Regd. No. M. 3618.

ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6.

Estd. 1921 ಸ್ಥಾಪನೆ.

NAVAYUGA

ನವಯುಗ

ವರ್ಷ ೨೪ ವಾರ ೧ | ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. | Vol. 24 No. 1

Founder SRI A. B. SHETTY.

ಉಡುಪಿ ● 7-9-1944 ● ಮಂಗಳೂರು.

ದಿ ಜುಪಿಟರ್

ಜನರಲ್ ಇನ್ಶ್ಯೂರೆನ್ಸ್
ಕಂಪೆನಿ, ಲಿ., ಬೊಂಬಾಯಿ.

ವಿಮೆಯುಳಿಸ ಬೇಕೆ?
ಏಜಂಟರಾಗುವಿರಾ?

ಹಾಗಾದರೆ ಕೂಡಲೇ-

ಪಿ. ಡಿ. ನಾಸಯ್ಯ, ಉಡುಪಿ.
ದಕ್ಷಿಣ ಕನ್ನಡದ ಚೀಫ್ ಏಜೆಂಟ್.

-ಇವರಿಗೆ ಬರೆಯಿರಿ-

! ಕೋಟಿಗೆ ಮಿಕ್ಕಿ ವ್ಯವಹಾರ !
ಈ ವರುಷವೇ ರಜತೋತ್ಸವ!

The Jupiter General Insurance Company Ltd

The Vijaya Bank, Ltd.,

Head Office MANGALORE.

Glad to announce that a Branch of the Bank has been opened at 321 **Thakurdwar Bombay**. on 15-6-44.

ನಮ್ಮ ಬ್ಯಾಂಕಿನ ಒಂದು ಶಾಖೆಯು ಇದೇ ತಾ. 15-6-44ರಲ್ಲಿ ಬೊಂಬಾಯಿಯಲ್ಲಿ ತೆರೆಯಲ್ಪಟ್ಟದೆ

ದಿ ವಿಜಯಾ ಬೇಂಕ್
ಲಿಮಿಟೆಡ್.

The Board of Directors,

Sri Narayana Guru Bank, Ltd., Mangalore announce that a Branch of this Bank has been opened at the premises of **"Parimala Bhavan"**, opposite Municipal Bus Stand, Udipi, on the 11th April, 1944. Your patronage is solicited.

Mangalore Jarappa,
Managing Director.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಠೇವುದಾರರುಗಳಿಗೆ ಉತ್ತಮ ದರದ ಬಡ್ಡಿಯನ್ನೂ, ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ, ಬೇಂಕಿನ ಎಲ್ಲಾ ತರದ ವ್ಯವಹಾರಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd, Moolky, S. K.

Sidha-Kalpa Kavach (Regd.)
No. 3 Rs. 2, No 2 Rs 5 No 1 Rs Special Rs 10, Extra Special Rs. 1 o over marriage health wealth, Ask an six questions with M. O. Re. 1-4 and get correct answers by return post Life reading Rs. 10No V. P., Send M. O. Free pamplets
Prof. Dr. N. H. Chhatbar,
P. O. MAHUVA (Kathiawar India)

Degrees, Books, Medicines
Free H. L. M. S, M. B. H, M. D, etc. Free Homeo Ayur- UnaniNatureo degree by post also—Practitioner also get soon Homeo Materiamedica, Rs. 5 Homeo Practice book Rs 1 Insanity Cure Pills Rs. 10 Enclose 2 annas stamp —
Prof. Dr. N. H. Chhatbar,
Principal Indian Homeopathic Institute & Society (Govt. Regd.)
P. O. MAHUVA (Kathiawar Dt. India)

ಇಂಗ್ಲಿಷ್ ಕಲಿಯಲಿಲ್ಲವಲ್ಲಾ ಎಂದು ಚಿಂತಿಸಬೇಡಿ!
ಸುಲಭವಾಗಿ ಇಂಗ್ಲಿಷ್ ಕಲಿಸುವ ಪುಸ್ತಕವಿದೆ ನೋಡಿ!

ಶ್ರೀ. ಕೊರಡ್ಕಲ್ ಶ್ರೀನಿವಾಸ ರಾಯರಿಂದ ಬರೆಯಲ್ಪಟ್ಟ

ಸುಲಭದಲ್ಲಿ ಇಂಗ್ಲಿಷ್

ENGLISH MADE EASY

ಅನ್ಯ ಸಹಾಯವಿಲ್ಲದೆ ಇಂಗ್ಲಿಷ್ ಕಲಿಸುವ ಸ್ವಯಂಬೋಧಿನಿ!

ನವಭಾರತ ಪುಸ್ತಕ ಭಂಡಾರ, ಉಡುಪಿ.
(ರಿಜಿಸ್ಟರ್ಡ್ ಪಬ್ಲಿಷರ್ಸ್ ಎಂಡ್ ಬುಕ್‌ಸೆಲ್ಲರ್ಸ್)

(ನಮ್ಮಲ್ಲಿ ದೊರೆಯುವ ಕನ್ನಡ ಪುಸ್ತಕಗಳ ಕೆಟಲಾಗಿಗೆ ಎರಡಾಣೆ ಸ್ಟ್ಯಾಂಪಿನೊಂದಿಗೆ ಬರೆಯಿರಿ.)

THE INFLUENCE OF A KIND ACT.

Is it not true that many an act of ours is impelled by the belief in its benevolent influence on the life hereafter?

Then will not the kind act of providing for one's family too be conducive to such influence?

THE
CANARA MUTUAL
ASSURANCE CO., LTD. UDIPI.

CO-OPERATION - - -

Life Assurance is the business based on the idea of mutual co-operation. By diverting a small portion of one's earning for paying premiums, we co-operate for the good of the family and safeguard the education of children.

Let us assist you in taking out a Policy under the plan that suits to you. Write now to:—

KOCHIKAR BROTHERS LTD.
Chief Agents for South India
THE BOMBAY LIFE ASSCE. CO., LTD.
(Estd. 1908)
The "Bombay Life" Bldg., UDIPI S. K.

Offices and Agencies throughout South India.

ಕಸ್ತೂರಿ ಬಾ ಸ್ಮಾರಕ ನಿಧಿಗೆ

ಶಕ್ತ್ಯಾನುಸಾರ

ಸಹಾಯ ಮಾಡಿರಿ

REGD

ಅಮೃತಾಂಜನ ತಲೆವೇದನೆ, ಶಿರೋವೇದನೆ, ಉಳುಕು, ಶೀತ್ರಿಗೆ, ಛಳಿ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು ಬಾತು ಕೊಳ್ಳುವುದು, ಚೇಳು ವಿಷ ಮುಂತಾದ ರೋಗ ಪಕ್ಷಘಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ. ಹುಳುಕಿನಲ್ಲಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತಾ.

TENDER NOTICE

Tenders of rates to reach the Assistant Director of Fisheries (Coast) Calicut, on or before 3rd October 1944, are invited for transporting salt bags from vessels or railway wagons and stacking them in the fish curing yards and gollahs on the West Cost, and for sundry other works.

Details and terms of contract can be had from the undersigned

D. D. Peter Devadas,
Asst. Director of Fisheries (Coast)

Calicut,
30-8-1944.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಮೂರನೇ ಸಂಪುಟಾರಂಭವಾಗಿದೆ
ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ
ರೂ. 1—8—0 ಮಾತ್ರ
ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

ತಾರುಣ್ಯ

ಶಕ್ತಿ, ವೀರ್ಯಸ್ತಂಭನೆ ಮಾಡಿ ದಾಂಪತ್ಯದಲ್ಲಿ ಪರಮಾನಂದವನ್ನುಂಟು ಮಾಡಲು ರಮಣೀ ವಿಲಾಸಿನಿ ಅತ್ಯುತ್ತಮ ಔಷಧಿ

ಡಪ್ಪಿ 1ಕ್ಕೆ ರೂ. 1

ಮದನಮಂಜರಿ ಫಾರ್ಮಸಿ,
184 ಚೈನಾ ಬಜಾರ್ ರೋಡ್, ಮದ್ರಾಸ.
ಪುತ್ತೂರು ಏಜಂಟರು: ಶ್ರೀ ಫಾರ್ಮಸಿ

Regd. No. M 3618.

ವಾರ್ಷಿಕ ಚಂದಾ ರೂ 4—8—0 ಬಿಡಿ ಸಂಚಿಕೆ 0—1—6.

Estd. 1921 ಸ್ಥಾಪನೆ.

NAVAYUGA ನವಯುಗ

ವರ್ಷ ೨೪ ವಾರ ೧ | ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. Founder SRI A. B. SHETTY. | Vol. 24 No. 1

ಉಡುಪಿ • 7-9-1944 • ಮಂಗಳೂರು.

ದಿ ಜುಪಿಟರ್

ಜನರಲ್ ಇನ್ಶ್ಯೂರೆನ್ಸ್ ಕಂಪೆನಿ, ಲಿ, ಬೊಂಬಾಯಿ.

ವಿಮೆಯಿಳಿಸ ಬೇಕೆ?
ಏಜಂಟರಾಗುವಿರಾ!

ಹಾಗಾದರೆ ಕೂಡಲೇ

ಪಿ ಡಿ ನಾಯಕ, ಉಡುಪಿ.
ದಕ್ಷಿಣ ಕನ್ನಡದ ಚೀಫ್ ಏಜೆಂಟ್.

ಇವರಿಗೆ ಬರೆಯಿರಿ—

1 ಕೋಟಿಗೆ ಮಿಕ್ಕಿ ವ್ಯವಹಾರ
ಈ ವರುಷವೇ ರಜತೋತ್ಸವ!

The Jupiter General Insurance Company Ltd

The Vijaya Bank, Ltd.,

Head Office **MANGALORE**.

Glad to announce that a Branch of the Bank has been opened at 321 **Thakurdwar Bombay**, on 15-6-44.

ನಮ್ಮ ಬ್ಯಾಂಕಿನ ಒಂದು ಶಾಖೆಯು ಇದೇ ತಾ. **15-6-44**ರಲ್ಲಿ ಬೊಂಬಾಯಿಯಲ್ಲಿ ತೆರೆಯಲ್ಪಟ್ಟಿದೆ.

ದಿ ವಿಜಯಾ ಬೇಂಕ್ ಲಿಮಿಟೆಡ್.

The Board of Directors,

Sri Narayana Guru Bank, Ltd., Mangalore announce that a Branch of this Bank has been opened at the premises of "**Parimala Bhavan**", opposite Municipal Bus Stand, Udipi, on the 11th April, 1944. Your patronage is solicited.

Mangalore Jarappa,
Managing Director.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪಾಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ, ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd, Moolky, S. K.

Sidha-Kalpa Kavach (Regd.)
No. 3 Rs. 2, No 2 Rs 5 No 1 Rs 7 Special Rs 10, Extra Special Rs 17 of over marriage health wealth. Ask an six questions with M O. Re 1/4 an get correct answers by return, post Life reading Rs.10 No. V. P. Send M O. Free, pamphlets
Prof. Dr. N. H. Chhatbar,
P. O MAHUVA (Kathiawar India.)

Degrees. Books. Medicines
Free H L M S, M, B, H, M' D, etc. Free Homeo-Ayur-Unani Naturo degree by post also—Practitioner also get soon Homeo Materiamedica, Rs. 5 Homeo Practice book Rs. 4 Insanity Cure Pills Rs. 10 Enclose 2 annas stamp —
Prof. Dr. N. H. Chhatbar,
Principal Indian Homeopathic Institute & Society (Govt Regd)
P. O MAHUVA (Kathiawar Dt India.)

ಇಂಗ್ಲಿಷ್ ಕಲಿಯಲಿಲ್ಲವಲ್ಲಾ ಎಂದು ಚಿಂತಿಸಬೇಡಿ!
ಸುಲಭವಾಗಿ ಇಂಗ್ಲಿಷ್ ಕಲಿಸುವ ಪುಸ್ತಕವಿದೆ ನೋಡಿ!

ಶ್ರೀ. ಕೊರಡ್ಕಲ್ ಶ್ರೀನಿವಾಸ ರಾಯರಿಂದ ಬರೆಯಲ್ಪಟ್ಟ

ಸುಲಭದಲ್ಲಿ ಇಂಗ್ಲಿಷ್
ENGLISH MADE EASY

ಅನ್ಯ ಸಹಾಯವಿಲ್ಲದೆ ಇಂಗ್ಲಿಷ್ ಕಲಿಸುವ ಸ್ವಯಂಬೋಧಿನಿ!

ನವಭಾರತ ಪುಸ್ತಕ ಭಂಡಾರ, ಉಡುಪಿ.
(ರಿಜಿಸ್ಟರ್ಡ್ ಪಬ್ಲಿಷರ್ಸ್ ಎಂಡ್ ಬುಕ್‌ಸೆಲ್ಲರ್ಸ್)

(ನಮ್ಮಲ್ಲಿ ದೊರೆಯುವ ಕನ್ನಡ ಪುಸ್ತಕಗಳ ಪಟ್ಟಿ
ಬೇಕಾದವರು ಎರಡಾಣೆ ಸ್ಟಾಂಪಿನೊಂದಿಗೆ ಬರೆಯಿರಿ.)

THE INFLUENCE OF A KIND ACT.

Is it not true that many an act of ours is impelled by the belief in its benevolent influence on the life hereafter?

Then will not the kind act of providing for one s family too be conducive to such influence?

THE
CANARA MUTUAL
ASSURANCE CO., LTD. UDIPI.

CO-OPERATION - - - -

Life Assurance is the business based on the idea of mutual co-operation. By diverting a small portion of one's earning for paying premiums, we co-operate for the good of the family and safeguard the education of children.

Let us assist you in taking out a Policy under the plan best suited to you. Write now to:—

KOCHIKAR BROTHERS LTD.
Chief Agents for South India
THE BOMBAY LIFE ASSCE. CO., LTD.
[Ltd 1908]
The "Bombay Life" Bldg., UDIPI, S. K.

Offices and Agencies throughout South India.

ಕಸ್ತೂರಿ ಬಾ
ಸ್ಮಾರಕ ನಿಧಿಗೆ
ಶಕ್ತಿಮೀರಿ
ಸಹಾಯ ಮಾಡಿರಿ

REGD

ಅಮೃತಾಂಜನ ತಲೆವೇದನೆ, ಶಿರೋವೇದನ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬೀಳು ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಶಕ್ಷವಾತ, ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ, ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತಾ.

TENDER NOTICE

Tenders of rates to reach the Assistant Director of Fisheries (Coast) Calicut, on or before 3rd October 1944, are invited for transporting salt bags from vessels or railway wagons and stacking them in the fish curing yards and gollahs on the West Cost, and for sundry other works.

Details and terms of contract can be had from the undersigned

D. D. Peter Devadas,
Asst. Director of Fisheries (Coast)
Calicut,
30-8-1944.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಮೂರನೇ ಸಂಪುಟಾರಂಭವಾಗಿದೆ
ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯೂಲರುಗಳೂ ಪ್ರಕಟವಾಗುತ್ತವೆ

ವಾರ್ಷಿಕ ಚಂದಾ
ರೂ. 1—8—0 ಮಾತ್ರ
ಹೆಚ್ಚಿನ ವಿಚಾರಕ್ಕೆ ಬರೆಯಿರಿ
ಬಾಲಚಂದ್ರ, ಉಡುಪಿ.

ತಾರುಣ್ಯ

ಕೆಟ್ಟು ಸೀರ್ಯಸ್ತಂಭನ ಮಾಡಿ ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು ರಮಣೀವಿಲಾಸಿನಿ ಅತ್ಯುತ್ತಮ ಔಷಧಿ

ಡಬ್ಬಿ 1ಕ್ಕೆ ರೂ. 1

ಮದನಮಂಜರಿ ಫಾರ್ಮಸಿ.
181 ಚೈನಾ ಬಜಾರ್ ರೋಡ್, ಮದ್ರಾಸ.
ಪುತ್ತೂರು ಏಜಂಟರು. ಶ್ರೈ ಫಾರ್ಮಸಿ

ಒಂದು ವ್ಯಂಗ್ಯ ಊಹೆ

ಆಗಾಖಾನ್ ಅರಮನೆ ನಂ. 2!

ಊಹಿಸಿದುದು—'ಹೆಗ್ಡೆ'

ಬೊಂಬಾಯಿ-ತಾ 11–9–44ನೇ ಶನಿವಾರ; ಉಪಸಂಹಾರ. ಇಡೀ ನಗರದಲ್ಲಿ ವಿದ್ಯುತ್ ಸಂಚಾರವಾಗುತ್ತಿದೆ; ಅದು ನಡುಕ ಅಥವಾ ನರ್ತನವಲ್ಲಿರುವಂತಿದೆ. ಕಾರಣ?

1ನೇ ಕಾರಣ—ಗಾಂಧಿ ಜಿನ್ನರ ನಾಲ್ಕು ಕಣ್ಣುಗಳು ಅಲ್ಲಿಯೇ ಒಟ್ಟಾಗಿರುವದು; 2ನೇ ಕಾರಣ ಭಾರತೀಯರ ೮೦ ಕೋಟಿ ಕಣ್ಣುಗಳೂ ಆ ಕಡೆಗೆ ಬಿದ್ದಿರುವದು, 3ನೇ ಕಾರಣ ಅಮೆರಿ ಚರ್ಚಿಲ್ಲರ ಆತುರದ ದೃಷ್ಟಿ ಅಲ್ಲಿ ನಟ್ಟಿರುವದು. ಬೊಂಬಾಯಿಯ ಕಂಪಕ್ಕೆ ಪ್ರಾಯಶಃ ಮೂರನೆ' ಕಾರಣವೇ ಮುಖ್ಯವೇನೋ! 1942ನೇ ಆಗೋಸ್ತು 9ರಲ್ಲೊಮ್ಮೆ ಬೊಂಬಾಯಿಯಲ್ಲಿ ವಿದ್ಯುತ್ಸಂಚಾರವಾದುದು ಆ ದೃಷ್ಟಿ ಬಿದ್ದೇ; 1944ನೇ ಸೆಪ್ಟಂಬರ್ 9ರಲ್ಲಿಯ ಈ ಆವೇಗಕ್ಕೂ ಅದೇ ಮೂಲವಿರಬೇಕು.

ಆ ದಿನ ನಡುಕಕೆಲ್ಕೊಳಗಾಗದವರೆಂದರೆ ಪೋಲಿಸ್ ಕಮಿಶನರರೊಬ್ಬರೇ. ಇದಕ್ಕೆ ಕಾರಣ, ಮೆರವಣಿಗೆ ಪ್ರದರ್ಶನಗಳಾವುವೂ ನಡೆಯ ಕೂಡದೆಂಬ ತನ್ನ ಅಜ್ಞೆಯು ಪಾಲಿಸಲ್ಪಡುತ್ತಿದೆಯೇ ಎಂದು ಅವರು ತನ್ನ ದೃಷ್ಟಿಯನ್ನು ರಸ್ತೆಗಳ ಮೇಲಿಟ್ಟಿದ್ದಾರೆ ಹೊರತು ಗಾಂಧಿ ಜಿನ್ನರುಗಳ ಮೇಲೋಡಿಸಿಲ್ಲ. ಮಿಕ್ಕವರಿಗೆ 'ಇಲೆಕ್ಟ್ರಿಕ್ ಪವರ್‌ಹೌಸ್'ನಂತಾಗಿರುವ ಜಿನ್ನಾ ಗೃಹವನ್ನು ಬಿಟ್ಟು ಬೇರೆ ಕಡೆಗೆ ನೋಡಲಿಕ್ಕಾಗದುದರಿಂದ-ಅವರಲ್ಲೆಲ್ಲಾ ವಿದ್ಯುದ್ವೇಗ!

ಇಡೀ ಬೊಂಬಾಯಿಯ ಸಂದುಗೊಂದುಗಳಲ್ಲಿ ಸಶಸ್ತ್ರ ಪೋಲೀಸ್ ಮತ್ತು ಸೈನಿಕ ಪಹರೆ

ಇದೇನು, ಇದೊಂದು ರಸ್ತೆಯಲ್ಲಿ ತಿರುಗುವವರೆಲ್ಲಾ ಕಪ್ಪು ಕರವಸ್ತ್ರ, ಕರಿ ಟೋಪಿ, ಧರಿಸಿಕೊಂಡಿದ್ದಾರೆ. ಹೋ! ಇವರು ಹಿಂದೂ ಮಹಾ ಸಭೆಯವರು. ಮೆರವಣಿಗೆ, ಪ್ರದರ್ಶನಕ್ಕೆಡೆಯಿಲ್ಲದುದರಿಂದ ಈ ವೇಷ. ಇವರಿರುವ ಈ ರಸ್ತೆಯಿಂದ ಅರ್ಧ ಮೈಲು ಪಶ್ಚಿಮಕ್ಕೆ ಜಿನ್ನಾಗೃಹವಿಡಯಂತೆ!

ಅರೇ! ಅದೊಂದು ರಸ್ತೆಯಲ್ಲೆಲ್ಲಾ ಖಾಂಡಿಗರೇ ತುಂಬಿದ್ದಾರೆ. ಏನದು, ಸೂರ್ಯ ನಮಸ್ಕಾರವಾಗುತ್ತಿದೆಯೆ? ತಿಳಿಯಿತು-ಅವರೆಲ್ಲಾ ಕಾಂಗ್ರೆಸ್ಸರು. ಗಾಂಧಿ-ಜಿನ್ನಾರಿಗೆ ಸೆಲ್ಯೂಟ್ ಕೊಡಬೇಕೆಂದು ಕೂಡಿದವರು. ಆದರೆ ಅದನ್ನು ಸ್ವೀಕರಿಸಲು ಅವರಿಬ್ಬರೂ ಒಪ್ಪಲಿಲ್ಲ. ಒಕ್ಕೂಟಯದಿಂದ ಕೊಟ್ಟು ಬರೋಣವೆಂದರೆ ಪೋಲೀಸರು ಬಿಡುವದಿಲ್ಲ. ಆದ್ದರಿಂದ ಅವರು ಮುಕ್ಕಾಲು ಮೈಲು ದೂರದ ರಸ್ತೆಯಲ್ಲಿ ತಮ್ಮ ಪಕ್ಕಕ್ಕೆ ತಾವೇ ಸೆಲ್ಯೂಟ್ ಮಾಡುತ್ತಿದ್ದಾರಂತೆ. ಪಾಪ! ಅವರದು ಕನಕದಾಸ ಭಕ್ತಿ; ಹಾಗಲ್ಲದೆ ಮಧ್ವಾಚಾರಿ ಭಕ್ತಿಯೊಡನೆ ಸಲಾಮು ಕೊಡಲು ಪರ್ಮಿಸಿದರೆ ಮಿ ಜಿನ್ನರಿಗೆ ಹಿಂದಿನ ಚೂರಿ ಸ್ಮರಣೆ ಬಂದು ಕೆಲಸವೇ ಕೆಡುವ ಸಂಭವ!

೦೦ ೦೦ ೦೦

ಜಿನ್ನರ ಮನೆ; ಮುಂಭಾಗದಲ್ಲಿ ಕಾಲು ಫರ್ಲಾಂಗು ದೂರದಲ್ಲಿ ಪೋಲಿಸರು ಸುತ್ತುಗಟ್ಟಿ ನಿಂತು ಜನ ಸಂದಣಿಯನ್ನು ತಡೆಯುತ್ತಿದ್ದಾರೆ. ಈ ಪೋಲೀಸು ಕೋಟೆಯಂತೂ ಜಿನ್ನರ ಸುತ್ತಲ ಬೇಲಿಯಷ್ಟೇ ಗಟ್ಟಿಯಿದೆ; ಮನೆಯ ಗೋಡೆಗೆ ತಾಗಿ ಮತ್ತೊಂದು ಪೋಲಿಸು ದಳವು ಅಂಗಳದ ಹೊರ ಆವರಣವಾಗಿ ನಿಂತಿದೆ. ಮೊದಲನೇ ಪೋಲಿಸು ಬೇಲಿಯನ್ನು ದಾಟಿ ಪತ್ರಿಕಾ ಪ್ರತಿನಿಧಿಗಳು ಮತ್ತು ರಾಷ್ಟ್ರ ಪ್ರಮುಖರು ಮಾತ್ರ ಬರಬಹುದು. ಆದರೆ ಎಲ್ಲಿ ವರೆಗೆ? ಮನೆಗೆ ತಾಗಿ ನಿಂತಿರುವ ಪೋಲಿಸು ಪಡೆಯಿದ್ದಲ್ಲಿ ವರೆಗ ಮಾತ್ರ. ಅದಕ್ಕಿಂತ ಮುಂದೆ ಹೋಗಲು ಯಾರಿಗೂ ಅವಕಾಶವಿಲ್ಲ. ಜಿನ್ನರ ಹೆಬ್ಬಾಗಿಲಲ್ಲಿ ಇಬ್ಬರು ಖಡ್ಗಧಾರಿ ಪಠಾಣರು; ಆಗಿನ ಮಟ್ಟಿಗೆ ಆ ಖಡ್ಗವೇ ಅವರ ನಾಲಿಗೆ—ಯಾವ ಭಾಷೆಯಲ್ಲಿ ಹೋಗಿ ಮಾತಾಡಿದರೂ ಆ ಭಾಷೆಯಿಂದಲೇ ಅವರ ಉತ್ತರ. ಆ ಹೆಬ್ಬಾಗಿಲ ವಿಶಾಲ ಹಣೆಯಲ್ಲಿ ನಿಂತ ಬೋರ್ಡಿನಲ್ಲಿ 'ಪ್ರವೇಶವಿಲ್ಲ' ಎಂಬ ದೊಡ್ಡ ಅಕ್ಷರಗಳು ಮೇಲ್ಭಾಗದಲ್ಲಿ ಉರ್ದು. ಅದರೊತ್ತಿಗೆ ಇಂಗ್ಲಿಷ್, ಆ ಮೇಲೆ ಸರ್ತಿ ಪ್ರಕಾರ ಹಿಂದೀ, ಗುಜರಾಥಿ, ಮರಾಠಿ ಭಾಷೆಗಳಲ್ಲಿ ಬರೆಯಲ್ಪಟ್ಟಿವೆ. ಕನ್ನಡವಿರಲಿಲ್ಲ; ಕನ್ನಡಿಗರಲ್ಲಿ ನುಗ್ಗುವ ಭಯವೂ ಇರಲಿಲ್ಲ.

೦೦ ೦೦ ೦೦

ಘಂಟೆ ಆರಾಗಿರಬಹುದು, ಒಮ್ಮಿಂದೊಮ್ಮೆಗೇ ಜನಸಮುದ್ರವು ಹಿಂಭಾಗದಿಂದ ಘೋರ್ಗರೆಯಹತ್ತಿತು — 'ಗಾಂಧೀ ಜಿನ್ನಾ ಝಿಂದಾಬಾದ್' 'ಹಿಂದೂ ಮುಸ್ಲಿಮ್ ಐಕ್ಯ ಹೋ' 'ಮಹಾತ್ಮಾ-ಕ್ವಯದ್-ಇ-ಅಝಾಮ್ ಕೀ ಜೈ!' ಬರಬರುತ್ತಾ ಜಯಘೋಷಗಳು ಎಲ್ಲಾ ಕಡೆಗಳಿಂದಲೂ ಏಳಹತ್ತಿದವು; ಮುಂದೆ ತಾವು ಹಿಂಗಡಿಸಲ್ಪಡುವೆವೆಂಬ ಭೀತಿಯಿಲ್ಲದೆ ಸಾಲ್ಕು ದೆಸೆಗಳೂ ಅವನ್ನು ಮಾರ್ದನಿಗೊಡುತ್ತಿದ್ದವು; ಲೀಗ್ ಸ್ವಯಂಸೇವಕರ ಪಹರೆಯಿಂದ ಮಾಸು ಮಡಚಿದ ಕಾರೊಂದು ಬರುತ್ತಿದೆ; ಮುಂಭಾಗದ ಸೀಟಿನಲ್ಲಿ ಕೊರಳು ಕೊಂಕಿಸಿ ರಾಜಾಜಿ; ಹಿಂಭಾಗದಲ್ಲಿ ಮುಗುಳುನಗುತ್ತಾ ಪ್ಯಾರೇಲಾಲ್ ಮತ್ತು ಸುಶೀಲಾ ನಾಯರ್; ನಡುವೆ ಕೈ ಜೋಡಿಸಿಕೊಂಡು ಮಹಾತ್ಮಾ ಗಾಂಧಿ! ಜೈಕಾರಗಳೇಳುತ್ತಿದ್ದವು; ಹೂವಿನ ಹಾರಗಳು ಬೀಳುತಿದ್ದವು; ಒಂದೆರಡು ಕಪ್ಪು ವಸ್ತ್ರಗಳು ಬಂದು ಬಿದ್ದುದನ್ನು ಪ್ಯಾರೇಲಾಲರು ಹೆಕ್ಕಿ ಡ್ರೈವರನಿಗೆ ಕೊಡುತ್ತಿರುವದೂ, ಮಡ್ಗರ್ ಉಜ್ಜಲಿಕ್ಕಾಯಿತೆಂಬಂತೆ ಡ್ರೈವರನದನ್ನು ಕೃತಜ್ಞತೆಯಿಂದ ಎತ್ತಿಕೊಳ್ಳುತ್ತಿರುವದೂ ಕಾಣಿಸಿತು. ಗೇಟಿನ ಬಳಿ ಕಾರು ನಿಂತಾಗ, ಗಾಂಧಿಜೀ ಪತ್ರಿಕಾ ಪ್ರತಿನಿಧಿಗಳ ನಡುವೆ ಘನಘೋರ ಬೇಕಾಯಿತು. ಸುತ್ತುಗಟ್ಟಿದವರ ತುಟಿಗಳಿಗೆ ಬಾರ ತಾಗಿರಬೇಕೆಂಬಂತೆ ಅವು ಕ್ರಿಯಿದವು; 'ಉರಿ ಸಹಿಸಿಕೊಳ್ಳಿ' ಎಂದು ಹೇಳುತ್ತಿರುವರೇನೋ ಎಂಬಂತೆ ಗಾಂಧಿಜೀ ಒಂದೆರಡು ಬಾರಿ ಕೈ ಭಾಷೆ ಮಾಡಿದರು—ದೂರದಲ್ಲಿದ್ದವರಿಗೆ ತಿಳಿದುದಿಷ್ಟೆ. ಕಾವಲ ಪಠಾಣರು ಖಡ್ಗ ತಗ್ಗಿಸಿ ಹಿಡಿದು ಗೇಟಿನ ಬಾಗಿಲು ತೆರೆದಾಗ, ಜೈಕಾರಗಳು ಒಳಹೊಗಿಸಿದುವು; ಆದರೆ ರಾಜಾಜಿಯ ಹೆಗಲಿಗೆ ಕೈಹಾಕಿ ಓರ್ವ ಪತ್ರಿಕೋದ್ಯೋಗಿ ಹಿಂದಕ್ಕೆ ಜಗ್ಗಿದಾಗ, ಅವರು ತನ್ನ ಶಾಲನ್ನು ಅವನ ಕೈಯಲ್ಲೇ ಬಿಟ್ಟು ದಬಕ್ಕನೆ ನುಗ್ಗಿದರು. ಜನ ಸಂದಣಿಯಲ್ಲಿ 'ಘೋ' ಎಂಬ ನಗೆಯೆದ್ದಿತು. 'ಕ್ವಯದ್-ಇ-ಅಝಾಮ್!'-ತಂಡದಲ್ಲಿ ಮತ್ತೊಮ್ಮೆ ಘೋಷ. ಬಾಗಿಲೆಡೆಯಿಂದ ಮಿ. ಜಿನ್ನರ ದೀರ್ಘ ಟೋಪಿಯ ಅರ್ಧಮಾತ್ರ ತೋರುತಿತ್ತು; ಅವರು ಸ್ವಾಗತಿಸಲು ಬಾಗಿಲವರೆಗೆ ಬಂದಿದ್ದರು. ಎರಡೇ ಮಿನಿಟುಗಳಲ್ಲಿ ಬಾಗಿಲು ಮುಚ್ಚಲ್ಪಟ್ಟು ಎಡಬಲಗಳಲ್ಲಿ ಎರಡು ಖಡ್ಗಗಳು ಪುನಃ ಕಾಣಿಸಿಕೊಂಡವು. ಕೆಲವು ಮಿನಿಟುಗಳ ವರೆಗೆ ಜನ ಸಂದಣಿಯಲ್ಲಿ ಗುಜುಗುಜು ಮಾತುಗಳ ಗದ್ದಲವೇ ಗದ್ದಲ; ಹದಿನೈದು ಮಿನಿಟುಗಳ ನಂತರ ಪ್ರಮುಖರ ಸಾಲಲ್ಲಿದ್ದ ಒಬ್ಬ ಮುಸಲ್ಮಾನ್ ಧುರೀಣರೆಂದರು—"ಈಗ ಗಾಂಧಿ ಕ್ವಯದೀ ಅಝಾಮರ ಕೋಣೆ ಮುಟ್ಟಿರಬಹುದು." ಸಂಭಾಷಣೆಯು ಕೋಣೆ ಅಸ್ಪೃಷ್ಟ ಒಳಗಡೆಯಲ್ಲಿದೆಯಂತೆ. ಸ್ವರ್ಗಕ್ಕೆ ಸೇರಿದ ಧರ್ಮರಾಜನಂತೆ ಗಾಂಧಿಯವರು ತನ್ನ ಸಂಗಡಿಗರನ್ನು ಮಧ್ಯದಲ್ಲೇ ಬಿಟ್ಟು ತಾನೊಬ್ಬನೇ ಆ ಕೋಣೆಗೆ ಹೋಗಬೇಕಾಗಿದೆಯಂತೆ. ಸಂಗಡಿಗರ ಪೈಕಿ ಅವಶ್ಯಬಿದ್ದಾಗ ರಾಜಾಜಿಯನ್ನು ಮಾತ್ರ-ಅಥವಾ ಹೇಗೆ ಹೇಳಲಿ, ಸಂದರ್ಭ ಬಂದರೆ ಡಾಕ್ಟರ್ ನಾಯರರನ್ನೂ-ಆ ಕೋಣೆಗೆ ಕರೆಯಲಾಗುವದಂತೆ.

೦೦ ೦೦ ೦೦

ಬಾಗಿಲಲ್ಲೇ ಇದ್ದ ಆ ಕಾರು ಮತ್ತೊಮ್ಮೆ 'ಗರ್‌ರ್' ಶಬ್ದ ಮಾಡಿದುದು ಸುಮಾರು 10 ಘಂಟೆಗೆ. ಆ ಹೊತ್ತಿಗೆ ಜನಸಂದಣಿ ಮತ್ತೂ ಹೆಚ್ಚಿದಂತೆ ಕಂಡಿತು. ಕೆಲವರು ಹೋಗಿರಬಹುದು; ಆದರೆ ಹಲವರು ಹೊಸತಾಗಿ ಬಂದಿದ್ದರು. ಕಾರನ್ನು ಹೊರಡಲು ಬಿಡದೆ ಪತ್ರಿಕಾ ಪ್ರತಿನಿಧಿಗಳು ಸುತ್ತುಗಟ್ಟಿದ್ದರು. "ನಮ್ಮದು ಅಣ್ಣತಮ್ಮಂದಿರೊಳಗಿನ ಮಾತುಕತೆ. ಮನೇ ಗುಟ್ಟನ್ನು ಹೊರಗೆ ಹಾಕುವದು ಮಹಾಪಾಪ" ಎಂದು ತಮಾಷೆಯಲ್ಲೇ ಗಾಂಧಿಜೀ ಪತ್ರಿಕೆಯವರ ಬಾಯಿ ಮುಚ್ಚಿಸಿದರಂತೆ. ಆ ಮೊದಲೇ ನುಸುಳಿಕೊಂಡು ಕಾರು ಹತ್ತಿ ಕುಳಿತಿದ್ದ ರಾಜಾಜೀಯ ಮುಖದಿದಿರು ಕಾಗದ ಪೆನ್ಸಿಲುಗಳು ಬಂದಾಗ "ನೀವು ಇಲ್ಲೇ ಇದ್ದರೆ ನಾನು ಓ ಅಲ್ಲಿವರೆಗೆ ಮಾತ್ರ ಹೋಗಿದ್ದೆ. ಗಾಂಧಿಜೀಯನ್ನೇ ಕೇಳಿ" ಎಂದು ಆಚಾರ್ಯರು ತನ್ನ ಕೊಂಕು ಕಂಠದ ಸಹಾಯದಿಂದ ಮುಖಪೋರಿ ಮಾಡಿದವರು ಆ ಮೇಲೆ ಮುಂಭಾಗ ನೋಡಿದುದು ಕಾರು ಹೊರಟ ಮೇಲೇನೇ.

ಮರುದಿನದ ಪತ್ರಿಕೆಗಳಲ್ಲಿ ದೊಡ್ಡದೊಡ್ಡ ತಲೆಬರೆಹಗಳು:—'ಗಾಂಧಿ-ಜಿನ್ನಾರನ್ನು ಸಹೋದರರಾಗಿ ಮಾರ್ಪಡಿಸಿದ ಪ್ರಥಮ ಸಂಭಾಷಣೆ!' 'ಬಾಪುಜೀ ಹಸನ್ಮುಖಿಯಾಗಿ ಹೊರಬಂದರು!' 'ಮಾತುಕತೆಯ ಮೊದಲ ಅಂಕ ವಿಜಯಿಯಾಯಿತು' ಒಂದೊಂದು ಹೆಡ್ಡಿಂಗು, ಪುಟದ ¼ನೇ ಅಂಶವನ್ನು ನುಂಗಿತ್ತಾದರೂ ಅದರ ಕೆಳಗಡೆ ಒಂದೆರಡು ಇಂಚುಗಳಷ್ಟೇ ಸ್ಥಳದಲ್ಲಿ ಗಾಂಧಿಜೀಯ ಒಂದು ವಾಕ್ಯ ಮತ್ತು ಅವರ ನಗೆಯ ವರ್ಣನೆಯೂ, ಅವುಗಳ ಗೂಢಾರ್ಥವೂ ಬಂದಿತ್ತು.

೦೦ ೦೦ ೦೦

ತಾ. 10ನೇ ಮುಂಜಾನೆ 9 ಘಂಟೆಯಿಂದ 12ರ ವರೆಗೆ ಸಂಭಾಷಣೆ. ಜಿನ್ನಾ ಗೃಹ ಹೊಗುವಾಗ ತನ್ನನ್ನು ಮುತ್ತಿದ ಪತ್ರಿಕಾಕಾರರ ತಂಡವನ್ನು ಇಬ್ಭಾಗ ಮಾಡಿಕೊಂಡು ಗಾಂಧಿಜೀ ಒಳಗೆ ಹೋಗಿದ್ದರು. ಇದು ದೇಶವಿಭಜನೆಯ ಸಂಕೇತವೆಂದು ಅವರೆಲ್ಲಾ 'ನೋಟ್' ಮಾಡಿಕೊಂಡಿದ್ದರು. ಸಂಭಾಷಣೆಯು ನಡೆಯುತಿದ್ದ ವೇಳೆ, ಪಹರೆಯವರ ಕಣ್ಣು ತಪ್ಪಿಸಿ ಜಿನ್ನಾ ಗೃಹದ ಗೋಡೆಗೆ ಕಿವಿಯೊತ್ತಿ ಹಿಡಿದು ಐದು ಮಿನಿಟು ನಿಲ್ಲಲು ಓರ್ವ ಬಾತ್ಮೀದಾರನಿಗೆ ಸಾಧ್ಯವಾಗಿದ್ದಿತು. ಅವ ಓಡಿ ಬಂದು 'ಒಳಗೆ ಧಢಾಲನೆ ಶಬ್ದವಾಯಿತು' ಎಂದು ವಾರ್ತೆ ಕೊಟ್ಟ; ಈ ಆಧಾರದಿಂದ ಅಲ್ಲಿ ನೆರೆದಿದ್ದ ನೂರಾರು ಪತ್ರಿಕೋದ್ಯೋಗಿಗಳ ನೂರಾರು ತಲೆಗಳೂ ಒಮ್ಮೆ ಸುತ್ತು ತಿರುಗಿ ಕೊನೆಗೆ ಪಡೆದ ತೀರ್ಮಾನ- "ಒಂದೋ ಮಿ. ಜಿನ್ನರು ಕೆರಳುವ ಸಂದರ್ಭ ಬಂದು ಅವರು ಮುಂಭಾಗದ ಮೇಜಿಗೆ ಬಡೆದು ಅದನ್ನು ಒಡೆದಿರಬೇಕು; ಇಲ್ಲವೇ ದೇಶವನ್ನು ಇಭ್ಭಾಗವಾಗಿ ಒಡೆಯುವ ಉದ್ಘಾಟನೆಯದಾಗಿರಬೇಕು; ಅಥವಾ ಆ ಹೊಡೆತ ಗಾಂಧಿಜೀಯ ತಲೆಗೆ....ಛೆ, ಹಾಗಾಗದು!' ಅಷ್ಟರಲ್ಲಿ ಗಾಂಧಿಜೀ ಹೆಬ್ಬಾಗಿಲು ದಾಟಿ ಹೊರಗೆ ಬರುತ್ತಿರುವದು ಕಾಣಿಸಿತು. ಬಲದಿಂದ ಹೊರ ಬಿದ್ದ ಮೊಲವನ್ನು ಕಂಡವರಂತೆ ಈ ಬೇಟೆಗಾರರೆಲ್ಲಾ ಮುತ್ತಿಗೆ ಹಾಕಿದರು. ಪ್ರಶ್ನೆಯ ಸುರಿಮಳೆಗಾರಂಭ.

(೭ನೇ ಪುಟ ನೋಡಿರಿ).

ನಿಮ್ಮ ಬ್ಯಾಂಕಿಂಗ್ ಸಂಬಂಧ

ನಿಮ್ಮ ಉದ್ಯಮದಲ್ಲಿ ನಿಮ್ಮ ಬ್ಯಾಂಕು ಎಂತಹ ಸಹಕಾರಿ ಎಂದು ನೀವು ಮನಗಂಡೊಡನೆ-ನಿಮ್ಮ ಧನ ಸಹಾಯಕನಿಂದ ಯಥಾಯೋಗ್ಯ ಸಹಕಾರವು ಎಷ್ಟೊಂದು ಅವಶ್ಯವು—ನೀವು ನಿಮ್ಮ ಬ್ಯಾಂಕಿಂಗ್ ಸಂಬಂಧವನ್ನು ಜಾಗರೂಕತೆಯಿಂದ ಚೆನ್ನಾಗಿ ವಿಚಾರಿಸಿಯೇ ನಿರ್ಧರಿಸುವಿರಿ.

ನಮ್ಮದೀ ಸೂಚನೆ: ವಿಪುಲ ಧನವುಳ್ಳ ಈ ಬ್ಯಾಂಕನ್ನೇ ನಿಮ್ಮ ಆಥಿಕ ಸಹಾಯಕ ಸಂಸ್ಥೆಯಾಗಿ ಆರಿಸಿಕೊಳ್ಳಿರಿ. ಅದರ ಹೆಸರು ಗೌರವಗಳು ನಿಮಗೆ ನಿಮ್ಮ ಆರ್ಥಿಕ ಸ್ಥಿತಿಗೆ ಅಮೂಲ್ಯವಾದ ಹಿನ್ನೆಲೆಯನ್ನೊದಗಿಸುವುದು.

ಇಂದೇ ನಮ್ಮ ಏಜಂಟರಿಗೆ ಮಾಹಿತಿಯ ಬಗ್ಗೆ ವಿಚಾರಿಸಿರಿ.

ಶಾಖೆಗಳು.	ಸೇವೆ
ಕ್ವಿಲೋನ್, ಬೆಳಗಾಂವ, ಆಲ್ಲೆಪ್ಪಿ, ಧಾರವಾಡ, ಕೊಚ್ಚಿ, ಚಿಕ್ಕಮಗಳೂರು, ಕಣ್ಣಾನೂರು, ಹುಬ್ಬಳ್ಳಿ, ಮಂಗಳೂರು, ದಾವಣಗೆರೆ, ಬೆಂಗಳೂರು ಇತ್ಯಾದಿ ಇತ್ಯಾದಿ.	ಸೇವಿಂಗ್ಸ್ ಖಾತೆ, ಚಾಲು ಖಾತೆ, ಸಿರಖು ಠೇವಣಾತಿ, ಓವರ್ ಡ್ರಾಫ್ಟುಗಳು, ಸಾಲಗಳು, ಡಿಸ್ಕಾಂಟಿಂಗ್,
ಬೊಂಬಾಯಿ ನಗರದಲ್ಲಿ 4 ಶಾಖೆಗಳು.	ಪರಊರ ಸಂಗ್ರಹಣ ಡ್ರಾಫ್ಟುಗಳು.

ESTD 1906

Canara Bank, Limited.

(Incorporated in British India with limited Liability.)

ಭಾರತಕ್ಕೆ ಸ್ವಾತಂತ್ರ್ಯ ದಾನಮಾಡಿರಿ.

ರುಸವೆಲ್ಟರಿಗೆ ಫಿಲಿಪ್ಸರ ಪತ್ರ

ಅಮೇರಿಕಾಧ್ಯಕ್ಷ ರುಸವೆಲ್ಟರ ರಾಯಭಾರಿಯಾಗಿ ಕಳೆದ ವರುಷ ಭಾರತದಲ್ಲಿ ಸಂಚರಿಸಿ ಹೋಗಿದ್ದ ಮಿ. ವಿಲಿಯಮ್ ಫಿಲಿಪ್ಸರು ಅಧ್ಯಕ್ಷರಿಗೊಪ್ಪಿಸಿದ ವರದಿಯು ಇದುವರೆಗೂ ಬೆಳಕು ಕಂಡಿರಲಿಲ್ಲ. ಗಾಂಧೀಜೀ ಭೇಟಿಗಾಗಿ ಆಗಾಖಾನ್ ಅರಮನೆ ಪ್ರವೇಶಿಸಬೇಕೆಂಬ ಫಿಲಿಪ್ಸ್ ಬಯಕೆಯನ್ನು ಕೂಡಾ ಲೋರ್ಡ್ ಲಿನ್‌ಲಿತ್‌ಗೋ ಧಿಕ್ಕರಿಸಿ ಅವಮಾನಿಸಿದ್ದರು. ಆದರೂ ಬಾಯಿ ಬಿಡದೆ ಮೂಕ ಯಂತ್ರದಂತೆ ಎಲ್ಲವನ್ನೂ ಪರಾಮರ್ಶಿಸುತ್ತಾ ಹೋಗುತ್ತಿದ್ದ ಫಿಲಿಪ್ಸರು ಆ ಕಾಲದಲ್ಲಿ ಹಿಂದೀಯರಿಂದಲೂ ಟೀಕಿಸಲ್ಪಟ್ಟಿದ್ದರು. ಈಗ ಕಾಲ್ವಿನ್ ಡಿ. ಜೋನ್ಸನ್ ಎಂಬ ಪ್ರತಿನಿಧಿಗಳು ಅಮೇರಿಕದ ಪ್ರತಿನಿಧಿಸಭೆಯ ಮುಂದೆ ತಂದ ಠರಾವೊಂದರಲ್ಲಡಕವಾಗಿ ಮಿ. ಫಿಲಿಪ್ಸರು ಅಧ್ಯಕ್ಷರಿಗೆ ಬರೆದಿದ್ದ ಪತ್ರವು ನ್ಯೂಯೋರ್ಕ್ ಪತ್ರಿಕೆ 'ಅಮೇರಿಕನ್'ದಲ್ಲಿ ಪ್ರಕಟವಾಗಿದೆ. ಅದು ಬ್ರಿಟಿಷ್ ಆಳ್ವಿಕೆಯ ಜಾತಕವಾಗಿರುವಂತೆ, ಮಿ. ಫಿಲಿಪ್ಸರ ನ್ಯಾಯಾನುವರ್ತಿತ್ವದ ದ್ಯೋತಕವಾಗಿಯೂ ಇದೆ. ಇದರ ಸಾರಾಂಶವಿದು:—

ಅಶ್ರದ್ಧೆಯ ಅಪಾಯ

"ಮುಂದಿನ ಬರ್ಮಾ ಜಪಾನು ವಿರುದ್ಧ ಹೋರಾಟದಲ್ಲಿ, ಹಿಂದುಸ್ಥಾನವೇ ನಮ್ಮ ಮುಖ್ಯ ನಿಲ್ದಾಣವೆಂಬುದು ಖಚಿತವಿರುವಾಗ, ನಮ್ಮ ಸುತ್ತಲೂ ಸಹಾನುಭೂತಿಯ ಭಾರತವಿರಬೇಕೇ ಹೊರತು ವ್ಯಂಗ್ಯಧಾರಿ ಇಲ್ಲವೇ ದ್ವೇಷಮಯೀ ಭಾರತವಿರದಂತೆ ನೋಡುವದು ಅತ್ಯಾವಶ್ಯವಿದೆ. ಜಪಾನಿನ ವಿರುದ್ಧ ಯುದ್ಧದ ಮುಖ್ಯ ಹೊಣೆಯನ್ನು ನಾವೇ ಹೊರಬೇಕೆಂಬಂತೆ ಕಾಣುತ್ತಿದೆ. ಈ ಕಾರ್ಯದಲ್ಲಿ ನಾವು ಮಾತ್ರ ಸಹಾಯವನ್ನಲ್ಲದೆ ಹೆಚ್ಚೇನನ್ನೂ ಮಾಡುವಬಯಕೆ ಬ್ರಿಟಿಷರಿಗಿರುವಂತೆ ತೋರುವದಿಲ್ಲ. ಸದ್ಯಕ್ಕೆ ಕೇವಲ ಕಾನೂನುರೀತ್ಯಾ ಹಿಂದೀ ಜನತೆ ಯುದ್ಧ ಭಾಗಿಯಾಗಿದೆ. ಹಲವು ಕಾರಣಗಳಿಂದಾಗಿ, ನ್ಯಾಯ ವಿಧಾಯಕ ಸಭೆಗಳ ಹಿಂದೀ ಪ್ರಮುಖರೊಡನೆ ಬ್ರಿಟಿಷ್ ಸರಕಾರವು ಈ ಕುರಿತು ಮುಂದಾಗಿ ಪರ್ಯಾಲೋಚನೆ ನಡಿಸಿಲ್ಲ. ಸರಕಾರದಲ್ಲಿ ತಮಗೆ ಸ್ಥಾನಮಾನವಿಲ್ಲದಿರುವುದರಿಂದ ಯುದ್ಧ ಜವಾಬ್ದಾರಿಯೂ ತಮ್ಮ ಮೇಲಿಲ್ಲ ಎಂದು ಭಾರತೀಯರು ಭಾವಿಸುತ್ತಿದ್ದಾರೆ. ಮಿತ್ರ ರಾಷ್ಟ್ರಗಳ ಯುದ್ಧ ಗುರಿಗಳಾಗುವುವೂ ತಮಗೆ ಅನ್ವಯವಾಗುವಂತಿಲ್ಲವೆಂಬುದು ಅವರಿಗೆ ಮನದಟ್ಟಾಗಿದೆ. ಅಂದ ಮೇಲೆ ತಾವು ಹೋರಾಡತಕ್ಕ ಅಂಶವಾವುದೂ ಈ ಯುದ್ಧದಲ್ಲಿಲ್ಲವೆಂದು ಅವರು ನಂಬುತ್ತಾರೆ. ಬ್ರಿಟಿಷ್ ಪ್ರಧಾನ ಮಂತ್ರಿಗಳೇ ಅಟ್ಲಾಂಟಿಕ್ ಘೋಷಣೆಯು ಹಿಂದುಸ್ಥಾನಕ್ಕೆ ಹೊಂದಿಕೆಯಾಗುವದಿಲ್ಲವೆಂದಿರುವಾಗ, ಅದ ಕೇವಲ ಬಿಳಿ ಜನಾಂಗದ ಲಾಭಕ್ಕಾಗಿ ಇದೆಯೇನೋ ಎಂದು ಹಿಂದೀ ಪ್ರಮುಖರು ಬೆರಗುಗೊಂಡಿರುವದು ಸ್ವಾಭಾವಿಕ.

ಹಿಂದೀ ಸೇನೆ

ಸದ್ಯದ ಹಿಂದೀಸೇನೆಯು ಕೇವಲ ಸಂಬಳಕ್ಕಾಗಿ ಸೇರಿರುವಂತಹದು. ಆ ಸೇನೆಯ ಪೈಕಿ ವೀರ ಜನಾಂಗಗಳಿಂದ ಆರಿಸಲ್ಪಟ್ಟಿದ್ದ ಒಂದು ಭಾಗ ಮಾತ್ರವೇ ಯುದ್ಧರಂಗಗಳಲ್ಲಿ ಪ್ರತ್ಯಕ್ಷ ಪರೀಕ್ಷೆಗೊಳಗಾಗುತ್ತಿದೆ. ಸೇನೆಯಲ್ಲಿ ಶೇಕಡಾ 33ರಷ್ಟು ಮಾತ್ರವೇ ಈ ವೀರ ಯೋಧರಿದ್ದಾರೆ. ಈ ಪರಿಸ್ಥಿತಿಯ ಕುರಿತು ಅವರಲ್ಲೂ ಮುಖ್ಯವಾಗಿ ಹಿಂದೀ ಆಫೀಸರರ ಕುರಿತು ಜನರಲ್ ಸ್ಟಿಲ್ [illegible] ಆತುರ ಪ್ರದರ್ಶಿಸಿದ್ದರು. ಯುದ್ಧದ ಕಡೆಗಿನ [illegible]ಜನಿಕರ ಧೋರಣೆಯಂತೂ ಇದಕ್ಕಿಂತಲೂ ಕಳಪೆಯದು. ಬರಗಾಲ, ಅತಿರೇಕ ಜೀವನ ವೆಚ್ಚ ಮತ್ತು ರಾಜಕೀಯ ಬಿಕ್ಕಟ್ಟುಗಳು ಹಿಂದೀಯರಲ್ಲಿ ಗಣವು, ಜಿಗುಪ್ಸೆ ಮತ್ತು ದ್ವೇಷವನ್ನು ಹುಟ್ಟಿಸಿವೆ. ಹಲವು ಪಂಗಡಗಳಿಂದಾಗಿ ಹಿಂದುಸ್ಥಾನವು ರಾಜಕೀಯತಃ ಹಂಚಾಗಿರುವದಾದರೂ ಎಲ್ಲರಲ್ಲೂ ಸಮಾನ ಗುರಿಯೊಂದಿದೆ. ಅದೆಂದರೆ ಬ್ರಿಟಿಷ್ ಆಳ್ವಿಕೆಯಿಂದ ಬಿಡುಗಡೆ ಹೊಂದಿದ ಪೂರ್ಣ ಸ್ವಾತಂತ್ರ್ಯ.

ಇದು ನಮ್ಮ ಜವಾಬ್ದಾರಿ

ಈ ಭಾಗದಲ್ಲಿ ಯಾವ ಸುಧಾರಣೆಯಾಗುವದಕ್ಕೂ ಸದ್ಯದ ರಾಜಕೀಯ ಸ್ಥಿತಿಯೊಂದು ತಡೆಯಾಗಿದೆ. ಮಾತುಗಳಿಗೀಗ ಬೆಲೆ ಬರುವಂತಿಲ್ಲ; ಅವು ಪರಿಸ್ಥಿತಿಯನ್ನು ಇನ್ನಷ್ಟು ಕೆಡಿಸುವದೇ ಸರಿ. ಬ್ರಿಟಿಷರು ಕಾರ್ಯಶೀಲರಾಗಲು ಇದೀಗ ಸಂದರ್ಭ. ಯುದ್ಧಾನಂತರ ಇಂತಿಷ್ಟನೇ ತಾರೀಕಿನೊಳಗೆ ಹಿಂದುಸ್ಥಾನವು ಸ್ವಾತಂತ್ರ್ಯ ಹೊಂದುವದೆಂದು ಬ್ರಿಟಿಷ್ ಚಕ್ರವರ್ತಿಗಳಿಂದೊಂದು ಜಾಹೀರನಾಮೆ ಹೊರಡಿಸಿ ಇದನ್ನು ಅವರ ಸಾಧಿಸಬಹುದು ಮತ್ತು ಈ ಕುರಿತು ವಿಶ್ವಾಸ ಹುಟ್ಟುವಂತೆ, ತಾತ್ಕಾಲಿಕವಾದ [illegible] ಪ್ರಾತಿನಿಧ್ಯವುಳ್ಳ ಕೇಂದ್ರ ಸರಕಾರವೊಂದನ್ನು ಕೂಡಲೇ ಸ್ಥಾಪಿಸಿ, ಮಿತವಾದ ಅಧಿಕಾರಗಳನ್ನು ಅದಕ್ಕೆ ಕೊಟ್ಟುಬಿಡಬಹುದು. ಪ್ರಿಯ ಅಧ್ಯಕ್ಷರೇ, ಹಿಂದುಸ್ಥಾನದಲ್ಲಿ ನಮಗಿರುವ ಸೇನಾ ಸ್ಥಿತಿಗನುಗುಣವಾಗಿ ಈ ವಿಷಯಗಳಲ್ಲೆಲ್ಲಾ ನಮ್ಮ ಮಾತು ನಡೆಯುವಂತಿರಬೇಕೆಂದೇ ನನ್ನ ಖಂಡಿತಾಭಿಪ್ರಾಯ. 'ಇದು ನಿಮ್ಮ ಉದ್ಯೋಗವಲ್ಲ' ಎಂದು ಬ್ರಿಟಿಷರನ್ನುವದು ಸರಿಯಲ್ಲ. ಯಾಕೆಂದರೆ ಜಪಾನಿ ವಿರುದ್ಧ ಯುದ್ಧದಲ್ಲಿ ಮುಖ್ಯ ಭಾಗವಹಿಸಬೇಕಾದವರು ಬಹುಶಃ ನಾವೊಬ್ಬರೇ. ನಾವೇ ಕುರಿತು ಏನೂ ಮಾಡದೆ ಹೋದರೆ ಮತ್ತು ಬ್ರಿಟಿಷರ ಅಭಿಪ್ರಾಯದಂತೆ ಹಿಂದುಸ್ಥಾನದ ಕ್ಲಿಷ್ಟಕರ ಸ್ಥಿತಿಯಿಲ್ಲವೆಂದೋ, ಅದು ನಮ್ಮ ಉದ್ಯೋಗವಲ್ಲವೆಂದೋ ಒಪ್ಪಿಕೊಳ್ಳತಕ್ಕರೆ, ಹಿಂದುಸ್ಥಾನದಲ್ಲೇಳಬಹುದಾದ ಹಲವು ಘೋರ ಸಮಸ್ಯೆಗಳಿಗೆ ನಾವು ತಯಾರಿರಬೇಕು. ಅದೆಂದರೆ ನಿರಾಶೆ ಮತ್ತು ದುಃಖದ ಪರಿಣಾಮವಾಗಿ ನೂರಾರು ಮಿಲಿಯ ದಾಸ್ಯಪೀಡಿತ ಜನರಲ್ಲೇಳುವ ಬಿಳಿಜನಾಂಗ ವಿರುದ್ಧ ಜ್ವಾಲೆಯೇ ಸರಿ.

ಆಸ್ವಾದವರ ನಿರಾಶೆ

ಈ ಯುದ್ಧವು ಫೇಸಿಸ್ಟ್ ಮತ್ತು ಸಾಮ್ರಾಜ್ಯವಾದೀ ರಾಷ್ಟ್ರಗಳೊಳಗಿನ ಯುದ್ಧವೆಂದೇ ಏಶ್ಯಾದ ಜನರ ದೃಢಭಾವನೆ. ನನ್ನೀ ಅಭಿಪ್ರಾಯವು ಇತರ ಹಲವು ಮರ್ಮಜ್ಞರಿಂದ ಮತ್ತು ಸೇನಾ ತಜ್ಞರಿಂದ ಸಮರ್ಥಿಸಲ್ಪಟ್ಟಿದೆ. ಬ್ರಿಟನಿನ ಒಂದು ಉದಾರ ದಾನವು ಈ ಅನಪೇಕ್ಷಿತ ರಾಜಕೀಯ ಪರಿಸ್ಥಿತಿಯನ್ನು ಬದಲಾಯಿಸಬಲ್ಲುದು. ಆಗ ಹಿಂದುಸ್ಥಾನವು ಜಪಾನಿನ ವಿರುದ್ಧ ಯುದ್ಧ ಯತ್ನದಲ್ಲಿ ಸರ್ವಶಕ್ತಿಯಿಂದ ಭಾಗವಹಿಸುವದನ್ನು ನಿರೀಕ್ಷಿಸಬಹುದು. ಆಂಗ್ಲೋ—ಅಮೇರಿಕನ್ [illegible]ಯನ್ನು [illegible] ಮತ್ತು ಅಪನಂಬಿಕೆಯಿಂದ ಕಾಣುತ್ತಿರುವ ಚೀನಕ್ಕೆ ಕೂಡಾ, ನಾವು ನಿಜವಾಗಿಯೂ ಒಂದು ಲೋಕೋತ್ತಮ ವ್ಯವಸ್ಥೆಗಾಗಿ ಹೋರಾಡುತ್ತಿರುವೆವೆಂಬ ಭರವಸ ಮೂಡಬಹುದು. ಜಾಪಾನಿನಿಂದ ಆಕ್ರಮಿಸಲ್ಪಟ್ಟಿರುವ ವಸಾಹತುಗಳಾದರೂ ತಾವು ಪುನಃ ತಮ್ಮ ಹಳೆಯ ಯಜಮಾನರ ಸ್ವಾಧೀನವಾಗುವೆವೆಂಬುದನ್ನೇ ಕಾಣುವ ಬದಲಿಗೆ ವಿಶೇಷಾಭಿವೃದ್ಧಿ ಹೊಂದುವೆವೆಂದು ನಿರೀಕ್ಷಿಸುವಂತಾಗಬಹುದು'.

NOTICE

ಉಡುಪಿ ಡಿ| ಮುಂ| ಕೋರ್ಟಿನಲ್ಲಿ.

S. C No. 192/1944.

ಕೆ. ಅಣ್ಣಯ್ಯ ಶೆಟ್ಟಿ — ವಾದಿ.

ಮತ್ತು

ಕೊರಗ ಪೂಜಾರಿ. ತಾವು ಗಡ್ಡ ಪೂಜಾರಿಯ ಅಳಿಯ—ಉಡುಪಿ ತಾಲ್ಲೂಕು [illegible] ಗ್ರಾಮ —ಪ್ರತಿವಾದಿ.

ಯಿವರೊಳಗೆ

ಸದ್ರಿ ಪ್ರತಿವಾದಿಗೆ ಯೀ ಮೂಲಕ ತಿಳಿಯಪಡಿಸುವದೇನೆಂದ್ರೆ—

ವಾದಿಗೆ ಪ್ರತಿವಾದಿಯಾದ ನೀವು ತಾ 29-4-1941ರಲ್ಲಿ ರೂಪಾಯಿ 50-0-0ಕ್ಕೆ ಬರ್ಸಿಕೊಟ್ಟ [illegible]ನೋಟು ಮೇರೆಗೆ ಬಾಕಿಬರತಕ್ಕದ್ದಾದ ಅಸಲು ಬಡ್ಡಿ ಖರ್ಚುಗಳಿಗೆ ನಿಂತು ವಾದಿ ಮಾಡಿದ ಸದ್ರಿ ವ್ಯಾಜ್ಯದ ತನಿಖೆಯು ತಾರೀಕು 18-9-44ಕ್ಕೆ ಇರುವದಾಗಿಯದೆ. ಆದುದರಿಂದ ನಿಮಗೆ ಯೇನಾದರೂ ಆಕ್ಷೇಪ ಕೊಡುವದಿದ್ದರೆ ಮೇಲ್ಕಂಡ ತಾರೀಕಿಗೆ 11 ಗಂಟೆಗೆ ತಪ್ಪದೆ ಹಾಜರಾಗಲಿಕ್ಕೆ ತಪ್ಪಿದರೆ ಸದ್ರಿ ವ್ಯಾಜ್ಯವು ನಿಮ್ಮ ಯೆಕ್ಸಪಾರ್ಟೆಯಿಂದ ತೀರ್ಮಾನಿಸಲಾಗುವದೆಂಬದಾಗಿ ಯೀ ಮೂಲಕ ತಿಳಿಸಲಾಗುತ್ತದೆ.

29-8-44 | Udipi | **K. J. Ballal.** Vakil for pltf

CHAMPAE'S
Snow & Castrex
(Sole Distributers for (India.)
Sukhananda Stores
Santhekatte, UDIPI, S. K.

ಪ್ರಕಟಣೆ

ಬಿಲ್ಲವ ಮಹಾ ಜನ ಸಂಘ ಉದ್ಯಾವರ.

ಉದ್ಯಾವರ ಬಿಲ್ಲವ ಮಹಾ ಜನ ಸಂಘದವರು ಈ ಮೂಲಕ ಸರ್ವ ಮಹಾಶಯರಲ್ಲಿ ವಿಜ್ಞಾಪಿಸಿಕೊಳ್ಳುವದೇನೆಂದರೆ:—ಉದ್ಯಾವರದ ಯು. ಪಗ್ಗು ಮಾಸ್ಟರ್ ಎಂಬವರು ಪರವೂರುಗಳಲ್ಲಿ ವಾ— ಜಿಲ್ಲೆಯ ಬೇರೆ ಬೇರೆ ಕಡೆಗಳಲ್ಲಿ ಸಂಚರಿಸಿ ಈ ಮೇಲಿನ ಸಂಘದ ಹೆಸರನ್ನು ಹೇಳಿಕೊಂಡು ಉದಾರ ಮಹಾಶಯರಿಂದ ಸಹಾಯ ಧನ ವಸೂಲು ಮಾಡಿ ದುರುಪಯೋಗ ಮಾಡುತ್ತಾರೆಂದು ತಿಳಿಯುತ್ತೇವೆ. ಸದ್ರಿಯವರಿಗೆ ಈ ಸಂಘದೊಡನೆ ಯಾವ ತರದ ಸಂಬಂಧ-ವ—ಹಣ ವಸೂಲು ಮಾಡುವ ಹಕ್ಕು ಇರುವುದಿಲ್ಲ. ಆದ್ದರಿಂದ ಇನ್ನು ಮುಂದೆ ಸದ್ರಿಯವರ ಕೂಡೆ ಸಂಘದ ಹೆಸರಿನಲ್ಲಿ ಧನ ಸಹಾಯ ವಸೂಲು ಕೊಡಬಾರದಾಗಿ ವಿನಂತಿಸಿಕೊಳ್ಳುತ್ತೇವೆ

—ಅಧ್ಯಕ್ಷರು

WANTED

A Higher Grade Trained Teacher Application should reach the undersigned on or before 15-9-'44.

V N Shetty,
Manager, M. A. E School,
Nadoor, Post Barkur (S.K)

ಸ್ಥಾಪಿತ] 'ಕಿರಿಯರ ಪ್ರಪಂಚ'ದ]1930

— ನೋಡಿದರೆ ಬಿಡದಿರುವ ಪುಸ್ತಕಗಳು —

ಅನ್ನದೇವರು ಮತ್ತು ಇತರ ಕತೆಗಳು	1	0	0
ಖಲೀಲ್ ಗಿಬ್ರಾನ್ [illegible] ಕ್ರಾಂತಿಕಾರಕ [illegible] ಕತೆಗಳ ಸಂಗ್ರಹ.			
ನಗೆ ನೋಟಗಳು (ಕೆ. ಸಿ. ರೆಡ್ಡಿ. ಬಿ. ಎ. ಎಲ್. ಟಿ.)	0	11	0
ನಗಿಸಿ, ತಣಿಸಿ, ವಿಚಾರವಿಟ್ಟಿಸುವ [illegible] ವಿನೋದ ಚಿತ್ರಗಳ ಸಂಗ್ರಹ			
ಮೂರು ಪ್ರಹಸನಗಳು (ಕೊರಡ್ಕಲ್) ಓದಿದರೂ	0	11	0
ಅಭಿನಯಿಸಿದರೂ ಸಾ ರಸವಾಗಿ ತೋರುವ ೩ ಪ್ರಹಸನಗಳ ಸಂಗ್ರಹ			
ಪ್ರಕಾಶ (ಸರಸ್ವತಿ [illegible] ಅನುವಾದ)	1	12	0
ಶೇಟ್ ಗೋವಿಂದದಾಸ [illegible] ರಾಜಕೀಯ [illegible] ಅನುವಾದ			
ಭಾರತೀಯ ಕತೆಗಳು (ಕೊರಡ್ಕಲ್ ಶ್ರೀನಿವಾಸರಾವ್)	0	14	0
ಎ. ಎಸ್. ಪಿ. ಅಯ್ಯರರ Tales of Ind ಕಥಾವಳಿಯ ಅನುವಾದ.			
ನಾರೀ ಹೃದಯ (S. L. ಸುಬ್ರಹ್ಮಣ್ಯಂ)	0	11	0
ಸ್ತ್ರೀ ಹೃದಯವನ್ನು ವ್ಯಕ್ತಗೊಳಿಸುವ [illegible] ಕತೆಗಳ ಸಂಗ್ರಹ.			
ಸೇವಾಪಥ (ನಾಟಕ—ಶೇಟ್ ಗೋವಿಂದದಾಸ)	0	8	0
ರಂಗ ಭೂಮಿ (ನಾಟಕ—S. ವೆಂಕಟರಾಜ)	0	[illegible]	0
ಪ್ರೇಮ ವಿಜಯ (ನಾಟಕ—ಕೆ. ಕೆ. ಶೆಟ್ಟಿ)	0	12	0
ದೇಶ ಭಕ್ತ (ನಾಟಕ— ಕೆ. ಕೆ. ಶೆಟ್ಟಿ)	0	11	0
ನಂದಾದೀಪ (ಕಥಾ ಸಂಗ್ರಹ—ಕೊರಡ್ಕಲ್)	0	10	0
ಸನ್ಯಾಸಿಯ ಸೋಗಿನಲ್ಲಿ (ಕಾದಂಬರಿ- ಕೆ. ಕೆ. ಶೆಟ್ಟಿ)	0	8	0
ಪುರುಷ ವಧು (ಪ್ರಹಸನ ,,)	0	1	0
ಹೆಂಡ್ತಿ ಗಂಡನಾದರೆ (,, ,,)	0	4	0
ಸ್ವೇಚ್ಛಾಚಾರಿಣಿ ಯಾರು (ನಾಟಕ ,,)	0	12	0
ಮುಂದಿನ ಜೀವರು (ಪ್ರಬಂಧ ,,)	0	3	0
ಮಧುವನ (ಕಥಾ ಸಂಗ್ರಹ)	3	0	0
ಕಾವ್ಯ ಸಾಮ್ರಾಜ್ಯ (ಕವಿತಾ ಸಂಗ್ರಹ)	0	12	0
ಕುಶಲವ (ನಾಟಕ—ಕೆ. ಕೆ. ಶೆಟ್ಟಿ)	0	5	0
ನಾಡ ಕತೆಗಳು (ಕಥಾ ಸಂಗ್ರಹ)	0	3	0
ಸಂಶಯ ಪಿಶಾಚಿ (ನಾಟಕ— ಕೆ. ಕೆ. ಶೆಟ್ಟಿ)	0	8	0
ಸ್ವತಂತ್ರ ಜೀವನೋಪಾಯ(ನಾಟಕ—ಕೆ. ಎಚ್. ಶೆಟ್ಟಿ)	0	3	0

ನವಭಾರತ ಪುಸ್ತಕ ಭಂಡಾರ, ಉಡುಪಿ.

The Canara Banking Corporation Limited.

ESTD' 1906.

Authorised Capital	Rs. 25,00,000/-
Subscribed Capital ..	,, 16,00,000/-
Paid up Capital .	,, 14,14,580/-
Reserves	,, 4,10,000/-

Total Working Capital—Exceeds One Crore.

With a net work of Branches and Agencies in almost all the principal Cities of India, we offer exceptional facilities and competitive rates for collection of Bills and issue of Drafts and Telegraphic Transfers.

ಉಡುಪಿ, ಗುರುವಾರ ೭-೯-೧೯೪೪

ಮಿ. ಫಿಲಿಪ್ಸರ ವಾದ

ಅಮೇರಿಕಾಧ್ಯಕ್ಷರ ರಾಯಭಾರಿಯಾಗಿ ಭಾರತದಲ್ಲಿ ಸಂಚರಿಸಿ ಹೋಗಿದ್ದ ಮಿ. ಫಿಲಿಪ್ಸರು ಅಧ್ಯಕ್ಷ ರುಸವೆಲ್ಟರಿಗೆ ಬರೆದಿದ್ದ ಪತ್ರದ ಮುಖ್ಯಾಂಶವನ್ನು ಈ ಸಂಚಿಕೆಯ ಇನ್ನೊಂದೆಡೆ ಕೊಟ್ಟಿರುತ್ತೇವೆ. ಮಿ. ಫಿಲಿಪ್ಸರ ಅಭಿಪ್ರಾಯದಲ್ಲಿ ಸತ್ಯವಾಗಿರುವ ನ್ಯಾಯಕ್ಕಾಗಿ ಹಿಂದೀಯರದಕ್ಕೆ ಬೆಲೆಕೊಟ್ಟಿದ್ದಾರೆ; ತನ್ನ ಮಾತನ್ನು ತಾನೇ ನಡಿಸಿಕೊಡಲು ಅಧ್ಯಕ್ಷ ರುಸವೆಲ್ಟರು ಬದ್ಧರಿದ್ದಾರಾದರೆ, ಮಿ. ಫಿಲಿಪ್ಸರ ವಾದಕ್ಕೆ ಅವರೂ ಬೆಲೆ ಕೊಡಲೇ ಬೇಕು. ಭಾರತೀಯರ ಅಸಮಾಧಾನವು ಅಮೇರಿಕಾಧ್ಯಕ್ಷರಿಗೆ ಆತುರದ ವಿಷಯವಾಗಿದ್ದುದರಿಂದಲೇ ಸತ್ಯಸ್ಥಿತಿ ತಿಳಿದುಬರಲು ಅವರು ತನ್ನ ರಾಯಭಾರಿಯನ್ನು ಹಿಂದೂದೇಶಕ್ಕೆ ಕಳುಹಿಕೊಟ್ಟುದಾಗಿದೆ. ಈ ಕಾಲದಲ್ಲಿ ಅಧ್ಯಕ್ಷರು ವ್ಯಕ್ತಿಶಃ ಪಡೆಯಬೇಕಾಗಿದ್ದ ಅನುಭವಗಳಲ್ಲಿ ಹಿಂದುಸ್ಥಾನದ ಸ್ಥಿತಿಪರಿಚಯವೂ ಒಂದು. ಫಿಲಿಪ್ಸರ ಪತ್ರದಲ್ಲಿರುವಂತೆ ಹಿಂದುಸ್ಥಾನವು ಜಪಾನಿ ಹೋರಾಟದ ಮುಖ್ಯ ನಿಲ್ದಾಣವಾಗಿದ್ದು ಆ ಹೋರಾಟದ ದೊಡ್ಡ ಹೊಣೆ ಅಮೇರಿಕದ ಮೇಲಿರುವದೇ ಇದಕ್ಕೆ ಕಾರಣ. ರುಸವೆಲ್ಟರಿಗದಕ್ಕವಕಾಶ ದೊರೆಯಲಿಲ್ಲ; ಅವರು ತನ್ನ ಪ್ರತಿನಿಧಿ ಫಿಲಿಪ್ಸರ ಮೂಲಕ ಭಾರತವನ್ನು ಅರಿತುಕೊಂಡರು. ಸದ್ಯಸ್ಥಿತಿಯಲ್ಲಿ ಹಿಂದೀಯರ ಪೈಕಿ ಪಂಡಿತ ಜವಾಹಿರಲಾಲರಂಥವರಿಂದ ತಿದ್ದಲಾಗುವ ತಪ್ಪು ಕೂಡಾ ಈ ತಿಳುವಳಿಕೆಯಲ್ಲಿ ಗೋಚರಿಸುವದಿಲ್ಲ. ಮಿ. ಫಿಲಿಪ್ಸರು ಸಂಪೂರ್ಣ ಸರಿ. ಅಧ್ಯಕ್ಷ ರುಸವೆಲ್ಟರು ಈ ಅಭಿಪ್ರಾಯವನ್ನಲ್ಲಗಳೆದರೆ ತನ್ನ ಮನಸ್ಸಾಕ್ಷಿಯನ್ನು ಅಲ್ಲಗಳೆದ ಆತ್ಮದ್ರೋಹಕ್ಕೊಳಗಾಗಬೇಕಾದೀತು. ಮಿ. ಫಿಲಿಪ್ಸರ ಆಕ್ಷೇಪಾರ್ಹ ಗುಣಗಳನ್ನು ಪ್ರೆ. ರುಸವೆಲ್ಟರು ಗುರುತಿಸಬೇಕಾಗಿದ್ದುದು ಅವರನ್ನು ಆರಿಸುವ ವೇಳೆಯಲ್ಲೇ. ಹೊರತು, ಕೆಲಸ ಮುಗಿದು ಫಲಿತಾಂಶ ದೊರೆತ ಈ ಕಾಲದಲ್ಲಿ ಅಥವಾ ಅಮೇರಿಕದಿಂದ ಹೊರಡುವ ವರೆಗೆ ಯಥಾರ್ಥವಾದಿಯಾಗಿದ್ದ ರಾಯಭಾರಿ, ಹಿಂದುಸ್ಥಾನಕ್ಕೆ ಬಂದೊಡನೆ ಪಕ್ಷಪಾತಿಯಾದರೆಂದು ಆರೋಪಿಸಲು ಸಾಧ್ಯವೇ? ಅದಕ್ಕವಕಾಶವಿಲ್ಲ. ಮೇಲಾಗಿ ಮಿ. ಫಿಲಿಪ್ಸರ ಆಗಮನದ ಖಾತ್ರಿ ಕೇಳಿದಾಗ ಹುರುಪುಗೊಂಡಿದ್ದ ಭಾರತೀಯರು ಫಿಲಿಪ್ಸರ ವರ್ತನೆಯನ್ನಿಲ್ಲಿ ಪ್ರತ್ಯಕ್ಷ ಕಂಡ ಮೇಲೆ ಅವರನ್ನು ಅಗಣ್ಯವಾಗಿಡಿದ್ದರು. ಭಾರತದ ಪ್ರಕ್ಷುಬ್ಧ ವಾತಾವರಣವನ್ನು ಕಂಡೂ ಬಾಯಿಬಿಡಲೊಪ್ಪದ ಈ ಪ್ರತಿನಿಧಿಯ ಅಮೇರಿಕನ್ ಸಭ್ಯತೆಯು ಹಿಂದೀ ಪತ್ರಿಕೆಗಳಿಂದಲೂ ಟೀಕಿಸಲ್ಪಟ್ಟಿದ್ದಿತು. ಗಾಂಧೀ ಭೇಟಿ ಯಾಚನೆಗೆ ವೈಸರಾಯರಿಂದ ದೊರೆತ ನಕಾರ- ಮೂಕಸಂಚಾರಕ್ಕಾಗಿ ಹಿಂದೀಯರಿಂದ ದೊರೆತ ತಾತ್ಸಾರ, ಇವೆರಡನ್ನೂ ನಿರುದ್ವೇಗಪೂರ್ವಕ ಸ್ವೀಕರಿಸಿಕೊಂಡು ಮಿ. ಫಿಲಿಪ್ಸರು, ಪರಿಸ್ಥಿತಿಯನ್ನು ತನ್ನ ನಿರ್ಲಿಪ್ತ ನ್ಯಾಯಬುದ್ಧಿಯ ತಕ್ಕಡಿಯಲ್ಲಿ ತೂಗಿಯೇ ಸಂಗ್ರಹಿಸಿದ್ದರು. ಚೀನಕ್ಕೆ ಹೋಗಿ ಬಂದ ಮಿ. ವಿಂಡೆಲ್ ವಿಲ್ಕಿಯವರಂತೆ, ಸಹಾನುಭೂತಿಯನ್ನು ಕಕ್ಕಿಕೊಂಡೇ ಹೊರಟವರು ಮಿ. ಫಿಲಿಪ್ಸರಲ್ಲ. ಇಂಥವರ ಆಗ್ರಹದ ವಿಜ್ಞಾಪನೆಯನ್ನು ಅಮೇರಿಕಾಧ್ಯಕ್ಷರು ಈ ವರೆಗೂ ಅದುಮಿಟ್ಟುಕೊಂಡುದರ ಗುಟ್ಟು ತಿಳಿಯುವದಿಲ್ಲ. ರುಸವೆಲ್ಟರು ಫಿಲಿಪ್ಸರೊಡನೆ ಅಭಿಪ್ರಾಯ ಭೇದ ಪಡುವದು ನಿಯಮಬಾಹಿರವಾದುದರಿಂದ ಅಸಂಭವ. ನಿರೀಕ್ಷೆಯಂತೆ ಮಿ. ಚರ್ಚಿಲ್ಲರು ಅಧ್ಯಕ್ಷರ ಅಭಿಪ್ರಾಯಕ್ಕೆ ತಣ್ಣೀರೆರಚಿರಬಹುದೆ? ಪ್ರಿಯರಾಗಿರಬೇಕು ಲೋಕಶಾಂತಿಯ ಅಭಯದಾನಗಳನ್ನು ಮಾಡಿದವರಲ್ಲಿ ಅಧ್ಯಕ್ಷ ರುಸವೆಲ್ಟರು ಅಗ್ರಗಣ್ಯರು. ಜಗಜ್ಜಾಹೀರಾಗಿ ಇಂತಹ ಸ್ವಾತಂತ್ರ್ಯ ಪ್ರವಾದಿಯಾಗಿರುವ ರುಸವೆಲ್ಟರ ಅಂತರ್ಯದಲ್ಲಿ ಇಷ್ಟೊಂದು ದೌರ್ಬಲ್ಯ ಇರುವದಾದರೆ, ಮುಂದಿನ ಜಗತ್ತಿರುವದು ಮಿ. ಚರ್ಚಿಲ್ಲರೊಬ್ಬರ ಕೈಯಲ್ಲೇ! 'ಬ್ರಿಟಿಷ್ ಸಾಮ್ರಾಜ್ಯವನ್ನು ಬರಖಾಸ್ತು ಪಡಿಸಲು ಜನ್ಮವೆತ್ತಿರದ' ಮಿ. ಚರ್ಚಿಲ್ಲರಿಂದ ಜಗತ್ತು ಸಮಾಧಾನ ಹೊಂದುವದು ಅಸಾಧ್ಯ. ಆದ್ದರಿಂದ ಮಿ. ಫಿಲಿಪ್ಸರ ವಾದವು, ಪ್ರಾಮುಖ್ಯ ಜಾಗತಿಕ ಪ್ರಶ್ನೆಯೊಂದನ್ನೆತ್ತಿ ಹಿಡಿದಿದೆ. ಇದಕ್ಕೆ ನ್ಯಾಯವಾದ ಉತ್ತರ ದೊರೆಯುವಂತೆ, ಭಾರತದ ಬಿಕ್ಕಟ್ಟಿನ ನಿವಾರಣೆಗಾಗಿ ನಾಡದು ಗಾಂಧಿ-ಜಿನ್ನಾರೊಳಾಗುವ ಬದಲಿಗೆ, ಮೊನ್ನೆಯೇ ಚರ್ಚಿಲ್ ರುಸವೆಲ್ಟರ ಭೇಟಿ ನಡೆಯಬೇಕಿದ್ದಿತು. ಇನ್ನು ನಾಳೆಯಾದರೂ, ಅದು ನಡೆಯಬಾರದೇಕೆ? ಮಿ. ಫಿಲಿಪ್ಸರ ವಾದದಂತೆ ಅಧ್ಯಕ್ಷ ರುಸವೆಲ್ಟರು ಭಾರತದ ಪ್ರಶ್ನೆಯು ತನ್ನ ಸ್ವಂತ ಹೊಣೆಯೆಂದು ಭಾವಿಸಿ ಸ್ವಾತಂತ್ರ್ಯ ದಾನ ಮಾಡುವಂತೆ ಮಿ. ಚರ್ಚಿಲ್ಲರನ್ನು ಒತ್ತಾಯಪಡಿಸದಿದ್ದರೆ ಮಿತ್ರ ರಾಷ್ಟ್ರಗಳ ನೈತಿಕ ದಿವಾಳಿಗಿರಿಗೆ ಬೇರೆ ನಿದರ್ಶನ ಬೇಕಾಗದು.

೨೪ನೇ ವರುಷ.

ಈ ಸಂಚಿಕೆಯೊಡನೆ 'ನವಯುಗ'ವು ತನ್ನ ೨೪ನೇ ವರುಷಕ್ಕೆ ಕಾಲಿಟ್ಟಿದೆ. ಕಾಲು ಶತಮಾನವನ್ನು ಸಮೀಪಿಸಿರುವ ಹೆಗ್ಗಳಿಕೆ, ರಜತೋತ್ಸವ ವತ್ಸರಕ್ಕೆ ಮುಂಬೊತ್ತುವ ಸಂಭ್ರಮವೀಗ ನವಯುಗಕ್ಕಿರಬೇಕಾದುದು ಸಹಜ. ಈ ಕಾಲದ 'ಮುಖ್ಯಪ್ರಾಣ'ರೆಂದರೆ ಪತ್ರಿಕೆಗಳೇ—ಅವುಗಳ ಆಯುಷ್ಯ ಮತ್ತು ತ್ರಾಣಕ್ಕೊಂದು ಮಿತಿಯಿಲ್ಲ. ಆ ಮಟ್ಟಿಗೆ ಒಂದು ರಾಷ್ಟ್ರದ, ಒಂದು ಸಂಸ್ಕೃತಿಯ ದರ್ಜೆ ಒಂದು ಪತ್ರಿಕೆಗೂ. ಆದರೂ, ಬಾಲ್ಯ, ಯೌವನ ವಾರ್ಧಿಕ್ಯಗಳೆಂಬ ಮೂರು ಅವಸ್ಥೆಗಳು ಅವನ್ನು ಬಿಟ್ಟಿಲ್ಲ. ಒಂದು ಪತ್ರಿಕೆ ಹುಟ್ಟುವಾಗಲೇ ಪ್ರೌಢಾವಸ್ಥೆಯಲ್ಲಿರಬಹುದು; ಇನ್ನೊಂದು ಶತಮಾನ ತುಂಬಿಸಿಕೊಂಡರೂ ಬಾಲಭಾಷೆಯಾಡುತ್ತಿರಬಹುದು. ಇದು ಹುಟ್ಟುಗುಣವನ್ನಾಧರಿಸಿರುವ ಸ್ಥಿತಿವ್ಯತ್ಯಾಸ. ಸಾಮಾನ್ಯವಾಗಿ ಒಂದು ಪತ್ರಿಕೆಯೂ ಅಭ್ಯಾಸ ಮತ್ತು ಅನುಭವದ ಬಲದಿಂದ ಪ್ರೌಢಿಮೆ ಪಡೆಯಬೇಕಾಗುತ್ತದೆ. ಆದ್ದರಿಂದ ವಯಸ್ಸಿಗೂ ಬೆಲೆಯಿದೆ. 21ರ ತರುಣ ತಾರುಣ್ಯದ ಹುರುಪು, ಎದೆಗಾರಿಕೆಗಳಿಂದ ವಾಚಕರನ್ನು ರಮಿಸಬೇಕಾದ ಪ್ರಾಯ-23 ವರುಷಗಳ ಅನುಭವದಿಂದ ಕಣ್ಣುತೆರೆದೊಡನೆ ಮನಬಿಚ್ಚಿ ಮಾತಾಡಬಹುದಾದ ಸ್ಥಾನ ಈಗ ನವಯುಗದ್ದು. ನವಯುಗವೆಂದು ಹಾಗಿದೆಯೇ ಎಂಬುದನ್ನು ತೂಗಿ ಹೇಳಬೇಕಾದವರು ಅಂದಿನಿಂದಿದುವರೆಗಿನ ವಾಚಕರು; ಆದರೆ ಅದನ್ನು ತೂಗಬೇಕಾದ ತಕ್ಕಡಿ ಮಾತ್ರ ಹೊಸತು—ಈಗಿನ ದುಷ್ಕಾಲ ತ್ರಾಸಿನದ್ದೇ!

ಈ ಸಂದರ್ಭದಲ್ಲಿ ನವಯುಗವನ್ನು ಪ್ರೋತ್ಸಾಹಿಸಿದ ಜಾಹಿರಾತುದಾರರ, ಚಂದಾದಾರರ, ವಾಚಕರ ಮತ್ತು ಎಲ್ಲಾ ವಿಧದ ಪ್ರೋತ್ಸಾಹಕರ ಉಪಕಾರ ಸ್ಮರಿಸುತ್ತೇವೆ.

ಕರ್ನಾಟಕ ಸಂಘದ— ಕಾರ್ಯನಿರ್ವಾಹಕ ಮಂಡಳಿಯ ಸದಸ್ಯರ ಸಭೆಯು ಇತ್ತೀಚೆಗೆ ಜರಗಿ ಶ್ರೀಗಳಾದ ಕಪೆಕಾರು ರಾಜಗೋಪಾಲಕೃಷ್ಣ ರಾಯರು ಅಧ್ಯಕ್ಷರಾಗಿಯೂ ಕೊರಡ್ಕಲ್ ಶ್ರೀನಿವಾಸ ರಾಯರು ಕಾರ್ಯದರ್ಶಿಯರಾಗಿಯೂ ಆರಿಸಲ್ಪಟ್ಟರು. ದಸರಾ ಕಾಲದಲ್ಲಿ ಕನ್ನಡ ಸಾಹಿತ್ಯೋತ್ಸವವನ್ನು ಇದೇ ತಾ 24ರಿಂದ 27ರ ತನಕ ಜರಗಿಸಬೇಕೆಂಬ ನಿರ್ಣಯವಾಯಿತು.

ಸುರತ್ಕಲ್—ಸ್ಥಳೀಯ ಕೃಷ್ಣಾಪುರ ಮಠದಲ್ಲಿ ಉಡುಪಿಯ ಕೃಷ್ಣಾಪುರ ಮಠದ ಸ್ವಾಮಿಗಳವರು ಮೊಕ್ಕಾಂ ಮಾಡಿ ಶ್ರೀ ಕೃಷ್ಣ ಜನ್ಮಾಷ್ಟಮಿ ಮತ್ತು ವಿಟ್ಲಪಿಂಡಿ ಹಬ್ಬವನ್ನು ಇದೇ ತಾ. 9 ಮತ್ತು 10ರಲ್ಲಿ ಆಚರಿಸಲಿರುವರು. ವಿಟ್ಲಪಿಂಡಿ ಹಬ್ಬದ ದಿನ ಜಿಲ್ಲೆಯ ಪ್ರಮುಖ ಯಕ್ಷಗಾನ ಅರ್ಥದಾರಿಗಳ ಕೂಡುವಿಕೆಯಿಂದ ತಾಳಮದ್ದಳೆ ನಡೆಯಲಿರುವದಾಗಿ ತಿಳಿದುಬರುತ್ತದೆ.

ಸರಕಾರಕ್ಕೆ ಶ್ರೀ. ಎ. ಬಿ. ಶೆಟ್ಟರ ವಿನಂತಿ— ಮದ್ರಾಸದಲ್ಲಿ ತಾ. 1ರಲ್ಲಿ ಜರಗಿದ ಪ್ರಾಂತಿಕ ಆಹಾರ ಸಮಿತಿ ಸಭೆಯಲ್ಲಿ ಶ್ರೀ ಎ. ಬಿ. ಶೆಟ್ಟಿಯವರು ಮಂಗಳೂರು ಜಿಲ್ಲೆಗೆ ಹೆಚ್ಚು ಅಕ್ಕಿ ಕಳಿಸಬೇಕೆಂದು ಕೇಳಿಕೊಂಡರು. ಮಂಗಳೂರಿಗೆ ಪ್ರತಿ ದಿವಸ ೪೦ ಟನ್ ಅಕ್ಕಿ ಬೇಕಾಗುತ್ತದೆಂದೂ ಮುಂಬರುವ ಮೂರು ತಿಂಗಳ ಬಗ್ಗೆ ೩೬೦೦ ಟನ್ ಅಕ್ಕಿ ಕಳಿಸದಿದ್ದರೆ ಅಲ್ಲಿಯ ಆಹಾರ ಪರಿಸ್ಥಿತಿ ಕಠಿಣವಾಗುವದೆಂದೂ ಅವರು ತಿಳಿಸಿದರು.

ರೈತರು ಬಾಯಿ ಬಿಡಲಿ.

ನಾಲ್ಕು ವರುಷಗಳಿಗೆ ಮೊದಲು 'ನೀನು ಬೆಳಸಿದ್ದನ್ನೆಲ್ಲಾ ಸರಕಾರಕ್ಕೆ ಕೊಡಬೇಕಂತೆ' ಎಂದು ದ.ಕ.ದ ಯಾರಾದರೊಬ್ಬ ರೈತನೊಡನೆ ಹೇಳುತ್ತಿದ್ದರೆ 'ಹಾಗಾಗುವಾಗ ಭೂಮಿ ಅಡಿಮೇಲಾದೀತು!' ಎಂದವ ಭರವಸೆಯಿಂದಾಡುತ್ತಿದ್ದ - ಈಗ ಭೂಮಿ ಅಡಿಮೇಲಾಗುತ್ತಿದೆ; ರೈತರ ಅಕ್ಕಿಭತ್ತಗಳಲ್ಲಿ ಕಾಳನ್ನೂ ಬಿಡದೆ ಸರಕಾರ ಕೇಳುತ್ತಿದೆ! ಇದು ಕಾಲ ಮಹಾತ್ಮೆಯೆಂದು ರೈತರು ತಮ್ಮ ಪ್ರಾಣಾವಧಿ ಆಪತ್ತಿನಲ್ಲೂ ಸಮಾಧಾನ ಪಡುತ್ತಿರಬಹುದು. ಆದರೆ ಹಾಗಲ್ಲ, ಎಲ್ಲವೂ ಮನುಷ್ಯ ಮಹಾತ್ಮೆಯೇ. ಇಂದಿನ ದುಷ್ಕಾಲಕ್ಕೆ ಹೇತು ಯುದ್ಧ; ಯುದ್ಧ ನಿರ್ಮಿಸಿದವರು ಮನುಷ್ಯರೇ. ಈ ಮನುಷ್ಯ ನಿರ್ಮಿತ ದುಷ್ಕಾಲದ ದುಷ್ಪರಿಣಾಮಗಳನ್ನು ಹೆಚ್ಚಿಸಲಿಕ್ಕೂ ತಗ್ಗಿಸಲಿಕ್ಕೂ ಮನುಷ್ಯರಿಗೇನೇ ಸಾಧ್ಯ. ದೃಷ್ಟಾಂತಕ್ಕಾಗಿ ಕಳೆದ ವರುಷದ ಅಕ್ಕಿ ಭತ್ತ ರೆಕ್ವಿಶಿಶನ್ ಮತ್ತು ವಿತರಣಾ ವ್ಯವಸ್ಥೆಯಿಲ್ಲದಿರುತ್ತಿದ್ದರೆ ದಕ್ಷಿಣ ಕನ್ನಡದ ಜನಸಾಮಾನ್ಯರಲ್ಲಿ ಹೆಚ್ಚಿನವರು ಇಷ್ಟರಲ್ಲೇ ಅನ್ನತಪೋನಿಷ್ಠರಾಗಿ ಸಾಯುಜ್ಯ ಮುಕ್ತಿಯನ್ನು ಪಡೆಯುತಿದ್ದರು! ಅಕ್ಕೀ ಮುಡಿಯ ಬೆಲೆ 20ರಿಂದ 40ರ ವರೆಗೂ ಏರುತಿತ್ತು! ಒಂದು ಆಸ್ತಿಯನ್ನು ಪಡೆಯುವಷ್ಟೇ ಪ್ರಯಾಸದಿಂದ,- ಸಹಾಯಕರ, ದಲ್ಲಾಲಿಗಳ ನೆರವಿನಿಂದ,- ಒಂದು ಮುಡಿ ಅಕ್ಕಿಯನ್ನು ಸಂಪಾದಿಸುವಂತಾಗುತಿತ್ತು! ಹಾಗಾಗದುದು ಮನುಷ್ಯ ಪ್ರಯತ್ನದಿಂದಲೇ. ಆಗದಿದ್ದ ಅನ್ಯಾಯಕ್ಕಾಗಿ ಅಭಿನಂದಿಸುವದನ್ನು ಮರೆತುಬಿಟ್ಟೇ ಆಗದೆ ಬಾಕಿ ಬಿದ್ದ ನ್ಯಾಯಕ್ಕಾಗಿ ನಿಂದಿಸುವದು ಮನುಷ್ಯನ ಸ್ವಭಾವ. ರೈತರೇ, ದಕ್ಷಿಣ ಕನ್ನಡದ ಬರಗಾಲವನ್ನು ಬಹುಮಟ್ಟಿಗೆ ತಪ್ಪಿಸಿ ಬಿಟ್ಟ ಇಂದಿನ ಆಹಾರ ವ್ಯವಸ್ಥೆಗಾಗಿ ಅದರ ವ್ಯವಸ್ಥಾಪಕರನ್ನೆಲ್ಲಾ ಮನಃಪೂರ್ವಕ ಅಭಿನಂದಿಸೋಣ. ಅಂತೆಯೇ ನಮಗಾಗಿರುವ ಅನ್ಯಾಯಗಳಿಗಾಗಿ ಈಗಲೇ ಜಾಗ್ರತರಾಗೋಣ. ಆದ್ದರಿಂದ ತಯಾರಾಗಿರಿ. ಆಹಾರ ಧಾನ್ಯಗಳ ಸುಸ್ಥಿತಿಗೆ ಅದರ ಉತ್ಪಾದಕರಾದ ನಿಮ್ಮ ಮಾತು ನಡೆಯಲೇಬೇಕು. ಆದರೆ ನಿಮ್ಮ ಕಣಜದಲ್ಲೇನಿದೆ ಎಂಬುದು ತಿಳಿದಂತೆ, ನಿಮ್ಮ ಮನಸ್ಸಿನಲ್ಲೇನಿದೆ ಎಂಬುದು ಅಧಿಕಾರಿಗಳಿಗೆ ತಿಳಿದಿಲ್ಲ. ಸಂಘಟಿತರಾಗಿ ತಿಳಿಸಿರಿ.

ಈಗಿನ ಅಂದಾಜಿನಂತೆ:—

ಮುಂದಿನ ಕಟಾವಾದೊಡನೆ ನಿಮ್ಮ ಭತ್ತವನ್ನೇ ರಿಕ್ವಿಜಿಶನ್ ಮಾಡಿಕೊಂಡು ಹೋಗಬಹುದು-ಅಕ್ಕಿಯನ್ನಲ್ಲ.

ಅವನ್ನು ಮಿಲ್ಲುಗಳ ಮೂಲಕ ಅಕ್ಕಿ ಮಾಡಿಸಬಹುದು

ಅಕ್ಕೀ ಮುಡಿಯ ಧಾರಣೆಯನ್ನು ಈ ವರುಷವಿದ್ದುದಕ್ಕಿಂತ ತಗ್ಗಿಸಬಹುದು.

ನಿಮ್ಮ ನಾಗುವಳಿ ಮತ್ತು ಮನೆಖರ್ಚಿಗೆ ಬಿಡುವ ಪರಿಮಾಣದಲ್ಲಿ ಬ್ರಹ್ಮಾಂಡದಂತಹ ತಪ್ಪುಗಳಾಗಬಹುದು.

ಧಾನ್ಯ ಜಪ್ತಿಯೂ ಆಗಾಗ ನಡೆಯಬಹುದು.

ಹಳ್ಳಿ ಮೂಲೆಗಳಿಗೆ ಮುಂದೆಯೂ ಸರಿಯಾಗಿ 'ಕಾರ್ಡು' ದೊರೆಯದಿರಬಹುದು.

ಈ ಬಾರಿಯೂ ಹೀಗಾಗಲು ಬಿಡುವಿರಾ? ಈ ಕುರಿತು ನೀವು ಕೇಳುವಂತಹದೇನೂ ಇಲ್ಲವೆ? ನಿಮ್ಮ ಹೊಟ್ಟೆಕೂಗ ಹತ್ತಿದ ಮೇಲೂ ನೀವು ಕೂಗುವದು ಬೇಡವೆ?

—ಕೆ. ಕ.

ಜರ್ಮನರ ಶೀಘ್ರ ಪಲಾಯನ!

ಬೆಲ್ಜಿಯಮ್ ಹೊಲ್ಲೆಂಡುಗಳಿಂದೋಟ!

ಫಿನ್ಲೆಂಡು ಶರಣುಬಂತು

ತನ್ನ ಶೌರ್ಯ ಸಾಹಸಗಳಿಗೆ ಜರ್ಮನಿಯಷ್ಟೇ ಹೆಸರು ಹೋದ ಫಿನ್ಲೆಂಡು ರಶ್ಯವನ್ನು ದ್ವೇಷಿಸುವುದರಲ್ಲಿ ಮತ್ತು ಜನಾಂಗ ಹೆಮ್ಮೆಯಲ್ಲಿ ಹಿಟ್ಲರ್ ಸಮಾನರಾದ ಮಾರ್ಶಲ್ ಮೇನರ್‌ಹೇಮರ ನಾಯಕತ್ವದ ಫಿನ್ಲೆಂಡು ರಶ್ಯದ ಸೂಚನೆಗಳನ್ನೊಪ್ಪಿಕೊಂಡು ಸಂಧಾನ ಯಾಚಿಸಿದೆ. ಸಂಧಾನದ ಪೂರ್ವರಂಗವಾಗಿ ಫಿನ್ಲೆಂಡಿನ ಜರ್ಮನ್ ಸೇನೆಗಳನ್ನು ಹಿಂದೆ ಕಳುಹಿಸಬೇಕೆಂಬ ರಶ್ಯದ ಶರ್ತಗಳಿಗನುಸಾರವಾಗಿ ಫಿನ್ಲೆಂಡು ಕೇಳಿಕೊಂಡಂತೆ ಸೆಪ್ಟೆಂಬರ್ 15ರೊಳಗೆ ತಮ್ಮ ಎಲ್ಲಾ ಸೇನೆಗಳನ್ನು ಹಿಂದೆಗೆಯಲು ಜರ್ಮನರೊಪ್ಪಿದ್ದಾರೆ. ತಾ 1ನೇ ಪೂರ್ವಾಹ್ನ ರಶ್ಯಾ-ಫಿನ್ಲೆಂಡ್ ಯುದ್ಧಾಂತ್ಯಗೊಂಡಿತು. ಫಿನ್ಲೆಂಡು ಜರ್ಮನಿಯೊಡನೆ ಸಂಬಂಧ ಕಡಿದುಕೊಂಡು ರಶ್ಯದ ಶಾಂತಿ ಶರ್ತಗಳನ್ನೆಲ್ಲಾ ಅಂಗೀಕರಿಸಿಕೊಂಡಿದೆ. ರಶ್ಯದ ಮೇಲೆ ಬೀಳುವಾಗ ಹಿಟ್ಲರರ ಬಾಲ ಹಿಡಿದು ಬಂದಿದ್ದ ರುಮೇನಿಯಾ, ಫಿನ್ಲೆಂಡು ಮತ್ತು ನಾಜೀ ಪಕ್ಷಪಾತಿ ಬಲ್ಗೇರಿಯಗಳೀಗ ಜರ್ಮನ್ ಸಂಬಂಧ ಕಡಿದುಕೊಂಡಿವೆ. ಹಂಗೇರಿಯೊಳಗಡೆ ರಶ್ಯನ್ ಸೇನೆ ನುಗ್ಗಿದೆ. ಯುದ್ಧವು ಜರ್ಮನಿನ ಬಾಗಿಲಿಗೆ ಬಂದು ಬಡಿಯುತ್ತಿರುವಾಗ ಜರ್ಮನಿಯು ನಿಸ್ಸಹಾಯಕ ವೀರನಾಗಿ ನಿಂತಿದೆ.

ರಶ್ಯಾ ರಣರಂಗದಲ್ಲಿ

ಈ ವಾರದಲ್ಲಿ ಗಣನೀಯ ಪ್ರಗತಿ ಕಂಡುಬರುವದಿಲ್ಲ. ರುಮೇನಿಯಾ ಮತ್ತು ಬಲ್ಗೇರಿಯಾದೊಳಗೆ ಕೆಂಪು ಸೇನೆ ನುಗ್ಗಿ ಹೋಗಿದೆ. ಆದರೆ ರುಮೇನಿಯದಲ್ಲಿ ಡೆನ್ಯೂಬಿನ ವರೆಗಿನ ವಿಶಾಲ ರಣರಂಗಕ್ಕೀಗ ನಾಜೀಗಳು ಅತಿ ಹೆಚ್ಚಿನ ಸೈನ್ಯೋಪಕರಣಗಳನ್ನು ಸರಬರಾಯಿಪಡಿಸಿಕೊಂಡು ಅದ್ಭುತ ಪ್ರತಿಭಟನೆ ಕೊಡಹತ್ತಿದ ವಾರ್ತೆ ಬರುತ್ತಿದೆ. ಕೆಂಪು ಸೇನೆಯ ಈಗಿನ ಪ್ರಾಮುಖ್ಯ ಯುದ್ಧಗ[illegible] ಪಾಸರ್-ರಿಗಾ ಲೈನಿನಲ್ಲಿ ಕೆಂಪು ಸೇನೆಯು ಒಂದು ನಿರ್ಣಯಾತ್ಮಕ ಧಾಳಿ ಹೂಡಲು ಬಹುಸಂಖ್ಯೆಯಲ್ಲಿ ಸಂಗ್ರಹವಾಗುತ್ತಿರುವ ವಾರ್ತೆಯು ಪ್ರಾಮುಖ್ಯವಾದುದು.

ಫ್ರಾನ್ಸಿನಲ್ಲಿ ಮಹಾ ಪ್ರಗತಿ

ಫ್ರಾನ್ಸ ರಣರಂಗದಲ್ಲಿ ಮಿತ್ರ ಸೇನೆಗಳೀಗ ಪಡೆಯುತ್ತಿರುವ ಪ್ರಗತಿಯು ಚರಿತ್ರೆಯನ್ನೇ ನಿರ್ಮಿಸುವಂತಹದು. ಅಲ್ಲಿ ಒಂದೆಡೆಯಿಂದ ಮುಂದೊತ್ತಿದ ಅಮೇರಿಕನ್ ಸೇನೆ ಬೆಲ್ಜಿಯಮ್ ಗಡಿಯಿಂದ ಬಹು ದೂರ ಮುಂದೆ ನುಗ್ಗಿ ಹೋಗಿ ಮುಖ್ಯ ಪಟ್ಟಣ ಬ್ರಸ್ಸೆಲ್ಸನ್ನು ಸ್ವಾಧೀನಪಡಿಸಿಕೊಂಡಿದೆ. ಬೆಲ್ಜಿಯಮ್ ಮತ್ತು ಹೊಲ್ಲೇಂಡುಗಳಿಂದ ನಾಜೀ ಸೇನೆಗಳು ಗಲಿಬಿಲಿಗೊಂಡು ಹಿಮ್ಮೆಟ್ಟುತ್ತಿವೆ. ಅವೆಲ್ಲಾ ಲೋಕ ಪ್ರಸಿದ್ಧ ಸಿಗ್‌ಫ್ರೆಡ್ ಲೈನಿನ ಆಶ್ರಯ ಪಡುತ್ತಿವೆ ಎಂದು ತಿಳಿದುಬರುತ್ತದೆ. ಆಶ್ಚರ್ಯವೆಂದರೆ ನಾಜಿಗಳು ಗಣ್ಯ ಪ್ರತಿಭಟನೆಯನ್ನೇ ಕೊಡದೆ ಕೂಡದಷ್ಟು ವೇಗವಾಗಿ ಹಿಂದೋಡುತ್ತಿದ್ದಾರೆ. ಬೆಲ್ಜಿಯಮಿನಲ್ಲಿ ತಲೆ ಮರೆಸಿಕೊಂಡಿದ್ದ ಸುಮಾರು ಒಂದು ಮಿಲಿಯ ಸ್ವತಂತ್ರ ಯೋಧರಿಗೆ ಮಿತ್ರ ಪಾಳೆಯದಿಂದ ಹೋರಾಟದ ಆಜ್ಞೆ ಹೋಗಿದೆ. ಲಂಡನಿನಲ್ಲಿರುವ ಬೆಲ್ಜಿಯಮ್ ಸರಕಾರವು ಬ್ರಸ್ಸೆಲ್ಸಿಗೆ ಮರಳಲಿದ್ದು ಅದರ ಕೆಲವು ಭಾಗ ವಿಷ್ಟರಲ್ಲೇ ಅಲ್ಲಿಗೆ ಬಂದು ಮುಟ್ಟಿದೆ. ಕೆಲವೆಡೆ ಸಿಗ್‌ಫ್ರೆಡ್ ಕೋಟೆಯ ತೀರಾ ಸಮೀಪದ ವರೆಗೂ ಮಿತ್ರ ಸೇನೆಗಳು ನುಗ್ಗಿಬಂದಿವೆ. ಫ್ರಾನ್ಸಿನೊಳಗಡೆಯ ಕ್ಷೇತ್ರಗಳಲ್ಲಾ ಹಲವು ಪ್ರಾಮುಖ್ಯ ನಗರಗಳನ್ನು ಮಿತ್ರರು ಹಸ್ತಗತ ಮಾಡಿಕೊಂಡರು. ಹೊಲ್ಲೆಂಡಿನ ರಾಣಿ ವಿಲ್‌ಹೆಲ್ಮಿನಾ ಜರ್ಮನರಿಗಾತಂಕವೊದ್ದುವಂತೆ ಲಂಡನಿನಿಂದ ತನ್ನ ಜನತೆಗೆ ವಿನಂತಿಮಾಡಿಕೊಂಡಿದ್ದಾರೆ. ಜನರಲ್ ಐಸನ್‌ಹೋವರರು ಬೆಲ್ಜಿಯಮ್ ಹೊಲ್ಲೆಂಡುಗಳ ಅಜ್ಞಾತವಾಸೀ ಯೋಧರಿಗೆ ಕಾಲಯೋಗ್ಯ 'ಸೂಚನೆಗಳನ್ನಿತ್ತಿದ್ದಾರೆ. ಇಟೆಲಿಯಲ್ಲಿಯೂ ಕೆಸ್ಸೆಲ್‌ರಿಂಗನ ಗೋಥಿಕ್ ಲೈನನ್ನು ಹಿಂದೀ ಸೇನೆಯು ಭೇದಿಸಿ ಒಳನುಗ್ಗಿದೆ.

ಜಾಪಾನೀ ಯುದ್ಧ

ಉತ್ತರ ಬರ್ಮಾದಲ್ಲಿ ಸ್ಟಿಲ್‌ವೆಲ್ಲರ ಸೇನೆಯು ನಿಧಾನವಾಗಿ ಸ್ವಲ್ಪ ಕ್ರಮಣ ಮಾಡುತ್ತಿದೆ. ಈ ತನಕ ಇಡೀ ಬರ್ಮಾದ $\frac{1}{10}$ರ ಪಾಲು ಮಿತ್ರರ ವಶವಾಯಿತೆನ್ನಬೇಕು. ಇಂಫಾಲ್ ತಿದ್ದಿಮ್ ರಸ್ತೆಯ 100 ಮೈಲುಗಳಷ್ಟು ಉದ್ದ ಮಿತ್ರ ಸೇನೆಗಳಿಗೆ ದೊರೆತಿದೆ. ಜಾಪಾನಿನ ಮೇಲೆ ಸಾಹಿರಾರು ವಿಮಾನಗಳ ಧಾಳಿಯನ್ನಾರಂಭಿಸಲಿರುವೆವು, ಇದರಿಂದ ಜರ್ಮನಿಯ ಮೇಲಾದುದಕ್ಕಿಂತಲೂ ಭೀಕರವಾದ ಪರಿಣಾಮ ಜಪಾನಿನ ಮೇಲಾಗಬಹುದೆಂದೂ ಅಮೇರಿಕದ ವಿಮಾನಾಧಿಕಾರಿಯೊಬ್ಬರಂದಿದ್ದಾರೆ.

ಒಳಾಂತರ್ಯವೇನು?

ರೋಮಿನಲ್ಲಿ ಮಿ. ಚರ್ಚಿಲ್ಲರು ಪೋಪ್ ಗುರುಗಳೊಡನೆ ಸಂಭಾಷಣೆ ನಡಿಸಿರುವದೂ ಸದ್ಯದಲ್ಲೇ ಚರ್ಚಿಲ್-ರುಸವೆಲ್ಟ್ ಭೇಟಿಯಾಗಲಿದೆ ಎಂಬ ವಾರ್ತೆ ಪ್ರಕಟವಾಗಿರುವದೂ ನಾನಾ ಊಹಾಪೋಹಗಳಿಗವಕಾಶವಿತ್ತಿದೆ. ಈಗ ಪ್ರಕಟವಾಗಿರುವ ವಿಶ್ವಾಸಾರ್ಹ ವರದಿಯಂತೆ ಜರ್ಮನರ ಸಂಧಿಸೂಚನೆಗಳೂ ಆ ಸಂಪತ್ತಿನಲ್ಲಿ ಚರ್ಚಿಸಲ್ಪಡಲಿವೆ. ಸಂಭಾಷಣೆಯ ಮುಖ್ಯ ವಿಷಯವೆಂದರೆ ಜಪಾನೀ ಯುದ್ಧಯೋಜನೆ ಅಂತಯೇ ಪೋಲೆಂಡಿನ ಪ್ರಶ್ನೆಯೂ ಅಲ್ಲಿ ಚರ್ಚಿಸಲ್ಪಡಲಿದೆ. ಇದರಿಂದಾಗಿ ಜರ್ಮನಿಯನ್ನಾಕ್ರಮಿಸಿಕೊಳ್ಳುವ ಕುರಿತು ಆಂಗ್ಲೋ ಅಮೆರಿಕಾನರು ರಶ್ಯದೊಡನೆ ಸ್ಪರ್ಧಿಸುತ್ತಿರಬಹುದೆಂದೂ, ಪೋಲೆಂಡ್ ರಶ್ಯಾ ಭಿನ್ನಾಭಿಪ್ರಾಯಗಳು ಬಲಿಗೊಳ್ಳಬಹುದೆಂದೂ ಭಯವೆದ್ದಿದೆ. ಪರಿಸ್ಥಿತಿಯು ಹೀಗೆಯೇ ಕೆಡುತ್ತಾ ಹೋದರೆ ರಶ್ಯಾ-ಜಾಪಾನು ಸಂಬಂಧ ಬಲಗೊಳ್ಳಬಹುದೆಂಬ ಭೀತಿಗೂ ಅವಕಾಶವಿದೆ. ಜರ್ಮನಿಯಾದರೂ ತನ್ನ ಪತನವನ್ನು ಮನಗಂಡು ಮಿತ್ರಪಾಳಯದೊಳಗಿನ ಈ ಬಿರುಕಗಳನ್ನು ವಿಸ್ತರಗೊಳಿಸಿ ಲಾಭ ಹೊಂದುವ ಹಂಚಿಕೆಯಲ್ಲಿದೆಯೆಂದೂ, ಇಂದಿನ ಹಿಂಮೋಟಗಳಲ್ಲಿ ಇಂತಹ ಕುಯುಕ್ತಿಯು ಅಡಕವಾಗಿರಬೇಕೆಂದೂ ನಿರೀಕ್ಷಿಸುವವರಿದ್ದಾರೆ.

ಹಿಟ್ಲರರ ಯೋಜನೆಯೇನು?

ಸೆಪ್ಟೆಂಬರ್ ಅಂತ್ಯದೊಳಗೆ ಬಲ್ಗೇರಿಯಾ, ಗ್ರೀಸ್, ಯುಗೊಸ್ಲೋವಿಯಗಳಿಂದ ಸೇನೆಗಳನ್ನೆಲ್ಲಾ ಪೂರ್ತಿ ಹಿಂದೆಗೆದುಕೊಳ್ಳಲು ಹಿಟ್ಲರರು ನಿರ್ಧರಿಸಿದ್ದಾರಂತೆ. ಬಾಲ್ಕನ್ ರಾಷ್ಟ್ರಗಳ ಗೊಡವೆಯನ್ನೇ ಅವರು ಬಿಟ್ಟು ಬಿಡಲಿದ್ದಾರೆ. ಇತ್ತ ಜರ್ಮನಿಯ ಆಸುಪಾಸಿನ ರಾಷ್ಟ್ರಗಳಲ್ಲೂ ಗಣ್ಯ ಹೋರಾಟ ಕೊಡದೆ ಸೇನೆಗಳನ್ನೆಲ್ಲಾ ಕ್ಷಿಪ್ರಗತಿಯಿಂದ ಜರ್ಮನ್ [illegible]ದೊಳಗೆಳೆದುಕೊಳ್ಳುತ್ತಿರುವದರಿಂದ ಸ್ವರಾಷ್ಟ್ರ ರಕ್ಷಣೆಯೊಂದೇ ಹಿಟ್ಲರರ ಈಗಿನ ಯುದ್ಧ ಗುರಿಯಾಗಿದೆ ಎನ್ನಬಹುದು. ಅಲ್ಲಿ ಮಾತ್ರ ಸ್ಥಿತಿಯು ಸದೃಢವಾಗುವಷ್ಟು ಭೀಕರ ಹೋರಾಟವನ್ನು ನಾಜಿಗಳು ಕೊಡುವದು ಖಂಡಿತ. ಈ ನಡುವೆ ರಾಷ್ಟ್ರಗಳೊಳಗಿನ ಪಕ್ಷಗಳಲ್ಲಿ ಒಡಲಾವಣೆಯಾಗಿ ಯುದ್ಧಸ್ಥಿತಿ ಅನಿಲು ಬದಲಾಗುವ ನಿರೀಕ್ಷೆಯೂ ಜರ್ಮನರಿಗಿರಬಹುದು.

ಗಾಂಧಿ-ಜಿನ್ನಾ ಸಂಭಾಷಣೆ.

ಸೆಪ್ಟೆಂಬರ್ 9ನೇ ಶನಿವಾರ ಅಪರಾಹ್ನ ಜಿನ್ನಾ ಗೃಹದಲ್ಲಾರಂಭವಾಗುವದೆಂದು ನಿಶ್ಚಯವಾಗಿದೆ. ಚರಕಾ ಸಂಘ ನೌಕರರ [illegible]ಲಾದುವುಗಳ ಅಧಿವೇಶನದಲ್ಲಿ ಭಾಗವಹಿಸಿ ದಣಿದ ಗಾಂಧಿಜೀ ಡಾಕ್ಟರರ ಸಲಹೆಯಂತೆ ತಾ. 9ನೇ ಮುಂಜಾನೆಯೇ ಬೊಂಬಾಯಿಗೆ ಮುಟ್ಟಲಿರುವರು. ಸಂಭಾಷಣೆಯ ದಿನಗಳಲ್ಲಿ ಪದ್ಧತಿಯಂತೆ ಬಿರ್ಲಾ ಗೃಹದಲ್ಲೇ ನಿಲ್ಲಲಿದ್ದಾರೆ. ಸೇವಾ ಗ್ರಾಮದಲ್ಲಿ ಗಾಂಧಿಜೀಯ ಗುಡಿಸಲಿನೆದಿರು ಪಾಕಿಸ್ತಾನ್ ವಿರೋಧೀ ಸಂಘದ ಕಾರ್ಯದರ್ಶಿ ಶ್ರೀ. ಥಟ್ಟೆಯವರು ಇತರ ಸ್ವಯಂಸೇವಕರೊಂದಿಗೆ ಹಲವು ದಿನಗಳಿಂದ ಪಿಕೆಟಿಂಗ್ ನಡೆಸುತ್ತಿದ್ದಾರೆ. ಮೂರನೇ ದಿನದ ಪಹರೆಯ ವೇಳೆ ಗಾಂಧಿಜೀಯಲ್ಲಿಗೆ ಬಂದು ತಾನು ಜಿನ್ನರೊಡನೆ ಸಂಧಿ ಹೂಡಿದರೆ ಹಿಂದುಗಳಿಗೆ ಹಾನಿಯಾಗುವದೆಂತು ಎಂದು ಪಹರೆಗಾರರನ್ನು ಪ್ರಶ್ನಿಸಿದರು. ಶ್ರೀ. ಥಟ್ಟೆಯವರು ಅದನ್ನು ವಿವರಿಸ ಹತ್ತಿದಾಗ 'ಹಿಂದುಗಳು ದುರ್ಬಲರೆಂಬುದಕ್ಕನುಮಾನವಿಲ್ಲ' ಎಂದು ಗಾಂಧಿಜೀ ಹೇಳಿದೊಡನೆ 'ನಿಮ್ಮಂತಹ ಧುರೀಣರನ್ನು ಪಡೆದುದರಿಂದಾಗಿ' ಎಂದೊಬ್ಬ ಸ್ವಯಂಸೇವಕನ ಸ್ಪಷ್ಟ ಉತ್ತರ. ಸಂಭಾಷಣೆಯ ದಿನದ ವರೆಗೂ ಪಹರೆ ಮತ್ತು ಪ್ರದರ್ಶನಗಳು ನಡೆಯಲಿರುವವೆಂದು ತಿಳಿದು ಬರುತ್ತದೆ.

ಸಿಲೋನಿನ ಸ್ವಾತಂತ್ರ್ಯ ಯಾಚನೆ

ಸಿಲೋನಿಗೆ ಪೂರ್ಣ ಸ್ವಾತಂತ್ರ್ಯ ಬೇಕು. ಸುಧಾರಣೆಗಾಗಿ ಬ್ರಿಟಿಷ್ ಸರಕಾರದಿಂದ ಕಳುಹಲ್ಪಡುವ ಕಮಿಶನನ್ನು ಬಹಿಷ್ಕರಿಸಬೇಕು ಎಂದು ಸಿಲೋನಿನ ರಾಷ್ಟ್ರೀಯ ಸಭೆಯಲ್ಲಿ ನಿರ್ಣಯವಾಗಿ ಅದಕ್ಕಾಗಿ ಸರ್ವ ಪಕ್ಷೀಯ ಪರಿಷತ್ತನ್ನು ಕರೆಯಲಾಗಿದೆ.

ಮಿ. ಫಿಲಿಪ್ಸರನ್ನು

ಅಮೇರಿಕದ ರಾಯಭಾರಿಯಾಗಿ ಭಾರತಕ್ಕೆ ಬಂದಿದ್ದ ಮಿ. ಫಿಲಿಪ್ಸರನ್ನು ಹಿಂದಕ್ಕೆ ಕರೆಯಿಸಿಕೊಳ್ಳುವಂತೆ ಒತ್ತಾಯ ಹಾಕಿದ್ದು ಹಿಂದೀ ಸರಕಾರವೆಂದು ಪ್ರಕಟವಾಗಿದೆ.

× ತಮ್ಮ ಸಂಘದ ನ್ಯಾಯವಾದ ಬೇಡಿಕೆಗಳಿಗೆ ಬೇಂಕ್ ಮೆನೇಜರುಗಳು ಲಕ್ಷ್ಯಕೊಡಲಿಲ್ಲವೆಂದು ಕೊಲೊಂಬೋದ ವಿವಿಧ ಬೇಂಕುಗಳ 558 ಕ್ಲಾರ್ಕರು ಸೆಪ್ಟೆಂಬರ್ 1ರಿಂದ ಮುಷ್ಕರಹೂಡಿದ್ದಾರೆ.

× ಕಳೆದಬಾರಿ ಬೊಂಬಾಯಿಯಲ್ಲಿ ದ ಅಗ್ನಿದುರಂತವು ಕೇವಲ ಅಪಘಾತದ ಪರಿಣಾಮವೆಂದು ಅದಕ್ಕಾಗಿ ಸರಕಾರದಿಂದ ನೇಮಿಸಲ್ಪಟ್ಟ ಕಮಿಟಿಯ ತೀರ್ಮಾನ. ಬೊಂಬಾಯಿ ಹೈಕೋರ್ಟಿನ ಚೀಫ್ ಜಸ್ಟಿಸ್ ಸರ್. ಲಿಯೊನಾರ್ಡ್ ಸ್ಟೋನ್‌ರವರ ಅಧ್ಯಕ್ಷತೆಯಲ್ಲಿ ಈ ಕಮಿಟಿಯು ವಿಚಾರಣೆ ನಡೆಸಿತ್ತು. ಬೊಂಬಾಯಿಯಂತಹ ಬಂದರದಲ್ಲಿ ಮದ್ದುಗುಂಡುಗಳನ್ನು ಸಾಗಿಸುವಾಗಿನ ಸರಕಾರದ ಅಲಕ್ಷ್ಯವನ್ನು ಈ ಕಮಿಟಿಯು ಕಠಿಣವಾಗಿ ಟೀಕಿಸಿದೆ ಎಂದು ತಿಳಿದುಬರುತ್ತದೆ.

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣದಿಂದರೂ "ಕುಮಾರಿ" (Govt Regd) ನಿಶ್ಚಿತ ನಿರುಪದ್ರವಿ ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಸರಿಯಾಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ 3! ಕೈಮೀರಿದ ಕೇಸುಗಳಿಗೆ ರೂ.5. (ವಿ.ಪಿ.12 ಆಣೆ ಆಲಾಯಿದ) Mrs. P: DEVEE, 1, D. ?. (N) Tollygunge, Calcutta. ಸ್ಟಾಕಿಸ್ಟ್: ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚ, ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ [illegible] ಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಯಾಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ
18 ಬಲ್ಮಟ ರಸ್ತೆ, ಮಂಗಳೂರು

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co.
18 Balmat Road, MANGALORE
Approved firm by the Govt. of Mysore.
Certified by the Agent of the Govt. of India in Ceylon. ESTD 1906

ಚಂದಾದಾರರಲ್ಲಿ

ಚಂದಾಹಣ ಬಾಕಿ ಇರುವ ನಮ್ಮ ಚಂದಾದಾರರು ದಯಮಾಡಿ ಅದನ್ನು ಕೂಡಲೇ ಮನಿಯಾರ್ಡರು ಮಾಡುವಂತೆ ಅಪೇಕ್ಷಿಸಲಾಗುತ್ತದೆ ಸಕಾಲದಲ್ಲಿ ಹಣ ಬಾರದಿದ್ದಲ್ಲಿ ಪತ್ರಿಕೆಯನ್ನು ವಿ. ಪಿ. ಮಾಡಿ ಕಳುಹಿಸಲಾಗುವುದು ಅದನ್ನು ಎಲ್ಲರೂ ಸ್ವೀಕರಿಸಿ ಪ್ರೋತ್ಸಾಹಿಸುವಂತೆ ವಿನಂತಿ

ಮೆನೆಜರ್

ದಕ್ಷಿಣ ಕನ್ನಡ-

ಮಂಗಳೂರು

ಶ್ರೀ ಶಿಲ್ಲಿಯವರ ಭಾಷಣ:— ತಾ 31-8-44ರಲ್ಲಿ ಶ್ರೀ N. S. ಶಿಲ್ಲಿಯವರು ಗವರ್ನಮೆಂಟ್ ಹಾ| ಎ| ಟ್ರೈನಿಂಗ್ ಶಾಲೆಯಲ್ಲಿ ಶ್ರೀ. ಕೆ. ಬಾಲಕೃಷ್ಣರಾವ್ ಎಡ್ವಕೇಟ್ ಇವರ ಅಧ್ಯಕ್ಷತೆಯಲ್ಲಿ ಸೇರಿದ ಸಭೆಯಲ್ಲಿ ಯಕ್ಷಗಾನದ ಮೂಲ, ಅದರ ವಿಶಿಷ್ಟತೆ, ಜನತಾಸೇವೆ ಮತ್ತು ಬೆಳವಣಿಗೆಗೆ ಬೇಕಾದ ಅಗತ್ಯ ವಿಚಾರಗಳ ಕುರಿತು ಭಾಷಣವಿತ್ತರು.

ಜುಬಿಲ್ಯಾನೆ:— ಮೆಟ್ಟಿಸ್ಸರು ಮಲ್ಲನ್ನು ಕಂಟ್ರೋಲ್ ದರಕ್ಕಿಂತ ಹೀನಗೆ ಸುಮಾರು ೧/₁ ಆಣೆ ಮುಷ್ಟು ಹೆಚ್ಚಿಗೆ ದರಕ್ಕೆ ಮಾರಿದರೆಂದು ಮಂಗಳೂರಿನ ಪಡಿ ವ್ಯಾಪಾರಿಗಳಾದ ಮೆ|| ಜಯಂತಿಲಾಲ್ ಬ್ರದರ್ಸ್ ಮೆ|| ಚಂದ್ರಾನ ಬ್ರದರ್ಸ್ ವ್ಯಕ್ತಿ ಮ. ವಿಠಲ್ ಮಾಧವಜ ಇವರಲ್ಲಿ ಪ್ರತಿಯೊಬ್ಬರೂ ಉಳಿದ ಆರೋಪಿಗಳ ಜಮೀನು ಎಂದು ನಮ್ಮ ಡಿವಿಜನಲ್ ಆಫೀಸರರಾದ ಶ್ರೀ. ಸಿ. ನಿ ಮಾಗವರ ವ್ ಅವರು ತಮ್ಮ ಘರ್ಂಗಿಸಾಟೆ ಕ್ಯಾಂಪಿನಲ್ಲಿ ವಿಧಿಸಿರುವರು.

ಮನೆ ಖಾಲಿ ಮಾಡುವಾಗ ರೇಶನ್ ಕಾರ್ಡಿನ ವ್ಯವಸ್ಥೆ:— ಮಂಗಳೂರು ನಗರ ಅಥವಾ "ಬೆಲ್ಟ್" ಕ್ಷೇತ್ರದಲ್ಲಿರುವ ಯಾವನೊಬ್ಬನಾದರೂ ತಾನಿರುವ ಮನೆ ಬಿಟ್ಟು ಅದನ್ನು ಖಾಲಿ ಮಾಡುವಾಗ ಆತನು ತನ್ನ ಸಕ್ಕರೆ ಮತ್ತು ಜಿಮಿನಿ ಎಣ್ಣೆ ರೇಶನ್ ಕಾರ್ಡನ್ನು ಆ ಮನೆಗೆ ಬರುವವರಿಗೆ ಕೊಡಬೇಕು, ಮತ್ತು ಆ ಮನೆಗೆ ಬಂದವರು ಖಾಲಿ ನಲ್ಲಿ ಕಾರ್ಡ್ ಪಡೆದವರ ಹೆಸರು ತಿದ್ದುಪಡಿಕ್ಕಾಗಿ ಆ ಕಾರ್ಡನ್ನು ಕಲೆಕ್ಟರ್ ಆಫೀಸಿನಲ್ಲಿ ಹಾಜರುಪಡಿಸಬೇಕು. ಆ ಮನೆಗೆ ಹೊಸದಾಗಿ ಬರುವವರು ಯಾರೂ ದೊರೆಯದಿದ್ದರೆ ಆ ಕಾರ್ಡನ್ನು ಕಲೆಕ್ಟರರ ಆಫೀಸಿಗೇ ಒಪ್ಪಿಸಿ ಕೊಡಬೇಕೆಂದು ಜಿಲ್ಲಾ ಕಲೆಕ್ಟರರ ಆಜ್ಞೆಯಾಗಿದೆ.

ನೇಮಕ:— ಜಿಲ್ಲಾ ಕಲೆಕ್ಟರರ ಪರ್ಸನಲ್ ಅಸಿಸ್ಟೆಂಟರಾದ ಶ್ರೀ| ಜಿ ದತ್ತಾತ್ರೇಯ ರಾವ್ ರಿಗೆ ಮೇಲೆಯ ಮೂಗಿ ಮಂಜಗರ ಸಾಮೆಯ ಕಂಟ್ರೋಲರರಾಗಿ ನೇಮಕವಾಗಿದೆ, ಅವರು ಬೇಗನೆ

ನೋಟೀಸು

ಉಡ್ಪಿ ತಾಲ್ಲೂಕು ಕಡೆಕಾರು ಗ್ರಾಮದ ಕಿನ್ನಿಮೂಲ್ಕಿಯಲ್ಲಿರುವ ಸಾಹುಕಾರ್ ಗಣಪಯ್ಯ ಸೆಟ್ಟಿಗಾರರ ವಿಧವೆ ತುಂಗು ಸೆಟ್ಟಿಗಾತಿಯು ಈ ಮೂಲಕ ತಿಳಿಯಪಡಿಸುವದೇನೆಂದ್ರೆ —

ನನ್ನ ಗಂಡ ಕಿನ್ನಿಮೂಲ್ಕಿ ಗಣಪಯ್ಯ ಸೆಟ್ಟಿಗಾರರು ತಾ. 12—4 1944ರಲ್ಲಿ ಮೃತಪಟ್ಟ ತರುವಾಯ ಅವರ ಸ್ಥಿರ ಚರ ಸೊತ್ತು ವ್ಯಾಪಾರ ವಹಿವಾಟಿನ ಯಾವತ್ತೂ ಹೊರ ಬಾಕಿ ವಗೈರೆಗೆ ನಾನು ಸಂಪೂರ್ಣ ಹಕ್ಕುದಾರಳಾಗಿರುತ್ತೇನೆ ಮತ್ತು ನಡಿಸಿ ಬರುತ್ತೇನೆ

ಈಗ ಸದ್ರಿ ವಹಿವಾಟುಗಳನ್ನು ನಡಿಸುವರೆ ನನ್ನ ಅಸಾಧ್ಯವಾದುದರಿಂದ ಸದ್ರಿ ವಹಿವಾಟುಗಳನ್ನು ನಡಿಸಲಿರೆಯೂ, ನನ್ನ ಹೊರ ಬಾಕಿ, ವಸೂಲಿ ಗಳನ್ನು ಸೆಟ್ಟಿಗಾರರಿಗೆ ಬರಲಿಕ್ಕೆ ಇರುವ ಹೊರ ಬಾಕಿ ಬಾಡಿಗೆ ವಗೈರೆ ವಸೂಲಿ ಮಾಡುವ ನನ್ನ ಹಕ್ಕನ್ನು ಕಿನ್ನಿಮೂಲ್ಕಿಯಲ್ಲಿನ ವ ರಟ್ಟಿಚ್ ಕಾಸ್ತೇ ಬಲು ಪುರುಷ ನಾಯ್ಕರಿಗೆ ತಾ. 30-8-44ರಲ್ಲಿ ರಿಜಿಸ್ಟರ್ ಮಾಡಿ ಪವರ್ ಒಟರ್ನಿ ಮೂಲಕ ಸಂಪೂರ್ಣ ಅಧಿಕಾರ ಕೊಟ್ಟಿರುತ್ತೇನೆ

ಅದ್ದರಿಂದ, ನನಗೆ, ವ, ನನ್ನ ಗಂಡ ಗಣಪಯ್ಯ ಸೆಟ್ಟಿಗಾರರಿಗೆ ಬರತಕ್ಕ ಯಾವತ್ತೂ ಬಾಕಿಗಳನ್ನು ಸದ್ರಿ ಪುರುಷ ನಾಯ್ಕರಿಗೆ ಪಾವತಿ ಮಾಡಿ ಅವರಿಂದ ಕ್ರಮದಂತೆ ರಶೀದಿ ಪಡೆಯಬೇಕಲ್ಲದೆ ಬೇರೆ ಯಾರಿಂದಾದರೂ ಗಣಪಯ್ಯ ಸೆಟ್ಟಿಗಾರರ ಬಗ್ಗೆ ವ್ಯವಹಾರಗಳನ್ನು ನಡಿಯುವರೆ ಹಕ್ಕುದಾರರೆಂದು ಹೇಳಿ ಸದ್ರಿ ವ್ಯವಹಾರಗಳನ್ನು ವಸೂಲಿ ಮಾಡಿದರೆ ಪ್ರಯೋಜನಕ್ಕೆ ಬಾರದೆ ರದ್ದಾದೀತು, ಎಂಬ ಸಂಗತಿಯನ್ನು ಈ ಮೂಲಕ ತಿಳಿಸಲಾಗುತ್ತದೆ.

● ಈ ಹೆಬ್ಬೆಟ್ಟು ಗುರುತು ತುಂಗು ಸೆಟ್ಟಿಗಾತಿಯ ರುಜು—

(ಸಾಹುಕಾರ್ ಗಣಪಯ್ಯ ಸೆಟ್ಟಿಗಾರರ ಹೆಂಡ್ತಿ)

—ಉಡುಪಿ ಕಿನ್ನಿಮೂಲ್ಕಿ

ಮುಂಬಯಿ ಕಡೆಗೆ ಪ್ರಯಾಣ ಬೆಳೆಸುವರು, ಅವರ ಸ್ಥಾನಕ್ಕೆ ನಮ್ಮ ಡಿ. ಡಿ. ಆಫೀಸರರಾದ ಶ್ರೀ| ಪಿ ವಿ. ಮಾಧವರಾಯರನ್ನು ನಿಯಮಿಸಿರುವರು.

ಜಿಲ್ಲಾ ಎಡಿಶನಲ್ ಸೆಶನ್ ಜಡ್ಜರಾದ ಶ್ರೀ. ಟಿ. ಡಿ. ರಾಮಯ್ಯ ಪಂತುಲುಗಾರು, ಎಮ್. ಎ., ಎಲ್. ಬಿ.ಯವರು ಸೌತ್ ಮಲಬಾರು ಜಿಲ್ಲೆಯ ಜಡ್ಜರಾಗಿ ನೇಮಕಗೊಂಡಿರುವರು.

ಟಾಪ್ರು ಸಜೆ.— ಕಾಸರಗೋಡು ತಾಲೂಕು ಕ್ಯಯಾರು ಗ್ರಾಮದ ಅಪ್ಪಣ್ಣ ನಾಯ್ಕ ಎಂಬಾತನು ತನ್ನನ್ನು ಆಡ್ಯ ಎಂಬಾತನು ಗೇರುಬೀಜವನ್ನು ಕೊಯ್ಯುತ್ತಿದ್ದಾಗ ಆತಂಕಿಸಲು ಅವನನ್ನು ತಿವಿದು ಕೊಂದನೆಂಬ ಆರೋಪದ ಮೊಕದ್ದಮೆ ಜಿಲ್ಲಾ ಜಡ್ಜರಲ್ಲಿ ವಿಚಾರಣೆಯಾಗಿ ಜಡ್ಜರು ಆರೋಪಿಗೆ ಟಾಪು ಸಜೆ ವಿಧಿಸಿದರು.

ಕೋಳಿ ಮತ್ತು ಕೋಳಿ ತತ್ತಿಗಳ ಮೇಲೆ ನಿರ್ಬಂಧ:— ಕೋಳಿ ಮತ್ತು ಕೋಳಿ ತತ್ತಿಗಳನ್ನು ಹೊರಗೊಯ್ಯಕೂಡದೆಂದೂ ಕೊಂಡೊಯ್ಯಲು ಸರಬರಾಯಿ ಶಾಖೆಯ ಕನಿ ಶನರ ಅಪ್ಪಣೆಬೇಕೆಂದೂ ಒಬ್ಬನ ತನ್ನ ಉಗ್ರಾಣದಿಂದ ಗೆ ಒಂದು ಕೋಳಿ, 5 ತತ್ತಿಗಳನ್ನು ಒಯ್ಯಬಹುದೆಂದೂ ಪ್ರಕಟವಾಗಿದೆ.

ವರ್ಗದಾರರ ಸಂಘ:— ಇದೇ ಬರುವ ೧೦ನೆ ತಾರೀಕಿನಂದು ಬೆಳಿಗ್ಗೆ ಹತ್ತು ಗಂಟೆಗೆ ಸ್ಥಳೀಯ ಬಂಟರ ಹೋಸ್ಟೆಲಿನಲ್ಲಿ ಸಭೆ ಸೇರಿ ಈ ಜಿಲ್ಲೆಯ ಆಹಾರ ಪರಿಸ್ಥಿತಿ ಬಗ್ಗೆ ಕೈಕೊಳ್ಳಬೇಕಾದ ಉಪಾಯಗಳ ಕುರಿತು ಯೋಜನೆಯನ್ನು ಮಾಡಲಾಗುವುದು.

ಉಡುಪಿ

ಹವಾಮಾನ:— ಮಳೆಯಿಲ್ಲ. ಬಿಸಿಲು ಕಾಯುತ್ತಿದೆ, ಗದ್ದೆಗಳೆಲ್ಲ ಒಣಗಿ ರೈತರು ಕಂಗಾಲಾಗಿದ್ದಾರೆ.

ತೋಟಿಗಳ ಸಂಕಷ್ಟ.— ಮುನಿಸಿಪಲ್ ತೋಟಿಗಳು ನಗರದ ಹೊಲಸನ್ನು ಒಯ್ಯುವ ಗಾಡಿಯ ಅಭಾವದಿಂದಾಗಿ ತಲೆ ಹೊರೆಯಲ್ಲೇ ಸಾಗಿಸುವ ಕಷ್ಟಕ್ಕೀಡಾಗಿದ್ದಾರೆ. ವಿಠಿನ ಗದ್ದೆಗೆ ಹೋಗಲು ಸುಲಭದಾರಿಯಾದ ಶಾಯಾಡಿ ವಾರ್ಡಿನ ಅಗಲಕಿರಿದಾದ ಬ್ಲೀಕ್‌ಟವರ್ ಓಣಿಯಲ್ಲಿ ಮಧ್ಯಾಹ್ನದ ಸಂಜೆ ನಾಲ್ಕು ಗಂಟೆಯ ತನಕವೂ ತೋಟಿಗಳು ಹೊಲಸನ್ನು ಹೊತ್ತುಕೊಂಡು ಹೋಗುತ್ತಿರುವುದರಿಂದ ಎಷ್ಟೋ ವೇಳೆ ಮೈಗೆ ಮೈ ತಾಗುವ ಪ್ರಸಂಗ ಬಂದಿದೆ, ಅಧಿಕಾರಿಗಳು ದಾರಿಗಳಿಗೆ ಅನಾನುಕೂಲವಾಗದಂತೆಯೂ ತೋಟಿಗಳಿಗೆ ಕಷ್ಟ ಕಡಿಮೆಯಾಗುವಂತೆಯೂ ಅವರಿಗೆ ವನ್ನು ಸಾಗಿಸುವ ಗಾಡಿಗಳನ್ನು ಕೂಡಲೇ ಒದಗಿಸಿ ತಮ್ಮ ಆದ್ಯ ಕರ್ತವ್ಯವನ್ನು ಪೂರೈಸುವರೆ? ಎಂದು ಶ್ರೀ-ಯು. ಎಸ್. ಭಟ್ಟರು ಬರೆಯುತ್ತಾರೆ.

ಅತೃಪ್ತಿಕರ ಅಕ್ಕಿ ವಿತರಣೆ:— ನಗರದಲ್ಲಿ ಹೊಸಗೆ ಪದ್ಧತಿ ಜ್ಯಾರಿಗೆ ಬಂದಂದಿನಿಂದ ಅಕ್ಕಿ ವಿತರಣೆಯು ನಗರದ ಎಲ್ಲಾ ಡಿಪೋಗಳಲ್ಲಿಯೂ ಒಂದೇ ರೀತಿಯಲ್ಲಿ ಆಗ ವುದಿಲ್ಲವೆಂದು ಪದೇ ಪದೇ ದೂರು ಕೇಳಬರುತ್ತಿದೆ. ಕೆಲವು ಡಿಪೋಗಳಿಗೆ ಸದಾ ಸರ್ವದಾ ಚಲೋ ಅಕ್ಕಿ. ಮತ್ತು ಉಳಿದ ಡಿಪೋಗಳಿಗೆ ಮಧ್ಯಮ ಹಾಗು ಹಾಳು ದರ್ಜೆ ಅಕ್ಕಿ ಸರಬರಾಯಿ ಆಗುತ್ತಿದೆಯಂತೆ ಇದು ನಿಜವಿದ್ದರೆ ನಿಜವಾಗಿಯೂ ಖಂಡನೀಯ.

ಉದ್ಯಾವರ:— ಸಾಹುಕಾರ್ ಶ್ರೀ, ಸದಿಯ ಮರಕಲರವರು ತಾರೀಕು 19 8 1944ರಲ್ಲಿ ವರ್ಷಂಪ್ರತಿ ಕೊಡುವಂತೆ ಚೌತಿ ಹಬ್ಬದ ಒಂದು ದಿನದ ಬಗ್ಗೆ ಉದಿಯಾವರ ಗ್ರಾಮದ ರೇಶನ್ ಕಾರ್ಡುಗಳ್ಳ ಎಲ್ಲಾ ಮನೆಗಳವರಿಗೂ ಅವರ ಕಾರ್ಡಿನ ನಮೂದಿಸಿದ ಪ್ರಕಾರ ಸುಮಾರು 45 ಮುಡಿ ಅಕ್ಕಿಯನ್ನು ಧರ್ಮಾರ್ಥವಾಗಿ ಹಂಚಿರುತ್ತಾರೆ.

ಕಟಪಾಡಿ:— ಇಲ್ಲಿಯ ಶ್ರೀ ವೆಂ- ಸ್ವಾ. ಹಾ| ಎ. ಶಾಲೆಯಲ್ಲಿ ದಿವಂಗತ ಮಂಗಳೂರ ಶ್ರೀನಿವಾಸ ನಾಯಕರ ದಿನಾಚರಣೆ ಸಮಾರಂಭವು ಶ್ರೀ. ಯು. ವೆಂಕಟರಾವ್, ಬಿ ಎ, ಎಲ್. ಟಿ-ಅವರ ಅಧ್ಯಕ್ಷತೆಯಲ್ಲಿ ತಾ. 2-9-44ರಲ್ಲಿ ಜರಗಿತು. ಶಾಲಾ ಮುಖ್ಯ ಅಧ್ಯಾಪಕರು ಶಾಲೆಯ ಸಂಕ್ಷಿಪ್ತ ವರದಿಯನ್ನೂ ದಿವಂಗತರು ಶಾಲೆಯ ಏಳಿಗೆ ಬಗ್ಗೆ ಮಾಡಿದ ಪ್ರಯತ್ನಗಳನ್ನೂ ವಿವರಿಸಿದ ಬಳಿಕ ಶ್ರೀ. ಕೆ ರಾಮಚಂದ್ರ ಭಟ್ಟರ ದಿವಂಗತರ ಗುಣ ಕಥನವನ್ನು ಮಾಡಿದರು. ಶ್ರೀ ಬಿ ತಮ್ಮಯ್ಯ ಸೇರಿಗಾರ, ರಾಮಕೃಷ್ಣ ಭಟ್, ಮಿ| ಮಾರ್ಸೆಲ್ ಆಲ್ವ. ಶ್ರೀ. ಕೆ. ವಿಠ್ಠಲ ಶೆಣೈ, ಬಿ ಎ, ಎಲ್. ಟಿ ಇವರು ಸಂದರ್ಭೋಚಿತ ಭಾಷಣಗಳನ್ನಿತ್ತರು. ಸಮಾರಂಭದ ಸಲುವಾಗಿಯೇ ಏರ್ಪಡಿಸಿದ ಭಾಷಣ ಸ್ಪರ್ಧೆಯ ಬಹುಮಾನಗಳು ವಿದ್ಯಾರ್ಥಿಗಳಿಗೆ ಹಂಚಲ್ಪಟ್ಟವು. ಅಧ್ಯಕ್ಷರು ಶಾಲೆಯ ಉತ್ತಮ ಸ್ಥಿತಿ ಅದಕ್ಕೆ ಕಾರಣವಾದ ಶಾಲಾ ಸ್ಥಾಪಕರು ಸಲ್ಲಿಸಿದ ಸೇವೆ ಮೊದಲಾದುವುಗಳನ್ನು ತಮ್ಮ ಸರಸ ಭಾಷಣದಲ್ಲಿ ವಿವರಿಸಿದರು. ಮಕ್ಕಳ ಚಟುವಟಿಕೆ, ಯಕ್ಷಗಾನ ಪ್ರದರ್ಶನವಾಗಿ ಸಮಾರಂಭವು ಕೊನೆಗೊಂಡಿತು.

ಕಾರ್ಕಳ.— ಡಿಸ್ಟ್ರಿಕ್ಟ್ ಟೆಕ್ಸ್‌ಟೈಲ್ ಆಫೀಸರರಾದ ಮಿ| ಎಮ್ ಎಮ್. ಪಿಂಟೋರವರ ಅಧ್ಯಕ್ಷತೆಯಲ್ಲಿ ಇಲ್ಲಿಯ ವ್ಯಾಪಾರಸ್ಥರ ಸಭೆ ಜರಗಿ, ಎಲ್ಲಾ ವ್ಯಾಪಾರಿಗಳು ಸರಕಾರದ "ಸ್ಟೇಂಡಾರ್ಡ್ ಕ್ಲಾತ್"ಗೆ ಪ್ರೋತ್ಸಾಹ ಕೊಡುವುದು ಯೋಗ್ಯನೆಂದರಿತು, ತಮ್ಮ ತಮ್ಮ ಲಕ್ಷ್ಯನ ಸಾರ ಒಟ್ಟಿ ಶೇಕಿ ಮಾರುವ ಏರ್ಪಾಡು ಮಾಡಲಾಯಿತು

ಕುಂದಾಪುರ ಸಬ್ ಕಲೆಕ್ಟರ ಶ್ರೀ ಡಿ. ಡಿ. ಸೇಠ್, I. C. S. ರವರ ಅಧ್ಯಕ್ಷತೆಯಲ್ಲಿ ಬೋರ್ಡ್ ಮೈನ ಎಲಿಮೆಂಟರಿ ಶಾಲೆಯಲ್ಲಿ ಪುರಪ್ರಮುಖರ ಸಭೆ ಜರುಗಿ, ಶ್ರೀ. ಕೆ. ಜಿ ಶೆಣೈ, ವಕೀಲ ಗಣಪತಿ ಕಾಮತ್, ಕೆ. ಶ್ರೀನಿವಾಸ ಕಿಣಿ B. A. L. T., ಶ್ರೀ S. ರಾಮಕೃಷ್ಣ ಆಚಾರ್, ಶ್ರೀ| ಪಿ.ವಿ ಉಪಾಧ್ಯಾಯ ವಕೀಲ ಮೊದಲಾದವರ ಪ್ರಸಂಗೋಚಿತ ಭಾಷಣಗಳಾದ ಬಳಿಕ ಅಧ್ಯಕ್ಷರು ಒಂದೇ ಅಂಗಡಿಯಲ್ಲ, ಎಲ್ಲಾ ವ್ಯಾಪಾರಸ್ಥರು ತಮ್ಮ ಅಂಗಡಿಗಳಲ್ಲಿ 'ಫೇರ್‌ಪ್ರೈಸ್' ಯೋಗ್ಯವಾದ ನ್ಯಾಯವಾದ ದರದಲ್ಲೇ ಸಾಹಿತ್ಯ ಸಾಮಗ್ರಿಗಳನ್ನು ಕೊಡುವುದೇ ಯೋಗ್ಯವೆಂದರು. ಅವರ ಹಸ್ತಗಳಿಂದ ಫೇರ್‌ಪ್ರೈಸ್ ಡಿಪೋ ತೆರೆಯಲ್ಪಟ್ಟಿತು.

ಬಿಲ್ಲವರ ಎಸೋಸಿಯೇಶನ್ ಮುಂಬಯಿ.— ಇದರ ಆಶ್ರಯದಲ್ಲಿ ಬ್ರಹ್ಮಶ್ರೀ ನಾರಾಯಣ ಪರಮ ಹಂಸರ ಜನ್ಮದಿನಾಚರಣೆಯನ್ನು ಇದೇ ತಾ. 10ನೇ ರವಿವಾರ ಅಪರಾಹ್ನ ಘಂಟೆ 2 30ಕ್ಕೆ ಆಚರಿಸಲಾಗುವುದು

ಮೊಗವೀರ ವ್ಯವಸ್ಥಾಪಕ ಮಂಡಳಿ ಮುಂಬಯಿ.— ಇದರ ವಾರ್ಷಿಕೋತ್ಸವವು, ಮೊಗವೀರ ಶ್ರೀ, ನೈಟ್ ಹೈಸ್ಕೂಲಿನ ಪಾರಿತೋಷಕ ವಿತರಣವೂ, ಧರ್ಮಪ್ರಕಾಶ ಶ್ರೀ ಎಮ್. ಶ್ರೀನಿವಾಸಯ್ಯನವರ ಅಧ್ಯಕ್ಷತೆಯಲ್ಲಿ ಸರ್ ಕವಾಸ್ಜಿ ಜಹಾಂಗೀರ್ ಹಾಲಿನಲ್ಲಿ ತಾರೀಖು ... ರಲ್ಲಿ ವಿಜೃಂಭಣೆಯಿಂದ ಜರಗಿತು ಸ್ವಾಗತವಾದ ಮೇಲೆ ಸಂದೇಶಗಳನ್ನು ಓದಲಾಯಿತು. ಶ್ರೀ ಯಸ್. ಸಿ ಪಡುಬಿದ್ರಿಯವರು ಮಂಡಳಿಯ ಸಂಕ್ಷಿಪ್ತ ಚರಿತ್ರೆಯನ್ನು ವಾಚಿಸಿದರು. ಅನಂತರ ಶಾಲಾ ಮಕ್ಕಳಿಗೂ, ಮಂಡಳಿಯ ಕೆಲಸಗಾರರಿಗೂ ಪಾರಿತೋಷಕಗಳನ್ನು ಹಂಚಲಾಯಿತು.

ಅತಿಥಿಗಳ ಪೈಕಿ ಶ್ರೀಗಳಾದ ಕೆ. ಯನ್. ಗಾಯಕೊಂಡೆ, ಯನ್. ಯಸ್. ಗುಬ್ಬಿ, ಕೃಷ್ಣ ಕುಮಾರ್, ಎಚ್. ವಿ. ಇವಾರಿ, ಸರ್ದಾರ್ ತಮನ್‌ಸಿಂಗ್, ಜಿ. ಯನ್. ಐಯ್ಯರ್ ಮತ್ತು ಆರ್. ಡಿ ವೆಂಡನ್ ಮುಂತಾದವರು ಮಂಡಳಿಯ ಕಾರ್ಯಗಳನ್ನು ಪ್ರಶಂಸಿಸಿ ಸಂದರ್ಭೋಚಿತ ಭಾಷಣಗಳನ್ನಿತ್ತರು. ಅಧ್ಯಕ್ಷರ ಸಂದರ್ಭೋಚಿತ ಭಾಷಣವಾದ ಮೇಲೆ ಶ್ರೀಯುತ ಯಚ್. ಕೆ. ಪುತ್ರಣರು ಧನ್ಯವಾದವಿತ್ತರು. ಕೊನೆಗೆ ಶಾಲಾ ಉಪಾಧ್ಯಾಯರೂ, ವಿದ್ಯಾರ್ಥಿಗಳೂ, ಅಭಿನಯಿಸಿದ ಎರಡು ಏಕಾಂಕ ನಾಟಕಗಳೂ ಶ್ರೀ ಸದಾಶಿವ ಯಂ. ಕಶೇರರ ಇಂದ್ರಜಾಲವೂ ಪ್ರದರ್ಶಿಸಲ್ಪಟ್ಟ ಮೇಲೆ ಸಭೆಯು ವಿಸರ್ಜಿಸಲ್ಪಟ್ಟಿತು

ಶ್ರೀಮಾನ್ ಶ್ರೀನಿವಾಸಯ್ಯನವರು ಮಂಡಳಿಯ ವಿದ್ಯಾನಿಧಿಗೆ ೧೦೦೧ ರೂಪಾಯಿ ದಾನಕೊಟ್ಟಿರುವರೆಂದು ಸಭಿಕರಿಗೆ ತಿಳಿಸಲಾಯಿತು.

ಸ್ವೀಕಾರ—ವಿಮರ್ಶೆ

ಜುಪಿಟರ್ ಜನರಲ್ ಇನ್ಶೂರೆನ್ಸ್ ಕೊ, ಲಿಮಿಟೆಡ್ ಕಳೆದ 25 ವರುಷಗಳಿಂದಲೂ ಸರ್ವತೋಮುಖ ಅಭಿವೃದ್ಧಿ ಪಡೆಯುತ್ತಾ ಬಂದಿರುವ 'ಜುಪಿಟರ್' ವಿಮಾಸಂಸ್ಥೆಯ ಉದ್ಯಮವು, ಅದರ ರಜತೋತ್ಸವ ವರುಷವಾದ 1943ರಲ್ಲಿ 1 ಕೋಟಿ ರೂಗಳಿಗೂ ಮಿಕ್ಕಿ ಪಟ್ಟವನ್ನು ಆನಂದವಾಗುತ್ತಿದೆ. ಭಾರತದ ಅತಿದೊಡ್ಡ ಸಂಯುಕ್ತ ವಿಮಾಸಂಸ್ಥೆಗಳಲ್ಲಿ 'ಜುಪಿಟರ್' ಎರಡನೇ ಸ್ಥಾನದಲ್ಲಿದೆ 1943ರಲ್ಲಿ ಈ ವಿಮಾಸಂಸ್ಥೆಯ 'ಅಗ್ನಿವಿಭಾಗ'ದ ಪ್ರೀಮಿಯಮ್ ಉತ್ಪನ್ನವು ರೂ. 20,24,922. ಅರ್ಥಾತ್ ಹಿಂದಿನ ವರುಷಕ್ಕಿಂತ ರೂ. 5,19,586ರಷ್ಟು ಹೆಚ್ಚಿಗೆ. ಕ್ಲೈಮ್ ಸಂದಾಯ, ಕಮಿಶನ್ ಮತ್ತು ಮೆನೇಜ್‌ಮೆಂಟಿನ ವೆಚ್ಚವು ಕಳೆದ ವರುಷ ಪ್ರೀಮಿಯಮ್ ಆದಾಯದ 75 50%ರಷ್ಟಿದ್ದುದು ಈ ವರುಷ 62.45%ಕ್ಕೆ ಇಳಿದಿದೆ ಅಂತೆಯೇ ಈ ಅವಧಿಯಲ್ಲಿ ಆದಾಯದ ಪರಿಮಾಣವು ಏರಿದೆ. 'ಅಗ್ನಿನಿಧಿ'ಯ ಈಗಿನ ಮೊತ್ತ ರೂ. 13,16 198. ಜಲಸಂಬಂಧ ವಿಮೆಯ ವಿಭಾಗದಲ್ಲಿ ಈ ವರುಷದ ನಿವ್ವಳ ಪ್ರೀಮಿಯಮ್ ರೂ. 7,42,292. ಈ ಭಾಗದಲ್ಲಿ ಸದ್ಯದ ಯುದ್ಧಾವಾಯುಗಳ ದೆಸೆಯಿಂದ ಕ್ಲೈಮ್ ಸಂದಾಯವೇ ಮೊದಲಾದ ವ್ಯಯವು 1942ಕ್ಕಿಂತ ಸ್ವಾಭಾವಿಕವಾಗಿ ಸ್ವಲ್ಪ ಹೆಚ್ಚಿದೆ. ಆದರೆ 'ಜಲಸಂಬಂಧ ನಿಧಿ'ಯು ಕಳೆದ ವರುಷ ರೂ 9,96,976 ಆಗಿದ್ದುದು ಈ ವರುಷ ರೂ. 11,13,438ಕ್ಕೇರಿದೆ. 'ಮಿಸ್ಲೇನಿಯಸ್' ಡಿಪಾರ್ಟ್‌ಮೆಂಟಿನ ಪ್ರೀಮಿಯಮ್ ಉತ್ಪನ್ನವಂತೂ 1942ರಲ್ಲಿ ರೂ. 1,71,904ಇದ್ದುದು 1943ರಲ್ಲಿ ರೂ 2,55,068 ಆಗಿದೆ ಇದು ಅಸಾಧಾರಣ ಪ್ರಗತಿ. ಕಂಪೆನಿಯು ರೂ 1,11,08,658ರ ಮೌಲ್ಯದ 3674 ಪೋಲಿಸಿಗಳನ್ನು ಕೊಟ್ಟಿರುವುದೆಂಬುದನ್ನು ಹೆಗ್ಗಳಿಕೆಯಿಂದ ಉಲ್ಲೇಖಿಸಬೇಕಾಗಿದೆ. ಬೊಂಬಾಯಿಯ ಅಗ್ನಿದುರಂತದಲ್ಲಿ ಹಾನಿಗೊಳಗಾದವರಿಗೆ ಜುಪಿಟರ್ ತನ್ನ ಪಾಲಿನ ರೂ. 250,000ನ್ನು ತೆತ್ತಿದೆ. ಈ ಸಂಸ್ಥೆಯು ವಿವಿಧ ನಿಧಿಗಳಾಗಿ ಇಟ್ಟಿರುವ ಜಮ್ಮಾ ಹಣವು ರೂ. 92,26,567. ಜುಪಿಟರ್ ವಿಮಾಸಂಸ್ಥೆಯ ದಕ್ಷಿಣ ಕನ್ನಡದ ಉತ್ಸಾಹಿ ಹಾಗೂ ಕಾರ್ಯದಕ್ಷ ಚೀಫ್ ಏಜೆಂಟರಾದ ಶ್ರೀ| ಪಿ. ಡಿ ನಾಯರಿಗೆ ಸರ್ವರ ಬೆಂಬಲ ದೊರೆಯಲೆಂದು ಹಾರೈಸುತ್ತೇವೆ.

ತಾ **28-8-1944**ರಿಂದ

2ನೇ ವಾರ! 2ನೇ ವಾರ!!

ಕನ್ನಡ ಚಿತ್ರರತ್ನ

ವಸಂತಸೇನಾ

ಸುಬ್ಬಯ್ಯ ನಾಯ್ಡು, ಲಕ್ಷ್ಮೀಬಾಯಿ,

ನಾಗೇಂದ್ರರಾವ್

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

WANTED.

A Secondary Grade Trained Teacher to fill up a permanent vacancy in the Hindu Higher Elementary School, Kalhanpur. For further particulars please apply by 15-9-'44 to the undersigned

Kalhanpur, 4-9-1944.

U. A Pai, Manager.

"ಒಳಗೆ ಆದ ಆ ಶಬ್ದವೇನು?"

ಗಾಂಧಿಜೀ ಗೊಳ್ಳೆಂದು ನಗುತ್ತಾ "ದಯವಿಟ್ಟು ಕ್ವಾಯಿದೀ ಆಝಾಮರ ಅಡುಗೆಯವನನ್ನು ವಿಚಾರಿಸಿರಿ".

ಬಾತ್ಮಿದಾರರು ಒಬ್ಬರ ಮುಖವನ್ನೊಬ್ಬರು ನೋಡಿಕೊಂಡರು. ಹಲವು ಕಂಠಗಳು ಒಂದೇ ಬಾರಿ ಪ್ರಶ್ನಿಸಿದುವು "ನಿಮ್ಮ ಮಾತುಕತೆಯೆಲ್ಲ ಎಲ್ಲಿವರೆಗೆ ಬಂತು?"

'ಇಲ್ಲಿವರೆಗೆ!' ಗಾಂಧಿಜೀ ತನ್ನ ಕಂಠಕ್ಕೇನೇ ಕೈ ತೋರಿಸುತ್ತಾ ಕಾರು ಹತ್ತಿದರು. ಹತ್ತುತ್ತಿರುವಾಗ ಗಾಂಧಿಜೀಯ ಪೈಂಜಾಸಿನ ತುದಿಯಲ್ಲಿ ಒಂದು ಕಾಗದದ ಚೂರು ಅಂಟಿಕೊಂಡಿರುವದನ್ನು ಒಬ್ಬ ಬಾತ್ಮೀದಾರ ಕಿತ್ತು ತೆಗೆದ. ಶಾಲನ್ನೆಳೆದವರಾರು ಎಂದು ಗಾಂಧಿಜೀ ಹಿಂದೆ ನೋಡಿದರು. ಬಾತ್ಮೀದಾರ ಕೈ ಮುಗಿದು ನಿಂತಿದ್ದ; ಗಾಂಧಿಜೀ ಪ್ರತಿ ನಮಸ್ಕಾರ ಕೊಡುತ್ತಿದ್ದಂತೆ ಕಾರು ಹೊರಟಿತು.

ವರದಿಗಾರರೊಟ್ಟಾಗಿ ಆ ಕಾಗದ ಚೂರನ್ನು ಪರೀಕ್ಷಿಸಿದರು. ಅದೊಂದು ಚೂರು ಕಾಗದ. ಹಿಂದು ಮುಂದಿನ ಭಾಗ ಹರಿದುಹೋಗಿತ್ತು. ಉಳಿದಿದ್ದುದು 'ಪಾತಿ' ಎಂಬೆರಡೇ ಅಕ್ಷರಗಳು. ಹೋ. ಪಾಕಿಸ್ತಾನದ ನಕಾಶೆ ತೆಗೆದಿರಬೇಕು. ಆದರೆ 'ಪಾಕಿ'ಯ ಬದಲಿಗೆ 'ಪಾತಿ' ಹೇಗೆ ಬಂತು? ಪ್ರಾಯಶಃ ಗಾಂಧಿಜೀಯ ಹಲ್ಲಿಲ್ಲದ ಬಾಯಿಯ ತೊದಲು ಉಚ್ಚಾರದ ಪರಿಣಾಮವಿದು ಅದಕ್ಕೇ ರೀತಿ ಅಂಟು ತಾಗಿರುವದನ್ನು ಕಾಣುವಾಗ ಹಿಂದುಸ್ಥಾನದ ಕೆಲವು ತುಂಡನ್ನು ಪಾಕಿಸ್ಥಾನಕ್ಕೆ ಅಂಟಿಸಿ ನೋಡಿರಬೇಕು-ಬಾತ್ಮೀದಾರ ಕೂಟದ ಶೋಧನೆ:-

ಆ ದಿನದ ದೈನಿಕಗಳಲ್ಲಿ ಮುಖ್ಯ ಹೆಡ್ಡಿಂಗುಗಳಡಿಯ ವರದಿ:— 'ಪಾಕಿಸ್ತಾನದ ಪ್ರಶ್ನೆ ಕೂಲಂಕುಶವಾಗಿ ಬಿಡಿಸಲ್ಪಟ್ಟು ಗಡಿನಿರ್ಣಯವೂ ಆಗಿದೆ; ಸ್ವತಂತ್ರಾಡಳಿತೆಗನುಕೂಲವಾಗುವಂತೆ ಮುಸ್ಲಿಂ ಬಹುಮತವಿಲ್ಲದ ಕೆಲವು ಜಿಲ್ಲೆಗಳನ್ನೂ ಪಾಕಿಸ್ತಾನಕ್ಕೊಪ್ಪಿಸಲಾಗಿದೆ.' ಹೆಡ್ಡಿಂಗುಗಳ ಕೆಲವು ಮಾದರಿಗಳಲ್ಲಿವೆ.

ಮುಸ್ಲೀಂ ಪತ್ರಿಕೆಗಳಲ್ಲಿ:-'ಗಾಂಧಿಯು ಪಾಕಿಸ್ಥಾನಕ್ಕೆ ಸೆರಗೊಡ್ಡಿದರು!' 'ಕ್ವಾಯಿದೀ ಆಝಾಮರಿದಿರು ಹಿಂದೂ ಪ್ರಮುಖನ ಕಂಪ-'ಪಾಕ್'ಎನ್ನುವ ಬದಲು 'ಪಾತಿ' ಎಂದರು!'

ರಾಷ್ಟ್ರೀಯ ಪತ್ರಿಕೆಗಳಲ್ಲಿ-'ಗಾಂಧಿಜೀಯ ಪಾಲಿನ ತುದಿಯಲ್ಲಿ 'ಪಾತಿ' ಅರ್ಥಾತ್ ಪಾಕಿಸ್ತಾನ ನೇತಾಡುತ್ತಿದೆ-ಆದರೆ ಹೃದಯದಲ್ಲಿ?' 'ಭಾರತದ ಹಣೆಬರಹ ಗಾಂಧಿಜೀಯ ಹೆಗಲಲ್ಲಿ!'

ಹಿಂದೂ ಪತ್ರಿಕೆಗಳಲ್ಲಿ-'ಬೈರಾಗಿಯ ಪೈಂಜಾಸಿನಲ್ಲಿ ಅಖಂಡ ಹಿಂದುಸ್ಥಾನದ ಮರಣ ಶಾಸನ!'-'ಗಾಂಧಿಯಂಟಿಸಿಕೊಂಡ 'ಪಾತಿ' ಬಿರುದಿನ ಅರ್ಥ-'ಪಕ್ಷಪಾತಿ. ಇಲ್ಲವೇ 'ಪಾಪಿ'!

ಮಾತುಕತೆ ಮರುದಿನಕ್ಕೆ ಮುಂದುವರಿಸಲ್ಪಟ್ಟಿದ್ದಿತು. ಬೊಂಬಾಯಿಯ ಮತ್ತು ಆಸುಪಾಸಿನ, ಶಾಲೆ, ಮನೆ, ಆಫೀಸುಗಳ ಗೋಡೆಗಳಲ್ಲಿ ತೂಗಿಸಲ್ಪಟ್ಟಿದ್ದ ಹಿಂದುಸ್ಥಾನದ ನಕಾಶೆಗಳೆಲ್ಲಾ ಗುಪ್ತವಾಗಿ ಸಂಗ್ರಹಿಸಲ್ಪಟ್ಟು ಜಿನ್ನಾ ಗೃಹಕ್ಕೆ ರವಾನಿಸಲ್ಪಡುತ್ತಿರುವ ಗುಟ್ಟು ಬಯಲಾದುದರಿಂದ ಆತುರವು ಮತ್ತಷ್ಟು ಹೆಚ್ಚಿತು. ಅಂದೇ ಶ್ರೀ. ಪ್ಯಾರೇಲಾಲರ ಪ್ರಕಟಣೆ:—

—ಆಗಾಖಾನ್ ಅರಮನೆ ನಂ. 2!—

೨ನೇ ಪುಟದಿಂದ ಮುಂದುವರಿದುದು).

"ಗಾಂಧಿ-ಜಿನ್ನಾ ಸಂಭಾಷಣೆಯ ಕುರಿತು ಕೇವಲ ಕಲ್ಪನೆಯ ಮತ್ತು ವಿಲಕ್ಷಣವಾದ ವಾರ್ತೆಗಳು ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿರುವದು ಗಾಂಧಿಜೀಯ ಅವಗಾಹನೆಗೆ ಬಂದಿದೆ. ಅವರ ಶಾಲಿನ ತುದಿಗೆ ಅಂಟಿಕೊಂಡಿದ್ದ 'ಪಾತಿ' ಅಕ್ಷರಗಳ ಆಧಾರದಿಂದ ಹುಟ್ಟಿಕೊಂಡಿರುವ ಕಟ್ಟುಕಥೆಗಳಂತೂ ಹಾಸ್ಯಾಸ್ಪದ ಮತ್ತು ಶೋಚನೀಯವಾಗಿವೆ ಮೊನ್ನೆ ತಾನೇ ಅನಾರೋಗ್ಯದಿಂದ ಸಧಾರಿಸಿರುವ ಕ್ವಾಯಿದೀ ಆಝಾಮರು ಮಾತುಕತೆಯ ನಡುವೆ ಆಯಾಸಗೊಂಡು ಕೆಲವು 'ಚಪಾತಿ'ಗಾಗಿ ಬರೆದಿದ್ದ ಚೀಟಿಯನ್ನು ಕಳುಹಿಸುವಷ್ಟು ಅವಕಾಶ ದೊರೆಯದೆ' ಅದು ಅಲ್ಲೇ ಹರಿದುಹೋಗಿ 'ಪಾತಿ' ಅಕ್ಷರಗಳಿದ್ದ ತುಂಡು ಮಾತ್ರ ಉಳಿದಿತ್ತು. ಗಾಂಧಿಜೀ ಮತ್ತು ಕ್ವಾಯಿದೀ ಆಝಾಮರು ಎಷ್ಟೊಂದು ಸಹೋದರ ಭಾವದಿಂದ ವರ್ತಿಸಿದ್ದರೆಂದರೆ ಮಿ. ಜಿನ್ನರು ಬೆವರಿದಾಗಲೆಲ್ಲಾ ಅವರ ಹಣೆಯನ್ನು ಗಾಂಧಿಜೀ ತನ್ನ ಶಾಲಿನಿಂದ ಒಜ್ಜುತ್ತಿದ್ದರು. ಕ್ವಾಯಿದೀ ಆಝಾಮರು ತಲೆ ಸಿಡಿತಕ್ಕಾಗಿ ಲೇಪಿಸಿಕೊಂಡಿದ್ದ ಲೇಪವು ಗಾಂಧಿಜೀಯ ಶಾಲಿಗೆ ತಾಗಿದ್ದುದರಿಂದ, ಚಪಾತೀ ಚೀಟಿನ 'ಪಾತಿ' ತುಂಡು ಆ ಶಾಲಿಗಂಟಿಕೊಂಡಿದ್ದಿತಲ್ಲದೆ ಅದರಲ್ಲಿ ಇನ್ನಾವ ಗೂಢಾರ್ಥವೂ ಇಲ್ಲ. ಈ ಕುರಿತು ಪತ್ರಿಕೆಗಳಲ್ಲಿ ಬಂದಿರುವ ಅಸಂಬದ್ಧ ವರದಿಗಳಿಗಾಗಿ ಗಾಂಧಿಜೀ ಅತ್ಯಂತ ಖೇದಪಡುತ್ತಾರಲ್ಲದೆ, ನಾಳೆ ಜಿನ್ನರೊಂದಿಗೆ ಕೋಣೆಯಲ್ಲಿ ಬೀಗ ಹಾಕಿ ಕುಳಿತವರು ಯಾವುದಾದರೊಂದು ತೀರ್ಮಾನ ಹೊಂದದೆ ಬಾಗಿಲು ತೆರೆಯುವಂತಿಲ್ಲವೆಂದು ನಿರ್ಧರಿಸಿ, ಮಿ ಜಿನ್ನರ ಒಪ್ಪಿಗೆಯನ್ನೂ ಪಡೆದಿದ್ದಾರೆ ಈ ಸಂದರ್ಭದಲ್ಲಿ ಪತ್ರಿಕೆಗಳು ತಮ್ಮ ಮಹತ್ವದ ಜವಾಬ್ದಾರಿಯನ್ನು ಅರಿತುಕೊಂಡು, ತಮ್ಮ ಆತುರ ಮತ್ತು ಕಲ್ಪನಾ ಶಕ್ತಿಯನ್ನು ಸಂಪೂರ್ಣವಾಗಿ ದಮನಿಸಿಕೊಳ್ಳಬೇಕೆಂದು ಅವರ ಆಗ್ರಹದ ವಿನಂತಿಯಿದೆ".

೦೦ ೦೦ ೦೦

ಮರುದಿನ ಅಪರಾಹ್ನ ಗಾಂಧಿಜೀಯ ಕಾರು ತೀವ್ರಗತಿಯಿಂದ ಜಿನ್ನಾ ಗೃಹಕ್ಕೆ ಧಾವಿಸುತಿತ್ತು; ಕಾರಿಗೆ ಪರದೆ ಮುಚ್ಚಲಾಗಿತ್ತು. ಸಾಸಿವೆ ಬಿದ್ದರೆ ಸದ್ದಾಗುವಷ್ಟು ಜನಸಂದಣಿಯಲ್ಲೂ ಮೌನ ಗಾಂಧಿಜೀ ಕಾರಿನಿಂದಿಳಿದುದಾಗಲೀ ಒಳಪ್ರವೇಶಿಸಿದುದಾಗಲೀ ಕಾಣುತ್ತಿರಲಿಲ್ಲ; ತುಸು ಹೊತ್ತಿನಲ್ಲಿ ಒಂದು ಗಸಾಗಲು ಹಾರಿತು-ಇಬ್ಬರು ಪ್ರಮುಖರು ಬಾಗಿಲ ಚಿಲುಕ ಹಾಕಿ ಕುಳಿತುಕೊಂಡರು ಎಂಬ ಸೂಚನೆ. ಸಂದಣಿಯಲ್ಲಿ ಒಂದೇ ಒಂದು ಶಾಂತ ಗಂಭೀರ ಜಯಘೋಷ- 'ಗಾಂಧಿಜಿನ್ನಾ ಕೀ ಜೈ!'

ಘಂಟೆಗಳು ಕಳೆದವು!
ದಿನಗಳುರುಳಿದವು!!
ಮಾಸಗಳು ಸಂದವು!!!
ಬಾಗಿಲ ಚಿಲುಕ ತೆಗೆಯಲ್ಪಟ್ಟಿಲ್ಲ.

ಎಂದಿಗೂ ಇದನ್ನು ಮಾಡದಿರಿ

ಗಾಡಿಯ ಹೊರಗಡೆ ಪ್ರಯಾಣಮಾಡದಿರಿ. ಹಾಗೆ ಮಾಡಿದಿರಾದರೆ, ಕೈಕಂಬಕ್ಕೋ, ಸೇತುವೆಗೋ ತಗಲಿ, ನಿಮ್ಮ ದೇಹವು ಚೂರ ಚೂರಾಗುವದು. ಈ ರೀತಿಯ ಪ್ರಯಾಣವು ಕಾಯಿದಾ ವಿರುದ್ಧವಾದದ್ದರಿಂದ, ಅಪಘಾತವು ಸಂಭವಿಸಿದರೆ, ಅದಕ್ಕಾಗಿ ಯಾವ ಉಪಶಮನವೂ ಸಿಕ್ಕುವದಿಲ್ಲ ಗಾಡಿಯ ಒಳಕ್ಕೆ ಪ್ರವೇಶವು ಸಿಕ್ಕದಿದ್ದರೆ, ಪ್ರಯಾಣವನ್ನೇ ಮಾಡದಿರಿ. ಮರಣಕ್ಕೂ ಅಂಗಹಾನಿಕ್ಕೂ ಆಸ್ಪದಕೊಡತಕ್ಕ ಅಪಾಯಕರವಾದ ಪ್ರಯಾಸವು ನಿಮಗೂ, ನಿಮ್ಮ ಕುಟುಂಬಕ್ಕೂ ಒಳ್ಳೆಯದಲ್ಲ.

ರೈಲುಗಾಡಿಗಳ ಮತ್ತು ರೈಲುಡಬ್ಬಿಗಳ ಸಂಖ್ಯೆಯು ಕಡಮೆಯಾಗಿರುವದರಿಂದ, ಈಚೆಗೆ ಗಾಡಿಗಳು ವಿಶೇಷವಾಗಿ ಜನರಿಂದ ಭರ್ತಿಯಾಗಿರುತ್ತವೆ. ಹೀಗೆ ಕಡಮೆಯಾಗಿರುವದಕ್ಕೆ ಕಾರಣವೆಂದರೆ, ಈಗ ರೈಲ್ವೆಯವರ ಪ್ರಥಮ ಕೆಲಸವೆಂದರೆ, ದೇಶದ ಎಲ್ಲಾ ಭಾಗಕ್ಕೂ ಆಹಾರಪದಾರ್ಥ, ಬಟ್ಟೆ ಮತ್ತು ಸಾಮಾನುಗಳನ್ನು ರವಾನಿಸುವದು. ಪ್ರಯಾಣಕ್ಕಿಂತಲೂ ನಿಮಗೆ ನಿಮ್ಮ ಆಹಾರ, ಬಟ್ಟೆ ಮತ್ತು ಆರೋಗ್ಯ ಇವುಗಳೇ ಮುಖ್ಯವಾದವುಗಳು.

ಕಡಮೆಯಾಗಿ ಪ್ರಯಾಣಮಾಡಿರಿ

AAA 684 KN.

ಮತ್ತು ಅಪಾಯಕರವಾದ ರೀತಿಯಲ್ಲಿ ಎಂದಿಗೂ ಪ್ರಯಾಣ ಮಾಡದಿರಿ.

The Pangal Nayak Bank Limited.

(Incorporated in 1920)

Registered Office Court Road, UDIPI

Branches at — Udipi Mangalore Katapadi Kanhangad Kinnigoli and Nileshwar, South Canara District

Discounting of demand and short term negotiable instruments for approved parties granting of loans and overdraft accommodation on goldware, marketable produce, other merchandise and on other securities, collection of pay pension or other bills, transmission of monies to upcountry places on moderate terms acceptance of Fixed, Current Savings Bank and Cumulative deposits and every other type of up to date Banking service is at the disposal of all the sections of the discreet public

For business proper please enquire at any one of our Offices

r 1911

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋತರಕ್ಕೆ ಶಾಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರ ಶರೀರದ ಸುತ್ತ ಘಾಯವಾಗಿದ್ದರೆ, ಚಟ್ಟೆ ಬಿದ್ದಿದ್ದರ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ ಬಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕಂಪು ಸೆರಗು ಹೋಗುತ್ತಿದ್ದರೆ, ಹುಲಿ ಕಟು ಗರ್ಭಿಯಿಂದ ಗರ್ಭಕೋಶ ನಾಶಹೊಂದಿದ್ದರೆ ಸರಿಯಾಗಿ ಜೇದಿಯಾಗದಿದ್ದರ, ಮೂತ್ರ ಉರಿಯುತ್ತಿದ್ದರೆ ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವು ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನ ಸಂಜ ಎರಡು ಸಾರೆ ತಕ್ಕೊಳ್ಳಬೇಕು ಮುಂದೆ ೬ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು ಪಥ್ಯ ಹುಳಿಖಾರ,ಕುಂಬಳಕಾಯಿ,ಬಳ್ಳೊಳ್ಳಿ ಬಿಡಬೇಕು

ಬಾಟ್ಲಿ ೧ಕ್ಕೆ ೫ರೂ ಪೋಸ್ಟ ಚಾರ್ಜ ೮ ಆಣೆ

ಏಜೆಂಟರು —ಗದಗ —ಗದಗ ಫಾರ್ಮಸಿ, ಹುಬ್ಬಳ್ಳಿ -ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟ — ಬಾಗಲಕೋಟೆ ಫಾರ್ಮಸಿ, ಧಾರವಾಡ —ಧಾರವಾಡ ಫಾರ್ಮಸಿ, ದಾವಣಗೇರಿ ದಾವಣಗೇರಿಪ್ರೆಸ್ ಪತ್ರ ವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ

Ayurveda Oushadalaya GADAG

The best preventive in epidemics of CHOLERA

"BHUVANENDRA"

CHANDRAMAS Also a sovereign remedy for diarrhoea Stomachache Vomiting and Nausea

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬ ಕೊಡನಿರತಕ್ಕ ಅತ್ಯುತ್ತಮ ಔಷಧಿ

[illegible] 1 [illegible] 8 [illegible] 1 [illegible] 2 [illegible]

[illegible] 2 [illegible] 3 [illegible]

[illegible] ಹೊಟ್ಟೆನೋವು ಹಲ್ಲುನೋವು, ಅಜೀರ್ಣ ಇತ್ಯಾದಿಗಳ್ಳು ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ ಕ.

[illegible] L I M, [illegible]

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಜಿಸ್ಟರ ಮಾಡಲ್ಪಟ್ಟಿದೆ)

ಬಾಣಂತಿಯರ ಸಲುವಾಗಿ ವಿಶೇಷ ಮತ್ತು ಪ್ರಕೃತದ ವೈಜ್ಞಾನಿಕ ರೀತಿಯ [illegible] ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ಬಾಟ್ಲಿಗಳು ಹಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ

ಎಂ ವಿ ಶಾಸ್ತ್ರಿ, ಆಯುರ್ವೇದ ಭೂಷಣ, ನಂ 5 ಕೊಡಿಯಾಲಬೈಲು ದ ಕ

— ಮಕ್ಕಳನ್ನು ಹಡೆಯುವದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು

ಪಥ್ಯ — ಹೆರಪೀಸಲ್ಲೆ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ ೫—೦—೦ ಪೋಸ್ಟ ಚಾರ್ಜು ೧೦ಆಣೆ

ಮಾಲಕರು — ಹಾಲಪ್ಪಾ, ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು —ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ, ವಿಜಾಪೂರ— ದಾನಪ್ಪ ಸಿದ್ದಲಿಂಗಪ್ಪ ಧಾರವಾಡಕರ ವಿಜಾಪೂರ ಚಿಕ್ಕೋಡಿಯಲ್ಲಿ —ಕುಂಟರವಾಡಿ ಸ್ಟೋರ್ ದಾವಣಗೇರಿ — ದಾವಣಗೇರಿ ಪ್ರೆಸ್ ಆರ್ ಎಲ್ ಶಿವ ಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ

Ayurveda Oushadalaya, GADAG CITY

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು ಬಾಟ್ಲಿ 1ರ ರೂ 1—12—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ ಖ್ಯಾತಸಂಗ್ರಿ ಬರದಲ್ಲಿ ರೋಗಕ್ಕೆ ತಕ್ಕವಾದ ಔಷಧ ದವಾ ಸ್ವಿಬಹುದು ಉಡಪಿ ಏಜಂಟರು — ನವಭಾರತ ಬುಕ್ ಡಿಪೋ

ನೋಡಿದರೆ ಸಾಕು! ಓದದೆ ಬಿಡಲಾರಿರಿ!!

ಮುಗಿದಾಗ ಮುಗಿದು ಹೋಯಿತಲ್ಲಾ ಎನಿಸುವ,ತೊಡಗಿದಾಗ ಹೇಗೆ ಮುಗಿಯುವುದೋ ಎಂದು ಕೌತುಕಪಡಿಸುವ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ ಬೆಲೆ ೦—೧೦—೦

ಅಂತರಂಗವನ್ನು ಬಹಿರಂಗವನ್ನು ಹೋಲಿಸಿ ತೋರಿಯುವ ಮಾತು

ಪ್ರೇಮಪ್ರವಾಹವು ಹೇಗೆ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮಪ್ರವಾಹ

ಸ್ವಾರಸ್ಯವಾದ ೫ ಕತೆಗಳ ಸಂಗ್ರಹವನ್ನು ಓದಿನೋಡಿ. ೦—೬—೦

ಬಹಿರಂಗವಾಗಿ ಅಲ್ಲವಾದರೂ ಅಂತರಂಗವಾಗಿ ನೋಡತಕ್ಕ

ಆರ್ಟ್ ಚಿತ್ರಗಳು

ಹಲವಾರು ಸುಂದರಿಯರ ನೈಜಚಿತ್ರಗಳ ಕಟ್ಟು. ಬೆಲೆ ೦—೬—೦

[illegible]

ಬರೆಯಿರಿ **ಅಂತರಂಗ ಕಾರ್ಯಾಲಯ, ಉಡುಪಿ**

(ಉಡುಪಿಯ ನವಭಾರತ ಪುಸ್ತಕ ಭಂಡಾರದಲ್ಲಿಯೂ ದೊರೆಯುತ್ತವೆ)

FOR GOOD PRINTING

NAVAYUGA PRESS, UDIPI.

(*Props.* Navayuga Enterprise Ltd)

EDITED PRINTED & PUBLISHED BY K H SHETTY AT THE NAVAYUGA PRESS, UDIPI, S. INDIA

Regd No. M 3618. ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6. Estd. 1921. ಸ್ಥಾಪಿತ.

NAVAYUGA

ನವಯುಗ

ವರ್ಷ ೨೪ ವಾರ ೨ | ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. Founder SRI A. B. SHETTY. | Vol. 24 No. 2

ಉಡುಪಿ • 14—9—1944 • ಮಂಗಳೂರು.

ದಿ ಜುಪಿಟರ್
ಜನರಲ್ ಇನ್ಶೂರೆನ್ಸ್
ಕಂಪೆನಿ, ಲಿ, ಬೊಂಬಾಯಿ.
ವಿಮೆಯಿಳಿಸ ಬೇಕೆ?
ಏಜಂಟರಾಗುವಿರಾ?
-ಕಾಗಾದರೆ ಕೂಡಲೇ-
ಪಿ. ಬಿ. ನಾಣಯ್ಯ, ಉಡುಪಿ.
ದಕ್ಷಿಣ ಕನ್ನಡದ ಚೀಫ್ ಏಜೆಂಟ್.
-ಇವರಿಗೆ ಬರೆಯಿರಿ-
ಕೋಟಿಗೆ ಮಿಕ್ಕಿ ವ್ಯವಹಾರ!
ಈ ವರುಷವೇ ರಜತೋತ್ಸವ!
The Jupiter General Insurance Company Ltd.

ಕಸ್ತೂರಿ ಬಾ
ಸ್ಮಾರಕ ನಿಧಿಗೆ
ಶಕ್ತ್ಯನುಸಾರ
ಸಹಾಯ ಮಾಡಿರಿ

WATNED

Applications are invited for the posts of Agents and Accountants to serve at any of the Offices of the Bank in the District. The applicants must have studied at least up to S. S. L.C Those with higher qualifications or Banking experience or knowledge of typing will be dreferred, Pay according to qualifications.

Applications should reach the Office by 30—9—44. Selected candidates will be required to furnish the necessary security as per the rules.

Head Office MANGALORE,
THE VIJAYA BANK, Ltd.,
Mangalore - - - Kadri Road.

ENGLISH MADE EASY

ಇಂಗ್ಲಿಷ್ ಏನೂ ತಿಳಿಯದವರು 'ಸುಲಭದಲ್ಲಿ ಇಂಗ್ಲಿಷ್' ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೇ ಕಲಿತುಕೊಳ್ಳಬಹುದು.

ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು.

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.
ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ
ಬೆಲೆ ಬರೇ ರೂ. 1—4—0 ರೂ 1-8-0ನ್ನು ಮನಿ ಯಾರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತೆ.

Navabharat Book Depot,
Registered Publishers & Book Sellers,
UDIPI, S. K.

ನಮ್ಮಲ್ಲಿ ಸಿಗುವ ಪುಸ್ತಕಗಳ ಕೆಟಲಾಗಿಗೆ 0-2-0 ಸ್ಟ್ಯಾಂಪು ಸೇರಿಸಿ ಬರೆಯಿರಿ.

ಅಮೃತಾಂಜನ
ತಲೆನೋವು, ನೆಗಡಿ, ಕೆಮ್ಮು, ಕತ್ತಿಗೆ, ಭುಜ, ಸೊಂಟ ನೋವುಗಳಿಗೆ ಗುಣ ಎಂದೆನಿಸುತ್ತದೆ. ಫ್ಯಾಯಿಗಳು ಬಾಹು ಕೊಟ್ಟುವುದು, ಚೇಳು ವಿಷ ಮುಂತಾದ ಜೀವಿ ಕಚ್ಚುವಾಗ ವೆದನೆ ವೇದನೆಯಾದ ಎಲ್ಲಾ ರೋಗಗಳಿಗೂ ಸಿದ್ಧ
ಕಢ,ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

TENDER NOTICE

Tenders of rates to reach the Assistant Director of Fisheries (Coast) Calicut, on or before 3rd October 1944, are invited for transporting salt bags from vessels or railway wagons and stacking them in the fish curing yards and gollahs on the West Cost, and for sundry other works.

Details and terms of contract can be had from the undersigned

D. D. Peter Devadas,
Asst. Director of Fisheries (Coast)
Calicut, 30-8-1944.

The Board of Directors,
Sri Narayana Guru Bank, Ltd., Mangalore announce that a Branch of this Bank has been opened at the premises of "Parimala Bhavan", opposite Municipal Bus Stand, Udipi, on the 11th April, 1944. Your patronage is solicited.

Mangalore Jarappa,
Managing Director.

THOUGH IN THESE DAYS—

In days of yore, Abraham and his family were led to safety and security by the hand of Providence in the farm of a White-winged Angel

Though in these days no such White-winged Angels come, wise men avail themselves of the same protection of safety and security in the form of Life Assurance Policies They believe that God helps those who help themselves

THE CANARA MUTUAL ASSURANCE CO., LTD.,
UDIPI (S. India)

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.
ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪ್ಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ, ಬೇಂಕಿನ ಎಲ್ಲಾ ತರದ ವ್ಯವಹಾರಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S K.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ
ಬಾಲಚಂದ್ರ
ಇದೀಗ ಮೂರನೇ ಸಂಪುಟ ಆರಂಭವಾಗಿದೆ
ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯೂಲರುಗಳೂ ಪ್ರಕಟವಾಗುತ್ತವೆ.
ವಾರ್ಷಿಕ ಚಂದಾ
ರೂ. 1—8—0 ಮಾತ್ರ
ಹೆಚ್ಚಿನ ವಿಚಾರಕ್ಕೆ ಬರೆಯಿರಿ
ಬಾಲಚಂದ್ರ, ಉಡುಪಿ.

CO-OPERATION - - - -

Life Assurance is the business based on the idea of mutual co-operation. By diverting a small portion of one's earning for paying premiums, we co-operate for the good of the family and safeguard the education of children.

Let us assist you in taking out a Policy under the plan best suited to you Write now to:—

KOCHIKAR BROTHERS LTD.
Chief Agents for South India
THE BOMBAY LIFE ASSCE. CO., LTD.
Estd 1908
The "Bombay Life" Bldg., UDIPI S. K.

Offices and Agencies throughout South India

Sidha-Kalpa Kavach (Regd.)
No. 3 Rs. 2, No 2 Rs 5 No 1 Rs. 7 Special Rs. 10, Extra Special Rs. 17 of over marriage health wealth, Ask any six questions with M O. Re.1/4 and get correct answers by return, post Life reading Rs.10 No. V. 1, Send M O Free, pamphlets,
Prof. Dr. N. H Chhatbar,
P. O MAHUVA (Kathiawar India.)

Degrees: Books: Medicines
Free H. L. M. S. M. B. H. M. D. etc, Free Homeo-Ayur- UnaniNaturo degree by post also—Practitioner also get soon Homeo Materiamedica, Rs. 5 Homeo Practice book Rs 4. Insanity Cure Pills Rs. 10 Enclose 2 annas stamp:—
Prof. Dr. N. H. Chhatbar,
Principal Indian Homeopathic Institute & Society (Govt. Regd)
P. O. MAHUVA (Kathiawar Dt. India.)

ತಾರುಣ್ಯ
ಶಕ್ತಿ, ವೀರ್ಯ ವೃದ್ಧಿಗೆ ಮಾತ್ರ ರಚಿಸಲ್ಪಟ್ಟಿದ್ದು ವರವಾದಂದ ದಿನದ ರಮಣ ನಿಲ್ಲಾ ಶಕ್ತಿ ಅತ್ಯುತ್ತಮ ಔಷಧ
ಡಬ್ಬಿ 1ಕ್ಕೆ ರೂ. 1
ಮದನಮಂಜರಿ ಫಾರ್ಮಸಿ,
184 ಚೈನಾ ಬಜಾರ್ ರೋಡ್, ಮದ್ರಾಸ್.
ಪತ್ರ ಮುಖೇನ ಬರೆಯಿರಿ. ಸೈ ಫಾರ್ಮಸಿ

ಗಾಂಧಿ–ಜಿನ್ನ ಸಂಭಾಷಣೆ

ಮೊದಲ ಭೇಟಿ ೩ ತಾಸು •
ಎರಡನೇ ಬಾರಿ ತಾ. 11ಕ್ಕೆ •
ಬೆಳೆಯಿತು–ಫಲಿಸದೆ? •

• ಸ್ಪಷ್ಟವಾತು, ಸಹಜವೃತ್ತಿ.
• ಇಬ್ಬರಲ್ಲೂ ಮಹದಾನಂದ.
• ಆದ್ದರಿಂದ ಆಸೆಯಿದೆ!

ತಾ 9-9-44ನೇ ಶನಿವಾರ ಅಪರಾಹ್ನ 4 ಘಂಟೆಗೆ ಸರಿಯಾಗಿ ಬೊಂಬಾಯಿಯ ಮಿ ಜಿನ್ನರ ಬಂಗಲೆ 'ಮೌಂಟ್ ಪ್ಲಿಸೆಂಟ್'ನಲ್ಲಿರುವಯ ಮೊದಲನೇ ಮಾಳಿಗೆಯಲ್ಲಿ ಗಾಂಧಿಜೀ ಮತ್ತು ಮಿ ಜಿನ್ನರು ಮುಖಾಮುಖಿ ಸಂಭಾಷಣೆಗಾರಂಭಿಸಿದರು. ಈ ಮಾತುಕತೆಯು ಎಷ್ಟು ಬಾರಿ–ಎಷ್ಟು ದಿನ–ನಡೆಯುಬಹುದೆಂಬ ನಿಶ್ಚಯವಿಲ್ಲ. ಪೂರ್ತಿ ಮುಗಿಯುವ ಮೊದಲು ಯಾವ ವಿವರವೂ ಪ್ರಕಟಿಸಲ್ಪಡುವಂತಿಲ್ಲ.

ಸೇವಾಗ್ರಾಮದಲ್ಲಿ ಪಹರೆ

ರಾಜಾಜೀ ಸಂಧಿಸೂಚನೆಗಳ ಪರಿಣಾಮರ್ವಾಗಿ ಪ್ರಥಮತಃ ಆಗೋಸ್ತು ತಾ 19ಕ್ಕೆ ಗೊತ್ತುಪಡಿಸಲ್ಪಟ್ಟಿದ್ದ ಗಾಂಧಿ–ಜಿನ್ನಾ ಭೇಟಿಯು ಮಿ. ಜಿನ್ನರ ಅನಾರೋಗ್ಯದಿಂದ ಮುಂದಬಿದ್ದು ಆ 19ನೇ ಶನಿವಾರದ ಬದಲಿಗೆ ಈ 9ನೇ ಶನಿವಾರವು ನಿಶ್ಚೈಸಲ್ಪಟ್ಟಿದ್ದಿತು. ಹಲವು ಕಾರ್ಯಕ್ರಮಗಳಿಂದ ದಣಿದಿದ್ದ ಗಾಂಧಿಜೀ ಎರಡು ದಿನಗಳ ವಿಶ್ರಾಂತಿ ಪಡೆದು ತಾ 8ನೇ ಅಪರಾಹ್ನವೇ ಸೇವಾಗ್ರಾಮದಿಂದ ಹೊರಟು ತಾ 9ರ ಪೂರ್ವಾಹ್ನ ಬೊಂಬಾಯಿಗೆ ಮುಟ್ಟುವದು–ಅಪರಾಹ್ನ ಮಾತುಕತೆ ಯಾರಂಭಿಸುವದು–ಎಂಬ ಕಾರ್ಯಕ್ರಮವಿಟ್ಟುಕೊಂಡಿದ್ದರು. ಆದರೆ ಪಾಕಿಸ್ತಾನ್ ವಿರೋಧಿ ಪಕ್ಷದ ಕಾರ್ಯದರ್ಶಿ ಶ್ರೀ ಘಟ್ಟೆಯವರ ನಾಯಕತ್ವದಲ್ಲಿ ಕೆಲವು ಸ್ವಯಂಸೇವಕರು ಹಲವು ದಿನಗಳಿಂದ ಸೇವಾಗ್ರಾಮದಲ್ಲಿ ಪಿಕೆಟಿಂಗ್ ಆರಂಭಿಸಿದ್ದರು. ಗಾಂಧಿಜೀ ಹೊರಡುವ ಒಂದೆರಡು ದಿನಗಳಿಗೆ ಮೊದಲು ಪಹರೆ ಬಲಗೊಂಡು ಗಾಂಧೀ ಗುಡಿಸಲಿನ ಮೂರುದ್ವಾರಗಳಲ್ಲೂ ರಾತ್ರಿ ಹಗಲು ಸ್ವಯಂಸೇವಕರು ನಿಂತು ಆಶ್ರಮವಾಸಿಗಳ ದೈನಿಕ ಅಗುಹೋಗುಗಳನ್ನೂ ಆತಂಕಿಸಹತ್ತಿದರು. "ನೀವು ಈ ರೀತಿ ತಡೆಗಟ್ಟುವದಾಗಲಿ ನಾನು ಬಂಧಿಸಲ್ಪಟ್ಟರುವುದರಿಂದ ಮಾತುಕತೆಯ ದಿನ ಮುಂದರಿಸಿರಿ, ಎಂದು ಜಿನ್ನರಿಗೆ ತಂತಿ ಬಿಡಬೇಕಾಗುವುದು" ಎಂದು ಗಾಂಧಿಜೀ ಪಹರೆಗಾರರೊಡನೆಂದಿದ್ದರು. "ವಿಶ್ವಾಸವಿಡಿ–ನಾನು ಒಂದೇ ಒಂದು ಹಿತವನ್ನಾದರೂ ಅಲಕ್ಷಿಸಲಾರೆ" ಎಂದವರಿಗೆ ಗಾಂಧಿಜೀಯು ಆಶ್ವಾಸನೆಯೂ ದೊರೆತಿದ್ದಿತು. ಈ ಸ್ವಯಂಸೇವಕರ ಉದ್ಧಟತನದಿಂದ ರೇಗಿದ ಆಶ್ರಮ ಸಂದರ್ಶಕರೊಬ್ಬರು ಶ್ರೀ ಘಟ್ಟೆಯವರನ್ನು ಹಿಡಿದರೆಂದೂ, ಆಶ್ರಮವಾಸಿಗಳೂ ಶ್ರೀ ಕಮಲನಯನ ಬಜಾಜರೂ ಅವರನ್ನು ಸಮಾಧಾನಪಡಿಸಿ 'ಗಾಂಧಿಜೀ ಕಣ್ಣುತಪ್ಪಿಸಿಕೊಂಡು ಎಂದೂ ಹೊರಡುವಂತಿಲ್ಲ' ಎಂದು ಪಹರೆಗಾರರಿಗಾಶ್ವಾಸನೆ ಕೊಟ್ಟು ತಾ. 7ರ ರಾತ್ರಿ ಪಹರೆಯನ್ನು ನಿಲ್ಲಿಸಿದರೆಂದೂ ತಿಳಿದು ಬರುತ್ತದೆ. ಅವರೆಗೂ ತಾಟಸ್ಥ್ಯ ವಹಿಸಿದ್ದ ಅಧಿಕಾರಿಗಳು ಈ ಪಹರೆಯ ವಿರುದ್ಧ ಪ್ರದರ್ಶನ ನಡಿಸಲು ಕೆಲವು ಮುಸಲ್ಮಾನರು ಪ್ರಯತ್ನಿಸುವದನ್ನರಿತ ಕೂಡಲೇ ಜಾತೀಯ ಜಗಳವೇಳಬಹುದೆಂದು ಎಚ್ಚರಗೊಂಡರು. ತಾ. 8ನೇ ಮುಂಜಾನೆ ವಾರ್ಧದ ಪೋಲೀಸ್ ಸುಪರಿಂಟೆಂಡೆಂಟರು ಪೋಲೀಸು ದಳದೊಂದಿಗೆ ಬಂದು ಪ್ರದರ್ಶನಾದಿಗಳಿಗಿರುವ ಬಹಿಷ್ಕಾರದ ನೆನಪು ಮಾಡಿಕೊಟ್ಟಾಗ, ತಾವದನ್ನು ಉಲ್ಲಂಘಿಸುವೆವೆಂದ ಶ್ರೀ ಘಟ್ಟೆಯವರನ್ನೂ ಇತರ ಎಂಟು ಮಂದಿ ಸ್ವಯಂಸೇವಕರನ್ನೂ ದಸ್ತಗಿರಿ ಮಾಡಿಕೊಂಡೊಯ್ದರು.

ಬೊಂಬಾಯಿ ಪ್ರಯಾಣ

ವಾರ್ಧದ ಸೇವಾಗ್ರಾಮ ಆಶ್ರಮವಾಸಿಗಳು ಗಾಂಧಿಜೀಯನ್ನು ಮುಂಬಾಯಿಗೆ ಬೀಳ್ಕೊಡುವ ಸಮಾರಂಭವು ಹೃದಯಸ್ಪರ್ಶಿಯಿದ್ದಿತು. ಆಶ್ರಮವಾಸಿಗಳು ಸಂಭಾಷಣೆಯ ಜಯಶೀಲತೆಗಾಗಿ ವಿಶೇಷ ಪ್ರಾರ್ಥನೆ ನಡಿಸಿದರು. ಗಾಂಧಿಜೀಯ ಹಣೆ ತುಂಬಾ ಕುಂಕುಮಾಕ್ಷತೆಗಳನ್ನು ಹಚ್ಚಿ ದಂಡೀ ಯಾತ್ರೆಯ ಸಂಭ್ರಮದೊಡನೆ ಅವರನ್ನು ಬೀಳ್ಕೊಟ್ಟರು ಮಹಾತ್ಮರು ವಾರ್ಧದಲ್ಲಿ ದಿವಂಗತ ಶೇಟ್ ಜಮುನಾಲಾಲರ ಬಂಗಲೆಯಲ್ಲಿ ತುಸು ವಿಶ್ರಾಂತಿ ಪಡದು ಹೊರಟಾಗ ಬಜಾಜರ ಮಗಳು ಮತ್ತು ಮೊಮ್ಮಗ ಅಕ್ಷತೆಯಿಟ್ಟು ಹಾರ ಹಾಕಿ ವಿದಾಯವಿತ್ತರು. ಗಾಂಧಿಜೀ ರೈಲ್ವೇ ಸ್ಟೇಶನಿಗೆ ನಡೆದುಕೊಂಡೇ ಹೋಗಿ, ಪ್ರಚಂಡ ಜನಸಂದಣಿಯ ನಡುವೆ ಸಾಯಂಕಾಲದ ಪ್ರಾರ್ಥನೆಯನ್ನು ಪ್ಲೇಟ್‌ಫೋರ್ಮಿನಲ್ಲಿಯೇ ಮುಗಿಸಿ, ಒಂದೂವರೆ ಘಂಟೆ ತಡವಾಗಿ ಬಂದ ರೈಲನ್ನು ಜೈಜೈಕಾರಗಳ ನಡುವೆ ಹತ್ತಿ ಹೊರಟರು. ಸ್ಟೇಶನಿನಲ್ಲಿ ಕೆಲವು ಬ್ರಿಟಿಷ್ ಸೋಲ್ಜರರು ಟ್ರೈನಿನಿಂದಿಳಿದು ಬಂದು ಗಾಂಧೀ ದರ್ಶನ ಪಡೆದಿದ್ದರು. ಅವರೊಂದಿಗಿದ್ದ ಪರಿವಾರವೆಂದರೆ ಕಾರ್ಯದರ್ಶಿ ಪ್ಯಾರೇಲಾಲ್, ಮಿಸ್. ಕರ್ಶಿದ್ ಬೆನ್, ಮಣಿಲಾಲ್, ಕಾನು ಗಾಂಧಿ, ಕಮಲನಯನ ಬಜಾಜ್, ಶಾಂತಿ ಕುಮಾರ್ ಮೊರಾರ್ಜಿ ಮತ್ತು ಡಾ। ಸುಶೀಲಾ ನಾಯರ್.

ತಾ 9ನೇ ಪೂರ್ವಾಹ್ನ ಗಾಂಧಿಜೀಯಿದ್ದ ರೈಲುಗಾಡಿ ಬೊಂಬಾಯಿ ತಲಪುವಾಗ ೬ ಘಂಟೆ ತಡ. ಜನಗೊಂದಲ ನಿವಾರಣೆಗಾಗಿ, ಗುಪ್ತ ವ್ಯವಸ್ಥೆಯಂತೆ ಸಯನ್ ಮತ್ತು ಕುರ್ಲಾ ಸ್ಟೇಶನುಗಳ ನಡುವಿನೊಂದು ಆಯಕಟ್ಟಿನ ಸ್ಥಳದಲ್ಲಿ ಗಾಂಧಿಜೀ ಗಾಡಿಯಿಂದಿಳಿದರು. ಅಲ್ಲಿಯೇ ರಸ್ತೆ ಬದಿಯಲ್ಲಿ ಮೇಯರ್ ನಾಗಿನ್‌ದಾಸ್ ಮಾಸ್ಟರ್, ಸರೋಜಿನಿ, ಬುಲಾಭಾಯಿ, ಖೇರ್, ಗಿಲ್ಡರ್ ಮತ್ತು ಕೆಲವು ಕಾಂಗ್ರೆಸ್ ಕೆಲಸಗಾರರು ಸ್ವಾಗತಕ್ಕಾಗಿ ಕಾದು ನಿಂತಿದ್ದರು. ರೈಲು ಅಲ್ಲಿ ನಿಂತುದೇ ತಡ, ಒತ್ತು ಕಂಪಾರ್ಟಮೆಂಟುಗಳಲ್ಲೇ ಕುಳಿತು ಬಂದಿದ್ದ ಕೆಲವು ಸಿಖ್ಖರು ಕೆಳಗೆ ಧುಮುಕಿ, ಪಾಕಿಸ್ತಾನ್ ವಿರುದ್ಧ ಘೋಷವೆಬ್ಬಿಸುತ್ತಾ ನಿಷೇಧಸೂಚಕ ಬೋರ್ಡು ನಿಶಾನೆಗಳೊಂದಿಗೆ ಮಹಾತ್ಮರಿದ್ದೆಡೆಗೆ ಧಾವಿಸಿ ಬಂದರು. ಅದೇ ರೈಲಿನಲ್ಲಿ ಸುಮಾರು ನೂರು ಮಂದಿ ಖಾಖ್ಸಾರರೂ ಇದ್ದರು. ಅವರು ಮಹಾತ್ಮಾಜೀಗೊಂದು ಕೋಟೆಯಾಗಿ ಸುತ್ತುಗಟ್ಟಿ ಅಲ್ಲೇ ಕಾಯುತ್ತಿದ್ದ ಕಾರನ್ನು ಸುರಕ್ಷಿತವಾಗಿ ಹತ್ತಿಸಿದರು. ಶ್ರೀಮತಿ ಸರೋಜಿನಿ ದೇವಿಯೊಂದಿಗೆ ಗಾಂಧಿಜೀಯನ್ನು ಹೊತ್ತುಕೊಂಡು ಕಾರು ಬಿರ್ಲಾ ಗೃಹಕ್ಕೆ ಧಾವಿಸಿತು.

ರೈಲು ಕಲ್ಯಾಣ್ ಸ್ಟೇಶನಿಗೆ ಬಂದಾಗ ಅಲ್ಲಿಯೂ ಗಾಂಧೀ ವಿರುದ್ಧ ಪ್ರದರ್ಶನಗಳಿದ್ದುವು. ಆದರೆ ರೈಲ್ವೇ ಪೋಲೀಸರು, ಅದೇ ಟ್ರೈನಿನಲ್ಲಿದ್ದ ಕೆಲವು ಸೈನಿಕರು ಮತ್ತು ಸ್ಥಳೀಯ ಸ್ವಯಂಸೇವಕರು ಗಾಂಧಿಜೀಯಿದ್ದ ಕಂಪಾರ್ಟ್‌ಮೆಂಟನ್ನು ಸುತ್ತುಗಟ್ಟಿ ನಿಂತಾಗ ಪ್ರದರ್ಶಕರು ಹಿಂತೆಗೆದರು.

ಬಿರ್ಲಾ ಗೃಹದಿಂದ ಜಿನ್ನಾ ಗೃಹಕ್ಕೆ

ಘಂಟೆ 4ಕ್ಕೆ ಏಳು ಮಿನಿಟುಗಳಿವೆಯೆನ್ನುವಾಗ, ಆರೋಗ್ಯ ಪ್ರಕೃತಿಯ ಹಸನ್ಮುಖೀ ಗಾಂಧಿಯವರು ರಾಜಗೋಪಾಲಾಚಾರಿ, ಭುಲಾಭಾಯಿ, ಸರೋಜಿನಿ, ಪ್ಯಾರೇಲಾಲರೊಂದಿಗೆ ಬಿರ್ಲಾ ಗೃಹದಿಂದ ಹೊರಟರು. ಮೆಟ್ಟಲುಗಳಲ್ಲಿ ಕಾದು ನಿಂತಿದ್ದ ಪತ್ರಿಕಾ ಪ್ರತಿನಿಧಿಗಳು ಅವರನ್ನು ವಂದಿಸಿದಾಗ ಗಾಂಧಿಜೀಯೊಂದೇ ಸವನೆ ನಗುತ್ತಾ 'ಪತ್ರಿಕೆಯವರು ಎಲ್ಲಾ ಕಾಲಗಳಲ್ಲೂ ಇದ್ದಾರೆ' ಎಂದರು. ಎಲ್ಲರನ್ನೂ ಬಿಟ್ಟು ಗಾಂಧಿಜೀ ಪ್ಯಾರೇಲಾಲರೊಂದಿಗೆ ಕಾರು ಹತ್ತಿದರು. ಕಾರು ಮಲಬಾರ್ ಹಿಲ್ಲಿನ ಮೌಂಟ್ ಪ್ಲೀಸೆಂಟ್ ರಸ್ತೆ ಹಿಡಿಯಿತು. ಬಿರ್ಲಾ ಗೃಹದಿಂದ ಜಿನ್ನಾ ಗೃಹಕ್ಕೆ ಎರಡೇ ಫರ್ಲಾಂಗುಗಳ ದೂರ. ಜಿನ್ನಾರ ಬಂಗಲೆಯಿದಿರು ಕಾರು ನಿಂತೊಡನೆ ಗಾಂಧಿಜೀ ಕೆಳಗಿಳಿದು ಪ್ಯಾರೇಲಾಲರನ್ನು ಮರಳಿ ಹೋಗ ವಂತೆ ಹೇಳಿ ತಾನೊಬ್ಬನೇ ಒಳ ಹೊಕ್ಕರು. ಬಂಗಲೆಯ ಕಂಪೌಂಡಿನಲ್ಲಿ ವಿದೇಶಿ ಹಾಗೂ ದೇಶೀಯ ಬಾತ್ಮೀದಾರರು ಮತ್ತು ಫೋಟೋಗ್ರಾಫರರು ಸಾಲಾಗಿ ನಿಂತು ಸಂದರ್ಭ ಕಾಯುತ್ತಿದ್ದರು.

ಮಿ. ಜಿನ್ನರು ಪೋರ್ಟಿಕೋವಿಗೆ ಬಂದು ಗಾಂಧಿಜೀಯನ್ನು ಮಹಾನಂದದಿಂದ ಸ್ವಾಗತಿಸಿಕೊಂಡರು.

ಮಹಾತ್ಮಾಜೀ ಕೈಯಲ್ಲೊಂದು ಚಿಕ್ಕ 'ಫೈಲ್' ಹಿಡಿದುಕೊಂಡಿದ್ದರು, ಮಿ ಜಿನ್ನರು ಸಡಿಲು ಚಲ್ಲಣ ಧರಿಸಿದ್ದರು.

"ನಾವು ಫೋಟೋವಿಗೆ ನಿಲ್ಲಬೇಕೆಂದು ಈ ಫೋಟೋಗ್ರಾಫರರು ಅಪೇಕ್ಷಿಸುತ್ತಾರೆ' ಎಂದರು ಜಿನ್ನ. ಇಬ್ಬರು ಮುಖಂಡರೂ ಕೆಮರಾಗಳಿಗೆ ಮುಖಮಾಡಿದರು. ಗಾಂಧಿಜೀ ಮಿ. ಜಿನ್ನರ ಹೆಗಲಿಗೆ ಕೈಹಾಕಿ ಒತ್ತಿ ನಿಂತರು. ಇಬ್ಬರೂ ಪರಸ್ಪರ ಗೌರವಿಸಿಕೊಳ್ಳುವ ಆಕರ್ಷಣೀಯ ಪ್ರೇಮ ಭಂಗಿಯಲ್ಲಿ ತುಸುಹೊತ್ತು ನಿಂತು ಒಳಭವನಕ್ಕೆ ನುಗ್ಗಲಿರುವಾಗ 'ಇನ್ನೊಂ

(೭ನೇ ಪುಟ ನೋಡಿರಿ)

ಯುದ್ಧೋತ್ತರ ದಿನಗಳಿಗಾಗಿ ಹಣ ಕೂಡಿಡಿ.

ಯುದ್ಧವು ಇನ್ನು ಬಹುಕಾಲ ಮುಂದರಿಯಲಿಕ್ಕಿಲ್ಲ. ಶಾಂತಿಕಾಲಕ್ಕಾಗಿ ನೀವು ಸಿದ್ಧರಾಗಿರುವಿರಾ?

ಶಾಂತಿ ಸಮಾರಂಭದಲ್ಲಿ ಅಕಲ್ಪಿತ ಘಟನೆಗಳು ಸಂಭವಿಸಬಹುದು. ಧಾರಣೆಗಳು ಇಳಿದು ಉದ್ಯೋಗ, ವ್ಯಾಪಾರ ದಂಧೆಗಳಿಗೆ ಧಕ್ಕೆ ತಗಲಬಹುದು. ನೀವು ಇವುಗಳಿಗಾಗಿ ನಿಮ್ಮ ಪೂರ್ವಸಿದ್ಧತೆಯನ್ನೇರ್ಪಡಿಸಿರುವಿರಾ? ಸ್ಥಿರವಾದ ಬ್ಯಾಂಕ್ ಖಾತೆಯಿಂದ ನೀವು ನಿಮ್ಮ ಸ್ಥಿತಿಯನ್ನು ಭದ್ರಗೊಳಿಸಿರುವಿರಾ? ಇಲ್ಲವಾದರೆ ನಿಮ್ಮ ಪೂರ್ವಸಿದ್ಧತೆಯನ್ನು ಪ್ರಾರಂಭಿಸಲೀಗ ಕಾಲಾತೀತವಾಗಿಲ್ಲ. ಅನವಶ್ಯಕ ವಸ್ತುಗಳಿಗಾಗಿ ಏರಿದ ಬೆಲೆ ತೆತ್ತು ಹಣ ವೆಚ್ಚಮಾಡುವ ಬದಲು ಮುಂಬರುವ ಬೆಲೆ ಇಳಿತದ ಲಾಭವನ್ನು ಹೊಂದಲೋಸುಗ ಹಾಗೂ ಆಗಿನ ನವೀನ ಪರಿಸ್ಥಿತಿಯನ್ನೆದುರಿಸಲು ನಿಮ್ಮ ಉಳಿತಾಯವನ್ನೀಗ ಕೂಡಿಡಿರಿ.

ನಾವು ನಿಮಗೆ ಸಹಾಯ ಉತ್ತೇಜನಗಳ ಬಗ್ಗೆ ಭರವಸೆಯನ್ನೀಯುತ್ತೇವೆ

ಸ್ಥಾಪನೆ 1906 **ಕೆನರಾ ಬ್ಯಾಂಕ್ ಲಿಮಿಟೆಡ್**

ESTD 1906 **Canara Bank, Limited.**

(Incorporated in British India with limited Liability)

ಪ್ರಕಟಣೆ

ಕಟಪಾಡಿ ಶ್ರೀ ವೆಂಕಟರಮಣ ದೇವರ ಸನ್ನಿಧಿಯಲ್ಲಿ—ಇದೇ ಆಶ್ವೀಜ ಶುದ್ಧ ದಶಮಿ ಬುಧವಾರ ಆರಂಭಿಸಿ ಆಶ್ವೀಜ ಬಹುಳ ಷಷ್ಠಿಗೆ ಬುಧವಾರ (ತಾ 27-9-44ರಿಂದ 4-10-44) ವರೆಗೆ ಏಳು ದಿನ ಅಹೋರಾತ್ರಿ ಭಜನಾ ಸಪ್ತಾಹವು ಶ್ರೀ ದೇವತಾನುಗ್ರಹದಿಂದಲೂ, ಇಹಪರಕ್ಕೆ ಸಾಧನವಾದ ಈ ಮಹತ್ಕಾರ್ಯಕ್ಕೆ ತಾವು ಭಕ್ತಿಪೂರ್ವಕವಾಗಿ ಉದಾರಹಸ್ತದಿಂದ ಮಾಡುವ ದ್ರವ್ಯಸಹಾಯದಿಂದಲೂ ಎಂದಿನಂತೆ ಸರ್ವ ವಿನಿಯೋಗಗಳೊಂದಿಗೆ ಸಾಂಗವಾಗಿ ನೆರವೇರುವುದು. ಈ ಮಹೋತ್ಸವಕ್ಕೆ ತಾವು ಆಗಮಿಸಿ ಬಂದು ಶ್ರೀದೇವರ ಪ್ರಸಾದವನ್ನು ಸ್ವೀಕರಿಸಿ, ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ ಅಪೇಕ್ಷಿಸುತ್ತೇವೆ. ಶ್ರೀ ಭಜನೆ ಸಪ್ತಾಹ ಸಮಾರಂಭದಲ್ಲಿ ಶ್ರೀ ದೇವರ ಸನ್ನಿಧಿಯಲ್ಲಿ ನಡೆಸಬಹುದಾದ ಸದ್ವಿನಿಯೋಗಗಳ ವಿವರ — ರಾತ್ರಿಕಾಲದ ಹೂವಿನ ಪೂಜೆಗೆ ರೂ. 10-0-0, ಹೂವಿನ ಪೂಜೆಗೆ ರೂ 5-0-0, ದೀಪಾರಾಧನೆ ರೂ 2-0-0, ಪಂಚಕಜ್ಜಾಯ ರೂ. 0-8-0, ಕರ್ಪೂರಾರತಿ ರೂ 0-2-3, ತುಲಸೀ ಹಾರ ರೂ. 0-1-3, ಅಹೋರಾತ್ರಿಯ ಪೂರ್ಣ ವಿನಿಯೋಗಕ್ಕೆ ರೂ 25-0-0

ಕಟಪಾಡಿ, ತಾ 9-9-44 } ಪಿ ಅಣ್ಣಪ್ಪ ನಾಯ್ಕ, ಪ್ರಕೃತ ಪ್ರೆಸಿಡೆಂಟ್.

ಈ ಯುದ್ಧ

ಮಹಾದಿನಗಳು

ಪ್ರಥಮಾಂಕ.

× 1939ನೇ ಸೆಪ್ಟೆಂಬರ್ ತಾ 1ಕ್ಕೆ ಪೋಲೆಂಡಾಕ್ರಮಣದ ಮೂಲಕ ಜರ್ಮನಿಯ ಯುದ್ಧಪ್ರಾರಂಭ.

× 1939ನೇ ಸೆಪ್ಟೆಂಬರ್ ತಾ 3ರಲ್ಲಿ ಜರ್ಮನಿಯ ಮೇಲೆ ಇಂಗ್ಲಾಂಡು ಫ್ರಾನ್ಸುಗಳ ಯುದ್ಧ ಘೋಷಣೆ.

× 1940ನೇ ಎಪ್ರಿಲ್ 9ಕ್ಕೆ ನಾಜಿಗಳ ನಾರ್ವೆ ಡೆನ್ಮಾರ್ಕ್ ಆಕ್ರಮಣ

× 1940ನೇ ಮೇ 10ಕ್ಕೆ ಹಾಲೆಂಬ್, ಬೆಲ್ಜಿಯಂ ಮತ್ತು ಲಕ್ಸೆಂಬರ್ಗ್‍ಗಳು ಜರ್ಮನಿಗಾಹುತಿ.

× 1940ನೇ ಮೇ ತಾ. 17ಕ್ಕೆ ಜರ್ಮನರ ಫ್ರಾನ್ಸ್ ಪ್ರವೇಶ

× 1910ನೇ ಮೇ ತಾ. 29ಕ್ಕೆ ಡಂಕರ್ಕಿನಲ್ಲಿ ಬ್ರಿಟಿಷ್ ಸೇನೆಗೆ ಮಹಾ ದುರಂತ.

× 1940ನೇ ಜೂನ್ ತಾ. 12ರಲ್ಲಿ ಫ್ರಾನ್ಸಿನ ಮೇಲೆ ಇಟೆಲಿಯ ಸೆಗೆತ.

× 1940ನೇ ಜೂನ್ ತಾ. 22ರಲ್ಲಿ ನಾಜಿಗಳಿಗೆ ಪಿಟೇನ್ ಸರಕಾರದ ಶರಣಾರ್ಥ.

× 1940ನೇ ಜೂನ್ 24ಕ್ಕೆ ಬ್ರಿಟನರ ಡಂಕರ್ಕ್ ಪಲಾಯನ.

× 1940ನೇ ಆಗೋಸ್ತು ತಾ. 9ಕ್ಕೆ ಪ್ಲೆಸೆಂಟಿಯಾ ಉಪಸಾಗರದಲ್ಲಿ ಚರ್ಚಿಲ್-ರುಸವೆಲ್ಟರ ಪ್ರಥಮ ಭೇಟಿ.

× 1941ನೇ ಎಪ್ರಿಲ್ 6ಕ್ಕೆ ಯುಗೊಸ್ಲೋವಿಯಾ ಮತ್ತು ಗ್ರೀಸಿನ ಮೇಲೆ ಜರ್ಮನರ ಸೆಗೆತ.

× 1941 ಜೂನ್ 1ಕ್ಕೆ ನಾಜಿಗಳ ಕ್ರೀಟ್ ಆಕ್ರಮಣ.

ದ್ವಿತೀಯಾಂಕ.

× 1941 ಜೂನ್ 22ಕ್ಕೆ ರಶ್ಯದ ಮೇಲೆ ಜರ್ಮನಿಯ ಧಾಳಿ.

× 1941ನೇ ದಶಂಬರ್ 7ಕ್ಕೆ ಪರ್ಲ್ ಹಾರ್ಬರ್ ಹೊಡೆತ ಮೂಲಕ ಜಪಾನ್ ಯುದ್ಧಾರಂಭ.

× 1941ನೇ ದಶಂಬರ್ 11ಕ್ಕೆ ಜರ್ಮನಿ ಇಟೆಲಿಗಳ ಮೇಲೆ ಅಮೇರಿಕೆಯ ಯುದ್ಧ ಪ್ರವೇಶ.

× 1942 ಆದಿಭಾಗದಲ್ಲಿ ಸಿಂಗಾಪುರ, ಬರ್ಮ, ಮಲಯಗಳು ಜಪಾನರಿಗಾಹುತಿ.

× 1942ರ ಅಂತ್ಯ ಭಾಗದಲ್ಲಿ ಆಫ್ರಿಕದಲ್ಲಿ ನಾಜೀ ಸೇನೆಯ ಪಲಾಯನ ಅಬಿಸೀನಿಯಾ ಬಿಡುಗಡೆ

× 1943ನೇ ಜನವರಿ ತಾ. 14ರಲ್ಲಿ ಚರ್ಚಿಲ್— ರುಸವೆಲ್ಟರ ಕಸಬ್ಲಾಂಕಾ ಸಮ್ಮೇಲನ.

× 1943ನೇ ಫೆಬ್ರವರಿ 2ಕ್ಕೆ ಸ್ಟಾಲಿನ್‍ಗ್ರಾಡಿನಲ್ಲಿ ರಶ್ಯಾನರ ಚರಿತ್ರಾರ್ಹ ವಿಜಯ.

× 1943ನೇ ಮೇ ತಾ. 22ಕ್ಕೆ ರಶ್ಯದ ಅಂತರ್‍ರಾಷ್ಟ್ರೀಯ ಕಮ್ಯೂನಿಸ್ಟ್ ಸಂಘದ ಬರಖಾಸ್ತು.

× 1943ನೇ ಜುಲಾಯಿ 24ಕ್ಕೆ ಫ್ಯಾಸಿಸ್ಟ್ ಪರಿಷತ್ತು ಮುಕ್ತಾಯ.

× 1943ನೇ ಜುಲಾಯಿ 25ಕ್ಕೆ ಮುಸಲಿನಿಯ ಅಧಿಕಾರಾಪಹಾರ.

× 1943ನೇ ಸೆಪ್ಟಂಬರ್ ಮೊದಲ ವಾರ ಇಟೆಲಿಯಾಕ್ರಮಣಾರಂಭ.

× 1943ನೇ ಅಕ್ಟೋಬರ್ 19ಕ್ಕೆ ಮೋಸ್ಕೋ ಪರಿಷತ್ತು.

× 1943ನೇ ನವಂಬರ್ 28ಕ್ಕೆ ಟೆಹರಾನ್ ಸಮ್ಮೇಲನ.

× 1944ನೇ ಜನವರಿ ಪ್ರಥಮವಾರದಲ್ಲಿ ಕೆಂಪುಸೇನೆಯ ಪೋಲೆಂಡ್ ಗಡಿ ಪ್ರವೇಶ.

ತೃತೀಯಾಂಕ.

× 1944ನೇ ಜೂನ್ 6ಕ್ಕೆ ಇಂಗ್ಲಾಂಡು ಅಮೇರಿಕಗಳ ಫ್ರಾನ್ಸ್ ಪ್ರವೇಶ.

× 1944ನೇ ಸೆಪ್ಟಂಬರ್ ಮೊದಲ ವಾರದಲ್ಲಿ ಜರ್ಮನ್ ಗಡಿಗೇನೇ ಮಿತ್ರ ಸೇನೆಯ ಪ್ರವೇಶ

ಪ್ರಕೃತ ಹಿಟ್ಲರಾಕ್ರಮಿತ ಎಲ್ಲಾ ರಾಷ್ಟ್ರಗಳೂ ಬಹುತೇಕವಾಗಿ ನಾಜಿಗಳ ಕೈ ಬಿಟ್ಟಿವೆ. ಜರ್ಮನರದಾಗಿ ಈ ತನಕ ಜರ್ಮನ್ ಮೂಲ ನೆಲವೊಂದೇ ಉಳಿದಿದೆ. ಫ್ರಾನ್ಸಿನ ಒಂದಡೆಯಲ್ಲಿ ಮಿತ್ರ ಸೇನೆಗಳು ಆ ಗಡಿಯೊಳಗಡೆಗೂ ನುಗ್ಗಿವೆ, ಇನ್ನೊಂದೆಡೆಯಿಂದ ರಶ್ಯವೂ ಆ ಗಡಿಗೊತ್ತಿಕೊಂಡ ಬಂದಿದೆ.

ಕ್ರೌನ್
ರಬ್ಬರ್ ಸ್ಟಾಂಪ್ ಕಂಪೆನಿ
18 ಬಲ್ಮಠ ರಸ್ತೆ, ಮಂಗಳೂರು.
ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.
Crown Rubber Stamp Co.
18 Balmat Road, MANGALORE.
Approved firm by the Govt. of Mysore.
Certified by the Agent of the Govt. of India in Ceylon. ESTD 1906

ಮಿತ್ರನೋ, ಶತ್ರುವೋ?



ಯೋಗಾಗ[illegible] ಯಾವ [illegible] ನೋಡಿದ್ದೀ [illegible] ಕೊಳ್ಳುವ ಶಕ್ತಿ (Purchasing Power) [illegible] ಅಧಿಕವಾಗಿರುತ್ತದೆ. ಇದರ [illegible] ಎಷ್ಟು ಆವಶ್ಯಕವೋ ಅದಕ್ಕಿಂತ ಹೆಚ್ಚಾಗಿ ಹಣವು [illegible] ನಮ್ಮ ಜನಾಂಗ [illegible] ಯನ್ನು ಅವಲಂಬಿಸಿದ್ದೇ ಆದರೆ, ಆ ಪಣ್ಯನಷ್ಟ (Inflation) [illegible] ಎಂಬರ್ಥವನ್ನು ತಾಳಿ, [illegible] ಗಳ ಅಭಾವ [illegible] ಧಾರಣವಾಸಿ [illegible] ಮಟ್ಟಿಗೆ ತಪ್ಪದಿರುವು [illegible] ಹೋರಾಟದಲ್ಲಿ ನೀವುಗಳೆಲ್ಲರೂ [illegible]

ಇದಕ್ಕಾಗಿ ನೀವು ಮಾಡಬೇಕಾದ್ದು [illegible] ರವೆ ಹಚ್ಚು ದನವನ್ನು ಆಭರಣಗಳು, [illegible] ಕಟ್ಟಡಗಳು, [illegible] ಅಂದರೆ [illegible] ಗಳು, ಪೋಸ್ಟ್ ಆಫೀಸ್ [illegible] ಗಳು ಪ್ರಕೃತ [illegible] ಲೋನುಗಳು, ಮತ್ತು ನ್ಯಾಶನಲ್ [illegible] ಮಾರ್ಗಗಳು.

ನೀವು [illegible] ಅವಶ್ಯಕವಲ್ಲ [illegible] ಹಣದ ಬೆಲೆಯು [illegible] ಹಣವು ಉಳಿಯುವುದು.

ಹಣವನ್ನು ಕೈಲಾದ ಮಟ್ಟಿಗೂ ಉಳಿಸಿರಿ. ಉಳಿಸಿದ್ದನ್ನು ವಿವೇಕಮಾರ್ಗಗಳಲ್ಲಿ ವಿನಿಯೋಗಿಸಿರಿ.

ಇದು ರಾಷ್ಟ್ರೀಯ ಯುದ್ಧ ಮುಖವು ಭಾರತೀಯರ ಸಮಕ್ಷಮದಲ್ಲಿ ಮಾಡುವ ಅರಿಕೆ.

AAA 1111 KN

The Canara Banking Corporation Limited.

ESTD 1906.

Authorised Capital	Rs 25 00 000/-
Subscribed Capital	,, 16 00,000/-
Paid up Capital	,, 11 11 580/-
Reserves	,, 1 10 000/-

Total Working Capital—Exceeds One Crore.

With a net work of Branches and Agencies in almost all the principal Cities of India, we offer exceptional facilities and competitive rates for collection of Bills and issue of Drafts and Telegraphic Transfers

ನವಯುಗ

ಉಡುಪಿ, ಗುರುವಾರ ೧೪-೯-೧೯೪೪

ಹೇಗೆ ಊಹಿಸಬಹುದು?

ಈಗಿನ ಯುದ್ಧಗತಿಯ ಆಧಾರದಿಂದ ಜರ್ಮನಿ ಮತ್ತು ಜಪಾನು, ಎರಡಕ್ಕೂ ಇನ್ನು ಹೆಚ್ಚೆಂದರೆ ಒಂಬತ್ತು ತಿಂಗಳ ಆಯುಷ್ಯವೆಂದು ನಿರೀಕ್ಷಿಸಬಹುದು ನಾಝಿ ಜರ್ಮನಿಯ ಕೋಟೆಕೊತ್ತಳಗಳು ಸಡಿಲು ಬಿದ್ದು, ಕವಚ ಕೂಡಾ ಹರಿದುಹೋಗಿ, ಈಗ ವಿಚಿತ್ರ ಮಾಡತಕ್ಕದರ ಎದುರು ಗುರಿಯಾಗಿದೆ ಎಂಬುದಕ್ಕೆ ಸಮಾನವಿಲ್ಲ. ಫ್ರಾನ್ಸ್ ಯುದ್ಧದ ಕೊನೆಯ ಭಾಗದಲ್ಲಾದ ಅಭಿವೃದ್ಧಿಯೇ ಜರ್ಮನಿಯಲ್ಲೂ ಸಾಗಿದರೆ, ಇದರ ಪತನ ಮೂರು ತಿಂಗಳೊಳಗಿನ ಮಾತು. ಆ ಮೇಲಿನ ಜಪಾನ್ ಯುದ್ಧವು ಸಮಯ ತಿನ್ನುವಂತಹದಾಗದು ಆದಕ್ಕೆಂದು ಅತ್ಯುದಾರ ಬುದ್ಧಿಯಿಂದ ಮೀಸಲಿಡಬಹುದಾದ ಸಮಯವೆಂದರೆ ಆರೇ ತಿಂಗಳು. ಈಗ ಕಾಲದುಯ್ಯಾಲೆಯಲ್ಲಿ ತೂಗುತ್ತಿರುವದು ಆಕ್ಸಿಸ್ ರಾಷ್ಟ್ರಗಳ ಅವಸಾನವೊಂದೇ-ಸತ್ಯಕ್ಕೂ ಜಯಶ್ರೀಯಲ್ಲ!

ಆದರೆ ಯುದ್ಧ ನಿರೀಕ್ಷಕರ ಬುದ್ಧಿಗೆ ಈ ಸಂದಿಗ್ಧ ಕಾಲವು ಅತಿ ಹೆಚ್ಚಿನ ಕೆಲಸ ಕೊಟ್ಟಿದೆ. ಬೇಗನೇ ಯುದ್ಧಾವಸಾನವನ್ನು ನಿರೀಕ್ಷಿಸದಂತೆ ಮಾಡುವ ಅವ್ಯಕ್ತ ಆಗುಹೋಗುಗಳು ತೆರೆಯ ಮರೆಯಲ್ಲಿ ನಡೆಯುತ್ತಿರುವಂತಿದೆ. ಮೊದಲಾಗಿ ಮಿತ್ರರ ಸೇನೆಗಳು ಪ್ರತ್ಯಕ್ಷ ಜರ್ಮನಿಯ ಗಡಿಯೊಳಗೆ ನುಗ್ಗಿ ಬರುತ್ತಿದ್ದರೂ ನಾಜಿಗಳು ಧೈರ್ಯಗುಂದಿದ ವಾರ್ತೆ ಮಾತ್ರ ದೊರೆತಿಲ್ಲ. ಮೊನ್ನೆ ತಾನೇ ಒಮ್ಮೆ ದಾವಾಗ್ನಿಯಂತೆ ಜರ್ಮನಿಯಲ್ಲಿ ಕಾಣಿಸಿಕೊಂಡು ಮರುಕ್ಷಣದಲ್ಲೇ ಅಡಗಿದ ಸೇನಾಬಂಡಾಯದ ಪುನರಾವರ್ತನೆಗೆ ಸುಮುಹೂರ್ತ ಬಂದಿದೆ ಆದರೆ ಅದರ ಮೂಲವೇ ನಿರ್ನಾಮಗೊಂಡಂತಿದೆ ಚಿಬೋರ್ಗ್ ವಲಯವೊಂದನ್ನು ಬಿಟ್ಟರೆ ಫ್ರಾನ್ಸಿನ ಇತರ ರಂಗಗಳಲ್ಲಾಗಲೀ ಬೆಲ್ಜಿಯಮ್ ಹೊಲೆಂಡುಗಳಲ್ಲಾಗಲೀ ಜರ್ಮನ್ ಸೇನೆ ಬಿಡಾರಬಿಡಿ ಹೋರಾಟ ಕೊಡದೇನೇ ಜರ್ಮನ್ ಗಡಿಗೆ ಹಿಂದ ಸರಿದಿದೆ. ಆದ್ದರಿಂದ ಅಪಾಯವು ಪ್ರತ್ಯಕ್ಷ ಜರ್ಮನಿಯ ಬಾಗಿಲನ್ನು ಬಡಿಯುತ್ತಿರುವ ಈ ಸಂದರ್ಭದಲ್ಲಾದರೂ ನಾಜಿಗಳು ಸಪಬಡಿಯಲ್ಪಟ್ಟಿದ್ದಾರೆನ್ನುವದು ಅಸತ್ಯ. ಜರ್ಮನ್ ಗಡಿಯ ಒಂದೆರಡು ನಗರಗಳಿಗೆ ಮೊದಲ ಬಾರಿ ಹೆಜ್ಜೆಯೂರಿದ ಅಮೇರಿಕನ್ ಸೇನೆಗಳಿಗೆ ನಾಜೀ ಪ್ರತಿಭಟನೆಯು ಬಿಸಿ ಸಾಕಷ್ಟು ತಾಗಿದೆ ಎಂಬ ವಾರ್ತೆಯೂ ಒಂದಿದೆ ಅತ್ತ ಪೋಲೆಂಡಿನ ವಾರ್ಸಾ ಸಂಹನ್ನಿನ ವರೆಗೆ ಕೆಂಪು ಸೇನೆಯನ್ನು ಧಾವಿಸಿಬರಲು ಬಿಟ್ಟ ಜರ್ಮನರು, ಪ್ರಕೃತ ಅಲ್ಲಿಂದ ಹೆಜ್ಜೆ ಮುಂದಿಡದಂತೆ ತಡೆದಿದ್ದಾರೆ. ಈ ಘಟನೆಗಳು ಜರ್ಮನರ ಅಂತಿಮ ಯುದ್ಧ ಯೋಜನೆಯ ರೂಪ ರೇಖೆಗಳನ್ನ ತೋರುವ. ಜರ್ಮನರ ಸೇನಾ ದೌರ್ಬಲ್ಯವನ್ನು ಈ ರೀತಿ ಸದುಪಯೋಗಪಡಿಸಿಕೊಂಡುದಕ್ಕಾಗಿ ಮಿತ್ರರನ್ನು ಅಭಿನಂದಿಸ ಬೇಕೇನೋ ನಿಜ; ಆದರದನ್ನು ಜರ್ಮನರಾದರೂ ದುರುಪಯೋಗ ಪಡಿಸಿಕೊಂಡಿಲ್ಲವೆಂಬುದನ್ನು ಮರೆಯಬಾರದು ಅವರು ತಮ್ಮ ಸೇನ ಶಕ್ತಿಯನ್ನು ಅಸಾಧ್ಯ ಕಾರ್ಯಕ್ಕಾಗಿ ಬಿನ ವ್ಯಯಗೊಳಿಸದ, ಆ ಕಡೆ ಪೋಲೆಂಡ್-ಈ ಕಡೆ ಫ್ರಾನ್ಸ್ ಗಡಿಯೊಳಗಿನ ಜರ್ಮನ್ ಮೂಲ ನೆಲದ ರಕ್ಷಣೆಗಾಗಿ ಹಿಂದಗಡು ಜಮಾಯಿಸಿ ಕೊಂಡಿದ್ದಾರೆಂಬುದು ಖಂಡಿತ. ಮೂಲ ನೆಲದಲ್ಲಿ ವೈರಿಗಳನ್ನು ಜಯಶೀಲವಾಗಿ ಪ್ರತಿಭಟಿಸಿ, ಕಾಲಾನುಸಾರ ಪ್ರತಿಧಾಳಿ ಹೂಡುವದೇ ನಾಜೀ ಯುದ್ಧ ಚಾಲಕರ ಇಂದಿನ ಯೋಚನೆಯಿರುವಂತಿದ. ಇನ್ನಿದು ಅಸಾಧ್ಯವೆಂಬುದು ಮನವರಿಕೆಯಾಗಿರುವದು ಲೋಕಕ್ಕೆ ಮಾತ್ರ—ಜರ್ಮನಿಗಲ್ಲ ಇಂತಹ 'ಆಪತ್ತಿನ ವೇಳೆಯ ಆತ್ಮ ವಿಶ್ವಾಸ' ವೇ ಇಂಗ್ಲಾಂಡು ಮತ್ತು ರಶ್ಯಗಳನ್ನು ಒಂದೊಂದು ಬಾರಿ ಉಳಿಸಿದ್ದಿತು ಫ್ರಾನ್ಸ್ ಜರ್ಮನರ ವಶವಾದಾಗ ಇಂಗ್ಲಾಂಡಿನ ಸ್ಥಿತಿಯು ಇಂದಿನ ಜರ್ಮನಿಗಿಂತಲೂ ಕಳಕೆಯಲ್ಲಿತ್ತು, ಆಗ ಬ್ರಿಟನ ಹೊರತು ಮಿಕ್ಕವರಲ್ಲರ ಭರವಸೆಯೂ ಕಳೆದು ಹೋಗಿದ್ದಿತು. ಸ್ಟಾಲಿನ್‌ಗ್ರಾಡ್ ಮುತ್ತಿಗೆಯ ವೇಳೆ, ರಶ್ಯದ ಭವಿಷ್ಯದ ಕುರಿತು ಕೇವಲ ರಶ್ಯನರಿಗಲ್ಲದ ಬಾಕಿಯವರಿಗೇನೊಂದೂ ಧೈರ್ಯವಿರಲಿಲ್ಲ ಇಂದು ಆ ಸ್ಥಿತಿ ಬರ್ಲಿನಿಗ ವರ್ಗಾಯಿಸಲ್ಪಟ್ಟಿದೆ. ಅದು ಇಂಗ್ಲಾಂಡು ರಶ್ಯಗಳ ಅಂದಿನ ದುಸ್ಥಿತಿಗಿಂತಲೂ ಕಠೋರವಾದುದೆಂಬುದನ್ನೊಪ್ಪಬೇಕು. ಇಂಗ್ಲಾಂಡಿನೊಡನೆ ಆಗ ಬೇರೇನಿರದಿದ್ದರೂ ಮೂಲ ದ್ವೀಪವನ್ನು ಉಳಿಸಿಕೊಡಬಲ್ಲಷ್ಟು ಬಲವಾದ ಹಡಗ ಪಡೆಯಿದ್ದಿತು. ಜರ್ಮನಿಯ ಸಿಗ್‌ಫ್ರಿಡ್ ಲೈನು ಅಂತಹ ರಕ್ಷಣೆಯೇಯು ಮಂತಿಲ್ಲ ರಶ್ಯಾಕ್ಕಾದಿನ ಪ್ರಾಣಾಪತ್ತು ಒದಗಿದ್ದುದು ಒಂದೇ ದಿಕ್ಕಿನಿಂದ, ಒಳಗಡೆಯಲ್ಲಿ ಸಾಕಷ್ಟು ಸೈನ್ಯೀಕರಣ ತಯಾರಿಯ ಅನುಕೂಲತೆಯು ದಕ್ಕಿಟ್ಟಿತು. ಆದರೆ ಜರ್ಮನಿಯಿಂದು ಮೂರು ಕಡೆಗಳಿಂದ ಸುತ್ತುಗಟ್ಟಲ್ಪಟ್ಟಿದೆ; ಅದಕ್ಕೆ ಸಹಾಯ ಸಲ್ಲಿಸುವ ಮಿತ್ರರಾಷ್ಟ್ರಗಳು ಉಳಿದಿಲ್ಲ, ಒಳಗಡೆಯ ಶಸ್ತ್ರ ತಯಾರಿಕಾ ಕ್ಷೇತ್ರಗಳ ಮೇಲೆ ಮಿತ್ರ ವಿಮಾನಗಳು ಹಲವು ಬಾರಿ ಕೈ ತೋರಿಸಿವೆ. ಆದ್ದರಿಂದ ಜರ್ಮನಿಯಿನ್ನು ಅವಸಾನವೊಂದನ್ನೇ ನಿರೀಕ್ಷಿಸಬೇಕಾದುದು ಸಹಜ. ಆದರೆ ಜರ್ಮನರದನ್ನೀಗಲೂ ನಿರೀಕ್ಷಿಸುತ್ತಿಲ್ಲ ಇದಕ್ಕೆ ಜರ್ಮನರ ಹುಟ್ಟು ಯೋಧಗುಣವೊಂದೇ ಕಾರಣವೆ? ಅಥವಾ ಹೊರಗಿನ ಕಾರಣಗಳೇನಾದರೂ ಇರಬಹುದೆ? ಬೇರೆ ಕಾರಣಗಳಿರಬಹುದಾದರೆ— ರಶ್ಯಾ ಮತ್ತು ಆಂಗ್ಲೋ ಅಮೇರಿಕಾನರೊಳಗಿನ ಪ್ರಬಲ ಮತಭೇದವು ಸದ್ಯದಲ್ಲೇ ಒಡೆದು ರಂಗ ರೂಪ ಧರಿಸಬಹುದೆಂಬ ಆಸೆ ಮೊದಲನೆಯದು, ತಮ್ಮ ರಿಜರ್ವ್ ಪಡೆ ಮತ್ತು ನೂತನಾಯುಧಗಳ ಬಲದಿಂದ ಇನ್ನಾದರೂ ಗೆಲ್ಲಬಹುದೆಂಬ ಭಾವನೆ ಎರಡನೆಯದು ಇವೆರಡೂ ಹಿಟ್ಲರನ ಮಟ್ಟಿಗೆ ಬಯಲಾಸೆಗಳಾಗಿ ಪರಿಣಮಿಸಬಹುದು ಆದರೆ ರಶ್ಯಾ ಜಪಾನುಗಳು ಒಟ್ಟಾಗುವ ಅಪಾಯವೊಂದು ಸಾಧ್ಯತೆಯ ಗಡಿಯಲ್ಲೇ ಇರುವದರಿಂದ ಯುದ್ಧಾವಸಾನದ ದಿನವಿನ್ನೂ ಕಾಲಗರ್ಭದಲ್ಲಡಗಿಕೊಂಡಿರುವಂತೆ ಕಾಣುತ್ತಿದೆ.

ಹಳ್ಳಿಗಳಲ್ಲಿ ಆಹಾರ ಬೊಬ್ಬೆ!

(ಪತ್ರಿಕಾ ವಾರ್ತಾ ವಿಭಾಗದಿಂದ).

ದಕ್ಷಿಣ ಕನ್ನಡದ ಹಳ್ಳೀವಲಯಗಳಿಂದ ಈಗೀಗ ಅತ್ಯಂತ ಶೋಚನೀಯ ವಾರ್ತೆಗಳು ಬರುತ್ತಿವೆ. ಮೂರು, ಆರು ದಿನಗಳಿಂದ, ವಾರ, ಎರಡು ವಾರಗಳಿಂದ ಅಕ್ಕೀ ಕಾಳನ್ನೇ ಕಾಣದೆ ಕುದಿಯುತ್ತಿರುವ ಗ್ರಾಮಗಳೆಷ್ಟೋ ಇವೆ ಹಳ್ಳೀ ಸ್ಟೋರುಗಳಲ್ಲಿ ಹಿಡಿಯಕ್ಕಿಯಿಲ್ಲ, ಆ ಸ್ಟೋರುಗಳಿಗೆ ಧಾನ್ಯ ಸರಬರಾಯಿ ಮಾಡುವ ಪಥವೇ ಕಡಿದುಹೋದಂತಿದೆ. ಸಪ್ಲ್ಯಾಯಿ ತಡೆಗಟ್ಟಲ್ಪಡುವ ವಿಧಾನಕ್ಕೆ ಹೆಸರು ಹೊಂದಿದ ಇಂದಿನ ಯುದ್ಧದಲ್ಲಾದರೂ ಹಿಂದೂದೇಶದ ಹಳ್ಳಿಗಳಂತೆ ಸಂಬಂಧ ಕಡಿದುಕೊಂಡ ಬೇರೊಂದು ರಣಕ್ಷೇತ್ರವೇ ಇರಲಾರದೆಂದರೆ ಅತಿಶಯೋಕ್ತಿಯಾಗದು ಮಂಗಳೂರಿನಂತಹ ರೇಶನಿಂಗ್ ವಲಯಗಳಲ್ಲಿ 'ಇನ್ನುಳಿದಿರುವದು ಹತ್ತೇ ದಿನಗಳ ಅಕ್ಕಿ'ಯೆಂದಾದೊಡನೆ, ಅದು ಅಧಿಕಾರಿಗಳನ್ನೂ ಜನಪ್ರಮುಖರನ್ನೂ ತಳಮಳಗೊಳಿಸಿತು; ಆದರೆ ಹಳ್ಳೀ ಸ್ಟೋರುಗಳಲ್ಲಿ ಅಕ್ಕಿ ಮುಗಿದು ಹತ್ತು ದಿನ ಸಂದರೂ ಅದಕ್ಕಾಗಿ ಆತುರಪ್ರದರ್ಶಿಸಿದವರಿಲ್ಲ. ಉಡುಪಿ ರೇಶನಿಂಗ್ ವಲಯದಲ್ಲಿ ಇನ್ನೆರಡು ತಿಂಗಳುಗಳಿಗೆ ಸಾಕಾಗುವಷ್ಟು ಅಕ್ಕಿ ದಾಸ್ತಾನಿದೆ ಎಂದು ಕೇಳುತ್ತೇವೆ ಆದರೆ ಆದರ ಒತ್ತಿನ ಬೇರೆಬೇರೆ ಊರುಗಳ ಸ್ಟೋರುಗಳಲ್ಲಿ ಅಕ್ಕಿಯಿಲ್ಲದ ಮೂರು, ನಾಲ್ಕು, ಆರು, ಏಳು ದಿನಗಳಾದುದಿದೆ ಕಲವರ ಆಗ್ರಹದ ವಿಜ್ಞಾಪನೆಯಂತೆ ಉಡುಪಿ ತಹಶೀಲ್ದಾರರೊಮ್ಮೆ 1000 ಮುಡಿ ಅಕ್ಕಿಯನ್ನು ಆಸುಪಾಸಿನ ಹಳ್ಳಿಗಳಿಗಾಗಿ ಬಿಡುಗಡೆ ಮಾಡುವಂತೆ ಸೂಚನೆ ಕೊಟ್ಟರೂ ರೇಶನಿಂಗ್ ಅಧಿಕಾರಿಗಳದನ್ನು ಮನ್ನಿಸದೆ, ಸುತ್ತಮುತ್ತಣವರ ಕೂಳಿನ ಕೂಗಿನ ನಡುವೆ ಪಟ್ಟಣಿಗರು ತೇಗು ಕೇಳುವಂತೆ ಮಾಡಿದ ಕೀರ್ತಿ ಭಾಜನರಾದರೆಂಬ ವಾರ್ತೆಯಿದೆ! ಇದೇ ತಾ 11ರಲ್ಲಿ ಸಬ್ ಕಲೆಕ್ಟರರು ಉಡುಪಿಗೆ ಬಂದಿದ್ದಾಗ, ಉದ್ಯಾವರ, ಮಲ್ಪೆ, ಕೊಡವೂರು ಮೊದಲಾದ ಆಸುಪಾಸಿನ ಗ್ರಾಮಗಳವರು ತಂಡತಂಡವಾಗಿ ನೆರೆದುಬಂದು ಅವರೊಡನೆ ಅಕ್ಕಿಗಾಗಿ ಬೊಬ್ಬಿಟ್ಟು, ಕೂಡಲೇ ತಂತಮ್ಮ ಸ್ಟೋರುಗಳಿಗೆ ಕೆಲವಂಶ ಅಕ್ಕಿ ಕಳುಹಲ್ಪಡುವದೆಂಬ ಅಭಯ ದೊರೆತ ಮೇಲೆಯೇ ಹಿಂದಿರುಗಿದರೆಂದು ಕೇಳುತ್ತೇವೆ. ರೇಶನಿಂಗ್ ವಲಯದ ನೆರೆಗ್ರಾಮಗಳ ಅವಸ್ಥೆಯೇ ಹೀಗಾದ ಮೇಲೆ, ಒಳಗಡೆಯ ಕೇವಲ ಹಳ್ಳಿಗಾಡು ಪ್ರದೇಶಗಳೀಗ ಹೇಗಿರಬಹುದು ಎಂಬುದನ್ನು ಅಧಿಕಾರಿಗಳು ಊಹಿಸಬೇಕು. ಮೇಲಧಿಕಾರಿಗಳು ಬಂದಾಗ ಅವರೊಡನೆ ಮೊರೆಯಿಟ್ಟೇ ಹಳ್ಳಿಗರು ತಮ್ಮ ಪಾಲಿನ ಪ್ರಸಾದವನ್ನು ಪಡೆಯಬೇಕೆಂದಾದರೆ, ಆ ಭಾಗ್ಯವು ಹತ್ತಿರದ ಗ್ರಾಮಗಳವರಿಗೆ ಮಾತ್ರ ಹೊರತು ದೂರದವರಿಗಿಲ್ಲ ಈ ಅನ್ನದಾತರ ಆಗಮನ ನಿರ್ಗಮನದ ವಾರ್ತೆಯು ಸಕಾಲದಲ್ಲಿ ಅವರಿಗೆ ದೊರೆಯುವ ಅನುಕೂಲತೆಯಿರುತ್ತಿದ್ದರೆ, ತಮ್ಮ ಹೊಟ್ಟೆಯನ್ನೊತ್ತಿ ಹಿಡಿದುಕೊಂಡಾದರೂ ದೂರದ ಹಳ್ಳಿಗರೋಡಿಬರುತ್ತಿದ್ದರು. ಆದರೆ ಇದೊಂದು ವ್ಯವಸ್ಥೆಯಲ್ಲ; ಸಾವಿರಾರು ಜನರು 'ಕೂಡಿಬಂದು ಬೊಬ್ಬಿಟ್ಟುದಕ್ಕಾಗಿ ಅಧಿಕಾರಿಗಳು ಅನಿವಾರ್ಯವಾಗಿ ಮಾಡಿದ ತಾತ್ಕಾಲಿಕ ಶಮನ- ಒಂದು ರೀತಿಯ ಭಿಕ್ಷಾದಾನ! ಹಳ್ಳಿಗರಿಗ ಇಂತಹ ಭಿಕ್ಷೆ ಮಾತ್ರವೇಕೆ- ಪಟ್ಟಣಿಗರು ನಾಳೆ ಉಪವಾಸಬೀಳಬಾರದೆಂದು ದಾಸ್ತಾನಿರಬೇಕು-ಆದರೆ ಹಳ್ಳಿಗರು ಮೊನ್ನೆಯಿಂದ ಉಪವಾಸವಿದ್ದರೂ ಅವರಿಗೆ ಎಂದಾದರೊಂದು ದಿನ ಇಂತಹ ದಾನಮಾತ್ರವೇ?

ರೇಶನಿಂಗ್ ಕ್ಷೇತ್ರಗಳಲ್ಲಿ ಕೂಡಾ ಮುಳಗಾಲಕ್ಕೆ ಸಾಕಾಗುವಷ್ಟು ಅಕ್ಕಿಯಿಲ್ಲವೆಂಬುದು ನಿಜ. ಒಟ್ಟಿನಲ್ಲಿ ಅಕ್ಕಿಯ ಅಭಾವವಿದೆ. ಈಗಲಾದರೂ ಪಟ್ಟಣಿಗರು ಉಣ್ಣುತ್ತಿದ್ದಾರೆಂದು ನಾವು ಅಸೂಯೆಪಡುತ್ತಿಲ್ಲ; ಆದರೆ ಹಳ್ಳಿಗರು ಉಪವಾಸ ಬೀಳುತ್ತಿರುವದಕ್ಕಾಗಿ ಪಶ್ಚಾತ್ತಾಪ ಪಡದಿರಲಾಗುವದಿಲ್ಲ ತುಲನಾತ್ಮಕವಾಗಿ ವಿಚಾರಿಸಲಿ-ಒಂದು ಪಟ್ಟಣಕ್ಕೆ ಇಡೀ ಒಂದು ತಿಂಗಳು ಒಂದು ಕಾಳು ಅಕ್ಕಿಯನ್ನೂ ಕೊಡದೆ, ಕೊನೆಗೆ ಜನೇಶುಮಾರಿ ತೆಗೆದರೆ ಜನಸಂಖ್ಯೆಯಲ್ಲಿ ಕಡಿಮೆ ಬೀಳದು. ಆದರೆ ಹಳ್ಳಿಯನ್ನೊಂದು ತಿಂಗಳು ಉಪವಾಸ ಹಾಕಿ ನೋಡಲಿ- ಅಲ್ಲಿ ಮಣ್ಣುಮುಟ್ಟೆಗಳುಳಿದಾವು! ಇದೇನೂ ಅತಿಶಯೋಕ್ತಿಯಲ್ಲ, ಅಕ್ಕಿಯೇ ಪ್ರಾಣಾಧಾರವಾಗಿರುವ ಹಳ್ಳಿ, ಮತ್ತು ಫಲಾಹಾರಾಭ್ಯಾಸ ಹಾಗೂ ಅನುಕೂಲತೆಯಿರುವ ಪಟ್ಟಣವನ್ನು ತುಲನೆ ಮಾಡಿ ತೋರಿಸಿದ ಸತ್ಯಸ್ಥಿತಿ ದಕ್ಷಿಣ ಕನ್ನಡ ಜಿಲ್ಲೆಗೆ ಅಕ್ಕಿ ಕಡಿಮೆಯಾಗಿದೆ, ಅದಕ್ಕಾಗಿ ಹೊರಗಿನಿಂದ ಸರಬರಾಯಿಪಡಿಸಿಕೊಳ್ಳುವ ಸ್ತುತ್ಯ ಪ್ರಯತ್ನವೂ ಸರ್ಕಾರದಿಂದ ನಡೆದಿದೆ ಪ್ರಕೃತ ಈ ಅಭಾವವನ್ನು ಹಳ್ಳಿಗಳ ಮೇಲೆ ಮಾತ್ರ ಹಾಕುವದು ಎಷ್ಟಕ್ಕೂ ನ್ಯಾಯವಲ್ಲವೆಂದೇ ನಮ್ಮ ವಾದ. ಎಲ್ಲರಿಗೂ ಸಮನಾಗಿ ಹಂಚುವದಾದರೆ ಒಂದೇ ದಿನಕ್ಕೆ ಸಾಕಾಗುವಷ್ಟು ಅಕ್ಕಿಯು

ಜರ್ಮನಿಗೆ ಅಂತಿಮ ಹೊಡೆತ!

ಫ್ರಾನ್ಸ್, ಬೆಲ್ಜಿಯಮ್ ಮತ್ತು ಲಕ್ಸೆಂಬರ್ಗಿನಿಂದ, ಆಂಗ್ಲೋ-ಅಮೇರಿಕನ್ ಮತ್ತು ಕೆನಡಾದ ಸೇನೆಗಳು ಧೃತಗತಿಯಿಂದ ಪ್ರತ್ಯಕ್ಷ ಜರ್ಮನಿಯ ಗಡಿಯೊಳಗೇನೇ ನುಗ್ಗಿ ಹೋಗುತ್ತಿವೆ. ಮೆಜಿನೋ ಲೈನಿನ ಒಂದು ಕೋಟೆ ಸಮೇತ ಹಲವು ಆಯಕಟ್ಟಿನ ಸ್ಥಳಗಳು ಮಿತ್ರಸೇನೆಗಳ ಹಸ್ತಗತವಾದ ವಾರ್ತೆಬಂದಿದೆ. ಡೆನ್ಮಾರ್ಕ್ ಮೊದಲಾದ ಕಡೆಗಳಿಂದ ತಮ್ಮ ಸೇನೆಗಳನ್ನು ಆತ್ಯವಸರದಿಂದ ತರಿಸಿಕೊಂಡು ಪ್ರಬಲ ಟ್ಯಾಂಕು ದಳಗಳನ್ನು ಮುಂದೊಡ್ಡಿ ಜರ್ಮನರು ತಮ್ಮ ಗಡಿಯಲ್ಲೀಗ ಅಸಾಮಾನ್ಯ ಪ್ರತಿಭಟನೆ ಕೊಡುತ್ತಿದ್ದಾರೆ. ಪ್ರತ್ಯಕ್ಷ ಜರ್ಮನಿಯ ಸರಹದ್ದಿನಲ್ಲೀಗ ಚರಿತ್ರಾರ್ಹ ಭೀಕರ ಕಾಳಗ ನಡೆಯುತ್ತಿದೆ.

ರಶ್ಯದ ಹೊಡೆತ.

ರಶ್ಯನೀಗ ಪೂರ್ವ ಪ್ರಶ್ಯ ಮತ್ತು ಬಾಲ್ಟಿಕ್ ರಾಷ್ಟ್ರಗಳ ಮೇಲೆ ಎರಡು ಅತಿದೊಡ್ಡ ಧಾಳಿಗಳನ್ನು ಹೂಡಿದೆ. ಪಶ್ಚಿಮ ಗಡಿಯಿಂದ ಮಿತ್ರರಾಷ್ಟ್ರಗಳು ಪ್ರತ್ಯಕ್ಷ ಜರ್ಮನಿಯ ಮೇಲೆ ಹೂಡಿರುವ ಧಾಳಿಗೆ ಹೊಂದಿಕೆಯಾಗಿ, ಈ ಕಡೆಯಿಂದ ಜರ್ಮನ್ ಮೂಲ ನೆಲಕ್ಕೆ ನುಗ್ಗಲು ಕೆಂಪುಸೇನೆ ಪ್ರಾರಂಭಿಸಿದ ಅಮೋಘ ಹೊಡೆತವಿದು. ಸೋವಿಯೆಟ್ ಸೇನೆಗಳು ಹಂಗೇರಿ ಆಕ್ರಮಿತ ಟ್ರಾನ್ಸಿಲ್ವಾನಿಯಾದೊಳಗೆ ನುಗ್ಗಿ ಅದರ ರಾಜಧಾನಿಯನ್ನು ಕಿತ್ತುಕೊಂಡಿವೆ. ದಕ್ಷಿಣ ತುದಿಯಲ್ಲಿ ಯುಗೊಸ್ಲೋವಿಯದ ಮಾರ್ಶಲ್ ಟಿಟೋನ ಸೇನೆಯು ನಾಜಿಗಳಿಗೆ ಪರಾಭವವೊಡ್ಡುತ್ತಾ ಕೆಂಪು ಸೇನೆಗೆ ನೆರವಾಗಿದೆ. ಜರ್ಮನ್ ಸರಹದ್ದಿನ ಆ ತುದಿಯಿಂದ ಈ ತುದಿ ವರೆಗಿನ ಸುದೀರ್ಘ ಯುದ್ಧ ರಂಗದಲ್ಲಿ ಹಲವು ಕಡೆಗಳ ರಕ್ಷಣಾ ಲೈನನ್ನು ಕೆಂಪು ಸೇನೆ ಭೇದಿಸಿ ಇಷ್ಟರಲ್ಲೇ ಪ್ರತ್ಯಕ್ಷ ಜರ್ಮನ್ ನೆಲದೊಳಗೆ ಕಾಲೂರಿದ ವಾರ್ತೆ ಬಂದಿದೆ. ಇಲ್ಲಿಯೂ ನಾಜಿಗಳ ಪ್ರತಿಭಟನೆಯೀಗ ಬಲಗೊಂಡಿದೆ.

ಆಕಾಶ ಧಾಳಿ.

ಇದೇ ಸಮಯದಲ್ಲಿ ದಕ್ಷಿಣ ಜರ್ಮನಿಯ ಸ್ಟಟ್‌ಗಾರ್ಟ್, ನೂರೆಂಬರ್ಗ್ ಮೊದಲಾದ ಮುಖ್ಯ ನಗರಗಳ ಮೇಲೆ ಮಿತ್ರರು ಸಾವಿರ ಸಂಖ್ಯೆಯ ವಿಮಾನ ಧಾಳಿಯಾರಂಭಿಸಿದ್ದಾರೆ. ಇಟಲಿ ನೆಲ್ದಾಣಗಳಿಂದ ಆಸ್ಟ್ರಿಯದ ಮೇಲೂ ಆಕಾಶ ಧಾಳಿ ನಡೆಯುತ್ತಿದೆ.

ಚರ್ಚಿಲ್-ರುಸವೆಲ್ಟ್ ಸಮ್ಮೇಲನ.

ಹಲವು ಮೇಲಧಿಕಾರಿಗಳು ಮತ್ತು ಸಲಹೆಗಾರರೊಡನೆ ಪ್ರಧಾನಿ ಚರ್ಚಿಲ್ಲರು ಕ್ವಿಬೆಕಿಗೆ ಬಂದಿದ್ದಾರೆ. ಅಧ್ಯಕ್ಷ ರುಸವೆಲ್ಟರು ಅವಶ್ಯವುಳ್ಳ ಪರಿವಾರದೊಂದಿಗೆ ಹೊರಟಿದ್ದಾರೆ. ಬ್ರಿಟಿಷ್-ಅಮೇರಿಕಗಳ ವಿದೇಶಮಂತ್ರಿಗಳಾದ ಮಿ. ಈಡೆನ್ ಮತ್ತು ಮಿ. ಹಲ್ಲರೂ ಇತರ ಅಧಿಕಾರಿಗಳೂ ಈ ಸಮ್ಮೇಲನದಲ್ಲಿ ಭಾಗವಹಿಸಲಿರುವರು. ಜಾಪಾನೀ ನಿರ್ನಾಮದ ಹಂಚಿಕೆ ತಯಾರಿಯೇ ಈ ಸಮ್ಮೇಲನದ ಮುಖ್ಯೋದ್ದೇಶ. ಒಂದು ವರುಷದೊಳಗೆ ಜಾಪಾನನ್ನು ಧ್ವಂಸಮಾಡುವ ಸರ್ವ ಸಹಾಯವನ್ನು ಅಮೇರಿಕಕ್ಕೀಯುವೆನೆಂದು ಮಿ. ಚರ್ಚಿಲ್ಲರು ಭಾಷೆಕೊಟ್ಟಿದ್ದಾರೆ. ಸ್ಟ್ಯಾಲಿನರಿಗೀ ಪರಿಷತ್ತಿಗಾಮಂತ್ರಣ ಹೋಗಿದ್ದಿತೆಂದೂ, ತನ್ನ ಕಾರ್ಯಾವಸರದಿಂದಾಗಿ ಅವರದನ್ನು ನಿರಾಕರಿಸಿದರೆಂದೂ ತಿಳಿದು ಬರುತ್ತದೆ. ರಶ್ಯ ಮತ್ತು ಚೀನವು ಈ ಪರಿಷತ್ತಿನಲ್ಲಿ ಭಾಗವಹಿಸುವದಿಲ್ಲ. ಬರ್ಮದ ಮಿತ್ರ ಸೇನಾನಿ ಜನರಲ್ ಸ್ಟಿಲ್‌ವೆಲ್ಲರು ಜಾಪಾನಿನ ಕ್ಷಿಪ್ರಪತನದ ಸಾಧನೆಯ ಕುರಿತು ಯೋಚಿಸಲು ಅಮೇರಿಕಕ್ಕೆ ಧಾವಿಸಿದ್ದಾರೆ.

ಗಾಂಧಿ-ಜಿನ್ನಾ.

ಶನಿವಾರ ಪ್ರಥಮ ಭೇಟಿಯ ನಂತರ ಕೆಲವು ವಿಷಯಗಳ ಸ್ಪಷ್ಟೀಕರಣಕ್ಕಾಗಿ ಗಾಂಧೀ ಜಿನ್ನಾರೊಳಗೆ ಪತ್ರವ್ಯವಹಾರಗಳು ನಡೆದವೆಂದು ತಿಳಿದು ಬರುತ್ತದೆ. ನಿಶ್ಚಯದಂತೆ ತಾ 11ರಲ್ಲಿ ಎರಡನೇ ಬಾರಿ ಗಾಂಧಿ ಜಿನ್ನಾರೊಳಗೆ ಸುದೀರ್ಘ ಮಾತುಕತೆ ನಡೆದು ಮರುದಿನಕ್ಕೆ ಮುಂದುವರಿಸಲ್ಪಟ್ಟಿತು. ಮೊದಲಿನ ಎರಡು ಸಂಭಾಷಣೆಗಳೂ ರಂಗ ತಯಾರಿಯ ಮುನ್ಸೂಚನೆಗಳೆಂದೂ ಮಂಗಳವಾರ ಇಡೀ ದಿನ ನಡೆದ ಮಾತುಕತೆಯೇ ಪ್ರಾಮುಖ್ಯವಾದುದೆಂದೂ ತಿಳಿದು ಬರುತ್ತದೆ.

ಳಗಿದೆಯೆನ್ನೋಣ. ಹಾಗಾದರೆ ಎಲ್ಲರೂ ಈ ದಿನ ಉಂಡು ನಾಳೆಯಿಂದ ಉಪವಾಸ ಬೀಳಲಿ! ಆ ಅಕ್ಕಿಯನ್ನೆಲ್ಲಾ ಪಟ್ಟಣದಲ್ಲಿ ಕೂಡಿಸಿಟ್ಟು, ಹಳ್ಳಿಗರಿಗೆ ಇಂದಿನಿಂದಲೇ ಉಪವಾಸ- ಪೇಟೆಯವರಿಗೆ ಇನ್ನೊಂದು ಹತ್ತು ದಿನ ಊಟ ಎಂಬಂತಹ ಪಕ್ಷಪಾತ ಬೇಡವೆಂದೇ ನಮ್ಮ ವಿನಂತಿ. ಈ ಪಕ್ಷಪಾತದ ಅನ್ಯಾಯವಾದರೂ ಯಾರಿಗೆ? ಧಾನ್ಯೋತ್ಪತ್ತಿ ಮಾಡಿಕೊಡುವ ಹಳ್ಳಿಗರಿಗೇನೇ! ರೈತರನ್ನು ಉಪವಾಸ ಹಾಕಿ ಬೇರೆಯವರಿಗುಣ್ಣುವ ಅಧಿಕಾರವಿಲ್ಲ. ಅನು ಊಟವಲ್ಲ-ವಿಷ! ಹಳ್ಳಿಗರ ಈ ಶಾಪದಿಂದ ಪಾರಾಗಿರಿ ಎಂದು ಆಹಾರ ವ್ಯವಸ್ಥಾಪಕರಲ್ಲಿ ಆಗ್ರಹದ ವಿನಂತಿ.

NOTICE.

The General Assurance Society Ltd
AJMER

Notice having been given of the loss of policy No 38457 on the life of Mr R. Narasimha Bhatta, Chauffuer C. P. C. Co. Ltd., Udipi (South Kanara), a duplicate copy of the said Policy will be issued if no objection is received by us within one month from this date.

Ajmer.
Dated 5-9-44 *General Manager*
G. C.

ನೋಟೀಸು

ಕಾರ್ಕಳ ತಾಲೂಕು ಪುತ್ತಿಗೆ ಗ್ರಾಮದ ಜಲಗೋಳಿ ಯೆಂಬಲ್ಲಿರುವ ಕೊರಪಳು ಹೆಂಗ್ಸಿನ ಮಗಾ ಅಪ್ಪಣ್ಣ ಪೂಜಾರಿ 1. ಮತ್ತು ಸದ್ರಿಯವನ ಮಗ ಮುದರ ಪೂಜಾರಿ 1 ಕೂಡಾ ಈ ಎರಡು ಜನರು ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದರೆ:

ಪೆದ್ದರೂ, ಅವಿದ್ಯಾವಂತರೂ, ಈಗಿನ ಹೊರಗಿನ ಸ್ಥಿತಿಗತಿಯಾ ಕಾನೂನು ಕಾಯಿದೆ ವಗೈರೆ ಯೇನನ್ನೂ ಅರಿಯದ ನಮ್ಮಿಬ್ಬರನ್ನೂ ನಂಬಿಸಿ ಮೋಸದಿಂದ, ಈಗ ಬಡ ಜನರಿಗೆ ಅಕ್ಕಿ ಬೇಕಾದಷ್ಟು ಕೊಡುವರೇ ಕಲಿಕ್ಕರರ ಹಕ್ಕು ಆಗಿರುವುದೆಂದೂ ಆ ಕುರಿತು ನಾವು ಅರ್ಜಿಗೆ ಕೈ ಮೊಹರು ಕೊಡಬೇಕೆಂದೂ ಹೇಳಿ, ಸದ್ರಿ ಗ್ರಾಮದ ಪಟೇಲ್ ಶಿವಣ್ಣ ಹೆಗ್ಡೆಯೂ, ಕಡಂದಲೆ ಸರಾಫಿ ಅಚ್ಯುತ ಸೆಟ್ರ ಮಗಾ ನಾರಾಯಣ ಸೆಟ್ರೂ, ಮುಸ್ತಾ ಪಾಲಡ್ಕ ಕೆಳಗಿನಮನೆ ರುಕ್ಕು ಸೆಟ್ಟರ ಮಗಾ ಶೀನ ಸೆಟ್ರು ಎಂಬವರೂ ಬಂದು ಕೆಲವು ಕಾಗದಗಳಿಗೆ, ನಮ್ಮ ಎಡ ಹೆಬ್ಬೆಟ್ಟು ಮೊಹರುಗಳನ್ನು ಸುಮಾರು ಹತ್ತು ಹದಿನೈದು ದಿವಸಗಳ ಹಿಂದೆ ಪಡೆದುಕೊಂಡು ಹೋಗಿರುತ್ತಾರೆ. ಹಾಗೆ ಅವರು ಪಡೆದುಕೊಂಡು ಹೋದ [illegible] ಸದ್ರಿಯವರು ಅಕ್ಕಿ ವಗೈರೆ ಕೊಡಿಸುವರೇಯೆಂತ ಹೇಳಿದ ಯಾವದೂ ಮೊಗಳಿಕೆ ಸುಳ್ಳು ಮತ್ತು ಕೇವಲ ಕಲ್ಪನೆಯೆಂತಲೂ-ಮತ್ತು ಸದ್ರಿ ಹೆಬ್ಬೆಟ್ಟುಗಳನ್ನು ನಮ್ಮನ್ನು ಮೋಸಗೊಳಿಸಿ ಪನೋಟು ಸುಳ್ಳು ರಿಕಾರ್ಡು ಕಲ್ಪಿಸುವ ಬಗ್ಗೆ ಅವರ ಪೈಕಿ ಶೀನ ಸೆಟ್ರು ಕೊಂಡುಹೋಗಿರುವರೆಂದೂ-ಈಗ ತಿಳಿದುಬರುತ್ತದೆ. ಅದ್ದರಿಂದ ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವುದೇನೆಂದರೆ: ಸದ್ರಿ ಮೋಸದಿಂದ ನಮ್ಮಿಂದ ಪಡಕೊಂಡ ಹೆಬ್ಬೆಟ್ಟುಗಳು ನಮ್ಮ ಮೇಲೆ ಯಾವುದೊಂದೂ ಹಕ್ಕು ಸ್ಥಾಪಿಸತಕ್ಕದಲ್ಲ. ಅದನ್ನು ನಂಬಿ ಮೋಸ ಹೋಗಿ ಯಿತರರು ಅದರ ಆಧಾರದಿಂದ ಯಾವುದೊಂದು ವ್ಯವಹಾರವನ್ನೂ ನಡಿಸತಕ್ಕದ್ದಲ್ಲ. ಸದ್ರಿ ಶಿವಣ್ಣ ಹೆಗ್ಡೆ, ನಾರಾಯಣ ಸೆಟ್ರು ವ ಶೀನ ಸೆಟ್ರು ಮತ್ತು ನಮ್ಮೊಳಗೆ ಯಾವುದೊಂದು ಸಕ್ಕು ಸಂಬಂಧವೂ ಇಲ್ಲಾ ತಿಳಿದಿರಲಿ.

● |||ಈ ಮೂರು ಗೆರೆ ವ ಎಡ ಕೈ ಹೆಬ್ಬೆಟ್ಟಿನ ಮುದ್ರೆ ಅಪ್ಪಣ್ಣ ಪೂಜಾರಿ ರುಜು-

● |||ಈ ಮೂರು ಗೆರೆ ವ ಎಡ ಕೈ ಹೆಬ್ಬೆಟ್ಟಿನ ಮುದ್ರೆ ಮುದರ ಪೂಜಾರಿ ರುಜು-

ಮೊಕ್ಕಾಂ ಪುತ್ತಿಗೆ.
ಕಾರ್ಕಳ 11-3-1944

NOTICE

ಉಡುಪಿ. ಡಿ. ಮು. ಕೋರ್ಟಿನಲ್ಲಿ.

O. P. ನಂಬ್ರ 76/44

(1) ವಾದಿರಾಜ, (2) ಮಾಧವ, G. S. ತಂತ್ರಿಗಳ ಪ್ರಾಪ್ತವಯಸ್ಕರಲ್ಲದ ಮಕ್ಕಳು. ಕ್ಷೇಮಚಿಂತಕಳು ತಾಯಿ ಮಹಾಲಕ್ಷ್ಮಿ ಅಮ್ಮ. (3) ರಾಘವೇಂದ್ರ ತಂತ್ರಿ, ಶ್ರೀನಿವಾಸ ತಂತ್ರಿ ಮಗ; (4) ಪದ್ಮಾವತಿ ಅಮ್ಮ, ಶ್ರೀನಿವಾಸ ತಂತ್ರಿಗಳ ವಿಧವೆ, (5) ಮಹಾಲಕ್ಷ್ಮಿ ಅಮ್ಮ G. S. ತಂತ್ರಿಗಳ ವಿಧವೆ. 1, 2, 5ನೇ ಅರ್ಜಿದಾರರು ಉಡುಪಿ ತಾಲ್ಲೂಕು ಉದ್ಯಾವರ ಗ್ರಾಮದಲ್ಲಿಯೂ, 3, 4ನೇ ಅರ್ಜಿದಾರರು ಪಾದೂರು ಗ್ರಾಮದಲ್ಲಿಯೂ, ಇರುವವರು —ಅರ್ಜಿದಾರರು

ಮತ್ತು

(1) ವೆಂಕಟ್ರಮಣ ತಂತ್ರಿ, ಶ್ರೀನಿವಾಸತಂತ್ರಿಗಳ ಮಗ,-Residing at Narasimha Potty Hotel Mullakkil Aleppiy, Travancore; (2) ಲಕ್ಷ್ಮೀಶತಂತ್ರಿ, ಶ್ರೀನಿವಾಸ ತಂತ್ರಿಗಳ ಮಗ, Residing at Laxmi Restaurant Saudatti, Belgaum —ಎ. ಪ್ರ. ರು

ಇವರೊಳಗೆ—

ಯೀ ಮೊಕದ್ದಮೆಯಲ್ಲಿ ಸರ್ವಜನರಿಗೆ ತಿಳಿಯಪಡಿಸುವುದೇನೆಂದರೆ, 1, 2ನೇ ಅರ್ಜಿದಾರರ ತಂದೆ, 5ನೇ ಅರ್ಜಿದಾರಳ ಗಂಡ, 4ನೇ ಅರ್ಜಿದಾರಳ ಮಗನೂ 3ನೇ ಅರ್ಜಿದಾರ ಮತ್ತು ಪ್ರತಿವಾದಿಗಳ ಸಹೋದರ ಮೃತ G. S. ತಂತ್ರಿಗಳು ದಿ ನ್ಯೂ ಇಂಡಿಯಾ ಎಶ್ಶೂರೆನ್ಸ್ ಕಂಪೆನಿ ಲಿಮಿಟೆಡ್ ಬೊಂಬಾಯಿ, ಈ ಕಂಪೆನಿಯಲ್ಲಿ ಪಾಲಿಸಿ ನಂಬ್ರ 20538ನೇದಾಗಿ [illegible] ಹಣವನ್ನು ಪಡೆಯುವರೇ 1, 2 ವ 4, 5 ನೇ ಅರ್ಜಿದಾರರು ಸದರಿಗೆ Succession Certificate' ಕೊಡಬೇಕಾಗಿ ಕೇಳಿ ಮೊಕದ್ದಮೆ ದಾಖಲು ಮಾಡಿರುತ್ತಾರೆ. ಅದುದರಿಂದ ಆ ಕುರಿತು ಆಕ್ಷೇಪ ಉಳ್ಳವರು ತಾರೀಕು 12 10 1944ನೇ ದಿವಸ ಬೆಳಿಗ್ಗೆ 10ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಸ್ವತಹಾ ವ ವಕೀಲರ ಮುಖಾಂತ್ರ ಹಾಜರಾಗತಕ್ಕದ್ದು. ಇಲ್ಲವಾದ್ರೆ ಏಕಪಕ್ಷವಾಗಿ ತೀರ್ಮಾನ ಮಾಡಲಾಗುವದೆಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿಯದೆ.

(By order of the Court)

ಉಡುಪಿ,
ತಾ 9-9-44. **K. L. Aithal.**
Vakil for Petitioners

ಉಡುಪಿ.

ಸಾಹಿತ್ಯೋತ್ಸವ:—ಕರ್ನಾಟಕದ ಹಿರಿಯ ಸಾಹಿತಿಗಳಲ್ಲೊಬ್ಬರಾದ ಶ್ರೀ. ಎಸ್. ರಾಜಗೋಪಾಲಕೃಷ್ಣರಾಯರ ಮುಂದಾಳುತನದಿಂದ ಈ ತಿಂಗಳ ಆದಿಯಲ್ಲಿ ಸ್ಥಾಪಿತವಾದ ಕರ್ನಾಟಕ ಸಂಘದ ನೇತೃತ್ವದಲ್ಲಿ ಬೋರ್ಡ್ ಹೈಸ್ಕೂಲಿನ ನವಸಭಾಭವನದಲ್ಲಿ ಜರಗಲಿರುವ ಸಾಹಿತ್ಯೋತ್ಸವವು ಇದೇ ತಿಂಗಳ ತಾ ೨೪ರಂದು ಸಾಯಂ. ಘಂ. ೫ಕ್ಕೆ ಶ್ರೀ ಪಲಿಮಾರು ಶ್ರೀಗಳವರಿಂದ ಉತ್ಸವದ ಉದ್ಘಾಟನೆಯಿಂದಾರಂಭವಾಗಿ ಉಪನ್ಯಾಸಗಳೂ ವಾಚನ, ನರ್ತನ, ನಾಟಕಾದಿಗಳೂ, ತಾ ೨೫ರಂದು ಸಾಯಂ. ಘಂ. ೪. ಕ್ಕೆ ಶ್ರೀ ಶೀರೂರು ಶ್ರೀಗಳವರ ಅಧ್ಯಕ್ಷತೆಯಲ್ಲಿ ಶ್ರೀ. ಎಸ್ ವಿ. ಕುಡುವರಿಂದ ಪತ್ರಿಕಾ ಉದ್ಘಾಟನೆಯಿಂದಾರಂಭವಾಗಿ ಶ್ರೀಗಳವರ ಮತ್ತು ಇತರರ ಉಪನ್ಯಾಸಗಳೂ ಹರಿಕಥೆ ಕಟ್ಟಾಡಿ ಯುವಕ ಕೂಟದ ಯಕ್ಷಗಾನ ನಾಟಕಾದಿಗಳೂ, ತಾ ೨೬ರಂದು ಸಾಯಂ ಘಂ. [illegible] ಉಪನ್ಯಾಸಗಳು ವಾಚನಗಳು [illegible] ರಾತ್ರಿ [illegible] ಯಕ್ಷಗಾನ ತಾಳಮದ್ದಳೆಯೂ, [illegible] ನಡೆಯುವವು. [illegible] ಕನ್ನಡ ಪ್ರೇಮಿಗಳೆಲ್ಲರೂ [illegible] ಉತ್ಸವವನ್ನು ಸಾರ್ಥಕಗೊಳಿಸಬೇಕಾಗಿ ಸಂಘದ ಪರವಾಗಿ [illegible] ಕಾರ್ಯದರ್ಶಿ ಶ್ರೀ [illegible] ಕೋರುತ್ತಾರೆ.

ಅಕ್ಕಿ ಹಿಂದೆಸಿಕ್ಕಿತು:— [illegible] ಎಂದು ತಿಳಿದುಬರುತ್ತದೆ.

ಅಕ್ಕಿ ವಿತರಣೆಯಲ್ಲಿ ತಾರತಮ್ಯ:—ರೇಶನಿಂಗ್ ಕ್ಷೇತ್ರದಲ್ಲಿ ಚಾಂದ್ರಮಾನ ಯುಗಾದಿ, ಕರ್ನಾ ಮತ್ತು ಶ್ರೀಕೃಷ್ಣಜಯಂತಿಯ ಸಲುವಾಗಿ ಬೆಳತಿಗೆಅಕ್ಕಿ ಸರಬರಾಯಿ ಮತ್ತು ವಿತರಣೆಯು ವಿಶೇಷವಿದ್ದು ಸೌರಮಾನ ಯುಗಾದಿ,ಪಾಕರ್ಮ ಮತ್ತು ಶ್ರೀಕೃಷ್ಣಜಯಂತಿ ಆಚರಣೆಯ ವೇಳೆಯಲ್ಲಿ ಮಾತ್ರ ಅಂತಹ ವಿಶೇಷ ಸರಬರಾಯಿ ಮತ್ತು ವಿತರಣೆಯಾಗದೆ ಸಂಕುಚಿತ ಮನೋವೃತ್ತಿಯ ತಾರತಮ್ಯ ಮಾಡುದು ನ್ಯಾಯಸಮ್ಮತವೇ ಎಂದು ಶ್ರೀ. ಯು. ಎಸ್. ಭಟ್ಟರು ಪ್ರಶ್ನಿಸುತ್ತಾರೆ.

ಸುರತ್ಕಲ್:—ತಾ 10ರಲ್ಲಿ ಶ್ರೀ ಕೃಷ್ಣಾಪುರ ಮಠದಲ್ಲಿ ಶ್ರೀ ಕೃಷ್ಣಾಪುರ ಶ್ರೀಗಳವರ ನೇತೃತ್ವದಲ್ಲಿ ಶ್ರೀ ಶೀರೂರು ಶ್ರೀಗಳವರ ಸಮ್ಮುಖದಲ್ಲಿ ವಿಟ್ಲಪಿಂಡಿ ಹಬ್ಬವು ಉತ್ಸವಯಾಗಿ ಅತಿ ವಿಜೃಂಭಣೆಯಿಂದ ಜರಗಿತು. ರಾತ್ರಿ ಪ್ರಸಿದ್ಧ ಅರ್ಥವಾದಿಗಳ ಕೂಡುವಿಕೆಯಿಂದ 'ಭೀಷ್ಮಾರ್ಜುನ ಕಾಳಗ' ಎಂಬ ಯಕ್ಷಗಾನ ಕಾಲಕ್ಷೇಪವಿತ್ತು. ಶ್ರೀ ಕಲ್ಲಿಯನ [illegible] ರಾಮಕೃಷ್ಣರಾಯರು [illegible] ಶ್ರೀ [illegible] ಶ್ರೀಕೃಷ್ಣ, ಶ್ರೀ [illegible] ಅರ್ಜುನ [illegible] ಧರ್ಮರಾಜ ಮತ್ತು [illegible] ಶ್ರೀ. [illegible] ಭಾಗವತರು [illegible] ಸ್ಮರಣೀಯವಾಗಿತ್ತು.

'ಅಂತರಂಗ'ಕ್ಕೆ ಸೆಕ್ಯುರಿಟಿ

ತಾ. 13-6-44ನೇ ಸಂಚಿಕೆಯಲ್ಲಿ ಪ್ರಕಟವಾದ 'ಪವಿತ್ರ ಪ್ರಾಯಶ್ಚಿತ್ತ' ಎಂಬ ಲೇಖನದ ಒಂದು ಭಾಗವು ಆಕ್ಷೇಪಕರವೆಂದು ಉಡುಪಿಯ 'ಅಂತರಂಗ' ವಾರಪತ್ರಿಕೆಯ ಪ್ರಕಾಶಕರಿಂದ ಮದ್ರಾಸು ಸರಕಾರವು ರೂ. 500/-ರ ಸೆಕ್ಯುರಿಟಿಯನ್ನು ಕೇಳಿರುತ್ತದೆ. ಈ ಕುರಿತು ಪ್ರಕಾಶಕರು ಮಾಡಿಕೊಂಡ ಬಿನ್ನಹವು ಇತ್ಯರ್ಥವಾಗುವ ವರೆಗೆ ಪತ್ರಿಕೆಯ ಪ್ರಕಟನೆಯು ನಿಲ್ಲಿಸಲ್ಪಟ್ಟಿದೆ.

ದಕ್ಷಿಣ ಕನ್ನಡ.

ಮಂಗಳೂರು

ರೇಶನಿಂಗ್— ಮಂಗಳೂರು — ಕಾಸರಗೋಡು— ಉಡುಪಿ— ಟೌನುಗಳು:—ರೇಶನ್ ಕಾರ್ಡು ಇರತಕ್ಕವರು ತಮ್ಮ ಮನೆಯ ಜನಸಂಖ್ಯೆ ಹೆಚ್ಚಿಗೆಯಾಗಿ ರೇಶನಿಂಗ್ ಹೆಚ್ಚಿಗೆ ಬೇಕಾದರೆ, ಜನಸಂಖ್ಯೆ ಕಡಿಮೆಯಾಗಿ ರೇಶನಿಂಗ್ ಕಡಿಮೆ ಮಾಡುವ ಸಂದರ್ಭದಲ್ಲಿ ಅಂಥವರು ಅವರವರ ಸರ್ಕಲ ಸಂಬಂಧಪಟ್ಟ ಅಸಿಸ್ಟೆಂಟ್ ರೇಶನಿಂಗ್ ಆಫೀಸರಿಗೆ ಅರ್ಜಿ ಬರೆಕೊಳ್ಳಬೇಕು. ಮಂಗಳೂರು ಪಟ್ಟಣ ಕ್ಷೇತ್ರದಲ್ಲಿ ಮಂಗಳೂರು ನೋರ್ತ ಸರ್ಕಲ್ ಮತ್ತು ಮಂಗಳೂರು ಸೌತ್ ಸರ್ಕಲ್ ಎಂಬ ಎರಡು ಪ್ರತ್ಯೆ ಪ್ರತ್ಯೇಕ ಆಫೀಸುಗಳು ಉಂಟು. ಸಂಬಂಧಪಟ್ಟ ಸರ್ಕಲ್ ಆಫೀಸರಿಗೆ ಕಾರ್ಡುದಾರರು ಮೇಲೆ ಹೇಳಿದ ಸಂದರ್ಭದಲ್ಲಿ ಬರಕೊಳ್ಳಬೇಕು. ವಿನಹ ಮಂಗಳೂರು ರೇಶನಿಂಗ್ ಆಫೀಸರು ಈ ಡಿಸ್ಟ್ರಿಕ್ಟ್ ರೇಶನಿಂಗ್ ಆಫೀಸರಿಗೆ ಬರಕೊಂಡಲ್ಲಿ ಅನಾವಶ್ಯಕ ತೇರಿಯಾದೀತು ಎಂಬ ಸಂಗತಿಯನ್ನು ಎಲ್ಲಾ ಕಾರ್ಡುದಾರರು ತಿಳಿದಿರುವದ.

ಹಸುಗೆ ಕ್ಷೇತ್ರದಲ್ಲಿ ಸಾಗ್ವಳಿ ಭೂಮಿ ಇರತಕ್ಕ ಜಮೀನುದಾರರು ವ ರೈತರು ಅನುಸರಿಸತಕ್ಕ ಅನುಜ್ಞೆಗಳು:—

ರೆಗ್ಯುಲೇಶನ್ 18:—ಸಂಬಂಧಪಟ್ಟ ರೇಶನಿಂಗ್ ಆಫೀಸರ ಅನುಮತಿ ಶಿವಾಯ ಭೂಮಿಯಲ್ಲಿ ಬೆಳೆದ ಬತ್ತ ಯಾ ಅಕ್ಕಿಯನ್ನು ಅಲ್ಲಿಂದ ಒಯ್ಯಕೂಡದು.

ರೆಗ್ಯುಲೇಶನ್ 49-50:—ಸಾಗವಳಿ ಗದ್ದೆಯಿಂದ ನೆಲ್ಲು ಪೈರು ಕಟಾವು ಮಾಡಿ ತೆಗೆಯುವ ಮುಂಚೆ ರೈತರು ಬೆಳೆ ಕಟಾವು ಮಾಡುವುದಕ್ಕಿಂತ ಕನಿಷ್ಠಪಕ್ಷ ಒಂದು ವಾರಕ್ಕಾದರೂ ಮುಂಚಿತವಾಗಿ ಬೆಳೆ ಕಟಾವು ಮಾಡುವ ತಾರೀಕು ಕಾಣಿಸಿ ಸದ್ರಿ ಬೆಳೆ ಇರುವ ಸರ್ವೆನಂಬ್ರ, ವಿಸ್ತೀರ್ಣ ಮತ್ತು ಅಂದಾಜ ಪೈಸಲು ಕಾಣಿಸಿ ಕಟಾವು ಮಾಡಿದ ಪೈರನ್ನು ಹೇಗೆ ಉಪಯೋಗಿಸುವದು ಎಂಬುದೇ ಮುಂತಾದ ತಪಶೀಲುಗಳನ್ನು ಕಾಣಿಸಿ ರೇಶನಿಂಗ್ ಯಾ ಅಸಿಸ್ಟೆಂಟ್ ರೇಶನಿಂಗ್ ಆಫೀಸರರವರಿಗೆ ಬರಹ ಮೂಲಕದ ನೋಟೀಸು ಕೊಡತಕ್ಕದ್ದು.

ರೆಗ್ಯುಲೇಶನ್ 52:—ನೋಟೀಸಿನಲ್ಲಿ ಕಾಣಿಸಿದ ಕಟಾವು ತಾರೀಕಿಗೆ ಯಾ ಅದರ ನಂತರ ರೈತರು ಬೆಳೆ ಕಟಾವು ಮಾಡಬಹುದು. ಆ ಸಮಯದಲ್ಲಿ ರೇಶನಿಂಗ್ ಡಿಪಾರ್ಟಮೆಂಟಿನ ಉದ್ಯೋಗಸ್ಥರ ಪೈಕಿ ಮೇಲು ಪಂಕ್ತಿ ಬಗ್ಗೆ ಯಾರಾದರೂ ಹಾಜರು ಇದ್ದರೂ ಇರಬಹುದು.

ರೆಗ್ಯುಲೇಶನ್ 53:—ಬೆಳೆ ಕಟಾವಿನ ನಂತರ ಜಮೀನುದಾರರು ವ ರೈತರು ಕಟಾವು ಮಾಡಿದ ಪೈಸಲು ಎಷ್ಟು? ಎಂಬ ಬಗ್ಗೆ ಸರಿಯಾದ ಲೆಕ್ಕ ತಯಾರಿಸಿ ಇಡಬೇಕು. ಜಮೀನುದಾರರು ರೇಶನಿಂಗ್ ಸರಹದ್ದಿನ ಹೊರಗೆ ವಾಸ ಮಾಡುವ ಸಂದರ್ಭದಲ್ಲಿ ಅಂಥವರು ರೇಶನಿಂಗ್ ಸರಹದ್ದಿನಲ್ಲಿ ಬೆಳೆದು ಕಟಾವು ಮಾಡಿದ ಭತ್ತ ಪೈಸಲನ್ನು ರೇಶನಿಂಗ್ ಯಾ ಅಸಿಸ್ಟೆಂಟ್ ರೇಶನಿಂಗ್ ಆಫೀಸರರ ಸಮಕ್ಷಮದಿಂದ ಪ್ರಮಾಣ ಪತ್ರಗಳ ಮೂಲಕ ರೇಶನಿಂಗ್ ಸರಹದ್ದಿನಿಂದ ಹೊರಗೆ ಕೊಂಡುಹೋಗಬಹುದು. ಬೆಳೆ ಕಟಾವಿನ ಕಾಲದಲ್ಲಿ ಕೂಲಿಯವರಿಗೆ ಸಂಬಳವಾಗಿ ಬತ್ತವನ್ನು ಬಟವಾಡೆ ಮಾಡಿದಲ್ಲಿ ಅಂಥಾ ಲೆಕ್ಕವನ್ನು ಸರಿಯಾಗಿ ಕಾಣಿಸಿ ಸಂಬಂಧಪಟ್ಟ ರೇಶನಿಂಗ್ ವ ಅಸಿಸ್ಟೆಂಟ್ ರೇಶನಿಂಗ್ ಆಫೀಸರರಿಗೆ ಕೊಡತಕ್ಕದ್ದು.

ರೆಗ್ಯುಲೇಶನ್ 54:— 48ರಿಂದ 52ರವರೆಗಿನ ರೆಗ್ಯುಲೇಶನ್‌ಗಳಲ್ಲಿ ಪ್ರಸ್ತಾಪಿಸಿದ್ದಾಗ್ಯೂ, ಪಕ್ಕನೆ ಮಳೆ ಬರುವ ಸಂದರ್ಭ ವ ಇತರ ಅವಗಡದ ಸಂದರ್ಭಗಳಲ್ಲಿ, ರೇಶನಿಂಗ್ ಯಾ ಅಸಿಸ್ಟೆಂಟ್ ರೇಶನಿಂಗ್ ಆಫೀಸರಿಗೆ ನೋಟೀಸು ಕೊಡದೇನೇ ಬೆಳೆ ಕಟಾವು ಮಾಡುವುದಲ್ಲದೆ ಬೆಳೆ ಕಟಾವು ಮಾಡಿದ ಸಂಗತಿಯನ್ನು ತಿಳುಹಿಸಿ ಬೆಳೆ ಕಟಾವು ಮಾಡಿದ ಪೈಸಲು ಎಷ್ಟು ಎಂತ ತಿಳುಹಿಸಬೇಕು.

ರೆಗ್ಯುಲೇಶನ್ 55:—ರೇಶನಿಂಗ್ ಸರಹದ್ದಿನಲ್ಲಿ ಭೂಮಿ ಇರತಕ್ಕ ಜಮೀನುದಾರರು ರೇಶನಿಂಗ್ ಸರಹದ್ದಿನ ಒಳಗೇನೇ ವಾಸ್ತವ್ಯನಿಂದು ಇರುವುದಾದರೆ ಕಟಾವು ಮಾಡಿದ ಬೆಳೆಯ ಪೈಸಲನ್ನು ಈ ಕೆಳಗೆ ಕಾಣಿಸಿದಂತೆ ಇಟ್ಟುಕೊಳ್ಳುವರೆ ಅವರಿಗೆ ಅನುಮತಿ ಕೊಡಲಾದೀತು.

1. ರೇಶನಿಂಗ್ ಆಫೀಸರು ಕೊಟ್ಟ ಕಾರ್ಡಿನ ಪ್ರಕಾರ ಸದರಿ ಜಮೀನುದಾರ ವ ಅವರ ಮನೆಯಲ್ಲಿ ವಾಸಿಸುವ ಕುಟುಂಬಸ್ತರು ವ ಸೇವಕರು ಇವರಿಗೆ ಬೇಕಾದ ಒಂದು ವರುಷದ ಅಕ್ಕಿ. 2, ಎರಡನೇ ಸಾಗುವಳಿಗೆ ಬೇಕಾಗುವಷ್ಟು ಭತ್ತದ ಬೀಜ ಮತ್ತು 3, ಎರಡನೇ ಬೇಸಾಯದ ತನಕ ಬೇಸಾಯ ಕೂಲಿ ವ ಮಜೂರಿ ಬಗ್ಗೆ ಬೇಕಾಗುವಷ್ಟು ಅಕ್ಕಿ ಯಾ ಭತ್ತ.

ರೆಗ್ಯುಲೇಶನ್ 56-57: ರೆಗ್ಯುಲೇಶನ್ 55ರಲ್ಲಿ ಹೇಳಿದಂತೆ ಜಮೀನುದಾರರು ಇಟ್ಟುಕೊಳ್ಳಬಹುದಾದ ಅಕ್ಕಿ ಯಾ ಭತ್ತ ಕಳೆದು ಉಳಿದ ಪೈಸಲನ್ನು ರೇಶನಿಂಗ್ ಯಾ ಅಸಿಸ್ಟೆಂಟ್ ರೇಶನಿಂಗ್ ಆಫೀಸರರವರ ಅನುಜ್ಞೆಯಂತೆ ವಿಲೆ ಮಾಡತಕ್ಕದ್ದು.

ಇನ್ನು ಹೆಚ್ಚಿಗೆ ವಿವರವನ್ನು ಜಮೀನುದಾರರು ವ ರೈತರು ಸಮೀಪದ ರೇಶನಿಂಗ್ ವ ಸರ್ಕಲ್ ಆಫೀಸಿನಿಂದ ತಿಳಿಯಬಹುದು.

ಕೆ. ಕೃಷ್ಣಯ್ಯ
ಜಿಲ್ಲಾ ರೇಶನಿಂಗ್ ಆಫೀಸರ್ ದ. ಕ.

ಜಿಲ್ಲಾ ಫುಡ್ ಕೌನ್ಸಿಲಿನ ನಿರ್ಧಾರ

ಜಿಲ್ಲಾ ಕಲೆಕ್ಟರ್ ರಾವ್ ಸಾಹೆಬ್ ಪಿ। ರಾಮದಾಸರ ಅಧ್ಯಕ್ಷತೆಯಲ್ಲಿ ಜಿಲ್ಲಾ ಫುಡ ಕೌನ್ಸಿಲಿನ ಸಭೆ ಸೇರಿದಾಗ ಜಿಲ್ಲೆಯ ಆಹಾರ ಪರಿಸ್ಥಿತಿಯ ಕುರಿತು ದೀರ್ಘ ಚರ್ಚೆ ನಡೆಯಿತು. ಕೌನ್ಸಿಲಿನ ಸಭೆಯ ಅನಂತರ ಆದ ಅಕ್ಕಿಯ ಸಂಗ್ರಹವು ಏನೂ ತೃಪ್ತಿಕರವಲ್ಲ; ಕಾರ್ಕಳ ಮತ್ತು ಕುಂದಾಪುರ ತಾಲೂಕುಗಳಲ್ಲಿ ಶ್ರೀ ಡಿ। ಯ.ಸ್। ಪಿ। ಯವರೂ ಜತೆಯಾಗಿ ನಡೆಸಿದ 'ಧಾಳಿ'ಗಳಿಂದ ಹೆಚ್ಚಿನ ಪ್ರಯೋಜನವಾಗಿಲ್ಲ, ಉಳಿತಾಯವಿರುವ ಅಕ್ಕಿಯನ್ನೆಲ್ಲ ಜಮೀನ್ದಾರರು ಬಿಟ್ಟುಕೊಡುವಂತೆ ಭೂಮಾಲಿಕರ ಸಂಘದವರು ಯತ್ನಿಸಬೇಕು ಎಂದು ಕಲೆಕ್ಟರರು ಹೇಳಿದರು. ಆಗಸ್ಟ್ ತಿಂಗಳೊಳಗೆ ಹಿಂದಿನ ಬಾಕಿ ಒಪ್ಪಿಸಿದರೆ ಹಳೆಯ ಅಪರಾಧಗಳನ್ನು ಮನ್ನಿಸಲಾಗುವುದು ಎಂದು ತಾವು ಮಾಡಿದ ಆಜ್ಞೆಯನ್ನು ಅವರು ವಿವರಿಸಿ ಜಿಲ್ಲೆಯಲ್ಲೀಗ ಎಷ್ಟೆಷ್ಟು ಧಾನ್ಯಗಳಿವೆ? ಚಿಂಗಲ್ಪಟ್ಟಿನಿಂದ ೨೦೦೦ಟನ್ ರಾಗಿಯನ್ನು ಪೂರ್ಣ ತರಿಸಲು ಆಗುತ್ತಿರುವ ಯತ್ನ, ಇನ್ನೂ ಹೆಚ್ಚು ಗೋಧಿಯನ್ನು ತರಿಸುವ ಸಾಧ್ಯಾಸಾಧ್ಯತೆ— ಇವನ್ನು ಸ್ಪಷ್ಟಪಡಿಸಿದರು.

ಕಾಸರಗೋಡು ತಾಲೂಕಿನಲ್ಲಿ ಮುಂದಿನ ಬೆಳೆಯನ್ನು ಸಂಗ್ರಹಿಸಲು, ಅಲ್ಲಿ ಹೊರಗೆ ಅಕ್ಕಿ ಕಳ್ಳಮಾರ್ಗವಾಗಿ ಹೋಗದಂತೆ ಮಾಡಲು, ಕೈಕೊಂಡಿರುವ ಯೋಜನೆಯನ್ನು ಕಲೆಕ್ಟರರು ಮುಂದಿಟ್ಟರು. ಸಭೆಯು ಅದಕ್ಕೆ ಒಪ್ಪಿಗೆ ಇತ್ತಿತಾದರೂ ಅಲ್ಲಲ್ಲಿ ಸ್ವಲ್ಪ ಬದಲಾವಣೆಗಳನ್ನು ಸೂಚಿಸಿತು.

ಅನಂತರ ಶ್ರೀ। ಜಿನರಾಜ ಹೆಗ್ಡೆ, ಎಂ। ಎಲ್। ಎ। (ಕೇಂದ್ರ)ಅವರು ಮುಂದಿಟ್ಟ "ಈಗ ಇರುವ ದಾಸ್ತಾನು ಡಿಸೆಂಬರ ೧೫ರ ತನಕ ಜಿಲ್ಲೆಯ ಉಪಯೋಗಕ್ಕೆ ಸಾಕಾಗದು. ಅಸ್ವರೊಳಗೆ ಬೇರೆ ಅಕ್ಕಿ ಎಲ್ಲಿಂದಲೂ ಸಿಗುವಂತಿಲ್ಲ. ಆದುದರಿಂದ, ಅಕ್ಕಿ ಏನೂ ಇಲ್ಲದ ಪರಿಸ್ಥಿತಿಯೊದಗದಂತೆ ಮಾಡುವುದಕ್ಕಾಗಿ ಕಾಸರಗೋಡು ತಾಲೂಕಿಗೆ ಕೊಡಲು ಬಾಕಿಯಾಗಿರುವ ಅಕ್ಕಿಯನ್ನು ಮಂಗಳೂರಿನ ಉಪಯೋಗಕ್ಕಾಗಿ ಕಳುಹಬೇಕು (ಹಿಂದೆ ಮಂಗಳೂರಿನಿಂದ ಕಾಸರಗೋಡಿಗೆ ಅಕ್ಕಿ ಕಡಕೊಡಲಾಗಿತ್ತು) ಹಸುಗೆ ಸ್ಥಳಗಳಲ್ಲದ ಗ್ರಾಮಾಂತರದ ಪ್ರದೇಶಗಳಿಗಾಗಿ, ಕೊಡಲೊಪ್ಪಿದ ೩೫೦೦ ಟನ್ನುಗಳನ್ನು ಉತ್ತರ ಆರ್ಕಟಿನಿಂದ ಪೂರ್ಣ ತರಿಸಬೇಕು. ಇಷ್ಟು ಅಕ್ಕಿ ಸೆಪ್ಟೆಂಬರ್ ೧೫ರೊಳಗೆ ಜಿಲ್ಲೆಗೆ ಬಂದು ತಲುಪಬೇಕು, ಅಲ್ಲಿಗೆ ಸೆಪ್ಟೆಂಬರ್ ೧೫ರಿಂದ ಡಿಶೆಂಬರ ೧೫ರ ತನಕ ಮಂಗಳೂರು ಹಸುಗೆ ಪ್ರದೇಶದ ಉಪಯೋಗಕ್ಕಾಗಿ ೩೭೫೦ ಟನ್ ಅಕ್ಕಿಯನ್ನು ಸೆಪ್ಟೆಂಬರ ೧೫ರೊಳಗೆ ಕಳುಹಿಕೊಡಬೇಕು" ಎಂಬರ್ಥದ ನಿರ್ಣಯ ಸ್ವೀಕರಿಸಲ್ಪಟ್ಟಿತು.

ಮುಂದಿನ ಬೆಳೆಯನ್ನು ಸಂಗ್ರಹಿಸುವ ಕಾರ್ಯವಿಧಾನಗಳ ಕುರಿತೂ ಚರ್ಚೆಯಾಯಿತು. ಅಕ್ಕಿ ಬತ್ತಗಳ ಬೆಲೆ ಈಗಿನದೇ ಇರುವುದು; ಆದರೆ ತಾವಾಗಿ ತಂದೊಪ್ಪಿಸದೆ ಸ್ವಾಧೀನಪಡಿಸಿಕೊಳ್ಳಬೇಕಾಗಿ ಬಂದರೆ ಅಕ್ಕಿಯ ಬೆಲೆ ಮುಡಿಗೆ ೨ ರೂ. ಕಡಿಮೆ ಇರಬೇಕು ಎಂದು ಕೌನ್ಸಿಲು ನಿರ್ಧರಿಸಿತು.

ಕೊಡಗಿನಿಂದ ತೋಟದ ಕೂಲಿಗಳು ಹಿಂದಿರುಗುವಾಗ ಅವರು ಈ ಜಿಲ್ಲೆಯಲ್ಲಿರುವ ತಮ್ಮ ಊರುಗಳನ್ನು ಸೇರುವ ವರೆಗಿನ ವೆಚ್ಚಕ್ಕೆ ಬೇಕಾದ ಅಕ್ಕಿಯನ್ನು ಕೊಡಗು ಸರಕಾರವು ಕೊಡಬೇಕು ಎಂದು ವಿನಂತಿ ಮಾಡುವ ಡಾ. ಸಾ. ರಂಗನಾಥ ಪೂಂಜರ ನಿರ್ಣಯವೂ ಸ್ವೀಕರಿಸಲ್ಪಟ್ಟಿತು.

"ಜಿಲ್ಲೆಯಲ್ಲಿ ಜಾನುವಾರುಗಳ ಬರಗಾಲವಿದೆ. ಈ ಸಲ ಕುಳುಕುಂದ ಮತ್ತು ನೀತಾನದಿ ಜಾತ್ರೆಗಳಿಗೆ ಹೆಚ್ಚು ಸಂಖ್ಯೆಯಲ್ಲಿ ಜಾನುವಾರುಗಳು ಬರುವಂತೆ ಸವ್ಯಕ್ತಿಸುವುದಕ್ಕಾಗಿ ಮದ್ರಾಸ್ ಸರಕಾರವು ಮೈಸೂರು ಸರಕಾರಕ್ಕೆ ಬರೆಯಬೇಕು" ಎಂದು ಕೇಳುವ ಶ್ರೀ ಎ. ಬಿ. ಶೆಟ್ಟರ ನಿರ್ಣಯವನ್ನೂ ಸಭೆಯು ಸ್ವೀಕರಿಸಿತು.

ಚಿಮಿಣಿ ಎಣ್ಣೆ—ಯನ್ನು ಅಡಗಿಸಿ ಇಟ್ಟಿದ್ದರೆಂಬ ಸಂಶಯದ ಮೇಲೆ ಪೋಲೀಸರು ತಾ. ೭ರಂದು ರಾತ್ರಿ ಮಣ್ಣಗುಡ್ಡೆಯಲ್ಲಿರುವ ಒಂದು ಮನೆಯನ್ನು ಜಪ್ತಿ ಮಾಡಿದರು. ಮೂರು ಡಬ್ಬಿ ಎಣ್ಣೆ ದೊರಕಿತು. ಮನೆಯವರೆಲ್ಲ ಬಂಧಿಸಲ್ಪಟ್ಟರಾದರೂ ಸ್ವಲ್ಪ ಸಮಯದಲ್ಲೇ ಬಿಡಲ್ಪಟ್ಟರು.

ವಿಶ್ವಾಸ ವಂಚನೆಯ ಆರೋಪದ ಮೇಲೆ ಉರ್ವ, ಕಿನ್ನಿಗೋಳಿ, ಕದ್ರಿ ದೇವಸ್ಥಾನ ಮಾರ್ಗದ ಸಹಕಾರಿ ಸ್ಟೋರುಗಳ, ಬಂದರದ ದ. ಕ. ಜಿಲ್ಲಾ ಕೃಷಿಕರ ಸಹಕಾರಿ ರಖಂ ಸೊಸೈಟಿಯ ಹಿಂದಿನ ಕೆಲ ನೌಕರರ ವಿರುದ್ಧ ಮೊಕದ್ದಮೆಗಳು ಹೂಡಲ್ಪಟ್ಟಿವೆ. ವಿಚಾರಣೆ ಸ್ಟೇಶನರಿ ಸಬ್ ಮ್ಯಾಜಿಸ್ಟ್ರೇಟರೆದುರು ನಡೆಯುವುದು.

ಸೈಕಲ್ ಕಾನೂನಿನನ್ವಯ ಶ್ರೀ। ಮುಂಡ್ಕೂರು ಮಾಧವ ಆಚಾರ್ಯ ಕಾಮತರನ್ನು ಸೈಕಲ್ ಟಾಯರ್ ಟ್ಯೂಬುಗಳ ಬೆಲೆಯ ಪಟ್ಟಿಯನ್ನು ತೂಗಹಾಕಲಿಲ್ಲ ಎಂಬ ಅಪಾದನೆಯ ಮೇಲೆ ಸ್ಟೇಶನರಿ ಸಬ್ ಮ್ಯಾಜಿಸ್ಟ್ರೇಟರು ರೂ. ೨೦೦ ಜುಲ್ಮಾನೆ ಇಲ್ಲವೆ ೪ ತಿಂಗಳ ಸಜೆಗೆ ಗುರಿಪಡಿಸಿದರು.

ಕಾಗದದ ತುಟ್ಟಿ:—ಕಮರ್ಶಿಯಲ್ ಟೇಕ್ಸ್ ಆಫೀಸರರು ಪ್ರಕಟಣೆಯೊಂದನ್ನು ಹೊರಡಿಸುತ್ತ, 'ಕಾಗದದ ಅಭಾವವೀಗ ಬಲು ತೀವ್ರವಾಗಿದೆ. ಪ್ರತಿಯೊಂದು ಸಂಸ್ಥೆ ಸಾರ್ವಜನಿಕರೂ ಕಾಗದದ ಉಪಯೋಗದಲ್ಲಿ ಅತ್ಯಂತ ಮಿತವಾಗಿ ಉಪಯೋಗಿಸಬೇಕು ಶಾಲೆ ಮೊದಲಾದ ವಿದ್ಯಾಸಂಸ್ಥೆಗಳೂ ಎಕ್ಸರ್‌ಸೈಜ್ ಪುಸ್ತಕ, ಪರೀಕ್ಷೆಯ ಕಾಗದಗಳಲ್ಲಿಯೂ ಅತಿ ಮಿತವ್ಯಯವನ್ನೂ ಆಚರಣೆಗೆ ತರಬೇಕಾಗಿದೆ. ಹೋಲ್‌ಸೇಲಿನಿಂದ ಕಾಗದಗಳನ್ನು ತರಿಸಿಕೊಳ್ಳುವವರೆಲ್ಲರೂ ಗವರ್ನ್ಮೆಂಟ್ ಆಫೀಸಿನಿಂದ ಪರವಾನಿಗೆಯನ್ನು ಸ್ವಾಧೀನಪಡಿಸಿಕೊಳ್ಳುವ ಮೊದಲು ರೈಟ್ಟ ರಶೀದಿಯನ್ನು ಕಮರ್ಶಿಯಲ್ ಟೇಕ್ಸ್ ಆಫೀಸರರ ಮುಖಾಂತರ ಕಲೆಕ್ಟರರಿಗೆ ಕಳುಹಿಸಿ ಅವರ ಸಹಿಯನ್ನು ಪಡಕೊಳ್ಳಬೇಕು' ಎಂದಿದ್ದಾರೆ.

ಜಿಲ್ಲಾ ಬೋರ್ಡಿನ ವಿಶೇಷ ಸಭೆಯೊಂದು ತಾ. ೧೮ರಂದು ಬೋರ್ಡಿನ ಕಟ್ಟಡದಲ್ಲಿ ಜರಗುವುದು.

ಉಡುಪಿ

ಕಸ್ತೂರಿ ಬಾ ನಿಧಿ.

ಶ್ರೀ ಪಿ. ಲಕ್ಷ್ಮೀನಾರಾಯಣ ನಾಯ್ಕರ ಮೂಲಕ ವಸೂಲಾದುದು.

ಕೊಟ್ಟಿಕಾರ್ ಬಂಧುಗಳು ಮತ್ತು ಸಿಬಂದಿ ರೂ. 62. ಪ್ರೋಸರ್ ರಾಘವೇಂದ್ರ ಕಾಮತ್ 51, ಶ್ರೀ ಗಜಾನನ ಫ್ಲೋರ್ ಮಿಲ್ಸ್ 50. ಪಳ್ಳಿ ಪದ್ಮನಾಭ ನಾಯಕ್ 50, ಕೆ. ರಮಾನಾಥ ವಾಮನ್ ಕಾಮತ್ 50, ಶ್ರೀ ವಿಠ್ಠಲ ಆಯಿಲ್ ಮಿಲ್ಸ್ 25, ಕೆ. ಚರ್ಡಪ್ಪ ಶಾನುಭಾಗ್ ಎಂಡ್ ಸನ್ಸ್ 25, ಎ. ಶಿವರಾಮ ಹೆಗ್ಡೆ 20, ವೈ. ಮುದ್ದು ಶೆಟ್ಟಿ 15, ಕೆ. ಎಂ. ವಿಠ್ಠಲ ಶೆಟ್ಟಿ 10, ಇಂದಿರಾ ಬಾಯಿ 10, ಡಾ। ಬಿ. ಕೆ. ಬೇಕಲ್ 10, ಅಣ್ಣಯ್ಯ ಹೆಗ್ಡೆ 10, ಕೆ. ದಾಸ ಹೆಗ್ಡೆ 10, ಕೆ. ಮಣ್ಣ ಶೆಟ್ಟಿ 10, ಕೆ ಕಾಂತಪ್ಪ 10. ಡಾ। ರಾಮಣ್ಣ ಶೆಟ್ಟಿ 10, ಕೆ. ರಮಾನಾಥ ಕಾಮತ್ 5, ದಾಕ್ಟರ್. ಕೆ. ಜಿ. ಕಿಣಿ 5, ಜಯಲಕ್ಷ್ಮಿ ಸ್ಟೋರ್ಸ್ 5, ಕೆ. ತೇಜಪ್ಪ ಹೆಗ್ಡೆ 5, ಕೆ. ಹಿರಣ್ಯ ಶೆಟ್ಟಿ 5, ಕೆ. ರಂಗ 5, ಎಂ. ವ ಹಾಬಲ ಶೆಟ್ಟಿ 5, ಅಂತಯ್ಯ ಶೆಟ್ಟಿ 5, ಬಿ. ಎಂ. ಎಲಿ ಸ್ಕ್ವೆಲ್ 5, ಎಂ. ಭೋಜಹೆಗ್ಡೆ 5, ಟಿ. ಎಂ. ಸೋನ್ಸ್ 5,

ತೋಟಗಾರರಿಗೆ ಸೂಚನೆ:—ತೆಂಗಿನ ಮರಗಳಿಗೂ, ಕಸಿಮಾವು, ಬಾಳೆ, ಚಿಕ್ಕು ಮೊದಲಾದ ಫಲವೃಕ್ಷಗಳಿಗೂ ಗೊಬ್ಬರ ಹಾಕುವ ಸಮಯವಿದು. ಸಪ್ತಂಬರ-ಅಕ್ಟೋಬರ ತಿಂಗಳುಗಳೊಳಗೆ ತೋಟವನ್ನು ಒಂದು ಸಾರಿ ಅಗತೆಮಾಡಿ ಹಾಕುವ ಗೊಬ್ಬರವನ್ನು ಹಾಕಿ ತೀರಿಸಬೇಕು. ವಿಶೇಷ ಫಲವನ್ನೀಯಲು ಸರಿಯಾದ ಗೊಬ್ಬರ ಹಾಕುವುದು ಅಗತ್ಯ. ಇದಕ್ಕಾಗಿ ಬೇಕಾಗುವ, ಅಮೋನಿಯಮ್ ಸಲ್ಫೇಟ್ ನೆಲಗಡಲೆ ಹಿಂಡಿ ಮತ್ತು ಎಲುಬಿನಹುಡಿ ಗೊಬ್ಬರ, ಈಗ ತಾನೆ ನಮ್ಮ ಆಫಿಸಿನಲ್ಲಿ ತಯಾರಾಗಿವೆ. ಫಲನೀಯುವ ದೊಡ್ಡ ತೆಂಗಿನ ಮರಗಳಿಗೂ ಫಲವೃಕ್ಷಗಳಿಗೂ ಒಂದೊಂದಕ್ಕೆ ಒಂದು ದೊಡ್ಡ ಹೆಡಿಗೆ ಜಾನುವಾರು (ಹಟ್ಟಿಗೊಬ್ಬರ) ಗೊಬ್ಬರ, 20ರಾತ್ಲು ಬೂದಿಹಾಕಿದ ನಂತರ, ಮರ ಒಂದಕ್ಕೆ 2ರಾತ್ಲು ಅಮೋನಿಯಮ್ ಸಲ್ಫೇಟು, 3ರಾತ್ಲು ಹಿಂಡಿಮತ್ತು 1ರಾತ್ಲು ಎಲುಬಿನ ಹುಡಿ ಬೆರಸಿ, ಮರದ ಸುತ್ತಲೂ ಚೆಲ್ಲಿ ಮಣ್ಣಿನಿಂದ ಕೊಚ್ಚಿ ಮುಚ್ಚಬೇಕು. ವಿಶೇಷ ಅನುಭವಕ್ಕೆ ನಮ್ಮ ಉಡ್ಪಿ ಆಫೀಸಿನಲ್ಲಿ ವಿಚಾರಿಸಿ ಸಮಯ ಕಳೆಯದೆ ಕೂಡಲೇ ನಿಮ್ಮ ನಿಮ್ಮ ತೋಟಕ್ಕೆ ಯುಕ್ತವಾದ ಗೊಬ್ಬರವನ್ನು ತಕ್ಕ ಸಮಯಕ್ಕೆ ಪಡೆದು ಹೆಚ್ಚಿನ ಲಾಭ ಪಡೆಯಿರಿ, ಎಂದು ಉಡುಪಿ ಎಗ್ರಿಕಲ್ಚರಲ್ ಡಿಮೋನ್ಸ್ಟ್ರೇಟರ್ ಶ್ರೀ. ಕೆ. ಸಂಜೀವ ಶೆಟ್ಟರು ಬರೆಯುತ್ತಾರೆ.

ಶಿರ್ವ—ದ. ಕ. ಜಿಲ್ಲಾ ಬಂಟರ ಯಾನೆ ನಾಡವರ ವಿದ್ಯಾವರ್ಧಕ ಸಂಘವು ಶಿರ್ವದಲ್ಲಿ ತಾ. 5-9-44ರಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿತು. ಸದ್ಯನೇ ಈ ಸಂಘವು ತನ್ನ ಉದ್ದೇಶಗಳನ್ನು ಒಂದೊಂದಾಗಿ ಕಾರ್ಯರೂಪಕ್ಕೆ ತರಲಿರುವುದರಿಂದ ಎಲ್ಲರೂ ಪ್ರೋತ್ಸಾಹಿಸಬೇಕಾಗಿ ವಿನಂತಿ.

ಮೂಲ್ಕಿ—ಬಿಲ್ಲವ ಸಮಾಜ ಸೇವಾ ಸಂಘದಲ್ಲಿ ಇದೇ ತಾ. 2ರಲ್ಲು ಬಹು ವಿಜೃಂಭಣೆಯಿಂದ ಬ್ರಹ್ಮಶ್ರೀ ನಾರಾಯಣಗುರು ದಿನಾಚರಣೆಯನ್ನು ಆಚರಿಸಲ್ಪಟ್ಟಿತು. ಸಮಾರಂಭಕ್ಕೆ ಊರ ಪರವೂರ ಮಹನೀಯರು ತುಂಬಾ ನೆರೆದಿದ್ದರು.

ನಡಿಯುವ ಚಿತ್ರ ಮಿನರ್ವಾದವರ ಪ್ರಾರ್ಥನಾ

ತಾ. **16—9—44**ರಿಂದ

ಭಾರತ ಮೂವಿಟೋನಿನವರ ಅತ್ಯದ್ಭುತ ಸಾಹಸ ಚಿತ್ರ

ನಡಿಯುವ ಭೂತ

(ಭಾಗ್‌ತಾ ಭೂತ್)

ಬ್ರಜರಾಣಿ ಮತ್ತು ವಸಂತ ಪಹಿಲ್‌ವಾನ್

ಬರುವ ಚಿತ್ರಗಳು—ರಣಜಿತ್-ಚಾಂದನಿ, ಭೇಟಿ, ಮತ್ತು ಕೈದಿ.

ನಿರೀಕ್ಷಿಸಿರಿ —ಕನ್ನಡ 'ವಾಣಿ'

CHAMPAE'S
Snow & Castrex
(Sole Distributers for (India.)
Sukhananda Stores
Santhekatte, UDIPI, S. K.

ಗಾಂಧಿ—ಜಿನ್ನ ಸಂಭಾಷಣೆ

(೨ನೇ ಪುಟದಿಂದ ಮುಂದುವರಿದುದು)

●

ದೇ ಒಂದು ಮಿನಿಟು' ಎಂದರು ಫೋಟೋಗ್ರಾಫರರು. ಮಿ. ಜಿನ್ನರದಕ್ಕೆ ಸಮ್ಮತಿಸಿದುದನ್ನು ಕಂಡು "ನೀವು ಒಪ್ಪಿಕೊಳ್ಳುವಂತೆ ಕಾಣುತ್ತಿದೆ" ಎಂದು ಗಾಂಧಿಜೀಯ ಮಾರ್ಮಿಕ ಮಾತು.

ಮೂರು ಘಂಟೆ ಸಂಭಾಷಣೆ

ಕೂಡಲೇ ಇಬ್ಬರು ಪ್ರಮುಖರೂ ಬಂಗಲೆಯ ಮೊದಲನೇ ಅಂತಸ್ತಿನ ಒಳಹೊಕ್ಕು ಅದೃಶ್ಯರಾದರು. ಅಲ್ಲಿ 3 ಘಂಟೆ 10 ಮಿನಿಟು ಗುಪ್ತ ಸಂಭಾಷಣೆ ನಡಿಸಿ ಅಪರಾಹ್ನ 7-15ಕ್ಕೆ ಸರಿಯಾಗಿ ಪುನಃ ಕಾಣಿಸಿಕೊಂಡರು. ಪ್ರಮುಖರಿಬ್ಬರೂ ಆಯಾಸಗೊಂಡಿದ್ದರಾದರೂ ಎರಡು ಮುಖಗಳೂ ನಗುಸೂಸುತ್ತಿದ್ದುವು. ಆ ವರೆಗೂ ಅಲ್ಲಿಯೇ ಅತ್ತಿಂದಿತ್ತ ತಿರುಗುತ್ತಾ, ಏನೇನೋ ಊಹಿಸುತ್ತಾ, ಆತುರ ರೋಗಪೀಡಿತರಾಗಿ, ಬಂಗಲೆಯ ಗೋಡೆಸಂದುಗಳ ಪರಿಚಯಮಾಡಿಕೊಳ್ಳುತಿದ್ದ 75ಮಂದಿ ಬಾತ್ಮೀದಾರರು ಹಾಗೂ ಫೋಟೋಗ್ರಾಫರರು ಪ್ರಮುಖರನ್ನು ಆವೇಗದೊಡನೆ ಸುತ್ತುಗಟ್ಟಿದರು; ಕೆಮರಗಳು ಕೆಲಸ ಮಾಡಹತ್ತಿದವು. ಈ ಕೋಟೆಯೊಳಗಡೆ ನಿಂತುಕೊಂಡು ಮಿ. ಜಿನ್ನರೆಂದರು: "ನಾವು 3 ತಾಸುಗಳ ತನಕ ಮೈತ್ರಿಪೂರ್ವಕ ಮನಬಿಚ್ಚಿ ಮಾತಾಡಿಕೊಂಡೆವು. ಸೋಮವಾರ ಅಪರಾಹ್ನ 5-30ಕ್ಕೆ ಈ ಮಾತುಕತೆಯನ್ನು ಪುನಃ ಮುಂದುವರಿಸಲಿರುವೆವು. ನಾಳೆ ರಮ್ಜಾನಿನ 21ನೇ ದಿನವಾಗಿದ್ದು ಎಲ್ಲಾ ಮುಸಲ್ಮಾನರೂ ಆದನ್ನಾಚರಿಸಬೇಕಾದುದರಿಂದ, ನಾಳೆಯ ಮಾತುಕತೆಯನ್ನು ನಿಲ್ಲಿಸುವ ಉಪಕಾರಮಾಡಬೇಕೆಂದು ನಾನು ಗಾಂಧಿಯವರನ್ನು ವಿಜ್ಞಾಪಿಸಿಕೊಂಡೆ". 'ಉಪಕಾರವೆನ್ನುವಿರೇಕೆ?'—ಎಂದು ಗಾಂಧಿಜೀ ನಗುತ್ತಾ ಜನರ ಮಾತಿಗಸ್ತ ಬಂದರು. ಕಾರೊಂದು ಕಾಯುತ್ತಿದ್ದರೂ ಗಾಂಧಿಜೀ ಬಿರ್ಲಾ ಗೃಹಕ್ಕಿರುವ ಎರಡು ಫರ್ಲಾಂಗು ದೂರಕ್ಕೆ ನಡಕೊಂಡೇ ಹೊರಟಾಗ ಪತ್ರಿಕಾಪ್ರತಿನಿಧಿಗಳೂ ಫೋಟೋಗ್ರಾಫರರೂ ಅವರ ಬೆನ್ನು ಹಿಡಿದು ಹೋದರು. ಬಿರ್ಲಾಗೃಹದಲ್ಲಿ ರಾಜಾಜೀ ಮೊದಲಾದ ಪ್ರಮುಖರು ಆತುರದಿಂದ ಕಾಯುತ್ತಿದ್ದರು. 7-30ರ ರಾತ್ರಿ ಪ್ರಾರ್ಥನೆಗೆ ಸರಿಯಾಗಿ ಗಾಂಧಿಜೀ ಬಿರ್ಲಾಗೃಹ ಮುಟ್ಟಿದರು.

ಆಸೆಗಾಸ್ಪದವಿದೆ.

ಮರುದಿನವೇ ವಾರ್ಧಾ ಪ್ರಯಾಣಮಾಡಬೇಕೆಂದಿದ್ದ ತನ್ನ ಕಾರ್ಯಕ್ರಮವನ್ನು ಗಾಂಧಿಜೀ ರದ್ದುಗೊಳಿಸಿ ಮತ್ತೊಮ್ಮೆ ಸಂಭಾಷಣೆಗಾಗಿ ನಿಂತುದು—ಇಬ್ಬರು ಪ್ರಮುಖರೂ ಮೊದಲ ಸಂಭಾಷಣೆಯ ನಂತರ ಅತ್ಯಂತ ಹರ್ಷದಿಂದಿದ್ದುದು—ಇವುಗಳಿಂದಾಗಿ ಬಿರ್ಲಾ ಜಿನ್ನಾ ಗೃಹಗಳೆರಡರಲ್ಲಿಯೂ ಸಂಧಾನ ಸಫಲತೆಯ ಆಶೋದಯವೆದ್ದಿದೆ. ಆದರೆ ಸಂಭಾಷಣೆಯ ಅನುಭವವೇನೆಂಬುದು ಆವೆರಡು ಹೃದಯಗಳಿಗೆ ಮಾತ್ರ ಗೊತ್ತಲ್ಲದೆ ಬೇರಾರಿಗೂ ಏನೊಂದೂ ಸುಳುಹುದೊರೆತಿಲ್ಲ. ಮಾತುಕತೆಯ ವೇಳೆಯಲ್ಲಿ ಬಹಳ ಮಾತಾಡಿದವರು ಮಿ. ಜಿನ್ನರಂತೆ. ಅವರ ವಾದವನ್ನು ಮೌನವಾಗಿ ಗ್ರಹಿಸಿಕೊಳ್ಳುವುದರಲ್ಲೇ ಗಾಂಧಿಜೀಯ ಹೆಚ್ಚಿನ ಸಮಯ ಕಳೆಯಿತಂತೆ. ರಾಜಾಜೀ ಸೂಚನೆಗಳನ್ನು ಗಾಂಧಿಜೀ ಸವಿವರವಾಗಿ ಜಿನ್ನರಿಗೆ ಮುಂದಿಟ್ಟು ಮಾಡಿದರಂತೆ. ಮಧ್ಯದಲ್ಲಿ ದೊರೆತ ಎರಡು ದಿನಗಳ ಅವಧಿಯಲ್ಲಿ ಇಬ್ಬರು ಪ್ರಮುಖರೂ ತಮ್ಮ ಅನುಯಾಯಿಗಳೊಡನೆ ಮಾತಾಡಿಕೊಂಡು, ನಿರ್ಣಯಾತ್ಮಕ ಬುದ್ಧಿಯಿಂದ ದ್ವಿತೀಯ ಸಂಭಾಷಣೆ ಹೂಡುವರೆಂದು ಊಹಿಸಲಾಗಿದೆ. ಸಂಭಾಷಣೆಯ ಸಮಯ ಕಾವಲಿನ ಸ್ಪೆಶಲ್ ಪೋಲಿಸ್ ಕೋಟೆಯೊಳಗಡೆ ಮಲಬಾರ್ ಹಿಲ್‌ವಲಯವು ಶಾಂತವಾಗಿದ್ದರೂ ಒಂದು ವಿಶೇಷ ಘಟನೆ ನಡೆದಿದ್ದಿತ್ತು. 8ಮಂದಿ ಪಾಕಿಸ್ತಾನ್ ವಿರೋಧಿ ಸಿಖ್ಖರು ಪೋಲಿಸು ಕೋಟೆಯೊಡೆದು ಒಳನುಗ್ಗಿ ದಸ್ತಗಿರಿಮಾಡಲ್ಪಟ್ಟರು. ಮಾರ್ಗದಲ್ಲಿ ದಸ್ತಗಿರಿಮಾಡಲ್ಪಟ್ಟದ್ದ ಶ್ರೀ ಛಟ್ಟಿಯವರ ದೇಹ ಜಡ್ತಿ ನಡಿಸಿದಾಗ ದೊಡ್ಡ ಕಠಾರಿಯೊಂದು ದೊರಕಿತುದರಿಂದ ಅವರ ಮೇಲೆ ಶಸ್ತ್ರಕಾಯಿದೆಯನ್ವಯ ಚಾರ್ಜ್ ಹಾಕಲಾಗಿದೆ. ಬಿರ್ಲಾಗೃಹದಲ್ಲೀಗ ಗಾಂಧಿಜೀಯವರು ಕಸ್ತೂರಿಬಾ ನಿಧಿ ಮೊದಲಾದ ಇತರ ಕಾರ್ಯಕ್ರಮಗಳಲ್ಲಿ ಮಗ್ನರಾಗಿದ್ದಾರೆ. ಬೊಂಬಾಯಿ ಮಾತುಕತೆ ವಿಫಲವಾದರೆ ಗಾಂಧಿಜೀ ಸೇವಾಗ್ರಾಮಕ್ಕೆ ಮರಳದೆ ಅಹಿಂಸಾತ್ಮಕ ಸ್ವಾತಂತ್ರ್ಯೋದ್ಧರ ತಯಾರಿಗಾಗಿ ಹಳ್ಳಿಗಿಳಿಯುವ ಶಪಥತೊಟ್ಟಂತಿದೆ. ಸರಕಾರವದಕ್ಕೂ ಅಡ್ಡಬಂದರೆ ಅವರು ಮತ್ತೊಮ್ಮೆ ಜೈಲು ಸೇರುವ ನಿರೀಕ್ಷೆಯಲ್ಲಿದ್ದಾರೆ.

Read & Advertise in
NAVAYUGA

☞ ಮುಟ್ಟಾಗುವಿಕೆ ☜
ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ 'ಕುಮಾರಿ' (Govt Regd) ಪಿಲ್ಸ್ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಸರಿಯಾಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ 3/- ಕ್ಷೈಮುರಿದ ಕೇಸುಗಳಿಗೆ ರೂ.5,(ಪಿ.ಪಿ.12 ಆಣೆ ಬೇರೆಯದ) Mrs P: DEVEE, I. D. 5 (N) Tollygunge, Calcutta, ಸ್ಟಾಕಿಸ್ಟ್: ಪ್ರೊವಿನ್ಶಿಯಲ್ ಸ್ಟೋರ್ಸ್, ಮಂಗಳೂರು.


ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳಿ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಯಾಂಪೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ನೀವು ಎಂದಾದರೂ ರೈಲ್ವೇ ಪ್ಲಾಟ್‌ಫಾರಮ್ಮಿನಲ್ಲಿ ಗಾಡಿಗಾಗಿ ಕಾದು ನಿಂತಿರುವಿರಾ?



ಒಂದು ಕಾಲದಲ್ಲಿ ರೈಲ್ವೇ ಪ್ಲಾಟ್‌ಫಾರಮ್ಮುಗಳು ಅಗಲವಾಗಿಯೂ ವಿಶಾಲವಾಗಿಯೂ ಇರುತ್ತಿದ್ದವು. ನಿಮ್ಮ ಗಾಡಿಗಾಗಿ ಕಾದು ನಿಂತಿರಲು ನಿಮಗೆ ಯಥೇಚ್ಛವಾಗಿ ಸ್ಥಳವಿರುತ್ತಿತ್ತು. ಆದರೆ, ಈಗ ರೈಲ್ವೇ ಪ್ಲಾಟ್‌ಫಾರಮ್ಮುಗಳು ಪೆಟ್ಟಿಗೆಗಳಿಂದಲೂ, ಪಾರ್ಸಲುಗಳಿಂದಲೂ ತುಂಬಿರುತ್ತವೆ. ಸ್ವಲ್ಪ ಓಡಾಡಲು ಸಹ ಸ್ಥಳ ಸಿಕ್ಕುವದು ದುರ್ಲಭ. ಕೂತುಕೊಂಡು ವಿಶ್ರಮಿಸಿಕೊಳ್ಳುವ ಅನುಕೂಲತೂ ಇಲ್ಲವೇ ಇಲ್ಲ. ಒಂದುವೇಳೆ ನಿಮಗೆ ಸ್ಥಳ ಸಿಕ್ಕಿತಾದರೂ, ರೈಲ್ವೇ ನೌಕರರು ಟ್ರಾಲಿಗಳನ್ನು ತಳ್ಳಿಕೊಂಡು ಹೋಗುತ್ತಿರುವಾಗ ನಿಮ್ಮ ಕಾಲುಗಳಮೇಲೆ ಹಾಯಬಹುದು. ನಿಮಗೆ ಏನಾದರೂ ಫಲಾಹಾರದ ಸಾಮಾನುಗಳು ಬೇಕಾದರೆ, ನಿಮ್ಮ ಸಾಮಾನುಗಳನ್ನು ಬಿಟ್ಟು ಹೋಗಲು ನಿಮಗೆ ಧೈರ್ಯವಿರುವದಿಲ್ಲ. ಅವುಗಳನ್ನು ನೋಡಿಕೊಳ್ಳಲು ಕೂಲಿಯೂ ಸಿಕ್ಕುವದು ಕಷ್ಟ. ಇದರ ಜತೆಗೆ ಟಿಕೆಟ್ಟನ್ನು ಪಡೆಯುವದರಲ್ಲಿರತಕ್ಕ ತೊಂದರೆ. ಗಾಡಿಯ ಒಳಕ್ಕೆ ಪ್ರವೇಶ ದೊರೆಯುವ ಅಸಾಧ್ಯತೆ. ಇವುಗಳನ್ನು ಸೇರಿಸಿ ನೋಡಿದರೆ, ಪ್ರಯಾಣವು ಎಷ್ಟೊಂದು ಕಷ್ಟ. ಇಂತಹ ಪ್ರಯಾಣದಲ್ಲಿ ಏನೂ ಪ್ರಯೋಜನವಿಲ್ಲ. ಕಾಲವು ಪುನಃ ಯಥಾಸ್ಥಿತಿಗೆ ಬರುವವರೆಗೂ ವಿವೇಕಿಗಳಾಗಿ ಮನೆಯಲ್ಲಿಯೇ ಉಳಿಯಿರಿ. ಇದು ಒಂದೇ ಸೂಕ್ತವಾದ ಕೆಲಸವು.

ಕಡಿಮೆಯಾಗಿ ಪ್ರಯಾಣಮಾಡಿರಿ

AAA 680 KN

The Pangal Nayak Bank Limited.

(Incorporated in 1920)

Registered Office Court Road, UDIPI

Branches at— Udipi, Mangalore, Katapadi, Kanhangad, Kinnigoli and Nileshwar, South Canara District

Discounting of demand and short term negotiable instruments for approved parties, granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms acceptance of Fixed, Current, Savings Bank and Cumulative deposits and every other type of up to date Banking service is at the disposal of all the sections of the discreet public

For business proper please enquire at any one of our Offices

15th April 1944

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ, ಚಟ್ಟೆ ಬಿದ್ದಿದ್ದರ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲೆ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದು ವೃದು ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ದತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು ಮುಂದೆ ಪರ ದಿವಸ ಬೆಳಿಗ್ಗೆ ಒಂದೇ ಸಾರ ೭ ದಿವಸ ಸೇವಿಸಬೇಕು ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳಗಾಲದಲ್ಲ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜೆಂಟರು:—ಗದಗ-ಗದಗ ಫಾರ್ಮಸಿ, ಹುಬ್ಬಳ್ಳಿ-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ — ಬಾಗಲಕೋಟೆ ಫಾರ್ಮಸಿ, ಧಾರವಾಡ —ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್ ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ

Ayurveda Oushadalaya GADAG.

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ **ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ**

ದೊಡ್ಡವರಿಗೆ ೧೦ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ2ಬೊಟ್ಟು ಸಕ್ಕರೆ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು —ಡಾ. ನಾಯಕ್, ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ ಶ್ರೀ ಆರ್. ಎಸ್. ಶೆಣೈ, ರಥಬೀದಿ, ಡಾ. ಪಿ. ಆರ್ ಅಡಿಗ, ಫಾರ್ಮಸಿ, ಡಾ. ಶ್ರೀನಿವಾಸ, L. I. M., ಡಾ. ವೆಂಕಟರಾವ್, ಕೋರ್ಟ್ ರೋಡ್, ನವಭಾರತ ಬುಕ್ ಡಿಪೋ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ಪರಿಸ್ಥಿತಿಯನ್ನು ಸಿದ್ದಗೊಳಿಸಿ ತಯಾರಿಸಲ್ಪಟ್ಟ **ಅಮೋಘವಾದ ಮಧುರದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)



೮ ಔನ್ಸಿನ ೩ಬಾಟ್ಲಿಗಳ ಸೆಟ್ ಕಳಿವೆ ೪೦ದಿವಸಗಳಿಗೆ ಬರುವವು ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವದು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ,

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೫ **ಕೊಡಿಯಾಲಬೈಲು, ದ. ಕ**

— ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರಪೀಪಲ್ಲೆ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು, ರೂಪಾಯಿ 5—0—0 ಪೋಸ್ಟ ಚಾರ್ಜ ೧೦ಆಣೆ.

ಮಾಲಕರು.—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು.—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ —ಕುಂಬಾರವಾಡಿ ಸ್ಟೋರ್ಸ ದಾವಣಗೇರಿ —ದಾವಣಗೇರಿ ಪ್ರೆಸ್ಸ್ ಆರ್. ಎಲ್ ಕವಲದಾಸ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು ಬಾಟ್ಲಿ 1ರ ದರ ರೂ 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು ಬಾಟ್ಲಿ 1ರ ರೂ 1—12—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ಯಾಲೆ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕದಾದ ಔಷದಿ ರವಾನಿಸಬಹುದು, ಉಡುಪಿ ಏಜಂಟರು.—ನವಭಾರತ ಬುಕ್ ಡಿಪೋ

ನೋಡಿದರೆ ಸಾಕು! ಓದದೆ ಬಿಡಲಾರಿರಿ!!

ಮುಗಿದಾಗ ಮುಗಿದು ಹೋಯಿತಲ್ಲಾ ಎನಿಸುವ, ತೊಡಗಿದಾಗ ಹೇಗೆ ಮುಗಿಯುವುದಿದು ಎಂದು ಕೌತುಕಪಡಿಸುವ

ಅಂತರಂಗದ ಕತೆಗಳು

೧೩ ಕತೆಗಳ ಸಂಗ್ರಹ **ಬೆಲೆ ೦—೧೦—೦**

ಅಂತರಂಗವನ್ನು ಜಗಿ ಬಹಿರಂಗವನ್ನು ಹೊಳೆಸಿ ಹರಿಯುವ ಮಾತು

ಪ್ರೇಮಪ್ರವಾಹವು ಹೇಗೆ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮಪ್ರವಾಹ

ಸ್ವಾರಸ್ಯವಾದ ೫ ಕತೆಗಳ ಸಂಗ್ರಹವನ್ನು ಓದಿನೋಡಿ ೦—೬—೦

ಬಹಿರಂಗವಾಗಿ ಅಲ್ಲವಾದರೂ 'ಅಂತರಂಗವಾಗಿ ನೋಡತಕ್ಕ

ಆರ್ಟ್ ಚಿತ್ರಗಳು

ಹಲವಾರು ಸುಂದರಿಯರ ನೈಜಚಿತ್ರಗಳ ಕಟ್ಟು. ಬೆಲೆ ೦—೬—೦

ಎಲ್ಲಕ್ಕೂ ವಿ. ಪಿ. ಪ್ರತ್ಯೇಕ ಕೆಲವೇ ಪ್ರತಿಗಳು ಉಳಿದಿವೆ

ಬರೆಯಿರಿ — **ಅಂತರಂಗ ಕಾರ್ಯಾಲಯ, ಉಡುಪಿ.**

(ಉಡುಪಿಯ ನವಭಾರತ ಪುಸ್ತಕ ಭಂಡಾರದಲ್ಲಿಯೂ ದೊರೆಯುತ್ತವೆ)

FOR GOOD PRINTING

NAVAYUGA PRESS, UDIPI.

(*Props* Navayuga Enterprise Ltd)

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd No M 3618.

ವಾರ್ಷಿಕ ಚಂದಾ ರೂ 4—8—0 ಬಿಡಿ ಸಂಚಿಕೆ 0—1—6

Estd. 1921 ಸ್ಥಾಪಿತ

NAVAYUGA

ನವಯುಗ

ವರ್ಷ ೨೪] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ [Vol 24
ವಾರ ೩] Founder SRI A. B. SHETTY. [No. 3

ಉಡುಪಿ • 21—9—1944 • ಮಂಗಳೂರು

ದಿ ಜುಪಿಟರ್
ಜನರಲ್ ಇನ್ಶ್ಯೂರೆನ್ಸ್
ಕಂಪೆನಿ, ಲಿ, ಬೊಂಬಾಯಿ

ವಿಮೆಯಿಳಿಸ ಬೇಕೆ?
ಏಜಂಟರಾಗಬೇಕೇ?

—ಹಾಗಾದರೆ ಕೂಡಲೇ—

ಪಿ. ಡಿ. ನಾನಯ್ಯ, ಉಡುಪಿ.
ದಕ್ಷಿಣ ಕನ್ನಡದ ಚೀಫ್ ಏಜೆಂಟ್,
ಇವರಿಗೆ ಬರೆಯಿರಿ

1 ಕೋಟಿಗೆ ಮಿಕ್ಕಿ ವ್ಯವಹಾರ!
ಈ ವರುಷವೇ ರಜತೋತ್ಸವ!

The Jupiter General Insurance Company Ltd

WANTED

Applications are invited for the posts of Agents and Accountants to serve at any of the Offices of the Bank in the District. The applicants must have studied at least up to S. S. L. C. Those with higher qualifications or Banking experience or knowledge of typing will be preferred. Pay according to qualifications.

Applications should reach the Office by 30—9—44. Selected candidates will be required to furnish the necessary security as per the rules.

THE VIJAYA BANK, Ltd.,
Head Office
Kadri Road - - - Mangalore

The Board of Directors,

Sri Narayana Guru Bank, Ltd., Mangalore announce that a Branch of this Bank has been opened at the premises of **"Parimala Bhavan"**, opposite Municipal Bus Stand, Udipi, on the 11th April, 1941. Your patronage is solicited.

Mangalore Jarappa,
Managing Director.

ದಿ ಮುಲ್ಕಿ ಬೇಂಕ್,
ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು

The Mulky Bank Ltd.,
Moolky, S K

☞ ಮುಟ್ಟಾಗುವಿಕೆ ☜

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣ ಅಥವಾ ಇನ್ನಾವ ಕಾರಣವಿದ್ದರೂ—'ಕುಮಾರಿ' (Govt Regd) ನಿಶ್ಚಿತ ಗುಣಪಡಿಸುವುದು—ಒಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಪರಿಣಾಮಗೊಳಿಸುವುದು, ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು, ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ 3| ಕೈಮೀರಿದ ಕೇಸುಗಳಿಗೆ ರೂ 5,(ಗ ಪಿ 12 ಆಣೆ ಅಲ್ಲದೆ)**Mrs P. DEVEE,**
I. D. S (N) Tollygunge, Calcutta,
ಸ್ಟಾಕಿಸ್ಟ್ ಪೊಪುಲರ್ ಸ್ಟೋರ್ಸ್,
ಮಂಗಳೂರು

THOUGH IN THESE DAYS—

In days of yore, Abraham and his family were led to safety and security by the hand of Providence in the form of a White-winged Angel.

Though in these days no such White-winged Angels come, wise men avail themselves of the same protection of safety and security in the form of Life Assurance Policies. They believe that God helps those who help themselves.

THE CANARA MUTUAL ASSURANCE CO., LTD.,
UDIPI (S India)

Decorate your home with

LIFE-LIKE OIL PAINTINGS

of those dear and near to you

M. S. Shirale,
Modern Studio,
UDIPI.

CO-OPERATION - - - -

Life Assurance is the business based on the idea of mutual co-operation. By diverting a small portion of one's earning for paying premiums, we co-operate for the good of the family and safeguard the education of children.

Let us assist you in taking out a Policy under the plan best suited to you. Write now to:—

KOCHIKAR BROTHERS LTD.
Chief Agents for South India
THE BOMBAY LIFE ASSCE. CO., LTD.
(Estd 1908)
The "Bombay Life" Bldg., UDIPI, S K.

Offices and Agencies throughout South India

ಕಸ್ತೂರಿ ಬಾ
ಸ್ಮಾರಕ ನಿಧಿಗೆ
ಶಕ್ತಿಮೀರಿ
ಸಹಾಯ ಮಾಡಿರಿ

REGD

ಅಮೃತಾಂಜನ ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಘಾಯಗಳು ಬಾತುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಪಕ್ಷವಾತ, ಮೊಡವೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಪಡಿಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತಾ.

TENDER NOTICE

Tenders of rates to reach the Assistant Director of Fisheries (Coast) Calicut, on or before 3rd October 1944, are invited for transporting salt bags from vessels or railway wagons and stacking them in the fish curing yards and gollahs on the West Coast, and for sundry other works.

Details and terms of contract can be had from the undersigned.

D. D. Peter Devadas,
Asst Director of Fisheries (Coast)
Calicut, }
30 8 1944 }

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಮೂರನೇ ಸಂಪುಟ ಆರಂಭವಾಗಿದೆ
ವಿದ್ಯಾ ಇಲಾಖೆಗೆ ಸಂಬಂಧಿಸಿದ
ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ
ವಾರ್ಷಿಕ ಚಂದಾ
ರೂ **1—8—0** ಮಾತ್ರ
ಹೆಚ್ಚಿನ ವಿಚಾರಕ್ಕೆ ಬರೆಯಿರಿ
ಬಾಲಚಂದ್ರ, ಉಡುಪಿ.

ತಾರುಣ್ಯ

ಕೊಟ್ಟು ವೀರ್ಯಸ್ತಂಭನೆ ಮಾಡಿ ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡುವ ರಮಣ ವಿಲಾಸಿನಿ ಅತ್ಯುತ್ತಮ ಔಷಧಿ
ಡಪ್ಪಿ 1ಕ್ಕೆ ರೂ. 1
ಮದನಮಂಜರಿ ಫಾರ್ಮಸಿ,
184 ಚೈನ ಬಜಾರ್ ರೋಡ್, ಮದ್ರಾಸ.
ಏಜಂಟರು, ಶೈ ಫಾರ್ಮಸಿ

ಗಾಂಧಿ—ಜಿನ್ನಾ ಮಾತುಕತೆ

ಹನುಮನ ಬಾಲದಂತೆ ಬೆಳೆಯುತ್ತಿದೆ!

ತಾ 9-9-44ನೇ ಶನಿವಾರ ಆರಂಭವಾದ, ಗಾಂಧಿ ಜಿನ್ನಾರೊಳಗಿನ ಚರಿತ್ರಾರ್ಹ ಗೋಷ್ಠೀಲನವು ಇನ್ನೂ ಮುಗಿದಿಲ್ಲದ ಮಾತುಕತೆಯನ್ನು ಗುಪ್ತವಾಗಿ ಇಟ್ಟಿದ್ದರಿಂದ ರಾಜಕೀಯ ಚರ್ಚೆ ನಡೆದ ರೀತಿಯೇ ಇಲ್ಲವೆನ್ನಬಹುದು. ಆರಂಭದ ವರದಿ ಏನೆಂದರೆ ರಮ್ಜಾನಿನ 21ನೇ ದಿನವಾದುದರಿಂದ ಅಂದು ಮಾತುಕತೆಯನ್ನು ನಿಲ್ಲಿಸಲಾಗಿತ್ತು. ತಾ 10ನೇ ರವಿವಾರ ರಮ್ಜಾನ್ ಮಹಾದಿನವಾದುದರಿಂದ ಮಿ. ಜಿನ್ನರು ರಜೆ ಪಡೆದಿದ್ದರು. ಮಿಕ್ಕ ದಿನಗಳಲ್ಲಿ ಇಬ್ಬರು ಮೂರು ತಾಸು ಸಂಭಾಷಣೆಯಲ್ಲಿ ಕಳೆದರೂ ಅದರ ವಿಷಯಗಳ ಸ್ವರೂಪ ಪರ್ಯಾಲೋಚನೆಯಲ್ಲಿ ತಮ್ಮೆಲ್ಲಾ ಸಮಯವನ್ನೂ ವ್ಯಯಿಸಿದ್ದಾರೆ. ಈ ಮಾತುಕತೆ ಎಲ್ಲಿವರೆಗೆ ಬಂತೆಂದು ಆ ಇಬ್ಬರಿಗಲ್ಲದೆ ಮೂರನೆಯವರಿಗೆ ತಿಳಿಯದು. ಎಂದು, ಹೇಗೆ ಮುಗಿಯುವುದೆಂಬ ಸಂಗತಿ ಪ್ರಾಯಶಃ ಅವರಿಗೇನೇ ತಿಳಿಯದು! ಸಂಭಾಷಣೆಯ ಗುಟ್ಟನ್ನರಿತ ಮೂರನೆಯವರೆಂದರೆ ರಾಜಾಜಿಯೊಬ್ಬರೇ. ಜಿನ್ನರ ಅನುಮತಿ ಪಡೆದು, ಸಂಧಾನ ಸೂತ್ರಗಳ ಜನಕರಾದ ರಾಜಾಜಿಗೆ, ಗಾಂಧೀಜೀಯವರು ತಮ್ಮ ಮಾತುಕತೆಗಳ ಮುಖ್ಯಾಂಶಗಳನ್ನು ತಿಳಿಸುತ್ತಿದ್ದಾರೆ. ಬಿರ್ಲಾ ಗೃಹ, ಜಿನ್ನಾಗೃಹಗಳಲ್ಲೇ ತುಂಬಿರುವ ಕಾಂಗ್ರೆಸ್ ಲೀಗ್ ಪ್ರಮುಖರಲ್ಲಿ ಯಾರಿಗೂ ಯಾವುದೊಂದು ಚಿಹ್ನೆಯೂ ದೊರೆತಿಲ್ಲ.

ಆತುರದ ನಿರೀಕ್ಷೆ

ಬೊಂಬಾಯಿಯ ಮೌಂಟ್ ಪ್ಲೆಸೆಂಟ್ ಬಂಗಲೆಯ ಗೋಡೆಯ ಮರೆಯಲ್ಲೊಂದು ಹೊಸ ಚರಿತ್ರೆ ಬರೆಯಲ್ಪಡುತ್ತಿದೆ. ಅದೇನೆಂಬುದನ್ನು ತಿಳಿಯುವ ಕುತೂಹಲದಲ್ಲಿ ಇಡೀ ಪ್ರಪಂಚವಿದೆ. ಅದರಲ್ಲೂ ಪತ್ರಿಕೋದ್ಯೋಗಿಗಳ ಆತುರವಂತೂ ಅಸಹನೀಯವಾಗಿ, ಅವರು ಗಾಂಧಿ ಜಿನ್ನರ ಮುಖಭಾವಗಳ ಆಧಾರದಿಂದಲೇ ಏನೇನೋ ಊಹಿಸಿ ಬರೆಯುತ್ತಿದ್ದಾಗ ಗಾಂಧೀಜಿಯೊಂದು ಬಾರಿ ಅವರನ್ನು ಚುಚ್ಚಬೇಕಾಯಿತು. ತಾ 11ನೇ ಪೂರ್ವಾಹ್ನದ ಸಂಭಾಷಣೆ ಮುಗಿಸಿ ಹೊರಬಂದ ಗಾಂಧೀಜೀ, ಪದ್ಧತಿಯಂತೆ ತಮ್ಮನ್ನು ಸುತ್ತುಗಟ್ಟಿದ ವಾರ್ತಾದಾರರನ್ನು ಕುರಿತು "ನಮ್ಮ ಮುಖದಲ್ಲಿ ಆಶೆಯೊಂದನ್ನು ಹೊರತು ಬೇರಾವುದನ್ನೂ ಕಾಣಬೇಡಿರಿ— ಅನ್ಯಾರ್ಥ ಕಟ್ಟಬೇಡಿರಿ" ಎಂದು ಎಚ್ಚರಿಸಿ ಮಿ. ಜಿನ್ನರ ಕಡೆ ತಿರುಗಿ "ನೀವೇನನ್ನುವಿರಿ ನಾನೆಂದುದು ಸರಿಯೇ? ಅವರು ವಿಶೇಷ ಬರೆದು ಬಿಟ್ಟಿದ್ದಾರೆ. ಈ ದಿನದ ಪತ್ರಿಕೆಗಳನ್ನು ನೀವು ಓದಿರುವಿರಾ? ತಂಟೆ ಮಾಡಲಿಚ್ಛಿಸುವವರು ಏನೆಲ್ಲಾ ಮಾಡುವರೆಂಬ ಸಂಗತಿ ನಮಗೆ ಗೊತ್ತೇ ಇಲ್ಲ" ಎಂದುಬಿಟ್ಟರು. ಮಿ. ಜಿನ್ನರು ನಡುವೆ ಬಾಯಿ ಹಾಕಿ 'ಅದರ ಪ್ರಸ್ತಾಪವೇಕೆ" ಎಂದರು.

ಪ್ರಾಣಾವಧಿ ಪ್ರಯತ್ನ

ಈ ಬಾರಿ ಸಂಧಾನ ಸಾಧಿಸಿಯೇ ತೀರಬೇಕು-ಆ ಪ್ರಯತ್ನದಲ್ಲಿ ಅಣುವನ್ನೂ ಬಾಕಿ ಬಿಡಬಾರದು—ಎಂದು ಇಬ್ಬರ ಪ್ರಮುಖರೂ ಭೀಷ್ಮ ನಿರ್ಧಾರ ಮಾಡಿದಂತಿದೆ. ಒಂದೋ ಈ ಸಲ ಜಾತೀಯ ಒಪ್ಪಂದವಾಗುವುದು, ಇಲ್ಲವೇ ಇನ್ನು ಮುಂದಂತೂ ಹಿಂದೂ ಮುಸ್ಲಿಮ್ ಮಾತುಕತೆಯೆಂಬುದಿಲ್ಲದಂತಾಗುವುದು— ಎಂಬಷ್ಟು ಗಾಂಧಿ ಜಿನ್ನರ ಈ ಬಾರಿಯ ಪ್ರಯತ್ನದಲ್ಲಿ ತಲ್ಲೀನರಾಗಿದ್ದಾರೆ. "ಈ ಸಲ ನಾವೊಂದು ತೀರ್ಮಾನಕ್ಕೆ ಬಾರದಿದ್ದರೆ ನಮ್ಮ ಮೂರ್ಖತನವನ್ನು ಜಗಜ್ಜಾಹೀರು ಮಾಡಿದಂತಾಗುವುದು" ಎಂದು ಗಾಂಧೀಜಿಯೊಡನೆ ಜಿನ್ನರೆಂದರಂತೆ. "ಮಾತ್ರವಲ್ಲ ದೇಶವು ಅಸಹನೀಯ ನಿರಾಶೆಗೀಡಾಗಿ ವಿಪ್ಲವವುಂಟಾದೀತು" ಎಂದು ಗಾಂಧೀಜೀಯದಕ್ಕೆ ಕೂಡಿಸಿ ಹೇಳಿದ್ದಾರೆ. "ಭಾರತ ಸ್ವಾತಂತ್ರ್ಯವನ್ನು ಚರ್ಚೆಯ ಮೇಜಿನ ಮೇಲೆ ನಾವಿಬ್ಬರೂ ಮುಂಭಾಗದಲ್ಲಿಟ್ಟಿದ್ದೇವೆ"-ಎಂದು ಗಾಂಧೀಜೀಯ ಹೇಳಿಕೆ. ಸಂಭಾಷಣೆಗಳ ವಿರಾಮಕಾಲದಲ್ಲಿ ಉಭಯರೊಳಗೂ ಪತ್ರವ್ಯವಹಾರಗಳು ನಡೆಯುತ್ತಿವೆ. ಆಯಾ ದಿನದ ಚರ್ಚೆಯ ಮಾತುಗಳನ್ನು ಸ್ಪಷ್ಟಪಡಿಸಿಕೊಳ್ಳಲು ಹಾಗೂ ದಾಖಲೆಯಾಗಿ ಇಟ್ಟುಕೊಳ್ಳಲು ಮಿ| ಜಿನ್ನರವುಗಳನ್ನು ಬರೆದು ಗಾಂಧೀಜೀಯವರಿಗೆ ಕಳುಹುತ್ತಿದ್ದಾರೆ, ಗಾಂಧೀಜೀಯದಕ್ಕೊಪ್ಪಿಗೆ ಇಲ್ಲವೇ ತಿದ್ದುಪಡಿ ಸೂಚಿಸುವ ಪದ್ಧತಿ ನಡೆದಿದೆ. ಜಿನ್ನರ ಬಂಗಲೆಯ ಗಾರ್ಡನಿನಲ್ಲಿ ರಾತ್ರಿ ಹಗಲು ಬಿದ್ದುಕೊಂಡು ವಾರ್ತೆಯಪಟ್ಟಿಗೆ ಸಂಪೂರ್ಣ ಉಪವಾಸಿಗಳಾಗಿರುವ ಸುಮಾರು 75 ಮಂದಿ ವಾರ್ತಾದಾರರಿಗೆ ಕೇವಲ ತಿಂಗಳುಗಳಿಗೆ ಸಾಕಾಗುವಂತಹ ದೊಡ್ಡ ಗ್ರಾಸವಾಗಿ ಈ ದಾಖಲೆಗಳು ದೊರೆಯುವ ದಿನವು ನಿರೀಕ್ಷೆಯಲ್ಲಿದೆ.

ಆಶೋತ್ಸಾಹವಿದ್ದಿದೆ

ಪಾತ ಬಿದರೂ ಮುಗಿಯದ ಈ ಸಂಭಾಷಣೆಯೀಗ ದಿನಂಪ್ರತಿ ನಡೆಯಲಾರಂಭವಾದುದರಿಂದ, ಅದಿನ್ನು ಮುರಿದು ಹೋಗುವ ಸಂಭವವಿಲ್ಲವೆಂದು ಬೊಂಬಾಯಿ ಹರ್ಷೋಲ್ಲಾಸದಲ್ಲಿದೆ. ತಾ 9ನೇ ಅಪರಾಹ್ನ ಮುಮ್ಮಾತುಗಳನ್ನಾಡಿ ಮುಗಿಸಿದ ಪುರೋಣದ್ವಯವು ತಾ 11ರಿಂದ 12ರ ವರೆಗಿನ 4 ದಿನಗಳಲ್ಲಿ ಎರಡು ಹೊತ್ತುಗಳಲ್ಲೂ ಗಾಢ ಸಂಭಾಷಣೆ ನಡೆಸಿದ್ದಿತು. ಅನಂತರ ಪ್ರತಿ ದಿನ ಅಪರಾಹ್ನ 5.30ರಿಂದ 7ರ ವರೆಗೆ ಕೂಟವೆಂದೂ, ಪೂರ್ವಾಹ್ನಗಳನ್ನು ಈ ಸಂಬಂಧದ ವಿಶೇಷಾಲೋಚನೆಗಳಿಗಾಗಿ ಮೀಸಲಿಟ್ಟಿದ್ದೇವೆಂದೂ ಧುರೀಣರು ತಾ 14ರಲ್ಲಿ ಜತೆ ಪ್ರಕಟನೆ ಕೊಟ್ಟಾಗ ಒಮ್ಮೆ ಎಲ್ಲರೂ ನಿರಾಶಾ ನಿವಾರಣೆಯ ಶಾಂತಿಯುಸಿರನ್ನು ಬಿಟ್ಟರು. ಮೂಲಭೂತ ವಿಷಯಗಳಲ್ಲಿ ಎರಡು ಹೊತ್ತಿನ ಚರ್ಚೆಯ ದಿನಗಳೇ ನಿರ್ಧಾರವಾಗಿ ತಳಹದಿ ನಿರ್ಮಾಣಗೊಂಡಿತು. ಇನ್ನವಕ್ಕೆ ಮಾಡು ಗೋಡೆಯೆಬ್ಬಿಸುವ ಸವಿವರ ಚರ್ಚೆಯಷ್ಟೇ ಒಪ್ಪೊತ್ತಿನ ಸಂಭಾಷಣೆಗಳಲ್ಲೀಗ ನಡೆಯುತ್ತಿದೆ ಎಂಬ ಆಶೋದಯವುಂಟಾಗಿದೆ. ಮುಸಲ್ಮಾನರ ಮಹಾ ಹಬ್ಬ 'ಇದ್‌ದಿನ'ದಲ್ಲಿ ಗಾಂಧಿಜಿ ಮತ್ತು ಜಿನ್ನರಿಬ್ಬರೂ ಒಟ್ಟಿಗೆ ವೇದಿಕೆಯಲ್ಲಿ ನಿಂತು ಪ್ರಾತಃಕಾಲದ ಇದ್ ಪ್ರಾರ್ಥನೆಯನ್ನು ನಡೆಸಿ ಮುಖ್ಯ ತತ್ವಗಳ ಕುರಿತಾಗಿರುವ ಒಪ್ಪಂದವನ್ನು ಅಲ್ಲಿಯೇ ಜಾಹೀರು ಮಾಡಬೇಕೆಂದು ಮಿ. ಜಿನ್ನರಿಗೆ ಕೆಲವರ ಸೂಚನೆ, ತಾನು ಕೂಡಿದಷ್ಟು ಪ್ರಯತ್ನಿಸಿ ನೋಡುವೆನೆಂದು ಮಿ. ಜಿನ್ನರ ಆಶ್ವಾಸನೆ.

ಶುಭಾಶುಭ ಶಕುನಗಳು

ಹಿಂದುಸ್ಥಾನದಂತಹ ಒಂದು ಭೂಖಂಡದ, 40 ಕೋಟಿ ಜನತೆಯ ಅದೃಷ್ಟ ರೇಖೆಯನ್ನೆಳೆಯುವ ಅತಿ ಗಂಭೀರ ಸಮಸ್ಯೆಯಲ್ಲಿ ಕೈಹಾಕಿರುವ ಗಾಂಧಿ ಜಿನ್ನರು ಈ ಸಂದರ್ಭದಲ್ಲಾದರೂ ಸ್ಮರಣಾರ್ಹ ತಮಾಷೆಗಳನ್ನು ನಿರ್ಮಿಸದೆ ಬಿಟ್ಟಿಲ್ಲ. ದ್ವಿತೀಯ ದಿನದ ಸಂಭಾಷಣೆಗಾಗಿ ಗಾಂಧೀಜೀ ಜಿನ್ನರ ಬಂಗಲೆಗೆ ಬಂದೊಡನೆ ಫೋಟೋಗ್ರಾಫರರು ಭಾವಚಿತ್ರಗಳಿಗಾಗಿ ಭಂಗಿ ಕೊಡಬೇಕೆಂದು ಹಟ ಹಿಡಿದಾಗ 'ನಮಗೆ ಸಾಕಷ್ಟಾಯಿತು' ಎಂದು ಗಾಂಧೀಜೀ ಪ್ರಥಮತಃ ನಿರಾಕರಿಸಿ ಜಿನ್ನರ ಅಭಿಪ್ರಾಯ ಕೇಳಿದರು. "ನಾನು ನಿಮ್ಮ ಕೈಯಲ್ಲಿದ್ದೇನೆ" ಎಂದದಕ್ಕೆ ಮಿ. ಜಿನ್ನರ ಉತ್ತರ. ಇದು ಬಂಗಲೆಯಲ್ಲಿರುವಾಗ ಮಿ. ಜಿನ್ನಾಗೆ ಒರೆದಿದ್ದ ಆಮಂತ್ರಣಪತ್ರದಲ್ಲಿ ಗಾಂಧೀಜೀಯೇ ಸೇರಿಸಿದ್ದ ಉಪಚಾರವಾಣಿಯ ಪ್ರತಿ ಹೊಡೆತ. ಕೊನೆಗೆ ಫೋಟೋ ಭಂಗಿ ಕೊಡುವಾಗ "ಹಾಗಾದರೆ ನಾನು ನಿಮ್ಮನ್ನಾದರಿಸಿ ನಿಲ್ಲುತ್ತೇನೆ" ಎಂದು ಗಾಂಧೀಜೀಯ ಹೇಳಿಕೆ. "ಆಗ ನಾನು ಬೀಳುವುದೇ ಸರಿ"- ಎಂದು ಜಿನ್ನರ ಉತ್ತರ. ಮಿ. ಜಿನ್ನರಿಷ್ಟು ಹೇಳಿದ ಮೇಲೂ ಗಾಂಧೀಜೀ ಅವರ ಹೆಗಲಿನ ಸುತ್ತ ತೋಳು ಚಾಚಿ ಅವರನ್ನು ಆದರಿಸಿ ನಿಂತರೆ ಮಹಾತ್ಮನ ಭಾರವು ಮಿ. ಜಿನ್ನರ ದೀರ್ಘ ಬಡಕಲು ದೇಹಕ್ಕೆ ಅಸಹನೀಯವಾಗಿ ಅವರು ಅತಿ ಪ್ರಯಾಸದಿಂದ ಹೇಗೂ ಕಾಲುಗಟ್ಟಿ ಮಾಡಿಕೊಂಡು ನಿಂತರಂತೆ. ಸಂಭಾಷಣೆಯ ಕೋಣೆಯ ಒಂದೇ ಒಂದು ಕಿಟಕಿ ಮಾತ್ರ ತೆರೆದಿಡುವ ಸಂಪ್ರದಾಯ. ದೂರದಿಂದಲೇ ಆ ಕಿಟಕಿಯೊಳಗೆ ದೃಷ್ಟಿ ಹಾಕಿ ಮಿ. ಜಿನ್ನರು ತನ್ನ ಸಬಳದಂತಹ ದೀರ್ಘ ಕೈಯನ್ನು ಆಡಿಸುವುದನ್ನು-ಯಾವುದಾದರೊಂದು ವಿಷಯವನ್ನು ಗಾಂಧಿಜೀಗೆ ಮುಂದಿಟ್ಟು ಮಾತಾಡಲು ತನ್ನ ದಬ್ಬಣದಂತಹ ಬೆರಳನ್ನು ಅವರ ಮುಖದೆದುರು ಕೊಂಡೊಯ್ಯುವುದನ್ನು-ಒಮ್ಮೊಮ್ಮೆ ಬಲಗೈ ಮುಷ್ಟಿಯಿಂದ ಎಡ ಅಂಗೈಗೆ ಜಡಿಯುವುದನ್ನು ಕಂಡ ವಾರ್ತಾದಾರರು ಅದಕ್ಕೆ ಬಣ್ಣಹಚ್ಚಿ ಪ್ರಕಟಿಸಿದ್ದಾರೆ. ವೈಸರಾಯಿ ಕೌನ್ಸಿಲಿನಲ್ಲಿ ಕಾಮರ್ಸ್ ಮೆಂಬರಾಗಿರುವ ಸರ್ ಅಜೀಜುಲ್ ಹಕ್ಕರು ತಾ 14ರಲ್ಲಿ ಬೊಂಬಾಯಿಗೆ ಬಂದು ಮಿ. ಜಿನ್ನರೊಡನೆ 45 ಮಿನಿಟು ಗುಪ್ತಸಂಭಾಷಣೆ ನಡೆಸಿ ಹೋಗಿರುವುದರಿಂದ ಏನೋ ಪಿಕಲಾಟ ನಡೆಸಿರಬೇಕೆಂದು ತಳಮಳವಿದ್ದಿದೆ. ಇಷ್ಟರಲ್ಲೇ ಗಾಂಧಿ ಜಿನ್ನರು ಒಂದು ರಾತ್ರಿ ಹಗಲಿಡೀ ಸಂಭಾಷಿಸಿದಂತಾಗಿದೆ, ಅರ್ಥಾತ್ ಇದುವರೆಗಿನ ಚರ್ಚೆಯ ಅವಧಿಯೇ 24 ಘಂಟೆ ಮಿಕ್ಕಿದೆ.

CHAMPAE'S
Snow & Castrex
(Sole Distributers for (India)
Sukhananda Stores
Santhekatte, UDIPI, S. K.

ಯುದ್ಧೋತ್ತರ ದಿನಗಳಿಗಾಗಿ ಹಣ ಕೂಡಿಡಿ.

ಯುದ್ಧವು ಇನ್ನು ಬಹುಕಾಲ ಮುಂದರಿಯಲಿಕ್ಕಿಲ್ಲ. ಶಾಂತಿಕಾಲಕ್ಕಾಗಿ ನೀವು ಸಿದ್ಧರಾಗಿರುವಿರಾ?

ಶಾಂತಿ ಸಮಾರಂಭದಲ್ಲಿ ಅಕಲ್ಪಿತ ಘಟನೆಗಳು ಸಂಭವಿಸಬಹುದು. ಧಾರಣೆಗಳು ಇಳಿದು ಉದ್ಯೋಗ ವ್ಯಾಪಾರ ಧಂಧೆಗಳಿಗೆ ಪೆಟ್ಟು ತಗಲಬಹುದು. ನೀವು ಇವುಗಳಿಗಾಗಿ ನಿಮ್ಮ ಪೂರ್ವಸಿದ್ಧತೆಯನ್ನೇರ್ಪಡಿಸಿರುವಿರಾ? ಸ್ಥಿರವಾದ ಬ್ಯಾಂಕ್ ಖಾತೆಯಿಂದ ನೀವು ನಿಮ್ಮ ಸ್ಥಿತಿಯನ್ನು ಭದ್ರಗೊಳಿಸಿರುವಿರೋ- ಇಲ್ಲವಾದರೆ ನಿಮ್ಮ ಪೂರ್ವಸಿದ್ಧತೆಯನ್ನು ಪ್ರಾರಂಭಿಸಲೀಗ ಕಾಲಾಂತರವಾಗಿಲ್ಲ. ಅನವಶ್ಯಕ ವಸ್ತುಗಳಿಗಾಗಿ ಏರಿದ ಬೆಲೆ ತೆತ್ತು ಹಣ ವೆಚ್ಚಮಾಡುವ ಬದಲು ಮುಂಬರುವ ಬೆಲೆ ಇಳಿತದ ಲಾಭವನ್ನು ಹೊಂದಲೋಸುಗ ಹಾಗೂ ಆಗಿನ ನವೀನ ಪರಿಸ್ಥಿತಿಯನ್ನೆದುರಿಸಲು ನಿಮ್ಮ ಉಳಿತಾಯವನ್ನೀಗ ಕೂಡಿಡಿರಿ.

ನಾವು ನಿಮಗೆ ಸಹಾಯ ಉತ್ತೇಜನಗಳ ಬಗ್ಗೆ ಭರವಸೆಯನ್ನೀಯುತ್ತೇವೆ.

ಸ್ಥಾಪನೆ 1906 **ಕೆನರಾ ಬ್ಯಾಂಕ್ ಲಿಮಿಟೆಡ್**

Estd 1906 **Canara Bank, Limited.**
(Incorporated in British India with limited Liability)

ಕ್ವಿಬೆಕ್ ಸಮ್ಮೇಲನ

ಇದೇ ತಾ 12ರಿಂದ 15ರ ವರೆಗೆ ಕ್ವಿಬೆಕಿನಲ್ಲಿ ಚರ್ಚಿಲ್ ರುಸವೆಲ್ಟರು ಪುನಃ ಒಟ್ಟಾಗಿ ಮಾತುಕತೆ ನಡೆಸಿದರು. ಈ ಬಾರಿಯ ಸಮ್ಮೇಲನದ ಮುಖ್ಯ ಧ್ಯೇಯವು ಜಪಾನಿನ ಮೇಲಿನ ಯುದ್ಧ ಹಂಚಿಕೆ ತಯಾರಿಯೆಂದೂ, ಅದಕ್ಕಾಗಿ ಒಂದು ವರುಷದ ಯೋಜನೆ ತಯಾರಿಸಲ್ಪಟ್ಟಿದೆಯೆಂದೂ ಪ್ರಕಟವಾಗಿದೆ. ಎರಡು ರಾಷ್ಟ್ರಗಳ ಪ್ರಮುಖ ಯುದ್ಧ ಸೂತ್ರಧಾರಿಗಳೂ ಈ ಪರಿಷತ್ತಿನಲ್ಲಿ ಭಾಗವಹಿಸಿದ್ದರಲ್ಲದೆ, ಚರ್ಚಿಲ್ ರುಸವೆಲ್ಟ್ ಕೂಟ ತಾ. 15ರಲ್ಲಿ ಮುಗಿದರೂ ಇವರೊಳಗಿನ ಸಮ್ಮೇಲನವು ಇನ್ನೂ ಮುಂದುವರಿಯಲಿದೆಯೆಂದು ತಿಳಿದುಬರುತ್ತದೆ.

ಗುಟ್ಟೇನು?

ಕ್ವಿಬೆಕ್ ಪರಿಷತ್ತಿನ ಕುರಿತು ನಾನಾ ಊಹಾಪೋಹಗಳಿದ್ದುವೆ. ಇಟಲಿಯಲ್ಲಿ ಪೋಪರೊಡನೆ ದೀರ್ಘ ಸಂಭಾಷಣೆ ನಡೆಸಿದ ಬ್ರಿಟಿಷ್ ಪ್ರಧಾನಿ ಕೂಡಲೇ ಅಮೇರಿಕಾಧ್ಯಕ್ಷರೊಡನೆ ಗುಪ್ತ ಸಂಭಾಷಣೆ ನಡೆಸಿದುದು ಜರ್ಮನ್ ಗತಿ ನಿರ್ಣಯಕ್ಕಾಗಿ ಎಂಬುದು ನಿಜವೆ? ಅಥವಾ ಸಂಧಾನಾತುರರಾದ ಪೋಪ್ ಗುರುಗಳಿಂದೇನಾದರೂ ಜರ್ಮನಿಯ ಪರವಾಗಿ ಶಾಂತಿ ಸೂತ್ರಗಳು ದೊರೆತಿರಬಹುದೇ? ಮಿ. ಆಪೆರಿಯವರು ಇದೇ ಪರಿಷತ್ತಿನ ವೇಳೆ ಇಟಲಿಗೆ ಹೋದುದೇಕೆ? ಜಪಾನ್ ಯುದ್ಧಕ್ಕಾಗಿ ಸರ್ವ ಸೇನಾನಿಯೊಬ್ಬನನ್ನು ಈ ಪರಿಷತ್ತಿನಲ್ಲಿ ನೇಮಿಸಲಾಗುವದೆಂಬ ವದಂತಿಯಿದ್ದರೂ ಆ ನೇಮಕವು ಈ ಮೊದಲೇ ಆಗಿದೆಯೆಂದೀಗ ಪ್ರಕಟವಾಗಿದೆ. ಸಮ್ಮೇಲನದ ಕೊನೆಯ ಭಾಗದಲ್ಲಿ ಆತ್ಮ ಪಸರದಿಂದ ಹಾರಿ ಬಂದು ಭಾಗ ವಹಿಸಿದ ಮಿ. ಅಂತೋನಿ ಈಡೆನ್ನರು ಜರ್ಮನಿಯ ಶರಣು ಸೂಚನೆ ಹಿಡಿದುಕೊಂಡೇ ಬಂದಿದ್ದರೆಂಬ ವದಂತಿಯಿದ್ದರೂ ಅದೂ ಅಬದ್ಧವೆಂದು ತಿಳಿದುಬರುತ್ತದೆ. ರಶ್ಯವು ಮೋಸ್ಕೋದಲ್ಲಿರುವ ಸ್ವತಂತ್ರ ಪೋಲೆಂಡ್ ಕಮಿಟಿಯನ್ನು ಮುಂದೆ ಮಾಡಿ, ಲಂಡನ್ ಕಮಿಟಿಯನ್ನು ವಿರೋಧಿಯೆಂದೇ ಭಾವಿಸಿ ಆಂಗ್ಲೋ ಅಮೇರಿಕಾನರನ್ನು ಕಡೆಗಣಿಸಿದಂತಿರುವದರಿಂದ ಬ್ರಿಟನ್ ವಿದೇಶ ಮಂತ್ರಿಗಳು ಕ್ವಿಬೆಕ್ ಸಮ್ಮೇಲನಕ್ಕೆ ಆ ಪ್ರಶ್ನೆಯನ್ನೊಯ್ದರೆಂದು ವಾರ್ತೆ. ಅಂತೆಯೇ ಬಾಲ್ಕನುಗಳ ಸಂಬಂಧದಲ್ಲಿಯೂ ರಶ್ಯದ ಸ್ವತಂತ್ರ ಘೋಷಣೆಯು ಆಂಗ್ಲೋ ಅಮೇರಿಕಾನರಿಗೆ ಅಸಹನೀಯವಾದಂತಿದೆ. ಪಾಳಯದೊಳಗಿನ ಈ ಕಚ್ಚಾಟ ಮೊದಲಾದ ರಾಜಕೀಯ ವಿಷಯಗಳ ಪರ್ಯಾಲೋಚನೆಗಾಗಿಯೇ ಕ್ವಿಬೆಕ್ ಸಮ್ಮೇಲನ ನಡೆದಿರಬಹುದೆಂದು ಊಹೆ. ಹಿಂದುಸ್ಥಾನದ ಪ್ರಶ್ನೆಯು ಅಲ್ಲಿಯ ಕಾರ್ಯಕ್ರಮದಲ್ಲಿ ಮಹತ್ವವಾಗಿತ್ತು ಎಂಬ ವದಂತಿಯಿದ್ದರೂ ಅದಕ್ಕೆ ಚರ್ಚಿಲ್ ರುಸವೆಲ್ಟರ ಸಾಕಷ್ಟು ಲಕ್ಷ್ಯವು ಹೋಗಿಲ್ಲವೆಂಬುದು ನಿರ್ವಿವಾದ.

ಜರ್ಮನಿಯನ್ನು ಹರಿದು ತಿನ್ನುವರೆ?

ಜರ್ಮನಿ ಸೋತ ಮೇಲೆ ಅದನ್ನು ಅನುಭೋಗಿಸುವ ಪಾಲುಪಟ್ಟಿಯು ಕ್ವಿಬೆಕಿನಲ್ಲಿ ತಯಾರಾಗಿರಬೇಕೆಂಬ ಸಾಧಾರ ವಾರ್ತೆಯೂ ಇದೆ. ಆದರೆ ಈ ಸಮ್ಮೇಲನದಲ್ಲಿ ಭಾಗಿಯಾಗಲು ಸ್ಟಾಲಿನರು ನಿರಾಕರಿಸಿದ್ದರೆಂಬುದು ಇದಕ್ಕೊಂದು ಆಕ್ಷೇಪ. ಅಂತೆಯೇ ಚೀನವೂ ಅದರಲ್ಲಿ ಭಾಗ ವಹಿಸಿಲ್ಲವಾದ್ದರಿಂದ ಜಪಾನಿನ ಮೇಲಿನ ಯುದ್ಧ ಯೋಜನೆ ತಯಾರಿಯಲ್ಲಿ ಅದನ್ನು ಹೇಗೆ ಬಿಟ್ಟರೆಂಬ ಪ್ರಶ್ನೆಯೇಳುತ್ತದೆ. ಇವೆಲ್ಲವನ್ನು ಕಾಣುವಾಗ ಇಂಗ್ಲೆಂಡು ಅಮೇರಿಕಗಳು ತಮ್ಮದೇ ಆದ ಪ್ರತ್ಯೇಕ ಧೋರಣೆಯೊಂದನ್ನು ನಿಶ್ಚಯಿಸಿಕೊಳ್ಳುವದಕ್ಕಾಗಿಯೇ ಕ್ವಿಬೆಕಿನಲ್ಲಿ ಕೂಡಿದುವೆಂದೂ, ಈ ಕುರಿತು ಜಪಾನು ಜರ್ಮನಿಗಳು ಹೆದರುವದಕ್ಕಿಂತ ಹೆಚ್ಚಾಗಿ ರಶ್ಯಾ ಚೀನಗಳು ಸಂದೇಹಪಡಬೇಕಾಗಿದೆಯೆಂದೂ ಊಹಿಸಲವಕಾಶವಿದೆ. ಆದರೂ ವಿಜಯಾನಂತರ ಜರ್ಮನಿಯನ್ನು ಹಂಚಿಕೊಳ್ಳುವ ಒಂದು ಯೋಜನೆ ತಯಾರಾದ ವಾರ್ತೆ ಬಂದಿದೆ. ಆ ಪಾಲುಪಟ್ಟಿಯಂತೆ ಜರ್ಮನಿಯ ವಾಯವ್ಯ ತುಂಡು ಇಂಗ್ಲಂಡಿಗೆ, ನೈಋತ್ಯ ಭಾಗ ಅಮೇರಿಕಕ್ಕೆ, ಪೂರ್ವಭಾಗ ರಶ್ಯಕ್ಕೆ ಹೋಗಲಿದೆ. ಈ ಮೂರೂ ರಾಷ್ಟ್ರಗಳ ಪ್ರತಿನಿಧಿಗಳನ್ನೊಳಗೊಂಡ ಒಂದು ಮಂಡಲಿಯು ಬರ್ಲಿನಿನಲ್ಲಿದ್ದುಕೊಂಡು ಪರಸ್ಪರರೊಳಗಿನ ವ್ಯವಹಾರ ನಿರ್ಣಯಗಳನ್ನು ಮಾಡಲಿದೆ. ಯುದ್ಧ ಮುಗಿದ ಮೇಲೂ ಕೆಲವು ತಿಂಗಳುಗಳ ವರೆಗೆ ಸೈನಿಕಾಡಳಿತೆಯಿದ್ದು, ಆ ಮೇಲೆ ನಾಗರಿಕಾಡಳಿತೆ ಸ್ಥಾಪಿಸಲ್ಪಟ್ಟು ಅದು 10 ವರುಷ ಅಥವಾ ಇನ್ನೂ ಹೆಚ್ಚುಕಾಲ ಅಧಿಕಾರ ನಡೆಸಲಿದೆಯಂತೆ. ಈ ಮೂರು ಪಾಲುಗಳಿಗೂ ಮೂರು ರಾಷ್ಟ್ರಗಳ ಕಮಿಶನರುಗಳು ನೇಮಿಸಲ್ಪಡುವವು. ಅವು ಜರ್ಮನರ ನಿತ್ಯ ಜೀವನದ ಪ್ರತಿಯೊಂದು ವಿಭಾಗದಲ್ಲೂ ಅಧಿಕಾರ ಚಾಲುಮಾಡುವವು. ಈಗ ಇಟಲಿಯಲ್ಲಿ ಅಧ್ಯಕ್ಷರಾಗಿರುವ ಬ್ರಿಟಿಷ್ ಮಂತ್ರಿಮಂಡಲದ ಸದಸ್ಯ ಮಿ. ಹೆರೊಲ್ಡ್ ಮೇಕ್‌ಮಿಲ್ಲನರು, ಜರ್ಮನಿಗಾಗಿ ನೇಮಿಸಲ್ಪಡುವ ಬ್ರಿಟಿಷ್ ಕಮಿಶನಿನ ಮುಖ್ಯಾಧಿಕಾರಿಯಾಗಿರುವರೆಂದು ವಾರ್ತೆಯಿದೆ.

ನೋಟೀಸು

ರೇಶನಿಂಗ್–ಮಂಗಳೂರು– ಬೆಳಿಕಟಾವು.

ಎಲ್ಲಾ ಜನರಿಗೆ ತಿಳಿಯಪಡಿಸುವುದೇನೆಂದರೆ— 1943ನೇ ಇಸವಿ ಮದ್ರಾಸು ರೇಶನಿಂಗ್ ಆರ್ಡರಿನ ಕ್ಲಾಸ್ 12ನೇ ಪ್ರಕಾರ ಏರ್ಪಡಿಸಿದ ರೇಶನಿಂಗ್ ರೆಗ್ಯುಲೇಶನ್‌ಗಳ ಪೈಕಿ ನಂಬ್ರ 48ನೇ ರೆಗ್ಯುಲೇಶನ್ ಪ್ರಕಾರ ಭತ್ತದ ಬೆಳೆಕಟಾವು ಮಾಡುವರೆ ಒಂದು ಮೂಲಕ ಕೊಡುವ ಅನುಮತಿಯನ್ನು ಸಂಬಂಧಪಟ್ಟ ಸರ್ಕಲ್ ರೇಶನಿಂಗ್ ಆಫೀಸರರು ಆಗಕ್ಕಿದ್ದ ತನ್ನ ನಡಿಸಿ ಕೊಡುವರು. ರೆಗ್ಯುಲೇಶನ್ 49 50ರ ಪ್ರಕಾರ ಕೊಡುವ ಕಟಾವು ನೋಟೀಸನ್ನು ರೈತರು ಪದ್ರಿ ಆಫೀಸರರಿಗೇನೇ ಕೊಡತಕ್ಕದ್ದು. ನೋಟೀಸಿನ ಮಾಯದೆ ಕಳೆದ ಕೂಡಲೇ ಸಂಬಂಧಪಟ್ಟ ಸರ್ಕಲ್ ಆಫೀಸರರ ಹುಕುಂ ಕಲಪದಿದ್ದರೂ ಬೆಳೆ ಕಟಾವು ಮಾಡಬಹುದು.

ಕೆ. ಕೃಷ್ಣಯ್ಯ ಬಿ. ಎ.
ಜಿಲ್ಲಾ ರೇಶನಿಂಗ್ ಆಫೀಸರರು. ದ. ಕ.

ENGLISH MADE EASY

ಇಂಗ್ಲಿಷ್ ಏನೂ ತಿಳಿಯದವರು 'ಸುಲಭದಲ್ಲಿ ಇಂಗ್ಲಿಷ್' ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೇ ಕಲಿತುಕೊಳ್ಳಬಹುದು.

ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚನ್ನಾಗಿ ಕಲಿತುಕೊಳ್ಳಬಹುದು.

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.
ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ.

ಬೆಲೆ ಬರೇ ರೂ. 1—4—0 ರೂ 1-6-0ನ್ನು ಮನಿಯಾರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತೆ.

Navabharat Book Depot,
Registered Publishers & Book Sellers,
UDIPI, S. K.

ನಮ್ಮಲ್ಲಿ ಸಿಗುವ ಪುಸ್ತಕಗಳ ಕೆಟಲಾಗಿಗೆ 0-2 0 ಸ್ಟಾಂಪಿನೊಂದಿಗೆ ಬರೆಯಿರಿ.

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

ಮಹಿಳೆಯರಿಗಾಗಿ ಕನ್ನಡ ಪ್ರಬಂಧ ಸ್ಪರ್ಧೆ [ಬೆಂಗಳೂರಿನ ಕರ್ನಾಟಕ ಮಾರ್ಕೆಟಿಂಗ್ ಬೋರ್ಡಿನವರು ಪರಿಷತ್ತು ಈ ಸ್ಪರ್ಧೆಯನ್ನು ಏರ್ಪಡಿಸಬೇಕೆಂದು ಅಪೇಕ್ಷಿಸಿ, ಬಹುಮಾನದ ಸಲುವಾಗಿ ಇಂದಿರಾ ಗಳನ್ನು ಸಲ್ಲಿಸಿರುತ್ತಾರೆ] (ಕರ್ನಾಟಕದ ಎಲ್ಲ ಮಹಿಳೆಯರಿಗೂ ಪ್ರವೇಶವುಂಟು) ಪ್ರಬಂಧದ ವಿಷಯ: 'ದೇಹದ ಮತ್ತು ಮನಸ್ಸಿನ ಮೇಲೆ ಒಳ್ಳೆಯ ಆಹಾರದ ಪರಿಣಾಮ'

ಸ್ಪರ್ಧೆಯ ನಿಯಮಗಳು: ೧. ಪ್ರಬಂಧ ಸ್ವತಂತ್ರವಾಗಿರಬೇಕು; ಇದುವರೆಗೆ ಅಚ್ಚಾಗಿರಬಾರದು. ೨. ಪ್ರಬಂಧ ಫುಲ್‌ಸ್ಕ್ಯಾಪ್ ಆಕಾರದ ೩೦ ಪುಟಗಳ ಪರಿಮಿತಿಯಲ್ಲಿ ಇರಬೇಕು; ಅದನ್ನು ಕಾಗದದ ಒಂದೇ ಪಕ್ಕದಲ್ಲಿ ಶಾಯಿಯಲ್ಲಿ ಸ್ಪಷ್ಟಾಕ್ಷರಗಳಲ್ಲಿ ಬರೆದಿರಬೇಕು. ೩. ೩೧-೧೦-೧೯೪೪ನೆಯ ತಾರೀಖಿನೊಳಗಾಗಿ ಪ್ರಬಂಧ ಪರಿಷತ್ತಿನ ಕಛೇರಿಗೆ ತಲುಪಬೇಕು. ೪. ಅತ್ಯುತ್ತಮವೆಂದು ಪರೀಕ್ಷಾ ಸಮಿತಿ ತೀರ್ಮಾನಿಸಿದ ಪ್ರಬಂಧಕ್ಕೆ ೪೦ ರೂಪಾಯಿಗಳ ಬಹುಮಾನವನ್ನು ಕೊಡಲಾಗುವುದು. ೫. ಬಹುಮಾನ ಪಡೆದ ಪ್ರಬಂಧವನ್ನು ಪ್ರಕಟಿಸಲು ಪರಿಷತ್ತಿಗೆ ಹಕ್ಕು ಇರುತ್ತದೆ. ೬. ಸ್ಪರ್ಧೆಗೆ ಬಂದ ಪ್ರಬಂಧಗಳು ಬಹುಮಾನಕ್ಕೆ ಅರ್ಹವಾದುವಾಗಿಲ್ಲವೆಂದು ಕಂಡುಬಂದರೆ ಅಥವಾ ಸಾಕಷ್ಟು ಸಂಖ್ಯೆಯಲ್ಲಿ ಪ್ರಬಂಧಗಳು ಬಾರದಿದ್ದರೆ ಸ್ಪರ್ಧೆಯನ್ನು ನಿಲ್ಲಿಸಬಹುದು. [ವಿ. ಸೂ.—ಸ್ಪರ್ಧೆಗೆ ಬಂದ ಪ್ರಬಂಧವನ್ನು ಹಿಂದಿರುಗಿಸುವುದಿಲ್ಲವಾದ್ದರಿಂದ ಸ್ಪರ್ಧಿಗಳು ಅವಶ್ಯ ತೋರಿದರೆ ತಮ್ಮ ಪ್ರಬಂಧದ ಒಂದು ಪ್ರತಿಯನ್ನು ಉಳಿಸಿಕೊಳ್ಳುವುದು ಉತ್ತಮ]

ಸ್ಪರ್ಧೆಗೆ ಸಂಬಂಧಿಸಿದ ಪತ್ರವ್ಯವಹಾರವನ್ನು ಪರಿಷತ್ತಿನ ಕಾರ್ಯದರ್ಶಿಯವರೊಂದಿಗೆ ನಡೆಸತಕ್ಕದ್ದು.

ದಿವಂಗತ ಶ್ರೀ ಇ. ಎ. ಭಾಸ್ಕರರಾಯರ ಜ್ಞಾಪಕ ಸ್ಪರ್ಧೆ–೧೯೪೪, ಪ್ರಬಂಧ ಸ್ಪರ್ಧೆ. ದಿವಂಗತ ಶ್ರೀ ಇ. ಎ. ಭಾಸ್ಕರರಾಯರ ಹೆಸರಿನಲ್ಲಿ ಕನ್ನಡ ಸಾಹಿತ್ಯ ಪ್ರೋತ್ಸಾಹದ ಒಂದು ಏರ್ಪಾಟನ್ನು ನಡೆಸಬೇಕೆಂಬ ಉದ್ದೇಶದಿಂದ ಅವರ ತಾಯಿಯವರಾದ ಶ್ರೀಮತಿ ಎ. ಶೇಷಮ್ಮನವರು ಒಂದು ಜ್ಞಾಪಕನಿಧಿಯನ್ನು ಪರಿಷತ್ತಿಗೆ ಕೊಟ್ಟಿರುವುದು ಸರಿಯಷ್ಟೆ. ಈ ಸಂಬಂಧದಲ್ಲಿ ಈ ವರ್ಷವೂ (೧೯೪೪) ಒಂದು ಪ್ರಬಂಧ ಸ್ಪರ್ಧೆಯನ್ನು ನಡೆಸಬೇಕೆಂದು ನಿಶ್ಚಯಿಸಿದೆ. ಪ್ರಬಂಧದ ವಿಷಯ 'ಕನ್ನಡ ಕಾದಂಬರಿಗಳು'.

ಸ್ಪರ್ಧೆಯ ನಿಯಮಗಳು: ೧. ಪ್ರಬಂಧ ಸ್ವತಂತ್ರವಾಗಿರಬೇಕು, ಇದುವರೆಗೆ ಅಚ್ಚಾಗಿರಬಾರದು. ೨. ಪ್ರಬಂಧ ಫುಲ್‌ಸ್ಕ್ಯಾಪ್ ಆಕಾರದ ೫೦ ಪುಟಗಳ ಪರಿಮಿತಿಯಲ್ಲಿ ಇರಬೇಕು, ಅದನ್ನು ಕಾಗದದ ಒಂದೇ ಪಕ್ಕದಲ್ಲಿ ಶಾಯಿಯಲ್ಲಿ ಸ್ಪಷ್ಟಾಕ್ಷರಗಳಲ್ಲಿ ಬರೆದಿರಬೇಕು. ೩. ೩೧–೧೦–೧೯೪೪ನೆಯ ತಾರೀಖಿನೊಳಗಾಗಿ ಪ್ರಬಂಧ ಪರಿಷತ್ತಿನ ಕಛೇರಿಗೆ ತಲುಪಬೇಕು. ೪. ಅತ್ಯುತ್ತಮವೆಂದು ಪರೀಕ್ಷಾ ಸಮಿತಿ ತೀರ್ಮಾನಿಸಿದ ಪ್ರಬಂಧಕ್ಕೆ ೨೦ ರೂಪಾಯಿಗಳ ಬಹುಮಾನವನ್ನು ಕೊಡಲಾಗುವುದು. ೫. ಬಹುಮಾನ ಪಡೆದ ಪ್ರಬಂಧವನ್ನು ಪ್ರಕಟಿಸಲು ಪರಿಷತ್ತಿಗೆ ಹಕ್ಕು ಇರುತ್ತದೆ. ೬. ಸ್ಪರ್ಧೆಗೆ ಬಂದ ಪ್ರಬಂಧಗಳು ಬಹುಮಾನಕ್ಕೆ ಅರ್ಹವಾದುವಾಗಿಲ್ಲವೆಂದು ಕಂಡುಬಂದರೆ ಅಥವಾ ಸಾಕಷ್ಟು ಸಂಖ್ಯೆಯಲ್ಲಿ ಪ್ರಬಂಧಗಳು ಬಾರದಿದ್ದರೆ ಸ್ಪರ್ಧೆಯನ್ನು ನಿಲ್ಲಿಸಬಹುದು. ೭. ಹಿಂದಿನ ವರ್ಷಗಳ ಸ್ಪರ್ಧೆಯಲ್ಲಿ ಬಹುಮಾನ ಪಡೆದವರು ಈ ಸ್ಪರ್ಧೆಗೆ ಸಲ್ಲತಕ್ಕದ್ದು. [ವಿ. ಸೂ.—ಸ್ಪರ್ಧೆಗೆ ಬಂದ ಪ್ರಬಂಧವನ್ನು ಹಿಂದಿರುಗಿಸುವುದಿಲ್ಲವಾದ್ದರಿಂದ ಸ್ಪರ್ಧಿಗಳು ಅವಶ್ಯ ತೋರಿದರೆ ತಮ್ಮ ಪ್ರಬಂಧದ ಒಂದು ಪ್ರತಿಯನ್ನು ತಮ್ಮಲ್ಲಿ ಉಳಿಸಿಕೊಳ್ಳುವುದು ಉತ್ತಮ] ಸ್ಪರ್ಧೆಗೆ ಸಂಬಂಧಿಸಿದ ಪತ್ರವ್ಯವಹಾರವನ್ನು ಪರಿಷತ್ತಿನ ಕಾರ್ಯದರ್ಶಿಯವರೊಂದಿಗೆ ನಡೆಸತಕ್ಕದ್ದು.

ಬೆಂಗಳೂರು ಕ. ವೆಂ. ರಾಘವಾಚಾರ್,
೯ ೯–೪೪ ಕಾರ್ಯದರ್ಶಿ

Read & Advertise in
NAVAYUGA

The Canara Banking Corporation Limited.

ESTD 1906,

Authorised Capital	.	Rs. 25.00.000/-
Subscribed Capital		,, 16 00.000/-
Paid up Capital		,, 14 14 580/-
Reserves	,,	,, 4 10 000/-

Total Working Capital—Exceeds One Crore.

With a net work of Branches and Agencies in almost all the principal Cities of India, we offer exceptional facilities and competitive rates for collection of Bills and issue of Drafts and Telegraphic Transfers

ನವಯುಗ

ಉಡುಪಿ, ಗುರುವಾರ ೨೧-೯-೧೯೪೪

ಧುರೀಣರನ್ನು ಬಿಡಲಿ!

'ಎಲ್ಲಾ ವಿಶ್ವಾಸವನ್ನೂ ಮಿತ್ರ ರಾಷ್ಟ್ರಗಳ ಪರವಾಗಿ ತಿರುಗಿಸಬಲ್ಲ ಜವಾಹರ (ನೆಹರು) ಸಾಮ್ರಾಜ್ಯದ ಜೈಲೊಂದರಲ್ಲಿ ಕೊಳೆಯುತ್ತಿರಬೇಕಾಗಿ ಬಂದುದು ಶೋಚನೀಯ. ಜಪಾನಿನ ವಿರುದ್ಧವಾಗಿ ತಯಾರಿಸುವ ಕ್ರಿಬೆಕ್ ಯುದ್ಧಯೋಜನೆಯಲ್ಲಿ ಪಂಡಿತ ನೆಹರೂಗಳು ಇರಬೇಕಿದ್ದಿತು"—ಅಮೇರಿಕದಲ್ಲಿರುವ ಶಾಂತ ಸಂಘದ ಅಧ್ಯಕ್ಷ ಸರ್ ಜ ಜೆ ಸಿಂಗರ ಮಾತು. ಯುದ್ಧಾನಂತರದ ಲೋಕಭದ್ರತಾ ವ್ಯವಸ್ಥೆಗಾಗಿ ಸದ್ಯವೇ ನೆರೆಯಲಿರುವ ಡಂಬಾರ್ಟನ್ ಓಕ್ಸ್ ಸಮ್ಮೇಲನದಲ್ಲಿ ಭಾರತಕ್ಕೆ ಪ್ರಾತಿನಿಧ್ಯವೀಯಬೇಕೆಂದು ಸರದಾರ್ ಸಿಂಗರು ಅಮೇರಿಕ, ಇಂಗ್ಲೆಂಡು, ರಶ್ಯಾ, ಚೀನಾಗಳ ಸರಕಾರಗಳಿಗೆ ಬರೆದುಕೊಂಡಿದ್ದರು. ಆ ಪೈಕಿ ಅಮೇರಿಕದ ಉಪಕಾರ್ಯದರ್ಶಿ ಮಿ. ಎಡ್ವರ್ಡ್ ಸ್ಟೆಟಿನಸರ ಉತ್ತರ ಬಂದಿದೆ. ಆ ಸಮ್ಮೇಲನವು ಜಾಗತಿಕ ವ್ಯವಸ್ಥೆಗಾಗಿ ಕೂಡುವಂತಹದಾದ್ದರಿಂದ ಪ್ರತ್ಯೇಕ ರಾಷ್ಟ್ರವೊಂದರ ಭಿನ್ನ ಸಮಸ್ಯೆಯನ್ನೆತ್ತಿಕೊಳ್ಳುವದಸಾಧ್ಯವೆಂಬ ಕಾರಣದೊಡನೆ ಸರ್ದಾರರ ವಿನಂತಿ ತಿರಸ್ಕರಿಸಲ್ಪಟ್ಟಿದೆ. ಹಿಂದುಸ್ಥಾನದಲ್ಲಿ ಜನ ಮತ್ತು ಹಣಕ್ಕೆ ಕೊರತೆ ಇದ್ದರೂ, ಸ್ಥಾನವೂ ಇದೆಯೆಂಬುದು ಮಿತ್ರ ರಾಷ್ಟ್ರಗಳಿಗೆ ಗೊತ್ತಿಲ್ಲವಾದ್ದರಿಂದ ಇಂತಹ ಧಿಕ್ಕಾರಗಳು ಭಾರತೀಯರಿಗೆ ಹೊಸತಲ್ಲ. "ಡಂಬಾರ್ಟನ್ ಓಕ್ಸ್ ಪರಿಷತ್ತು ಹಿಂದೀ ಸಮಸ್ಯಾ ನಿವಾರಣೆ ಮಾಡದಿದ್ದರೆ ಅದು ಶಾಂತಿ ನಿರ್ಮಿಸುವ ಬದಲು ಯುದ್ಧ ನಿರ್ಮಿಸುವದೇ ಸರಿ' ಎಂದು ಸರ್ದಾರ್ ಸಿಂಗರು ಹಳೇ ಮಾಪರಿಯ ಬೆದರಿಕೆ ಹಾಕಿದ್ದಾರೆ. ಯುದ್ಧ ನಿರ್ಮಾಣದಿಂದ ಆಂಗ್ಲೋ-ಅಮೆರಿಕನರಿಗೆ ಪ್ರಯೋಜನವೇ ಇದೆ ಎಂಬುದು ಸ್ಪಷ್ಟವಾಗುತ್ತಿರುವ ಈ ಕಾಲದಲ್ಲಿ ಚರ್ಚಿಲ್ ರೂಸವೆಲ್ಟರನ್ನು ಹೆದರಿಸುವ ಮಾತು ಇದಲ್ಲ. ಹಿಂದುಸ್ಥಾನದ ಪರವಾಗಿ ಮಿತ್ರ ರಾಷ್ಟ್ರಗಳೊಡನೆ ಈ ರೀತಿ ಸ್ಥಾನ ಮಾನಗಳ ಯಾಚನೆ ಮಾಡುವ ಕಾಲ ಕಳೆದಿದೆ. ಜಾಪಾನೀ ಆಕ್ರಮಣದ ಭೀತಿಯಿದ್ದು ಕ್ರಿಪ್ಸ್ ಆಗಮನದ ಆ ಕಾಲದಲ್ಲಿ, ಇಂತಹ ಬೇಡಿಕೆಗಳಿಗೆ ಹೃದಯವನ್ನಿಟ್ಟಿವಾದರೂ ಕಿವಿಯಗೊಡಿಸುವ ಆವಶ್ಯಕತೆ ಮಿತ್ರ ಪ್ರಮುಖರಿಗೊದಗಿದ್ದಿತು. ಈಗ ಅಂತಹ ಭಯವಿಲ್ಲ, ಆವಶ್ಯಕವಿರುವದಕ್ಕಿಂತ ಹೆಚ್ಚಿನ ಔದಾರ್ಯವು ಪ್ರದರ್ಶಿಸಲು ಬ್ರಿಟನರಾಗಲೀ ಅಮೆರಿಕಾನರಾಗಲೀ ಕಲಿತಿಲ್ಲ. ಮುಂದಿನದು ಯುದ್ಧಜ್ವಾಲೆಯಲ್ಲಿ ಬೆಂದು ಪಕ್ವವಾಗಿ ಹೊರಬರುವ ಹೊಸ ಜಗತ್ತು, ಈ ಅವಧಿಯಲ್ಲಿ ನೆಹರುಗಳಂತಹ ತಂಟೆಕೋರರು ಪಶ್ಚಾತ್ತಿ ಗೃಹದಲ್ಲಿದ್ದರು. ಪ್ರಯತ್ನವನಾಡಿದವರಿಗೇನ್ ಪಾಲು? ಅದ್ದರಿಂದ ಯುದ್ಧ ಪ್ರಯತ್ನದಲ್ಲಿ ಸಹಕರಿಸಿದ ಸರ್. ಫಿರೋಜ್ ಖಾನ್ ನೂನರಂಥವರೇ ಶಾಂತಿ ಸಮ್ಮೇಲನದಲ್ಲಿ ಭಾಗವಹಿಸ ಬಹುದಲ್ಲದೆ ನೆಹರುಗಳಂಥವರಲ್ಲ—ಇಂತಹ ಪ್ರಾತಿನಿಧ್ಯ ದೊರೆಯಬೇಕಾದರೂ ಮುಂದಿನ ಜಾಪಾನೀ ಯುದ್ಧದಲ್ಲಿ ಹಿಂದುಸ್ಥಾನವು ಸರ್ವ ಶಕ್ತಿಯಿಂದ ಸಹಕರಿಸಿ ಆ ಯೋಗ್ಯತೆ ಸಂಪಾದಿಸಿಕೊಳ್ಳಬೇಕು. ಮಿತ್ರ ರಾಷ್ಟ್ರೀಯರ ಅಂತರ್ಯವು ಹೀಗಿರುವಾಗ ಕ್ವಿಬೆಕ್ ಸಮ್ಮೇಲನದಲ್ಲಾಗಲೀ ಮುಂದಿನ ಶಾಂತಿ ಸಮ್ಮೇಲನದಲ್ಲಾಗಲೀ ನಹರುಗಳಿಗೊಂದು 'ಸೀಟ್ ರಿಝರ್ವ್' ಮಾಡಿಸುವ ಸರ್ದಾರ್ ಸಿಂಗರಂಥವರ ಪ್ರಯತ್ನವು ನಿರರ್ಥಕವೇ ಸರಿ. ಅಂತಹ ಪ್ರಾತಿನಿಧ್ಯ ವಹಿಸುವದಕ್ಕಾಗಿ ವರ್ಕಿಂಗ್ ಕಮಿಟಿ ಸದಸ್ಯರನ್ನು ಸರಕಾರವು ಬಿಡುಗಡೆ ಮಾಡಬೇಕೆಂದಿಲ್ಲ. ಅದರ ಬಿಡುಗಡೆಯಲ್ಲಿ ಕಾಲೆರಾದಂತಹ ಭೀಕರ ಅಂಟುರೋಗಗಳು ಹಬ್ಬಿವೆ. ಈ ಸಂಕಷ್ಟದಿಂದ ತನ್ನನ್ನು ಪಾರುಮಾಡಲು ರಾಜೇಂದ್ರ ಪ್ರಸಾದರು ಬೇಕೆಂದು ಆ ಪ್ರಾಂತ್ಯ ಬೊಬ್ಬಿಡುತ್ತಿದೆ. ಅಲ್ಲಿಯ ಗವರ್ನರರೂ ಈ ಆವಶ್ಯಕತೆಯನ್ನು ಮನಗಂಡಂತಿದೆ. ಅಖಿಲ ರಾಷ್ಟ್ರದ ಒಂದು ಪ್ರಾಮುಖ್ಯ ಪ್ರಶ್ನೆಯನ್ನೆತ್ತಿಕೊಂಡಿರುವ ಗಾಂಧೀಜೀಗಂತೂ ಮೌಲಾನಾ ಆಜಾದರಂಥವರಿಲ್ಲದೆ ಹಿಂದೂ ಮುಸ್ಲಿಂ ಪ್ರಶ್ನೆಯ ನಿರ್ಣಯವಾಗಲು ಕಷ್ಟ. ಇದು ಕೋಲೆರಾ ನಿವಾರಣೆಯು ಕಾಯಿದೆಗೆ ವಿರುದ್ಧವಲ್ಲ, ಜಾತೀಯ ಒಪ್ಪಂದವು ಜಾಪಾನೀ ಸಂಬಂಧವಲ್ಲ. ಅಹಾರಾಭಾವ ನಿವಾರಣೆಗೂ ಆಧಿಕಾರಾಪಹಾರಕ್ಕೂ ವ್ಯತ್ಯಾಸವಿದೆ. ಅದ್ದರಿಂದ ಕಾಂಗ್ರೆಸ್ ಪ್ರಮುಖರನ್ನು ಬಿಡುಗಡೆ ಮಾಡಿದರೆ ಸರಕಾರಕ್ಕೆ ಬೇಡವಾದುದೇನೂ ಇನ್ನು ನಡೆಯುವಂತಿಲ್ಲ. ಕಾಯಿದೆ ಭಂಗದ ಸರ್ವಾಧಿಕಾರ ಪಡೆದಿದ್ದ ಗಾಂಧೀಜೀಯೇ ಬಿಡುಗಡೆ ಹೊಂದಿದ ಮೇಲೆ ಅದರ ಪುನರಾವರ್ತನೆ ಮಾಡಿಲ್ಲ. ಮಿಕ್ಕ ಕಾಂಗ್ರೆಸ್ ಪ್ರಮುಖರಿಗೆ ಆ ಅಧಿಕಾರವೆಂತೂ ಇಲ್ಲ, ಆಲೋಚನೆಯಿರುವದೂ ಅಸಾಧ್ಯ. ಆದರೂ ಅವರ ಬಿಡುಗಡೆಯಿಲ್ಲವೇಕೆ? ಹಿಂದೀಯರು ಕೂಡಾ ಪ್ರಕೃತ ಆ ವಿಷಯವನ್ನು ಮರೆತಿರುವರೇಕೆ? ಗಾಂಧೀಜೀಯ ಬಂಧವಿಮೋಚನೆಯಾಗುವ ವರೆಗೆ ಬಿಡುಗಡೆ ಯಾಚನೆಯು ಭಾರತದ ದೈನಿಕ ಬೊಬ್ಬೆಯಾಗಿದ್ದಿತು. ಮಹಾತ್ಮರು ಹೊರಬಂದೊಡನೆ ದೇಶೀಯರ ಲಕ್ಷ್ಯವನ್ನೆಳೆಯುವ ಇತರ ಘಟನೆಗಳು ಸಂಭವಿಸುತ್ತಾ ಹೋದುವು ಮಾತ್ರವಲ್ಲ, ಹಿಂದೀಯರು ಒಂದು ದೊಡ್ಡ ಕೊರತೆಯಾಗಿರುವ ವ್ಯಕ್ತಿ ಪ್ರಾಧಾನ್ಯತೆಯ ದಸೆಯಿಂದ ಗಾಂಧೀಜೀಯ ಬಿಡುಗಡೆಯೇ ಸರ್ವಸ್ವವಾಗಿ ಹೋಗಿ ಮಿಕ್ಕ ಧುರೀಣರನ್ನವರು ಮರೆತಂತಿದೆ. ಆದರೆ ಯಾವ ವ್ಯಕ್ತಿಯೂ ಸಂಪೂರ್ಣನಲ್ಲ, ಅಂತರ್ರಾಷ್ಟ್ರೀಯ ವಿಷಯಗಳಲ್ಲಿ ತನ್ನ ಗುರುವೆಂದು ಗಾಂಧೀಜೀಯೇ ಒಪ್ಪಿಕೊಂಡಿದ್ದ ಪಂಡಿತ ನೆಹರುಗಳಂಥವರು, ಜಾಗತಿಕ ಪ್ರಶ್ನೆಗಳೇ ಪ್ರತಿಯೊಂದು ರಾಷ್ಟ್ರದ ಮುಖ್ಯ ಪ್ರಶ್ನೆಯಾಗಿರುವ ಈ ಕಾಲದಲ್ಲಿ ಸೆರೆ ಹುಜೂರಿಯಾಗಿರುವ ಗಾಂಧೀಜೀಯೇ ಸತ್ಯಕಸ್ಕ್ರಾ ಅಪೂರ್ಣ ಮನುಷ್ಯ ಏಕೆ ಯಥಾ ಭಾವನವನ್ನು ವಿಚಾರಬುದ್ಧಿಯುಳ್ಳ ಜೀಕಾದ ಕಲಿದು, ಆದರೆ ಭಾರತೀಯರ ದಕ್ಷವಾದ ಗಾಂಧೀಜೀಯ ಪ್ರತಿಯೊಂದು ಮಾತನ್ನೂ ವೇದವಾಕ್ಯದಂತೆ ಪರಿಪಾಲಿಸುವವರು, ಅವರೇ ಹೇಳುತ್ತಿರುವ 'ನನ್ನಲ್ಲೆಷ್ಟೋ ದೌರ್ಬಲ್ಯಗಳಿವೆ' ಎಂಬೊಂದು ಮಾತನ್ನೊಪ್ಪಲಾರರು! ಗಾಂಧೀಜೀ ತಪ್ಪುಮಾಡಿದ, ವರ್ಕಿಂಗ್ ಕಮಿಟಿಯದನ್ನು ತಿದ್ದಿದ, ಹಲವು ದೃಷ್ಟಾಂತಗಳು ಕಾಂಗ್ರೆಸ್ ಚರಿತ್ರೆಯಲ್ಲಿವೆ. ಇಂದಿನ ಸಂದರ್ಭವಂತಹದೆಂಬುದು ನಿರ್ವಿವಾದ. ನೆಹರು ಆಜಾದರಂಥವರ ಆವಶ್ಯಕತೆಯೀಗ ಹೆಚ್ಚಿದೆ ಎಂಬುದನ್ನು ಯಾರೂ ಮರೆಯಬಾರದು.

ಕಣಗಲಹಿಟ್ಟನ್ನು (Tapioca flour) ಉಪಯೋಗಿಸಿ ಬಡುವ ಜಿಲ್ಲಾ ಕಲೆಕ್ಟರರ ಪ್ರಕಟಣೆಯೊಂದು ಹೊರಬಿದೆ. ಈ ಹಿಟ್ಟನ್ನು ಉಪಯೋಗಿಸ [illegible] ಅಕ್ಕಿ ಹಿಟ್ಟಿನೊಂದಿಗೆ ಈ ಹಿಟ್ಟನ್ನು ಉಪಯೋಗ ಮಾಡಿದರೆ ರೊಟ್ಟಿ ಮತ್ತು ತಿಂಡಿಗಳನ್ನು ಮಾಡಬಹುದು.

ಕುಂದಾಪುರ — ಸ್ಥಳೀಯ ಕಾಂಗ್ರೆಸ್ ಕೆಲಸಗಾರರು ಶ್ರೀ [illegible] ಸುಬ್ಬ [illegible] ರ ಅಧ್ಯಕ್ಷತೆಯಲ್ಲಿ ಸಭೆ ಸೇರಿ 'ಜನತಾ ಆಹಾರ ಸಮಿತಿ'ಯನ್ನು ಸ್ಥಾಪಿಸಿದರು. [illegible] ಗಳಲ್ಲಿ ಅಕ್ಕಿಯ ಅಭಾವ [illegible] ಸರಕಾರ [illegible] ಕಲೆಕ್ಟರರಿಗೆ ತಾರು ಕೊಡಬೇಕೆಂದಾಯಿತು.

ಕಾರ್ಕಳ — ವಿಜಯಾ [illegible] ಕಾರ್ಕಳ [illegible] ಶ್ರೀ [illegible] ಎಸ್ [illegible] ವರ್ಗವಾದ ಪ್ರಯುಕ್ತ, ಅವರ ಸೇವೆಯನ್ನು ಶ್ರೀ [illegible] ಪ್ರಶಂಸೆ [illegible] ಶ್ರೀ ಶ್ರೀನಿವಾಸ ನಾಯ್ಕ, ಶ್ರೀ [illegible] ಶ್ರೀನಿವಾಸ ಕಾಮತ್ [illegible], [illegible] ಕಾರ್ಯದರ್ಶಿ [illegible] ಶ್ರೀ ಕೆ [illegible] ಶ್ರೀ ಎಸ್ [illegible] B A L T, [illegible] ಶ್ರೀ [illegible] ಭಂಡಾರಿಯವರ [illegible] ಶ್ರೀಯುತ [illegible] ಸ್ಥಳೀಯ [illegible] ಶ್ರೀ [illegible] ಶಾಸ್ತ್ರಿ [illegible] ಕಾರ್ಯದಲ್ಲಿ [illegible]

ನವಯುಗ
ಪ್ರಕಟಣೆ

ನವರಾತ್ರಿ ಸಂಬಂಧ ಬರುವ ವಾರದ ಅಂದರೆ ತಾ 28-9-44ರ ನವಯುಗ ಸಂಚಿಕೆಯು ಹೊರಡುವುದಿಲ್ಲ

ಮ್ಯಾನೇಜರ್.

ತಡೆಗಳಲ್ಲಿ ಹೋಗಿ, ತುಂಬಾ ಅಕ್ಕಿ ತಪಾಸಣೆ ಮಾಡಿ 'ರಿಕ್ವಿಜಿಶನ' ಮಾಡುತ್ತಿರುವರು.

ಔಷಧಿ ವ್ಯಾಪಾರಿಗಳು ಕೆಲವು ಔಷಧ ಸಾಮಗ್ರಿಗಳ ಕೊರತೆಯಿಂದಾಗಿ ತಮ್ಮಲ್ಲಿರುವ ಕಂಟ್ರೋಲ್ ದಾಸ್ತಾನನ್ನು ಗ್ರಾಹಕರಿಗೆ ಕೊಡಲೊಪ್ಪುವದಿಲ್ಲ. ಇದು ಸರಿಯಾದ ಮಾರ್ಗವಲ್ಲವೆಂದೂ ಡಾಕ್ಟರರು ಕೊಟ್ಟ ಸರ್ಟಿಫಿಕೇಟುಗಳನ್ನು ಹಾಜರಪಡಿಸಿದ್ದಲ್ಲಿ ವ್ಯಾಪಾರಿಗಳು ಔಷಧಗಳನ್ನು ಕೊಡತಕ್ಕದೆಂದೂ ಜಿಲ್ಲಾ ಕಮರ್ಶಿಯಲ್ ಟೇಕ್ಸ್ ಆಫೀಸರರ ಪ್ರಕಟಣೆ ಜಾಹೀರು ಪಡಿಸಿಯದೆ.

ಜಿಲ್ಲಾ ಕಲೆಕ್ಟರರ ಪ್ರಕಟಣೆ ಅಕ್ಟೋಬರ, ನವಂಬರ ತಿಂಗಳಲ್ಲಿ ಹೊಸಅಕ್ಕಿ ತಯಾರಾಗಿ ಮಾರ್ಕೇಟಿಗೆ ಬರಬೇಕಾಗಿದೆ.—ದ ಕ ಜಿಲ್ಲೆಯ ಪೈರು ಕಟಾವು ಸದ್ಯವೇ ಆರಂಭವಾಗಲಿದೆ. ಜನರು ಭತ್ತವನ್ನು ಸಂಗ್ರಹಿಸಿ ಗುಪ್ತವಾಗಿಸಕೂಡದು. ಅದರ ಬದಲಾಗಿ ಭತ್ತವನ್ನು ತೀವ್ರ ಅಕ್ಕಿಯನ್ನಾಗಿ ಮಾಡಿ ಮಾರಾಟಕ್ಕೆ ಮಾರ್ಕೇಟಿಗೆ ತರಬೇಕಾಗಿದೆ. ಹಿಂದಿನ ಕಾಲದಂತೆ ಸಾವಕಾಶವಾಗಿ ಅಕ್ಕಿ ತಯಾರಿಸದೆ ಕೂಡಲೇ ಆ ಕೆಲಸಕ್ಕೆ ಪ್ರಾರಂಭಿಸಿ ಅಕ್ಟೋಬರ್ ನವಂಬರ ತಿಂಗಳುಗಳೊಳಗಾಗಿ ಅಕ್ಕಿ ಮಾರ್ಕೇಟಿಗೆ ಬರಬೇಕಾಗಿದೆ. ಈ ಭಾಗದಲ್ಲಿ ರೈತರೂ ವರ್ಗದಾರರೂ ಇತರರೂ ಸಹಕರಿಸಬೇಕಾಗಿದೆ.

ಕರ್ನಾಟಕ ಸಾಹಿತ್ಯ

ಪರಿಷತ್ತಿನ ಉಪಾಧ್ಯಕ್ಷರ ಮತ್ತು ಕಾರ್ಯದರ್ಶಿಗಳ ದಕ್ಷಿಣ ಕನ್ನಡ ಜಿಲ್ಲೆಯ ಪ್ರವಾಸ

ಸೆಪ್ಟಂಬರು ೨೪ ಬೆಳಿಗ್ಗೆ ಶಿವಮೊಗ್ಗೆಯಿಂದ ಪ್ರಯಾಣ, ೨೪ ಸಂಜೆ ಕೋಟೇಶ್ವರ, ೨೫ ಬೆಳಿಗ್ಗೆ ಉಡುಪಿಗೆ ಪ್ರಯಾಣ ೨೬ ಉಡುಪಿ ೨೭ ಸಂಜೆ ಕಾರ್ಕಳ. ೨೮ ಸಂಜೆ ಮೂಲ್ಕಿ ಮಾರ್ಗವಾಗಿ ಸುರತ್ಕಲ್ ೨೯ ಬೆಳಿಗ್ಗೆ ಸುರತ್ಕಲ್ಲಿನಿಂದ ಮಂಗಳೂರು ೩೦ ಸಂಜೆ ಪುತ್ತೂರು.

ಅಕ್ಟೋಬರು ೧ ಬೆಳಿಗ್ಗೆ ಪುತ್ತೂರಿನಿಂದ, ಸಂಜೆ ವಿಟ್ಲ [illegible] ೨ ರಂದು [illegible] ರಿಂದ ಪ್ರಯಾಣ ೩ ಸುಳ್ಯ [illegible]

ಬೆಂಗಳೂರು	ಕ ವೆಂ ಶ್ರೀನಿವಾಸ [illegible]
೧೧ ೯ ೪೪	ಕಾರ್ಯದರ್ಶಿ

ಸ್ವಾರ್ಕರ್ ಪೆನ್ ಕಳೆದು ಹೋಗಿದೆ—ನನ್ನ ಪಾರ್ಕರ್ ಫೌಂಟನ್ ಪೆನ್ [illegible] ಉಡುಪಿಯ [illegible] ನಲ್ಲಿ ಎಲ್ಲಿಯೋ ಹೋಗಿರುತ್ತದೆ (ಕಪ್ಪು ಬಣ್ಣದ [illegible]) ಇದು ಯಾರಿಗೆ ದೊರೆತರೂ ಅದನ್ನು ನವಯುಗ ಪ್ರೆಸ್ಸಿಗೆ ತಂದುಕೊಟ್ಟಲ್ಲಿ ತಕ್ಕ ಬಹುಮಾನ ಕೊಡಲಾಗುವುದು

ಪಾಂಗಾಳ ಲಕ್ಷ್ಮೀನಾರಾಯಣ ನಾಯಕ್

ನೋಟೀಸು.

ಕಾರ್ಕಳ ತಾಲ್ಲೂಕು ವರ್ಗದಾರರ ಸಂಘದ ಒಂದು ಮಹಾಸಭೆಯು ತಾ 26-9-1944ನೇ ಮಂಗಳವಾರ ದಿವಸ ಅಪರಾಹ್ನ 3-30 ಘಂಟೆಗೆ ಕಾರ್ಕಳ ಸ್ವರಾಜ್ಯ ಮೈದಾನದಲ್ಲಿ ಬಂಟರಯಾನೆ ನಾಡವರ ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ಜರಗುವುದು. ಬತ್ತದ ಅಕ್ಕಿ ರೆಕ್ವಿಜಿಶನ್ನು ವಿತರಣೆ ವ್ಯವಸ್ಥೆ ಅತಿ ಜರೂರು ಮತ್ತು ಮುಖ್ಯ ವಿಷಯಗಳ ಕುರಿತು ನಿರ್ಣಯಗಳು ಆಗಲಿರುವುದರಿಂದ ತಾಲೂಕಿನ ವರ್ಗದಾರರೆಲ್ಲರೂ ತಪ್ಪದೆ ಹಾಜರಿ ಇರಬೇಕಾಗಿ ವಿನಂತಿ

ಕೆ ಮಹಾಬಲ ಹೆಗ್ಡೆ. B. A. B. L.
ಜಾಯಿಂಟ್ ಸೆಕ್ರೆಟರಿ,
ಕಾರ್ಕಳ ತಾಲ್ಲೂಕು ವರ್ಗದಾರರ ಸಂಘ.
ತಾ 16-9 44
ಕಾರ್ಕಳ

ಉಡುಪಿ.
ಕಸ್ತೂರಿಬಾ ಸ್ಮಾರಕ ನಿಧಿ

ಶ್ರೀ. ಪಿ. ಲಕ್ಷ್ಮೀನಾರಾಯಣ ನಾಯ್ಕರ ವ ಶಂಕ ವಸೂಲಾದ ದು,
ತಿದ್ದುಪಡಿ.

(ಕಳದ ಸಂಚಿಕೆಯಲ್ಲಿ ಕೊಟ್ಟಕಾರ್ ಬಂಧುಗಳು ಮತ್ತು ಸಿಬಂದಿ ಎಂಬುದು ಕೊಟ್ಟಕಾರ್ ಬಂಧುಗಳ ಸಿಬಂದಿ ಎಂದೂ, ಕೆ. ದ ಮೋನಾಥ ನಾಮಂದ ಕಾಮತ್ ರೂ 50 ಎಂಬುದು ರೂ 5 ಎಂದೂ ಆಗಬೇಕು.)

ರೂ ೨೫ರಂತೆ ಕೊಟ್ಟವರು: ಪದ್ಮನಾಭಪ್ಪ, ಪಿ. ಜಗನ್ನಿವಾಸದಾಸಶೆಟ್ಟಿ, ಟಿ. ಗೋಪಾಲಪ್ಪ, ಬಡಗಬೆಟ್ಟು ಗೋವಿಂದ ಹೆಗ್ಡೆ

ರೂ ೧೦ರಂತೆ ಕೊಟ್ಟವರು ಶೀಸಗಿರಿ ಮಲ್ಯ, ಯು। ಸುಬ್ರಾಯ ಪಡಿಯಾರ್, ಪಿ ರಘುರಾಮ ಕುಂದಹೆಗ್ಡೆ, ಸಿ। ವೆಂಕಟರಾವ್, ಎಚ್। ಮಂಜುನಾಥ ಶೆಣೈ, ಎಡ್ ಕೇ, ಟಿ। ಅನಂತ ಕಿಣಿ, ಓ. ಮರ್ತಪ್ಪ ಕಿಣಿ, ಬಿ ಭವಾನಿಶಂಕರ ಹೆಗ್ಡೆ, ಬಿ। ಸದಾಶಿವ ಹೆಗ್ಡೆ, ಬಿ। ರಾಮಯ್ಯ ಹೆಗ್ಡೆ, ಬಿ ಗೋವಿಂದರಾಜ ಹೆಗ್ಡೆ, ಬಿ। ಅಕ್ಕಮ್ಮ ಹೆಗ್ಗಡತಿ, ಎಚ್ ಗೋಪಾಲಪ್ಪ, ಸಿ। ಎಸ್। ಮಾಧವರಾವ್. ಡಾಕ್ಟರ್. ಎಸ್. ಪದ್ಮನಾಭಶೆಟ್ಟಿ, ಬಿ। ಸಿ. ನಾಗಹೆಗ್ಡೆ, ಎ। ಕೃಷ್ಣಯ್ಯಹೆಗ್ಡೆ, ಎಚ್। ಸದಾಶಿವಹೆಗ್ಡೆ

ರೂ ೭ರಂತೆಕೊಟ್ಟವರು ಶ್ರೀನಿವಾಸಕಾಮತ್, ಜನಾಬ್ ಶೇಖ್ ಅಬ್ದುಲ್ ರಹಿಮಾನ ಸಾಹೇಬ್, ರೂ೫ರಂತೆ ಕೊಟ್ಟವರು. ಬಿ। ಅನಂತಪದ್ಮನಾಭ ಹೆಗ್ಡೆ, ಬಿ. ವಿಠ್ಠಲ ಹೆಗ್ಡೆ, ಬಿ। ಭುಜಂಗಹೆಗ್ಡೆ, ಪಾಂಡುರಂಗಪ್ರಭು, ಪವಿಯಾ ಭಂಡಾರಿ, ಎಸ್। ನಾರಾಯಣನಾಯ್ಕ, ಪುತ್ತು ಮಾನೆ ಅನಂತನಾಯ್ಕ, ಕೆ। ಆನಂದಹೆಗ್ಡೆ, ಎಸ್। ರಾಮಹೆಗ್ಡೆ, ಬಿ। ಸದಾನಂದ ಹೆಗ್ಡೆ, ಎಚ್। ವಿಠ್ಠಲಶೆಟ್ಟಿ, ಎಚ್। ಪಿರಿಯಣ್ಣ ಶೆಟ್ಟಿ, ಎಸ। ಭವಾನಿಶಂಕರಹೆಗ್ಡೆ, ಎಸ್। ಸದಾಶಿವಹೆಗ್ಡೆ, ಸಿ। ಗೋವಿಂದನಾಯ್ಕ, ಎಚ್। ಕೃಷ್ಣಯ್ಯ ಹೆಗ್ಡೆ, ಕೆ ಆನಂದಶೆಟ್ಟಿ, ಬಿ। ಶೇಖರಹೆಗ್ಡೆ, ಬಿ। ಪಿರಿಯಣ್ಣ ಹೆಗ್ಡೆ ಪಡುಮನೆ, ಎಚ್। ರಾಮಣ್ಣಹೆಗ್ಡೆ, ಬಿ ಕರುಣಾಕರಹೆಗ್ಡೆ, ಸಿ। ಕೃಷ್ಣಯ್ಯ ಶೆಟ್ಟಿ, ಎ। ಮಹೇಶಹೆಗ್ಡೆ ಬಿ ಸಂಜೀವಹೆಗ್ಡೆ, ಅಕ್ಕು ಯಾನೆ ಸೀರಕ್ಕ ಹೆಗ್ಗಡತಿ. ಸೂಧವನಾಯ್ಕ, ಸಿ। ಲಕ್ಷ್ಮೀನಾರಾಯಣ ಭಟ್ಟ, ಪಿ ವಾಸುದೇವ ಅಡಿಗ, ಪಿ, ಪದ್ಮನಾಭ ಅಡಿಗ, ಕೆ. ರಾಮಚಂದ್ರ ಕಲ್ಕೂರ, ಜಗನ್ನಾಥಮಲ್ಯ, ಪಿ. ಎಸ್ ಅನಂತಯ್ಯ ಹೆಬ್ಬಾರ್ ಮತ್ತು ಸಹೋದರರು, ಪಿ ನರಸಿಂಹ ಭಂಡಾರಕಾರ್, ಎ. ಶಿವರಾಮಶೆಟ್ಟಿ ಪಿ. ವಾಮನ ಶೇಷಗಿರಿಮಲ್ಯ ಮತ್ತು ಬಂಧುಗಳು, ಮೂಡ್ಲಗಿರಿ ರಾಮಚೋರ್, ನರಸಿಂಹ ಕಿಣಿ, ಪಟ್ಟಿಕೆರೆ ರಾಮಪ್ರಭು, ಎ ದೇವಪ್ಪ ಸುಡಾ, ಪಿ ಅಣ್ಣುಶೆಟ್ಟಿ, ಎಸ್ ರಾಮರಾವ್, ಸಿ ಕೆ ಅನಂತಯ್ಯ ಸೆಲ್ಲಿ, ಗುಂಡು ಯಾನೆ ವಿನಾಯಕಮಲ್ಯ ಎಸ್ ವಂಕಟರಮಣಭಟ್ಟ, ನಾರಾಯಣಾಚಾರಿ, ನಾಗಯ್ಯ ಶೆಟ್ಟಿ, ಎಚ್. ದೇವಪ್ಪ ವೆಂಕಟರಮಣಶೆಟ್ಟಿ ಬಿ. ರಾಘವಹೆಗ್ಡೆ, ಎ ಪೀರಣ್ಣ ಸೂಡ ಜೆ. ಪಿ ಶೇಖರ, ರಾಕರಶೆಟ್ಟಿ, ಬಿ ಮಂಜುನಾಥ ಪೈ, ಕೆ. ಕೆ ಪೈ, ಎಸ್. ಬಿ. ನಾಯಕ್, ಯು ಬಾಬುರಾವ್, ಕೆ ನಾಗಪ್ಪ, ಶ್ರೀನಿವಾಸರಾವ್. ಎಚ್ ಶೀನಮ್ಮ ಹೆಗ್ಗಡತಿ. ಬಿ ಸದಾನಂದಹೆಗ್ಡೆ, ಎಸ್ ವಾಸಪ್ಪಹೆಗ್ಡೆ, ಎ ಪಿರಿಯಣ್ಣ ಹೆಗ್ಡೆ, ಲಕ್ಷ್ಮಿಶೆಟ್ಟಿ, ರಾಮರಾಯ ಪುರಾಣಿಕ, ಡಾಕ್ಟರ - ರಾಜಗೋಪಾಲಾಚಾರ್. ದೇವಣ್ಣ ಸುಬ್ರಾಯಶೈ, ಆರ್ ಪುಂಡಲೀಕ ನಾಯಕ, ಬಿ ರಾಮದಾಸಪ್ಪೈ, ಕೆ. ಗಣಪಯ್ಯ ಕಾಮತ್, ಓ. ಗಣಪತಿರಾವ್. ಪಿ ಗೋಪಾಲರಾವ್, ಬಿ ಶ್ಯಾಮಶೆಟ್ಟಿ, ಜಿ. ಸುರೇಂದ್ರನಾಥ ನಾಯ್ಕ, ಕೆ ಬಿ ಶೆಣೈ, ಎಚ್. ಭಾಸ್ಕರ ಕಾಮತ್. ಪಿ. ವೆಂಕಟೇಶ ಕಾಮತ, ಡಾಕ್ಟರ್. ಬಿ ಕೃಷ್ಣಬಾಯರಿ, ಕೆ. ವಿಠ್ಠಲಕಾಮತ್, ಸಿ ಲಕ್ಷ್ಮಣಕಾಮತ್, ಡಾಕ್ಟರ್. ಎ ಎಸ್. ಹೆಬ್ಬಾರ್, ಮಹಾಬಲೇಶ್ವರ ಭಟ್ಟ, ಡಾಕ್ಟರ್ ಗೋವಿಂದಾಚಾರ್, ದ್ವೈ-

ಅನಂತಯ್ಯಹೆಗ್ಡೆ ಮತ್ತು ಬಂಧುಗಳು, ವೈ. ನಂಜಪ್ಪಹೆಗ್ಡೆ, ಎ. ಎಸ್. ನಾಗಣ್ಣ ಹೆಗ್ಡೆ, ಗಿರಿಯ ಪೂಜಾರಿ.

ಉಡುಪಿ ಬೋರ್ಡುಹ್ಯಾಸ್ಕೂಲನ್ನು ಮುಚ್ಚುವುದಿಲ್ಲ

ತಾ. 18ರಲ್ಲು ಜರಗಿದ ಜಿಲ್ಲಾ ಬೋರ್ಡಿನ ಸಭೆಯಲ್ಲಿ ಉಡಪಿಯ ಬೋರ್ಡುಹ್ಯಾಸ್ಕೂಲನ್ನು ಮುಚ್ಚಬೇಕೋ ಬೇಡವೋ ಎಂಬುದರ ಕುರಿತು ಚರ್ಚೆ ನಡೆಯಿತು. "ಉಡುಪಿ ಬೋರ್ಡ ಹ್ಯಾಸ್ಕೂಲನ್ನು ಮುಚ್ಚಲು ನಿರ್ಧರಿಸುತ್ತದೆ" ಎಂಬ ಶ್ರೀ. ಇತ್ತಪ್ಪ ರೈಗಳವರು ಕಂಡ ಠರಾವು ಓಟಿಗೆ ಹಾಕಲ್ಪಟ್ಟಿತು 14 ಮಂದಿ ನಿರ್ಣಯಕ್ಕೆ ವಿರೋಧವಾಗಿಯೂ 10 ಮಂದಿ ಪರವಾಗಿಯೂ ಮತ ಕೊಟ್ಟರು.

ಪ್ರಗತಿಶೀಲ ಲೇಖಕರ ಸಂಘ.

ಕನ್ನಡ ಲೇಖಕರ ಸಭೆಯೊಂದು ತಾ 10ನೇ ಸಂಜೆ ಪತ್ರಿಕೋದ್ಯೋಗಿ ಸಂಘದ ಕಟ್ಟಡದಲ್ಲಿ ಜರಗಿ, ಪ್ರಗತಿಶೀಲ ಲೇಖಕರ ಸಂಘವೊಂದು ಸ್ಥಾಪಿಸಲ್ಪಟ್ಟಿತು. ಶ್ರೀ। ಕೆ. ಕೆ, ಶೆಟ್ಟರನ್ನು ಕಾರ್ಯದರ್ಶಿಯಾಗಿ ಆರಿಸಲಾಯಿತು. ಸಂಘದ ಉದ್ದೇಶ, ಧ್ಯೇಯ ಧೋರಣೆಗಳನ್ನು ಸ್ಪಷ್ಟಪಡಿಸುವ ಒಂದು ಉದ್ಘೋಷಣೆಯನ್ನು ಸಭೆಯು ಸ್ವೀಕರಿಸಿತು.

ಮೂಲ್ಕಿ:—ಇಲ್ಲಿ ಅಕ್ಕಿ ಪರಿಸ್ಥಿತಿಯು ತೀರಾ ಪಿಕ್ಕಟ್ಟಿಗ ಬಂದಿದ್ದು ಬಡಜನರು ಕಂಗಾ ... ಗೈತಿಯಲ್ಲಿರುವುದನ್ನು ಕಂಡು, ನಮ್ಮ ಮಂಗಳೂರು ತಾಲೂಕು ತಹಶೀಲ್ದಾರರು ಶ್ರೀಯುತ. ನರಸಿಂಹರವರು ಇಲ್ಲಿಗೆ ಅವಸರದಲ್ಲಿ ಬಂದು, ಇಲ್ಲಿಯ ವರ್ತಕರ ಬಳಿಗೆ ತಾವಾಗಿ ಹೋಗಿ, ಬಡಜನರ ಕಷ್ಟ ಸಂಕಷ್ಟಗಳ ಚಿತ್ರವನ್ನು ಅವರ ಮುಂದಿಟ್ಟು ಅವರಲ್ಲಿರುವ ಮಿಗಿತೆ ಅಕ್ಕಿಯನ್ನು ಅತ್ಯಸಂತೋಷದಿಂದ ಕೊಟ್ಟು ಉಪಕಾರಮಾಡಬೇಕೆಂದು ನಯವಾಗಿ ವಿನಯಿಸಿ ಹೇಳಿದ ಮೇರೆಗೆ, ಇಲ್ಲಿಯ ವ್ಯಾಪಾರಿಗಳು ಉದಾರ ಮನಸ್ಸಿನಿಂದ ಅಲ್ಪಸ್ವಲ್ಪ ಅಕ್ಕಿಯನ್ನು ಕೊಟ್ಟು, ಬರೇ ಕೆಲವು ತಾಸುಗಳ ಪರಿಶ್ರಮದಿಂದ ಸುಮಾರು 130 ಮುಡಿ ಅಕ್ಕಿ ಸಂಗ್ರಹವಾಯಿತು ಸ್ತುತ್ಯ ಕಾರ್ಯವಾಗಿದೆ ಇ ರೀತಿ ಬಡಜನರ ಕಷ್ಟ ನಿವಾರಣೆಗೆ ಪರಿಶ್ರಮವಹಿಸಿ ಕೆಲಸ ಮಾಡಿದ ನಮ್ಮ ತಾಲೂಕು ತಹಶಿಲ್ದಾರ್ ಶ್ರೀ। ಯುತ ನರಸಿಂಹರವರೂ ಅತ್ಯಸಂತೋಷದಿಂದ ಅಕ್ಕಿಯನ್ನು ಕೊಟ್ಟು ಸಕಾಲದಲ್ಲಿ ಸಹಾಯ ಮಾಡಿದ ಪುರಜನರೂ ವಂದನಾರ್ಹರು. ಇದೇ ರೀತಿಯಲ್ಲಿ ಎಲ್ಲೆಡೆಯಲ್ಲಿಯೂ ಉದಾರಿಗಳು ಮುಂದೆ ಬಂದರೆ ಬಡಜನರು ಈ ಕಷ್ಟಕಾಲದಲ್ಲಿ ಬದುಕಬಹುದು. ನಮ್ಮ ರೇಷನಿಂಗಾಫೀಸರರ ಸದಯಾಂತಃಕರಣದ ದೆಸೆಯಿಂದ ಮಂಗಳೂರಿನಿಂದ ಇಲ್ಲಿಗೆ 750 ಮುಡಿ ಅಕ್ಕಿ ಬರುವಂತಾದುದು ಬಡಜನರ ಪುಣ್ಯವೆಂದು ಹೇಳಬಹುದು. ಇಲ್ಲಿಯ ಬಡಬಗ್ಗರು ಮೂವರು ತಹಶೀಲ್ದಾರರಿಗೆ ಚಿರ ಋಣಿಗಳಾಗಿರುವರು.

ಬೊಂಬಾಯಿ

ಬಂಗಾಳ ನಿರಾಶ್ರಿತರಿಗೆ ಜೀವದಾನ ಮಾಡುವ ಸದುದ್ದೇಶದಿಂದ ಜನ್ಮ ತಾಳಿದ ಬಂಗಾಳ ಮೆಡಿಕಲ್ ರಿಲೀಫ್ ಕಮಿಟಿ, ಬೊಂಬಾಯಿ ಈ ಸಂಸ್ಥೆಯವರು ಔಷಧ ಕಟ್ಟಿ ಕಾಲದಲ್ಲೂ ಶಕ್ತಿ ಮೀರಿ ಔಷಧಿಗಳನ್ನು ಒದಗಿಸಿ ಅನೇಕ ಮಂದಿಯನ್ನ ಸಾಂಕ್ರಾಮಿಕ ರೋಗಗಳಿಂದ ಪಾರುಮಾಡಿರುವರು. ಮಹಾ ಜನರು ಹೆಚ್ಚು ಹೆಚ್ಚಾಗಿ ದ್ರವ್ಯ ಸಹಾಯವನ್ನಿತ್ತು ಇತರ ರೀತಿಯಿಂದ ಸಹ ನೆರವಾಗಬೇಕಾಗಿದೆ.

ಪತ್ರಿಕಾ ವ್ಯವಸಾಯಿ ಶ್ರೀ। ಬಿ ಜಿ ಹಾರ್ನಿಮನರ ಸುವರ್ಣ ಮಹೋತ್ಸವವು ಸದ್ಯವೇ ಜರಗಿರುವ ಸುಮುಹೂರ್ತದಲ್ಲಿ ಅವರಿಗೊಂದು ಥೈಲಿಯನ್ನು ಅರ್ಪಿಸುವ ನಿರ್ಧಾರವಾಗಿರುವುದು. ಶ್ರೇಷ್ಠ ಪತ್ರಿಕಾ ವ್ಯವಸಾಯಿಗಳ ಅಭಿಮಾನಿಯರೂ ಉದಾರ ಬುದ್ಧಿಯಿಂದ ದ್ರವ್ಯ ಸಹಾಯವನ್ನೀಯಬೇಕಾಗಿ ಹಾರ್ನಿಮನ್ ಗೋಲ್ಡನ್ ಜುಬಿಲಿ ಕಮಿಟಿಯ ವಿನಂತಿಯಿದೆ.

ನಿಮಗೆ ಯಾವದು ಬೇಕು?



ಆಹಾರ ಪದಾರ್ಥ



ಬಟ್ಟೆ ಮತ್ತು

ಸೌದೆ

ಅಥವಾ



ರೈಲ್ವೆ ಪ್ರಯಾಣ?

ಎರಡೂ ಬೇಕೆಂದರೆ, ಸಿಗಲಾರವು. ರೈಲ್ವೆಯವರು ಹಿಂದೂಸ್ಥಾನದ ಎಲ್ಲಾ ಭಾಗಗಳಿಗೂ ಜೀವನಕ್ಕೆ ಅತ್ಯವಶ್ಯಕವಾದ ಪದಾರ್ಥಗಳನ್ನು ತಪ್ಪದೆ ಒದಗಿಸಿಕೊಡುವ ಭರವಸೆಯನ್ನು ಕೊಡಲಾಗುವುದಿಲ್ಲ ಮತ್ತು ಜನಗಳಿಗೆ ಪ್ರಯಾಣಮಾಡಲು ರೈಲುಗಾಡಿಗಳಲ್ಲಿ ಮಿತಿಯಿಲ್ಲದಷ್ಟು ಸ್ಥಳವನ್ನು ಒದಗಿಸಿಕೊಡುವ ಭರವಸೆಯನ್ನೂ ಕೊಡಲಾಗುವುದಿಲ್ಲ. ಸಾಕಾದಷ್ಟು ಎಂಜಿನ್ನುಗಳು, ಗಾಡಿಗಳು, ವಾಗಿನ್ನುಗಳು ಅವರಲ್ಲಿಲ್ಲ.

ಇಂತಹ ಪರಿಸ್ಥಿತಿಯಲ್ಲಿ ಹಿಂದೂಸ್ಥಾನಕ್ಕೆ ರೈಲ್ವೆಯವರ ಕರ್ತವ್ಯವು ತಿಳಿದೇ ಇದೆ. ಆಹಾರಪದಾರ್ಥ, ಬಟ್ಟೆ ಮತ್ತು ಸೌದೆ ಇವು ಪ್ರಥಮದಲ್ಲಿ ಬರುತ್ತವೆ. ಇವು ಜೀವನಕ್ಕೆ ಅತ್ಯವಶ್ಯಕವಾದವುಗಳು. ಇವುಗಳಿಲ್ಲದಿದ್ದರೆ, ಜನರು ಸಾಯುವರು. ಈ ಕಾರಣದಿಂದಲೇ ಈಗ ಪ್ಯಾಸೆಂಜರ್ ಗಾಡಿಗಳು ಅಷ್ಟೊಂದು ಭರ್ತಿಯಾಗಿ, ಸ್ವಲ್ಪವೂ ಸೌಖ್ಯವಿಲ್ಲದೆ ಇರುತ್ತವೆ. ಇದಕ್ಕಾಗಿಯೇ ನೀವುಗಳು ಮನೆಯಲ್ಲಿಯೇ ಉಳಿಯಬೇಕು. ಮತ್ತು ತನ್ಮೂಲಕ ನಿಮ್ಮ ಜೀವನಕ್ಕೆ ಅತ್ಯವಶ್ಯಕವಾದ ಪದಾರ್ಥಗಳು ನಿಮಗೆ ದೊರೆಯುವಂತೆ ಸಹಾಯ ಮಾಡಿಕೊಳ್ಳಬೇಕು.

ಕಡಮೆಯಾಗಿ ಪ್ರಯಾಣಮಾಡಿರಿ

ದ. ಕ. ಜಿಲ್ಲೆಯ ಕಸ್ತೂರಿ!

ದಕ್ಷಿಣ ಕನ್ನಡ ಜಿಲ್ಲೆಯ ಕಸ್ತೂರಿ ಬಾ ಸಮಿತಿಯ ಪ್ರಧಾನ ಕಾರ್ಯದರ್ಶಿಗಳು ಇದೇ ತಾ. 16ರ ವರೆಗಿನ ಲೆಕ್ಕಾಚಾರ ಪ್ರಕಟಿಸಿದ್ದಾರೆ. ಜಿಲ್ಲೆಯಲ್ಲಿ ಅದುವರೆಗೆ ಸಂಗ್ರಹವಾದ ರೂ.10520—0—0

× × ×

ತಾಲೂಕುವಾರಾಗಿ ಮಂಗಳೂರು ...000, ಉಡುಪಿ 4000, ಕಾರ್ಕಳ ...000, ಪುತ್ತೂರು 520, ಕಾಸರಗೋಡು ...00, ಕುಂದಾಪುರ 500.

× × ×

ಈ ಅಂಕೆಗಳಲ್ಲಿ ಆಣೆ ಪೈಗಳೇ ಇಲ್ಲ.

ದಕ್ಷಿಣ ಕನ್ನಡಿಗರು ಚಿಲ್ಲರ ಮನುಷ್ಯರಲ್ಲ!

× × ×

ಪುತ್ತೂರು ತಾಲೂಕೊಂದು 20 ರೂ. ಚಿಲ್ಲರೆ ಕೊಡದಿರುತ್ತಿದ್ದರೆ ದಶಮಸ್ಥಾನಗಳು ಕೂಡಾ ಖಾಲಿ ಬೀಳುತ್ತಿದ್ದವು. 'ನೂರು ನೂರ ಊರು' ಎಂಬ ಬಿರುದಾದರೂ ದಕ್ಷಿಣ ಕನ್ನಡಕ್ಕೆ ಬರುತಿತ್ತು.

× × ×

'ಇದೇ ತಿಂಗಳ 25ರ ನಂತರ ಯಾವ ತಾಲೂಕಿನಲ್ಲೂ ಹಣ ಸಂಗ್ರಹಿಸಬಾರದು' ಎಂದು ಕಾರ್ಯದರ್ಶಿಯ ಕಟ್ಟಪ್ಪಣೆ.

× × ×

ತಾ. 16ರ ವರೆಗಿನ ಸುಮಾರು ಎರಡು ತಿಂಗಳಲ್ಲಿ ಒಟ್ಟಾದ ಹಣ ಹತ್ತೂವರ ಸಾವಿರ ಮಾತ್ರ.

× × ×

2 ತಿಂಗಳಲ್ಲಿ 10½ ಸಾವಿರ ಒಟ್ಟಾದರೆ ಇನ್ನುಳಿದ 9 ದಿನಗಳಲ್ಲ ಎಷ್ಟು ಒಟ್ಟಾದೀತು?

× × ×

ಎಷ್ಟು ಒಟ್ಟಾಗಬೇಕು? ಇದೇ ದ. ಕ. ಸಮಿತಿಯು ಆದಿಯಲ್ಲಿ ಇಟ್ಟುಕೊಂಡಿದ್ದ ಗುರಿ ಕಡಿಮೆಯೆಂದರೆ 30 ಸಾವಿರ.

× × ×

ಎರಡು ತಿಂಗಳ ಸಂಗ್ರಹ 10½ ಸಾವಿರವಾದರೆ ಇನ್ನೊಂಭತ್ತೇ ದಿನಗಳಲ್ಲಿ 19½ ಸಾವಿರ ಒಟ್ಟಾದೀತೆ?

× × ×

ಮುಂದಿನ ದಿನವೊಂದಕ್ಕೂ ಇಪ್ಪತ್ತನಾಲ್ಕೇ ಘಂಟೆಯೆಂಬುದು ನೆನಪಿರಲಿ.

× × ×

ಜಿಲ್ಲಾ ಸಮಿತಿ ಮತ್ತು ತಾಲೂಕು ಸಮಿತಿಗಳಲ್ಲಿರುವವರೆಲ್ಲಾ 'ಖಂಡಿ ತೂಕ'ದ ಮನುಷ್ಯರೆಂಬುದಂತೂ ಅಗತ್ಯ ಜ್ಞಾಪಕದಲ್ಲಿರಲಿ.

× × ×

ಬಹಳ ಭಾರವಿದ್ದುದು ಚಲಿಸುವದಿಲ್ಲ; ಆದರೆ ತಿರುಗಾಡದೆ ಹಣ ಸಂಗ್ರಹವಾಗುವದಿಲ್ಲ.

× × ×

ಸಮಿತಿಗಳಲ್ಲಿರುವ ಭಾರದ ಯಾನೆ ಬಾರದ ಮನುಷ್ಯರನ್ನು ಹಣ ಸಂಗ್ರಹಕ್ಕಾಗಿ ಎಬ್ಬಿಸಿ ಹೊರಡಿಸಲು ಹಿಡಿಯಬಹುದಾದ ಕಡಿಮೆ ಅವಧಿಯೆಂದರೆ 15 ದಿನ.

× × ×

ಅರ್ಥಾತ್ ಈ ದೊಡ್ಡ ಮನುಷ್ಯರೆಲ್ಲಾ ನಿಧಿ ಸಮರ್ಪಣೆಯ ದಿನ-ಗಾಂಧೀಜೀಯ ಹುಟ್ಟು ಹಬ್ಬ-ಒಕ್ಟೋಬರ್ 2ಕ್ಕೆ ಎದ್ದು ನಿಲ್ಲುವದು ಖಂಡಿತ

× × ×

ಹಾಗಾದರೆ ನಿಶ್ಚಿತ ಸಮಯದೊಳಗೆ ನಿಶ್ಚಿತ ಗುರಿಯಾದ 30 ಸಾವಿರ ರೂಪಾಯಿ ದಕ್ಷಿಣ ಕನ್ನಡದಲ್ಲಿ ಜಮೆಯಾದೀತೆ ಎಂಬ ಪ್ರಶ್ನೆಯಿದೆ. 'ಗೊತ್ತಿಲ್ಲ' ಎಂಬುದೇ ಉತ್ತರ.

× × ×

ಯಾಕೆ ಗೊತ್ತಿಲ್ಲ ಗೊತ್ತೆ? ನಿಧಿ ಹಗುರವಿದ್ದರೂ ಸಮಿತಿಯ ಸದಸ್ಯರ ಹೆಸರು ಬಹಳ ಭಾರವಿದೆ.

× × ×

ಸಹಾಯ ಧನದ ಪಟ್ಟಿಯೊಂದಿಗೆ ಸಮಿತೀ ಸದಸ್ಯರ ಹೆಸರುಪಟ್ಟಿಯನ್ನೂ ಕಳುಹಿಸಿದರಾಯಿತು-ತೂಕಭರ್ತಿ!

× × ×

ವಿಸ್ತಾರದಲ್ಲಿ ದೊಡ್ಡ ತಾಲೂಕು ಪುತ್ತೂರು; ಶ್ರೀಮಂತಿಕೆಯಲ್ಲಿ ಮೊದಲ ತಾಲೂಕು ಮಂಗಳೂರು. ಆದರೆ ಹಣ ಸಂಗ್ರಹದಲ್ಲ ಉಡುಪಿ ಮೊದಲು

× × ×

ಕಾರಣ-ಉಡುಪಿ ಕಾರ್ಯದರ್ಶಿಯ ಹೆಸರು ಮಾತ್ರ ತಿರುಗಾಡಿದುದಲ್ಲ-ಅವರೇ ತಿರುಗಾಡಿ ಸಂಗ್ರಹಿಸಿದರು; ಲಘು ಮನುಷ್ಯ!

× × ×

ದೊಡ್ಡ ಮನುಷ್ಯರ ಮರ್ಜಿ ಹಾಗಿಲ್ಲ. ಅವರೆಲ್ಲಿಗೂ ಹೋಗಲಾರರು, ಆದರೆ ತಮ್ಮ ಹೆಸರನ್ನು ಕರೆದಲ್ಲಿಗೆಲ್ಲಾ ಕಳುಹಬಲ್ಲರು.

× × ×

ಕಸ್ತೂರಿಬಾಗೆ ಯೋಗ್ಯ ಸ್ಮಾರಕವೆನ್ನಬೇಕು ಈ ಮರ್ಜಿಯನ್ನೇ.

× × ×

ಕಸ್ತೂರಿ ಬಾ ಇಲ್ಲ-ಅವರ ಹೆಸರು ಮಾತ್ರವಿದೆ. ಈ ಸಮಿತಿಯಲ್ಲೂ ದೊಡ್ಡ ಮನುಷ್ಯರಿಲ್ಲ-ಅವರ ಹೆಸರು ಮಾತ್ರವಿದೆ.

× × ×

ಇದಕ್ಕೆನ್ನಬೇಕು ಯೋಗ್ಯ ಸ್ಮಾರಕವೆಂದು—ಅಥವಾ—ಸ್ಮಾರಕಕ್ಕೆ ಯೋಗ್ಯರೆಂದು!

—'ಜಿಲ್ಲಾ ಭವಾನಿ'.

ಇಂತಹ ಅನರ್ಥಕ್ಕೆ ಅವಕಾಶ ಕೊಡಲು

ನೀವು ಎಂದಿಗೂ ಇಷ್ಟಪಡಲಾರಿರಿ.

ಆದ್ದರಿಂದ ಅತ್ಯವಶ್ಯಕವಾದ ಪದಾರ್ಥಗಳನ್ನು ಮಿತವಾಗಿ ಕೊಂಡುಕೊಂಡಾಗೆಲ್ಲಾ, ಸಂಭವಿಸತಕ್ಕದ್ದು ಈ ಅನಿಷ್ಟವೇ. ಪದಾರ್ಥಗಳ ಬೆಲೆ ಮಿತಿ ಮೀರಿ ಏರಿರುವುದರಿಂದ, ನಿಮಗೆ ನಿಜವಾಗಿಯೂ ಆವಶ್ಯವಿಲ್ಲದ ಪದಾರ್ಥಗಳನ್ನು ನೀವು ಕೊಂಡುಕೊಳ್ಳುವ ಪ್ರತಿಯೊಂದಾವರ್ತಿಯೂ, ಶ್ರಮಾರ್ಜಿತವಾದ ನಿಮ್ಮ ಧನವು ಹಾಳಾಗುವುದು. ಆದುದರಿಂದ ವಿವೇಕಿಗಳಾಗಿರಿ. ಅನಿರ್ವಾಹಗಳು ಯಾವನ್ನೋ ಅಂತಹ ಪದಾರ್ಥಗಳನ್ನು ಮಾತ್ರ ಕೊಂಡುಕೊಳ್ಳಿ. ಯುದ್ಧಕಾಲದಲ್ಲಿ, ಪದಾರ್ಥಗಳ ಬೆಲೆ, ನಮ್ಮ ಹಣಕ್ಕೆ ಅನುರೂಪವಾಗಿರುವುದಿಲ್ಲ. ಯುದ್ಧಕಾಲದಲ್ಲಿ ಹೆಚ್ಚು ಬೆಲೆಯನ್ನು ಕೊಟ್ಟು ಅನವಶ್ಯಕವಾದ ಪದಾರ್ಥಗಳನ್ನು ಕೊಂಡುಕೊಳ್ಳುವುದರಲ್ಲಿ ಹಣವನ್ನು ವೆಚ್ಚ ಮಾಡುವುದು, ಹಾಳು ಭಾವಿಯಲ್ಲಿ ಹಾಕಿದಂತೆಯೇ.

ಆಭರಣಗಳು, ಜಮೀನುಗಳು, ಕಟ್ಟಡಗಳು, ಸರಕುಗಳು, ಕೈಗಾರಿಕೆ ಸಾಮಾನುಗಳು, ಇವುಗಳಿಗಾಗಿ ನೀವು ವೆಚ್ಚ ಮಾಡುವದರಿಂದ, ಬಂಡವಾಳಕ್ಕೇನೆ ಅಪೋಹವುಂಟಾಗುವುದು. ಅವುಗಳ ಬೆಲೆಗಳು ಸ್ಥಿರವಲ್ಲ. ಆದುದರಿಂದ ಎಚ್ಚರಿಕೆ ತಪ್ಪಿ, ತಪ್ಪುಹೆಜ್ಜೆಯನ್ನಿಡಬೇಡಿ. ಈಗ ಬೆಲೆಗಳು ಏರುವುದಕ್ಕೆ ಬದಲಾಗಿ ಇಳಿಮುಖವಾಗಿರುವಂತೆ ಕಾಣುತ್ತವೆ.

ಹಾಗಾದರೆ, ಭದ್ರತೆ ಮತ್ತು ಲಾಭಕರ, ಈ ಎರಡು ಗುಣಗಳನ್ನೂ ಹೊಂದಿರುವ, ಧನವಿನಿಯೋಗ ಮಾರ್ಗಗಳು ಯಾವುವೆಂದರೆ: —

- ★ ಇನ್‌ಷೂರೆನ್ಸ್ ಅಂದರ ವಿಮೆ,
- ★ ಕೋ-ಆಪರೇಟಿವ್ ಸಂಘಗಳು,
- ★ ಬ್ಯಾಂಕುಗಳಲ್ಲಿ ಕಲ್ಪಿಸಿರುವ ಉಳಿತಾಯ ಸೌಕರ್ಯಗಳು,
- ★ ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕುಗಳು,
- ★ ಗವರ್ನಮೆಂಟ್ ಲೋನ್‌ಗಳು,
- ★ ಮತ್ತು ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳು.

ಸುರಕ್ಷಿತವಾದ ಧನವಿನಿಯೋಗದಿಂದ ದೊರೆಯುವ ಬಡ್ಡಿಯು ಕಡಿಮೆಯಾಗಬಹುದು, ಆದರೆ, ಅಸಲು ಭದ್ರವಾಗಿರುವುದು —ಯುದ್ಧಕಾಲದಲ್ಲಿ ಧನವಿನಿಯೋಗಮಾಡುವ ಉದ್ದೇಶವುಳ್ಳವರು ಗಮನಿಸಬೇಕಾದ ವಿಚಾರವು ಇದೇ ಅಲ್ಲವೆ?

ಹಣವನ್ನು ಕೈಲಾದ ಮಟ್ಟಿಗೂ ಉಳಿಸಿರಿ

ಉಳಿಸಿದ್ದನ್ನು ವಿವೇಕಮಾರ್ಗಗಳಲ್ಲಿ ವಿನಿಯೋಗಿಸಿರಿ.

ಇದು ರಾಷ್ಟ್ರೀಯ ಯುದ್ಧಮುಖವು ಭಾರತೀಯರ ಸಮಕ್ಷಮದಲ್ಲಿ ಮಾಡುವ ಅರಿಕೆ

AAA 1112 KN

ಸಿಗ್ ಫ್ರೆಡ್ ಕೋಟೆಯ ಸಮರಸನ್ನಾಹ!

ಜರ್ಮನಿ ಎರಡು ಕಡೆಗೆದೆಯೊಡ್ಡಿದೆ!

ಯುರೋಪು ಯುದ್ಧದ ಕೊನೆಯ ಅಂಕವೀಗ ಆರಂಭವಾಗಿದೆ. ಅನ್ಯರಾಷ್ಟ್ರಗಳ ಆಕ್ರಮಣದ ರುಚಿಯರಿತ ನಾಜೀಸೇನೆಯೀಗ ಸ್ವರಾಷ್ಟ್ರದ ಆಕ್ರಮಣ ವಿರೋಧದ ಕಹಿಯನ್ನನುಭವಿಸುವ ಕಾಲ ಬಂದಿದೆ. ಅಂತೆಯೇ ಇಡೀ ಯುರೋಪನ್ನೊಂದು ಕಾಲದಲ್ಲಿ ಮುಷ್ಟಿಯೊಳಗಿಟ್ಟುಕೊಂಡಿದ್ದ ಜರ್ಮನರ ಹಸ್ತವು ಕೊನೆಗಾಲದಲ್ಲಿ ಸ್ವರಾಷ್ಟ್ರವನ್ನಾದರೂ ಗಟ್ಟಿಹಿಡಿದುಕೊಳ್ಳುವುದು ಖಂಡಿತವಾದುದರಿಂದ ಮುಂದಿನ ಹೋರಾಟವು ಇನ್ನಷ್ಟು ಭೀಕರವಾಗಲಿದೆ

ಜರ್ಮನಿಗೆ ಸಾವು

ಪ್ರಕೃತ ಮುಖ್ಯವಾಗಿ ಪಶ್ಚಿಮದಿಂದ ಜರ್ಮನಿಗೆ ಪ್ರಾಣಾಪತ್ತು ಬಂದಿದೆ. ಫ್ರಾನ್ಸ್, ಬೆಲ್ಜಿಯಮ್ ಮತ್ತು ಲಕ್ಸೆಂಬರ್ಗಿನಿಂದ ಮುಂದೊತ್ತಿದ ಮಿತ್ರಸೇನೆಗಳು ಹಲವು ಕಡೆಗಳಲ್ಲಿ ಜರ್ಮನ್ ಗಡಿಯೊಳಗೆ ನುಗ್ಗಿಹೋಗುತ್ತಿವೆ. ಈಗ ನಾಜಿಗಳ ಅಭೇದ್ಯಕೋಟೆ ಸಿಗ್ ಫ್ರೆಡ್ ಲೈನಿನ ಕಾಳಗವಾರಂಭವಾಯಿತೆನ್ನಬೇಕು. ಜರ್ಮನ್ ರಾಷ್ಟ್ರದ ಪಶ್ಚಿಮ ಸರಹದ್ದಿನ ಉತ್ತರದಲ್ಲಿ ಒಪ್ರಿಗೆಸ್‌ನಿಂದ ದಕ್ಷಿಣದಲ್ಲಿ ಬೆಲ್‌ಫೋರ್ಟಿನ ವರೆಗಿನ ಸುಮಾರು 500 ಮೈಲುದ್ದಕ್ಕೂ ಜನರಲ್ ಐಸನೋವರ 5 ಸೇನೆಗಳು ಪ್ರಲಯ ಪ್ರವಾಹದಂತೆ ಪ್ರತ್ಯಕ್ಷ ಜರ್ಮನಿಯೊಳಗೆ ನುಗ್ಗುತ್ತಿವೆ. ಕರಾವಳಿ ಹಿಡಿದು ಸಾಗಿದ ಪ್ರಥಮ ಕೆನಡಾ ಸೇನೆ, ಯು ಬೋಟು ನಿಲ್ದಾಣವಾದ ಝೀಬ್ರಗ್ಗೆಯನ್ನು ವಶಪಡಿಸಿಕೊಂಡು ಮುಂದೆ ಹೋಗಿದೆ. ಇನ್ನೊಂದೆಡೆಯಿಂದ ಬ್ರಿಟಿಷ್ ಎರಡನೇ ದಳವು ಅಲ್ಬರ್ಟ ಕಾಲುವೆಯನ್ನು ಗೆದ್ದು ಮಾಸ್ಟ್ರಿಚ್ಟನ್ನು ಸ್ವಾಧೀನ ಪಡಿಸಿಕೊಂಡಿದೆ. ಮೂರನೆಯದಾಗಿ ಅಮೇರಿಕನ್ ಪ್ರಥಮ ದಳವೀಗ ಆ ಭಾಗದ ಜರ್ಮನ್ ಮುಖ್ಯ ನಗರ ಆಚೆನನ್ನು ಸಮೀಪಿಸಿದೆ. ಇನ್ನಷ್ಟು ದಕ್ಷಿಣಕ್ಕೆ ಅಮೇರಿಕದ ಮೂರನೇ ಸೇನೆ ನ್ಯಾನ್ಸಿಯನ್ನು ಗೆದ್ದು ತೀವ್ರಗತಿಯಿಂದ ಧಾವಿಸುತ್ತಿದೆ. ತೀರಾ ದಕ್ಷಿಣದಿಂದ ಅಮೇರಿಕನ್ ಏಳನೇ ಸೇನೆಯು ರ್ಹೋನ್ ಕಂದರದ ಮೂಲಕ ಸ್ವಿಸ್ ಗಡಿಯ ಹತ್ತಿರದವರೆಗೂ ಮುಂದೊತ್ತಿದೆ. ಇವೆಲ್ಲಾ ಆಕ್ರಮಣಗಳೂ ಜರ್ಮನಿಯ ಸಿಗ್‌ಫ್ರೆಡ್ ಕೋಟೆಗೊತ್ತಾಗಿ ನಡೆದಿವೆ. ಈ 5 ಸೇನಾ ವಿಭಾಗಗಳೊಳಗೂ ಈಗ ಪರಸ್ಪರ ಸಂಬಂಧ ನಿರ್ಮಾಣಗೊಳ್ಳಹತ್ತಿದೆ.

ಸಿಗ್‌ಫ್ರೆಡ್ ಕೋಟೆ

1800ರಲ್ಲಿ ನಡೆದಿದ್ದ ನಿಪೋಲಿಯನ್ ದಾಳಿಯ ನಂತರ ಜರ್ಮನ್ ರಾಷ್ಟ್ರವು ಪಶ್ಚಿಮಗಡಿಯಿಂದ ಇಂತಹ ದೊಡ್ಡ ಆಕ್ರಮಣಕ್ಕೊಂದೂ ಒಳಗಾಗಿಲ್ಲ. ಮಿತ್ರಸೇನೆಯ ಈ ಪ್ರಳಯ ಪ್ರವಾಹವನ್ನು ಜರ್ಮನರ ಸಿಗ್‌ಫ್ರೆಡ್ ಕೋಟೆಯು ಅಣೆಕಟ್ಟಾಗಿ ತಡೆದು ನಿಲ್ಲಿಸಬಲ್ಲದೇ ಎಂಬುದೇ ಈಗಿನ ಆತುರದ ಪ್ರಶ್ನೆ. ಈ ಮಹಾಕೋಟೆಯು ಡಚ್ ಗಡಿಯಿಂದ ಸ್ವಿಸ್‌ಗಡಿಯ ವರೆಗೆ 100 ಮೈಲುದ್ದಕ್ಕಿದೆ. ಇದು ಫ್ರಾನ್ಸಿನ ಮೆಜಿನೋ ಲೈನಿನಂತೆ ಕಾಂಕ್ರೀಟಿನಿಂದ ನಿರ್ಮಿಸಲ್ಪಟ್ಟ ಗೋಡೆಯಲ್ಲ, ಭೂಗರ್ಭಾಂತರ್ಗತ ಕೋಟೆಗಳ ಸಾಲೆನ್ನಬಹುದು. ಎಲ್ಲಾ ಆತ್ಯಾಧುನಿಕ ರಕ್ಷಣಾ ಕೊತ್ತಳಗಳೂ ಮುಖ್ಯವಾಗಿ ಒಳಗಡೆಯಲ್ಲೇ ಇದ್ದು ಮೇಲ್ಭಾಗದಲ್ಲಿ ಪರಿಶೀಲನಾ ವ್ಯವಸ್ಥೆ ಮಾತ್ರವಿರುವ ಅದ್ಭುತ ಹಾಗೂ ಅಪಾಯಕಾರೀ ಕೋಟೆಯಿದು. ಸುಮಾರು 125 ಮೈಲುಗಳವರೆಗೆ ರೈನ್ ಹೊಳೆಯು ಇದಕ್ಕೊತ್ತಾಗಿ ಹರಿಯುತ್ತಿದೆಯಲ್ಲದೆ ಬೇರೆ ಕಡೆಗಳಲ್ಲೂ ದಟ್ಟಾರಣ್ಯದಂತಹ ಅತಿ ಬಿಕ್ಕಟ್ಟಾದ ಸ್ಥಳಗಳಾಗಿವೆ. 1939ರಲ್ಲಿ ಯುದ್ಧಾರಂಭವಾದಾಗ ಮಿತ್ರರಾಷ್ಟ್ರಗಳ ಸರ್ವಸೇನಾನಿಯಾಗಿದ್ದ ಜನರಲ್ ಗೇಮೆಲಿನರು ಈ ಕೋಟೆಯ ಸರಹದ್ದಿನಲ್ಲಿ ಕೆಲಕಾಲ ಸೇನೆಯನ್ನಿರಿಸಿ ಹವಾಮಾನ ಮತ್ತು ಪ್ರಕೃತಿ ಕೂಡಾ ನೆರವಾಗಿರುವ ಈ ರಕ್ಷಣಾ ಲೈನನ್ನು ಸ್ಪರ್ಶಿಸಲಾರದೇ ಹಿಂದೆ ಸರಿದಿದ್ದರು. ಈ ಬಾರಿ ತಮ್ಮ ಗಡಿಯೊಂದು ಮೂಲೆಯಲ್ಲಿ ಕಾಲಿಟ್ಟ ಮಿತ್ರಸೇನೆಗೆ ಮೇರೆ ಜರ್ಮನ್ ನಾಗರಿಕರು ಕೂಡಾ ಪ್ರತೀಕಾರ ಕೊಡ್ಮತ್ತಿಕೆಯುಳ್ಳವರಾಗಿದ್ದಾರೆಂಬುದು ತಿಳಿದುಬಂದಿದೆ. ಆದರೂ ಜರ್ಮನರಿಗೀಗ ಸ್ವರಕ್ಷಣೆಗಾಗಿ ಕಡಿಮೆಯೆಂದರೆ 150 ಡಿವಿಜನ್ ಸೇನೆಗಳಾದರೂ ಬೇಕಾಗಿವೆಯೆಂದೂ, ರಷ್ಯದಲ್ಲಿ ಅತಿ ಹೆಚ್ಚಿನ ನಷ್ಟ ಹೊಂದಿರುವ ಮತ್ತು ಈಗಲೂ ಕೆಂಪು ಸೇನೆಯ ಬೃಹತ್ಧಾಳಿಯನ್ನೆದುರಿಸುತ್ತಿರುವ ಹಿಟ್ಲರರ ಬಳಿಗೆ ಅಷ್ಟು ಬಲವುಳ್ಳದಿಲ್ಲವೆಂದೂ ತಿಳಿದುಬರುತ್ತದೆ. ಸಿಗ್‌ಫ್ರೆಡ್ ಕೋಟೆ ಧಾಳಿಗಾಗಿ ಜನರಲ್ ಐಸನೋವರರು ಹೆಚ್ಚಿನ ಸೇನಾಸಂಗ್ರಹವನ್ನು ನಡೆಸಿಕೊಂಡು ಬಂದಿ...

ಹೊಲ್ಲೆಂಡಿನ ಮೇಲೆ ಆಕಾಶ ಸೇನೆ

ಇದಕ್ಕೆ ಹೊಂದಿಕೆಯಾಗಿ ಇದೀಗ ಮೊದಲಬಾರಿ ಹೊಲ್ಲೆಂಡಿನ ಸಂದುಕಟ್ಟಿನ ನಗರಗಳ ಮೇಲೆ ಮಿತ್ರರು ವಿಮಾನ ಮೂಲಕ ಸೇನೆಯಿಳಿಸಿದ್ದಾರೆ. ಫ್ರಾನ್ಸ್ ಆಕ್ರಮಣಾರಂಭದಿಂದ ಹಾಗೂ ಆಂಗ್ಲೋ ಅಮೇರಿಕಾನರೊಟ್ಟಿಗೆ ಆಕಾಶ ಸೇನೆಯಿಳಿಸಿದುದು ಇದೇ ಪ್ರಥಮ. ದಕ್ಷಿಣ ಮತ್ತು ಉತ್ತರ ನೆದರ್ಲೆಂಡನ್ನು ಪ್ರತ್ಯೇಕಿಸಿ ಜರ್ಮನರದೊಂದು ಪ್ರಬಲ ರಕ್ಷಣಾ ಲೈನಾಗಿರುವ ಅಲ್ಲಿಯ 'ವಾಟರ್ ಬೆಲ್ಟ'ನ್ನು ಹೊಡೆಯುವದೇ ಈ ಧಾಳಿಯ ಗುರಿಯೆಂಬಂತೆ ಕಾಣುತ್ತಿದೆ. ಈ ರಕ್ಷಣಾ ಲೈನು ಧಾಳಿಗಾರರಿಗೆ ಸಿಗ್‌ಫ್ರೆಡ್ ಲೈನಿಗಿಂತಲೂ ಕಷ್ಟಸಾಧ್ಯವಾದುದಂತೆ. ಜರ್ಮನಿಯ ಪಶ್ಚಿಮ ಯುರೋಪಿನ ರಕ್ಷಣಾ ವ್ಯವಸ್ಥೆಗಳ ಪೈಕಿ ಇದೇ ಅತ್ಯಂತ ಪ್ರಬಲವಾದುದಂತೆ.

ರಷ್ಯದ ಹೊಡೆತ.

ಜರ್ಮನಿಯ ಒಂದು ಮೈಯಲ್ಲಿ ಆಂಗ್ಲೋ ಅಮೇರಿಕಾನರಿಂದ ಇತಿ ಮೃತ್ಯುಪ್ರಾಯವಾಗಿರುವಾಗ ಇನ್ನೊಂದೆಡೆ ಸ್ಟಾಲಿನರಾದರೂ ಸುಮ್ಮಗಿಲ್ಲ. ಪೂರ್ವ ಪ್ರಷ್ಯದ ರಕ್ಷಣಾ ದ್ವಾರವಾದ ಲೋಮ್ಜಾವು ಕೆಂಪು ಸೇನೆಯ ಹಸ್ತಗತವಾದುದರಿಂದ ಹಿಟ್ಲರನ ಕೋಟೆಯಲ್ಲಿ ಮುರಿದಂತೆಯೇ. ವಾರ್ಸಾ ವಲಯದಲ್ಲಿ ರಷ್ಯನರ ಚಟುವಟಿಕೆಗಳ ಮೇಲಿಂದ ಆ ಭಾಗದ ಜರ್ಮನರ ವಿಸ್ಚುಲಾ ಲೈನನ್ನು ಧ್ವಂಸ ಮಾಡುವ ಸರ್ವಸಿದ್ಧತೆಯಾಗಿದೆ ಎಂಬುದು ಸ್ಪಷ್ಟ. ಬಾಲ್ಟಿಕ್ ಯುದ್ಧಮುಖದ ಒಂದು ಕಡೆಯಲ್ಲಿ ಸ್ಟಾಲಿನರು 40 ಡಿವಿಜನ್ ಸೇನೆಯನ್ನು ಮುಂದೊಡ್ಡಿದ್ದಾರೆಂಬ ವಾರ್ತೆಯೂ ಇದೆ. ಝೆಕೊಸ್ಲೊವೇಕಿಯದೊಳಗಡೆಯಲ್ಲಿ ಕೆಂಪು ಸೇನೆ ಕೇಂದ್ರೀಕರಿಸಲ್ಪಟ್ಟಿದೆ. ರುಮೇನಿಯದೊಂದಿಗೆ ಸೇರಿ ರಶ್ಯನರು ಹಂಗೇರಿಯ ಟ್ರಾನ್ಸಿಲ್ವೇನಿಯದೊಳಗಡೆ ಬಹುದೂರಕ್ಕೆ ನುಗ್ಗಿಹೋಗಿದ್ದಾರೆ. ಯುಗೊಸ್ಲೋವಿಯದಲ್ಲಿ ಮಾರ್ಶಲ್ ಟಿಟೋನ ಸೇನೆಯೊಂದಿಗೆ ಸೇರಿಕೊಂಡು ಪ್ರಗತಿ ನಡೆಯುತಿದ್ದಾರೆ. ಸಪ್ಟೆಂಬರ್ 15ರೊಳಗೆ ಎಲ್ಲಾ ಸೇನೆಗಳನ್ನು ಹಿಂದೆಗೆಯತಕ್ಕದ್ದೆಂಬ ರಷ್ಯಾ ಫಿನ್ಲೆಂಡ್ ಸಂಧಿಸೂಚನೆಯಂತೆ ಉತ್ತರ ಫಿನ್ಲೆಂಡಿನಿಂದ ಜರ್ಮನ್ ಸೇನೆ ಹೋಗದುದರಿಂದ ಜರ್ಮನಿ-ಫಿನ್ಲೆಂಡುಗಳೇ ಹೋರಾಡಿಕೊಳ್ಳುವಂತಿದೆ. ಇಟಲಿಯಲ್ಲಿಯೂ ಮಿತ್ರ ಸೇನೆಗಳೀಗ ಪ್ರಬಲ ಧಾಳಿಯಾರಂಭಿಸಿವೆ.

ಜಪಾನಿನ ಭೀತಿ.

ಕ್ವಿಬೆಕಿನಲ್ಲಿ ಜಪಾನಿನ ಅಂತ್ಯ ಯೋಜನೆ ತಯಾರಾಗಿರುವಾಗ ಜಪಾನ್ ಪ್ರಧಾನಿ ಕ್ವೊಯಿಸೋರವರು ಕಠಿಣ ಪರಿಸ್ಥಿತಿಯನ್ನು ಅನುಭವಿಸಲು ತಯಾರಾಗಬೇಕೆಂದು ತನ್ನ ದೇಶೀಯರಿಗೆಚ್ಚರಿಕೆಯೀಯುತ್ತಿದ್ದಾರೆ. ಅಮೇರಿಕದ ಹಡಗಬಲ ಹಾಗೂ ವಿಮಾನ ಶಕ್ತಿಯು ದೃಢವಾಗಿ ಜಪಾನ್ ಮೂಲ ನೆಲದತ್ತ ಒತ್ತಿಕೊಂಡು ಬರುತ್ತಿರುವದೇ ಈ ಭೀತಿಗೆ ಕಾರಣ. ಸೈಪಾನ್ ವಲಯದೊಂದು ಕಡೆಯಿಂದ ಮಿತ್ರಬಲವು ಟೋಕಿಯೋಕ್ಕಿಂತ 610 ಮೈಲು ದೂರದ ಬೊನಿನ್ ದ್ವೀಪಗಳ ಮೇಲೆ ಧಾಳಿ ನಡೆಸುತ್ತಿದೆ. ಫಿಲಿಪ್ಪೈನನ್ನು ಸ್ವಾಧೀನಪಡಿಸಿಕೊಳ್ಳುವ ಜನರಲ್ ಮೇಕರ್ಥರರ ಆಶೆಗನುಗುಣವಾಗಿ ಹಾಲ್ಮಾಹೆರದಲ್ಲಿ ಮಿತ್ರಸೇನೆ ಇಳಿದಿರುವುದರಿಂದ ಇನ್ನೀ ದ್ವೀಪಗಳಿಗಿರುವದು 300 ಮೈಲು ಮಾತ್ರ. ಇನ್ನೊಂದು ಮುಖ್ಯ ಘಟನೆಯೆಂದರೆ ರಂಗೂನಿನಿಂದ 100 ಮೈಲು ದೂರದಲ್ಲಿ ಅಂದಮಾನ್ ಸಮುದ್ರದಲ್ಲಿ ಜಪಾನಿನ ದೊಡ್ಡ ಹಡಗದಳದ ಮೇಲೆ ಆಕಾಶಧಾಳಿ ನಡೆಸಿ ಬಹುಸಂಖ್ಯೆಯ ಹಡಗಗಳಿಗೆ ಜಲಸಮಾಧಿಕೊಟ್ಟ ಮಿತ್ರರ ಸಾಹಸ. ಇವೆಲ್ಲಾ ಘಟನೆಗಳ ಮೇಲಿಂದ ಆಕಾಶ ಬಲದಲ್ಲಿ ಮಿತ್ರರು ಮೇಲ್ಮೈಯ್ಯಾಗಿದ್ದಂತೆಯೇ ಜಪಾನಿನ ಮೇಲ್ಮೆಯಾಗಿದ್ದ ಸಮುದ್ರಾಧಿಕಾರವನ್ನೂ ಅವರೀಗ ಕಸಗೊಂಡಿದ್ದಾರೆನ್ನಬಹುದು. ಫಿಲಿಪ್ಪೈನಿನ ಒಂದು ಬಂದರ ಡಾವೋವನ್ನು ಜಪಾನರಿಷ್ಟರಲ್ಲೇ ಖಾಲಿ ಮಾಡಿದ್ದಾರೆ.

ಆಶ್ರಿತ ರಾಜರ ಶಿಷ್ಟ ಮಂಡಲಿ

ಪ್ರಿನ್ಸೆಸ್ ಚೇಂಬರಿನ ಶಿಷ್ಟ ಮಂಡಲಿಯೊಂದು ಆಶ್ರಿತ ರಾಜರ ಸಂಬಂಧದ ಕುರಿತು ಚರ್ಚಿಸಲು ನವದಿಲ್ಲಿಗೆ ಹೋಗಿ ವೈಸರಾಯರ ಭೇಟಿ ಪಡೆದಿದೆ. ಸಣ್ಣ ಸಂಸ್ಥಾನಗಳ ಸಂಬಂಧವಾಗಿ ಮತ್ತೊಂದು ಡೆಪ್ಯುಟೇಶನ್ ಹೋಗಿದೆ.

ಸಿಲೋನ್ ಸ್ವರಾಜ್ಯ

ಸಿಲೋನಿನ ತಮಿಳು ಕಾಂಗ್ರೆಸ ಜಾಫ್ನಾದಲ್ಲಿ ಸೇರಿ 'ಸಿಲೋನಿಗೆ ಸ್ವರಾಜ್ಯ ಸಂಪಾದಿಸುವದೇ ತನ್ನ ಗುರಿಯೆಂದು ನಿರ್ಧರಿಸಿದೆ.

ದುರ್ಬಲ ಜರ್ಮನಿ

'ಜರ್ಮನಿಯೀಗ ಪೂರ್ಣ ದುರ್ಬಲಗೊಂಡಿದೆ. ಇನ್ನೂ ಲೆಕ್ಕಕ್ಕೆ ಜಮೆಯಾಗಲಿರುವವರನ್ನು ಬಿಟ್ಟೇ ಈ ವರೆಗೆ 4 ಲಕ್ಷ ಜರ್ಮನರು ಸೆರೆಯಾಗಿದ್ದಾರೆ. ಜರ್ಮನಿಯ ಅದೃಷ್ಟ ನಿರ್ಣೈಸಲ್ಪಟ್ಟಂತೆಯೇ'— ಎಂದು ಜನರಲ್ ಮೊಂಟಗೋಮೆರಿ ಇನ್ನೊಂದು ಆಕಾಶವಾಣಿ ಭಾಷಣದಲ್ಲಂದಿದ್ದಾರೆ.

ಕೋರ್ಟ್ ದ್ರೋಹ.

'ಸ್ಥಾನಬದ್ಧ ವ್ಯಕ್ತಿಯ ಅರ್ಜಿಯನ್ನು ಕೋರ್ಟಿಗೆ ಹಾಜರು ಪಡಿಸದ ಪೋಲೀಸ್ ಅಧಿಕಾರಿಗಳ ವರ್ತನೆಯನ್ನು ನಾಗಪುರ ಹೈಕೋರ್ಟಿನ ನ್ಯಾಯಾಧೀಶರು ತಮ್ಮದೊಂದು ತೀರ್ಪಿನಲ್ಲಿ ಕಠಿಣವಾಗಿ ಟೀಕಿಸಿ, ಅದು ಕೋರ್ಟಿನ ದ್ರೋಹವೆಂದಿದ್ದಾರೆ

ಡೋವರ್ ಧಾಳಿ

ಇಂಗ್ಲೆಂಡು ಕರಾವಳಿಯ ಡೋವರಿನ ಮೇಲೆ ಜರ್ಮನರು ಕೆಲವು ದಿನಗಳಿಂದ ಅತಿ ಭೀಕರವಾದ ಗನ್ನು ಹೊಡೆತಗಳನ್ನು ಕೊಡುತಿದ್ದಾರೆ. ಇದರ ದೂರವು ಆಶ್ಚರ್ಯಕರವಿದೆ.

ಹಿಂದುಸ್ಥಾನಕ್ಕೆ ಇಂಗ್ಲೆಂಡು ಕೊಡಬೇಕಾದ ಸಾಲ

ಯುದ್ಧದ ಮೊದಲು ಹಿಂದುಸ್ಥಾನವು ಇಂಗ್ಲೆಂಡಿಗೆ ಕೊಡಬೇಕಾಗಿದ್ದ ಸಾಲವೆಲ್ಲಾ ಸಂದಾಯವಾಗಿ ಈಗ ಇಂಗ್ಲೆಂಡೇ ಹಿಂದುಸ್ಥಾನಕ್ಕೆ ಹೇರಳ ಸಾಲ ಸಂದಾಯ ಮಾಡಲಿದೆ. ಈ ಸಾಲವನ್ನು ಹೇಗಾದರೂ ಮುಳುಗಿಸಬೇಕೆಂದು ಇಂಗ್ಲೆಂಡಿನಲ್ಲಿ ಪ್ರಯತ್ನ ನಡೆಯುತ್ತಿರುವದನ್ನು ಶ್ರೀ. ಬಿರ್ಲರಂತಹ ಆರ್ಥಿಕ ಅಧ್ವರ್ಯರು ಸಕಾಲದಲ್ಲಿ ಖಂಡಿಸಿದ್ದಾರೆ. ಲಂಡನಿನ ಮೆಂಚೆಸ್ಟರ್ ಗಾರ್ಡಿಯನ್ ಪತ್ರಿಕೆಯು ಈ ಕುರಿತು ತನ್ನ ಇತ್ತೀಚಿನ ಅಗ್ರಲೇಖದಲ್ಲಿ, ಈ ಸಾಲವು ಕಳೆದ ಯುದ್ಧಾನಂತರ ಇಂಗ್ಲೆಂಡಿಗಿದ್ದ ಅಮೇರಿಕದ ಸಾಲದಷ್ಟು ಇಷ್ಟರಲ್ಲೇ ಬೆಳೆದಿದೆಯೆಂದೂ, ಇನ್ನದರ ಸಂದಾಯವಾಗುವದು ಸಮಗ್ರಗಳನ್ನು ಕಳುಹಿಸಿಯೇ ಎಂದೂ ಬರೆದಿದೆ.

ಡಾಕ್ಟರರಿಗೆ ಪರಿಹಾರ ದ್ರವ್ಯ

ಪ್ರಯಾಣದ ವೇಳೆ ರೈಲ್ವೇ ನೌಕರರ ಅಜಾಗರೂಕತೆಯಿಂದ ಬಿದ್ದು ತನ್ನ ಒಂದು ತೋಳನ್ನು ಮುರಿದುಕೊಂಡಿದ್ದ ಬನಾರಸಿನ ಡಾ| ಸುಶೀಲಕುಮಾರ ಮುಖರ್ಜಿಯವರು ಇ. ಐ. ರೈಲ್ವೇ ಮೇಲೆ 1 ಲಕ್ಷ ಪರಿಹಾರ ದ್ರವ್ಯಕ್ಕಾಗಿ ದಾವೆ ಹೂಡಿದ್ದು 30 ಸಾವಿರಕ್ಕೆ ಡಿಕ್ರಿಯಾಗಿದೆ.

WANTED.

One Secondary Grade trained or untrained teacher.

Manager.
[Ud]di Udipi Higher Ele. School,
Udipi Post

ದಕ್ಷಿಣ ಕನ್ನಡ

ಮಂಗಳೂರು

ಚಿಪ್ಸ್ ಎಣ್ಣೆ ಆರೋಪ— ಕದ್ರಿಯ ಪಿ. ಎಲ್. ರೇಗೋ ಮತ್ತು ಡಿ. ಫರ್ನಾಂಡಿಸ್ ಇವರು ಎಣ್ಣೆ ಮಾರಾಟಕ್ಕಾಗಿ ಅರ್ಧ ಪೌಂಡ್ ಕಡಿಮೆ ಇರುವ ಚಿಪ್ಸ್ ಎಣ್ಣೆ ಬಾಟಲಿಗಳನ್ನು ಉಪಯೋಗಿಸುತ್ತಿದ್ದರೆಂದು ಆರೋಪಿಸಲ್ಪಟ್ಟು ಅವರಲ್ಲಿ ಪ್ರತಿಯೊಬ್ಬರೂ ರೂ. ೨೦೦ ಜುಲ್ಮಾನೆ ಪ ೪ ತಿಂಗಳ ಕಠಿಣ ಸಜೆಗೆ ಪಾತ್ರರಾಗಿದ್ದಾರೆ.

ಹುಳಿಬೆಲ್ಲ—ಹುಳಿಬೆಲ್ಲ ಮಾರುವುದು ಕಾನೂನಿಗೆ ವಿರೋಧ. ಅದು ಆರೋಗ್ಯಕ್ಕೆ ಹಾನಿಕರ. ಆ ಬೆಲ್ಲ ಮಾರಾಟ ಮಾಡುವವರಿಗೆ ದಂಡನೆ ಇದೆ.

ಬರೆಯುವ ಕಾಗದ—ಮಂಗಳೂರು ನಗರದೊಳಗಿನ ಬಜಾರಿನೊಳು ಪುಸ್ತಕದ ಅಂಗಡಿ ಕಾರ್ಖಾನೆ ಅಲ್ಲದೆ ಕಾಗದವನ್ನು ಚಿಲ್ಲರೆಯಾಗಿ ಮಾರುವ 17 ಕೇಂದ್ರಗಳನ್ನು ತೆರೆಯಲಾಗಿದೆ. ಪ್ರತಿಯೊಬ್ಬರೂ ಪ್ರತಿ ತಿಂಗಳಿನಲ್ಲಿ 2 ಕಾಪಿ ಕಾಗದ ಕೊಡುವಂತೆ ಏರ್ಪಾಡಾಗಿದೆ.

ಶ್ರೀ ನಾರಾಯಣ ಗುರು ಬ್ಯಾಂಕ್, ಲಿಮಿಟೆಡ್—ಇದರ ವ್ಯವಹಾರಾರಂಭದ ಮಹೋತ್ಸವವು ತಾ. ೧೦ರಲ್ಲಿ ಸ್ಥಳೀಯ ಕೆಥೋಲಿಕ್ ಕ್ಲಬ್ಬಿನಲ್ಲಿ ನಿಯೋಜಿತ ಅಧ್ಯಕ್ಷ ಶ್ರೀ. ಅರಸರು ಲಕ್ಷ್ಮಣ(ನಾರಾಯಣ)ರಾವ್ ಅವರು ಸಕಾಲಕ್ಕೆ ಬಾರದ ಕಾರಣ ಶ್ರೀ ಬಿ. ಶೀನಪ್ಪ ಹೆಗ್ಡೆ ಜಿಲ್ಲಾ ಮುನ್ಸಿಫ್, ಕಾರ್ಕಳ ಅವರು ತಾತ್ಕಾಲಿಕ ಅಧ್ಯಕ್ಷ ಪೀಠವನ್ನು ಅಲಂಕರಿಸಿದರು. ಈ ಸಂಸ್ಥೆಯ ಪ್ರೆಸಿಡೆಂಟರೂ ಮತ್ತು ಶ್ರೀ. ಮಂಗಳೂರು ಜಾರಪ್ಪನವರು ಈ ಬ್ಯಾಂಕಿನ ಇದುವರೆಗಿನ ವಿಚಾರಗಳ ವರದಿಯನ್ನೋದಿ ಅದರ ಉದ್ದೇಶಗಳ ಪರಿಚಯ ಮಾಡಿಕೊಟ್ಟರು. ಶ್ರೀ ಜಾರಪ್ಪನವರ ಸಾಹಸ ಬುದ್ಧಿ ಇತ್ಯಾದಿಯಿಂದ ಪ್ರಸ್ತುತ ಸಂಸ್ಥೆಯು ಶ್ರೇಯಸ್ಸನ್ನು ಹೊಂದಿ ನಡೆದಿದೆಯೆಂದು ಡಾ. ಎಂ. ಆರ್. ಭಟ್, ಬಿ. ಎಂ. ಎಸ್. ಶೆಟ್ಟಿ, ಪಟೇಲ್ ಶ್ರೀ. ಮಂಜಯ್ಯ ಹೆಗ್ಗಡೆ, ಶ್ರೀಯುತರು ಬಿ ರಾಮರಾವ್, ಎಚ್. ಘಮರಾವ್ ಅವರ ಭಾಷಣಗಳಾಗಿ ಅಧ್ಯಕ್ಷರ ಸರಳ ಭಾಷಣವೂ ಆಯಿತು. ಶ್ರೀ. ಗಂಗಾಧರದಾಸ ಎಡ್ವೋಕೇಟ್ ಅವರು ಪ್ರೇರಿತ್ಸರ ವರವಾಗಿ ಒಂದಿಸಿದರು. ಇಷ್ಟರಲ್ಲಿ ಶ್ರೀ. ಅರಸರವರು ಸಭೆಗೆ ದಯಮಾಡಿಸಲು ಅವರು ಬ್ಯಾಂಕಿಂಗಿನ ವಿಚಾರದಲ್ಲಿ ಹಲವು ಯುಕ್ತ ಸೂಚನೆಗಳುಳ್ಳ ಭಾಷಣವನ್ನು ಅಧ್ಯಕ್ಷ ಪೀಠದಿಂದ ಮಾಡಿದ್ದರು. ಶ್ರೀ. ಎಚ್. ರಾಮರಾಯರೂ ಶ್ರೀ ಜಾರಪ್ಪನವರ ವಿಚಾರ ಮಾತಾಡಿ ಸಂಸ್ಥೆಯನ್ನು ಹರಸಿದರು. ಶ್ರೀ. ಜಾರಪ್ಪನವರು ತಮ್ಮನ್ನೂ ತಮ್ಮ ಸಂಸ್ಥೆಯನ್ನೂ ವನ್ನಿಸಿದುದಕ್ಕಾಗಿ ಕಿಕ್ಕ ಉತ್ತರವನ್ನು ಹೇಳಿದರು. ಫಲಾಹಾರ, ಗ್ರೂಪ್ ಫೋಟೊಗಳ ಏರ್ಪಾಡೂ ಇದ್ದವು.

ನೂಲಿನ ಅಭಾವ—ನೂಲಿನ ಅಭಾವದಿಂದ ನೇಕಾರರು ನಗರದಲ್ಲಿ ಕೆಲಸವಿಲ್ಲದೆ ಕಷ್ಟಪಡುತ್ತಿದ್ದಾರೆ. ಈ ವಿಷಯದಲ್ಲಿ ಕೂಡಲೇ ಜಿಲ್ಲೆಗೆ ೫೦೦ ಬೇಲು ನೂಲನ್ನು ಕಳುಹಿಸಿಕೊಡುವ

NOTICE.

ಕುಂದಾಪುರ ಡಿ ಮು. ಕೋರ್ಟಿನಲ್ಲಿ

R. I. A 926/44;
O S. 17/44.

ನರಸಿಂಹ ಶ್ಯಾನುಭಾಗ — ವಾದಿ.
ದೇವಕಿ ಕ್ಷಾಕ್ಷಿ ಏ ಖ್ಯ ಹೆಂಗ್ಸಿನ ಮಗ
ಗಂಗೊಳ್ಳಿಗ್ರಾಮ

ಸದ್ರಿ ಸಂಬಂಧದಲ್ಲಿ ಫೈನಲ್ ಡಿಕ್ರಿ ಆಗಬೇಕೆಂತ ಅರ್ಜಿದಾರ ಕೊಟ್ಟ ಅರ್ಜಿಯು ತಾ 2-10-44 ಕ್ಕೆ ಇನ್ನಗೆ ಇರುತ್ತದೆ. ಈ ಕುರಿತು ನಿಮ್ಮದೇನಾದ್ರೂ ಆಕ್ಷೇಪವಿದ್ದರೆ ಸದ್ರಿ ದಿವಸ ಬೆಳ್ಳಿಗ್ಗೆ ಕೋರ್ಟು ಮುಂದೆ ಸ್ವತಹಾ ವ ವಕೀಲರ ದ್ವಾರಾ ಹಾಜ್ರಾಗಿ ಇಡತಕ್ಕದ್ದು. ತಪ್ಪಿದ್ದಲ್ಲಿ ನಿಮ್ಮ ಗೈರುಹಾಜರಿಯಲ್ಲಿ ಯುಕ್ತವಾಗಿ ತೀರ್ಮಾನಿಸಲ್ಪಡುವದು ಎಂಬ ಸಂಗ್ತಿ ಈ ಮೂಲಕ ತಿಳಿಸಲಾಗಿದೆ.

G Sanjava Rao
Pleader for Petitioner

ತಾ 12-9-44.
Kundapur

ವ್ಯವಸ್ಥೆಯಾಗಬೇಕೆಂದು ಸಂಘದ ಅಧ್ಯಕ್ಷರು ಪ್ರಾಂತಿಕ ಟೆಕ್ಸ್‌ಟಾಯಿಲ್ ಕಮಿಶನರಿಗೆ ತಂತಿಯೊಂದರಿಂದ ಮನವಿ ಮಾಡಿಕೊಂಡಿರುವರು.

ದ ಕ. ಜಿಲ್ಲಾ ಭೂಮಾಲಕರ ಸಂಘ

ಈ ಸಂಘದ ಸಭೆಯೊಂದು ತಾ. 10ರಂದು ಸ್ಥಳೀಯ ಎಸ್. ಆರ್. ಎಸ್. ಹೋಟೆಲಿನಲ್ಲಿ ರಾವ್‌ಬಹದೂರ್ ಕೆ ಟಿ. ಆಳ್ವರ ಅಧ್ಯಕ್ಷತೆಯಲ್ಲಿ ಜರುಗಿತು. ಸಂಘದ ಕಾರ್ಯದರ್ಶಿಗಳು ಕಳೆದ ಸಭೆಯ ಅನಂತರ ವಿಚಾರದ ವರದಿಯನ್ನೋದಿದರು. ಅನಂತರ ಸೇನೆಯಕಡೆಗಿಂದ ಕಮಿಟಿಯಿಂದ ತಯಾರಾದ ಸಂಘದ ಘಟನಾತ್ಮಕ ಒಯಮಾನಗಳನ್ನು ಮಂಜೂರು ಮಾಡಲಾಯಿತು. ಈ ವಿಷಯಗಿನ ಕಾಲದಲ್ಲಿ ಸರಕಾರವು ಉಳುವ ಜಾನುವಾರುಗಳ ಅವಶ್ಯಕತೆಯನ್ನು ಮನಗಂಡು ಈ ಜಿಲ್ಲೆಗೆ ಅಗತ್ಯವಿರುವ ಅಂತಹ ಜಾನುವಾರುಗಳನ್ನು ಆತ್ತ ಸಾಗಿಸುವ ಹಾಗೆ ನಮ್ಮ ಸರಕಾರವು ಮೂರು ಸರಕಾರದೊಡನೆ ಏರ್ಪಡಿಸಬೇಕೆಂಬ ವಿನಂತಿಯನ್ನು ಮಾಡಿಕೊಳ್ಳಲಾಯಿತು.

ಉಡುಪಿ

"ಈ ತಾಲೂಕಿನ ಸಿದ್ದಾಪುರ ಪಂಚಾಯತಿ ಬೋರ್ಡಿಗೆ ಮದ್ರಾಸ್ ಸರಕಾರದಿಂದ ಎಲೆಕ್ಷನ್ ಆಗಿ ಬಂದ ಕಡೆಯ ಬಿಲ್ ಬಂಡಿಯ ಮಾನೆ ಕಡವಿನ ಗುತ್ತಿಗೆಯನ್ನು ಇದೇ ಸೆಪ್ಟೆಂಬರ ತಾ. 23ನೇ ಶನಿವಾರ ಸಾಯಂಕಾಲ 5 ಗಂಟೆಗೆ ಸದ್ರಿ ಬೋರ್ಡಿನ ಕಛೇರಿಯ ಕಾರ್ಯಾಲಯದಲ್ಲಿ ಏಲಂ ಮಾಡುವುದಾಗಿಯೂ ಸಂಬಂಧಪಟ್ಟವರೆಲ್ಲರೂ ಬಂದು ಬಿಡ್ ಮಾಡಬಹುದಾಗಿಯೂ ಸದರಿ ಬೋರ್ಡಿನ ಪ್ರೆಸಿಡೆಂಟರು ತಿಳಿಸಿದ್ದಾರೆ."

ಹಿಂದೂಸ್ಥಾನ ಸ್ಕೌಟ್ ಎಸೋಸಿಯೇಶನ್, ಉಡುಪಿ

ಬಿ.ಎಮ್. ಬಾಳಿಗ ಸ್ಮಾರಕ ನಿಧಿಯ ವಿನಂತಿ—ಶ್ರೀಯುತ ಬಿ ಎಮ್ ಬಾಳಿಗರು ಕಳೆದ ಫೆಬ್ರವರಿ ೧೫ರಂದು ಉಡುಪಿಯಲ್ಲಿ, ವಿಷಾದಪೂರ್ಣ ವ ದಾಕಸ್ಮಿಕವಾಗಿ ಮೃತರಾದರು. ಪ್ರವರ್ಧಮಾನ ದಶೆಯಲ್ಲೇ ಈರ ಜೀವನವೆಂದು ಮೃತಿ ಹೊಂದಿದರು. ಮೃತರು ಯುವಕರು, ಆರೋಗ್ಯ ಜೀವನ, ಸದುಪಯೋಗ ಕಲೆಗಳಿಗಾಗಿ ಹಲವು ವಿಧಗಳಲ್ಲಿ ಉತ್ಸಾಹದಿಂದ ದುಡಿಯುತ್ತಿದ್ದರೋ ಅಂತಹ ಏಳುವರಿಗಾದ ನಷ್ಟವು ಅಪಾರವಾದುದು. ಅಂಗಸಾಧನೆ, ಆಟಗಳು, ಬಾಲಚರ ಚಟುವಟಿಕೆಗಳು—ಮುಂತಾದುವುಗಳಲ್ಲಿ ಅವರು ಕ್ರಮದಿಂದ ಕನ್ನಡದ ಆದ ಒಂದು ಸಂಪ್ರದಾಯವನ್ನು ರಚಿಸುತ್ತ ಬಂದಿದ್ದರು. ಆ ಬಗ್ಗೆ ಆಬಾಲವೃದ್ಧರೆಲ್ಲ ಪ್ರೀತಿ ಹಾಗೂ ಕೃತಜ್ಞತೆಯಿಂದ ಅವರನ್ನು ನಿರಂತರ ನೆನೆಯುವಂತಾಗಿದೆ. ಅವರು ಹೋದಲ್ಲೆಲ್ಲ ತನ್ನ ಒಡನಾಟದಲ್ಲಿ ಬೀರುತ್ತಿದ್ದ ರಸಿಕತೆ, ಸಲ್ಲಿಸುತ್ತಿದ್ದ ನಿಸ್ವಾರ್ಥ ಸೇವೆ ಇವು ಜನರಿಂದ ಅವರಿಗೆ ಕೂಡಲೆ ಸಿಗುತ್ತಿದ್ದ ಮನ್ನಣೆ ಮತ್ತು ಪ್ರಶಂಸೆಗಳಿಗೆ ಕಾರಣವಾಗಿವೆ. ಶ್ರೀಯುತ ಬಾಳಿಗರ ಜೀವಮಾನವೆಲ್ಲ ಅವರ ಕಷ್ಟನಷ್ಟಗಳಲ್ಲಿ ಸಂತೋಷದಿಂದ ಸಹಭಾಗಿಗಳಾಗಿದ್ದ ಅವರ ಹೆಂಡತಿ ಮತ್ತು ಇಬ್ಬರು ಕಿರಿಯ ಹೆಣ್ಮಕ್ಕಳು ಈಗ ನಿರಾಶ್ರಿತರಾಗಿದ್ದಾರೆ. ಆದುದರಿಂದ ದಿವಂಗತರ ನೆನಪಿಗೋಸ್ಕರ ಪುಟ್ಟ ಕಾಣಿಕೆಯೋಪಾದಿ ಅವರ ಹೆಂಡತಿ ಮಕ್ಕಳಿಗೆ ಸಹಾಯಧನ ಒದಗಿಸಲಿಕ್ಕೊಂದು ನಿಧಿಯನ್ನು ಸಂಗ್ರಹಿಸುವ ನಿರ್ಧಾರವಾಗಿದೆ. ಕನಿಷ್ಠಪಕ್ಷ ೩,೦೦೦ ರೂಪಾಯಿಗಳಾದರೂ ಸಂಗ್ರಹವಾಗಬೇಕೆಂಬ ಅಪೇಕ್ಷೆ ಇದೆ. ಸ್ಥಳೀಯ ಎಸೋಸಿಯೇಶನಿನ ಕೇಂದ್ರದಲ್ಲಿ ಮೃತರ ಭಾವಚಿತ್ರವೊಂದನ್ನು ಇಡಲಿಕ್ಕೂ ಏರ್ಪಾಡು ಮಾಡಲಾಗುತ್ತದೆ. ಮೃತರನ್ನು ಮಾದರಿಯಾಗಿಟ್ಟುಕೊಂಡು, ಅವರ ಜೀವನದ ಕಾರ್ಯಾಂಶಗಳನ್ನು ಮುಂದೊತ್ತಲು ಅವರ ಅಸಂಖ್ಯಾತ ಮಿತ್ರರು ಹಾಗೂ ವಿದ್ಯಾರ್ಥಿಗಳು ನೆರವಾಗುವರೆಂದು ನಂಬಲಾಗಿದೆ. ಉಡುಪಿಯ ಹಿಂದೂಸ್ಥಾನ ಸ್ಕೌಟ್ ಎಸೋಸಿಯೇಶನಿನ ಸುವ್ಯವಸ್ಥೆ, ಜನಪ್ರಿಯತೆ ಮತ್ತು ಅಭ್ಯುದಯಗಳಿಗೆ ಶ್ರೀಯುತ ಬಾಳಿಗರೇ ಬಹುಮಟ್ಟಿಗೆ ಕಾರಣರು. ಈಗ ಆ ಎಸೋಸಿಯೇಶನಿನವರೇ ಜಿಲ್ಲೆಯ ಹೊರಗೂ ಒಳಗೂ ಇರುವ, ದಿವಂಗತ ಬಾಳಿಗರ ವಿದ್ಯಾರ್ಥಿಗಳು, ಮಿತ್ರರು, ಸಹೋದ್ಯೋಗಿಗಳು ಮತ್ತು ಅಭಿಮಾನಿಗಳೆಲ್ಲರ ಉದಾರ ಸಹಾಯವನ್ನು ನಿರೀಕ್ಷಿಸಿ, ನಿಧಿ ಸಂಗ್ರಹಕ್ಕಾಗಿ ಹೊರಟಿದ್ದಾರೆ. ಯಜಮಾನ ಹಾಗೂ ಪೋಷಕರ ವೆಂಕಟರಮಣ ದೇವಾಲಯಕ್ಕೆ ಸಂಬಂಧಿಸಿದ ಬ್ರಾಹ್ಮಣ ಸಭಾಂತಿಕ ದಿನವೇ ಅವರ ಕುಟುಂಬಕ್ಕೆ ನಿಧಿಯನ್ನು ಒಪ್ಪಿಸಬೇಕೆಂಬ ನಿರ್ಧಾರವಿದೆ. ವಂತಿಗೆಯು ಎಷ್ಟು ಅಲ್ಪವಾಗಿದ್ದರೂ ಚಿಂತೆಯಿಲ್ಲ, ಅದನ್ನು ಕೆಳಗಿನ ಕಾರ್ಯಾಧಿಕಾರಿಗಳಿಗೆ ಕಳುಹಿಸಿದಲ್ಲಿ, ಅವರು ಅದನ್ನು ಕೃತಜ್ಞತಾಪೂರ್ವಕ ಸ್ವೀಕರಿಸುವರು. ಪೂರ್ಣವಾದ ಲೆಕ್ಕಪತ್ರಗಳು ಸಂದಿಯ ಸ್ಕೌಟ್ ಪತ್ರಿಕೆಗಳಲ್ಲಿ ಮತ್ತು ಜಿಲ್ಲೆಯ ವಾರ್ತಾಪತ್ರಿಕೆಗಳಲ್ಲಿ ಪ್ರಕಟವಾಗುವುವು.

ಯು. ಸುಂದರರಾಮ ಪೈ,
ಅಧ್ಯಕ್ಷರು.

ಶ್ರೀ ನಾರಾಯಣ ಗುರು ಬ್ಯಾಂಕ್ ಲಿಮಿಟೆಡ್—ಇದರ ಉಡುಪಿ ಶಾಖೆಯ ವ್ಯವಹಾರಾರಂಭದ ಸಮಾರಂಭವು ಡಿ ಮುನ್ಸಿಫ್ ಶ್ರೀ. ಡಿ ನೋರೋನ್ಹಾರ ಅಧ್ಯಕ್ಷತೆಯಲ್ಲಿ ಜೂನ್ ೨೨ರಂದು ಇದರ ಹೊಸ ಸಭಾಸದನದಲ್ಲಿ ಜರುಗಿತು. ಮೇನೇಜಿಂಗ್ ಡೈರೆಕ್ಟರ್ ಶ್ರೀ ಮಂಗಳೂರು ಜಾರಪ್ಪನವರು ವರದಿಯನ್ನೋದಿದ ಮೇಲೆ ಶ್ರೀಗಳಾದ ಕೊಟ್ಟಿಕಾರ್ ಪದ್ಮನಾಭಪೈ, ಡಾ. ಮಾಧವಪೈ, N ಸಿ. ಕಾಮತ್, ರೋಕ್ಕಿ ಫರ್ನಾಂಡಿಸ್, ಬಿ. ಅನಂತಪೈ, ಕೊರಡ್ಕಲ್ ಶ್ರೀನಿವಾಸ ರಾವ್, ಕೆ ಎಚ್. ವಿಟ್ಲ ಮೊದಲಾದವರು ಶ್ರೀ ಜಾರಪ್ಪನವರ ಸಾಹಸೋದ್ಯಮಗಳನ್ನು ಅಭಿನಂದಿಸಿ, ನೂತನ ಬ್ಯಾಂಕಿಗೆ ಶುಭವನ್ನು ಕೋರಿ ಮಾತನಾಡಿದರು. ಅಧ್ಯಕ್ಷ ಭಾಷಣವಾದ ಮೇಲೆ ಶ್ರೀ ಜಾರಪ್ಪನವರು ತಮ್ಮ ಜೀವನಾಂತರ ಚರಿತ್ರೆಯನ್ನು ಮುಂದುವರಿಸಿ ಒಬ್ಬರ ಸೇವೆ ಮಾಡಿ ತಮಗೆ ನೆರವಾದವರಿಗೆಲ್ಲ ಉಪಕಾರ ಸೂಚಿಸಿದರು. ಟೀಪಾರ್ಟಿ ಗ್ರೂಪ್ ಫೋಟೋದೊಂದಿಗೆ ಸಭಾಂತ್ಯವಾಯಿತು.

ಕಾಯಿಪಲ್ಯಗಳ ಸೇರುಗಟ್ಟಲೆ ಕ್ರಯ—ಬದನೆಕಾಯಿ 4 ಪೈ, ಕುಂಬಳಕಾಯಿ 2 ಪೈ, ಸೋರೆಕಾಯಿ 4 ಪೈ, ಸೌತೆಕಾಯಿ 3 ಪೈ, ಮುಳ್ಳುಸೌತೆಕಾಯಿ 4 ಪೈ, ಬೆಂಡೆಕಾಯಿ 9 ಪೈ, ಬದನೆಕಾಯಿ 3 ಪೈ, ಅಲಸಂದೆ 3 ಪೈ, ಪಡುವಲಕಾಯಿ 6 ಪೈ, ಹೀರೆಕಾಯಿ 4 ಪೈ, ಸುವರ್ಣಗೆಡ್ಡೆ ಒಂದಾಣೆ, ಬಾಳೆಕಾಯಿ 9 ಪೈ, ಮರ್ಸಗೆಡ್ಡೆ 4 ಪೈ, ಹಾಗಲಕಾಯಿ 6 ಪೈ, ಚೌಳಿಕಾಯಿ ಸೇರಿಗೆ 4 ಪೈ, ಹರಿವೆ ಸೊಪ್ಪು 2 ಪೈ, ಬಸಳೆ 1 ಪೈ, ದಿವ್ಯಹಲಸು 9 ಪೈ, ತೊಂಡೆಕಾಯಿ ನೂರಕ್ಕೆ (ಉತ್ತಮ) ಒಂದಾಣೆ ಮೂರುಪೈ, ಮಧ್ಯಮ ಒಂದಾಣೆ, ಹಸಿ ಮೆಣಸು ನೂರಕ್ಕೆ (ಉತ್ತಮ) 9 ಪೈ, ಮಧ್ಯಮ 6 ಪೈ, ಒಣಮೆಣಸು ಮಣಕ್ಕೆ 10 ರೂಪಾಯಿ, ಗೆಣಸು ಸೇರಿಗೆ (ಉತ್ತಮ) 4 ಪೈ, ಮಧ್ಯಮ 3 ಪೈ, ಚಿಕ್ಕು ಸೇರಿಗೆ ಒಂದಾಣೆ ಆರು ಪೈ, ಕಸಿ ಅನಾನಸು ಸೇರಿಗೆ 9 ಪೈ, ಊರಿನದ್ದಕ್ಕೆ 6 ಪೈ, ಮೈಸೂರು ಕಾಬುಬಾಳೆ ಮಟ್ಟುಬಾಳೆ ಹಣ್ಣು ಸೇರಿಗೆ 7 ಪೈ, ರಸಬಾಳೆ 9 ಪೈ, ಪಪ್ಪಾಯಿ 2 ಪೈ, ಉಪ್ಪು ಮುಡಿಗೆ 12 ರೂಪಾಯಿ, ಹೆಸ್ರು ಮುಡಿಗೆ 13 ರೂಪಾಯಿ, ತುರು(?) ಮುಡಿಗೆ 10 ರೂಪಾಯಿ ಆರೆ ಎಂಟು, ಅವಡೆ ಮುಡಿಗೆ 11 ರೂಪಾಯಿ ವಿಪಸ ರಾತ್ರಿಗೆ ಹನ್ನೆರಡಾಣೆ, ಹುಲ್ಲು ಕಟ್ಟಿಗೆ, ಒಂದಾಣೆ ಯಾ ಬೇಳೆಗೆ ಹನ್ನೆರಡಾಣೆ, ಎಣ್ಣೆ ತುಪ್ಪ ಕಡ್ತಿಗೆ ಆರಾಣೆ, ದನದ ತುಪ್ಪ ಕುಡ್ತೆಗೆ ಎಂಟಾಣೆ, ಒಣ ಹುಲ್ಲು ಸಾವಿರಕ್ಕೆ ಇಪ್ಪತ್ತರಿಂದ ಇಪ್ಪತ್ತೈದು ರೂಪಾಯಿ (ಹುಲ್ಲಿನ ಗಾತ್ರ ಮತ್ತು ತಾರತಮ್ಯ ಒಂದು ಉಂಡಿಗೆ ಒಂದು ರಾತ್ತಲಗೆ ಕಡಿಮೆಯಾಗದ ರಾಬೇಕೆಂದ ದ್ದಿಷ್ಟಿಯಿಂದ) ಕಾಗದದ ಕಾದವರು 'ಸಹ್ರಿಂಗ್ ಪ್ರೈಸ್ ಕಂಟ್ರೋಲ್ ಕಮಿಟಿ', ತಾಲೂಕು ಆಫೀಸು, ಉಡುಪಿ. ಈ ವಿಳಾಸಕ್ಕೆ ಬರೆಕೊಳ್ಳಬಹುದು.

ಬೀಡಿಲೇಬರ್ ಯೂನಿಯನ್ ಸಭೆಯು—ತಾ 14ರಲ್ಲಿ ಶ್ರೀ ಕೆ ರಾಘವನ್‌ರವರ ಅಧ್ಯಕ್ಷತೆಯಲ್ಲಿ ಜರಗಿ ದ. ಕ. ಜಿಲ್ಲೆಗೆ 10,000ಟನ್ನುಹಲಕ್ಕೆ ಹೋಸ್ಪ್ರಾಂತದಿಂದ ತರಿಸಿ ಮಿಸರ್ಕಾರನ್ನು ಸರಕಾರವು ಮಾಡುವಂತೆಯೂ ಈಗ ಇರುವ ಅಕ್ಕಿಯ ದರವನ್ನು ಇನ್ನೂ ಕಡಿಮೆ ಮಾಡಬೇಕಾಗಿಯೂ ಅಧಿಕಾರಿಗಳನ್ನು ಕೇಳಿಕೊಳ್ಳಬೇಕೆಂದ ನಿರ್ಣಯಗಳಾದುವು. ಇತ್ತೀಚೆಗೆ ಮೈಸೂರಿನಿಂದ ಬಿಡುಗಡೆಹೊಂದಿದ ಬೀಡಿ ಕೆಲಸಗಾರರನ್ನು ಮುಸಹ ಕೆಲಸಕ್ಕೆ ಸೇರಿಸಿಕೊಳ್ಳಬೇಕಾಗಿ ಮಂಗಳೂರು ಬೀಡಿ ಮಾಲಕರನ್ನು ವಿನಂತಿಸಲಾಯಿತು. ಕಲ್ಲಿಕೋಟೆಯಲ್ಲಿ ನಡೆಯಲಿರುವ ಕೇರಳಾ ಟ್ರೇಡ್ ಯೂನಿಯನ್ ಕಾನ್ಫರೆನ್ಸಿಗೆ ಓರ್ವ ಪ್ರತಿನಿಧಿಯನ್ನು ಆರಿಸಲಾಯಿತು.

ಯುದ್ಧ ವರ್ಧಂತಿ ಸಮಾರಂಭವು—ಉಡುಪಿ ತಾಲೂಕು ವಾರ್ ಕಮಿಟಿಯ ನೇತೃತ್ವದಲ್ಲಿ ತಾ. 17ರಲ್ಲಿ ಸಂಜೆ ಮುನಿಸಿಪಲ್ ಮೈದಾನಿನಲ್ಲಿ ಜರಗಿತು. ಸಭಾಧ್ಯಕ್ಷತೆಯನ್ನು ಮಿ|| ಡಿ. ನೋರೋನ್ಹಾ ಡಿ ಮುನ್ಸಿಫ್ ಅವರು ವಹಿಸಿದ್ದರು. ಶ್ರೀಗಳಾದ ಆರ್. ಫೆರ್ನಾಂಡಿಸ್ ಕೆ. ನರಸಿಂಗರಾವ್, ಎ. ಎಸ್. ಶಾಂತ್, ಎಸ್ ಜಿ ಕೌಂಡಿನ್ಯ, ಬಿ. ಶ್ಯಾಮರಾಯ ಸೆಟ್ಟಿ ಮೊದಲಾದವರ ಸಮಯೋಚಿತ ಭಾಷಣಗಳಾದವು. ತಹಶಿಲ್ದಾರ್ ಮಿ|| ಜಿ. ಆರ್ಯಾನ್ನಾರವರು ಧನ್ಯವಾದಗಳನ್ನರ್ಪಿಸಿದರು. ಮುನಿಸಿಪಲ್ ಗೆಯಲ್ಲಿ ಭಾಗವಹಿಸಿದ ಶಾಲಾ ಮಕ್ಕಳಿಗೂ ಇತರರಿಗೂ ಮೈಸೂರ್ ಪಾಕುತ ಎದುಗಳಿಂದ ವಾಯಿ ಸಿಹಿಮಾಡಲಾಯಿತು.

ಮಿತ ಬೆಲೆ ನಿಯಂತ್ರಣ ಸಮಿತಿ—ಜನ ಜೀವನಕ್ಕೆ ದಿನವೂ ಬೇಕಾಗುವ ಕಾಯಿಪಲ್ಯ ಇತ್ಯಾದಿ ಸಾಮಾನುಗಳ ಬೆಲೆಯನ್ನು ಆಗಾಗ್ಗೆ ನಿರ್ಧರಿಸುವರೆ ಉಡುಪಿ ತಾಲೂಕಿಗೊಂದು ಬೆಲೆ ನಿಯಂತ್ರಣ ಸಮಿತಿಯು ಇತ್ತೀಚೆಗೆ ಸ್ಥಾಪಿಸಲ್ಪಟ್ಟಿದೆ. ಈ ಕಮಿಟಿಗೆ ಶ್ರೀಗಳಾದ ಡಾ|| ಟಿ. ಎಮ್. ಎ. ಪೈ, ಪಿ. ವಿ ಆಚಾರ್, ಕೆ. ಜಿ. ಬಲ್ಲಾಳ್, ಎಸ್. ಶಾಂತ್, ಜೆ. ಸಿ. ರೇಗೋ, ತಹಶಿಲ್ದಾರ್, ಅಸಿಸ್ಟೆಂಟ್ ರೇಶನಿಂಗ್ ಆಫೀಸರ್, ಆ| ಶಿಯಲ್ ಟೀಕ್ಸ್ ಅಫೀಸರ್, ಎಗ್ರಿಕಲ್ಚರಲ್ ಡಿಮೊನ್‌ಸ್ಟ್ರೇಟರ್, ಸ್ಟೇಶನ ಸಬ್ ಮೆಜಿಸ್ಟ್ರೇಟ್, ಮುನಿಸಿಪಲ್ ಕಮಿಶನರ್ ಇವರೆಲ್ಲ ಮಂದಿ ಮೆಂಬರರಾಗಿರುವರಲ್ಲದೆ ಮಿ|| ಡಿ ನೋರೊನ್ಹಾ, ಡಿಸ್ಟ್ರಿಕ್ಟ್ ಮುನ್ಸೀಫ್ ಅವರು ಕಮಿಟಿಯ ಅಧ್ಯಕ್ಷರಾಗಿರುವರು. ನಿನ್ನೆ ತಾನೆ ಜರಗಿದ ಕಮಿಟಿಯ ಸಭೆಯಲ್ಲಿ ಮೇಲೆ ಸೂಚಿಸಿದಂತೆ ಪರಮಾವಧಿ ದರಗಳು ನಿರ್ಣಯಿಸಲ್ಪಟ್ಟವು.

ತಾ. 25—9—44ರಿಂದ

ಮನಮೋಹಕ ಅಭಂಗಗಳು ಮತ್ತು ಕೀರ್ತನೆಗಳು

ಬಾಬುರಾವ್ ಮಹೇಂದ್ರಕರ್, ಇಂದಿರಾ ವಾಡಕರ್, ನಳಿನಿ ಗುಪ್ತಾ ಅಭಿನೀತ.

ಸಂತ ಚೋಖಾಮೇಳಾ

(ಮರಾಠಿ ಭಾಷೆಯಲ್ಲಿ).

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಖಾವನಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಬೊಂಬಾಯಿಗೆ ಬೆಂಕಿ ಹಿಡಿದುದು ಹೇಗೆ?

— ವಿಚಾರಣಾ ಸಮಿತಿಯ ವರದಿ —

ಕಳೆದ ಎಪ್ರಿಲ್ ತಾ. 14ರಲ್ಲಿ ಬೊಂಬಾಯಿ ಬಂದರದಲ್ಲಿ ಉಂಟಾದ ಹಡಗ ಸ್ಫೋಟದಿಂದ ಇಡೀ ದೇಶವನ್ನು ದುಃಖಕ್ಕೀಡುಮಾಡುವಷ್ಟು ಮರಣ, ನೋವು, ನಷ್ಟಗಳುಂಟಾಗಿರುವದು ಮರೆವೆಯಾಗುವಂತಹದಲ್ಲ. ಇದರ ಕಾರಣಗಳನ್ನು ಕಂಡುಹಿಡಿಯಲು ಬೊಂಬಾಯಿ ಹೈಕೋರ್ಟಿನ ಚೀಫ್ ಜಸ್ಟೀಸರ ಅಧ್ಯಕ್ಷತೆಯಲ್ಲಿ ಸರಕಾರವು ನೇಮಿಸಿದ್ದ ಕಮಿಶನು ತನ್ನ ವಿಚಾರಣೆ ಮುಗಿಸಿ, ಈಗ ವರದಿಯನ್ನೊಪ್ಪಿಸಿದೆ. ಈ ಅಗ್ನಿಪ್ರಳಯಕ್ಕೆ ಅಧಿಕಾರಿಗಳ ಅಸಡ್ಡೆಯೇ ಕಾರಣ; ಅವರು ಬೆಂಕಿಯೊಡನಾಟವಾಡಿದ್ದರು, ಎಂಬುದು ಕಮಿಶನಿನ ತೀರ್ಮಾನದಿಂದ ಸ್ಪಷ್ಟ. ಸಿಡಿಮದ್ದುಗಳ ಆಮದುರಫ್ತುಗಳ ಒತ್ತಾಟವು ಇಲ್ಲಿಗಿಂತ ಎಷ್ಟೋ ಪಾಲು ಅಧಿಕವಿರುವ ಯುರೋಪಿನ ಯಾವುದೊಂದು ಬಂದರದಲ್ಲೂ ಇಂತಹ ಪ್ರಮಾದವು ನಡೆದಿಲ್ಲವೆನ್ನುವಾಗ ಭಾರತೀಯರ ಪ್ರಾಣ ಮತ್ತು ಸೊತ್ತುಗಳೆಂದರೆ ಇಷ್ಟೊಂದು ಅಸಡ್ಡೆಯ ಆಟದ ವಸ್ತುಗಳೇ ಎಂದು ವೇದನೆಯೊಡನೆ ಪ್ರಶ್ನಿಸಬೇಕಾಗುತ್ತದೆ.

ಅದು ದೇನು?

ಮೊದಲನೇ ಕಾರಣ ಯುದ್ಧಸ್ಥಿತಿಗನುಸಾರವಾಗಿ ಸಿಡಿಮದ್ದುಗಳನ್ನು ತುಂಬಿಕೊಂಡ ಹಡಗಗಳನ್ನು ಬೊಂಬಾಯಿಯಂತಹ ಧಕ್ಕೆಗಳಿಗೆ ಸಾಗಿಸಿದುದು. ಇದು ಸದ್ಯಸ್ಥಿತಿಯಲ್ಲಿ ಅನಿವಾರ್ಯ ಮತ್ತು ರಾಯಿದೇ ಬದ್ಧವಾಗಿದೆ ಎಂಬುದನ್ನು ಕಮಿಶನ್ ಒಪ್ಪುತ್ತದೆ. ಆದರೆ, ಅವುಗಳ ಸಾಗೋಣದ ಕುರಿತು ಸರಿಯಾದ ಹಾಗೂ ಸಮರ್ಥ ಮುಂಜಾಗ್ರತೆ ಮತ್ತು ರಕ್ಷಣೋಪಾಯಗಳಿಲ್ಲದುದನ್ನು ಕಮಿಶನು ಕಠಿಣವಾಗಿ ಟೀಕಿಸಿದೆ. ಇಂತಹ ರಕ್ಷಣೋಪಾಯಗಳ ಜವಾಬ್ದಾರಿಯು ಕೇಂದ್ರ ಸರಕಾರದ್ದೋ ಸ್ಥಳೀಯ ಅಧಿಕಾರಿಗಳದ್ದೋ ಎಂಬುದು ಸ್ಪಷ್ಟವಿರದುದೂ ಅನಾಹುತಕ್ಕೊಂದು ಕಾರಣವೆಂದು ಕಮಿಟಿಯ ಶೋಧ. ಬೊಂಬಾಯಿಯಲ್ಲಿ ಬೆಂಕಿ ಹಿಡಿದ ಹಡಗಗಳು ಇಂಗ್ಲಂಡಿನಿಂದ ವಿಮಾನ ಮತ್ತು ಇತರ ಸಾಮಗ್ರಿಗಳನ್ನು ಹೊತ್ತುಕೊಂಡು ಬಂದಿದ್ದವು ಅವುಗಳನ್ನು ಕರಾಚಿಯಲ್ಲಿ ಇಳಿಸಲಾಯಿತು. ಇತರ ಸಿಡಿಮದ್ದುಗಳು ತುಂಬಿದ್ದ ಹಡಗಿನೊಳಗೆ ಕರಾಚಿ ಬಂದರದಲ್ಲಿ ಮೇಲೂ ಕೆಳಗೂ ಒತ್ತೊತ್ತಾಗಿ ಹತ್ತಿ ತುಂಬಿಸಲಾಯಿತು. ಇಂತಹ ಅಸಡ್ಡೆಯ ಅಪರಾಧಕ್ಕೆ ಮುಖ್ಯವಾಗಿ ಆ ಹಡಗದ ನಾಯಕ ಹಾಗೂ ಚೀಫ್ ಆಫೀಸರರು ಹೊಣೆಗಾರರೆಂದು ಕಮಿಟಿಯ ಶೋಧ ಆದರೆ ಅವರಿಬ್ಬರೂ ಆ ಬೆಂಕಿಗಾಹುತಿಯಾಗಿದ್ದಾರೆ ಬ್ರಿಟಿಷ್ ಯುದ್ಧ ಸಾಮಗ್ರಿವಾಹಕ ಮಂತ್ರಿಯ ಡಿಪ್ಯುಟಿ ಪ್ರತಿನಿಧಿಯಾಗಿ ಕರಾಚಿಯಲ್ಲಿರುವ ಅಧಿಕಾರಿಯು, ಬೊಂಬಾಯಿಯ ತನ್ನ ಮೇಲಧಿಕಾರಿಯಿಂದ ಟೆಲಿಫೋನ್ ಮೂಲಕ ಸಮ್ಮತಿ ಪಡೆದು ಕರಾಚಿಯಲ್ಲಿ ಆ ರೀತಿ ಹತ್ತಿಯನ್ನು ತುಂಬಿಸಲು ಪರವಾನಗಿ ಕೊಟ್ಟಿದ್ದರು ಈ ಇಬ್ಬರು ಅಧಿಕಾರಿಗಳೂ ಈ ದುರಂತಕ್ಕೆ ಜವಾಬ್ದಾರರಾಗುತ್ತಾರೆ. ಯಾಕೆಂದರೆ ಕರಾಚಿಯ ಹಾಗೂ ಬೊಂಬಾಯಿಯ ಇವರಿಬ್ಬರೂ ಕೇವಲ ಬ್ರಿಟಿಶ್ ಸರಕಾರದ ಪ್ರತಿನಿಧಿಗಳು ಮಾತ್ರವಲ್ಲ; ಆ ಹಡಗಕ್ಕೆ ಹತ್ತಿ ತುಂಬಿಸಿದ ಹಡಗ ವ್ಯಾಪಾರ ದಲ್ಲಾಲಿ ಸಂಸ್ಥೆಯ ಪಾಲುಗಾರರೂ ಆಗಿದ್ದಾರೆ. ಹೀಗೆ ಹತ್ತಿ ಮತ್ತು ಸಿಡಿಮದ್ದುಗಳನ್ನು ಒತ್ತೊತ್ತಾಗಿ ತುಂಬಿಸಿಕೊಂಡು ಬಂದ ಹಡಗವು ಬೊಂಬಾಯಿ ಬಂದರದಲ್ಲಿ ನಿಂತಾಗ ಯಾರೋ ಪ್ರಮಾದವಶಾತ್ ಸೇದಿ ಬಿಸುಟ ಸಿಗರೇಟ್ ತುಂಡಿನ ಬೆಂಕಿ ಹತ್ತಿಗೆ ಹಿಡಿದು ಈ ಪ್ರಳಯವುಂಟಾಗಿರಬೇಕು ಎಂದು ಕಮಿಟಿಯ ಶೋಧ. ಕುಹಕ ಒಳಸಂಚಿನಿಂದ ಯಾರಾದರೂ ಬೆಂಕಿ ... ಅಸಂಭವವೆಂದು ಕಮಿಶನ್ ಅನ್ನುತ್ತದೆ.

ಬಂದರದಲ್ಲಿ ಅಸಡ್ಡೆ, ಅವ್ಯವಸ್ಥೆ

ಬೆಂಕಿ ತಾಗಿದ 'ಎಸ್.ಎಸ್.ಫೋರ್ಟ್ ಸ್ಟಿಕಿನ್' ಹಡಗವು ಬೊಂಬಾಯಿ ಧಕ್ಕೆಗೆ ಪ್ರವೇಶಿಸಿದಾಗಿನ ಅಜಾಗರೂಕತೆ, ಅವ್ಯವಸ್ಥೆ ಮತ್ತು ಅಲಕ್ಷ್ಯತನಗಳನ್ನು ಕಮಿಟಿಯವರು ಸ್ಪಷ್ಟವಾಣಿಯಲ್ಲಿ ಕಠಿಣವಾಗಿ ಖಂಡಿಸಿದ್ದಾರೆ. ಅವರು ಎತ್ತಿ ತೋರಿಸಿರುವ ಹಲವು ಅಪರಾಧಗಳ ಪೈಕಿ ಕೆಲವನ್ನು ಇಲ್ಲಿ ಕೊಡಲಾಗಿದೆ ಹಡಗ ಧಕ್ಕೆಗೆ ಬಂದಾಗ, ಸಿಡಿಮದ್ದುಗಳಿವೆ ಎಂಬುದರ ಸೂಚನೆಯಾಗಿ ಪದ್ಧತಿಯ ಕೆಂಪು ಧ್ವಜವನ್ನು ಏರಿಸಿರಲಿಲ್ಲ. ಬೆಂಕಿ ನಂದಿಸುವ ಯಂತ್ರವೂ ದೋಷಪೂರ್ಣವಾಗಿದ್ದಿತು. ಹೊಗೆಬತ್ತಿ ಸೇವನೆಯ ನಿಷೇಧವನ್ನು ಕಟ್ಟುನಿಟ್ಟಿನಿಂದ ಯಾರಿಗೆ ತಂದಿರಲಿಲ್ಲ. ಸಿವಿಲ್ ಮತ್ತು ಮಿಲಿಟರಿ ಪೋಲೀಸರ ಹಾಗೂ ಸಂಚು ನಿರೋಧಕ ಪಹರೆಯವರ ಸುಗಮ ವ್ಯವಸ್ಥೆಯಿರಲಿಲ್ಲ. ಧಕ್ಕೆಯಲ್ಲಿದ್ದ ಅನಗತ್ಯ ಜನರನ್ನು ಚದರಿಸುವ, ಇಲ್ಲವೇ ಮುಂಬರುವ ಸ್ಫೋಟದ ಕುರಿತು ಜನರಿಗೆ ಎಚ್ಚರಿಕೆ ಕೊಡುವ ವ್ಯವಸ್ಥೆಯಿರಲಿಲ್ಲ ಎಲ್ಲಕ್ಕಿಂತ ಹೆಚ್ಚಾಗಿ ಬೆಂಕಿ ಹರಡಿದಾಗ ಅದನ್ನು ಶಮನಿಸುವ ಕೇಂದ್ರೀಕೃತ ಅಧಿಕಾರ ಸೂತ್ರವೇನೂ ಇರಲಿಲ್ಲ ತತ್ಪರಿಣಾಮವಾಗಿ ಹಡಗದ ನಾಯಕರಿಗೆ ಪರಸ್ಪರ ವಿರುದ್ಧವಾದ ಸಲಹೆಗಳು ದೊರೆತು, ಪರಿಣಾಮಕಾರೀ ಹಂಚಿಕೆ ಯಾವುದನ್ನೂ ಕೈಕೊಳ್ಳಲಸಾಧ್ಯವಾಯಿತು ಎರಡು ಸ್ಫೋಟಗಳ ಪೈಕಿ ಮೊದಲನೆಯದು ಅಪರಾಹ್ನ 4 ಘಂಟೆಗೆ ನಡೆದಿದ್ದರೂ, ಮಧ್ಯಾಹ್ನ 1ರಿಂದಲೇ ಹಡಗದಲ್ಲಿ ಹೊಗೆಯೇಳುತ್ತಿತ್ತೆಂದು ತಿಳಿದುಬರುತ್ತದೆ. ಬಂದಂದ ಡಿಪ್ಯುಟಿ ಕನ್ಸರ್ವೇಟರರು ಘಂಟೆ 2-30 ಕ್ಕೇನೇ ಅಲ್ಲಿ ಹಾಜರಾಗಿದ್ದರು. ಇಷ್ಟೊಂದು ಬಿಡುವಿದ್ದರೂ ಬೆಂಕಿಯನ್ನು ಮೂಲದಲ್ಲೇ ಶಮನಮಾಡುವ ಅಥವಾ ಆಸುಪಾಸಿನವರನ್ನು ಖಾಲಿಮಾಡಿಸುವ ಯಾವ ವ್ಯವಸ್ಥೆಯೂ ನಡೆಯದಿರಲು ಸಂಬಂಧಪಟ್ಟ ಅಧಿಕಾರಿಗಳೊಳಗಿದ್ದ ಅವ್ಯವಸ್ಥೆ ಹಾಗೂ ಅಸಡ್ಡೆಯೇ ಕಾರಣವೆಂಬುದು ಸ್ಪಷ್ಟವಿದೆ.

ಸ್ವೀಕಾರ–ವಿಮರ್ಶೆ.

ತೆನೆಗಳು–ಕಾಮಧೇನು ಪುಸ್ತಕಮಾಲೆಯ ೧೧ನೆಯ ಕುಸುಮ. ಪ್ರಕಾಶಕರು: ಕರ್ನಾಟಕ ಸಂಘ, ಕೆನರಾ ಹಾಯ್ ಸ್ಕೂಲ್, ಮಂಗಳೂರು. ಪುಟಗಳು ೮೪.

ಇದರಲ್ಲಿ ಕೆನರಾ ಹಾಯ್‌ಸ್ಕೂಲಿನ ವಿದ್ಯಾರ್ಥಿಗಳಿಂದಲೇ ಬರೆಯಲ್ಪಟ್ಟ ೧೦ ಬರೆಹಗಳಿವೆ— ಕೆಲವು ಕಿರುಗತೆಗಳು, ಉಳಿದವುಗಳು ಜೀವನ ಚಿತ್ರಗಳು. ಕಿರಿಯರ ಬರೆಹಗಳಾದ ಈ ಅವುಗಳಲ್ಲಿ ಉತ್ತಮ ಕತೆಗಾರಿಕೆಯ ಹಾಗೂ ಚಿತ್ರಣದ ಲಕ್ಷಣಗಳು ಮೂಡಿವೆ. ಮುಖ್ಯಕ್ಕೆ ಬಳ್ಳ ಜೀವನಕ್ಕೆ ಸಂಬಂಧಿಸಿದ ವಸ್ತುಗಳನ್ನೇ ಆಯ್ದುಕೊಂಡುದು ತಕ್ಕುದಾಗಿದೆ ಆದರೆ ವಿದ್ಯಾರ್ಥಿನಿಯರ ಒಂದಾದರೂ ಬರೆಹ ಸಂಗ್ರಹದಲ್ಲಿ ಬಾರದಿದ್ದುದು ಕೊರತೆಯೇ. ಕಿರಿಯರ ಲೇಖನ ಕಲೆಗೆ ಪ್ರೋತ್ಸಾಹವೀಯುವ ಇಂತಹ ಹೊಸ ಬಗೆಯ ಸಾಹಸವು ಇತರ ಶಾಲೆಗಳ ಅನುಕರಣೆಗೆ ಯೋಗ್ಯವಾಗಿದೆ.

ಲತೆಗಳು–ಪ್ರೇಮಕಲಾ ವಾಣಿ ಗ್ರಂಥಮಾಲೆಯ ೧ನೆಯ ಕುಸುಮ, ಪ್ರಕಾಶಕರು ಪ್ರೇಮಕಲಾ ವಾಣಿ ಸಾಹಿತ್ಯಕೂಟ, ಮಂಗಳೂರು. ಪುಟಗಳು ೩೭

'ಪ್ರೇಮಕಲಾ ವಾಣಿ'ಯೆಂಬ ಹೆಸರಿನ, ಕಿರಿಯರ ಹಸ್ತಲಿಖಿತ ಪತ್ರಿಕೆಯಿಂದ ಆಯ್ದ ೮ 'ಕಿರುಗತೆ'ಗಳು ಇದರಲ್ಲಿ ಸಂಗ್ರಹವಾಗಿವೆ. ಇವುಗಳನ್ನು ಕಿರುಗತೆಗಳೆನ್ನುವುದಕ್ಕಿಂತಲೂ ಬರಿಯ 'ಚಿತ್ರಗಳು' ಯಾ 'ನೋಟಗಳು' ಎನ್ನುವುದು ವಾಸಿಯಾಗಿತ್ತು. 'ಕಿರಿಯರ ಬರೆಹಗಳು, ಅವರ ಪ್ರಯತ್ನ, ಮುಂದಾದರೂ ಅವರಲ್ಲಿ ಕೆಲರು ಉತ್ತಮ ಕತೆಗಾರರಾದಾರು' ಎಂಬ ದೃಷ್ಟಿಯಿಂದ ಪುಸ್ತಕವನ್ನು ಸ್ವಾಗತಿಸುತ್ತೇವೆ ಕಿರಿಯರ ಉತ್ಸಾಹವು ಕುಗ್ಗದಿರಲಿ. ಪ್ರೇಮಕಲಾ ವಾಣಿಯ ಲೇಖಕರಂತೆಯೇ ಅಂತಹ ಇತರ ಸಾಹಿತ್ಯಕೂಟಗಳೂ ವರ್ತಿಸಿದರೆ ನಮ್ಮಲ್ಲಿ 'ಮಕ್ಕಳ ಸಾಹಿತ್ಯ'ವು ತುಂಬಾ ಬೆಳೆಯಬಲ್ಲುದು.

—ವಿ. ಎಸ್.

NOTICE.

ಉಡುಪಿ ಡಿ ಮು ಕೋರ್ಟಿನಲ್ಲಿ

O. P. No. 75/44

ಸ್ವರ್ಗಸ್ಥ ಸಟ್ಟಿ-ಯಾಲ್ಲಪ್ಪ ಸಟ್ರ ಹೆಂಡ್ತಿ, ಉಡುಪಿ ತಾಲೂಕು ಇನ್ನಂಜೆ ಗ್ರಾಮದ ಉಂಡಾರು

ಅರ್ಜಿದಾರಳು

ಈ ಮೂಲಕ ಸರ್ವ ಜನರಿಗೆ ತಿಳಿಯಪಡಿಸುವುದೇನೆಂದ್ರೆ ಅರ್ಜಿದಾರಳ ಮಗ ಮೃತ II ಕೃಷ್ಣಯ್ಯ ಸಟ್ಟಿಯು ದಿ ಜುಪಿಟರ್ ಜನರಲ್ ಇನ್ಶ್ಯೂರೆನ್ಸ್ ಕಂಪೆನಿ ಲಿಮಿಟೆಡ್ ಬೊಂಬಾಯಿ ಈ ಕಂಪೆನಿಯಲ್ಲಿ ಪೊಲಿಸಿ ನಂಬ್ರ 16759ನೇದಕ್ಕೆ ಸಹಿಮಾಡಿಕೊಂಡು ಬಂದ ಇನ್ಶ್ಯೂರೆನ್ಸ್ ಬಾಬ್ತು ಹಣವನ್ನು ತಾನು ಸ್ವಲು ಪಡೆಯುವರೆ ತನ್ನ ಹೆಸರಿಗೆ 'Succession Certificate' ಕೊಡಬೇಕಾಗಿ ಕೇಳಿ ಮೇಲ್ಕಂಡ ಅರ್ಜಿ ದಾಖಲು ಮಾಡಿರುತ್ತಾಳೆ. ಅದು ಸಂಬಂಧ ಕುರಿತು ಆಕ್ಷೇಪ ಉಳ್ಳವರು ತಾರೀಕು 3 10-44ನೇ ದಿವಸ ಬೆಳಿಗ್ಗೆ 10ಘಂಟೆಗೆ ಸದ್ರಿ ಕೋರ್ಟಿನ ಮುಂದೆ ಸ್ವತಹಾ ವಕೀಲರ ಮುಖಾಂತ್ರ ಹಾಜರಾಗತಕ್ಕದ್ದು ಇಲ್ಲವಾದ್ರೆ ಏಕ ಪಕ್ಷವಾಗಿ ತೀರ್ಮಾನ ಮಾಡಲಾಗುವದೆಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿಯದೆ.

(By order of the Court)

K. L Aithal.

Vakil for Petitioner

ಉಡುಪಿ, ತಾರೀಕು 9. 9 44

Navabharat Book Depot Udipi South India			Navabharat Book Depot Udipi South India		
ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು					
	ರೂ. ಆ.	ಮೂರು ಪ್ರಹಸನಗಳು	0 14	ವೀರಭದ್ರ	0 2
ಸುಲಭದಲ್ಲಿ ಇಂಗ್ಲಿಷ್	1-1	ಸ್ವತಂತ್ರ ಜೀವನೋಪಾಯ	0-3	ವತ್ಸಲ	0 8
ಯುವಕರಿಗೆ ಮತ್ತು ವಯಸ್ಕರಿಗೆ ಸುಲಭವಾಗಿ ಇಂಗ್ಲಿಷನ್ನು ಅನ್ಯ ಸಹಾಯವಿಲ್ಲದೆ ಕಲಿಸುವ ಇಂಗ್ಲಿಷ್ ಸ್ವಯಂಬೋಧಿನಿ.		ಪುರುಷವಧ	0 4	● ಕವನಗಳು	
		ಹೆಂಡ್ತಿ ಗಂಡನಾದರೆ	0 4	ಕಾವ್ಯನ ಸಾಮ್ರಾಜ್ಯ	0 12
		● ಕತೆಗಳು		ವಂಗಗಳು	0 3
		ನಗೆನೋಟಗಳು	0-14	ಪ್ರೇಮಮಯಿ	1-0
● ನಾಟಕಗಳು		ಅನ್ನದೇವರು ಮತ್ತು ಇತರ ಕಥೆಗಳು	1 0	ಪುರಂದರದಾಸರ ಕೀರ್ತನೆ	1-0
ಪ್ರೇಮವಿಜಯ	0 12			ಭಗವದ್ಗೀತಾ (ಮೂಲ-ಸಿಲ್ಕ್ ಬೈಂಡು)	
ದೇಶಭಕ್ತ	1-4	ಭಾರತೀಯ ಕತೆಗಳು	0-11		1-4
ವ್ಯಭಿಚಾರಿಣಿ ಯಾರು	0-12	ನಂದಾದೀಪ	0 10	● ಇತರ ಪುಸ್ತಕಗಳು	
ಕುರಲವ	0-5	ನಾಡಕತೆಗಳು	0 3	ಮುಂದಿನ ದೇವರು	0-3
ಸಂಶಯ ಪಿಶಾಚಿ	0-8	ಮಾಧವನ	3 0	ದಾಸ್ಯಕತೆಯ ಇತಿಹಾಸ	2 6
ರಂಗಧಾಮ	0-6	ಸಾರೀಹೃದಯ	0 11	ಬಾಲವಾಙ್ಮಯ	0-3
ಪ್ರಕಾಶ	1-12	ಅಂತರಂಗದ ಕತೆಗಳು	0-10	ಮಿತಸಂತತಿ	0-8
ಧರ್ಮಸಂಕಟ	0-4	ಪ್ರೇಮಪ್ರವಾಹ	0 6	ಲಕ್ಷ್ಮಿಯಜ್ಞಾನ	0-8
ಆರೋಗ್ಯ ಪ್ರತಾಪ	0 12	ಅಪಾತ ಇತ್ಯಾದಿ ಕತೆಗಳು	0 12	ನಾಸಪೂರಿತ ಪಟ್ಟಣಗಳು	1-8
ಪಂಚಾರತಿ	0 6	ಜೋನಾಮುದ್ರೆ	0-6	ಚಿಗುರು	0 6
ಪ್ರತೀಕಾರ	0-6	● ಕಾದಂಬರಿಗಳು		ಇತರ ಪುಸ್ತಕಗಳ ಕೆಟಲಾಗಿಗ	
ಸೇವಾಶಪಥ	0-8	ಸನ್ಯಾಸಿಯ ಸೋಗಿನಲ್ಲಿ	0-3	0-2 0 ಸ್ಟ್ಯಾಂಪಿನ್ನು ಬರೆಯಿರಿ.	
ನವಭಾರತ ಪುಸ್ತಕ ಭಂಡಾರ, ರಿಜಿಸ್ಟರ್ಡ್ ಪಬ್ಲಿಷರ್ಸ್, ಉಡುಪಿ ದ ಕ.					
Navabharat Book Depot Udipi South India			Navabharat Book Depot Udipi South India		

NOTICE.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

R. I. A 416/44
O. S 440/43

ರಮಾ ದುಗ್ಗೀನ ಸ್ವಾಬ ವಾದಿ

ನಾಕೋಡ ಬಾಬಾಸ ಪ್ರತಿವಾದಿ

ನಾಕೋಡ ಬಾಬಾಸ ಸೀನಪ್ಪಾ ನಾಯಕನ ಮಗ. ಪಕ್ಷಾದಿಗ್ರಾಮದ ಕೋಟಕೆರೆಯಲ್ಲಿರುವವ

ಸದ್ರಿ ನಂಬರಿನಲ್ಲಿ ಕ್ಯಾನಸ್ ತಿಕ್ರಿ ಆಗುವ ಕೆಂದ ವಾದಿವಾದ ಕೊಟ್ಟ ಅರ್ಜಿಯು ತಾ 30 9 44ಕ್ಕೆ ತಸ್ತಿಗ ಮುಂದೂಡಾಗಿರುವುದ ಆ ಕುರಿತು ನಿಮ್ಮದೇನಾದು ಆಕ್ಷೇಪವಿದ್ದ ಸದ್ರಿ ದಿವಸ ಸಂಕಲ್ಪದ ಕೋರ್ಟಿನ ಮುಂದೆ ಹಾಜರಾಗಿ ಹಾಜೀರು ಮಾಡಿಕೊಳ್ಳತಕ್ಕದು. ತಪ್ಪಿದ್ರೆ, ನಿಮ್ಮ ಗೈರ ಹಾಜರಿಯಲ್ಲಿ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವುದು ಎಂಬ ಸಂಗ್ತಿ ಈ ಮೂಲಕ ತಿಳಿಯಪಡಿಸಿಯದೆ

G Sanjiva Rau
Pleader for Plaintiff
Kundapur, Date 16-9-44

**ಕ್ರೌನ್
ರಬ್ಬರ್ ಸ್ಟಾಂಪ್ ಕಂಪೆನಿ
18 ಬಲ್ಮಠ ರಸ್ತೆ, ಮಂಗಳೂರು.**

ರಬ್ಬರ್ ಮೊಹರು ಸ್ಟೆನ್ ಬೋರ್ಡ್
ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co.
18 Balmat Road, MANGALORE.
Approved firm by the Govt. of Mysore.
Certified by the Agent of the Govt. of India in Ceylon. ESTD 1906

The Pangal Nayak Bank Limited.

(Incorporated in 1920)

Registered Office Court Road, UDIPI

Branches at— **Udipi, Mangalore, Katapadi, Kanhangad, Kinnigoli and Nileshwar**, South Canara District

Discounting of demand and short term negotiable instruments for approved parties, granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms, acceptance of Fixed, Current, Savings Bank and Cumulative deposits and every other type of up-to-date Banking service is at the disposal of all the sections of the discreet public.

For business proper please enquire at any one of our Offices.

15th April 1944.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಬಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ, ...ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡು ನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ಬರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟ:— ಬಾಗಲಕೋಟ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ

Ayurveda Oushadalaya GADAG.

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea. Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಉಪಯೋಗಿಸತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2 ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು.— ದಾ. ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ... ಶೆಣೈ, ರಥಬೀದಿ, ಡಾ. ಪಿ. ವಿ. ಆಚಾರ್ಯ ಫಾರ್ಮಸಿ; ದಾ. ಕೆ. ಶ್ರೀನಿವಾಸ, L. I. M., ಡಾ. ವೆಂಕಟರಾವ್, ಕೊಡವೂರು, ನವಭಾರತ ಬುಕ್ ಡಿಪೋ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ **ಅಮೋಘವಾದ ಮಧುರದ್ರವ ರಸಾಯನ.** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)



೮ ಪಿನ್ನಿನ ೨ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೭ **ಕೊಡಿಯಾಲಬೈಲು, ದ.ಕ**

— ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. ೫—0—0 ಪೋಸ್ಟ ಚಾರ್ಜ ೧೦ಆಣೆ.

ಮಾಲಕರು:—**ಹಾಲಪ್ಪಾ ಫಕೀರಪ್ಪಾ ದಾವಣಗೇರಿ**

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರ:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ:—ಕುಂಬರವಾಡಿ ಸ್ಟೋರ್ಸ ದಾವಣಗೇರಿ;—ದಾವಣಗೇರಿ ಪ್ರೆಸ್ಸ್. ಆರ್. ಎಲ್. ಕಮಲದಾಸಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಖ್ಯಾತಿ ಸಂಗ್ರಿ ಬರದಲ್ಲಿ ರೋಗಕ್ಕೆ ತಕ್ಕವಾದ ಔಷಧ ತಯಾರಿಸಬಹುದು. ಉಡುಪಿ ಏಜಂಟರು: — ನವಭಾರತ ಬುಕ್ ಡಿಪೋ

ನೋಡಿದರೆ ಸಾಕು! ಓದದೆ ಬಿಡಲಾರಿರಿ!!

ಮುಗಿದಾಗ ಮುಗಿದು ಹೋಯಿತಲ್ಲಾ ಎನಿಸುವ, ತೊಡಗಿದಾಗ ಹೇಗೆ ಮುಗಿಯುವುದಿದು ಎಂದು ಕೌತುಕಪಡಿಸುವ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ. ಬೆಲೆ ೦—೧೦—೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ತೊಳೆಸಿ ಹರಿಯುವ ಮಾತು.

ಪ್ರೇಮಪ್ರವಾಹವು ಹೇಗೆ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮಪ್ರವಾಹ

ಸ್ವಾರಸ್ಯವಾದ ೫ ಕತೆಗಳ ಸಂಗ್ರಹವನ್ನು ಓದಿನೋಡಿ ೦-೬—೦

ಬಹಿರಂಗವಾಗಿ ಅಲ್ಲವಾದರೂ ಅಂತರಂಗವಾಗಿ ನೋಡತಕ್ಕ

ಆರ್ಟ್ ಚಿತ್ರಗಳು

ಹಲವಾರು ಸುಂದರಿಯರ ನೈಜಚಿತ್ರಗಳ ಕಟ್ಟು. ಬೆಲೆ ೦—೬—೦

"ಪಾಪಪೂರಿತ ಪಟ್ಟಣಗಳು" ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಕುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ. ೧—೮—೦

ಎಲ್ಲಕ್ಕೂ ಟಿ. ಖ. ಪ್ರತ್ಯೇಕ. ಕೆಲವೇ ಪ್ರತಿಗಳು ಉಳಿದಿವೆ.

ಬರೆಯಿರಿ:— **ಅಂತರಂಗ ಕಾರ್ಯಾಲಯ, ಉಡುಪಿ.**

(ಉಡುಪಿಯ ನವಭಾರತ ಪುಸ್ತಕ ಭಂಡಾರದಲ್ಲಿಯೂ ದೊರೆಯುತ್ತವೆ.)

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

EDITED PRINTED & PUBLISHED BY K. H. SHETTY ...

Regd No M'3618.

ವಾರ್ಷಿಕ ಚಂದಾ ರೂ 4—8—0 ಬಿಡಿ ಸಂಚಿಕೆ 0—1—6

Estd 1921 ಸ್ಥಾಪಿತ.

NAVAYUGA
ನವಯುಗ

ವರ್ಷ ೨೪] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. [Vol 24
ವಾರ ೫] Founder SRI A. B. SHETTY. [No. 5

ಉಡುಪಿ ● 5—10—1944 ● ಮಂಗಳೂರು.

ಡಿ ಜುಪಿಟರ್
ಜನರಲ್ ಇನ್ಶ್ಯೂರೆನ್ಸ್
ಕಂಪೆನಿ, ಲಿ, ಬೊಂಬಾಯಿ.

ವಿಮೆಯಿಳಿಸ ಬೇಕೆ?
ಏಜಂಟರಾಗುವಿರಾ!

-ಹಾಗಾದರೆ ಕೂಡಲೇ-

ಪಿ. ಡಿ. ನಾಯಕ್, ಉಡುಪಿ,
ದಕ್ಷಿಣ ಕನ್ನಡದ ಚೀಫ್ ಏಜೆಂಟ್.

-ಇವರಿಗೆ ಬರೆಯಿರಿ-

1 ಕೋಟಿಗೆ ಮಿಕ್ಕಿ ವ್ಯವಹಾರ!
ಈ ವರುಷವೇ ರಜತೋತ್ಸವ!

The Jupiter General
Insurance Company Ltd.

ಅಂತರಂಗ

ಅಖಿಲ ಕರ್ನಾಟಕದ ಹೊಸ
ಮಾದರಿಯ ಸಚಿತ್ರ
ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ 4—8—0
ಬಿಡಿ ಪ್ರತಿಗೆ ರೂ. 0—1—6

The Vijaya Bank, Limited.

NOTICE

To

The Shareholders of
The Vijaya Bank, Limited.

The Examiner of Capital Issues in his letter No R 1543-CCI/41/6007 dated 8-9 44 while with-holding permission for the issue of further capital on the ground that the proportion of Paid Up Capital and Reserves to deposits is satisfactory, has given consent to the re issue, to the existing share holders only, of 65 forfeited shares of Rs 50 each with Rs. 25/ paid up

You are therefore requested to send in your application to the Head office of the Bank, at Mangalore, for the said shares with Rs 26 per share(including Re. 1' being the Admision Fee per share), in the prescribed share Application Form which is available at any of the offices of the Bank The said shares are open for subscription from 1 10 44up to 10 10 44 both days inclusive. The allotment of shares shall be at the discretion of the Directors.

(Consent of the Central Government has been obtained to this issue under Defence of India Rule 94-A It must be distinctly understood that in giving this consent the Government of India do not take any responsibility for the financial soundness of any schemes or for the correctness of any of the statements made or opinions expressed with regard to them)

By order)

B Mahabala Shetty
Secretary

Head Office,
Mangalore,
23 9-1944

THOUGH IN THESE DAYS—

In days of yore, Abraham and his family were led to safety and security by the hand of Providence in the form of a White-winged Angel

Though in these days no such White-winged Angels come, wise men avail themselves of the same protection of safety and security in the form of Life Assurance Policies. They believe that God helps those who help themselves

THE CANARA MUTUAL ASSURANCE CO., LTD.,
UDIPI (S India)

RFGI

ಅಮೃತಾಂಜನ ತಲೆವೇದನೆ, ಶಿರೋವೇದನೆ, ಉಳುಕು, ಶೀತ, ಭುಜ, ಹಲ್ಲು ವೇದನೆಗಳಿಗೂ ಏದೆನೋವು, ಘಾಯಗಳು ಬೆಂಕು ಕೊಳ್ಳುವದು, ಚೇಳು ವಿಷ ಮೊಂತಾದ ಬೇನೆ ಕಷ್ಟಕ್ಕೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಹಸ್ತ, ಎಲ್ಲಾ ಕಡೆ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್.
ಮದರಾಸು
ಬೊಂಬಾಯಿ ಮತ್ತು ಕಲ್ಕತ್ತ.

ENGLISH MADE EASY

ಇಂಗ್ಲಿಷ್ ಏನೂ ತಿಳಿಯದವರು 'ಸುಲಭದಲ್ಲಿ ಇಂಗ್ಲಿಷ್' ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೇ ಕಲಿತುಕೊಳ್ಳಬಹುದು

ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.
ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ

ಬೆಲೆ ಬರೇ ರೂ 1—4—0 ರೂ 1-5-0ನ್ನು ಮನಿಯಾರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತೆ.

Navabharat Book Depot,
Registered Publishers & Book Sellers,
UDIPI, S K.

ನಮ್ಮಲ್ಲಿ ಸಿಗುವ ಪುಸ್ತಕಗಳ ಕೆಟಲಾಗಿಗೆ 0 2 0 ಸ್ಟಾಂಪು ಕಳುಹಿ ಬರೆಯಿರಿ.

ಡಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪಾಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವ್ಯವಹಾರಗಳಿಂದ ಅಪಾರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S K.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಮೂರನೇ ಸಂಪುಟಾರಂಭವಾಗಿದೆ
ವಿದ್ಯಾ ಇಲಾಖೆಗೆ ಸಂಬಂಧಿಸಿದ
ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ

ವಾರ್ಷಿಕ ಚಂದಾ
ರೂ 1—8—0 ಮಾತ್ರ
ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

☞ ಮುಟ್ಟುಗುಟಿಕೆ ☜

ಮಲಬಂಧದಿಂದ ಕಷ್ಟಪಡುವ, ಕಷ್ಟದ ಗರ್ಭಧಾರಣ ಅಥವಾ ಅಸ್ವಾಭಾವಿಕ ಮಟ್ಟು ... (Govt Regd) ಸ್ತ್ರೀಯರ ... ಅತ್ಯಯುಕ್ತರಾಗಿ, ಕೆಲವೇ ಗಂಟೆಗಳಲ್ಲಿ ಮರಿಯ ... ಗರ್ಭಧಾರಣೆಯನ್ನು ತಿಳಿಸುವುದು, ... ತೃಪ್ತರಾಗಿದ್ದಾರೆ ಬೆಲೆ ರೂ 31 ... ರೂ 5, (ರೂ 12 ...) Mrs P: DEVEE, P D S (S) Tollygunge, Calcutta,
ಸ್ಟಾಕಿಸ್ಟ್ ಪೋಪ್ಯುಲರ್ ಸ್ಟೋರ್ಸ್
ಮಂಗಳೂರು

CO-OPERATION - - - -

Life Assurance is the business based on the idea of mutual co-operation By diverting a small portion of one's earning for paying premiums, we co-operate for the good of the family and safeguard the education of children.

Let us assist you in taking out a Policy under the plan best suited to you. Write now to.—

KOCHIKAR BROTHERS LTD.
Chief Agents for South India
THE BOMBAY LIFE ASSCE. CO., LTD.
(Estd 1908)
The "Bombay Life" Bldg. UDIPI S K.

Offices and Agencies throughout South India.

Decorate your home with
Life-like Oil Painting
of those dear and near to you

M. S Shirale,
Modern Studio
UDIPI.

CHAMPAE'S
Snow & Castrex
Sole Distributers for (India.)
Sukhananda Stores
Santhekatte, UDIPI, S. K.

ತಾರುಣ್ಯ

ಕೊಟ್ಟು, ವೀರ್ಯಸ್ತಂಭನ ಮಾಡಿ ರತಿಸುಖದಲ್ಲಿ ಪರಮಾನಂದವನ್ನುಂಟು ಮಾಡಲು ರಮಣೀ ವಿಲಾಸಿನಿ ಅತ್ಯುತ್ತಮ ಔಷಧಿ

ಡಬ್ಬಿ 1ಕ್ಕೆ ರೂ. 1—4—0

ಮದನಮಂಜರಿ ಫಾರ್ಮಸಿ,
184 ಬೈನಾ ಬಜಾರ್ ರೋಡ್, ಮದ್ರಾಸು,
ಪುತ್ತೂರು ಏಜಂಟರು ಶೈ ಫಾರ್ಮಸಿ

ಉಡುಪಿಯ ಸಾಹಿತ್ಯೋತ್ಸವ

ಬೋರ್ಡು ಹೈಸ್ಕೂಲ್ ಎಕೆಡಮಿ ಹಾಲಿನಲ್ಲಿ ಕರ್ನಾಟಕ ಸಂಘದ ಸಾಹಿತ್ಯೋತ್ಸವವು:—ತಾ 24ರಿಂದ ತಾ 27ರ ತನಕ ಯಶಸ್ವಿಯಾಗಿ ಜರಗಿತು.

ಮೊದಲ ದಿನ ಉತ್ಸವದ ಉದ್ಘಾಟನೆಯನ್ನು ಶ್ರೀ. ಫಲಿಮಾರು ಮಠದ ಶ್ರೀ. ರಘುಮಾನ್ಯ ತೀರ್ಥ ಸ್ವಾಮಿಗಳವರು ನೆರವೇರಿಸಿದರು. ಅಧ್ಯಕ್ಷ ಸ್ಥಾನವನ್ನು ಶ್ರೀ. ಸಾಬಾಜಿ ಶ್ರೀನಿವಾಸಾಚಾರ್ಯರು ವಹಿಸಿದ್ದರು. 'ಕರ್ನಾಟಕದ ಸಂಸ್ಕೃತಿಯ ಐಕ್ಯ ಸಾಧನೆ'ಯ ಕುರಿತು ವಕೀಲ್ ಶ್ರೀ. ಪಿ ವಾಸುದೇವ ಉಪಾಧ್ಯಾಯರೂ 'ಗ್ರೀಕರ ಪ್ರಹಸನಲ್ಲಿ ಕನ್ನಡ ನುಡಿ' ಎಂಬ ವಿಷಯದಲ್ಲಿ ಶ್ರೀ. ಮಂಜೇಶ್ವರ ಗೋವಿಂದ ಪೈಗಳವರೂ ಉಪನ್ಯಾಸಗಳನ್ನಿತ್ತರು. ವಾದ್ಯಗೋಷ್ಠಿ ಮತ್ತು ನಾಟಕ ಪ್ರದರ್ಶನಗಳಾದ ಬಳಿಕ ಶ್ರೀ. ಹಂಡೆ ಶ್ರೀ ಪಾದದಾಸರ 'ಕರ್ನಾಟಕ ವಿಜಯ' ಹರಿಕಥೆಯಾಯಿತು.

ಎರಡನೆ ದಿನ ಪೂರ್ವಾಹ್ನ ವಿಶೇಷ ಅಧಿವೇಶನವೊಂದು ಪಂಡಿತ ಮುಳಿಯ ತಿಮ್ಮಪ್ಪಯ್ಯನರವರ ಅಧ್ಯಕ್ಷತೆಯಲ್ಲಿ ಜರಗಿ 'ಶಾಲೆಗಳಲ್ಲಿ ಕನ್ನಡ ಶಿಕ್ಷಣ' 'ನಾಡ ನುಡಿಯ ಒಳಿಕೆ' ಮತ್ತು 'ಶೈಲಿ' ಈ ವಿಷಯಗಳನ್ನೆತ್ತಿ ಶ್ರೀಗಳಾದ ಎಚ್ ರಾಮರಾವ್, ಎ.ಶಂಭು ಭಟ್ ಮತ್ತು ಎಸ್. ಕೃಷ್ಣ ಭಟ್ಟರು ಅನುಕ್ರಮವಾಗಿ ಉಪನ್ಯಾಸಗಳನ್ನಿತ್ತರು. ಸಭಾ ನಾಯಕರು 'ಪಂಪ ಕಾವ್ಯದ ಪೆಂಪಿನ' ಕುರಿತು ಭಾಷಣವಿತ್ತರು.

ಮಧ್ಯಾಹ್ನ ಶ್ರೀ ಶೀರೂರು ಮಠದ ಶ್ರೀ ಲಕ್ಷ್ಮೀಂದ್ರ ತೀರ್ಥ ಶ್ರೀ ಪಾದಂಗಳವರು ಶ್ರೀ. ಕೆ. ವಿಟ್ಠಲ ಶೆಣೈ, ಬಿ. ಎ. ಎಲ್. ಟಿ.ಯವರಿಂದ ಸಂಗ್ರಹಿಸಲ್ಪಟ್ಟ ವಾರ್ತಾಪತ್ರ ಪ್ರದರ್ಶನದ ಉದ್ಘಾಟನಾ ಸಮಾರಂಭವನ್ನು ಯಶಸ್ವಿಗೊಳಿಸಿದರು. ಶ್ರೀ. ಎಚ್. ಭೀಮರಾಯರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. 'ಕನ್ನಡದ ವಾರ್ತಾ ಪತ್ರಗಳು' ಈ ವಿಷಯದಲ್ಲಿ ಶ್ರೀ. ಕೆ. ಕೃಷ್ಣರಾಯರೂ 'ನಾಡ ನುಡಿ ಕನ್ನಡವೇ ಶಿಕ್ಷಣ ಮಾಧ್ಯಮವಾಗಿರಬೇಕು, ಇದನ್ನೆತ್ತಿ ಶ್ರೀ. ಎಸ್. ಮುಕುಂದರಾಯರೂ 'ಕನ್ನಡ ಲಘುಸಾಹಿತ್ಯ'ದ ಕುರಿತು ಶ್ರೀ ಎಮ್. ವಾಸುದೇವ ಪ್ರಭುಗಳೂ ಉಪನ್ಯಾಸಗಳನ್ನಿತ್ತರು. ಕುಮಾರ ಹಂಡೆ ಗುರುವೇದವ್ಯಾಸರ 'ಕಥಾಮೃತಸಾರ' ಗ್ರಂಥವಾಚನ, ಕಟ್ಪಾಡಿ ಹಾ। ಎಲಿಮೆಂಟರಿ ಶಾಲಾ ಬಾಲಕ ವೃಂದದ 'ಕಂಸವಧೆ' ಬಯಲಾಟ ಪ್ರದರ್ಶನ, ವಾದ್ಯ, ನೃತ್ಯಗೋಷ್ಠಿ, ಸತಾರವಾದನ ದ್ವಾರಾ ಸಾಹಿತ್ಯಕಲಾ ಸೇವೆಗಳೊಂದಿಗೆ ಅಂದಿನ ಕಾರ್ಯಕ್ರಮ ಕೊನೆಗೊಂಡಿತು.

ಮೂರನೆ ದಿನದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರು ಸಭಾಧ್ಯಕ್ಷತೆ ವಹಿಸಿದ್ದರು.

'ಕನ್ನಡ ಶಾಸನಗಳು', ಈ ವಿಚಾರದಲ್ಲಿ ಶ್ರೀ ಕೆ. ವಿ ರಾಘವಾಚಾರ್ಯರ್, 'ಕನ್ನಡ ಸಾಹಿತ್ಯದಲ್ಲಿ ಯಕ್ಷಗಾನ' ಕುರಿತು ಡಾ। ಎನ್. ಎಚ್. ಒಡೆಯರ್, 'ಕನ್ನಡ ಕವಿತೆಗಳು' ಈ ಕುರಿತು ಶ್ರೀ ಎಸ್. ಸುಬ್ಬರಾಯರು ಉಪನ್ಯಾಸಗಳನ್ನಿತ್ತರು 'ನಾಡ ಮತ್ತು ನುಡಿಯ ಏಕೀಕರಣ' ಇತ್ಯಾದಿ ವಿಷಯಗಳನ್ನೆತ್ತಿ ಅಧ್ಯಕ್ಷರ ಭಾಷಣವಾಯಿತು. ರಾತ್ರಿ ತೆಂಕು ಬಡಗಣ ಪ್ರಸಿದ್ಧ ಅರ್ಥಗಾರರ ಕೂಡುವಿಕೆಯಿಂದ ಯಕ್ಷಗಾನ ತಾಳಮದ್ದಳೆಯಿತ್ತು.

ಕೊನೆಯ ದಿನ ಜರಗಿದ ಅಧಿವೇಶನದ ಅಗ್ರಾಸನವನ್ನು ಜಿಲ್ಲಾ ವಿದ್ಯಾಧಿಕಾರಿ ಶ್ರೀ ಎಸ್. ಸಬ್ಬರಾಯರು ಅಲಂಕರಿಸಿದ್ದರು. 'ವಚನ ಸಾಹಿತ್ಯ'ದ ವಿಚಾರದಲ್ಲಿ ಶ್ರೀ ಬಿ. ವಿ ರಮಣನವರೂ, 'ಇಂದಿನ ವಿಜ್ಞಾನದ ಕೆಲವಿಚಾರ'ಗಳಲ್ಲಿ ಶ್ರೀ ಕೆ. ಸೂರ್ಯನಾರಾಯಣ ಅಡಿಗರೂ, 'ಸಾಹಿತ್ಯೋತ್ಸವದ ಧ್ಯೇಯ'ಗಳ ಕುರಿತು ಶ್ರೀ ಎಚ್. ಭೀಮರಾಯರೂ ಭಾಷಣಗಳನ್ನಿತ್ತರು

ಕೆನರಾ ಮ್ಯೂಚುವಲ್ ಎಷ್ಯೂರೆನ್ಸ್ ಕಚೇರಿಯಲ್ಲಿ ತಾ 26ರಲ್ಲು ಕರ್ನಾಟಕ ಸಂಘದ ಸದಸ್ಯರಿಗೂ, ಸಾಹಿತ್ಯೋತ್ಸವಕ್ಕೆ ದಯಮಾಡಿಸಿದ ಮಾನ್ಯ ಅತಿಥಿಗಳಿಗೂ ಶ್ರೀ. ಬಿ. ವೈಕುಂಠ ಬಾಳಿಗರ ಸಭಾಧ್ಯಕ್ಷತೆಯಲ್ಲಿ ಸತ್ಕಾರ ಕೂಟವಿತ್ತು. ಆ ಸಂದರ್ಭದಲ್ಲಿ ಡಾ। ಟಿ. ಮಾಧವ ಪೈ, ಶಿವರಾಮ ಕಾರಂತ್, ಮಾಸ್ತಿ ವೆಂಕಟೇಶ ಅಯ್ಯಂಗಾರರ ಭಾಷಣಗಳಿದ್ದುವು.

ಕ್ರೌನ್

ರಬ್ಬರ್ ಸ್ಟಾಂಪ್ ಕಂಪೆನಿ

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co.
18 Balmat Road, MANGALORE.
Approved firm by the Govt. of Mysore, Certified by the Agent of the Govt. of India in Ceylon. ESTD 1906



ಈಗ ಉಳಿಸಿದ ಪ್ರತಿಯೊಂದು ರೂಪಾಯಿಯೂ..

ಯುದ್ಧ ಮುಗಿದ ಮೇಲೆ, ಈಗಿನಕ್ಕಿಂತಲೂ ಬಹುಮಟ್ಟಿಗೆ ಹೆಚ್ಚಾದ ಕೊಳ್ಳುವ (ಪದಾರ್ಥಗಳನ್ನು) ಶಕ್ತಿಯನ್ನು ಪಡೆಯುವುದು. ಪದಾರ್ಥಗಳು ಮಿತಿಮೀರಿ ತುಟ್ಟಿಯಾಗಿರುವ ಈ ಸಮಯದಲ್ಲಿ, ನಾವು ಅವುಗಳನ್ನು ಕೊಂಡುಕೊಂಡರ ನಮ್ಮ ದುಡ್ಡಿಗೆ ತಕ್ಕ ಪ್ರಯೋಜನವು ದೊರಕುವುದಿಲ್ಲ ಹೇಗೆಂದರೆ, ಸಾಮಾನ್ಯ ಬುದ್ಧಿಯವರಿಗೂ ಕೂಡ ಸ್ಪಷ್ಟವಾಗಿ ತಿಳಿದಿರುತ್ತದೆ. ಅಲ್ಲದೆ, ಬಟ್ಟೆಗಳು, ಆಹಾರ ಸಾಮಾಗ್ರಿಗಳು, ಮತ್ತು ಔಷಧಿಗಳು ಇವುಗಳಿಗೆ ಈಗ ಒಂದು ವರ್ಷದ ಹಿಂದೆ ಇದ್ದ ಬೆಲೆಗೂ, ಈಗಿನ ಬೆಲೆಗೂ ಹೋಲಿಸಿದರೆ ಅವರ ಈಗಿನ ಬಾಳುವೆಯು ಎಷ್ಟುಮಟ್ಟಿಗೆ ಕಠಿಣವಾಗಿದೆಯೆಂಬುದು ತಿಳಿಯುವುದು. ಮತ್ತು ಇವುಗಳ ಧಾರಣೆಯು ನಮ್ಮ ಕೊಳ್ಳುವವರಲ್ಲಿಯೇ ಏರುತ್ತಿರುವುದು ವ್ಯಕ್ತವಾಗುವುದು. ಈ ವಿಚಾರವನ್ನು ಚೆನ್ನಾಗಿ ಮನಗಂಡು ಎಲ್ಲರೂ, ಮಿತವ್ಯಯ ಮಾಡಿದ ವಿವೇಕಿಯು, ಈ ವರ್ಷ ಅಂಟಿಗೊಂಡಲೂ ನ ಕ್ರಯಕ್ಕೆ ತನಗೆ ಬೇಕಾದವುಗಳನ್ನು ಕೊಳ್ಳುವುದು. ಆದುದರಿಂದ ನಿಮ್ಮ ಕೈಲಾದ ಮಟ್ಟಿಗೂ ಈಗ ಹಣವನ್ನು ಉಳಿಸಿ, ಯುದ್ಧ ನಿಂತು, ಶಾಂತಿಯು ನೆಲೆಸಿದಾಗ ಈಗಿನಕ್ಕಿಂತಲೂ ಕನಿಷ್ಠಪಕ್ಷ ಇಮ್ಮಡಿ ಪ್ರಯೋಜನವನ್ನು ಹೊಂದುವುದು ಅತ್ಯಂತ ವಿವೇಕಯುಕ್ತವಾದ ಮಾರ್ಗ.

ಮತ್ತೊಂದಂಶವೇನೆಂದರೆ, ನೀವು ಉಳಿಸಿದ ಹಣವನ್ನು ವಿನಿಯೋಗಿಸುವಾಗ ಹೆಚ್ಚುಬಡ್ಡಿಗೆ ಆಸೆಪಡದೆ, ಒಂದುವಾಳಕ್ಕೆ ಚ್ಯುತಿಯಿಲ್ಲದ ಮಾರ್ಗವೆಂಬುವ ವಿಚಾರವನ್ನು ದೃಢಮಾಡಿಕೊಳ್ಳಿ. ಆಭರಣಗಳು, ಜಮೀನುಗಳು, ಕಟ್ಟಡಗಳು, ಕೈಗಾರಿಕೆ ಸಾಮಾನುಗಳು, ಸರಕುಗಳು, ಇವುಗಳೆಲ್ಲವೂ, ಈ ಯುದ್ಧದ ದಿವಸಗಳಲ್ಲಿ, ಧನವಿನಿಯೋಗಕ್ಕೆ ಯೋಗ್ಯಮಾರ್ಗಗಳಲ್ಲ. ಅವುಗಳ ಬೆಲೆ ಪ್ರಕೃತದಲ್ಲಿ ಮಿತಿಮೀರಿ ಏರಿರುವದೇನೋ ನಿಜ. ಆದರೆ, ಅವುಗಳು ಎಷ್ಟುಮಟ್ಟಿಗೆ ಇಳಿಯುವದನ್ನು ಸಹ ನೀವು ಒಂದು ದಿನವಲ್ಲೊಂದು ದಿನ ನೋಡಿಯೇ ನೋಡುವಿರಿ.

ಭದ್ರತೆ ಮತ್ತು ಮಿತವಾದ ಬಡ್ಡಿ ಇವುಗಳ ಮೇಲೆ ನಿಮ್ಮ ಧ್ಯಾನವಿದ್ದರೆ ಆದರೆ, ನಿಮ್ಮ ಹಣವನ್ನು ಗವರ್ನಮೆಂಟ್ ಲೋನುಗಳು, ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳು, ಇನ್ಷೂರೆನ್ಸ್, ಕೋ ಆಪರೇಟಿವ್ ಸಂಘಗಳು, ಪೋಸ್ಟಾಫೀಸ್ ಮತ್ತು ಬೇಂಕುಗಳಲ್ಲಿ ಏರ್ಪಡಿಸಿರುವ ಉಳಿತಾಯ ಸೌಕರ್ಯಗಳೂ, ಇವುಗಳಲ್ಲಿ ನಿಮ್ಮ ಹಣವನ್ನು ಇಡಿರಿ.

ಹಣವನ್ನು ಕೈಲಾದ ಮಟ್ಟಿಗೂ

ಉಳಿಸಿರಿ

ಉಳಿಸಿದ್ದನ್ನು ವಿವೇಕಮಾರ್ಗಗಳಲ್ಲಿ ವಿನಿಯೋಗಿಸಿರಿ.

ಇದು ರಾಷ್ಟ್ರೀಯ ಯುದ್ಧಮುಖವು ಭಾರತೀಯರ ಸಮಕ್ಷಮದಲ್ಲಿ ಮಾಡುವ ಅರಿಕೆ.

AAA 1113 KN.

——ಯುದ್ಧದ ಸುದ್ದಿಗಳು——

ಕೆಲೈಯು ಮಿತ್ರಪಕ್ಷದ ವಶವಾಯಿತು

ಫ್ರಾನ್ಸಿನ ಕರೆಯಲ್ಲಿರುವ ಕೆಲೈಯಿಂದ ಶತ್ರುಪಕ್ಷವು ಕಳೆದೈದು ವರ್ಷಗಳಲ್ಲಿ ದೂರ ಎಸೆತದ ಫಿರಂಗಿಗಳ ಮೂಲಕ ಆ ಕಿಯ ಕಡೆಯಲ್ಲಿ ಇಂಗ್ಲಾಂಡಿನ ದ್ವಾರ ದಂತಿರುವ ಡೋವರನ್ನು ಪುಡಿಗೈಯುತ್ತಿದ್ದುದು ಕಳೆದ ಶನಿವಾರ ನಿಂತು ಹೋಯಿತು ಮಿತ್ರಪಕ್ಷದ ಕೆನಡಿಯನ್ ಸೇನೆಯು ಜರ್ಮನ ಸೇನೆಯನ್ನು ಪರಿಪೂರ್ಣ ಸೋಲಿಸಿ ಸೆರೆಹಿಡಿದು ಕೆಲೈಯನ್ನು ವಶಪಡಿಸಿಕೊಂಡಿತು ಈ ಸುದ್ದಿಯು ಡೋವರಿಗೆ ಮುಟ್ಟದೊಡನೆ ನೆಲದೊಳಗೆ ಅಡಗುಮನೆಯ ಕಳೆದೈದು ವರುಷಗಳಿಂದ ದಿನಗಳೆಯುತ್ತಿದ್ದ ಜನರು ಬೀದಿಬೀದಿಗಳಲ್ಲಿ ನರೆದು ಕುಣಿದು ಹಾಡಿ ಈ ವಿಜಯೋತ್ಸವವನ್ನು ಆಚರಿಸಿದರು ಫ್ರಾನ್ಸಿಗೂ ಇಂಗ್ಲಾಂಡಿಗೂ ನಡುವೆ ಇರುವ ಇಕ್ಕಟ್ಟಾದ ಇಂಗ್ಲಿಷ್ ಚೆನಲ್ ಎಂಬ ಶರಧಿಯು ಈಗ ಶತ್ರುವಿನಿಯಿಂದ ಪರಿಪೂರ್ಣ ಪರಿಹೃತವಾದುದೂ ಆ ಶರಧಿಯ ಕಾವಲನ್ನೆಸಗುತ್ತಿರುವ ಹಾಗೂ ಇಂಗ್ಲಾಂಡಿನ ಪ್ರವೇಶದ್ವಾರದಂತಿರುವ ಡೋವರ್ ಶತ್ರುಭಯರಹಿತವಾದುದೂ ಮಹತ್ವದ ವಿಜಯವು

ಹೊಲ್ಲಾಂಡದಲ್ಲಿ ಭೀಕರ ಕದನ

ಜರ್ಮನರು ಹೋಲಾಂಡು ಬಿಟ್ಟು ಜರ್ಮನಿಗೆ ಓಡಿಹೋಗಲಾಸ ರೈಲ್ವೆ ಜಂಕ್ಷನಿಗೆ ಸಮೀಪವಿರುವ ಮಾರ್ಕ್ಸ್‌ಪ್ಲಾಸ್ ಎಂಬ ಪಟ್ಟಣವು ಮಿತ್ರರ ವಶವಾಯಿತು ಶತ್ರುಪಕ್ಷವು ಭೀಕರವಾಗಿ ಪ್ರತಿಭಟಿಸುತ್ತಿದ್ದರೂ ಹಿಂದೆ ಹಿಂದ ಸರಿಯುತ್ತಿದೆ

ಪೂರ್ವರಣರಂಗದಲ್ಲಿ

ರಷ್ಯನರು ಮುಕ್ತಾಯದ ವಿಜಯಕ್ಕೆ ಸನ್ನಾಹಮಾಡುತ್ತಿದ್ದಾರೆ ರಷ್ಯದ ಕೆಂಪುಸೇನೆಯು ದೊಡ್ಡ ಪ್ರಮಾಣದಲ್ಲಿ ಒಂದು [illegible] ಆದಾಪ್ರದೋ ಒಂದು ಕಡೆಯು ಅತಿ ರಹಸ್ಯವಾದ ಕಾರ್ಯದಲ್ಲಿ ದ [illegible] ನಗರದ ಕೊಡು ಬಲ್ಗೇರಿಯ ಕೆಂಪು ಸೇನೆಯು ಜರ್ಮನಿಯ ರಾಜಧಾನಿಯ ಕಡೆಗೆ ಸಾಗುವ ಪಥದ [illegible] ಮಾರ್ಗ ನಿರ್ಮಾಣಕ್ಕಾಗಿ ಸಕಲ ಸನ್ನಾಹಗಳಾಗುತ್ತಿವೆ

ಈ ಕೊನೆಯ ವಿಜಯದ ಧನಿಯು ಕಲವು ವಾರಗಳಲ್ಲಿಯೋ ತಿಂಗಳುಗಳಲ್ಲಿಯೂ ಅಥವಾ ಮುಂದಿನ ವರ್ಷದಲ್ಲಿಯೋ ಎಂದು ಹೇಳಲು ಬರುವುದಿಲ್ಲವಾದರೂ ವಿಜಯವು ನಿಶ್ಚಯ.

WANTED

"Wanted immediately a Natural Science Graduate (L T preferred) or an L T qualified to teach Natural Science. Vacancy likely to be permanent. Apply to the Correspondent stating terms"

A S Karat [illegible]
Correspondent

Christian High School
Dated 3 10 1944

ಗಣನೀಯ ವಿಷಯ

ಸ್ಟಾಲೀನನೊಡನೆ ಇನ್ನೂ ರಿಜರ್ವದ್ದೂ ಸಮರೋಪಕರಣಗಳ ಸಂಗ್ರಹವೂ ವಿಶೇಷ ಪರಿಮಾಣದಲ್ಲಿವೆ ಧೀರ ಶೂರ ದೇವಾಯಿಗಳೂ ಇದ್ದಾರೆ ಹಿಟ್ಲರನ ಓಂಬಲ ಮುಂಬಲವೆಲ್ಲ ಕುಂದುತ್ತ ಬಂದಿದೆ

ಈ ವರ್ಷಾಂತ್ಯದಲ್ಲೇ ಯುದ್ಧ ಪರ್ಯವಸಾನವಾಗುವಂತೆ ಸಹಾಯಗೈರಿಯ ಆಸ್ತಿಯಾದವರು ದಂಗೆಯೇಳುವಂತೆ ನೋಸ್ಕೋದಿಂದ ವಿನಂತಿ

ಆಸ್ಟ್ರಿಯಾದಲ್ಲಿ ದಂಗೆಯೇಳುದಂತೆ ಈಗಾಗಲೇ ಹಿಮ್ಲರನು ಹತ್ತು ಸಾವಿರ ಆಸ್ಟ್ರಿಯರನ್ನು ಪ್ರತ್ಯೇಕಿಸಿ ದೂರವಿಟ್ಟಿದ್ದಾನೆ ಹಿಮ್ಲರ್ ಕೈ ಇನ್ನೂ ಮುಂದುವರಿಯದಂತೆ ಜಾಗ್ರತರಾಗಿರಿ ಪ್ರತಿಯೊಬ್ಬ ಜರ್ಮನ್ ಅಧಿಕಾರಿಯ ಹೃದಯದ ಮೂಲಕ ಒಂದೊಂದು ಗುಂಡು ಹಾಯುಹೋಗಲಿ—ಎಂದು ಆಸ್ಟ್ರಿಯಾದವರಿಗೆ ಮೋಸ್ಕೋದಿಂದ ವಿನಂತಿ

ಯುಗೊಸ್ಲವೇಕಿಯಾದೊಳಗೆ ಕೆಂಪು ಸೇನೆಯ ಪ್ರವೇಶ

ಈ ಪ್ರವೇಶದಿಂದಾಗಿ ಜರ್ಮನರ 63 ಟ್ಯಾಂಕಗಳೂ 14 ವಿಮಾನಗಳೂ ನಾಶವಾದುವು

ಇಟಲಿಯಲ್ಲಿ

ಮಿತ್ರಪಕ್ಷದ ಸೇನೆಯು ಉತ್ತರದ ಮಹಾಬಯಲಿನ ಕಡೆಗೆ ನುಗ್ಗುತ್ತಿದೆ ಜರ್ಮನರ ನಿಂತ ನಿಲುವನ್ನು ಮುರಿದು ಹಿಂದೂಡಿಸಿ ಮುಂಬರಿಯುತ್ತಿದೆ

ಜಪಾನರ ಹಡಗಗಳು ಮುಳುಗಿಸಲ್ಪಟ್ಟವು

ಸರಕು ಸರಬರಾಯಿಗಳನ್ನು ಕೊಂಡೊಯ್ಯುತ್ತಿದ್ದ ನಾಲ್ಕು ಜಪಾನರ ಹಡಗಗಳು ಬೋರ್ನಿಯೋದಿಂದ ಬಿಯು ಕಡಲಿನಲ್ಲಿ ಬೋಂಬಿನೆಸತದಿಂದ ಮುಳುಗಿಸಲ್ಪಟ್ಟವು.

ಮಾರ್ಷಲ್ ಪೆಟೆನ್ ಜರ್ಮನಿಯಲ್ಲಿ

ಮಾರ್ಷಲ್ ಪೆಟೆನ್ನನು ಬೆಲ್‌ಫೋರ್ಟನಿಂದ ಜರ್ಮನಿಗೆ ಹೋಗಿದ್ದಾನೆಂದು ಜರ್ಮನ್ ನ್ಯೂಸ್ ಏಜೆನ್ಸಿಯಿಂದ ಸುದ್ದಿ ಆದರೆ ಆತನು ತಾನಾಗಿ ಆತ್ಮಸಂತೋಷದಿಂದ ಹೋದನೋ ಅಥವಾ ಆತನು ಅಲ್ಲಿಗೆ ಒಯ್ಯಲ್ಪಟ್ಟನೋ ಎಂಬುದನ್ನು ಹೇಳುವುದಿಲ್ಲ

37 ಜರ್ಮನ್ ಹಡಗಗಳು ಮುಳುಗಿಸಲ್ಪಟ್ಟವು

ಆರ್ಕ್‌ಟಿಕ್ ಸಾಗರದಿಂದ ಏಜಿಯನ್ ಶರಧಿಯ ತನಕದ ಇತ್ತೀಚಿನ ಶರದಿ ಘೋಷನೆಯಲ್ಲಿ ಬ್ರಿಟಿಷ್ ಜಲಾಂತರ್ಗಾಮಿಗಳು ಮೂವತ್ತೇಳು ಜರ್ಮನ್ ಹಡಗಗಳನ್ನು ಮುಳುಗಿಸಿ ಹತ್ತು ಹಡಗಗಳನ್ನು ಜರ್ಝರಿತವಮಾಡಿವೆ

ಮಳೆಗಾಲ ಮುಗಿದ ಮೇಲೆ

ಜಪಾನು ನಮ್ಮ ಮೇಲೆ [illegible] ತ್ತದೆ ಈ ಮಾತು ಖಂಡಿತ ಸಾಧ್ಯವಕ್ಕೆ ಸಿದ್ಧರಾಗಿರಲೇಬೇಕು ಮುಂಬರುವ ಹೋರಾಟ ಮಹಾ ಕಠೋರವಾಗಿರುತ್ತದೆ ಅದಕ್ಕೆ ಮಾಡಬೇಕಾದುದನ್ನೆಲ್ಲ ಮಾಡಲಾಗುತ್ತಿದೆ.

——ವಿವಿಧ ಸಮಾಚಾರ——

ಕಾಂಗ್ರೆಸ್ ಮುಖಂಡರ ಬಿಡುಗಡೆಯಾಗುವುದೇ?

ಲಂಡನಿನ ವೈಟ್ ಹಾಲಿಗೂ ಡಿಲ್ಲಿಗೂ ಕೊಸಗೇನಾದರೂ ಭಿನ್ನಾಭಿಪ್ರಾಯ ತಲೆದೋರಿದರೆ ಹೋತು ಪ್ರಕೃತ ವಿದ್ಯಮಾನದಿಂದ ನೋಡಿದರೆ ಈಗ ಬಂಧನದಲ್ಲಿರುವ ಎಲ್ಲ ಕಾಂಗ್ರೆಸ್ ಮುಖಂಡರನ್ನೂ ಸದ್ಯದಲ್ಲಿಯೇ ಬಿಡುಗಡೆಮಾಡುವದು ಖಂಡಿತವೆಂದು ಲಂಡನಿನಿಂದ ಪ್ರೆಸ್ಸ್ ಕೇಬಲ್ ಹೇಳುತ್ತದೆ ಪಾರ್ಲಿಮೆಂಟು ತಿರುಗಿ ಕೂಡಿದ ಮೇಲೆ ಇಂಡಿಯಾ ಸ್ಟೇಟ್ ಸೆಕ್ರೆಟರಿಗಳೊದ ಎಮರಿಯವರು ಕಾಂಗ್ರೆಸ್ ಮುಖಂಡರ ಬಿಡುಗಡೆಯ ಸೂಚನೆಯನ್ನೀಯುವರೆಂದೂ ಎಣಿಸಲಾಗಿದೆ

ಚತುರ್ಥ ಭಾರತೀಯ ಸೇನಾಂಗದ ನಷ್ಟ

ಕಳೆದ ನಾಲ್ಕು ವರುಷಗಳಿಂದ ಸಮರಾಂಗಣದಲ್ಲಿ ನಿರಂತರ ಯುದ್ಧಭಾಗಿಯಾದ ಫೋರ್ತ್ ಇಂಡಿಯನ್ ಡಿವಿಜನ್ ಎಂಬ ಸೇನೆಯಲ್ಲಿ ಒಟ್ಟು ಈ ತನಕ ಯುದ್ಧಕ್ಕೆ ಆಹುತಿಯಾದವರು 25,000 ಎಂದು ತಿಳಿದುಬಂದಿದೆ ಈ ಸೇನೆಗೆ ಇದಕ್ಕಿಂತಲೂ ಮಿಗಿಲಾಗಿ ನಾಶಮಾಡಿದ ಹಾಗೂ ಒಂದು ಲಕ್ಷಕ್ಕಿಂತಲೂ ಮಿಕ್ಕಿ ಶತ್ರುಗಳನ್ನು ಸೆರೆಹಿಡಿದ ಪ್ರಖ್ಯಾತಿ ಇದೆ

ಲಾರ್ಡ್ ವನ್‌ಸ್ಟಾರ್ಟ್ ಇಂಡಿಯಾ ಸಂದರ್ಶನೆ

ಇಂಡಿಯಾದ ಉಪಸ್ಟೇಟ್ ಸೆಕ್ರೆಟರಿಗಳಾದ ಲಾರ್ಡ್ ಮನ್‌ಸ್ಟರರು ಲಂಡನಿನಿಂದ ಇಂಡಿಯಾ ಸಂದರ್ಶನೆಗೆ ಕೂಡಲೆ ಹೊರಡಲಿರುವರು ಉದ್ದೇಶ—ಇಂಡಿಯಾದಲ್ಲಿ ಮತ್ತು ಅದಕ್ಕೆ ಸಂಬಂಧಿಸಿರುವ ರಣಕ್ಷೇತ್ರಗಳಲ್ಲಿರುವ ಬ್ರಿಟಿಷ್ ಸೇನೆಗಳ ಪರಿಸ್ಥಿತಿಗಳನ್ನು ಪರಿಶೋಧಿಸಿ ಅವರ ಸಕಲ ಆವಶ್ಯಕತೆ ಸೌಕರ್ಯಗಳ ಪ್ರಾಪ್ತಿಗೆ ತಕ್ಕ ಏರ್ಪಾಡುಗಳನ್ನು ಮಾಡುವುದು ಈ ವಿಷಯದ ವ್ಯವಸ್ಥೆಯು ತನಗ ತೃಪ್ತಿಕರವೆಂದು ತೋರುವ ತನಕ ತಕ್ಕಷ್ಟು ದಿನ [illegible] ಇಂಡಿಯಾದಲ್ಲಿ ಉಳಿಯುವನೆಂದು ಹೇಳಿರುತ್ತಾರೆ

ಶ್ರೀಮತಿ ವಿಜಯಲಕ್ಷ್ಮಿ ಪಂಡಿತ್

ಇವರ ಅಮೇರಿಕಾ ಪ್ರಯಾಣದ ಪರವಾನ (ಪಾಸ್ಪೋರ್ಟ) ಬಗ್ಗೆ ಅರ್ಜಿಯು

ಯುದ್ಧದ ಮುಕ್ತಾಯ ಎಂದು? ಚರ್ಚಿಲ್ಲರ ಭಾಷಣ

ಬ್ರಿಟಿಷ್ ಮಹಾ ಪ್ರಧಾನರಾದ ಚರ್ಚಿಲ್ಲರವರು ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣದ ಮುಖ್ಯಾಂಶಗಳು—ಯುರೋಪಿನ ಸಂಗ್ರಾಮ ಪರಿಸ್ಥಿತಿಯು ತೀರಾ ಬದಲಾವಣೆಯಾಗಿದೆ ಸಮರಶಾಸ್ತ್ರ ವಿಶಾರದರನೇಕರು ಈ ವರ್ಷಾಂತ್ಯದಲ್ಲೇ ಯುದ್ಧವು ಮುಗಿಯುವುದಾಗಿ ಹೇಳುತ್ತಾರೆ ಒಂದುವೇಳೆ ಮುಂದಿನ ವರ್ಷದ ಕೆಲವು ತಿಂಗಳ ತನಕವೂ ಮುಂದುವರಿಯಬಹುದು ಜರ್ಮನರ ಸಮರ ಸಾಮರ್ಥ್ಯಗಳೆಲ್ಲ ಕುಗ್ಗುತ್ತಿವೆ ವಿಜಯವು ನಮಗೆಂಬುದು ನಿಸ್ಸಂದೇಹವಾದರೂ ಕಳೆದ ಕೆಲವು ವಾರಗಳ ಅನುಭವದಿಂದ ಹೇಳುವುದಾದರೆ ಜರ್ಮನಿಯು ಹಟಸಾಧಿಸಿ ಕೊನೆಯ ತನಕವೂ ಪ್ರತಿಭಟಿಸದೆ ಶರಣು ಬರಲಾರದೆಂದು ತೋರುತ್ತದೆ

ಬಂದಿಲ್ಲವೆಂದೂ ಯುಕ್ತದ್ವಾರಾ ಮನವಿಯು ಬಂದಲ್ಲಿ ಪರವಾನೆಯನ್ನು ಪಡೆಯಲು ತೊಂದರೆಯಾಗದೆಂದೂ ಅಧಿಕಾರಿಗಳ ಕಡೆಯಿಂದ ತಿಳಿದುಬಂದಿದೆ.

ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಸ್ಕೂಲು ಮದ್ರಾಸು ವಿದ್ಯಾರ್ಥಿಗಳ ಬಹಿಷ್ಕಾರದಿಂದ ಮುಚ್ಚಲಾದುದು ತೆರೆಯಲಾಗುತ್ತದೆ

ಶಾಲೆಯ ಶಿಕ್ಷಣವೂ ಆಂತರ್ವ್ಯವಸ್ಥೆಯೂ ಸರಿಯಾಗಿಲ್ಲವೆಂದೂ ತತ್ಪರಿಣಾಮವಾಗಿ ಕಳೆದ ಸಪ್ಟಂಬರದ ಪರೀಕ್ಷೆಗೆ ತಾವು ಸನ್ನದ್ಧರಾಗಲು ಅಶಕ್ಯರಾಗಿದ್ದೇವೆಂದೂ ತಾವು ಶಪ್ತ ಮನವಿಯಲ್ಲೀಗ ತಿಳಿಸಿದರು ಶಿಕ್ಷಣದ ಮತ್ತು ಇತರ ವ್ಯವಸ್ಥೆಯ ಕುಂದುಕೊರತೆಗಳನ್ನು ನಿವಾರಿಸಬೇಕೆಂದೂ ಸರಕಾರಕ್ಕೆ ಬರಕೊಂಡುದು ಸಕಾಲದಲ್ಲಿ ಇತ್ಯರ್ಥವಾಗದೆ ಉಳಿದ ಸಂಬಂಧ ವಿದ್ಯಾರ್ಥಿಗಳು ಶಾಲೆಗೂ ಹೋಗದೆ ಪರೀಕ್ಷೆಗೂ ಕುಳಿತುಕೊಳ್ಳದೆ ಸಂಪು ಹೂಡಿದರ ಪರಿಣಾಮವಾಗಿ ಶಾಲೆಯು ಮುಚ್ಚಲ್ಪಟ್ಟಿತು ಆದರೆ ಹಲವು ಪ್ರಮುಖ ಸಂಘಗಳ ಮತ್ತು ವ್ಯಕ್ತಿಗಳ ಮಧ್ಯಸ್ಥಿಕೆಯಿಂದ ಸರಕಾರದ ಮತ್ತು ವಿದ್ಯಾರ್ಥಿಗಳ ನೀತಿರೀತಿಗಳ ಧೋರಣೆಯು ಬದಲಾಗಿ ಈಗ ಶಾಲೆಯು ತಿರುಗಿ ತೆರೆಯಲ್ಪಡುವುದೆಂದು ತಿಳಿದು ಬರುತ್ತದೆ

ನೂಲು ಮತ್ತು ಬಟ್ಟೆ ವ್ಯಾಪಾರಿಗಳ ಲೈಸನ್ಸ್

ಮದ್ರಾಸ ಪ್ರಾಂತದಲ್ಲಿ ಹಲವು ದೊಡ್ಡದೊಡ್ಡ ವ್ಯಾಪಾರಿಗಳ ಲೈಸನ್ಸ್ ತೆಗೆದುಹಾಕಲಾಗಿದೆ ಇನ್ನು ಹಲವರದಕ್ಕೆ ತಾತ್ಕಾಲಿಕ ತಡೆಹಾಕಲಾಗಿದೆ ಕಾರಣ ಟೆಕ್ಸ್ಟೈಲ್ ಕಂಟ್ರೋಲ್ ಡಿಪಾರ್ಟ್‌ಮೆಂಟಿನವರು ಮಾಡಿದ ಪರಿಶೋಧನೆ ವಿಚಾರಣೆಗಳಿಂದ ಅವರು ತಮ್ಮ ಲೈಸನ್ಸ್ ಸೂತ್ರಗಳಿಗನುಸಾರವಾಗಿ ವ್ಯಾಪಾರಮಾಡದೆ ಅಕ್ರಮ ಹಾಗೂ ಅನ್ಯಾಯದ ದಾರಿ ಹಿಡಿದಿರುವರೆಂಬುದು

ಸಿನೆಮಾ ಪ್ರಕಟಣೆಗಳು ಬೀದಿ ಎಲೆಗಳಲ್ಲಿ

ಕಲ್ಕತ್ತೆಯಲ್ಲಿ ಬೀದಿ ಸುತ್ತುವ ಎಲೆಗಳನ್ನು ಬೊಕ್ಕವಾಗಿ ಕತ್ತರಿಸಿ ಅದರ ಮೇಲೆ ಸಿನೆಮಾ ಪ್ರಕಟಣೆಗಳನ್ನು ಮುದ್ರಿಸಿ ಹಂಚುತ್ತಿರುವರೆಂದು ತಿಳಿದುಬಂದಿದೆ ಮುಂದೆ ಹಸುರ ಬಣ್ಣದ ಈ ಎಲೆಗಳ ಮೇಲೆ ಕಪ್ಪುಬಣ್ಣಗಳಿಂದ ಮುದ್ರಿತವಾದ ಪ್ರಕಟಣೆಗಳು ಎಲ್ಲರಿಗೆ ತೊಡಕಾಗದಂತೆ ಇರುವಂತೆ ಕಾಗದದ ಮಿತವ್ಯಯಕ್ಕಾಗಿ ಹೊರಟ ಹೊಸದೊಂದು ಹಂಚಿಕೆ ಇದು

ಅಲ್ಲಾಬಕ್ಸ್ ಕೊಲೆ ಮೊಕದ್ದಮೆ

ಕರಾಚಿ ಈ ಮೊಕದ್ದಮೆಯಲ್ಲಿ ಅಪರಾಧಿಗಳೆಂದು ತೀರ್ಮಾನದ ಆರು ಜನರು ಫೆಡರಲ್ ಕೋರ್ಟಿಗೆ ಅಪ್ಪೀಲುಮಾಡುವರೆ ಅನುಮತಿಗಾಗಿ ಬರಕೊಂಡ ಮನವಿಯನ್ನು ಚೀಫ್ ಕೋರ್ಟು ತಿರಸ್ಕರಿಸಿಯದೆ

ಸಣ್ಣಸಣ್ಣ ಪತ್ರಿಕೆಗಳಿಗೆ ನ್ಯೂಸ್ ಪ್ರಿಂಟ್ ಕಾಗದದ ಪೂರೈಕೆ

ಮದ್ರಾಸ್-ಸಣ್ಣಸಣ್ಣ ಪತ್ರಿಕೆಗಳ ಪರವಾಗಿ ಇಂಡಿಯಾ ಗವರ್ನಮೆಂಟ್ ಪೇಪರ್ ಕಂಟ್ರೋಲರ ಮುಂದೆ ಶ್ರೀ ಜಿ. ವಿ. ಸುಬ್ಬರಾಯರು ಮಾಡಿಕೊಂಡ ವಿನ್ನವತ್ತಿಯ ಪರಿಣಾಮವಾಗಿ ಇಂತಹ ಪತ್ರಿಕೆಗಳಿಗೂ ನ್ಯೂಸ್ ಪ್ರಿಂಟಿನ ಕೋಟಾವನ್ನು ಕೊಡುವದಾಗಿ ತೀರ್ಮಾನವಾಗಿದೆ

The Canara Banking Corporation Limited.
(Incorporated in British India)
Estd 1906.
Head Office. **UDIPI,** (S. K.)

Paid up Capital	.	Rs 14,3,8255/-
Reserves	...	,, 4,10,000/-
Total working resources		Exceed Rs One Crore

ANNOUNCMENT
A Brance of the Bank will **be Opened** shortly at **BOMBAY**.

ನವಯುಗ

ಉಡುಪಿ, ಗುರುವಾರ ೫-೧೦-೧೯೪೪

ಗಾಂಧಿ ಜಿನ್ನಾ ಸಂಭಾಷಣೆ

ಕಾಂಗ್ರೆಸ್ಸು ಮತ್ತು ಮುಸ್ಲಿಮ್ ಲೀಗುಗಳೊಳಗೆ ಸಂಧಾನವಾಗಬೇಕೆಂಬ ಧ್ಯೇಯದಿಂದ ಕಳೆದ ಸಪ್ಟಂಬರ ತಾ. 9ರಿಂದ 27ರ ವರೆಗೆ ಗಾಂಧಿಜಿನ್ನಾರೊಳಗೆ ನಡೆದ 2೬ತಾಸುಗಳ ದೀರ್ಘ ಸಂಭಾಷಣೆಯು ಸಫಲವಾಗದುದು ವಿಷಾದಕರವಾಗಿದೆ. ಹೀಗೇ ಆಗುತ್ತದೆಂದು ನಾವು ಮೊದಲೇ ಊಹಿಸಿದ್ದೆವೆಂದೂ ಹೀಗಾದೀತೆಂದು ನಾವು ನಿರೀಕ್ಷಿಸಲಿಲ್ಲವೆಂದೂ ಹೀಗೇ ಆಗಬೇಕೆಂದು ನಾವು ಬಯಸಿದ್ದೆವೆಂದೂ ಹೇಳುವ ಮೂರು ತಂಡಗಳಿರಬಹುದು. ಅವೇನಿದ್ದರೂ ಹೀಗಾಗಬಾರದಿತ್ತೆಂದು ನಮಗನ್ನಿಸುತ್ತದೆ. ಆದರೆ ಜಿನ್ನಾ ಸಾಹೇಬರೇ ಕೊನೆಗೆ 'ಇದೇನೂ ನಮ್ಮ ಪ್ರಯತ್ನದ ಆತ್ಯಂತಿಕ ಪರಿಣಾಮವಲ್ಲ' ಎಂದು ಸಾರಿರುವುದರಿಂದಲೂ ಗಾಂಧೀಜೀಯವರು 'ಪ್ರಕೃತದ ಸೋಲು ಉಭಯಪಕ್ಷಗಳ ತತ್ವಗಳ ಸತ್ವಪರೀಕ್ಷೆಯೆಂದೂ ಸಂಧಾನದ ವಿಷಯವಾಗಿ ಇನ್ನೂ ಹೆಚ್ಚಿನ ಪ್ರಯತ್ನ ಮಾಡಲು ಉತ್ತೇಜಕವಾಗಿರಬೇಕು' ಎಂದೂ ಸಾರಿರುವ ಕಾರಣ ಹಿಂದೂಸ್ಥಾನದ ಈ ಎರಡು ಪ್ರಮುಖ ಪಕ್ಷಗಳೊಳಗೆ ಸಂಧಾನವಾಗದೆಂದು ಹತಾಶರಾಗಲು ಕಾರಣವಿಲ್ಲ. ಹೀಗಾಯಿತೆಂದು ಒಂದು ಪಕ್ಷವು ಮತ್ತೊಂದು ಪಕ್ಷವನ್ನು ಪರಸ್ಪರ ದೂಷಿಸಿ ದ್ವೇಷಿಸಿ ಇನ್ನೂ ದೂರವಾಗುವ ಪ್ರತಿಕೂಲಪರಿಸ್ಥಿತಿಯನ್ನು ತರಲೂಬಾರದು. ಬದಲಾಗಿ ಹೀಗಾಗಲು ಕಾರಣವೇನೆಂಬುವನ್ನು ತಿಳಿದುಕೊಂಡು ಆ ಕಾರಣ ನಿವಾರಣೆಗೆ ಯತ್ನಿಸುವುದರಲ್ಲಿ ವಿವೇಕವಿದೆ, ಔಚಿತ್ಯವಿದೆ, ಔದಾರ್ಯವಿದೆ, ಸಾಫಲ್ಯವಿದೆ. ಅದನ್ನೀಗ ಯೋಚಿಸಬೇಕು.

ಕಾಂಗ್ರೆಸ್ ಮುಸ್ಲಿಮ್ ಪಕ್ಷಗಳ ಸಮಸ್ಯೆಯನ್ನು ಸಂಧಾನ ಮೂಲಕ ತೀರ್ಮಾನಿಸಲು ಒಂದುಗೂಡಿದ ಈ ಇಬ್ಬರು ಮಹನೀಯರ ಮುಂದೆ ಇದ್ದ ಪರಸ್ಪರ ವಿರುದ್ಧವಾದ ಪ್ರಶ್ನೆಗಳೆಂದರೆ ಭರತಖಂಡವನ್ನು ಹಿಂದುಸ್ಥಾನ್ ಮತ್ತು ಪಾಕಿಸ್ಥಾನ್ ಎಂದು ಎರಡು ಜನಾಂಗದ ರಾಜ್ಯಗಳಾಗಿ ವಿಂಗಡಿಸಬೇಕೆಂಬ ದ್ವಿಜನಾಂಗ ತತ್ವವನ್ನೊಳಗೊಂಡ ಮುಸ್ಲಿಮ್ ಲೀಗಿನ ಲಾಹೋರ್ ನಿರ್ಣಯ ಒಂದು ಕಡೆ. ಭರತಖಂಡವು ಅಖಂಡವಾಗಿಯೇ ಇರಬೇಕೆಂದು ನಿರ್ಧರಿಸಿರುವ ಕಾಂಗ್ರೆಸ್ಸಿನ ಆಗೋಸ್ತು ನಿರ್ಣಯ ಮತ್ತೊಂದು ಕಡೆ. ಇವುಗಳಲ್ಲಿ ಏನಾದರೂ ಬಿಟ್ಟು ಕೊಟ್ಟು ತೆಗದುಕೊಳ್ಳುವ ಸಂಧಾನವು ಯಶಸ್ವಿಯಾಗಬೇಕಾಗಿದ್ದರೆ ಆಯಾ ಪಕ್ಷದ ಸಂಧಾನಕಾರರು ಆಯಾ ಪಕ್ಷದ ಅಧಿಕಾರ ಮುದ್ರೆಯಿಂದ ಭೇಟಿಯಾಗಬೇಕಿತ್ತು. ಜಿನ್ನಾ ಸಾಹೇಬರೇನೋ ಮುಸ್ಲಿಮ ಲೀಗದ ಪರಿಪೂರ್ಣ ಪ್ರತಿನಿಧಿಗಳಾಗಿ ಅಧಿಕಾರ ಹೊಂದಿ ನಿಂದಿದ್ದರು. ಗಾಂಧೀಜಿಗಳಾದರೋ ತಾನು ಯಾವ ಪಕ್ಷದ ಯಾವ ಜಾತಿಯ ಪ್ರತಿನಿಧಿಯಾಗಿಯೂ ಬಾರದೆ ಕೇವಲ ವ್ಯಕ್ತಿಯಾಗಿ ಬಂದಿದ್ದೇನೆಂದರು. ಕಾಂಗ್ರೆಸ್ಸಿನ ಪ್ರತಿನಿಧಿಯಾಗಿ ಬಾರದ ಗಾಂಧಿಜಿಗಳೊಡನೆ ತನ್ನ ಪಾಕಿಸ್ಥಾನದ ಸೂಕ್ಷ್ಮ ರೂಪರೇಖೆಗಳನ್ನು ಬಿಡಿಸಿ ಹೇಳಲು ತಾನು ಸಿದ್ಧನಿಲ್ಲವೆಂದೂ ತನ್ನೊಡನೆ ಚರ್ಚಿಸಲು ಅಪೇಕ್ಷಿಸುವವರು ಪಾಕಿಸ್ಥಾನ ನಿರ್ಮಾಣವನ್ನು ಮೊದಲಾಗಿ ನಿರ್ವಿವಾದವಾಗಿ ಒಪ್ಪಲೇಬೇಕಾಗಿದೆ ಎಂದೂ ಒತ್ತಿ ಹೇಳಿದರು ಜಿನ್ನಾಸಾಹೇಬರು. ರಾಜಾಜಿಯವರ ಸೂಚನೆಯ ಸೂತ್ರದಲ್ಲಿ ಪಾಕಿಸ್ಥಾನದ ಪ್ರಶ್ನೆಯ ಇತ್ಯರ್ಥವು ಮುಂದೆ ಜನಮತಗಣನೆಯಿಂದಾಗಬೇಕೆಂದಿರುವ ಕಾರಣ ಆ ಸೂತ್ರದ ಆಧಾರದ ಮೇಲೆ ಸಂಧಾನ ನಡೆಯಿಸಲು ತಾನು ಗಾಂಧೀಜಿಗಳನ್ನು ಆಹ್ವಾನಿಸಿಲ್ಲವೆಂಬುವನ್ನು ಜಿನ್ನಾರವರು ಸ್ಪಷ್ಟೀಕರಿಸಿದರು. ಗಾಂಧೀಜೀಗಳು ಹೊಸ ಸೂಚನೆಗಳನ್ನು ತಂದಾಗ ಅದು ಅನಧಿಕೃತವಾದುದರಿಂದ ಮಾನ್ಯವಲ್ಲವೆಂದಾಯಿತು. ಗಾಂಧೀಜಿಗಳು ತಾನು ಕಾಂಗ್ರೆಸ್ಸಿನ ಅಧಿಕೃತ ಪ್ರತಿನಿಧಿಯಾಗಿ ಬಂದಿಲ್ಲವಾದರೂ ತಮ್ಮೊಳಗಾಗುವ ಇತ್ಯರ್ಥವು ಕಾಂಗ್ರೆಸ್ಸಿನಲ್ಲಿ ಮಾನ್ಯವಾಗುವಂತೆ ತನ್ನ ವರ್ಚಸ್ಸನ್ನು ಕಾಂಗ್ರೆಸ್ಸಿನ ಮೇಲೆ ಬೀರುವೆನೆಂದಿತ್ತ ಆಶ್ವಾಸನೆಯು ಕುದುರೆಯ ಮುಂದ ಬಂಡಿಯೆಂಬಂತೆ ತೋರಿತು ಜಿನ್ನಾ ಸಾಹೇಬರಿಗೆ. ಒಂದು ವೇಳೆ ಗಾಂಧೀಜಿಗಳು ಕಾಂಗ್ರೆಸ್ಸಿನ ಅಧಿಕಾರ ಮುದ್ರೆಯಿಂದ ಜಿನ್ನಾರವರ ಭೇಟಿ ಮಾಡಿದ್ದರೆ ಅವರು ತನ್ನ ಸ್ಥಿರನಿಲುವನ್ನು ಬಿಟ್ಟು ಏನಾದರೂ ಕೊಟ್ಟುಕೊಳ್ಳುವ ಧೋರಣೆಯನ್ನು ವಹಿಸುವ ಮನಸ್ಸಿನಲ್ಲಿದ್ದರೆಂಬುದು ಅವರ ಮಾತುಗಳಲ್ಲಿ ಒಳಗಿಂದೊಳಗೆ ತೋರಿಬರುತ್ತಿತ್ತು. ಅಂತೂ ಈ ದೀರ್ಘ ಸಂಭಾಷಣೆಯಿಂದ ಒಂದು ಸತ್ಪರಿಣಾಮರವಾಗಿದೆ. ಜಿನ್ನಾರವರ ಇಂಗಿತವೇನೆಂಬುದನ್ನು ಗಾಂಧೀಜೀಯವರೂ ಗಾಂಧಿಜಿಯವರ ತತ್ವವೇನೆಂಬುದನ್ನು ಜಿನ್ನಾರವರೂ ಹಿಂದಿಗಿಂತ ಈಗ ಚೆನ್ನಾಗಿ ತಿಳಿಯುವಂತಾಗಿದೆ. ಇದನ್ನು ಲೀಗಿನವರಿಗೆ ಜಿನ್ನಾರವರೂ ಕಾಂಗ್ರೆಸ್ಸಿನವರಿಗೆ (ಸಂದರ್ಭವೊದಗಿದಲ್ಲಿ) ಗಾಂಧೀಜಿಗಳೂ ಹೇಳಿ ಹೊಸ ತೊಂದು ಮನೋವಾತಾವರಣವನ್ನು ಕಲ್ಪಿಸಲು ಸಹಕಾರಿಯಾಗಿದೆ. ಹಾಗೆ ಸಂದರ್ಭವೊದಗಿ ಕಾಂಗ್ರೆಸ್ಸು ಕಾರ್ಯಕಾರೀ ಮಂಡಳಿಯು ಕೂಡಿ ಬಂದು ಕಾಂಗ್ರೆಸ್ಸಿನ ಅಧಿಕೃತ ಪ್ರತಿನಿಧಿಗಳೂ ಜಿನ್ನಾರೂ ಕೂಡಿದಲ್ಲಿ ಏನಾದರೊಂದು ಕೊಟ್ಟುಕೊಳ್ಳುವ ಸಂಧಾನವಾಗುವ ಆಶೆಯು ಆಶಾವಾದಿಗಳಿಂದ ಗಾಂಧೀಜೀಯವರಲ್ಲಿಯೂ ಫಲವಾದಿಗಳಾದ ಜಿನ್ನಾರವರ ಕೊನೆಯ ಮಾತಿನಲ್ಲಿಯೂ ಹೊಳೆಯುತ್ತದೆ. ಆಗ ಸ್ವರಾಜ್ಯಪ್ರಾಪ್ತಿಯ ಬಿಕ್ಕಟ್ಟಿನ ಪ್ರಶ್ನೆಗಳಲ್ಲಿ ಪ್ರಧಾನವಾದುದೊಂದು ನಿವಾರಣೆಯಾದಂತಾದೀತು. ಅಂತಾಗಲು ಸೆರೆಯಲ್ಲಿರುವ ಮುಂದಾಳುಗಳು ಹೊರಬರಬೇಕು. ಈ ವಿಷಯಕ್ಕೆ ಸರಕಾರವೂ ಜನತೆಯೂ ಗಮನಕೊಡಬೇಕಾದುದು ಇಂದಿನ ಕರ್ತವ್ಯ.

ಉಡುಪಿಯಲ್ಲಿ ಸಾಹಿತ್ಯೋತ್ಸವ

ಇಲ್ಲಿ ಕರ್ಣಾಟಕ ಸಂಘವು ಸ್ಥಾಪಿತವಾಗಿ ಕೇವಲ ಮೂರುವಾರದೊಳಗೇ ಅದು ಸುವ್ಯವಸ್ಥೆಯಿಂದ ವಿಜೃಂಭಣೆಯ ಸಾಹಿತ್ಯೋತ್ಸವವನ್ನು ಯಶಸ್ವಿಯಾಗಿ ನೆರವೇರಿಸಿದುದೂ ಅಷ್ಟು ಮಾತ್ರವಲ್ಲ ಸಂಘದ ಸ್ಥಾಪಕ ಸದಸ್ಯರಾಗಿಯೂ ಪಟ್ಟಣದ ಪ್ರಮುಖ ಡಾಕ್ಟರರುಗಳು ವಕೀಲರುಗಳು ಬ್ಯಾಂಕರರುಗಳು ಇತರ ವಿದ್ವಜ್ಜನರು ಆಢ್ಯ ಗೃಹಸ್ಥರು ಗೃಹಿಣಿಯರು ಮುಂತಾಗಿ ಸಂಘದ ಉಪಕಾರೀ ಸದಸ್ಯರಾಗಿಯೋ ಆಜೀವಸದಸ್ಯರಾಗಿಯೋ ಸಹಾನುಭೂತಿ ಸದಸ್ಯರಾಗಿಯೋ ಈ ಅಲ್ಪಾವಧಿಯೊಳಗೆ ಅಧಿಕ ಸಂಖ್ಯೆಯಲ್ಲಿ ಸೇರಿದುದೂ ಪ್ರಕೃತ ಕಾರ್ಯನಿರ್ವಾಹಕ ಸಮಿತಿಯಲ್ಲಿ ಅವರಿಗಿರುವ ವಿಶ್ವಾಸಾದರಗಳನ್ನು ವ್ಯಕ್ತ ಪಡಿಸುತ್ತದೆ. ಮಾತ್ರವಲ್ಲ, ಇಂತಹ ಸಂಘದ ಹಾಗೂ ಅದು ಕೈಗೊಂಡ ಸಾಹಿತ್ಯೋತ್ಸವದ ಆವಶ್ಯಕತೆ ಪ್ರಯೋಜಕತೆಗಳನ್ನು ಊರವರು ಚೆನ್ನಾಗಿ ಮನಗಂಡಿದ್ದಾರೆಂಬುದು ವಿಶಾಲವಾದ ಸಭಾಭವನವು ದಿನಾಲೂ ಸಾವಿರಾರು ಸುಶಿಕ್ಷಿತ ಜನಸಂದಣಿಯಿಂದ ಕಿಕ್ಕಿರಿದು ತುಂಬಿ ಬಂದು ನಿಶ್ಶಬ್ದವಾಗಿ ಆಲಿಸುತ್ತಿದ್ದುದರಿಂದಲೂ ಕಾರ್ಯಸೂಚಿಯಲ್ಲಿ ಕಾಣಿಸಿದ ನಾಲ್ಕು ದಿವಸಗಳ ಕಾರ್ಯಕ್ರಮಗಳು ಸಾಲದಾಗಿ ಕಂಡುಬಂದು ವಿಶೇಷ ಪ್ರಕಟಣೆಯಿಲ್ಲದೆ ಜರಗಿಸಲ್ಪಟ್ಟ ಮತ್ತೊಂದು ವಿಶೇಷ ಅಧಿವೇಶನಕ್ಕೂ ಪಟ್ಟಣಿಗರು ಉತ್ಸಾಹದಿಂದ ಬಂದು ಸಹಭಾಗಿಗಳಾದುದರಿಂದಲೂ ಸ್ಪಷ್ಟವಾಗುತ್ತದೆ.

ಈ ಸಾಹಿತ್ಯೋತ್ಸವದಲ್ಲಿ ವೇದಿಕೆಯನ್ನೇರಿ ಈ ತೆರದ ಆಕರ್ಷಕತೆಯನ್ನುಂಟುಮಾಡಿದವರು ('ಶಾಕೆತಾಲನ್ಯಾಯ'ದಂತೆ ಬೆಂಗಳೂರಿಂದ ಬಂದು ಸಹಕರಿಸಿದ ಶ್ರೀ ಮಾಸ್ತಿಯವರು ಮತ್ತು ಆ ರಸಯೋದರ್ಶಿಗಳು ಹೊರತು ಮಿಕ್ಕುಳಿದವರೆಲ್ಲ) ನಮ್ಮ ದಕ್ಷಿಣ ಕನ್ನಡ ಜಿಲ್ಲೆಯವರೇ. ಈ ಮೊದಲು ನಮ್ಮ ಜಿಲ್ಲೆಯಲ್ಲಿ ಸಾಹಿತ್ಯಕವಾದ ಉತ್ಸವ ಸಮ್ಮೇಲನಗಳನ್ನು ಜರಗಿಸುವುದಕ್ಕೆ ಜಿಲ್ಲೆಯ ಹೊರಗಿನವರನ್ನೇ ಹೆಚ್ಚಾಗಿ ಬರಮಾಡಿಸಿಕೊಳ್ಳುತ್ತ ಬಂದ ಪದ್ಧತಿಯಿಂದಾಗಿ ನಮ್ಮಲ್ಲಿ ಅಂತಹ ಕಾರ್ಯಕಲಾಪಗಳನ್ನು ನೆರವೇರಿಸಿಕೊಡುವಂತಹ ವಿದ್ವಜ್ಜನರಿಲ್ಲವೋ ಏನೋ ಎಂದು ಜನಸಾಮಾನ್ಯರಲ್ಲಿ ಉಂಟಾದಿದ್ದ ಅದೊಂದು ತರದಸ್ವಯಂನಿಕೃಷ್ಟ ತಾಭಾವವನ್ನು ಈ ಸಾಹಿತ್ಯೋತ್ಸವವು ತೊಡೆದು ತೆಗೆದುದು ಅಭಿನಂದನೀಯ. ಈ ಯತ್ನವು ಯಶಸ್ವಿಯಾಗುವಂತೆ ಕೈಗೊಟ್ಟ ನಮ್ಮ ಮಂಗಳೂರವರ ಸಹಕಾರವೂ ಸ್ತುತ್ಯರ್ಹ.

ವಸ್ತುತಃ ನಮ್ಮ ಜಿಲ್ಲೆಯಲ್ಲಿ ಸಾಹಿತ್ಯ ಸಂಸ್ಕೃತಿಕಲಾ ವಿಷಯಗಳನ್ನು ಆಮೂಲಾಗ್ರವಾಗಿ ತಿಳಿದುಕೊಂಡಿರುವ ಹಾಗೂ ಜನತೆಗೆ ಅವನ್ನು ಸರಳವಾಗಿ ಬಗೆಯುಟ್ಟುವಂತೆ ಬೋಧಿಸಲಾಪವರು ಕೂಡ ಇದ್ದಾರೆ. ಆದರೆ ಅಂತಹರನ್ನು ಆಯ್ದು ಮುಂತಂದು ಸನ್ಮಾನಿಸಿ ಪ್ರೋತ್ಸಾಹಿಸಿ ಅವರಿಂದ ಪ್ರಯೋಜನ ಹೊಂದುವ ಯತ್ನವು ಸಂಘ ಸಂಸ್ಥೆಗಳ ಮೂಲಕ ನಡೆದಿಲ್ಲ. ಉಡುಪಿಯ ಕರ್ಣಾಟಕ ಸಂಘವು ಅನಿತು ಅವಸರದಿಂದ ಅಂತಹ ಕೆಲವರನ್ನಾದರೂ ಬರಮಾಡಿಸಿಕೊಂಡು ಈ ಹಾದಿಯಲ್ಲಿ ಮೊದಲು ಹೆಜ್ಜೆಯನ್ನಿಟ್ಟುದು ಪ್ರಶಂಸನೀಯವಿದೆ. ಇಂತಹರೇ ಇನ್ನೂ ಅನೇಕರಿದ್ದಾರೆ. ಅದು ಇವರೆಲ್ಲರ ಅರಿವು ಅರಿವುಗಳ ಪ್ರಯೋಜನಗಳು ಜನಸಾಮಾನ್ಯರಿಗೆ ಇನ್ನೂ ಹೆಚ್ಚಾಗಿ ಆಗಬೇಕು. ನಮ್ಮ ನಡುವೆ ಇಂತಹರಿದ್ದಾರೆಂಬ ಅಭಿಮಾನವನ್ನು ಮೂಡಿಬರಬೇಕು. ನಾಡನ್ನು ಬೆಳಗಿಸಿ ಅಖಿಲ ಕರ್ನಾಟಕಕ್ಕೇ ಕೀರ್ತಿಕರರಾದ ಹಿರಿಯ ಕಿರಿಯ ದೀವಿಗೆಗಳು ತಕ್ಕ ಅವಕಾಶ ಪ್ರೋತ್ಸಾಹಗಳಿಲ್ಲದೆ ಉಪೇಕ್ಷೆಗೆ ಗುರಿಯಾಗಿ ಮೂಲೆಪಾಲಾಗಿ ಬಿದ್ದಿದ್ದಾರೆ. ಇವರನ್ನೆಲ್ಲ ಮುಂತರಬೇಕು. ಹೀಗೆಯೇ ಪ್ರತಿಕೂಲ ಪರಿಸ್ಥಿತಿಗೀಡಾಗಿ ಸಮರ್ಥ ಪತ್ರಿಕಾ ಕರ್ತರೂ ಗ್ರಂಥಕರ್ತರೂ ಪತ್ರಿಕೋದ್ಯಮಿಗಳೂ ಲೇಖಕರೂ ಇತರ ಲಲಿತಕಲಾವಿದರೂ ಆವಜ್ಞೆಯಿಂದ ಬಳಲುತ್ತಲಿದ್ದಾರೆ. ಹಿರಿಯರಿಗಿಂತಲೂ ಹೆಚ್ಚಾಗಿ ಕಿರಿಯರು ಈ ಪ್ರತಿಕೂಲ ಪರಿಸ್ಥಿತಿಯನ್ನು ಎದೆಗಾರಿಕೆಯ ಹುಮ್ಮಸಿನಿಂದ ಎದುರಿಸುತ್ತ ಮುಂಬರಲು ದುಡಿಯುತ್ತಿದ್ದಾರೆ. ಇವರನ್ನೆಲ್ಲ ಪ್ರೋತ್ಸಾಹಿಸಲಾಪ ಸುಶಿಕ್ಷಿತ ವರ್ಗವು ಪಟ್ಟಣಗಳಲ್ಲಿಯಲ್ಲದೆ ಹಳ್ಳಿಹಳ್ಳಿಗಳಲ್ಲಿಯೂ ಇದೆ. ನಮ್ಮ ಜಿಲ್ಲೆಯಲ್ಲಿರುವಷ್ಟು ಶಾಲಾ ಕಾಲೇಜುಗಳು ಕರ್ನಾಟಕದ ಮತ್ತಾವ ಜಿಲ್ಲೆಯಲ್ಲಿಯೂ ಇಲ್ಲ. ಪರಿಣಾಮವಾಗಿ ನಮ್ಮ ಹಳ್ಳಿಯ ಪ್ರತಿಯೊಂದು ಮನೆಯೂ ಸಾಮಾನ್ಯ ಸುಶಿಕ್ಷಿತ ತರುಣ ತರುಣಿಯರಿಂದ ಬೆಳಗುತ್ತ ಬಂದಿದೆ. ಈ ಸುಶಿಕ್ಷಿತ ವರ್ಗಕ್ಕೂ ಮೇಲೆ ಹೇಳಿದ ವಿವಿಧ ಅಂಗಗಳಿಂದ ಸಾಹಿತ್ಯ ಸಂಸ್ಕೃತಿಕಲಾ ವಿಷಯಗಳಲ್ಲಿ ಆಸಕ್ತರಾಗಿ ದುಡಿಯುತ್ತಿರುವ ಹಿರಿಯ ಕಿರಿಯರೆಲ್ಲರಿಗೂ ಸಂದುಗೂಳಿಕೆಯಾಗಿನಿಂದು ಪರಸ್ಪರ ಪರಿಚಯ ಪ್ರೋತ್ಸಾಹ ಆಶ್ರಯಗಳಿಗೆ ಅವಕಾಶವನ್ನು ಕಲ್ಪಿಸಿಕೊಡುವ ಸ್ಥಳೀಯ ಕರ್ಣಾಟಕ ಸಂಘಗಳು ಸಾಧಾರಣ ಏದಿರು ಮೈಲು ಅಂತರಕ್ಕೊಂದರಂತೆ ಬೇಕು. ಆಯಾ ತಾಲೂಕಿನೊಳಗಿನ ಇಂತಹ ಸ್ಥಳೀಯ ಸಂಘಗಳು ತಾಲೂಕು ಸಂಘದಲ್ಲಿ ಸಂಯೋಜನೆಗೊಂಡೂ ತಾಲೂಕು ಸಂಘಗಳು ಜಿಲ್ಲಾ ಸಂಘವೊಂದರಲ್ಲಿ ಸಮ್ಮಿಳಿತವಾಗಿಯೂ ಏಕಸೂತ್ರತೆಯಿಂದ ನಾಡಿನ ಸರ್ವತೋಮುಖವಾದ ಏಳಿಗೆಯನ್ನು ಸಾಧಿಸಬೇಕು.

ಹೀಗೆ ಮಾಡದೆ ಸ್ವೋದ್ಧಾರದ ಕಡೆಗೆ ಉದಾಸೀನರಾಗಿದ್ದರೆ ದಕ್ಷಿಣ ಕನ್ನಡ ಜಿಲ್ಲೆಯು ಸಾಹಿತ್ಯ ಸಂಸ್ಕೃತಿ ಕಲಾ ರಾಜ್ಯ ವಿಷಯಗಳಲ್ಲಿ ಅಖಿಲ ಕರ್ನಾಟಕದ ಯಾವಭಾಗಕ್ಕೂ ಸಮಾನ ಸ್ಕಂದವಾಗಿದೆಯೆಂಬ ಭಾವವು ನೆಲೆಯಾಗುವ ಬದಲಾಗಿ ಅದೆಂದು ಬರಡು ಜಿಲ್ಲೆಯೆಂಬ ಸಲ್ಲದ ಅವಹೇಳನಕ್ಕೆ ಈಡಾಗುವ ಸಂಭವವಿದೆ. ಮಾತ್ರವಲ್ಲ, ಮುಂದಿನ ಕರ್ನಾಟಕ ಪ್ರಾಂತರಚನೆಯಾದಾಗಲೂ ಅದರಲ್ಲಿಯೂ ದಕ್ಷಿಣ ಕನ್ನಡ ಜಿಲ್ಲೆಗೆ ಪ್ರಕೃತಿಯ ವರದಿಂದಲೂ ಪ್ರತಿಭೆಯಿಂದಲೂ ಜನಸಾಮಾನ್ಯರ ಸಾಹಿತ್ಯ ಸಂಸ್ಕೃತಿ ಕಲಾಭಿಮಾನದ ಮಟ್ಟದಿಂದಲೂ ನ್ಯಾಯವಾಗಿ ದೊರೆಕಬೇಕಾದ ಸ್ಥಾನಮಾನ ಪ್ರಾತಿನಿಧ್ಯಗಳು ಉಪೇಕ್ಷಿಸಲ್ಪಟ್ಟಾವು. ನಾಲ್ಕಾರು ನಮ್ಮ ಕಿರಿಯರಲ್ಲಿ ಕಂಡು ಬರುವ ಸಾಹಿತ್ಯ ಸಂಸ್ಕೃತಿಕಲಾವಾಣಿಜ್ಯ ವಿಷಯಕವಾದ ಪ್ರಭಾಂಕುರಗಳು ಮೊಳೆತು ಬೆಳೆದು ಹೂಬಿಟ್ಟು ಫಲಿಸಲಿಕ್ಕೆ ಅವಶ್ಯವಾದ ಕ್ಷೇತ್ರವನ್ನು ನಾಡು ಹಸನು ಮಾಡಿಕೊಡದೆಯೂ ತಕ್ಕಷ್ಟು ಪ್ರೋತ್ಸಾಹದ ಜಲಧಾರೆಯನ್ನೆರೆಯದೆಯೂ ಅವರನ್ನು ಕಗ್ಗಿಸಿ ಕುಂದಿಸಿ ನಂದಿಸಿ ಕೆಡಿಸಿ ತಾನೂ ಕೆಡುವ ಆತ್ಮವಿನಾಶವನ್ನು ತಾನಾಗಿ ತಂದುಕೊಂಡಂತಾಗುವುದು. ಹೀಗಾಗಬಾರದೆಂಬ ಧ್ಯೇಯ-ಧೋರಣೆ ದೃಷ್ಟಿಗಳಿಂದ ಉಡುಪಿಯಲ್ಲಿ ಕರ್ಣಾಟಕ ಸಂಘವು ಸರ್ವ ಜನಬೆಂಬಲದಿಂದ ಸ್ಥಾಪಿತವಾಗಿ ಸಾಹಿತ್ಯೋತ್ಸವವನ್ನು ಜರಗಿಸಿ ತಕ್ಕ ಹಾದಿಯಲ್ಲಿ ತಕ್ಕ ರೀತಿಯಲ್ಲಿ ಮೊದಲ ಹೆಜ್ಜೆಯನ್ನಿಟ್ಟುದು ಅಭಿನಂದನೀಯವಿದೆ. ಅನುಕರಣೀಯವಿದೆ. ಪ್ರಾರಂಭದ ಈ ಉತ್ಸಾಹವು ಕೊನೆತನಕ ಇರಲೆಂದೂ ಇಂತಹ ಕರ್ನಾಟಕ ಸಂಘಗಳು ಜಿಲ್ಲೆಯ ಎಲ್ಲಾ ಮೂಲೆಗಳಲ್ಲಿಯೂ ಸ್ಥಾಪಿತವಾಗಿ ನಾಡಿನ ಉತ್ಕರ್ಷೆಯನ್ನು ಸಾಧಿಸಲೆಂದು ಹಾರೈಸುತ್ತೇವೆ.

ಕಸ್ತೂರಿಬಾ ನಿಧಿಗೆ 105 ಲಕ್ಷ ರೂ. ಸಂಗ್ರಹ

ಗಾಂಧೀಜಿಯ ಎಪ್ಪತ್ತೈದನೆಯ ಜನ್ಮದಿನೋತ್ಸವ

ತಾ. ೨ರಲ್ಲಿ ವಾರ್ಧಾಗ್ರಾಂಜದಲ್ಲಿ ಆಚರಣೆ—ಕಸ್ತೂರಿಬಾ ಸ್ಮಾರಕ ನಿಧಿಯ ಕಾರ್ಯದರ್ಶಿ ಶ್ರೀ ಎ. ವಿ. ಥಕ್ಕರ್ ನಿಧಿಯ ವರದಿಯನ್ನರ್ಪಿಸಿ ಒಂದು ಕೋಟಿಗೆ ಮಿಕ್ಕಿದ ನಿಧಿಯ ಚೆಕ್ಕನ್ನು ಗಾಂಧೀಜಿಯವರಿಗೆ ಅರ್ಪಿಸಿದರು. ಜನ್ಮದಿನೋತ್ಸವದ ಸ್ಮಾರಕವಾಗಿ ಶ್ರೀಗಳಾದ ಡಿ. ಜಿ. ಎಂಡುಲ್‌ಕರ್, ಭುಲಬಾಯಿ ದೇಸಾಯಿ?, ವಿಠಲಭಾಯಿ ಜವೇರಿ ಮತ್ತು ಕುಮಾರಿ ಮರ್ದುಲಾ ಬೆನ್ ಸಾರಾಭಾಯಿ ಇವರ ನೇತೃತ್ವದಲ್ಲಿ ಬರೆಯಲ್ಪಟ್ಟ ಗ್ರಂಥವನ್ನು ಗಾಂಧೀಜಿಯವರಿಗೆ ಸಮರ್ಪಿಸಲಾಯಿತು. ಈ ಗ್ರಂಥ ಪ್ರತಿಗಳ ವಿಕ್ರಯದಿಂದ ಸಂಗ್ರಹವಾಗುವ ನಿಧಿಯನ್ನು 'ದರಿದ್ರನಾರಾಯಣ' ಸೇವೆಗಾಗಿ ಗಾಂಧೀಜಿಯವರಿಗೆ ಕೊಡಲಾಗುವುದು. ಈ ಗ್ರಂಥಕ್ಕೆ ಪ್ರಸ್ತಾವನೆಯನ್ನು ಗಾಂಧೀಜಿಯವರೇ ಬರೆದಿರುತ್ತಾರೆ.

ಜನ್ಮದಿನೋತ್ಸವಕ್ಕೆ ಅಮೇರಿಕಾ ಬ್ರಿಟನುಗಳಿಂದ ಅಭಿನಂದನಾ ಪತ್ರಿಕೆಗಳು

ಬ್ರಿಟಿಷ್ ಪಾರ್ಲಿಮೆಂಟಿನ ಸೋಷಿಯಲಿಸ್ಟ್ ಕೂಟದ ಮೆಂಬರರುಗಳಾದ ಮಿ. ಡಬ್ಲ್ಯು. ಡೋಬ್ಸ್ ಎಮ್. ಪಿ, ಮಿ. ಜೋಜ್ ಪೆಡ್ಮೋರ್ ಜೆಕೊಸ್ಲೊವೇಕಿಯಾ ರಿಪಬ್ಲಿಕಿನ ಅಧ್ಯಕ್ಷ ಡಾ॥ ಎಡ್ವಾರ್ಡ್ ಬೆನೆಸ್, ಪ್ರೊ. ಹಾರೊಲ್ಡ್ ಲಾಸ್ಕಿ, ಸುಪ್ರಸಿದ್ಧ ಕವಿ ಮತ್ತು ಸಾಹಿತಿ ಮಿ. ಹೌಸ್‌ಮ್ಯಾನ್ ಇವರು ಇಂಗ್ಲಂಡದಿಂದ ಸಂದೇಶಗಳನ್ನು ಕಳುಹಿಸಿರುವರು.

ನ್ಯೂಯೋರ್ಕದಿಂದ ರೆವರೆಂಡ್ ಜೆ. ಎಚ್. ಹೋಮ್ಸ್, ಡಾ॥ ರೂಫಸ್ ಹೋಮ್ಸ್ ಅಭಿನಂದನಾ ಪತ್ರಗಳನ್ನು ಕಳುಹಿಸಿರುವರು.

ನ್ಯೂಯೋರ್ಕಿನಲ್ಲಿ ಮತ್ತು ಲಂಡನಿನಲ್ಲಿ ಇಂಡಿಯನ್ ಲೀಗಿನವರ ನೇತೃತ್ವದಲ್ಲಿ ಜನ್ಮದಿನೋತ್ಸವವು ಜರಗಿತು.

ಜಪಾನ್ ಹಡಗವು ಮುಳುಗಿಸಲ್ಪಟ್ಟಿತು.

ಸಿಲೇಬಿಸ್ ದ್ವೀಪದಾಚೆ ಹತ್ತು ಸಾವಿರ ಟನ್ನಿನ ಜಪಾನ್ ಹಡಗವೊಂದು ಮತ್ತು ಎಂಟೂವರೆ ಸಾವಿರ ಟನ್ನಿನ ಹಡಗ ಮತ್ತೊಂದು ಏಳು ಜಪಾನ್ ವಿಮಾನಗಳು ಸಹ ನಾಶಮಾಡಲ್ಪಟ್ಟಿವೆ.

NOTICE

In the Court of the District Munsiff of Mangalore

S C No 301/1944

Between,

U Ahmed Hussain — Plaintiff

and

Chenoli Mills by Managing partner K C C, Kannan — Defendant

To the defendant-firm represented by its managing partner Mr. K. C. C Kannan, trading at Kunhi Mangalam —

Please take notice that the above suit filed by the Plaintiff against you for the recovery of the sum of Rupees 230—4—0 due from you in respect of dealings, is posted to 11-10-1944 at 11 O'clock for final hearing before the said Court. You are hereby required to appear either personally (or) through a pleader on the said date before the said court, failing which you will be declared exparte.

(By order of Court)

Mangalore, 26-9-44. } M. Venkatraya Kamath, Advocate for Plaintiff

ಜನವಾಣಿ ಮತ್ತು ಪ್ರಜಾಮತ ಪತ್ರಿಕಾಕರ್ತರಾದ ಶ್ರೀ. ಬಿ. ಎನ್. ಗುಪ್ತರಿಗೆ ನೋಟೀಸು

ಪ್ರಜಾಮತದ ಮಾರ್ಚಿ ತಾ. 12ರ ಲೇಖನ ಮತ್ತು ಜನವಾಣಿಯ ಮಾರ್ಚಿ 31ರ ಸಂಪಾದಕೀಯ ಲೇಖನಗಳು ಆಕ್ಷೇಪಕರವಿರುವುದರಿಂದ ಸೆಕ್ಯುರಿಟಿಯನ್ನೇಕೆ ಕೇಳಬಾರದೆಂಬುದಕ್ಕೆ ಈ ತಿಂಗಳ ತಾ. 10ರಂದು ಹೇಳಿಕೆ ಕೊಡಬೇಕೆಂದು ನೋಟೀಸು ಕೊಡಲಾಗಿದೆ.

ಮದ್ರಾಸು ಗವರ್ನಮೆಂಟ್ ನೌಕರರ ಸಂಬಳದ ಮಾನ ಬದಲಾವಣೆ

ಯುದ್ಧ ಪರ್ಯವಸಾನವಾದ ಮೇಲೂ ಹಲವು ವರ್ಷಗಳ ವರೆಗೆ ಇರಬಹುದಾದ ಜೀವನ ಸಂಕಷ್ಟದ ದೃಷ್ಟಿಯಿಂದ ನೌಕರರ ಸಂಬಳದ ಮಾನವನ್ನೇ ಬುಡಮುಟ್ಟ ಬದಲಾಯಿಸಬೇಕೆಂಬ ಉದ್ದೇಶದಿಂದ ಆ ಬಗ್ಗೆ ಒಂದು ವಿಚಾರಣಾ ಸಮಿತಿಯನ್ನು ನಿರ್ಮಿಸಿ ವಿಚಾರಣೆತೊಡಗಬೇಕೆಂದು ಸರಕಾರದ ಆಜ್ಞೆ ಹೊರಟಿದೆ. ಈ ಸಮಿತಿಗೆ ಮದ್ರಾಸು ಸರಕಾರದ ಆರ್ಥಿಕ ಸಚಿವರಾದ ಸರ್ ಹೆಗ್‌ಹುಡ್ ಇವರು ಚೆಯರ್ಮ್ಯಾನರಾಗಿಯೂ ಸಂಬಳ ಪರಿವರ್ತನೆಯ ಸ್ಪೆಶಿಯಲ್ ಆಫೀಸರರಾದ ರಾವ್ ಬಹದೂರ್ ಟಿ. ಎ. ಶ್ರೀನಿವಾಸರಾಘವಯ್ಯಂಗಾರರು ಕಾರ್ಯದರ್ಶಿಗಳಾಗಿಯೂ ನೇಮಕಗೊಂಡಿದ್ದಾರೆ

ಕೆಲೈಯಲ್ಲಿ ಜರ್ಮನರು ಶರಣಾಗತರಾದರು.

ಮೂರು ಸಾವಿರ ಜರ್ಮನರನ್ನು ಸೆರೆಹಿಡಿಯಲಾಗಿದೆ. ಇನ್ನು ಇಂಗ್ಲಾಂಡದ ಕರಾವಳಿಗೆ ತೊಂದರೆ ಕೊಡುವ ಸ್ಥಳವೆಂದರೆ ಡಂಕರ್ಕ—ಇಲ್ಲಿರುವ ಹದಿನೈದು ಸಾವಿರ ಜರ್ಮನರು ಹೊರಗೆ ಹೋಗಲಾರದೆ ಬೋನಿನಲ್ಲಿ ಬಿದ್ದಂತೆ ಇದ್ದಾರೆ.

ಐ. ಸಿ. ಎಸ್. ಆಫೀಸರರಿಗೆ ಶಿಕ್ಷೆ

ಚೆಂಗಲ್ಪಟ್ಟಿನ ಸಬ್ ಕಲೆಕ್ಟರರಾಗಿದ್ದ ಶ್ರೀ ಟಿ. ಎ. ಸ್ವಾಮಿನಾಥನ್, ಐ. ಸಿ. ಎಸ್. ರಾಜಮಹೇಂದ್ರಿಯ ಜಾಯಿಂಟ್ ಮೆಜಿಸ್ಟ್ರೇಟ್ ಕೋರ್ಟಿನ ಬೆಂಚ್ ಕ್ಲಾರ್ಕರಾಗಿದ್ದ ಶ್ರೀ. ಕೆ. ಅಚ್ಚುತರಾಮಯ್ಯನ ಮೇಲೂ ವಿಶ್ವಾಸದ್ರೋಹ, ಫೋರ್ಜರಿ, ಸುಳ್ಳು ಲೆಕ್ಕಪತ್ರಗಳ ಸೃಷ್ಟನೆ ಇತ್ಯಾದಿ ಆರೋಪಗಳ ಮೇಲಾದ ಮೊಕದ್ದಮೆಯು ಮೂಡು ಗೋದಾವರಿ ಜಿಲ್ಲೆಯ ಸೆಸ್ಸನ್ ಜಡ್ಜ ಮಿ. ಕಾದರ್ ಮಹಮ್ಮದ ಸ್ಯಾನರ ಮುಂದೆ ವಿಚಾರಣೆಯಾಗಿ ಸ್ವಾಮಿನಾಥನರಿಗೆ ಒಂದು ವರುಷದ ಕಠಿಣ ಶಿಕ್ಷೆ ಮತ್ತು ರೂ 1141 ರೂಪಾಯಿ ಜುಲ್ಮಾನೆಯೂ, ಈ ದಂಡತೆರದಿದ್ದಲ್ಲಿ ತಿರುಗಿ ಮೂರು ತಿಂಗಳ ಕಠಿಣ ಶಿಕ್ಷೆಯೂ, ಅಚ್ಯುತರಾಮಯ್ಯನಿಗೆ ಒಂದೂವರೆ ವರುಷದ ಕಠಿಣ ಶಿಕ್ಷೆಯೂ ಕೊಡಲಾಗಿದೆ—ಸ್ವಾಮಿನಾಥರನ್ನು ಎ ಕ್ಲಾಸಿನಲ್ಲಿಯೂ ಮತ್ತೊಬ್ಬರನ್ನು ಸಿ ಕ್ಲಾಸಿನಲ್ಲಿಯೂ ಇಡಲಾಗಿದೆ.

ಗ್ರೀಸದ ದ್ವೀಪಗಳಲ್ಲಿ ಮಿತ್ರಪಕ್ಷದವರು ಇಳಿದರು. ಪ್ರತಿಭಟನೆಯೇ ಇಲ್ಲ.

ಭೂಮಧ್ಯ ಸಾಗರದಲ್ಲಿ ಕ್ರೀಟ್ ಮತ್ತು ಗ್ರೀಕ್ ಕರೆಯ ನಡುವಿರುವ ಮೂರು ದ್ವೀಪಗಳಲ್ಲಿ ಮಿತ್ರ ಪಕ್ಷದ ಸೇನೆಯು ಇಳಿದಿದೆ. ವೈರಿಪಕ್ಷದ ಪ್ರತಿಭಟನೆಯೇ ಇದ್ದಿಲ್ಲ. ದ್ವೀಪದ ನಿವಾಸಿಕರು ಅತ್ಯಾನಂದದಿಂದ ಆಗಂತುಕರನ್ನು ಸ್ವಾಗತಿಸಿದರು.

ಕಾಲೇಜಿನ ಗ್ರಾಂಟು ಮನ್ನಾ ಮಾಡಲಾಯಿತು

ಗಾಂಧೀ ಜಯಂತಿಯಲ್ಲಿ ಸಹಭಾಗಿಯಾದ ಕಾರಣ—ಕಳೆದ ವರ್ಷದ ಗಾಂಧೀ ಜಯಂತಿಯಲ್ಲಿ ಸಿಂಧದ ಡಿ. ಜೆ. ನ್ಯಾಶನಲ್ ಕಾಲೇಜು ಸಹಭಾಗಿಯಾದಕಾರಣ ಎಂದರೆ ಅದರ ಪ್ರಿನ್ಸಿಪಾಲರು ಗಾಂಧೀ ಪ್ರತಿಮೆಯ ಅನಾವರಣೆಯನ್ನು ಮಾಡಿ ಭಾಷಣಮಾಡಿದುದರಿಂದ ಮತ್ತು ಕಾಲೇಜಿನವರು ನ್ಯಾಶನಲ್ ಧ್ವಜವನ್ನು ಹಾರಿಸಿ ನ್ಯಾಶನಲ್ ಹಾಡು ಮತ್ತು ಉದ್ಘೋಷಗಳನ್ನು ಎಬ್ಬಿಸಿದುದರಿಂದ ಆ ಕಾಲೇಜಿಗೆ ಸಲ್ಲುತ್ತಿದ್ದ ಹನ್ನೆರಡು ಸಾವಿರ ರೂಪಾಯಿ ವಾರ್ಷಿಕ ಗ್ರಾಂಟನ್ನು ಮನ್ನಾ ಮಾಡಲಾಗಿದೆ.

ಕೆಂಪುಸೇನೆ

ಬೆಲ್ಗ್ರೇಡಿಗೆ 80 ಮೈಲು ಸಮೀಪ ಸಾಗುವಷ್ಟು ಮುಂದುವರಿದಿದೆ.

ವಾರ್ಸೋವಿನಲ್ಲಿ

ಭಯಂಕರ ಕದನ ನಗರ ಮಧ್ಯದಲ್ಲಿ ನಡೆಯುತ್ತಿದೆ

ಇಟಲಿಯಲ್ಲಿ

ಪಂಚಮದಳದ ಅಮೇರಿಕ ಮತ್ತು ಬ್ರಿಟಿಷ್ ಸೇನೆಗಳು ಹವಾಮಾನ ಪ್ರತಿಕೂಲವಿದ್ದರೂ ಮುಂದೊತ್ತುತ್ತಲಿದ್ದಾರೆ.

ಬರ್ಮಾದ ಟಿಡ್ಡಿಮ್ ಮಾರ್ಗದಲ್ಲಿ

ಟಿಡ್ಡಿಮಿನ ಉತ್ತರ ರಸ್ತೆಯಲ್ಲಿ ಭಾರತೀಯ ಪಂಚಮ ದಳವು ಜಪಾನೀಯರ ಸೇನೆಗಳನ್ನು ಆತಿಕ್ರಮಿಸಿ ಮುಂದುವರಿಯುತ್ತಿವೆ.

ಉಡುಪಿ.

ಅಧಿಕೃತ ಕಾಗದ ವ್ಯಾಪಾರಿಗಳು: ಮಾರಾಟದ ಬಗ್ಗೆ ಬೇಕಾಗುವ ಕಾಗದದ ಬಗ್ಗೆ ತಮ್ಮ ಲೈಸೆನ್ಸಿನ ನಕಲಿನೊಂದಿಗೆ ಉಡುಪಿ ಪೇಪರ್ ಕಂಟ್ರೋಲ್ ಕಮಿಟಿಯ ಕಾರ್ಯದರ್ಶಿಯವರಿಗೆ ಬರೆಕೊಳ್ಳಬೇಕು. ಸಾರ್ವಜನಿಕರಿಗೆ ಕೂಡಾ ಪೇಪರ್ ಬೇಕಾಗಿದ್ದಲ್ಲಿ ಅದೇ ಕಮಿಟಿಯ ಕಾರ್ಯದರ್ಶಿಯವರಿಗೆ ಅರ್ಜಿಮಾಡಿಕೊಳ್ಳಬೇಕು ಎಂದು ಸಂಬಂಧಪಟ್ಟವರು ತಿಳಿಸುತ್ತಾರೆ.

ತರಕಾರಿ ಕಂಟ್ರೋಲ್ ಕಮಿಟಿ:— ಜನ್ನುತಾಳಿ ಕಾಯಿಪಲ್ಯಗಳ ದರವನ್ನು ನಿರ್ಧರಿಸಿದಂದಿನಿಂದ ತರಕಾರಿಗಳ ಅಭಾವ ದಿನೇ ದಿನೇ ಜಾಸ್ತಿಯಾಗುತ್ತಲಿದೆ. ಬಾಳೆಹಣ್ಣು ಸಹ ಸರಾಗವಾಗಿ ಸಿಕ್ಕುವುದಿಲ್ಲ. ಕೆಲವಕ್ಕೆ ಇನ್ನೂ ಕಂಟ್ರೋಲ್ ದರ ಬೀಳಲಿಲ್ಲ. ತರಕಾರಿಗಳನ್ನು ಬೆಳೆಯಿಸುವವರಿಗೂ ಕ್ರಯಕ್ಕೆ ಪಡೆಯುವವರಿಗೂ ಅನ್ಯಾಯವಾಗದ ರೀತಿಯಲ್ಲಿ ಕಂಟ್ರೋಲ್ ದರಗಳು ನಿಶ್ಚಯಿಸಲ್ಪಟ್ಟಾವೆಂದು ಜನರ ನಿರೀಕ್ಷೆ

ಕಸ್ತೂರಿಬಾ ಸ್ಮಾರಕ ನಿಧಿಗೆ—ಉಡುಪಿ ತಾಲೂಕಿನಲ್ಲಿ ಶ್ರೀ ... ರಾವ ... ಅವರ ಅಭೂತಪೂರ್ವ ಪ್ರಯತ್ನದಿಂದ ರೂಪಾಯಿ 10,209 ಜಮೆಯಾಗಿರುತ್ತದೆ ... ಸಂಸ್ಥೆಗಳ ಹಾಗೂ ವ್ಯಕ್ತಿಗಳ ... ಉಡುಪಿ ... ಜಮೆಯಾದ ರೂ. 20 000ವಕ್ಕೆ ... ಜಾಸ್ತಿ ... ಉಡುಪಿಯಲ್ಲಿ ... ಕೆನರಾ ಬೇಂಕಿಂಗ ಕೋರ್ಪರೇಶನ್ ಲಿಮಿಟೆಡ್ ರೂ. 1111 ಕೆನರಾ ಮ್ಯೂಚುವಲ್ ಎಶ್ಶುರನ್ಸ್ ಕಂ ರೂ. 1000 ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಇದರ ಡೈರೆಕ್ಟರ್ಸ್ ಮತ್ತು ಜನರಲ್ ಮೇನೇಜರರಿಂದ ಸೇಕಡಾ 5ರಂತೆ ಬಡ್ಡಿ ನಡೆಯುವ ರೂ. 842-ಚೆರಿಯ ಕ್ಯುಮಿಲೇಟಿವ್ ಪ್ರಿಫರೆನ್ಸ್ ಶೇರುಗಳು, ಕೊಚ್ಚಿಕಾರ್ ಟ್ರಸ್ಟ್‌ಫಂಡ್ ರೂ. 555 ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ ರೂ. 505 ಹಾಂಗಾಳ ಮಂಜುನಾಥನಾಯಕ್ ಮತ್ತು ಸಹೋದರರು ರೂ 505 ಹಾಂಗಾಳ ಗಣೇಶನಾಯಕ್ ರೂ. 320 ಜನರಲ್ ಇನ್ವೆಸ್ಟ್‌ಮೆಂಟ್ ಎಂಡ್ ಕಮರ್ಶಿಯಲ್ ಕೊರ್ಪರೇಶನ್ ನಾಯಕ ಮುಂಬಳ ರೂ.125- ಹನುಮಾನ್ ಟ್ರಾನ್ಸ್‌ಪೋರ್ಟ್ ಕಂ 115- ಭಾಗವತ ವೆಂಕಟೇಶ ಪೈ ರೂ 115 ಮುದನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್ ರೂ 105 ಉಪೇಂದ್ರ ಅನಂತಪೈ, ಉಡುಪಿ ಹಾರ್ಡವೇರ್ಸ್, ಐಡಿಯಲ್ ಸ್ಟೋರ್ಸ್, ನಾರಾಯಣ ವಾಮನ್ ಕಾಮತ್ ಎಂಡ ಬ್ರದರ್ಸ್ ಮತ್ತು ಉಡುಪಿ ನಪ್ಪನಗ್ಗ

ಕೊಬ್ಬರು ರೂ 101 ರಂತೆ, ನಗರ ಸಿ. ರಾಮರಾವ್ ರೂ. 100 (ಸಹಾಯಪಟ್ಟವರ ಪಟ್ಟಿಯ ವಿವರಪಟ್ಟಿಯು ನಿಲಂಬವಾಗಿ ಹಸ್ತಗತವಾದ ಪ್ರಯುಕ್ತ ಸ್ಥಳಾಭಾವದಿಂದಾಗಿ ಇನ್ನಿತರರ ಹೆಸರುಗಳನ್ನು ಪ್ರಕಟಿಸಲಾಗಲಿಲ್ಲ ಸಂ.ಸ.)

ತೈಲಚಿತ್ರ ಅನಾವರಣ:— ತಾ. 2ರಲ್ಲು ಶ್ರೀರಾಮಕೃಷ್ಣ ಥಿಯೇಟರಿನಲ್ಲಿ ಶ್ರೀ ರಾಮರಾವ್ ಚಿತ್ರೆಯವರು ಮಹಾತ್ಮಾ ಗಾಂಧೀಜಿಯವರ ತೈಲಚಿತ್ರ ಅನಾವರಣವನ್ನು ಮಾಡಿದರು. ಡಾ॥ ಎನ್. ಶ್ರೀಪಾದರಾಯರು ಈ ಸಮಾರಂಭದ ಅಧ್ಯಕ್ಷರಾಗಿದ್ದರು. ಶ್ರೀಗಳಾದ ಉಪೇಂದ್ರಪೈ, ಕೊಚ್ಚಿಕಾರ್ ಪದ್ಮನಾಭಪೈ ಮೊದಲಾದವರು ಸಂದರ್ಭೋಚಿತ ಭಾಷಣಗಳನ್ನು ಮಾಡಿ ದರಿದ್ರ ನಾರಾಯಣನ ಆರಾಧ್ಯ ಸೇವಕನಲ್ಲಿ ತಮಗಿರುವ ಪೂಜ್ಯ ಭಕ್ತಿಯನ್ನು ಪ್ರದರ್ಶಿಸಿದರು ತೈಲಚಿತ್ರ ತಯಾರಿಸಿದವರು ಶ್ರೀ ಆರ್ ಕೆ ... ಅವರು

ಮಂಗಳೂರಲ್ಲಿ ಶ್ರೀ ಮಾಸ್ತಿಯವರಿಗೆ ಸನ್ಮಾನ—ತಾ 29ರಲ್ಲು ಕೆನರಾ ಹೈಸ್ಕೂಲು ಭವನದಲ್ಲಿ ಸತ್ಕಾರ ಕೂಟವೊಂದು ಆರ್ಟ್ಸ ಮಿತ್ರಮಂಡಳಿ, ಪ್ರಕಾಶನ ಪತ್ರಿಕೋದ್ಯೋಗಿ ಸಂಘ ಮತ್ತು ಪ್ರಗತಿಶೀಲ ... ಸಂಘಗಳ ನೇತೃತ್ವದಲ್ಲಿ ಕೂಡಿಕೊಂಡು ಕೂಟಗಳ ಕಡೆಯಿಂದ ನಡೆಸಲಾಯಿತು.

ದ. ಕ. ಜಿಲ್ಲಾ ಮಹಿಳಾ ಪರಿಷತ್ತು

ಮಂಗಳೂರು ಭಗಿನೀ ಸಮಾಜದ ಆಶ್ರಯದಲ್ಲಿ ತಾ 30ರಲ್ಲು ಕೆನರಾ ಹೈಸ್ಕೂಲಿನಲ್ಲಿ ಜರಗಿತ, ಕೇರಳದ ಕಾಂಗ್ರೆಸ್ ಭಗಿನಿ ಶ್ರೀಮತಿ ಕಸ್ತೂರಿ ಅಮ್ಮಾಳ್ ಅವರು ಅಧ್ಯಕ್ಷತೆ ವಹಿಸಿದ್ದರು ಶ್ರೀಮತಿ ಕೆ. ಸಾವಿತ್ರಿಯಮ್ಮನವರು ಪರಿಷತ್ತಿನ ಉದ್ಘಾಟನೆ ಮಾಡಿದರು ಶ್ರೀಮತಿ ಪಂಜೆಯ ಪ್ರಭುಗಳವರು ಸುಸ್ವಾಗತವನ್ನು ಬಯಸಿ ಭಾಷಣವಾಯು ಪಕ್ಷಿಯಲ್ಲಿಗಂಡರಿಗೆ ಹೆಂಗಸರ ಸಹಕಾರ ಅಗತ್ಯವೆಂದರು. ಅಧ್ಯಕ್ಷೆಯರ ವಿಚಾರಪೂರ್ಣ ಭಾಷಣವಾದ ನಂತರ ಹಿಂದೂ ಮಹಿಳೆಯರೆಲ್ಲರಿಗೆ ಆಸ್ತಿಯಲ್ಲಿ ಸಮಪಾಲು ಸಿಕ್ಕಬೇಕು ಎಂದು ವಾದಿಸುವ, ಏಕಪತ್ನೀತ್ವವನ್ನು ಪ್ರತಿಪಾದಿಸುವ, ಒಂದೇ ಜಾತಿಯವರಲ್ಲಿ ಸಿವಿಲ್ ವಿವಾಹವನ್ನು ಕ್ರಮಬದ್ಧಗೊಳಿಸುವ ಮಸೂದೆಗೆ ಸಮ್ಮತಿಯನ್ನೀಯುವ, ಈಗಿನ ಶಿಕ್ಷಣದಲ್ಲಿ ಬದಲಾವಣೆಗಳಾಗಬೇಕೆನ್ನುವ, ಹಿಂದೂಸ್ಥಾನ್ ಸ್ಕೌಟ್ ಚಳುವಳಿಗೆ ಸ್ತ್ರೀಯರು ಪ್ರೋತ್ಸಾಹಿಸಬೇಕೆನ್ನುವ, ಅನ್ನ ಸಮಸ್ಯೆಯ ಇತ್ಯರ್ಥ ಸಮಿತಿಯಲ್ಲಿ ಹೆಂಗಸರಿಗೂ ಸ್ಥಾನದೊರೆಯಬೇಕೆನ್ನುವ, ಸ್ತ್ರೀಯರು ಕಲ್ಲಿದ್ದಲು ಗಣಿಗಳಲ್ಲಿ ದುಡಿಯುವುದನ್ನು ನಿಷೇಧಿಸುವ ಕಾನೂನನ್ನು ಹಿಂತೆಗೆದ ಸರಕಾರವು ಅನ್ಯಾಯವಾಗಿತೆಂದು ಅದರ ವರ್ತನೆಯನ್ನು ಖಂಡಿಸುವ ಹತ್ತು ಹಲವು ನಿರ್ಣಯಗಳಾದವು.

ಉಡುಪಿಯಲ್ಲಿ ಶ್ರೀ. ಮಾಸ್ತಿಯವರು ('ಶ್ರೀನಿವಾಸ'ರು)

(ವಾರ್ತಾಪಾಠಕರ ಅಭಿಪ್ರಾಯಗಳಿಗೆ ನಾವು ಜವಾಬ್ದಾರರಲ್ಲ ಸಂ. ನ.)

ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀ ಮಾಸ್ತಿ ವೆಂಕಟೇಶಯ್ಯಂಗಾರ್, ಎಂ. ಎ., ಎಂ. ಸಿ. ಎಸ್. ಇವರು ತಮ್ಮ ಕಾರ್ಯದರ್ಶಿಯವರಾದ ಶ್ರೀ. ಕೆ ವಿ ರಾಘವಾಚಾರ್ಯ; ಎಂ. ಎ., ಬಿ. ಟಿ ಇವರೊಂದಿಗೆ ಕಳೆದ ತಾ ೨ರಂದು ಬೆಳಗ್ಗೆ ಇಲ್ಲಿಗೆ ಬಂದು ಮುಟ್ಟಿದವರೇ ಈಗ ನಡೆಯುತ್ತಲಿದ್ದ ಸಾಹಿತ್ಯೋತ್ಸವದ ವಿಶೇಷ ಅಧಿವೇಶನಕ್ಕೆ ನೇರಾಗಿ ದಯಮಾಡಿಸಿದುದೂ ಅನಂತರ ಸಂಜೆಯ ಮತ್ತು ಮರುದಿನದ ಕಾರ್ಯಕಲಾಪಗಳಲ್ಲಿ ಉತ್ಸುಕತೆಯಿಂದ ಸಹಭಾಗಿಗಳಾದುದೂ ಕರ್ನಾಟಕ ಸಂಘಕ್ಕೂ ಸಾಹಿತ್ಯ ಪರಿಷತ್ತಿಗೂ ಭೂಷಣವೇ. ಅವರು ತಮ್ಮ ಉಡುಪಿಯ ಸಂದರ್ಶನದ ಹೆಚ್ಚಿನ ಸಮಯವನ್ನೆಲ್ಲ ಸಾಹಿತ್ಯೋತ್ಸವದಲ್ಲಿ ಸಭಾಗಿಗಳಾಗ ವ್ರವಕ್ಕೆ ಕಳೆದುದೂ ಸಂತೋಷವೇ. ಅದು ಕಾರಣವೋ ಏನೋ ಅವರಿಗೆ ಸಾಹಿತ್ಯ ಪರಿಷತ್ತಿನ ವಿಷಯವಾದ ಪ್ರಚಾರವನ್ನು ಮಾಡಲು ಅವಕಾಶವಾಗಲಿಲ್ಲ. ತಾ ೩ರಂದು ಸಾಯಾಹ್ನ ಸಾಹಿತ್ಯೋತ್ಸವಕ್ಕೆ ಹೋಗುತ್ತ 'ಕಲಾವೃಂದ'ದವರು ಏರ್ಪಡಿಸಿದ್ದ ಸನ್ಮಾನ ಕೂಟಕ್ಕೂ 'ಟ್ರೈಸಿಯಮ್' ನವರಿತ್ತ ಉಪಹಾರ ಸತ್ಕಾರಕೂಟಕ್ಕೂ ಹತ್ತೈಸಿ ಅವಸರವಸರದಲ್ಲಿ ಸಂದರ್ಭೋಚಿತವಾದ ಒಂದೆರಡು ಔಪಚಾರಿಕ ನುಡಿಗಳನ್ನು ಮಾತ್ರವೇ ಹೇಳಿದರು. ಹಾಗೆಯೇ ಶೀರೂರು ಮಠದ ಶ್ರೀಗಳವರ ದರ್ಶನೆಯನ್ನು ಮಾಡಿದರು. ಮರುದಿನ ಬೆಳಗ್ಗೆ ಕೆನರಾ ಮ್ಯುಚ್ಯುವಲ್‌ನ ಚಾಲಕರು ಕರ್ನಾಟಕ ಸಂಘದ ಸಕಲ ಸದಸ್ಯರನ್ನೂ ಸಾಹಿತ್ಯೋತ್ಸವಕ್ಕೆ ದಯಮಾಡಿಸಿದ ಪ್ರಧಾನ ಅತಿಥಿಗಳಾದ ಇವರನ್ನೂ ಇತರ ಅತಿಥಿಗಳನ್ನೂ ಹಲವು ಸ್ಥಳೀಯ ಪ್ರಮುಖರನ್ನೂ ಆಮಂತ್ರಿಸಿ ವಿಜೃಂಭಣೆಯಿಂದ ಏರ್ಪಡಿಸಿದ ಸತ್ಕಾರ ಉಪಹಾರ ಕೂಟಕ್ಕೆ ಹೊರಟು ಹೋಗುತ್ತ ಅವಸರದಲ್ಲಿ ಶ್ರೀಕೃಷ್ಣ ಸಂದರ್ಶನವನ್ನು ಮಾಡಿ ಪರ್ಯಾಯ ಮಠದ ಕಿರಿಯ ಶ್ರೀಗಳವರನ್ನು ಕಂಡು ಮಾತಾಡಿದರು. ಕೆನರಾ ಮ್ಯೂಚುವಲ್‌ನವರ ಸತ್ಕಾರ ಕೂಟದಲ್ಲಿ ಪ್ರಧಾನ ಅತಿಥಿಗಳಾಗಿ ಚಲೋ ಭಾಷಣವನ್ನಿತ್ತರು. ಮುಖ್ಯವಾಗಿ ಉಡುಪಿಯ ಹಾಗೂ ಇತರ ಕಡೆಗಳಿಂದ ಅತಿಥಿಗಳಾಗಿ ಬಂದಿದ್ದ ಕನ್ನಡ ಪ್ರೇಮಿಗಳನ್ನೆಲ್ಲ ತಾನು ಕಾಣುವಂತೆ ಏಕತ್ರ ಕಲೆಹಾಕಿಕೊಟ್ಟುದಕ್ಕಾಗಿ ತನ್ನ ಸಂತೋಷ ಮತ್ತು ಧನ್ಯವಾದಗಳನ್ನು ಮಾತ್ರ ವ್ಯಕ್ತಪಡಿಸಿದರಲ್ಲದೆ ಕನ್ನಡ ಸಾಹಿತ್ಯ ಪರಿಷತ್ತಿನ ವಿಷಯವಾಗಿ ಹೇಳಲು ಅತ್ಯುತ್ತಮವಾಗಿದ್ದ ಆ ಸಂದರ್ಭದ ಪ್ರಯೋಜನವನ್ನು ಮಾಡಿಕೊಳ್ಳದಿದ್ದುದು ವಿಷಾದಕರ.

ತಾ ೩ರಂದು ಸಾಯಾಹ್ನ ಸಾಹಿತ್ಯೋತ್ಸವದ ಅಂದಿನ ಅಧ್ಯಕ್ಷರಾಗಿ ಉತ್ಸವಕ್ಕೊಂದು ವಿಶೇಷ ಕಳೆಗೊಟ್ಟರು. ತನ್ನ ಕಾರ್ಯದರ್ಶಿಯರು ಮಾಡಿದ 'ಕನ್ನಡ ಶಾಸನಗಳು' ಎಂಬ ಉಪನ್ಯಾಸವನ್ನೆತ್ತಿ ಹೇಳುವಾಗ ತಾನು ಆ ಭಾಷಣವನ್ನು ಹಿಂದೆ ಹಲವು ಸಲ ಕೇಳಿದ್ದರೂ ಅವರು ಹೇಳಿದಷ್ಟು ಸಲ ತನಗೆ ಕೇಳೋಣವೆನಿಸುತ್ತಿತ್ತು ಎಂದರು. ಮೈಸೂರು ಧಾರವಾಡದತ್ತ ಕಡೆಯಿಂದ ಕೆಲವರು ಬಂದು ತಾವೆ ಆಯ್ದುಕೊಂಡ ಕೆಲವು ಭಾಷಣಗಳಿಂದ ಇಲ್ಲಿಯ ಜನಸಾಮಾನ್ಯರನ್ನು ಬೆರಗುಗೊಳಿಸುವುದರ ರಹಸ್ಯವೊಂದು ಹೊರಬಿತ್ತೋ ಎಂದು ತೋರಿತು ಹಲವರಿಗೆ. ಅನಂತರ 'ನಾಡ ಮತ್ತು ನುಡಿಯ ಏಕೀಕರಣ'ದ ವಿಷಯವಾಗಿ ಚಲೋ ಭಾಷಣವನ್ನಿತ್ತರು. ಮುಖ್ಯವಾಗಿ ಕನ್ನಡ ಸಾಹಿತ್ಯ ಪರಿಷತ್ತಿನ ವಿಷಯವನ್ನೆತ್ತಿ ಪರಿಷತ್ತಿಗೆ ಸದಸ್ಯರಾಗುವುದರಲ್ಲೇ ಅಖಿಲ ಕರ್ನಾಟಕ ಉದ್ಧಾರವಿದೆಯೆಂದು ಉದ್ಘೋಷಿಸಿದ ಅವರ ಮಾತುಗಳಲ್ಲಿ ತರ್ಕಗಳ ಬದಲಾಗಿ ಮಂದಿ ಭಾಷಣದ ಪ್ರಚಾರ ಸರಣಿಯೇ ಮೇರೆ ಮೀರಿತು. ಮಾತ್ರವಲ್ಲ, ಪರಿಷತ್ತಿನ ವಿಷಯವಾಗಿ ಟೀಕೆಟೂಕೆಗಳಿದ್ದರೆ ತಾನಾಗ ಉತ್ತರಗೊಡಲು ಸಿದ್ಧನಿದ್ದೇನೆಂದೂ ಪ್ರಶ್ನೆ ಕರೆದರೆ ಮುಂದು ಬರಬಹುದೆಂದೂ ಅಲ್ಲಿ ಧುರವೀಳಯವನ್ನಿತ್ತುದು ಚೆನ್ನಾಗಿದ್ದಿಲ್ಲ. ಪರಿಷತ್ತಿನ ವಿಚಾರವಿನಿಮಯ ಮಾಡಲಿಕ್ಕೆ ಬೆಳಗ್ಗಿನ ಸತ್ಕಾರ ಕೂಟವು ಒಂದು ವೇಳೆ ಯೋಗ್ಯ ಸಂದರ್ಭವಾಗಿತ್ತೆಂದು ಹೇಳಬಹುದಾಗಿದ್ದರೂ ಸಾಹಿತ್ಯೋತ್ಸವದ ಸಮಯ ಬದ್ಧವಾದ ಕಾರ್ಯಕ್ರಮಗಳ ನಡುವೆ ಅಂದಿನ ಕಾರ್ಯಕಲಾಪಗಳು ಮತ್ತೂ ಕೆಲವು ಉಳಿದಿರುವಾಗ ಇಂತಹ ಪ್ರಶ್ನೋತ್ತರಗಳಿಗೆ ಶಿಷ್ಟಾಚಾರದ ದೃಷ್ಟಿಯಲ್ಲಿ ಎಡೆಯಿಲ್ಲವೆಂದು ಸಭಿಕರು ಮೌನವಾಗಿದ್ದರು. ಈ ಮೌನವನ್ನು ಶ್ರೀ ಮಾಸ್ತಿಯವರು ಪರಿಷತ್ತಿನ ದಿಗ್ವಿಜಯವೆಂದು ಭಾವಿಸಿದರೆ ಮಾತ್ರ ತಪ್ಪಾದೀತು. ಚಿಕ್ಕ ಕತೆಗಳ ತಾತತನ, ನವಕಾವ್ಯ ತಾತತನಗಳು ಸಲ್ಲದ ಕಡೆಗೆ ಸರಿದಿವೆ ಎಂಬ ದಕ್ಷಿಣ ಕನ್ನಡದ ಆಕ್ಷೇಪಕ್ಕೆ ಸ್ಪಷ್ಟವಾದ ಉತ್ತರಕೊಡುವ ಬದಲಿಗೆ ಇಲ್ಲಿಯೂ ಬೆಂಗಳೂರಲ್ಲಿಯೂ ದಂಡೆಯ ಮೇಲೆ ದೀಪವಿಟ್ಟಂತೆ ಮಾತಾಡಿ ತೇಲಿಸಿಬಿಟ್ಟರು. ಮರುದಿನ ಬೆಳಗ್ಗೆ ಬೇಗ ಹೊರಡಲಿರುವ ಇವರು ಮುಂಚಿನ ದಿನ ಸಂಜೆ ಆವೇಳೆಯಲ್ಲಿ ಪರಿಷತ್ತಿನ ವಿಷಯ ಆಕ್ಷೇಪಗಳಿದ್ದರೆ ಮುಂದೆ ಬಂದು ಹೇಳಿರೆಂದು ಕೊಟ್ಟ ಧುರವೀಳಯವು ಹೃದಯಾಂತರಾಳದಿಂದ ಬಂದುದೋ ಎನ್ನಲಾಗುವುದಿಲ್ಲ. ಆದರೂ ಕೆಲವರು ಅವರೆಂದು ರಾತ್ರೆ ಯಕ್ಷಗಾನ ಕೂಟಕ್ಕೆಂದು ಬಂದ ಅರ್ಧ ತಾಸಿನ ಅವಧಿಯಲ್ಲಿ ಅವರೊಡನೆ ಹೊರಗಿಂದ ಹೊರಗೆ ಕೆಲವು ಚರ್ಚೆಗಳನ್ನು ನಡೆಯಿಸುತ್ತಿದ್ದರು. ಅದು ಸಾಧಾರಣ ಗಾಂಧಿ–ಜಿನ್ನಾ ಸಂಭಾಷಣೆಯಂತೆ ಪರ್ಯವಸಾನವಾಯಿತೆನ್ನಬಹುದು. ಪರಿಷತ್ತಿನ ಧೋರಣೆ, ಘಟನಾವಳಿ, ಸದಸ್ಯತ್ವ ಮತ್ತು ಅದರ ಮುಂದಾಳುಗಳು ಈ ತನಕ ದಕ್ಷಿಣ ಕನ್ನಡದ ಪತ್ರಿಕೆಗಳ ಗ್ರಂಥಗಳ ಸಾಹಿತಿಗಳ ಬರೆಹಗಾರರ ಕಡೆಗೆ ತೋರಿದ್ದ ಅನಾದರಣೆ ಇವುಗಳ ವಿಷಯವಾಗಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ತೀವ್ರ ಅಸಂತೃಪ್ತಿ ಇದೆ. ಶ್ರೀ ಮಾಸ್ತಿಯವರು ಹೊರಟುಹೋಗುವ ಸ್ವಂಚೆ ಪರಿಷತ್ತಿನ ಪ್ರಸ್ತಾಪವೆತ್ತುವ ಬದಲಾಗಿ ಬಂದವರೇ ಈ ವಿಷಯವಾಗಿ ಒಂದು ವಿಚಾರ ವಿನಿಮಯ ಕೂಟವನ್ನು ಏರ್ಪಡಿಸಿ ಕೊಡಬೇಕಾಗಿ ಸೂಚಿಸಿದ್ದರೆ ಕರ್ನಾಟಕ ಸಂಘವು ಸಂತೋಷದಿಂದ ಅಂತಹ ಸಂದರ್ಭವನ್ನು ಕಲ್ಪಿಸಿಕೊಡುತ್ತಿತ್ತು. ಶ್ರೀ ಮಾಸ್ತಿಯವರೇ ತಮ್ಮ ಬರೋಣವನ್ನು ಯಾರ್ಯಾರಿಗೆ ಮುಂದಾಗಿ ಬರೆದು ತಿಳಿಸಿದ್ದಾರೋ ಅವರನ್ನಾದರೂ ಕೂಡ ಹಾಕಿ ಅನ್ಯೋನ್ಯ ಚೆನ್ನಾಗಿ ತಿಳಿದುಕೊಳ್ಳುವ ವ್ಯವಸ್ಥೆ ಮಾಡಲು ಆಗುತ್ತಿತ್ತು. ಅಂತೆಯೇ ಕಾರ್ಕಳ ಮಂಗಳೂರಲ್ಲಿಯೂ ಕೇವಲ ಸತ್ಕಾರ ಕೂಟಗಳ ಶಿಷ್ಟಾಚಾರದ ಔಪಚಾರಿಕ ಮಾತುಗಳಿಂದಲೇ ಸಂತುಷ್ಟರಾಗದೆ ಗೆಳೆಯರಂತೆ ಒಂದುಗೂಡಿ ವಿಚಾರ ವಿನಿಮಯ ಮಾಡಿಕೊಳ್ಳುವ ಕೂಟಗಳ ಏರ್ಪಾಡು ಮಾಡಿದ್ದರೆ ಸಾಹಿತ್ಯ ಪರಿಷತ್ತಿನಿಂದ ದೂರವಾಗುತ್ತಿರುವ ದಕ್ಷಿಣಕನ್ನಡವು ಹತ್ತಿರ ಬರುತ್ತಿತ್ತೋ ಏನೋ. ಉಡುಪಿಯಲ್ಲಿ ಶ್ರೀ ಮಾಸ್ತಿಯವರೊಡನೆ ಕೆಲವರು ಕೇಳಿದ ಪ್ರಶ್ನೆಗಳಿಗೆ ಕೊಟ್ಟ ಉತ್ತರಗಳಲ್ಲಿ ಅವರು ದಕ್ಷಿಣ ಕನ್ನಡ ಪತ್ರಿಕೆಗಳನ್ನು ಮತ್ತು ಪುಸ್ತಕ ಪ್ರಕಟಣೆಗಳನ್ನು ಅವಲೋಕಿಸುವ ಔದಾರ್ಯವನ್ನೂ ಇಟ್ಟುಕೊಂಡಿಲ್ಲವೆಂಬುದು ಒಡೆದು ಕಾಣುತ್ತಿತ್ತು. ಹಿಂದಿನ ಪರಿಷತ್ತಿನ ಅಧಿಕಾರಿಗಳೂ ಹೀಗೇ ಮಾಡುತ್ತಿದ್ದು ದಕ್ಷಿಣ ಕನ್ನಡದ ನಿಜವಾದ ಅರಿವಾಗಲೀ ಯೋಗ್ಯತೆಯಾಗಲೀ ಪರಿಷತ್ತಿನ ಅಥವಾ ಅಖಿಲ ಕರ್ನಾಟಕದ ದೃಷ್ಟಿಗೆ ಬರಲಿಲ್ಲ. ಈಗಿನವರೂ ಮುಂದಿನವರೂ ಮೈಸೂರು ಧಾರವಾಡ ಮುಂತಾದ ಘಟ್ಟದ ಮೇಲಿನ ಪತ್ರಿಕೆಗಳನ್ನು ಲೇಖಕರ ವಿಚಾರಗಳನ್ನೂ ತಿಳಿದುಕೊಳ್ಳಲು ಹೇಗೆ ಉತ್ಸುಕರಾಗಿದ್ದಾರೋ ಇರುವರೋ ಅಂತೆಯೇ ದಕ್ಷಿಣ ಕನ್ನಡದ ಕಡೆಗೆ ಅವರ ದೃಷ್ಟಿಯು ತಿರುಗಿದರೆ ಆಗ ಪರಿಷತ್ತಿಗೆ ಈ ಜಿಲ್ಲೆಯಲ್ಲಿ ನಿಜವಾದ ಭ್ರಾತೃತ್ವವಿದೆ ಎಂದು ತಿಳಿಯಬಹುದು.

—"ಪರಿಷತ್ತಿನ ಹಿತೈಷಿ"

ನೋಟೀಸು.

ಉಡುಪಿ ತಾಲೂಕು ನಾಲ್ಕೂರು ಗ್ರಾಮದಲ್ಲಿರುವ ಮಾರಾಳಿ ಸಂಕ್ಕೆಸೆಟ್ಟಿ ಅಳಿಯ ದುಗ್ಗಪ್ಪಸೆಟ್ಟಿಯು ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವುದೇನೆಂದ್ರೆ—

ನನ್ನ ಕುಟುಂಬದಲ್ಲಿ ಈಗ ಹಿರಿಯಳು, ಪಟ್ಟದಾರ್ತಿ ಮತ್ತು ಯಜಮಾನ್ತಿಯಾದ ನನ್ನ ಅಕ್ಕ ಸದಿಯಮ್ಮ ಶೆಡ್ತಿಯು ವರ್ಷ 70ಕ್ಕೆ ಮಿಕ್ಕಿದ ಮುದುಕಿಯಾಗಿದ್ದು ಸದ್ರಿಯವಳ ಮಗಳ ಮಗ ಮಹಾಬಲಶೆಟ್ಟಿಯು ನನ್ನ ಮೇಲಣ ದ್ವೇಷದಿಂದ ಕುಟುಂಬಕ್ಕೆ ಕೆಡಕು ಮಾಡಿ ಇನ್ನು ಮೇಲೆ ನನಗೆ ಬರತಕ್ಕ ಯಜಮಾನಿಕೆಗೆ ಭಂಗತರುವ ಹಿರಾಧೆಯಿಂದ ಸದ್ರಿಯವಳನ್ನು ಸೇರಿಸಿ ನೋಟು ದಸ್ತಾವೇಜು ಬರ್ಸಿಕೊಟ್ಟು ತನ್ನ ಸ್ವಂತ ಲಾಭಕ್ಕಾಗಿ ಕುಟುಂಬದ ಮೇಲೆ ಜವಾಬ್ದಾರಿ ಹೊರಿಸುವ ಆಲೋಚನೆಯಲ್ಲಿರುವುದಾಗಿ ತಿಳಿಯುತ್ತೇನೆ. ನಮ್ಮ ಕುಟುಂಬಕ್ಕೆ ಸಾಲಮಾಡುವ ಅಗತ್ಯ ವಗೈರೆ ಇರುವುದಿಲ್ಲ. ಸುಳ್ಳು ನೆವನಗಳನ್ನು ತೋರ್ಸಿ ಸದ್ರಿ ಮಹಾಬಲಶೆಟ್ಟಿಯು ಸದ್ರಿ ಹೆಣ್ಣು ಹೆಂಗಸಾದ ಮುದಿಪ್ರಾಯದ ಸದಿಯಮ್ಮ ಶೆಡ್ತಿಯನ್ನು ಸೇರ್ಸಿ ಸಾಲವಗೈರೆ ಬಗ್ಗೆ ರಿಕಾರ್ಡು ಮಾಡಿದ್ರೆ ಅಂಥಾ ಸಾಲಕ್ಕೆ ನನ್ನ ಕುಟುಂಬದ ಸ್ಥಿರಚರ ಸೊತ್ತುಗಳಾಗ್ಲಿ ನಾನಾಗ್ಲಿ ಬದ್ಧರಾಗಲಿಕ್ಕಿಲ್ಲವೆಂತ ಸಹಾ ಈ ಮೂಲಕ ಜಾಹೀರುಮಾಡಿಕೊಂಡಿದ್ದೇನೆ.

ಉಡ್ಪಿ, ತಾ 3-10-44 } ದುಗ್ಗಪ್ಪಸೆಟ್ಟಿ ರುಜು.

Sri Narayan Guru Bank, Ltd.,

(Incorporated in British India, Liability of Members is Limited)

Regd. Head Office HAMPANKATTA,

MANGALORE.

Branch: UDIPI, S. K.

Authorised Capital	**Rs. 2,00000**
Issued Capital	**,, 1,00000**
Paid up Capital	**,, 56,150**

The Company has commenced Business by obtaining from the Government the Certificate of Commencement of Business on the 19th August, 1944 under the Indian Companies Act, 1913.

Strong Board of Directors

Consent of the Central Government has been obtained under the Defence of India Rules 94 A- "It must be distinctly understood that in giving this consent the Govt. of India does not take any responsibility for the financial soundness of any scheme or for the correctness of any of the statements made or opinion expressed with regard to them". The Government of India has been pleased to extend the period till the 13th January 1945 for the sale of shares.

A few shares at par available.

Rs. 50/- per share. Re 1/- Entrance Fee per share.

Hundreds have already taken up shares!

WHY NOT YOU?

Current and Savings Bank Accounts are opened. Fixed Deposits are accepted. Enquire for Rules of Business and rates of Interest.

MANGALORE JARAPPA,

President & Managing Director.

ದಕ್ಷಿಣ ಕನ್ನಡ-

ಮಂಗಳೂರು

ಸೌದೆಯ ವ್ಯವಸ್ಥೆಯ ಕುರಿತು ಪ್ರಕಟಣೆ—"ಸೌದೆಯ ಧಾರಣ ಈ ಮುಂಚೆ ತಗ್ಗಿಸಿದ್ದರಿಂದ, ಹಳ್ಳಿಕಡೆಗಳ ಸೌದೆ ವ್ಯಾಪಾರಗಳು ಸೌದೆಯನ್ನು ಮಾರಲು ತಾಪತ್ರಯ ಮಾಡಲು ತೊಡಗಿದ್ದರಿಂದ, ಜನತೆಗೆ ಸಂಕಷ್ಟವುಂಟಾಗದಂತೆ ಮಾಡಲು, ಸಕ್ಕದ ಯಾವತ್ತು ಸೌದೆಯನ್ನು ಕಲೆಕ್ಟರರು ಹಿಡಿದುಕೊಂಡರು ಮತ್ತು ವ್ಯಕ್ತಿಗೆ ತಿ ಮಣದಂತೆ ಹಂಚಲುಬೇಕೆಂದು ಹುಕುಂ ಮಾಡಿದರು. ಆಗ ಅದು ಮಳೆಗಾಲವಾದ್ದರಿಂದ, ಶ್ರೀಮಂತರೂ ವರ್ಗದಾರರೂ ಸೌದೆ ದೊರಕಿಸಿಕೊಳ್ಳಲಾರರಾಗಿದ್ದು ಅಂಥವರಿಗೆ ಖಿಂಡಿಗಟ್ಟೆಯಲ್ಲಿ ಸೌದೆ ಒದಗಿಸಬೇಕೆಂದು ಕಲೆಕ್ಟರರು ಏರ್ಪಾಟು ಕೊಟ್ಟರು. ಪರಂತು ಈಗ ಮಳೆಗಾಲ ತೀರಿದ್ದರಿಂದ ಯಾವತ್ತು ಜಮೀನ್ದಾರರು, ರೈತರು ಯಾ ಶ್ರೀಮಂತರು ಹಳ್ಳಿಗಳಿಂದ ತಮ್ಮ ಸ್ವಂತ ಸೌದೆಯನ್ನು ತರಿಸಿಕೊಳ್ಳಲು ಏರ್ಪಾಡು ಮಾಡತಕ್ಕದ್ದು. ಇದರಿಂದ, ಇತರ ಉಪಾಯವಿಲ್ಲದೆ ಬಡವರಿಗೆ ಸ್ಥಳೀಯ ಸೌದೆಯು ಸಿಗುವಂತೆ ಗುಪ್ತಾ, ತಂತಮ್ಮ ಭೂಮಿಕಾಣಿಕೆಗಳಿಂದ ಸೌದೆ ತರಿಸಿಕೊಳ್ಳಬಲ್ಲವರು ಹಾಗೆ ಮಾಡಿದ್ದಲ್ಲಿ, ಸೌದೆ ವ್ಯಾಪಾರಿಗಳುಂಟುಮಾಡತಕ್ಕ ತೊಂದರೆ ವ ಕಿರುಕುಳಗಳು ನಡೆಯದಂತಾಗಿ ಬಡವರಿಗೆ ತುಂಬಾ ಉಪಕಾರ ಮಾಡಿದಂತಾದೀತು."

ಹೆಚ್ಚಿಗೆ ಬಟ್ಟೆ ಬಗ್ಗೆ ಒತ್ತಾಯ—ಪ್ರಾಂತಿಕ ಜವುಳಿ ಕಮಿಶನರರಾದ ಶ್ರೀ ಎಸ್. ವೆಂಕಟೇಶ್ವರನ್, ಐ. ಸಿ. ಎಸ್. ಇವರು ಕಳೆದ ಸೋಮವಾರ ಸಾಯಂಕಾಲ ದಕ್ಷಿಣ ಕನ್ನಡಾ ಚೇಂಬರ್ ಒಫ್ ಕೊಮ್ಮರ್ಸ್ ಇದರ ಕಚೇರಿಯಲ್ಲಿ ನೂಲಿನ ಮತ್ತು ಜವಳಿ ಸಾಹುಕಾರರಿಗೆ ಭೇಟಿಯಿತ್ತರು.

ಸದರಿ ವಾಣಿಜ್ಯ ಸಂಘದ ಕಾರ್ಯದರ್ಶಿ ಅವರನ್ನು ಸ್ವಾಗತೀಕರಿಸುತ್ತ, ಈ ಜಿಲ್ಲೆಯಲ್ಲಿ ೭೦೦೦ ಕೈಮಗ್ಗಗಳಿದ್ದು, ಈಗ ಒದಗಿಸುತ್ತಿರುವ ನೂಲು ಸಾಕಾಗದ್ದರಿಂದ ಅದರ ಮಾಸಿಕ ಪ್ರಮಾಣವನ್ನು ಹೆಚ್ಚಿಸಬೇಕಾಗಿ ಕೇಳಿಕೊಂಡರು. ಅದಲ್ಲದೆ, ಜವಳಿ ನಿಯಂತ್ರಣ ಹುಕುಮನ್ನು ಜಾರಿ ತರುವಲ್ಲಿ ವಾಣಿಜ್ಯ ಸಂಘವು ಸಹಕರಿಸುವುದೆಂದೂ ಪರಂತು ಈ ಅಪ್ಪಣೆಗೆ ಸಂಬಂಧಪಟ್ಟ ಸ್ಥಳೀಯ ಸಮಸ್ಯೆಗಳ ವಿಷಯದಲ್ಲಿ ಸದರಿ ಸಂಘವನ್ನು ವಿಚಾರಿಸಿಕೊಳ್ಳಬೇಕೆಂದೂ ಅಪೇಕ್ಷೆಮಾಡಿಕೊಂಡರು.

ಅದಕ್ಕೆ ಕಮಿಶನರರು ಉತ್ತರವೀಯುತ್ತಾ—"ಹೆಚ್ಚಿಗೆ ಜವಳಿ ಒದಗಿಸಲು ನಾನಿಗೆ ತೊಂದರೆಗಳೇನೂ ಇಲ್ಲ. ಆದರೆ ಈಗಿನ ಪರಿಸ್ಥಿತಿಯಿಂದಾಗಿ ಸಿವಿಲಿಯನರಿಗೆ ಸಿಗುವ ಬಟ್ಟೆಯ ಪರಿಮಾಣವೇ ಕಡಿಮೆಯಾಗಿದೆ, ಮದ್ರಾಸು ಪ್ರಾಂತವು ತುಟ್ಟಿ ಪ್ರಾಂತವಾಗಿದ್ದು, ಯಾವತ್ತು ಜಿಲ್ಲೆಗಳಿಗೆ ಸಾಕಷ್ಟು ಗಿಂಣೆಬಟ್ಟೆ ಒದಗಿಸುವುದೇ ದೊಡ್ಡ ತೊಂದರೆಯಾಗಿದೆ. ಆಯಾಯ ಪ್ರಾಂತಗಳಿಗೆ ಬಟ್ಟೆಯನ್ನು ಹಂಚಿಹಾಕುವ ಆಲೋಚನೆ ನಮಗಿದ್ದರೂ ಗಿರಣಿಯವರು ಮಾತ್ರ ಅದಕ್ಕೆ ಸಿದ್ಧರಿಲ್ಲ. ಹೀಗಾಗಿ, ಈಗ ತತ್ಕಾಲಕ್ಕೆ, ಮದ್ರಾಸು ಹಾಗೂ ತಿರುವಾಂಕೋಡು, ಹೈದರಾಬಾದು, ಕೊಚ್ಚಿ ವ ಮೈಸೂರು ಸಂಸ್ಥಾನಗಳನ್ನೇ ದಕ್ಷಿಣ ತುಟ್ಟಿವಲಯಗಳಾಗಿ ಭಾವಿಸಿ, ಈ ಇಡೀ ಭಾಗಕ್ಕೆ ಒಂದಷ್ಟು ಬಟ್ಟೆ ಒದಗಿಸಲು ತೀರ್ಮಾನಿಸಿದೆ. ಮದ್ರಾಸಿನ ನಿಯಂತ್ರಣ ಕಚೇರಿಯವರೇ ಸದರಿ ಬಟ್ಟೆಯನ್ನು ಈ ಪ್ರದೇಶಕ್ಕೆಲ್ಲಾ ಹಂಚಿಕೊಡುವರು. ಈ ಕ್ರಮವು ನವಂಬರ ತಾ ೧ರಿಂದ ಜಾರಿಗೆ ಬರುವುದು. ಇದರ ಹಿಂದೆಯೇ ತಕ್ಕ ಸರಬರಾಯಿ ಒದಗಿಸಲ್ಪಡುವುದಾಗಿ ನಾನು ನಂಬುತ್ತೇನೆ. 'ಕುಡಿಯ ಲ್ಪಟ್ಟ ಬಟ್ಟೆಯೇ ನಮ್ಮೊಗಿನ ಮೂಲಾಧಾರವಾಗಿದೆ. ನೂಲಿನ ವಿಷಯದಲ್ಲಾದರೂ, ಈ ವರೆಗೆ ಒದಗಿಸಲಾಗುತ್ತಿದ್ದ ತಿಂಗಳೊಂದರ ೨೫೫ ಬೇಲ್‌ಗಳನ್ನು ೪೦೦ಕ್ಕೆ ಈಗ ಏರಿಸಲಾಗಿದೆ"—ಎಂದರು.

ಕೈಮಗ್ಗ ಮ್ಹಾಲಿಕ ಸಂಘದವರಿಗೆ ಈಗ ಕೊಡಲಾಗುತ್ತಿರುವ ನೇಕಡಾ ೧೦ರಷ್ಟು ಮುನಾಫಾ ಸಾಕಾಗದೆಂಬ ಮನವಿಗೆ ಅವರು ಉತ್ತರಕೊಡುತ್ತಾ ಹೇಳಿದ್ದೇನೆಂದರೆ: "ಉತ್ಪತ್ತಿಯ ವಿಚಾರಿಸಿ ಅಧಿಕಾರಿಗಳು ಉದಾರ ರೀತಿಯಲ್ಲಿ ಅಂದಾಜುಮಾಡುವರು ಹಾಗೂ ಲಾಗ್ವಾಡು ವ ಮೇಲ್ವನಿಮ ಖರ್ಚು ಮತ್ತು ಮೂಲವೆಚ್ಚದ ಹಣದ ಮೇಲೆ ಮೂಲವೆಚ್ಚದ ಹಣದ ಮೇಲೆ ಮೂರು ತಿಂಗಳ ಬಡ್ಡಿ ಕಟ್ಟುವರು. ಈ ಪ್ರಕಾರ ಉತ್ಪನ್ನ ಖರ್ಚು ಲೆಕ್ಕ ಮಾಡುವುದಾಗಿದೆ. ನೂಲಿನ ಪರಿಮಾಣದ ವಿಷಯದಲ್ಲಿ ಕೈಮಗ್ಗದ ಮ್ಹಾಲಿಕರಿಗೆ ಅವಶ್ಯ ಬೇಕೋ ಅಷ್ಟನ್ನು ಸದಾ ಕಾಲ ಒದಗಿಸುವಂತೆ ನಾನು ಭರವಸೆ ಕೊಡಬಲ್ಲೆ."

ನಾಗರಿಕ ಪೂರೈಕೆ ಖಾತೆಯ ಕಮಿಶನರರ ಭೇಟಿ—ಪೂರೈಕೆ ಕಮಿಶನರರಾದ ಮಿ. ಡಿಕ್ಸನ್‌ರವರು ಕಳೆದ ವಾರ ಇಲ್ಲಿಗೆ ಬಂದು ಜಿಲ್ಲೆಯ ಪರಿಸ್ಥಿತಿಯನ್ನು ಪರಾಂಬರಿಸಿ ಮರಳಿದರು. ಶ್ರೀ ಎ. ಬಿ. ಶೆಟ್ಟಿ, ಶ್ರೀ ಜನಾರ್ದನ ಹೆಗ್ಡೆ, ಶ್ರೀ ಕೆ. ಟಿ. ಆಳ್ವ, ಶ್ರೀ ಸದಾನಂದ ಹೆಗ್ಡೆ, ಶ್ರೀ ರಂಗನಾಥ ರಾಜ, ಶ್ರೀ ಎಂ. ಶಿವರಾವ್—ಇವರೆಲ್ಲರೂ ಅವರನ್ನು ಕಂಡು ಜಿಲ್ಲೆಗೆ ಒಡನೆಯೇ ಒದಗಿಸಬೇಕಿದ್ದ ಅಕ್ಕಿಯ ಆವಶ್ಯಕತೆಯನ್ನು ಸೂಚಿಸಿದರು. ಅದಕ್ಕೆ ಕಮಿಶನರರು—'೩೦೦೦ ಟನ್ ಅಕ್ಕಿ ಇದೀಗಲೇ ಬಂದಿದೆ. ೧೭೦೦ ಟನ್ ರಾಗಿ ವ ೧೦೦೦ ಟನ್ ಗೋದಿ ಸರಬರಾಯಿ ಮಾಡಲಾಯಿತ್ತಿಸಲಾಗುವುದು'—ಎಂದು ಹೇಳಿದರು.

ಮಂಗಳೂರಿನಲ್ಲಿ ವ ದಕ್ಷಿಣಕನ್ನಡದಲ್ಲಿ, ಇತರ ಕಡೆಗಳಲ್ಲಿದ್ದಂತೆ, ಒಂದು ರಾತ್ರೆ ಕೊಡದೆ ಎರಡು ರಾತ್ರೆ ಮಾತ್ರ ಕೊಡುತ್ತಾರೆ ಈ ವ್ಯತ್ಯಾಸವೂ, ಮರೀಸನಿಂಗ್ ಪದ್ಧತಿಯಾಗುವ ಮತ್ತು ಇಲ್ಲದಿರುವ ಭಾಗಗಳಲ್ಲಿಯ ವ್ಯತ್ಯಾಸವೂ ಹೋಗಬೇಕು—ಎಂಬುದಾಗಿ ಕಾರ್ಯದವರನ್ನು ಕೇಳಿಕೊಂಡದ್ದಕ್ಕೆ, ಹಾಗೆಯೇ ಮಾಡುವುದಾಗಿ ಅವರು ಭರವಸೆ ಕೊಟ್ಟರೆಂದು ತಿಳಿಯುತ್ತದೆ. ಇಲ್ಲಿಯ ಕೆಲವು ರೇಶನಿಂಗ್ ಅಂಗಡಿಗಳನ್ನು ಕಮಿಶನರ್ ಸಾಹೇಬರು ಸಂದರ್ಶಿಸಿದ್ದರೆಂದು ವರ್ತಮಾನ.

ಉಡುಪಿ.

ಜನರಲ್ ಸೇಲ್ಸ್ ಟೇಕ್ಸ್ ಕೊಡತಕ್ಕ ವ್ಯಾಪಾರಿಗಳು ಪ್ರತಿ ತಿಂಗಳಲ್ಲೂ ಸಕಾಲದಲ್ಲಿ ತಾವು ಕೊಡತಕ್ಕ ಹಣವನ್ನು ಕೊಡದೆ ತಿಂಗಳುಗಟ್ಟಲೆ ಬಾಕಿಮಾಡಿಕೊಂಡ ನಿದರ್ಶನಗಳು ಅನೇಕ ಬಂದಿವೆ. ಈ ಪದ್ಧತಿಯು ಕಾನೂನಿಗೆ ತೀರಾ ವಿರುದ್ಧವಿದ್ದುದರಿಂದ ಜನರಲ್ ಸೇಲ್ಸ್ ಟೇಕ್ಸ್ ಕೊಡತಕ್ಕವರು ಪ್ರತಿತಿಂಗಳ ತಾ 10ರೊಳಗಾಗಿ ಪಾವತಿ ಮಾಡಲೇ ಬೇಕಾಗಿದೆ. ಇದಕ್ಕೆ ವ್ಯತಿರಿಕ್ತವಾಗಿ ವರ್ತಿಸಿದವರಿಗೆ ಒಂದು ಸಾವಿರ ರೂಪಾಯಿ ತನಕ ಜುರಮಾನೆ ವಿಧಿಸಲು ಅವಕಾಶವಿದೆಯೆಂದು ಜಿಲ್ಲಾ ಕಮರ್ಶಿಯಲ್ ಟೇಕ್ಸ್ ಆಫೀಸರರು ಎಚ್ಚರಿಕೆ ಕೊಟ್ಟಿರುತ್ತಾರೆ.

ಉಡುಪಿ ತಾಲೂಕು ರೈತರ ಸಭೆಯು ತಾ 30ರಲ್ಲಿ ನವಯುಗ ಪ್ರೆಸ್ಸಿನ ಮಾಳಿಗೆಯಲ್ಲಿ ಜರಗಿ ವರ್ಗದಾರರ ಹಾಗೂ ಒಕ್ಕಲಗಳ ಸಂಕಷ್ಟಗಳನ್ನು ಪರ್ಯಾಲೋಚಿಸಲಾಯಿತು. ಈ ಸಭೆಗೆ ಸಬ್‌ಕಲೆಕ್ಟರರವರು ಕಾರಣಾಂತರಗಳಿಂದ ಗೈರಹಾಜರಾದ ನಿಮಿತ್ತ ಸಭೆಯಲ್ಲಿ ನಿಶ್ಚಿತ ನಿರ್ಧಾರಗಳೇನೂ ಆಗದೆ ಸಭೆಯನ್ನು ಇದೇ ತಾ ೫ನೆ ಶುಕ್ರವಾರ ಸಂಜೆ ಆರುಗಂಟೆಗೆ ಮುಂದರಿಸಲಾಯಿತು. ಈ ಸಭೆಗೆ ಸಬ್ ಕಲೆಕ್ಟರರು ಬರಲಿರುವ ಕಾರಣ ಎಲ್ಲಾ ರೈತರೂ ವರ್ಗದಾರರೂ ಬರಬೇಕಾಗಿ ವರ್ಗದಾರರ ಸಂಘದ ಪ್ರೆಸಿಡೆಂಟ್ ವಕೀಲ್ ಶ್ರೀ. ಕೆ. ಜಿ. ಪಿಳ್ಳೆಯವರು ಅಪೇಕ್ಷಿಸುತ್ತಾರೆ.

ಮಲ್ಲಮಂಡಲ.—ಇಲ್ಲಿಯ ಉತ್ಸಾಹೀ ತರುಣರೊಂದುಗೂಡಿ "ಮಲ್ಲಮಂಡಲ" ವೆಂಬ ವ್ಯಾಯಾಮ ಶಾಲೆಯು ಪ್ರಾರಂಭೋತ್ಸವವನ್ನು ರಾಮಕೃಷ್ಣ ಥಿಯೇಟರಿನ ಬಳಿ, ಶ್ರೀ ಟಿ. ಆರ್. ಭಟ್ಟರವರ ಅಧ್ಯಕ್ಷತೆಯಲ್ಲಿ ಯಶಸ್ವಿಯಾಗಿ ನೆರವೇರಿಸಿದರು.

ರೆಡ್‌ಕ್ರಾಸ್ ಫಂಡಿನ ಸಹಾಯಾರ್ಥವಾಗಿ ಶ್ರೀ ರಾಮಕೃಷ್ಣರು ಕಳೆದ ತಾ23ರಲ್ಲಿ ನಡೆದ ಪಾಲಿನಲ್ಲಿ ಸಾವಿರ ಮುಖದ ದೇವಾಮೆಯ ಸ್ನಿತ್ತರು ಮಹಾ ಜನರ ಅಪೇಕ್ಷೆ ಮೇರೆಗೆ ದ್ವಿತೀಯ ಬಾರಿ ಪ್ರದರ್ಶನವಿತ್ತರು. ಮೊದಲನೆ ಬಾರಿಯ ದೇಣಿಗೆಯಿಂದ ನಾಲ್ಕು ಸಾವಿರ ರೂಪಾಯಿಗಳು ಜಮೆಯಾಗಿರುವುದೆಂದು ತಿಳಿದು ಬರುತ್ತದೆ.

ಜುಲಾಹ್ನೆ—ಸ್ಥಳೀಯ ವ್ಯಾಪಾರಿಗಳಲ್ಲು ಅಧಿಕ ಲಾಭವನ್ನಿಟ್ಟು ಕಟ್ಟರಿ ಸಾಮಾನುಗಳನ್ನು ಮಾರಿದರೆಂಬ ಆರೋಪಕ್ಕೊಳಗಾಗಿ ಪ್ರತಿಯೊಬ್ಬರೂ ಒಂದು ಸಾವಿರ ರೂಪಾಯಿಯಂತೆ ದಂಡ ತೆರಬೇಕಾಯಿತು.

ಭಜನೆ:—ಉಡುಪಿ ರಜಕ ಕುಲೋದ್ಧಾರಕ ಸಂಘದವರು ಏರ್ಪಡಿಸಿದ್ದ ಶ್ರೀ ನಾರದಾನಂದ ಭಜನ ಮಂಡಳಿಯ ಮಂಗಳೋತ್ಸವವು ತಾ 23-9 44ರಲ್ಲಿ ವಿಜೃಂಭಣೆಯಿಂದ ಕೊನೆಗೊಂಡಿತು. ಶ್ರೀ ನಂದಳಿಕೆ ಸುಬ್ಬಣ್ಣಯ್ಯ ರಾಮದಾಸರ ಉಪನ್ಯಾಸವಿತ್ತು. ಭಜನೆಯಲ್ಲಿ ಶ್ರೀ ಉಡುಪಿ ಗೋಪಾಲದಾಸರೂ ಭಾಗವಹಿಸಿದ್ದರು.

ಉಡುಪಿ ವ್ಯಾಯಾಮ ಶಾಲೆ:—ನವರಾತ್ರಿಯಲ್ಲಿ ಜರಗುವ ಆಯುಧ ಪೂಜಾ ಸಮಾರಂಭವು ತಾ 27 9-44ರಲ್ಲಿ ವಿಜೃಂಭಣೆಯಿಂದ ನೆರವೇರಿತು. ಸಂಚಾಲಕ ಶ್ರೀ ಟಿ ಸಂಜೀವ ಪೈಗಳು ಮೆನೇಜಿಂಗ್ ಕಮಿಟಿಯ ಪರವಾಗಿ ಚಿಕ್ಕ ಭಾಷಣವನ್ನು ಮಾಡಿ ಸಂಸ್ಥೆಯು ಇನ್ನೂ ಆರ್ಥಿಕ ದುರವಸ್ಥೆಯಲ್ಲಿಯೇ ಇರುವುದಾಗಿಯೂ ಮುಂದೆ ಆರ್ಥಿಕ ಬಿಕ್ಕಟ್ಟನ್ನು ಅನುಭವಿಸದೆ ತನ್ನ ಕಾರ್ಯಕಲಾಪಗಳನ್ನು ವಿಸ್ತರಿಸುವ ಬಗ್ಗೆ ಸಂಸ್ಥೆಗೆ ಪೋಷಕರು, ಆಶ್ರಯದಾತರು, ಆಜೀವ ಸದಸ್ಯರು ಇಂಜಿನ್ಯಾರಿ ವರ್ಗದ ಸದಸ್ಯರನ್ನು ಆಯಾಯ ತರಗತಿಯ ವರ್ಗಣೆಯನ್ನು ನಿರ್ಧರಿಸಿ ಸೇರಿಸಿಕೊಳ್ಳಲಾಗುವುದೆಂದೂ ಹೇಳಿದರು. ಈ ಸಂದರ್ಭದಲ್ಲಿ ಶ್ರೀ ಕೊಚ್ಚಿಕಾರ್ ದೇವದಾಸ ಪೈಗಳ ಷಷ್ಠ್ಯಬ್ಧಿ ಪೂರ್ತಿ ಮಹೋತ್ಸವದ ಸ್ಮಾರಕಾರ್ಥವಾಗಿ ಸದ್ರಿಯವರ ಮುಖಾಂತರ ರೂ. 51-0-0ನ್ನು ವ್ಯಾಯಾಮ ಶಾಲೆಯ ಮೂಲಧನದ ಸಹಾಯಾರ್ಥವಾಗಿ ದಾನ ಮಾಡಿದರು. ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್‌ರವರ ಸಿಬಂದಿಯವರು ರೂ 5-0 0, ಶ್ರೀ ಪಿ. ರಾಮರಾವ್ ಗನ್ನೆಯವರು ರೂ. 5-0-0, ಶ್ರೀ ಕೆ. ಸದಾನಂದ ಶೆಟ್ಟಿರವರು ರೂ 5 0-0 ಶ್ರೀ ಕಪ್ಪೆಟ್ಟು ಸದಾನಂದ ನಾಯ್ಕರವರು ರೂ. 2-0-0, ಶ್ರೀ ಬಿ. ಗೋವಿಂದ ನಾಯ್ಕರವರು ರೂ. 1-0 0 ಮತ್ತು ಆಹಾಮಧೇಯರೊಬ್ಬರು ರೂ. 3 0 0 ನಷ ದಾನಮಾಡಿದರು ಇದೇ ರೀತಿ ಎಲ್ಲರೂ ಪ್ರೋತ್ಸಾಹಿಸಬೇಕಾಗಿ ಸಂಸ್ಥೆಯ ಮೆನೇಜಿಂಗ್ ಕಮಿಟಿಯು ವಿನಂತಿಯಿದೆ.

ಕರ್ನಾಟಕ ಸಂಘ, ಉಡುಪಿ.

ಧನ್ಯವಾದ ಸಮರ್ಪಣೆ—ಈ ಸಂಘವು ನಡೆಸಿದ ನವರಾತ್ರಿ ಮಹೋತ್ಸವಕ್ಕೆ ಸಹಾಯಮಾಡಿದವರೆಲ್ಲರಿಗೆ ಕೃತಜ್ಞತೆ ಅರ್ಪಿಸುತ್ತದೆ ಮತ್ತು ಸಂಸ್ಥಾನವನ್ನು ಪೂಜಿಸಿದ, ಸಾಹಿತ್ಯೋತ್ಸವವನ್ನು ಯಶಸ್ವಿಯಾಗಿ ಮಾಡಿದ ಕಾರಣಾಂತರಗಳಿಂದ ಬರಲಾಗದಕ್ಕೆ ವಿಷಾದಿಸಿ ಈ ಕೆಳಗೆ ಹೆಸರು ಕಾಣಿಸಿರುವ ಪೂಜ್ಯನೀಯರು ಉತ್ಸವಕ್ಕೆ ಶುಭಾಶಂಸನೆಗಳನ್ನು ಕಳುಹಿಸಿಕೊಟ್ಟಿರುತ್ತಾರೆ. ಅವರೆಲ್ಲರಿಗೂ ಸಂಘದ ಸಾಹಿತ್ಯೋತ್ಸವದ ಸ್ವಾಗತ ಸಮಿತಿಯು ಪರವಾಗಿ ಕೃತಜ್ಞತಾಪೂರ್ವಕ ವಂದನೆಗಳನ್ನು ಅರ್ಪಿಸುತ್ತೇವೆ.

ಉಡುಪಿ. ತಾ. 1 10 44 } ಕೊರಡ್ಕಲ್ ಶ್ರೀನಿವಾಸ ರಾವ್, ಪ್ರಧಾನ ಕಾರ್ಯದರ್ಶಿ.

1 ಶ್ರೀ ಸುಜ್ಞಾನೇಂದ್ರತೀರ್ಥ ವಿದ್ಯಾನಿಧಿ ಶ್ರೀಗಳವರು. ಶ್ರೀ ಪುತ್ತಿಗೆಮಠ, 2 ಶ್ರೀ ವಿದ್ಯಾಸಮುದ್ರತೀರ್ಥ ಶ್ರೀಗಳವರು, ಶ್ರೀ ಕಾಣಿಯೂರುಮಠ, 3 ಶ್ರೀ ವಿದ್ಯಾರತ್ನತೀರ್ಥ ಶ್ರೀಗಳವರು ಶ್ರೀ ಕೃಷ್ಣಾಪುರಮಠ. 4 ಶ್ರೀ ಉಗ್ರಾಣ ಮಂಗೇಶರಾಯರು, 5 ಶ್ರೀ ಕೆ. ಶಂಕರನಾರಾಯಣ ಶಾಸ್ತ್ರಿಗಳು, 6 ಶ್ರೀ ಪಿ. ನಂಜುಂಡ ಸ್ವಾಮಿಗಳು, 7 ಶ್ರೀ ಯು. ಸೀತಾರಾಮಾಚಾರ್ಯರು, 8 ಶ್ರೀ ಪ್ಯಾಟಿ ಪ್ರಾಮರಾಯರು, 9 ಶ್ರೀ ಕಡಂಗೋಡ್ಲು ಶಂಕರ ಭಟ್ಟರು, 10 ಶ್ರೀ ಧರ್ಮಸ್ಥಳ ಪುಟ್ಟಸ್ವಾಮಿಗಳು, 11 ಶ್ರೀ ಕೆ. ಶಂಭುಶರ್ಮರು, 12 ಶ್ರೀ ಎ. ಬಿ. ಶೆಟ್ಟರು, 13 ಶ್ರೀ ಯು. ಗಣೇಶ ಕೇಶಾಯಿಯವರು, 14 ಶ್ರೀ ಆಲೂರ ವೆಂಕಟರಾಯರು, 15 ಶ್ರೀ ಕಯ್ಯಾರ ಕಿಂಞಣ್ಣ ರೈಗಳು, 16 ಶ್ರೀ ನಾರಾಯಣ ಕಿಲ್ಲೆಯವರು, 17 ಶ್ರೀ ಮಾಸ್ತಿ ಶ್ರೀನಿವಾಸಐಯ್ಯಂಗಾರರು, 18 ಶ್ರೀ ತೀರ್ಥನಕೇರಿ ಶ್ರೀನಿವಾಸ ಶಾಸ್ತ್ರಿಗಳು, 19 ಶ್ರೀ ಮುಳಿಯ ತಿಮ್ಮಪ್ಪಯ್ಯ ಗೋವಿಂದರಾಯರು. 20 ಶ್ರೀ ಕೆ. ಪಿ. ಜನಾರ್ದನ ಹೆಗ್ಡೆಯವರು, 21 ಶ್ರೀ ಪಡುಕೋಣೆ ರಮಾನಂದರಾಯರು, 22 ಶ್ರೀ ಎಂ. ಚಿತ್ರರಂಜನ ದಾಸರು, 23 ದಿವಾನ್ ಬಹದ್ದೂರ್ ರಾಜಕಾರ್ಯಪ್ರಸಕ್ತ ಶ್ರೀ ಕೆ. ರಾಮಸ್ವಾಮಿಗಳು.

Read & Advertise in

NAVAYUGA

In the court of the District Munsif of Mangalore.

O. S. No 179 of 1944

Between:—

Mrs L. M Seldon. Plaintiff

and

Robert Salvadore Coelho. Defendant

To

Defendant,

Robert Salvadore Coelho son of L Coelho, Employed in Lloyd's Bank, Limited, Bombay, residing at No 11St Leo's Road, Bandra, Bombay.

Notice is hereby given that the above-named plaintiff has instituted the above suit against the defendant to render an account of the collections made by him in respect of the income of properties shown in Schedule A. the plaint and that the said suit is posted to 17 10-1944 for the appearance of the defendant

The defendant is hereby required to appear in person or by a pleader on17-10-1944 at 11 A. M. before the said court. On failure to do so, the suit will decided in his absence.

(By order of Court)

G. Narayana Rao.

23-9-1944. Vakil for plaintiff.

ತಾ **4—10—44**ರಿಂದ

ರಣಜಿತ್ ಚಿತ್ರರತ್ನ

ಸೈಗಲ್ ಮತ್ತು ಖುರ್ಶೀದ್ ಅಭಿನೀತ

ಭಕ್ತ ಮಹಾಕವಿ

ಸೂರದಾಸ

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

ದಕ್ಷಿಣ ಕನ್ನಡ.

ಸಭೆಮೆರವಣಿಗೆಗಳ ಮೇಲೆ ಕಳೆದ 1942ನೆ ಸಪ್ಟಂಬರದಿಂದ ಜ್ಯಾರಿಯಲ್ಲಿದ್ದ ಪ್ರತಿಬಂಧಕಾಜ್ಞೆಯು ಕಳೆದ ತಾ 25ರಿಂದ ಹಿಂತೆಗೆಯಲ್ಪಟ್ಟಿದೆ.

ಇನ್ನಂಜೆ—ತಾ 27-9-44ರಲ್ಲು ಇಲ್ಲಿಯ ಎಸ್. ವಿ. ಎಚ್. ಹ್ಯಾಸ್ಕೂಲಿನ ಸ್ಥಾಪಕರಾದ ಶ್ರೀ ವಿಶ್ವೇಂದ್ರ ತೀರ್ಥ ಶ್ರೀ ಪಾದಂಗಳವರ ಸ್ಮಾರಕ ದಿನಾಚರಣೆಯೂ, B ಬ್ಲೋಕಿನ ಉದ್ಘಾಟನಾ ಸಮಾರಂಭವೂ ಶ್ರೀ ಶೀರೂರು ಮಠದ ಶ್ರೀಮಲ್ಲಕ್ಷ್ಮೀಂದ್ರ ತೀರ್ಥ ಶ್ರೀಪಾದಂಗಳವರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಅಧ್ಯಕ್ಷರೂ, ಸೋದೆಮಠದ ಶ್ರೀ ವಿಶ್ವೋತ್ತಮ ಶ್ರೀಪಾದಂಗಳವರೂ ಶಂಕರಪುರದಿಂದ ವಾದ್ಯಘೋಷ ಮೆರವಣಿಗೆ ಸಹಿತಬಂದು ಸ್ಥಳೀಯ ಶ್ರೀ ವಿಷ್ಣುಮೂರ್ತಿ ದೇವರನ್ನು ಸಂದರ್ಶಿಸಿ, ಇಲ್ಲಿಯ ಕಾರ್ಯಭಾಗಗಳ ಸೂತ್ರಧಾರಿಗಳಾದ ಶ್ರೀನಿವಾಸ ವಿಠ್ಠಂತಾಯರ ಹೆಸರಿನಿಂದ 'ಶ್ರೀನಿವಾಸಭವನ'ವೆಂದು ಕರೆಯಲ್ಪಡುವ ಹೊಸ ಕಟ್ಟಡದ ಉದ್ಘಾಟನೆಯನ್ನು ನೆರವೇರಿಸಿದರು. ಶಾರದಾ ಪೂಜೆ, ಗುರುಪೂಜೆಗಳಾದ ಬಳಿಕ ಸಭೆಸೇರಿ ಶ್ರೀ ವಿಠ್ಠಂತಾಯರು ದಿವಂಗತ ಶ್ರೀ ವಿಶ್ವೇಂದ್ರ ತೀರ್ಥರ ಗುಣಗಾನಮಾಡಿ ಗ್ರಾಮೋದ್ಧಾರಕ್ಕಾಗಿ ಜನ್ಮವೆತ್ತಿದ ಈ ಶಾಲೆಯು ಲಕ್ಷ್ಮಿಯ ಕಟಾಕ್ಷ ಕಡಿಮೆಯಾಗಿ ಕಷ್ಟಕ್ಕೊಳಕಾಗಿದ್ದರೂ, ಇನ್ನು ಶ್ರೀ ಲಕ್ಷ್ಮೀಂದ್ರ ತೀರ್ಥರ ಅನುಗ್ರಹದಿಂದ ಆ ಕಷ್ಟವನ್ನು ಪರಿಹರಿಸಿಕೊಂಡು ಬೆಳೆದೀತೆಂದು ಹೇಳಿ ಅಧ್ಯಕ್ಷರಿಗೆ ಕೃತಜ್ಞತೆಯನ್ನರ್ಪಿಸಿದರು. ಬಳಿಕ ಜಿಲ್ಲಾವಿದ್ಯಾಧಿಕಾರಿಗಳಾದ ಶ್ರೀ N. ಸುಬ್ಬರಾಯರು ಈ ಸಮಾರಂಭದ ದಿನ ಬೆಳಗ್ಗೆ ಜರಗಿದ್ದ ಪಂದ್ಯಾಟಗಳಲ್ಲಿ ಜಯಶೀಲರಾದವರಿಗೆ ಬಹುಮಾನಗಳನ್ನಿತ್ತ ಮೇಲೆ ಅಧ್ಯಕ್ಷರು ವಿದ್ಯೆಯ ಮಹತ್ವವನ್ನು ಶಾಸ್ತ್ರಾಧಾರಪೂರ್ವಕವಾಗಿ ವಿವರಿಸಿ ಈ ಜನೋಪಯೋಗಿ ಸಂಸ್ಥೆಯು ಈ ವಿಜಯದಶಮಿಯ ಪವಿತ್ರ ದಿನದಲ್ಲಿ ಮತ್ತೊಂದು ಕಟ್ಟಡದ ಆರಂಭವನ್ನು ಪಡೆದು ಉನ್ನತಿಯನ್ನು ಹೊಂದಲೆಂದು ಹರಸಿದರು. ನಂತರ ವಿದ್ಯಾಧಿಕಾರಿಗಳು ಇದು ನವೀನ ಆದರ್ಶ ಸಂಸ್ಥೆಯೆಂದೂ, ಇದು ಸರ್ವತೋಮುಖ ಅಭಿವೃದ್ಧಿ ತೋರಿಬರುವದೆಂದೂ ಇದಕ್ಕೆ ಬೇಕಾದ ಸಹಾಯಕ್ಕೆ ನಾನು ಸದಾ ಸಿದ್ಧನೆಂದೂ ಹೇಳಿ ಸಂಸ್ಥೆಯ ಏಳಿಗೆಯನ್ನು ಬಯಸಿದರು. ನಂತರ ಮುಖ್ಯೋಪಾಧ್ಯಾಯರು ಅಧ್ಯಕ್ಷರಿಗೂ ವಿದ್ಯಾಧಿಕಾರಿಗಳಿಗೂ ಇತರ ಮಹಾಶಯರಿಗೂ ಧನ್ಯವಾದವನ್ನರ್ಪಿಸಿದ ಮೇಲೆ ಮಂಗಲವಾಯಿತು.

ತಾ 30-9 44ರಲ್ಲು ಇಲ್ಲಿಯ ಎಸ್ ವಿ ಎಚ್. ಹ್ಯಾಸ್ಕೂಲಿನ ಆಶ್ರಯದಲ್ಲಿ ಸ್ಕೌಟ್ ದಿನಾಚರಣೆಯು ಅಸಿಸ್ಟೆಂಟ್ ಸ್ಕೌಟು ಕಮಿಶನರ್ ಶ್ರೀಯುತ ಕಾರ್ನಾಡ್ ಮಂಗೇಶರಾಯರ ಅಧ್ಯಕ್ಷತೆಯಲ್ಲಿ ಬಹು ವಿಜೃಂಭಣೆಯಿಂದ ಜರಗಿತು. ಶಿರ್ವಾ, ಕಾಪು, ಕಟಪಾಡಿ, ಗುಡ್ಡೆ, ಪಾಂಗಾಳ, ಶಂಕರಪುರ, ಕರಂದಾಡಿ, ಇನ್ನಂಜೆ, ಮುಂತಾದ ಶಾಲೆಗಳ ಬಾಲವೀರದಳಗಳೂ, ಕಾಪು ರೋವರ್ಸ್ ದಳದವರೂ ಭಾಗವಹಿಸಿ ಲಘೂಪಹಾರವಾದ ಮೇಲೆ ನಾನಾ ವಿಧ ಚಟುವಟಿಕೆಗಳನ್ನು ಪ್ರದರ್ಶಿಸಿ ಸಭಿಕರನ್ನು ಆನಂದಗೊಳಿಸಿದರು. ಶ್ರೀಯುತ ರಾವ ಕುಮಾರಯ್ಯ, ಎ. ಶ್ಯಾಮರಾವ್. ಬಿ. ಎ. ಎಲ್. ಟಿ, ವಿಠ್ಠಲ ಶೆಣೈ B. A. L T ಮೊದಲಾದವರ ಸಂದರ್ಭೋಚಿತ ಭಾಷಣಗಳಾದ ಮೇಲೆ ಅಧ್ಯಕ್ಷ ಮಹಾಶಯರು ಎಲ್ಲರೂ ಬಾಲವೀರ ದಳಗಳನ್ನು ಸೇರಿ ದೇಶದ ಏಳ್ಗೆಯನ್ನು ಸಾಧಿಸಬೇಕೆಂದು ಹೇಳಿದ ಬಳಿಕ ಮಂಗಳವಾಯಿತು.

ನಂದಳಿಕೆ— ನಂದಳಿಕೆ ಸಂಯುಕ್ತ ಕೊಂಗ್ರೆಸ್ ಕಮಿಟಿ (ನಂದಳಿಕೆ, ಬೆಳ್ಮಣ್, ಸೂಡಾ, ಬೋಳ, ಕೆದಿಂಜೆ ಗ್ರಾಮಗಳನ್ನೊಳಗೊಂಡಿದೆ.)ಯ ಪರವಾಗಿ ಕಸ್ತೂರಿ ಬ್ಯಾಸ್ಮಾರಕ ನಿಧಿಗೆ ರೂ. 29-0-0ನ್ನು ಕರ್ನಾಟಕ ಪ್ರಾಂತಿಕ ಕೊಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಿಗೆ ತಾ. 27-9-44ರಲ್ಲಿ ಕಳುಹಿಸಲಾಗಿರುತ್ತದೆ.

ಸುರತ್ಕಲ್:—ವಿದ್ಯಾದಾಯಿನೀ ಹೈಸ್ಕೂಲಿನ ಮಂದಿರದಲ್ಲಿ, ತಾ 28-9-44 ರಲ್ಲಿ "ದಸರಾ ಮಹೋತ್ಸವ"ವು ಜರಗಿತು. ಇಲ್ಲಿಗೆ ಚಿತ್ತೈಸಿದ್ದ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಮತ್ತು ರಾಘವಾಚಾರ್ಯರ್ ಇವರ ಭಾಷಣಗಳಿದ್ದುವು.

ಕಟೀಲು. ಶ್ರೀಗಳಾದ ಎ. ಒ. ಶೆಟ್ಟಿ, ಹೇಜಮಾಡಿ ಸಂಜೀವರಾವ್, ಬೈಲುಗೋಪಾಲಕೃಷ್ಣಯ್ಯ, ಕೆ. ಮಹಾಬಲ ಶೆಟ್ಟಿ, ಲಕ್ಷ್ಮೀನಾರಾಯಣ ಆಸ್ರಣ್ಣ, ಶಂಭಟ್ಟ, ಕೆ. ಕೃಷ್ಣ ಭಟ್ಟ, ಕೆ. ವಿಠಲ ಶೆಟ್ಟಿ ಇವರಿಂದ ಕಟೀಲು ದುರ್ಗಾಪರಮೇಶ್ವರೀ ಜೀರ್ಣೋದ್ಧಾರ ಸಮಿತಿಯು H. R. E. ಬೋರ್ಡಿನವರ ಅನುಮತಿಯಿಂದ ರಚಿಸಲ್ಪಟ್ಟು ತಾ 29-9 44ರಲ್ಲು ಸಭೆಕೂಡಲಾಗಿ ಶ್ರೀ ಪಿ ಸಂಜೀವರಾಯರ, ಅಧ್ಯಕ್ಷರಾಗಿಯೂ, ಶ್ರೀ ಶಂಭಟ್ಟ ಕೋಶಾಧಿಕಾರಿಯಾಗಿಯೂ ಶ್ರೀ ಕೆ. ಶ್ರೀಧರ ಶೆಟ್ಟಿ ಸೆಕ್ರೆಟರಿಯರಾಗಿಯೂ ಆರಿಸಲ್ಪಟ್ಟರು. ಭಕ್ತ ಮಹನೀಯರು ಕೊಡುಗೈಯ ಸಹಾಯವಿತ್ತು ಜೀರ್ಣೋದ್ಧಾರ ಕಾರ್ಯವನ್ನು ಯಶಸ್ವಿಯಾಗಿ ಮಾಡುವರೆಂದು ಆಶಿಸಲಾಗಿಯದೆ

ಫಲಿಮಾರು:—ಇಲ್ಲಿಯ 'ಶಾರದಾ ಪೂಜೆ'ಯು ಕಳೆದ ತಾ 22ರಲ್ಲಿ ನಡೆದು ಸ್ಥಳೀಕ ಮಹಾಶಯರಿಂದಲೂ ಮಹಿಳೆಯರಿಂದಲೂ ಪಂದ್ಯಾಟಗಳಲ್ಲಿ ಗೆದ್ದ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ಇನಾಮುಗಳನ್ನು ಹಂಚಲಾಗಿ ಮೆರವಣಿಗೆ ಭಜನೆ ಪ್ರಸಾದ ಹಂಚೋಣದಿಂದ ಉತ್ಸವವು ಕೊನೆಗೊಂಡಿತು.

ಹಿರಿಯಡ್ಕ-ಶೀರೂರು:—ಕಳೆದ ಎಂಟು ದಿವಸಗಳಿಂದ ಉಡುಪಿಯ ಶ್ರೀ ಶೀರೂರು ಮಠದ ಲಕ್ಷ್ಮೀಂದ್ರ ತೀರ್ಥ ಶ್ರೀಪಾದಂಗಳವರು ತಮ್ಮ ಗುರುಗಳಾರಾಧನೆಯನ್ನು ಶೀರೂರಿನಲ್ಲಿ ವಿಜೃಂಭಣೆಯಿಂದ ನೆರವೇರಿಸಿದರು, ಶ್ರೀ ಕೃಷ್ಣಾಪುರ ಮಠದ ಶ್ರೀವಿದ್ಯಾರತ್ನ ತೀರ್ಥಶ್ರೀಪಾದಂಗಳವರು,ಸೋದೆ ಮಠದ ಸ್ವಾಮಿಗಳೂ ಆಮಂತ್ರಿತರಾಗಿದ್ದರು. ಸಂಜೆ ಶ್ರೀ ಹಂಡೆ ಶ್ರೀನಿವಾಸರ ಹರಿಕಥಾ ಕಾಲಕ್ಷೇಪವೂ ಇತ್ತು.

ಪಡುಬಿದ್ರೆ:—ತಾ 26—9—44ರಲ್ಲು ಬೋ, ಹೈ ಎ. ಶಾಲೆಯ ಶ್ರೀ ಶಾರದಾ ಪೂಜಾ ಸಮಾರಂಭವು ಜಿಲ್ಲಾ ಬೋರ್ಡು ವಿದ್ಯಾಧಿಕಾರಿಗಳಾದ ಶ್ರೀ ಯಚ್. ರಾಮರಾವ್, ಯಂ. ಎ. ಯಲ್ ಟಿ., ಬಿ. ಒ. ಎಲ್. ಇವರ ಅಧ್ಯಕ್ಷತೆಯಲ್ಲಿ ಜರಗಿತು. ಮಾನ್ಯ ಅಧ್ಯಕ್ಷರ ನೇತೃತ್ವದಲ್ಲಿ ಶಾಲಾ ಕಟ್ಟಡದ ವಿಸ್ತರಣಕ್ಕಾಗಿ ಕಮಿಟಿಯೊಂದು ಏರ್ಪಾಡಾಯಿತು. ಅಷ್ಟರಲ್ಲೇ ನೆರೆದ ಮಹನೀಯರು ರೂ. 2500ನ್ನು ಕೊಡುವ ವಾಗ್ದಾನವಿತ್ತರು. ಮಹನೀಯರಿಂದ ಈ ಕೆಲಸದ ಹರವನ್ನು ಕಂಡ ಮಾನ್ಯ ಅಧ್ಯಕ್ಷರು ಆಶ್ಚರ್ಯಚಕಿತರಾಗಿ ಗ್ರಾಮಸ್ಥರನ್ನು ತುಂಬಾ ಶ್ಲಾಘಿಸಿದರು, ಊರವರು ಇನ್ನೂ ಹೆಚ್ಚಿನ ಹಣವನ್ನು ಸದ್ಯದಲ್ಲೇ ಸಂಗ್ರಹಿಸುವ ಹಂಚಿಕೆ ಮಾಡಿದರು ಮಕ್ಕಳ ವಿವಿಧ ನೂತನ ವಿನೋದಗಳ. ಸರ್ವತೋಮುಖವಾಗಿ ಸಂತೋಷವಿತ್ತವು ಕೊನೆಗೆ ಮಾನ್ಯ ಅಧ್ಯಕ್ಷರು ತಮ್ಮ ಸಮಾರೋಪ ಭಾಷಣದಲ್ಲಿ ನಡೆದ ಕಾರ್ಯಭಾಗಗಳನ್ನು ಆದ್ಯಂತವೂ ಕೊಂಡಾಡಿ ಅವಿಟಿಗೆ ಬೇಕಾದ ಸೂಚನೆ ಸಲಹೆಗಳನ್ನಿತ್ತು ಹೆತ್ತವರನ್ನು ಹೊಗಳಿ ಮಕ್ಕಳನ್ನು ಹರಸಿ ತನ್ನ ಭವ್ಯ ಭಾಷಣದಲ್ಲಿ ಶಾಲೆಯ ಶ್ರೇಯೋಭಿವೃದ್ಧಿಯನ್ನು ಕೋರಿದರು.

ಪಡುಬಿದ್ರೆ ಜವಳಿ ವ್ಯಾಪಾರಿಕೆ. ಕೆರಿಯಂಗಡಿ ಶಿಸ್ತು ಮಾತೃಶ್ರೀ. ಕೆ.ಅಪ್ಪಿಯರು ಹೊಸಮನೆ ಗಿರಿಯಂಮ ಸೆಡ್ತಿಯವರು ತಂನ 84ನೇ ವಯಸ್ಸಿನಲ್ಲಿ ತಾ 15-9-44ನೇ ಶುಕ್ರವಾರ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ, ಮೃತರ ಆತ್ಮಕ್ಕೆ ಪರಮಾತ್ಮನು ಶಾಂತಿಯಂನೀಯಲಿ.

ಬ್ರಹ್ಮಾವರ:—ಇಲ್ಲಿಯ ಆಢ್ಯ ಮಹನೀಯರು ಹಾಗೂ ವರ್ಗದಾರರ ಸಾಹುಕಾರರ ಉದಾರಾಶ್ರಯದಲ್ಲಿ ಬ್ರಹ್ಮಾವರಕ್ಕೆ ಸಂಬಂಧಪಟ್ಟ 5 ಗ್ರಾಮಗಳಲ್ಲಿ ಹಸಿವಿನ ಬೇನೆಗೆ ಸಿಕ್ಕಿ ಬಳಲುತ್ತಿದ್ದ ಸರ್ವತ್ರ ಬಡವರಿಗೆ ತಾ 17-9-44ನೆ ಮಹಾಲಯಾ ಅಮಾವಾಸೆಯ ದಿನದಿಂದ ತಾ 26-9-44ವಿಜಯಾ ದಶಮಿಯ ವರೆಗೆ ಗಂಜಿ ಊಟವನ್ನೇರ್ಪಡಿಸಿ, ಬಡವರ ಜೀವ ಉಳಿಸಿದ ವಿಚಾರವು ಸ್ತುತ್ಯಾರ್ಹವಾದುದು.

ಮಾಬುಕಳ:—ತಾ 17-9 44ರಲ್ಲು ಕುಂದಾಪುರ ಸಬ್ ಕಲೆಕ್ಟರವರು ಉಡುಪಿಯಿಂದ ಕುಂದಾಪುರಕ್ಕೆ ಹೋಗುವಾಗ ವಾರಂಬಳ್ಳಿ, ಕುಮ್ರಗೋಡು ಗ್ರಾಮಗಳ ಬಡಜನರು ವಾರಂಬಳ್ಳಿ ಸ್ಟೋರಿನಲ್ಲಿ ತಮಗೆ ಕೊಟ್ಟ ಹಾಳು ಅಕ್ಕಿಯನ್ನು ದೊರೆಗಳ ಕೈಯಲ್ಲಿಕೊಟ್ಟು ಅಲ್ಲಿ ನಡೆಯುವ ಅನ್ಯಾಯವನ್ನು ಮುಖತಾ ನಿವೇದಿಸಲಾಗಿ ಅದನ್ನು ತಾನು ವಿಚಾರಿಸಿ ನ್ಯಾಯ ಕೊಡಿಸುವೆನಾಗಿ ಆಶ್ವಾಸನವಿತ್ತರು.

ಪುತ್ತೂರು:—ಹಿಂದೀ ಸಂಸ್ಕೃತ ಪಾಠಶಾಲೆಯಲ್ಲಿ ಕಳೆದ ತಾ 22ರಿಂದ 27ರ ವರೆಗೆ ನವರಾತ್ರಿ ಮಹೋತ್ಸವವು ಉಪನ್ಯಾಸಾದಿ ಕಾರ್ಯಕ್ರಮಗಳಿಂದ ಜಯಶೀಲವಾಗಿ ಆಚರಿಸಲಾಯಿತು. ಶ್ರೀಗಳಾದ ಬಿ ಮಂಗೇಶರಾವ್, ಶ್ರೀನಿವಾಸ ಶಾಸ್ತ್ರಿ, ಶಂಭುಶರ್ಮ, ಕೆ. ಎಸ್. ಪರಮೇಶ್ವರ ಶಾಸ್ತ್ರಿ, ಸುಬ್ರಾಯ ಶರ್ಮ, ಡಾ। ಕೃಷ್ಣಭಟ್, ಎನ್. ಶ್ರೀನಿವಾಸ ಶಾಸ್ತ್ರಿ, ಕೆ. ಶ್ರೀನಿವಾಸಾಚಾರ್, ಎನ್.ಎಸ್ ನಾರಾಯಣರಾವ್, ಉಗ್ರಾಣ ಮಂಗೇಶರಾವ್, ಬಿ. ಶಿವರಾಮ ಹೊಳ್ಳ, ಜಿ. ಎಸ್. ಲಕ್ಷ್ಮಣ ಪೈ, ಎಮ್. ಬಿ. ನರ್ಸಪ್ಪ, ಎಮ್. ರಾಮನ್ ನಂಬಿಯಾರ್, ಬಿ. ದೇವದಾಸ ಶೆಣೈ ಮೊದಲಾದವರು ಪ್ರಮುಖ ಭಾಗವಹಿಸಿದ್ದರು

ಕಾರ್ಕಳ ತಾಲೂಕು ವರ್ಗದಾರರ ಸಂಘ:—

ಎಲ್ಲಾ ವರ್ಗದಾರರ ಮತ್ತು ಬೇಸಾಯಗಾರರ ತಿಳುವಳಿಕೆ ಬಗ್ಗೆ ಜಿಲ್ಲಾ ರೈತರ ಸಂಘದ ಕಾರ್ಯದರ್ಶಿ ಶ್ರೀ ಕೆ. ಬಿ ಜಿನರಾಜ ಹೆಗ್ಗಡೆರಿಗೂ, ಮಾನ್ಯ ಜಿಲ್ಲಾ ಕಲೆಕ್ಟರ್ ದೊರೆಗಳಿಗೂ ನಡೆದ ಪತ್ರವ್ಯವಹಾರದ ಸಾರಾಂಶವು ಹೀಗಿದೆ:—

ತಾ. 25-9-1944ರಲ್ಲು ಕಾರ್ಯದರ್ಶಿಗಳು ಬರೆದ ಪತ್ರ-"ಪ್ರಕೃತ ಕಾರ್ತಿ ಬೆಳೆಯ ಲೆಕ್ಕ ತನ್ಖಿಯನ್ನು ನಡೆಸುತ್ತಿರುವ ಶಾನುಭಾಗರುಗಳು ತಮಗೆ ತಿಳಿಸದ ವಿನಹಾ ಕಾರ್ತಿ ಬೆಳೆಯನ್ನು ಕಟಾವು ಮಾಡಬಾರದಾಗಿಯೂ, ಕೆಲವರು ಕೆಲವರಕೂಡೆ ಕಮ್ಮಿ ಉತ್ಪತ್ತಿ ಕಾಣಿಸುವ ಬಗ್ಗೆ ತಮಗೆ ಲಂಚಕೊಡಬೇಕಾಗಿಯೂ ಬೇಸಾಯಗಾರರಕೂಡೆ ತಗಾದೆಪಡಿಸುತ್ತಿರುವದಾಗಿ ತಿಳಿದು ಬರುತ್ತದೆ. ಈ ಕುರಿತು ಅಧಿಕಾರಿಗಳು ಗ್ರಾಮ ಉದ್ಯೋಗಸ್ಥರಿಗೆ ಯಾವ ಅನುಭವನ್ನು ಕೊಟ್ಟಿರುತ್ತಾರಾಗಿ ನಮಗೆ ಗೊತ್ತಿಲ್ಲ. ಸನ್ನಿಧಾನದ ಖಚೇರಿಯಿಂದ ಈ ಕುರಿತು ಸರಿಯಾದ ಸಂಗತಿಯನ್ನು ಪತ್ರಿಕೆಗಳಲ್ಲಿ ಪ್ರಕಟಿಸುತ್ತಿದ್ದರೆ ಇಂತಹ ವರ್ತನೆಗಳಿಗೆ ಆಸ್ಪದವಿಲ್ಲದಂತಾಗುವುದು. ಸನ್ನಿಧಾನದ ಖಚೇರಿಯ ಹುಕುಂಗಳ ಪ್ರತಿಯನ್ನು ನಮಗೆ ಕಳುಹಿಸಿಕೊಡುತ್ತಿದ್ದರೆ ಅವನ್ನು ಯಾವತ್ತು ಜನರಿಗೆ ನಾವು ಪ್ರಕಟಿಸುತ್ತಿದ್ದೆವು."—

ತಾ. 26-9-44ರಲ್ಲು ಮಾನ್ಯ ಕಲೆಕ್ಟರ್ ದೊರೆಗಳವರು ಕೊಟ್ಟ ಉತ್ತರ—

"ನಿಮ್ಮ ಪತ್ರದಲ್ಲಿ ಕಾಣುವ ಶ್ಯಾನುಭಾಗರ ವರ್ತನೆಗಳಿಗೆ ನಮ್ಮ ಹುಕುಂಗಳಲ್ಲಿ ಯಾವ ಆಧಾರವೂ ಇಲ್ಲವೆಂಬುದನ್ನು ನೀವು ನಂಬತಕ್ಕದ್ದು. ಮಾತ್ರವಲ್ಲ, ಈ ವರೆಗೆ ನಡೆದು ಬಂದಂತೆ ಬೇಸಾಯಗಾರರು ಕಟಾವು ಮಾಡುವ ಕುರಿತು ಯಾ ಒಕ್ಕಲುಗಳು ಧನಿಗಳಿಗೆ ಗೇಣಿಯನ್ನು ಕೊಡುವ ಕುರಿತು ಯಾವ ನಿರ್ಬಂಧವನ್ನು ಮಾಡಕೂಡದಾಗಿ ನಾನು ಸಂಬಂಧಪಟ್ಟ ಅಧಿಕಾರಿಗಳಿಗೆ ಒತ್ತಿ ತಿಳಿಸಿರುವೆನು. ಧನಿಗೂ ಒಕ್ಕಲುಗಳಿಗೂ ಇರತಕ್ಕ ಸಂಬಂಧದಲ್ಲಿ ಯಾವ ಆತಂಕ ಮ ಅಡ್ಡಿಗಳನ್ನೂ ತಂದೊಡ್ಡಬಾರದಾಗಿ ನಾನು ತಿಳಿಸಿರುವೆನು. ಈ ವಿಷಯ ನಾನು ಪದೇ ಪದೇ ಹೇಳುತ್ತಿದ್ದೇನೆ. ಆದಾಗ್ಯೂ ಈ ಕುರಿತು ನೀವು ಸಂಶಯ ಪಡುತ್ತಿರುವುದು ನನಗೆ ತಿಳಿಯದು. ದಯವಿಟ್ಟು ಅಂಥಹ ಅಪಪ್ರಚಾರಗಳನ್ನು ಖಂಡಿಸಿರಿ ತಮ್ಮ ಸ್ವಾತಂತ್ರ್ಯವನ್ನೂ ಸ್ವಾಭಿಮಾನವನ್ನೂ ಕಾಪಾಡಿಕೊಂಡು ಗ್ರಾಮಉದ್ಯೋಗಸ್ಥರು ದುರ್ಮಾರ್ಗದಲ್ಲಿ ಪ್ರವರ್ತಿಸದಂತೆ ಮಾಡತಕ್ಕದ್ದು ವರ್ಗದಾರರ ಕರ್ತವ್ಯವೆಂದು ತಿಳಿಯುತ್ತೇನೆ. ಈ ರೀತಿಯ ದುರ್ವರ್ತನೆಗಳನ್ನು ಪದೆಬಡಿಯಲು ಒಬ್ಬ ಕಲೆಕ್ಟರರಿಗೇನೇ ಸಾಧ್ಯವಿಲ್ಲ. ನಾವೆಲ್ಲರೂ ಸೇರಿ ಅದನ್ನು ಕೊಣೆಗಾಣಿಸಬೇಕು. ನಿಮ್ಮ ಪತ್ರದ ಪ್ರತಿಯನ್ನು ನಾನು ಪ್ರತಿಯೊಬ್ಬ ರೆವಿನ್ಯೂ ಇನ್ಸ್‌ಪೆಕ್ಟರರಿಗೂ ಕಳ ಹಿಸಿರುವೆನು. ಮತ್ತು ಕೂಡ್ಲೆ ತನ್ಖಿ ನಡೆಸಿ ನನಗೆ ರಿಪೋರ್ಟು ಮಾಡಬೇಕಾಗಿ ಹೇಳಿರುವೆನು. ಶ್ಯಾನುಭಾಗರುಗಳು ಆ ರೀತಿ ವರ್ತಿಸುವುದು ಬಹಳ ಅವಮರ್ಯಾದೆಕರವೆಂಬುದನ್ನು ಎಲ್ಲಾ ತಹಶಿಲ್ದಾರರುಗಳಿಗೂ ಡಿಪ್ಯುಟಿತಹಶಿಲ್ದಾರರುಗಳಿಗೂ ತಿಳಿಸಿರುವೆನು. ಆ ರೀತಿಯ ದುರ್ವರ್ತನೆಗಳನ್ನು ನನ್ನ ಅವಗಾಹನೆಗೆ ನೀವು ತಂದಲ್ಲಿ ನಾನು ತಕ್ಕ ಶಿಕ್ಷೆಯನ್ನು ವಿಧಿಸುವೆನು."

ಈ ಮೇಲಿನ ಪತ್ರವ್ಯವಹಾರದಿಂದ ವರ್ಗದಾರರ ಕರ್ತವ್ಯವು ಸ್ವಯಂವ್ಯಕ್ತ. ಆದಕಾರಣ ಪ್ರತಿಯೊಬ್ಬ ವರ್ಗದಾರನೂ ತನ್ನ ತಿಳುವಳಿಕೆಗೆ ಬಂದ ಇಂಥಹ ದುರ್ವರ್ತನೆಗಳನ್ನು ವರ್ಗದಾರರ ಸಂಘಕ್ಕೆ ಕೂಡಲೇ ತಿಳಿಸಿ ಬಯಲುಮಾಡಬೇಕಾಗಿ ಅಪೇಕ್ಷಿಸೋಣಾಗುತ್ತದೆ. ಎಂದು ಜತೆಕಾರ್ಯದರ್ಶಿಗಳು ಪ್ರಕಟಿಸಿದ್ದಾರೆ.

ಪ್ರಕಟಣೆ.

ಕಾರ್ಕಳ ಡಿ. ಮು. ಕೋರ್ಟಿನಲ್ಲಿ.

O. P. No 80/1944

1. ತುಂಗುಶೆಟ್ಟಿ, 2. ದೇಣಶೆಟ್ಟಿ, 3. ಕೂಕ್ರಶೆಟ್ಟಿ, 4 ಸಿದ್ದುಶೆಟ್ಟಿ-ಅರ್ಜಿದಾರರು

ಮತ್ತು

ರಂಗುಶೆಟ್ಟಿ—ಕಾದ್ಯಶೆಟ್ರಸೊಸೆ, ಉಡುಪಿ ತಾಲ್ಲೂಕು ಪಿಲಾರು ಗ್ರಾಮದಲ್ಲಿ ಮಧ್ವರಾಯ ಉಡುಪರ ಜಾಗದಲ್ಲಿರುತ್ತಾಳೆ—ಎದ್ರಿರು.

ಯಿವರ ವಳಗೆ

ಈ ಮೂಲಕ ಸರ್ವಜನರಿಗೂ ತಿಳಿಯಪಡಿಸುವುದೇನಂದ್ರೆ,-ಉಡುಪಿ ತಾಲ್ಲೂಕು ಪಿಲಾರು ಗ್ರಾಮದಲ್ಲಿದ್ದು ತಾರೀಕು 28-10-43 ಲ್ಲು ಮೃತವಾದ 1-2 ಅರ್ಜಿದಾರರ ತಮ್ಮ 3-4ನೆ ಅರ್ಜಿದಾರರ ಸೋದರಮಾವ ಮೃತ ನಾರ್‍ಯಾಣಸುಬ್ಬಶೆಟ್ರಿಗೆ G. I. P. Railway Bombay ಯಿದರಿಂದ ಸಿಕ್ಕತಕ್ಕ ಬ್ರಾವೇಜು ವ್ಸಲಾತಿಗೆ ವಾರಿಸ ಸರ್ಟಿಫಿಕೇಟುಕೇಳಿ ದಾಕ್ಲುಮಾಡಿದ ಮೇಲ್ಕಂಡ ಅರ್ಜಿಯು ಈ ಕೋರ್ಟಿನಲ್ಲಿ ತಾರೀಕು 30-10-1944ಕ್ಕೆ ಇಟ್ಟದೆ ಆಕ್ಷೇಪವುಳ್ಳವರು ಸದ್ರಿದಿನ ಬೆಳಗ್ಗೆ 11 ಗಂಟೆಗೆ ಸದ್ರಿಕೋರ್ಟಿಗೆ ಸ್ವತಹಾ ಯಾ ವಕೀಲು ದ್ವಾರಾ ಹಾಜರಾಗಿ ಬಿದಹರಿಸತಕ್ಕದ್ದು.

By order of the Court

N. M Adyanthaya,

Advocate for the Petitioners

Camp, Karkala, Dated 3-10-1944

ಬೀಡಿ ಸೇದುವ ಸಂಸ್ಕೃತಿ.

(೨ನೇ ಪುಟದಿಂದ ಮುಂದುವರಿದುದು.)

ಕೋಡಿ ನಮಗೊದಗಿದ ಸಂಕಟ ಪ್ರಸಂಗವನ್ನು ಇದಿರಿನಲ್ಲಿ ಕುಳಿತ ಭಕ್ತನು ಕೂಡಲೇ ಕಂಡು ಹಿಡಿಯುವನು. ನಿತ್ಯದ ಪರೋಪಕಾರ ವೃತ್ತಿಗನುಸಾರವಾಗಿ ಆ ಗೃಹಸ್ಥನು ತನ್ನ ಬೆಂಕಿಪೆಟ್ಟಿಗೆಯನ್ನು ನಮಗೆ ಕೊಡಬೇಕೆಂದು ಹುಡುಕಹತ್ತುವನು ಆದು ಆತನಿಗೆ ಸಿಗುವದಿಲ್ಲ. ಸಿಕ್ಕರೂ ಅದರಲ್ಲಿ ಕಡ್ಡಿಗಳಿರುವದಿಲ್ಲವೆಂದು ತಿಳಿಯೋಣ. ಇಂಥ ಬಿಕ್ಕಟ್ಟಿನ ಪ್ರಸಂಗದಲ್ಲಿ ನಮ್ಮನ್ನು ಏಳ್ಳಷ್ಟೂ ಎದೆಗುಂದಿಸದೆ, ಯಾರ ಬಾಯಲ್ಲಿ ಹೊತ್ತಿದ ಬೀಡಿ ಇರುವದೋ ಆ ಗೃಹಸ್ಥನು ಪ್ರೇಮದಿಂದ ಬಾಗಿ ಮೋರೆ ಮುಂದಕ್ಕೆ ಮಾಡುವನು. ಆ ವೇಳೆಗೆ ನಾವಾದರೂ ನಮ್ಮ ಬಾಯಲ್ಲಿ ಹೊತ್ತದಿದ್ದ ಬೀಡಿ ಇಟ್ಟುಕೊಂಡು ಅತ್ಯಂತ ಆದರದಿಂದ ಬಾಗುವೆವು. ಈ ಕ್ರಿಯೆಯಲ್ಲಿ ಎರಡು ಬೀಡಿಗಳ ತಲೆಗಳು ಒಂದಾಗುವವು. ಮತ್ತು ಇಬ್ಬರೂ ಒಂದೇ ವೇಳೆಗೆ ಶ್ವಾಸ ಜಗ್ಗಿದರೆ ೫-೬ ಸೇಕಂದಿನಲ್ಲಿ ನಿರ್ಜೀವ ಬೀಡಿ ಸಜೀವವಾಗುವದು. ಮುಂದೆ ಎರಡೂ ಬಾಯಿಗಳೊಳಗಿಂದ ಹೊಗೆಯು ಹಾಯಹತ್ತುವದು. ಈ ರೀತಿ ಬೀಡಿ ಹೊತ್ತಿಸುವದಕ್ಕೆ ನಾವು 'ಬೀಡಿ ಚುಂಬನ' ವೆಂದು ಕರೆಯುವೆವು. ಇದರಲ್ಲೇನು ತಪ್ಪು?

ಇನ್ನು, ಬೇಕಾದಂಥ ಚಲೋ ಪದಾರ್ಥಕ್ಕೂ ಕೂಡ ಹೆಸರಿಡುವಂಥ ಸರ್ವಜ್ಞರು ಜಗತ್ತಿನಲ್ಲನೇಕರುಂಟು. ಇಂಥ ಜನರು ಬೀಡಿ ಸೇದುವವರ ಕಡೆಗೆ ವಕ್ರ ದೃಷ್ಟಿಯನ್ನು ಬೀರುವರು. ಅವರು ಯಾವಾಗಲೂ ಮಾಡುವ ತಕರಾರುಗಳೆಂದರೆ ಬೀಡಿ ಸೇದುವವನು ಬೇಕಾದಾಗ ಬೇಕಾದಲ್ಲಿ ಕೆಮ್ಮುವನು. ಉಗುಳುವನು. ಹೊಗೆ ಬಿಡುವನು ಮತ್ತು ಕನ್ನ ಈ ಸೊಗಡುತನದಿಂದ ಎರಡನೆಯವರಿಗೆ ತೊಂದರೆಯಾಗಬಹುದೆಂಬ ಕಲ್ಪನೆಯೂ ಕೂಡ ಅವನಿಗಿರುವದಿಲ್ಲ. ಇಷ್ಟು, ಸಂಸ್ಕೃತಿಹೀನನಾಗುತ್ತಾನೆ. ಬೀಡಿ ಸೇದುವ ಭಕ್ತರು ಅಲ್ಲಲ್ಲಿ ಚೂದಿಚಟಕಿ ಹೊಡೆಯುತ್ತ, ಬೇಕಾದಲ್ಲಿ ಹತ್ತರವಿದ್ದ ಬೀಡಿ ಕಡ್ಡಿಗಳನ್ನು ಒಗೆಯುತ್ತ, ಮತ್ತು ಬಾಯೊಳಗಿನ ಹೊಗೆಯಿಂದ ಸುತ್ತಮುತ್ತಲಿನ ಹವೆಯನ್ನು ಕೆಡಿಸುತ್ತ, ಜನರ ಸೋಯಿ ಗೈರಸೋಯಿಗಳನ್ನು ಲಕ್ಷ್ಯಕ್ಕೆ ತಾರದೆ ಜಗತ್ತಿನಲ್ಲಿ ಅಲೆಯುತ್ತಾರೆ. ಇದು ಅವರ ಮೇಲೆ ಹೊರಿಸುವ ಮತ್ತೊಂದು ಆರೋಪ. ಆದರೆ ನಾವು ಮೇಲೆ ಹೇಳಿದಂತೆ ಈ ಕಲಿಯುಗದಲ್ಲಿ ದೇವರಿಗೂ ಕೂಡ ಹೆಸರಿಡುವ ಜನರಿದ್ದಾರೆ. ಅಂದ ಮೇಲೆ ಬೀಡಿ ಸೇದುವವರ ಮೇಲೆ ಪುಷ್ಪಗಳೇ ಬಿದ್ದರೆ ಇದರಲ್ಲಿ ಆಶ್ಚರ್ಯವೇನು? ಒಂದು ವೇಳೆ ಬೆಂಕಿ ಕಡ್ಡಿಯು ಹತ್ತರವಿದ್ದರೆ ಅದರ ಉಪಯೋಗ ಮಾಡಿ ಪಂಚ ಪಕ್ವಾನ್ನಗಳ ಭೋಜನವನ್ನು ತಯಾರಿಸಬಹುದು. ಅದರಂತೆ ಅದೇ ಕಡ್ಡಿಯಿಂದ ಮೃತ ದೇಹಕ್ಕೆ ಅಗ್ನಿ ಸಂಸ್ಕಾರವನ್ನು ಮಾಡಬಹುದು, ಅಥವಾ ಒಬ್ಬರ ಮನೆಗೆ ಹಚ್ಚುಲಿಕ್ಕೂ ಬರುವದು. ಇಷ್ಟರ ಮೇಲಿಂದಲೇ ನಾವು ಪದಾರ್ಥ ಯಾವದೇ ಇದ್ದರೂ ಅದನ್ನು ಉಪಯೋಗ ಮಾಡುವವನ ಮೇಲೆ ಅದು ಚಲೋ ಅಥವಾ ಕೆಟ್ಟ ಎಂಬುದು ಅವಲಂಬಿಸಿರುತ್ತದೆ. ಎಂದು ನಾವು ಉಪದೇಶ ಮಾಡಬಹುದು. ಇದರ ಮೇಲಿಂದ ಹಿಂದು-ಮುಂದಿನ ವಿಚಾರ ಮಾಡದೆ ಬೀಡಿ ಸಂಸ್ಕೃತಿಗೆ ಹೆಸರಿಡುವದು ಮೂರ್ಖತನವಾಗುವದೆಂದು ಪ್ರತಿಯೊಬ್ಬನು ಲಕ್ಷ್ಯದಲ್ಲಿಡತಕ್ಕದ್ದು!!!

(ಕೆ. ವೈ.)



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಂಜಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ನೋಟೀಸು.

ಕಾರ್ಕಳ ತಾಲೂಕು ಪಾಲಡ್ಕ ಗ್ರಾಮದ ಚಂಕರಬೆಟ್ಟು ಎಂಬಲ್ಲಿರುವ ಪರಮೇಶ್ವರಿ ಸೆಟ್ಟಿ ಮಗಳು ಯಮುನ ಸೆಟ್ಟಿ 1 ಮತ್ತು ಇವಳ ಅಕ್ಕ ಮೃತ ಗೋಪಿ ಸೆಟ್ಟಿ ಮಗ ತಿಮ್ಮಯ ಸೆಟ್ಟಿ ಕೂಡಾ 2 ಜನರು ಈ ಮೂಲಕ ಸರ್ವಜನರಿಗೆ ತಿಳಿಸುವದೇನೆಂದರೆ—

ನಮ್ಮ ಅವಿಭಕ್ತ ಕುಟುಂಬದಲ್ಲಿ ಈಗ ಸುಮಾರು 12 ವರ್ಷಗಳ ಹಿಂದೆ ಆಗಿರುವ ಬಾಯಿದರೆ ವಿಚಾರಗಳ ಮೇರೆಗೆ ನಮ್ಮ ಕುಟುಂಬದಲ್ಲಿ ಅತೀ ಹಿರಿಯನಾಗಿರುವ 1 ನೇಯವಳ ಅಣ್ಣ 2ನೇಯವನ ಮಾವ ಪಕೀರ ಸೆಟ್ಟಿಯು ಬರೀ ಜೀವನಾಂಶದಾರಿಯಾಗಿರುತ್ತಾನೆ. ಆತ ಅಲ್ಲಾಗ್ಯುತ್ತ ಕುಟುಂಬದ ಮೆನೆಜರನಾಗಿರುವದೇ ಇಲ್ಲ, ವ, ಕುಟುಂಬದ ಯಾವತರದ ಆಡಳ್ತೆಯನ್ನು ನೋಡಿಬಂದದ್ದಿಲ್ಲ. ನಾವೆ ತೀವೇ ಜೆತ್ತು ಕುಟುಂಬದ ಆಡಳ್ತೆ ನಡ್ಸಿ ಬರುತ್ತೇವೆ. ಆತ ಸದ್ರಿ 12 ವರ್ಷಗಳಿಗಿಂತಲೂ ಮೊದಲಾರಭ್ಯ ತನ್ನ ಹೆಂಡ್ತಿ ಮಗಳ ಒಟ್ಟಿಗೇನೇ ಕಾಯಂ ಆಗಿ ಜೀವಿಸಿಬರುತ್ತಾನೆ ಕುಟುಂಬದ ಮನೆಯಲ್ಲಿ ಜೀವಿಸಿಬರುವದು ಕೂಡಾಯಿಲ್ಲ. ಹೀಗಿರುತ್ತ ನಾವೆ ಕೂಡಾ ಕುಟುಂಬದ ಇತರ ಮೆಂಬರರು ಆತನನ್ನು ಬಿಟ್ಟೇ ಕುಟುಂಬಾರ್ಥದ ಗರ್ಜಿಗೆ ಕುಟುಂಬದ ಆಸ್ತಿಗಳನ್ನು ಆಡವು ಮಾಡಿಕೊಟ್ಟಿರುವ ಕಾರಣದಿಂದ ಸದ್ರಿ ಫಕೀರ ಸೆಟ್ಟಿಯು ಕುಟುಂಬದ ಅಹಿತ ಚಿಂತನೆಯಲ್ಲಿರುವ ಸಬ್ಬೆರ ಪಂಚಾದಿ ಮಹಾಲಿಂಗ ಸೆಟ್ಟಿ ಮತ್ತು ಕೆಂಬ್ಳಕೋಡಿ ಹೊಸ್ಮನೆ ಶೀನ ಸೆಟ್ಟಿಯರ ದುಬೋಧನೆಗೆ ವ, ವಳಸಂಚಿನಿಂದ ತಾನು ಕುಟುಂಬದಲ್ಲಿ ಹಿರಿಯನಾದ ನೆಂಬಸಬಬಿನಿಂದ ಕುಟುಂಬಾರ್ಥ ಗರ್ಜಿಗೆಂತ ಸುಳ್ಳು ಸಾಲಗಳನ್ನು ಕಲ್ಪಿಸಿರುತ್ತಾರು ವದಾಗಿ ಇತ್ತಲಾಗೆ ನಮಗೆ ತಿಳಿದು ಬಂದದೆ. ಸದ್ರಿ ಮಹಾಲಿಂಗಸೆಟ್ರ ಹೆಸ್ರಲ್ಲಿ ಕಲ್ಪಿಸಿರುವ ಕಾರ್ಕಳ ಡಿ| ಮು| ಕೋರ್ಟಿನ S. C. No 366/43ನೇ ಡಿಕ್ರಿಯ ಸಂಗ್ತಿ ಯಿತ್ತಲಾಗೆ ತಿಳಿದು ಬಂದದ್ದರಿಂದ ಅದರ ಬಾಬ್ತು ಅಗತ್ಯವುಳ್ಳ ನೈವೃತ್ತಿಕೇಳಿ ದಾವೆಯಾಕ್ಷೆ ಮಾಡುತ್ತೇವೆ, ಆದುದರಿಂದ ಸರ್ವರಿಗೂ ಈ ಮೂಲಕ ತಿಳಿಸುವದೇನೆಂದರೆ—

ಸದ್ರಿ ಪಕೀರ ಸೆಟ್ಟಿಯಿಂದ ಬರ್ಸಿಕೊಂಡ ಯಾವ ರಿಕಾರ್ಡುಗಳು ಯಾ ಆತ ಮಾಡಿರುವ ಯಾವ ಸಾಲಗಳು ನಮ್ಮ ಅವಿಭಕ್ತ ಕುಟುಂಬದ ಮೇಲೆ ಬಾಧಕಕ್ಕೊಳ್ಳವಲ್ಲ ನಮ್ಮನ್ನು ಕಕ್ಷಿಮಾಡದೆ ಅವನೊಬ್ಬನನ್ನೆ ಕಕ್ಷಿಮಾಡಿ ಪಡದ ವ ಪಡೆಯಬಹುದಾದ ಯಾವ ಡಿಕ್ರಿಯೂ ನಮ್ಮ ಕುಟುಂಬದ ಮೇಲೆ ಬಾಧಕಕ್ಕೊಳ್ಳವಲ್ಲವೆಂಬುದನ್ನು ಈ ಮೂಲಕ ತಿಳಿಸುತ್ತೇವೆ.

● ಯಿ ಎಡಕೈ ಹೆಬ್ಬೆಟ್ಟು ಮುದ್ರೆ ಸಹ ಯಮುನ ಸೆಟ್ಟಿ ರುಜು.

● ಯಿ ಎಡಕೈ ಹೆಬ್ಬೆಟ್ಟು ಮುದ್ರೆ ಸಹ ತಿಮ್ಮ ಸೆಟ್ಟಿ ರುಜು.

ತಾ 26 9-44 }
ಪಾಲಡ್ಕಗ್ರಾಮ }

ನಿಮಗೆ ಯಾವುದು ಅವಶ್ಯಕ?



ರೈಲ್ವೆಯವರಿಗೆ ಈಗ ಕೆಲಸವು ಮಿತಿಮೀರುವದರಿಂದ, ಅವರು ಜನರಿಗೆ ಬೇಕಾದ ಸಾಮಗ್ರಿಗಳನ್ನು ಒದಗಿಸಿ ಕೊಡುವದು ಮತ್ತು ಯುದ್ಧ್ ... ದ್ದಹಾಗೆ ಜನರಿಗೆ ಪ್ರಯಾಣದ ಸೌಕರ್ಯವನ್ನು ಒದಗಿಸಿಕೊಡುವದು ಇವೆರಡರ ಭರವಸೆಯನ್ನು ಕೊಡುವದು ಅವರಿಗೆ ಸಾಧ್ಯವಿಲ್ಲ.

ಜನರು ಇವೆರಡರೊಳಗೆ ಯಾವುದಾದರೊಂದನ್ನು ಪಡೆಯಬಹುದೇ ಹೊರತು ಎರಡನ್ನು ಪಡೆಯಲಾರರು. ಆದರೆ, ಆಹಾರಪದಾರ್ಥ, ... ಮುಂತಾದ ಉಪಯುಕ್ತ ಸಾಮಗ್ರಿಗಳನ್ನು ಒದಗಿಸಿಕೊಡುವದು, ಪ್ರಯಾಣದ ಸೌಕ ... ವನ್ನು ... ಕೊಡುವದಕ್ಕಿಂತಲೂ ಮುಖ್ಯವಾದದ್ದೆಂಬುದು ಎಲ್ಲರಿಗೂ ತಿಳಿದ ವಿಷಯವೆ. ನೀವು ಎಂದಾದರೂ ಆಹಾರ ಸಾಮಗ್ರಿಗಳು ಕೊರತೆಯಿರುವ ಪ್ರದೇಶದಲ್ಲಿ ಇದ್ದಿದ್ದರೆ, ಆ ಪ್ರದೇಶಕ್ಕೆ ಹಸಿದಿರುವ ಜನರಿಗಾಗಿ ಸಾವಿರಾರು ಅತ್ಯಾವಶ್ಯಕವಾದ ಆಹಾರಪದಾರ್ಥಗಳಿಂದ ತುಂಬಿ ಬರುತ್ತಿರುವ ರೈಲುಗಾಡಿಗಳು ಅಲ್ಲಿಯ ಜನರಿಗೆ ಉಂಟು ಮಾಡತಕ್ಕ ಪರಿಣಾಮವು ಏನೆಂಬುದು ನಿಮ್ಮ ಅನುಭವಕ್ಕೆ ಬರುವದು.

ಹೌದು! ಜನರಿಗೆ ಪ್ರಯಾಣವು ಅಷ್ಟು ಮುಖ್ಯವಾದದಲ್ಲ. ಅದರಿಂದಲೇ ಆಹಾರ ಪದಾರ್ಥಗಳಿಗಾಗಿ ಪ್ಯಾಸೆಂಜರ್ ಗಾಡಿಗಳು ಕಡಮೆಯಾಗಿರುತ್ತವೆ ಈ ಕಾರಣದಿಂದಲೇ ಈಗಿನ ಪ್ರಯಾಣದಲ್ಲಿ ಅಷ್ಟು ಪ್ರಯಾಸ ಮತ್ತು ತೊಂದರೆ, ಆದು ಕಾರಣ ನೀವು ರೈಲ್ವೆಯವರಿಗೆ ಮುಖ್ಯತರವಾದ ಕೆಲಸದಲ್ಲಿ ನೆರವಾಗಬಯಸಿದ್ದರೆ, ನೀವು ನಿಮ್ಮ ಮನೆಗಳಲ್ಲಿಯೇ ಉಳಿಯಬೇಕು.

ಕಡಿಮೆಯಾಗಿ ಪ್ರಯಾಣಮಾಡಿರಿ

AAA 682 KN

The Pangal Nayak Bank Limited.

(Incorporated in 1920)

Registered Office Court Road, UDIPI.

Branches at— **Udipi, Mangalore, Katapadi, Kanhangad, Kinnigoli and Nileshwar,** South Canara District

Discounting of demand and short term negotiable instruments for approved parties, granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms, acceptance of Fixed, Current, Savings Bank and Cumulative deposits and every other type of up-to-date Banking service is at the disposal of all the sections of the discreet public.

For business proper please enquire at any one of our Offices.

15th April 1944.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಘೋತರಕ್ಕೆ ಹಳದೀ ಹಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಚುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿ‌ಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. **ಪೋಸ್ಟ ಚಾರ್ಜ ೮ ಆಣೆ.**

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ

Ayurveda Oushadalaya. GADAG.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ **ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ**

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ.ಕ.

ಉಡುಪಿ ಸ್ಟಾಕಿಸ್ಟರು.—ಡಾ. ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ: ಆರ್. ಎಸ್: ಶೆಣೈ, ರಥಬೀದಿ; ಡಾ. ಪಿ. ಜಿ. ಆಚಾರ್ಯ್ಸ್ ಫಾರ್ಮಸಿ, ಡಾ. ಕೆ. ಶೇಷಗಿರಿ ಪೈ, L. I. M.; ಡಾ. ವೆಂಕಟರಾವ್, ಕೊಡವೂರ್; ನವಭಾರತ ಬುಕ್ ಡಿಪೊ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹಸ್ಥಿತಿಯನ್ನು ಸಿದ್ಧಗೊಳಿಸಿ ತಯಾರಿಸಲ್ಪಟ್ಟ **ಅಮೋಘವಾದ ಮಧುರದ್ರವ ರಸಾಯನ.** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

೮ ಔನ್ಸಿನ ೩ಬಾಟ್ಲಿಗಳು. ಹೆಚ್ಚು ಕಡಿಮೆ ೪೮ದಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೫ **ಕೊಡಿಯಾಲಬೈಲು, ದ.ಕ**

— ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ **ಖಂಡಿತವಾಗಿ** ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜ ೧೦ಆಣೆ.

ಮಾಲಕರು:—**ಹಾಲಪ್ಪಾ ಫಕೀರಪ್ಪಾ ದಾವಣಗೇರಿ**

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರ:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಕುಂಬಾರನಾಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್ಸ್. ಆರ್. ಎಲ್. ಕವಲದಾಸಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಿಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು. ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ಯಾಲೆಸಂಗ್ರಿ ಬರದಕ್ಕಿ ರೋಗಕ್ಕೆ ತಕ್ಕದಾದ ಔಷಧಿ ರವಾನ್ಸಿಬಹುದು, ಉಡುಪಿ ಏಜಂಟರು: —ನವಭಾರತ ಬುಕ್ ಡಿಪೊ

ನೋಡಿದರೆ ಸಾಕು! ಓದದೆ ಬಿಡಲಾರಿರಿ!!

ಮುಗಿದಾಗ ಮುಗಿದು ಹೋಯಿತಲ್ಲಾ ಎನಿಸುವ, ಕೊಡಗಿದಾಗ ಹೇಗೆ ಮುಗಿಯುವುದಿದು ಎಂದು ಕೌತುಕಪಡಿಸುವ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ. **ಬೆಲೆ ೦—೧೦—೦**

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ತೊಳೆಸಿ ಹರಿಯುವ ಮಾತು.

ಪ್ರೇಮಪ್ರವಾಹವು ಹೇಗೆ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮಪ್ರವಾಹ

ಸ್ವಾರಸ್ಯವಾದ ೫ ಕತೆಗಳ ಸಂಗ್ರಹವನ್ನು ಓದಿನೋಡಿ. ೦-೬—೦

ಬಹಿರಂಗವಾಗಿ ಅಲ್ಲವಾದರೂ ಅಂತರಂಗವಾಗಿ ನೋಡತಕ್ಕ

ಆರ್ಟ್ ಚಿತ್ರಗಳು

ಹಲವಾರು ಸುಂದರಿಯರ ನೈಜಚಿತ್ರಗಳ ಕಟ್ಟು. ಬೆಲೆ ೦—೬—೦

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಳುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ. ೧—೮—೦

ಎಲ್ಲಕ್ಕೂ ಟ. ಖ. ಪ್ರತ್ಯೇಕ. ಕೆಲವೇ ಪ್ರತಿಗಳು ಉಳಿದಿವೆ.

ಬರೆಯಿರಿ:— **ಅಂತರಂಗ ಕಾರ್ಯಾಲಯ, ಉಡುಪಿ**

(ಉಡುಪಿಯ ನವಭಾರತ ಪುಸ್ತಕ ಭಂಡಾರದಲ್ಲಿಯೂ ದೊರೆಯುತ್ತವೆ.)

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd. No. M 3618.

ವಾರ್ಷಿಕ ಚಂದಾ ರೂ 4—8—0 ಬಿಡಿ ಸಂಚಿಕೆ 0—1—6

Estd. 1921 ಸ್ಥಾಪನೆ.

NAVAYUGA

ನವಯುಗ

ವರ್ಷ ೨೪ ವಾರ ೬ | ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. Founder SRI A. K. SHETTY. | Vol. 24 No. 6

ಉಡುಪಿ ● 12—10—1944 ● ಮಂಗಳೂರು.

ದಿ ಜುಪಿಟರ್

ಜನರಲ್ ಇನ್ಶೂರೆನ್ಸ್ ಕಂಪೆನಿ, ಲಿ, ಬೊಂಬಾಯಿ

ವಿಮೆಯಿಳಿಸ ಬೇಕೆ? ಏಜಂಟರಾಗುವಿರಾ!

—ಹಾಗಾದರೆ ಕೂಡಲೇ—

ಪಿ. ವಿ. ನಾಣಯ್ಯ, ಉಡುಪಿ. ದಕ್ಷಿಣ ಕನ್ನಡದ ಚೀಫ್ ಏಜೆಂಟ್.

—ಇವರಿಗೆ ಬರೆಯಿರಿ—

ಕೋಟಿಗೆ ಮಿಕ್ಕಿ ವ್ಯವಹಾರ! ಈ ವರುಷವೇ ರಜತೋತ್ಸವ!

The Jupiter General Insurance Company Ltd.

ನಮ್ಮ ಕೆಲವು ಏಜಂಟರುಗಳು

1 ಕೆ ವಿ ಹನಗೋಡಿಮಠ್, ರಾಣಿಬೆನ್ನೂರು 2 ಶಂಕರನಾರಾಯಣಮಯ್ಯ, ಪುತ್ತೂರು 3 ಭಟ್ಟ ಬ್ರದರ್ಸ್. ಕಾಸರಗೋಡು, 4. ವೆಂಕಟೇಶಯ್ಯ ಬ್ರದರ್ಸ್. ಶಿವಮೊಗ್ಗಾ 5 ಎಚ್ ಗಣೇಶಾಚಾರ್ಯ, ಸೋಮೇಶ್ವರ, 6. ಕೆ. ಅಚ್ಯುತಪ್ಪ, ಕಾರ್ಕಳ 7. ಪಿ ಡಿ. ಶೆಟ್ಟಿ, ಸಕಲೇಶಪುರ 8 ಜಿ ಎನ್. ಚಂದ್ರಶೇಖರ, ಸಿದ್ಧಾಪುರ 9. ಜಿ. ಆರ್. ಮಹಾರಾಜಶೆಟ್ಟಿ, ಹಾವೇರಿ 10. ಎಸ್ ಎಸ್. ರಬ್ಬರ್ ಕಂಪೆನಿ, ಚಿಕ್ಕಮಗಳೂರು 11. ನಾರಾಯಣ ಎಚ್. ದೇಶಪಾಂಡೆ, ಹೋಲಾಪುರ.

Transact with

The Vijaya Bank Ltd.

H. O. MANGALORE

Branches all over the District and in Bombay city,

for all kinds of Banking business

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು.

ಜಿಲ್ಲೆಯ ಎಲ್ಲಾ ಕಡೆಗಳಲ್ಲಿ ಮತ್ತು ಮುಂಬಾಯಿ ನಗರದಲ್ಲಿ ನಮ್ಮ ಶಾಖೆಗಳು ಎಲ್ಲಾ ತರದ ಬೇಂಕಿಂಗ್ ವ್ಯವಹಾರಗಳು ನಡೆಸಲ್ಪಡುವುವು.

ಮುಟ್ಟುಗುಳಿಗೆ

ಹಲವಂಗಳಿಂದ ಕಟ್ಟಿಗಟ್ಟಿದ ಕಷ್ಟದ ಗರ್ಭಧಾರಣ ಅಥವಾ ಇನ್ನಾವ ಕಾರಣದಿಂದಲೂ 'ಕುಮಾರಿ' (Govt Regd) ಸ್ತ್ರೀಯರು ಶರೀರದ ಸಿಂಧುಸಂತತಿಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಸರಿಯಾಗುವುದು; ಬೇಕಾದಾಗ ಗರ್ಭಧಾರಣವನ್ನು ನಿಲ್ಲಿಸುವುದು; ಸಾವಿರಾರು ಜನ ತೃಪ್ತರಾಗಿದ್ದಾರೆ! ಬೆಲೆ ರೂ 3|- ಶ್ರೀಮಂತ ಕೇಸುಗಳಿಗೆ ರೂ.5, (ವಿ.ಪಿ 12 ಆಣೆ ಅಧಿಕ) Mrs P. DEVEE, 1 D. S. (S) Tollygunge, Calcutta. ಸ್ಪೆಶಲ್ ಪಾಪ್ಯುಲರ್ ಸ್ಟೋರ್ಸ್, ಮಂಗಳೂರು

CHAMPAE'S

Snow & Castrex

Sole Distributers for (India.)

Sukhananda Stores

Santhekatte, UDIPI, S K.

Inferior Parental Longevity-

This has a correlation to the expectation of life of the offspring.

Therefore a judicious selection of marriage partners must go with better health and sanitation, etc. to improve the expectation of life of the generation to come.

THE CANARA MUTUAL ASSURANCE CO., LTD.,

UDIPI (S India)

ENGLISH MADE EASY

ಇಂಗ್ಲಿಷ್ ಏನೂ ತಿಳಿಯದವರು 'ಸುಲಭದಲ್ಲಿ ಇಂಗ್ಲಿಷ್' ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೇ ಕಲಿತುಕೊಳ್ಳಬಹುದು

ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚನ್ನಾಗಿ ಕಲಿತುಕೊಳ್ಳಬಹುದು

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ

ಬೆಲೆ ಬರೇ ರೂ. 1—4—0 ರೂ 1—8—0ನ್ನು ಮನಿಯಾರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತೆ.

ನವಭಾರತ ಪುಸ್ತಕ ಭಂಡಾರ,

ರಿಜಿಸ್ಟರ್ಡ್ ಪಬ್ಲಿಷರ್ಸ್ ಎಂಡ್ ಬುಕ್ ಸೆಲ್ಲರ್ಸ್,

ಉಡುಪಿ, ದ, ಕ

ನಮ್ಮಲ್ಲಿ ಸಿಗುವ ಪುಸ್ತಕಗಳ ಕೆಟಲಾಗಿಗೆ 0 2 0 ಸ್ಟಾಂಪಿನೊಂದಿಗೆ ಬರೆಯಿರಿ.

CO-OPERATION - - - -

Life Assurance is the business based on the idea of mutual co-operation. By diverting a small portion of one's earning for paying premiums, we co-operate for the good of the family and safeguard the education of children.

Let us assist you in taking out a Policy under the plan best suited to you. Write now to:—

KOCHIKAR BROTHERS LTD.

Chief Agents for South India

THE BOMBAY LIFE ASSCE. CO., LTD.

(Estd 1908)

The "Bombay Life" Bldg., UDIPI S K.

Offices and Agencies throughout South India

ಅಂತರಂಗ

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6

REGD

ಅಮೃತಾಂಜನ ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಪಕ್ಷವಾತ, ನೋವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಔಷಧ. ಜಗತ್ಪ್ರಸಿದ್ಧ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್.

ಮದರಾಸು

ಬೊಂಬಾಯಿ ಮತ್ತು ಕಲ್ಕತ್ತಾ.

ದಿ ಮುಲ್ಕಿ ಬೇಂಕ್,

ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 1. ವರ್ಷಗಳಿಂದ ಡಿಪ್ರೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಜನರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,

Moolky, S K.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಮೂರನೇ ಸಂಪುಟಾರಂಭವಾಗಿದೆ ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ

ವಾರ್ಷಿಕ ಚಂದಾ ರೂ 1—8—0 ಮಾತ್ರ

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

Decorate your home with

Life-like Oil Painting

of those dear and near to you

M. S. Shirale,

MODERN STUDIO,

UDIPI.

ತಾರುಣ್ಯ

ಕೆಮ್ಮು, ಪಿತ್ಥ ಸ್ತಂಭನೆ ಮೊದಲಾದ ರೋಗಗಳಲ್ಲಿ ಪರಮಾನಂದವನ್ನುಂಟುಮಾಡಲು ರಮಣೀ ವಿಲಾಸಿನಿ ಅತ್ಯುತ್ತಮ ಔಷಧಿ

ಡಬ್ಬಿ 1ಕ್ಕೆ ರೂ. 1—4—0

ಮದನಮಂಜರಿ ಫಾರ್ಮಸಿ,

184 ಚೈನಾ ಬಜಾರ್ ರೋಡ್, ಮದ್ರಾಸು.

ಪುತ್ತೂರು ಏಜಂಟರು, ಶ್ರೀ ಫಾರ್ಮಸಿ

ವಿಶ್ವಮಾನ್ಯವಿಭೂತಿ ಮಹಾತ್ಮಾಗಾಂಧಿ.

❖

ಮಹಾತ್ಮಾ ಗಾಂಧಿಯವರ ಎಪ್ಪತ್ತೈದನೆಯ ಜನ್ಮದಿನೋತ್ಸವವನ್ನು ಕಳೆದ ತಾ ೨ರಂದು ಜಗತ್ತೆಲ್ಲ ಆಚರಿಸಿ ಇನ್ನೂ ಇಂತಹ ಎಷ್ಟೋ ಜನ್ಮದಿನೋತ್ಸವಗಳು ಬರಲೆಂದು ಬಯಸಿತು. ಜಗತ್ತಿನ ಬೇರೆ ಬೇರೆ ಯಾವ ವ್ಯಕ್ತಿಯ ಜನ್ಮ ದಿನವಾಗಲಿ ಇಷ್ಟು ವ್ಯಾಪಕವಾಗಿ ಆತ್ಮಸಂತೋಷದಿಂದ ಆಚರಿಸಲ್ಪಟ್ಟಿದು ಇಲ್ಲ. ಅವರು ಕೇವಲ ಭಾರತದ ಹಿತೈಷಿಗಳಾಗಿಂದೆ ಸಮಗ್ರ ಜಗತ್ತಿನ ತುಷ್ಟಿಪುಷ್ಟಿಗಳಿಗಾಗಿ ಜೀವನವನ್ನು ಅರ್ಪಿಸಿರುವುದರಿಂದಲೇ ಅವರಿಗೆ ಈ ಜಗದ್ವಂದ್ಯತೆ ಬಂದಿದೆ. ಮಾನವಕೋಟಿಯೇ ಅವರ ಕುಟುಂಬ. ಅದರ ಹಿತವನ್ನು ಸತ್ಯ ಅಹಿಂಸೆಗಳ ಸಾಧನದಿಂದ ಹೊಂದಬೇಕೆಂಬ ತತ್ವವನ್ನು ನುಡಿಯಲ್ಲಿ ಮಾತ್ರವಲ್ಲದೆ ತನ್ನ ನಿತ್ಯಜೀವನದ ನಡೆಯಲ್ಲಿ ಜಗತ್ತಿಗೆ ತೋರಿಸಿಕೊಟ್ಟ ಸಂಪೂರ್ಣ ಪುರುಷ ಮಹಾತ್ಮಾಗಾಂಧಿ. ಅವರ ತತ್ವವು ತ್ರಿಕಾಲಾಬಾಧಿತವಾಗಿ ಉಳಿಯುವಂತಹುದು. ಅವರ ಕೃತಿಗಳು ಜಗತ್ತಿನ ಇತಿಹಾಸದಲ್ಲಿ ಚಿರಸ್ಮರಣೀಯವಾಗಿ ಉಳಿಯುವಂತಹವು. ಚೀನಿಯರು ಜೀವಂತ ಬುದ್ಧನೆನ್ನುವ, ಕ್ರಿಸ್ತರು ಕ್ರಿಸ್ತನ ಪುನರಾವತಾರ ಎನ್ನುವ, ಹಿಂದೂಗಳು ರಾಮರಾಜ್ಯ ಸ್ಥಾಪನಾಚಾರ್ಯನೆನ್ನುವ ಮಹಾಮಹಿಮಾವಂತ ಮಹಾತ್ಮಾ ಗಾಂಧಿ.

ಇವರ ತತ್ವಗಳೇನು? ಇವರು ಹಿಂದೂಸ್ಥಾನಕ್ಕೆ ಹಾಗೂ ಸಮಗ್ರ ಜಗತ್ತಿಗೆ ಮಾಡುತ್ತಿರುವ ಸೇವೆಯೇನು? ಎಂಬುದನ್ನು ಇಂತಹ ಪುಣ್ಯದಿನದಲ್ಲಿ ಸ್ಮರಿಸಿಕೊಳ್ಳಬೇಕು. ಅವರ ತತ್ವಗಳು ಮಾನವಕೋಟಿಯ ಉದ್ಧಾರಕ್ಕೆ ಅಮೋಘವಾದ ಸಾಧನಗಳಾಗಿವೆ. ದುರ್ಬಲರು, ದೀನರು ಹಾಗೂ ದರಿದ್ರರು ತಮ್ಮ ಮಾನಗೌರವ ಅಸ್ತಿತ್ವಜೀವನಗಳನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಾಳಿಬೆಳಗಲು ಸತ್ಯ ಅಹಿಂಸೆಯ ಮಾರ್ಗವೇ ಉತ್ಕೃಷ್ಟವಾದುದೆಂದು ಅವರ ಉದ್ಘೋಷಣೆ. ಹಿಂಸೆಯನ್ನು ಅನ್ಯಾಯವಾದ ನಿರ್ಬಂಧಗಳನ್ನು ಪ್ರತಿಭಟಣೆಯಿಲ್ಲದೆ ಅಹಿಂಸಾತ್ಮಕ ಹಾಗೂ ಸತ್ಯಬದ್ಧವಾದ ಹಾದಿಯಿಂದ ಗೆಲ್ಲಲಾಗುತ್ತದೆಂಬುದು ಅವರ ಸಿದ್ಧಾಂತ. ಪಾಶವೀ ಶಕ್ತಿಯು ಅದನ್ನು ಉಗ್ರರೂಪದಿಂದ ನಿಗ್ರಹಿಸಲು ಬಂದರೂ ಅದನ್ನು ಸಾತ್ವಿಕ ಸಹನೆಯಿಂದ ಸಹಿಸಿ ನಿರುಪಯೋಗಗೊಳಿಸಿ ಆ ಶಕ್ತಿಯನ್ನೇ ಮಾನವ ಕ್ಷೇಮಸಾಧಕವಾಗಿ ಪರಿವರ್ತಿಸಲಾಗುತ್ತದೆಂಬುದು ಅವರ ತತ್ವ. ಈ ತತ್ವವನ್ನು ಹಲವು ವೇಳೆ ತಾನೇ ಅಗ್ನಿಪರೀಕ್ಷೆಯಲ್ಲಿಟ್ಟು ಇದು ಅಜೇಯ ಶಕ್ತಿಯುಳ್ಳದೆಂದು ಲೋಕಕ್ಕೆ ತೋರಿಸಿಕೊಟ್ಟಿದ್ದಾರೆ. ಸಮಗ್ರ ಜಗತ್ತಿಗೆ ಹಿತವಾಗಬೇಕು, ಎಲ್ಲರಿಗೂ ಹೊಟ್ಟೆಬಟ್ಟೆ, ಮನೆಮಾರು, ಸಾಮಾಜಿಕ ಸ್ಥಾನಮಾನ, ವ್ಯಕ್ತಿ ವಿಕಾಸಕ್ಕೆ ಸರಿಸಮಾನ ಅವಕಾಶ, ಇವೆಲ್ಲದೊರಕಬೇಕೆಂದು ಹೃತ್ಪೂರ್ವಕ ಬಯಸಿ, ಶ್ರದ್ಧಾಪೂರ್ವಕ ನಡೆನುಡಿಗಳಿಂದ ಅಪೂರ್ವ ಅಪಾರ ತ್ಯಾಗವಮಾಡಿದ ಮಾಡುತ್ತಿರುವ ಅಜರಾಮರ ವ್ಯಕ್ತಿ ಮಹಾತ್ಮಾ ಗಾಂಧಿ. ಈ ಮಹಾ ಪುರುಷನನ್ನು ಅನನ್ಯ ರಾಜಕಾರಣಿಯೆಂದು ತಿಳಿಯುವುದರ ಬದಲಾಗಿ ಮಹಾ ವಿಭೂತಿಯೆಂದು ಭಾವಿಸುವುದರಲ್ಲಿ ಸಮಂಜಸವಿದೆ. ಇವರ ಭಾರತೀಯ ರಾಜಕಾರಣದ ರೀತಿನೀತಿ ಧೋರಣೆಗಳನ್ನು ಟೀಕಿಸುವವರು ಭರತಖಂಡದಲ್ಲಿಯೂ ಹೊರಜಗತ್ತಿನಲ್ಲಿಯೂ ಇದ್ದಾರೆ. ಆದರೆ ಇಂತಹರೂ ಗಾಂಧೀಯವರ ವ್ಯಕ್ತಿತ್ವಕ್ಕೆ, ಶ್ರದ್ಧೆಗೆ, ತ್ಯಾಗಕ್ಕೆ, ನಿಸ್ಪೃಹತೆಗೆ ಪ್ರಾಮಾಣಿಕತೆಗೆ, ಆದರ್ಶಕ್ಕೆ ಮಣಿಯುತ್ತಾರೆ. ಧನ್ಯೆ! ಭಾರತಮಾತೆ, ಇಂತಹ ಸುಪುತ್ರನನ್ನು ಪಡೆದ ಲೋಕವಂದ್ಯೆಯಾದ ನೀನೇ ಧನ್ಯೆ! ಧನ್ಯೆ!! ಧನ್ಯೆ!!!

ನಿಃಸ್ವ

(ಮಹಾತ್ಮಾ ಗಾಂಧಿಯವರಿಗೆ ಒಸೆಯ
ಒಡ್ಡಂತಿಯ ಕಾಣಿಕೆ)

●

ತಟ್ಟಿನ ವಧೀತ ಸುರಲಿಗೆ ನೀಡಿದಂ
ಸುರಿಯ,
ತನ್ನ ನಾಂಸವನಿತ್ತು ಹಿಗನ ಶಿಬಿ
ಕಾದಂ,
ಶಿಬಿಕೇತನಂ ಪದನಸೆರೆದರಂ ಮೊಯ್ಯ
ರಯ,
ನೃಗಶಿಲುವ ಸಾಕೆ ಭರತರ್ಷಿ ಭನಿ
ಯಾದಂ,
ಚರಿಗೆನ್ನೋದಂ ಬುದ್ಧ, ಸುರಿಗಗಾದಂ
ತೇಗ,
ಬೆಂದಳಂ ಘೋಜನ ಜಕೋರೆದಂ
ಕಾಯ—
ನೀಸ್ವನೇನೇಸ್ನೀಗೆ? ನೀಸ್ವನಿಂದೇನಾಗೆ?
ಅಳಿಯ, ನೀಸ್ವನೆ ಪರಾರ್ಥಕೆ ನೋಯಿಯ, ಸಾಯ!
ಇಳೆ ನೋಂದ ಬಾಳು. ನೀಸ್ವಂ ನೋಂದು
ಹೆಬ್ಬಾಳು;
ಬರಡಪಾತನ ನೀವನದ ಸಾವು,
ಕಾಣ!
ನೊಂದು ನೀಸ್ವಂ ಲೋಕ ನುಂದರಿ
ಯುತಿಪೆ, ಹಾಳು
ಗವೆಯನಾತನ ಗೊತ್ತು ಕಡೆಗೊ
ಳಿದೆ ಮಾಣ!
ಇದೋ ನಮಸ್ತ, ಕೆಯ್ಯೊಡ್ಡುತಿದೆ ನಿನ್ನ
ನೀಸ್ವ
ದಿಂದೆನ್ನ ಭಾರತದ ಭಾಗ್ಯ ಸರ್ವಸ್ವ!

ಗೋವಿಂದ ಪೈ.

CHAMPAE'S
Snow & Castrex
(Sole Distributers for (India.)
Sukhananda Stores
Santhekatte, UDIPI, S. K.

ಅಭಯದೇವ ಗಾಂಧಿ!

ಕವಿ: ಶ್ರೀ. ಸ. ಪ. ಗಾಂವಕಾರ, ಬಿ. ಎ.

●

(75ನೇ ಜನ್ಮದಿನೋತ್ಸವ
ತಾ 2 10 1944).

●

ಹಾ ಹಾ ಕಾರವು ದೇಶವಿದೇಶ
ಹಾ ಹಾ ಎಸ್ನಲು ಸರ್ವವು ನಾಶ ॥ಪಲ್ಲ॥

೧

ನ್ಯಾಯಾನೀ ಯುಗ ಸೋಪಾನ ಬಿಡು।
ಜೋಪಾಸನೆಯಲಿ ದಾನವ ಶಾಪ।
ಹಾ ಹಾ ಕಾರವು ದೇಶವಿದೇಶ।
ಹಾ ಹಾ ಎಸ್ನಲು ಸರ್ವವು ನಾಶ।

೨

ನ್ಯಾಯಾಂದ ಸಾಮ್ರಾಜ್ಯದ ಮೋಹ।
ವ್ಯಾಪದ ಸಂರಕ್ಷಕ ಬಲು ಕಾಪು
ಕಾಪಟ್ಯದ ಕಾಯಂಗಳ ತಳಿದು।
ನೇಸಥ್ಯದ ನರಮಾರಿದ ನರದು

೩

ಯುದ್ಧವೆ ಯುದ್ಧವು ಎಂದೆರಡಿಲ್ಲ
ಬುದ್ಧಿ ಪುರಸ್ಸರ ಹೂಡಿದೆ ಮೋಕ್ಷ।
ಯುದ್ಧೋದ್ರೇಕದ ವೇಗಂಗಳ ರಚನೆ।
ಬುದ್ಧಿ ಪುರಸ್ಸರ ಯುದ್ಧದ ರಚನೆ

೪

ಸಾಮ್ರಾಜ್ಯಾಶಾ ಪ್ರೇರಕ ಶಕ್ತಿ।
ಧರ್ಮಾಧರ್ಮ ಧರಿತ್ರಿಯ ತುಡುಕಿ॥
ಘೋರಾಯುಧಗಳ ಗರ್ಜನೆ ಗೈಸಿ।
ಘೋರ ಅನರ್ಥವ ಬರಿಸಿದೆ ಬಯಸಿ॥

೫

ತಾಂಡವ ನೃತ್ಯ ನಭೋಮಂಡಲವು
ಡಾಂಬರ ಬರ್ಬರ ಯಾನ ವಿಮಾನ॥
ಕಂದಂಗಳ ಸುರಂಗಗಳ ನೋಟ।
ಬಂದಿರೆ ಕಲ್ಕಿಯ ಕಾಟವೆ ಕಾಟ

೬

ದಾನವ ಸಂಹಾರಕ ಶಕ್ತಿ।
ಧಾವಿಸಿ ಮೀರಿದ ಯಾಂತ್ರಿಕ ಯುಕ್ತಿ
ಭಸ್ಮೀಕೃತ ಭೂವಲಯದ ಶೇಷ।
ವಿಸ್ಮಯಗೊಳಿಸಿದ ವಿಕೃತಿ ವಿಶೇಷ॥

೭

ಪೃಥಿವಿಯ ವಾಸ್ಯದ ಭೀಕರ ಪರಿಗೆ
ಇತಿಮಿತಿಯಿಲ್ಲದೆ ಜ್ಯೋತಿಮರಿ ನಮಗೆ?
ನುತಿಯುತ ಮಾನವರಿಲ್ಲವೆ ಮಹಿಗೆ?
ಸ್ಥಿತಿಗತಿ ತೋರಿದ ಇದೊ ಇದೊ ಗಾಂ।

೮

ಸತ್ಯಾಗ್ರಹ ಸಂಗ್ರಾಮದ ಸ್ಥಿತಿಗೆ।
ಮಿಥ್ಯಾಚಾರ ಮನೋವ್ಯಥೆಯಿಲ್ಲ॥
ಸತ್ಯ ಪರಾಯಣ ಕಾರಣ ಪುರುಷ॥
ಸತ್ಯಾಗ್ರಹದಲಿ ಕಾಣುವ ಹರುಷ

೯

ಭೂಮಂಡಲ ಮಂಡನ ಭಾರತಿಯು
ಯೋಮೋಜ್ಜೀವಿತಮಹಿಮುನಿ ಉಷೆಯ
ತಾಮಸ ಸೃಷ್ಟಿಯ ಕೊಲ್ಲುವ ಶಕುತಿ
ಭಾರತ ಸಂಸ್ಕೃತಿ ಜಗಕಿದೊ ಜ್ಯೋತಿ

೧೦

ಭಾರತ ಅಭಯವಿಧಾತನು ಗಾಂಧಿ
ಮಾರಕ ಶಕ್ತಿಯ ತಾರಕ ಗಾಂಧಿ॥
ಬಿಸ್ಮರಿ ಅಭಯ ವಿಧಾತನ ಕರಗೆ।
ರಸ್ಮರಿ ತನುಮನ ಅಭಯದ ನೆರಗೆ॥

೧೧

ಗಾಂಧಿ ವಿಧಾಯಕ ಕಾರ್ಯಕ್ರಮು
ಎಂದೂರ ಹೊಂದಿಕೆಯಾಗಲಿ ಪಳ್ಳಿ॥
ಸುಂದರ ಸ್ವಾತಂತ್ರ್ಯವ ಜಗವೆಲ್ಲ।
ಹೊಂದಲಿ ಮೋಕ್ಷಿ ಶಾಂತಿಯನೆಲ್ಲ

ಎರ್ಮಾಳ

ಭಕ್ತಾಭಿಮಾನಿಗಳಲ್ಲಿ ವಿನಂತಿ

ನಮ್ಮ ಎರ್ಮಾಳ ತೆಂಕ ಗ್ರಾಮದಲ್ಲಿರುವ ಶ್ರೀ। ನಾರಲ್ಲತ್ತಾಯ ಗುಡಿಯು ಹೆಚ್ಚಿನ ನಾದುರಸ್ತಿಯಲ್ಲಿದ್ದು ಅದನ್ನು ಜೀರ್ಣೋದ್ಧಾರ ಗೈಯ್ಯುವ ಬಗ್ಗೆ ಮತ್ತು ಅದರ ಮಂಭಾಗದಲ್ಲಿ ಹೊಸತಾಗಿ ಗೋಪುರ ಕಟ್ಟಿಸುವರೆ ಮುಂಬಾಯಿಯಲ್ಲಿ ಧನಸಹಾಯಮಾಡಿದ ಮಹನೀಯರು Y. ನಕುಲಸೆಟ್ಟಿ, 50-0 0, ಗುಂಡಲುಡಿ ಹುವ್ವಯ ಸೆಟ್ಟಿ 51-0-0, Y. ಸುಬ್ಬಸೆಟ್ಟಿ 25-0-0, ಅಡ್ವೆ ನಾಗಪ್ಪಸೆಟ್ಟಿ, 21-0-0, ಪಾದೂರು ದೇಜುಸೆಟ್ಟಿ 15-0-0, ನಟ್ಟಿ ಶ್ಯಾಮಸೆಟ್ಟಿ 10-4-0, Y. ಹಿರಿಯಣ್ಣಸೆಟ್ಟಿ 10-0-0, Y. ತೋಮುಸೆಟ್ಟಿ 10-0-0, Y. ನಾರಾಯಣಪೂಜಾರಿ 10-0 0, ಗೋವಿಂದ ಸಾಂತುಸೆಟ್ಟಿ 10 0-0, Y. ಕೃಷ್ಣಪ್ಪ 10-0-0, Y. ಕಿಟ್ಟಣ್ಣಸೆಟ್ಟಿ 10-0-0, Y. ಬಾಬು ಪೂಜಾರಿ 10-0-0 Y. ರಾಜುಸೆಟ್ಟಿ 10-0-0, ಪದಯೂರು ಮುದ್ದುಸೆಟ್ಟಿ 5-0-0, Y. ಮಂಜಣ್ಣಸೆಟ್ಟಿ 5-0-0, ಬಳಕುಂಜೆ ಬೋಳಯಸೆಟ್ಟಿ 5 0 0, ಪೊಳ್ಯ ಕೆಂಚಗಸೆಟ್ಟಿ 10 4-0, ಲಿಂಗುಸೆಟ್ಟಿ ಶಿವಾಜಿಪಾರ್ಕ್ 10-4-0, Y. ಬೋಜಸೆಟ್ಟಿ 5-4-0, Y. ಸಂಜೀವಸೆಟ್ಟಿ 5-2-0, ಕುತ್ಯಾರು ಶ್ಯಾಮಸೆಟ್ಟಿ 5-0-0, ಪಿಲಾರುಗುತ್ತು ಅಗಿ ಸೆಟ್ಟಿ 10 0 0, ಅರ್. ಕೆ. ಸೆಟ್ಟಿ 5-0-0, ಗುರುಮಬಲಸೆಟ್ಟಿ 5-0-0, Y ಕುಶ್ರಸೆಟ್ಟಿ 10-0-0 ಮುಷ್ಟಣ್ಣಸೆಟ್ಟಿ ದಾದರ್ 5-0-0, ಮಲ್ಲಾರು ದಮುಸೆಟ್ಟಿ 2-8-0, ಪಿಲಾರು ಸೂರುಸೆಟ್ಟಿ 2-0-0 M. V. ಪ್ರಭು 5-0-0, ಬಳಕುಂಜೆ ಸೀನಸೆಟ್ಟಿ 5-0-0, ಸೇಸು ನಾರಾಯಣ್ 5-4-0, ಉಳಿಯಡಿಗುತ್ತು ನಕುಲಸೆಟ್ಟಿ 2-0-0, ಪಾದೆಬೆಟ್ಟು ಕೃಷ್ಣಸೆಟ್ಟಿ 10-0-0. ಕುತ್ಯಾರು ಚೆನ್ನಯಸೆಟ್ಟಿ 5 0-0, Y ಮುದ್ದುಸೆಟ್ಟಿ 5-0-0, Y. ಬನ್ನಾಥಸೆಟ್ಟಿ 5-4 0, ಯರ್ಲಪಲ್ಲ ರಾಮಾಂಜನೇಯ ಭಂಡಾರದ ಕಡೆಯಿಂದ 1-4-0. ಪಾಗ್ದಮಾಡಿದ ಮಹನೀಯರ ಹೆಸರು:- ಪಿಲಾರು ಅಂಗಸೆಟ್ಟಿ, ಯರ್ಲಪಲ್ಲ ಮುಂಬಾಯಿ. ತೆಂಕ ಎರ್ಮಾಳ ಬಿಲ್ಲವರ ಸಹಾಯಕ ಸಂಘ, ಮುಂಬಾಯಿ. ಇನ್ನೂ ಹೆಚ್ಚಿನ ಮಹನೀಯರು ಇರುವರು. ಭಕ್ತಾಭಿಮಾನಿಗಳು ನಾರಲ್ಲತಾಯ ಗುಡಿಯ ಜೀರ್ಣೋದ್ಧಾರದ ಬಗ್ಗೆ ಧನ ಸಹಾಯಮಾಡಿ ಶ್ರೀದೇವಿಯ ಗಂಧಪ್ರಸಾದಕ್ಕೆ ಪಾತ್ರರಾಗಬೇಕೆಂದು ಅಪೇಕ್ಷಿಸುವ,

ಪೂಲಾ ಬಾಬು ಸೆಟ್ಟಿ,
ಕಾರ್ಯದರ್ಶಿ, ಜೀರ್ಣೋದ್ಧಾರ ಸಂಘ
Advt. ಎರ್ಮಾಳ ತೆಂಕ.

ಸಮಾಚಾರ ಸಂಗ್ರಹ

ಮಲಬಾರಿಗೆ ಅಕ್ಕಿ ಐದುಸಾವಿರ ಟನ್ನು ಸಿಂಧದಿಂದ ಕರಾಚಿ ಮೂಲಕ

ಆಹಾರ ಪೂರೈಕೆಯ ಕೇಂದ್ರ ಖಾತೆಯು (ಸೆಂಟ್ರಲ್ ಫುಡ್ ಡಿಪಾರ್ಟ್ಮೆಂಟು) ಮಲಬಾರಿನ ಆಹಾರ ಅಭಾವದ ತೀಕ್ಷ್ಣತೆಯನ್ನು ನಿವಾರಿಸುವ ಅತ್ಯಾವಶ್ಯಕತೆಗಾಗಿ ಸಿಂಧಪ್ರಾಂತದ ಸರಕಾರವನ್ನು ಕೇಳಿಕೊಂಡುದರ ಪರಿಣಾಮವಾಗಿ ಆ ಸರಕಾರವು ಮಲಬಾರಿಗೆ ಐದು ಸಾವಿರ ಟನ್ನು ಅಕ್ಕಿಯನ್ನು ಹಡಗ ಮೂಲಕ ಸಾಧ್ಯವಾದಷ್ಟು ಬೇಗನೆ ಕಳುಹಿಸಲಿಕ್ಕಿದೆ ಎಂದು ತಿಳಿದುಬರುತ್ತದೆ.

ಸಿಂಧ ಪ್ರಾಂತವು ಮದ್ರಾಸು ಪ್ರಾಂತಕ್ಕೆ ೧೯೪೪-೪೫ನೆಯ ಇಸವಿಗೆ ಕೊಡಬೇಕೆಂದು ತೀರ್ಮಾನಿಸಿದ (ಕೋಟಾ) ಗೋದಿ ಹದಿನೇಳು ಸಾವಿರ ಟನ್ನು ಅದರಲ್ಲಿ ಇಷ್ಟರ ತನಕ ಬಂದುದು ಹತ್ತು ಸಾವಿರ ಟನ್ನು. ಉಳಿದುದುದನ್ನು ಸಾಗಿಸಲಿಕ್ಕೆ ಹಡಗಗಳು ಎಷ್ಟು ಶೀಘ್ರದಲ್ಲಿ ದೊರಕುವವೋ ಅಷ್ಟು ಬೇಗನೆ ಕಳುಹಲಾಗುವುದಂತೆ. ಹಾಗೆಯೇ ಅಲ್ಲಿಂದ ಬರಬೇಕಾದ ಕುರುಳಿ ಮೂವತ್ತೆಂಟುಸಾವಿರ ಟನ್ನಿನಲ್ಲಿ ಇಪ್ಪತ್ತೆರಡು ಸಾವಿರದ ಇನ್ನೂರ ನಾಲ್ವತ್ತು ಟನ್ನು ಈ ತನಕ ಬಂದಿದೆಯಂತೆ.

ಈ ಪ್ರಾಂತದ ಹಲವು ದಕ್ಷಿಣ ಜಿಲ್ಲೆಗಳಲ್ಲಿ ಈ ವರ್ಷದ ಪೈರು ಕೆಟ್ಟಿರುವ ಕಾರಣ ಸಿಂಧ ಪ್ರಾಂತದಿಂದ ಈ ಪ್ರಾಂತಕ್ಕೆ ದೊರಕುವ ಕೋಟವನ್ನು ಈ ವರ್ಷ ಇನ್ನೂ ಹೆಚ್ಚಿಸಬೇಕೆಂದು ಮದ್ರಾಸು ಸರಕಾರವು ಇಂಡಿಯಾ ಸರಕಾರವನ್ನು ಒತ್ತಾಯಿಸುತ್ತಿದೆ ಎಂದೂ ತಿಳಿದು ಬಂದಿದೆ.

ಮೈಸೂರು ಎಸೆಂಬ್ಲಿಯ ಪರಿಪೂರ್ಣ ಬೆಂಬಲ

ಬಟ್ಕಳ ಬಂದರದ ಕಡೆಗೆ ದಕ್ಷಿಣಕನ್ನಡದ ಮಲ್ಪೆಯ ಮಾತೇ ಇಲ್ಲ

ತಾ. ೪ರಲ್ಲಿ ಮೈಸೂರು ಪ್ರಜಾ ಪ್ರತಿನಿಧಿ ಸಭೆ (ಎಸೆಂಬ್ಲಿ)ಯಲ್ಲಿ ಮೈಸೂರು ಸಾಗರ ಮೂಲಕ ವ್ಯಾಪಾರಾಭಿವೃದ್ಧಿಯನ್ನು ಮಾಡಿಕೊಳ್ಳಲು ಬಟ್ಕಳವು ಒಂದೇ ಗುರಿ. ಮೈಸೂರು ಸರಕಾರ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುವ ಠರಾವು ಸರ್ವಾನುಮತದಿಂದ ಅಂಗೀಕೃತವಾಯಿತು.

ಮೈಸೂರು ಮಲ್ಪೆಯನ್ನು ಆರಿಸಿತು ಎಂದಿದ್ದ ದಕ್ಷಿಣ ಕನ್ನಡದ ಆಸೆಯು ನಿರಾಶೆಯಾಯಿತು.

ಆದರೆ ದಕ್ಷಿಣ ಕನ್ನಡಕ್ಕೊಂದು ಬಂದರವಾಗದಿದ್ದರೆ ಮುಂದಿನ ವಾಣಿಜ್ಯ ಉದ್ಯಮ ಪ್ರಧಾನವಾದ ದಿನಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು ಹಿಂದೆಬೀಳುವುದು ನಿಶ್ಚಯ. ನಾಳಿನ ಕರ್ನಾಟಕದಿಂದ ಈ ಜಿಲ್ಲೆಗೆ ಬಂದರು ಬರುವ ಹಾಗಿಲ್ಲವೆಂಬ ಅಂತರಂಗವು ಈ ಠರಾವಿನಿಂದ ತಿಳಿದರೂ ದಕ್ಷಿಣ ಕನ್ನಡಿಗರು ಸುಮ್ಮನೆ ಕುಳಿತಿರದೆ ಈಗಾಗಲೇ ಸಿದ್ಧವಾಗುತ್ತಿರುವ ಯುದ್ಧಾನಂತರದ ಪುನರ್ರಚನೆಯ ಯೋಜನೆಯಲ್ಲಾದರೂ ಮಲ್ಪೆಯ ಬಂದರಿನ ಯೋಜನೆಯು ಸೇರಿ ಬರುವಂತೆ ಈಗಿಂದೀಗಲೇ ನೋಡಿಕೊಳ್ಳಬೇಕು. ಇನ್ನೂ ನಿದ್ದೆಯಲ್ಲಿದ್ದು ಕಾಲತಪ್ಪಿ ಹೋಗಿದರೆ ಅರಣ್ಯರೋಧನ, ದಕ್ಷಿಣ ಕನ್ನಡ ಜಿಲ್ಲೆಯ ಪತನ, ನಿಶ್ಚಯ.

ಅಖಿಲ ಭಾರತ ವೃತ್ತ ಸಂಪಾದಕ ಸ್ಥಾಯಿ ಸಮಿತಿ.

ಇದರ ಸಭೆಯು ಲಾಹೋರಲ್ಲಿ ತಾ. ೨೨ ಮತ್ತು ೨೩ರಲ್ಲಿ ಜರಗುವುದು.

ಗಾಂಧೀ ಅಭಿನಂದನ ಗ್ರಂಥ ಮಹಾದೇವ ದೇಸಾಯಿ ಸ್ಮಾರಕನಿಧಿ

ಗಾಂಧಿಜೀಯ ವಿಷಯವಾಗಿರುವ ಪದ್ಯಗಳಲ್ಲಿ ಉತ್ತಮವಾದ ಸಾಧಾರಣವೆಲ್ಲ ಪದ್ಯಗಳನ್ನು ಸಂಗ್ರಹಿಸಿ ಹಿಂದೀ ಭಾಷಾಂತರದೊಡನೆ ಹಿಂದೀ ಅಕ್ಷರಗಳಲ್ಲಿ ಮುದ್ರಿಸಲ್ಪಟ್ಟ ಈ ಅಭಿನಂದನ ಗ್ರಂಥವನ್ನು ಅದರ ಸಂಪಾದಕರಾದ ಪಂಡಿತ್ ಸೋಹಾನ್‌ಲಾಲ್ ದ್ವಿವೇದಿಯವರು ಜನ್ಮದಿನೋತ್ಸವದಿನದಲ್ಲಿ ಗಾಂಧಿಜೀಯವರಿಗೆ ಅರ್ಪಿಸಿದರು. ಅದರೊಡನೆ ಮಹಾದೇವ ದೇಸಾಯಿ ಸ್ಮಾರಕನಿಧಿಗೆ ಹತ್ತುಸಾವಿರ ರೂಪಾಯಿಯ ಚೆಕ್ಕನ್ನೂ ಒಪ್ಪಿಸಿದ್ದಾರೆ. ಗಾಂಧಿಜೀಯವರು ಮಹಾದೇವ ದೇಸಾಯಿ ಸ್ಮಾರಕನಿಧಿ ಯೋಜನೆಯಲ್ಲಿ ಆಸಕ್ತಿಯನ್ನು ತೋರಿ ಅದಕ್ಕೆ ತಕ್ಕ ಸಲಹೆಸೂಚನೆಗಳನ್ನು ಕೊಡುವುದಾಗಿ ಒಪ್ಪಿಗೆಯಿತ್ತಿರುವರು.

ಜಪಾನು ಬೇಗನೇ ಸೋಲದು

ಎಂದು ಮೇಜರ್ ಶಫರ್ಡರು ಹೇಳುತ್ತಾರೆ. ಹಾಗೆ ಹೇಳುವ ಅವರ ಪತ್ರದ ಮುಖ್ಯ ಮಾತುಗಳು ಹೀಗಿವೆ. ಪೌರ್ವಾತ್ಯ ಪ್ರದೇಶದ ಬಹುಭಾಗವು ಸಮುದ್ರದಿಂದ ಆವರಿಸಲ್ಪಟ್ಟಿದ ಭೂಪ್ರದೇಶದಲ್ಲಿ ವಾಹನ ಚಲನವಲನಗಳ ಸೌಕರ್ಯ ಕಡಿಮೆ. ಯುರೋಪದ ಯಾವ ಭಾಗಕ್ಕಿಂತಲೂ ಈ ಪ್ರದೇಶವನ್ನು ಗದ್ದು ಕೊಳ್ಳುವದು ಕಠಿಣವಿದ. ಸಮುದ್ರಾವೃತವಾದ ಇಟಲಿಯ ಪೂರದಲ್ಲೆರಡಾಂಶವನ್ನು ಗದ್ದು ಕೊಳ್ಳಲಿಕ್ಕೇ ಒಂದು ವರುಷ ಬೇಕಾಯಿತು. ಈಗ ಜಪಾನರ ವಶವಿರುವ ಚೀನಾದ ಒಂದಂಶವನ್ನು ಜಪಾನು ಹಿಡಿಯಲಿಕ್ಕೆ ಮೂರು ವರುಷ ಹಿಡಿಯಿತು. ... ... ಸ್ವಸ್ಥಾನದ ಮುಖ್ಯ ... ರಂಗಕ್ಕೆ ಬಂದಿಲ್ಲ. ಚೀನಾ ಬರ್ಮಾ ಮತ್ತು ಸಾಗರದ ದ್ವೀಪಗಳಲ್ಲಿ ಜಪಾನಿಗೆ ಹಿನ್ನಡೆ ಸಂಭವಿಸಿದ್ದಾದರೂ ಅದರ ಚೇತನವು ಇನ್ನೂ ಕುಂದಿಲ್ಲ. ಜಪಾನೀ ಸೇನೆಯಲ್ಲಿ ಸುಶಿಕ್ಷಿತ ಸಂಘಟಿತ ಮತ್ತು ಪ್ರೀತ್ಯ ನಾಯಕತ್ವಕ್ಕೊಳಗಾಗಿರುವ ಸಾವಿರಾರು ಮಂದಿಯಿದ್ದಾರೆ. ಇಂತಹ ಸೈನ್ಯ ಸಮೂಹವನ್ನು ಒಂದೊಂದಾಗಿ ಕೊಲ್ಲಬೇಕು ಇದು ಸುಲಭವಲ್ಲ. ಜಪಾನೀ ನೌಕಾಪಡೆಯೂ ಬಲಿಷ್ಠವಿದೆ. ಅವರ ವಿಮಾನದ ಶಕ್ತಿ ಕುಂದಿತಪ್ಪಿದ್ದರೂ ಇನ್ನೂ ಹೇರಳ ವಿಮಾನಗಳೂ ವೈಮಾನಿಕರೂ ಇದ್ದಾರೆ. ಇಂತಹ ವೈರಿಯನ್ನು ಮುರಿಯಬೇಕಾದರೆ ಮಿತ್ರಪಕ್ಷದವರು ಘೋರ ಯುದ್ಧವನ್ನು ನಡೆಯಿಸಬೇಕಾದೀತು? ಎಂದರೆ ಪಶ್ಚಿಮದ ಯುದ್ಧವು ಶೀಘ್ರದಲ್ಲಿ ಮುಗಿದರೂ ಪೂರ್ವದಲ್ಲೊಂದು ದೀರ್ಘಕಾಲದ ಯುದ್ಧವು ಕಾದೇ ಇದೆ ಎಂದಾಯಿತು. ಹಾಗಿದ್ದಲ್ಲಿ ಇಂಡಿಯಾಕ್ಕೆ ಗಂಡಾಂತರದ ದಿನಗಳು ಹಿಂದಿಗಿಂತ ಮುಂದೆ ಕಠೋರತರವಾಗಿ ಬಂದಾವೆಂದು ಪ್ರತ್ಯೇಕ ಹೇಳಬೇಕೇ?

ಪೋಲ್ಸ್ ಮತ್ತು ಜರ್ಮನರ ಯುದ್ಧದಲ್ಲಿ ಜರ್ಮನರಿಗೆ ಜಯ ವಾರ್ಸೋ ಪತನ

ಪೋಲ್ಸರು ಅರುವತ್ತಮೂರು ದಿನ ಜರ್ಮನರೊಡನೆ ಶೌರ್ಯದಿಂದ ಕಾದಾಡಿ ಕೊನೆಗೆ ವಾರ್ಸೋದಲ್ಲಿ ಸಮರೋಪಕರಣಗಳ ಮತ್ತು ಆಹಾರದ ಸಂಗ್ರಹ ಒಡಿದಾದ ಕಾರಣ ಶರಣಾಗತರಾದರು.

ಗಾಂಧೀ–ಜಿನ್ನಾ ಸಂಧಾನ ಕಾಮನ್ಸ್ ಸಭೆಯಲ್ಲಿ ಅಮೆರಿಯವರ ಉತ್ತರ ಸರಕಾರವು ಪ್ರವೇಶಿಸಲು ಅವಕಾಶವಿಲ್ಲ.

ಸ್ವತಂತ್ರಪಕ್ಷದ ಮಿ. ಹಾರ್ವಿಯವರು ಕಾಮನ್ಸ್ ಸಭೆಯಲ್ಲಿ ಅಮೆರಿಯವರೊಡನೆ 'ಇಂಡಿಯಾದ ವಿವಿಧ ಪಕ್ಷಗಳ ಪ್ರತಿನಿಧಿಗಳು ಮುಂದಾಳುಗಳು ಭಾರತದ ಭಾವೀ ರಾಜ್ಯಾಂಗದ ರೂಪರೇಷೆಗಳ ರಚನೆಯಲ್ಲಿ ಪರಸ್ಪರ ಒಪ್ಪಿಗೆಗೆ ಬರುವಂತೆ ಅವರ ಅಭಿಪ್ರಾಯಗಳನ್ನು ಕೇಳುವ ಮತ್ತು ಅವರನ್ನು ಕಲೆಯಿಸುವ ಪ್ರಯತ್ನವನ್ನು ಇಂಡಿಯಾ ಸರಕಾರಕ್ಕೆ ಸೂಚನ ಕೊಡುವಿರೋ' ಎಂದು ಕೇಳಿದ ಪ್ರಶ್ನೆಗೆ ಅಮೆರಿಯವರು ಕೊಟ್ಟಿರುವ ಉತ್ತರ ಹೀಗಿದೆ—

'ಗಾಂಧಿ–ಜಿನ್ನಾ ಮಾತುಗಳು ಪಾಕಿಸ್ಥಾನದ ವಿಷಯದಲ್ಲಿ ಮುರಿದು ಬಿತ್ತೆಂದು ಪ್ರಕಟಿತವಾದ ವರದಿಗಳಿಂದ ನನಗೆ ತಿಳಿದು ಬಂದಿದೆ. ಆದರೆ ಇಬ್ಬರೂ ಅದೇ ತಮ್ಮ ಪ್ರಯತ್ನದ ಮುಕ್ತಾಯವಲ್ಲವೆಂದು ನುಡಿದಿದ್ದಾರೆ. ಮುಂದೇನಾಗುವುದೆಂದು ತಿಳಿದು ಬರುವನಕ ಅದರಲ್ಲಿ ಸರಕಾರದ ಸಾರ್ಥಕವಾದ ಪ್ರವೇಶಕ್ಕೆ ಅವಕಾಶವಿಲ್ಲವೆಂದು ನನಗೆ ತೋರುತ್ತದೆ.'

ನೆಹರೂಗಳ ಆರೋಗ್ಯದ ವಿಷಯ ಎಮೆರಿಯವರ ಉತ್ತರ

ಕಾಮನ್ಸ್ ಸಭೆಯಲ್ಲಿ ಮಜೂರ ಪಕ್ಷದ ಮೆಂಬರುಗಳಿಬ್ಬರು 'ನಿಮಗೆ ನೆಹರೂಗಳ ಆರೋಗ್ಯದ ಕಳವಳವನ್ನುಂಟುಮಾಡುವಂತಿದೆಯೆಂಬುದು ಗೊತ್ತಿದೆಯೋ? ಬಾಬು ರಾಜೇಂದ್ರ ಪ್ರಸಾದ ಮತ್ತು ಇತರ ವರ್ಕಿಂಗ್ ಕಮಿಟಿಯ ಮೆಂಬರರ ಆರೋಗ್ಯ ಸ್ಥಿತಿಯ ವಿಷಯ ಹೇಳುವಿರೇ?' ಎಂದು ಕೇಳಿದ ಪ್ರಶ್ನೆಗೆ ಅಮೆರಿಯವರು ಕೊಟ್ಟ ಉತ್ತರ—

ನಾನು ಈ ವಿಷಯದಲ್ಲಿ ಕುರಿತಾಗಿ ವಿಚಾರ ಮಾಡಿದ್ದಲ್ಲಿ ಸ್ವಲ್ಪಮಟ್ಟಿಗೆ ಅನಾರೋಗ್ಯದಲ್ಲಿರುವ ಡಾ| ಮಹಮೂದರೊಬ್ಬರಲ್ಲದೆ ಅಹ್ಮದಾನಗರದಲ್ಲಿ ಸೆರೆಯಲ್ಲಿರುವ ಬೇರೆಲ್ಲ ವರ್ಕಿಂಗ್ ಕಮಿಟಿಯ ಮೆಂಬರರು ಕ್ಷೇಮದಲ್ಲಿದ್ದಾರೆಂದು ತಿಳಿದು ಬಂದಿದೆ. ಪಂಡಿತ್ ನೆಹರೂಗಳು ಶಕ್ತಿಯುತ್ಸಾಹಯುಕ್ತರಾಗಿ ಚುರುಕಾಗಿ ದೃಢಾರೋಗ್ಯವುಳ್ಳವರಾಗಿರುವರೆಂದು ಕುರಿತಾಗಿ ತಿಳಿದುಬಂದಿದೆ. ಬೇರೆ ಕಡೆಯಲ್ಲಿರುವ ಬಾಬು ರಾಜೇಂದ್ರ ಪ್ರಸಾದರ ಆರೋಗ್ಯದ ವಿಷಯವಾಗಿ ನಾನು ವಿಚಾರಿಸಿದುದಕ್ಕೆ ಇನ್ನೂ ಉತ್ತರ ಬಂದಿಲ್ಲ. ಉತ್ತರ ಬಂದೊಡನೆ ಪ್ರಶ್ನಕರಿಗೆ ಪತ್ರ ಮೂಲಕ ತಿಳಿಸುತ್ತೇನೆ.

ಸೆರೆಮನೆಯಲ್ಲಿರುವ ಕಾಂಗ್ರೆಸ್ಸಿಗರ ಬಂಧವಿಮೋಚನೆ ಕಾಮನ್ಸ್ ಸಭೆಯಲ್ಲಿ ಚರ್ಚೆ

ಇದೇ ಬುಧವಾರ ಯಾ ಗುರುವಾರ ಇಂಡಿಯಾದ ವಿಷಯವಾಗಿ ಕಾಮನ್ಸ್ ಸಭೆಯಲ್ಲಿ ಚರ್ಚೆ ನಡೆಯುವುದು. ಇಂಡಿಯಾದ ರಾಜಕೀಯ ವಿಷಯವಾಗಿ ಎದ್ದಿರುವ ಸಮಸ್ಯೆಗಳ ಕುರಿತು ಒಂದು ವರದಿಯನ್ನು ಎಮೆರಿಯವರು ಕೊಡುವರು. ಸೆರೆಯಲ್ಲಿರುವ ಕಾಂಗ್ರೆಸ್ಸಿಗರ ಬಂಧವಿಮೋಚನೆ ಮಾಡುವ ಪ್ರಶ್ನೆಯು ಅನುಕೂಲವಾಗಿ ಅವಲೋಕಿಸಲಾದೀತೆಂದು ನಿರೀಕ್ಷಣೆ ಇದೆ.

ಆಸ್ತಿ ಮಾರಾಟಕ್ಕಿದೆ.

ಉಡುಪಿ ತಾಲೂಕು ಉಳಿಯಾರಗೋಳಿ ಮತ್ತು ಮಂಗಾಳ ಗ್ರಾಮದ ಕರಾವಳಿಯಲ್ಲಿ ಕೀರ್ತ ಜಾತಾ ೧೧೫ಮುಡಿ ಅಕ್ಕಿ ಗೇಣಿಸಿಕ್ಕುವ ಒಮ್ಮುಖವಾದ ಆಸ್ತಿಯು ಮಾರಾಟಕ್ಕಿದೆ. ಕಾಯಿಸ್ ಉಳ್ಳವರು ಕೂಡಲೇ ಈ ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು.

'S'
C/o ನವಯುಗ,
ಉಡುಪಿ.

Read & Advertise in
NAVAYUGA

ಯುದ್ಧವು ತೀವ್ರ ಕೊನೆಗೊಂಡು ಧಾರಣೆಗಳ ರಚನೆಯ ರೂಪಾಂತರ ಹೊಂದುವುದು. ಈ ಪರಿಸ್ಥಿತಿಯನ್ನು ... ... ಸಂಪದಗಳನ್ನು ನಮ್ಮ ಮುಂದಿಡುವವು.

1 ನಿಮ್ಮ ಕಾಲ ... ... ಅವನ್ನು ವಿಕ್ರಯಿಸಿ ನಿಮ್ಮ ನಗದಿ ... ... ಬ್ಯಾಂಕಿನ ಖಾತೆಯಲ್ಲಿರಿಸಿ ಧಾರಣೆಗಳ ಇಳಿತವನ್ನಿರೀಕ್ಷಿಸಿರಿ

2 ನಿಮ್ಮ ಸಾಲಗಳನ್ನೀಗಲೇ ತೀರಿಸಿರಿ ... ಯುದ್ಧಾನಂತರದ ದಿನಗಳಲ್ಲಿ ಧಾರಣೆಗಳ ಇಳಿತದಿಂದಾಗಿ ಸಾಲಗಳನ್ನು ತೀರಿಸಲು ಬಹು ... ಸಾಗಬಹುದು.

3 ನಿಮಗೆ ಪರರಿಂದ ಸಲ್ಲಬೇಕಾದ ಸಾಲಗಳನ್ನೀಗಲೇ ವಸೂಲು ಮಾಡಿರಿ. ಮುಂದಿನ ಧಾರಣೆಗಳ ಇಳಿತದಿಂದಾಗಿ ನಿಮ್ಮ ಸಾಲಗಾರರ ನಗದಿ ಸ್ಥಿತಿಯು ಬಹಳ ... ... ಸಾಲಗಳನ್ನು ತೀರಿಸಲಸಾಧ್ಯವಾಗಬಹುದು.

4 ನಿಮ್ಮ ಕೂಡೆ ಇರುವಂಥ ನಗದಿಯನ್ನೆಲ್ಲಾ ಇನ್ನು ಮುಂದೆ ಬರುವ ಧಾರಣೆ ಇಳಿತವಾಗುವ ದಿನಗಳಿಗಾಗಿ ಕೂಡಿಟ್ಟು ಧಾರಣೆಗಳ ಗತಿಯನ್ನು ಮತ್ತು ವಾಣಿಜ್ಯದ ಸಾಮಾನ್ಯ ಸ್ಥಿತಿಯನ್ನು ಪರ್ಯಾಲೋಚಿಸಿ ನಿಮ್ಮ ಭಾವೀ ಯೋಜನೆಗಳನ್ನು ಕಲ್ಪಿಸಬಹುದು.

ನಿಮ್ಮಲ್ಲಿರುವ ನಗದಿಯನ್ನೆಲ್ಲ ... ... ಇಟ್ಟಲ್ಲಿ ... ... ಸಮಾಜದ ... ...

ಸ್ಥಾಪನೆ 1906 ಕೆನರಾ ಬ್ಯಾಂಕ್ ಲಿಮಿಟೆಡ್

Estd 1906 Canara Bank, Limited.

(Incorporated in British India with limited Liability of members limited.)

The Canara Banking Corporation Limited.
(Incorporated in British India)
Estd 1906.
Head Office. **UDIPI**, (S. K.)

Paid up Capital .... Rs. 11,3,8255/-
Reserves .... „ 4,10,000/-
Total working resources .... Exceed Rs. One Crore

ANNOUNCEMENT
A Branch of the Bank will **be Opened** shortly at **BOMBAY**.

ನವಯುಗ

ಉಡುಪಿ, ಗುರುವಾರ ೧೨-೧೦-೧೯೪೪

ದಕ್ಷಿಣ ಕನ್ನಡ ಜಿಲ್ಲೆಗೆ ಬಂದರು

ದಕ್ಷಿಣಕನ್ನಡ ಜಿಲ್ಲೆಗೊಂದು ಬಂದರು ಬೇಕೆಂಬ ಮಾತು ಹೊಸತೇನೂ ಅಲ್ಲ. ಎಷ್ಟೋ ವರುಷಗಳಿಂದ ಆಗಾಗ ಈ ವಿಷಯದಲ್ಲಿ ಪ್ರಯತ್ನಗಳು ನಡೆಯುತ್ತಲಿವೆ. ಮೈಸೂರು ಮತ್ತು ಮದ್ರಾಸು ಸರಕಾರದ ಪ್ರಮುಖ ಅಧಿಕಾರಿಗಳು ಬಂದಾಗಲೆಲ್ಲ ಈ ಬೇಡಿಕೆಯನ್ನು ಅವರ ಮುಂದಿಡುತ್ತ ಬರಲಾಗಿದೆ. ಉತ್ತಮವಾದ ರೇವು ಆಗಲು ಸಕಲ ಸೌಕರ್ಯವೂ ಸೌಲಭ್ಯವೂ ನಿಸರ್ಗದಿಂದಲೇ ಹೊಂದಿರುವ ಮಲ್ಪೆಯನ್ನು ಅವರ ಅವಗಾಹನೆಗೆ ತರಲಾಗಿದೆ. ಅಂತೂ ವಿಳಂಬವಾಗಿಯಾದರೂ ಮೈಸೂರು ಮದ್ರಾಸು ಸರಕಾರಗಳು ಈ ವಿಷಯದಲ್ಲಿ ಒಂದುಗೂಡಿ ಜಿಲ್ಲೆಗೊಂದು ಬಂದರವನ್ನು ಕೊಟ್ಟೀತೆಂಬ ಆಶೆಯನ್ನು ಜನತೆಯು ಇಟ್ಟುಕೊಂಡಿದೆಯೆಂಬುದು ಜನಸಾಮಾನ್ಯರ ಮಾತುಕತೆಗಳಲ್ಲಿಯೂ ತೋರಿಬರುತ್ತಲಿದೆ.

ಆದರೆ ಆಶೆಯನ್ನು ಕಟ್ಟಿಕೊಂಡು ಸುಮ್ಮನೆ ಕುಳಿತರೆ ನಿರಾಶೆಯೇ ಗತಿಯೆಂಬುದು ಇತ್ತೀಚೆಗಿನ ವಿದ್ಯಮಾನಗಳಿಂದ ಸ್ಪಷ್ಟವಾಗುತ್ತದೆ. ಮೈಸೂರು ಉತ್ತರಕನ್ನಡ ಮತ್ತು ನೈಜಾಮ ಕನ್ನಡ ಮುಂತಾದ ಘಟ್ಟದ ಮೇಲಿನ ನಾಡವರೆಲ್ಲರೂ ಒಂದಾಗಿ ಚಳವಳಿ ನಡೆಯಿಸಿ ಮೈಸೂರು ಸರಕಾರವು ಭಟ್ಕಳ ಬಂದರವನ್ನು ಪಡೆದು ಊರ್ಜಿತಕ್ಕೆ ತರಬೇಕೆಂಬ ಗೊತ್ತುವಳಿಯನ್ನು ಮೈಸೂರು ಎಸೆಂಬ್ಲಿಯಲ್ಲಿ ಸರ್ವಾನುಮತದಿಂದ ಮಂಜೂರಾಗಿಸುವುದರಲ್ಲಿ ಜಯಶೀಲರಾಗಿದ್ದಾರೆ. ಮೈಸೂರು ಸರಕಾರವು ಈ ಠರಾವನ್ನು ಮಾನ್ಯಮಾಡುವಂತೆ ಈಗಾಗಲೇ ಅಲ್ಲಲ್ಲಿಯ ಪತ್ರಿಕೆಗಳೆಲ್ಲ ಅಗ್ರಲೇಖನಗಳನ್ನು ಬರೆದು ಸರಕಾರದ ಲಕ್ಷ್ಯವನ್ನು ಸೆಳೆಯತೊಡಗಿವೆ. ಅವುಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಕಡೆಗೆ ಉಪೇಕ್ಷೆಯಿದ್ದಂತೆ ಕಾಣುತ್ತದೆಂಬುದು ತಾ. ೮ರ ಹುಬ್ಬಳ್ಳಿ ಗಜೇಟದ ಮಾತುಗಳಿಂದ ವ್ಯಕ್ತವಾಗುವುದು. 'ಕರ್ಣಾಟಕ ಏಕೀಕರಣವು ಯಾವಾಗ ಸಾಧ್ಯವಾಗುವುದೆಂಬುದು ಇನ್ನೂ ಬಗೆಹರಿಯದ ಸಮಸ್ಯೆಯಾಗಿದೆ. ಆದರೆ ಈಗ ಇದ್ದ ಉತ್ತರ ಕರ್ಣಾಟಕ, ಮೈಸೂರು ಕರ್ಣಾಟಕ, ನಿಜಾಮ ಕರ್ಣಾಟಕ, ಇವುಗಳ ಆರ್ಥಿಕ ಸಾಂಸ್ಕೃತಿಕ ಏಕೀಕರಣವನ್ನಾದರೂ ಸಾಧಿಸುವುದು ನಮ್ಮ ಕರ್ತವ್ಯವಾಗಿದೆ' ಎನ್ನುತ್ತೆ ಆ ಪತ್ರಿಕೆ. ಎಂದಮೇಲೆ ಮುಂದೆ ಕರ್ಣಾಟಕ ಪ್ರಾಂತ ರಚನೆಯಾದರೂ (ಅದೆಂದಾಗುವುದೋ ಏನೋ!) ಅದರಲ್ಲಿ ಸೇರಲಿರುವ ದಕ್ಷಿಣ ಕನ್ನಡವು ಅನಂತರ ತನಗೊಂದು ಬಂದರ ಬೇಕೆಂದು ಕೇಳಿದರೆ ಈ ಹಿರಿಯ ಸೋದರ ಸಂಘದ ಪ್ರಬಲ ಪ್ರತಿಭಟನೆಯಿಂದ ಅದು ಅರಣ್ಯ ರೋದನವಾದೀತೆಂಬುದು ನಿಶ್ಚಯ.

ದಕ್ಷಿಣ ಕನ್ನಡದ ಕೃಷಿವಾಣಿಜ್ಯ ಉದ್ಯಮಗಳ ನಾಳಿನ ಏಳಿಗೆಯೆಲ್ಲ ಈ ಬಂದರದ ಪ್ರಶ್ನೆಯಲ್ಲಿ ಅಡಕವಾಗಿದೆ. ಈ ಬಂದರ ಪ್ರಶ್ನೆ ಯಶಸ್ವಿಯಾಗಿ ಎದ್ದರೆ ಜಿಲ್ಲೆಯು ಏಳುತ್ತೆ. ಇದು ಬಿದ್ದರೆ ಜಿಲ್ಲೆಯೂ ಬಿದ್ದು ಕರ್ಣಾಟಕದಲ್ಲಿ ಹೀನ ದೀನ ಬಾಳಿಗೀಡಾಗುತ್ತದೆ. ಬಂದರವು ಏಳದಿದ್ದರೆ ಪ್ರತ್ಯಕ್ಷವಾಗಿ ವ್ಯಾಪಾರೋದ್ಯಮಿಗಳಿಗೆ ಶಾಶ್ವತವಾದ ಹಾನಿ; ಪರೋಕ್ಷವಾಗಿ ಎಲ್ಲ ಬಗೆಯ ಉದ್ಯೋಗಿಗಳಿಗೂ ಅದರ ಆಘಾತ ಇದ್ದೇ ಇದೆ. ಇದನ್ನು ಜಿಲ್ಲೆಯ ವಣಿಕ ವರ್ಗದ ಮುಂದಾಳುಗಳು ಈಗಾಗಲೆ ಚೆನ್ನಾಗಿ ಮನಗಾಣಬೇಕು. ಕೆಲವೆಡೆಗಳಲ್ಲಿ ಮುಟ್ಟಿ ಇನ್ನು ಕೆಲವೆಡೆಗಳಲ್ಲಿ ತಟ್ಟಿ ಮತ್ತು ಕೆಲವೆಡೆಗಳಲ್ಲಿ ಬೇಡಿ ಕಾಡಿ ಕೂಗಿ ಬಂದರವನ್ನೇಳಿಸುವುದರ ಮೂಲಕ ತಮ್ಮ ಹಾಗೂ ಜಿಲ್ಲೆಯ ಉದ್ಧಾರವನ್ನು ಸಾಧಿಸಬೇಕು. ಮೈಸೂರು ಹುಬ್ಬಳ್ಳಿ ಧಾರವಾಡದ ದತ್ತಕಷೆಯ ಪತ್ರಿಕೆಗಳು ಹೇಗೆ ಜನತಾಪ್ರತಿನಿಧಿಯಾಗಿ ಭಟ್ಕಳ ಬಂದರದ ಪ್ರಶ್ನೆಯನ್ನು ಮೈಸೂರು ಮತ್ತು ಬ್ರಿಟಿಷ್ ಸರಕಾರದ ಮುಂದೊತ್ತುತ್ತಿವೆಯೋ ಹಾಗೆಯೇ ನಮ್ಮ ಜಿಲ್ಲೆಯ ಪತ್ರಿಕೆಗಳು ಮಲ್ಪೆಯ ಬಂದರದ ಅವಶ್ಯಕತೆಯನ್ನು ಎತ್ತಿಯೆತ್ತಿ ಕೂಗಿ ಹೇಳಬೇಕು.

ಹಾಗೆ ಮಾಡುವುದಕ್ಕೆ ಇದೀಗ ಸುಸಂದರ್ಭ. ಈಗಾಗಲೇ ಯುದ್ಧಾನಂತರದ ಪುನರ್‍ರಚನೆಯ ಕಮಿಟಿಗಳು ಮದ್ರಾಸು ಸರಕಾರದಿಂದ ನಿಯಮಿತವಾಗಿ ಆಯಾಯ ಜಿಲ್ಲೆಗಳ ಪ್ರತಿನಿಧಿಗಳನ್ನು ಅವುಗಳಲ್ಲಿ ಸೇರಿಸಿಕೊಂಡು ಅವರ ಅಭಿಪ್ರಾಯಗಳನ್ನು ಕೇಳಿ ಮುಂದಿನ ಆರ್ಥಿಕೋದ್ಯಮಗಳ ಪುನರ್ವ್ಯವಸ್ಥೆಯ ಯೋಜನೆಗಳನ್ನು ಸಿದ್ಧಮಾಡತೊಡಗಿವೆ. ನಮ್ಮ ಜಿಲ್ಲೆಯ ಪ್ರತಿಷ್ಠಾವಂತ ವ್ಯಕ್ತಿಗಳೂ ಅದರಲ್ಲಿದ್ದಾರೆ. ವಿಮಾ ವಾಣಿಜ್ಯ, ಕೃಷಿ, ಬ್ಯಾಂಕು ಮುಂತಾದ ಆರ್ಥಿಕೋನ್ನತಿಗೆ ದುಡಿಯುವ ಸಂಘ ಸಂಸ್ಥೆಗಳಲ್ಲಿ ಪ್ರತಿಷ್ಠಾವಂತ ವ್ಯಕ್ತಿಗಳೂ ಇದ್ದಾರೆ. ಇವರೀಗ ಈ ಕಡೆಗೆ ಗಮನವಿತ್ತಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೊಂದು ಬಂದರದ ಪೂರೈಕೆಯೂ ಪ್ರಶ್ನೆಯೂ ಯೋಜನೆಯಲ್ಲಿ ಸೇರಿ ನಾಳೆ ಅದು ಸಫಲವಾದೀತು. ಈಗಯಾರಾದರೂ ಮಾಡಿಯಾರೆಂದು ಪ್ರತಿಯೊಬ್ಬರೂ ನಂಬಿ ಮೌನವಾಗಿದ್ದರೆ ಯಾವೂ ಮಾಡದೆ ಪ್ರಶ್ನೆಯೇ ಸರಕಾರದ ಲಕ್ಷ್ಯಕ್ಕೆ ಪ್ರಬಲ ಬೆಂಬಲದಿಂದ ಬಾರದೆ ಬಿದ್ದುಹೋದೀತು. ಪುನರ್‍ರಚನೆಯ ಯೋಜನೆಗಳೆಲ್ಲ ಮುಗಿದ ಮೇಲೆ ಎಚ್ಚತ್ತು ಬಾಯಿಬಿಟ್ಟರೆ ಮುಂಚೆ ನಿದ್ರೆಯಲ್ಲಿದ್ದುದೇಕೆಂಬ ಮಾತುಬಂದೀತು. ಆದುದರಿಂದ ಜಿಲ್ಲೆಯ ಭಾವೀ ಏಳ್ಗೆಗೆ ಇದೊಂದು ಜಿಲ್ಲೆಯ ಆರ್ಥಿಕೋನ್ನತಿಯ ಬೆಂಗೋಲಾಗಿರುವ ಪ್ರಶ್ನೆಯೆಂದು ತಿಳಿದು ಸಕಾಲದಲ್ಲಿ ಪ್ರಯತ್ನ ತೊಡಗಿ ಸಾರ್ಥಕವಾಗುವನಕ ನಿರಂತರ ಇದನ್ನು ಮುಂದೊತ್ತಿಯಾರೆಂದು ಹಾರೈಸುತ್ತೇವೆ.

ಪಶುಪಾಲನೆ

ಸರಕಾರವು ಯಾವತ್ತು ಪ್ರಾಂತಿಕ ಸರಕಾರಗಳಿಗೆ ಈ ವಿಷಯವನ್ನು ಕುರಿತು ಇಂಡಿಯಾ ಕಳೆದ ತಿಂಗಳಲ್ಲಿ ಸೂಚನೆಗಳನ್ನು ಕಳುಹಿಸಿಕೊಟ್ಟು ಅವುಗಳ ಆಚರಣೆಯ ಬಗ್ಗೆ ಕೈಗೊಂಡ ವ್ಯವಸ್ಥೆಯ ವರದಿಯನ್ನು ದಶಂಬರಾತ್ಯದೊಳಗೆ ಕಳುಹಿಸಬೇಕೆಂದು ಕೇಳಿದೆ. ಉತ್ತಮ ರಾಸುಗಳು ಹೆಚ್ಚಾಗಿ ಹುಟ್ಟುವ ವ್ಯವಸ್ಥೆ, ಹತ್ತು ವರ್ಷಗಳ ಮೇಲ್ಪಟ್ಟ ಪ್ರಾಣಿಯನ್ನು ಮಾತ್ರ ವಧಿಸುವ ಕ್ರಮ, ವರ್ಷಸಂದ ಆಕಳನ್ನಾದರೂ ನಿಕೃಷ್ಟ ಸ್ಥಿತಿಯಲ್ಲಿ ಕಸಾಯಿಗೆ ಕೊಡುವುದರ ಬದಲಾಗಿ ಮೂರು ತಿಂಗಳಾದರೂ ಸಾಕಿ ಮೈ ತುಂಬಿಸಿಕೊಡುವುದರಿಂದುಂಟಾಗುವ ಲಾಭ, ಬತ್ತಿಹೋದ ದನಗಳನ್ನು ಎಳೆಯುವ ಕೆಲಸಕ್ಕೆ ಉಪಯೋಗಿಸುವುದು, ಗೋವೈದ್ಯವನ್ನು ಹೆಚ್ಚಿಸುವುದು, ಹಾಲಿನ ಪೂರೈಕೆ ಕಡಿಮೆಯಾದಲ್ಲಿ ಕರುಗಳಿಗೆ ಇತರ ಒಳ್ಳೆಯ ಆಹಾರವನ್ನು ಕೊಟ್ಟು ಪೋಷಿಸುವುದು, ಇತ್ಯಾದಿ ಸೂಚನೆಗಳನ್ನು ಕೊಡಲಾಗಿವೆ.

ಮುಖ್ಯವಾಗಿ ನಮ್ಮ ಜಿಲ್ಲೆಯಲ್ಲಿ ಪಶುಪಾಲನೆಯು ಹೀನಸ್ಥಿತಿಗೆ ಬಂದಿರುವುದಕ್ಕೆ ಒಂದು ಪ್ರಧಾನ ಕಾರಣ ಆಕಳುಗಳಿಗೆ ಮೇವಿನ ಜಾಗಗಳು ಇಲ್ಲದಿರುವುದು. ಹಳ್ಳಿಗಳ ಮತ್ತು ಪಟ್ಟಣಗಳ ಹೊರವಳಯದ ಹುಲ್ಲುಗಾವಲು ಜಾಗವೆಲ್ಲ ವರ್ಷ ಹೋದಂತೆಲ್ಲ ವಸತಿಗಾಗಿ ದರ್ಖಾಸ್ತು ಮಾಡಲ್ಪಟ್ಟು ಗೋಚರಾವಿಗೆ ಜಾಗವಿಲ್ಲದಂತಾಗುತ್ತಾ ಬಂದಿದೆ. ಇನ್ನಾದರೂ ಪ್ರತಿಯೊಂದು ಪೇಟೆ ಪಟ್ಟಣಗಳ ಮತ್ತು ಹಳ್ಳಿಗಳ ಹೊರವಳೆಯದಲ್ಲಾಗಲೀ ನಡುವಿನಲ್ಲಾಗಲೀ ಗೋಚರಾವಿಗಾಗಿ ಜಾಗಗಳನ್ನು ವಿಸಾಸಲಾಗಿರಿಸುವುದು ಅತ್ಯವಶ್ಯವಿದೆ. ಒಂದೇ ಕಡೆ ವಿಶಾಲವಾದ ಸ್ಥಳವು ಇರದಿದ್ದರೆ ಅಲ್ಲಲ್ಲಿ ಚಿಕ್ಕ ಚಿಕ್ಕ ಜಾಗಗಳನ್ನಾದರೂ ದರ್ಖಾಸ್ತಿಗೆ ಕೊಡದೆ ಆಯಾ ಭಾಗದ ಆಕಳುಗಳ ಮೇವಿಗಾಗಿಯೂ ಸಂಚಾರಕ್ಕಾಗಿಯೂ ಕಾದಿರಿಸುವುದು ಅಗತ್ಯವಿದೆ. ಸರಕಾರವು ಈ ವಿಷಯಕ್ಕೆ ಲಕ್ಷ್ಯಗೊಡಬೇಕಾಗಿದೆ.

ಜನರೂ ಕೇವಲ ಸ್ವಾರ್ಥದಿಂದ ಇಂತಹ ಜಾಗಗಳನ್ನು ದರ್ಖಾಸ್ತಿಗೆ ಬೇಡಿ ಸರಕಾರಕ್ಕೆ ಕಾಟ ಕೊಡುವುದನ್ನೂ ಬಿಡಬೇಕು. ಮಾತ್ರವಲ್ಲ, ಇಂತಹ ಜಾಗಗಳು ಉತ್ತಮ ಹುಲ್ಲುಗಾವಲುಗಳಾಗುವಂತೆ ಸಮಷ್ಟಿಯಿಂದ ಪ್ರಯತ್ನಿಸಬೇಕು. ಎಲ್ಲಾದರೂ ಅಲ್ಲಲ್ಲಿ ದರ್ಖಾಸ್ತಾಗದೆ ಗೋಚರಾವಾಗಿ ಉಳಿದಿರುವ ಜಾಗವನ್ನು ಅಲ್ಲಿಯ ನೆರೆಹೊರೆಯವರು ಅರೂಪ ಮಾಡಿಸುವುದನ್ನು ನೋಡಿದರೆ ತಮ್ಮ ನಾಶವನ್ನೇ ತಾವು ತಂದುಕೊಳ್ಳುವಷ್ಟು ಅವಿವೇಕಿಗಳಾಗಿ ಕಾಣುತ್ತಾರೆ. ಇಂತಹ ಜಾಗದಲ್ಲಿ ಮತ್ತಷ್ಟು ಚೆನ್ನಾಗಿ ಹುಲ್ಲು ಬೆಳೆಯುವಂತೆ ಹುಲ್ಲಿನ ಬೀಜಗಳನ್ನು ಬಿತ್ತುವ ಬದಲಿಗೆ ಅಲ್ಲಿ ಬೇಸಿಗೆಯಲ್ಲಿ ಹೇಗಾದರೂ ಜೀವ ಹಿಡಿದು ಕೊಂಡಿರುವ ಹುಲ್ಲಿನ ಮೂಲಗಳನ್ನು ಕೆರೆದುಕೊಂಡು ಹೋಗಿ ಹಟ್ಟಿಗೆ ಹಾಕುತ್ತಿದ್ದಾರೆ. ದನಗಳು ಹಾಕಿದ ಸಗಣಿಯನ್ನೂ ಹೆಕ್ಕಿಕೊಂಡು ಹೋಗುತ್ತಾರೆ. ಇದರಿಂದಾಗಿ ವಿಶೇಷತಃ ಕರಾವಳಿಯಲ್ಲಿ ಮೊದಲು ತಕ್ಕಷ್ಟು ಉತ್ತಮ ಹುಲ್ಲುಗಾವಲಾಗಿದ್ದ ಜಾಗಗಳು ಈಗ ಬರೇ ಮರಳಿನ ಬೋಳು ಮೈದಾನುಗಳಾಗಿವೆ. ಹೀಗೆ ಹಳ್ಳಿ ಪಟ್ಟಣಗಳ ಸುತ್ತುವಳಯದಲ್ಲಿದ್ದ ಅಲ್ಪ ಸ್ವಲ್ಪ ಗೋಚರಾವಿನ ಜಾಗಗಳನ್ನೂ ಜನರು ಅವಿವೇಕತನದಿಂದ ಕೆಡಿಸುತ್ತ ಬರುವುದೂ ನಿಲ್ಲಬೇಕು. ಎಲ್ಲ ಲೋಪ ದೋಷಗಳಿಗೂ ಸರಕಾರವನ್ನೇ ದೂರುವ ಬದಲಾಗಿ ಅಂತಹ ಅನಿಷ್ಟಗಳಿಗೆ ತಾವೆಷ್ಟರ ಮಟ್ಟಿಗೆ ಹೊಣೆಯಾಗಿರುವೆವೆಂದೂ ತಮ್ಮ ಪಾಲಿನ ಕರ್ತವ್ಯವನ್ನಾದರೂ ತಾವು ಮನವಾರೆ ನಿರ್ವಹಿಸುವೆವೋ ಎಂದು ಆತ್ಮ ಪರಿಶೋಧನೆಯ ಬುದ್ಧಿಯು ಜನತೆಯಲ್ಲಿ ಬರಬೇಕು.

ಮೇಲೆ ಸೂಚಿಸಿದಂತೆ ಸರಕಾರವು ಪಟ್ಟಣ ಯಾ ಹಳ್ಳಿಗಳ ನಡುವೆಯೋ ಹೊರವಳೆಯದಲ್ಲಿಯೋ ತನ್ನ ವಶದಲ್ಲಿರುವ ಅಥವಾ ಕೇವಲ ಆಸ್ತಿ ಸಂಗ್ರಹದ ಆತುರತೆಯಿಂದಲೂ ಭಾವೀ ಲಾಭ ದೃಷ್ಟಿಯಿಂದಲೂ ರೈತರು ಬಂಜರಾಗಿಟ್ಟಿರುವ ಜಾಗವನ್ನು ಆಯಾ ಚಿಕ್ಕದಿರಲಿ ದೊಡ್ಡದಿರಲಿ, ಗೋಚರಾವಿಗಾಗಿ ಜನತೆಗೆ ಒದಗಿಸಿಕೊಡಬೇಕು. ಜನತೆಯು ಅದನ್ನು ರಕ್ಷಿಸಿಕೊಂಡು ಉತ್ತಮ ಹುಲ್ಲುಗಾವಲುಗಳಾಗುವಂತೆ ನೋಡಿಕೊಳ್ಳಬೇಕು. ಅವಿವೇಕಿಗಳು ಅವನ್ನು ಹಾಳುಮಾಡದಂತೆ ನೋಡಿಕೊಳ್ಳುವ ಅಧಿಕಾರವನ್ನು ಅಲ್ಲಲ್ಲಿಯ ಪಂಚಾಯತುಗಳಿಗೆ ಕೊಟ್ಟು ಆಗಾಗ ಸರಕಾರದ ಅಧಿಕಾರಿಗಳು ಸಂದರ್ಶನೆಯ ಮೂಲಕ ನೋಡಿಕೊಳ್ಳಬೇಕು. ಹೀಗೆ ಸರಕಾರವೂ ಜನತೆಯೂ ಪರಸ್ಪರ ಸಹಕಾರ ಸಹಾಯಗಳಿಂದ ವರ್ತಿಸಿ ಹುಲ್ಲುಗಾವಲುಗಳನ್ನು ಹೆಚ್ಚಿಸಿಕೊಂಡರೆ, ವೃದ್ಧಿಪಡಿಸಿಕೊಂಡರೆ ಪಶುಪಾಲನೆಯು ನಮ್ಮ ಜಿಲ್ಲೆಯಲ್ಲಿ ಎಷ್ಟೋ ಉತ್ತಮತರವಾದೀತು.

ಇತ್ತೀಚೆಗೆ ನಮ್ಮ ಜಿಲ್ಲೆಯ ಜನತೆ ಸಂಕಷ್ಟಗಳನ್ನು ಹಲವು ರೀತಿಗಳಿಂದ ಹೋಗೆ ಹರಿಸಲು ಅವಿಶ್ರಾಂತವಾಗಿ ದುಡಿಯುತ್ತಿರುವ ನಮ್ಮ ಜಿಲ್ಲಾಧಿಕಾರಿಗಳು ಈ ವಿಷಯಕ್ಕೂ ಗಮನಕೊಟ್ಟಾರೆಂದು ಹಾರೈಸುತ್ತೇವೆ.

ಬ್ರಿಟಿಷ್ ವಿಮಾನ ಧಾಳಿಗಳಿಂದ ಜರ್ಮನಿಗೆ ಹಾವಳಿ

ಮೂರು ಸಾವಿರ ವಿಮಾನಗಳ ಪ್ರಚಂಡ ಧಾಳಿಯಿಂದ ಜರ್ಮನಿಯ ಸಮರ ಸನ್ನಾಹ ಹಾಗೂ ಸಂಗ್ರಹ ಕೇಂದ್ರಗಳ ಹಾವಳಿಯಾಗಿದೆ.

ಹಿಂದೂ ಸಾಗರದಲ್ಲಿ ಬ್ರಿಟಿಷ ಮಹಾನೌಕಾ ಪಡೆಯು ಬಂದು ಕೂಡಿದೆ. ಮುಂದಿನ ಸಾಧನ ತಂತ್ರಗಳ ಮಂತ್ರಾಲೋಚನೆಯಾಗುತ್ತಿದೆ.

ಜಪಾನರು ಇಂಡಿಯಾಗಡಿಯ ಬರೇ ಎರಡು ಮೈಲು ಒಳಗಿನಲ್ಲಿದ್ದಾರಷ್ಟೆ! ಇಂಡಿಯಾ ಸೇನೆಯು ಜಪಾನರನ್ನು ಟಿಡ್ಡಿಮ್ ಕಡೆಗೆ ಹಿಂದೆ ಸರಿಸಿದೆ.

ಉಡುಪಿ ತಾಲೂಕು ರೈತರ ಸಭೆಯ ಸೂಚನೆಗಳು

ಉಡುಪಿ ತಾಲೂಕಿನ ರೈತ ಸಭೆಯು ಇದೇ ತಾ. ೮ರಲ್ಲಿ ಸಂಘದ ಅಧ್ಯಕ್ಷ ಶ್ರೀ. ಕೆ. ಜೆ. ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿ ಈ ಕೆಳಗೆ ಸೂಚಿಸೋಣಾದ ಠರಾವುಗಳಾದುವು.

1 ಜಿಲ್ಲೆಯ ಆಹಾರ ಪರಿಸ್ಥಿತಿಯನ್ನು ಹತೋಟಿಗೆ ತರಲು ತಕ್ಕ ಕಾರ್ಯಕ್ರಮವನ್ನು ಕೈಗೊಂಡ ಜಿಲ್ಲಾ ಕಲೆಕ್ಟರರ ಸತತ ಪ್ರಯತ್ನವನ್ನು ಅಭಿನಂದಿಸಲಾಯಿತು.

2 ಈ ವರುಷದ ಬೆಳೆಯು ಹಿಂದಿನ ದಿನಗಳ ಸೇಕಡಾ 75% ರಷ್ಟು ಸಹ ಉತ್ಪತ್ತಿಯನ್ನು ಕೊಡಲಾರದೆಂದು ಈ ಸಂಘದ ಅಭಿಪ್ರಾಯವಿರುವುದರಿಂದ ಜನತೆಯ ಜೀವನಕ್ಕೆ ಕಡಿಮೆ ಬೀಳಬಹುದಾದ ಅಂಶವನ್ನು ಹೊರ ಪ್ರಾಂತ್ಯದಿಂದ ಈಗಲೇ ತರಿಸುವ ವ್ಯವಸ್ಥೆ ಮಾಡದಿದ್ದರೆ ಆಹಾರ ಪರಿಸ್ಥಿತಿಯು ಹತೋಟಿಯಲ್ಲಿರಲಾರದೆಂದು ಈ ಸಭೆಯು ಸದಭಿಪ್ರಾಯವನ್ನೀಯುತ್ತದೆ.

3 ರೈತರು ಹಾಗೂ ಸಾಗುವಳಿದಾರರು ಸ್ಟೋರುಗಳಿಗೆ ಹಾಕತಕ್ಕ ಉಳಿತಾಯ ಅಕ್ಕಿ ಮಿತಿಯನ್ನು ನಿರ್ಧರಿಸತಕ್ಕ ಅಧಿಕಾರವು ಗ್ರಾಮ ಉದ್ಯೋಗಸ್ಥರಿಗೆ ಕೊಡಲಾಗಿದೆಯೆಂದು ತಿಳಿದುಬರುವುದರಿಂದ ಅದರ ಪರಿಣಾಮ ನೆಟ್ಟಗಾಗದೆಂದೂ ಗ್ರಾಮ ಉದ್ಯೋಗಸ್ಥರು ನಿರ್ಣಯಿಸಿದ ಮಿತಿಯನ್ನು ತನಿಖೆ ನಡಿಸುವರೆ ಸರಕಾರದಿಂದಲಾಗಲೀ ಫುಡ್ ಕೌನ್ಸಿಲಿನಿಂದಾಗಲೀ ಗ್ರಾಮ ಕಮಿಟಿಗಳು ಈ ಸಂಘದ ಪ್ರಾತಿನಿಧ್ಯದೊಡನೆ ಸ್ಥಾಪಿಸಲ್ಪಡಬೇಕಾಗಿ ಸೂಚಿಸುತ್ತದೆ. ಹೀಗಾದರೆ ಗ್ರಾಮ ಉದ್ಯೋಗಸ್ಥರು ತಮ್ಮ ಅಧಿಕಾರವನ್ನು ದುರುಪಯೋಗ ಮಾಡಲು ಅವಕಾಶವಿರಲಾರದು.

4 ಉಳಿತಾಯದ ಅಕ್ಕಿಯ ಮಿತಿಯನ್ನು ನಿರ್ಧರಿಸುವಾಗ ಹನ್ನೆರಡು ವರುಷಕ್ಕೆ ಮೇಲ್ಪಟ್ಟವರಿಗೆ ವರ್ಷಕ್ಕೆ ನಾಲ್ಕು ಮುಡಿ, ಇತರರಿಗೆ ಎರಡು ಮುಡಿ ಎಂದು ಕಳೆಯುವುದನ್ನು ದೊಡ್ಡವರಿಗೆ ದಿನ ಒಂದು ಸೇರು, ಚಿಕ್ಕವರಿಗೆ ಅರ್ಧಸೇರಿನಂತೆ ಲೆಕ್ಕ ಮಾಡಬೇಕಾಗಿ ಈ ಸಂಘದ ಸಕ್ರಿಯ ಅಭಿಪ್ರಾಯವಿದೆ. ಸಾಗುವಳಿ ಒಕ್ಕಲು ಮೊದಲಾದವರ ಅತಿಥಿಗಳಾಗಿ ಒದಗುವವರಿಗೋಸ್ಕರ ಸ್ವಲ್ಪ ಅಂಶವನ್ನು ಬಿಡಬೇಕಾಗಿಯೂ ಸೂಚಿಸುತ್ತದೆ.

5 ಈಗ ಅಕ್ಕಿ ತಯಾರು ಮಾಡಲು ಕಷ್ಟಸಾಧ್ಯವಾದುದರಿಂದ 1945ನೇ ಇಸವಿ ಜನವರಿಯಿಂದ ಅಕ್ಕಿಯನ್ನು ಸ್ಟೋರುಗಳಿಗೆ ಹಾಕಲು ನಿರ್ದಿಷ್ಟ ದಿನಗಳನ್ನು ನಿರ್ಣಯಿಸುವಂತೆಯೂ, ಕಳೆದ ವರುಷದ ದರವನ್ನೇ ಈ ಸಲವೂ ಊರ್ಜಿತದಲ್ಲಿಡುವಂತೆಯೂ ಮಾಡಿ ಉಳಿತಾಯ ಅಕ್ಕಿ ಕಳ್ಳ ಸಂತೆಗೆ ಹೋಗದಂತೆ ವ್ಯವಸ್ಥೆ ಮಾಡಬೇಕಾಗಿ ಸರಕಾರವನ್ನು ವಿನಂತಿಸುತ್ತದೆ.

6 ಗೇಣಿ ಒಕ್ಕಲುಗಳು ಧನಿಗೆ ಕೊಡತಕ್ಕ ಗೇಣಿ ಅಕ್ಕಿಯನ್ನು ಪಾವತಿಮಾಡಿದ ನಂತರ ಅವರಲ್ಲಿ ಉಳಿಯುವ ಅಲ್ಪ ಮಿತಿಯ ಅಕ್ಕಿಯು ಕೆಲವೇ ದಿನಗಳಿಗೆ ಸಾಕಾಗುವುದರಿಂದ ಅಂತಹ ಒಕ್ಕಲುಗಳಿಗೆ ಗುರುತುಚೀಟಿಗಳು ದೊರೆಯುವಂತಾಗಿ ತನಕ್ಕಾಗಿ ಅವರು ಡಿಪೋಗಳಿಂದ ಅಕ್ಕಿ ಪಡೆಯುವಂತಾಗಬೇಕು.

7 ಈ ತಾಲೂಕಿನಲ್ಲಿ ಕಳೆದ ವರ್ಷ ರೈತರೂ ಗೇಣಿ ಒಕ್ಕಲುಗಳೂ ಸ್ಟೋರುಗಳಿಗೆ ಅಕ್ಕಿ ಪಾವತಿಮಾಡುವಾಗ ಪಟ್ಟ ಕಷ್ಟನಷ್ಟಗಳ ಕಹಿ ನೆನಪು ಈಗಲೂ ಪ್ರಜ್ವಲಿಸುತ್ತಿರುವುದರಿಂದ ಈ ಬಾರಿಯೂ ಅದೇ ರೀತಿಯಾಗದಂತೆ ಈ ಕೆಳಗಿನ ಸೂಚನೆಗಳನ್ನು ಈ ಸಂಘವು ಕೊಡಲು ಬಯಸುತ್ತದೆ.

(*a*) ಅಕ್ಕಿಯಾಗಲೀ ಭತ್ತವಾಗಲೀ ಡಿಪೋಗಳಲ್ಲಿ ಅಳತೆ ಪ್ರಕಾರ ತೆಗೆದುಕೊಳ್ಳಬೇಕಲ್ಲದೆ ತೂಕ ಲೆಕ್ಕದಲ್ಲಿ ಸರ್ವಥಾ ಕೂಡದು. ಡಿಪೋಗಳಿಂದ ಹೊರಹೋಗುವ ಅಕ್ಕಿಗೂ ಇದೇ ಕ್ರಮ ಅನ್ವಯಿಸುವಂತಾಗಬೇಕು.

(*b*) ಮುಡಿ ಕಟ್ಟದೆ ಇತರ ರೀತಿಯಲ್ಲಿ ತಂದ ಅಕ್ಕಿ ವ ಭತ್ತವನ್ನು ಡಿಪೋಗಳಲ್ಲಿ ಸ್ವೀಕರಿಸಲು ತಕ್ಕ ವ್ಯವಸ್ಥೆಯಾಗಬೇಕು.

(*c*) ಡಿಪೋಗಳಲ್ಲಿ ಪ್ರತ್ಯೇಕ ಚಾರ್ಜು ವಸೂಲು ಮಾಡಕೂಡದು.

(*d*) ಮಂಗಳೂರು ಗುಡ್ಡ ಅಕ್ಕಿಗೆ ಉಡುಪಿಯ ಹಳ್ಳಿಗ ಅಕ್ಕಿ ಸರಿಸಮಾನವೆಂದು ತೀರ್ಮಾನಿಸಬೇಕು.

(*e*) ಪ್ರತಿಯೊಂದು ಡಿಪೋವಿನ ಕಾರ್ಯವನ್ನು ತನಿಖೆ ನಡಿಸುವರೆಯೂ ಏಜಂಟರಿಗೂ ಅಕ್ಕಿ ವ ಭತ್ತವನ್ನು ಪಾವತಿ ಮಾಡುವವರಿಗೂ ಉಂಟಾಗಬಹುದಾದ ತಿಕ್ಕಾಟವನ್ನು ತೀರ್ಮಾನಿಸುವರೆಯೂ ಪಂಚಾಯಿತಿಕ ಕಮಿಟಿಗಳು ನೇಮಿಸಲ್ಪಡಬೇಕು.

(ಇದರ ಪ್ರತಿಗಳು ಜಿಲ್ಲಾ ಕಲೆಕ್ಟರರಿಗೂ, ಕುಂದಾಪುರ ಸಬ್ ಕಲೆಕ್ಟರರಿಗೂ ಜಿಲ್ಲಾ ರೈತರ ಸಂಘಕ್ಕೂ ಕಳಿಸಲ್ಪಟ್ಟಿವೆ)

ಪ್ರತ್ಯಕ್ಷಪ್ರಮಾಣವೇ ನಂಬಿಕೆಗೆ ಕಾರಣ

ಬೆಲೆಗಳು ಇಳಿಯುತ್ತಿರುವದರಿಂದ, ಭವಿಷ್ಯತ್ಕಾಲಕ್ಕಾಗಿ ಈಗ ಹಣವನ್ನು ಉಳಿಸುವುದರ ಬುದ್ಧಿವಂತಿಕೆಯು ಸ್ಥಾಪಿತವಾಗುತ್ತದೆ.

ಕಳೆದವರ್ಷ ಮತ್ತು ಈ ವರ್ಷದ ಪ್ರಾರಂಭದಲ್ಲಿ ಯಾರೂ ಹಣವನ್ನು ಉಳಿಸಲಿಲ್ಲ. ಗವರ್ನಮೆಂಟಿನವರು ಪದಾರ್ಥಗಳ ಬೆಲೆಗಳನ್ನು ಇಳಿಸುವುದಕ್ಕಾಗಿ ಒಂದೋಟ ನಿಗ್ರಹ ಮಾಡದೆಯೂ, ಮತ್ತು ಅನೇಕ ವಸ್ತುಗಳ ಉತ್ಪನ್ನವನ್ನು ಹೆಚ್ಚಿಸುವ ಏರ್ಪಾಟುಗಳನ್ನು ಮಾಡದೆಯೂ, ಹೋಗಿದ್ದ ಪಕ್ಷದಲ್ಲಿ, ಕಳೆದವರ್ಷದಂತೆಯೇ, ಉಪಯುಕ್ತವಾದ ಪದಾರ್ಥಗಳ ಬೆಲೆಗಳು ಸಾಮಾನ್ಯ ಅಸಾಧ್ಯವಾಗುವ ಮಟ್ಟಿಗೆ ಏರುತ್ತಿದ್ದವು.

ಆದರೆ, ಅನೇಕ ಜನಗಳು ಮಿತವ್ಯಯದಿಂದ ಹಣ ಉಳಿಸಿದ್ದರಿಂದಲೂ, ಗವರ್ನಮೆಂಟಿನವರ ಸಮಯೋಚಿತವಾದ ಕಾರ್ಯಪ್ರದರ್ಶನದಿಂದಲೂ, ಬೆಲೆಗಳು ಬಹಳ ಮಟ್ಟಿಗೆ ಇಳಿದಿರುತ್ತವೆ. ಉಪಕರಣಗಳು, ಕಟ್ಟಡ ಮುಂತಾದ ಸ್ಥಿರ ಸ್ವತ್ತುಗಳು, ವ್ಯಾಪಾರದ ಸರಕುಗಳು, ಧಾನ್ಯಗಳಿಗಾಗಿ ಅವಿವೇಕವಾಗಿ ಯಾರಾರು ಹಣವನ್ನು ವೆಚ್ಚಮಾಡಿದರೋ, ಅವರುಗಳೇ ಆ ಪದಾರ್ಥಗಳ ಬೆಲೆ ಕಡಿಮೆಯಾಗುವದರ ಮೂಲಕ ತಮ್ಮ ಬಂಡವಾಳವು ಸಂಕುಚಿತವಾಗುತ್ತಿರುವದನ್ನು ತಮ್ಮ ಕಣ್ಣಿಂದಲೇ ಕಂಡಿರುತ್ತಾರೆ.

ಇಷ್ಟೇ ಅಲ್ಲ, ಪದಾರ್ಥಗಳ ಬೆಲೆಗಳು ಇನ್ನೂ ಇಳಿಯುತ್ತಲೇ ಹೋಗುವುವು. ಆದುದರಿಂದ ವಿವೇಕಿಗಳಾಗಿ ಇದ್ದು, ಬೆಲೆಗಳ ಇಳಿತದ ಏಟಿಗೆ ಸಿಕ್ಕಬೇಡಿ.

ಎಂದಿನಂತೆ ಈಗಲೂ ಸುರಕ್ಷಿತವಾಗಿರತಕ್ಕ ಧನ ವಿನಿಯೋಗ ಮಾರ್ಗಗಳು ಈ ಕೆಳಗೆ ನಮೂದಿಸಲ್ಪಟ್ಟಿರುತ್ತವೆ. ಪದಾರ್ಥಗಳ ಬೆಲೆ ಎಷ್ಟೇ ಏರಿಳಿತಗಳಿಗೆ ಒಳಗಾಗುತ್ತಿದ್ದರೂ ... ಬೆಲೆಯು ಹೆಚ್ಚುತ್ತಾ ಹೋಗುತ್ತದೆ. ಪದಾರ್ಥಗಳ ಬೆಲೆಯಲ್ಲಿ ಒಂದು ವೇಳೆ ಮಾತ್ರ ಕಡಿಮೆ ಯಾದರೂ ಕೂಡ, ಇವುಗಳ ಬೆಲೆಯು ಕಡಿಮೆಯಾಗುವುದಿಲ್ಲ. ಅವುಗಳು ಯಾವುವೆಂದರೆ—

- ★ ಕೋ ಆಪರೇಟಿವ್ ಸಂಘಗಳು
- ★ ಡಿಫೆನ್ಸ್, ಎಂಪರರ್ ಜಿಮ್ಮೆ
- ★ ಸೇವಿಂಗ್ಸ್ ಬ್ಯಾಂಕು ಖಾತೆ
- ★ ಪೋಸ್ಟಾಫೀಸ ಸೇವಿಂಗ್ಸ್ ಬ್ಯಾಂಕು
- ★ ಗವರ್ನಮೆಂಟ್ ಲೋನುಗಳು
- ★ ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳು.

ಭೋಗವಸ್ತುಗಳನ್ನು ತ್ಯಜಿಸಿರಿ. ಹೊಸ ಉಡುಪುಗಳು, ಹೊಸ ಕುರ್ಚಿ ಮೇಜು ಮುಂತಾದ ಸಾಮಾನುಗಳು, ಹೊಸ ಮನೆಗಳು, ಸೈಕಲ್‌ಗಳು ಮತ್ತು ಮೋಟಾರುಗಳು ಇವುಗಳನ್ನು ಕೊಳ್ಳುವುದಕ್ಕೆ ಯುದ್ಧ ನಿಂತ ನಂತರ ಬೇಕಾದಷ್ಟು ಅವಕಾಶವುಂಟಾಗುವುದು. ಈಗ ಹಣವನ್ನು ಉಳಿಸಿರಿ; ಆಗ ವೆಚ್ಚಮಾಡಿರಿ.

ಹಣವನ್ನು ಕೈಲಾದ ಮಟ್ಟಿಗೂ

ಉಳಿಸಿರಿ

ಉಳಿಸಿದ್ದನ್ನು ವಿವೇಕಮಾರ್ಗಗಳಲ್ಲಿ ವಿನಿಯೋಗಿಸಿರಿ

ಇದು ರಾಷ್ಟ್ರೀಯ ಯುದ್ಧಮುಖವು ಭಾರತೀಯರ ಸಮಕ್ಷಮದಲ್ಲಿ ಮಾಡುವ ಅರಿಕೆ

AAA 1114 KN.

ದೇಶ—ವಿದೇಶ

ಕೊಚ್ಚಿ ರಾಜ್ಯದಲ್ಲಿ ಸ್ಟೇಂಡಾರ್ಡ್ ಹೋಟೆಲುಗಳು. ಊಟಕ್ಕೆ ನಾಲ್ಕಾಣೆ

ಕೊಚ್ಚಿಯ ಫುಡ್ (ಆಹಾರ) ಖಾತೆಯ ಪ್ರೋತ್ಸಾಹದಿಂದ ಎರ್ನಾಕುಲಮಿನಲ್ಲಿ ಸ್ಟೇಂಡಾರ್ಡ್ ಹೋಟೆಲುಗಳು ತೆರೆಯಲಾಗಿವೆ. ಇವು ಅತ್ಯವಶ್ಯಕವಾದ ಮೇಲೋಗರಾದಿಗಳಿಂದ ಕೂಡಿದ ಶಾಕಾಹಾರ (ವೆಜಿಟೇರಿಯನ್) ಹೋಟೆಲುಗಳಾಗಿದ್ದು ಇವುಗಳಲ್ಲಿ ಊಟವೊಂದರ ನಾಲ್ಕಾಣೆದರ ಇದೆ. ಇವು ಸಾರ್ವಜನಿಕರ ಸೇವೆಯನ್ನು ಉತ್ತಮ ರೀತಿಯಲ್ಲಿ ಸಲ್ಲಿಸುವಂತೆ ಸರಕಾರವು ಸರ್ವ ಸಹಕಾರ ಪ್ರೋತ್ಸಾಹಗಳನ್ನೀಯುವುದಂತೆ. ಇಂತಹ ಹೋಟೆಲುಗಳು ರಾಜ್ಯದ ಇತರ ಕೇಂದ್ರಗಳಲ್ಲಿಯೂ ತೆರೆಯಲಾಗುವಂತೆ ಸರಕಾರವು ಯತ್ನಿಸುತ್ತಿದೆ.

ನೇಪಾಲದಲ್ಲಿ ಗೋರಕ್ಷಣೆ.

ಇಂಡಿಯಾದಲ್ಲಿ ಸ್ವತಂತ್ರವಾಗಿರುವ ರಾಜ್ಯ ನೇಪಾಲ. ಅಲ್ಲಿಯ ಜನರು ದನಗಳನ್ನು ಸಾಕುವುದರಲ್ಲಿ ಪೂಜ್ಯಭಾವವನ್ನಿಟ್ಟುಕೊಂಡಿದ್ದಾರೆ. ಗೋಹತ್ಯೆಗೆ ಅಲ್ಲಿ ಮರಣಾಂತ ಕಾರಾಗೃಹ ಶಿಕ್ಷೆ ಇದೆ. ನೇಪಾಲದ ರಾಜರು ಇಂದಿಗೂ ಬೆಳಗ್ಗೆ ಎದ್ದೊಡನೆ ಗೋದರ್ಶನ ಮಾಡಿ ಇತರ ವ್ಯವಹಾರಗಳನ್ನು ತೊಡಗುತ್ತಾರೆ. ದನಗಳಿಗೆ ಆಹಾರ ತಿನ್ನಿಸದೆ ನೇಪಾಲಿಯರು ಊಟ ಮಾಡರು. ಗೋಗ್ರಾಸವನ್ನು ಇಟ್ಟು ಊಟಮಾಡುವ ಕ್ರಮವು ನಮ್ಮಲ್ಲಿಯೂ ಇತ್ತು. ಈಗ ಅದು 'ಗೋಗ್ರಾಸವನ್ನು ಬಿಟ್ಟು' ಊಟಮಾಡುವ ಶುಷ್ಕ ಸಂಪ್ರದಾಯವಾಗಿದೆ.

ಹಗಲು ನಿದ್ರಿಸಿ ರಾತ್ರಿ ಕಲಿಯುವುದು ಒಳ್ಳೆಯದೋ?

ಒಳ್ಳೆಯದೆಂದು ಟರ್ಕಿಯ ವಿದ್ಯಾರ್ಥಿಗಳ ಹಾಗೂ ವಿಶ್ವವಿದ್ಯಾನಿಲಯಾಧಿಕಾರಿಗಳ ಪರಿಶೋಧನೆ. ವಿದ್ಯಾರ್ಥಿಗಳಂತಹ ಮಿದುಳಿಂದ ಕೆಲಸಮಾಡುವವರಿಗೆ ಹಗಲಿನ ಗುಲ್ಲು ಗಲಾಟೆ ಗಡಿಬಿಡಿಯ ಸಮಯಕ್ಕಿಂತ ರಾತ್ರಿಯ ನಿಶ್ಶಬ್ದ ಕಾಲವೇ ವ್ಯಾಸಂಗಕ್ಕೆ ಉತ್ತಮವೆಂದು ಅವರ ಸಿದ್ಧಾಂತ. ಹಗಲು ನಿದ್ರಿಸುವ ಮತ್ತು ರಾತ್ರಿ ನಿದ್ರಿಸುವ ವಿದ್ಯಾರ್ಥಿಗಳ ಪರೀಕ್ಷಾ ಫಲಿತಾಂಶವನ್ನು ಹೋಲಿಸಿ ನೋಡಿಯೂ ಹಗಲು ನಿದ್ರಿಸುವವರದೇ ಉತ್ತಮ ತರವೆಂದು ತಿಳಿದು ಬಂದಿದೆಯಂತೆ.

ಅಳಬೇಡಿರಿ. ಕಣ್ಣೀರಲ್ಲಿರುವ ರೋಗಾಣುನಾಶಕ ಜೀವಿಗಳು ನಷ್ಟವಾಗುತ್ತವೆ.

ಅಮೇರಿಕಾ ಮತ್ತು ಯುರೋಪಿನ ಕೆಲವು ವೈದ್ಯ ಶಾಸ್ತ್ರಜ್ಞರು ಕಣ್ಣೀರಲ್ಲಿ ಎಪಿಟನ್ ಮತ್ತು ಬ್ಯಾಕ್ಟೀನ್ಸ್ ಎಂಬ ಸತ್ವಗಳಿವೆಯೆಂದೂ ಅವು ರೋಗಾಣು ನಾಶಕಾರಿಗಳಾಗಿವೆಯೆಂದೂ ಸಂಶೋಧಿಸಿದ್ದಾರೆ. ಕಣ್ಣೀರು ಸುರಿಸಿದರೆ ಈ ಉಪಯುಕ್ತ ರಸವಿಶೇಷಗಳು ನಷ್ಟವಾಗುತ್ತವೆಯೆಂದು ಅವರ ಮತ.

ರಾವ್ ಬಹದ್ದೂರ್ ಬಿರುದು ಬೇಡವೆಂದರು.

ನಮ್ಮ ಉಡುಪಿಯ ಉದ್ಯಾವರದವರಾಗಿ ಈಗ ಬೊಂಬಾಯಿಯಲ್ಲಿರುವ ಇಂಡಿಯನ್ ಮೆಡಿಕಲ್ ಜರ್ನಲ್, ಇಂಡಿಯನ್ ಮೆಡಿಕಲ್ ಡೈಜೆಸ್ಟ್ ಮುಂತಾದ ವೈದ್ಯಕೀಯ ಪತ್ರಿಕಾ ಸಂಪಾದಕರೂ ಅಖಿಲ ಭಾರತ ವೈದ್ಯ ಸಂಘದ ಪ್ರಧಾನ ವ್ಯಕ್ತಿಯೂ ಆಗಿರುವ ಡಾ. ಯು. ಬಿ. ನಾರಾಯಣ ರಾಯರಿಗೆ ಚಕ್ರವರ್ತಿಗಳ ಕಳೆದ ಜನ್ಮದಿನೋತ್ಸವದಲ್ಲಿ ಕೊಡಲಾದ ಮೇಲ್ಕಂಡ ಬಿರುದನ್ನು ಅಂಗೀಕರಿಸದೆ ಇಂತಹ ಬಿರುದಿಗಿಂತ ತನಗೆ ಸಾರ್ವಜನಿಕ ಸೇವೆಯೇ ಭೂಷಣವೆಂದೂ ಬೇರೆ ಬಿರುದುಗಳನ್ನು ಧರಿಸಿ ಮೆರೆಯಲು ಮನಸ್ಸೊಪ್ಪದ ಕಾರಣ ಬಿರುದನ್ನು ಅಂಗೀಕರಿಸದುದಕ್ಕೆ ದಯಮಾಡಿ ಕ್ಷಮಿಸಬೇಕೆಂದೂ ಇಂಡಿಯಾ ಸರಕಾರಕ್ಕೆ ವಿನಯ ಪತ್ರಬರೆದಿದ್ದಾರೆ.

ಬೆಂಕಿಯು ಮರವನ್ನು ಸುಡದಂತೆ ಮಾಡಬಹುದು.

ಅಮೇರಿಕದ ನೌಕಾ ಖಾತೆಯವರ ಶೋಧನೆ

ಇವರು ಬೆಂಕಿಯು ಸುಡಲಾಗದ ಒಂದು ಲೇಪವನ್ನು ಕಂಡುಹಿಡಿದಿರುವರು. ಇದನ್ನು ತಗಡಿನಷ್ಟು ತೆಳ್ಳಗೆ ಸಿಗಿದ ಮರದ ಹಲಗೆಗೆ ಸವರಿದರೆ ಆ ಹಲಗೆಯು ನೀರು ಕುದಿಸಲಿಕ್ಕೆ ಬೇಕಾಗುವ ಕಾವಿನ ದಶಾಧಿಕ ಉಷ್ಣತೆಯನ್ನು ಹಾಕಿದರೂ ಸುಡಲಾರದಂತೆ. ಮಾತ್ರವಲ್ಲ, ನೀರಿಗೂ ಅದರ ಆಘಾತಕ್ಕೂ ಇಂತಹ ಹಲಗೆಯು ಹಾಳಾಗುವುದಿಲ್ಲವಂತೆ. ನೌಕಾ ರಚನೆಯಲ್ಲಿ ಈ ಲೇಪದ ಪ್ರಯೋಗವನ್ನು ಮಾಡಲು ತೊಡಗಿದ್ದಾರೆ ಅಲ್ಲಿ.

ರಷ್ಯಾ ಜನರ ಅದ್ಭುತ ಸಾಹಸ.

ಮರುಭೂಮಿಯು ಫಲೋದ್ಯಾನವಾಯಿತು. ಮೋಸ್ಕೋವಿಂದ ಸಾವಿರದ ಮುನ್ನೂರು ಮೈಲು ದೂರದಲ್ಲಿರುವ ಮಧ್ಯ ಏಷ್ಯ ಪ್ರದೇಶದಲ್ಲಿ ರಷ್ಯಕ್ಕೆ ಸೇರಿದ ವಿಶಾಲ ಮರುಭೂಮಿಯಿದೆ. ಇದಕ್ಕೆ ಅತಿದೂರವಲ್ಲದ ಅಲ್ಟ್ಯ ಪರ್ವತ ಪ್ರದೇಶದಲ್ಲಿ ಸರೋವರಗಳಿವೆ. ಅಲ್ಲಿಂದಿಲ್ಲಿಗೆ ನೀರನ್ನು ಹರಿಯಿಸುವ ಯೋಜನೆ ಹೊಳೆದನಂತರ ೪೫ ದಿವಸಗಳಲ್ಲಿ ಇಪ್ಪತ್ತು ಲಕ್ಷ ಕೂಲಿಯವರು ಕೂಡಿ ಕಾಲುವೆ ತೋಡುತ್ತ ತೋಡುತ್ತ ಭಗೀರಥನ ಹಿಂದೆ ಭಾಗೀರಥಿ ಬಂದಂತೆ ನೀರನ್ನು ತಂದೇಬಿಟ್ಟರು ಆ ಮರುಭೂಮಿ ಪ್ರದೇಶಕ್ಕೆ. ಪರಿಣಾಮವಾಗಿ ಈಗ ಅಲ್ಲಿ ಹದಿಮೂರು ಲಕ್ಷ ಎಕ್ರೆ ವಿಸ್ತೀರ್ಣದ ವಿವಿಧ ಫಲೋದ್ಯಾನ ಕಂಗೊಳಿಸುತ್ತಿದೆ. ಸಮರ್ಕಂದ್ ಹಳೆಯ ಕರಕಾಲುವೆಗಳಲ್ಲಿ ತುಂಬಿದ್ದ ಕೆಸರನ್ನು ತೆಗೆದು ನೀರಿನ ಬುಗ್ಗೆಯನ್ನು ಎಬ್ಬಿಸೋಣವೆಂದರೆ ಅಲಸಗಾರರಾಗಿ ಕುಳಿತಿರಲ್ಲಿ ಬರುವವರು ಯಾರೂ ಇಲ್ಲ

ಅಮೇರಿಕದಲ್ಲಿ ಭಾರತೀಯ ಪತ್ರಿಕಾ ಪ್ರಕಟಣೆ

ಭಾರತೀಯ ಸಾಹಿತ್ಯ ಸಂಸ್ಕೃತಿಗಳ ವಿಷಯವಾಗಿಯೂ ಭಾರತದ ಪ್ರಸಿದ್ಧ ಪುರುಷರ ಕುರಿತೂ ಭಾರತದ ಯುದ್ಧ ಪ್ರಯತ್ನದ ವರದಿಯೂ ಸಹ ಪ್ರಕಟವಾಗುವ ಒಂದು ವೃತ್ತಪತ್ರಿಕೆಯನ್ನು ಇಂಡಿಯಾ ಸರಕಾರವು ಅಮೇರಿಕೆಯಲ್ಲಿ ಹೊರಡಿಸುವುದಾಗಿ ತಿಳಿದು ಬಂದಿದೆ.

ರಷ್ಯದಲ್ಲಿಯ ಮಕ್ಕಳು.

ಅಲ್ಲಿ ಹದಿನಾಲ್ಕು ವರುಷಕ್ಕಿಂತ ಕಿರಿಯರಾಗಿರುವವರು ದುಡಿಯುವುದು ಕಾನೂನಿಗೆ ವಿರುದ್ಧ. ಅಂತಹರನ್ನು ದುಡಿಸಿದವರಿಗೆ ಕಠಿಣ ಶಿಕ್ಷೆ. ಮಕ್ಕಳನ್ನು ಹದಿನಾರು ವರುಷಗಳ ವರೆಗೆ ಸಾಕುವ ಕಲಿಸುವ ಮತ್ತು ಅವರಿಗೆ ಬೇಕಾಗುವ ಅನುಕೂಲ ಪರಿಸ್ಥಿತಿ ಸೌಕರ್ಯ ಸೌಲಭ್ಯಗಳನ್ನು ಒದಗಿಸಿಕೊಟ್ಟು ಅವರ ಶಕ್ತಿ, ಯುಕ್ತಿ, ವಿದ್ಯಾಬುದ್ಧಿಗಳು ವಿಕಾಸವಾಗುವಂತೆ ಮಾಡುವ ಹೊಣೆಗಾರಿಕೆಯು ಸರಕಾರದ್ದೂ ಸಮಾಜದ್ದೂ ಆಗಿದ್ದುಕೊಂಡು ಪರಿಪಾಲಿಸಲ್ಪಡುತ್ತದೆ. ಮಕ್ಕಳು ದೇಶದ ಅಮೂಲ್ಯ ಸೊತ್ತೆಂದೂ ದೇಶದ ಭವಿಷ್ಯವನ್ನು ನಿರ್ಮಾಣಮಾಡುವವರೆಂದೂ ರಷ್ಯನರ ಸಿದ್ಧಾಂತ.

ತ್ರಿಮೂರ್ತಿಗಳ ಮತ್ತೊಂದು ಸಮ್ಮೇಳನ.

ರೂಜ್ವೆಲ್ಟ್, ಚರ್ಚಿಲ್ ಮತ್ತು ಸ್ಟಾಲಿನ್ ಈ ಮೂವರು ಮಿತ್ರ ಪಕ್ಷದ ಅಗ್ರೇಸರರ ಮತ್ತೊಂದು ಸಮ್ಮೇಳನವು ಸದ್ಯದಲ್ಲೇ ಜರಗುವುದಾಗಿ ತಿಳಿದುಬಂದಿದೆ.

ಯುದ್ಧಪರಿಸ್ಥಿತಿಯು ಕಠಿಣವಾಗಿಲ್ಲವೆಂದು ಭಾವಿಸಬಾರದು.

ಚರ್ಚಿಲ್ಲರ ಹೇಳಿಕೆ-

ನಾವು ವಿಜಯಿಗಳಾಗುವೆವೆಂದು ಖಚಿತವೆನಿಸುವುದಾದರೂ ಪರಿಸ್ಥಿತಿಯು ಗಹನವಾಗಿಲ್ಲವೆಂದು ನಾವು ಭಾವಿಸಬಾರದು. ಮುಂದಿನ ಕೆಲವು ತಿಂಗಳುಗಳಲ್ಲಿ ನಾವು ಹೇರಳವಾಗಿ ರಕ್ತಸುರಿಯ ಬೇಕಾಗಿರುತ್ತದೆ. ಪ್ರಾಗತಿಕ ಅಪ್ರಾಗತಿಕ ಮಜೂರ ಪಕ್ಷಗಳೆಂಬ ಭೇದವಿಲ್ಲದೆ ಎಲ್ಲರ ರಕ್ತವೂ ಸುರಿಯಬೇಕಾಗುವುದು. ಆದರೆ ಸೇನೆಯ ಹಿನ್ನೆಲೆಯ ಜನಜೀವನವು ಸುರಕ್ಷಿತವಾಗಿರುವಂತೆ ನೋಡಿಕೊಳ್ಳುವುದು ನನ್ನ ಕರ್ತವ್ಯ. ಆದುದರಿಂದ ಅನವಶ್ಯಕವಾದ ಭಿನ್ನಾಭಿಪ್ರಾಯಗಳನ್ನು ಹದಮೀರಿದ ಉತ್ಸತಿಗಾಗಲಿ ಪರಿಮಾಣಕ್ಕಾಗಲಿ ಎಳೆಯಬಾರದೆಂದು ನನ್ನ ಅಪೇಕ್ಷೆ-ಎಂದು ಚರ್ಚಿಲ್ಲರು ಯುದ್ಧ ಮಂತ್ರಾಲೋಚನೆಯ ಭವನದಿಂದ ನೇರಾಗಿ ಕಾಮನ್ಸ್ ಸಭೆಗೆ ಬಂದವರೆಂದರು.

ಮಾರ್ಷಲ್ ಪೆಟೆನ್ನನ ಮೇಲೆ ರಾಜ್ಯದ್ರೋಹದ ಆರೋಪಣೆ.

ಪೆಟೆನ್ನನ ಮೇಲೆ ಹೊರಿಸಲ್ಪಟ್ಟಿರುವ ರಾಜ್ಯದ್ರೋಹದ ಆರೋಪಣೆಯ ಸಂಬಂಧವಾಗಿ ಸಾಕ್ಷಿಗಳನ್ನು ಸಂಗ್ರಹಿಸುವುದಕ್ಕೂ ಶೋಧನೆಗಳನ್ನು ಮಾಡುವುದಕ್ಕೂ ಹೇಳಿಕೆಗಳನ್ನು ಕೇಳುವುದಕ್ಕೂ ತದ್ವಿತರ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕೂ ಪ್ಯಾರಿಸ್ಸಿನ ಪೋಲೀಸ್ ಕಮಿಷನರಿಗೆ ಪ್ಯಾರಿಸ್ ಮಿಲಿಟೆರಿಟ್ರ್ಯಾಬ್ಯೂನಲ್ ಅಧಿಕಾರ ಸ್ಥಾನದಿಂದ ಅಪ್ಪಣೆ ಹೊರಟಿದೆ.

ಇಂಡಿಯನ್ ಮೆಡಿಕಲ್ ಸ್ಕೂಲ್ ಪ್ರಿನ್ಸಿಪಾಲರ ಹುಕುಮಿನ ತಿದ್ದುಪಡಿ

ಮದ್ರಾಸು ಸರಕಾರವು ಈ ಶಾಲೆಯ ವಿದ್ಯಾರ್ಥಿಗಳು ಇತ್ತೀಚೆಗೆ ಹೂಡಿದ ಮುಷ್ಕರದ ಪರಿಣಾಮವಾಗಿ ಅವರ ಅಕ್ರಮ ವರ್ತನೆಯ ವಿಷಯವಾಗಿ ಪ್ರಿನ್ಸಿಪಾಲರು ಕೊಟ್ಟ ಆಜ್ಞೆಯನ್ನು ಪುನಃಮರ್ಶಿಸಿ ತಿದ್ದುಪಡಿ ಮಾಡಿದೆ.

ಪ್ರಿನ್ಸಿಪಾಲರ ಹುಕುಮಿನಿಂದ ಹೊರತಳ್ಳಲ್ಪಟ್ಟ ಐವರು ವಿದ್ಯಾರ್ಥಿ ಮುಖಂಡರು ಇನ್ನು ಹನ್ನೆರಡು ತಿಂಗಳು ದಾಟುವ ತನಕ ಪರೀಕ್ಷೆಗೆ ಕುಳಿತುಕೊಳ್ಳಕೂಡದು. ಡಿಪ್ಲೋಮಾ ದೊರಕಿದ್ದರೆ ಅವರಿಗೆ ಆ ಅವಧಿ ಮುಗಿಯುವ ತನಕ ಅದು ಕೊಡಲಾಗುವುದಿಲ್ಲ. ಉಳಿದ ವಿದ್ಯಾರ್ಥಿಗಳ ಮೇಲೆ ಹೊರಿಸಿದ ದಂಡ ತೆರುಗೆಯನ್ನು ಮನ್ನಾಮಾಡಲಾಗಿದೆ. ಆದರೆ ಅವರಲ್ಲಿ ಕಳೆದ ಸಪ್ಟಂಬರದ ಪರೀಕ್ಷೆಗೆ ಕುಳಿತುಕೊಳ್ಳುವವರಿದ್ದು ಅವರು ಕುಳಿತುಕೊಳ್ಳದಿದ್ದರೆ ಅವರು ಆ ಪರೀಕ್ಷೆಯಲ್ಲಿ ಸೋತವರೆಂದು ಪರಿಗಣಿಸಲ್ಪಡಲಾಗುವುದು. ಅವರು ತಿರುಗಿ ಪುನರಾವರ್ತನೆಯ ಶುಲ್ಕ ಕೊಟ್ಟು ಎಪ್ರಿಲ್ ತಿಂಗಳ ಪರೀಕ್ಷೆಗೆ ಕುಳಿತುಕೊಳ್ಳಬಹುದು.

ಸೈಯದರ ಬಿಡುಗಡೆ ಅನಾರೋಗ್ಯದ ಕಾರಣದಿಂದಲ್ಲ.

ಸೈಯದ್ ಮಹಮ್ಮದರು ಅನಾರೋಗ್ಯದಿಂದ ಇದ್ದಿಲ್ಲವೆಂದೂ ವೈದ್ಯಕೀಯ ಕಾರಣಗಳಿಂದ ಅವರ ಬಿಡುಗಡೆಯಾದುದಲ್ಲವೆಂದೂ ಡಿಲ್ಲಿಯಿಂದ ಸುದ್ದಿ.

ನೆಹರೂಗಳ ವಿಷಯ ಸರಕಾರದ ಪ್ರಕಟಣೆ

ನೆಹರೂಗಳವರು ಇನ್‌ಫ್ಲುಯೆಂಜಾದಿಂದ ಪೀಡಿತರಾಗಿರುವರೆಂದು ಪತ್ರಿಕೆಗಳಲ್ಲಿ ಸುದ್ದಿ ಬಂದುದು ಸರಿಯಲ್ಲ. ಅವರಿಗೆ ಸಾಮಾನ್ಯ ಶೀತವಾಗಿತ್ತು. ಅದರಿಂದ ಅವರು ಗುಣಹೊಂದಿ ಚೈತನ್ಯಪೂರ್ಣರಾಗಿ ಚುರುಕಾಗಿ ಒಳ್ಳೆಯ ಆರೋಗ್ಯದಿಂದ ಇದ್ದಾರೆ ಎಂದು ಬೊಂಬಾಯಿ ಸರಕಾರದ ಪ್ರಕಟಣೆ.

ಕಸ್ತೂರಿಬಾ ಸ್ಮಾರಕ ನಿಧಿ.

ತಾ ೬ರ ಸಾಯಂಕಾಲಕ್ಕೆ ಈ ನಿಧಿಯ ಮೊತ್ತವು ಒಂದುಕೋಟಿಯ ಹದಿನೈದು ಲಕ್ಷವಾಗಿದೆಯೆಂದೂ ದಿನ ಹೋದಂತೆ ಏರುತ್ತಾ ಬರುತ್ತಿದೆ ಎಂದೂ ಪ್ರಾಂತ ಪ್ರಾಂತದ ಮೊಬಲಗು ವಿವರವನ್ನು ಶೀಘ್ರದಲ್ಲೇ ಪ್ರಕಟಿಸಲಾಗುವುದೆಂದೂ ನಿಧಿಯ ಕಾರ್ಯದರ್ಶಿ ಶ್ರೀ ಎ. ವಿ. ಥಕ್ಕರ್ ಇವರ ಹೇಳಿಕೆ—ಇದರ ಅಧಿಕಾಂಶವನ್ನು ಆಯಾ ಪ್ರಾಂತ ಜಿಲ್ಲೆಗಳಲ್ಲೇ ಸ್ತ್ರೀಯರ ಮತ್ತು ಶಿಶುಗಳ ಒಳ್ಳಿತಕ್ಕಾಗಿ ವಿನಿಯೋಗಿಸುವ ಯೋಜನೆ ಇದೆ.

ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್, ಉಡುಪಿ.
ತಾ 11—10—44ರಿಂದ
ಸಾಹಸ ಚಿತ್ರ
ಸಫೇದ್ ಸವಾರ್
ನವೀನ ಯಾಜ್ಞಿಕ್, ರಾಧಾರಾಣಿ, ಆಗಾ.
15—10—44ರಿಂದ ರಣಜಿತ್ ಚಿತ್ರ
ಬೇಟಿ
ಖುರ್ಷಿದ್, ವಾಸಂತಿ, ಅರುಣ ಕುಮಾರ್.
ಬರುವುದು ಕನ್ನಡ ವಾಣಿ

ಕಳೆದೊಂದು ವಾರದಲ್ಲಿ ಯುದ್ಧದ ನಡೆ

ಇಟೆಲಿಯು ಮಿತ್ರ ಪಕ್ಷದ ವಶವಾದ ಕಾರಣ ಮಗ್ಗುಲ ಹೊಡೆತದ ಭೀತಿಯಿಲ್ಲದೆ ಅವರು ಯುರೋಪಿನ ಆಗ್ನೇಯ ಭಾಗದಿಂದ ವೈರಿಯನ್ನು ಪ್ರತಿಭಟಿಸಿ ಹಿಂದೋಡಿಸುತ್ತ ಮುನ್ನುಗ್ಗುತ್ತಿದ್ದಾರೆ. ಆಲ್ಬೇನಿಯಾದಲ್ಲಿ ಮಿತ್ರ ಪಕ್ಷದ ಸೇನೆ ಪ್ರವೇಶಿಸಿಯದೆ, ಮತ್ತೊಂದು ಕಡೆ ಗ್ರೀಸದ ಮೂರು ದ್ವೀಪಗಳು ನಮ್ಮ ವಶವಾಗಿವೆ. ಗ್ರೀಸದ ಪೆಲೋಪೊನೀಸಿಸ್‌ನಲ್ಲಿ ಸೈನ್ಯ ಇಳಿದಿದೆ. ವೈರಿಯು ದಕ್ಷಿಣ ಗ್ರೀಸನ್ನು ಬಿಟ್ಟು ಉತ್ತರಕ್ಕೆ ಸರಿಯುತ್ತಿದ್ದಾನೆ. ಕೋರಿಂತನ್ನು ಬಿಟ್ಟನು. ಏಥನ್ಸ್‌ನಲ್ಲಿ ಕದನವಾಗುತ್ತಿದೆ. ಆಲ್ಬೇನಿಯಾ ಕರಾವಳಿಯಲ್ಲಿ ಮಿತ್ರ ಪಕ್ಷದ ಸೇನೆ ಇಳಿದು ಯುಗೋಸ್ಲೋವೇಕಿಯಾ ಮತ್ತು ಸಲೋನಿಕಾದ ಕಡೆಗೆ ಶತ್ರುವನ್ನು ಹಿಮ್ಮೆಟ್ಟಿಸುತ್ತ ಮುನ್ನುಗ್ಗುತ್ತಿವೆ. ಹೀಗೆ ಪೆಲೋಪೊನೀಸದಿಂದಲೂ ಸೆಲೋನಿಕದಿಂದಲೂ ಮುನ್ನುಗ್ಗುವ ಸೈನ್ಯಗಳ ಇಕ್ಕಳದ ಬಾಯಿಗೆ ಸಿಗದಂತೆ ಜರ್ಮನ ಸೇನೆಗಳು ದಕ್ಷಿಣ ಗ್ರೀಸನ್ನೇ ಬಿಟ್ಟು ಹಿಂದೋಡುತ್ತಿವೆ.

ಜರ್ಮನಿಯ ಪಶ್ಚಿಮ ಭಾಗದಲ್ಲಿ ಡಚ್ ಮತ್ತು ಸ್ವಿಸ್ ಗಡಿಗಳ ನಡುವಿನ ಮುನ್ನೂರು ಮೈಲು ಉದ್ದದ ಯುದ್ಧಮುಖದಲ್ಲಿ ಮೂರು ಮಿಲಿಯ ಜರ್ಮನರು ಪ್ರತಿಕೂಲ ಪರಿಸ್ಥಿತಿಯಲ್ಲಿದ್ದಾರೆಂದು ಜರ್ಮನ್ ವಂದಿಯೇ ಇದೆ. ಸಿಗ್‌ಫ್ರೀಡ್ ಗೋಡೆಯು ಮಿತ್ರಪಕ್ಷದವರಿಂದ ಭೇದಿಸಲ್ಪಟ್ಟಿದೆ. ಅಮೇರಿಕಾ ಸೇನೆ ನಾದೆಳವು ಬೇಸಾಗೆಗೆ ಹರಡಿದಂತೆ ಏಚನಿನಿಂದ ಉತ್ತರಕ್ಕೆ ಹರಡುತ್ತಿದ್ದಾರೆ. ವೈರಿಯು ಉಗ್ರವಾಗಿ ಪ್ರತಿಭಟಿಸುತ್ತಿದ್ದಾನೆ.

ಜರ್ಮನಿಯ ಪೂರ್ವ ರಣಕ್ಷೇತ್ರದಲ್ಲಿ ರಸ್ಯದ ಮುಖ್ಯ ವಿಜಯವು ದಕ್ಷಿಣದಲ್ಲಿ. ಅದು ಯುಗೊಸ್ಲೋವೇಕಿಯಾದ ರಾಜಧಾನಿಗೆ ಸಮೀಪವರ್ತಿಯಾಗಿ ಬಂದಿದೆ. ರುಮೇನಿಯಾ ಗಡಿಯನ್ನು ದಾಟಿ ಹಂಗೇರಿಯಾದೊಳಗೆ ಪ್ರವೇಶಿಸಿದ್ದಾರೆ. ಅಲ್ಲಿ ಹಲವು ಪಟ್ಟಣಗಳನ್ನು ವಶಪಡಿಸಿಕೊಂಡಿರುವರು. ಪೂರ್ವ ಪ್ರಶ್ಯವನ್ನು ಸುತ್ತುಗಟ್ಟಿ ಪ್ರವೇಶಿಸಲು ಒಂದು ಸೇನೆಯು ಪೋಲಿಶ್ ಪ್ರದೇಶದಿಂದಲೂ ಮತ್ತೊಂದು ಸೇನೆಯು ಲಿತುವೇನಿಯದಿಂದಲೂ ಮುಂದುವರಿಯುತ್ತಿವೆ

ಜಪಾನರು ಇಂಡಿಯಾದ ಗಡಿಯನ್ನು ಬಿಟ್ಟು ಹಿಂದೆ ಸರಿಯಲು ಇನ್ನೇಡೇ ಮೈಲು ಇದೆ. ಅರಕಾನ್‌ತಪ್ಪಲುಗಳಲ್ಲಿ ಅಲ್ಲಲ್ಲಿ ತುಂಡು ಕಾಳಗಗಳಾಗುತ್ತಲಿವೆ. ಬ್ರಿಟಿಷರ ಪ್ರಬಲ ನೌಕಾ ಪಡೆಯೊಂದು ಹಿಂದೂ ಸಾಗರದಲ್ಲಿ ಗುಂಪುಗೂಡಿದೆ. ಶಾಂತ ಸಾಗರಕ್ಕೆ ಒಯ್ಯುವ ಸಾಧನೋಪಾಯಗಳ ಯೋಜನೆಯು ವಿಚಾರಪೂರ್ಣವಾಗಿ ನಡೆಯುತ್ತದೆ

ಕೆಂಪು ಸೇನೆಯು ರುಮೇನಿಯಾ ಗಡಿಯನ್ನು ದಾಟಿ ಹಂಗೇರಿಗೆ ಪ್ರವೇಶಿಸಿ ಹಲವು ಪಟ್ಟಣಗಳನ್ನು ವಶಪಡಿಸಿಕೊಂಡಿದೆ ಬೆಲ್ಗ್ರೇಡು ಪತನೋನ್ಮುಖವಾಗಿದೆ.

ಬುಡಾಪೆಸ್ಟಿನಿಂದ ಒರೇ ನೂರು ಮೈಲು ದೂರದೊಳಗಿದೆ ರಸ್ಯದ ಸೈನ್ಯ.

ಅಮೇರಿಕಾ ಸೇನೆಯು ಏಕೆನ್‌ನ್ನ ಉತ್ತರದಲ್ಲಿ ಮುನ್ನುಗ್ಗಿದೆ– ಅಲ್ಲಿ ಜರ್ಮನರ ಪ್ರತಿಭಟನೆ ಒಮ್ಮಿಂದೊಮ್ಮೆಗೆ ಕುಗ್ಗಿದೆ. ಆ ಪಟ್ಟಣದ ದಕ್ಷಿಣದಲ್ಲಿ ಅದು ಪ್ರತಿಭಟಿಸಲಿಕ್ಕೆ ಸಿದ್ಧವಾಗುತ್ತದೆ.

—ವೆಂಡೆಲ್ ವಿಲ್ಕಿಯವರ ನಿಧನ—

ವೆಂಡೆಲ್ ವಿಲ್ಕಿಯವರ ನಿಧನ.
ಅಮೇರಿಕದ ಪ್ರಸಿದ್ಧ ರಾಜಕಾರಣಿ ಭಾರತೀಯ ಸ್ವಾತಂತ್ರ್ಯದ ಪಕ್ಷಪಾತಿ

ಅಮೇರಿಕದ ಪ್ರಸಿದ್ಧ ರಾಜಕೀಯ ಮುಂದಾಳುಗಳಲ್ಲೊಬ್ಬರೂ ಭಾರತದ ಹಿತೈಷಿಗಳೂ ಆಗಿದ್ದ ವೆಂಡೆಲ್ ಲೂಯಿಸ್ ವಿಲ್ಕಿಯವರು ತಮ್ಮ ೫೨ನೆಯ ವಯಸ್ಸಿನಲ್ಲಿ ತಾ. ೮ರಂದು ಮೃತರಾದರು. ಇವರು ಪ್ರಸಿದ್ಧ ಬ್ಯಾರಿಸ್ಟರೂ ಹಲವು ದೊಡ್ಡ ದೊಡ್ಡ ಉದ್ಯಮ ಸಂಘ ಸಂಸ್ಥೆಗಳ ಚಾಲಕರೂ ಆಗಿದ್ದರು ರಾಜಕೀಯ ವಿಷಯಗಳಲ್ಲಿಯೂ ಅಮೇರಿಕದಲ್ಲಿ ಪ್ರತಿಷ್ಠಾವಂತರಾಗಿದ್ದರು. ೧೯೪೦ರಲ್ಲಿ ಅಮೇರಿಕದ ಸಂಯುಕ್ತ ರಾಷ್ಟ್ರಗಳ ಅಧ್ಯಕ್ಷತನಕ್ಕೆ ರೂಜ್ವೆಲ್ಟರ ಪ್ರತಿಸ್ಪರ್ಧಿಯಾಗಿ ನಿಂತಿದ್ದರು. ಅದರಲ್ಲಿ ಸೋತರೂ ಅಮೇರಿಕಾದ ರಾಜಕೀಯ ವಿಷಯಗಳಲ್ಲಿ ತನ್ನ ವರ್ಚಸ್ಸನ್ನು ಉಳಿಸಿಕೊಂಡು ರೂಸ್ವೆಲ್ಟರ ವಿದೇಶೀಯ ಧೋರಣೆಗೆ ಪ್ರಬಲ ಬೆಂಬಲಕೊಟ್ಟವರಿವರು. ೧೯೪೨ರಲ್ಲಿ ಇವರು ರೂಸ್ವೆಲ್ಟರ ವಿಶೇಷ ಪ್ರತಿನಿಧಿಯಾಗಿ ಪಶ್ಚಿಮ ಏಷ್ಯ, ರಷ್ಯ ಮತ್ತು ಚೀನಾ ದೇಶಗಳಲ್ಲಿ ಸಂಚರಿಸಿದರು. ಇದರ ಪರಿಣಾಮವಾಗಿ ಇವರು ಬರೆದ ಪ್ರಸಿದ್ಧ ಗ್ರಂಥವಾದ ಏಕ ಜಗತ್ತು (One World) ಎಂಬುದರಲ್ಲಿ ಇಂಡಿಯಾದ ಸ್ವಾತಂತ್ರ್ಯವನ್ನತಿ ಪುಷ್ಟೀಕರಿಸಿ ಬರೆದಿರುವರು. 'ನಾವು ಸಾರುತ್ತಿರುವ ಅಂತಿಮ ಧ್ಯೇಯವನ್ನು ನಾವು ನಿಜವಾಗಿ ನಂಬುವುದಾದರೆ ಮತ್ತು ಆ ಅಂತಿಮ ಧ್ಯೇಯ ಸಾಧನೆಗಾಗಿ ಪೂರ್ವ ದೇಶೀಯರು ನಮ್ಮೊಡನೆ ಕೂಡಿ ಬರುವಂತೆ ಸ್ಫೂರ್ತಿಯನ್ನುಂಟು ಮಾಡಬೇಕಾದರೆ ನಾವು ನಮ್ಮ ಅಧಿಕಾರವನ್ನು ದೃಢಪಡಿಸಿಕೊಳ್ಳುವ ಹಂಚಿಕೆಗಳನ್ನೆಲ್ಲ ತ್ಯಜಿಸಬೇಕು. ನಮ್ಮ ಸ್ವಾರ್ಥ ಸಾಧನೆಗಾಗಿ ಪೌರ್ವಾತ್ಯ ಜನಗಳನ್ನು ಕುಣಿಸುವ ಮತ್ತು ಒಂದರ ಮೇಲೊಂದನ್ನು ಕೋಳಿ ಕಾಳಗಕ್ಕೆ ಬಿಡುವ ಹವ್ಯಾಸವನ್ನು ಬಿಡಬೇಕು' ಎಂದು ಸ್ವಸ್ಫೂರ್ತಿಗಳಿಂದ ಬರೆದ ಲೋಕ ಸ್ವಾತಂತ್ರ್ಯಪ್ರಿಯರಿದ್ದರು ವೆಂಡೆಲ್ ವಿಲ್ಕಿಯವರು.

ಹಿಟ್ಲರನ ಲೆಫ್ಟಿನೆಂಟ್ ರೂಡೋಲ್ಫ್ ಶಿಮೊಂಡ್‌ರ ಮರಣ-

ಜುಲೈ ತಾ. ೨೦ರಂದು ಹಿಟ್ಲರನ ವಿರೋಧಿಗಳು ಅವನನ್ನು ಕೊಲ್ಲಲು ಮಾಡಿದ ಪ್ರಯತ್ನದಲ್ಲಿ ಗಾಯಗೊಂಡ ಆತನ ವೈಯಕ್ತಿಕ ರಕ್ಷಣಾ ಕೂಟದ ಲೆಫ್ಟಿನೆಂಟ್ ರೂಡೋಲ್ಫ್ ಶಿಮುಂಡರು ಆ ಗಾಯದಿಂದಾಗಿ ಕಳೆದ ತಾ. ೧ರಲ್ಲಿ ಮೃತರಾದರು.

ಡಾ. ಸಯ್ಯದ್ ಮಹಮ್ಮದರ ಬಂಧವಿಮೋಚನೆ
ಸೆರೆಯಲ್ಲಿರುವ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯವರು ಕ್ಷೇಮದಲ್ಲಿದ್ದಾರೆ.

ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯ ಸದಸ್ಯರಾಗಿ ಇತರ ಸದಸ್ಯರೊಡನೆ ಅಹ್ಮದ್‌ನಗರ ಕೋಟೆಯ ಸೆರೆಮನೆಯಲ್ಲಿದ್ದು ಈಗ ತಾನೇ ಬೇಷರತ್ತಾಗಿ ಬಿಡುಗಡೆ ಹೊಂದಿದ ಡಾ. ಸಯ್ಯದ್ ಮಹಮ್ಮದರು ಅಲ್ಲಿರುವ ತನ್ನ ಸೋದರ ಸದಸ್ಯರೆಲ್ಲ ಸುಕ್ಷೇಮಿಗಳೆನ್ನುತ್ತಾರೆ. ಸಯ್ಯದರನ್ನು ಬಿಡುಗಡೆ ಮಾಡಿದುದು ಅವರ ಅನಾರೋಗ್ಯದ ಕಾರಣವಂತೆ. ಇನ್ನುಳಿದ ಅವರ ಜೊತೆಗಾರರೆಲ್ಲ ಒಳ್ಳೆಯ ಉತ್ಸಾಹದಲ್ಲಿರುವರೆಂದೂ ಹೊರಗಿನ ತಮ್ಮ ಸಹೋದ್ಯೋಗಿಗಳಿಗೆ ತನ್ನ ಮೂಲಕ ವಂದನೆಯನ್ನು ಕಳುಹಿಸಿರುವರೆಂದೂ ಹೇಳಿರುತ್ತಾರೆ. ಅವರೆಲ್ಲರ ಆರೋಗ್ಯದ ವಿಷಯ ಪ್ರಶ್ನಿಸಿದುದಕ್ಕೆ ಅವರು ಕೊಟ್ಟ ಉತ್ತರ ಹೀಗಿದೆ. ಕಾಂಗ್ರೆಸ್ ಪ್ರೆಸಿಡೆಂಟ್ ಮೌಲಾನಾ ಅಜಾದರು ಭಾರದಲ್ಲಿ ನಾಲ್ವತ್ತೆರಡು ರಾತಲು ತಗ್ಗಿದ್ದಾರೆ. ಪಂಡಿತ ಜವಹಾರ್ ನೆಹರುಗಳು ಹದಿನಾಲ್ಕು ರಾತಲು ತಗ್ಗಿರುವುದಾದರೂ ತನ್ನ ಆರೋಗ್ಯದ ವಿಷಯ ತುಂಬ ಹೆಮ್ಮೆ ಪಡುತ್ತಿದ್ದಾರೆ. ಯಾರಾದರೂ ಅವರ ಶಾರೀರಿಕ ಪರಿಸ್ಥಿತಿ ಕೆಟ್ಟಿದೆ ಎಂದು ಸೂಚಿಸಿದರೆ ಅವರಿಗೆ ಕಿರಿಕಿರಿಯಾಗುತ್ತದೆ ಸರ್ದಾರ ವಲ್ಲಭಾಯಿ ಪಟೇಲರಿಗೆ ಅವರ ಹಿಂದಿನ ಉದರಶೂಲೆ ಆಗಾಗ ಬಂದು ಪೀಡಿಸುತ್ತಿತ್ತು. ಆದರೆ ಜಾಗರೂಕತೆಯ, ಪಥ್ಯದಿಂದ ಅದನ್ನು ಜಯಿಸಿದ್ದಾರೆ. ಆದರೆ ಬಲಗುಂದಿರುವರು. ಡಾ. ಪಟ್ಟಾಭಿ ಸೀತಾರಾಮಯ್ಯನವರಿಗೆ ಕಳೆದ ವರ್ಷ ಕರ್ಣರೋಗ ಮಾತ್ರ ಪೀಡಿಸಿದಿತ್ತು. ಅಂದಿನಿಂದ ಅವರು ಜಾಗರೂಕರಾಗಿದ್ದ ಈಗ ಚೆನ್ನಾಗಿದ್ದಾರೆ ಡಾ. ಸೈಯದ್ ಮಹಮ್ಮದರೂ ನೆಹರುಗಳೂ ಒಂದೇ ಕೊಠಡಿಯಲ್ಲಿದ್ದವರು. ಉಳಿದವರು ಅದೇ ಕಟ್ಟಡದ ಪ್ರತ್ಯೇಕ ಪ್ರತ್ಯೇಕ ಕೊಠಡಿಗಳಲ್ಲಿದ್ದಾರೆ. ಓದುತ್ತ ಕಾಲಹರಣ ಮಾಡುತ್ತಾರೆ. ಕೆಲವರು ಬರೆಯುತ್ತಿದ್ದಾರೆ.

ಬೊಂಬಾಯಿ 'ಫೋರಂ' ಪ್ರಕರಣ.

ಬೊಂಬಾಯಿ 'ಫೋರಂ' ಪತ್ರಿಕೆಯ ಮುದ್ರಕರೂ ಪ್ರಕಾಶಕ, ಸಂಪಾದಕರೂ ಆದ ಶ್ರೀ ಜೋಕಿಂ ಆಳ್ವರಿಂದ ಮುಂಬಯಿ ಸರಕಾರವು ಎರಡು ಸಾವಿರ ರೂಪಾಯಿಗಳ ಸೆಕ್ಯೂರಿಟಿಯನ್ನು ಆ ಪ್ರಕಟಣೆಯ ಮಾಲಕರಿಂದ ಒಂದು ಸಂಬಂಧ ಪತ್ರವನ್ನು ಕೇಳಿ... ಆ ಕುರಿತಾಗಿ ರಿವಿಜನ್ ಅರ್ಜಿಯನ್ನು ಬೊಂಬಾಯಿ ಹೈಕೋರ್ಟು ಸ್ವೀಕರಿಸಿದೆ. ಈ ಮೊಕದ್ದಮೆಯಲ್ಲಿ ಮಿ! ಜೋಕಿಂ ಆಳ್ವರ ಪರವಾಗಿ ಮಿಸೆಸ್ ಬ್ಯಾರಿಸ್ಟರ್ ಆಳ್ವರೇ ತನ್ನ ಪತಿಯ ಪರವಾಗಿ ವಕಾಲತು ವಹಿಸಿ ವಾದಿಸಿದ್ದಾರೆ. ಹಿಂದುಸ್ಥಾನದ ಹೈಕೋರ್ಟಿನ ಒಂದು ಸ್ಪೆಶಲ್ ಬೆಂಚಿನ ಮುಂದೆ ಓರ್ವ ಮಹಿಳಾ ಲಾಯರು ಪತಿಯ ಪರವಾಗಿ ಹೀಗೆ ವಾದಿಸಿದ್ದು ಇದೇ ಪ್ರಥಮ ಬಾರಿ. ಶ್ರೀ ಜೋಕಿಂ ಆಳ್ವರು ಉಡುಪಿಯವರು.

ಉಡುಪಿ.

ತರಕಾರಿಗಳ ಬೆಲೆ ನಿಯಂತ್ರಣ:- ವಾರದಿಂದೀಚೆಗೆ ಪೇಟೆಯಲ್ಲಿ ತರಕಾರಿ ಸಿಗುವುದು ದುರ್ಲಭವಾಗಿದೆ. ಕಳೆದ ಬುಧವಾರ ಸಂತೆಗೆ ಬಂದ ಅಲ್ಪಸ್ವಲ್ಪ ತರಕಾರಿಯನ್ನು ಕೆಲವರು ಕಂಟ್ರೋಲಾಗಿದೆಯೆಂದು ಕಾಸಿಬಂದಷ್ಟು ಕಾಸು ಬೆಲೆ (ಕೆಲವರು ಕೊಡದೆಯೂ) ಕಿತ್ತುಕೊಂಡು ಹೋದರೆಂದು ಸುದ್ದಿ. ಇದನ್ನು ವಿಚಾರಿಸ ತಕ್ಕವರಿಲ್ಲವೆ? ಸಾಮಾನುಗಳ ಬೆಲೆಯು ನಿಯಂತ್ರಣವಾಗಬೇಕಾದುದೇನೋ ಅತ್ಯಾವಶ್ಯಕವೇ. ಆದರೆ ಬೆಲೆ ನಿರ್ಧಾರ ಮಾಡುವಾಗ ಬೆಳೆಯಿಸುವವರಿಗೂ ಮಾರಾಟ ಮಾಡುವವರಿಗೂ ಹೊಟ್ಟೆಗೆ ಹಿಟ್ಟು ಸಿಕ್ಕುವಂತಾಗಬೇಕು. ಉದಾಹರಣಾರ್ಥವಾಗಿ ಹರಿವೆ ಸೊಪ್ಪು ಸೇರಿಗೆ ಎರಡು ಪೈ, ಬಸಳೆ ಸೇರಿಗೆ ಒಂದು ಪೈ ಕ್ರಯವೆಂದು ನಿರ್ಧರಿಸಲಾಗಿದೆ. ಎರಡು ಮೂರು ಮೈಲು ದೂರದಿಂದ ಹೊತ್ತು ತಂದ ಒಂದು ಕುಕ್ಕೆ ಸೊಪ್ಪಿನ ಬಸಳೆ ಮಾರಾಟದಿಂದ ಅವನ್ನು ಬೆಳೆಯಿಸಿದವನಿಗೇನು ದೊರೆಯುವುದು? ಸಂಜೆಯವರೆಗೆ ಕೊಡಕಕ್ಕೆ ತಿರುಗಿ, ಮಧ್ಯಾಹ್ನ ಹೊತ್ತಿಗೆ ತಕ್ಕ ಹೊಟ್ಟೆಗೆ ಹಾಕಿ ತಂಪು ಮಾಡಿಕೊಳ್ಳಲು... ಇನ್ನು ಜೊತೆ ಮಾರಾಟ ನಾಲ್ಕೆ ಆಣೆಯಂತೆ ಹಿಡಿದರೂ ಮನೆಗೆ ಹಿಂತಿರುಗುವಾಗ ಉಳಿಯುವುದೆಷ್ಟು? ಇನ್ನು ಬಾಳೆಹಣ್ಣುಗಳ ವಿಚಾರವಲ್ಲವೆ ಹಾಗೆಯೇ. ಸೇರು ಲೆಕ್ಕದಲ್ಲಿ ಮಾರುವವರಾಗಲು ಕಷ್ಟಸಾಧ್ಯವಾದುದು. ಬಡವರು ತಿನ್ನುವ ಹಲಸುಗಳ ಬಗ್ಗೆ ಹೇಳುವುದಾದರೂ ಎಲ್ಲಿಗೆ ಮೊದಲು ಮಾಡಲ್ಪಟ್ಟ ಕಲ್ಲುಗಳಾದರೂ ಸಲಭದಲ್ಲಿ ದೊರೆಯುತ್ತವೆಯೇ? ಕೆಲವು ತರಕಾರಿಗಳನ್ನು ಕೂಕಲಾಡಿ ಕೊಡುವುದಾದರೆ ವ್ಯವಹಾರಿಯೇನು? ಜನಜೀವನಕ್ಕೆ ತರಕಾರಿಗಳು ಮಾತ್ರವಲ್ಲ, ಇನ್ನೆಷ್ಟೋ ಅತ್ಯಾವಶ್ಯಕ ಸಾಮಾನುಗಳು ಬೇಕಾಗಿವೆ. ಇವೆಲ್ಲಕ್ಕೂ ನ್ಯಾಯವಾದ ಬೆಲೆ ನಿರ್ಧಾರವಾಗಬೇಕಾಗಿದೆ. ಉಡುಪಿಯಲ್ಲಿ ಕ್ರಯ ನಿಶ್ಚಯವಾಗಿಲ್ಲ. ತೆಂಗಿನೆಣ್ಣೆ, ಬೆಲ್ಲಕ್ಕೆ ಕ್ರಯ ಏರುತ್ತಲಿದೆ. ಕೈಗೆ ಸಿಗುವ ಕೆಲವು ಹಿಡಿಅಕ್ಕಿಯಿಂದಲಾದರೂ ದೀಪಾವಳಿ ಹಬ್ಬವನ್ನು ಆಚರಿಸಬೇಕೆನ್ನುವ ಬಡವರೇನು ಮಾಡಬೇಕು? ಕಂಟ್ರೋಲ್ ಕಮಿಟಿಯವರು ಎಲ್ಲಾ ವಿಷಯಗಳನ್ನೂ ಪರ್ಯಾಲೋಚಿಸಿ ಸರ್ವ ನಿತ್ಯೋಪಯೋಗೀ ವಸ್ತುಗಳಿಗೆ ಸಹಜವಾದ ಕ್ರಯವನ್ನು ನಿಶ್ಚಯಿಸಬೇಕೆಂದು ಬಾತ್ಮೀದಾರರೊಬ್ಬರು ಬರೆಯುತ್ತಾರೆ.

ಮಂಗಳೂರು ಕಾಫಿ ಹೊಟೇಲ್ ವ್ಯಾಪಾರಿಗಳ ಸಭೆ:—ಮೊನ್ನೆ ತಾ. ೯ರಲ್ಲಿ ಹಂಪನಕಟ್ಟೆಯಲ್ಲಿ ಶ್ರೀ. ಎನ್. ಎಸ್. ಕಿಲ್ಲೆಯವರ ಅಧ್ಯಕ್ಷತೆಯಲ್ಲಿ ಜರಗಿ, ಶ್ರೀಗಳಾದ ಹುಬ್ಳಿ ಭೀಮರಾವ್, ಕೆ. ಕೃಷ್ಣರಾವ್ ಮ ಸಿ. ರಾಮರಾವ್ ಇವರ ಭಾಷಣಗಳಾಗಿ ಕಾಫಿ ಹೊಟೇಲ್ ವ್ಯಾಪಾರಿಗಳಿಗೊಂದು ಸಂಘವು ಅಗತ್ಯವೆಂಬ ನಿರ್ಧಾರದ ಮೇರೆಗೆ ಕಾರ್ಯಕಾರಿ ಮಂಡಳಿಯು ರಚನೆಯಾಗಿ ಆಗಲೇ ರೂ. 121 ಜಮೆಯಾಯಿತು.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S C 164/1944

ವಾದಿ. ಸ್ವನರ ಮಹಾಬಲೇಶ್ವರ

ಪ್ರತಿವಾದಿ: 1. ಶೇಕ್ ಮಯುತ್ ಮಿಯಾ ಸಾಹೇಬ 2. ಶೇಕ್ ಮುಹಮ್ಮದ್ ಕಾದರ್ ಸಾಹೇಬ

ಉಪ್ಪಿನಕುದ್ರು ಗ್ರಾಮದ ಪ್ರಸ್ತುತ ಕಸಬಾದಲ್ಲಿರುವ ಶೇಕ್ ಅಬೂದ್ ಹಮ್ಮದ್ ಸಾಹೇಬರ ಮಗ 1ನೇ ಪ್ರತಿವಾದಿ ಶೇಕ್ ಮಯುತ್ ಮಿಯಾ ಸಾಹೇಬ 1. ಇವರ ಮಗ 2ನೇ ಪ್ರತಿವಾದಿ ಶೇಕ್ ಮಹಮ್ಮದ್ ಕಾದರ್ ಸಾಹೇಬ 1 ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ವಾದಿಯು ತಂದ ಕಾಲಿಂಗ ಆಡಿಗಳಿಗೆ ತಾ. 4 41ರಲ್ಲು ರೂ 100 0 0ಕ್ಕೆ ಪ್ರತಿವಾದಿಗಳು ಬರೆಕೊಟ್ಟ ಚಿಮಾಂಡು ನೋಟಿನ ಅಸಲು ಬಡ್ಡಿ ಹಣಗಳನ್ನು ಬರಮಾಡಿಕೊಳ್ಳುವ ಬಾಬ್ತು ಮಾಡಿದ ನೇಲಿನ ದಾವೆಯು 26 10 1944ಕ್ಕೆ ಮೇಲಿನ ಕೋರ್ಟಿನ ವಿಚಾರಣೆಗೆ ಇಟ್ಟಿರುತ್ತದೆ. ಆ ಕುರಿತು ನಿಮ್ಮ ಆಕ್ಷೇಪಣೆಗಳಿದ್ದರೆ ಆ ತಾರೀಕಿಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ತ್ಯಾಪೀಲು ಸಾಗೃತಕ್ಕದ್ದು ಎಂಬ ಸಂಗ್ತಿ ಈ ಮೂಲಕ ತಿಳಿಸಲ್ಪಡುತ್ತದೆ.

By Order
K Ramappaya
Advocate for Plaintiff
…1-10-44 Kundapur.

ಕ್ರೌನ್

ರಬ್ಬರ್ ಸ್ಟಾಂಪ್ ಕಂಪೆನಿ

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸ್ಟೆನ್ ಮೊದಲಾದ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co.
18 Balmat Road, MANGALORE
Approved firm by the Govt of Mysore.
Certified by the Agent of the Govt. of India in Ceylon. Estd 1906

ದಕ್ಷಿಣ ಕನ್ನಡ-

ಮಂಗಳೂರು

ಗಾಂಧಿ ಜಯಂತಿ- ಯು ತಾ| ೨ರಂದು ನಗರದಲ್ಲಿ ಆಚರಿಸಲ್ಪಟ್ಟಿತು. ಸಂಜೆ ದ್ರಾವಿಡ ಬ್ರಾಹ್ಮಣ ವಿದ್ಯಾರ್ಥಿ ವಸತಿಯಿಂದ ವಿದ್ಯಾರ್ಥಿಗಳ ಮತ್ತು ಮಜೂರರ ಮೆರವಣಿಗೆ ಹೊರಟು ಮೈದಾನವನ್ನು ಸೇರಿತು. ಶ್ರೀ| ಧಾಮೋದರ್ ನಂಬಿಯಾರ ಅಧ್ಯಕ್ಷತೆಯಲ್ಲಿ ಜರಗಿದ ವಿದ್ಯಾರ್ಥಿಗಳ ಸಭೆಯಲ್ಲಿ ಶ್ರೀ| ಪ್ರಕಾಶನಾಥರು ಗಾಂಧಿಜೀಯ ಜೀವನದ ಕುರಿತು ಮಾತನಾಡಿದರು. ಅನಂತರ ಕಮ್ಯೂನಿಸ್ಟ್ ಪಾರ್ಟಿಯ ಆಶ್ರಯದಲ್ಲಿ ಜರಗಿದ ಸಭೆಯಲ್ಲಿ ಶ್ರೀ| ನಿರಂಜನರಾಂ ಪೈ ಅವರು ಗಾಂಧಿ ಜಿನ್ನಾ ಮಾತುಕತೆ ವಿಫಲವಾದುದು ದೊಡ್ಡ ದುರಂತವೆಂದೂ ಜನರೊಂದಾಗಿ ಪುನಃ ಐಕ್ಯವಾಗಲು ಯತ್ನಿಸಬೇಕೆಂದೂ ಮಾತನಾಡಿದರು. ಶ್ರೀ| ಶಿವಶಂಕರರಾಯರೂ ಭಾಷಣವಿತ್ತರು. ಶ್ರೀ| ನಾರಾಯಣಮೂರ್ತಿ ಅವರು ಅಧ್ಯಕ್ಷತೆ ವಹಿಸಿದ್ದರು.

ಬೆಸೆಂಟ್ ಹುಡುಗಿಯರ ಶಾಲೆಯಲ್ಲಿ ಜಯಂತಿಯು ಆಚರಿಸಲ್ಪಟ್ಟಿತು. ಶ್ರೀ| ಎಂ| ಎಸ್| ವಸಂತರಾಯರು ಗಾಂಧೀಜಿಯ ಕುರಿತು ಭಾಷಣವಿತ್ತರು. ಗಣಪತಿ ಹೈಸ್ಕೂಲಿನಲ್ಲೂ ಆ ದಿನ ಸಂಜೆ ಹಿಂದೂಸ್ಥಾನ್ ಸ್ಕೌಟ್ ದಳದವರ ಆಶ್ರಯದಲ್ಲಿ ಜಯಂತಿಯು ಆಚರಿಸಲ್ಪಟ್ಟಿತು.

ಕಸ್ತೂರ್ ಬಾ ನಿಧಿ-ಗಾಗಿ ಜಿಲ್ಲೆಯಲ್ಲಿ ಒಟ್ಟು ರೂ ೫೪೧೧೭-೭-೦ ಸಂಗ್ರಹವಾಗಿದೆ. ಹೆಚ್ಚು ಹಣ ಒಟ್ಟುಗೂಡಿಸಿರುವುದು ಉಡುಪಿ ತಾಲೂಕಿನವರು. ತಾಲೂಕುಗಳ ಬೇರೆಬೇರೆ ಸಂಖ್ಯೆ ಹೀಗಿದೆ: ಉಡುಪಿ ೧೦,೨೬೯, ಮಂಗಳೂರು ೭,೦೭೩-೩-೦; ಕಾರ್ಕಳ ೨,೫೨೭; ಕಾಸರಗೋಡು ೨,೧೨೦; ಪುತ್ತೂರು ೧೯೯೩, ಕುಂದಾಪುರ ೫೪೭-೬-೦; ಮತ್ತು ಕೊಲಂಬೋ ಮುಂಬಯಿಗಳಿಂದ ರೂ. ೧೫೫.

ಜನತಾ ರಂಗಭೂಮಿ-ಯುವಕ ಪವಿತ್ರ ವಿನೋದಗಳು ತಾ ೩೦ರಂದು ರಾತ್ರಿ ಮಿಶನ್ ಹೈಸ್ಕೂಲಿನಲ್ಲಿ ಜರಗಿ ರೂ. ೮೫೦ ಕಸ್ತೂರ್ ಬಾ ನಿಧಿಗಾಗಿ ಸಂಗ್ರಹಿಸಲ್ಪಟ್ಟಿತು. ವಿರಾಮದ ಸಮಯದಲ್ಲಿ ಜಿಲ್ಲಾ ಕಸ್ತೂರ್ ಬಾ ಸ್ಮಾರಕ ನಿಧಿ ಸಮಿತಿಯ ಅಧ್ಯಕ್ಷ ಶ್ರೀ ಬಿ ವೈಕುಂಠ ಬಾಳಿಗರು ಮಾತನಾಡಿ ನಿಧಿಗೆ ವಂತಿಗೆ ಕೊಟ್ಟ ಜಿಲ್ಲೆಯ ಎಲ್ಲರಿಗೂ ವಂದನೆಗಳನ್ನರ್ಪಿಸಿದರು.

ಜಿಲ್ಲಾ ಮತ್ತು ಸೆಶನ್ಸ್-ನ್ಯಾಯಾಧೀಶ ಶ್ರೀ| ಎಂ| ಬಾಲಚಂದ್ರ ಕೋಮನ್ ಬಿ| ಎ| ಎಲ್| ಅವರ ರಜೆಯ ಅವಧಿಯು ಅಕ್ಟೋಬರ ೩೧ನೇ ತಾರೀಕಿನ ವರೆಗೆ ಮುಂದುವರಿಸಲ್ಪಟ್ಟಿದೆ.

ಸ್ಕೌಟ್ ಸಪ್ತಾಹ-ತಾ. ೧೪ರಂದು ಬೆಸೆಂಟ್ ರಾಷ್ಟ್ರೀಯ ಹುಡುಗಿಯರ ಶಾಲೆಯಲ್ಲಿ ಆರಂಭವಾಗಿ ಬೇರೆಬೇರೆ ದಿನಗಳಲ್ಲಿ ಬೇರೆಬೇರೆ ಕಡೆ ಆಚರಿಸಲಾಯಿತು. ಶನಿವಾರ ಸಂಜೆ ಮ್ಯುನಿಸಿಪಲ್ ಸೆಂಟ್ರಲ್ ವಾರ್ಡ್ ಶಾಲೆಯಲ್ಲಿ ಜಿಲ್ಲಾ ಸ್ಕೌಟ್‌ಗಳ ಶಿಬಿರವಿತ್ತು.

ಗೇರುಬೀಜ ಕಾರ್ಖಾನೆಯು ೧,೩೦೦ರಷ್ಟು ಸ್ತ್ರೀ ಕೆಲಸಗಾರರ ಮತ್ತು ೧೦೦ರಷ್ಟು ಪುರುಷ ಕೆಲಸಗಾರರ ಸಭೆ ಉರ್ವ ಮೈದಾನದಲ್ಲಿ ತಾ ೧ರಂದು ಗೇರುಬೀಜ ಕಾರ್ಖಾನೆ ಕೆಲಸಗಾರರ ಸಂಘದ ಆಶ್ರಯದಲ್ಲಿ ಜರಗಿತು. ಬೇರೆ ಬೇರೆ ಮುಖಂಡರ ಭಾಷಣಗಳಾದ ನಂತರ ಉರ್ವದ ಗೇರುಬೀಜ ಮಜೂರರ ಇತರ ಬೇಡಿಕೆಗಳನ್ನು ಮುಂದಿಡುವ ಗೊತ್ತುವಳಿಯೂ ಸ್ವೀಕರಿಸಲ್ಪಟ್ಟಿತು. ಸಂಜೆಗೆ ನಗರದಲ್ಲಿ ಮಜೂರರ ಮೆರವಣಿಗೆ ಇತ್ತು.

ಬೆಸೆಂಟ್ ಶಾಲಾ ವರ್ಧಂತಿಯು ತಾ. ೧೧ರಂದು ರಾ| ಬ| ಯು| ರಾಮಪ್ಪ ಅವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸಿ ಬೀಬಿ ಬಾಯಿ ಅವರು ಶಾಲೆಯ ಚಟುವಟಿಕೆಗಳ ವರದಿಯನ್ನೊಪ್ಪಿಸಿದರು. ಶ್ರೀ| ಅನ್ಮೆಂಬಳ ಶ್ರೀನಿವಾಸಪ್ಪ ಅವರು ಸ್ವಾಂತ ಭಾಷಣ ಮಾಡಿದರು. ಕೊನೆಯಲ್ಲಿ ವಿದ್ಯಾರ್ಥಿನಿಯರ ವಿವಿಧ ವಿನೋದಗಳಿದ್ದುವು. ತಾ. ೩ರಂದು ಸಂಜೆ ಮ ಹಿಳೆಯರ ದಿನವು ಶಾಲೆಯಲ್ಲಿ ಆಚರಿಸಲ್ಪಟ್ಟಿತು.

ಸಾಹಿತ್ಯ ಪರಿಷತ್ತಿ—ನ ಉಪಾಧ್ಯಕ್ಷ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರು ಜಿಲ್ಲೆಯ ತಮ್ಮ ಪ್ರವಾಸವನ್ನು ಪೂರ್ಣಗೊಳಿಸಿ, ತಾ. ೩ರಂದು ಪುತ್ತೂರಿನಿಂದ ಮೈಸೂರಿಗೆ ಹಿಂತಿರುಗಿದರು. ತಾ| ೩೦ರ ನಂತರ ಅವರು ಮಂಜೇಶ್ವರ, ಪದ್ದೂಲ, ಕಾಸರಗೋಡಿಗೆ ಹೋಗಿ ಮರಳಿ ತಾ| ೨ರಂದು ಬೆಸೆಂಟ್ ಹುಡುಗಿಯರ ಶಾಲೆಯಲ್ಲಿ, ಗಣಪತಿ ಹೈಸ್ಕೂಲಿನಲ್ಲಿ, ಟ್ರೈನಿಂಗ್ ಶಾಲೆಯಲ್ಲಿ ಭಾಷಣಗಳನ್ನಿತ್ತರು.

ಜಿಲ್ಲಾ ಸೆಶನ್ಸ್ ಕೋರ್ಟಿನಲ್ಲಿ— ಪುತ್ತೂರು ತಾಲೂಕು ಸುಳ್ಯದ ಸಮೀಪದ ಅಜ್ಜಾವರ ಗ್ರಾಮದಲ್ಲಿ ಕುಜಣ್ಣ ಗೌಡ ಎಂಬಾತನು ಶೇಷಪ್ಪ ಗೌಡನಿಗೆ ಅಪಾಯ ಕಾರಕವಾದ ಆಯುಧಗಳಿಂದ ವಿಶೇಷವಾದ ಗಾಯಮಾಡಿದನೆಂಬ ಆರೋಪ (ಗಾಯವಾಗಿ ೨ ತಿಂಗಳ ನಂತರ ಆರೋಪಿ ಮೃತನಾದ) ಉಳ್ಳ ಮೊಕದ್ದಮೆ ಸಮ್ಮರಿ ಮತ್ತು ಸೆ ಕೋರ್ಟಿನಲ್ಲಿ ಹಂಗಾಮಿ ಸೆ ಜಡ್ಜ್‌ರಾದ ಶ್ರೀ| ಸಿ ಕೆ ಮೆನೋನ್ ಅವರ ಮುಂದೆ ವಿಚಾರಣೆಯಾಗಿ ಆರೋಪಿಗೆ ೫ ವರ್ಷಗಳ ಕಠಿಣ ಸಜೆ ವಿಧಿಸಲಾಗಿದೆ.

ಮಂಗಳೂರು ಸ್ಟೆ. ಸಬ್. ಮೆಜಿಸ್ಟ್ರೇಟರ ಕೋರ್ಟಿನಲ್ಲಿ—ಸುರತ್ಕಲಿನಲ್ಲಿ ಒಬ್ಬಾಕೆಯ ಮನೆಯಿಂದ ಮನೆಯೊಡೆದು ಕೊಡಪಾನ ಮೊದಲಾದವನ್ನು ಕಳವು ಮಾಡಿದರೆಂಬ ಆರೋಪವುಳ್ಳ ಮೊಕದ್ದಮೆ ನಂ| ಸ್ಟೆ| ಸ| ಮ್ಯಾಜಿಸ್ಟ್ರೇಟರಾದ ಶ್ರೀ| ಪಿ| ಸದಾನಂದಪ್ಪ ಅವರ ಮುಂದೆ ವಿಚಾರವಾಗಿ ಆರೋಪಿಗಳಾದ ಸಸ್ಪೆಂಡ್ ಆದ ಕಾನ್ಸ್‌ಟೇಬ್‌ಲರಾದ ಕಾಪಿರ ಪೂಜಾರಿ ಮತ್ತು ಹುಸನಬ್ಬ ಇವರಲ್ಲಿ ಪ್ರತಿಯೊಬ್ಬರಿಗೆ ಅವರ ಮೇಲೆ ಏರ್ಪಡಿಸಿದ ಎರಡು ಚಾರ್ಜುಗಳಲ್ಲಿ ಪ್ರತಿಯೊಂದಕ್ಕೆ ೬.೬ ತಿಂಗಳ ಕಠಿಣ ಸಜೆ (ಒಟ್ಟು 1 ವರ್ಷ) ಯನ್ನು ಪ್ರತ್ಯೇಕ ಪ್ರತ್ಯೇಕವಾಗಿ ಅನುಭವಿಸುವಂತೆ ವಿಧಿಸಲಾಗಿದೆ ಅವರು ಕಣ್ಣಾನೂರು ಸೆಂಟ್ರಲ್ ಜೈಲಿಗೆ ರವಾನಿಸಲ್ಪಟ್ಟಿದ್ದಾರೆ.

ಸ್ಟೋರ್ಸ್ ಮೆನೇಜರರ ಕೈದು—ಕಂಕನಾಡಿ ಸಹಕಾರಿ ಸ್ಟೋರ್ಸಿನ ಮನೇಜರ್ ಕೋಟಿಯನ್ನೂ ಆಳ್ ಅವರು ಆಹಾರಧಾನ್ಯಗಳ ನಿಬಂಧನೆಗಳನ್ನು ಮೀರಿದರೆಂದೂ, ಲೆಕ್ಕಗಳಲ್ಲಿ ಮೋಸ ಕಡಿಮೆ ಮಾಡಿದರು ಮತ್ತು ವಿಶ್ವಾಸದ್ರೋಹ ಮಾಡಿದರೆಂದೂ ಆಪಾದಿತರಾಗಿ, ಕೈದು ಮಾಡಲ್ಪಟ್ಟಿರುವರು. ಮಂಗಳೂರು ಸಬ್ ಡಿವಿಜನಲ್ ಮೆಜಿಸ್ಟ್ರೇಟರಲ್ಲಿ ವಿಚಾರಣೆ ನಡೆಯಲಿದೆ.

ರೇಶನಿಂಗ್ ತಕ್ಷೀರು - ಹಂಪನಕಟ್ಟೆಯ ಕವಿ ಸ್ಟೋರ್ಸ್ ಮತ್ತು ಡ್ರಗಿಸ್ಟರ್ ಮಿ| ಜಾನ್ ಮೆನ್ವೆಲ್ ಪೆನಾರ್ಂಡೀಸರು ಮತ್ತು ಬಲ್ಮಠದ ಮಿ| ಸ್ಯಾಮುವೇಲ್ ಮೆಬೆನರು ಇವರುಗಳಿಗೆ ಹಾಜರಿಲ್ಲದ ಮಂದಿಗಳ ಅಕ್ಕಿ ಪಡೆದುದಕ್ಕಾಗಿ ಯಥಾಕ್ರಮವಾಗಿ ೫೦೦ ರೂ. ಮತ್ತು ೫೦ ರೂಪಾಯಿಗಳ ಜುಲ್ಮಾನೆ ವಿಧಿಸಲಾಗಿದೆ. ಬೆಂದೂರ ಎನ್ನಿಸಲ್ವಾನರು ಅಕ್ಕಿ ತಿಂಗಳಿಗಿಂತ ಹೆಚ್ಚಿನದ್ದು ದೂರ್ತಿನಿಷ್ಟು ಹಾಜರಿಲ್ಲದವರ ರೇಶನ್ ಪಡೆದುದಕ್ಕಾಗಿ ೫೦ ರೂ. ಜುಲ್ಮಾನೆಯನ್ನು ಹೊಂದಿದರು. ಬನ್ನಿ ಸಿಕೇರ ರೂ ಇದೇ ರೀತಿಯ ಚಾರ್ಜ ಮೊಕದ್ದಮೆಯಲ್ಲಿ ೫೦ ರೂ. ಜುಲ್ಮಾನೆಯ ವಿಧಿಯನ್ನು ಹೊಂದಿರುವರು.

ಧಾರ್ಮಿಕ ಭಾವನೆಗೆ ಬೇನೆ—ಈ ಆರೋಪದಿಂದ ಶ್ರೀಗಳಾದ ಗೋಪಾಲ ಸಾಲಿಯಾನ್ ಎಡಿಶನಲ್ ಕಲೆಕ್ಟರ್ ರಾಷ್ಟ್ರೀಯ ಯುದ್ಧ ಮುಖರಂಗ, ಜೆ| ಬ| ಮಾವನ ಮುನ್ಸಿಪಲ್ ಕೌನ್ಸಿಲರ್, ಸೀತಾರಾಮ ಪದಕಣ್ಣಯ ಜಿಲ್ಲಾ ಕೋರ್ಟ ಅಮಿನ್, ಒಸವ ಲೇಬರ್ ಶಾಲಾ ಉಪಾಧ್ಯಾಯ, ಚಂದ್ರಶೇಖರ, ಗವರ್ನ್‌ಮೆಂಟು ಶಿಕ್ಷಣ ಕಾಲೇಜು ಹಾಯರ ಎಲಿಮೆಂಟರಿ ಶಾಲಾ ಅಧ್ಯಾಪಕ, ಶುಕ್ರ ಮುಖಾರಿ, ಗುರುವ ಮ-ಮಾರಿ, ಜ| ಕೋಡಿ ಇವರ ಮೇಲೆ ಜಾಮೀನ ವಾರಂಟುಗಳು ಹೊರಟಿವೆ.

ರೇಶನಿಂಗ್ ಸಂಬಂಧದ ಆರೋಪ ಅಕ್ಕಿ ಸ್ಟಾಕನ್ನು ತಿಳಿಸದಿದ್ದುದಕ್ಕಾಗಿ ಇ| ಎಲ್| ಮತಾಯಸ್ ಮತ್ತು ಹಾಜರಿಲ್ಲದವರ ರೇಶನಿಂಗ್ ಪಡಕೊಂಡ ಬಗ್ಗೆ ಹರ್ಬರ್ಟ್ ಪೆನಾರ್ಂಡೀಸರ ಮೇಲೂ ಮೊಕದ್ದಮೆ ಹೂಡಲಗಿದೆ. ಮಾರ್ನಮಿಕಟ್ಟೆ ಕೆಕರಿನ್ ವೀಗಸ್ ಮತ್ತು ಜೆ| ಬಿ| ವೀಗಸ್ ರವರ ಮೇಲೆ ಕಂಟ್ರೋಲ್ ದರಕ್ಕೆ ಮಿಕ್ಕಿ ಅಕ್ಕಿಯನ್ನು ಮಾರಾಟ ಮಾಡಿದ್ದಲ್ಲದೆ ಬೇರೆ ಕೆಲವು ತಪ್ಪುಗಳಿಗಾಗಿ ಮೊಕದ್ದಮೆ ಹೂಡಿರುವರು.

ಉಡುಪಿ

ಶ್ರೀ ಶೀರೂರು ಮಠದ ಶ್ರೀಗಳವರಿಗೆ ಬಿರುದು—ಅಯೋಧ್ಯೆಯ ಅಖಿಲ ಭಾರತೀಯ ರಾಜ ವಿದ್ವಜ್ಜನ ಮಾನ್ಯ ಸಂಸ್ಕೃತ ಸಂಘದ ಕಳೆದ ವಿಜಯದಶಮಿಯ ಮಹೋತ್ಸವ ಸಮ್ಮೇಳನದಲ್ಲಿ ಉಡುಪಿಯ ಶ್ರೀ ಶೀರೂರು ಮಠದ ಶ್ರೀ ಲಕ್ಷ್ಮೀಂದ್ರ ತೀರ್ಥ ಶ್ರೀಗಳವರಿಗೆ 'ದ್ವೈತ ವೇದಾಂತಾಲಂಕಾರ' ಎಂಬ ಬಿರುದನ್ನು ಅರ್ಪಿಸಲಾಗಿದೆ. ಶ್ರೀಗಳವರ ದ್ವೈತವೇದಾಂತದಲ್ಲಿ ಅಸ್ಸೀಮ ಘನ ಪಂಡಿತರಾಗಿರುವರಲ್ಲದೆ ಜಾಗತಿಕ ಸಕಲ ಮತ ತತ್ವಗಳನ್ನೂ ತುಲನಾತ್ಮಕ ದೃಷ್ಟಿಯಿಂದ ಪರಿಶೀಲಿಸಿದವರಿರುವರು. ಕೇವಲ ಧಾರ್ಮಿಕ ವಿಚಾರಗಳಲ್ಲೇ ಮಗ್ನರಾಗಿರದೆ ಜಾಗತಿಕ ಆಧ್ಯಾತ್ಮಿಕ ವಿಚಾರಗಳನ್ನೂ ಸಮಸ್ಯೆಗಳನ್ನೂ ಅರಿತವರಿದ್ದು ಧರ್ಮವನ್ನು ಜೀವನಕ್ಕೂ ಸಂಸ್ಕೃತಿಗೂ ಹೊಂದಿಸಿಕೊಡುವ ವಿಶಾಲ ದೃಷ್ಟಿಯು ಶ್ರೀಗಳವರದ್ದೆಯೆಂಬುದು ಅವರು ಕಳೆದ ಸಾಹಿತ್ಯೋತ್ಸವದಂದೂ ಇತರ ಕಡೆಗಳಲ್ಲಿಯೂ ಸಕಲ ಮತೀಯರೂ ವಿದ್ವಜ್ಜನರೂ ತಲೆದೂಗುವಂತೆ ಮಾಡಿರುವ ಅಮೋಘವಾದ ಭಾಷಣ ಉಪನ್ಯಾಸಗಳಿಂದ ಜನಜನಿತವಾಗಿದೆ. ಬಿರುದನ್ನು ಹೊಂದಿದ ಶ್ರೀಗಳವರನ್ನು ಅಭಿನಂದಿಸ ಬೇಕೆಂತಲೂ ಮುಗಿಲೇ ಶ್ರೀಗಳವರಿಗೆ ಬಿರುದನ್ನಿತ್ತ ಭೂಷಣವಾದ ಸಂಘವನ್ನು ಅಭಿನಂದಿಸೋಣವೆನ್ನಿಸುತ್ತೆ, ಎಂತ ಬಾಹ್ಯ.

ಕಾವ ಮತ್ತು ಜಾಣ ತರಗತಿಗಳು ತಾ ೬ರಲ್ಲಿ ಕಲಾ ವೃಂದದಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನ ಕಾವ ಮತ್ತು ಜಾಣ ತರಗತಿಗಳ ಉದ್ಘಾಟನೆಯ ಸಮಾರಂಭವು ಶ್ರೀ. ವೆಂಕಟರಮಣಾಚಾರ್ಯ ವಿದ್ವಾನ್ ಅವರ ಹಸ್ತದಿಂದ ನೆರವೇರಿತು. ಪ್ರತಿನಿತ್ಯ ಸಾಯಂಕಾಲ ೬ರಿಂದ ೭ರ ವರೆಗೆ ತರಗತಿಗಳು ನಡೆಯುವುವು. ಈಗಾಗಲೇ ೩೫ ವಿದ್ಯಾರ್ಥಿಗಳು ಶಿಕ್ಷಣ ಹೊಂದುತ್ತಿರುವರು.

ಅ. ಪದ್ಮನಾಭ ಉಡುಪ, ಕಾರ್ಯದರ್ಶಿ

ಚೌಕಿದಾರರ ಉಪಟಳ—ಕಲವು ಕಡ ಜಾಸ್ತಿಯಾಗುತ್ತಲಿದೆಯಂತೆ. ನೂಲು ಮತ್ತು ಕಾಗದ ಕಟ್ಟುಗಳನ್ನು ಅವು ಸ್ಪಷ್ಟನಾಗಿ ತೋರಿರದ ಗಾಡಿಗಳಿಂದ ಕೆಳಗೆ ಹಾಕದ ವಿನಹ ಮುಂದರಿಯಬಿಡುವುದಿಲ್ಲ ನಂತೆ. ಜೇಲಗಟ್ಟಲೆಯ ಕಟ್ಟುಗಳನ್ನು ಕೆಳಗೆ ಹಾಕಿ ಪುನಃ ಗಾಡಿಗೆ ತುಂಬಿಸುವುದು ಬಹು ಪ್ರಯಾಸದ ಕೆಲಸವೆಂಬುವುದನ್ನು ಮನಗಂಡರೂ ಕೋಳೂರ-ಕೋಟ್ಯಾರದ ಚೌಕಿದಾರರು ಮಾತ್ರ ಹಸ್ತ ಸಿದ್ಧಿಯಾಗದಿದ್ದರೆ ಮಾಲುಗಳನ್ನು ರಸ್ತೆಯ ನೇರ ಹಾಕಿಸಿಯೇ ಬಿಡುತ್ತಾರೆಂದು ಬಂಡಿ ಗಾಡಿಗಳವರ ಕಣ್ಣೀರಿನ ಗೋಳು. ರೇಶನಿಂಗ್ ಮೇಲಧಿಕಾರಿಗಳು ಈ ಕುರಿತ ತಕ್ಕ ನಿಗಾ ಕೊಡುವರೆ?

ಬಡಗಬೆಟ್ಟು—ಇಲ್ಲಿಯ ಎಲಿಮೆಂಟರಿ ಶಾಲೆಯಲ್ಲಿ ಸಭೆ ಜರಗಿ ಬುಲ್ ಬುಲ್ಸ್‌ಗಳ ಗಾಯನ, ನರ್ತನ, ಡಿಟ್ರಿಲ್ಸ್, ಮತ್ತು ಕಬ್ಸ್‌ಗಳ ಚಟುವಟಿಕೆಗಳಾದುವು.

Sri Narayan Guru Bank, Ltd.,

(Incorporated in British India, Liability of Members is Limited)

Regd. Head Office HAMPANKATTA,

MANGALORE.

Branch UDIPI, S. K.

Authorised Capital	**Rs 2,00000**
Issued Capital	**,, 1,00000**
Paid up Capital	**,, 56,150**

The Company has commenced Business by obtaining from the Government the Certificate of Commencement of Business on the 19th August, 1944 under the Indian Companies Act, 1913.

Strong Board of Directors

Consent of the Central Government has been obtained under the Defence of India Rules 94 A "It must be distinctly understood that in giving this consent the Govt. of India does not take any responsibility for the financial soundness of any scheme or for the correctness of any of the statements made or opinion expressed with regard to them". The Government of India has been pleased to extend the period till the 13th January 1945 for the sale of shares

A few shares at par available.

Rs 50/- per share. Re. 1/- Entrance Fee per share.

Hundreds have already taken up shares!

WHY NOT YOU?

Current and Savings Bank Accounts are opened Fixed Deposits are accepted. Enquire for Rules of Business and rates of Interest.

MANGALORE JARAPPA,

President & Managing Director.

NOTICE

ಉಡುಪಿ ಡಿ. ಮು. ಕೋರ್ಟಿನಲ್ಲಿ

O. P. No. 78/1944

1 ಭಾಗಮ್ಮ ಹೆಗ್ಗಡ್ತಿ-ಮಂಜಮ್ಮ ಹೆಗ್ಗಡ್ತಿ ಮಗಳು, 2 ಶೇಕರ ಹೆಗಡೆ, 3 ವಿಶ್ವನಾಥ ಹೆಗಡೆ 4 ನಾರಾಯಣ ಹೆಗಡೆ. 1ನೇ ಅರ್ಜದಾರಳ ಮಕ್ಕಳು—ಅರ್ಜದಾರರು—ಉಡುಪಿ ತಾಲೂಕು ಅತ್ರಾಡಿ ಗ್ರಾಮದ ಪರೀಕ ಹೊಸಮನೆಯಲ್ಲಿರುವರು.

ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವುದೇನಂದರೆ—

1ನೇ ಅರ್ಜದಾರಳ ಮಗ ತಾ. 20-7-44ಲ್ಲಿ ಮೃತಪಟ್ಟ ಸಿ ಅಂತಯ್ಯ ಹೆಗ್ಡೆ ಬಾಬ್ತು ಮೇಲ್ಕಂಡ ಅರ್ಜಿಯ A ಶೆಡ್ಯೂಲಿನಲ್ಲಿ ವಿವರಿಸಿರುವ "The Indo Union Assurance Company Limited, Madras" ನ No 3488ನೇ ಪೋಲಿಸಿ ಬಾಬ್ತು ರೂ| 1000/ ಮತ್ತು B ಶೆಡ್ಯೂಲಿನಲ್ಲಿ ವಿವರಿಸಿದ "The Vijaya Bank Ltd, Mangalore" ಇದರ ಶೇರ್ ಸರ್ಟಿಫಿಕೇಟು ನಂಬ್ರ 1016 ಮ Fol No 287/2 ತಾ. 16-7-43ನೇ ಶೇರುಗಳು 10ರ ಬಾಬ್ತು ರೂ 250/-ನ್ನು ಸಹಾ ವಸೂಲು ಪಡೆಯುವರೆ ಮೃತನ ಬಾಧ್ಯ ವಾರೀಸುದಾರರಾದ ಅರ್ಜದಾರರೇ ಹಕ್ಕುದಾರರೆಂತಲೂ, ಆ ಕುರಿತು ಅರ್ಜದಾರರಿಗೋಸ್ಕರ ಸ್ವಾಧೀನ ಬಿಡಿಸುವ ಜವಾಬ್ದಾರಿ ಇದ 1ನೇ ಅರ್ಜದಾರಳ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಬೇಕಾಗಿ ವಗೈರೆ ಸಂಗ್ತಿಗಳನ್ನು ಕಾಣಿಸಿ ಅರ್ಜದಾರರು ದಾಖಲು ಮಾಡಿರುವ ಮೇಲ್ಕಂಡ ಅರ್ಜಿಯು ತಾ. 21-10-44ಕ್ಕೆ ಇಟ್ಟಿರುತ್ತದೆ. ಆಕ್ಷೇಪ ಹೇಳಲಿಕ್ಕಿದ್ದವರು ಅದಿವಸ್ಸ ಈ ಕೋರ್ಟಿನ ಮುಂದೆ ಬೆಳಗ್ಗೆ 10 ಘಂಟೆಗೆ ಹಾಜರಾಗಿ ವ್ಯಾಜ್ಯ ನಡೆಸಿಕೊಳ್ಳತಕ್ಕದ್ದು.

ಉಡುಪಿ, ತಾ. 4-10-44 } **P. V. Acharya,** Vakil for Petitioners.

ಕಟಪಾಡಿ–ಇಲ್ಲಿಯ ಎಸ್. ವಿ. ಎಸ್. ಹಾಯರ್ ಎಲಿಮೆಂಟರಿ ಶಾಲಾ ಸ್ಕೌಟ್, ಕಬ್, ಬುಲ್ ಬುಲ್ ದಳದವರು ಹಿಂದುಸ್ಥಾನ್ ಸ್ಕೌಟ್ ದಿನಾಚರಣೆಯನ್ನು ತಾ 7-10-44ರಲ್ಲಿ ಜಿಲ್ಲಾ ಅಸಿಸ್ಟೆಂಟ್ ಸ್ಕೌಟ್ ಕಮಿಶನರ್ ಶ್ರೀ ಎಸ್. ಆರ್. ಕಾರ್ನಾಡರವರ ಅಧ್ಯಕ್ಷತೆಯಲ್ಲಿ ಜರಗಿಸಿದರು. ಧ್ವಜವಂದನೆ, ವಂದಿವಾಚನ, ವಿವಿಧ ವಿನೋದಾವಳಿ ಪ್ರದರ್ಶನವಾದ ಬಳಿಕ ಅಧ್ಯಕ್ಷರು ಸ್ಕೌಟ್ ಚಳವಳಿಯ ಧ್ಯೇಯವನ್ನು ವಿವರಿಸಿ ಈ ದಳದವರ ಕಾರ್ಯಕ್ರಮವನ್ನು ಪ್ರಶಂಸಿಸಿ ಭಾಷಣವಿತ್ತರು. ಈ ಸಮಾರಂಭದಲ್ಲಿ ಸುಮಾರು 125ಮಂದಿ ಸ್ಕೌಟ್ಸ್, ಕಬ್ಸ್, ಮತ್ತು ಬುಲ್‌ಬುಲ್ಸರು ಭಾಗವಹಿಸಿದ್ದರು. ಪ್ರೇಕ್ಷಕ ವರ್ಗವೂ ತುಂಬಾ ಇದ್ದಿತು.

ತಾ 9-10-44ರಲ್ಲಿ ಜಿಲ್ಲಾ ರಾಷ್ಟ್ರೀಯ ಯುದ್ಧ ಮುಖದ ಪ್ರಚಾರ ವಾಹನದವರು ಇಲ್ಲಿಯ ಹಾಯರ್ ಎಲಿಮೆಂಟರಿ ಶಾಲಾ ವಠಾರದಲ್ಲಿ ತಮ್ಮ ಪ್ರಚಾರ ಕಾರ್ಯವನ್ನು ಮಾಡಿದರು. ಜನಸಂದಣಿ ತುಂಬಾ ಇದ್ದಿತು. ಶಾಲಾ ಅಧಿಕಾರಿಗಳು ಈ ಉತ್ಸವದಲ್ಲಿ ತುಂಬಾ ಸಹಕರಿಸಿರುವರು.

ಕಾರ್ಕಳ–ಮೆ॥ ಕೆ. ಬಿ ದಾಸಪ್ಪ ವೆಂಕಟೇಶ ಶೆಣೈ ಎಂಡ್ ಸನ್ಸ್ ಅವರ ಮಾಲಕರಾದ ಶ್ರೀ. ಬಳ್ಕುಂಜೆ ಗೋಪಾಲಕೃಷ್ಣ ಶೆಣೈ ಅವರು ಸಿಮೆಂಟಿನಲ್ಲಿ ಅತಿ ಲಾಭ ಪಡೆದರೆಂಬ ಆರೋಪದ ಮೊಕದ್ದಮೆಯ ತನಿಖೆ ಕುಂದಾಪುರದ ಸಬ್ ಕಲೆಕ್ಟರ್ ಶ್ರೀ ಟಿ ಟಿ ನಾಥ್ ಐ ಸಿ ಎಸ್. ಅವರಲ್ಲಿ ನಡೆದು ಆರೋಪಿಗೆ ೧ ಸಾವಿರ ಜುಲ್ಮಾನೆ ವಿಧಿಸಲಾಯಿತು.

ಮೂಡಬಿದ್ರೆಯಲ್ಲಿ ಶ್ರೀ॥ ಶಾಸ್ತ್ರಿಯವರ ಭಾಷಣ-ತಾ. 28ಕ್ಕೆ ಕರ್ನಾಟಕ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷರಾದ ಶ್ರೀ॥ ಶಾಸ್ತ್ರಿಯವರು ಪರಿಷತ್ ಕಾರ್ಯದರ್ಶಿಯವರೊಡನೆ ದಿಯವರೊಡನೆ ಶ್ರೀ॥ ಟಿ॥ ಗೋಪಾಲ ಪೈಯವರ ಆತಿಥ್ಯವನ್ನು ಪಡೆದು, ಶ್ರೀ॥ ಚಾರುಕೀರ್ತಿ ಪಂಡಿತಾಚಾರ್ಯ ಸ್ವಾಮಿಯವರನ್ನು ಭೇಟಿಮಾಡಿ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರನ್ನಾಗಿ ಮಾಡಿ ಸದಸ್ಯತ್ವದ 101-0 0 ರೂಪಾಯಿಗಳನ್ನು ಸ್ವೀಕರಿಸಿದರು. ನಂತರ ಸಾವಿರಕಂಭದ ಬಸದಿ, ಜೈನ ಎಕಡೆಮಿ ಆಫೀಸು ಮುಂತಾದವುಗಳನ್ನು ಸಂದರ್ಶಿಸಿ,

ಬೋರ್ಡ್ ಎಲಿಮೆಂಟರಿ ಶಾಲೆಯಲ್ಲಿ ಶ್ರೀ॥ ಭುಜಬಲಿ ಶಾಸ್ತ್ರಿಗಳವರ ಅಧ್ಯಕ್ಷತೆಯಲ್ಲಿ ಭಾಷಣಮಾಡಿ ಮುಲ್ಕಿಗೆ ತೆರಳಿದರು.

ಬೈಂದೂರು–ತಾ 10-9-44ರಲ್ಲಿ ಬೈಂದೂರು ಯಡ್ತರೆ ಕೃಷ್ಣಪ್ಪ ಸೆಟ್ಟರ ಮನೆಯಲ್ಲಿ ಸಬ್ ಕಲೆಕ್ಟರ್ ಮಿ॥ ನಾಥ್‌ಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆಯೊಂದು ಜರಗಿ ಅನ್ನ ಸಮಸ್ಯೆಯ ಹಾಗೂ ಬಡವರ ಕರುಣಾಜನಕ ಕೂಗಿನ ಪರಿಹಾರ ಯೋಜನೆಯ ಕುರಿತು ಶ್ರೀ ಬಿ. ಸುಬ್ಬಣ್ಣ ಸೆಟ್ಟರೇ ಮೊದಲಾದವರ ಭಾಷಣಗಳಾದುವು. ಬಡವರ ಗಂಜಿಯೂಟಕ್ಕೆ ಸಹಾಯವನ್ನಿತ್ತು ನೆರವಾದವರ ಉಪಕಾರ ಸ್ಮರಿಸಲಾಯಿತು. ಕುಂದಾಪುರ ತಾಲೂಕಿನಲ್ಲಿ ಕಾಯಿದೆ ರೇಶನಿಂಗ್ ಜ್ಯಾರಿಯಾಗಬೇಕಾಗಿಯೂ ಬಡವರ ಹಿತ ದೃಷ್ಟಿಯಿಂದ ಅಲ್ಲಲ್ಲಿ ಅಕ್ಕಿ ಡಿಪೋಗಳು ಸ್ಥಾಪಿಸಲ್ಪಡಬೇಕಾಗಿಯೂ ನಿರ್ಣಯಗಳಾದುವೆಂದು ಓರ್ವ ಬಾತ್ಮಿದಾರರು ಬರೆಯುತ್ತಾರೆ

ಕಟಪಾಡಿ–ಬ್ರಹ್ಮ, ಶ್ರೀ. ನಾರಾಯಣ ಗುರು ಸ್ವಾಮಿ ಸೇವಾ ಸಮಿತಿಯ, ದೇವತಾ ಮಂದಿರದಲ್ಲಿ ಇದರ ಹನ್ನೊಂದನೆ ವಾರ್ಷಿಕೋತ್ಸವವು ಇದೇ. ತಾ 21 10-44ನೇ ಶನಿವಾರ ಆರಂಭವಾಗಿ ತಾ 27-10-44ನೇ, ಶುಕ್ರವಾರ ಮಧ್ಯಾಹ್ನ 12, ಗಂಟೆಯಿಂದ ಮರುದಿನ ಪೂರ್ವಾಹ್ನ 9, ಗಂಟೆ (S. T)ಯವರೆಗೆ, ಜಂಗಲಿಡುವ ಸಪ್ತಯಾಮದ ಶ್ರೀ. ದೇವೀ ಸಪ್ತಾಹ ಮಹೋತ್ಸವದೊಂದಿಗೆ ಅಂತ್ಯವಾಗಲಿಕ್ಕಿರುವದು. ಸಂತ ಮಂಡಳಿ ಸಮೇತ ಸದ್ಭಕ್ತರ ಆಗಮನವನ್ನು ಸಮಿತಿಯು ಅಪೇಕ್ಷಿಸುವದು.

ಕಾರ್ಕಳ–ಸ್ಥಳೀಯ ಪಂಚಾಯತ ಬೋರ್ಡಿನ ಖಾಲಿ ಬಿದ್ದಿದ್ದ 4 ಸ್ಥಾನಗಳಿಗೆ, ಶ್ರೀ ಕೆ. ಟಿ. ಚ್ಚಪ್ಪ ಶೆಟ್ಟಿ, ಶ್ರೀ ಕೆ. ಪಾಂಡುರಂಗನಾಯ್ಕ, ಜನಾಬ ಎ. ಎಸ್. ಮೀರ ಹೈದರ್ ಸಾಹೇಬ ಅಬ್ದುಲ್ ಕರೀಂ ಸಾಹೇಬ, 4 ಜನರು ಉಮೇದ್ವಾರರಾಗಿ ನಿಂತು ತಮ್ಮ ಶಿಫಾರಸುಪತ್ರಗಳು ಪಂಚಾಯತ ಆಫೀಸರರಾದ ಶ್ರೀ ಕೆ. ಶೀನಸೆಟ್ಟಿ B. Aರವರ ಪರಿಶೀಲನೆಯಾಗಿ ಎದುರಾಳಿಗಳಿಲ್ಲದೆ ಮೇಲಿನ ಮೆಂಬರರು, ಸದ್ರಿ ಸ್ಥಾನಗಳಿಗೆ ಆರಿಸಿ ಬಂದಿರುವರು

ಪುತ್ತೂರು–ಸಬ್ ಡಿ॥ ಮ್ಯಾಜಿಸ್ಟ್ರೇಟರಾದ ಶ್ರೀ. ಅಪ್ಪಯ್ಯ ಚೆಟ್ಟಿ ಅವರು ಈ ಕೆಳಗಿನ ಮೊಕದ್ದಮೆಗಳ ತನಿಖೆ ನಡೆಸಿ ಮುಂದೆ ತೋರುವ ತೀರ್ಮಾನ ಹೇಳಿರುತ್ತಾರೆ. [೧] ಪುತ್ತೂರಿನಲ್ಲಿ ನಿಗದಿಯನ್ನು ಮೀರಿದ ಕ್ರಯ ಪಡೆದ ಮಾಡಿದ ಆ ವ್ಯಾಪಾರಿ ಎಂ. ದಾಮೋದರ ಭಟ್ಟ [ಅಂಗಡಿ ರೋಜಪಟ್ಟಾಗಿಯ ಮಾಲಕರು] ಮತ್ತು ಸೇಲ್ಸ್‌ಮ್ಯಾನ್ ರಾಮಕಾಮತ್ ಇವರಿಂದ್ದಿ ಪ್ರತಿಯೊಬ್ಬರಿಗೂ ೪ ತಿಂಗಳ ಕಠಿನ ಸಜೆ ಮತ್ತು ರೂ. ೨೦೦ ರಂತೆ ಜುಲ್ಮಾನೆ. "ಬಿಸಲಗಳ ಕಂಟ್ರೋಲ್ ಅನ್ವಯಿಸಿ ವಿಧಿಗಳನ್ನು ಮೀರಿ ... ಮಾಡಿದ ಆರೋಪಕ್ಕಾಗಿ ಕಾಸರಗೋಡಿನ ಬಿ. ರಾಮ ಪೈ ಅವರಿಗೆ ೪ ತಿಂಗಳ ಕಠಿನ ಸಜೆ ಮತ್ತು ೨೦೦ ರೂ. ಜುಲ್ಮಾನೆ ೩] ಬೆಂಕಿ ಪೆಟ್ಟಿಗೆಯನ್ನು ಹೆಚ್ಚಿಗೆ ಕ್ರಯಕ್ಕೆ ಮಾರಿದ ಆರೋಪಕ್ಕಾಗಿ ಕಾಸರಗೋಡಿನ ಅಬ್ದುಲ್‌ಖಾದರ್ ಮತ್ತು [೪] ಅದೇ ಆರೋಪಕ್ಕಾಗಿ ಕಾಸರಗೋಡಿನ ಅಬ್ದುಲ್ಲ ಮೊಹಮ್ಮದ್ ಇವರಲ್ಲಿ ಪ್ರತಿಯೊಬ್ಬರಿಗೂ ರೂ. ೩೦೦ರಂತೆ ಜುಲ್ಮಾನೆ.

ಸಕಲೇಶ–(ಉತ್ತರಕನ್ನಡ) ತಾ 27-9-44 ರಲ್ಲಿ ಸರ್ಕಾರಿ ಶಾಲೆಯಲ್ಲಿ ಶ್ರೀ. ಶಾರದಾ ಪೂಜೋತ್ಸವವು ಜರಗಿತು. ರಾ॥ ಡಿ ಬಿ. ನಾಯ್ಕರು. ಶಾಲಾ ಹುಡುಗರಿಂದ "ಶ್ರೀ- ಕೃಷ್ಣಸಂಧಾನ"ವೆಂಬ ನಾಟಕವನ್ನು ಶೀನರಾಯರೊಡಗೂಡಿ ಅಭಿನಯಿಸಿದರು, ಇಂಥ ಹಳ್ಳಿಯ ಶಾಲೆಯಲ್ಲಿ ಇಂಥ ಉತ್ಸಾಹೀ ತರುಣ ಮಾಸ್ತರರೇ ಯೋಗ್ಯರೆಂದು ಸಭಿಕರು ವ್ಯಕ್ತಪಡಿಸಿದರು. ನಂತರ ಇದೇ ಶಾಲೆಯಲ್ಲಿ ಶ್ರೀ. ಅಂ. ವಾಚನಾಲಯದ ಜನರಲ್ ವಾರ್ಷಿಕ ಕಮಿಟಿಯು ಶ್ರೀ ಸುಬ್ರಾಯ ನಾಗಪ್ಪ ಹೆಗ್ಡೆ ಶ್ಯಾನಭಾಗರು ಇವರ ಅಧ್ಯಕ್ಷತೆಯಲ್ಲಿ ಜರಗಿತು. ವೆ॥ ರಾ॥ ರಾಮಚಂದ್ರ ಅಣ್ಣಯ್ಯ ಭಟ್ಟ ಚಯರ್‌ಮನ್. ಇವರು ವಾಚನಾಲಯದ ಬಗ್ಗೆ ಆದಷ್ಟು ಹಣವನ್ನು ಸಹಾಯಮಾಡಬೇಕೆಂದು ಜನರಿಗೆ ತಿಳಿಸಿ ಹೇಳಿದರು. ಆ ನಂತರ ಬೇಗನೆ ಯುದ್ಧ ಮುಗಿದು ಶಾಂತಿ ನೆಲೆಗೊಳ್ಳಲೆಂದು ದೇವರನ್ನು ಪ್ರಾರ್ಥಿಸಿ ಸಭೆ ವಿಸರ್ಜಿಸಲಾಯಿತು.

NOTICE

ದಕ್ಷಿಣ ಕನ್ನಡಾ ಸಬೋರ್ಡಿನೇಟ ಕೋರ್ಟಿನಲ್ಲಿ

S. C. No. 9/1942

ಸಂಧ್ಯಪ್ಪ ಸೆಟ್ಟಿ ಕುಡ್ವಾರ್ —ವಾದಿ

ಮತ್ತು

ಅಬ್ದುಲ್ಲಾ ಸಾಹೇಬ್ ಕೂಡಾ 3 ಜನರು—ಪ್ರತಿವಾದಿರು

3ನೇ ಪ್ರತಿವಾದಿ ಇಸ್ಮಾಯಿಲ್ ಸಾಹೇಬ್, ಅಬ್ದುಲ್ಲಾ ಸಾಹೇಬರ ಮಗ, ಈಗ ಜಾಲಿ ಪುತ್ತೂರು ಕಸಬೆಯಲ್ಲಿರುವವರು.

ಮೇಲ್ಕಂಡ ವ್ಯಾಜ್ಯದ 1 ಮತ್ತು 2ನೇ ಪ್ರತಿವಾದಿರು 3ನೇ ಪ್ರತಿವಾದಿಗೆ ತಾ. 12 1 1939ರಲ್ಲಿ ರೂಪಾಯಿ 450ಕ್ಕೆ ಬರೆಕೊಟ್ಟಿರುವ ಡಿಮಾಂಡು ಪ್ರೋನೋಟು ಪ್ರಕಾರ ಬಾಬಾ ವ್ಯವಹಾರಗಳನ್ನು ನಡೆಸುವ ಹಕ್ಕನ್ನು 3ನೇ ಪ್ರತಿವಾದಿಯು ವಾದಿಗೆ ತಾ. 11 5-1940ರಲ್ಲಿ ಟ್ರಾನ್ಸ್‌ಫರ್ ಮಾಡಿಕೊಟ್ಟಿರುವದರಿಂದ ಸದ್ರಿ ಡಿಮಾಂಡು ಪ್ರೋನೋಟು ಪ್ರಕಾರ ಬಾಬಾ ವ್ಯವಹಾರಗಳನ್ನು ವಸೂಲು ಮಾಡಿಕೊಳ್ಳುವದಕ್ಕೆ ಮೇಲ್ಕಂಡ ವಾದಿಯು ಪ್ರತಿವಾದಿರ ಮೇಲೆ ಮೇಲ್ಕಂಡ ಕೋರ್ಟಿನಲ್ಲಿ ದಾವಾ ದಾಖಲುಮಾಡಿರುತ್ತಾನೆ. ಸದ್ರಿ ವ್ಯಾಜ್ಯವು 1944ನೇ ಇಸ್ವಿ ಅಕ್ಟೋಬರು ತಿಂಗಳ 28ನೇ ತಾರೀಕಿನ ಹಗಲು 11 ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ತನಿಖೆ ಬಗ್ಗೆ ಇಡೋಣಾಗಿರುತ್ತದೆ. ಅದ್ದರಿಂದ ಈ ಕುರಿತು ಆಕ್ಷೇಪ ಇದ್ದರೆ ಮೇಲ್ಕಂಡ ತಾರೀಕಿಗೆ ಮೇಲಿನ ಕೋರ್ಟಿನಲ್ಲಿ ವ್ಯಾಜ್ಯವಮಾಡಿಕೊಳ್ಳತಕ್ಕದ್ದು. ತಪ್ಪಿದ್ದಾದರೆ ಏಕಪಕ್ಷವಾಗಿ ತೀರ್ಮಾನವಾಗುವದೆಂದು ಸಂಗ್ತಿ ಈ ಮೂಲಕ ತಿಳಿಸಲಾಗಿರುತ್ತದೆ.

Mangalore. | R. R Talcherkar,
—10—19 4. | Counsel for Plaintiff.

ನೋಟೀಸು

ಉಡುಪಿ ಡಿ ಮುಂ. ಕೋರ್ಟಿನಲ್ಲಿ.

O. P No 80/1944

ಮಹಾಲಕ್ಷ್ಮಿ ಅಮ್ಮ ಅಚ್ಯುತ ಭಟ್ಟರ ಹೆಂಡತಿ ಉಡುಪಿ ತಾಲೂಕು ಪುತ್ತೂರು ಗ್ರಾಮದ ... ಅರ್ಜಿದಾರಳು.

ಈ ಮೂಲಕ ಸರ್ವ ಜನರಿಗೂ ತಿಳಿಸುವದೇನೆಂದರೆ—

ಅರ್ಜಿದಾರಳ ಗಂಡ ತಾ 21 9 43ರಲ್ಲಿ ಮೃತಪಟ್ಟ ಅಚ್ಯುತ ಭಟ್ಟರ ಪ್ರತಿವಾದಿಗಳಾದ ಸದ್ರಿ ಗುರುರಾಜ ಹೆಬ್ಬಾರ, ಶಿವರಾಯ ಹೆಬ್ಬಾರ ಕೂಡಾ 2 ಜನರ ಮೇಲೆ ಪಡೆದ ಉಡುಪಿ ಡಿ ಮುಂ. ಕೋರ್ಟಿನ ಸ್ಮಾಲ್ ಕಾಸ್ಸ್ ನಂಬ್ರ 373/1938ನೇ ವ್ಯಾಜ್ಯದ ಡಿಕ್ರಿ ಇದರ ಪ್ರಕಾರ ಬರತಕ್ಕ ಹಣವನ್ನು ವಸೂಲು ಮಾಡಿಯುವದಕ್ಕೆ ಮೃತ ಡಿಕ್ರಿ ವಾದಿಯ ವಾರೀಸುದಾರಳೆಂದು ಅರ್ಜಿದಾರಳ ಹೆಸರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರಳು ದಾಖಲುಮಾಡಿರುವ ಮೇಲ್ಕಂಡ ಅರ್ಜಿಯು ತಾ 26 10 44ಕ್ಕೆ ಇಡಲ್ಪಟ್ಟಿರುತ್ತದೆ. ಆಕ್ಷೇಪ ಹೇಳಬೇಕಾದವರು ಸದ್ರಿ ತಾ 26 10 44ನೇ ದಿವಸ ಹಗಲು 10 ಘಂಟೆಗೆ ಈ ಕೋರ್ಟಿನ ಮುಂದೆ ಹಾಜರಾಗಿ ಆಕ್ಷೇಪ ವಿವರಮಾಡಿಕೊಳ್ಳತಕ್ಕದ್ದು.

ಉಡುಪಿ | P. V. Acharya,
ತಾ 1 10 44 | Vakil for Petitioner

Navabharat Book Depot Udipi South India Navabharat Book Depot Udipi South India

ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು.

	ರೂ. ಆ.				
ಸುಲಭದಲ್ಲಿ ಇಂಗ್ಲಿಷ್	1-1	ಮೂರು ಪ್ರಹಸನಗಳು	0-14	ವೀರಭದ್ರ	0-2
ಯುವಕರಿಗೆ ಮತ್ತು ವಯಸ್ಕರಿಗೆ ಸುಲಭವಾಗಿ ಇಂಗ್ಲಿಷನ್ನು ಅನ್ಯ ಸಹಾಯವಿಲ್ಲದೆ ಕಲಿಸುವ ಇಂಗ್ಲಿಷ್ ಸ್ವಯಂಬೋಧಿನಿ.		ಸ್ವತಂತ್ರ ಜೀವನೋಪಾಯ	0 3	ವತ್ಸಲಾ	0-8
		ಪುರುಷವಧು	0 4	● ಕವಿತೆಗಳು	
		ಹೆಂಡ್ತಿ ಗಂಡನಾದರೆ	0 4	ಕಾವ್ಯಸಾಮ್ರಾಜ್ಯ	0 12
		● ಕತೆಗಳ		ಮುಗುಳು	0-3
		ನಗೆನೋಟಗಳು	0-14	ಪ್ರೇಮಪುಷ್ಪ	1-0
● ನಾಟಕಗಳು		ಅನ್ನದೇವರು		ಪುರಂದರದಾಸರ ಕೀರ್ತನೆ	1-0
ಪ್ರೇಮವಿಜಯ	0-12	ಮತ್ತು ಇತರ ಕಥೆಗಳು	1 0	ಭಗವದ್ಗೀತಾ (ಮೂಲ ಸಹಿತ್ ಬೈಂಡು)	1-4
ದೇಶಭಕ್ತ	1-4	ಭಾರತೀಯ ಕತೆಗಳ	0-14	● ಇತರ ಪುಸ್ತಕಗಳು	
ವ್ಯಭಿಚಾರಿ ಯಾರು	0-12	ನಂದಾದೀಪ	0 10	ಮುಂಜಿನ ದೇವಿ	0 3
ಕುಶಲವ	0-5	ನಾಡಕತೆಗಳು	0-3	ರಾಷ್ಟ್ರಕಥೆಯ ಇತಿಹಾಸ	2-8
ಸಂಶಯ ಪಿಶಾಚ	0-8	ಶಾಧುವನ	3 0	ಬಾಲವಾಙ್ಮಯ	0-3
ರಂಗಪ್ರಭಾವ	0-5	ನಾರೀಹೃದಯ	0 14	ವಿಚಿತ್ರಸಂತತಿ	0-8
ಪ್ರಕಾರ	1 12	ಅಂತರಂಗದ ಕತೆಗಳ	0-10	ಅಕ್ಷಯಜ್ಞಾನ	0-8
ಧರ್ಮಸಂಕಟ	0 4	ಜೀಮೂತವಾಹನ	0 6	ಪ ಪ್ರಮುಖ ಪಟ್ಟಣಗಳು	1-8
ಆರೋಗ್ಯ ಪ್ರತಾಪ	0 12	ಆರು ಇತ್ಯಾದಿ ಕತೆಗಳ	0 12	ಟಿಗೂರು	0 6
ಕಂಬುಂಠ	0 6	ಬೇಟಾಮಹ್ದ	0-6	ಇತರ ಪುಸ್ತಕಗಳ ಕೆಟಲಾಗಿಗೆ	
ಪ್ರತೀಕಾರ	0 6	● ಜೀವನಚರಿತೆಗಳು		0 3-0 ಸ್ಟ್ಯಾಂಪ್ ಬರೆಯಿರಿ	
ಸೇವಾಪಥ	0-8	ಕನ್ಯಾಸಿಯ ನೆನಪಿನಲ್ಲಿ	0-8		

ನವಭಾರತ ಪುಸ್ತಕ ಭಂಡಾರ, ರಿಜಿಸ್ಟರ್ಡ್ ಪಬ್ಲಿಶರ್ಸ್, ಉಡುಪಿ ದ. ಕ.

ಕರ್ನಾಟಕ ಮಿತ್ರಮಂಡಲಿ, ಮದ್ರಾಸ್

ಸಣ್ಣ ಕಥೆಗಳ ಸ್ಪರ್ಧೆ—ಮಿತ್ರಮಂಡಲಿಯವರ ಸಮಿತಿಯವರು ಈ ವರ್ಷ ಸಣ್ಣ ಕಥೆಗಳ ಸ್ಪರ್ಧೆಯನ್ನು ಏರ್ಪಡಿಸಿದ್ದಾರೆ. ಕನ್ನಡಿಗರೆಲ್ಲಾ ಭಾಗವಹಿಸಬಹುದು.

ಸ್ಪರ್ಧೆಯ ನಿಯಮಗಳು–೧ ಕಥೆಯು ಸ್ವತಂತ್ರವಾಗಿರಬೇಕು, ರೂಪಾಂತರವಾಗಲಿ ಅಥವ ಭಾಷಾಂತರವಾಗಲಿ ಅಥವ ಈ ತನಕ ಪ್ರಕಟಿಸಿರುವದಾಗಲಿ ಅಂಗೀಕರಿಸಲ್ಪಡುವದಿಲ್ಲ. ೨ ಕಥೆಯ ವಸ್ತು ಕಥೆಗಾರರಿಗೆ ಬಿಟ್ಟಿದೆ, ಸುಮಾರು ೨೦೦೦ ಅಥವ ೩೦೦೦ ಪದಗಳ ವರೆಗೂ ಇರಬಹುದು ೩ ಪ್ರತಿಯೊಂದು ಕಥೆಯನ್ನು ಸ್ಪಷ್ಟವಾಗಿ ಶಾಯಿಯಲ್ಲಿ ಬರೆದು ಎಂಟಾಣೆ ಪೋಸ್ಟಲ್ ಆರ್ಡರ್ ಅಥವ ಮನಿಆರ್ಡರ್ ಪ್ರವೇಶದರದೊಡನೆ ಕೆಳಗಿನ ವಿಳಾಸದವರಿಗೆ ೧೯೪೪ನೇ ಇಸ್ವಿ ನವೆಂಬರ್ ೧೫ನೇ ತಾರೀಖಿನ ಒಳಗೆ ಸೇರುವಹಾಗೆ ಕಳಿಸತಕ್ಕದ್ದು. ೪ ಕಥೆಯ ಹಾಳೆಗಳ ಮೇಲೆ ಎಲ್ಲಿಯೂ ಕತೆಗಾರರ ಹೆಸರು ಬರೆದಿರಕೂಡದು ಸಂಕೇತನಾಮ ಇರಬಹುದು. ಪ್ರತ್ಯೇಕವಾಗಿ ವಿಳಾಸ, ಸಂಕೇತನಾಮ, ಕಥೆಯ ಹೆಸರು ಇವುಗಳ ವಿವರಗಳನ್ನು ಕೊಡತಕ್ಕದ್ದು. ೫ ಅತ್ಯುತ್ತಮ ಕಥೆಗಳಿಗೆ ೨ ಬಹುಮಾನಗಳಿವೆ. ಮೊದಲನೆಯ ಬಹುಮಾನ ೨೦ ರೂಪಾಯಿಗಳು, ಎರಡನೆಯ ಬಹುಮಾನ ೧೦ ರೂಪಾಯಿಗಳು. ಬಹುಮಾನ ಪಡೆದ ಕಥೆಗಳನ್ನು ಪ್ರಕಟಿಸುವ ಮತ್ತು ಅವುಗಳ ಸರ್ವಹಕ್ಕು ಮಂಡಲಿಗೆ ಸೇರಿದೆ, ಬಹುಮಾನ ಪಡೆಯದ ಇತರ ಕಥೆಗಳನ್ನು ಹಿಂದಕ್ಕೆ ಕಳುಹಿಸ ವಹಾಗಲಿ ಅಥವ ಅವುಗಳ ಬಗ್ಗೆ ಯಾವ ವಿಧವಾದ ಪತ್ರವ್ಯವಹಾರವನ್ನು ಮಾಡುವದಕ್ಕಾಗಲಿ ಮಂಡಲಿಯವರು ಬಾಧ್ಯರಲ್ಲ. ೬ ಈ ಸ್ಪರ್ಧೆಯ ಯಾವ ವಿಷಯದಲ್ಲಿಯೂ ಸ್ಪರ್ಧಾ ಉಪಸಮಿತಿಯವರ ತೀರ್ಮಾನವೇ ಅಂತಿಮ.

P. Ramananda Rao M.A., M.L.
'Yoga Vilas' Gopalkrishna Road
Thiagarayanagar, P. O. Madras
3-9-'44.

ಒಂದು ಗ್ರಾಮದಿಂದ ಇನ್ನೊಂದು ಗ್ರಾಮಕ್ಕೆ ಭತ್ತ ಅಥವಾ ಅಕ್ಕಿಯನ್ನು ಒಯ್ಯೋಣದ ಕುರಿತು ಜಿಲ್ಲಾ ಕಲೆಕ್ಟರರ ಸ್ಪಷ್ಟೀಕರಣ

ಭತ್ತ ಮತ್ತು ಅಕ್ಕಿಯನ್ನು ಒಂದು ಗ್ರಾಮದಿಂದ ಇನ್ನೊಂದು ಗ್ರಾಮಕ್ಕೆ ಕೊಂಡುಹೋಗುವದಕ್ಕೆ ಪರ್ಮಿಟಿನ ಆವಶ್ಯಕತೆಯಿದೆಯೋ ಎಂಬ ಪ್ರಶ್ನೆಯು ಈಗ ತಲೆದೋರಿದೆ ಕಳ್ಳ ಸಂತೆಗೆ ಹೋಗದಂತೆ ಮಾಡಬೇಕಾದರೆ ಪರ್ಮಿಟು ಆವಶ್ಯಕವೆಂಬುದರಲ್ಲಿ ಸಂದೇಹವಿಲ್ಲ. ಪರ್ಮಿಟು ಪಡೆಯದೆ ಸಾಗಿಸಲ್ಪಡುವ ಭತ್ತ ವ ಅಕ್ಕಿಯನ್ನು ರಿಕ್ವಿಜಿಶನ್ ಮಾಡಲಾಗುವ ಅಧಿಕಾರವು ಈ ಮೊದಲೇ ಇರುತ್ತದೆ. ಆದರೂ ರೈತರಿಗೂ ಒಕ್ಕಲುಗಳಿಗೂ ಅನಾವಶ್ಯಕ ತೊಂದರೆಯಾಗುವುದನ್ನು ನಿಲ್ಲಿಸುವುದಕ್ಕಾಗಿ ಗ್ರಾಮದಿಂದ ಸ್ಟೋರಿಗೆ ಕೊಂಡು ಹೋಗುವ ಮತ್ತು ಒಕ್ಕಲು ಧನಿಗೆ ಸಲ್ಲಿಸುವ ಗೇಣಿ ಅಕ್ಕಿಯನ್ನು ಒಯ್ಯುವ ಪರ್ಮಿಟು ಕೊಡುವ ಅಧಿಕಾರವನ್ನು ಗ್ರಾಮ ಪಟೇಲರಿಗೆ ಕೊಡೋಣಾಗಿಯದೆ. ಒಂದು ತಾಲೂಕಿನಿಂದ ಮತ್ತೊಂದು ತಾಲೂಕಿಗೆ ಅಕ್ಕಿ ವ ಭತ್ತವನ್ನು ಸಾಗಿಸಬೇಕಾದರೆ ಜಿಲ್ಲಾ ಕಲೆಕ್ಟರರ ಅಪ್ಪಣೆ ಆವಶ್ಯಕವೆಂಬುವುದನ್ನು ಮರೆಯಲಾಗದು.

ಪರ್ಮಿಟು ವಿನಹ ಸಾಗಿಸಲ್ಪಡುವ ಅಕ್ಕಿ ವ ಭತ್ತ ಜಪ್ತಿ ಮಾಡಿ ಸ್ಟೋರ್ಸ್‌ಗಳಿಗೆ ಹಾಕಲಾಗುವುದು.

The Pangal Nayak Bank Limited.

(Incorporated in 1920.)

Registered Office Court Road, UDIPI

Branches at , Udipi, Mangalore, Katapadi, Kanhangad, Kinnigoli and Nileshwar, South Canara District

Discounting of demand and short term negotiable instruments for approved parties, granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms, acceptance of Fixed, Current, Savings Bank and Cumulative deposits and every other type of up-to date Banking service is at the disposal of all the sections of the discreet public

For business proper please enquire at any one of our Offices

15th April 1944.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದಿ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,...ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಬಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದಿನ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿಗೆ ೧ಕ್ಕೆ ೫ರೂ. ಫೋಸ್ಟ ಚಾರ್ಜ ೮ ಆಣೆ.

ಏಜೆಂಟರು:— ಗದಗ:- ಗದಗ ಫಾರ್ಮಸಿ, ಹುಬ್ಬಳ್ಳಿ:- ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:— ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG.

The best preventive in epidemics of CHOLERA

"BHUVANENDRA"

CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'

ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಉಪಯೋಗಿಸತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8 ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ 2 ಬೊಟ್ಟು ಒಂದಾ ಯಾ ಹೆಚ್ಚು ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ.ಕ.

ಉಡುಪಿ ಸ್ಟಾಕಿಸ್ಟರು:— ಡಾ. ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ; ಶ್ರೀ ಆರ್. ಎಸ್. ಶೆಣ್ಯ, ರಥಬೀದಿ; ಡಾ. ಪಿ. ಬಿ. ಆಚಾರ್ಸ್ ಫಾರ್ಮಸಿ; ಡಾ. ಕೆ. ಶೀನಪ್ಪ, L. I. M.; ಡಾ. ವೆಂಕಟರಾವ್, ಕೊಡವೂರ್; ನವಭಾರತ ಬುಕ್ ಡಿಪ್ಪೊ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ಪರಿಶೀಲಿಸಿ ತಯಾರಿಸಲ್ಪಟ್ಟ, ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯವಂತರಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)

೮ ಔನ್ಸಿನ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ಸಿ ಶಾಸ್ತ್ರಿ, ಆಯುರ್ವೇದ ಭೂಷಣ, ಸಂ.ಪ **ಕೊಡಿಯಾಲಬೈಲು, ದ.ಕ**

— ಮಕ್ಕಳನ್ನು ಹಡೆಯುವದು ಸಾಕು —

ಅಶಕ್ತ ಸ್ತ್ರೀಯರಿಗೆ

ಬರ್ಥ ಕಂಟ್ರೋಲ

ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಪರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೧೨ ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರ:— ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ.— ಕುಂಬಾರಮಾಡಿ ಸ್ಟೋರ್ಸ ದಾವಣಗೇರಿ:— ದಾವಣಗೇರಿ ಪ್ರೆಸ್, ಆರ್. ಎಲ್. ಕಮಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ಯಾಟೆಲಾಗ್ ಬರೆದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ದವಾನ್ನಬಹುದು. ಉಡುಪಿ ಏಜಂಟರು — ನವಭಾರತ ಬುಕ್ ಡಿಪೊ

ನೋಡಿದರೆ ಸಾಕು! ಓದದೆ ಬಿಡಲಾರಿರಿ!!

ಮುಗಿದಾಗ ಮುಗಿದು ಹೋಯಿತಲ್ಲಾ ಎನಿಸುವ, ತೊಡಗಿದಾಗ ಹೇಗೆ ಮುಗಿಯುವುದಿದು ಎಂದು ಕೌತುಕಪಡಿಸುವ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ. ಬೆಲೆ ೦—೧೦—೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ತೊಳೆಸಿ ಹರಿಯುವ ಮಾತು.

ಪ್ರೇಮಪ್ರವಾಹವು ಹೇಗ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮಪ್ರವಾಹ

ಸ್ವಾರಸ್ಯವಾದ ೫ ಕತೆಗಳ ಸಂಗ್ರಹವನ್ನು ಓದಿನೋಡಿ ೦ ೬—೦

ಬಹಿರಂಗವಾಗಿ ಅಲ್ಲವಾದರೂ ಅಂತರಂಗವಾಗಿ ನೋಡತಕ್ಕ

ಆರ್ಟ್ ಚಿತ್ರಗಳು

ಹಲವಾರು ಸುಂದರಿಯರ ನೈಜಚಿತ್ರಗಳ ಕಟ್ಟು. ಬೆಲೆ ೦—೬—೦

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಕುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ ೧—೮—೦

ಎಲ್ಲಕ್ಕೂ ಟ. ಖ. ಪ್ರತ್ಯೇಕ. ಕೆಲವೇ ಪ್ರತಿಗಳು ಉಳಿದಿವೆ.

ಬರೆಯಿರಿ:— **ಅಂತರಂಗ ಕಾರ್ಯಾಲಯ, ಉಡುಪಿ.**

(ಉಡುಪಿಯ ನವಭಾರತ ಪುಸ್ತಕ ಭಂಡಾರದಲ್ಲಿಯೂ ದೊರೆಯುತ್ತವೆ.)

EDITED PRINTED & PUBLISHED BY K H. SHETTY AT THE NAVAYUGA PRESS, UDIPI, S. INDIA

Regd. No. M. 3618. ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6. Estd. 1921 ಸ್ಥಾಪನೆ

NAVAYUGA

ನವಯುಗ

ವರ್ಷ ೨೪ ವಾರ ೭] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ Founder SRI A. B. SHETTY. [Vol. 24 No. 7

ಉಡುಪಿ ● 19—10—1944 ● ಮಂಗಳೂರು.

ದಿ ಜುಪಿಟರ್
ಜನರಲ್ ಇನ್ಶ್ಯೂರೆನ್ಸ್
ಕಂಪೆನಿ, ಲಿ, ಬೊಂಬಾಯಿ.
ವಿಮೆಯಿಳಿಸ ಬೇಕೆ?
ಏಜಂಟರಾಗುವಿರಾ!
–ಹಾಗಾದರೆ ಕೂಡಲೇ–
ಡಿ. ನಾನಯ್ಯ, ಉಡುಪಿ.
ದಕ್ಷಿಣ ಕನ್ನಡದ ಚೀಫ್ ಏಜೆಂಟ್.
–ಇವರಿಗೆ ಬರೆಯಿರಿ–
1 ಕೋಟಿಗೆ ಮಿಕ್ಕಿ ವ್ಯವಹಾರ!
ಈ ವರುಷವೇ ರಜತೋತ್ಸವ!
The Jupiter General Insurance Company Ltd

ನಮ್ಮ ಕೆಲವು ಏಜಂಟರುಗಳು
1. ಕೆ ವಿ ವಸಗೋಡಿಸಾಟ್, ದಾಣೆ ಬೆನ್ನೂರು 2 ಶಂಕರನಾರಾಯಣಮಯ್ಯ, ತಿಕ್ಕೂರು 3 ಭಕ್ತಾಬ್ರದರ್ಸ್. ಕಾಸರಗೋಡು, 4. ವೆಂಕಟೇಶಯ್ಯ ಬ್ರದರ್ಸ್, ಶಿವಮೊಗ್ಗಾ 5. ಎಚ್ ಗೋಪಾಲಪ್ಪ, ಸೋಮೇಶ್ವರ, 6. ಕೆ ಅಚ್ಯುತಪ್ಪ, ಕಾರ್ಕಳ 7 ಪಿ. ಡಿ ಕೊರಯ, ಸಕಲೇಶಪುರ 8 ಜಿ ಎನ್. ಚಂದ್ರಘಟಗಿ, ಸಿದ್ದಾಪುರ 9. ಜಿ. ಆರ್. ಮಹರಾಜಮೇಟಿ, ಹಾವೇರಿ 10. ಎಸ್. ಎಸ್. ರಬ್ಬರ್ ಸ್ಟಾಂಪು ಕಂಪೆನಿ, ಚಿಕ್ಕಮಗಳೂರು 11. ನಾರಾಯಣ ಎಚ್. ದೇಶಪಾಂಡೆ, ಕೋಟೆಪುರ

Transact with

The Vijaya Bank Ltd.
H. O. MANGALORE.
Branches all over the District and in Bombay city,
for all kinds of Banking business

ದಿ ವಿಜಯ ಬೇಂಕ್ ಲಿಮಿಟೆಡ್,
ಹೆಡ್ ಆಫೀಸು ಮಂಗಳೂರು.
ಜಿಲ್ಲೆಯ ಎಲ್ಲಾ ಕಡೆಗಳಲ್ಲಿ ಮತ್ತು ಬೊಂಬಾಯಿ ನಗರದಲ್ಲಿ ನಮ್ಮ ಶಾಖೆಗಳು ಎಲ್ಲಾ ತರದ ಬೇಂಕಿಂಗ್ ವ್ಯವಹಾರ ಗಳು ನಡೆಸಲ್ಪಡುವುದು.

ಮುಟ್ಟಾಗುವಿಕೆ
ಹಲವಂಗಳಿಂದ ಕಟ್ಟಾಗಿದ್ದರೂ, ಕಸ್ಸದ ಗರ್ಭಧಾರಣೆ ಅಥವಾ ಅನ್ಯಾಯ ಕಾರಣದಿಂದ ರೂ—'ಕುಮಾರಿ' (Govt Regd) ಖಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಪರಿಣಮಿಸುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು, ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ 3|- ಕ್ಕಿಮೊಂದ ಕೇಸುಗಳಿಗೆ ರೂ 5,(ವಿ.ಪಿ.12 ಅಣೆ ಅಧಿಕ) Mrs P. DEVEE: 1, D. 5 (N) Tollygunge, Calcutta.
ಸ್ಟಾಕಿಸ್ಟ್: ಪೊಪುಲರ್ ಸ್ಟೋರ್ಸ್, ಮಂಗಳೂರು

CHAMPAE'S
Snow & Castrex
Sole Distributers for (India.)
Sukhananda Stores
Santhekatte, UDIPI, S. K.

Inferior Parental Longevity-

This has a correlation to the expectation of life of the offspring

Therefore a judicious selection of marriage partners must go with better health and sanitation, etc. to improve the expectation of life of the generation to come.

THE CANARA MUTUAL ASSURANCE CO., LTD.,
UDIPI (S India)

ENGLISH MADE EASY
ಇಂಗ್ಲಿಷ್ ಏನೂ ತಿಳಿಯದವರು 'ಸುಲಭದಲ್ಲಿ ಇಂಗ್ಲಿಷ್' ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೇ ಕಲಿತುಕೊಳ್ಳಬಹುದು
ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು
ಸುಲಭದಲ್ಲಿ ಇಂಗ್ಲಿಷ್
ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.
ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ
ಬೆಲೆ ಬರೇ ರೂ 1—4—0 ರೂ. 1-8-0ನ್ನು ಮನಿಯಾರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತ
ನವಭಾರತ ಪುಸ್ತಕ ಭಂಡಾರ,
ರಿಜಿಸ್ಟರ್ಡ್ ಪಬ್ಲಿಷರ್ಸ್ ಎಂಡ್ ಬುಕ್ ಸೆಲ್ಲರ್ಸ್,
ಉಡುಪಿ, ದ. ಕ
ನಮ್ಮಲ್ಲಿ ಸಿಗುವ ಪುಸ್ತಕಗಳ ಕೆಟಲಾಗಿಗೆ 0 2 0 ಸ್ಟಾಂಪಿನೊಂದಿಗೆ ಬರೆಯಿರಿ.

ದೀಪಾವಳಿಯ ಅಭಿವಂದನೆ
ದಿ ಬೊಂಬೇ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.
ಇದರ
ದಕ್ಷಿಣ ಭಾರತದ ಮದ್ರಾಸ್ ಶಾಖಾ ಕಾರ್ಯದರ್ಶಿಗಳು ಮತ್ತು ಬೊಂಬಾಯಿ ನಗರದ ವಿಶಿಷ್ಟ ಪ್ರತಿನಿಧಿಗಳಾದ
ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್
ಇವರು
ತಮ್ಮ ಎಲ್ಲಾ ಪೋಲಿಸಿದಾರರಿಗೂ, ಪ್ರತಿನಿಧಿಗಳಿಗೂ, ವೈದ್ಯಕೀಯ ಪರೀಕ್ಷಕರಿಗೂ, ಹಿತೇಚ್ಛುಗಳಿಗೂ ತಮ್ಮ ಹಾರ್ದಿಕವಾದ ದೀಪಾವಳಿಯ ಅಭಿವಂದನೆಗಳನ್ನು ಅರ್ಪಿಸುತ್ತಾರೆ

ಅಂತರಂಗ
ಅಖಿಲ ಕರ್ನಾಟಕದ ಹೊಸ ಪ್ರಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ.
ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ. 0—1—6

REGD
ಅಮೃತಾಂಜನ ತಲೆವೇದನೆ, ಶಿರೋವೇದನೆ, ಉಳುಕು, ಉತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಪಕ್ಷವಾತ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ, ಹುಳುಕಡ್ಡಿ ಮುಲ್ಲಾಮು ಸಹ ನಮ್ಮಲ್ಲಿ ಸಿಕ್ಕುತ್ತದೆ
ಅಮೃತಾಂಜನ ಲಿಮಿಟೆಡ್.
ಮದರಾಸು
ಬೊಂಬಾಯಿ ಮತ್ತು ಕಲ್ಕತ್ತಾ.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.
ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ನಾಲಗನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.
The Moolky Bank Ltd.,
Moolky, S K.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ
ಬಾಲಚಂದ್ರ
ಇದೀಗ ಮೂರನೇ ಸಂಪುಟಾರಂಭವಾಗಿದೆ
ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ
ವಾರ್ಷಿಕ ಚಂದಾ ರೂ 1—8—0 ಮಾತ್ರ
ಹೆಚ್ಚಿನ ವಿಚಾರಕ್ಕೆ ಬರೆಯಿರಿ
ಬಾಲಚಂದ್ರ, ಉಡುಪಿ.

Decorate your home with
Life-like Oil Painting
of those dear and near to you
M. S. Shirale,
MODERN STUDIO,
UDIPI


ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಚಿಲ್ಲರೆಯಾಗಿಯೂ ದೊರೆಯುತ್ತವೆ
ಕಲ್ಯಾಣಿ ವ್ಯಾಪಾರಾಲಯ,
ರಥಬೀದಿ, ಉಡುಪಿ.

★ "ದೇಶ ಭಕ್ತ" ★

ಅನುವಾದಕಿ:—ಶ್ರೀಮತಿ ಮಾಲತಿ ದೇವಿ, ಬಿ. ಎ., ಬೆಂಗಳೂರು.

"ಸ್ವಾಮಿ, ಇಂದು ಒಂದು ಸುಂದರ ಪಾದ ಸೃಷ್ಟಿಯನ್ನು ನೋಡಿ. ನಾವು ಅಭಿಮಾನಪಡುವಂತಹ ಒಂದು ಪ್ರಾಣಿಯ ರಚನೆಯನ್ನು ಮಾಡಿ ನೀನು?"

"ನಿಜವಾಗಿಯೂ! ಪ್ರಿಯೇ, ಇಂದು ನೀನು ನಿನ್ನ ಕೆಲಸ ಕಾರ್ಯವನ್ನೆಲ್ಲಾ ಬಿಟ್ಟು, ನನ್ನ ಸೃಷ್ಟಿ ಪರೀಕ್ಷೆಯನ್ನು ಮಾಡಲೆಣಿಸಿ ಬಂದಿರುವೆಯಾ?"

"ನಿಮ್ಮ ಪರೀಕ್ಷೆಯನ್ನು ನಾನು ಮಾಡಲೇ? ವೃಥಾ ನೀವು ನನ್ನ ಪ್ರಶಂಸೆಯನ್ನು ಮಾಡುವಿರಿ. ಇಲ್ಲಿ ಕುಳಿತು ನಿಮ್ಮ ಮರ್ತ್ಯಲೋಕದ ಅದ್ಭುತ ರಚನೆಯನ್ನು ನೋಡುತ್ತಿದ್ದೆನು. ಮನಸ್ಸಿಗೆ ಬೇಸರವಾಗಿ ನಿಮ್ಮ ಬಳಿಗೆ ಬಂದೆನು. ಪ್ರಪಂಚದಲ್ಲಿ ಈಗ ಅಪೂರ್ವ ಗುಣವುಳ್ಳುದೂ ಇಲ್ಲ. ಹಿಂದಿನ ಸಂಪ್ರದಾಯವೇ ನಾಲ್ಕಾರು ಕಡೆಯೂ ತೋರಿಬರುತ್ತಿದೆ. ಒಬ್ಬನು ಅಳುತ್ತಿದ್ದರೆ ಮತ್ತೊಬ್ಬನು ನಗುತ್ತಾನೆ. ಒಬ್ಬನು ಪ್ರೀತಿಸಿದರೆ, ಮತ್ತೊಬ್ಬನು ಅತ್ಯಾಚಾರ ಮಾಡುತ್ತಾನೆ. ರಾಜನು ಭಿಕ್ಷೆ ಬೇಡಲು ಪ್ರಾರಂಭಿಸಿದರೆ, ಭಿಕ್ಷುಕನು ಅಧಿಕಾರ ಮಾಡುತ್ತಾನೆ. ಆದ್ದರಿಂದ ಒಂದು ಮನೋರಂಜಕ ಸೃಷ್ಟಿ ಮಾಡಬೇಕೆಂದು ನಿಮ್ಮಲ್ಲಿ ನನ್ನ ಪ್ರಾರ್ಥನೆ. ಪ್ರಪಂಚದಲ್ಲಿ ಬಹುಮಂದಿ ನಿಮ್ಮನ್ನು ಶಪಿಸುತ್ತಾರೆ. ಒಮ್ಮೆ ಆಶೀರ್ವಾದವು ಬರಲಿ."

"ಆಗಲಿ, ಈಗ ನನ್ನ ಮನಸ್ಸೂ ಸಂತೋಷದಿಂದಿದೆ. ಯಾರಿಂದಾದರೂ ಮಾನವ ಸೃಷ್ಟಿಗೆ ಅವಶ್ಯಕವಾದ ವಸ್ತುಗಳನ್ನು ತರಿಸು. ನಾನು ನಿನ್ನೆದುರಿನಲ್ಲಿ ನಿನ್ನ ಸಹಾಯದಿಂದಲೇ ಸೃಷ್ಟಿ ಮಾಡುವೆನು."

"ನಾನು ನಿಮಗೆ ಸಹಾಯ ಮಾಡಲೇ? ಚೆನ್ನಾಯಿತು. ಸೃಷ್ಟಿಯಾದಂತೆಯೇ ಆಯಿತು. ಸೃಷ್ಟಿ ಮಾಡುವ ಯೋಗ್ಯತೆ ನನ್ನಲ್ಲಿದ್ದಿದ್ದರೆ, ನಿಮಗೆ ಕಷ್ಟ ಕೊಡಲು ಇಲ್ಲಿಗೆ ಬರುತ್ತಿದ್ದೆನೇ?"

"ಕೋಪಿಸುವೆಯೇಕೆ? ಪ್ರತಿಮೆಯನ್ನು ಸಿದ್ಧಪಡಿಸೆಂದು ನಿನಗೆ ಹೇಳಿದೆನೆ? ನೀನು ಇಲ್ಲಿ ಸುಮ್ಮನೆ ಕುಳಿತಿರು. ಆಗಾಗ್ಗೆ ನನ್ನ ಕಡೆ ಮತ್ತು ನನ್ನ ಕೃತಿಯ ಕಡೆ, ನಿನ್ನ ಮಧುರ ಕಟಾಕ್ಷವನ್ನು ಬೀರುತ್ತಿರು. ನಿನ್ನ ಇಷ್ಟರ ಸಹಾಯದಿಂದಲೇ ನನ್ನ ಸೃಷ್ಟಿಯಲ್ಲಿ ಪ್ರಾಣ ಬರುವುದು. ತಿಳಿಯಿತೇ?"

"ಗೊತ್ತಾಯಿತು. ಕಲಿಯುಗದ ಮುದುಕರಂತೆಯೇ ನೀವೂ ಆಗುತ್ತಿರುವಿರಿ. ಇನ್ನೂ ಯೌವನದ ಅಮಲು ಕಣ್ಣುಗಳಲ್ಲಿರುವುವು."

"ನಿನ್ನ ಸ್ವಭಾವವೂ ಚೆನ್ನಾಗಿಯೇ ಆಗುತ್ತಿರುವುದು. ಮಾರವಾಡಿ ಹೆಂಗಸರಂತೆ ಸಾಧ್ಯವಾದಾಗಲೆಲ್ಲಾ ಕೂಗಾಡುವೆ. ಬೇಗ ಸಾಮಗ್ರಿಗಳನ್ನು ಸಿದ್ಧಪಡಿಸು. ನಡೆ."

೨

ಮಣ್ಣು, ನೀರು, ಅಗ್ನಿ, ಆಕಾಶ ಮತ್ತು ಗಾಳಿಯ ಸಹಾಯದಿಂದ ವಿಧಾತನು ಒಂದು ಪುತ್ಥಳಿಯನ್ನು ಸಿದ್ಧಗೊಳಿಸಿದನು. ಇದಾದ ನಂತರ ಬ್ರಹ್ಮನು ತೇಜಸ್ಸನ್ನು ಪ್ರಥಮತಃ ಕರೆದು ಆ ಪ್ರತಿಮೆಯನ್ನು ಪ್ರವೇಶಿಸುವಂತೆ ಹೇಳಿದನು. ನಂತರ ಕ್ರಮವಾಗಿ ಸೌಂದರ್ಯ, ದಯೆ, ಕರುಣೆ, ಪ್ರೇಮ, ವಿದ್ಯೆ, ಬುದ್ಧಿ, ಬಲ, ಸಂತೋಷ, ಉತ್ಸಾಹ, ಧೈರ್ಯ ಮತ್ತು ಗಾಂಭೀರ್ಯಾದಿ ಸಮಸ್ತ ಸದ್ಗುಣಗಳು ಆ ಪ್ರತಿಮೆಯಲ್ಲಿ ಐಕ್ಯಗೊಂಡವು. ಆಯುಸ್ಸು ಮತ್ತು ಭಾಗ್ಯದ ರೇಖೆಗಳನ್ನು ಬರೆಯಲು ಲೇಖನಿಯನ್ನು ಮೇಲಕ್ಕೆತ್ತಿದಾಗ, ಬ್ರಹ್ಮ ಪ್ರಿಯಳಾದ ವಾಣಿಯು ಅವನನ್ನು ತಡೆದು, "ಇವನ ಭಾಗ್ಯದಲ್ಲೇನು ಬರೆಯುವಿರಿ? ಅವನ ಆಯುಃಪ್ರಮಾಣವೇನು?" ಎಂದಳು.

"ಏಕೆ? ಅದರಿಂದ ನಿನಗೇನು? ನಿನಗೆ ಬೇಕಾದದ್ದು ಮನೋರಂಜನೆ ತಾನೆ? ಹುಬ್ಬುಗಳನ್ನೇಕೆ ಗಂಟು ಹಾಕಿಕೊಳ್ಳುವೆ? ಸರಿ. ಬೇಕಾದರೆ ಕೇಳು. ಇವನ ಭಾಗ್ಯದಲ್ಲಿ ಬರೆಯುವುದು ಭಯಂಕರ ದಾರಿದ್ರ್ಯ, ದುಃಖ ಮತ್ತು ಚಿಂತೆ ಆಯುಸ್ಸು 20 ವರ್ಷ."

"ಇದೇನು ತಮಾಷೆ ಮಾಡುವಿರಿ? ಸಕಲ ಸದ್ಗುಣಗಳನ್ನೂ ಕೊಟ್ಟ ನಂತರ ದಾರಿದ್ರ್ಯ ದುಃಖ ಮತ್ತು ಚಿಂತೆಯನ್ನು ಕೊಡುವ ಆವಶ್ಯಕತೆ ಏನು? ನಂತರ ಕೇವಲ 20 ವರ್ಷ ಆಯುಸ್ಸು. ಇದರಿಂದಲೇ ಮರ್ತ್ಯಲೋಕದ ಕವಿಗಳು ನಿಮ್ಮನ್ನು ಆಕ್ಷೇಪಿಸುವುದು. ಹೆಸರು ಚತುರಾನನನಾದರೂ, ನೀವು ತಪ್ಪು ಮಾಡುತ್ತಲೇ ಇರುವಿರಿ."

ಬ್ರಹ್ಮನು ನಗುತ್ತಾ ಹೇಳಿದನು. 'ಸೃಷ್ಟಿಯಾಯಿತು. ತಮಾಷೆಯನ್ನು ನೋಡು. ತಮಾಷೆಯು ಬೇಗ ಮುಗಿಯಲೆಂದೇ ಅವನಿಗೆ ಅಲ್ಪಾಯಸ್ಸು."

'ಮರ್ತ್ಯಲೋಕದಲ್ಲಿ ಇವನನ್ನು ಏನೆಂದು ಕರೆಯುವರು?"

ಪ್ರಜಾಪತಿಯು ಗಂಭೀರನಾಗಿ ಹೇಳಿದನು. "ದೇಶ ಭಕ್ತ'. ಅಮರಾವತಿಯಿಂದ ಇಂದ್ರನು, ಕೈಲಾಸದಿಂದ ಶಿವನು, ವೈಕುಂಠದಿಂದ ಕಮಲಾಪತಿಯು ಪೃಥ್ವಿಯ ರಂಗಮಂಚದ ಮೇಲೆ ದೇಶಭಕ್ತನ ಪ್ರವೇಶವನ್ನು ನೋಡಿದಾಗ ಅವನ ವಯಸ್ಸು 19. ಇದರಿಂದ ಆಶ್ಚರ್ಯವೇನೂ ಇಲ್ಲ. ದೇವಮಂಡಲದ ಒಂದೊಂದು ದಿನ ನಮ್ಮ ಅನೇಕ ಶತಾಬ್ದಗಳಿಗಿಂತಲೂ ಅಧಿಕ. ನಮ್ಮ 19 ವರ್ಷಗಳು 1 ನಿಮಿಷಕ್ಕಿಂತಲೂ ಕಡಿಮೆ.

ದೇಶಭಕ್ತನ ದರ್ಶನದಿಂದ ಪ್ರಸನ್ನನಾದ ಭಗವಾನ್ ಶಂಕರನು ನಲಿದನು. ತನ್ನ ಪ್ರಾಣೇಶ್ವರಿಯಾದ ಪಾರ್ವತಿಗೆ ದೇಶಭಕ್ತನನ್ನು ತೋರಿಸುತ್ತಾ "ನೋಡು, ಇದು ಸೃಷ್ಟಿಯ ಅಪೂರ್ವ ರಚನೆ. ಈತನ ರೂಪವನ್ನು ಧಾರಣೆ ಮಾಡಿದ ದೇವತೆಗಳು ತಮ್ಮನ್ನು ಧನ್ಯರೆಂದು ಭಾವಿಸುತ್ತಾರೆ. ಪ್ರಿಯೇ, ಇವನನ್ನಾಶೀರ್ವದಿಸು" ಎಂದನು. ಪ್ರಸನ್ನವದನೆಯಾದ ಉಮೆಯು "ದೇಶಭಕ್ತನಿಗೆ ಜಯವಾಗಲಿ" ಎಂದಳು. ಒಂದು ದಿನ ದೇಶಭಕ್ತನ ತೇಜಃಪೂರ್ಣ ಮುಖಮಂಡಲವು ಆಕಸ್ಮಾತ್ ಶ್ರೀ ಕಮಲೆಗೆ ದೃಷ್ಟಿಗೋಚರವಾಯಿತು. ಆಗ ಅವನು ಕೈಯಲ್ಲಿ ಪಿಸ್ತೂಲನ್ನು ಹಿಡಿದು ಒಬ್ಬ ದೇಶದ್ರೋಹಿಯನ್ನು ಹಿಂಬಾಲಿಸುತ್ತಿದ್ದನು. ಭಯಾಕ್ರಾಂತೆಯಾದ ಇಂದಿರೆಯು ವಿಷ್ಣುವಿಗೆ ಅದನ್ನು ತೋರಿಸುತ್ತಾ ಹೇಳಿದಳು "ಇದು ಯಾರು? ಮುಖದಲ್ಲಿ ಇಷ್ಟೊಂದು ತೇಜಸ್ಸು ಮತ್ತು ಪವಿತ್ರತೆ ಇದ್ದರೆ ಮಾಡಲು ಹೊರಟಿರುವುದು ಕ್ರೂರ ಕೃತ್ಯ-ಹತ್ಯೆ. ಇದೆಂತಹ ಲೀಲೆ, ಹೇ ಲೀಲಾಧರನೇ!" ಎನ್ನುವ ಹೇಳಿದನು. "ಸುಮ್ಮನೆ ನೋಡು '

ಪರಿತ್ರಾಣಾಯ ಸಾಧೂನಾಂ ವಿನಾಶಾಯ ಚ ದುಷ್ಕೃತಾಂ। ಧರ್ಮ ಸಂಸ್ಥಾಪನಾರ್ಥಾಯ ಸಂಭವಾಮಿ ಯುಗೇ ಯುಗೇ॥

ಇವನ ಕಾರ್ಯವು ಕ್ಷಮಾಕೃತ್ಯವಾದರೆ, ರಾಮ, ಕೃಷ್ಣ, ಪ್ರತಾಪ, ಶಿವಾಜಿ ಇವರೆಲ್ಲರೂ ರಾಕ್ಷಸ ಕಾರ್ಯ ಮಾಡಿದರು. ದೇವಿ, ಇವನನ್ನು ವಂದಿಸು. ಇದು ಸೃಷ್ಟಿಕರ್ತನ ಪವಿತ್ರ ಕೃತಿ

\+ \+

ಕೈಯಲ್ಲಿದ್ದ ಪಿಸ್ತೂಲನ್ನು ದೇಶದ್ರೋಹಿಯ ಮಸ್ತಕಕ್ಕೆ ಗುರಿಯಿಟ್ಟು ದೇಶಭಕ್ತನು ಹೇಳಿದನು. "ಮೂರ್ಖ, ಪಶ್ಚಾತ್ತಾಪಪಟ್ಟು ದೇಶದ್ರೋಹದಿಂದ ದೂರವಾಗಿ ಮಾತೃಸೇವೆಯ ಪ್ರತಿಜ್ಞೆ ಮಾಡು. ಇಲ್ಲವಾದರೆ ಮರಣಕ್ಕೆ ಸಿದ್ಧನಾಗು"

ದೇಶದ್ರೋಹಿಯ ಮುಖದಲ್ಲಿ ವ್ಯಂಗ್ಯ ಮತ್ತು ಗರ್ವಪೂರಿತವಾದ ನಗುವು ತೋರಿತು. ಶಾಸಕನ ದರ್ಪದಿಂದ ಹೇಳಿದನು "ಅಜ್ಞಾನಿ, ಸಾವಧಾನದಿಂದಿರು. ನಾವು ಶಾಸಕರ ಮಕ್ಕಳು. ನಮ್ಮ ದೇವರು ಮತ್ತು ತಂದೆ ತಾಯಿಗಳು ಸರ್ವ ಶಕ್ತಿವಂತನಾದ ಚಕ್ರವರ್ತಿ. ಸಾಮ್ರಾಟನಿಂದಲೇ ದೇಶದ ಉನ್ನತಿ."

"ಕೊನೆಯ ಬಾರಿ ಹೇಳುತ್ತೇನೆ. 'ಮಾತೆಗೆ ಜಯವಾಗಲಿ' ಎನ್ನು. ಇಲ್ಲದಿದ್ದರೆ ಇಲ್ಲಿ ನೋಡು." ದೇಶಭಕ್ತನು ಪಿಸ್ತೂಲು ಹಾರಿಸಲು ಸಿದ್ಧನಾದನು.

ತನಗೆ ಬಂದಿರುವ ಆಪತ್ತನ್ನು ತಿಳಿದು ದೇಶದ್ರೋಹಿಯು ಜೇಬಿನಿಂದ ಒಂದು ಸಿಳ್ಳೆಯನ್ನು ತೆಗೆದು ಘಟ್ಟಿಯಾಗಿ ಊದಿದನು. ತಕ್ಷಣವೇ ಗುಪ್ತವೇಷದಲ್ಲಿ ದೇಶದ್ರೋಹಿಯ ಹತ್ತಿರದಲ್ಲೇ ಇದ್ದ 20 ಮಂದಿ ಬಂದು ದೇಶಭಕ್ತನನ್ನು ಮುತ್ತಿದರು. ಅವನು ಪಿಸ್ತೂಲು ಹಾರಿಸಿದನು. ತಕ್ಷಣವೇ ದೇಶದ್ರೋಹಿಗಳ ಮುಖಂಡನು ನೆಲಕ್ಕೆ ಬಿದ್ದನು. ದಸ್ತಗಿರಿಯಾಗುವ ಮೊದಲು ದೇಶಭಕ್ತನು ಸಫಲ ಪ್ರಯತ್ನನಾಗಿ ಪ್ರಸನ್ನವದನನಾಗಿ 'ಮಾತೆಗೆ ಜಯವಾಗಲಿ" ಎಂದು ಕೂಗಿದನು.

ಆಗ ನಡೆಯುತ್ತಿದ್ದ ಇಂದ್ರಾಸನನು ಪುಷ್ಪವೃಷ್ಟಿ ಮಾಡುತ್ತಿದ್ದ. ನಂದನ ಕಾನನವು, ತಾಂಡವನೃತ್ಯ ಲೀನನಾಗಿದ್ದ ರುದ್ರನು, ಕಲಕಲ ನಿನಾದ ಗೈಯುತ್ತಿದ್ದ ಸುರನದಿಯೂ ಎಲ್ಲರೂ ಏಕ ಕಂಠದಿಂದ "ದೇಶಭಕ್ತನಿಗೆ ಜಯವಾಗಲಿ" ಎಂದರು.

ವಿಧಾತನು ಪ್ರೇಮಗದ್ಗದನಾಗಿ ಸರಸ್ವತಿಯೊಡನೆ ಹೇಳಿದನು." "ನೋಡಿದೆಯಾ, ದೇಶಭಕ್ತನ ಚರಣ ಸ್ಪರ್ಶದಿಂದ ಕಾರಾಗೃಹವು ಸ್ವರ್ಗವಾಯಿತು. ಶಬ್ದಗಳ ಬೇಡಿಗಳು ಛಿನ್ನವಾಗುವುವು. ಪ್ರಪಂಚದಲ್ಲಿ ಜನರ ಹೃದಯಗಳಲ್ಲಿ ಸಂತೋಷ ಸಾಗರವು ಉಕ್ಕಿ ಬರುವುದು. ವಸುಂಧರೆಯು ಆನಂದಾಶ್ರು ಸುರಿಸುವಳು. ಇದು ನನ್ನ ಕೃತಿ, ನನ್ನ ವಿಭೂತಿ. ಪ್ರಿಯೇ, ಮಂಗಳವನ್ನು ಹಾಡು. ಇಂದು ನನ್ನ ಲೇಖನಿಯು ಧನ್ಯವಾಯಿತು."

(ಗುರು ಪತ್ರ ನೋಡಿರಿ)

Navabharat Book Depot Udipi South India Navabharat Book Depot Udipi South India

ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು

		ರಾ. ಅ. ಮನೋಜ್ಞ ಪ್ರಹಸನಗಳು	0 14	ಸೀತಾಭಿಷೇಕ	0 2
ಸುಲಭದಲ್ಲಿ ಇಂಗ್ಲಿಷ್	1-4	ಸ್ವತಂತ್ರ ಜೀವನೋಪಾಯ	0-3	ವತ್ಸಲಾ	0 8
ಯುವಕರಿಗೆ ಮತ್ತು ವಯಸ್ಕರಿಗೆ		ಪುರುಷವಧು	0 4	● ಕವಿತೆಗಳು	
ಸುಲಭವಾಗಿ ಇಂಗ್ಲಿಷನ್ನು ಅನ್ಯ		ಹೆಂಡ್ತಿ ಗಂಡನಾದರೆ	0 4	ಕಾವ್ಯಸಾಮ್ರಾಜ್ಯ	0 12
ಸಹಾಯವಿಲ್ಲದೆ ಕಲಿಸುವ ಇಂಗ್ಲಿಷ್ ಸ್ವಯಂಬೋಧಿನಿ.		● ಕತೆಗಳು		ಮುಗ್ಧಳು	0 3
		ನಗೆನೋಟಗಳು	0-14	ಶ್ರೀಮುಖ	1-0
● ನಾಟಕಗಳು		ಅನ್ನದೇವರು		ಪುರಂದರದಾಸರ ಕೀರ್ತನೆ	1-0
ಪ್ರೇಮವಿಜಯ	0 12	ಮತ್ತು ಇತರ ಕತೆಗಳು	1 0	ಭಗವದ್ಗೀತಾ (ಮಾಲಿ-	
ದೇಶಭಕ್ತ	1-4	ಭಾರತೀಯ ಕತೆಗಳು	0-14	ಸನ್ ಬೈಂಡು)	1-4
ವ್ಯಭಿಚಾರಿಣಿ ಯಾರು	0 12	ನಂದಾದೀಪ	0 10	● ಇತರ ಪುಸ್ತಕಗಳು	
ಕುಶಲವ	0-5	ನಾಡಕತೆಗಳು	0 3	ಮುಂದಿನ ದೇವರು	0 3
ಸಂಶಯ ಪಿಶಾಚಿ	0-8	ಮಾಧವನ	3 0	ರಾಷ್ಟ್ರಕವಿಯ ಇತಿಹಾಸ	2 8
ರಂಗಭೂಮಿ	0-6	ಸಾಂಖ್ಯದಯ	0 14	ಬಾಲವಾಙ್ಮಯ	0 3
ಪ್ರಕಾಶ	1-12	ಅಂತರಂಗದ ಕತೆಗಳು	0-10	ಮಿತಸಂತತಿ	0-8
ಧರ್ಮಸಂಕಟ	0 4	ಪ್ರೇಮಪ್ರವಾಹ	0 6	ಲಕ್ಷ್ಮಿಯ ಯಾನ	0-8
ಆರೋಗ್ಯ ಪ್ರಕಾಶ	0-12	ಆಹುತಿ ಇತ್ಯಾದಿ ಕತೆಗಳು	0 12	ವಸಂತ ಪುಷ್ಪಗಳು	1-6
ಕಂಟೀರವ	0 6	ಲೋಪಾಮುದ್ರೆ	0-6	ಚಿಗುರು	0 6
ಪ್ರತೀಕಾರ	0 6	● ಕಾದಂಬರಿಗಳು		ಇತರ ಪುಸ್ತಕಗಳ ಕೆಟಲಾಗು	
ಸೇವಾಪಥ	0-8	ಸನ್ಯಾಸಿಯ ಸೊಗಸಗಿ	0-8	0-2-0 ಸ್ಟಾಂಪು ಬರೆಯಿರಿ	

ನವಭಾರತ ಪುಸ್ತಕ ಭಂಡಾರ, ರಿಜಿಸ್ಟರ್ಡ್ ಪಬ್ಲಿಷರ್ಸ್, ಉಡುಪಿ ದ. ಕ.

ಆಸ್ತಿ ಮಾರಾಟಕ್ಕಿದೆ

ಉಡುಪಿ ತಾಲೂಕು ಉಳಿಯಾರಗೋಳಿ ಮತ್ತು ಪಾಂಗಾಳ ಗ್ರಾಮದ ಕರಾವಳಿಯಲ್ಲಿ ಕಂದಾಯ ಜಾತಾ 115ರ ಮುಡಿ ಅಕ್ಕಿ ಗೇಣಿಸಿಕ್ಕುವ ಒಮ್ಮುಖವಾದ ಆಸ್ತಿಯು ಮಾರಾಟಕ್ಕಿದೆ. ಕಾಯಿಸ್ ಉಳ್ಳವರು ಕೂಡಲೇ ಈ ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು.

'S'
C/o ನವಯುಗ,
ಉಡುಪಿ.

ಕ್ರೌನ್

ರಬ್ಬರ್ ಸ್ಟಾಂಪ್ ಕಂಪೆನಿ

18 ಬಲ್ಮಠ ರಸ್ತೆ, ಮಂಗಳೂರು

ರಬ್ಬರ್ ಮೊಹರು ಸ್ಟೆನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು

Crown Rubber Stamp Co.
18 Balmat Road, MANGALORE
Approved firm by the Govt of Mysore
Certified by the Agent of the Govt of India in Ceylon. Estd 1906

ಸಮಾಚಾರ ಸಂಗ್ರಹ

ಲಾರ್ಡ್ ಲಿನ್ಲಿತ್ಗೋರವರ ಬಡಾಯಿ.

ಸಾಮಾನ್ಯವಾಗಿ ವೈಸರಾಯರು ಅವರ ಅಧಿಕಾರವಿರುವಷ್ಟು ಕಾಲ ಭಾರತೀಯ ರಾಜಕೀಯ ಆಕಾಶದಲ್ಲಿ ಭಾರತದ ಹಿತಾಹಿತಕಾರಕ ಗ್ರಹವಾಗಿ ವಿರಾಜಿಸಿ ಅಧಿಕಾರ ದಂಡ ಕೆಳಗಿಡುವುದರೊಡನೆ ರಾಜಕೀಯ ಆಕಾಶದಿಂದ ಅಸ್ತಂಗತವಾಗುವುದು ವಾಡಿಕೆ. ಆದರೆ ನಮ್ಮ ಮಾಜಿ ವೈಸರಾಯಿ ಲಾರ್ಡ್ ಲಿನ್ಲಿತ್ಗೋರವರು ಇತ್ತೀಚಿಗಿನ ಯುದ್ಧಮುಖದ ರಭಸದ ಮುನ್ನಡೆಯನ್ನು ಕಂಡು ಮುಂಬರುವ ವಿಜಯ ಕಾರಣಿಕ ಗ್ರಹಗಳಲ್ಲಿ ತಾನೂ ಒಂದೆಂದು ಲೋಕವು ತಿಳಿದುಕೊಳ್ಳಲೆಂದೋ ಏನೋ, ಧೂಮಕೇತುವಿನಂತೆ ರಾಜಕೀಯ ಬಾಂದಳದಲ್ಲಿ ತೋರಿಸಿಕೊಳ್ಳಲು ಹವಣಿಸುತ್ತಿದ್ದಾರೆ. ಅವರು ಇತ್ತೀಚೆಗೆ ಎಡಿನ್‌ಬರೋದಲ್ಲಿ ಮಾಡಿದ ಒಂದು ಭಾಷಣದಲ್ಲಿ ತನ್ನ ಗೈಮೆಯನ್ನೆತ್ತಿಗಳಹಿದರು. ೧೯೪೨ರ 'ಬಹಿರಂಗ ಬಂಡಾಯ'ದ ಕುರಿತು ಮಾತಾಡುತ್ತ ಆಗ ಇಂಡಿಯಾವು ಏನು ಬೇಕಾದರೂ ಮಾಡಿಕೊಳ್ಳಲೆಂದು ಅದರ ಪಾಡನ್ನು ಅದಕ್ಕೇ ಬಿಟ್ಟುಬಿಟ್ಟಿದ್ದರೆ, ರಕ್ತಪಾತಯುಕ್ತವಾದ ಅರಾಜಕೀಯ ಅವ್ಯವಸ್ಥೆಯುಂಟಾಗಿ ಪ್ರತಿಯೊಂದು ಭೂಖಂಡದಲ್ಲಿಯೂ ಜಾಗತಿಕ ಶಾಂತಿಯನ್ನು ಶಿಥಿಲಗೊಳಿಸುತ್ತಿತ್ತು. ಅಪ್ರಬುದ್ಧ ಭಾರತದ ಬ್ರಿಟಿಷ್ ಗಾರ್ಡಿಯನ್‌ತನವನ್ನು ಅವಧಿ ಮುಂದಾಗಿಯೇ ಈಗ ಬಿಟ್ಟುಬಿಡುವುದೆಂದರೆ ಭಾರತೀಯರ ಕಡೆಗಿರುವ ನಮ್ಮ ಸಾಮಾನ್ಯ ಕರ್ತವ್ಯ ನಿರ್ವಹಣೆಯಲ್ಲಿ ಪಾಪಕರವಾದ ದ್ರೋಹವನ್ನೆಸಗಿದಂತೆಯೇ. ಅಂದು ಒಂದು ಕಡೆ ಹೊರಗಿಂದ ವೈರಿಯ ಪ್ರಬಲ ಆಕ್ರಮಣಯತ್ನ, ಒಳಗಿಂದ ದೇಶವ್ಯಾಪ್ತವಾಗಲಾಗುವ ಬಹಿರಂಗ ಬಂಡಾಯ, ಇವೆರಡಲ್ಲಿಯೂ ಉಭಯ ಶಕ್ತಿಗಳ ಆಟ ಸಾಗದೆಂದು ತೋರಿಸಲಿಕ್ಕೆ ವೈಸರಾಯಿಯ ಮೇಲೆ ಗುರುತರವಾದ ಕರ್ತವ್ಯಭಾರ ಬಿದ್ದಿತ್ತು. ಆ ಕರ್ತವ್ಯಪಾಲನೆಯಾಗದಿರುತ್ತಿದ್ದರೆ ಭೂಮಧ್ಯಸಾಗರದಿಂದ ಚೀನಾದ ಹುವಿ ನದಿಯ ತನಕ ಎಲ್ಲವೂ ಅವ್ಯವಸ್ಥೆ, ಅರಾಜಕೀಯ ಗೊಂದಲಗಳಲ್ಲಿ ಮುಳುಗಿ ಮೃತಿಗೊಳ್ಳುತ್ತಿತ್ತು—ಎಂದು ತನ್ನ ಗೈಮೆಯ ಮಹತ್ವವು ಇಂದಿನ ಬ್ರಿಟಿಷ್ ಪ್ರಭುತ್ವದ ಕರ್ಣಪಟಲವನ್ನು ಕುಕ್ಕುವಂತೆ ತನ್ನ ಬಡಾಯಿಯ ಕಹಳೆಯನ್ನು ಊದಿಬಿಟ್ಟಿದ್ದಾರೆ.

'ಮದರ್ ಇಂಡಿಯಾ'ದಂತಹ ಇನ್ನೊಂದು ಉದ್ಗ್ರಂಥ! 'ವರ್ಡಿಕ್ಟ್ ಓನ್ ಇಂಡಿಯಾ' ಗಾಂಧಿ ಮತ್ತು ಹಿಂದೂಮತದ ಅವಹೇಳನ

'ಇಂಡಿಯಾದ ಮೇಲೆ ತೀರ್ಪು' ಎಂಬ ಈ ಪುಸ್ತಕವನ್ನು ಬೆವರ್ಲೀ ನಿಕೊಲಾಸ್ ಎಂಬ ಆಂಗ್ಲೇಯ ಕಾದಂಬರಿಕಾರ ಹಾಗೂ ಪತ್ರಿಕೋದ್ಯಮಿಯೊಬ್ಬನು ಈಗಾಗಲೇ ಪ್ರಕಟಿಸಿದ್ದಾನೆ. ಆತ ಕಳೆದೊಂದು ವರುಷ ಬೊಂಬಾಯಿಯಲ್ಲಿದ್ದ. ಅಲ್ಲಿ ಬಹುಶಃ ಕಾಲ್ಪನಿಕವಾಗಿಯೇ ಅವನು ಇಂಡಿಯಾದ ವಿಚಾರಣೆ ನಡೆಯಿಸಿ ಕಾದಂಬರಿಕಾರನಂತೆ ತೀರ್ಪುಕೊಟ್ಟಂತೆ ಕಾಣುತ್ತದೆ. ಸೆರೆಮನೆಯಲ್ಲಿದ್ದ ಗಾಂಧೀಜಿಗಳನ್ನು ಒಂದು ಸಲವಾದರೂ ಕಣ್ಣಿಂದ ಕಾಣದೆಯೇ ಅವರ ಸ್ವರೂಪ ನಿರೂಪಣೆಮಾಡಿದ್ದಾನೆ. ಕಾಂಗ್ರೆಸ್ಸು ಸೇಕಡಕ್ಕೆ ಸೇಕಡ [illegible] ಹಟವಾದಿ ಫ್ಯಾಸಿಸ್ಟರ ಕೂಟವಂತೆ. ಗಾಂಧಿಯು ಸತ್ಯದ ಕಡೆಗೆ ಆದರವಿಲ್ಲದವ, ಹದಮೀರಿದ ಜಂಬಗಾರ, ಸಂಕೋಚ ದೃಷ್ಟಿಯುಳ್ಳ ಅಜ್ಞಾನಿ, ಅತಿ ಅಸಹಿಷ್ಣು, ಜನತೆಯ ಮೇಲೆ ಅವನ ವರ್ಚಸ್ಸು ಕುಂದುತ್ತಾ ಬರುತ್ತಿದೆ. ಹಿಂದುಸ್ಥಾನದ ಉತ್ಕೃಷ್ಟವಾದ ಆರು ಮೇಧಾವಿಗಳಲ್ಲಿ ಡಾ|ಅಂಬೇಡ್ಕರರೊಂದು ಗಾಂಧಿಯು ಅಸ್ಪೃಶ್ಯರ ಮಹಾವೈರಿಯೆಂದು ತನ್ನೊಡನೆ ಹೇಳಿದ್ದಾರೆ. ಅಹಿಂಸಾತತ್ವವೆಂಬುದೊಂದು ದೊಡ್ಡ ವಂಚನೆಯ ಒಳಸಂಚೆಂಬುದು ಬಹಿರಂಗಕ್ಕೆ ಬಂದುದು ಲೇಸಾಯಿತು. ಜಾಗತಿಕ ಮತಗಳಲ್ಲಿ ಐತಿಹಾಸಿಕ ಆಧಾರವೇನೂ ಇಲ್ಲದ ಮತವೆಂದರೆ ಹಿಂದೂಮತ. ಇಂಡಿಯಾದಲ್ಲಿ ನಿಜವಾದ ಸಂಗೀತ ಚಿತ್ರ ಇತ್ಯಾದಿ ಲಲಿತಕಲೆಗಳೇನೂ ಇಲ್ಲ. ಕಿರಿಯಭಾರತವು ಕಾರ್ಖಾನೆಯ ಕಡೆಗೆ ಧಾವಿಸುತ್ತಿದೆ. ಅದನ್ನು ಹಿರಿಯ ಭಾರತವು ತಡೆದು ದೇಗುಲದ ಗುಡಿಯ ಕಡೆಗೆ ತಿರುಗಿಸುತ್ತದೆ. ಇಂಡಿಯಾದ ಪತ್ರಿಕೆಗಳೆಂದರೆ ಅಜ್ಞಾನದ ದ್ವೇಷದ ಹಾಗೂ ಸುಳ್ಳುಸುದ್ದಿಗಳ ಕಂತೆಗಳು—ಹೀಗೆಲ್ಲ ಬರೆದು ಇಂಡಿಯವು ಮಹಾ ಅಪರಾಧಿಯೆಂದು ಅದರ ಮೇಲೆ ತನ್ನ (ವರ್ಡಿಕ್ಟ್) ತೀರ್ಪನ್ನಿತ್ತಿದ್ದಾನೆ!—'ಮದರ್ ಇಂಡಿಯಾ'ದ ಉತ್ತರವಾಗಿ 'ಫಾದರ್ ಇಂಡಿಯಾ' ಬರೆಯಲ್ಪಟ್ಟಿತು. ಈ 'ಇಂಡಿಯಾದ ಮೇಲಿನ ತೀರ್ಪು' ಎಂಬುದಕ್ಕೆ ಪ್ರತಿಯಾಗಿ 'ಬ್ರಿಟನ್ನಿನ ಮೇಲೆ ತೀರ್ಪು' ಎಂಬ ಗ್ರಂಥವು ಹೊರಬೀಳಬಹುದೋ ಏನೋ!

ಬೇಕಾದಷ್ಟು ಕ್ಲಾರ್ಕರು ದೊರಕುವುದಿಲ್ಲ. ಮದ್ರಾಸು ಸರ್ವೀಸು ಕಮಿಷನಿನ ಹೇಳಿಕೆ—ಸರ್ವೀಸು ಕಮಿಶನಿನ ಪರೀಕ್ಷೆಗೆ ಉಮೇದ್ವಾರರು ಕಡಿಮೆಯಾಗಿದ್ದಾರೆ!

ಮದ್ರಾಸು ಸರ್ವೀಸ್ ಕಮಿಶನಿನವರ ೧೯೪೩-೪೪ರ ವರದಿಯು ಹೀಗೆನ್ನುತ್ತಿದೆ—ವರದಿಯ ವರ್ಷದಲ್ಲಿ ಪರೀಕ್ಷೆಗೆ ಕುಳಿತ ಉಮೇದ್ವಾರರ ಸಾಮಾನ್ಯ 'ಗತಿಯ ಮಟ್ಟವು ಹಿಂದಿನ ವರ್ಷದವರದಕ್ಕಿಂತ ಕೀಳ್ತರಗತಿಯದಿದೆ. ಉತ್ತಮ ತರದ ಯೋಗ್ಯತೆಯುಳ್ಳವರಿಗೆ ಹೆಚ್ಚಿನ ಆಕರ್ಷಕತೆಯುಳ್ಳ ಉದ್ಯೋಗಗಳು ಯುದ್ಧಮುಖದಲ್ಲಿ ದೊರಕುತ್ತಿರುವುದರಿಂದ ಸಾಧಾರಣ ಮಧ್ಯಮ ಯೋಗ್ಯತೆಯವರೇ ಇದಕ್ಕೆ ಬರುತ್ತಾರೆ. ಬಂದವರ ಸಂಖ್ಯೆಯೂ ಹಿಂದಿನ ವರ್ಷದಕ್ಕಿಂತ ಕಡಿಮೆ. ಆಯ್ಕೆಗಿಟ್ಟ ಕನಿಷ್ಟ ಗುಣಗಳನ್ನು ಹೊಂದಿದವರನ್ನು ಬಿಡದೆ ಚುನಾಯಿಸಲಾಗಿದೆ. ಶೆಡ್ಯೂಲ್ಡ್ ಕ್ಲಾಸು, ಮಹಮ್ಮದೀಯರು, ಕ್ರಿಶ್ಚನರು, ಅಬ್ರಾಹ್ಮಣ ಹಿಂದುಗಳು ಇವರಿಗಿಟ್ಟ ಸ್ಥಾನಸಂಖ್ಯೆಗಳಿಗಿಂತ ಆಯ್ಕೆಯಲ್ಲಿ ಉತ್ತೀರ್ಣರಾದವರ ಸಂಖ್ಯೆ ಕಡಿಮೆಯಾಗಿತ್ತು. ಉದಾಹರಣ ಉತ್ತೀರ್ಣರಾದ ಬ್ರಾಹ್ಮಣ ಉಮೇದ್ವಾರರನ್ನು ಅವರ ಸರದಿಗಿಂತ ಮುಂಚಿತವಾಗಿಯೇ ತೆಗೆದುಕೊಳ್ಳಬೇಕಾಯಿತು. ಹೀಗೆ ಮಾಡಿಯೂ ತಕ್ಕಷ್ಟು ಉಮೇದ್ವಾರರು ಮುಂದು ಬಾರದ ಕಾರಣ ಉದ್ಯೋಗ ಕೊಡುವ ಅಧಿಕಾರಿಗಳ ಆವಶ್ಯಕತೆಗೆ ಬೇಕಾದ ಸಂಖ್ಯೆಯನ್ನು ಪೂರ್ಣವಾಗಿ ಪೂರೈಸಿಕೊಡಲಾಗಲಿಲ್ಲ.

ಆಗಾಖಾನರ ಮೂರನೆಯ ಮದುವೆ

ಕುದುರೆ ಜೂಜಿನ ಪ್ರಸಿದ್ಧ ವ್ಯಕ್ತಿ ಮಹಾ ಶ್ರೀಮಂತ ಆಗಾಖಾನರಿಗೆ ಇತ್ತೀಚೆಗೆ ಮೂರನೆಯ ಮದುವೆಯಾಯಿತು. ವಧುವು ೩೮ ವರುಷ ಪ್ರಾಯದ ಫ್ರೆಂಚ ತರುಣಿ. ೧೯೩೦ರ ಸುಂದರ ಕುಮಾರಿಯರ ಸ್ಪರ್ಧೆಯಲ್ಲಿ ಫ್ರಾನ್ಸಿನ ಅತ್ಯಂತ ಸುಂದರ ಕುಮಾರಿಯೆಂಬರ್ಥದ 'ಮಿಸ್ ಫ್ರಾನ್ಸ್' ಎಂಬ ಬಿರುದನ್ನು ಹೊಂದಿದವಳು ಈಕೆ. ಆಗಾಖಾನರ ಎರಡನೆಯ ವಿವಾಹ ವಿಚ್ಛೇದನವು ಕೆಲವು ತಿಂಗಳ ಹಿಂದೆ ಪತಿಪತ್ನಿಯರ ಪರಸ್ಪರ ಸಮ್ಮತಿಯಿಂದಾಗಿತ್ತು. ಅವಳೂ ಒಬ್ಬ ಫ್ರೆಂಚ ತರುಣಿ. ಇವರ ಪ್ರಥಮಪತ್ನಿ ಇಟಲಿಯ ರಾಜಕುಮಾರಿ ಥೆರೇಸಾ ಎಂಬವಳಾಗಿದ್ದಳು. ಅವಳಲ್ಲಿ ಹುಟ್ಟಿದ ಮಗನೊಬ್ಬನಿದ್ದಾನೆ. ಅವನ ಹೆಸರು ರಾಜಕುಮಾರ ಅಲೀಖಾನ್.

ಅಖಂಡ ಹಿಂದ ಸ್ಥಾನ ಪರಿಷತ್ತು

ನವಡಿಲ್ಲಿಯಲ್ಲಿ ತಾ. ೭ರಂದು ಜರಗಿದ ಅಖಂಡ ಹಿಂದೂಸ್ಥಾನ ಪರಿಷತ್ತಿನಲ್ಲಿ ಅಧ್ಯಕ್ಷರಾದ ರಾಧಾ ಕುಮುದ ಮುಖರ್ಜಿಯವರು ತನ್ನ ಅಮೋಘವಾದ ಭಾಷಣದಲ್ಲಿ ಹಿಂದೂಸ್ಥಾನವು ಮೂಲತಃ ಅಖಂಡವಾಗಿ ಉಳಿಯಬೇಕೆಂದೂ ಜಿನ್ನಾರವರ ಪರಿಪೂರ್ಣ ಪ್ರತ್ಯೇಕ ದ್ವಿಜನಾಂಗ ತತ್ವವಾಗಲಿ ರಾಜಾಜಿಯವರ ಸೂತ್ರವಾಗಲಿ ಸಾಧುವಲ್ಲವೆಂದೂ ಸಾಧಿಸಿದರು. ಅಮೇರಿಕಾದ ಸಂಯುಕ್ತ ರಾಷ್ಟ್ರಗಳ ಅಥವಾ ರಷ್ಯಾದ ರಿಪಬ್ಲಿಕ್ ರಾಷ್ಟ್ರಗಳ ಸ್ವಾತಂತ್ರ್ಯತತ್ವ ಹಾಗೂ ಅಖಂಡತೆಯ ಮೂಲಸೂತ್ರಗಳ ಆಧಾರದ ಮೇಲೆ ಆ ಮಾದರಿಯಲ್ಲಿ ಪಾಕಿಸ್ಥಾನದ ಸಾಧ್ಯತೆಯಿದೆ ಎಂದೂ ತೋರಿಕೊಟ್ಟರು

ಈಜಿಪ್ತದ ಮಂತ್ರಿ ಸಭಾ ವಿಸರ್ಜನೆ

ಈಜಿಪ್ತದ ಅರಸ ಫರೋಕರು ಒಮ್ಮಿಂದೊಮ್ಮೆಲೇ ತನ್ನ ಕೆಬಿನೆಟ್ಟನ್ನು ಮನ್ನಾ ಮಾಡಿರುವರು. ಸಭೆಗೂ ಅರಸನಿಗೂ ಕೆಲಕಾಲದಿಂದ ಭಿನ್ನಾಭಿಪ್ರಾಯಗಳಿದ್ದು ಈಗ ಪರಿಸ್ಥಿತಿಯು ಹದಗೆಟ್ಟಿತೆಂದು ಅರಸನು ತಿಳಿಕೊಂಡುದೇ ಅರಸನ ಈ ಅವಸರದ ಆಜ್ಞೆಗೆ ಕಾರಣ.

ಸರಕಾರಿ ನೌಕರರಿಗೆ ಯುದ್ಧಬತ್ತೆ ಸೇಕಡ ಹತ್ತು

ಮದ್ರಾಸು ಸರಕಾರವು ಈ ತನಕ ಕೊಡುತ್ತಲಿದ್ದ ತುಟ್ಟಿಬತ್ತೆಯು ದೊಡ್ಡ ದೊಡ್ಡ ಸಂಬಳದವರಿಗೆ ಅನ್ವಯಿಸುತ್ತಿದ್ದಿಲ್ಲ. ವಿವಾಹಿತರಾಗಿದ್ದು ರೂ. 1000ದ ಒಳಗಿನ ಸಂಬಳವಿರುವವರಿಗೆ ಅವರ ಸಂಬಳದ ಸೇಕಡ 10ರಂತೆಯೂ ಅವಿವಾಹಿತರಾಗಿದ್ದು ರೂ. 750ರ ಒಳಗಿನ ಸಂಬಳದವರಿಗೆ ಸೇಕಡಾ ೫ರಷ್ಟು ಯುದ್ಧಬತ್ತೆ ಕೊಡುವಂತೆ ಸರಕಾರವು ನಿಶ್ಚಯಿಸಿದೆ. ಈಗ ತುಟ್ಟಿಬತ್ತೆಯನ್ನು ಹೊಂದುತ್ತಿರುವವರು ಅದನ್ನು ಬಿಟ್ಟು ಈ ಸೇಕಡ ದರವನ್ನು ಹಿಡಿಯುವುದರಿಂದ ಹೆಚ್ಚಿಗೆ ಪ್ರಯೋಜನವಿದೆಯೆಂದು ತಿಳಿದರೆ ಅವರಿಗೆ ಹಾಗೆ ಮಾಡಲು ಅವಕಾಶಕೊಡಲಾಗಿದೆ

ಚರ್ಚಿಲ್-ಸ್ಟೇಲಿನ್ ಭೇಟಿ

ಚರ್ಚಿಲ್-ರೂಸ್ವೆಲ್ಟ್-ಸ್ಟೇಲಿನರ ಮಂತ್ರಾಲೋಚನೆಯ ಕೂಟವು ಅಮೇರಿಕಾದ ಕ್ವಿಬೆಕಿನಲ್ಲಾಗುವಂತೆ ಸ್ಟೇಲಿನರಿಗಿತ್ತ ಆಮಂತ್ರಣವನ್ನು ಅವರು ಅಂಗೀಕರಿಸಲಾಗದ ಕಾರಣ ಚರ್ಚಿಲ್ಲರು ರೂಸ್ವೆಲ್ಟರನ್ನು ಕಾಣುವ ಮುಂಚೆ ಸ್ಟೇಲಿನರನ್ನು ಕಂಡು ಮಾತುಕತೆ ನಡೆಯಿಸುವೆವೆಂದು ಬಗೆದು ಬ್ರಿಟಿಷ್ ವಿದೇಶ ಕಾರ್ಯದರ್ಶಿ ಎಂಥೋನಿ ಈಡನ್ ಸಮರಕ್ಷೇತ್ರದ ಮಹಾ ಪ್ರಧಾನಿ ಅಲನ್ ಬ್ರೂಕ್, ರಕ್ಷಣಾ ಖಾತೆಯ ಪ್ರಮುಖ ಸರ್.ಹೇಸ್ಟಿಂಗ್ಸ್ ಇಸ್ಮೇ ಇವರಿಂದೊಡಗೂಡಿ ಕಳೆದವಾರ ಮೋಸ್ಕೋ ನಗರಕ್ಕೆ ಹೋಗಿ ಸ್ಟೇಲಿನರೊಡನೆ ಯುದ್ಧ ವಿಚಾರವಿನಿಮಯದ ಮಾತುಕತೆಯಾಯಿತು. ಈ ಮಾತುಕತೆಗೆ ಅಮೇರಿಕಾದ ಪರಿಪೂರ್ಣ ಅನುಮೋದನೆಯಿದ್ದು ಅದರ ಪ್ರತಿನಿಧಿಯಾಗಿ ಮೋಸ್ಕೋದಲ್ಲಿರುವ ಅಮೇರಿಕದ ರಾಯಭಾರಿ ಅವೆರಿಲ್ ಹೆರಿಮ್ಯಾನ್‌ರು ಸಹಭಾಗಿಗಳಾಗಿದ್ದಾರೆ. ಚರ್ಚಿಲ್ಲರು ಅಲ್ಲಿ ಇಳಿದೊಡನೆ ಜರ್ಮನ್ ಸೇನೆಯ ಮೂಳೆ ಮುರಿದಿರುವ ಕೆಂಪುಸೇನೆಯನ್ನು ಬಾಯ್ತುಂಬ ಹೊಗಳಿದರು

ನಿರ್ಬಂಧಿಸಲ್ಪಟ್ಟ ಮದ್ರಾಸಿಗರ ಬಿಡುಗಡೆ

೧೯೪೨ರ ನವಂಬರದಲ್ಲಿ ದಸ್ತಗಿರಿಮಾಡಲ್ಪಟ್ಟು ವೆಲ್ಲೂರು ಜೇಲಿನಲ್ಲಿ ತಡೆಹಾಕಲ್ಪಟ್ಟಿದ್ದ ಶ್ರೀ| ಎನ್| ಜಿ| ರಂಗಾ, ಎಮ್. ಎಲ್. ಎ (ಸೆಂಟ್ರಲ್), ಹಲವು ಕಡೆಗಳಿಗೆ ಸ್ಥಾನಾಂತರಗೊಳಿಸಲ್ಪಟ್ಟು ಈಗ ತಂಜಾವೂರು ಸೆಂಟ್ರಲ್ ಜೇಲಿನಿಂದ ಅವರನ್ನು ಬಿಡುಗಡೆಮಾಡಲಾಗಿದೆ.

ಡಾಕ್ಟರ್ ಟಿ| ಸಿ| ಶಂಕರ ಐಯ್ಯರ್ ಇವರೂ ಬಿಡುಗಡೆ ಹೊಂದಿರುವರು.

ಯುದ್ಧವು ತೀವ್ರ ಕೊನೆಗೊಂಡು ಘಟನೆಗಳ ರಚನೆಯು ರೂಪಾಂತರ ಹೊಂದಬಹುದು. ಈ ಪರಿಸ್ಥಿತಿಯನ್ನು ನೀವು ಹೇಗೆ ಎದುರಿಸುವಿರಿ? ನಾವು ಸಲಹೆಗಳನ್ನು ನಿಮ್ಮ ಮುಂದಿಡುವೆವು

1. ನಿಮ್ಮ ಕೂಡ ಮಾಲುಗಳ ಅಧಿಕ ಸಂಚಯವಿದ್ದರೆ ಈಗಲೇ ಅವನ್ನು ವಿಕ್ರಯಿಸಿ ನಿಮ್ಮ ನಗದಿ ಸ್ಥಿತಿಯನ್ನು ಸ್ಥಿರಗೊಳಿಸಿರಿ. ನಿಮ್ಮ ಆ ನಗದಿ ಹಣವನ್ನೆಲ್ಲಾ ಬ್ಯಾಂಕಿನ ಖಾತೆಯಲ್ಲಿರಿಸಿ ಧಾರಣೆಗಳ ಇಳಿತವನ್ನು ನಿರೀಕ್ಷಿಸಿರಿ

2. ನಿಮ್ಮ ಸಾಲಗಳನ್ನೀಗಲೇ ತೀರಿಸಿರಿ ಇಲ್ಲವಾದರೆ ಯುದ್ಧಾನಂತರದ ದಿನಗಳಲ್ಲಿ ಧಾರಣೆಗಳ ಇಳಿತದಿಂದಾಗಿ ಸಾಲಗಳನ್ನು ತೀರಿಸಲು ಬಹು ತ್ರಾಸವಾಗಬಹುದು

3. ನಿಮಗೆ ಪರರಿಂದ ಸಲ್ಲಬೇಕಾದ ಸಾಲಗಳನ್ನೀಗಲೇ ವಸೂಲು ಮಾಡಿರಿ. ಏಕೆಂದರೆ ಧಾರಣೆಗಳ ಇಳಿತದಿಂದಾಗಿ ನಿಮ್ಮ ಸಾಲಗಾರರ ನಗದಿ ಸ್ಥಿತಿಯು ಬದಲ [illegible] ಹೊಂದಿ, ಅವರಿಂದ ಸಾಲಗಳನ್ನು ತೀರಿಸಲಸಾಧ್ಯವಾಗಬಹುದು

4. ನಿಮ್ಮ ಕೂಡೆ ಇರುವಂಥ ನಗದಿಯನ್ನೆಲ್ಲಾ ಇನ್ನು ಮುಂದೆ ಬರುವ ಧಾರಣ ಇಳಿತವಾಗುವ ದಿನಗಳಿಗಾಗಿ ಕೂಡಿಡಿ. ಧಾರಣೆಗಳ ಗತಿಯನ್ನು ಮತ್ತು ವಾಣಿಜ್ಯದ ಸಾಮಾನ್ಯ ಸ್ಥಿತಿಯನ್ನು ಪರ್ಯಾಲೋಚಿಸಿ ನೀವು ಬಾಕಿ ಯೋಜನೆಗಳನ್ನು ಕಲ್ಪಿಸಬಹುದು.

ನಿಮ್ಮಲ್ಲಿರುವ ನಗದಿಯನ್ನೆಲ್ಲಾ ನಮ್ಮೊಡನೆ ಖಾತೆಯಲ್ಲಿರಿಸಿ [illegible] ಒಳಗಾಗುವ ಪ್ರಸಂಗ ಒದಗಬಹುದು

ಸ್ಥಾಪಿತ 1906 ಕೆನರಾ ಬ್ಯಾಂಕ್ ಲಿಮಿಟೆಡ್

ESTD 1906 **Canara Bank, Limited,**

(Incorporated in British India with limited Liability of members limited.)

ಎಲ್ಲೆಲ್ಲಿ ಏನೇನು – – ?

ಪಂಡಿತ ನೆಹರೂಗಳವರ ಕಾರ್ಯದರ್ಶಿಯ ಬಿಡುಗಡೆ

ಪಂಡಿತ ನೆಹರೂಗಳ ಕಾರ್ಯದರ್ಶಿಯಾಗಿದ್ದ ಶ್ರೀ| ಎಚ್| ಡಿ| ಉಪಾಧ್ಯಾಯರನ್ನು ನೈನೀ ಸೆಂಟ್ರಲ್ ಜೇಲಿನಿಂದ ಬಿಡುಗಡೆಮಾಡಿದ್ದಾರೆ.

ಗಾಂಧೀಜಿಯ ಹೊಸ ಹಾದಿ

ಗಾಂಧೀಜಿಯವರನ್ನು ಸಂದರ್ಶಿಸಿ ಮಾತುಕತೆ ನಡೆಸಿ ಬಂದ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಸಂಯುಕ್ತಪ್ರಾಂತದ ಕಾಂಗ್ರೆಸ್ಸ್ ಪ್ರತಿನಿಧಿ ಪರಿಷತ್ತಿನಲ್ಲಿ ಗಾಂಧೀಜಿಯವರು ಶೀಘ್ರದಲ್ಲೇ ದೇಶಕ್ಕೊಂದು ಹೊಸ ಹಾದಿ ತೋರಿಸಿ ಮುನ್ನಡೆಯಿಸುವ ಯೋಚನೆಯಲ್ಲಿದ್ದಾರೆ ಎಂದು ಹೇಳಿರುವರು.

ಡಾ| ಸಯ್ಯದ್ ಮಹಮ್ಮದರು ಗಾಂಧೀ ಸಂದರ್ಶನೆಗೆ ಹೋಗುವರು

ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯ ಸದಸ್ಯರಲ್ಲೊಬ್ಬರಾಗಿದ್ದು ಅವರೊಡನೆ ಅಹಮ್ಮದ ನಗರದ ಜೈಲಿನಲ್ಲಿದ್ದು ಕಳೆದ ವಾರ ಬಿಡುಗಡೆ ಹೊಂದಿರುವ ಡಾ| ಸಯ್ಯದ್ ಮಹಮ್ಮದರು ಗಾಂಧೀಜಿಯ ಭೇಟಿಗೆ ಹೋಗುವರು. ಬಂಧನದಲ್ಲಿರುವ ಕಾಂಗ್ರೆಸ್ ವರ್ಕಿಂಗ್ ಕಮಿಟಿಯವರು ಇಂದಿನ ರಾಜಕೀಯ ಬಿಕ್ಕಟ್ಟಿನ ಹಾಗೂ ಅದನ್ನು ಬಗೆಹರಿಸುವ ವಿಷಯ ಗಾಂಧೀಜಿಯವರು ಕೈಗೊಳ್ಳಬೇಕಾದ ಕಾರ್ಯಕ್ರಮದ ಕುರಿತು ಅವರ ಅಭಿಪ್ರಾಯವನ್ನು ಮೊದಲಾಗಿ ಗಾಂಧೀಜಿಯವರಿಗೆ ತಿಳಿಸಬೇಕೆಂದು ತನ್ನೊಡನೆ ಹೇಳಿರುವುದರಿಂದ ಅವರು ಸ್ಥಳೀಯ ಮುಖಂಡರೊಡನೆ ಈ ವಿಷಯ ಮಾತೆತ್ತದೆ ನೇರಾಗಿ ಗಾಂಧೀಜಿಗಳ ಬಳಿ ಸಾರಲಿಕ್ಕಿರುವರಂತೆ.

ಅಖಿಳಭಾರತ ಮುಸ್ಲಿಂ ಲೀಗ್ ಕೌನ್ಸಿಲಿನ ಸದಸ್ಯರ ರಾಜಿನಾಮೆ. ಲೀಗಿಗೆ ಮುಸ್ಲಿಂ ಜನಸಾಮಾನ್ಯರ ಸೇವಾದೃಷ್ಟಿಯಲ್ಲಿ ಪಂಜಾಬದ ಮುಂದಾಳುಗಳ ಟೀಕೆ.

ಆಲ್ ಇಂಡಿಯಾ ಮುಸ್ಲಿಂ ಲೀಗ್ ಕೌನ್ಸಿಲಿನ ಸದಸ್ಯರೂ ಪಂಜಾಬದ ಪ್ರಮುಖ ಮುಸ್ಲಿಂ ಮುಂದಾಳುಗಳೂ ಆದ ಚೌಧ್ರಿ ಹಮೀದ್ ಅಹಮ್ಮದ್‌ರವರು ತನ್ನ ಸರ್ಗೋದಾ ಜಿಲ್ಲಾ ಮುಸ್ಲಿಂ ಲೀಗಿನ ಕಾರ್ಯದರ್ಶಿತನಕ್ಕೆ ರಾಜಿನಾಮೆಯನ್ನು ಕೊಟ್ಟಿದ್ದಾರೆ. ಮುಸ್ಲಿಂ ಲೀಗಿನ ಧೋರಣೆಯನ್ನು ಟೀಕಿಸಿ ಕೆಲವರ ಅಧಿಕಾರ ಲಾಲಸೆಯ ಸಾಧನೆಯೂ ಮಹಮ್ಮದೀಯ ಮುಖಾಜನ ಹಿತಸಾಧನೆಯೂ ಪರಸ್ಪರ ವಿರುದ್ಧಗತಿಯುಳ್ಳವಾಗಿರುವ ಕಾರಣ ಮಹಾಜನರ ಹಿತಸಾಧಕವಾದ ತನಗೆ ಲೀಗಿನಲ್ಲಿ ಸೇರಿ ಸೇವೆ ಸಲ್ಲಿಸುವುದು ಅಸಾಧ್ಯವಾಗಿ ತೋರಿಬಂದ ಕಾರಣ ರಾಜಿನಾಮೆಯನ್ನಿತ್ತೆನೆಂದಿದ್ದಾರೆ.

ಕಾಲುದೀಪವೆಂದುಪಯೋಗಿಸಿದ್ದು ಸಿಡಿಯಿತು

ಸ್ಫೋಟಣದಿಂದ ಮೂವರ ಮರಣ

ಬೊಂಬಾಯಿಯ ನೋರ್ತ್ ಬ್ರೂಕ್ ಗಾರ್ಡನ್ಸ್ ಎಂಬ ವಿಹಾರೋದ್ಯಾನದಲ್ಲಿ ಐದು ವರುಷದ ಹುಡುಗನೊಬ್ಬನಿಗೆ ಆಟಗಾರಿಕೆಯ ಉಪಕರಣದಂತಿದ್ದೊಂದು ವಸ್ತುವು ಸಿಕ್ಕಿತು. ಅವನದನ್ನು ತನ್ನ ತಾಯಿಗೆ ತಂದುಕೊಡಲು ಅವಳದನ್ನು ದೀಪದ ಕಂಬವಾಗಿ ಉಪಯೋಗಿಸಿದಳು. ಅದು ಸಿಡಿದು ಹತ್ತಿರವಿದ್ದ ಮೂವರ ಪ್ರಾಣಹಾನಿಗೆ ಕಾರಣವಾಯಿತು. ಅದು ಎಂಟೀಟ್ಯಾಂಕ್ ಗ್ರೆನೇಡ್ ಆಗಿತ್ತೆಂದು ಅನಂತರ ಶೋಧನೆಯಿಂದ ತಿಳಿದುಬಂದಿದೆ

ಫ್ರೀಪ್ರೆಸ್ಸ್ ಜರ್ನಲ್ ಪತ್ರಿಕೆಯ ಮೇಲೆ ಜಾಮೀನು ಠೇವಣಾತಿ

ಫ್ರೀಪ್ರೆಸ್ ಜರ್ನಲ್ ಎಂಬ ಪತ್ರಿಕೆಯ ಪ್ರಕಟಣಾಕರ್ತರೂ ಆದರ ಮುದ್ರಣಾಲಯದ ಮಾಲಕರೂ ಆದ ಶ್ರೀ. ಎಸ್ ಸದಾನಂದ ಇವರ ಮೇಲೆ ಆ ಪತ್ರಿಕೆಯು ಕಳೆದ ಅಗೋಸ್ತು ತಾ. 1,2,3,8,9,10, 12, 14ರಲ್ಲಿ ಪ್ರಕಟಿಸಿದ ಎಂಟು ಲೇಖನಗಳ ಸಂಬಂಧವಾಗಿ ಆರು ಸಾವಿರ ರೂಪಾಯಿ ಜಾಮೀನು ಠೇವಣಾತಿಯನ್ನು ಇದೇ ತಿಂಗಳ ತಾ. 17ರೊಳಗೆ ಇಡಬೇಕಾಗಿ ಬೊಂಬಾಯಿ ಸರಕಾರದ ನೋಟೀಸು ಇದು ಎಮರ್ಜನ್ಸಿ ಪವರ್ ಆಕ್ಟಿಗನುಸಾರವಾಗಿ ಕೇಳಬಹುದಾದ ಪರಮಾವಧಿ ಜಾಮೀನು ಠೇವಣಾತಿಯಾಗಿದೆ.

ಡಾ. ಪಿ. ವಿ. ಕೃಷ್ಣರಾಯರ ನಿಧನ

ಮದ್ರಾಸು ಗವರ್ನಮೆಂಟ್ ಇಂಡಿಯನ್ ಮೆಡಿಕಲ್ ಸ್ಕೂಲಿನ ಪ್ರಿನ್ಸಿಪಾಲರು ಇದೇ ತಿಂಗಳ ತಾ 7ರಲ್ಲಿ ತೀರಿಕೊಂಡರು ಇವರು ಕಳೆದ ತಿಂಗಳಲ್ಲಿ ವಯೋಮಿತಿಗನುಸಾರವಾಗಿ ಉದ್ಯೋಗ ನಿವೃತ್ತರಾಗಬೇಕಾಗಿದ್ದರೂ ಸರಕಾರವು ಇವರನ್ನು ಮತ್ತೊಂದು ವರುಷದ ತನಕ ತಿರುಗಿ ನೇಮಕಮಾಡಿತ್ತು. ಡಾ ಪಿ ವಿ. ಕೃಷ್ಣರಾಯರು ಫೆಬ್ರವರಿಯಿಂದ ಈ ಮೆಡಿಕಲ್ ಸ್ಕೂಲಿನ ಪ್ರಿನ್ಸಿಪಾಲರಾಗಿಯೂ ಸೆಂಟ್ರಲ್ ಬೋರ್ಡ್ ಆಫ್ ಇಂಡಿಯನ್ ಮೆಡಿಸಿನ್ ಇದರ ಪ್ರೆಸಿಡೆಂಟರಾಗಿಯೂ ಇದ್ದರು.

ಅಮೇರಿಕದ ಆಮಂತ್ರಣ ಡಾ| ಜೆ ಎಮ್. ಕುಮಾರಪ್ಪನವರಿಗೆ

ಬೊಂಬಾಯಿಯ ತಾತಾ ಇನ್ಸ್‌ಟ್ಯೂಟಿನ ಸಾಮಾಜಿಕ ವಿಜ್ಞಾನ ಶಾಖೆಯ ಪ್ರೊಫೆಸರರಾದ ಡಾ| ಜೆ. ಎಮ್. ಕುಮಾರಪ್ಪ ಇವರಿಗೆ ಅಮೇರಿಕದ ಸ್ಟೇಟ್ ಡಿಪಾರ್ಟ್‌ಮೆಂಟು ಅವರ ಅಮೇರಿಕಾ ಪ್ರವಾಸ ಕಾಲದಲ್ಲಿ ತನ್ನ ಅತಿಥಿಯಾಗಿರುವಂತೆ ಆಮಂತ್ರಣವಿತ್ತಿದೆ, ಇಂತಹ ಆಮಂತ್ರಣವನ್ನು ಭಾರತೀಯರು ಹೊಂದಿದುದು ಇದೇ ಮೊತ್ತಮೊದಲಿನದು. ಡಾ| ಕುಮಾರಪ್ಪನವರು ದಶಂಬರ ಮೊದಲ ವಾರದಲ್ಲಿ ಇಲ್ಲಿಂದ ಹೊರಡುವರಂತೆ. ಅವರು ಅಮೇರಿಕಾದ ಕಾಲೇಜುಗಳನ್ನು, ವಿಶ್ವವಿದ್ಯಾನಿಲಯಗಳನ್ನು, ಮಾನಸಿಕ ದುರ್ಬಲರ ಚಿಕಿತ್ಸಾಕ್ರಮಗಳನ್ನು, ಕಿವುಡ ಮೂಕರ ಹಾಗೂ ಅಂಗನ್ಯೂನತೆಯ ಮಕ್ಕಳ ಚಿಕಿತ್ಸಾನಿಲಯಗಳನ್ನು ಸಂದರ್ಶಿಸಿ ಮಾನಸಿಕ ಹಾಗೂ ಶಾರೀರಿಕ ಲೋಪದೋಷ ನಿವಾರಣೆಗಳ ರೀತಿನೀತಿಗಳನ್ನು ಪರಿಶೀಲಿಸಿ ವಿಚಾರವಿನಿಮಯ ಮಾಡಲಿಕ್ಕಿರುವರಂತೆ.

ಕಾಂಗ್ರೆಸಿನ ಪುನರ್ವ್ಯವಸ್ಥೆ ಬೊಂಬಾಯಿಯ ಕಾಂಗ್ರೆಸಿಗರು ಪರ್ಯಾಲೋಚಿಸಲಿಕ್ಕಿರುವರು

ಇದೇ ತಿಂಗಳ ಅಂತ್ಯದಲ್ಲಿ ಅದಕ್ಕಾಗಿ ಬೊಂಬಾಯಿ. ಮಹಾರಾಷ್ಟ್ರ, ಗುಜರಾತ್, ಕರ್ಣಾಟಕ ಪ್ರಾಂತಿಕ ಕಾಂಗ್ರೆಸ್ಸ್ ಕಮಿಟಿಯ ಸದಸ್ಯರು ವಿಚಾರವಿನಿಮಯಕ್ಕಾಗಿ ಸಭೆಗೂಡಲಿರುವರು. ವಿಚಾರದ ರೀತಿನೀತಿಗಳ ಹೆಗ್ಗುರುತುಗಳು ನಗರದ ಕಾಂಗ್ರೆಸ್ ಮುಂದಾಳುಗಳಿಂದ ಹಾಕಲ್ಪಟ್ಟು ಗಾಂಧೀಜಿಗಳ ಹಾರೈಕೆಯನ್ನು ಹೊಂದಿವೆಯಂತೆ. ವಿದ್ಯಾರ್ಥಿಗಳು ಕಾಂಗ್ರೆಸ್ಸ್ ಚಳುವಳಿಯಲ್ಲಿ ವಿಶೇಷ ಸಹಕರಿಸಿದ್ದರೂ ಅವರ ಅಭಿಪ್ರಾಯಗಳನ್ನು ತಿದ್ದಿ ರೂಪಿಸುವ ಕೆಲಸದಲ್ಲಿ ಕಾಂಗ್ರೆಸ್ಸು ಕೈಹಾಕದಿದ್ದುದನ್ನೂ ಕಮ್ಯೂನಿಸ್ಟರ ಹಾದಿ ಹಿಡಿದು ಕಾಂಗ್ರೆಸ್ಸು, ವಿದ್ಯಾರ್ಥಿಗಳ ಚಳುವಳಿ ಮತ್ತು ಮಜೂರರ, ಕಿಸಾನರ, ಅಂಗಡಿ ನೌಕರರ ಮತ್ತು ಸ್ವಯಂಸೇವಕ ಸಂಘಗಳ ವಿಷಯದಲ್ಲಿ ಹೆಚ್ಚಿನ ಆಸಕ್ತಿ ತೋರದಿದ್ದುದನ್ನು ತಿದ್ದಿಕೊಂಡು ಕಾಂಗ್ರೆಸಿನ ಪುನರ್ವ್ಯವಸ್ಥೆಯಾಗಬೇಕೆಂಬುದು ಕೂಟಕೂಡುವುದರ ಮುಖ್ಯೋದ್ದೇಶ.

ಸಂಯುಕ್ತ ಪ್ರಾಂತದಲ್ಲಿ ಕಾಂಗ್ರೆಸ್ಸಿಗರ ಪರಿಷತ್ತು ಸ್ಥಾಪನೆ. ರೋಯಿಸ್ಟ ಮತ್ತು ಕಮ್ಯೂನಿಸ್ಟರಿಗೆ ಸದಸ್ಯರಾಗುವ ಅರ್ಹತೆಯಿಲ್ಲ

ಬಂಧನದಿಂದ ವಿಮುಕ್ತರಾದ ಕಾಂಗ್ರೆಸಿಗರು ಸುಮಾರು ೬೦ ಮಂದಿ ಈ ಪರಿಷತ್ತಿನ ಪ್ರಥಮ ದಿನದ ಅಧಿವೇಶನದಲ್ಲಿ ಸಹಭಾಗಿಗಳಾಗಿ ಪರಿಷತ್ತನ್ನು ಸ್ಥಾಪಿಸಿದ್ದಾರೆ. ೧೯೪೨ರ ಕಾಂಗ್ರೆಸ್ಸ್ ಚಳುವಳಿಯಲ್ಲಿ ನೆರೆಮನೆಯಲ್ಲಿ ಸೇರದವರೂ ರೆಡಿಕಲ್ ಡೆಮೊಕ್ರೆಟಿಕ್ ಮತ್ತು ಕಮ್ಯೂನಿಸ್ಟ ಪಾರ್ಟಿಗಳ ಸದಸ್ಯರೂ ಈ ಪರಿಷತ್ತಿನ ಸದಸ್ಯರಾಗಲು ಅನರ್ಹರಾಗತಕ್ಕದೆಂದು ನಿಯಮ ಈ ಪರಿಷತ್ತು ವಿಶೇಷತಃ ಕಾಂಗ್ರೆಸ್ಸು ಹಾಕಿಕೊಂಡಿರುವ ಜನೋದ್ಧಾರಕ ಕಾರ್ಯಕ್ರಮಗಳನ್ನು ಮುಂದೊತ್ತಲು ಕೆಲಸಮಾಡುವ ಧ್ಯೇಯವುಳ್ಳದ್ದಾಗಿದೆ.

ಭಿಕ್ಷಾಟನಾ ಪ್ರತಿಬಂಧಕ ಶಾಸನ

ಮದ್ರಾಸು ನಗರದಲ್ಲಿ ಹೊರತು ಪ್ರಾಂತದ ಇತರ ಕಡೆಗಳಲ್ಲಿ ಭಿಕ್ಷುಕರನ್ನು ಗೇಯುವ ಸಾಲೆ (ವರ್ಕ್ ಹೌಸ್) ಗಳಿಗಾಗಲಿ ಪ್ರತ್ಯೇಕ ಪೋಷಣಾಲಯ (ಸ್ಪೆಶ್ಯಲ್ ಹೋಮ್ಸ್) ಗಳಿಗಾಗಲೀ ಹೊಗಿಸುವ ಅಧಿಕಾರವು ಕಾನೂನಿನೊಳಗಿಲ್ಲದ ಪ್ರಯುಕ್ತ ಸರಕಾರವು ಮೇಲ್ಕಂಡ ಶಾಸನವನ್ನು ಒಕ್ಕಣಿಸಿ ಜನತಾಭಿಪ್ರಾಯಕ್ಕಾಗಿ ಪ್ರಕಟಿಸಿಯದೆ ಇದರ ವಿಷಯವಾದ ಆಕ್ಷೇಪಣೆ ಯಾ ಸಲಹೆಸೂಚನೆಗಳನ್ನು ಮುಂಬರುವ ದಶಂಬರ ತಾ ೨೪ರೊಳಗೆ ಮದ್ರಾಸು ಗವರ್ನಮೆಂಟಿನ ಹೋಮ್ ಡಿಪಾರ್ಟ್‌ಮೆಂಟಿನ ಸೆಕ್ರೆಟರಿಯವರಿಗೆ ಕಳುಹಿಸತಕ್ಕದು. ಈ ಶಾಸನದ ಮುಖ್ಯಾಂಶಗಳನ್ನು ಕೆಳಗೆ ಕೊಡಲಾಗಿದೆ

೩ನೇ ಸೆಕ್ಷನ್—ಯಾವ ವ್ಯಕ್ತಿ ಯಾಗಲಿ ಸಾರ್ವಜನಿಕ ರಸ್ತೆ, ಬೀದಿ ರಸ್ತೆ, ಸಂಚಾರ ಸ್ಥಳ ಯಾ ಕೂಟ ಸ್ಥಳದಲ್ಲಿ ಬೇಡಿದರೆ, ಧರ್ಮ ಕೇಳಿದರೆ ಅಥವಾ ಧರ್ಮ ಸುಲಿದುಕೊಳ್ಳಬೇಕೆಂಬ ಯಾ ಧರ್ಮಕೊಡುವಂತೆ ಹೃದಯವನ್ನು ಕಲಕಿಸುವ ಉದ್ದೇಶದಿಂದ ಹುಣ್ಣು, ಗಾಯ, ಶಾರೀರಿಕ ರೋಗ ಯಾ ಅಂಗವೈಕಲ್ಯವನ್ನು ತೋರಿದರೆ ಯಾ ಪ್ರದರ್ಶಿಸಿದರೆ ರೂ. ೫೦ರ ವರೆಗಿನ ಜುಲ್ಮಾನೆಯ ಅಥವಾ ಒಂದು ತಿಂಗಳ ಸೆರೆಮನೆಯ ಶಿಕ್ಷೆಗೆ ಗುರಿಯಾಗತಕ್ಕದು.

ಮೂರನೆ ಸೆಕ್ಷನಿನ ತಕ್ಷೀರಿಗಾಗಿ ಪೋಲೀಸರಿಂದ ಕೈದುಮಾಡಲ್ಪಟ್ಟ ವ್ಯಕ್ತಿಯ ಪ್ರಾಯವು ೧೬ಕ್ಕಿಂತ ಕಡಿಮೆಯಾಗಿದ್ದಲ್ಲಿ ೧೯೨೦ರ ಮದ್ರಾಸು ಚಿಲ್ಡ್ರನ್(ಮಕ್ಕಳ) ಆಕ್ಟಿನ ೪೯ನೆ ಸೆಕ್ಷನಿನ ೧ನೇ ಒಳ ಸೆಕ್ಷನಿಗನುಗುಣವಾಗಿ ಆ ತಕ್ಷೀರಿನ ಇತ್ಯರ್ಥವಾಗತಕ್ಕದು. ತಕ್ಷೀರಿಗೆ ಗುರಿಯಾದ ವ್ಯಕ್ತಿಗೆ ೧೬ ವರ್ಷವಾಗಿದ್ದರೆ ಸಾಧಾರಣ ನ್ಯೈಕೈಗೆಲಸಮಾಡುವಷ್ಟು ಶಾರೀರಿಕ ಯೋಗ್ಯತೆಯಿದ್ದರೆ ಮೂರನೆ ಸೆಕ್ಷನು ಮೇರೆಗೆ ಶಿಕ್ಷಿಸುವ ಬದಲಾಗಿ ಮೂರು ವರ್ಷಗಳಿಗೆ ಮೀರದ ನಿರ್ದಿಷ್ಟವಾದ ಅವಧಿಯ ತನಕ ಗೇಯುವ ಸಾಲೆಯಲ್ಲಿ ಆ ವ್ಯಕ್ತಿಯು ಇರಿಸಲ್ಪಡತಕ್ಕದು. ಅವಳಿ ಆ ವ್ಯಕ್ತಿಯು ಅಂತಹ ತಕ್ಷೀರನ್ನು ಮುಂದೆ ಮಾಡುವುದಿಲ್ಲೆಂದು ಬರಹ ಮೂಲಕ ಮುಚ್ಚಳಿಕೆ ಕೊಟ್ಟಲ್ಲಿ ಮೆಜಿಸ್ಟ್ರೇಟರು ಬಿಡಲೂಬಹುದು. ಅಂತಹ ಮುಚ್ಚಳಿಕೆಯನ್ನು ಮುಂ

(೫ನೇ ಪುಟದ ೧ನೇ ಕಲಂ ನೋಡಿರಿ.)

ದೃಢವಾದ ಊರ್ಜಿತಾವಸ್ಥೆ



"ವಾರ್ಡನ್" ನ ಈ ವರೆಗಿನ ವ್ಯವಹಾರವನ್ನು ಪರಿಶೀಲಿಸಿದಲ್ಲಿ, ಈ ಕಂಪನಿಯು ಮುಂದಕ್ಕೆ ಹೆಚ್ಚಿನ ಪ್ರಗತಿಯನ್ನು ಪಡೆಯುವುದೆಂದು ನಿಶ್ಚಿತವಾಗುವುದು "ವಾರ್ಡನ್" ನ ಬೆಳವಣಿಗೆಯು ಕ್ರಮವಾಗಿ ಇತರ ಹೆಸರಾಂತ ವಿಮಾ ಸಂಸ್ಥೆಗಳಂತೆ ತೊಡಕಿಲ್ಲದ ಮುಂದಕ್ಕೆ ಸಾಗುತ್ತಿದೆ.

ಸಂಸ್ಥೆಯ ಬೆಳವಣಿಗೆಯೊಂದಿಗೆ ನಿಮ್ಮ ಶ್ರೀಯೂ (ಭ ಷ್ಯದಿಯ ಸಂಧರ್ಭಗಳು ಅನೇಕ ವಿಧವನ್ನು ಇದನ್ನು ನೀವೇ ಪರಿಶೋಧಿಸಿರಿ

★ ★ ☆

ಚಾಲ್ತಿ ವಿಮೆ	.. ..	ರೂ. 2,00,00,000
ಭಂಡವಾಳ	.. ..	ರೂ. 36,00,000
ಆದಾಯ	.. ..	ರೂ. 18,00,000
ವರ್ಚಿನ ಪ್ರಮಾಣ		22 %
ಪೋಲಿಸಿ ರದ್ದಿನ ಪ್ರಮಾಣ		8 %

★ ★ ★

ಜೀವ – ಬೆಂಕಿ – ಅಪಘಾತ ವಿಮೆಗಳು

ದಿ ವಾರ್ಡನ್ ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ

ವಾರ್ಡನ್ ಹೌಸ್, ಸರ್ ಫಿರೋಜ್‌ಶಹಾ ಮೆಹ್ತಾ ರೋಡ್, ಫೋರ್ಟ್ ಮುಂಬಾಯಿ.

ಪ್ರಥಕ ಮತ್ತು ಬೆಳವಣಿಗೆ ಎಲ್ಲಾ ಕಡೆಯಲ್ಲಿ ಕೀರ್ತಿಯನ್ನು ಪಡೆದಿರುವುದ.

ದೇಶ—ವಿದೇಶ

ಇಂಡಿಯಾದ ಸಮಸ್ಯೆ
ಪ್ರೊ॥ ಕೂಪ್ಲೆಂಡರ ಪುಸ್ತಕ

ಅಮೇರಿಕದ ನ್ಯೂಯೋರ್ಕದಲ್ಲಿ ಪ್ರಕಟವಾದ ಈ ಪುಸ್ತಕವನ್ನು ಕಟುವಾಗಿ ಟೀಕಿಸಿ ಅಲ್ಲಿಯ 'ಹೆರಾಲ್ಡ್ ಟ್ರಾಬ್ಯೂನ್' ಪತ್ರಿಕೆಯಲ್ಲಿ ಶ್ರೀ| ಕೃಷ್ಣಲಾಲ್ ಶ್ರೀಧರ ಕಿಣಿಯವರು ಲೇಖನ ಬರೆದಿರುವರು. ಈ ಪುಸ್ತಕವು ಇಂಡಿಯಾದ ಬಿಕ್ಕಟ್ಟಿನ ವಿಷಯ ಬ್ರಿಟಿಷ್ ಅಧಿಕಾರಿಗಳ ಅಭಿಪ್ರಾಯವನ್ನೇ ಸಮರ್ಥಿಸಿ ಹಿಂದೂ ಮುಸ್ಲಿಂ ಭಿನ್ನತೆಯೇ ಸಮಸ್ಯೆ ಪರಿಹಾರಕ್ಕೆ ಪ್ರಧಾನ ವಿಘ್ನಕಾರಕ ವಿಷಯವಾಗಿವೆ ಎನ್ನುತ್ತದೆ. ಪಾಕಿಸ್ತಾನ ರಚನೆಯು ಅಪೇಕ್ಷಣೀಯವಲ್ಲವೆಂದೂ ಅನ್ವಯಹಾರ್ಯವೆಂದೂ ಕೂಪ್ಲೆಂಡರು ಇದರಲ್ಲಿ ಸಿದ್ಧಾಂತಗೊಳಿಸಿದ್ದರೂ ಸಾಧಾರಣ ಅದನ್ನೇ ಹೋಲುವ ಮತ್ತೊಂದು ರಚನಾಕ್ರಮವನ್ನು ಪ್ರತಿಪಾದಿಸಿದ್ದಾರೆ. ಉತ್ತರ ಹಿಂದುಸ್ಥಾನವನ್ನು ನದಿ ಪಾತ್ರಾನುಸಾರವಾಗಿ ಸಿಂಧೂ, ಗಂಗಾ—ಯಮುನಾ, ಗಂಗಾ ಬ್ರಹ್ಮಪುತ್ರಾ ಇತ್ಯಾದಿ ಮೂರು ನಾಲ್ಕು ಪ್ರಾಂತಘಟಕಗಳಾಗಿಯೂ, ದಕ್ಷಿಣ ಹಿಂದೂಸ್ಥಾನವು ಅಂತಹ ಮಹಾನದಿ ವಿರಹಿತವಾಗಿರುವುದರಿಂದ ಇದನ್ನೊಂದು ಅಖಂಡ ದ್ವೀಪಖಂಡ ಘಟಕವಾಗಿಯೂ ವಿಭಾಗಿಸಿ ಸಮಸ್ಯೆ ಪರಿಹರಿಸುವ ಸೂಚನೆಯಿತ್ತಿದ್ದಾರೆ. ಹಿಂದೂ ಮುಸ್ಲಿಂ ಭಿನ್ನತೆಯನ್ನೇ ಕೇಂದ್ರ ಸಮಸ್ಯೆಯನ್ನಾಗಿ ಎತ್ತಿಕೊಂಡು ಇತರ ಮುಖ್ಯ ಪಕ್ಷಗಳ ಪ್ರಶ್ನೆಯನ್ನು ಉಪೇಕ್ಷಿಸಿಯೂ ಬ್ರಿಟಿಷ್ ಪ್ರಭುತ್ವ ಮತ್ತು ಭಾರತೀಯ ಸ್ವಾತಂತ್ರ್ಯದ ವಿಷಯ ಬೇರೇನೂ ಹಾದಿ ತೋರಿಸದೆ ಕ್ರಿಪ್ಸರ ಕೊಡುಗೆಯ ಅಂಗೀಕಾರವೇ ಇಂಡಿಯಾದ ಸ್ವಾತಂತ್ರ್ಯ ಸಾಧನಮಾರ್ಗವೆಂದಿರುವುದರಿಂದಲೂ ಭಾರತೀಯ ಸಮಸ್ಯೆ ಪರಿಹಾರದ ದೃಷ್ಟಿಯಿಂದ ಈ ಪುಸ್ತಕವು ನಿರರ್ಥಕವಾಗಿದೆ ಎಂದು ಕೃಷ್ಣಲಾಲರ ಟೀಕೆ.

ಜನರಲ್ ಚಿಯಾಂಗ್ ಕೈಶೇಕರ ಹೇಳಿಕೆ-
ಇಂದಿನ ಪರಿಸ್ಥಿತಿಯು ಕಠಿಣವಾಗಿದ್ದರೂ ಮುಂಬ[illegible] ವಿಜಯವನ್ನು ತಂದೀತೆಂಬ ಆಸೆ ಇದೆ

ಕಂಟವಳಿ ಮತ್ತು ರೈಲ್ವೆಗಳ ಉದ್ದಕ್ಕೆ ಹೋರಾಟವು ಕಠಿಣವಾದೀತು. ಆದರೆ ಈ ಪರಿಸ್ಥಿತಿ ಬಂದೀತೆಂಬ ನಿರೀಕ್ಷಣೆ ಎಷ್ಟೋ ಮೊದಲೇ ಇದ್ದು ಎದುರಿಸಲಿಕ್ಕೆ ತಕ್ಕ ಪೂರ್ವ ಸಿದ್ಧತೆಯಾಗಿದೆ. ಇಂದು ಯುದ್ಧಮುಖದಲ್ಲಿ ಐದು ಮಿಲಿಯ ಚೀನೀಯ ಯೋಧರು ಕಾದುತ್ತಿದ್ದಾರೆ. ನಾಲ್ಕು ಲಕ್ಷ ಸುಶಿತ ಯೋಧರು ಪೆಕಿನ್ ಹ್ಯಾಂಕೋ ಮತ್ತು ಕ್ಯಾಂಟನ್ ಹ್ಯಾಂಕೋ ರೈಲ್ವೆಗಳ ಪೂರ್ವದಲ್ಲೇ ಇದ್ದು ಜಪಾನರನ್ನು ಪ್ರತಿಭಟಿಸಲು ಸಮರ್ಥರಾಗಿದ್ದಾರೆ. ಮುಂಬರುವ ವರ್ಷವು ವಿಜಯವನ್ನೇ ತಂದೇ ತರುವುದು. ಇನ್ನೊಂದು ಸ್ವಲ್ಪ ಕಾಲ ಚೀನೀಯರು ಮತ್ತೂ ಬಿಗಿಯಾಗಿ ಸೊಂಟ ಕಟ್ಟಬೇಕು-ಸಂಕಷ್ಟಗಳನ್ನು ಸಹಿಸಬೇಕು-ಎಂದು ಚಿಯಾಂಗರು ಚೀನಾ ನವ ಸಂಘಟನೆಯ ದ್ವಿದಶ ವಾರ್ಷಿಕೋತ್ಸವದಂದು ಚೀನೀಯರಿಗೆ ಸಾರಿದ್ದಾರೆ. ಅವರ ಈ ಉದ್ಘೋಷಣೆಯ ಭಾಷಣದಲ್ಲಿ ಮಿತ್ರಪಕ್ಷೀಯರ ಪ್ರಸ್ತಾಪವನ್ನೆತ್ತಲಿಲ್ಲ. ಅವರ ಸಹಾಯಕ್ಕಾಗಿ ವಿನಂತಿಸಿಕೊಳ್ಳಲೂ ಇಲ್ಲ.

ಪ್ರಾಂತಿಕ ಗೋ ಪರಿಷತ್ತು

ಮದ್ರಾಸು ಸರಕಾರದ ಹಾಗೂ ಮದ್ರಾಸು ಪ್ರಾಂತದೊಳಗೆ ಸೇರಿದ ಆಶ್ರಿತ ಸಂಸ್ಥಾನಗಳ ಅಧಿಕಾರಿ ಪ್ರತಿನಿಧಿಗಳ ಪ್ರಾಂತಿಕ ಗೋ ಪರಿಷತ್ತು ಮದ್ರಾಸಿನಲ್ಲಿ ನೆರೆಯಿತು-ನೈಜಾಂ, ಮೈಸೂರು, ತಿರುವಾಂಕೂರು, ಕೊಚ್ಚಿ, ಪುದುಕೋಟೆ ಈ ಸಂಸ್ಥಾನಗಳ ಗೋ ಶಾಖೆಯ ಪ್ರಧಾನ ಅಧಿಕಾರಿಗಳು ನೆರೆದಿದ್ದರು. ಇಡೀ ಇಂಡಿಯಾದ ಆಕಳುಗಳ ಪರಿಸ್ಥಿತಿಯು ಅಂಕೆ ಸಂಖ್ಯೆಗಳ ಸಂಗ್ರಹದ ಕಾರ್ಯವು ಮುಂಬರುವ ನವೆಂಬರದಲ್ಲಿ ಆರಂಭವಾಗುವುದೆಂದು ತಿಳಿಯಲಾಗಿದೆ. ಆ ಅಂಕೆಸಂಖ್ಯೆಗಳು ತಿಳಿದ ಬಂದು ಯಥಾರ್ಥ ಪರಿಸ್ಥಿತಿಯು ಗೋಚರವಾಗುವ ತನಕ ತಾತ್ಪೂರ್ತಿಕವಾಗಿ ಕೆಲವು ಗೊತ್ತುವಳಿಗಳು ಅಂಗೀಕಾರವಾದುವು. ಮದ್ರಾಸು ಸರಕಾರವು ತಿಂಗಳಿಗೊಂದು ಸಾವಿರ ಆಕಳುಗಳನ್ನು ಹೊಂದಬೇಕೆಂದೂ ಅವುಗಳಿಂದ ಒಂದೊಂದು ನೂರರಂತೆ ತಿರುವಾಂಕೂರು ಮತ್ತು ಕೊಚ್ಚಿಗೆ ಕೊಡಬೇಕೆಂದೂ ಒಂದು ಗೊತ್ತುವಳಿ. ಈ ವ್ಯವಸ್ಥೆಯು ಮೂರು ತಿಂಗಳ ಕಾಲ ನಡೆಯಬೇಕೆಂದೂ ಅಷ್ಟರಲ್ಲಿ ದೊರಕಬಹುದಾದ ಅಖಿಲ ಭಾರತ ಪಶು ಪರಿಸ್ಥಿತಿಯ ಅಂಕೆಸಂಖ್ಯೆಗಳ ದೃಷ್ಟಿಯಿಂದ ಮುಂದಿನ ವ್ಯವಸ್ಥೆಯ ನಿಷ್ಕರ್ಷೆಯಾಗಬೇಕೆಂಬುದು ಮತ್ತೊಂದು ಗೊತ್ತುವಳಿ.

ಲಾಭಖೋರತನದಿಂದ ಸೀರೆ ಮಾರಿದುದಕ್ಕೆ ೧೦೦೦ರೂ.ಗಳ ಜುಲ್ಮಾನೆ

ಸೀರೆಗಳ ಅಕ್ರಮ ಲಾಭದಲ್ಲಿ ಮಾರಿದನೆಂಬ ಆರೋಪಣೆಯ ಮೇಲೆ ತಲ್ಲೇರಿಯ ಜವಳಿ ವ್ಯಾಪಾರಿ ಕವಂದಾಸ ವಸಂಜೀ ರೇಟ್ ಎಂಬವರಿಗೆ ಒಂದು ಸಾವಿರ ರೂಪಾಯಿಯ ಜುಲ್ಮಾನೆಯ ಶಿಕ್ಷೆ ವಿಧಿಸಲಾಗಿದೆ. ಜುಲ್ಮಾನೆ ತೆರದಿದ್ದರೆ ಎರಡು ವಾರಗಳ ಕಠಿಣ ಸಜೆ.

ಈಜಿಪ್ತದಲ್ಲಿ ನವಮಂತ್ರಿಮಂಡಲ ಸ್ಥಾಪನೆ

ಈಜಿಪ್ತದ ಅರಸು ಫೆರೋಕರು ಕಳೆದ ವಾರ ಒಮ್ಮಿಂದೊಮ್ಮೆಗೆ ತನ್ನ ಮಂತ್ರಿಕೂಟ (ಕೆಬಿನೆಟ್) ವನ್ನು ವಿಸರ್ಜಿಸಿ ಈಗ ನವಮಂತ್ರಿಮಂಡಲವನ್ನು ನಿರ್ಮಾಣ ಮಾಡಿದ್ದಾರೆ. ಈ ನವಮಂತ್ರಿಮಂಡಲದಲ್ಲಿ ವಿಸರ್ಜಿತ ನಹಾಸ್‌ಪಾಷರ ವಾಫ್ಡ್ ಪಕ್ಷದಲ್ಲಿದೆ ಬೇರೆ ಎ ಪಕ್ಷ ಪಂಥದಲ್ಲಿ ಪ್ರತಿನಿಧಿಗಳಿರುವುದರಿಂದ ಇದು ಚೆನ್ನಾಗಿ ಕಾರ್ಯನಿರ್ವಹಣಮಾಡೀತೆಂದು ಕೈರೋದಲ್ಲಿ ಅಭಿಪ್ರಾಯ. ಹಿಂದಿನ ಮಂತ್ರಿಮಂಡಲದ ಪ್ರಧಾನ ಕೈ ನಾಹಾಸ್ ಪಾಷಾರ ಸ್ವೈರ ಅಧಿಕಾರ ಪ್ರಯೋಗಗಳಿಂದಾಗಿ ಅರಸನಿಗೂ ಮಂತ್ರಿಮಂಡಲಕ್ಕೂ ಸಂಬಂಧ ಗೊಳಿಕ ಶಿಥಿಲವಾಗುತ್ತ ಬಂದು ಅಖಿಲ-ಅರಬರ ಪರಿಷತ್ತು ನಿರ್ಣಯಗಳ ಮೇಲಿನ ತೀರ್ಮಾನಗಳನ್ನು ಮುಂದಾಗಿ ಅರಸನಿಗೆ ತಿಳಿಸದೆಯೇ ನಾಹಾಸ್ ಪಾಷಾರು ಸ್ವೈರವರ್ತನೆಯಿಂದ ಬಹಿರಂಗವಾಗಿ ಸಾರಿದುದರಿಂದ ಮಂತ್ರಿಮಂಡಲಕ್ಕೂ ಅರಸನಿಗೂ ಇದ್ದ ಶಿಥಿಲ ಸಂಬಂಧದ ಕೊನೆ ಕೆಯ್ಯೂ ತುಂಡಾಯಿತೆಂದು ಕೈರೋದ ಜನತೆಯ ಹೇಳಿಕೆ

ಹಾವಿನ ಕಡಿತಕ್ಕೆ ಅತ್ಯಂತ ಸುಲಭ ಚಿಕಿತ್ಸೆ

ತೆಲುಗು ಪತ್ರಿಕೆಯೊಂದರಲ್ಲಿ ಒಬ್ಬ ಅನುಭವಿಕರು ಹಾವಿನ ಕಡಿತಕ್ಕೆ ಶೇಕಡ ನೂರರಷ್ಟು ಯಶಸ್ವಿಯಾದ ಅತಿ ಸುಲಭ ಚಿಕಿತ್ಸೆಯನ್ನು ಪ್ರಕಟಿಸಿರುವರಾಗಿ ಬಳ್ಳಾರಿಯ 'ನವಸಂದೇಶ'ದಲ್ಲಿ ಕಾಣುತ್ತದೆ. ಹಾವಿನ ಕಡಿತವಾದವನು ಕೂಡಲೆ ತನ್ನ ಯಾ ಇತರರ (ಸಾಧ್ಯವಾದಲ್ಲಿ ಹುಡುಗರ) ಮೂತ್ರವನ್ನು ಒಂದು ಸೆರೆಯಷ್ಟು ಕುಡಿಯಬೇಕಂತೆ. ಕೂಡಲೆ ವಿಷವು ಇಳಿಯುವುದೆಂದೂ ಒಂದು ವೇಳೆ ಇಳಿಯದಿದ್ದರೆ ಮತ್ತೊಮ್ಮೆ ಅಂತೆಯೇ ಕುಡಿಯಬೇಕೆಂದೂ ಹೇಳಲಾಗಿದೆ. ಕುಡಿಯಲು ಅಸಾಧ್ಯವಾದರೆ ಸ್ವಲ್ಪ ಕಾಳುಮೆಣಸಿನ ಪುಡಿಯನ್ನು ಸೇರಿಸಿಕೊಂಡು ಕುಡಿಯಬೇಕಂತೆ. ವಾಚಕರು ಇದನ್ನು ನೆನಪಿನಲ್ಲಿಟ್ಟುಕೊಂಡು ಸಂದರ್ಭವೊದಗಿದಾಗ ಇತರ ಖಾತರಿ ಚಿಕಿತ್ಸೆ ಕೂಡಲೆ ದೊರಕದಿದ್ದಲ್ಲಿ ವಿಳಂಬ ಮಾಡಿ ಪ್ರಾಣಹಾನಿಯಾಗುವಲ್ಲಿ ಈ ಸುಲಭ ಚಿಕಿತ್ಸೆಯನ್ನು ಅವಶ್ಯವಾಗಿ ಪ್ರಯೋಗಿಸಿ ನೋಡಿ ಪರಿಣಾಮವನ್ನು ಜನತೆಯ ಅವಗಾಹನೆಗಾಗಿ ಪತ್ರಿಕೆಗಳಿಗೆ ಕಳುಹಿಸಬೇಕು.

ಕನ್ನಡ ಸಾಹಿತ್ಯ ಸಮ್ಮೇಲನಾಧ್ಯಕ್ಷರ ಆಯ್ಕೆ.

ಮುಂಬರುವ ದಶಂಬರದಲ್ಲಿ ರಬಕವಿಯಲ್ಲಿ ಜರಗಲಿರುವ ಕನ್ನಡ ಸಾಹಿತ್ಯ ಸಮ್ಮೇಲನಕ್ಕೆ ಜಯಕರ್ನಾಟಕದ ಸಂಪಾದಕರಾದ ಪ್ರೊ. ಶಿ. ಶಿ. ಬಸವನಾಳರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುತ್ತಾರೆ.

ಸೈನಿಕರಿಗೆ ಶಿಕ್ಷೆ.

ಈ ವರ್ಷಾರಂಭದಲ್ಲಿ ರಾಣೀಪೇಟೆಯಲ್ಲಿ ಸೈನಿಕರು ಗೊಂದಲವೆಬ್ಬಿಸಿ ನಾಗರಿಕರಿಗೆ ತೊಂದರೆ ಮತ್ತು ಸೊತ್ತುಗಳಿಗೆ ಹಾನಿ ಮಾಡಿದುದರ ವಿಷಯ ಮಿಲಿಟರಿ ಕೋರ್ಟಿನಲ್ಲಿ ವಿಚಾರಣೆ ನಡೆದು ಕೆಲವರಿಗೆ ಶಿಕ್ಷೆ ವಿಧಿಸಲಾಗಿದೆ. ಒಬ್ಬನಿಗೆ ಎರಡು ವರುಷ ಮತ್ತೊಬ್ಬನಿಗೆ ೬ ತಿಂಗಳ ಸಶ್ರಮ ಸೆರೆಮನೆವಾಸದ ಶಿಕ್ಷೆ ಕೊಡಲ್ಪಟ್ಟಿದೆ.

ಸೆಂಟ್ರಲ್ ಎಸೆಂಬ್ಲಿ ಅಧಿವೇಶನಕ್ಕೆ ಕಾಂಗ್ರೆಸ್ ಪಕ್ಷದ ಮೆಂಬರರು.

ನವೆಂಬರ ತಾ. ೧೮ರಲ್ಲಿ ಜರಗಲಿರುವ ಕೇಂದ್ರ ನ್ಯಾಯವಿಧಾಯಕ ಸಭೆಯ ಅಧಿವೇಶನದಲ್ಲಿ ಸಹಭಾಗಿಗಳಾಗುವ ವಿಷಯ ಕಾಂಗ್ರೆಸ್ ಪಕ್ಷದ ಸದಸ್ಯರ ಮುಂದಾಳು ದ ಭೂಲಾಭಾಯಿ ದೇಸಾಯಿಯವರು ಗಾಂಧೀಜಿಯವರೊಡನೆ ವಿಚಾರ ಮಾಡಿ ಸಹಭಾಗಿಗಳಾಗಬೇಕೆಂಬ ನಿರ್ಣಯವಾಗಿವೆಯೆಂದೂ ಈ ಪಕ್ಷದ ಸದಸ್ಯರೆಲ್ಲ ಮುಂದಾಗಿ ತಾ. ೩೦ರಲ್ಲಿ ಡೆಲ್ಲಿಯಲ್ಲಿ ಸಭೆಗೂಡಿ ಬರಬೇಕಾಗಿಯೂ ದೇಸಾಯಿಯವರು ಸಂಬಂಧಪಟ್ಟ ಸದಸ್ಯರಿಗೆ ಪತ್ರ ಬರೆದಿರುವರಾಗಿ ತಿಳಿದುಬಂದಿದೆ.

ಫ್ರಾನ್ಸಿನ ಹಳೆಯ ಮಂತ್ರಿಗಳ ಬಂಧನದ ಆಜ್ಞೆ

ಫ್ರಾನ್ಸಿನ ಹೊಸ ಸರಕಾರವು ಹಳೆಯ ವಿಚಿ ಸರಕಾರದ ಮಂತ್ರಿಗಳನ್ನು ಸೆರೆಹಿಡಿಯಲು ಆಜ್ಞೆ ಹೊರಡಿಸಿದೆ. ಸೆರೆಹಿಡಿದು ಅವರನ್ನು ದೇಶದ್ರೋಹದ ಆರೋಪಣೆಯ ಮೇಲೆ ವಿಚಾರಣೆ ನಡೆಯಿಸುವುದಂತೆ

ಈಜಿಪ್ತದ ನವಮಂತ್ರಿಮಂಡಲದ ಪ್ರಧಾನರ ಆಶ್ವಾಸನೆ. ಮಿತ್ರರಾಷ್ಟ್ರಗಳಿಗೆ ಬೆಂಬಲ

ಈ ಯುದ್ಧದಲ್ಲಿ ಈಜಿಪ್ತು ಮಿತ್ರರಾಷ್ಟ್ರಗಳಿಗೆ ಸಂಪೂರ್ಣ ಬೆಂಬಲಗೊಡುವುದು ಮತ್ತು ಬ್ರಿಟನಿನೊಡನಿದ್ದ ಗೆಳೆತನವನ್ನು ಕಾಪಾಡಿಕೊಂಡು ಬರುವುದು ಎಂದು ಹೊಸ ಪ್ರಧಾನರಾದ ಅಹಮ್ಮದ್ ಮಹರ ಪಾಷಾರವರು ಆಶ್ವಾಸನೆಕೊಟ್ಟಿರುವರು.

ಪಾಕಿಸ್ತಾನ ಪ್ರಚಾರ ಸಭೆಗಳಿಗೆ ಪ್ರತಿಬಂಧಕ.

ಕರಾಚಿ ನಗರದ ಮುಸ್ಲಿಂ ಲೀಗು ಮುಸ್ಲಿಂ ವಾರ್ಡುಗಳಲ್ಲಿ ಲೀಗಿಗೆ ಬೆಂಬಲವಾಗುವಂತೆ ಸುಮಾರು ೩೦ ಪ್ರಚಾರ ಸಭೆಗಳನ್ನು ಜರಗಿಸುವುದಾಗಿ ನಿಶ್ಚಯಿಸಿತ್ತು. ಆದರೆ ಕರಾಚಿ ಪೋಲೀಸು ಅಧಿಕಾರಿಗಳು ಸಮ್ಮತಿ ಕೊಡಲಿಲ್ಲ.

(೬ನೇ ಪುಟದಿಂದ)

ದು ವರ್ತಿಸಿದ ವ್ಯಕ್ತಿಯು ಆರು ತಿಂಗಳ ವರೆಗೂ ಅವಧಿಯುಳ್ಳ ಜೈಲು ಶಿಕ್ಷೆಗೆ ಗುರಿಯಾಗತಕ್ಕುದು. ಇಂತಹ ಶಿಕ್ಷೆ ಕೊಡುವುದರ ಬದಲಾಗಿ ಮೇಜಿಸ್ಟ್ರೇಟರು ಆ ವ್ಯಕ್ತಿಯನ್ನು ಮೂರು ವರುಷಗಳಿಗೆ ಮೀರದ ಅವಧಿಯ ತನಕ ಗೇಯುವ ಸ್ಕೂಲಿಗೂ ಕಳುಹಿಸಬಹುದು. ತಪ್ಪೆಸಗಿದ ವ್ಯಕ್ತಿಗೆ ಗೇಯುವಂತಹ ಶಾರೀರಿಕ ಅರ್ಹತೆಯಿಲ್ಲದಿದ್ದಲ್ಲಿ ೩ನೇ ಕಲಮಿನ ಪ್ರಕಾರ ಶಿಕ್ಷಿಸುವ ಬದಲಾಗಿ ಪೋಷಣಾಲಯವಿದ್ದರೆ ಅಲ್ಲಿಗೆ ಕಳುಹಿ ಕೊಡಬಹುದು.

೧೫ ಸೆಕ್ಷನುಗಳುಳ್ಳ ಈ ಬಿಲ್ಲಿನ ಕೂಲಂಕಷ ವಿವರಣೆಯನ್ನು ತಿಳಿಯಬೇಕೆಂದಿದ್ದವರು ತಾ ೧೧-೧೦-೪೪ರ ಫೋರ್ಟ್ ಸೆಂಟ್ ಜಾರ್ಜ್ ಗಜೇಟಿನಲ್ಲಿ ಪ್ರಕಟವಾಗಿರುವುದನ್ನು ನೋಡಬಹುದು.—

(೬ನೇ ಪುಟ ನೋಡಿರಿ).

ತಾ 22—10—44ರಿಂದ
ಕಾವ್ಯ, ಕಥೆ, ಸಂಗೀತಾದಿಯಾಗಿ ಸರ್ವಾಂಗ ಸುಂದರವಾದ
ಕನ್ನಡಿಗರ ಹೆಮ್ಮೆಯ ಚಿತ್ರ
ವಾಣಿ (ಕನ್ನಡ)
ಚೌಡಯ್ಯ, ಹಿರಣ್ಣಯ್ಯ, ಬೆಳ್ಳಾರೆ ಲಲಿತ, ಚಂದ್ರಮ್ಮ ಮೊದಲಾದವರು.
ಮುಂದಿನ ಚಿತ್ರ
ಶಾಂತೋಳಿಯವರ ಪ್ರೂಂಜೆ
ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್, ಉಡುಪಿ.

The Canara Banking Corporation Limited.

(Incorporated in British India)

Estd 1906

Head Office: UDIPI, (S. K.)

ANNOUNCEMENT

A Branch of the Bank will be Opened at BOMBAY,

(1st Floor, 'Ready Money Mansions', Churchgate St, Fort) ON 24—10—1944

ಉಡುಪಿ, ಗುರುವಾರ ೧೯ ೧೦-೧೯೪೪

ಹಿಂದೂ ಕಾನೂನಿನಲ್ಲಿ ಸುಧಾರಣೆ

ಹಿಂದೂ ಕಾನೂನನ್ನು ಸುಧಾರಿಸುವುದಕ್ಕಾಗಿ ಜಸ್ಟೀಸ್ ಬೆನಗಲ್ ನರಸಿಂಗರಾಯರ ನೇತೃತ್ವದ ಒಂದು ಸಮಿತಿಯು ಏರ್ಪಡಾಗಿ ಆ ಸಮಿತಿಯು ಮಾಡಿರುವ ಸುಧಾರಣೆಗಳ ವರದಿಯು ವಿಷಯ ಜನತೆಯ ಸಲಹೆಸೂಚನೆ ಆಕ್ಷೇಪಣೆಗಳನ್ನು ತಿಳಿಯುವರೆ ಪ್ರಕಟವಾಗಿದೆ. ಈ ಸುಧಾರಣೆಗಳ ಮುಖ್ಯಾಂಶವನ್ನು ಬೇರೊಂದು ಕಡೆ ಕೊಡಲಾಗಿದೆ. ಮದ್ರಾಸು ಪ್ರಾಂತದ ಹಲವೆಡೆಗಳಲ್ಲಿ ಜನತೆಯು ಸಭೆಗೂಡಿ ಇವುಗಳ ಖಂಡನೆಯೊಂದನೆ ತಿದ್ದುಪಡಿಗಳನ್ನು ಸೂಚಿಸಿದ್ದಾರೆ. ಹಿಂದೂಗಳಾದವರೆಲ್ಲರಿಗೂ ಅನ್ವಯಿಸುವ ಈ ಸುಧಾರಣೆಗಳ ವಿಷಯದಲ್ಲಿ ಪ್ರತಿಯೊಬ್ಬ ಹಿಂದೂವೂ ಯೋಚಿಸತಕ್ಕದ್ದಿದೆ. ಎಂತಲೆ ಕೆಲವೊಂದು ಸಂಗತಿಗಳನ್ನು ಇಲ್ಲಿ ಎತ್ತಿಕೊಟ್ಟಿದ್ದೇವೆ. ಈ ಸುಧಾರಣೆಯ ಪ್ರಕಾರ ಒಬ್ಬನು ತನ್ನ ಜೀವಂತಕಾಲದಲ್ಲಿ ಸ್ವಾರ್ಜಿತ ಆಸ್ತಿಯನ್ನು ಹೇಗೋ ಹಾಗೆಯೇ ಪಿತ್ರಾರ್ಜಿತ ಆಸ್ತಿಯನ್ನು ಇಷ್ಟಾನುಸಾರ ವಿನಿಯೋಗಿಸುವ ಹಕ್ಕು ಬರುತ್ತದೆ. ಗಂಡುಮಕ್ಕಳಿಗೆ ಅವನ ಜೀವಿತ ಕಾಲದಲ್ಲಿ ಹಿಸೆ ಕೇಳುವ ಹಕ್ಕು ಇರುವುದಿಲ್ಲ. ಅಲ್ಪಸ್ವಲ್ಪ ಪಿತ್ರಾರ್ಜಿತ ಆಸ್ತಿ ಇದ್ದು ಸಂಸಾರ ನಿರ್ವಹಣಕ್ಕೂ, ವ್ಯಾಪಾರ ಉದ್ಯಮಗಳಿಗಾಗಿಯಾಗಲಿ, ಮಕ್ಕಳ ಪುರೋಭಿವೃದ್ಧಿಕಾರಕವಾದ ವಿದ್ಯಾಭ್ಯಾಸಾದಿಗಳಿಗೂ ಅದನ್ನು ವಿಕ್ರಯಿಸಿ ತೆಗೆಯುವುದೇ ಶ್ರೇಯಸ್ಕರವಾಗಿರುವಲ್ಲಿ ಅಂತಹದನ್ನು ಮಾಡಲು ಈ ಕಾನೂನು ಅನುಕೂಲವಾಗುವುದೇನೋ ನಿಜ. ಆದರೆ ಹೇರಳವಾಗಿ ಪಿತ್ರಾರ್ಜಿತ ಆಸ್ತಿಯಿದ್ದವನಿಗೆ ಅದರ ಹುಟ್ಟುವಳಿಯೇ ಸಾಕಾಗಿರುವಲ್ಲಿ ಆತನ ದುಂದುಗಾರಿಕೆಗೋ ದುರಾಚಾರಗಳಿಗೋ ಈ ಸುಧಾರಣೆಯು ಅನುಕೂಲವಾಗಿ ಮುಂದಿನ ಸಂತಾನಕ್ಕೆ ಬಾಧಕವಾಗಿ ಪರಿಣಮಿಸೀತು. ಹಿರಿಯರು ದಣಿದು ದುಡಿದು ಕೂಡಿಟ್ಟುದು ಆ ವಂಶದ ಒಬ್ಬ ದುಷ್ಪುತ್ರನಿಂದಾಗಿ ಸಂತತಿ ಪರಂಪರೆಗೆ ದಕ್ಕದೆ ಹೋದೀತು. ಮಾತ್ರವಲ್ಲ ಎರಡನೆಯ ಮದುವೆ ಮಾಡಿಕೊಂಡವನೊಬ್ಬನು ಮೊದಲಿನ ಹೆಂಡತಿಯ ಮಕ್ಕಳಿಗೂ ಎರಡನೆಯವಳ ಮಕ್ಕಳಿಗೂ ಸರಿಪಾಲದೆ ಕೋಪದಲ್ಲಿ ಹಿರಿಯ ಹೆಂಡತಿಯ ಮಕ್ಕಳು ಪ್ರಾಯಪ್ರಬುದ್ಧರಾಗಿದ್ದರೂ ತಂದೆಯ ಜೀವಂತಕಾಲದಲ್ಲಿ ಹಿಸೆ ಕೇಳುವ ಹಕ್ಕಿಲ್ಲದ ಪ್ರಯುಕ್ತ, ಹೇರಳ ಪಿತ್ರಾರ್ಜಿತ ಆಸ್ತಿ ಇದ್ದೂ ಅವರು ಅದರ ಪ್ರಯೋಜನ ಹೊಂದದೆ ಅವರ ಬಾಳ್ವೆಗೇ ಹಾನಿಯಾದೀತು ಮಾತ್ರವಲ್ಲಿ ದ್ವಿತೀಯ ಪತ್ನಿಯ ಕೈಗೊಂಬೆಯಾಗುವವನು ಎಲ್ಲವನ್ನೂ ಅವಳ ಮಕ್ಕಳಿಗೇ ಕೊಟ್ಟುಬಿಡಲಿಕ್ಕೂ ಈ ಕಾನೂನು ಅನುಕೂಲವಾಗುವುದು. ಆದುಕಾರಣ ಹೇರಳ ಪಿತ್ರಾರ್ಜಿತ ಆಸ್ತಿಯಿರುವ ತಂದೆಗೆ ಅದರದೊಂದು ಯುಕ್ತಾಂಶವನ್ನು ಮಾತ್ರ ಇಷ್ಟಾನುಸಾರ ವಿನಿಯೋಗಿಸುವಂತೆ ಮಿತಿಯಿಡುವುದು ಅವಶ್ಯವಿದೆ.

ಗಂಡು ಮಕ್ಕಳಿಲ್ಲದ ತಂದೆಯ ಯಾವತ್ತು ಪಿತ್ರಾರ್ಜಿತ ಸ್ವಾರ್ಜಿತ ಆಸ್ತಿಯು ಹಕ್ಕುಪೂರ್ಣವಾಗಿ ಇಚ್ಛಾನುಸಾರ ವಿನಿಯೋಗಕ್ಕಾಗಿ ಮಗಳಿಗೆ ಸಿಗುವುದು ನ್ಯಾಯವೆನಿಸಿದರೂ ಗಂಡುಮಕ್ಕಳಿಲ್ಲದ ಗಂಡನ ಪಿತ್ರಾರ್ಜಿತ ಆಸ್ತಿಯು ಅಲ್ಪವಾಗಿದ್ದು ಅದರ ಇಚ್ಛಾನುಸಾರ 'ವಿನಿಯೋಗದ ಹಕ್ಕು ಅವನ ವಿಧವೆಗೆ ಬರುವುದು ನ್ಯಾಯವಾದರೂ ಹೇರಳ ಪಿತ್ರಾರ್ಜಿತ ಆಸ್ತಿಯಿದ್ದಲ್ಲಿ ಅದರದೊಂದು ಹಿರಿದಾದ ಅಂಶವು ಗಂಡನ ಅಣ್ಣ ತಮ್ಮ ಅಕ್ಕ ತಂಗಿಯರ ಭಾಗಕ್ಕೆ ದೊರಕದೆ ಪೂರಾ ವಿಧವೆಗೇ ಸೇರುವವೂ ನ್ಯಾಯವೆನಿಸದು. ಹಿರಿಯರು ಮಾಡಿಟ್ಟುದು ತಮ್ಮ ವಂಶ ಪರಂಪರೆಯವರಿಗೆ ದೊರಕಬೇಕೆಂಬ ಸಂಕಲ್ಪದಿಂದಲ್ಲದ ಹೊರಗಿಂದ ಬಂದು ಸೇರುವ ಸ್ತ್ರೀಯೊಬ್ಬಳ ಇಚ್ಛಾನುಸಾರ ವಿನಿಯೋಗಕ್ಕಾಗಿ ಇಗಿರತೆಂದಲ್ಲ ಕುಟುಂಬಿಕರಿಗಾಗಿ ವಿಧವೆಯು ತ್ಯಾಗ ಜೀವನ ಮಾಡಬಾರದೇನೋ ನಿಜ. ಆವಳು ಬಾಳಬೇಕು, ಚೆನ್ನಾಗಿ ಬಾಳಬೇಕು. ಅದಕ್ಕೆ ತಕ್ಕಷ್ಟು ಹುಟ್ಟುವಳಿಯು ಗಂಡನ ಪಿತ್ರಾರ್ಜಿತ ಆಸ್ತಿಯಿಂದ ದೊರಕದಿದ್ದಲ್ಲಿ ಅದನ್ನು ವಿಕ್ರಯಿಸಿ ತೆಗದಾದರೂ ಆವಳು ಜೀವಿಸಬೇಕು. ಆದರೆ ಹೇರಳ ಪಿತ್ರಾರ್ಜಿತ ಆಸ್ತಿಯಿದ್ದಲ್ಲಿ ಅವಳ ಇಚ್ಛಾನುಸಾರ ಕುಟುಂಬೇತರರ ಕೈ ಸೇರಲು ಕಾನೂನು ಅವಕಾಶ ಕೊಟ್ಟಲ್ಲಿ ಹಿರಿಯರ ತ್ಯಾಗ ಧ್ಯೇಯಗಳಿಗೆ ಭಂಗವಾಗುವುದು. ಆದ ಕಾರಣ ಹೇರಳವಾಗಿ ಗಂಡನ ಪಿತ್ರಾರ್ಜಿತ ಆಸ್ತಿ, ದೊರಕದ ವಿಧವೆಗೂ ಅದರದೊಂದು ಯುಕ್ತಾಂಶದ ಮಟ್ಟಿಗೆ ಇಚ್ಛಾನುಸಾರ ಹಕ್ಕು ಕೊಡುವುದು ನ್ಯಾಯ. ಮಾತ್ರವಲ್ಲ, ವಿಧವೆಯು ಪುನರ್ವಿವಾಹ ಮಾಡಿಕೊಂಡರೂ ಮೊದಲಿನ ಗಂಡ ಯಾ ಗಂಡಂದಿರಿಂದ ದೊರೆತ ಅವರವರ ಪಿತ್ರಾರ್ಜಿತ ಆಸ್ತಿಯೂ ಅವಳಿಗೇ ಇಚ್ಛಾನುಸಾರ ವಿನಿಯೋಗಕ್ಕೆ ದೊರಕುವುದರಿಂದ ಮದುವೆಯ ಮೇಲಾದ ಹೇರಳ ಆಸ್ತಿಯುಳ್ಳ ಇಬ್ಬರು ಮೂವರು ಮುಂಡಿಯರನ್ನೊಬ್ಬಳು ಕ್ರಮವಾಗಿ ಮದುವೆಯಾಗುತ್ತ ಬಂದು ಎರಡು ಮೂರು ಕುಟುಂಬದ ಪಿತ್ರಾರ್ಜಿತ ಆಸ್ತಿಗಳನ್ನೆಲ್ಲ ಮುಕ್ಕುನೀರು ಕುಡಿದು ಪಿತೃಗಳು ತಮ್ಮ ವಂಶಿಕರಿಗೆ ಸೇರಬೇಕೆಂಬ ಧ್ಯೇಯತ್ಯಾಗದಿಂದ ಮಾಡಿಟ್ಟುದೆಲ್ಲ ನಿರರ್ಥಕವಾಗುವ ಸಂಭವವಿದೆ.

ಇಂತಹ ವಿಷಯಗಳನ್ನೆಲ್ಲ ಸಕಾಲದಲ್ಲಿ ಜನತೆಯು ವಿಚಾರ ಮಾಡಬೇಕು. ಆಕ್ಷೇಪಗಳನ್ನೋ ಸಲಹೆ ಸೂಚನೆ ತಿದ್ದುಪಡಿಗಳನ್ನೋ ಸಂಬಂಧಪಟ್ಟಲ್ಲಿಗೆ ಕಳುಹಿಸಿಕೊಡಬೇಕು ಕೂಗಬೇಕು ಚೆನ್ನಾಗಿ ಕೂಗಬೇಕು, ನ್ಯಾಯಬದ್ಧವಾಗಿ ಸಕಾಲದಲ್ಲಿ ಕೂಗಬೇಕು ವಕೀಲ ಸಂಘಗಳೂ (Bar Association) ಈ ಸುಧಾರಣೆಗಳನ್ನು ಪರ್ಯಾಲೋಚಿಸಿ ತಕ್ಕ ತಿದ್ದುಪಡಿಗಳನ್ನು ಸೂಚಿಸುವುದು ಕರ್ತವ್ಯವಿದೆ. ಹೀಗೆ ಮಾಡದೆ ಈಗ ಮೌನವಾಗಿದ್ದಲ್ಲಿ ಸರಕಾರವು ಆ ಮೌನವನ್ನು ಸರ್ವಸಮ್ಮತ ಸೂಚಕವೆಂದು ಬಗೆದು ಈ ಸುಧಾರಣೆಗಳನ್ನು ಕಾನೂನಾಗಿ ವ್ಯವಹಾರಕ್ಕೆ ತಂದ ಮೇಲೆ ಕೂಗೆಬ್ಬಿಸುತ್ತ ಸರಕಾರವು ಅನ್ಯಾಯ ಮಾಡಿತೆಂದು ದೂರುವುದರಲ್ಲಿ ನ್ಯಾಯವೂ ಇಲ್ಲ, ಸಾರ್ಥಕ್ಯವೂ ಇಲ್ಲ

ಸ್ವೀಕಾರ ವಿಮರ್ಶೆ.

೧ ಮೊಗವೀರ ಯುವಕ ಸಂಘ, ಮುಂಬಯಿ-ಇವರ ನವಮ ವಾರ್ಷಿಕ ವರದಿಯು ನಮ್ಮ ಕೈ ಸೇರಿದೆ ತಾ. ೩೧ನೆ ದಸಂಬರ ೧೯೪೩ಕ್ಕೆ ಅಂತ್ಯವಾಗುವ ವರದಿಯ ವರ್ಷದಲ್ಲಿ ಸಂಘವು ಕೈಕೊಂಡ ಬಾಲ್ಯ ವಿವಾಹ ನಿಷೇಧ, ವರದಕ್ಷಿಣಾ ಕ್ರಮದ ಖಂಡನ, ಬಂಗಾಲದ ಜನರಿಗೆ ಸುಮಾರು ನಾಲ್ಕುವರೆ ಸಾವಿರ ರೂಪಾಯಿಗ ಮೇಲ್ಪಟ್ಟ ಧನ ಸಹಾಯ, ಕಾಟಕ ವಾಚನಾಲಯ ಮತ್ತು ಪುಸ್ತಕ ಭಂಡಾರದ ಏರ್ಪಾಡು-ಇತ್ಯಾದಿ ಕೆಲಸಗಳ ಶ್ಲಾಘನೀಯವಾಗಿವೆ. ಮೊಗವೀರ ವಿದ್ಯೋಗಿಕ ರಾತ್ರಿ ಮತ್ತು ಸ್ತ್ರೀಯ ಶಾಲೆ ಇವುಗಳು ಮಾಡುತ್ತಿರುವ ಕೆಲಸವೂ ಸ್ತುತ್ಯಾರ್ಹವಾದುದು. ಸಂಘದ ಅಭ್ಯುದಯವನ್ನು ಬಯಸುತ್ತೇವೆ.

೨. ಬಿಲ್ಲವರ ಎಸೋಸಿಯೇಶನ್, ಮುಂಬಯಿ- ಇದರ ೧೨ನೇ ವಾರ್ಷಿಕ ವರದಿಯೂ ನಮ್ಮ ಕರಗತವಾಗಿದೆ. ವರದಿಯ ವರ್ಷದಲ್ಲಿ ೧೨ ವಿದ್ಯಾರ್ಥಿಗಳಿಗೆ ರೂ ೩೦೦೦ ವೇತನ ರೂಪದ ಸಹಾಯ ದೊರತಿದೆ, ನಿರ್ಗತಿಕ ಜಾತಿ ಬಾಂಧವರಿಗೆ ಸುಮಾರು ೭೦ ರೂ.ಗಳ ಧನ ಸಹಾಯವು ಕೊಡಲ್ಪಟ್ಟಿದೆ. ಸಂಘದ ಸದಸ್ಯತನವು ಸ್ವಲ್ಪ ಇರಿದೆ ಬಿಲ್ಲವ ಸಮಾಜದ ಮೇಲ್ಮಗಾಗಿ ದುಡಿಯ ತ್ರಿರ ವ ಈ ಸಂಘಕ್ಕೆ ಸಮಾಜದ ಹಿತೇಚ್ಛುಗಳು ಸದಸ್ಯರಾಗಿ ಸೇರಿ, ಸಂಘವ ವ ತ್ರಸ್ಸ ಯಶಸ್ವಿಯಾಗಿ ಮುನ್ನಡೆಯಲೆಂದು ಹಾರೈಸುತ್ತೇವೆ

೩ ಗಾಂಧಿ-ಜಿನ್ನಾ ಭೇಟಿ- ಬರೆದವರು: ಶ್ರೀ ಪಿ. ಸಿ. ಜೋಶಿ. ಅನುವಾದಕರು. ಶ್ರೀ. ಕೆ. ಪಿ. ರಾಯರು ಪುಟಗಳು ೩೮. ಬೆಲೆ ಎರಡಾಣೆ ಆಣೆ

ಪ್ರಗತಿ ಸಾಹಿತ್ಯ ಕೂಟವವರ ಪ್ರಕಟಣೆಯಿದು. ಜಗತ್ತಿನ ದೃಷ್ಟಿಯೆಲ್ಲ ಗಾಂಧಿ-ಜಿನ್ನಾ ಭೇಟಿಯ ಮೇಲೆ ಕೇಂದ್ರೀಕೃತವಾದ ಸಂದರ್ಭದಲ್ಲಿ ಆ ಭೇಟಿಯ ಮಹತ್ವ, ಮುಸ್ಲಿಮರ ಪಾಕಿಸ್ತಾನ ಕೇಳಿಕೆಯು ಹೇಗೆ ನ್ಯಾಯಬದ್ಧವಾದುದು, ಮತ್ತು ಭೇಟಿಯ ಫಲಸ್ವರೂಪ ಭಾರತದ ಕಲ್ಯಾಣ ಹೇಗಾಗುವುದು-ಎಂಬಿವೇ ಮುಂತಾದ ಗಹನ ವಿಚಾರಗಳು ಕಮ್ಯೂನಿಸ್ಟ ದೃಷ್ಟಿಕೋನದಿಂದ ಚರ್ಚಿಸಲ್ಪಟ್ಟಿವೆ. ಅನುವಾದ ಸರಳವಾಗಿದ್ದು ಸುವಾಚ್ಯವಾಗಿದೆ.

—ಪಿ. ಎಸ್.

ಯುದ್ಧದ ಸ್ಥಿತಿಗತಿ

●

ಯುದ್ಧವು ಎಣಿಸಿದಷ್ಟು ರಭಸದಿಂದ ವಿಜಯದ ಕಡೆಗೆ ಧಾವಿಸುತ್ತಿಲ್ಲ. ಪರಿಸ್ಥಿತಿಯು ಸುಲಭವಾಯಿತೆಂದು ಯಾರೂ ಉದಾಸೀನರಾಗಕೂಡದೆಂದೂ ಮತ್ತಷ್ಟು ಬಿಗುವಾಗಿ ಸೊಂಟಕಟ್ಟಿ ನೆತ್ತರು ಸುರಿದು ಕಾದಲಿಕ್ಕೆ ಒಕ್ಕಟ್ಟಿನಿಂದ ಸಿದ್ಧರಾಗಬೇಕೆಂದೂ ಎಲ್ಲ ಕಡೆಯ ಮುಖಂಡರೂ ಸಾರುತ್ತಿದ್ದಾರೆ. ಇಂಗ್ಲೆಂಡದಲ್ಲಿ ಚರ್ಚಿಲ್ಲರೂ ಅಮೇರಿಕದಲ್ಲಿ ರೂಸವೆಲ್ಟರೂ ಚೀನಾದಲ್ಲಿ ಚಿಯಾಂಗರೂ ಈ ಮಾತನ್ನೇ ಒತ್ತಿಯೊತ್ತಿ ಕಳೆದವಾರ ಉದ್ಘೋಷಿಸಿರುವರು.

ಪಶ್ಚಿಮ ರಣರಂಗ

ಕಳದ ವಾರ ಯುರೋಪದಲ್ಲಿ ಹಿಗ್ಗುವಂತಹ ವಿಜಯಗಳಾಗಲಿಲ್ಲ ಪರಿಸ್ಥಿತಿಯೂ ಬದಲಾವಣೆಯಾಗಿಲ್ಲ ಫ್ರಾನ್ಸಿನ ಕರಾವಳಿಯೆಲ್ಲ ಮಿತ್ರರ ವಶವಾಗಿದೆ. ಬೆಲ್ಜಿಯಂ ಹೊಲ್ಲಾಂಡುಗಳ ತೀರಗಳೂ ಇಷ್ಟರಲ್ಲಿ ಸ್ವಾಧೀನವಾದಂತೆಯೇ. ಅದು ! ಕಾರಣ ಮಿತ್ರಪಕ್ಷದ ಸೇನೆ ಮತ್ತು ಸಮರೋಪಕರಣಗಳನ್ನು ನಿರಾತಂಕವಾಗಿ ಜರ್ಮನಿಯ ಗಡಿನಾಡಿನ ಕಡೆಗೆ ಸಾಗಿಸುವ ಸೌಕರ್ಯ ವುಂಟಾಗಿದೆ. ಈಗಾಗಲೇ ಮಿತ್ರಪಕ್ಷದ ಮೂರು ಮಿಲಿಯಕ್ಕೆ ಮೀರಿದ ಸೈನ್ಯಗಳು ಅಲ್ಲಿವೆ ಇವೂ ವಿಮಾನಸೇನೆಗಳೂ ಆಗಾಗ ತಮ್ಮ ಅಸಾಧಾರಣ ಧೈರ್ಯ ಶೌರ್ಯ ಸಾಹಸಗಳನ್ನು ಪ್ರದರ್ಶಿಸಿ ಯಶಸ್ವಿಗಳಾಗಿವೆ. ಆದರ ಜರ್ಮನರು ಬೆದರಿ ಬೆಚ್ಚಿ ಹಿಂದೋಡದೆ ಪ್ರತಿಭಟಿಸುತ್ತಿದ್ದಾರೆ. ಈವರೆಗೆ ಎಲ್ಲಿಯೂ ದೊಡ್ಡ ಸೋಲು ದೊರೆತಿಲ್ಲ.

ಹೊಲ್ಲಾಂಡ್-ಜರ್ಮನಿ ಗಡಿಪ್ರದೇಶದ ಯುದ್ಧ ಪ್ರಗತಿಯು ತುಸು ಮಂದವಾಗಿದೆ. ಇಲ್ಲಿಯ ಆರ್ನೆಮ್ ಮತ್ತು ನ್ಯಜ್ಮೇಗನ್ ಕ್ಷೇತ್ರಗಳಲ್ಲಿ ಮಿತ್ರ ಪಕ್ಷದವರು ಪೆರಚ್ಯೂಟ್‌ಗಳ ಮೂಲಕ ಇಳಿದಿದ್ದಾರ ಅವರ ನೆಲೆಯನ್ನು ಭದ್ರಗೊಳಿಸಲು ಹೊಸಸೇನೆಗಳು ಕಳುಹಲ್ಪಡುತ್ತಿವೆ. ಫ್ರಾನ್ಸ್ ಬೆಲ್ಜಿಯಂ ಜರ್ಮನಿಗಳು ಸಂಧಿಸುವಲ್ಲಿ ಅಮೇರಿಕನ್ ಸೇನೆಯು ಸೀಜ್‌ಫ್ರಿಡ್‌ಗಡಿ ಕೋಟೆಯನ್ನು ಒಡೆದು ಮುಂದೊತ್ತಿವೆ. ಇಲ್ಲಿರುವ ಆಖೆನ್ ಎಂಬ ಜರ್ಮನ್ ನಗರವು ಅಮೇರಿಕನರ ಮುತ್ತಿಗೆಯಿಂದ ಶರಣಾಗತವಾಗಲಿಕ್ಕೆ ಸಿದ್ಧವಾಗಿದೆ, ಲಿಥುವೇನಿಯದಲ್ಲಿ ರಸ್ಯನರ ಪ್ರಬಲ ಅಭಿಯೋಗವಾಗಿದೆ ಪೋಲ್ಲಾಂಡದಲ್ಲಿಯೂ ತುಸು ಪ್ರಗತಿಇದೆ ಈ ಮಧ್ಯೆ ಸಾವಿರ ಸಂಖ್ಯೆಯಲ್ಲಿ ಮಿತ್ರರ ವಿಮಾನಗಳು ಗಡಿಯ ಮೇಲಿಂದ ಹಾರಿ ಜರ್ಮನಿಯ ಒಳ ಪ್ರದೇಶದಲ್ಲಿ ಸಮರಸನ್ನಾಹದ ಮುಖ್ಯ ಕೇಂದ್ರಗಳಲ್ಲಿ ಬಾಂಬು ಸುರಿದು ತುಂಬ ಹಾವಳಿಯನ್ನೆಸಗುತ್ತಿವೆ. ಆಗಾಗ ಜರ್ಮನರ ಹಾರುವ ಬಾಂಬುಗಳೂ ಇಂಗ್ಲಂಡಿನ ಆಗ್ನೇಯ ಭಾಗದಲ್ಲಿ ಬೀಳುತ್ತಿವೆ.

ಪೂರ್ವರಣರಂಗದಲ್ಲಿ

ಹಂಗೇರಿಯವು ಕೆಂಪು ಸೇನೆಯ ಘಾತದಿಂದ ತತ್ತರಿಸುತ್ತಿದೆ. ಅದು ಮುನ್ನುಗ್ಗಿ ಡಾನ್ಯೂಬ್ ನದಿಯ ದಂಡೆಯಲ್ಲಿ ಕೇಂದ್ರೀಕರಿಸಲ್ಪಡುತ್ತಿದೆ ಹಂಗೇರಿಯದ ಪ್ರಧಾನ ನಗರವಾದ ಬುಡಾಪೆಸ್ಟ್ ಗಂಡಾಂತರದಲ್ಲಿದೆ ಹಾಗೆಯೇ ಯುಗೋಸ್ಲೊ

ದಕ್ಷಿಣಭೂಮಧ್ಯಸಾಗರಪ್ರಾಂತದಲ್ಲಿ

ಇಟೆಲಿಯಲ್ಲಿ ಮುನ್ನಡೆ ಹೇಳುವಷ್ಟೇನಿಲ್ಲವಿದ್ದರೂ ಮಿತ್ರಪಡೆಗಳು ಅಲ್ಬೇನಿಯಾ ಮತ್ತು ಗ್ರೀಸಿನಲ್ಲಿ ಬಂದಿಳಿದು ಜರ್ಮನರಿಗೆ ಪ್ರಬಲ ಆಘಾತವನ್ನಿತ್ತಿವೆ. ದಕ್ಷಿಣ ಗ್ರೀಸನ್ನು ಜರ್ಮನರು ಬಿಟ್ಟಂತೆಯೇ. ಅಥೆನ್ಸ್ ನಗರದ ಸಮೀಪವಿರುವ ಕೊರಿಂಥ ಸೇವು ಬ್ರಿಟಿಷರ ವಶವಾಗಿದೆ.

ಶಾಂತಸಾಗರದಲ್ಲಿ

ಅಮೇರಿಕನ್ ನೌಕಾಪಡೆಗಳೂ ವಿಮಾನಗಳೂ ಫಾರ್ಮೋಸಾದಿಂದ ಜಪಾನು ವರೆಗಿನ ನೂರಾರು ದ್ವೀಪಗಳ ಮೇಲೆ ಧಾಳಿ ಮಾಡಿ ಹಾವಳಿ ಎಬ್ಬಿಸಿವೆ ಮುಖ್ಯವಾಗಿ ಜಪಾನಿನಿಂದ ಆರುನೂರು ಮೈಲು ದೂರದಲ್ಲಿರುವ ರ್‍ಯೂಕ್ ದ್ವೀಪಾವಳಿಗಳ ಮೇಲೂ ಫಾರ್ಮೋಸಾದ್ವೀಪದ ಮೇಲೂ ವಿಶೇಷ ಹಾನಿಯಾಗಿದೆ ೧೦೩ ಜಪಾನ್ ನೌಕೆಗಳೂ ೩೯ ಜಪಾನ್ ವಿಮಾನಗಳೂ ನಾಶವಾಗಿವೆ.

ಇಂಡಿಯಾದ ಗಡಿಯಲ್ಲಿ

ಅಸ್ಸಾಮು ಮಣಿಪುರಗಳಿಂದ ಹಿಂದೋಡಿದ ಜಪಾನರ ಮುಂಗಾವಲ ಪಡೆ ತಿರುಗಿ ಬರ್ಮದ ಗಡಿದಾಟಿ ಎರಡು ಮೈಲು ಒಳನುಗ್ಗಿತ್ತು. ಆದರೆ ಅಲ್ಲಿ ಗಡಿಗಾವಲಿನ ಅಧಿಕ ಸೇನೆಗಳು ಅದನ್ನು ಹಿಮ್ಮೆಟ್ಟಿಸಿ ಓಡಿಸಿರುವವು. ಮಣಿಪುರದಿಂದ ಶತ್ರುವನ್ನು ಬೆನ್ನಟ್ಟಿ ಓಡಿಸುತ್ತಿದ್ದ ಮಿತ್ರಪಕ್ಷದ ಪಡೆಯು ಟಿಡ್ಡಿಮನ್ನು ಪ್ರವೇಶಿಸಿಯದೆ

ರೊಮೆಲ್ಲರ ಮರಣ

ಮೋಟಾರು ಕಾರಿನ ಅವಘಡ

ರೊಮೆಲ್ಲನು ಮಹಾ ಸೇನಾನಾಯಕ ಎಂದು ವೈರಿಪಕ್ಷದ ಮಹಾಪ್ರಧಾನ ಚರ್ಚಿಲ್ಲರಿಂದಲೂ, ಕಾಮನ್ಸರ ಸಭೆಯಲ್ಲಿ ಹೊಗಳಿಸಿಕೊಳ್ಳುವಷ್ಟು ಶಕ್ತಿಸಾಹಸಗಳನ್ನು ತೋರಿದ ವ್ಯಕ್ತಿ ಈತ.

ಜರ್ಮನ್ ಸೇನೆಯ ಫೀಲ್ಡ್ ಮಾರ್ಶಲ್ ಎಫ್. ಎಮ್. ರೊಮೆಲ್ಲರು ಮೋಟಾರು ಕಾರು ಅವಘಡದಿಂದ ತಲೆಗಾದ ಆಘಾತದ ಪರಿಣಾಮವಾಗಿ ತೀರಿಹೋದರೆಂದು ವೃತ್ತಾಂತವು ೧೮೯೧ರಲ್ಲಿ ದಕ್ಷಿಣ ಜರ್ಮನಿಯ ಉಪಾಧ್ಯಾಯನೊಬ್ಬನ ಮಗನಾಗಿ ಹುಟ್ಟಿದ. ೧೯೧೪ರಲ್ಲಿ ತೊಡಗಿದ ಮಹಾ ಯುದ್ಧದಲ್ಲಿ ಸೇನಾನಿಯಾಗಿ ಸೇರಿದ. ೧೯೧೭ರಲ್ಲಿ ಇಟೆಲಿಯನರನ್ನು ಪ್ರತಿಭಟಿಸುವುದರಲ್ಲಿ ಪ್ರಸಿದ್ಧಿ ಹೊಂದಿದರೂ ಯುದ್ಧನಂತರದ ಜರ್ಮನಿಯ ಪುನರ್ರಚನೆಯಲ್ಲಿ ಇವನಿಗೆ ಸ್ಥಾನ ದೊರೆಯಲಿಲ್ಲ. ಆದರೆ ಇವನ ಯುದ್ಧಕುಶಲತೆಗೆ ಯೋಗ್ಯವಾಗಿ ನಾಜಿ ಪಂಗಡದಲ್ಲಿ ಅವಕಾಶ ದೊರೆ

ನಿಯಾದೊಳಗೆ ನುಗ್ಗಿದ ರಶ್ಯನ್ ಪಡೆಯು ಅದರ ರಾಜಧಾನಿಯಾದ ಬೆಲ್ಗ್ರೇಡನ್ನು ಪತನೋನ್ಮುಖವಾಡಿವೆ. ಯುಗೋಸ್ಲಾವಿಯವು ಶತ್ರುವಿನ ಕೈತಪ್ಪಿದಂತೆಯೇ. ಪೂರ್ವ ಪ್ರಶ್ಯಯದಲ್ಲಿ ರಶ್ಯನರ ಏಳು ದಂಡುಗಳು ಒಂದುಸಾವಿರ ಟ್ಯಾಂಕುಗಳೊಡನೆ ಗಡಿನಾಡಿನೊಳಗೆ ನುಗ್ಗಿವೆ ಎಂದು ಜರ್ಮನರ ವಾರ್ತಾ ಸಂಸ್ಥೆಯೇ ಹೇಳಿದೆ. ಅಲ್ಲಿಯ ಮೆಮಲ್ ಮತ್ತು ಲಿಬಾ ಗಳನ್ನು ರಶ್ಯನರು ಆಕ್ರಮಿಸಿಕೊಂಡ ಯುದ್ಧವು ಪರಾಕಾಷ್ಠೆಗೆ ಬಂದಿದೆ. ಒಟ್ಟಿನಲ್ಲಿ ಈ ಭಾಗದ ಯುದ್ಧದ ಪ್ರಗತಿಯು ರಶ್ಯನ ಉತ್ಕರ್ಷಕಾರಿಯಾಗಿ ಸಾಗಿದೆ.

ರೊಮೆಲ್ಲರ ಮರಣ

ಇಂಡಿಯಾದಿಂದ ಸಾಯಾಮಿಗೆ ವಿಮಾನ ದಾಳಿ

ಕಿತು. ಹಿಟ್ಲರನೊಡನೆ ಸೇರಿ ಸ್ಟೋರ್ಮ್ ಟ್ರೂಪ್ ಗುರಿಕಾರನಾಗಿ ಕ್ಯೂಬರ್ಗದ ಕಮ್ಯೂನಿಸ್ಟ್ ಮತ್ತು ಸೋಶ್ಯಲಿಸ್ಟರನ್ನು ಕೊಲೆಮಾಡುವ ಕೂಟದಲ್ಲಿ ಸಹಭಾಗಿಯಾಗಿ ಹಿಟ್ಲರನ ಮೆಚ್ಚಿನ ಮೈಗಾವಲ ಬಂಟನಾದ. ಜರ್ಮನರ ಪೋಲೆಂಡ್ ಪ್ರವೇಶದಲ್ಲಿ ಕರ್ನಲನಾಗಿ, ಪ್ರಾನ್ಸಿನ ಅಭಿಯೋಗದಲ್ಲಿ ಜನರಲ್ ನಾಗಿ ಈಜಿಪ್ಟದ ಪ್ರವೇಶ ಸಂಗ್ರಾಮದಲ್ಲಿ ಫೀಲ್ಡ್ ಮಾರ್ಶಲ್ ಸ್ಥಾನಕ್ಕೇರಿದ್ದ. ಹಿಟ್ಲರನಿಗೆ ಇತ್ತೀಚೆಗೆ ಹಲವು ಕಡೆಗಳಿಂದ ಬರುತ್ತಿರುವ ಶಕ್ತಿನಾಶಕ ವಾರ್ತೆಗಳಲ್ಲಿ ಇದೊಂದು ಮಹತ್ವದ್ದಾಗಿರಬೇಕು.

ಅಖಾಲಿ ಪರಿಷತ್ತು

ಪಾಕಿಸ್ಥಾನ ವಿರೋಧ ಅವಿಶ್ರಾಂತ ಪ್ರಯತ್ನ ನಿರ್ಧಾರ

ತಾ. 15ರಂದು ಲಾಹೋರದಲ್ಲಿ ಕೂಡಿದ ಅಖಾಲಿ ಪರಿಷತ್ತಿನಲ್ಲಿ ಸಿಖ್ಖರು ರಾಜಾಜಿ ಸಂಧಾನ ಸೂತ್ರವನ್ನು ಖಂಡಿಸಿದರು. ಗಾಂಧೀಜಿಗಳು ಬಗಿದುದು ಹೆಚ್ಚಾಯಿತೆಂದರು. ಕಾಂಗ್ರೆಸ್ಸು ಇನ್ನು ಮುಂದ ಗಾಂಧೀಜಿಯವರ ಮಾತು ಕೇಳಬಾರದೆಂದು ಅಭಿಪ್ರಾಯಪಟ್ಟರು ಗಾಂಧೀಜಿಗಳು ಮೊದಲಾಗಿ ತಮ್ಮ ಅಭಿಪ್ರಾಯವನ್ನು ಕೇಳದೆ ಕಾಂಗ್ರೆಸ್ಸು ಸಿಖ್ಖರಿಗೆ ೧೯೩೯ರಲ್ಲಿತ್ತ ಅಭಯವಚನವನ್ನು ಮೀರಿ ಜಿನ್ನಾರೊಡನೆ ಸಂಧಾನಕ್ಕೆ ಹೋದುದಕ್ಕಾಗಿ ತಮ್ಮ ಕಳವಳವನ್ನು ಹಾಗೂ ವಿಷಾದವನ್ನು ವ್ಯಕ್ತಪಡಿಸಿದರು. ಸಿಖ್ಖರಿಗೆ ಹಾನಿ

ನೋಟೀಸು

ದಕ್ಷಿಣ ಕನ್ನಡ ಜಿಲ್ಲಾ, ಪುತ್ತೂರು ತಾಲೂಕು, ಸುಬ್ರಹ್ಮಣ್ಯ ಗ್ರಾಮದ ಕ ಲುಕ ದಲ್ಲಿ ವರ್ಷಂಪ್ರತಿ ಆಗುವ ಜಾನುವಾರು ಸಂತೆಯು 1944ನೇ ಇಸವಿಯಲ್ಲಿ ಒಕ್ಟೋಬರ 31 ರಿಂದ ನವಂಬ್ರ 14ನೇ ತಾರೀಕು ವರೆಗೆ ಜರಗುವುದು. ಅಂದ್ರ ಸಂತೆಯು ... ಪ್ರಾರಂಭವಾಗಿ ... ಷಷ್ಠಿ ದಿವಸ-ಪೂರ್ಣ ... ದಿವಸ ... ಸಂತೆಗೆ ತರಲ್ಪಡುವ ... ಜಾನುವಾರಿನ ಮೇಲೆ 2ರ ... ಫೀಸು ವಸೂಲು ಮಾಡಲಾದೀತು. ಅಗತ್ಯ ಸಂದರ್ಭ ಒದಗಿದಲ್ಲಿ ಹೆಚ್ಚಿಗೆ ಫೀಸು ವಸೂಲು ಮಾಡಲಾದೀತು.

2 ಮೈಸೂರು ಪ್ರಾಂತ್ಯದಿಂದ ಜಾನುವಾರುಗಳನ್ನು ರಫ್ತು ಮಾಡಬೇಕಾದ್ರೆ ಸದ್ರಿ ಸರಕಾರದ, ಈಗ ಸದ್ರಿ ಪ್ರಾಂತದಲ್ಲಿ ಜಾರಿಗಿರುವ ನಿರ್ಬಂಧನೆಗನುಸಾರವಾಗಿ ಜಾನುವಾರು ವ್ಯಾಪಾರಿಗಳು ಮೈಸೂರು ಪ್ರಾಂತದಲ್ಲಿ ಸಂಬಂಧಪಟ್ಟ ಜಿಲ್ಲಾ ಮ್ಯಾಜಿಸ್ಟ್ರೇಟರವರ ಹುಕುಮನ್ನು ಪಡೆಯದೆ ವಿನಹಾ ರಫ್ತು ಮಾಡಕೂಡದಾಗಿರುತ್ತದೆ. ಆದುದರಿಂದ ಕಾಲ್ಪಿ ಪರ್ಷದಲ್ಲಿ ನಡೆಯುವ ಕುಕ್ಕೆಯ ಜಾನುವಾರು ಸಂತೆಗೆ ಸದರೀ ಮೈಸೂರು ಪ್ರಾಂತದಿಂದ ಜಾನುವಾರುಗಳನ್ನು ತಂದು ವ್ಯಾಪಾರ ಮಾಡಬೇಕೆಂದು ಅಪೇಕ್ಷಿಸುವ ವ್ಯಾಪಾರಿಗಳು ಕ್ಲುಪ್ತ ಸಮಯದಲ್ಲಿ ಬೇಕಾದ ಹುಕುಮಿಗೆ ಸದ್ರೀ ಮೈಸೂರು ಪ್ರಾಂತದ ಸಂಬಂಧಪಟ್ಟ ಜಿಲ್ಲಾ ಮೆಜಿಸ್ಟ್ರೇಟರಿಗೆ ಬರಕೊಳ್ಳತಕ್ಕದ್ದು ಎಂತ ಈ ಮೂಲಕ ತಿಳಿಸಲಾಗುತ್ತದೆ.

ಬಿ ಅಪ್ಪಾಸ್ವಾಮಿ ಚೆಟ್ಟಿ, ಬಿ ಎ
ಪುತ್ತೂರು ರೆವಿನ್ಯು ಡಿವಿಜನಲ್ ಆಫೀಸರ್.
ಪುತ್ತೂರು 9-10-44

ಮಾಡಿಯಾದರೂ ಮುಸ್ಲಿಮರನ್ನು ಸಮಾಧಾನಗೊಳಿಸುವ ಧೋರಣೆಯು ಗಾಂಧೀಜಿಗಳದ್ದೆಂದರು. ಪಂಜಾಬು ನಮ್ಮದು, ಅದು ಹಿಂಡವಾಗಿ ಮುಸ್ಲಿಮರಿಗೆ ಹೋಗಲು ನಾವೆಂದಿಗೂ ಬಿಡೆವೆಂದರು-ಇತ್ಯಾದಿ ಮಾಸ್ಟರ್ ತಾರಾಸಿಂಹರ ಗರ್ಜನೆಯು ಮಾತು ಸಿಖ್ಖರಲ್ಲಿ ಮಾರ್ದನಿಗೊಳ್ಳುತ್ತಿತ್ತು.

ಜರ್ಮನರಿಗೆ ಗೋರಿಂಗರ ಉದ್ಘೋಷಣೆ.

ನಮ್ಮ ಉಳಿವಿಕೆಗಾಗಿ ಹೋರಾಡಬೇಕಾಗಿದೆ

ಜರ್ಮನ್ ಆಕಾಶ ವಾಣಿಯ ಮೂಲಕ ಗೋರಿಂಗರು ಜರ್ಮನರಿಗೆ ಹೀಗೆ ಕೂಗಿ ಹೇಳಿದ್ದಾರೆ-'ನಾವೀಗ ಕಾದುವುದು ಬರೇ ನಮ್ಮ ಉಳಿವಿಕೆಗಾಗಿ. ಇಂತಹ ಸಂಕಷ್ಟದ ಪರೀಕ್ಷಾಕಾಲ ಯಾವ ದೇಶಕ್ಕೂ ಎಂದೂ ಬಂದಿಲ್ಲ. ನಾವಿಂದು ಅತಿ ಕಠಿಣ ಪರಿಸ್ಥಿತಿಯಲ್ಲಿದ್ದೇವೆ. ಇದರಿಂದ ನಾವು ಸೋತರೆ ಜರ್ಮನಿಯು ನಿರ್ನಾಮವಾಗದೆಂದು ತೋರಿಸಿದಂತಾಗುತ್ತದೆ ನಮ್ಮ ವೈರಿಗಳಲ್ಲೊಬ್ಬರು ಜರ್ಮನಿಯನ್ನು ಗೆದ್ದಲ್ಲಿ ಆಗ ನಮಗೆ ಕಾದಿರುವ ದುರಂತ ಪ್ರಕರಣದೊಡನೆ ನಾವೀಗ ಅನುಭವಿಸುತ್ತಿರುವ ಖೇದದಾಯಕ ನಷ್ಟ ಸಂಕಷ್ಟಗಳನ್ನು ಅನುದಿನ ಜೀವನದ ದುಃಖ ಪರಂಪರೆಗಳನ್ನು ಹೋಲಿಸಿದರೆ ಇವು ಅತ್ಯಲ್ಪ ಬಗೋಚರ ವಿಷಯಗಳನ್ನ ಬೇಕಾಗಿದ. ಆದುದರಿಂದ ಅಂತಹ ದುಸ್ಥಿತಿಯಿಂದ ತಪ್ಪಿಸಿಕೊಳ್ಳಲಿಕ್ಕಾಗಿ ನಾವಿಂದು ಎಂತಹ ಕಷ್ಟಪರಂಪರೆಗಳನ್ನೂ ನುಂಗಿಕೊಳ್ಳಬೇಕಾಗಿದೆ ಬಂದುದೆಲ್ಲವನ್ನು ಸಹಿಸಿಕೊಳ್ಳಬೇಕು.ಆದರೆ ಎಂದಿಗೂ ಶರಣಾಗತರಾಗಬಾರದು'.

ಇಂಡಿಯಾದಿಂದ ಸಾಯಾಮಿಗೆ ವಿಮಾನ ಧಾಳಿ.

ಬರ್ಮಾದಲ್ಲಿರುವ ಜಪಾನಿನ ಸೇನೆಗಳಿಗೆ ಸರಬರಾಯಿ ಬಾರದಂತೆ ಮಾರ್ಗ

ನೋಟೀಸು.

ಗುಂಡ್ಮಿ ಗ್ರಾಮದಲ್ಲಿರುವ ನಾರಾಯಣ ಕಾರಂತರ ಮಗ 2ನೇ ಎದ್ರಿ ವಾಸುದೇವ ಕಾರಂತರಿಗೆ ಕೊಡುವ—ನೋಟೀಸು.

1938 ಇಸವಿ O S. No 127.
ಕುಂದಾಪುರ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ,

1944ನೇ ಇಸವಿ ಅರ್ಜಿ ನಂಬರು R I A 473
ವೈಕುಂಠ ಕಾರಂತ ಕೂಡಾ ವಾದಿರು.
ವೆಂಕಟಗಿರಿ ಕಾರಂತ ಕೂಡಾ ಪ್ರತಿವಾದಿರು.

ಮೇಲಿನ ನಂಬರಿನಲ್ಲಿ ಹಿಸೆ ಬಗ್ಗೆ ಫೈನಲ್ ಡಿಕ್ರಿಯನ್ನು ಕೊಡಿಸಬೇಕೆಂತ ಸದರಿ ಅರ್ಜಿದಾರರು ಅರ್ಜಿ ಕೊಟ್ಟಿರುವದರಿಂದ ಅದನ್ನು ಕುರಿತು ನಿಮಗೇನಾದರೂ ಆಕ್ಷೇಪಣೆಯಿದ್ದಪಕ್ಷದಲ್ಲಿ ಅದನ್ನು ಈ 1944 ಇಸವಿ ಅಕ್ಟೋಬ್ರ ತಿಂಗಳು 30ನೇ ತಾರೀಖು ಹಗಲು 10 ಘಂಟೆಗೆ ಈ ಕೋರ್ಟಿನಲ್ಲಿ ನೀವು ಖುದ್ದು ಸ್ವಂತವಾಗಲಿ ವಕೀಲರುದ್ವಾರಾವಾಗಲಿ ಹಾಜರಾಗಿ ತಿಳಿಸಿಕೊಳ್ಳಬೇಕು ಹಾಗೆ ಹಾಜರಾಗದಿದ್ದರೆ ಸದರಿ ವಿಷಯದಲ್ಲಿ ಏಕ ಪಕ್ಷವಾಗಿ ತೀರ್ಮಾನಿಸಲ್ಪಡುವದು.

Sd/. K Venkappa Shetty.
Pleader for Pleff.
Kundapur 16-10-1944.

ಭಂಗ ಮಾಡುವುದಕ್ಕಾಗಿ ಇಂಡಿಯಾದಿಂದ ವಿಮಾನಪಡೆಗಳು ಹಾರಿಹೋಗಿ ಬರ್ಮಾವನ್ನು ದಾಟಿ ಸಾಯಾಮಿನ ರೈಲ್ವೇ ನಿಲ್ದಾಣಗಳ ಮತ್ತು ಸೇತುವೆಗಳ ಮೇಲೆ ಬಾಂಬುಗಳನ್ನು ಸುರಿಸಿ ಹಾವಳಿ ಮಾಡುವ ಕಾರ್ಯದಲ್ಲಿ ಯಶಸ್ವಿಗಳಾಗಿ ಹಿಂತಿರುಗಿವೆ.

ಜಪಾನರ ಪಾಮೋ ದ್ವೀಪಗಳ ಮೇಲೆ ಅಮೇರಿಕನರ ವಿಮಾನ ಧಾಳಿ.

ಫಾರ್ಮೋಜಾ ದ್ವೀಪಗಳ ಮೇಲೆ ಕೇಗೋ ಹಾಗೆಯೇ ಜಪಾನರ ವಶವಿರುವ ಪಾಮೋ ದ್ವೀಪಗಳ ಮೇಲೆಯೂ ಅಮೇರಿಕಾನರ ಸಾವಿರಗಟ್ಟಳೆಯ ವಿಮಾನಗಳು ಹಾರಿ ಹೋಗಿ ವಿಶೇಷ ಹಾವಳಿಯನ್ನು ಮಾಡಿವೆ.

ಪೋರ್ಚುಗಲ್ ಜಪಾನಿನ ಮೇಲೆ ಬೀಳಲಿಕ್ಕಿದೆ.

ಜಪಾನರು ಟಿಮೋರ್ ದ್ವೀಪದಲ್ಲಿ ಪೋರ್ಚುಗೀಸರ ವಶವಿರುವ ಭಾಗವನ್ನು ಬಿಟ್ಟು ಆದರ ಮತ್ತೊಂದು ಅರ್ಧಾಂಶವಾದ ಡಚ್ಚ ಟಿಮೋರಿಗೆ ಸರಿಯುವುದಕ್ಕೆ ಪೋರ್ಚುಗಲ್ ಸರಕಾರದ ಅನುಮತಿಯನ್ನು ಕೇಳಿದ್ದಾರೆ. ಪೋರ್ಚುಗಲ್ ಸದ್ಯದಲ್ಲೇ ತಮ್ಮ ಮೇಲೆ ಯುದ್ಧ ಸಾರುವುದೆಂದು ಅವರಿಗೆ ತಿಳಿದು ಬಂದಿರುವುದೇ ಇದಕ್ಕೆ ಕಾರಣ.

ಉಡುಪಿ

ಕೆಲವು ಡಿಪೋಗಳಲ್ಲಿ ಅಕ್ಕಿಯ ಬದಲಾಗಿ ರೈತರು ಗೇಣಿ ಒಕ್ಕಲುಗಳು ಭತ್ತವನ್ನು ಮಾರಾಟ ಮಾಡುತ್ತಿದ್ದಾರೆ. ಭತ್ತವನ್ನು ಪಡೆಯುವ ರೇಷನಿಂಗ ಕಾರ್ಡುಗಳಲ್ಲಿ ಜನತೆಗೆ ತೃಪ್ತಿಯಿಲ್ಲವಾದುದರಿಂದ ಒಂದು ಮುಡಿ ಅಕ್ಕಿಗೆ ಎಷ್ಟು ಮುಡಿ ಭತ್ತ ಸಾಕಾಗುವುದೆಂದು ಮಾಡಬೇಕ, ಕೊಂಡಲ, ಬತ್ತ ಅಂತವೆಷ್ಟು ತೆಗೆಯಲಾಗುವುದು ಇತ್ಯಾದಿ ಮಾಹಿತಿಯನ್ನು ... ಜಿಲ್ಲಾ ಸೋಲ್ ಸೇಲ್ ಸ್ಟೋರಿನ ಅಧಿಕಾರಿಗಳು ಜಾಹೀರು ಪ್ರಕಟಣೆ ಕೊಡಬೇಕಾಗಿ ಗೇಣಿ ಒಕ್ಕಲೊಬ್ಬರು ತಿಳಿಸುತ್ತಾರೆ.

ಜಂಗ್ಲಿ ಇಲಾಖೆ—ಗ್ರಾಮ ಉದ್ಯೋಗಸ್ಥರ ಮತ್ತು ಜಂಗ್ಲಿ ಇಲಾಖೆಯ ಕೆಳ ನೌಕರರ ಮತ್ತು ಇತರರ ಕಣ್ಣುಮುಚ್ಚಾಲೆಯಿಂದ ಕಾಡುಗಳಲ್ಲಿಯ ಮರಗಿಡಗಳು ಗುಪ್ತವಾಗಿ ಕಡಿಯಲಾಗುತ್ತಿವೆಯೆಂಬುದು ಜನರ ಅವಗಾಹನೆಗೆ ಬರುತ್ತಿರುವುದು. ತಾಲೂಕು ವಹಿವಾಟುದಾರರೂ, ಇತರ ರೆವಿನ್ಯೂ ಅಧಿಕಾರಿಗಳೂ, ಮೊಕ್ತೇಸರರೂ, ಗ್ರಾಮ ಉದ್ಯೋಗಸ್ಥರಿಗೂ ಇಂತಹ ಗುಪ್ತ ಕೆಲಸಗಳು ನಡೆಯುವುದು ಗೊತ್ತಿದ್ದರೂ ಜಾಗರೂಕರಾಗಿರುವಂತೆ ತಿಳಿಸಿರುತ್ತಾರೆ ಜಂಗ್ಲಿ ಆಫೀಸರರು ಸೂಚಿಸಿದ ಹೊರತು ಯಾವದೇ ಕಾಡಿನ ಮರಗಳನ್ನು ಕಡಿಯಕೂಡದಾಗಿ ಜಿಲ್ಲಾ ಕಲೆಕ್ಟರರು ಜಾಹೀರುಪಡಿಸುತ್ತಾರೆ.

ಅಕ್ಕಿ ಹುಡಿ ಮತ್ತು ಅವಲಕ್ಕಿ ಕೂಡ ರೇಶನ್ ಪದಾರ್ಥ— 1943ನೇ ಇಸವಿಯ ಮದ್ರಾಸು ರೇಶನಿಂಗ್ ಆರ್ಡರಿನ 2ನೇ ಕ್ಲಾಸ್ (7)ನೇ ಸಬ್ ಕ್ಲಾಸ್ ಪ್ರಕಾರ ಮದರಾಸು ಸರಕಾರದವರು ಮದರಾಸ್ ಸಂಸ್ಥಾನದಲ್ಲಿರುವ ಎಲ್ಲಾ ರೇಶನಿಂಗ್ ಇರುವ ಸ್ಥಳಗಳಲ್ಲಿ ತಾರೀಕು 8-10-1944ರಿಂದ ಅಕ್ಕಿಯ ಹುಡಿ ಮತ್ತು ದಕ್ಷಿಣ ಕನ್ನಡಾ ಜಿಲ್ಲೆಯ ರೇಶನಿಂಗ್ ಸರಹದ್ದುಗಳ ಮಟ್ಟಿಗೆ ಅವಲಕ್ಕಿ ಕೂಡಾ ರೇಶನ್ ಪದಾರ್ಥಗಳು ಎಂಬದಾಗಿ ಪ್ರಕಟಿಸಿರುತ್ತಾರೆ. ಆದ್ದರಿಂದ ಸದ್ರಿ ತಾರೀಕಿನ ನಂತರ ಈ ಎರಡು ಪದಾರ್ಥಗಳಿಗ ಎಲ್ಲಾ ರೇಶನ್ ಕಾನೂನುಗಳು ಅನ್ವಯಿಸುತ್ತವೆ. ರೇಶನಿಂಗ್ ಆಫೀಸರಿಂದ ಅಧಿಕಾರ ಹೊಂದಿದವರ ವಿನಹಾ ಬೇರೆ ಯಾರೊಬ್ಬರೂ ಅಕ್ಕಿ ಹುಡಿಯನ್ನು ಅವಲಕ್ಕಿ ವ್ಯಾಪಾರ ಮಾಡಿದರೆ ಕಾನೂನಿಗೆ ವಿರೋಧ ಎಂದು ಜಿಲ್ಲಾ ರೇಶನಿಂಗ್ ಆಫೀಸರ್ ಶ್ರೀ ಕೆ. ಕೃಷ್ಣಯ್ಯನವರು ಪ್ರಕಟಿಸುತ್ತಾರೆ.

ದೇಶ—ವಿದೇಶ

(ಕಳೆದ ಪುಟದಿಂದ ಮುಂದುವರಿದುದು)

ರೀಗಾ ರಶ್ಯನರ ವಶವಾಯಿತು

ಉತ್ತರ ಪೂರ್ವ ಬಾಲ್ಟಿಕ್ ಸಮುದ್ರ ಪ್ರಾಂತ್ಯವಾದ ಲಟ್ವಿಯಾದ ಪ್ರಧಾನ ನಗರವೂ ಬಂದರವೂ ಆದ ರೀಗಾವು ರಶ್ಯನರ ವಶವಾದುದೊಂದು ಮಹತ್ವಾದ ವಿಜಯ. ಇದರಿಂದ ಬಾಲ್ಟಿಕ್ ಸಮುದ್ರದಲ್ಲಿಯ ಚಲನವಲನಗಳ ನಿಯಂತ್ರಣವು ರಶ್ಯನರ ಕೈ ಸೇರಿದಂತಾಯಿತು. ಬಾಲ್ಟಿಕ್ ಪ್ರಾಂತಗಳಲ್ಲಿರುವ ಜರ್ಮನ ಸೇನೆಗೆ ಸಮುದ್ರ ಮೂಲಕ ಸರಾಗವಾಗಿ ತಪ್ಪಿಸಿಕೊಂಡು ಹೋಗುವ ಹಾದಿ ಕಟ್ಟಿದಂತಾಗಿದೆ ಈ ಪ್ರಾಂತಗಳನ್ನು ತಮ್ಮ ಪ್ರತಿಭಟನಾ ಸಮರ ಕ್ಷೇತ್ರವಾಗಿರಿಸಿಕೊಳ್ಳಬೇಕೆಂದಿದ್ದ ಜರ್ಮನರ ಯೋಜನೆಯು ವಿಫಲವಾದುದರಿಂದ ಇದೊಂದು ಜರ್ಮನರ ಮಹತ್ವದ ಸೋಲೆಂದೆನ್ನಬೇಕು.

ಉತ್ತರ ಫಿನ್ಲೆಂಡಿನಲ್ಲಿ

ಉತ್ತರ ಫಿನ್ಲೆಂಡಿನ ಪೆಟ್ಸಾಮೋ ಪ್ರಾಂತದ ಲೀನಾಹಮರಿ ಬಂದರದಲ್ಲಿ ರಶ್ಯನರು ಇಳಿದಿರುವರು. ರಶ್ಯನರ ೧ಲ ಪಡೆಗಳು ಮುನ್ನೂರು ಟ್ಯಾಂಕುಗಳ ಸಹಿತ ಉತ್ತರ ಫಿನ್ಲೆಂಡದ ಜರ್ಮನರ ಮೇಲೇರಿ ಹೋಗತೊಡಗಿವೆ.

ಪೂರ್ವ ಪ್ರಶ್ಯಾದಲ್ಲಿ ರಶ್ಯನರ ಆಕ್ರಮಣಾರಂಭ

ರಶ್ಯನರ ಸಾವಿರಗಟ್ಟಲೆಯ ಸೈನಿಕರೂ ನೂರುಗಟ್ಟಲೆಯ ಟ್ಯಾಂಕುಗಳೂ ಪೂರ್ವ ಪ್ರಶ್ಯಾವನ್ನು ಪ್ರವೇಶಿಸಿವೆ. ಇಲ್ಲಿ ೨೦೦ ಮೈಲು ಉದ್ದದ ಸಮರಮುಖದಲ್ಲಿ ಜರ್ಮನರು ಪ್ರಬಲವಾಗಿ ಪ್ರತಿಭಟಿಸಲಿಕ್ಕೆ ಸಿದ್ಧರಾಗಿದ್ದಾರೆ.

ಬುಡಾಪೆಸ್ಟನ್ನು ಜರ್ಮನರು ಬಿಟ್ಟುಹೋಗುತ್ತಿದ್ದಾರೆ

ಹಂಗೇರಿಯಾದ ರಾಜಧಾನಿಯಾದ ಬುಡಾಪೆಸ್ಟಿನಿಂದ ಜರ್ಮನರು ತಮ್ಮ ಜನ ಸೇನೆಗಳನ್ನು ತೆಗೆಯುತ್ತಿರುವರು. ರಶ್ಯನರ ದಳವು ಅಲ್ಲಿಗೆ ೫೦ ಮೈಲು ದೂರದಲ್ಲಿದೆ. ಹಂಗೇರಿಯವು ಶರಣಾಗತವಾಗಬಹುದು.

ಬೆಲ್ಗ್ರೇಡಿನಲ್ಲಿ ಬೀದಿಬೀದಿ ರಣಾಗ್ರ

ಯುಗೋಸ್ಲಾವಿಯಾದಲ್ಲಿ ರಶ್ಯನರು ವಿಜಯಿಗಳಾಗುತ್ತ ರಾಜಧಾನಿಯಾದ ಬೆಲ್ಗ್ರೇಡಿನೊಳಗೆ ಪ್ರವೇಶಿಸಿರುವರು. ಜರ್ಮನ್ ಮತ್ತು ರಶ್ಯನರ ಸೇನೆಗಳಿಗೆ ಬೀದಿಬೀದಿ ಕೈಕೈ ಕಾಳಗವಾಗಹತ್ತಿವೆ

ಏಥೆನ್ಸ್ ಮಿತ್ರವಶ

ಗ್ರೀಸದಲ್ಲಿ ಕೋರಿಂತ್ ವಶವಾದುದಲ್ಲದೆ ಏಥೆನ್ಸ್ ನಗರವೂ ಮಿತ್ರಪಕ್ಷದವರ ಕೈ ಸೇರಿತು.

ಪಾಮೋಜಾದ ಮೇಲೆ ಭೀಕರ ಧಾಳಿ

ಜಪಾನರ ವಶವಿರುವ ಪಾಮೋಜಾ ದ್ವೀಪದ ಮೇಲೆ ಅಮೇರಿಕನರು ಪ್ರಬಲ ವಿಮಾನಧಾಳಿ ನಡೆಯಿಸಿರುವರು ಮೂವತ್ತು ತಾಸುಗಳ ತನಕ. ಅಮೇರಿಕನ ಒಂದು ಸಾವಿರ ವಿಮಾನಗಳು ಧಾಳಿ ನಡೆಯಿಸಿ ಜಪಾನರ ೬೩೭ದೊಡ್ಡ ನೌಕೆಗಳನ್ನು ೩೭೩ ಸಣ್ಣ ಹಡಗಗಳನ್ನು ೩೩೯ ವಿಮಾನಗಳನ್ನು ನಾಶಮಾಡಿದುವು.

ಪಶ್ಚಿಮ ರಣರೇಖೆಯಲ್ಲಿ ಏಕೆನ್ನಿನ ಪತನ.

ಸೀಗ್‌ಫ್ರಿಡ್ ಪ್ರಾಕಾರದ ಪ್ರಬಲ ರಕ್ಷಾಕ್ಷೇತ್ರವಾದ ಏಕೆನ್ ನಗರವು ಮಿತ್ರ ಪಕ್ಷದವರ ದಾಳಿಯಿಂದ ಪುಡಿಪುಡಿಯಾಗಿದೆ. ಜರ್ಮನರಿಗೆ ಇಲ್ಲಿ ಹಿಂದೆ ಸರಿದೋಡಲಿರುವ ಹಾದಿಯು ಅಗಲಕಿರಿದಾಗುತ್ತ ಬಂದು ಅರ್ಧ ಮೈಲಿನಗಲಕ್ಕೆ ಬಂದಿದೆ. ಬೆಲ್ಜಿಯಂ ಡಚ್ಚ್ ಕರಾವಳಿಯಲ್ಲಿ ಆ ಪ್ರಾಂತದಲ್ಲಿರುವ ಜರ್ಮನ್ ಸೇನೆಯನ್ನು ತಪ್ಪಿಸಿಕೊಂಡೊಯ್ಯಲು ಜರ್ಮನರು ಹಡಗಗಳನ್ನೂ ದೋಣಿಗಳನ್ನೂ ಕೂಡ ಹಾಕುತ್ತಿರುವರು.

ಸೆರೆಮನೆಯಲ್ಲಿರುವ ಕಾಂಗ್ರೆಸ್ಸು ಮುಂದಾಳುಗಳಿಗೆ ಸಮೀಪ ಬಂಧುಗಳ ಸಂದರ್ಶನಕ್ಕೆ ಅನುಮತಿ

ಭದ್ರತೆಗಾಗಿ ಸೆರೆಯಲ್ಲಿರುವವರನ್ನು ಸಮೀಪಬಂಧುಗಳು ಸಂದರ್ಶಿಸಲು ಕಾನೂನಿನಲ್ಲಿ ಅವಕಾಶವಿದ್ದರೂ ಸೆರೆಯಲ್ಲಿರುವ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯ ಸದಸ್ಯರ ಮಟ್ಟಿಗೆ ಈ ನಿಯಮದಲ್ಲಿ ಬಿಗಿತವಿತ್ತು. ಈಗದನ್ನು ಶಿಥಿಲಗೊಳಿಸಿ ಅತಿ ಸಮೀಪದ ಬಂಧುಗಳು ಅವರನ್ನು ಕೇವಲ ವೈಯಕ್ತಿಕ ಮತ್ತು ಸಾಂಸಾರಿಕ ಯೋಗಕ್ಷೇಮ ವಿಚಾರವಿಷಯಗಳಿಗಾಗಿ ಪಾಕ್ಷಿಕವಾಗಿ ಸಂದರ್ಶಿಸಬಹುದೆಂದಾಗಿದೆ.

ಉಡುಪಿ.

ನಗರ ಸಭೆ—ಕಳೆದ ಗುರುವಾರ ದಿನ ಶ್ರೀ ಎ. ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿದ ನಗರ ಸಭೆಯ ಅರ್ಜಂಟ್ ಮೀಟಿಂಗಿನಲ್ಲಿ ಕೌನ್ಸಿಲಿನ ಗತ ವರುಷದ ಆಡಳಿತವು ತೃಪ್ತಿಕರವಾಗಿತ್ತೆಂದು ಸೂಚಿಸಿದ ಸರಕಾರೀ ವಿಮರ್ಶೆಯನ್ನು ರಿಕಾರ್ಡ ಮಾಡಲಾಯಿತು. ಟೌನ್ ಪ್ಲಾನಿಂಗ್ ಕಿಬಂದಿ ನೇಮಕದ ಕುರಿತು ಬಂದ ಸರಕಾರದ ಹುಕುಮಿಗೆ ಫ್ಯಾನೆನ್ಸ್ ಕಮಿಟಿಯು ತಯಾರಿಸಿದ ಉತ್ತರವನ್ನು ಪುಷ್ಟೀಕರಿಸಲಾಯಿತು. ಬೋರ್ಡು ಹ್ಯಾಸ್ಕೂಲಿನ ಪರವಾಗಿ ಧನ ಸಹಾಯವನ್ನಪೇಕ್ಷಿಸಿದ ಜಿಲ್ಲಾ ಬೋರ್ಡಿನ ವಿನಂತಿಯನ್ನು ಪರ್ಯಾಲೋಚಿಸುವರೆ ಫ್ಯಾನೆನ್ಸ್ ಕಮಿಟಿಗೆ ಬಿಡಲಾಯಿತು. ಈಗಿನ ಕಮಿಶನರರು ಚೆಲುವಾ ರೀತಿಯಲ್ಲಿ ಕೆಲಸ ನಿರ್ವಹಿಸಿ ಖ್ಯಾತಿ ಹೊಂದಿದುದಕ್ಕಾಗಿ ಅವರನ್ನು ಮನ್ನಿಸುವ ಬಗೆಯಲ್ಲಿ ಕಡಿಮೆ ಸಂಬಳದ ಕಮಿಶನರರು ಈ ಎಳೆಯ ಮ್ಯುನಿಸಿಪಾಲಟಿಗೆ ಬೇಕಾಗಿದೆಯೆಂದು ಸರಕಾರಕ್ಕೆ ತಿಳಿಸಲಾಯಿತು ಆರ್ಥಿಕ ದೃಷ್ಟಿಯಿಂದ.

ಕ್ರಿಕೆಟ್ ಪಂದ್ಯಾಟ-ಸೌಥ ಕೆನರಾ ಇಂಟರ್ ಸ್ಕೂಲ್ ಎತ್ಲೆಟಿಕ್ ಎಸೋಸಿಯೇಶನಿನ ನೇತೃತ್ವದಲ್ಲಿ ಜರಗಿದ ಸಬ್ ಜೂನಿಯರ್ ಕ್ರಿಕೆಟ್ ಪಂದ್ಯಾಟದಲ್ಲಿ ಉಡುಪಿ ಕ್ರಿಶ್ಚಿಯನ್ ಹ್ಯಾಸ್ಕೂಲಿನವರು ಉಡುಪಿ ಬೋರ್ಡ್ ಹ್ಯಾಸ್ಕೂಲ್ ಮತ್ತು ಕಲ್ಯಾಣಪುರ ಮಿಲಾಗ್ರಿಸ್ ಹ್ಯಾಸ್ಕೂಲ್ ಟೀಮಿನವರೊಡನೆ ಆಡಿ ಎರಡರಲ್ಲಿಯೂ ಜಯಶೀಲರಾದರು.

ಜೂನಿಯರ್ ಕ್ರಿಕೆಟ್ ಪಂದ್ಯಾಟದಲ್ಲಿಯೂ ಉಡುಪಿ ಕ್ರಿಶ್ಚಿಯನ್ ಹೈಸ್ಕೂಲಿನವರೆ ವಿಜಯಿಗಳಾದುದು ಸಂತೋಷಕರ.

ಸ್ಕೌಟ್ ದಿನಾಚರಣೆ-ಉಡುಪಿ ಮುನಿಸಿಪಾಲಟಿಯೊಳಗಿನ ಬಾಲವೀರ ದಳಗಳು ಹಿಂದುಸ್ತಾನ್ ಸ್ಕೌಟ್ ಎಸೋಸಿಯೇಶನಿನ ನೇತೃತ್ವದಲ್ಲಿ, ಉಡುಪಿ ಕ್ರಿಶ್ಚಿಯನ್ ಹ್ಯಾಸ್ಕೂಲ್ ವಠಾರದಲ್ಲಿ ಕಳೆದ ಗುರುವಾರ ಸ್ಕೌಟ್ ದಿನಾಚರಣೆಯನ್ನು ಮಾಡಿದ್ದವು [illegible] ಸಂದರಭದಲ್ಲಿ, ಆವರು ಅಧ್ಯಕ್ಷತೆಯನ್ನು ವಹಿಸಿದ್ದರು. ಸಂಘದ ಜಿಲ್ಲಾ ಅಸಿಸ್ಟಂಟ್ ಸ್ಕೌಟ್ ಕಮಿಶನರ ಶ್ರೀ ಎನ್. ಆರ್. ಕಾಮ್ತರರು ಧ್ವಜಾರೋಹಣವನ್ನು ಮಾಡಿದರು. ವಿ. ಪಿ. ಎಸ್. ಕಾಂಟಿಯು ಸಂದರ್ಭೋಚಿತವಾಗಿ ಮಾತಾಡಿದ ಬಳಿಕ ಅಧ್ಯಕ್ಷ ಭಾಷಣವಾಯಿತು. ಸ್ಕೌಟ್ ಬಾಲಕ-ಬಾಲಿಕೆಯರ ವಿವಿಧ ವಿನೋದಾವಳಿಗಳು ಪ್ರೇಕ್ಷಣೀಯವಾಗಿದ್ದುವು.

ಮಧ್ವ ಸರೋವರದಲ್ಲಿ ಹೆಣ:—ಬ್ರಾಹ್ಮಣ ಸಮಾಜದ ಸುಂದರಿಯೊಂಬ ಹೆಂಗಸಿನ ಶವವು ಕಳೆದ ಶನಿವಾರ ಶ್ರೀ ಕೃಷ್ಣ ಮಠದ ಮಧ್ವ ಸರೋವರದಲ್ಲಿ ತೇಲಾಡುತ್ತಿತ್ತು. ಅದಾವ ಕಾರಣದಿಂದ ಈಕೆಯು ದುರ್ಮರಣಕ್ಕೊಳಗಾದಳೋ ತಿಳಿಯಬರುವುದಿಲ್ಲ. ಪತಿಯನ್ನು ದೂರೀಕರಿಸಿದ್ದ ಈಕೆಯು ಗರ್ಭವತಿಯಾಗಿದ್ದುದು ಜನವಿದಿತವಾಗಿತ್ತು. ಭೋಜನ ಶಾಲೆಯಲ್ಲಿ ಅನ್ನ ದೊರೆಯ ಬೇಕೆಂದು ಅಂಗಲಾಚಿ ಬೇಡಿಕೊಂಡಾಗ ಅಧಿಕಾರಿಗಳು 'ನಾಸ್ತಿ' ಎಂದರೆಂದೂ ಇಹಲೋಕದ ಈ ವೈರಾಗ್ಯವೇ ಪರಲೋಕದ ಸಮೀಪದ ದಾರಿಯನ್ನು ತೋರಿಸಿರಬೇಕೆಂದೂ ಜನರಾಡುತ್ತಿದ್ದಾರೆ. ಮಂದಿ ಜನಗಳು ಸಮಾಜದಲ್ಲಿ ಸಾಧು ಇಲ್ಲವೆ ದುಷ್ಕರ ಸಹವಾಸಕ್ಕೆ ಬಲಿಬಿದ್ದು ಆಪಮೃತ್ಯುವಿಗೀಡಾಗುವ ಅನಾಥ ಸ್ತ್ರೀಯರನ್ನು ರಕ್ಷಿಸುವ ಸಲುವಾಗಿ ಅನಾಥಾಲಯ (Rescne Home)ವೊಂದನ್ನು ಸ್ಥಾಪಿಸುವುದು ಧರ್ಮಾಧಿಕಾರಿಗಳ ಧರ್ಮಪ್ರಚಾರ ಕಾರ್ಯಕ್ರಮದಲ್ಲಿ ಒಂದಂಗವಾಗಲಾರದೇ ಎಂಬ ಪ್ರಶ್ನೆಯು ಸರ್ವವಿಚಾರಣೀಯವಿದೆ.

ಫುಡ್ ಕಮಿಟಿಯವರ ಗಮನಕ್ಕೆ

ಅಸಲಕ್ಕಿಯ ಬೆಲೆ ಇತ್ತೀಚೆಗೆ ಜನ ಏರಿ ಬಂದಿದೆ. ರೂಪಾಯಿಗೆ 2 ಅಥಾ ಎಂಡೂವರೆ ಸೇರು ಎನ್ನುವದರಲ್ಲಿ ಲಾಭ ಖೋರತನದ ಪರಮಾವಧಿ ಚೆನ್ನಾಗಿ ಕಾಣುತ್ತದೆ. ಅಂತೆಯೇ ಅರಳಿಗೆ ಸೇರಿಗೆ ಒಂದಾಣೆ ಎನ್ನುವುದೂ ನ್ಯಾಯವಿಲ್ಲದ ದರ, ಕಮಿಟಿಯವರು ಇವುಗಳ ಬೆಲೆಯನ್ನು ನ್ಯಾಯದ ಮಟ್ಟಕ್ಕೆ ಇಳಿಸುವುದು ಅವಶ್ಯವಿದೆ.

ದೋಣಿ, ಜಟ್ಕಾ ಮತ್ತು ಗಾಡಿ ಬಾಡಿಗೆಗಳ ನಿಯಂತ್ರಣವಾಗಬೇಕು—ಹುರುಳಿ ಬೈಹುಲ್ಲು ಹಿಂಡಿ ಮುಂತಾದವುಗಳ ಬೆಲೆ ನಿಯಂತ್ರಣವಾಗಿ ನ್ಯಾಯದ ಮಟ್ಟಕ್ಕೆ ಬಂದಿದ್ದರೂ ಜೀವನದ ಅವಶ್ಯಕತೆಗಳ ಬೆಲೆ ಹದದಲ್ಲಿ ಇರಿಸಿದ್ದರೂ ಜಟ್ಕಾದವರು ಮತ್ತು ಗಾಡಿವಾಲರೂ ದೋಣಿಯವರೂ ಬಾಡಿಗೆಯನ್ನು ಏರಿಸುತ್ತಲೇ ಹೋಗುತ್ತಿದ್ದಾರೆ. ಉಡುಪಿ ಪಟ್ಟಣದೊಳಗೇ ಒಂದು ಕಡೆಯಿಂದ ಮತ್ತೊಂದು ಕಡೆಗೆ ಅರ್ಧ ಮೈಲಿನ ದೂರದೊಳಗೂ ಜನಗಳನ್ನೂ ಸರಕುಗಳನ್ನೂ ಒಯ್ಯುವುದಕ್ಕೆ ಎರಡು ರೂಪಾಯಿ ಕೇಳುತ್ತಾರೆ. ಜಟ್ಕಾಗಳಿಗೆ ಪಟ್ಟಣದೊಳಗಿನ ಸಂಚಾರಕ್ಕೆ ಬಾಡಿಗೆ ನಿಯಂತ್ರಣವಾಗುವುದೂ ಮಲ್ಪೆ ಕಲ್ಯಾಣಪುರ ಉದ್ಯಾವರ, ಪರ್ಕಳ ಮುಂತಾದ ಸ್ಥಳಗಳಿಗೆ ಹೋಗುವುದಕ್ಕೆ ಮೈಲಿಗೆ ಇಂತಿಷ್ಟೆಂದು ದರ ನಿರ್ಣಯಿಸಲ್ಪಡುವುದೂ ಅವಶ್ಯಕ. ಇನ್ನಂತೂ ಅಕ್ಕಿ ಬತ್ತಗಳನ್ನು ಸ್ಟೋರುಗಳಿಗೆ ಸಾಗಿಸುವ ಅವಶ್ಯಕತೆ ಇರುವುದರಿಂದಲೂ ಗಾಡಿಯವರೂ ದೋಣಿಯರೂ ಯಾವ ವಿವೇಕವೂ ನ್ಯಾಯವೂ ಇಲ್ಲದ ಕೇಳುವುದರಿಂದಲೂ ಬಡ ರೈತರಿಗೆ ಬಹಳ ಕಷ್ಟ ನಷ್ಟಗಳಾಗುತ್ತವೆ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೆ ಇವುಗಳ ಬಾಡಿಗೆಯನ್ನು ನಿಯಂತ್ರಿಸುವುದು ಅವಶ್ಯ ಕರ್ತವ್ಯವಿದೆ

ರಿಕ್ವಿಜಿಶನ್ ಭತ್ತದ ಅಕ್ಕಿ ಸಂಗ್ರಹ ಹೇಗಾಗಬೇಕು? ತೂಕದಿಂದಲೊ ಅಳತೆಯಿಂದಲೊ—ಈ ಬಾಂಬ ವರ್ಗದಾರರಿಂದ ಅಕ್ಕಿ ಸಂಗ್ರಹಿಸುವ ಕಾರ್ಯವು ಈಗ ತಾನೆ ಆರಂಭವಾಗಿಯದೆ. ಪ್ರಕೃತಿ ನಿಯಮದಂತೆ ಡಿಶಂಬರ ಅಂತ್ಯದೊಳಗಾಗಿ ತಯಾರಿಸಲ್ಪಡುವ ಅಕ್ಕಿ ಚೆನ್ನಾಗಿ ಒಣಗಿರುವುದಿಲ್ಲ. ಇಂತಹ ಅಕ್ಕಿಯನ್ನು ಸ್ಟೋರುಗಳಿಗೆ ಸಾಗಿಸಿ ಅಲ್ಲಿಯ ಅಧಿಕಾರಿಗಳು ಅಳತೆ ಮತ್ತು ತೂಕ ಎರಡು ದೃಷ್ಟಿಯಿಂದ ಅಕ್ಕಿಯನ್ನು ಪಡೆಯುತ್ತಿದ್ದಾರೆ. ತೂಕದ ಒಂದು ಮುಡಿ ಅಕ್ಕಿಯು ಅಳತೆಯಲ್ಲಿ 45 ಸೇರಿಗೆ ಸಮಾನವಾಗುವುದರಿಂದ ಮುಡಿ ಒಂದರ ವರ್ಗದಾರರು ಮೂರು ಸೇರು ಅಕ್ಕಿಯಂತೆ ನಷ್ಟ ಹೊಂದಿಕೊಳ್ಳಬೇಕಾಗುತ್ತದೆ ಜಾಸ್ತಿ ಪಡಕೊಳ್ಳುವ ಈ ಮೂರು ಸೇರಿನಂತೆ ಯಾರ ಪಾಲಿಗೆ ಹೋಗುವುದೋ ತಿಳಿಯದು. ಆದುದರಿಂದ ಡಿಶಂಬರ ತಿಂಗಳಾಂತ್ಯದ ವರೆಗೆ ಸ್ಟೋರುಗಳಿಗೆ ಸಾಗಿಸಲ್ಪಡುವ ಅಕ್ಕಿ ಅಳತೆಯಿಂದಲೇ ಪಡೆಯುವಂತಾಗಬೇಕೆಂದು ಸಂಬಂಧಪಟ್ಟ ಅಧಿಕಾರಿಗಳ ಅವಗಾಹನೆ ಬಗ್ಗೆ ಓರ್ವ ವಾರ್ತಾದಾರರು ಬರೆದು ತಿಳಿಸುತ್ತಾರೆ.

WANTED

Applications are invited for the posts of Agents and Accountants in the Bank as per perticulars given below —

The Candidates must have studied at least up to S. S. L. C. Preference will be given to those with higher qualifications or Banking experience

Applications for the posts of Agents must have previous Banking experience.

The selected candidates will have to undergo a period of probation for about 3 months and if found satisfactory, will have to furnish the securities as per the rules and will be given the following pay:—

The of the Agents will be Rs 35/- per mensem and that of the Accountants Rs. 25/- per mensem. Besides this, the Agents and the Accountants will be entitled to Dearness Allowance which is now Rs 12/- per month

Applications along with testimonials as to the qualifications, character and conduct of the candidates, should reach the Head Office, Mangalore, on or before 31-10-44.

The Vijaya Bank Ltd.,

MANGALORE.

ದಕ್ಷಿಣ ಕನ್ನಡ-ಮಂಗಳೂರು

ವರ್ಗ—ಕುಂದಾಪುರ ಎಡಿಶನಲ್ ಡಿ॥ ಮುನ್ಸಿಫರಾದ ಶ್ರೀ. ಬಿ. ಸುಬ್ಬರಾವ್ ಅವರು ಮಂಗಳೂರ ಜಿಲ್ಲಾ ಮುನ್ಸಿಫರಾಗಿಯೂ ಮಂಗಳೂರಿನ ಮುನ್ಸಿಫರಾದ ಮಿ। ಅಬ್ದುಲ್ ರಹೀಂ ಅಹಮ್ಮದ್ ಅವರು ಕುಂದಾಪುರ ಮುನ್ಸಿಫರಾಗಿಯೂ ವರ್ಗಾಯಿಸಲ್ಪಟ್ಟಿದ್ದಾರೆ.

ನಾರ್ದರ್ನ್ ಇನ್ಶೂರೆನ್ಸ್ ಕಂಪೆನಿಯ ಶಾಖೆ-ಯೊಂದು ಇಲ್ಲಿ ಬರುವ ತಿಂಗಳ ತಾ. 12ಕ್ಕೆ ತೆರೆಯಲ್ಪಡಲಿರುವುದೆಂದೂ ಶ್ರೀ। ಬಿ. ಸಚ್ಚಿದಾನಂದ ಹೆಗ್ಡೆಯವರು ಶಾಖಾ ಮೆನೇಜರರಾಗಿ ನೇಮಿಸಲ್ಪಟ್ಟಿರುವರೆಂದೂ ತಿಳಿದುಬರುತ್ತದೆ.

ಜಿಲ್ಲಾ ಸೆಶನ್ಸ್ ಕೋರ್ಟಿನಲ್ಲಿ—ಪುತ್ತೂರು ತಾಲೂಕಿನ ಕಂಬಾಡಿ ಗ್ರಾಮದ ನಾರಾಯಣ ಶೆಟ್ಟಿ ಎಂಬಾತನು ಬಸಿಲ್ ಮೊಂತೆರೋ ಎಂಬಾತನನ್ನು ಕೊಲೆಮಾಡಿದನೆಂಬ ಆಪಾದನೆಯ ಮೊಕದ್ದಮೆ ನಮ್ಮ ಹಂಗಾಮಿ ಜಿಲ್ಲಾ ಜಡ್ಜರಾದ ಶ್ರೀ. ಸಿ. ಕೆ. ಮೆನೋನರ ಕೋರ್ಟಿನಲ್ಲಿ ತನಿಖೆಯಾಗಿ ಆರೋಪಿಗೆ ಬಿಡುಗಡೆಯಾಯಿತು.

ಬೈಹುಲ್ಲಿನಲ್ಲಿ ಅಕ್ಕಿ ಅಡಗಿಸಿ ತಂದ ಆರೋಪ—ಬೋಳಿಯಾರ್ ಗ್ರಾಮದ ಅಬ್ದುಲ್ ಖಾದರ್ ಬ್ಯಾರಿ ಎಂಬಾತನು ಬೈಹುಲ್ಲಿನ ಅಡಿಯಲ್ಲಿ ಅಕ್ಕಿ ಅಡಗಿಸಿಕೊಂಡು ಕಳ್ಳತನದಿಂದ ಬೈಹುಲ್ಲಿನ ಮೂಟೆ ಎಂಬಂತೆ ಅದನ್ನು ಸಾಗಿಸುತ್ತಿದ್ದಾಗ ಅದನ್ನು ಮಂಗಳೂರಲ್ಲಿ ಹಿಡಿದ ಈ ಮೊಕದ್ದಮೆಯನ್ನು ಸ್ಪೆ॥ ಸಬ್ ಮೆಜಿಸ್ಟ್ರೇಟ್ ಶ್ರೀ. ಎ. ಸದಾನಂದ ಪೈ ಅವರು ವಿಚಾರಿಸಿ ಆರೋಪಿಗೆ ೩ ತಿಂಗಳ ಕಠಿಣ ಸಜೆ ವಿಧಿಸಿದರು.

ರೇಶನಿಂಗ್ ಕಾನೂನು ಮೀರಿದ ಆರೋಪಗಳು—ತಿಂಗಳಿಗಾಗುವಷ್ಟು ಅಕ್ಕಿ ದಾಸ್ತಾನಿದ್ದಾಗಲೂ ರೇಶನ್ ಪಡೆದ ಆರೋಪಕ್ಕಾಗಿ ಅರಿಕೆರೆ ಐತಪ್ಪ ಶೆಟ್ಟಿಗೆ ಜುಲ್ಮಾನೆ ರೂ. ೭೫; ರೇಶನಿಂಗ್ ಕ್ಷೇತ್ರದ ಪರ್ಮಿಟ್ ಪಡೆಯದೆ ಅಕ್ಕಿ ಸಾಗಿಸುತ್ತಿದ್ದ ಆರೋಪಕ್ಕಾಗಿ ತುಂಬೆ ಗ್ರಾಮದ ಲಾರೆನ್ಸ್ ಕುವೆಲ್ಲೋನಿಗೆ ಜುಲ್ಮಾನೆ ರೂ. ೧೦೦; ಅದೇ ಆರೋಪಕ್ಕಾಗಿ ಮುನಪ್ಪರಿನ ಕೋಟ ಮಹಮ್ಮದನಿಗೆ ಜುಲ್ಮಾನೆ ರೂ. ೫೦; ತಿಂಗಳಿಗಾಗುವಷ್ಟು ಅಕ್ಕಿ ಇದ್ದಾಗಲೂ ರೇಶನ್ ಪಡೆದ ಆರೋಪಕ್ಕಾಗಿ ಉಳ್ಳಾಲ ಸಿ. ಕೆ. ಇಧಿನಬ್ಬ ಬ್ಯಾರಿಗೆ ಜುಲ್ಮಾನೆ ರೂ. ೧೦೦; ತಮ್ಮ ನಾಗವಿಕಲದಲ್ಲಿ ಎಕ್ಸೈಜ್ ಸಬ್ ಇನ್ಸ್‌ಪೆಕ್ಟರರಾಗಿ ಕೆಲಸ ನೋಡುತ್ತಿದ್ದಾಗ ಇಲ್ಲಿ ಗೈರುಹಾಜರಿದ್ದ ಅವರ ಬಗ್ಗೆ ರೇಶನ್ ಪಡೆದರೆಂಬ ಆರೋಪದ ಬಗ್ಗೆ ಬೋಳೂರಿನ ವಿಠ್ಠಪ್ಪ ಭಕ್ತನಿಗೆ ಜುಲ್ಮಾನೆ ರೂ. ೧೦೦; ತಿಂಗಳಿಗಾಗುವಷ್ಟು ಅಕ್ಕಿ ಇದ್ದಾಗಲೂ ರೇಶನ್ ಪಡೆದನೆಂಬ ಆರೋಪಕ್ಕಾಗಿ ಶ್ರೀ. ಕೆರವಾಳ್ ಏರಲ ರಾಯನಿಗೆ ಜುಲ್ಮಾನೆ ರೂ. ೧೦೦; ಹೀಗೆಂದು ನಮ್ಮ ಸ್ಪೆ॥ ಸ॥ ಮೆಜಿಸ್ಟ್ರೇಟ್ ಶ್ರೀ. ಎ. ಸದಾನಂದ ಪೈ ಅವರು ವಿಧಿಸಿರುವರು.

ಕರ್ನಾಟಕ ಲೇಖಕರ ಸಂಘ ಮಂಗಳೂರು—ಈ ಹೊಸ ಸಂಘ ಸ್ಥಾಪಿಸುವ ಉದ್ದೇಶದಿಂದ ಕಳೆದ ತಾ। 8ರಲ್ಲಿ ಶ್ರೀ। ಪಿ ಎನ್। ರಾವ್ ಫೋಟೋ ಸ್ಟುಡಿಯೋದಲ್ಲಿ ಸಭೆಯೊಂದು ಜರಗಿತು. ಕನ್ನಡ ಭಾಷಾ ಬೆಳವಣಿಗೆ, ಕನ್ನಡ ಸಾಹಿತ್ಯ ಪ್ರಚಾರ; ಕನ್ನಡನಾಡ ಏಕೀಕರಣ, ಕನ್ನಡ ಕಲಾ ಪ್ರಚಾರ ಇವುಗಳೇ ಮುಖ್ಯ ಉದ್ದೇಶವಾಗಿದ್ದು ಈ ಸಂಘವು ಚಟುವಟಿಕೆ ಆರಂಭಿಸಲಿದೆ. ಇದರ ಕಾರ್ಯಾಧ್ಯಕ್ಷರಾಗಿ ಶ್ರೀ। ಕೆ। ಕೃಷ್ಣರಾವ್, ಬಿ ಎ।, ಕಾರ್ಯದರ್ಶಿಗಳಾಗಿ ಶ್ರೀ। ಎಸ್। ಜಿನಯ್ಯ ಬಿ। ಎ। ಇವರ ಆರಿಸಲ್ಪಟ್ಟು ಸಹಾಯಕರೂ ಎಂಟು ಜನರಿಂದ ಕೂಡಿದ ಸಮಿತಿಯೊಂದು ನಿರ್ಮಿತವಾಗಿದೆ.

ಎಡಿಶನಲ್ ಜಿಲ್ಲಾ ಮೆಜಿಸ್ಟ್ರೇಟರಲ್ಲಿ— ನಮ್ಮ ಎಡಿಶನಲ್ ಜಿಲ್ಲಾ ಮೆಜಿಸ್ಟ್ರೇಟರಾದ ಶ್ರೀ. ಪಿ. ವಿ. ಮಾಧವ ರಾಯರ ಕೋರ್ಟಿನಲ್ಲಿ ವಿದ್ಯುಚ್ಛಕ್ತಿಯ ಬಲ್ಬುಗಳನ್ನು ದಾಸ್ತಾನಿರಿಸಿದ್ದರೆಂಬ ಅತಿ ಲಾಭದ ಉದ್ದೇಶವುಳ್ಳದೆಂಬ ಆರೋಪದ ೩ ಮೊಕದ್ದಮೆಗಳು ಇಲ್ಲಿಯ ಕೆನರಾ ಸೇಲ್ಸ್ ಕೋರ್ಪೊರೇಶನ್ ಲಿಮಿಟೆಡ್ ಇವರ ಮೇಲೆ ನಡೆಯುತ್ತಿದೆ. ಮದ್ರಾಸ್ ಜನರಲ್ ಇಲೆಕ್ಟ್ರಿಕ್ ಕಂಪೆನಿ ಮೊದಲಾದವುಗಳ ಸಾಕ್ಷಿ ವಿಚಾರಣೆ ಇನ್ನು ಮುಂದೆ ಆಗಬೇಕಾಗಿದೆ.

ಜನತಾ ಆಹಾರ ಸಮಿತಿಯ ವಿಶೇಷ ಮೀಟಿಂಗ್— ಈ ಸಮಿತಿಯ ಮೀಟಿಂಗ್ ಕಳೆದ ಆದಿತ್ಯವಾರ ಸಮಿತಿಯ ಕಾರ್ಯಾಲಯದಲ್ಲಿ ಸಮಿತಿಯ ಅಧ್ಯಕ್ಷ ಶ್ರೀ। ಎಂ ಡಿ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ ಸೇರಿತು. ಕೃಷಿಕರಿಗೆ ದಿವಸಕ್ಕೆ ೩ ಪಾವಿನಂತೆ ವಾರದ ಎಲ್ಲಾ ದಿನಗಳಲ್ಲಿಯೂ ಅಕ್ಕಿ ದೊರೆಯುವಂತಾಗಬೇಕು; ಅಥವಾ ೨ ಪಾವು ಅಕ್ಕಿ ೧ ಪಾವು ರಾಗಿಯಂತೆ ನಿತ್ಯವೂ ಅವರಿಗೆ ದೊರೆಯಬೇಕು; ಡಿಸೆಂಬರದ ಮೊದಲು ಅಕ್ಕಿ ಮಾಡಿದರೆ ನಷ್ಟ; ಪಿಟಿಎ.ನ್‌ಗೆ ಕಡಿಮೆಯಾದ್ದರಿಂದ ಜನವರಿಯ ಬಳಿಕವೇ ಅಕ್ಕಿ ಮಾಡುವಂತೆ ಏರ್ಪಾಡಾಗಬೇಕು; ಈ ಸಮಿತಿಯ ಪುನಸ್ಸಂಘಟನೆಗಾಗಿ ಬರುವ ನವಂಬರಿನ ಅಂತ್ಯದೊಳಗೆ ಜಿಲ್ಲೆಯ ಯಾವತ್ತು ಸಮಿತಿಯ ಕೆಲಸಗಾರರದೊಂದು ಪರಿಷತ್ತು ಸೇರಬೇಕು, ನೆರೆ ಹಾವಳಿ ಪ್ರದೇಶಗಳನ್ನು ಸಂದರ್ಶಿಸಿ ಬಂದ ಶ್ರೀ. ಕೆ. ಕೆ. ಶೆಟ್ಟಿ, ಶ್ರೀಗಳಾದ ಬಿ ವಿ. ಕಕ್ಕಿಲ್ಲಾಯ ಮತ್ತು ಬಿ. ದೇವಪ್ಪ ಆಳ್ವರು ನೆರೆ ಹಾವಳಿಯಿಂದ ನೊಂದವರಿಗೆ ಸಹಾಯವನ್ನು ನೀಡಿ ಜಿಲ್ಲಾ ನೆರೆ ಹಾವಳಿ ಸಮಿತಿಯವರು ಕೊಟ್ಟ ರೂ. ೧ ಸಾವಿರ ಮತ್ತು ಮಹಾಜನ ಫ್ಲಡ್ ರಿಲೀಫ್ ಕಮಿಟಿಯವರು ಕೊಟ್ಟ ಸ್ವಲ್ಪ ಹಣ ಮತ್ತು ೨೦೦ ಹಾರೆಗಳನ್ನು ಹಂಚಬೇಕು; ಈ ನಗರಕ್ಕೆ ಸರಕಾರದವರು ಕಟ್ಟಿಗೆ ಸರಬರಾಯಿಯನ್ನು ಬೇಗನೆ ಮಾಡಿಸಿ ಅದನ್ನು ಸಹಕಾರಿ ಸ್ಟೋರ್ಸಿನ ಮೂಲಕ ಹಂಚುವಂತೇರ್ಪಡಿಸಬೇಕೆಂಬ ಅರ್ಥದ ನಿರ್ಣಯಗಳು ಮಂಜೂರಾದುವು.

ಕಟ್ಟಿಗೆಯ ಬೆಲೆ—ಯನ್ನು ಜಿಲ್ಲಾ ಕಲೆಕ್ಟರರು ತಿದ್ದಿ ಪುನಃ ಈ ರೀತಿಯಾಗಿ ನಿಯಂತ್ರಿಸಿದ್ದಾರೆ. ಬಂದರದ ಒಳ (ನದಿಯಿಂದ ೨ ಮೈಲು ದೂರದ ವರೆಗೆ) ಕರಿಮರ, ಗಾಳಿ ಒಡೆಯದಿದ್ದುದು ರೂ. 5-14-0; ಒಡೆದುದು 6-6 0, ಕಾಟು ಒಡೆಯದಿದ್ದುದು ರೂ. 5-4-0; ಒಡೆದುದು 5-12 0 ಮುನಿಸಿಪಾಲಿಟಿಯ ಇತರ ಪ್ರದೇಶಗಳಲ್ಲಿ ಒಡೆಯದ ಕರಿಮರ, ಗಾಳಿ 6-2-0; ಒಡೆದ ಕರಿಮರ, ಗಾಳಿ 6-10-0; ಕಾಟು ಒಡೆಯದಿದ್ದುದು 5-8-0; ಒಡೆದುದು 6 0 0; ಇದಕ್ಕಿಂತ ಜಾಸ್ತಿ ಬೆಲೆಗೆ ಯಾರೂ ಮಂಗಳೂರು ಮುನಿಸಿಪಾಲಿಟಿಯೊಳಗೆ ವಿಕ್ರಯಿಸಬಾರದೆಂದು ಕಲೆಕ್ಟರರು ವಿಧಿಸಿದ್ದಾರೆ

ಚಿಮಿಣಿ ಎಣ್ಣೆ—ಯ ಬೆಲೆಯನ್ನು ತಿದ್ದಿ ಪ್ರಕಟಿಸಲಾಗಿದೆ. ಮಂಗಳೂರು ಮುನಿಸಿಪಾಲಿಟಿಯೊಳಗೆ ಬಾಟ್ಲಿಗೆ 0 3-4, ಮುನಿಸಿಪಾಲಿಟಿಯ ಹೊರಗೆ 0 3 10, ಮಂಜೇಶ್ವರದಲ್ಲಿ 0 3 9 ಕುಂಬ್ಳೆ, ಕಾಸರಗೋಡು, ಕಾಞಂಗಾಡ 0-3-8, ಉಪ್ಪಿನಂಗಡಿ 0-4-0, ಪುತ್ತೂರಿನ ಇತರ ಭಾಗದಲ್ಲಿ 0-3-11, ಗಂಗೊಳ್ಳಿ, ಕುಂದಾಪುರ 0-3 6 ಬೈಂದೂರು 0-3-3, ಉಡುಪಿ 0 3 7ಯಿಂದ 0 3 4, ಕಾರ್ಕಳ 0-4-0ಯಿಂದ 0 3 8, ಮೂಡಬಿದ್ರಿ 0 4 0ಯಿಂದ 0-3 .

ನಗರದಲ್ಲಿ ಪ್ಲೇಗು—ಎಳೆಂಟು ತಿಂಗಳ ಹಿಂದೆ ಮಂಗಳೂರಲ್ಲಿ ತಲೆದೋರಿದ ಪ್ಲೇಗಿನ ರೋಗವು ಇನ್ನೂ ಪೂರ್ಣ ತೊಲಗಿದಂತಿಲ್ಲ. ಅಕ್ಟೋಬರ ತಿಂಗಳ ಪ್ರಥಮ ವಾರದಲ್ಲಿ ಬುನ್ನು ಇಬ್ಬರಿಗೆ ರೋಗವು ತಗಲಿ, ಒಬ್ಬನು ಇಷ್ಟರಲ್ಲೇ ಮಡಿದ ವರ್ತಮಾನ ಬಂದಿದೆ ಬದುಕಿಕೊಂಡವನು ಮೂರು ತಿಂಗಳ ಹಿಂದೆ ಪ್ಲೇಗಿನ ಚುಚ್ಚು ಹಾಕಿಸಿಕೊಂಡಿದ್ದ. ಇನ್ನೊಬ್ಬನು ಸುದುಗ ತಾ.2ರಂದು ಈತನಿಗೆ ಜ್ವರ ಆರಂಭವಾಗಿತ್ತು. ಮರುದಿನ ಈತನನ್ನು ಆಸ್ಪತ್ರೆಗೆ ಸಾಗಿಸಲಾಗಿತ್ತು ಅಂದೇ ಆತನ ಮಡಿದ.

ಜೆಪ್ಪು ಬೋಳಾರ-ಈ ಪ್ರದೇಶದ ಎಲ್ಲಾ ಹಂಚಿನ ಕಾರ್ಖಾನೆಗಳ ಮಜೂರ ಮತ್ತು ಇತರರ ಸಭೆಯು ತಾ। 12ರಂದು ಸಂಜೆ ಜರಗಿ ಹೆಚ್ಚು ಕೂಲಿ, ಯುದ್ಧಭತ್ತೆ ಮತ್ತು ಬೋನಸುಗಳಿಗೆ ಸಂಬಂಧಿಸಿದ ಕೇಳಿಕೆಗಳು ಮುಂದಿಡಲ್ಪಟ್ಟುವು. ಕೇಳಿಕೆಗಳನ್ನು ವಿವರಿಸಿ ಹಲವರ ಭಾಷಣಗಳಾದುವು

ದ. ಕ ಜಿಲ್ಲಾ ಹರಿಜನ ಲೇಬರ್ ಲೀಗಿನ-ಒಂದು ಮಹಾಸಭೆಯು ತಾ। 8ರಂದು ಸಂಜೆ ಡಿ। ಸಿ ಯಂ ಶಾಲೆಯಲ್ಲಿ ಉಪಾಧ್ಯಕ್ಷ ಶ್ರೀ। ತನಿಯ ಮಾಸ್ತರಿಯ ವರ ಅಧ್ಯಕ್ಷತೆಯಲ್ಲಿ ಜರಗಿತು; ಸಂಘದ ವಾರ್ಷಿಕೋತ್ಸವವನ್ನು ಬರುವ ಡಿಸೆಂಬರ ತಿಂಗಳಲ್ಲಿ ಜರಗಿಸಬೇಕೆಂದು ನಿರ್ಣಯಿಸಲಾಯಿತು; ಮಂಗಳೂರು ನಗರದೊಳಗಿರುವ ಹಸಿಗೆ ಅಂಗಡಿಯವರು ಹರಿಜನರಿಗೆ ಕೊಡುವ ತೊಂದರೆ ಮತ್ತು ಕಷ್ಟದ ಕುರಿತು ಒಂದು ಮನವಿಯನ್ನು ಜಿಲ್ಲಾ ಕಲೆಕ್ಟರರಿಗೂ ಮತ್ತು ಇದಕ್ಕೆ ಸಂಬಂಧವಿರುವ ಮುಖ್ಯ ಅಧಿಕಾರಿಗಳ ಅವಗಾಹನೆಗೂ ತರಬೇಕೆಂದು ನಿರ್ಣಯಿಸಲಾಯಿತು

ಗುರುಕಂಬಳ— ಮಂಗಳೂರು ತಾಲ್ಲೂಕು ಮೂಡು ಪೆರಾರ ಗ್ರಾಮದ ಗುರುಕಂಬಳದ ದರ್ಗೆಯಲ್ಲಿ ಇದೇ ತಾ. 12-13 ಮತ್ತು 14ರಲ್ಲು ಹಜ್ರತ್ ಅಸ್ರಾರುದ್ದೀನ್‌ರವರ ಉರೂಸು ಎಂಬ ಕಾರ್ಯವು ಜರಗಿತು

ಪಡು ಅಲಿಪೂರು ಇಲ್ಲಿಯ ಎಲಿಮೆಂಟರಿ ಶಾಲಾ ಬಾಲರ ಪೂಜಾ ಸಮಾರಂಭವು ತಾ. 26-9-44ರಲ್ಲು ಡಾ। ಪಿ. ರಾಮಚಂದ್ರ ರಾಯರ ಅಧ್ಯಕ್ಷತೆಯಲ್ಲಿ ಶ್ರೀಯುತ ಯು. ಕೃಷ್ಣ ಭಟ್ಟರ ಸೌಹಾರ್ದತೆಯಿಂದ ಜರಗಿತು. ಶಾಲಾ ವಿದ್ಯಾರ್ಥಿಗಳ ವಿವಿಧ ಚಟುವಟಿಕೆಗಳ ಪ್ರದರ್ಶನಗಳಾದ ತರುವಾಯ ಶಾಲಾ ಮೆನೇಜರ್ ಯಂ. ಅಷ್ಟಣ್ಣ ಶೆಟ್ಟರ ಧನ್ಯವಾದಗಳೊಡನೆ ಸಭೆಯು ಕೊನೆಗೊಂಡಿತು.

ಜಿಲ್ಲಾ ಕಲೆಕ್ಟರರಲ್ಲಿ ಕುಂಬಳೆಯವರ ಅರಿಕೆ-ನಮ್ಮ ಜಿಲ್ಲಾ ಕಲೆಕ್ಟರರು ಕುಂಬಳೆಯಲ್ಲಿ ಕ್ಯಾಂಪ ಮಾಡಿದ್ದಾಗ ಶ್ರೀ। ಬಿ। ದೇವಪ್ಪ ಆಳ್ವರು ಸುಮಾರು ೫೦೦ ಜನರ ಸಹಿಯುಳ್ಳ ವಿಜ್ಞಾಪನಾ ಪತ್ರದೊಂದಿಗೆ ಕಲೆಕ್ಟರರನ್ನು ಭೇಟಿಮಾಡಿದರು. ಈಗ ಅಲ್ಲಿ ಪ್ರತಿಯೊಬ್ಬರಿಗೆ ಸಿಕ್ಕುವ ವಾರಕ್ಕೊಂದರ ೫ ಪಾವು ಅಕ್ಕಿಯನ್ನು ಹೆಚ್ಚಿಸುವಂತೆ ಆ ಪತ್ರದಲ್ಲಿ ನಿವೇದಿಸಿದುದನ್ನು ಪ್ರಕಟಪಡಿಸಿದರು. ಅಂತೇ ಅಕ್ಕಿಯ ಸಡಿ ಹೆಚ್ಚಿಸಲಿಕ್ಕಾಗಿ ಅಲ್ಲಿನ ಉಪಾಧ್ಯಾಯರ ಪರವಾಗಿ ಶ್ರೀ। ಎಂ। ಶಿವರಾಮ ರಾಯರೂ ಪ್ರಾರ್ಥಿಸಿದರು. ಕಲೆಕ್ಟರರು ಆಲೋಚಿಸುವೆವೆಂದರು.

The Canara Industrial &

Estd] **Banking Syndicate Ltd.,** [1925

Head Office UDIPI.

NOTICE.

Is hereby given that 29 five% Cumulative Preference Shares in the Syndicate, one of which is Rs 2 - paid and the rest each Re. 1 paid, will be sold by public auction at the Registered Office of the Syndicate ("Mukund Nivas," Udipi), on Monday 23rd October, 1944 at 3-30 p.m. in order to recover the debts due to the Syndicate by the concerned share-holders.

Intending bidders are requested to be present at the time of auction.

Udipi,
16-10-44

(*Sd.*) K. V. Shenoy.
Secretary

ಪುತ್ತೂರಲ್ಲಿ ರೈತರ ಸಭೆ-ಯೊಂದು ತಾ. 3ರಂದು ಗುತ್ತಿಗಾರು ಬೋರ್ಡು ಹ। ಪ್ರಾ। ಶಾಲಾ ವಠಾರದಲ್ಲಿ ಸೇರಿ ಈ ಪ್ರಾಂತದ ಬೇಸಾಯಗಾರರ ಸಂಕಷ್ಟಗಳನ್ನು ವಿಮರ್ಶಿಸಿತು. ಶ್ರೀ। ಮೊಗ್ರ ನಾರ್ಣಪ್ಪಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಸಭೆಯಲ್ಲಿ ಈ ಕೆಳಗಿನ ಗೊತ್ತುವಳಿಗಳು ಮಾನ್ಯವಾದುವು:—

ಮಲೆನಾಡು ಪ್ರಾಂತವಾದ ಈ ಹಳ್ಳಿಯ ಗ್ರಾಮಗಳ ಕೃಷಿ. ಬೇಸಾಯ ಇತ್ಯಾದಿಯಿಂದ ಜೀವಿಸುವ ರೈತ, ಕೂಲಿ, ಜನರಿಗೆ ಪಟ್ಟಣಿಗರ ಯಾವ ಸೌಕರ್ಯವೂ ಇಲ್ಲದ ಕಾರಣ ಅಕ್ಕಿಯಿಂದಲೇ ಜೀವಿಸಬೇಕಾಗಿದೆ. ಹಳ್ಳಿಯ ಪ್ರತಿಯೊಬ್ಬನಿಗೆ ಕಲು ದಿನ ಒಂದರ ಒಂದು ಸೇರು ಅಕ್ಕಿ ಅಥವಾ ೨॥ ಸೇರು ಭತ್ತ ಇಷ್ಟನ್ನಾದರೂ ಜೀವನದಗೋಸ್ಕರ ಸಿಗುವಂತೆಯೂ ಇದು ರೈತರಲ್ಲಿಯೇ ಉಳಿಯುವಂತೆಯೂ ಹುಕುಂ ದಯಪಾಲಿಸಬೇಕಾಗಿ ಕಲೆಕ್ಟರ್ ದೊರೆಗಳವರಲ್ಲಿ ಕೇಳಿಕೊಳ್ಳುವುದಾಗಿ ನಿರ್ಣಯಿಸಲಾಯಿತು, ಇದು ಕಾಡು ಪ್ರಾಂತವಾಗಿದ್ದು ಬೇಸಾಯಕ್ಕೆ ಸರಿಯಾದ ಅನುಕೂಲವಿಲ್ಲದೆ ಬಹಳ ಕಷ್ಟನಷ್ಟ ಇರುವುದರಿಂದ ಕರಾವಳಿಯ ಸಾಲಿಗೆ ನಮ್ಮನ್ನು ಗಣಿಸದೆ ಬೇಸಾಯದ ಖರ್ಚಿಗೆ ಬೆಳೆ ಒಂದರ ಎಕ್ರೆ ಒಂದಕ್ಕೆ ಕನಿಷ್ಠಪಕ್ಷಕ್ಕೆ ೬॥ ಮುಡಿ ಅಕ್ಕಿ ಅಥವಾ ೧೫ ಮುಡಿ ಭತ್ತ ಇಷ್ಟನ್ನಾದರೂ ನಮ್ಮಲ್ಲಿ ಉಳಿಸಿ ಬಡಹಳ್ಳಿಯ ರೈತ ಜನರನ್ನು ಕಾಪಾಡಬೇಕಾಗಿಯೂ; ನಮ್ಮಲ್ಲಿ ಹೆಚ್ಚು ಜನರಿಗೆ ಸುಗ್ಗಿ ಬಾಗುವಳಿ ಕಡಿಮೆ ಇರುವುದರಿಂದ ಮುಂದಿನ ಇಡೀ ವರ್ಷದ ಜೀವನ, ಕೃಷಿ ಮುಂತಾದ ಖರ್ಚಿಗೆ ಬೇಕಾಗುವಷ್ಟು ಭತ್ತ, ಇದೇ ಎನೆಲು ಬೆಳೆಯ ಭತ್ತದಿಂದಲೇ ಇರಗೊಡಿಸಬೇಕಾಗಿಯೂ; ಈ ತಾಲೂಕಿನಲ್ಲಿ ಹೆಚ್ಚಿನ ರೈತರ ಅಡಿಕೆ ತೋಟದ ಕೃಷಿ ಮತ್ತು ಭತ್ತ ಮುಂತಾದ ಇತರ ಸಾಗುವಳಿಯಿಂದ ಸದಾ ಜೀವಿಸ ವವರಾಗಿರುವ ಕಾರಣ, ಅಡಿಕೆ ತೋಟದ ಕೃಷಿ ಬಡ ಜನರ ಜೀವನದ್ದೇ ಆಗಿರುವ ಕಾರಣ, ತೋಟದ ಕೃಷಿಗೆ ಎಕ್ರೆ ಒಂದರ ಕನಿಷ್ಠ ೩ ಮುಡಿ ಭತ್ತವಾದರೂ ಕೊಡಬೇಕಾಗಿಯೂ ಈ ಸಭೆಯು ಜಿ। ಕಲೆಕ್ಟರರಲ್ಲಿ ಅರಿಕೆಮಾಡಿಕೊಳ್ಳುತ್ತದೆ.

ಕಾಸರಗೋಡು ಸ್ಪೆ। ಸಬ್ ಮೆಜಿಸ್ಟ್ರೇಟರ ಕೋರ್ಟಿನಲ್ಲಿ—ಆಹಾರ ಸಾಮಗ್ರಿಗಳ ಸಂಬಂಧದ ಲೈಸನ್ಸ್ ಪಡೆಯದೆ ವ್ಯಾಪಾರ ಮಾಡಿದ ಆರೋಪಕ್ಕಾಗಿ ನರಸಿಂಹ ಶೆಣೈಯವರಿಗೆ ೨ ತಿಂಗಳ ಕಠಿಣ ಶಿಕ್ಷೆ ಮತ್ತು ರೂ. ೩೦೦ ಜುಲ್ಮಾನೆ; ರೇಶನಿಂಗ್ ಕ್ರಮ ಮೀರಿ ವ್ಯವಹರಿಸಿದ ಆರೋಪಕ್ಕಾಗಿ ಸುಬ್ರಾಯ ಕಾಮತರಿಗೆ ೩ ತಿಂಗಳ ಕಠಿಣ ಶಿಕ್ಷೆ; ಈ ಜಿಲ್ಲೆಯಿಂದ ಮಲಬಾರಿಗೆ ಅಕ್ಕಿಯನ್ನು ಕಳ್ಳಸಾಗಣೆಯಿಂದ ಸಾಗಿಸಲೆತ್ನಿಸಿದ ಆರೋಪಕ್ಕಾಗಿ ಕೆ। ವಿ। ಕೃಷ್ಣನ್ ಎಂಬಾತನಿಗೆ ೩ ತಿಂಗಳ ಕಠಿಣ ಸಜೆ ಎಂದು ಕಾಸರಗೋಡಿನ ಸ್ಪೆ। ಸ। ಮೆಜಿಸ್ಟ್ರೇಟ್ ಶ್ರೀ। ಸೀತಾರಾಮ ಶೆಟ್ಟಿ ಅವರು ವಿಧಿಸಿದರು.

ಹರಿಜನ ಸಪ್ತಾಹ-ವು ಕಾಸರಗೋಡಿನಲ್ಲಿ ತಾ। ೧ರಿಂದ 7ರ ವರೆಗೆ ವಿವಿಧ ಕಾರ್ಯಕ್ರಮಗಳಿಂದ ನಡೆಯಿತು. ಪ್ರತಿದಿನ ಸಭೆ ಮೆರವಣಿಗೆಗಳು ನಡೆದುವು.

೧೪ನೆಯ ನಿಖಿಲ ಕರ್ನಾಟಕ ಆಯುರ್ವೇದ ಸಮ್ಮೇಳನ-ದ। ಕ। ಜಿಲ್ಲೆಯ ಮಂಜೇಶ್ವರದಲ್ಲಿ ಬರುವ ಜನವರಿ ತಾ। ೫ರಲ್ಲಿ ೧೪ನೆಯ ನಿಖಿಲ ಕರ್ನಾಟಕ ಆಯುರ್ವೇದ ಸಮ್ಮೇಳನ ಜರಗಲು ನಿರ್ಧರಿಸಲಾಗಿದೆ. ಅಲ್ಲಿಯ ಪುರಪ್ರಮುಖರಾದ ಸಾಹುಕಾರ್ ಶ್ರೀ। ವೈಕುಂಠ ಭಕ್ತರ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯೊಂದು ನಿರ್ಮಿಸಲ್ಪಟ್ಟಿದೆ; ಎಲ್ಲಾ ವೈದ್ಯರೂ ನವಂಬರ ತಾ।೧೦ರೊಳಗಾಗಿ ಮಂಡಲಿಯ ಸದಸ್ಯರಾಗಿ ಸಮ್ಮೇಳನದಲ್ಲಿ ಭಾಗವಹಿಸಿ ಅದನ್ನು ಯಶಸ್ವಿಗೊಳಿಸಬೇಕಾಗಿ ಕಾರ್ಯದರ್ಶಿಗಳು ಪ್ರಾರ್ಥಿಸುತ್ತಾರೆ.

ಶ್ರೀಮತಿ ವಿಜಯಲಕ್ಷ್ಮಿ ಪಂಡಿತರ ಅಮೇರಿಕಾ ಪ್ರವಾಸ

ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ಅಮೇರಿಕಾದ ಮಸ್ಸಾಚುಸೆಟ್ಸ್ ಎಂಬಲ್ಲಿರುವ ತನ್ನ ಮಗಳಂದಿರನ್ನು ನೋಡಿಕೊಂಡು ಬರುವುದಕ್ಕಾಗಿ ಅಲ್ಲಿಗೆ ಹೊರಡಲಿಕ್ಕಿರುವರೆಂದೂ ಹೋದವರು ಮೂರು ತಿಂಗಳು ಉಳಕೊಳ್ಳುವರೆಂದೂ ತಿಳಿದುಬಂದಿದೆ.

ಕಸ್ತೂರಿ ಬಾ ರಾಷ್ಟ್ರೀಯ ಸ್ಮಾರಕ ನಿಧಿ ಸಮಿತಿ

ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ವರದಿ

ಜಿಲ್ಲಾ ಕಸ್ತೂರಿ ಬಾ ಸ್ಮಾರಕ ನಿಧಿ ಸಮಿತಿಯ ಸಭೆಯು ತಾ. 19ರಲ್ಲಿ ನವಭಾರತ ಆಫೀಸಿನಲ್ಲಿ ಶ್ರೀ. ಬಿ. ವೈಕುಂಠ ಬಾಳಿಗಾರವರ ಅಧ್ಯಕ್ಷತೆಯಲ್ಲಿ ಜರಗಿತು. ಸಮಿತಿಯ ಕಾರ್ಯದರ್ಶಿ ಶ್ರೀ ... ಅಧಿಕಾರಿಯವರು ಸಭೆಯ ಮುಂದಿರಿಸಿದ ಸಮಿತಿಯ ವರದಿಯನ್ನು ಸರ್ವಾನುಮತದಿಂದ ಸ್ವೀಕರಿಸಲಾಯಿತು. ವರದಿಯ ವಿವರಗಳು ಈ ಕೆಳಗೆ ಕೊಟ್ಟಿರುತ್ತೇವೆ:—

"ಕಸ್ತೂರಿ ಬಾ ರಾಷ್ಟ್ರೀಯ ಸ್ಮಾರಕ ನಿಧಿಗೆ ಹಣ ಸಂಗ್ರಹಿಸಲು ಆರಂಭಿಸಬೇಕೆಂಬ ನಿರ್ಧಾರವು ೫ ತಿಂಗಳ ಹಿಂದೆಯೇ ಆದುದು. ಎಪ್ರಿಲ್ ೭ನೇ ತಾರೀಕು ಶ್ರೀ ... ಅಧಿಕಾರಿ ಅವರ ಅಧ್ಯಕ್ಷತೆಯಲ್ಲಿ ಮಂಗಳೂರಲ್ಲಿ ಸೇರಿದ ಜಿಲ್ಲೆಯ ಪ್ರಮುಖ ಕಾಂಗ್ರೆಸ್ ಕಾರ್ಯಕರ್ತರ ಹಾಗೂ ಇತರರ ಸಭೆಯಲ್ಲಿ ನಿಧಿ ಸಂಗ್ರಹಿಸುವುದಕ್ಕಾಗಿ ಸಮಿತಿಯೊಂದು ರಚಿಸಲ್ಪಟ್ಟಿತು. ಆದರೆ ಕರ್ನಾಟಕ ಪ್ರಾಂತಿಕ ನಿಧಿ ಸಮಿತಿಯಿಂದ ಬೇರೆ ಕೆಲವು ಹೆಸರುಗಳನ್ನು ಸೇರಿಸಿಕೊಂಡ ಸಮಿತಿಯೊಂದು ಈ ಜಿಲ್ಲೆಗಾಗಿ ಸೂಚಿಸಲ್ಪಟ್ಟುದರಿಂದ ಜುಲೈ ತಾ. ... ರಂದು ಈ ಎರಡೂ ಸಮಿತಿಗಳಲ್ಲಿದ್ದ ಸದಸ್ಯರ ಸಂಯುಕ್ತ ಸಭೆಯಾದುದು ಶ್ರೀ. ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿ ಈ ಕೆಳಗಿನ ಕಾರ್ಯನಿರ್ವಾಹಕ ಸಮಿತಿಯು ರಚಿಸಲ್ಪಟ್ಟಿತು.

ಶ್ರೀಯುತರು ಬಿ. ವೈಕುಂಠ ಬಾಳಿಗ (ಅಧ್ಯಕ್ಷರು) ಎ. ಬಿ. ಶೆಟ್ಟಿ ಮತ್ತು ... ಹೆಗ್ಡೆ (ಉಪಾಧ್ಯಕ್ಷರು) ... ಪುರುಷೋತ್ತಮ ಶೇಟ್ (ಕೋಶಾಧಿಕಾರಿ) ... ಅಧಿಕಾರಿ (ಪ್ರಧಾನ ಕಾರ್ಯದರ್ಶಿ) ... ಬಾಳಿಗ (ಜತೆ ಕಾರ್ಯದರ್ಶಿ) ನಿಧಿ ಸಂಗ್ರಹಿಸುವ ಕಾರ್ಯದಲ್ಲಿ ಅಗತ್ಯವಾದ ಸೂಚನೆ ... ಸಭೆ ಸೇರಿದ್ದ ಸದಸ್ಯರು ಪ್ರತ್ಯೇಕ ಸೂಚನೆಗಳನ್ನು ಕೊಡಲೊಪ್ಪಿದರು.

... ಸಭೆಯಲ್ಲಾದ ನಿರ್ಣಯದಂತೆಯೇ ಪ್ರಧಾನ ಕಾರ್ಯದರ್ಶಿಯು ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಸಂಚರಿಸಿ ತಾಲೂಕು ಸ್ಮಾರಕ ನಿಧಿ ಸಮಿತಿಗಳನ್ನು ರಚಿಸಿದರು. ಜಿಲ್ಲಾ ಸಮಿತಿಯು ಆಗಾಗ್ಗೆ ಸೇರುತ್ತಿದ್ದು ನಿಧಿ ಸಂಗ್ರಹದ ಕಾರ್ಯದ ಅವಲೋಕನ ಮಾಡುತ್ತಿತ್ತು.

ತಾ. ... ಆಗಸ್ಟ ... ರಂದು ಸೇರಿದ ಸಮಿತಿಯ ಸಭೆಯಲ್ಲಿ ಸಪ್ಟೆಂಬರ ತಾ. ... ರಿಂದ ... ರ ವರೆಗೆ ಕಸ್ತೂರಿ ಬಾ ನಿಧಿ ಸಂಗ್ರಹದ ಸಪ್ತಾಹವನ್ನು ಆಚರಿಸಬೇಕೆಂಬ ನಿರ್ಧಾರವಾಯಿತು. ಈ ಸಪ್ತಾಹದ ಆಚರಣೆಯ ಕಾಲದಲ್ಲಿ ಹೆಚ್ಚು ಹಣ ಸಂಗ್ರಹವಾಯಿತಲ್ಲದೆ, ನಿಧಿ ಒಟ್ಟುಗೂಡಿಸುವ ಕಾರ್ಯವು ಒಳ್ಳೇ ರೀತಿ ಮುಂದುವರಿಯಿತು. ಅಕ್ಟೋಬರ ತಾ. ... ರ ವರೆಗೆ ಈ ಜಿಲ್ಲೆಯಲ್ಲಿ ಸಂಗ್ರಹವಾದ ಒಟ್ಟು ಹಣ ರೂ. ... ಆ ... ತಾಲೂಕುಗಳಲ್ಲಿ ಪ್ರತ್ಯಪ್ರತ್ಯೇಕವಾಗಿ ಸಂಗ್ರಹವಾದ ನಿಧಿಯ ಸಂಖ್ಯೆ ಈ ರೀತಿಯಿದೆ: ... ಮಂಗಳೂರು ರೂ. ... ಕುಂದಾಪುರ ರೂ. ...೦ ೦ ಉಡುಪಿ ರೂ. ...೦ ೦ ಪುತ್ತೂರು ರೂ. ...೦ ೦ ಕಾರ್ಕಳ ರೂ. ...೦ ಕಾಸರಗೋಡು ರೂ. ...೦ ೦

ಉಡುಪಿ ತಾಲೂಕಿನಲ್ಲಿ ಸಂಗ್ರಹವಾದ ನಿಧಿಯೇ ಅತಿ ಹೆಚ್ಚೆಂಬುದು ಇದರಿಂದ ವ್ಯಕ್ತವಾಗುವುದು. ಈ ಹಣವನ್ನು ಒಟ್ಟುಗೂಡಿಸುವ ಕಾರ್ಯವನ್ನು ಬಹು ದಕ್ಷತೆಯಿಂದ ನೆರವೇರಿಸಿದ ಉಡುಪಿ ತಾಲೂಕು ಸಮಿತಿಗೆ ಧನ್ಯವಾದ ಸಲ್ಲಬೇಕು.

ಈ ಜಿಲ್ಲೆಯಲ್ಲಿ ...೦ ೦೦೦ ರೂಪಾಯಿಗಳಾದರೂ ಸಂಗ್ರಹವಾಗಬೇಕೆಂದು ಪ್ರಾಂತಿಕ ಸಮಿತಿಯವರು ತಿಳಿಸಿದ್ದರು. ಆದರೆ ಅದಕ್ಕಿಂತಲೂ ನಾಲ್ಕು ಸಾವಿರಕ್ಕೆ ಮಿಕ್ಕಿ ಹೆಚ್ಚು ಹಣವನ್ನೇ ಒಟ್ಟುಗೂಡಿಸಲು ನಮಗೆ ಸಾಧ್ಯವಾಯಿತೆಂದು ತಿಳಿಸಲು ಸಂತೋಷಪಡುತ್ತೇವೆ.

ಈ ಹಣ ಸಂಗ್ರಹಿಸಲು ಆರಂಭಿಸಿದಾಗ ಜಿಲ್ಲೆಯ ದೇಶಪ್ರೇಮಿಗಳೆಲ್ಲ ಉದಾರ ಹಸ್ತದಿಂದ ಮುಂದಾದರೆಂಬುದು ಅಭಿಮಾನದ ವಿಚಾರ. ಜಾತಿ ಮತ ಭೇದವಿಲ್ಲದೆ, ಬಡವ ಶ್ರೀಮಂತರೆನ್ನದೆ, ಹಿಂದೂಗಳು, ಮುಸ್ಲಿಮರು ಮತ್ತು ಕ್ರಿಸ್ತಿಯನರು ಎಲ್ಲರೂ ನಿಧಿಗೆ ವಂತಿಗೆ ಕೊಡುವದರಲ್ಲಿ ಆಸಕ್ತಿ ವಹಿಸಿದರು. ಸಾವಿರ ರೂಪಾಯಿಗಳಿಗೂ ಮೇಲ್ಪಟ್ಟು ವಂತಿಗೆ ಕೊಟ್ಟ ಉಡುಪಿಯ ಕೆನರಾ ಮ್ಯೂಚುವಲ್ ... ಬೆನಿಫಿಟ್ಸ್ ಕಂಪೆನಿಗೂ, ಕೆನರಾ ಬ್ಯಾಂಕಿಂಗ್ ಕಾರ್ಪೊರೇಶನಿಗೂ, ಕೋ ... ಬ್ರದರ್ಸ್ ಲಿಮಿಟೆಡ್ (ಪ್ರಿನ್ಸ್ ಫಂಡ್ ಮತ್ತು ಕಂಪೆನಿ ಕೂಡಾ) ಇವರಿಗೂ ಅಷ್ಟರೂ ಬಳಿಕ ... ಕೊಟ್ಟ ಕೆನರಾ ಇಂಡಸ್ಟ್ರಿಯಲ್ ಎಂಡ್ ಬ್ಯಾಂಕಿಂಗ್ ಸಿಂಡಿಕೇಟ್ ಲಿಮಿಟೆಡ್ ಇವರಿಗೂ ಪ್ರತ್ಯೇಕ ಅಭಿನಂದನೆಗಳು. ಸಂತೋಷವಾಗಿ ಹಣವನ್ನು ವರ್ಗಾಯಿಸಿ ಕೊಟ್ಟುಕೊಂಡು ನಿಧಿ ಸಂಗ್ರಹದ ಕಾರ್ಯವನ್ನು ಸುಲಭಗೊಳಿಸಿದ ಕೆನರಾ ಬ್ಯಾಂಕಿನವರಿಗೂ ನಾವು ಕೃತಜ್ಞರಾಗಿದ್ದೇವೆ. ... ಉತ್ಸಾಹದಿಂದ ಹಣ ಸಂಗ್ರಹಿಸಿ, ಸಂಗ್ರಹಿಸಲು ನೆರವಾದ ಜಿಲ್ಲಾ ತಾಲೂಕು ಸಮಿತಿಯ ಕಾರ್ಯ ... ಕರ್ನಾಟಕ ಯುವಕ ಸಂಘ, ಕಾಲೇಜ, ಭಗಿನಿ ಸಮಾಜ ... ಜನತಾ ರಂಗಭೂಮಿ ... ನೊಂದಣಿದ ಸಂಘ ಸಂಸ್ಥೆಗಳು, ವಿದ್ಯಾರ್ಥಿಗಳಿಗೆ, ... ಹಾಗೂ ಇತರ ಸ್ವಯಂಸೇವಕರಿಗೆ ನಾವು ತುಂಬಾ ಕೃತಜ್ಞರಾಗಿಯೇ ಇದ್ದೇವೆ. ಹಾಗೆಯೇ ಆಗಾಗ ನಮ್ಮ ಪ್ರಕಟನೆಗಳನ್ನು ಮುದ್ರಿಸುತ್ತಿದ್ದು, ಸಂಗ್ರಹವು ಒಂದೇ ಸವನೆ ಏರುವಂತೆ ... ಪ್ರೋತ್ಸಾಹ ನೀಡಿದ ಜಿಲ್ಲೆಯ ವಾರ್ತಾ ಪತ್ರಿಕೆಗಳ ಉಪಕಾರವನ್ನೂ ನಾವು ಸ್ಮರಿಸುತ್ತೇವೆ.

ಕೊನೆಯದಾಗಿ ಮುಕ್ತಹಸ್ತದಿಂದ ನಿಧಿಗೆ ವಂತಿಗೆ ಕೊಟ್ಟ ಜಿಲ್ಲೆಯ ಎಲ್ಲಾ ಮಹಿಳೆಯರಿಗೂ ಮಹನೀಯರಿಗೂ ಸಮಿತಿಯ ಪರವಾಗಿ ನಾವು ವಂದನೆಗಳನ್ನರ್ಪಿಸುತ್ತೇವೆ.

ಕಸ್ತೂರಿ ಬಾ ಸ್ಮಾರಕ ನಿಧಿಗೆ ಇನ್ನೂ ವಂತಿಗೆಗಳು ಬರುತ್ತಲಿದ್ದು ಅವನ್ನು ಈ ತಿಂಗಳ ... ರ ವರೆಗೆ ಸ್ವೀಕರಿಸಲಾಗುವುದೆಂದು ... ಮಾಡಿದರು ... ಬಳಿಕ ವಂದನಾರ್ಪಣೆಯೊಂದಿಗೆ ಸಭಾಂತ್ಯವಾಯಿತು.

ಸಮಿತಿಯು ಕೂಡಿಸಿದ್ದ ... ಹಣವನ್ನು ಈ ದಿನ ಟೆಲಿಗ್ರಾಫಿಕ್ ಮನಿಯಾರ್ಡರ್ ಮೂಲಕ ಮುಂಬಯಿಯ ಪ್ರಧಾನ ಸಮಿತಿಗೆ ಕಳುಹಿ ಕೊಡಲಾಯಿತು.

ಹಿಂದೂ ಲಾ ಸುಧಾರಣೆ

ಸರ್. ಬಿ. ಎನ್. ರಾವ್ ಇವರ ಅಧ್ಯಕ್ಷತೆಯುಳ್ಳ ಹಿಂದೂ ಲಾ ಕಮಿಟಿಯು ಹಿಂದೂಗಳ ಕಾನೂನಿನಲ್ಲಿ ಸುಧಾರಣೆಯಾಗತಕ್ಕ ಅಂಶಗಳನ್ನು ಸೂಚಿಸಿ ಜನತೆಯ ಅವಗಾಹನೆಗೆ ಹಾಗೂ ವಿಮರ್ಶೆಗೆ ಪ್ರಕಟಿಸಿದೆ. ಇದು ಕೇಂದ್ರ ಎಸೆಂಬ್ಲಿಯಲ್ಲಿ ಮಂಜೂರಾತಿ ಹೊಂದಿದರೆ ಬ್ರಿಟಿಷ್ ಇಂಡಿಯಾದಲ್ಲಿ ವಾಸಿಸುವ ಹಿಂದೂಗಳಿಗೆಲ್ಲ ಅನ್ವಯಿಸುವುದು. ಅದರ ಮುಖ್ಯಾಂಶಗಳು ಹೀಗಿವೆ:—

೧ ಹಿಂದೂ ಎಂದರೆ ಹಿಂದೂ ಬೌದ್ಧ ಸಿಕ್ ಮತ್ತು ಜೈನ ಮತಾನುಯಾಯಿಗಳು.

೨ ಮದುವೆಯು ನ್ಯಾಯಬದ್ಧವೆನಿಸಬೇಕಾದರೆ (ಅ) ಲಗ್ನಕಾಲದಲ್ಲಿ ವಧೂವರರಿಗೆ ಬೇರೆ ಗಂಡಹೆಂಡತಿಯರಿದ್ದಿರಕೂಡದು. (ಆ) ವಧೂವರರಲ್ಲಿ ಯಾರಾದರೂ ಹುಚ್ಚು ಯಾ ಬುದ್ಧಿಭ್ರಂಶವುಳ್ಳವರಾಗಿರಕೂಡದು. (ಇ) ವಧೂವರರ ಸಂಬಂಧವು ಹಿಂದೂ ಸಂಪ್ರದಾಯವನ್ನು ವಿರೋಧಿಸಬಾರದು. (ಎಂದರೆ ಸಂಬಂಧದಲ್ಲಿ ಮಾವನಾಗುವವನು ಸೊಸೆಯಾಗುವವಳನ್ನು ಮದುವೆಯಾಗುವುದು, ಅಣ್ಣತಮ್ಮಂದಿರ ಮಕ್ಕಳ ಮದುವೆ-ಇತ್ಯಾದಿ. (ಈ) ವಧುವು ಹದಿನಾರು ವರುಷ ಪ್ರಾಯದೊಳಗಿನವಳಾದರೆ ರಕ್ಷಕನ (ಳ) ಸಮ್ಮತಿಬೇಕು (ಉ) ಮದುವೆಯನ್ನು ರಿಜಿಸ್ಟರ್ ಮಾಡಲೇಬೇಕೆಂಬ ಒತ್ತಾಯವಿಲ್ಲದಿದ್ದರೂ ನ್ಯಾಯಬದ್ಧವೆಂದು ಸಿದ್ಧಗೊಳಿಸುವ ಇಚ್ಛೆಯುಳ್ಳವರು ರಿಜಿಸ್ಟರು ಮಾಡಿಸಿಕೊಳ್ಳಬಹುದು. (ಊ) ಗಂಡನೊಡನೆ ವಾಸಿಸುವ ಪತ್ನಿಯನ್ನು ಗಂಡನು ಪೋಷಿಸಬೇಕು ಗಂಡನ ಭಯಂಕರ ವ್ಯಾಧಿ, ಮನೆಯಲ್ಲಿ ಬೇರೊಬ್ಬಳ ಅಕ್ರಮ ಸಹವಾಸ, ಕ್ರೂರತನ, ಗಂಡನಿಂದ ಪತ್ನಿ ಪರಿತ್ಯಾಗ, ಮತ ಪರಿತ್ಯಾಗ, ಲೋಕವೊಪ್ಪದ ಅನ್ಯಾಯ ಕೃತ್ಯ, ಇವುಗಳಿಂದಾಗಿ ಹೆಂಡತಿಯು ತನಗೆ ಗಂಡನಿಂದ ಸಿಗಬೇಕಾದ ಪೋಷಣೆಯ ಹಕ್ಕನ್ನು ಕಳೆದುಕೊಳ್ಳದೆಯೇ ಪ್ರತ್ಯೇಕ ವಾಸಿಸಬಹುದು.

(೩) **ಅಳಿಯಸಂತಾನ ಕಟ್ಟಿನವರೂ** ಈ ಕಾನೂನುಗಳೊಳಗೆ ಬರುವರು. ಅವರ ಆಸ್ತಿಪಾಸ್ತಿಗಳ ಹಕ್ಕುಗಳ ವಿಷಯದಲ್ಲಿಯೂ ಏರ್ಪಾಡುಗಳಿವೆ.

(೪) **ವರದಕ್ಷಿಣೆ** ಇಷ್ಟಾನುಸಾರ ಕೊಡಲೂ ತೆಗೆದುಕೊಳ್ಳಲೂಬಹುದು. ಆದರೆ ಅದರ ಹಕ್ಕು ವಧುವಿಗೆ ಇರತಕ್ಕದು. ವಧುವು ಅಪ್ರಾಯಸ್ಥಳಾಗಿದ್ದಲ್ಲಿ ವರನ ಕಡೆಯಿಂದ ವರದಕ್ಷಿಣೆ ಪಡೆದವರು ಅವಳು ಪ್ರಾಯಕ್ಕೆ ಬಂದಾಗ ಅವಳಿಗೆ ತೆರಲು ಬದ್ಧರು.

(೫) **ವಿವಾಹ ವಿಚ್ಛೇದನ** ಗಂಡ ಯಾ ಹೆಂಡತಿ ಏಳು ವರುಷಗಳಿಂದ ಗುಣಪಡಿಸಲಾಗದ ಹುಚ್ಚು, ಮನೋವಿಕಾರ, ಯಾ ಇತರ ಭಯಂಕರ ರೋಗ, ವ್ಯಭಿಚಾರ ರೋಗ ಇವುಗಳಿಂದ ನರಳುತ್ತಿದ್ದರೆ, ಗಂಡನು ಅಕ್ರಮ ಸಹವಾಸಕ್ಕಾಗಿ ಇನ್ನೊಬ್ಬಳನ್ನು ಮನೆಯಲ್ಲಿಟ್ಟುಕೊಂಡಿದ್ದರೆ, ಹೆಂಡತಿಯು ಇನ್ನೊಬ್ಬನ ಜೊತೆಯಲ್ಲಿ ಅಕ್ರಮ ಸಹವಾಸದಲ್ಲಿದ್ದರೆ ಯಾ ವ್ಯಭಿಚಾರದಿಂದ ಜೀವನಮಾಡುತ್ತಿದ್ದರೆ — ವಿವಾಹ ವಿಚ್ಛೇದನಕ್ಕೆ ಜಿಲ್ಲಾ ಕೋರ್ಟಿನಲ್ಲಾಗಲೀ ಹೈಕೋರ್ಟಿನಲ್ಲಾಗಲಿ ದಾವೆ ತರಬಹುದು. ಜಿಲ್ಲಾ ಕೋರ್ಟಿನಲ್ಲಿ ತೀರ್ಮಾನವಾಗದಿದ್ದರೆ ಅದಕ್ಕೆ ಹೈಕೋರ್ಟಿನ ಸಮ್ಮತಿ ಪಡೆಯಬೇಕು.

(೬) **ಉತ್ತರಾಧಿಕಾರದ ಹಕ್ಕು** ಸ್ವಾರ್ಜಿತ ಸೊತ್ತು ಸಂಪತ್ತಿನ ಉತ್ತರಾಧಿಕಾರವು ವಿಧವೆಯಾದ ಹೆಂಡತಿ, ಮಗ, ಮಗಳು, ಮೊದಲೇ ಸತ್ತ ಹಿರಿಯ ಮಗನ ಮಗ ಹೀಗೆ ಹಕ್ಕು ಹೋಗುವುದು ಹೆತ್ತವರಿಗೂ ಸೊಸೆಗೂ ಉತ್ತರಾಧಿಕಾರದ ಹಕ್ಕು ಇಲ್ಲ. ಪ್ರತ್ಯೇಕ ಅಶನಾರ್ಥದ ಹಕ್ಕಿನ ಏರ್ಪಾಡು ಇದೆ.

(೭) **ಅಶನಾರ್ಥವು** ಮೃತನ ತಂದೆ, ತಾಯಿ, ಪ್ರಾಯಕ್ಕೆ ಬಾರದ ಮಗ, ಮೊಮ್ಮಗ (ಮಗ ಸತ್ತಿದ್ದರೆ), ಮದುವೆಯಾಗದ ಮಗಳು, ವಿಧವೆಯಾದ ಮಗಳು ಯಾ ಸೊಸೆ (ಬೇರೆ ಅಶನಾರ್ಥವಿಲ್ಲದಿದ್ದಲ್ಲಿ ಮಾತ್ರ) ಮರಣ ಪರ್ಯಂತ ವಿವಾಹವಾಗದೆ ಮೃತನು ಇಟ್ಟುಕೊಂಡಿದ್ದ ಹೆಂಗಸು, ಇವಳಲ್ಲಿ ಹುಟ್ಟಿದ ಪ್ರಾಯಕ್ಕೆ ಬಾರದ ಮಗ ಯಾ ಮಗಳು ಇವರಿಗೆ ಪರಿಸ್ಥಿತಿಗನುಸಾರವಾಗಿ ಪರ್ಯಾಲೋಚಿಸಲ್ಪಟ್ಟು ಅಶನಾರ್ಥ ಕೊಡಲ್ಪಡುವುದು

Sri Narayan Guru Bank, Ltd.,

(Incorporated in British India Liability of Members is Limited)

Regd. Head Office HAMPANKATTA,

MANGALORE.

Branch UDIPI, S. K.

Authorised Capital	.... ..	**Rs 2,00000**
Issued Capital	.... .	**,, 1,00000**
Paid up Capital	....	**,, 56,150**

The Company has commenced Business by obtaining from the Government the Certificate of Commencement of Business on the 19th August, 1944 under the Indian Companies Act, 1913

Strong Board of Directors

Consent of the Central Government has been obtained under the Defence of India Rules 94 A "It must be distinctly understood that in giving this consent the Govt. of India does not take any responsibility for the financial soundness of any scheme or for the correctness of any of the statements made or opinion expressed with regard to them". The Government of India has been pleased to extend the period till the 13th January 1945 for the sale of shares.

A few shares at par available.

Rs 50 - per share. Re 1/ Entrance Fee per share.

Hundreds have already taken up shares!

WHY NOT YOU?

Current and Savings Bank Accounts are opened. Fixed Deposits are accepted Enquire for Rules of Business and rates of Interest.

MANGALORE JARAPPA,

President & Managing Director.

ದೇಶಭಕ್ತ

(೬ನೆ ಪುಟದಿಂದ ಮುಂದುವರಿದುದು)

೪

ದೇಶಭಕ್ತನ ಜೀವನದ ಕೊನೆಯ ಪುಟವನ್ನು ಬರೆಯುವ ದಿನ ದೇವಲೋಕದಲ್ಲಿ ಆನಂದಸಾಗರವೇ ಉಕ್ಕೇರುತ್ತಿತ್ತು. 33 ಕೋಟಿ ದೇವತೆಗಳ ಕಟ್ಟೆಗಳನ್ನು ಉದಾರ ಕಲ್ಪವೃಕ್ಷವು ತನ್ನ ಪುಷ್ಪಗಳಿಂದ ತುಂಬಿತ್ತು. ಅಮರಾವತಿಯು ಅಪೂರ್ವ ಶೃಂಗಾರದಿಂದ ಶೋಭಿಸುತ್ತಿತ್ತು. ನಾಲ್ಕು ಕಡೆಗಳಲ್ಲಿಯೂ ಮಂಗಳಗೀತವು ಕೇಳಿಬರುತ್ತಿತ್ತು.

ಬಹಳ ಮುಂಚೆಯೇ ದೇವತೆಗಳು ವಿಮಾನವನ್ನೇರಿ ಆಕಾಶದಲ್ಲಿ ಸಂಚರಿಸುತ್ತಾ, ದೇಶಭಕ್ತನ ಆಗಮನವನ್ನೇ ನಿರೀಕ್ಷಿಸುತ್ತಿದ್ದರು.

* * *

ಸಾಮ್ರಾಟನ ಅನುಯಾಯಿಗಳು ಭೀಷಣ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತರಾಗಿ ಒಂದು ದೊಡ್ಡ ಮೈದಾನದಲ್ಲಿ ನಿಂತಿದ್ದರು. ದೇಶಭಕ್ತನ ಮೇಲೆ 'ರಾಜದ್ರೋಹ'ದ ಅಪರಾಧವನ್ನು ಹೊರಿಸಿ ನ್ಯಾಯದ ನಾಟಕವು ಮುಕ್ತಾಯವಾಗಿದ್ದಿತು. ದೇಶಭಕ್ತನು ತನ್ನ ದುಷ್ಕಾರ್ಯಕ್ಕಾಗಿ ಪಶ್ಚಾತ್ತಾಪಪಟ್ಟು 'ಸಾಮ್ರಾಟರಿಗೆ ಜಯವಾಗಲಿ" ಎಂಬ ಘೋಷಣೆ ಮಾಡಬೇಕು ಇಲ್ಲವೇ ಗುಂಡಿನ ಬಾಯಿಗೆ ಸಿದ್ಧನಾಗಬೇಕು" ಎಂಬ ಆಜ್ಞೆಯನ್ನು ನ್ಯಾಯಾಧೀಶನು ಮಾಡಿದನು. ದೇಶಭಕ್ತನಿಗೆ ಪಶ್ಚಾತ್ತಾಪವೆಂಬುದು ಎಂದಿಗೂ ಇಲ್ಲ. ಸಾಮ್ರಾಟನ ಸೈನಿಕರು ಅವನನ್ನು ಸರಪಣಿಗಳಿಂದ ಕಟ್ಟಿ ಗುಂಡಿನ ಮುಂದೆ ನಿಲ್ಲಿಸಿದರು.

ಸಾಮ್ರಾಟನ ಪ್ರತಿನಿಧಿಯು ಹೇಳಿದನು, "ಅಪರಾಧಿ, ನ್ಯಾಯದ ರಕ್ಷಣೆಗಾಗಿ ಕೊನೆಯ ಬಾರಿ ಹೇಳುತ್ತೇನೆ. ಪಶ್ಚಾತ್ತಾಪಪಟ್ಟು ರಾಜರಲ್ಲಿ ವಿಶ್ವಾಸ ಪ್ರದರ್ಶನದ ಘೋಷಣೆಮಾಡು'.

ದೇಶಭಕ್ತ ಕೈದಿಯು ನಗುತ್ತಾ ಹೇಳಿದನು, "ನೀನು ನಿನ್ನ ಕೆಲಸವನ್ನು ಮಾಡು. ನನ್ನಿಂದ ಪಶ್ಚಾತ್ತಾಪವನ್ನು ನಿರೀಕ್ಷಿಸುವುದು ವ್ಯರ್ಥ. ನನ್ನಿಂದ 'ಸಾಮ್ರಾಟರಿಗೆ ಜಯವಾಗಲಿ" ಎಂದು ಹೇಳಿಸಲು ಅಷ್ಟೇಕೆ ಉತ್ಸುಕನಾಗಿದ್ದಿ? ನಿಜವಾದ ಪ್ರಭುವೆಲ್ಲಿದ್ದಾನೆ? ನಿನ್ನ ಹೇಳಿಕೆಯಂತೆ ಪ್ರಪಂಚದ ಲೂಟಿಗಾರನನ್ನು ಚಕ್ರವರ್ತಿಯೆಂದು ಭಾವಿಸಲೇ? ಸಾಮ್ರಾಟನು ಮಾನವತೆಯ ದ್ರೋಹಿಯಾಗುತ್ತಾನೆಯೇ? ಪ್ರಭುವು ನ್ಯಾಯದ ಕತ್ತನ್ನು ಮುರಿಯುತ್ತಾನೆಯೇ? ರಾಜನು ಬಲಾತ್ಕಾರವಾಗಿ ತನ್ನ ದಂಡವನ್ನು ಮತ್ತೊಬ್ಬರ ತಲೆಯ ಮೇಲಿಡುತ್ತಾನೆಯೇ? ಸಹೋದರನೇ, ನೀನು ಯಾರನ್ನು ಚಕ್ರವರ್ತಿಯೆಂದು ಕರೆಯುವೆಯೋ, ಅಂತಹವನನ್ನು ಮನುಷ್ಯತೆಯ ಉಪಾಸಕರು ಮತ್ತು ಮನುಷ್ಯತೆಯು 'ರಾಕ್ಷಸ'ನೆಂದು ಕರೆಯುವರು. ಅಂತಹುದರಿಂದ ಸಾಮ್ರಾಟನ ಜಯಘೋಷವೆಂದರೇನು? ನೀನು ನನ್ನನ್ನು ಗುಂಡಿನಿಂದಹೊಡೆದು ಸಾಯಿಸು. ಇದರಲ್ಲಿಯೇ ಸಾಮ್ರಾಟನ ಮಂಗಳ. ಇದರಿಂದಲೇ ಅವನ ಪಾಪದ ಕೊಡವು ಬೇಗನೆ ತುಂಬಿ ಅವನಿಗೆ ಮುಕ್ತಿಯು ದೊರಕುವುದು".

* * *

ದೇವಗಣದ ಮಧ್ಯ ಕುಳಿತಿರುವ ಮಾನವತೆಯೆಂಬ ತಾಯಿಯ ತೊಡೆಯ ಮೇಲೆ ಕುಳಿತ ದೇಶಭಕ್ತನೂ ಮತ್ತು 33 ಕೋಟಿ ದೇವತೆಗಳೂ ಪಂಚ ತತ್ವಗಳಿಂದ ಕೂಡಿದ ಒಂದು ಪ್ರತಿಮೆಯನ್ನು ಅತ್ಯಾಚಾರದ ಉಪಾಸಕರು ಗುಂಡಿನಿಂದ ಹೊಡೆದು ಕೆಡಹುದುದನ್ನು ನೋಡಿದರು.

ಆ ಬೊಂಬೆಯ ಪ್ರತಿಯೊಂದು ಕಣವನ್ನೂ ದೇವತೆಗಳು ರತ್ನದಂತೆ ಆರಿಸಿಕೊಂಡರು. ಬಹಳ ಹೊತ್ತಿನ ವರೆಗೂ ದೇವಲೋಕವು "ದೇಶಭಕ್ತನಿಗೆ ಜಯವಾಗಲಿ" ಎಂಬ ಹರ್ಷಧ್ವನಿಯಿಂದ ಪ್ರತಿಧ್ವನಿಗೈಯುತ್ತಿದ್ದಿತು.

(ಶ್ರೀ ಬೇಚನ ಶರ್ಮಾ 'ಉಗ್ರ'ರ ಕಥೆಯಿಂದ)

ನೋಟೀಸು.

ಉಡುಪಿ ಕೆಳಪೇಟೆಯಲ್ಲಿರುವ ರಾಮರಾವ್ ವಿ. ತಗ್ಗರ್ಸೆ ... ಪ್ರತಿನಿಧಿಸುವ ಕರ್ನಾಟಕ ...

ನಟ್ಟು ... ಕಾರಣ ಉದ್ದೇಶಪೂರ್ವಕ ... ಪುರಾಣಿಕರ ಮಗ K. ರಾಮಪುರಾಣಿಕರು ತಾರೀಕು 10-10-1944ರಲ್ಲಿ ನನ್ನನ್ನು ವಂಚಿಸಿ ಕಾರ್ಕಳಕ್ಕೆ ಕರಕೊಂಡು ಹೋಗಿ ಅಲ್ಲಿ ಕೆಲವರೊಟ್ಟಿಗೆ ಸೇರಿ ತಾ. 11-10-1944ನೆ ಬೆಳಿಗ್ಗೆ ನನ್ನನ್ನು ಒಂದು ಮನೆಯಲ್ಲಿ ಬಂಧನದಲ್ಲಿಡಿಸಿ ಅದೇ ದಿವಸ ರೂಪಾಯಿ 2000/-ಕ್ಕೆ ಒಂದು ಡಿಮ್ಯಾಂಡು ಪ್ರೋನೋಟನ್ನು "ರಾಮಕೃಷ್ಣ ಭಟ್ ವೈಕುಂಠ ಭಟ್ ತಗ್ಗರ್ಸೆ" ಎಂಬ ಹೆಸರಿನಿಂದ ... ನೋಟಿಗೆ ನನ್ನಿಂದ ಬಲಾತ್ಕಾರದಿಂದ ಹೆಬ್ಬೆಟ್ಟು ... "ರಾಮಕೃಷ್ಣ ಭಟ್ ವೈಕುಂಠ ಭಟ್ ತಗ್ಗರ್ಸೆ" ಎಂತ ... ಹಾಕಿಸಿ ಕೊಂಡಿರುತ್ತಾರೆ. ಈ ನೋಟಿಗೆ ನನ್ನಿಂದ ಯಾರ ಹೆಸರಲ್ಲಿ ನೋಟು ಬರೆಸಿಕೊಂಡದ್ದೆಂಬುದು ನನಗೆ ತಿಳಿಯಲಿಲ್ಲ. ಹೇಗೂ ಸದ್ರಿ ನೋಟಿಂದುಂಟಾಗುವ ಪ್ರತಿಫಲವು ಸಲ್ಲ. ಕಾನೂನು ಪ್ರಕಾರ ... ಸದ್ರಿ ನೋಟು ಬರೆಸಿಕೊಂಡವರಾಗಲಿ ಸದ್ರಿ ನೋಟಿನ ಹಕ್ಕು ಪಡೆಯುವವರಾಗಲಿ ನನ್ನ ಮೇಲೆ ... ಯಾವ ನಿವೃತ್ತಿ ... ಸರ್ವರೂ ತಿಳಿದಿರತಕ್ಕದ್ದು.

ರಾಮರಾವ ವಿ. ತಗ್ಗರ್ಸೆ

12—10—44



ಇದನ್ನು ತಿಳಿಯುವುದಕ್ಕೆ

ಯಾವ ಜೋತಿಷ್ಯವೂ ಬೇಕಿಲ್ಲ

ಇನ್ನು ಮುಂದಕ್ಕೆ ಪದಾರ್ಥಗಳ ಬೆಲೆಗಳು ಹೆಚ್ಚುವವೋ, ಇಳಿಯುವವೋ ಎಂಬುದನ್ನು ತಿಳಿಯುವದಕ್ಕೆ ಯಾವ ಅಪರೋಕ್ಷಜ್ಞಾನವೂ ಬೇಕಾಗಿಲ್ಲ. ಪದಾರ್ಥಗಳ ಬೆಲೆಗಳು ಇಳಿಮುಖವಾಗಿರುವ ಸಂಗತಿ, 1944ನೇ ಇಸವಿಯಲ್ಲಿ ಜನಗಳಿಗೆ ಉಂಟಾದ ಅನುಭವದಿಂದಲೇ ... ವ್ಯಕ್ತವಾಗುತ್ತದೆ. ಬೆಲೆಗಳು ಇಳಿಯುತ್ತವೆಂಬುದು ಸ್ಪಷ್ಟಪಡಿಸುವ ನಿದರ್ಶನಗಳು ನಮ್ಮ ಸುತ್ತುಮುತ್ತಲೂ ಇವೆ. ಬೆಲೆಗಳನ್ನು ಹತೋಟಿಗೆ ತರುವ ಉದ್ದೇಶದಿಂದ ಗೌರ್ನಮೆಂಟ್ ನವರು ಜಾರಿಗೆ ತಂದಿರುವ ... ಗಳು ಮತ್ತು ಅನ್ಯಾಯದಿಂದ ಲಾಭಸಂಪಾದನೆಯನ್ನು ಮಾಡಲು ಪ್ರಯತ್ನಿಸಿದ ವ್ಯಾಪಾರಿಗಳನೇಕರನ್ನು ದಂಡನೆಗೆ ಗುರಿಮಾಡಿದ್ದು, ... ವ್ಯಾಪಾರಿಗಳು ಬೆಲೆಗಳು ತಳಿಯುತ್ತವೆಂದು ... ಅವುಗಳು ಇನ್ನೂ ... ಮಾಡಿರುತ್ತವೆ. ಬೆಲೆಗಳ ಇಳಿತದ ಸೂಚನೆ ನೀವು ನೋಡಬಹುದು.

... ನಾನಾ ಬಗೆಯ ಸರಕುಗಳು, ಜಮೀನುಗಳು, ಕಟ್ಟಡಗಳು, ಆಭರಣಗಳು, ... ಬಂಡವಾಳವನ್ನು ಹಾಕುವುದಕ್ಕೆ ಇದು ಸಮಯವಲ್ಲ. ಕಾಲಚಕ್ರವು ಮುಂದುವರಿದಾಗೆಲ್ಲಾ ಅವುಗಳ ಬೆಲೆಯು ಇಳಿಯುವುದು ಖಂಡಿತ. ಅವುಗಳ ಮೇಲೆ ಹಾಕಿದ ರೂ 100 ಬಂಡವಾಳವು, ಒಂದು ವರ್ಷದ ಅನಂತರ ಇನ್ನೂ ಮುಂಚೆಯೇ ರೂ 70 ಬೆಲೆ ಅಥವಾ ಇನ್ನೂ ಕಡಿಮೆ ಬೆಲೆಗೆ ಇಳಿಯುವುದು.

ಈಗ ಬಂಡವಾಳವನ್ನು ವಿನಿಯೋಗಿಸಲು ಅತ್ಯುತ್ತಮ ಮಾರ್ಗಗಳು ಇವು — ... ಸರ್ಟಿಫಿಕೆಟ್, ಸೇವಿಂಗ್ಸ್ ಬ್ಯಾಂಕು ಖಾತೆಗಳು, ... ಮತ್ತು ... ಸೇವಿಂಗ್ಸ್ ಸರ್ಟಿಫಿಕೇಟುಗಳು.

ಬಟ್ಟೆಬರೆಗಳು, ... ಔಷಧಿಗಳು, ಔಷಧೀಯ ತಯಾರಿಕೆಗೆ ಬೇಕಾಗುವ ಸಾಮಗ್ರಿಗಳು, ಆಹಾರಕ್ಕೆ ಉಪಯುಕ್ತವಾದ ಧಾನ್ಯಗಳು, ಇವೇ ಮೊದಲಾದವುಗಳ ಬೆಲೆಯು ಇಳಿಯುತ್ತಿದೆ. ಇದೂ ಅಲ್ಲದೆ, ಬೆಲೆಗಳನ್ನು ಅಧೀನಕ್ಕೆ ತೆಗೆದುಕೊಳ್ಳುವ ಕಾನೂನುಗಳ ಕಾರ್ಯವು ಹೆಚ್ಚುತ್ತಿರುವದಲ್ಲದೆ, ಅವುಗಳನ್ನು ಉಲ್ಲಂಘಿಸಿದವರನ್ನು ಶಿಕ್ಷೆಗೆ ಗುರಿಮಾಡುವ ಏರ್ಪಾಟುಗಳೂ ಬಲವಾಗಲ್ಪಡುತ್ತಿವೆ. ಈ ಕಾರಣಗಳಿಂದ ಬೆಲೆಗಳು ಇನ್ನೂ ಇಳಿಯುತ್ತವೆಂದು ನೀವು ... ನಂಬಿರಿ.

ಹಣವನ್ನು

ಕೈಲಾದ ಮಟ್ಟಿಗೂ

ಉಳಿಸಿರಿ

ಉಳಿಸಿದ್ದನ್ನು

ವಿವೇಕಮಾರ್ಗ

ಗಳಲ್ಲಿ ವಿನಿಯೋಗಿಸಿರಿ

ಇದು ರಾಷ್ಟ್ರೀಯ ಯುದ್ಧಮುಖವು ಭಾರತೀಯರ ಸಮಕ್ಷಮದಲ್ಲಿ ಮಾಡುವ ಅರಿಕೆ

AAA 1115 KN.

ಕಸ್ತೂರಿ ಬಾ ರಾಷ್ಟ್ರೀಯ ಸ್ಮಾರಕ ನಿಧಿ ಸಮಿತಿ

ದಕ್ಷಿಣ ಕನ್ನಡ ಜಿಲ್ಲಾ ಸಮಿತಿಯ ವರದಿ

ಜಿಲ್ಲಾ ಕಸ್ತೂರ್ಬಾ ಬಾ ಸ್ಮಾರಕ ನಿಧಿ ಸಮಿತಿಯ ಸಭೆಯು ತಾ. 19ರಲ್ಲಿ ನವಭಾರತ ಆಫೀಸಿನಲ್ಲಿ ಶ್ರೀ. ಬಿ. ವೈಕುಂಠ ಬಾಳಿಗಾರವರ ಅಧ್ಯಕ್ಷತೆಯಲ್ಲಿ ಜರಗಿತು. ಸಮಿತಿಯ ಕಾರ್ಯದರ್ಶಿ ಶ್ರೀ. ಎಂ. ಡಿ. ಅಧಿಕಾರಿಯವರು ಸಭೆಯ ಮುಂದಿರಿಸಿದ ಸಮಿತಿಯ ವರದಿಯನ್ನು ಸರ್ವಾನುಮತದಿಂದ ಸ್ವೀಕರಿಸಲಾಯಿತು. ವರದಿಯ ವಿವರಗಳು ಈ ಕೆಳಗೆ ಕೊಟ್ಟಂತಿವೆ:—

"ಕಸ್ತೂರ್ಬಾ ರಾಷ್ಟ್ರೀಯ ಸ್ಮಾರಕ ನಿಧಿಗೆ ಹಣ ಸಂಗ್ರಹಿಸಲು ಆರಂಭಿಸಬೇಕೆಂಬ ನಿರ್ಧಾರವು ೫ ತಿಂಗಳ ಹಿಂದೆಯೇ ಬಂದಿದ್ದು ಏಪ್ರಿಲ್ ತಾ. ೩೦ರಂದು ಶ್ರೀ. ಎಂ. ಡಿ. ಅಧಿಕಾರಿ ಅವರ ಅಧ್ಯಕ್ಷತೆಯಲ್ಲಿ ಮಂಗಳೂರಲ್ಲಿ ಸೇರಿದ ಜಿಲ್ಲೆಯ ಪ್ರಮುಖ ಕಾಂಗ್ರೆಸ್ ಕಾರ್ಯಕರ್ತರ ಹಾಗೂ ಇತರರ ಸಭೆಯಲ್ಲಿ ನಿಧಿ ಸಂಗ್ರಹಿಸುವುದಕ್ಕಾಗಿ ಸಮಿತಿಯೊಂದು ರಚಿಸಲ್ಪಟ್ಟಿತು. ಅದರ ಕರ್ನಾಟಕ ಪ್ರಾಂತಿಕ ನಿಧಿ ಸಮಿತಿಯಿಂದ ಬೇರೆ ಕೆಲವು ಹೆಸರುಗಳನ್ನು ಒಳಗೊಂಡ ಸಮಿತಿಯೊಂದು ಈ ಜಿಲ್ಲೆಗಾಗಿ ಸೂಚಿಸಲ್ಪಟ್ಟುದರಿಂದ ಜುಲೈ ತಾ. ೨೦ರಂದು ಈ ಎರಡೂ ಸಮಿತಿಗಳಲ್ಲಿದ್ದ ಸದಸ್ಯರ ಸಂಯುಕ್ತ ಸಭೆಯೊಂದು ಶ್ರೀ. ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿ ಈ ಕೆಳಗಿನ ಕಾರ್ಯ ನಿರ್ವಾಹಕರನ್ನೊಳಗೊಂಡ ಸಮಿತಿಯು ರಚಿಸಲ್ಪಟ್ಟಿತು.

ಶ್ರೀಯುತರು ಬಿ. ವೈಕುಂಠ ಬಾಳಿಗ (ಅಧ್ಯಕ್ಷರು) ಎ. ಬಿ. ಶೆಟ್ಟಿ ಮತ್ತು ಜನರಾಜ ಹೆಗ್ಡೆ (ಉಪಾಧ್ಯಕ್ಷರು) ನಿರಂಜನ ಪುರುಷೋತ್ತಮ ಶೇಟ್ (ಕೋಶಾಧಿಕಾರಿ) ಎಂ. ಡಿ. ಅಧಿಕಾರಿ (ಪ್ರಧಾನ ಕಾರ್ಯದರ್ಶಿ) ಬಿ. ವಿ. ಬಾಳಿಗ (ಜತೆ ಕಾರ್ಯದರ್ಶಿ) ನಿಧಿ ಸಂಗ್ರಹಿಸುವ ಕಾರ್ಯದಲ್ಲಿ ಅಗತ್ಯವಾದ ವೆಚ್ಚಗಳಿಗಾಗಿ ಸಭೆ ಸೇರಿದ್ದ ಸದಸ್ಯರು ಪ್ರತ್ಯೇಕ ಸಂಭಾವನೆಗಳನ್ನು ಕೊಡಲೊಪ್ಪಿದರು

ಈ ಸಭೆಯಲ್ಲಾದ ನಿರ್ಣಯದಂತೆಯೇ ಪ್ರಧಾನ ಕಾರ್ಯದರ್ಶಿಯು ಜಿಲ್ಲೆಯ ವಿವಿಧ ತಾಲೂಕುಗಳಲ್ಲಿ ಸಂಚರಿಸಿ ತಾಲೂಕು ಸ್ಮಾರಕ ನಿಧಿ ಸಮಿತಿಗಳನ್ನು ರಚಿಸಿದರು. ಜಿಲ್ಲಾ ಸಮಿತಿಯು ಆಗಾಗ್ಗೆ ಸೇರುತ್ತಿದ್ದು ನಿಧಿ ಸಂಗ್ರಹದ ಕಾರ್ಯದ ಅವಲೋಕನ ಮಾಡುತ್ತಿತ್ತು

ತಾ. ೨೭ ಆಗಸ್ಟರಂದು ಸೇರಿದ ಸಮಿತಿಯ ಸಭೆಯಲ್ಲಿ ಸೆಪ್ಟೆಂಬರ ತಾ ೪ರಿಂದ ೧೦ರ ವರೆಗೆ ಕಸ್ತೂರ್ಬಾ ನಿಧಿ ಸಂಗ್ರಹದ ಸಪ್ತಾಹವನ್ನು ಆಚರಿಸಬೇಕೆಂಬ ನಿರ್ಧಾರವಾಯಿತು ಈ ಸಪ್ತಾಹದ ಆಚರಣೆಯ ಕಾಲದಲ್ಲಿ ಹೆಚ್ಚು ಹಣ ಸಂಗ್ರಹವಾಯಿತಲ್ಲದೆ, ನಿಧಿ ಒಟ್ಟುಗೂಡಿಸುವ ಕಾರ್ಯವು ಅದೇ ರೀತಿ ಮುಂದುವರಿಯಿತು. ಅಕ್ಟೋಬರ ತಾ. ೨ರ ತನಕ ಈ ಜಿಲ್ಲೆಯಲ್ಲಿ ಸಂಗ್ರಹವಾದ ಒಟ್ಟು ಹಣ ರೂ. ೨೬,೨೩೬-೭-೧ ತಾಲೂಕುಗಳಲ್ಲಿ ಪ್ರತ್ಯಪ್ರತ್ಯೇಕವಾಗಿ ಸಂಗ್ರಹವಾದ ನಿಧಿಯ ಸಂಖ್ಯೆ ಈ ರೀತಿಯಿದೆ. ಮಂಗಳೂರು ರೂ. ೭೨೯೭-೯-೦ ಕುಂದಾಪುರ ರೂ ೪೫೧-೦-೦ ಉಡುಪಿ ರೂ. ೧೦,೭೦೭-೭-೦ ಪುತ್ತೂರು ರೂ. ೧,೨೯೬-೦-೦ ಕಾರ್ಕಳ ರೂ. ೨,೫೭೧-೪-೦ ಕಾಸರಗೋಡು ರೂ. ೨,೧೨೦-೨-೦

ಉಡುಪಿ ತಾಲೂಕಿನಲ್ಲಿ ಸಂಗ್ರಹವಾದ ನಿಧಿಯೇ ಅತಿ ಹಿರಿದೆಂಬುದು ಇದರಿಂದ ಸ್ಪಷ್ಟವಾಗುವುದು. ಈ ಹಣವನ್ನು ಒಟ್ಟುಗೂಡಿಸುವ ಕಾರ್ಯವನ್ನು ಬಹು ದಕ್ಷತೆಯಿಂದ ನೆರವೇರಿಸಿದ ಉಡುಪಿ ತಾಲೂಕು ಸಮಿತಿಗೆ ಧನ್ಯವಾದ ಸಲ್ಲಬೇಕು.

ಈ ಜಿಲ್ಲೆಯಲ್ಲಿ ೩೦,೦೦೦ ರೂ. ಗಳಷ್ಟಾದರೂ ಸಂಗ್ರಹವಾಗಬೇಕೆಂದು ಪ್ರಾಂತಿಕ ಸಮಿತಿಯವರು ತಿಳಿಸಿದ್ದರು. ಆದರೆ ಅದಕ್ಕಿಂತಲೂ ನಾಲ್ಕು ಸಾವಿರಕ್ಕೆ ಮಿಕ್ಕ ಹೆಚ್ಚು ಹಣವನ್ನೇ ಒಟ್ಟುಗೂಡಿಸಲು ನಮಗೆ ಸಾಧ್ಯವಾಯಿತೆಂದು ತಿಳಿಸಲು ಸಂತೋಷವೆನಿಸುತ್ತದೆ.

ಈ ಹಣ ಸಂಗ್ರಹಿಸಲು ಆರಂಭಿಸಿದಾಗ ಜಿಲ್ಲೆಯ ದೇಶಪ್ರೇಮಿಗಳೆಲ್ಲ ಉದಾರ ಹಸ್ತದಿಂದ ಮುಂದಾದರೆಂಬುದು ಅಭಿಮಾನದ ವಿಚಾರ. ಜಾತಿ ಮತ ಭೇದವಿಲ್ಲದೆ, ಬಡವ ಶ್ರೀಮಂತರೆನ್ನದೆ, ಹಿಂದೂಗಳು, ಮುಸ್ಲಿಮರು ಮತ್ತು ಕ್ರೈಸ್ತರು ಎಲ್ಲರೂ ನಿಧಿಗೆ ವಂತಿಗೆ ಕೊಡುವದರಲ್ಲಿ ಆಸಕ್ತಿ ವಹಿಸಿದರು. ಸಾವಿರ ರೂಪಾಯಿಗಳಿಗೂ ಮೇಲ್ಪಟ್ಟು ವಂತಿಗೆ ಕೊಟ್ಟ ಉಡುಪಿಯ ಕೆನರಾ ಮ್ಯೂಚುವಲ್ ಎಶ್ಯೂರನ್ಸ್ ಕಂಪೆನಿಗೂ, ಕೆನರಾ ಬ್ಯಾಂಕಿಂಗ್ ಕೊರ್ಪರೇಶನಿಗೂ, ಕೊಚ್ಚಿಕಾರ್ ಬ್ರದರ್ಸ್ ಲಿಮಿಟೆಡ್ (ಟ್ರಸ್ಟ್ ಫಂಡ್ ಮತ್ತು ಕಂಪೆನಿ ಕೂಡಾ) ಇವರಿಗೂ ಅಲ್ಲದೆ ರೂ ೫೦೦ರಷ್ಟು ಕೊಟ್ಟ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟು ಲಿಮಿಟೆಡ್ ಇವರಿಗೂ ಪ್ರತ್ಯೇಕ ಅಭಿನಂದನೆಗಳು. ಮುಫತ್ತಾಗಿ ಹಣವನ್ನು ವಗಾಯಿಸಿಕೊಂಡು ನಿಧಿ ಸಂಗ್ರಹದ ಕಾರ್ಯವನ್ನು ಸುಲಭಗೊಳಿಸಿದ ಕೆನರಾ ಬ್ಯಾಂಕಿನವರಿಗೂ ನಾವು ಕೃತಜ್ಞರಾಗಿದ್ದೇವೆ. ಮೇಲಾಗಿ ಉತ್ಸಾಹದಿಂದ ಹಣ ಸಂಗ್ರಹಿಸಿದ, ಸಂಗ್ರಹಿಸಲು ನೆರವಾದ ಎಲ್ಲಾ ತಾಲೂಕು ಸಮಿತಿಗಳ ಕಾರ್ಯ ನಿರ್ವಾಹಕರಿಗೆ, ಕರ್ನಾಟಕ ಯುವಕ ಸಂಘ; ಕಾರ್ಕಳ, ಭಗಿನಿ ಸಮಾಜ ಮಂಗಳೂರು, ಜನತಾ ರಂಗಭೂಮಿ ಮಂಗಳೂರು, ಮೊದಲಾದ ಸಂಘ ಸಂಸ್ಥೆಗಳಿಗೆ, ವಿದ್ಯಾರ್ಥಿಗಳಿಗೆ, ಮಹಿಳೆಯರಿಗೆ ಹಾಗೂ ಇತರ ಸ್ವಯಂಸೇವಕರಿಗೆ ನಾವು ತುಂಬಾ ಕೃತಜ್ಞರಾಗಿದ್ದೇವೆ ಹಾಗೆಯೇ ಆಗಾಗ್ಗ ನಮ್ಮ ಪ್ರಕಟಣೆಗಳನ್ನು ಮುದ್ರಿಸುತ್ತಿದ್ದು, ಸಂಗ್ರಹವು ಒಂದೇ ಸವನೆ ಏಗುವಂತೆ ಸಂತತ ಪ್ರಚಾರ ನಡೆಸಿದ ಜಿಲ್ಲೆಯ ರಾಷ್ಟ್ರೀಯ ವಾರ್ತಾ ಪತ್ರಿಕೆಗಳ ಉಪಕಾರವನ್ನೂ ನಾವು ಸ್ಮರಿಸುತ್ತೇವೆ

ಕೊನೆಯದಾಗಿ ಮತ್ತೊಮ್ಮೆ ನಿಧಿಗೆ ವಂತಿಗೆ ಕೊಟ್ಟ ಜಿಲ್ಲೆಯ ಎಲ್ಲಾ ಮಹಿಳೆಯರಿಗೂ ಮಹನೀಯರಿಗೂ ಸಮಿತಿಯ ಪರವಾಗಿ ನಾನು ಧನ್ಯವಾದಗಳನ್ನರ್ಪಿಸುತ್ತೇನೆ

ಕಸ್ತೂರ್ಬಾ ಸ್ಮಾರಕ ನಿಧಿಗೆ ಇನ್ನೂ ವಂತಿಗೆಗಳು ಬರುವುದಿದ್ದರೆ ಅದನ್ನು ಈ ತಿಂಗಳ ಅಂತ್ಯದ ವರೆಗೆ ಸ್ವೀಕರಿಸಬಹುದೆಂದು ನಿರ್ಣಯವಾಯಿತು ಅಧ್ಯಕ್ಷರ ಉಪಸಂಹಾರ ಭಾಷಣ ಬಳಿಕ ಧನ್ಯವಾದಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಸಮಿತಿಯು ಕೂಡಿಟ್ಟಿದ್ದ ರೂಪಾಯಿಗಳನ್ನು ಈ ದಿನ ಟೆಲಿಗ್ರಾಫಿಕ್ ಮನಿಯಾರ್ಡರ್ ಮೂಲಕ ಮುಂಬಯಿಯ ಪ್ರಧಾನ ಸಮಿತಿಗೆ ಕಳಿಸಿ ಕೊಡಲಾಯಿತು.

ಹಿಂದೂ ಲಾ ಸುಧಾರಣೆ

ಸರ್. ಬಿ. ಎನ್. ರಾವ್ ಇವರ ಅಧ್ಯಕ್ಷತೆಯುಳ್ಳ ಹಿಂದೂ ಲಾ ಕಮಿಟಿಯು ಹಿಂದೂಗಳ ಕಾನೂನಿನಲ್ಲಿ ಸುಧಾರಣೆಯಾಗತಕ್ಕ ಅಂಶಗಳನ್ನು ಸೂಚಿಸಿ ಜನತೆಯ ಅವಗಾಹನೆಗೆ ಹಾಗೂ ವಿಮರ್ಶೆಗೆ ಪ್ರಕಟಿಸಿದೆ. ಇದು ಕೇಂದ್ರ ಎಸೆಂಬ್ಲಿಯಲ್ಲಿ ಮಂಜೂರಾತಿ ಹೊಂದಿದರೆ ಬ್ರಿಟಿಷ್ ಇಂಡಿಯಾದಲ್ಲಿ ವಾಸಿಸುವ ಹಿಂದೂಗಳಿಗೆಲ್ಲ ಅನ್ವಯಿಸುವುದು. ಅದರ ಮುಖ್ಯಾಂಶಗಳು ಹೀಗಿವೆ:—

೧ ಹಿಂದೂ ಎಂದರೆ ಹಿಂದೂ ಬೌದ್ಧ ಸಿಕ್ ಮತ್ತು ಜೈನ ಮತಾನುಯಾಯಿಗಳು.

೨ ಮದುವೆಯು ನ್ಯಾಯಬದ್ಧವೆನಿಸಬೇಕಾದರೆ (ಅ) ಲಗ್ನಕಾಲದಲ್ಲಿ ವಧೂವರರಿಗೆ ಬೇರೆ ಗಂಡಹೆಂಡತಿಯರಿದ್ದಿರಕೂಡದು. (ಆ) ವಧೂವರರಲ್ಲಿ ಯಾರಾದರೂ ಹುಚ್ಚು ಯಾ ಬುದ್ಧಿಭ್ರಂಶವುಳ್ಳವರಾಗಿರಕೂಡದು (ಇ) ವಧೂವರರ ಸಂಬಂಧವು ಹಿಂದೂ ಸಂಪ್ರದಾಯವನ್ನು ವಿರೋಧಿಸಬಾರದು. (ಎಂದರೆ ಸಂಬಂಧದಲ್ಲಿ ಮಾವನಾಗುವವನು ಸೊಸೆಯಾಗುವವಳ ಮದುವೆಯಾಗುವುದು, ಅಣ್ಣತಮ್ಮಂ ಮಕ್ಕಳ ಮದುವೆ-ಇತ್ಯಾದಿ. (ಈ) ವು ಹದಿನಾರು ವರುಷ ಪ್ರಾಯದೊಳ ವಳಾದರೆ ರಕ್ಷಕನ (ಳ) ಸಮ್ಮತಿ ಬೇ (ಉ) ಮದುವೆಯನ್ನು ರಿಜಿಸ್ಟರ್ ಮಾ ಲೇಬೇಕೆಂಬ ಒತ್ತಾಯವಿಲ್ಲದಿದ್ದರೂ ಯಬದ್ಧವೆಂದು ಸಿದ್ಧಗೊಳಿಸುವ ಇ ಯುಳ್ಳವರು ರಿಜಿಸ್ಟರು ಮಾಡಿಸಿಕೊ ಬಹುದು.(ಊ)ಗಂಡನೊಡನೆ ವಾಸಿ ಪತ್ನಿಯನ್ನು ಗಂಡನು ಪೋಷಿಸಬೇ ಗಂಡನ ಭಯಂಕರ ವ್ಯಾಧಿ, ಮನೆ ಬೇರೊಬ್ಬಳ ಅಕ್ರಮ ಸಹವಾಸ, ಕ ತನ, ಗಂಡನಿಂದ ಪತ್ನಿ ಪರಿತ್ಯಾಗ, ಪರಿತ್ಯಾಗ, ಲೋಕವೊಪ್ಪುವ ಅನ್ಯ ಕೃತ್ಯ, ಇವುಗಳಿಂದಾಗಿ ಹೆಂಡತಿಯು ಗ ಗಂಡನಿಂದ ಸಿಗಬೇಕಾದ ಪೋಷಣೆ ಹಕ್ಕನ್ನು ಕಳೆದುಕೊಳ್ಳದೆಯೇ ಪ್ರತ್ಯೇ ವಾಸಿಸಬಹುದು.

(ಎ) **ಅಳಿಯಸಂತಾನ** ಕಟ್ಟಿನವ ಈ ಕಾನೂನುಗಳೊಳಗೆ ಬರುವರು. ರ ಆಸ್ತಿಪಾಸ್ತಿಗಳ ಹಕ್ಕುಗಳ ವಿಷಯ ಲ್ಲಿಯೂ ಏರ್ಪಾಡುಗಳಿವೆ

(ಏ) **ವರದಕ್ಷಿಣೆ** ಇಷ್ಟಾನುಸಾರ ಡಲೂ ತೆಗೆದುಕೊಳ್ಳಲೂಬಹುದು. ಅದರ ಹಕ್ಕು ವಧುವಿಗೆ ಇರತಕ್ಕ ವಧುವು ಅಪ್ರಾಯಸ್ಥಳಾಗಿದ್ದಲ್ಲಿ ವರ ಡೆಯಿಂದ ವರದಕ್ಷಿಣೆ ಪಡೆದವರು ಪ್ರಾಯಕ್ಕೆ ಬಂದಾಗ ಅವಳಿಗೆ ಬದ್ಧರು.

(ಐ) **ವಿವಾಹ ವಿಚ್ಛೇದನ** ಯಾ ಹೆಂಡತಿ ಏಳು ವರುಷಗಳಿಂದ ಗುಣಪಡಿಸಲಾಗದ ಹುಚ್ಚು, ಮನೋವಿ ಯಾ ಇತರ ಭಯಂಕರ ರೋಗ, ವ ಚಾರ ರೋಗ ಇವುಗಳಿಂದ ನರಳುತ್ತಿ ರೆ, ಗಂಡನು ಅಕ್ರಮ ಸಹವಾಸಕ್ಕೆ ನ್ನೊಬ್ಬಳನ್ನು ಮನೆಯಲ್ಲಿಟ್ಟುಕೊಂಡ ರೆ, ಹೆಂಡತಿಯು ಇನ್ನೊಬ್ಬನ ಜೊತೆ ಲ್ಲಿ ಅಕ್ರಮ ಸಹವಾಸದಲ್ಲಿದ್ದರೆ ಯಾ ಭಿಚಾರದಿಂದ ಜೀವನಮಾಡುತ್ತಿದ್ದರೆ ವಾಹ ವಿಚ್ಛೇದನಕ್ಕೆ ಜಿಲ್ಲಾ ಕೋ ಲ್ಲಾಗಲೀ ಹ್ಯಾಕೋರ್ಟಿನಲ್ಲಾಗಲಿ ತರಬಹುದು. ಜಿಲ್ಲಾ ಕೋರ್ಟಿನಲ್ಲಿ ವರ್ಣನವಾಗದಿದ್ದರೆ ಅದಕ್ಕೆ ಹ್ಯಾಕೋ ರ್ಟಿನ ಸಮ್ಮತಿ ಪಡೆಯಬೇಕು.

(ಒ) **ಉತ್ತರಾಧಿಕಾರದ** ಹ ಸ್ವಾರ್ಜಿತ ಸೊತ್ತು ಸಂಪತ್ತಿನ ಉತ್ತ ಧಿಕಾರವು ವಿಧವೆಯಾದ ಹೆಂಡತಿ, ಮಗಳು, ಮೊದಲೇ ಸತ್ತ ಹಿರಿಯ ನ ಮಗ ಹೀಗೆ ಹಕ್ಕು ಹೋಗುವು ಹೆತ್ತವರಿಗೂ ಸೊಸೆಗೂ ಉತ್ತರಾಧಿ ದ ಹಕ್ಕು ಇಲ್ಲ. ಪ್ರತ್ಯೇಕ ಅಶನಾರ್ಥ ಹಕ್ಕಿನ ಏರ್ಪಾಡು ಇದೆ.

(ಓ) **ಅಶನಾರ್ಥ**ವು ಮೃತನ ತಾಯಿ, ಪ್ರಾಯಕ್ಕೆ ಬಾರದ ಮಗ, ಮ್ಮಗ (ಮಗ ಸತ್ತಿದ್ದರೆ), ಮದುವೆ ಗದ ಮಗಳು, ವಿಧವೆಯಾದ ಮಗ ಯಾ ಸೊಸೆ (ಬೇರೆ ಅಶನಾರ್ಥವಿಲ್ಲದಿ ಮಾತ್ರ) ಮರಣ ಪರ್ಯಂತ ವಿವಾಹ ಗದೆ ಮೃತನು ಇಟ್ಟುಕೊಂಡಿದ್ದ ಸು, ಇವಳಲ್ಲಿ ಹುಟ್ಟಿದ ಪ್ರಾಯಕ್ಕೆ ವ ಮಗ ಯಾ ಮಗಳು ಇವರಿಗೆ ಗನುಸಾರವಾಗಿ ಪರ್ಯಾಲೋಚಿಸಲ್ಪ ಅಶನಾರ್ಥ ಕೊಡಲ್ಪಡುವುದು.

Sri Narayan Guru Bank, Ltd.,

(Incorporated in British India. Liability of Members is Limited)

Regd. Head Office: HAMPANKATTA,

MANGALORE.

Branch: UDIPI, S. K.

Authorised Capital	....	**Rs 2,00000**
Issued Capital	....	**,, 1,00000**
Paid up Capital	....	**,, 56,150**

The Company has commenced Business by obtaining from the Government the Certificate of Commencement of Business on the 19th August, 1944 under the Indian Companies Act, 1913.

Strong Board of Directors

Consent of the Central Government has been obtained under the Defence of India Rules 94 A. "It must be distinctly understood that in giving this consent the Govt. of India does not take any responsibility for the financial soundness of any scheme or for the correctness of any of the statements made or opinion expressed with regard to them". The Government of India has been pleased to extend the period till the 13th January 1945 for the sale of shares.

A few shares at par available.

Rs. 50/- per share. Re. 1/- Entrance Fee per share.

Hundreds have already taken up shares!

WHY NOT YOU?

Current and Savings Bank Accounts are opened. Fixed Deposits are accepted. Enquire for Rules of Business and rates of Interest.

MANGALORE JARAPPA,

President & Managing Director.

ದೇಶ ಭಕ್ತ

(ನೆ ಪುಟದಿಂದ ಮುಂದುವರಿದುದು)

ಶಭಕ್ತನ ಜೀವನದ ಕೊನೆಯ ಪುಟ ಬರೆಯುವ ದಿನ ದೇವಲೋಕದಲ್ಲ ದಸಾಗರವಿ ಉಕ್ಕೇರುತ್ತಿತ್ತು. 33 ಕೋಟಿ ದೇವತೆಗಳ ಕಟ್ಟೆಗಳನ್ನು ಉದಾರ ವೃಕ್ಷವು ತನ್ನ ಪುಷ್ಪಗಳಿಂದ ತುಂಬಿ ಅಮರಾವತಿಯು ಅಪೂರ್ವ ಶೃಂಗಾರ ಶೋಭಿಸುತ್ತಿತ್ತು. ನಾಲ್ಕು ಕಡೆಗ ಮಂಗಳಗೀತವು ಕೇಳಿಬರು

ಕಳ ಮುಂಚೆಯೇ ದೇವತೆಗಳು ವಿ ವನ್ನೇರಿ ಆಕಾಶದಲ್ಲಿ ಸಂಚರಿಸುತ್ತಾ ಕ್ತನ ಆಗಮನವನ್ನೇ ನಿರೀಕ್ಷಿಸು .

*　　*　　*

ಮ್ರಾಟನ ಅನುಯಾಯಿಗಳು ಭೀ ಶಸ್ತ್ರಾಸ್ತ್ರಗಳಿಂದ ಸುಸಜ್ಜಿತರಾಗಿ ದೊಡ್ಡ ಮೈದಾನದಲ್ಲಿ ನಿಂತಿದ್ದ ಶಭಕ್ತನ ಮೇಲೆ 'ರಾಜದ್ರೋಹ' ಪರಾಧವನ್ನು ಹೊರಿಸಿ ನ್ಯಾಯದ ಪ್ರಮ ಕ್ತಾಯವಾಗಿದ್ದಿತು. ದೇಶ ತನ್ನ ದುಷ್ಕಾರ್ಯಕ್ಕಾಗಿ ಪಶ್ಚಾತ್ತಾಪಪಟ್ಟು "ಸಾಮ್ರಾಟರಿಗೆ ಜಯವಾ ಎಂಬ ಘೋಷಣೆ ಮಾಡಬೇಕು ಇ ಗುಂಡಿನ ಬಾಯಿಗೆ ಸಿದ್ಧನಾಗಬೇ ಎಂಬ ಆಜ್ಞೆಯನ್ನು ನ್ಯಾಯಾಧೀಶ ಇಡಿದನು. ದೇಶಭಕ್ತನಿಗೆ ಪಶ್ಚಾತ್ತಾಪ ಎಂದಿಗೂ ಇಲ್ಲ. ಸಾಮ್ರಾ ಸೈನಿಕರು ಅವನನ್ನು ಸರಪಣಿಗಳಿಂ ಗುಂಡಿನ ಮುಂದೆ ನಿಲ್ಲಿಸಿದರು. ಮ್ರಾಟನ ಪ್ರತಿನಿಧಿಯು ಹೇಳಿದ ಅಪರಾಧಿ, ನ್ಯಾಯದ ರಕ್ಷಣೆಗಾಗಿ ಬಾರಿ ಹೇಳುತ್ತೇನೆ. ಪಶ್ಚಾತ್ತಾ ರಾಜರಲ್ಲಿ ವಿಶ್ವಾಸ ಪ್ರದರ್ಶನದ ಣೆ ಮಾಡು'.

ಶಭಕ್ತ ಕೈದಿಯು ನಗುತ್ತಾ ಹೇಳಿ "ನೀನು ನಿನ್ನ ಕೆಲಸವನ್ನು ಮಾ ನನ್ನಿಂದ ಪಶ್ಚಾತ್ತಾಪವನ್ನು ನಿರೀಕ್ಷಿಸುವುದು ವ್ಯರ್ಥ. ನನ್ನಿಂದ 'ಸಾಮ್ರಾಟರಿಗೆ ಜಯವಾಗಲಿ" ಎಂದು ಹೇಳಿಸಲು ಅಷ್ಟೇಕೆ ಉತ್ಸುಕನಾಗಿದ್ದಿ? ನಿಜವಾದ ಪ್ರಭುವೆಲ್ಲಿದ್ದಾನೆ? ನಿನ್ನ ಹೇಳಿಕೆಯಂತೆ ಪ್ರಪಂಚದ ಲೂಟಿಗಾರನನ್ನು ಚಕ್ರವರ್ತಿಯೆಂದು ಭಾವಿಸಲೇ? ಸಾಮ್ರಾಟನು ಮಾನವತೆಯ ದ್ರೋಹಿಯಾಗುತ್ತಾನೆ ಯೇ? ಪ್ರಭುವು ನ್ಯಾಯದ ಕತ್ತನ್ನು ಮುರಿಯುತ್ತಾನೆಯೇ? ರಾಜನು ಬಲಾತ್ಕಾರವಾಗಿ ತನ್ನ ದಂಡವನ್ನು ಮತ್ತೊಬ್ಬರ ತಲೆಯ ಮೇಲಿಡುತ್ತಾನೆಯೇ? ಸಹೋದರನೇ, ನೀನು ಯಾರನ್ನ ಚಕ್ರವರ್ತಿಯೆಂದು ಕರೆಯುವೆಯೋ ಅಂತಹವನನ್ನು ಮನುಷ್ಯತೆಯ ಉಪಾಸಕರು ಮತ್ತು ಮನುಷ್ಯತೆಯು 'ರಾಕ್ಷಸ'ನೆಂದು ಕರೆಯುವರು. ಅಂತಹುದರಿಂದ ಸಾಮ್ರಾಟನ ಜಯ ಘೋಷವೆಂದರೇನು? ನೀನು ನನ್ನನ್ನು ಗುಂಡಿನಿಂದ ಹೊಡೆದು ಸಾಯಿಸು. ಇದರಲ್ಲಿಯೇ ಸಾಮ್ರಾಟನ ಮಂಗಳ. ಇದರಿಂದಲೇ ಅವನ ಪಾಪದ ಕೊಡವು ಬೇಗನೆ ತುಂಬಿ ಅವನಿಗೆ ಮುಕ್ತಿಯು ದೊರಕುವುದು".

*　　*　　*

ದೇವಗಣದ ಮಧ್ಯೆ ಕುಳಿತಿರುವ ಮಾನವತೆಯೆಂಬ ತಾಯಿಯ ತೊಡೆಯ ಮೇಲೆ ಕುಳಿತ ದೇಶಭಕ್ತನೂ ಮತ್ತು 33 ಕೋಟಿ ದೇವತೆಗಳೂ ಪಂಚ ತತ್ವಗಳಿಂದ ಕೂಡಿದ ಒಂದು ಪ್ರತಿಮೆಯನ್ನು ಅತ್ಯಾಚಾರದ ಉಪಾಸಕರು ಗುಂಡಿನಿಂದ ಹೊಡೆದು ಕೆಡಹಿದುದನ್ನು ನೋಡಿದರು.

ಆ ಬೊಂಬೆಯ ಪ್ರತಿಯೊಂದು ಕಣವನ್ನೂ ದೇವತೆಗಳು ರತ್ನದಂತೆ ಆರಿಸಿಕೊಂಡರು. ಬಹಳ ಹೊತ್ತಿನ ವರೆಗೂ ದೇವಲೋಕವು "ದೇಶಭಕ್ತನಿಗೆ ಜಯವಾಗಲಿ" ಎಂಬ ಹರ್ಷಧ್ವನಿಯಿಂದ ಪ್ರತಿಧ್ವನಿಗೈಯ್ಯುತ್ತಿದ್ದಿತು.

(ಶ್ರೀ ಬೇಚನ ಶರ್ಮಾ 'ಉಗ್ರ'ರ ಕಥೆಯಿಂದ)

ನೋಟೀಸು.

ನ ಕಸಬೆಯಲ್ಲಿರುವ ರಾಮರಾವ ತಗ್ಗರಸೆ ಈ ಮೂಲಕ ತಿಳಿಸುವುದೇನೆಂದರೆ:

ಬಾವಿಸಲ್ಲ ಹುಟ್ಟುಬಿದ ನಿವಾಸದ ಉಪ್ಪಿನಲ್ಲಿರುವ ನಂಕಪ್ಪ ಪ್ರಭು ಗ K ರಾಮಪ್ರಭಾಕರು ತಾರೀಕು -1944ರಲ್ಲಿ ನನ್ನನ್ನು ವಂಚಿಸಿ ಕಾ ಕರಕೊಂಡು ಹೋಗಿ ಅಲ್ಲಿ ಕೆಲವರೊ ೧೦ ತಾ. 11 10 1944ನೆ ಬೆಳಗ್ಗೆ ಒಂದು ಮನೆಯಲ್ಲಿ ಬಂಧನದಲ್ಲಡಿಸಿ ನ್ನ ರೂಪಾಯಿ 2000/-ಕ್ಕೆ ಒಂದು ಡಿ. ೧೦ ನೋಟನ್ನು "ರಾಮಕೃಷ್ಣ ಭಟ್ ಭಟ್ ತಗ್ಗರಸೆ" ಎಂಬ ಹೆಸರಿನಿಂದ ಪ್ರಿ ನೋಟಿಗೆ ನನ್ನಿಂದ ಬಲಾತ್ಕಾರ ಸಿಟ್ಟಿ ವ "ರಾಮಕೃಷ್ಣ ಭಟ್ ನ್ ಭಟ್ ತಗ್ಗರಸೆ" ಎಂತ ಪತ್ರವು ಕೂ ಸಿ ಕೊಂಡಿರುತ್ತಾರೆ. ಈ ಮೇರೆಗೆ ನ ಮಾರ ಹೆಸರಲ್ಲಿ ನೋಟು ಬರಕೊಂಡು ನನಗೆ ತಿಳಿಯುದಿಲ್ಲ. ಯೇನೂ ನ ಟುಂಬದ ಪ್ರತಿಫಲವುಳ್ಳದಲ್ಲ ಕಾ ಪ್ರಕಾರ ನಿಂಧಾನಗತಕ್ಕ ಸ್ವೂ ಅಲ್ಲ. ಸದ್ರಿ ಬರಕೊಂಡರಾಗ್ಗ ಸದ್ರಿ ನೋಟಿನ ನಡಿಯುವವರಾಗ್ಗಿ ನನ್ನ ಮೇಲೆ ನಾಲ್ವರೂ ಯಾವ ನಿವೃತ್ತಿ ಹೊ ಅರಸರಲ್ಲ ಸಂಬಂಧವನ್ನು ಸರ್ವರೂ ತಿ ಕ್ಕದ್ದು.

ರಾಮರಾವ ವಿ. ತಗ್ಗರಸೆ
12—10—44



ಇದನ್ನು ತಿಳಿಯುವುದಕ್ಕೆ
ಯಾವ ಜೋತಿಷ್ಯವೂ ಬೇಕಿಲ್ಲ

ಇನ್ನು ಮುಂದಕ್ಕೆ ಪದಾರ್ಥಗಳ ಬೆಲೆಗಳು ಏರುತ್ತವೆಯೋ, ಇಳಿಯುವವೋ ಎಂಬುದನ್ನು ಹೇಳುವುದಕ್ಕೆ ಯಾವ ಅಪರೋಕ್ಷ ಜ್ಞಾನವೂ ಬೇಕಾಗಿಲ್ಲ. ಪದಾರ್ಥಗಳ ಬೆಲೆಗಳು ಇಳಿಮುಖವಾಗಿರುವ ಅಂಶವು 1943 ನೇ ಇಸವಿಯಲ್ಲಿ ಜನಗಳಿಗೆ ಉಂಟಾದ ಅನುಭವದಿಂದಲೇ ಜನಸಾಮಾನ್ಯಕ್ಕೆ ನಂಬಿಕೆಯನ್ನುಂಟುಮಾಡಿರುತ್ತದೆ. ಬೆಲೆಗಳು ಇಳಿಯುತ್ತಿವೆಯೆಂದು ಸ್ಪಷ್ಟಪಡಿಸುವ ನಿದರ್ಶನಗಳು ನಮ್ಮ ಸುತ್ತುಮುತ್ತಲೂ ಇವೆ. ಬೆಲೆಗಳನ್ನು ಹತೋಟಿಗೆ ತರುವ ಉಪಕ್ರಮದಿಂದ ಗಾಬರಿಗೊಂಡವರು ಚಲಾವಣೆಗೆ ತಂದಿರುವ ಉಪಾಯಗಳು ಮತ್ತು ಅನ್ಯಾಯದಿಂದ ಲಾಭಸಂಪಾದನೆಯನ್ನು ಮಾಡಲು ಪ್ರಯತ್ನಿಸಿದ ವ್ಯಾಪಾರಿಗಳನೇಕರನ್ನು ದಂಡನೆಗೆ ಗುರಿಮಾಡಿದ್ದು, ಈ ಕಾರಣಗಳು, ಬೆಲೆಗಳು ತಲೆಯೆತ್ತುವುದನ್ನು ನಿಲ್ಲಿಸಿದ್ದಲ್ಲದೆ, ಅವುಗಳು ಇನ್ನೂ ತಗ್ಗುತ್ತಲೇ ಹೋಗುವಂತೆ ನಿಸ್ಸಂದೇಹವಾಗಿ ಮಾಡಿರುತ್ತವೆ. ಬೆಲೆಗಳ ಇಳಿತದ ಏಟಿಗೆ ನೀವು ಸಿಕ್ಕಬೇಡಿ.

ಕೈಗಾರಿಕೆ ಸಾಮಾನುಗಳು, ವ್ಯಾಪಾರದ ಸರಕುಗಳು, ಜಮೀನುಗಳು, ಕಟ್ಟಡಗಳು, ಆಭರಣಗಳು, ಇವುಗಳ ಮೇಲೆ ಬಂಡವಾಳವನ್ನು ಹಾಕುವುದಕ್ಕೆ ಇದು ಸಮಯವಲ್ಲ. ಕಾಲಚಕ್ರವು ಮುಂದುವರಿದಹಾಗೆಲ್ಲಾ ಇವುಗಳ ಬೆಲೆಯು ಇಳಿಯುವುದು ಖಂಡಿತ. ಇವುಗಳ ಮೇಲೆ ಹಾಕಿದ ರೂ 100 ಬಂಡವಾಳವು, ಒಂದು ವರ್ಷ ಅಥವ ಇನ್ನೂ ಮುಂಚೆಯೇ ರೂ 10 ಅಥವ ಇನ್ನೂ ಕಡಿಮೆ ಬೆಲೆಗೆ ಇಳಿಯುವುದು.

ಈಗ ಬಂಡವಾಳವನ್ನು ವಿನಿಯೋಗಿಸಲು ಅತ್ಯುತ್ತಮ ಮಾರ್ಗಗಳು ಇವು — ಕೋ ಆಪರೇಟಿವ್ ಸೊಸೈಟಿಗಳು, ಸೇವಿಂಗ್ಸ್ ಬ್ಯಾಂಕು ಖಾತೆಗಳು, ಪೋಸ್ಟ್ ಆಫೀಸ್ ಸೇವಿಂಗ್ಸ್ ಸರ್ಟಿಫಿಕೇಟುಗಳು, ಗೌರ್ನಮೆಂಟ್ ಲೋನುಗಳು ಮತ್ತು ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳು.

ಬಟ್ಟೆಬರೆಗಳು, ಜನರ ಸಾಮಾನುಗಳು, ಔಷಧಿಗಳು, ಔಷಧಿಗಳ ತಯಾರಿಕೆಗೆ ಬೇಕಾಗುವ ಸಾಮಗ್ರಿಗಳು, ಆಹಾರಕ್ಕೆ ಉಪಯುಕ್ತವಾದ ಧಾನ್ಯಗಳು, ಇವೇ ಮೊದಲಾದವುಗಳ ಧಾರಣೆಯು ಇಳಿಯುತ್ತಿದೆ. ಇದೂ ಅಲ್ಲದೆ, ಬೆಲೆಗಳನ್ನು ಅಧೀನಕ್ಕೆ ತೆಗೆದುಕೊಳ್ಳುವ ಕಾನೂನುಗಳ ಕಾಠಿಣ್ಯವು ಹೆಚ್ಚುತ್ತಿರುವುದಲ್ಲದೆ, ಇವುಗಳನ್ನು ಉಲ್ಲಂಘಿಸಿದವರನ್ನು ಶಿಕ್ಷೆಗೆ ಗುರಿಮಾಡುವ ಏರ್ಪಾಟುಗಳೂ ಬಲವಾಗುತ್ತಿವೆ. ಈ ಕಾರಣಗಳಿಂದ ಬೆಲೆಗಳು ಇನ್ನು ಇಳಿಯುತ್ತವೆಂದು ನೀವು ಖಂಡಿತವಾಗಿಯೂ ನಂಬಿರಿ.

ಹಣವನ್ನು
ಕೈಲಾದ ಮಟ್ಟಿಗೂ
ಉಳಿಸಿರಿ
ಉಳಿಸಿದ್ದನ್ನು
ವಿವೇಕಮಾರ್ಗ
ಗಳಲ್ಲಿ ವಿನಿಯೋ
ಗಿಸಿರಿ

ಇದು ರಾಷ್ಟ್ರೀಯ ಯುದ್ಧಮುಖವು ಭಾರತೀಯರ ಸಮಕ್ಷಮದಲ್ಲಿ ಮಾಡುವ ಅರಿಕೆ

AAA 1115 KN.

The Pangal Nayak Bank Limited.

(Incorporated in 1920)

Registered Office Court Road, UDIPI

Branches at- **Udipi, Mangalore, Katapadi, Kanhangad, Kinnigoli and Nileshwar,** South Canara District

Discounting of demand and short term negotiable instruments for approved parties, granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms acceptance of Fixed, Current, Savings Bank and Cumulative deposits and every other type of up to date Banking service is at the disposal of all the sections of the discreet public

For business proper please enquire at any one of our Offices

15th April 1944

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ, . ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡು ನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳ ಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ

ಏಜೆಂಟರು:—ಗದಗ.-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್ ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 6ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ2ಬೊಟ್ಟು (ವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು —ಡಾ. ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ, ಶ್ರೀ ಆರ್ ಎಸ್. ಶೆಣೈ, ರಥಬೀದಿ, ಡಾ. ಸಿ. ಜಿ. ಆಚಾರ್ಸ್ ಫಾರ್ಮಸಿ, ಡಾ. ಕೆ ಶೇಷಗಿರಿ ಪೈ, L. I. M.; ಡಾ. ವೆಂಕಟರಾವ್, ಕೊರಡ್ಕಲ್, ನವಭಾರತ ಬುಕ್ ಡಿಪೊ

ಬಾಣಂತಿಯರ ಸಲುವಾಗಿಯೇ ದೇಶಿ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ **ಅಮೋಘವಾದ ಮಧುರದ್ರವ ರಸಾಯನ.** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟದೆ)

೮ ಔನ್ಸಿನ ೨ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ. ಕ

— ಮಕ್ಕಳನ್ನು ಹಡೆಯುವದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರಪೀಸಲ್ಲಿ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜ ೧೦ಆಣೆ

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ— ದಾಸಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್ಸ ಆರ್. ಎಲ್. ಕವಲದಾಸಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ,

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು, ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ 1—12—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ವಾಲಿಸಂಗ್ರಿ ಬರದಕ್ಷಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಬಹುದು. ಉಡುಪಿ ಏಜಂಟರು — ನವಭಾರತ ಬುಕ್ ಡಿಪೊ

ನೋಡಿದರೆ ಸಾಕು! ಓದದೆ ಬಿಡಲಾರಿರಿ!!

ಮುಗಿದಾಗ ಮುಗಿದು ಹೋಯಿತಲ್ಲಾ ಎನಿಸುವ, ತೊಡಗಿದಾಗ ಹೇಗೆ ಮುಗಿಯುವುದಿದು ಎಂದು ಕೌತುಕಪಡಿಸುವ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ ಬೆಲೆ ೦-೧೦-೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಪೊಳಿಸಿ ಹರಿಯುವ ಮಾತು.

ಪ್ರೇಮಪ್ರವಾಹವು ಹೇಗ ಹರಿಯುತ್ತದೆ! ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮಪ್ರವಾಹ

ಸ್ವಾರಸ್ಯವಾದ ೫ ಕತೆಗಳ ಸಂಗ್ರಹ ಬೆಲೆ ೦ ೬—೦

ಬಹಿರಂಗವಾಗಿ ಅಲ್ಲವಾದರೂ ಅಂತರಂಗವಾಗಿ ನೋಡತಕ್ಕ

ಆರ್ಟ್ ಚಿತ್ರಗಳು

ಹಲವಾರು ಸುಂದರಿಯರ ನೈಜಚಿತ್ರಗಳ ಕಟ್ಟು. ಬೆಲೆ ೦—೬—೦

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಕುತ್ತಿವೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ ೧—೮—೦

ಎಲ್ಲಕ್ಕೂ ಟ. ಖ ಪ್ರತ್ಯೇಕ. ಕೆಲವೇ ಪ್ರತಿಗಳು ಉಳಿದಿವೆ.

ಬರಯಿರಿ:— **ಅಂತರಂಗ ಕಾರ್ಯಾಲಯ, ಉಡುಪಿ.**

(ಉಡುಪಿಯ ನವಭಾರತ ಪುಸ್ತಕ ಭಂಡಾರದಲ್ಲಿಯೂ ದೊರೆಯುತ್ತವೆ.)

EDITED PRINTED & PUBLISHED BY K H. SHETTY AT THE NAVAYUGA PRESS, UDIPI, S, INDIA

Regd. No. M. 3618. ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6. Estd. 1921 ಸ್ಥಾಪನೆ.

NAVAYUGA

ನವಯುಗ

ವರ್ಷ ೨೪ ವಾರ ೮] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ [Vol. 24 No. 8

Founder SRI A. B. SHETTY.

ಉಡುಪಿ ● 26—10—1944 ● ಮಂಗಳೂರು.

ದಿ ಜುಪಿಟರ್

ಜನರಲ್ ಇನ್ಶೂರೆನ್ಸ್ ಕಂಪೆನಿ, ಲಿ., ಬೊಂಬಾಯಿ.

ವಿಮೆಯುಳ್ಳವ ಬೇಕೆ? ಏಜಂಟರಾಗುವಿರಾ?

-ಹಾಗಾದರೆ ಕೂಡಲೇ-

ಪಿ. ಬಿ. ನಾಯಕ್, ಉಡುಪಿ. ದಕ್ಷಿಣ ಕನ್ನಡದ ಚೀಫ್ ಏಜಂಟ್.

-ಇವರಿಗೆ ಬರೆಯಿರಿ-

1 ಕೋಟಿಗೆ ಮಿಕ್ಕಿ ವ್ಯವಹಾರ ಈ ವರುಷವೇ ರಜತೋತ್ಸವ!

The Jupiter General Insurance Company Ltd

ಅಂತರಂಗ

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6

ಆಸ್ತಿ ಮಾರಾಟಕ್ಕಿದೆ

ಉಡುಪಿ ತಾಲೂಕು ಉಳಿಯಾರ ಗೋಳಿ ಮತ್ತು ಪಾಂಗಾಳ ಗ್ರಾಮದ ಕರಾವಳಿಯಲ್ಲಿ ಶೀರ್ವೆ ಜಾತಾ 115ಮು ದಿ ಅಕ್ಕಿ ಗೇಣಿಸಿಕ್ಕುವ ಒಮ್ಮುಖವಾದ ಆಸ್ತಿಯು ಮಾರಾಟಕ್ಕಿದೆ. ಕಾಯಸ್ ಉಳ್ಳವರು ಕೂಡಲೇ ಈ ಕೆಳಗಿನ ವಿಳಾಸಕ್ಕೆ ಬರೆಯತಕ್ಕದ್ದು.

'S'

C/o ನವಯುಗ, ಉಡುಪಿ.

Inferior Parental Longevity-

This has a correlation to the expectation of life of the offspring.

Therefore a judicious selection of marriage partners must go with better health and sanitation, etc. to improve the expectation of life of the generation to come.

THE CANARA MUTUAL ASSURANCE CO., LTD.,

UDIPI (S India)

ಅಮೃತಾಂಜನ

ತಲೆನೋವನ್ನ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗೆ ಗೂ ಎದೆನೋವು, ಗಾಯಗಳು ಚಾತು ಕೊಳ್ಳುವುದು, ಜೇಳು ವಿಷದಿಂದಾದ ಬೇನೆ ಪಕ್ಷವಾತ, ನೋವಿನ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ

REGD.

ಪಟ್ಟಣಗಳಲ್ಲಿ ಮತ್ತು ಸಹ ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

Transact with

The Vijaya Bank Ltd.

H. O. MANGALORE.

Branches all over the District and in Bombay city,

for all kinds of Banking business

ದಿ ವಿಜಯಾ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು, ಮಂಗಳೂರು.

ಜಿಲ್ಲೆಯ ಎಲ್ಲಾ ಕಡೆಗಳಲ್ಲಿ ಮತ್ತು ಮುಂಬಾಯಿ ನಗರದಲ್ಲಿ ನಮ್ಮ ಶಾಖೆಗಳು ಎಲ್ಲಾ ತರದ ಬೇಂಕಿಂಗ್ ವ್ಯವಹಾರಗಳು ನಡೆಸಲ್ಪಡುವುವು.

ENGLISH MADE EASY

ಇಂಗ್ಲಿಷ್ ಏನೂ ತಿಳಿಯದವರು 'ಸುಲಭದಲ್ಲಿ ಇಂಗ್ಲಿಷ್' ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೇ ಕಲಿತುಕೊಳ್ಳಬಹುದು

ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ

ಬೆಲೆ ಬರೇ ರೂ. 1—4—0 ರೂ 1—4—0ನ್ನು ಮನಿ ಆರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತೆ.

ನವಭಾರತ ಪುಸ್ತಕ ಭಂಡಾರ,

ರಿಜಿಸ್ಟರ್ಡ್ ಪಬ್ಲಿಷರ್ಸ್ ಎಂಡ್ ಬುಕ್ ಸೆಲ್ಲರ್ಸ್,

ಉಡುಪಿ, ದ. ಕ.

ನಮ್ಮಲ್ಲಿ ಸಿಗುವ ಪುಸ್ತಕಗಳ ಕೆಟಲಾಗಿಗೆ 0 2 0 ಸ್ಟಾಂಪಿನೊಂದಿಗೆ ಬರೆಯಿರಿ.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ, ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,

Moolky, S K.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಮೂರನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ ರೂ. 1—8—0 ಮಾತ್ರ

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

☞ ಮುಟ್ಟಾಗುವಿಕೆ ☜

ಹಲತಿಂಗಳಿಂದ ಕಟ್ಟಾಗಿದ್ದರೂ, ಕಪ್ಪವ ಗರ್ಭಧಾರಣೆ ಅಥವಾ ಇನ್ನಾವ ಕಾರಣದಿಂದಲೂ—'ಕುಮಾರಿ' (Govt Regd) ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು, ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ 3/- ಕೈಮೀರಿದ ಕೇಸುಗಳಿಗೆ ರೂ.5,(ವಿ.ಪಿ.12 ಆಣೆ ಅಲಾಯಿದ) Mrs P. DEVEE. F. D. 5. (N) Tollygunge, Calcutta ಪ್ರಾಕ್ಟಿಸ್ಟ್, ಪೋಸ್ಟಲ್ ಸ್ಟೋರ್ಸ್, ಮಂಗಳೂರು

ದೀಪಾವಳಿಯ ಅಭಿವಂದನೆ

ದಿ ಬೊಂಬೇ ಲೈಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಇದರ

ದಕ್ಷಿಣ ಭಾರತದ ಮದ್ರಾಸ್ ಶಾಖಾ ಕಾರ್ಯದರ್ಶಿಗಳು ಮತ್ತು ಬೊಂಬಾಯಿ ನಗರದ ವಿಶಿಷ್ಟ ಪ್ರತಿನಿಧಿಗಳಾದ

ಕೊಟ್ಟಿಕಾರ್ ಬ್ರದರ್ಸ್ ಲಿಮಿಟೆಡ್

ಇವರು

ತಮ್ಮ ಎಲ್ಲಾ ಪೋಲಿಸಿದಾರರಿಗೂ, ಪ್ರತಿನಿಧಿಗಳಿಗೂ, ವೈದ್ಯಕೀಯ ಪರೀಕ್ಷಕರಿಗೂ, ಹಿತೈಷಿಗಳಿಗೂ ತಮ್ಮ ಹಾರ್ದಿಕವಾದ ದೀಪಾವಳಿಯ ಅಭಿವಂದನೆಗಳನ್ನು ಅರ್ಪಿಸುತ್ತಾರೆ

Decorate your home with

Life-like Oil Painting

of those dear and near to you

M. S. Shirale,

MODERN STUDIO,

UDIPI.



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಮಂಜೆ ವ್ಯಾಪಾರಿಯರ್,

ರಥಬೀದಿ, ಉಡುಪಿ.

CHAMPAE'S

Snow & Castrex

Sole Distributers for (India.)

Sukhananda Stores

Santhekatte, UDIPI, S. K.

★ ಏಳು ಹುಚ್ಚರು ★

Seven fools

ಬರೆಯುವವರು: ಶ್ರೀ. ವೈಕಾಡಿ ವೆಂಕಟಕೃಷ್ಣರಾಯರು, ಬೆಂಗಳೂರು ನಗರ

ಇದೀಗ ಎರಡು ವರ್ಷಗಳ ಹಿಂದಿನ ಮಾತು. ಆಗ ನಾನು ನಮ್ಮೂರಿನಲ್ಲಿದ್ದೆ. ಟ್ರೈನಿಂಗ್ ಪಾಸಾಗಿ ನಮ್ಮೂರಿನಲ್ಲಿಯೇ ಶಾಲಾ ಮಾಸ್ತರನಾಗಿದ್ದೆ. ನಮ್ಮೂರೆಂದರೆ ಅದೊಂದು ದೊಡ್ಡ ಪಟ್ಟಣವೂ ಅಲ್ಲ. ಹಾಗೆಂತ ತೀರ ಚಿಕ್ಕ ಹಳ್ಳಿಯೂ ಅಲ್ಲ. ನಮ್ಮೂರಿನಲ್ಲಿ ಒಂದು ಸಣ್ಣ ಪೇಟೆ, ಅದರಲ್ಲೊಂದು ಹೊಟೇಲು, ನಮ್ಮೂರಿನ ವೆಂಕಪ್ಪಯ್ಯ ಅದರ ಮಾಲೀಕರು. ಈಗ ಅದು ಕೃಷ್ಣ ಭವನವಾಗಿದೆ. ಆದರೆ ಇನ್ನೂ ಒಂದು ಕೋಣೆಗಿಂತ ಅದರ ವಿಸ್ತಾರ ಹರಡಿಲ್ಲ. ೨ ಮೇಜುಗಳು, ಕನ್ನಡಿ, ಕವಾಟು ಇಷ್ಟು ವೆಂಕಪ್ಪಯ್ಯನವರ ಕೃಷ್ಣ ಭವನದ ವೈಭವ.

ಕಣಜರ ಭಂಡಾರಿ ನಮ್ಮೂರಿನ ಕ್ಷೌರಿಕ. ಇವನ ತಾತನ ಕಾಲದಿಂದ ಗಿರಿಯಪ್ಪ, ಸಂಕಪ್ಪ ಎಲ್ಲರೂ ನಮ್ಮೂರಿನಲ್ಲೇ ಕಸುಬು ಮಾಡಿಕೊಂಡಿದ್ದವರು. ಸ್ವರಾಜ್ಯ ಬಂದ ಮೇಲೆ ಮನೆಮನೆ ತಿರುಗಿ ಬೇಸರಪಟ್ಟು ಕಣಜರ ಈಗ ಒಂದು ಸ್ವಂತ ಅಂಗಡಿ (ಸೆಲೂನು) ತೆರೆದಿದ್ದಾನೆ.

ಒಂದು ಡಾಕ್ಟರರ ರೂಮು, ಕೆಲವು ಬೀಡಾಬೀಡಿ ಅಂಗಡಿಗಳು, ಒಂದು ಮಾರ್ಕೆಟ್ಟು, ಇವೆಲ್ಲ ನಮ್ಮೂರಿಗೆ ಇತ್ತೀಚೆಗೆ ಅಮದಾಗಿ ಬಂದವುಗಳು.

ನಾನು ಆಗ ಹೊಸತಾಗಿ ಸಂಸಾರ ಹೂಡಿದ್ದೆ ಅಷ್ಟೆ. ಉಗಾದಿ ಹಬ್ಬಕ್ಕೆಂದು ಮಾವ ಬಂದು ನನ್ನ ಸರಸುವನ್ನು ಎರಡು ದಿನದ ಮಟ್ಟಿಗೆ ಕರಕೊಂಡು ಹೋಗಿದ್ದರು. ಅಳಿಯ ಬಾರದಿದ್ದರೂ ಚಿಂತೆ ಇಲ್ಲ. ಮಗಳು ಬಂದೇ ತೀರಬೇಕು ನಮ್ಮ ಮಾವನಿಗೆ. ಹೀಗಾಗಿ ಮನೆಯಲ್ಲಿ ನಾನೊಬ್ಬನೇ ಇರಬೇಕಾಗಿ ಬಂದಿತ್ತು.

ಅಂದು ಭಾನುವಾರ, ತಿಂಗಳ ಕೊನೆಯ ಭಾನುವಾರ, ಕೈಯಲ್ಲಿ ಬಿಡಿಕಾಸೂ ಇರಲಿಲ್ಲ. ತಿಂಗಳು ತಿಂಗಳಿಗೆ ನೂರಾರು ರೂಪಾಯಿ ಸಂಬಳ ಬರುವವರ ಕೈಯಲ್ಲೇ ತಿಂಗಳ ಅಂತ್ಯಕ್ಕೆ ಸೊನ್ನೆ. ಇನ್ನು ನಮ್ಮಂತಹ ಮೂರು ತಿಂಗಳಿಗೊಮ್ಮೆ ಅಲಸನಾರ್ಥ ತೆಗೆದುಕೊಳ್ಳುವ ಹಳ್ಳಿಯ ಬಡ ಮಾಸ್ತರರ ಗತಿ ಏನು? ನಮ್ಮ ಹತ್ತಿರ ಕಾಸಿಲ್ಲ ಎಂದರೆ ಖರ್ಚು ನಿಲ್ಲುತ್ತದೆಯೆ? ಕನ್ನಡಿ ಎದುರು ನಿಂತು ನೋಡಿದರೆ ಕ್ಷೌರ ವಿಪರೀತ ಬೆಳೆದಿತ್ತು. ನೋಡಿದರೆ ಇವನೇನು ಸನ್ಯಾಸಿಯೋ ಅನ್ನುವಂತಿತ್ತು. ಎಷ್ಟು ಯೋಚಿಸಿದರೂ ಹಣ ಸಂಪಾದಿಸುವ ದಾರಿ ಹೊಳೆಯಲಿಲ್ಲ.

ಥಟ್ಟನೆ ಯೋಚನೆಯೊಂದು ಹೊಳೆಯಿತು, ಕೂಡಲೇ ಹೋಗಿ ಸರಸು ಪೆಟ್ಟಿಗೆ ಹುಡುಕಿದೆ. ಸಿಕ್ಕಿತು ಆ ನಿಧಿ, ಕರವಸ್ತ್ರದಲ್ಲಿ ಕಟ್ಟಿಟ್ಟ ಎರಡು ರೂಪಾಯಿಯ ಗಂಟು. ಅವಳ ಸೋದರ ಮಾವ ಕೊಟ್ಟ ಹಣವೆಂತ ಹಿಂದೆ ಹೇಳಿದ್ದಳು. ಆಪತ್ಕಾಲಕ್ಕೆ ಕೈ ಹಿಡಿದ ಸತಿಯೇ ನನ್ನ ದೇವ ಎಂದು ಸರಸವನ್ನೊಮ್ಮೆ ಕೊಂಡಾಡಿ, ಕರವಸ್ತ್ರವನ್ನೊಮ್ಮೆ ಮುದ್ದಿಟ್ಟೆ.

ನಾಪಿತನ ದರ್ಶನಕ್ಕಾಗಿ ಹೊರಟದ್ದಾಯಿತು. ಸಮಯ ಇನ್ನೂ 9 ತಾಸು. ದಾರಿಯಲ್ಲಿ ಒಮ್ಮೆ ವೆಂಕಪ್ಪಯ್ಯನ ಹೊಟೆಲಿಗೆ ಹೋಗಬೇಕೆನ್ನಿಸಿತು. ಕಿಸೆಯಲ್ಲಿ ದುಡ್ಡಿದ್ದ ಮೇಲೆ ಕೇಳಬೇಕೆ? ಸರಿ, ಪ್ರವೇಶ ಮಾಡಿದ್ದಾಯ್ತು. ಯಾವಾಗಲೂ ತಿರಸ್ಕಾರದಿಂದ (ಕಡಿ ಗಿರಾಕಿ ಎಂದು) ನೋಡುತ್ತಿದ್ದ ವೆಂಕಪ್ಪ ಇಂದು ಅತ್ಯಂತ ಆದರದಿಂದ ಬರಮಾಡಿಕೊಂಡು ತನ್ನ ಸಿಂಹಾಸನದಲ್ಲಿ ಕುಳ್ಳಿರಿಸಿ "ಮಾಣಿ, ಒಂದು ಕಪ್ ಸ್ಪೆಷಲ್ ಕಾಫಿ ಮಾಡಿ ಕೊಡು ನಮ್ಮ—ಡಿ ಮಾಸ್ತರರಿಗೆ" ಎಂದು ಹುಕುಂ ಕೊಟ್ಟು Madras Mail ಪತ್ರಿಕೆಯೊಂದನ್ನು ನನ್ನ ಕೈಗಿತ್ತು ಅದರಲ್ಲಿ ಚಿತ್ರಿಸಿದ Curly wee ತೋರಿಸಿ ಇದರ ಅಂದಾಜು ಹೇಗೆ ಸ್ವಾಮಿ ಎಂದು ಪೀಠಿಕೆ ಹಾಕಿದ. ಇಂಗ್ಲಿಷೆಂದರೆ ಮೂರು ಮಾರು ಹಾರುವ ನಮ್ಮ ವೆಂಕಪ್ಪಯ್ಯ, ತನ್ನ ಮಾಣಿಯನ್ನು ಸಹ ಇಂಗ್ಲಿಷ್ ಇದೆಯೆಂದು ನಮ್ಮ ಶಾಲೆಗೆ ಕಳಿಸದೆ ಸಂಸ್ಕೃತಕ್ಕೆ ಹಾಕಿದವ, ಈಗ ಪೂರಾ ಇಂಗ್ಲಿಷಿನ Madras Mail ಹಿಡಿದು ಕುಣಿಯುತ್ತಾನಲ್ಲ ಅನ್ನಿಸಿತು ನನಗೆ.

"ಏನು ಹೇಳ್ತೀರಿ ಮಾಸ್ತರರೆ, ನಿಮ್ಮ ಹಾಗೆ ಎರಡು ಅಕ್ಷರ ಇಂಗ್ಲಿಷ್ ಬರುತ್ತಿದ್ದರೆ ನಾನು ಇಂದು ಬೇಕಾದ ಕಾರುಬಾರು ಮಾಡುತ್ತಿದ್ದೆ" ಎಂದು ಶುರು ಮಾಡಿದ ವೆಂಕಪ್ಪಯ್ಯ "ಸ್ವಾಮಿ ಅದರಲ್ಲಿ ಬರೆದದ್ದೇನು ಹೇಳಿ" ಅಂದ. Curly wee ಅದೊಂದು ವ್ಯಂಗ್ಯ ಚಿತ್ರ-ಶಿರೋಲೇಖನದಷ್ಟು ಅಕ್ಷರದಲ್ಲಿ— Seven fools ಎಂದು, ಚಿತ್ರದಲ್ಲಿ ಒಂದು ಕಡೆ ಏಳು ಜನ ಹುಚ್ಚರು ಎದುರಿಗಿರುವ ನಾಲ್ಕು ಜನ ಹುಚ್ಚರನ್ನು ನೋಡಿ ನಗುತ್ತಿದ್ದರು. ನನಗಿದರ ಗೂಢಾರ್ಥವಾಗಲಿಲ್ಲ. ವೆಂಕಪ್ಪಯ್ಯ ಮತ್ತೆ ಪ್ರಾರಂಭಿಸಿದ "ನೋಡಿ ಸ್ವಾಮಿ, Seven ಅಂದರೆ 7 1 ಎಂದರೆ '6' ಸಂಖ್ಯೆ, ಎರಡು 'o'ಗಳಿಗೆ 30, 'l'ಗೆ 12 's' ಗೆ 19 ಒಟ್ಟು 67 6+7=13 ಇದನ್ನು 9ರಿಂದ ಭಾಗಿಸಿದರೆ 1 ಶೇಷ (ಇದಾವ ಬ್ರಹ್ಮನ ಗಣಿತವೋ?) ಚಿತ್ರದಲ್ಲಿ ನೋಡಿ. ಅದಕ್ಕೆ ಸರಿಯಾಗಿ 7 ಜನ ಹುಚ್ಚರು 4 ಜನ ಹುಚ್ಚರನ್ನು ನೋಡಿ ನಗುತ್ತಾರೆ. ಆದ್ದರಿಂದ ಇವತ್ತು ಓಪನಿಂಗ್ 7. ಕ್ಲೋಸಿಂಗ್ 1. ಡಬ್ಲಿಂಗ್ 74" ಅಂದು ಒಮ್ಮೆ ನೆಗೆದು ಹಾರಿದ. ಇವನು ಇಲ್ಲಿ ಉಪನ್ಯಾಸದಲ್ಲಿ ಮಗ್ನನಾಗಿದ್ದಾಗ ಅತ್ತ ನಾಲ್ಕು ಗಿರಾಕಿಗಳು ಯಥೇಷ್ಟ ತಿಂದು ದುಡ್ಡು ಕೊಡದೆ ಹೊರ ಬಾಗಿಲಿನಿಂದ ಇಳಿದು ಹೋದುದು ಇವನ ಗಮನಕ್ಕೆ ಬರಲೇ ಇಲ್ಲ. ನನ್ನೊಡನೆ "ಕೊಡಿ ಸ್ವಾಮಿ ಒಂದು ರುಪಾಯಿ. ನಾಳೆ ನಿಮಗೆ 72 ರೂಪಾಯಿ ಬರುತ್ತೆ" ಎಂದ.

ವೆಂಕಪ್ಪಯ್ಯನ ಉಪನ್ಯಾಸದಿಂದ ತಲೆನೋವು ಹಿಡಿದವನಾಗಿ ಅಲ್ಲಿಂದ ಹೊರಟೆ. ಕಾಫಿ ಬಿಟ್ಟಿಯಾಯಿತಲ್ಲ ಎಂದು ಮಾತ್ರ ಸಂತೋಷ. ಮಾಮೂಲಿನಂತೆ ಮಾರ್ಕೆಟಿನೊಳಗೆ ಕಾಲಿಟ್ಟೆ. ಲೂಸಿ ಬಾಯಿ ಚಿಗುರು ಬದನೆ ಕಾಯಿ ಇಟ್ಟುಕೊಂಡು ಏನೋ ಗುಣಿಸುತ್ತಾ ಭಾಗಿಸುತ್ತಾ ಇದ್ದಳು. ಇವಳ ಕೈಯಲ್ಲೂ ಒಂದು Madras Mail! ಇವಳಾವಾಗ ಮಾದ್ರಿ ಶಾಲೆಯ ಮೆಟ್ಟಿಲು ಹತ್ತಿದಳು ಅನ್ನಿಸಿತು. ನನ್ನನ್ನು ನೋಡಿದವಳೇ "ಏನು ಸ್ವಾಮಿ ಬದನೆ ಕಾಯಿ ಬೇಡವೇ, ಚಿಗುರು ಇದೆ, ಮನೆಯಲ್ಲಿ ಅಮ್ಮ ಇಲ್ವೇ" ಅಂದಳು. ಬೇಡವಾಗಿದ್ದರೂ ಹತ್ತಿರ ಹೋಗಿ ಬದನೆ ಕಾಯಿ ಪರೀಕ್ಷೆಗೆ ಪ್ರಾರಂಭಿಸಿದೆ. ಲೂಸಿ ಬಾಯಿ ಇದ್ದಕ್ಕಿದ್ದಂತೆ ಮಾಯಕ, ಎರಡು ನಿಮಿಷದ ನಂತರ ಬಂದಳು. ಎಲ್ಲಿಗೆ ಹೋಗಿದ್ದೆ ಎಂದು ಕೇಳುವ ಮುಂಚೆಯೇ ನಂಬ್ರ 71ರ ಮಹಿಮೆ ಹೇಳತೊಡಗಿದಳು "ಇವತ್ತು ನಮ್ಮ ಏಸು ಕ್ರೂಜೆ ಹತ್ತಿದ ದಿನ. ಕ್ರೂಜೆ ಆಕಾರ ಎರಡು ಕಡೆಯಿಂದಲೂ 7 ಆದ್ದರಿಂದ ಓಪನಿಂಗ್ 7 ಖಂಡಿತ ಎಂತ ಖಚಿತಪಡಿಸಿದಳು. ಹತ್ತಿರದಲ್ಲಿದ್ದ ದನ ಬಂದು ಬುಕ್ಕೆ ಎಲ್ಲ ಕೆಡವಿ ಬದನೆ ಕಾಯಿ ಹಾಳು ಮಾಡಿದ್ದು ಅವಳ ಗಮನಕ್ಕೆ ಬಂದರೂ "ಹೋಗಲಿ ಸ್ವಾಮಿ. ಇವತ್ತಿನ ನಂಬ್ರ ಬಂದರೆ ದುಡ್ಡೆಲ್ಲಾ ಅದರಲ್ಲಿದೆ" ಎಂದು ಸಮಾಧಾನಪಟ್ಟಳು.

ಈಗ ನನ್ನಲ್ಲಿ ಇದೊಂದು ದೊಡ್ಡ ಸಮಸ್ಯೆ. ಇಷ್ಟು ಸುಲಭದಿಂದ ದುಡ್ಡು ಮಾಡುವ ದಾರಿ ಇದಾವುದು ಎಂದು. ಕೊನೆಗೆ ನಾನು ಹೊರಟ ಕಾರ್ಯವನ್ನು ನೆನಸಿಕೊಂಡು ಕಣಜರ ಭಂಡಾರಿ ಭೇಟಿಗೆ ಹೊರಟೆ. "ಬನ್ನಿ ಸ್ವಾಮಿ" ಅಂದ ಮಹಾರಾಯ. "ಏನು ಫೇಸ್ ಕ್ಷೌರವೋ ಕ್ರಾಪೋ" ಎಂದ. ಕ್ರಾಪು ಎಂದೊಡನೆ ಕತ್ತರಿ ಪ್ರಯೋಗಕ್ಕೆ ಪ್ರಾರಂಭಿಸಿದ. ಕ್ರಾಪು ಮುಗಿಸಿ ಗಡ್ಡಕ್ಕೆ ಸಾಬೂನು ಬಳಿದು ಅರ್ಧ ಮುಗಿಸಿದ್ದಾನೆನ್ನುವಾಗ ವೆಂಕಪ್ಪಯ್ಯನ ಮಾಣಿ ಬಂದು ಓಪನಿಂಗ್ 7 ಎಂದು ಒಸಗೆ ಹೇಳಿತು. ಸರಿ, ಕಣಜರ ಅಲ್ಲಿಂದ ಪಲಾಯನ. ನಾನು ಇವನ ಕೈಯಲ್ಲಿ ಸಿಕ್ಕಿಬಿದ್ದೆನಲ್ಲಾ ಅಂದುಕೊಂಡೆ ಅಷ್ಟರಲ್ಲಿ ಬಂತು ಕಣಜರನ ಸವಾರಿ. ಬಂದವನೇ ಪ್ರಾರಂಭಿಸಿದ ತನ್ನ ಹರಿಕಥೆಗೆ. "ನೋಡಿ ಸ್ವಾಮಿ, ನಿನ್ನೆ 74 ಬರುತ್ತೆಂತ ಖಂಡಿತ ಮಾಡಿ ಓಪನಿಂಗ್ 7ಕ್ಕೆ 5ರೂ. ಹಾಕಿದ್ದೆ. ಆ ಕೊಳ್ಳಿ 7 ಬಂದೇ ಬಂತು. 1ಕ್ಕೆ 9ರಂತೆ 45ರೂ. ಬಂತು. ಎಲ್ಲಿ ಹಣವನ್ನು ಕ್ಲೋಸಿಂಗ್ 4ಕ್ಕೆ ತಿರುಗಿಸಿದ್ದೇನೆಂದ ನೋಡಿ ಇದೊಂದು ಅಮೇರಿಕದವರ ಆಟ. ನಮ್ಮಲ್ಲಿಗೆ ಇದನ್ನು ವರಪ್ರಸಾದದಂತೆ ತಂದವರು ನಮ್ಮ ಹೊಟೆಲ್ ವೆಂಕಪ್ಪಯ್ಯ. ಅಂದಿನಿಂದ ಇದಕ್ಕೆ ಬಲಿ ಬೀಳದ ಜನ ಇಲ್ಲ. ಒಗಾಲ ಎಂಬುದೆ ನಮಗೆ ಗೊತ್ತೇ ಇಲ್ಲ. ಆ ರಾಮಯ್ಯನಾಯ್ಕ ಬರೀ ಹಲಸಿನ ಸೋಳೆ ಮಾರಿ ಮನೆಗೆ ಹಂಚು ಹಾಕಿದ ಎಂಬು ತಿಳಿದಿದ್ದೀರಾ? ಆ ಬೀಡಾ ತನಿಯ ಹ್ಯಾಗೆ ಸೆಟ್ಟರ ಆಸ್ತಿ ಕೊಂಡುಕೊಂಡ ಗೊತ್ತೇ? ಇದೆಲ್ಲಾ ಇದರಿಂದಲೇ. ನೋಡಿ, ನೀವು ಇವತ್ತು ಒಂದು ಚಾನ್ಸ್ ನೋಡಿ, ಹೋದರೆ ಕೆಲವು ಆಣೆ ಬಂದರೆ ನೂರಾರು ರೂಪಾಯಿಗಳು.

ನನಗೆ ಒಮ್ಮೆಗೆ ಇದೂ ಹೌದು ಎಂದು ಕಂಡಿತು. ಕಿಸೆಯಿಂದ ಒಂದು ರೂಪಾಯಿ ತೆಗೆದು ಅವನ ಕೈಮೇಲಿಟ್ಟು, ಮಹಾರಾಯ ನನ್ನ ಕ್ಷೌರ ಮುಗಿಸು. ಆ ಮೇಲೆ ನಿನ್ನ ರುಸುಂ ತೆಗೆದು ಉಳಿದದ್ದು ಕ್ಲೋಸಿಂಗ್ 4ಕ್ಕೆ ಎಂದೆ. ಕಣಜರ ರೂಪಾಯಿಯ ಹಿಂದುಮುಂದು ನೋಡಿ, ಇದು 1934ರ ರೂಪಾಯಿ—ಕೊನೆ ನಂಬ್ರ 4 ಆದ್ದರಿಂದ ಕ್ಲೋಸಿಂಗ್ 4 ಖಂಡಿತ ಎಂದು ನನಗೆ ಧೈರ್ಯಕೊಟ್ಟ.

ನನ್ನ ಕ್ಷೌರ ಅಂತೂ ಮಧ್ಯಾಹ್ನ ೨ ಗಂಟೆಗೆ ಮುಗಿಯಿತು. ಮನೆಗೆ ಹೋಗಿ ಸ್ನಾನ ತೀರಿಸಿ ಊಟಮಾಡಿ ಮಲಗಿದ್ದೆ. ದಣಿದ ಮನಸ್ಸು, ಸೋತ ದೇಹ, ಎರಡಕ್ಕೂ ವಿಶ್ರಾಂತಿ ಬೇಕಿತ್ತು. ಬೇಗನೆ ಕಣ್ಣು ಮುಚ್ಚಿತು. ಒಂದು ಸ್ವಪ್ನ-ಅದರಲ್ಲಿ ಸರಸು ಬಂದು "ಸಟ್ಟಕ್ಕೆ ಕಟ್ಟಬೇಡಿ—ಅತ್ಯಾಚಾರ

(೧೧ನೇ ಪುಟ ನೋಡಿರಿ).

Navabharat Book Depot Udipi South India Navabharat Book Depot Udipi South India

ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು.

	ರೂ. ಆ.	ಮೂರು ಪ್ರಹಸನಗಳು	0-14	ವೀರಭೀಮ	0 2
ಸುಲಭದಲ್ಲಿ ಇಂಗ್ಲಿಷ್	1-1	ಸ್ವತಂತ್ರ ಜೀವನೋಪಾಯ	0-3	ವತ್ಸಲಾ	0-8
ಯುವಕರಿಗೆ ಮತ್ತು ವಯಸ್ಕರಿಗೆ		ಪುರುಷವಧು	0-4	● ಕವಿತೆಗಳು	
ಸುಲಭವಾಗಿ ಇಂಗ್ಲಿಷನ್ನು ಅನ್ಯ		ಹೆಂಡ್ತಿ ಗಂಡನಾದರೆ	0 4	ಕಾವ್ಯಸಾಮ್ರಾಜ್ಯ	0 12
ಸಹಾಯವಿಲ್ಲದೆ ಕಲಿಸುವ ಇಂಗ್ಲಿಷ್ ಸ್ವಯಂಬೋಧಿನಿ.		● ಕತೆಗಳು		ಮುಗುಳು	0-3
		ನಗೆನೋಟಗಳು	0 14	ಪ್ರೇಮಮುಖ	1-0
● ನಾಟಕಗಳು		ಅನ್ನದೇವರು		ಪುರಂದರದಾಸರ ಕೀರ್ತನೆ	1-0
ಪ್ರೇಮವಿಜಯ	0-12	ಮತ್ತು ಇತರ ಕಥೆಗಳು	1 0	ಭಗವದ್ಗೀತಾ (ಮೂಲ-ಸಿಲ್ಕ್ ಬೈಂಡು)	1-4
ದೇಶಭಕ್ತ	1-4	ಭಾರತೀಯ ಕತೆಗಳು	0-14	● ಇತರ ಪುಸ್ತಕಗಳು	
ವ್ಯಭಿಚಾರಿಣಿ ಯಾರು	0-12	ನಂದಾದೀಪ	0 10	ಮುಂದಿನ ದೇವರು	0-3
ಕುರಲವ	0-5	ನಾಡಕತೆಗಳು	0-3	ರಾಷ್ಟ್ರಸಭೆಯ ಇತಿಹಾಸ	2-8
ಸಂಶಯ ಪಿಶಾಚಿ	0-8	ಕೆಂಡಸಂಪಿಗೆ ನೋಟಗಳು	08	ಬಾಲವಾಙ್ಮಯ	0-3
ರಂಗಭೂಮಿ	0-8	ನಾರೀಹೃದಯ	0 14	ಮಿತಸಂತತಿ	0-8
ಪ್ರಕಾಶ	1-12	ಅಂತರಂಗದ ಕತೆಗಳು	0-10	ಇಹ್ಲಯ ಜ್ಞಾನ	0-8
ಧರ್ಮಸಂಕಟ	0-4	ಪ್ರೇಮಪ್ರವಾಹ	0 6	ನವಪೂರಿತ ಪಟ್ಟಣಗಳು	1-8
ಆರೋಗ್ಯ ಪ್ರತಾಪ	0-12	ಆಹುತಿ ಇತ್ಯಾದಿ ಕತೆಗಳು	0 12	ಚಿಗುರು	0 6
ಶಂಬರಾರಿ	0 6	ಲೋಪಾಮುದ್ರೆ	0-6	ಇತರ ಪುಸ್ತಕಗಳ ಕೆಟಲಾಗಿಗೆ	
ಪ್ರತೀಕಾರ	0-6	● ಕಾದಂಬರಿಗಳು			
ಸೇವಾಪಥ	0-8	ಸನ್ಯಾಸಿಯ ಸೋಗಿನಲ್ಲಿ	0-8	0-2-0 ಸ್ಟಾಂಪಿಟ್ಟು ಬರೆಯಿರಿ.	

ನವಭಾರತ ಪುಸ್ತಕ ಭಂಡಾರ, ರಿಜಿಸ್ಟರ್ಡ್ ಪಬ್ಲಿಷರ್ಸ್, ಉಡುಪಿ ದ. ಕ.

ಕ್ರೌನ್
ರಬ್ಬರ್ ಸ್ಟಾಂಪ್ ಕಂಪೆನಿ
18 ಬಲ್ಮಠ ರಸ್ತೆ, ಮಂಗಳೂರು
ರಬ್ಬರ್ ಮೊಹರು ಸೈನ್ ಬೋರ್ಡ್
ತೃಪ್ತಿಕರವಾಗಿ ಮಾಡಿಕೊಡಲ್ಪಡುವವು
Crown Rubber Stamp Co.
18 Balmat Road, MANGALORE
Approved firm by the Govt. of Mysore
Certified by the Agent of the Govt. of India in Ceylon ESTD 1906

ಲೋಕ ಶಾಂತಿಗೆ ಹೊಸ ಲೀಗಿನ ಯೋಜನೆ.

ಜಾಗತಿಕ ಭಾವೀ ಭದ್ರತೆಗಾಗಿ ಡಂಬಾರ್ಟನ್ ಓಕ್ಸ್ ಎಂಬಲ್ಲಿ ಕೂಲಂಕಷ ವಿಚಾರ ವಿನಿಮಯಗಳಾಗಿ ಹೊಸದಾಗಿ ಒಂದು ಜನಾಂಗ ಸಂಘ ರಚನೆಯ ಯೋಜನೆಯಾಗಿದೆ--ಆದರೆ ಕೆಲವು ವಿಷಯಗಳಲ್ಲಿ ಹಳೆಯ ಲೀಗ್ ಆಫ್ ನೇಶನ್ಸ್‌ನ ತತ್ವಗಳಿಗಿಂತಲೂ ಇದು ಅಪ್ರಾಗತಿಕವಾಗಿದೆ—ಹಳೆಯದರಲ್ಲಿ ಜಗತ್ತಿನ ಜನಾಂಗಗಳ ಕಲ್ಪನಾ ರಾಜ್ಯದಲ್ಲಾದರೂ ಸಾಧ್ಯವೆನಿಸುವ ಆದರ್ಶ ಧ್ಯೇಯಗಳಿದ್ದುವು. ಈ ನವ ಸಂಘ ಯೋಜನೆಯಲ್ಲಿ ಕಿರಿಯ ಜನಾಂಗಗಳೆಲ್ಲ ಹಿರಿಯ ಜನಾಂಗಗಳು ತಮಗೆ ಒಳ್ಳೆಯದನ್ನು ಮಾಡುವುದಕ್ಕಾಗಿ ಯೋಜನೆ ಮಾಡಿದ್ದಾರೆಂದು ನಂಬಬೇಕಷ್ಟೆ.

ಈ ಯೋಜನೆಯ ಮುಖ್ಯ ಸೂತ್ರಗಳು ಹೀಗಿವೆ--ಎಲ್ಲ ರಾಷ್ಟ್ರಗಳೂ ಸಮಾನ ಎಂಬ ತತ್ವಾಧಾರದ ಮೇಲೆ ಎಲ್ಲ ರಾಷ್ಟ್ರಗಳ ಪ್ರತಿನಿಧಿಗಳಿರುವ ಒಂದು ಮಹಾಪರಿಷತ್ತು ಇರತಕ್ಕುದು. ಆದರೆ ಈ ಪರಿಷತ್ತು ಪ್ರಧಾನ ಸಂಸ್ಥೆಯಲ್ಲ. ಇದಕ್ಕೆ ಕೇವಲ ಸಲಹೆ ಸೂಚನೆಗಳನ್ನೀಯುವ ಹಕ್ಕು ಮಾತ್ರ ಇರುವುದು. ಇದು ಮಾಡುವ 'ಶಿಫಾರಸು'ಗಳಿಗೂ ಇತಿಮಿತಿಯ ನಿರ್ಬಂಧವಿದೆ. 'ಸೆಕ್ಯೂರಿಟಿ ಕೌನ್ಸಿಲ್' ಎಂಬುದು ಪ್ರಧಾನ ಸಂಸ್ಥೆ. ಇದರಲ್ಲಿ ಬ್ರಿಟನ್, ಅಮೇರಿಕಾ ರಸ್ಯಾ, ಚೀನಾ ಇವುಗಳಿಗೆ ಶಾಶ್ವತ ಸದಸ್ಯತೆ ಇರತಕ್ಕುದು. ಆರು ಇತರ ಸದಸ್ಯರು ಆಗಾಗ ಮಹಾ ಪರಿಷತ್ತಿನಿಂದ ಚುನಾಯಿತರಾಗಿ ಬರಬೇಕು. ಈ ಕೌನ್ಸಿಲಿಗೆ ಸಹಾಯಕನಾಗಿ ತಾಂತ್ರಿಕ ವಿಷಯಗಳಲ್ಲಿ ಮಂತ್ರಾಲೋಚನೆ ಕೊಡಲಿಕ್ಕೆ ಒಂದು ಮುಖ್ಯ ಮಿಲಿಟರಿ ಅಧಿಕಾರಿಗಳ ಸಮಿತಿ ಇರುವುದು. ಅಲ್ಲದೆ ಜನಾಂಗಳೊಳಗಿನ ವಿವಾದ ತೀರ್ಮಾನಕ್ಕೆ ಅಂತರಾಷ್ಟ್ರೀಯ ನ್ಯಾಯಸ್ಥಾನವೂ ಇದೆ ಶಾಂತಿ ಸ್ಥಾಪನೆಯ ಪ್ರಧಾನ ಹೊಣೆಗಾರಿಕೆಯು ಸೆಕ್ಯೂರಿಟಿ ಕೌನ್ಸಿಲಿನದೇ

ಈ ಸೂತ್ರಗಳಿಂದ ಸ್ಪಷ್ಟವಾಗುವ ಸಂಗತಿಗಳೇನೆಂದರೆ—ಈಗ ಅಧಿಕ ಸೇನಾಶಕ್ತಿಯುಳ್ಳ ಜನಾಂಗಗಳೇ ಮುಂದಿನ ಲೋಕ ಶಾಂತಿಸ್ಥಾಪನೆಯ ಪೋಲೀಸರಾಗುವರು. ಕೌನ್ಸಿಲಿನಲ್ಲಿ ಬ್ರಿಟನ್ ಅಮೇರಿಕಾ ರಸ್ಯಾಗಳು ಪ್ರಬಲಪಕ್ಷಗಳಾಗುವವು ಉದ್ಯಮಾದಿಗಳಲ್ಲಿ ಹಿಂದಾಗಿದ್ದು ಪರಾವಲಂಬಿಯಾಗಿರುವ ಚೀನವು ಕೆಲವು ವರುಷಗಳ ತನಕ ಶಾಂತಿಸ್ಥಾಪನೆಯ ಕಾರ್ಯದಲ್ಲಿ ಸ್ವತಂತ್ರವಾಗಿ ಮಾತೆತ್ತುವ ಶಕ್ತಿಯು-ಅದಕ್ಕೆ ಬರಲಾರದು. ಅಂದರೆ ಈಗಿನ ಮಹಾಜನಾಂಗತ್ರಯಗಳೇ ಮುಂದಿನ ಶಾಂತಿವಿಧಾತರಾಗುವವು. ಈ ಜನಾಂಗತ್ರಯದ ನ್ಯಾಯಬುದ್ಧಿಯಲ್ಲಿ ಲೋಕಕ್ಕೆ ವಿಶ್ವಾಸವಿದ್ದರೇನೆ ಈ ಹೊಸ ಲೀಗ್ ಸಾರ್ಥಕವಾದೀತು. ಆದರೆ ಅವುಗಳಿಗೆ ತಮ್ಮ ಉನ್ನತ ಸ್ಥಾನಗಳನ್ನು ಕಾದುಕೊಳ್ಳುವ ಮತ್ತು ಹೊಸ ಪ್ರದೇಶಗಳನ್ನು ಹೊಂದುವ ಕಾತರತೆ ಇದೆ ಎಂದು ಕೆಲವು ನಿಯಮಗಳಿಂದ ವ್ಯಕ್ತವಾಗುತ್ತದೆ. ಶಾಶ್ವತ ಸದಸ್ಯ ರಾಷ್ಟ್ರಗಳ ಮೇಲೆ ಆಕ್ರಮಣದ ಆರೋಪಗಳು ಬಂದರೆ ಆ ವಿಷಯ ಮತಕ್ಕೆಗೆಯಲಾಗುವುದಿಲ್ಲವಂತೆ. ಮಜೂರಪಕ್ಷದ ಪಾರ್ಲಿಮೆಂಟ್ ಮೆಂಬರರೊಬ್ಬರು ಹೇಳಿದಂತೆ ಈ ಸೆಕ್ಯೂರಿಟಿ ಕೌನ್ಸಿಲು ತನಗೆ ಅನ್ವಯಿಸದ ಹಾಗೂ ಕಿರಿಯರಿಗೆ ಅನ್ವಯಿಸುವ ನಿಬಂಧನಗಳಿಂದ ಕಿರಿಯರು ಪುಂಡಾಟ ಮಾಡದಂತೆ ವ್ಯವಸ್ಥೆಮಾಡುವ ಸಂಘವಾಗಿದೆ. ಈ ಧೋರಣೆಯುಳ್ಳ ಯೋಜನೆಯು ಜಾಗತಿಕ ಸ್ವಾತಂತ್ರ್ಯಕ್ಕಾಗಲೀ ಶಾಂತಿಗಾಗಲೀ ಭದ್ರತೆಗಾಗಲೀ ಹದಿಯಾಗಿ ಉಳಿಯಲಾರದು.

ಇಂಗ್ಲಾಂಡ್-ಅಮೇರಿಕಾಗಳಲ್ಲಿ ಅಖಂಡ ಹಿಂದುಸ್ಥಾನ ತತ್ವಪ್ರಚಾರ

ಅಖಂಡ ಹಿಂದೂಸ್ಥಾನ ತತ್ವವನ್ನು ಬ್ರಿಟಿಷ್ ಮತ್ತು ಅಮೇರಿಕಾನರೂ ಬಗೆಗೊಳ್ಳುವಂತೆ ಪ್ರಚಾರಮಾಡಲು ಅಖಂಡ ಹಿಂದೂಸ್ಥಾನ ಪರಿಷತ್ತಿನ ಕೆಲವರು ಕ್ಷಿಪ್ರದಲ್ಲೇ ಅಮೇರಿಕಾ ಮತ್ತು ಇಂಗ್ಲಾಂಡಿಗೆ ಹೊರಡಲಿರುವರು.

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. No 388/1944

1- ವಾದಿ ಅನಂತಯ್ಯ ಉಪಾಧ್ಯ. ಮಹಾದೇವ ಉಪಾಧ್ಯರ ಮಗಾ. ಕುಂದಾಪುರ ತಾಲ್ಕು ನಂದನವನ ಗ್ರಾಮದಲ್ಲಿರುವವಾ, ವೈದಿಕ. Post — Uppunda 2 ಪ್ರತಿವಾದಿರು- 2. ರಂಗ. ಸಬ್ಬಹೆಂಗ್ಸಿನ ಮಗಾ.

3. ಮಂಜ. 4. ಅಕ್ಕು. 6. ಬಡಿಯ. —1ನೇ ಪ್ರತಿವಾದಿ ಕಾವೇರಿ ಹೆಂಗ್ಸಿನ ಮಕ್ಕಳು.

ಕುಂದಾಪುರ ತಾಲ್ಕು ನಂದನವನ ಗ್ರಾಮದಲ್ಲಿರುವವರು. ಬೇಸಾಯಗಾರರು. Post-Uppunda

ಸದ್ರಿ ವಾದಿಯು ಸದ್ರಿ ಪ್ರತಿವಾದಿರ ಮೇಲೆ ಮೂಲ ಗೇಣಿ ಗೇಣಿ ಬಾಕಿ ರೂಪಾಯಿ 152 11-4ನ್ನು ಬರಮಾಡಿಕೊಳ್ಳುವರೆ ಮೇಲ್ಕಂಡ ಕೋರ್ಟಿನಲ್ಲಿ ದಾಖಲುಮಾಡಿದ ಮೇಲಿನ ದಾವೆಯು ತಾರೀಕು. 10-11-1944ಕ್ಕೆ ತನಿಖೆಗೆ ಇಟ್ಟಿರುತ್ತದೆ. ಆ ಕುರಿತು ನಿಮ್ಮದೇನಾದರೂ ಆಕ್ಷೇಪಣೆ ಇದ್ದರೆ ಸದ್ರಿ ದಿವಸ ಪೂರ್ವಾಹ್ನ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ನೀವು ಸ್ವತಹ ಯಾ ವಕೀಲರ ಮುಖಾಂತ್ರ ಹಾಜರಾಗಿ ಜ್ವಾಬು ಮಾಡತಕ್ಕದ್ದು. ತಪ್ಪಿದ್ರೆ ಸದ್ರಿ ದಿವ್ಸ ನಿಮ್ಮನ್ನು ಎಕ್ಸಪಾರ್ಟಿ ಮಾಡಿ ನಿಮ್ಮ ಗೈರು ಹಾಜರಿಯಲ್ಲಿ ಸದ್ರಿ ದಾವಾ ತೀರ್ಮಾನಿಸೋಣಾದೀತೆಂತ ಈ ಮೂಲಕ ತಿಳುಹಿಸಿರುತ್ತದೆ.

M Mahabala Hebbar
Advocate for Plaintiff

ಕ್ಯಾಂ. ಕುಂದಾಪುರ 20 10 1944

ರ್‍ಯಾಟ್ ಒನರೆಬಲ್ ಶಾಸ್ತ್ರಿಗಳು

ಪಾಕಿಸ್ಥಾನ ಖಂಡನೆ-ಪ್ರತಿಯೋಜನೆ-ಗಾಂಧೀಜಿಯವರು ಹದಮೀರಿದ ಆಗ್ರಹ

ಪ್ರಾಂತಿಕ ಸ್ವಯಂನಿರ್ಧಾರದ ಶರತವಿರಹಿತಗೊಳಿಸಲ್ಪಟ್ಟರೆ ಕ್ರಿಪ್ಸ್ ಕೊಡುಗೆಯೇ ಲೇಸು—

ತಾ ೨೦ರಂದು ಮದ್ರಾಸಿನ ಗೋಖಲೇ ಸಭಾಭವನದಲ್ಲಿ ರ್‍ಯಾಟ್ ಒನರೇಬಲ್ ವಿ. ಶ್ರೀನಿವಾಸ ಶಾಸ್ತ್ರಿಗಳು ಮಾಡಿದ ಭಾಷಣವು ವಿಚಾರ ವಿವೇಕಪೂರ್ಣವಿವೆ ಅವರಿಂದ ಕೆಲವು ಮಾತುಗಳ :—ಪಾಕಿಸ್ಥಾನ ವಿರೋಧಿಯಾದ ನನಗೆ ಗಾಂಧಿ-ಜಿನ್ನಾ ಸಂಧಾನ ಯತ್ನವು ವಿಫಲವಾದುದರಿಂದ ಸಂತೋಷವಾಗಲಿಲ್ಲವೆ ಎಂದು ನನ್ನ ಮಿತ್ರರೊಬ್ಬರು ಕೇಳಿದರು. ಈ ಮಾತುಕತೆಗಳು ಆರಂಭವಾಗುವ ಮೊದಲು ಇದ್ದ ಸ್ಥಿತಿಯಲ್ಲಿಯೇ ವಿದ್ಯಮಾನಗಳು ಉಳಿದಿದ್ದು ಸಂಧಾನವು ಮುರಿಯುತ್ತಿದ್ದರೆ ಸಂತೋಷವಾಗುತ್ತಿತ್ತು. ಆದರೆ ಹಾಗಾಗಿಲ್ಲ. ಪಾಕಿಸ್ಥಾನದ ವಿಷಯ ಕಾಂಗ್ರೆಸ್ಸಿನ ಒಪ್ಪಿಗೆಯನ್ನು ಜಿನ್ನಾರು ತಿರಸ್ಕರಿಸಿದರೂ ಕಾಂಗ್ರೆಸ್ಸು ತನ್ನ ಆ ಒಪ್ಪಿಗೆಯನ್ನು ಆಗಲೇ ಹಿಂತೆಗೆಯದೆ ಈಗಲೂ ಇಟ್ಟಿಕೊಂಡಿದೆ. ಆದರೆ ಸುದೈವವಶಾತ್ ಗಾಂಧೀಜಿಗಳು ದೇಶದ ತೀರ್ಮಾನವನ್ನು ಕಾಯಬೇಕೆಂದು ಒತ್ತಿಹೇಳಿದುದರಿಂದ ಮಹತ್ತಾದ ವಿಪತ್ತು ತತ್ಕಾಲ ತಪ್ಪಿದುದಕ್ಕೆ ಸಂತೋಷಪಡಬೇಕು. ಆದರೆ ಗಾಂಧೀಜಿಗಳ ಮನೋವೃತ್ತಿ ಹೀಗೆಯೇ ಇದ್ದೀತೆಂದು ಹೇಳಬರುವುದಿಲ್ಲ. ಹಿಂದೂ ಮುಸ್ಲಿಮರು ಒಂದಾದರೆ ಬ್ರಿಟಿಷರಿಂದ ಸ್ವಾತಂತ್ರ್ಯವನ್ನು ಕಿತ್ತುಕೊಳ್ಳಬಹುದೆಂಬೊಂದು ಕನಸಿನಲ್ಲಿದ್ದಾರೆ ಗಾಂಧೀಜಿಯವರು. ಇದಕ್ಕಾಗಿ ಇವರು ಮುಸ್ಲಿಮರ ಯಾವ ಶರ್ತವನ್ನೂ ಒಪ್ಪಬಹುದು. ಮಹಾತ್ಮರೊಮ್ಮೆ ಇಡೀ ಹಿಂದೂಸ್ಥಾನದ ಚಕ್ರವರ್ತಿತನವನ್ನು ಹೈದರಾಬಾದದ ನೈಜಾಮರಿಗೆ ಕೊಡಲು ವಾಗ್ದಾನಮಾಡಿದ್ದರು. ಜಿನ್ನಾರನ್ನೇ ಅಖಿಲ ಭಾರತದ ಪ್ರಧಾನಮಂತ್ರಿಯನ್ನಾಗಿ ಮಾಡುವೆನೆಂದೂ ಭಾಷೆಗೊಟ್ಟಿದ್ದರು. ಜಿನ್ನಾರು ಬಗ್ಗದಿರುವುದನ್ನು ಕಂಡು ಗಾಂಧೀಜಿಗಳು ಇನ್ನೂ ಔದಾರ್ಯದ ಶರತ್ತುಗಳಿಗೆ ಸಮ್ಮತಿಯನ್ನೀಯಬಹುದು. ಆದುದರಿಂದ ಪಾಕಿಸ್ಥಾನದ ವಿಷಯವಾಗಿ ಬಗ್ಗಬಾರದೆಂದು ದೇಶವು ಸ್ಪಷ್ಟವಾಗಿ ಮಹಾತ್ಮರಿಗೆ ಹೇಳಬೇಕು. ಪಾಕಿಸ್ಥಾನಕ್ಕೆ ಕೊಟ್ಟ ಒಪ್ಪಿಗೆಯು ತಿರಸ್ಕರಿಸಲ್ಪಟ್ಟಿರುವುದರಿಂದ ಅದನ್ನೀಗಲೇ ಹಿಂತೆಗೆಯುವಂತೆಯೂ ಈಗ ಎಷ್ಟು ಮುಂದುವರಿದಿರುವರೋ ಅಲ್ಲಿಂದಲೇ ಹಿಂದೆ ಸರಿಯುವಂತೆಯೂ ಮಹಾತ್ಮರನ್ನು ದೇಶವು ಒತ್ತಾಯಿಸಬೇಕು. ಇಷ್ಟು ಮುಂದುವರಿದುದರಿಂದಲೇ ಲಾಹೋರು ನಿರ್ಣಯದಲ್ಲಿದ್ದುದಕ್ಕಿಂತ ಈಗ ಪಾಕಿಸ್ಥಾನದ ಗಡಿ ವಿಸ್ತಾರವಾಗಿದೆ. ಇನ್ನೂ ಮುಂದುವರಿದರೆ ಏನೇನು ಶರತುಗಳು ಒಂದಾವು. ರಾಜಕೀಯ ಹೋರಾಟದಲ್ಲಿ ಮುಸ್ಲಿಮರಿಲ್ಲ. ಪ್ರತಿಯೊಂದು ಸಂದರ್ಭದಲ್ಲಿಯೂ ತಮಗೆ ಸವಲತ್ತುಗಳನ್ನು ಸಂಪಾದಿಸಿಕೊಳ್ಳುವುದರಲ್ಲಿದ್ದಾರೆ. ಈ ದೃಷ್ಟಿಯುದ್ಧದಲ್ಲಿ ಸಂಧಾನವು ನಡೆಯದು. ಒಂದಲ್ಲ ಇದ್ದರೊಂದು ದಿನ ಕೈಕೈ ಹತ್ತುವ ಪ್ರಸಂಗ. ಅಂತಹದನ್ನು ತಡೆಯಲು ಒತ್ತಾಯದಿಂದಲೂ ಮೂರನೆಯವರು ಮಧ್ಯಸ್ಥಿಕೆಗಿಳಿಯಬೇಕಾಗಿದೆ. ಬ್ರಿಟಿಷ್ ಸರಕಾರವೇ ತನ್ನ ಅಧಿಕಾರ ಪ್ರಯೋಗದಿಂದ ಅಂತಹ ಒತ್ತಾಯದ ಮಧ್ಯಸ್ಥಿಕೆಮಾಡುವ ಸಂದರ್ಭ ಬಂದೀತು. ಹಾಗಾಗದಂತೆ ಉಭಯಪಕ್ಷದವರೂ ಆತ್ಮಸಂತೋಷದಿಂದ ಈ ಪ್ರಶ್ನೆಯನ್ನು ಪಂಚಾಯಿತರ ಕೈಯಲ್ಲಿ ಕೊಡುವುದು ಲೇಸು. ನಮ್ಮಲ್ಲೇ ಅಂತಹ ಮಧ್ಯಸ್ಥಿಕೆಯ ಸಮಿತಿ ನಿರ್ಮಾಣಕ್ಕೆ ಯೋಗ್ಯ ಜನರಿಲ್ಲವೆಂದಾದರೆ ಹೊರಗಿನಿಂದ ತಂದರೂ ಸರಿಯೇ. ಇದೀಗ ಹಿಂದೂ ಮುಸ್ಲಿಂ ಸಮಸ್ಯೆಯನ್ನು ಬಗೆಹರಿಸಲು ಪ್ರತಿಯೋಜನೆ

ಇನ್ನು ಸರಕಾರಕ್ಕೂ ಜನತೆಗೂ ನಡುವೆ ಇರುವ ಬಿಕ್ಕಟ್ಟಿನ ಪರಿಹಾರವು ಹಿಂದೂ ಮುಸ್ಲಿಂ ತೀರ್ಮಾನದಿಂದಲೇ ಆಗದು. ಕ್ರಿಪ್ಸ್ ಕೊಡುಗೆಯಲ್ಲಿ ಪ್ರಾಂತಿಕ ಸ್ವಯಂನಿರ್ಧಾರದ ಶರತು ಇದೆ. ಇದರಿಂದಾಗಿ ಯಾವ ಕಾಲದಲ್ಲಿಯೂ ತುಸು ಭಿನ್ನಾಭಿಮತ ಬಂದಾಗ ಪಾಕಿಸ್ಥಾನ, ದ್ರಾವಿಡಸ್ಥಾನ ಮುಂತಾದ ಹಲವು ಸ್ಥಾನಗಳು ಮುಂದೆಯೂ ಉಂಟಾಗಿ ಹಿಂದೂಸ್ಥಾನವು ತುಂಡುತುಂಡಾಗಿ ಅಂತಃಕಲಹಗಳ ಕುಂಡವಾಗಬಹುದು. ಆದುದರಿಂದ ಆ ಪ್ರಾಂತಿಕ ಸ್ವಯಂನಿರ್ಧಾರದ ಶರತನ್ನು ವಿರಹಿತಪಡಿಸಿದರೆ ಕ್ರಿಪ್ಸರ ಕೊಡುಗೆಯು ಪ್ರಕೃತ ಎಲ್ಲ ಬಗೆಯ ಬಿಕ್ಕಟ್ಟುಗಳ ಪರಿಹಾರಕ್ಕೆ ಸ್ವೀಕಾರಾರ್ಹ ಯೋಜನೆಯಾಗಿದೆ. ಹಿಂದೂಗಳು ಸ್ವಾತಂತ್ರ್ಯಕ್ಕಾಗಿ ಸರಕಾರದೊಡನೆ ಹೋರಾಡುತ್ತಿರುವರೆಂಬುದು ಮುಸ್ಲಿಮರಿಗೆ ಗೊತ್ತು. ಅವರು ಇದರಲ್ಲಿ ಸಹಭಾಗಿಗಳಾಗದೆ ಸಮಯ ಸಾಧಿಸಿಕೊಂಡು ಬೆದರಿಕೆಯೋ ತೊಂದರೆ ತಂದೊಡ್ಡಿಯೋ ತಮ್ಮ ಜನರಿಗೆ ಬೇಕಾದ ಸವಲತುಗಳನ್ನು ಹೊಂದುತ್ತ ಹೋಗುತ್ತಿದ್ದಾರೆ. ಕ್ರಿಪ್ಸರ ಕೊಡುಗೆಯನ್ನು ಪ್ರಾಂತಿಕ ಸ್ವಯಂನಿರ್ಧಾರದ ಶರತ ವಿರಹಿತಪಡಿಸಿ ಕಾಂಗ್ರೆಸ್ಸು ಒಪ್ಪಿ ಹೋರಾಟವನ್ನು ನಿಲ್ಲಿಸಿತೆಂದರೆ ಆಗ ಕಿರಿಯ ಮುಸ್ಲಿಮರಾದರೂ ಎಚ್ಚರಗೊಂಡು ಹಿರಿಯರ ಧೋರಣೆಯನ್ನು ಖಂಡಿಸಿ ಸರಿದಾರಿಗೆ ಎಳೆಯುವರು. ಆಗ ಉಭಯಪಕ್ಷದ ಸಮಸ್ಯೆಯನ್ನು ಮಧ್ಯಸ್ಥಿಕೆಯ ಸಮಿತಿಯೊಂದರಿಂದ ತೀರ್ಮಾನಿಸಿಕೊಳ್ಳೋಣ ಎಂಬ ಹದಕ್ಕೆ ಮುಸ್ಲಿಂ ಲೀಗು ಬಂದೇ ಬರುವುದು. ಇಂದಿನ ಬಿಕ್ಕಟ್ಟುಗಳೆಲ್ಲ ಬಗೆಹರಿದಾವು.

2154 ದಿನಗಳು ಬೇಕಾದುವು. ಒಂದು ಕಾರ್ಡಿಗೆ 25 ಮೈಲು ದೂರ ತಲಪಲಿಕ್ಕೆ!

ಕಟೋಲಿ ಎಂಬ ಹಳ್ಳಿಯಲ್ಲಿ ತಾ. ೯-೧೧-೧೯೩೮ರಲ್ಲಿ ಟಪ್ಪಾಲಿಗೆ ಹಾಕಿದ ಒಂದು ಕಾರ್ಡು ಅಲ್ಲಿಂದ ೨೫ ಮೈಲು ದೂರದ ಸೂರತಿಯ ಊಂಜಾ ಫಾರ್ಮಸಿಯ ಶ್ರೀ ಮಿಸ್ತ್ರೀಭಾಗುಭಾಯ್ ಎಂಬವರಿಗೆ 2151 ದಿನಗಳ ನಂತರ, ಅಂದರೆ ೩-೧೦-೧೯೪೪ರಲ್ಲಿ ತಲಪಿತಂತೆ!

ಕಮರ್ಶಿಯಲ್ ಟೇಕ್ಸ್ ಆಫೀಸರರಿಗೆ ಕಠಿಣ ಸಜೆ.

ಹಿಂದುಪುರದ ಡೆಪ್ಯುಟಿ ಕಮರ್ಶಿಯಲ್ ಟೇಕ್ಸ್ ಆಫೀಸರರಾಗಿದ್ದ ಅಬ್ದುಲ್ ಮಜೀದ್ ಸಾಹೇಬರವರು ವ್ಯಾಪಾರಿಗಳನ್ನು ಲ್ಯಾಸೆನ್ಸು ಇಲ್ಲದೆ ಮೈಸೂರು ಸೀಮೆಯೊಳಗೆ ಅಕ್ಕಿ ಸಾಗಿಸಲು ಸಹಾಯ ಮಾಡಿದರೆಂದೂ ಈ ಅಕ್ರಮ ಸಾಗುವಾಡನ್ನು ಒಬ್ಬ ಪೋಲೀಸಿನವನು ಹಿಡಿದಾಗ ಆತನಿಗೆ ಲಂಚಕೊಟ್ಟು ಸುಮ್ಮಗಿರಿಸಲು ಪ್ರಯತ್ನಿಸಿದರೆಂದೂ ಆರೋಪಿತರಾಗಿ ಅನಂತಪುರದ ಸಬ್‌ಕೋರ್ಟಿನಲ್ಲಿ ವಿಚಾರಣೆಗೊಳಪಟ್ಟು ನಿರಪರಾಧಿಗಳೆಂದು ಬಿಡಲ್ಪಟ್ಟಿದ್ದರೂ ಮದ್ರಾಸು ಹೈಕೋರ್ಟಿನಲ್ಲಿ ಅವರು ಅಪರಾಧಿಗಳೆಂದು ತೀರ್ಮಾನಿಸಲ್ಪಟ್ಟು ಆರು ತಿಂಗಳ ಕಠಿಣ ಸಜೆಗೊಳಗಾದರು.

ಮುಂದಾಳುಗಳನ್ನು ಬಂಧ ವಿಮೋಚನೆಮಾಡಬೇಕು.

ಬ್ರಿಟಿಷ್ ಟ್ರೇಡ್ಸ್ ಯೂನಿಯನ್ನಿನ ಠರಾವು

ಲಂಡನಿನಲ್ಲಿ ತಾ. ೧೯ರಲ್ಲು ಜರಗಿದ ಮೇಲ್ಕಂಡ ವಣಿಕ ಸಂಘದ ಸಮ್ಮೇಳನದಲ್ಲಿ ಭಾರತೀಯ ರಾಜಕೀಯ ಕೈದಿಗಳನ್ನೆಲ್ಲ ಬಿಡುಗಡೆ ಮಾಡಬೇಕೆಂಬ ನಿರ್ಣಯವು ಮಂಜೂರಾಯಿತು. ನಿರ್ಣಯವನ್ನು ಮುಂದೆ ತಂದ ಎಚ್. ಕೆ. ಬೇಕರರು ಗಾಂಧೀ ಜಿನ್ನಾ ಸಂಧಾನವು ಮುರಿದು ಹೋದುದು ವಿಷಾದಕರವೆಂದೂ ಆ ಚರ್ಚೆಯಲ್ಲಿ ಸಹಭಾಗಿಗಳಾಗುವಂತೆ ಬಂಧನದಲ್ಲಿದ್ದ ಮುಂದಾಳುಗಳನ್ನು ಮೊದಲಾಗಿ ಬಿಡುತ್ತಿದ್ದರೆ ಸಂಧಾನವು ಸಫಲವಾಗುವ ಸಂಭವವಿತ್ತೆಂದೂ ಹೇಳಿದರು. ಸಂಘದ ಪ್ರತಿನಿಧಿತ್ವವುಳ್ಳ ನಿಯೋಗಿ ಮಂಡಲವನ್ನು ಹಿಂದೂಸ್ಥಾನಕ್ಕೆ ಕಳುಹಬೇಕೆಂದೂ ಅದು ಅಲ್ಲಿಯ ಮಜೂರರ ಸಮಸ್ಯೆಗಳನ್ನು ಪರಿಶೀಲಿಸಿ ಸ್ಥಿರವಾದ ಬಾಂಧವ್ಯವನ್ನು ನೆಲೆಗೊಳಿಸಬೇಕೆಂದೂ ನಿರ್ಣಯವಾಯಿತು.

ಚರ್ಚಿಲ್ಲರ ಇಂಡಿಯಾ ಧೋರಣೆಯ ಖಂಡನೆ. ಅಮೇರಿಕದ ಸೆನೇಟರ ಕಟುಮಾತು.

ಚರ್ಚಿಲ್ ಮತ್ತು ಸ್ಟಾಲಿನರ ಸಾಮ್ರಾಜ್ಯಶಾಹಿಯ ಹಂಚಿಕೆಯಿಂದ ಅಮೇರಿಕವು ದೂರಾಗಬೇಕು.

ಅಮೇರಿಕದ ಸಂಯುಕ್ತ ರಾಷ್ಟ್ರಗಳ ಸೆನೇಟರ್‌ಗಳಲ್ಲೊಬ್ಬರಾದ ರೊಬರ್ಟ್ ಲಾಫೊಲಿಟೆಯವರು ಸ್ವಂತ ಸಹಿಯ ಸಂಪಾದಕೀಯ ಲೇಖದಲ್ಲಿ ಹೀಗೆ ಬರೆದಿದ್ದಾರೆ:- ಪ್ರೆಸಿಡೆಂಟ ರೂಸವೆಲ್ಟರೂ ಡ್ಯೂವೀಯವರೂ ಅಮೇರಿಕದ ವಿದೇಶೀಯ ಧೋರಣೆಯ ಕುರಿತು ಮೌನಧೋರಣೆಯನ್ನು ತಾಳಿರುವುದು ಕೊನೆಗಾಣಬೇಕು. ಈ ಮೌನದಿಂದಾಗಿ ಇಂಡಿಯಾವು ನಮ್ಮನ್ನು ದೂರುತ್ತಿದೆ. ಜಾಗತಿಕ ವ್ಯವಸ್ಥೆಯಲ್ಲಿ ಪರಸ್ಪರ ಸಹಕಾರವೆಂದು ದೊಡ್ಡದೊಡ್ಡ ಮಾತಾಡುತ್ತಿರುವ ನಮ್ಮ ಮಿತ್ರಪಕ್ಷದವರ ಪರಾಕ್ರಮಣಶೀಲವನ್ನು ನಾವು ದೀನತೆಯಿಂದ ಮನ್ನಿಸುತ್ತಿದ್ದೇವೆ. ರಶ್ಯನರು ಯುರೋಪಿನ ವಿಷಯಗಳಲ್ಲಿ ಪ್ರಧಾನವಾಗಿ ತಮ್ಮ ಸಮಸ್ಯೆಗಳೆಂದೂ ಅವುಗಳಲ್ಲಿ ನಾವು ಪ್ರವೇಶಿಸಬಾರದೆಂದೂ ಸ್ಪಷ್ಟವಾಗಿ ನುಡಿದಿದ್ದಾರೆ. ಬ್ರಿಟಿಷರೂ ತಮ್ಮ ಸಾಮ್ರಾಜ್ಯ ವಿಷಯಗಳಲ್ಲಿ ನಾವು ಪ್ರವೇಶಿಸಬಾರದೆಂದೂ ಅಷ್ಟೇ ಸ್ಪಷ್ಟೋಕ್ತಿಗಳಿಂದ ಹೇಳಿದ್ದಾರೆ. ರುಸ್ಯಾ ಮತ್ತು ಪೋಲಾಂಡರ ವಿವಾದದಲ್ಲಿ ಮಧ್ಯಸ್ಥಿಕೆಯ ತೀರ್ಮಾನವಾಗುವಂತೆ ನಾವು ಸಹಾಯದ ಕೈನೀಡುವೆವೆಂದಾಗ ರಶ್ಯವು ನೀವು ನಿಮ್ಮ ಕೆಲಸ ನೋಡಿಕೊಳ್ಳಿರೆಂದೂ ಅಧಿಕಪ್ರಸಂಗಕ್ಕೇಳದಿರೆಂದೂ ಅರ್ಥವಾಗುವ ಚಾತುರ್ಯದ ನುಡಿಯನ್ನಾಡಿದೆ. ಇಂಡಿಯಾಕ್ಕೆ ಹೋಗಿದ್ದ ನಮ್ಮ ಪ್ರತಿನಿಧಿಯು ಇಂಡಿಯಾದ ವಿಷಯದಲ್ಲಿ ಬ್ರಿಟಿಷರ ಧೋರಣೆಯು ಇನ್ನಷ್ಟು ನಿರ್ಮಲವಾಗಬೇಕೆಂದು ವರದಿಯನ್ನೊಪ್ಪಿಸಿದ ಫಿಲಿಪ್ಸರನ್ನು ಸ್ಥಾನಚ್ಯುತನನ್ನಾಗಿ ಮಾಡಬೇಕೆಂಬ ನಿರ್ಬಂಧ ಬಂದಿತ್ತು. ಆ ವರದಿಯನ್ನು ಅಧಿಕಾರ ಪ್ರಯೋಗದಿಂದ ತುಂಡರಿಸಿತ್ತು. ಹೀಗೆ ಸಾಮ್ರಾಜ್ಯಾಧಿಕಾರಲಾಲಸೆ ತೋರುವ ಚರ್ಚಿಲ್—ಸ್ಟಾಲಿನರ ಹಂಚಿಕೆಗಳಿಂದ ಈಗ ಬಾದರೂ ಅಮೇರಿಕವು ದೂರಾಗಬೇಕು.

ದೃಢವಾದ ಊರ್ಜಿತಾವಸ್ಥೆ



"ವಾರ್ಡನ್" ನ ಈ ವರೆಗಿನ ವ್ಯವಹಾರವನ್ನು ಪರಿಶೀಲಿಸಲು, ಈ ಕಂಪೆನಿಯು ಮುಂದಕ್ಕೆ ಹೆಚ್ಚಿನ ಪ್ರಗತಿಯನ್ನು ನಡೆಯುವುದೆಂದು ನಿಶ್ಚಿತವಾಗುವುದು. "ವಾರ್ಡನ್" ನ ಬೆಳವಣಿಗೆಯು ಕ್ರಮವಾಗಿ ಇತರ ಹೆಸರಾಂತ ವಿಮಾ ಸಂಸ್ಥೆಗಳಂತೆ ತೊಡಕಿಲ್ಲದೆ ಮುಂದಕ್ಕೆ ಸಾಗುತ್ತಿದೆ.

ಸಂಸ್ಥೆಯ ಬೆಳವಣಿಗೆಯೊಂದಿಗೆ ನಿಮ್ಮ ಪ್ರಾಪ್ತಿ (ಭವಿಷ್ಯ) ವೃದ್ಧಿಯ ಸಂಧರ್ಭಗಳು ಅನೇಕ ವಿರುವವು. ಇದನ್ನು ನೀವೇ ಪರಿಶೋಧಿಸಿರಿ.

★ ★ ★

ಚಾಲ್ತಿ ವಿಮೆ	ರೂ. 2,00,00,000	
ಭಂಡವಾಳ	ರೂ. 36,00,000	
ಆದಾಯ	ರೂ. 18,00,000	
ಖರ್ಚಿನ ಪ್ರಮಾಣ	22%	ಇವು ಕಾರ್ಯಕರ್ತರು ... ಕಡಿಮೆಯಾಗಿವೆ.
ಪೋಲಿಸಿ ರದ್ದಿನ ಪ್ರಮಾಣ	8%	

★ ★ ★

ಜೀವ — ಬೆಂಕಿ — ಅಪಘಾತ ವಿಮೆಗಳು

ದಿ ವಾರ್ಡನ್ ಇನ್ಸ್ಯೂರೆನ್ಸ್ ಕಂಪೆನಿ ಲಿಮಿಟೆಡ್

ವಾರ್ಡನ್ ಹೌಸ್, ಸರ್ ಫಿರೋಜ್‌ಶಹಾ ಮೆಹ್ತಾ ರೋಡ್,

ಫೋರ್ಟ್ ಮುಂಬಾಯಿ.

ದೃಢತೆ ಮತ್ತು ಬೆಳವಣಿಗೆಗೆ ಎಲ್ಲಾ ಕಡೆಯಲ್ಲಿ ಕೀರ್ತಿಯನ್ನು ಪಡೆದಿರುವುದು.

W. 29.

ಸಮಾಚಾರ ಸಂಗ್ರಹ

೧೫,೦೦೦ ಕಾಂಗ್ರೆಸ್ಸು ಕೈದಿಗಳ ಬಿಡುಗಡೆ

ಅಮೆರಿಯವರ ಹೇಳಿಕೆ.

ಕಾಮನ್ಸ್ ಸಭೆಯಲ್ಲಿ ಮಜೂರ ಪಕ್ಷದ ಮೆಂಬರರಾದ ಸೋರೆನ್‌ಸನ್‌ರವರು ಕೇಳಿದ ಪ್ರಶ್ನೆಗುತ್ತರವಾಗಿ ಕಾಂಗ್ರೆಸ್ಸಿಗರನ್ನು ಕೈದುಮಾಡಿ ಬಂಧನದಲ್ಲಿಡತೊಡಗಿದಂದಿನಿಂದ ಇಂದಿನ ತನಕ ಅವರಲ್ಲಿ ಹದಿನೈದು ಸಾವಿರ ಮಂದಿಯನ್ನು ಶರತ್ತುರಹಿತವಾಗಿ ಬಿಡುಗಡೆಮಾಡಲಾಗಿದೆ ಎಂದು ಇಂಡಿಯಾ ಸ್ಟೇಟ್ ಸೆಕ್ರೆಟರಿಗಳಾದ ಮಿ| ಅಮೆರಿಗಳೆಂದರು

ಹಿಟ್ಲರನ ಮಹದಾಜ್ಞೆ ೧೬ರಿಂದ ೬೦ರ ವಯಸ್ಸಿನ ಗಂಡಸರೆಲ್ಲ ಸಿದ್ಧರಾಗಬೇಕು.

ಕಳೆದ ವಾರ ಹಿಟ್ಲರನು ಅಖಿಲ ಜರ್ಮನಿಗೆ ತನ್ನ ಆಜ್ಞೆಯನ್ನು ಜರ್ಮನ ಆಕಾಶವಾಣಿಯ ಮೂಲಕ ಉದ್ಘೋಷಿಸಿದನು. ಶತ್ರುವು ನಮ್ಮ ಯುರೋಪದ ಮಿತ್ರರದ್ರೋಹದಿಂದಲೂ ಪಕ್ಷಾಂತರ ವರ್ತನದಿಂದಲೂ ಬಲಗೊಂಡು ಕೆಲವೆಡೆಗಳಲ್ಲಿ ನಮ್ಮ ಜರ್ಮನ್ ಗಡಿಗೆ ಸಮೀಪಿಸಿದ್ದಾನೆ, ಕೆಲವೆಡೆಗಳಲ್ಲಿ ಅದನ್ನು ಮುಟ್ಟಿದ್ದಾನೆ. ಆತನು ಜರ್ಮನರ ರೀಚ್ ಸರಕಾರವನ್ನು ಅಳಿಸಿ ಜರ್ಮನರನ್ನು ನಾಶಮಾಡಲು ತನ್ನ ಪ್ರಯತ್ನವನ್ನು ಇಮ್ಮಡಿಮಾಡುತ್ತಿದ್ದಾನೆ. ಇದೇ ನಮ್ಮನ್ನು ಸೋಲಿಸುವ ಆತನ ಕೊನೆಯ ಆಘಾತವೆಂದು ಆತನು ನಂಬಿ ಸನ್ನಾಹಗೊಳ್ಳುತ್ತಿರುವುದರಿಂದ ಆತನ ಆ ಸಂಕಲ್ಪವು ನೆರವೇರದಂತೆ ಮಾಡಲಿಕ್ಕಾಗಿ ಜರ್ಮನ ಜನಾಂಗವನ್ನೇ ಸಮರಮುಖಕ್ಕೆ ಕರೆದಿದ್ದೇನೆ. ಈ ನಮ್ಮ ಸಾಹಸದಲ್ಲಿ ವೈರಿಯನ್ನು ಹತಾಶನನ್ನಾಗಿ ಮಾಡುವುದು ಮಾತ್ರವಲ್ಲದೆ ಆತನ ಸೈನ್ಯವನ್ನು ರೀಚ್ ರಾಷ್ಟ್ರದಿಂದ ದೂರ ಹಿಂದೋಡಿಸಿ ಜರ್ಮನಿಗೂ ಅದರ ಯುರೋಪಿನ ಮಿತ್ರಜನಾಂಗಗಳಿಗೂ ಮುಂದೆ ಶಾಂತಿಯು ದೊರಕಿ ಯುರೋಪದಲ್ಲೇ ಶಾಂತಿ ಸ್ಥಾಪನೆಯಾಗುವನಕ ತಡೆಗಟ್ಟಿ ನಿಲ್ಲಿಸಬೇಕಾಗಿದೆ.

ಈ ಕಾರ್ಯಕ್ಕಾಗಿ ನನ್ನ ಮೊದಲಿನ ಆಜ್ಞೆ ಏನೆಂದರೆ—ನಮ್ಮ ರೀಚ್ ರಾಷ್ಟ್ರದ ಪ್ರತಿಯೊಂದು ಜಿಲ್ಲೆಯಲ್ಲಿಯೂ ೧೬ರಿಂದ ೬೦ ವರುಷಗಳೊಳಗಿನ ಶಕ್ತರಾದ ಗಂಡಸರೆಲ್ಲರಿಂದ ಕೂಡಿದ ಜಿಲ್ಲಾದಳ (ವೊಲ್ಕ್ ಸ್ಟ್ರಮ್) ನಿರ್ಮಾಣವಾಗಬೇಕು. ಈ ದಳವು ತನ್ನ ಜಿಲ್ಲೆಯನ್ನು ಸರ್ವಸಾಧನೋಪಾಯಗಳಿಂದ ರಕ್ಷಿಸತಕ್ಕದು. ಈ ದಳದ ನಿರ್ಮಾಣ ಮತ್ತು ನೇತೃತ್ವವು ಗೇಲೈಟರ್ಸ್‌ರ ಕೈವರ್ತಿಸಲಾಗಿದೆ. ಈ ವೋಲ್ಕ್‌ಸ್ಟ್ರುಮಿನ ಎಲ್ಲರೂ ಸೈನಿಕರೆಂದೂ ಸೇನಾ ನಿಯಮಬದ್ಧರೆಂದೂ ಪರಿಗಣಿಸಲ್ಪಡತಕ್ಕದು ಜರ್ಮನ್ ಮಹಾಸೇನಾಧಿಪತಿ ಹಿಮ್ಲರನಿಗೆ ಈ ಜಿಲ್ಲಾ ಯೋಧ ಸಂಘಗಳ ಸ್ಥಾಪನೆ, ಶಿಕ್ಷಣ, ಸಮರೋಪಕರಣ ಪೂರೈಕೆ ಮುಂತಾದ ಸರ್ವಾಧಿಕಾರಗಳನ್ನು ಕೊಡಲಾಗಿದೆ. ಈ ಸಂಘದ ಸದಸ್ಯರು ಹಿಮ್ಲರನ ಸೂಚನೆಗನುಸಾರವಾಗಿ ನನ್ನ ಆಜ್ಞಾಮೇರೆಗೆ ಸಮರಕ್ಷೇತ್ರಕ್ಕೆ ಕಳುಹಿಸಲ್ಪಡುವರು

ಹಿಮ್ಲರನ ಉದ್ಘೋಷಣೆ

ಹಿಮ್ಲರನೂ ಒಂದು ಭೀಕರ ಉದ್ಘೋಷಣೆಯಿಂದ ಜರ್ಮನರನ್ನು ಕರೆದಿರುವನು. ಪೂರ್ವ ಪ್ರಶ್ಯಾದಿಂದ ಆಕಾಶವಾಣಿಯ ಮೂಲಕ ಮಾಡಿದ ಆವೇಶ, ಆಕ್ರೋಶಪೂರಿತವಾದ ಉದ್ಘೋಷಣೆ ಇದು. ಜರ್ಮನ್ ಸೇನೆಯು ನಾಚಿಗೆಗೇಡಿನ ಸೋಲು ದೊರೆತೊಡನೆ ಕೆದರಿ ಏಳುವುದು ಸಂಪ್ರದಾಯವಾಗಿದೆ. ಈಗಿನದು ಅಂತಹ ಸಂದರ್ಭ. ನಾವು ವಲ್ಕ್‌ಸ್ಟ್ರುಮುಗಳನ್ನು ನಿರ್ಮಾಣಮಾಡಿಕೊಂಡು ರಕ್ಷಣೆಯನ್ನು ಭದ್ರಗೊಳಿಸಬೇಕಾಗಿದೆ ವೈರಿಯು ಪ್ರತಿಯೊಂದು ಮೈಲಿಗೂ ರಕ್ತಪ್ರವಾಹವನ್ನು ಹರಿಸಿ ಮುಂದೊತ್ತಬೇಕಾಗುತ್ತದೆಂಬುದನ್ನು ಕಲಿಯಬೇಕು. ಹಾಗೆ ಮುಂದುವರಿದರೂ ಹಿಂದಿನಿಂದ ಅವನ ಮೇಲೆ ಹಾರಿ ಬೀಳಬೇಕು. ಹಳ್ಳಿಯ ಪ್ರತಿಯೊಂದು ವಸತಿಯೂ ಮರಣಕ್ಕೆ ಬೆದರದ ಜನರಿಂದ ರಕ್ಷಿಸಲ್ಪಡಬೇಕು ಅವರು ಬಿದ್ದರೆ ಹೆಂಗಸರೂ ಹುಡುಗಿಯರೂ ಎದುರಿಸಬೇಕು. ನಮ್ಮೂರಿನೊಳಗೆ ವೈರಿಯು ಕಾಲಿಟ್ಟರೆ ವಲ್ಕ್‌ಸ್ಟ್ರುಮಿನವರ ಅವನೊಡನೆ ಕೂಡಲೆ ಕಾಳಗ ಕೊಡಲಿಕ್ಕೆ ಸಿದ್ಧರಾಗಿರತಕ್ಕದು. ಅವನು ಎಲ್ಲಿಂದಲೇ ಬರಲಿ-ಯಾವಾಗಲೇ ಬರಲಿ-ಒಂದೊಡನೆ ನೆಲದ ಮೇಲೆ ನಿಂತು ಎದುರಿಸಿ, ಆಕಾಶದಿಂದ ಅವನ ಮೇಲೆರಗಿ, ಹುಚ್ಚನ ಆವೇಶದಿಂದ ಅವನ ಮೇಲೆ ಬೀಳಿರಿ. ಪ್ರತಿಯೊಂದು ಮನೆ, ಪ್ರತಿಯೊಂದು ಅಗಳ್ತೆ, ಪ್ರತಿಯೊಂದು ಪೊದೆ, ಪ್ರತಿಯೊಂದು ತೋಪು ಈ ರೀತಿಯಿಂದ ನಮ್ಮ ಗಂಡಸರಿಂದಲೂ ಯುವಕರಿಂದಲೂ ರಕ್ಷಿಸಲ್ಪಡಬೇಕು ಆವಶ್ಯಕತೆಯುಂಟಾದಲ್ಲಿ ಹೆಂಗಸರ ಮೇಲೂ ಈ ಹೊಣೆತನ ಒಂದೀತು, ಎಂದು ವೈರಿಯನ್ನು ಬೆದರಿಸುವ ಉದ್ಘೋಷಣೆಮಾಡಿದ್ದಾನೆ ಜರ್ಮನರ ಮಹಾಸೇನಾಧಿಪತಿ ಹಿಮ್ಲರ್

ಬ್ರಿಟನು ಮನಸಾರೆ ಕರ್ತವ್ಯಕ್ಕೆ ಕೈಯಿಕ್ಕಬೇಕು. ಪೆ. ಎ. ಜಿ ಗಾರ್ಡಿನರ ಒತ್ತಾಯದ ನುಡಿ

ಬ್ರಿಟನಿನ ಪ್ರಸಿದ್ಧ ಪತ್ರಿಕೋದ್ಯಮಿ ಮಿ [illegible] ಕ್ಯವು ಚಿರಸ್ಥಾಯಿಯಾಗಿ ಉಳಿಯಬೇಕಾದರೆ ಅದರಲ್ಲಿ ಜನನೆಯ ಅತ್ಯಾವಶ್ಯಕ ಸ್ತಂಭವು ಇಂಡಿಯಾ. ಆಧೀನ ಇಂಡಿಯಾ ಅಲ್ಲ, ಸ್ವಾತಂತ್ರ್ಯ ಹೊಂದಿದ ಸ್ವತಂತ್ರ ಸರಕಾರವುಳ್ಳ ಒಗ್ಗಟ್ಟುಳ್ಳ ಇಂಡಿಯಾ ಅದರಲ್ಲಿರಬೇಕು, ಎಂದಿದ್ದಾರೆ. ಮಾತ್ರವಲ್ಲ ಡಂಬರ್ಟನ್ ಓಕ್ಸ್‌ನಲ್ಲಾದ ಜನಾಂಗ ಸಂಘ ರಚನೆಯ ಯೋಜನೆಯು ಒಳಗುಟ್ಟಿರಿತ ಇವರು 'ಜಾಗತಿಕ ಭದ್ರತೆಯೂ ಪುನರ್ರಚನೆಯೂ ಕೇವಲ ಜಳ್ಳು ತತ್ವಗಳಾಗಿರದೆ ಸಫಲವಾಗಬೇಕಾದರೆ ಅದರಲ್ಲಿ ಚೀನಾದ ಸಹಭಾಗಿತ್ವವು ಸಹಜವೂ ಪರಿಣಾಮಕಾರಿಯೂ ಆಗುವಂತಿರಬೇಕು. ಈ ವಿಷಯದಲ್ಲಿ ಬ್ರಿಟನು ಮನಸಾರೆ ತನ್ನ ಹೊಣೆಗಾರಿಕೆಯನ್ನು ನಿರ್ವಹಿಸಲು ಕೈಯಿಕ್ಕಬೇಕು' ಎಂದಿದ್ದಾರೆ.

ಸೈನಿಕರ ಮಕ್ಕಳಿಗೆ ಯಾ ಆಶ್ರಿತರಿಗೆ ವಿದ್ಯಾವಿಷಯಕ ವಿಶೇಷ ಔದಾರ್ಯ

ಈಗ ಯುದ್ಧದಲ್ಲಿ ಸಹಭಾಗಿಗಳಾಗಿರುವ ಸೈನಿಕರ ಮಕ್ಕಳಿಗೆ ಯಾ ಆಶ್ರಿತ ಬಾಲಕರಿಗೆ ಈಗಿರುವ ಸಂಬಳದ ವಿನಾಯಿತಿಯಲ್ಲದೆ 1944—45ನೇ ವರ್ಷಾರಂಭದಿಂದ ವಿದ್ಯಾಸಂಸ್ಥೆಗಳಲ್ಲಿ ತೆರಬೇಕಾಗಿರಬಹುದಾದ ಗೇಮ್ಸ್, ಲ್ಯಾಬ್ರೆರಿ, ಲೆಬೊರೇಟರಿ, ಮೆಡಿಕಲ್ ಇನ್ಸ್‌ಪೆಕ್ಷನ್, ಇತ್ಯಾದಿಗಳ ಫೀಸನ್ನೂ ವಿನಾಯತಿಗೊಳಿಸಿಯದೆಯೆಂದು ಮದ್ರಾಸ ಸರಕಾರದ ಹುಕುಂ ಹೊರಟಿದೆ

ಜಪಾನರನ್ನು ಸೋಲಿಸುವ ಯತ್ನವು ಮಂದಗತಿಯಲ್ಲಿ ಸಾಗುವುದೇಕೆ?

ಕಮಾಂಡರ್ ಯಂಗ್‌ರವರ ಮುಚ್ಚುಮರೆಯಿಲ್ಲದ ಎಚ್ಚರದ ನುಡಿ. ಕಮಾಂಡರ್ ಯಂಗ್‌ರವರು ಇಂಡಿಯಾ ಲೀಗ್ ನ್ಯಾಶನಲ್ ಕೌನ್ಸಿಲಿನಲ್ಲಿ ಮಾತಾಡುತ್ತ ಇಂಡಿಯಾದ ಪರಿಪೂರ್ಣ ಸಹಕಾರವನ್ನು ಹೊಂದುವುದೂ ಚೀನಾಕ್ಕೆ ಸಹಾಯವನ್ನೀಡುವುದೂ ಜಪಾನನ್ನು ಸೋಲಿಸುವ ಕಾರ್ಯದಲ್ಲಿ ವಿಳಂಬಗೊಳ್ಳದೆ ಮಾಡಬೇಕಾದ ಕೆಲಸವಾಗಿದೆ. ಶತ್ರುವಿನ ಆಕ್ರಮಣಕ್ಕೊಳಗಾದ ಫ್ರಾನ್ಸು ಮತ್ತು ಬೆಲ್ಜಿಯಮುಗಳು ಕೃತಜ್ಞಪೂರ್ವಕವಾಗಿ ನಮ್ಮೊಡನೆ ಸಹಕರಿಸಿದುದರಿಂದ ಆ ಭಾಗದಲ್ಲಿ ವೈರಿಗೆ ಶೀಘ್ರ ಅಪಜಯವುಂಟಾಯಿತು. ಅಂತೆಯೇ ಪೂರ್ವದಲ್ಲಿ ಜಪಾನು ಗೆದ್ದುಕೊಂಡಿರುವ ರಾಷ್ಟ್ರಗಳಿಂದ ಅದನ್ನು ತ್ವರಿತದಿಂದ ಹಿಂದಟ್ಟಬೇಕಾದರೆ ಆ ಜಿತ ರಾಷ್ಟ್ರಗಳ ಪರಿಪೂರ್ಣ ಸಹಕಾರದ ಬೆಂಬಲ ಬೇಕು. ಕೇವಲ ಸಮರ ಕ್ಷೇತ್ರಗಳಲ್ಲಿ ಮಾತ್ರವಲ್ಲದೆ ಇತರ ಮುಖಗಳಲ್ಲಿಯೂ ಈ ಹೋರಾಟದ ಕಷ್ಟ ನಷ್ಟಗಳನ್ನು ಎದುರಿಸಲು ಪೂರ್ವದ ಇಂಡಿಯಾ ಮತ್ತು ಇತರ ರಾಷ್ಟ್ರಗಳು ಸಿದ್ಧರಾಗಬೇಕು. ಆದರೆ ಇಂಡಿಯಾ ಮತ್ತು ಚೀನದ ಭವಿಷ್ಯದ ಪ್ರಶ್ನೆಗಳ ಕುರಿತಾಗಿ ಇರುವ ಭಿನ್ನಾಭಿಪ್ರಾಯಗಳು ಇನ್ನೂ ತೀರ್ಮಾನವಾಗದ ಕಾರಣ ಅಂತಹ ಪರಿಪೂರ್ಣ ನೆರವು ನಮಗೆ ದೊರಕಲಿಲ್ಲ. ಅದರಿಂದಾಗಿ ಶೀಘ್ರವಾಗಬಹುದಾದಷ್ಟು ಶೀಘ್ರದಲ್ಲಿ ಜಪಾನನ್ನು ಸೋಲಿಸುತ್ತ ಮುಂದೊತ್ತಲಾಗಲಿಲ್ಲ—ಎಂದಿದ್ದಾರೆ.

ಈ ತನಕ ಕೊಲ್ಲಲ್ಪಟ್ಟ ಜರ್ಮನ್ ದಳವಾಯಿಗಳು 50000

ಜರ್ಮನ್ ಫೀಲ್ಡ್ ಮಾರ್ಶಲರಿಗೆ ಬಂದಿರುವ ಸುದ್ದಿಗಳ ಮೇರೆಗೆ ಯುದ್ಧಾರಂಭದಿಂದ ಈ ವರೆಗೆ ಐವತ್ತು ಸಾವಿರ ಜರ್ಮನ್ ಸೇನಾಧಿಕಾರಿಗಳು ಕೊಲ್ಲಲ್ಪಟ್ಟಿರುವರೆಂದೂ ಅವರಲ್ಲಿ ೧೫೦ ಜನರಲ್‌ಗಳೆಂದೂ ಜರ್ಮನ್ ನ್ಯೂಸ್ ಏಜನ್ಸಿಯ ಹೇಳಿಕೆ.

ಪಂಡಿತ ನೆಹರೂಗಳವರು ಸಂದರ್ಶನೆಗಳ ರಿಯಾಯಿತಿಯನ್ನು ತಿರಸ್ಕರಿಸಿರುವರು

ಬಂಧನದಲ್ಲಿರುವ ಕಾಂಗ್ರೆಸ್ ಕಾರ್ಯಕಾರಿ ಸದಸ್ಯರನ್ನು ಅವರ ಸಮೀಪದ ಬಂಧುಬಾಂಧವರು ಸಂದರ್ಶಿಸಿ ವೈಯಕ್ತಿಕ ಹಾಗೂ ಸಾಂಸಾರಿಕ ಯೋಗಕ್ಷೇಮಾದಿಗಳ ವಿಚಾರ ಮಾತುಕತೆ ನಡೆಯಿಸಬಹುದೆಂದು ಇಂಡಿಯಾ ಸರಕಾರವು ಇತ್ತೀಚೆಗೆ ಕೊಟ್ಟ ಅನುಮತಿಯನ್ನು ಉಪಯೋಗಿಸಿಕೊಳ್ಳಲು ಪಂಡಿತ ನೆಹರೂಗಳು ತಿರಸ್ಕರಿಸಿರುವರಂತೆ. ಅವರು ತನ್ನ ಸಂಬಂಧಿಕರಲ್ಲೊಬ್ಬರಿಗೆ ಬರೆದ ಕಾಗದದಲ್ಲಿ 'ಮಾತುಕತೆ ನಡೆಯಿಸಲು ಬಿಡುವ ಶರತ್ತು ಮೇರೆಗಳು ನನ್ನ ಅಥವಾ ನನ್ನ ಪ್ರಿಯ ಜನರ ಗೌರವಕ್ಕೆ ಸರಿಹೋಗುವುದಲ್ಲವಾಗಿರಬಹುದಾದ ಕಾರಣ ಶೀಘ್ರವಾಗಲೀ ಇತರರಾರೇ ಆಗಲಿ ಅಂತಹ ಸಂದರ್ಶನೆಗಾಗಿ ಮನಸಿವಾಡುವ ಅಥವಾ ಇಲ್ಲಿಯ ತನಕ ಬರುವ ತೊಂದರೆಗೊಳ್ಳಬಾರದೆಂದು ನನ್ನ ಅಪೇಕ್ಷೆ' ಎಂದು ಬರೆದಿರುವರಂತೆ.

ಐ ಸಿ ಎಸ್. ಆಫೀಸರನು ತಳ್ಳಲ್ಪಟ್ಟನು.

ಶ್ರೀ ಆರ್. ಎಸ್ ಡೇ ಐ ಸಿ ಎಸ್. ಇವರನ್ನು ಇಂಡಿಯಾ ಸ್ಟೇಟ್ ಸೆಕ್ರೆಟರಿಯವರು ಕೆಲಸದಿಂದ ತಳ್ಳಿಹಾಕಿರುವರೆಂದು ಸಂಯುಕ್ತ ಪ್ರಾಂತದ ಗಜೇಟಿನಲ್ಲಿ ಪ್ರಕಟವಾಗಿದೆ.

ಜೈಪ್ರಕಾಶ ನಾರಾಯಣರ ಮೇಲೆ ರಾಜದ್ರೋಹದ ಖಟ್ಲೆ.

ಕಾಂಗ್ರೆಸ್ಸು ಸೋಶಿಯಾಲಿಸ್ಟ್ ಪಕ್ಷದ ಪ್ರಸಿದ್ಧ ಮುಂದಾಳಾದ ಶ್ರೀ ಜೈಪ್ರಕಾಶ ನಾರಾಯಣರನ್ನು ರಾಜದ್ರೋಹದ ಆರೋಪಣೆಯ ಮೇಲೆ ವಿಚಾರಣೆಗೆ ಗುರಿಪಡಿಸುವರೆಂದು ಲಂಡನಿಗೆ ಸುದ್ದಿಹೋಗಿದೆ ಈ ವಿಷಯವು ಕಾಮನ್ಸ್ ಸಭೆಯಲ್ಲಿ ಚರ್ಚೆಗೆ ಬರುವುದೆಂದೂ ವಾರ್ತೆ.

ಥೀಬ್ಸ್ ಮಿತ್ರರ ವಶವಾಯಿತು

ಗ್ರೀಸದ ಏಥೆನ್ಸಿನಿಂದ ೩೦ ಮೈಲು ಒಳನಾಡಿನಲ್ಲಿರುವ ಥೀಬ್ಸ್ ನಗರವು ಮಿತ್ರರ ವಶವಾಯಿತು.

ಯುದ್ಧವು ಶೀಘ್ರ ಕೊನೆಗೊಂಡು ಧಾರಣೆಗಳ ರಚನೆಯ ರೂಪಾಂತರ ಹೊಂದಬಹುದು. ಈ ಪರಿಸ್ಥಿತಿಯನ್ನು ನೀವು ಹೇಗೆ ಎದುರಿಸುವಿರಿ? ನಾವು ಸಲಹೆಗಳನ್ನು ನಿಮ್ಮ ಮುಂದಿಡುವೆವು.

1 ನಿಮ್ಮ [illegible] ಈಗಲೇ ಅವನ್ನು ವಿಕ್ರಯಿಸಿ ನಿಮ್ಮ ನಗದಿ ಸ್ಥಿತಿಯನ್ನು ಸ್ಥಿರಗೊಳಿಸಿರಿ [illegible] ಬ್ಯಾಂಕಿನ ಖಾತೆಯಲ್ಲಿರಿಸಿ ಧಾರಣೆಗಳ ಇಳಿತವನ್ನು ನಿರೀಕ್ಷಿಸಿರಿ

2 ನಿಮ್ಮ ಸಾಲಗಳನ್ನು ಈಗಲೇ ತೀರಿಸಿರಿ [illegible] ಯುದ್ಧಾನಂತರದ ದಿನಗಳಲ್ಲಿ ಧಾರಣೆಗಳ ಇಳಿತದಿಂದಾಗಿ ಸಾಲಗಳನ್ನು ತೀರಿಸಲು [illegible] ಸಬಹುದು

3 ನಿಮಗೆ ಪರರಿಂದ ಸಲ್ಲಬೇಕಾದ ಸಾಲಗಳನ್ನು ಈಗಲೇ ವಸೂಲು ಮಾಡಿರಿ [illegible] ಧಾರಣೆಗಳ ಇಳಿತದಿಂದಾಗಿ ನಿಮ್ಮ ಸಾಲಗಾರರ ನಗದಿ ಸ್ಥಿತಿಯು ಬಹಳ ದುಷ್ಟರಿಣಾಮ ಹೊಂದಿ, ಅವರಿಂದ ಸಾಲಗಳನ್ನು ತೀರಿಸಲಸಾಧ್ಯವಾಗಬಹುದು

4 ನಿಮ್ಮ ಕೂಡ ಇರುವಷ್ಟು ನಗದಿಯನ್ನೆಲ್ಲಾ ಇನ್ನು ಮುಂದೆ ಎರುವ ಧಾರಣೆ ಇಳಿತವಾಗುವ ದಿನಗಳಿಗಾಗಿ ಕಾದಿರಿ ಧಾರಣೆಗಳ ಗತಿಯನ್ನು ಮತ್ತು ವಾಣಿಜ್ಯದ ಸಾಮಾನ್ಯ ಸ್ಥಿತಿಯನ್ನು ಪರ್ಯಾಲೋಚಿಸಿ ನಿಮ್ಮ ಭಾವೀ ಯೋಜನೆಗಳನ್ನು ಕಲ್ಪಿಸಬಹುದು

ನಿಮ್ಮಲ್ಲಿರುವ ನಗದಿಯನ್ನೆಲ್ಲಾ ನಮ್ಮೊಡನೆ ಖಾತೆಯಲ್ಲಿರಿಸಿ [illegible] ಬೇಕಾದರೆ [illegible] ಅಥವಾ ಸಲಹೆಯ [illegible] ಪ್ರಸಂಗ [illegible]

ಸ್ಥಾಪನೆ 1906 ಕೆನರಾ ಬ್ಯಾಂಕ್ ಲಿಮಿಟೆಡ್

ESTD 1906 Canara Bank, Limited.

(Incorporated in British India with limited-Liability of members limited.)

The Canara Banking Corporation Limited.
(Incorporated in British India)
Estd 1906.
Head Office: UDIPI, (S. K.)

ANNOUNCEMENT
A Branch of the Bank has been opened at BOMBAY on 24-10-1944.
(1st Floor, Ready Money Mansions, Churchgate Sreett, Fort.

ನವಯುಗ

ಉಡುಪಿ, ಗುರುವಾರ ೨೬-೧೦-೧೯೪೪

ಯುದ್ಧದ ಮುನ್ನಡೆ.

ಕಳೆದೊಂದು ವಾರವು ಭೀಕರ ಕದನಗಳ ಹಾಗೂ ಮಹತ್ವದ ವಿಜಯಗಳ ವಾರವಾಗಿತ್ತು. ಜರ್ಮನಿಯ ಗಡಿಗಳಲ್ಲಿ ಭೀಕರ ನಿರ್ಣಾಯಕ ಕದನಗಳಾಗುತ್ತಿರುವಾಗಲೇ ಮಿತ್ರ ಪಕ್ಷವು ಶಾಂತ ಸಾಗರದಲ್ಲಿ ಮಹತ್ವದ ವಿಜಯವನ್ನು ಸಾಧಿಸಿದೆ. ಆ ವಿಜಯವೆಂದರೆ ಫಿಲಿಪ್ಪೈಯನ ದ್ವೀಪಗಳಲ್ಲಿ ಅಮೇರಿಕನ್ ಪಡೆಯು ಇಳಿದಿರುವುದು. ೧೯೪೨ರಲ್ಲಿ ಈ ದ್ವೀಪಗಳನ್ನು ತ್ಯಜಿಸಿದ ಜನರಲ್ ಮೆಕ್ ಆರ್ಥರರೇ ತಾನಾಗ ಕೊಟ್ಟಿದ್ದ ಅಭಯವಚನದಂತೆ ತಿರುಗಿ ಅಲ್ಲೀಗ ಮಹಾ ಪಡೆಯೊಂದಿಗೆ ಬಂದಿಳಿದಿರುವರು. ಜಾಪಾನರು ನಿರೀಕ್ಷಿಸಿದಂತೆ ಮಿಂಡಾನೋ ದ್ವೀಪಗಳಲ್ಲಿಳಿಯದೆ ಲೇಟೋ ದ್ವೀಪದಲ್ಲಿ ಆತ ಬಂದಿಳಿದಾನೆಂದು ಅವರು ಊಹಿಸಿರಲಿಲ್ಲ. ಫಿಲಿಪ್ಪೈಯನ ದ್ವೀಪಗಳ ನಡುವಿನ ದ್ವೀಪವಾದ ಲೇಟೆಯಲ್ಲಿ ಇಳಿದುದರಿಂದ ಜಾಪಾನರ ಪಡೆಗಳನ್ನು ಎರಡು ತುಂಡಾಗಿ ವಿಭಾಗಿಸಿದಂತಾಗಿದೆ. ಜಪಾನರನ್ನು ಈ ದ್ವೀಪಗಳಿಂದೋಡಿಸುವುದು ಸುಲಭದ ಕೆಲಸವಲ್ಲವಾದರೂ ಪೂರ್ಣ ಪರ್ಯಾಲೋಚನೆ ಮಾಡಿದ ಕಾರ್ಯಕ್ರಮಾನುಸಾರವಾಗಿ ಈ ಆಕ್ರಮಣವು ಆರಂಭಿಸಲ್ಪಟ್ಟಿದೆಯೆಂದೂ ಆ ಕಾರ್ಯಕ್ರಮಾನುಸಾರ ಒಂದರ ಹಿಂದೊಂದಾಗಿ ತೀವ್ರಗತಿಯ ಆಘಾತಗಳು ಶತ್ರುವಿನ ಮೇಲೆ ಬೀಳಲಿಕ್ಕಿವೆಯೆಂದೂ ತಿಳಿಯಲಾಗಿದೆ. ಫಾರ್ಮೋಸಾ ಮತ್ತು ಫಿಲಿಪ್ಪೈಯನ್ ದ್ವೀಪಗಳು ವಿಮಾನ ಹಾಗೂ ನೌಕಾಪಡೆಗಳ ಮೂಲಾಶ್ರಯಗಳಾಗುವ ಸೌಕರ್ಯಗಳಿಂದೊಡಗೂಡಿವೆ. ಇವುಗಳಿಂದ ಜಾಪಾನಿನ ಮೇಲೆ ಬೀಳುವುದು ಸುಲಭ. ಈ ಕಾರ್ಯದ ಪೀಠಿಕೆಯಾಗಿಯೇ ಮಿತ್ರ ಪಕ್ಷವು ಈ ದ್ವೀಪಗಳಲ್ಲಿ ಇಳಿದಿರುವುದು. ಇಲ್ಲಿ ಸೂತ್ರಧಾರಿಯಾಗಿ ಮಿತ್ರಪಕ್ಷವು ಕುಳಿತು ಕೆಲಸ ಮಾಡಿದರೆ ಜಾಪಾನರ ಗೃಹ ದ್ವೀಪಗಳಿಗೂ ಅವರೀಗ ಜಯಿಸಿಕೊಂಡಿರುವ ಈಸ್ಟ್ ಇಂಡೀಸ್ ದ್ವೀಪಗಳಿಗೂ ಸಂಚಾರ ಸಂಬಂಧವನ್ನು ತಡೆದು ಕಡಿದು ಹಾಕಬಹುದು. ಶತ್ರುವಿನ ಉದ್ಯಮ ಕ್ಷೇತ್ರಗಳನ್ನು ಬಾಂಬಿನ ಸುರಿಮಳೆಗರೆದು ಪುಡಿಗುಟ್ಟಬಹುದು. ಲೇಟೋವು ಫಿಲಿಪ್ಪಾಯಿನ್ ದ್ವೀಪಗಳಲ್ಲಿ ಅತಿ ದೊಡ್ಡದಾದವುಗಳಾದ ಲೂಜೋನ್ ಮತ್ತು ಮಿಂಡಾನೋಗಳ ಮಧ್ಯದಲ್ಲಿದೆ. ಶಾಂತ ಸಾಗರದಲ್ಲಿ ಹಿಂದೆಂದೂ ಸಮರಕ್ಕಿಳಿಯದಿದ್ದಷ್ಟು ದೊಡ್ಡ ಸೇನಾನಿವಹವು ಜನರಲ್ ಮೆಕ್ ಆರ್ಥರೊಡನಿದೆಯಂತೆ. ಜಾಪಾನರು ಛಲದಿಂದ ಪ್ರತಿಭಟಿಸುವರೆಂಬುದೇನೋ ನಿಜ. ಆದರೆ ಆರ್ಥರರಿಗ ಎರಡು ಸೌಕರ್ಯ ವಿಶೇಷಗಳಿವೆ. ಮೊದಲನೆಯದಾಗಿ ಅವರ ವಿಮಾನ ಮತ್ತು ನೌಕಾ ನಿವಹದ ಉತ್ಕೃಷ್ಟತೆ. ಇವು ಜಾಪಾನರದವುಗಳಿಂತ ಮೇಲ್ತರಗತಿಯವುಗಳು. ಎರಡನೆಯದಾಗಿ ಫಿಲಿಪ್ಪಾಯಿನ್ ದ್ವೀಪ ವಾಸಿಗಳ ಮೈತ್ರೀ ಭಾವದ ಪರಿಪೂರ್ಣ ಬೆಂಬಲ. ಅಮೇರಿಕಾ ಸರಕಾರವು ಈಗಾಗಲೇ ಅವರಿಗೆ ಸ್ವಾತಂತ್ರ್ಯವನ್ನೀಯುವ ಆಶ್ವಾಸನೆಯನ್ನಿತ್ತಿದೆ.

ಕಳೆದ ವಾರದ ಮತ್ತೊಂದು ಮಹತ್ವದ ಸಾಧನೆಯೆಂದರೆ ಸಾವಿರಗಟ್ಟಲೆ ವಿಮಾನ ಪಡೆಗಳು ಫಾರ್ಮೋಸದ ಮೇಲೆ ಧಾಳಿಯಿಟ್ಟುದು. ಫಾರ್ಮೋಸಾ ಕೋರಿಯಾ ಮತ್ತು ಮೆಂಚೂರಿಯಾ ಇವು ಮೂರು ಜಪಾನರ ಸೇನೆಯ ಆಹಾರ ಪೂರೈಕೆಯ ಪ್ರದೇಶಗಳು. ಮತ್ತೊಂದು ಮುನ್ನಡೆ ಬರ್ಮಾ ಗಡಿಯಲ್ಲಿ ಇಂಡಿಯಾದ ಐದನೇ ದಳವು ಟಿಡ್ಡಿಮನ್ನು ವಶಪಡಿಸಿಕೊಂಡುದು. ಟಿಡ್ಡಿಮು ಮಣಿಪುರ ಸಂಗ್ರಾಮದಲ್ಲಿ ಶತ್ರುವಿನ ಪಡೆಯ ಮೂಲಾಧಾರವಾಗಿತ್ತು. ಇದನ್ನು ವಶಪಡಿಸಿಕೊಂಡುದಲ್ಲದೆ ಇದರಿಂದ ೧೬ ಮೈಲು ತೆಂಕಲಿಗಿರುವ ಫಾಲಮಿನ ವರೆಗೂ ಶತ್ರುವನ್ನು ಹಿಮ್ಮೆಟ್ಟಿಸಿ ಚಿನ್ ಪರ್ವತ ಪ್ರದೇಶದಲ್ಲಿ ಶತ್ರುವಿಗೆ ಮೂಲಾಧಾರ ಸ್ಥಾನವಾಗಿದ್ದ ಅಲ್ಲಿಂದಲೂ ಅವನು ಕಾಲು ತೆಗೆವಂತೆ ಮಾಡಿದುದು.

ಯುರೋಪದಲ್ಲಿ ಗ್ರೀಕರ ಪ್ರಸಿದ್ಧ ನಗರವಾಗಿದ್ದ ಏಥೆನ್ಸ್ ಮಿತ್ರಪಕ್ಷದ ಕೈಸೇರಿದುದಲ್ಲದೆ ಅಲ್ಲಿಂದ ೩೦ ಮೈಲು ಒಳನಾಡಿನಲ್ಲಿರುವ ಥೀಬ್ಸ್ ಕೂಡಾ ವಶಕ್ಕೆ ಬಂದಿದೆ. ಗ್ರೀಕ ಸರಕಾರವು ಪುನಃ ಸ್ಥಾಪನೆಯಾಗಿದೆ. ಜರ್ಮನರು ಗ್ರೀಸನ್ನು ಪೂರ್ಣ ಬಿಟ್ಟು ಹೋಗುವ ತವಕದಲ್ಲಿದ್ದಂತೆ ತೋರುತ್ತದೆ. ಸಲೋನಿಕಾ ಪ್ರಾಂತದಿಂದ ಜರ್ಮನರು ಎದ್ದೇಳುತ್ತಿದ್ದಾರೆ.

ಸಮರ ದೃಷ್ಟಿಯಿಂದ ನೋಡಿದರೆ ಮತ್ತೊ ಪ್ರಾಮುಖ್ಯತೆಯ ಘಟನೆಯೆಂದರೆ ಯುಗೊಸ್ಲೋವಿಯಾದ ರಾಜಧಾನಿಯಾದ ಬೆಲ್ಗ್ರೇಡು ರಶ್ಯನರ ಕೈವಶವಾದುದು. ಬಾಲ್ಕನ್ ಪ್ರಾಂತದಿಂದ ದಳಗಳನ್ನು ಕೇಂದ್ರೀಕರಿಸಿ ಆಸ್ಟ್ರಿಯಾವನ್ನು ಪ್ರವೇಶಿಸಲಿಕ್ಕೆ ಬೆಲ್ಗ್ರೇಡು ಮೂಲ ಠಾಣೆಯಾಗುವಂತಹ ನಗರ.

ಜರ್ಮನಿಯ ಪಶ್ಚಿಮ ಗಡಿಯಲ್ಲಿ ಮಹತ್ವದ ಘಟನೆಯೆಂದರೆ ಅಮೇರಿಕನ್ ದಳವು ಏಕೆನ್‌ನ್ನು ಹಿಡಿದುದು—ಇದು ಮಿತ್ರಪಕ್ಷವು ವಶಪಡಿಸಿಕೊಂಡ ಮೊತ್ತ ಮೊದಲಿನ ಜರ್ಮನರ ನಗರ ಮಾತ್ರವಾಗಿರದೆ ಪ್ರಾಮುಖ್ಯ ರೈಲ್ವೇ ಕೇಂದ್ರವೂ ಹಲವು ಮಹಾ ಮಾರ್ಗಗಳ ಸಂಗಮ ಸ್ಥಾನವೂ ಆಗಿದೆ. ಈ ಸ್ಥಳದಿಂದ ಜರ್ಮನಿಯ ಒಳನಾಡಿನ ಉದ್ಯಮ ಹಾಗೂ ಕೈಗಾರಿಕೆಯ ಕ್ಷೇತ್ರಗಳನ್ನು ಪುಡಿಗುಟ್ಟಲಿಕ್ಕೆ ಸುಲಭವಾಗುವುದು. ಈಗಾಗಲೇ ಬ್ರಿಟಿಷ್ ಬಾಂಬರುಗಳು ಹಲವು ಸಲ ಮಹಾ ಸಮೂಹದಿಂದ ಹಾರಿ ಆ ಕಾರ್ಯವನ್ನು ಮಾಡುತ್ತಲಿವೆ. ಡಚ್ಚ್ ಬೆಲ್ಜಿಯನ್ ಕರಾವಳಿಯಲ್ಲಿ ಶೆಲ್ಟ್ ಪ್ರಾಂತದಲ್ಲಿ ಸ್ವಲ್ಪ ಮುನ್ನಡೆಯಾಗಿದೆ. ಇದರ ಉದ್ದೇಶವು ಅಳಿವೆಯ ಬಾಗಿಲನ್ನು ತೆರವು ಮಾಡಿಕೊಂಡು ಪ್ರಸಿದ್ಧ ಬಂದರವಾದ ಏಂಟ್ವರ್ಪಿನ ಪ್ರಯೋಜನವನ್ನು ಪಡೆಯುವುದಾಗಿದೆ.

ರಶ್ಯನರು ತಮ್ಮ ಸುದೀರ್ಘವಾದ ಸಮರ ರೇಖೆಯ ಎರಡು ತುದಿಗಳಲ್ಲಿಯೂ ಜರ್ಮನರ ಮೇಲೆ ಬೀಳುತ್ತಿದ್ದಾರೆ. ಬಾಲ್ಟಿಕ್ ರಾಷ್ಟ್ರಗಳ ಸ್ವಾಧೀನತೆಯಿಂದ ರಶ್ಯನರಿಗೆ ಪೂರ್ವಪ್ರಶ್ಯಿಯಾದೊಳಗೆ ನುಗ್ಗಲು ಸುಗಮ ಹಾದಿ ಸಿಕ್ಕಿದಂತಾಗಿದೆ. ಅಲ್ಲಿ ಅವರು ಸುಮಾರು ಹನ್ನೆರಡು ಮೈಲು ಒಳನುಗ್ಗಿದ್ದಾರ ಆದರೆ ಜರ್ಮನರೇನೋ ಸುಲಭದಲ್ಲಿ ಒಗ್ಗುವ ಲಕ್ಷಣ ಕಾಣುವುದಿಲ್ಲ. ಹಟಮಾರಿತನದಿಂದ ಕಾಳಗವಾಗಬಹುದಾದ ಸ್ಥಳವಿದು. ಈ ಭಾಗದ ಜನರು ಕಲಿತನದಲ್ಲಿ ಆವೇಶಗೊಂಡಂತಾಗುವ ಸ್ವಭಾವದವರು. ಹಿಮ್ಲರನಂತೂ ಈ ಜನರಲ್ಲಿ ರೌದ್ರಾವೇಶ ಬರುವಂತೆಯೂ ಮರಣಾಂತ ರಣಕೇಳಿಯಾಡುವಂತೆಯೂ ಹುರಿದುಂಬಿಸಿದ್ದಾನೆ

ದಕ್ಷಿಣ ತುದಿಯಲ್ಲಿ ರಶ್ಯನರ ಯುಕ್ರೇನ್ ಚತುರ್ಥ ದಳವು— ಕ್ರಿಮಿಯಾದಲ್ಲಿ ಮಹಾ ಶೂರರೆಂದೆನಿಸಿಕೊಂಡ ಪಡೆಯು— ಕಾರ್ಪೆತಿಯನ್ ಪರ್ವತವನ್ನು ದಾಟಿ ಜೆಕೋಸ್ಲೋವೇಕಿಯಾದೊಳಗೆ ನುಗ್ಗುತ್ತಿದೆ. ಕಳೆದ ಮಹಾ ಯುದ್ಧದಲ್ಲಿಯೂ ಈ ಪರ್ವತ ತಪ್ಪಲುಗಳೇ ರಶ್ಯನರಿಗೂ ಆಸ್ಟ್ರೋ ಹಂಗೇರಿಯನರಿಗೂ ಮಹತ್ವದ ಸಮರ ಕ್ಷೇತ್ರವಾಗಿತ್ತು. ಆಗಿನ ಅವಸ್ಥೆಯೇ ಹಂಗೇರಿಯನರಿಗೆ ಜರ್ಮನರೊಂದಿಗೆ ಈ ಸಲ ಬರಲಿಕ್ಕಿದೆ. ಕೆಂಪು ಸೇನೆಯು ಈಗ ಎರಡು ಕಡೆಗಳಿಂದ ಹಂಗೇರಿಯ ಕಡೆಗೆ ಮುಂಬರುತ್ತಿದೆ

ಹೀಗೆ ಸಮರಮುಖದಲ್ಲಿ ಎಲ್ಲ ಕಡೆಗಳಲ್ಲಿಯೂ ಮಿತ್ರರ ಕೈಮೇಲಾಗುತ್ತಿರುವುದು ಕಾಣಬಂದರೂ ತುಸು ನಿಧಾನದಲ್ಲಿ ಮುಂದುವರಿಯುವುದು ತೋರುವುದು. ಮಾತ್ರವಲ್ಲ, ವೈರಿಯು ನಿರೀಕ್ಷಿಸಿದಷ್ಟು ಶೀಘ್ರವಾಗಿ ಸುಲಭದಲ್ಲಿ ಸೋಲುವುದಿಲ್ಲವೆಂದೂ ವಿಜಯವು ನಿಶ್ಚಯವಾಗಿ ತೋರಿದರೂ ಆ ದಿನವು ಮುಂದು ಮುಂದು ಅನಿಶ್ಚಿತವಾಗಿ ಸಾಗುತ್ತಿದೆ ಎಂದೂ ತಿಳಿಯಬೇಕಾಗುತ್ತದೆ.

ಭಿಕ್ಷಾಟನಾ ಪ್ರತಿಬಂಧಕ ಶಾಸನ

ಹಾದಿಬೀದಿಗಳಲ್ಲಿ ಬಿಕ್ಷುಕರ ಉಪಟಳವನ್ನೂ ಅಸಹ್ಯ ಭೀಕರ ಪ್ರದರ್ಶನಗಳನ್ನೂ ನಿವಾರಿಸುವುದಕ್ಕಾಗಿ ಸರಕಾರವು ಜ್ಯಾರಿಗೆ ತರಲಿರುವ ಒಂದು ಶಾಸನವನ್ನು ಜನತಾಭಿಪ್ರಾಯಕ್ಕಾಗಿ ಪ್ರಕಟಿಸಿಯದೆ. ಇದರ ಮುಖ್ಯ ಧ್ಯೇಯಸಾಧನಗಳನ್ನು ಕಳೆದ ಸಂಚಿಕೆಯಲ್ಲಿ ಕೊಡಲಾಗಿದೆ. ಇಂತಹದೊಂದು ಶಾಸನವು ಆವಶ್ಯಕವೇ. ಸಾರ್ವಜನಿಕ ಹಾದಿಬೀದಿ, ಸಂತೆ ಪೇಟೆ, ವಿಹಾರ ಸ್ಥಳಗಳಲ್ಲಿ ಸೋಮಾರಿ ಭಿಕ್ಷುಕರ ಹಾಗೂ ಸಹಜ ಅಥವಾ ಕೃತಕ ಭೀಕರ ರೋಗಪೀಡಿತರೆಂದು ತೋರಿಸಿಕೊಂಡು ವಿಕೃತ ಕೂಗಾಟದಿಂದ ಹೆಂಗಸರು ಮಕ್ಕಳ ಕೋಮಲ ನರಮಂಡಲವನ್ನು ನಡುಗಿಸಿ ಕೆಡಿಸುವ ಭಿಕ್ಷುಕರ ಪಿಡುಗು ತಪ್ಪಬೇಕೆಂಬುದ ನಿರ್ವಿವಾದ. ಇಂತಹ ಭಿಕ್ಷುಕರನ್ನು ಹಿಡಿದು ದಂಡಿಸುವ ರೀತಿಗಳು ಈ ಶಾಸನದಲ್ಲಿವೆ. ಮುಖ್ಯವಾಗಿ ೧೬ ವರುಷಗಳಿಗೆ ಮೇಲ್ಪಟ್ಟ ಇಂತಹ ಭಿಕ್ಷುಕರಿಗೆ ದಂಡ ವಿಧಿಸುವುದೂ ಸೆರೆಮನೆಗಟ್ಟುವುದೂ ಗೇಯುವ ಶಾಲೆ (Work Homes)ಗಳಿಗೆ ಕಳುಹಿಸುವುದೂ ನಿವಾರಣೋಪಾಯಗಳಾಗಿವೆ. ನಿಜವಾಗಿ ಅಂಗ ವೈಕಲ್ಯವಿದ್ದವರನ್ನು, ಪ್ರಬಲ ರೋಗಿಗಳನ್ನು ಪ್ರತ್ಯೇಕ ಪೋಷಣಾಲಯ (Speccial Homes)ಗಳಿಗೆ ಕಳುಹಿಸುವ ಏರ್ಪಾಡೂ ಇದೆ. ೧೪-೧೬ ವರುಷಗಳೊಳಗಿನ ತರುಣರನ್ನು ಗೇಯಲರ್ಹರಾಗಿದ್ದಲ್ಲಿ ಗೇಯುವ ಸಾಲೆಗೆ ಕಳುಹಿಸುವುದೂ ೧೪ ವರುಷಕ್ಕಿಂತ ಸಣ್ಣವರನ್ನು ಪೋಷಣಾಲಯಗಳಲ್ಲಿರಿಸುವುದೂ ಕಾನೂನಿನಲ್ಲಿ ಕಾಣುವ ಸಾಧನಗಳು. ಈ ಸಾಧನಗಳು ಸಾಧುವಾದವುಗಳೇ. ಆದರೆ ಈ ಕಾನೂನನ್ನು ಜ್ಯಾರಿಗೆ ತರುವ ಮೊದಲು ಪ್ರತಿಯೊಂದು ಜಿಲ್ಲೆಗ ಸರಿಕಾ ಪೋಷಣವಾಗಿ ಒಂದೆರಡು ಗೇಯುವ ಸಾಲೆಗಳ ಮತ್ತು ಪೋಷಣಾಲಯಗಳ ಏರ್ಪಾಡನ್ನು ಸರಕಾರವು ಮಾಡಿಕೊಳ್ಳದಿದ್ದರೆ ಕುದುರೆಯ ಮುಂದೆ ಗಾಡಿ ಎಂಬಂತಾದೀತು. ಇಂತಹ ಸಾಲೆ ಮತ್ತು ಆಲಯಗಳ ಅಭಾವದಲ್ಲಿ ಕಾನೂನು ಜ್ಯಾರಿಗೆ ಬಂದರೆ ಅದರ ಮೂರನೆಯ ಸೆಕ್ಶನಿಗನುಗುಣವಾಗಿ ಪೋಲೀಸರು ಹಿಡಿದು ತಂದು ಮೆಜಿಸ್ಟ್ರೇಟರ ಮುಂದೆ ತಂದು ನಿಲಿಸುವ ಅಪರಾಧಿಗಳಿಗೆ ಜುಲ್ಮಾನೆಯ ಅಥವಾ ಸೆರೆಮನೆಯ ಶಿಕ್ಷೆಯನ್ನು ವಿಧಿಸಬೇಕಲ್ಲದೆ ಅವರನ್ನು ಸ್ವಾವಲಂಬನದ ಹಾದಿಗೆ ತರುವ ಸಾಧನಗಳು ಶಾಸನದಲ್ಲಿದ್ದರೂ ಪ್ರಯೋಗದಲ್ಲಿ ತರಲಾಗದೆ ಶಾಸನವು ನಿರರ್ಥಕವಾದೀತು ಮಾತ್ರವಲ್ಲ ವ್ಯವಹಾರದಲ್ಲಿ ಶಿಥಿಲವಾಗಲೂಬಹುದು ಅದು ನಿಜವಾಗಿಯೂ ನಿರ್ಗತಿಕರಾದ ಅನಾಥ ಬಾಲಕ ಹಾಗೂ ದುರ್ಬಲ ವಯಸ್ಕ ಭಿಕ್ಷುಕರಿಗೂ ನ್ಯಾಯವಾಗಿ ದೊರೆಬೇಕಾದ ಧರ್ಮವು ಸಿಗದೆ ಹೋಗಿ ದೀನ ದರಿದ್ರರ ಪಾಡು ದುರಂತ ಕರುಣಾಜನಕವಾದೀತು.

1000 ಬಾಂಬರ್ ವಿಮಾನಗಳ ಧಾಳಿ

ಜರ್ಮನಿಯ ಸ್ಟಟ್‌ಗಾರ್ಟ್ ಮತ್ತು ನುರೆಂಬರ್ಗ ನಗರಗಳ ಮೇಲೆ ತಾ. 20ರ ರಾತ್ರಿ ಮಿತ್ರಪಕ್ಷದ 1000 ವಿಮಾನಗಳು ಬಾಂಬುಗಳನ್ನು ಸುರಿಸಿ ಆ ಪಟ್ಟಣಗಳಲ್ಲಿ ಅಗ್ನಿ ಮತ್ತು ಸ್ಫೋಟನಗಳ ಹಾವಳಿಯನ್ನುಂಟುಮಾಡಿದವು.

ಸ್ಟಟ್‌ಗಾರ್ಟಿನ ಮೇಲೆ ಎರಡು ಸಲ ಧಾಳಿ ನಡೆಸಿದುವು. ಅಲ್ಲದೆ ಪಶ್ಚಿಮ ಜರ್ಮನಿಯ ವಿಸ್ಬೇಡನ್ ಮತ್ತು ಇತರ ಪ್ರಾಮುಖ್ಯ ಸ್ಥಳಗಳ ಮೇಲೂ ಧಾಳಿಯಾಯಿತು.

ಚರ್ಚಿಲ್-ಸ್ಟಾಲಿನ್ ಸಮ್ಮೇಳನ

ಮುಂದಿನ ವರ್ಷದಲ್ಲೂ ಯುದ್ಧ ಸಾಗೀತು

ಜರ್ಮನರು ಏಥೆನ್ಸಿನಿಂದ ನೂರು ಮೈಲು ದೂರ.

ಬ್ರಿಟಿಷ್ ಪಡೆಗಳು ಜರ್ಮನರನ್ನು ಒಂದು ದಿನದಲ್ಲಿ ಥೀಬ್ಸಿನಿಂದ ೭೦ ಮೈಲು ಆಚೆಗೆ ಅಂದರೆ ಏಥೆನ್ಸಿನಿಂದ ನೂರು ಮೈಲೂ ದೂರ ಹಿಂಪಟ್ಟಿವೆ.

ಫ್ರಾನ್ಸಿನ ಆಡಳಿತೆ.

ದಿಗೋಲೆಯೊಡನೆ ಮಿತ್ರಪಕ್ಷದ ಒಡಂಬಡಿಕೆ.

ಫ್ರಾನ್ಸಿನ ತಾತ್ಪೂರ್ತಿಕ ಸರಕಾರಕ್ಕೂ ಮಿತ್ರಪಕ್ಷದ ಸವಾರಾಧಿಕಾರಿಗೂ ಒಂದು ಒಡಂಬಡಿಕೆಯಾಗಿದೆ- ಫ್ರಾನ್ಸನ್ನು ಸೇನಾ ವಲಯವೆಂದೂ ಅಂತಃಪ್ರದೇಶಿಯ ವಲಯವೆಂದೂ ಎರಡು ವಿಭಾಗ ಮಾಡಿ ಮೊದಲನೆಯದು ಮಿತ್ರಪಕ್ಷದ ಅಧಿಕಾರಕ್ಕೊಳಪಟ್ಟು ಎರಡನೆಯದು ಪೂರ್ಣ ಫ್ರೆಂಚ ಅಧಿಕಾರಕ್ಕೊಳಪಟ್ಟು ಆಡಳಿತೆ ನಡೆಯಬೇಕೆಂದೂ ಒಪ್ಪಂದವಾಗಿದೆ

ಜಾಪಾನೀಯರು ಚೀನಾ ಕರಾವಳಿಯನ್ನು ಭದ್ರಗೊಳಿಸುತ್ತಾರೆ.

ಮಿತ್ರಪಕ್ಷದವರು ಫಿಲಿಪ್ಪೈನ್ ದ್ವೀಪಗಳಲ್ಲಿ ಬಂದಿಳಿದಿರುವುದನ್ನು ಕಂಡು ಅವರು ಚೀನಾಕರಾವಳಿಯಲ್ಲಿಳಿಯದಂತೆ ತಡೆಗಟ್ಟುವುದಕ್ಕಾಗಿ ಜಾಪಾನೀಯರು ಆ ಕರಾವಳಿಯ ಭದ್ರತೆಯ ಕಾರ್ಯವನ್ನು ರಭಸದಿಂದ ಸಾಗಿಸುತ್ತಿದ್ದಾರೆ ಎಮ್ಮೊ, ಫ್ಯೂಚೋ, ವೆಂಚೋ ಇವುಗಳನ್ನು ಜಲಾಂತರ್ಗಾಮಿಗಳ ಚಲನವಲನಗಳಿಗ ಹಿನ್ನೆಲೆಯ ಮೂಲ ಸ್ಥಾನಗಳನ್ನಾಗಿ ಸಿದ್ಧಗೊಳಿಸುತ್ತಿದ್ದಾರೆ. ಮಾತ್ರವಲ್ಲ, ಶಾಂಗಹಾಯಿಯಿಂದ ಹೆಂಗ್ಚೊ ಅಖಾತದ ವರೆಗಿನ ಕೋಟೆಗಳನ್ನು ತ್ವರಿತದಿಂದ ಬಲಗೊಳಿಸುತ್ತಿರುವರು.

ಮಿತ್ರಪಡೆಗಳು ಇಟಲಿಯ ಪೋ ನದಿ ದ್ರೋಣವನ್ನು ಮುಟ್ಟಿರುವರು.

ಇಟಲಿಯ ಎಡ್ರಿಯಾಟಿಕ್ ಕರಾವಳಿಯ ಮಿತ್ರಪಕ್ಷದ ಅಷ್ಟಮ ದಳವು ಪೋ ನದಿಯ ದ್ರೋಣದಲ್ಲಿ ಮುಂದುವರಿದಿದೆ. ಜರ್ಮನರು ಸೆಸಿನಾದಿಂದ ಪಶ್ಚಿಮಕ್ಕೆ ಅಟ್ಟಲ್ಪಟ್ಟಿರುವರು.

ಜಾಪಾನರೊಡನೆ ಕಾಳಗಕ್ಕೆ ಬ್ರಿಟಿಷ್ ನೌಕಾಪಡೆ

"ಜಾಪಾನರ ನೌಕಾಬಲದೊಡನೆ ಕಾದಲಿಕ್ಕೆ ಸ್ವಯಂಸಮರ್ಥವಾದ ಮಹಾ ನೌಕಾಪಡೆಯೊಂದನ್ನು ಶಾಂತಸಾಗರದಲ್ಲಿ ಇಡುತ್ತೇವೆ. ಆ ಮಹಾ ನೌಕಾ ನಿವಹದ ಒಂದಂಶವು ಈಗಾಗಲೆ ಅಲ್ಲಿಗೆ ತೆರಳಿದೆ. ನಾವೂ ನಮ್ಮ ಅಮೇರಿಕನ್ ಮಿತ್ರರೂ ಜಾಪಾನರನ್ನು ಸೋಲಿಸಿ ಆ ಸಾಗರದೊಡೆಯರಾಗುವುದು ನಿಶ್ಚಯ. ನಮ್ಮ ಕಳೆದ ಕೆಲವು ತಿಂಗಳ ಆರಂಭಿಕ ಯುದ್ಧದಲ್ಲಿಯೇ ಮುಂಗಾವಲ ನಮ್ಮ ಜಲಾಂತರ್ಗಾಮಿಗಳು ಜಾಪಾನರ ಒಂದು ಕ್ರೂಯಿಜರನ್ನೂ 23 ಆಹಾರ ಪೂರವಣೆಯ ಹಡಗಗಳನ್ನೂ 60 ಸಣ್ಣ ತರದವುಗಳನ್ನೂ ನೀರುಪಾಲು ಮಾಡಿವೆ. ಇದೇನೋ ಆರಂಭದ ಆರಂಭವಷ್ಟೆ!" ಎಂದು ಎಡ್ಮಿರಾಲ್ಟಿಯ ಪ್ರಥಮಾಧಿಕಾರಿ ಎ. ವಿ. ಅಲೆಕ್ಸಾಂಡರರ ಹೇಳಿಕೆ.

ಚರ್ಚಿಲ್--ಸ್ಟಾಲಿನ್ ಸಮ್ಮೇಳನ

ಹಿಂದಿನ ಮೋಸ್ಕೋ, ಕ್ವಿಬೆಕ್, ತೆಹರಾನ್ ಸಮ್ಮೇಳನಗಳಿಗಿಂತಲೂ ಮೊನ್ನೆ ಮೋಸ್ಕೋದಲ್ಲಿ ಚರ್ಚಿಲ್ ಸ್ಟಾಲೀನರ ಸಮ್ಮೇಳನವು ಅತ್ಯಧಿಕ ಅನ್ಯೋನ್ಯ ವಿಶ್ವಾಸಾಭಿಪ್ರಾಯವನ್ನುಂಟುಮಾಡಿದೆಯಂತೆ. ಸಮ್ಮೇಳನದ ನಿರ್ಣಯಗಳೆಲ್ಲ ರಹಸ್ಯವಾಗಿದುವುದಾದರೂ ಪೋಲೆಂಡು ಬಾಲ್ಕನ್ ಪ್ರಾಂತಗಳೇ ಮೊದಲಾದ ಆಗ್ನೇಯ ಯುರೋಪಿಯ ಭಾಗ, ಇವುಗಳ ಯುದ್ಧೋತ್ತರ ವ್ಯವಸ್ಥೆಗಳ ಕುರಿತು ಇಕ್ಕಡೆಯ ಏಕಾಭಿಪ್ರಾಯದ ನಿರ್ಣಾಯಕ ತೀರ್ಮಾನಗಳಾಗಿವೆಯಂತೆ.

ನಿಕೋಬಾರಿನ ಧಾಳಿ

ಬಂಗಾಳ ಅಖಾತದಲ್ಲಿರುವ ನಿಕೋಬಾರ್ ದ್ವೀಪಗಳ ಮೇಲೆ ಮಿತ್ರಪಕ್ಷದವರ ನೌಕಾ ಮತ್ತು ವಿಮಾನ ಪಡೆಗಳ ಧಾಳಿಯಾಯಿತು. ಅಲ್ಲಿಯ ಶತ್ರು ವಿಮಾನ ಕ್ಷೇತ್ರಗಳನ್ನು ಹಾಳುಮಾಡಲಾಗಿದೆ

ಹಾರುವ ಬಾಂಬುಗಳ ಹಾವಳಿ

ದಕ್ಷಿಣ ಇಂಗ್ಲೆಂಡದ ಮೇಲೆ ಒಂದು ಬೀಳುವ ಹಾರುವ ಬಾಂಬುಗಳ ಉಪಟಳವು ಇತ್ತೀಚೆಗೆ ಬಹಳ ಕಡಿಮೆಯಾಗಿರುವುದಾದರೂ ಪರಿಪೂರ್ಣ ನಿಂತಿಲ್ಲ. ವಿರಳವಾಗಿಯಾದರೂ ಸಂದರ್ಶನೆಮಾಡುತ್ತಿವೆ.

ಅಮೆರಿಕದಿಂದ ಇಂಗ್ಲಾಂಡಿಗೆ 167 ತುಂಬಲು ಹಡಗಗಳ ಸುರಕ್ಷಿತ ಪ್ರಯಾಣ

167 ಹಡಗಗಳು ಒಂದು ಮಿಲಿಯ ಟನ್ನಿಗಿಂತಲೂ ಮಿಕ್ಕಿದ ಸರಕುಗಳನ್ನು ತುಂಬಿಸಿಕೊಂಡು ಅಮೇರಿಕಾದಿಂದ ಹೊರಟು 17 ದಿನಗಳ ಸುರಕ್ಷಿತವಾದ ಪ್ರಯಾಣ ಮಾಡಿ ಇಂಗ್ಲಾಂಡಿನ ಬಂದರಗಳಲ್ಲಿ ಬಂದಿಳಿದಿವೆಯೆಂದು ಎಡ್ಮಿರಾಲ್ಟಿಯ ಪ್ರಧಮಾಧಿಕಾರಿಯು ಬಹಿರಂಗಪಡಿಸಿರುವರು. ಯುದ್ಧಾರಂಭವಾದಂದಿನಿಂದ ಇಂದಿನ ತನಕ ಮೂರುವರೆ ಮಿಲಿಯ ಟನ್ನುಗಳಿಗೆ ಮಿಕ್ಕಿದ ಸರಕು ಸಾಮಾನುಗಳು ಅಮೆರಿಕದಿಂದ ಬಂದಿವೆಯೆಂದೂ ಈಗ ಬಂದಷ್ಟು ಹಿಂದೆಂದೂ ಒಮ್ಮೆಗೇ ಬಂದುದಿಲ್ಲವೆಂದೂ ಹೇಳಿದರು

ಜರ್ಮನಿಯೊಡನೆ ಹೋರಾಟ

ಕ್ರಿ. [illegible] ವಿರೋಧ ಸುದಿ ಗಾರನೇ ನ್ನುತ್ತಾನೆ? ಮುಂದಿನ ವರ್ಷದಲ್ಲೂ ಯುದ್ಧ ಸಾಗೀತು.

ಮಾರ್ಷಲ ಮಿತ್ರ ರಾಷ್ಟ್ರ ಪಕ್ಷಗಳು ಅತ್ಯಂತ ಭೀಕರ ಕದನಗಳಲ್ಲಿ ಸಿಲುಕಿ ಮುಂಬರುವ ದೀರ್ಘ ಹಿಮಗಾಲವನ್ನಲ್ಲಿ ಯುರೋಪದಲ್ಲಿ ಕಳೆಯಬೇಕಾದೀತು ಜರ್ಮನರಲ್ಲಿ ಯುದ್ಧ ನಿಲ್ಲಿಸುವ ಒಲವಿಲ್ಲ ಒಳಗಿಂದೊಳಗೇ ಜರ್ಮನಿಯು ದಣಿದು ಬೀಳುವ ಲಕ್ಷಣವೂ ದೇರದೊಳಗೆಲ್ಲಿಯೂ ಕಾಣುವುದಿಲ್ಲ. ಜರ್ಮನಿಯೊಳಗೇ ಹಿಟ್ಲರನ ಮೇಲೆ ಜನರು ಬಂಡಾಯವೆಬ್ಬಿಸುವಂತಹ ಅದ್ಭುತ ಘಟನೆಗಳೇನಾದರೂ ನಡೆಯುವ ಹೊರತು ಯುದ್ಧವು ಮುಂದಿನ ವರ್ಷದ ಆಧಿಕಾಂಶದ ವರೆಗೂ ಸಾಗೀತೆಂದು ಮಿತ್ರಪಕ್ಷದ ಸಮರ ಸೇನಾನಿಗಳ ಅಭಿಪ್ರಾಯವಿದೆಯೆಂದು ನಾನು ಅವರೊಡನೆ ಮಾಡಿದ ವಿಚಾರ ವಿನಿಮಯದಲ್ಲಿ ಸ್ಪಷ್ಟವಾಗಿ ತೋರಿ ಬಂದಿದೆ

ನನ್ನ ಪ್ರವಾಸದಲ್ಲಿ ಜರ್ಮನರ ಭೀಕರ ಅತ್ಯಾಚಾರಗಳು ನನ್ನ ದೃಷ್ಟಿಗೆ ಬಿದ್ದಿವೆ. ಜರ್ಮನ್ ವಶವಾದ ಪ್ರಾಂತಗಳಲ್ಲಿ ತಮ್ಮ ಆಧಿಕಾರವನ್ನು ನೆಲೆಗೊಳಿಸಲು ಗೆಸ್ಟಪೋ ಪಡೆಯು ನಡೆಯಿಸಿರುವ ಭೀಕರ ಕೃತ್ಯಗಳು ಲೋಕದ ದೃಷ್ಟಿಗೆ ಬರಬೇಕು. ಅಂತಹ ಸಂಘಟನೆಗಳ ವೃತ್ತಾಂತಗಳನ್ನು ಸಂಗ್ರಹಿಸಲಾಗುತ್ತದೆ. ಅವುಗಳಿಂದ ಲೋಕವು ಜರ್ಮನರ ಅತ್ಯಾಚಾರಗಳನ್ನು ಎಂದೆಂದಿಗೂ ಮರೆಯಲಾರದಂತಾದೀತು.

ಮಿತ್ರ ಪಕ್ಷದವರೊಳಗೆ ಯುದ್ಧ ಸಂಬಂಧವಾದ ಪರಸ್ಪರ ಸಹಕಾರವು ಈಗ ಮುಂಚೆಗಿಂತ ಎಷ್ಟೋ ಬಲಗೊಂಡಿದೆ. ಇಷ್ಟೊಂದು ಐಕ್ಯವುಂಟಾಗುವುದು ಸಾಧ್ಯವೆಂದು ಯಾರೂ ಊಹಿಸಿದ್ದಿಲ್ಲ ಆದರೆ ಬ್ರಿಟಿಷ್ ಮತ್ತು ಅಮೇರಿಕಾ ಮುಂದಾಳುಗಳೊಳಗೂ ಯುರೋಪದ ಮಿತ್ರ ಪಕ್ಷಗಳೊಳಗೂ ಎರಕವುಂಟಾಗಲಿಲ್ಲ. ಆದರೂ ಜರ್ಮನಿಯನ್ನು ಸೋಲಿಸಬೇಕೆಂಬ ಸರ್ವ ಸಾಮಾನ್ಯ ಧ್ಯೇಯವೊಂದರಿಂದ ಭಿನ್ನಾಭಿಪ್ರಾಯಗಳೆಲ್ಲ ಮೂಲೆಗೊತ್ತಲ್ಪಟ್ಟು ಇಂದು ಯಾರೂ ಮಿದುತಪ್ಪಿ ರೆಜ್ಜೆಯಿಡುತ್ತಿಲ್ಲ

ಗಾಂಧೀಜಿಗಳ ನವಗ್ರಂಥ

ಗಾಂಧೀಜಿಗಳು ತಮ್ಮ ಕಾರ್ಯದರ್ಶಿಯಾಗಿದ್ದ ದಿ. ಮಹದೇವ ದೇಸಾಯಿಗಳ ಜೀವನ ಚರಿತ್ರೆಯ ಮೊದಲ ೫೦ ಪುಟಗಳನ್ನು ಆಗಾಖಾನ್ ಪೆಲೇಸದಲ್ಲಿದ್ದಾಗ ಬರೆದಿದ್ದರಂತೆ. ಈಗ ಅದನ್ನು ಮುಂದುವರಿಸಿ ಪೂರ್ಣಗೊಳಿಸುವರಂತೆ

ಜರ್ಮನರು ದಕ್ಷಿಣ ಗ್ರೀಸನ್ನು ಬಿಟ್ಟು ಹೋಗುವ ತವಕದಲ್ಲಿದ್ದಾರೆ

ಗ್ರೀಕರ ಅಡಗು ಪಡೆಯ (ಗರಿಲ್ಲಾ) ಪ್ರಬಲ ಉಪಟಳಕ್ಕೆ ಸಿಕ್ಕಿರುವ ಜರ್ಮನರು ದಕ್ಷಿಣ ಗ್ರೀಸನ್ನು ತ್ಯಜಿಸಿ ಹೋಗುವುದಕ್ಕೆ ಅವಸರಗೊಳ್ಳುತ್ತಿದ್ದಾರೆ.

ಬ್ರಿಟನಿನ ಯುದ್ಧ ವೆಚ್ಚ

2389300000 ಪವನುಗಳು ಕಾಮನ್ಸ್ ಸಭೆಯಲ್ಲಿ ಟ್ರೆಜರಿಯ ಫಿನಾನ್ಶಿಯಲ್ ಸೆಕ್ರೆಟರಿಗಳಾದ ರಾಲ್ಫ್ ಎಸ್ಸನವರು ಹೇಳಿದ ಪ್ರಕಾರ ಕಳೆದ ಸಪ್ಟಂಬರ ೩೦ 2ಕ್ಕೆ ಅಂತ್ಯವಾಗುವ ಪ್ರಥಮ ಪಂಚವಾರ್ಷಿಕ ಯುದ್ಧ ವೆಚ್ಚವು 23893 ಮಿಲಿಯ ಪವನುಗಳು.

Sri Ramakrishna Threatre Ltd. Udipi.

NOTICE

Is hereby given that the Register of Members and transfer books of the Company will stand closed from Sunday the 12th November 44 to Saturday 25th November 44, both days inclusive

UDIPI
24—10—44. (Sd.) A. Janardhan Alse,
Managing Director.

ಏಕೆನ್ ವಶವಾಯಿತು.

ಅಮೇರಿಕನ್ ಪಡೆಯು ಏಕೆನ್ ನಗರವನ್ನು ಹಿಡಿದಿರುವರು. ಅದರ ಉತ್ತರದ ಎರಡು ಜರ್ಮನರ ನಗರಗಳೂ ಮಿತ್ರರ ವಶವಾಗಿವೆ.

ಏಂಟ್ವರ್ಪನ ಉತ್ತರದಲ್ಲಿ ಕದನಾರಂಭ

ಬ್ರಿಟಿಷ್ ಮತ್ತು ಕೆನಡಿಯನ್ ಪಡೆಗಳು ಟ್ಯಾಂಕು ಮತ್ತು ವಿಮಾನಪಡೆ ಸಹಿತ ಬೆಲ್ಜಿಯಮಿನ ಏಂಟ್ವರ್ಪಿನ ಉತ್ತರದಲ್ಲಿ ಶತ್ರುವಿನ ಮೇಲೆ ಬಿದ್ದಿವೆ.

ಲಿಯೋಪಾಲ್ಡ್ ಕಾಲಿವೆಯ ಆಚೆದಡ ಮುಟ್ಟಲಾಯಿತು.

ಬರ್ಗೆಸ್ಸಿನ ಆಗ್ನೇಯ 5 ಮೈಲಲ್ಲಿ ಮಿತ್ರಪಕ್ಷದ ದಳಗಳು ಲಿಯೋಪಾಲ್ಡ್ ಕಾಲಿವೆಯ ಆಚೆಯ ದಡ ಸೇರಿರುವರು. ಆ ಪ್ರದೇಶದ ಜರ್ಮನ್ ಸೇನೆಯು ಅದನ್ನು ಬಿಟ್ಟು ಹಿಂದೆ ಸರಿದಿದೆ

ಆರ್ದೆನಬರ್ಗ್ ಮತ್ತು ಮಿಡ್ಲಬರ್ಗಗಳು ವಶವಾದುವು

ಲಿಯೋಪಾಲ್ಡ್ ಕಾಲಿವೆಯನ್ನು ಒತ್ತಡವೆಗೆ ಶತ್ರುವಿಗೆ ಅನಿರೀಕ್ಷಿತವಾಗಿ ದಾಟಿದ ಮಿತ್ರದಳಗಳು ಆ ಶೆಲ್ಟ್ ಭಾಗದ ಆರ್ದೆನ್‌ಬರ್ಗ್ ಮತ್ತು ಮಿಡ್ಲಬರ್ಗ್ ಎಂಬ ಎರಡು ಪಟ್ಟಣಗಳನ್ನು ವಶಮಾಡಿಕೊಂಡಿವೆ ಫ್ರೆಂಚ ಸೇನೆಗಳು ಅಲ್ಸ್ಯಾಸ ಲೊರೇನ್‌ನಿನ ಎರಡೂವರೆ ಮೈಲಿನೊಳಗೆ ಬಂದಿವೆ

ಬ್ರೂಯರ್ಸ್ ವಶವಾಯಿತು

ಬೆಲ್ಫೋರ್ಟಿನಿಂದ 10 ಮೈಲು ಉತ್ತರದಲ್ಲಿರುವ ಬ್ರೂಯರ್ಸ್ ಪಟ್ಟಣವನ್ನು ಅಮೇರಿಕನ ಪಡೆಯು ವಶಮಾಡಿಕೊಂಡಿತೆಂದು ಜರ್ಮನ್ ನ್ಯೂಸ್ ಏಜನ್ಸಿಯ ವರದಿ.

ರಶ್ಯನರು ಬೆಲ್ಗ್ರೇಡನ್ನು ವಶಪಡಿಸಿಕೊಂಡರು

ಯುಗೊಸ್ಲೋವಿಯದ ಪ್ರಧಾನ ನಗರವಾದ ಬೆಲ್ಗ್ರೇಡು ರಶ್ಯನರ ವಶವಾಯಿತು

ಆಸ್ಟ್ರಿಯಾ ಆಕ್ರಮಣಕ್ಕೆ ಪೀಠಿಕೆ

ಬೆಲ್ಗ್ರೇಡಿನಿಂದಾಚೆಗೆ ಆಸ್ಟ್ರಿಯಾ ಗಡಿಯ ಕಡೆಗೆ ಹೋಗಲು ರಶ್ಯನರು ಹಾದಿ ಬಿಡಿಸಿಕೊಳ್ಳುವ ಹಂಚಿಕೆಯಲ್ಲಿದ್ದಾರೆ.

ಚೆಕೊಸ್ಲೊವೇಕಿಯಾದಲ್ಲಿ

ಪೋಲ್ಲಾಂಡ್-ಚೆಕೊಸ್ಲೊವೇಕಿಯಾ ಗಡಿಯ ಕಾರ್ಪೇಥಿಯನ್ ಬೆಟ್ಟದ ಗಡಿನಾಡಿನಲ್ಲಿ ಜರ್ಮನ್ ಮತ್ತು ರಶ್ಯನ್ ಪಡೆಗಳೊಳಗೆ ಭೀಕರ ಕದನವಾಗುತ್ತಿದೆ.

ಶ್ರೀ ವಿ. ವಿ. ಗಿರಿಗಳ ಬಿಡುಗಡೆ

ವೆಲ್ಲೂರು ಸೆಂಟ್ರಲ್ ಜೈಲಿನಲ್ಲಿ ಸ್ಥಾನಬದ್ಧತೆಯಲ್ಲಿದ್ದ ಶ್ರೀ. ವಿ. ವಿ. ಗಿರಿಗಳು ಅವರ ಸಹೋದರ ಮೃತರಾದುದರಿಂದ ಒಂದು ತಿಂಗಳ ಪೆರೋಲಿನ ಮೇಲೆ ಬಿಡಲ್ಪಟ್ಟಿದ್ದಾರೆ

ಪೂರ್ವ ಪ್ರಶ್ಯದಲ್ಲಿ.

ಪಶ್ಚಿಮ ಭಾಗದ ರಶ್ಯನರು ಪ್ರಬಲ ಪ್ರತಿಭಟನೆಯನ್ನು ಎದುರಿಸಿಕೊಂಡು ಹತ್ತು ಹನ್ನೆರಡು ಮೈಲು ಒಳ ನುಗ್ಗಿರುವರೆಂದೂ ಬಾಲ್ಟಿಕ್ ಕರಾವಳಿಯಲ್ಲಿ ಒಂಭತ್ತು ಹತ್ತು ಮೈಲು ಒಳ ಪ್ರವೇಶಿಸಿರುವರೆಂದೂ ಜರ್ಮನ್ ನ್ಯೂಸ್ ಏಜನ್ಸಿಯ ಹೇಳಿಕೆ.

ಇಟಲಿಯಲ್ಲಿ.

ಮಿತ್ರ ಪಕ್ಷದ ದಳವು ಸೆಸ್ಸಿನಾ ಹೊರವಲಯದ ತನಕ ಪ್ರವೇಶಿಸಿವೆ.

ದಕ್ಷಿಣ ಕನ್ನಡ-

ಮಂಗಳೂರು

ಹೊಸ ಅಕ್ಕಿಯ 'ರಿಕ್ವಿಸಿಶನ್' ಕಾರ್ಯಕ್ರಮ- ಜಿಲ್ಲಾ ಫುಡ್ ಕೌನ್ಸಿಲಿನ ಸಭೆಯು ಕಲೆಕ್ಟರ ರಾ. ಸಾ. ರಾಮದಾಸರ ಅಧ್ಯಕ್ಷತೆಯಲ್ಲಿ ಜರಗಿತು.

ಆಹಾರ ಪರಿಸ್ಥಿತಿಯ ಸಿಂಹಾವಲೋಕನ ಮಾಡುತ್ತ, ಮಂಗಳೂರು ನಗರದಲ್ಲಿ ಈಗ ೨೫,೦೦೦ ಮುಡಿ ಅಕ್ಕಿ ಇದೆ. ಕುಂದಾಪುರ ವಿಭಾಗದಲ್ಲಿ ಅಭಾವವಿರುವದರಿಂದ ಅಲ್ಲಿಗೆ ೪,೦೦೦ ಮುಡಿ ಕಳುಹಬೇಕಾಯಿತು. ೫೦೦ ಟನ್ ರಾಗಿ ಮತ್ತು ಕರಾಚಿಯಿಂದ ೭೦೦ ಗೋಣಿ ಗೋಧಿ ಬಂದು ತಲಪಿದೆ. ಇನ್ನೂ ೧೦೦೦ ಟನ್ ರಾಗಿ ಮತ್ತು ಸಾವಿರ ಟನ್ ಗೋಧಿ ಸಪ್ತಾಹದಲ್ಲೇ ಬರಲಿವೆ. 'ರೇಶನ್' ಕೊಡುವಾಗ ಕಡ್ಡಾಯವಾಗಿ ಶೇಕಡ ೨೫ ಗೋಧಿ ಕೊಡಲೇ ಬೇಕೆಂದು ವಿಧಿಸಲಾಗಿದೆ."

ಈ ವರ್ಷ ಮಳೆ ಸರಿಯಾಗಿ ಬರದೆ ಶೇಕಡ ೪೦ರಿಂದ ೫೦ರಷ್ಟು ಬೆಟ್ಟು ಬೆಳೆಗೆ ಹಾನಿ ತಟ್ಟಿದೆ ಎಂಬರ್ಥದ ಗೊತ್ತುವಳಿಯನ್ನು ಕೌನ್ಸಿಲು ಸ್ವೀಕರಿಸಿತು.

ಅಕ್ಕಿ ಸಂಗ್ರಹ ಮತ್ತು ವಿತರಣದ ಕಾರ್ಯದಲ್ಲಿ ಭಾಗವಹಿಸಲು ವ್ಯಾಪಾರಿಗಳಿಗೂ ಅವಕಾಶ ಕೊಡಬೇಕೆಂಬ ಖಾ. ಬ. ಮಹಮ್ಮದ್ ರಸ್ಸಾಕರ ಸೂಚನೆಯನ್ನು ಕೌನ್ಸಿಲು ಸ್ವೀಕರಿಸಲಿಲ್ಲ. ಅಕ್ಕಿಯನ್ನು ಸ್ವೀಕರಿಸುವುದಕ್ಕಾಗಿ ಜಿಲ್ಲೆಯಲ್ಲಿ ೧೨ 'ರಿಸೆಪ್ಶನ್ ಡಿಪೋ'ಗಳಿವೆ. ಬೇಕಿದ್ದರೆ ಹೆಚ್ಚು ಡಿಪೋಗಳನ್ನು ತೆರೆಯಲು ಎಸ್. ಕೆ. ಸಿ. ಸಿ. ಹೋಲ್‌ಸೇಲ್ ಸೊಸೈಟಿಯವರು ಒಪ್ಪಿದ್ದಾರೆ ಎಂದು ವ್ಯಕ್ತಪಡಿಸಲಾಯಿತು. ಕಬ್ಬಿನ ಮತ್ತು ತಾಳೆಯ ಬೆಲ್ಲಗಳನ್ನು ನಿಯಂತ್ರಿಸಬೇಕೆಂದು ನಿರ್ಧಾರವಾಗಿ ಎಲ್ಲಿ ಕೊಂಡುಕೊಳ್ಳುವ ಮತ್ತು ಮಾರುವ ಜವಾಬ್ದಾರಿಕೆಯನ್ನು ವಹಿಸುವುದು ಸಾಧ್ಯವಿದೆಯೋ ಏನೆಂದು ನೋಡಬೇಕೆಂದು ಸಹಕಾರಿ ಸಂಘದ ಶ್ರೀ ಮೊಳಹಳ್ಳಿ ಶಿವರಾಯರನ್ನು ಕೇಳಿಕೊಳ್ಳಲಾಯಿತು. ಅಮೀನ್ ದೀವಿ ದ್ವೀಪಗಳಿಗೆ ಇನ್ನು ಮುಂದೆ ಈ ಜಿಲ್ಲೆಯಿಂದ ಅಕ್ಕಿ ಹೋಗಬೇಕಾಗಿಲ್ಲ; ಮದ್ರಾಸು ಸರಕಾರದವರೇ ಪ್ರತ್ಯೇಕವಾಗಿ ೧,೫೦೦ ಟನ್ ಕಳುಹುವರು ಎಂದು ಕಲೆಕ್ಟರರು ತಿಳಿಸಿದರು. ನಗರಕ್ಕೆ ಬೇಕಾಗುವ ಕಟ್ಟಿಗೆಯನ್ನು ಪೂರೈಸಲು ತಕ್ಕ ಏರ್ಪಾಡಾಗುತ್ತಿದೆಯೆಂದೂ ಮನೆಗಳ ಮತ್ತು ಹೋಟೆಲುಗಳ ಉಪಯೋಗಕ್ಕಾಗಿ ಹೊರಗಿನಿಂದ ತರಿಸುವ ಕಟ್ಟಿಗೆಯನ್ನು ತಡೆದು ಹಿಡಿಯಬಾರದೆಂದು ಪೋಲೀಸರಿಗೆ ತಾವು ಸೂಚಿಸಿರುವೆನೆಂದೂ ಕಲೆಕ್ಟರರು ಹೇಳಿದರು.

ಈ ಜಿಲ್ಲೆಯಿಂದ ಗೇಣಿ ಹೊರಹೋಗಬಾರದೆಂದು ಹಾಕಲಾಗಿರುವ ನಿರ್ಬಂಧದಾಜ್ಞೆಯನ್ನು ತೆಗೆಯಬೇಕೆಂದು ಗೇಣಿ ಬೆಳೆಸುವವರ ಶಿಷ್ಟ ಮಂಡಲದವರು ಮಾಡಿದ ವಿನಂತಿಯನ್ನು ಕೌನ್ಸಿಲು ಚರ್ಚಿಸಿತು. ಗೇಣಿಯನ್ನು ಒಣಗಿ ಕೊಡುವುದು ಸಾಧ್ಯವೋ? ಮಲಬಾರಿಗೆ ಕಳುಹಲು ಸ್ವಲ್ಪ ಅಂಶವನ್ನು ಬಿಡಬಹುದೋ? ಏನೆಂದು ನಿರ್ಧರಿಸಲು ಒಂದು ಉಪಸಮಿತಿಯು ನೇಮಿಸಲ್ಪಟ್ಟಿತು.

ಅಕ್ಕಿಯ ಸಂಗ್ರಹ ಮತ್ತು ವಿತರಣದ ವ್ಯವಸ್ಥೆಯ ಕುರಿತು ಜಿಲ್ಲಾ ಭೂಸ್ವಾಮಿಕರ ಸಂಘದ ಕಾರ್ಯದರ್ಶಿಯು ಕೇಳಿದ ಪ್ರಶ್ನೆಗಳಿಗೆ ತಾವು ಬೇಗನೆ ಉತ್ತರ ಕೊಡುವುದಾಗಿ ಕಲೆಕ್ಟರರು ತಿಳಿಸಿದರು. ಕೆಲವು ಪ್ರಶ್ನೆಗಳು ಕೌನ್ಸಿಲಿನಲ್ಲಿ ಚರ್ಚಿಸಲ್ಪಟ್ಟವು. ಭೂಮಾಲಕನು ಆಕ್ಷೇಪಿಸಿದರೆ ಒಕ್ಕಲಿಗೆ ಅಕ್ಕಿಯ ಬೆಲೆ ಕೊಡಬಾರದು, ಯಾರು ಪಡೆದುಕೊಳ್ಳುವುದು ಅಥವಾ ಒಬ್ಬೊಬ್ಬರು ಎಷ್ಟೆಷ್ಟು ಎಂದು ಅವರೊಳಗೆ ಒಪ್ಪಂದವಾದ ಮೇಲೆ ಒಪ್ಪಿಸಿದ ಅಕ್ಕಿಯ ಮೌಲ್ಯವನ್ನು ಕೊಡಬೇಕು, ಒಕ್ಕಲಿಗೆ ಕೊಡಲು ತನಗೆ ಆಕ್ಷೇಪವಿದೆಯೆಂದು ಭೂಮಾಲಕನು ರಿಕ್ವಿಸಿಶನ್ ನೋಟೀಸಿನ ದಿವಸ ಮೊದಲೇ ಆಫೀಸರರಿಗೂ ಸ್ಟೋರು ಮೆನೇಜರರಿಗೂ ತಿಳಿಸಬೇಕು ಎಂದು ನಿರ್ಧಾರವಾಯಿತು.

ಒಪ್ಪಿಸಬೇಕಾದುದನ್ನು ಅಕ್ಕಿಯ ರೂಪದಲ್ಲಾದರೆ ಐದರಲ್ಲಿ ಒಂದಂಶವನ್ನು ನವಂಬರ ಅಂತ್ಯದೊಳಗೆ, ಐದರಲ್ಲಿ ಎರಡಂಶವನ್ನು ಡಿಸಂಬರ ಅಂತ್ಯದೊಳಗೆ ಉಳಿದುದನ್ನು ಜನವರಿಯಲ್ಲಿ ಕೊಡಬೇಕು; ಬತ್ತದ ರೂಪದಲ್ಲಾದರೆ ಎಲ್ಲವನ್ನೂ ನವಂಬರ ೧೫ರೊಳಗೆ ಕೊಡಬೇಕು ಎಂದು ಕಲೆಕ್ಟರರು ಸ್ಪಷ್ಟಪಡಿಸಿದರು. ಅಕ್ಕಿ ಸಂಗ್ರಹ ಮತ್ತು ವಿತರಣಕ್ಕಾಗಿ ಸಿದ್ಧವಾಗಿರುವ ಯೋಜನೆಯನ್ನು ಸರಕಾರವು ಒಪ್ಪುವ ವರೆಗೆ ಮಾತ್ರ ಮೇಲಿನ ಆಜ್ಞೆಯು ರೂಢಿಯಲ್ಲಿರುವುದು.

ಹೆಚ್ಚು ಆಹಾರ ಬೆಳೆಸುವ ವಿಚಾರದಲ್ಲಿ ತಾವೂ ತಮ್ಮ ಕೆಳ ಅಧಿಕಾರಿಗಳೂ ಇನ್ನಷ್ಟು ಆಸಕ್ತಿ ವಹಿಸಬೇಕೆಂದು ಸಭೆಗೆ ಬಂದಿದ್ದ ಅಗ್ರಿಕಲ್ಚರಲ್ ಆಫೀಸರರನ್ನು ಕೌನ್ಸಿಲು ಕೇಳಿಕೊಂಡಿತು. ಸರಕಾರದ ಇಲ್ಲವೆ ಖಾಸಗಿಯಾಗಿ ಕೃಷಿಯೋಗ್ಯವಾದ ಬಂಜರು ಪ್ರದೇಶಗಳಲ್ಲಿ ವ್ಯವಸಾಯ ಮಾಡಲು ತಮಗೆ ಬೇಕೆಂದು ಯಾರಾದರೂ ಕೇಳಿದರೆ ಆ ಭೂಮಿಯನ್ನು ತೆಗೆಸಿಕೊಡಲಾಗುವುದೆಂದು ಕಲೆಕ್ಟರರು ಹೇಳಿದರು. ಸರಕಾರದ ರಿಸರ್ವ್ ಸ್ಥಳಗಳಿಂದ ಮಾತ್ರ ಭೂಮಿಯನ್ನು ಬಿಟ್ಟುಕೊಡಲು ತಮಗೆ ಅಧಿಕಾರವಿಲ್ಲವೆಂದೂ ಆದರೆ ಅದಕ್ಕೆ ಸಂಬಂಧಿಸಿದ ಯೋಜನೆ ಏನಾದರೂ ಇದ್ದರೆ ತಾವು ಪ್ರಾಂತಿಕ ಸರಕಾರಕ್ಕೆ ಕಳುಹುವುದಾಗಿಯೂ ಅವರು ತಿಳಿಸಿದರು.

ಇಂಡಿಯಾ ಸರಕಾರದ ಅಸಿಸ್ಟೆಂಟ್ ಲೇಡಿ ಲೇಬರ್ ವೆಲ್‌ಫೇರ್ ಅಡ್ವೈಸರಾದ ಮಿಸ್. ಎ. ರಾಧಾ ಬಾಯಿ ಅವರು ಕನ್ಸಲಿಯೇಶನ್ ಆಫೀಸರ್ ಎ / ಪಿ. ಎಸ್. ರೋಸರಿಯೊ ಸಾ. ೧೭ರಂದು ಇಲ್ಲಿಗೆ ಬಂದು, ಎರಡು ದಿನಗಳಿದ್ದು, ಇಲ್ಲಿನ ಮಜೂರರ ಜೀವನದ ಸ್ಥಿತಿಗತಿಗಳನ್ನು ವಿಚಾರಿಸಿ ಹಿಂತಿರುಗಿದರು. ನಗರದ ಕೆಲವು ಕಾರ್ಖಾನೆಗಳನ್ನು ಸಂದರ್ಶಿಸಿದುದಲ್ಲದೆ, ಮಜೂರ ಪ್ರತಿನಿಧಿಗಳಾದ ಶ್ರೀಯುತರು ಎ. ಶಾಂತಾರಾಮ ಪೈ ಮತ್ತು ಪಿ. ಸಿ. ಶಿಕ್ವೆಲ್ಲರ(?) ಅವರೊಡನೆಯೂ ವಿಚಾರ ವಿನಿಮಯ ಮಾಡಿದರು. ಮಂಗಳೂರಿನ ಮಜೂರ ಸ್ತ್ರೀಯರ ಸ್ಥಿತಿಗಳು ನಿಕೃಷ್ಟವಾಗಿವೆ ಎಂದು ಶ್ರೀಮತಿ ರಾಧಾಬಾಯಿ ಅವರ ಅಭಿಪ್ರಾಯ. ಇಲ್ಲಿ ಹೆಚ್ಚು ಸಂಖ್ಯೆಯಲ್ಲಿ ಸಮಾಜ ಸೇವಿಕೆಯರು ಮುಂದೆ ಬರುತ್ತಿಲ್ಲವೆಂದು ಅವರು ವಿಷಾದ ಸೂಚಿಸಿದರು.

ಸ್ವಾಮಿ ಸುವಿಚಾರಾನಂದರು ತಾ. ೧೦ರಂದು ಕಲ್ಲಿಕೋಟೆಯಲ್ಲಿ ನಿಧನ ಹೊಂದಿದುದಕ್ಕಾಗಿ ಸಂತಾಪ ಸೂಚಿಸಲು ಸಭೆಯೊಂದು ಕೆನರಾ ಹೈಸ್ಕೂಲಿನಲ್ಲಿ ಶ್ರೀ ಕಾರ್ನಾಡ ಸದಾಶಿವರಾಯರ ಅಧ್ಯಕ್ಷತೆಯಲ್ಲಿ ತಾ. ೧೭ರಂದು ಸಂಜೆ ಜರಗಿತು. ಶ್ರೀಯುತರು ಕೇಶವ ಪೈ, ಎ. ಬಿ. ಶೆಟ್ಟಿ, ಬಿ. ವೈಕುಂಠ ಬಾಳಿಗಾ, ಜೆ. ವಾಸುದೇವ ಪೈ, ಮಾರುತಿ ರಾವ್, ಸೇಡಿಯಾಪು ಕೃಷ್ಣ ಭಟ್ ಮತ್ತು ಶ್ರೀಮತಿ ಆನಂದಿ ಬಾ(?) ಇವರು ಸ್ವಾಮಿಜಿಯವರ ಜೀವನದ ಕುರಿತು ಮಾತನಾಡಿದರು. ಸುವಿಚಾರಾನಂದರ ಹೆಸರಲ್ಲಿ ಒಂದು ಸ್ಕಾಲರ್‌ಶಿಪ್ ಸ್ಥಾಪಿಸಬೇಕೆಂದು ನಿರ್ಧಾರವಾಗಿ ಹಣ ಸಂಗ್ರಹಿಸಲು ಸಮಿತಿಯೊಂದು ರಚಿಸಲ್ಪಟ್ಟಿತು. ಶ್ರೀ ಎಂ. ಸುಬ್ಬರಾಯರು ಸಭಾಂತ್ಯದಲ್ಲಿ ಧನ್ಯವಾದಗಳನ್ನರ್ಪಿಸಿದರು.

ಅಲೋಶಿಯಸ್ ಕಾಲೇಜಿನ ವರ್ಧಂತ್ಯುತ್ಸವವು ತಾ. ೧೭ರಂದು ಸಂಜೆ ಕಲೆಕ್ಟರ ರಾ. ಸಾ. ರಾಮದಾಸರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಕಾಲೇಜಿನ ರೆಕ್ಟರರಾದ ರೈಟ್ ರೆವರೆಂಡ್ ಫಾದರ್ ಜೆ. ಎ. ಬಿ. ಕ್ರೂಲೋ(?) ಇವರು ವರದಿಯೊಪ್ಪಿಸಿದರು. ಕೊನೆಯಲ್ಲಿ ವಿವಿಧ ವಿನೋದಗಳಿದ್ದುವು. ರೆಕ್ಟರರ ದಿನವು ತಾ. ೧೩ನೇ ಶುಕ್ರವಾರ ಆಚರಿಸಲ್ಪಟ್ಟಿತು.

ಹಂಚಿನ ಮಜೂರರ ಸಭೆಯೊಂದು ಮಂಗಳೂರು ಹಂಚಿನ ಮಜೂರ ಸಂಘದ ಆಶ್ರಯದಲ್ಲಿ ತಾ. ೧೫ರಂದು ಉರ್ವ ಮೈದಾನದಲ್ಲಿ ಜರಗಿತು. ಒಂದೂವರೆ ಕೂಲಿಯಲ್ಲಿ ಕಾಲಾವಧಿ ಏರಿಸಬೇಕು, ಎರಡು ತಿಂಗಳ ಸಂಬಳದಷ್ಟು ಬೋನಸ್ ಕೊಡಬೇಕು ಎಂಬ ಕೋರಿಕೆಗಳು ಸಭೆಯಲ್ಲಿ ಮಂಡಿಸಲ್ಪಟ್ಟವು. ಶ್ರೀ ಸಿಂಪ್ಸನ್ ಸೋನ್ಸರು ಅಧ್ಯಕ್ಷತೆ ವಹಿಸಿದ್ದರು.

ಸೈನ್ಯಕ್ಕೆ ಸೇರಿಸುವ ಕೆಲಸ ಈ ಜಿಲ್ಲೆಯಲ್ಲಿ ಹೇಗೆ ಸಾಗಿದೆ ಎಂದು ಪರಿಶೀಲಿಸುವುದಕ್ಕಾಗಿ ದಕ್ಷಿಣ ವಿಭಾಗದ ಡಿ. ಎ. ಎ. ಜಿ. ಮೇಜರ್ ಇಂಗಲ್ ಅವರು ಕಳೆದ ವಾರ ಇಲ್ಲಿಗೆ ಬಂದರು. ತಾ. ೧೧ರಂದು ಜಿಲ್ಲಾ ಕಲೆಕ್ಟರರ ಅಧ್ಯಕ್ಷತೆಯಲ್ಲಿ ಜರಗಿದ ರಿಕ್ರೂಟಿಂಗ್ ಉಪ ಸಮಿತಿಯ ಸಭೆಯಲ್ಲಿ ಭಾಗವಹಿಸಿದರು. ಕಮಿಶನ್ ಆಫೀಸರರ ಹುದ್ದೆಗಳಿಗೆ ಈ ಜಿಲ್ಲೆಯಿಂದ ರಿಕ್ರೂಟ್‌ಮೆಂಟ್ ತೃಪ್ತಿಕರವಿಲ್ಲವೆಂದು ಮೇಜರ್ ಇಂಗಲರ ಅಭಿಪ್ರಾಯ.

ಪೇಯಿಂಟ್ ವಾರ್ನಿಶ್ ಇತ್ಯಾದಿಗಳ ನಿಯಂತ್ರಿತ ಬೆಲೆಯನ್ನು ಸಿವಿಲ್ ಸರಬರಾಯಿ ಶಾಖೆಯ ಡೆಪ್ಯುಟಿ ಕಮಿಶನರರು ನಿರ್ಧರಿಸಿದ್ದ ಬೆಲೆಗಳ ಪಟ್ಟಿ ಮದ್ರಾಸ್ ಹಾರ್ಡ್‌ವೇರ್ ಮತ್ತು ಪೈಂಟ್ಸ್ ಮರ್ಚೆಂಟ್ಸ್ ಅಸೋಸಿಯೇಶನ್ ಇದರ ಕಾರ್ಯದರ್ಶಿಯಿಂದ ಪಡೆಯುವುದು. ಫೋರ್ಟ್ ಸೈಂಟ್ ಗಜೆಟಿನಲ್ಲಿ ಅದು ಪ್ರಕಟವಾಗಿಲ್ಲ-ಎಂದು ಜಿಲ್ಲಾ ಕಮರ್ಶಿಯಲ್ ಟೇಕ್ಸ್ ಆಫೀಸರ್ ಶ್ರೀ ಕೃಷ್ಣರಾಯರು ತಿಳಿಸುತ್ತಾರೆ.

ಚಿಲ್ಲರೆ ಸಂಗ್ರಹಿಸಿಟ್ಟಿದ್ದ ಆರೋಪದ ಮೇಲೆ ಶಿಕ್ಷೆಗೊಳಗಾಗಿದ್ದ ಕದ್ರಿಯ ಸೋಡಾ ಅಂಗಡಿಗಾರರೊಬ್ಬರಿಗೆ ೧ ತಿಂಗಳ ಶಿಕ್ಷೆ ಮತ್ತು ೧೦೦ ರೂ.ಗಳ ಜುರ್ಮಾನೆ ವಿಧಿಸಲಾಗಿದೆ.

ಕಲ್ಲು ಸಕ್ಕರೆ ಎಲ್ಲಿದೆ?—ಅನೇಕ ವಾರಗಳಿಂದ ಪೇಟೆಯಲ್ಲಿ ಕಲ್ಲು ಸಕ್ಕರೆ ಎಲ್ಲಿಯೂ ಸಿಕ್ಕುತ್ತಿಲ್ಲ. ಅನೇಕ ದೇಶಿ ಮದ್ದುಗಳಿಗೆ-ಮಕ್ಕಳ ಕೆಮ್ಮಲು ಮೊದಲಾದ ಕಿರುಕುಳಗಳಿಗೆ ಕಲ್ಲುಸಕ್ಕರೆ ಅತೀ ಅವಶ್ಯವಿದೆ. ಕಲ್ಲುಸಕ್ಕರೆ ಮಂಗಳೂರಿಗೆ ಆಮದಾಗುತ್ತಿದೆಯೋ? ಆಮದಾದುದು ಎಲ್ಲಿ ಹೋಗುತ್ತಿದೆ? ಇದನ್ನು ಅಧಿಕಾರಿಗಳು ಕೂಲಂಕಷ ತನಿಖಿ ಮಾಡಬೇಕೆಂದು ನಮ್ಮ ಬಿನ್ನಹ. ಮಿಠಾಯಿ ಬಗ್ಗೆಯೂ ಕಲ್ಲುಸಕ್ಕರೆ ಉಪಯೋಗಿಸಲ್ಪಡುವುದುಂಟೆಂತೆ.

ಸಕ್ಕರೆ ರೇಶನ್ ಹೆಚ್ಚು-ಅಕ್ಟೋಬರ, ನವಂಬರ, ಮತ್ತು ಡಿಸಂಬರ (1944) ಈ ಮೂರು ತಿಂಗಳಿಗೆ ಸಕ್ಕರೆ ರೇಶನನ್ನು ಮೂರನೇ ಒಂದಂಶ ಹೆಚ್ಚಿಸಲಾಗಿದೆ.

ಅಕ್ಕಿ ಬತ್ತದ ಕುರಿತು ಮದ್ರಾಸು ಗವರ್ನರರ ಪ್ರಕಟಣೆ

ಡಿಫೆನ್ಸ್ ಒಫ್ ಇಂಡಿಯಾ ರೂಲ್ಸಿನ 81ನೆ ಕಲಮದ ಸಬ್ ರೂಲ್ 2ರಲ್ಲಿ ನಮೂದಿಸಿದ ಅಧಿಕಾರದ ಪ್ರಕಾರ ಮದ್ರಾಸ ಗವರ್ನರರು ಅಕ್ಕಿ ಭತ್ತದ ಕುರಿತು ಹೊರಡಿಸಿದ ಪ್ರಕಟಣೆಯ ಸಾರಾಂಶ ಹೀಗಿದೆ. ಈ ಹುಕುಮು ತ್ರಿಚಿನಾಪಳ್ಳಿ, ವಿಶಾಗಪಟ್ಣ, ರಾಮನಾಡ್, ಕೊಯಮುತ್ತೂರು, ತಿನ್ನವೆಲ್ಲಿ ಜಿಲ್ಲೆಗಳಿಗೂ ಅನ್ವಯಿಸಲ್ಪಡುತ್ತದೆ. ದ. ಕ. ಜಿಲ್ಲೆಗೆ ಅನ್ವಯಿಸುವ ವಿಧಾನ ಹೀಗಿದೆ. ಯಾವ ರೂಪದಲ್ಲೇ ಆಗಲಿ ಬೇಸಾಯ ಮಾಡತಕ್ಕ ಪ್ರತಿಯೊಬ್ಬನೂ ಭೂಮಾಲಿಕನಾಗಿರಲಿ, ಮೂಲಗೇಣಿಯವನಿರಲಿ, ಒಳ ಒಕ್ಕಲಾಗಿರಲಿ, ವರ್ಗದಾರನಾಗಿರಲಿ, ತನ್ನ ಭೂಮಿಯಲ್ಲಾದ ಪ್ರತಿಯೊಂದು ಬೆಳೆಯ ಉತ್ಪತ್ತಿಯ ಉಳಿಕೆಯನ್ನು ಜಿಲ್ಲಾ ಕಲೆಕ್ಟರರಿಂದ ನಿರ್ಧರಿಸಲ್ಪಟ್ಟ ರೀತಿಯಲ್ಲಿ ಅವರಿಗಾಗಲೀ ವ ಅವರಿಂದ ಅಧಿಕೃತರಾದವರಿಗೇನೇ ಕೊಡತಕ್ಕದ್ದು. ಭತ್ತದಂತೆಯೇ ಜೋಳ, ಕಂಬು, ರಾಗಿ, ಸಾವೆ ಇವನ್ನು ಸಹ ಅನ್ಯರಿಗೆ ವಿಕ್ರಯಿಸಕೂಡದು. ಪ್ರತಿಯೊಂದು ಬೆಳೆಯ ಕಟಾವು ಆಗಿ 14 ದಿವಸದೊಳಗಾಗಿ ಪೈರು ಬೆಳೆಸಿದವರು ತಮ್ಮಲ್ಲಿರತಕ್ಕ ಸ್ಟಾಕನ್ನು ಆಯಾಯ ತಾಲೂಕು ತಹಸಿಲ್ದಾರರಿಗೆ ಬರಹ ಮೂಲಕ ತಿಳಿಸತಕ್ಕದ್ದು. ಅವರ ಹುಕ್ಕುಂ ವಿನಹ ಅನ್ಯಥಾ ವಿನಿಯೋಗಿಸಕೂಡದು. ಈ ಆರ್ಡರಿಗೆ ವಿರೋಧವಾಗಿ ವರ್ತಿಸಿದರೆ ಅಂತಹ ಅಕ್ಕಿ ವ ಭತ್ತ ಸರಕಾರಕ್ಕೆ ಜಪ್ತಿ ಮಾಡಲಾಗುವುದು ಮತ್ತು ಅಪರಾಧಿಗಳು ಶಿಕ್ಷೆ ಅನುಭವಿಸಬೇಕಾದೀತು.

ಲಾವೆಲ್ಲರಿಗೆ ಮರಣ ಶಿಕ್ಷೆ
ಗೈರು ಹಾಜರಿಯಲ್ಲಿ

ತಾ ೧೯ರಂದು ಮಾರ್ಸೇಲ್ಸಿನ ನ್ಯಾಯಸ್ಥಾನದಲ್ಲಿ ಲಾವೆಲ್ಲರ ಮೇಲಿನ ದೇಶದ್ರೋಹದ ಆರೋಪಣೆಯು ವಿಚಾರಣೆಗೆ ಬಂದು ಅವರ ಗೈರು ಹಾಜರಿಯಲ್ಲಿಯೇ ಅವರಿಗೆ ಮರಣದಂಡನೆ ವಿಧಿಸಲಾಗಿದೆ. ಅಂತೆಯೇ 'ಪೇಟಿಟ್ ಮಾರ್ಸೆಲ್ಯಾಸ್' ಎಂಬ ಪತ್ರಿಕೆಯ ಸಂಪಾದಕ ಜೀನ್ ಗೈಲಾರ್ಡ್ ಬುರ್ಜಿಯಾಸ್ ಎಂಬವನಿಗೂ ಮರಣ ಶಿಕ್ಷೆ ಕೊಡಲಾಗಿದೆ.

Sri Narayan Guru Bank, Ltd.,

(Incorporated in British India Liability of Members is Limited)

Regd. Head Office HAMPANKATTA,

MANGALORE.

Branch. UDIPI, S. K.

Authorised Capital	....	**Rs 2,00000**
Issued Capital	....	**,, 1,00000**
Paid up Capital	....	**,, 56,150**

The Company has commenced Business by obtaining from the Government the Certificate of Commencement of Business on the 19th August, 1944 under the Indian Companies Act, 1913

Strong Board of Directors

Consent of the Central Government has been obtained under the Defence of India Rules 94 A "It must be distinctly understood that in giving this consent the Govt. of India does not take any responsibility for the financial soundness of any scheme or for the correctness of any of the statements made or opinion expressed with regard to them". The Government of India has been pleased to extend the period till the 13th January 1945 for the sale of shares.

A few shares at par available.

Rs 50 - per share. Re 1 - Entrance Fee per share.

Hundreds have already taken up shares!

WHY NOT YOU?

Current and Savings Bank Accounts are opened Fixed Deposits are accepted. Enquire for Rules of Business and rates of Interest

MANGALORE JARAPPA,

President & Managing Director.

ದಕ್ಷಿಣ ಕನ್ನಡ

ದಕ್ಷಿಣ ಕನ್ನಡ ಜಿಲ್ಲಾ ಸೆಂಟ್ರಲ್ ಕೋ—ಒಪರೇಟಿವ್ ರಖಂ ಸ್ಟೋರ್ಸ್, ಲಿಮಿಟೆಡ್, ಪಡೆದುಕೊಳ್ಳುವ ಡಿಪೋಗಳು — 1944—45.

ಕುಂದಾಪುರ ತಾಲೂಕು—ಇರುವ ಡಿಪೋಗಳು:- ಬೈಂದೂರು; ಉಪ್ಪುಂದ, ಕಿರಿಮಂಜೇಶ್ವರ; ಗಂಗೊಳ್ಳಿ; ಬಸ್ರೂರ್; ಕುಂದಾಪುರ; ತೆಕ್ಕಟ್ಟೆ, ಹಳ್ನಾಡ್; ಶಂಕರನಾರಾಯಣ; ಕೋಟೇಶ್ವರ, ಹೊಸ ಡಿಪೋಗಳು ತ್ರಾಸಿ, ಹಳ್ನಾಡಿ, ಹಲ್ಸ್ನೂರು, ಹಾಲಾಡಿ, ಕಂಡ್ಲೂರು—ಜುಮ್ಲಾ ೧೫

ಉಡುಪಿ ತಾಲೂಕು—ಇರುವ ಡಿಪೋಗಳು- ಕೋಟ, ಹಂಗರಕಟ್ಟೆ, ಬ್ರಹ್ಮಾವರ, ಕಲ್ಯಾಣಪುರ, ಬಾರಕೂರು, ಕೊಕ್ಕರ್ಣೆ, ಪೆರ್ಡೂರ್, ಹಿರಿಯಡ್ಕ, ಉಡುಪಿ ಎ, ಉಡುಪಿ ಬಿ, ಕಟಪಾಡಿ, ಶಿರ್ವ, ಕಾಪು, ಪಡುಬಿದ್ರಿ, ಹೊಸ ಡಿಪೋಗಳು—ಹೆಜಮಾಡಿ, ಮಲ್ಪೆ, ಉದ್ಯಾವರ—ಜುಮ್ಲಾ ೧೮,

ಕಾರ್ಕಳ ತಾಲೂಕು:— ಇರುವ ಡಿಪೋಗಳು—ಹೆಬ್ರಿ, ಅಜೆಕಾರು, ಬೈಲೂರು, ಮೂಡಬಿದ್ರೆ, ಕಾರ್ಕಳ, ವೇಣೂರು, ಹೊಸ ಡಿಪೋಗಳು ಮುನಿಯಾಲ ಮಿಯಾರು, ಬೆಳ್ಮಣ್ಣು, ನಿಟ್ಟೆ, ಪೊಸವಾರು, ಕೆರ್ವಾಶೆ, ಅಳದಂಗಡಿ, ಅಲಿಯೂರು, ಜುಮ್ಲಾ ೧೪ ಡಿಪೋಗಳು

ಪುತ್ತೂರು ತಾಲೂಕು:— ಇರುವ ಡಿಪೋಗಳು:—ಉಜಿರೆ, ಬೆಳ್ತಂಗಡಿ, ಪುಂಜಾಲಕಟ್ಟೆ, ಉಪ್ಪಿನಂಗಡಿ, ಕಡಬ, ಪಂಜ, ಗುತ್ತಿಗಾರು, ಸುಳ್ಯ, ವಿಟ್ಲ, ಈಶ್ವರ ಮಂಗಲ, ಪುತ್ತೂರು, ನಿಡ್ಪಳ್ಳಿ, ನೆಲ್ಯಾಡಿ, ಹೊಸ ಡಿಪೋಗಳು— ಮುಂಡಾಜೆ, ಗುರುವಾಯನಕೆರೆ, ಕೊಕ್ಕಡ, ಅಲಂಕಾರು, ಬೆಳಂದೂರು, ಬೊಳ್ವಾಡಿ, ಕುಂಬ್ರ, ಸಂಪ್ಯ, ಅಡ್ಕ—ಜುಮ್ಲಾ ೨೨ ಡಿಪೋಗಳು

ಕಾಸರಗೋಡು ತಾಲೂಕು:— ಇರುವ ಡಿಪೋಗಳು:—ಮಂಜೇಶ್ವರ, ಕೊಡ್ಲಮೊಗ್ರು, ಮಂಗಲ್ಪಾಡಿ, ಕುಂಬಳೆ, ಪೆರ್ಲ, ಬದಿಯಡ್ಕ, ಕಾಸರಗೋಡು ಎ ಡಿಪೋ, ಉದ್ಮ, ಕಾಸರಗೋಡು ಬಿ, ಹೊಸ ಡಿಪೋಗಳು ಪಿಲಿಯ, ಬಾಯಾರು, ಅಂಗಡಿಮೊಗರು, ಮುಳಿಯಾರು, ಆದೂರು, ಕೋಳ್ಯೂರು, ಪುತ್ತಿಗೆ, ಬೇಡಡ್ಕ, ಕುಂಬ್ಡಾಜೆ, ಜುಮ್ಲಾ ೧೮ ಡಿಪೋಗಳು,

ಹೊಸದುರ್ಗ ಸಬ್ ತಾಲೂಕು:— ಇರುವ ಡಿಪೋಗಳು—ಪಳ್ಳಿಕೆರೆ, ಕೋಟಚೇರಿ, ಹೊಸದುರ್ಗ, ನೀಲೇಶ್ವರ, ಪಡ್ನೆ, ತ್ರಿಕರಿಪುರ, ಹೊಸ ಡಿಪೋಗಳು ತಿಮ್ರಿ, ಕಿನಾನೂರು, ಚಿಮ್ಮೇನಿ, ಕಲ್ಲಾರ್, ಸಿತಿ, ಇಚಿಲ, ಚೆರ್ವತ್ತೂರ್, ಉದಿನೂರ್, ಬೇಳೂರು—ಜುಮ್ಲಾ ೧೫ ಡಿಪೋ.

ಮಂಗಳೂರು ತಾಲೂಕು.— ಇರುವ ಡಿಪೋಗಳು—ಮಂಗಳೂರು ಎ, ಮಂಗಳೂರು ಬಿ, ಪಣಂಬೂರು, ಸುರತ್ಕಲ್, ಹಳೆಯಂಗಡಿ, ಮುಲ್ಕಿ, ಕಿನ್ನಿಗೋಳಿ, ಮೂಡಬಿದ್ರೆ, ಬಜಪೆ, ಗುರುಪುರ್, ಕೋಟೆಕಾರ್, ಬಂಟ್ವಾಳ, ಹೊಸ ಡಿಪೋಗಳು ಕುಡುಪು, ಗಂಜಿಮಠ, ಕುಪ್ಪೆಪದವು, ಕಾವೂರು, ಕೂಳೂರು, ಪಡೀಲ್, ಫರಂಗಿಪೇಟೆ, ಪೊಳಲಿ, ಪೊಳ್ಯ, ಪಿಲಾತಬೆಟ್ಟು, ಸಿದ್ಧಕಟ್ಟೆ, ಪಾಣೆಮಂಗಳೂರು, ಕಲ್ಲಡ್ಕ, ಮಂಚಿ, ಕುರ್ನಾಡ್—ಜುಮ್ಲಾ ೩೭ ಡಿಪೋಗಳು.

ಈ ಜಿಲ್ಲೆಯಲ್ಲಿ ಕೇಂದ್ರ ಸಹಕಾರೀ ರಖಂ ಸ್ಟೋರ್ಸಿನ ಒಟ್ಟು ೧೫೯ ಡಿಪೋಗಳಿವೆ.

ಕಟಪಾಡಿ:—ಸ್ಥಳೀಯ ಬ್ರಹ್ಮಶ್ರೀ ನಾರಾಯಣ ಗುರುಸೇವಾ ಸಮಿತಿಯು, ಪ್ರಾಥಮಿಕ ವಿದ್ಯಾಭ್ಯಾಸ ಮಾಡುತ್ತಿರುವ ಬಿಲ್ಲವ ಜಾತಿಯ ಮಕ್ಕಳಲ್ಲಿ ಅಗತ್ಯವುಳ್ಳವರಿಗೆ ಬೇಕಾಗುವ ಸಹಾಯವನ್ನು ಕೊಡಲು ನಿರ್ಧರಿಸಿ ಹಣ ಮಂಜೂರು ಮಾಡಿರುತ್ತದೆ. ಪ್ರಾಥಮಿಕ ವಿದ್ಯಾಭ್ಯಾಸ ಮಾಡುತ್ತಿರುವ ಬಿಲ್ಲವ ಮಕ್ಕಳು ಆಯಾ ಶಾಲಾ ಮುಖ್ಯೋಪಾಧ್ಯಾಯರ ಶಿಫಾರಸು ಪತ್ರದೊಂದಿಗೆ ಅರ್ಜಿ ಕಳುಹಿಸಿದರೆ ಅರ್ಜಿ ಪರಿಶೀಲಿಸಲ್ಪಟ್ಟು ಯೋಗ್ಯತೆಗೆ ಅನುಸಾರವಾಗಿ ಸಹಾಯ ಕೊಡಲಾಗುವುದೆಂದು ಸಮಿತಿಯ ಕಾರ್ಯದರ್ಶಿ ಶ್ರೀ ಕೆ. ರಂಗರವರು ತಿಳಿಸುತ್ತಾರೆ.

ಕಟಪಾಡಿ, ಮಟ್ಟು, ಮೂಡಬೆಟ್ಟು, ಏಣಗುಡ್ಡೆ, ಕುರ್ಕಾಲು, ಪಾಂಗಾಳ, ಉಳಿಯಾರಗೋಳಿ ಈ ಏಳು ಗ್ರಾಮಗಳ ಮುಕ್ತೇಸರರ ವಿಶೇಷ ಮಹಾ ಸಭೆಯೊಂದು ತಾ. 29-10-1944ನೇ ರವಿವಾರ ಮಧ್ಯಾಹ್ನ ಗಂಟೆ 1ಕ್ಕೆ ಬ್ರಹ್ಮಶ್ರೀ ನಾರಾಯಣಗುರು ಸೇವಾ ಸಮಿತಿಯ ದೇವಸ್ಥಾನದಲ್ಲಿ ಜರಗಲಿರುವುದೆಂದು ವಾರ್ತೆ.

ಕುಂದಾಪುರ ತಾಲೂಕಿನ ಭೂಮಾಲಿಕರ ಸಂಘದ ಮಹಾಸಭೆ:- ಇದೇ ತಾ 14ರಲ್ಲಿ ಶ್ರೀ ಎಚ್. ಲಕ್ಷ್ಮೀನಾರಾಯಣ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಜಿಲ್ಲಾ ಕಲೆಕ್ಟರರೂ ಸಬ್ ಕಲೆಕ್ಟರರೂ ಆಹಾರ ಪ್ರಶ್ನೆಯ ಇತ್ಯರ್ಥದಲ್ಲಿ ವಿಶೇಷ ಶ್ರಮ ವಹಿಸಿದುದಕ್ಕಾಗಿ ಸಂಘದ ಕಡೆಯಿಂದ ಇಬ್ಬರನ್ನೂ ಅಭಿನಂದಿಸಲಾಯಿತು. ಸಪ್ಟಂಬರ ತಿಂಗಳಲ್ಲಿ ಸಾಕಷ್ಟು ಮಳೆಬಾರದೆ ಇದ್ದುದರಿಂದ ಈ ತಾಲೂಕಿನ ಬೆಳೆಯು ಸಾಕಷ್ಟು ಉತ್ಪತ್ತಿಯನ್ನೀಯಲಾರದೆಂದು ಈ ಸಂಘವು ಅಭಿಪ್ರಾಯಪಡುತ್ತದೆ. ಆದಕಾರಣ ಈ ತಾಲೂಕಿನಿಂದ ಹೊರಗೆ ಅಕ್ಕಿ ವ ಭತ್ತವನ್ನು ಒಯ್ಯಕೂಡದಾಗಿಯೂ ಸಂಬಂಧಪಟ್ಟವರಿಗೆ ತಿಳಿಸಲಾಗುತ್ತದೆ. ಇಲಾಖಾ ಅಧಿಕಾರಿಗಳಿಂದ ಆಗಾಗ್ಗೆ ಕೊಡಲಾದ ಸರ್ಕ್ಯುಲಾರುಗಳನ್ನು ವಿಮರ್ಶಿಸಿ ಕೆಲವು ಹಿತಕರ ತಿದ್ದುಪಡಿಗಳನ್ನು ಸೂಚಿಸಲಾಯಿತು. ವರ್ಗದ ದರಾಗೇಣಿ ಗೇಣಿಒಕ್ಕಲುಗಳೇ ಕಳ್ಳಸಂತೆಯಲ್ಲಿ ವಹಿವಾಟು ನಡೆಸುವವನು ಎಂದು ಖಾತ್ರಿಯಾಗದೆ ಅವನ ಪಾಲಿನ ಭತ್ತವನ್ನು ರಿಕ್ವಿಜಿಶನ್ ಮಾಡಕೂಡದು. ಉಳಿತಾಯ ಅಕ್ಕಿಯ ಮಿತಿಯನ್ನು ರಿಕ್ವಿಜಿಶನ್ ಬಗ್ಗೆ ಗ್ರಾಮ ಉದ್ಯೋಗಸ್ಥರು ನಿರ್ಣಯಿಸುವಂತಾಗಕೂಡದು. ಅಕ್ಕಿಯ ಅಭಾವ ಪ್ರಶ್ನೆಯು ಕೂಡಲೇ ತಲೆದೋರದ ಹಾಗೆ ಉಳಿತಾಯ 21/10ನೆ ಅಂಶವನ್ನು ನವೆಂಬರ ತಿಂಗಳಲ್ಲಿ ಉಳಿದಂಶವನ್ನು ಜನವರಿ, ಫೆಬ್ರವರಿ, ಮಾರ್ಚ ತಿಂಗಳ ಗಳಲ್ಲಿ ಸರಿ ಪ್ರಮಾಣದಲ್ಲಿ ಪಾವತಿ ಮಾಡುವಂತೆ ವರ್ಗದಾರರನ್ನು ಕೇಳಿಕೊಳ್ಳಬೇಕೆಂದು ಈ ಸಭೆಯು ಅಭಿಪ್ರಾಯಪಡುತ್ತದೆ ಸಾಗುವಳಿ ಬಗ್ಗೆ ಎಕ್ರೆಗೆ 3 ಮುಡಿಗೆ ಅಕ್ಕಿಯ ಬದಲಿಗೆ 5 ಮುಡಿಗೆ ಅಕ್ಕಿ ಸಿಗುವಂತಾಗಬೇಕು. ಹೋಲ್ ಸೇಲ್ ಸ್ಟೋರ್ಸು ಅನುಮತಿಯಂತೆ ಡಿಪೋಗಳಲ್ಲಿ ಒಂದು ಮುಡಿ ಅಕ್ಕಿಗೆ ಎರಡು ಕಳಸಿಗೆ ಭತ್ತವನ್ನು ಪಡೆಯುವುದು ಸರಿಯಲ್ಲವಾದುದರಿಂದ ಮೇಲು ಕೂಲಿ ವಜಾತಿಗೆಯು ಎದುರುವಾಸಿಗೆ ಭತ್ತ ಕೊಟ್ಟಲ್ಲಿ ಒಂದು ಮುಡಿ ಅಕ್ಕಿಯ ಕ್ರಯದೊರೆಯುವಂತಾಗಬೇಕು. ಅಕ್ಕಿ ವ ಭತ್ತದ ಪರವಾನಿಗೆಯು ತಾಲೂಕಿನ ಒಳಗೆ ಕೊಡದೆ ಕಾನೂನಿನ ತರ ತಿದ್ದುಪಡಿಯೆಂದು ಅಗತ್ಯ. ಒಂದು ಮುಡಿಗೆ ಭತ್ತದ ಧಾರಣೆ 63 ರೂಪಾಯಿಗಳೆಂದು ಲೆಕ್ಕ ಹಾಕುವುದ ಅಸಮರ್ಪಕವಾಗಿದೆ, ಒಂದು ಮುಡಿಗೆ ಭತ್ತಕ್ಕೆ ತೊಳಲಿಲ್ಲ ಪಾವತಿ 60 ರೂಪಾಯಿಗಳಿಗೆ ಜಾಸ್ತಿ ಸಲ್ಲಲೆಂದು. ಈ ತಾಲೂಕಿನಲ್ಲಿಯ ಈ ಕೆಳಗಿನ ವಿಶೇಷ ಮಾಡಿದಂತೆ ಅಕ್ಕಿಯ ಬೆಲೆಯು ಹೀಗಿರಬೇಕಾಗಿದೆ ಕಟಿಂತ ಉತ್ತಮ ತರಗತಿಯ ಹಂಡಿಕಟ್ಟಿಗೆ ಮುಡಿಗೆ ರೂಪಾಯಿ 9—10—0, ಬಿಳಿ ಕೆಂಪಿಗೆ ರೂಪಾಯಿ 9—13—0, ಉಸಿ ಬೆಳ್ತಿಗೆ ರೂಪಾಯಿ 12/- ಇದೀಗ ಅವಶ್ಯಕಂತಲೂ ಶ್ರೀಷ್ಮ ದರಗಳು ಪಕ್ಕ ಕ್ಕಿಗೆ ಜಾಸ್ತಿ ಬೆಲೆ ಸಿಗುವಂತಾಗಬೇಕು. ಎಂಬಿತ್ಯಾದಿ ರಾವುಗಳಾದ ವು.

ತೆಕ್ಕಟ್ಟೆ:—ಇಲ್ಲಿಯ ಬಡವಿದ್ಯಾರ್ಥಿ ಸಂಘಕ್ಕೆ ಈ ವರ್ಷ ಜಮಾಹಣದಿಂದ ರೂ. 111-5-0, ಕಳೆದ ವರ್ಷದ ಶೇಖನಿಧಿ ರೂ. 26-0-0, ಜುಮ್ಲಾ ರೂ. 137-5-0ಜಮೆಯಿರುತ್ತದೆ. ಸದ್ರಿ ಹಣದಿಂದ ಎಲಿಮೆಂಟರಿ ಶಾಲೆಯಲ್ಲಿ ಕಲಿಯುವ ಬಡಮಕ್ಕಳಿಗೆ ಸ್ಲೇಟು ಪುಸ್ತಕಗಳನ್ನು ಕೊಟ್ಟು ಸಹಾಯ ಮಾಡಲಾಗುವುದೆಂದು ಸಂಘದ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಪುತ್ತೂರು-ಸ್ಥಳೀಯ ಬೋರ್ಡ ಹೈಸ್ಕೂಲಿನಲ್ಲಿ ಸ್ಥಳ ಸಂಕೋಚದ ದೆಸೆಯಿಂದ ಮಕ್ಕಳ ವಿದ್ಯಾಭ್ಯಾಸದ ವಿಷಯದಲ್ಲಿ ಈಗ ಪಡುತ್ತಿರುವ ಮತ್ತು ಸದ್ಯದಲ್ಲೇ ಪಡಬೇಕಾಗಿ ಬರುವ ಸಂಕಷ್ಟಗಳನ್ನು ಊರವರೇ ನಿವಾರಿಸಬೇಕಾಗಿ ಬಂದಿರುವುದರಿಂದ ತಾ. 3 9 44ರಲ್ಲಿ ಹೈಸ್ಕೂಲಿನಲ್ಲಿ ಜರಗಿದ ಮಹಾಸಭೆಯು ನಿರ್ಣಯಿಸಿದಂತೆ ಸಾರ್ವಜನಿಕರಿಂದ ಹಣ ಕೂಡಿಸುವ ಬಿಲ್ಡಿಂಗ್ ಸಮಿತಿಯ ಕಾರ್ಯಕಾರಿ ಮಂಡಲಿಯವರು ಶಾಲೆಗೆ ಅತ್ಯಗತ್ಯವಾಗಿ ಬಂದಿರುವ ಕ್ಲಾಸುಗಳನ್ನು ನಡೆಸಲಿಕ್ಕೆ 5 ಕೋಣೆಗಳನ್ನು ಒಂದು ಸಭಾ ಮಂದಿರವನ್ನೂ ಒಳಗೊಂಡಿರುವ ಒಂದು ಕಟ್ಟೋಣವನ್ನು ಕೂಡಲೆ ಕಟ್ಟಿಸಬೇಕೆಂಬ ಉದ್ದೇಶದಿಂದ ಆ ಬಗ್ಗೆ ಕಡಿಮೆ ಪಕ್ಷಕ್ಕೆ ಬೇಕಾಗಿರುವ ರೂ. 20,000/-ನ್ನು ಒಟ್ಟುಗೂಡಿಸುವುದಕ್ಕಾಗಿ ತಾಲೂಕಿನ ಎಲ್ಲಾ ಮಹನೀಯರಿಗೂ ಶಾಲೆಯ ಹಳೆಯ ವಿದ್ಯಾರ್ಥಿಗಳಿಗೂ ವಿನಂತಿ ಪತ್ರವನ್ನು ಕಳುಹಿಸುವುದು ಮಾತ್ರವಲ್ಲದೆ ಹಣದ ವಸೂಲಿ ಬಗ್ಗೆ ಅದನ್ನು ಮತ್ತಿಗೆ ಕಮಿಟಿಯ ಮೆಂಬರರು ಮುಖ್ಯರು ತಾಲೂಕಿನ ಹಳ್ಳಿಹಳ್ಳಿಗೆ ಹೋಗಿ ಮಾನ್ಯ ಗೃಹಸ್ಥರನ್ನು ಸಂದರ್ಶಿಸುತ್ತಿದ್ದಾರೆ. ತಾಲೂಕಿನ ಎಲ್ಲಾ ಮಹನೀಯರೂ, ಶಾಲೆಯ ಹಳೆಯ ವಿದ್ಯಾರ್ಥಿಗಳೂ ಆ ಸಂದರ್ಭದಲ್ಲಿ ಉದಾರ ಹಸ್ತದಿಂದ ಧನ ಸಹಾಯ ಮಾಡಬೇಕಾಗಿ ವಿನಂತಿಯಿದೆಯೆಂದು ಪತ್ರ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಬೋರ್ಡು ಹೈಸ್ಕೂಲಿಗೆ ಹೊಸ ಕಟ್ಟಡ-ನಿರ್ಮಾಣ ಮಾಡುವ ಯೋಜನೆಯ ಸ್ನೇಹಿತರೊಂದ ಬಿನ್ನವತ್ತಳೆಯೊಂದು ಜಿಲ್ಲಾ ಬೋರ್ಡು ಪ್ರೆಸಿಡೆಂಟರಿಗೆ ತಾ 20ರಲ್ಲಿ ಕಟ್ಟಡ ಸಮಿತಿಯ ಪರವಾಗಿ ಅರ್ಪಿಸಲ್ಪಟ್ಟಿತು. ಬಿನ್ನವತ್ತಳೆಯ ಮೇಲೆ ಗಳು ಸರ್ವ ನ್ಯಾಯವಿದ್ದಾಗ್ಯೂ ಜಿಲ್ಲಾಬೋರ್ಡಿನ ಆರ್ಥಿಕ ದೃಷ್ಟಿಯಿಂದ ಹೊಸ ಕಟ್ಟಡವನ್ನು ಬೋರ್ಡು ಕಟ್ಟಿಸಲು ಸಾಧ್ಯವಿಲ್ಲ. ಊರವರು ಹಣವೊದಗಿಸಿದಲ್ಲಿ ಈ ಕಾರ್ಯಕ್ಕೆ ಬೋರ್ಡಿನ ಪೂರ್ಣ ಸಹಾನುಭೂತಿಯನ್ನು ತೋರಿಸುವೆನೆಂದೂ ಪ್ರೆಸಿಡೆಂಟರು ಉತ್ತರವಿತ್ತರು. ಉಪಾಹಾರದ ಕೂಟದೊಂದಿಗೆ ಸಭಾಂತ್ಯವಾಯಿತು.

ಉಡುಪಿ.

ಸಶಕ್ತ ವಿದ್ಯುತ್ ಸ್ಪರ್ಶದಿಂದ ಮರಣ:—ಕಳೆದ ತಾ. 18ರಲ್ಲಿ ಇಲೆಕ್ಟ್ರಿಕ್ ಕಂಪೆನಿಯ ನೌಕರನೊಬ್ಬನು ಸಶಕ್ತ ವಿದ್ಯುತ್ ಸ್ಪರ್ಶಕ್ಕೆ ತುತ್ತಾಗಿ ಅಕಾಲ ಮರಣಕ್ಕೀಡಾದನು ವಿಷಾದಕರವೆನಿಸುತ್ತದೆ. ಸ್ವಲ್ಪ ಸಮಯದ ಹಿಂದೆ ಗಾಡಿಯಾಳು ಮತ್ತು ಎತ್ತು ಸಹ ಇಂತಹ ಗಂಡಾಂತರಕ್ಕೆ ಬಲಿ ಬಿದ್ದಿದ್ದರಷ್ಟೆ! ಅಂತೂ ಇಲೆಕ್ಟ್ರಿಸಿಟಿಯಿಂದಾಗಿ ಈ ವರುಷದಲ್ಲಿ ಮೂರು ಮರಣ ಗಳಾಯಿತು.

ಮಳೆ ಮತ್ತು ಸಿಡಿಲು:—ಕಳೆದ ಆದಿತ್ಯವಾರ ರಾತ್ರಿ ಭಾರೀ ಮಳೆ ಸುರಿಯಿತು. ಒಂದೆರಡು ಭಯಂಕರ ಸಿಡಿಲು ಗಳು ಎರಡು ಮೂರು ಕಡೆಗಳಲ್ಲಿ ಬಿದ್ದುದರಿಂದ ಪ್ರಾಣಹಾನಿಯೇನೂ ಆಗಲಿಲ್ಲವೆಂದೂ ಸುದ್ದಿ.

ಕಂಟ್ರೋಲ್ ದರಗಳು:— ಪ್ಯಾಂಗೆ ಬಂದಿದ್ದರೂ ಸಾಮಾನುಗಳು ಮಾತ್ರ ಆ ದರಗಳಲ್ಲಿ ಸಿಕ್ಕುವುದಿಲ್ಲ. ಕೆಲವಕ್ಕೆ ಇನ್ನೂ ಕಂಟ್ರೋಲ್ ದರಗಳು ನಿಶ್ಚಯವಾಗಿಲ್ಲ

ಜಾಸ್ತಿ ಸಕ್ಕರೆ:-ಮಂಗಳೂರು ನಗರದಲ್ಲಿ ಅಕ್ಟೋಬರ, ನವೆಂಬರ ಮತ್ತು ದಶಂಬರ ಈ ಮೂರು ತಿಂಗಳುಗಳಲ್ಲಿ ಸಕ್ಕರೆ ರೇಶನ್ ಮೂರನೇ ಒಂದಂಶ ಹೆಚ್ಚಿಸಲಾದಂತೆ ಉಡುಪಿಗೂ ಅಂತಹ ಸೌಕರ್ಯವೀಯಲಾಗಿದೆಯಂತೆ ಆದರೆ ಈ ತಿಂಗಳಲ್ಲಿ ಜಾಸ್ತಿ ಸಕ್ಕರೆ ದೊರೆತ ಸಂಗತಿ ಏನೂ ತಿಳಿದು ಬರುವುದಿಲ್ಲ.

ರೇಶನ್ ತಕ್ಕೀರುಗಳು:-ಶ್ರೀ ಯು. ಬಿ. ಪ್ರಭಾಕರರಾಯರು ತಿಂಗಳಿಗಿಂತ ಹೆಚ್ಚು ಅಕ್ಕಿಯನ್ನು ರೇಶನಿಂಗ್ ಕಾನೂನಿಗೆ ವಿರುದ್ಧವಾಗಿ ಇರಿಸಿದ ಬಗ್ಗೆ ಕುಂದಾಪುರದ ಸಬ್ ಕಲೆಕ್ಟರರು ಅವರಿಗೆ 200ರೂಪಾಯಿ ಜುಲ್ಮಾನೆ ವಿಧಿಸಿದರು.

ಕಂಚಿಬೈಲು ಶ್ರೀ ರಂಗಪ್ಪ ಕಾಮತರು ಲೈಸನ್ಸಿಲ್ಲದೆ 20ಮಣಕ್ಕಿಂತ ಹೆಚ್ಚು ಅಕ್ಕಿ ಮಾರಾಟವನ್ನು ಇಟ್ಟ ಅಪರಾಧಕ್ಕಾಗಿ 3 ತಿಂಗಳ ಕಠಿನ ಸಜೆ ವ 500ರೂಪಾಯಿ ಜುಲ್ಮಾನೆ ತೆರಬೇಕಾಯಿತು.

ಕೋಡಿ ಗ್ರಾಮದ ಶ್ರೀ ಮಂಜುನಾಥ ನಾಯಕರು 10 ಮುಡಿ ಅಕ್ಕಿಯನ್ನು ರೂಪಾಯಿ 15ರಂತೆ ಮಾರಾಟ ಮಾಡಿದಕ್ಕೆ ಅವರಿಗೆ 7ತಿಂಗಳು ಕಠಿನ ಸಜೆ ಮತ್ತು ರೂಪಾಯಿ 500ಜುಲ್ಮಾನೆ, ಹಣಕೊಡದಿದ್ದರೆ 6ತಿಂಗಳು ಜಾಸ್ತಿ ಶಿಕ್ಷೆ ವಿಧಿಸಲಾಯಿತು.

ಶ್ರೀ ತಲಕಾವೇರಿ ಫಂಡ್:-ದಕ್ಷಿಣ ಕಾಶಿಯೆಂದು ಪ್ರಖ್ಯಾತಿಹೊಂದಿದ ಶ್ರೀ ತಲಕಾವೇರಿ ತೀರ್ಥಸ್ನಾನದ ಸಲುವಾಗಿ ಅಸ್ಟಿಕ ಹಿಂದೂಗಳೆಲ್ಲ ತಾ ಕ ರಾವಾಸದ ಸಂಕ್ರಾಂತಿ ಮೊದಲ್ಗೊಂಡು ಒಂದು ತಿಂಗಳ ಪರ್ಯಂತ ವಿಶೇಷತಃ ಯಾತ್ರಾರ್ಥಿಗಳಾಗಿ ಹೋಗುತ್ತಿರುವುದು ಸರ್ವವಿದಿತವಷ್ಟೆ. ತಿರುಪತಿ ಒಡೆಯನ ದರ್ಶನ ಪಡೆಯಲು ಈಗ ಮಿಲಿಟರಿಗಳಿಗೆ ಹೋಗತಕ್ಕವರು ಕಡಿಮೆ. ಕಾರಣ ಬ್ರಿಟಿಶ ಮೋಟಾರ್ ಸಂಚಾರ ವ್ಯವಸ್ಥೆ ಮಾಡಲಾಗಿ ಮತ್ತೆ ಪಿಲ್ಗ್ರಿಮ ತಲಕಾವೇರಿಗೆ ಯಾತ್ರಾರ್ಥಿಗಳು ಸುಲಭದಲ್ಲಿ ಹೋಗಿ ಬರುವರೆ ಒಂದು ಧರ್ಮಸ್ಥಾನ ಮತ್ತು ಅಲ್ಲಿ ಉಳಕೊಳ್ಳಲು ಛತ್ರಗಳ ಏರ್ಪಾಡು ಇವಿಷ್ಟರ ಯೋಜನೆಯೊಂದನ್ನು ಅಲ್ಲಿಯ ಉದಾರ ಸದ್ಗೃಹಸ್ಥ ಗೃಹಿಣಿಯರು ಕೈಗೊಂಡಿದ್ದಾರೆ. ಈ ಯೋಜನೆಯು ಕಾರ್ಯಗತವಾಗಬೇಕಾದರೆ ಆಸ್ತಿಕ ಸಂಸ್ಥಾನಗಳ ರಾಜರೂ ಧರ್ಮಸೀಲರ ಸ್ವಾಮಿಗಳವರೂ ಇತರ ಆಸ್ತಿಕ ಮಹಾಜನರೂ ಉದಾರ ಬುದ್ಧಿಯಿಂದ ದಕ್ಷಿಣೆಯಿಂದ ಧನಸಹಾಯ ಮಾಡಬೇಕಾಗಿದೆ. ಮಡಿಕೇರಿಯ ಕೊಡಗು ಬ್ಯಾಂಕಿನ ಫಂಡ್ಸ್ ಸಮಿತಿಯ ಪ್ರೆಸಿಡೆಂಟರಿಗೆ ಹಣವನ್ನು ಕಳುಹಿಸಿಕೊಟ್ಟು ಶ್ರೀ ತಲಕಾವೇರಿಯಮ್ಮನ ಪವಮಾನ ಗೃಹಕ್ಕೆ ಪಾತ್ರರಾಗಬೇಕಾಗಿ ಸಂಬಂಧಪಟ್ಟವರು ವಿನಂತಿಪತ್ರ ಹೊರಡಿಸಿರುತ್ತಾರೆ.

ಜಾಹೀರು ನೋಟೀಸು

The Karnataka Bank Limited Udipi

ದಿ ಕರ್ನಾಟಕ ಬೇಂಕ್, ಲಿಮಿಟೆಡ್. ಉಡುಪಿ.

ಈ ಕೆಳಗೆ ಹೆಸರು ಕಾಣಿಸಿದವರು ಸದರೀ ಬೇಂಕಿನಿಂದ ಚಿನ್ನಾಭರಣಗಳ ಈಡಿನ ಮೇಲೆ ಪಡೆದ ಸಾಲದ ಮೊಬಲಗನ್ನಾಗಲೀ, ಅದರ ಬಡ್ಡಿಯನ್ನಾಗಲೀ ವಾಯಿದೆಗೆ ಕೊಡದ ಇರುವದರಿಂದ, ಅವರಿಗೆ ಬಿಟ್ಟ ರಿಜಿಸ್ಟ್ರಿ ನೋಟೀಸು, ಅವರು ಮೃತಪಟ್ಟಿರುತ್ತಾರೆಂತೆ ವಾಪಾಸು ಬಂದ ಪ್ರಯುಕ್ತ, ಸದ್ರಿ ಮೃತಪಟ್ಟವರ ವಾರೀಸುದಾರರು ತಮ್ಮ ಹಕ್ಕುಗಳನ್ನು ಬೇಂಕಿಗೆ ಸ್ಥಿರ ಪಡಿಸಿ ಬೇಂಕಿಗೆ ಸಲತಕ್ಕ ಅಸಲು ಬಡ್ಡಿ ವ್ಯವೇಜುಗಳನ್ನು ಮತ್ತು ಖರ್ಚು ವಗೈರೆಯನ್ನು ಇದೇ ಬರುವ ತಾರೀಕು 3-11-1944ನೇ ಶುಕ್ರವಾರದೊಳಗೆ ಬೇಂಕಿಗೆ ಪಾವತಿ ಮಾಡಿ ಸದ್ರಿ ಅಡವಿಟ್ಟ ನಗಗಳನ್ನು ಬಿಡಿಸಿಕೊಂಡು ಹೋಗುವರೆ ತಪ್ಪಿದ್ದಲ್ಲಿ ಸದರೀ ನಗಗಳನ್ನು ಇದೇ ತಾರೀಕು 9-11-1944ನೇ ಗುರುವಾರ ದಿವಸ ಅಪರಾಹ್ನ ಘಂಟೆ 2ಕ್ಕೆ ಸರಿಯಾಗಿ ಬೇಂಕಿನ ಆಫೀಸಿನಲ್ಲಿ ಬಹಿರಂಗವಾಗಿ ಏಲಂ ಮಾಡಲಾಗುವದು. ಅಗತ್ಯಪಟ್ಟಲ್ಲಿ ಏಲಮಿನ ತಾರೀಕನ್ನು ಮುಂದರಿಸುವ ಹಕ್ಕು ಬೇಂಕಿಗೆ ಇದೆ ತಿಳಿದಿರುವದು.

ಖಂಜ್ರಾ ನಂಬ್ರ	ಲೋನಿನ ನಂಬ್ರ	ಹೆಸರು ಮತ್ತು ವಿಳಾಸ	ಬೇಂಕಿಗೆ ಬರತಕ್ಕ ಮೊಬಲಗು
1	174/41	ಕೆ. ಕೃಷ್ಣಯ್ಯ, ಗುಮಾಸ್ತೆ, ದಿ ಕರ್ನಾಟಕ ಬೇಂಕ್ ಲಿಮಿಟೆಡ್, ಉಡುಪಿ ಬ್ರೇಂಚ್, ಉಡುಪಿ, ದ.ಕ.	ಅಸಲು ರೂ 10/- ಮತ್ತು ಇದರ ಮೇಲೆ ತಾ. 26 9 42ರಿಂದ ಸೇಕಡಾ 8ರ ಸಲೆಯಲ್ಲಿ ವಸೂಲು ವರೆಗಿನ ಬಡ್ಡಿ

ಬೇಂಕಿನ ಆಫೀಸ
ಶಂಕರಪೇಟೆ, ಉಡುಪಿ, ದ. ಕ.
ತಾ 21-10-1944.

B. Venkata Rao,
Ag Agent.

ಸಾರ್ಜೆಂಟರ ವಿಚಿತ್ರ ಪ್ರಚಾರ.

ಈ ಶಿರೋನಾಮೆಯಲ್ಲಿ ತಾ ೧೯ರ 'ಇಂಡಿಯನ್ ಎಕ್ಸ್‌ಪ್ರೆಸ್' ನಲ್ಲೊಂದು ಅಗ್ರಲೇಖವಿದೆ. ಅದರ ಮಾತುಗಳು ವಿಚಾರಣೀಯವಿದೆ ಅವನ್ನು ಸಂಗ್ರಹಿಸಿ ಹೇಳುವುದಾದರೆ-ಇಂಡಿಯಾ ಸರಕಾರದ ಎಡ್ಯುಕೇಶನಲ್ ಕಮಿಷನರಾದ ಸ| ಜೋನ್ ಸಾರ್ಜಂಟರು ಈಗಾಗಲೆ ಅಮೇರಿಕಾದ ಸಂಯುಕ್ತ ರಾಷ್ಟ್ರಗಳಲ್ಲಿ ತನ್ನ ಆರುವಾರಗಳ ಸಂಚಾರವನ್ನು ಮುಗಿಯಿಸಿರುತ್ತಾರೆ. ಈ ಸಂಚಾರದಲ್ಲಿ ಇಂಡಿಯಾದ ಯುದ್ಧೋತ್ತರ ವಿದ್ಯಾಯೋಜನೆಯನ್ನೆಲ್ಲ ಅಲ್ಲಿಯ ಜನರಲ್ಲಿ ಸಾರಿ ಪ್ರಚಾರ ಮಾಡುತ್ತ ಬಂದಿದ್ದಾರೆ ಆದರೆ ಇವರು ಪ್ರಚಾರಮಾಡಿದ ಯೋಜನೆಯು ಇಂಡಿಯಾ ಸರಕಾರದ ಯೋಜನೆಯೆನ್ನುವ ಬದಲಾಗಿ ಇವರದೇ ಅನ್ನೋಣವೆನ್ನಿಸುತ್ತದೆ ಯಾಕೆಂದರೆ ನಮಗೆ ತಿಳಿದಿರುವ ಮಟ್ಟಿಗೆ ಇಂಡಿಯಾ ಸರಕಾರವು ಈ ಯೋಜನೆಯನ್ನು ಅಂಗೀಕರಿಸಿಲ್ಲ. ವಾಸ್ತವಿಕವಾಗಿ ಹೇಳುವುದಾದರೆ ಕಳೆದ ದಶಂಬರದಲ್ಲಿ ಕಲ್ಕತ್ತದಲ್ಲಿ ಎಸ್ಸೋಸಿಯೇಟೆಡ್ ಚೇಂಬರ್ ಆಫ್ ಕಾಮರ್ಸ್‌ನ ಸಮ್ಮೇಳನದ ಮುಂದೆ ವೈಸರಾಯರು ಮಾಡಿದ ಭಾಷಣದಲ್ಲಿ ಈ ಯೋಜನೆಯ ಕುರಿತು ನಿರುತ್ತೇಜಕವಾಗಿ ಮಾತಾಡಿದ್ದಾರೆ ವಿದ್ಯೆಯ ಮಹತ್ವಿಕೆಯನ್ನು ತಾನೆಂದೂ ಕೀಳ್ಗೈಯುವವನಲ್ಲವಾದರೂ ಸಾರ್ಜಂಟರ ವರದಿಯಲ್ಲಿ ಸೂಚಿತವಾದಂತಹ ಯೋಜನೆಯ ಪೂರ್ಣ ಆವಿಷ್ಕಾರವು ಇತರ ದೇಶೋನ್ನತಿಯ ಯೋಜನೆಗಳು ಮುಗಿಯುವನಕ ಕಾಯಬೇಕಾಗುವುದು. ಹಳ್ಳಿಗಳನ್ನು ಎಂತಹ ಸಂದರ್ಭದಲ್ಲಿಯೂ ಶೀಘ್ರವಾಗಿ ಮತ್ತು ನಿಶ್ಚಿಯವಾಗಿ ಮುಟ್ಟಲಾಪ ರಸ್ತೆಗಳ ಏರ್ಪಾಡಾಗದೆ ಅವುಗಳ ಆರೋಗ್ಯ ಮತ್ತು ವಿದ್ಯೆಯಲ್ಲಿ ಮಹತ್ವದ ಸುಧಾರಣೆಗಳನ್ನು ಸಾಧಿಸುವುದು ಅಶಕ್ಯವಾದ ದರಿಂದ ತಾನು ಮಾರ್ಗರಚನೆಯ ಯೋಜನೆಗೇ ಮೊತ್ತ ಮೊದಲ ಸ್ಥಾನಕೊಡುತ್ತೇನೆಂದಿದ್ದಾರೆ.

ಅನಂತರವೂ ಈ ವಿಷಯವಾಗಿ ಹೆಚ್ಚು ಕೇಳಿಬಂದಿದೆ ಮಾತ್ರವಲ್ಲ, ಕೃತಿಯಲ್ಲಿಯೂ ಕಂಡು ಬಂದಿದೆ. ಯುದ್ಧಾನಂತರದ ಪುನರ್ರಚನೆಯಲ್ಲಿ ಇಂಡಿಯಾ ಸರಕಾರದ ಪ್ರಥಮ ಕಾರ್ಯವು ಮಾರ್ಗನಿರ್ಮಾಣ ಯೋಜನೆಯೆಂಬುದು ಗೊತ್ತಾಗಿದೆ.

ಹೀಗಿರುತ್ತ ಯಾವ ದೇಶದಲ್ಲಿ ಈ ಯೋಜನೆಯ ಪ್ರಯೋಗವಾಗಬೇಕಾಗಿದೆಯೋ ಅಲ್ಲಿಯ ಸರಕಾರದ ಅನುಮೋದನೆಯೇ ಅದಕ್ಕೆ ದೊರಕದಿರುವಾಗ ಆದರ ಮೊದಲ ಹೆಜ್ಜೆಯ ಛಾಯೆಯೂ ಅಲ್ಲಿ ಕಾಣದಿರುವಾಗ ಅವುಗಳ ಸಾಧನೆಗಾಗಿ ಗಾಗಿ ಅಲ್ಲಿ ತಕ್ಕ ಯತ್ನ ಮಾಡದೆ ಆದರ ವಿಷಯ ಅಮೇರಿಕದಲ್ಲಿ ಸಾರ್ಜಂಟರು ಪ್ರಚಾರ ಕೈಗೊಂಡಿರುವುದು ವಿಚಿತ್ರವೆನಿಸುತ್ತದೆ ಯುದ್ಧೋತ್ತರ ವಿದ್ಯಾಪ್ರಸಾರಕ್ಕಾಗಿ ಎರಡು ಮಿಲಿಯ ಅಧ್ಯಾಪಕರ ವಿಶೇಷ ತರಬೇತಿಯಾಗುವುದೆಂದೂ ಇವರಲ್ಲಿ ಹಲವರು ಅಮೇರಿಕದ ಕಾಲೇಜುಗಳಲ್ಲಿಯೂ ವಿಶ್ವವಿದ್ಯಾನಿಲಯಗಳಲ್ಲಿಯೂ ಔದ್ಯೋಗಿಕ ವಿಷಯಗಳ ವಿಶೇಷತಜ್ಞತೆಯನ್ನು ಹೊಂದುವಂತ ಅವರನ್ನು ತರಬೇತಿಗಳಿಸುವ ಸುವಿಸ್ತಾರವಾದ ಏರ್ಪಾಡುಗಳಾಗುತ್ತಾ ಇವೆಯೆಂದೂ ಇವರು ಅಮೇರಿಕದಲ್ಲಿ ಜಾಹೀರಾತು ಮಾಡಿದ್ದಾರೆ ನಮಗೆ ತಿಳಿದಿರುವಷ್ಟರ ಮಟ್ಟಿಗೆ ಕೇಂದ್ರ ಸರಕಾರವಾಗಲಿ ಪ್ರಾಂತಿಕ ಸರಕಾರವಾಗಲೀ ಈ ಯೋಜನೆಗ ಹಣಹಾಕುವ ವ್ಯವಸ್ಥೆಗಳನ್ನು ಮಾಡಿಲ್ಲ. ಪರಿಸ್ಥಿತಿ ಹೀಗಿರುತ್ತ ಸಾರ್ಜೆಂಟರು ಅಮೇರಿಕಕ್ಕೆ ಹೋಗಿ ಅಲ್ಲಿಯ ಜನರ ಮುಂದ ತನ್ನ ಯೋಜನೆಯ ತುತೂರಿಯೂದಲು ಆವಸರಗೊಳ್ಳುವ ಕಾರಣವೇನಿತ್ತೋ! ತನ್ನ ಯೋಜನೆಯನ್ನು ಪರಿಪೂರ್ಣವಾಗಿ ಇಲ್ಲಿಯ ಜನತೆಯ ಮುಂದಿಟ್ಟು ಆದರ ಬೆಂಬಲದಿಂದಲಾದರೂ ಅದರೂ ಆರಂಭಿಕ ಕಾರ್ಯಕ್ರಮವು ಕಾರ್ಯಕ್ಷೇತ್ರದಲ್ಲಿಳಿಯುವಂತೆ ಮಾಡುವುದಕ್ಕಿಂತ ಆದರ ವಿಷಯವನ್ನು ಅಮೇರಿಕನರಿಗೆ ಸಾರುವುದು ವಿಶೇಷ ಅವಶ್ಯಕತೆಯದೇ? ಹಿಂದೂಸ್ಥಾನದ ತನ್ನ ಆಳಿಕೆಯ ಕುರಿತಾಗಿ ಆಗುತ್ತಿರುವ ಬ್ರಿಟಿಷ್ ಪ್ರಚಾರದಲ್ಲಿ ಇದೂ ಒಂದೋ ಎನ್ನುವ ಸಂಶಯಕ್ಕೆಡೆಯಾಗಿದೆ-ಬ್ರಿಟಿಷ್ ಸರಕಾರವು ಇಂಡಿಯಾದಲ್ಲಿ ರಾಜಕೀಯ ಹಾಗೂ ಸ್ವಾತಂತ್ರ್ಯ ಚಳುವಳಿಯನ್ನು ಕುಗ್ಗಿಸುವುದರಲ್ಲೇ ಮಗ್ನವಾಗಿರದೆ ಇಂಡಿಯಾದ ಯುದ್ಧೋತ್ತರದ ಪುನರ್ರಚನೆಯ ಕುರಿತಾಗಿ ಮಹತ್ವದ ಏರ್ಪಾಡಗಳನ್ನು ಮಾಡುತ್ತಿದೆಯೆಂದು ಅಮೇರಿಕದ ಜನತೆಯ ಮನಸ್ಸಿನಲ್ಲಿ ನೆಲೆಗೊಳಿಸುವ ಪ್ರಯತ್ನವು ಇದೆಂದು ತೋರುತ್ತದೆ. ಆದರೆ ಒಂದು ಬಾಯಿಯಲ್ಲಿ ಯುದ್ಧ ಮುಗಿದೊಡನೆಯೇ ಇಂಡಿಯಕ್ಕೆ ಸ್ವಾತಂತ್ರ್ಯವನ್ನೀಯಲಾಗುತ್ತದೆಂದು ಅಮೇರಿಕನರಿಗೆ ಬ್ರಿಟಿಷರು ಭರವಸೆಗೊಡುತ್ತಾರೆ ಮತ್ತೊಂದು ಬಾಯಿಯಲ್ಲಿ ಯುದ್ಧೋತ್ತರದ ಹಲವು ವರ್ಷಗಳ ಯೋಜನೆಗಳನ್ನು ಸಾರುತ್ತಿದ್ದಾರೆ. ಬ್ರಿಟಿಷ್ ಅಧಿಕಾರಿಗಳಿಂದ ವಿರಚಿತವಾದ ಈ ಯೋಜನೆಗಳು ಸ್ವತಂತ್ರ ಭಾರತದಲ್ಲಿ ಮಾನ್ಯವಾಗುವವೇ? ಭಾರತೀಯರದ್ದಾದ ಯೋಜನೆಗಳೂ ಅವನ್ನು ಪ್ರಯೋಗಕ್ಕಿಳಿಸಲಾಪ ಸಾಮರ್ಥ್ಯವುಳ್ಳ ಭಾರತೀಯರೂ ಅಲ್ಲಿಲ್ಲವೇ ಎಂದು ಅಮೇರಿಕನರಿಗೆ ಹೊಳೆಯದಿದ್ದೀತೇ? ಅಂತೂ ಅಮೇರಿಕಾದ ಸಂಯುಕ್ತರಾಷ್ಟ್ರಗಳಲ್ಲಿ ಸಾರ್ಜೆಂಟರು ಮಾಡಿದ ಪ್ರಚಾರದ ರೀತಿಯನ್ನು ವಿಚಾರಮಾಡಿದಷ್ಟು ಅವರನ್ನು ಕಳುಹಿದ ಧನಿಗಳಿಗೆ ಯುದ್ಧಾನಂತರವೂ ತಾವು ಬಹುಕಾಲ ಭಾರತದಲ್ಲಿ ಆಳುತ್ತಿರುವೆವೆಂಬ ಕನಸಿದೆಯೆಂಬುದು ಸ್ಪಷ್ಟ ಸ್ಪಷ್ಟವಾಗಿ ಗೋಚರಿಸುತ್ತದೆ. ಯುದ್ಧಾನಂತರದ ಪುನರ್ರಚನೆಯ ಯೋಜನೆಗಳೆನ್ನಿಸಿಕೊಳ್ಳುವವುಗಳಲ್ಲಿ ಹಲವು ಕೇವಲ ಕಣ್ಣುಕಟ್ಟಿನ ಪ್ರಚಾರಗಳೆಂಬ ಸಂಶಯವು ಇಂಡಿಯಾದಲ್ಲಿ ವಿಶಾಲವಾಗಿ ಹರಡಿದೆ ಆದರೆ ಸಾರ್ಜಂಟರ ಯೋಜನೆಯೊಂದು ಈ ಸಂಶಯಕ್ಕೆ ಒಳಗಾಗಿದ್ದಿಲ್ಲ ಈಗ ಸಾರ್ಜೆಂಟರ ಈ ಅಮೇರಿಕಾ ಪ್ರಚಾರದ ರೀತಿಯಿಂದ ಅವರ ಯೋಜನೆಯೂ ಮೊಣಗಂಟಿಗೆ ಬೆಲ್ಲ ಸವರುವ ಯೋಜನೆಯೋ ಎಂದ ಸಂಶಯ ಚಿತ್ತದಿಂದ ಕಾಣಬೇಕಾಗಿದೆ

ದ್ರಾವಿಡರ ಮೂಲ ಸಿಂಧೂ ನದಿಯ ಬಯಲು
ಮಹೆಂಜೆದಾರೋ ಸಂಶೋಧನೆಯ ಸಿದ್ಧಾಂತ

ಮದುರೆಯಲ್ಲಿ ಅಲ್ಲಿಯ ಸಾಂಸ್ಕೃತಿಕ ಸಂಘದಾತ್ರದಿಂದ ಏರ್ಪಡಿಸಲ್ಪಟ್ಟ ಉಪನ್ಯಾಸಾವಳಿಗಳಲ್ಲಿ ಮೊದಲನೆಯದಾಗಿ ರೆಫಾ| ಹೆರಾಸ್ ಎಂಬವರು ಶ್ರೀ ಎ.ಎಸ್ ಪಿ. ಅಯ್ಯರರವರ ಅಧ್ಯಕ್ಷತೆಯಲ್ಲಿ ಉಪನ್ಯಾಸಮಾಡಿದರು ಮಹೇಂಜಾದಾರೊ ಎಂಬುದು ಸಿಂಧೂನದಿಯ ಬಯಲಲ್ಲಿ ಭೂಗತವಾಗಿದ್ದ ಮಹಾ ನಗರ. ಆ ಪ್ರಾಂತವನ್ನು ಅಗೆದು ನಗರದ ಭಗ್ನಾವಶೇಷಗಳನ್ನು ಪ್ರಾಚ್ಯಶಾಸ್ತ್ರತಜ್ಞರು ಪರಿಶೋಧಿಸಿದ್ದಾರೆ. ಅವರಿಗೆ ದೊರೆತ ಲಿಖಿತಾದಿಗಳ ಆಧಾರದಿಂದ ಆ ಪ್ರಾಂತಕ್ಕೆ ಮಹೆಂಜದಾರೋ ಕಾಲದಲ್ಲಿ 'ಸಿದ' ಎಂದು ಹೆಸರಿತ್ತೆಂದು ಹೇಳುವರು ಅದರ ಜನರಿಗೆ ದ್ರಾವಿಲರು ಎಂಬ ಹೆಸರು. ದ್ರಾವಿಲರ್ ಎಂದರೆ ಸಾಗರ ಸಂಚಾರಿಗಳು ಎಂದರ್ಥ. ಈ ಮಾತು ಆನಂತರದ ಆರ್ಯರಿಂದ ದ್ರಾವಿಡರು ಎಂದಾಯಿತು ಮಹೆಂಜೆದಾರೋ ನಗರ ರಚನೆಯ ಯೋಜನೆಯು ಆಧುನಿಕ ರೀತಿಯನ್ನು ಹೋಲುತ್ತದೆ ಅದು ಮಹದೈಶ್ವರ್ಯ ಸಂಪನ್ನ ನಗರವಾಗಿತ್ತು. ಅದರ ರಕ್ಷಣಾ ವ್ಯವಸ್ಥೆಯ ಆಕಾರವು ಸ್ವಸ್ತಿಕವಾಗಿತ್ತು ಆದುದರಿಂದ ನಾಣ್ಯಗಳನ್ನು ವಂತೆ ಸ್ವಸ್ತಿಕವು ಆರ್ಯರ ಚಿಹ್ನೆಯಲ್ಲ ಕ್ರಿಸ್ತಪೂರ್ವ ಐದು ಸಾವಿರ ವರ್ಷಗಳ ಹಿಂದೆಯೇ ಈ ಮಹೆಂಜಾದಾರೋ ಉತ್ಕೃಷ್ಟ ನಾಗರಿಕತೆಯುಳ್ಳ ಜನರ ನೆಲೆವೀಡಾಗಿತ್ತು ಅವರಿಗೆ ಖಗೋಳ ಶಾಸ್ತ್ರ ಗೊತ್ತಿತ್ತು ನಕ್ಷತ್ರಗಳನ್ನು ಆಧರಿಸಿ ಅವರು ಕಾಲಗಣನೆ ಮಾಡುತ್ತಿದ್ದರು. ಅದಲ್ಲದೆ ಅವರು ವರುಷಕ್ಕೆ ಎಂಟೇ ರಾಶಿಗಳನ್ನು ಎಣಿಸುತ್ತಿದ್ದರೆಂದು ಈ ತನಕ ದೊರೆತ ಲಿಖಿತಗಳಿಂದ ತಿಳಿದುಬರುತ್ತದೆ. ಅಲ್ಲಿಯ ಕೆಲವು ಹೊಗೆಕಂಬ ಅಥವಾ ಆರಿದ ಬಾವಿಯಂತೆ ಕಾಣುವವುಗಳ ತಳಕ್ಕಿಳಿದರೆ ಈಗಲೂ ಹಗಲಲ್ಲಿ ನಕ್ಷತ್ರಗಳನ್ನು ಕಾಣಲಾಗುತ್ತದೆ ಎಂದು ತನ್ನ ಅನುಭವದ ಮಾತುಗಳನ್ನು ಹೇಳಿದರು.

NOTICE

In the Court of the Subordinate Judge of S K.

O S No 44 of 1944

Between

Mearu Devi Ammma -Plaintiff

and

Shanthiraja Hegde & others -Defendants

To Respondents -4 Adiraja Hegde, 4 Laxmimathi for her self and as guardian ad litem of minors 10 Shridhara 11 Prabhavathi and 12 Gunapala, 6 Siddappa, 7 Rathi Devi - Children of Thangappe residing in Naddodi House, Padu Konaje Village, Karkal Taluk.

Please take notice that the above suit filed by Plaintiff is posted for your appearance to 3-11 1944 in the above Court, and if you do not appear on that day either in person or through a competent vakil the suit will be decided in your absence

Mangalore, 19 10 1944 | **S Nagarajiah,** Vakil for Plaintiff

WANTED

Applications are invited for the posts of Agents and Accountants in the Bank as per particulars given below —

The Candidates must have studied at least up to S. S L C. Preference will be given to those with higher qualifications or Banking experience

Applications for the posts of Agents must have previous Banking experience

The selected candidates will have to undergo a period of probation for about 3 months and if found satisfactory, will have to furnish the securities as per the rules and will be given the following pay —

The pay of the Agents will be Rs. 35/- per mensem and that of the Accountants Rs 25 - per mensem Besides this, the Agents and the Accountants will be entitled to Dearness Allowance which is now Rs 12/- per month

Applications along with testimonials as to the qualifications, character and conduct of the candidates, should reach the Head Office, Mangalore, on or before 31-10-44.

The Vijaya Bank Ltd.,
MANGALORE.

• ಏಳು ಹುಚ್ಚರು •

(೨ನೇ ಪುಟದಿಂದ ಮುಂದುವರಿದುದು)

●

ಕ್ಕೆ ಇಳಿಯಬೇಡ-ಇದಲ್ಲಾ ಕ್ಷಣ ಮಾತ್ರ ಸುಖ ತರುವವು"ಎಂದಂತಾಯಿತು. ಎದ್ದು ನೋಡಿದೆ; ಯಾರೂ ಇಲ್ಲ.

ಅಂದುರಾತ್ರಿ 12 ಗಂಟೆ ಸಮಯ ಸಟ್ಟಾದೇವಳ ಭಕ್ತರ ಸಾಲಿನಲ್ಲಿ ನಾನೂ ಒಬ್ಬನಾಗಿ ನಂಬರ ಕಾಯುತ್ತಾ ವೆಂಕಪ್ಪಯ್ಯನಲ್ಲಿ ಕುಳಿತೆ ಕಣಜರನೂ ಬಂದಿದ್ದ. ಕಿಸೆಯಲ್ಲಿ ಮತ್ತೊಂದು ರೂಪಾಯಿ ಉಳಿದಿತ್ತು. ನಿದ್ದೆಗೆಡುವುದಕ್ಕಾಗಿ ವೆಂಕಪ್ಪಯ್ಯನಲ್ಲಿ ಚಾ ಪಾನೀಯ, ಬೀಡಿ ಸೇವನೆಗಳೆಲ್ಲಾ ಆದುವು. ಆದರೂ ನಂಬರಿನ ಸುಳಿವಿಲ್ಲ ಕಾಂಗ್ರೆಸಿನವರಾರೋ ತಂತಿ ಕಡಿದುಹಾಕಿರಬೇಕೆಂದು ಕಣಜರನ ಸಿದ್ಧಾಂತ. ಬೆಳಗಿನ ಜಾವ,ಮೂರು ಗಂಟೆ ಹೊತ್ತು, ನನ್ನ ಕಣ್ಣಿಗ ಜಂಪು ಹಿಡಿಯಿತು "ನೀವು ಹೋಗಿ ಸ್ವಾಮಿ ಮಲಕೊಳ್ಳಿ, ನಿಮಗಿನ್ನೂ ನಿದ್ದೆ ಬಿಟ್ಟು ಅಭ್ಯಾಸವಿಲ್ಲ, ನಂಬರ್ ಬಂದೊಡನೆ ಎಬ್ಬಿಸುತ್ತೇನೆ" ಎಂದ ಕಣಜರ. ಸರಿ ಮಹಾರಾಯ ಎಂದು ಹೊರಟೆ ಕಗ್ಗತ್ತಲೆ, ದಾರಿ ಕಾಣಿಸದು. ನಾಲ್ಕುಮಾರು ಮುಂದೆ ಹೋಗಿದ್ದೆ. ಯಾರೋ ಹಾದ ಹಾಗಾಯ್ತು. ಯಾರು ಎಂದ "ನಾನು ಎಂದು ಮೆಲ್ಲನೆ ಹೇಳಿ ವ್ಯಕ್ತಿ ನನ್ನ ಕೈ ಹಿಡಿಯಿತು ನನ್ನ ಕೈ ತಣ್ಣಗಾಯಿತು. ವ್ಯಕ್ತಿ ನನ್ನನ್ನು ಒಂದು ಕಟ್ಟಡಕ್ಕೆ ಕರಕೊಂಡು ಹೋಯಿತು ಕಿಸೆಯಲ್ಲಿದ್ದ ಬೆಂಕಿಪೆಟ್ಟಿಗೆ ತೆಗೆದು ಹತ್ತಿಸಿನೋಡಿದರೆ ಅದು ನಮ್ಮ ಶಾಲಾ ಮರಾರ. ಕರೆತಂದ ವ್ಯಕ್ತಿ ಸುಂದರ ತರುಣಿ ಸುಮಾರು ಇಪ್ಪತ್ತೈದರ ಹರೆಯದ ತುಂಬು ಮೈಯ ಚಕ್ಕ ಜವ್ವನೆ. ಬಿಳಿ ಸೀರೆ ಉಟ್ಟಿದ್ದ ಅವಳ ರೂಪು ಆ ಕತ್ತಲಿನಲ್ಲಿ ನನ್ನನ್ನೊಮ್ಮೆ ಮರುಳುಮಾಡಿತು ಉನ್ಮಾದಗೊಂಡಿದ್ದ ಮೆದುಳು, ಉದ್ರೇಕಗೊಂಡಿದ್ದ ನರಗಳು. ಎರಡಕ್ಕೂ ಆಹುತಿಬೇಕಿತ್ತು ಸರಿ, ನಮ್ಮೀರ್ವರ ದೇಹಗಳು ಕತ್ತಲಲ್ಲಿ ಚಿರಪರಿಚಿತರಂತೆ ಒಂದನ್ನೊಂದು ಅರಸುತ್ತಾ ಸಲಿಗೆ ಬೆಳೆಸಿದವು ನನ್ನ ಕಿಸೆಯಲ್ಲಿದ್ದ ಚಿಲ್ಲರೆ ದುಡ್ಡು ಜಲಜಕ್ಕನ ಅಂದಿನ ಕ್ಲೋಸಿಂಗ್ ನಾಲ್ಕು ಕಾಣಿಕೆಯಾಯ್ತು.

ಬೆಳಗಾಯ್ತು. ಸೂರ್ಯನು ಕತ್ತಲನ್ನು ಬಿಡಿಸಿ ಜನಜೀವನಕ್ಕೆ ಬೆಳಕು ತೋರಲು ಗದ್ದುಗೆ ಏರಿದ್ದ. ಕ್ಲೋಸಿಂಗ್ ಎಲ್ಲರನ್ನೂ ಉದಾಸೀನತೆಯಲ್ಲಿರಿಸಿತ್ತು ನಾಲ್ಕು ಬಾರದಿದ್ದರೂ ಆದರ ದುಬಾರಿ ಕಿಂತಲ್ಲ. ನಮ್ಮದು ಸೇಕಡ 50 ಸರಿ ಎಂದು ವೆಂಕಪ್ಪಯ್ಯ ಮತ್ತು ಕಣಜರ ವಾದ

× × ×

ಮೂರು ದಿನಗಳ ತರುವಾಯ ಸರಸುನ್ನ ಕಾಹಿಲೆ ವರ್ತಮಾನ ಕೇಳಿ ತವರೂರಿಂದ ಹಿಂತಿರುಗಿದ್ದಳು ನಾನು ಹಾಸಿಗೆ ಹಿಡಿದಿದ್ದೆ. ಮೈಕೈ ಸಂದುಗಳಲ್ಲೆಲ್ಲಾ ನೋವು ಅಸಾಧ್ಯ ರೋಗದ ಚಿಹ್ನೆಯು ನನ್ನಲ್ಲಿ ತಲೆದೋರಿತ್ತು ಗೆಳೆಯ ಡಾಕ್ಟರ್ ರಾಮಚಂದ್ರ ಒಂದು ಪರೀಕ್ಷಿಸಿ, "ಇದೆಲ್ಲಿಂದ ಸಂಪಾದಿಸಿದೆ ಅಯ್ಯಾ ನಿನಗೆ, ಸಂಸಾರಿಗನಿಗೆ ಸಲ್ಲದ ಕಾರ್ಯವಿದು" ಎಂದ. ನನಗ ಬಲು ನಾಚಿಕೆ ಆಯಿತು. ಅವನಿಗೆ ದಮ್ಮಯ್ಯಗುಡ್ಡೆ ಹಾಕಿ ಗುಟ್ಟುರಟ್ಟಾಗದಂತೆ ಮಾಡಿ ಮಾನ ಕಾಪಾಡಿಕೊಂಡೆ ಈಗಲೂ ಅಂತರಂಗದಲ್ಲಿ ಹೇಳುತ್ತಿದ್ದೇನೆ

ನನ್ನ ತಪ್ಪು ಕೆಲಸಕ್ಕೆ ಪಶ್ಚಾತ್ತಾಪಪಟ್ಟು ಮುಂದ ಎಂದಿಗೂ ಇಂಥ ತಪ್ಪು ಮಾಡಲಾರೆನೆಂದು ಪ್ರತಿಜ್ಞೆಮಾಡುವುದರಿಂದ ತಪ್ಪಿನ ಪ್ರಾಯಶ್ಚಿತ್ತವಾಗುವುದೆಂದು ಸರಸುವನ್ನು ಹತ್ತಿರ ಕರೆದು, ಅವಳ ಮುಖವನ್ನು ನನ್ನೆದೆಯ ಮೇಲಿರಿಸಿಕೊಂಡು ವಿಷಯವನ್ನೆಲ್ಲಾ ಮರೆಮಾಚದೆ ತಿಳಿಸಿ, ಅವಳಲ್ಲಿ ಕ್ಷಮೆ ಬೇಡಿದೆ. ಎಷ್ಟೆಂದರೂ ಹೆಣ್ಣು ಹೃದಯ ಸರಸು ಬಿಕ್ಕಿಬಿಕ್ಕಿ ಅತ್ತಳು ಮೂರು ದಿನದ ತಾಯ ಮನೆಯ ಸುಖಕ್ಕಾಗಿ ಕೈಸೋಡಿ ಈ ಅನರ್ಥಕ್ಕೆ ಕಾರಣವಾಯ್ತಲ್ಲ ಎಂದು ತನ್ನ ತಪ್ಪಿಗಾಗಿ ನೊಂದುಕೊಂಡಳು.

× × ×

ಈಗ ನಾನು ನಮ್ಮೂರಿನಲ್ಲಿಲ್ಲ ಸಟ್ಟಾ ಮಾತ್ರ ನಮ್ಮೂರಿನಲ್ಲಿ ಬೀಜರೂಪದಲ್ಲಿದ್ದದ್ದು ಬಲಿತು ಬೆಳೆದು ಮರವಾಗಿದೆಯಂತೆ. ಬಂಗಾಲಕ್ಕೆ ಬೀಸಿದಂತಹ ಬಿರುಗಾಳಿ ಬೀಸಿದರೆ ಮಾತ್ರ ಈ ಮರವು ಬೇರು ಸಹಿತ ನಾಶವಾಗಬಹುದೋ ಏನೋ?

ಬೇಕು

'ಅಂತರಂಗ'ಕ್ಕೆ ಏಜಂಟರಿಲ್ಲದ್ದಲ್ಲಿ ಏಜಂಟರು ಬೇಕಾಗಿದ್ದಾರೆ ಶರ್ತಗಳಿಗೆ ಬರೆಯಿರಿ

ಅಂತರಂಗ ಆಫೀಸು, ಉಡುಪಿ

ನೀವು..

ನಿಮ್ಮ ಧನ..



ಮತ್ತು ನಿಮ್ಮ ಭವಿಷ್ಯತ್ತು

"ನನ್ನದನ, ನನ್ನದು ಅದನ್ನು ನನ್ನ ಮನಸ್ಸು ಬಂದಂತೆ ವಿನಿಯೋಗ ಮಾಡ ಕೂಡದು", ಎಂದಾಗಿ ನೀವು ಕೇಳಬಹುದು ನಿಮ್ಮ ಹಣವನ್ನು ನಿಮ್ಮ ಮನಬಂದಂತೆ ನೀವು ದಾರಾಳವಾಗಿ ಖರ್ಚುಮಾಡಲು ಯಾರೂ ಅಡ್ಡಿಮಾಡುವುದಿಲ್ಲ—ಆದರೆ, ನೀವು ಶ್ರಮಪಟ್ಟು, ಎದೆಯರಕ್ತವನ್ನುಬಸಿದು ಆ ಹಣವನ್ನು ಸಂಪಾದಿಸಿದ್ದೀರಿ ಆದರೆ, ಅದನ್ನು ನಿರರ್ಥಕವಾಗಿ ಚೆಲ್ಲಿಬಿಡಲು, ನೀವು ಎಂದಿಗೂ ಸಮ್ಮತಿಸಲಾರಿರಿ. ಆದರೆ, ಪ್ರತಿಯೋರ್ವನು ಅನವಶ್ಯಕವಾದ ವಸ್ತುಗಳಿಗೆ ಮಿತಿಮೀರಿದ ಬೆಲೆಯನ್ನು ಕೊಟ್ಟು, ಕೊಂಡುಕೊಳ್ಳುತ್ತಾಗಲ್ಲಾ, ನೀವು ಹೀಗೇಕೆ ಮಾಡ ತ್ತಿರುತ್ತೀರಿ ದಾರಣನಾಳಿಯು ಮಾಮೂಲ್ ಮಟ್ಟಕ್ಕೆ ಇಳಿಯುವವರೆಗೂ, ನೀವು ಕೊಳ್ಳುವದನ್ನು ನಿಲ್ಲಿಸುವುದು ಉತ್ತಮ.

ಅದೂ ಅಲ್ಲದೆ ಜನಸತ್ತೆಯ ಮನೆಯ ಬೇಡಿ ಸಂಯುಕ್ತ ರಾಷ್ಟ್ರಪಕ್ಷದವರಿಗೆ ಜಯವುಂಟಾಗಿ, ಭರತಖಂಡದ ಶಕ್ತಿ ... ಶಾಂತಕಾಲದಲ್ಲಿ ನಡಿಸಬಹುದಾದ ಉದ್ಯೋಗಗಳಲ್ಲಿ ಉಪಯೋಗಿಸಲು ಅವಕಾಶವಾಗುತ್ತದೆ ಆಗ ಭರತಖಂಡದ ಪ್ರಗತಿಪರ ವೃದ್ಧಿಗಾಗಿ ಮಾಡು ಏರ್ಪಾಟುಗಳಿಗೆ ಎಷ್ಟು ಹಣವಾದರೂ ಬೇಕಾಗುವುದು ಆದುದರಿಂದ ಈಗ ಎಷ್ಟೆಷ್ಟು ಮಟ್ಟಿಗೆ ನೀವು ಹಣವನ್ನು ಉಳಿಸುವಿರೋ ಅಷ್ಟಷ್ಟು ಮಟ್ಟಿಗೆ, ನಿಮ್ಮ ಭಾವಿ ಸಂಪತ್ತೂ ಬಲಪಡುವದು. (ತಳಹದಿಯು ಬಲಪಡುವುದು.)

★ ಇನ್ಶೂರೆನ್ಸ್, ಗವರ್ನ್‌ಮೆಂಟ್ ಲೋನುಗಳು ನ್ಯಾಷನಲ್ ಸರ್ಟಿಫಿಕೇಟುಗಳು, ಪೋಸ್ಟಾಫೀಸ್ ಸೇವಿಂಗ್ಸ್ ಬೇಂಕುಗಳು, ಸ್ಟಾಂಡರ್ಡ್ ಬೇಂಕ ಖಾತೆಗಳು, ಕೋ ಆಪರೇಟಿವ್ ಸೊಸೈಟಿಗಳು, ಇವುಗಳು ಧನ ವಿನಿಯೋಗಕ್ಕೆ ಉತ್ತಮ ಮಾರ್ಗಗಳು ಇವುಗಳಲ್ಲಿ ಹಾಕಿದ ಹಣವು ... ದಲ್ಲದೆ, ನಿಮಗೆ ನ್ಯಾಯವಾದ ಬಡ್ಡಿಯೂ ದೊರೆಯುವುದು.

ಹಣವನ್ನು ಕೈಲಾದ ಮಟ್ಟಿಗೂ ಉಳಿಸಿರಿ

ಉಳಿಸಿದ್ದನ್ನು ವಿವೇಕಮಾರ್ಗಗಳಲ್ಲಿ ವಿನಿಯೋಗಿಸಿರಿ.

ಇದು ರಾಷ್ಟ್ರೀಯ ಯುದ್ಧಮುಖದ ಭಾರತೀಯರ ಸಮಕ್ಷಮದಲ್ಲಿ ಮಾಡುವ ಅರಿಕೆ.

AAA 1116 KN.

The Pangal Nayak Bank Limited.

(Incorporated in 1920)

Registered Office Court Road, UDIPI

Branches at Udipi, Mangalore, Katapadi, Kanhangad, Kinnigoli and Nileshwar, South Canara District

Discounting of demand and short term negotiable instruments for approved parties, granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms acceptance of Fixed Current Savings Bank and Cumulative deposits and every other type of up to date Banking service is at the disposal of all the sections of the discreet public

For business proper please enquire at any one of our Offices

15th April 1944

ಗನೋರಿಯಾ ಪರಮಾರೋಗೆ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ, ಚಟ್ಟಿ ಬದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಬೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು ಪಥ್ಯ ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು

ಬಾಟ್ಲಿ ೧ಕ್ಕೆ ೫ರೂ **ಪೋಸ್ಟ ಚಾರ್ಜ ೮ ಆಣೆ**

ಏಜೆಂಟರು —ಗದಗ-ಗದಗ ಫಾರ್ಮಸಿ, ಹುಬ್ಬಳ್ಳಿ-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟ — ಬಾಗಲಕೋಟೆ ಫಾರ್ಮಸಿ, ಧಾರವಾಡ —ಧಾರವಾಡ ಫಾರ್ಮಸಿ, ದಾವಣಗೇರಿ-ದಾವಣಗೇರಿಪ್ರೇಸ್ ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG

The best preventive in epidemics of CHOLERA

"BHUVANENDRA"

CHANDRAMAS

Also a sovereign remedy for diarrhoea Stomachache Vomiting and Nausea

BHUVANENDRA PRODUCTS LTD., Katapadi.

'ಭುವನೇಂದ್ರ'

ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗ 1ರಿಂದ2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಅಂತರ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ ಕ.

ಉಡುಪಿ ಸ್ಟಾಕಿಸ್ಟರು —ಡಾ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ, ... ಎಸ್ ಶೆಣೈ, ರಥಬೀದಿ, ಡಾ ಪಿ ಜಿ ಆಚಾರ್ಯ್ಸ ಫಾರ್ಮಸಿ, ಡಾ ಕೆ ... L I M, ಡಾ ವೆಂಕಟರಾವ್, ಕೋರ್ಟ್ಹಿಲ್, ನವಭಾರತ ಬುಕ್ ಡಿಪೊ

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿದ ದೇಹಸ್ಥಿತಿಯನ್ನು ಸಿದ್ಧಗೊಳಿಸಿ ತಯಾರಿಸಲ್ಪಟ್ಟ **ಅಮೋಘವಾದ ಮಧುರವಾದ ರಸಾಯನ** ಅಲ್ಪ ಮೌಲ್ಯದಿಂದ ಒಡನೆಯೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು



೮ ಔನ್ಸಿನ ಬಾಟ್ಲಿಗಳು ಇಪ್ಪತ್ತು ದಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ,

ಎಂ ವಿ ಶಾಸ್ತ್ರಿ, ಆಯುರ್ವೇದ ಭೂಷಣ, ನಂ 5 **ಕೊಡಿಯಾಲಬೈಲು,** ದ ಕ

—ಮಕ್ಕಳನ್ನು ಹಡೆಯುವದು ಸಾಕು—

ಅಳಕ್ಕ ಸ್ತ್ರೀಯರಿಗೆ

ಬರ್ಥ ಕಂಟ್ರೋಲ

ರೋಗಗ್ರಹಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು

ಪಥ್ಯ — ಹೆರವೀಪಲ್ಲೆ ಬಿಡಬೇಕು ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0 ಪೋಸ್ಟ ಚಾರ್ಜು ೧೦ಆಣೆ

ಮಾಲಕರು.—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರ —ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟ ಧಾರವಾಡ, ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ —ಹುಂಬರವಾಡಿ ಸ್ಟೋರ್ಸ ದಾವಣಗೇರಿ — ದಾವಣಗೇರಿ ಪ್ರೆಸ್ಸ ಆರ್ ಎಲ್ ಒಮ್ಮಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ

Ayurveda Oushadalaya, GADAG CITY

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು ಬಾಟ್ಲಿ 1ರ ದರ ರೂ 3—8—0

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು ಬಾಟ್ಲಿ 1ರ ರೂ 1—12—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ ಕ್ಯಾಲೆಂಡ್ರಿ ಬರದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಬಹುದು

ಉಡುಪಿ ಏಜಂಟರು — ನವಭಾರತ ಬುಕ್ ಡಿಪೊ

ನೋಡಿದರೆ ಸಾಕು! ಓದದೆ ಬಿಡಲಾರಿರಿ!!

ಮುಗಿದಾಗ ಮುಗಿದು ಹೋಯಿತಲ್ಲಾ ಎನಿಸುವ, ತೊಡಗಿದಾಗ ಹೇಗೆ ಮುಗಿಯುವುದಿದು ಎಂದು ಕೌತುಕಪಡಿಸುವ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ **ಬೆಲೆ ೦—೧೦—೦**

ಅಂತರಂಗವನ್ನು ಬಳಿಗ ಬಹಿರಂಗವನ್ನು ಹೂಳಿಸಿ ಹರಿಯುವ ಮಾತು

ಪ್ರೇಮಪ್ರವಾಹವು ಹೇಗೆ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮಪ್ರವಾಹ

ಸ್ವಾರಸ್ಯವಾದ ೫ ಕತೆಗಳ ಸಂಗ್ರಹ **ಬೆಲೆ ೦—೬—೦**

ಬಹಿರಂಗವಾಗಿ ಅಲ್ಲವಾದರೂ ಅಂತರಂಗವಾಗಿ ನೋಡತಕ್ಕ

ಆರ್ಟ್ ಚಿತ್ರಗಳು

ಹಲವಾರು ಸುಂದರಿಯರ ನೈಜಚಿತ್ರಗಳ ಕಟ್ಟು **ಬೆಲೆ ೦—೬—೦**

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಳು ತ್ತಿದೆ ಎಂಬುದನ್ನು ವಿವರಿಸುವ ಗ್ರಂಥ **ಬೆಲೆ ೧—೮—೦**

ಎಲ್ಲರ್ಕೂ ಟ ಖ ಪ್ರತ್ಯೇಕ ಕೆಲವೇ ಪ್ರತಿಗಳು ಉಳಿದಿವೆ

ಬರೆಯಿರಿ — **ಅಂತರಂಗ ಕಾರ್ಯಾಲಯ, ಉಡುಪಿ**

(ಉಡುಪಿಯ ನವಭಾರತ ಪುಸ್ತಕ ಭಂಡಾರದಲ್ಲಿಯೂ ದೊರೆಯುತ್ತವೆ)

EDITED PRINTED & PUBLISHED BY K H. SHETTY AT THE NAVAYUGA PRESS UDIPI, S. INDIA

Regd. No. M. 3618.

ವಾರ್ಷಿಕ ಚಂದಾ ರೂ. 4—0—0 ಬಿಡಿ ಸಂಚಿಕೆ 0—1—6.

Estd. 1921 ಸ್ಥಾಪನೆ.

ದಿ ಜುಪಿಟರ್
ಜನರಲ್ ಇನ್ಶೂರೆನ್ಸ್
ಕಂಪೆನಿ, ಲಿ., ಬೊಂಬಾಯಿ.
ವಿಮೆಯುಳ್ಳವರಾಗಬೇಕೆ?
ಏಜಂಟರಾಗುವಿರಾ?
—ಹಾಗಾದರೆ ಕೂಡಲೇ—
ಪಿ. ಡಿ. ನಾಯಕ್, ಬಿ.ಎ.
ದಕ್ಷಿಣ ಕನ್ನಡದ ಚೀಫ್ ಏಜೆಂಟ್,
—ಇವರಿಗೆ ಬರೆಯಿರಿ—
1 ಕೋಟಿಗೆ ಮಿಕ್ಕಿ ವ್ಯವಹಾರ!
ಈ ವರುಷವೇ ರಜತೋತ್ಸವ!
The Jupiter General Insurance Company Ltd.

ನವಯುಗ

NAVAYUGA

ವರ್ಷ ೨೪ ವಾರ ೯ | ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. Founder SRI A. B. SHETTY. | Vol. 24 No. 9

ಉಡುಪಿ • 2—11—1944 • ಮಂಗಳೂರು.

ಅಂತರಂಗ
ಅಖಿಲ ಕರ್ನಾಟಕದ ಹೊಸ
ಮಾದರಿಯ ಸಚಿತ್ರ
ವಿನೋದ ವಾರ ಪತ್ರಿಕೆ.
ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ. 0—1—6

ಬೇಕಾಗಿದ್ದಾರೆ
ನವಯುಗಕ್ಕೆ ವಾರವಾರವೂ ನಿಷ್ಪಕ್ಷಪಾತವಾಗಿ ಸುದ್ದಿಗಳನ್ನು ಕಳುಹಿಸುವ ಬಾತ್ಮಿದಾರರು—ಬಾತ್ಮಿದಾರರಿಲ್ಲದ್ದಲ್ಲಿಗೆ—ಬೇಕಾಗಿದ್ದಾರೆ. ಶರ್ತಗಳಿಗೆ ಬರೆಯಿರಿ.
ಮೆನೇಜರ್,
ನವಯುಗ, ಉಡುಪಿ.

Inferior Parental Longevity-

This has a correlation to the expectation of life of the offspring.

Therefore a judicious selection of marriage partners must go with better health and sanitation, etc. to improve the expectation of life of the generation to come.

THE CANARA MUTUAL ASSURANCE CO., LTD.,
UDIPI (S India)

ಅಮೃತಾಂಜನ
ತಲೆನೋವು, ಶಿರೋವೇದನೆ, ಉಳುಕು, ಕೀಲ್ನೋವು, ಭುಜ, ಹಲ್ಲು ವೇದನೆಗಳು ಎದೆನೋವು, ಗಾಯಗಳು ಬಾತು ಕೊಳ್ಳುವಿಕೆ, ಚೇಳು ವಿಷ ಮುಂತಾದ ಎಲ್ಲ ವಿಧ ರೋಗಗಳಿಗೂ ಸಿದ್ಧ ಔಷಧ, ಹುಲುಕಡ್ಡಿ ಮುದ್ದು ಸಹ ಸಮ್ಮೆಲ್ಲಿ ಸಿಕ್ಕುತ್ತದೆ
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

Transact with
The Vijaya Bank Ltd.
H. O. MANGALORE.
Branches all over the District and in Bombay city,
For all kinds of Banking business
ದಿ ವಿಜಯ ಬೇಂಕ್
ಲಿಮಿಟೆಡ್,
ಹೆಡ್ ಆಫೀಸು: ಮಂಗಳೂರು.
ಜಿಲ್ಲೆಯ ಎಲ್ಲಾ ಕಡೆಗಳಲ್ಲಿ ಮತ್ತು ಮುಂಬಾಯಿ ನಗರದಲ್ಲಿ ನಮ್ಮ ಶಾಖೆಗಳು
ಎಲ್ಲಾ ತರದ ಬೇಂಕಿಂಗ್ ವ್ಯವಹಾರಗಳು ನಡೆಸಲ್ಪಡುವುದು.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.
ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪ್ಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ, ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.
The Moolky Bank Ltd.,
Moolky, S. K.

ENGLISH MADE EASY
ಇಂಗ್ಲಿಷ್ ಏನೂ ತಿಳಿಯದವರು 'ಸುಲಭದಲ್ಲಿ ಇಂಗ್ಲಿಷ್' ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೇ ಕಲಿತುಕೊಳ್ಳಬಹುದು.
ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು
ಸುಲಭದಲ್ಲಿ ಇಂಗ್ಲಿಷ್
ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.
ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ
ಬೆಲೆ ಬರೇ ರೂ. 1—4—0 ರೂ 1-8-0ನ್ನು ಮನಿ ಯಾರ್ಡರು ಮೂಲಕ ... ಕಳುಹಿಸಲು ಸಾಕು.
ನ ವ ಭಾ ರ ತ ಪು ಸ್ತ ಕ ಭಂ ಡಾ ರ,
ರಿಜಿಸ್ಟರ್ಡ್ ಪಬ್ಲಿಷರ್ಸ್ ಎಂಡ್ ಬುಕ್ ಸೆಲ್ಲರ್ಸ್,
ಉಡುಪಿ, ದ. ಕ.
ನಮ್ಮಲ್ಲಿ ಸಿಗುವ ಪುಸ್ತಕಗಳ ಕೆಟಲಾಗಿಗೆ 0-2-0 ಸ್ಟಾಂಪಿನೊಂದಿಗೆ ಬರೆಯಿರಿ.

ಕ್ರೌನ್
ರಬ್ಬರ್ ಸ್ಟಾಂಪ್ ಕಂಪೆನಿ
18 ಬಲ್ಮಠ ರಸ್ತೆ, ಮಂಗಳೂರು
ರಬ್ಬರ್ ಮೊಹರು ಫೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.
Crown Rubber Stamp Co.
18 Balmat Road, MANGALORE
Approved firm by the Govt. of Mysore. Certified by the Agent of the Govt. of India in Ceylon. Est. 1906

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ
ಬಾಲಚಂದ್ರ
ಇದೀಗ ಮೂರನೇ ಸಂಪುಟ ಆರಂಭವಾಗಿದೆ
ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ
ವಾರ್ಷಿಕ ಚಂದಾ
ರೂ. 1—8—0 ಮಾತ್ರ
ಹೆಚ್ಚಿನ ವಿಚಾರಕ್ಕೆ ಬರೆಯಿರಿ
ಬಾಲಚಂದ್ರ, ಉಡುಪಿ.

ಮುಟ್ಟುಗುಡಿಕೆ
ಹಲವಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ—'ಕುಮಾರಿ' (Govt Regd) ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ 3/- ಕೈಮೀರಿದ ಕೇಸುಗಳಿಗೆ ರೂ.5, (ವಿ.ಪಿ.12 ಆಣೆ ಅಲಾಯಿದ) Mrs P. DEVEE, 1, D. S. (K) Tollygunge, Calcutta.
ಸ್ಟಾಕಿಸ್ಟ್: ಫ್ರೆಂಡ್ಸ್ ಪಾಪ್ಯುಲರ್ ಸ್ಟೋರ್ಸ್, ಮಂಗಳೂರು.

CO-OPERATION - - -
Life Assurance is the business based on the idea of mutual co-operation. By diverting a small portion of one's earning for paying premiums, we co-operate for the good of the family and safeguard the education of children.

Let us assist you in taking out a Policy under the plan best suited to you. Write now to:—

KOCHIKAR BROTHERS LTD.
Chief Agents for South India
THE BOMBAY LIFE ASSCE. CO., LTD.
[Estd 1908]
The "Bombay Life" Bldg., UDIPI S. K.

Offices and Agencies throughout South India.

Decorate your home with
Life-like Oil Painting
of those dear and near to you
M. S. Shirale,
MODERN STUDIO,
UDIPI.


ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಚಿಲ್ಲರೆಯಾಗಿಯೂ ದೊರೆಯುತ್ತವೆ
ಕಲ್ಯಾಂಜಿ ವ್ಯಾಸಾಚಾರ್ಯರ್,
ರಥಬೀದಿ, ಉಡುಪಿ.

CHAMPAE'S
Snow & Castrex
Sole Distributers for (India.)
Sukhananda Stores
Santhekatte, UDIPI, S. K.

'ಕ್ಷಮಿಸಿರಿ. ನಾನು ಇಲ್ಲಿ ಕುಳಿತುಕೊಳ್ಳಬಹುದೇ?' ಎಂದು ಅವನು ಕ್ಷಮಾಯಾಚನೆಯ ಸ್ವರದಲ್ಲಿ, ನನ್ನ ಕಾಲುಗಳ ಕಡೆಗೆ ತೋರಿಸುತ್ತಾ ಕೇಳಿದನು.

ನಾನು, ಕೂರುತ್ತಿದ್ದ ನನ್ನ ಕಣ್ಣುಗಳನ್ನು ತಟ್ಟನೆ ತೆರೆದು, ಒಂದಿಷ್ಟು ಮುನಿಸಿನಿಂದ ಅವನ ಕಡೆಗೆ ನೋಡಿದೆನು. ರೈಲಿನಲ್ಲಿ ಪ್ರಯಾಣಮಾಡುವಾಗ, ತನ್ನ ಸ್ಥಳವನ್ನು ಮತ್ತೊಬ್ಬರು ಆಕ್ರಮಿಸುವುದೆಂದರೆ ಎಲ್ಲರಿಗೆ ಸಿಟ್ಟು ಬಂದೇ ಬರುವುದು. ನನಗೂ ಹಾಗಾಯಿತು ನಿಜ. ಆದರೆ ಅವನ ಆ ನವತಾರುಣ್ಯ, ವಿನಯ-ಸಂಪತ್ತಿಗೆ ಮನಸೋತೆ. 'ಆಗದು' ಎಂದು ಹೇಳಲು ನನ್ನ ಮನಸ್ಸೊಪ್ಪಲಿಲ್ಲ.

'ಕುಳಿತುಕೊಳ್ಳಿ' ಎಂದು ಹೇಳುತ್ತಾ ನೀಡಿದ್ದ ಕಾಲುಗಳನ್ನು ಮಡಚಿ, ನಾನು ಅವನಿಗೆ ಜಾಗಮಾಡಿಕೊಟ್ಟೆ. 'ಯಾವ ಸ್ಟೇಷನಿನಿಂದ?'

'ಆಲಿಘರ್'

'ನಿಮಗೆಲ್ಲಿಗೆ.......'

'ಪಾಟ್ನಕ್ಕೆ'

'ಓಹೋ! ಪಾಟ್ನವಿನ್ನೂ ತುಂಬಾ ದೂರವಿದೆ. ನಾನು ಕೂಡ ಹೋಗುವುದೂ ಅಲ್ಲಿಗೇನೆ. ನಾಳೆ ಮುಂಜಾನೆ ಆರಕ್ಕಿಂತ ನೊದಲು ನಾನು ಅಲ್ಲಿಗೆ ಮುಟ್ಟುವಂತೆ ಇಲ್ಲ- ಅಂದರೆ ಇನ್ನೂ ಇಪ್ಪತ್ತಾರು ತಾಸಿನ ಪ್ರಯಾಣವಿದೆ ಮಧ್ಯದಲ್ಲಿ, ಈ ಹಾಳು ರೈಲು ಎಲ್ಲಿ ನಿಲ್ಲುತ್ತದೋ ಎಂದು ಸಂದೇಹ .....ವಿದ್ಯಾರ್ಥಿಗಳೆಂದು ತೋರುತ್ತೆ. ಅಲ್ಲವೇ' ಕೇಳಿದೆ ನಾನು

ಅವನು ಸ್ನೇಹಪೂರ್ಣ ಮುಗುಳು ನಗುವೊಂದನ್ನು ನಕ್ಕ. 'ಅಲ್ಲ. ನಾನೊಬ್ಬ ವಕೀಲ.' ಎಂದ.

'ಆದರೆ ಎಷ್ಟು ಎಳೆಯವರಾಗಿ ತೋರುತ್ತೀರಿ!.......ತಮಗೆ ಪ್ರಾಯ?'

'ಇಪ್ಪತ್ತೈದು.-ಎಂದರೆ ಕಡಿಮೆಯಲ್ಲವಷ್ಟೆ! ನಮ್ಮ ಬಿಹಾರಿಗಳ ಅವಸ್ಥೆಯೇ ಹಾಗೆ. ಪ್ರಾಯ ಹೆಚ್ಚಾದರೂ ಸಣ್ಣವರಂತೆಯೇ ಕಾಣುತ್ತಾರೆ ನಿಮಗೂ ಹಾಗೆ ತೋರಿರಬಹುದು.'.

'ಛೆ, ಛೆ, ನಿಮ್ಮ ಪ್ರಾಯಕ್ಕೆ ತಕ್ಕಷ್ಟೇ ನೀವು ಬೆಳೆದಿದ್ದೀರಿ. ನಿಮ್ಮ ವಿಷಯದಲ್ಲಿ ಅದು ಸರಿಯಲ್ಲ' ಎಂದು ನಾನು ವಾದಿಸಿದೆ

'ಇಲ್ಲ ನೋಡಿ. ಅದು ಬಿಹಾರಿಗಳೆಲ್ಲರ ಹುಟ್ಟುಗುಣ. ನಾನು ಆದರಿಂದ ಹೇಗೆ ಪಾರಾಗಬಹುದೆನ್ನುತ್ತೀರಿ!'

'ನಿಮ್ಮ ಸಾಮಾನೆಲ್ಲ ಎಲ್ಲಿದೆ?'

'ಆಚೆಯ ಹೆಂಗಸರ ಡಬ್ಬಿಯಲ್ಲಿದೆ. ಇಲ್ಲಿ ಮಲಗಿಕೊಳ್ಳಲಿಕ್ಕೆ ಅವಕಾಶಸಿಗದೆಂದು ನನಗೆ ಖಂಡಿತವಾಗಿತ್ತು. ಆದುದರಿಂದ ನಾನು ಹಾಸಿಗೆಯನ್ನು ಕೂಡ ತಂದಿಲ್ಲ.

ನಾನು ಆ ಹೊಸ ಗೆಳೆಯನ ವಿಷಯದಲ್ಲಿ ಕನಿಕರಪಟ್ಟೆ. ಅವನಿಗೆ ಒರಗಲು ಸ್ಥಳ, ಹೊದೆಯಲಿಕ್ಕೆ ಒಂದು 'ರಗ್ಗು' ಕೊಟ್ಟೆ. ಅವನು ನನ್ನ ಉಪಕಾರವನ್ನು ಸ್ವೀಕರಿಸಿದ. ನಾವಿಬ್ಬರೂ ಒಂದೇ ಸೀಟಿನಲ್ಲಿ- ಅಲ್ಪಸ್ವಲ್ಪ ಮುದುಡಿಕೊಂಡಾದರೂ-ಸಾಕಷ್ಟು ಸುಖವಾಗಿಯೇ ಮಲಗಿಕೊಂಡು ಆ ರಾತ್ರಿಯನ್ನು ಕಳೆದೆವು

ಮರುದಿನ ಬೆಳಗ್ಗೆ, ನಡುವಿನ ಒಂದು ಒಂದು ಸ್ಟೇಷನಿನಲ್ಲಿ, ನಾನು ಕೆಳಗಿಳಿದಾಗ, ಅವನು ನಮ್ಮ ಆಚೆಯ ಡಬ್ಬಿಯಲ್ಲಿ ಕುಳಿತಿದ್ದ ಓರ್ವ ತರುಣಿಯೊಂದಿಗೆ ಮಾತಾಡುತ್ತಿದ್ದುದನ್ನು ಕಂಡೆ. ಆ ತರುಣಿ

ಯಾರು? ಅವಳು ಹೇಗಿರಬಹುದು?ಎಂದು ನೋಡಬಯಸಿ, ಟೀ ಹುಡುಕುವವನಂತೆ ನಟಿಸುತ್ತಾ ನಾನು ಹಲವು ಸಲ ಅವರ ಆಚೆ ಈಚೆ ಸುಳಿದೆನು. ನನ್ನನ್ನು ಕಂಡು ಅವನು ಕರೆದಾನು. ಅವಳಾರೇ ಇರಲಿ— ಆಕೆಯ ಪರಿಚಯ ಮಾಡಿಸಿಕೊಟ್ಟಾನು-- ಎಂಬ ನಿರೀಕ್ಷೆಯಿಂದಲೇ ನಾನು ಹೀಗೆ ಮಾಡಿದೆನೆಂದು ಒಪ್ಪುತ್ತೇನೆ. ಅವಳೋರ್ವ ಅತ್ಯಂತ ರೂಪವತಿಯಾದ ತರುಣಿಯಾಗಿದ್ದಳು. ನಿದ್ದೆ ಬಿಟ್ಟುದರಿಂದ ಒಂದಿಷ್ಟು ಕಳೆಗುಂದಿದ್ದರೂ ಅವಳ ಮುಖವು ಬಲು ಆಕರ್ಷಣೀಯವಾಗಿತ್ತು. ಆಕೆಯ ಕಣ್ಣುಗಳಲ್ಲಿ ಒಂದು ವಿಶೇಷ ತರದ ಕಳೆಯಿತ್ತು. ಆಕೆಯ ಆ ವಿಶಾಲನಯನಗಳಲ್ಲಿ ಮುಗುಳು ನಗೆ ತುಂಬಿತ್ತು. ಆದರೆ ನನ್ನ ಆಸೆ ನನ್ನಲ್ಲೇ ಉಳಿಯಿತು ಅವನು ನನ್ನನ್ನು ಕರೆಯಲೂ ಇಲ್ಲ; ಆಕೆಯ ಪರಿಚಯವನ್ನು ಮಾಡಿಕೊಡಲೂ ಇಲ್ಲ. ಕಟ್ಟಕಡೆಗೆ ಬೇಸತ್ತು, ನಾನು 'ಕೆಲ್ನರ್' ಹುಡುಗನೊಬ್ಬನಿಂದ ಒಂದು ಕಪ್ ಟೀ ಪಡೆದು, ಅಷ್ಟರಿಂದಲೇ ಸಂತುಷ್ಟನಾಗಿ ಕುಳಿತುಕೊಂಡೆ.

ಅವನು ಮರಳಿ ನನ್ನ ದಬ್ಬಿಗೆ ಬಂದೊಡನೆ 'ನೀವೂ ಒಂದಿಷ್ಟು ಕುಡಿಯಿರಿ' ಎಂದು ನಾನು ಟೀ ಕೊಟ್ಟೆ. ಅಷ್ಟರಲ್ಲಿ ರೈಲು ಪುನಃ ಹೊರಟಿತು.

'ಥ್ಯಾಂಕ್ಸ್. ಬರೇ ಎರಡು ಚಮಚ ಸಾಕು....ಅಬ್ಬಾ ದೇವರೆ! ಈ ಡಬ್ಬಿಯಲ್ಲಿ ಎಷ್ಟು ಜನರಿದ್ದೇವೆ ನೋಡಿ'

'ಇಡಿ ಬಂಡಿಯೇ ತುಂಬಿಹೋಗಿದೆ.... ನಿಮ್ಮ ಹೆಂಡತಿ ಸುಖವಾಗಿರುವರಷ್ಟೆ!'

ಯಾರವಳು?

ಅನುವಾದಕರು.
ಶ್ರೀ. ಕೆ. ವಿ. ಶೆಣ್ಯೆ, ಬಿ. ಎ. ಎಲ್. ಟಿ.,
: : ಉಡುಪಿ : :

●

'ಹಂ. ಸೌಖ್ಯದಲ್ಲಿಯೇ ಇದ್ದಾಳೆ... ಆದರೆ ಅವಳು ನನ್ನ ಹೆಂಡತಿಯಲ್ಲ' ಎಂದು ಅವನೆಂದ.

'ತಪ್ಪಾಯಿತು, ಕ್ಷಮಿಸಿರಿ' ಎಂದು ನಾನು ಗೊಣಗುಟ್ಟುತ್ತಾ, ಟೀ ಕಪ್ಪಿನಲ್ಲಿ ನನ್ನ ಮೂಗನ್ನು ಮರೆಸಿದೆ.

ಆ ತರುಣಿ ಯಾರು? ಆಕೆಗೂ ಅವನಿಗೂ ಏನು ಸಂಬಂಧ? ಎಂಬುದನ್ನು ತಿಳಿಯುವ ಕುತೂಹಲ ನನ್ನಲ್ಲಿ ಬಲವಾಗಿತ್ತು. ಅವನೊಡನೆ ನೇರಾಗಿ ಕೇಳುವ ಧೈರ್ಯವಿದ್ದರೆ ಆಗುತಿತ್ತು ಎಂದು ನಾನೆಣಿಸಿದೆ. ಆದರೆ ಆ ಯುವಕನ ಸಂಗಾತಿಯನ್ನು ಕುರಿತು ಅಷ್ಟು ಶ್ರದ್ಧೆ ತೋರಿಸುವುದು ಶಿಷ್ಟಾಚಾರವಲ್ಲವೆಂದು ನನಗೆ ತೋರಿತು. ಒಂದು ವೇಳೆ ನಾನು ಕೇಳಿದರೆ 'ಇವನಿಗೇಕೆ ಇಷ್ಟು ಕುತೂಹಲ?' ಎಂದು ಅವನು ಎಣಿಸುವುದೂ ಸ್ವಾಭಾವಿಕವಷ್ಟೆ! ಆಕೆಯ ವಿಷಯವನ್ನು ತಿಳಿಯಲು ನನ್ನ ಮನಸ್ಸು ತುಂಬಾ ಲವಲವಿಸುತ್ತಿತ್ತೆಂಬುದು ನಿರ್ವಿವಾದದ ಮಾತು. ಅಂತೂ ಆಕೆ ಅವನ ಹೆಂಡತಿಯಲ್ಲವೆಂದಾಯಿತು. 'ಅವಳ ಮಾಹಿತಿಯನ್ನು ಪರೋಕ್ಷವಾಗಿ ಪಡೆಯೋಣ' ಎಂದು ನಾನು ನನ್ನಲ್ಲೇ ನಿರ್ಧರಿಸಿದೆ.

'ನೀವು ಆಲಿಘರದಿಂದ ಬಂದುದಲ್ಲವೆ?'

'ಹೌದು.'

'ಅಲ್ಲೇನೋ ಕೆಲಸವಿದ್ದಿರಬೇಕು'

'ಉಹುಂ. ಕೆಲಸವಷ್ಟೇನೂ ಇರಲಿಲ್ಲ.'

'ಪ್ರಾಯಶಃ ಸಂಬಂಧಿಕರನ್ನು ಕಾಣಲೆಂದು ಹೋಗಿದ್ದಿರಬಹುದು'....

'ಇಲ್ಲಪ್ಪ. ಹಾಗೇನೂ ಇಲ್ಲ.'

ಅಯ್ಯೋ ದೇವರೆ! ಎಂತಹ ಹಟವಾರಿಯಪ್ಪಾ. ಬಾಯಿಗೆ ಇಕ್ಕುಳ ಹಾಕಿದರೂ ಬೇಕಷ್ಟೇ ಮಾತು!

'ಮದುವೆಗಿರಬಹುದು'.

ಅದಕ್ಕೆ ಅವನು ತಲೆದೂಗಿದ.

'ಹೌದು ಈಗ ಮದುವೆಗಳ ಕಾಲ, ಅಲ್ಲವೇ?'

ಅವನು ಮತ್ತೊಮ್ಮೆ ತಲೆಯಲ್ಲಾಡಿಸಿದ.

'ಹಾಗಾದರೆ ನೀವು ಮತ್ತು ನಿಮ್ಮ ತಂಗಿ ಮದುವೆಗೆ ಹೋದವರು ಮರಳುತಿದ್ದೀರಿ....ಅಲ್ಲವೇ?'

'ಹೌದು. ನಾವೊಂದು ಮದುವೆಯಿಂದ ಮರಳುತಿದ್ದೇವೆ. ಅವಳು ನನ್ನ ತಂಗಿಯಲ್ಲ.'

ಪುನಃ 'ಓಹೊ. ಕ್ಷಮಿಸಿರಿ' ಎಂದೆ ನಾನು.

ಆಕೆಯು ಅವನ ತಂಗಿಯಲ್ಲವೆಂದಾಯಿತು. ಹೆಂಡತಿಯಂತೂ ಅಲ್ಲ. ಹಾಗಾದರೆ ಮತ್ತಾರಿರಬಹುದು? ನನ್ನಲ್ಲಿ ಕುತೂಹಲವು ಇಮ್ಮಡಿಯಾಯಿತು. ಅವಳಾರೆಂದು ತಿಳಿಯದೆ ಹೋದರೆ ನನಗೆ ಹುಚ್ಚು ಹಿಡಿಯುವುದು ಖಂಡಿತವೆಂಬಂತೆ ತೋರಿತು. ಈ ವಿಷಯದಲ್ಲಿ ಎಂತಹ ಗುಟ್ಟಪ್ಪಾ! ನಿಜಾರ್ಥಕ ಮಾಹಿತಿಯನ್ನೇ ಅವನೇಕೆ ಕೊಡಬೇಕು? ಹೆಂಡತಿಯಲ್ಲವಂತೆ. ತಂಗಿಯಲ್ಲವಂತೆ 'ಯಾರು ಹೌದೆಂ'ದು ಬಾಯಿಬಿಟ್ಟು ಹೇಳಲಿಕ್ಕೇನು ಸಂಕಟ?

'ನಿಮ್ಮ ಸಂಸ್ಥಾನದಲ್ಲಿ ನೇಕಡಾ ಎಷ್ಟು ಮಂದಿ ಸ್ತ್ರೀಯರು ಶಿಕ್ಷಿತರಿದ್ದಾರೆ? ನಿಮ್ಮ....ನಿಮ್ಮ....ಆ....ಚಿಕ್ಕಪ್ಪನ ಮಗಳು ....ಒಂದು ಆಂಗ್ಲ ಪತ್ರಿಕೆ ಓದುತಿದ್ದುದನ್ನು ನಾನು ಕಂಡೆ.' ಎಂದು ಮಗದೊಮ್ಮೆ ಧೈರ್ಯ ತಂದುಕೊಂಡು ಪ್ರಶ್ನಿಸಿಯೇ ಬಿಟ್ಟೆ.

'ಸರಿಯಾಗಿ ನೇಕಡಾ ಎಷ್ಟೆಂದು ನನಗೆ ಗೊತ್ತಿಲ್ಲ. ಅದು ಬಹಳ ಕಡಿಮೆಯಿರಬೇಕು. ನಿಜ, ಆದರೆ ಅವಳು ನನ್ನ ಚಿಕ್ಕಪ್ಪನ ಮಗಳಲ್ಲ,' ಎಂದಿತು ಆ ವ್ಯಕ್ತಿ.

ಪುನಃ 'ಓಹೋ ಕ್ಷಮಿಸಿರಿ.' ಎಂದು ಸುಮ್ಮಗಾದೆ ನಾನು.

ಹೀಗೆ ಒಂದೊಂದೇ ಸಂಬಂಧವನ್ನು ಹೊರಹಾಕಿ ತಿಳಿಯುವುದೊಂದಲ್ಲದೆ ಆಕೆಯ ಮಾಹಿತಿಯನ್ನು ಪಡೆಯುವ ಬೇರಾವ ಉಪಾಯವೂ ನನಗೆ ಕಾಣಲಿಲ್ಲ ಆದರೆ ಹೀಗೆ ಎಷ್ಟೆಂದು ಸಂಬಂಧಗಳನ್ನು ಕೇಳುತ್ತ ಹೋಗುವುದು! ನನಗೆ ತುಂಬಾ ಸಿಟ್ಟು ಬಂತು. ಒಬ್ಬ ಸ್ತ್ರೀ ಮತ್ತೊಬ್ಬ ಪುರುಷನೊಳಗೆ ಇರಬಹುದಾದ ಎಲ್ಲಾ ಸಂಬಂಧಗಳನ್ನು ಒಂದೊಂದಾಗಿಯೇ ಅಲ್ಲವೆಂದು ಹೇಳಿಸಿ, ಈ ರೀತಿಯಲ್ಲಿ ನಿಜವಾದ ಸಂಬಂಧವನ್ನು ತಿಳಿಯುವುದೆಂದರೆ ಒಬ್ಬನ ಆಯುಷ್ಯ ಸಾಕಾದೀತೆ? ಆದರೂ ಹಿಡಿದ ಪ್ರಯತ್ನ ಬಿಡಲಾರೆನೆಂದು ನಾನು ಪಣತೊಟ್ಟೆ.

ಅನಂತರದ ಸ್ಟೇಷನಿನಲ್ಲಿ, ನಾನು ನನ್ನ ತಿಂಡಿಯ ಬುಟ್ಟಿಯನ್ನು ತೆರೆದು, ನನ್ನ ಮುಂದಿದ್ದ ವೃತ್ತಪತ್ರಿಕೆಯ ಹಾಳೆಯ ಮೇಲೆ ಕೆಲವು ತಿಂಡಿ ತಿನಸುಗಳನ್ನು ಸುರಿದೆ.

'ನೀವೂ ಸ್ವಲ್ಪ ತೆಗೆದುಕೊಳ್ಳಿ' ಎಂದು ಅವನಿಗೆ ಆಹ್ವಾನವಿತ್ತೆ.

'ಆಗಲಿ. ತುಂಬಾ ಥ್ಯಾಂಕ್ಸ್' ಎಂದು ಅವನೆಂದ.

'ಒಂದಿಷ್ಟನ್ನು ನಿಮ್ಮ ಆ....ಸೊಸೆಗೆ.... ಕೊಂಡುಹೋಗಿ ಕೊಡಬಹುದಲ್ಲ.'

(೧೨ನೇ ಪುಟ ನೋಡಿರಿ)

Navabharat Book Depot Udipi South India Navabharat Book Depot Udipi, South India

ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು.

		ರೂ. ಆ. ಮೂರು ಪ್ರಹಸನಗಳು	0-14	ವಿಶ್ವಭೂಷಿ	0-2
ಸುಲಭದಲ್ಲಿ ಇಂಗ್ಲಿಷ್	1-1	ಸ್ವತಂತ್ರ ಜೀವನೋಪಾಯ	0-3	ವತ್ಸಲಾ	0-8
ಯುವಕರಿಗೆ ಮತ್ತು ವಯಸ್ಕರಿಗೆ		ಪುರುಷವಧು	0-4	● ಕವಿತೆಗಳು.	
ಸುಲಭವಾಗಿ ಇಂಗ್ಲಿಷನ್ನು ಅನ್ಯ		ಹೆಂಡ್ತಿ ಗಂಡನಾದರೆ	0-4	ಕಾವ್ಯಸಾಮ್ರಾಜ್ಯ	0-12
ಸಹಾಯವಿಲ್ಲದೆ ಕಲಿಸುವ ಇಂಗ್ಲಿಷ್ ಸ್ವಯಂಬೋಧಿನಿ.		● ಕತೆಗಳು		ಮುಗುಳು	0-3
		ನಗೆನೋಟಗಳು	0-14	ಪ್ರೇಮಮುಖಿ	1-0
● ನಾಟಕಗಳು		ಅನ್ನದೇವರು		ಪುರಂದರದಾಸರ ಕೀರ್ತನೆ	1-0
ಪ್ರೇಮವಿಜಯ	0-12	ಮತ್ತು ಇತರ ಕಥೆಗಳು	1-0	ಭಗವದ್ಗೀತಾ (ಮೂಲ-ಸಿಲ್ಕ್ ಬೈಂಡು)	1-4
ದೇಶಭಕ್ತ	1-4	ಭಾರತೀಯ ಕತೆಗಳು	0-14	● ಇತರ ಪುಸ್ತಕಗಳು	
ವ್ಯಭಿಚಾರಿಣಿ ಯಾರು	0-12	ನಂದಾದೀಪ	0-10	ಮುಂದಿನ ದೇವರು	0-3
ಕುಶಲವ	0-5	ನಾಡಕತೆಗಳು	0-3	ರಾಷ್ಟ್ರಸಭೆಯ ಇತಿಹಾಸ	2-8
ಸಂಶಯ ಪಿಶಾಚಿ	0-8	ಕಂಡೂಕಾಣದ ನೋಟಗಳು	-08	ಬಾಲವಾಙ್ಮಯ	0-3
ರಂಗಭೂಮಿ	0-8	ನಾರೀಹೃದಯ	0-14	ಮಿತ್ರಸಂಹಿತ	0-8
ಪ್ರಕಾಶ	1-12	ಅಂತರಂಗದ ಕತೆಗಳು	0-10	ನಿಶ್ಚಯಜ್ಞಾನ	0-8
ಧರ್ಮಸಂಕಟ	0-4	ಪ್ರೇಮಪ್ರವಾಹ	0-6	ಪಾಪಪೂರಿತ ಪಟ್ಟಣಗಳು	1-8
ಆರೋಗ್ಯ ಪ್ರತಾಪ	0-12	ಆಹುತಿ ಇತ್ಯಾದಿ ಕತೆಗಳು	0-12	ಚಿಗುರು	0-6
ಪಂಚಾರತಿ	0-6	ಲೀಲಾಮುದ್ರೆ	0-6	ಇತರ ಪುಸ್ತಕಗಳ ಕಟಲಾಗಿಗೆ	
ಪ್ರತೀಕಾರ	0-6	● ಕಾದಂಬರಿಗಳು			
ಸೇವಾಪಥ	0-8	ಸನ್ಯಾಸಿಯ ಸೋಗಿನಲ್ಲಿ	0-8	0-2-0 ಸ್ಟಾಂಪಿಟ್ಟು ಬರೆಯಿರಿ.	

ನವಭಾರತ ಪುಸ್ತಕ ಭಂಡಾರ, ರಿಜಿಸ್ಟರ್ಡ್ ಪಬ್ಲಿಷರ್ಸ್, ಉಡುಪಿ. ದ. ಕ.

ಅಹಮ್ಮದಾನಗರ ಕೋಟೆಯಲ್ಲಿ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯ ಸದಸ್ಯರೊಡನೆ ಬಂಧನದಲ್ಲಿದ್ದು ಇತ್ತೀಚೆಗೆ ಬಿಡುಗಡೆ ಹೊಂದಿರುವ ಡಾ. ಸಯ್ಯದ್ ಮಹಮ್ಮದರು ಅಲ್ಲಿ ಬಂಧನದಲ್ಲಿದ್ದಾಗ ಕಾರ್ಯಕಾರಿ ಸದಸ್ಯರಿಗೆ ತಿಳುಹಿಸದೆ ತಾನೆ ಸ್ವತಂತ್ರವಾಗಿ ವೈಸರಾಯರಿಗೊಂದು ಪತ್ರ ಬರೆದಿದ್ದರು. ಅದನ್ನೀಗ ಪ್ರಕಟಿಸಿದ್ದಾರೆ. ಅದಕ್ಕೆ ಪೀಠಿಕೆಯಾಗಿ ತನ್ನದೊಂದು ಹೇಳಿಕೆಯನ್ನೂ ಕೊಟ್ಟಿದ್ದಾರೆ.

ಡಾ. ಸಯ್ಯದ್ ಮಹಮದರ ಪತ್ರ

ಸಯ್ಯದರ ಹೇಳಿಕೆಯ ಸಾರಾಂಶ—

ಗಾಂಧೀಜಿಗಳು ಜೀವಿಸುವಾಗಲೇ ಭಾರತ ಪ್ರಶ್ನೆ ತೀರ್ಮಾನಿಸುವುದು ಲೇಸು. ಲಂಡನಿನಲ್ಲಿ ನಾನು ವಿದ್ಯಾರ್ಥಿಯಾಗಿದ್ದಾಗ ನನಗೆ ಇಂಗ್ಲಿಷ್ ಜನತೆಯ ಬಗೆಗೆ ಒಂದು ಆದರ ವಿಶ್ವಾಸಗಳುಂಟಾದುವು. ಆ ಆದರ ವಿಶ್ವಾಸಗಳು ಇನ್ನೂ ನನ್ನಲ್ಲಿವೆ. ಯುದ್ಧದ ಸಂಕಟದಲ್ಲಿರುವ ಅವರೊಡನೆ ಸಹಕರಿಸಬೇಕೆಂಬ ಒಲವು ನನ್ನದು. ಆದ ಕಾರಣ ಯೋಧ ವೈಸರಾಯರಾದ ಲಾರ್ಡ್ ವೇವೆಲ್ಲರ ಹೃದಯವನ್ನು ಪರಿವರ್ತಿಸಿ ಸದ್ಯದ ರಾಜಕೀಯ ಬಿಕ್ಕಟ್ಟನ್ನು ಬಗೆಹರಿಸಬಹುದೆಂಬ ಆಶೆಯಿಂದ ನಾನು ಆ ಪತ್ರವನ್ನು ಬರೆದೆನಲ್ಲದೆ ನನ್ನ ಬಂಧವಿಮೋಚನೆಯಾಗಬೇಕೆಂಬ ದೃಷ್ಟಿಯಿಂದಲ್ಲ. ಆದರೆ ನಾನು ಆ ಪತ್ರ ಬರೆಯುವಾಗ ಕಾಂಗ್ರೆಸು ಕಾರ್ಯಕಾರಿಯವರು ನನ್ನೊಡನಿದ್ದರೂ ಅವರಿಗೆ ಆ ವಿಷಯವನ್ನು ನಾನು ತಿಳಿಸಲಿಲ್ಲ.

ಭಾರತಕ್ಕೆ ಸ್ವಾತಂತ್ರ್ಯಗಳಿಸಬೇಕೆಂಬುದು ನನ್ನ ದೃಢನಿರ್ಧಾರ. ನನಗೆ ಪೂಜ್ಯಭಾವವಿರುವ ಸಮಾಧಿಯ ಮುಂದೆ ಈ ಬಗೆಗೆ ನಾವು ಮೂವರು ಹರೆಯದಲ್ಲೇ ಪ್ರತಿಜ್ಞೆ ಹಾಕಿಕೊಂಡಿದ್ದೆವು. ಆ ಮೂವರಲ್ಲಿ ಇಬ್ಬರು ತೀರಿಕೊಂಡರು ನಾನೊಬ್ಬನುಳಿದಿದ್ದೇನೆ. ನಾನು ಮೊದಲಾಗಿ ಉತ್ತಮ ಭಾರತೀಯನಾಗಿರಬೇಕು. ಎರಡನೆಯದಾಗಿ ಉತ್ತಮ ಮಹಮ್ಮದೀಯನಾಗಿರಬೇಕು. ಇವೆರಡಕ್ಕಾಗಿ ಉಸುರಿರುವ ತನಕ ಹೋರಾಡಬೇಕು. ಇವು ನನ್ನ ಜೀವನದ ಧ್ಯೇಯ. ಆದರೆ ನನ್ನ ಶಕ್ತಿಯು ಕುಂದುತ್ತಿದೆ. ಅವಸಾನಕಾಲ ಸಮೀಪಿಸುತ್ತಿದೆ ಎಂದು ಕಾಣುತ್ತಿದೆ. ಅದಕ್ಕಿಂತ ಮೊದಲು ನನ್ನಿಂದಾದ ಸೇವೆಯನ್ನು ಭಾರತಕ್ಕೆ ಸಲ್ಲಿಸಬೇಕೆಂಬುದು ನನ್ನ ಹಂಬಲ. ನಾನು ಆ ಪತ್ರವನ್ನು ಬರೆಯಲಿಕ್ಕೆ ಮುಖ್ಯ ಪ್ರೇರಣೆ ಇದೇ.

ಡಾ. ಸಯ್ಯದರು ವೈಸರಾಯರಿಗೆ ಬರೆದ ಪತ್ರದ ಕೆಲವು ಮುಖ್ಯಾಂಶಗಳು—

೧೯೪೨ರ ಆಗೋಸ್ತು ೮ರಂದು ಕಾಂಗ್ರೆಸ್ಸಿನ ಕಾರ್ಯಕಾರಿ ಮಂಡಳಿಯು ಬೊಂಬಾಯಿಯಲ್ಲಿ ಕೂಡಿಬಂದು ಆ ಆಗೋಸ್ತು ನಿರ್ಣಯವೆಂದು ಈಗ ಕರೆಯಲ್ಪಡುವ ಠರಾವನ್ನು ನಿರ್ಣಯವಾಗಿ ಕೈಗೊಳ್ಳುವ ಮೊದಲೆ ಅದು ನನ್ನ ಆತ್ಮಸಾಕ್ಷಿಗೆ ವಿರುದ್ಧವೆಂದು ನನಗೆ ತೋರಿ ಬಂದುದರಿಂದ ನಾನು ಆಗಲೆ ಕಾರ್ಯಕಾರಿ ಮಂಡಳಿಯ ನನ್ನ ಸದಸ್ಯತನಕ್ಕೆ ರಾಜಿನಾಮೆಯನ್ನಿತ್ತು ಸಭೆಯಲ್ಲಿ ವಿರುದ್ಧವಾಗಿ ಮತನಿತ್ತೆ. ಆದರೆ ಅಂದೇ ರಾತ್ರಿ ನಮ್ಮ ಬಂಧನವಾದುದರಿಂದ ನನ್ನ ರಾಜಿನಾಮೆಯು ಪ್ರಕಟವಾಗಲಿಲ್ಲ. ಇನ್ನು ಆ ಠರಾವಿನ ಕುರಿತು ಹೇಳುವುದಾದರೆ ಅದು ಕಾರ್ಯದಲ್ಲಿ ಇಳಿಯಲಿಲ್ಲ ಮಾತ್ರವಲ್ಲದೆ ಕಾಂಗ್ರೆಸ್ಸಿಗೂ ಸರಕಾರಕ್ಕೂ ಸಂಧಾನವು ಸಾಧ್ಯವಾಗದಿದ್ದರೆ ಒಂದು ಚಳವಳವನ್ನು ಹೂಡಲು ಮಾತ್ರ ಅಧಿಕಾರವನ್ನು ಗಾಂಧೀಜಿಯವರಿಗೆ ಆ ಠರಾವಿನಲ್ಲಿ ಕೊಡಲಾಗಿತ್ತು. ಯುದ್ಧಯತ್ನದಲ್ಲಿ ಸಹಕರಿಸುವ ಪ್ರಸ್ತಾಪವೂ ಅದರಲ್ಲಿತ್ತು. ಸತ್ಯಸಂಗತಿ ಹೀಗಿರುವಲ್ಲಿ ಯುದ್ಧಯತ್ನಕ್ಕೆ ಭಂ[illegible] ದ್ದೇಶವಿದ್ದ ಆ ಆಗೋಸ್ತು ಠರಾವಿನಲ್ಲಿ ನಾನೂ ಸಹಭಾಗಿಯಾಗಿದ್ದೇನೆಂದು ನನ್ನ ಮೇಲೆ ಆರೋಪ ಹೊರಿಸಿದುದು ಸರಿಯಲ್ಲ.

ಆದರೆ ಈ ಪತ್ರವನ್ನು ಬರೆಯುವ ಉದ್ದೇಶವು ಈ ವಿಷಯವನ್ನು ತಿಳಿಸಿ ಕೇವಲ ನನ್ನ ಬಂಧ ವಿಮೋಚನೆ ಮಾಡಿಸಿಕೊಳ್ಳುವುದಲ್ಲ. ಬೇರೆ ಉಚ್ಚ ಉದ್ದೇಶಗಳಿವೆ.

೧೯೪೦ರಲ್ಲಿ ಗಾಂಧೀಜಿಯವರು ಕೈಗೊಂಡ ವೈಯಕ್ತಿಕ ಸತ್ಯಾಗ್ರಹದ ವಿಚಾರದಲ್ಲಿಯೂ ನನ್ನ ವಿರೋಧವಿತ್ತು. ಆ ಸಂದರ್ಭದಲ್ಲಿ ನಾನು ಹೀಗೆ ಹೇಳಿದ್ದೆ—ಬ್ರಿಟಿಷ್ ಚರಿತ್ರೆ ಭಾಷೆ ಸಾಹಿತ್ಯಗಳಿಂದ ನಾವೊಂದು ಹೊಸ ಬೆಳಕನ್ನು ಕಂಡಿದ್ದೇವೆ. ಇಂದು ಕಾಂಗ್ರೆಸ್ಸು ಇಷ್ಟು ಪ್ರಬಲವಾಗಲೂ ಅದೊಂದು ಕಾರಣ. ಅಲ್ಲದೆ ಕಾಂಗ್ರೆಸ್ಸು ಬೆಳೆಯಲೂ ಸರಕಾರದ ಸಹಕಾರವಿತ್ತು. ಹೀಗೆ ಉಪಕೃತರಾದ ನಾವು ಈಗ ಅವರ ಸಂಕಟ ಸಮಯದಲ್ಲಿ ಕುತ್ತಿಗೆಯ ಮೇಲೆ ಕುಳಿತುಕೊಳ್ಳಬಾರದು--ಎಂದು ನನ್ನ ಅಭಿಪ್ರಾಯವನ್ನು ಸ್ಪಷ್ಟಪಡಿಸಿದ್ದೆ. ಆದರೂ ವೈಯಕ್ತಿಕ ಸತ್ಯಾಗ್ರಹವು ತೊಡಗಲ್ಪಟ್ಟಿತು. ಅದು ಹಿಂಸೆ ಶಿಸ್ತುಗಳನ್ನು ಮೀರದೆಯೆ ನಡೆಯಿತೆಂಬುದು ಗಮನಕ್ಕೆ ತರಬೇಕಾದ ವಿಷಯ.

ಕ್ರಿಪ್ಸರು ಇನ್ನೂ ತುಸು ತಾಳ್ಮೆಯನ್ನು ವಹಿಸಿ ಮತ್ತೂ ಒಂದೆರಡು ವಾರ ನಿಂತು ಪ್ರಯತ್ನಿಸಿದ್ದರೆ ಪರಿಣಾಮ ಬೇರಾಗುತ್ತಿತ್ತೆಂದು ನನ್ನ ಅಭಿಪ್ರಾಯ. ಆದರೆ ಆ ಸಂಧಾನವು ಮುರಿಯಿತು. ಜನರು ಬ್ರಿಟಿಷರ ವಿಷಯವಾಗಿ ಕುಪಿತರಾದರು. ಹಿಂಸಾ ಮನೋವೃತ್ತಿಯು ತೋರ ತೊಡಗಿತು. ಇದರ ನಿವಾರಣೆಗಾಗಿ ಮಹಾತ್ಮರು ಹೊಸದೊಂದು ಚಳವಳದ ಪ್ರಸ್ತಾಪನೆತ್ತಿದರು. ಆದರೆ ದುರ್ದೈವವಶಾತ್ ಮಹಾತ್ಮರ ವಚನ ಮತ್ತು ಹೃದಯಗಳ ಅರ್ಥ ಹಲವು ಸಲ ಅಧಿಕಾರಿಗಳಿಗೆ ಅರ್ಥವಾಗುವುದಿಲ್ಲ. ಸಾಮೂಹಿಕ ಕ್ರಾಂತಿ-ಒಡಂಬಡಿಕೆಗೆ ಎಡೆಯಿಲ್ಲ-ಎಂಬ ಮಾತುಗಳಿಂದ ಸರಕಾರವು ಬೀತಿಗೊಂಡಿತು. ಆದರೆ ಆಗೋಸ್ತು ನಿರ್ಣಯದಲ್ಲೇ ಆ ಕಾರ್ಯಕ್ರಮವನ್ನು ಕೈಗೊಳ್ಳುವ ಮೊದಲು ಗಾಂಧೀಜಿಯವರು ವೈಸರಾಯರನ್ನು ನೋಡಿ ಮಾ[illegible]ತೆಂಬುದು ಸ್ಪಷ್ಟವಾಗಿತ್ತು. ಆದರೆ ಮೇಲಿನ ಭೀತಿಕಾರಕ ಮಾತುಗಳು ಯಾರಿಂದಲೆ ಬರಲಿ, ಅವು ತಿರುಳಿಲ್ಲದವುಗಳೆಂದು ತೋರ್ಪಡಿಸಲಿಕ್ಕೆ ಅವಕಾಶವಿಲ್ಲದಯೆ ಕಾರ್ಯಕಾರಿ ಮಂಡಲಿಯನ್ನು ಬಂಧನದಲ್ಲಿಡುವ ದುರಂತ ಪ್ರಕರಣವು ನಡೆಯಿತು. ಈ ಬಗ್ಗೆ ಸರಕಾರವನ್ನು ನಾನು ದೂರಲಾರೆ.

ಬ್ರಿಟಿಷ್ ಜನಾಂಗವು ಯಾರಿಗಾದರೂ ಒಂದು ಒಳ್ಳೆಯದನ್ನು ಮಾಡುವಾಗ ಆ ಒಳ್ಳಿತನ್ನು ಪಡೆಯುವವನಲ್ಲಿ ದೀನ ಹೀನತೆಯನ್ನು ಹುಟ್ಟಿಸುವ ವರ್ತನೆಯನ್ನು ತೋರಿಸುತ್ತಾರೆ. ಹೀಗೆ ಜಿಗುಪ್ಸೆಗೊಂಡ ಉಪಕೃತನು ನಿರೀಕ್ಷಿಸಲ್ಪಟ್ಟಷ್ಟು ಕೃತಜ್ಞತೆಯನ್ನು ತೋರಿಸದಿರುವುದು ಸಹಜವಾದರೂ ಬ್ರಿಟಿಷ್ ಜನತೆಯು ಅವನನ್ನು ಕೃತಘ್ನನೆಂದು ತಿಳಿದು ರೇಗುವುದು. ಈ ವರ್ತನೆಗೆ ಕಾರಣ ಬ್ರಿಟಿಷ್ ಜನತೆಯೆಲ್ಲ ತಾವೂ ಅದ್ವಿತೀಯರು ಎಂದು ತಿಳಿದುಕೊಂಡಿರುವುದು.

ವೈಸರಾಯಿಗಳಾಗಿದ್ದ ಲಿನ್‌ಲಿತ್ಗೋರವರು ಸ್ವಭಾವತಃ ಒಳ್ಳೆಯ ಮನುಷ್ಯ. ೧೯೩೯ರಲ್ಲಿ ನಾನವರನ್ನು ಕಂಡು ಗಾಂಧೀಜಿಯವರ ಜೀವಮಾನ ಕಾಲದಲ್ಲೇ ಭಾರತದ ಸ್ವಾತಂತ್ರ್ಯ ಪ್ರಶ್ನೆಯನ್ನು ಇತ್ಯರ್ಥಸಬೇಕೆಂದು ಕೇಳಿಕೊಂಡಿದ್ದೆ. ಹಾಗಾಗದಿದ್ದರೆ ಮತ್ತೆ ತುಂಬ ತೊಂದರೆಯೆಂಬುದನ್ನೂ ಸೂಚಿಸಿದ್ದ. ನನ್ನ ಸಲಹೆಗಳಿಗಾಗಿ ಅವರು ಆಭಾರವನ್ನು ಸೂಚಿಸಿ ಗಾಂಧೀಜಿಗಳ ವ್ಯಕ್ತಿತ್ವವನ್ನು ಚೆನ್ನಾಗಿ ಹೊಗಳಿದ್ದರು. ಆದರೆ ಭಾರತದ ಪ್ರಶ್ನೆಯನ್ನು ಬಗೆಹರಿಸುವ ಭಾಗ್ಯ ಅವರ ಪಾಲಿಗೆ ಬರಲಿಲ್ಲ.

ಈಗ ತಮ್ಮ ಪರಿಚಯ ನನಗಿಲ್ಲದಿದ್ದರೂ ಅದೇ ಸೂಚನೆಯನ್ನು ತಮ್ಮ ಮುಂದಿಡುತ್ತೇನೆ. ಗಾಂಧೀಜಿಯವರು ಸಂಧಾನ ಮನೋವೃತ್ತಿಯವರು ಶಾಂತಿಪ್ರಿಯರು. ಇಂಗ್ಲಿಷ್ ಜನತೆಗೆ ಅವರ ಮನಸ್ಸನ್ನೂ ಭಾಷೆಯನ್ನೂ ತಿಳಿದುಕೊಳ್ಳಲು ಕಷ್ಟವಾಗಬಹುದು. ಆದರೂ ಅವರ ಜೀವಮಾನ ಕಾಲದಲ್ಲಿ ಭಾರತದ ಸ್ವಾತಂತ್ರ್ಯ ಪ್ರಶ್ನೆಯನ್ನು ತೀರ್ಮಾನಿಸುವಷ್ಟು ಸುಲಭದ ಹಾದಿ ಅನಂತರ ತೋರಲಾರದು. ಆದುದು ಕಾರಣ ಗಾಂಧೀಜಿಯವರು ಬದುಕಿರುವಾಗಲೇ ಭಾರತದ ಸಮಸ್ಯೆಯನ್ನು ಬಗೆಹರಿಸಿಕೊಡಿರೆಂದು ಒತ್ತಿ ಹೇಳುತ್ತೇನೆ. ಇದೀಗ ನನ್ನ ಈ ಪತ್ರದ ಮೂಲೋದ್ದೇಶ.

THULUNAD BANK OF
Supply Agency Limited, Udipi.
(In Liquidation)
Under sec 209 H of Indian Companies Act)

Notice is hereby given that meeting of the Creditors of the Company will be held on Sunday the 17th December 1944 at 4-30 p. m. at the premises of the Company at Vishwajna Bhavan, Udipi for considering the following agenda.

1. To consider the account of the acts and dealings of the Liquidators and of the conduct of the winding up during the year and to adopt the accounts of the Liquidators.
2. Any other items of business which may be brought before the meeting with the previous consent of the Chairman.

K. Gururaja Rao.
Narayana Rao K
Joint Liquidators

Camp UDIPI
Dated 3-10-44.

ಯುದ್ಧವು ತೀವ್ರ ಕೊನೆಗೊಂಡು ಭಾರತದ ರಚನೆಯು ರೂಪಾಂತರ ಹೊಂದಬಹುದು. ಈ ಪರಿಸ್ಥಿತಿಯನ್ನು ನೀವು ಹೇಗೆ ಎದುರಿಸುವಿರಿ? ನಾವೀ ಸಲಹೆಗಳನ್ನು ನಿಮ್ಮ ಮುಂದಿಡುವೆವು

1 ನಿಮ್ಮ ಶೇರು ಮತ್ತು ಸಾಲಗಳ ಆತ್ಯಧಿಕ ಸಂಚಯನಿದ್ದಲ್ಲಿ ಈಗಲೇ ಅವನ್ನು ವಿಕ್ರಯಿಸಿ ನಿಮ್ಮ ನಗದಿ ಸ್ಥಿತಿಯನ್ನು ಸ್ಥಿರಗೊಳಿಸಿ. ನಿಮ್ಮ ಆ ನಗದಿ ಹಣವನ್ನೆಲ್ಲಾ ಬ್ಯಾಂಕಿನ ಖಾತೆಯಲ್ಲಿರಿಸಿ ದರಗಳ ಇಳಿತವನ್ನು ನಿರೀಕ್ಷಿಸಿರಿ

2 ನಿಮ್ಮ ಸಾಲಗಳನ್ನೀಗಲೇ ತೀರಿಸದಿದ್ದಲ್ಲಿ ಯುದ್ಧಾನಂತರದ ದಿನಗಳಲ್ಲಿ ಧಾರಣೆಗಳ ಇಳಿತದಿಂದಾಗಿ ಸಾಲಗಳನ್ನು ತೀರಿಸಲು ಬಹು ಪ್ರಯಾಸವಾಗಬಹುದು

3 ನಿಮಗೆ ಬರಬೇಕಾದ ಸಾಲಗಳನ್ನೀಗಲೇ ವಸೂಲು ಮಾಡಿರಿ. ಏಕೆಂದರೆ ಧಾರಣೆಗಳ ಇಳಿತದಿಂದಾಗಿ ನಿಮ್ಮ ಸಾಲಗಾರರ ನಗದಿ ಸ್ಥಿತಿಯೂ ಬಹಳ ದುಸ್ಥಿತಿಗಿಳಿದು ಅವರಿಂದ ಸಾಲಗಳನ್ನು ತೀರಿಸಲಸಾಧ್ಯವಾಗಬಹುದು

4 ನಿಮ್ಮ ಕೂಡ ಇರುವಂಥ ನಗದಿಯನ್ನಿಟ್ಟು ಇನ್ನು ಮುಂದೆ ಬರುವ ಧಾರಣೆ ಇಳಿತವಾಗುವ ದಿನಗಳಿಗಾಗಿ ಕಾದಿರಿ. ಧಾರಣೆಗಳ ಗತಿಯನ್ನು ಮತ್ತು ವಾಣಿಜ್ಯದ ಸಾಮಾನ್ಯ ಸ್ಥಿತಿಯನ್ನು ಪರ್ಯಾಲೋಚಿಸಿ ನಿಮ್ಮ ಭಾವೀ ಯೋಜನೆಗಳನ್ನು ಕಲ್ಪಿಸಬಹುದು

ನಿಮ್ಮಲ್ಲಿರುವ ನಗದಿಯನ್ನೆಲ್ಲಾ ನಮ್ಮೊಡನೆ ಖಾತೆಯಲ್ಲಿರಿಸಿ. ಇಲ್ಲವಾದರೆ ಪ್ರೇರಣೆಗೆ ಅಥವಾ ಕಳ್ಳರ ಕೈಗೆ ಒಳಗಾಗುವ ಪ್ರಸಂಗ ಬರಬಹುದು

ಸ್ಥಾಪನೆ 1906 **ಕೆನರಾ ಬೇಂಕ್ ಲಿಮಿಟೆಡ್**

ESTD 1906 **Canara Bank, Limited.**
(Incorporated in British India with limited Liability of members limited.)

NOTICE

ಕುಂದಾಪುರ ಎಡಿಶನಲ್ ಡಿಸ್ಟ್ರಿಕ್ಟ್ ಮುನ್ಸಿಫ್ ಕೋರ್ಟಿನಲ್ಲಿ

S C 368/1944

ವಾದಿ— ಸಂಜೀವ ಮಲ್ಯ

ಪ್ರತಿವಾದಿರು--ಮ್ಯಾನೆಜರ್ ರಘುನಾಥ ಕೂಡಾ.

2ನೆ ಪ್ರತಿವಾದಿ – ಲಕ್ಷ್ಮೀನಾರಾಯಣ ರಾವ್. ಹೊಸಂಗಡಿ ಶಿವರಾಯರ ಮ.ಗ-ಬೆಂಗಳೂರು ಸಿಟಿ ಮಲ್ಲೇಶ್ವರಂ- ಎಂ VII ನೇ ಕ್ರಾಸ್ ರೋಡ್-ಮನೆ ನಂಬ್ರ 1925 ಯಲ್ಲಿ ಯಿರತಕ್ಕವ.

ಸದ್ರಿ 2ನೇ ಪ್ರತಿವಾದಿ ಕೂಡಾ 3 ಜನರು ತಾ, 19 12-1924ರಲ್ಲಿ ರಿಜಿಸ್ಟರಾದ ವಾದಿಕೆಂದ ವಿಭಾಗ ಪತ್ರದ ಪ್ರಕಾರ ಮೇಡಿ ಪೂರಾ ಧಿಕಾರ II. ಬಾಬು ರಾಯರಿಗೆ ಕೇಳಿದ ಏರು-ಚಿತ್ರಭಾನು ಮತ್ತು ಸ್ವಭಾನು ಸಂ॥ರಕ್ಕೆ ಬರತಕ್ಕ ಮಿಗ್ತೆ ವಸೂಲಿ ಹಕ್ಕನ್ನು ವಾದಿಯು ಟ್ರಾನ್ಸ್ಫರ್ ಪಡೆದ ಪ್ರಕಾರ ಪ್ರತಿವಾದಿರ ನೋಟಿ ಮೇಲ್ಪಂದ ದಾವೆಯನ್ನು ದಾಖಿಲು ಮಾಡಿರುತ್ತಾರೆ. ಆ ಕ ಇದು ವಿಚಾರದ ಆಕ್ಷೇಪವಿದ್ರೆ ತಾರೀಕು 13-11-1944 ನೇ ದಿವಸ ಮೇಲ್ಕಂಡ ಕೋರ್ಟಿನಲ್ಲಿ ಹಗಲು ಹನ್ನೊಂದು ಗಂಟೆಗೆ ಹಾಜರಾಗಿ ಜವಾಬು ಮಾಡಿಕೊಳ್ಳುವದು. ತಪ್ಪಿದರೆ ಏಕಪಕ್ಷವಾಗಿ ತೀರ್ಮಾನಿಸಲ್ಪಡುವದೆಂಬ ಸಂಗ್ತಿಯನ್ನು ಕೋರ್ಟು ಹುಕುಂ ಪ್ರಕಾರ ಸದ್ರಿ 2ನೇ ಪ್ರತಿವಾದಿಗೆ ಯೀ ಮೂಲಕ ತಿಳಿಸಲಾಗುತ್ತದೆ.

K Raghunath Shenai.

ಕುಂದಾಪುರ) Pleader for Plaintiff
25 10 1944)

ಸಮಾಚಾರ ಸಂಗ್ರಹ

ಅಖಿಳ ಭಾರತ ಆಕಾಶವಾಣಿಗೆ ಬಹಿಷ್ಕಾರ. ಹಿಂದೀ ಸಮ್ಮೇಳದ ಠರಾವು

ಅಖಿಳ ಭಾರತ ಹಿಂದೀ ಸಾಹಿತ್ಯ ಸಮ್ಮೇಳನದ ಸ್ಥಾಯಿ ಸಮಿತಿಯು ಆಲ್ ಇಂಡಿಯಾ ರೇಡಿಯೋ ಸಂಸ್ಥೆಯ ಹಿಂದೀ ವಿರೋಧ ಧೋರಣೆಯನ್ನು ಖಂಡಿಸುವ ಸೂಚಕವಾಗಿ ಯಾವ ಹಿಂದೀ ಲೇಖಕನಾಗಲಿ ಇನ್ನು ಮುಂದೆ ಆ ಸಂಸ್ಥೆಯ ಆಕಾಶವಾಣಿ ಮೂಲಕ ಮಾತಾಡಕೂಡದೆಂದು ನಿರ್ಣಯ ಮಾಡಿಯದೆ.

ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ತಕ್ಕಷ್ಟು ಪ್ರಗತಿ ತೋರುವುದಿಲ್ಲ ವೇಕೆ?

ಎಸ್. ಎಚ್. ವುಡ್ ಮತ್ತು ಸಾರ್ಜೆಂಟರ ಅಭಿಪ್ರಾಯ.

೧. ಹಸಿದ ಮಕ್ಕಳಿಗೆ ವಿದ್ಯೆ ಕಲಿಸುವುದು.

೨. ಪರೀಕ್ಷೆಗಳಿಗೆ ಹದಮೀರಿದ ಪ್ರಾಧಾನ್ಯವೀಯುವುದು.

೩. ಶಾಲಾ ವಾತಾವರಣವು ಮಕ್ಕಳ ಆಟ ಮುಂತಾದ ಶಾರೀರಿಕ ಚಟುವಟಿಕೆಗಳ ಅವಕಾಶವಿರಹಿತವಾಗಿ ನಿರುತ್ತೇಜವಾಗಿರುವುದು. ಮಕ್ಕಳ ಇಂದಿನ ಬಾಳಿನ ಸುಖೋಲ್ಲಾಸಗಳ ಕಡೆಗೆ ಹೆಚ್ಚಿನ ಗಮನವೀಯದೆ ನಾಳಿನ ಬಾಳಿಗೆ ಅವರನ್ನು ಸಿದ್ಧಗೊಳಿಸುವ ಧ್ಯೇಯದಿಂದ ವಿದ್ಯೆಯನ್ನು ತುರುಕುವುದು.

೪. ಉಪಾಧ್ಯಾಯರಿಗೆ ತಕ್ಕಷ್ಟು ಆದರಣೆಯಿಲ್ಲದಿರುವುದು.

೫. ಉಪಾಧ್ಯಾಯರ ಈಗಿನ ಸಂಬಳವು ನಿಕೃಷ್ಟವಾಗಿದ್ದು ಅರೆಹೊಟ್ಟೆಯ ಇವರಿಂದ ಪರಿಪೂರ್ಣತೆಯನ್ನು ನಿರೀಕ್ಷಿಸುವುದು.

೬. ಅಲ್ಪವೇತನ ಹಾಗೂ ಅನಾದರಣೆಯಿರುವ ಅಧ್ಯಾಪಕತನವು ಸಮರ್ಥರನ್ನು ಆಕರ್ಷಿಸದಿರುವುದು

೭. ಶಿಕ್ಷಣ ಕ್ರಮದಲ್ಲಾಗುವ ಪ್ರಗತಿ ಮಾರ್ಗಗಳನ್ನು ಉಪಾಧ್ಯಾಯರ ಅವಗಾಹನೆ ಹಾಗೂ ಪ್ರಯೋಗಕ್ಕೆ ಬರುವಂತೆ ಅವನ್ನು ಅವರಿಗೆ ಆಗಾಗ ಬೋಧಿಸುವ ಪುನಶ್ಚರಣೆ (ರಿಫ್ರೆಶರ್ ಕೋರ್ಸ್)ಯ ಕೇಂದ್ರಗಳನ್ನು ಮಾಡದಿರುವುದು.

ಮೇಲಿನ ಏಳು ಕಾರಣಗಳಿಂದಾಗಿ ಇಂಡಿಯಾದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವು ಪರಿಣಾಮಕಾರಿಯಾದ ಪ್ರಗತಿ ಮಾರ್ಗವನ್ನು ಹಿಡಿದಿಲ್ಲವೆಂದು ಬ್ರಿಟಿಷ್ ಎಡ್ಯುಕೇಶನ್ ಬೋರ್ಡಿನ ಪ್ರತಿನಿಧಿಗಳಾಗಿ ಈ ದೇಶಕ್ಕೆ ಬಂದು ಕೆಲವು ಸಮಯ ಇಲ್ಲಿಯ ವಿದ್ಯಾಪ್ರಚಾರವನ್ನು ಪರಿಶೀಲಿಸಿದ ಮೆ. ಎಸ್. ಎಚ್. ವುಡ್ ಇವರೂ ಮೆ. ಜೋನ್ ಸಾರ್ಜೆಂಟರೂ ಬಿ. ಬಿ. ಸಿ. ಆಕಾಶವಾಣಿಯ ಮೂಲಕ ಹೇಳಿದರು

ಸಾರ್ವಜನಿಕ ಪುಸ್ತಕ ಭಂಡಾರಗಳಿಗೆ ಗ್ರಾಂಟು

ಮದ್ರಾಸು ಸರಕಾರವು ಪ್ರಾಂತದೊಳಗಿನ ಸಾರ್ವಜನಿಕ ಪುಸ್ತಕ ಭಂಡಾರಗಳಿಗೆ ಹಂಚುವುದಕ್ಕಾಗಿ ಈ ವರುಷಕ್ಕೆ ರೂ ೨೪೭೬೦ನ್ನು ತೆಗೆದಿಟ್ಟಿದೆ ಇದು ಪುಸ್ತಕಗಳನ್ನೂ ಕಪಾಟುಗಳನ್ನೂ ಕೊಂಡುಕೊಳ್ಳುವ ವೆಚ್ಚಕ್ಕಲ್ಲದೆ ಕಟ್ಟೋಣಗಳ ವೆಚ್ಚಕ್ಕಾಗಿ ವಿನಿಯೋಗಿಸ ಕೂಡದೆಂದೂ ತಿಳಿಸಿಯದೆ.

ಮಲಬಾರಿಗೆ ೧೦೦೦೦ಟನ್ನು ಅಕ್ಕಿ.

ಸಿಂಧ ಪ್ರಾಂತದಿಂದ ಮಲಬಾರಿಗೆ ಹತ್ತು ಸಾವಿರ ಟನ್ನು ಅಕ್ಕಿಯನ್ನು ಕಳುಹಬೇಕೆಂದು ಇಂಡಿಯಾ ಸರಕಾರದ ಅಪ್ಪಣೆ. ಇದಲ್ಲದೆ ಈ ಮೊದಲಿನ ಅಪ್ಪಣೆ ಪ್ರಕಾರ ಸಿಂಧ ಪ್ರಾಂತದಿಂದ ಐದುಸಾವಿರ ಟನ್ನು ಅಕ್ಕಿಯಲ್ಲಿ ಹೆಚ್ಚಿನ ಅಂಶ ಈಗಾಗಲೆ ಕಲ್ಲಿಕೋಟೆಗೆ ಬಂದು ತಲಪಿದೆ

ಸಂದರ್ಶನೆಗಾಗಿ ಬಂಧುಗಳು ಬರುವುದು ಬೇಡ

ಬಂಧನದಲ್ಲಿರುವ ಕೃಪಾಲಾನಿಯವರೂ ತಮ್ಮ ಬಂಧುಬಾಂಧವರು ಸಂದರ್ಶನೆಗಾಗಿ ಬರುವುದು ಬೇಡವೆಂತ ಬರೆದಿರುವರಂತೆ. ಇತ್ತೀಚೆಗೆ ಸರಕಾರವು ಅಹಮ್ಮದಾನಗರ ಕೋಟೆಯಲ್ಲಿ ಬಂಧನದಲ್ಲಿರುವ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯ ಸದಸ್ಯರನ್ನು ಅವರ ಸಮೀಪಬಂಧುಗಳು ಸಂದರ್ಶಿಸಬಹುದೆಂಬ ಸವಲತ್ತನ್ನು ಕೊಟ್ಟಿದೆ. ಆದರೆ ಸ್ವಾಭಿಮಾನವನ್ನಿಟ್ಟುಕೊಂಡು ಸಂದರ್ಶನೆಯ ಮಾತುಕತೆಗಳು ನಡೆಯುವುದು ಅಸಂಭವವೆಂದೂ ಆ ಕಾರಣದಿಂದಾಗಿ ತನ್ನ ಸಂದರ್ಶನೆಗೆ ಯಾರೂ ಬರುವ ಪ್ರಯತ್ನ ಮಾಡಬಾರದೆಂದೂ ಈ ಮೊದಲು ಪಂಡಿತ ನೆಹರೂಗಳು ತನ್ನ ಬಂಧುಗಳಿಗೆ ಬರೆದಂತೆಯೆ ಈಗ ಕೃಪಾಲಾನಿಯವರೂ ತನ್ನ ಬಂಧುಗಳಿಗೆ ತಿಳಿಸಿರುವರು.

ಅಖಿಳ ಪಕ್ಷಗಳ ಸಮ್ಮೇಳನ ಗಾಂಧೀಜಿಗಳ ಕರೆ

ಕಾಂಗ್ರೆಸ್ಸು ವಳಯದಿಂದ ಹೊರಗಿರುವ ಸರ್ ತೇಜ ಬಹಾದೂರ ಸಪ್ರು, ಡಾ| ಜಯಕರ್, ಮೌಲಾನಾ ಹುಸ್ಸೇನ್ ಅಹಮ್ಮದ್ ಮದಾನಿ, ಪಂಡಿತ್ ಕುಂಜ್ರು, ಫಜ್ಲುಲ್ ಹಕ್, ಮುಂತಾದ ಹಲವು ವಿವಿಧ ಪಕ್ಷ ಹಾಗೂ ರಾಜಕೀಯ ಪಂಥಗಳ ಮುಂದಾಳುಗಳ ಅಭಿಪ್ರಾಯಗಳನ್ನೂ ಸೆರೆಮನೆಯ ಹೊರಗಿರುವ ಕಾಂಗ್ರೆಸ್ಸು ಮುಂದಾಳುಗಳ ಒಲವುಗಳನ್ನೂ ತಿಳಿದುಕೊಂಡು ಗಾಂಧೀಜಿಯವರು ಈಗ ಅಖಿಳ ಭಾರತ ಪಕ್ಷಪಂಥಗಳ ಸಮ್ಮೇಳನವನ್ನು ಕರೆಯುವುದಾಗಿ ನಿಶ್ಚೈಸಿರುವರು. ಇದರ ಉದ್ದೇಶವು ಭಾರತೀಯ ರಾಜಕೀಯ ಪರಿಸ್ಥಿತಿಯ ಅತ್ಯಾಧುನಿಕ ನೆಲೆಯನ್ನು ನಿಶ್ಚೈಸಿಕೊಳ್ಳುವುದು ಮತ್ತು ಇತ್ತೀಚೆಗೆ ಸರಕಾರದೊಡನೆಯೂ ಮುಸ್ಲಿಂ ಲೀಗದೊಡನೆಯೂ ತಾನು ಗೈದ ಸಂಧಾನ ಪ್ರಯತ್ನದ ವಿಫಲತೆಯ ದೃಷ್ಟಿಯಿಂದ ಮುಂದೇನು ಮಾಡಬಹುದೆಂಬುದರ ವಿಚಾರವಿನಿಮಯ ಮಾಡಿ ಇತ್ಯರ್ಥಿಸಿಕೊಳ್ಳುವದು.

ಗಾಂಧೀಜಿಗಳು ಮತ್ತೊಂದು ಉಪವಾಸವನ್ನು ಕೈಗೊಳ್ಳುವರೇ?

ಶ್ರೀ. ಹೋರ್ನಿಮೇನರು ಈ ಪ್ರಶ್ನೆ ಕೇಳಿ ಪೇರೇಲಾಲ್‌ರಿಗೆ ಕೊಟ್ಟ ತಂತಿಯ ವಿಷಯವಾಗಿ ಗಾಂಧೀಜಿಗಳೇ ವಿವರಣೆಯನ್ನೀಯುತ್ತ ತಾನು ಹಾಗೆ ಮಾಡುವ ಕಾಲ ಬಂದಿತೆಂದು ತನ್ನ ಗೆಳೆಯರೊಡನೆ ಹೇಳುತ್ತಾ ಬಂದಿದ್ದೇನೆಂದೂ ಆದರೆ ಆತ್ಮಪರಿಶುದ್ಧಿಗಾಗಿ ಪರಮಾತ್ಮನ ದಿವ್ಯಪ್ರಕಾಶ ಸಾಕ್ಷಾತ್ಕಾರಕ್ಕಾಗಿ ಮಾಡಬೇಕಾಗಿರುವ ಆ ತಪಶ್ಚರಣೆಗೆ ಎಂದು ತನ್ನ ಅಂತಃವಾಣಿಯು ಕರೆಯುವುದೋ ಎಂಬುದನ್ನು ನಾನೀಗ ಹೇಳಲಾರೆನು ಅಂತಹ ಕರೆ ಕೇಳಿದಂತಾಗುತ್ತಿದೆ. ಆದರೆ ಸ್ಪಷ್ಟವಿಲ್ಲ. ನಿಜವಾದ ಕರೆಯನ್ನಲೂ ಬರುವುದಿಲ್ಲ ಈಗೇನೋ ಕರೆಯೆಂದು ತೋರುವ ಅದು ನಿಜವಾದ ಕರೆಯಾಗದಿರಲೂ ಬಹುದು-ಎಂದಿರುವರು

ಬ್ರಿಟನ್ನಿನಲ್ಲಿರುವ ಮುಸ್ಲಿಮರಲ್ಲಿ ಸೇಕಡಾ99 ಪಾಕಿಸ್ಥಾನಕ್ಕೆ ವಿರೋಧ. ಕಾಂಗ್ರೆಸ್ಸಿನೊಡನೆ ಶರ್ತರಹಿತ ಮೈತ್ರಿಗೆ ಅನುಮೋದನೆ—

ಗ್ರೇಟ್ ಬ್ರಿಟನ್ನಿನಲ್ಲಿಯ ಇಂಡಿಯನ್ ಕಾಂಗ್ರೆಸ್ ಕೂಟದ ವಾರ್ಷಿಕ ಅಧಿವೇಶನದಲ್ಲಿ ಅಖಿಳ ಬ್ರಿಟನ್ನಿನ ಜಮಾಯಿತುಲ್ಲ ಮುಸ್ಲಿಂ ಸಭೆಯ ಅಧ್ಯಕ್ಷರಾದ ಸೈಯದ್ ಅಮೀರ್ ಷಾರವರು ಹೀಗೆ ಹೇಳುತ್ತಾರೆ- ಬ್ರಿಟನ್ನಿನಲ್ಲಿರುವ ಐದುಸಾವಿರ ಮಂದಿ ಮುಸ್ಲಿಮರಲ್ಲಿ ಸೇಕಡಾ 99ರಷ್ಟು ಜನರು ಪಾಕಿಸ್ಥಾನಕ್ಕೆ ಬದ್ಧ ವಿರುದ್ಧರಾಗಿದ್ದಾರೆ. ಕಾಂಗ್ರೆಸಿನೊಡನೆ ಶರತ ರಹಿತ ಮೈತ್ರಿಗೆ ಅವರ ಪರಿಪೂರ್ಣ ಅನುಮೋದನೆ ಇದೆ- ಪಾಕಿಸ್ಥಾನವೆಂಬ ಯೋಜನೆಯನ್ನು ಆಮೂಲಾಗ್ರವಾಗಿ ನಾವೆಷ್ಟು ಆಗ್ರಹದಿಂದ ದ್ವೇಷಿಸುತ್ತಿದ್ದೇವೆಂಬುದನ್ನು ಸ್ಪಷ್ಟಾಕ್ಷರಗಳಿಂದ ಜಿನ್ನಾರವರಿಗೆ ನಾವು ತಿಳಿಸುತ್ತೇವೆ

ಸರ್. ಸಿ. ವಿ. ರಾಮನ್‌ರಿಗೆ ಡಾಕ್ಟರ್ ಬಿರುದು

ಅಲ್ಲಹಾಬಾದ್ ವಿಶ್ವವಿದ್ಯಾನಿಲಯವು ಸರ್| ಸಿ| ವಿ| ರಾಮನ್ ಇವರಿಗೆ ಮುಂಬರುವ ತಾ. ೪ರಂದು ಜರಗಲಿರುವ ಅದರ ಪದವಿಪ್ರಧಾನ ಮಹೋತ್ಸವದಲ್ಲಿ ಡಾಕ್ಟರ್ ಆಫ್ ಸಯನ್ಸ್ ಎಂಬ ಬಿರುದನ್ನು ಕೊಡುವುದಾಗಿ ನಿಶ್ಚಯಿಸಿದೆ.

ಸೋವಿಯೇಟ (ರಸ್ಯಾ)ದ ಉಕ್ಕಿನ ನಗರ

ಉರಾಲ ಪರ್ವತದ ಬಳಿಯಲ್ಲಿರುವ ಮೆಗ್ನಿಟೋಗೋರ್ಸ್ಕ್ ಎಂಬ ನಗರವು ರಸ್ಯಾದ ಉಕ್ಕಿನ ಕಾರ್ಖಾನೆಯಲ್ಲಿ ಪ್ರಥಮ ಸ್ಥಾನವನ್ನು ಹೊಂದಿದೆ. ಇದರ ಸಮೀಪವಿರುವ ಪರ್ವತದಲ್ಲಿ ಸೇಕಡ 45ರಿಂದ 60ರ ವರೆಗೆ ಕಬ್ಬಿಣ ದೊರಕುವ ಅದುರುಗಳು 335 ಮಿಲಿಯ ಟನ್ನುಗಳು ದೊರಕಲಾಪವೆಂದು ತಜ್ಞರು ಲೆಕ್ಕ ಹಾಕಿರುವರು. ಈ ಕಾರ್ಖಾನೆಯು ಉದ್ಯಮದ ಯೋಜನೆಯು 1948ಕ್ಕೆ ಪರಮಾವಧಿಯನ್ನು ಮುಟ್ಟುವಂತೆ ಏರ್ಪಡಿಸಲಾಗಿದೆಯೆಂದೂ ಆಗ ಅದು ಪ್ರಪಂಚದಲ್ಲಿ ಅತ್ಯಂತ ಹೆಚ್ಚು ಉಕ್ಕಿನ ಸಾಮಗ್ರಿಗಳನ್ನು ಸಿದ್ಧಗೊಳಿಸುವ ಕೇಂದ್ರವಾಗುವುದಂತೆ,

ಬರ್ಮಾ ಗಡಿಯಲ್ಲಿ

ಪಾಲಮಿನಿಂದ ಜಪಾನರು ಕಾಲುಕಿತ್ತರು

ಟಿಡ್ಡಿಮದಿಂದ ೧೯ ಮೈಲು ದಕ್ಷಿಣದಲ್ಲಿರುವ ಪಾಲಮಿನಿಂದ ಜಪಾನರು ತಮ್ಮ ಸೇನಾದಿಗಳನ್ನು ಹಿಂದೆ ಕೊಂಡುಹೋಗಿದ್ದಾರೆ. ಚಿನ್ ಪರ್ವತ ಪ್ರದೇಶದಲ್ಲಿ ಜಪಾನರ ಆಡಳಿತೆಯ ಪ್ರಧಾನ ಪಟ್ಟಣವಾದ ಪಾಲಮಿನಿಂದ ತಮ್ಮ ರಾಣೆಯನ್ನುತೆಗೆದಿದ್ದಾರೆ. ಈ ಚಿನ್ ಪ್ರದೇಶದ ನಾಲ್ವತ್ತು ಸಾವಿರ ಪರ್ವತ ಪ್ರದೇಶಗಳ ಮೇಲಿದ್ದ ಹಿಡಿತವು ಜಾಪಾನರ ಕೈಯಿಂದ ತಪ್ಪಿದಂತಾಯಿತು. ಈ ವಿಜಯದಲ್ಲಿ ಪರ್ವತ ಪ್ರದೇಶಿಯರೂ ಮಿತ್ರ ಪಕ್ಷದ ದಳಗಳೊಡನೆ ಸಹಕರಿಸಿದ್ದಾರೆ.

ಫಿಲಿಪ್ಪೈನ್ಸ್ ದ್ವೀಪಗಳಲ್ಲಿ ಅಮೇರಿಕನರ ಸೇನೆಗಳು ಇಳಿದಿವೆ.

ವಿಮಾನ ಬಲಗಳ ರಕ್ಷಣಾಬಲದೊಡನೆ 600 ನೌಕೆಗಳ ಪಡೆಯು ಸಾವಿರಗಟ್ಟಳೆ ಅಮೇರಿಕನ್ ಸೈನಿಕರನ್ನು ತಂದು ಲೀಟೆ ದ್ವೀಪದಲ್ಲಿ ಇಳಿದಿದೆ. ಮತ್ತೊಂದು ಪಡೆಯು ಸಾಮೋನ್ ದ್ವೀಪವನ್ನು ಹಿಡಿದಿದೆ. ಈ ಪಡೆಗಳ ದಳವಾಯಿಯಾದ ಜನರಲ್ ಮೇಕ್ ಆರ್ಥರರು ಫಿಲಿಪ್ಪೈಯಿನ್ ದ್ವೀಪಗಳ ನಿವಾಸಿಕರಿಗೆ ಈ ರೀತಿ ಉದ್ಘೋಷಣೆಯನ್ನು ಕೊಟ್ಟಿರುವರು-'ಎರಡು ವರುಷಗಳ ಹಿಂದೆ ಐದು ತಿಂಗಳು ಇಪ್ಪತ್ತೈದು ದಿನಗಳ ತನಕ ಕಾದಾಡಿ ಅಮೇರಿಕಾ ಸೇನೆಯು ವೈರಿಗೆ ಶರಣಾಗತವಾಗಬೇಕಾದಾಗ ನಾವು ತಿರುಗಿಬಂದು ನಿಮ್ಮನ್ನು ಉದ್ಧರಿಸುವೆವು ಎಂದಿತ್ತ ವಾಗ್ದಾನದ ಮೇರೆಗೆ ಇಂದು ಬಂದಿಳಿದಿರುವೆವು. ನಿಮ್ಮ ಹಿಂದಿನ ಅಧ್ಯಕ್ಷ ಸರ್ಗೋ ಒಸ್ಮೆನಾ ಮತ್ತು ಮಂತ್ರಿಮಂಡಲದ ಸದಸ್ಯರೂ ನನ್ನೊಂದಿಗೆ ಬಂದಿಳಿದಿರುವರು. ನಿಮ್ಮ ಸರಕಾರವು ಪುನಃ ಸ್ಥಾಪಿತವಾಗಿದೆ. ನನಗೆ ಪರಿಪೂರ್ಣ ಬೆಂಬಲವಾಗಿ ನಿಂದು ಜಾಪಾನರಿಗೆ ಇಲ್ಲಿ ಆಶ್ರಯವಿಲ್ಲವೆಂಬುದನ್ನು ಶೂರತನದಿಂದ ತೋರಿ'.

ಅಮೇರಿಕದ ಕೃಷಿ ಇಲಾಖೆಯ ಹೊಸ ಸಂಶೋಧನೆಗಳು

ಹಾಲಿನಿಂದ ಕುಂಚಿಕೆಯ ಕೇಸರ, ಬಿಳಿಬಟಾಟೆಯಿಂದ ಮರದ ಸಾಮಾನುಗಳಿಗೆ ಬಳಿಯುವ ಬಣ್ಣ ಇವನ್ನು ಮಾಡುವ ವಿಧಾನಗಳ ಸಂಶೋಧನೆಯಾಗಿದೆ.

ನೋಟೀಸು

ಉಡ್ಪಿ ಡಿಸ್ಟ್ರಿಕ್ಟ ಮುನ್ಸೀಫ್ ಕೋರ್ಟಿನಲ್ಲಿ.

O. P. No. 57/1941
R. I. A. No. 667/1944

ಗಣಪತಿ ಶ್ಯಾನುಭಾಗ-ಹೆಜ್ಮಾಡಿ ಮಾಧವ ಶ್ಯಾನುಭಾಗರ ಮಗ ಉಡ್ಪಿ ತಾಲ್ಲೂಕು ಕೋಟ ಗ್ರಾಮದ ಕಟ್ಟಾಡಿ— ಅರ್ಜಿದಾರ,

ಮತ್ತು

ಹಲವಾರು ಜನ ಕೌ ದಾ:—ಯೆದ್ರಿರು

ಯಾವರೊಳಗೆ

ಈ ಮೂಲಕ ಸರ್ವಜನರಿಗೆ ತಿಳಿಯಪಡಿಸುವುದೇನೆಂದ್ರೆ:—

ಮೇಲ್ಕಂಡ O. P. ನಂಬ್ರ 57/41ನೇ ಅರ್ಜಿ ವ್ಯವಹರಣೆಯಲ್ಲಿ 13ರಿಂದ 19ನೇ ವರೆಗಿನ ರೆಸ್ಪಾಂಡೆಂಟರಾದ ಯೆದ್ರಿರಿಗೆ ಸಿಂಗಲ್ಲಿರುವ ಲಿವೇಜನ ಪೈಕಿ 13, 14ನೇ ರೆಸ್ಪಾಂಡೆಂಟರಾದ 1, 2ನೇ ಯೆದ್ರಿಂ ಹಕ್ಕಿನ 13/48ನೇ ಅಂಶದ ಈ ಪ್ಪಾ 57-1-7ನ್ನು ವಸೂಲು ಮಾಡುವರೆ ಸಕ್ಷಿಮಂಟು 20ನೇ ರೆಸ್ಪಾಂಡೆಂಟನಾದ ತನಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ವಗೈರೆ ಅರ್ಜಿದಾರನು ದಾಖಲ್ಲು ಮಾಡಿದ ಸದ್ರಿ ಅರ್ಜಿಯು ತಾ. 16-11-44ಕ್ಕೆ ಸದ್ರಿ ಕೋರ್ಟಿನಲ್ಲಿ ತನಿಖೆಗೆ ಯಿಟ್ಟಿರುವದ್ರಿಂದ ಆ ಕುರಿತು ಆಕ್ಷೇಪ ಹೇಳುವವರು ಸದ್ರಿ ತಾರೀಕಿನ ದಿವ್ಸ ಸದ್ರಿ ಅರ್ಜಿ ತನಿಖೆ ಸಮಯ ಸದ್ರಿ ಕೋರ್ಟಿನ ಮುಂದೆ ಸ್ವತಹಾ ಅಥವಾ ವಕೀಲರ ಮುಖಾಂತ್ರ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜಾಹೀರು ಮಾಡಿಕೊಳ್ಳಬೇಕಾಗಿ ಯೀ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸಲಾಗುತ್ತದೆ.

Haradi Ramanatha Pai.
Advocate for Petitioner

Advocate's Office, Udipi,
Dated 21-10-1944.

ಪ್ರೆಸಿಡೆಂಟ್ ರೂಸವೆಲ್ಟ್

ಇದೇ ನವಂಬರ ೭ ಅಮೇರಿಕದ ಚರಿತ್ರೆಯಲ್ಲೊಂದು ಮಹತ್ವದ ದಿನ. ೪ ವರ್ಷಗಳಿಗೊಮ್ಮೆ ಜರಗುವ ಅಧ್ಯಕ್ಷ ಚುನಾವಣೆ ಆ ದಿನ ನಡೆಯಲಿದೆ. ೧೯೩೨ರಿಂದ ಮೂರು ಬಾರಿ ಆರಿಸಲ್ಪಟ್ಟು, ಅಮೇರಿಕದ ಏಕೆ-ಪ್ರಪಂಚದ ಇತಿಹಾಸವನ್ನೇ ಬದಲು ಮಾಡಿದ ವ್ಯಕ್ತಿ ರೂಸವೆಲ್ಟರ ವ್ಯಕ್ತಿ ಚಿತ್ರವಿದು.

ಪ್ರಪಂಚದ ಅತಿ ಶ್ರೀಮಂತ ಹಾಗೂ ಪ್ರಬಲ ರಾಷ್ಟ್ರವೆಂದರೆ ಅಮೇರಿಕ. ಮೂರು ಮಿಲಿಯ ಚದರ ಮೈಲುಗಳ ವಿಸ್ತೀರ್ಣವಾಗಿದ್ದು, ಲೋಕದ ಅರೆವಾಸಿ ಕಚ್ಚಾ ವಸ್ತುಗಳನ್ನು ಉಪಯೋಗಿಸುತಿದ್ದು, ಅರೆವಾಸಿ ಕೈಗಾರಿಕೆಯನ್ನು ಕೈಕೊಂಡು ಅದರ ನೇಕಡಾ ೬೦ರಷ್ಟು ಪ್ರಯೋಜನವನ್ನು ತಾನೇ ಪಡೆಯುವ ದೇಶವದು. ಪ್ರಪಂಚದ ಒಟ್ಟು ಚಿನ್ನದ ಮುಕ್ಕಾಲಂಶ ಅಮೇರಿಕ ಒಂದರಲ್ಲೇ ಇದೆ. ಅವರ ರಾಜ್ಯದಲ್ಲಿ, ಲೋಕದ ಅತಿ ದೊಡ್ಡ ತಾಮ್ರದ ಮತ್ತು ಕಲ್ಲಿದ್ದಲಿನ ಗನಿಗಳು, ಎಣ್ಣೆಯ ಗನಿಗಳು, ಕಬ್ಬಿಣದ ಅದುರು ದೊರೆಯುವ ಸ್ಥಳಗಳು, ಗೋದಿ ಹತ್ತಿ ಮುಂತಾದುವು ಬೆಳೆಯುವ ಸ್ಥಳಗಳೂ ಇವೆ. ಹೀಗೆ ಧನಧಾನ್ಯ ಖನಿಜಗಳ ಸಂಪತ್ತಿನಿಂದ ತುಂಬಿ ತುಳುಕುವ ರಾಷ್ಟ್ರದ ಅಧಿನಾಯಕನೆಂದರೆ ಪ್ರೆಸಿಡೆಂಟ್ ರೂಸವೆಲ್ಟ್. ಅಷ್ಟೇಕೆ? ಅಮೇರಿಕವೆಂದರೇನೆ ರೂಸವೆಲ್ಟ್.

ಅವರ ಸಂಪೂರ್ಣ ಹೆಸರು ಫ್ರಾಂಕ್ಲಿನ್ ಡೆಲಾನೊ ರೂಸವೆಲ್ಟ್ ಎಂಬುದಾಗಿ. ಅಮೇರಿಕದಲ್ಲಿ ನಾಲ್ಕು ವರ್ಷಗಳಿಗೊಮ್ಮೆ ಅಧ್ಯಕ್ಷ ಪದವಿಯ ಚುನಾವಣೆ ನಡೆಯುವುದು. ಅದಕ್ಕೆ ಸುಮಾರು ೧೩೦ ಮಿಲಿಯ ಜನರಿಗೆ ಮತವೀಯುವ ಅಧಿಕಾರವಿದೆ. ಹೀಗೆ ನಡೆಯುವ ಚುನಾವಣೆಗಳಲ್ಲಿ, ಬಿಡದೆ ಮೂರು ಸಲ ಉತ್ತೀರ್ಣರಾದ ವ್ಯಕ್ತಿಯೆಂದರೆ ಅದು ರೂಸವೆಲ್ಟ್. ಅವರು ೧೯೩೨ನೆಯ ಇಸವಿಯಿಂದ ಅಮೇರಿಕದ ರಾಜಸೂತ್ರದ ಚಾಲಕರಾಗಿದ್ದಾರೆ. ನಾಲ್ಕನೆಯ ಚುನಾವಣೆಯಲ್ಲಿ ಎಂದರೆ, ಇದೇ ನವಂಬರ ೭ರಂದು ಜರಗುವ ಚುನಾವಣೆಯಲ್ಲೂ ಅವರೇ ಆರಿಸಲ್ಪಟ್ಟರೂ ಅದೊಂದು ಆಶ್ಚರ್ಯವಾಗಲಾರದು.

ರೂಜವೆಲ್ಟರಿಗೀಗ ೬೧ ವರ್ಷ ಪ್ರಾಯ—ಹಿಟ್ಲರನಿಗಿಂತ ೭ ವರ್ಷಕ್ಕೆ ಅವರು ಹಿರಿಯರು. ಗುಣದಲ್ಲಿ, ಕಾರ್ಯದಕ್ಷತೆಯಲ್ಲಿ ಹೇಗೋ ಹಾಗೆಯೇ ದೇಹದಲ್ಲಿಯೂ ದೊಡ್ಡವರಿದ್ದಾರೆ ಅವರು. ವೇದಿಕೆಯ ಮೇಲೆ, ಜನ ಸಮೂಹದ ನಡುವೆ ನಿಂತಾಗ, ಅವರ ಆಜಾನುಬಾಹು ದೇಹವು ದೂರದ ವರೆಗೂ ಕಾಣಬಲ್ಲುದು. ಅವರು ಪ್ರಚಂಡ ವಾಗ್ಮಿಗಳಾದರೂ ಭಾಷಣ ಮಾಡುವಾಗ ಕೈಬೀಸುವುದೆಂದಿಲ್ಲ; ತಲೆಯಲ್ಲಾಡಿಸುವುದಿದೆ. ಗಂಭೀರವಾದ ಚುರುಕಾದ ಸ್ವರದಲ್ಲಿ ಅವರು ತನ್ನ ಸಿಬ್ಬಂದಿಗಳಿಂದ ಬರೆಯಲ್ಪಟ್ಟು, ತಾನೇ ಸ್ವತಃ ನೋಡಿ ತಿದ್ದಿದ, ಭಾಷಣಗಳನ್ನು ಓದುತ್ತಾರೆ. ಸಾಮಾನ್ಯ ಎಲ್ಲಾ ಪತ್ರಿಕಾ ಪ್ರತಿನಿಧಿಗಳ ಪರಿಚಯ ಅವರಿಗಿದೆ—ಏಕೆ? ಅವರೆಲ್ಲರ ಹೆಸರುಗಳನ್ನೂ ಅವರು ಚೆನ್ನಾಗಿ ಬಲ್ಲರು. ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಿರುವಾಗ, ತನ್ನ ಮಂತ್ರಿ ಮಂಡಲವನ್ನೇ ಅವರು ಮರೆತುಬಿಡುವುದುಂಟು.

ರೂಜವೆಲ್ಟರು ಹಸನ್ಮುಖಿಗಳು; ನಗೆಗಾರರು-ಮಾತಿನ ಮಲ್ಲರು. ಅವರ ಮನಸ್ಸಿನಲ್ಲಿ ಚಿಂತೆಯಿದ್ದರೆ, ಅವರ ವೇಷವೇ ಬೇರೆ. ಸಿಟ್ಟಾದಾಗ ಮೋಸಕ್ಕೆ-ಮೋಸ, ಏಟಿಗೆ-ಏಟು ಕೊಡಲಿಕ್ಕೂ ಅವರು ಸಿದ್ಧರು. ಹೀಗಾಗಿ ಅವರಿಗೆ ತುಂಬಾ ವೈರಿಗಳಿದ್ದಾರೆ. ಪ್ರೀತಿಸುವವರಷ್ಟೇ ಮಂದಿ ದ್ವೇಷಿಸುವವರೂ ಇದ್ದಾರೆ.

ಅವರು ಅಮೇರಿಕದ ಅಧ್ಯಕ್ಷರಾದರೂ ಸಾದಾ ಜೀವನವನ್ನು ನಡೆಸುತ್ತಾರೆ ಎಂದು ನೋಡಿದರೂ ಯಾವುದಾದರೂ ಕೆಲಸದಲ್ಲಿ ಮಗ್ನರಾಗಿಯೇ ಇರುತ್ತಾರೆ. ಮೀನು ಹಿಡಿಯುವ ತನ್ನ ಕುಶಲ ವೃತ್ತಿಯನ್ನು ಮಾಡುವಾಗಲೂ ಅವರ ಮನಸ್ಸು ಆಲೋಚನಾಮಯವಾಗಿಯೇ ಇರುತ್ತದೆ. ಅವರು ಒಮ್ಮೊಮ್ಮೆ ಸಿನೆಮಾ ನೋಡುವುದಿದೆ. ಆದರೆ ಅವರಿಗೆ ಪ್ರತಿದಿನವೆಂಬಂತೆ ನಡು ರಾತ್ರಿಯ ವರೆಗೂ ತುಂಬಾ ಕೆಲಸವಿರುತ್ತದೆ. ನಿದ್ರೆಯಿಂದ ಎದ್ದೊಡನೆ ಪತ್ರ ಬರೆಯುವ ಮತ್ತು ಹಾಸಿಗೆಯಿಂದಲೇ ತಂತಿ ಬಿಡಬೇಕಾಗುವ ಸಂದರ್ಭಗಳು ಹಲವಿರುತ್ತವೆ.

ರೂಜವೆಲ್ಟರು ತನ್ನದೇ ಆದ ಒಂದು ಕೊಳದಲ್ಲಿ ಈಜಾಡುವ ಅಭ್ಯಾಸವನ್ನಿಟ್ಟುಕೊಂಡಿದ್ದಾರೆ—ಅದುದರಿಂದಲೇ ಏನೋ ಆರೋಗ್ಯವಾಗಿದ್ದಾರೆ ಅವರಿಗೆ ಮದ್ಯಪಾನದ ಅಭ್ಯಾಸವಿಲ್ಲ ಹಾಗೆಂದು ಹೊಗೆಬತ್ತಿಯೊಂದು ಸದಾಕಾಲ ಬಾಯಲ್ಲಿರಲೇಬೇಕು ಒಂದು ಬತ್ತಿಯಿಂದಲೇ ಮತ್ತೊಂದಕ್ಕೆ ಬೆಂಕಿ ತಗಲಿಸಿ ಹೊಗೆ ಬಿಡುತ್ತಲೇ ಇರುವುದು ಅವರ ಪದ್ಧತಿ.

ರೂಜವೆಲ್ಟರ ಮುಂಜಾನೆಯ ಊಟ ತೀರ ಸಾದಾತರದ್ದು. ಮಧ್ಯಾಹ್ನ ಊಟಕ್ಕೆ ಸಾರು, ಮೇಲೋಗರವನ್ನು ಸೇವಿಸುತ್ತಾರೆ. ಹೆಚ್ಚಾಗಿ ಆ ಊಟವನ್ನು ತನ್ನ ಆಫೀಸಿನಲ್ಲಿಯೇ ಮಾಡುವುದು ಅವರ ರೂಢಿ. ಅವರ ಊಟವಾದರೋ ಬೇಗ ಮುಗಿಯುವುದು. ಪರಂತು, ಊಟ ಮಾಡುತ್ತಿರುವಾಗಲೂ ಅವರು ಮಾತನಾಡುತ್ತಿರುತ್ತಾರೆ. ಆದಿತ್ಯವಾರ ರಾತ್ರಿಯ ಊಟವನ್ನು ಮಾತ್ರ ಅವರು ಸಂಭ್ರಮದಿಂದ ಜರಗಿಸುವುದಿದೆ. ಅದಕ್ಕೆ ಮಿತ್ರರನ್ನೆಲ್ಲ ಆಮಂತ್ರಿಸುತ್ತಾರೆ [illegible] ಡಿ-ಇತ್ಯಾದಿಗಳಿಂದ ಊಟವು ಪರಿಷ್ಕೃತವಾಗಿರುತ್ತದೆ.

ರೂಜವೆಲ್ಟರ ಪತ್ನಿ ಅವರಷ್ಟೇ ಉತ್ಸಾಹಿಗಳು. ವೃತ್ತಲೇಖನ, ಗ್ರಹವಿಚಾರ, ಶಿಕ್ಷಣ, ಆಸ್ಪತ್ರೆಯ ಕೆಲಸ, ಅತಿಥಿ ಸತ್ಕಾರ, ಪತಿಗೆ ಸಹಾಯ-ಹೀಗೆ ಒಂದಲ್ಲೊಂದು ಕೆಲಸ ಅವರಿಗಿದ್ದೇ ಇದೆ. ಗಂಡನಷ್ಟೇ ಶ್ರದ್ಧೆಯಿಂದ ಹೆಂಡತಿ ಏಕ ಛತ್ರಾಧಿಪತಿಗಳನ್ನು ದ್ವೇಷಿಸುತ್ತಾಳೆ.

ಅಮೇರಿಕದ ಅಧ್ಯಕ್ಷರಾದ ರೂಜವೆಲ್ಟರ ಹಿರಿಯರ ಮನೆ ನ್ಯೂಯೋರ್ಕ ಸಂಸ್ಥಾನದ ಹ್ಯಾಡ್ ಪಾರ್ಕ ಎಂಬಲ್ಲಿದೆ. ಅವರು ಚಿಕ್ಕಂದಿನಲ್ಲೇ ನೌಕಾ ಪಡೆಗೆ ಸೇರಿದ್ದರು. ಅನಂತರ ಯುರೋಪಿನ ಪ್ರವಾಸವನ್ನು ಮಾಡಿದರು. ಅವರ ತಾರುಣ್ಯದಲ್ಲೇ ನೌಕಾ ಖಾತೆಯ ಸಹಾಯಕ ಕಾರ್ಯದರ್ಶಿಯ ಪದವಿಯು ಅವರಿಗೆ ಲಭಿಸಿತು. ಅನಂತರ, ಲೂಯಿ ಹೌ ಎಂಬ ಪತ್ರಿಕಾಕರ್ತರೊಬ್ಬರು ರೂಜವೆಲ್ಟರ ಪ್ರತಿಭೆಯನ್ನೂ, ಅವರ ವಾಕ್ಚಾತುರ್ಯ, ಸ್ನೇಹಭಾವ, ಉತ್ಸಾಹ, ಧೈರ್ಯ ಮುಂತಾದ ಸದ್ಗುಣಗಳನ್ನೂ ಕಂಡು ಅವರೇ ಅಧ್ಯಕ್ಷರಾಗಲು ಅರ್ಹರೆಂದು ತಿಳಿದರು.

ಆಗ ೧೯೩೨ನೆಯ ಇಸವಿ. ಅಮೇರಿಕವು ಆರ್ಥಿಕ ಸಂಕಟಕ್ಕೊಳಗಾಗಿತ್ತು. ಎಲ್ಲಿ ನೋಡಿದರಲ್ಲಿ ನಿರುದ್ಯೋಗಿಗಳು ಕಂಡು ಬರುತಿದ್ದರು ಇಡಿ ಅಮೇರಿಕದ ಆಡಳಿತವು ೬೦ ಶ್ರೀಮಂತ ಕುಟುಂಬಗಳ ಅಧೀನವಾಗಿತ್ತು, ಅವರು ಮಾಡಿದ್ದೇ ಕಾನೂನು, ಹೇಳಿದ್ದೇ ನ್ಯಾಯವಾಗುತಿತ್ತು. ದೊಡ್ಡ ದೊಡ್ಡ ಹುದ್ದೆಯಲ್ಲಿದ್ದ ಆ ಶ್ರೀಮಂತರಿಗೆ ಅವರ ನೌಕರರೇ ಆದ ಪೋಲೀಸರಿದ್ದರು. ಮಜೂರರಿಗೂ ಬಂಡವಾಳ ಶಾಹಿಯವರಿಗೂ ಆಗಾಗ ಕಲಹಗಳುಂಟಾಗುತಿದ್ದವು. ಬಡತನದಿಂದ ನರಳುವವರಿಗೆ ಅವರಿಂದ ಹೊರಲಾರದಷ್ಟು ತೆರಿಗೆಯಿದ್ದರೂ ಮಿಲಿಯಾಧಿಪತಿಗಳಿಗೆ ಆ ಕರಗಳಿಂದ ವಿನಾಯತಿಯಿತ್ತು. ಇಂತಹ ಅನ್ಯಾಯ, ಸೂರೆ-ಸುಲಿಗೆಗಳು ತನ್ನ ಕಣ್ಣಮುಂದೆ ನಡೆಯುವುದನ್ನು ಸಹಿಸಲಾಗದಿದ್ದವರಲ್ಲಿ ಹೌ ಒಬ್ಬರು. ಅವರು ರೂಜವೆಲ್ಟರು ಆರಿಸಿಬರುವಂತೆ ಪ್ರಯತ್ನಪಟ್ಟರು. ದುಸ್ಥಿತಿಯ ಮಡುವಿನಲ್ಲಿ ಬಿದ್ದಿದ್ದ ಅಮೇರಿಕವನ್ನು ಸುಧಾರಿಸುವ ಧ್ಯೇಯವನ್ನಿಟ್ಟುಕೊಂಡ ರೂಜವೆಲ್ಟರು ಅಧ್ಯಕ್ಷ ಪದವಿಯನ್ನೇರಿದರು.

ರೂಜವೆಲ್ಟರು ತನ್ನ ಕೈಲಾದಷ್ಟು ಪರಿಸ್ಥಿತಿಯ ಸುಧಾರಣೆ ಮಾಡಿದವರು. ಮಜೂರರಿಗೆ ಆರ್ಥಿಕ ಭದ್ರತೆ, ಶ್ರೀಮಂತರಿಂದಾಗುತಿದ್ದ ಸೂರೆ-ಸುಲಿಗೆಯ ನಿವಾರಣೆ-ಮುಂತಾದ ಕಾರ್ಯಗಳಲ್ಲಿ ಅವರು ತುಂಬಾ ದುಡಿದಿದ್ದಾರೆ. ಅಲ್ಲದೆ, ಅಂತರ್ರಾಷ್ಟ್ರೀಯ ರಾಜಕಾರಣದಲ್ಲಿ ಕೈ ಹಾಕಿ, ಬ್ರಿಟನ್ನಿನ ಪಕ್ಷದಲ್ಲಿ ನಿಂತು, ಪ್ರಜಾಪ್ರಭುತ್ವದ ಹೆಸರಲ್ಲಿ ಅವರು ಹೋರಾಡುತ್ತಿದ್ದಾರೆ. ಅಮೇರಿಕವು ಬ್ರಿಟನ್ನಿನ ಪಕ್ಷವನ್ನು ವಹಿಸದಿದ್ದರೆ ಈ ಮಹಾಯುದ್ಧದ ಹಾಗೂ ಪ್ರಪಂಚದ ಇತಿಹಾಸವೇ ಬೇರಾಗುತಿತ್ತೆಂಬುದರಲ್ಲಿ ಸಂದೇಹವಿಲ್ಲ.

ಅಮೇರಿಕದ ಅಧ್ಯಕ್ಷರಿಗೆ ವರ್ಷಕ್ಕೆ ೭೫೦೦೦ ಡಾಲರುಗಳ ಸಂಬಳವಿದೆ ಆದರೆ ಅಂತಹ ಶ್ರಮದಾಯಕವಾದ ಪದವಿಗೆ, ಆ ಸಂಬಳ ಎಷ್ಟಕ್ಕೂ ಹೆಚ್ಚಲ್ಲವೆಂದು ತಜ್ಞರ ಅಭಿಪ್ರಾಯ. ಹೆಚ್ಚಿನ ಮಾಜಿ ಅಧ್ಯಕ್ಷರೆಲ್ಲ ತಮ್ಮ ಅಧಿಕಾರದ ಅವಧಿ ಮುಗಿದ ಅಲ್ಪ ಕಾಲದಲ್ಲೇ ಮೃತಿ ಹೊಂದಿರುವರು. ಅವರ ಮರಣಕ್ಕೆ ಅಧ್ಯಕ್ಷ ಪದವಿಯನ್ನು ಹೊತ್ತ ಶ್ರಮವೇ ಬಹುಮಟ್ಟಿಗೆ ಕಾರಣವೆನ್ನುತ್ತಾರೆ.

ರೂಜವೆಲ್ಟರು ಹಾರೈಸಿದ್ದಂತೆ ಅಮೇರಿಕದಲ್ಲಿ 'ರಾಮರಾಜ್ಯ'ದ ಸ್ಥಾಪನೆ ಮಾಡಿಲ್ಲವಾದರೂ, ಅಲ್ಲಿಯ ಸಾಮಾನ್ಯ ನಾಗರಿಕನೊಬ್ಬನ ಸುಖಜೀವನಕ್ಕೆ ಹಲವಾರು ರೀತಿಗಳಲ್ಲಿ ನೆರವಾಗಿದ್ದಾರೆನ್ನಲು ಸಂಶಯವಿಲ್ಲ.

THE UDIPI BANK LTD.

Head Office. UDIPI, S. K.

Estd 1925

ANNOUNCEMENT

A branch of the bank has been opened at Padubidri on 31-10-44.

ಪ್ರಕಟಣೆ

ನಮ್ಮ ಬ್ಯಾಂಕಿನ ಶಾಖೆಯೊಂದು ತಾ. 31—10—44 ರಲ್ಲಿ ಪಡುಬಿದ್ರೆಯಲ್ಲಿ ತೆರೆಯಲ್ಪಟ್ಟಿರುವುದು.

ದಿ ಉಡುಪಿ ಬ್ಯಾಂಕ್ ಲಿಮಿಟೆಡ್, ಉಡುಪಿ.

ಪಡುಬಿದ್ರಿಯಲ್ಲಿ ಉಡುಪಿ ಬ್ಯಾಂಕಿನ ಶಾಖೆ:—ತಾ. 31 10 44ರಲ್ಲಿ ಉಡುಪಿ ಬ್ಯಾಂಕ್ ಲಿಮಿಟೆಡ್ ಇದರ ಶಾಖೆಯೊಂದು ಡಾಕ್ಟರ್ ಕೆ. ಎಲ್. ಐತಾಳ್, ಎಂ. ಬಿ. ಬಿ. ಎಸ್ ಇವರ ಅಧ್ಯಕ್ಷತೆಯಲ್ಲಿ ಪಡುಬಿದ್ರೆಯಲ್ಲಿ ತೆರೆಯಲ್ಪಟ್ಟಿರುವುದು. ಪ್ರಾರಂಭದಲ್ಲಿ ಬ್ಯಾಂಕಿನ ಮೆನೇಜರ್ ಶ್ರೀ. ಯು. ಎ. ಪ್ರಭುಗಳು ಬ್ಯಾಂಕಿಂಗ್ ವಿಷಯವಾಗಿ ಚಿಕ್ಕ ಭಾಷಣ ಮಾಡಿದರು. ವಕೀಲ್ ಶ್ರೀ ಎಂ. ಡಿ. ಕಾಮತರು ಜನರ ಸಹಕಾರವನ್ನು ಕೋರಿ ಮಾತನಾಡಿದರು. ಅಧ್ಯಕ್ಷರ ಸಂದರ್ಭೋಚಿತ ಭಾಷಣವಾದ ಮೇಲೆ ಡೈರೆಕ್ಟರ್ ಶ್ರೀ ಕೆ. ಅಣ್ಣಪ್ಪ ಭಗತರು ಧನ್ಯವಾದಗಳನ್ನಿತ್ತರು. ಉಪಾಹಾರದೊಂದಿಗೆ ಸಭಾಂತ್ಯವಾಯಿತು.

General Supplies Ltd. Udipi.

(In Liquidation)

(Under sec. 209 H of Indian Companies Act)

Notice is hereby given that a meeting of the Shareholders of the Company will be held on Sunday the 17th December 1944 at 5-30 p. m. at the premises of the Company at Vishwajna Bhavan, Udipi for considering the following agenda.

1. To consider the account of the acts and dealings of the Liquidators and of the conduct of the winding up during the year and to adopt the accounts of the Liquidators.

2. Any other items of business which may be brought before the meeting with the previous consent of the Chairman

K. Gururaja Rao.
Narayana Rao K.
Joint Liquidators.

Camp: UDIPI
Dated 3-10-44

ಸಮಾಚಾರ ಸಂಗ್ರಹ

ಅಖಿಳ ಭಾರತ ಆಕಾಶವಾಣಿಗೆ ಬಹಿಷ್ಕಾರ. ಹಿಂದೀ ಸಮ್ಮೇಳದ ಠರಾವು

ಅಖಿಳ ಭಾರತ ಹಿಂದೀ ಸಾಹಿತ್ಯ ಸಮ್ಮೇಳನದ ಸ್ಥಾಯೀ ಸಮಿತಿಯು ಆಲ್ ಇಂಡಿಯಾ ರೇಡಿಯೋ ಸಂಸ್ಥೆಯ ಹಿಂದೀ ವಿರೋಧ ಧೋರಣೆಯನ್ನು ಖಂಡಿಸುವ ಸೂಚಕವಾಗಿ ಯಾವ ಹಿಂದೀ ಲೇಖಕನಾಗಲಿ ಇನ್ನು ಮುಂದೆ ಆ ಸಂಸ್ಥೆಯ ಆಕಾಶವಾಣಿ ಮೂಲಕ ಮಾತಾಡಕೂಡದೆಂದು ನಿರ್ಣಯ ಮಾಡಿಯದೆ.

ಪ್ರಾಥಮಿಕ ವಿದ್ಯಾಭ್ಯಾಸದಲ್ಲಿ ತಕ್ಕಷ್ಟು ಪ್ರಗತಿ ತೋರುವುದಿಲ್ಲವೇಕೆ?

ಎಸ್. ಎಚ್. ವುಡ್ ಮತ್ತು ಸಾರ್ಜೆಂಟರ ಅಭಿಪ್ರಾಯ.

೧ ಹಸಿದ ಮಕ್ಕಳಿಗೆ ವಿದ್ಯೆ ಕಲಿಸುವುದು.

೨. ಪರೀಕ್ಷೆಗಳಿಗೆ ಹದಮೀರಿದ ಪ್ರಾಧಾನ್ಯಸೀಯುವುದು.

೩. ಶಾಲಾ ವಾತಾವರಣವು ಮಕ್ಕಳ ಆಟ ಮುಂತಾದ ಶಾರೀರಿಕ ಚಟುವಟಿಕೆಗಳ ಅವಕಾಶವಿರಹಿತವಾಗಿ ನಿರುತ್ತೇಜವಾಗಿರುವುದು. ಮಕ್ಕಳ ಇಂದಿನ ಬಾಳಿನ ಸಮೋಲ್ಲಾಸಗಳ ಕಡೆಗೆ ಹೆಚ್ಚಿನ ಗಮನವೀಯದೆ ನಾಳಿನ ಬಾಳಿಗೆ ಅವರನ್ನು ಸಿದ್ಧಗೊಳಿಸುವ ಧ್ಯೇಯದಿಂದ ವಿದ್ಯೆಯನ್ನು ತುರುಕುವುದು.

೪. ಉಪಾಧ್ಯಾಯರಿಗೆ ತಕ್ಕಷ್ಟು ಆದರಣೆಯಿಲ್ಲದಿರುವುದು.

೫. ಉಪಾಧ್ಯಾಯರ ಈಗಿನ ಸಂಬಳವು ನಿಕೃಷ್ಟವಾಗಿದ್ದು ಅರೆಹೊಟ್ಟೆಯು ಇವರಿಂದ ಪರಿಪೂರ್ಣತೆಯನ್ನು ನಿರೀಕ್ಷಿಸುವುದು.

೬. ಅಲ್ಪವೇತನ ಹಾಗೂ ಅನಾದರಣೆಯಿರುವ ಅಧ್ಯಾಪಕತನವು ಸಮರ್ಥರನ್ನು ಆಕರ್ಷಿಸದಿರುವುದು

೭. ಶಿಕ್ಷಣ ಕ್ರಮದಲ್ಲಾಗುವ ಪ್ರಗತಿಮಾರ್ಗಗಳನ್ನು ಉಪಾಧ್ಯಾಯರ ಅವಗಾಹನೆ ಹಾಗೂ ಪ್ರಯೋಗಕ್ಕೆ ಬರುವಂತೆ ಅವನ್ನು ಅವರಿಗೆ ಆಗಾಗ ಬೋಧಿಸುವ ಪುನಶ್ಚರಣೆ (ರಿಫ್ರೆಶ್ಮರ್ ಕೋರ್ಸ್)ಯ ಕೇಂದ್ರಗಳನ್ನು ಮಾಡದಿರುವುದು.

ಮೇಲಿನ ಏಳು ಕಾರಣಗಳಿಂದಾಗಿ ಇಂಡಿಯಾದಲ್ಲಿ ಪ್ರಾಥಮಿಕ ವಿದ್ಯಾಭ್ಯಾಸವು ಪರಿಣಾಮಕಾರಿಯಾದ ಪ್ರಗತಿ ಮಾರ್ಗವನ್ನು ಹಿಡಿದಿಲ್ಲವೆಂದು ಬ್ರಿಟಿಷ್ ಎಡ್ಯುಕೇಶನ್ ಬೋರ್ಡಿನ ಪ್ರತಿನಿಧಿಗಳಾಗಿ ಈ ದೇಶಕ್ಕೆ ಬಂದು ಕೆಲವು ಸಮಯ ಇಲ್ಲಿಯ ವಿದ್ಯಾಪ್ರಚಾರವನ್ನು ಪರಿಶೀಲಿಸಿದ ಮಿ. ಎಸ್. ಎಚ್. ವುಡ್ ಇವರೂ ಮಿ. ಜೋನ್ ಸಾರ್ಜೆಂಟರೂ ಬಿ. ಬಿ. ಸಿ. ಆಕಾಶವಾಣಿಯ ಮೂಲಕ ಹೇಳಿದರು

ಸಾರ್ವಜನಿಕ ಪುಸ್ತಕ ಭಂಡಾರಗಳಿಗೆ ಗ್ರಾಂಟು

ಮದ್ರಾಸು ಸರಕಾರವು ಪ್ರಾಂತದೊಳಗಿನ ಸಾರ್ವಜನಿಕ ಪುಸ್ತಕ ಭಂಡಾರಗಳಿಗೆ ಹಂಚುವುದಕ್ಕಾಗಿ ಈ ವರುಷಕ್ಕೆ ರೂ. ೨೪೭೬೫ನ್ನು ತೆಗೆದಿಟ್ಟಿದೆ. ಇದು ಪುಸ್ತಕಗಳನ್ನೂ ಕಪಾಟುಗಳನ್ನೂ ಕೊಂಡುಕೊಳ್ಳುವ ವೆಚ್ಚಕ್ಕಲ್ಲದೆ ಕಟ್ಟೋಣಗಳ ವೆಚ್ಚಕ್ಕಾಗಿ ವಿನಿಯೋಗಿಸ ಕೂಡದೆಂದೂ ತಿಳಿಸಿಯದೆ.

ಮಲಬಾರಿಗೆ ೧೦೦೦೦ ಟನ್ನು ಅಕ್ಕಿ.

ಸಿಂಧ ಪ್ರಾಂತದಿಂದ ಮಲಬಾರಿಗೆ ಹತ್ತು ಸಾವಿರ ಟನ್ನು ಅಕ್ಕಿಯನ್ನು ಕಳುಹಬೇಕೆಂದು ಇಂಡಿಯಾ ಸರಕಾರದ ಅಪ್ಪಣೆ. ಇದಲ್ಲದೆ ಈ ಮೊದಲಿನ ಅಪ್ಪಣೆ ಪ್ರಕಾರ ಸಿಂಧ ಪ್ರಾಂತದಿಂದ ಐದುಸಾವಿರ ಟನ್ನು ಅಕ್ಕಿಯಲ್ಲಿ ಹೆಚ್ಚಿನ ಅಂಶ ಈಗಾಗಲೆ ಕಲ್ಲಿಕೋಟೆಗೆ ಬಂದು ತಲಪಿದೆ.

ಸಂದರ್ಶನೆಗಾಗಿ ಬಂಧುಗಳು ಬರುವುದು ಬೇಡ

ಬಂಧನದಲ್ಲಿರುವ ಕೃಪಾಲಾನಿಯವರೂ ತಮ್ಮ ಬಂಧುಬಾಂಧವರು ಸಂದರ್ಶನೆಗಾಗಿ ಬರುವುದು ಬೇಡವೆಂತ ಬರೆದಿರುವರಂತೆ. ಇತ್ತೀಚೆಗೆ ಸರಕಾರವು ಅಹಮ್ಮದಾನಗರ ಕೋಟೆಯಲ್ಲಿ ಬಂಧನದಲ್ಲಿರುವ ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯ ಸದಸ್ಯರನ್ನು ಅವರ ಸನಿಹಬಂಧುಗಳು ಸಂದರ್ಶಿಸಬಹುದೆಂಬ ಸವಲತ್ತನ್ನು ಕೊಟ್ಟಿದೆ. ಆದರೆ ಸ್ವಾಭಿಮಾನವನ್ನಿಟ್ಟುಕೊಂಡು ಸಂದರ್ಶನೆಯ ಮಾತುಕತೆಗಳು ನಡೆಯುವುದು ಅಸಂಭವವೆಂದೂ ಆ ಕಾರಣದಿಂದಾಗಿ ತನ್ನ ಸಂದರ್ಶನೆಗೆ ಯಾರೂ ಬರುವ ಪ್ರಯತ್ನ ಮಾಡಬಾರದೆಂದೂ ಈ ಮೊದಲು ಪಂಡಿತ ನೆಹರೂಗಳು ತನ್ನ ಬಂಧುಗಳಿಗೆ ಬರೆದಂತೆಯೆ ಈಗ ಕೃಪಾಲಾನಿಯವರೂ ತನ್ನ ಬಂಧುಗಳಿಗೆ ತಿಳಿಸಿರುವರು.

ಅಖಿಳ ಪಕ್ಷಗಳ ಸಮ್ಮೇಳನ ಗಾಂಧೀಜಿಗಳ ಕರೆ

ಕಾಂಗ್ರೆಸ್ಸಿನ ವಳಯದಿಂದ ಹೊರಗಿರುವ ಸರ್ ತೇಜ ಬಹಾದೂರ ಸಪ್ರು, ಡಾ। ಜಯಕರ್, ಮೌಲಾನಾ ಹುಸ್ಸೇನ್ ಅಹಮ್ಮದ್ ಮದಾನಿ, ಪಂಡಿತ್ ಕುಂಜ್ರು, ಫಜ್ಲುಲ್ ಹಕ್, ಮುಂತಾದ ಹಲವು ವಿವಿಧ ಪಕ್ಷ ಹಾಗೂ ರಾಜಕೀಯ ಪಂಥಗಳ ಮುಂದಾಳುಗಳ ಅಭಿಪ್ರಾಯಗಳನ್ನೂ ಸೆರೆಮನೆಯ ಹೊರಗಿರುವ ಕಾಂಗ್ರೆಸ್ಸಿನ ಮುಂದಾಳುಗಳ ಒಲವುಗಳನ್ನೂ ತಿಳಿದುಕೊಂಡು ಗಾಂಧೀಜಿಯವರು ಈಗ ಅಖಿಳ ಭಾರತ ಪಕ್ಷಪಂಥಗಳ ಸಮ್ಮೇಳನವನ್ನು ಕರೆಯುವುದಾಗಿ ನಿಶ್ಚಯಿಸಿರುವರು. ಇದರ ಉದ್ದೇಶವು ಭಾರತೀಯ ರಾಜಕೀಯ ಪರಿಸ್ಥಿತಿಯ ಅತ್ಯಾಧುನಿಕ ನೆಲೆಯನ್ನು ನಿಶ್ಚೈಸಿಕೊಳ್ಳುವುದು ಮತ್ತು ಇತ್ತೀಚೆಗೆ ಸರಕಾರದೊಡನೆಯೂ ಮುಸ್ಲಿಂ ಲೀಗದೊಡನೆಯೂ ತಾನು ಗೈದ ಸಂಧಾನ ಪ್ರಯತ್ನದ ವಿಫಲತೆಯ ದೃಷ್ಟಿಯಿಂದ ಮುಂದೇನು ಮಾಡಬಹುದೆಂಬುದರ ವಿಚಾರವಿನಿಮಯ ಮಾಡಿ ಇತ್ಯರ್ಥಿಸಿಕೊಳ್ಳುವದು.

ಗಾಂಧೀಜಿಗಳು ಮತ್ತೊಂದು ಉಪವಾಸವನ್ನು ಕೈಗೊಳ್ಳುವರೇ?

ಶ್ರೀ. ಹೋರ್ನಿಮನರು ಈ ಪ್ರಶ್ನೆ ಕೇಳಿ ಪೇರೇಲಾಲ್‌ರಿಗೆ ಕೊಟ್ಟ ತಂತಿಯ ವಿಷಯವಾಗಿ ಗಾಂಧೀಜಿಗಳೇ ವಿವರಣೆಯನ್ನೀಯುತ್ತ ತಾನು ಹಾಗೆ ಮಾಡುವ ಕಾಲ ಬಂದೀತೆಂದು ತನ್ನ ಗೆಳೆಯರೊಡನೆ ಹೇಳುತ್ತಾ ಬಂದಿದ್ದೇನೆಂದೂ ಆದರೆ ಆತ್ಮ ಪರಿಶುದ್ಧಿಗಾಗಿ ಪರಮಾತ್ಮನ ದಿವ್ಯಪ್ರಕಾಶ ಸಾಕ್ಷಾತ್ಕಾರಕ್ಕಾಗಿ ಮಾಡಬೇಕಾಗಿರುವ ಆ ತಪಶ್ಚರಣೆಗೆ ಎಂದು ತನ್ನ ಅಂತಃವಾಣಿಯು ಕರೆಯುವುದೋ ಎಂಬುದನ್ನು ನಾನೀಗ ಹೇಳಲಾರೆನು ಅಂತಹ ಕರೆ ಕೇಳಿದಂತಾಗುತ್ತಿದೆ. ಆದರೆ ಸ್ಪಷ್ಟವಿಲ್ಲ. ನಿಜವಾದ ಕರೆಯನ್ನಲೂ ಬರುವುದಿಲ್ಲ. ಈಗೇನೋ ಕರೆಯೆಂದು ತೋರುವ ಅದು ನಿಜವಾದ ಕರೆಯಾಗದಿರಲೂ ಬಹುದು-ಎಂದಿರುವರು

ಬ್ರಿಟನ್ನಿನಲ್ಲಿರುವ ಮುಸ್ಲಿಮರಲ್ಲಿ ಸೇಕಡಾ99 ಪಾಕಿಸ್ಥಾನಕ್ಕೆ ವಿರೋಧ. ಕಾಂಗ್ರೆಸ್ಸಿನೊಡನೆ ಶರ್ತರಹಿತ ಮೈತ್ರಿಗೆ ಅನುಮೋದನೆ –

ಗ್ರೇಟ್ ಬ್ರಿಟನ್ನಿನಲ್ಲಿಯ ಇಂಡಿಯನ್ ಕಾಂಗ್ರೆಸ್ ಕೂಟದ ವಾರ್ಷಿಕ ಅಧಿವೇಶನದಲ್ಲಿ ಅಖಿಳ ಬ್ರಿಟನ್ನಿನ ಜಮಾಯಿತುಲ್ಲ ಮುಸ್ಲಿಂ ಸಭೆಯ ಅಧ್ಯಕ್ಷರಾದ ಸೈಯುದ್ ಅಮೀರ್ ಷಾರವರು ಹೀಗೆ ಹೇಳುತ್ತಾರೆ- ಬ್ರಿಟನ್ನಿನಲ್ಲಿರುವ ಐದುಸಾವಿರ ಮಂದಿ ಮುಸ್ಲಿಮರಲ್ಲಿ ಸೇಕಡಾ 99ರಷ್ಟು ಜನರು ಪಾಕಿಸ್ಥಾನಕ್ಕೆ ಬದ್ಧ ವಿರುದ್ಧರಾಗಿದ್ದಾರೆ ಕಾಂಗ್ರೆಸಿನೊಡನೆ ಶರತ ರಹಿತ ಮೈತ್ರಿಗೆ ಅವರ ಪರಿಪೂರ್ಣ ಅನುಮೋದನೆ ಇದೆ- ಪಾಕಿಸ್ಥಾನವೆಂಬ ಯೋಜನೆಯನ್ನು ಆಮೂಲಾಗ್ರವಾಗಿ ನಾವೆಷ್ಟು ಆಗ್ರಹದಿಂದ ದ್ವೇಷಿಸುತ್ತಿದ್ದೇವೆಂಬುದನ್ನು ಸ್ಪಷ್ಟಾಕ್ಷರಗಳಿಂದ ಜಿನ್ನಾರವರಿಗೆ ನಾವು ತಿಳಿಸುತ್ತೇವೆ

ಸರ್. ಸಿ. ವಿ. ರಾಮನ್‌ರಿಗೆ ಡಾಕ್ಟರ್ ಬಿರುದು

ಅಲ್ಲಹಾಬಾದ್ ವಿಶ್ವವಿದ್ಯಾನಿಲಯವು ಸರ್। ಸಿ। ವಿ। ರಾಮನ್ ಇವರಿಗೆ ಮುಂಬರುವ ತಾ. ೪ರಂದು ಜರಗಲಿರುವ ಅದರ ಪದವಿಪ್ರಧಾನ ಮಹೋತ್ಸವದಲ್ಲಿ ಡಾಕ್ಟರ್ ಆಫ್ ಸಯನ್ಸ್ ಎಂಬ ಬಿರುದನ್ನು ಕೊಡುವುದಾಗಿ ನಿಶ್ಚಯಿಸಿದೆ.

ಸೋವಿಯೇಟ (ರಷ್ಯಾ)ದ ಉಕ್ಕಿನ ನಗರ

ಉರಾಲ ಪರ್ವತದ ಬಳಿಯಲ್ಲಿರುವ ಮೆಗ್ನಿಟೋಗೋರ್ಸ್ಕ್ ಎಂಬ ನಗರವು ರಷ್ಯಾದ ಉಕ್ಕಿನ ಕಾರ್ಖಾನೆಯಲ್ಲಿ ಪ್ರಥಮ ಸ್ಥಾನವನ್ನು ಹೊಂದಿದೆ. ಇದರ ಸಮೀಪವಿರುವ ಪರ್ವತದಲ್ಲಿ ಸೇಕಡ 45ರಿಂದ 60ರ ವರೆಗೆ ಕಬ್ಬಿಣ ದೊರಕುವ ಅದುರುಗಳು 325 ಮಿಲಿಯ ಟನ್ನುಗಳು ದೊರಕಲಾಸವೆಂದು ತಜ್ಞರು ಲೆಕ್ಕ ಹಾಕಿರುವರು. ಈ ಕಾರ್ಖಾನೆಯ ಉದ್ಯಮದ ಯೋಜನೆಯು 1948ಕ್ಕೆ ಪರಮಾವಧಿಯನ್ನು ಮುಟ್ಟುವಂತೆ ಏರ್ಪಡಿಸಲಾಗಿದೆಯೆಂದೂ ಆಗ ಅದು ಪ್ರಪಂಚದಲ್ಲಿ ಅತ್ಯಂತ ಹೆಚ್ಚು ಉಕ್ಕಿನ ಸಾಮಗ್ರಿಗಳನ್ನು ಸಿದ್ಧಗೊಳಿಸುವ ಕೇಂದ್ರವಾಗುವುದಂತೆ,

ಬರ್ಮಾ ಗಡಿಯಲ್ಲಿ

ಪಾಲಮಿನಿಂದ ಜಪಾನರು ಕಾಲುಕಿತ್ತಿರುಟಿಡ್ಡಿಮದಿಂದ ೧೯ ಮೈಲು ದಕ್ಷಿಣದಲ್ಲಿರುವ ಪಾಲಮಿನಿಂದ ಜಾಪಾನರು ತಮ್ಮ ಸೇನಾದಿಗಳನ್ನು ಹಿಂದೆ ಕೊಂಡುಹೋಗಿದ್ದಾರೆ. ಚಿನ್ ಪರ್ವತ ಪ್ರದೇಶದಲ್ಲಿ ಜಪಾನರ ಆಡಳಿತೆಯ ಪ್ರಧಾನ ಪಟ್ಟಣವಾದ ಪಾಲಮಿನಿಂದ ತಮ್ಮ ಠಾಣೆಯನ್ನು ತೆಗೆದಿದ್ದಾರೆ. ಈ ಚಿನ್ ಪ್ರದೇಶದ ನಾಲ್ವತ್ತು ಸಾವಿರ ಪರ್ವತ ಪ್ರದೇಶಗಳ ಮೇಲಿದ್ದ ಹಿಡಿತವು ಜಾಪಾನರ ಕೈಯಿಂದ ತಪ್ಪಿದಂತಾಯಿತು. ಈ ವಿಜಯದಲ್ಲಿ ಪರ್ವತ ಪ್ರದೇಶಿಯರೂ ಮಿತ್ರ ಪಕ್ಷದ ದಳಗಳೊಡನೆ ಸಹಕರಿಸಿದ್ದಾರೆ.

ಫಿಲಿಪ್ಪೈನ್ ದ್ವೀಪಗಳಲ್ಲಿ ಅಮೇರಿಕನರ ಸೇನೆಗಳು ಇಳಿದಿವೆ.

ವಿಮಾನ ಬಲಗಳ ರಕ್ಷಣಾಬಲದೊಡನೆ 600 ನೌಕೆಗಳ ಪಡೆಯು ಸಾವಿರಗಟ್ಟಳೆ ಅಮೇರಿಕನ್ ಸೈನಿಕರನ್ನು ತಂದು ಲೀಟೆ ದ್ವೀಪದಲ್ಲಿ ಇಳಿದಿದೆ. ಮತ್ತೊಂದು ಪಡೆಯು ಪಾಮೋನ್ ದ್ವೀಪವನ್ನು ಹಿಡಿದಿದೆ. ಈ ಪಡೆಗಳ ದಳವಾಯಿಯಾದ ಜನರಲ್ ಮೇಕ್ ಆರ್ಥರರು ಫಿಲಿಪ್ಪೈಯಿನ್ ದ್ವೀಪಗಳ ನಿವಾಸಿಕರಿಗೆ ಈ ರೀತಿ ಉದ್ಘೋಷಣೆಯನ್ನು ಕೊಟ್ಟಿರುವರು-'ಎರಡು ವರುಷಗಳ ಹಿಂದೆ ಐದು ತಿಂಗಳು ಇಪ್ಪತ್ತೈದು ದಿನಗಳ ತನಕ ಕಾದಾಡಿ ಅಮೇರಿಕಾ ಸೇನೆಯು ವೈರಿಗೆ ಶರಣಾಗತವಾಗಬೇಕಾದಾಗ ನಾವು ತಿರುಗಿಬಂದು ನಿಮ್ಮನ್ನು ಉದ್ಧರಿಸುವೆವು ಎಂದಿತ್ತ ವಾಗ್ದಾನದ ಮೇರೆಗೆ ಇಂದು ಬಂದಿಳಿದಿರುವೆವು. ನಿಮ್ಮ ಹಿಂದಿನ ಅಧ್ಯಕ್ಷ ಸರ್ಗೋ ಒಸ್ಮೆನಾ ಮತ್ತು ಮಂತ್ರಿಮಂಡಲದ ಸದಸ್ಯರೂ ನನ್ನೊಂದಿಗೆ ಬಂದಿಳಿದಿರುವರು. ನಿಮ್ಮ ಸರಕಾರವು ಪುನಃ ಸ್ಥಾಪಿತವಾಗಿದೆ. ನನಗೆ ಪರಿಪೂರ್ಣ ಬೆಂಬಲವಾಗಿ ನಿಂದು ಜಾಪಾನರಿಗೆ ಇಲ್ಲಿ ಆಶ್ರಯವಿಲ್ಲವೆಂಬುದನ್ನು ಶೂರತನದಿಂದ ತೋರಿ'.

ಅಮೇರಿಕದ ಕೃಷಿ ಇಲಾಖೆಯ ಹೊಸ ಸಂಶೋಧನೆಗಳು

ಹಾಲಿನಿಂದ ಕುಂಚಿಕೆಯ ಕೇಸರ, ಬಿಳಿ ಬಟಾಟೆಯಿಂದ ಮರದ ಸಾಮಾನುಗಳಿಗೆ ಬಳಿಯುವ ಬಣ್ಣ ಇವನ್ನು ಮಾಡುವ ವಿಧಾನಗಳ ಸಂಶೋಧನೆಯಾಗಿದೆ.

ನೋಟಿಸು.

ಉಡ್ಪಿ ಡಿಸ್ಟ್ರಿಕ್ಟ್ ಮುನ್ಸೀಫ್ ಕೋರ್ಟಿನಲ್ಲಿ.

O. P. No. 57/1941
R. I. A. No. 667/1944

ಗಣಪತಿ ಶ್ಯಾನುಭಾಗ-ಹೆಜ್ಮಾಡಿ ಮಾಧವ ಶ್ಯಾನುಭಾಗರ ಮಗ ಉಡ್ಪಿ ತಾಲ್ಲೂಕು ಕೋಟೆ ಗ್ರಾಮದ ಕಟ್ಪಾಡಿ— ಅರ್ಜದಾರ,

ಮತ್ತು

ಹಲಿವಿ ಬೀಬಿ ಕೂಡಾ— ಯೆದ್ರಿರು

ಯಾವರೊಳಗೆ

ಯೀ ಮೂಲಕ ಸರ್ವಜನರಿಗೆ ತಿಳಿಯಪಡಿಸುವುದೇನೆಂದ್ರೆ:—

ಮೇಲ್ಕಂಡO. P. ನಂಬ್ರ 57/41ನೇ ಅರ್ಜಿ ವ್ಯವಹಾರಣೆಯಲ್ಲಿ 13ರಿಂದ 19ನೇ ವರೇಗಿನ ರೆಸ್ಪಾಂಡೆಂಟರಾದ ಯೆದ್ರಿರಿಗೆ ನಿಂಗಡ್ಸಿದ ಆಸ್ತೀ ಜನ ಪೈಕಿ 13, 14ನೇ ರೆಸ್ಪಾಂಡೆಂಟರಾದ 1, 2ನೇ ಯೆದ್ರಿರ ಹಕ್ಕಿನ 13/48ನೇ ಅಂಶದ ರೂ 57-1-7ನ್ನು ನ್ನಲು ಮಾಡುವರೆ ಶಕ್ಸಿಮೆಂಟು 20ನೇ ರೆಸ್ಪಾಂಡೆಂಟನಾದ ತನಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ವಗೈರೆ ಅರ್ಜದಾರನು ದಾಖಲ್ಲು ಮಾಡಿದ ಸದ್ರಿ ಅರ್ಜಿಯು ತಾ. 16-11-44ಕ್ಕೆ ಉದ್ರಿ ಕೋರ್ಟಿನಲ್ಲಿ ತನ್ಕಿಗೆ ಯಿಟ್ಟಿರುವದ್ರಿಂದ ಆ ಕುರಿತು ಆಕ್ಷೇಪ ಹೇಳುವವರು ಸದ್ರಿ ತಾರೀಕಿನ ದಿವ್ಸ ಸದ್ರಿ ಅರ್ಜಿ ತನ್ಕಿ ಸಮಯ ಸದ್ರಿ ಕೋರ್ಟು ಮುಂದೆ ಸ್ವತಹಾ ಅಥವಾ ವಕೀಲರ ಮುಖಾಂತ್ರ ಹಾಜರಾಗಿ ತಮ್ಮ ಆಕ್ಷೇಪಗಳನ್ನು ಜ್ಯಾಹೀರು ಮಾಡಿಕೊಳ್ಳಬೇಕಾಗಿ ಯೀ ಮೂಲಕ ಎಲ್ಲಾ ಜನರಿಗೆ ತಿಳಿಯಪಡಿಸಲಾಗುತ್ತದೆ.

Haradi Ramanatha Pai.
Advocate for Petitioner.
Advocate's Office, Udipi,
Dated 24-10-1944.

ಪ್ರೆಸಿಡೆಂಟ್ ರೂಸವೆಲ್ಟ್

ಇದೇ ನವಂಬರ ೭ ಅಮೇರಿಕದ ಚರಿತ್ರೆಯಲ್ಲೊಂದು ಮಹತ್ವದ ದಿನ ೪ ವರ್ಷಗಳಿಗೊಮ್ಮೆ ಜರಗುವ ಅಧ್ಯಕ್ಷ ಚುನಾವಣೆ ಆ ದಿನ ನಡೆಯಲಿದೆ. ೧೯೩೨ರಿಂದ ಮೂರು ಬಾರಿ ಆರಿಸಲ್ಪಟ್ಟು, ಅಮೇರಿಕದ ಏಕೆ-ಪ್ರಪಂಚದ ಇತಿಹಾಸವನ್ನೇ ಬದಲು ಮಾಡಿದ ವ್ಯಕ್ತಿ ರೂಸವೆಲ್ಟರ ವ್ಯಕ್ತಿ ಚಿತ್ರವಿದು

ಪ್ರಪಂಚದ ಅತಿ ಶ್ರೀಮಂತ ಹಾಗೂ ಪ್ರಬಲ ರಾಷ್ಟ್ರವೆಂದರೆ ಅಮೇರಿಕ. ಮೂ ೩ ಮಿಲಿಯ ಚದರ ಮೈಲುಗಳ ವಿಸ್ತೀರ್ಣವಾಗಿದ್ದು, ಲೋಕದ ಅರೆವಾಸಿ ಕಚ್ಚಾ ಸ್ಸಾಲುಗಳನ್ನು ಉಪಯೋಗಿಸುತಿದ್ದು, ಅರೆವಾಸಿ ಕೈಗಾರಿಕೆಯನ್ನು ಕೈಕೊಂಡು ಅದರ ಸೇಕಡಾ ೬೦ರಷ್ಟು ಪ್ರಯೋಜನವನ್ನು ತಾನೇ ಪಡೆಯುವ ದೇಶವದು. ಪ್ರಪಂಚದ ಒಟ್ಟು ಚಿನ್ನದ ಮುಕ್ಕಾಲಂಶ ಅಮೇರಿಕ ಒಂದರಲ್ಲೇ ಇದೆ. ಅವರ ರಾಜ್ಯದಲ್ಲಿ, ಲೋಕದ ಅತಿ ದೊಡ್ಡ ತಾಮ್ರದ ಮತ್ತು ಕಲ್ಲಿದ್ದಲಿನ ಗಣಿಗಳು, ಎಣ್ಣೆಯ ಗಣಿಗಳು, ಕಬ್ಬಿಣದ ಅದುರು ದೊರೆಯುವ ಸ್ಥಳಗಳು, ಗೋದಿ ಹತ್ತಿ ಮುಂತಾದುವು ಬೆಳೆಯುವ ಸ್ಥಳಗಳೂ ಇವೆ ಹೀಗೆ ಧನಧಾನ್ಯ ಖನಿಜಗಳ ಸಂಪತ್ತಿನಿಂದ ತುಂಬಿ ತುಳುಕುವ ರಾಷ್ಟ್ರದ ಅಧಿನಾಯಕನೆಂದರೆ ಪ್ರೆಸಿಡೆಂಟ್ ರೂಸವೆಲ್ಟ್ ಅಷ್ಟೇಕೆ ಅಮೇರಿಕವೆಂದರೇನೆ ರೂಸವೆಲ್ಟ್.

ಅವರ ಸಂಪೂರ್ಣ ಹೆಸರು ಫ್ರಾಂಕ್ಲಿನ್ ಡೆಲಾನೊ ರೂಸವೆಲ್ಟ್ ಎಂಬುದಾಗಿ ಅಮೇರಿಕದಲ್ಲಿ ನಾಲ್ಕು ವರ್ಷಗಳಿಗೊಮ್ಮೆ ಅಧ್ಯಕ್ಷ ಪದವಿಯ ಚುನಾವಣೆ ನಡೆಯುವುದು ಅದಕ್ಕೆ ಸುಮಾರು ೧೩೦ ಮಿಲಿಯ ಜನರಿಗೆ ಮತವೀಯುವ ಅಧಿಕಾರವಿದೆ ಹೀಗೆ ನಡೆಯುವ ಚುನಾವಣೆಗಳಲ್ಲಿ, ಬಿಡದೆ ಮೂರು ಸಲ ಉತ್ತೀರ್ಣರಾದ ವ್ಯಕ್ತಿಯೆಂದರೆ ಅದು ರೂಸವೆಲ್ಟ್ ಅವರು ೧೯೩೨ನೆಯ ಇಸವಿಯಿಂದ ಅಮೇರಿಕದ ರಾಜಸೂತ್ರದ ಚಾಲಕರಾಗಿದ್ದಾರೆ ನಾಲ್ಕನೆಯ ಚುನಾವಣೆಯಲ್ಲಿ ಎಂದರೆ, ಇದೇ ನವಂಬರ ೭ರಂದು ಜರಗುವ ಚುನಾವಣೆಯಲ್ಲೂ ಅವರೇ ಆರಿಸಲ್ಪಟ್ಟರೂ ಅದೊಂದು ಆಶ್ಚರ್ಯವಾಗಲಾರದು.

ರೂಜವೆಲ್ಟರಿಗೀಗ ೬೨ ವರ್ಷ ಪ್ರಾಯ—ಹಿಟ್ಲರನಿಗಿಂತ ೭ ವರ್ಷಕ್ಕೆ ಅವರು ಹಿರಿಯರು. ಗುಣದಲ್ಲಿ, ಕಾರ್ಯದಕ್ಷತೆಯಲ್ಲಿ ಹೇಗೋ ಹಾಗೆಯೇ ದೇಹದಲ್ಲಿಯೂ ದೊಡ್ಡವರಿದ್ದಾರೆ ಅವರು ವೇದಿಕೆಯ ಮೇಲೆ, ಜನ ಸಮೂಹದ ನಡುವೆ ನಿಂತಾಗ, ಅವರ ಆಜಾನುಬಾಹು ದೇಹವು ದೂರದ ವರೆಗೂ ತೋರಬಲ್ಲುದು ಅವರು ಪ್ರಚಂಡ ವಾಗ್ಮಿಗಳಾದರೂ ಭಾಷಣ ಮಾಡುವಾಗ ಕೈಬೀಸುವುದೆಂದಿಲ್ಲ, ತಲೆಯಲ್ಲಾಡಿಸುವುದಿದ ಗಂಭೀರವಾದ ಮಧುರವಾದ ಸ್ವರದಲ್ಲಿ ಅವರು ತಮ್ಮ ಪಿಯ್ಯಾಸಿಗಳಿಂದ ಬರೆಯಲ್ಪಟ್ಟು, ತಾನೇ ಸ್ವತಃ ನೋಡಿ ತಿದ್ದಿದ, ಭಾಷಣಗಳನ್ನೋದುತ್ತಾರೆ ಸಾಮಾನ್ಯ ಎಲ್ಲಾ ಪತ್ರಿಕಾ ಪ್ರತಿನಿಧಿಗಳ ಪರಿಚಯ ಅವರಿಗಿದೆ—ಏಕೇ ಅವರೆಲ್ಲರ ಹೆಸರುಗಳನ್ನೂ ಅವರು ಚೆನ್ನಾಗಿ ಬಲ್ಲರು ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಿರುವಾಗ, ತನ್ನ ಮಂತ್ರಿ ಮಂಡಲವನ್ನೇ ಅವರು ಮರೆತುಬಿಡುವುದುಂಟು.

ರೂಜವೆಲ್ಟರು ಹಸನ್ಮುಖಿಗಳು, ನಗೆಗಾರರು ಮಾತಿನ ಮಲ್ಲರು ಆದರೆ ಮನಸ್ಸಿನಲ್ಲಿ ಚಿಂತಿಯಿದ್ದರೆ, ಅವರ ವೇಷವೇ ಬೇರೆ. ಸಿಟ್ಟುಬಂದಾಗ ಮೋಸಕ್ಕೆ-ಮೋಸ, ಏಟಿಗೆ-ಏಟು ಕೊಡಲಿಕ್ಕೂ ಅವರು ಸಿದ್ಧರು. ಹೀಗಾಗಿ ಅವರಿಗೆ ತುಂಬಾ ವೈರಿಗಳಿದ್ದಾರೆ. ಪ್ರೀತಿಸುವವರಷ್ಟೇ ಮಂದಿ ದ್ವೇಷಿಸುವವರೂ ಇದ್ದಾರೆ

ಅವರು ಅಮೇರಿಕದ ಅಧ್ಯಕ್ಷರಾದರೂ ಸೀದಾ ಜೀವನವನ್ನು ನಡೆಸುತ್ತಾರೆ ಎಂದು. ನೋಡಿದವರೂ ಯಾವುದಾದರೂ ಕೆಲಸದಲ್ಲಿ ಮಗ್ನರಾಗಿಯೇ ಇರುತ್ತಾರೆ ಮೀನು ಹಿಡಿಯುವ ತನ್ನ ಕುಶಲ ವೃತ್ತಿಯನ್ನು ಮಾಡುವಾಗಲೂ ಅವರ ಮನಸ್ಸು ಆಲೋಚನಾಮಯವಾಗಿಯೇ ಇರುತ್ತದೆ. ಅವರು ಒಮ್ಮೊಮ್ಮೆ ಸಿನೆಮಾ ನೋಡುವುದಿದೆ ಆದರೆ ಅವರಿಗೆ ಪ್ರತಿದಿನವೆಂಬಂತೆ ನಡು ರಾತ್ರಿಯ ವರೆಗೂ ತುಂಬಾ ಕೆಲಸವಿರುತ್ತದೆ. ನಿದ್ದೆಯಿಂದ ಎದ್ದೊಡನೆ ಪತ್ರ ಬರೆಯುವ ಮತ್ತು ಹಾಸಿಗೆಯಿಂದಲೇ ತಂತಿ ಬಿಡಬೇಕಾಗುವ ಸಂದರ್ಭಗಳು ಹಲವಿರುತ್ತವೆ

ರೂಜವೆಲ್ಟರು ತನ್ನದೇ ಆದ ಒಂದು ಕೊಳದಲ್ಲಿ ಈಜಾಡುವ ಅಭ್ಯಾಸವನ್ನಿಟ್ಟುಕೊಂಡಿದ್ದಾರೆ—ಆದುದರಿಂದಲೇ ಏನೋ ಆರೋಗ್ಯವಾಗಿದ್ದಾರೆ ಅವರಿಗೆ ಮದ್ಯಪಾನದ ಅಭ್ಯಾಸವಿಲ್ಲ ಹಾಗೆಂದು ಹೂಗೆಬತ್ತಿಯೊಂದು ಸದಾಕಾಲ ಬಾಯಲ್ಲಿರಬೇಕು ಒಂದು ಬತ್ತಿಯಿಂದಲೇ ಮತ್ತೊಂದಕ್ಕೆ ಬೆಂಕಿ ತಗಲಿಸಿ ಹೊಗೆ ಬಿಡುತ್ತಲೇ ಇರುವುದು ಅವರ ಪದ್ಧತಿ

ರೂಜವೆಲ್ಟರ ಮುಂಜಾನೆಯ ಊಟ ತೀರ ಸಾಧಾರಣದ್ದು ಮಧ್ಯಾಹ್ನ ಊಟಕ್ಕೆ ಸಾರು, ಸೋಲೋಗರವನ್ನು ಸೇವಿಸುತ್ತಾರೆ. ಹೆಚ್ಚಾಗಿ ಆ ಊಟವನ್ನು ತನ್ನ ಆಫೀಸಿನಲ್ಲಿಯೇ ಮಾಡುವುದು ಅವರ ರೂಢಿ. ಅವರ ಊಟವಾದರೋ ಬೇಗ ಮುಗಿಯುವುದು ಮರಂತು, ಊಟ ಮಾಡುತ್ತಿರುವಾಗಲೂ ಅವರು ಮಾತನಾಡುತ್ತಿರುತ್ತಾರೆ. ಆದಿತ್ಯವಾರ ರಾತ್ರಿಯ ಊಟವನ್ನು ಮಾತ್ರ ಅವರು ಸಂಭ್ರಮದಿಂದ ಜರಗಿಸುವುದಿದೆ ಅದಕ್ಕೆ ಮಿತ್ರರನ್ನೆಲ್ಲ ಆಮಂತ್ರಿಸುತ್ತಾರೆ ಮೊಟ್ಟೆ, ಮಾಂಸ, ಮೀನು-ಇತ್ಯಾದಿಗಳಿಂದ ಊಟವು ಪರಿಷ್ಕೃತವಾಗಿರುತ್ತದೆ

ರೂಜವೆಲ್ಟರ ಪತ್ನಿ ಅವರಷ್ಟೇ ಉತ್ಸಾಹಿಗಳು ವೃತ್ತಲೇಖನ, ಗ್ರಹವಿಚಾರ, ಭಾಷಣ, ಆಸ್ಪತ್ರೆಯ ಕೆಲಸ, ಅತಿಥಿ ಸತ್ಕಾರ, ಪತಿಗೆ ಸಹಾಯ-ಹೀಗೆ ಒಂದಲ್ಲೊಂದು ಕೆಲಸ ಅವರಿಗಿದ್ದೇ ಇದೆ ಗಂಡನಷ್ಟೇ ಶ್ರದ್ಧೆಯಿಂದ ಹೆಂಡತಿ ಏಕ ಛತ್ರಾಧಿಪತಿಗಳನ್ನು ದ್ವೇಷಿಸುತ್ತಾಳೆ.

ಅಮೇರಿಕದ ಅಧ್ಯಕ್ಷರಾದ ರೂಜವೆಲ್ಟರ ಹಿರಿಯರ ಮನೆ ನ್ಯೂಯೋರ್ಕ ಸಂಸ್ಥಾನದ ಹ್ಯಾಡ್ ಪಾರ್ಕ ಎಂಬಲ್ಲಿದೆ. ಅವರು ಚಿಕ್ಕಂದಿನಲ್ಲೇ ನೌಕಾ ಪಡೆಗೆ ಸೇರಿದ್ದರು ಅನಂತರ ಯುರೋಪಿನ ಪ್ರವಾಸವನ್ನು ಮಾಡಿದರು ಅವರ ತಾರುಣ್ಯದಲ್ಲೇ ನೌಕಾ ಖಾತೆಯ ಸಹಾಯಕ ಕಾರ್ಯದರ್ಶಿಯ ಪದವಿಯು ಅವರಿಗೆ ಲಭಿಸಿತು ಅನಂತರ, ಲೂಯಿ ಹೌ ಎಂಬ ಪತ್ರಿಕಾಕರ್ತರೊಬ್ಬರು ರೂಜವೆಲ್ಟರ ಪ್ರತಿಭೆಯನ್ನೂ, ಅವರ ವಾಕ್ಚಾತುರ್ಯ, ಸ್ನೇಹಭಾವ, ಉತ್ಸಾಹ, ಧೈರ್ಯ ಮುಂತಾದ ಸದ್ಗುಣಗಳನ್ನೂ ಕಂಡು ಅವರೇ ಅಧ್ಯಕ್ಷರಾಗಲು ಅರ್ಹರೆಂದು ತಿಳಿದರು.

ಆಗ ೧೯೩೨ನೆಯ ಇಸವಿ. ಅಮೇರಿಕವು ಆರ್ಥಿಕ ಸಂಕಟಕ್ಕೊಳಗಾಗಿತ್ತು. ಎಲ್ಲ ನೋಡಿದಲ್ಲಿ ನಿರುದ್ಯೋಗಿಗಳು ಕಂಡು ಬರುತಿದ್ದರು ಇಡಿ ಅಮೇರಿಕದ ಆಡಳಿತವು ೬೦ ಶ್ರೀಮಂತ ಕುಟುಂಬಗಳ ಅಧೀನವಾಗಿತ್ತು ಅವರು ಮಾಡಿದ್ದೇ ಕಾನೂನು, ಹೇಳಿದ್ದೇ ನ್ಯಾಯವಾಗುತಿತ್ತು ದೊಡ್ಡ ದೊಡ್ಡ ಹುದ್ದೆಯಲ್ಲಿದ್ದ ಆ ಶ್ರೀಮಂತರಿಗೆ ಅವರ ನೌಕರರೇ ಆದ ಪೋಲೀಸರಿದ್ದರು ಮಜೂರರಿಗೂ ಭಂಡವಾಳ ಶಾಹಿಯವರಿಗೂ ಆಗಾಗ ಕಲಹಗಳುಂಟಾಗುತಿದ್ದವು. ಬಡತನದಿಂದ ನರಳುವವರಿಗೆ ಅವರಿಂದ ಹೊರಲಾರದಷ್ಟು ತೆರಿಗೆಯಿದ್ದರೂ ಮಿಲಿಯಾಧಿಪತಿಗಳಿಗೆ ಆ ಕರಗಳಿಂದ ವಿನಾಯತಿಯಿತ್ತು- ಇಂತಹ ಅನ್ಯಾಯ, ಸೂರೆ-ಸುಲಿಗೆಗಳು ತನ್ನ ಕಣ್ಣಮುಂದೆ ನಡೆಯುವುದನ್ನು ಸಹಿಸಲಾಗದಿದ್ದವರಲ್ಲಿ ಹೌ ಒಬ್ಬರು· ಅವರು ರೂಜವೆಲ್ಟರು ಆರಿಸಿ ಬರುವಂತೆ ಪ್ರಯತ್ನಪಟ್ಟರು ದುಸ್ಥಿತಿಯ ಮಡುವಿನಲ್ಲಿ ಬಿದ್ದಿದ್ದ ಅಮೇರಿಕವನ್ನು ಸುಧಾರಿಸುವ ಧ್ಯೇಯವನ್ನಿಟ್ಟುಕೊಂಡ ರೂಜವೆಲ್ಟರು ಅಧ್ಯಕ್ಷ ಪದವಿಯನ್ನೇರಿದರು

ರೂಜವೆಲ್ಟರು ತನ್ನ ಕೈಲಾದಷ್ಟು ಪರಿಸ್ಥಿತಿಯ ಸುಧಾರಣೆ ಮಾಡಿದವರು ಮಜೂರರಿಗೆ ಆರ್ಥಿಕ ಭದ್ರತೆ, ಶ್ರೀಮಂತರಿಂದಾಗುತಿದ್ದ ಸೂರೆ-ಸುಲಿಗೆಯ ನಿವಾರಣೆ-ಮುಂತಾದ ಕಾರ್ಯಗಳಲ್ಲಿ ಅವರು ತುಂಬಾ ದುಡಿದಿದ್ದಾರೆ. ಅಲ್ಲದೆ, ಅಂತರಾಷ್ಟ್ರೀಯ ರಾಜಕಾರಣದಲ್ಲಿ ಕೈ ಹಾಕಿ, ಬ್ರಿಟನ್ನಿನ ಪಕ್ಷದಲ್ಲಿ ನಿಂತು, ಪ್ರಜಾಪ್ರಭುತ್ವದ ಹೆಸರಲ್ಲಿ ಅವರು ಹೋರಾಡುತ್ತಿದ್ದಾರೆ ಅಮೇರಿಕವು ಬ್ರಿಟನ್ನಿನ ಪಕ್ಷವನ್ನು ವಹಿಸದಿದ್ದರೆ ಈ ಮಹಾಯುದ್ಧದ ಹಾಗೂ ಪ್ರಪಂಚದ ಇತಿಹಾಸವೇ ಬೇರಾಗುತಿತ್ತೆಂಬುದರಲ್ಲಿ ಸಂದೇಹವಿಲ್ಲ

ಅಮೇರಿಕದ ಅಧ್ಯಕ್ಷರಿಗೆ ವರ್ಷಕ್ಕೆ ೧೫೦೦೦೦ ಡಾಲರುಗಳ ಸಂಬಳವಿದೆ ಆದರೆ ಅಂತಹ ಸಶ್ರಮವಾದ ಪದವಿಗೆ, ಆ ಸಂಬಳ ಎಷ್ಟಕ್ಕೂ ಹೆಚ್ಚಲ್ಲವೆಂದು ತಜ್ಞರ ಅಭಿಪ್ರಾಯ. ಹೆಚ್ಚಿನ ಮಾಜೀ ಅಧ್ಯಕ್ಷರೆಲ್ಲ ತಮ್ಮ ಅಧಿಕಾರದ ಅವಧಿ ಮುಗಿದ ಅಲ್ಪ ಕಾಲದಲ್ಲೇ ಮೃತಿ ಹೊಂದಿರುವರು. ಅವರ ಮರಣಕ್ಕೆ, ಅಧ್ಯಕ್ಷ ಪದವಿಯನ್ನು ಹೊತ್ತ ಶ್ರಮವೇ ಬಹುಮಟ್ಟಿಗೆ ಕಾರಣವೆನ್ನುತ್ತಾರೆ

ರೂಜವೆಲ್ಟರು ತಾನೆಣಿಸಿದ್ದಂತೆ ಅಮೇರಿಕದಲ್ಲಿ 'ರಾಮರಾಜ್ಯ'ದ ಸ್ಥಾಪನೆ ಮಾಡಿಲ್ಲವಾದರೂ, ಅಲ್ಲಿಯ ಸಾಮಾನ್ಯ ನಾಗರಿಕನೊಬ್ಬನ ಸುಖಜೀವನಕ್ಕೆ ಹಲವಾರು ರೀತಿಗಳಲ್ಲಿ ನೆರವಾಗಿದ್ದಾರೆನ್ನಲು ಸಂಶಯವಿಲ್ಲ

ಪಡುಬಿದ್ರಿಯಲ್ಲಿ ಉಡುಪಿ ಬ್ಯಾಂಕಿನ ಶಾಖೆ:—ತಾ 31 10 44ರಲ್ಲಿ ಉಡುಪಿ ಬ್ಯಾಂಕ್ ಲಿಮಿಟೆಡ್ ಇದರ ಶಾಖೆಯೊಂದು ಡಾಕ್ಟರ್ ಕೆ. ಎಲ್. ಐತಾಳ್, ಎಂ ಬಿ, ಬಿ ಎಸ್ ಇವರ ಅಧ್ಯಕ್ಷತೆಯಲ್ಲಿ ಪಡುಬಿದ್ರೆಯಲ್ಲಿ ತೆರೆಯಲ್ಪಟ್ಟಿರುವುದು. ಪ್ರಾರಂಭದಲ್ಲಿ ಬ್ಯಾಂಕಿನ ಮೆನೇಜರ್ ಶ್ರೀ ಯು. ವಿ ಪ್ರಭುಗಳು ಬ್ಯಾಂಕಿಂಗ್ ವಿಷಯವಾಗಿ ಚಿಕ್ಕ ಭಾಷಣ ಮಾಡಿದರು. ವಕೀಲ್ ಶ್ರೀ ಎಂ. ಡಿ ಕಾಮತರು ಜನರ ಸಹಕಾರವನ್ನು ಕೋರಿ ಮಾತನಾಡಿದರು ಅಧ್ಯಕ್ಷರ ಸಂದರ್ಭೋಚಿತ ಭಾಷಣಾನಂತರ ಮೇಲೆ ಡೈರೆಕ್ಟರ್ ಶ್ರೀ ಕೆ ಅಣ್ಣಪ್ಪ ಭಗತರು ಧನ್ಯವಾದಗಳನ್ನಿತ್ತರ ಉಪಾಹಾರದೊಂದಿಗೆ ಸಭಾಂತ್ಯವಾಯಿತು.

THE UDIPI BANK LTD.

Head Office UDIPI, S K

Estd 1925

ANNOUNCEMENT

A branch of the bank has been opened at Padubidri on 31-10-44.

ಪ್ರಕಟಣೆ

ನಮ್ಮ ಬ್ಯಾಂಕಿನ ಶಾಖೆಯೊಂದು ತಾ. 31—10—44 ರಲ್ಲಿ ಪಡುಬಿದ್ರೆಯಲ್ಲಿ ತೆರೆಯಲ್ಪಟ್ಟಿರುವುದು·

ದಿ ಉಡುಪಿ ಬ್ಯಾಂಕ್ ಲಿಮಿಟೆಡ್, ಉಡುಪಿ.

General Supplies Ltd. Udipi.

(In Liquidation)

(under s c 209 H of Indian Companies Act)

Notice is hereby given that a meeting of the Shareholders of the Company will be held on Sunday the 17th December 1944 at 5-30 p. m at the premises of the Company at Vishwajna Bhavan, Udipi for considering the following agenda

1. To consider the account of the acts and dealings of the Liquidators and of the conduct of the winding up during the year and to adopt the accounts of the Liquidators.

2 Any other items of business which may be brought before the meeting with the previous consent of the Chairman

K. Gururaja Rao
Narayana Rao K
Joint Liquidators

Camp UDIPI
Dated 3 10-44

The Canara Banking Corporation Limited.
(Incorporated in British India.)
Estd 1906.
Head Office. UDIPI, (S. K.)

ANNOUNCEMENT

A Branch of the Bank has been opened at BOMBAY on 24-10-1944.

(1st Floor, Ready Money Mansions, Churchgate Street, Fort.

ನವಯುಗ

ಉಡುಪಿ, ಗುರುವಾರ ೨-೧೧-೧೯೪೪

ಯುದ್ಧದ ಮುನ್ನಡೆ

ಕಳೆದ ವಾರದ ಪ್ರಾಮುಖ್ಯ ಯುದ್ಧ ಕ್ಷೇತ್ರವೆಂದರೆ ಫಿಲಿಪ್ಪಾಯಿನ್ ದ್ವೀಪಗಳ ಸುತ್ತುವಳಿಯದ ಶಾಂತಸಾಗರದಲ್ಲಿ ಅಮೇರಿಕನ್ನರು ಈ ದ್ವೀಪಗಳಲ್ಲೊಂದಾದ ಲೀಟೆಯಲ್ಲಿ ಬಂದಿಳಿದ ನಂತರ ಜಾಪಾನರ ಕಣ್ತೆರೆಯಿತು. ತಮಗೆ ಮುಂದೆ ಬರಬಹುದಾದ ಗಂಡಾಂತರವು ಮನವರಿಕೆಯಾಯಿತು. ಜಾಪಾನರು ಗೆದ್ದ ಜಾವಾ ಸುಮಾತ್ರಾ ಮುಂತಾದ ಪೂರ್ವ ದ್ವೀಪಗಳಿಗೆ ಜಾಪಾನಿನಿಂದ ಬರಬೇಕಾದ ಹಾದಿಬದಿಯಲ್ಲಿ ನಡುವೆ ಇರುವ ಫಿಲಿಪ್ಪಾಯಿನ್ ದ್ವೀಪಗಳಿರುವುದರಿಂದ ಇವುಗಳು ಅಮೇರಿಕನರ ವಶವಾದುದು ತಮಗೂ ತಾವು ಗೆದ್ದುಕೊಂಡಿರುವ ದ್ವೀಪಗಳಿಗೂ ಇರುವ ಸಂಬಂಧವನ್ನು ಕಡಿದು ಹಾಕುವುದಕ್ಕೆಂಬುದು ಸ್ಪಷ್ಟವಾಯಿತು. ಮಾತ್ರವಲ್ಲ ಆ ಫಿಲಿಪ್ಪಾಯಿನ್ ದ್ವೀಪಗಳಿಂದ ಅಮೇರಿಕನರು ಸುಲಭವಾಗಿ ಚೀನಾದ ಕರಾವಳಿಯನ್ನು ಪ್ರವೇಶಿಸಿದರೆ ಬರ್ಮಾ ಇಂಡೋಚೀನಾ ಮುಂತಾದ ತಮ್ಮ ಕೈಗೆ ಬಂದ ರಾಜ್ಯಗಳಿಗೂ ಹೋಗುವ ಹಾದಿ ಪೂರಾ ತಡೆಗಟ್ಟಿದಂತಾಗಿ ಚೀನಾದ ಪ್ರಾಂತವೂ ಬರ್ಮಾ ಮುಂತಾದ ಏಸ್ಯಾಖಂಡದ ಇತರ ಭಾಗಗಳೂ ಅವುಗಳ ತೆಂಕಲಲ್ಲಿರುವ ಪೂರ್ವ ದ್ವೀಪಗಳೂ ತಮ್ಮ ಕೈತಪ್ಪಿ ಹೋದಾವೆಂದು ಜಾಪಾನರಿಗೆ ಸ್ಪಷ್ಟವಾಗಿರಬೇಕು. ಆದುದರಿಂದ ಅಮೇರಿಕನ್ನರನ್ನು ಫಿಲಿಪ್ಪಾಯಿನ್ ದ್ವೀಪಗಳಿಂದ ಅಟ್ಟುವುದಕ್ಕಾಗಿ ಜಾಪಾನರು ಸಿಂಗಾಪುರದಿಂದ ಉತ್ತರಾಭಿಮುಖವಾಗಿಯೂ ಫಾರ್ಮೋಸಾದಿಂದ ದಕ್ಷಿಣಾಭಿಮುಖವಾಗಿಯೂ ಫಿಲಿಪ್ಪಾಯಿನ ದ್ವೀಪಗಳ ಕಡೆಗೆ ಪ್ರಬಲವಾದ ವಿಮಾನ ಹಾಗೂ ನೌಕಪಡೆಗಳ ಸಹಿತ ಬರುತ್ತ ಸಾಗರದಲ್ಲಿ ಅಮೇರಿಕನ್ ನೌಕೆ ಹಾಗೂ ವಿಮಾನ ಪಡೆಗಳನ್ನು ಸಂಧಿಸಿದರು. ಆದರೆ ಅಮೇರಿಕನರಿಗೆ ನಿರ್ಣಾಯಕವಾದ ವಿಜಯವು ದೊರಕಿತು ಮಾತ್ರವಲ್ಲ ಲೀಟೆಯ ಸಮೀಪವಿರುವ ಸಾಮಾರ್ ದ್ವೀಪಗಳೂ ಅಮೇರಿಕನರ ವಶವಾಗಿವೆ. ಹೀಗಾಗಿ ಫಿಲಿಪ್ಪಾಯಿನ ದ್ವೀಪಗಳಲ್ಲಿರುವ ಜಾಪಾನರ ಪಡೆಗಳು ಉತ್ತರದಲ್ಲಿ ಕೆಲವು ದಕ್ಷಿಣದಲ್ಲಿ ಕೆಲವು ಎಂಬಂತೆ ಇಬ್ಭಾಗಿ ತುಂಡಾಗಿವೆ. ಆದರೆ ಜಾಪಾನರು ಈ ದ್ವೀಪಗಳನ್ನು ಶೀಘ್ರವಾಗಿಯಾಗಲೀ ಸುಲಭವಾಗಿಯಾಗಲೀ ಬಿಟ್ಟುಕೊಡುವಂತಿಲ್ಲ. ಕದನವನ್ನು ಸಾಧ್ಯವಿದ್ದಷ್ಟು ಉದ್ದವೆಳೆದು ಒಂದು ವೇಳೆ ಅಮೇರಿಕನ್ನರಿಗೆ ವಿಜಯ ದೊರೆತರೂ ಅದು ಅಪಾರ ನಷ್ಟದಿಂದ ದೊರೆತ ವಿಜಯವೆನ್ನಿಸಬೇಕೆಂಬ ಛಲತೊಟ್ಟು ಹೋರಾಡುವಂತಿದ್ದಾರೆ. ಆದರೆ ಅಮೇರಿಕನ್ನರ ಸೇನಾ ವಿಮಾನ ಪಡೆಗಳು ಉತ್ತಮ ತರದವುಗಳಾಗಿರುವುದರಿಂದಲೂ ಫಿಲಿಪ್ಪಾಯಿನ್ ದ್ವೀಪನಿವಾಸಿಕರ ಸಹಾಯ ಸಹಾನುಭೂತಿಗಳು ಅವರ ಕಡೆಗಿರುವುದರಿಂದಲೂ ಅವರು ಇನ್ನೂ ಕೆಲವು ದ್ವೀಪಗಳನ್ನು ವಶಪಡಿಸಿಕೊಳ್ಳುವ ಸಂಭವವಿದೆ.

ಪಶ್ಚಿಮ ಯುರೋಪಿನ ರಣರಂಗದಲ್ಲಿ ಮಿತ್ರರ ಮುನ್ನಡೆ ಬಲು ನಿಧಾನವಾಗಿದೆ. ಕಾರಣ ಜರ್ಮನರು ಆವೇಶಪೂರ್ಣರಾಗಿ ಮಿತ್ರರನ್ನು ಹೆಜ್ಜೆಹೆಜ್ಜೆಗೆ ತಡೆಗಟ್ಟುತ್ತಿರುವುದೇ. ಆದರೂ ಜರ್ಮನರನ್ನು ಪಶ್ಚಿಮ ಹೊಲ್ಲಾಂಡದಿಂದ ತಳ್ಳುವ ಪ್ರಯತ್ನದಲ್ಲಿ ಮಿತ್ರರು ವಿಜಯಿಗಳಾಗಿರುವರು.

ಪೂರ್ವ ಯುರೋಪಿಯ ಯುದ್ಧದ ಉದ್ದವಾದ ಸಮರ ಮುಖದ ಉತ್ತರ ಮತ್ತು ದಕ್ಷಿಣ ತುದಿಗಳಲ್ಲಿ ರಸ್ಯಾನರು ಸ್ಪಷ್ಟವಾದ ವಿಜಯವನ್ನು ಸಾಧಿಸಿದ್ದಾರೆ. ದಕ್ಷಿಣ ತುದಿಯಲ್ಲಿ ಹಂಗೇರಿಯ ಟ್ರಾನ್ಸಿಲ್ವೇನಿಯಾ ಪ್ರಾಂತವನ್ನು ಸಂಪೂರ್ಣ ವಶಪಡಿಸಿಕೊಂಡಿರುವರು. ಕಾರ್ಪೇಥಿಯನ್ ಪರ್ವತಾವಳಿಗಳನ್ನು ದಾಟಿ ಚೆಕೊಸ್ಲೋವೇಕಿಯಾವನ್ನು ಪ್ರವೇಶಿಸಿ ಮುಂದುವರಿದಿದ್ದಾರೆ. ಉತ್ತರ ತುದಿಯಲ್ಲಿ ಅನುಕೂಲ್ಯವಾಗಿರುವ ಪೆಟ್ಸಾಮೋ ಪ್ರಾಂತವನ್ನು ರಸ್ಯಾನರು ಪಡೆದಿದ್ದಾರೆ. ಮತ್ತು ನಾರ್ವೆಯಲ್ಲಿ ಪ್ರವೇಶಮಾಡಿದ್ದಾರೆ. ಪೂರ್ವಪ್ರಶ್ಯಿಯದಲ್ಲಿ ಜರ್ಮನರು ಛಲಗೊಂಡು ಪ್ರತಿಭಟಿಸುತ್ತಿದ್ದಾರೆ. ಭೀಕರ ಕದನಗಳಾಗುತ್ತಿವೆ. ಮೆಮೆಲನ ಎದುರು ಟ್ಯಾಂಕು ಯುದ್ಧಗಳು ನಡೆಯುತ್ತಿವೆ. ಆದರೂ ರಸ್ಯಾನರು ಟಿಲ್ ಸಿಟ್ ಎಂಬ ನಗರವನ್ನು ವಶಪಡಿಸಿಕೊಂಡು ಪೂರ್ವ ಪ್ರಶ್ಯದ ಪ್ರಧಾನ ನಗರವಾದ ಕೊನಿಗ್ಸ್‌ಬರ್ಗದ ಕಡೆಗೆ ಮುನ್ನುಗ್ಗುತ್ತಿರುವರು. ಅವರ ಗುರಿಯು ಡಾನ್ಜಿಗ್‌ನ್ನು ವಶಪಡಿಸಿಕೊಳ್ಳುವುದರಲ್ಲಿದೆ. ಆದರೆ ಗೋಬೆಲ್ಲನು ತನ್ನ ಉದ್ಘೋಷಣೆಯಿಂದ ಜರ್ಮನರಲ್ಲಿ ಆವೇಶ ಗೊಳಿಸಿಬಿಟ್ಟಿದ್ದಾನೆ. ಅವರು ಯುದ್ಧೋನ್ಮತ್ತರಂತೆ ರಸ್ಯನರನ್ನು ಪ್ರತಿಭಟಿಸುತ್ತಿದ್ದಾರೆ. ಒಟ್ಟಾರೆ ಮೇಲೆ ಜರ್ಮನರೀಗ ಹಲವು ಉಪಾಯಗಳನ್ನು ಹೂಡಿ ಸಾಧ್ಯವಿದ್ದಷ್ಟು ಯುದ್ಧವು ಉದ್ದ ಬೆಳೆಯುವಂತೆ ಮಾಡಿ ಮಿತ್ರಪಕ್ಷದವರನ್ನು ದಣಿಸಿ ದಣಿಸಿ ವಿಶೇಷ ನಷ್ಟಕ್ಕೊಳಗಾಗಿಸುವುದರಲ್ಲಿ ತಮಗೆ ಪ್ರಯೋಜನ ದೊರಕೀತೆಂದು ಜರ್ಮನರು ತಿಳಕೊಂಡು, ಹೆಜ್ಜೆಹೆಜ್ಜೆಗೆ ಪ್ರತಿಭಟಿಸುವಂತೆ ತೋರುತ್ತದೆ.

ಅಮೇರಿಕಾದಲ್ಲಿ ಅಧ್ಯಕ್ಷ ಚುನಾವಣೆ

ಇದೇ ತಿಂಗಳ ತಾ. ೭ ಅಮೇರಿಕದ ಸಂಯುಕ್ತ ರಾಷ್ಟ್ರಗಳಲ್ಲೊಂದು ಮಹತ್ವದ ದಿನ. ಅಂದು ಆ ರಾಷ್ಟ್ರಗಳ ಅಧ್ಯಕ್ಷನ ಚುನಾವಣೆ. ಆಯಾ ರಾಷ್ಟ್ರದ ಜನತೆಯು ಚುನಾಯಿಸಿ ಕಳುಹಿಸಿದ ಕೆಲವು ಪ್ರತಿನಿಧಿಗಳು ಕೂತು ಅಧ್ಯಕ್ಷನನ್ನು ಚುನಾಯಿಸುವ ರೀತಿಯು ಆಯ್ಕೆಯು ಇದಲ್ಲ. ಅಖಿಳ ರಾಷ್ಟ್ರಗಳ ಮಹಾ ಜನರ ಮತಗಣನೆಮಾಡಿ ಬಹುಮತ ದೊರಕುವವನು ಅಧ್ಯಕ್ಷನಾಗುವನು. ಅಂತಹ ಮತಗಣನೆಯು ತಾ. ೭ರಂದು ನಡೆಯಲಿಕ್ಕಿದೆ. ಈ ಅಧ್ಯಕ್ಷತನಕ್ಕೆ ಸ್ಪರ್ಧಿಸುವವರು ಇಬ್ಬರು. ಈಗ ಅಧ್ಯಕ್ಷರಾಗಿರುವ ರೂಸವೆಲ್ಟರು ಒಬ್ಬರು ಡ್ಯೂಯಿ ಎಂಬವರು ಇನ್ನೊಬ್ಬರು. ರೂಸ್ವೆಲ್ಟರು ಡೆಮೊಕ್ರೆಟಿಕ್ ಪಾರ್ಟಿಯವರು ಡ್ಯೂಯಿಯವರು ರಿಪಬ್ಲಿಕನ್ ಪಕ್ಷದವರು. ಈ ಈರ್ವರು ಹುರುಡುಗಾರರೂ ಇವರ ಕಡೆಯವರೂ ರಾಷ್ಟ್ರ ರಾಷ್ಟ್ರಗಳ ಎಲ್ಲೆ ಮೂಲೆಗಳಲ್ಲಿಯೂ ತೀಕ್ಷ್ಣವಾದ ಪ್ರಚಾರವನ್ನು ಮಾಡುತ್ತಿದ್ದಾರೆ. ಸ್ವಪಕ್ಷ ಮಂಡನ ವಿಪಕ್ಷ ಖಂಡನಗಳ ಆವೇಶ ಆಗ್ರಹಗಳಲ್ಲಿ ಮಾತುಗಳು ಶಿಷ್ಟಾಚಾರ ಮೀರಿಯೂ ಮುಂದುವರಿದಿವೆ. ಪ್ರಧಾನ ನಾಯಕರೇ ಒಬ್ಬರನ್ನೊಬ್ಬರು ಕಳ್ಳ ಸುಳ್ಳ ವಂಚಕ ಮೋಸಗಾರನೆಂದೂ ಜನಸಾಮಾನ್ಯರ ಮುಂದೆ ಉದ್ಘೋಷಿಸಿ ಅವರ ಮತಯಾಚನೆ ಮಾಡುವವೂ ಮುಂದವರಿದಿದ್ದಾರೆ.

ರೂಸ್ವೆಲ್ಟರದು ಇದೀಗ ಮೂರನೆಯ ಸಲದ ಅಧ್ಯಕ್ಷತನವಾಗಿ ನಾಲ್ಕನೆಯದಕ್ಕೀಗ ನಿಂತುದಾಗಿದೆ. ಅಮೇರಿಕದ ಇತಿಹಾಸದಲ್ಲೇ ಇಂತಹದು ಹಿಂದೆ ಇದ್ದಿಲ್ಲ. ಈ ಹಳೆಯನು ಮತ್ತು ಇವನ ಹಳೆಯ ಗೆಳೆಯರು ಆಡಳಿತೆಯಲ್ಲಿ ಹಳೆಯ ಜಾಡು ಹಿಡಿದ ಹಾದಿ ಹಿಡಿದು ಸಾಗುತ್ತಿರುವುದನ್ನು ಇನ್ನಾದರೂ ನಿಲ್ಲಿಸಿ. ಡೆಮೊಕ್ರೆಟಿಕ್ ಎಂಬ ಪ್ರಜಾಪ್ರಭುತ್ವದ ಹೆಸರಲ್ಲಿ ಡಿಕ್ಟೇಟರ್ (ಏಕ ಪ್ರಭುತ್ವ) ತನ ಬರುತ್ತಿದೆ, ಜಾಗರೂಕರಾಗಿ ಎಂದು ಡ್ಯೂಯಿ ಮತ್ತು ಅವರ ಕಡೆಯವರು ಜನರನ್ನು ಎಚ್ಚರಿಸುತ್ತಿದ್ದಾರೆ. ಮುಖ್ಯವಾಗಿ ರೂಸ್ವೆಲ್ಟರು ಬ್ರಿಟನ್ ಮತ್ತು ರಸ್ಯಾದವರಿಗೆ ವಿಶೇಷ ಬಗ್ಗಿ ಅನುಯಾಯಿಯಾಗಿ ನಡೆಯುತ್ತಿದ್ದಾರೆ ಇದರಿಂದ ಈಗಲೂ ಮುಂದೆ ಯುದ್ಧಾನಂತರದಲ್ಲಿಯೂ ಅಮೇರಿಕನರಿಗೆ ಹಾನಿಯಿದೆ ಎಂದು ಡ್ಯೂಯಿ ಸಾರುತ್ತಿದ್ದಾನೆ.

ರೂಸ್ವೆಲ್ಟ್ ಮತ್ತು ಅವರ ಪಕ್ಷದವರು ಇದಕ್ಕುತ್ತರವಾಗಿ, ಯುದ್ಧಾರಂಭದಿಂದ ಇಂದಿನ ವರೆಗಿನ ಅತ್ಯಂತ ಕಠಿಣ ಕಾಲದಲ್ಲಿ ರಾಜ್ಯಭಾರವನ್ನು ಸಸೂತ್ರವಾಗಿ ನಿರ್ವಹಿಸುತ್ತ ಯುದ್ಧ ವಿಚಾರದಲ್ಲಿಯೂ ಅದು ವಿಜಯ ಮುಖವಾಗಿ ಸಾಗುವಂತೆ ಮಾಡಿರುವ ವ್ಯಕ್ತಿಯೇ ಯುದ್ಧ ಪರ್ಯವಸಾನವಾಗಿ ಲೋಕಶಾಂತಿಸ್ಥಾಪನೆಯಾಗುವನಕ ಅಧಿಕಾರದ ಹಿಡಿತವನ್ನು ಹಿಡಿದಿರುವುದೇ ಲೇಸಲ್ಲದೆ ನಡುವೆ ಬೇರೊಬ್ಬನನ್ನು ತಂದು ಆಡಳಿತದಲ್ಲಿ ಗಡಿಬಿಡಿಯನ್ನುಂಟುಮಾಡಿದರೆ ಕೇಡು ನಿಶ್ಚಯವೆಂದು ಪ್ರತಿಪಾದಿಸುತ್ತಿದ್ದಾರೆ.

ಆದರೆ ಜಗತ್ತಿನ ಲಕ್ಷವೆಲ್ಲ ಯುದ್ಧಾನಂತರದ ಪುನರ್ರಚನೆ ಮತ್ತು ಶಾಂತಿಸ್ಥಾಪನೆಯ ಧೋರಣ ಚಳವಳ ಕಡೆ ಸರಿಯುತ್ತಿರುವಂತೆ ಅಮೇರಿಕಾದ ಈ ಹಲವು ರಾಷ್ಟ್ರಗಳ ಜನತೆಯು ವಿವಿಧ ವರ್ಗಗಳು ಯುದ್ಧಾನಂತರದ ತಮ್ಮ ಭವಿತವ್ಯ ಹೇಗಾದೀತೆಂಬ ವಿಷಯದಲ್ಲಿ ಕಾರಗೊಂಡಿವೆ. ಇಂತಹ ವರ್ಗಗಳಲ್ಲಿ ಬಹುದೊಡ್ಡದಾದುವು ಮಜೂರರದೊಂದು, ಸೈನಿಕರದೊಂದು, ನೀಗ್ರೊಗಳದೊಂದು. ಈ ಮೂರು ವರ್ಗಗಳ ಬಹುಮತಗಳ ಭಾರವೆತ್ತಬೀಳುವುದೋ ಅತ್ತ ಸಾರುವುದು ಅಧ್ಯಕ್ಷತನ.

ಡ್ಯೂಯಿಯವರ ಪಕ್ಷವು ವೈಯಕ್ತಿಕ ಉದ್ಯಮಗಳಲ್ಲಿ ಸರಕಾರವು ಪ್ರವೇಶಿಸಬಾರದೆಂಬ ಧೋರಣೆಯುಳ್ಳದ್ದಿರುವುದರಿಂದ ಮಜೂರ ವರ್ಗವು ಈ ಪಕ್ಷದವರಿಂದ ತಮ್ಮ ಉನ್ನತಿಗೆ ಹಾನಿಯಾದೀತೆಂದು ಭಯಪಡುತ್ತಿದೆ. ರೂಸ್ವೆಲ್ಟಪಕ್ಷವು ಈ ತನಕ ಹಲವು ಪ್ರಸಂಗಗಳಲ್ಲಿ ತಮ್ಮ ಸಂಕಷ್ಟ ನಿವಾರಣೆಗಾಗಿ ಹೋರಾಡಿದ ನಿದರ್ಶನಗಳಿರುವುದರಿಂದ ಅದರ ಒಲವು ಅತ್ತಕಡೆ ಇದೆ. ರೂಸ್ವೆಲ್ಟರೇ ಇಂದು ಮಹಾ ಸೇನಾಧಿಪತಿ ಎಂದಿರುವುದರಿಂದ ಸೈನಿಕರ ಸಹಾಯವು ಸೇನಾಪತಿಯ ಕಡೆಗಿರುವುದು ಸಹಜವೇ. ಆದರೆ ಹನ್ನೊಂದು ಮಿಲಿಯ ಯೋಧರು ಕದನಕ್ಷೇತ್ರಗಳಲ್ಲಿರುವುದಾದರೂ ರಿಪಬ್ಲಿಕನರ ಕೆಲವೊಂದು ಆಕ್ಷೇಪ ಪರಿಹಾರಕ್ಕಾಗಿ ಬರೇ ನಾಲ್ಕು ಮಿಲಿಯ ಸೈನಿಕರು ಈ ಮತದಾನದಲ್ಲಿ ಭಾಗಿಗಳಾಗಲಿಕ್ಕಿದ್ದಾರೆ. ಮೂರನೆಯ ತಾದನೀಗ್ರೋಗಳದು ಎರಡೂವರೆಮಿಲಿಯ ಓಟುಗಳಿವೆ. ಇವರು ಕಳೆದ ಎರಡು ವರುಷಗಳಿಂದ ವರ್ಣಭೇದವು ಯುದ್ಧ ಹಾಗೂ ಒಳ ಆಡಳಿತೆಯ ನೌಕರಿಗಳ ನೇಮಕದ ಧೋರಣೆಯು ತೋರಿಬಂದುದರಿಂದ ರೂಸ್ವೆಲ್ಟರ ಪಕ್ಷದಿಂದ ದೂರಸರಿಯುತ್ತಿದ್ದಾರೆ. ತಮ್ಮ ಉದ್ಧಾರದ ಮೂಲ ಪುರುಷನಾದ ಲಿಂಕೊಲಿನ್‌ನ್ನ ಪಕ್ಷ ರಿಪಬ್ಲಿಕನ್ ಪಾರ್ಟಿಯ ಕಡೆಗೇ ಅವರ ಮತವು ಒಲಿಯುತ್ತಿದೆ. ಹೀಗೆಲ್ಲ ಇರುವುದರಿಂದ ಮತಗಣನೆಯ ತಜ್ಞರು ಈ ಸಲದ ಚುನಾವಣೆಯು ಹಿಂದಿನವೆಲ್ಲಕ್ಕಿಂತಲೂ ತೀಕ್ಷ್ಣವಾಗಿವೆಯೆಂದು ಅಭಿಪ್ರಾಯ ಪಡುತ್ತಾರೆ. ಆದರೆ ರೂಸ್ವೆಲ್ಟರ ಪಾಲಿಗೆ ಹಿಂದಿನ ಚುನಾವಣೆಗಳಲ್ಲೆಲ್ಲ ಗೆದ್ದ ಪ್ರಸಿದ್ಧಿ ಇದೆ. ಈಗಾಗಲೇ ಯುದ್ಧ ಕ್ಷೇತ್ರದಲ್ಲಿನ ವಿಶೇಷ ವಿಜಯವಾಗುತ್ತಿರುವ ಸುದ್ದಿಯು ಬೆಂಬಲವಿದೆ. ಮೇಲಾಗಿ ರೂಸ್ವೆಲ್ಟರಲ್ಲಿ ಅಸಾಧಾರಣ ರಾಜಕಾರಣ ತಂತ್ರ ಚಾತುರ್ಯಗಳಿವೆ. ಇವುಗಳಿಂದಾಗಿ ಚುನಾವಣೆಯು ರೂಸ್ವೆಲ್ಟರನ್ನೇ ನಾಲ್ಕನೆಯ ಬಾರಿಗೆ ಅಧ್ಯಕ್ಷತನದ ಗದ್ದುಗೆಯನ್ನೇರಿಸುವ ಸಂಭವವಿದೆ.

NOTICE.

ಮಂಗ್ಳೂರು ಡಿ. ಮು. ಕೋರ್ಟಿನಲ್ಲಿ

R. E. P. ನಂಬ್ರ 194/44
ಸಬ್ ಕೋರ್ಟ್ S. C. 57/36

ದಿ. ಪ್ರಾಮುಖ ಬೇಂಕ್ ಲಿಮಿಟೆಡ್ ಮಂಗ್ಳೂರು
ವಾದಿ—ಅರ್ಜಿದಾರ

ಎ. ಸೋಮಪ್ಪ—ರಾಜಪ್ಪರ ಅಳಿಯ—ಮಂಗ್ಳೂರು ಸ್ವಹಾರ ಅತ್ತಾವರ ಗ್ರಾಮವಾಸಿಯವ—
2ನೇ ಪ್ರತಿವಾದಿ ರಿಸ್ಪೋಂಡೆಂಟ

ಮೇಲ್ಕಂಡ ಅಮ್ಮಲ್ಜಾರಿಯಲ್ಲಿ ರಿಸ್ಪೊಂಡೆಂಟಿಗೆ ಸ್ಥಿರಾಸ್ತಿ ಸೇಲ ನೋಟೀಸು ಸಬ್‌ಸ್ಟಿಟ್ಯೂಟೆಡ್ ಸರ್ವಿಸ ಹುಕುಂ ಆಗಿ ಅರ್ಜಿಯು ತಾರೀಕು 10ನೇ ನವಂಬ್ರ 1944ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ಕನ್ನಿಗೆ ಇಟ್ಟಿರುತ್ತದೆ. ರಿಸ್ಪೊಂಡೆಂಟರಿಗೆ ಯೇನಾದ್ರೂ ಉದಾಹರಣೆ ಕೊಡುವದಿದ್ದಲ್ಲಿ ಆದಿನ್ನ ಹಗಲು 11 ಗಂಟೆಗೆ ಖುದ್ದಾಗಿ ಯಾ ವಕೀಲ ದ್ವಾರಾ ಹಾಜ್ರಾಗಿ ಹೇಳಿಕೊಳ್ಳದಿದ್ರೆ ಅರ್ಜಿಯು ಯೇಕ್ಪಾರ್ಟಿಯಾಗಿ ತೀರ್ಮಾನಿಸಲ್ಪಡುವದು. ತಿಳಿದಿರುವದು

G. Naranyana Rao,
Vakil for Petitioner.

ಮಂಗ್ಳೂರು. ತಾ. 30—10—44

ಚರ್ಚಿಲ್ಲರ ಭಾಷಣ

ಹಿಟ್ಲರನ ಶಿಲಾ ಸುರಂಗ ನಿರ್ಮಾಣ

ಪಾರ್ಲಿಮೆಂಟಿನಲ್ಲಿ ಚರ್ಚಿಲ್ಲರ ಭಾಷಣ

ಮೋಸ್ಕೋವಿಗೆ ಹೋಗಿ ಸ್ಟಾಲಿನರೊಡನೆ ಮಾತುಕತೆ ನಡೆಯಿಸಿಬಂದ ಚರ್ಚಿಲ್ಲರು ಈ ವಿಷಯವಾಗಿ ಪಾರ್ಲಿಮೆಂಟಿನಲ್ಲಿ ದೀರ್ಘವಾದೊಂದು ಭಾಷಣವನ್ನು ಮಾಡಿದರು. ಅದರ ಕೆಲವು ಮುಖ್ಯ ಮಾತುಗಳು ಇಲ್ಲಿವೆ-ಇಂದು ಯುದ್ಧದ ಪರಿಸ್ಥಿತಿಯು ಕಠಿಣವಾಗುತ್ತ ಬರುತ್ತಿದೆ. ಎಲ್ಲ ರಣರಂಗದಲ್ಲಿಯೂ ಭೀಕರ ಕದನಗಳಾಗುವುವೆಂದು ನಿರೀಕ್ಷಿಸಬೇಕಾಗಿದೆ. ವೈರಿಗಳಿಗಿರುವುದು ಎರಡು ಆಸೆ. ಯುದ್ಧವನ್ನು ದೀರ್ಘ ಕಾಲದ ವರೆಗೆ ಎಳೆದರೆ ನಾವು ಪರದೇಶದ ಆ ಯುದ್ಧ ಕ್ಷೇತ್ರಗಳಲ್ಲಿ ಬಳಲಿ ಬೆಂಡಾಗಿ ಅಪಾರ ನಷ್ಟಕ್ಕೊಳಗಾಗಿ ವೈರಿಯ ಕಡೆಗಿರುವ ನಮ್ಮ ನಿರ್ಧಾರವನ್ನು ಬದಲಿಸಿಯೇವೆಂಬುದೊಂದು. ಮಿತ್ರ ಪಕ್ಷದ ರಾಷ್ಟ್ರಗಳೊಳಗೂ ಯಾವುದಾದರೊಂದು ಭಿನ್ನಾಭಿಪ್ರಾಯಗಳು ತಲೆದೋರಬಹುದು. ಇಲ್ಲವೆ ಬಾಲ್ಕನ್ ಪೋಲೆಂಡ್ ಹಂಗೇರಿ ಫ್ರಾನ್ಸು ಮುಂತಾದ ರಾಷ್ಟ್ರಗಳ ಪುನರ್ವ್ಯವಸ್ಥೆ ಕುರಿತಾದರೂ ಅಭಿಪ್ರಾಯ ಭೇದದಿಂದ ಮಿತ್ರಪಕ್ಷಗಳೊಳಗೆ ಒಡಕುಂಟಾಗಬಹುದು ಎಂಬುದು ಎರಡನೆಯ ಪ್ರಬಲ ಆಸೆ. ಈ ಆಸೆಯು ನೆರವೇರದಂತೆ ನಾವು ಜಾಗರೂಕರಾಗಿದ್ದೇವೆ. ಆದಕ್ಕಾಗಿಯೇ ನಾನು ಕ್ವಿಬೆಕಿಗೆ ಹೋಗಿ ರೂಸವೆಲ್ಟರನ್ನೂ ಮೋಸ್ಕೋವಿಗೆ ಹೋಗಿ ಸ್ಟಾಲೀನರನ್ನೂ ಸಂದರ್ಶಿಸಿ ಭಿನ್ನಾಭಿಪ್ರಾಯಕ್ಕೆ ಅವಕಾಶವಾಗಬಹುದಾದ ವಿಚಾರಗಳನ್ನೆಲ್ಲ ಮುಖತಃ ಚರ್ಚಿಸಿ ನಮ್ಮ ಮೈತ್ರಿಯಲ್ಲಿ ಒಡಕು ಬಾರದಂತೆ ಪ್ರಯತ್ನಿಸಿದ್ದೇನೆ. ಪರಿಣಾಮವು ನನಗೆ ತೃಪ್ತಿದಾಯಕವಾಗಿದೆ. ಆದರೆ ಈ ತ್ರಿರಾಷ್ಟ್ರಗಳ ನಾಯಕರು ಒಂದೆಡೆಯೇ ಕೂಡಿ ಚರ್ಚಿಸಿ ಕೊನೆಯ ನಿರ್ಧಾರಕ್ಕೆ ಬರಬೇಕಾಗಿದೆ. ಈ ವರ್ಷಾಂತ್ಯದೊಳಗೆ ಅಂತಹ ಕೂಟವು ಕೂಡೀತೆಂದು ನನ್ನ ಭರವಸೆ. ಅನೇಕ ವಿಷಯಗಳಲ್ಲಿ ಈಗಾಗಲೇ ನಮ್ಮೊಳಗೆ ಒಮ್ಮತವಿದೆ. ಮೋಸ್ಕೋ ಮಾತುಕತೆಯಲ್ಲಿ ಪೋಲೆಂಡದ ಸಮಸ್ಯೆ ಪ್ರಧಾನವಾಗಿತ್ತು. ಮಿತ್ರ ರಾಷ್ಟ್ರಗಳು ಪೋಲೆಂಡಕ್ಕೆ ಸಂಪೂರ್ಣ ಸ್ವರಾಜ್ಯವನ್ನು ಕೊಡುವವೆಂದು ನಿಶ್ಚಯದ ಆಸೆಯಿದೆ. ಈ ವಿಷಯವು ಪುನಃ ಶಾಂತಿ ಪರಿಷತ್ತಿನಲ್ಲಿ ಯೋಚಿಸಲಾಗುವುದು. ಪೋಲೆಂಡು ಸ್ವತಂತ್ರವಾಗಿ ಬಲಿಷ್ಟವಾಗಿ ಮಿತ್ರರಾಷ್ಟ್ರಗಳಲ್ಲಿ ಸ್ನೇಹಿಯುಳ್ಳದಾಗಿ ಇರುವಂತೆ ಅದರ ರಚನೆಯನ್ನು ಮಾಡಬೇಕೆಂಬುದಕ್ಕೆ ಮೂರು ಮಿತ್ರ ರಾಷ್ಟ್ರಗಳದೂ ಒಮ್ಮತವಿದೆ. ಬಾಲ್ಕನದಲ್ಲಿ ಕಪ್ಪು ಸಮುದ್ರ ಮತ್ತು ಭೂಮಧ್ಯ ಸಮುದ್ರದ ಹಕ್ಕು ಹಿತ ಸವಲತ್ತುಗಳನ್ನು ಲಕ್ಷಿಸಿಕೊಂಡು ಒಂದು ತೆರದ ಒಪ್ಪಂದಕ್ಕೆ ಬರಲಾಗಿದೆ. ಗ್ರೀಸ್, ರುಮಾನಿಯಾ, ಬಲ್ಗೇರಿಯಾ ಯುಗೋಸ್ಲಾವಿಯಾ ಇವುಗಳ ವಿಷಯ ಧೋರಣೆಯಲ್ಲಿ ನಮ್ಮೊಳಗೆ ಒಡಕು ಬರುವ ಸಂಭವವೇ ಇಲ್ಲ

ಹಿಟ್ಲರನ ದೂರಾಲೋಚನೆ ಶಿಲಾ ಸುರಂಗ ನಿರ್ಮಾಣ.

ಒಂದುವೇಳೆ ಕಾಡಾಕಾಡಿ ಕಾಳಗದಲ್ಲಿ ಸೋತರೂ ಅಡಗಿದ್ದು ಸಮಯ ಸಾಧಿಸಿ ಅನಿರೀಕ್ಷಿತವಾಗಿ ಮೇಲೆ ಬಿದ್ದು ಶತ್ರುಗಳನ್ನು ಪೀಡಿಸುತ್ತ ಯುದ್ಧವನ್ನು ದೀರ್ಘ ಕಾಲ ಎಳೆಯುವುದಕ್ಕಾಗಿ ಹಿಟ್ಲರನು ಬೆರ್ಚಸ್‌ಗಡನ್ ಎಂಬ ತನ್ನ ಪ್ರಧಾನ ಆಶ್ರಯಸ್ಥಳವಾದ ಪರ್ವತ ಪ್ರದೇಶಗಳಲ್ಲಿ ಸುರಂಗಗಳನ್ನು ಮಾಡಿಸುತ್ತಿರುವನಂತೆ ಸಾವಿರಾರು ಜನರು ಈ ಕೆಲಸದಲ್ಲಿ ನಿರತರಾಗಿರುವರಂತೆ

ಜರ್ಮನರ ನವ ಸಂಶೋಧನೆ.

ಜರ್ಮನ್ ವಿಜ್ಞಾನಿಗಳು ಇತ್ತೀಚೆಗೆ ಒಂದು ನಿರ್[illegible] ಮಾಡಿದಾಗಿ ಅದನ್ನು ಮನುಷ್ಯನ ಕಣ್ಣಿಗೆ ಇಂಜೆಕ್ಟ್ ಮಾಡಿದರೆ ಅವನು ಬೆಕ್ಕಿನಂತೆ ಕತ್ತಲಲ್ಲಿ ಕಾಣಬಲ್ಲವನಂತೆ. ಈ ಔಷಧದ ಹೆಸರು ನೋಕ್ಟನ್ ಬಿ. ಇದನ್ನು ಕಣ್ಣಿಗೆ ಇಂಜೆಕ್ಷನ್ ಮಾಡಿದರೆ ಕಣ್ಣು ಅಲ್ಟ್ರಾ-ಕೆಂಪು ಕಿರಣಗಳನ್ನು ಸಂಗ್ರಹಿಸಿ ಕತ್ತಲಲ್ಲಿಯೂ ಕಾಣುವ ಶಕ್ತಿ ಬರುತ್ತದಂತೆ. ಈ ಔಷಧದ ಸಿದ್ಧತೆಯು ಈಗ ಮಹಾ ಪರಿಮಾಣದಲ್ಲಿ ಸಾಗುತ್ತದೆ ಸದ್ಯದಲ್ಲೇ ಜರ್ಮನರು ರಾತ್ರಿ ರಣಾಂಗಣಕ್ಕೆ ಹೋಗುವ ಸೈನಿಕರಿಗೆ ಈ ಇಂಜೆಕ್ಷನ್ ಕೊಟ್ಟು ಕಳುಹಿಸುವರಂತೆ.

ಕೋಕ್ಸ ಬಜಾರದ ಮೇಲೆ ಶತ್ರುವಿನ ವಿಮಾನಧಾಳಿ

ಕಳೆದ ತಾ. 28ರ ಸಾಯಾಹ್ನ ಶತ್ರುವಿನ ವಿಮಾನವೊಂದು ಕೆಲವು ಬಾಂಬುಗಳನ್ನು ಕೋಕ್ಸ್ ಬಜಾರದ ಮೇಲೆ ಸುರಿಸಿತೆಂದೂ ಸೊತ್ತುಗಳಿಗೆ ಅಲ್ಪ ಹಾನಿಯಾದದಲ್ಲದೆ ಪ್ರಾಣಹಾನಿಯಾಗಿಲ್ಲವೆಂದೂ ತಿಳಿದುಬಂದಿದೆ. ಇದಕ್ಕಿಂತ ಮೊದಲು ಈ ಸ್ಥಳದ ಮೇಲೆ ಶತ್ರುವಿನ ವಿಮಾನ ಧಾಳಿಯಾದುದು ಕಳೆದ ಮಾರ್ಚ 25ರಲ್ಲಿ

ಫಿಲಿಪ್ಪಾಯಿನ್ ದ್ವೀಪ ಕದನದ ಕುರಿತು ಜಪಾನರ ಟೋಕಿಯೋದ ಹೇಳಿಕೆ.

ಅಮೇರಿಕನರ ನೌಕಾಪಡೆಗಳು ಫಿಲಿಪ್ಪಾಯಿನಗಳ ಪೂರ್ವದಲ್ಲಿ ಒಂದು ಕೂಡುತ್ತಿವೆ ಇನ್ನೊಂದು ನಿರ್ಣಾಯಕ ಯುದ್ಧವು ಸನ್ನಿಹಿತವಾಗುತ್ತಿದೆ

ಜಾಪಾನ್ ಇಂಪೀರಿಯಲ್ ಕಮಾಂಡಿನ ಪ್ರಕಟಣೆ

ಲೇಟಿಕೊಲ್ಲಿಯನ್ನು ಒಳನುಗ್ಗಲು ಮಾಡಿದ ನಮ್ಮ ನಿಷ್ಫಲ ಪ್ರಯತ್ನದಲ್ಲಿ ಒಂದು ಏರ್‌ಕ್ರಾಫ್ಟ್ ಕೆರಿಯರ್, ಎರಡು ಕ್ರೂಯಿಜರು ಮತ್ತು ಎರಡು ಡಿಸ್ಟ್ರೋಯರುಗಳು ನಷ್ಟವಾಗಿವೆ--ಈ ಮೊದಲು ಒಂದು ಯುದ್ಧ ನೌಕೆಯೂ ಎರಡು ಕ್ರೂಯಿಜರೂ ಮತ್ತು ಎರಡು ಡಿಸ್ಟ್ರೋಯರುಗಳೂ 126 ಜಪಾನ್ ವಿಮಾನಗಳೂ ನಷ್ಟವಾಗಿವೆ

ರ್‍ಹೈನ್‌ಲೇಂಡ್ ನಗರದಲ್ಲಿ ನಿಗೂಢ ಜ್ಯೋತಿ—ರ್‍ಯೂಟರ್‌ನ ವಿಶೇಷ ಸುದ್ದಿಗಾರನ ಹೇಳಿಕೆ

ಅಮೇರಿಕನರ ಪ್ರಥಮ ದಳದೊಂದಿಗಿದ್ದ ರ್‍ಯೂಟರನ ವಿಶೇಷ ಸುದ್ದಿಗಾರನು ಈ ವಿಚಿತ್ರ ಸುದ್ದಿಯನ್ನು ಕಳುಹಿಸಿರುವನು ಕೊಲೋನ್, ಡಸೆಲ್‌ಡೋರ್ಫ್, ಡ್ಯೂಸ್‌ಬರ್ಗ ಮತ್ತು ಇನ್ನೊಂದು ನಿಶ್ಚಿತವಾಗದ ಪಟ್ಟಣ—ಹೀಗೆ ರ್‍ಹೈನ್‌ಲೇಂಡಿನ ನಾಲ್ಕು ಪಟ್ಟಣಗಳಲ್ಲಿ ಹೊರಗತ್ತಲೆ(ಬ್ಲೇಕೌಟ್)ಯ ನಿಯಮವಿದ್ದರೂ ಇತ್ತೀಚೆಗೆ ನಾಲ್ಕು ರಾತ್ರಿಗಳಲ್ಲಿ ವಿಚಿತ್ರಪ್ರಕಾಶ ಕಾಣಬಂದಿದೆ ಮಿತ್ರಪಕ್ಷದ ವೈಮಾನಿಕರು ಅದನ್ನು ಕಳೆದ ತಾ ೧೧ರಲ್ಲಿ ಮೊತ್ತಮೊದಲಿಗೆ ಕಂಡರಂತೆ ಎಲ್ಲಿಂದ ಹೇಗೆ ಬರುತ್ತದೆಂದು ಹೇಳಲಶಕ್ಯವಾದ ಈ ವಿಚಿತ್ರ ಜ್ಯೋತಿ ಪ್ರಸಾರದಿಂದ ಕೋಲೋನಿನ ಅತ್ಯಂತ ಎಲ್ಲ ಬೀದಿಗಳಲ್ಲಿಯೂ ಅವರು ಸಂಚರಿಸಿ ನೋಡಿದರಂತೆ. ಮತ್ತೆ ತಡು ರಾತ್ರಿಯೂ ಅಂತೆಯೇ ಆ ಬೆಳಕು ಎಲ್ಲಿಂದಲೋ ಹರಿದು ಬಂದು ಪ್ರಸರಿಸುತ್ತಿತ್ತು. ಅನಂತರ ಅದು ಅದೃಶ್ಯ. ತಾ. ೧೬ರ ರಾತ್ರೆ ಪುನಃ ದೃಶ್ಯವಾಯಿತಂತೆ.

ಅಮೇರಿಕಾದಿಂದ ಕಲ್ಕತ್ತಕ್ಕೆ ವಿಮಾನ ಸರ್ವಿಸ್.

ಅಮೇರಿಕಾದ ವಾಶಿಂಗ್‌ಟನ್ನಿನಿಂದ ಕಲ್ಕತ್ತಕ್ಕೆ ವಿಮಾನ ಮೂಲಕ ಪ್ರಯಾಣಿಕರನ್ನು ಒಯ್ಯುವರೆ ಒಂದು ಕಂಪೆನಿಯು ಸ್ಥಾಪಿತವಾಗಿ ಸನ್ನದು ಪಡೆದಿದೆ ಈ ಪ್ರಯಾಣಕ್ಕೆ ತಲಾ ಒಂದರ 512 ಡೊಲ್ಲರು ಕೊಡಬೇಕಾಗುತ್ತದೆ.

ಆಹಾರ ಧಾನ್ಯಗಳ ಸಂಗ್ರಹದ ಯೋಜನೆ. ಮದ್ರಾಸು ಸರಕಾರದ ಪ್ರಕಟಣೆ ದಕ್ಷಿಣ ಕನ್ನಡ ಜಿಲ್ಲೆಗೂ ಅನ್ವಯಿಸುವುದು

ಅಕ್ಕಿ ಮುಂತಾದ ಆಹಾರದ ಕಾಳುಗಳು ಆವಶ್ಯಕತೆಗೆ ತಕ್ಕಷ್ಟು ಪ್ರಾಪ್ತಿಯಿಲ್ಲವೆಂದು ಪರಿಗಣಿಸಲ್ಪಟ್ಟಿರುವ ವಿಶಾಖಪಟ್ಣ, ತಿನ್ನವೆಲ್ಲಿ, ರಾಮನಾಡು, ಕೊಯಮುತ್ತೂರು, ನೀಲಗಿರಿ ಮತ್ತು ದಕ್ಷಿಣಕನ್ನಡ ಈ ಜಿಲ್ಲೆಗಳಲ್ಲಿ ಸಮಿತಿಯ ಹಸುಗೆಯಾಗುವಂತೆ ರೈತನ ಬೆಳೆಯು ಹುಟ್ಟುವಳಿಯಲ್ಲಿ ಅವನ ಸಂಸಾರದ ಆಹಾರ, ಬೇಸಾಯದ ಬೀಜ ಮತ್ತು ಮಜೂರಿ, ಅವನಿಂದ ಸಲಬೇಕಾಗಿರಬಹುದಾದ ಗೇಣಿ ಇವಕ್ಕೆ ನ್ಯಾಯವಾಗಿ ಬೇಕಾಗುವಷ್ಟನ್ನು ಆತನಿಗೆ ಬಿಟ್ಟು ಮಿಗುತೆಯನ್ನು ಆಯಾ ಜಿಲ್ಲೆಯ ಕಲೆಕ್ಟರರಿಂದ ನೇಮಿಸಲ್ಪಡುವವರ ಮೂಲಕ ಸಂಗ್ರಹಿಸಲ್ಪಟ್ಟು ಹಸುಗೆಯ ವಿತರಣೆಗೆ ಉಪಯೋಗಿಸಲ್ಪಡುವುದು

ಬಿಹಾರ್ ಹಳ್ಳಿಗಳಲ್ಲಿ ಪುಂಡು ಗಾವಲಿಗೆ ಪೋಲೀಸರು

ಬಿಹಾರದ ಗವರ್ನರರು ಆ ಪ್ರಾಂತದ ಕೆಲವು ಜಿಲ್ಲೆಗಳ ಹಲವು ಹಳ್ಳಿಗರವರು ಪ್ರಸಿದ್ಧ ಪುಂಡುಗಾರನಾದ ಸೀತಾರಾಮ್ ಸಿಂಗ್ ಮತ್ತು ಅವನ ಪುಂಡುಪಡೆಯವರಿಗೆ ಹಳ್ಳಿ ಲೂಟಿಗೆ ಸಹಾಯಕರಾಗಿರುವುದರಿಂದ ಆಯಾ ಭಾಗದಲ್ಲಿ ಪುಂಡುಗಾವಲಿಗಾಗಿ ವಿಶೇಷ ಪೋಲೀಸು ದಳಗಳನ್ನಿಟ್ಟು ಆ ಸಂಬಂಧವಾದ ಸರಕಾರದ ವೆಚ್ಚವನ್ನು ಹಳ್ಳಿಗರಿಂದ ಎತ್ತಲಾಗುವುದೆಂದು ಆಜ್ಞಾಪ್ರಕಟಣೆ ಕೊಟ್ಟಿದ್ದಾರೆ

"ಮುಂಬಯಿಯಲ್ಲಿ 'ಪಾರ್ಥಸಾರಥಿ'! ನಾಟಕದೇವಿಗೆ ಅವಮಂಗಳದಾರತಿ"—

ಎಂಬ ಶಿರೋನಾಮೆಯಿಂದ ಇತ್ತೀಚೆಗೆ ಮುಂಬಯಿಯಲ್ಲಿ ರಾಮರಾಜ ಕ್ಷತ್ರಿಯ ಸಂಗೀತ ಸಭೆಯವರು ಅಭಿನಯಿಸಿದ 'ಪಾರ್ಥಸಾರಥಿ ಅಥವಾ ಕುರುಕ್ಷೇತ್ರ' ಎಂಬ ಕನ್ನಡ ನಾಟಕದ ಕೆಲವೊಂದು ಅಂಶಗಳನ್ನು ವಿವರಿಸುವ ವಾರ್ತೆಯೊಂದು ನಮ್ಮಬಳಿಗೆ ಬಂದಿದೆ. ಸ್ಥಳಾಭಾವದಿಂದ ಪ್ರಕಟಿಸಲಾಗಲಿಲ್ಲ. ಸಂ. ನ.

ಕಾರ್ಕಳ—ಕಾರ್ಕಳ ತಾಲೂಕು ವರ್ಗದಾರ ಸಂಘದ ಮಹಾ ಸಭೆಯು ತಾ 6-11-44ನೆ ಸೋಮವಾರ ಸಂಜೆ 6 ಗಂಟೆಗೆ ಎಸ್. ಆರ್. ಎಸ್. ಹೋಮಿನಲ್ಲಿ ಸೇರಲಿರುವುದರಿಂದ ಈ ಸಭೆಗೆ [illegible] ರಿವಿನ್ಯೂ ಕಲೆಕ್ಷನ್ [illegible] ಇತ್ಯಾದಿ ವಿಷಯಗಳಲ್ಲಿ ಮಾತನಾಡಲಿರುವರೆಂದೂ ಆ ಪ್ರಯುಕ್ತ ಎಲ್ಲಾ ವರ್ಗದಾರರೂ ಬರಬೇಕಾಗಿ ವಕೀಲ್ ಶ್ರೀ ಕೆ. ಮಹಾಬಲ ಹೆಗ್ಡೆಯವರು ತಿಳಿಸುತ್ತಾರೆ

THULUNAD BANK OF Supply Agency Limited, Udipi.

(In Liquidation)

(Under sec. 209 H of Indian Companies Act)

Notice is hereby given that a meeting of the Shareholders of the Company will be held on Sunday the 17th December 1944 at 4-30 p. m. at the premises of the Company at Vishwajna Bhavan, Udipi for considering the following agenda

1. To consider the account of the acts and dealings of the Liquidators and of the conduct of the winding up during the year and to adopt the accounts of the Liquidators.

2. Any other items of business which may be brought before the meeting with the previous consent of the Chairman

K. Gururaja Rao
Narayana Rao K.
Joint Liquidators

Camp UDIPI
Dated 3-10-44.

The Canara Land Investments Ltd., MANIPAL.

NOTICE.

Notice is hereby given that the Register of Members and Transfer Books of the above Company will remain closed from 10th November 1944 to 26th November 1944 both days inclusive.

Upendra Anant Pai,
Managing Director.

ಉಡುಪಿ

ದಿ ಮೋರ್ಡರ್ನ್ ಸ್ಕೂಲ್ ಓಫ್ ಕಾಮರ್ಸ್ ವರ್ಧಂತಿ–ಯು ತಾ. 27-10-44ರಲ್ಲಿ ಕುಂದಾಪುರ ಸಬ್ ಕಲೆಕ್ಟರ್ ಶ್ರೀ ಡಿ. ಡಿ. ಸಾಠೆ ಐ. ಸಿ. ಎಸ್. ಇವರ ಅಧ್ಯಕ್ಷತೆಯಲ್ಲಿ ಊರ ಅಧ್ಯ ಮಹನೀಯರ ಕೂಡುವಿಕೆಯಿಂದ ವಿಜೃಂಭಣೆಯಿಂದ ಜರಗಿತು. ಶಾಲೆಯ ಪ್ರಗತಿಪರ ವರದಿಯನ್ನು ಮುಖ್ಯೋಪಾಧ್ಯಾಯರಾದ ಶ್ರೀ ಟಿ. ಎ. ವಾಸುದೇವನರು ಓದಿದ ಮೇಲೆ ಶ್ರೀ. ಕೊಬ್ಬೆಕಾರ್ ಪದ್ಮನಾಭ ಪೈಗಳು ಶಾಲೆಯ ಅಭ್ಯುದಯವನ್ನು ಹಾರೈಸಿ ಭಾಷಣವಿತ್ತರು. ಅಧ್ಯಕ್ಷರು ಯುರೋಪಿಯನರ ವ್ಯವಹಾರ ಜಾಣ್ಮೆಯನ್ನು ಕೆಲನಾತ್ಮಕವಾಗಿ ವಿವರಿಸಿ, ಇಂತಹ ಶಾಲೆಗಳ ಆವಶ್ಯಕತೆಯನ್ನು ಒತ್ತಿ ಹೇಳಿ ಪ್ರಶಂಸನಾತ್ಮಕ ಭಾಷಣವಿತ್ತರು, ಧನ್ಯವಾದ ಉಪಹಾರ ಮತ್ತು ಫೋಟೋಗಳೊಡನೆ ಸಭಾಂತ್ಯವಾಯಿತು.

ಕುಮ್ಕಿ ಸ್ಥಳಗಳು- ಉಡುಪಿ ತಾಲೂಕು ವರ್ಗದಾರರ ಸಂಘದ ಅಧ್ಯಕ್ಷರು 1943ನೆ ಯುಜ ವಿ ಆಗೋಸ್ತು ತಿಂಗಳಲ್ಲಿ ಮದ್ರಾಸು ಸರಕಾರದ ರೆವಿನ್ಯೂ ಬೋರ್ಡಿಗೆ ಬರಕೊಂಡ ಮನವಿಯ ವಿಷಯದಲ್ಲಿ ಈ ಕೆಳಗಿನ ರಿಯಾಯುತಿಗಳು ದೊರೆತಿವೆ ಕುಮ್ಕಿ ಸ್ಥಳಗಳನ್ನು ಎಸ್ಸೈನ್ ಮಾಡಬಾರದಾಗಿದ್ದ ನಿಷೇಧವನ್ನು ಈಗ ತೆಗೆದುಹಾಕಲಾಗಿದೆ. ಕುಮ್ಕಿ ಸ್ಥಳಗಳಲ್ಲಿಯ ದೂಪದ ಹಾಗೂ ಇತರ ಮರಗಳನ್ನು ಮಾರಾಟಮಾಡುವ ವಿಷಯದಲ್ಲಿ ಕುಮ್ಕಿದಾರರ ಹಿತವನ್ನು ಅಲ್ಲಗಳೆಯದಂತೆಯೂ ಕುಮ್ಕಿದಾರರ ಆಕ್ಷೇಪಗಳೇನಾದರೂ ಇದ್ದಲ್ಲಿ ಅವಕ್ಕೆ ನಿ

ಸೀತಾನದಿ ಜಾನುವಾರು ಜಾತ್ರೆ

ದ. ಕನ್ನಡ ಜಿಲ್ಲಾ ಕಾರ್ಕಳ ತಾಲೂಕು ಸೋಮೇಶ್ವರದ ಬಳಿ ಈ ಜಿಲ್ಲೆಯ ಶೈವರ ಅನುಕೂಲದ ಬಗ್ಗೆ, ಹೆಬ್ರಿ ಸೀತಾನದಿಯು ಘಟ್ಟಗಳೂ ಕೆ. ಆಗುಂಬೆ ರಸ್ತೆ ಕೂಡುವಲ್ಲಿ ಸೋಮೇಶ್ವರದ ಪೇಟೆಯ ಬುಡದಿಂದ ಮೂರು ಮೈಲು ಕೆಳಗೆ ಸೀತಾನದಿ ಎಂಬಲ್ಲಿ ಜಾನುವಾರು ಜಾತ್ರೆಯು ವರ್ಷಂಪ್ರತಿ ಜರಗುವಂತೆ ತಾ 25 11 44ರಿಂದ 12 ದಿವಸಗಳವರೆಗೆ ಜರಗುವುದು. ಕುಂದಾಪುರಕ್ಕೆ ಬಂದ ಜಾನುವಾರು ವ್ಯಾಪಾರಿಗಳು ಅಲ್ಲಿಯ ಜಾತ್ರೆ ಮುಗಿದ ಬಳಿಕ ಸಾವಕಾಶವಾಗಿ ಈ ಜಾತ್ರೆಗೆ ಮುಟ್ಟಲಾಗುವಂತೆ ಕುಂದಾಪುರದ ಜಾತ್ರೆಯು ಮುಗಿದು ಹತ್ತು ದಿನಗಳ ನಂತರ ಈ ಜಾತ್ರೆಯು ಪ್ರಾರಂಭವಾಗುವದು

ಜಾತ್ರೆಗೆ ಬರುವವರೆಲ್ಲರಿಗೂ ಯೋಗ್ಯ ಅನುಕೂಲತೆಗಳು ದೊರಕುವಂತೆ ಎಲ್ಲಾ ಏರ್ಪಾಡುಗಳನ್ನೂ ಕ್ರಮದಂತೆ ಮಾಡಲಾಗುವದು. ಜಾತ್ರೆಯ ಸ್ಥಳವು ಸೀತಾನದಿ ಹೊಳೆಯಿಂದ ಎರಡು ಫರ್ಲಾಂಗುಗಳೊಳಗಿದ್ದು ಹತ್ತಿರವಿರುವ ರಿಜರ್ವ ಕಾಡಿನಲ್ಲಿ ತುಂಬಾ ಹುಲ್ಲುಗಾವಲು ಇದೆ. ಜಾತ್ರೆಗೆ ಬರತಕ್ಕ ಜಾನುವಾರುಗಳಲ್ಲಿ ಅತ್ಯಂತ ಉತ್ಕೃಷ್ಟವೆಂದು ನಿರ್ಣಯಿಸಲಾಗುವ ಜಾನುವಾರುಗಳ ಬಗ್ಗೆ ಇನಾಮುಗಳನ್ನು ಕೊಡುವ ಏರ್ಪಾಡು ಮಾಡಲಾಗಿದೆ.

ಮೈಸೂರು, ದಕ್ಷಿಣಕನ್ನಡ ಹ ಇತರ ಜಿಲ್ಲಾ ಪ್ರಾಂತ್ಯಗಳಿಂದಲೂ ಸರ್ವರೂ ಈ ಜಾತ್ರೆಗೆ ಬಂದು ಪ್ರೋತ್ಸಾಹಿಸಬೇಕಾಗಿ ನಮ್ಮ ಅಪೇಕ್ಷೆಯಾಗಿರುತ್ತದೆ ಜಾತ್ರೆ ಸಮಯ ಈ ಕೆಳಗಣ ವಿವಿಧ ವಿನೋದಾವಳಿಗಳು ನಡೆಸಲ್ಪಡುವವು (1) ರಾಷ್ಟ್ರೀಯ ಯುದ್ಧ ಮುಖವಣ ನೂಯೋಕಾಂದ್ರ ದೇವಾವೆ. ಭಾಷಣ ಮ ಯುತರ ವಿನೋದಾವಳಿಗಳು. 2 ವ್ಯವಸಾಯ ಇಲಾಖೆಯ ಆಫೀಸರರಿಂದ ನಮ್ಮ ಜಿಲ್ಲೆಯ ವ್ಯವಸಾಯಗಳ ಉತ್ತೀರ್ಣದ ಬಗ್ಗೆ ಆಗತ್ಯವಿರುವ ಸಲಹೆಗಳನ್ನು ಸೂಚಿಸಿ ಭಾಷಣ ಮತ್ತು ಪ್ರದರ್ಶನಗಳು 3. ಜಾನುವಾರು ಇಲಾಖೆಯವರಿಂದ ಜಾನುವಾರುಗಳನ್ನು ಯೋಗ್ಯ ರೀತಿಯಲ್ಲಿ ಸಾಕಲು ಬೇಕಾಗುವ ಸಲಹೆಗಳನ್ನು ಸೂಚಿಸಿ ಭಾಷಣ ಮತ್ತು ಪ್ರದರ್ಶನಗಳು 4 ವಿದ್ಯಾ ಇಲಾಖೆಯ ಹಕ ಭಾಷಣ ಮತ್ತು ಪ್ರದರ್ಶನ

(ಸಹಿ) ಡಿ ಡಿ ಸಾಠೆ.
ಸಬ್ ಕಲೆಕ್ಟರ್, ಕುಂದಾಪುರ.

ಗೆ ಕೊಡುವಂತೆಯೂ ಜಿಲ್ಲಾ ಕಲೆಕ್ಟರರು ತಹಶಿಲ್ದಾರರಿಗೆ ಸೂಚನೆಗಳನ್ನು ಕೊಟ್ಟಿರುತ್ತಾರೆ. ಕುಮ್ಕಿ ಸ್ಥಳಗಳಿಂದ ಯುದ್ಧ ಸಿದ್ಧತೆಗಳಿಗೆ–ಬೇಕಾಗುವ ಯೋಗ್ಯ ಮರಗಳನ್ನು ಕೊಂಡುಹೋಗುವರೆ ಮಾಡಿದ ಕಾರ್ಯಕ್ರಮವನ್ನು ಹಿಂತೆಗೆಯಲು ಸರಕಾರವು ತಯಾರಿಲ್ಲ

ನಾಟ್ಯ ಗೋಷ್ಠಿ–ಸ್ಥಳೀಯ ಕಲಾವೃಂದದ ನಾಟ್ಯಗೋಷ್ಠಿಯು ಶ್ರೀ ಚಂದ್ರ ಮೌಳೀಶ್ವರ ದೇವಸ್ಥಾನದ ಉಪ್ಪರಿಗೆಯಲ್ಲಿ ತಾ 29ರಿಂದ ಮೂರು ದಿನಗಳ ತನಕ ನಡೆಯಿತು. ಶ್ರೀಗಳಾದ ಬಿ. ರ್ವಾಮಕೃಷ್ಣಾಚಾರ್ (ಹಿಂದೀ ನಾಟಕಗಳು), ಬಿ. ಶ್ರೀನಿವಾಸಭಟ್ (ನಾಟಕದಲ್ಲಿ ನಾಯಕ), ಪಿ. ಕುಪ್ಪಸ್ವಾಮಾಚಾರ್ (ಚಲಚ್ಚಿತ್ರ ಮತ್ತು ನಾಟಕ), ಮುಖ್ಯಪ್ರಾಣಕಿಂತ್ರ (ಸಂಸ್ಕೃತ ನಾಟಕಗಳ), ಬನ್ನಂಜೆ ರಾಮಾಚಾರ್ (ನವೀನ ಕನ್ನಡ ನಾಟಕಗಳು), ಬಿ. ವಿ. ಕೆದಿಲಾಯ (ಏಕಾಂಕ ನಾಟಕಗಳು), ಕೆ. ವಿಠಲ ಶೆಣೈ (ವಿನೋದಕ್ಕೆ ವಿಜ್ಞಾನದ ಕಾಣಿಕೆ), ಸೀತಾರಾಮಾಚಾರ್ (ಶಾಕುಂತಲಾ), ಕೆ. ಎಸ್. ಪದ್ಮನಾಭಾಚಾರ್ (ನಾಟ್ಯ ಕಲೆ), ಕೊರಡ್ಕಲ್ ಶ್ರೀನಿವಾಸರಾವ್ (ಇಂದಿನ ಮತ್ತು ಮುಂದಿನ ನಾಟಕಗಳು) ಮೊದಲಾದವರ ಭಾಷಣಗಳಿದ್ದುವು. ಶ್ರೀಯುತರು ಎಮ್. ರಾಮಚಂದ್ರರಾವ್. ಕೆ. ರಾಜಗೋಪಾಲಕೃಷ್ಣರಾವ್, ಪಂಡಿತ ವೆಂಕಟ್ರಮಣಾಚಾರ್ಯರು ಅನುಕ್ರಮವಾಗಿ ಮೂರು ದಿನಗಳ ಸಭಾಧ್ಯಕ್ಷತೆ ವಹಿಸಿದ್ದರು ತಾ 1ರಲ್ಲು ರಾತ್ರೆ ಸರಪಣಿ, ಅದೃಷ್ಟದಾಟ, ಯಮನ ಸೋಲು, ನಾಟಕಗಳ ಪ್ರದರ್ಶನವಾಯಿತು. ಕಲಾವೃಂದದ ಉತ್ಸಾಹಿ ಕಾರ್ಯದರ್ಶಿಯರಾದ ಶ್ರೀ. ಕೆ ಅನಂತಪದ್ಮನಾಭ ಉಡುಪರ ಧನ್ಯವಾದಾರ್ಪಣೆಯೊಂದಿಗೆ ನಾಟ್ಯಗೋಷ್ಠಿ ಸಮಾರಂಭವು ಜಯಶೀಲವಾಗಿ ಕೊನೆಗೊಂಡಿತು

ಸ್ವಾತೀ ನಕ್ಷತ್ರದ ಮಳೆಯು:— ಅತಿರೇಕವಾಗಿ ಬಿದ್ದಿರುವುದರಿಂದ ಕೆಲವು ಕಡೆ ಪೈರು ಕಟಾವು ಇನ್ನೂ ಆಗಲಿಲ್ಲ

ಕುಂಜಾಲು–ತಾ 21 10-1944ನೇ ಶನಿವಾರ ಸಂಜೆ ಸುಮಾರು 5 ಘಂಟೆಯ ಸಮಯ ಇಲ್ಲಿಯ ಒಂದು ಮಾವಿನ ಮರಕ್ಕೆ ಸಿಡಿಲೆರಗಿ ಮರವು ಇಬ್ಭಾಗವಾಗಿದೆಯಲ್ಲದೆ, ಸದರಿ ಮರದ ಸಮೀಪದಲ್ಲಿ ನಿಂತುಕೊಂಡಿದ್ದ ದನವೊಂದ ಕೂಡಲೇ ಮರಣಹೊಂದಿರುತ್ತದೆ ಸಾಮಾನ್ಯ ಆ ಮರದ ಒಂದು ಫರ್ಲಾಂಗ್ ಸುತ್ತುವರಿಯ ಮನೆ, ಅಂಗಡಿ, ಹೋಟೇಲುಗಳಲ್ಲಿ ಇದ್ದ ಜನರು ಮಿಂಚಿನ ಘರ್ಷಣವನ್ನು ನಾನಾ ರೀತಿಯಲ್ಲಿ ಅನುಭವಿಸಿದ್ದರು. ಒಬ್ಬರು ಸುಮಾರು ಒಂದು ತಾಸು ಬೋಧ ತಪ್ಪಿ ಬಳಿಕ ಪ್ರಜ್ಞೆ ಹೊಂದಿರುವರು.

ಪುತ್ತೂರು: ಸ್ಟೋರಿಗೆ ಅಕ್ಕಿ ಮಾರದ ಇತರರಿಗೆ ಮಾರಿದ ರೂ. ೧೨ರಂತೆ ಮಾರಿದರೆಂಬ ಆರೋಪದ ಮೊಕದ್ದಮೆ ಪುತ್ತೂರು ಸ್ಪೇಶಲ್ ಸಬ್ ಮೆಜಿಸ್ಟ್ರೇಟರಲ್ಲಿ ತೀರ್ಪಾಯಿತಾಗಿ ಆರೋಪಿಗಳು

ದ ಶಂಕರ ನಾರಾಯಣ ತೋಳ್ಪಾಡಿತ್ತಾಯ, ಶಾಂತಿಗೋಡು ಅವರಿಗೆ ೪ ತಿಂಗಳ ಕಠಿನ ಸಜೆ ೨೦೦ ರೂಗಳ ಜುಲ್ಮಾನೆ, ತಪ್ಪಿದರೆ ೧ ತಿಂಗಳ ಹೆಚ್ಚಿನ ಕಠಿನ ಸಜೆ ಎಂದು ವಿಧಿಸಲಾಗಿರುವಂತೆ ತಿಳಿದು ಬಂದಿದೆ.

ಕಾಸರಗೋಡು– ರೇಶ್ನಿಂಗ್ ಕ್ರಮ ಮೀರಿದ ಅಪಾದನೆಯ ಸಂಬಂಧ ಕಾಸರಗೋಡಿನ ಸುಬ್ರಾಯ ಕಮ್ತಿ ಯವರು ಅಲ್ಲಿನ ಸ್ಪೆ॥ ಸಬ್॥ ಮೆಜಿಸ್ಟ್ರೇಟರಿಂದ ೩ ತಿಂಗಳ ಕಠಿನ ಸಜೆಗೆ ಗುರಿಯಾಗಿದ್ದಾರೆ.

ಶ್ರೀ ತಲಕಾವೇರಿ ಫಂಡು– ಇದರ ಕುರಿತು ಶ್ರೀಗಳಾದ ವಿ ಎಸ್. ಶ್ರೀನಿವಾಸ ಶಾಸ್ತ್ರಿ, ಡಾ॥ ಯು ರಾಮರಾವ್, ದಿ ಬಾ॥ ಕೆ. ಎಸ್. ರಾಮಸ್ವಾಮಿ ಶಾಸ್ತ್ರಿ ಮೊದಲಾದ ಅಧ್ಯ ಮಹನೀಯರುಗಳು ತಂತಮ್ಮ ಸದಭಿಪ್ರಾಯವನ್ನೀಯುತ್ತಾ ಆಸ್ತಿಕ ಮಹಾಜನರು ಈ ಫಂಡಿಗೆ ಶಕ್ತಿ ಮೀರಿ ಧನ ಸಹಾಯಮಾಡುವುದು ಆದ್ಯ ಕರ್ತವ್ಯವಿರುತ್ತದೆಂದು ಜಾಹಿರುಪಡಿಸಿರುವರೆಂದು ಶ್ರೀ ಎಂ ಜಿ ವಿಶ್ವನಾಥ ರೈಗಳವರು ತಿಳಿಸುತ್ತಾರೆ. ಧನ ಸಹಾಯ ಮಾಡತಕ್ಕವರು ಅಧ್ಯಕ್ಷ, ತಲಕಾವೇರಿ ಫಂಡು, C. T. H. C ವಿರಾಜಪೇಟೆ ಕೊಡಗು, ಈವಿಳಾಸಕ್ಕೆ ಕಳಿಸಬಹುದು

ಮೈಸೂರು ಪತ್ರ.

ವಿಶ್ವವಿದ್ಯಾನಿಲಯ ಸಂಘದಲ್ಲಿ ಸಭಾ ಪರಿತ್ಯಾಗ:— ಮೈಸೂರು ವಿಶ್ವವಿದ್ಯಾನಿಲಯ ಸಂಘದಲ್ಲಿದ್ದ ವಂದೇ ಮಾತರಂ ಪ್ಲೇಟನ್ನು ಸಂಘದ ಅಧ್ಯಕ್ಷರು ಬೇರೆ ಕಡೆ ಬದಲಾಯಿಸಿರುವ ಮತ್ತು ಗಾಂಧಿಜೀಯವರಿಗೆ ಶುಭ ಸಂದೇಶವನ್ನು ಕಳಿಹಿಸಲು ಅಡ್ಡಿ ಪಡಿಸಿದ ಅಧ್ಯಕ್ಷರ ವರ್ತನೆಯನ್ನು ಖಂಡಿಸುವ ನಿರ್ಣಯವನ್ನು ಮೊನ್ನೆ ನಡೆದ ಸಭೆಯಲ್ಲಿ ಚರ್ಚಿಸಲು ಅವಕಾಶವನ್ನೀಯದುದಕ್ಕಾಗಿ ತಮ್ಮ ಪ್ರತಿಭಟನೆ ವ್ಯಕ್ತಪಡಿಸಲು ಕಾರ್ಯದರ್ಶಿಗಳು, ಉಪಾಧ್ಯಕ್ಷರು ಮತ್ತು ಕೆಲವು ಸದಸ್ಯರುಗಳು ಸಭಾ ಪರಿತ್ಯಾಗ ಮಾಡಿದರು.

ನಗರಾಭಿವೃದ್ಧಿ ಸಮಿತಿ– ಮೈಸೂರು ನಗರಾಭಿವೃದ್ಧಿ (City Improvement Trust Board)ಯ ಸಭೆಯು ೩೧.೧೦.೪೪ ನೇ ದಿನ ಬೆಳಿಗ್ಗೆ ನಡೆದು ನಗರಾಭಿವೃದ್ಧಿಗೆ ಸಮ್ಮಂಧಪಟ್ಟ ಹಲವು ವಿಷಯಗಳನ್ನು ಚರ್ಚಿಸಿತು. ಅಧ್ಯಕ್ಷರಾದ ಶ್ರೀ॥ ಆರ್, ರಾಮಚಂದ್ರರಾವ್ ಬೇರೆ ಬೋರೆಯೆಮು ಅಧ್ಯಕ್ಷತೆ ವಹಿಸಿದ್ದರು

ನಗರದ ಹೋಟೇಲುಗಳು– ಮೈಸೂರು ನಗರದಲ್ಲಿರುವ ಊಟದ ಹೋಟೇಲುಗಳಿಗೆ ಮುಂದಿನ ತಿಂಗಳಿಂದ ಶೇಕಡಾ 50ರಷ್ಟು ಕಡಿಮೆ ಮತ್ತು ಕಾಫಿ ಹೋಟೇಲುಗಳಿಗೆ ಅಕ್ಕಿಯೇ ಕೊಡುವುದಿಲ್ಲವೆಂದು ರೇಷನಿಂಗ್ ಅಧಿಕಾರಿಗಳು ತಿಳಿಸಿರುವುದರಿಂದ 1ನೆ ತಾರೀಖಿನಿಂದ ಹೋಟೆಲುಗಳಲ್ಲಿ ದೋಸೆ ಇಡ್ಲಿ ಮಾಡುವುದನ್ನು ನಿಲ್ಲಿಸತಕ್ಕದೆಂದು ಆರ್ಡರ್ ಆಗಿದೆ.

Sri Ramakrishna Theatre Limited,

UDIPI.

(This is not a Prospectus)

(Consent of the central Government has been obtained to the issue of 8000 new ordinary shares of the Theatre under rule 94- A. It must be distinctly understood that in giving this consent, the Government of India do not take any responsibility for the financial soundness of any schemes or for the correctness of any of the statements made or opinions expressed with regard to them)

The directors are glad to announce that new shares of the value of over Rs. 18,000/- are subscribed by the existing share holders of the company The remaining shares of Rs 32,000/- are available for the public to subscribe at a premium.

For particulars, apply:

Udipi,
31-10-44.

A. Janardhan Aise
Managing Director,

ಮೈಸೂರು ಕಾಂಗ್ರೆಸ್– ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರ ಸಭೆಯು ಕಳೆದ ವಾರ ಬೆಂಗಳೂರು ಕಾಂಗ್ರೆಸ್ ಕಾರ್ಯಾಲಯದಲ್ಲಿ ಅಧ್ಯಕ್ಷರಾದ ಶ್ರೀ ಟಿ. ಸುಬ್ರಹ್ಮಣ್ಯಂರವರ ಅಧ್ಯಕ್ಷತೆಯಲ್ಲಿ ನಡೆದು ಅನೇಕ ವಿಷಯಗಳನ್ನು ಚರ್ಚಿಸಲಾಯಿತು. ಅಲ್ಲದೆ ನವಂಬರ್ ಕೊನೆಯ ವಾರದಲ್ಲಿ ಕಾಂಗ್ರೆಸಿನ ವಿಶೇಷಾಧಿವೇಶನವನ್ನು ಕರೆಯಬೇಕೆಂದು ತೀರ್ಮಾನಿಸಿತು. ಶ್ರೀ. ಎಚ್ ಕೆ. ವೀರಣ್ಣ ಗೌಡರನ್ನು ಜಂಟಿ ಕಾರ್ಯದರ್ಶಿಗಳನ್ನಾಗಿ ಆರಿಸಲಾಯಿತು. ಸಭೆಯ ನಂತರ ಅಧ್ಯಕ್ಷರು ಪತ್ರಿಕಾಪ್ರತಿನಿಧಿಗಳನ್ನು ಕರೆಸಿ ಕಾಂಗ್ರೆಸ್ಸಿನ ರೀತಿನೀತಿಗಳನ್ನು ವಿವರಿಸಿದರು. ಅಲ್ಲದೆ ಇತ್ತೀಚೆ ಹಿಂದೆ ಸಾರಿದ ಜವಾಬ್ದಾರಿಯ ಸರ್ಕಾರಕ್ಕೆ ಸಮ್ಮಂಧಪಟ್ಟ ಟೀಕೆಗಳಿಗೆ ಉತ್ತರವಿತ್ತರು.

ಮಹಾಚುನಾವಣೆ:–ನೂತನ ಸುಧಾರಣೆಯಂತೆ ರಚಿಸಲ್ಪಟ್ಟ ರಾಜಾಂಗ ರಚನೆಯ ಎರಡನೆ ಸಲದ ಚುನಾವಣೆಯು ೧೯೪೫ನೇ ಇಸವಿ ಫೆಬ್ರವರಿ ೧೭,೧೮, ಮತ್ತು ೧೯ನೇ ತಾರೀಕುಗಳಲ್ಲಿ ನಡೆಯತಕ್ಕದೆಂದು ಮೈಸೂರು ಸರ್ಕಾರದ ಆಜ್ಞೆಯಾಗಿದೆ. ಅದಕ್ಕೆ ಸಂಬಂಧಪಟ್ಟ ಮತದಾರರ ಪಟ್ಟಿಯು ಅಕ್ಟೋಬರ್ ೩ನೇ ತಾರೀಕು ಪ್ರಕಟವಾಗುವುದು. ಹೆಸರು ಬಿಟ್ಟು ಹೋದವರು ತಕರಾರು ಅರ್ಜಿ ನಿಲ್ಲಿಸಲು ನವಂಬರ್ ೧೫ ಕೊನೆಯ ದಿನ. ಈ ಸಲದ ಚುನಾವಣೆಯಲ್ಲಿಯೂ ಕಾಂಗ್ರೆಸ್ ಸ್ಪರ್ಧಿಸುವುದೆಂದು ಅಧ್ಯಕ್ಷರು ಹಿಂದೆಯೇ ಸಾರಿದ್ದರು ಖಾಸಗಿ ಮಂತ್ರಿಗಳು ಅಧಿಕಾರದಲ್ಲಿದ್ದು ಸ್ಪರ್ಧಿಸುವರು.

ತಾ 23ರಲ್ಲಿ ಶ್ರೀ ಕೃಷ್ಣರಾಜ ಪರಿಷನ್ಮಂದಿರದಲ್ಲಿ ದಿವಂಗತರಾದ ಶ್ರೀ. ಹನುಮಾನ್ ದಾಸ್ ಶ್ರೀ ಎಂ. ಎನ್. ಕಾಮತ್ ಇವರ ಭಾವಚಿತ್ರಗಳ ಅನಾವರಣೋತ್ಸವವು ಶ್ರೀ. ಶಿವರಾಮ ಕಾರಂತರ ಅಧ್ಯಕ್ಷತೆಯಲ್ಲಿ ಜರಗಿತು.

ಅಮೇರಿಕದಲ್ಲಿ ಫಲರಸ ಸಿದ್ಧತೆಯ ಉದ್ಯಮ

ಅಮೇರಿಕದಲ್ಲಿ ಕಿತ್ತಳೆ ಬೆಳೆಯ ಕಾಲದಲ್ಲಿ ದೊರಕುವ ಕಿತ್ತಳೆಗಳ ಸೇಕಡ 10ರಷ್ಟಾಗುವ 10 ಸಾವಿರ ಟನ್ನು ಕಿತ್ತಳೆಗಳಿಂದ 16 ಮಿಲಿಯ ಗಲನು ರಸವನ್ನು ತೆಗೆದು ಅದರಿಂದ ಐದು ಮಿಲಿಯದ ಮೂರು ಲಕ್ಷ ಗೆಲನು ರಸಸಾರವನ್ನು ಸಿದ್ಧಗೊಳಿಸಿ ಪರವೂರುಗಳಿಗೆ ಕಳುಹಿಸಲಾಗಿದೆಯಂತೆ

ವಿಮಾನಗಳನ್ನು ಕಳುಹಿಸುವ ಲಕೋಟೆ

ಅಮೇರಿಕದಿಂದ ಬ್ರಿಟನಿಗೆ ಕಳುಹಿಸಲ್ಪಡುವ ವಿಮಾನಗಳು ಉಪ್ಪು ನೀರಿನ ತ್ಯಾವದ ಗಾಳಿಯಿಂದ ತುಕ್ಕು ಹಿಡಿದು ಹಾಳಾಗದಂತೆ ಅವನ್ನು ಗಾಳಿ ಪ್ರವೇಶಿಸದಂತಹ ಲಕೋಟೆಯೊಳಗೆ ಭದ್ರಗೊಳಿಸಿರುವರಂತೆ. ಈ ಲಕೋಟೆಗೆ ಒಂದು ತರದ ರಬ್ಬರಿನಿಂದ ಮಾಡಲ್ಪಟ್ಟ ಪಾರದರ್ಶಕವಾದ ತೆಳ್ಳನೆಯ ಹಾಳೆಯನ್ನು ಉಪಯೋಗಿಸುವರಂತೆ.

ಅಖಿಳ ಭಾರತ ಆಹಾರ ಪರಿಷತ್ತು

ಪ್ರಾಂತಿಕ ಹಾಗೂ ಆಶ್ರಿತ ಸಂಸ್ಥಾನಗಳ ಪ್ರತಿನಿಧಿಗಳನ್ನೂ ಇತರ ಕೆಲವು ಪ್ರಮುಖರನ್ನೂ ಆಮಂತ್ರಿಸಿ ಇಂಡಿಯಾ ಸರಕಾರವು ಡಿಲ್ಲಿಯಲ್ಲಿ ನವಂಬರ ಕೊನೆಯ ವಾರ ಅಖಿಳ ಭಾರತ ಆಹಾರ ಪರಿಷತ್ತನ್ನು ಜರಗಿಸುವುದಾಗಿ ತಿಳಿದುಬಂದಿದೆ. ಯುದ್ಧಾರಂಭವಾದಂದಿನಿಂದ ಸರಕಾರವು ಈ ವಿಷಯವಾಗಿ ಕರೆದ ಪರಿಷತ್ತುಗಳಲ್ಲಿ ಇದು ನಾಲ್ಕನೆಯದು.

ದಕ್ಷಿಣ ಕನ್ನಡ-
ಮಂಗಳೂರು

ಎಡ್ವೈಜರರ ಆಗಮನ-ನಮ್ಮ ಮಾನ್ಯ ಗವರ್ನರರ ಎಡ್ವೈಜರರಾದ ಸರ್. ಟಿ. ಎ. ಆಸ್ಟಿನ್, ಸಿ. ಐ. ಇ. ಐ. ಸಿ. ಎಸ್., ಅವರು ಇದೇ ನವೆಂಬರದ ಎರಡನೆ ವಾರದಲ್ಲಿ ಮಂಗಳೂರಿಗೆ ದಯಮಾಡಿಸಿ ಅದೇ ತಿಂಗಳ ತಾ. ೧೧ರ ಸುಮಾರಿಗೆ ಜರಗುವ ಸ್ಥಳೀಯ ಗವರ್ನ್‌ಮೆಂಟ್ ಕಾಲೇಜ್ ದಿನಾಚರಣೆಯಲ್ಲಿ ಅಧ್ಯಕ್ಷತೆ ವಹಿಸಬಹುದೆಂದೂ ಈ ಮುನಿಸಿಪಾಲಿಟಿಯವರು ಅವರಿಗೊಂದು ಎಡ್ರೆಸ್ ಒಪ್ಪಿಸಬಹುದೆಂದೂ ತಿಳಿದುಬಂದಿದೆ.

ಆಗಮನ-ಯುದ್ಧಾನಂತರದ ಪುನರ್ ವ್ಯವಸ್ಥೆಯ ಯೋಜನಾ ಶಾಖೆಯ ಅಸಿಸ್ಟೆಂಟರಾಗಿರುವ ರಾವ್ ಸಾಹೇಬ್ ಎನ್ ಸಿ ಡಾಮಸ್, ಬಿ. ಎ., ಅವರು ಮಂಗಳೂರಿಗೆ ಬಂದು ಆ ಯೋಜನೆಗೆ ಸಂಬಂಧಿಸಿದ ವಿಚಾರಗಳನ್ನು ಪರಿಶೀಲಿಸುತ್ತಿದ್ದರು-

ಸಂದರ್ಶನೆ- ಮಿ. ಈ. ಸಿ ವುಡ್, ಐ. ಸಿ. ಯಸ್. ಎಕ್ಸೈಜ್ ಮತ್ತು ಕಮರ್ಶಿಯಲ್ ತೆರಿಗೆಗಳ ಕಮಿಶನರ್, ಬೋರ್ಡ್ ಆಫ್ ರೆವಿನ್ಯೂ ಅವರು ಮಂಗಳೂರಿಗೆ ಬಂದು ಕಮರ್ಶಿಯಲ್ ಟೇಕ್ಸ್ ಆಫೀಸು ಮೊದಲಾದ ತಮಗೆ ಸಂಬಂಧಿಸಿದ ಕಾರ್ಯಾಲಯಗಳನ್ನು ನೋಡಿಕೊಂಡು ಹಿಂತಿರುಗಿದರು-

ತಳಿ--ಓಲೆ ಬೆಲ್ಲಕ್ಕೆ ಕ್ರಯ:— ಈ ಬೆಲ್ಲಕ್ಕೆ ಕ್ರಯವೀಗ ನಿಂಡಿತವಾಗಿದೆ. ೬ ರಾತಲಿನ ೨೪ ಓಲೆಬೆಲ್ಲದ ಕಟ್ಟಿಗೆ ಆಣೆ ೧೨, ಕಾಲು ರಾತಲಿನ ಒಂದು ಬೆಲ್ಲಕ್ಕೆ ಆಣೆ ಅರ್ಧ- ಈ ಬೆಲೆ ಜಾರಿಗೆ ಬರುವ ತಾರೀಕು ಇದೇ ೨೪ ಈ ಅಪ್ಪಣೆ ಮೀರುವವರ ಸ್ಟಾಕು ರಿಕ್ವಿಜಿಶನ್ ಆದೀತು- ಅವರಿಗೆ ಇತರ ರೀತಿಯ ದಂಡನೆಯೂ ಆದೀತು-

ದೀಪಾವಳಿ ಕಲೋತ್ಸವ- ತಾ. ೨೦ನೇ ಸಾಯಂಕಾಲ ಗಂಟೆ ೬ರಿಂದ ೮ರ ತನಕ ಶ್ರೀ॥ ಆರ್. ಬಿ. ವಸಂತರ ಕಟ್ಟಡದ ಮಾಳಿಗೆಯಲ್ಲಿ ದೀಪಾವಳಿ ಕಲೋತ್ಸವವು ಶ್ರೀ ನಾರಾಯಣ ಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಜರಗಿತು- ಶ್ರೀ॥ ಕೆ. ಕೃಷ್ಣರಾವ್, ಬಿ. ಎ. ಅವರು ಕರ್ನಾಟಕ ಲೇಖಕರ ಸಂಘದ ಉತ್ತಮ ಉದ್ದೇಶಗಳನ್ನೂ, ದೀಪಾವಳಿಕಲೋತ್ಸವಮಾಡಬೇಕೆಂಬ ಉತ್ಸಾಹದ ವಿಷಯಗಳನ್ನೂ ವಿವರಿಸಿದ ಮೇಲೆ ಶ್ರೀ॥ ಬಿ. ಎಂ. ಇದಿನಬ್ಬನವರು 'ಆಧುನಿಕ ಕವಿತೆಗಳು' ಎಂಬ ವಿಚಾರ ಭಾಷಣ ಮಾಡಿದ್ದಲ್ಲದೆ "ಯಾವ ಕಾಲವು ಶಾಸ್ತ್ರವೇನು ಹೇಳಿದರೇನು" "ದೀನಗಿಂತ ದೇವ ಬಡವ" "ಮೊದಲಗಿತ್ತಿ" ಮತ್ತು ರತ್ನನ ಪದದೂ ಳಗಿನ ಕೆಲವು ಕವನ[illegible] ಹಾಡಿ ತೋರಿಸಿದರು.

ಅನಂತರ ಶ್ರೀ॥ ಜಿ. ಎನ್. ಶೆಣ್ಯೆಯವರು ಮತ್ತು ಶ್ರೀ॥ಎಂ ವಿ. ಪ್ರಭುಗಳು "ಸಣ್ಣಕತೆ" ಎಂಬುದರ ಕುರಿತು ಭಾಷಣವಿತ್ತರು.- ಬಳಿಕ ಅಧ್ಯಕ್ಷರು ಭಾಷಣ ಕೊಡುತ್ತಾ ಕರ್ನಾಟಕ ಲೇಖಕರ ಸಂಘದ ಕಾರ್ಯಭಾರದ ಉತ್ಸಾಹವನ್ನು ಹೊಗಳಿ ಸಂಘದ ಏಳಿಗೆಯನ್ನು ಕೋರಿದರು ಕಾರ್ಯದರ್ಶಿಯರಾದ ಶ್ರೀ॥ ಎಸ್. ಜಿ. ನಾಯ್ಕರು ಧನ್ಯವಾದಗಳನ್ನು ಅರ್ಪಿಸಿದ ತರುವಾಯ ಸಭೆಯು ಮುಕ್ತಾಯವಾಯಿತು

"ಚಿಲ್ಲರೆ" ದಾಸ್ತಾನಿಗಾಗಿ.— ಮಂಗಳೂರು ಸಬ್ ಡಿವಿಜನಲ್ ಮೆಜಿಸ್ಟ್ರೇಟರಾದ ಶ್ರೀ. ರಂಗನಾಥರಾವ್ ನಾಯ್ಕರವರು (೧) ಮಂಗಳೂರು ರಥಬೀದಿಯ ಚಿಲ್ಲರೆ (ಬೀಡಿ) ವ್ಯಾಪಾರಿ ವೆಂಕಟೇಶ ಶೆಣೈ ಎಂಬಾತನ ವಶ ಸುಮಾರು ರೂ. ೩೫-೯-೦ಗಳಷ್ಟು ಚಿಲ್ಲರೆ ಇತ್ತೆಂಬ ಆರೋಪಕ್ಕಾಗಿ ಆತನಿಗೆ ೩ ತಿಂಗಳ ಕಠಿನ ಸಜೆ, ರೂ. ೨೦೦ ಜುಲ್ಮಾನೆ ಅಥವಾ ೬ ತಿಂಗಳು ಹೆಚ್ಚಿಗೆ ಶಿಕ್ಷೆಯನ್ನೂ (೨) ಕದ್ರಿಯ ಸೋಡಾ ಅಂಗಡಿಗಾರ ಐತಪ್ಪ ಸುವರ್ಣನ ಬಳಿ ಸುಮಾರು ರೂ. ೧೭-೧೦-೩ ಗಳಷ್ಟು ಚಿಲ್ಲರೆ ಇತ್ತೆಂಬ ಆರೋಪದ ಸಂಬಂಧ ಆತನಿಗೆ ೧ ತಿಂಗಳ ಕಠಿನ ಸಜೆ, ರೂ. ೧೦೦ ಜುಲ್ಮಾನೆ ಅಥವಾ ಒಂದ ತಿಂಗಳ ಹೆಚ್ಚಿನ ಕಠಿನ ಸಜೆಯನ್ನೂ (೩) ಪದವಿನ ಅಂಗಡಿಗಾರ ಅಪ್ಪಯ್ಯ ಬೆಳ್ಚಡನ ಬಳಿ ರೂ. ೧೯ ೭-೫ರಷ್ಟು ಚಿಲ್ಲರೆ ಇತ್ತೆಂಬ ಆರೋಪಕ್ಕಾಗಿ ರೂ. ೧೫೦ ಜುಲ್ಮಾನೆಯನ್ನೂ ವಿಧಿಸಿದ್ದಾರೆ.

ಬಿಡುಗಡೆ-- (೪) ಕದ್ರಿ ಸ್ಪೆಶಲ್ ಬೀಡಿ ವರ್ಕ್ಸಿನ ಮಾಲಕ ಎಂ. ನಾರಾಯಣರ ವಶ ರೂ. ೧೧-೩-೧೧ರಷ್ಟು ಚಿಲ್ಲರೆ ಇತ್ತೆಂಬ ಆರೋಪದ ಮೊಕದ್ದಮೆಯಲ್ಲಿ ಸ॥ ಡಿ॥ ಮೆಜಿಸ್ಟ್ರೇಟರು ಅವರನ್ನು ಬಿಡುಗಡೆ ಮಾಡಿರುವರು ಇವರ ಕಡೆಯಿಂದ ವಕೀಲರು ಶ್ರೀ. ಗಂಗಾಧರ ದಾಸರು ವಾದಿಸಿದ್ದರು

ರೇಶ್ನಿಂಗ್ ಕ್ರಮ ಮೀರಿದ್ದಕ್ಕೆ— ವೆಂಕಟೇಶ್ವರದ ಹರ್ಬರ್ಟ್ ಫೆರ್ನಾಂಡೀಸ ಎಂಬವರು ತಮ್ಮ ಮನೆಯಲ್ಲಿ ಹಾಜರಿಲ್ಲದ ನೆಂಬರ್ರರ ಕುರಿತು ತಿಳಿಸದೆ ರೇಶನ್ ಪಡೆದರೆಂಬ ಆರೋಪದ ಮೊಕದ್ದಮೆ ನಮ್ಮ ಸ್ಪೆ॥ ಸಬ್॥ ಮೆಜಿಸ್ಟ್ರೇಟರ ದ ಶ್ರೀ ಪಿ ಸೀತಾರಾಮ ಸೆಟ್ಟಿ ಅವರಲ್ಲಿ ತನಿಖೆ ನಡೆದು ಆರೋಪಿಗೆ ೧೦೦ ರೂಪಾಯಿಗಳ ಜುಲ್ಮಾನೆ ವಿಧಿಸಲಾಯಿತು.

ಪಂಡಿತ ಹೃದಯನಾಥ ಕುಂಜ್ರು- ಅವರು ಕಳೆದ ತಾ 10ರಲ್ಲಿ ಮಂಗಳೂರಿಗೆ ದಯಮಾಡಿಸಿದರು ನಮ್ಮದೀವ ರೇಶನಿಂಗ್ ಪದ್ಧತಿಯುಳ್ಳದಿರುವ ಕೆಲವು ಸ್ಥಳಗಳನ್ನು ಸಂದರ್ಶಿಸಿ ಅಕ್ಕಿಯ ವಿತರಣೆ ಆ ಕ್ಷಣಗಳಲ್ಲಿ ಹೇಗೆ ನಡೆಯುತ್ತಿದೆ ಎಂಬುದನ್ನು ಅನುಭವ ಮಾಡಿಕೊಂಡರು. ಮಂಗಳೂರಿನ ಕೆಲವು ಸಂಸ್ಥೆಗಳನ್ನು ಸಹ ಸಂದರ್ಶಿಸಿದರು- ಜಿಲ್ಲೆಯ ಆಹಾರ ಪರಿಸ್ಥಿತಿಯ ಕುರಿತು ಶ್ರೀಗಳಾದ ಜಿನರಾಜ ಹೆಗ್ಡೆ, ಎಮ್. ಶಿವರಾವ್, ಎನ್. ರಾಮರಾವ್ ಮೊದಲಾದವರೊಡನೆ ವಿಚಾರ ವಿನಿಮಯ ಮಾಡಿದರು. ಈ ಜಿಲ್ಲೆಯ ಆಹಾರ ಪರಿಸ್ಥಿತಿಯು ಮುಂಬಯಿ ಜಿಲ್ಲೆಯಷ್ಟೇ ಹೀನ ಸ್ಥಿತಿಯಲ್ಲಿದೆ. ಎಂದು ಅಭಿಪ್ರಾಯವಿತ್ತರು. ಈ ಸಂದರ್ಭದಲ್ಲಿ ಶ್ರೀ ಜಿನರಾಜ ಹೆಗ್ಡೆಯವರು ಕೆಲವು ಉಚಿತ ಸೂಚನೆಗಳನ್ನಿತ್ತರು.

ದ ಕ ಜಿಲ್ಲಾ ಕ್ಷೌರಿಕರ ಸಂಘ ಈ ಸಂಘದ ವಾರ್ಷಿಕ ಮಹಾಸಭೆಯು ಶ್ರೀ. ಕೆ. ಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ಕಳೆದ ವಾರ ಸೇರಿತು. ಕಾರ್ಯದರ್ಶಿಗಳಾದ ಶ್ರೀ॥ ಬಿ ರಾಮಪ್ಪನವರು ವರದಿಯನ್ನೂ ಲೆಕ್ಕಪತ್ರವನ್ನೂ ಸಭೆಯ ಮುಂದಿರಿಸಲಾಗಿ ಅವು ಮಂಜೂರಾದುವು ಅನಂತರ ಮಾ॥ ಡಾ॥ ಎಫ್ ಎಚ್. ಒಪೆಯರ್ ಶ್ರೀ॥ ಬಿ. ಎಲ್. ವಿದ್ಯಾರ್ಥಿ ಇವರುಗಳು ಭಾಷಣ ಮಾಡಿದರು. ಸಭೆಯಲ್ಲಿ ಸಂಘದ ರಿಜಿಸ್ಟ್ರಿ ಬಗ್ಗೆ ಎಪ್ಪತ್ತೈದು ರೂಪಾಯಿಗಳ ಸಂಗ್ರಹವಾದುವು, ಹೊಸ ವರ್ಷದ ಕಾರ್ಯಕಾರಿ ಮಂಡಲಿಯ ಚುನಾವಣೆ ನಡೆದು ಸಭಾಕಾರ್ಯವು ಮುಕ್ತಾಯಗೊಂಡಿತು.

ಅನ್ನದೇವರು ಮತ್ತು ಇತರ ಕತೆಗಳು- ತಾ. 22ನೇ ಸಂಜೆ, "ಪ್ರಕಾಶ ಎಸೋಸಿಯೇಶನಿನ" ಆಶ್ರಯದಲ್ಲಿ ಶ್ರೀ॥ ಕಯ್ಯಾರ ಕಿಂಞ್ಞಣ್ಣ ರೈಯವರ "ಅನ್ನ ದೇವರು ಮತ್ತು ಇತರ ಕತೆಗಳು" ಎಂಬ ಕಥಾ ಸಂಗ್ರಹದ ವಿಮರ್ಶೆ ನಡೆಯಿತು ಹಲವರು ಭಾಗ ವಹಿಸಿದ್ದ

ಮಂಗಳೂರು ನಗರ ಸಭೆ.--ಈ ಕೌನ್ಸಿಲಿನ ಮೀಟಿಂಗ್ ನಿನ್ನೆ ಸಂಜೆ ಆದರ ಕಾರ್ಯಾಲಯದಲ್ಲಿ ಚೆಯರ್‌ಮ್ಯಾನರ ಅಧ್ಯಕ್ಷತೆಯಲ್ಲಿ ಜರಗಿತು ಇಲ್ಲಿಗೆ ಬರಲಿರುವ ಗವರ್ನರರ ಎಡ್ವೈಜರರಿಗೊಂದು ಎಡ್ರೆಸ್‌ನ್ನು ಈ ಕೌನ್ಸಿಲು ಒಪ್ಪಿಸಬೇಕೆಂದು ನಿರ್ಧರಿಸಿ ಆ ಸಂಬಂಧವಾದ ಕಾರ್ಯನಿರ್ವಾಹಕ್ಕಾಗಿ ಒಂದು ಕಮಿಟಿಯನ್ನು ನೇಮಿಸಲಾಯಿತು. ಮಂಗಳೂರು ಆಟೋಮ್ಯಾಟಿಕ್ ಇವರು ನಡೆಸುತ್ತಿರುವ ಸಿಟಿ ಬಸ್ ಸರ್ವಿಸಿನವರ ಬಸ್ಸುಗಳು ಈ ನಗರದಲ್ಲಿ ಸಂಚರಿಸುವ ಮಾರ್ಗಗಳನ್ನು ನಿಶ್ಚೈಸಲು ಕೌನ್ಸಿಲ್ ನೇಮಿಸಿದ ಕಮಿಟಿಯ ವರದಿಯನ್ನು ಅಂಗೀಕರಿಸಲಾಯಿತು ಮಾರ್ಕೆಟುಗಳಲ್ಲಿ ಮಾರುವ ತರಕಾರಿ, ಮೀನು ಇತ್ಯಾದಿಗಳ ಬೆಲೆ ನಿರ್ಧರಿಸುವ ಕೆಲಸವನ್ನು ಒಂದು ಕಮಿಟಿಗೊಪ್ಪಿಸಲಾಯಿತು. ನಗರದಲ್ಲಿ ಹಬ್ಬುತ್ತಿರುವ ಮಲೇರಿಯ ರೋಗದ ಸಂಬಂಧ ಮಿ. ಎಂ. ಎಸ್ ಶ್ರೀಕೃಷ್ಣರು ಕೊಂಡು ರಚಿಸಿದ ವಿಚಾರದಲ್ಲಿ ನಗರ ಸಭೆಯ ನಾಶದ ಕುರಿತಾದ ಇತರವಾದ ಅವರ ಸೂಚನೆಗಳನ್ನು ಅಂಗೀಕರಿಸಲಾಯಿತು.

ಜಿಲ್ಲಾ ಕಲೆಕ್ಟರರ ಸೂಚನೆಗಳು- ಕಳೆದ ಆದಿತ್ಯವಾರ ನಮ್ಮ ಕಲೆಕ್ಟರರು ಪಂಚನಕಟ್ಟೆಯ ಮಂಗಳೂರು ಸಹಕಾರಿ ಸ್ಟೋರ್ಸಿನ ಕಟ್ಟಡದಲ್ಲಿ ಈ ನಗರದ ೩೧ ಸಹಕಾರಿ ಎಸೋಸಿಯೇಶನ್‌ಗಳ ಮೆಂಬರರ ಮತ್ತು ಇತರ ಕೆಲಸಗಾರರ ಒಂದು ಸಭೆಯನ್ನು ಉದ್ದೇಶಿಸಿ ಭಾಷಣ ಮಾಡುತ್ತ ಅವರೆಲ್ಲರೂ ತಮ್ಮ ತಮ್ಮ ಸಂಸ್ಥೆಗಳ ವಿಚಾರದಲ್ಲಿ ಪ್ರಾಮಾಣಿಕವಾದ ಕರ್ತವ್ಯಗಳನ್ನು ಸಲ್ಲಿಸಬೇಕೆಂದೂ ರೇಶನಿಂಗ್ ಕ್ರಮಗಳನ್ನು ಚೆನ್ನಾಗಿ ಪಾಲಿಸಬೇಕೆಂದೂ ತಿಳಿಸಿದರು, ಈ ಸಭೆಗೆ ಸಹಕಾರ ಸಂಘಗಳ ಡೆ॥ ರಿಜಿಸ್ಟ್ರಾರರೂ ಶ್ರೀ. ಎಂ. ಶಿವರಾಯರೂ ಬಂದಿದ್ದರು.

ನಿಧನ-ನಿವೃತ್ತ ಸಬ್ ಜಡ್ಜರಾದ ಬೈಲು ಗೋಪಾಲಕೃಷ್ಣಯ್ಯನವರು ಕಳೆದ ತಾ 27ರಲ್ಲಿ ಪರಲೋಕಯಾತ್ರೆಗೈದರೆಂದು ತಿಳಿಸಲು ವಿಷಾದಿಸುತ್ತೇವೆ. ಶ್ರೀಯುತರು ಉದ್ಯೋಗದಲ್ಲಿರುವಾಗ ದಕ್ಷತೆಯಿಂದ ಕಾರ್ಯ ನಿರ್ವಹಿಸಿದ್ದರು ನಿವೃತ್ತರಾದ ಬಳಿಕವೂ ಹತ್ತು ಹಲವು ಸಂಸ್ಥೆಗಳಲ್ಲಿ ಸೇರಿ ಜನತಾ ಸೇವೆಯನ್ನು ಮಾಡಿದ್ದರು- ದಿವಂಗತರ ಆತ್ಮಕ್ಕೆ ಚಿರಶಾಂತಿಯನ್ನೀಯಲಿ.

ಪ್ಲೇಗ್ ವರದಿ— ಅಕ್ಟೋಬರ ೩೧ಕ್ಕೆ ಅಂತ್ಯವಾದ ವಾರದ ಪ್ಲೇಗ್ ವರದಿಯನ್ನು ಮುನಿಸಿಪಲ್ ಹೆಲ್ತ್ ಆಫೀಸರರು ಹೀಗೆ ಪ್ರಕಟಿಸಿದ್ದಾರೆ

"ಈ ವಾರದ ಕೇವಲ ೩ ಇಲಿ ಮಾತ್ರ ಬಿದ್ದಿದ್ದುವು ಆ ವ್ಯಕ್ತಿ ೨ ಇಲಿಗಳ ಪರೀಕ್ಷೆ ಬಗ್ಗೆ ಪರ್ಮಿಟು ಮಾಡಿದ ಗೂಡುಗಳಲ್ಲಿ ಹಿಡಿಯಲ್ಪಟ್ಟಿದ್ದ ಇಲಿಗಳ ಪೈಕಿ ೬ ಇಲಿಗಳ ರಕ್ತವನ್ನು ಕಡಿದು ಪರೀಕ್ಷೆಗೆ ರವಾನಿಸಿದೆ ನಂಬ್ರ ೨೩೦ ಮತ್ತು ೨೩೩ನೇ ಸ್ಲೈಡುಗಳ ಪರೀಕ್ಷೆಯ ಪರಿಣಾಮವಾಗಿ ಅವು ಪ್ಲೇಗ್ ಸೋಂಕಿದ ಇಲಿಗಳದ್ದೆಂದು ವರದಿ ಬಂದಿದೆ. ಈ ಪೈಕಿ ಒಂದು ಮಿ. ಪಿಯರ್ಸ್ ಲೆಸ್ಲೀ ಕಂಪೆನಿಯವರ ಆವರಣದಲ್ಲಿ ಬಿದ್ದ ಇಲಿಗೂ ಮತ್ತೊಂದು ಚೊಕ್ಕಬೆಟ್ಟು ರಸ್ತೆಯ ಸ್ಟಯ ಒಂದು ಮನೆಯಲ್ಲಿ ಬಿದ್ದ ಇಲಿಗೂ ಸಂಬಂಧಪಟ್ಟಿತ್ತು ಎರಡೂ ಕಡೆಗಳನ್ನು ತೊಳೆದು ಶುದ್ಧಪಡಿಸಲ್ಪಟ್ಟಿದೆ, ಇಲಿಬಿಲಗಳಿಗೆ 'ಗೇಸ್' ಕೊಟ್ಟಿತ್ತು. ಬಿಸಲಮ್ಮನ ಪಿಗೆ ತೆರವು ಮಾಡಿದ್ದೂ ಉಂಟು- "೨೩೧ ಇಲಿ ಬಿಲಗಳಿಗೆ ಈ ವಾರದಲ್ಲಿ 'ಗೇಸ್' ಕೊಟ್ಟು ಮೇರೆಗೆ ಒಟ್ಟಾರೆ ಅವುಗಳ ಜುಮಲು ಸಂಖ್ಯೆ ೯೩,೨೪೯ಕ್ಕೆ ಏರಿದೆ ಪ್ಲೇಗ್ ಸೋಂಕಿದ್ದ ಹಲವು ಸ್ಥಳಗಳಲ್ಲಿಟ್ಟ ಗೂಡುಗಳಲ್ಲಿ ೧೬೧ ಇಲಿಗಳು ಬಿದ್ದಿದ್ದುವು ಅವನ್ನು ನಾಶಪಡಿಸಿದೆ "ಮನುಷ್ಯರಲ್ಲಿ ಯಾರಿಗೂ ಈ ವಾರದಲ್ಲಿ ಪ್ಲೇಗ್ ತಗಲಿದ್ದಿಲ್ಲ ಪ್ಲೇಗ್ ಚುಚ್ಚುಮದ್ದು ಹಾಕಿಕೊಂಡವರ ಸಂಖ್ಯೆ ೬೧,೬೬೨ಕ್ಕೆ ಏರಿದೆ 'ಪಶ್ಚಿಮ ಮಾರ್ಗದ ಒಂದು ಕಡೆಯಲ್ಲಿ ದ ಸ್ತಾಪಿಸಲ್ಪಟ್ಟ ೧೫೦ ಚೀಲ ಗೋದಿಗೆ ಮತ್ತು ಸರಕಾರದ ಮಟ್ಟುಗೋಲು ಹಾಕಿದ್ದ ಕಸ್ಟಮ್ಸ್ ಕಚೇರಿಯಲ್ಲಿಯ ಅಕ್ಕಿಯ ಚೀಲಗಳಿಗೆ ಹಾಗೂ ರಿಕಾರ್ಡಿಗೆ ಕೂಡ ಈ ವಾರದಲ್ಲಿ 'ಗೇಸ್' ಕೊಟ್ಟಿತು

ಗೌ. ಸಾ ಬ್ರಾ ಪರಿಷತ್ತು:— ಗೌಡ ಸಾರಸ್ವತ ಬ್ರಾಹ್ಮಣ ಪರಿಷತ್ತಿನ ಹಿರಿಯರ ಕೌನ್ಸಿಲ್ ಸಭೆಯೊಂದು ಈಚೆಗೆ ಜರಗಲಾಗಿ, ಇದೇ ಬರುವ ಡಿಸೆಂಬರ ತಿಂಗಳ ಕೊನೆಯ ವಾರದ [illegible] ಅಧಿವೇಶನವ ಮಂಗಳೂರಿನಲ್ಲಿ ನಡೆಸಬೇಕೆಂದು ಆಪೇಕ್ಷಿಸಲಾಗುವ ಠರಾವುಗಳನ್ನು ಇದೇ ಡಿಸೆಂಬರ ೩ರ ಒಳಗೆ "ಗೌ. ಕಾರ್ಯದರ್ಶಿ, ಶ್ರೀ ರಂಗಬನನ, ಹಂಪನಕಟ್ಟೆ, ಮಂಗಳೂರು, ಈ ವಿಳಾಸಕ್ಕೆ ಕಳಿಸಿಕೊಡಬೇಕೆಂದು ತೀರ್ಮಾನವಾದ ವಿಷಯವನ್ನು ಸದರಿ ಪರಿಷತ್ತಿನ ಕಾರ್ಯದರ್ಶಿಗಳವರು ಪ್ರಕಟಿಸಿ ಸೂಚಿಸುತ್ತಾರೆ

ಜಪಾನಿನಲ್ಲಿ ವೃತ್ತಪತ್ರಿಕೆಗೆ ಕತ್ತರಿ

ನವಂಬರ ತಾ. 1ರಿಂದ ಜಪಾನಿನ ಯಾವ ದೈನಿಕ ಪತ್ರಿಕೆಯಾಗಲಿ ಎರಡು ಪುಟ ಮೀರಕೂಡದೆಂದು ಜಪಾನ್ ಸರಕಾರದ ನಿಯಂತ್ರಣ

ರೈಲುಬಂಡಿ ಹತ್ತುವ ನೂಕುನುಗ್ಗಲಿನಿಂದ ಮೂವರ ಮರಣ

ಕಲ್ಕತ್ತೆಯ ಒಂದು ರೈಲು ನಿಲ್ದಾಣದಲ್ಲಿ ಬಂಡಿ ಬಂದು ನಿಂತಾಗ ನಿಲ್ದಾಣದ ಹೊರಗಿದ್ದ ಮೂರನೆಯ ತರಗತಿಯ ಪ್ರಯಾಣಿಕರು ಒಳಹೋಗಲು ನುಗ್ಗಿದ ಒತ್ತಡದಿಂದ ಕಬ್ಬಿಣದ ಗೇಟು ಮುರಿದು ಕಳಚಿ ಬಿದ್ದು ಮೂವರಿಗೆ ಮರಣವಾಯಿತು. ಇಪ್ಪತ್ತೈದು ಮಂದಿ ಜಖಮುಗೊಂಡರು

ಯುದ್ಧಾನಂತರದ ಶಾಂತಿ ಸ್ಥಾಪನೆಯ ರೂಪರೇಖೆ-- ರೂಜ್ವೆಲ್ಟರ ನಿರೂಪಣೆ.

ಜರ್ಮನಿ ಜಪಾನುಗಳ ವಿವಿಧ ಸೇನಾ ಶಕ್ತಿಗಳನ್ನು ಸಂಪೂರ್ಣವಾಗಿ ತೊಡೆದು ತೆಗೆಯಬೇಕು ಮುಂದೆ ಚಿಗುರಬಹುದಾದ ಮೂಲವನ್ನು ಬೇರುಸಹಿತ ನಾಶಮಾಡಬೇಕು. ಶಾಂತಿಯನ್ನು ಕಾಪಾಡಲಿಕ್ಕೆ ಈಗ ಯುದ್ಧ ಭಾಗಿಯಾಗಿರುವ ಅಮೇರಿಕಾದಿ ಜನಾಂಗಗಳು ಮಾತ್ರ ಸಮರೋಪಕರಣಗಳನ್ನು ಇಟ್ಟುಕೊಳ್ಳಬೇಕು. ಯುದ್ಧಪ್ರಿಯ ಜನಾಂಗಗಳನ್ನು ದೀರ್ಘಕಾಲ ಪಳಗಿಸಿ ಶಾಂತಿಪ್ರಿಯರನ್ನಾಗಿ ಮಾಡಬೇಕಾಗಿರುವುದರಿಂದ ನಮ್ಮ ಅಮೇರಿಕಾ ಬ್ರಿಟನ್ ರಶ್ಯಾ ಚೀನಾ—ಈ ಚತುರ್ಜನಾಂಗಗಳಲ್ಲಿ ಯುದ್ಧೋಪಕರಣಗಳ ಸಂಚಯವು ಅನಿವಾರ್ಯವಾದುದು.

ಭಾರತದ ಬಿಕ್ಕಟ್ಟಿನ ಪರಿಹಾರಕ್ಕೆ ಬ್ರಿಟಿಷ್ ಕಾಮನ್‌ವೆಲ್ತ್ ಪಕ್ಷದ ಸೂಚನೆ

ರಾಜಕೀಯ ಕೈದಿಗಳ ಬಿಡುಗಡೆ—ಚುನಾಯಿಸಲ್ಪಟ್ಟ ಹನ್ನೊಂದು ಮಂತ್ರಿಗಳ ವಶಕ್ಕೆ ಅಧಿಕಾರ ಪರಿವರ್ತನೆ—

ಪಾರ್ಲಿಮೆಂಟಿನಲ್ಲಿ ಸರ್. ರಿಚಾರ್ಡ್ ಏಕ್‌ಲೇಂಡ ಎಂಬವರಿಂದ ನಿರ್ಮಾಣವಾದ ಕಾಮನ್‌ವೆಲ್ತ್ ಪಕ್ಷ (ಸ್ವತಂತ್ರಪಕ್ಷದ ಒಂದು ಪರಿಚ್ಛೇದ) ಕ್ಕೆ ಸೇರಿದವರು ಇಂಡಿಯಾದ ವಿಷಯವಾಗಿ ತಮ್ಮ ಘೋಷಣೆಯನ್ನು ಪ್ರಕಟಿಸಿರುತ್ತಾರೆ ಮೊದಲಾಗಿ ಎಲ್ಲ ರಾಜಕೀಯ ಕೈದಿಗಳನ್ನು ಬಿಡುಗಡೆಮಾಡತಕ್ಕದ್ದು. ಪ್ರಾಂತೀಯ ನ್ಯಾಯವಿಧಾಯಕ ಸಭೆಗಳನ್ನು ತಿರುಗಿ ಸಂಸ್ಥಾಪಿಸಬೇಕು ಎರಡನೆಯದಾಗಿ ಜನತೆಯಿಂದ ಚುನಾಯಿಸಲ್ಪಡುವ ಹನ್ನೊಂದು ಮಂತ್ರಿಗಳ ಮಂಡಲದ ಸರಕಾರಕ್ಕಾಗಲೀ ಅಥವಾ ಸರ್. ತೇಜಬಹದೂರ್ ಸಪ್ರು, ಶ್ರೀ ರಾಜಗೋಪಾಲಾಚಾರಿ, ಮಿ ಜಿನ್ನಾ ಅಥವಾ ಪಂಡಿತ ನೆಹರೂ ಇಂತಹ ಮುಂದಾಳುಗಳಿಂದ ನಿಯೋಜಿತವಾಗುವ ಸರಕಾರಕ್ಕಾಗಲೀ ಅಧಿಕಾರವನ್ನು ಬಿಟ್ಟುಕೊಟ್ಟು ಭಾರತವು ಸ್ವತಂತ್ರವಾದ ಮಿತ್ರರಾಷ್ಟ್ರವೆಂಬ ಘೋಷಣೆಯಿಂದ ಆ ಸರಕಾರದೊಂದಿಗೆ ಬ್ರಿಟಿಸು ಇಂಡಿಯಾದ ಸೇನಾ ವಿಷಯಕ ನಿಯಂತ್ರಣದ ವ್ಯವಸ್ಥೆಯ ಬಗ್ಗೆ ಒಪ್ಪಂದ ಒಡಂಬಡಿಕೆಯ ಕರಾರನ್ನು ಮಾಡಿಕೊಳ್ಳತಕ್ಕದ್ದು.

ಅಲ್ಲಾ ಭಕ್ಷ್ ಕೊಲೆಯ ಮೊಕದ್ದಮಾ. ಕೊಲೆ ನಡೆಸಿದವನಿಗೆ ರೂ 12000ದ ವಾಗ್ದಾನವಿತ್ತಂತೆ— ಒಪ್ಪಿದ ಸಾಕ್ಷಿ ದರೇಶನ ಹೇಳಿಕೆ—

ಈ ಕೊಲೆಗೆ ಕಾರಣರೆಂದು ಆರೋಪಿತರಾಗಿರುವ ಖಾನ್ ಬಹದೂರ್ ಖುಹ್ರೊ ಮತ್ತು ಅವರ ಸಹೋದರ ಮಹಮ್ಮದ್ ನವಾಜ್ ಇವರು ಅಲ್ಲಾ ಬಕ್ಷನ ಕೊಲ್ಲುವ ವ್ಯವಸ್ಥೆ ಮಾಡಬೇಕೆಂದೂ ಅದಕ್ಕೆ ಹನ್ನೆರಡು ಸಾವಿರ ರೂಪಾಯಿಗಳನ್ನು ತನಗೆ ಕೊಡುವುದಾಗಿ ವಾಗ್ದಾನ ಮಾಡಿದ್ದರೆಂದೂ ಆದರೆ ಹುರ್ ಜನಗಳ ಮೂಲಕ ಕೊಲೆ ನಡೆಯಿಸಿದ ಮೇಲೆ ಅದರ ಗುಟ್ಟು ರಟ್ಟಾಯಿತೆಂಬ ನೆಪದಿಂದ ಖುಹ್ರೊ ವಾಗ್ದತ್ತವಾದ ಮೊಬಲಗನ್ನು ಕೊಡಲಿಲ್ಲವೆಂದೂ ಒಪ್ಪಿಗೆಯ ಸಾಕ್ಷಿ ದರೇಶನು ಕೋರ್ಟಿನಲ್ಲಿ ನಡೆಯುವ ಈ ಕೊಲೆ ವಿಚಾರಣೆಯಲ್ಲಿ ವಾಗ್ಮೂಲಕೊಟ್ಟಿರುವನು.

ನಾನು ಕೋರ್ಟಿನ ಮೂಲಕ ಗಂಡನಿಂದ ವಿಚ್ಛೇದವನ್ನು ಪಡೆದು ಇಂದಿಗೆ ಒಂದು ತಿಂಗಳಾಯಿತು. ನನಗೆ ಅಸಹನೀಯವೆಂದು ತೋರುತಿದ್ದ ದಾಂಪತ್ಯ ಬಂಧನದಿಂದ ಒಮ್ಮೆಗೆ ನಾನು ಬಿಡುಗಡೆ ಹೊಂದಿದೆನು.

'ಇನ್ನು ಸದಾಕಾಲ ಕಾರ್ಯತತ್ಪರಳಾಗಿದ್ದು ಎಲ್ಲವನ್ನು ಮರೆಯುವೆನು; ಜೀವನವನ್ನು ಹೊಸ ಹೊಸ ಅಭಿರುಚಿ, ಸಾಧನಗಳಿಂದ ತುಂಬುವೆನು. ಕಳೆದ ಎಂಟು ವರ್ಷ ದಾಂಪತ್ಯ ಬಂಧನದಲ್ಲಿ ಸಿಲುಕಿ ಮಾಡಲಿಕ್ಕಾಗದಿದ್ದ ಎಲ್ಲವನು ಮಾಡಲು ಸ್ವತಂತ್ರಳಾಗಿರುವೆನು' ಎಂದು ನನ್ನ ಭಾವನೆಯಾಗಿತ್ತು.

ಎಂಟು ವರ್ಷಗಳ ನಂತರ ಗಂಡನನ್ನು ತ್ಯಜಿಸಿ, ವಿಚ್ಛೇದವನ್ನು ಪಡೆದು, ಮನೆಬಿಟ್ಟು ಬಂದು ನಗರದಲ್ಲೊಂದು ಹೊಸ ಮನೆಯನ್ನು ಬಾಡಿಗೆಗೆ ಕೊಂಡು, ನನ್ನ ರಕ್ಷ್ಯನುಸಾರ, ನನ್ನ ಸ್ವಂತ ಅಭಿರುಚಿಗೊಪ್ಪುವಂತೆ ಆ ಮನೆಯನ್ನು ಸಜ್ಜುಗೊಳಿಸಿದೆನು. 'ಸ್ವೇಚ್ಛಾನುಸಾರ-ಮತ್ತೊಬ್ಬನ ಹುಚ್ಚುಮೆಚ್ಚುಗಳಿಗೆ ಬಗ್ಗದೆ--ಮನೆಯನ್ನು ಅಲಂಕರಿಸುವುದೆಂದರೆ ಎಂತಹ ಆನಂದ!' ಎಂಬುದಾಗಿ ಎಷ್ಟೋ ವರ್ಷ ಪದೇ ಪದೇ ನಾನೆಣಿಸುತಿದ್ದೆ.

'ನನ್ನ ಅಡುಗೆ ನಾನೇ ಮಾಡಬಹುದು; ತೋರಿದಂತೆ ತಿನ್ನಬಹುದು; ಮನಸ್ಸಿಗೆ ಬಂದಂತೆ ಮನೆಗೆ ಹಿಂದಿರುಗಬಹುದು; ಸ್ವತಂತ್ರಳಾಗಿ ಸ್ನೇಹಿತರನ್ನು ಆರಿಸಬಹುದು' ಎಂದು ನಾನಾಶಿಸಿದ್ದೆ.

'ಎಂಟು ವರ್ಷಗಳ ದಾಂಪತ್ಯದಿಂದ ಸೋತು ಸುಣ್ಣವಾದೆ; ನಿರಾಶಳಾದೆ; ನನ್ನ ವ್ಯಕ್ತಿತ್ವವನ್ನೆಲ್ಲ ಕಳೆದುಕೊಂಡೆ; ನನಗಿಂತ ಬಲವಂತನಾದ ಬೇರೊಬ್ಬನ ನೆರಳಿನಂತಾದೆ'ನೆಂದು ನನಗೆ ಆಗ ತೋರುತಿತ್ತು.

ದಾಂಪತ್ಯ ಜೀವನವೊಂದು ಬಂಧನದಂತಾದರೆ—

ವಿಚ್ಛೇದದಿಂದ ಸ್ವಾತಂತ್ರ್ಯವಿಲ್ಲ!

ಕೋರ್ಟಿನ ಮೂಲಕ ವಿಚ್ಛೇದವನ್ನು ಪಡೆದು, ಗಂಡನನ್ನು ತ್ಯಜಿಸಿ, ನಿರಾಶೆಗೊಂಡ ರಮಣಿಯೋರ್ವಳ ಹೃದಯದ್ರಾವಕ ಆತ್ಮವೃತ್ತ!

ನಮ್ಮ ವಿಚ್ಛೇದದ ವ್ಯಾಜ್ಯ ಕೋರ್ಟಿನಲ್ಲಿ ಬಾಕಿಯಿದ್ದಾಗ ಎಂದರೆ ಕಳೆದ ಕೆಲವು ತಿಂಗಳಂತೂ ನಾನು ನಮ್ಮ ದಾಂಪತ್ಯ ಜೀವನದ ಸಿಂಹಾವಲೋಕನ ಮಾಡಿದೆನು; ಎಂಟು ವರ್ಷಗಳ ಹಿಂದೆ ನಮ್ಮೊಳಗಿದ್ದ ಪ್ರೇಮಶೃಂಖಲೆ ಎಲ್ಲಿ ಮುರಿಯಿತು, ನಾವೇನು ತಪ್ಪು ಮಾಡಿದೆವು ಎಂದು ಯೋಚಿಸಿದೆನು.

ನಮಗೆ ಮಕ್ಕಳಿಲ್ಲ ನಿಜ; ಆದರೆ ಮಕ್ಕಳಿಲ್ಲದ ಎಷ್ಟೋ ದಂಪತಿಗಳು ಸುಗಮವಾಗಿ ದಾಂಪತ್ಯವನ್ನು ನಿರ್ವಹಿಸುತ್ತಿಲ್ಲವೆ? ನಮಗೆ ಹಣದ ಅಡಚಣೆಯಿರಲಿಲ್ಲ; ರೋಗರುಜೆಗಳ ಕಾಟವಿರಲಿಲ್ಲ; ಗೆಳೆಯರ ಕೊರತೆಯಿರಲಿಲ್ಲ ಸಾಮಾನ್ಯವಾಗಿ ನವದಂಪತಿಗಳು ಆಶಿಸಬಹುದಾದ ಎಲ್ಲ ಬಗೆಯ ಸುಖ-ಸೌಕರ್ಯಗಳೂ ನಮಗಿದ್ದುವು.

ಆದರೂ ನಮ್ಮ ದಾಂಪತ್ಯವು ನಿರಾಶಾಮಯವಾಯಿತು; ಅಂತೆಯೇ ಸ್ವಾತಂತ್ರ್ಯದಾಯಕವೆಂದು ಹೇಳಿಸಿಕೊಳ್ಳುವ ಈ ವಿಚ್ಛೇದವು ದೊರೆತು ಒಂದು ತಿಂಗಳು ಕಳೆಯುವಷ್ಟರಲ್ಲೇ ನಿರಾಶೆಯೇ ತೋರುವುದಲ್ಲ! ಆಹಾ ಎಲ್ಲೆಲ್ಲಿಯೂ ಸೋಲು; ಇನ್ನು ನನಗೆ ಗೆಲುವೆಂಬುದಿಲ್ಲ; ಸ್ವಾತಂತ್ರ್ಯವೂ ಇಲ್ಲ

ನಾನು ದಾಂಪತ್ಯದ ಬಂಧನದಿಂದ ಮುಕ್ತಳಾಗಿರುವೆನಹುದು; ಪರಂತು ಅದಕ್ಕಿಂತ ಕಟುತರವಾದ ಏಕಾಂತ, ವ್ಯರ್ಥಾಲಾಪಗಳ ಬಂಧನದಲ್ಲೀಗ ನಾನು ಸಿಲುಕಿರುವೆನು.

ದಾಂಪತ್ಯದ ಒಡನಾಟವು ಕಳೆದ ಕೆಲವು ವರ್ಷಗಳಿಂದ ನನಗೆ ನಿಂತುಹೋದಂತೆಯೇ ಇತ್ತು. ಈಗಲಂತೂ ಅದು ಸಂಪೂರ್ಣ ಶೂನ್ಯವಾಗಿದೆ. ಬರೇ ಆತ್ಮಸಂತೋಷಕ್ಕಾಗಿ,-ಆತ್ಮ ಲಾಭಕ್ಕಾಗಿ-ಬದುಕಿ ಫಲವಿಲ್ಲವೆಂಬ ಸಂಪೂರ್ಣ ಅನುಭವ ನನಗಿದೆ.

ದಾಂಪತ್ಯದಿಂದ ಪಾರಾದೆನೆಂದು ಸಂತೋಷಪಡುವುದರ ಬದಲಿಗೆ ಕಹಿಯಾದ ಈ ಒಂಟಿ ಬಾಳು,- ನಿರಾಶೆಗಳನ್ನು- ಕುರಿತಾಗಿ ಚಿಂತಿಸುತ್ತಲೇ ಇದ್ದೇನೆ. ಕೆಲಸದಲ್ಲಿ- ನಡೆನುಡಿಗಳಲ್ಲಿ—ಸಂತೋಷವೆಂಬುದೇ ಇಲ್ಲ. ಮತ್ತೊಂದು ಜೀವಿಯ. ಉನ್ನತಿಗಾಗಿ-ಸುಖಕ್ಕಾಗಿ-ನಾನೇನಾದರೂ ಮಾಡುತಿದ್ದೇನೆಯೆ? ಎಂದು ಮನಸ್ಸು ಮರುಗುತ್ತಿದೆ.

ಕಳೆದ ಎಂಟು ವರ್ಷಗಳ ನಮ್ಮ ಜೀವನವನ್ನು ಪ್ರಾಮಾಣಿಕ ದೃಷ್ಟಿಯಿಂದ ವಿಮರ್ಶಿಸುವಾಗ, ನಮ್ಮಲ್ಲಿ ಆಗಾಗ ಒಬ್ಬರನ್ನೊಬ್ಬರು ಸ್ವಲ್ಪ ಸಮಯದವರೆಗೆ ಅಗಲಿಕೊಂಡಿರುವಷ್ಟು ಧೈರ್ಯ, ಬುದ್ಧಿವಂತಿಕೆಗಳಿದ್ದುದಾದರೆ ನಮ್ಮ ಬಾಳಿನ ಕಹಿ-ಕಷ್ಟಗಳೆಲ್ಲ-ಬರುತ್ತಿರಲೇ ಇಲ್ಲವೆಂಬುದು ಖಂಡಿತ ನಮ್ಮಿಬ್ಬರೊಳಗೆ ಅಭಿಪ್ರಾಯಭೇದವೆದ್ದಾಗ-- ತುಮುಲವೇಳುವುದೆಂದು ತಿಳಿದೊಡನೆ-ನಾವು ಒಬ್ಬರನ್ನೊಬ್ಬರು ಬಿಟ್ಟು ಸ್ವಲ್ಪ ಕಾಲವಿದ್ದು, ಮರಳಿ ಮನಸ್ಸಿನ ಮಾರ್ಪಾಟವಾಗಿ, ದಾಂಪತ್ಯ ಜೀವನದ ಅಡಿಗಲ್ಲಾದ ಪರಸ್ಪರ ಸಹಿಷ್ಣುತೆಯನ್ನು ಪಡೆಯುವ ತನಕ ಹಾಗೆಯೇ ಇದ್ದರೆ ಒಳಿತಾಗುತಿತ್ತೆಂದು ಈಗ ತೋರುತ್ತದೆ.

ಆದರೇನು? ವಿವಾಹವಾಗಿ ಕೆಲವು ವಾರಗಳ ವರೆಗಂತೂ ಒಬ್ಬರನ್ನೊಬ್ಬರು ಅಗಲಿರುವುದು ನಮಗೆ ತೀರಾ ಅಸಾಧ್ಯವೆಂಬಂತೆ ತೋರಿತು. ಅನಂತರ 'ಪರಸ್ಪರ ಅಗಲೋಣ' ವೆಂದು ಹೇಳುವಷ್ಟು ಧೈರ್ಯ ನನ್ನಲ್ಲಾಗಲೀ ನನ್ನ ಪತಿಯಲ್ಲಾಗಲೀ ಇರದೆ ಹೋಯಿತು; ಹಾಗೆ ಮಾಡಿದರೆ, ಮತ್ತೆ ಜೊತೆಗೆ ಹಾಕಲಿಕ್ಕಾಗದಷ್ಟು ವೈಷಮ್ಯ ನಮ್ಮಲ್ಲುಂಟಾಗಬಹುದೆಂದು ನಾವು ಬಗೆದೆವು.

ಕಷ್ಟಮಯವಾದ-ಈ ದುರ್ದಿನಗಳಲ್ಲಿ ಎಷ್ಟೋ ವೇಳೆ ದಂಪತಿಗಳು ತಮಗೆ ವಿಚ್ಛೇದ ದೊರೆತರಾಗಬಹುದಿತ್ತು ಎಂದು ಯೋಚಿಸಬಹುದು. ಆದರೆ ಎಚ್ಚರಿಕೆ! ತಿರಿಗೊಮ್ಮೆ ಹೇಳುತ್ತೇನೆ—ಒಮ್ಮೆ ದಾಂಪತ್ಯವನ್ನು ಪರಿಗ್ರಹಿಸಿದವರಿಗೆ ಮತ್ತೆ ಸ್ವಾತಂತ್ರ್ಯವೆಂಬುದಿಲ್ಲ. ದಾಂಪತ್ಯದ ನಿಕಟಸಂಬಂಧದಲ್ಲಿ, ಆಗಾಗ ತಲೆದೋರಬಹುದಾದ ಸಣ್ಣಪುಟ್ಟ ತೊಂದರೆಗಳು ವಿಚ್ಛೇದಾನಂತರದ ಈ ಒಂಟಿಬಾಳು—ಕನಿಕರಗಳಿಗಿಂತ ನೂರು ಪಾಲಿಗೆ ಒಳಿತೆಂದೇ ನಾನು ಸಾರಿ ಸಾರಿ ಹೇಳುತ್ತೇನೆ.

'ಗಂಡನನ್ನು ತ್ಯಜಿಸೋಣ; ಸ್ವತಂತ್ರಳಾಗೋಣ.' ಎಂಬ ಆಸೆ ತಲೆದೋರಿದೊಡನೆ. ಹೇಗಾದರೂ ಮಾಡಿ ಪರಿಸ್ಥಿತಿಯನ್ನು ಸುಧಾರಿಸಿ, ಆ ಆಸೆಯನ್ನು ದೂರಕ್ಕೆ ತಳ್ಳಿಬಿಡಿ.

ಇದಕ್ಕೆ ಒಳ್ಳೆಯ ಉಪಾಯವೆಂದರೆ ಅಂತಹ ಸಂದರ್ಭಗಳಲ್ಲಿ ಗಂಡನಿಂದ ಸ್ವಲ್ಪಸಮಯ ದೂರವಾಗಿರಿ ಆಗ ತಾನೆ ನಿಮ್ಮಿಬ್ಬರ ಪರಸ್ಪರ ಒಡನಾಡದಿಂದೆಷ್ಟು ಸುಖವಿದೆಯೆಂಬ ಅರಿವಾಗುವುದು. ಮಕ್ಕಳಿಂದ ನಿಮ್ಮ ಸುಖಕ್ಕೆ ಧಕ್ಕೆ ತಗಲಿದೆಯಾದರೆ ಅವರನ್ನು ಸ್ವಲ್ಪ ಸಮಯ ಬೇರೆಲ್ಲಿಗಾದರೂ ಕಳುಹಿಸಿ ಕೊಡಿ ನಿಮ್ಮ ಮನಸ್ಸಮಾಧಾನವಾದ ಬಳಿಕವೇ ಅವರನ್ನು ಕರೆದು ತರಿಸಿಕೊಳ್ಳಬಹುದು.

ಇದೆಲ್ಲ ಸುಮ್ಮನೆ ಹೇಳುತಿದ್ದೇನೆಂದು ಭಾವಿಸಬೇಡಿ. ಮನಸ್ಸಿದ್ದಲ್ಲಿ ಮಾರ್ಗವಿದ್ದೇ ಇದೆ. ವಿಚ್ಛೇದದ ದುರಂತವನ್ನು ನಿಲ್ಲಿಸಲು ನಿಮಗೆ ಮನಸ್ಸಿದೆಯಾದರೆ, ಬೇಕಾದ ತ್ಯಾಗಮಾಡಲಿಕ್ಕೂ ಅಂಜಬೇಡಿ; ಆ ತ್ಯಾಗವು ಅತ್ಯಾವಶ್ಯಕ-ಅನಿವಾರ್ಯ.

ಒಂದು ಗಾದೆಮಾತಿನಂತೆ 'ದಾಂಪತ್ಯದಲ್ಲಿ ಯಶಸ್ಸು ಸಿಗಬೇಕಾದರೆ ತಕ್ಕವನನ್ನು ವರಿಸುವುದಕ್ಕಿಂತಲೂ—ತಕ್ಕವಳಾಗಿ ಇರುವುದೇ ಮುಖ್ಯವಾಗಿದೆ'-ಎಂಬುದನ್ನು ನೆನಪಿನಲ್ಲಿಡಿ.

ವಿಚ್ಛೇದಕ್ಕಾಗಿ ಕೋರ್ಟಿಗೆ ಹೋಗುವ ಮುನ್ನ 'ನಾನು ಮತ್ತೊಬ್ಬ ಪುರುಷನೊಡನಾದರೂ ದಾಂಪತ್ಯವನ್ನು ಸುಗಮವಾಗಿ ನಡೆಯಿಸಬಲ್ಲೆನೇ?' ಎಂದು ಒಂದಿಷ್ಟು ಯೋಚಿಸಿರಿ. ಒಮ್ಮೆ ವಿವಾಹಿತೆಯಾದವಳಿಗೆ ಮತ್ತೆ ಸ್ವಾತಂತ್ರ್ಯವೆಂಬುದಿಲ್ಲ. ಸ್ವತಂತ್ರಳಾದ ಹೆಂಗುಸು ನಿಜವಾದ ಸುಖವನ್ನು ಪಡೆಯುವಳೆಂಬ ಭ್ರಮೆಯಿಂದ ಪತಿಯನ್ನು ತ್ಯಜಿಸುವುದರಿಂದ ಒಬ್ಬಳ ಜೀವನವೆಲ್ಲ ಮಣ್ಣುಗೂಡೀತು; ದುಃಖಮಯವಾದೀತು. ಜೋಕೆ!!

General Supplies Ltd. Udipi.

(In Liquidation)

(Under sec. 209 II of Indian Companies Act)

Notice is hereby given that a meeting of the Creditors of the Company will be held on Sunday the 17th December 1944 at 5-30 P. M. at the premises of the Company at Vishwajna Bhavan, Udipi for considering the following agenda.

1. To consider the account of the acts and dealings of the Liquidators and of the conduct of the winding up during the year and to adopt the accounts of the Liquidators.

2. Any other items of business which may be brought before the meeting with the previous consent of the Chairman.

K. Gururaja Rao.
Narayana Rao K.
Joint Liquidators

Camp: UDIPI
Dated 3-10-44

Sri Narayan Guru Bank, Ltd.,

(Incorporated in British India. Liability of Members is Limited.)

Regd. Head Office HAMPANKATTA, MANGALORE.

Branch: UDIPI, S. K.

Authorised Capital	....	**Rs. 2,00000**
Issued Capital	....	**,, 1,00000**
Paid up Capital	....	**,, 56,150**

The Company has commenced Business by obtaining from the Government the Certificate of Commencement of Business on the 19th August, 1944 under the Indian Companies Act, 1913.

Strong Board of Directors

Consent of the Central Government has been obtained under the Defence of India Rules 94 A "It must be distinctly understood that in giving this consent the Govt. of India does not take any responsibility for the financial soundness of any scheme or for the correctness of any of the statements made or opinion expressed with regard to them". The Government of India has been pleased to extend the period till the 13th January 1945 for the sale of shares.

A few shares at par available.

Rs. 50/- per share. Re 1/- Entrance Fee per share.

Hundreds have already taken up shares!

WHY NOT YOU?

Current and Savings Bank Accounts are opened Fixed Deposits are accepted. Enquire for Rules of Business and rates of Interest.

MANGALORE JARAPPA,
President & Managing Director.

ಯಾರವಳು?

(೩ನೇ ಪುಟದಿಂದ)

●

'ಬೇಡ. ಅವಳು ತನಗೆ ಬೇಕಾದ ತಿಂಡಿಯನ್ನೆಲ್ಲ ಹೊರಡುವಾಗಲೇ ತನ್ನೊಟ್ಟಿಗೆ ತಂದಿದ್ದಾಳೆ ಅವಳು ನನ್ನ ಸೊಸೆಯಲ್ಲ.'

ಪುನಃ 'ಒಹೋ! ಕ್ಷಮಿಸಿ'. ಎಂದೆ ನಾನು. ನಾವಿಬ್ಬರೂ ಮೌನವಾಗಿ ತಿನ್ನತೊಡಗಿದೆವು.

ಹೆಂಡತಿಯಲ್ಲ. ತಂಗಿಯಲ್ಲ, ಚಿಕ್ಕಪ್ಪನ ಮಗಳಲ್ಲ. ಸೊಸೆಯಲ್ಲ ಆಗಲಿ. ನನ್ನ ಸಾಧನೆಯಲ್ಲಿ ಮುಂದುವರಿಯುತಿದ್ದೇನೆ ಎಂದು ಒಳಗೊಳಗೇ ನಾನು ನಕ್ಕೆನು

'ನೀವೆಷ್ಟು ಮಂದಿ ಅಣ್ಣತಮ್ಮಂದಿರು?' ನಾನು ಮರಳಿ ಪ್ರಶ್ನಿಸಿದೆ

'ಮೂವರು'

'ನಿಮಗಿಂತ ಹಿರಿಯರಿರಬಹುದು.'

'ಹೌದು.'

ಸರಿ, ಮತ್ತೊಂದು ದಾರಿ ಸಿಕ್ಕಿದಂತಾಯಿತು.

'ವಿವಾಹವಾಗಿದೆಯೆ?'

'ಹೌದು. ದೊಡ್ಡಣ್ಣನಿಗೆ ಆಗಿದೆ'

'ಆಚೆ ಡಬ್ಬಿಯಲ್ಲಿರುವ ನಿಮ್ಮ ಅ....ಅತ್ತಿಗೆ....ಗೆ ಊರೆಲ್ಲಿ?'

'ಒಹೊ. ಅವಳ ಊರು ಪಾಟ್ನ.....ಆಕೆ ನನ್ನ ಅತ್ತಿಗೆಯಲ್ಲ.'

ಮತ್ತೊಮ್ಮೆ ಶೂನ್ಯ. ಗುರಿ ತಪ್ಪಿತು. ಅಯ್ಯೋ ಭಗವಂತ! ಎಷ್ಟೆಷ್ಟು ಸಂಬಂಧಗಳನ್ನು ಹೊರಹಾಕಿದೆನೋ ಅಷ್ಟಷ್ಟು ಸತ್ಯದಿಂದ ದೂರವಾಗುತಿದ್ದೇನೆ, ಎಂದು ನಾನು ಭಾವಿಸಿದೆ. ನನ್ನ ಕುತೂಹಲವಂತೂ ನಿಮಿಷ ನಿಮಿಷಕ್ಕೆ ಉಕ್ಕೇರುತಿತ್ತು.

ಆ ಯುವಕನು ಇತ್ತೀಚೆಗಿನ ಯಾವ ಸ್ಟೇಷನಿನಲ್ಲಿಯೂ ಕೆಳಗಿಳಿದು ಅವಳೊಡನೆ ಮಾತನಾಡಲು ಹೋಗದಿದ್ದುದರಿಂದ, ಅವನಿಗೆ ಒಂದು ಸಲಹೆ ಕೊಡೋಣವೆಂದು ನಾನು ಯೋಚಿಸಿದೆ.

'ಇಲ್ಲಿಯ ಸ್ಟೇಷನುಗಳಲ್ಲಿ ನೀರಿನ ಅಭಾವ ಬಹಳ ಜಾಸ್ತಿ ಅಲ್ಲವೇ?' ಎಂದೆ ನಾನು.

'ಹೌದು, ನನಗೂ ಹಾಗೆಯೇ ಕಂಡು ಬರುತ್ತದೆ'.

'ಕೆಲವು ಸಲ ತಾಸುಗಟ್ಟಲೆ ನೀರು ಸಿಗದೆ ಹೋಗುವುದೂ ಉಂಟು. ಸಿಡಿಯಂತೂ ಹೇಳತೀರದು'.

ಅವನು ತಲೆದೂಗಿದ.

'ಮುಂದಿನ ಸ್ಟೇಷನೇ ವೆಣಗಲ್' ಸರಾಯಿ ಅಲ್ಲಿ ತುಂಬಾ ನೀರು ಸಿಗುವುದು. ಅಲ್ಲಿ ಕೆಳಗಿಳಿದು ನಿಮ್ಮ ಆ ಅತ್ತಿಗೆ ನೀರು ಬೇಕೋ ಎಂದು ವಿಚಾರಿಸುವುದುತ್ತಮ. ಅವರು ಬಹಳ ಬಾಯಾರಿರಬೇಕು'.

'ಸರಿ ಹಾಗೆಯೇ ಮಾಡಬೇಕೆಂದಿದ್ದೇನೆ......ಅವಳು ನನ್ನ ಅತ್ತಿಗೆಯಲ್ಲ'.

'ಕ್ಷಮಿಸಿರಿ' ಎಂದು ಪುನಃ ನಾನು ಸುಮ್ಮನಾದೆ.

ಪಾಟ್ನಕ್ಕೆ ರೈಲು ತಲಪಲು ಆರೇ ತಾಸುಗಳು ಉಳಿದಿದ್ದುವು. ಆದರೆ ನನ್ನ ಲವಲವಿಕೆಯು ಎಳ್ಳಷ್ಟೂ ತೃಪ್ತಿಪಡೆದಿರಲಿಲ್ಲ. ನಾನು ಒಳಗೊಳಗೇ ಕನಲಿದೆ, ರೇಗಿದೆ, ನೇಸತ್ತೆ ಇಂತಹ ಚಿಲ್ಲರೆ ಸಂಗತಿಗಳಲ್ಲಿಯೂ ಒಮ್ಮೆ ಕೆರಳಿದ ಆತುರಕ್ಕೆ ಮೇಲಿಂದ ಮೇಲೆ ತಣ್ಣೀರು ಬಿದ್ದರೆ ನರಗಳಿಗಾಗುವ ಪೀಡೆ ಅಷ್ಟಿಷ್ಟಲ್ಲ

ಆ ಯುವಕ-ಯುವತಿಯರೊಳಗೆ ಬೇರಾವ ಸಂಬಂಧವಿರಬಹುದೆಂದು ನನ್ನ ಬಗೆಗೆ ತೋಚಲೇ ಇಲ್ಲ. ಅದನ್ನು ಯೋಚಿಸುತ್ತ ನನ್ನ ತಲೆಯೆಲ್ಲ ಕರಡಾಯಿತು ಆದರೆ ರಹಸ್ಯವು ಕೊನೆಯ ತನಕ ನಿಗೂಢವಾಗಿಯೇ ಉಳಿಯಿತು.

ಕಟ್ಟಕಡೆಗೆ ಪಾಟ್ನಾ ರೈಲ್ವೇ ಸ್ಟೇಷನಿನ ದೀಪಗಳು ಕಾಣತೊಡಗಿದವು. ಜನರು ಲಗುಬಗೆಯಿಂದ ತಮ್ಮತಮ್ಮ ಸಾಮಾನುಗಳನ್ನು ಸಂಗ್ರಹಿಸತೊಡಗಿದರು.

'ಆಗಲಿ. ಹೇಗೂ ಒಮ್ಮೆ ತಲುಪಿದಂತಾಯಿತು' ಎಂದು ಆ ಯುವಕನು ತನ್ನಲ್ಲೇ ಗೊಣಗಿದ.

'ಹೌದಪ್ಪಾ, ದೇವರ ದಯೆಯಿಂದ ಮುಟ್ಟಿದೆವು. ಎಂತಹ ಉದ್ದ ಪ್ರಯಾಣವಿದು! ಸಾಕೇ ಸಾಕಾಯಿತು. ಹೆಂಗಸರಿಗಂತೂ ಹೇಳಿದ ಪ್ರಯಾಣವೇ ಅಲ್ಲ. ಪಾಟ್ನದಲ್ಲಿ ಕೆಳಗಿಳಿದಾಗ ನಿಮ್ಮ....ಅ...ಗೆಳತಿಯ ಆನಂದಕ್ಕಂತೂ ಪಾರವಿರಲಾರದು' ಎಂದು ಹರಟಿಬಿಟ್ಟೆ ನಾನು.

ಅವನು ಥಕ್ಕನೆ ನನ್ನ ಕಡೆಗೊಮ್ಮೆ ನೋಡಿದ.

'ಅದು ನಿಜ. ಅವಳಿಗೊಮ್ಮೆ ಹೊಸ ಜೀವ ಬಂದಂತಾದೀತು.......ಆದರೆ ಅವಳು ನನ್ನ ಗೆಳತಿಯಲ್ಲ'

ನನ್ನ ಸಹನೆಯು ಎಲ್ಲೆ ಮೀರಿತು ರೋಷವೇರಿತು.

'ಹಾಗಾದರೆ ಅವಳು ಯಾರೆನ್ನುತ್ತೀರಿ? ಕಳೆದ ೨೪ ತಾಸುಗಳಿಂದ ಅದನ್ನು ತಿಳಿದುಕೊಳ್ಳಲು ನಾನು ಪ್ರಯತ್ನಿಸುತ್ತಿದ್ದೆ ನೀವು ಮಾತ್ರ ಬಿಡಲಿಲ್ಲ ಯಾಕೆ? ನಿಮ್ಮ ಹೆಂಡತಿಯಲ್ಲ-ತಂಗಿಯಲ್ಲ-ಚಿಕ್ಕಪ್ಪನ ಮಗಳಲ್ಲ--ಸೊಸೆಯಲ್ಲ--ಅತ್ತಿಗೆಯಲ್ಲ--ಗೆಳತಿ ಕೂಡಾ ಅಲ್ಲ. ಮತ್ಯಾವ ಸುಡುಗಾಡಿನವಳಪ್ಪಾ!' ಎಂದು ನಾನು ನನ್ನ ಹುಬ್ಬುಗಳನ್ನೇರಿಸುತ್ತ ಅರಚಿದೆ

'ನೀವು ನನ್ನೊಡನೆ ಅದನ್ನು ಯಾಕೆ ಕೇಳಲಿಲ್ಲ? ನೀವು ಅಂದಾಜುಮಾಡುತ್ತಾ ಹೋದಿರಿ. ನಾನು ಅದನ್ನು ತಿದ್ದುತ್ತಾ ಹೋದೆ. ನೀವು ಬಾಯಿಬಿಟ್ಟು ಕೇಳಲಿಲ್ಲ. ಕೇಳಿದಿರೇನು?' ಎಂದು ಅವನು ನಗೆ ತುಂಬಿದ ನೋಟದಿಂದ ಸಣ್ಣಮಗುವಿನಂತೆ ಪ್ರಶ್ನಿಸಿದ.

ಅವನು ಹೇಳಿದುದೇನೋ ನಿಜವೇ ಆಗಿತ್ತು.

'ನಾನು ಬಾಯಿಬಿಟ್ಟು ಕೇಳಲಿಲ್ಲ, ಹೌದು. ಈಗ ಕೇಳುತ್ತೇನೆ--ಯಾರೆಂದು ಹೇಳುವಿರಾ?'

'ಅವಳು ನನ್ನ ಮಲತಾಯಿ' ಎಂದು ನಿಧಾನವಾಗಿ ಉಸುರುತ್ತ ಅವನು ಪ್ಲಾಟ್‍ಫಾರ್ಮಿನಲ್ಲಿ ಇಳಿದುಹೋದ.

ಆ ಒಂದು ಸಂಬಂಧ ಮಾತ್ರ ನನ್ನ ಮನಸ್ಸಿಗೆ ಹೊಳೆದಿರಲಿಲ್ಲ.

ಹಿಂದಕ್ಕೆ ನೋಡಿದರೆ
ಮುಂದಿನ ವಿಚಾರಗಳು ಕಾಣುವವು

ಜೀವನಕ್ಕೆ ಅವಶ್ಯಕವಾದ ಪದಾರ್ಥಗಳಲ್ಲಿಯಾಗಲಿ, ಕೇವಲ ಭೋಗ್ಯವಸ್ತುಗಳಲ್ಲಾಗಲೀ, ಈಗ ನಾಲ್ಕು ವರ್ಷಗಳಿಂದ, [illegible] ಬೆಲೆ ಹೆಚ್ಚದೇ ಇರುವ ವಸ್ತುವು ಒಂದು ಅಪೂರ್ವ. ಗವರ್ನಮೆಂಟಿನವರ ಹತೋಟಿಯಿಂದ ಬೆಲೆಗಳು ಏರು [illegible] ತಡೆಯಲ್ಪಟ್ಟಿರುವುದಲ್ಲದೆ, ವಸ್ತುಶಃ ಇಳಿಮುಖವಾಗಿ [illegible] ಮಾಡಲ್ಪಟ್ಟಿದ ಬೆಲೆಗಳು ಇನ್ನೂ [illegible] ಅತ್ಯವಶ್ಯಕವಾಗಿ ಆಗಬೇಕಾದರೆ ಗವರ್ನಮೆಂಟಿನವರ ಏರ್ಪಾಟುಗಳು ಸಾಲವು. ಬೆಲೆಗಳನ್ನು ಇಳಿಸುವುದಕ್ಕೆ ಹಣವನ್ನು ಉಳಿಸುವದು ಒಂದೇ ರಾಜಮಾರ್ಗ

ಉಳಿಸಿದ ಹಣವನ್ನು ರಕ್ಷಿಸಿರಿ, ಜಮೀನುಗಳು, ಕಟ್ಟಡಗಳು, [illegible] ವಸ್ತುಗಳು, ಆಭರಣಗಳು, ಕೈಗಾರಿಕೆ ಸಾಮಾನುಗಳು, [illegible] ಅವುಗಳ ಬೆಲೆಗೆ ತಕ್ಕ ಪ್ರಯೋಜನಕಾರಿಗಳಲ್ಲ. [illegible] ಪ್ರಕೃತದ ಬೆಲೆಗಳು ಮಿತಿಮೀರಿ ಏರಿವೆ ಆದುದರಿಂದ, ನಿಮ್ಮ ಹಣವನ್ನು ಸುರಕ್ಷಿತವಾಗಿಯೂ ಮತ್ತು ಶಾಶ್ವತ ಪ್ರಯೋಜನಕಾರಿಯಾಗಿಯೂ ಇರುವ ಮಾರ್ಗದಲ್ಲಿ ವಿನಿಯೋಗಿಸಿ [illegible] ಮಾರ್ಗಗಳನ್ನೀಕೆಳಗೆ ಕೊಡಲಾಗಿದೆ. — ಇನ್ಶೂರನ್ಸ್ (ವಿಮೆ), ಕೋ ಆಪರೇಟಿವ್ ಸಂಘಗಳು, ಬ್ಯಾಂಕುಗಳ ಸೇವಿಂಗ್ಸ್ ಖಾತೆ ಇಡುವದು, ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕುಗಳು, ಆದರೆ, ಗವರ್ನಮೆಂಟ್ ಲೋನುಗಳು ಮತ್ತು ನ್ಯಾಶನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳು ಸರ್ವೋತ್ತಮವಾದ ಮಾರ್ಗಗಳು.

ಹಣವನ್ನು
ಸ್ಥಿರವಾದ ಮಟ್ಟಿಗೂ
ರಕ್ಷಿಸಿರಿ
ಉಳಿಸಿದ್ದನ್ನು
ವಿವೇಕವಾಗಿ
ಗಳಲ್ಲಿ ವಿನಿಯೋ
ಗಿಸಿರಿ.

ಈಗ ನೀವು ಹಣವನ್ನು ಉಳಿಸಿದರೆ, ಅದು ನಿಮ್ಮ ವೃದ್ಧಾಪ್ಯದಲ್ಲಿ ಆಧಾರವಾಗಿರುವುದು, ಇಲ್ಲವೆ ಯುದ್ಧನಿಂತ ಬಳಿಕ ನಿಮಗೆ ಬಹಳ ಲಾಭದಾಯಕವಾದ ಸನ್ನಿವೇಶಗಳನ್ನು ಒದಗಿಸುವುದು. ಹಣವನ್ನು ಉಳಿಸುವುದಕ್ಕೆ ಇದು ಸುವರ್ಣಪ್ರಾಯವಾದ ಸಮಯ ಒಂದೇ ಸಮಯವನ್ನು ಬಿಟ್ಟುಬಿಡುವುದು ವಿವೇಕವಲ್ಲ.

ದಯಾಳು, ನ್ಯಾಶನಲ್ ವಾರ್ ಫ್ರಂಟ್, ಅಂದರೆ, ರಾಷ್ಟ್ರೀಯ ಯುದ್ಧರಂಗ ಭಾರತೀಯರ ಪಕ್ಷವಾದಲಿ ಮಾಡುವ ವಿನಂತಿ.

AAA 1117 KN

ನೋಟೀಸು.

ಕುಂದಾಪುರದ ಡಿ ಮುನ್ಸಿಫ್ ಕೋರ್ಟಿನಲ್ಲಿ.

O. S. C. No. 374/1944

1. ವಾದಿ- ವಾಸ್ತವ ಉಪಾಧ್ಯ, ಸುಬ್ರಾಯ ಉಪಾಧ್ಯನ ಮಗ- ಉಡುಪಿ ತಾಲ್ಲೂಕು ಕಾರ್ಕಡ ಗ್ರಾಮದಲ್ಲಿರುವವ, ರಹಿತ್ತ. Post.-Saligram

2 ಪ್ರತಿವಾದಿ- ವೆಂಕಟ್ರಮಣ ಕಲ್ಕೂರ, ಮುಟ್ಟಾಡಿ ಶಿವರಾಮ ಕಲ್ಕೂರರ ಮಗ. ಕುಂದಾಪುರ ತಾಲ್ಲೂಕು ಕುಂದಾಪುರ ಕಸಬಾ ಗ್ರಾಮದಲ್ಲಿರುವವ, ರಹಿತ್ತ (Post) Kundapur-

ಸದ್ರಿ ವಾದಿಯು ಸದ್ರಿ ಪ್ರತಿವಾದಿಯ ಮೇಲೆ ಚಿಟ್ಟಿಫಂಡಿನ ಕಂತ್ತಿನ ಬಗ್ಗೆ ರೂ 64-11 6ನ್ನು ಬರಮಾಡಿಕೊಳ್ಳುವರೆ ಮೇಲ್ಕಂಡ ಕೋರ್ಟಲ್ಲಿ ದಾಖಲ್ಲುಮಾಡಿದ ಮೇಲಿನ ದಾವೆಯು ತಾರೀಖು 13-11-1944ಕ್ಕೆ ತನ್ನಿಗೆ ಯಿಟ್ಟಿರತ್ತದೆ. ಅ ಕುರಿತು ನಿಮ್ಮದೇನಾದರೂ ಆಕ್ಷೇಪಣೆಯಿದ್ದರೆ ಸದ್ರಿ ದಿವಸ ಪೂರ್ವಾಹ್ನ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ನೀವು ಸ್ವತಹಾ ಯಾ ವಕೀಲರ ಮುಖಾಂತ್ರ ಹಾಜರಾಗಿ ಜ್ಯಾಹೀರು ಮಾಡತಕ್ಕದ್ದು. ತಪ್ಪಿದ್ದ ಸದ್ರಿ ದಿವಸ ಸದ್ರಿ ದಾವೆಯಲ್ಲಿ ನಿಮ್ಮನ್ನು ಎಕ್ಸಪಾರ್ಟೆ ಮಾಡಿ ನಿಮ್ಮ ಗೈರ ಹಾಜರಿಯಲ್ಲಿ ಸದ್ರಿ ದಾವಾ ತೀರ್ಮಾನಿಸಲಾಗುದೆಂದು ಈ ಮೂಲಕ ತಿಳಿಸಲಾಗುತ್ತದೆ

(Sd) **M Mahabala Hebbar.**

Advocate for Plaintiff.

ಮೊಕ್ಕಾಂ, ಕುಂದಾಪುರ

ತಾರೀಖು 24-10 1944.

The Pangal Nayak Bank Limited.

(Incorporated in 1920)

Registered Office Court Road, UDIPI

Branches at— **Udipi, Mangalore, Katapadi, Kanhangad, Kinnigoli and Nileshwar,** South Canara District

Discounting of demand and short term negotiable instruments for approved parties, granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms, acceptance of Fixed, Current, Savings Bank and Cumulative deposits and every other type of up-to date Banking service is at the disposal of all the sections of the discreet public.

For business proper please enquire at any one of our Offices.

15th April 1944.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಫೋಸ್ಟ ಚಾರ್ಜ ೮ ಆಣೆ-

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟಿ:— ಬಾಗಲಕೋಟಿ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG.

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ — **ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ**

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ. ಸಾಯುಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ ಶ್ರೀ। ಆರ್। ಎಸ್। ಶೆಣೈ, ರಥಬೀದಿ; ಡಾ। ಸಿ। ಜಿ। ಆಚಾರ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೋ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ **ಅಮೋಘವಾದ ಮಧುರದ್ರವ ರಸಾಯನ.** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)



೮ ಔನ್ಸಿನ ಬಾಟ್ಲಿಗಳ ಪೆಟ್ಟು ಕಡಿಮೆ ಆಲದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ. ಕ

— ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ

ಬರ್ಥ ಕಂಟ್ರೋಲ

ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಫೋಸ್ಟ ಚಾರ್ಜು ೧೨ಆಣೆ.

ಮಾಲಕರು:— **ಹಾಲಪ್ಪಾ ಫಕೀರಪ್ಪಾ ದಾವಣಗೇರಿ**

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟಿ ಧಾರವಾಡ, ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್ಸ್. ಆರ್. ಎಲ್. ಕಮಲದಾಸ, ಕೆಮಿಸ್ಟ್, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ಯಾಲಿ ಸಂಗ್ರಿ ಬರದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನ್ಸಬಹುದು, ಉಡುಪಿ ಏಜಂಟರು: — ನವಭಾರತ ಬುಕ್ ಡಿಪೊ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ ಬೆಲೆ ೦—೧೦—೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು.

ಪ್ರೇಮಪ್ರವಾಹವು ಹೇಗೆ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮಪ್ರವಾಹ

ಸ್ವಾರಸವಾದ ೫ ಕತೆಗಳ ಸಂಗ್ರಹ ಬೆಲೆ ೦—೬—೦

ಬಹಿರಂಗವಾಗಿ ಅಲ್ಲವಾದರೂ ಅಂತರಂಗವಾಗಿ ನೋಡತಕ್ಕ

ಆರ್ಟ ಚಿತ್ರಗಳು

ಹಲವಾರು ಸುಂದರಿಯರ ನೈಜಚಿತ್ರಗಳ ಕಟ್ಟು. ಬೆಲೆ ೦—೬—೦

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಕುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ. ೧—೮—೦

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. ಬೆಲೆ: ೦—೧೨—೦

ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ.

EDITED PRINTED & PUBLISHED BY K H. SHETTY AT THE NAVAYUGA PRESS, UDIPI, S. INDIA

Regd. No. M. 3618.

ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6

Estd. 1921 ಸ್ಥಾಪನೆ.

NAVAYUGA

ನವಯುಗ

ವರ್ಷ ೨೪ ವಾರ ೧೦ | ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ | Vol. 24 No. 10

Founder SDIA. B. SHETTY.

ಉಡುಪಿ • 9—11—1944 • ಮಂಗಳೂರು.

ದಿ ಜುಪಿಟರ್

ಜನರಲ್ ಇನ್ಶೂರೆನ್ಸ್ ಕಂಪೆನಿ, ಲಿ., ಬೊಂಬಾಯಿ.

ವಿಮೆಯಿಳಿಸ ಬೇಕೆ? ಏಜಂಟರಾಗುವಿರಾ?

-ಹಾಗಾದರೆ ಕೂಡಲೇ-

ಪಿ. ಡಿ. ನಾಯಕ್, ಉಡುಪಿ, ದಕ್ಷಿಣ ಕನ್ನಡದ ಚೀಫ್ ಏಜೆಂಟ್,

-ಇವರಿಗೆ ಬರೆಯಿರಿ-

1 ಕೋಟಿಗೆ ಮಿಕ್ಕಿ ವ್ಯವಹಾರ! ಈ ವರುಷವೇ ರಜತೋತ್ಸವ!

The Jupiter General Insurance Company Ltd

ಬೇಕಾಗಿದ್ದಾರೆ

ನವಯುಗಕ್ಕೆ ವಾರವಾರವೂ ನಿಷ್ಪಕ್ಷಪಾತವಾಗಿ ಸುದ್ದಿಗಳನ್ನು ಕಳುಹಿಸುವ ಬಾತ್ಮಿದಾರರು—ಬಾತ್ಮಿದಾರರಿಲ್ಲದ್ದಲ್ಲಿಗೆ—ಬೇಕಾಗಿದ್ದಾರೆ. ಶರ್ತಗಳಿಗೆ ಬರೆಯಿರಿ.

ಮೆನೇಜರ್,
ನವಯುಗ, ಉಡುಪಿ

Transact with

The Vijaya Bank Ltd.

H. O. MANGALORE.

Branches all over the District and in Bombay city,

For all kinds of Banking business

ದಿ ವಿಜಯ ಬೇಂಕ್

ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು

ಜಿಲ್ಲೆಯ ಎಲ್ಲಾ ಕಡೆಗಳಲ್ಲಿ ಮತ್ತು ಮುಂಬಾಯಿ ನಗರದಲ್ಲಿ ನಮ್ಮ ಶಾಖೆಗಳು ಎಲ್ಲಾ ತರದ ಬೇಂಕಿಂಗ್ ವ್ಯವಹಾರಗಳು ನಡೆಸಲ್ಪಡುವುದು.

ಕ್ರೌನ್ ರಬ್ಬರ್ ಸ್ಟಾಂಪ್ ಕಂಪೆನಿ

18 ಬಲ್ಮಠ ರಸ್ತೆ, ಮಂಗಳೂರು

ರಬ್ಬರ್ ಮೊಹರು ಸ್ಟೆನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು

Crown Rubber Stamp Co.
18 Balmat Road, MANGALORE
Approved firm by the Govt. of Mysore, Certified by the Agent of the Govt. of India in Ceylon. ESTD 1906

ಮುಟ್ಟಾಗುವಿಕೆ

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ—'ಕುಮಾರಿ' (Govt Regd) ನಿಶ್ಚಿತ ನಿರುಪದ್ರವಿ—ಒಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಸರಿಯಾಗೊಡುವುದು, ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು, ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ 3/- ಕ್ಲಿಷ್ಟವಾದ ಕೇಸುಗಳಿಗೆ ರೂ.5,(ವಿ ಪಿ.12 ಆಣೆ ಅಲಾಯಿದ) Mrs P. DEVEE. F. D. 5 (N) Tollygunge, Calcutta, ಸ್ಟಾಕಿಸ್ಟ್: ಪೋಪ್ಯುಲರ್ ಸ್ಟೋರ್ಸ್, ಮಂಗಳೂರು.

CHAMPAE'S

Snow & Castrex

Sole Distributers for (India.)

Sukhananda Stores
Santhekatte, UDIPI, S. K.

partners must go with better health and sanitation, etc. to improve the expectation of life of the generation to come.

THE CANARA MUTUAL ASSURANCE CO., LTD.,

UDIPI (S. India)

ENGLISH MADE EASY

ಇಂಗ್ಲಿಷ್ ಏನೂ ತಿಳಿಯದವರು 'ಸುಲಭದಲ್ಲಿ ಇಂಗ್ಲಿಷ್' ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೇ ಕಲಿತುಕೊಳ್ಳಬಹುದು

ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು

ಸುಲಭದಲ್ಲಿ ಇಂಗ್ಲಿಷ್

ಕೂರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ

ಬೆಲೆ ಬರೀ ರೂ. 1—4—0 ರೂ. 1-6-0ನ್ನು ಮನಿ ... 1 ಪ್ರತಿ ಕಳಿಸಲ್ಪಡುತ್ತೆ.

ನವಭಾರತ ಪುಸ್ತಕ ಭಂಡಾರ,

ರಿಜಿಸ್ಟರ್ಡ್ ಪಬ್ಲಿಶರ್ಸ್ ಎಂಡ್ ಬುಕ್ ಸೆಲ್ಲರ್ಸ್,

ಉಡುಪಿ, ದ ಕ,

ನಮ್ಮಲ್ಲಿ ಸಿಗುವ ಪುಸ್ತಕಗಳ ಕೆಟಲಾಗಿಗೆ 0 2 0 ಸ್ಟಾಂಪಿನೊಂದಿಗೆ ಬರೆಯಿರಿ.

CO-OPERATION - - - -

Life Assurance is the business based on the idea of mutual co-operation. By diverting a small portion of one's earning for paying premiums, we co-operate for the good of the family and safeguard the education of children.

Let us assist you in taking out a Policy under the plan best suited to you. Write now to:—

KOCHIKAR BROTHERS LTD.

Chief Agents for South India

THE BOMBAY LIFE ASSCE. CO., LTD.

[Estd 1908]

The "Bombay Life" Bldg., UDIPI: S. K.

Offices and Agencies throughout South India.

ಅಂತರಂಗ

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ 0—1—6

ಅಮೃತಾಂಜನ ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ವಿಷ ಮುಂತಾದ ಜೇನೆ ಕಣ್ಣವಾತ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ, ಮುಲಾಮು ಸಹ ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್.
ಮದರಾಸು
ಬೊಂಬಾಯಿ ಮತ್ತು ಕಲ್ಕತ್ತ.

ದಿ ಮೂಲ್ಕಿ ಬೇಂಕ್,

ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಒಡ್ಡಿಯನ್ನೂ, ಸಾಲಗಳನ್ನು ಕಡಮೆ ದರದ ಒಡ್ಡಿಯಿಂದಲೂ ಕೊಡುತ್ತಾ, ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಮೂರನೇ ಸಂಪುಟ ಆರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ

ವಾರ್ಷಿಕ ಚಂದಾ ರೂ. 1—8—0 ಮಾತ್ರ

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

Decorate your home with

Life-like Oil Painting

of those dear and near to you

M. S Shirale,
MODERN STUDIO,
UDIPI



ಯಾವತ್ತೂ ಸಿದ್ಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಯಾಂಜೆ ವ್ಯಾಪಾರಾಚಾರ್ಯ,
ರಥಬೀದಿ, ಉಡುಪಿ.

ಸಮಾಚಾರ ಸಂಗ್ರಹ

ಮತ್ತೊಮ್ಮೆ ನನ್ನನ್ನು ಅಧ್ಯಕ್ಷನನ್ನಾಗಿ ಚುನಾಯಿಸಬೇಡಿರಿ- ಆರೋಗ್ಯ ಕೆಟ್ಟಿದೆ— ಸಾವರ್ಕಾರರ ಹೇಳಿಕೆ-

ಹಿಂದೂ ಮಹಾಸಭೆಯ ಅಧ್ಯಕ್ಷರಾದ ಶ್ರೀ ವಿ. ಡಿ. ಸಾವರ್ಕಾರರು ಒಂದು ಹೇಳಿಕೆಯನ್ನು ಪ್ರಕಟಿಸಿದ್ದಾರೆ-'ಹಿಂದೂ ಮಹಾಸಭೆಯ ಅಧ್ಯಕ್ಷ ಚುನಾವಣೆಯ ಕಾಲ ಸಮೀಪಿಸುತ್ತಿದೆ. ಕಳೆದ ಏಳು ವರುಷಗಳಿಂದ ಹಿಂದೂ ಮಹಾಸಭೆಯ ಗುರುತರವಾದ ಕಾರ್ಯಭಾರವನ್ನು ನಿರ್ವಹಿಸಿ ನನ್ನ ಆರೋಗ್ಯವು ಕೆಟ್ಟಿದೆ. ಅದು ಕಾರಣ ಮುಂಬರುವ ವರ್ಷಕ್ಕೆ ನನ್ನನ್ನು ಅಧ್ಯಕ್ಷನನ್ನಾಗಿ ಚುನಾಯಿಸಬಾರದು. ಯೋಗ್ಯ ಅಧ್ಯಕ್ಷ ಚುನಾವಣೆಯಾಗುವಂತೆ ನಾನು ಸಹಕರಿಸುವುದಕ್ಕೆ ನಾನು ನಿರ್ಧರಿಸಿದ್ದೇನೆ. ಎಂತಹ ಪರಿಸ್ಥಿತಿಯೇ ಬರಲಿ, ನಾನು ಅಧ್ಯಕ್ಷ ಸ್ಥಾನವನ್ನು ಸ್ವೀಕರಿಸಲಾರೆ ಆದುದರಿಂದ ನನ್ನ ಹೆಸರನ್ನು ಅಧ್ಯಕ್ಷಸ್ಥಾನಕ್ಕೆ ಸೂಚಿಸಬಾರದಾಗಿ ಅಖಿಲ ಭಾರತದ ಸಕಲ ಹಿಂದೂ ಮಹಾಸಭಾ ಸದಸ್ಯರಲ್ಲಿ ನನ್ನ ವಿನಂತಿ ಇದೆ.'

ಮದ್ರಾಸಿನ ಗವರ್ನರರು ಯುದ್ಧಾನಂತರವೂ ಎರಡು ವರುಷಗಳ ಕಾಲ ಗವರ್ನರರಾಗಿಯೇ ಇರಲಿ-

ಮದ್ರಾಸಿನ ಮೇಯರ್ ಡಾ ನಿಯಮತುಲ್ಲಾರವರ ಅಧ್ಯಕ್ಷತೆಯಲ್ಲಿ ಜರಗಿದ ಮದ್ರಾಸು ನಾಗರಿಕರ ಮಹಾ ಸಭೆಯಲ್ಲಿ ಮದ್ರಾಸು ಪ್ರಾಂತದ ಗವರ್ನರರಾದ ಸರ್ ಆರ್ಥರ್ ಹೋಪ್ ಇವರ ಗವರ್ನರ್‌ತನವನ್ನು ಯುದ್ಧವು ಸಾಗುವಷ್ಟು ಕಾಲವೂ ಶಾಂತಿ ಸ್ಥಾಪನೆಯಾದ ಬಳಿಕ ಎರಡು ವರುಷಗಳ ತನಕವೂ ಇರಗೊಡಿಸಬೇಕೆಂದು ಚಕ್ರವರ್ತಿಗಳನ್ನು ಪ್ರಾರ್ಥಿಸಿಕೊಳ್ಳಬೇಕೆಂಬ ಠರಾವು ಮಂಜೂರಾಗಿದೆ.

ಜರ್ಮನಿಯ ಮೇಲೆ ಮಹಾವಿಮಾನ ದಾಳಿ. ಶತ್ರುವಿನ 208 ವಿಮಾನಗಳ ನಾಶ

ಯುರೋಪಿನಲ್ಲಿ ಹಿಂದೆಂದೂ ನಡೆಯದ ದೀರ್ಘಾವಧಿ ವಿಮಾನ ಧಾಳಿಯು ಕಳೆದ ತಾ. ೨ರಲ್ಲಿ ನಡೆಯಿತು. 2000ಕ್ಕೆ ಮಿಕ್ಕಿದ ಅಮೇರಿಕನರ ಪಡೆಯು ಪಶ್ಚಿಮ ಜರ್ಮನಿಯ ಸಮರ ಸಾಮಗ್ರಿ ಕ್ಷೇತ್ರಗಳ ಮೇಲೆ ಬಾಂಬಿನ ಮಳೆಗರೆದುವು. ರೂರ್ ಪ್ರಾಂತದ ಕೃತಕ ಎಣ್ಣೆ ಕಾರ್ಖಾನೆಗಳ ಮೇಲೆಯೂ ಡ್ಯೂಸಲ್ ಡೋರ್ಫದ ಸಮರೋಪಕರಣ ಕೇಂದ್ರದ ಮೇಲೆಯೂ ವಿಶೇಷ ಹಾನಿಯನ್ನುಂಟುಮಾಡಿವೆ. ಮಾತ್ರವಲ್ಲ, ಈ ಬೇಚರ ಕಾಳಗದಲ್ಲಿ ಜರ್ಮನರ 208 ವಿಮಾನಗಳು ನಾಶವಾದುವು. ಅಮೇರಿಕನರದು 69 ವಿಮಾನಗಳು ಕಾಣೆಯಾಗಿವೆ.

ಒಂದೇ ತಿಂಗಳಲ್ಲಿ ಜರ್ಮನಿಯ ಮೇಲೆ 60,000 ಟನ್ನು ಬಾಂಬುಗಳು

ಕಳೆದ ಅಕ್ಟೋಬರ ತಿಂಗಳೊಂದರಲ್ಲಿ ಜರ್ಮನಿಯ ಮೇಲೆ ಮಿತ್ರ ಪಕ್ಷದವರು 50,000 ಟನ್ನು ಬಾಂಬುಗಳನ್ನೂ ಜರ್ಮನರ ವಶವಾಗಿರುವ ಪ್ರದೇಶಗಳ ಮೇಲೆ 10,000 ಟನ್ನು ಬಾಂಬುಗಳನ್ನೂ ಹೀಗೆ 60,000 ಟನ್ನು ಬಾಂಬುಗಳನ್ನು ಸುರಿಸಿದ್ದಾರೆಂದು ವಿಮಾನ ಇಲಾಖೆಯ ಲೆಕ್ಕ.

ಫ್ರಾನ್ಸಿಗೆ ಚರ್ಚಿಲ್ಲರ ಸವಾರಿ-

ಜನರಲ್ ಡಿಗಾಲೇಯವರ ಆಮಂತ್ರಣವನ್ನು ಮನ್ನಿಸಿ ಪ್ರಧಾನ ಚರ್ಚಿಲ್ಲರೂ ಬ್ರಿಟಿಷ್ ವಿದೇಶ ಕಾರ್ಯದರ್ಶಿ ಅಂಥೋನಿ ಈಡನ್ನರೂ ಫ್ರಾನ್ಸಿನ ಪ್ಯಾರಿಸ್ಸಿಗೆ ಸದ್ಯದಲ್ಲೇ ಹೋಗಲಿರುವರಂತೆ.

ಮೈಸೂರು ಕಾಂಗ್ರೆಸ್ ಪ್ರೆಸಿಡೆಂಟರಿಗೆ ವಾಗ್ಬಂಧನ

ಮೈಸೂರು ಸ್ಟೇಟ್ ಕಾಂಗ್ರೆಸ್ಸು ಕಮಿಟಿಯ ಅಧ್ಯಕ್ಷರಾದ ಶ್ರೀ. ಟಿ. ಸುಬ್ರಮಣ್ಯಂ ಅವರು ಇದೇ ತಿಂಗಳ ತಾ. ೧೦ರಿಂದ ಆರು ತಿಂಗಳ ತನಕ ಯಾವ ಸಾರ್ವಜನಿಕ ಭಾಷಣವನ್ನು ಮಾಡಕೂಡದೆಂದು ಮೈಸೂರು ಸರಕಾರದ ಚೀಫ್ ಸೆಕ್ರೆಟರಿಯವರ ಆಜ್ಞೆ.

ಒರಿಸ್ಸಾದಲ್ಲಿ ವಿಶ್ವವಿದ್ಯಾನಿಲಯ ಪ್ರಥಮ ಪದವೀದಾನ ಸಮಾರಂಭ

ಒರಿಸ್ಸಾದ ಉತ್ಕಲ ವಿಶ್ವವಿದ್ಯಾನಿಲಯದ ಉದ್ಘಾಟನೆಯು ತಾ. ೧ರಲ್ಲಿ ಅದರ ಪ್ರಥಮ ಚಾನ್ಸೆಲರಾದ ಅಲ್ಲಿಯ ಗವರ್ನರ್ ಸರ್. ಹೊಥೋರ್ನ್ ಲೂಯಿಸ್‌ರವರಿಂದ ನೆರವೇರಿತು. ಪ್ರಥಮ ಪದವೀದಾನ ಸಮಾರಂಭದ ಭಾಷಣವನ್ನು ಡಾ. ಸಚ್ಚಿದಾನಂದ ಸಿಂಹರು ಮಾಡಿದರು. ಸಿಂಹರು ಬಿಹಾರದ ಉಜ್ವಲ ದೇಶಭಕ್ತರು. ಅವರು ಈ ವಿಶ್ವವಿದ್ಯಾನಿಲಯದಿಂದ ಮೊದಲ ಬಾರಿಗೆ ಹೊರಹೋಗುವ ಪದವೀಧರರಿಗೆ ಕೊಟ್ಟ ಉಪದೇಶದ ಕೆಲವು ಮಾತುಗಳು ಮನನೀಯವಿವೆ. ನಮ್ಮಲ್ಲಿಯ ಜಾತೀಯತೆಯ ಸಮಸ್ಯೆಯ ಸೃಷ್ಟಿಯು ಬ್ರಿಟಿಷ್ ಧೋರಣೆಯಿಂದಾದುದು. ದೇಶದ ಈಗಿನ ದುಃಸ್ಥಿತಿಯ ನಿವಾರಣೆ ಸ್ವರಾಜ್ಯವೇ ಪ್ರಧಾನ ಸಾಧನ. ಬ್ರಿಟಿಷರು ಅಧಿಕಾರವನ್ನು ಬಿಟ್ಟುಕೊಡುವಂತೆ ಒತ್ತಾಯಿಸುವುದರಲ್ಲಿ ನಾವು ವಿಜಯಿಗಳಾಗದಿರುವುದಕ್ಕೆ ನಮ್ಮಲ್ಲಿಯ ಬಹುಜನತೆಯಲ್ಲಿ ಉದಾತ್ತಶೀಲವಿಲ್ಲದಿರುವುದೇ ಕಾರಣ. ರಾಜಕೀಯ ಮತ್ತು ಸಾಮಾಜಿಕ ವಿಚಾರಗಳಲ್ಲಿ ಉದಾತ್ತ ಭಾವನೆಗಳುಂಟಾಗುವಂತೆ ವಿಶ್ವವಿದ್ಯಾನಿಲಯದ ಶಿಕ್ಷಣಕ್ರಮವಿರಬೇಕು.

ನೆಹರೂಗಳವರ ಮೇಲ್ಪಂಜ್ತಿಯಲ್ಲಿ ಮುಕ್ತಿಬ್ಬರು.

ಕಾಂಗ್ರೆಸ್ ಪ್ರೆಸಿಡೆಂಟರಾದ ಮೌಲಾನಾ ಅಬ್ದುಲ್ ಕಲಾಮ್ ಆಜಾದರು ಮತ್ತು ಸರ್ದಾರ ವಲ್ಲಭಾಯಿ ಪಟೇಲರು ಇತ್ತೀಚೆಗೆ ಸರಕಾರವಿತ್ತಿರುವ ಸವಲತ್ತನ್ನುಪಯೋಗಿಸಿಕೊಂಡು ತಮ್ಮ ತಮ್ಮ ಸಂಬಂಧಿಕರು ಸಂದರ್ಶನೆಗೆ ಬರಲು ಸರಕಾರದೊಡನೆ ಅನುಮತಿಪತ್ರ ಯಾಚಿಸಬಾರದೆಂದು ಸಂಬಂಧಿಕರಿಗೆ ತಿಳಿಸಿರುತ್ತಾರೆ.

ಇಂಡಿಯಾ ಅಂಡರ್ ಸೆಕ್ರೆಟರಿ ನೇಮಕ

ಇಂಗ್ಲೆಂಡಿನಲ್ಲಿ ಇಂಡಿಯಾದ ಅಂಡರ್ ಸೆಕ್ರೆಟರಿ ಆಫ್ ಸ್ಟೇಟ (ಉಪ ಕಾರ್ಯದರ್ಶಿ)ಯಾಗಿದ್ದ ಲಾರ್ಡ ಮನ್ಸ್‌ಟರ್‌ರ ಬದಲಿಗೆ ಲಾರ್ಡ ಲಿಸ್ಟೋವೆಲ್‌ರವರು ನೇಮಕಗೊಂಡಿದ್ದಾರೆ. ಲಾರ್ಡ ಲಿಸ್ಟೋವರು ಇಂಡಿಯಾದ ಲೀಗಿನೊಡನಿದ್ದು ಇಂಡಿಯಾದ ಸ್ವಾತಂತ್ರ್ಯಕ್ಕಾಗಿ ವಿಶೇಷ ಕೆಲಸಮಾಡಿದವರು. ಇವರು ತನ್ನ ಉಪಕಾರ್ಯದರ್ಶಿತ್ವದಲ್ಲಿ ನೆಹರೂ ಮುಂತಾದವರ ಬಂಧನ ವಿಮೋಚನೆಯ ವಿಷಯದಲ್ಲಿ ಪ್ರಯತ್ನಪಟ್ಟರೆಂದು ಆಶೆಯನ್ನು ಕಟ್ಟಿಕೊಳ್ಳಬಹುದು ಆದರೆ ಪ್ರಧಾನ ಸಮಸ್ಯೆಗಳಲ್ಲೆಲ್ಲ ಇವರು ಮುಖ್ಯ ಕಾರ್ಯದರ್ಶಿಯಾದ ಅಮೇರಿಯವರ ಧೋರಣೆಯನ್ನು ನಿರ್ವಹಿಸಲೇಬೇಕಾಗುತ್ತದಲ್ಲದೆ ಸ್ವತಂತ್ರವಾಗಿ ವರ್ತಿಸುವ ಅವಕಾಶ ದೊರಕಲಾರದು.

ಇಂಡಿಯಾದ ವಿಷಯದಲ್ಲಿ ಚರ್ಚಿಲ್ಲರು ರೂಸ್ವೆಲ್ಟರ ಮಾತಿಗೆ ಕಿವಿಗೊಡಲಿಲ್ಲವಂತೆ

ಅಮೇರಿಕ 127 ಮುಂದಾಳುಗಳು ನೆಹರೂಗಳನ್ನು ಬಿಡುಗಡೆಮಾಡಬೇಕೆಂದು ಕಳುಹಿಸಿದ ವಿನಂತಿ ಪತ್ರದ ವಿಷಯವಾಗಿ ಅಮೇರಿಕದಲ್ಲಿರುವ ಸರ್ದಾರ್ ಜೆ. ಜೆ. ಸಿಂಗರವರು ಮಾತಾಡುತ್ತ ಕೆಲವು ವಿಷಯಗಳನ್ನು ಹೇಳಿದರು. ಅಮೇರಿಕನರು ಇಂಡಿಯಾದ ವಿಷಯದಲ್ಲಿ ಮಧ್ಯಸ್ಥಿಕೆಗೆ ಬಂದಾರೆಂಬುದರಲ್ಲಿ ನಾವು ವಿಶೇಷ ಆಶಾವಾದಿಗಳಾಗಿರಬಾರದು ಪರಿಸ್ಥಿತಿಯ ಸತ್ಯತೆಯನ್ನು ನಾವು ಮನಗಾಣಬೇಕು. ಬ್ರಿಟಿಷರ ಇಷ್ಟಕ್ಕೆ ವಿರೋಧವಾಗಿ ಅಮೇರಿಕವು ಇಂಡಿಯಾದ ಪ್ರಶ್ನೆಯಲ್ಲಿ ಕೈಹಾಕುವುದು ಅಸಾಧ್ಯವಾಗಿದೆ. ರೂಸ್ವೆಲ್ಟರು ಇಂಡಿಯಾದ ಸಮಸ್ಯೆಯ ವಿಷಯ ನಾಲ್ಕು ಸಲ ಚರ್ಚಿಲ್ಲರೊಡನೆ ಚರ್ಚೆ ತೆಗೆದಿದ್ದಾರೆ. ಅವುಗಳಲ್ಲಿ ಕೊನೆಯದು ಕ್ವಿಬೆಕ್ ಸಂದರ್ಶನ ಕಾಲದಲ್ಲಿ. ಆದರೆ ಹಿಂದಿನಂತೆ ಚರ್ಚಿಲ್ಲರ ಆ ವಿಷಯ ಚರ್ಚಿಗಿಳಿಯಲು ಒಪ್ಪಲಿಲ್ಲ. ಇಂಡಿಯಾದ ಪ್ರಶ್ನೆಯಲ್ಲಿ ಅಮೇರಿಕದ ಪ್ರವೇಶವು ಅನಿವಾರ್ಯವಾಗಿ ಬಂದೇ ಬರಬೇಕಾದ ಸನ್ನಿವೇಶಗಳು ಎರಡು ಮಾತ್ರ. ಇಂಡಿಯಾವು ಜಪಾನಿನ ಯುದ್ಧ ಕ್ಷೇತ್ರವಾಗಿ ಯುದ್ಧವು ವಿಜಯದ ಕಡೆಗೆ ಸಾಗುವುದಕ್ಕೆ ದೇಶೀಯ ರಾಜಕಾರಣಗಳು ಪ್ರತಿಬಂಧಕವಾಗಿ ನಿಂತು ಅಮೇರಿಕನ ಸೇನಾ ಹಾನಿಯಾಗತೊಡಗಿದರೆ ಅಥವಾ ಈಗ ಬ್ರಿಟಿಷ್ ಪ್ರಭುತ್ವದ ನಿಜಸ್ಥಿತಿಯು ಅಮೇರಿಕನರಿಗೆ ತಿಳಿಯುವಂತಾದರೆ ಆಗ ಮಾತ್ರ ಅಮೇರಿಕವು ಬ್ರಿಟನಿನ ಮೇಲೆ ತನ್ನ ಒತ್ತಾಯವನ್ನು ಹಾಕೀತು

ವಿಕ್ಟೋರಿಯಾ ಮಹಾರಾಣಿಯವರ ಔರಸ ಪುತ್ರಿಯ ನಿಧನ

ಚಿರಸ್ಮರಣೀಯಳಾದ ವಿಕ್ಟೋರಿಯಾ ಮಹಾರಾಣಿಯವರ ಔರಸ ಪುತ್ರ ಪುತ್ರಿಯರಲ್ಲಿ ಇಂದಿನ ತನಕ ಉಳಿದಿದ್ದ ಪ್ರಿನ್ಸೆಸ್ ಬೀಟ್ರಿಸ್ ಎಂಬ ಕೊನೆಯ ಪುತ್ರಿಯು ಕಳೆದ ವಾರಾಂತ್ಯದಲ್ಲಿ ತೀರಿಕೊಂಡರು. ಆ ಬಗ್ಗೆ ವಿಷಾದ ಸೂಚಕವಾಗಿ ಇಂಡಿಯಾದ ಸರಕಾರಿ ಕಟ್ಟಡಗಳ ಮೇಲೆ ಪದ್ಧತಿ ಪ್ರಕಾರ ಅರೆಬಾವುಟ ಏರಿಸಲಾಗಿತ್ತು.

ಉಪವಾಸವು ಅಂತಿಮ ಸಾಧನ. ಗಾಂಧೀಜಿಗಳ ಅಭಿಪ್ರಾಯ

ತಾನು ಕೈಗೊಳ್ಳುವ ಉಪವಾಸ ದೀಕ್ಷೆಯ ಕುರಿತು ಹಲವು ಪತ್ರಗಳನ್ನು ಬರೆದಿರುವ ಗಾಂಧೀಜಿಗಳು ಈಗ ಕೊನೆಯ ನಿರ್ಧಾರಕ್ಕೆ ಬಂದಿದ್ದಾರೆ. ತನ್ನ ಇತರ ಎಲ್ಲ ಸಾಧನ ಪ್ರಯತ್ನಗಳಿಂದ ತನ್ನ ಉದ್ದೇಶವು ನೆರವೇರದೆ ಹೋದಲ್ಲಿ ಉಪವಾಸವು ತನ್ನ ಅಂತಿಮ ಸಾಧನವೆಂದು ಹೇಳಿರುವರು.

ಚರ್ಚಿಲ್ ಪಕ್ಷದ ಪಾರ್ಲಿಮೆಂಟು ಮುಂದುವರಿಯುವುದು.

ಮತ್ತೊಂದು ವರ್ಷ ಈಗಿನ ಪಾರ್ಲಿಮೆಂಟಿನ ಅವಧಿಯನ್ನು ಮುಂದುವರಿಸಬೇಕೆಂಬ ಬಿಲ್ಲನ್ನು ಎರಡನೆಯ ಬಾರಿಗೆ ಪಾರ್ಲಿಮೆಂಟನ್ನು ಓದುವ ಸಂದರ್ಭದಲ್ಲಿ ಜರ್ಮನಿಯೊಳಗೆ ಅಂತಃಕಲಹವೆದ್ದು ತಮಗೆ ವಿಜಯ ದೊರಕೀತೆಂಬ ಆಶೆಯಿಲ್ಲವೆಂದೂ ಜರ್ಮನಿಯು ಎಂದು ಸೋತೀತೆಂಬುದರ ಭವಿಷ್ಯ ಹೇಳಲು ಸಾಧ್ಯವಿಲ್ಲವೆಂದೂ ನಾಜಿಗಳು ಸೋಲುವನಕ ಈಗಿರುವ ಮಂತ್ರಿಮಂಡಲಗಳೆಲ್ಲ ಊರ್ಜಿತವಾಗಿರಬೇಕೆಂದೂ ಹೇಳಿದರು. ಜರ್ಮನಿ ಸೋತ ಮೇಲೆ ಜಪಾನನ್ನು ಸೋಲಿಸಲಿಕ್ಕೆ ಹದಿನೆಂಟು ತಿಂಗಳು ಬೇಕಾದೀತೆಂದೂ ಅಭಿಪ್ರಾಯಕೊಟ್ಟರು.

ಸಿಖ್ಖ ಮುಖಂಡ ತಾರಾಸಿಂಗರ ಹೇಳಿಕೆ.

ಸಿಖ್ಖರು ಅಖಂಡ ಭಾರತ ರಾಜ್ಯಭಾರಕ್ಕೆ ಸದಾ ಸಿದ್ಧರಿದ್ದಾರೆ. ಆದರೆ ಹೀಗಾಗುವುದಕ್ಕೆ ಮುಸ್ಲಿಮರೂ ಅಲ್ಪ ಸಂಖ್ಯಾ ಪಕ್ಷದವರೂ ಸಮ್ಮತಿಸಬೇಕು. ಇದಕ್ಕೆ ವ್ಯತಿರಿಕ್ತವಾಗಿ ಹಿಂದೂ ಮುಸ್ಲಿಮರು ಅದನ್ನೆರಡು ತುಂಡುಗಳನ್ನಾಗಿ ಮಾಡಿದರೆ ನಾವದನ್ನು ತಡೆಯಲಾರೆವು. ಆದರೆ ಅಂತಹ ಸಂದರ್ಭದಲ್ಲಿ ನಮಗೂ ಸ್ವತಂತ್ರವಾದೊಂದು ತುಂಡು ಬೇಕೆಂದು ಕೇಳುವೆವು.

ಸೀತಾನದಿ ಜಾನುವಾರು ಜಾತ್ರೆ

ದ ಕನ್ನಡ ಜಿಲ್ಲಾ ಕಾರ್ಕಳ ತಾಲೂಕ ಸೋಮೇಶ್ವರದ ಬಳಿ ಈ ಜಿಲ್ಲೆಯ ಸ್ಥಿತಿ ಅನುಕೂಲದ ಬಗ್ಗೆ, ಹೆಬ್ರಿ ಶೀತಾನದಿಯು ಮಂಗಳೂರು ಆಗುಂಬೆ ರಸ್ತೆಗೆ ಕೂಡುವಲ್ಲಿ ಸೋಮೇಶ್ವರದ ಘಾಟಿಯ ಬುಡದಿಂದ ಸುಮಾರು ಮೈಲು ಕೆಳಗೆ ಶೀತಾನದಿ ಎಂಬಲ್ಲಿ ಜಾನುವಾರು ಜಾತ್ರೆಯು ವರ್ಷಂಪ್ರತಿ ಜರಗುವಂತೆ ತಾ.25 11 44ರಿಂದ 12 ದಿವಸಗಳ ವರೆಗೆ ಜರಗುವುದು. ಕುಲ್ಗುಂದಕ್ಕೆ ಬಂದ ಜಾನುವಾರು ವ್ಯಾಪಾರಿಗಳು ಅಲ್ಲಿಯ ಜಾತ್ರೆ ಮುಗಿದ ಬಳಿಕ ಸಾವಕಾಶವಾಗಿ ಈ ಜಾತ್ರೆಗೆ ಮುಟ್ಟಲಾಗುವಂತೆ ಕುಲ್ಗುಂದ ಜಾತ್ರೆಯು ಮುಗಿದು ಹತ್ತು ದಿನಗಳ ನಂತ್ರ ಈ ಜಾತ್ರೆಯು ಪ್ರಾರಂಭವಾಗುವದು.

ಜಾತ್ರೆಗೆ ಬರುವವರೆಲ್ಲರಿಗೂ ಯೋಗ್ಯ ಅನುಕೂಲತೆಗಳು ದೊರಕುವಂತೆ ಎಲ್ಲಾ ಏರ್ಪಾಡುಗಳನ್ನೂ ಕ್ರಮದಂತೆ ಮಾಡಲಾಗುವದು. ಜಾತ್ರೆಯ ಸ್ಥಳವು ಶೀತಾನದಿ ಹೊಳೆಯ ಎರಡು ಕವಲುಗಳೊಳಗಿದ್ದು ತ್ರಿಕೋಣವಾದ ವಿಜನ ಕಾಡಿನಲ್ಲಿ ತುಂಬಾ ರಮ್ಯವಾಗಿದೆ. ಜಾತ್ರೆಗೆ ಬರತಕ್ಕ ಜಾನುವಾರುಗಳಲ್ಲಿ ಅತ್ಯಂತ ಉತ್ಕೃಷ್ಟವೆಂದು ನಿರ್ಣಯಿಸಲಾಗುವ ಜಾನುವಾರುಗಳ ಬಗ್ಗೆ ಬಹುಮಾನಗಳನ್ನು ಕೊಡುವ ಏರ್ಪಾಡು ಮಾಡಲಾಗಿದೆ

ಮೈಸೂರು, ದಕ್ಷಿಣಕನ್ನಡ ವ ಇತರ ಜಿಲ್ಲಾ ಪ್ರಾಂತ್ಯಗಳಿಂದಲೂ ಸರ್ವರೂ ಈ ಜಾತ್ರೆಗೆ ಬಂದು ಪ್ರೋತ್ಸಾಹಿಸಬೇಕಾಗಿ ನಮ್ಮ ಅಪೇಕ್ಷೆಯಾಗಿರುತ್ತದೆ. ಜಾತ್ರೆ ಸಮಯ ಈ ಕೆಳಗಣ ವಿವಿಧ ವಿನೋದಾವಳಿಗಳು ನಡೆಸಲ್ಪಡುವವು. (1) ರಾಷ್ಟ್ರೀಯ ಯುದ್ಧ ಮಂಡಳಿಯ ನಾಯಿಯಾಲಾಂದ್ರ ದೇಖಾವೆ, ಭಾಷಣ ವ ಇತರ ವಿನೋದಾವಳಿಗಳು. 2. ವ್ಯವಸಾಯ ಇಲಾಖೆಯ ಆಫೀಸರರಿಂದ ನಮ್ಮ ಜಿಲ್ಲೆಯ ವ್ಯವಸಾಯಗಳ ಉನ್ನತಿಗೆ ಆಗತ್ಯವಿರುವ ಸಲಹೆಗಳನ್ನು ಸೂಚಿಸಿ ಭಾಷಣ ಮತ್ತು ಪ್ರದರ್ಶನಗಳು. 3. ಜಾನುವಾರು ಇಲಾಖೆಯವರಿಂದ ಜಾನುವಾರುಗಳನ್ನು ಯೋಗ್ಯ ರೀತಿಯಲ್ಲಿ ಸಾಕಲು ಬೇಕಾಗುವ ಸಲಹೆಗಳನ್ನು ಸೂಚಿಸಿ ಭಾಷಣ ಮತ್ತು ಪ್ರದರ್ಶನಗಳು. 4. ವಿದ್ಯಾ ಇಲಾಖೆಯವರ ಭಾಷಣ ಮತ್ತು ಪ್ರದರ್ಶನ

(ಸಹಿ) ಡಿ. ಡಿ. ಸಾತೆ.
ಸಬ್ ಕಲೆಕ್ಟರ್, ಕುಂದಾಪುರ.

ಹೆಂಗಸರ ಮಾರಾಟ

ಹರಿಶ್ಚಂದ್ರನು ಮಾತ್ರ ಹೆಂಡತಿಯನ್ನು ಮಾರಾಟಮಾಡಿದುದಲ್ಲ. ಲೋಕದ ಎಷ್ಟೋ ಜನಾಂಗಗಳಲ್ಲಿ ಈಗಲೂ ಹೆಂಡಿರನ್ನು ಮಾರುವ ಕ್ರಮವಿದೆ! ಹೆಂಡತಿಯ ಬೆಲೆ ಒಂದು ಹಂದಿಯಿಂದ ಹಿಡಿದು ನೂರಾರು ಪೌಂಡುಗಳ ವರೆಗೂ ಇದೆಯೆನ್ನುವಾಗ ಆಶ್ಚರ್ಯವಲ್ಲವೆ?

ಪುರಾತನ ಬೆಬಿಲೋನಿನಲ್ಲಿ ವಿಚಿತ್ರ ತರದ ವಧು ವಿಕ್ರಯವಿತ್ತು. ಆಗ ಸುಂದರಿಯರನ್ನು ಹರಾಜು ಹಾಕಿ ಮಾರಾಟಮಾಡುತಿದ್ದರು. ಹರಾಜಿನಿಂದ ಉತ್ಪತ್ತಿಯಾದ ಹಣವನ್ನಲ್ಲಿ ಕೂಡಹಾಕಿ, ಹರಾಜಿನಲ್ಲಿ ಪಡಕೊಳ್ಳಲು ಉಮೇದ್ವಾರರಿಲ್ಲದ ಕುರೂಪಿಗಳೊಳಗೆ ಹಂಚುವುದು ಅಂದಿನ ಕ್ರಮವಾಗಿತ್ತು. ಹೀಗೆ ಸ್ವಲ್ಪ ಹಣವನ್ನು ಮೊರೆಕಿಸಿಕೊಂಡ ಕುರೂಪಿಯರಿಗೆ ಮರುದಿನ ಪಾದರೂ ಯಾರಾದರೂ ಪುಣ್ಯಾತ್ಮರು ಗಿರಾಕಿಗಳಾಗುತಿದ್ದರು

ಚೀನಾ ದೇಶದಲ್ಲಿ ಹೆಂಡಂದಿರನ್ನು ಅಡವು ಇಡುವ ಪದ್ಧತಿಯೂ ಇದೆ. ಸರಕಾರವು ಅದನ್ನು ನಿಷೇಧಿಸಿದರೂ ಆ ಪದ್ಧತಿ ಇನ್ನೂ ಸಂಪೂರ್ಣ ಮಾಯವಾಗಿಲ್ಲ. ಉತ್ತಮ ರೀತಿಯಲ್ಲಿ ಮೇಲ್ವಿಚಾರ ನೋಡುವ ಪ್ರತ್ಯೇಕ ಜನರು ಹೆಂಡಂದಿರನ್ನು ಒತ್ತೆಗೆ ಪಡಯುತ್ತಾರೆ. ಒತ್ತೆಗೆ ಕೊಡುವ ಗಂಡನು, ತನ್ನ ಹೆಂಡತಿಯ ಪ್ರಾಯ, ರೂಪಲಾವಣ್ಯಾದಿಗಳಿಗನುಸಾರ ಅವಳ ಮೌಲ್ಯವನ್ನು ನಿರ್ಣಯಿಸುತ್ತಾನೆ. ಕೆಲವು ಬಾರಿ ಒತ್ತೆಗೆ ಪಡೆದವನಿಂದ ಮರಳಿ ಬರಲಿಕ್ಕೆ ಹೆಂಡತಿ ಒಪ್ಪದಿರುವುದೂ ಉಂಟು.

ಪಾಶ್ಚಾತ್ಯ ದೇಶಗಳಲ್ಲೂ ಹೆಂಗುಸರ ಮಾರಾಟವಾದ ಉದಾಹರಣೆಗಳಿವೆ. ನ್ಯೂಯೋರ್ಕಿನ ಒಬ್ಬ ಮಹಾನುಭಾವನು ಸುಂದರಿಯಾದ ತನ್ನ ಹೆಂಡತಿಯನ್ನು ೫೦೦೦ ಡಾಲರುಗಳಿಗೆ ಮಾರಿದನಂತೆ. ಆಂಗ್ಲ ಮಹನೀಯನೊಬ್ಬನು ತನ್ನ ಹೆಂಡತಿಯ ಕಾಟವನ್ನು ಸಹಿಸಲಾರದೆ ಆಕೆಯನ್ನು ಒಂದುವರೆ ಶಿಲ್ಲಿಂಗ್ ಮತ್ತು ಒಂದು ಕಪ್ ಸರಾಯಿಗೆ ಮಾರಿದನಂತೆ

ಕೆಲಕಾಲ ಹಿಂದೆ, ಎಳೆ ವಯಸ್ಸಿನ ಓರ್ವ ಪುರಾಣ ಕನ್ನಿಕೆಗೆ ವಿವಾಹ ನಿಶ್ಚಯವಾಯಿತು. ವಿವಾಹವೆಂದೇನೇ? ಅಲ್ಲ—ಅವಳ 'ಮಾರಾಟ' ನಿಶ್ಚಯವಾಯಿತು. ಅವಳ ಬೆಲೆಯ ವಿಷಯ ಅವಳ ತಂದೆ ಹಾಗೂ ಭಾವೀಪತಿಯು ಏನೋ ಒಪ್ಪಂದ ಮಾಡಿಕೊಂಡಿದ್ದರು. ಆದರೆ ವಿವಾಹದ ದಿನ, ಮತ್ತೊಬ್ಬ ಗಿರಾಕಿ ಬಂದೇ ಬಿಟ್ಟ. ಮುಂಚಿನವನಿಗಿಂತ ತಾನು ಹೆಚ್ಚಿಗೆ ಕೊಡುವೆನೆಂದು ಮೇಲಾಡಿಸಿದ. ಶಕುನಿತಂತ್ರದ ಪಿತಾಣನು 'ನೀವಿಬ್ಬರೂ ಕಾದಾಡಿಕೊಳ್ಳಿ. ಗೆದ್ದವನಿಗೆ ಮಗಳನ್ನು ಕೊಡುತ್ತೇನೆ' ಎಂದ. ಸರಿ! ಕಾಳಗವಾಯಿತು. ಆದರೆ ಯುವಕರಿಬ್ಬರು ಹೀಗೆ ಕಾದಾಡುತ್ತಿರುವಾಗ, ವಧುವು ಬಾವಿಗೆ ಹಾರಿ ಪ್ರಾಣಕಳೆದುಕೊಂಡಳಂತೆ.

ಪುರಾಣರಲ್ಲೇ ಎಂದೇನು? ಸುಧಾರಿತ ದೇಶಗಳಲ್ಲೂ ಹೆಂಗಸರನ್ನು ಮಾರುವ ಮತ್ತು ಕೊಂಡುಕೊಳ್ಳುವ ರೂಢಿಯಿದೆ. ಅರಬರಲ್ಲಿಯೂ ಕನ್ನಿಕೆಯನ್ನು ಮಾರುವ ಪದ್ಧತಿಯಿದೆ. ಅರಬಿ ದೇಶಕ್ಕೆ ಯೆಹೂದ್ಯರು ಬಂದು ನೆಲೆಯಾದಂದಿನಿಂದ, ಇತರ ಸಾಮಾನುಗಳ ಬೆಲೆ ಏರಿದಂತೆಯೇ ಹೆಂಡಂದಿರ ಬೆಲೆಯೂ ಏರಿದೆಯಂತೆ. ಹಿಂದೆ ರೂಪವತಿಯಾದ ಕಾರ್ಯಸಮರ್ಥೆಯಾದ ಹೆಂಡತಿಯು ೩೦ ಪವನುಗಳಿಗೆ ದೊರೆಯುತ್ತಿದ್ದಳು, ಈಗ ೧೦೦-೨೦೦ ಪವನುಗಳಿಗೆ ದೊರೆಯುವುದು ಕಷ್ಟವಾಗಿದೆಯೆಂದು ಅರಬರು ಗೊಣಗುತ್ತಾರೆ.

ಬೇರೆ ಜನಾಂಗಗಳಲ್ಲಾದರೋ ಹೆಂಡತಿಯ ಬೆಲೆ ಅಷ್ಟಿಲ್ಲ. ನ್ಯೂಗಿನಿಯ ಮೂಲನಿವಾಸಿಗಳಲ್ಲಿ ಒಬ್ಬ ಕನ್ನಿಕೆಯ ಸರಾಸರಿ ಬೆಲೆ ಸಾಧಾರಣ ಒಂದು ಶಿಲ್ಲಿಂಗ್ ಮಾತ್ರ—ಎಂದರೆ ನಮ್ಮ ಒಂದು ರೂಪಾಯಿಯಷ್ಟು ಕೂಡ ಇಲ್ಲ. ಪಿಗ್ಮಿ ಜನರು ಒಂದು ವಧುವನ್ನು ಕೊಳ್ಳಲು ಆಕೆಯ ತಂದೆಗಲ್ಲ-ತಾಯಿಗೆ ಒಂದು ನಾಯಿಯನ್ನು ಕೊಡುವ ಕ್ರಮವಿದೆ.

ಆಫ್ರಿಕದಲ್ಲಿ ಕನ್ನಿಕೆಯರ ಧಾರಣೆ ಬೇರೆಬೇರೆ ಕಡೆಗಳಲ್ಲಿ ಬೇರೆಬೇರೆ ತೆರನಾಗಿರುತ್ತದೆ. ಉದಾ: ಕಾಫರರು ಒಂದು ವಧುವಿಗೆ ಹತ್ತು ದನಗಳನ್ನು ಕೊಟ್ಟು ಕೊಂಡುಕೊಳ್ಳುತ್ತಾರೆ. ಉಗಾಂಡದಲ್ಲಿ ನಾಲ್ಕು ಎತ್ತುಗಳಿಗೆ ಒಂದು ಕನ್ನಿಕೆ ದೊರೆಯುತ್ತಾಳೆ. ಉತ್ತರ ಕಾಂಗೋ ಜಿಲ್ಲೆಗಳಲ್ಲಾದರೋ, ಕೆಲವು ಕಬ್ಬಿಣದ ಸರಳುಗಳಿಯೂ ಪಾತ್ರೆಗಳಿಗೆ ಒಂದು ವಧು ಸಿಕ್ಕುವಳು.

ಕೆಲವು ಕಡೆಗಳಲ್ಲಿ, ಬಂದೂಕಿನ ಕೇಪಿನ ಒಂದು ಪೆಟ್ಟಿಗೆ ಕೊಟ್ಟರೆ ಕನ್ಯಾಪಿತನೊಬ್ಬನು ತನ್ನ ಮಗಳನ್ನು ಕೊಡಲಿಕ್ಕೂ ಸಿದ್ಧನಾಗಿರುತ್ತಾನೆ. ಮತ್ತೆ ಕೆಲವು ಪಂಗಡಗಳಲ್ಲಿ, ಒಂದು ಕಟ್ಟು ಹೊಗೆಸೊಪ್ಪಿಗೆಯೂ ಒಂದು ಮುಷ್ಟಿ ಅಕ್ಕಿಗೆ ಒಬ್ಬ ಚಲೋ ಹೆಂಗುಸು ಸಿಗಲಿಕ್ಕೆ ತೊಂದರೆಯಿಲ್ಲ.

ಟಿಬೆಟೀಯರಲ್ಲಿ ಕೂಡಾ ವಧು ವಿಕ್ರಯದ ಕ್ರಮ ಬಳಕೆಯಲ್ಲಿದೆ. ಶ್ರೀಮಂತರಲ್ಲಿ ಸುಂದರಿಯಾದ ತರುಣಿಯೊಬ್ಬಳು ಇಪ್ಪತ್ತು ದನಗಳ ಬದಲಿಗೆ ಸಿಗುವಳಾದರೆ, ಬಡವರಲ್ಲಿ ಅಂತಹಳು ಒಂದು ಹಂದಿಯೂ ಹುಲ್ಲಿನ ಹೊರೆಗೂ ಸಿಗಬಲ್ಲಳು. ಆದರೆ ಹೀಗೆ ಒಂದು ಹಂದಿಗೆ ಪಡಕೊಂಡ ವಧುವಿನ ಮೌಲ್ಯ ಗೊತ್ತಾದರೆ, ಅವಳಿಗೆ ಎಲ್ಲರೂ ತಮಾಷೆ ಮಾಡುವವರೇ ಎನ್ನಬಹುದು.

ಜಿಲ್ಲಾ ಬೋರ್ಡು ಜಿಲ್ಲೆಯ ಬಸ್ ಸರ್ವಿಸನ್ನು ನಡೆಯಿಸಬೇಕು

ಶ್ರೀ. ಪಿ ವಿ. ಉಪಾಧ್ಯಾಯ, ವಕೀಲ್, ಕಾರ್ಕಳ.

ನಾಲ್ಕೈದು ವರ್ಷಗಳ ಹಿಂದೆ ಬಸ್ ಸರ್ವಿಸನ್ನು ಬೋರ್ಡು ನಡೆಯಿಸಬೇಕೆಂಬ ಚಳವಳವೊಂದು ನಡೆದಿತ್ತು. ಹಾಗೆ ಮಾಡುವುದು ಶ್ರೇಯಸ್ಕರವೆಂದು ಎಲ್ಲರೂ ಒಪ್ಪಿದ್ದರು. ಬೋರ್ಡು ಸದಸ್ಯರಲ್ಲಿಯೂ ಹೆಚ್ಚಿನವರು ಅದೇ ಮತದವರಾದರು ಆಷ್ಟರಲ್ಲಿ ಯುದ್ಧದ ಪ್ರಭಾವವು ನಮ್ಮ ದೇಶಕ್ಕೂ ತಗಲಿತು. ಪ್ರಕೃತ ಆ ಯೋಚನೆ ಬೇಡವೆಂದು ಬೋರ್ಡಿನವರು ತತ್ಕಾಲ ಮುಂದುವರಿಸಿದರು. ಈಗ ಪುನಃ ಆ ಚಳವಳವನ್ನು ಮುಂದೊತ್ತಬೇಕೆಂದು ಅನೇಕರು ಯೋಚಿಸುತ್ತಿದ್ದಾರೆ. ಅಂತಹ ಚಳವಳಕ್ಕೆ ಇದು ಅತ್ಯಂತ ಅನುಕೂಲವಾದ ಸಮಯವೆಂದು ತೋರುತ್ತದೆ.

ನಮ್ಮ ಬೋರ್ಡು ಹಣದ ಅಭಾವದಿಂದ ಅತ್ಯಂತ ಅವಶ್ಯವಾದ ಅನೇಕ ಕಾರ್ಯಗಳನ್ನು ಮುಂದೊತ್ತಿದೆ ಇದೆ ಎಂಬುದು ನಿರ್ವಿವಾದದ ಮಾತು. ಹೊಸ ಶಾಲೆಗಳು ಮಾರ್ಗಗಳು, ಸೇತುವೆಗಳು, ಈ ಯೋಜನೆಗಳೇ ನಿಂತಿವೆ. ಇದ್ದ ಮಕ್ಕಳಿಗೆ ಕೂಳಿಲ್ಲವೆಂದಾಗಿದೆ. ಬೋರ್ಡು ಶಾಲೆಯ ಕಟ್ಟಡಗಳನ್ನು ಸಾರ್ವಜನಿಕ ವಂತಿಗೆಯಿಂದ ಕಟ್ಟಿಕೊಳ್ಳಬೇಕೆಂದು ಬೋರ್ಡಿನವರ ಸಲಹೆದೊರೆಯುತ್ತಿದೆ. ತನ್ನ ಆದಾಯವನ್ನು ಹೆಚ್ಚಿಸಿಕೊಳ್ಳುವ ಯಾವ ಯೋಚನೆಯೂ ಬೋರ್ಡಿಗೆ ಇಲ್ಲವೆನ್ನಬೇಕು. ಇಲ್ಲದಿದ್ದರೆ ಬಸ್ ಸರ್ವಿಸನ್ನು ನಡೆಯಿಸುವ ಸಾಹಸವನ್ನು ಅದು ಇಷ್ಟರೊಳಗೆ ಮಾಡಬೇಕಿತ್ತಲ್ಲವೇ?

ಇದೆಲ್ಲಾ ಅನುಭವಸ್ಥ ವ್ಯಾಪಾರಿಗಳಿಂದ ಆಗತಕ್ಕ ಕೆಲಸ ಬೋರ್ಡಿನವರಿಂದ ಸಾಧ್ಯವಲ್ಲವೆನ್ನುವದಕ್ಕೆ ಅರ್ಥವಿಲ್ಲ. ಜಿಲ್ಲೆಯ ಮುಖ್ಯ ವ್ಯಾಪಾರಿ ಸಾಮಗ್ರಿಯಾದ ಅಕ್ಕಿಯ ವಹಿವಾಟನ್ನು ರೆವಿನ್ಯೂ ಇಲಾಖೆಯವರೂ ಸಹಕಾರಿ ಸಂಘದವರೂ ಒಟ್ಟಾಗಿ ಬಹಳ ಯಶಸ್ವಿಯಾಗಿ ನಡೆಯಿಸುತ್ತಿರುವುದಿಲ್ಲವೇ? ಹಾಗೆಯೇ ಸಹಕಾರ ಸ್ಟೋರುಗಳು ಎಲ್ಲಾ ವ್ಯಾಪಾರ ನಡೆಯಿಸುವುದಿಲ್ಲವೇ? ಬೋರ್ಡು ಬಸ್ ಸರ್ವಿಸನ್ನು ನಡೆಯಿಸುವುದೆಂದು ನಿಶ್ಚಯಿಸಿದರೆ ಬಸ್ ಸರ್ವಿಸಿನ ಅನುಭವವಿರುವ ನೌಕರರು ಬೋರ್ಡಿಗೆ ಸಾಕಷ್ಟು ದೊರೆಯುವುದರಲ್ಲಿ ಸಂಶಯವಿಲ್ಲ.

ಬಸ್ ಸರ್ವಿಸು ಬಹಳ ಲಾಭವುಳ್ಳ ವ್ಯಾಪಾರವೆಂಬುದರಲ್ಲಿ ಸಂದೇಹವಿಲ್ಲ. ಅದರಲ್ಲೂ ಪೆಟ್ರೋಲಿನ ಬದಲಿಗೆ ಮಸಿಗೆಂಡ ಹಾಕುವ ಕ್ರಮ ಪ್ರಾರಂಭವಾದಂದಿನಿಂದ ಬಸ್ ಕಂಪೆನಿಗಳ ಲಾಭಕ್ಕೆ ಅಂತ್ಯವೇ ಇಲ್ಲವೆಂದಾಗಿದೆ. ನೌಕರರಿಗೆ ಸಂಬಳ ಕೊಡುವಾಗ ಬಡತನವಿದ್ದರೂ ಮೇಲಧಿಕಾರಿಗಳು ಯಥೇಷ್ಟ ವೇತನವನ್ನು ಪಡೆಯುತ್ತಿದ್ದಾರೆ. ಡೈರೆಕ್ಟರರೂ ನಾನಾ ರೀತಿಯಿಂದ ಪ್ರಯೋಜನ ಹೊಂದುತ್ತಿದ್ದಾರೆ. ಹೀಗಿದ್ದರೂ ಪಾಲುಗಾರರಿಗೆ ವರ್ಷದಲ್ಲಿ ನೂರರಲ್ಲಿ ಅರುವತ್ತರಷ್ಟು ಲಾಭ ಹಂಚಲಾಗುತ್ತದೆ. ಲಾಭದ ದರವನ್ನು ಕಡಿಮೆಯೆಂದು ತೋರಿಸಲಿಕ್ಕಾಗಿ ಹೆಚ್ಚಿಗೆ ಹಣ ಕೇಳದೆಯೇ ಪಾಲುಗಳ ಸಂಖ್ಯೆಯನ್ನು ಏರಿಸಬೇಕಾಗಿ ಬಂದಿದೆ. ಕ್ರಮಪ್ರಕಾರವಾದರೆ ಈಗಿನ ಸ್ಥಿತಿಯಲ್ಲಿ ನೂರರಲ್ಲಿ ನೂರೇ ಲಾಭ ದೊರೆಯುವುದು ಸಾಧ್ಯವಿದೆ.

ಆದರೆ ಬಸ್ ಕಂಪೆನಿಗಳು ಪ್ರಯಾಣಿಕರ ಕಡೆಗೆ ಸಾಕಷ್ಟು ಲಕ್ಷ್ಯಕೊಡುವುದಿಲ್ಲ. ಇಷ್ಟು ಲಾಭವಿರುವಾಗಲೂ ಟಿಕೇಟು ದರ ಇಳಿಯುವಂತಿಲ್ಲ. ಟಿಕೇಟು ಸಿಕ್ಕುವುದೆಂದರೆ ಅದೊಂದು ಪ್ರಯಾಸದ ಕಾರ್ಯವಾಗಿದೆ. ಜನರಿಗಾಗಿ ಬಸ್ಸು ಇರುವುದಲ್ಲ, ಬಸ್ಸಿಗಾಗಿ ಜನರು-ಎಂದಾಗಿದೆ. ಸರಕಾರಿ ನೌಕರರು, ಬಸ್ ಡೈರೆಕ್ಟರು, ಅವರ ಕಡೆ ಜನರು-ಇವರಿಗೆಲ್ಲಾ ಆಗಿ ಸಾಮಾನ್ಯರಿಗೆ ಟಿಕೇಟು ಇದೆಯೇ ಎಂಬುದು ಬಸ್ ಹೊರಡುವ ಮೊದಲು ಯಾರಿಗೂ ತಿಳಿಯದು. ಏಜಂಟರ ಕೂಡೆ ಮಾತನಾಡುವುದೇ ಕಷ್ಟಕ್ಕೆ ಬಂದಿದೆ. ಇಷ್ಟು ಪ್ರಯತ್ನದಲ್ಲಿ ಒಂದು ಟಿಕೇಟು ದೊರೆಯಿತೆಂದರೆ ಅನಂತರ ಬಸ್ಸಿನಲ್ಲಿ ಕುಳಿತುಕೊಳ್ಳುವ ಕಷ್ಟಬೇರೆಯೇ ಇದೆ. ಐದು ಜನರು ಪ್ರಯಾಸದಲ್ಲಿ ಕುಳಿತುಕೊಳ್ಳಬಹುದಾಗಿದ್ದ ಸೀಟಿನಲ್ಲಿ ಈಗ ಆರು ಏಳು ಜನರನ್ನು ಬಲಾತ್ಕಾರದಿಂದ ತುಂಬಿಸುತ್ತಿದ್ದಾರೆ. ಅಲ್ಲಲ್ಲಿ ನಿಲ್ಲುವ ಬಸ್ಸು ಒಂದು ಬಸ್ಸು ನಿಂತರೆ ಅದು ದುರಸ್ತಿ ಆಗಿಯೇ ಮುಂದುವರಿಸಬೇಕಲ್ಲದೆ ಬದಲಾಯಿಸಲಿಕ್ಕೆ ಇನ್ನೊಂದು ಬಸ್ಸು ಇಲ್ಲ. ಹೀಗಾಗಿ ಹೊರಟ ಬಸ್ಸು ಯಾವಾಗ ಹೋಗಿ ಮುಟ್ಟುವುದೆಂದು ಯಾರಿಗೂ ತಿಳಿಯದು. ಬಸ್ಸಿನ ಸೀಟುಗಳೂ ಕುಳಿತುಕೊಳ್ಳಲು ಅನುಕೂಲವಾಗಿಲ್ಲ. ನಿರ್ಮಲವಾಗಿಯೂ ಇರುವುದಿಲ್ಲ. ಬಸ್ಸನ್ನು ಕಾಯುವವರಿಗೆ ಕೆಲವು ಕಡೆ ಸ್ಟೇಶನಲ್ಲಿ ಕುಳಿತುಕೊಳ್ಳುವ ಅನುಕೂಲತೆಗಳಿಲ್ಲ. ಆದರೆ ಟಿಕೇಟು ಸಿಕ್ಕುವುದೇ ಪ್ರಯಾಸವಾಗಿರುವಾಗ ಬಸ್ಸಿನ ಇತರ ಅನುಕೂಲತೆಗಳ ವಿಷಯ ಯಾರೂ ಮಾತಾಡುವುದಿಲ್ಲ. ಸಾರ್ವಜನಿಕ ಹಿತದೃಷ್ಟಿಯಿಲ್ಲದೆ ಕೇವಲ ವ್ಯಾಪಾರದ ದೃಷ್ಟಿಯಿಂದ ನಡೆಯುವ ಸಂಸ್ಥೆಗಳ ಅವಸ್ಥೆಯೇ ಹೀಗೆ ಎನ್ನಬೇಕು. ಸರ್ವಿಸುಗಳು ಕಂಬೈಂಡ್ ಆಗುವ ಮೊದಲು ಅವು ಪ್ರಯಾಣಿಕರ ಕಡೆಗೆ ತೋರಿಸುತ್ತಿದ್ದ ಆಸಕ್ತಿ. ಆದರೆ ಅದೆಲ್ಲಾ ಮಾಯವಾಗಿದೆ. ಬಸ್ ಸರ್ವಿಸನ್ನು ಸಾರ್ವಜನಿಕ ಸಂಸ್ಥೆಯಾದ ಬೋರ್ಡು ನಡೆಸಿದರೆ ಮಾತ್ರ ಪ್ರಯಾಣಿಕರ ಕಷ್ಟಗಳು ಪರಿಹಾರವಾಗಬಹುದಲ್ಲದೆ ಅನ್ಯಥಾ ಸಾಧ್ಯವಿಲ್ಲ.

ಪ್ರಯಾಣಿಕರು ಇಷ್ಟು ಕಷ್ಟಪಟ್ಟರೂ ಬಸ್ ಸರ್ವಿಸಿನ ಲಾಭವು ನಮ್ಮ ಬೋರ್ಡಿಗೆ ಸಿಗುವುದಾದರೆ ಅಷ್ಟೊಂದು ಪಶ್ಚಾತ್ತಾಪವಿರುತ್ತಿರಲಿಲ್ಲ. ಈ ಕಷ್ಟ ಕಾಲದಲ್ಲಿ ಪ್ರಯಾಣಿಕರನ್ನು ಪ್ರಯಾಸಗೊಳಿಸಿ ಖಾಸಗಿ ಕಂಪೆನಿಗಳು ಮಿತಿಮೀರಿದ ಲಾಭ ಹೊಂದುವುದಾದರೆ ಅದೊಂದು ಅತ್ಯಂತ ಶೋಚನೀಯ ವಿಷಯವಲ್ಲವೆ? ಆದರಲ್ಲಿಯೂ ಇದು ಯಾರೂ ಮಿತಿಮೀರಿದ ಲಾಭವನ್ನು ಹೊಂದ ಕೂಡದೆಂಬ ಕಂಟ್ರೋಲ್ ಕಾಲ! ಸರಕಾರದವರು ಎಲ್ಲಾ ವ್ಯಾಪಾರಿಗಳ ಲಾಭಕ್ಕೂ ಒಂದು ಮೇರೆಯನ್ನು ವಿಧಿಸುತ್ತಾರೆ. ನಮ್ಮ ಬಸ್ ಕಂಪೆನಿಗಳ ವಿಷಯದಲ್ಲಿ ಆ ಧೋರಣೆಯನ್ನು ವಹಿಸುವುದು ಸುಲಭವಲ್ಲವೆಂಬುದು ನಿಜ. ಈ ಸಂದರ್ಭದಲ್ಲಿ ಬಸ್ ಸರ್ವಿಸನ್ನು ಖಾಸಗಿ ಕಂಪೆನಿಗಳ ವಶಬಿಡದೆ ಬೋರ್ಡು ಅದನ್ನು ವಹಿಸಿ ನಡೆಯಿಸುವುದು ಎಲ್ಲಾ ದೃಷ್ಟಿಯಿಂದಲೂ ಶ್ರೇಯಸ್ಕರವಾಗಿದೆ.

ಈ ವಿಚಾರದಲ್ಲಿ ಸಾರ್ವಜನಿಕರೆಲ್ಲರೂ ಸಾಕಷ್ಟು ಚಳವಳ ನಡೆಯಿಸಬೇಕು. ತಮ್ಮ ಸ್ಪಷ್ಟ ಅಭಿಪ್ರಾಯವನ್ನು ಪತ್ರಿಕೆಗಳಲ್ಲಿ ಪ್ರಕಟಿಸಬೇಕಲ್ಲದೆ ಅಧಿಕಾರಿಗಳಿಗೂ ಜಿಲ್ಲಾ ಬೋರ್ಡಿಗೂ ತಿಳಿಸಬೇಕು. ಜಿಲ್ಲಾ ಬೋರ್ಡಿನ ಅಧ್ಯಕ್ಷರೂ ಎಲ್ಲಾ ಸದಸ್ಯರೂ ಈ ವಿಷಯದಲ್ಲಿ ಉತ್ಸಾಹದಿಂದ ಕೆಲಸಮಾಡಿದರೆ ಈ ಕಾರ್ಯವು ಸುಲಭಸಾಧ್ಯವಾಗುವುದೆಂಬುದರಲ್ಲಿ ಸಂದೇಹವಿಲ್ಲ. ನಮ್ಮ ಅಧ್ಯಕ್ಷರಾದರೂ ಬಸ್ ಸರ್ವಿಸಿನಲ್ಲಿ ಸಾಕಷ್ಟು ಅನುಭವವುಳ್ಳವರು. ಆದುದರಿಂದ ಬೋರ್ಡಿನವರು ಈ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕೆ ಇದು ಉತ್ತಮ ಕಾಲವಿದೆ. (ರಾಷ್ಟ್ರಬಂಧು)

೧೨೦೦೦ ಜರ್ಮನರ ಸೆರೆ

ಶೆಲ್ಟ್ ಪ್ರದೇಶದಲ್ಲಿ ಮಿತ್ರ ಪಕ್ಷದವರಿಗಾದ ವಿಜಯದಿಂದ ಹನ್ನೆರಡು ಸಾವಿರ ಜರ್ಮನರು ಸೆರೆಹಿಡಿಯಲ್ಪಟ್ಟಿದ್ದಾರೆ.

ಹಿಂದೂಸ್ಥಾನ ಪಾಕಿಸ್ಥಾನವಾಗುವುದೆ?

೨೦೦ ವರ್ಷಗಳ ನಂತರ ಮುಸ್ಲಿಮರ ಸಂಖ್ಯೆ ಹಿಂದೂಗಳ ಸಂಖ್ಯೆಯನ್ನು ಮೀರಬಹುದು.

ಲೇಖಕರು: ಶ್ರೀ। ಜಿ। ಎಲ್। ಬನ್ಸಾಲ

ಹಿಂದೂ ದೇಶದಲ್ಲಿ ಹಿಂದೂಗಳ ಸಂಖ್ಯೆ ವರ್ಷಗಳೆದಂತೆ ಕ್ಷೀಣಿಸುತ್ತಾ ಬರುತ್ತಿದೆ ಮುಸ್ಲಿಮರದು ವೃದ್ಧಿಯಾಗುತ್ತಿದೆ. ಇದೇ ರೀತಿಯಲ್ಲಿ ವಿದ್ಯಮಾನಗಳು ಮುಂದುವರಿಯುವುದಾದರೆ ಇನ್ನು ಎರಡು ಶತಮಾನಗಳಲ್ಲಿ ಮುಸ್ಲಿಮರ ಸಂಖ್ಯೆಯು ಹಿಂದೂಗಳ ಸಂಖ್ಯೆಯನ್ನು ಮೀರಬಹುದು; ಕನಿಷ್ಠಪಕ್ಷಕ್ಕೆ ಸಮಾನವಾಗುವುದು ನಿಶ್ಚಯ.

ಕಳೆದ ೬೦ ವರ್ಷಗಳ ಖಾನೇಷು ಮಾರಿಯನ್ನು ಪರಿಶೀಲಿಸಿದರೆ ಹಿಂದೂಗಳ ಸಂಖ್ಯೆ ದಶಮಾನಗಳೆದಂತೆ ಕ್ಷೀಣಿಸುತ್ತಿರುವುದೂ ಮುಸ್ಲಿಮರ ಸಂಖ್ಯೆ ಏರುತ್ತಿರುವುದೂ ಕಾಣಾಗಿ ತಿಳಿಯುತ್ತಿದೆ. ೧೮೮೧ರಲ್ಲಿ ಹಿಂದೂಗಳ ಸಂಖ್ಯೆಯು ಪ್ರತೀ ೧೦,೦೦೦ಕ್ಕೆ ೭೪೩೨ ಇರಬಹುದು. ೧೯೪೧ರಲ್ಲಿ ಈ ಸಂಖ್ಯೆ ೬,೯೫೯ರಷ್ಟಾಯಿತು; ಅಂದರೆ ೧೦,೦೦೦ಕ್ಕೆ ೪೭೩ರಂತೆ ಇಳಿದಂತಾಯಿತು. ಇದಕ್ಕೆ ವ್ಯತಿರಿಕ್ತವಾಗಿ ಮುಸ್ಲಿಮರ ಸಂಖ್ಯೆಯು ಅಷ್ಟೇ ಅವಧಿಯೊಳಗೆ ೧,೯೭೪ರಿಂದ-೨,೩೧೧ಕ್ಕೆ ಏರಿದೆ. ಎಂದರೆ ೧೦,೦೦೦ದಲ್ಲಿ ೪೦೭ ಏರಿದಂತಾಯಿತು.

ಇಡೀ ದೇಶದ ದೃಷ್ಟ್ಯಾ ಪರಿಶೀಲಿಸುವುದಾದರೆ ಮಾತ್ರ ಈ ಇಳಿತ ಕಂಡು ಬರುವುದು-ಪ್ರಾಂತ್ಯವಾರು ವಿಂಗಡಿಸಿದರೂ ಇಳಿತದ ಚಿಹ್ನೆಯೇ ಪ್ರಧಾನವಾಗಿ ತೋರುತ್ತದೆ. ಇದರ ಸತ್ಯಾಸತ್ಯತೆಗಳನ್ನು ಈ ಕೆಳಗಿನ ತಖ್ತೆಯಿಂದ ಸುಲಭವಾಗಿ ಕಂಡುಹಿಡಿಯಬಹುದು.

ಪ್ರತೀ ೧೦,೦೦೦ಕ್ಕೆ

ಪ್ರಾಂತ್ಯಗಳು	ಮುಸ್ಲೀಮರು ೧೮೮೧	೧೯೪೧	ಹಿಂದೂಗಳು ೧೮೮೧	೧೯೪೧
ಬಂಗಾಳ	೫೦೦೯	೫೪೭೩	೪೯೫೫	೪೧೫೫
ಪಂಜಾಬ	೫೫೩೩	೫೭೦೭	೩೦೮೪	೩೬೬
ಯು. ಪಿ.	೧೩೪೫	೧೫೩೦	೮೯೭೭	೮೩೭
ಬಿಹಾರ್	೧೦೮೯	೧೭೮೯	೮೪೩೦	೭೬೯
ಮದ್ರಾಸು	೬೭೩	೭೯೦	೯೧೪೧	೮೬೭

೨೦೦ ವರ್ಷಗಳ ನಂತರ

೧೮೮೧ ಅಂದರೆ ೬೦ ವರ್ಷಗಳ ಹಿಂದೆ ಹಿಂದೂ ಮುಸ್ಲೀಮರ ಸಂಖ್ಯೆಯು ಪ್ರಮಾಣ ೪೧ ಇತ್ತಾದರೆ ಈಗ ಅದು ೩: ೮ ಪ್ರಮಾಣದಲ್ಲಿದೆ. ಆದುದರಿಂದ ಇದೇ ಪ್ರಮಾಣದಲ್ಲಿ ಇಳಿತ ಭರತಗಳು ನಡೆದು ಹೋದರೆ ಇನ್ನು ೨೦೦ ವರ್ಷಗಳ ನಂತರ ಪ್ರಮಾಣ ಸರಿಸಮಾನ ಇಲ್ಲವೆ ಮುಸ್ಲೀಮರ ಕಡೆಗೆ ಒಂದಿಷ್ಟು ಅಧಿಕವಾಗಿ ರೂಪಾಂತರ ಹೊಂದಬಹುದು. (ನವಸಂದೇಶ)

ವೈಸರಾಯರು ಲಾರಿ ಅವಘಡದಿಂದ ಪಾರಾದರು

ಡಿಲ್ಲಿಯಲ್ಲಿ ವೈಸರಾಯರು ಕುದುರೆ ಸವಾರಿಮಾಡುತ್ತಿದ್ದಾಗ ಮೋಟಾರು ಲಾರಿಯೊಂದು ಅಡ್ಡಬಂದು ಅವಘಡ ಪ್ರಾಪ್ತವಾಗುವುದರಲ್ಲಿತ್ತು. ಅಂತೂ ಕುದುರೆಯ ನೂರೇ ಅಡಿ ದೂರದಲ್ಲಿ ಅದು ನಿಲ್ಲಿಸಲ್ಪಟ್ಟುದರಿಂದ ವೈಸರಾಯರು ಗಂಡಾಂತರದಿಂದ ಪಾರಾದರು. ಡ್ರೈವರನು ತನ್ನ ತಪ್ಪನ್ನು ಮೆಜಿಸ್ಟ್ರೇಟರ ಮುಂದೆ ಒಪ್ಪಿಕೊಂಡನು. ಒಂದು ನೂರು ರೂಪಾಯಿ ಜುಲ್ಮಾನೆ ವಿಧಿಸಲಾಯಿತೆಂದು ಸುದ್ದಿ.

ಪುಸ್ತಕ ರೂಪದಲ್ಲಿ ಹೊರಡುವ ವಾರಪತ್ರಿಕೆ

ಉಡುಪಿ - - - - ದ. ಕನ್ನಡ.

ಯುದ್ಧದಲ್ಲಿ ಚೀನದ ಪ್ರಗತಿ ಮಂದವಾಗಿರಲು ಕಾರಣವೇನು?

ಕೇವಲ ಸಮರ ಸಲಕರಣೆಗಳ ಪೂರೈಕೆ ಕಡಿಮೆಯಾದುದೇ ಅಲ್ಲ ಉತ್ತರ ಚೀನಾದಲ್ಲಿ ಪ್ರಬಲವಾದ ಕಮ್ಯೂನಿಸ್ಟ್ ಪಕ್ಷವಿದೆ. ಈ ಪಕ್ಷಕ್ಕೆ ವಿರೋಧವಾದುದು ದಕ್ಷಿಣದಲ್ಲಿರುವ ಚಿಯಾಂಗ್ ಕೈಶೇಕರ ಪಕ್ಷ. ಚಿಯಾಂಗ್ ಕೈಶೇಕರು ಜಪಾನರನ್ನು ಮುರಿದಿಕ್ಕುವುದಕ್ಕಿಂತಲೂ ಕಮ್ಯೂನಿಸ್ಟ್ ಪಕ್ಷವು ಪ್ರಬಲವಾಗದಂತೆ ನೋಡಿಕೊಳ್ಳುವುದರಲ್ಲೇ ಕಾತರರಾಗಿದ್ದಾರೆ. ಅದಕ್ಕಾಗಿ ಸಮರ ಸಲಕರಣೆಯ ಪೂರೈಕೆಯಲ್ಲಿ ಹೆಚ್ಚಿನವನ್ನು ಜಪಾನರ ಮೇಲೆ ಪ್ರಯೋಗಿಸದೆ ಉಳಿಸಿಕೊಂಡು ಬರುತ್ತಿದ್ದಾರೆ. ಅಮೇರಿಕನರೇ ಕಾದಿದಷ್ಟು ಕಾದಲಿ ಎಂಬ ಉದಾಸೀನ ಭಾವದಿಂದ ಇದ್ದಾರೆ. ಚೀನಾದೊಳಗೆ ಕಮ್ಯೂನಿಸ್ಟರನ್ನು ಕುಗ್ಗಿಸಿ ತನ್ನ ಅಧಿಕಾರ ಪ್ರಭಾವವನ್ನು ಹೆಚ್ಚಿಸಿಕೊಳ್ಳುವ ಸಾಧನೆಗೆ ತನ್ನ ಸೇನೆಯನ್ನು ಉಳಿಸಿಕೊಳ್ಳಬೇಕೆಂದು ಅರೆ ಮನಸ್ಸಿನಿಂದ ಜಪಾನರೊಡನೆ ಕಾದುತ್ತಿದ್ದಾರೆ. ಆದರೆ ಅಮೇರಿಕದ ಸೇನಾನಾಯಕ ಸ್ಟಿಲ್‌ವೆಲ್ಲರು ಅಖಿಳ ಚೀನಾ ಬಲವು ಜಪಾನರ ಮೇಲೆ ಬೀಳುವಂತೆ ಕಮ್ಯೂನಿಸ್ಟರನ್ನೂ ಬಳಸಿಕೊಳ್ಳಬೇಕೆಂಬ ಒಲವಿದ್ದವರಾದುದರಿಂದ ಅವರ ಕೈಯಲ್ಲಿ ತನ್ನ ಸೇನೆಯನ್ನು ಕೊಡಲಿಕ್ಕೆ ಚಿಯಾಂಗರಿಗೆ ಇಷ್ಟವಿಲ್ಲ ಆದರೆ ಈ ಗುಟ್ಟನ್ನು ಹೊರಗೆಡಹದೆ ತನಗೂ ಸ್ಟಿಲ್‌ವೆಲ್ಲರಿಗೂ ವ್ಯಕ್ತಿಕ ಭಿನ್ನಾಭಿಪ್ರಾಯಗಳಿರುವ ಕಾರಣ ಅವರನ್ನು ಹಿಂದೆ ಕರೆಯಿಸಿಕೊಳ್ಳಬೇಕೆಂದು ಪ್ರೆಸಿಡೆಂಟ್ ರೂಸ್ವೆಲ್ಟರಿಗೆ ಬರೆದು ಆ ಪ್ರಯತ್ನದಲ್ಲಿ ಗೆದ್ದಿದ್ದಾರೆ. ಜನರಲ್ ಸ್ಟಿಲ್‌ವೆಲ್ಲರು ಅಮೇರಿಕಕ್ಕೆ ಹಿಂದೆ ಕರೆಯಲ್ಪಟ್ಟಿದ್ದಾರೆ. ಚಿಯಾಂಗರ ಸೇನೆಯ ದೊಡ್ಡದೊಂದು ಅಂಶವು ಉತ್ತರದ ಕಮ್ಯೂನಿಸ್ಟರನ್ನು ಹತ್ತಿಕ್ಕುವುದರಲ್ಲೇ ನಿರತವಾಗಿದೆಯಂತೆ ಚೀನದ ವರ್ತಮಾನ ನಿಯಂತ್ರಣವು ಕಟುಕಟ್ಟು ನಿಟ್ಟಿನದಾಗಿರುವುದರಿಂದ ನಿಜಸ್ಥಿತಿಯು ವರ್ತಮಾನ ಬಾಹ್ಯ ಜಗತ್ತಿಗೆ ಬರುವುದಿಲ್ಲವೆಂದೂ ಚಿಯಾಂಗರು ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ದೊರಕಲೆಂದು ಹಾರೈಸುವುದು ಮುಂದೆ ತನಗೆ ಹಿಂದೂಸ್ಥಾನದಿಂದ ಸಹಾಯ ದೊರೆತು ತನ್ಮೂಲಕ ಕಮ್ಯೂನಿಸ್ಟರನ್ನು ಸದೆ ಬಡಿದು ಅಖಿಳ ಚೀನಾದ ಪ್ರಭುವಾಗಬೇಕೆಂಬ ಹಂಬಲದಿಂದ ಎಂದೂ ಇತ್ತೀಚೆಗೆ ಅಮೇರಿಕದಲ್ಲೊಂದು ವದಂತಿ ಹರಡಿದೆ.

ಚಿತೆಯಲ್ಲಿಡಲ್ಪಟ್ಟವ ಜೀವಂತ ತೆಗೆಯಲ್ಪಟ್ಟ

ರಾಜಕೋಟೆಯ ಸಮೀಪ ಚಿತ್ತಪುರದ ರೈಲ್ವೆಯವನು ಸತ್ತಾಗ ಅವನ ಶವವನ್ನು ಹೊತ್ತುಕೊಂಡು ಹೋಗಿ ಸ್ಮಶಾನದಲ್ಲಿ ಚಿತೆಯ ಮೇಲಿಟ್ಟು ಅಗ್ನಿ ಪ್ರತಿಷ್ಠೆ ಮಾಡುವುದರಲ್ಲಿದ್ದಾಗ ಶವವು ಜೀವದಿರುವ ಲಕ್ಷಣವನ್ನು ತೋರಿದುದರಿಂದ ಕೂಡಲೆ ಅದನ್ನು ತೆಗೆದು ತಕ್ಕ ಶುಶ್ರೂಷೆ ಮಾಡಲಾಯಿತು ಚಿತೆಯೇರಿದ ಶವವು ಜೀವಂತವಾಗಿ ಊರಿಗೆ ಮರಳಿತು!

ಜರ್ಮನ್ ವಿಜ್ಞಾನಿಗಳ ದ್ವಿತೀಯ ವಿಜಯಾಯುಧ ವಿ-೨

ಜರ್ಮನ್ ವಿಜ್ಞಾನಿಗಳ ಸಂಶೋಧನೆಯ ಫಲವಾಗಿ ಆವಿಷ್ಕರಣವಾದ ಪ್ರಥಮ ವಿಜಯಾಯುಧ—ವಿ-೧ ಎಂದರೆ ಇಂಗ್ಲಂಡದ ಮೇಲೆ ತಾನಾಗಿ ಹಾರಿ ಬರುವ ರೆಕ್ಕೆ ಬಾಂಬು ಈಗ ಎರಡನೆಯದೊಂದರ ಸಂ

ದೇಶ—ವಿದೇಶ

ಶೋಧನೆಯಾಗಿ ಆವಿಷ್ಕರಣಕ್ಕೆ ಬಂದಿದೆಯಂತೆ ಇದನ್ನು ಜರ್ಮನಿಯಿಂದಲೇ ಬ್ರಿಟನಿನ ಮೇಲೆ ಹಾರಿಸಬಹುದಂತೆ ಆದರೆ ಇದರ ಸಿದ್ಧತೆಯ ವೆಚ್ಚವು ಅತ್ಯಧಿಕವಾಗುವುದೊಂದು ಇದರ ಕೊರತೆಯಂತೆ

ವಿಚಿತ್ರ ಸಂಭಾವನೆ

ಆಲ್ಬರ್ಟ್ ಫಿಲಿಪ್ಸ್ ಎಂಬವನೊಬ್ಬನು ಬರೆದಿಟ್ಟ ತನ್ನ ಮರಣೋತ್ತರ ವ್ಯವಸ್ಥಾಪತ್ರ (ವಿಲ್)ದಲ್ಲಿ ಅಮೇರಿಕದ ಅಧ್ಯಕ್ಷ ರೂಜ್ವೆಲ್ಟರ ಮತ್ತು ಬ್ರಿಟನಿನ ಮಹಾ ಪ್ರಧಾನ ಚರ್ಚಿಲ್ಲರ ಕಡೆಗಿರುವ ತನ್ನ ಗೌರವ ಸೂಚಕ ಸಂಭಾವನೆಯಾಗಿ ಮೊದಲನೆಯವರಿಗೆ ನ್ಯೂಯೋರ್ಕ್ ಬಂದರದ ಚಿತ್ರವನ್ನೂ ಎರಡನೆಯವರಿಗೆ ಗುಳುಹಾಕುವ ದೋಣಿಯ ಚಿತ್ರವನ್ನೂ ಅರ್ಪಿಸುವಂತೆ ಬರೆದಿದ್ದಾನಂತೆ.

ಕ್ಲಬ್ಬಿನ ವೈಶಿಷ್ಟ್ಯ

ಇಂಗ್ಲೆಂಡಿನ ಸಸ್ಸೆಕ್ಸ್ ಎಂಬಲ್ಲಿ ನಸ್ಯ ಸೇದುವವರದೇ ಆದ ಕ್ಲಬ್ ಇದೆಯಂತೆ ಅದಕ್ಕೆ ಸೇರುವ ನಸ್ಯ ಸೇದುವ ಸದಸ್ಯರು ಎಲ್ಲಾದರೂ ನಸ್ಯದ ಡಬ್ಬಿಯನ್ನು ತರಲು ಮರೆತು ಬಿಟ್ಟು ಬಂದಿದ್ದರೆ, ಎಡಗೈಯಿಂದ ನಸ್ಯ ಎಳೆದರೆ,ನಸ್ಯ ಸೇದುವಾಗ ಸೀನು ಬಿಟ್ಟರೆ, ಶುದ್ಧ ಹೊಗೆಸೊಪ್ಪಿನದಲ್ಲದೆ ಕೃತಕ ಪರಿಮಳ ನಸ್ಯಗಳನ್ನು ಪಯೋಗಿಸಿದರೆ ಅವರು ದಂಡತೆರಬೇಕಂತೆ. ಆ ದಂಡ ದ್ರವ್ಯವನ್ನು ರೆಡ್‌ಕ್ರಾಸ್ ನಿಧಿಗೆ ಕೊಡಲಾಗುವುದಂತೆ.

ಗಾಯಕವಾಡರ ಅರಮನೆಯೊಳಗೆ ಗುಡಿಸಲು

ಬರೋಡೆಯ ಅರಸರಾಗಿದ್ದ ದಿವಂಗತ ಸಯ್ಯಾಜಿರಾವ್ ಗಾಯಕವಾಡರು ಬಾಲ್ಯದಲ್ಲಿ ದನ ಮೇಯಿಸುವ ಬಡ ಹುಡುಗನಾಗಿ ಗುಡಿಸಲಲ್ಲಿದ್ದರಂತೆ ಅವರು ರಾಜವಂಶದವರೆಂದು ಬ್ರಿಟಿಷರು ಪತ್ತೆಮಾಡಿ ಅವರನ್ನು ತಂದು ಬರೋಡಾ ಸಂಸ್ಥಾನದ ಪಟ್ಟದಲ್ಲಿ ಕು... [illegible] ... ರಾಜರಾಗಿ ತನ್ನ ಸಂಸ್ಥಾನದಲ್ಲಿ ಎಷ್ಟೋ ಸುಧಾರಣೆಗಳನ್ನು ಮಾಡಿದರಲ್ಲದೆ ವೈಭವದ ಅರಮನೆಯನ್ನೂ ಕಟ್ಟಿದ್ದರು. ಆದರೂ ತನ್ನ ಬಾಲ್ಯದ ಜೀವನ ಸ್ಮರಣಾತ್ಮವಾಗಿ ಆ ಅರಮನೆಯೊಳಗೊಂದು ಕಡೆ ಮಣ್ಣಿನ ಗೋಡೆಯ ಸಗಣಿ ಬಳಿದ ನೆಲದ ಗುಡಿಸಲೊಂದನ್ನು ಕಟ್ಟಿಸಿರುವುದು ಈಗಲೂ ಇದೆಯಂತೆ.

ತಲೆತೆರಿಗೆಯ ಚಿನ್ಹಾವಶೇಷ ಹೋಯಿತು.

ಮೊಗಲಾಯ ಕಾಲದಲ್ಲಿ ಹಿಂದೂಗಳ ಮೇಲೆ ಹೊರಿಸಲಾಗುತ್ತಿದ್ದ ಜಜಿಯಾ ತಲೆತೆರಿಗೆಯ ಚಿನ್ಹೆಯು ಅವಶೇಷವಾಗಿ ದಿಲ್ಲಿಯ ಜುಮ್ಮಾ ಮಸೀದಿಯನ್ನು ನೋಡ ಹೋಗುವ ಹಿಂದುಗಳು ಮೊನ್ನಿನವರೆಗೂ ತಲೆತೆರಿಗೆ ಕೊಡಬೇಕಾಗಿತ್ತು ಈಗ ಅಲ್ಲಿಯ ಆಡಳಿತೆದಾರರು ಆ ತೆರಿಗೆಯನ್ನು ತೆಗೆದುಹಾಕಿದ್ದಾರೆ ಮೊದಲು ಕ್ರೈಸ್ತರು ಮತ್ತು ಇತರ ಯುರೋಪಿಯಾನರು ಈ ತೆರಿಗೆ ಕೊಡಬೇಕಾಗಿಲ್ಲ, ಮಾತ್ರವಲ್ಲದೆ ಕಾಲಿಗೆ ಬೂಟ್ಸ್ ಹಾಕಿಕೊಂಡೂ ಪ್ರಾರ್ಥನಾ ಮಂದಿರದವರೆಗೂ ಹೋಗಲು ಬಿಡುತ್ತಿದ್ದರು ಆದರೆ ಈಗ ಯಾರೇ ಆಗಲಿ ಹೊರಗೆ ಪಾದರಕ್ಷೆ ತೆಗೆದಿಟ್ಟೇ ಒಳಗೆ ಪ್ರವೇಶಿಸಬೇಕೆಂಬ ನಿಯಮವಾಗಿದೆ. ಇತ್ತೀಚೆಗೆ ಭಾರತದ ಸೇನಾಪತಿ ಅಚಿನ್‌ಲೇಂಡರು ಸಂದರ್ಶನೆಗೆ ಬಂದಾಗ ಅವರೂ ಈ ನಿಯಮವನ್ನು ಪಾಲಿಸಬೇಕಾಗಿತ್ತು.

ಕಟ್ಟಡಗಳಿಗೆ ಬಣ್ಣ ಬಳಿಯುವ ವೈಶಿಷ್ಟ್ಯ

ಚೀನದಲ್ಲಿ ಹಸುರು ಬಣ್ಣ ಬಳಿದ ಕಟ್ಟಡಗಳು ಸರಕಾರಿ ಆಫೀಸುಗಳು. ಹಳದಿ ಬಣ್ಣದವುಗಳು ವ್ಯಾಪಾರ ಸಂಸ್ಥೆಗಳು, ಕೆಂಪುಬಣ್ಣದವುಗಳು ನಾಗರಿಕರ ವಾಸ್ತವ್ಯ ಗೃಹಗಳು.

ಮೈಸೂರು ರಾಜರಿಂದ ಯುದ್ಧ ಫಂಡಿಗೆ ಸಹಾಯ.

ಮೈಸೂರು ಮಹಾರಾಜರವರು ಇತ್ತೀಚೆಗೆ ಯುದ್ಧ ಸಹಾಯ ನಿಧಿಗೆ ಹತ್ತು ಲಕ್ಷ ರೂಪಾಯಿಗಳನ್ನು ಕೊಟ್ಟಿರುವರು. ಇದು ಕೂಡಿ ಅವರದು ಈ ತನಕ ಸಹಾಯಧನ ಹದಿನಾಲ್ಕು ಲಕ್ಷವಾಯಿತು, ಅಲ್ಲದೆ ಮೈಸೂರು ಮಹಾಜನರಿಂದ ಬೇರೆ ಹತ್ತು ಲಕ್ಷ ರೂಪಾಯಿಗಳ ಸಹಾಯ ದೊರಕಿದೆ.

ಇಂಡಿಯಾಕ್ಕೆ ಗೋಧಿಯ ಆಮದು

ಕಳೆದ ಆಕ್ಟೋಬರ ಅಂತ್ಯ ವಾರದಲ್ಲಿ ಇಂಡಿಯಾಕ್ಕೆ ನಾಲ್ವತ್ತೈದು ಸಾವಿರ ಟನ್ನು ಗೋಧಿಯು ಪರದೇಶಗಳಿಂದ ಬಂದು ತಲಪಿದೆಯಂತೆ, ಕಳೆದ ಎರಡು ವರುಷಗಳ ಅವಧಿಯಲ್ಲಿ ಇಷ್ಟು ಗೋಧಿಯು ಒಂದೇ ಸಲ ಬಂದುದು ಇದೇ ಮೊದಲನೆಯ ಸಲವಂತೆ.

ಯುದ್ಧವು ತೀವ್ರ ಕೊನೆಗೊಂಡು ಧಾರಣೆಗಳ ರಚನೆಯು ರೂಪಾಂತರ ಹೊಂದಬಹುದು. ಈ ಪರಿಸ್ಥಿತಿಯನ್ನು ನೀವು ಹೇಗೆ ಎದುರಿಸುವಿರಿ? ನಾವೀ ಸಲಹೆಗಳನ್ನು ನಿಮ್ಮ ಮುಂದಿಡುವೆವು

1 ನಿಮ್ಮ ಕೂಡೆ ಮಾಲುಗಳ ಅತ್ಯಧಿಕ ಸಂಚಯವಿದ್ದಲ್ಲಿ ಈಗಲೇ ಅವನ್ನು ವಿಕ್ರಯಿಸಿ ನಿಮ್ಮ ನಗದಿ ಸ್ಥಿತಿಯನ್ನು ಸ್ಥಿರಗೊಳಿಸಿರಿ ನಿಮ್ಮ ಆ ನಗದಿ ಹಣವನ್ನೆಲ್ಲಾ ಬ್ಯಾಂಕಿನ ಖಾತೆಯಲ್ಲಿರಿಸಿ ಧಾರಣೆಗಳ ಇಳಿತವನ್ನು ನಿರೀಕ್ಷಿಸಿರಿ

2 ನಿಮ್ಮ ಸಾಲಗಳನ್ನೀಗಲೇ ತೀರಿಸಿರಿ ಇಲ್ಲವಾದರೆ ಯುದ್ಧಾನಂತರದ ದಿನಗಳಲ್ಲಿ ಧಾರಣೆಗಳ ಇಳಿತದಿಂದಾಗಿ ಸಾಲಗಳನ್ನು ತೀರಿಸಲು ಬಹು ತ್ರಾಸವಾಗಬಹುದು

3 ನಿಮಗೆ ಪರರಿಂದ ಸಲ್ಲಬೇಕಾದ ಸಾಲಗಳನ್ನೀಗಲೇ ವಸೂಲು ಮಾಡಿರಿ. ಏಕೆಂದರೆ ಧಾರಣೆಗಳ ಇಳಿತದಿಂದಾಗಿ ನಿಮ್ಮ ಸಾಲಗಾರರ ನಗದಿ ಸ್ಥಿತಿಯು ಬಹಳ ದುಷ್ಕರವಾಗಿ ಹೊಂದಿ, ಅವರಿಂದ ಸಾಲಗಳನ್ನು ತೀರಿಸಲಸಾಧ್ಯವಾಗಬಹುದು

4 ನಿಮ್ಮ ಕೂಡೆ ಇರುವಂಥ ನಗದಿಯನ್ನೆಲ್ಲಾ ಇನ್ನು ಮುಂದೆ ಬರುವ ಧಾರಣೆ ಇಳಿತವಾಗುವ ದಿನಗಳಿಗಾಗಿ ಕೂಡಿಡಿ. ಧಾರಣೆಗಳ ಗತಿಯನ್ನು ಮತ್ತು ವಾಣಿಜ್ಯದ ಸಾಮಾನ್ಯ ಸ್ಥಿತಿಯನ್ನು [illegible] ಭಾವೀ ಯೋಜನೆಗಳನ್ನು ಕಲ್ಪಿಸಬಹುದು.

ನಿಮ್ಮಲ್ಲಿರುವ ನಗದಿಯನ್ನೆಲ್ಲಾ ನಮ್ಮೊಡನೆ ಖಾತೆಯಲ್ಲಿರಿಸಿರಿ ಇಲ್ಲವಾದರೆ ಪ್ರೀಮಿಯಂ ನಗಳಿಗೆ ಅಥವಾ ಸಮಾಜದ ಉತ್ತರಗಳಿಗೆ ಒಳಗಾಗುವ ಪ್ರಸಂಗ ಒದಗಬಹುದು

ಸ್ಥಾಪನೆ 1906 ಕೆನರಾ ಬೇಂಕ್ ಲಿಮಿಟೆಡ್

ESTD 1906 Canara Bank, Limited,

(Incorporated in British India with limited Liability of members limited)

ಮದ್ರಾಸು ಪ್ರಾಂತದಲ್ಲಿ ಕ್ವಿನೀನು ಹಂಚುಗೆಯ ವ್ಯವಸ್ಥೆ

೧೯೪೪-೪೫ನೆಯ ವರುಷಕ್ಕೆ ಇಂಡಿಯಾ ಸರಕಾರವು ಮದ್ರಾಸು ಪ್ರಾಂತಕ್ಕೆ ಕೊಡಲು ನಿಶ್ಚೈಸಿರುವ 86250 ಪೆಟ್ಟಿಗೆ ಕ್ವಿನೀನ್ ಇಂಜೆಕ್ಷನ್ ಎಂಪ್ಯೂಲ್ (ಸೀಸೆ) ಗಳಲ್ಲಿ 18750 ಪೆಟ್ಟಿಗೆಗಳು ಗವರ್ನಮೆಂಟ್ ಲೋಕಲ್ ಬೋರ್ಡು ಮತ್ತು ಮುನ್ಸಿಪಲ್ ಆಸ್ಪತ್ರೆಗಳಿಗೂ 15,500 ಪೆಟ್ಟಿಗೆಗಳು ಸರಕಾರದ ಆಧೀನತೆಯಲ್ಲಿರದ ಆಸ್ಪತ್ರೆಗಳಿಗೂ 1100 ಪೆಟ್ಟಿಗೆಗಳು ಖಾಸಗಿ ವೈದ್ಯಾಲಯಗಳಿಗೂ 1100 ಪೆಟ್ಟಿಗೆಗಳು ಕೊಂಡುಕೊಳ್ಳಲಪೇಕ್ಷಿಸುವ ಜನಸಾಮಾನ್ಯರಿಗೂ ಹಂಚುಗೆಯ ಪ್ರಮಾಣವನ್ನು ನಿರ್ಧರಿಸಿಯದೆ

ಲಂಡನಿನಲ್ಲಿ ಪಾಕಿಸ್ಥಾನ ವಿರೋಧ ಪರಿಷತ್ತು. ಹಲವು ಪಾರ್ಲಿಮೆಂಟು ಮೆಂಬರರು ಸಹಭಾಗಿಗಳಾಗಲಿರುವರು.

ಇದೇ ತಿಂಗಳ ತಾ. ೬ರಂದು ಬ್ರಿಟನ್ನಿನಲ್ಲಿರುವ ಭಾರತೀಯ ಕಾಂಗ್ರೆಸ್ಸಿಗರ ಸಮಿತಿಯು ಪಾಕಿಸ್ತಾನ ವಿರೋಧ ಪರಿಷತ್ತನ್ನು ಜರಗಿಸುತ್ತದೆಂದೂ ಪಾರ್ಲಿಮೆಂಟಿನ ವಿವಿಧ ಪಕ್ಷದ ಪ್ರಮುಖ ಸದಸ್ಯರು ಇದರಲ್ಲಿ ಸಹಭಾಗಿಗಳಾಗುವರೆಂದೂ ತಿಳಿದು ಬಂದಿದೆ

ಎಂಡೋಮೆಂಟ್ ಬೋರ್ಡಿಗೆ ಅಧ್ಯಕ್ಷರು

ಮದ್ರಾಸು ರಿಲೀಜಿಯಸ್ ಎಂಡೋಮೆಂಟ್ ಬೋರ್ಡಿನ ಈಗಿನ ಅಧ್ಯಕ್ಷರಾಗಿರುವ ದಿವಾನ್ ಬಹದೂರ್ ಟಿ ಎಮ್. ನಾರಾಯಣಸ್ವಾಮಿ ಪಿಳ್ಳೆಯವರು ಮದ್ರಾಸ್ ಪಬ್ಲಿಕ್ ಕಮಿಶನಿನ ಮೆಂಬರರಾಗಿ ನಿಯಮಿಸಲ್ಪಟ್ಟ ಪರಿಣಾಮದಲ್ಲಿ ಆ ಕೆಲಸಕ್ಕೆ ಹಾಜರಾಗಬೇಕಾದುದರಿಂದ ಬರಿದಾಗುವ ಎಂಡೋಮೆಂಟ್ ಬೋರ್ಡಿನ ಅಧ್ಯಕ್ಷಸ್ಥಾನಕ್ಕೆ ರಾವ್ ಬಹದೂರ್ ಟಿ ಎಮ್ ಚಿನ್ನಯ ಪಿಳ್ಳೆ ಇವರ ನೇಮಕವಾಗಿದೆ. ಇವರು ಈಗ ನೀಲಗಿರಿಯ ಪಬ್ಲಿಕ್ ಪ್ರೊಸಿಕ್ಯೂಟರ್ (ಸರಕಾರಿ ಕಡೆಯ ವಕೀಲ) ರಾಗಿರುತ್ತಾರೆ

ಮಂಗಳೂರು

ನೇಮಕ: ಮೊಕದ್ದಮೆಗಳ ಸಂಖ್ಯೆ ಬೆಳೆಯುತ್ತಿದೆ. ಇವುಗಳ ಶೀಘ್ರ ವಿಚಾರಣೆಗಾಗಿ ಪುತ್ತೂರು ತಹಶಿಲ್ದಾರ್ ಶ್ರೀ ತಿಮ್ಮಪ್ಪ ಶೆಟ್ಟಿಯವರು 1 ಕ್ಲಾಸ್ ಮೆಜಿಸ್ಟ್ರೇಟರಾಗಿ ನೇಮಕಗೊಂಡಿರುವರು

(2) ರಜೆಯಲ್ಲಿರುವ ಮಿ| ಪಳ್ಳಿ ಬ್ಯಾರಿಯವರು ಕಾರ್ಕಳ ತಹಶಿಲ್ದಾರರಾಗಿಯೂ, ಕಾರ್ಕಳ ತಹಶೀಲ್ದಾರ್ ಶ್ರೀ| ನಾರಾಯಣ ಹೆಗ್ಡೆಯವರು ಪುತ್ತೂರಿನ ತಹಶಿಲ್ದಾರರಾಗಿಯೂ ವರ್ಗಾಯಿಸಲ್ಪಟ್ಟಿರುವರು.

ಸುಳ್ಳು ಫಿರ್ಯಾದಿಗೆ ಶಿಕ್ಷೆ: ತಣ್ಣೀರುಬಾವಿ ಗ್ರಾಮದ ನಾರ್ಣಪ್ಪ ಪೂಜಾರಿ ಎಂಬವನು ಒಬ್ಬ ಪೋಲೀಸನ ಮೇಲೆ ಸುಳ್ಳು ಫಿರ್ಯಾದಿಯನ್ನು ಕೊಟ್ಟ ಅಪರಾಧಕ್ಕೆ ಸ|| ಡಿ| ಮೆ| ಕೋರ್ಟಿನಲ್ಲಿ ವಿಚಾರಣೆಯಾಗಿ, ೬ ತಿಂಗಳ ಕಠಿಣ ಸಜೆ ವಿಧಿಸಲಾಗಿದೆ

The Canara Banking Corporation Limited.
(Incorporated in British India)
Estd 1906.
Head Office: **UDIPI**, (S. K.)

ANNOUNCEMENT
A Branch of the Bank has been opened
at BOMBAY on 24-10-1944.
(1st Floor, Ready Money Mansions,
Churchgate Street, Fort.

ಉಡುಪಿ, ಗುರುವಾರ ೯-೧೧-೧೯೪೪

ಒಕ್ಕಲುತನಕ್ಕೆ ಪ್ರೋತ್ಸಾಹವೆಲ್ಲಿ?

ಒಬ್ಬೆಗ ಊರಲ್ಲಿ ಊಟಕ್ಕೆ ಅಕ್ಕಿ ಕಡಿಮೆಯಾದ ಕಾಲ. ಇದಕ್ಕಾಗಿಯೆ grow more food ಹೆಚ್ಚು ಆಹಾರ ಬೆಳೆಯಿಸಿರೆಂದು ಎಲ್ಲ ಕಡೆಯಿಂದಲೂ ಕೇಳಬರುತ್ತದೆ. ಆದರೆ ಅಕ್ಕಿ ಯಾ ಭತ್ತದ ರಿಕ್ವಿಜಿಶನಿನ ಕೇಡೊಂದು ರೀತಿನೀತಿಗಳಲ್ಲಿ ಬದಲು ನಡೆಯೂ ಕಾರ್ಯ್ಯವೂ ಇದರಿಂದ ಒಕ್ಕಲಿಗನು ಹೆಚ್ಚು ಬೆಳೆ ಬೆಳೆಯಿಸುವ ಬದಲಾಗಿ ಬೇಸಾಯದ ಕಸಬನ್ನೇ ಬಿಟ್ಟುಬಿಡೋಣ ಎನ್ನುವಷ್ಟು ನಿರುತ್ಸಾಹವು ಆತನಲ್ಲಿ ಉಂಟಾದೀತು. ಉದಾಹರಣೆಗಾಗಿ ಒಬ್ಬ ಬಡ ಒಕ್ಕಲ. ಇಂದಿನ ಪರಿಸ್ಥಿತಿಯನ್ನು ಪರಿಶೀಲಿಸೋಣ. ಆತನೇನೋ ಹತ್ತೈವತ್ತು ಎಕ್ರೆ ಗದ್ದೆಗಳನ್ನು ಗೇಣಿಗೆ ಮಾಡಿಕೊಂಡವನಲ್ಲ, ಸಾಧಾರಣ ತರದ ಒಂದು ಜೋಡು ಕೋಣಗಳಿಗೆ ಮುನ್ನೂರು ರೂಪಾಯಿ ಬೆಲೆಯಿರುವ ಈ ದಿನದಲ್ಲಿ ಅಂತಹ ಮಹತ್ವಾಕಾಂಕ್ಷೆಯೂ ಆವನಲ್ಲಿಲ್ಲ ಏನೋ ಒಂದೆರಡು ಎಕ್ರೆ ಗದ್ದೆಗಳನ್ನು ಗೇಣಿಗೆ ಮಾಡಿಕೊಂಡಿದ್ದಾನೆ. ವಿಶೇಷತಃ ಅವುಗಳಲ್ಲಿ ಎರಡನೆಯ ಭತ್ತದ ಬೆಳೆಯೂ ಆಗುವಂತಹದೂ ಇಲ್ಲ. ಒಂದೆರಡು ಗದ್ದೆಯಲ್ಲಿ ಕಬ್ಬನ್ನೋ ನೆಲಗಡಲೆಯನ್ನೋ ಗೆಣಸನ್ನೋ ಬೆಳೆಯಿಸಿದ್ದಾನೆ. ಆತನ ಧನಿಗೆಂತೂ ಹೇರಳ ಆಸ್ತಿ, ಇರುವುದರಿಂದ ಇವನು ಈ ವರೆಗೆ ಗೇಣಿ ಕೊಡುತ್ತಿದ್ದುದೆಂದರೆ ಅಕ್ಕಿ ಯಾ ಭತ್ತದ ಬದಲು ನಗದು ಹಣವೇ. ಆಚೀಚೆ ನೆರೆಹಿತ್ತಲಲ್ಲಿರುವ ಕುಟುಂಬದ ಕೆಲವು ಮಂದಿ ಪೇಟೆ ಪಟ್ಟಣಗಳಲ್ಲಿ ದುಡಿಯುತ್ತಿರುವುದರಿಂದ ಲೋಕಕ್ಕೆ ದೊರೆತ ದುಡ್ಡನ್ನು ಧನಿಗೆ ಗೇಣಿಯ ಕ್ಕಿಯ ಕ್ರಯವಾಗಿ ಕೊಟ್ಟು ತಾನು ಬೆಳೆಯಿಸಿದ ಪೈರಿನ ಫಲವನ್ನು ತಾನು ಉಣ್ಣುತ್ತಿದ್ದನು. ಇಂತಹ ಬೇಸಾಯದಿಂದ ಆತನಿಗೆ ಬೇರೇನು ಲಾಭ ದೊರೆಯದಿದ್ದರೂ ತಾನು ಬೆಳೆಯಿಸಿದ ಅಕ್ಕಿಯನ್ನು ತಾನು ಉಣ್ಣುವೆನೆಂಬ ಸಮಾಧಾನವೊಂದಾದರೂ ಈ ತನಕ ಇತ್ತು. ಈಗ ಧನಿಗೆ ಬೇಕಾದುದಕ್ಕಿಂತ ಹೆಚ್ಚಿಗೆಯಾಗಿ ಒಕ್ಕಲಲ್ಲಿರುವ ಗೇಣಿಯ ಅಕ್ಕಿಯೂ ರಿಕ್ವಿಜಿಶನ್ ಆಗಿ ಒಯ್ಯಲ್ಪಡುವುದರಿಂದ ಇಂತಹ ಬಡ ಒಕ್ಕಲುಗಳಿಗೆ ಆ ಗೇಣಿಯ ಅಕ್ಕಿಯು ಹೋದ ಮೇಲೆ ಒಂದೆರಡು ತಿಂಗಳ ಪಡಿಯೂ ಉಳಿಯುವುದಿಲ್ಲ. ಈ ಸಂಗತಿಗಳಲ್ಲಿ ಅವನಿಗೆ ಗುರುತು ಕಾರ್ಡು ಕೊಡಲಾಗುವುದೆಂದಿದ್ದರೂ ಅದೇನೂ ಧೈರ್ಯಕ್ಕೆ ದೊರಕುವಂತಹದಲ್ಲ. ದುಡ್ಡು ಕೊಟ್ಟೇ ತರಬೇಕಾದುದು. ಬದಲಾಗಿ ಆ ದುಡ್ಡನ್ನೇ ಕೊಟ್ಟು ತಾನು ಬೆಳೆಯಿಸಿದ ಅಕ್ಕಿಯನ್ನೇ ಆವನಿಟ್ಟುಕೊಂಡಲ್ಲಿ ಅವನಿಗೆ ಸಮಾಧಾನ ಹೆಚ್ಚು. ವರುಷವೆಲ್ಲ ದುಡಿದು ಬೆಳೆ ಬೆಳೆಯುವುದನ್ನು ಆಶೆಯಿಂದ ನೋಡಿದ ಅವನೂ ಅವನ ಮಕ್ಕಳೂ ಮನೆಗಳೂ ಅಂಗಳಕ್ಕೆ ಬಂದ ಬತ್ತವನ್ನು ಬಿಟ್ಟುಕೊಟ್ಟು ಪಡಿಯಕ್ಕಿಗೆ ಚೀಟಿ ಹಿಡಕೊಂಡು ಹೋಗಬೇಕೆಂದರೆ ಬೆಳೆ ಬೆಳೆಯಿಸದೆ ಬೇರೆ ಕಸಬುಗಳನ್ನು ಮಾಡುವವರ ಪಾಡೇ ಆಯಿತು. ತಾನು ಮತ್ತು ತನ್ನ ಹೆಂಡತಿ ಮಕ್ಕಳು ಚಳಿ ಮಳೆ ಬಿಸಿಲೆನ್ನದೆ ರಟ್ಟೆ ಮುರಿದು ಬೆವರಿಳಿದು ದುಡಿದು, ಬೆಳೆಯಿಸಿದ ಭತ್ತ ದುಡ್ಡು ಕೊಟ್ಟರೂ ತಮಗೆ ಬಾಯಿಗೆ ದೊರಕುವುದಿಲ್ಲವೆಂದಾದ ಮೇಲೆ ಅಂತಹ ಬೇಸಾಯ ಮಾಡಲಿಕ್ಕೆ ಯಾರಿಗೆ ಉತ್ಸಾಹವುಂಟಾದೀತು? ಗುರುತು ಕಾರ್ಡು ಕೊಟ್ಟಾದರೂ ಒಕ್ಕಲಿನ ಅಕ್ಕಿಯ ಆವಶ್ಯಕತೆಯನ್ನು ಪೂರೈಸುವ ಕರ್ತವ್ಯವಿರುವಾಗ ಆ ಒಕ್ಕಲಿನ ಹೊಟ್ಟೆಯ ಪಾಡಿಗೆ ಬೇಕಾಗುವಷ್ಟು ಅವನಿಂದ ರಿಕ್ವಿಜಿಶನ್ ಮಾಡಲ್ಪಟ್ಟಿರುವ ಅಕ್ಕಿಯಲ್ಲಿ ಬಿಟ್ಟುಕೊಟ್ಟು ಧನಿಗೆ ಹಣ ಕೊಡಿಸಿದರೆ ಕರ್ತವ್ಯ ಪಾಲನೆಯಾದಂತೆಯೂ ಆಯಿತು, ಒಕ್ಕಲಿಗೆ ತಾನು ಬೆಳೆಯಿಸಿದುದನ್ನು ದುಡ್ಡು ಕೊಟ್ಟಾದರೂ ತಾನು ದಕ್ಕಿಸಿಕೊಂಡೆನೆಂಬ ಸಮಾಧಾನವಾದಂತೂ ಆಯಿತು. ಹೀಗಾದಲ್ಲಿ ಒಕ್ಕಲಿಗೆ ಲಾಭದ ದೃಷ್ಟಿಯಿಂದಲ್ಲವಾದರೂ ತಾನು ಬೆಳೆಯಿಸಿದುದು ತನ್ನ ಮಕ್ಕಳು ಮರಿಗಳ ಬಾಯಿಗೆ ಒದಗುತ್ತದೆಂಬ ಆಸೆಯಿಂದಲಾದರೂ ಬೇಸಾಯ ಮಾಡಲಿಕ್ಕೆ ಉತ್ಸಾಹವುಂಟಾದೀತು. ಚಿಕ್ಕ ಚಿಕ್ಕ ಒಕ್ಕಲುಗಳೆಲ್ಲ ಬೇಸಾಯ ಮಾಡುವುದು ಈ ದೃಷ್ಟಿಯಿಂದಲೇ. ಅಲ್ಪಸ್ವಲ್ಪ ಗದ್ದೆಗಳನ್ನು ಗೇಣಿಗೆ ಬೇಸಾಯ ಮಾಡುವುದರಲ್ಲಿರುವ ಲಾಭವೆಂದರೆ ಈ ಆಸೆಯೊಂದೇ. ದುಡ್ಡು ಕೊಟ್ಟಾದರೂ ತಾವು ಬೆಳೆಯಿಸಿಕೊಂಡುದನ್ನು ತಾವು ಉಂಡೇವು ಎಂಬುದೊಂದು ಆಸೆಯು ಪಾಪವು ಚಿಕ್ಕ ಪುಟ್ಟ ಬಡ ಒಕ್ಕಲುಗಳನ್ನು ಬೇಸಾಯದ ಕಸುಬಿನಲ್ಲಿ ಬಿಗಿದುಹಾಕಿದೆ. ಈ ಪಾಶವು ಹರಿಯಿತೆಂದರೆ ಬೇಸಾಯದಲ್ಲಿ ನಿರಾಶೆಯೇ ಸರಿ.

ಅದು ಕಾರಣ ಒಕ್ಕಲಿನಲ್ಲಿರುವ ರಿಕ್ವಿಜಿಶನ್ ಆದ ಅಕ್ಕಿಯಲ್ಲಿ ಅವನ ಕುಟುಂಬದ ಜೀವನಕ್ಕೆ ಅತ್ಯವಶ್ಯವಾದಷ್ಟನ್ನು ಲೆಕ್ಕ ಹಾಕಿ ಬಿಟ್ಟುಕೊಟ್ಟರೆ ಅವನಿಗೆ ಬೇಸಾಯ ಮಾಡಲು ಪ್ರೋತ್ಸಾಹವುಂಟಾದೀತು. ರೈತರ ಸಂಘದವರೂ ರಿಕ್ವಿಜಿಶನಿಗೆ ಸಂಬಂಧಪಟ್ಟ ಅಧಿಕಾರಿಗಳೂ ಪರ್ಯಾಲೋಚಿಸಬೇಕಾದ ವಿಷಯವಿದು.

ಯುದ್ಧ ವಿಚಾರ.

ಯುರೋಪಿನ ಪಶ್ಚಿಮ ರಣರಂಗದಲ್ಲಿ ಜರ್ಮನಿಯು ಹೆಜ್ಜೆಹೆಜ್ಜೆಗೂ ಛಲದಿಂದ ಕಾದಾಡುತ್ತಿರುವುದರಿಂದ ಮಿತ್ರ ಪಕ್ಷಕ್ಕೆ ನಿರ್ಣಾಯಕವಾದ ವಿಜಯಗಳೇನೂ ದೊರೆತಿಲ್ಲ. ಆದರೂ ಬೆಲ್ಜಿಯಮ್ ಪ್ರದೇಶದ ಪ್ರವೇಶವು ಸಂಪೂರ್ಣವಾಗಿದೆ. ಶೆಲ್ಡ್ ನದಿ ಮುಖದ ಡಚ್ಚ ಬಂದರವೂ ಕಾರಗತವಾಗಿದೆ. ಏಂಟ್ವರ್ಪ್ ಬಂದರವು ವಶವಾಗಿದ್ದರೂ ಅಳಿವೆಯ ಬಾಗಿಲಲ್ಲಿರುವ ಶತ್ರುವು ಪರಿಪೂರ್ಣವಾಗಿ ಅಟ್ಟಲ್ಪಡದಿರುವುದರಿಂದ ಮಿತ್ರಪಕ್ಷೀಯರಿಗೆ ಆ ಬಂದರದ ಪರಮಾವಧಿ ಪ್ರಯೋಜನವು ದೊರಕಿಲ್ಲ. ಆ ಅಳಿವೆಯ ಬಾಗಿಲಲ್ಲಿರುವ ಹಲವು ಚಿಕ್ಕ ಪುಟ್ಟ ದ್ವೀಪಗಳಲ್ಲಿ ಶತ್ರುವು ಉಳಿದುಕೊಂಡಿರುವುದು ತೊಂದರೆಯಾಗಿದೆ. ಆದರೂ ವಾಲ್ಚೆರ್ ದ್ವೀಪವನ್ನು ಪ್ರವೇಶಿಸಿ ಫ್ಲಶಿಂಗ್‌ನ್ನು ಹಿಡಿದಿರುವುದರಿಂದ ಪಶ್ಚಿಮ ಕ್ಷೇತ್ರಕ್ಕೆ ಪೂರೈಕೆಯ ಮಾರ್ಗವು ತುಸು ಸುಧಾರಿಸಿಯದೆ. ಜನರಲ್ ಮೊಂಟ್ಗೊಮರಿಯೆಂಬ ಒಡೆಯ ಸಾಹಸದಿಂದ ಬೆಲ್ಜಿಯಮು ಸಾಧಾರಣ ಪರಿಪೂರ್ಣ ಮಿತ್ರರ ವಶವಾಗಿದೆ. ಹಾಲ್ಲಾಂಡಿನಲ್ಲಿ ಮಾಸ್ ನದಿಯ ತನಕ ಮುಂದೊತ್ತಿದ್ದಾರೆ. ನಾರ್ವೆಯನ್ನು ಪ್ರವೇಶಿಸಿರುವರು. ಆಚೇನ ಪ್ರಾಂತದಲ್ಲಿ ಅಮೇರಿಕಾನರ ಪ್ರಥಮ ಸೇನಾದಳವು ಹದಿನಾಲ್ಕು ಮೈಲು ಮುಂದುವರಿದಿದೆ. ಈ ಎಲ್ಲ ಕಡೆಗಳಲ್ಲಿಯೂ ಪ್ರತಿ ಹೆಜ್ಜೆ ಎಂಬಂತೆ ವೈರಿಯು ಛಲದಿಂದ ಕಾದಾಡಿಯೇ ವಿಶೇಷ ನಷ್ಟಕಷ್ಟಗಳನ್ನು ಸಹಿಸಿಯೇ ಹಿಂತೆಗೆಯುತ್ತಿದ್ದಾನೆ. ಹಿಂತಿರುಗುವಾಗ ಬಿಟ್ಟುಹೋಗುವ ಪಟ್ಟಣಗಳನ್ನು ನಾಶಮಾಡುವುದಲ್ಲದೆ ಚದರಿ ಹೋದ ತನ್ನ ಸೇನಾತಂಡಗಳಿಗೂ ತಿರುಗಿ ಸೇರಲು ಅಸಾಧ್ಯವಾಗಿ ಮಿತ್ರರ ವಶವಾಗುವ ಗಂಡಾಂತರ ಕ್ಕೀಡಾಗುತ್ತವೆ. ಹೇಗಾದರೂ ಸಹಿಸಿಕೊಂಡು ತನ್ನ ಗಡಿನಾಡಿನ ಯುದ್ಧವನ್ನು ಸಾಧ್ಯವಿದ್ದಷ್ಟು ನಿಧಾನಗೊಳಿಸಿ ಉದ್ದ ಒಳೆಯಿಸಿ ಮಿತ್ರ ಪಕ್ಷೀಯರನ್ನು ಶ್ರಮಗೊಳಿಸಬೇಕೆನ್ನುವುದೂ ತನ್ನ ನವೀನಾಸ್ತ್ರಗಳ ಸನ್ನಾಹಕ್ಕೆ ಅವಕಾಶ ದೊರೆಯಬೇಕೆನ್ನುವುದೂ ಶತ್ರುವಿನ ಈಗಿನ ಯುದ್ಧಾ ರೀತಿಯ ಧೋರಣೆಯಾಗಿದೆ. ಆದರೆ ಮಿತ್ರಪಕ್ಷೀಯರು ಆತನಿಗೆ ಅಂತಹ ಅವಕಾಶ ಸಿಗದಂತೆ ಮೇಲಿಂದ ಮೇಲೆ ಪ್ರಬಲ ಹೊಡೆತಗಳನ್ನು ಕೊಡುತ್ತಿದ್ದಾರೆ. ಅಲ್ಲದೆ ಪ್ರತಿದಿನವೆಂಬಂತೆ ಸಾವಿರಗಟ್ಟಳೆಯ ವಿಮಾನ ಪಡೆಗಳು ಜರ್ಮನಿಯ ಮೇಲೆ ಹಾರಿ ಸಮರಸನ್ನಾಹ ನಾಯಕಗಳಾದ ಕಾರ್ಖಾನೆಗಳಿರುವಲ್ಲೆಲ್ಲ ಬಾಂಬುಗಳನ್ನು ನೂರಾರು ಟನ್ನುಗಟ್ಟಳೆಯಲ್ಲಿ ಸುರಿಸಿ ಒಳನಾಡಿನಲ್ಲಿ ಭೀತಿಯನ್ನೂ ನಷ್ಟವನ್ನೂ ಉಂಟುಮಾಡುತ್ತಿದ್ದಾರೆ.

ಜನರಲ್ ಆಲೆಕ್ಸಾಂಡರರ ನೇತೃತ್ವದಲ್ಲಿ ಇಟಲಿಯಲ್ಲಿಯೂ ಜರ್ಮನ ಪಡೆಗಳು ಅರ್ಧಕ್ಕರ್ಧ ನಾಶವಾಗಿದೆ. ಅಲ್ಲಿ ಈ ತನಕ ಜರ್ಮನರ ಹದಿನೈದು ದಳಾಂಗಗಳು ಪರಿಪೂರ್ಣ ನಾಶವಾಗಿವೆ.

ಪೂರ್ವ ರಣರಂಗದಲ್ಲಿ ರಷ್ಯಾನರು ಈಗಾಗಲೇ ಬುಡಾಪೆಸ್ಟಿಗೆ ಮುಟ್ಟಿದಂತಿದೆ. ಇದು ಹಂಗೇರಿಯದ ರಾಜಧಾನಿ. ಇದರ ಸ್ವಾಧೀನತೆಯು ಮುಂದೆ ಆಸ್ಟ್ರಿಯಾದ ರಾಜಧಾನಿಯನ್ನು ವಶಪಡಿಸಿಕೊಳ್ಳುವ ಹೆದ್ದಾರಿಯಾಗುವುದು. ಅಲ್ಲದೆ ರಷ್ಯನರಿಗೆ ರಣರಂಗಕ್ಕೆ ಸಮರಸನ್ನಾಹಗಳ ಪೂರೈಕೆಗೆ ನಿರಾತಂಕವಾದ ಹಾದಿಯು ದೊರಕಿದಂತಾಗುತ್ತದೆ. ಹಂಗೇರಿಯವು ಕ್ಷಿಪ್ರದಲ್ಲೇ ಪರಿಪೂರ್ಣ ಸೋತಾಗಲೀ ಸಂಧಿಯನ್ನು ಮಾಡಿಕೊಂಡಾಗಲೀ ರಷ್ಯಾನರ ವಶವಾಗುವುದು ನಿಸ್ಸಂದೇಹ. ಕೆಳಗೆ ಗ್ರೀಸು ಬಲ್ಗೇರಿಯಾ ರುಮೇನಿಯಾ ಈ ಎಲ್ಲ ರಾಷ್ಟ್ರಗಳಿಂದಲೂ ಜರ್ಮನಿಯು ಪೂರ್ಣ ಹಿಂತೆಗೆದಿದೆ. ಇವೆಲ್ಲ ರಷ್ಯಾನರ ವಶವರ್ತಿಯಾಗಿವೆ.

ಜಪಾನ್ ಯುದ್ಧಾ ಕ್ಷೇತ್ರದಲ್ಲಿ ಪ್ರಧಾನ ರಣರಂಗವಾದ ಫಿಲಿಪ್ಪಾಯಿನ ದ್ವೀಪಗಳಲ್ಲಿ ಅಮೆರಿಕನರಿಗೆ ಮಹತ್ವಾದ ವಿಜಯವು ದೊರಕಿದೆ. ಜಪಾನರ 58 ಯುದ್ಧ ನಾವೆಗಳು ಮುಳುಗಿಸಲ್ಪಟ್ಟದು ಜಪಾನಿನ ನೌಕಾ ಬಲಕ್ಕೆ ಪ್ರಬಲ ಆಘಾತವೇ ಸರಿ. ಅದು ಕಾರಣ ಅಮೇರಿಕನರ ನೌಕೆಗಳು ಜಾಪಾನರ ಸ್ವರಕ್ಷಣೆಯ ಅಂತರ್ವಲಯದಲ್ಲಿಯೂ ಗಂಡಾಂತರದ ಭಯ ವಿಶೇಷವಿಲ್ಲದೆ ಸಂಚಾರಿಸಬಹುದಾಗಿದೆ. ಇಲ್ಲಿಯ ಅಮೇರಿಕನರ ದಳವಾಯಿ ಜನರಲ್ ಮೆಕ್ ಆರ್ಥರರ ಪಡೆಯು ದ್ವೀಪವಾಸಿಗಳ ಪ್ರೋತ್ಸಾಹದ ಹಿಂಬಲದಿಂದ ಶೀಘ್ರ ಪ್ರಗತಿಯನ್ನು ತೋರಿಸಿದೆ. ಲೇಟೆ ಮತ್ತು ಸಾಮಾರ ದ್ವೀಪಾವಳಿಗಳೆಲ್ಲ ವಶವಾಗಿವೆ.

ಚೀನಾದಲ್ಲಿ ಚಿಯಾಂಗ್ ಕೈಶೇಕರು ಚೀನೀಯ ಹಾಗೂ ಚೀನಾದಲ್ಲಿರುವ ಅಮೇರಿಕನ್ ಪಡೆಗಳ ನಾಯಕನಾಗಿದ್ದ ಜನರಲ್ ಸ್ಟಿಲ್‌ವೆಲ್ಲರೊಡನೆ ವೈಯಕ್ತಿಕಾಭಿಪ್ರಾಯ ಭೇದವುಳ್ಳವರಾಗಿ ಸ್ಟಿಲ್‌ವೆಲ್ಲರನ್ನು ಅಮೇರಿಕವು ಹಿಂದ ಕರೆಯಿಸಿಕೊಂಡು ಬೇರೆಯವರನ್ನು ನೇಮಿಸಬೇಕೆಂದು ರೂಸ್ವೆಲ್ಟರನ್ನು ಕೇಳಿಕೊಂಡುದರ ಪರಿಣಾಮವಾಗಿ ಸ್ಟಿಲ್‌ವೆಲ್ಲರೂ ಹಿಂದಕ್ಕೆ ಕರೆಯಲ್ಪಟ್ಟಿರುತ್ತಾರೆ. ಇದು ಜಪಾನರಿಗೆ ಉತ್ಸಾಹಜನಕವಾಗಿದೆ. ಅಲ್ಲಿ ಜಾಪಾನರ ಜಯಾಪಜಯಗಳು ಚಿಯಾಂಗರ ಮುಂದಿನ ಧೋರಣೆಯನ್ನು ಅಮೇರಿಕನರು ಕಳುಹಿಸುವ ಸೇನಾನಿಯ ಚಾತುರ್ಯವನ್ನು ಅವಲಂಬಿಸಿವೆ.

ಬರ್ಮಾ ಗಡಿಯಲ್ಲಿ ಎರಡು ತಿಂಗಳ ನಂತರ ಈಗ ಮಿತ್ರ ಪಕ್ಷೀಯರು ಶೀಘ್ರ ಪ್ರಗತಿಯನ್ನು ಲಕ್ಷಣವನ್ನು ತೋರುತ್ತಿದ್ದಾರೆ. ಒಂದು ಕಡೆಯಲ್ಲಿ ಮಿತ್ರಪಕ್ಷದ ಪಡೆಗಳು ಮೊಗೋಂಗ್-ಮಾಂಡಲೇ ಹಾದಿ ಹಿಡಿದು ಕಾಥಾದ ಕಡೆಗೂ ಅತ್ತ ಚೀನೀ ಸೇನೆಯು ಮಿತಿಕ್ಯಾನ-ಭಾನೋ ಹಾದಿ ಹಿಡಿದೂ ಮುಂದೊತ್ತುತ್ತಿದ್ದಾರೆ. ಅಂತೂ ಈಗ ಬರ್ಮಾದೊಳಗೆ ಮಿತ್ರಪಕ್ಷದ ಪ್ರವೇಶವು ಆಗಿದೆ. ವಿಜಯವು ದೊರೆಯುವ ಲಕ್ಷಣ ಕಾಣುತ್ತಿದೆ. ಮುಂದಿನ ಎರಡು ತಿಂಗಳ ಹೋರಾಟದಿಂದ ಈ ಜಾಪಾನಿ ಯುದ್ಧವು ಎಷ್ಟುಕಾಲ ನಡೆದೀತೆಂಬುದರ ನಿರ್ಣಯವಾಗಬೇಕಾಗಿದೆ.

ಸಿಮೆಂಟ್ ಬೇಕಾದವರು:--ತಮ್ಮ ಅರ್ಜಿಗಳನ್ನು ಸೆಂಟ್ರಲ್ ಸಿಮೆಂಟ್ ಪ್ಯಾಕಿಂಗ್ ಬೋರ್ಡು, ಬೊಂಬಾಯಿ ಇವರಿಗೆ ಆಯಾದ ಪ್ರೈಸ್ ಕಮಿಟಿಗಳ ಮೂಲಕ ಕಳುಹಿಸಿಕೊಡಬಹುದೆಂದು ಕುಂದಾಪುರ ಸಬ್ ಕಲೆಕ್ಟರ್ ಶ್ರೀ ಬಿ. ಬಿ. ಸಾಥೆಯವರು ಕುಂದಾಪುರ, ಉಡುಪಿ, ಕಾರ್ಕಳ ತಾಲೂಕುಗಳ ಪ್ರೈಸ್ ಕಂಟ್ರೋಲ ಕಮಿಟಿಗಳಿಗೆ ತಿಳಿಸುತ್ತಾರೆ.

ಬರ್ಮಾದ ಮೇಲೆ ವಿಮಾನಧಾಳಿ

ರಂಗೂನಿನ ಸಮೀಪವಿರುವ ಇನ್ಸೀನ್ ಎಂಬ ರೈಲ್ವೇ ಸಂಗಮ ಸ್ಥಾನದ ಮೇಲೆ ಯೂ ಫ್ರೆಂಚ್ ಇಂಡೋಚೀನದ ಟೋಂಕಿಂಗ್ ಕೊಲ್ಲಿಯ ಹಡಗಕಟ್ಟುವ ಲಿನ್ ಬಂದರದ ಮೇಲೂ ಮಧ್ಯ ಬರ್ಮಾದ ಜಾಪಾನೀ ವಿಮಾನ ರಾಣ್ಯಗಳ ಮೇಲೆಯೂ ಮಿತ್ರಪಕ್ಷೀಯರು ಕಳೆದ ತಾ| ೨೯ವ ತ್ತು೭ರಲ್ಲಿ ಬಾಂಬು ಸುರಿದು ಹಾವಳಿ ಮಾಡಿರುವರು.

ಅಕ್ಕಿಯ ಸ್ಪೆಶ್ಯಲ್ ಟ್ರೈನ್ ಮಲಬಾರಿಗೆ

ಪಂಜಾಬದ ಶೇಖ್ಪುರದಿಂದ ೩0,000 ಮಣ ಅಕ್ಕಿ ತುಂಬಿದ ಸ್ಪೆಶ್ಯಲ್ ರೈಲು ಬಂಡಿಯು ತಾ. ೪ರಂದು ಮಲಬಾರಿಗೆ ಹೊರಟಿದೆ. ಹೀಗೆಯೇ ಈ ಪ್ರಾಂತದ ಬೇರೆ ಬೇರೆ ಅಕ್ಕಿಯ ಕೇಂದ್ರಗಳಿಂದ ಅಕ್ಕಿಯು ಕಡಿಮೆಯಾಗಿರುವ ಕ್ಷೇತ್ರಗಳಿಗೆ ಅಕ್ಕಿತುಂಬಿದ ಸ್ಪೆಶ್ಯಲ್ ಗಾಡಿಗಳು ಸದ್ಯದಲ್ಲೇ ಬಿಡಲಾಗುವುದಂತೆ.

ಫಿಲಿಪ್ಪಾಯಿನದ ಮೆನಿಲಾದ ಮೇಲೆ ವಿಮಾನ ಧಾಳಿ.

ಅಮೇರಿಕನರ ೩00ವಿಮಾನಗಳು ಲೂಜೋನ್ ಕ್ಷೇತ್ರದಿಂದ ಹಾರಿಬಂದು ಮೆನಿಲಾದಲ್ಲಿಯ ಜಾಪಾನರ ವಿಮಾನ ಕ್ಷೇತ್ರದ ಮೇಲೆ ಬಾಂಬು ಸುರಿದು ನಷ್ಟಗೊಳಿಸಿವೆಯೆಂದು ಜಾಪಾನ್ ನ್ಯೂಸ್ ಏಜನ್ಸಿಯೇ ಹೇಳುತ್ತದೆ.

ಅಕ್ಕಿ, ಬತ್ತ ಕಳ್ಳಸಂತೆಗೆ ಹೋಗಕೂಡದು. ಜಿಲ್ಲಾ ಕಲೆಕ್ಟರರ ಪ್ರಕಟಣೆ.

ಮಹಾಜನರು ಮುಖ್ಯವಾಗಿ ಕಂಟ್ರಾಕ್ಟರರೂ, ಕೂಲಿಯಾಳುಗಳನ್ನು ಬಹು ಸಂಖ್ಯೆಯಲ್ಲಿರಿಸಿಕೊಳ್ಳುವವರೂ, ತಂಬಾಕು, ಅಡಿಕೆ, ಒಳ್ಳೆಮೆಣಸು ಇತ್ಯಾದಿ ಬೆಳೆಗಾರರು ಬೆಳೆಸುವವರೂ, ಕಾಫೀ, ನ ನಡಿಸುವವರೂ ಕಳ್ಳ ಸಂತೆಯಲ್ಲಿ ಬತ್ತ ವ ಅಕ್ಕಿಯನ್ನು ಕೊಂಡು ಕೊಂಡು ದಾಸ್ತಾನು ಮಾಡಿಡಕೂಡದು. ಹೀಗೆ ಮಾಡಿದರೆ ವರ್ತಕರಿಗೂ ಒಕ್ಕಲುಗಳಿಗೂ ಕಳ್ಳ ಸಂತೆಯ ಪಥವನ್ನು ಸ್ವಯಂ ಹೇಳಿಕೊಟ್ಟಂತಾಗಿ ಮಾರ್ಕೆಟಿಗೆ ಸ್ವಾಭಾವಿಕವಾಗಿ ಬರತಕ್ಕ ಅಕ್ಕಿ ವ ಬತ್ತವನ್ನು ತಡೆಗಟ್ಟಿದಂತೆ ಆಗುವುದು. ಇದರ ಪರಿಣಾಮದಿಂದ ಆಹಾರದ ಅಭಾವ ತಲೆದೋರಿ ಜನತೆಯಲ್ಲಿ ಅಶಾಂತಿಯುಂಟಾಗುವುದು. ಇದರ ನಿವಾರಣೆಗಾಗಿ ಇಲಾಖೆಯವರು ಮನ ಕೊಡಿಗಳನ್ನು ಜಪ್ತಿ ಮಾಡಲೇ ಬೇಕಾಗುವುದು. ಕಳ್ಳ ಸಂತೆಯನ್ನು ಪ್ರೋತ್ಸಾಹಿಸಿದ ಮತ್ತು ಕಳ್ಳ ಸಂತೆಯ ವಹಿವಾಟನ್ನು ಮಾಡಿದವರಿಗೆ ಕಠಿನ ಪ್ರಾಯಶ್ಚಿತ್ತವನ್ನು ವಿಧಿಸಲೇ ಬೇಕಾಗುವುದು. ಮಾತ್ರವಲ್ಲದೆ ಪತ್ತೆ ಹಚ್ಚಲಾದ ಕಳ್ಳ ಸಂತೆಯ ಅಕ್ಕಿ ವ ಬತ್ತಕ್ಕೆ ಮುಟ್ಟುಗೋಲು ಹಾಕಲ್ಪಟ್ಟು ಸರಕಾರದ ಸ್ವಾಧೀನಪಡಿಸಿಕೊಳ್ಳಲಾಗುವುದು. ಆದುದರಿಂದ ಮಹಾಜನರು ಅನಪೇಕ್ಷಿತ ಹವ್ಯಾಸಕ್ಕೆ ಬಲಿಬೀಳಬಾರದಾಗಿ ವಿನಂತಿ

ಉಡುಪಿಯಲ್ಲಿ ಯಕ್ಷಗಾನ ಸಂಘ ಸ್ಥಾಪನೆ: – ಹಲವು ಯಕ್ಷಗಾನ ಕಲಾಪ್ರಿಯರ ಅಪೇಕ್ಷಾನುಸಾರ ಇಲ್ಲಿಯ ಯಕ್ಷಗಾನೋತ್ಸಾಹಿಗಳಾದ ಶ್ರೀ. ಕೆ. ನಾರಾಯಣ ಶೆಟ್ಟರ ನಿಮಂತ್ರಣದಂತೆ ಉಡುಪಿ ಕುಂದಾಪುರ ಕಾರ್ಕಳ ಈ ಮೂರು ತಾಲೂಕುಗಳ ಬಡಗತಿಟ್ಟಿನ ಯಕ್ಷಗಾನ ಕಲಾಭಿವೃದ್ಧಿಯ ಸಾಧನೆಗಾಗಿ ಒಂದು ಯಕ್ಷಗಾನ ಸಂಘ ಸ್ಥಾಪನೆ ಮಾಡುವ ಉದ್ದೇಶದಿಂದ ಕಳೆದ ತಾ. ೨ರಂದು ಶ್ರೀ. ಕಲ್ಯಾಣ್ಜೀ ವೇಲ್ಜೀ ಶೇಟರ ಅಂಗಡಿಯ ಮಹಡಿಯಲ್ಲಿ ಶ್ರೀ. ಎನ್. ರಾಜಗೋಪಾಲಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಯಕ್ಷಗಾನ ಪ್ರಿಯರ ಸಭೆಗೂಡಿತು. ಶ್ರೀ. ಪೊಳ್ಳ್ಯ ದೇಜಪ್ಪ ಶೆಟ್ಟರು ಯಕ್ಷಗಾನ ಸಂಘ ಸ್ಥಾಪನೆಯ ಆವಶ್ಯಕತೆಯನ್ನೆತ್ತಿಯೂ ಶ್ರೀ ವಿದ್ವಾನ್ ಕಾಡಪ್ಪನವರು ಯಕ್ಷಗಾನ ಕಲೆಯ ಹಿಂದಿನ ಮತ್ತು ಇಂದಿನ ಪರಿಸ್ಥಿತಿಯನ್ನು ಕುರಿತೂ ಶ್ರೀ. ಕೊರಡ್ಕಲ್ ಶ್ರೀನಿವಾಸರಾಯರು ಸಾಹಿತ್ಯದಲ್ಲಿ ಯಕ್ಷಗಾನ ಕಲೆಗಿರುವ ಸ್ಥಾನವನ್ನೂ ಅದರ ಸದುಪಯೋಗದಿಂದ ಜನಸಾಮಾನ್ಯರಲ್ಲುಂಟಾಗಬಹುದಾದ ಸಾಹಿತ್ಯಾಭಿರುಚಿಯನ್ನೂ ವಿವರಿಸಿ ಭಾಷಣಗಳನ್ನಿತ್ತ ಮೇಲೆ ಅಧ್ಯಕ್ಷರು ಸಂಘಸ್ಥಾಪನೆಯ ಕ್ರಮ ನಿಯಮಗಳನ್ನೂ ಮುನ್ನಡೆಯ ರೀತಿನೀತಿಗಳನ್ನೂ ವಿವರಿಸಿ ಭಾಷಣವಿತ್ತರು. ಅನಂತರ ಸಂಘಸ್ಥಾಪನೆಯಾಗಬೇಕೆಂಬ ನಿರ್ಣಯವಾಗಿ ಭೀಷ್ಮಪರ್ವ ಎಂಬ ಯಕ್ಷಗಾನ ಕಲಾಸೇವೆ ನಡೆಯಿತು.

ಬರ್ಮಾದ ಮೇಲೆ ವಿಮಾನ ಧಾಳಿ.

ಅಕ್ಕಿ, ಬತ್ತ ಕಳ್ಳ ಸಂತೆಗೆ ಹೋಗಕೂಡದು,

ಮದ್ರಾಸು ಪ್ರಾಂತದ ಆಹಾರ ಪ್ರಶ್ನೆಯನ್ನು ಪರಿಶೀಲಿಸಿ ಮದ್ರಾಸು ಸರಕಾರವು 12ವರ್ಷಕ್ಕೆ ಮೇಲ್ಪಟ್ಟವರಿಗೆ ದಿನಕ್ಕೆ 1 ಪೌಂಡು ಅಕ್ಕಿ (ಅರ್ಧಸೇರು) ೨ ವರುಷದಿಂದ 12 ವರುಷಗಳ ವರೆಗಿನವರಿಗೆ ಒಂದು ಪಾವು ಅಕ್ಕಿಯಂತೆ ನಿರ್ಧರಿಸಿರುತ್ತದೆ. ಆದುದರಿಂದ ಕೂಲಿಕೆಲಸದವರಿಗೆ ಈ ರೇಶನಿಗಿಂತಲೂ ಜಾಸ್ತಿ ಅಕ್ಕಿ ಸಿಗಬೇಕೆಂದು ಚಳವಳಿಸವುದು ಪ್ರಯೋಜನಕಾರಿಯಾಗದು. ಜಾಸ್ತಿ ರೇಶನ್ ಕೊಟ್ಟಲ್ಲಿ ಎಂದಲ್ಲ ಒಂದು ದಿನ ಜನತೆಯು ಉಪವಾಸ ಬೀಳಬೇಕಾಗುವ ಪ್ರಸಂಗ ಬರಬಹುದು. ಇಡೀ ಜಿಲ್ಲೆಯಲ್ಲಿ ಅಪ್ರತ್ಯಕ್ಷ ರೂಪದಲ್ಲಿ ರೇಷನಿಂಗ್ ಕ್ರಮವು ಅಮಲಿನಲ್ಲಿ ಇರುವುದರಿಂದ ಮಹಾ ಜನರೆಲ್ಲರೂ ಇಲಾಖಾ ಆಫೀಸರರೊಂದಿಗೆ ಸಹಕರಿಸಬೇಕಾಗಿಯೂ ಕಳ್ಳ ಸಂತೆಯ ಮೂರಣೋಚ್ಚಾಟನ ಕಾರ್ಯದಲ್ಲಿ ಸಹಾಯವನ್ನೀಯಬೇಕಾಗಿಯೂ ಜಿಲ್ಲಾ ಕಲೆಕ್ಟರರ ಅನುಗ್ರಹಪೂರ್ವಕ ವಿನಂತಿಯಿದೆ

ರಂಗೂನಿನ ಮೇಲೆ ವಿಮಾನಧಾಳಿ.

ಅಮೇರಿಕನ್ ವಿಮಾನಗಳು ಕಳೆದ ಶುಕ್ರವಾರ ರಂಗೂನಿನಲ್ಲಿಯ ಮಲ್ಕೋನ್ ಎಂಬ ಹಡಗ ನಿರ್ಮಾಣ ಕ್ಷೇತ್ರದ ಮೇಲೆ ಬಾಂಬುಗಳನ್ನು ಸುರಿಸಿ ವಿಶೇಷ ಹಾನಿಯುಂಟು ಮಾಡಿದ. ಹಿಂದೆಂದೂ ಸುರಿಸದಷ್ಟು ಬಾಂಬುಗಳನ್ನು ಹಗಲಲ್ಲೇ ಸುರಿಸಿ ವಿಜಯಿಗಳಾಗಿ ಹಿಂತಿರುಗಿವೆ

ಫ್ಲಶಿಂಗ್ ಬಂದರು ಸ್ಥಳವು ಮುಳುಗುತ್ತಿದೆ

ಸಮುದ್ರ ಮಟ್ಟಕ್ಕಿಂತ ತಗ್ಗಿನದಾದ ಹೊಲ್ಲಾಂಡಿನ ಪ್ರಸಿದ್ಧ ಬಂದರವಾದ ಫ್ಲಶಿಂಗ್ ಬಂದರದ ಆಣೆಕಟ್ಟುಗಳ ಮೇಲೆ ಮಿತ್ರ ಪಕ್ಷದವರು ಸುರಿಸಿದ ಬಾಂಬುಗಳಿಂದಾಗಿ ಅದರಲ್ಲಿ ಬಿರುಕುಗಳುಂಟಾಗಿ ಬಂದರವು ನೀರು ಪಾಲಾಗುತ್ತಿದ.

ಕಾಂಗ್ರೆಸ್ ಕಾರ್ಯಕಾರಿ ಮಂಡಳಿಯ ಮೇಲಿನ ಆರೋಪಗಳು ನಿಷ್ಕಾರಣವಾದುವು

೧೯೪೨ರ ಆಗೋಸ್ತು ೮ರಂದು ಕಾಂಗ್ರೆಸ್ಸು ಮಹಾಸಭೆಯನ್ನು ಸೆರೆಮನೆಯಲ್ಲಿರಿಸಿದ ತನ್ನ ಕಾರ್ಯಕ್ಕೆ ಆಗಿನ ವೈಸರಾಯರಾಗಿದ್ದ ಲಾರ್ಡ್ ಲಿನ್ಲಿತ್ಗೋರವರು ಕೊಟ್ಟದ್ದ ಕಾರಣದಲ್ಲಿ ಕಾಂಗ್ರೆಸ್ಸಿಗರು ಬ್ರಿಟಿಷರ ವಿಪತ್ತಿನ ಕಾಲವನ್ನು ನೋಡಿಕೊಂಡು ದೇಶವ್ಯಾಪ್ಯವಾದ ಕ್ರಾಂತಿಯನ್ನೆಬ್ಬಿಸುವ ಚಳವಳದಲ್ಲಿ ಪ್ರವರ್ತಕರಾದುದೇ ಎಂದೂ ಇದನ್ನು ಕಾರ್ಯಕಾರಿ ಮಂಡಳಿಯು ಯಾರೂ ನಿರಾಕರಿಸಲಿಲ್ಲವೆಂದೂ ಪ್ರಪಂಚವೆಲ್ಲ ತಿಳಿದುಕೊಳ್ಳುವಂತೆ ಸಾರಿ ಹೇಳಿದ್ದರು. ಆದರೆ ಅವರ ಆರೋಪಣೆಗಳು ನಿರಾಧಾರವಾದುವುಗಳೆಂಬುದನ್ನು ಆಗಲೇ ಬಂಧನದಲ್ಲಿದ್ದ ಕಾಂಗ್ರೆಸ್ ಪ್ರೆಸಿಡೆಂಟರಾದ ಮೌಲಾನಾ ಅಬುಲ್ ಆಜಾದರೂ ಡಾ| ಸಯುದ್ ಮಹಮ್ಮದರೂ ಸೆರೆಮನೆಯಲ್ಲಿದ್ದಾಗಲೇ ದೀರ್ಘವಾದ ಪತ್ರದ ಮೂಲಕ ತಿಳಿಸಿದ್ದರೆಂದೂ ಅದನ್ನು ಮಾತ್ರ ವೈಸರಾಯರು ಗುಪ್ತವಾಗಿರಿಸಿದ್ದರೆಂದೂ ಈಗ ಸೆರೆಮನೆಯಿಂದ ಹೊರ ಬಂದಿರುವ ಡಾ| ಸಯ್ಯದರು ಪ್ರಕಟಿಸಿರುವ ಆ ಎರಡು ಪತ್ರಗಳಿಂದ ಗೊತ್ತಾಗಿದೆ.

ಗಾಂಧೀಜಿಜನ್ಮದಿನೋತ್ಸವ ಕಾಣಿಕೆಯ ಪುಸ್ತಕ– 'ಗಾಂಧೀಜಿ'

ಅಖಿಳ ಜಗತ್ತಿನ ವಿಖ್ಯಾತ ಜನರು ಗಾಂಧೀಜಿಯವರ ವಿಷಯವಾಗಿ ಬರೆದ ವಿವಿಧ ಲೇಖನಗಳನ್ನೂ ಚಿತ್ರಗಳನ್ನೂ ಒಳಗೊಂಡಿರುವ ಈ ಮಹಾ ಗ್ರಂಥವು ಇಂಗ್ಲಿಷಿನಲ್ಲಿ ಪ್ರಕಟವಾಗಿದ್ದು ಇದರ ಬೆಲೆ ೨ ರೂ. ಮಾತ್ರ. ಇದನ್ನೇ ಹುಬ್ಬಳ್ಳಿಯ ರಾಷ್ಟ್ರೀಯ ವಾಙ್ಮಯ ಪ್ರಕಾಶಮಂದಿರದವರು ಕ್ರೌನ್ ಕಾಲರ ಆಕಾರದ ೩೫೦ ಪುಟಗಳ ನೂರಾರು ಚಿತ್ರಗಳುಳ್ಳ ಕನ್ನಡ ಪುಸ್ತಕವಾಗಿ ಭಾಷಾಂತರಿಸಿ ಪ್ರಕಟಿಸಿದ್ದಾರೆ. ಇದರ ಬೆಲೆ ರೂ ೧–೮–೦ ಎಂದು ತಿಳಿದು ಬಂದಿದೆ

ಕೋತಿಗಳ ಮೇಲೆ ಆಜ್ಞೆ

ಲಕ್ನೋ ನಗರದಲ್ಲಿ ಮಂಗಗಳ ಹಾವಳಿಯು ತಡೆಯಲಾರದ ಸ್ಥಿತಿಗೆ ಒದಗಿದುದರಿಂದ ಅವನ್ನು ಹಿಡಿದು ಕೊಲ್ಲುವ ಪ್ರಯತ್ನವು ಸಫಲವಾಗದೆ ಈಗ ಅಲ್ಲಿಯ ಮುನ್ಸಿಪಾಲಿಟಿಯು ಹೊಸ ಆಜ್ಞೆ ಹೊರಡಿಸಿದೆ. ಅಲ್ಲಿ ಸುಮಾರು ಹತ್ತು ಸಾವಿರ ಕೋತಿಗಳಿವೆಯೆಂದು ಅಂದಾಜು ಮಾಡಲಾಗಿದೆ. ಯಾವುದಾದರೂ ಧರ್ಮ ಭಾವನೆಯಿಂದ ಅವುಗಳಿಗೆ ಅನ್ನವೀಯಬಾರದೆಂದೂ ಅವನ್ನು ಶತ್ರುವಿನಂತೆ ಪರಿಗಣಿಸಿ ಉಪವಾಸ ಹಾಕಿಸಿ ಸಾಯಿಸಬೇಕೆಂದೂ ಇದನ್ನು ಮೀರಿ ಅವುಗಳಿಗೆ ಯಾರಾದರೂ ಅನ್ನಾದಿಗಳನ್ನು ಕೊಟ್ಟರೆ ರೂ. ೫೦ ದಂಡ ವಿಧಿಸಲಾಗುವುದೆಂದೂ ಆಜ್ಞೆಯು ಮುನ್ಸಿಪಾಲಿಟಿಯಿಂದ ಹೊರಟಿದೆಯಂತೆ.

ಭೂಕಂಪದ ಸೂಚನೆ

ಕಳೆದ ತಾ. ೭ರಲ್ಲಿ ಬೊಂಬಾಯಿಯಿಂದ ೫೫ ಮೈಲು ದೂರದಲ್ಲಿ ಅಲ್ಪ ತರದ ಭೂಕಂಪನವಾಗಿದೆಯೆಂದು ಬೊಂಬಾಯಿಯ ಕೊಲಾಬಾದಲ್ಲಿರುವ ಭೂಕಂಪನ ಗ್ರಾಹಿಯಂತ್ರದಿಂದ ತಿಳಿದು ಬಂದಿದೆ

ಭಾರತೀಯ ವಿಜ್ಞಾನಿಯ ದುರಂತ ಮರಣ.

ಅಮೇರಿಕಾದ ಕೆಲಿಫೋರ್ನಿಯದಲ್ಲಿ ಸರ್ ನೌರೋಜ್ಜೀ ಸಕ್ಲತ್ವಾಲರ ಸಹೋದರರಾದ ಡಾ| ಕೆ. ಫೀರೋಜ್ ಸಕ್ಲತ್ವಾಲರು ಅಮೇರಿಕದ ಕೆಲಿಫೋರ್ನಿಯ ಪ್ರಾಂತದಲ್ಲಿ ವಿಮಾನ ಪ್ರಯಾಣಿಕರಾಗಿ ಪ್ರವಾಸಮಾಡುತ್ತಿದ್ದಾಗ ವಿಮಾನವು ಮುರಿದು ಬಿದ್ದ ಪ್ರಯುಕ್ತ ದುರಂತ ಮರಣಕ್ಕೀಡಾದರು. ಇವರು 1881ರಲ್ಲಿ ಬೊಂಬಾಯಿಯಲ್ಲಿ ಜನಿಸಿ ಪ್ರಸಿದ್ಧ ವಿಜ್ಞಾನಿಗಳೆನಿಸಿ 1909ರಲ್ಲಿ ಅಮೇರಿಕಕ್ಕೆ ಬಂದು ಲೋಹಕ್ಷೇತ್ರಗಳು ಮತ್ತು ಅವುಗಳಿಗೆ ಸಂಬಂಧಪಟ್ಟ ರಾಸಾಯನಿಕ ವಿಚಾರಗಳಲ್ಲಿ ಮಂತ್ರಾಲೋಚನೆ ಕೊಡುವ ಶ್ರೇಷ್ಠ ಉದ್ಯೋಗದಲ್ಲಿದ್ದರು.

ಮಿತ್ರರಿಗೆ ಮಹಾತ್ಮರ ಉತ್ತರ

ಉಪವಾಸದ ಬಗ್ಗೆ ತಾನು ದೇವರ ಪ್ರೇರಣೆಯನ್ನು ನಿರೀಕ್ಷಿಸುತ್ತಿರುವೆನೆಂದೂ ಅದು ಬಾರದಿದ್ದರೆ ಉಪವಾಸ ಕೈಗೊಳ್ಳುವ ಸಂಭವ ಇಲ್ಲವೆಂದೂ ಕಸ್ತೂರಿ ಬಾ ಸ್ಮಾರಕ ನಿಧಿ ಸಮಿತಿ ಸಭೆಗೆ ಬಂದ ಪ್ರಮುಖರಿಗೆ ಅವರು ಪ್ರಶ್ನಿಸಿದಾಗ ಗಾಂಧಿಯವರು ಉತ್ತರ ಹೇಳಿರುವರೆಂದು ತಿಳಿದು ಬರುತ್ತದೆ.

Navabharat Book Depot Udipi South India Navabharat Book Depot Udipi South India

ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು.

	ರೂ. ಆ.	ಮೂರು ಪ್ರಹಸನಗಳು	0 11	ವೀರಭೂಮಿ	0 2
ಸುಲಭದಲ್ಲಿ ಇಂಗ್ಲಿಷ್	1-1	ಸ್ವತಂತ್ರ ಜೀವನೋಪಾಯ	0-3	ವತ್ಸಲಾ	0 8
ಯುವಕರಿಗೆ ಮತ್ತು ವಯಸ್ಕರಿಗೆ		ಶ್ರಾಂತವಧು	0 4	● ಕವಿತೆಗಳು	
ಸುಲಭವಾಗಿ ಇಂಗ್ಲಿಷನ್ನು ಅನ್ಯ		ಹೆಂಡ್ತಿ ಗಂಡನಾದರೆ	0-4	ಕಾವ್ಯಸಾಮ್ರಾಜ್ಯ	0 12
ಸಹಾಯವಿಲ್ಲದೆ ಕಲಿಸುವ ಇಂಗ್ಲಿಷ್ ಸ್ವಯಂಬೋಧಿನಿ		● ಕತೆಗಳು		ವಂಗಳು	0 3
		ನಗೆನೋಟಗಳು	0 14	ಶ್ರೀಮುಖ	1-0
● ನಾಟಕಗಳು		ಅನ್ನದೇವರು		ಪುರಂದರದಾಸರ ಕೀರ್ತನೆ	1-0
ಪ್ರೇಮವಿಜಯ	0-12	ಮತ್ತು ಇತರ ಕಥೆಗಳು	1 0	ಭಗವದ್ಗೀತಾ (ಮೂಲ-ಸಿಲ್ಕ ಬೈಂಡು)	1-4
ದೇಶಭಕ್ತ	1-4	ಭಾರತೀಯ ಕತೆಗಳು	0-14		
ವ್ಯಭಿಚಾರಿಣಿ ಯಾರು	0-12	ನಂದಾದೀಪ	0 10	● ಇತರ ಪುಸ್ತಕಗಳು	
ಕಲಿವ	0-5	ನಾಡಕತೆಗಳು	0-3	ಮುಂದಿನ ದೇವರು	0 3
ಸಂಶಯ ಪಿಶಾಚಿ	0-8	ಕಂದುಕಾಣದ ಪೋಟಗಳು	0 8	ರಾಷ್ಟ್ರಭಾಷೆಯ ಇತಿಹಾಸ	2 8
ರಂಗಭೂಮಿ	0-6	ನಾರೀಹೃದಯ	0 14	ಬಾಲಮಾಧುರ್ಯ	0-3
ಪ್ರಕಾಶ	1 12	ಅಂತರಂಗದ ಕತೆಗಳು	0-10	ವಿಚಾರಂತರ	0 8
ಧರ್ಮಸಂಕಟ	0 4	ಪ್ರೇಮ ಪ್ರವಾಹ	0 6	ಸ್ತ್ರೀ ಮುಕ್ತಿ	0-8
ಆರೋಗ್ಯ ಪ್ರತಾಪ	0 12	ಆಮೆ ಇತ್ಯಾದಿ ಕತೆಗಳು	0 12	ಸೂಪಶಾಸ್ತ್ರ ಪಕ್ವಾನ್ನಗಳು	1 8
ರಂಚ ರತಿ	3 0	ಲೀಲಾಮಯಿ	0-6	ಚಿಗುರು	0 6
ಪ್ರತೀಕಾರ	0 6	● ಕಾದಂಬರಿಗಳು		ಇತರ ಪುಸ್ತಕಗಳ ಕೆಟಲಾಗಿಗೆ	
ಸೇವಾಪಥ	0-5	ಸನ್ಯಾಸಿಯ ಸೋಗಿನಲ್ಲಿ	0-8	0-2-0ಸ್ಟಾಂಪಿನೊಟ್ಟು ಬರೆಯಿರಿ	

ನವಭಾರತ ಪುಸ್ತಕ ಭಂಡಾರ, ರಿಜಿಸ್ಟರ್ಡ್ ಪಬ್ಲಿಷರ್ಸ್, ಉಡುಪಿ ದ. ಕ.

ದಕ್ಷಿಣ ಕನ್ನಡ-

ಮಂಗಳೂರು

ಕಲೆಕ್ಟರರ ಸ್ಪಷ್ಟೀಕರಣ

ಹೊಸ ಬೆಳೆಯ ಕಟಾವು, ರಿಕ್ವಿಸಿಶನ್ ಆದ ಅಂಶವನ್ನು ಅಧಿಕಾರಿಗಳಿಗೆ ಒಪ್ಪಿಸಬೇಕಾದ ಅವಧಿ ಸ್ವಂತದ ವೆಚ್ಚಕ್ಕಾಗಿ ಇಟ್ಟುಕೊಳ್ಳಬೇಕಾದ ಪ್ರಮಾಣ-ಈ ಎಲ್ಲ ವಿಷಯಗಳ ಕುರಿತು ಜಿಲ್ಲಾ ಭೂಮಾಲಿಕ ಸಂಘದವರು ಕೇಳಿದ ಇಪ್ಪತ್ತು ಪ್ರಶ್ನೆಗಳಿಗೆ ಜಿಲ್ಲಾ ಕಲೆಕ್ಟರರು ಸ್ಪಷ್ಟವಾದ ಉತ್ತರಗಳನ್ನು ಕೊಟ್ಟಿರುವರು.

ಅಕ್ಕಿಯನ್ನು ತಾನಾಗಿಯೇ ತಂದೊಪ್ಪಿಸುವದರಿಂದೇನು ಪ್ರಯೋಜನ? ಎಂಬ ಪ್ರಶ್ನೆಗೆ ಕಲೆಕ್ಟರರ ಉತ್ತರ. ಸ್ವಾಧೀನಪಡಿಸಿಕೊಂಡ ಅಕ್ಕಿಗಿಂತ ಮುಡಿಯಲ್ಲಿ ಒಂದು ರೂ. ಹೆಚ್ಚು ತಾನಾಗಿ ಒಪ್ಪಿಸಿದ ರೈತನಿಗೆ ಸಿಗುವುದು. ಆದರೆ ಹೆಚ್ಚು ಸಂಖ್ಯೆಯಲ್ಲಿ ರೈತರು ತಾವಾಗಿಯೇ ಒಪ್ಪಿಸದಿದ್ದರೆ ಮೇಲಿನ ಹೆಚ್ಚು ಕೊಡುವ ವ್ಯವಸ್ಥೆಯನ್ನು ಕಲೆಕ್ಟರರು ತೆಗೆದುಹಾಕುವರು. ಸ್ವಂತವಾಗಿ ಒಪ್ಪಿಸುವದು ಕೂಡ ನಿಶ್ಚಿತ ಅವಧಿಯೊಳಗಾಗಿರದಿದ್ದರೆ ಹೆಚ್ಚು ಹಣ ಸಿಗದು.

ಹಾಗೆ ಅಕ್ಕಿ ಒಪ್ಪಿಸುವ ಅವಧಿಗಳು ಯಾವುವು? ಎಂಬ ಪ್ರಶ್ನೆಗೆ ಉತ್ತರ- ಮೊದಲ ಬೆಳೆಯನ್ನು ಒಪ್ಪಿಸುವ ಅವಧಿಗಳನ್ನು ನಿರ್ಧರಿಸಿದ್ದೇವೆ. ಬತ್ತವಾದರೆ, ಪೂರ್ಣ ಅಂಶವನ್ನು ೧೫-೧೧ ೪೪ರೊಳಗೆ ಒಪ್ಪಿಸಬೇಕು ಅಕ್ಕಿಯಾದರೆ ೫ನೇ ೧ಅಂಶವನ್ನು ೩೦-೧೧-೪೪ರೊಳಗೆ, ೫ನೇ ೨ ಅಂಶವನ್ನು ೩೧-೧೨-೪೪ರೊಳಗೆ ಮತ್ತು ಉಳಿದ ೫ನೇ ೨ಅಂಶವನ್ನು ೩೧-೧-೪೫ರೊಳಗೆ ಒಪ್ಪಿಸಬೇಕು.

ಕೆಲವೆಡೆಗಳಲ್ಲಿ ಎರಡನೆ ಬೆಳೆಗೂ ನೀರೆತ್ತಬೇಕಾಗವುದಿದೆ, ಅಂತಹ ಪ್ರದೇಶಗಳಲ್ಲಿ ಎಕ್ರೆಗೆ ಮೂರು ಮುಡಿಯಂತೆ ಖರ್ಚು ಸಾಲದು. ಹೆಚ್ಚು ಯಾರೊಡನೆ ಕೇಳಬೇಕು? ಎಂಬ ಪ್ರಶ್ನೆಗೆ ಮೂರು ಮುಡಿಯೆಂಬುದೆ ಎಲ್ಲಾ ದುಡಿತಕ್ಕೂ ಮಜೂರಿ ಕೊಟ್ಟಿರುವ ಸಂದರ್ಭದಲ್ಲಿ ಕೊಡಲಾಗುವ ಅತಿ ಹೆಚ್ಚು ಅಕ್ಕಿ. ಹೊರಗಿನ ಕೂಲಿಗಳನ್ನು ದುಡಿಸದ ರೈತರ ವಿಷಯದಲ್ಲಾದರೆ ಅವರಿಗೆ ನಿಜಕ್ಕೂ ಬೇಳುವ ಖರ್ಚಿನ ಅಕ್ಕಿ ಮಾತ್ರ ಸಿಗುವುದು. ಅತಿ ನೆಟ್ಟಿಂಗರೆ ಮೂರು ಮುಡಿಯೆಂದು ಲೆಕ್ಕಹಿಡಿದು ಮೇಲಿನ ಖರ್ಚನ್ನು ಅಂದಾಜು ಹಾಕಲಾಗುವುದು. ಹೆಚ್ಚಿಗೆ ಬೇಕಾಗಿದ್ದರೆ ಅಕ್ಕಿ ಕೊಂಡುಕೊಳ್ಳುವ ಅಧಿಕಾರವು ನಿರಾಕರಿಸುವರು.

ಸಾಮಾನ್ಯವಾಗಿ ಯಾರಾದರೂ ಒಂದೇ ಬೆಳೆ ಬೆಳೆಸುವ ಗದ್ದೆಗಳಲ್ಲಿ ಎರಡನೆ ಇಲ್ಲವೆ ಮೂರನೆ ಬೆಳೆ ಬೆಳೆದರೂ ಹೆಚ್ಚು ಆಹಾರದ ಉತ್ಪತ್ತಿ ಆಗಬೇಕೆಂಬುದರಿಂದ, ಆ ಅಕ್ಕಿಯನ್ನು ರಿಕ್ವಿಸಿಶನ್ ಮಾಡುವುದಿಲ್ಲವೆಂದು ಕಲೆಕ್ಟರರು ತಿಳಿಸಿರುವರು.

ಬತ್ತವನ್ನು ಅಕ್ಕಿಯಾಗಿ ಮಾರ್ಪಡಿಸುವ ಅಳತೆ ಯಾವುದು ಎಂಬ ಪ್ರಶ್ನೆಗೆ ಕಲೆಕ್ಟರರು ಕೊಟ್ಟಿರುವ ಉತ್ತರವಿದು: ಸ್ವಾಧೀನಪಡಿಸಿಕೊಂಡುದಾದರೆ ಒಂದು ಮುಡಿ ಅಕ್ಕಿಗೆ ೬||(?) ಕಳಸಿಗೆ ಬತ್ತ; ತಾವಾಗಿಯೇ ಒಪ್ಪಿಸಿದರೆ ೬ (?) ಕಳಸಿಗೆ ಬತ್ತಕ್ಕೆ ಒಂದು ಮುಡಿ ಅಕ್ಕಿ.

ಹಳ್ಳಿಗಳಲ್ಲಿ ವಾರದಲ್ಲಿ ಐದು ದಿನ ಅಕ್ಕಿ ಹಂಚುವ ಏರ್ಪಾಡನ್ನು ಕಲೆಕ್ಟರರು ಮಾಡುವರೆಂದು ಗೊತ್ತಾಗಿದೆ. ತಾ ೪ರಂದು, ಕಾಸರಗೋಡು ತಾಲೂಕು ರೈತರ ಸಂಘದ ಕಾರ್ಯದರ್ಶಿಯೂ ಜಿಲ್ಲಾ ಆಹಾರ ಸಮಿತಿಯ ಸದಸ್ಯರೂ ಆದ ಶ್ರೀ|| ಪಿ. ಅಂಬು ನಾಯರರು ಕಲೆಕ್ಟರರನ್ನು ಕಂಡು 'ವಾರದಲ್ಲಿ ಕೊಡಲಾಗುತ್ತಿರುವ ಮೂರು ದಿನಗಳ ಅಕ್ಕಿ ಎಷ್ಟೂ ಸಾಲದು; ಉಳಿದ ದಿನಗಳಲ್ಲಿ ಕೊಡಲಾಗುತ್ತಿರುವ ಧಾನ್ಯಗಳನ್ನು ಯಾರೂ ತಿನ್ನುವಂತಿಲ್ಲ' ಎಂದು ಮೊದಲಾದ ತನ್ನ ಪ್ರದೇಶದ ಜನರ ಸಂಕಷ್ಟಗಳನ್ನು ತಿಳಿಸಿದರು. 'ಇನ್ನು ಮುಂದೆ ಆಯಾ ಸ್ಥಳದ ಅಕ್ಕಿ ಸಂಗ್ರಹವನ್ನು ಅನುಸರಿಸಿ ವಾರದಲ್ಲಿ ನಾಲ್ಕು ದಿನಗಳಿಗೆ ಕಡಿಮೆಯಾಗದಂತೆ ಐದು ದಿನಗಳಿಗೆ ಹೆಚ್ಚಾಗದಂತೆ ಅಕ್ಕಿ ಹಂಚುವುದಕ್ಕೂ ಉಳಿದ ದಿನಗಳಲ್ಲಿ ಇತರ ಧಾನ್ಯಗಳನ್ನು ಕೊಡುವುದಕ್ಕೂ ಆಜ್ಞಾಪಿಸುವೆನು' ಎಂದು ಕಲೆಕ್ಟರರು ಆಶ್ವಾಸನೆ ಕೊಟ್ಟರು.

ಪಂಡಿತ ತಾರಾನಾಥರ ದಿನವು ಮಂಗಳವಾರ ಸಂಜೆ ಕೇಂದ್ರ ಮೈದಾನಿನಲ್ಲಿ ಆಚರಿಸಲ್ಪಟ್ಟಿತು. ದಿವಂಗತರ ಶಿಷ್ಯರಾಗಿದ್ದ ಡಾ| ಎಂ. ಆರ್ ಭಟ್ಟರು ಅಧ್ಯಕ್ಷತೆ ವಹಿಸಿದ್ದರು. ಶ್ರೀ. ಕೆ ಕೃಷ್ಣರಾವ್ ಮತ್ತು ತಾರಾನಾಥರ ಶಿಷ್ಯರಾಗಿದ್ದ ಡಾ. ಎಫ್. ಎಚ್. ಒಡೆಯರ್ ಇವರು ದಿವಂಗತರ ಜೀವನದ ಕುರಿತು ಭಾಷಣಗಳನ್ನಿತ್ತರು.

ಕಾಮನ್‌ವೆಲ್ತ್-ಫ್ಯಾಕ್ಟರಿಗಳ ಮಂಗಳೂರು ಅಸಿಸ್ಟೆಂಟ್ ಜನರಲ್ ಮೆನೇಜರ್ ಮಿ| ಎ| ಎಫ್. ಎಚ್. ಗನ್ನರು ತಾ ೬ರಂದು ಸ್ವಲ್ಪ ಕಾಲದ ಅಸ್ವಾಸ್ಥ್ಯದ ಬಳಿಕ ಚಿಕ್ಕ ವಯಸ್ಸಿನಲ್ಲಿ ನಿಧನ ಹೊಂದಿದರೆಂದು ತಿಳಿಸಲು ವಿಷಾದವೆನಿಸುತ್ತದೆ. ದುಃಖಸೂಚಕಾರ್ಥ ಮರುದಿನ ನಗರದ ಹಂಚಿನ ಕಾರ್ಖಾನೆಗಳೆಲ್ಲ ಮುಚ್ಚಲ್ಪಟ್ಟಿದ್ದುವು

ಸೆಶನ್ಸ್ ಮತ್ತು ಜಿಲ್ಲಾ- ನ್ಯಾಯಾಧೀಶರಾಗಿ ಮಿ| ಎಂ. ಬಿ ಸಿ ಕೋಮನ್ ಐ ಸಿ ಎಸ್, ಅವರು ಪುನಃ ಅಧಿಕಾರ ವಹಿಸುವರು.

ಕದ್ದಿಯ ರೊಟ್ಟಿ ಮತ್ತು ಬಿಸ್ಕೂಟು ವ್ಯಾಪಾರಿಯೊಬ್ಬರು ರೂ ೩೩೦ರಷ್ಟು ಚಿಲ್ಲರೆ ನಾಣ್ಯಗಳನ್ನಿಟ್ಟೆಂಬ ಆರೋಪದ ಮೇಲೆ, ೨೦ ರೂಗಳ ಜುಲ್ಮಾನೆಗೆ ಗುರಿಯಾಗಿರುವರು.

ಅ. ಭಾರತ ಟ್ರೇಡ್ ಯೂನಿಯನ್ ಕಾಂಗ್ರೆಸ್ ದಿನವು ತಾ, ೩ರಂದು ಡಾ|ಎಂ. ಆರ್. ಭಟ್ಟರ ಅಧ್ಯಕ್ಷತೆಯಲ್ಲಿ ಕೇಂದ್ರ ಮೈದಾನಿನಲ್ಲಿ ಆಚರಿಸಲ್ಪಟ್ಟಿತು, ನೇಕಾರರ ಸಂಘದ ಶ್ರೀ. ಸಿಂಪ್ಸನ್ ಸೋನ್ಸ್, ಬೀಡಿ ಮಜೂರರ ಸಂಘದ ಶ್ರೀ|| ಲಿಂಗಪ್ಪ ಸುವರ್ಣ, ಪ್ರೆಸ್ ಕೆಲಸಗಾರರ ಸಂಘದ ಶ್ರೀ|| ನಾರಾಯಣ ಶೆಟ್ಟಿ ಮತ್ತು ಶ್ರೀನಿವಾಸ, ಶ್ರೀಯುತರು ಎ ಶಾಂತಾರಾಮ ಪೈ ಮತ್ತು ಕುಳಕುಂದ ಶಿವರಾಯ ಇವರು ಮಜೂರ ಸಂಘಟನೆಗಳ ಧೋರಣೆಯ ಕುರಿತು ಮಾತನಾಡಿದರು. ಅಧ್ಯಕ್ಷರು ಮಜೂರರದು ಬಹು ಸಂಖ್ಯಾಕರಿಗಾಗಿ, ದೇಶ ಮತ್ತು ಸಮಾಜಕ್ಕಾಗಿ ಇರುವ ಧಾರ್ಮಿಕ ಹೋರಾಟ'ವೆಂದು ಭಾಷಣದ ಹೇಳಿದರು

ಶ್ರೀ ಕಾಶಿ ಮಠಾಧೀಶ- ಶ್ರೀಮತ್ ಸುಕೃತೀಂದ್ರ ತೀರ್ಥ ಸ್ವಾಮಿಜಿಯವರ ಶಿಷ್ಯ ಶ್ರೀ ಸುಧೀಂದ್ರ ತೀರ್ಥರವರು ತಾ. ೬ರಂದು ಮೂಲ್ಕಿಯಿಂದ ಮಂಗಳೂರಿಗೆ ಬಂದು ವಿಠೋಬ ದೇವಸ್ಥಾನದ ಭಜನಾ ಸಪ್ತಾಹದಲ್ಲಿ ಭಾಗವಹಿಸಿ ಅದೇ ದಿನ ಹಿಂದಿರುಗಿದರು.

ನಿಧನ- ಬಂದರ ಮನೆಯ ತಿಮ್ಮಪ್ಪಯ್ಯನವರ ಧರ್ಮಪತ್ನಿ ಶ್ರೀಮತಿ ದೇವಕಿ ಅಮ್ಮನವರು ಕೆಲಕಾಲದಿಂದ ಅಸ್ವಸ್ಥರಾಗಿದ್ದು ಇತ್ತೀಚೆಗೆ ನಿಧನ ಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ.

ಮಕ್ಕಳ ಸಮ್ಮೇಳನವನ್ನು ಜನವರಿಯಲ್ಲಿ ಜರಗಿಸುವುದಕ್ಕಾಗಿ ಕೆನರಾ ಹೈಸ್ಕೂಲಿನ ವಿದ್ಯಾರ್ಥಿ ಶ್ರೀ|| ಎಚ್. ನಾರಾಯಣರಾವ್ ಇವರ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯೊಂದು ಗುರುವಾರ ಸಂಜೆ ಕೆನರಾ ಹೈಸ್ಕೂಲಿನಲ್ಲಿ ಜರಗಿದ ನಗರದ ವಿವಿಧ ಶಾಲೆಗಳ ಮಕ್ಕಳ ಸಭೆಯಲ್ಲಿ ಆರಿಸಲ್ಪಟ್ಟಿತು. ಕದ್ರಿ ವಿದ್ಯಾ ಬೋಧಿನಿ ಶಾಲೆಯ ಮಕ್ಕಳು ಮೆರವಣಿಗೆಯಲ್ಲಿ ಬಂದಿದ್ದರು. ಶ್ರೀ ವಿಷ್ಣುಮೂರ್ತಿ ಉಪಾಧ್ಯಾಯರು ಆ ದಿನದ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ರೈಲಿನಡಿಗೆ-ಆಕಸ್ಮಿಕವಾಗಿ ಬಿದ್ದು ಮಿಶನ್ ಹೈಸ್ಕೂಲಿನ ಫಿಫ್ತ್ ಫಾರಂ ವಿದ್ಯಾರ್ಥಿ ಅಹಮ್ಮದ್ ಯು. ಎ. ಎಂಬವರು ನಿಧನ ಹೊಂದಿದುದಕ್ಕಾಗಿ ಶಾಲೆಯು ಗುರುವಾರ ದಿನ ಮುಚ್ಚಲ್ಪಟ್ಟಿತು ಆ ದಿನ ಬೆಳಿಗ್ಗೆ ರೈಲು ಮಂಗಳೂರಿಗೆ ಬರುತ್ತಿದ್ದಾಗ ಉಳ್ಳಾಲ ಸೇತುವೆಯ ಬಳಿ ಈ ದುರ್ಘಟನೆಯಾಯಿತು.

ಭಗಿನಿ ಸಮಾಜದ ಆಶ್ರಯದಲ್ಲಿ ಮಂಗಳೂರಿನ ಮಹಿಳೆಯರ ಸಭೆಯೊಂದು ಬೆಸೆಂಟ್ ಶಾಲೆಯಲ್ಲಿ ಗುರುವಾರ ಸಂಜೆ ಮಿಸೆಸ್ ಬಾಕಾಟೀರ ಅಧ್ಯಕ್ಷತೆಯಲ್ಲಿ ಜರಗಿತು. ಮದ್ರಾಸಿನಿಂದ ಬಂದಿದ್ದ ಸ್ತ್ರೀಸದನದ ಸುಪರಿಂಟೆಂಡೆಂಟ ಶ್ರೀಮತಿ ಕೆ. ಟಿ. ಲಕ್ಷ್ಮಿ ಅವರು ಅನೀತಿ ವ್ಯಾಪಾರವನ್ನು ತಡೆಗಟ್ಟಲು ಮಹಿಳೆಯರು ಯತ್ನಿಸಬೇಕೆಂದರು. ಅತಿಥಿ ಭಾಷಣವಿತ್ತರು. ಶ್ರೀಮತಿ ಲೀಲಾ ಬಾಯಿ. ಎಕಾಂಬರ ರಾಯರ ಭಾಷಣ ಕರ್ತೆಯ ಪರಿಚಯಮಾಡಿ ಕೊಟ್ಟರು ಕೊನೆಯಲ್ಲಿ ಭಗಿನಿ ಸಮಾಜದ ಕಾರ್ಯದರ್ಶಿನಿ ಶ್ರೀಮತಿ ಲಲಿತಾಬಾಯಿಯರು ವಂದನೆಗಳನ್ನರ್ಪಿಸಿದರು

ರಿಕ್ವಿಸಿಶನ್ ಆದ ಬತ್ತವನ್ನು- ನವಂಬರ ೧೫ರ ಒಳಗೆ ಕೊಡಬೇಕೆಂದು ಈಗ ನಿಯಮವಿದೆ. ಆದರೆ ಮಳೆಯ ದೆಸೆಯಿಂದಾಗಿ ಬತ್ತ ಒಣಗದ ಈಗ ದಾಸ್ತಾನ ಮಾಡಿದಲ್ಲಿ ಬತ್ತ ಕೆಡಬಹುದೀತು, ಈ ವಿಷಯವನ್ನು ಕಲೆಕ್ಟರ ಗಮನಕ್ಕೆ ತರಲಾಗಿದೆ. ಮತ್ತು ಒಣಗುವ ವರೆಗೆ ಸಮಯ ಕೊಡುವಂತೆ ಅಧಿಕಾರಿಗೆ ತಿಳಿಸಲು ವಿನಂತಿಸಿಕೊಳ್ಳಲಾಗಿದೆ, ಎಂದು ಅ- ಬೇ- ಸಂಘದ ಕಾರ್ಯದರ್ಶಿಗಳು ತಿಳಿಸುತ್ತಾರೆ

ಸಿವಿಲ್ ಸಪ್ಲೈಸಿನ ಸಹಾಯಕ ಕಂಟ್ರೋಲರ್ ಜನರಲ್ ದಿ. ಬ ನಾರಾಯಣನ್ ನಾಯರರು ಮಂಗಳೂರಿಗೆ ಬಂದಿದ್ದು ಶುಕ್ರವಾರ ಸಾಯಂಕಾಲ ಕೆನರಾ ವಾಣಿಜ್ಯ ಸಂಘದ ಸಭೆಯಲ್ಲಿ ಭಾಗವಹಿಸಿದರು. ದಾಸ್ತಾನ ಗಾರಿಕೆ ಮತ್ತು ಲಾಭಬಡುಕತನಗಳಿಗೆ ಸಂಬಂಧಿಸಿದ ಕಾನೂನನ್ನು ಮತ್ತು ಇತರ ವಾಣಿಜ್ಯ ಸಮಸ್ಯೆಗಳ ಕುರಿತು ಚೇಂಬರಿನಲ್ಲಿ ವಿಚಾರವಿನಿಮಯ ನಡೆಯಿತು.

ಜುಲ್ಮಾನೆ ತಗ್ಗಿತು-ಇಲ್ಲಿಯ ಮೂವರು ಜವುಳಿ ವ್ಯಾಪಾರಸ್ಥರಿಗೆ ಬಟ್ಟೆ ಸಂಬಂಧದ ಕಾನೂನು ಮೀರಿದರೆಂದು ತಲಾ ಒಂದರ ೪೫೦ ರೂ ಮಾಯಿ ಪ್ರಕಾರ ಜುಲ್ಮಾನೆ ವಿಧಿಸಿದ್ದನ್ನು ನವ್ಯ ಡಿ| ಮತ್ತು ಸೆ ಜಡ್ಜ ಮಿ| ಎಮ್- ಸಿ. ಬಿ. ಕೋಮನ್, ಐ ಸಿ. ಎಸ್.,ರವರು ಈ ಜುಲ್ಮಾನೆಯನ್ನು ರೂ ೪೫೦ರಿಂದ ರೂ. ೧೫ಕ್ಕೆ ತಗ್ಗಿಸಿರುವರೆಂದು ತಿಳಿದುಬರುತ್ತದೆ.

ಭಾಷಣ:—ಪ್ರಾಂತಿಕ ಮಹಿಳಾ ಕ್ಷೇಮ ಚಿಂತನೆಯ ಕೆಲಸಗಾರರೂ ಮದ್ರಾಸಿನ ಸ್ತ್ರೀ ಸದನದ ಕಾರ್ಯದರ್ಶಿನಿಯೂ ಆಗಿರುವ ಶ್ರೀಮತಿ ಎ. ಟಿ. ಲಕ್ಷ್ಮಿ ಅವರು ಕಳೆದ ತಾ. 2ರಂದು ಸಂಜೆ ಸ್ಥಳೀಯ 'ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆ'ಯಲ್ಲಿ ಭಾಷಣಮಾಡಿದರು.

ಕಲ್ಲು ಸಕ್ಕರೆ ಬೂರಾ—ಸಕ್ಕರೆಗಳ ಕ್ರಯ ನಿಶ್ಚಯ:—ಡಿಫೆನ್ಸ್ ಒಫ್ ಇಂಡಿಯಾ ಸೂತ್ರಗಳ ಅನ್ವಯ ಮಾನ್ಯ ಜಿಲ್ಲಾ ಕಲೆಕ್ಟರ್‌ರವರು ಕಲ್ಲು ಸಕ್ಕರೆ ಮತ್ತು ಬೂರಾ ಸಕ್ಕರೆಗಳಿಗೆ ನಿಶ್ಚಿತ ಬೆಲೆಯನ್ನು ಈ ರೀತಿ ಯಾಗಿ ಗೊತ್ತುಪಡಿಸಿದ್ದಾರೆ.

ಕಲ್ಲು ಸಕ್ಕರೆ ಕ್ರಯ ಮಂಗಳೂರುನಗರ- ನಂಬ್ರ1 82 7ನೇ 2ರಾತಲಿನ ಗೋಣಿಯ ಅತ್ಯಧಿಕ ರಖಮ್ ಮಾರಾಟದ ಕ್ರಯ ರೂ 25-15-0, ನಂಬ್ರ (2) ಅಷ್ಟೇ ತೂಕದ ಗೋಣಿಯ ಚಿಲ್ಲರೆ ಮಾರಾಟದ ಕ್ರಯ ರೂ. 26-11-0; ನಂಬ್ರ (3) 1 ರಾತಲಿಗೆ ಕ್ರಯ 0-5-4. ಮಂಗಳೂರು ತಾಲೂಕಿನ ಮೂಲ್ಕಿ, ಬಂಟ್ವಾಳ-ನಂಬ್ರ (1) ರೂ 26-11-0; ನಂಬ್ರ (2) ರೂ 27-3-0, ನಂಬ್ರ (3) 0-5-5. ಪುತ್ತೂರು-ನಂಬ್ರ (1) ರೂ. 27 3 0; ನಂಬ್ರ (2) ರೂ 27-15-0; ನಂಬ್ರ (3) 0-5 7 ಕಾಸರಗೋಡು-ನಂಬ್ರ (1) ರೂ. 26-7-0, ನಂಬ್ರ (2) ರೂ. 27-3-0 ; ನಂಬ್ರ (3) 0-5-5. ಕಾರ್ಕಳ- ನಂಬ್ರ (1) ರೂ. 27-3 0; ನಂಬ್ರ (2) 27-15-0, ನಂಬ್ರ (3) 0 5-7 ಕುಂದಾಪುರ- 1. ರೂ 27-15-0, 2. ರೂ, 28-11 0; 3- 0 5-9 ಉಡುಪಿ- 1. ರೂ. 27-9-0; 2. ರೂ. 28 5 0; 3- 0-5-8

ಬೂರಾ ಸಕ್ಕರೆ ಕ್ರಯ. ಮಂಗಳೂರು-1. ರೂ, 22-11 0, 2. ರೂ. 23-7-0; 3. 0-4-8. ಮಂಗಳೂರು ತಾಲೂಕಿನ ಮೂಲ್ಕಿ, ಬಂಟ್ವಾಳ- 1 ರೂ 23-7 0, 2 ರೂ 23-15-0- 3 0 4-9 ಪುತ್ತೂರು 1 ರೂ 23 15-0- 2 ರೂ. 24-11-0; 3 0 4 11. ಕಾಸರಗೋಡು-1 ರೂ 23-3-0, 2 ರೂ 23-15-0· 3 0-4-9 ಕಾರ್ಕಳ-1 ರೂ 23-15-0, 2 ರೂ 24-11-0; 3 0-4 11· ಕುಂದಾಪುರ 1 ರೂ 24-11 0; 2 ರೂ 25 7 0, 3 0-5-1· ಉಡುಪಿ-1 ರೂ 24-5-0; 2 ರೂ 25-1-0; 3 0 5-0-

ಪುತ್ತೂರು.

ಜನತಾ ಸಮ್ಮೇಳನ-ಶ್ರೀ ಎನ್. ಶಂಕರ ಭಟ್ ಇವರ ಅಧ್ಯಕ್ಷತೆಯಲ್ಲಿ ಪುತ್ತೂರು ಜನತಾ ಸಮ್ಮೇಳನವು ತಾ ೪ರಂದು ಜರಗಿತು. ಶ್ರೀ. ಬಿ ಕೃಷ್ಣಭಟ್ ಮತ್ತು ಜ. ಕೆ. ಶೆಟ್ಟಿಯಾರ್ ಇವರು ಕ್ರಮವಾಗಿ ಕನ್ನಡ ಮತ್ತು ತುಳುವಿನಲ್ಲಿ ಸ್ವಾತಂತ್ರ್ಯದ ಕುರಿತೂ, ಪರದೇಶೀ ಹಾಗೂ ದೇಶಿ ಬಂಡವಾಳಶಾಹೀ ಮತ್ತು ಸಾಮಂತಶಾಹಿಗಳ ದಬ್ಬಾಳಿಕೆಯ ಕುರಿತೂ, ಭಾಷಣ ಮಾಡಿದರು. ಬೆಳ್ಳಾರೆ ಉಪ್ಪಿನಂಗಡಿ ಮಂಗಳೂರು, ವಿಟ್ಲ, ಕಬಕ ಮೊದಲಾದ ಕಡೆಗಳಿಂದ ಪ್ರತಿನಿಧಿಗಳು ನೆರೆದಿದ್ದರು.

ಶ್ರೀ ರಾಮಕೃಷ್ಣ ಥಿಯೇಟರ್
ಲಿಮಿಟೆಡ್, ಉಡುಪಿ.
ನವಂಬರ್ ತಿಂಗಳಲ್ಲಿ 9-11-44ರಿಂದ
ಸ್ವಾಮಿನಾಥ
ಪ್ರೇಮ ಅದಿಬ್ ಮತ್ತು ಶೋಭನಾ ಸಮರ್ಥ

15-11-44ರಿಂದ
ಪಾಂಚೋಳಿ ಚಿತ್ರ
ಪೂಂಜಿ



22-11-44ರಿಂದ
ಕರ್ದಾರ್ ಚಿತ್ರ
ಶಾರದಾ

WANTED

Wanted a Secondary Grade Trained teacher (male or female) on permanent lien.

Please apply to-

The Manager,
Aided Higher Elementary School,
Kemmannu, S. K.

ದಕ್ಷಿಣ ಕನ್ನಡ.

ಉಡುಪಿ

ಇಲ್ಲಿಯ ಕರ್ನಾಟಕ ಸಂಘದ ಕಾರ್ಯನಿರ್ವಾಹಕ ಸಮಿತಿಯ ಸಭೆಯು ಕಳೆದ ತಾ ೩೦ರಲ್ಲಿ ಜರಗಿತು. ಅದು ಇತ್ತೀಚೆಗೆ ಏರ್ಪಡಿಸಿದ್ದ ಸಾಹಿತ್ಯೋತ್ಸವದ ಬಗ್ಗೆ ಮಾಡಿದ ಜಮಾ ಖರ್ಚುಗಳನ್ನು ಪರಿಶೀಲಿಸಿ, ಜಮಾ ಬಂದಿದ್ದ ರೂ 341—12—0ಯಲ್ಲಿ ವೆಚ್ಚವಾದ ರೂ 287—6—6ಯನ್ನು ಮಂಜೂರು ಮಾಡಿತು. ಜಮಾ ಖರ್ಚುಗಳ ವಿವರ ಪಟ್ಟಿಯನ್ನು ಛಾಪಿಸಿ ಸಾಹಿತ್ಯೋತ್ಸವಕ್ಕೆ ಸಹಾಯ ಮಾಡಿದ ಮಹನೀಯರುಗಳಿಗೆಲ್ಲ ಕಳುಹಬೇಕಾಗಿ ನಿರ್ಣಯವಾಯಿತು. ಈ ಸಂಘವೇ ಜಿಲ್ಲಾ ಕೇಂದ್ರ ಸಂಘವಾಗಬೇಕೆಂದು ಮಂಗಳೂರು ಮುಂತಾದ ಇತರ ತಾಲೂಕುಗಳ ಹಲವರ ಅಭಿಪ್ರಾಯವಿರುವುದರಿಂದ ತದನುಸಾರವಾಗಿಯೂ ಸಂಘವನ್ನು ರಿಜಿಸ್ಟ್ರಿ ಮಾಡಲನುಕೂಲವಾಗುವಂತೆಯೂ ಸಂಘದ ನಿಯಮಾವಳಿಗಳಲ್ಲಿ ಅವಶ್ಯವಾಗಬಹುದಾದ ತಿದ್ದುಪಡಿಯೂ ಸೇರ್ಪಡೆಗಳನ್ನು ಸೂಚಿಸಲಿಕ್ಕೆ ಉಪಸಮಿತಿಯನ್ನು ಏರ್ಪಡಿಸಲಾಗಿದೆ. ಈ ತಿದ್ದುಪಡಿ ಸೇರ್ಪಡೆಗಳ ವರದಿಯು ಬಂದೊಡನೆ ಅವುಗಳ ಮಂಜೂರಾತಿಯ ಬಗ್ಗೆ ಮಹಾ ಸಭೆಯನ್ನು ಕರೆಯಲಾಗುವುದೆಂದೂ ಪ್ರಧಾನ ಕಾರ್ಯದರ್ಶಿ ಶ್ರೀ. ಕೆ.ರ ದ್ಯಲ್ಲರು ಬರೆಯುತ್ತಾರೆ.

ತಾಲೂಕು ವಾರ್ ಕಮಿಟಿಯ— ಸಭೆಯು ತಾ 6ರಲ್ಲು ಸಂಜೆ ತಾಲೂಕು ಕಚೇರಿಯಲ್ಲಿ ಶ್ರೀಮತಿ. ಕೆ. ಕಣ್ಣನ್ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಯುದ್ಧ ನಿಧಿ ರೆಡ್‌ಕ್ರಾಸ್ ಮತ್ತು ಫಂಡ್ ಕವಿಟಗಳ ಸಹಾಯಾರ್ಥವಾಗಿ ಡಿಸೆಂಬರ ತಿಂಗಳ ತಾ 16ರಲ್ಲು ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಕನ್ನಡ ನಾಟಕವೇ ಪ್ರಧಾನವಾಗಿ ಇತರ ವಿವಿಧ ವಿನೋದಗಳ ಪ್ರದರ್ಶನಗಳನ್ನು ಜರಗಿಸಬೇಕೆಂದು ನಿರ್ಣಯವಾಯಿತು. ಟಿಕೇಟು ವಿಕ್ರಯದ ವ್ಯವಸ್ಥೆಯು ಕಾರ್ಕಳ, ಕುಂದಾಪುರ ತಾಲೂಕುಗಳಲ್ಲಿ ಸಹ ಆಗಬೇಕಾಗಿ ನಿರ್ಧರಿಸಲಾಯಿತು. ಈ ಬೆನಿಫಿಟ್ ಪ್ರದರ್ಶನದ ಕಾಲದಲ್ಲಿ ಜಿಲ್ಲಾ ಕಲೆಕ್ಟರೂ ಸಬ್ ಕಲೆಕ್ಟರರೂ ಹಾಜರಿರುವರು. ಬಹುಮಾನ ವಿತರಣೆಯನ್ನು ಶ್ರೀಮತಿ ಉಷಾ ಸಾಥೆಯವರು ನೆರವೇರಿಸುವರು.

ಆಹಾರ ಸಮಸ್ಯೆ—ರೇಶನಿಂಗ್ ಕ್ಷೇತ್ರದಲ್ಲಿ ಗೋಧಿ ಮತ್ತು ರಾಗಿ ಕೊಡಲಾಗುತ್ತಿದೆ. ಬೆಳ್ತಿಗೆ ಅಕ್ಕಿಯ ಅಭಾವ ಕಡಿಮೆಯಾಗಲಿಲ್ಲ. ಕೆಲವು ಡಿಪೋಗಳಲ್ಲಿ ಕೊಡಲಾಗುವ ಅಲ್ಪ ಪ್ರಮಾಣದ ಬೆಳ್ತಿಗೆ ಅಕ್ಕಿಯಲ್ಲಿ ಕಡ್ಡಿ, ಪಡ್ಡಿ, ಭತ್ತ, ಕಲ್ಲು ವಿಶೇಷವಾಗಿರುವುದು. ಸಂಬಂಧಪಟ್ಟವರು ಇತ್ತ ನಿಗಾ ಕೊಡಬೇಕಾಗಿಯದೆ. ಎಂದು ಶ್ರೀ ಯು. ಎ. [illegible] ಬಟ್ರರು ಬರೆಯುತ್ತಾರೆ.

ಬೆಲ್ಲದ ಕ್ರಯ ನಿರ್ಧಾರ— ಉಡುಪಿ ತಾಲೂಕಿನಲ್ಲಿಯ ಈ ಕೆಳಗೆ ಕಾಣಿಸಿದ ಕೇಂದ್ರಗಳಲ್ಲಿ ಬೆಲ್ಲ ಮಾರಾಟದ ಕ್ರಯ ಹೀಗಿದೆ-ಉಡುಪಿ ಟೌನ್, 1ನೆ ತರಗತಿ ಉಂಡೆ ಬೆಲ್ಲ 28 ರಾತ್ಲುಗಳ ಮಣಕ್ಕೆ ರೂ. 4-4-0, 2ನೆ ತರಗತಿ 3-12-0 3ನೆ ತರಗತಿ, ರೂ- 3. ಡಬ್ಬಿ ಬೆಲ್ಲ ಉತ್ತಮ ತರಗತಿ ಡಬ್ಬಿ 1ಕ್ಕೆ ರೂ 7-8-0, ಎರಡನೆ ತರಗತಿ ರೂ 6-8-0 (60 ರಾತ್ಲುಗಳ ಡಬ್ಬಿ ಯಿರಬೇಕು. ಡಬ್ಬಿ ಕ್ರಯ ಎಂಟಾಣೆ ಪ್ರತ್ಯೇಕ). ಉಪ್ಪೂರು— ಉಂಡೆ ಬೆಲ್ಲ ರೂ 3-8-0, 3-0 0, 2-4-0 ಡಬ್ಬಿ ಬೆಲ್ಲ ರೂ 6-8-0, 5-8-0. ಶಿರಿಯಾರ— ಉಂಡೆ ಬೆಲ್ಲ ರೂ 2-12-0, 2-8-0, 1-12-0, ಡಬ್ಬಿ ಬೆಲ್ಲ 6-0-0, 5-4 0. ಆರೂರು—ಉಂಡೆ ಬೆಲ್ಲ ರೂ 3-8-0, 3 0-0, 2 4-0. ಡಬ್ಬಿ ಬೆಲ್ಲ 6-8 0. 5-8-0. ಹಾಲಾಡಿ—ಉಂಡೆ ಬೆಲ್ಲ ರೂ 2-12-0, 2-8-0, 1-12 0 ಡಬ್ಬಿ ಬೆಲ್ಲ ರೂ 6-0-0, 5 4 0. ಬಿಲ್ಲಾಡಿ ಉಂಡೆ ಬೆಲ್ಲ ರೂ 2-12-0, 2-8 0, 1-12-0, ಡಬ್ಬಿ ಬೆಲ್ಲ ರೂ 6-0 0, 5-4-0. ಕುಟ್ಟೂರು—ಉಂಡೆ ಬೆಲ್ಲ ರೂ 3-0-0, 2-12-0, 2-0 0, ಡಬ್ಬಿ ಬೆಲ್ಲ ರೂ 6-0-0, 5-4-0. ಬಾರ್ಕೂರು— ಉಂಡೆ ಬೆಲ್ಲ ರೂ 3 0-0, 2-12 0, 2-0 0, ಡಬ್ಬಿ ಬೆಲ್ಲ ರೂ 6-0-0, 5-4-0. ಬ್ರಹ್ಮಾವರ— ಉಂಡೆ ಬೆಲ್ಲ ರೂ. 3-8-0, 3-0-0, 2-4-0 ಡಬ್ಬಿ ಬೆಲ್ಲ ರೂ 6-8-0, 5-8-0. ಕುರ್ಕಾಲು, ಬೊಮ್ಮಾರಬೆಟ್ಟು, ಹಿರಿಯಡ್ಕ ಮತ್ತು ಹಾವಂಜೆ— ಉಂಡೆ ಬೆಲ್ಲ ರೂ 3-8-0, 3-0-0, 2-4 0 ಡಬ್ಬಿ ಬೆಲ್ಲ ರೂ 6 8-0, 5-8-0. ರಾತ್ಲು ಮತ್ತು ಸೇರುಗಳ ಕ್ರಯ ಪ್ರತ್ಯೇಕವಿದೆ

ಕಟಪಾಡಿ:— ಬ್ರ. ಶ್ರೀ ನಾರಾಯಣ ಗುರು ಸ್ವಾಮಿ ಸೇವಾ ಸಮಿತಿಯ ೧೯ನೇ ವಾರ್ಷಿಕೋತ್ಸವವು ತಾ. 21 10 44ರ ವರೆಗೆ ಜರಗಿಸಲ್ಪಟ್ಟು ಶ್ರೀ ದೇವಿ ಸನ್ನಿಧಿಯ ವಸಂತೋತ್ಸವದೊಂದಿಗೆ ಮಂಗಳವ[illegible] ಕಲ, ಪುಷ್ಪ ಪೂಜಾದಿ ಸೇವೆಗಳು ಅನೇಕ ಸದ್ಭಕ್ತರಿಂದ ಅರ್ಪಿಸಲಾಗಿದೆ. ಶ್ರೀ ಮುದ್ದು ಕಡ್ಡ ಪೂಜಾರಿಯವರು ಈ ಸಮಿತಿಯ ಏಳಿಗೆಯ ಕುರಿತು ಭಾಷಣ ಮಾಡಿದರು. ಶ್ರೀಯುತರ ಅಭಿಪ್ರಾಯಗಳನ್ನು ಸ್ವೀಕರಿಸಿಕೊಂಡು ಮುಂದಿನ ಏಳಿಗೆಯನ್ನು ಹಾರೈಸುತ್ತಾ ಶ್ರೀ ಮಾಧವ ಅಂಗರನವರು ಮತ್ತು ಕನ್ನ ಮಾಸ್ತರ್, ವೈ. ವೆಂಕ ಮಾಸ್ತರ್ ಮತ್ತು ಉಳಿಯಾರಗೋಳಿ ದಾದು ಮಾಸ್ತರರು ಕೂಡಾ ಭಾಷಣ ಮಾಡಿದರು. ನೆರೆಕರೆಯ ಮಂಡಳಿಯವರೆಲ್ಲರೂ ಈ ಉತ್ಸವದಲ್ಲಿ ಸಹಭಾಗಿಗಳಾದುದು ಅತೀ ಸಂತೋಷವಾಗಿದೆ.

ಪಡುಬಿದ್ರೆ.— ಕಳೆದ ತಾ. 25ರಲ್ಲು ಬೋ. ಹ್ಯೆ. ಎ. ಶಾಲೆಯಲ್ಲಿ ಮಾನ್ಯ ಕುಂದಾಪುರ ಡಿವಿಜನಿನ ಸಬ್ ಕಲೆಕ್ಟರರಾದ ಶ್ರೀ ಡಿ. ಡಿ ಸಾಥೆ ಐ. ಸಿ. ಯಸ್. ಇವರ ಅಧ್ಯಕ್ಷತೆಯಲ್ಲಿ ಮಹಾಸಭೆಯೊಂದು ಜರಗಿತು. ಮಕ್ಕಳ ನೂತನ ವಿನೋದ ಕಾರ್ಯಗಳು ಅಲ್ಲದೆ ಸ್ಥಳೀಕ ಮೊಗವೀರ ಸಂಘದ ಕಾರ್ಯಕರ್ತರುಗಳು ಸರ್ವಜನ ಸ್ತುತಿಗೆ ಪಾತ್ರವಾದವು. ಬಳಿಕ ಪೊಲ್ಯ ದೇಜು ಶೆಟ್ಟರವರು ಸಭೆಯ ಉದ್ದೇಶವನ್ನು ತುಳು ಭಾಷೆಯಲ್ಲಿ ವಿವರಿಸಿದರು. ಅಧ್ಯಕ್ಷರು ಪ್ರಕೃತ ಒದಗಿರುವ ಆಹಾರ ಅಭಾವ, ಕಳ್ಳಸಂತೆಯ ವಿರೋಧ, ತನ್ಮೂಲಕ ಯುದ್ಧಕ್ಕೆ ಸಹಾಯಕ ವಿಷಯಗಳ ಕುರಿತು ಭಾಷಣವಿತ್ತರು. ಜನರಿಗೆ ಸರ್ವ ಸೌಕರ್ಯಗಳು ಒದಗುವಂತೆ food committeeಯೊಂದು ಸ್ಥಾಪಿತವಾಯಿತು. ಶ್ರೀ ಆರ್. ಆರ್. ಕುಂಜಣರ್ ಅವರು ಅಧ್ಯಕ್ಷರ ಭಾಷಣವನ್ನು ಕನ್ನಡಿಸಿದರು ಶ್ರೀ. ಶ್ರೀನಿವಾಸ ಮಂಜನಾಥ ಶ್ಯಾನಭಾಗರು ಬಡಜನರಿಗೆ ಚಪಾತಿ ಹಂಚಿದರು. ಶ್ರೀ ದಾಸಗಡಿಯಾರರವರು ಭೋಜನದ ವ್ಯವಸ್ಥೆಯನ್ನೂ, ಶ್ರೀ. ರಾಮದಾಸ್ ಪೈಗಳವರು ಉಪಹಾರದ ಏರ್ಪಾಡನ್ನೂ ವಹಿಸಿದರು.

ಬಸ್ರೂರು:—ಸನ್ ಲೈಫ್ ಒಫ್ ಕೆನಡಾ ವಿಮಾ ಕಂಪೆನಿಯ ಸ್ಥಳೀಯ ಪ್ರತಿನಿಧಿಯಾದ, ಶ್ರೀ ಕೆ. ಶಂಕರ ಸೆಟ್ಟಿ, ಇದೇ ಕಳೆದ ಅಕ್ಟೋಬರ ತಿಂಗಳಲ್ಲಿ ಸದ್ರಿ ಕಂಪೆನಿಯವರು ಏರ್ಪಡಿಸಿದ ಪ್ರೆಸಿಡೆಂಟ್ ಮಾಂತ್ ಎಂಬ, ವಿಮಾ ಸ್ಪರ್ಧೆಯಲ್ಲಿ ಮದ್ರಾಸ್ ಸಂಸ್ಥಾನದ ಪ್ರಥಮ ಬಹುಮಾನಕ್ಕೆ ಅರ್ಹರಾಗಿ ಪ್ರಶಂಸಿಸಲ್ಪಟ್ಟಿರುವ ಸಂತೋಷಾರ್ಥವಾಗಿ ಶ್ರೀಮಾನ್ [illegible] ತಾ. 5-11-'44ರಲ್ಲಿ ಕವ[illegible] ಬಸ್ರೂರು ಆಫೀಸಿನಲ್ಲಿ ಒಂದು [illegible] ಸಮಾರಂಭವನ್ನು ಏರ್ಪಡಿಸಿದರು ಶ್ರೀ ಬಿ. ರಾಜೀವ ಸೆಟ್ಟಿ ಎಡ್ವೊಕೇಟ್ ಮತ್ತು ಶ್ರೀ ಬಿ. ಎಸ್. ಪ್ರಭುಗಳು ಸಂದರ್ಭೋಚಿತ ಭಾಷಣವಿತ್ತರು.

ಧರ್ಮಸ್ಥಳ—ಧರ್ಮಸ್ಥಳದಲ್ಲಿ ಎಂದಿನಂತೆ ದೀಪೋತ್ಸವವು ಇದೇ ತಿಂಗಳ ತಾ- ೧೧ರಿಂದ ೧೫ರ ತನಕ ಜರಗಲಿಕ್ಕಿದೆ. ತಾ- ೧೪ ಮತ್ತು ೧೫ರಲ್ಲು ಎಂದಿನಂತೆ ಧರ್ಮ ಸಮ್ಮೇಳನವು ನಡೆಯುವುದು. ಪ್ರಥಮ ದಿನದ ಕಾರ್ಯಕ್ರಮದಲ್ಲಿ ಆಧುನಿಕ ಮತ್ತು ಪುರಾತನ ವಿದ್ಯಾಭ್ಯಾಸ ಕ್ರಮದ ಗುಣದೋಷ ವಿಚಾರ ಮತ್ತು ದ್ವಿತೀಯ ದಿವಸ ಕರ್ನಾಟಕ ಸಾಹಿತ್ಯವು ಧರ್ಮದ ಬೆಳವಣಿಗೆಗೆ ಮಾಡಿದ ಒತ್ತಾಸೆ ಈ ವಿಷಯಗಳ ಕುರಿತು ಉಪನ್ಯಾಸಗಳು ನಡೆಯುವವು. ಮೊದಲ ದಿನ ಮೈಸೂರಿನ ಆಸ್ಥಾನ ಮಹಾ ವಿದ್ವಾನ್ ಶಾಂತಿರಾಜ ಶಾಸ್ತ್ರಿಯವರು, ದ್ವಿತೀಯ ದಿನ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಎಮ್. ಎ, ಇವರು ಭಾಗವಹಿಸಲಿದ್ದಾರೆ. ಇತರ ಬೇರೆಬೇರೆ ಕಡೆಯ ವಿದ್ವಾಂಸರೂ ಸಮ್ಮೇಳನದಲ್ಲಿ ಭಾಗವಹಿಸಲಿಕ್ಕಿರುವರು.

ತಾ 6-11-'44ರಲ್ಲು ಜರಗಿದ ಕಾರ್ಕಳ ತಾಲೂಕು ರೈತರ ಸಂಘದ ಸಭೆಯಲ್ಲಿ ಕುಂದಾಪುರ ಸಬ್ ಕಲೆಕ್ಟರರು ಸ್ಪಷ್ಟೀಕರಿಸಿದ ಕೆಲವು ವಿಷಯಗಳು:

ಒಕ್ಕಲುಗಳು ತಮಗೆ ಸಾಗುವಳಿಯಲ್ಲಿ ಯೆಷ್ಟೇ ಭತ್ತ ಬೆಳೆದರೂ (ಅಂದರೆ ಗೇಣಿಗೇ ಬೇಕಾದಷ್ಟೇ ಭತ್ತ ಬೆಳೆದಿದ್ದರೂ ಸಹಾ) ಪಾಸಿಗ ಅಕ್ಕಿ ರೂಪವಾಗಿ ಸಲತಕ್ಕ ಪೂರಾ ಗೇಣಿಯನ್ನು ರೆಕ್ವಿಸಿಶನ್ ಮಾಡಲಾಗುವುದು ಅದನ್ನು ಒಕ್ಕಲು ಅಕ್ಕಿ ರೂಪವಾಗಿಯೇ ಕೊಟ್ಟೇ ತೀರಬೇಕು ಆತನ ಜೀವನಕ್ಕೆ ಬೇಕಾಗುವ ಅಕ್ಕಿಯನ್ನು ಆ ಗುರುತುಕಾರ್ಡಿನ ಪ್ರಕಾರವೇ ಪಡೆಯತಕ್ಕದ್ದು, ಬೀಜಕ್ಕೆ ಬೇಕಾದ ಭತ್ತ, ಸಾಗುವಳಿ ಖರ್ಚಿನ ಅಕ್ಕಿ, ಜೀವನದ ಅಕ್ಕಿ ಇವು ಮೂರು ಸಹಾ ದಣಿಗೇಣಿ ಹೋಗಿ ಉಳಿದ ಅಂಶದಲ್ಲಿ ಒಕ್ಕಲಿಗೆ ಬಿಡಲಾಗುವುದು

2. ಗ್ರಾಮದ ಶ್ಯಾನುಭೋಗರು ಪ್ರತಿ ಒಬ್ಬ ಸಾಗುವಳಿದಾರನು ಬೆಳೆಯುವ ಕಾರ್ತಿ ಪೈರಿನ ಬೆಳೆಯ ಅಂದಾಜುಪಟ್ಟಿ ತಯಾರಿಸುತ್ತಾರೆ. ಅವುಗಳೇ ಮುಖ್ಯ ರಿಕಾರ್ಡು. ಅವುಗಳ ಅಂಕೆ ಸಂಖ್ಯೆಗಳನ್ನು ತಿಳಿಯಲು ಅಪೇಕ್ಷಿಸುವ ಪ್ರತಿ ಸಾಗುವಳಿದಾರನೂ ಅದನ್ನು ಆತನಿಂದ ಪಡೆಯಬಹುದು ಆ ಬಗ್ಗೆ ಹುಕುಂ ಕೊಡಲಾಗಿದೆ. ಸದ್ರಿ ಅಂದಾಜು ಸಂಖ್ಯೆಯು ತಪ್ಪೆಂದು ವಾದಿಸುವ ಸಾಗುವಳಿದಾರನು ರೆಕ್ವಿಸಿಶನ್ ಮಣಿಗಾರರಿಗೆ ವ ಡಿಪ್ಯುಟಿ ತಹಶೀಲ್ದಾರರಿಗೆ ಅಕ್ಷೇಪಣ ಅರ್ಜಿ ಕೊಡಬಹುದು. ಅಲ್ಲಲ್ಲಿ ಸ್ಪೆಶಲ್ ಅಕ್ಕಿ ಡಿಪೋಗೆ ಸಂಬಂಧಿಸಿದ ಗ್ರಾಮಗಳಲ್ಲಿ ಆಫೀಸರೇತರ ಆಹಾರ ಸಮಿತಿಗಳು ಸದ್ರಿ ಆಕ್ಷೇಪಣೆಗಳನ್ನು ಕೊಡಬಹುದು. ಆ ಸಮಿತಿಯು ಆ ವಾದಿಸ ಮಾಡುವ ಶಿಫಾರಸಿಗೆ ತೀರ್ಪಿನ ಕಾಲದಲ್ಲಿ ಮಾನ್ಯ ಕೊಡಲಾಗುವುದು.

3 ರೆವೆನ್ಯೂ ಬೋರ್ಡಿನವರ ಲೆಕ್ಕ ಪ್ರಕಾರ ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿ ಈ ವರ್ಷ 1 ನೇ ಕ್ಲಾಸ್ ನಂಜದ 1 ಎಕ್ರೆ ಗದ್ದೆಯಲ್ಲಿ 2 ಬೆಳೆಯಲ್ಲಿ ಸರಾಸರಿ 15 ಮುಡಿ ಅಕ್ಕಿಯ ಭತ್ತ ಬೆಳೆಯುತ್ತದೆ. ತನ್ನ ಆಫೀಸರುಗಳು ಈ ಸರಾಸರಿಯಲ್ಲಿ local conditions ಎಂದ (ಸ್ಥಳೀಯ ಹಾಲತನ್ನು) ಅನುಸರಿಸಿ ಬದಲಾವಣೆಯನ್ನು ಗಮನಿಸಿಟ್ಟುಕೊಂಡು ಸದ್ರಿ ಗದ್ದೆಯ ಈ ವರ್ಷದ ಉತ್ಪತ್ತಿ ನಿರ್ಣಯಿಸುವರು.

4 ಪ್ರತಿ ಸಾಗುವಳಿದಾರನು ಆತನ ಸಾಗುವಳಿ ಭೂಮಿಗಳಲ್ಲಿ ಬೆಳೆದದ್ದಾಗಿ ನಿರ್ಣಯಿಸಲ್ಪಡುವ ಅಕ್ಕಿ ಯಾ ಭತ್ತದ ಮುಡಿ ಕಾಳಿನ ಸಮರ್ಪಕವಾದ ವಿತರಣೆಯನ್ನು (disposal) ಕೊಡಲು ಬದ್ಧನು. ಇಲ್ಲದಿದ್ದರೆ ಮಾರ್ಚ ತಿಂಗಳ ನಂತರ ಕ್ರಿಮಿನಲು ವ್ಯವಹಾರಗಳು ಸಾಗುವಳಿದಾರನ ಮೇಲೆ ಆಗುವುದು ನಿಶ್ಚಯ. ಲೆಕ್ಕ ಪ್ರಕಾರದ ಅಕ್ಕಿ ಕೊಡದಿದ್ದರೆ ವ್ಯಕ್ತಿಗಳನ್ನು ವಯ್ಯಲಾಗುವುದು.

೦೦ ೦೦ ೦೦

ಬಡ ಸಾಗುವಳಿದಾರ (ಒಕ್ಕಲು)ನ ಕನಿಷ್ಟ ತರಗತಿ ಜೀವನದ ಖರ್ಚಿಗಾದರೂ ಗೇಣಿಯ ಸ್ವಾಮಿತ್ವತೆಯನ್ನು ಕೊಡುವುದು ಸಮಂಜಸವಲ್ಲವೇ? ಆ ಧೋರಣೆಯಲ್ಲಿ ಯೋಚಿಸತಕ್ಕದ್ದೇಯಿಲ್ಲವೇ? ಜಿಲ್ಲೆಯ ಆಹಾರ ಉತ್ಪತ್ತಿಕಾರನೂ ವಾರಕ್ಕೊಂದು ಸಲವಾದರೂ 2 3 ಮೈಲು ದೂರದ ಡಿಪೋವಿಗೆ ಗುರುತುಕಾರ್ಡು ಹಿಡಕೊಂಡು ವಾರಕ್ಕೆ 5 ದಿವಸದ ಅಕ್ಕಿಗೆ (ಬಾಕಿ 2 ದಿನ ದಾನ್ಯ) ದಾರಿ ನಡೆಯಲೇ ಬೇಕೆ? ಕರಾವಳಿ ಗ್ರಾಮಗಳಲ್ಲಿ ಆತ ಈಗಲೇ ಸದ್ರಿ ಕಾರ್ಡು ಪಡೆಯಬೇಕಾಗುವುದಲ್ಲವೇ ಮೂಲಕ ಆಹಾರ ಉತ್ಪತ್ತಿಕಾರನ ಗೋಳು ಕೇಳುವವರೇ ಇಲ್ಲವೇ? ರೈತರು ಮ ಅವರ ಸಂಘಟನ ಈ ಭಾಗದಲ್ಲಿ ಮಾಡತಕ್ಕ ಕರ್ತವ್ಯವೇನೂ ಇಲ್ಲವೇ.

K. Mahabala Hegde,

B. A., B L.

5—11—1944

ಮೈಸೂರು ಪತ್ರ

ಕಾಂಗ್ರೆಸ್ ಕೆಲಸಗಾರರ ಸಭೆ:- ಮುಂದೆ ಬರಲಿರುವ ಚುನಾವಣೆಗಳಿಗೆ ಸಂಬಂಧ ಪೂರ್ವಭಾವಿ ಕೆಲಸಗಳನ್ನು ಕೈಕೊಳ್ಳಲು ಮೈಸೂರು ನಗರದ ಕಾಂಗ್ರೆಸ್ ಕೆಲಸಗಾರರ ಸಭೆಯು ತಾ ೩-11-44 ರಲ್ಲಿ ಶ್ರೀಮತಿ ಯಶೋಧರಾ ದಾಸಪ್ಪನವರ ಅಧ್ಯಕ್ಷತೆಯಲ್ಲಿ ಸೇರಿ ಅನೇಕ ವಿಷಯಗಳನ್ನು ಚರ್ಚಿಸಿದ ನಂತರ ಶ್ರೀಮತಿ ಯಶೋಧರಾ ದಾಸಪ್ಪ, ಶ್ರೀಗಳಾದ ಸಾಲಹಳ್ಳಿ ತೀರ್ಥರಾಮಯ್ಯ, ಎ. ರಾಮಣ್ಣ, H. ನ ನೂರಿಸ್ವಾಮಿ, ಯಂ ಯಲ್. ನಂಜರಾಜೆ ಅರಸ್, ಎನ್. ಗೋಪಾಲರಾವ್, ಕೆ. ಉಗ್ರಪ್ಪ, ಟಿ. ಎಸ್. ಸುಬ್ಬಣ್ಣ ಮತ್ತು ವಿ ಎನ್ ದಾಸಪ್ಪನವರನ್ನೊಳಗೊಂಡ ಒಂದು ಉಪಸಮಿತಿಯನ್ನು ರಚಿಸಲಾಯ್ತು.

ಇಡ್ಲಿ ದೋಸೆಗಳಿಲ್ಲ:-ರೇಷನಿಂಗ್ ಇಲಾಖೆಯವರು ಹೋಟೇಲುಗಳಿಗೆ ಕೊಡುತ್ತಿದ್ದ ಅಕ್ಕಿ ರೇಷನನ್ನು ಇದೇ ನವಂಬರ್ 1ನೇ ತಾರೀಖಿನಿಂದ ನಿಲ್ಲಿಸಿರುವುದರಿಂದ ನಗರದ ಹೋಟೇಲು ಮಾಲಿಕರ ಸಂಘದವರು ದೋಸೆ ಇಡ್ಲಿ ಮಾಡುವುದನ್ನು ನಿಲ್ಲಿಸಿದ್ದಾರೆ. ಇದರಿಂದ ಜನಗಳಿಗೆ ತುಂಬಾ ಕಷ್ಟವಾಗಿದೆ.

ಕಾಂಗ್ರೆಸ್ ಅಧ್ಯಕ್ಷರಿಗೆ ವಾಗ್ಬಂಧನ:—ಮೈಸೂರು ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ. ಟಿ. ಸುಬ್ರಹ್ಮಣ್ಯಂರವರು ಆರು ತಿಂಗಳುಗಳು ಎಲ್ಲಿಯೂ ಭಾಷಣಗಳನ್ನು ಮಾಡಕೂಡದೆಂಬ ಇಂಡಿಯಾ ರಕ್ಷಣ ಕಾನೂನಿನ ಪ್ರಕಾರ ಸರಕಾರದ ಚೀಫ್ ಸೆಕ್ರೆಟರಿಗಳು ಹೊರಡಿಸಿದ ಆರ್ಡರನ್ನು ತುಮಕೂರಿನಲ್ಲಿ ಕಾಂಗ್ರೆಸ್ ಅಧ್ಯಕ್ಷರಿಗೆ ಜಾರಿಮಾಡಲಾಗಿದೆ. ಈ ವಿಚಾರ ಕಾಂಗ್ರೆಸ್ ಆವರಣದಲ್ಲಿ ಕಳವಳವನ್ನುಂಟುಮಾಡಿದೆ.

THE UDIPI BANK LTD.

Head Office. UDIPI, S. K.

Estd 1925

ANNOUNCEMENT

A branch of the bank has been opened at Padubidri on 31-10-44.

ಪ್ರಕಟಣೆ

ನಮ್ಮ ಬ್ಯಾಂಕಿನ ಶಾಖೆಯೊಂದು ತಾ. 31—10—44 ರಲ್ಲಿ ಪಡುಬಿದ್ರೆಯಲ್ಲಿ ತೆರೆಯಲ್ಪಟ್ಟಿರುವುದು

ದಿ ಉಡುಪಿ ಬ್ಯಾಂಕ್ ಲಿಮಿಟೆಡ್, ಉಡುಪಿ.

ಯುದ್ಧಾನಂತರದ ಪುನರ್ರಚನೆ

ಅಖಿಳ ಭಾರತ ವ್ಯಾಪ್ತಿಯುಳ್ಳ ಹದಿನೈದು ವರ್ಷಾವಧಿಯ ಯೋಜನೆಯಲ್ಲಿ ಮದ್ರಾಸು ಪ್ರಾಂತದ ಪ್ರಾಂತಿಕ ಯೋಜನೆ

ಯುದ್ಧ ಭಾಗಿಗಳಾದ ಮಿತ್ರರಾಷ್ಟ್ರಗಳೆಲ್ಲ ಒಂದು ಕಡೆ ಯುದ್ಧವನ್ನು ವಿಜಯದ ಕಡೆಗೆ ಮುನ್ನಡೆಯಿಸುತ್ತಿರುವಾಗಲೆ ಮತ್ತೊಂದು ಕಡೆಯಲ್ಲಿ ಯುದ್ಧಾನಂತರದ ಪುನರ್ರಚನೆಯ ವಿಚಾರದಲ್ಲಿ ಮಗ್ನವಾಗಿವೆ. ತದನುಸಾರವಾಗಿ ನಮ್ಮ ಅಖಿಳಭಾರತದಲ್ಲಿಯೂ ಅದರದೊಂದು ಅಂಗವಾದ ನಮ್ಮ ಮದ್ರಾಸು ಪ್ರಾಂತದಲ್ಲಿಯೂ ಅಂತಹ ಯೋಜನೆಗಳ ವಿಚಾರವೂ ಪರಿಶೀಲನೆಯೂ ನಡೆಯುತ್ತಲಿವೆ. ಯುದ್ಧ ಮುಗಿದ ಮೇಲೆ ಈ ವಿಚಾರವನ್ನು ಕೈಗೊಂಡರೆ ಸಾಲದೇ ಈಗೇಕಿಷ್ಟು ಅವಸರ, ಅವ್ಯವಸ್ಥೆಯೊಳಗೆ ವ್ಯವಸ್ಥೆಯ ವಿಚಾರ ಎಂದು ವಿಷಯವನ್ನು ಆಳವಾಗಿ ಯೋಚಿಸದವರು ಸಹಜವಾಗಿ ಕೇಳುವ ಸಂಗತಿಯೇ. ಆದರೆ ಚೆನ್ನಾಗಿ ಪರ್ಯಾಲೋಚಿಸಿದರೆ ಅಂತಹ ಯೋಜನೆಗಳು ಈಗಾಗಲೇ ನಿಷ್ಕರ್ಷೆಯಾಗಬೇಕಲ್ಲದೆ ಅವುಗಳ ಆರಂಭವೂ ಆಗಬೇಕಾಗಿದೆ ಎಂಬುದು ಸ್ಪಷ್ಟವಾಗುತ್ತದೆ.

ಈಗ ಯುದ್ಧದ ದೆಸೆಯಿಂದಾಗಿ ಸಮರಕ್ಕೆ ಸಂಬಂಧಪಟ್ಟ ಸೇನಾಪಡೆಗಳಲ್ಲಿ ಮಾತ್ರವಲ್ಲದೆ ಇತರ ವಿವಿಧ ಸಮರ ಸಹಾಯಕ ಕ್ಷೇತ್ರಗಳಲ್ಲಿಯೂ ಕಾರ್ಖಾನೆಗಳಲ್ಲಿಯೂ ಲಕ್ಷಾಂತರ ಜನರು ಇದ್ದಾರೆ. ಯುದ್ಧವು ಮುಗಿದೊಡನೆ ಒಮ್ಮೆಗೆ ಇವರೆಲ್ಲ ಆ ಉದ್ಯೋಗಗಳಿಂದ ನಿವೃತ್ತರಾಗಿ ಶಾಂತಿಪರ ಜೀವನದ ಹಾದಿಗೆ ಹಿಂತಿರುಗಬೇಕಾದುದರಿಂದ ಅವರಿಗೆ ಕೂಡಲೇ ಅಂತಹ ಉದ್ಯೋಗಗಳು ದೊರಕದಿದ್ದರೆ ಊರಲ್ಲೆಲ್ಲ ನಿರುದ್ಯೋಗದ ಕೂಗೆದ್ದು ಬದುಕು ಬಾಳುಗಳು ಕಷ್ಟವಾದಾವು. ಯುದ್ಧದಿಂದಾಗಿ ಕಷ್ಟವಾಗಿರುವ ಜೀವನವು ಮತ್ತಷ್ಟು ಕಷ್ಟತರವಾಗಿ ದೇಶವ್ಯಾಪ್ತವಾದ ಅವ್ಯವಸ್ಥೆಯುಂಟಾದೀತು. ಅದಕ್ಕಾಗಿ ಈಗ ಸಮರ ಮುಖದಲ್ಲಿ ವಿವಿಧ ಉದ್ಯೋಗದಲ್ಲಿ ಇರುವವರನ್ನೆಲ್ಲ ಉಪಯೋಗಿಸಿಕೊಳ್ಳಲನುಕೂಲವಾಗುವಂತಹ ಮತ್ತು ದೇಶಕ್ಕೆ ಪ್ರಯೋಜನವಾಗುವಂತಹ ಯೋಜನೆಗಳು ಈಗಾಗಲೇ ನಿಶ್ಚಯವಾಗಬೇಕಾದುದು ಅವಶ್ಯ. ಈ ದೃಷ್ಟಿಯಿಂದ ಇಂಡಿಯಾ ಸರಕಾರದ ಅಪೇಕ್ಷಾನುಸಾರ ವೈಸರಾಯರ ಕೌನ್ಸಿಲಿನ ಪುನರ್ರಚನಾ ಸಮಿತಿಯವರು ಹದಿನೈದು ವರುಷದ ಒಂದು ಯೋಜನೆ ಸೂಚನೆಯನ್ನಿತ್ತಿದ್ದಾರೆ. ಅದರಲ್ಲಿ ಪ್ರಥಮ ಐದು ವರುಷದ ಅತ್ಯವಸರದ ಕಾರ್ಯಕ್ರಮವೂ ಅನಂತರದ ಹತ್ತು ವರುಷಗಳ ಸಾವಧಾನದ ಕಾರ್ಯಕ್ರಮಗಳ ಸೂಚನೆಗಳೂ ಒಳಗೊಂಡಿವೆ.

ತದನುಸಾರವಾಗಿ ನಮ್ಮ ಮದ್ರಾಸು ಆಧಿಪತ್ಯದಲ್ಲಿಯೂ ಮದ್ರಾಸು ಸರಕಾರವು ಪ್ರಾಂತಿಕ ವೈಶಿಷ್ಟ್ಯಕ್ಕೆ ಮತ್ತು ಆವಶ್ಯಕತೆಗೆ ತಕ್ಕಂತೆ ಪುನರ್ರಚನೆಯ ಯೋಜನೆಯನ್ನು ತಯಾರಿಸುವರೆ ಒಂದು ಪುನರ್ರಚನಾ ಮಹಾ (ಜನರಲ್) ಸಮಿತಿಯನ್ನು ರಚಿಸಿದೆ. ಈ ಸಮಿತಿಯೊಳಗೆ ಬೇರೆ ಬೇರೆ ವಿಚಾರಗಳನ್ನು ಪರ್ಯಾಲೋಚಿಸಿ ನಿರ್ಣಾಯಕವಾದ ಯೋಜನೆಗಳನ್ನು ರಚಿಸಿ ಒಪ್ಪಿಸುವುದಕ್ಕಾಗಿ ಎಂಟು ಬೇರೆ ಬೇರೆ ಉಪಸಮಿತಿಗಳು ಇವೆ. ಅವು ಈ ಕೆಳಗಿನ ವಿಚಾರಗಳನ್ನು ಪರ್ಯಾಲೋಚಿಸಿ ಯೋಜನೆಗಳನ್ನು ಒಪ್ಪಿಸತಕ್ಕದು. ೧. ದಂಡಿನಿಂದ ಬಿಡುಗಡೆ ಹೊಂದುವ ಸೈನಿಕರ ಉದ್ಯೋಗ ಇತ್ಯಾದಿ. ೨. ಕೈಗಾರಿಕೆ ಉದ್ಯಮಗಳು ಇತ್ಯಾದಿ ೩. ಕೃಷಿ ೪. ಮೀನುಗಾರಿಕೆ, ೫. ಅರಣ್ಯಖಾತೆ, ೬. ಪಶುಪಾಲನೆ ಇತ್ಯಾದಿ. ೭. ನೀರಾವರಿ ಇಲಾಖೆ, ೮. ನೆಲಜಲ ಆಕಾಶಗಳಲ್ಲಿ ಸಂಚಾರ ಸೌಕರ್ಯ ನಿರ್ಮಾಣ.

ಹೀಗೆ ಈ ಎಂಟು ಶಾಖೆಗಳಲ್ಲಿಯೂ ದೇಶಕ್ಕೆ ಆರ್ಥಿಕೋನ್ನತಿ ಸೌಕರ್ಯಗಳುಂಟಾಗುವಂತೆಯೂ ದಂಡಿನ ವಿವಿಧ ಉದ್ಯೋಗದಲ್ಲಿದ್ದವರು ಮರಳಿದಾಗ ಈ ವಿಭಾಗಗಳಲ್ಲಿ ಅವರನ್ನು ತೆಗೆದುಕೊಳ್ಳಲಾಗುವಂತೆಯೂ ಯೋಜನೆಗಳಾಗುತ್ತಿವೆ. ಎಂದರೆ ಈ ಎಲ್ಲ ಶಾಖೆಗಳಲ್ಲಿ ಬೇಕಾಗುವ ಉದ್ಯೋಗಗಳಲ್ಲಿ ಅವರಿಗೇ ಎಂದಲ್ಲ. ಅವರಲ್ಲಿ ಆಯಾ ಉದ್ಯೋಗಕ್ಕೆ ಅರ್ಹರಿರುವವರನ್ನು ಇದರಲ್ಲಿ ಸೇರಿಸಿಕೊಳ್ಳುವುದು ಪ್ರಥಮ ಕರ್ತವ್ಯವಿರುತ್ತೆ.

ಈ ಎಂಟನೆಯ ನೆಲಜಲ ಆಕಾಶ ಸಂಚಾರ ಸೌಕರ್ಯ ನಿರ್ಮಾಣ ಯೋಜನೆಯ ಸಮಿತಿಯಲ್ಲಿ ನಮ್ಮ ಜಿಲ್ಲಾ ಬೋರ್ಡು ಅಧ್ಯಕ್ಷರಾದ ಶ್ರೀ ಆರೂರು ಲಕ್ಷ್ಮೀನಾರಾಯಣ ರಾಯರು ಸದಸ್ಯರಾಗಿರುವರು. ನಮ್ಮ ಜಿಲ್ಲೆಯ ಕೃಷಿ ವಾಣಿಜ್ಯ ಉದ್ಯಮಗಳ ಉತ್ಕರ್ಷಕ್ಕೆ ಸಂಚಾರದ ಸೌಕರ್ಯಗಳ ಅಭಾವವು ಎಷ್ಟು ತೊಡಕಾಗಿದೆ ಎಂಬುದರ ಪರಿಪೂರ್ಣ ಅನುಭವವಿರುವ ಇವರು ಈಗಾಗಲೇ ಮಾರ್ಗ, ಸಂಕ, ಸೇತುವೆ, ಬಂದರಗಳ ಸುಧಾರಣೆಗಾಗಿ ಹಲವು ಯೋಜನೆಗಳನ್ನು ತಕ್ಕ ಅಂಕೆ ಸಂಖ್ಯೆ ವಿವರಗಳ ಸಹಿತ ಸಮಿತಿಯ ಮುಂದಿಟ್ಟು ಯೋಜನೆಯಲ್ಲಿ ಒಳಗೊಳ್ಳುವಂತೆ ಮಾಡುವುದರಲ್ಲಿ ಯಶಸ್ವಿಗಳಾಗಿದ್ದಾರೆ, ಆಗುತ್ತಿದ್ದಾರೆ. ಅಲ್ಲದೆ ಇತರ ಏಳು ಸಮಿತಿಗಳಲ್ಲಿ ನಮ್ಮ ಜಿಲ್ಲೆಯ ಮಟ್ಟಿಗೆ ಏನೇನು ಯೋಜನೆಗಳು ಸೇರಬೇಕೋ ಅವನ್ನು ಆಯಾ ಸಮಿತಿಯ ಪರ್ಯಾಲೋಚನೆಗೆ ಒಪ್ಪಿಸಿದ್ದಾರೆ, ಒಪ್ಪಿಸುತ್ತಿದ್ದಾರೆ. ಇವರ ಕೇಳಿಕೆಗಳ ನ್ಯಾಯವೂ ಇವರ ವೈಯಕ್ತಿಕ ವರ್ಚಸ್ಸೂ ಇತರ ಸಮಿತಿಗಳ ಮೇಲೆ ಪರಿಣಾಮಕಾರಿಯಾಗದಿರದು. ಆದರೆ ಹಾಗೆಂದು ಜಿಲ್ಲೆಯವರು ಸುಮ್ಮನಿರಬಾರದು. ಅಲ್ಲೇನಾಗುತ್ತಿದೆಯೆಂಬುದನ್ನು ತಿಳಿಯುತ್ತ ನಮ್ಮ ಜಿಲ್ಲೆಯ ಪರವಾಗಿ ಅಲ್ಲಿ ಮುಂದೊತ್ತುವ ವಿಷಯಗಳಿಗೆ ಬೆಂಬಲವಾಗುವಂತೆ ಜಿಲ್ಲೆಯು ತಮ್ಮ ಮನವಿ ಸೂಚನೆ ನಿರ್ಣಯಾದಿಗಳನ್ನು ಸಮಿತಿಗೆ ಕಳುಹಿಕೊಡತಕ್ಕದು. ಈ ಸಮಿತಿಯ ಸದಸ್ಯರಲ್ಲಿ ಹೆಚ್ಚಿನವರೆಲ್ಲ ಆಯಾ ಇಲಾಖೆಯ ಪ್ರಮುಖ ಸರಕಾರೀ ನೌಕರರಾಗಿದ್ದಾರೆ. ನೌಕರರೇತರ ಸದಸ್ಯರು ಎಲ್ಲ ಜಿಲ್ಲೆಗಳಿಂದಲೂ ಆರಿಸಲ್ಪಡಲಿಲ್ಲ. ಒಕ್ಕೈ ಬೆರಳೆಣಿಸುವಷ್ಟೂ ಇಲ್ಲ. ಬೇರೆ ಜಿಲ್ಲೆಗಳಿಗೆ ದೊರಕದಂತಹ ಈ ಸಂದರ್ಭ ವಿಶೇಷ ನಮಗೆ ದೊರೆತಿದೆ. ಇದರ ಪರಿಪೂರ್ಣ ಪ್ರಯೋಜನವನ್ನು ನಮ್ಮ ಜಿಲ್ಲೆಯು ಹೊಂದುವಂತಾಗಲಿ.

ಜಿಲ್ಲಾ ಹಿತೈಷಿ

Sri Narayan Guru Bank, Ltd.,

(Incorporated in British India. Liability of Members is Limited)

Regd. Head Office: HAMPANKATTA,

ಮಂಗಳೂರು.

Branch: UDIPI, S. K.

Authorised Capital	....	**Rs 2,00000**
Issued Capital	....	**,, 1,00000**
Paid up Capital	....	**,, 56,150**

The Company has commenced Business by obtaining from the Government the Certificate of Commencement of Business on the 19th August, 1944 under the Indian Companies Act, 1913.

Strong Board of Directors

Consent of the Central Government has been obtained under the Defence of India Rules 94 A "It must be distinctly understood that in giving this consent the Govt. of India does not take any responsibility for the financial soundness of any scheme or for the correctness of any of the statements made or opinion expressed with regard to them". The Government of India has been pleased to extend the period till the 15th January 1945 for the sale of shares.

A few shares at par available.

Rs. 50/- per share. Re. 1/- Entrance Fee per share.

Hundreds have already taken up shares!

WHY NOT YOU?

Current and Savings Bank Accounts are opened. Fixed Deposits are accepted. Enquire for Rules of Business and rates of Interest.

MANGALORE JARAPPA,

President & Managing Director.

ಮದ್ರಾಸು ಪ್ರಾಂತದಲ್ಲಿ ಅಮಲು ಪದಾರ್ಥ ಸೇವನೆ

ಕೆಲವು ಅಂಕೆ ಸಂಖ್ಯೆಗಳು

ಕಳೆದ ೧೯೪೩-೪೪ನೆಯ ವರುಷದ ಬಗ್ಗೆ ಮದ್ರಾಸು ಸರಕಾರದ ಎಕ್ಸೈಜ್ ಇಲಾಖೆಯ ವರದಿಯಲ್ಲಿ ಈ ಕೆಳಗಿನ ಅಂಕೆ ಸಂಖ್ಯೆಗಳು ಇವೆ. ವರದಿಯ ವರುಷದಲ್ಲಿ ಕರ್ಚಾದ ಊರು ಸಾರಾಯಿ (ಅರಕ್) 17,96,391 ಪ್ರೂಫ್‌ಗೆಲನ್. ಹಿಂದಿನ ವರ್ಷದಲ್ಲಿ 15,03,677. ವರದಿಯ ವರ್ಷದಲ್ಲಿ ಸರಕಾರಕ್ಕೆ ಉತ್ಪತ್ತಿ 251·79 ಲಕ್ಷ ರೂಪಾಯಿ ಹಿಂದಿನ ವರ್ಷವಲ್ಲಿ ರೂ. 169 31. ವರದಿಯ ವರ್ಷದಲ್ಲಿ ಗುತ್ತಿಗೆಗೆ ಕೊಡಲ್ಪಟ್ಟ ಹೆಂಡದ ಅಂಗಡಿಗಳು 10,404. ಹಿಂದಿನ ವರ್ಷವಲ್ಲಿ 8,445. ಇವುಗಳಲ್ಲಿ 1529 ಅಂಗಡಿಗಳು ಹಿಂದೆ ಸುರಾಪಾನ ಬಹಿಷ್ಕಾರವಿದ್ದ ಸೇಲಂ, ಉತ್ತರ ಆರ್ಕಾಟು, ಚಿತ್ತೂರು ಮತ್ತು ಕಡಪಾ ಜಿಲ್ಲೆಗಳಲ್ಲಿ ೧೯೪೪ರ ಜನವರಿಯಲ್ಲಿ ತೆರೆಯಲ್ಪಟ್ಟಂತಹವು. ಒಟ್ಟು ಉತ್ಪತ್ತಿ ರೂ. 150·77ಲಕ್ಷ ಮರ್ತೆ ಮರಗಳ ತೆರಿಗೆಯಿಂದ ರೂ. 198 35 ಗುತ್ತಿಗೆ ವಿಕ್ರಯದಿಂದ ಹೀಗೆ ಒಟ್ಟು ರೂ 349·12 ಲಕ್ಷ. ಹಿಂದಿನ ವರ್ಷದ ಒಟ್ಟು ಉತ್ಪತ್ತಿ 222 83ಲಕ್ಷ. ಇದರಲ್ಲಿ ಮರಗಳ ಮರ್ತೆಯಿಂದ ರೂ. 103·39 ಲಕ್ಷ. ಅಂಗಡಿ ಗುತ್ತೆ ಕೊಟ್ಟುದರಿಂದ ರೂ. 119·44 ಲಕ್ಷ.

ವಿದೇಶೀ ಸಾರಾಯಿಗಳಲ್ಲಿ ವ್ಯಾನ್ ಮತ್ತು ಬೀರ್‌ಗಳ ಸೇವನೆಯು ಕಡಿಮೆಯಾಗಿತ್ತು. ಇತರ ಸಾರಾಯಿಗಳ ಉಪಯೋಗವು ಹೆಚ್ಚಾಗಿತ್ತು. ವರದಿಯ ವರ್ಷದ ಒಟ್ಟು ಉತ್ಪತ್ತಿ ರೂ. 40·59ಲಕ್ಷ. ಹಿಂದಿನ ವರ್ಷದಲ್ಲಿ ರೂ. 26·69ಲಕ್ಷ

ಅಫೀಮು ಮಾರಾಟದ ಅಂಗಡಿಗಳು ವರದಿಯ ವರ್ಷದಲ್ಲಿ 445, ಹಿಂದಿನ ವರ್ಷದಲ್ಲಿ 444. ಆದರೆ ವರದಿಯ ವರ್ಷದ ಒಟ್ಟು ಉತ್ಪತ್ತಿ ರೂ. 11·73ಲಕ್ಷ. ಹಿಂದಿನ ವರ್ಷದಲ್ಲಿ ರೂ. 6·7ಲಕ್ಷ. ವರದಿಯ ವರ್ಷದಲ್ಲಿ ಉಪಯೋಗಿಸಲ್ಪಟ್ಟ ಹಸಿ ಅಫೀಮು 17,0093ಸೇರು. ಹಿಂದಿನ ವರ್ಷದಲ್ಲಿ 20,083ಸೇರು. ಹೀಗ 2990 ಸೇರು ಕಡಿಮೆ ಕರ್ಚಾದುದಕ್ಕೆ ಕಾರಣ ತಕ್ಕ ಕಾಲದಲ್ಲಿ ಗಾಜೀಪುರದಿಂದ ಅಫೀಮು ಬಾರದಿದ್ದುದೇ. ಸರಕಾರಕ್ಕೆ ಆದ ಒಟ್ಟು ಉತ್ಪತ್ತಿ ರೂ. 27 87ಲಕ್ಷ. ಹಿಂದಿನ ವರ್ಷದಲ್ಲಿ ರೂ. 25·08ಲಕ್ಷ.

ವರದಿಯ ವರ್ಷದಲ್ಲಿ ಗಾಂಜಾ ಮತ್ತು ಭಂಗಿ ಮಾರಾಟದ 448 ಅಂಗಡಿಗಳನ್ನು ರೂ. 10·19ಲಕ್ಷಕ್ಕೆ ಗುತ್ತೆ ಕೊಡಲಾಗಿತ್ತು. ಇವುಗಳಲ್ಲಿ ಕರ್ಚಾದ ಗಾಂಜಾ ಮತ್ತು ಭಂಗಿ41,843ಸೇರು. ಹಿಂದಿನ ವರ್ಷದಲ್ಲಿ 32,334ಸೇರು ಈ ಎಲ್ಲ ಬಾಬುಗಳಿಂದ ಒಟ್ಟು ಸರಕಾರಕ್ಕೆ ಉತ್ಪತ್ತಿ ರೂ 693.55ಲಕ್ಷ. ಹಿಂದಿನ ವರ್ಷದಲ್ಲಿ ರೂ' 161,44ಲಕ್ಷ.

ವರದಿಯ ವರ್ಷದಲ್ಲಿ ಈ ಇಲಾಖೆಯ ಬಗ್ಗೆ ಕರ್ಚು ರೂ. 36·07ಲಕ್ಷ ಎಂದರೆ ಆದಾಯದ ಸಾಧಾರಣ ಸೇಕಡ 5 ಮಾತ್ರ. ಹಿಂದಿನವರ್ಷದ ವೆಚ್ಚ ರೂ 31·99 ಲಕ್ಷ. ಇದು ಹಿಂದಿನ ವರ್ಷದ ಉತ್ಪತ್ತಿಯ ಸೇಕಡ 6 8ಆಗಿತ್ತು. ಹೀಗೆ ಒಟ್ಟಿನ ಮೇಲೆ ವರದಿಯ ವರ್ಷದಲ್ಲಿ ಸರಕಾರಕ್ಕೆ ಹಿಂದಿನ ವರ್ಷಕ್ಕಿಂತ ಇನ್ನೂರು ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚು ಆದಾಯವುಂಟಾಗಿದೆ.

★ಅದೃಷ್ಟದ ಆಟ★

ಕತೆಗಾರರು. ಶ್ರೀ ಕೆ ನಾರಾಯಣ ರೈ, ವಕೀಲ್, ಪುತ್ತೂರು

ದಿನ ಬೆಳಿಗ್ಗೆ ಹೊತ್ತಾಗಿ ಎದ್ದು ನೋಡುವಾಗ ಆಕಾಶವು ಮೋಡಗಳಿಂದ ಮುಸುಕಿತ್ತು. ಯಾವುದೋ ಒಂದು ತರದ ಜಡತೆಯು ಲೋಕವನ್ನೇ ಆವರಿಸಿದ ಹಾಗಿತ್ತು.

ನಮ್ಮ ಮನೆಯೆದುರಿನ ಡಾಕ್ಟರ್ ಶ್ರೀಪತಿರಾಯರು ಆದಿನ ತನ್ನ ವೈದ್ಯಕೀಯ ವೃತ್ತಿಗೋಸ್ಕರ ಮನೆಯಿಂದ ಸ್ವಲ್ಪ ಅವಸರದಿಂದಲೇ ಹೊರಬಿದ್ದರು. ಮುಂಚಿನ ರಾತ್ರಿ ಯಾವನೋ ಒಬ್ಬ ರೋಗಿಯ ಅವಸಾನದ ಸಲುವಾಗಿ ಅವರು ತನ್ನ ಮನೆಯಲ್ಲಿರಲಿಲ್ಲ. ಹೀಗಾಗಿ ರಾತ್ರಿಯೆಲ್ಲಾ ಜಾಗರಣೆ. ಮನೆಗೆ ಬರುವಾಗ ಗಂಟೆ 10 ಆಗಿಹೋಗಿತ್ತು. ತನ್ನ 'ಡಿಸ್ಪೆನ್ಸರಿ'ಗೆ ಹೋಗಲು ಹೊತ್ತಾಗಲೇ ಮೀರಿ ಹೋಗಿತ್ತು. ಅದರ ಮೇಲೆ ನಿದ್ದೆಯಿಲ್ಲದುದರಿಂದ ತಲೆಶೂಲೆ ಮೊದಲಾಗಿತ್ತು. ಅವಸರದಿಂದ ಮುಖ ತೊಳೆದು ಕಾಪಿ ಕುಡಿದು ಮೋಟಾರು ಹತ್ತಿದರು. ತಡವಾಯಿತೆಂದು 40 ಮೈಲು ವೇಗದಿಂದಲೇ ಬಿಟ್ಟುಕೊಂಡು ಹೊರಟಿದ್ದರು ಆಗ . .

ಸಿಟಿ ಬಸ್ಸು ಸರ್ವಿಸಿನ ಡ್ರೈವರ ಸಾಲಿನ್ಸನ್ ಕಂಕನಾಡಿಯಲ್ಲಿ ತನ್ನ ಬಸ್ಸಿನಲ್ಲಿ ಮುಖ ಮುದುಡಿಸಿಕೊಂಡು ಕುಳಿತಿದ್ದನು. ಏನೋ ಒಂದು ವ್ಯಸನವು ಅವನನ್ನು ಕಾಡುತ್ತಿತ್ತು. ಒಂದಡೆ ತಗಣೆಗಳ ಕಾಟದಿಂದ ರಾತ್ರಿಯೆಲ್ಲಾ ಆತಗೆ ನಿದ್ರೆಯಿರಲಿಲ್ಲ. ಇನ್ನೊಂದೆಡೆ ಅನುದಿನ ಕಿಂಚಿತ್ತಾಗಿ ಕಾಡುವ ಹೆಂಡತಿಯ ಕಾಟ. ಪ್ರಾತಃಕಾಲ ಏಳುವಾಗ ಬಹಳ ಹೊತ್ತಾಗಿತ್ತು. ಮುಂಚಿನ ದಿನ ಬಡ್ಡಿಗೆ ನಂಬ್ರ 12ಕ್ಕೆ ರೂ ಕಟ್ಟಿದ್ದನು. ಆದರೆ ಆದಿನ ಬಂದ ನಂಬ್ರ 21 ಆಗಿತ್ತು. ಪಾಪ! ಎದ್ದು ನೋಡುವಾಗ ಮನೆಯಲ್ಲಿ ಗಂಜಿಯಾಗಿರಲಿಲ್ಲ. ಬರಿ ಹೊಟ್ಟೆಯಲ್ಲೇ ಅವಸರದಿಂದ ಆಫೀಸಿಗೆ ಬಂದು ನೋಡುವಾಗ ಮನೇಜರರು ಕೋಪದಿಂದ ಕೆಂಡಕಿಡಿಯಾಗಿದ್ದರು. ತಡವಾದುದಕ್ಕೆ ಸಾಲಿನ್ಸನಿಗೆ ರೂ ೫-ದಂಡ ವಿಧಿಸಿದ್ದರು. ಮೊದಲೆ ಮರ್ಕಟ ಎಂಬ ಹಾಗೆ ಸಾಲಿನ್ಸನ ಸ್ಥಿತಿಯಾಗಿತ್ತು. ಬಸ್ಸಿನಲ್ಲಿ ಕುಳಿತವನು ಇವುಗಳನ್ನೆಲ್ಲಾ ಯೋಚಿಸಿ, ಯೋಚಿಸಿ, ಬಸ್ಸು ಬಿಟ್ಟುಬಿಟ್ಟನು. ಲೋಕವೇ ತನ್ನ ಮೇಲೆ ಮುನಿದಿದೆಯೆಂಬ ಮುನಿಸಿನಿಂದಲೇ ಬಸ್ಸು ಬಿಡುತ್ತಿದ್ದನು. ಯಾವ ಆತ, ಜಾಗ್ರತೆಗಳಿಲ್ಲದೇನೆ ಬಿಡುತ್ತಿದ್ದನು ಆಗ . .

ಕೊರಗನು ತನ್ನ ಕೈಗಾಡಿಯಲ್ಲಿ ಸಕ್ಕರೆಯ ಗೋಣಿಗಳನ್ನು ತುಂಬಿಸಿಕೊಂಡು ಅನಂತ ಕಮ್ತಿಯವರ ಅಂಗಡಿಯಿಂದ ಹೊರಬಿದ್ದನು. ಅವನನ್ನು ಕಾಣುವಾಗ ಏನೋ ಭೂತ ಹಿಡಿದಂತಿದ್ದನು. ಆ ದಿನ ಅವನು ಬರುವಾಗ ತಡವಾಯಿತಂತೆ. ಅನಂತ ಕಮ್ತಿಯವರು ವಕೀಲ್ ರಾಮರಾಯರಲ್ಲಿಗೆ ಸಕ್ಕರೆ ಬೇಗ ಕಳುಹಿಸಿಕೊಡುವೆನೆಂತ ವಾಗ್ದಾನ ಮಾಡಿದ್ದರೂ ಕೊರಗನು ಸಮಯಕ್ಕೆ ಬೇಕಾದಾಗ ಇಲ್ಲ. ಇದಕ್ಕಾಗಿ ಕಮ್ತಿಯವರು ಅವನನ್ನು ಗದರಿಸಿ ಹೊಡೆಯಲು ಕೂಡಾ ಹೋಗಿದ್ದರು. ಆ ಕೊರಗನು ಸಕ್ಕರೆ ಗೋಣಿಗಳನ್ನು ರಾಮರಾಯರಲ್ಲಿ ಮುಟ್ಟಿಸದಿದ್ದರೆ 'ಖಬರ್ದಾರ್' ನೀನು ಮನೆಗೆ ಹೋಗಬಹುದೆಂದಿದ್ದರು. ಪಾಪದ ಬಡವಾಯಿ! ಆದಷ್ಟು ವೇಗದಿಂದ ಕೈಗಾಡಿಯನ್ನು ದೂಡುತ್ತಿದ್ದನು. ಎದುರಿಗೆ ಬರುವ ಜನಗಳ ಮತ್ತು ವಾಹನಗಳನ್ನು ಕೂಡಾ ಗಮನಿಸದೆ ಕೈಗಾಡಿಯನ್ನು ದೂಡುತ್ತ ಮುಂದರಿಯುತ್ತಿದ್ದನು ಕೊರಗ. ಆಗ . .

ತಾಲೂಕು ಕಚೇರಿಯ ಗುಮಾಸ್ತ ಅನಂತರಾಮನು ತಹಸೀಲ್ದಾರರ ಅಪ್ಪಣೆಯಂತೆ ೧೧ ಗಂಟೆಗೆ ಅವರನ್ನು ಕಾಣಲು ಆಫೀಸಿಗೆ ಹೊರಟಿದ್ದನು. ಮುಂಚಿನ ದಿನ ರಾತ್ರಿ ೧೨ ಗಂಟೆವರೆಗೆ ಆಫೀಸಿನಲ್ಲಿ ಕತ್ತೆ ಚಾಕರಿ ಮಾಡಿ ಬೇಸತ್ತು ಮನೆಗೆ ಬಂದು ಮಲಗುವಾಗ ಬಹಳ ಹೊತ್ತಾಗಿತ್ತು. ಪ್ರಾತಃಕಾಲ ಏಳುವಾಗ ತನ್ನ ಕೈಗಡಿಯಾರದಲ್ಲಿ ಗಂಟೆ ೯ ಆಗಿಹೋಗಿತ್ತು. ೧೧ ಗಂಟೆಗೆ ರಾಯರನ್ನು ಕಾಣಬೇಕು. ಆಗುಬಗೆಯಿಂದ ಹೊರಟು ಜಯಕೇಫಿಗೆ ಒಂದು ಕಾಫಿ ಕುಡಿಯಲು ಕುಳಿತು ಗೋಡೆ ನೋಡುವಾಗ ಗಂಟೆ ೧೧ ಆಗಲೇ ಆಗಿಹೋಗಿತ್ತು. ಕುಡಿದ ಕಾಪಿ ಗಂಟಲಲ್ಲೇ ಸಿಕ್ಕಿಕೊಂಡ ಹಾಗಾಯಿತು. ಪಾಪದ ಅನಂತರಾಮನಿಗೆ ತನ್ನ ಗಡಿಯಾರ ನಿಂತುಹೋಗಿತ್ತು. ಇನ್ನು ರಾಯರ ಆಗ್ರಹಕ್ಕೆ ಬಲಿಬಿದ್ದು ಮನೆಗೆ ಹೋಗುವ ಸಂದರ್ಭ ಒದಗಿತೆಂಬ ಭಯ. ಒಂದೇ ಗುಟುಕಿನಲ್ಲಿ ಕಾಫಿ ಕುಡಿದು ಅಲ್ಲಿಂದ ಆಫೀಸಿಗೆ ಓಡಿದ. ಕಾಲು ನಡಿಗೆಯವರನ್ನು ಹಿಂದಿಕ್ಕಿ ಓಡಿದ. ವಾಹನಗಳ ವೇಗವನ್ನು ಮೀರಿ ಓಡಿದ. ಭಯ ಮತ್ತು ಅವಸರಗಳಿಂದ ಓಡಿದ. ಆಗ . .

ಗರ್‍ರ್‍ರ್‍ರ್‍ರ್ ಎಂದಿತು. ಅಯ್ಯೋ ಎಂಬ ಬೊಬ್ಬೆ. ಮೋಟಾರು ಕಾರಿನ ಬ್ರೇಕುಗಳ ಕಿರಿಚಾಟ. ಜನರ ಗುಂಪು. ಪೋಲೀಸರು. ಅನಂತರಾಮನು ಕಾರಿನಡಿಗೆ ಬಿದ್ದು ಮೃತಪಟ್ಟಿದ್ದನು. ಡಾ! ಶ್ರೀಪತಿ ರಾಯರ ಕಾರಿನ ಚಕ್ರಗಳಡಿಗೆ ಆತನ ದೇಹವು ಸಿಲುಕಿ ಛಿದ್ರ ಛಿದ್ರವಾಗಿತ್ತು. ಆ ದೃಶ್ಯವು ಬಹು ಭೀಭತ್ಸವಾಗಿ 'ಅಯ್ಯೋ' ಎನಿಸುತ್ತಿತ್ತು. ಶ್ರೀಪತಿರಾಯರು ತನ್ನ ಕಾರನ್ನು ಬಹು ವೇಗದಿಂದ ಓಡಿಸುತ್ತಿದ್ದರು. ಆಗ ಕೊರಗನ ಕೈಗಾಡಿಯಿಂದ ಸಕ್ಕರೆಯ ಗೋಣಿಯೊಂದು ಜಾರಿ ಕೆಳಗೆ ಬಿತ್ತು. ಅಷ್ಟರಲ್ಲಿ ಸಾಲಿನ್ಸನ ಬಸ್ಸು ಇವುಗಳನ್ನು ತಪ್ಪಿಸಿ ಇನ್ನೊಂದು ಬದಿಗೆ ಹೋಗುವಾಗ ಅನಂತರಾಮನು ಅದೇ ಬದಿಗೆ ಓಡಿದನು. ಶ್ರೀಪತಿರಾಯರು ಆಗ ಕಾರು ತಿರುಗಿಸಿ ಅನಂತರಾಮನು ಓಡಿದ ಕಡೆಗೆ, ಬಿಟ್ಟುಬಿಟ್ಟಿದ್ದರು. ಅನಂತರಾಮನು ಪಕ್ಕನೆ ಕಾರಿನ ಅಡಿಗೆ ಬಿದ್ದುಬಿಟ್ಟನು.

ಅನಂತರಾಮನ ಶವದ ಮೇಲೆ ಪೋಲೀಸರು 'ಇಂಕ್ವೆಸ್ಟ್' ನಡಿಸಿದರು. "ಎಕ್ಸಿಡೆಂಟಲ್ ಡೆತ್" (ಆಕಸ್ಮಿಕ ಮರಣ) ಎಂಬ ತೀರ್ಪು. ಡಾ! ಶ್ರೀಪತಿರಾಯರಿಗೆ ತಮ್ಮ ಅಜಾಗರೂಕತೆಗೆ ಜುಲುಮಾನೆಯಾಯಿತು. ಸಾಲಿನ್ಸನಿಗೆ ಕೂಡಾ ಜುಲುಮಾನೆ ವಿಧಿಸಿದರು. ಕೈಗಾಡಿಯ ಕೊರಗನಿಗೆ ಪಾಪ ೩ ವಾರಗಳ ಸಜೆಯಾಯಿತು.

ಆ ದಿನ ಅವರೆಲ್ಲರೂ ತಡವಾಗಿಯೇ ಹೊರಟಿದ್ದರು. ಆದರೆ ಅನಂತರಾಮನು ಪರಲೋಕವಾಸಿಯಾದನು. ಇಂಕ್ವೆಸ್ಟಿನ ಸಮಯ, ಅವನು ಪೂರ್ತನಾಡಿ ಸಕ್ತನಿದ್ದರೆ ತನ್ನದು ಕೂಡಾ ತಪ್ಪೆಂದು ಹೇಳಿಕೆ ಕೊಡುತ್ತಿದ್ದನು. ಅವನು ಕೂಡಾ ಆಫೀಸಿಗೆ ತಡವಾಗಿಯೇ ಹೊರಟಿದ್ದನು. ಆದರೆ ಆ ಸಣ್ಣ ತಪ್ಪಿಗೆ ತನ್ನ ದೇಹವನ್ನು ದಂಡ ತೆತ್ತನು. ಮರಣಶಿಕ್ಷೆಯು ಕೊಲೆಗಡುಕರಿಗೆ ನಮ್ಮ ದೇಶದ ನ್ಯಾಯಾಸನದ ಪ್ರಕಾರ ವಿಧಿಸಲ್ಪಡುತ್ತಿದೆ. ಆದರೆ ಕೆಲವು ವೇಳೆ ವಿಧಿಯು ಮನುಷ್ಯರನ್ನು ಅವರ ಯಾವ ತಪ್ಪುಗಳಿಲ್ಲದೆಯೂ ಕೊಲೆಗಾರರಂತೆ ಎಣಿಸುತ್ತದೆ. ಅದೃಷ್ಟದ ಆಟ ಹಾಗೆ! ಜೀವನದ ಕಹಿ ವಿಡಂಬನೆ ಹಾಗೆ!

(ಇಂಗ್ಲಿಷು ಕತೆಯೊಂದರ ಆಧಾರದಿಂದ)

ಪದಾರ್ಥಗಳ ಬೆಲೆಗಳು
ಇಳಿಯುತ್ತಲೇ ಇವೆ.
ಕೊಳ್ಳುವ ಆತುರದಲ್ಲಿ
ಮೋಸಹೋಗಬೇಡಿ

ಕಳೆದ ವರ್ಷದ ನಡವಳಿಕೆಗಳು, ಸರಕುಗಳು, ಸ್ಥಿರಸ್ವತ್ತು, ಚರಸ್ವತ್ತು ಮುಂತಾದ ವಸ್ತುಗಳ ಮೇಲೆ ಹಾಕಿದ ಬಂಡವಾಳವು ಬಹಳ ನಷ್ಟಕ್ಕೆ ಈಡಾದವೆಂಬುದನ್ನು ಸ್ಪಷ್ಟವಾಗಿ ಸ್ಥಾಪಿಸುತ್ತವೆ. ಹೇಗೆಂದರೆ, ಬೆಲೆಗಳು ಕಡಿಮೆಯಾದುದರಿಂದ, ಆ ಪದಾರ್ಥಗಳಮೇಲೆ ಹಾಕಿದ ಬಂಡವಾಳವು ನಮ್ಮ ಕಣ್ಣಿಗೆ ಕಾಣಿಸದಷ್ಟು ಸಂಕುಚಿತವಾಗಿರುತ್ತದೆ!

ಸುರಕ್ಷಿತವಾದ ಮಾರ್ಗಗಳಲ್ಲಿ ಧನವನ್ನು ವಿನಿಯೋಗಿಸಿದವರು ನಿಜವಾಗಿಯೂ ಸೌಭಾಗ್ಯವಂತರೇ ಸರಿ. ಅವರ ಶ್ರಮಾರ್ಜಿತವಾದ ಬಂಡವಾಳವು ವೃದ್ಧಿಯನ್ನು ಹೊಂದಿರುತ್ತದೆ. ಅವರು ವಿವೇಕದಿಂದ ವಿನಿಯೋಗಿಸಿದ ಹಣಕ್ಕೆ ಬೆಲೆಯು ಹೆಚ್ಚಿದೆ. ಇದರ ಜೊತೆಗೆ, ಗವರ್ನಮೆಂಟಿನವರು ಚಲಾವಣೆಗೆ ತಂದಿರುವ, ಬೆಲೆಗಳನ್ನು ಹತೋಟಿಗೆ ತೆಗೆದುಕೊಳ್ಳುವ ಕಾನೂನುಗಳು ಮತ್ತು ಪದಾರ್ಥಗಳ ತಯಾರಿಗೆ ಸರ್ಕಾರದವರು ಕೊಡುತ್ತಿರುವ ಉತ್ತೇಜನ, ಇವುಗಳ ಸಹಾಯವೂ ಸೇರಿ, ಅಪ್ರಾಮಾಣಿಕ ವ್ಯಾಪಾರಿಗಳು, ಸರಕುಗಳನ್ನು ಬಚ್ಚಿಟ್ಟು, ಅವುಗಳ ಬೆಲೆಯನ್ನು ಮಿತಿಮೀರಿ ಹೆಚ್ಚಿಸಬೇಕೆಂದು ಮಾಡುತ್ತಿರುವ ಪ್ರಯತ್ನಗಳನ್ನು ಸೋಲಿಸುತ್ತಿವೆ. ಇವರುಗಳು ತಮಗ ಮಾತ್ರವೇ ಅಲ್ಲ, ಇಡೀ ಭರತಖಂಡಕ್ಕೇನೆ ಮಹದುಪಕಾರವನ್ನು ಮಾಡಿರುತ್ತಾರೆ.

ಈ ಸತ್ಕಾರ್ಯವನ್ನು ಬಿಡದೇ ಮಾಡುತ್ತಿರಿ. ಬೆಲೆಗಳು ಇನ್ನೂ ಇಳಿಯುತ್ತಲೇ ಇರುವುದಲ್ಲದೆ, ಜನಗಳು ಎಲ್ಲಿಯವರೆವಿಗೆ ಮಿತವ್ಯಯವನ್ನು ಮಾಡಿ ಹಣವನ್ನು ಉಳಿಸ ಬಲ್ಲರೋ ಅಲ್ಲಿಯವರೆವಿಗೆ ಇಳಿಯುತ್ತಲೇ ಹೋಗುತ್ತವೆ. ಈಗ ಅನೇಕರ ಅನುಭವಕ್ಕೆ ಬಂದಿರುವಂತೆ, ಹಣವನ್ನು ಈ ಕೆಳಗೆ ನಮೂದಿಸುವ ಮಾರ್ಗಗಳಲ್ಲಿ ವಿನಿಯೋಗಿಸುವುದೇ ಅತ್ಯುತ್ತಮ. ಈ ಮಾರ್ಗಗಳಲ್ಲಿ ಪ್ರತಿಯೊಂದೂ, ಸಂಪೂರ್ಣ ಭದ್ರತೆ ಉಳ್ಳದ್ದಾಗಿರುತ್ತದೆ. ಅವುಗಳು ಯಾವವೆಂದರೆ — ಕೋ ಆಪರೇಟಿವ್ ಸಂಘಗಳು, ಇನಷೂರೆನ್ಸ್ (ವಿಮೆ), ಸೇವಿಂಗ್ಸ್ ಬ್ಯಾಂಕುಗಳಲ್ಲಿ ಖಾತೆ ತೆರೆಯುವುದು, ಗವರ್ನಮೆಂಟ್ ಲೋನುಗಳು, ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳು, ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕುಗಳು

ಹಣವನ್ನು ಕೈಲಾದ ಮಟ್ಟಿಗೂ
ಉಳಿಸಿರಿ
ಉಳಿಸಿದ್ದನ್ನು ವಿವೇಕಮಾರ್ಗಗಳಲ್ಲಿ ವಿನಿಯೋಗಿಸಿರಿ

ಬಟ್ಟೆಬರೆಗಳು, ಮೇಜು, ಕುರ್ಚಿ ಮೊದಲಾದ ಸಾಮಾನುಗಳು, ಗಾಜಿನ ಸಾಮಾನುಗಳು, ಸೈಕಲ್‌ಗಳು, ಮೋಟಾರ್ ಗಾಡಿಗಳು ಇವೇ ಮುಂತಾದ ಸಾಮಾನುಗಳನ್ನು ಅನವಶ್ಯಕವಾಗಿ ಕೊಳ್ಳುವುದರಲ್ಲಿ ಹಣವನ್ನು ಸರ್ವಥಾ ವೆಚ್ಚ ಮಾಡಬೇಡಿ. ಅಲ್ಪ ದಿನಗಳ ಮೇಲೆ ಇವುಗಳನ್ನು ಬಹಳ ಸುಲಭ ಬೆಲೆಗೆ ಕೊಳ್ಳಬಹುದು. ಈ ಯುದ್ಧ ನಡೆಯುವವರೆವಿಗೂ ಭೋಗ್ಯವಸ್ತುಗಳನ್ನು ತ್ಯಜಿಸಿರಿ. ನಿಮ್ಮ ಸ್ವಂತ ಸುಖಕ್ಕೂ, ಭರತಖಂಡದ ಅಭಿವೃದ್ಧಿಗೂ ನಿಜವಾದ ಮಾರ್ಗ ಇದೇ.

ದಾಸ್ಯಮುಖವು ನಿಮ್ಮ ಸಮಕ್ಷಮದಲ್ಲಿ ಮಾಡುವ ವಿನಂತಿಯು ಇದೇ.

AA\ 1118 KN

The Pangal Nayak Bank Limited.

(Incorporated in 1930.)

Registered Office Court Road, UDIPI.

Branches at— Udipi, Mangalore, Katapadi, Kanhangad, Kinnigoli and Nileshwar, South Canara District

Discounting of demand and short term negotiable instruments for approved parties, granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms acceptance of Fixed, Current, Savings Bank and Cumulative deposits and every other type of up-to date Banking service is at the disposal of all the sections of the discreet public

For business proper please enquire at any one of our Offices.

15th April 1944

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,.... ಚಟ್ಟ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ.

Ayurveda Oushadalaya GADAG

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ ೪ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ2ಬೊಟ್ಟು ಒಂದೇ ಗ ಯಾ ಹಿತವಾದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಅಂತರದಲ್ಲಿ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು.—ಡಾ॥ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ ಪ್ರೈ॥ ಅರ್॥ ಎಸ್॥ ಶೆಟ್ಟಿ, ರಥಬೀದಿ; ಡಾ॥ ಟಿ॥ ಜಿ॥ ಆಚಾರ್ಯ್ಸ ಫಾರ್ಮಸಿ; ಡಾ॥ ಕೆ॥ ಶೀನಪ್ಪ ಶೆಟ್ಟಿ, L. I. M., ಡಾ॥ ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ಲಕ್ಷಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)

೮ ಔನ್ಸಿನ ಬಾಟ್ಲಿಗಳು ಹಟ್ಟ,ಕಡಿಮೆ ಆದಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ. ಕ.

— ಮಕ್ಕಳನ್ನು ಹಡೆಯುವದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ 5—0—0 ಪೋಸ್ಟ ಚಾರ್ಜು ೧೦ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ ದಾವಣಗೇರಿ:—ದಾವಣಗೇರಿ ಪ್ರೆಸ್. ಅರ್. ಎಲ್. ಕಮಲದಾಸ, ಕೆಮಿಸ್ಟ್, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ಯಾಟಲಾಗ್ ಬರದಲ್ಲಿ ರೋಗಕ್ಕೆ ತಕ್ಕ ಸಾದ ಔಷಧ ಕಳುಹಿಸಲಾಗುವುದು. ಉಡುಪಿ ಏಜಂಟರು:— ನವಭಾರತ ಬುಕ್ ಡಿಪೊ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ. **ಬೆಲೆ ೦—೧೦—೦**

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೋಲಿಸಿ ಪರಿಯುವ ಮಾತು.

ಪ್ರೇಮಪ್ರವಾಹವು ಹೇಗೆ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮಪ್ರವಾಹ

ಸ್ವಾರಸ್ಯವಾದ ೫ ಕತೆಗಳ ಸಂಗ್ರಹ **ಬೆಲೆ ೦—೬—೦**

ಬಹಿರಂಗವಾಗಿ ಅಲ್ಲವಾದರೂ ಅಂತರಂಗವಾಗಿ ನೋಡತಕ್ಕ

ಆರ್ಟ್ ಚಿತ್ರಗಳು

ಹಲವಾರು ಸುಂದರಿಯರ ನೈಜಚಿತ್ರಗಳ ಕಟ್ಟು. ಬೆಲೆ ೦—೬—೦

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಕುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. **ಬೆಲೆ. ೧—೮—೦**

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. **ಬೆಲೆ: ೦—೧೨—೦**

ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಿಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd. No. M. 3618.

ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6.

Estd. 1921 ಸ್ಥಾಪನೆ.

NAVAYUGA
ನವಯುಗ

ವರ್ಷ ೨೪] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. [Vol. 24
ವಾರ ೧೧] Founder SRI A. B. SHETTY. [No. 11

ಉಡುಪಿ • 16-11-1944 • ಮಂಗಳೂರು

ದಿ ಜುಪಿಟರ್
ಜನರಲ್ ಇನ್ಶ್ಯೂರೆನ್ಸ್
ಕಂಪೆನಿ, ಲಿ., ಬೊಂಬಾಯಿ.

ವಿಮೆಯಿಳಿಸ ಬೇಕೆ?
ಏಜಂಟರಾಗುವಿರಾ!

—ಹಾಗಾದರೆ ಕೂಡಲೇ—

ಪಿ. ಡಿ. ನಾಣಯ್ಯ, ಬಿ.ಎ.ಬಿ.
ದಕ್ಷಿಣ ಕನ್ನಡದ ಚೀಫ್ ಏಜೆಂಟ್.

—ಇವರಿಗೆ ಬರೆಯಿರಿ—

1 ಕೋಟಿಗೆ ಮಿಕ್ಕಿ ವ್ಯವಹಾರ!
ಈ ವರುಷವೇ ರಜತೋತ್ಸವ!

The Jupiter General
Insurance Company Ltd

Transact with

The Vijaya Bank Ltd.

H. O. MANGALORE.

Branches all over the District
and in Bombay city,
For all kinds of Banking business

ದಿ ವಿಜಯ ಬೇಂಕ್
ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು.

ಜಿಲ್ಲೆಯ ಎಲ್ಲಾ ಕಡೆಗಳಲ್ಲಿ ಮತ್ತು ಮುಂಬಾಯಿ ನಗರದಲ್ಲಿ ನಮ್ಮ ಶಾಖೆಗಳು

ಎಲ್ಲಾ ತರದ ಬೇಂಕಿಂಗ್ ವ್ಯವಹಾರಗಳು ನಡೆಸಲ್ಪಡುವುದು.

"We are glad to announce that the Canara Bank Ltd., are our Clearing agents at Bombay".

ದಿ ಕೆನರಾ ಬ್ಯಾಂಕ್ ಲಿಮಿಟೆಡ್‌ಯವರು ನಮ್ಮ ವಿಜಯಾ ಬ್ಯಾಂಕಿನ ಕ್ಲಿಯರಿಂಗ್ ಏಜಂಟರಾಗಿರುತ್ತಾರೆಂದು ತಿಳಿಸಲು ಸಂತೋಷಪಡುತ್ತೇವೆ.

M. M. Bhandary,
Agent Bombay Branch

ಕ್ರೌನ್
ರಬ್ಬರ್ ಸ್ಟಾಂಪ್ ಕಂಪೆನಿ
18 ಬಲ್ಮಠ ರಸ್ತೆ, ಮಂಗಳೂರು.
ರಬ್ಬರ್ ಮೊಹರು ಸ್ಟೆನ್ ಬೋರ್ಡ್
ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co.
18 Balmat Road, MANGALORE
Approved firm by the Govt. of Mysore.
Certified by the Agent of the Govt. of India in Ceylon. ESTD 1906

☞ ಮುಟ್ಟಾಗುವಿಕೆ ☜

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ—'ಕುಮಾರಿ' (Govt Regd) ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ 3/- ಕ್ಲಿಮಿರಿದ ಕೇಸುಗಳಿಗೆ ರೂ.5, (ವಿ.ಪಿ.12 ಆಣೆ ಅಲಾಯಿದ) Mrs P. DEVEE, P. B. 9, (N) Tollygunge, Calcutta.
ಸ್ಟಾಕಿಸ್ಟ್: ಪೊಪ್ಯುಲರ್ ಸ್ಟೋರ್ಸ್,
ಮಂಗಳೂರು.

CHAMPAE'S
Snow & Castrex
Sole Distributers for (India.)
Sukhananda Stores
Santhekatte, UDIPI, S. K.

BAG ON HIS HEAD

If you saw any passenger sitting in a train with his bag on his head, you will laugh your sides out because good arrangements are made in the train to keep the luggage

One worrying about one's future and that of one's family is like the passenger with his bag on the head because fine arrangements to ensure them through insurance are easily available.

THE CANARA MUTUAL
ASSURANCE CO., LTD.,
UDIPI (S. India)

ENGLISH MADE EASY

ಇಂಗ್ಲಿಷ್ ಏನೂ ತಿಳಿಯದವರು 'ಸುಲಭದಲ್ಲಿ ಇಂಗ್ಲಿಷ್' ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೇ ಕಲಿತುಕೊಳ್ಳಬಹುದು.

ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.
ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ.

ಬೆಲೆ ಬರೇ ರೂ '—4—0 ರೂ 1-8-0ನ್ನು ಮನಿ ಯಾರ್ಡರು ಮಾಡಿದರೆ ... ಲ್ಪಡುತ್ತೆ.

ನವಭಾರತ ಪುಸ್ತಕ ಭಂಡಾರ,
ರಿಜಿಸ್ಟರ್ಡ್ ಪಬ್ಲಿಷರ್ಸ್ ಎಂಡ್ ಬುಕ್ ಸೆಲ್ಲರ್ಸ್,
ಉಡುಪಿ, ದ. ಕ.

CO-OPERATION - - - -

Life Assurance is the business based on the idea of mutual co-operation. By diverting a small portion of one's earning for paying premiums, we co-operate for the good of the family and safeguard the education of children.

Let us assist you in taking out a Policy under the plan best suited to you. Write now to:—

KOCHIKAR BROTHERS LTD.
Chief Agent for South India
THE BOMBAY LIFE ASSCE. CO., LTD.
[Estd 1908]
The "Bombay Life" Bldg., UDIPI S. K.

Offices and Agencies throughout South India.

ಅಂತರಂಗ

ಅಖಿಲ ಕರ್ನಾಟಕದ ಹೊಸ
ಮಾದರಿಯ ಸಚಿತ್ರ
ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ. 0—1—6

ಅಮೃತಾಂಜನ ತಲೆನೋವು, ಶಿರೋವೇದನೆ, ಉಳುಕು, ಕತ್ತಿಗೆ, ಘುಟ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವದು, ಚೇಳು ವಿಷ ಮುಂತಾದ ಚೇನ ಪಕ್ಷವಾತ, ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಔಷಧ, ಹುಳುಕಡ್ಡಿ ಮದ್ದು ಗಳು ಸಮಸ್ತ ಅಂಗಡಿಗಳಲ್ಲಿ ಸಿಕ್ಕುತ್ತದೆ.

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S. K.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಮೂರನೇ ಸಂಪುಟಾರಂಭವಾಗಿದೆ
ವಿದ್ಯಾ ಇಲಾಖೆಗೆ ಸಂಬಂಧಿಸಿದ
ಸರ್ಕ್ಯೂಲರುಗಳೂ ಪ್ರಕಟ
ವಾಗುತ್ತವೆ.
ವಾರ್ಷಿಕ ಚಂದಾ
ರೂ 1—8—0 ಮಾತ್ರ
ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

Decorate your home with
Life-like Oil Painting
of those dear and near to you
M. S. Shirale.
MODERN STUDIO.
UDIPI

ಯೋಗ್ಯ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಿಯಾಯಿತಿ ಯ ಬೆಲೆಯಲ್ಲಿಯೂ ದೊರೆಯುತ್ತವೆ.

ಕಲ್ಯಾಂಜೆ ನ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಈ ವಾರದ ಕಥೆ

★ ಮೇರಿಬಾಯಿ ★

ಕತೆಗಾರ: ಶ್ರೀ. 'ದಾಂತಿ'.

ನನ್ನನ್ನು 'ವಿಲೇಜ್ ಪೋಸ್ಟ್‌ಮೇನ್' ಗಿ 'ದಾಳೂರು' ಪೋಸ್ಟಾಫೀಸಿಗೆ ವರ್ಗಾಯಿಸಿದ್ದರು. 'ವಿಲೇಜ್ ಪೋಸ್ಟ್‌ಮೇನ್' ಆದುದರಿಂದ ಸೋಮವಾರ ಪೋಸ್ಟಾಫೀಸಿನಿಂದ ಹೊರಟರೆ ಶನಿವಾರ ಹಿಂತಿರುಗಿ ಬರಬೇಕಿತ್ತು. ಈ ಮಧ್ಯೆ ಹಲವು ಗ್ರಾಮಗಳನ್ನು ತಿರುಗಬೇಕಿತ್ತು. ಸರತಿ ಪ್ರಕಾರ ಮೊನ್ನೆ ಬುಧವಾರ 'ಚಿಕ್ಕೂರು' ಗ್ರಾಮಕ್ಕೆ ಹೋಗಿದ್ದೆ. ಚಿಕ್ಕೂರು ಮೇರಿ ಬಾಯಿಗೆ ಒಂದು ಕಾಗದವಿತ್ತು. ವಿಚಾರಿಸುತ್ತಾ ಮೇರಿಯ ಮನೆಯತ್ತ ಕಡೆ ಹೋದೆ. ಮಳೆಯು ಧಾರೆಯಾಗಿ ಸುರಿಯುತಿತ್ತು. ಹೊತ್ತು ಸಾಯಂ ಗಂಟೆ 6ಕ್ಕೆ ಮೀರಿತ್ತು.

* * *

ಗ್ರಾಮದ ಪಕ್ಕದ ಒಂದು ಗುಡ್ಡೆಯ 'ಡಕಾಂಸಿ'ನಲ್ಲಿ ಅವಳ ಜೋಪುಡಿ. ಅಂಗಳದಲ್ಲಿ ನಿಂತುಕೊಂಡು ಮೇರಿ ಬಾಯಿಯನ್ನು ಕೂಗಿ ಕರೆದೆ. ಉತ್ತರವಿಲ್ಲ. ಹೊರಗೆ ವಿಪರೀತ ಮಳೆ ಸುರಿಯುತಿದ್ದುದರಿಂದ ಜಗಲಿಗೆ ಹೋದೆ. ಜಗಲಿಯ ಹಲವು ಕಡೆಗಳಲ್ಲಿ ಸೋರುತಿತ್ತು. ಪುನಃ ಕರೆದೆ. ನಿರುತ್ತರ. ಅದಕ್ಕೆ ಪ್ರತಿಯಾಗಿ ಅಮ್ಮಾ ಎಂಬ ಧ್ವನಿ ಕೇಳಿಸಿತು ಒಳಗಿಂದ. ಒಳಕ್ಕೆ ಇಣಕಿ ನೋಡುವಾಗ ಕೋಣೆಯ ಒಂದು ಪಕ್ಕದಲ್ಲಿ ಹರಕು ಚಾಪೆಯ ತುಂಡೊಂದರಲ್ಲಿ 1-2 ವರ್ಷದ ಮಗುವೊಂದು ಬಿದ್ದುಕೊಂಡಿತ್ತು. ಮೇರಿಯು ಹೊರಗೆ ಹೋಗಿರುವಳು; ಈಗ ಬರಬಹುದು ಎಂದು ಊಹಿಸಿ ಸ್ವಲ್ಪ ನಿಂತುಕೊಂಡೆ.

* * *

ಸ್ವಲ್ಪ ಸಮಯ ದಾಟುವಷ್ಟರಲ್ಲಿ ಒಂದು ಸ್ತ್ರೀ ವ್ಯಕ್ತಿಯು ಕೈಯಲ್ಲೊಂದು ಗಂಟನ್ನು ಹಿಡಿದುಕೊಂಡು ಒಳಕ್ಕೆ ಬಂತು. ಪ್ರಾಯ 20ಕ್ಕೆ ಮಿಕ್ಕಿರಲಾರದು. ಸಂಶಯವಿಲ್ಲ. ಅವಳೇ ಮೇರಿಯಾಗಿರಬೇಕೆಂದು ಅನುಮಾನಿಸಿದೆ.

"ಅಮ್ಮಾ ನಿಮಗೊಂದು ಕಾಗದವಿದೆ. ಮೇರಿ ಬಾಯಿ ಎಂದರೆ ನೀವಲ್ಲವೆ?"

"ಹೌದು ಬಂದೆನು; ಸ್ವಲ್ಪ ತಡೆಯಿರಿ"

ಮೇರಿಯು ಒಳಹೊಕ್ಕು ಮಗುವನ್ನು ಎತ್ತಿಕೊಂಡು ಸಮಜಾಯಿಸುತ್ತಾ ಹೊರಕ್ಕೆ ಬಂದು—

"ಯಾರದು ಕಾಗದ? ಸ್ವಲ್ಪ ಓದಬಹುದೇ?"

ಓದಲು ಒಪ್ಪಿಕೊಂಡೆನು. ಮೇರಿಯು ಸಣ್ಣ ಹಣತೆಯನ್ನು ಹೊತ್ತಿಸಿ ತಂದಿಟ್ಟು ಮಗುವಿಗೆ ಮೊಲೆಯುಣಿಸುತ್ತಾ ಕುಳಿತಳು. ನಾನು ಕಾಗದವನ್ನು ಓದತೊಡಗಿದೆ.

ಪತ್ರ

ಬೈಕುಲ,
24-10-44

ಪ್ರಿಯ ಮೇರಿ,

ನಿನ್ನ ಪತಿಯು ಬೊಂಬಾಯಿಗೆ ಬಂದಿರುವನೆಂದೂ ನೀನು ಬಹಳ ಕಷ್ಟದಲ್ಲಿರುವಿಯೆಂದೂ ಕೇಳಿದ್ದೇನೆ. ತಾರೀಕು 30ಕ್ಕೆ 15 ರೂಪಾಯಿಗಳನ್ನು ಕಳುಹಿಸುತ್ತೇನೆ- ಒಪ್ಪಿಗೆಯಿರುವುದಾದರೆ ಬೊಂಬಾಯಿಗೆ ಬಾ. ಖರ್ಚಿಗೆ ರೂಪಾಯಿ ಕಳುಹಿಸುತ್ತೇನೆ. ಬರಬೇಕೆಂದು ಪ್ರಾರ್ಥನೆ ನಿನ್ನ ಮಗನಿಗೆ ನನ್ನ ಆಶೀರ್ವಾದಗಳು.

ನಿನ್ನವನಾದ
ಸೇಟ್ ಮೋಹನ್‌ದಾಸ್

ಓದಿ ಮುಗಿಸಿ ಮೇರಿಯ ಮುಖವನ್ನು ನೋಡಿದೆ ಅದು ದುಃಖಭಾವವನ್ನು ಪ್ರಕಟಿಸುತಿತ್ತು.

* * *

ಇಷ್ಟರಲ್ಲಿ ಕತ್ತಲು ಕವಿದು ಬಿಟ್ಟಿತು ಮಳೆಯು ತನ್ನ ಪರಿವಾರಗಳಾದ ಮಿಂಚುಡಿಲುಗಳಿಂದ ಕೂಡಿಯೇ ಸುರಿಯುತಿತ್ತು. ನನಗೆ ಹೆದರಿಕೆ ಸ್ವಲ್ಪ ಜಾಸ್ತಿ. ಅಂದಾಜಿನಿಂದ ಹೋಗುವ ಎಂದರೆ ಹೊಚ್ಚ ಹೊಸತಾದ ದಾರಿ.

"ಬೆಳಕಿಗೆ ಏನಾದರೂ ಕೊಡಬಹುದೇ?"

"ಅಯ್ಯೋ. ಏನೂ ಇಲ್ಲವಲ್ಲ."

"ಇಲ್ಲಿಂದ ಶಾಂತಪ್ಪಯ್ಯನವರ ಮನೆಗೆಷ್ಟು ದೂರ?"

"ಒಂದು ಕೂಗಾಗಬಹುದು"

"ಯಾವ ಕಡೆಗೆ ಹೋಗಬೇಕು?"

"ಹೇಗೆ ಹೋಗುತ್ತೀರಿ ಈಗ? ಅವರೂ ಮಲಗಿರಬಹುದು. ಇಲ್ಲದಿದ್ದರೆ ಮಲಗಿಕೊಳ್ಳಿ ಇಲ್ಲಿಯೆ; ಜಗಲಿಯ ಆ ಮೂಲೆಯಲ್ಲಿ ಸ್ವಲ್ಪ ಸೋರದ ಸ್ಥಳವಿದೆ." ನಿರ್ವಾಹವಿಲ್ಲದೆ ಒಪ್ಪಿಕೊಂಡೆ ಎಲ್ಲಿಯಾದರೇನು ರಾತ್ರಿ ಕಳೆದರಾಯಿತು ನನಗೆ.

* *

ಮೇರಿಯು ಅನ್ನಕ್ಕೆ ಎಸರಿಡುತಿದ್ದಳು. ಮಗುವು ಕೂಗುತಿತ್ತು.

"ನನ್ನ ಮಗುವಿಗೆ ಸ್ವಲ್ಪ ಜ್ವರ ಬರುತ್ತದೆ"

"ಮದ್ದು ಮಾಡಿಲ್ಲವೆ."

"ನಿನ್ನೆ ಸ್ವಲ್ಪ ಕಷಾಯ ಕೊಟ್ಟಿದ್ದೇನೆ"

"ಮಲವಿಸರ್ಜನೆಯಾಗಿದೆಯೇ?"

"ಮೊನ್ನೆ ಗೋದಿ ಗಂಜಿ ಉಂಡಂದಿನಿಂದ ಸರಾಗವಾಗಿ ಆಗುವುದಿಲ್ಲ."

"ನಿಮಗೆ ರೇಶನ್ ಕಾರ್ಡು ಆಗಿದೆಯೇ?"

"ಹೌದು. ಇಲ್ಲದಿದ್ದರೆ ಈ ವರ್ಷ ಉಪವಾಸ ಬೀಳಬೇಕಿತ್ತು. ಗೋದಿಯಾಗಲಿ ಮಣ್ಣಾಗಲಿ ಕೊಡುತ್ತಾರಲ್ಲ. ಅದೇ ಪುಣ್ಯ. ಕಳೆದ ಸಾರಿ ಎಲ್ಲೂ ರೇಶನ್ ತರಲಿಕ್ಕೆ ದುಡ್ಡಿರಲಿಲ್ಲ ಮೊನ್ನೆ ಅಕ್ಕಿ ಮುಗಿಯಿತು. ಹೋಗಿ ದಮ್ಮಯ್ಯ ಹಾಕಿದೆ ಶಾಂತಪ್ಪಯ್ಯನವರಲ್ಲಿ ಒಂದು ಪಾವು ಅಕ್ಕಿ ಕೊಡಿರೆಂದು. ಇಲ್ಲವೆಂದರು. ಮಗುವಿಗಾಗಿ ಬೇಡಿದೆ, ಕೊಡಲಿಲ್ಲ".

"ಶಾಂತಪ್ಪಯ್ಯನವರು ಉದಾರಿಗಳಂತೆ. ಮೊನ್ನೆ ಒಂದು ಪತ್ರಿಕೆಯಲ್ಲಿ ಅವರ ಗುಣಗಾನ ಮಾಡಿದ್ದರು".

'ಇರಬಹುದು ನನಗೆ ಮಾತ್ರ ಕೊಡಲಿಲ್ಲ, ಅವರಿಗೇನು ಸ್ವಾಮಿ, ಬಡತನದ ಅನುಭವವಿಲ್ಲ. ದೇವರು ಬೇಕಾದಷ್ಟು ಕೊಟ್ಟಿದ್ದಾನೆ. ನನ್ನಂತೆ ಈ ಗೋದಿ ಬೇಯಿಸಿ ಕುಡಿಯಬೇಕೆ? ಊಟಕ್ಕೆ ಬೇಕಾದಷ್ಟು ಅಕ್ಕಿ ಇದೆ."

"ಇಲ್ಲಿ ಸ್ಟೋರಿನಲ್ಲಿ ಅಕ್ಕಿ ಸಿಗೋದಿಲ್ಲವೇನು?"

"ಎಂಟು ಆಣೆ ಕೊಂಡು ಹೋಗಿದ್ದೆ 1ಸೇರು ಅಕ್ಕಿ, 2ಪಾವು ಗೋದಿ ಕೊಟ್ಟಿದ್ದಾರೆ. "2ಪೈ ಹಿಂದೆ ಕೊಡಬೇಕು; ಚಿಲ್ಲರೆ ಇಲ್ಲ"-ಅಂದರು."

"ರಶೀದಿ ಕೊಡಲಿಲ್ಲವೇನು?"

"ಕೊಟ್ಟಿದ್ದಾರೆ. ಇಗೊಳ್ಳಿ ಇಲ್ಲಿದೆ."

ಅದನ್ನು ನನ್ನಿಂದ ಓದಲಾಗಲಿಲ್ಲ. ಬ್ರಹ್ಮ ಲಿಪಿಯಾಗಿರಬೇಕೆಂದೂಹಿಸಿದೆ.

"ಕೊಟ್ಟ ಅಕ್ಕಿ ಅಳತೆಗೆ ಸರಿಯಾಗುತ್ತದೆಯೇ?"

"ಇಲ್ಲಪ್ಪ, 2 ಸೇರು ಕೊಟ್ಟರೆ 7ಪಾವು ಆಗುತ್ತದೆ. ನೋಡಿ ಈ ಹೊತ್ತಿನ ಅಕ್ಕಿ ಅಳತೆ ಮಾಡುತ್ತೇನೆ".

ಅಳತೆ ಮಾಡಿದಳು ಮೇರಿ. ಅದು 3 ಪಾವಿಗೆ ಮೀರಲಿಲ್ಲ

"ಎಲ್ಲರಿಗೂ ಹೀಗೆ ಕೊಡುತ್ತಾರೆಯೇ?"

"ಅಲ್ಲ. ನನ್ನಂತಹ ಬಡವರಿಗೆ ಮಾತ್ರ"

"ನೀವು ಅರ್ಜಿ ಮಾಡಬೇಕು".

'ನಿಮಗೆ ಹುಚ್ಚು. ಅರ್ಜಿ ಧರ್ಮಕ್ಕಾಗುತ್ತದೆಯೇ? ಚೀಟು ಖರ್ಚು. ಬರೆದವರಿಗೆ ಕೊಡಬೇಕು ಅದರ ಮೇಲೆ, ಸ್ಟೋರಿನವರಿಗೆ ತಿಳಿದುಬಿಟ್ಟರೆ ಏನಾದರೂ ಅಪದ್ದ ಕೊಟ್ಟೇ ಕೊಡುತ್ತಾರೆ. ಅದಕ್ಕಿಂತ ಸುಮ್ಮನಿರುವುದು ಮೇಲಲ್ಲವೇ"?

"ಈ ಎಲ್ಲಾ ತೊಂದರೆಗಳು ಬೇಗ ತೀರಬಹುದು, ಶಾಂತಿ ದೊರಕಬಹುದು"

"ಶಾಂತಿ! ಸಮತೆಯಿಲ್ಲದ ತನಕ ಶಾಂತಿ!! ಅದು ಬರಿಯ ಭ್ರಾಂತಿ".

* * * *

"ಅಮ್ಮಾ ನಿಮ್ಮ ಪತಿಯು ಬೊಂಬಾಯಿಗೆ ಹೋಗಿರುವರೆ?"

"ಹೌದು".

"ಈ ಹೊತ್ತು ಬಂದಿದ್ದ ಕಾಗದ... ...."

"ನಾನು ಬೊಂಬಾಯಿಯಲ್ಲಿರುವಾಗ ಅವರಲ್ಲಿ ಕೆಲಸಕ್ಕಿದ್ದೆ. ಅವರದು".

"ಅವರು ರೂಪಾಯಿ ಕಳುಹಿಸುತ್ತಾರಂತಲ್ಲ; ನಿಮ್ಮ ಸಂಬಳ ಬಾಕಿ ಇದೆಯೇ?"

"ಇಲ್ಲ"

"ಮತ್ತೆ"

(ನಿರುತ್ತರ)

"ನಿಮ್ಮ ಪತಿಗೆ ಎಂತಹ ಕೆಲಸವಿತ್ತು?"

"ನನ್ನನ್ನು ಮದುವೆಯಾಗುವಾಗ ಎಲ್ಲಿಯೋ ಹೋಟೇಲಲ್ಲಿದ್ದರಂತೆ".

"ಈಗ ಅವರ ವರ್ತಮಾನವೇ ಇಲ್ಲವೇ?"

"ಏನೋ ಒಂದು ಗಾಳಿಸುದ್ದಿ ಕೇಳಿದೆ; ಅವರಿನ್ನೊಂದು ಮದುವೆಯಾಗಿರುವರಂತೆ."

"ಅದು ಹೇಗೆ? ನಿಷೇಧವಲ್ಲವೆ?"

"ಹೌದು. ಮಾಡುವುದೇನು?"

"ಗುರುಗಳಲ್ಲಿ ಹೇಳಲಿಲ್ಲವೇ?"

"ಹೇಳಿಯೇನು ಫಲ? ಗುರುಗಳಾದರೇನು? ಯತಿಗಳಾದರೇನು? ಮಾನವ ಸಹಜವಾದ ಗುಣಗಳು ಬಿಟ್ಟು ಹೋಗುತ್ತವೆ

(೧೧ನೇ ಪುಟ ನೋಡಿರಿ.)

ಪ್ರಕಟಣೆ.

ದ. ಕ. ಮಂಗಳೂರು ಡಿ. ಮುನ್ಸಿಫ ಕೋರ್ಟಿನಲ್ಲಿ.

ಸ್ಮಾಲನಂಬ್ರ 429|1944

ಗುಂಡಿಲ ಮಂಜಪ್ಪ ಶೆಟ್ಟಿ-- ವಾದಿ.

ಮತ್ತು

1. ಹಂಪುದ ಬ್ಯಾರಿ. 2. ಹಸನ ಬ್ಯಾರಿ— ಚೈಯ್ಯ ಬ್ಯಾರಿ ಮಕ್ಕಳು:—
ಮಂಗಳೂರು ತಾಲ್ಲೂಕ ವ ಲ್ಲಾರು ಗ್ರಾಮಸ್ಥರು—
ಪ್ರತಿವಾದಿರು.

1ನೇ ಪ್ರತಿವಾದಿಗೆ–

ಮೇಲೆ ಹೆಸ್ರು ಕಾಣ್ಸಿದ ವಾದಿ ಪ್ರತಿವಾದಿರ ಮೇಲೆ ಮಂಗಳೂರು ಡಿ ಮು ಕೋರ್ಟಿನಲ್ಲಿ ತನಗೆ ಪ್ರತಿವಾದಿರಿಂದ ಬರತಕ್ಕ ರೂಪಾ 240 8 0 ವಗೈರೆಗೆ ದಾಖಲ್ಲು ಮಾಡಿದ ಸದ್ರಿ ದಾವೆ ಅಖೈರಿ ಚಸ್ಕಿ ಬಗ್ಗೆ ತಾ. 4-12-1944ಕ್ಕೆ ಇಟ್ಟಿರುತ್ತದೆ, ಆ ಕುರಿತು 1ನೇ ಪ್ರತಿವಾದಿಗೆ ಆಕ್ಷೇಪವಿದ್ರೆ ಸದ್ರಿ ತಾರೀಕಿನ ಬೆಳಗ್ಗೆ 11 ಗಂಟೆಗೆ ಮೇಲಿನ ಕೋರ್ಟು ಮುಂದೆ ಹಾಜರಾಗಿ ಜಾಹೀರುಪಡಿಸಿಕೊಳ್ಳಬಹುದು, ತಪ್ಪಿದರೆ ಸದ್ರಿ ಪ್ರತಿವಾದಿ ಗೈರ ಹಾಜರಿಯಲ್ಲಿ ಮೇಲಿನ ನಂಬ್ರ ತೀರ್ಮಾನಿಸಲಾದೀತು.

M. Janardan Malya

ಮಂಗಳೂರು, 7-11-44. } ವಾದಿಕಡೆ ವಕೀಲ್.

Navabharat Book Depot Udipi South India   Navabharat Book Depot Udipi South India

ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು

	ರೂ. ಆ.				
ಸುಲಭದಲ್ಲಿ ಇಂಗ್ಲಿಷ್	1-4	ಮೂರು ಪ್ರಹಸನಗಳು	0 14	ವೀರಭೂಮಿ	0-2
ಯುವಕರಿಗೆ ಮತ್ತು ವಯಸ್ಕರಿಗೆ ಸುಲಭವಾಗಿ ಇಂಗ್ಲಿಷನ್ನು ಅನ್ಯ ಸಹಾಯವಿಲ್ಲದೆ ಕಲಿಸುವ ಇಂಗ್ಲಿಷ್ ಸ್ವಯಂಬೋಧಿನಿ		ಸ್ವತಂತ್ರ ಜೀವನೋಪಾಯ	0-3	ವಕ್ಸಲಾ	0-8
		ಪುರುಷವಧ	0-4	● ಕವಿತೆಗಳು	
		ಹೆಂಡ್ತಿ ಗಂಡನಾದರೆ	0-4	ಕಾವ್ಯಸಾಮ್ರಾಜ್ಯ	0-12
		● ಕತೆಗಳು		ಮುಗುಳು	0-3
● ನಾಟಕಗಳು		ನಗೆನೋಟಗಳು	0 14	ಪ್ರೇಮಾಮಿ	1-0
ಪ್ರೇಮವಿಜಯ	0-12	ಅನ್ನದೇವರು ಮತ್ತು ಇತರ ಕಥೆಗಳು	1 0	ಪುರಂದರದಾಸರ ಕೀರ್ತನೆ	1-0
ದೇಶಭಕ್ತ	1-4	ಭಾರತೀಯ ಕತೆಗಳು	0-14	ಭಗವದ್ಗೀತಾ (ಮೂಲ- ಸಿಲ್ಕ ಬೈಂಡು)	1-4
ವ್ಯಭಿಚಾರಿಣಿ ಯಾರು	0-12	ನಂದಾದೀಪ	0 10	● ಇತರ ಪುಸ್ತಕಗಳು	
ಕುಶಲವ	0-5	ನಾಡಕತೆಗಳು	0-3	ಮುಂದಿನ ದೇವರು	0 3
ಸಂಶಯ ಪಿಶಾಚಿ	0-8	ಕೆಂಡಸಂಪಿಗೆಯ ನೋಟಗಳು	0-8	ರಾಷ್ಟ್ರಸಭೆಯ ಇತಿಹಾಸ	2 8
ರಂಗಭೂಮಿ	0-8	ನಾರೀಹೃದಯ	0-14	ಬಾಲವಾಙ್ಮಯ	0-3
ಪ್ರತಾಪ	1-12	ಅಂತರಂಗದ ಕತೆಗಳು	0-10	ಮಿತಸಂತತಿ	0-8
ಧರ್ಮಸಂಕಟ	0-4	ಪ್ರೇಮಪ್ರವಾಹ	0-6	ನಿತ್ಯ ಯುಜ್ಞಾನ	0-8
ಆರೋಗ್ಯ ಪ್ರತಾಪ	0-12	ಅಹ ಕಿ ಇತ್ಯಾದಿ ಕತೆಗಳು	0 12	ಪಾಪಪೂರಿತ ಪಟ್ಟಣಗಳು	1-8
ಸಂಜಾರತಿ	3-6	ಟೋಪಾಮಾಸ್ತ್ರ	0-6	ಚಿಗುರು	0 6
ಪ್ರತೀಕಾರ	0 6	● ಕಾದಂಬರಿಗಳು		ಇತರ ಪುಸ್ತಕಗಳ ಕೆಟಲಾಗಿಗಾಗಿ	
ಸೇವಾಪಥ	0-8	ಸನ್ಯಾಸಿಯ ಸೋಗಿನಲ್ಲಿ	0-8	0-2-0 ಸ್ಟಾಂಪಿಟ್ಟು ಬರೆಯಿರಿ	

ನವಭಾರತ ಪುಸ್ತಕ ಭಂಡಾರ, ರಜಿಸ್ಟರ್ಡ ಪಬ್ಲಿಷರ್ಸ್, ಉಡುಪಿ. ದ. ಕ.

ಯುದ್ಧಾನಂತರದ ಪುನರ್ರಚನಾಯೋಜನೆ

ದಕ್ಷಿಣ ಕನ್ನಡ ಜಿಲ್ಲೆಯ ವಿಚಾರ

ಕಳೆದ ಸಂಚಿಕೆಯಲ್ಲಿ ಯುದ್ಧಾನಂತರದ ಪುನರ್ರಚನಾಯೋಜನೆಯ ನಿರ್ಮಾಣಕ್ಕಾಗಿ ಮದ್ರಾಸು ಸರಕಾರದಿಂದ ನಿಯಮಿತವಾದ ವಿವಿಧ ಸಮಿತಿಗಳ ಸ್ಥೂಲವಿಚಾರವನ್ನು ಹೇಳಲಾಯಿತು. ಅದರಲ್ಲಿ ಸೂಚಿಸಿದಂತೆ ಎಂಟನೆಯ ಸಂಚಾರ ಸೌಕರ್ಯ ನಿರ್ಮಾಣ ಸಮಿತಿಯಲ್ಲಿ ಶ್ರೀ ಅರೂರು ಲಕ್ಷ್ಮೀನಾರಾಯಣ ರಾಯರು ನೌಕರೇತರ ಸದಸ್ಯರಾಗಿರುವರಲ್ಲದೆ ನೌಕರ ಸದಸ್ಯರಾಗಿ ಶ್ರೀ ವಿ. ಎನ್. ಕುಡ್ವಾ, ಐ ಸಿ ಎಸ್, ಇವರೂ ಇರುವರು ಶ್ರೀ ಕುಡ್ವರು ನಮ್ಮ ಜಿಲ್ಲೆಯವರು. ಸ್ಥಳೀಯ ಆಡಳಿತೆ ಖಾತೆಯ (ಲೋಕಲ್ ಎಡ್ಮಿನಿಸ್ಟ್ರೇಶನ್ ಡಿಪಾರ್ಟ್‌ಮೆಂಟಿನ) ಸರಕಾರೀ ಕಾರ್ಯದರ್ಶಿಯಾಗಿದ್ದಾರೆ ಹೀಗೆ ಈ ಎಂಟನೆಯ ಸಮಿತಿಯಲ್ಲಿ ನಮ್ಮ ಜಿಲ್ಲೆಯ ಇಬ್ಬರು ಸದಸ್ಯರಿರುವರಲ್ಲದ ಒಂಭತ್ತನೆಯ ಟ್ರಾನ್ಸ್‌ಪೋರ್ಟ್ (ವಾಹಕ ವಿಚಾರ) ಸಮಿತಿಯಲ್ಲಿ ಆ ವಿಷಯದ ಅನುಭವಿಕರಾದ ಶ್ರೀ ಎಸ್. ವಿ ಕುಡ್ವರು ನೌಕರೇತರ ಸದಸ್ಯರಾಗಿರುವರು ಹಿಂತು ನಮ್ಮ ಜಿಲ್ಲೆಯ ಅತ್ಯಾವಶ್ಯಕತೆಗಳ ಅರಿವೂ ಹಿತಚಿಂತನೆಯೂ ಕಾರ್ಯೋತ್ಸಾಹವೂ ಪರಿಪೂರ್ಣವುಳ್ಳ ಈ ಮೂವರು ಮಹನೀಯರಿರುವುದರಿಂದ ಎಂಟನೆಯ ಮತ್ತು ಒಂಬತ್ತನೆಯ ಸಮಿತಿಗಳ ಯೋಜನೆಗಳಲ್ಲದೆ ಇತರ ಸಮಿತಿಗಳ ವಿಚಾರಕ್ಕೂ ನಮ್ಮ ಜಿಲ್ಲೆಯ ಆಯಾ ವಿಷಯಗಳ ಅವಶ್ಯಕತೆಗಳನ್ನು ಲಕ್ಷ್ಯಕ್ಕೆ ತರಲೂ ಅವು ಆಯಾ ಯೋಜನೆಯಲ್ಲಿ ಸೇರ್ಪಡೆಯಾಗುವಂತೆ ನೋಡಿಕೊಳ್ಳಲೂ ಅವಕಾಶವಿರುವುದು. ಇದು ಕೇವಲ ಆಶಾವಾದವಲ್ಲವೆಂಬುದು ನಮ್ಮ ಜಿಲ್ಲೆಯ ವಿಚಾರವಾಗಿ ಎಂಟನೆಯದಾದ ಸಂಚಾರ ಸೌಕರ್ಯ ನಿರ್ಮಾಣ ಸಮಿತಿಯ ಯೋಜನೆಯಲ್ಲಿ ಈಗಾಗಲೇ ಸೇರ್ಪಡೆಯಾದ ಕೆಳಗಿನ ವಿಚಾರಗಳಿಂದ ಮನದಟ್ಟಾಗಬಹುದು

ಮೊದಲನೆಯದಾಗಿ ಮದ್ರಾಸು ಆಧಿಪತ್ಯದ ಇಪ್ಪತ್ತಾರು ಜಿಲ್ಲೆಗಳ ಬಗ್ಗೆ ಈ ಎಂಟನೆಯ ಸಮಿತಿಯು ಶಿಫಾರಸುಮಾಡಿರುವ ಸುಮಾರು ಅರುವತ್ತಾರು ಕೋಟಿ ರೂಪಾಯಿ ವೆಚ್ಚದ ಸಂಚಾರ ಸೌಕರ್ಯ ಯೋಜನೆಯಲ್ಲಿ ನಮ್ಮ ಜಿಲ್ಲೆಯ ಬಗ್ಗೆ ಸುಮಾರು ನಾಲ್ಕು ಕೋಟಿ ರೂಪಾಯಿ ಯೋಜನೆಯು ಈಗಾಗಲೇ ಸೇರ್ಪಡೆಯಾಗಿದೆ. ಮದ್ರಾಸು ಆಧಿಪತ್ಯದ ಜಿಲ್ಲೆಗಳಲ್ಲಿ ನಮ್ಮದೊಂದು ಮೂಲೆಯಲ್ಲಿ ಕಿರುಬಾಲದಂತಿದ್ದು ಈ ತನಕ ಅದರ ನೂರಾರು ಆವಶ್ಯಕತೆಗಳು ಸರಕಾರದ ದೃಷ್ಟಿಗೆ ತಕ್ಕಷ್ಟು ಬೀಳದಿದ್ದರೂ ಈ ಸಲದ ಯೋಜನೆಯಲ್ಲಿ ನಮ್ಮ ಜಿಲ್ಲೆಯ ಆವಶ್ಯಕತೆಯು ವಿಶೇಷನೆಯದಾಗಿ ಗಣನೆಗೆ ಬಂದಿರುವುದು ಸಂತೋಷದ ವಿಷಯ. ಮೇಲ್ಕಾಣಿಸಿದ ಅರುವತ್ತಾರು ಕೋಟಿ ರೂಪಾಯಿಯನ್ನು ಈ ಕೆಳಗಿನಂತೆ ರಸ್ತೆ ಸಂಕ ಸೇತುವೆ ಮುಂತಾದುವುಗಳ ನಿರ್ಮಾಣಕ್ಕಾಗಿ ಜಿಲ್ಲಾವಾರು ವೆಚ್ಚ ಮಾಡಬೇಕೆಂದು ಸಮಿತಿಯು ಅಂದಾಜು ಪಟ್ಟಿಯನ್ನು ಒಪ್ಪಿಸಿಯದೆ. ಕೆಳಗೆ ಆಯಾ ಜಿಲ್ಲೆಯ ಹೆಸರೊಡನೆ ಆವರಣದಲ್ಲಿರುವುದು ಅಲ್ಲಿಗೆ ಲಕ್ಷದ ಸ್ಥಿ ವಿಂಗಡಿಸಿ ಹಾಕಿದ ಮೊಬಲಗು.

ಅನಂತಪುರ (73 7), ದ ಆರ್ಕಾಟು (109 4), ಬಳ್ಳಾರಿ (159·9), ಚಂಗಲ್ಪಟ್ಟು (335 8) ಚಿತ್ತೂರು (220 1), ಕೊಯಮುತ್ತೂರು (255 2), ಕಡಪಾ (335 0), ಮೂಡುಗೋದಾವರಿ (305 5) ಪಡುಗೋದಾವರಿ (256·7), ದ ಕನ್ನಡ (378 3) ಕರ್ನೂಲು (213 0), ಮಧುರಾ (162·9), ಮಲಬಾರು (216 8), ನೆಲ್ಲೂರು (217 0), ನೀಲಗಿರಿ (60·2) ರಾಮ್ನಾಡು (408 8), ಮೂಡುತಂಜಾವೂರು (356 0), ಪಡು ತಂಜಾವೂರು (279 5), ತಿನ್ನವೆಲ್ಲಿ (328 1), ತಿರುಚಿನಾಪಳ್ಳಿ (209 5), ಉತ್ತರ ವಿಶಾಖಪಟ್ಣ (102 9), ದಕ್ಷಿಣ ವಿಶಾಖಪಟ್ಣ (165·3), ಉತ್ತರ ಆರ್ಕಾಟು, ಗುಂಟೂರು ಕೃಷ್ಣಾ, ಸೇಲಂ, ಈ ನಾಲ್ಕು ಜಿಲ್ಲೆಗಳಿಗೆ ವಿಭಜಿಸಿ ಹಾಕಲಿಕ್ಕಾಗಿ ರೂ 1310 6 ಲಕ್ಷ ಹೀಗೆ ಒಟ್ಟು 6553 1 ಲಕ್ಷ ರೂಪಾಯಿಯ ಯೋಜನೆಯನ್ನು ಸಮಿತಿಯು ಸಿದ್ಧಗೊಳಿಸಿಯದೆ. ಇದರಲ್ಲಿ ನಮ್ಮ ಜಿಲ್ಲೆಯ ಬಗ್ಗೆ ಸೇರ್ಪಡೆಯಾದ 378 3 ಲಕ್ಷ ರೂಪಾಯಿ ವೆಚ್ಚದ ಕೂಲಂಕಷ ವಿಚಾರವನ್ನು ಮುಂದಿನ ಸಂಚಿಕೆಯಲ್ಲಿ ಕೊಡಲಾಗುವುದು

'ಜಿಲ್ಲಾ ಹಿತೈಷಿ'

ತಿದ್ದುಪಡಿ:—ಕಳೆದ ಸಂಚಿಕೆಯಲ್ಲಿ ಪ್ರಕಟವಾದ ವರದಿಯಲ್ಲಿರುವ ಮಿ। ಪಳ್ಳಿ ಬ್ಯಾರಿಯವರು ಕಾರ್ಕಳ ತಹಶಿಲ್ದಾರರಾಗಿಯೂ ಕಾರ್ಕಳ ತಹಶಿಲ್ದಾರ್ ಶ್ರೀ ನಾರಾಯಣ ಹೆಗ್ಡೆಯವರು ಪುತ್ತೂರಿನ ತಹಶಿಲ್ದಾರರಾಗಿಯೂ ವರ್ಗಾಯಿಸಲ್ಪಟ್ಟಿರುವರು ಎಂಬ ಸುದ್ದಿಯು ನಿರಾಧಾರವಾದುದೆಂದು ತಿಳಿದುಬರುತ್ತದೆ.

—ರುಸವೆಲ್ಟ್ ವಿಜಯ—

ನಾಲ್ಕನೇ ಬಾರಿ ಚುನಾವಣೆ ಗೆದ್ದರು

ಇದೇ ನವಂಬರ್ ತಾ. ೭ರಲ್ಲಿ ನಡೆದ ಅಮೇರಿಕದ ಮಹಾ ಚುನಾವಣೆಯಲ್ಲಿ ಮಿ. ರುಸವೆಲ್ಟರೇ ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿದ್ದಾರೆ. 3½ ಕೋಟಿ ಜನಮತಗಳ ಪೈಕಿ ರುಸವೆಲ್ಟರಿಗೆ ತನ್ನ ಪ್ರತಿಸ್ಪರ್ಧಿ ಗವರ್ನರ್ ಡೆವಿಯವರಿಗಿಂತ 2½ ಮಿಲಿಯ ಅಧಿಕ ಮತ ದೊರೆತಿದೆ. ತನ್ನ ಇದಿರಾಳಿಯ ಸ್ವಂತ ಕ್ಷೇತ್ರದಲ್ಲಿಯೇ ರುಸವೆಲ್ಟರಿಗೆ ಬಹುಮತ ಬಿದ್ದಿದೆ. ಮಾತ್ರವಲ್ಲ, ರುಸವೆಲ್ಟರ ಡೆಮೊಕ್ರೆಟಿಕ್ ಪಕ್ಷಕ್ಕೆ ಈ ಬಾರಿಯ ಚುನಾವಣೆಯಲ್ಲಿ ಅಮೇರಿಕನ್ ಸೆನೆಟಿನಲ್ಲಿಯೂ ಕಾಂಗ್ರೆಸಿನಲ್ಲಿ ಯೂ ಅಧಿಕ ಬಹುಮತ ದೊರೆತು ರುಸವೆಲ್ಟ್ ಆಡಳಿತೆಯು ಅಪ್ರತಿಬಂಧವಾಗಿ ಸಾಗಲು ಸುಕರವಾಗಿದೆ.

ಹೊಸ ದಾಖಲೆ

ಈ ರೀತಿ ನಾಲ್ಕು ಬಾರಿ--ಒಟ್ಟು 16 ವರುಷಗಳ ವರೆಗೆ--ಅಮೇರಿಕದ ಅಧ್ಯಕ್ಷ ಮುಕುಟ ಹೊತ್ತ ವ್ಯಕ್ತಿ ಚರಿತ್ರೆಯಲ್ಲೇ ಇಲ್ಲ. ರುಸವೆಲ್ಟರ ಜನಪ್ರಿಯತೆ, ಕಾರ್ಯೋತ್ಸಾಹ, ಧೈರ್ಯ ಸ್ಥೈರ್ಯಗಳು ಈ ಮೊದಲ ಮೂರು ಬಾರಿಯ ಚುನಾವಣೆಗಳಲ್ಲಿ ಅವರನ್ನು ವಿಜಯಿಯನ್ನಾಗಿ ಮಾಡಿದ್ದರೆ, ಈ ಬಾರಿಯ ಪ್ರಚಂಡ ವಿಜಯಕ್ಕೆ ಸದ್ಯ ಸ್ಥಿತಿಯೇ ಕಾರಣವೆನ್ನಬಹುದು. ಮಿತ್ರಪಾಳಯವೀಗ ವಿಜಯದ ಮುಂಬೆಳಕನ್ನು ಸ್ಪಷ್ಟವಾಗಿ ಕಾಣುತ್ತಿದೆ. ಅಮೇರಿಕವು ಯುದ್ಧಕ್ಕಿಳಿಯುವ ಮೊದಲೂ ಯುದ್ಧಕ್ಕಿಳಿದ ಮೇಲೂ ಈ ವಿಜಯ ಸಾಧನೆಯಲ್ಲಿ ಅತಿ ಹೆಚ್ಚಿನ ಪಾಲು ಪಡೆದಿದೆ. ಲೋಕದ ಆಯುಷ್ಯದಲ್ಲಿ ಈ ವರೆಗೂ ಬಾರದಿದ್ದ ಇಂದಿನ ಯುದ್ಧದಂತಹ ಕಠಿಣಾವಧಿಯಲ್ಲಿ ಒಂದು ರಾಷ್ಟ್ರದ ಹೊಣೆ ಹೊತ್ತು ಅದನ್ನು ವಿಜಯದತ್ತ ನಡೆಸಿಕೊಂಡು ಬಂದ ಅಧ್ಯಕ್ಷರನ್ನು ಅವರ ಕಾರ್ಯ ಪೂರ್ತಿ ಮುಗಿಯುವ ಮೊದಲೇ ಗದ್ದುಗೆಯಿಂದಿಳಿಸಲು ರಾಷ್ಟ್ರವೊಪ್ಪಲಿಲ್ಲ. ಹೀಗಾಗಿ ರುಸವೆಲ್ಟರ ತಲೆಯಲ್ಲಿ ಅಮೇರಿಕಾಧ್ಯಕ್ಷ ಕಿರೀಟವು ಶಾಶ್ವತವೋ ಎಂಬಂತೆ ಮತ್ತೊಂದು ನಾಲ್ಕು ವರುಷಗಳ ಅವಧಿಗಾಗಿಯೂ ನಿಂತಿತು.

ಮುಂದೇನು?

ರುಸವೆಲ್ಟರ ಅವಧಿಯಲ್ಲೇ ಯುದ್ಧ ಮುಗಿದು ಲೋಕ ಶಾಂತಿ ಸ್ಥಾಪನೆಯಾಗಲಿದೆಯೆಂದು ಇಂದಿನ ಯುದ್ಧ ಸ್ಥಿತಿಯ ಆಧಾರದಿಂದ ಹೇಳಬಹುದು. ಮಿತ್ರಪಾಳಯದ ಯುದ್ಧ ರಥವೆಳೆಯುವದರಲ್ಲಿ ರುಸವೆಲ್ಟರು ಚರ್ಚಿಲ್ಲರ ಸಮಜೋಡಿ. ಆದ್ದರಿಂದ ಯುದ್ಧ ವಿಜಯವೊಂದೇ ಅವರಿಗೆ ಮುಖ್ಯವಲ್ಲದೆ, ಭಾರತದ ಸ್ವಾತಂತ್ರ್ಯ ಯಾಚನೆಯಂತಹ ಒಳ ಪ್ರಶ್ನೆಗಳ ಕಡೆಗೆ ಸಾಕಷ್ಟು ಗಮನ ಬೀಳುವಂತಿಲ್ಲ. ಈ ಚುನಾವಣೆಯಲ್ಲಿ ಸ್ಪರ್ಧಿಸಿದ ಮಿ. ಡೆವಿಯವರು ವಿಶೇಷತಃ ರಾಷ್ಟ್ರೀಯ ದೃಷ್ಟಿಯುಳ್ಳವರು. ಇಂಗ್ಲಾಂಡು ರಶ್ಯಗಳಿಗಾಗಿ ರೂಸವೆಲ್ಟರಂತೆ ಇವರು ಉದಾರ ಧೋರಣೆ ವಹಿಸುವವರಲ್ಲವೆಂದು ವಿದಿತವಾಗಿದ್ದಿತು. ಅವರು ವಿಜಯಿಯಾಗುತ್ತಿದ್ದರೆ ಬ್ರಿಟನಿಗೆ ಪ್ರಿಯವಾಗುವದೆಂಬ ಕಾರಣದಿಂದ ಭಾರತೀಯ ಪ್ರಶ್ನೆಯಂತಹ ಸಮಸ್ಯೆಗಳನ್ನು ಕಡೆಗಣಿಸುತ್ತಿರಲಿಲ್ಲವೆಂಬ ಊಹೆಗವಕಾಶವಿದೆ. ಆದರೆ ಅವರನ್ನು ಚುನಾಯಿಸಿಕೊಂಡವರು ಅಮೇರಿಕದ ಮತದಾರರು-ಯಾರ ನೆರವು ಪಡೆದಾದರೂ, ಯಾರಿಗೆ ಸಹಾಯ ಕೊಟ್ಟಾದರೂ ಇಂದಿನ ಸಮರ ಕುಂಡದಿಂದೊಮ್ಮೆ ಪಾರಾಗಬೇಕೆಂದು ಕಾತರಿಸುತ್ತಿರುವ ಅಮೇರಿಕಾನರು ಎಂಬುದನ್ನು ಮರೆಯಬಾರದು.

ಜಿಲ್ಲಾ ಕಲೆಕ್ಟರರಿಗೆ ಕುಂದಾಪುರ ವರ್ಗದಾರರ ಸಂಘದ ಮನವಿ—ತಾ 7-11-44ರಲ್ಲಿ ಅರ್ಪಿಸಲಾದ ಮನವಿಯ ಮುಖ್ಯಾಂಶ ಹೀಗಿದೆ-ಪೈರು ಕಟಾವು ಈ ತಾಲೂಕಿನಲ್ಲಿಯೂ, ಉಡುಪಿ ತಾಲೂಕಿನ ಮಾಗಣೆಗಳ ಹೊಳೆಯ ಉತ್ತರ ಭಾಗದಲ್ಲಿಯೂ ಇಲ್ಲಿಯ ಇತರ ಭಾಗಗಳಂತೆ ಬೇಗನೆ ಆರಂಭವಾಗುವುದಿಲ್ಲ. ಈ ಬಾರಿಯಂತೂ ಅನಾವೃಷ್ಟಿಯಿಂದ ಪೈರು ಕಟಾವು ಇನ್ನೂ ಹಿಂದೆಬಿದ್ದಿರುವುದು ಮಾತ್ರವಲ್ಲದೆ, ಹೆಚ್ಚಿನ ನಷ್ಟಕಷ್ಟಗಳಿಗೆ ಎಡೆಕೊಟ್ಟಿದೆ. ಈ ವಿಷಮ ಪರಿಸ್ಥಿತಿಯಲ್ಲಿ ನವಂಬರ ತಾ. 15ರೊಳಗಾಗಿ ಭತ್ತ ವ ಅಕ್ಕಿಯನ್ನು ಒಪ್ಪಿಸುವುದು ಮಾನವ ಸಾಮರ್ಥ್ಯಕ್ಕೆ ಮೀರಿದುದಾಗಿದೆ. ಈ ಅವಧಿಯೊಳಗಾಗಿ ಒಪ್ಪಿಸದಿದ್ದರೆ ಪ್ರಭುತ್ವದ ಶಿಕ್ಷೆ-ದಂಡನೆಯ ಕಟ್ಟಾಜ್ಞೆಯ ಭಯವೂ ಇದೆ. ಆದುದರಿಂದ ಪರಿಸ್ಥಿತಿಯನ್ನು ಪರ್ಯಾಲೋಚಿಸಿ ಭತ್ತ, ಅಕ್ಕಿ ಒಪ್ಪಿಸತಕ್ಕ ಅವಧಿಯನ್ನು ದಸಂಬರ ತಾ. 15ರ ತನಕ ಮುಂದರಿಸಬೇಕಾಗಿದೆ. ಏಳು ಕಳಸಿಗೆ ಭತ್ತದ ಬದಲಾಗಿ ಎರಡು ಮೂಡಿಗೆ ಭತ್ತಕ್ಕೆ ಒಂದು ಮುಡಿ ಅಕ್ಕಿಯೆಂದು ಭಾವಿಸಬೇಕಾಗಿದೆ ಅಕ್ಕಿ ತಯಾರಿಸುವ ಕೂಲಿ ಪ್ರತ್ಯೇಕ. ಈ ದೃಷ್ಟಿಯಿಂದ ಹೋಲ್‌ಸೇಲ್ ಸ್ಟೋರಿನ ಡಿಪೋಗಳಲ್ಲಿ ಭತ್ತ ಪಡೆಯುವಂತಾಗಬೇಕು. ಅಕ್ಕಿ ಮಾರಾಟದ ದರವು ಟೌನಿನಲ್ಲೂ ಹಳ್ಳಿಗಳಲ್ಲೂ ಒಂದೇ ರೀತಿಯಿರುತ್ತ ಟೌನ್‌ನಲ್ಲಿ ಮತ್ತು ಹಳ್ಳಿ ಡಿಪೋಗಳಲ್ಲಿ ಒಪ್ಪಿಸತಕ್ಕ ಭತ್ತ ವ ಅಕ್ಕಿಗೆ ಈಗ ಇರುವ ತಾರತಮ್ಯದ ದರವನ್ನು ತೆಗೆದುಹಾಕುವಂತಾಗಬೇಕು.

ಹಿಟ್ಲರನ ಗುಪ್ತಾಸ್ತ್ರ ನಂ. ೨.

ದೂರಗುರಿಯ 'ರೋಕೆಟ'

ಜರ್ಮನರ ನಂ. 1ನೇ ನೂತನಾಯುಧ ಹಾರುವ ಬಾಂಬುಗಳಂತೆಯೇ ನಂ. 2ನೆಯದಾದ ರೋಕೆಟ್ ಬಾಂಬು ಪ್ರಯೋಗವು ಇಂಗ್ಲಾಂಡಿನ ಮೇಲೆ ಕೆಲಕಾಲದಿಂದ ನಡೆಯುತ್ತಿದೆಯೆಂದು ತಿಳಿದು ಬರುತ್ತದೆ. ಈ ನೂತನಾಸ್ತ್ರ ಪ್ರಯೋಗದ ಕುರಿತು ಜರ್ಮನರು ಬೆದರಿಸುತ್ತಾ ಬಂದಿರ್ಯವು ಬರಿಯ ಬಡಾಯಿಯಲ್ಲವೆಂದೂ, ಅವರು ತಮ್ಮ ಕೊನೆಯಂಕದಲ್ಲಿ ಇಂತಹ ಇತರ ಪ್ರಲಯೋಪಕರಣಗಳನ್ನೂ ಪ್ರಯೋಗಿಸುವದು ಖಂಡಿತವೆಂದೂ ಇದರಿಂದ ಊಹಿಸಬಹುದು.

ಚರ್ಚಿಲ್ಲರ ಜಾಹೀರಾತು.

ಇಂಗ್ಲಾಂಡಿನ ಮೇಲೆ ನಾಜೀ ರೋಕೆಟ್ ಪ್ರಯೋಗಗಳಾಗುತ್ತಿವೆಯೆಂಬ ವಾರ್ತೆಯು ಅಧಿಕೃತವಾಗಿ ಪ್ರಕಟವಾದುದು ಕಳೆದ ತಾ. 10ರಲ್ಲಿ ಇಂಗ್ಲಾಂಡಿನ ಕಾಮನ್ಸ್ ಸಭೆಯಲ್ಲಿ ಮಿ. ಚರ್ಚಿಲ್ಲರಿಂದಲೇ. ಕಳೆದ ಕೆಲವು ವಾರಗಳಿಂದ ಈ ಹಾವಳಿ ನಡೆದಿದೆಯಾದರೂ ವೈರಿಗಳಿಗೆ ಸೂಚನೆ ದೊರೆಯಬಾರದೆಂಬುದಕ್ಕಾಗಿ ತಾವದನ್ನು ಪ್ರಕಟಿಸಲಿಲ್ಲವೆಂದು ಚರ್ಚಿಲ್ಲರ ಹೇಳಿಕೆ. ಕೊನೆಗೆ ಜರ್ಮನರು ಆ ಕುರಿತು ಅತ್ಯುಕ್ತಿಗಳನ್ನಾಡಹತ್ತಿದುದರಿಂದಲೇ ಸತ್ಯ ಸ್ಥಿತಿಯನ್ನು ಬಹಿರಂಗ ಪಡಿಸಬೇಕಾಯಿತಂತೆ. ಇದುವರೆಗಾಗಿರುವ ಜನ ಸೊತ್ತು ಹಾನಿಯು ಬಹಳವಲ್ಲವಾದರೂ ಮುಂದೆ ದೀರ್ಘಾವಧಿಯ ತನಕ ವಿಶೇಷ ಉಪಟಳವನ್ನದು ಈಯಬಲ್ಲುದೆಂದೂ, ರೋಕೆಟ್ ಬಾಂಬಿನ ಪ್ರತಾಪವು ಸರ್ವ ಸಾಮಾನ್ಯವಾಗಿ ರೆಕ್ಕೆ ಬಾಂಬುಗಳಷ್ಟೇ ಎಂದೂ ಮಿ. ಚರ್ಚಿಲ್ಲರ ಅಂದಾಜು.

ಮಾರಾವಧಿಯ ಗುಟ್ಟು.

ಮೊದಲ ರೋಕೆಟ್ ಬಂದು ಇಂಗ್ಲಾಂಡಿಗೆ ಬಿದ್ದಾಗ ಬ್ರಿಟಿಷ್ ಯುದ್ಧಸಮಿತಿಯ ಅವಸರದ ಸಭೆಸೇರಿ, ಜರ್ಮನರ ಎರಡನೇ ಗುಪ್ತಾಸ್ತ್ರದ ವಿವರವನ್ನು ಬಹಿರಂಗ ಪಡಿಸಬೇಕೋ ಬೇಡವೋ ಎಂಬುದನ್ನು ಚರ್ಚಿಸಿತು. ಪ್ರಥಮಾಯುಧ ರೆಕ್ಕೆ ಬಾಂಬಿನ ಹಾವಳಿ ತುಸು ತಗ್ಗಿದಂತಿದ್ದುದರಿಂದ ದಕ್ಷಿಣ ಇಂಗ್ಲಾಂಡನ್ನು ಖಾಲಿಮಾಡಿ ಹೋದವರೆಲ್ಲಾ ಈ ಹೊತ್ತಿನಲ್ಲಿ ಹಿಂದಿರುಗುತಿದ್ದರು. ಆದ್ದರಿಂದ ಸ್ವಪ್ಪವಾಗಿ ಈ ದ್ವಿತೀಯಾಯುಧದ ವಾರ್ತೆ ಪ್ರಕಟಿಸುತ್ತಿದ್ದರೆ ಸಾವಿರಾರು ಪ್ರಾಣಗಳನ್ನುಳಿಸಬಹುದಿತ್ತು. ಆದರೆ ಹಾಗೆ ಜಾಹೀರುಮಾಡುವದರಿಂದ ಜರ್ಮನರು ಎದು ಕುಳಿತಿರುವ ವಾರ್ತೆಯನ್ನವರಿಗೆ ಮುಟ್ಟಿಸಿದಂತಾಗುವದೆಂಬ ಮುಂಜಾಗ್ರತೆಯಿಂದ ಯುದ್ಧಮಂಡಲವು ಮೌನವ್ರತ ತಾಳುವ ನಿರ್ಧಾರಮಾಡಿತು ಅದರ ಮಾದರಿಯನ್ನೇ ಬ್ರಿಟಿಷ್ ಪತ್ರಿಕೆಗಳೂ ಅನುಸರಿಸಿದವು. ಆದರೆ ತಮ್ಮ ಸ್ಥಳಗಳಿಗೆ ಹಿಂದಿರುಗುತ್ತಿರುವ ಜನರಿಗೆ ಅಸ್ಪಷ್ಟ ಮಾತುಗಳ ಮೂಲಕ ಬೆದರಿಸಹತ್ತಿದವು. ಹೊಸ ಅಪಾಯವಿದೆ ಎಂದು ಸೂಚಿಸಿ ದೂರವಿರಿಸಲು ನೋಡಿದವು ಆದರೆ ಸ್ವಾಭಾವಿಕವಾಗಿ ಜನರಿಗದರ ಪೂರ್ಣ ಅರ್ಥವಾಗಲಿಲ್ಲ ಮನೆಬಿಟ್ಟು ಹೋಗಿದ್ದವರಲ್ಲಿ ಅರೆವಾಸಿಗೂ ಮಿಕ್ಕಿ ಮರಳಬಂದರು. ಈ ನೂತನಾಯುಧವು ಪ್ರಥಮಬಾರಿ ಇಂಗ್ಲಾಂಡಿನಲ್ಲಿ ಸಿಡಿದಾಗ 'ಗ್ಯಾಸ್ ಪೈಪ್' ಸ್ಫೋಟಗೊಂಡಿತೆಂದೇ ಜನರಲ್ಲಿ ಹಬ್ಬಿದ ಸುದ್ದಿ.

ಆಧುನಿಕ ನಿಟಿಲಾಗ್ನಿ

ಸೋತು ಕೆರಳಿ ಕಾಲರುದ್ರನಾತಾಗಿರುವ ಹಿಟ್ಲರನ ನಿಟಿಲಾಕ್ಷಿಯ ಕಿಡಿಯೆಂಬಂತೆ ಈ ಆಯುಧವು ಅತ್ಯಂತ ಅಪಾಯಕಾರಿ. ಇಂಗ್ಲಾಂಡಿನ ಮೇಲೆ ಬಂದುಬಿದ್ದ ಹಲವು ರೋಕೆಟುಗಳನ್ನು ಹೊಲ್ಲೆಂಡಿನಿಂದ ಪ್ರಯೋಗಿಸಿರಬೇಕೆಂದು ನಂಬಲಾಗಿದೆ. ಆದರೆ ಅದನ್ನು ಪ್ರತ್ಯಕ್ಷ ಜರ್ಮನಿಯಿಂದಲೇ ಇಂಗ್ಲಾಂಡಿನ ಮೇಲೆ, ಮಾತ್ರವಲ್ಲ, ಅಮೇರಿಕದ ಮೇಲೂ ಪ್ರಯೋಗಿಸಲು ಸಾಧ್ಯವಾಗಬಹುದೆಂದು ಬ್ರಿಟಿಷ್ ತಜ್ಞರೇ ಒಪ್ಪುತ್ತಾರೆ. ಅದನ್ನೆಸೆಯಲು ವಿಮಾನಗಳಿಗೆ ಬೇಕಾದಂತೆ ನಿಲ್ದಾಣದ ಆವಶ್ಯಕತೆಯೂ ಇಲ್ಲ. ಅವುಗಳಿಗಾಗಿಯೇ ತಯಾರಿಸಲ್ಪಟ್ಟ ಲಾರಿಗಳಲ್ಲಿ ತುಂಬಿಕೊಂಡು ಜರ್ಮನರು ಬೇಕಾದಲ್ಲಿಗೊಯ್ಯುತ್ತಾರೆ. ಆ ಮೇಲೆ ಆಸುಪಾಸಿನ ಜನರನ್ನು ಖಾಲಿಮಾಡಿಸಿ ಪ್ರಯೋಗಕ್ಕಾರಂಭಿಸುತ್ತಾರೆ. ಸಾಮಾನ್ಯತಃ ರೋಕೆಟಿನಲ್ಲಿಯೂ ರೆಕ್ಕೆ ಬಾಂಬಿನಲ್ಲಿರುವಷ್ಟೇ ಸಿಡಿಮದ್ದುಗಳಿವೆಯಾದರೂ ಅದರ ತಾಡನಶಕ್ತಿ ಅತಿ ಹೆಚ್ಚಿನದಂತೆ ಆದ್ದರಿಂದ ಅದರ ಸಿಡಿತದಿಂದಾಗುವ ಹಾನಿಯೂ ಸಹಜವಾಗಿ ಭಯಂಕರವಿದೆ. ವೇಗ ಘಂಟೆಗೆ ಸುಮಾರು 3000 ಮೈಲಷ್ಟು. ಆದರದರ ಹಾರಾಟಕ್ಕೆ ಮಿನಿಟಿಗರ್ಧ ಟನ್ನಿನಷ್ಟು ಇದ್ದಲು ವ್ಯಯವಿದೆಯೆಂದೂ ಜರ್ಮನಿಯಲ್ಲಿ ಅದರ ಅಭಾವವಿದೆಯೆಂದೂ ತಿಳಿದುಬರುತ್ತದೆ.

ಗುಟ್ಟು ದೊರೆತಿಲ್ಲವೆ?

ಈ ವರೆಗೂ ಬ್ರಿಟಿಷ್ ವಿಜ್ಞಾನಿಗಳಿಗೆ ಈ ನೂತನಾಯುಧದ ಗುಟ್ಟು ದೊರೆತಿಲ್ಲವೆಂಬಂತೆ ತೋರುತ್ತಿದೆ. ಅದು ಸಿಡಿದ ಚೂರುಗಳನ್ನಾಯ್ದುಕೊಂಡು ಶೋಧಗಳೇನೋ ನಡೆದಿವೆ. ಇಡಿಯ ಆಕಾರದ ವರ್ಣನೆ ಕೂಡಾ ಬ್ರಿಟಿಷರ ಹೇಳಿಕೆಗಳಲ್ಲಿ ಕಂಡುಬರುವದಿಲ್ಲ.

ಯುದ್ಧವು ತೀವ್ರ ಕೊನೆಗೊಂಡು ಧಾರಣೆಗಳ ರಚನೆಯು ರೂಪಾಂತರ ಹೊಂದಬಹುದು. ಈ ಪರಿಸ್ಥಿತಿಯನ್ನು ನೀವು ಹೇಗೆ ಎದುರಿಸುವಿರಿ? ನಾವೀ ಸಲಹೆಗಳನ್ನು ನಿಮ್ಮ ಮುಂದಿಡುವೆವು: -

1 ನಿಮ್ಮ ಕೂಡೆ ಮಾಲುಗಳ ಅತ್ಯಧಿಕ ಸಂಚಯವಿದ್ದರೆ. ಈಗಲೇ ಅವನ್ನು ವಿಕ್ರಯಿಸಿ ನಿಮ್ಮ ನಗದಿ ಸ್ಥಿತಿಯನ್ನು ಸ್ಥಿರಗೊಳಿಸಿರಿ ನಿಮ್ಮ ಆ ನಗದಿ ಹಣವನ್ನೆಲ್ಲಾ ಬ್ಯಾಂಕಿನ ಖಾತೆಯಲ್ಲಿರಿಸಿ ಧಾರಣೆಗಳ ಇಳಿತವನ್ನಿರೀಕ್ಷಿಸಿರಿ.

2 ನಿಮ್ಮ ಸಾಲಗಳನ್ನೀಗಲೇ ತೀರಿಸಿರಿ. ಇಲ್ಲವಾದರೆ ಯುದ್ಧಾನಂತರದ ದಿನಗಳಲ್ಲಿ ಧಾರಣೆಗಳ ಇಳಿತದಿಂದಾಗಿ ಸಾಲಗಳನ್ನು ತೀರಿಸಲು ಬಹು ತ್ರಾಸವಾಗಬಹುದು

3 ನಿಮಗೆ ಪರರಿಂದ ಸಲ್ಲಬೇಕಾದ. ಸಾಲಗಳನ್ನೀಗಲೇ ವಸೂಲು ಮಾಡಿರಿ. ಏಕೆಂದರೆ ಧಾರಣೆಗಳ ಇಳಿತದಿಂದಾಗಿ ನಿಮ್ಮ ಸಾಲಗಾರರ ನಗದಿ ಸ್ಥಿತಿಯು ಬಹಳ ದುಷ್ಪರಿಣಾಮ ಹೊಂದಿ, ಅವರಿಂದ ಸಾಲಗಳನ್ನು ತೀರಿಸಲಶಾಧ್ಯವಾಗಬಹುದು.

4 ನಿಮ್ಮ ಕೂಡೆ ಇರುವಂಥ ನಗದಿಯನ್ನೆಲ್ಲಾ, ಇನ್ನು ಮುಂದೆ ಬರುವ ಧಾರಣೆ. ಇಳಿತವಾಗುವ ದಿನಗಳಿಗಾಗಿ ಕೂಡಿಡಿ. ಧಾರಣೆಗಳ ಗತಿಯನ್ನು ಮತ್ತು ವಾಣಿಜ್ಯದ ಸಾಮಾನ್ಯ ಸ್ಥಿತಿಯನ್ನು ಪರ್ಯಾಲೋಚಿಸಿ ನಿಮ್ಮ ಭಾವೀ ಯೋಜನೆಗಳನ್ನು ಕಲ್ಪಿಸಬಹುದು.

ನಿಮ್ಮಲ್ಲಿರುವ ನಗದಿಯನ್ನೆಲ್ಲಾ ನಮ್ಮೊಡನೆ ಖಾತೆಯಲ್ಲಿರಿಸಿರಿ. ಇಲ್ಲವಾದರೆ ಸ್ಪರ್ಧೆಗಳಿಗೆ ಅಥವಾ ಸಮಾಜದ ಒತ್ತಡಗಳಿಗೆ ಒಳಗಾಗುವ ಪ್ರಸಂಗ ಒದಗಬಹುದು

ಸ್ಥಾಪನೆ 1906 **ಕೆನರಾ ಬೇಂಕ್ ಲಿಮಿಟೆಡ್**

ESTD 1906 **Canara Bank, Limited.**

(Incorporated in British India with limited-Liability of members limited)

ಗಾಂಧಿಜೀ ಮರಣಾಂತ ಉಪವಾಸಕ್ಕೈಗೊಳ್ಳುವರೆ

ಮಹಾತ್ಮಾಜೀಯ 'ಆತ್ಮವಾಣಿ'ಯು ಅವರನ್ನೊಂದು ಅನಶನವ್ರತಕ್ಕೆ ಕರೆಯುತ್ತಿದೆ ಎಂಬುದರಿಂದ ದೇಶವಿಡೀ ಆತುರಕ್ಕೊಳಗಾಗಿದೆ ಈ ಕುರಿತು ಕೆಲಕಾಲಕ್ಕೆ ಮೊದಲೇ ಗಾಂಧೀಜೀಯೊಂದು ಹೇಳಿಕೆ ತಯಾರಿಸಿದ್ದರೂ ಪ್ರಕಟಣೆಗೆ ಕೊಡದೆ ಅನುಯಾಯಿಗಳೊಡನೆ ಪರ್ಯಾಲೋಚಿಸಿಕೊಳ್ಳಬೇಕೆಂದು ಅವಮಾನಿತಿಟ್ಟದ್ದರು. 'ಸದ್ಯಸ್ಥಿತಿಯಲ್ಲಿ ಅಂತಹದೊಂದು ಕೊನೆಯವ್ರತ ಕೈಕೊಳ್ಳುವ ಆವಶ್ಯಕತೆ ಹೊಳೆಯಹತ್ತಿದೆ; ಆದರೆ ಅದನ್ನು ಕೈಕೊಳ್ಳದಂತಾಗುವ ಪರಿಸ್ಥಿತಿ ಬರಲೂ ಬಹುದು' ಎಂದು ಆ ಮೇಲೆ ಗಾಂಧಿಜೀ ಸಂದಿಗ್ಧವಾಣಿಯಲ್ಲಾಡಿದ್ದಾರೆ. ಕಾಂಗ್ರೆಸಿನ ಅಗ್ರೇಸರು ಸಿಧ್ಧಾಂತಕ್ಕೆ ಮೊದಲು ಸ್ವಾತಂತ್ರ್ಯ ಹೋರಾಟವೊಂದು ಅಂಗವಾಗಿ ಮಹಾತ್ಮರು ತಾನು ಅನಶನವ್ರತ ಹೂಡುವದಾಗಿ ಸೂಚಿಸಿದ್ದರೂ ವರ್ಕಿಂಗ್ ಕಮಿಟಿ ಸದಸ್ಯರನ್ನು ಆಕ್ಷೇಪಿಸಿದ್ದರು. ಆ ಮೇಲೆ ಅವರು ಬಂಧನದಲ್ಲಿರುವಾಗಲೂ ಈ ಆಪತ್ತನ್ನು ದೇಶವು ನಿರೀಕ್ಷಿಸಿದ್ದಿತು. ಹೀಗೆ ಈ ತನಕ ಮುಂದೆ ಬೀಳುತ್ತಾ ಬಂದ ದೇಶ ವಿಪತ್ತೊಂದ ಈಗ ಸನ್ನಿಹಿತವಾದಂತಿದೆ ದೇಶದ ಕಂಗಾಲ ಸ್ಥಿತಿ, ಲೋಕದ ರಕ್ತದೋಕುಳಿ, ನ್ಯಾಯನೀತಿಯ ಸಾರ್ವತ್ರಿಕ ಪತನಗಳನ್ನಿದಿರಿಸಬೇಕಾದ ಅಹಿಂಸಾ ಯೋಧನಾದ ತನ್ನ ನಿಸ್ಸಹಾಯಕತೆಯಿಂದ ಗಾಂಧಿಜೀ ತೀರಾ ನೊಂದುಕೊಂಡು ಅನಶನದಂತಹ ಕಠೋರ ತಪಸ್ಸೊಂದೇ ತನಗುಳಿದಿರುವ ಮಾರ್ಗವೆಂಬುದನ್ನು ದಿನದಿಂದ ದಿನಕ್ಕೆ ಅಧಿಕಾಧಿಕವಾಗಿ ಮನಗಾಣಹತ್ತಿದ್ದಾರೆ. ಈ ದುರಂತವನ್ನು ತಪ್ಪಿಸುವದಕ್ಕಾಗಿ ದೇಶಪ್ರಮುಖರು ಬಂದೆಡೆಯಿಂದ ಗಾಂಧಿಜೀಯೊಡನೆ ಆಗ್ರಹದ ವಿಜ್ಞಾಪನೆಯನ್ನು ಮಾಡಿಕೊಳ್ಳುತಿದ್ದಾರೆ; ಇನ್ನೊಂದಡೆಯಿಂದ ದೇಶಕ್ಕೆ ಕರ್ತವ್ಯ ಪ್ರೇರಣೆಕೊಡಹತ್ತಿದ್ದಾರೆ.

ಈ ತಪಸ್ಸನ್ನು ತಡೆಯುವದು ಹೇಗೆ?

ಈ ಸಂಬಂಧವಾಗಿ ಅಲಹಾಬಾದ್ ವಿಶ್ವವಿದ್ಯಾಲಯದ ರಾಜಕೀಯ ಪ್ರೊಫೆಸರ್ ಡಾ। ಬೆನಿ ಪ್ರಸಾದರು ಕೊಟ್ಟಿರುವ ಮನಸ್ಸೀಯ ಹೇಳಿಕೆಯನ್ನಿಲ್ಲಿ ಕೊಟ್ಟಿದ್ದೇವೆ. "ನಾನು ಇತ್ತೀಚೆಗೆ ಮಹಾತ್ಮಾಜೀಯೊಡನೆ ನಾಲ್ಕು ಬಾರಿ ಸಂಭಾಷಿಸಿದ್ದೇನೆ. ತಮ್ಮ ಉಪವಾಸಕ್ಕೆ ಪ್ರೇರಣೆಯಾಗಿರುವ ಅಂತಃಕರಣ ಕರೆಯೊಂದಿಗೆ ಕೂಡಿಕೆಯಾಗಿರುವ ಪರಿಸ್ಥಿತಿ ಯಾವುದೆಂಬುದನ್ನೂ ಮತ್ತು ತಡೆಗಟ್ಟಬೇಕಾದರೆ ಏನು ಮಾಡಬೇಕೆಂಬುದನ್ನೂ ತಿಳಿಸಬೇಕೆಂದು ಒಕ್ಟೋಬರ್ 25ರಲ್ಲಿ ಗಾಂಧಿಯವರನ್ನು ಕೇಳಿಕೊಂಡೆ. ಮಹಾತ್ಮರು ರಾಜಕೀಯ ನಾಯಕ ಇಲ್ಲವೇ ದೇಶಭಕ್ತರಷ್ಟೇ ಅಲ್ಲ; ಅವರು ಮೂಲತಃ ಮಾನವೀಯತೆಯಿದ್ದವರು. ಅಂತೆಯೇ ಅವರ ಆತ್ಮೋತ್ಕರ್ಷದ ಮಾನಸಿಕ ಶಕ್ತಿಯು ದೈವಿಕತೆಯಲ್ಲಿ ಆಳವಾಗಿ ಬೇರು ಬಿಟ್ಟುಕೊಂಡಿದೆ. ಅವರ ಅಭಿಪ್ರಾಯವನ್ನು ಈ ಕೆಳಗಿನ ಐದು ವಿಭಾಗಗಳಾಗಿ ಕೊಡಬಹುದು".

ಮೊದಲನೆಯದಾಗಿ ಲೋಕವು ಹಿಂಸೆಯ ಹಿಡಿತದಲ್ಲಿ ಸಿಕ್ಕಿಕೊಂಡಿರುವದನ್ನು ಕಂಡು ಅವರು ಅಗಾಧ ಯಾತನೆಗೊಳಗಾಗಿದ್ದಾರೆ. ನಮ್ಮ ಭಾರತೀಯರು ಜಾಗತಿಕ ಸ್ಥಿತಿಗಳನ್ನು ಬದಲಾಯಿಸಲು ಅಸಮರ್ಥರಾಗಿದ್ದೇವೆ ಎಂಬುದನ್ನವರು ಒಪ್ಪುತ್ತಾರೆ ಆದರೂ ನೈತಿಕ ಹಾಗೂ ದೈವಿಕವಾದರ್ಶಗಳ ತೆರೆಯೇಳುವರೇ ಸಹಾಯವಾಗಿ ಏನನ್ನಾದರೂ ಮಾಡಲುಸಾಧ್ಯವಿದೆ ಎಂದು ಅವರ ಭಾವನೆ. ಸಚ್ಚರ ಲೌಕಿಕತೆಯಿಂದ ದೈವಿಕತೆಯ ಸಿದ್ಧಾಂತಕ್ಕೆ ಸಾಮಾಜಿಕ ರೀತಿ ನಿಯಮಗಳನ್ನು ವರ್ಗಾಯಿಸುವ ಪ್ರಯತ್ನವೊಂದನ್ನು ನಡೆಸುವ ಕಾಲವೀಗ ಬಂದಿದೆ ಇಂತಹ ಜಾಗತಿಕ ಸಮಾಲೋಚನೆಯಲ್ಲಿ ಹಿಂದೀಯ ಪ್ರಾಜ್ಞರುಕೈ ಹಾಕಲು ಸಾಧ್ಯವಿದೆ.

ಎರಡನೆಯದಾಗಿ ಭಾರತದಲ್ಲಿ ಸಾಮಾಜಿಕ ಸುಧಾರಣೆಯು ಸಾಕಷ್ಟು ತೀವ್ರವಾಗಿ ಪ್ರಗತಿ ಪಡೆಯುತ್ತಿಲ್ಲ ಮಹಾತ್ಮರು ಪಾಪವೆಂದು ಪರಿಗಣಿಸಿರುವ ಅಸ್ಪೃಶ್ಯತಾ ನಿವಾರಣೆಗಾಗಿ ಪೂರ್ಣ ಯತ್ನ ನಡೆಯಬೇಕಾಗಿದೆ ದಲಿತ ವರ್ಗದವರ ಉದ್ಧಾರಕ್ಕಾಗಿ ರಚನಾ ವ್ಯಾಪಕಪ್ರಯತ್ನ ನಡೆಯಬೇಕಾದುದು ಅಗತ್ಯ

ಮೂರನೆಯದಾಗಿ, ಬಂಗಾಳ ಮತ್ತು ಇತರ ಕಡೆಗಳಲ್ಲಿ ಅಧಿಕ ಪರಿಮಾಣದ ಅನ್ನಾಭಾವವನ್ನು ನಿರ್ಮಿಸಿರುವ ಅಸ್ವಾಭಾವಿಕತೆ, ದಾಸ್ಯಾನು, ಲಾಭಖೋರತ್ವಗಳಿಂದ ಮಹಾತ್ಮಾ ಗಾಂಧಿಯವರು ಸಂಕಟಕ್ಕೊಳಗಾಗಿದ್ದಾರೆ. ದೇಶದಲ್ಲಿ ಆಹಾರಧಾನ್ಯಗಳ ಅಷ್ಟೊಂದು ಅಭಾವವೇನೂ ಇಲ್ಲ. ಆದರೆ ದುರ್ವ್ಯವಸ್ಥೆಗಳು ಅವನ್ನು ದೀರ್ಘಾವಧಿ ಮಂದಿಗೆ ಎಟಕದಂತೆ ಮಾಡಿವೆ. ಅಧಿಕಾರಿಗಳ ಅಸಂಗತ ವರ್ತನೆ ಮತ್ತು ಖಾಸಗೀ ಜನರ ಲಾಭಖೋರತನಗಳನ್ನು ತಡೆಗಟ್ಟುವ ಸರ್ವ ಯತ್ನ ಮಾಡುವ ಹೊಣೆಯು ಎಲ್ಲಾ ನ್ಯಾಯವಾದಿಗಳದಾಗಿದೆ.

ನಾಲ್ಕನೆಯದಾಗಿ ಜಾತಿಜಾತಿಗಳೊಳಗಿನ, ಅದರಲ್ಲೂ ಮುಖ್ಯವಾಗಿ ಹಿಂದೂ ಮುಸ್ಲೀಮರೊಳಗಿನ, ಸಾಂಸ್ಕೃತಿಕ ಹಾಗೂ ದೈನಿಕ ವ್ಯವಹಾರ ಸಂಬಂಧಗಳು ಅಧಿಕವಾಗಿ ಸುಗಮಗೊಳ್ಳಬೇಕಾಗಿದೆ. ರಾಜಕೀಯ ಒಪ್ಪಂದವಾಗಲು ವಿಳಂಬವಾದ ಮಾತ್ರಕ್ಕೆ ಸಾಮಾಜಿಕ ಸಬಂಧಂಗಳನ್ನು ಸುಧಾರಿಸುವ ಪ್ರಯತ್ನವಾಗಬಾರದೆಂದೇನೂ ಇಲ್ಲ.

ಐದನೆಯದಾಗಿ ಗಾಂಧಿ ಜಿನ್ನಾ ಮಾತುಕತೆ ವಿಫಲವಾದ ಕುರಿತಾಗುತ್ತಿರುವ ಕೆಲವು ಟೀಕೆಗಳು ಅತ್ಯಂತ ಕಠೋರವಿವೆ. ಅವುಗಳ ಧ್ವನಿ ತಿದ್ದಲ್ಪಡಬೇಕು ಇಲ್ಲವೇ ಸಂಧಾನ ಯತ್ನದ ವಿಫಲತೆಯು ರಾಜಕೀಯ ಜಡತ್ವವನ್ನು ನಿರ್ಮಿಸದಂತೆ ನೋಡಬೇಕು. ಜೀವಪ್ರ ಪನ್ನನ್ನು ತಾನೇ ಒಂದುಗೂಡಿಸಿಕೊಂಡು, ಪರಿಸ್ಥಿತಿಯನ್ನೆಲ್ಲಾ ಪರಿಗ್ರಹಿಸಿಕೊಂಡು, ಜಾತೀಯ ಒಪ್ಪಂದದ ಸರ್ವ ವಿಧಾನಗಳನ್ನೂ ಮಾಡಿನೋಡಬೇಕು

ಈ ಉದ್ದೇಶಗಳ ಪೈಕಿ ಯಾವುದಕ್ಕಾಗಿಯಾದರೂ ಮಹಾತ್ಮರು ಸಾಮೂಹಿಕ ಅಥವಾ ವ್ಯಕ್ತಿ ಸತ್ಯಾಗ್ರಹ ಕೈಕೊಳ್ಳಲಾಗುವದಿಲ್ಲ. ಅಥವಾ ಇವುಗಳಿಗಾಗಿ ತಾವಾದರೂ ಕಾಯಿದೆ ಭಂಗ ಮಾಡುವಂತಿಲ್ಲ. ಸಧ್ಯದ ನಿಷ್ಕ್ರಿಯಾತ್ಮಕ ಮಬ್ಬು ಅವರಲ್ಲಿ ನಿಸ್ಸಹಾಯಕತೆಯ ಭಾವವನ್ನುಂಟುಮಾಡಿ, ಸತ್ಯಾಗ್ರಹಿಯ ಕೊನೆಯ ಸಾಧನವಾಗಿಯೂ ಅಪ್ರತಿಬಂಧ ಆತ್ಮ ಶುದ್ಧಿಗಾಗಿಯೂ ಉಪವಾಸವನ್ನು ಕೈಕೊಳ್ಳಬೇಕೆಂಬ ಯೋಚನೆ ಅವರಲ್ಲಿ ಮೂಡಿದಂತಿದೆ.

ಅದನ್ನು ತಡೆಗಟ್ಟುವದು ಹೇಗೆ?

ಅಕ್ಟೋಬರ್ 27ರಲ್ಲಿ ಮಹಾತ್ಮರೊಂದು ವಿಧಾಯಕ ಕಾರ್ಯಕ್ರಮದ ಸೂಚನೆಗಳನ್ನು ಕೆಲಸಗಾರರಿಗಾಗಿ ಪ್ರಕಟಿಸಿದ್ದರು. ಅದರಲ್ಲಿ ವಿದ್ಯಾಭಿವೃದ್ಧಿ, ವೈದ್ಯಕೀಯ ಸಹಾಯ, ವ್ಯವಸಾಯ ಸುಧಾರಣೆ ಮತ್ತು ಕೂಲಿಗಾರರ ಉನ್ನತಿಯ ಕಾರ್ಯಕ್ರಮಗಳನ್ನು ಹಾಕಿದ್ದರು.

ಆ ಹೇಳಿಕೆಯ ಕುರಿತು ಅಧಿಕಾರಬದ್ಧವಾಗಿ ನಾನೇನನ್ನೂ ಹೇಳಲಾರೆನಾದರೂ, ಮಹಾತ್ಮರು ತಮ್ಮೀ ವಿಧಾಯಕ ಕಾರ್ಯಕ್ರಮ ಸೂಚನೆಯ ಕುರಿತು ಸಾರ್ವಜನಿಕ ಪ್ರತಿಕ್ರಿಯೆಗಳನ್ನು ಲಕ್ಷ್ಯಪೂರ್ವಕ ಪರಿಶೀಲಿಸುತ್ತಿರಬಹುದೆಂದು ನನ್ನ ನಂಬಿಕೆ. ಅದು ಸಮಾಧಾನಕರವಾಗಿ ಕಂಡುಬಂದರೆ, ಹಾಗೂ ಮೇಲ್ಕಾಣಿಸಿದ ಪಾಪಗಳ ಪರಿಹಾರ ಕಾರ್ಯವೇನಾದರೂ ನಡೆದರೆ, ಉಪವಾಸ ದೀಕ್ಷೆ ನಿಂತೇ ಹೋಗಬಹುದು, ಅಥವಾ ಅದರ ಅವಧಿಯಾದರೂ ಗಿಡ್ಡಾಗಬಹುದು. ಕೊನೆಯ ಪಕ್ಷ ಅದು ಅವರಲ್ಲಿ ಉತ್ಸಾಹವನ್ನು ಹುಟ್ಟಿಸಿ, ಅವರನ್ನು ಯಾವುದೇ ಸ್ವನಿರ್ಮಿತ ಗಂಡಾಂತರದಿಂದಾದರೂ ಸುರಕ್ಷಿತವಾಗಿ ಪಾರು ಮಾಡುವದಂತೂ ನಿಜ.

ಅಂತರ್ವಾಣಿ ಅಥವಾ ದೈವಿಕ ಕರೆಯೆಂಬ ಒಂದು ವಿಶೇಷತತ್ವವು ಮಹಾತ್ಮರ ಮರ್ಜಿಯಾಗಿದೆ ಎಂಬುದನ್ನೊಪ್ಪಬೇಕು. ಆದರೂ ಮಹಾತ್ಮರ ಮನಸ್ಸೆಂದರೆ ವಸ್ತುಸ್ಥಿತಿಗೆ ಹೊಂದಿಕೊಳ್ಳುವ ಪ್ರಯತ್ನದ ಪ್ರತಿನಿಧಿಯಾಗಿದ್ದು ಬುದ್ಧಿ ಮತ್ತು ನಡತೆಗಳನ್ನೊಂದುಗೂಡಿಸುವ ಏಕರೂಪಿಯೆಂಬುದನ್ನು ಮರೆಯಬಾರದು. ದೇಶವು ಧೈರ್ಯವನ್ನು ಕಿತ್ತೊಗೆದು ಪುನಃ ಮುಂದೊತ್ತಲಾರಂಭಿಸಿದೆ ಎಂಬ ಮನವರಿಕೆಯು ಅವರ ಮನಸ್ಸಿನ ಮೇಲೆ ಪರಿಣಾಮವನ್ನುಂಟುಮಾಡಬಲ್ಲುದು. ಅವರಿಗೆ ಹಿತವನ್ನು ಕೋರುವ ಸರ್ವರೂ ಕೂಡಲೇ ದೇಶ ರಚನಾ ಕಾರ್ಯದಲ್ಲಿ ಪ್ರವೃತ್ತರಾಗಿ ಸರಿಯಾದ ವರದಿಗಳನ್ನು ಸೇವಾಗ್ರಾಮಕ್ಕೆ ಕಳುಹಿಕೊಡಬೇಕು

ಉಪವಾಸದಿಂದ ಗಾಂಧಿಜೀಯನ್ನು ತಪ್ಪಿಸುವ ಬಾಯಿ ಯತ್ನಗಳು ಈ ತನಕ ಪರಿಣಾಮಕಾರಿಯಾಗಿಲ್ಲ. ಕೊನೆಯ ನಿಶ್ಚಯಾತ್ಮಕ ಧ್ಯೇಯ ಯಾವುದೆಂಬುದು ಯಾರಿಗೂ ತಿಳಿದಿಲ್ಲ. ಸ್ವತಃ ಅವರೇ ಸಂದಿಗ್ಧ ಧೋರಣೆಯುಳ್ಳವರಾಗಿದ್ದಾರೆ ಅವರೊಳಗೊಂದು ಅವರ್ಣನೀಯ ಒತ್ತಡ ಹುಟ್ಟಿಕೊಂಡಂತಿದೆ. ಅಹಿಂಸೆಯನ್ನೀಗ ನಾವೆಲ್ಲರೂ ನೋಡಬಲ್ಲೆವು; ಅಹಿಂಸೆಯು ಕಾರ್ಯಕಾರಿಯಾಗುತ್ತಿರುವದನ್ನು ನಾವು ಕಾಣುತ್ತಿಲ್ಲ. ಅದು ಕಾರ್ಯತಃ ಪ್ರದರ್ಶಿಸಲ್ಪಟ್ಟು ವಿಸ್ತೃತ ಹಿಂಸೆಯನ್ನು ತಡೆಗಟ್ಟಲೇಬೇಕೆಂದು ಅವರು ಮನದಟ್ಟು ಮಾಡಿಕೊಂಡಿದ್ದಾರೆ. ಆದರಲ್ಲವರ ಸ್ಥಾನವಾವುದು? ನಾವೇನು ಮಾಡಬೇಕು? ಸಾರ್ವಜನಿಕರು ಹೇಗೆ ಸಹಾಯ ಮಾಡಬಲ್ಲರು? ನಾನು ಕೆಲವೊಂದು ವಿಧಾನಗಳನ್ನಿಲ್ಲಿ ಸೂಚಿಸಿದ್ದೇನೆ"

… ಸ್ವಮತ
ಶಿವಳ್ಳಿ ಬ್ರಾಹ್ಮಣರ
ಧರ್ಮ ಛತ್ರ
ಇದೇ ತಾ 8-10-44ರಿಂದ
ರಾಮೇಶ್ವರ ದೇವಸ್ಥಾನದ ಬಡಗು ಬೀದಿಯಲ್ಲಿ ತೆರೆಯಲ್ಪಟ್ಟಿದೆ.
ಎಲ್. ನರಸಿಂಗರಾವ್. ಪ್ರೊಪ್ರೈಟರ್.
ಉಡುಪಿ ಬೋರ್ಡಿಂಗ್ ಎಂಡ್ ಲಾಜಿಂಗ್, ಮಧುರ.

ಉಡುಪಿ ಮುನಿಸಿಪಲ್ ಉಪಚುನಾವಣೆ.
ಇದೇ ಬರುವ 4-12-1944ರಲ್ಲಿ ನಡೆಯಲಿರುವ ಉಡುಪಿ ಮುನಿಸಿಪಾಲಿಟಿಯ ಮೂಡನಿಡಂಬೂರು ವಾರ್ಡಿನ ಉಪಚುನಾವಣೆಯಲ್ಲಿ ನಾನು ಒಬ್ಬ ಉಮೇದ್ವಾರನಾಗಿರುವೆ. ಮತದಾರರೆಲ್ಲರೂ ದಯಮಾಡಿ ತಮ್ಮ ಮತಗಳನ್ನು ನನಗೆ ಕೊಟ್ಟು ಪ್ರೋತ್ಸಾಹಿಸಿ, ಮಹಾ ಜನರ ಸೇವೆಯನ್ನು ಮಾಡುವ ಸುಯೋಗವನ್ನು ಒದಗಿಸಿಕೊಡ ಬೇಕಾಗಿ ಅಪೇಕ್ಷಿಸುತ್ತೇನೆ.
ಆರ್. ಆರ್. ಕುಂಜೂರು,
ಜತೆಕಾರ್ಯದರ್ಶಿ, ತಾಲೂಕು ಆಹಾರ ಸಮಿತಿ, ಉಡುಪಿ.

The Canara Banking Corporation Limited.

(Incorporated in British India.)

Estd: 1906.

Head Office: **UDIPI,** (S. K.)

ANNOUNCEMENT

A Branch of the Bank Will Shortly Be opened at **HUBLI**

ನವಯುಗ

ಉಡುಪಿ, ಗುರುವಾರ ೧೬-೧೧-೧೯೪೪

ಸಾರ್ವತ್ರಿಕ ಹಸುಗೆ

ದಕ್ಷಿಣ ಕನ್ನಡ ಜಿಲ್ಲಾ ಕಲೆಕ್ಟರರ ಇತ್ತೀಚಿಗಿನ ಪ್ರಕಟಣೆಯನ್ವಯ ಜಿಲ್ಲೆಯ ಸರ್ವ ಜನರೂ ಸಾಮಾನ್ಯವಾದ ಒಂದು ರೇಶನ್ ಪದ್ಧತಿಯಂತೆ ಅಕ್ಕಿ ಪಡೆಯುವ ವ್ಯವಸ್ಥೆಯಾಗಲಿದೆ. ಇದಕ್ಕಾಗಿ ರೆವಿನ್ಯೂ ಡಿವಿಜನಲ್ ಆಫೀಸರರುಗಳೆಲ್ಲಾ ವಕೀಲರು, ಉಪಾಧ್ಯಾಯರು, ಆರೋಗ್ಯ ಅಬಕಾರಿ ಇಲಾಖೆಯ ಉದ್ಯೋಗಸ್ಥರು ಹಾಗೂ ಇತರ ಸಾರ್ವಜನಿಕ ಕೆಲಸಗಾರರ ಸಹಾಯದಿಂದ ತಂತಮ್ಮ ಕ್ಷೇತ್ರದ ಜನಸಂಖ್ಯೆಯ ಪಟ್ಟಿಯನ್ನು ಏನೂ ತಪ್ಪಿಲ್ಲದಂತೆ ದಶಂಬರ್ ತಾ. 15ರೊಳಗೆ ಸಂಗ್ರಹಿಸಬೇಕಾಗಿದೆ. ಈ ಸಂಬಂಧದ ಸರ್ವಾಧಿಕಾರವನ್ನು ಗ್ರಾಮಉದ್ಯೋಗಸ್ಥರಿಗೆ ಕೊಡುವಂತಿಲ್ಲ. ಧನಿಕ ಬಡವ ಎಂಬ ಪಕ್ಷಪಾತವಿಲ್ಲದೆ ಎಲ್ಲರಿಗೂ ಏಕಪ್ರಕಾರ—ಅರ್ಥಾತ್, 12ವರುಷಕ್ಕೆ ಮೇಲ್ಪಟ್ಟವರಿಗೆ ದಿನಕ್ಕರ್ಧ ಸೇರಿನಂತೆಯೂ ಅದರೊಳಗಿನ ಪ್ರಾಯದವರಿಗೆ 1ಪಾವಿನಂತೆಯೂ ಧಾನ್ಯಕೊಡಲಾಗುವುದು. ಈ ಅಳತೆಯಂತೆಯೇ ತಮ್ಮ ಊಟದ ಅಕ್ಕಿಯನ್ನು ಇಟ್ಟುಕೊಂಡು ಮಿಕ್ಕುಳಿದ ಹುಟ್ಟುವಳಿಯನ್ನೆಲ್ಲಾ ಸ್ಟೋರುಗಳಿಗೆ ಒಪ್ಪಿಸುವಂತೆ ಅಧಿಕಾರಿಗಳ ಕಟ್ಟಪ್ಪಣೆಯು ಬೇಸಾಯಗಾರರ ಮೇಲೆ ಈ ಮೊದಲೇ ಜ್ಯಾರಿಯಾಗಿ ಸಂಗ್ರಹಕಾರ್ಯ ನಡೆದಿದೆ, ದ. ಕ. ಜಿಲ್ಲೆಯ ಈ ವರುಷದ ಆಹಾರ ವ್ಯವಸ್ಥೆಯ ಚೌಕಟ್ಟು ಈ ರೀತಿ ಪೂರ್ಣವಾಯಿತೆನ್ನಬೇಕು. ಆದರೆ ಈ ಯೋಜನೆಯ ಉತ್ತರಾರ್ಧವಾದ ಸಾರ್ವತ್ರಿಕ ಹಸುಗೇ ಪದ್ಧತಿಯು 1945ರ ಆದಿಭಾಗದಲ್ಲಿ ಮಾತ್ರ ಜ್ಯಾರಿಗೆ ಬರಲು ಸಾಧ್ಯ. ಕಳೆದ ವರುಷದ ರಿಕ್ವಿಶಿಶನ್ ಪ್ರಮಾದಗಳನ್ನು ಕಂಡ ನಾವು ಇಂತಹ ಅಸ್ತವ್ಯಸ್ತತೆಗಿಂತ, ಪ್ರಥಮತಃ ಎಲ್ಲವನ್ನೂ ಸಂಗ್ರಹಿಸಿ ಆ ಮೇಲೆ ಎಲ್ಲರಿಗೂ ಹಂಚುವ ಆಮೂಲ ರಿಕ್ವಿಶಿಶನ್ ಮತ್ತು ಸಾರ್ವತ್ರಿಕ ರೇಶನ್ ಕ್ರಮವೇ ಉತ್ತಮವೆಂದು ಸೂಚಿಸಿದ್ದೆವು. ಅಧಿಕಾರಿಗಳೀಗ ಸ್ವಾನುಭವ ಮೂಲಕವೇ ಅಂತಹ ನಿರ್ಧಾರಕ್ಕೆ ಬಂದಿದ್ದಾರೆ. ನಮ್ಮ ಅಭಿಪ್ರಾಯಕ್ಕೂ ಜಿಲ್ಲಾಧಿಕಾರಿಗಳ ಇಂದಿನ ಯೋಜನೆಗೂ ನಾಮಮಾತ್ರ ವ್ಯತ್ಯಾಸವಿದೆ. ಬೇಸಾಯಗಾರರ ಎಲ್ಲಾ ಹುಟ್ಟುವಳಿಯನ್ನೂ ಒಮ್ಮೆ ಕಾಳುಬಿಡದೆ ಸಂಗ್ರಹಿಸಿ, ಅವರ ಸಾಗುವಳಿ ಮತ್ತು ಊಟದ ಖರ್ಚನ್ನೂ ರೇಶನ್ ಮೂಲಕವೇ ಕೊಡುವದುತ್ತಮವೆಂದು ನಮ್ಮ ಸೂಚನೆಯಾಗಿದ್ದರೆ, ಸಾಗುವಳಿದಾರರ ಊಟ ವ್ಯವಸಾಯದ ಖರ್ಚನ್ನು ಸಂಗ್ರಹಿಸದೇನೇ ಬಿಟ್ಟು ಮಿಕ್ಕುದನ್ನು ಜಮಾಯಿಸಿಕೊಳ್ಳುವ ಯೋಜನೆ ಅಧಿಕಾರಿಗಳದು. ತೋರಿಕೆಯ ಮಟ್ಟಿಗೆ ಇವೆರಡರ ಪೈಕಿ ಅಧಿಕಾರೀ ಯೋಜನೆಯೇ ರೈತಪಕ್ಷಪಾತಿಯಾಗಿ ಕಾಣಿಸಬಹುದು. ಆದರೆ ಕಳೆದ ವರುಷದ ಕಹಿ ಅನುಭವನ್ನು ಯಾರೂ ಮರೆಯಬಾರದು. ಒಮ್ಮೆ ರೈತರ ಸಾಗುವಳಿ ಮತ್ತು ಊಟದ ಖರ್ಚಿಗೆಂದು ಬಿಟ್ಟುಬಂದ ಅಂಶವೇ ಮತ್ತೊಮ್ಮೆ ಹೋದಾಗ ಅದೇ ಅಧಿಕಾರಿಗಳ ಕಣ್ಣಿಗೆ 'ದಾಸ್ತಾನು' ಆಗಿ ತೋರಿ ಜಪ್ತಾಗಿ ಹೋದುದಿದೆ. ಒಂದೆಡೆಯಿಂದ ಈ ಅಪಾಯವಿರುವಾಗ ಇನ್ನೊಂದೆಡೆಯಿಂದ ಬೇಸಾಯಗಾರರು ತಮ್ಮಲ್ಲುಳಿಯುವ ಧಾನ್ಯವನ್ನು ಅವಧಿಯ ಮೊದಲೇ ಅಪವ್ಯಯ ಮಾಡಿ ಕೊನೆಗೆ ಕಷ್ಟಕ್ಕೊಳಗಾಗುವ ಸಂಭವವೂ ಇದೆ. ಆದರೆ ನಮ್ಮ ಅಭಿಪ್ರಾಯದ 'ಸಂಪೂರ್ಣ ಸಂಗ್ರಹ ಮತ್ತು ಸಾರ್ವತ್ರಿಕ ವಿತರಣಾ ಯೋಜನೆ'ಯ ಅವಧಿಯೀಗ ಮೀರಿದೆ. ಕಾರ್ತಿ ಬೆಳೆ ಕಟಾವಾಗುವ ಮೊದಲೇ ಜನಗಣನೆ ಮತ್ತು ಸಾಗುವಳಿ ಖರ್ಚಿನ ಅಂದಾಜು ಪಟ್ಟಿ ತಯಾರಾಗುತ್ತಿದ್ದರೇನೇ ಆ ಪದ್ಧತಿಯನ್ನು ಜ್ಯಾರಿಗೆ ತರಲು ಸಾಧ್ಯವಿತ್ತು. ಆ ಅವಧಿ ಮೀರಿರುವಾಗ ಜಿಲ್ಲಾಧಿಕಾರಿಗಳ ಇಂದಿನ ಕ್ರಮವೇ ಮಾನ್ಯವೆಂಬುದರಲ್ಲಿ ಸಂದೇಹವಿಲ್ಲ. ಆದರೆ ಬೇಸಾಯಗಾರರ ಸಾಗುವಳಿ ಮತ್ತು ಊಟದ ಖರ್ಚಿಗೆ ಸಾಕಾಗುವಷ್ಟನ್ನು ಬಿಡುವದು ಮಾತ್ರವಲ್ಲ—ಅದನ್ನು ಆ ಮೇಲೆ ಮುಟ್ಟಬಾರೆವೆಂದು ಅಧಿಕಾರಿಗಳು ಪ್ರತಿಜ್ಞೆ ಮಾಡಿಕೊಳ್ಳತಕ್ಕದ್ದೆಂದು ಈ ಸಂದರ್ಭದಲ್ಲಿ ಒತ್ತಿಹೇಳದಿರಲಾರೆವು. ಅಂತೆಯೇ ಜಿಲ್ಲೆಯ ಸಾಮಾನ್ಯ ಬೇಸಾಯಗಾರರನ್ನೂ ಎಚ್ಚರಿಸುವ ಅಂಶವಿದೆ. ಕಟಾವಾದೊಡನೆ 'ಅಂದಾದ ಬರ್ಕಾರು' ನಡೆಯಿಸಿ, ವರಷದ ಕೊನೆಯ ಭಾಗದಲ್ಲಿ ಸಾಲಪಡೆದುಣ್ಣುವ ಪರಿಳಿತವು ದ. ಕ. ರೈತರಲ್ಲಿ ಆದಿಯಿಂದಲೂ ಇದ್ದದ್ದೇ. ರೈತರು ತಮ್ಮ ಮನೋವೃತ್ತಿಯನ್ನು ಈ ವರುಷ ಬದಲಾಯಿಸಲೇ ಬೇಕು. ಯಾಕಂದರೆ ಸ್ಥಿತಿಬದಲಾಗಿದೆ, 'ಅಕ್ಕಿ ಸಾಲ'ವೆಂಬುದು ಕಳೆದ ವರುಷದಿಂದ ಪೂರ್ಣ ರದ್ದಾಗಿದೆ. ಮುಂಬರುವ ತಿಂಗಳುಗಳಿಗುಣ್ಣುವದಕ್ಕಾಗಿ ಅಧಿಕಾರಿಗಳು ಬಿಟ್ಟು ಹೋಗುವ ಅಂಶದಲ್ಲಿ ಪ್ರತಿದಿನವೂ ಆ ದಿನದ ಪಡಿಯನ್ನಲ್ಲದೆ ಮಿಕ್ಕುದನ್ನು ಮುಟ್ಟುವ ಅಧಿಕಾರ ತಮಗಿಲ್ಲವೆಂಬುದನ್ನು ರೈತರು ಆಗತ್ಯ ತಿಳಿದಿರಬೇಕು. ಇಂತಹ ನಿಯಮವನ್ನು ಮೀರಿ ವ್ಯಯಿಸುವ ರೈತರು ಆಖೈರಿಗೆ ತಮಗೆ ತಾವೇ ಬರಗಾಲವನ್ನು ನಿರ್ಮಿಸಿಕೊಳ್ಳುವದು ಖಂಡಿತ.

'ಎಲ್ಲರೂ ರೇಶನ್ ಮಟ್ಟಿಗೆ ಸಮಾನ ಹಕ್ಕುಳ್ಳವರು. ಮಜೂರರಿಗೆ ಹೆಚ್ಚುಬೇಕೆಂದರೆ ಇತರ ಹಲವರು ಉಪವಾಸಬೀಳಬೇಕಾಗುವುದು. ಮತ್ತದರಿಂದ ಕಳ್ಳಸಂತೆಗೆ ಪ್ರೋತ್ಸಾಹಕೊಟ್ಟಂತಾಗುವದು.'—ಎಂಬೊಂದು ಸಮತಾವಾದ ಮಾತ್ರ ಸರಿಯಲ್ಲವೆನ್ನಡೆ ನಿರ್ವಾಹವಿಲ್ಲ. 'ಎಲ್ಲರಿಗೂ ಸಮಾನ ಹಕ್ಕು' ಇರಬೇಕಾದುದು ಆಹಾರದ ಮಟ್ಟಿಗೆ ಮಾತ್ರ—ಅಕ್ಕಿಯ ಮಟ್ಟಿಗಲ್ಲ. ಶ್ರೀಮಂತರು, ಪಟ್ಟಣಿಗರೇ ಮೊದಲಾದವರು ಇತರ ಪೌಷ್ಟಿಕ ಆಹಾರ ಸೇವಿಸುತ್ತಿದ್ದಾಗಾದರೆ, ರೈತರು ಮಜೂರರೇ ಮೊದಲಾದವರಿಗೆ ಅನ್ನವೊಂದೇ ಆಹಾರ. ಅಕ್ಕಿಯ ಮಟ್ಟಿಗೆ 12ವರುಷದೊಳಗಿನವರು ಮತ್ತು ಹೊರಗಿನವರು ಎಂಬ ಭೇದಮಾಡಿದಂತೆಯೇ ಪಟ್ಟಣಿಗರು—ಹಳ್ಳಿಗರು, ಅಥವಾ ಶ್ರೀಮಂತರು-ಮಜೂರರು ಎಂಬ ತಾರತಮ್ಯ ಮಾಡುವದೂ ಅತ್ಯವಶ್ಯವಿದೆ. ಅಧಿಕಾರಿಗಳು ಈ ಕುರಿತು ಪುನರಾಲೋಚಿಸಿ ಶ್ರಮಜೀವಿಗಳಿಗೆ ನ್ಯಾಯದಾನಮಾಡುವರೆಂದು ನಂಬುತ್ತೇವೆ ಈ ರೀತಿ ಆಗತ್ಯವುಳ್ಳ ಕೆಲವು ಮುಂಜಾಗ್ರತೆ ಮತ್ತು ರಕ್ಷಣೋಪಾಯಗಳನ್ನು ಕೈಕೊಂಡಲ್ಲಿ ಅಧಿಕಾರಿಗಳು ಜ್ಯಾರಿಗೆ ತಂದಿರುವ ಈ ಸಾರ್ವತ್ರಿಕ ಹಸುಗೆಯ ಯೋಜನೆಯು ಜಯಶೀಲವಾಗುವದರಲ್ಲಿ ಸಂದೇಹವಿಲ್ಲ. ಈ ರೀತಿ ಜಿಲ್ಲೆಯ ಆಹಾರ ವ್ಯವಸ್ಥಾ ಯಂತ್ರವನ್ನು ಬಹುಅಂಶ ನಿರ್ದೋಷವಾಗಿ ಹಾಗೂ ಪರಿಣಾಮಕಾರಿಯಾಗಿ ಚಾಲುಮಾಡುತ್ತಿರುವ ಇಂದಿನ ಜಿಲ್ಲಾಧಿಕಾರಿಗಳು ಅಭಿನಂದನೀಯರು.

ಯುದ್ಧ ಸ್ಥಿತಿ

ಒಮ್ಮೆ ರಶ್ಯಾನರು ಪೋಲೆಂಡ್ ಹಾಗೂ ಪೂರ್ವ ಪ್ರಶ್ಯದ ಗಡಿಯಲ್ಲಿಯೂ, ಇತ್ತ ಆಂಗ್ಲೋ ಅಮೆರಿಕಾನರು ಫ್ರಾನ್ಸಿನಿಂದ ಮುಂದೊತ್ತಿ ಜರ್ಮನಿ ಗಡಿಯ ವರೆಗೂ ತೀವ್ರಗತಿಯಿಂದ ಧಾವಿಸಿದಾಗ ಉಂಟಾಗಿದ್ದ ಅತಿ ಭರವಸೆಯು, ಜರ್ಮನರ ಇಂದಿನ ಪ್ರಬಲ ಪ್ರತಿಭಟನೆಯಿಂದ ಕುಗ್ಗಿದಂತಿದೆ. ಕಳೆದ ವಾರ ಮಿತ್ರಸೇನೆಗಳು ಯಾವ ರಂಗದಲ್ಲೂ ಗಣನೀಯ ವಿಜಯವನ್ನು ಪಡೆದಿಲ್ಲ. ಆದರೆ ದೃಢವಾಗಿ, ಹೆಜ್ಜೆಹೆಜ್ಜೆಯಾಗಿ ಮುಂದೊತ್ತುತ್ತಿವೆ.

ಯುದ್ಧಾವಧಿ ಬೆಳೆಯಬಹುದೆ?

ಈಗ ಎಲ್ಲಾ ಕಡೆಗಳಲ್ಲೂ ಮಿತ್ರಸೇನೆಗಳು ಹೋಗಿ ನಿಂತಿರುವ ಗಡಿಗಳು ನಾಜಿಗಳ ಜೀವನಾಡಿಗಳಂತಿರುವ ಸ್ಥಳಗಳು, ಆದ್ದರಿಂದ ಜರ್ಮನರ ಇಂದಿನ ಅದ್ಭುತ ಪ್ರತಿಭಟನೆಯು ಅನಿರೀಕ್ಷಿತವಾದುದೇನೂ ಅಲ್ಲ. ಅವರು ಇನ್ನೂ ಹೆಜ್ಜೆ ಹಿಂದಿಡುತ್ತಾ ಹೋದರೆ ಯುರೋಪು ಯುದ್ಧದ ಕೊನೆಯು ಅನತಿದೂರವಲ್ಲೇ ಇದೆಯೆನ್ನಬಹುದು ಆದರೆ ಇಂದಿನ ಅವರ ಪ್ರತಿಭಟನೆಯ ಬೃಹದ್ರೂಪವನ್ನು ಕಾಣುವಾಗ ಅದು ಈ ಆಯಕಟ್ಟಿನ ಗಡಿಗಳಲ್ಲಿ ಮಾತ್ರವಿರುವ ಶಕ್ತಿಯೋ ಅಥವಾ ಮಿತ್ರಸೇನೆಗಳು ಒಳಗೆ ನುಗ್ಗಿದಾಗಲೂ ಇದ್ದೇ ಇರುವಂತಹದೋ ಎಂಬುದನ್ನು ದೃಢಪಡಿಸಿಕೊಳ್ಳಲಾಗುವದಿಲ್ಲ. ರಾಷ್ಟ್ರದೊಳಗಡೆ ನಾಗರಿಕರನ್ನೂ ಯೋಧರನ್ನಾಗಿ ಜರ್ಮನರು ತಯಾರಿಸಿಟ್ಟಿದ್ದಾರೆ- ಹೊಸ ಆಯುಧಗಳು ಈಗ ಒಂದೊಂದಾಗಿ ಬೆಳಕಿಗೆ ಬರುತ್ತಿವೆ. ಆದ್ದರಿಂದ ಮುಂದಿನದು ಅತಿ ಪ್ರಯಾಸದ ಕಾರ್ಯ; ಈ ತನಕ ನಿರೀಕ್ಷಿಸಿರುದಕ್ಕಿಂತಲೂ ಹೆಚ್ಚಿನ ಸಮಯ ತಾಗಬಹುದಾದ ಕೆಲಸವೆಂಬುದನ್ನು ಮರೆಯಬಾರದು.

ಹಲವು ತೊಂದರೆಗಳು

"ನಾವೀಗ ಜರ್ಮನಿಗೆ ಕೈಮೈಯ್ಯಾಗಿ ನಿಂತಿದ್ದೇವೆ. ಕಟ್ಟಕಡೆಗೆ ತನ್ನ ಸ್ವಂತ ಗುಹೆಗೇನೇ ಅಟ್ಟಲ್ಪಟ್ಟ, ಈ ಮಿಲಿಟರಿ ಮಹಾಗರ್ವಿಯು ಗಲಿಬಿಲಿಗೊಂಡು ಕೊಡಬಹುದಾದ ಪ್ರತಿಭಟನೆಯನ್ನಿದಿರಿಸಲು ನಮ್ಮ ಮೂರು ಮಹಾರಾಷ್ಟ್ರಗಳ ಮಹಾಶಕ್ತಿಯ ಪ್ರತಿಯೊಂದಂಶವನ್ನೂ ಉಪಯೋಗಿಸಬೇಕಾದೀತು. ಹಿಂದಿನ ಸಂದರ್ಭಗಳಿಗೆ ಮಿಕ್ಕಿದ ಯಾವುದೊಂದು ಲಘು ಭವಿಷ್ಯದ ಆಶ್ವಾಸನೆಯನ್ನಾದರೂ ಯುರೋಪು ರಂಗದ ಮಟ್ಟಿಗೆ ನಾನೀಗ ಈಯುವಂತಿಲ್ಲ" ಎಂದು ಮಿ. ಚರ್ಚಿಲ್ಲರು ತನ್ನ ಈಬಾರಿಯ ಕಾಮನ್ಸ್ ಭಾಷಣದಲ್ಲಂದಿದ್ದಾರೆ. ಅಂತೆಯೇ ಪೂರ್ವ ಆಶ್ಯಾದ ಪರಿಸ್ಥಿತಿಯ ಪೂರ್ಣಾನುಭವಿಗಳಾದ ಬ್ರಿಟಿಷರೊಬ್ಬರು ಆ ವೇಳಿನ ಜಪಾನೀ ಯುದ್ಧವಾದರೂ ಕಡಿಮೆಯೆಂದರೆ, 15 ತಿಂಗಳಿಂದ 2 ವರುಷಗಳ ವರೆಗಾದರೂ ಬೆಳೆಯಬಹುದೆಂದು ಎಚ್ಚರಿಸಿದ್ದಾರೆ. ಸಮೀಪಕ್ಕೆ ಹೋದಂತೆ ಜರ್ಮನಿ ಜಪಾನುಗಳು ಅಧಿಕಾಧಿಕ ಭೀಕರವಾಗುತ್ತಿವೆ ಎಂಬುದು ಸ್ಪಷ್ಟ ಮೇಲಾಗಿ ಮಿತ್ರರಾಷ್ಟ್ರಗಳ ಪಾಲಿಗೆ ರಣರಂಗಗಳು ಮೂಲನೆಲಗಳಿಗಿಂತ ದೂರದೂರವಾದಂತೆ ಅವರ ಸರಬರಾಯಿ ಪಥಗಳ ಉದ್ದವೂ ಬೆಳೆಯುವದರಿಂದ ಈ ವರೆಗಿನ ಅನುಕೂಲತೆಯು ಇನ್ನು ಮುಂದೆಯೂ ದೊರೆಯುವದು ಸುಲಭವಲ್ಲ. ಕಳೆದ ಕೆಲವು ವಾರಗಳಿಂದ ಪಶ್ಚಿಮರಂಗದಲ್ಲಿ ಮುಖ್ಯವಾದ ಬಂದರಗಳ ರಿಪೇರಿಯೇ ಮೊದಲಾದ ರಚನಾತ್ಮಕ ಕಾರ್ಯದಲ್ಲೇ ಮಿತ್ರರಿದ್ದಾರೆ. ಮೇಲಾಗಿ ಹವೆಯ ಅನುಕೂಲತೆಯಿಲ್ಲದೆ ಪ್ರತ್ಯಕ್ಷ ಜರ್ಮನಿಯೊಳಗೆ ನುಗ್ಗಿ ಹೋಗುವದು ಅಪಾಯಕರ. ಆರ್ನ್ಹೆಮ್ ರಂಗದಲ್ಲಿ ಮಿತ್ರಸೇನೆಗಳಿಗಾದ ಹಾನಿಯ ಅನುಭವವನ್ನು ಯುದ್ಧ ಚಾಲಕರು ಜನ್ಮದಲ್ಲೇ ಮರೆಯಲಾರರು. ಇವೆಲ್ಲಕ್ಕಿಂತ ಹೆಚ್ಚಾಗಿ ಈಗ ರೊಕೆಟ್ ಹಾವಳಿಯು ಇಂಗ್ಲಾಂಡನ್ನು ಕಳವಳಕ್ಕೀಡುಮಾಡಿದೆ ಅವುಗಳ ನಿರ್ಮಾಣಕ ಕಾರ್ಖಾನೆಗಳ ಸ್ಥಳಗಳನ್ನೂ, ನಿಲ್ದಾಣಗಳನ್ನೂ ಊಹಿಸಿ ಮಿತ್ರ ವಿಮಾನಗಳು ಧಾಳಿ ನಡೆಸುತ್ತಿವೆಯಾದರೂ ಆತಿಸಿದಷ್ಟು ಪರಿಣಾಮವಾಗಿಲ್ಲ.

ಊಟದ ದರ ನಿಯಂತ್ರಣ:— ಊಟದ ಹೊಟೆಲುಗಳಲ್ಲಿಯೂ ಸಾರ್ವಜನಿಕ ಬೋರ್ಡಿಂಗ್‌ಗಳಲ್ಲಿಯೂ ಜಿಲ್ಲಾ ಕಲೆಕ್ಟರರು ಈ ಕೆಳಗಿನಂತೆ ಊಟದ ದರವನ್ನು ನಿಯಂತ್ರಿಸಿದ್ದಾರೆ. ಮಾಂಸಾಹಾರಿಗಳ ಸಾಮಾನ್ಯ ಊಟಕ್ಕೆ (ಕಟ್ಲೆಲು ಯಾ ಟೆಳ್ಳಿಗ) ಹೆಚ್ಚೆಂದರೆ ನಾಲ್ಕಾಣೆ, ನಸ್ಯಾಹಾರಿಗಳ ಸಾಮಾನ್ಯ ಊಟಕ್ಕೆ (ಕುಚ್ಚಲು ಯಾ ಬೆಳ್ತಿಗೆ) ಹೆಚ್ಚೆಂದರೆ ಐದಾಣೆ, ತಿಂಗಳೊಂದರ ಊಟದ ದರವು ರೂ. 10ಕ್ಕೆ ಮೀಗಬಾರದು.

ಎಲ್ಲಾ ರಣರಂಗಗಳಲ್ಲೂ ಸಮಬಲ ಸ್ತಬ್ಧತೆ!

ಪಶ್ಚಿಮ ರಂಗದಲ್ಲಿ

ಪ್ರತ್ಯಕ್ಷ ಯುದ್ಧರಂಗವನ್ನು ಪರಿಶೀಲಿಸುವದಾದರೆ ಕಳೆದ ವಾರ ಪಶ್ಚಿಮ ರಂಗದಲ್ಲಿ ಮಿತ್ರರಿಗಾಗಿರುವದು ಸಣ್ಣ ಸಣ್ಣ ವಿಜಯಗಳು ಮಾತ್ರ. ಡಚ್-ಬೆಲ್ಜಿಯನ್ ಕರಾವಳಿಯ ದ್ವೀಪಗಳಲ್ಲಿ ಹೆಚ್ಚಿನವುಗಳನ್ನು ಈಗ ಮಿತ್ರರು ವಶಪಡಿಸಿಕೊಂಡಿದ್ದಾರೆ. ಎಂಟ್‌ವರ್ಪ್ ಸರಬರಾಯಿಗನುಕೂಲವಾಗುವ ಮಹಾ ಬಂದರವಾಗಿ ಸದ್ಯದಲ್ಲೇ ಮಾರ್ಪಡಬಹುದು. ಹೊಲ್ಲೇಂಡಿನಲ್ಲಿ ಮಿತ್ರಸೇನಾನಿ ಜನರಲ್ ಡೆಂಪ್ಸೆಯವರ 2ನೆ ದಳ ಸಾಕಷ್ಟು ಮುಂದೊತ್ತಿದೆ. ಈಗ ಸಿಗ್‌ಫ್ರೈಡ್ ವಲಯದ ಪ್ರಾಮುಖ್ಯವಾದ ಧಾಳಿಗಳೆಂದರೆ ಎಚಿನ್ ಮತ್ತು ಮೆಟ್ಜ ವಲಯದವುಗಳು. ಜನರಲ್ ಹೋಡ್ಜೆಯವರ ಮೊದಲನೇ ಸೇನೆಯು ಜರ್ಮನರ ಕೈಗಾರಿಕಾ ಕೇಂದ್ರವಾದ ಕೊಲೋನಿಗಭಿಮುಖವಾಗಿ ಸಾಗುತ್ತಿದ್ದರೂ ಅದರ ಪ್ರಗತಿ ಕುಂಠಿತವಾಗಿದೆ. ಯುರೋಪಿನ ಪ್ರಬಲ ಕೋಟೆಗಳಲ್ಲೊಂದೆಂದು ಚರಿತ್ರೆಯಲ್ಲೇ ಸ್ಥಾನಪಡೆದಿರುವ ಮೆಟ್ಜಿನ ಕಡೆಗೆ ಜನರಲ್ ಪೇಟನರ ಮೂರನೇ ದಳ ಧಾವಿಸುತ್ತಿದೆ. ಇವೆರಡು ಅಮೇರಿಕನ್ ಧಾಳಿಗಳೂ ಜಯಶೀಲವಾದರೆ ಜರ್ಮನಿಯೊಳಗಡೆಯ ರೂರ್ ಮತ್ತು ರೈನ್‌ಲೇಂಡ್‌ಗಳೊಳಗೆ ಮಿತ್ರರು ಪ್ರವೇಶಿಸಿದಂತಾಗುವದು. ಆದರೆ ಹಾಗಾಗಲು ಬಿಡಲಾರೆವೆಂದು ಶಪಥ ತೊಟ್ಟು ಜರ್ಮನರು ಹೋರಾಡುತ್ತಿರುವಂತಿದೆ.

ರಶ್ಯಾನರ ಪ್ರಗತಿ

ಕೆಂಪು ಸೇನೆಯು ಬುಡಾಪೆಸ್ಟ್ ನಗರಾಕ್ರಮಣಕ್ಕಾಗಿ ತ್ರಿಮುಖ ಧಾಳಿಯನ್ನು ಹೂಡಿದೆ. ಆದರೂ ಸಾಕಷ್ಟು ಪ್ರಗತಿಪಡೆದಿಲ್ಲ. ಬಾಲ್ಟಿಕ್ ಕ್ಷೇತ್ರದಲ್ಲಿ ರಶ್ಯಾನರೊಂದು ಚಮತ್ಕಾರ ಪೂರ್ಣ ನೂತನ ಸಾಹಸ ಕೈಕೊಳ್ಳುವ ಸಂಭವ ಕಾಣುತ್ತಿದೆ. ರಶ್ಯಾನರ ಹೊಸಧಾಳಿಯನ್ನು ನಿರೀಕ್ಷಿಸಿ ಜರ್ಮನರು ಇಡಿಯ ಪೂರ್ವ ಬಾಲ್ಟಿಕ್ ವಲಯವನ್ನು ಯುದ್ಧಕ್ಷೇತ್ರವೆಂದು ಸಾರಿ ಸಿದ್ಧತೆ ನಡೆಸಿದ್ದಾರೆ. ರಶ್ಯಾನರು ಜಿಲ್ಲೆ ನೋರ್ಮಂಡಿ ಮಾದರಿಯಲ್ಲಿ ಜಲಸೇನೆಯನ್ನಿಳಿಸಬಹುದೆಂದು ನಿರೀಕ್ಷಿಸಲಾಗಿದೆ. ಬಾಲ್ಟಿಕನ್ನು ಯುದ್ಧಕ್ಷೇತ್ರವಾಗಿ ಪರಿಗಣಿಸಿದ ಜರ್ಮನರ ಪ್ರತಿಬಂಧವನ್ನು ಸ್ವೀಡನು ಕಠೋರವಾಗಿ ನಿಷೇಧಿಸಿ, ಆ ವಲಯದಲ್ಲಿ ಸಂಚರಿಸುವ ಸ್ವೀಡಿಶ್ ಹಡಗಗಳನ್ನು ಆತಂಕಿಸಿದರೆ ಗುಂಡುಹಾರಿಸಲಾಗುವದೆಂದು ಎಚ್ಚರಿಸಿದೆ

ಜಪಾನರ ಹೋರಾಟ

ಫಿಲಿಪ್ಪೈನುಗಳಲ್ಲಿ ಹೊಸ ಸರಬರಾಯಿಯೊಂದಿಗೆ ಪ್ರತಿಭಟಿಸಲು ಪ್ರಯತ್ನಿಸಿದ ಜಪಾನರು ವಿಫಲರಾಗಿ ಹಿಂದೂಡಲ್ಪಟ್ಟಿದ್ದಾರೆ. ಬೋನಿನ್ ದ್ವೀಪ, ಮಲಯ, ಸುಮಾತ್ರಾಗಳ ಮೇಲೆ ಮಿತ್ರರ ಆಕಾಶದಾಳಿ ನಡೆದಿದೆ. ಒಂದೆಡೆ ಪಾಮುಶಿರೋದಿಂದ ಟೋಕಿಯೋ ವರೆಗೆ 1500 ಮೈಲು ಮತ್ತೊಂದು ದಿಕ್ಕಿನಲ್ಲಿ ಟೋಕಿಯೋದಿಂದ ಸಿಂಗಾಪುರಕ್ಕೆ 3300 ಮೈಲು, ಮತ್ತೊಂದೆಡೆ ಸಿಂಗಾಪುರದಿಂದ ರಂಗೂನಿಗೆ ಸುಮಾರು 1200 ಮೈಲು, ಹೀಗೆ ಸಾಧಾರಣ 6000 ಮೈಲಷ್ಟು ಉದ್ದದ ತಮ್ಮ ಕರಾವಳಿಯನ್ನು ಮಿತ್ರ ರಾಷ್ಟ್ರಗಳ ಯುದ್ಧ ಹಡಗ ಹಾಗೂ ವಿಮಾನ ವಾಹಕಗಳ ಧಾಳಿಗಳಿಂದ ರಕ್ಷಿಸುವದು ಜಪಾನರಿಗೆ ಅತಿಪ್ರಯಾಸವಾಗಿದೆ. ಬರ್ಮಾದಲ್ಲಿ ಮಿತ್ರರ ಪ್ರಗತಿ ಚೆನ್ನಾಗಿ ಸಾಗಿದೆ. ಉತ್ತರಗಡೆಯಿಂದ ಚೀನೀ ಸೇನೆಗಳು ವಿಶಾಲಪ್ರದೇಶಗಳನ್ನಾಕ್ರಮಿಸಿಕೊಳ್ಳುತ್ತಾ ಬರುತ್ತಿರುವಾಗ ಈ ಕಡೆಯಿಂದ 14ನೇ ಸೇನೆಯೂ ಒಳಗಡೆಗೆ ಮುಂದೊತ್ತುತ್ತಿದೆ. ಈ ಧಾಳಿಗಳ ಮುಖ್ಯೋದ್ದೇಶವು ಮಧ್ಯ ಬರ್ಮಾದಲ್ಲಿರುವ ಕಲೆವಾ ಮತ್ತು ಕಲೆವ್ಯೋದಂತಹ ಜಪಾನರ ಮುಖ್ಯ ಸರಬರಾಯಿ ಕೇಂದ್ರಗಳನ್ನು ವಶಪಡಿಸಿಕೊಳ್ಳುವದೇ.

ಸ್ಟಾಲಿನ್ ಬೈಗಳ ಗುಟ್ಟೇನು?

ಸ್ಟಾಲಿನರು ರಶ್ಯದ ದಿನಾಚರಣೆಯ ವೇಳೆ ಮಾಡಿದ ಭಾಷಣವೊಂದರಲ್ಲಿ ಕೆಂಪುಧ್ವಜವು ಬರ್ಲಿನಿನಲ್ಲಿ ಹಾರಾಡಲಿದೆಯೆಂದು ಭರವಸೆಯಿತ್ತಿರುವರು. ಶಾಂತಿಪ್ರಿಯ ರಾಷ್ಟ್ರಗಳಿಗಿಂತ ಆಕ್ರಮಣಶೀಲ ರಾಷ್ಟ್ರಗಳು ಸ್ವಾಭಾವಿಕವಾಗಿ ಯುದ್ಧ ತಯಾರಿಯಲ್ಲಿ ಮುಂದಿವೆ ಎಂದು ವಿಮರ್ಶಿಸುತ್ತಾ ಜಪಾನನ್ನು 'ಆಕ್ರಮಣಗಾರ ರಾಷ್ಟ್ರ'ವೆಂದು ಸ್ಪಷ್ಟವಾಣಿಯಲ್ಲಿ ಸಂಬೋಧಿಸಿರುವರು. ರಶ್ಯಾ ಜಪಾನುಗಳೊಳಗೆ ಅನಾಕ್ರಮಣ ಒಪ್ಪಂದವಿರುವಾಗ ಸ್ಟಾಲಿನರ ಇಂತಹ ಸಂಬೋಧನೆಯು ಹಲವು ಊಹಾಪೋಹೆಗಳಿಗವಕಾಶವಿತ್ತಿದೆ. ಈ ಬೈಗಳ ಮೂಲಕ ಜಪಾನಿನೊಡನೆ ಯುದ್ಧ ತೊಡಗುವ ತನ್ನ ಬಯಕೆಯನ್ನು ಸ್ಟಾಲಿನರು ಪ್ರದರ್ಶಿಸಿರುವರೆಂದು ಇಂಗ್ಲಾಂಡು ಅಮೇರಿಕಗಳಲ್ಲಿ ಊಹೆ. ಜಪಾನಿನ ಅಧಿಕಾರೀ ವಕ್ತಾರನೊಬ್ಬನು ಇದಕ್ಕುತ್ತರ ಕೊಡುತ್ತಾ "ಯುದ್ಧಕ್ಕೆ ಹೇತುವಾದ ಜಪಾನೀ ಅಮೇರಿಕನ್ ಮಾತುಕತೆಗಳ ಸ್ಥಿತಿಗತಿ [illegible] ಜಪಾನು ಆಕ್ರಮಣಶೀಲ ರಾಷ್ಟ್ರವಲ್ಲವೆಂಬುದು ತಿಳಿದಿರಬೇಕು. ಮಾರ್ಶಲ್ ಸ್ಟಾಲಿನರ ಭಾಷಣದಿಂದ, ಜಪಾನಿನ ಕಡೆಗೆ ಸೋವಿಯೆಟ್ ಯೂನಿಯನಿನ ಧೋರಣೆ ಬದಲಾದ ಯಾವ ಚಿಹ್ನೆಯೂ ಕಾಣುವದಿಲ್ಲ" ಎಂದಿದ್ದಾನೆ.

ತ್ರಿಮೂರ್ತಿಗಳ ಸಮ್ಮೇಲನ

ಅಧ್ಯಕ್ಷ ರೂಸವೆಲ್ಟರು ಚುನಾವಣಾ ವಿಜಯಿಯಾದೊಡನೆಯೇ ಸ್ಟಾಲಿನ್, ಚರ್ಚಿಲ್ಲರೊಡನೆ, ಮತ್ತೊಂದು ಸಮ್ಮೇಲನ ನೆರೆಯಿಸುವ ಬಯಕೆಯನ್ನು ವ್ಯಕ್ತಪಡಿಸಿದ್ದಾರೆ. ಇದನ್ನು ಬ್ರಿಟಿಷ್ ಪತ್ರಿಕೆಗಳೂ ಪ್ರಧಾನಿ ಚರ್ಚಿಲ್ಲರೂ ಅನುಮೋದಿಸಿದ್ದಾರೆ. ಸದ್ಯದಲ್ಲೇ ಸ್ಟಾಲಿನ್, ಚರ್ಚಿಲ್, ರೂಸವೆಲ್ಟ್ ಕೂಟವೊಂದು ನೆರೆಯಲಿದೆಯೆಂದೂ, ಪ್ರಾಯಶಃ ಇಂಗ್ಲಾಂಡಿನಲ್ಲೇ ಅದು ನೆರೆಯಬಹುದೆಂದೂ ವಾರ್ತೆಯಿದೆ.

ಹಿಟ್ಲರನ ಆವೇಶಪರ ಭಾಷಣ

ಹಿಟ್ಲರರ ಭಾಷಣ.

ನವಂಬರ್ ತಾ. 12ರಲ್ಲಿ ಹಿಟ್ಲರನು ತನ್ನ ಜನತೆಯನ್ನು ಹುರಿದುಂಬಿಸುವ ಜಾಹೀರುನಾಮೆಯೊಂದರಲ್ಲಿ, ತಮ್ಮನ್ನು ತಾವು ಉಳಿಸಿಕೊಳ್ಳುವ ತಮ್ಮ ಗುರಿಯನ್ನೂ ತಮ್ಮನ್ನು ಆಮೂಲಾಗ್ರವಾಗಿ ನಿರ್ನಾಮ ಮಾಡಬೇಕೆಂಬ ವಿರೋಧಿಗಳ ಬಯಕೆಯನ್ನೂ ನೆನಪಿನಲ್ಲಿಟ್ಟುಕೊಳ್ಳಬೇಕೆಂದು ಎಚ್ಚರಿಸಿರುವನು. "ಈ ದಿನ ಪ್ರಜಾಸತ್ತಾತ್ಮಕ ರಾಷ್ಟ್ರಗಳ ಬೆಂಬಲದೊಡನೆ ಬೊಲ್ಶೆವಿಸಮ್ ಜರ್ಮನಿಯನ್ನು ಧ್ವಂಸ ಮಾಡಲು ಹವಣಿಸುತ್ತಿದೆ. ಬೊಲ್ಶೆವಿಸಮ್ ಗೆದ್ದರೆ ಅದರ ಹಿಂದಿರುವ ಇಂದಿನ ಪ್ರಜಾಸತ್ತಾ ರಾಷ್ಟ್ರಗಳು ಮಣ್ಣುಪಾಲಾದಂತೆಯೇ ಸರಿ. ಆದರೆ ಇಷ್ಟರಿಂದ ಅವುಗಳ ಕೃತ್ಯ ಒದಗಲಾಗದು ಯಾಕೆಂದರೆ ಇವೆಲ್ಲವುಗಳ ಹಿಂಗಡೆಯಲ್ಲಿರುವದು ಯಹೂದಿ" ಎಂದು ಉಸಿರಿ, ರಾಷ್ಟ್ರೀಯ ಜರ್ಮನಿ ಗೆದ್ದರೇನೇ ಯುರೋಪು ಬೊಲ್ಶೆವಿಸಮ್ ಹಾವಳಿಯಿಂದ ತಪ್ಪಿ ಬದುಕಬಲ್ಲುದು ಎಂದು ಉದ್ಘೋಷಿಸಿದ್ದಾನೆ. ವೈರಿಗಳಿಗೆ ಶರಣು ಹೋದ ರಾಜರುಗಳನ್ನೂ ಇತರ ಸರಕಾರಗಳನ್ನೂ ಕಟುವಾಣಿಯಲ್ಲಿ ಟೀಕಿಸಿ "ನಾಗರಿಕರೆಂದು ಕರೆಯಲ್ಪಡುವ ಈ ಅಧಿಕಾರಿಗಳು ಇಂದಿನ ಜೀವನ್ಮರಣ ಹೋರಾಟದಲ್ಲಿ ಬಗ್ಗಿ ನಡೆದು ಬದುಕಬಹುದೆಂದು ನಂಬಿದ್ದರೆ, ಲೋಕದಲ್ಲಿ ಯಾವ ಕಾಲದಲ್ಲಾದರೂ ಕೆಲ ಮಂದಿ ವಿಚಕ್ಷಣರು ಮಾತ್ರವೇ ಇರುತ್ತಾರೆಂಬ ಸಾಂಪ್ರದಾಯಕ ನುಡಿಗೆ ಅನುಮೋದನೆ ದೊರೆತಂತಾಯಿತು" ಎಂದಿದ್ದಾನೆ. "ನಮ್ಮ ಅತಿಮುಖ್ಯ ಮಿತ್ರರಾಷ್ಟ್ರವಾದ ಜಪಾನು ಆದಿಯಿಂದಲೂ ಇದನ್ನು ಜೀವನ್ಮರಣ ಹೋರಾಟವೆಂಬುದನ್ನರಿತುಕೊಂಡು ನಿಜಕ್ಕೂ ಚರಿತ್ರಾರ್ಹ ಮನುಷ್ಯರಾಗುವ ಯೋಗ್ಯ ಧೈರ್ಯದಿಂದ ಹೋರಾಡುತ್ತಿದೆ" ಎಂದು ಶ್ಲಾಘಿಸಿ ತಾನು ರಶ್ಯನ್ ಹಾವಳಿಯನ್ನು ದೂರದರ್ಶಿತ್ವದಿಂದ ಮೊಗ್ಗೆಯಲ್ಲೇ ಮುರುಟಿಸಿಬಿಟ್ಟುದಕ್ಕಾಗಿ ಹಿಟ್ಲರ್ ಸಮಾಧಾನ ವ್ಯಕ್ತಪಡಿಸಿದ್ದಾನೆ.

"ನಾನು ಬದುಕಿರುವ ವರೆಗೆ ಬೊಲ್ಶೆವಿಸಮಿನಿಂದ ಮುಳುಗಿಸಲ್ಪಟ್ಟ ಇತರ ಯುರೋಪಿಯನ್ ರಾಷ್ಟ್ರಗಳ ಅದೃಷ್ಟವನ್ನು ಜರ್ಮನಿ ಅನುಭವಿಸುವಂತಿಲ್ಲ. ನನ್ನ ಶ್ವಾಸವಿರುವ ವರೆಗೆ ನನ್ನ ಆತ್ಮ ಮತ್ತು ದೇಹವು ಒಂದೇ ಒಂದು ಅಭಿಪ್ರಾಯಕ್ಕೆ ಕಟ್ಟುಬಿದ್ದಿದೆ. ಅದೆಂದರೆ ತಮ್ಮ ರಕ್ಷಣೆಗಾಗಿ ಮತ್ತು ಈ ಪ್ರಾಣಾವಧಿ ಅಪಾಯ ನಿವಾರಣೆಯ ಧಾಳಿಗಾಗಿ ನನ್ನ ಜನರನ್ನು ಬಲಶಾಲಿಗಳನ್ನಾಗಿ ಮಾಡುವದೇ. ನಮ್ಮ ರೀಚ್‌ನಲ್ಲಿ ಸೋಲಿಸಲ್ಪಟ್ಟ ಪಕ್ಷ ಅಥವಾ ಪಂಗಡಗಳವರು ತಾವು ಪುನಃ ತಮ್ಮ ತಲೆಯೆತ್ತಲು ಇದೀಗ ಸಂದರ್ಭವೆಂದು ನೆನಸಿದರೆ ಅವರು ತಮ್ಮ ಪೂರ್ಣ ವಿನಾಶವನ್ನು ಕಾಣುವದಕ್ಕಾಗಿಯೇ ಬದುಕಿದ್ದಾರೆಂದು ತಿಳಿಯಬೇಕು. ಜರ್ಮನಿಗಿದಿರಾಗಿ ಖಡ್ಗವೆತ್ತುವ, ಅಥವಾ ಬೊಂಬೆಗೆಯುವ ಯಾವನೇ ಆದರೂ ಈ ಬಾರಿ ನಿರ್ದಾಕ್ಷಿಣ್ಯವಾಗಿ ಕಠೋರವಾಗಿ ನಿರ್ನಾಮ ಮಾಡಲ್ಪಡುವನು. ಸಂಧಾನ ಅಥವಾ ಅರೆಮನಸ್ಸಿನ ಸಾಧನೆಯ ಸಮಯವೀಗ ಸಂಪೂರ್ಣ ಕಳೆದು ಹೋಗಿದೆ. ಜುಲಾಯಿ 20ರ ನಂತರ (ಹಿಟ್ಲರ್ ಕೊಲೆಯ ಯತ್ನ ನಡೆದ ದಿನ) ನನ್ನ ಮನಸ್ಸಿಗೆ ನಾಟಿ ಹೋಗಿರುವ ಒಂದು ವಿಷಯವೆಂದರೆ ಜರ್ಮನ್ ಸೇನೆ, ನಾವೆ, ವಿಮಾನಗಳು ಸಂಪೂರ್ಣವಾಗಿ ರಾಷ್ಟ್ರೀಯ ಸಮತಾವಾದಿ ಜರ್ಮನ್ ಧೋರಣೆಯೊಡನೆ ಮಿಲನವಾಗಿ ಹೋಗಿರುವವೆಂಬುದೇ. ಪ್ರಮುಖ್ಯ ಜರ್ಮನನಾಗಿ ನಾನು ನನ್ನ ಕರ್ತವ್ಯದಲ್ಲಿ ನನ್ನ ಪ್ರಾಣ ಅಥವಾ ಆರೋಗ್ಯವನ್ನು ಬಿಡಬಲ್ಲೆ" ಎಂಬುದೇ ಹಿಟ್ಲರ್ ಭಾಷಣದ ಸಾರಾಂಶ

ಚರ್ಚಿಲ್ಲರು ಪ್ಯಾರಿಸಿಗೆ.

ಸ್ವತಂತ್ರ ಫ್ರೆಂಚ್ ನಾಯಕ ಜ ದಿ ಗೋಲೆಯವರ ಆಮಂತ್ರಣದಂತೆ ಮಿ ಚರ್ಚಿಲ್ಲರು ವಿದೇಶ ಮಂತ್ರಿ ಮಿ. ಈಡನ್ ಮತ್ತು ತನ್ನ ಪತ್ನಿ ಪುತ್ರಿ ಪರಿವಾರದೊಂದಿಗೆ ಪ್ಯಾರಿಸಿಗೆ ಹೋಗಿದ್ದಾರೆ. ಪಾರ್ಲಿಮೆಂಟು ನಡೆಯುತ್ತಿದ್ದಂತೆಯೇ ತನ್ನ ಭಾಷಣ ಮುಗಿಸಿ ಪ್ಯಾರಿಸಿಗಾಗಿ ವಿಮಾನ ಹತ್ತಿದ್ದರು. ಪ್ಯಾರಿಸಿನಲ್ಲಿ ಅತಿ ಸಂಭ್ರಮದ ಸ್ವಾಗತ ದೊರೆತಿದೆ.

ಕೃಷ್ಣೋಜಿಯವರಿಗೆ ಟಾಪುಶಿಕ್ಷೆ: ತಾ 5-8-44ನೇ ರಾತ್ರಿ ಮೈಸೂರಿನ ಲಿಂಗರಾಜ ಅರಸ್ ಎಂಬವರನ್ನು ಕೊಲೆಮಾಡಿದರೆಂಬ ಆರೋಪದಿಂದ ಬಂಧಿಸಲ್ಪಟ್ಟಿದ್ದ ಶ್ರೀ ಕೃಷ್ಣೋಜಿಯವರ ವಿಚಾರಣೆ ಮುಗಿದು ತಾ. 13ರಲ್ಲಿ ಜಿಲ್ಲಾ ಮತ್ತು ಸೆಷನ್ಸ್ ಜಡ್ಜರಾದ ಮಿ [ಎಂ] ಬಿ [ಸಿ] ಕೋಮನ್ ಅವರು ಆರೋಪಿಗೆ ಟಾಪುಶಿಕ್ಷೆಯನ್ನು ವಿಧಿಸಿದರು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

15-11-44ರಿಂದ

ಪಾಂಚೋಲಿ ಚಿತ್ರ

ಪೂಂಜಿ

22-11-44ರಿಂದ

ಸರ್ದಾರ್ ಚಿತ್ರ

ಶಾರದಾ

ದಕ್ಷಿಣ ಕನ್ನಡ-
ಮಂಗಳೂರು
ಅಕ್ಕಿಯನ್ನು ಸ್ಟೋರುಗಳಿಗೊಪ್ಪಿಸುವ ವಿಚಾರ.

ನಮ್ಮ ಜಿಲ್ಲೆಯಲ್ಲಿ, ಅಕ್ಕಿ, ಭತ್ತ, ರಾಗಿಗಳನ್ನು ವಿಲೆವಾರಿ ಮಾಡುವವರಿಗೆ ನ್ಯಾಯಬದ್ಧವಾಗಿ ಬೇಕಾಗುವ ಅಂಶವನ್ನುಳಿದು ಮಿಗತೆಯದನ್ನೆಲ್ಲ ಸರಕಾರವು ನೇಮಿಸುವ ಏಜಂಟರುಗಳಿಗೇ ಕೊಡತಕ್ಕದ್ದು ಎಂದು ಮದ್ರಾಸ್ ಪ್ರಾಂತ ಸರಕಾರದವರು ಪ್ರಕಟಿಸಿದ ಸಬಂಧಸನೆಯು ಈ ಮೊದಲೇ ಪ್ರಕಟವಾಗಿದೆ. ಈಗ ಜಿಲ್ಲಾ ಕಲೆಕ್ಟರರು ತಮ್ಮದೊಂದು ಆಜ್ಞೆಯಲ್ಲಿ ಈ ಕೆಳಗಿನ ಅಧಿಕಾರಿಗಳಿಗೆ ಅಕ್ಕಿ ಬೆಳೆಸುವವನ ಇತಿಮಿತಿಗಳನ್ನು ನಿರ್ಧರಿಸುವ ಅಧಿಕಾರವನ್ನು ಕೊಡುತ್ತಾರೆ.

ಎಲ್ಲಾ ರೆವಿನ್ಯೂ ಡಿವಿಜನಲ್ ಆಫೀಸರರು, ಜಿಲ್ಲಾ ಸಪ್ಲೈ ಆಫೀಸರರು (ಇವರು ಹಿಂದೆ ರೇಶನ್ ಆಫೀಸರರಾಗಿದ್ದವರು) ತಹಸೀಲ್ದಾರರು, ತಾಲೂಕು ಪಡಕೊಳ್ಳುವ ಡೆಪ್ಯುಟಿ ತಹಸೀಲ್ದಾರರು, ತಾಲೂಕು ಪಡಕೊಳ್ಳುವ ಡೆ. ತಹಸೀಲ್ದಾರರು, ಮತ್ತು ತಾಲೂಕುಗಳ ಕೇಂದ್ರದಲ್ಲಿರುವ ಡೆ. ತಹಸೀಲ್ದಾರರು.

ದ. ಕ. ಜಿಲ್ಲಾ ಕೋ-ಓಪರೇಟಿವ್ ಹೋಲ್‌ಸೇಲ್ ಸ್ಟೋರ್ಸ್ ಮತ್ತು ಇತರ ಶಾಖೆಗಳನ್ನು ಅಕ್ಕಿ ಪಡಕೊಳ್ಳುವ ಮತ್ತು ಹಂಚುವ ತಮ್ಮ ಏಜಂಟರಾಗಿ ಕಲೆಕ್ಟರರು ನೇಮಿಸುತ್ತಾರೆ.

ಅಕ್ಕಿಯ ಬೆಲೆ—ಈಗ ಕಟ್ಟುಮಾಡಿದ ಬೆಲೆಯಲ್ಲಿ ಸ್ಟೋರುಗಳಿಗೆ ಸಲ್ಲಿಸಬೇಕಾದ ಕೊನೆಯ ತಾರೀಕುಗಳನ್ನು ಹಿಂದೆಯೇ ಪ್ರಕಟಿಸಿದ್ದೇವೆ. (ಪೂರಾ ಭತ್ತವಾದರೆ ನವಂಬರ ೧೫, ಅಕ್ಕಿಯಾದರೆ ಆರನೇ ಒಂದು ಅಂಶ ನವಂಬರ ಅಂತ್ಯದೊಳಗೆ, ಐದನೇ ಎರಡು ದಶಂಬರ ಅಂತ್ಯದೊಳಗೆ, ಉಳಿದಂಶ ಜನವರಿ ಅಂತ್ಯದೊಳಗೆ) ಆ ತಾರೀಕು ಕಳೆದು ಹೋದಮೇಲೆ ಸಲ್ಲಿಸುವ ಅಕ್ಕಿಗೆ ಮುಡಿಯಲ್ಲಿ ರೂ. ೧ ಮತ್ತು ಭತ್ತಕ್ಕೆ ಆಣೆ ೦-೮-೦ ಕಡಿಮೆ ಮಾಡಲಾಗುವುದು. ಅಕ್ಕಿ ಮುಡಿಗೆ ೪೪ ಕಳಸಿಗೆ (ಬಿರಸಾಲೆ, ಸಣ್ಣಕ್ಕಿಗಳಿಗೆ ೮ ಕಳಸಿಗೆ) ಎಂದೂ ನಿರ್ಧರಿಸಲಾಗಿದೆ.

ಮುಡಿಯ ಬೆಲೆ ಹೀಗಿದೆ.-ಸುಗ್ಗಿ ಮತ್ತು ರಾಶಿ ರೂ. ೧೦, ಗುಡ್ಡು ರೂ. ೧೦-೮, ಮಸ್ಕತಿ ರೂ. ೧೧, ಕಜೆ ಕುಚ್ಚಿಗೆ ರೂ. ೯-೮ ಸಾಧಾರಣ ಬೆಳ್ತಿಗೆ ರೂ. ೧೨, ಬೀರಸಾಲ, ಸಣ್ಣಕ್ಕಿ ಇತ್ಯಾದಿ ರೂ. ೧೩

ಈ ಬೆಲೆಯು ತಾಲೂಕುಗಳ ಕೇಂದ್ರಗಳಲ್ಲಿ ಮತ್ತು ಹೊಸದುರ್ಗ ಸಬ್ ತಾಲೂಕಿನ ಕೇಂದ್ರದಲ್ಲಿ ಪಡಕೊಳ್ಳುವ ಬೆಲೆ. ಇತರ ಕಡೆಗಳಲ್ಲಾದರೆ ಆಯಾ ತಾಲೂಕು ಕೇಂದ್ರಗಳಿಂದ ಪಡಕೊಳ್ಳುವ ಸ್ಟೋರು ಎಷ್ಟು ಮೈಲು ದೂರದಲ್ಲಿದೆಯೋ ಆ ಪ್ರತಿ ಮೈಲಿಗೆ ಮುಡಿಯ ಮೇಲೆ ೨ ಪೈ ಕಡಿಮೆ.

ಒಂದರಿಂದ ಹೆಚ್ಚು ಗ್ರಾಮಗಳಲ್ಲಿ ಆಸ್ತಿ—ನಮ್ಮ ಜಿಲ್ಲೆಯಲ್ಲಿ ವಾಸಿಸುತ್ತಿದ್ದು ಒಂದು ಗ್ರಾಮಕ್ಕಿಂತ ಹೆಚ್ಚು ಗ್ರಾಮಗಳಲ್ಲಿ ನಮ್ಮ ಜಿಲ್ಲೆಯೊಳಗೆ ಆಗಿರಲಿ, ಅಥವಾ ಮದ್ರಾಸ್ ಪ್ರಾಂತದ ಯಾವ ಜಿಲ್ಲೆಯಲ್ಲೇ ಆಗಲಿ, ಒಬ್ಬಾತನು ಆಸ್ತಿಗಳಿದ್ದರೆ ಅಥವಾ ಅಕ್ಕಿ ಭತ್ತಗಳ ರೂಪದಲ್ಲಿ ಗೇಣಿ ಬಾಡಿಗೆಯನ್ನು ಪಡೆಯುತ್ತಿದ್ದರೆ, ಅಂಥವನು ಈ ಕೆಳಗಿನ ವಿವರಗಳನ್ನೊಳಗೊಂಡ ಹೇಳಿಕೆಯೊಂದನ್ನು ಕಳುಹಿಸತಕ್ಕದ್ದು ಮತ್ತು ಆತನು ತನ್ನ ಸ್ವಂತ ಉಪಯೋಗಕ್ಕೆ ಯಾವ ಗ್ರಾಮದ ಅಕ್ಕಿಯನ್ನು ಉಪಯೋಗಿಸಿಕೊಳ್ಳುವನು ಎಂದು ತಿಳಿಸಬೇಕು. ಹೇಳಿಕೆಯನ್ನು ಆತನು ಯಾವ ತಾಲೂಕಿನಲ್ಲಿ ವಾಸಿಸಿಕೊಂಡಿದ್ದಾನೋ ಆ ತಾಲೂಕಿನ ತಾಲೂಕಾಫೀಸಿಗೆ ಕಳುಹಿಸತಕ್ಕದ್ದು (ಈ ಹೇಳಿಕೆಯನ್ನು ಯಾವ ತಾರೀಕಿನೊಳಗೆ ಕೊಡಬೇಕೆಂಬುದು ಆಜ್ಞೆಯಲ್ಲಿಲ್ಲ) ಹೇಳಿಕೆಯಲ್ಲಿರಬೇಕಾದ ವಿವರಗಳು –

(೧) ಯಾವ ಯಾವ ತಾಲೂಕಿನ ಯಾವ ಯಾವ ಗ್ರಾಮಗಳಲ್ಲಿ ಆಸ್ತಿ ಇದೆ, (೨) ಪ್ರತಿ ಗ್ರಾಮದಲ್ಲಿ ಬೇಸಾಯದ ಗುತ್ತಿನ ಆಸ್ತಿಯ ವಿಸ್ತೀರ್ಣ, (೩) ಗೇಣಿ ಸಾಗುವಳಿಯಾದರೆ ಸಾಗುವಳಿ ಭೂಮಿಯ ವಿಸ್ತೀರ್ಣ ಮತ್ತು ಉತ್ಪತ್ತಿ, ಗೇಣಿಗೆ ಕೊಟ್ಟು ದಾದರೆ ಒಕ್ಕಲ ಹೆಸರು ಮತ್ತು ಬರಬೇಕಾದ ಗೇಣಿ

ಮಂಗಳೂರಲ್ಲಿ ಮಿ| ಆಸ್ಟಿನರು—ಮದ್ರಾಸು ಪ್ರಾಂತದ ಗವರ್ನರರ ಬೋಧಕ ಮಿ| ಆಸ್ಟಿನ್, ಸಿ. ಐ. ಇ., ಐ. ಸಿ. ಎಸ್., ಅವರು ತಾ. ೧೧ನೆಯ ಸಂಜೆ ಮಂಗಳೂರಿಗೆ ಬಂದರು. ಮಂಗಳೂರಿನ ಕಾರ್ಯಕ್ರಮದ ಬಳಿಕ ತಾ. ೧೧ರಂದು ಮದ್ರಾಸಿಗೆ ಹಿಂತೆರಳಿದರು.

ತಾ. ೯ರಂದ ಬೆಳಿಗ್ಗೆ ರಾಮಕೃಷ್ಣ ವಿದ್ಯಾರ್ಥಿ ಭವನದಲ್ಲಿ ವಿದ್ಯಾರ್ಥಿ ಭವನದ ಪರವಾಗಿ ಶ್ರೀ| ಶ್ರೀಧರ ಹೆಗ್ಡೆ ಅವರೂ ವಿದ್ಯಾರ್ಥಿನಿ ಭವನದ ಪರವಾಗಿ ಕುಮಾರಿ ಇಂದಿರಾ ಅವರೂ ಮಾನಪತ್ರಗಳನ್ನರ್ಪಿಸಿದರು, ಯುದ್ಧೋತ್ತರ ಪುನರ್ರಚನೆಯ ಕಾರ್ಯದಲ್ಲಿ ಬಂಟ ಜಾತಿಯವರಿಗೆ ಪ್ರಾತಿನಿಧ್ಯ ಸಿಗಬೇಕು, ತಮ್ಮ ಹಾಸ್ಟೆಲುಗಳಿಗೆ ನೆರವು ಸಿಗಬೇಕೆಂದು ಮಾನಪತ್ರಗಳಲ್ಲಿದ್ದ ಕೋರಿಕೆಗಳನ್ನು ತಾವು ಗಮನಿಸುವುದಾಗಿ ಮಿ| ಆಸ್ಟಿನರು ತಿಳಿಸಿದರು. ಹಾಸ್ಟೆಲಿನ ಮೇಲಧಿಕಾರಿ ಡಾ| ಭಂಡಾರಿಯವರು ಧನ್ಯವಾದಗಳನ್ನರ್ಪಿಸಿದರು.

ಸಂಜೆ ನಗರಸಭೆಯವರು ಮಿ| ಆಸ್ಟಿನರನ್ನು ಕರೆದು ಗೌರವಿಸಿ ಮಾನಪತ್ರ ಒಪ್ಪಿಸಿದರು. ಅಧ್ಯಕ್ಷ ಮಿ. ಹುಸೇನ್ ಸಾಹೇಬರು ಓದಿ ಹೇಳಿದ ಮಾನಪತ್ರದಲ್ಲಿ ನಗರದಲ್ಲಿ ನೀರ ಪೂರೈಕೆಯ ಅವ್ಯವಸ್ಥೆ ಯುದ್ಧದ ದೆಸೆಯಿಂದಾಗಿ ಉಂಟಾಗಿರುವ ಸಂಕಷ್ಟಗಳು, ಲಾರಿಗಳ ಅಭಾವ, ನಗರದ ನೈರ್ಮಲ್ಯಕ್ಕೆ ಒದಗಿರುವ ಧಕ್ಕೆ, ಬಿಕ್ಷುಕರ ಪ್ರಶ್ನೆಯನ್ನು ನಿವಾರಿಸಲೇಬೇಕಾಗಿರುವುದರ ಅನಿವಾರ್ಯತೆ, ಜಾನುವಾರು ರೋಗದಿಂದಾಗಿರುವ ಹಾನಿ, ಕಾವು ವಾಡಿರುವ ಯುದ್ಧ ಯತ್ನ ಮೊದಲಾದವನ್ನು ವಿವರಿಸಲಾಗಿತ್ತು. 'ನಗರಸಭೆಯೊಳಗೆ ಸಭಾಂಗಣಗಳ ಅಗತ್ಯ, ಯುದ್ಧೋತ್ತರ ಯೋಜನೆಯಲ್ಲಿ ವೈದ್ಯಕೀಯ ಸಹಾಯವು ಇಲ್ಲಿಗ ಖಂಡಿತ ದೊರಕುವುದು, ಜನವಾರಿಗಳ ಮೇಲಿನ ಪ್ರತಿಬಂಧಕ ಶಾಸನವನ್ನು ವೈಸರಾಯರು ಸರಕಾರ ತೆಗೆಯುವಂತೆ ನಾವು ಯತ್ನಿಸುತ್ತಿದ್ದೇವೆ. ಭಿಕ್ಷುಕರ ಪ್ರಶ್ನೆಯನ್ನು ನಿವಾರಿಸಲು ನೀವು ಪ್ರಯತ್ನಿಸುತ್ತಿರುವುದು ಸಂತೋಷದ ವಿಚಾರ. ಆಹಾರದ ವಿಷಯದಲ್ಲಿ ಈ ಜಿಲ್ಲೆಗೇನೂ ತೊಂದರೆ ಇರಲಾರದು, ಸಂಕಷ್ಟವಿದ್ದರೆ ಅದು ಕಳ್ಳತನದಿಂದ ಅಕ್ಕಿ ಹೊರಗೆ ಹೋಗುವುದರ ಫಲವಿರಬಹುದು' ಎಂದು ಮಿ| ಆಸ್ಟಿನರು ಉತ್ತರವಿತ್ತರು.

ತಾ. ೧೦ರಂದು ಸಂಜೆ ಗವರ್ನಮೆಂಟ್ ಕಾಲೇಜ್ ದಿನವು ಆಚರಿಸಲ್ಪಟ್ಟಿತು. ಅಧ್ಯಕ್ಷತೆ ವಹಿಸಿದ್ದ ಮಿ| ಆಸ್ಟಿನರು ಮಾತನಾಡುತ್ತ ಯುದ್ಧೋತ್ತರ ಯೋಜನೆಯಲ್ಲಿ ಸೆಕೆಂಡರಿಗ್ರೇಡ್ ಕಾಲೇಜುಗಳಿರುವುದಿಲ್ಲ. ಒಂದೋ ತೆಗೆದುಹಾಕುತ್ತೇವೆ ಇಲ್ಲವೆ ಫಸ್ಟ್ ಗ್ರೇಡ್ ಮಾಡುತ್ತೇವೆ ಎಂದರು. ಸದ್ಯ ಗ. ಕಾಲೇಜಿನ ತರಗತಿಗಳನ್ನು ಪರಿಶಲಿಸ್ಯಾಗವುದಿಲ್ಲವೆಂದು ಅವರ ಅಭಿಪ್ರಾಯವಾಗಿತ್ತು. ಪ್ರಿನ್ಸಿಪಾಲ್ ಮಿ| ವರ್ಗೀಸರು ವರದಿಯೋದಿಸಿದರು. ಬೆಳಿಗ್ಗೆ ಡಾ| ಕೇಶವ ಪೈ, ಶ್ರೀ| ವೆಂಕಟೇಶ ಪೈ ಮೊದಲಾದವರ ಶಿಷ್ಟ ಮಂಡಲವೊಂದು ಮಿ| ಆಸ್ಟಿನರನ್ನು ಕಂಡ ಗ. ಕಾಲೇಜನ್ನು ಫಸ್ಟ್ ಗ್ರೇಡ್ ಮಾಡಬೇಕೆಂದು ಕೇಳಿಕೊಂಡಿತ್ತು. ತಾ. ೯ರಂದು ಆಸ್ಟಿನರು ಎಲೋಶಿಯಸ್ ಕಾಲೇಜನ್ನು ಸಂದರ್ಶಿಸಿದರು.

ನಾಗರಿಕರ ಪೂರೈಕೆಯ— ಡೆ. ಕಂಟ್ರೋಲರ್ ಜನರಲ್ ದಿ. ಬ. ನಾರಾಯಣನ್ ನಾಯರು ಕಳೆದ ವಾರ ಬಂದಿದ್ದವರು ಕೆನರಾ ವಾಣಿಜ್ಯ ಸಂಘದ ಸಭೆಯಲ್ಲಿ ಭಾಗವಹಿಸಿದರು. ಆ ಸಂದರ್ಭದಲ್ಲಿ ಸಹಕಾರಿ ಸಂಘಗಳನ್ನು ಮುಂದೆ ತಂದು ವ್ಯಾಪಾರಿಗಳನ್ನು ಹೊಂಗಟ್ಟುವ ಯತ್ನವನ್ನು ಸರಕಾರ ಮಾಡುತ್ತಿದೆ ಎಂಬ ಅಭಿಪ್ರಾಯವನ್ನು ಸಂಘದ ಕೆಲವು ಪ್ರಮುಖ ಸದಸ್ಯರು ಪ್ರಕಟಪಡಿಸಿದರು. ಕಂಟ್ರೋಲರರು ಉತ್ತರವೀಯುತ್ತ 'ಹಾಗೆ ಹೇಳುವುದು ಸರಿಯಲ್ಲ, ಕಷ್ಟ ಕಾಲದಲ್ಲಿ ಮುಂದೆ ಬಂದು ಜವಾಬ್ದಾರಿಕೆ ವಹಿಸಿ ಸ್ಟೋರುಗಳವರು ಜನಪ್ರಿಯರಾಗಿದ್ದಾರೆ' ಎಂದರು.

ಬಟ್ಟೆಯ ನಿಯಂತ್ರಣಾಜ್ಞೆ ಯನ್ನು ಮೀರಿದರೆಂದು ಹಿಂದೆ ಚಂದ್ರನಾ ಬ್ರದರ್ಸ್, ಜಯಂತಿಲಾಲ್ ಮತ್ತು ವಿಠಲಜಿ ಮಾಧವಜಿ ಅವರಿಗೆ ೪೫೦ ರೂ. ಜುಲ್ಮಾನೆಯಾಗಿತ್ತಷ್ಟೆ. ಜಿಲ್ಲಾ ಮತ್ತು ಸೆಶನ್ಸ್ ನ್ಯಾಯಾಧೀಶ ಮಿ| ಕೋಮನ್ ಅವರೆದುರು ಅಪೀಲ ನಡೆದು ಶಿಕ್ಷೆಯು ೧೫೦ ರೂಪಾಯಿಗಳಿಗೆ ಇಳಿಸಲ್ಪಟ್ಟಿತು.

ಕಸ್ತೂರ್‌ಬಾ ಸ್ಮಾರಕ ನಿಧಿ ಸಂಗ್ರಹಕ್ಕಾಗಿ ಜಿಲ್ಲೆಯಲ್ಲಿ ಸ್ಥಾಪಿಸಲ್ಪಟ್ಟ ಸಮಿತಿಯ ಸಭೆಯು ಹಿಂದಿನ ಶುಕ್ರವಾರ ಸಂಜೆ ಜರಗಿ ಹಣವನ್ನು ವ್ಯಯ ಮಾಡುವ ಜವಾಬ್ದಾರಿಕೆ ವಹಿಸಲು ಹತ್ತು ಮಂದಿಯ ಸ್ಥಾಯೀ ಸಮಿತಿಯೊಂದು ರಚಿಸಲ್ಪಟ್ಟಿತ. ಈ ಸಮಿತಿಯಲ್ಲಿ ಶ್ರೀಯುತರು ಬಿ. ವೈಕುಂಠ ಬಾಳಿಗರು ಅಧ್ಯಕ್ಷರು, ಕೊಚ್ಚಿಕಾರ್ ಪದ್ಮನಾಭ ಪೈ, ಮತ್ತು ಎಂ. ಡಿ. ಅಧಿಕಾರಿ ಉಪಾಧ್ಯಕ್ಷರು, ಶ್ರೀಮತಿಯವರು ಲೀಲಾಬಾಯಿ ಪಕಾಂಬರ ರಾವ್ ಮತ್ತು ಲಲಿತ ರಾವ್ ಕಾರ್ಯದರ್ಶಿಯರು, ಶ್ರೀ| ವಿ. ಎಸ್. ಕುಡುವ ಕೋಶಾಧಿಕಾರಿ, ಶ್ರೀಯುತರು ಎ. ಬಿ. ಶೆಟ್ಟಿ, ಎಂ. ಉಮೇಶ ರಾವ್, ಪಾಂಗಾಳ ಲಕ್ಷ್ಮೀನಾರಾಯಣ ನಾಯಕ್ ಮತ್ತು ಶ್ರೀಮತಿ ಕಮಲಾವತಿ ಅಧಿಕಾರಿ ಸದಸ್ಯರು.

ಶ್ರೀ. ಕೆ. ಶಂಕರ ಶೆಟ್ಟಿ, ಬಸ್ರೂರು.

ಶ್ರೀಯುತರು ಜಗತ್ಪ್ರಸಿದ್ಧವೂ, ಲೋಕದ ಅತಿಪುರಾತನವೂ ಆದ ಸನ್ ಲೈಫ್ ಆಫ್ ಕೆನಡಾ ಜೀವ ವಿಮಾ ಕಂಪೆನಿಯ ದ. ಕನ್ನಡ ಜಿಲ್ಲೆಯ ಪ್ರತಿನಿಧಿಯಾಗಿದ್ದು, ಕಳೆದ ಹತ್ತು ವರ್ಷಗಳಿಂದ ಒಂದೇ ಸಮಾನ ಅತೀ ಹೆಚ್ಚಿನ ವಿಮಾ ಉದ್ಯಮವನ್ನುಗಳಿಸಿ ಅನೇಕ ಪಾರಿತೋಷಕಗಳನ್ನು ಆಗಾಗ ಪಡೆದಿರುವುದಲ್ಲದೆ ಇದೇ ಕಳೆದ ಅಕ್ಟೋಬರ್ ತಿಂಗಳಲ್ಲಿ ಸದ್ರಿ ಸಂಸ್ಥೆಯವರು ವರ್ಷಂಪ್ರತಿ ಏರ್ಪಡಿಸುವ ಪ್ರೆಸಿಡೆಂಟ್ಸ್ ಮಂತ್ ಎಂಬ ವಿಮಾ ಸ್ಪರ್ಧೆಯಲ್ಲಿ ಮದ್ರಾಸು ಸಂಸ್ಥಾನದ ಪ್ರಥಮ ಬಹುಮಾನವೂ ಹಾಗೂ ಇದೇ ಸಂದರ್ಭದಲ್ಲಿ ಏರ್ಪಡಿಸಲ್ಪಟ್ಟ ಆಲ್ ಇಂಡಿಯಾ ಸ್ಪರ್ಧೆಯಲ್ಲಿ ರನ್ನರ್ ಅಪ್ ಕಪ್ ಪಡದು ಪ್ರಶಂಸಿಸಲ್ಪಟ್ಟಿರುವರು.

1943ರಲ್ಲಿಯೂ ಇದೇ ಸಂದರ್ಭ ಪ್ರಥಮ ಪಾರಿತೋಷಕವನ್ನು ಪಡದು ಜಯಶೀಲರಾಗಿರುವರು. ವಿಮಾ ಉದ್ಯಮದಲ್ಲಿ ಶ್ರೀ ಶೆಟ್ಟರು ದಕ್ಷಿಣ ಭಾರತದಲ್ಲಿ ಶ್ರೇಷ್ಠಸ್ಥಾನವನ್ನು ಇಷ್ಟರಲ್ಲೇ ಗಳಿಸಿರುವುದು ಅಭಿನಂದನೀಯ.

Advt.

ಜಿಲ್ಲೆಯಲ್ಲಿ ನಾಗರಿಕ ಸರಬರಾಯಿ-ಪದ್ಧತಿ ಪ್ರಕಾರವಲ್ಲದ ರೇಶನಿಂಗ್ ಕುರಿತು ಜಿಲ್ಲಾ ಕಲೆಕ್ಟರರ ಸರ್ಕ್ಯುಲರ್
ಯಾದಾಸ್ತಿನ ಸೂಚನೆಗಳು:-

ಜಿಲ್ಲೆಯಲ್ಲಿ ಪದ್ಧತಿ ಪ್ರಕಾರವಲ್ಲದ (Informal) ರೇಶನಿಂಗ್ ಕ್ರಮವನ್ನು ಜಾರಿಗೆ ತರುವ ಧ್ಯೇಯದಿಂದಲೇ ಅಕ್ಕಿ ಬತ್ತ ಸಂಗ್ರಹದ ಕಾರ್ಯವನ್ನು ಚುರುಕಾಗಿ ಕೈಕೊಳ್ಳಲಾದುದು. ಈ ಕೆಲಸವು ಸರಾಗವಾಗಿ ನಡೆದು ಯಶಸ್ವಿಯಾಗುವಂತೆ ನೋಡಲು ಸಂಬಂಧಪಟ್ಟ ಅಧಿಕಾರಿ ವರ್ಗಕ್ಕೆ ತಕ್ಕ ಅನುಭವ ಸೂಚನೆಗಳನ್ನು ಈ ಮೊದಲೇ ಕೊಡಲಾಗಿಯದೆ. ಸಬ್ ಕಲೆಕ್ಟರರೂ ರೆವಿನ್ಯೂ ಡಿವಿಜನಲ್ ಆಫೀಸರೂ ತಂತಮ್ಮ ಕಾರ್ಯಕ್ಷೇತ್ರದ ಹಳ್ಳಿಪಳ್ಳಿಗಳನ್ನು ಸಂದರ್ಶಿಸಿ ಗ್ರಾಮ ಕೇಂದ್ರಗಳಲ್ಲಿ ಖಾನೇಸುಮಾರಿ ಅಥಾರಿಟ್ ಮಮಮಂದಿಯ ಜನಗಣನೆ ಇತ್ಯಾದಿ ವಿಷಯಗಳಲ್ಲಿ ಜನ ಜಾಗೃತಿಯುಂಟುಮಾಡುವಂತೆ ವಿನಂತಿಸಲಾಗಿಯದೆ. ಖಾನೇಸುಮಾರಿ ಕೆಲಸವು ದಶಂಬರ ತಾ. 15ರೊಳಗಾಗಿ ಪ್ರತಿ ತಾಲೂಕಿನಲ್ಲೂ ಮುಗಿಯಬೇಕಾಗಿರುವುದರಿಂದ ಗ್ರಾಮ ಕಮಿಟಿಗಳ ಸ್ಥಾಪನೆಯಾಗಿ ಸರಕಾರಿ ಮತ್ತು ಬಿನ್ ಸರಕಾರೀ ನೌಕರರ, ವಕೀಲರ, ಶಾಲಾಮಾಸ್ತರುಗಳ, ಪಂಚಾಯತ ಬೋರ್ಡು ಮೆಂಬರ, ಊರ ಸಭ್ಯ ಪುರಸ್ಕರು ಮೊದಲಾದವರ ಬೆಂಬಲ ಹಾಗೂ ಸಹಕಾರದಿಂದ ತಂದುಕೊಂಡರೆ, ಕಷ್ಟಗಳಿಲ್ಲದ ಸರ್ವಸಮ ಜನಗಣನೆಯಾಗಬೇಕಾಗಿದೆ. ಗ್ರಾಮ ಉದ್ಯೋಗಸ್ಥರಿಗನೇ ಈ ಜವಾಬ್ದಾರಿಯನ್ನು ಬಿಟ್ಟಲ್ಲಿ ಅನಪೇಕ್ಷಿತ ದೋಷಗಳಿಗೆ ಆಸ್ಪದ ಕೊಟ್ಟಂತಾಗವುದು ಆದ್ದರಿಂದಲೇ ಜನತಾಸೇವೆ ಮಾಡುವ ನಿಸ್ವಾರ್ಥ ಮಹನೀಯರುಳ್ಳ ಗ್ರಾಮ ಕೇಂದ್ರ ಕಮಿಟಿಗಳ ಸ್ಥಾಪನೆಯು ಅತ್ಯಾವಶ್ಯಕ.

ಜನಗಣನೆ ವೇಳೆ ಜಾಗರೂಕತೆಯಿಂದ ಮನೆಮಂದಿಯ ವಿವರಗಳನ್ನು ಕೇಳಿ ಪರಾಂಬರಿಸಿ ನಂತರ ದಾಖಿಲು ಮಾಡಬೇಕಾಗಿದೆ, ಉದಾಹರಣಾರ್ಥವಾಗಿ ಅಳಿಯ ಸಂತಾನ ಕಟ್ಟಿನ ಹೆಂಗಸರು ಕುಟುಂಬದ ಮನೆಯಲ್ಲಾಗಲೀ ತಮ್ಮ ಗಂಡಂದಿರ ಮನೆಯಲ್ಲಾಗಲೀ ವಾಸಿಸುತ್ತಾರೆ. ಜನಗಳು ಬೇರೆ ಬೇರೆ ಗ್ರಾಮಗಳಲ್ಲಿದ್ದು ಎಲ್ಲ ಕಡೆಗಳಲ್ಲೂ ಜನಗಣನೆಗೆ ದಾಖಿಲು ಮಾಡಿಕೊಂಡರೆ ಒಂದೇ ವ್ಯಕ್ತಿಗೆ ಡಬ್ಬಲ್ ರೇಶನ್ ದೊರೆವಂತಾಗುವುದು. ಖಾನೇಸುಮಾರಿ ತೆಗೆಯತಕ್ಕವರು ಈ ವಿಷಯದಲ್ಲಿ ಹೆಚ್ಚಿನ ನಿಗಾಕೊಟ್ಟು ಒಂದು ಕಡೆಯಲ್ಲಿ ಮಾತ್ರ ಅಂತಹ ವ್ಯಕ್ತಿಗಳಿಗೆ ರೇಶನ್ ದೊರೆಯುವಂತೆ ರಿಕಾರ್ಡು ಮಾಡಿಕೊಳ್ಳಬೇಕಾಗಿದೆ. ಮನೆಗಳಲ್ಲಿ ಕೆಲಸಕ್ಕೆ ಇಟ್ಟುಕೊಂಡ ಕೆಲಸದಾಳುಗಳು, ಹಳ್ಳಿಯ ಕಲ್ಲುಕಟ್ಟುವವರು, ದೇವಸ್ಥಾನದ ನೌಕರರು, ಹಜಾಮರು, ದೋಣಿವಾಲರು, ಅಡಿಕೆತೋಟ, ಮರದ ಡಿಪೋಗಳಲ್ಲಿ ಕೆಲಸ ಮಾಡತಕ್ಕವರು ಇತ್ಯಾದಿ ಜನರಿಗೆ ಕೂಲಿ ರೂಪದಲ್ಲಿ ಅಕ್ಕಿ ಬತ್ತ ಕೊಟ್ಟಲ್ಲಿ ಅಂತವರ ಹೆಸರನ್ನು ಜನಗಣನೆ ರಿಜಿಸ್ತ್ರಿಯಲ್ಲಿ ಪ್ರತ್ಯೇಕ ಕಾಣಿಸಬೇಕಾಗಿದೆ. ರೇಶನ್ ನಿಯಮದಲ್ಲಿ ಸರಕಾರಿ ನೌಕರರಿಗೂ ಇತರರಿಗೂ ಸರ್ವ ಸಮಾನತೆಯೇ ಇದೆ, ಹೆಚ್ಚುಕಡಿಮೆ ಬೇಕೆನಿಸಿಗೆ ಎಡೆಯಿಲ್ಲ. ಜನತಾ ಆಹಾರದ ಈ ಯೋಜನೆಯು ಪೂರ್ಣ ಯಶಸ್ವಿಯಾಗುವಂತೆ ಎಲ್ಲಾ ಇಲಾಖೆಯವರೂ ಮಹಾ ಜನರೂ ನೆರವಾಗಬೇಕಾಗಿದೆ ಇಲ್ಲವಾದರೆ ಆಹಾರದ ಅಭಾವ, ಗುಪ್ತ ಅಕ್ಕಿಯ ಸಂಗ್ರಹ, ಕಳ್ಳಸಂತೆ ಇತ್ಯಾದಿ ಅಥರ್ವಣಗಳ ಸರಣಾವಳಿಯಲ್ಲಿ ಭಾಗಿಗಳಾಗಬೇಕಾಗುವುದು.

ಬಾಲಚಂದ್ರ

ಉಪಾಧ್ಯಾಯರಿಗಾಗಿ ಪ್ರಕಟವಾಗುವ ವಿದ್ಯಾವಿಷಯಕ ಮಾಸಪತ್ರಿಕೆ.

ವಾರ್ಷಿಕ ಚಂದಾ ರೂ 1-8-0

ಮಾದರಿ ಪ್ರತಿಗೆ ಎರಡಾಣೆ ಸ್ಟಾಂಪಿನೊಂದಿಗೆ ಬರೆಯುವುದು

ಸಂಚಾಲಕ

ಬಾಲಚಂದ್ರ, ಉಡುಪಿ-

ದಕ್ಷಿಣ ಕನ್ನಡ.

ಮಂಗಳೂರು

ದಿ ನಾರ್ದರ್ನ್ ಇನ್ಶೂರೆನ್ಸ್ ಕಂಪೆನಿಯ ಮಂಗಳೂರು ಶಾಖೆಯ ಪ್ರಾರಂಭೋತ್ಸವವು ತಾ. 12ರಲ್ಲಿ ಹಂಪನಕಟ್ಟೆ ಡಯಮಂಡ್ ಬಿಲ್ಡಿಂಗಿನಲ್ಲಿ ಶ್ರೀ ಎ. ಬಿ. ಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸಭೆಯು ಕೆಥೋಲಿಕ್ ಕ್ಲಬ್ಬಿನಲ್ಲಿ ಜರಗಿತು. ಏಜನ್ಸಿ ಇನ್ಸ್‌ಪೆಕ್ಟರರಾದ ಶ್ರೀ ಸುಂದರರಾವ್ ಸೆಟ್ಟರು ಕಂಪೆನಿಯ ಪ್ರಗತಿಪರ ಅಭಿವೃದ್ಧಿಯ ಕುರಿತು ವರದಿಯನ್ನೋದಿದರು. ಸಭೆಯಲ್ಲಿ ಶ್ರೀಗಳಾದ ಕೆ. ಗೋಪಾಲಕೃಷ್ಣ ಸೆಟ್ಟಿ, ನರಸಪ್ಪಯ್ಯ, ಟಿ ಎ. ಪುತ್ರನ್ ಮೊದಲಾದವರ ಸಂದರ್ಭೋಚಿತ ಮಾತುಗಳನ್ನಾಡಿದರು. ಅಧ್ಯಕ್ಷರ ಭಾಷಣವಾದ ನಂತರ ಈ ನೂತನ ಶಾಖೆಯ ಬ್ರಾಂಚ್ ಸೆಕ್ರೆಟರಿಗಳಾದ ಶ್ರೀ ಬಿ. ಸಚ್ಚಿದಾನಂದ ಹೆಗ್ಡೆಯವರು ಧನ್ಯವಾದಗಳನ್ನರ್ಪಿಸಿದರು. ಜಿಲ್ಲೆಯ ಅಧ್ಯ ಮಹನೀಯರನೇಕರು ಈ ಸಮಾರಂಭದಲ್ಲಿ ಭಾಗಿಗಳಾಗಿದ್ದರು. ಫೋಟೋ ಮತ್ತು ಉಪಹಾರದ ವ್ಯವಸ್ಥೆ ಮಾಡಲಾಗಿತ್ತು. ಶಾಖಾ ಚೆಕರ ಶ್ರೀ ಬಿ. ಸಚ್ಚಿದಾನಂದ ಹೆಗ್ಡೆಯವರ ನೇತೃತ್ವದಲ್ಲಿ ಕಂಪೆನಿಯು ಜನಪ್ರಿಯ ಸಂಸ್ಥೆಯಾಗಲೆಂದು ಹಾರೈಕೆ.

ಉಡುಪಿ

ಸಂಗ್ರಾಮ ಸಂಧಾನ ದಿನಾಚರಣೆ

ಇದೇ ತಾ 11ರಲ್ಲು ಮಿತ್ರರಾಷ್ಟ್ರಗಳಲ್ಲೆಲ್ಲಾ ಆಚರಿಸಲ್ಪಟ್ಟಂತೆ ಉಡುಪಿಯಲ್ಲೂ ಸಂಗ್ರಾಮ ಸಂಧಾನ ದಿನಾಚರಣೆಯು (Armistice Day) ನಡೆಯಿತು ಬೆಳಿಗ್ಗೆ ಶಾಲಾ ಬಾಲಕ ಬಾಲಕಿಯರಿಂದ ಕೂಡಿದ ಮೆರವಣಿಗೆಯು ತಾಲೂಕು ಕಚೇರಿಯಿಂದ ಹೊರಟು ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಮುನಿಸಿಪಲ್ ಮೈದಾನಿಗೆ ಒಂದು ತಲ್ಪಿತ . ಹನ್ನೊಂದು ಗಂಟೆಗೆ ಶ್ರೀ ಎಮ್. ಗೋಪಾಲಕೃಷ್ಣರಾವ್, ಹೆಡ್ ಕ್ವಾರ್ಟರ್ಸ್ ಡಿಪ್ಯುಟಿ ತಹಶಿಲ್ದಾರ್ ಅವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕ ಸಭೆ ಜರಗಿತು. ಯುದ್ಧ ಮಂಡಳಿ ಆರ್ಗನೈಜರ್ ಶ್ರೀ ಕೆ. ನರಸಿಂಗರಾಯರ ಸಂದರ್ಭೋಚಿತ ಭಾಷಣವಾಯಿತು. ಹನ್ನೊಂದು ಗಂಟೆಗೆ ಸರಿಯಾಗಿ ಎರಡು ನಿಮಿಷಗಳ ಮೌನ ಪ್ರಾರ್ಥನೆಯಾಯಿತು. ಶ್ರೀಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನತೀರ್ಥ ಶ್ರೀಪಾದಂಗಳವರೂ ಅಥಮಾರು ಮಠದ ಜನರಲ್ ಏಜಂಟ್ ಶ್ರೀ ರಂಗೋಪಾಧ್ಯಾಯರೂ ತಮ್ಮ ಖರ್ಚಿನಿಂದಲೇ ಒದಗಿಸಿಕೊಟ್ಟ ಸಕ್ಕರೆ ಕಡ್ಡಿ ತಿಂಡಿ ತಿನಸು ಮಕ್ಕಳಿಗೆಲ್ಲಾ ಹಂಚಲಾಯಿತು. ಪೂಪ್ಪಿದಿನವಾದುದರಿಂದ 600 ಪೂಪ್ಪಿಗಳು ಮಾರಲಾದುವು.

ಕ್ರಿಕೆಟ್ ಪಂದ್ಯಾಟ:— ಮಂಗಳೂರು ಎಮ್. ಸಿ ಸಿ ಮತ್ತು ಉಡುಪಿ ಕ್ರಿಕೆಟ್ ಕ್ಲಬ್ ಇವರೊಳಗೆ ನಡೆದ ಕ್ರಿಕೆಟ್ ಪಂದ್ಯಾಟದಲ್ಲಿ ಉಡುಪಿಯವರೇ ಜಯಶೀಲರಾದರು. ಶ್ರೀ ಯು. ಉಗ್ಗಪ್ಪ ಸೆಟ್ಟಿ, ಎಡ್ವೊಕೇಟ್ ಅವರ ಮಂಗಳೂರು ಟೀಮಿನ ಕೆಪ್ಟನರಾಗಿದ್ದರು. ಉಡುಪಿ ಟೀಮಿನ ಕೆಪ್ಟನ್ ಮಿ| ಡಿ. ನೊರೊನ್ಹಾ, ಡಿ| ಮುನ್ಸೀಫ್ ಅವರು. ಉಡುಪಿ ಟೀಮಿನ ಕಡೆಯಿಂದ ಶ್ರೀಗಳಾದ ಡಿ ನೊರೊನ್ಹಾ, ಮಂಜಣ್ಣ, ಮಂಜುನಾಥನವರೂ, ಮಂಗಳೂರು ಕಡೆಯಿಂದ ಶ್ರೀ ಎಸ್. ಆರ್ ತ್ಯಾಗರಾಜ ಚಲೋದಾಗಿ ಆಟವಾಡಿದರು. ಶ್ರೀಗಳಾದ ಕರುಣಾಕರ ಹೆಗ್ಡೆ, ರಘುರಾಮ ಹೆಗ್ಡೆ ಮತ್ತು ಬಿ. ರಾಮಪ್ಪ ಇವರ ಬೌಲಿಂಗ್ ಚೆನ್ನಾಗಿತ್ತು.

ಮುನ್ಸಿಪಲ್ ಚುನಾವಣೆ:— ಶ್ರೀ N. ಸುಂದರರಾಯರ ರಾಜಿನಾಮೆಯಿಂದ ಖಾಲಿಬಿದ್ದ ಮೂಡನಿಡಂಬೂರು ವಾರ್ಡಿನ ಉಪಚುನಾವಣೆಗೆ ಶ್ರೀ ಆರ್ ಆರ್. ಕುಂಜೂರು ಮತ್ತು ಶ್ರೀ ಕೆ. ಶಂಭು ಶೆಟ್ಟರು ಉಮೇದ್ವಾರರಾಗಿರುವರು. ಚುನಾವಣೆಯು ತಾ. 4 12-44ಕ್ಕೆ ಜರಗಲಿರುವುದು.

ಎಮಾರ್ಗಳು:— ತಾ 9 11 44ರಲ್ಲಿ ಸ್ಥಳೀಯ ಬೋ. ಹ. ಎ. ಶಾಲೆಯಲ್ಲಿ ಶ್ರೀ ರಾಂತಿರಾಜಯ್ಯನವರ ಅಧ್ಯಕ್ಷತೆಯಲ್ಲಿ ಹೆಣ್ಣವರ ಸಭೆಯು ಜರಗಲ್ಪಟ್ಟು, ಶಾಲಾಭಿವೃದ್ಧಿಯ ಆದಳಿತ ಮಂಡಲಿಯೊಂದು ಏರ್ಪಡಿಸಲ್ಪಟ್ಟು, ಶಾಲಾ ಕಟ್ಟೋಣವನ್ನು ಕೂಡಿಸ ಕಟ್ಟುವುದಕ್ಕಾಗಿ ಕಾರ್ಯಕಾರಿ ಮಂಡಳಿಯೊಂದನ್ನು ರಚಿಸಲಾಯಿತು.

ತಾ 4ರಿಂದ ಇಲ್ಲಿ ಶ್ರೀ ಚಂದಪ್ಪನವರಿಂದ ಹಿಂದಿ ಕ್ಲಾಸು ಪ್ರಾರಂಭವಾಗಿರುವುದು.

ಕಾರ್ಕಳ:— ವರ್ಷಂಪ್ರತಿ ಜರಗುವ ಕಾರ್ಕಳ ಶ್ರೀವೆಂಕಟರಮಣ ದೇವಸ್ಥಾನದ ಲಕ್ಷದೀಪೋತ್ಸವವು ವಿಳಂಬವೇ ಇಲ್ಲದೆ ಬಹಳ ವಿಜೃಂಭಣೆಯಿಂದ ಜರಗಿತು ಈ ಬಾರಿ ಶ್ರೀ ಕಾಶೀಮಠಾಧೀಶ ಶ್ರೀಮದ್ ಸುಕೃತೀಂದ್ರ ತೀರ್ಥಸ್ವಾಮಿ ಜಿಯವರ ಶಿಷ್ಯ ಶ್ರೀ ಸುಧೀಂದ್ರತೀರ್ಥ ಸ್ವಾಮಿಜಿಯವರು ಬಂದಿದ್ದು ಮಹೋತ್ಸವವು ಹೆಚ್ಚಿನ ಆನಂದ ಉತ್ಸಾಹಗಳಿಂದ ಆಚರಿಸಲ್ಪಟ್ಟಿತು.

ಕೆಲವು ಸಮಯದಿಂದ ಬೆಲ್ಲದ ಅಭಾವವಿದ್ದಂತೆ ಸ್ಥಳೀಯ ಕೋಓಪರೇಟಿವ್ ಸ್ಟೋರ್ಸಿನ ಅಧ್ಯಕ್ಷರಾದ ಶ್ರೀ ಕೆ. ಗಣಪತಿ ... ತ್ ವಕೀಲರ ಉತ್ಸಾಹದಿಂದ ತುಂಬಾ ಒಳ್ಳೇ ಬೆಲ್ಲ ಕಾರ್ಕಳಕ್ಕೆ ತಂದಿದ್ದು ಯೋಗ್ಯ ರೀತಿಯಲ್ಲಿ ಬಟವಾಡೆ ಮಾಡಿದ್ದು ಸ್ತುತ್ಯಾರ್ಹವಿದ

ಸ್ಥಳೀಯ ಡಿಪ್ಯುಟಿ ತಹಶಿಲ್ದಾರ ಮಿ| ಕೆ ಜೋಸೆಫ ಬಿ. ಎ ರವರ, ಬೋರ್ಡ ಮೈನ ಎಲಿಮೆಂಟರಿ ಶಾಲೆಯಲ್ಲಿ ಶ್ರೀಯುತ ಕೃಷ್ಣರಾವ್ ಬಿ ಎ ಎಲ್ ಟಿ ಯವರ ಅಧ್ಯಕ್ಷತೆಯಲ್ಲಿ ಸಾರ್ವಜನಿಕಸಭೆ ಸೇರಿಸಲಾಗಿ, ಶ್ರೀ ಕೆ. ವಾಮನ ಆಚಾರ್ಯ, ಎಸ್. ರಾಮರಾವ್ ತ, ಶ್ರೀ| ಕೆ ಅಚ್ಯುತ ಪೈ, ಯು. ಕೃಷ್ಣರಾವ್, ರೆವರೆಂಡ್ ಫಾದರ್ ಕೊಲಾಸೊ ಬಿ ಎ ಎಲ . ಟಿ ಮೊದಲಾದವರ ಸಂದರ್ಭೋಚಿತ ಸುಂದರ ಭಾಷಣಗಳಿದ್ದು 'ಪೂಪ್ಪಿಡೇ' ದಿನಾಚರಣೆ ಆಚರಿಸಲ್ಪಟ್ಟಿತು.

ಬೊಂಬಾಯಿಯಲ್ಲಿ ಶ್ರೀ. ಎನ್. ಎಸ್. ಕಿಲ್ಲೆಯವರು— ಕಳೆದ ತಾ. 29ರಲ್ಲು ಬಿಲ್ಲವ ಎಸೋಸಿಯೇಶನಿನ ನೇತೃತ್ವದಲ್ಲಿ ಕೂಡಿದ ಸಭೆಯಲ್ಲಿ ಶ್ರೀ| ಕಿಲ್ಲೆಯವರು ಅಧ್ಯಕ್ಷತೆ ವಹಿಸಿ ಶ್ರೀ ಸ್ವಾಮಿಧರ್ಮತೀರ್ಥರ್. ಬಿ ಎ, ಎಲ್, ಎಲ್. ಬಿ, ಯವರು ಭಾಷಣವಿತ್ತರು. ತಾ. 2 11-1944ರಲ್ಲಿ ಚಿಂಚಬೇ ಫ್ಲೋಟ್ ಫ್ರೀ ನೈಟ್ ಹೈಸ್ಕೂಲಿನ ಆಶ್ರಯದಲ್ಲಿ ಒಂದು ಸಭೆಯು ನಡೆಯಿತು. ಶಾಲೆಯ "ಪ್ರಿನ್ಸಿಪಾಲ" ಶ್ರೀ| ಬಿ. ಸಿ ಕಾಳೆಕರ್, ಇವರು ಅಧ್ಯಕ್ಷತೆವನ್ನು ವಹಿಸಿ, ಭಾಷಣಕಾರರಾದ ಶ್ರೀಮಾನ್ ನಾರಾಯಣ ಕಿಲ್ಲೆಯವರ ಪರಿಚಯವನ್ನು ಮಾಡಿಕೊಟ್ಟು, ಅವರ ಜೀವನ ಚರಿತ್ರೆಯನ್ನು ಸಂಕ್ಷೇಪವಾಗಿ ವಿವರಿಸಿದರು. ಶ್ರೀ. ಕಿಲ್ಲೆಯವರು, ವಿದ್ಯೆಯ ಮಂತ್ರಿ ಕಾಲಗಳ ಅಗತ್ಯ, ವಿದ್ಯಾರ್ಥಿಗಳ ಮತ್ತು ಉಪಾಧ್ಯಾಯರ ಕರ್ತವ್ಯ; ಮತ್ತು ನಮ್ಮ ಜಿಲ್ಲೆಯವರಾಗಿ ಮುಂಬಯಿಯಲ್ಲಿರುವವರು ಅನೇಕ ಚಟುವಟಿಕೆಗಳ ಮೂಲಕ ಜಿಲ್ಲೆಯ ಪ್ರತಿಷ್ಠೆಯನ್ನು ಹೆಚ್ಚಿಸಬೇಕಾದ ವಿಧಾನ ಇವುಗಳ ಕುರಿತು ಭಾಷಣವಿತ್ತರು. ಅಧ್ಯಕ್ಷರ ಮುಕ್ತಾಯ, ಭಾಷಣವಾದ ಮೇಲೆ, "ನೈಟ್ ಪ್ರಿನ್ಸಿಪಾಲ"ರಾದ ತ್ಯಾಗಿ ಗಣೇಶರಾವ್, ಎಂ. ಎ. ಇವರು ಉಪಕಾರಸ್ಮರಣೆಯನ್ನು ಮಾಡಿದರು. ತಾ. 3ರಲ್ಲಿ ಬಿಲ್ಲವ ಎಸೋಸಿಯೇಶನಿನವರು ಶ್ರೀ| ಕಿಲ್ಲೆಯವರಿಗೆ ಸತ್ಕಾರಕೂಟವಿತ್ತು ಗೌರವಿಸಿದರು. 'ಪ್ರದೇಶ ಕಾಂಗ್ರೆಸ್ ಕಚೇರಿಯಲ್ಲಿ ಗಾಂಧೀಜಿಯವರ ರಚನಾತ್ಮಕ ಕಾರ್ಯಕ್ರಮಗಳ ಕುರಿತೂ ಕರ್ನಾಟಕ ಫ್ರೆಂಡ್ಸ್ ಯೂನಿಯನ್ ಆಶ್ರಯದಲ್ಲಿ ವ್ಯಾಯಾಮಗಳ ಕುರಿತೂ ಸೌತ್ ಕೆನರಾ ಹೆಲ್ತ್ ಲೀಗಿನ ನೇತೃತ್ವದಲ್ಲಿ ಶ್ರೀಕೃಷ್ಣನ ಪರಿಪೂರ್ಣತೆಯ ಕುರಿತೂ ಭಾಷಣಗಳನ್ನು ಮಾಡಿದರು. ವೋಗವೀರ ಮಹಿಳಾ ಮಂಡಳಿಯ ನೇತೃತ್ವದಲ್ಲಿ ಶ್ರೀ| ಕಿಲ್ಲೆಯವರ ಉಪನ್ಯಾಸವಾಯಿತು.

ಶ್ರೀ ಮ್ಯಾಲಿ ರೈಗಳ ನಿಧನ

ಪುತ್ತೂರು ತಾಲೂಕಿನ ಸುಪ್ರಸಿದ್ಧ ವ್ಯಕ್ತಿಗಳಲ್ಲೊಬ್ಬರಾಗಿದ್ದು, ಅಸಾಮಾನ್ಯ ಮನುಷ್ಯನೆಂದು ಇಡೀ ಜಿಲ್ಲೆಯಲ್ಲೇ ಕೀರ್ತಿಗಳಿಸಿದ್ದ ಶ್ರೀ. ಪೆರ್ನ ಮ್ಯಾಲಿ ರೈಗಳು ಇದೇ ತಾ. 12ರಲ್ಲು ಮಂಗಳೂರಿನ ವೆನ್‌ಲೋಕ್ ಆಸ್ಪತ್ರೆಯಲ್ಲಿ ದಿವಂಗತರಾದರೆನ್ನಲು ವಿಷಾದಿಸುತ್ತೇವೆ ಅವರ ಸಾಹಸ ಚಮತ್ಕಾರಗಳು, ಪ್ರತಿಭೆ ಪ್ರತಾಪಗಳು ದ. ಕ. ಜಿಲ್ಲೆಯವರ ಮನೆಮಾತಾಗಿದ್ದವು; 'ಅದ್ಭುತ ಮನುಷ್ಯ' ಎಂಬ ಬಿರುದನ್ನವರಿಗೆ ಸಂಪಾದಿಸಿಕೊಟ್ಟಿದ್ದವು. ದಿವಂಗತರು ಪುತ್ತೂರಿನಲ್ಲಿ ಇತ್ತೀಚೆಗೆ ನಡೆದ ಒಂದು ಕೊಲೆಯ, ಸಂಬಂಧವಾಗಿ ಸರಕಾರದ 'ಅಪೇಕ್ಷಿತ ಮನುಷ್ಯ'ನಾಗಿ ಅಜ್ಞಾತವಾಸದಲ್ಲೇ ಇದ್ದರು ಅವರನ್ನು ಹಿಡಿದು ಯಾ ತೋರಿಸಿಕೊಟ್ಟವರಿಗೆ ಸರಕಾರದ ಬಹುಮಾನವು ಜಾಹೀರಾಗಿದ್ದಿತು. ರೈಗಳು ಅನಾರೋಗ್ಯದ ನಿಮಿತ್ತ ಇದೇ ತಾ 10ರಲ್ಲಿ ರಾತ್ರಿ 1 ಘಂಟೆಗೆ ವೆನ್‌ಲೋಕ್ ಆಸ್ಪತ್ರೆಗೆ ಬಂದು ಸೇರಿದ್ದರೆಂದೂ ಮರುದಿನ ಅಲ್ಲಿಯೇ ಅವರ ದಸ್ತಗಿರಿಯಾಗಿ ಪೋಲಿಸ್ ಪಹರೆಯಲ್ಲಿ ಚಿಕಿತ್ಸೆ ನಡೆಯುತ್ತಿದ್ದಂತೆ ತಾ 12ನೇ ಸಂಜೆ 4½ ಘಂಟೆಗೆ ತೀರಿಕೊಂಡರೆಂದೂ ತಿಳಿದು ಬರುತ್ತದೆ. ದಿವಂಗತ ರೈಗಳು ಕಥೆ ಕಾದಂಬರಿಗಳಲ್ಲಿ ಕಾಡುಬರುವ, ಧನಿಕದ್ವೇಷಿ ಬಡ ಜನ ಪಕ್ಷಪಾತಿ ಧೀರೋದಾತ್ತ ನಾಯಕರಂತಿದ್ದು ವಿಚಕ್ಷಣ ನ್ಯಾಯ ತೀರ್ಮಾನ ಕರ್ತರೆಂದು ಹೆಸರು ಪಡೆದಿದ್ದರು. ಮೃತರ ಆತ್ಮಕ್ಕೆ ಶಾಂತಿಯಿರಲಿ!

ಮೈಸೂರು ಪತ್ರ

ಕಾಂಗ್ರೆಸ್ ಕೆಲಸಗಾರರ ಸಭೆ - ಮೈಸೂರು ಜಿಲ್ಲಾ ಮತ್ತು ನಗರ ಕಾಂಗ್ರೆಸ್ ಕೆಲಸಗಾರರ ಸಭೆಯು ತಾ 6-11-44 ರಲ್ಲಿ ನಡೆದು ಮುಂದಿನ ಚುನಾವಣೆಗೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ಚರ್ಚಿಸಲಾಯಿತು.

ನೂತನ ಮಂತ್ರಿಗಳು — ಮದ್ರಾಸ್ ಕಾರ್ಪೊರೇಷನಿನ ಮಾಜಿ ಕಮಿಷನರಾದ ಶ್ರೀ ಓ. ಪುಲ್ಲಾರೆಡ್ಡಿ ಎಂ. ಎ. ಐ. ಸಿ ಎಸ್. ರವರನ್ನು ಮೈಸೂರಿನ ನೂತನ ಮಂತ್ರಿಗಳನ್ನಾಗಿ ನೇಮಿಸಲಾಗಿದೆ ಅವರು 10-11-44ಕ್ಕೆ ಅಧಿಕಾರವನ್ನು ವಹಿಸಿಕೊಂಡರು

ಮೈಸೂರೇತರ ಮಂತ್ರಿಗಳೊಬ್ಬರನ್ನು ನೇಮಿಸಿರುವುದನ್ನು ಖಂಡಿಸಿ ತಾಯಿನಾಡು, ದೇಶಬಂಧು ಅಗ್ರಲೇಖನವನ್ನೂ ಶ್ರೀಗಳಾದ ಕೆ. ಟಿ ಭಾಷ್ಯಂ, ಟಿ. ಸುಬ್ರಹ್ಮಣ್ಯಂ, ಡಿ ವಿ. ಗುಂಡಪ್ಪ, ಭೂಪಾಳಂ ಚಂದ್ರಶೇಖರಯ್ಯನವರೂ ಹೇಳಿಕೆಗಳನ್ನೂ ಇತ್ತಿದ್ದಾರೆ.

ಮಾತೃಭೂಮಿ ಮತ್ತು ಜನವಾಣಿಗಳು ಸಮರ್ಥಿಸಿ ಅಗ್ರಲೇಖನವನ್ನೂ ಶ್ರೀಗಳಾದ ಶಿವಮೂರ್ತಿ ಶಾಸ್ತ್ರಿ, ಹೆಚ್. ಆರ್. ಗುರುವಾ ರೆಡ್ಡಿ, ಟಿ ಕೃಷ್ಣರಾವ್, ಧರ್ಮಪ್ರಕಾಶ ವೆಂಕಾಜಿ ರಾವ್‌ರವರು ಹೇಳಿಕೆಗಳನ್ನು ಇತ್ತಿದ್ದಾರೆ.

ವಿಶ್ವವಿದ್ಯಾನಿಲಯ ಸಂಘ— ಮೈಸೂರು ವಿಶ್ವವಿದ್ಯಾನಿಲಯ ಸಂಘದ ಸದಸ್ಯರಿಗೂ ಅಧ್ಯಕ್ಷರಿಗೂ ಇದ್ದ ಭಿನ್ನಾಭಿಪ್ರಾಯ ವೈಸ್ ಚಾನ್ಸಲರವರು ಸರಿಪಡಿಸಿದ್ದಾರೆಂದು ತಿಳಿದು ಬಂದಿದೆ.

ಕಸ್ತೂರಿ ಬಾ ನಿಧಿ— ಮೈಸೂರು ಸಂಸ್ಥಾನದಲ್ಲಿ ಬಾ ನಿಧಿಗೆ ಒಟ್ಟು ಎರಡು ಲಕ್ಷದ ತೊಂಭತ್ತು ಸಾವಿರ ರೂಪಾಯಿ ಶೇಖರಣೆಯಾಗಿದೆ.

ಪತ್ರಿಕೋದ್ಯೋಗಿಗಳ ಸಂಘ- ಮೈಸೂರು ಪತ್ರಿಕೋದ್ಯೋಗಿಗಳ ಸಾಧಾರಣ ಸಭೆಯು ತಾ. 5-11-44ರಲ್ಲು ಶ್ರೀ ಪಟ್ಟಣದಲ್ಲಿ ಶ್ರೀ ಟಿ. ನಾರಾಯಣ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು ಮುಂದಿನ ಸಾಲಿಗೆ ಶ್ರೀ ಆಗರಂ ರಂಗಯ್ಯನವರು ಅಧ್ಯಕ್ಷರಾಗಿಯೂ ಶ್ರೀ ಆರ್. ಗೋಪಾಲಕೃಷ್ಣರಾವ್ ಮತ್ತು ಶ್ರೀ N. ಶ್ರೀನಿವಾಸ ಮೂರ್ತಿ ಉಪಾಧ್ಯಕ್ಷರಾಗಿಯೂ ಶ್ರೀ N. N. ಶಾಸ್ತ್ರಿಯವರು ಕೋಶಾಧ್ಯಕ್ಷರಾಗಿಯೂ ಚುನಾಯಿತರಾದರು.

ಚುನಾವಣಾ ಪ್ರಚಾರ— 1945 ನೇ ಇಸವಿ ಫೆಬ್ರುವರಿ ತಿಂಗಳಲ್ಲಿ ನಡೆಯಲಿರುವ ಚುನಾವಣೆಗೆ ಸಂಬಂಧ ಮತದಾರರ ಪಟ್ಟಿಯು ಪ್ರಕಟವಾಗಿ ಬಿಟ್ಟಿರುವುದರಿಂದ ಹೆಸರುಗಳನ್ನು ಸೇರಿಸುವ ಕಾರ್ಯವು ಭರದಿಂದ ಸಾಗುತ್ತಿದೆ. ಮೈಸೂರು ನಗರ ಕಾಂಗ್ರೆಸ್ ಕೆಲಸಗಾರರ ಕೇಂದ್ರ ಸಮಿತಿಯವರೂ ಇತರರೂ ಮನೆಗೆ ಮನೆಗೆ ಹೋಗಿ ಬಿಟ್ಟು ಹೋದವರ ಹೆಸರುಗಳನ್ನು ಸಂಗ್ರಹಿಸುತ್ತಿದ್ದಾರೆ

Sri Narayan Guru Bank, Ltd.,

(Incorporated in British India Liability of Members is Limited)

Regd. Head Office HAMPANKATTA,

MANGALORE.

Branch. UDIPI, S. K.

Authorised Capital	....	Rs 2,00000
Issued Capital	....	,, 1,00000
Paid up Capital	....	,, 56,150

The Company has commenced Business by obtaining from the Government the Certificate of Commencement of Business on the 19th August, 1944 under the Indian Companies Act, 1913.

Strong Board of Directors

Consent of the Central Government has been obtained under the Defence of India Rules 94 A "It must be distinctly understood that in giving this consent the Govt. of India does not take any responsibility for the financial soundness of any scheme or for the correctness of any of the statements made or opinion expressed with regard to them'. The Government of India has been pleased to extend the period till the 15th January 1945 for the sale of shares.

A few shares at par available.

Rs 50 - per share. Re 1,- Entrance Fee per share.

Hundreds have already taken up shares!

WHY NOT YOU?

Current and Savings Bank Accounts are opened Fixed Deposits are accepted Enquire for Rules of Business and rates of Interest.

MANGALORE JARAPPA,

President & Managing Director.

ಪ್ರಾಯ 55ಕ್ಕೆ ಬಂದ ಪಂಡಿತ ನೆಹರು

ಪಂಡಿತ ಜವಾಹಿರಲಾಲ ನೆಹರುಗಳು ಈ ನವಂಬರ್ ತಾ. 14ನೇ ಮಂಗಳವಾರದಲ್ಲಿ 55ನೇ ವರುಷಕ್ಕೆ ಕಾಲಿಟ್ಟರು. 'ಕಾಲು ನಿಂತರೂ ಕಾಲ ನಿಲ್ಲದು' ಎಂಬ ಗಾದೆಯಿದೆ. 1942ನೇ ಅಗೋಸ್ತಿನಾರಭ್ಯ ಪಂಡಿತ ನೆಹರು ಇದ್ದಂತೆ ಇದ್ದಾರೆ—ಇದ್ದಲ್ಲೇ ಇದ್ದಾರೆ; ಆದರೆ ಅವರ ಪ್ರಾಯ ಮಾತ್ರ ದಾಟುತ್ತಾ ಹೋಗಿದೆ. ಪಂಡಿತಜೀ—ಅಖಿಲ ಭಾರತೀಯರ ಆದರ್ಶಮೂರ್ತಿ—ತನ್ನ 52ನೇ ವಯಸ್ಸಿನಲ್ಲಿ ಹೊಕ್ಕ ಕೋಣೆಯನ್ನು 55 ಬಂದಾಗಲೂ ಬಿಟ್ಟಿಲ್ಲ! 53-54-55ನೇ ಜನ್ಮದಿನಗಳಲ್ಲಿ ಪಂಡಿತರ ಮುಖಾವಲೋಕನ ಮಾಡಿದ ಭಾಗ್ಯಶಾಲಿ ಬೊಂಬಾಯಿ ಬಳಿಯ ಅಹಮ್ಮದ್ ನಗರದ ಜೈಲರನೊಬ್ಬನೆ. ಈ ರೀತಿ ಜವಾಹಿರಲಾಲರ ಮೂರು ಜನ್ಮದಿನಗಳನ್ನು ಸರ್ತಿ ಬಿಡದೆ ನೋಡುವ ಸುಯೋಗವು ಪುತ್ರನು ಪ್ರಾಯಕ್ಕೆ ಬಂದ ಮೇಲೆ ಪ್ರಾಯಶಃ ತಂದೆ ಮೋತಿಲಾಲರಿಗೆ ಕೂಡ ದೊರೆತಿರಲಾರದು. ಯಾಕೆಂದರೆ ಪ್ರಾಯಸ್ಥ ಜವಾಹಿರಲಾಲ್ ಒಂದು ವರುಷ ಹೊರಗಿದ್ದರೆ ಮತ್ತೊಂದು ವರುಷ ಜೈಲಲ್ಲಿದ್ದು ಬೆಳೆದವರು. ಈಗ ಅವರು ಅನುಭವಿಸುತ್ತಿರುವ ಶಿಕ್ಷೆ 9ನೇ ಬಾರಿಯದು!

55ರ ಯುವಕ.

'ಯುವಕರ ಮುಂದಾಳು' 'ತರುಣರ ಮಾರ್ಗದರ್ಶಕ' 'ನವಯುವಕರ ಅಧಿದೈವ' ಎಂದು ಪಂಡಿತರು ಪಡೆದಷ್ಟು ಕೀರ್ತಿಯನ್ನು ಬೇರೆ ವಿಧದಿಂದ ಪಡೆದಿಲ್ಲ ಇನ್ನೂ ಹಾಗೆನ್ನಬಹುದೆ? ಪ್ರಾಯ 55ಕ್ಕೆ ಬಂದವ ಮುದುಕನಲ್ಲವೆ? ನೆಹರುಗಳ ಮಟ್ಟಿಗೆ ಹಾಗಲ್ಲ. ಪ್ರಾಯ 55ಕ್ಕೆ ಬಂದಿರುವದು ಎಷ್ಟು ಸತ್ಯವೋ ಪಂಡಿತರು 25ರ ಯುವಕನಾಗಿ ಉಳಿದಿರುವದು ಅಷ್ಟೇ ಸತ್ಯ. ನಡುನೆತ್ತಿ ಬಿಟ್ಟು ವರ್ತುಲಾಕಾರವಾಗಿ ಬೆಳೆದಿರುವ ಅವರ ಕೂದಲು ಬಿಳಿಯಾಗಿರಬಹುದು-ಆದರೆ ರಕ್ತ ದಪ್ಪಗಟ್ಟಿಲ್ಲ. ಪಂಡಿತರ ರಕ್ತವನ್ನು ಹೆಚ್ಚೆಚ್ಚಾಗಿ ಕುದಿಸುವ ವಾತಾವರಣವು ಹಿಂದುಸ್ಥಾನದಲ್ಲಿ, ಅಖಿಲ ಜಗತ್ತಿನಲ್ಲಿ ಇನ್ನೂ ಉಳಿದಿರುವದೇ ಇದಕ್ಕೆ ಕಾರಣವೆನ್ನಬಹುದು. ಆದರೆ ಈ ಮಾತು ಅವರ ಉತ್ಸಾಹಾವೇಶಗಳಿಗೆ ಸಂಬಂಧಪಟ್ಟದ್ದು. ದೇಹ ತ್ರಾಣದ ಮಟ್ಟಿಗೂ ಪಂಡಿತರು ಯುವಕರೇ. ಕೆಲವರು ಇಪ್ಪತ್ತರಲ್ಲಿಯೇ ಮುದುಕರಾಗಿ ಬಿಡುತ್ತಾರೆ; ಇನ್ನು ಕೆಲವರು ಎಪ್ಪತ್ತರಲ್ಲಿಯೂ ಯುವಕರಾಗಿ ಉಳಿಯುತ್ತಾರೆ ಪಂಡಿತಜೀ ಎರಡನೇ ವರ್ಗಕ್ಕೆ ಸೇರಿದವರು. ಬಿಳಿ ಜನರ ಪ್ರಾಯವೆಷ್ಟೇ ಎಂದು ಅವರನ್ನು ಕಂಡ ಮಾತ್ರದಿಂದ ಹೇಳುವದು ಭಾರತೀಯರಿಗೆ ಕಷ್ಟ. ಪಂಡಿತ ನೆಹರುಗಳು ಪ್ರಾಯದ ಮಟ್ಟಿಗೆ ಯುರೋಪಿನವರೇ. ಅಹಮ್ಮದ್ ನಗರದ ಜೈಲಲ್ಲಿ ಹಲ್ಲು ನೋವಿನಿಂದ ನರಳುತ್ತಿರುವ ಸರ್ದಾರರ ವಲ್ಲಭಾಯಿಯವರಿಗೆ, ಬೊಜ್ಜು ಹೊಟ್ಟೆಯಿಂದ ಉಚ್ವಾಸ ಬಿಡುತ್ತಿರುವ ಮೌಲಾನಾ ಅಜಾದರಿಗೆ ನೆಹರುಗಳ ಒಡನಾಟವು ಯುವಕನ ಸಹ ಚರ್ಯೆಯಾಗಿದೆಯಂತೆ; ಈ ಯುವಕನ ಪ್ರಾಯವೀಗ 55!

ಹುಟ್ಟು ಯೋಧ

ಗಾಂಧಿ ಮತ್ತು ಅಸಹಕಾರ ಚಳವಳವನ್ನು ಅಪಹಾಸ್ಯ ಮಾಡುತ್ತಿದ್ದ ವಕೀಲ್ ವಲ್ಲಭಾಯಿ ಮಹಾತ್ಮರ ಬಲಗೈಯ್ಯಾದುದು ಸಂದರ್ಭಾನುಸಾರವಾಗಿ; ಉರ್ದು ಪಂಡಿತ ಮೌಲಾನಾ ಅಜಾದರು ಕಾಂಗ್ರೆಸ್ ಛತ್ರದಡಿಗೆ ಬಂದುದು ಹೊರಗಿನ ವಾತಾವರಣದ ಬಿಸಿ ತಾಗಿದ ಮೇಲೇನೇ. ಆದರೆ ನೆಹರುಗಳು ಹೀಗೆ ಮತಾಂತರ ಹೊಂದಿ ದೇಶಭಕ್ತನಾದವರಲ್ಲ; ಹಾಗಿದ್ದೇ ಹುಟ್ಟಿ ಬಂದವರು. ಇಂಗ್ಲಾಂಡಿನಲ್ಲಿ ವಿದ್ಯಾಭ್ಯಾಸ ಮುಗಿಸಿಕೊಂಡು ಬಂದೊಡನೆ ಅಲ್ಲಹಾಬಾದ್ ಹ್ಯಾಕೋರ್ಟಿನ 'ಎಡ್ವೋಕೇಟ್' ಆಗಿ ನಿಂತರು; ಆದರೆ ಬಹುಕಾಲ ನಿಲ್ಲುವದಾಗಲಿಲ್ಲ. ಅವರ ಅತಿ ಮಾನುಷ ಸಾಹಸ ಬುದ್ಧಿಯಿಂದಾಗಿ, ಕಾನೂನಿನ ಬಲೆಯೊಳಗೆ ಕಕ್ಷಿಗಾರರನ್ನು ಕೆಡಹುವದರಲ್ಲೇ ಜವಾಹಿರಲಾಲರಿಗೆ ತೃಪ್ತಿ ಕಾಣಿಸಲಿಲ್ಲ. ಅವರ ಪ್ರತಿಭೆಯನ್ನು ಕಂಡ ರಾಷ್‌ಬಹಾರಿ ಘೋಷರು 'ಕಾನೂನಿನ ವಿಷಯವಾಗಿ ಒಂದು ಪುಸ್ತಕ ಬರೆ' ಎಂದು ಸಲಹೆಕೊಟ್ಟರು. ಜವಾಹಿರರ ಉತ್ಸಾಹಕ್ಕೊಂದು ಕೆಲಸಕೊಟ್ಟು ತಣಿಸಬೇಕೆಂದೇ ಈ ಸೂಚನೆ. ಆದರೆ ಪಂಡಿತರಿಗದರಿಂದಲೂ ತೃಪ್ತಿಯಾಗಲಿಲ್ಲ. ಅವರು ಲೋಕಮಾನ್ಯ ತಿಲಕರ ಹೋಮ್ ರೂಲ್ ಲೀಗಿನಲ್ಲಿ ಸೇರಿಕೊಂಡರು. ಅದರ ಅಲಹಾಬಾದ್ ಶಾಖೆಯ ಕಾರ್ಯದರ್ಶಿಯೂ ಆದರು ಕೊನೆಗದೂ ಸಮಾಧಾನಕೊಡಲಿಲ್ಲ. ಹೋಮ್‌ರೂಲ್ ಚಳವಳದ ಕಾರ್ಯಕ್ಷೇತ್ರವನ್ನು ತುಂಬಿಯೂ ತುಳುಕುವಷ್ಟು ಉತ್ಸಾಹ, ಯೋಧತ್ವ, ಪಂಡಿತರದು. ಅವರಿಗೆ ಯೋಗ್ಯರಂಗ ದೊರೆತುದು ಗಾಂಧಿಯವರು ಸತ್ಯಾಗ್ರಹ ಚಳವಳ ಹೂಡಿದಾಗಲೇ. ಅವರದರಲ್ಲಿ ಪೂರ್ಣ ಮನಸ್ಸಿನಿಂದ ಧುಮುಕಿದರು. ಸತ್ಯಾಗ್ರಹ ಚಳವಳಕ್ಕೆ ನೆಹರುಗಳಂಥವರು ಬೇಕಾಗಿದ್ದರು; ನೆಹರುಗಳಿಗೆ ಅಂತಹ ಚಳವಳ ಬೇಕಾಗಿದ್ದಿತು.

ನೆಹರು ಕುಟುಂಬ

ಈ ಯೋಧ ಪ್ರವೃತ್ತಿಯಿಂದ, ದೇಶಸೇವಾ ಸ್ಫೂರ್ತಿಯಿಂದ ತನ್ನ ತಂದೆ, ತಾಯಿ, ತಂಗಿ, ಭಾವ, ಪತ್ನಿ, ಮಗಳ ಸಮೇತ ಇಡೀ ಕುಟುಂಬವನ್ನೇ ರಾಷ್ಟ್ರೀಯ ಯಜ್ಞ ಕುಂಡಕ್ಕಿಳಿಸಿದವರು ಪಂಡಿತ ಜವಾಹಿರರು. ಆ ಕಾಲದಲ್ಲಿ ಪಂಡಿತ ಮೋತಿಲಾಲರು ಮಂದಗಾಮಿಗಳಲ್ಲಿ ಹೆಸರಾಂತ ಪ್ರಮುಖರಾಗಿದ್ದರು. ಅಂಥವರನ್ನು ಉಗ್ರ ಅಸಹಕಾರ ಚಳವಳಕ್ಕೆಳೆದುಕೊಂಡುದು ಏಕಮಾತ್ರ ಪುತ್ರನ ವ್ಯಕ್ತಿತ್ವ, ತ್ಯಾಗ, ಕಷ್ಟಸಹನೆಗಳೇ. ಇಂದಿನ ಅಹಮ್ಮದ್ ನಗರದ ಕೋಟೆಗೆ ಜವಾಹಿರ್ ನಂಬ್ರ 9! ಅವರು ಜೈಲು ಪಕ್ಷಿ; ಸರ್ವಿಸಾದ 'ಕೇಡಿ'. ಮಾತೆ ಮತ್ತು ಪತ್ನಿಗೆ ಮರಣ ಶಯ್ಯೆ, ಆಗಲೂ ಜವಾಹಿರು ಜೈಲಲ್ಲಿ. ತಾಯಿಯ ಮೇಲೆ ಪ್ರೀತಿ, ತಂದೆಯ ಕುರಿತು ಭೀತಿ ಇದ್ದವರು ಪಂಡಿತರು. ತಾನೊಮ್ಮೆ ಕಾರಾಗೃಹದಲ್ಲಿರುವಾಗ ವೃದ್ಧ ಮಾತೆಯ ಮೇಲೆ ಲಾಥೀಚಾರ್ಜ್ ನಡೆದ ವಾರ್ತೆಯನ್ನು ಕೇಳಿ ನೆಹರು ನಖಶಿಖಾಂತ ಉರಿದು ಹೋಗಿದ್ದರು. ಆ ಉರಿಯಲ್ಲಿ ಅವರ ಅಹಿಂಸೆಯೂ ಕರಗಿ ಹೋಗಿದ್ದಿತು ಜೈಲು ಗೋಡೆ ಮಾತ್ರ ಕುಸಿಯಲಿಲ್ಲವಾದ್ದರಿಂದ ಏನೂ ಸಂಭವಿಸಲಿಲ್ಲ. ಮಹಾತ್ಮರ ಅಹಿಂಸೆಯು ಪಂಡಿತರ ಅಭಿಪ್ರಾಯದಲ್ಲೊಂದು ಸಾಧನೆ ಹೊರತು ಸರ್ವಸ್ವವಲ್ಲ. 'ಖಾದಿಯೇ ಸ್ವರಾಜ್ಯದ ಹಾದಿ' ಎಂದು ಗಾಂಧಿಯವರೆಂದರೆ, ಅದು ಆರ್ಥಿಕ ಅನಾರೋಗ್ಯಕ್ಕೊಂದು ಪ್ರಥಮ ಚಿಕಿತ್ಸೆ ಮಾತ್ರ ಎಂದು ನೆಹರು ಭಾವಿಸಿದ್ದಾರೆ. ಹೀಗಿದ್ದರೂ ಇವರಿಬ್ಬರ ಹಾದಿ ಕವಲೊಡೆದಿಲ್ಲ. ಅವರು ತುಳಿದ ಹಾದಿಯನ್ನೇ ಇವರು ತುಳಿಯುತ್ತಲೂ ಇಲ್ಲ. ಆದಿಯಿಂದ ಈ ವರೆಗೂ ಇಬ್ಬರ ಎರಡು ಹಾದಿಗಳೂ ಅಕ್ಕ ಪಕ್ಕದಲ್ಲೇ ಹೋಗಿವೆ—ಇನ್ನವು ಬೇರೆ ಬೇರೆಯಾಗುವಂತೆಯೂ ಇಲ್ಲ. ಯಾತಕ್ಕಿಲ್ಲ?

ಪಂಡಿತರಿಗೂ ಮುಂದೆ ಪರಾಕ್ರಮ!

ನೆಹರು ಪರಾಕ್ರಮಿ, ಸಾಹಸಿ, ಯೋಧ. ಇವುಗಳ ಜತೆಗೆ ಭಾವ ಜೀವಿ. ಇಂಥವರು ಸೂತ್ರದ ತುದಿಯಲ್ಲಿರಬೇಕು ಹೊರತು ಸೂತ್ರಧಾರಿಯಾಗಲಾರರು. ಆದರೆ ಇಷ್ಟು ಭಾರತದ ಮನುಷ್ಯನನ್ನಾಡಿಸುವ ಸೂತ್ರವು ಅಷ್ಟೇ ಗಟ್ಟಿಯಿರಬೇಕು. ಮಹಾತ್ಮಾಗಾಂಧಿಯವರ ಸ್ವಾತಂತ್ರ್ಯ ಹೋರಾಟವು ಅಂತಹ ಗಟ್ಟಿ ಸೂತ್ರವಾಗಿ ಜವಾಹಿರರನ್ನಾಡಿಸುತ್ತಿದೆ ಜವಾಹಿರರಿಗೆ ಬೇಕಾಗಿದ್ದ ತನ್ನನ್ನು ತಾನೇ ಮರೆತು ಹೋರಾಡುವ ಕೆಲಸ ದೊರೆತಿದೆ. ಆದ್ದರಿಂದಲೇ ಅವರು ಗಾಂಧಿಜೀಯ ಅನ್ಯಯಾಯಿತಿ. ಅಂತಹ ಹೋರಾಟದ ಸೂತ್ರವನ್ನು ಕೆಳಗಿಟ್ಟು ಗಾಂಧಿಜೀ ಬದುಕುವವರಲ್ಲ; ಆದ್ದರಿಂದ ಗಾಂಧಿಜೀಯಲ್ಲಿ ಶ್ವಾಸವಿರುವ ವರೆಗೆ ನೆಹರುಗಳ ವಿಶ್ವಾಸವೂ ಅವರಲ್ಲಿ ಉಳಿಯದೆ ಹೋಗದು. ಗಾಂಧಿಜೀ ನಾಯಕ, ಪಂಡಿತಜೀ ಅನುಯಾಯಿ. ಗಾಂಧಿತ್ವವು ತನ್ನ ಕ್ಷೇತ್ರದಲ್ಲಿ ಹೇಗೆ ಬೆಳೆದಿದೆಯೋ ನೆಹರುತ್ವವೂ ಅದರ ಕ್ಷೇತ್ರದಲ್ಲಿ ಹಾಗೇನೇ ಬೆಳೆದಿದೆ. ಅವರ ಸೇವಾ ಸ್ಫೂರ್ತಿಯು ರಾಷ್ಟ್ರೀಯತೆಯ ಗಡಿ ದಾಟಿ ಜಾಗತಿಕ ರೂಪಾಂತಿದೆ. ನೆಹರು ಅಂತರ್ರಾಷ್ಟ್ರೀಯ ವ್ಯಕ್ತಿ. ಇಂಗ್ಲಾಂಡು ನಾಜಿಗಳ ಮೇಲೆ ಪ್ರಥಮ ಗುಂಡು ಹಾರಿಸುವ ಮೊದಲೇ ನೆಹರುಗಳದಕ್ಕೆ ವಾಗ್ಪ್ರಹಾರ ಕೊಟ್ಟಿದ್ದರು. ಜಾಪಾನರ ಚೀನೀ ಅತ್ಯಾಚಾರವನ್ನು-ಇಟೆಲಿಯ ಅಬಿಸೀನಿಯಾ ಕ್ರೂರತ್ವವನ್ನು-ನಾಜಿಗಳ ಝೆಕೊಸ್ಲೊವೇಕಿಯಾಪಹಾರವನ್ನು ಏಕಪ್ರಕಾರವಾಗಿ ಅವುಗಳ ಆರಂಭದಲ್ಲೇ ಖಂಡಿಸುವ ಧೈರ್ಯ ಮತ್ತು ಯೋಗ್ಯತೆಯನ್ನು ಪ್ರದರ್ಶಿಸಿದವರಲ್ಲಿ ಇಡೀ ಜಗತ್ತಿನಲ್ಲೇ ಪಂಡಿತ ನೆಹರುಗಳು ಮೊದಲಿಗರು. ಅಂತಹ ಸ್ಥಾನ ಭಾರತದಲ್ಲಿರುವದು ನೆಹರುಗಳಿಗೆ ಮಾತ್ರ, ಗಾಂಧಿಯವರಿಗೂ ಇಲ್ಲ.

ಇಂತಹ ಮನುಷ್ಯ

ಈಗ ಅಹಮ್ಮದ್ ನಗರದ ಜೈಲಲ್ಲಿ ಕೊಳೆಯುತ್ತಿದ್ದಾರೆ; ಅಥವಾ ಪೆಟ್ಟಿಗೆಯೊಳಗೇನೇ ಹೊಳೆಯುತ್ತಿದ್ದಾರೆ. ಗಾಂಧಿಯವರು ಜಾಪಾನೀ ಪಕ್ಷಪಾತಿಯೆಂಬ ಆರೋಪಕ್ಕೆ ಜೋಡಿಸಲು ಶಬ್ದಗಳಾದರೂ ಸರಕಾರಕ್ಕೆ ದೊರೆತಿದ್ದವು; ಆದರೆ ಜವಾಹಿರರ ಮಾತನ್ನೋ.—ಫೇಸಿಸ್ಟ್ ವಿರೋಧ ಪ್ರಚಾರಕ್ಕಾಗಿ ಸರಕಾರವೇ ಉಪಯೋಗಿಸಿಕೊಂಡಿದೆ! ಸರಕಾರದ 'ರಾಷ್ಟ್ರೀಯ ಯುದ್ಧ ಮುಖ'ದ ಜಾಹೀರಾತುಗಳಲ್ಲಿ ಪಂಡಿತ ನೆಹರುಗಳ ಭಾವಚಿತ್ರ ಮತ್ತು ಅವರ ಫ್ಯಾಸಿಸ್ಟ್ ವಿರೋಧ ಮಾತುಗಳು ಬಂದಿದ್ದವು. ನೆಹರು ಸರಕಾರೀ ಕಾರಾಗೃಹದಲ್ಲಿ ಅವರ ಮಾತುಗಳು ಸರಕಾರೀ ಕಾಗದಗಳಲ್ಲಿ! ಬೊಂಬಾಯಿಯ ಟ್ರಾಮು ಟಿಕೇಟುಗಳಲ್ಲಿ ಕೂಡಾ ಪಂಡಿತರ ಫೇಸಿಸ್ಟ್ ವಿರೋಧ ಸಂದೇಶಗಳಿವೆಯಂತೆ. ಆದರೆ ನೆಹರುಗಳು ಅಹಮ್ಮದ್ ನಗರದ ಬಂದೀಖಾನೆಯಲ್ಲೇ ಇದ್ದಾರೆ. ಅಲ್ಲ, 40 ಕೋಟಿ ಹಿಂದೀಯರ ಹಾಗೂ ಸಾವಿರಾರು ಪಾಶ್ಚಾತ್ಯರ ಹೃದಯಗಳಲ್ಲೂ ಇದ್ದಾರೆ, ಎಂಬುದಕ್ಕೆ ಅವರ 55ನೇ ಜನ್ಮದಿನಾಚರಣೆಯು ಇದೀಗ ಮೊದಲ ಬಾರಿ ಲಂಡನಿನಲ್ಲಿ ನಡೆದ ಸುಮುಹೂರ್ತದಲ್ಲಿ ಇಂಗ್ಲಾಂಡಿನ ಸ್ವತಂತ್ರ ಕೂಲಿಗಾರ ಪಕ್ಷದ ಕಾರ್ಯದರ್ಶಿ ಮಿ. ಫೆನ್ನರ್ ಬ್ರೋಕ್‌ವೇಯವರಿತ್ತ ಈ ಕೆಳಗಿನ ಸಂದೇಶವೊಂದು ನಿದರ್ಶನ: "ಅವರಿನ್ನೂ ಜೈಲಲ್ಲಿ ಇದ್ದಾರೆಂಬುದೇ ಬ್ರಿಟಿಷ್ ರಾಜ್ಯಭಾರಕ್ಕೆ ಸಾಕಷ್ಟು ಆರೋಪ. ನೆಹರುಗಳ ಶಕ್ತಿ ಮತ್ತು ವ್ಯಕ್ತಿತ್ವವನ್ನು ನೋಡಿದರಂತೂ ಈ ಅಪರಾಧವು ಮತ್ತಷ್ಟು ಅಸಹ್ಯ. ಅವರನ್ನು ಜೈಲಲ್ಲಿಟ್ಟಿರುವ ಕಿರಿಮನುಷ್ಯರೊಡನೆ ಹೋಲಿಸಿದರೆ ಅವರೊಬ್ಬ ದೈತ್ಯನೇ ಸರಿ. ನೆಹರುಗಳಿರುವದಕ್ಕಾಗಿ ಹಿಂದುಸ್ಥಾನವು ಹೆಮ್ಮೆಪಡಬೇಕಾಗಿದೆ; ಅವರನ್ನು ಜೈಲಲ್ಲಿಟ್ಟ ನಾಗರಿಕರಿರುವದಕ್ಕಾಗಿ ಇಂಗ್ಲಾಂಡು ನಾಚಬೇಕಾಗಿದೆ".

ಮೇರಿಬಾಯಿ

●

(೨ನೇ ಪುಟದಿಂದ ಮುಂದುವರಿದುದು)

ಯೆ? ಅದೂ ಎಲ್ಲಾ ಗುರುಗಳಲ್ಲಿ. ಕಳೆದ ಸಾರಿ ಹೆರಲಿಕ್ಕೆ ಆಸ್ಪತ್ರೆಗೆ ಹೋಗುವಾಗ ಉಡಲು ಸೀರೆಯಿರಲಿಲ್ಲ. ಒಂದು ರೂಪಾಯಿ ಕೇಳಿದೆ; ಕೊಡಲಿಲ್ಲ."

"ಬೊಂಬಯಿಯಲ್ಲಿ ನಿನ್ನ ಮತ್ತು ನಿನ್ನ ಗಂಡನ ಗುರ್ತರಿತರಿಲ್ಲವೆ?"

"ಇದ್ದಾರೆ."

"ಅವರಿಗೆ ನಿನ್ನ ಗಂಡನ ವಿಷಯ ಪತ್ರ ಬರೆಯಬಹುದಲ್ಲ?"

"ಬರೆದಿದ್ದೇನೆ."

"ಉತ್ತರ ಕೊಡಲಿಲ್ಲವೆ?"

(ಮೌನ)

"ಏನು ಮೌನವಾಗಿರುವೆ?"

"ಅವರ ಉದ್ಯೋಗವೇ ಇಂತಹದಂತೆ".

"ಅಂದರೆ......!"

"ಅಂದರೆ....ಅದು ನಿಮಗೆ ಅರ್ಥವಾಗಲಾರದು. ಆ ಸಮಯ ನನಗೊಂದು ತಿಳಿಯಲಿಲ್ಲ ತಪ್ಪು ಮಾಡುವುದು ಮನುಷ್ಯ ಸ್ವಭಾವವಂತೆ. ಇಲ್ಲದಿದ್ದರೆ ಆ ಸೇಟರ ಮಾತಿಗೆ ಮರುಳಾಗುತ್ತಿರಲಿಲ್ಲ....ಭ್ರೂಣ ಹತ್ಯೆ...ಅದಕ್ಕೆ ನಾನೊಪ್ಪಲಿಲ್ಲ.ಮರ್ಯಾದೆಯನ್ನು ಉಳಿಸಬೇಕೆಂದು ಸೇಟರು ಪ್ರಯತ್ನಿಸಿ 3 ಸಾವಿರ ರೂಪಾಯಿಗಳನ್ನು ಕೊಟ್ಟರಿವರಿಗೆ. ಇವರೂ ಒಪ್ಪಿದರು ಮದುವೆಗೆ. ನನಗೂ ಆಷ್ಟೊಂದು ಲೋಕಾನುಭವ ಇರಲಿಲ್ಲ. ಪ್ರಪಂಚವು ವಂಚನೆ ಮೋಸಗಳಿಂದಲೇ ತುಂಬಿದೆ ಎಂದು ನಾನು ತಿಳಿಯಲಿಲ್ಲ. ಮದುವೆಯೂ ಆಯಿತು. ನಾವಿಬ್ಬರೂ ಸೇಟರ ಖರ್ಚಿನಿಂದಲೇ ಊರಿಗೆ ಬಂದು ಈ ಗುಡ್ಡೆಯನ್ನು 'ಪರ್ಚೇಸು' ಮಾಡಿಕೊಂಡೆವು. 2 ತಿಂಗಳ ನಂತರ ಆವರು ಬೊಂಬಾಯಿಗೆ ಹೋದರು, ನನ್ನನ್ನು-ಎಂಟು ತಿಂಗಳ ಗರ್ಭಿಣಿಯನ್ನು-ಬಿಟ್ಟು ಹೋದವರು ಹಿಂದೆ ಬರಲಿಲ್ಲ. ಒಂದು ಪತ್ರವನ್ನೂ ಹಾಕಲಿಲ್ಲ. ಈಗ ಜೀವಿಸುತ್ತಿದ್ದೇನೆ ಈ ಕಷ್ಟಗಳ ನಡುವೆ ಈ ಮಗುವಿಗಾಗಿ–ಅಂತೋನಿಗಾಗಿ. ಅವನೂ ಈಗ ನೋಡುವಾಗ ಬದುಕುವಂತೆ ಕಾಣುವುದಿಲ್ಲ

"ಹಾಗಾದರೆ...!"

"ಹಾಗಾದರೆ...! ಏನು ಹೇಳಿರಿ. ನಾನು ಜಾರಿಯೆಂದಲ್ಲವೆ ನಿಮ್ಮ ಅಭಿಪ್ರಾಯ? ಆದರೆ ಅದನ್ನು ನಾನು ಬಲ್ಲೆ. ಆ ಸರ್ವಾಂತರ್ಯಾಮಿ ಬಲ್ಲ. ಅನ್ಯರಿಗೇನು ಗೊತ್ತು? ಆದರೆ ಒಂದನ್ನು ಮಾತ್ರ ತಿಳಿಯಿರಿ. ಹಾಗಾಗುತ್ತಿದ್ದರೆ ಇಂದು ನಾನು ಸೌಭಾಗ್ಯವತಿಯಾಗಿ ಉಳಿದವರು ಸರಸರಿಗಿಂತಲೂ ಸುಖವಾಗಿ ಬಾಳುತ್ತಿದ್ದೆ."

ಅವಳು ಉಸುರ್ಗರೆದಳು.

ನಾನು ನಿಟ್ಟುಸಿರು ಬಿಟ್ಟೆ.

* * * *

ರಾತ್ರಿಯ ನನ್ನ ಜಗಲಿಯ ಮೂಲೆಯಲ್ಲಿ ಕಳೆದು ನನ್ನ ಪ್ರಯಾಣ ಮುಂದುರಿಸಿದೆ ಇನ್ನೊಂದು ಸರ್ತಿ ಮೇರಿಗೆ ಸೇಟ್ ಮೋಹನದಾಸರು ಮಾಡಿದ್ದ ಮಣಿ ಆರ್ಡರು ತಂದಿದ್ದೆ. ಬಂದು ನೋಡುವಾಗ ಅವಳಿರಲಿಲ್ಲ. ಆ ಜೋಪುಡಿ ಮಾತ್ರ ಇತ್ತು. ಊರವರೊಡನೆ ಕೇಳಿದ್ದಲ್ಲಿ ಅವಳ ಮಗು ಜ್ವರದಿಂದ ತೀರಿಹೋಯಿತೆಂದೂ, ಅವಳು ಬಾವಿಯಲ್ಲಿ ಹಾರಿ ಮೃತಪಟ್ಟಳೆಂದೂ ಕೇಳಿದೆ. ಅವಳನ್ನು ಹುಗಿದರೋ ಸುಟ್ಟರೋ ನಾನರಿಯೆ. ಅಂತೂ ಅವಳು ಮೃತಪಟ್ಟಳೆಂಬುದು ನಿಶ್ಚಯ. ಇಹದಲ್ಲಿ ಅವಳಿಗೆ ಶಾಂತಿಯಿರಲಿಲ್ಲ. ಪರದಲ್ಲಾದರೂ ಶಾಂತಿ ದೊರಕಲಿ.

"ಮೃತಳ ಆತ್ಮಕ್ಕೆ ಚಿರ ಶಾಂತಿಯಿರಲಿ"

ಪುತ್ತೂರು–ದ. ಕ. ಡಿಸ್ಟ್ರಿಕ್ಟ್ ಡೆಮೋಕ್ರೆಟಿಕ್ ಪಾರ್ಟಿಯ ಪುತ್ತೂರು ಸಮಿತಿಯ ಆಶ್ರಯದಲ್ಲಿ "ರಷ್ಯಾ ಕ್ರಾಂತಿ ದಿನ"ವು "ಸಾರ್ವತ್ರಿಕ ಮತದಾನ ದಿನ"ವಾಗಿ ತಾ. 7ರಲ್ಲಿ ಆಚರಿಸಲ್ಪಟ್ಟಿತು. ಬಹಿರಂಗ ಅಧಿವೇಶನದಲ್ಲಿ ಶ್ರೀ. ಎಂ. ಎ. ಹುಸ್ಸೇನ್ ಇವರು ಅಧ್ಯಕ್ಷ ಸ್ಥಾನವನ್ನು ವಹಿಸಿದ್ದರು. ಭಾಷಣಕರ್ತರು "ಭಾರತದಲ್ಲಿ ಅನಿವಾರ್ಯವಾಗಿ ನಡೆಯಲಿರುವ ವರ್ಗ ಕಲಹದ ಕುರಿತು ಮತ್ತು ಅಂತಹ ಕಲಹಕ್ಕಾಗಿ ಹೇಗೆ ದಲಿತ ವರ್ಗದವರು ಇಂದೇ ಸಂಘಟಿತರಾಗತಕ್ಕದೆಂಬುದಕ್ಕೆ ಮಹತ್ವವನ್ನಿತ್ತು ಮಾತನಾಡಿದರು. ಪಟ್ಟಣದ ಮುಖ್ಯ ಬೀದಿಗಳಲ್ಲಿ ಮೆರವಣಿಗೆಗಳನ್ನು ತೆಗೆದುಕೊಂಡು ಹೋಗಲಾಯಿತು.

ಮಿತ್ರನೋ, ಶತ್ರುವೋ?



ಯೋಗಗಳಲ್ಲವೂ, ಯುದ್ಧ [illegible] ಆರ್ಥಿಕ [illegible], ಯುದ್ಧಕಾಲದ [illegible] ನೋಡಿದ್ದೀರಿ. ಆದರೆ ಈ ದೇಶದ [illegible] ತಲೆದೋರಿದ [illegible] ಆರ್ಥಿಕ [illegible]. ಹಣದ ಕೊಳ್ಳುವ ಶಕ್ತಿ (Purchasing Power) [illegible] ಹೆಚ್ಚಾಗಿ [illegible] ಪದಾರ್ಥಗಳನ್ನು ಕೊಳ್ಳುವ ಶಕ್ತಿಯು ಅಧಿಕವಾಗಿರುತ್ತದೆ. ಇದರ ತಾತ್ಪರ್ಯ, ದೇಶದಲ್ಲಿ [illegible] ಸರಕುಗಳು [illegible] ಅವರಿಗೆ ಎಷ್ಟು ಅವಶ್ಯಕತೆಯೋ [illegible] ಹಣವು [illegible]. [illegible] ನಮ್ಮ ಜನಾಂಗದ [illegible] ಮಿತ್ರನನ್ನಾಗಿ ಮಾಡಬಹುದು. [illegible] ಮುಂದುಗಾಣಿಕೆಯನ್ನು ಅವಲಂಬಿಸಿದೆ. ಆದರೆ ಆ ಹಣವು, (Inflation) [illegible] ಪದಾರ್ಥಗಳ ಬೆಲೆ ಏರುವಿಕೆ, [illegible] ವ್ಯತ್ಯಾಸ [illegible] ಕಾಲದಲ್ಲಿ ಹಣದಷ್ಟು [illegible] ಪದಾರ್ಥಗಳ ಅಭಾವ, ಆದುದರಿಂದ [illegible] ಕೊಳ್ಳುವವನ್ನು [illegible], ಆವಶ್ಯಕ ಪದಾರ್ಥಗಳ ಧಾರಣೆಯು [illegible] ಸರಕಾರದವರು [illegible] ಈ ನಿಯಂತ್ರಣವನ್ನು [illegible] ನಡೆದಿರುವ [illegible], ಈ ರೀತಿಯಾದ [illegible] ಸರಕಾರದವರು ಪ್ರಾರಂಭಿಸುವ ಹೋರಾಟದಲ್ಲಿ [illegible] ನಿಮ್ಮ ಕ್ಷೇಮದಷ್ಟು [illegible] ಸಹಾಯಮಾಡಬೇಕಾದುದು ಕೇವಲ ಆವಶ್ಯಕ.

ಇದಕ್ಕಾಗಿ ನೀವು ಮಾಡಬೇಕಾದ್ದು ಇಷ್ಟೇ —ನಿಮ್ಮಲ್ಲಿರುವ ಹೆಚ್ಚು ಧನವನ್ನು. ಆಭರಣಗಳು, [illegible], ಕಟ್ಟಡಗಳು, [illegible] ಸಾಮಾನುಗಳು [illegible] ಖರ್ಚುಮಾಡಬೇಡಿ. [illegible] ಅಂದರೆ [illegible] ಸರ್ಟಿಫಿಕೇಟ್ [illegible]ಗಳು, [illegible]ಗಳು, ಪೋಸ್ಟ್ ಆಫೀಸ್ ಸೇವಿಂಗ್ಸ್ ಬ್ಯಾಂಕುಗಳು, [illegible] ಪ್ರಕೃತ ಸನ್ನಿವೇಶದಲ್ಲಿ [illegible] ಯೋಗ್ಯವಾದ ಮಾರ್ಗಗಳು. [illegible] ಗವರ್ನಮೆಂಟ್ ಲೋನುಗಳು, ಮತ್ತು ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳು, [illegible] ಸುರಕ್ಷಿತವಾದ ಮಾರ್ಗಗಳು.

ನೀವು ಏನಾದರೂ ಕೊಳ್ಳುವುದಕ್ಕೆ ಅಂಗಡಿಗೆ ಹೋದಾಗೆಲ್ಲಾ, 'ಈ ಪದಾರ್ಥವು [illegible] ನನಗೆ ಅವಶ್ಯಕವೇ?' ಎಂಬ ಪ್ರಶ್ನೆಯನ್ನು ಹಾಕಿಕೊಳ್ಳಿ. ಈಗ ನೀವು ಮನಸ್ಸು ಗಟ್ಟಿಮಾಡಿ, ಪದಾರ್ಥಗಳನ್ನು ಕೊಳ್ಳದೇ ಇರುವುದರಿಂದ [illegible] ಕಷ್ಟಗಳನ್ನು [illegible] ಕೊಂಡದ್ದೇ ಆದರೆ, [illegible], ಹಣದ ಬೆಲೆಯು [illegible], ನಿಮ್ಮಲ್ಲಿ ಹಣವೂ ಉಳಿಯುವುದು

ಹಣವನ್ನು ಕೈಲಾದ ಮಟ್ಟಿಗೂ ಉಳಿಸಿರಿ.

ಉಳಿಸಿದ್ದನ್ನು ವಿವೇಕಮಾರ್ಗಗಳಲ್ಲಿ ವಿನಿಯೋಗಿಸಿರಿ.

ಇದು ರಾಷ್ಟ್ರೀಯ ಯುದ್ಧ ಮುಖಿವು ಭಾರತೀಯರ ಸಮಕ್ಷಮದಲ್ಲಿ ಮಾಡುವ ಅರಿಕೆ.

ASA 1111 KN

NOTICE.
UDIPI MUNICIPALITY.

Applications are invited for the post of a Secondary Grade Trained woman teacher on a scale of pay of Rs. 25-2/2-45 with a dearness allowance of Rs. 10/- per mensum. The vacancy is likely to be permanent. Applications to be made to the **Commissioner urgently.**

The Pangal Nayak Bank Limited.

(Incorporated in 1920)

Registered Office Court Road, UDIPI.

Branches at— Udipi, Mangalore, Katapadi, Kanhangad, Kinnigoli and Nileshwar, South Canara District

Discounting of demand and short term negotiable instruments for approved parties granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms acceptance of Fixed, Current, Savings Bank and Cumulative deposits and every other type of up to date Banking service is at the disposal of all the sections of the discreet public

For business proper please enquire at any one of our Offices

15th April 1944.

— ಮಕ್ಕಳನ್ನು ಹಡೆಯುವದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹರವೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೧೨ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:— ಹುಬ್ಬಳ್ಳಿ ಫಾರ್ಮಸಿ,— ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪುರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪುರ, ಚಿಕ್ಕೋಡಿಯಲ್ಲಿ:— ಕುಂಬಾರವಾಡಿ ಸ್ಟೋರ್ಸ. ದಾವಣಗೇರಿ:— ದಾವಣಗೇರಿ ಪ್ರೆಸ್ಸ್, ಆರ್, ಎಲ್, ಕಮಲದಾನಿ, ಕೆಮಿಸ್ಟ್, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,.... ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣಿ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:— ಗದಗ:- ಗದಗ ಫಾರ್ಮಸಿ, ಹುಬ್ಬಳ್ಳಿ:- ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:— ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೇಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ.

Ayurveda Oushadalaya GADAG.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷದಿಗಳು ದೊರೆಯುತ್ತವೆ. ಖ್ಯಾತಿ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕ ಹಾದ ಔಷದಿ ರವಾನ್ನಿಬಹುದು, ಉಡುಪಿ ಏಜಂಟರು:— ನವಭಾರತ ಬುಕ್ ಡಿಪೊ

The best preventive in epidemics of CHOLERA

"BHUVANENDRA"

CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:— ಡಾ. ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ ಶ್ರೀ। ಆರ್। ಎಸ್। ಶೆಣೈ, ರಥಬೀದಿ; ಡಾ। ಪಿ। ಜಿ। ಆಚಾರ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I M.: ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ. ಬೆಲೆ ೦—೧೦—೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು.

ಪ್ರೇಮಪ್ರವಾಹವು ಹೇಗೆ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮಪ್ರವಾಹ

ಸ್ವಾರಸವಾದ ೫ ಕತೆಗಳ ಸಂಗ್ರಹ ಬೆಲೆ ೦ ೬—೦

ಬಹಿರಂಗವಾಗಿ ಅಲ್ಲವಾದರೂ ಅಂತರಂಗವಾಗಿ ನೋಡತಕ್ಕ

ಆರ್ಟ್ ಚಿತ್ರಗಳು

ಹಲವಾರು ಸುಂದರಿಯರ ನೈಜಚಿತ್ರಗಳ ಕಟ್ಟು. ಬೆಲೆ ೦—೬—೦

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಕುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ ೧—೮—೦

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. **ಬೆಲೆ: ೦—೧೨—೦**

ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ನೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)



೮ ಔನ್ಸಿನ ಬಾಟ್ಲಿಗಳು. ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ,

ಎಂ ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd. No. M 3618.

ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6.

Estd. 1921 ಸ್ಥಾಪನೆ.

NAVAYUGA ನವಯುಗ

ವರ್ಷ ೨೪] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. [Vol. 24
ವಾರ ೧೨] Founder SRI A. B. SHETTY. [No. 12

ಉಡುಪಿ ● 23—11—1944 ● ಮಂಗಳೂರು

ದಿ ಜುಪಿಟರ್
ಜನರಲ್ ಇನ್ಶೂರೆನ್ಸ್
ಕಂಪೆನಿ, ಲಿ., ಬೊಂಬಾಯಿ.
ವಿಮೆಯ ಏಜಂಟರಾಗಬೇಕೇ?
-ಹಾಗಾದರೆ ಕೂಡಲೇ-
ಪಿ. ಡಿ. ನಾಯಕ್, ಉಡುಪಿ.
ದಕ್ಷಿಣ ಕನ್ನಡದ ಚೀಫ್ ಏಜಂಟ್.
-ಇವರಿಗೆ ಬರೆಯಿರಿ-
1 ಕೋಟಿಗೆ ಮಿಕ್ಕಿ ವ್ಯವಹಾರ
ಈ ವರುಷವೇ ರಜತೋತ್ಸವ!
The Jupiter General Insurance Company Ltd

ಅಂತರಂಗ
ಅಖಿಲ ಕರ್ನಾಟಕದ ಹೊಸ
ಮಾದರಿಯ ಸಚಿತ್ರ
ವಿನೋದ ವಾರ ಪತ್ರಿಕೆ.
ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ. 0—1—6

Transact with
The Vijaya Bank Ltd.
H. O. MANGALORE.
Branches all over the District and in Bombay city,
For all kinds of Banking business.
ದಿ ವಿಜಯ ಬೇಂಕ್
ಲಿಮಿಟೆಡ್,
ಹೆಡ್ ಆಫೀಸು: ಮಂಗಳೂರು.
ಜಿಲ್ಲೆಯ ಎಲ್ಲಾ ಕಡೆಗಳಲ್ಲಿ ಮತ್ತು ಮುಂಬಾಯಿ ನಗರದಲ್ಲಿ ನಮ್ಮ ಶಾಖೆಗಳು ಎಲ್ಲಾ ತರದ ಬೇಂಕಿಂಗ್ ವ್ಯವಹಾರಗಳು ನಡೆಸಲ್ಪಡುವುವು.
"We are glad to announce that the Canara Bank Ltd., are our Clearing agents at Bombay'.
ದಿ ಕೆನರಾ ಬ್ಯಾಂಕ್ ಲಿಮಿಟೆಡ್‌ಯವರು ನಮ್ಮ ವಿಜಯಾ ಬ್ಯಾಂಕಿನ ಕ್ಲಿಯರಿಂಗ್ ಏಜಂಟರಾಗಿರುತ್ತಾರೆಂದು ತಿಳಿಸಲು ಸಂತೋಷಪಡುತ್ತೇವೆ.
M. M. Bhandary,
Agent Bombay Branch.

BAG ON HIS HEAD

If you saw any passenger sitting in a train with his bag on his head, you will laugh your sides out because good arrangements are made in the train to keep the luggage.

One worrying about one's future and that of one's family is like the passenger with his bag on the head because fine arrangements to ensure them through insurance are easily available.

THE CANARA MUTUAL ASSURANCE CO., LTD.,
UDIPI. (S India)

ಅಮೃತಾಂಜನ
ತಲೆನೋವು, ನೆಗಡಿ, ನೋವು, ಉಳುಕು, ಕಜ್ಜಿ, ಊತ, ಹಲ್ಲು ನೋವು ಮೊದಲಾದವುಗಳಿಗೆ ... ಮಾರಲ್ಪಡುತ್ತದೆ.
PEGD.
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತಾ.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.
ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪ್ರೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಿಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.
The Moolky Bank Ltd.,
Moolky, S K.

ಕ್ರೌನ್
ರಬ್ಬರ್ ಸ್ಟ್ಯಾಂಪ್ ಕಂಪೆನಿ
18 ಬಲ್ಮಠ ರಸ್ತೆ, ಮಂಗಳೂರು
ರಬ್ಬರ್ ಮೊಹರು ಸ್ಕ್ರೀನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವುವು.
Crown Rubber Stamp Co.
18 Balmat Road, MANGALORE
Approved firm by the Govt. of Mysore
Certified by the Agent of the Govt. of India in Ceylon. ESTD 1906

THE
Vijaya Stores, Ltd.,
Registered Head Office: COONDAPUR, S K
(Incorporated under the Indian Companies Act, 1913)
ON 28—10—44
Liabilities of Members Limited.

Authorised Capital Rs. 3,00,000
SHARES VALUES
50 (A) ordinary Shares of Rs. 1,000 each
200 (B) ordinary Shares of Rs. 500 each
400 (C) ordinary Shares of Rs 250 each
500 (D) ordinary Shares of Rs. 100 each
(FULLY PAID-UP)

BOARD OF DIRECTORS:
1. Sri. A. S. Vittal Shetty, Merchant & Landlord, Coondapur (*Managing Director*)
2. Sri Haladdy Monappa Shetty, Timber Merchant & Landlord Coondapur.
3. Sri Mangalore Jarappa, President & Managing Director The Badavara Bhandhu Printing Press, Ltd., Managalore & Sri Narayan Guru Bank, Ltd., Mangalore. (*Chairman*)
4. Sri K Thimappa Shetty, Merchant, Coondapur.
5. Sri A. Mutheya Shetty, Landlord, Coondapur,
6. Sri. B Narsappa, Editor, Printer & Landlord, Mangalore.
7. Mr. Ignatius Menezes, Manufacturers' Representative, Coondapur.

LEGAL ADVISER:
S. S. Kolkebail B. Sc., LL. B., Advocate, Coondapur.

BANKERS:
Sri Narayan Guru Bank, Ltd.,

The only Company of its kind in the Coondapur Taluk. The Company enjoys the benefit of Trade permits, licences and concessions. Place your orders with us for all your daily necessities.

K THIMAPPA SHETTY, *Manager* A S VITTAL SHTTY, *Managing Director*
Coondapur.
28-10-44

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ
ಬಾಲಚಂದ್ರ
ಇದೀಗ ನಾಲ್ಕನೇ ಸಂಪುಟ ಆರಂಭವಾಗಿದೆ
ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ
ವಾರ್ಷಿಕ ಚಂದಾ
ರೂ 1—8—0 ಮಾತ್ರ
ಹೆಚ್ಚಿನ ವಿಚಾರಕ್ಕೆ ಬರೆಯಿರಿ
ಬಾಲಚಂದ್ರ, ಉಡುಪಿ.

ಮುಟ್ಟಾಗುವಿಕೆ
ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ—"ಕುಮಾರಿ" (Govt Regd) ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ 3/-
ಕ್ಷಿಪ್ರವಾದ ಕೇಸುಗಳಿಗೆ ರೂ.5, (ವಿ. ಪಿ. 12 ಆಣೆ ಅಲ್ಲದೆ) Mrs P: DEVEE.
P. B. 5. (N) Tollygunge, Calcutta,
ಸ್ಟಾಕಿಸ್ಟ್: ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

Decorate your home with
Life-like Oil Painting
of those dear and near to you
M. S. Shirale,
MODERN STUDIO,
UDIPI.

CHAMPAE'S
Snow & Castrex
Sole Distributers for (India.)
Sukhananda Stores
Santhekatte, UDIPI, S. K.

ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾನುಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಯಾಂಜಿ ವ್ಯಾಪಾರಾಯರ್,
ರಥಬೀದಿ, ಉಡುಪಿ.

ವಾರದ ಕಥೆ

ಮಾಲಿನೀ

ಕತೆಗಾರರು ಶ್ರೀ ವಿ ಎಸ್. ಕಾರಿಯಪಳ್ಳ, ಕಾಸರಗೋಡು.

ಚಿತ್ರವನ್ನು ಬರೆದು ಪೂರೈಸಿರಲಿಲ್ಲ ಶಶಿಧರನು ನಿಡುನೀಳವಾಗಿ ಉಸಿರುಗರೆದನು ಮಾಲಿನಿ ಚೆಲುವಿನ ಮಾರ್ಬಿಂಬವಾಗಿದ್ದಳು ಅದರ ಪಡಿ ಚಿತ್ರದಲ್ಲಿ ಬಣ್ಣ ಬಣ್ಣವಾಗಿ ಮೂಡಿತ್ತು. ಅದಕ್ಕೆ ಇನ್ನೂ ಒಂದಿಷ್ಟು ಮೋಡಿಯನ್ನು ಬೆರಸಲಿದ್ದನು ಅದರಲ್ಲಿ ಏನೋ ಕಾಣದೆ ಹೋದ ಚೆಲುವಿನ ಕಣವೊಂದು ಬಾಕಿಯಾಗಿತ್ತು ಅದನ್ನು ಹೇಗೆ ಮೂಡಿಸಲೆಂದು ಅವನು ತಿರುಗಿ ನಿಟ್ಟಿಸಿ ನೋಡಿದನು

'ಮಾಲಿನಿಗೆ ಕೆಂಪೂಗೆವ ಹೂವಿನ ಮುಗುಳು ನಗೆ ಬೀರಲು ತಿಳಿಯದು!' ಶಶಿಧರನ ಮನ ಜೋಲ ಬಿತ್ತು, ತಿರಗಿ ತೂಗಿತು ನರ್ತಿಸಿತು 'ಇಲ್ಲಿ ಆಕೆ ತಿಳಿನಗೆಯ ಕದಿರನ್ನು ಕಳ್ಳಿಸುವಂತೆ ಒಣ್ಣಿಸಬೇಕು,

'ಮಾಲನೀ' ಶಶಿ ಇಳಿದನಿಯಲ್ಲಿ ಕೂಗಿದ ಆಕೆ ಕಿಟಕಿಯ ಹೊರಗೆ ತಲೆ ಹಾಕಿ ದೂರದ ಬಯಲನ್ನು ಕಣ್ಣಿಟ್ಟು ನೋಡುತ್ತಿದ್ದಳು ತಿರಿಗಿ ಕರೆದನು ಆಕೆ ಮೊಗ ತಿರವಿದಳು ತುಸ ಸಮಯದಿಂದ ಈಚೆಗೆ ಆಕೆಯ ಎದೆಯಲ್ಲಿ ಹೆಚ್ಚು ಆಳವಾದ ಗುಟ್ಟಿನ ಕದಿರು ಒಂದು ಅಡಗಲು ಎಡತಾಕುತ್ತಿತ್ತು, ಅಲ್ಲಿ ಅದು ಕುದಿಯುತಿತ್ತು ಅದನ್ನು ಹೊರಗೆಡವಿ ಶಶಿಗೂ ಅದರ ಬಣ್ಣವನ್ನು ಕಾಣಿಸಬೇಕೆಂದು ಆಕೆಯ ಆಸೆ ಆದರೆ ಅವನಿನ್ನು ಹನಿಸುವನೋ ಎಂದು ಆಕೆಗೆ ಸಂದೇಹ, ಆಕೆ ಹೆದರಿದಳು ಬೇರ ಹೇಗಾದರೂ ಇರಲಿ, ಅದನ್ನು ಹೇಳಿ ತಿಳಿಸುವ ದಿನ ಹತ್ತಿರ ಹತ್ತಿರ ಒದಗೀತು ಎಂದು ಆಕೆ ಎಣಿಸಿದಳು, ಮನದ ಆಟವನ್ನು ತಡೆದ. ನಿಲ್ಲಿಸಿದಳು ನಿಟ್ಟುಸಿರೊಂದು ಆಕೆಯನ್ನು ಹೇಳದ ಕೇಳದೆ ಹೊರಟು ಬಂತು ಅದರೊಂದಿಗೆ ಅದೇ ಆಸೆಯ ಕದಿರು ಆಕೆಯ ಎಷೆಯ ಒಳಗಿನ ಸೆರೆಯನ್ನು ಕಡಿದು ಮೋರೆಯಲ್ಲಿ ಮಿಂಚಿತು ಆಕೆಯ ಗಂಟಲು ಆರಿಹೋಯಿತು

'ಶಶೀ!'

ಆಕೆಗೆ ಮುಂದ ಮಾತನ್ನು ಹೊರಗೆ ಡಹಲಾಗಲಿಲ್ಲ ಆತನ ಮೋರೆಯನ್ನು ನೆಟ್ಟ ಕಣ್ಣಿನಿಂದ ನೋಡ ತೊಡಗಿದಳು ಕಣ್ಣಿನ ನೋಟ ದಣಿದು ಕಂಬನಿ ಸೋರಿತು. ಮಾಲಿನಿ ಅಳುವಳೇನು? ಶಶಿ ತನ್ನ ತಾನೇ ಕೇಳಿಕೊಂಡನು ಅದರ ಗೊತ್ತು ಅವನಿಗೆ ಆಗಲಿಲ್ಲ.

'ನೀನು ಯಾಕೆ, ಅಳುತ್ತೀಯಾ?' ಶಶಿ ಕೇಳಿದನು ಆಕೆಯ ಮೋರೆ ಸಣ್ಣದಾಯಿತು ಶಶಿ ಮತ್ತೆ ಒತ್ತಿ ಕೇಳಲಿಲ್ಲ.

ಕೆಲವು ತಿಂಗಳು ಮಾಸಿಹೋದುವು ಸಂಜೆಯ ಹೊತ್ತು. ಮಾಲಿನಿ ಮನೆಯ ಮುಂದಿನ ತೋಟದಲ್ಲಿದ್ದಳು. ಆಕೆಯ ಮನಸ್ಸಿಗೆ ಒಂದಿಷ್ಟಾದರೂ ನೆಮ್ಮದಿ ಇರಲಿಲ್ಲ ಆಕೆ ಯೋಚಿಸಿದಳು. 'ಶಶಿ ನನಗೆ ಮೆಚ್ಚಿದಾನೆ, ಅವನೊಲವು ಎನ್ನು ಸವಿಯಾಗಿದ್ದೀತು ಆದರೆ? ..ನನ್ನ ಗುಟ್ಟು ಅವನಿಗೆ ಅರಿತುದಾದರೆ? .. " ಆಕೆ ನಡುಗಿದಳು

ಮುಂಬಾಗಿಲಲ್ಲಿ ಸದ್ದಾಯಿತು ಆಕೆಯ ಮನವು ಎಲ್ಲಿಯೋ ದೂರದ ನೋವಿಗೆ ಹೋಗಿತ್ತು. ಹೊರಗೆ ಯಾರೋ ಬಂದಿದ್ದರು ಆಕೆಯ ತಿಳಿಯಲಿಲ್ಲ.

ಒಂದವನು ತೋಟದಲ್ಲಿ ಅಡ್ಡಾಡುತ್ತಿದ್ದ ಮಾಲಿನಿಯು ಬಳಿಗೆ ಬಂದನು. ಆಕ ನೋಡಿದಂತಿರಲಿಲ್ಲ ಅವನು ಕೇಳಿದ 'ರಾಮ ಕುಮಾರರಮನೆ ಇದೇ ಅಲ್ಲವೇನು?' ಆಕೆಯನ್ನು ಬಡಿದೆಬ್ಬಿಸಿದಂತಾಯಿತು ಎರಡು ವರುಷಗಳ ಹಿಂದಯೇ ಆಕೆಯ ತಂದೆಯಾದ ರಾಮಕುಮಾರರು ತೀರಿಕೊಂಡಿದ್ದರ ತೀರಿಹೋದ ತನ್ನ ತಂದೆಯನ್ನು ನೋಡಬಂದವರು ಯಾರು? ಆಕೆಯನ್ನು ದಂಗುಬಡಿಸಿತು ಮೇಲಿನ ಮಾತು

ಅವನು ಮತ್ತೆ ಹೇಳಿದ 'ಅವರು ಇಲ್ಲಿಯೇ ಇದ್ದರಲ್ಲ ಮೊದಲು?' ಮಾಲಿನಿಗೆ ಈ ಹೊಸಬನನ್ನು ನೋಡಿ ಅಚ್ಚರಿಯಾಯಿತು. ಹೇಗೆ, ಎರಡು ವರುಷದ ಹಿಂದೆ ತೀರಿಹೋದ ತನ್ನ ತಂದೆಯ ನೆನಪು ಮಾಡಿಕೊಂಡು, ನಾಚಿಕೆಯಿಲ್ಲದವನಂತೆ ಹೆಣ್ಣಿನ ಸಂಗಡ ಮಾತಿಗೆಳಸುವನಲ್ಲ ಎಂದೆಣಿಸಿದಳು ಆದರೆ, ತೀರ ಹೊಸಬನಾದುದರಿಂದ ನೋಡುವ ಎನಿಸಿತು ಅವಳೆಂದಳು 'ಅವರು ಎರಡು ವರುಷಗಳಾದುವು ಇಹಲೋಕವನ್ನು ಬಿಟ್ಟು '

ಹೊಸಬನು ಕಲ್ಲಿನಂತೆ ನಿಂತುಕೊಂಡನು ಅವನ ಬಾಯಿಯಿಂದ ಮಾತೇ ಹೊರಡಲಿಲ್ಲ 'ಹಾಗಾದರೆ?. . .'

ಇಬ್ಬರೂ ಪಕಪಕನೆ ಒಬ್ಬರನ್ನೊಬ್ಬರು ನೋಡಿಕೊಂಡರು.

ಅವನು ಮತ್ತೆ ಕೇಳಿದನು, ತುಸು ನಾಚುತ್ತ 'ಮಾಲಿನೀ ಅವಳು ಎಲ್ಲಿಗೆ ಹೋದಳು? ನಿಮಗೆ ಅವರ ಇರವು ಗೊತ್ತೇನು?'

ಆಕೆ ಅಚ್ಚರಿಗೊಂಡಳು ಮಾಲಿನಿಯನ್ನು ಅರಿತಿದ್ದ ಈ ಹೊಸಬನಾರು? ಆಕೆ ಬೆಡಗಿನಿಂದ ತಲೆಯೆತ್ತಿ ಮಾತನಾಡಿದಳು ಮೊಗದಲ್ಲಿ ತಾನೆಂಬ ಕೆಚ್ಚು ಹೊಳೆದಿತ್ತು 'ಮಾಲಿನಿ ಎಂದರೆ ನಾನೇ!'

(೧೧ನೇ ಪುಟ ನೋಡಿರಿ)

ಎಲ್ಲವೂ ಬಹಳ ಕಷ್ಟದಾಯಕವಾಗಿ ಇನ್ನು ಮನೆಯ ಲ್ಲೇ ಇರುವ ಹಾಗಿತ್ತು

ಇಂದು ಅತ್ಯವಸರ ಸಾಮಾನುಗಳನ್ನು ಪಟ್ಟಿಗೊಳಿಸಿ ರವಾನಿಸಬೇಕು, ಆದರಿಂದಲೇ ಪ್ರಯಾಣದಲ್ಲಿ ಜನರಿಗೆ ಸೌಕರ್ಯವಿಲ್ಲ,
ಅನಾವಶ್ಯಕವಾದ ಪ್ರಯಾಣವನ್ನು ನಿಲ್ಲಿಸಿರಿ.

ಈ ಕುಟುಂಬದ ಗತಿಯೇನಾಗುವುದೋ! ಮುಂದಿನ ವಾರದ ಪತ್ರಿಕೆಯಲ್ಲಿ ನೋಡಿ.

AAR 849K

ಯಾರನ್ನೇ ಆದರೂ ಭೂತ ಬಡಿದವನಂತೆ ನೋಡುತ್ತಾ ನಿಲ್ಲುವದು-ನೋಡುತ್ತಾ ಹೋಗುವದು ಕೂಡಾ-ಶಿಷ್ಟ ಸಂಪ್ರದಾಯಕ್ಕೆ ವಿರುದ್ಧವೆನ್ನುತ್ತಾರೆ. ಇದು, ಅನ್ಯರ ಮನೇವಾರ್ತೆಗಳ ಮಾತಾಡಬಾರದು ಎಂಬಂತಹ ಒಂದು ನೀತಿ. ನನ್ನ ಅಭಿಪ್ರಾಯದಲ್ಲಿ ಇದೊಂದು ಸಾಧುವಾದ ನಿಯಮವಲ್ಲ. ಒಬ್ಬರಿನ್ನೊಬ್ಬರ ಮರ್ಯಾದೆಯುಳಿಸಿಕೊಡಬೇಕೆಂಬ ನಿರ್ವಾಣವಾಡಿರುವ ನಿರ್ಬಂಧ ಮಾತ್ರ. ಮನೆಯ ಸ್ಥಿತಿಗತಿ ಚೆನ್ನಾಗಿರುವವರಿಗೆ ತಮ್ಮ ಮನೇವಾರ್ತೆಯೆಂದರೆ ಬಹಿರಂಗವಾಗಬೇಕಾದ ಒಂದು ಹೆಗ್ಗಳಿಕೆಯ ಸಂಗತಿಯಾಗಿರುತ್ತದೆ. ಅಂತಹ ಉತ್ತಮ ಸ್ಥಿತಿಯಲ್ಲಿಲ್ಲದವರಾದರೂ ತಮ್ಮದನ್ನು ಮುಚ್ಚಿಟ್ಟುಕೊಂಡು ಪಡೆಯುವ ಲಾಭವೇನು, ಎಂದು ನನ್ನ ಪ್ರಶ್ನೆ. ಈ ವಾದ-ಬಹಿರಂಗ ಬಂಡಾಯವು ನನ್ನ ಮರ್ಜಿಯ ಸಮರ್ಥನೆಗಾಗಿಯೇ ಎಂಬ ನನ್ನ ಗುಟ್ಟನ್ನು ನಾನೂ ಮುಚ್ಚಿಕೊಳ್ಳಲಾರೆ. ಮೇಲಿನ ವಾದವೇಕೆಂದರೆ ಸ್ವತಃ ನಾನು ಶಿಷ್ಟ ಸಂಪ್ರದಾಯದವನಲ್ಲ; ಎಲ್ಲರನ್ನೂ ಎಲ್ಲವನ್ನೂ ನೋಡುತ್ತಾ ಹೋಗುತ್ತೇನೆ. ಅದ ನನ್ನ ಹುಟ್ಟು ಸ್ವಭಾವ. ನೀವು ಈ ಸ್ವಭಾವದವರಲ್ಲವಾದರೆ ಹಾಗೆ ಯಾರನ್ನಾದರೂ ಭೂತಬಡಿದವನಂತೆ ನೋಡುವದು ನಿಮಗೆಷ್ಟು ಕಷ್ಟವೋ ನೋಡದಿರುವದು ನನಗಷ್ಟೇ ಪ್ರಯಾಸ. ಈ ಮಾತಿನಲ್ಲೇ ನನ್ನ ನೋಟದಲ್ಲಾವ ಉದ್ದೇಶವೂ ಇಲ್ಲವೆಂಬ ಆಶ್ವಾಸನೆಯನ್ನು ಆಸುಪಾಸಿನವರು ಪಡೆಯಲಾಗುತ್ತದೆ. ತಮ್ಮ ಮೇಲೆ ಬೆಳಕು ಬಿದ್ದಂತೆ ಈ ನೋಟವೂ ಬಿದ್ದಿತೆಂದು ಅವರು ನೆನಸಬೇಕು. ಅನ್ಯಥಾ ಭಾವಿಸಬೇಕಾದರೆ ಆ ಭಾವನೆಗೊಂದು ಉದ್ದೇಶವಿರಬೇಕು. ಈ ತನಕ ಹೇಳಿದುದನ್ನೇ 'ನನ್ನದು ನೋಟಮಾತ್ರ, ಮಾಟವಲ್ಲ' ಎಂಬ ಒಂದೇ ವಾಕ್ಯದಲ್ಲಿ ಮತ್ತೊಮ್ಮೆ ಹೇಳಿ, ಈಗ ನೋಡಿದುದನ್ನು ಹೇಳಲಾರಂಭಿಸುತ್ತೇನೆ.

× × ×

ಮನುಷ್ಯ—ಮರ್ಜಿ

ಸ್ವಭಾವ ಚಿತ್ರಗಳು.

೧. ಹೊಗೆಬತ್ತಿ ರಂಗಣ್ಣ

(ಚಿತ್ರಿಸುವವರು—'ಮಟ್ಪಾರ್')

●

('ಲೌಕಿಕ' ಎಂದರೆ ಮನುಷ್ಯ ವರ್ಗ ಮತ್ತು ಅದರ ಮರ್ಜಿಗಳ ಮೊತ್ತಕ್ಕಿಟ್ಟಿರುವ ಹೆಸರು. ಈ ಭಾಗದಲ್ಲಿ ಬರಲಿರುವದು ಅದೇ—ಬಿಡಿ ಬಿಡಿಯಾಗಿ ಲೋಕದ್ದೇ ಚಿತ್ರ. ಆದ್ದರಿಂದ ಲೋಕದುದ್ದಕ್ಕೂ ಈ ಬರೆಹ ಸರಪಣಿ ಗೊಣಸುಗೂಡುತ್ತಾ ಹೋಗಬಹುದೆಂದು ನಮ್ಮ ನಿರೀಕ್ಷೆ. ಯಾಕೆಂದರೆ ಇದ್ದ ಎಲ್ಲಾ ಮನುಷ್ಯರಿಗೂ, ಎಲ್ಲಾ ಮರ್ಜಿಗಳಿಗೂ ಇಲ್ಲಿ ಪ್ರವೇಶವಿದೆ; ಸಮಾರಾಧನೆಯಲ್ಲಿ ಬೇಧಮಾಡುವಂತಿಲ್ಲವೆಂದು ಲೇಖಕರು ಪ್ರತಿಜ್ಞೆ ಹಾಕಿಕೊಂಡಿದ್ದಾರೆ ಅಂತೂ ಇದು ಲೋಕದ ಚಿತ್ರ—ಯಾರೇ ಆದರೂ ಇದನ್ನಾಕ್ಷೇಪಿಸಿ, ಅಥವಾ ತಮ್ಮ ಮೇಲೆ ಆವಾಹನೆ ಮಾಡಿಕೊಂಡು ಲೋಕ ಬಾಹಿರರಾಗಬಾರದು. ಇದರಲ್ಲೇನಾದರೂ ಇದೆಯೆನ್ನುವಿರಾ?—ಇಡೀ ಲೋಕಕ್ಕೇನೇ ಇದೆ; ಇಲ್ಲವಾದರೆ ಯಾರಿಗೂ ಇಲ್ಲ.

—ಸಂ)

ರಂಗಣ್ಣನನ್ನು ನಾನು ದಿನಂಪ್ರತಿ ಸಂಜೆ ಮುಂಜಾನೆ ನೋಡುತ್ತಿದ್ದೇನೆ-ನನ್ನ ಮತ್ತು ಅವನ ಆಫೀಸುಗಳ ಕೆಲಸವಾರಂಭವಾಗುವ ಮತ್ತು ಮುಕ್ತಾಯವಾಗುವ ಸಮಯವೊಂದೇಯಾದ್ದರಿಂದ ಕೆಲವು ರೂಢಿಗಳು ಮನುಷ್ಯರನ್ನು ಪರಸ್ಪರ ಒಂದುಗೂಡಿಸುವಂತೆ, ಲೋಕದ ಇನ್ನಾವುದಕ್ಕಾದರೂ ಅಂತಹ ಸಂಧಾನ ಹೂಡಲಾಗುವದಿಲ್ಲ. ನಾವಿಬ್ಬರೂ ಹೆಚ್ಚಾಗಿ ಆಫೀಸು ಸಮಯಕ್ಕೆ ಸರಿಯಾಗಿಯೇ ಹೊರಡುವವರು ಅವನದು ಮತ್ತು ನನ್ನದು ಪರಸ್ಪರ ವಿರುದ್ಧ ದಿಕ್ಕಿನಲ್ಲಿರುವ ಆಫೀಸುಗಳಾದ್ದರಿಂದ ಸಂಜೆ ಮುಂಜಾನೆ ರಸ್ತೆಯಲ್ಲಿ ಮುಖಾಮುಖಿಯಾಗುವ ಸಂದರ್ಭ ನಮಗೆ ತಪ್ಪಿದುದಲ್ಲ. ಹೋಗಿಬರುವ ರಸ್ತೆಯ ಕಟ್ಟೋಣಗಳಂತೆ ನಾನು ದಿನಂಪ್ರತಿ ಕಾಣಲೇ ಬೇಕಾದ ಬೇರೆ ಕೆಲವರೂ ಇದ್ದಾರೆ. ಆದರೆ 'ಇದ್ದಾನೋ' ಎಂದು ಪ್ರತಿಬಾರಿಯೂ ನಾನು ಆತುರದಿಂದ ನೋಡುತ್ತಾ ಬರುವ ವ್ಯಕ್ತಿಯೆಂದರೆ ರಂಗಣ್ಣ [illegible] ಗವ ಹೊಸಬನಾಗಿಯೇ ಕಾಣುತ್ತಿದ್ದಾನೆ. ಎಲ್ಲರೂ ಅವನನ್ನು ನಿದ್ದೆಗಣ್ಣಿನಿಂದ ನೋಡುತ್ತಿರುವಾಗ, ಅವನ ಅಂತ್ಯದ ವರೆಗಿನ ಎಲ್ಲಾ ಚಲನವಲನಗಳನ್ನೂ ನೋಡುತ್ತಿರಲಾಗುವಂತೆ ಅವನ ಹಿಂಗಡೆಯಲ್ಲೇ ಕಳುಹಿಸಲಾಗುವ ಇನ್ನೆರಡು ಕಣ್ಣುಗಳು ನನಗಿರಬೇಕು ಎಂದು ನನ್ನ ಆಸೆ.

ಮೊದಲ ನಾಲ್ಕಾರು ಬಾರಿಯ ವರೆಗೂ ನಾನು ನೋಡುತ್ತಿದ್ದುದು ರಂಗಣ್ಣನನ್ನು ಮಾತ್ರ, ಅವನ ವೈಶಿಷ್ಟ್ಯವನ್ನಲ್ಲ. ಮನುಷ್ಯನ ಊಹೆ ಮತ್ತು ಉಡುಪಿನೊಳಗೆ ಒಂದು ರೀತಿಯ ಹೋಲಿಕೆಯಿದೆ. ತನ್ನ ಉಡುಪು ಕೊಳೆಯಾಗಬೇಕೆಂದು ಯಾರೂ ಬಯಸುವದಿಲ್ಲ. ಆದರೆ ಒಬ್ಬನ ಅಂಗಿಯ ಬೆನ್ನಿಗೆ ಸ್ವಲ್ಪ ಸ್ವಲ್ಪವೇ ಒತ್ತಿದ ಕೊಳೆ ಕೊನೆಗೊಮ್ಮೆ 'ಇಸ್ತ್ರೀ' ಎನ್ನುವಷ್ಟು ದಪ್ಪಗಟ್ಟಿಹೋಗುತ್ತದೆ. ಊಹೆಯೂ ಹಾಗೇನೇ-ನಾವು ಊಹಿಸದಿದ್ದರೂ ಆಗಾಗ ತಾನಾಗಿ ಊಹೆಗೆ ತಾಗುತ್ತಾ ಹೋದ ಒಂದು ವಿಷಯವು ಕೊನೆಗೊಮ್ಮೆ ಅಲ್ಲಿ ಪೂರ್ತಿಯಾಗಿ ಮಾಡಿಕೊಳ್ಳುತ್ತದೆ. ಹಾಗೇನೇ ನಾಲ್ಕಾರು ಬಾರಿ ಕಾಣುವಷ್ಟರಲ್ಲಿ 'ರಂಗಣ್ಣ'ನ ಬೀಡೀ ವೈಶಿಷ್ಟ್ಯ' ನನ್ನ ಮನಸ್ಸಿಗೆ ಹೊಳೆದುಹೋಯಿತು.

'ತುಟಿಮೀರಿದ ಹಲ್ಲು' ಎಂಬಂತೆ ಅವನ ಬಾಯಿಯಲ್ಲಿ ಬೀಡಿಯಿಲ್ಲದ ಕ್ಷಣವಿಲ್ಲ. ಕಣ್ಣಲ್ಲೊಂದು ವಿಧದ ಪ್ರಕಾಶ-ಮುಖದಲ್ಲಿ ಬಂದಲ್ಲದಿದ್ದರಿನ್ನೊಂದು ವಿಧದ ಭಾವ-ಇಷ್ಟನ್ನು ನಾವು ಯಾರಲ್ಲಾದರೂ ಯಾವಾಗಾದರೂ ಕಾಣಲೇ ಬೇಕು. ರಂಗಣ್ಣನನ್ನು ಕಂಡಾಗಲೆಲ್ಲಾ ಇವುಗಳ ಜತೆಗೆ ಬಾಯಿಯಲ್ಲೊಂದು ಬೀಡಿಯನ್ನೂ ಕಾಣದೆ ಉಪಾಯವಿಲ್ಲ. ಬಹುಕಾಲದಿಂದ ಕಾಣುತ್ತಿದ್ದೇನೆ-ಆದರೆ ಅವನನ್ನು ಮಾತ್ರ ಕಂಡು ಅವನ ಹೊಗೆ ಕಾಣದಿದ್ದ ಸಂದರ್ಭ ಪ್ರಾಯಶಃ ಇದು ವರೆಗೆ ಒಮ್ಮೆಯಾ ಎರಡು ಬಾರಿ ಮಾತ್ರ. ಈ ಸಂದರ್ಭಗಳಲ್ಲಿ ಅವನ ಬಾಯಿಯಲ್ಲಿ ಹೊಗೆಯೇಳದಿದ್ದರೆ ಮುಖದಲ್ಲೇಳುತ್ತಿತ್ತು; ಬೇರಾವ ಭಾವವೂ ಇಲ್ಲದೆ ಅದು ಬುಸುಗುಟ್ಟುತ್ತಿತ್ತು ಶವದ ಮುಖವೆನ್ನಲಾಗದಂತೆ. ರಂಗಣ್ಣ, ಬೀಡಿದರೂ ಬೀಡಿಸಿಕ್ಕದ ಬರಗಾಲಕ್ಕೊಳಗಾಗಿದ್ದಾನೆ ಎಂದು ಇಂತಹ ಸಂದರ್ಭಗಳಲ್ಲಿ ಊಹಿಸಬೇಕು. ನಾನೊಬ್ಬ ಚಿತ್ರಗಾರನೆನ್ನಿ; ನನ್ನಿಂದ ದೊಡ್ಡ ದೊಡ್ಡ ತಪ್ಪುಗಳಾಗುವವುದೆಂಬುದನ್ನು ಒಪ್ಪಿಕೊಳ್ಳುತ್ತೇನೆ ಈಗ ರಂಗಣ್ಣನ ಚಿತ್ರ ಬಿಡಿಸುತಿದ್ದೇನೆ. ಪ್ರಮಾದದಿಂದ ಅವನ ಒಂದು ಕಣ್ಣು ಅಥವಾ ಒಂದು ಕೈಯನ್ನು ಚಿತ್ರಿಸದೇನೇ ಬಿಟ್ಟರೂ, ಅದು ರಂಗಣ್ಣನೇ ಎಂದು ಸಾಧಿಸಿ ಇಲ್ಲಿವೇ ಕ್ಷಮೆ ಕೇಳ ಬಹುದು. ಆದರೆ ಅವನ ಬಾಯಿಯ ಬೀಡಿಯನ್ನು ಬರೆಯಲಿಲ್ಲವಾದರೆ ನನ್ನ ಕೆಲಸ ಪೂರ್ತಿ ಕಳೆದುಹೋದಂತೆಯೇ; ಆಗ ನನಗೆ ರಂಗಣ್ಣನ ಅಂಗಲೋಪವಾಡಿದ ದೋಷವಷ್ಟೇ ಅಲ್ಲ, ಪ್ರಾಣಾಪಹಾರವಾಡಿದ ಪಾಪವೇ ಇದೆ.

ಹಲವು ಸನ್ನಿವೇಶಗಳಲ್ಲಿ, ಅತಿ ವಿಲಕ್ಷಣವಾಗಿ ನನಗೆ ರಂಗಣ್ಣ ಸ್ಮರಣೆ ಬರುವದಿದೆ. 'ದಿನಕ್ಕರ್ಧ ಸೇರು ಪಡಿಧಾನ್ಯ, ಅದರಲ್ಲೊಂದು ಪಾವು ಅಕ್ಕಿ, ಒಂದು ಪಾವು ಗೋಧಿ' ಎಂದು ಆಹಾರಾಧಿಕಾರಿಗಳ ಡಂಗುರ ಹೊಡಿಸುವಾಗ ನನ್ನ ತಲೆಯಲ್ಲಿ ಮೂಡುವದು ಏತದ ಹಗ್ಗ ಹಿಡಿಯುವ ರೈತ ಬದುಕಿಯಾನೇ ಎಂಬ ಭೀತಿಯಲ್ಲ-ಹೀಗೇನೇ 'ದಿನಕ್ಕಾರು ಬೀಡಿ. ಆ ಪೈಕಿ ಮೂರು ಹೊಗೆಬತ್ತಿಯದು, ಮೂರು ಇತರ ಮಿಶ್ರಣದ್ದು' ಎಂಬ ಕಂಟ್ರೋಲ್ ಬಂದರೆ ರಂಗಣ್ಣ ಬದುಕಿಯಾನೇ ಎಂಬ ಪ್ರಶ್ನೆ. ಅಲ್ಲಲ್ಲಿಯ ಆಫೀಸು ಗೋಡೆಗಳಲ್ಲಿರುವ 'ಧೂಮ್ರ ಸೇವನೆ ನಿಷೇಧಿಸೋಣಾಗಿದೆ' ಎಂಬ ಬೋರ್ಡುಗಳಿಗೆ ರಂಗಣ್ಣನಿಗೆ ಊರ ಹಲವು ಕಡೆಗಳಲ್ಲಿ ಬಹಿಷ್ಕಾರವಿದೆ ಎಂಬ ಅರ್ಥಕಟ್ಟಿದ್ದೇನೆ. ಪ್ರಥಮ ಬಾರಿ ನಮ್ಮೂರಿಗೆ ಎ ಆರ್ ಪಿ. ದಳದವರು ಬಂದಾಗ ರಂಗಣ್ಣನ ಸ್ಮರಣೆ ಬಂದು ಕಣ್ಣೀರುಗೊಂಡಿದ್ದೆ. ಹಂಚ. ಕಾರ್ಖಾನೆಯನ್ನು ನೋಡಹೋಗಿ 'ಚಿಮಿಣಿ'ಯನ್ನು ಕಂಡಾ

ಯುದ್ಧವು ತೀವ್ರ ಕೊನೆಗೊಂಡು ಧಾರಣೆಗಳ ರಚನೆಯು ರೂಪಾಂತರ ಹೊಂದಬಹುದು. ಈ ಪರಿಸ್ಥಿತಿಯನ್ನು ನೀವು ಹೇಗೆ ಎದುರಿಸುವಿರಿ? ನಾವೀ ಸಲಹೆಗಳನ್ನು ನಿಮ್ಮ ಮುಂದಿಡುವೆವು:—

1 ನಿಮ್ಮ ಕೂಡೆ ಮೌಲ್ಯಗಳ ಅತ್ಯಧಿಕ ಸಂಚಯವಿದ್ದಲ್ಲಿ, ಈಗಲೇ ಅವನ್ನು ವಿಕ್ರಯಿಸಿ ನಿಮ್ಮ ನಗದಿ ಸ್ಥಿತಿಯನ್ನು [illegible] ನಿಮ್ಮ ಆ ನಗದಿ ಹಣವನ್ನೆಲ್ಲಾ ಬ್ಯಾಂಕಿನ ಖಾತೆಯಲ್ಲಿರಿಸಿ ಧಾರಣೆಗಳ ಇಳಿತವನ್ನಪೇಕ್ಷಿಸಿರಿ

2 ನಿಮ್ಮ ಸಾಲಗಳನ್ನೀಗಲೇ ತೀರಿಸಿರಿ [illegible] ಯುದ್ಧಾನಂತರದ ದಿನಗಳಲ್ಲಿ ಧಾರಣೆಗಳ ಇಳಿತದಿಂದಾಗಿ ಸಾಲಗಳನ್ನು ತೀರಿಸಲು ಬಹು ಕಷ್ಟವಾಗಬಹುದು

3 ನಿಮಗೆ ಬರಬೇಕಾದ ಸಾಲಗಳನ್ನೀಗಲೇ ವಸೂಲು ಮಾಡಿರಿ. ಏಕೆಂದರೆ ಧಾರಣೆಗಳ ಇಳಿತದಿಂದಾಗಿ ನಿಮ್ಮ ಸಾಲಗಾರರ ನಗದಿ ಸ್ಥಿತಿಯು ಬಹಳ [illegible] ತಾವು ಹೊಂದಿ, ಅವರಿಂದ ಸಾಲಗಳನ್ನು ತೀರಿಸಲಸಾಧ್ಯವಾಗಬಹುದು

4 ನಿಮ್ಮ ಕೂಡೆ ಇರುವಂಥ ನಗದಿಯನ್ನೆಲ್ಲಾ ನಿಮ್ಮ ಮುಂದೆ ಬರುವ ಧಾರಣೆ ಇಳಿತವಾಗುವ ದಿನಗಳಿಗಾಗಿ ಕೂಡಿಡಿ [illegible] ಗತಿಯನ್ನು ಮತ್ತು ವಾಣಿಜ್ಯದ ಸಾಮಾನ್ಯ ಸ್ಥಿತಿಯನ್ನು [illegible] ನಿಮ್ಮ ಭಾವೀ ಯೋಜನೆಗಳನ್ನು ಕಲ್ಪಿಸಬಹುದು.

ನಿಮ್ಮಲ್ಲಿರುವ ನಗದಿಯ [illegible] ಖಾತೆಯಲ್ಲಿರಿಸಿ [illegible] ಗಳಿಗೆ ಅಥವಾ ಸಮಾಜದ [illegible] ಬಹುದು

ಸ್ಥಾಪಿತ 1906 ಕೆನರಾ ಬೇಂಕ್ ಲಿಮಿಟೆಡ್

ESTD 1906 **Canara Bank, Limited.**

(Incorporated in British India with limited Liability of members limited)

NOTICE

ಕುಂದಾಪುರ ಡಿ. ಮು ಕೋರ್ಟಿನಲ್ಲಿ

O S. No. 328/1944

ವಾದಿರು—1 ಪದ್ಮನಾಭ ಭಟ್ಟ, 2 ಕೃಷ್ಣ ಶಾಸ್ತ್ರಿ.

ಪ್ರತಿವಾದಿರು—1 ವಿಷ್ಣುಮೂರ್ತಿ ಚಾತ್ರ, 2 ಲಲಿತಾಬ್ಬಾ, 3 ಮಂಜುನಾತ ಹೆಬ್ಬಾರ.

ಸದ್ರಿ ದಾವೆಯಲ್ಲಿ ಉಡ್ಪಿ ತಾಲ್ಲುಕ್ಕು ನೈಲಾಡಿ ಬಿಲ್ಲಾಡಿ ಗ್ರಾಮದ ಬಿಜ್ಜಾಡಿ ಅಗ್ರಹಾರದಲ್ಲಿರುವ ವೆಂಕಟರಮಣ ಚಾತ್ರರ ಮಗ 1ನೇ ಪ್ರತಿವಾದಿ ವಿಷ್ಣುಮೂರ್ತಿ ಚಾತ್ರ 1, ಈತನ ಹೆಂಡ್ತಿ 2ನೇ ಪ್ರತಿವಾದಿ ಲಲಿತಾಬ್ಬಾ 1 ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

2ನೇ ವಾದಿಯು 1ನೇ ಪ್ರತಿವಾದಿಗೆ ತಾ. 26-8-35ರಲ್ಲು ರೂ. 400-0 0ಕ್ಕೆ ಬಿ. ಸಿರಿ ಬರ್ಸಿಕೊಟ್ಟ ಭೋಗ್ಯಾದಿ ಅಡವಿಗೆ ಕಾರಣವಾದ ಆಸ್ತಿಗಳನ್ನು 2ನೇ ವಾದಿಯ ಸ್ವಾಧೀನ ಬಿಡ್ಸಿಕೊಡುವರೆ ವಾದಿರು ಪ್ರತಿವಾದಿರ ಮೇಲೆ ದಾಖಲ್ಲು ಮಾಡಿದ ಮೇಲಿನ ರಿಡೆಮ್ಷನ್ ದಾವೆಯು ತಾ. 28-11-44ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಿಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಆ ತಾರೀಕಿಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರುಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲ್ಕ ತಿಳಿಯಪಡ್ಸಿರುತ್ತದೆ.

N. S. Parameshwariah,
Advocate for Plff's

Date 15-11-44, Kundapur.

ನೋಟೀಸು

ಕಾಸರಗೋಡು ತಾಲೂಕು ಬಂಗ್ರ ಮಂಜೇಶ್ವರ ನಾರಾಯಣ ಕಾಮತರು ಈ ಮೂಲಕ ಸರ್ವಜನರಿಗೂ ಪ್ರಕಟಪಡಿಸುವುದೇನೆಂದರೆ—ನನ್ನ ಸ್ವಾಧೀನದ ಬಾಬ್ತು 1942/1943ರ ವರ್ಗ ಬಾಳಿಗದ ಪುಸ್ತಕಗಳನ್ನು ತಾ. 11 11 1944ರಲ್ಲಿ ಮಂಗಳೂರಿನ [illegible] ಆಫೀಸದಲ್ಲಿ [illegible] ಬಗ್ಗೆ ಹಾಜರುಪಡಿಸಿ, ನಂತರ [illegible] ಅವುಗಳ ಸಮೇತ [illegible] ಬರುವಾಗ [illegible] ಪುಸ್ತಕಗಳು ಯಾರಿಗಾದರೂ ಸಿಕ್ಕಿದರೆ, ಯಾ ಆ ಕುರಿತು ವರ್ತಮಾನವನ್ನು [illegible], ಅಂಥವರಿಗೆ ಯೋಗ್ಯ ಸಂಭಾವನೆಯನ್ನು ಕೊಡಲಾಗುವುದೆಂದು ಈ ಮೂಲಕ ತಿಳಿಯಪಡಿಸುತ್ತೇನೆ.

Narayana Kamath,
14-11-'44.

ನಾರದ ಕಥೆ

ಮಾಲಿನೀ

ಕತೆಗಾರರು: ಶ್ರೀ. ವಿ. ಎಸ್. ಕಾರಿಯಪಳ್ಳ,
ಕಾಸರಗೋಡು.

ಚಿತ್ರವನ್ನು ಬರೆದು ಪೂರೈಸಿದಲ್ಲಿ ಶಶಿಧರನು ನಿಡುನೀಳಾಗಿ ಉಸಿರುಗರೆದನು. ಮಾಲಿನಿ ಚೆಲುವಿನ ಮಾರ್ಬಿಂಬವಾಗಿದ್ದಳು. ಅದರ ಪಡಿ ಚಿತ್ರದಲ್ಲಿ ಬಣ್ಣಬಣ್ಣವಾಗಿ ಮೂಡಿತ್ತು. ಅದಕ್ಕೆ ಇನ್ನೂ ಒಂದಿಷ್ಟು ಮೋಡಿಯನ್ನು ಬೆರಸಲಿದ್ದನು ಅದರಲ್ಲಿ ಏನೋ ಕಾಣದೆ ಹೋದ ಚೆಲುವಿನ ಕಣವೊಂದು ಬಾಕಿಯಾಗಿತ್ತು. ಅದನ್ನು ಹೇಗೆ ಮೂಡಿಸಲೆಂದು ಅವನು ತಿರುಗಿ ನಿಟ್ಟಿಸಿ ನೋಡಿದನು

'ಮಾಲಿನಿಗೆ ಕೆಂಪೊಗೆವ ಹೂವಿನ ಮುಗುಳು ನಗೆ ಬೀರಲು ತಿಳಿಯದು!' ಶಶಿಧರನ ಮನ ಜೋಲು ಬಿತ್ತು; ತಿರಗಿ ತೂಗಿತು, ನರ್ತಿಸಿತು 'ಇಲ್ಲಿ ಆಕೆ ತಿಳಿನಗೆಯ ಕದಿರನ್ನು ಕಳಿಸುವಂತೆ ಒಲ್ಲಿಸಬೇಕು',

'ಮಾಲನೀ' ಶಶಿ ಇಳಿದನಿಯಲ್ಲಿ ಕೂಗಿದ. ಆಕೆ ಕಿಟಕಿಯ ಹೊರಗೆ ತಲೆ ಹಾಕಿ ದೂರದ ಬಯಲನ್ನು ಕಣ್ಣಿಟ್ಟು ನೋಡುತ್ತಿದ್ದಳು. ತಿರಿಗಿ ಕರೆದನು ಆಕೆ ಮೊಗ ತಿರುವಿದಳು. ತುಸ ಸಮಯದಿಂದ ಈಚೆಗೆ ಆಕೆಯ ಎದೆಯಲ್ಲಿ ಹೆಚ್ಚು ಆಳವಾದ ಗುಟ್ಟಿನ ಕದಿರು ಒಂದು ಅಡಗಲು ಎಡತಾಕುತ್ತಿತ್ತು; ಅಲ್ಲಿ ಅದು ಕುದಿಯುತಿತ್ತು. ಅದನ್ನು ಹೊರಗೆಡವಿ ಶಶಿಗೂ ಅದರ ಬಣ್ಣವನ್ನು ಕಾಣಿಸಬೇಕೆಂದು ಆಕೆಯ ಆಸೆ ಆದರೆ ಅವನಿನ್ನು ಹನೆಣಿಸುವನೋ ಎಂದು ಆಕೆಗೆ ಸಂದೇಹ; ಆಕೆ ಹೆದೇದಳು ಬೇರೆ. ಹೇಗಾದರೂ ಇರಲಿ, ಅದನ್ನು ಹೇಳಿ ತಿಳಿಸುವ ದಿನ ಹತ್ತಿರ ಹತ್ತಿರ ಒದಗೀತು ಎಂದು ಆಕೆ ಎಣಿಸಿದಳು; ಮನದ ಆಟವನ್ನು ತಡೆದು ನಿಲ್ಲಿಸಿದಳು. ನಿಟ್ಟುಸಿರೊಂದು ಆಕೆಯನ್ನು ಹೇಳದೆ ಕೇಳದೆ ಹೊರಟು ಬಂತು. ಅದರೊಂದಿಗೆ ಅದೇ ಆಸೆಯ ಕದಿರು ಆಕೆಯ ಎಷೆಯ ಒಳಗಿನ ಸೆರೆಯನ್ನು ಕಡಿದು ಮೋರೆಯಲ್ಲಿ ಮಿಂಚಿತು. ಆಕೆಯ ಗಂಟಲು ಆರಿಹೋಯಿತು.

'ಶಶಿ!'

ಆಕೆಗೆ ಮುಂದೆ ಮಾತನ್ನು ಹೊರಗೆಡಹಲಾಗಲಿಲ್ಲ. ಆತನ ಮೋರೆಯನ್ನು ನಟ್ಟ ಕಣ್ಣಿನಿಂದ ನೋಡ ತೊಡಗಿದಳು. ಕಣ್ಣಿನ ನೋಟ ದಣಿದು ಕಂಬನಿ ಸೋರಿತು. ಮಾಲಿನಿ ಅಳುವಳೇನು? ಶಶಿ ತನ್ನ ತಾನೇ ಕೇಳಿಕೊಂಡನು. ಅದರ ಗೊತ್ತು ಅವನಿಗೆ ಆಗಲಿಲ್ಲ.

'ನೀನು ಯಾಕೆ, ಅಳುತ್ತೀಯಾ?' ಶಶಿ ಕೇಳಿದನು. ಆಕೆಯ ಮೋರೆ ಸಣ್ಣದಾಯಿತು. ಶಶಿ ಮತ್ತೆ ಒತ್ತಿ ಕೇಳಲಿಲ್ಲ,

ಕೆಲವು ತಿಂಗಳು ಮಾಸಿಹೋದುವು. ಸಂಜೆಯ ಹೊತ್ತು. ಮಾಲಿನಿ ಮನೆಯ ಮುಂದಿನ ತೋಟದಲ್ಲಿದ್ದಳು. ಆಕೆಯ ಮನಸ್ಸಿಗೆ ಒಂದಿಷ್ಟಾದರೂ ನೆಮ್ಮದಿ ಇರಲಿಲ್ಲ. ಆಕೆ ಯೋಚಿಸಿದಳು. 'ಶಶಿ ನನಗೆ ಮೆಚ್ಚಿದಾನೆ; ಅವನೊಲವು ಎಷ್ಟು ಸವಿಯಾಗಿದ್ದೀತು ......! ಆದರೆ?........ನನ್ನ ಗುಟ್ಟು ಅವನಿಗೆ ಅರಿತುದಾದರೆ? ...." ಆಕೆ ನಡುಗಿದಳು.

ಮುಂಬಾಗಿಲಲ್ಲಿ ಸದ್ದಾಯಿತು. ಆಕೆಯ ಮನವು ಎಲ್ಲಿಗೋ ದೂರದ ಮೋಡಿಗೆ ಹೋಗಿತ್ತು. ಹೊರಗೆ ಯಾರೋ ಬಂದಿದ್ದರು. ಆಕೆಯ ತಿಳಿಯಲಿಲ್ಲ.

ಒಂದವನು ತೋಟದಲ್ಲಿ ಅಡ್ಡಾಡುತ್ತಿದ್ದ ಮಾಲಿನಿಯ ಬಳಿಗೆ ಬಂದನು. ಆಕೆ ನೋಡಿದಂತಿರಲಿಲ್ಲ. ಅವನು ಕೇಳಿದ: 'ರಾಮು ಕುಮಾರರ ಮನೆ ಇದೇ ಅಲ್ಲವೇನು?' ಆಕೆಯನ್ನು ಬಡಿದೆಬ್ಬಿಸಿದಂತಾಯಿತು ಎರಡು ವರುಷಗಳ ಹಿಂದೆಯೇ ಆಕೆಯ ತಂದೆಯಾದ ರಾಮಕುಮಾರರು ತೀರಿಕೊಂಡಿದ್ದರು; ತೀರಿಹೋದ ತನ್ನ ತಂದೆಯನ್ನು ನೋಡಬಂದವನು ಯಾರು? ಆಕೆಯನ್ನು ದಂಗುಬಡಿಸಿತು ಮೇಲಿನ ಮಾತು.

ಅವನು ಮತ್ತೆ ಹೇಳಿದ: 'ಅವರು ಇಲ್ಲಿಯೇ ಇದ್ದರಲ್ಲ ಮೊದಲು?' ಮಾಲಿನಿಗೆ ಈ ಹೊಸಬನನ್ನು ನೋಡಿ ಅಚ್ಚರಿಯಾಯಿತು. ಹೇಗೆ, ಎರಡು ವರುಷದ ಹಿಂದೆ ತೀರಿಹೋದ ತನ್ನ ತಂದೆಯ ನೆನವು ಮಾಡಿಕೊಂಡು, ನಾಚಿಕೆಯಿಲ್ಲದವನಂತೆ ಹೆಣ್ಣಿನ ಸಂಗಡ ಮಾತಿಗೆಳಸುವನಲ್ಲ ಎಂದೆಣಿಸಿದಳು. ಆದರೆ, ತೀರ ಹೊಸಬನಾದುದರಿಂದ ನೋಡುವ ಎನಿಸಿತು. ಅವಳೆಂದಳು: 'ಅವರು ಎರಡು ವರುಷಗಳಾದುವು ಇಹಲೋಕವನ್ನು ಬಿಟ್ಟು.......'

ಹೊಸಬನು ಕಲ್ಲಿನಂತೆ ನಿಂತುಕೊಂಡನು. ಅವನ ಬಾಯಿಯಿಂದ ಮಾತೇ ಹೊರಡಲಿಲ್ಲ. 'ಹಾಗಾದರೆ?........'

ಇಬ್ಬರೂ ಪಕಪಕನೆ ಒಬ್ಬರನ್ನೊಬ್ಬರು ನೋಡಿಕೊಂಡರು.

ಅವನು ಮತ್ತೆ ಕೇಳಿದನು, ತುಸು ನಾಚುತ್ತ: 'ಮಾಲಿನೀ....ಅವಳು ಎಲ್ಲಿಗೆ ಹೋದಳು? ನಿಮಗೆ ಅವರ ಇರವು ಗೊತ್ತೇನು?'

ಆಕೆ ಅಚ್ಚರಿಗೊಂಡಳು. ಮಾಲಿನಿಯನ್ನು ಅರಿತಿದ್ದ ಈ ಹೊಸಬನಾರು? ಆಕೆ ಬೆಡಗಿನಿಂದ ತಲೆಯೆತ್ತಿ ಮಾತನಾಡಿದಳು. ನೊಗದಲ್ಲಿ ತಾನೆಂಬ ಕೆಚ್ಚು ಹೊಳೆದಿತ್ತು. 'ಮಾಲಿನಿ ಎಂದರೆ ನಾನೇ!'

(೧೧ನೇ ಪುಟ ನೋಡಿರಿ).

ಪ್ರಯಾಣದ ಕಥೆ 4

ರಾಮಚಂದ್ರ-ಅಯ್ಯಾ ಹನ್ನೆರಡು ಪೂರಿಗಳನ್ನು ಕೊಡು. ಅದಕ್ಕೆಷ್ಟು ಬೆಲೆ?

ರಾಮಚಂದ್ರನು ಆಹಾರವು ಎಲ್ಲಿ ದೊರೆಯುವುದೆಂದು ಹುಡುಕುವನು ಅವನ ಅದೃಷ್ಟಕ್ಕೆ, ಹತ್ತಿರವೇ ಫಲಹಾರ ಮಾರುವವನೊಬ್ಬನು ಇರುವನು.



ಎಲ್ಲವೂ ಬಹಳ ಕಷ್ಟದಾಯಕವಾಗಿದೆ ನಾವು ಮನೆಯಲ್ಲೇ ಇರಬೇಕಾಗಿತ್ತು.

ಈ ಕುಟುಂಬದ ಗತಿಯೇನಾಗುವುದೋ ಮುಂದಿನ ವಾರದ ಕಥೆಯಲ್ಲಿ ನೋಡಿ.

ಇಂದು ಅತ್ಯವಸರ ಸಾಮಾನುಗಳನ್ನು ಮೊಟ್ಟಮೊದಲು ರವಾನಿಸಬೇಕು.
ಆದರಿಂದಲೇ ಪ್ರಯಾಣದಲ್ಲಿ ಜನಗಳಿಗೆ ಸೌಕರ್ಯವಿಲ್ಲ.

ಅನಾವಶ್ಯಕವಾದ ಪ್ರಯಾಣವನ್ನು ನಿಲ್ಲಿಸಿರಿ.

AAR 849KN

ಯಾರನ್ನೇ ಆದರೂ ಭೂತ ಬಡಿದವನಂತೆ ನೋಡುತ್ತಾ ನಿಲ್ಲುವದು-ನೋಡುತ್ತಾ ಹೋಗುವದು ಕೂಡಾ-ಶಿಷ್ಟ ಸಂಪ್ರದಾಯಕ್ಕೆ ವಿರುದ್ಧವೆನ್ನುತ್ತಾರೆ. ಇದು, ಅನ್ಯರ ಮನೇವಾರ್ತೆಗಳ ನೂತಾಡಬಾರದು ಎಂಬಂತಹ ಒಂದು ನೀತಿ. ನನ್ನ ಅಭಿಪ್ರಾಯದಲ್ಲಿ ಇದೊಂದು ಸಾಧುವಾದ ನಿಯಮವಲ್ಲ, ಒಬ್ಬರಿನ್ನೊಬ್ಬರ ಮರ್ಯಾದೆ ಉಳಿಸಿಕೊಡಬೇಕೆಂದು ನಿರ್ಮಾಣವಾಡಿರುವ ನಿರ್ಬಂಧ ಮಾತ್ರ. ಮನೆಯ ಸ್ಥಿತಿಗತಿ ಚೆನ್ನಾಗಿರುವವರಿಗೆ ತಮ್ಮ ಮನೇವಾರ್ತೆಯೆಂದರೆ ಬಹಿರಂಗವಾಗಬೇಕಾದ ಒಂದು ಹೆಗ್ಗಳಿಕೆಯ ಸಂಗತಿಯಾಗಿರುತ್ತದೆ. ಅಂತಹ ಉತ್ತಮ ಸ್ಥಿತಿಯಲ್ಲಿಲ್ಲದವರಾದರೂ ತಮ್ಮದನ್ನು ಮುಚ್ಚಿಟ್ಟುಕೊಂಡು ಪಡೆಯುವ ಲಾಭವೇನು, ಎಂದು ನನ್ನ ಪ್ರಶ್ನೆ. ಈ ವಾದ-ಬಹಿರಂಗ ಬಂಡಾಯವು ನನ್ನ ಮರ್ಜಿಯ ಸಮರ್ಥನೆಗಾಗಿಯೇ ಎಂಬ ನನ್ನ ಗುಟ್ಟನ್ನು ನಾನೂ ಮುಚ್ಚಿಕೊಳ್ಳಲಾರೆ. ಮೇಲಿನ ವಾದವೇಕೆಂದರೆ ಸ್ವತಃ ನಾನು ಶಿಷ್ಟ ಸಂಪ್ರದಾಯದವನಲ್ಲ; ಎಲ್ಲರನ್ನೂ ಎಲ್ಲವನ್ನೂ ನೋಡುತ್ತಾ ಹೋಗುತ್ತೇನೆ. ಅದ ನನ್ನ ಹುಟ್ಟು ಸ್ವಭಾವ. ನೀವು ಈ ಸ್ವಭಾವದವರಲ್ಲವಾದರೆ ಹಾಗೆ ಯಾರನ್ನಾದರೂ ಭೂತಬಡಿದವನಂತೆ ನೋಡುವದು ನಿಮಗೆಷ್ಟುಕಷ್ಟವೋ ನೋಡದಿರುವದು ನನಗಷ್ಟೇ ಪ್ರಯಾಸ. ಈ ಮಾತಿನಲ್ಲೇ ನನ್ನ ನೋಟದಲ್ಲಾವ ಉದ್ದೇಶವೂ ಇಲ್ಲವೆಂಬ ಆಶ್ವಾಸನೆಯನ್ನು ಆಸುಪಾಸಿನವರು ಪಡೆಯಲಾಗುತ್ತದೆ. ತಮ್ಮ ಮೇಲೆ ಬೆಳಕು ಬಿದ್ದಂತೆ ಈ ನೋಟವೂ ಬಿದ್ದಿತೆಂದು ಅವರು ನೆನಸಬೇಕು. ಅನ್ಯಥಾ ಭಾವಿಸಬೇಕಾದರೆ ಆ ಭಾವನೆಗೊಂದು ಉದ್ದೇಶವಿರಬೇಕು. ಈ ತನಕ ಹೇಳಿದುದನ್ನೇ 'ನನ್ನದು ನೋಟಮಾತ್ರ, ಮಾಟವಲ್ಲ' ಎಂಬ ಒಂದೇ ವಾಕ್ಯದಲ್ಲಿ ಮತ್ತೊಮ್ಮೆ ಹೇಳಿ, ಈಗ ನೋಡಿದುದನ್ನು ಹೇಳಲಾರಂಭಿಸುತ್ತೇನೆ.

× × ×

ನೋಟೀಸು

ಕುಂದಾಪುರ ಡಿ. ಮು ಕೋರ್ಟಿನಲ್ಲಿ

O. S. No. 328/1944

ವಾದಿಯು—1 ಪದ್ಮನಾಭ ಭಟ್ಟ, 2 ಕೃಷ್ಣ ಚಾತ್ರ.

ಪ್ರತಿವಾದಿರು—1 ವಿಷ್ಣುಮೂರ್ತಿ ಚಾತ್ರ, 2 ಲಲಿತಾಬ್ಬಾ, 3 ನಂಜುನಾತ ಹೆಬ್ಬಾರ.

ಸದ್ರಿ ದಾವೆಯಲ್ಲಿ ಉಡ್ಪಿ ತಾಲ್ಲುಕ ನೈಲಾಡಿ ಬಿಲ್ಲಾಡಿ ಗ್ರಾಮದ ಬಿಲ್ಲಾಡಿ ಅಗ್ರಹಾರದಲ್ಲಿರುವ ವೆಂಕಟ್ರಮಣ ಚಾತ್ರರ ಮಗ 1ನೇ ಪ್ರತಿವಾದಿ ವಿಷ್ಣುಮೂರ್ತಿ ಚಾತ್ರ 1, ಈತನ ಹೆಂಡ್ತಿ 2ನೇ ಪ್ರತಿವಾದಿ ಲಲಿತಾಬ್ಬಾ 1 ಕೂಡಾ 2 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ—

2ೀ ವಾದಿಯು 1ನೇ ಪ್ರತಿವಾದಿಗೆ ತಾ. 26-8-35ರಲ್ಲು ರೂ. 400-0-0ಕ್ಕೆ ರಿ. ಜಿ ಬರ್ಸಿಕೊಟ್ಟ ಭೋಗ್ಯಾದಿ ಅಡವಿಗೆ ಕಾರಣವಾದ ಆಸ್ತಿಗಳನ್ನು 2ನೇ ವಾದಿಯ ಸ್ವಾಧೀನ ಬಿಡ್ಸಿಕೊಡುವರೆ ವಾದಿಯು ಪ್ರತಿವಾದಿರ ಮೇಲೆ ದಾಖ್ಲು ಮಾಡಿದ ಮೇಲಿನ ರಿಡೆಮ್ಪ್ಶನ್ ದಾವೆಯು ತಾ. 28-11-44ಕ್ಕೆ ಮೇಲಿನ ಕೋರ್ಟಿನಲ್ಲಿ ವಿಚಾರಣೆಗೆ ಇಟ್ಟಿರುತ್ತದೆ. ಆ ಕುರಿತು ಏನಾದರೂ ಆಕ್ಷೇಪಣೆಗಳಿದ್ದರೆ ಆ ತಾರೀಕಿಗೆ ಮೇಲಿನ ಕೋರ್ಟಿನಲ್ಲಿ ಹಾಜ್ರಾಗಿ ಜ್ಞಾಹೀರುಮಾಡಿಕೊಳ್ಳತಕ್ಕದ್ದು ಎಂಬ ಸಂಗ್ತಿ ಈ ಮೂಲ್ಕ ತಿಳಿಯಪಡ್ಸಿರುತ್ತದೆ.

N. S. Parameshwariah,
Advocate for Plff's.

Date 15-11-44, Kundapur.

ಮನುಷ್ಯ—ಮರ್ಜಿ

ಸ್ವಭಾವ ಚಿತ್ರಗಳು.

೧. ಹೊಗೆಬತ್ತಿ ರಂಗಣ್ಣ

(ಚಿತ್ರಿಸುವವರು—'ಮಟ್ಟಾರ್')

●

('ಲೌಕಿಕ' ಎಂದರೆ ಮನುಷ್ಯ ವರ್ಗ ಮತ್ತು ಅದರ ಮರ್ಜಿಗಳ ಮೊತ್ತಕ್ಕಿಟ್ಟಿರುವ ಹೆಸರು. ಈ ಭಾಗದಲ್ಲಿ ಬರಲಿರುವದು ಅದೇ—ಬಿಡಿ ಬಿಡಿಯಾಗಿ ಲೋಕದ್ದೇ ಚಿತ್ರ. ಆದ್ದರಿಂದ ಲೋಕದುದ್ದಕ್ಕೂ ಈ ಬರೆಹ ಸರಪಣಿ ಗೊಣಸುಗೂಡುತ್ತಾ ಹೋಗಬಹುದೆಂದು ನಮ್ಮ ನಿರೀಕ್ಷೆ. ಯಾಕೆಂದರೆ ಇದ್ದ ಎಲ್ಲಾ ಮನುಷ್ಯರಿಗೂ, ಎಲ್ಲಾ ಮರ್ಜಿಗಳಿಗೂ ಇಲ್ಲಿ ಪ್ರವೇಶವಿದೆ; ಸಮಾರಾಧನೆಯಲ್ಲಿ ಬೇಧಮಾಡುವಂತಿಲ್ಲವೆಂದು ಲೇಖಕರು ಪ್ರತಿಜ್ಞೆ ಹಾಕಿಕೊಂಡಿದ್ದಾರೆ ಅಂತೂ ಇದು ಲೋಕದ ಚಿತ್ರ—ಯಾರೇ ಆದರೂ ಇದನ್ನಾಕ್ಷೇಪಿಸಿ, ಅಥವಾ ತಮ್ಮ ಮೇಲೆ ಆವಾಹನೆ ಮಾಡಿಕೊಂಡು ಲೋಕ ಬಾಹಿರರಾಗಬಾರದು. ಇದರಲ್ಲೇನಾದರೂ ಇದೆಯೆನ್ನುವಿರಾ?—ಇದೇ ಲೋಕಕ್ಕೇನೇ ಇದೆ; ಇಲ್ಲವಾದರೆ ಯಾರಿಗೂ ಇಲ್ಲ. —ಸಂ)

ರಂಗಣ್ಣನನ್ನು ನಾನು ದಿನಂಪ್ರತಿ ಸಂಜೆ ಮುಂಜಾನೆ ನೋಡುತ್ತಿದ್ದೇನೆ-ನನ್ನ ಮತ್ತು ಅವನ ಆಫೀಸುಗಳ ಕೆಲಸವಾರಂಭವಾಗುವ ಮತ್ತು ಮುಕ್ತಾಯವಾಗುವ ಸಮಯವೊಂದೇಯಾದ್ದರಿಂದ ಕೆಲವುರೂಢಿಗಳು ಮನುಷ್ಯರನ್ನು ಪರಸ್ಪರ ಒಂದುಗೂಡಿಸುವಂತೆ, ಲೋಕದ ಇನ್ನಾವುದಕ್ಕಾದರೂ ಅಂತಹ ಸಂಧಾನ ಕೂಡಲಾಗುವದಿಲ್ಲ. ನಾವಿಬ್ಬರೂ ಠೀಕಾಗಿ ಆಫೀಸು ಸಮಯಕ್ಕೆ ಸರಿಯಾಗಿಯೇ ಹೊರಡುವವರು. ಅವನದು ಮತ್ತು ನನ್ನದು ಪರಸ್ಪರ ವಿರುದ್ಧ ದಿಕ್ಕಿನಲ್ಲಿರುವ ಆಫೀಸುಗಳಾದ್ದರಿಂದ ಸಂಜೆ ಮುಂಜಾನೆ ರಸ್ತೆಯಲ್ಲಿ ಮುಖಾಮುಖಿಯಾಗುವ ಸಂದರ್ಭ ನಮಗೆ ತಪ್ಪಿದುದಲ್ಲ. ಹೋಗಿಬರುವ ರಸ್ತೆಯ ಕಟ್ಟೋಣಗಳಂತೆ ನಾನು ದಿನಂಪ್ರತಿ ಕಾಣಲೇ ಬೇಕಾದ ಬೇರೆ ಕೆಲವರೂ ಇದ್ದಾರೆ. ಆದರೆ 'ಇದ್ದಾನೋ' ಎಂದು ಪ್ರತಿಬಾರಿಯೂ ನಾನು ಆತುರದಿಂದ ನೋಡುತ್ತಾ ಬರುವ ವ್ಯಕ್ತಿಯೆಂದ[illegible] ಇಷ್ಟು ಬಾರಿ ಕಂಡ ಮೇಲೂ ನನ್ನ ದೃಷ್ಟಿಗವ ಹೊಸಬನಾಗಿಯೇ ಕಾಣುತ್ತಿದ್ದಾನೆ. ಎಲ್ಲರೂ ಅವನನ್ನು ನಿದ್ದೆಗಣ್ಣಿನಿಂದ ನೋಡುತ್ತಿರುವಾಗ, ಅವನ ಅಂತ್ಯದ ವರೆಗಿನ ಎಲ್ಲಾ ಚಲನವಲನಗಳನ್ನೂ ನೋಡುತ್ತಿರಲಾಗುವಂತೆ ಅವನ ಹಿಂಗಡೆಯಲ್ಲೇ ಕಳುಹಿಸಲಾಗುವ ಇನ್ನೆರಡು ಕಣ್ಣುಗಳು ನನಗಿರಬೇಕು ಎಂದು ನನ್ನ ಆಸೆ.

ಮೊದಲ ನಾಲ್ಕಾರು ಬಾರಿಯ ವರೆಗೂ ನಾನು ನೋಡುತ್ತಿದ್ದುದು ರಂಗಣ್ಣನನ್ನು ಮಾತ್ರ, ಅವನ ವೈಶಿಷ್ಟ್ಯವನ್ನಲ್ಲ. ಮನುಷ್ಯನ ಊಹೆ ಮತ್ತು ಉಡುಪಿನೊಳಗೆ ಒಂದು ರೀತಿಯ ಹೋಲಿಕೆಯಿದೆ. ತನ್ನ ಉಡುಪು ಕೊಳೆಯಾಗಬೇಕೆಂದು ಯಾರೂ ಬಯಸುವದಿಲ್ಲ. ಆದರೆ ಒಬ್ಬನ ಅಂಗಿಯ ಬೆನ್ನಿಗೆ ಸ್ವಲ್ಪ ಸ್ವಲ್ಪವೇ ಒತ್ತಿದ ಕೊಳೆ ಕೊನೆಗೊಮ್ಮೆ 'ಇಷ್ಟೇ' ಎನ್ನುವಷ್ಟು ದಪ್ಪಗಟ್ಟಿಹೋಗುತ್ತದೆ ಊಹೆಯೂ ಹಾಗೇನೇ-ನಾವು ಊಹಿಸದಿದ್ದರೂ ಆಗಾಗ ತಾನಾಗಿ ಊಹೆಗೆ ಕಾಗುತ್ತಾ ಹೋದ ಒಂದು ವಿಷಯವು ಕೊನೆಗೊಮ್ಮೆ ಅಲ್ಲಿ ಪೂರ್ತಿಯಾಗಿ ಮೂಡಿಕೊಳ್ಳುತ್ತದೆ. ಹಾಗೇನೇ ನಾಲ್ಕಾರು ಬಾರಿ ಕಾಣುವಷ್ಟರಲ್ಲಿ 'ರಂಗಣ್ಣ'ನ ಬೀಡೀ ವೈಶಿಷ್ಟ್ಯ' ನನ್ನ ಮನಸ್ಸಿಗೆ ಹೊಳೆದುಹೋ[illegible]

'ತುಟಿಮೀರಿದ ಹಲ್ಲು' ಎಂಬಂತೆ ಅವನ ಬಾಯಿಮಲ್ಲಿ ಬೀಡಿಯಿಲ್ಲದ ಕ್ಷಣವಿಲ್ಲ. ಕಣ್ಣಲ್ಲೊಂದು ವಿಧದ ಪ್ರಕಾರ-ಮುಖದಲ್ಲಿ ಬಂದಲ್ಲದಿದ್ದರಿನ್ನೊಂದು ವಿಧದ ಭಾವ-ಇಷ್ಟನ್ನು ನಾವು ಯಾರಲ್ಲಾದರೂ ಯಾವಾಗಾದರೂ ಕಾಣಲೇ ಬೇಕು. ರಂಗಣ್ಣನನ್ನು ಕಂಡಾಗಲೆಲ್ಲಾ ಇವುಗಳ ಜತೆಗೆ ಬಾಯಿಯಲ್ಲೊಂದು ಬೀಡಿಯನ್ನೂ ಕಾಣದೆ ಉಪಾಯವಿಲ್ಲ. ಬಹುಕಾಲದಿಂದ ಕಾಣುತಿದ್ದೇನೆ -ಆದರೆ ಅವನನ್ನು ಮಾತ್ರ ಕಂಡು ಅವನ ಹೊಗೆ ಕಾಣದಿದ್ದ ಸಂದರ್ಭ ಪ್ರಾಯಶಃ ಇದು ವರೆಗೆ ಒಮ್ಮೆಯೂ ಎರಡು ಬಾರಿಮಾತ್ರ. ಈ ಸಂದರ್ಭಗಳಲ್ಲಿ ಅವನ ಬಾಯಿಯಲ್ಲಿ ಹೊಗೆಯೇಳದಿದ್ದರೆ ಮುಖದಲ್ಲೇಳುತ್ತಿತ್ತು; ಬೇರಾವ ಭಾವವೂ ಇಲ್ಲದೆ ಅದು ಬುಸುಗುಟ್ಟುತ್ತಿತ್ತು, ಶವದ ಮುಖವೆನ್ನಲಾಗದಂತೆ, ರಂಗಣ್ಣ, ಬೀಡಿದರೂ ಬೀಡಿಸಿಕ್ಕದ ಬರಗಾಲಕ್ಕೊಳಗಾಗಿದ್ದಾನೆ ಎಂದು ಇಂತಹ ಸಂದರ್ಭಗಳಲ್ಲಿ ಊಹಿಸಬೇಕು. ನಾನೊಬ್ಬ ಚಿತ್ರಗಾರನೆನ್ನಿ; ನನ್ನಿಂದ ದೊಡ್ಡ ದೊಡ್ಡ ತಪ್ಪುಗಳಾಗುವವೆಂಬುದನ್ನು ಒಪ್ಪಿಕೊಳ್ಳುತ್ತೇನೆ. ಈಗ ರಂಗಣ್ಣನ ಚಿತ್ರ ಬಿಡಿಸುತಿದ್ದೇನೆ. ಪ್ರಮಾದದಿಂದ ಅವನ ಒಂದು ಕಣ್ಣು ಅಥವಾ ಒಂದು ಕೈಯನ್ನು ಚಿತ್ರಿಸದೇನೇ ಬಿಟ್ಟರೂ, ಅದು ರಂಗಣ್ಣನೇ ಎಂದು ಸಾಧಿಸಿ ಇಲ್ಲವೇ ಕ್ಷಮೆ ಕೇಳಿ ಪಾರಾಗಬಲ್ಲೆ. ಆದರೆ ಅವನ ಬಾಯಿಯ ಬೀಡಿಯನ್ನು ಬರೆಯಲಿಲ್ಲವಾದರೆ ನನ್ನಾ ಕೆಲಸ ಪೂರ್ತಿ ಕಳೆದುಹೋದಂತೆಯೇ; ಆಗ ನನಗ ರಂಗಣ್ಣನ ಅಂಗಲೋಪಮಾಡಿದ ದೋಷವಷ್ಟೇ ಅಲ್ಲ, ಪ್ರಾಣಾಪಹಾರವಾಡಿದ ಪಾಪವೇ ಇದೆ.

ಹಲವು ಸನ್ನಿವೇಶಗಳಲ್ಲಿ, ಅತಿ ವಿಲಕ್ಷಣವಾಗಿ ನನಗೆ ರಂಗಣ್ಣ ಸ್ಮರಣೆ ಬರುವದಿದೆ. 'ದಿನಕ್ಕರ್ಧ ಸೇರು ಪಡಿಧಾನ್ಯ, ಅದರಲ್ಲೊಂದು ಪಾವು ಅಕ್ಕಿ, ಒಂದು ಪಾವು ಗೋಧಿ' ಎಂದು ಆಹಾರಾಧಿಕಾರಿಗಳ ಡಂಗುರ ಹೊಡಿಸುವಾಗ ನನ್ನ ತಲೆಯಲ್ಲಿ ಮೂಡುವದು ಏತದ ಹಗ್ಗ ಹಿಡಿಯುವ ಕೃತ ಬದುಕಿಯಾನೇ ಎಂಬ ಭೀತಿಯಿಲ್ಲ—ಹೀಗೇನೇ 'ದಿನಕ್ಕಾರು ಬೀಡಿ. ಆ ಪೈಕಿ ಮೂರು ಹೊಗೆಬತ್ತಿಯದು, ಮೂರು ಇತರ ಮಿಶ್ರಣದ್ದು' ಎಂಬ ಕಂಟ್ರೋಲ್ ಬಂದರೆ ರಂಗಣ್ಣ ಬದುಕಿಯಾನೇ ಎಂಬ ಪ್ರಶ್ನೆ. ಅಲ್ಲಲ್ಲಿಯ ಆಫೀಸು ಗೋಡೆಗಳಲ್ಲಿರುವ 'ಧೂಮ್ರ ಸೇವನೆ ನಿಷೇಧಿಸೋಣಾಗಿದೆ' ಎಂಬ ಬೋರ್ಡುಗಳಿಗೆ ರಂಗಣ್ಣನಿಗೆ ಊರ ಹಲವು ಕಡೆಗಳಲ್ಲಿ ಬಹಿಷ್ಕಾರವಿದೆ ಎಂಬ ಅರ್ಥಕಟ್ಟಿದ್ದೇನೆ. ಪ್ರಥಮ ಬಾರಿ ನಮ್ಮೂರಿಗೆ ಎ. ಆರ್. ಪಿ. ದಳದವರು ಬಂದಾಗ ರಂಗಣ್ಣನ ಸ್ಮರಣೆ ಬಂದು ಕಣ್ಣು ಕರಗೊಂಡಿದ್ದೆ. ಹಂಚ. ಕಾರ್ಖಾನೆಯನ್ನು ನೋಡಹೋಗಿ 'ಚಿಮಿಣಿ'ಯನ್ನು ಕಂಡಾ

ಯುದ್ಧವು ತೀವ್ರ ಕೊನೆಗೊಂಡು ಧಾರಣೆಗಳ ರಚನೆಯು ರೂಪಾಂತರ ಹೊಂದಬಹುದು. ಈ ಪರಿಸ್ಥಿತಿಯನ್ನು ನೀವು ಹೇಗೆ ಎದುರಿಸುವಿರಿ? ನಾವೀ ಸಲಿಹೆಗಳನ್ನು ನಿಮ್ಮ ಮುಂದಿಡುವೆವು:—

1 ನಿಮ್ಮ ಕೂಡೆ ಮಾಲುಗಳ ಅತ್ಯಧಿಕ ಸಂಚಯವಿದ್ದಲ್ಲಿ. ಈಗಲೇ ಅವನ್ನು ವಿಕ್ರಯಿಸಿ ನಿಮ್ಮ ನಗದಿ ಸ್ಥಿತಿಯನ್ನು ಸ್ಥಿರಗೊಳಿಸಿರಿ ನಿಮ್ಮ ಆ ನಗದಿ ಹಣವನ್ನೆಲ್ಲಾ ಬ್ಯಾಂಕಿನ ಖಾತೆಯಲ್ಲಿರಿಸಿ ಧಾರಣೆಗಳ ಇಳಿತವನ್ನಿರೀಕ್ಷಿಸಿರಿ.

2 ನಿಮ್ಮ ಸಾಲಗಳನೀಗಲೇ ತೀರಿಸಿರಿ. ಇಲ್ಲವಾದರೆ ಯುದ್ಧಾನಂತರದ ದಿನಗಳಲ್ಲಿ ಧಾರಣೆಗಳ ಇಳಿತದಿಂದಾಗಿ ಸಾಲಗಳನ್ನು ತೀರಿಸಲು ಬಹು ತ್ರಾಸವಾಗಬಹುದು.

3 ನಿಮಗೆ ಪರರಿಂದ ಸಲ್ಲಬೇಕಾದ. ಸಾಲಗಳನ್ನೀಗಲೇ ವಸೂಲು ಮಾಡಿರಿ. ಏಕೆಂದರೆ ಧಾರಣೆಗಳ ಇಳಿತದಿಂದಾಗಿ ನಿಮ್ಮ ಸಾಲಗಾರರ ನಗದಿ ಸ್ಥಿತಿಯು ಬಹಳ ದುಷ್ಪರಿಣಾಮ ಹೊಂದಿ, ಅವರಿಂದ ಸಾಲಗಳನ್ನು ತೀರಿಸಲಸಾಧ್ಯವಾಗಬಹುದು.

4 ನಿಮ್ಮ ಕೂಡೆ ಇರುವಂಥ ನಗದಿ[illegible] ಮುಂದೆ ಬರುವ ಧಾರಣೆ. ಇಳಿತವಾಗುವ ದಿನಗಳಿಗಾಗಿ ಕೂಡಿಡಿ. ಧಾರಣೆಗಳ ಗತಿಯನ್ನು ಮತ್ತು ವಾಣಿಜ್ಯದ ಸಾಮಾನ್ಯ ಸ್ಥಿತಿಯನ್ನು ಪರ್ಯಾಲೋಚಿಸಿ ನಿಮ್ಮ ಭಾವೀ ಯೋಜನೆಗಳನ್ನು ಕಲ್ಪಿಸಬಹುದು.

ನಿಮ್ಮಲ್ಲಿರುವ ನಗದಿಯನ್ನೆಲ್ಲಾ ನಮ್ಮೊಡನೆ ಖಾತೆಯಲ್ಲಿರಿಸಿರಿ. ಇಲ್ಲವಾದರೆ ಸ್ನೇಹಿತರಿಗೆ ಅಥವಾ ಸಮಾಜದ ಚತ್ತರಿಗಳಿಗೆ ಒಳಗಾಗುವ ಪ್ರಸಂಗ ಒದಗಬಹುದು

ಸ್ಥಾಪನೆ 1906 **ಕೆನರಾ ಬ್ಯಾಂಕ್ ಲಿಮಿಟೆಡ್**

ESTD 1906 **Canara Bank, Limited.**

(Incorporated in British India with limited-Liability of members limited)

ನೋಟೀಸು

ಕಾಸರಗೋಡು ತಾಲೂಕು ಬಂಗ್ರ ಮಂಜೇಶ್ವರ ನಾರಾಯಣಕಾಮತರಾದ ನಾನು ಈ ಮೂಲಕ ಸರ್ವಜನರಿಗೂ ಪ್ರಕಟಪಡಿಸುವುದೇನೆಂದರೆ—ನನ್ನ ವ್ಯಾಪಾರದ ಬಾಬ್ತು 1942/1943ರ ವರ್ಷ ಊಳಿಗದ ಪುಸ್ತಕಗಳನ್ನು ತಾ. 11-11 1944ರಲ್ಲು ಮಂಗಳೂರಿನ ಇನ್‌ಕಮ್‌ಟೇಕ್ಸ್ ಆಫೀಸರರಲ್ಲಿ ಲೆಕ್ಕ ತನಿಖೆ ಬಗ್ಗೆ ಹಾಜರುಪಡಿಸಿ, ನಂತರ ಸಾಯಂಕಾಲ ಅವುಗಳ ಸಮೇತ ರೈಲುಬಂಡಿಯಲ್ಲಿ ಬರುವಾಗ ಗೈರಮಿಲೆಯಾಗಿರುವುದರಿಂದ, ಸದ್ರಿ ಲೆಕ್ಕಪುಸ್ತಕಗಳು ಯಾರಿಗಾದರೂ ಸಿಕ್ಕಿದರೆ, ಯಾ ಆ ಕುರಿತು ವರ್ತಮಾನವನ್ನು ಕೊಟ್ಟಲ್ಲಿ, ಅಂಥವರಿಗೆ ಯೋಗ್ಯ ಸಂಭಾವನೆಯನ್ನು ಕೊಡಲಾಗುವುದೆಂದು ಈ ಮೂಲಕ ತಿಳಿಯಪಡಿಸುತ್ತೇನೆ.

Narayana Kamath,
14-11-'44.

ಗ-ಕರಾವಳಿಗೆ ಹೋಗಿ ದೂರದ ಹೊಗೆ ಹಡಗವನ್ನು ನೋಡಿಬಾಗ—ಅಷ್ಟೇಯಾಕೆ, ನಮ್ಮೂರ ಪಕ್ಕದಲ್ಲಿ ಸದಾ ಉರಿಯುತ್ತಿರುವ ಸ್ಮಶಾನದತ್ತ ನೋಟ ಬೀಳುವಾಗ ಕೂಡಾ ನನ್ನ ಸ್ಮರಣೆಗೆ ವೈಜ್ಞಾನಿಕರಾಗಲೀ ಯಮುನಾಗಲೀ ಬಾರದ ರಂಗಣ್ಣನೇ ಬರುತ್ತಾನೆ. ಇದೂ ಒಂದು ಮನುಷ್ಯ ಸಹಜ ಚಟವನ್ನಬೇಕು—ರಂಗಣ್ಣನಿಗೆ ಬೀಡಿಯಂಟಿಕೊಂಡಹಾಗೆ ನನ್ನಂಥವರ ಮನಸ್ಸಿಗೆ ರಂಗಣ್ಣಂದವರ ಚಿತ್ರ ಅಂಟಿಕೊಳ್ಳುತ್ತದೆ

× × ×

ಪ್ರೇಣೆ ಕೂಡುವದರಲ್ಲಿ ಪ್ರೇಮ ಮತ್ತು ಆಕರ್ಷಣ, ಇವರಡಕ್ಕೂ ಸಮಬಲವಿದ ಒಬ್ಬಾಕೆಯ ರೂಪನೋಡಿ ಇಲ್ಲವೇ ಗುಣಕ್ಕ ಸೋತು ನೀವಾಕೆಯನ್ನು ಪ್ರೇಮಿಸುತ್ತೀರಾದರ ಅವರ ಬಲದಿಂದಲೇ ಅವಳಿರುವವಲ್ಲಿ, ನಂಒಂದವಾರದು ಎಲ್ಲೆಲ್ಲಿಗ ಹೋಗಿ ಬರುತ್ತಾಳೆ ಎಂಬ ಶೋಧಕ್ಕೆ ತೊಡಗುಂರಿ ಆಕರ್ಷಣೆಯೂ ಹಾಗೆಯೇ ಹುಲಿವೇಷವನ್ನು ಕಂಡ ಮಕ್ಕಳು, ಆದುಹೋದಲ್ಲಿ ವರಗೂ ಹೋಗಿ ಕುಣಿಯುವದನ್ನು ನೋಗೂ ನೋಡುತ್ತಾರೆ, ಆ ಬಣ್ಣ ಹಾಕುವದೆಲ್ಲಿ, ಬಣ್ಣ ದೊರೆಯುವದೆಲ್ಲಿ ಎಂಬ ಶೋಧವಾಡುವದೂ ಇದೆ ಹೊಗೆಬತ್ತಿ ರಂಗಣ್ಣನ ಕುರಿತು ನನ್ನ ಆತುರವೂ ಅಂತಹದೇ ಆಯಿತು ಇಷ್ಟು ಬೀಡಿಯೆಳಯುತ್ತಾನಲ್ಲಾ— ಈ ಮನುಷ್ಯ ಯಾಕಾದ್‍ನು ಹೇಗೆ ಬದುಕಿಯಾನು, ಎಂದು ನನ್ನ ಚಿಂತೆ ರಂಗಣ್ಣ ದಿನಕ್ಕುರಡು ಬಾರಿ ಸಿಗುತ್ತಿರುವಾಗ ನಾನು ನನ್ನೊಳಗೇನೇ ಚಿಂತಿಸಿ ಕುಳಿತುಕೊಳ್ಳುವಂತಿರಲಿಲ್ಲ. ಇವನ ಸ್ವಭವವೆಂತಹದೆಂದು ಪರೀಕ್ಷಿಸಿಬಿಡೋಣವೆಂದು ಒಮ್ಮೆ, ಬೇರೆ ಕಡೆಗೆ ನೋಡುತ್ತಿದ್ದಂತೆ ನಟಿಸುತ್ತಾ ರಸ್ತೆಯಲ್ಲಿ ಅವನಿಗೆ ಡಿಕ್ಕಿ ಹೊಡದ 'ನಿನಗೆ ಕಣ್ಣುಕಾಣುವದಿಲ್ಲವೇ?' ಎಂದು ರಂಗಣ್ಣ ಗದರಿಸಲೂ ಇಲ್ಲ, 'ಹೋ! ನಿಮಗೆ ತಾಗಿತೇ!' ಎಂದು ಉಪಚಾರವಾಡಲೂ ಇಲ್ಲ ತನ್ನ ಅಂಗೀ ವಸ್ತ್ರಗಳಿಗೆ ಬಿದ್ದ ಬೀಡಿಯ ಕಿಡಿಗಳನ್ನು ಝಾಡಿಸುತ್ತಾ, ನಾನು ನಿಂತು ನೋಡುತ್ತಿದ್ದರೂ ಹೋಗುವದಲ್ಲೇ ಇದ್ದ ಆಗೊಂದುಬಾರಿ ಅವನಿಗಗಿ ಅಪಹಾಸ್ಯದ ನಗು ಬೀರಿದ್ದೆ. ಮತ್ತೊಂದು ಬಾರಿ ಹೊಸಮುರ್ಜಿ ಪ್ರದರ್ಶಿಸಿದೆ ನಲನೋಡುತ್ತಾ ಬರುತ್ತಿದ್ದ ಅವನ ಮುಖಮಾವರಿತ ಮುಖದಿದಿರು ನಿಂತು 'ನಮಸ್ಕಾರ ಸ್ವಾಮಿ' ಎಂದ ಪಕ್ಕನೆ ತಲೆಯೆತ್ತಿ 'ಓ' ಎಂದ, ಅಂದರೆ 'ಏನಂದಿಯಪ್ಪಾ?' ಎಂದು ನನ್ನನ್ನು ಪ್ರಶ್ನಿಸಿದ ಹಾಗೆ ಇಷ್ಟು ಕಠಿಣವಾದ ಪರೀಕ್ಷಾ ಪ್ರಶ್ನೆ ಲೋಕದಲ್ಲೇ ಇರಲಾರದು ಪ್ರಪಂಚವನ್ನು ಅರಿಯುವದಕ್ಕಿಂತಲೂ ತನ್ನನ್ನು ತಾನರಿಯುವದು ಕಷ್ಟ ಎಂಬ ತತ್ವ ಇಲ್ಲಿದೆ ನಿಮ್ಮ ಎಲ್ಲಾ ಸವಾಲುಗಳನ್ನೂ ಉತ್ತರಿಸಬಲ್ಲ ಪಂಡಿತನೊಬ್ಬನನ್ನು 'ಪಂಡಿತನೆಂದರೇನು?' ಎಂದೊಮ್ಮೆ ಪ್ರಶ್ನಿಸಿ ಹೇಗಾಗುತ್ತಾನೋ ನೋಡಿ ಹಾಗೆಯೇ ರಂಗಣ್ಣ ನಮಸ್ಕಾರವನ್ನೇ 'ಅಂದರೇನು?' ಎಂದು ಪ್ರಶ್ನಿಸಿದ್ದ ನನ್ನದು ಹುಸಿ ನಮಸ್ಕಾರವಾದ್ದರಿಂದ ಈ ಬಾರಿಯೂ ನನಗೆ ನಗುಬಂತು, ತಿರಸ್ಕಾರದ ಅನುಭವವಾಗಲಿಲ್ಲ ನಮಸ್ಕಾರವು ನಮಸ್ಕಾರನೇ ಹೊರತು ಸಮಾಚಾರವಲ್ಲ ಆಫೀಸು ಕೆಲಸ ಮಾಡುತ್ತಿರುವ ರಂಗಣ್ಣನಿಗೆ ಅದು ತಿಳಿಯದಿರುವುದುಂಟೆ? ಆದರೆ, ಅವ ಆ ಮುಹೂರ್ತದಲ್ಲಿ ಯಾವುದೋ ಬೇರೆ ಲೋಕದಲ್ಲಿದ್ದ. ರಂಗಣ್ಣನ ದಿನದ 24ಘಂಟೆಗಳಲ್ಲಿ ಹೆಚ್ಚಿನವು ಇಂತಹ ಮುಹೂರ್ತಗಳೇ ಕೊನೆಕೊನೆಗೆ ನನ್ನ ಈ ಅಭಿಪ್ರಾಯವೇ ದೃಢವಾಯಿತು. ಅವ ಎಲ್ಲರಂತೆ ಲೋಕದ ಹವೆ ಸೇವಿಸುತ್ತಾನೆ, ರೇಶನ್ ಅನ್ನ ಉಣ್ಣುತ್ತಾನೆ, ಆದರೆ ನಮ್ಮ ನಿಮ್ಮಂತೆ ಈ ಲೋಕದಲ್ಲಿಲ್ಲ ಅಥವಾ ಈ ಲೋಕದಲ್ಲಿ ಅವನದೇನ್ ಇದ್ದರೂ ತಲೆಮಾತ್ರ ಇಲ್ಲಿಲ್ಲ ಇವನ ಮೆದುಳಗೇನು ಮತ್ತೆ ಕೊಂಡಿರಬಹುದು-ನವ ಜ್ಮಾರಲ್ಲಿ ಬಡ್ಡಿನ ಪ್ರಭಾವದಿಂದಾಗಿ ತಲೆಯನ್ನು ಅಮೇರಿಕದ ವರೆಗೂ ಕಳುಹಿಸಿ, ಅಂಕೆ ಸಂಖ್ಯೆಗಳಲ್ಲಿ ಹುದುಗಿಸಿ, ಕೆಡಿಸಿಕೊಂಡವರು ಒಹುಮಂದಿ ನಾನು ರಂಗಣ್ಣನ ತಲೆ ಈ ಲೋಕದಲ್ಲಿಲ್ಲವೆಂದುದು, ಬಿಡ್‍ಕೂಡ ಅದಕ್ಕೆ ತಾಗಿಲ್ಲವೆಂಬುದನ್ನು ಪರೀಕ್ಷಿಸಿ ತಿಳಿದ ಮೇಲೇನೇ. ಹೀಗೆ ಮೊದಮೊದಲು ಒರಟಾಗಿ ತೋರುತ್ತಿದ್ದವ ಕೊನೆಕೊನೆಗೆ ಒಂದು ಒಗಟಾಗಿ ತೋರಹತ್ತಿದ ಆದಿಯಲ್ಲಿ ಅಸಡ್ಡೆ ಮಾಡತಕ್ಕ ಜಂತುವೆಂಬಂತೆ ತೋರಿದವ, ಮಧ್ಯದಲ್ಲಿ ಆಲೋಚಿಸ ಬೇಕಾದ ಒಂದು ವಿಷಯವಾದ ಈಗೀಗ ನನ್ನ ದೃಷ್ಟಿಗ ತೋರುತ್ತಿದೆ—ಸಮಾಜದೊಳಗೇನೇ ಒಂದು ಸನ್ಯಾಸವಿದ ರಂಗಣ್ಣನು ಅಂತಹ ಓರ್ವ ಸಾಮಾಜಿಕ ಸನ್ಯಾಸಿಯೆಂದು ಇಲ್ಲಿಂದಲೂ ಮುಂದಕ್ಕೆ ನನ್ನ ಸಾಮರ್ಥ್ಯವನ್ನೊಯ್ದು 'ರಂಗಣ್ಣನ ತೂಕವಿಷ್ಟು' ಎಂಗು ಖಂಡಿತ ಹೇಳಲು ನನ್ನಿಂದಾಗಿಲ್ಲ

ಈ ಪ್ರಪಂಚವನ್ನೊಂದು ಸಾಗರವೆಂದೋ ಸರೋವರವೆಂದೋ ಹೇಳುವದಿದ. ಆ ಸರೋವರದಲ್ಲಿದ್ದೂ ಒದ್ದೆಯಾಗದಿರುವ ನೀರು ನಿಲ್ಲದಿರುವ ತಾವರೆಯೆಲೆಗಳೇ ರಂಗಣ್ಣನಂಥವರು ಅವ ತನ್ನನ್ನು ತಾನೇ ಅರಿಯ ದವ-ತನ್ನ ಆಯ ವ್ಯಯವನ್ನು ನೋಡಿಯಾನೆ? ನಾವು ಅವನನ್ನರಿತ ತಪ್ಪಿಗಗಿ ಅವನ ಬಜೆಟನ್ನೊಮ್ಮೆ ನೋಡೋಣ ಒಂದು ಬೀಡಿಯನ್ನೆಳೆದು ಮುಗಿಸಲು ಸರ್ವಸಾಧಾರಣ ಎರಡು ಮಿನಿಟು ಎಂದಿಟುಕೊಳ್ಳಿ ಆಶ್ಚರ್ಯವೆನ್ನಬೇಕು—ಬೀಡಿಗಾಗಿ ಅವ ಊಟ ನಿದ್ರೆಬಿಟ್ಟಿಲ್ಲ ಮಲಗುವಾಗ ಇದ್ದಂತೆ ಏಳುವವರಗೂ ಗುಟಿಯಲ್ಲೇ ಇದ್ದ ಒಂದೇ ಬೀಡಿನಿಂದ ಅವನ ದಿನದ ಸುಮಾರು ಸಮಯ ಕಳೆಯುತ್ತದೆ. ಈ ಅಂಶಗಳನ್ನೆಲ್ಲಾ ವಜಾ ಮಾಡಲಾಗಿ ದಿನಕ್ಕವನಿಗೆ 125 ಬೀಡಿ ಮಾತ್ರವೆಂದಿಟ್ಟುಕೊಂಡರೆ-25ರ ಕಟ್ಟಿಗೆ 0-1 9ಪೈ ಪ್ರಕಾರ ಆಗುವದು 0-8-9 ಪೈಮಾತ್ರ ಒಮ್ಮೆ ಒಂದು ಬೀಡಿಗಗಿ ಕೀರಿದ ಕಡ್ಡಿಯೇ ನಂದಾದೀಪವಾಗಿ ಹಲವು ಬೀಡಿಕುತ್ತಿಗಳುರಳುವ ವರೆಗೂ ವರ್ಗಾಯಿಸಲ್ಪಡುವದಾದ್ದರಿಂದ, ದಿನಕ್ಕೊಂದೇ ಬೆಂಕಿಪೆಟ್ಟಿಗೆ—0—9—0 ಅವನ ಒಂದು ದಿನದ ಬೀಡಿಕುತ್ತಿಗಳನ್ನೊಟ್ಟುಹಾಕಿ ಬೆಂಕಿಕೊಟ್ಟಲ್ಲಿ ಅದನ್ನು ನಂದಿಸಬೇಕಾದರೂ ಒಂದು ಕೊಡಪಾನ ನೀರು ಬೇಕಾದೀತು ಅಂದಮೇಲೆ ಅಷ್ಟು ಬೆಂಕಿಯುರಿದ ಬಾಯಿಗೆ ಎಂಟು ಸಿಂಗಲ್ ಚಹಾ ಆದರೂ ಸುರಿಯಬೇಡವೆ? ಇದು ಕೇವಲ ಅಗ್ನಿಶಮನ ಕಾರ್ಯವಾದ್ದರಿಂದ ತಿಂಡಿಯ ಪ್ರಸ್ತಾಪವನ್ನೇ ಬಿಟ್ಟು ಚಹಾದ ಲೆಕ್ಕ ಮಾತ್ರ ಹಿಡಿದರೆ 0—8—0 ಅಂತೂ ಈ ದೈನಿಕ ಹೋಮ ಮತ್ತು ತೀರ್ಥವೆಚ್ಚ ರೂ 1-1-6ಮಾತ್ರ ರಂಗಣ್ಣನಂತಹ ನೌಕರನಿಗೆ ತಿಂಗಳಿಗೆ ರೂ 50ಕ್ಕಿಂತ ಹೆಚ್ಚಿಗೆ ಉತ್ಪತ್ತಿಯಿರುವದು ಅಸಾಧ್ಯ ಭರ್ತಿ 50 ಹಿಡಿಯೋಣ ದಿನಕ್ಕೆ ಸುಮಾರು 1-10-8ಪೈ ಸಾಧ್ಯಗುತ್ತದೆ ಅವನಿಗೆ ಊಟ ಉಡುಗೆ, ವಿನೋದ, ವಿಹಾರಗಳ ಅಭ್ಯಾಸವಿದ್ದರೆ ಅವುಗಳಿಗಾಗಿ 0-9-2ಪೈ ಯುಳಿಯುತ್ತದೆ ಬೀಡಿಗಳೊಳಗೆ 'ವಿಟಮಿನ್'ಸತ್ವತುಂಬಿಸುವ ಸುಧಾರಣೆಯಾಗುವವರೆಗೆ ಈ ಭಾಗದ ಒಂದು ಅಲ್ಪವ್ಯಯ, ಅನಗತ್ಯಸಂದಾಯ ಅವನ ಪಾಲಿಗಿದ್ದದ್ದೇ ಮುಖ್ಯವಾಗಿ ಬೇಕಾದುದು—ಹೊಗೆಬತ್ತಿ 'ಜೈ ಶಂಕರ್' ಸನ್ಯಾಸಿಗೆ ಭಂಗಿ ಈ ಬೋಳು ಶಂಕರ' ಸನ್ಯಾಸಿಗೆ ಬೀಡಿ ರಂಗಣ್ಣನಿಗ ಸನ್ಯಾಸಿಯಾಗಿರುವ ಬದಲು ಸದ್ಗೃಹಸ್ಥನಾಗಬೇಕೆಂಬ ಮನವಿದ್ದರೆ ಹಣ ಅವನ ಬಜೆಟಿನಲ್ಲಿಯೇ ಇದೆ ಆದರ ರೂ 1-1-6ರ ವಿಭಾಗದ ವ್ಯಯವನ್ನು ರೂ 0-9-2 ವಿಭಗಕ್ಕೂ, ಅದನ್ನು ಇದಕ್ಕೂ ವರ್ಗಾಯಿಸಿಕೊಂಡರಾಯಿತು ಹೀಗೆ ಬಜೆಟ್ ಬಲಪಿರುವ ಈ ಕಂಪೆನಿಯ ದುರ್ವ್ಯಯದಿಂದ ದಿವಾಳಿಯಾಗುವದನ್ನು ತಪ್ಪಿಸಬೇಕೆಂದು ಪ್ರಯತ್ನಿಸಿದ ಕೆಲವರು ರಂಗಣ್ಣನಿಂದ ಕೆಳಗಿನ ಉತ್ತರ ಪಡೆದರಂತೆ —"ಹಾಗ ವರ್ಗಾಯಿಸಿ ಹೊಂದವ ಸುಖವೇನ? ಮನೆ, ಮಡದಿ, ಮಾನ್ಯತೆ, ಎಲ್ಲವೂ ಆತ್ಮತೃಪ್ತಿಗಾಗಿ ಅವೆಲ್ಲಾ ಕೊಡುವಷ್ಟು ತೃಪ್ತಿಯನ್ನು ಹೊಗೆಬತ್ತಿ ಕೊಡುತ್ತಿರುವಾಗ ಆ ವ್ಯಯಾಂಗಗಳ ಅದಲುಬದಲೇಕಾಗಿ?" ಇದಕ್ಕೇ ನೀವೇ ಆದರೆ ಏನೆನ್ನುವಿರಿ! ಒಬ್ಬರನ್ನೊಬ್ಬರು ನೋಡಿಕೊಂಡು 'ಸಮಾಜದಲ್ಲೂ ಸನ್ಯಾಸಿಗಳಿದ್ದಾರಯ್ಯಾ' ಎಂದುಕೊಳ್ಳುವಿರೇನೋ! ರಂಗಣ್ಣ ರಸಿಕನನ್ನಿಸಲು ಹುಟ್ಟಿಲ್ಲ ತನ್ನ ಹೊಗೆಯನ್ನಲ್ಲದೆ ಹೊರತು ಅನ್ಯರ ಹೊಗೆ ನೋಡುವ ರಸಿಕತೆ ತುರುಕಿಸಿದರೂ ಅವನನ್ನು ಹೊಗುವಂತಿಲ್ಲ ಇದ್ದುಕೊಳ್ಳಲಿ ಇದೊಂದು ನಿರುಪದ್ರವೀ ಜೀವ!

ಬರುವವಾರ—

ನಗುಮೊಗದ ನರ್ಸಮ್ಮ

CO-OPERATION - - -

Life Assurance is the business based on the idea of mutual co-operation. By diverting a small portion of one's earning for paying premiums, we co-operate for the good of the family and safeguard the education of children

Let us assist you in taking out a Policy under the plan best suited to you. Write now to—

KOCHIKAR BROTHERS LTD.

Chief Agents for South India

THE BOMBAY LIFE ASSCE. CO., LTD.

[Estd 1908]

The "Bombay Life" Bldg, UDIPI, S K.

Offices and Agencies throughout South India

ENGLISH MADE EASY

ಇಂಗ್ಲಿಷ್ ಏನೂ ತಿಳಿಯದವರು 'ಸುಲಭದಲ್ಲಿ ಇಂಗ್ಲಿಷ್' ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೇ ಕಲಿತುಕೊಳ್ಳಬಹುದು

ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ

ಬೆಲೆ ಬರೇ ರೂ 1—4-0 ರೂ 1-6-0ನ್ನು ಮನಿಯಾರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತೆ

ನವಭಾರತ ಪುಸ್ತಕ ಭಂಡಾರ,

ರಿಜಿಸ್ಟರ್ಡ್ ಪಬ್ಲಿಷರ್ಸ್ ಎಂಡ್ ಬುಕ್ ಸೆಲ್ಲರ್ಸ್,

ಉಡುಪಿ, ದ ಕ,

ಬಾಲಚಂದ್ರ

ಉಪಾಧ್ಯಾಯರಿಗಾಗಿ ಪ್ರಕಟವಾಗುವ ವಿದ್ಯಾವಿಷಯಕ ಮಾಸಪತ್ರಿಕೆ

ವಾರ್ಷಿಕ ಚಂದಾ ರೂ 1-8-0

ಮಾದರಿ ಪ್ರತಿಗೆ ಎರಡಾಣೆ ಸ್ಟಾಂಪುಗಳನ್ನು ಕಳುಹಿಸಿ ಬರೆಯುವುದು

ಸಂಚಾಲಕ

ಬಾಲಚಂದ್ರ, ಉಡುಪಿ

ತಿರುವಾಂಕೂರಿನಲ್ಲಿ ಮರಣ ಶಿಕ್ಷೆಯಿಲ್ಲ.

ಸರ್. ಸಿ. ಪಿ. ರಾಮಸ್ವಾಮಿ ಅಯ್ಯರ ಸಮರ್ಥ ದಿವಾನಗಿರಿಯಲ್ಲಿ ತಿರುವಾಂಕೂರು ಸಂಸ್ಥಾನವು ಸಾಮಾಜಿಕ-ಆರ್ಥಿಕ ಕ್ಷೇತ್ರಗಳಂತೆಯೇ ವಿಧಿಸಿಯಮಗಳಲ್ಲಿಯೂ ಸುಧಾರಣೆ ಮಾಡಿಕೊಳ್ಳುವದರಲ್ಲಿ ಹೆಸರು ಪಡೆದಿದೆ. ಆದಿಯಿಂದಲೂ ಬ್ರಾಹ್ಮಣಾರಾಧನೆಗೆ ತಿರುವಾಂಕೂರಿನಷ್ಟು ಹೆಸರುಪಡೆದ ಸ್ಥಳ ಬೇರೊಂದಿಲ್ಲವೆನ್ನಬೇಕು. ಆದ್ದರಿಂದಲೇ ದಕ್ಷಿಣಕನ್ನಡದ ಇತರರು ಬೊಂಬಾಯಿಗೋಡುವಂತೆ ಬ್ರಾಹ್ಮಣರು ತ್ರಿವೇಂದ್ರಮನ್ನಾಶ್ರಯಿಸುವ ರೂಢಿಯಿದೆ. ಇಂತಹ ಬ್ರಾಹ್ಮಣ ಭಕ್ತಿಯ ತಿರುವಾಂಕೂರು ಅಲ್ಲಿಯ ದೇವಾಲಯಗಳನ್ನೆಲ್ಲಾ ಹರಿಜನರಿಗೆ ತೆರೆದು ಹಾಕಿ ಸಂಪ್ರದಾಯ ಶರಣರ ಹೊರತು ಮಿಕ್ಕೆಲ್ಲರ ಅಭಿನಂದನೆಗೆ ಪಾತ್ರವಾಗಿದ್ದಿತು. ಈಗ ಮತ್ತೊಂದು ಸಂಪ್ರದಾಯಬದ್ಧ ನಿಯಮವನ್ನು ಮುರಿದುಕೊಂಡಿದೆ ತಿರುವಾಂಕೂರಿನಲ್ಲಿನ್ನು ಮರಣಶಿಕ್ಷೆಯಿಲ್ಲ.

ಕೊಂದವನನ್ನು ಕೊಲ್ಲುವದು ಪ್ರತೀಕಾರ ಹೊರತು ಪ್ರಾಯಶ್ಚಿತ್ತವಲ್ಲ, ಆದ್ದರಿಂದ ಮರಣದಂಡನೆಯನ್ನು [illegible] ಜಾಪದಿಸಬೇಕು ಎಂಬ ಚಳವಳಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಸುಟ್ಟು ಕಾಲಕಳೆದಿದೆ ಆದರೂ ಅದು ಪೂರ್ಣ ರದ್ದಾದುದಿಲ್ಲ. ತಿರುವಾಂಕೂರಿನಲ್ಲಿ ಮರಣ ದಂಡನೆಯ ಮಟ್ಟಿಗೆ ಈ ಮೊದಲೂ ಒಂದು ಪಕ್ಷಪಾತವಿದ್ದಿತು. ಬ್ರಾಹ್ಮಣರು ಮತ್ತು ಸ್ತ್ರೀಯರಿಗೆ ಅಲ್ಲಿ ಮರಣ ಸಜೆಯ ಅಲ್ಲ ಮಿಕ್ಕ ಎಲ್ಲಾ ಮಹಾಪರಾಧಿಗಳ ಮಟ್ಟಿಗೂ ಬ್ರಿಟಿಷ್ ಹಿಂದುಸ್ಥಾನದಲ್ಲಿದ್ದಂತೆಯೇ ತಿರುವಾಂಕೂರಿನಲ್ಲಿಯೂ ಅದು ಅಸ್ತಿತ್ವದಲ್ಲಿತ್ತು. ಸಂಸ್ಥಾನದ ದ್ರೋಹವೊಂದನ್ನು ಬಿಟ್ಟರೆ ಮಿಕ್ಕ ಯಾವ ಅಪರಾಧಕ್ಕೂ ಮರಣದಂಡನೆಯಿಲ್ಲವೆಂದೂ, ಈ ಸಧಾರಣೆಯ ಕೊಡಲೇ ಜ್ಯಾರಿಯಲ್ಲಿದೆಯೆಂದೂ ದಿವಾನರು ಜಾಹೀರು ಮಾಡಿದ್ದಾರೆ. ಘಾಶಿಶಿಕ್ಷೆ ವಿಧಿಸಲಾಗುವಂತಹ ಅಪರಾಧಗಳಿಗೆ ಜೀವಾವಧಿ ಸಜೆಯೇ [illegible] ಈಗ ಮಾರ್ಪಡಿಯಾಗಿದೆ. ಇತರ ಸರಕಾರಗಳೂ ಅನುಸರಿಸಬೇಕಾದ ಸತ್ಕೃತ್ಯ ಮಾಡಿಯದು'

ತಂದೆಬೈದುದಕ್ಕೂ ತಗಾದೆ!

ಮೋಹಿನ್‌ಚಂದ್ರಗುಹ ಎಂಬವರು ಚಿತ್ತಗಾಂಗಿನ ಎಡ್ವೊಕೇಟರು. ಬಂಗಾಳದ

— ವಿಚಿತ್ರ ಮೊಕದ್ದಮೆಗಳು —

ಎಲ್ಲಾ ವಕೀಲರಿಗೂ ಹಿರಿಯರು, ವಯಸ್ಸು 67. ಅವರ ಮಗನೂ ಅಲ್ಲಿಯೇ [illegible] ಒಂದು ವ್ಯವಹಾರಣೆಯಲ್ಲಿ ತಂದೆ ಮಗನಿಗೆ ಕೋರ್ಟಿನಲ್ಲಿಯೇ ಅಕ್ಷೇಪಣಾರ್ಹವಾಗಿ ಛಿನ್ನಾಡಿದ. ಪಿತ ಪುತ್ರ ಸಂಬಂಧವು ಸಿಲುಕಿತು [illegible] ಭಾಷಿಸಿದ್ದ ಮಗ ತಂದೆಯ ಮೇಲೆ ಐ ಪಿ ಸಿ. ಸಕ್ಷನ್ 500ರ ನ್ವಯ ದಾವೆಹೂಡಿದ ಕೆಳಕೋರ್ಟಿನಲ್ಲಿ ಮೋಹಿನ್ ಚಂದ್ರರು ರೂ 200 ಜುಲ್ಮಾನೆಗೊಳಗಾಗಿ ಸೆಶ್ಶನಿಗೆ ಅಪೀಲು ಮಾಡಿದರು. ಸೆಶ್ಶನ್ಸ್ ಜಡ್ಜರು ಇದೇ ತಾ. 13ರಲ್ಲಿ ಕೆಳಕೋರ್ಟಿನ ತೀರ್ಮಾನವನ್ನು ಸಮರ್ಥಿಸಿ, ಜುಲ್ಮಾನೆಯನ್ನು ಮಾತ್ರ ರೂ. 200ದಿಂದ 50ಕ್ಕಿಳಿಸಿದರು. ಜುಲ್ಮಾನೆ ತೆರದಿದ್ದರೆ 2ವಾರಗಳ ಶಿಕ್ಷೆಯೆಂದೂ ವಿಧಿಸಿದರು. "ಶ್ರೀ ಮೋಹಿನ್ ಚಂದ್ರಗುಹರ ಅಪರಾಧವು ಎಷ್ಟೊಂದು ಸ್ವಲ್ಪವಿದೆ, ಮತ್ತು ಇಡೀ ವಿಷಯವು ಎಂತಹ ಹೀನಾಯವಿದೆಯೆಂದರೆ, ಬಾರ್‌ಕೌನ್ಸಿಲಿನ್ ಏಕ್ಟ ಪ್ರಕಾರ ಅವರನ್ನು ಉದ್ಯೋಗದಿಂದಲೇ ಯಾಕೆ ಕಿತ್ತೊಗೆಯಬಾರದು, ಎಂದು ಅವರ ಮೇಲೆ ಮುಂದಿನ ಕಾರ್ಯಕ್ರಮ ಕೈಕೊಳ್ಳುವ ಅವಶ್ಯಕತೆಯೊದಗಿದೆ ಎಂದು ನನಗನ್ನಿಸುತ್ತಿದೆ"-ಎಂದು ಜಜ್ ಹೇಳಿನಲ್ಲಿದೆ.

ಯುದ್ಧಮುಖದ ಸಂಪಾದಕನ ಸಂಕಟ

ಸರಕಾರದ ರಾಜ್ಯಿಯ ಯುದ್ಧಮುಖದ ತಮಿಳು ದಿನಪತ್ರಿಕೆಯಾದ ವಿಮುತಲಾಯಿಯ ಸಂಪಾದಕ ಶ್ರೀ ವಿಜಯತುಂಗರು ಐ ಪಿ.ಸಿ 109ನೇ ಸೆಕ್ಷನಿನಂತೆ ಇದೇ ತಾ. 15ರಲ್ಲಿ ಮದ್ರಾಸಿನಲ್ಲಿ ದಸ್ತಗಿರಿಮಾಡಲ್ಪಟ್ಟು ಒಂದೊಂದು ಸಾವಿರ ರೂಪಾಯಿಗಳ ಎರಡು ಜಾಮೀನುಕೊಟ್ಟು ಹೊರಗೆ ಬಂದಿದ್ದಾರೆ. ಸುಮಾರು ರೂ 113 ರ ವರೆಗಿನ ಸರಕಾರೀ ಹಣವ [illegible] ವಿನೋ ಅಟ್ಟಿಹಿದರೆಂದು ಅವರ ಮೇಲೆ ಆರೋಪವಂತೆ'

ಬೆಂಕಿನೊಂದಿಸುವವನೂ ತುಪ್ಪ ಸುರಿಸುವನೆ?

ಮದ್ರಾಸಿನ ಚೀಫ್ ಪ್ರೆಸಿಡೆನ್ಸಿ ಮೆಜಿಸ್ಟ್ರೇಟ್ [illegible] ಈಗ ನಡೆಯುತ್ತಿರುವ ಒಂದು ಮೊಕದ್ದಮೆಯೂ ವಿಶೇಷ ರೀತಿಯದು. [illegible] ಇತರ ನಾಲ್ವರೊಂದಿಗೆ, [illegible] ಆರ್. [illegible] ಚೀಫ್ ಪಾರ್ಕ ಸಾಗರ್ [illegible] ಶ್ರೀ. ಎಸ್. ಕನ್ನನ್ ಎಂಬವರು ಆರೋಪಿಗಳಾಗಿದ್ದಾರೆ [illegible] ಆರ್ [illegible] ತಿಂದಿಗಳಿಗೆ ಸರಬರಾಜು ಮಾಡುತ್ತಿದ್ದ ಪುಸ್ತಕದಲ್ಲಿ ತುಪ್ಪ [illegible] ಮೊದಲಾದವುಗಳನ್ನು [illegible] ಪಂಚನೆ ನಡಿಸಿದ್ದಾರೆಂಬುದೇ ಆರೋಪ. ಮೆಜಿಸ್ಟ್ರೇಟರಿಂದ ಚಾರ್ಜ ಮಾಡಲ್ಪಟ್ಟು ಈಗ ಸರಕಾರೀ ಕಡೆಯ ಸಾಕ್ಷಿದಾರರ ಪ್ರತಿಸವಾಲು ನಡೆಯುತ್ತಿದೆ

ಗ್ರಾಮ ಮುನ್ಸೀಫನ ನಿರ್ಮಾಣ.

ಇದೇ ತಾ 10ರಲ್ಲಿ ಒಂದು ಕೊಲೆಯ ಸಂಬಂಧದ ಆರೋಪಿ ಪೆದ್ದ ತಿಮ್ಮ ರೆಡ್ಡಿಯೆಂಬವನನ್ನು ಬಿಡುಗಡೆ ಮಾಡುತ್ತಾ ಕರ್ನೂಲಿನ ಸೆಶ್ಶನ್ಸ್ ಜಡ್ಜರು ಈ ಮೊಕದ್ದಮೆಯ ನಿರ್ಮಾಪಕರನ್ನು ಕಠಿಣವಾಗಿ ಟೀಕಿಸಿ ಮುಳ್ಳು ನಿರ್ಮಾಣವೆಂದು ತೀರ್ಪಿತ್ತಿರುವರು. ತನ್ನ ಭಾವ ನೆಂಟನಿಗೆ ಒಂದು ತುಂಡು ಆಸ್ತಿಯನ್ನು ಕೊಡಬೇಕೆಂಬ ಕುರಿತು ತಿಮ್ಮ ರೆಡ್ಡಿಗೂ ಅವನ ತಮ್ಮ ನಾಗಿ ರೆಡ್ಡಿಗೂ ಮನಸ್ತಾಪ ಬಂದು ತಿಮ್ಮ ರೆಡ್ಡಿ ಊಟಕೊಂಡವಲ್ಲಿ ಜೂನ್ ತಾ 9ರಲ್ಲಿ ತಮ್ಮನನ್ನು ಕೊಂದು ಹಾಕಿದನೆಂಬುದೇ ಮೊಕದ್ದಮೆಯ ಆರೋಪ. ಆಸ್ತಿಯ ಪಾಲು ಊಟಕೊಂಡದ ಗ್ರಾಮ ಮುನ್ಸೀಫನು ತನ್ನನ್ನು ಬಲಾತ್ಕಾರದಿಂದ ಸಿರ್ಕಂಧದಲ್ಲಿಟ್ಟು ಒಂದು ಖಾಲಿ ಕಾಗದಕ್ಕೆ ತನ್ನ ಹೆಬ್ಬೆಟ್ಟು ಮೊಹರುಗಳನ್ನು ಪಡಕೊಂಡ. ಅದರಲ್ಲಿ ಈ ಮೊಕದ್ದಮೆ ಸಿರ್ಮಿಸಲನುಕೂಲವಾಗುವಂತೆ ತನ್ನ ಫೋರ್ಜರಿ ಹೇಳಿಕೆಯನ್ನು ಬರೆಸಿಕೊಂಡ ಮಾತ್ರವಲ್ಲ, ನಾಗಿ ರೆಡ್ಡಿಯನ್ನು ಕೊಂ[illegible] ಭಾವ ನೆಂಟನನ್ನು (ಅವನೇ ಸರಕಾರೀ ಪರ ಸಾಕ್ಷಿ ಹೇಳುವವನು) ಉಳಿಸುವುದಕ್ಕೂ ಅವನಿಗೆ ಆಸ್ತಿ ತುಂಡನ್ನು ಕೊಡಿಸುವದಕ್ಕೂ ಅನುಕೂಲವಾಗುವಂತೆ ಸಾಕ್ಷಿಗಳನ್ನೆಲ್ಲಾ ಅವನೇ ತಯಾರಿಸಿದ'. ಜಪ್ತ

ದು ಈ ಪಾದವನ್ನೆತ್ತಿ ಹಿಡಿದು ಸಂಬಂಧಪಟ್ಟ ಸ್ಟೇಶನ್ ರೈಟರ್, ಪ್ರೋಲಿಸ್ ಇನ್ಸ್ಪೆಕ್ಟರರೇ ಮೊದಲಾದವರ ವರ್ತನೆಯನ್ನೂ ಕಟುವಾಗಿ ಖಂಡಿಸಿದ್ದಾರೆ.

ಸವೀಸು ಬಿಟ್ಟು ಸಾಕ್ಷಿಯೆ?

ಯುದ್ಧ ವಿಭಾಗದಲ್ಲಿದ್ದ ಬೆಂಗಳೂರಿನ ಸರ್ಜೆಂಟ್ ಮಿಸ್. ರಂ.ಜು.ಲ್ ಖಾ ಎಂಬವಳು ಒಂದು ಸಾಕ್ಷಿನಿಮಿತ್ತ ತಾ 22-5-41 ರಲ್ಲಿ ಕೋರ್ಟಿಗೆ ಹಾಜರಾಗತಕ್ಕದ್ದೆಂದು ಸ್ಥಳೀಯ ಮೆಜಿಸ್ಟ್ರೇಟರ ಸಮನ್ಸ್ ಜ್ಯಾರಿಯಾಗಿತ್ತು ಆದರೆ ಅದೇ ದಿನ ಸೇನಾ ವೇಧಿಕಾರಿಗಳ ಆಜ್ಞೆಯಂತೆ ಆಕೆ ಹೊಸ ಸ್ಥಾನ ಸ್ವೀಕರಿಸಲು ಹಾಜರಾಗಬೇಕಾಗಿದ್ದುದರಿಂದ, ಅವಳು ಸಾಕ್ಷಿಗೆ ಬಾರದೆ [illegible] ಮೆಜಿಸ್ಟ್ರೇಟರು ಆಕೆಯು ತಪ್ಪುಗಾರಳೆಂದು ತೀರ್ಮಾನಿಸಿ [illegible] ರೂ. 115ನ್ನು ತೆರತಕ್ಕದ್ದೆಂದು ವಿಧಿಸಿದರು. ಹೈ ಕೋರ್ಟಿಗೆ ಅಪೀಲಾಗಿ ಮಿಲಿಟರಿ ಅಧಿಕಾರಿಗಳ ಹೇಳಿಕೆಯಂತೆ ಅವಳು ಸಾಕ್ಷಿ ಕೊಡಬೇಕಾದ ದಿನದಲ್ಲೇ [illegible] ಸರ್ವಿಸಿನಲ್ಲಿ ಇರಬೇಕಾಗಿದ್ದುದರಿಂದ ಸಾಕ್ಷಿ ಕೊಡಲು [illegible] ತೀರ್ಮಾನವಾಗಿದೆ.

ರೂ 30,000 ಜುಲ್ಮಾನೆ

ಒಂದು ಕಳ್ಳ ದಾಸ್ತಾನು ಸಂಬಂಧದ ಮೊಕದ್ದಮೆಯಲ್ಲಿ ಕಲ್ಕತ್ತದ ಮೆಜಿಸ್ಟ್ರೇಟರು 5 ಮಂದಿ ಆರೋಪಿಗಳಿಗೆ ಇದೇ ತಾ. 18ರಲ್ಲಿ ಜುಮ್ಲಾ 30,000 ರೂ. ಜುಲ್ಮಾನೆ ವಿಧಿಸಿದ್ದಾರೆ. ಆ ವ್ಯಕ್ತಿ ವೈಸ್ ಸ್ಲಿಪ್ಪಿದೆ ಅಧಿಕ ಪರಿಮಾಣದಲ್ಲಿ ಸಂಗ್ರಹ ಮತ್ತು ಮಾರಾಟಮಾಡುತ್ತಿದ್ದ ಓಂಕ ಮಲ್‌ಎಂಬ ಸಾಹುಕಾರನೊಬ್ಬನೇ ರೂ 15,000 ಜುಲ್ಮಾನೆಗೊಳಗಾಗಿದ್ದಾನೆ. ಕಳ್ಳ ಸಂಗ್ರಹಕ್ಕಾಗಿ ಕಲ್ಕತ್ತದತ್ತ ಕಡೆ ಬಿದ್ದ ಜುಲ್ಮಾನೆಗಳ ಪೈಕಿ ಇದೇ ಅತಿವೆಚ್ಚ ನದೆಂದು ನಂಬಲಾಗಿದೆ. ಪ್ರಾಯಶಃ ಇಡೀ ಹಿಂದುಸ್ಥಾನದಲ್ಲೇ ಇದೊಂದು ದಾಖಲೆ.

ವಿಮಾ ಏಜೆಂಟನ ವಿಶೇಷ ವರ್ತನೆ.

ಕಾಮನ್‌ವೆಲ್ತ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್, ಪೂನಾ ಇದರ ಮೆನೇಜಿಂಗ್ ಏಜೆಂಟನಾಗಿದ್ದ ಶ್ರೀ ರಾಮಚಂದ್ರ ನರಹರ್ ಅಭ್ಯಂಕರರು ಇದೇ 16ರಲ್ಲಿ ಒಂದು ವರುಷದ ಕಠಿಣ ಸಜೆ ಮತ್ತು ರೂ 1000 ಜುಲ್ಮಾನೆಗೊಳಗಾಗಿದ್ದಾರೆ. ಈ ಏಜಂಟರು ಮಾಡಿದ ದ್ರೋಹವೇನೆಂದರೆ 1938ರಿಂದ 40ರ ವರೆಗೆ ಕಂಪೆನಿಯ ಸುಮಾರು 1,20,000ಗಳಿಗೆ ಚಕ್ರ ಸುತ್ತಿದ್ದು. ಕಂಪೆನಿಯ ಬೇರೆ ಬೇರೆ ಏಜೆಂಟರುಗಳಿಗೆ ಕಮಿಶನಿನ ಎಡ್ವಾನ್ಸ್ ಆಗಿ ಸಂದಾಯದ, ಬೇರೆ ವಿಧದಿಂದಲೂ ಹಣವನ್ನು 'ಡೆಬಿಟ್'ಮಾಡುತ್ತಾ ಬಂದು ತನ್ನ ಸ್ವಂತಕ್ಕಾಗಿ ಉಪಯೋಗಿಸಿಕೊಳ್ಳುತ್ತಿದ್ದನಂತೆ ಅಭ್ಯಂಕರ ಅಪೀಲು ಇದೆಯಾದ್ದರಿಂದ ಈಗ ಜಾಮೀನಿನಲ್ಲಿ ಬಿಡಲ್ಪಟ್ಟಿದ್ದಾರೆ

ಯಿವರ್ಗಾಳಿ-ಮಾಮೂಲು ಪೇಟೆಗೆ ನಡೆಯುವ ಸೀಮೆಯ ಕಂಬಳವು ತಾ. 5-12-41ನೇ ಮಂಗಳವಾರ ದಿನ ಜರುಗುತ್ತದೆಂದೂ, ಓಟದ ಕೋಣಗಳಿರುವ ಮಹನೀಯರು ತಮ್ಮ ಓಟದ ಕೋಣಗಳನ್ನು ಸದರಿ ಕಂಬಳಕ್ಕೆ ಕಳುಹಿಸಿಕೊಡಬೇಕೆಂದೂ ಸಂಬಂಧಪಟ್ಟವರು ವಿನಂತಿಸುತ್ತಾರೆ. ಗೆದ್ದ ಕೋಣಗಳಿಗೆ ಬಹುಮಾನವಿದೆ.

Navabharat Book Depot Udipi South India   Navabharat Book Depot Udipi South India

ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು.

		ರೂ. ಆ. ಮೂರು ಪ್ರಹಸನಗಳು	0 14	ವಿರೇಥಿ [illegible]	0-2
ಸುಲಭದಲ್ಲಿ ಇಂಗ್ಲಿಷ್	1-4	ಸ್ವತಂತ್ರ ಜೀವನೋಪಾಯ	0 3	ವತ್ಸಲಾ	0 8
ಯುವಕರಿಗೆ ಮತ್ತು ವಯಸ್ಕರಿಗೆ		ಪುರುಷವಧು	0 4	● ಕವಿತೆಗಳು	
ಸುಲಭವಾಗಿ ಇಂಗ್ಲಿಷನ್ನು ಅನ್ಯ		ಹೆಂಡ್ತಿ ಗಂಡನ-ಎರೆ	0 4	[illegible]	0 12
ಸಹಾಯವಿಲ್ಲದೆ ಕಲಿಯುವ ಇಂಗ್ಲಿಷ್ ಸ್ವಯಂಬೋಧಿನಿ,		● ಕತೆಗಳು		ಮುಗುಳು	0-3
		ನಗೆನೋಟಗಳು	0 14	ಪ್ರೇಮಮಯಿ	1-0
● ನಾಟಕಗಳು		ಅನ್ನದೇವರು		ಪುರಂದರದಾಸರ ಕೀರ್ತನೆ	1-0
ಪ್ರೇಮವಿಜಯ	0 12	ಮತ್ತು ಇತರ ಕಥೆಗಳು	1 0	ಭಗವದ್ಗೀತಾ (ಮೂಲ-ಸಟೀಕ ಬೈಂಡು)	1-4
ದೇಶಭಕ್ತ	1-4	ಭಾರತೀಯ ಕತೆಗಳು	0-14	● ಇತರ ಪುಸ್ತಕಗಳು	
ವ್ಯಭಿಚಾರಿಣಿ ಯಾರು	0-12	ನಂದಾದೀಪ	0 10	ಮುಂದಿನ ದೇವರು	0 3
ಕುಶಲವ	0-5	ನಾಡಕತೆಗಳು	0-3	ರಾಷ್ಟ್ರಕಥೆಯ ಇತಿಹಾಸ	2 8
ಸಂಶಯ ಪಿಶಾಚಿ	0-8	ಕಂದೂಕಾಚಾರ್ಯ ನೀತಿಗಳು	1 8	[illegible]	0-3
ರಂಗಭೂಮಿ	0-8	ನಾರೀಹೃದಯ	0 14	ಮಿತಸಂತತಿ	0-6
ಪ್ರಕಾಶ	1-12	ಅಂತರಂಗದ ಕತೆಗಳು	0-10	ವಿಜ್ಞಾನ [illegible]	0-8
ಧರ್ಮಸಂಕಟ	0-4	ಪ್ರೇಮಪ್ರವಾಹ	0 6	ಮಂಸಪೂರಿತ ಪಟ್ಟಣಗಳು	1-8
ಆರೋಗ್ಯ ಪ್ರತಾಪ	0 12	ಆಹುತಿ ಇತ್ಯಾದಿ ಕತೆಗಳು	0 12	ಚಿಗುರು	0 6
ಪಂಚಾರತಿ	0 6	ಲೋಪಾಮುದ್ರೆ	0-6	ಇತರ ಪುಸ್ತಕಗಳ ಕೆಟಲಾಗಿಗೆ	
ಪ್ರತೀಕಾರ	0 6	● ಕಾದಂಬರಿಗಳು		0-2 0ಸ್ಟಾಂಪಿಟ್ಟು ಬರೆಯಿರಿ.	
ಸೇವಾಪಥ	0-8	ಸನ್ಯಾಸಿಯ ಸೋಗಿನಲ್ಲಿ	0-8		

ನವಭಾರತ ಪುಸ್ತಕ ಭಂಡಾರ, ರಿಜಿಸ್ಟರ್ಡ್ ಪಬ್ಲಿಶರ್ಸ್, ಉಡುಪಿ. ದ. ಕ.

The Canara Banking Corporation Limited.

(Incorporated in British India)

Estd 1906.

Head Office UDIPI, (S K)

ANNOUNCEMENT

Branches of the Bank Will Shortly Be opened at **HUBLI & DHARWAR.**

ಉಡುಪಿ, ಗುರುವಾರ, ೨೩ ೧೧-೧೯೪೪

ನಿರ್ಜೀವ ವಾತಾವರಣ

ಇದು ವರೆಗಿನ ಚರಿತ್ರೆಯಲ್ಲಿ ಇದ್ದಿರದ—ಮುಂದ ಎಂದೆಂದಿಗೂ ಇಂತಹದಿಲ್ಲವನ್ನಿಸಿಬಿಡಬೇಕೆಂದು ಸರ್ವರ ಶಪಥವಿರುವ—ಒಂದು ಮಹಾ ದುರಂತಕ್ಕೆ ಸಿಕ್ಕಿ ಪ್ರಸಂಚವಿಂದು ಒದ್ದಾಡುತ್ತಿದೆ ಇಂದಿನ ಕಡುಗಾಲವನ್ನು, ಯುದ್ಧ ಸ್ಥಿತಿಯನ್ನು ನಾವು ಬೇಕಾದಷ್ಟು ಬೈಯ್ಯಬಹುದು ಆದರೆ ವರ್ತಮಾನಕಾಲವು ಭೂತಭವಿಷ್ಯತ್ಕಾಲಗಳೆರಡನ್ನೂ ಒಂದು ವಿಷಯದಲ್ಲಿ ಹಂಗಿಸಬಲ್ಲುದೆಂಬುದನ್ನು ಮರೆಯಬಾರದು ಇಂದಿನವರ ಪಾಲಿಗೆ ಹಿಂದಿನವರಿಗಿಲ್ಲದಿದ್ದಂತಹ – ಮುಂದಿನವರಿಗಿರಲಾರದಂತಹ ಅಪೂರ್ವಾದ್ಭುತಗಳನ್ನು ಸಾಧಿಸುವ ಸುಯೋಗವುಂಟು. ಒದಗಿ ಬಂದಿದೆ ಮನುಷ್ಯವರ್ಗದ ಶಕ್ತಿ ಚಾತುರ್ಯಗಳ ಪ್ರದರ್ಶನಕ್ಕೆ ವಾತಾವರಣದ ಅನುಕೂಲತೆಯಂತಹ ಬೇರೊಂದು ಬೆಂಬಲವಿಲ್ಲ. ಆದ್ದರಿಂದಲೇ ಶಾಂತಿಕಾಲದಲ್ಲಿ ಮಹಾರಾಷ್ಟ್ರಗಳಿಗೂ ಅಸಾಧ್ಯವಾಗಿದ್ದ ಅದ್ಭುತಗಳನ್ನು ಯುದ್ಧಕಾಲದಲ್ಲಿ ಅಲ್ಪ ಶಕ್ತಿಯ ಅಲ್ಪ ಜನಸಂಖ್ಯೆಯ ರಾಷ್ಟ್ರಗಳು ಪ್ರದರ್ಶಿಸುತ್ತಿವೆ ಗಾಂಧೀಜೀಯಂಥವರು ಲೋಕದಲ್ಲಿ ಬರ್ಬರ ನೀತಿಯಿದೆ ಎಂದು ಕುದಿಯುತ್ತಿರಬಹುದು, ಯುದ್ಧೋನ್ಮತ್ತ ದಗಾಖೋರರಿಂದಾಗಿ ಲೋಕಸ್ಮಶಾನವಾಗುವಂತಾಯಿತು ಎಂಬ ಚರ್ಚಿಲ್ ಅಭಿಪ್ರಾಯವು ಹೆಚ್ಚಿನವರಲ್ಲಿರಬಹುದು ಹೇಗಿದ್ದರೂ ಲೋಕವಿಂದು ಸಚೇತನವಾಗಿದೆ ಎಂಬುದನ್ನೊಪ್ಪಬೇಕು. ಲೋಕದ ಸರ್ವ ರಾಷ್ಟ್ರಗಳ ಸರ್ವಜನಾಂಗಗಳ ಸರ್ವಶಕ್ತಿಯೂ ಇಂದು ಪ್ರಯೋಗದಲ್ಲಿದೆ ಎಂಬುದು ಸತ್ಯ. ಯುದ್ಧನಿಘಂಟುವಿನಲ್ಲಿ 'ನಿಷ್ಕ್ರಿಯೆ' ಎಂಬ ಪದವೇ ಇಲ್ಲ ಆದರೆ ಹಿಂದುಸ್ಥಾನವೊಂದ ಇದಕ್ಕಪವಾದ! ಯಾವ ರಾಷ್ಟ್ರವನ್ನು ಕಂಡರೂ ಅದು ಒಂದಲ್ಲೊಂದು ಹಾದಿ ಹಿಡಿದಿದೆ; ಒಳ್ಳೆಯದನ್ನು ಅಥವಾ ಕೆಟ್ಟದನ್ನು ಮಾಡುತ್ತಿದೆ. ಆದರೆ ಹಿಂದುಸ್ಥಾನವೇನು ಮಾಡುತ್ತಿದೆ, ಎಂಬ ಪ್ರಶ್ನೆಯನ್ನು ಹಿಂದೀಯರೇ ಉತ್ತರಿಸಲಾರರು. ಇನ್ನು ಚರಿತ್ರೆಯಲ್ಲಿ ಅದು ಉಲ್ಲೇಖಿಸಲ್ಪಡುವದಾದರೂ ಏನೆಂದು?

ಅಥವಾ ಚರಿತ್ರೆಯಲ್ಲಿ ಭಾರತವು ಸ್ಥಾನಪಡೆಯಬಹುದಾದರೆ ಬರಗಾಲದ ದುರ್ಮರಣಗಳಿಗಾಗಿ, ಸಾಮೂಹಿಕ ದಿಗ್ಬಂಧನಗಳಿಗಾಗಿ ಅರ್ಥಾತ್, ಬೆಂಕಿಬಿದ್ದಲ್ಲೇ ಇದ್ದರೂ ಅದನ್ನು ನಂದಿಸಲಾಗದೆ ಅಥವಾ ಅದರಿಂದ ತಪ್ಪಿಸಿಕೊಂಡು ಓಡಲಾಗದೆ ಇದ್ದಲ್ಲೇ ಇದ್ದು ಬೆಂದು ಹೋದ ನಿಷ್ಕ್ರಿಯೆಗಾಗಿ' ನಮ್ಮಲ್ಲೆಷ್ಟೇ ಸ್ವಾಭಿಮಾನವಿದ್ದರೂ ನಮ್ಮ ಈ ದೌರ್ಬಲ್ಯವನ್ನು ಒಪ್ಪಿಕೊಳ್ಳದಿರಲಾಗುವದೆ? ಈಗ ನಿರೀಕ್ಷೆಯಲ್ಲಿರುವ ಗಾಂಧೀಜೀಯ ಉಪವಾಸವು ಎಲ್ಲವನ್ನೂ ಸುಧಾರಿಸಿಬಿಡುವದೆಂದು ಬಯಸಿದರೆ ಹೆಚ್ಚಾದೀತು; ಆದರದು ನಮ್ಮ ಈ ದೌರ್ಬಲ್ಯವನ್ನು ಲೋಕದೆದುರು ಸ್ಪಷ್ಟೀಕರಿಸಿ ಪ್ರದರ್ಶಿಸಲಿದೆ ಎಂಬುದನ್ನು ಮರೆಯಬಾರದು

ಏನಿಲ್ಲದಿದ್ದರೂ ಭಾರತೀಯರಲ್ಲಿ ಹೃದಯವಿದೆ ಆದ್ದರಿಂದ ಮಹಾತ್ಮರ ಉಪವಾಸ ಸೂಚನೆಬಂದಂದಿನಿಂದ ಭಾರತದಲ್ಲಿ ಆತುರ ಕಳವಳವೆದ್ದಿದೆ. ಗಾಂಧೀಜೀಯನ್ನು ಮೇಲ್ದರ್ಜೆಯ ರಾಜಕೀಯ ನಾಯಕನೆಂದು ಅಂಗೀಕರಿಸುವ ಮೊದಲು ಆಲೋಚಿಸಲಿಕ್ಕಿದೆ. ಆದರೆ ಅವರ ವರ್ತನೆಗಳಿಗೂ ದೇಶಸ್ಥಿತಿಯ ಪರಿವರ್ತನೆಗಳಿಗೂ ನಿಕಟ ಸಂಬಂಧವಿದೆ ಎಂಬುದನ್ನು ಅಲ್ಲಗಳೆಯಲಾಗುವದಿಲ್ಲ ಮಹಾತ್ಮರ ಅನಶನದಂತಹ ವ್ರತವು ದೇಶವಿದೇಶಗಳ ರಾಜಕೀಯವಾದಿಗಳಿಗೆ ಏನೋ ಒಂದು ಮಾಯೆಯಂಬಂತೆ ಕಾಣುತ್ತಿದೆ, ಆದರದು ದೇಶಸ್ಥಿತಿಯ ಪ್ರತಿಛಾಯೆ ಉದ್ಯೋಗವಿಲ್ಲದಾಗ ಉಪವಾಸ-ಎಂಬ ರಾಷ್ಟ್ರೀಯ ನಿಷ್ಕ್ರಿಯೆಯ ಪರಿಣಾಮವು ಗಾಂಧಿಜೀಯ ಮೂಲಕ ಪ್ರದರ್ಶಿಸಲ್ಪಡಬೇಕು 'ಉಪವಾಸ ಬೇಡ' ಎಂದು ಕೂಗುತ್ತಿರುವವರೆಲ್ಲಾ ದೇಶ ಮತ್ತು ಗಾಂಧಿಯೊಳಗಿನ ಈ ಸಂಬಂಧವನ್ನು ಕಡಿದು ಹಾಕಲು ನೋಡುತ್ತಿದ್ದಾರೆ, ಅನೇರಿಯವರ ಅಪರಾಧವನ್ನೇ ಇವರೂ ಮಾಡುತ್ತಿದ್ದಾರೆ' ಅಂಥವರು ತಮ್ಮ ದೃಷ್ಟಿಕೋನವನ್ನು ಬದಲಾಯಿಸಿ ಮಹಾತ್ಮರ ಮೇಲಿನ ವ್ಯಕ್ತಿಗೌರವಕ್ಕಿಂತಲೂ, ದೇಶದ ಇಂದಿನ ರೋಗವವೇ ಹೆಚ್ಚಿನದೆಂಬುದನ್ನು ಕಾಣಬೇಕು ತಮ್ಮ ದೇಶಸ್ಥಿತಿಗೆ ಹೊಂದಿಕೊಳ್ಳುವ ಬದಲಿಗೆ, ತನ್ನ ಆತ್ಮಪ್ರೇರಣೆಯಂತೆ ತಾನಾದರೂ ತಾಗಿಕೊಳ್ಳುವೆನೆಂದು ಬಯಸುವ ಒಬ್ಬ ಗಾಂಧಿಜೀಯನ್ನೂ ತಡೆದಿಟ್ಟು ಇಂದಿನ ದುಸ್ಥಿತಿಯನ್ನು ಸ್ಪರ್ಶಿಸುವವರು ಕೂಡಾ ಇಲ್ಲದಂತೆ ಮಾಡಬಾರದು ಹೀಗನ್ನುವಾಗ 'ಉಪವಾಸದಿಂದಲೇ ಉದ್ಧಾರ' ಎಂದು ನಮ್ಮ ಭಾವನೆಯಲ್ಲ. ಮೇಲೆ ಹೇಳಿದಂತೆ ಗಾಂಧಿಜೀಯ ಉಪವಾಸವು ಸದ್ಯಸ್ಥಿತಿಯ ಒಂದು ಪರಿಣಾಮ ಅಥವಾ ಪ್ರತಿಬಿಂಬ ಸ್ಥಿತಿಯನ್ನು ಬದಲಾಯಿಸದೆ ಅದರ ನೆರಳನ್ನು ತಿದ್ದುವದು ಅಸಾಧ್ಯ ಮತ್ತು ಅಪಹಾಸ್ಯಕರ. ಗಾಂಧಿಜೀ ದೇಶದ ಕಡೆಗೆ ನೋಡುತ್ತಿರುವಾಗ ದೇಶವು ಗಾಂಧಿಜಿಯ ಕಡೆಗೆ ನೋಡಿ ದೃಷ್ಟಿಯುದ್ಧಕ್ಕೆ ನಿಲ್ಲುವದಲ್ಲ. ಅವರು ತನ್ನ ಉಪವಾಸಕ್ಕೆ ತಡೆಯಾಗಬಲ್ಲ ವಿಧಾಯಕ ಕಾರ್ಯಕ್ರಮಗಳನ್ನು ಸೂಚಿಸಿದ್ದಾರೆ. ಹಿಂದೀಯರೆಲ್ಲರ ದೃಷ್ಟಿಯು ಆ ಕಡೆಗೆ ತಿರುಗಬೇಕು; ಸರ್ವ ಶಕ್ತಿಯೂ ಆ ಕಾರ್ಯಾಚರಣೆಯಲ್ಲಿ ವಿನಿಯೋಗವಾಗಬೇಕು. ನಾವು ಗಾಂಧೀಭಕ್ತರಾಗುವ ಬದಲಿಗೆ ಕಾರ್ಯಾಸಕ್ತರಾಗಬೇಕು ದೇಶದ ಇಂದಿನ ನಿಸ್ಸಹಾಯಕ ಸ್ಥಿತಿಯೆಂಬ ಕರಿಕಟ್ಟೆಡ ಮತ್ತು ಅದರ ಕಳಶವಾಗಿರುವ ಗಾಂಧಿಜೀಯ ಉಪವಾಸವನ್ನು ಒಟ್ಟೊಟ್ಟಿಗೆ ಕೆಡಹುವ ಉಪಾಯ ಇದೇ.

ಬಿಡಿನುಡಿ

ನಮ್ಮ ಜಿಲ್ಲೆಯ ಪ್ರತಿನಿಧಿಗಳಾದ ಶ್ರೀ ಕೆ. ಬಿ. ಜಿನರಾಜ ಹೆಗ್ಡೆಯವರು ಈ ಬಾರಿಯ ಕೇಂದ್ರ ಎಸೆಂಬ್ಲಿಯಲ್ಲಾಡಿದ ಒಂದೆರಡು ಮಾತುಗಳು ಮನನೀಯವಿವೆ

'ಅಧಿಕಾರಿಗಳು ಅಕ್ಕಿ ಬತ್ತ ಸಂಗ್ರಹಕ್ಕಾಗಿ ರಿಜರ್ವ್ ಪೋಲೀಸರೊಂದಿಗೆ ಹೋಗಿ ಹಳ್ಳಿಗರನ್ನು ಬೆದರಿಸುತಿದ್ದಾರೆ' ಎಂದು ಹೆಗ್ಡೆಯವರ ದೂರು

ತಾವು ಜನ ರಿಜರ್ವ್ ಮಾಡಿಟ್ಟಂತೆ ಹಳ್ಳಿಗರು ಧಾನ್ಯ ರಿಜರ್ವ್ ಮಾಡಿಟ್ಟರಬೇಕೆಂದು ಅಧಿಕಾರಿಗಳೂಹಿಸುವದು ಸಹಜ

ಇಂತಹ ಧಾಳಿಗಳಿಂದ ಮತ್ತೊಂದು ಉಪಕಾರವೂ ಇದೆ

ಈ ಕಾಲದಲ್ಲಿ ರೈತರೆಲ್ಲಾ ಉದರಾಗ್ನಿಯಿಂದ ಕುದಿಯುತಿದ್ದಾರೆ.

ಅಧಿಕಾರಿಗಳು ಹೋದಾಗ ಈ ಅಗ್ನಿಕುಂಡಗಳು ಇದಿರಿಗೆ ಬರುವದು ಹಿತಕರವಲ್ಲ ರಿಜರ್ವ್ ಪೋಲೀಸು ಹೋದೊಡನೆ ಅಡಗಿಸಿಕೊಂಡ ಭತ್ತ ಮುಂದೆ ಬಾರದಿದ್ದರೂ ರೈತರು ಅಡಗಿಕೊಳ್ಳುತ್ತಾರೆ.

× × ×

"ರೈತರಂದರ ಚಿನ್ನದ ಮೊಟ್ಟೆಯಿಡುವ ಬಾತುಕೋಳಿಗಳು. ಒಮ್ಮೆಯೆ ಮೊಟ್ಟೆಗಳನ್ನೆಲ್ಲಾ ಪಡೆಯ ಬೇಕೆಂಬ ದುರಾಶಯಿಂದ ಅವುಗಳ ಹೊಟ್ಟೆ ಸೀಳಬೇಡಿ"—ಸರಕಾರಕ್ಕೆ ಹೆಗ್ಡೆಯವರ ಸದುಪದೇಶ

ಇದು ದ. ಕ ಜಿಲ್ಲೆಯ ರೈತರ ಬಯಕೆಯಲ್ಲ

ರೈತರಿಗೀಗ ಅವರ ಹೊಟ್ಟೆಯೇ ಅತಿ ದೊಡ್ಡ ವೈರಿ.

ಇಂತಹ ವೈರಿಯನ್ನು ಸೀಳುವವರಿಗೆ ರೈತರು ಧನ್ಯವಾದ ಕೊಟ್ಟಾರು.

× × ×

ಕಳದ ತಾ 10ರಲ್ಲಿ ಸೇರಿದ ದ. ಕ ಜಿಲ್ಲಾ ಬೋರ್ಡು ಸಭೆಯಲ್ಲಿ 'ಸಭೆಯ ಕಾರ್ಯಕಲಾಪಗಳ ಕನ್ನಡದಲ್ಲಿ ನಡೆಯಬೇಕು' ಎಂಬ ನಿರ್ಣಯ ಬಂತು

ಈ ಸೂಚನೆಯನ್ನು ವಿರೋಧಿಸಿದವರು ಅದನ್ನು ತಂದವರಿಗರ್ಥವಾಗದಂತೆ ಮಲೆಯಾಳದಲ್ಲಿ ಮಾತಾಡಿದರು

ಇದು ತುಳುನಾಡಾದ್ದರಿಂದ ತುಳುವಿನಲ್ಲೇ ನಡೆಯಲಿ' ಎಂದು ಮತ್ತೊಬ್ಬರಂದರು

'ನನಗೆ ಅರ್ಥವಾಗುವದು ಇಂಗ್ಲಿಷು ಮಾತ್ರ' ಎಂದೋರ್ವ ಆಫೀಸರರಂದರು.

'ಇಂಗ್ಲಿಷಿನಲ್ಲಿ ಮಾತಾಡಿದುದು ಅರ್ಥವಾಗದುದರಿಂದಲೇ ಹಿಂದಿನ ಪಂಚಾಯತ ಆಫೀಸರರ ಕುರಿತು ನಡೆದ ಚರ್ಚೆಯಲ್ಲಿ ನಾವು ತಟಸ್ಥರಿರುವಂತಾದುದು' ಎಂದು ಬೇರೊಬ್ಬರ ಮಾತು

ಕೊನೆಗೆ ಆ ನಿರ್ಣಯದ ಬದಲಿಗೆ 'ಆದಷ್ಟು ಮಟ್ಟಿಗ ಕನ್ನಡ ಮಾತಾಡಬೇಕು ಎಂಬ ತತ್ವ' ಸ್ವೀಕಾರವಾಯಿತು.

'ಆದಷ್ಟು ಮಟ್ಟಿಗೆ ಕಮ್ಮಿ ಮಾತಾಡಬೇಕು' ಎಂಬ ತತ್ವವು ಮುಂದಿನ ಅಧಿವೇಶನದಲ್ಲಾದರೂ ಸ್ವೀಕಾರವಾಗದಿದ್ದರೆ ಕಷ್ಟ.

ಅಥವಾ ಪರಸ್ಪರ ಅರ್ಥವಾಗದಂತೆ ಈ ದಿನದ ಸಭೆಯಂತೆ ಇನ್ನು ಮುಂದೆಯೂ ಒಬ್ಬೊಬ್ಬರೊಂದೊಂದು ಮಾತಾಡಬೇಕು

× × ×

ಜಿಲ್ಲೆಯಲ್ಲಿ ಊಟದ ದರಕ್ಕೂ ನಿಯಂತ್ರಣವಾಗಿದೆ ನಾಲ್ಕಾಣೆಯಲ್ಲಿ ಊಟ ಹಾಕಬೇಕು.

ಹೊಟೆಲಿನವರು ಹಾಕಬಲ್ಲರೋ ಎಂಬ ಅನುಮಾನ ಬೇಡ–ನಿಯಂತ್ರಣದಿದಿರು ನಿರುತ್ತರ.

ಅವರು ನಾಲ್ಕಾಣೆಯೂಟ ಬಡಿಸಿದರೆ ಗಿರಾಕಿಗಳು ಉಣ್ಣಬಲ್ಲರೋ. ಎಂಬ ಪ್ರಶ್ನೆ ಮಾತ್ರವಿದೆ

ಆದರೆ ನಾಲ್ಕಾಣೆಯ ಊಟ ಬಂದು ಆರಾಣೆ, ಎಂಟಾಣೆ, ರೂಪಾಯಿ ಊಟಗಳನ್ನು ವಜಾ ಪಡಿಸಿದಂತೆ ಕಾಣುವದಿಲ್ಲ

ಈ ಆಜ್ಞೆಯಿಂದ ಒಂದು ಹೊಸ ವರ್ಗದ ಅಡುಗೇ ವ್ಯವಸ್ಥೆಯಾಯಿತು ಮಾತ್ರ

ಇದೊಂದು ನಿರ್ವಾಣವೆಂದು ಸಂತೋಷ ಪಡಿ-ನಿಯಂತ್ರಣವೆಂದು ಹೆದರಬೇಡಿ

'ನಾಲ್ಕಾಣೆಯ ಊಟವನ್ನೆ ಎಲ್ಲರೂ ಉಣತಕ್ಕದ್ದು' ಎಂಬ ನಿಯಂತ್ರಣ ಬಂದರೆ ಮಾತ್ರ ಹೆದರಬೇಕು.

—ಬೀದಿವಾಲ

NOTICE.

ಕುಂದಾಪುರ ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟನಲ್ಲಿ

S. C No 436/1944

ವಾದಿ—ದೇವಣ್ಣ ಯಾನೆ ಸುಬ್ರಾಯ ಪೈ ನರಸಿಂಹ ಪೈಗಳ ಮಗ, ಕುಂದಾಪುರ ಕಸಬಾ ನಿವಾಸಿ

ಪ್ರ —ವೆಂಕಟರಮಣ ಕಲ್ಕೂರ, ಮಟಪಾಡಿ ಶಿವರಾಮ ಕಲ್ಕೂರರ ಮಗ ೩

ಸದ್ರಿ ಪ್ರತಿವಾದಿಗೆ ತಿಳುಹಿಸುವುದೇನೆಂದರೆ.

ನೀವು ನನಗೆ ಬರೆದುಕೊಟ್ಟ ಡಿಮಾಂಡ ನೋಟಿನ ಅಸಲುಬಡ್ಡಿ ರೂಪಾಯಿ 267-7-0 ಬರಮಾಡಿಕೊಳ್ಳುವರೆ ನಾನು ಮಾಡಿದ ಸವರಿ ದಾವೆಯನ್ನು ತಾ 27 11-44ಕ್ಕೆ ತನಖಿಗೆ ಇಟ್ಟದೆ ನಿಮ್ಮ ಉವಾಪರಣೆ ಇದ್ದರೆ ತಕ್ಕ ಸಮಯದಲ್ಲಿ ಕೋರ್ಟಿಗೆ ಹಾಜೀರು ಮಾಡಬೇಕು ಇಲ್ಲವಾದರೆ ನಿಮ್ಮ ಎಕ್ಸಪಾರ್ಟಿಯಿಂದ ಡಿಕ್ರಿ ಕೊಡಲಾಗುವುದು

ದೇವಣ್ಣ ಯಾನೆ ಸುಬ್ರಾಯ ಪೈ

K. Devanna alias Subraya Pai.
Pltf

ತಾ 21-11-44. ಕುಂದಾಪುರ

ಕೆಂಪು ಸೇನೆ ಪೋಲೆಂಡಿನಿಂದ ಬರ್ಲಿನ್ ವರೆಗೂ ಹೋಗುವದೆ?

ಚೀನದ ಸ್ಥಿತಿ ವಿಷಮವಾಗಿದೆ!

ಯುದ್ಧಗತಿ ಹೇಗಿದೆ ಎಂಬುದನ್ನು, ನಮಗೆ ಬಹುಮಟ್ಟಿಗೆ ಸ್ವಭಾವ ಪರಿಚಯವಾಗಿ ಹೋಗಿರುವ ಮಿತ್ರಪಕ್ಷದ ಯುದ್ಧಸೂತ್ರಧಾರಿಗಳ ಮಾತಿನಿಂದಲೂ ಊಹಿಸಲಾಗುತ್ತದೆ. ಆದ್ದರಿಂದ ಕಳೆದ ವಾರ ಹೊರಬಿದ್ದ ಕೆಲವು ಯುದ್ಧಾಭಿಪ್ರಾಯಗಳನ್ನು ಇಲ್ಲಿ ಕೊಡಲಾಗಿದೆ. ಅಮೇರಿಕನ್ ಜನತೆಗಿತ್ತ ಒಂದು ಹೇಳಿಕೆಯಲ್ಲಿ ಪಶ್ಚಿಮ ರಣರಂಗದ ಸರ್ವ ಸೇನಾನಿ ಜನರಲ್ ಐಸೆನ್ಹೋವರರಂದಿದ್ದಾರೆ: "ಸರ್ವ ಕಾಲಗಳ ಮಟ್ಟಿಗೂ ಗಣನೀಯವಾಗಬಲ್ಲ ಒಂದು ಮಹಾ ವಿಜಯವನ್ನು ಕಳೆದ ಜೂನ್ ತಾ. 6ರಿಂದ ಮಿತ್ರಸೇನೆಗಳು ಸಂಪಾದಿಸಿವೆ. ಅವರು ಒಂದು ಮಿಲಿಯಕ್ಕೂ ಮಿಕ್ಕಿದ ಜರ್ಮನ್ ಸೋಲ್ಜರರನ್ನು ನಾಶ ಮಾಡಿದ್ದಾರೆ". ಜಾಪಾನ್ ಯುದ್ಧದ ಕುರಿತು ಅಮೇರಿಕನ್ ಹಡಗ ಬಲದ ನಾಯಕ ಎಡ್ಮಿರಲ್ ಕಿರ್ನಸ್ಟರ ಮಾತು. "ಕಳೆದ ವರುಷ ನಾವು ಶಾಂತ ಸಮುದ್ರದ ಯುದ್ಧವನ್ನು ಸುಮಾರು ಮೂರು ಸಾವಿರ ಮೈಲಷ್ಟು ಪಶ್ಚಿಮಕ್ಕೂ ಹರಡಿದ್ದೇವೆ ಯುದ್ಧವೀದಿನ ಕಳೆದ ವರುಷ ನಾವು ನಿರೀಕ್ಷಿಸಿದ್ದುದಕ್ಕಿಂತ ಮುಂದೆ ಹೋಗಿದೆ, ಆದರೆ ಯುರೋಪು ಯುದ್ಧ ಮುಗಿದ ಮೇಲೂ ಶಾಂತ ಸಮುದ್ರದಲ್ಲಿ ಸುಲಭದಲ್ಲಿ ವಿಜಯ ದೊರೆಯುವಂತಿಲ್ಲ" ಕಳೆದ ಮೂರು ವರುಷಗಳ ಯುದ್ಧದಲ್ಲಿ ಸುಮಾರು 1 ಮಿಲಿಯ 750 ಸಾವಿರ ಟನ್ನುಗಳಷ್ಟು ಭಾರದ 1400 ಜಾಪಾನೀ ಹಡಗಗಳನ್ನು ಅಮೆರಿಕಾನರು ಮುಳುಗಿಸಿದ್ದಾರಂತೆ. ಆದರೂ "ಪೂರ್ವ ಪ್ರಾಚ್ಯದ ವಿಜಯವು ಸುಲಭದಲ್ಲಾಗಬಹುದೆಂದು ಆಶಿಸಲಾಗುವಂತೆ ಈ ತನಕ ಜಾಪಾನೀ ಶಕ್ತಿಯನ್ನು ನಾವು ಸಾಕಷ್ಟು ನಾಶ ಮಾಡಿಲ್ಲ" ಎಂದು ಅಮೇರಿಕದ ಯುದ್ಧೋಪಕಾರ್ಯದರ್ಶಿಯೇ ಒಪ್ಪುತ್ತಾರೆ. ಈ ಮಾತುಗಳಿಂದ ಮಿತ್ರರ ಪಾಲಿಗೆ ವಿಜಯ ಸ್ಪಷ್ಟವಾಗಿ, ಕೆಲಸ ಮಾತ್ರ ಕಷ್ಟವಾಗಿ ಕಾಣುತ್ತಿರುವಂತಿದೆ.

ಪಶ್ಚಿಮ ರಂಗದಲ್ಲಿ

ಈಗ ಪ್ರತ್ಯಕ್ಷ ರಣರಂಗದ ಕಡೆಗೆ ನೋಡೋಣ. ಕೊನೆಯ ವಾರ್ತೆಯಂತೆ ಪಶ್ಚಿಮ ರಂಗದ ಜರ್ಮನಿ ಗಡಿಯಲ್ಲಿ ನಾಜೀಸೇನೆ ಹಿಂದೆಬಿತ್ತೆಂದೂ ರ್ಹೈನ್ ವಲಯದತ್ತ ಮಿತ್ರಸೇನೆ ಮುಂದೊತ್ತುತ್ತಿದೆಯೆಂದೂ ತಿಳಿದುಬರುತ್ತದೆ. ಅಲ್ಲಿ ತೀವ್ರ ಹೋರಾಟರಂಗವಾಗಿದ್ದ ಮೆಟ್ಸ್ ವಲಯವು ಈಗ ಪೂರ್ಣವಾಗಿ ಮಿತ್ರರ ವಶವಾದಂತಿದೆ. ಜರ್ಮನ್ ಗಡಿಯಲ್ಲಿ ತೀರಾ ಮುಂಭಾಗದ ನಾಜೀ ಪ್ರತಿಭಟನೆಗಳನ್ನು ಅವಿಶ್ರಾಂತವಾಗಿ, ಹಾಗೆ ಅತಿ ಪ್ರಯಾಸದಿಂದ ಮಿತ್ರಸೇನೆಗಳು ಹಿಂದೊತ್ತಿ ಈಗ ಅದರೊತ್ತಿನಲ್ಲಿ ಅದಕ್ಕೂ ಪ್ರಬಲವಾಗಿರಬಹುದಾದ ಜರ್ಮನರ ರ್ಹೈನ್ ರಕ್ಷಣಾ ಲೈನನ್ನು ಸಮೀಪಿಸುತ್ತಿವೆ. ರ್ಹೈನ್ ಪ್ರದೇಶದಲ್ಲಿ ವಿಜಯಹೊಂದದೆ ಮಿತ್ರರು ನೇರಾಗಿ ಜರ್ಮನಿಯೊಳಗೆ ನುಗ್ಗಿದರು ಎನ್ನಲಾಗುವುದಿಲ್ಲ. ಹೀಗೆ ಪಶ್ಚಿಮಗಡೆಯಿಂದ ಮಿತ್ರರೂ ಪೂರ್ವಗಡೆಯಿಂದ ರಶ್ಯಾನರೂ ಜರ್ಮನಿ ನುಗ್ಗಬೇಕಾದರೆ ಪ್ರಥಮತಃ ಇಕ್ಕಡೆಯಲ್ಲೂ ಮಾಡಿಕೊಳ್ಳಬೇಕಾದ ಮುಖ್ಯ ಕೆಲಸಗಳಿವೆ ಎಂದು ಬ್ರಿಟಿಷ್ ಸೇನಾತಜ್ಞನೊಬ್ಬನಂದಿದ್ದಾನೆ. ಅದೆಂದರೆ ಪಶ್ಚಿಮದಲ್ಲಿ ಉತ್ತರ ಹಾಲೆಂಡು ಮಿತ್ರರ ವಶವಾಗಬೇಕು, ಪೂರ್ವದಲ್ಲಿ ಪೂರ್ವ ಪ್ರಶ್ಯವು ರಶ್ಯಾನರ ಕೈಸೇರಬೇಕು. ಇವೆರಡು ಆಯಕಟ್ಟಿನ ಸ್ಥಳಗಳಲ್ಲಿಯೂ ಜರ್ಮನರು ಅಜೇಯ ಪ್ರತಿಭಟನೆ ಕೊಡುತ್ತಿರುವದರಿಂದ ಮಿತ್ರರ ಕೈಸಾಗಿಲ್ಲ.

ರಶ್ಯನ್ ಕಡೆಯಲ್ಲಿ

ಪೂರ್ವ ಪ್ರಶ್ಯದಲ್ಲಿ ಹೋರಾಟವೇ ನಡೆಯುತ್ತಿಲ್ಲ. ಆದರೆ ಮಧ್ಯ ಪೋಲೆಂಡಿನಲ್ಲಿ ರಶ್ಯಾನರು ಪ್ರಬಲ ಸೇನಾಸಂಗ್ರಹ ಮಾಡುತ್ತಿರುವ ವಾರ್ತೆಯು ಜರ್ಮನರನ್ನು ಆತುರಾವೇಗಕ್ಕೀಡುಮಾಡಿದೆ. ಅಲ್ಲಿಂದಾರಂಭಿಸಿ ಬರ್ಲಿನಿನ ವರೆಗೂ ಮುಂದೊತ್ತುವ ಯೋಜನೆಯಿರಬೇಕೆಂದು ಊಹೆ. ಕಾರ್ಯಕ್ಕಲ್ಲದ ಮಾತುಗಳನ್ನಾಡುವದರಲ್ಲಿ ಎಲ್ಲರಿಗಿಂತ ಹಿಂದಿರುವ ಕಾ| ಸ್ಟಾಲಿನರು ತನ್ನ ಇತ್ತೀಚೆಗಿನ ಭಾಷಣವೊಂದರಲ್ಲಿ 'ಕೆಂಪು ಧ್ವಜವು ಬರ್ಲಿನಿನಲ್ಲಿ ಹಾರಾಡುವ ಕಾಲ ಮುಂದಿದೆ' ಎಂದಾಡಿದುದು ಅರ್ಥಗರ್ಭಿತವಿರಬೇಕು. ಇತ್ತ ಹಂಗೇರಿಯ ಮುಖ್ಯ ಪಟ್ಟಣವಾದ ಬುಡಾಪೆಸ್ಟಿನ ಕಡೆಗೆ ಧಾಳಿ ಹೂಡಿದ್ದ ಕೆಂಪುಸೇನೆಯು ಈಗ ಅದನ್ನು ಬಿಟ್ಟು ಈಶಾನ್ಯದತ್ತ ಸರಿಯುತ್ತಿರುವದರಿಂದ ಬುಡಾಪೆಸ್ಟ್ ರಣವೂ ಶಾಂತವಾಗಿದೆ. ಈಶಾನ್ಯಗಡೆಯಲ್ಲಿ ಜರ್ಮನರು ತಮ್ಮ ಸೇನಾ ಸಂಘಟನೆ ಮಾಡಿಕೊಳ್ಳುತ್ತಿರುವದರಿಂದ ಅದನ್ನು ಸೋಲಿಸಿ ಅಥವಾ ತಡೆಗಟ್ಟಿ ಆ ಮೇಲೆ ಬುಡಾಪೆಸ್ಟ್ ನಗರಾಕ್ರಮಣಕ್ಕೆ ಪ್ರಯತ್ನಿಸುವ ಅವಶ್ಯಕತೆಯೊದಗಿದುದೇ ಈ ಬದಲಾವಣೆಗೆ ಕಾರಣ.

ಶಾಂತ ಸಮುದ್ರದಲ್ಲಿ

ಫಿಲಿಪ್ಪೈನ್ಸ್ ದ್ವೀಪಗಳು ತಮ್ಮ ಬಗಲೊಳಗಾದಂತೆಯೇ ಎಂದು ಮಿತ್ರರಿಗಿದ್ದ ಭರವಸೆಯು ಈ ವಾರ ತುಸು ಕುಗ್ಗಿದಂತಿದೆ. ಅವನ್ನು ಸರ್ವ ಶಕ್ತಿಯಿಂದ [illegible] ಕೊಳ್ಳಬೇಕೆಂದು ಜಾಪಾನರು [illegible] ಮಾಡಿಕೊಂಡು ವಿಶೇಷ ಸರಬರಾಯಿ ಪಡಿಸಿಕೊಂಡು ಕಠಿಣ ಹೋರಾಟ ಕೊಡುತ್ತಿದ್ದಾರೆ. ಅಲ್ಲಿಯ ಲೈಟೆ ಮತ್ತು ಸಾಮಾರ್ ದ್ವೀಪಗಳ ಯುದ್ಧ ಮುಗಿದಂತೆಯೇ ಎಂದು ಜನರಲ್ ಮೆಕಾರ್ಥರರ ಕಾರ್ಯಾಲಯದಿಂದ ವರದಿಯಾಗಿದ್ದರೂ ಈಗ ಆ ಕಡೆಗೆ ಜಾಪಾನರ ಸರಬರಾಯಿ ಒದಗುತ್ತಿರುವದರಿಂದ ಅದು ಅವಸರದಿಂದಾಗದ ಮಾತೇ ಸರಿ. ಫಿಲಿಪ್ಪೈನ್ಸ್ ಕಳೆದು ಹೋದರೆ ಡಚ್ ಇಂಡೀಸ್ ಮತ್ತು ಮಲಯಾಗಳ ವ್ಯವಹಾರ ಸಂಬಂಧವು ಜಪಾನರಿಗೆ ಕಳೆದುಹೋಗುವ ಅಪಾಯವಿದೆ. ಆದ್ದರಿಂದ ಅಲ್ಲಿ ಪ್ರಾಣಾವಧಿ ಹೋರಾಟ ಕೊಡುವ ಜಪಾನರು. ಒಂದೆರಡು ಸಂಗತಿ: ಇತ್ತೀಚೆಗೆ ನಡೆದ ಫಿಲಿಪ್ಪೈನ್ಸಿನ ಮಹಾ ನೌಕಾ ಕಾಳಗದಲ್ಲಿ ಜಪಾನರ ವಿಶೇಷ ನೌಕಾ ನಷ್ಟವುಂಟಾಗಿದ್ದರೂ ಅವರಲ್ಲಿನ್ನೂ ತಮ್ಮ ಸಮುದ್ರ ಮಾರ್ಗಗಳನ್ನು ಉಳಿಸಿಕೊಳ್ಳುವಷ್ಟು ಶಕ್ತಿಯುಂಟು.

ಬರ್ಮಾ ಹೋರಾಟ

ಕಳೆದ ವಾರ ಸೇನಾಹೋರಾಟದಲ್ಲಿ ಮಿತ್ರರು ಅತಿ ಹೆಚ್ಚಿನ ಲಾಭಗಳಿಸಿದುದು ಬರ್ಮಾದಲ್ಲೆನ್ನಬೇಕು. ಒಂದೆಡೆಯಿಂದ ಚಿಂಡ್ವಿನ್ ವಲಯದಲ್ಲಿ 11ನೇ ಸೇನೆಯು ಹಲವು ಪ್ರಮುಖ್ಯ ಸ್ಥಳಗಳನ್ನಾಕ್ರಮಿಸಿಕೊಂಡಿದೆ ವೈರಿಗಳ ಅತಿಮುಖ್ಯ ನೆಲ್ದಾಣವಾದ ಕಾಲೆವಾವನ್ನು ವಶಪಡಿಸಿಕೊಂಡುದೊಂದು ಮಹಾ ವಿಜಯ ಆ ಕಡೆಯಿಂದ ಚೀನೀ ಸೈನ್ಯವು ಭಮೋ ನಗರ ಸ್ವಾಧೀನತೆಗಾಗಿ ಮುಂದೊತ್ತುತ್ತಿದೆ ಆ ಚಿತ್ರವನ್ನು ನೋಡಲಾಗ ಬರ್ಮಾ ರಸ್ತೆಯು ಸಿದ್ಧದಲ್ಲೇ ತೆರೆಯಲ್ಪಡುವದೆಂಬ ಆಶೆ ಮೂಡುತ್ತಿದೆ. ಆ ರಸ್ತೆ ತೆರವಾಗುವ ಅವಶ್ಯಕತೆಯೀಗ ಎಷ್ಟಿದೆಯೆಂದರೆ ಅದು ವಿನಹಾ ಚೀನಾ ಬದುಕಲಾರದೆಂಬುದು ಈಗೀಗ ಹೊಳೆಯುತ್ತಿದೆ ದಕ್ಷಿಣ ಚೀನಾ ರಣರಂಗವೀಗ ಪೂರ್ಣ ನಿರ್ಜೀವವಾಗಿದೆ. ಅಲ್ಲಿಯ ಕ್ವಾಂಗ್ಸಿ ಪ್ರಾಂತ್ಯದ ಪ್ರಧಾನ ಪಟ್ಟಣ ಕ್ವೇಲಿನ್ ರಸ್ತೆಯ ವರೆಗೂ ಜಾಪಾನರು ಬಂದಿದ್ದಾರೆ. ಮಾತ್ರವಲ್ಲ ನನ್ನಿಂಗಿನ ಮುಖ್ಯ ಪಟ್ಟಣಗಳ ಸ್ವಾಧೀನತೆಗಾಗಿಯೂ ಮುಂದೊತ್ತುತ್ತಿದ್ದಾರೆ ಆ ಭಾಗದ ಪೂರ್ಣ ಸ್ವಾಧೀನತೆಯೇ ಜಾಪಾನರಿಗೀಗ ಅತ್ಯಗತ್ಯವಾಗಿದೆ ಯಾಕೆಂದರೆ ಅಮೇರಿಕನ್ ನೌಕೆಯು ತಮ್ಮ ಸಮುದ್ರ ಪಥಗಳನ್ನು ತುಂಡರಿಸಿ ಇಟ್ಟರೆ ಇಂಡೋಚೀನಾ, ಥೈಲೇಂಡ್ ಮತ್ತು ಮಲಯಗಳೊಡನೆ ನೆಲ ಸಂಬಂಧವನ್ನಿಟ್ಟುಕೊಳ್ಳುವದೆ ಅದು ಬೇಕು.

ಚೀನದ ದುರವಸ್ಥೆ

ಆದ್ದರಿಂದ ಕಳೆದ ಜುಲಾಯಿಯಿಂದ ದಕ್ಷಿಣ ಮತ್ತು ಮಧ್ಯ ಚೀನಾದಲ್ಲಿ ಅವಿಶ್ರಾಂತವಾಗಿ ಅನಿರ್ಬಂಧವಾಗಿ ಜಾಪಾನೀ ಸೇನೆ ಮುಂದೊತ್ತುತ್ತಾ ಬಂದಿದೆ. ಸಾಕಷ್ಟು ಸೈನ್ಯೋಪಕರಣ ಸರಬರಾಯಿಯಿಲ್ಲದ ಚೀನವು ನಿಸ್ಸಹಾಯವಾಗಿ ಹಿಮ್ಮೆಟ್ಟುತ್ತಾ ಹೋಗಿದೆ. ಅದರ ಆಯಕಟ್ಟಿನ ಸ್ಥಳಗಳಲ್ಲಿ ಯಾವುದನ್ನೂ ಜಾಪಾನು ಬಿಟ್ಟಿಲ್ಲವೆಂದೂ, ವಿಸ್ತಾರಕ್ಷೇತ್ರವಾಗಿರುವದರಿಂದಲೇ ನಾವಿಂದು ರಾಷ್ಟ್ರೀಯ ಚೀನದ ಹೆಸರು ಕೇಳುತ್ತಿದ್ದೇವಲ್ಲದೆ ಬೇರಿಲ್ಲವೆಂದೂ ತಿಳಿದಿರಬೇಕು. ಜಾಪಾನರ ಮೇಲೆ ಧಾಳಿ ನಡೆಸುವದೆ ಮಿತ್ರ ವಿಮಾನಗಳಿಗಾಶ್ರಯ ಸ್ಥಾನವಾಗಿದ್ದ ವಿಮಾನ ನಿಲ್ದಾಣಗಳನ್ನೂ ಜಾಪಾನರು ಕಸಗೊಂಡಿದ್ದಾರೆ. ಇಂತಹ ದುಸ್ಥಿತಿಯುಂಟಾಗಲೇ ಚೀನದ ಆಂತರಿಕ ಕಲಹವೂ ಪ್ರಬಲಗೊಂಡು ಅದೀಗ ವಿಷಮಾವಸ್ಥೆಯಲ್ಲಿದೆ. ಅಲ್ಲಿಯ ಕಮ್ಯೂನಿಸ್ಟರಿಗೂ ಜನರಲಿಸಿಮೋ ಚಿಯಾಂಗ್ ಕೈಶೇಕರಿಗೂ ನಡೆದ ಒಪ್ಪಂದ ಮಾತುಕತೆ ಮುರಿದುಹೋಯಿತು. ಅತಿಪ್ರಬಲ ಕಮ್ಯೂನಿಸ್ಟ್ ಸೇನೆಯ ಉಪಯೋಗವನ್ನು ಚಿಯಾಂಗರು ಪಡೆಯದಂತಾಗಿರುವದು ಮಾತ್ರವಲ್ಲ; ಅದರ ಸಲುವಾಗಿ ತನ್ನ ಸೇನಾ ವಿಭಾಗಗಳನ್ನ ಬಿಡಬೇಕಾಗಿಬಂದಿದೆ ಇಂತಹ ಪರಿಸ್ಥಿತಿಯಿಂದಾಗಿ ಚೀನೀ ಸೇನೆಯು ಪೂರ್ಣವಾಗಿಯಾಗಲೀ ನಿಜ ಮನಸ್ಸಿನಿಂದಾಗಲೀ ಜಾಪಾನರೊಡನೆ ಹೋರಾಡುತ್ತಿಲ್ಲ ಎಂಬ ದೂರನ್ನು ಕೂಡಾ ಕೇಳಬೇಕಾಗಿಬಂದಿದೆ ರಾಷ್ಟ್ರಾಧಿಪನಾದ ಚಿಯಾಂಗರು ವಿದೇಶಿಯರ ವರ್ಚಸ್ಸನ್ನು ಸಹಿಸುವವರಲ್ಲವೆಂಬುದು ಸ್ಟಿಲ್‌ವೆಲ್ ಪ್ರಕರಣದಲ್ಲಿ ಸ್ಪಷ್ಟವಾಗಿರುವ ಚೀನದ ಮಿತ್ರ ರಾಷ್ಟ್ರಗಳಿಗಾದರೂ ಚೀನಾ ಘೋಷಣೆಯು ಪೂರ್ಣ ಸಮ್ಮತವೆನ್ನಲಾಗದಿಲ್ಲ- ಸ್ಟಿಲ್‌ವೆಲ್ಲರು ಚೀನೀ ಸೇನೆಯ ಸರ್ವ ಸೇನಾನಿತ್ವವನ್ನು ಯಾಚಿಸಿದುದಲ್ಲದೆ ಗೃಹ ವ್ಯವಸ್ಥೆಯಲ್ಲೂ ಬೆರಳು ತುರುಕಿಸಲು ನೋಡಿ ಅದಾವುದೂ ನಡೆಯದುದರಿಂದಾಗಿಯೇ ಅಮೇರಿಕಕ್ಕೆ ಹಿಂದೆ ಕರೆಸಲ್ಪಟ್ಟರೆಂಬುದು ಸರ್ವವಿದಿತ ಸಂಗತಿ. ಇವೆಲ್ಲಾ ದುರ್ಘಟನೆಗಳಿಂದಾಗಿ ಚೀನದ ಭವಿಷ್ಯಕ್ಕೆ ಮಬ್ಬು ಕವಿದುಕೊಂಡಿದೆ.



ಸುಮಾರು 11 ವರ್ಷ ಕಾಲ ವಿಜಯ ಬ್ಯಾಂಕಿನಲ್ಲಿ ಏಜಂಟರಾಗಿ ಸೇವೆ ಸಲ್ಲಿಸಿ ಈಗ ತಾನೆ ನಾರ್ದರ್ನ್ ಇನ್ಶೂರೆನ್ಸ್ ಕಂಪೆನಿಯ ಮಂಗಳೂರು ಶಾಖೆಯ ಸೆಕ್ರೆಟರಿಗಳಾಗಿ ನೇಮಕಗೊಂಡು ವಿಮಾಕ್ಷೇತ್ರದಲ್ಲೂ ಈಗಾಗಲೇ ವಿಜಯಶಾಲಿಗಳಾಗಿರುವ ಶ್ರೀ. ಬಿ. ಸಚ್ಚಿದಾನಂದಹೆಗ್ಡೇರು.

ಬತ್ತ, ಅಕ್ಕಿ ಒಪ್ಪಿಸುವ ಅವಧಿ ಮುಂದುವರಿಸಲ್ಪಟ್ಟಿತು

ರಿಕ್ವಿಜಿಶನ್ ಆದ ಬತ್ತವನ್ನು ಬತ್ತವಾದರೆ ತಾ. 15 11 44ರೊಳಗೂ ಅಕ್ಕಿಯಾದರೆ ಪ್ರಥಮ ಕಂತನ್ನು ತಾ. 30 11 44ರೊಳಗೂ ಕೊಡಬೇಕೆಂದಿತ್ತಷ್ಟೆ. ಆದರೆ ಇತ್ತೀಚಿನ ಮಳೆಯಿಂದಾದ ಕಾರಣದಿಂದ, ಅಕ್ಕಿ ಮಾಡಲಿಕ್ಕೂ ಅನಾನುಕೂಲವೆಂದು ಜಿಲ್ಲಾ ಕಲೆಕ್ಟರರ ಗಮನಕ್ಕೆ ತರಲ್ಪಟ್ಟುದರಿಂದ ಈ ಅವಧಿಯನ್ನು ತಾ. 30 11 44 ಮತ್ತು 15 12 44ಕ್ಕೆ ಮುಂದುವರಿಸಲಾಗಿದೆಯೆಂದು ಕಲೆಕ್ಟರರ ಪ್ರಕಟನೆಯಿಂದ ತಿಳಿದುಬರುತ್ತದೆ.

ಪಳ್ಳಿ–ತಾ. 10–11–44ರಲ್ಲಿ ಬೋರ್ಡ್ ಶಾಲಾ ಹೆತ್ತವರ ಕೂಟದ ಸಭೆಯು ಶ್ರೀ| ಸಿ| ವಿಠಲ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಸಮಾರು 500ಕ್ಕೆ ಮಿಕ್ಕಿದ ಜನ ಸಂದಣಿಯೊಡನೆ ಜರಗಿತು. ಮುಖ್ಯೋಪಾಧ್ಯಾಯರು ಶಾಲೆಯ ಮುಂದಿನ ಏಳಿಗೆಯ ಕುರಿತು ಸಹಾಯ ಕೇಳಿಕೊಂಡಂತೆ ಗ್ರಾಮದ ಮಹನೀಯರು ಹೃತ್ಪೂರ್ವಕ ಬೆಂಬಲವನ್ನೀಯುವುದಾಗಿ ಭರವಸೆಯಿತ್ತರು. ಮಕ್ಕಳ ವಿವಿಧ ವಿನೋದಾವಳಿಗಳು ತಿಂಡಿ ಹಂಚುವಿಕೆ, ಅಧ್ಯಕ್ಷರ ಭಾಷಣ, ಮಂಗಲ ಗೀತೆಯೊಂದಿಗೆ ಸಭೆಯು ಮುಕ್ತಾಯವಾಯ್ತು.

ಶ್ರೀ ಶಿವರಾಮ ಕಾರಂತರು–ತಾ. 12ರಲ್ಲಿ ಮುಂಬಯಿಯ 'ದಿ ಮೆಂಗ್ಳೂರಿಯನ್ ಮೇನ್ಯನ್ಸ್' ಎಂಬಲ್ಲಿ 'ಕನ್ನಡ ಸಾಹಿತ್ಯವೂ ಯಕ್ಷಗಾನವೂ' ಎಂಬ ಕುರಿತು ಶ್ರೀ. ಕೂಳೂರ್ಕಾರರ ಅಧ್ಯಕ್ಷತೆಯಲ್ಲಿ ಭಾಷಣವಿತ್ತರು. ರಾತ್ರಿ 'ದಿ ಸೆಂಟ್ರಲ್ ಬೇಂಕ್' ಸಭಾಸದನದಲ್ಲಿ ಜರಗಿದ ಯಕ್ಷಗಾನ ಸಭೆಯಲ್ಲಿ ಭಾಗವಹಿಸಿದರು. ತಾ 14ರಲ್ಲಿ ವೆಂಗರ್ಲೆ ಧರ್ಮಾರ್ಥ ಕೈಗಾರಿಕೆ ಶಾಲೆಯನ್ನು ಸಂದರ್ಶಿಸಿ ಉಪನ್ಯಾಸ ಮಾಡಿದರು. ತಾ. 15ರಲ್ಲಿ ಮುಂಬಯಿಯಿಂದ ಹೈದರಾಬಾದಿಗೆ ತೆರಳಿ ಅಲ್ಲಿಯೂ ತಾ. 16, 19ರಲ್ಲಿ ಬೇರೆಬೇರೆ ಸಂಘಗಳ ಆಶ್ರಯದಲ್ಲಿಯೂ ಭಾಷಣಗಳನ್ನಿತ್ತರೆಂದು ತಿಳಿದು ಬರುತ್ತದೆ.

ಅಖಿಲ ಭಾರತ ರೇಡಿಕಲ್ ಡೆಮೋಕ್ರೇಟಿಕ್ ಪಾರ್ಟಿಯ ವಾರ್ಷಿಕ ಅಧಿವೇಶನ–ವು ಇದೇ ದಶಂಬರ ತಿಂಗಳ ಕೊನೆಯ ವಾರದಲ್ಲಿ ಕಲ್ಕತ್ತೆಯಲ್ಲಿ ಜರಗುವುದು. ಶ್ರೀ| ಎಮ್| ಎನ್| ರಾಯರು ಅಧ್ಯಕ್ಷರಾಗಿ ಚುನಾಯಿಸಲ್ಪಟ್ಟಿದ್ದಾರೆ. ಕಲ್ಕತ್ತಾ ಕಾರ್ಪೋರೇಶನಿನ ಎಕ್ಸ್‌ಕ್ಯೂಟಿವ್ ಆಫೀಸರರಾದ ಶ್ರೀ| ಜೆ| ಸಿ| ಮುಖರ್ಜಿಯವರು ಸ್ವಾಗತ ಸಮಿತಿಯ ಅಧ್ಯಕ್ಷರೂ. ಶ್ರೀ| ನಲಿನೀ ಸೇನ್ ಇವರು ಕೋಶಾಧಿಕಾರಿಗಳಾಗಿಯೂ ಚುನಾಯಿತರಾಗಿರುತ್ತಾರೆ. 5000 ಮಂದಿ ಪ್ರತಿನಿಧಿಗಳಿಗೂ, 15000 ಮಂದಿ ಸಭಿಕರಿಗೂ ಒಳಕೊಳ್ಳಲು ಚಪ್ಪರ, ಬಿಡಾರಗಳ ವ್ಯವಸ್ಥೆಯು ಮಾಡಲ್ಪಡುತ್ತದೆ. 2000ಮಂದಿ "ಪೀಪ್ಲ್ಸ್ ಗಾರ್ಡ್ಸ್" ಎಂಬ ಸ್ವಯಂಸೇವಕರು ಶಿಸ್ತುಗಳನ್ನು ಅಭ್ಯಾಸಮಾಡುತ್ತಿದ್ದಾರೆ 'ಸ್ವತಂತ್ರ ಭಾರತದ ರಾಜ್ಯಾಂಗ ರಚನೆ"ಯನ್ನು ವಿಮರ್ಶಿಸಿ ಅನುಮೋದಿಸುವುದು ಈ ಅಧಿವೇಶನದ ಮುಖ್ಯರಂಗವು.

ಸ್ವೀಕಾರ ವಿಮರ್ಶೆ.

'ಕರ್ನಾಟಕ'– ಶ್ರೀ. ಚಿಕ್ಕೋಡಿ ಅನಂತರಾಯರ ಸಂಪಾದಕತ್ವದಲ್ಲಿ ಬೆಳಗಾಂವಿಯಿಂದ ಗುರುವಾರ ಹೊರಡುವ ವಾರಪತ್ರಿಕೆ ಅಖಿಲ ಕರ್ನಾಟಕದ ಹಿರಿಯರ ಶುಭಾಕಾಂಕ್ಷೆಯೊಂದಿಗೆ ಕಳೆದ ವಿಜಯದಶಮಿಯಿಂದ ಪ್ರಾರಂಭವಾಗಿದೆ. ಸಂಪಾದಕರು ಪತ್ರಿಕೋದ್ಯಮದಲ್ಲಿ ನುರಿತವರಿದ್ದು, ಅಖಿಲ ಕರ್ನಾಟಕಾಭಿಮಾನ ಮತ್ತು ದೇಶಸೇವೋತ್ಸಾಹದಿಂದ ಈ ನೂತನ ಸಾಹಸಕ್ಕೆ ಕೈಯಿಕ್ಕಿದ್ದಾರೆ 'ಕರ್ನಾಟಕ'ದ ಕೆಲವು ಸಂಚಿಕೆಗಳನ್ನು ಕಾಣುವಾಗ ಅದಕ್ಕೆ ಉಜ್ವಲ ಭವಿಷ್ಯವಿದೆಯೆಂಬ ಭಾವನೆಯೂ ಉಂಟಾಗುತ್ತಿದೆ. ಕಾಗದದ ಬರ ಮತ್ತು ಹೊಸ ನಿರ್ಮಾಣಕ್ಕೆ ಸ್ಪಷ್ಟ ಪ್ರತಿಬಂಧವಿರುವ ಈ ದುಷ್ಕಾಲದಲ್ಲಿಯೂ ಇಂತಹ ಹೊಸಹುಟ್ಟನ್ನು ನೋಡುವಂತಾದುದು ಒಂದು ವಿಶೇಷವೇ. ನಮ್ಮ ಸಹವ್ಯವಸಾಯಿಯ ಭವಿಷ್ಯಪಥ ಸುಗಮಗೊಳ್ಳಲಿ, ಅದರ ಉದ್ದೇಶ ಫಲಿಸಲಿ ಎಂದು ಹಾರೈಸುತ್ತೇವೆ.

ಮೈಸೂರು ಪತ್ರ

ಪ್ರಜಾಪ್ರತಿನಿಧಿ ಸಭೆ-- ಮೈಸೂರು ಪ್ರಜಾಪ್ರತಿನಿಧಿ ಸಭೆಯ ಮುಂದುವರಿದ ಅಧಿವೇಶನವು ತಾ. 13-11-44ನೇ ಸೋಮವಾರ ದಿವಾನರಾದ ಪ್ರಧಾನ ಶಿರೋಮಣಿ ಎನ್ ಮಾಧವ ರಾಯರ ಅಧ್ಯಕ್ಷತೆಯಲ್ಲಿ ಸೇರಿತು. ನೂತನ ಮಂತ್ರಿ ಶ್ರೀ ಪುಲ್ಲಾ ರೆಡ್ಡಿಯವರು ಸಭೆಗೆ ಬಂದಿದ್ದರು.

ನೂತನ ಅಧಿಕಾರಿ ಮಂತ್ರಿಗಳನ್ನು ನೇಮಿಸಲು ಸಲಹೆ ಇತ್ತಿರುವ ವಿಚಾರದಲ್ಲಿ ಕಾಂಗ್ರೆಸ್ ಪಕ್ಷದ ಸದಸ್ಯರೂ, ನ್ಯಾಷನಲಿಸ್ಟ್ ಪಕ್ಷದವರೂ, ಹಿಂದೂ ಮಹಾಸಭೆಯ ಶ್ರೀ| ಭೂಪಾಲಂರವರೂ, ಕಾಂಗ್ರೆಸ್ ಅಧ್ಯಕ್ಷರ ಮೇಲೆ ಹಾಕಿರುವ ವಾಗ್ಬಂಧನ ಆಜ್ಞೆಯ ಮೇಲೆ ಚರ್ಚಿಸಲು ಕಾಂಗ್ರೆಸ್ಸಿನವರು ತಂದಿದ್ದ ನಿಲುವಳಿ ಸೂಚನೆಗಳನ್ನೆಲ್ಲಾ ದಿವಾನ ಅಧ್ಯಕ್ಷರು ತಳ್ಳಿಹಾಕಿದರು. ಅದನ್ನು ಪ್ರತಿಭಟಿಸುವುದಕ್ಕಾಗಿ ಕಾಂಗ್ರೆಸ್ ಪಕ್ಷದ ಸದಸ್ಯರೂ, ಶ್ರೀ| ಭೂಪಾಲಂರವರೂ, ಇನ್ನೂ ಬ್ಬ ಸದಸ್ಯರೂ ಸಭಾತ್ಯಾಗ ಮಾಡಿದರು.

ಕೊಬ್ಬರಿ ಮೇಲೆ ಸುಂಕ ಹಾಕಿದ ವಿಚಾರದಲ್ಲಿ ಒಂದ ನಿಲುವಳಿ ಸೂಚನೆ ಚರ್ಚೆಯಾಗಿ ಸರಕಾರಕ್ಕೆ ಸೋಲುಂಟಾಯಿತು.

ಎರಡನೆ ದಿನ ಕೆಲವು ವಿಚಾರದಲ್ಲಿ ಅಧ್ಯಕ್ಷರಿಗೂ, ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿ ಶ್ರೀ|| ಹನುಮಂತಯ್ಯನವರಿಗೂ ಬಿಸಿ ಬಿಸಿ ಚರ್ಚೆಯಾಗಿ ಹನುಮಂತಯ್ಯನವರು ಸಭಾತ್ಯಾಗ ಮಾಡಿದರು. ಮಧ್ಯಾಹ್ನದ ಮೇಲೆ ಕಾಂಗ್ರೆಸ್ ಪಕ್ಷದವರು ಒಂದು ಹೇಳಿಕೆ ಇತ್ತು ಸಭಾಪರಿತ್ಯಾಗಮಾಡಿದರು ಮೂರನೆದಿನದಲ್ಲಿ ನಿರ್ಣಯಗಳು ಚರ್ಚೆಗೆ ಒಂದು. ಬಂಚರು ಹುವತ್ತುಗಳಿಗೆ ಸಮ್ಮಂಧಪಟ್ಟ ನಿರ್ಣಯದಲ್ಲಿ ಸದಸ್ಯರು ಅದನ್ನು ನಿಕ್ಕಿಸಲು ಬೇಕಾದ ಸಲಹೆಗಳನ್ನು ಕೊಟ್ಟರೂ ಸರಕಾರದವರು ನಿರ್ಣಯವನ್ನು ಒಪ್ಪಲಿಲ್ಲ. ಓಟಿಗೆ ಹಾಕಲಾಗಿ ನಿರ್ಣಯ ಬಹುಮತದಿಂದ ಅಂಗೀಕರಿಸಲ್ಪಟ್ಟಿತು. ಆ ನಾಲ್ಕನೆ ದಿನದ ಸಭೆಯಲ್ಲಿ ಸುಗ್ರೀವಾಜ್ಞೆಗೆ ಸಂಬಂಧಪಟ್ಟ ಒಂದು ನಿಲುವಳಿ ಸೂಚನೆ ಬಂದು ಚರ್ಚೆಯಾಯಿತು ನಿರ್ಣಯವನ್ನು ಓಟಿಗೆ ಹಾಕಬೇಕೆಂದು ಕಾಂಗ್ರೆಸ್ ಪಕ್ಷದವರು ಒತ್ತಾಯಪಡಿಸಿದರೂ ಕಾರ್ಯ ವಿಳಂಬ ಮಾಡಿದುದನ್ನು ಪ್ರತಿಭಟಿಸಲು ಕಾಂಗ್ರೆಸ್ಸಿನವರು ಸಭಾ ಪರಿತ್ಯಾಗ ಮಾಡಿದರು. ನಾಲ್ಕು ದಿನಗಳಲ್ಲಿ ಇದು ಮೂರನೆ ಸಲ.

ಮೈಸೂರು ವಿದ್ಯಾರ್ಥಿ ಸಂಘ:– ಮೈಸೂರು ವಿದ್ಯಾರ್ಥಿ ಸಂಘದ ಆರಂಭ ಭಾಷಣವನ್ನು ಮೊನ್ನೆ ಸಾಯಂಕಾಲ ಶ್ರೀ| ಬನುಮಯ್ಯನವರ ಶಾಲಾವರಣದಲ್ಲಿ ಶ್ರೀ| ಕೆ. ಟಿ ಭಾಷ್ಯಂರವರು ಮಾಡಿದರು. ತರುಣ ಮಿತ್ರರಾದ ಶ್ರೀ| ಟಿ ಎಸ್ ಸುಬ್ಬಣ್ಣನವರು ಅಧ್ಯಕ್ಷತೆ ವಹಿಸಿದ್ದರು.

ಖಿದ್ದರ್ ಸೊಸೈಟಿ:—ಮೈಸೂರು ಖಿದ್ದರ್ ಸಂಸ್ಕರ ಸಹಾಯಕ ಸಂಘದ 19ನೇ ವಾರ್ಷಿಕ ಸಭೆಯು ತಾ 12ನೇ ದಿನ ನಡೆದು ಮುಂದಿನ ಸಾಲಿಗೆ ಆದ್ಯ ಮಹನೀಯರುಗಳನ್ನೊಳಗೊಂಡ ಅಧಿಕಾರಿವರ್ಗದ ಚುನಾವಣೆ ನಡೆಯಿತು.

ಶ್ರೀ ಬಿ ಸಾಂಬಮೂರ್ತಿ:—ಮದ್ರಾಸ್ ಶಾಸನ ಸಭಾಧ್ಯಕ್ಷರಾದ ಶ್ರೀ| ಬಿ. ಸಾಂಬಮೂರ್ತಿಯವರು ಮದ್ರಾಸಿನಿಂದ 15—11—44ನೇ ದಿನ ಇಲ್ಲಿಗೆ ಆಗಮಿಸಿದರು. ಅವರನ್ನು ಸ್ಟೇಷನಿನಲ್ಲಿ ಕಾಂಗ್ರೆಸ್ಸಿನವರು ಸ್ವಾಗತಿಸಿದರು. ಪೌರಸಭಾ ಕಾಂಗ್ರೆಸ್ ಪಕ್ಷದವರು ತಮ್ಮ ಕಾರ್ಯಾಲಯದಲ್ಲಿ ಟೀಪಾರ್ಟಿ ಏರ್ಪಡಿಸಿದ್ದರು. ಪ್ರಜಾಪ್ರತಿನಿಧಿಸಭಾ ಕಾಂಗ್ರೆಸ್‌ಪಕ್ಷದ ಮಹೋತ್ಸವದಲ್ಲಿ ಅಗ್ರಭಾಷಣಮಾಡಿದರು ಮಹೋತ್ಸವವು ರಂಗಚಾರ್ಲು ಸ್ಮಾರಕ ಭವನದಲ್ಲಿ ಸಂಭ್ರಮದಿಂದ ನಡೆಯಿತು ಶ್ರೀ| ಸಾಂಬಮೂರ್ತಿಯವರು ಖಾದಿ ಸೊಸೈಟಿಗೆ ಭೇಟಿಯಿತ್ತು, ವಿದ್ಯಾರ್ಥಿನಿಲಯದಲ್ಲಿ ನಡೆದ ಚರ್ಚಾ ಕೂಟದ ಅಧ್ಯಕ್ಷತೆ ವಹಿಸಿದರು, ರಂಗಚಾರ್ಲು ಸ್ಮಾರಕ ಭವನದಲ್ಲಿ ಹಿಂದಿ ಪದವೀಧರರಿಗೆ ಬಹುಮಾನ ವಿನಿಯೋಗವನ್ನೂ ಮಾಡಿದರು.

'ಶ್ರೀ ಕೃಷ್ಣಮಂದಿರ' ಸ್ಥಾಪನೆಗಾಗಿ ಮೈಸೂರಲ್ಲಿರುವ ದ. ಕನ್ನಡ ಬ್ರಾಹ್ಮಣರ ಸಭೆ–ಮೈಸೂರು ನಗರದಲ್ಲಿರುವ ದಕ್ಷಿಣ ಕನ್ನಡ ಜಿಲ್ಲೆಯ ಬ್ರಾಹ್ಮಣರು ರಾಜಧಾನಿಯಲ್ಲಿ ಒಂದು ಭವ್ಯವಾದ ಶ್ರೀಕೃಷ್ಣ ಮಂದಿರವನ್ನು ಕಟ್ಟಿಸಬೇಕೆಂಬ ಉದ್ದೇಶದಿಂದ ದಾಸಪ್ಪಕಾರ ಮಹಡಿ ಮೇಲ ತಾ 16-11-44ರಲ್ಲಿ ಒಂದ ಸಭೆಯನ್ನು ಏರ್ಪಡಿಸಿದ್ದರು. ಅರಮನೆಯ ಧರ್ಮಾಧಿಕಾರಿ ಬ್ರಹ್ಮಶ್ರೀ ಪೌರಾಣಿಕ ರತ್ನ ಹೊಳವನಹಳ್ಳಿ ಶ್ರೀ| ಶೇಷಾಚಾರ್ಯರು ಅಗ್ರಾಸನವನ್ನು ಅಲಂಕರಿಸಿದ್ದರು. ಮಹಾರಾಜಾ ಕಾಲೇಜಿನ ಪ್ರೊಫೆಸರ್ ಶ್ರೀ H. ರಾಘವೇಂದ್ರಾಚಾರ್ಯರು ಆರಂಭ ಭಾಷಣ ಮಾಡಿದರು-ಅನಂತರ ಕೃಷ್ಣಮಂದಿರ ಸ್ಥಾಪನ ಕಮಿಟಿಯನ್ನು ಏರ್ಪಡಿಸಲಾಯಿತು. ಶ್ರೀಯುತ ಕೆ ಅನಂತಾಚಾರ್ಯರನ್ನು ಸಂಘದ ಪೇಟ್ರನ್'ರನ್ನಾಗಿಯೂ ಶ್ರೀ| ಕೆ. ಸೀತಾರಾಮ ರಾಯರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ| ಕೆ. ಆರ್. ಕೆ. ಭಟ್, ಡಾಕ್ಟರ್, ಯು. ಎಲ್. ಭಟ್, ಕೆ. ಗೋಪಾಲಾಚಾರ್, ಕೆ. ಗುರುರಾಜಾಚಾರ್, ಪಿ. ಶ್ರೀನಿವಾಸಾಚಾರ್ ಇವರನ್ನು ಉಪಾಧ್ಯಕ್ಷರುಗಳನ್ನಾಗಿಯೂ, ಶ್ರೀ ರಾಘವೇಂದ್ರ ಬಲ್ಲಾಳ, ಕೆ. ವಾಸುದೇವರಾವ್ ಇವರನ್ನು ಸೆಕ್ರೆಟರಿಗಳನ್ನಾಗಿಯೂ, ಹನ್ನೆರಡು ಮಂದಿಯನ್ನು ಕಮಿಟಿ ಮೆಂಬರುಗಳನ್ನಾಗಿಯೂ ಆರಿಸಲಾಯಿತು. ಪ್ರೊಫೆಸರ್ ರಾಜಾರಾಯರೂ, ಶ್ರೀ ರಾಮರಾಜಪ್ಪನವರೂ, ಕಾರ್ಯೋಚಿತ ಸಲಹೆಗಳನ್ನು ಕೊಟ್ಟರು. ಶ್ರೀ ಆಚಾರ್ಯರು ಈ ಸಂಘದ ಸದುದ್ದೇಶವನ್ನು ಶ್ಲಾಘಿಸಿ, ಈ ಕಾರ್ಯಕ್ಕೆ ನೆರೆದ ಮಹನೀಯರೆಲ್ಲರೂ ಉದಾರ ಮನಸ್ಸಿನಿಂದ ಸಹಾಯ ಮಾಡಬೇಕೆಂದರು, ಶ್ರೀ| ಕೆ. ಸೀತಾರಾಮರಾಯರು ಈ ಮಂದಿರದ ಉದ್ದೇಶವನ್ನು ತಿಳಿಸಿ ಈ ಉದ್ಯಮಕ್ಕೆ ಪ್ರಕೃತ ನಲ್ವತ್ತು ಸಾವಿರ ರೂಪಾಯಿ ಖರ್ಚು ತಗಲಬಹುದೆಂದರು. ಅಲ್ಲಿ ಆಗ ನೆರೆದ ಸಭಿಕರಿಂದ ಇಪ್ಪತ್ತು ಸಾವಿರ ರೂಪಾಯಿ ವಸೂಲಾಯಿತು.

ನೋಟೀಸು

ಉಡುಪಿ ಡಿ| ಮುನ್ಸಿಫ್ ಕೋರ್ಟಿನಲ್ಲಿ

C P. No. 86/1944

1 ರಾಜೀವಿ ಯಾನೆ ಕಮಲಾ ಬಾಯಿ, 2 ಕೆ| ಸದಾನಂದಪ್ಪ; 3 ಕೆ| ಪುಂಡಲೀಕಪ್ಪ. 4 ಕೆ| ವಾಮನಪ್ಪ, 5 ಕೆ| ರವೀಂದ್ರಪ್ಪ—ಮೈನರು—3, 4, 5ನೇ ಮೈನರರ ಕ್ಷೇಮಚಿಂತಕಳು ತಾಯಿ 1ನೇ ಅರ್ಜಿದಾರಳು

—ಅರ್ಜಿದಾರರು

2ನೇಯವರು ಬೊಂಬಾಯಿಯಲ್ಲಿಯೂ ಮಿಕ್ಕವರು ಮೂಡುಬೋಳ್ಳೆ ಗ್ರಾಮದ ಕಲ್ಯಾಣಪುರದಲ್ಲಿಯೂ ಇರುವವರು.

1ನೇ ಅರ್ಜಿದಾರಳ ಗಂಡ ಮಿಕ್ಕ ಅರ್ಜದಾರರ ತಂದೆ ಪಾಲಿ ಮೃತಪಟ್ಟ ಕೆ| ರಂಗಪ್ಪಯ್ಯನವರು ದಿ ಯುನೈಟೆಡ್ ಇಂಡಿಯಾ ಲೈಫ್ ಎಶ್ಯೂರೆನ್ಸ್ ಕಂಪೆನಿಯಲ್ಲಿ ಪಡೆದ ನಂಬ್ರ 32120ನೇ ಪೋಲಿಸಿಯ ಬಾಬ್ತು ಬರತಕ್ಕ ರೂಪಾಯಿ 566 8-0ನ್ನು ಪಡೆಯುವರೆ ತಾವು ಹಕ್ಕುದಾರರೆಂತಲೂ, ಆ ಬಗ್ಗೆ ತಮ್ಮ ಕಡೆಯಿಂದ 1ನೇ ಅರ್ಜಿದಾರಳ ಪ್ಪೆರಿಗೆ ಸಕ್ಸೆಶನ್ ಸರ್ಟಿಫಿಕೇಟು ಕೊಡಿಸಬೇಕಾಗಿ ಸದ್ರಿ ಅರ್ಜಿದಾರರು ಬರಕೊಂಡ ಸದರಿ ಅರ್ಜಿಯು ಮೇಲ್ಕಂಡ ಕೋರ್ಟಿನಲ್ಲಿ ತಾ. 12-12-44ಕ್ಕೆ ತನಿಖೆಗೆ ಇಟ್ಟಿದೆ, ಈ ಕುರಿತು ಆಕ್ಷೇಪ ಹೇಳುವವರು ಯಾರಾದರೂ ಇರುವ ಸಂಗ್ತಿಯಲ್ಲಿ ಸದ್ರಿ ತಾರೀಕಿನ ದಿನ್ನ ಸದರಿ ಕೋರ್ಟಿನ ಮುಂದೆ ಹಾಜರಾಗಿ ತಂತಮ್ಮ ಆಕ್ಷೇಪಗಳನ್ನು ಜಾಹೀರುಮಾಡಿಕೊಳ್ಳತಕ್ಕದ್ದೆಂತ ಈ ಮೂಲಕ ಸರ್ವಜನರಿಗೆ ತಿಳಿಯಪಡಿಸಲಾಗಿಯದೆ

M. Damodar Kamath

Advocte for Petit'oners

Udipi, S. Kanara Dated 20-11-944

ಬಾಡಿಗೆಗೆ ದೊರಕುತ್ತವೆ.

ಹೊಸ ಉಡುಪುಗಳು ಹೊಸ ಪರದೆಗಳು

ಹೊಸ ಇತರ ಉಪಕರಣಗಳು

ಶಾಲಾಮಕ್ಕಳ ಮತ್ತು ಎಮೆಚೂರ್ಸ್ ನಾಟಕ ಕಥಾಭಾಗದಲ್ಲಿ ಬರಬಹುದಾದ ವಿವಿಧ ಭೂಮಿಕೆಗಳಿಗನುಕೂಲವಾದ ಎಲ್ಲಾ ತರದ ಪರಜೆ ಉಡುಪು ಸಹಿತ ಉಪಕರಣಗಳು ಬಹಳೇ ಕಡಿಮೆ ಬಾಡಿಗೆಗೆ ದೊರಕುತ್ತವೆ. ಅಗತ್ಯವಿದ್ದಲ್ಲಿ ಪೌಡರ್ ಕೆಲಸವನ್ನು ಸಹ ಮಾಡಿಕೊಡಲಾಗುವುದು. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ಎಂಟು ದಿವಸಗಳ ಮುಂಚಿತವಾಗಿ ಬರೆದುಕೊಳ್ಳುವುದು

B Budan Basha Saheb,
P. V I B H. E. Boys School, Barkur,
P. O. Barkur.

ಉಡುಪಿ ಮುನಿಸಿಪಲ್ ಉಪಚುನಾವಣೆ.

ಇದೇ ಬರುವ 4–12–1944ರಲ್ಲಿ ನಡೆಯಲಿರುವ ಉಡುಪಿ ಮುನಿಸಿಪಾಲಿಟಿಯ ಮೂಡನಿಡಂಬೂರು ವಾರ್ಡಿನ ಉಪಚುನಾವಣೆಯಲ್ಲಿ ನಾನು ಒಬ್ಬ ಉಮೇದ್ವಾರನಾಗಿರುವೆ. ಮತದಾರರೆಲ್ಲರೂ ದಯಮಾಡಿ ತಮ್ಮ ಮತಗಳನ್ನು ನನಗೆ ಕೊಟ್ಟು ಪ್ರೋತ್ಸಾಹಿಸಿ, ಮಹಾ ಜನರ ಸೇವೆಯನ್ನು ಮಾಡುವ ಸುಯೋಗವನ್ನು ಒದಗಿಸಿಕೊಡಬೇಕಾಗಿ ಅಪೇಕ್ಷಿಸುತ್ತೇನೆ.

ಆರ್. ಆರ್. ಕುಂಜೂರು.

ಜತೆಕಾರ್ಯದರ್ಶಿ, ತಾಲೂಕು ಆಹಾರ ಸಮಿತಿ, ಉಡುಪಿ.

ದಕ್ಷಿಣ ಕನ್ನಡ-

ಮಂಗಳೂರು

ಸಿಡುಬು—ಇದು ನಗರದ ಮಧ್ಯಕ್ಕೂ ಬರುತ್ತಿರುವ ಲಕ್ಷಣಗಳಿವೆ.

ಜವಾಹರರ ದಿನಾಚರಣೆ—ಪಂಡಿತ ಜವಾಹರಲಾಲರ 55ನೇ ಜನ್ಮ ದಿನೋತ್ಸವವು ಮಂಗಳೂರು ವಿದ್ಯಾರ್ಥಿ ಯೂನಿಯನಿನ ಆಶ್ರಯದಲ್ಲಿ ಜರಗಿತು, ಶ್ರೀ| ಬಿ ಎಸ್. ಭಾಸ್ಕರ ರಾವ್‌ರವರ ಅಧ್ಯಕ್ಷತೆಯಲ್ಲಿ ಸಭೆ ಜರಗಿ ಪಂಡಿತ ಜವಾಹರಲಾಲರನ್ನೂ ಇತರ ಕಾಂಗ್ರೆಸ್ ಮುಖಂಡರನ್ನೂ ಬಂಧವಿಮೋಚನ ಮಾಡಬೇಕಾಗಿ ಕೇಳಿಕೊಂಡು ಠರಾವುಗಳಾದವು.

ಸಹಾಯ ಧನ—ದ. ಕ. ಜಿಲ್ಲಾ ಬೋರ್ಡಿನವರು ಹಿಂದೂಸ್ಥಾನ ಸ್ಕಾಟ್ ಎಸೋಸಿಯೇಶನಿಗೆ ರೂ. 100 ಮತ್ತು ಜಿಲ್ಲಾ ಹರಿಜನ ಸೇವಕ ಸಂಘಕ್ಕೆ ರೂ. 800/- ಹೀಗೆ ಸಹಾಯ ಧನವನ್ನು ಮಂಜೂರು ಮಾಡಿರುವರು.

ಜುಲ್ಮಾನೆ—ಕಾಸರಗೋಡು ತಾಲೂಕಿನ ಮಹಮ್ಮದ ಮತ್ತು ಟಿ. ಎಮ್. ಅಬ್ದುಲ್ಲ ಎಂಬವರು—ಧಾನ್ಯ ದವಸಗಳ ಸಂಬಂಧವಾದ ವ್ಯಾಪಾರದಲ್ಲಿ, ಕಾನೂನಿನಂತೆ ಸರಿಯಾದ ಲೆಕ್ಕಗಳನ್ನಿಡದೆ, ರಶೀದಿಗಳನ್ನು ಕೊಡದೆ ತಪ್ಪು ಮಾಡಿದರೆಂಬ ಆಪಾದನೆಯು ನಮ್ಮ ಸಬ್ ಡಿವಿಜನಲ್ ಮೆಜಿಸ್ಟ್ರೇಟರ ಮುಂದೆ ವಿಚಾರಣೆಯಾಗಿ ತಲಾ ರೂ. 200/- ಜುಲ್ಮಾನೆ, ಜುಲ್ಮಾನೆ ತೆರಲು ತಪ್ಪಿದರೆ ಎರಡು ತಿಂಗಳ ಸಜೆ ಹೀಗೆ ಶಿಕ್ಷೆ ವಿಧಿಸಲಾಯಿತೆಂದು ತಿಳಿದು ಬರುತ್ತದೆ.

ಕಡ್ಡಾಯವಾಗಿ ಗೋದಿ ಮತ್ತು ರಾಗಿ—ಈ ತನಕ ಮಂಗಳೂರಲ್ಲಿ, ವಾರದ ಏಳು ದಿವಸವೂ ಅಕ್ಕಿ ದೊರೆಯುತಿತ್ತು. ಇನ್ನು, ಈ ವಾರದಿಂದ, ಅಕ್ಕಿಯು ಎಂಟನೇ ಒಂದಂಶ ಗೋದಿ, ಮತ್ತು ಅಷ್ಟೇ (ಎಂಟನೇ ಒಂದಂಶ) ರಾಗಿ ಕೊಡುವರೆಂದು ತಿಳಿಯಲಾಗಿದೆ, ರಾಗಿಯನ್ನಪೇಕ್ಷಿಸದವರು ಅಕ್ಕಿಯ ಕಾಲಾಂಶ ಗೋದಿಯನ್ನು ಪಡೆಯಬಹುದೆಂದೂ, ಆದರೆ, ಗೋದಿ ಬೇಡವೆಂದಾದರೆ ಕಾಲಂಶ ರಾಗಿ ದೊರೆಯಲಾರದೆಂದೂ ತಿಳಿಯಲಾಗಿದೆ.

ಜಿಲ್ಲಾ ಬೋರ್ಡು ಸಭೆ— ತಾ. 16—11—1944ರಲ್ಲಿ ಸೇರಿದ ಜಿಲ್ಲಾ ಬೋರ್ಡು ಸಭೆಯಲ್ಲಿ, ಕೆಲವು ಮಹತ್ವದ ವಿಷಯಗಳು ಚರ್ಚಿಸಲ್ಪಟ್ಟವು. ಕಾಸರಗೋಡು ತಾಲೂಕಿನಲ್ಲಿ ಆಹಾರ ಪರಿಸ್ಥಿತಿಯು ತೀರ ಕೆಟ್ಟುದರಿಂದ ಸರಕಾರವು ಸಹಾಯಕ್ಕೆ ಬರಬೇಕೆಂದು ಶ್ರೀ| ಸಿ. ಕೆ. ರಾಘವನ್ ನಂಬಿಯಾರರು ತಂದ ಠರಾವನ್ನು ಚರ್ಚಿಸುವಾಗ, ಖಾನ್ ಬಹದ್ದೂರ್ ಶ್ರೀ| ಎಮ್. ಶಮ್ನಾಡರವರು—'ಕೊಡುತ್ತಿರುವ ಗೋದಿ ಚೆನ್ನಾಗಿಲ್ಲ; ಇದರಿಂದ ನಾನಾ ರೋಗಗಳು ಹರಡುತ್ತಿವೆ' ಎಂದು ಆರೋಪಿಸುತ್ತ ಜಿಲ್ಲಾ ಹೆಲ್ತ್ ಆಫೀಸರರು—ಹಾಗೆ ಕೆಟ್ಟ ಧಾನ್ಯಗಳನ್ನು ಹಂಚದಂತೆ ತಾವೂ ತಮ್ಮ ಸಿಬ್ಬಂದಿಯವರೂ ನೋಡಿಕೊಳ್ಳುತ್ತಿರುವರೆಂದರು ಸಮಾಧಾನವಾಗದೆ ಖಾನ್ ಬಹದ್ದೂರರು ತಾವು ಈ ವಿಷಯದಲ್ಲಿ ಆರೋಗ್ಯ ಖಾತೆಗೆ ನೋಟೀಸು ಕೊಡಬೇಕಾದೀತೆಂದು ಮುನಿಸಿನಿಂದ ಹೇಳಿದರು. ಶ್ರೀ| ಸಿ ಎಲ್. ಲೋಬರು ಜಿಲ್ಲಾಧಿಪತಿಗಳು ಆಹಾರ ಸಾಮಗ್ರಿ ಪೂರೈಕೆಯ ವಿಷಯ. ಕೈಕೊಂಡ ವ್ಯವಸ್ಥೆಯನ್ನು ವಿವರಿಸುತ್ತ ಕಳ್ಳಸಂತೆ ದಾಸ್ತಾನು ಪತ್ತೆ ದಲಾದುದರ ಕಾರಣದಿಂದ ಕೆಟ್ಟ ಗೋದಿ ತಿನ್ನುವಂತಾಯಿತೆಂದರು, ಖಾ| ಬ| ಶಮ್ನಾಡರವರು ಈ ದೂರನ್ನೆಲ್ಲ ಮಂಗಳೂರಿನವರ ಮೇಲೇ ಹೊರಿಸುತ್ತಿಸಿದರು .. .ಶ್ರೀ| ನಂಬಿಯಾರರ ಠರಾವು ಮಂಜೂರಾಯಿತು.

ಶ್ರೀ| ಕೆ| ರಘುಚಂದ್ರ ಬಲ್ಲಾಳರವರು ಕೇಳಿದ ಪ್ರಶ್ನೆಗಳಿಗೆಲ್ಲ ಅಧ್ಯಕ್ಷರು ಬರಹ ಮೂಲಕವಾದ ಉತ್ತರಗಳನ್ನಿತ್ತರು.

ತಾಳಿಪಾಡಿ ಮತ್ತು ಕಂದಾವರಗಳಲ್ಲಿ ಖಾಸಗಿ ಸಂಸ್ಥೆಗಳು ಹೈಸ್ಕೂಲುಗಳನ್ನು ತೆರೆವಲ್ಲಿ ಜಿಲ್ಲಾ ಬೋರ್ಡಿನ ಆಕ್ಷೇಪವಿಲ್ಲವೆಂದು ತೀರ್ಮಾನವಾಯಿತಲ್ಲದೆ, ಪುತ್ತೂರು ಹೈಸ್ಕೂಲ್ ಕಟ್ಟಡದ ಬಾಡಿಗೆಯನ್ನು ಕಟ್ಟಡಗಳ ಬಗ್ಗೆ ಇರುವ ನಿಧಿಯಿಂದ ಮಾಡಬಹುದೆಂದೂ, ರಾಜಕೀಯವಲ್ಲದ ಸಭೆಗಳಿಗೆ ಶಾಲಾ ಕಟ್ಟಡವನ್ನು ಉಪಯೋಗಿಸಲು ಬಿಡುವ ಅಧಿಕಾರವನ್ನು ಆ ಶಾಲಾ ಹೆಡ್ಮಾಸ್ತರರಿಗೆ ಕೊಡುವುದೆಂದೂ ನಿರ್ಧಾರವಾಯಿತು.

ಜಿಲ್ಲಾ ಬೋರ್ಡಿನ ಕಾರ್ಯಕಲಾಪಗಳೆಲ್ಲ ಕನ್ನಡದಲ್ಲೇ ನಡೆಯಬೇಕೆಂದು ಶ್ರೀ| ಕೆ| ರಘುಚಂದ್ರ ಬಲ್ಲಾಳರವರ ಸೂಚನೆಯುದ್ದಕ್ಕೆ ಹೆಚ್ಚಿನ ಬೆಂಬಲ ದೊರೆಯಲಿಲ್ಲ.

ವ್ಯಾಸರಾಯರಿಗೆ ದ. ಕನ್ನಡಿಗರ ಮನವಿ—

ನಮ್ಮ ಜಿಲ್ಲೆಯ ಉಪ್ಪಿನಂಗಡಿ ಕೊಂಬಳಿ ಬಳಿಯ ಕೆಲ ಪ್ರದೇಶಗಳನ್ನು ಮಿಲಿಟರಿ ಉಪಯೋಗಕ್ಕಾಗಿ ಸ್ವಾಧೀನಮಾಡಿಕೊಳ್ಳಲು ಯೋಜನೆಗಳಾಗಿವೆ ಆಗಲೇ ಸಂಬಂಧಪಟ್ಟ ಖಾತೆಯವರು ಈ ಪ್ರದೇಶಗಳನ್ನು ಪರಿಶೀಲಿಸಿ ಗುರುತು ಮಾಡಿದವರು. ಈ ಸ್ಥಳ ಭಾಗಗಳನ್ನು ಬಿಟ್ಟುಕೊಟ್ಟರೆ ಅಲ್ಲಿಯ ಜನರಿಗೆ ಆಗಬಹುದಾದ ನಷ್ಟ ಸಂಕಷ್ಟಗಳನ್ನು ವಿವರಿಸಿ ಜನರಿಗೆ ನಷ್ಟ ಸಂಭವಿಸದ ಪ್ರದೇಶಗಳನ್ನೇ ಆರಿಸಿದ್ದರೆ ಒಳಿತೆಂಬ ಸೂಚನೆಯು ಮನವಿಯೊಂದನ್ನು ಜಿಲ್ಲೆಯ ಕೆಲ ಪ್ರಮುಖರ ಸಹಿಯೊಂದಿಗೆ ವ್ಯಾಸರಾಯರಿಗೆ ಕಳುಹಿಸಲಾಗಿದೆ ಎಂದು ತಿಳಿದುಬರುತ್ತದೆ.

ಇದರಿಂದ ನಷ್ಟವೆಷ್ಟು?— ಮಿಲಿಟರಿ ಖಾತೆಯವರ ಯೋಜನೆಯೊಳಗೆ ಬಂದಿರುವ ಈ ಪ್ರದೇಶಗಳಲ್ಲಿ ಸುಮಾರು ೧೭೦೦ ಮನೆಗಳಿದ್ದು ೮೦೦೦ ಜನರು ಸ್ಥಳಾಂತರ ಹೊಂದಬೇಕಾಗುವುದು,

ಕೃಷಿ ಯೋಗ್ಯವಾದ ಸುಮಾರು ೨೫೦೦೦ ಎಕ್ರೆಯಷ್ಟು ಬೈಲು, ಬೆಟ್ಟು ಗದ್ದೆಗಳೂ, ೭೫೦೦ ಎಕ್ರೆಯಷ್ಟು ಅಡಿಕೆ, ಬಾಳೆ ಮುಂತಾದ ಫಲೋತ್ಪತ್ತಿ ತೋಟ ಪ್ರದೇಶಗಳೂ ಇವೆಯೆಂದು ತಿಳಿದಿದೆ

ಇವುಗಳನ್ನು ಸ್ವಾಧೀನಪಡಿಸಿಕೊಳ್ಳುವುದರಿಂದ ಸುಮಾರು 25 ಸಾವಿರ ಮುಡಿಗಳಷ್ಟು ಅಕ್ಕಿ ಉತ್ಪತ್ತಿ ಕಮ್ಮಿಯಾದಂತಾಗುವುದು. ತೋಟಗಳಲ್ಲಿ ಸುಮಾರು ೧೬೦೦ ಖಂಡಿಯಷ್ಟು ಅಡಿಕೆ, ಕೆಲವು ಲಕ್ಷದಷ್ಟು ತೆಂಗಿನಕಾಯಿಗಳು ಸಿಗುತ್ತಿತ್ತೆಂದು ಅಂದಾಜು ಹಾಕಲಾಗಿದೆ

ಧಾರ್ಮಿಕ ಸಂಸ್ಥೆಗಳು— ಒಂದು ಮಸೀದಿಯಲ್ಲದೆ, ಹಿಂದೂಗಳ ೧೪ ಚಿಕ್ಕ ದೊಡ್ಡ ದೇವಾಲಯಗಳೇ ಮುಂತಾದ ಅನೇಕ ದೇವಾರಾಧನೆಯ ಸ್ಥಾನಗಳೂ ಈ ಪ್ರದೇಶದೊಳಗೆ ಇವೆ. ಇವುಗಳನ್ನು ಮುಚ್ಚುವಂತಾದರೆ ಆ ಸ್ಥಳಗಳ ಮೇಲೆ ಬಹುಸಂಖ್ಯಾತ ಹಿಂದೂಗಳಿಗಿರುವ ಧಾರ್ಮಿಕ ಭಾವನೆಗಳನ್ನು ನೋಯಿಸಿದಂತಾಗುತ್ತದೆಂದೂ, ಅವುಗಳಿಗೆ ಚ್ಯುತಿ ಬಾರದ ಎಲ್ಲಾ ರೀತಿ ಧರ್ಮದ ಜನಾಂಗಗಳ ಮೇಲೆ ಪರಿಣಾಮವಾಗುತ್ತದೆಂದೂ ಮನವಿಯಲ್ಲಿ ಸೂಚಿಸಲಾಗಿದೆ.

ಕೃಷಿಗೆ ಹಾನಿ-ಅತ್ಯುತ್ತಮ ಫಲವತ್ತಾದುದೂ ಎಂದೆನಿಸುವ ಈ ಪ್ರದೇಶದ ಅನೇಕ ತೋಟಗಳಿಂದ ವರ್ಷಕ್ಕೆ ಲಕ್ಷ ರೂ. ಉತ್ಪತ್ತಿ ಇದೆ. ಮತ್ತೆ ಹೊಸ ತೋಟಗಳನ್ನು ನಮ್ಮ ಬೆಳೆಸಲು ಹತ್ತಿಪ್ಪತ್ತು ವರ್ಷಗಳು ಬೇಕಾಗುತ್ತವೆ ಇದಕ್ಕೆ ಅಪಾರ ಮೂಲ ಧನವೂ ಬೇಕಾಗುವುದು. ತಲೆಮಾರುಗಳಿಂದ ವ್ಯವಸಾಯ ಮಾಡಿಬಂದ ಈ ತೋಟಗಳನ್ನು ಕಳಕೊಳ್ಳುವುದರಿಂದ ಸುಮಾರು ಅರ್ಧ ಕೋಟಿಯ ನಷ್ಟವಾಗಬಹುದೆಂದೂ ಹೇಳಲಾಗಿದೆ

ಬೇರೆ ಸ್ಥಳಗಳು—ಸೈನ್ಯ ಖಾತೆಯ ಆವಶ್ಯಕತೆಯು ಯುದ್ಧ ಕಾಲದಲ್ಲಿ ನ್ಯಾಯ ಸಮ್ಮತವಾಗುತ್ತದೆ. ಆದರೆ ಮೇಲೆ ಹೇಳಿದಷ್ಟು ನಷ್ಟ, ಸಂಕಷ್ಟಗಳುಂಟಾಗದ ಇತರ ಪ್ರದೇಶಗಳನ್ನು ಸರಕಾರದವರು ಉಪಯೋಗಿಸಿಕೊಳ್ಳುವಂತಾದರೆ ಜನರಿಗೆ ಆಪತ್ತುಗಳಿಂದ ತಪ್ಪಿಸಿದಂತಾಗುವುದೆಂದು ಸೂಚಿಸಿ, ಆ ಬೇರೆ ಸ್ಥಳಗಳ್ಯಾವುವೆಂದೂ ಮನವಿಗಾರರು ತೋರಿಸಿರುವರು

ಈ ಕೃಷಿ ಪ್ರದೇಶಗಳನ್ನು ಸ್ವಾಧೀನಪಡಿಸುವ ನಿರ್ವಾಹವಿಲ್ಲವೆಂದಾದ ಸಂದರ್ಭದಲ್ಲಿ ಕನಿಷ್ಠ ಪಕ್ಷ ಆ ಪ್ರದೇಶದಲ್ಲಿನ ದೇವಾರಾಧನೆಯ ಮಸೀದಿ, ದೇವಳಗಳು ಇರುವ ಸ್ಥಳಗಳನ್ನಾದರೂ ಈ ಯೋಜನೆಯಿಂದ ಬಿಟ್ಟುಬಿಡಬೇಕೆಂದೂ ಮನವಿಯಲ್ಲಿ ಪ್ರಾರ್ಥಿಸಲಾಗಿದೆ ಎಂದು ತಿಳಿದುಬರುತ್ತದೆ.

ದಿ ನಾರ್ಡರ್ನ್ ಇನ್ಸೂರೆನ್ಸ್ ಕಂಪೆನಿ—ಇದರ ಮಂಗಳೂರು ಶಾಖೆಯು ತಾ 12ರಂದು ಪ್ರಾರಂಭವಾಗುವಾಗಲೇ ಸುಮಾರ 4 ಲಕ್ಷದಷ್ಟು ವ್ಯವಹಾರವಾಗಿರುವುದೆಂದು ತಿಳಿದು ಬರುತ್ತದೆ ಇದಕ್ಕೆ ಪಿಪ್ಲ್ಸ್ ಮ್ಯಾನೇಜರಾದ ಶ್ರೀ| ಎಂ. ಸುಂದರರಾಮ ಶೆಟ್ಟರು, ಮಂಗಳೂರು ಪ್ರಮುಖ ಸತ್ಪ್ರಜೆಗಳಾದ ಶ್ರೀ| ಬಿ. ಸಚ್ಚಿದಾನಂದ ಹೆಗ್ಡೇರು, ಸ್ಪೆಶ್ಯಲ್ ಒರ್ಗನೈಜರಾದ ಶ್ರೀ| ಕೆ. ಶಂಕರ ಶೆಟ್ಟರು ಇವರ ವ್ಯವಹಾರ ದಕ್ಷತೆಯೇ ಕಾರಣವೆಂದು ತಿಳಿದುಬರುತ್ತದೆ.

ಮೋಟರ್ ಕೆಲಸಗಾರರ ಸಂಘ— ದಕ್ಷಿಣ ಕನ್ನಡ ಜಿಲ್ಲಾ ಮೋಟರ್ ಕೆಲಸಗಾರರ ಯೂನಿಯನ್ ಎಂಬ ಸಂಘವು ತಾ. 10-10-44ರಲ್ಲಿ ಶ್ರೀ ನಾರಾಯಣ ಗುರು ಬ್ಯಾಂಕ್ ಲಿಮಿಟೆಡಿನಲ್ಲಿ ಶ್ರೀ ಮಂಗಳೂರ ಜಾರಪ್ಪನವರ ಅಧ್ಯಕ್ಷತೆಯಲ್ಲಿ ಸುಮಾರು 150 ಮಂದಿ ಕೆಲಸಗಾರರ ಪ್ರೋತ್ಸಾಹದಿಂದ ಸ್ಥಾಪನೆಹೊಂದಿತು.

ಉಡುಪಿ.

ಗಾಂಧಿ ಮೈದಾನದಲ್ಲಿ ಕ್ರಿಕೆಟ್ ಪಂದ್ಯಾಟ—ಕಳೆದ ಆದಿತ್ಯವಾರ ಅಪರಾಹ್ನ ಹನ್ನೊಂದು ಗಂಟೆಯ ನಂತರ ಸಂಜೆ ಏಳು ಗಂಟೆಯ ತನಕ ಮಂಗಳೂರು ಕ್ರಿಕೆಟ್ ಕ್ಲಬ್ಬಿನವರಿಗೂ ಉಡುಪಿ ಕ್ರಿಕೆಟ್ ಕ್ಲಬ್ಬಿನವರಿಗೂ ಟ್ರೊಫಿಕಲ್ ಕಪ್ ಕ್ರಿಕೆಟ್ ಪಂದ್ಯಾಟ ನಡೆಯಿತು. ಪ್ರೆಸಿಡೆನ್ಸಿ ಆಟಗಾರರಾದ ಶ್ರೀ| ಎನ್| ಎಸ್| ಸುವರ್ಣನವರು ಮಂಗಳೂರು ಟೀಮಿನ ಮತ್ತು ವಿ| ಡಿ| ನೊರೊನ್ಹಾ, ಡಿ| ಮುನ್ನಿಸರು ಉಡುಪಿ ಟೀಮಿನ ಕಪ್ತಾನರಾಗಿದ್ದರು. ಪ್ರಥಮತಃ ಮಂಗಳೂರವರು ಆಡಿ ಮಾತ್ರ 125 ರನ್ಸು ತೆಗೆದರು. (ಶ್ರೀಗಳಾದ ಬಿ| ಮಹಮ್ಮದ್ [37], ಉಗ್ಗಪ್ಪ ಸೆಟ್ಟಿ [29]) ಉಡುಪಿಯವರು 8 ವಿಕೆಟುಗಳಿಗೆ 123 ರನ್ಸು ತೆಗೆದರು. ಇನ್ನು 2ರನ್ಸು ತೆಗೆಯಲು ಮತ್ತು 2 ವಿಕೆಟುಗಳು ಬಿಟ್ ಆಗಲು ಇರುವಷ್ಟರಲ್ಲಿ ಕತ್ತಲೆ ದುದರಿಂದ ಚೆಂಡು ಕಾಣುವುದಿಲ್ಲವೆಂದು ಪದೇಪದೇ ಮಂಗಳೂರವರು ಹೇಳಿದುದರಿಂದ ಆಟವು ಅಪೂರ್ಣವಾಗಿ ಅರ್ಧಕ್ಕೇನೇ ನಿಲ್ಲಿಸಲ್ಪಟ್ಟಿತು. ನೆರೆದ ಸಾವಿರಾರು ಮಂದಿಗೆ ಆಗ ಬಹಳ ನಿರಾಶೆಯುಂಟಾಯಿತು. ಉಡುಪಿ ಟೀಮಿನ ಶ್ರೀ| ಕರುಣಾಕರ ಹೆಗ್ಡೆಯವರು 49 ರನ್ಸು ತೆಗೆದಿದ್ದರು ಶ್ರೀಗಳಾದ ವಿಷ್ಣು ಕಾಮತ್ ಮತ್ತು ಬಿ| ರಾಮಪ್ಪನವರು ಉಡುಪಿ ಮತ್ತು ಮಂಗಳೂರು ಟೀಮುಗಳ ಕಡೆಯಿಂದ ಅನುಕ್ರಮವಾಗಿ ಚಳೋ ರೀತಿಯಲ್ಲಿ ಬೌಲಿಂಗ್ ಮಾಡಿದ್ದರು.

ಸ್ಕಾಟ್ ರ್ಯಾಲಿ—ಯು ಕಳೆದ ಶನಿವಾರ ಆದಿ ಉಡುಪಿ ಶಾಲೆಯ ವಠಾರದಲ್ಲಿ ಜರಗಿತು.

ಭತ್ತ ವಿತರಣೆ—ಕಲ್ಯಾಣಪುರ, ಬೈಕಾಡಿ ಮೊದಲಾದ ಸಂಟರುಗಳಲ್ಲಿ ಅಕ್ಕಿಯ ಬದಲಾಗಿ ಭತ್ತ ವಿತರಣೆಯಾಗುತ್ತಿದೆಯಾಗಿ ಸುದ್ದಿ

ಕಾಯಿಪಲ್ಯಗಳ ದರಗಳು-ಪ್ರಾಯ್ಸ್ ಕಂಟ್ರೋಲ್ ಕಮಿಟಿಯವರು ನಿರ್ಣಯಿಸಲ್ಪಟ್ಟ ಕ್ರಮದಲ್ಲಿ ವ್ಯಾಪಾರಿಗಳಿಂದ ಅನುಸರಿಸಲ್ಪಡುವುದಿಲ್ಲವೆಂದು ವಾರ್ತೆ.

ದಬ್ಬಿ ಬೆಲ್ಲದ ಅಭಾವ—ಬೆಲ್ಲಕ್ಕೆ ಕ್ರಯ ನಿರ್ಧಾರವಾದಂದಿನಿಂದ ಉಂಡೆ ಬೆಲ್ಲ ಮಾತ್ರ ವ್ಯಾಪಾರಿಗಳಲ್ಲಿ ಸಿಗುತ್ತದೆ. ದಬ್ಬಿ ಬೆಲ್ಲವು ಮಾಯವಾಗಿದೆ. ಬಡವಾಸಿಗಳಿಗೆ ತೊಂದರೆಯಾಗಿದೆ.

ಕಟಪಾಡಿ—ಬ್ರಹ್ಮ ಶ್ರೀ ನಾರಾಯಣ ಗುರು ಸ್ವಾಮಿ ಸೇವಾ ಸಮಿತಿಯ ಭವನದಲ್ಲಿ ತಾರೀಕು 26-11-44ನೇ ರವಿವಾರ ಬೆಳಗ್ಗೆ ಗಂಟೆ 10ಕ್ಕೆ ಜಿಲ್ಲೆಯ ಪಟಾಂಗದ ಕಸಬಿನವರ ಪ್ರೈಕಿ ಗಾಡಿಯವರ, ಮೇಸ್ತ್ರಿಗಳವರ ಮತ್ತು ಟಂಡೇಲರಿನ ಕೆಲಸಗಾರರ ಸಭೆಯು ಜರಗಲಿಕ್ಕಿರುವದೆಂದು ವಾರ್ತೆ.

ಶೋಕವಾರ್ತೆ ... ಶ್ರೀ| ಸುಬ್ಬಶೆಟ್ಟಿ ಅವರ 76ನೇ ವಯಸ್ಸಿನವಲ್ಲಿ ಕ್ಷಯರೋಗದಿಂದ ಇದೇ ತಿಂಗಳ ತಾ| 13ನೇ ಸೋಮವಾರ ದಿನ ಸ್ವರ್ಗಸ್ಥರಾಗಿರುವರು. ಮೃತರ ಆತ್ಮಕ್ಕೆ ಶಾಂತಿ ಇರಲಿ

ಕುಂದಾಪುರ-ಶ್ರೀ ನಾರಾಯಣ ಗುರು ಬ್ಯಾಂಕಿನ ಶಾಖೆಯೊಂದು ಇಲ್ಲಿ ತಾ| 18ರಲ್ಲಿ ಸಬ್ ಕಲೆಕ್ಟರ್ ಶ್ರೀ| ಡಿ| ಡಿ| ನ ಫೆ| ಐ| ಸಿ| ಎಸ್| ಇವರ ಅಧ್ಯಕ್ಷತೆಯಲ್ಲಿ ತೆರೆಯಲ್ಪಟ್ಟಿತು. ಭಾಷಣ, ಉಪಾಹಾರ, ಗ್ರೂಪ್ ಫೋಟೋ ಮೊದಲಾದ ಕಾರ್ಯಕ್ರಮಗಳಿದ್ದುವು.

ಪ್ರಕಟಣೆ

ಗೋದಿ ರಾಗಿ ರೇಶನ್ ಪದಾರ್ಥ.

1943ನೇ ಇಸವಿಯ ಮದ್ರಾಸ್ ರೇಶನಿಂಗ್ ಆರ್ಡರಿನ 2ನೇ ಕ್ಲೋಸ್ 8ನೇ ಸಬ್ ಕ್ಲೋಸ್ ಪ್ರಕಾರ ಮದ್ರಾಸು ಸರಕಾರದವರು ದಕ್ಷಿಣ ಕನ್ನಡ ಜಿಲ್ಲೆಯ ರೇಶನಿಂಗ್ ಸರಹದ್ದುಗಳಲ್ಲಿ ತಾರೀಕು 19 11 1944ರಿಂದ ಗೋದಿ ಮತ್ತು ರಾಗಿ ರೇಶನ್ ಪದಾರ್ಥಗಳು ಎಂಬದಾಗಿ ಜಾರಿಗೆ ತಂದಿರುತ್ತಾರೆ. ಆದುದರಿಂದ ಸದ್ರಿ ತಾರೀಕಿನ ನಂತರ ಈ ಎರಡು ಪದಾರ್ಥಗಳಿಗೆ ಎಲ್ಲಾ ರೇಶನಿಂಗ್ ಕಾನೂನುಗಳು ಲಗಾವಾಗುತ್ತವೆ. ರೇಶನಿಂಗ್ ಆಫೀಸರರಿಂದ ಅಧಿಕಾರ ಹೊಂದಿದವರು ವಿನಹಾ ಬೇರೆ ಯಾರೊಬ್ಬರೂ ಗೋದಿ ಯಾ ರಾಗಿಯನ್ನು ವ್ಯಾಪಾರ ಮಾಡಿದರೆ ಅದು ಕಾನೂನಿಗೆ ವಿರೋಧ.

ತಾರೀಕು 19 11 44ರಿಂದ ದ. ಜಿಲ್ಲೆಯ ರೇಶನಿಂಗ್ ಸರಹದ್ದುಗಳ ಒಳಗೆ ಈ ರೇಶನ್ ಪದಾರ್ಥಗಳನ್ನು ಕಾರ್ಡು ಯಾ ಪರ್ಮಿಟು ಪಡಕೊಂಡವರಿಗೆ ಈ ಕೆಳಗೆ ಕಾಣಿಸಿದ ಪ್ರಕಾರ ಕೊಡಲ್ಪಡುತ್ತದೆ.

(1) ⅛ನೇ ಅಂಶ ಗೋದಿ; ⅛ನೇ ಅಂಶ ರಾಗಿ; ಯಾ ¼ನೇ ಅಂಶ ಗೋದಿ.

ಉಳಿದ ¾ನೇ ಅಂಶ ಅಕ್ಕಿ. ಅಕ್ಕಿಯ ಬದಲು ಇದಕ್ಕಿಂತ ಹೆಚ್ಚಿನ ಅಂಶ ಗೋದಿ ಯಾ ರಾಗಿ ತೆಗೆದುಕೊಳ್ಳಬಹುದು. ಆದರೆ ಗೋದಿ ಯಾ ರಾಗಿಯ ಬದಲು ಅಕ್ಕಿ ಕೊಡುವುದಿಲ್ಲ. ಗೋದಿ, ರಾಗಿ, ಅಕ್ಕಿ ಈ ಮೂರು ಕೂಡಿ ಒಬ್ಬ ಪ್ರಾಯಸ್ಥನಿಗೆ ದಿನಕ್ಕೆ 7/16ನೇ ಸೇರು ರೇಶನ್ ಕೊಡಲಾದೀತು.

ಯಚ್. ಶಂಕರ ರಾವ್,
ರೇಷನಿಂಗ್ ಆಫೀಸರ್, ಮಂಗಳೂರು.

ಶ್ರೀ ರಾಮಕೃಷ್ಣ ಥಿಯೇಟರ್ ಲಿಮಿಟೆಡ್, ಉಡುಪಿ.

15-11-44ರಿಂದ
ಪಾಂಚೋಲಿ ಚಿತ್ರ
ಪೂಂಜಿ



22-11-44ರಿಂದ
ಕರ್ದಾರ್ ಚಿತ್ರ
ಶಾರದಾ

ಯುದ್ಧಾನಂತರದ ಪುನರ್ರಚನಾಯೋಜನೆಯಲ್ಲಿ

ದಕ್ಷಿಣ ಕನ್ನಡ ಜಿಲ್ಲೆಯ ವಿಚಾರ.

ಯುದ್ಧಾನಂತರದ ಪುನರ್ರಚನೆಯ ಕುರಿತಾಗಿ ಯೋಜನೆಗಳನ್ನು ಸಿದ್ಧಗೊಳಿಸಿ ಒಪ್ಪಿಸುವುದಕ್ಕಾಗಿ ಮದ್ರಾಸು ಸರಕಾರವು ಏರ್ಪಡಿಸುವ ಒಂಭತ್ತು ಸಮಿತಿಗಳಲ್ಲೊಂದಾದ ಸಂಚಾರ ಸೌಕರ್ಯ ನಿರ್ಮಾಣ ಸಮಿತಿಯ ಯೋಜನೆಯಲ್ಲಿ ನಮ್ಮ ಜಿಲ್ಲೆಯ ಬಗ್ಗೆ 378.3 ಲಕ್ಷ ರೂಪಾಯಿ ವೆಚ್ಚದ ಕಾಮಗಾರಿಕೆಗಳು ಸೇರ್ಪಡೆಯಾಗಿವೆಯೆಂಬುದನ್ನು ಕಳೆದ ಸಂಚಿಕೆಯಲ್ಲಿ ಹೇಳಲಾಗಿತ್ತು. ಜಿಲ್ಲೆಯಲ್ಲಿ ಈಗಿರುವ ರಸ್ತೆ ಸಂಕ ಸೇತುವೆಗಳನ್ನು ಉತ್ತಮಗೊಳಿಸುವುದಕ್ಕೂ ಹೊಸದಾಗಿ ರಸ್ತೆ ಸಂಕ ಸೇತುವೆಗಳನ್ನು ನಿರ್ಮಿಸುವುದಕ್ಕೂ ಈ ಮೊಬಲಗಿನ ವಿನಿಯೋಗವಿದೆ.

ಪ್ರಕೃತ ಅಂಗೀಕೃತವಾಗಿ ಯೋಜನೆಯಲ್ಲಿ ಸೇರ್ಪಡೆಯಾಗಿರುವ ಕಾಮಗಾರಿಕೆಗಳಲ್ಲಿ ಸಂಕ ಸೇತುವೆಗಳ ವಿಚಾರವನ್ನಷ್ಟೆ ಈ ಲೇಖನದಲ್ಲಿ ಹೇಳಲಾಗುವುದು. ಈಗ ನಮ್ಮ ಜಿಲ್ಲೆಯಲ್ಲಿರುವ ಸಂಕ ಸೇತುವೆಗಳು ನಾಲ್ವತ್ತೊಂದು. ಇವುಗಳಲ್ಲಿ ಕೆಲವು ಬಹಳ ಹಳೆಯವುಗಳಾಗಿ ಅಭದ್ರವಾಗಿರುವುದರಿಂದ ಇವನ್ನು ಹೊಸ, ಇಂದಿನ ಆವಶ್ಯಕತೆಗಳಿಗೆ ತಕ್ಕಂತೆ ರಚಿಸಬೇಕಾಗಿದೆ. ಇನ್ನು ಕೆಲವು ಇತ್ತೀಚಿನವುಗಳಾಗಿದ್ದರೂ ಈಗಿನ ಬಹು ಭಾರವಾಹಕಗಳಾದ ಮೋಟಾರು ಲಾರಿಗಳ ಸಂಚಾರಕ್ಕೆ ತಕ್ಕಷ್ಟು ಗಟ್ಟಿಮುಟ್ಟಿನವುಗಳಲ್ಲವಾದ ದರಿಂದ ಮೇಲಿಟ್ಟಿಗಳನ್ನು ಬಲಗೊಳಿಸಬೇಕಾಗಿದೆ. ಉದಾಹರಣೆಗಾಗಿ ಪಾಣೆಮಂಗಳೂರಿನಲ್ಲಿ ನೇತ್ರಾವತಿ ಹೊಳೆಯ ಮೇಲಿನ ಸಂಕ ಮತ್ತು ಗುರುಪುರ ಸಂಕ. ಇನ್ನು ಸರಕು ಸಂಚಾರದ ಪರಿಮಾಣ ದೃಷ್ಟಿಯಿಂದಲೂ ಹೇರಳ ಧನ ವ್ಯಯದ ದೃಷ್ಟಿಯಿಂದಲೂ ಪ್ರಕೃತ ಪ್ರತ್ಯೇಕ ಸೇತುವೆ ಆವಶ್ಯವೆನಿಸದಿರುವಲ್ಲಿ ರೈಲ್ವೇ ಸೇತುವೆಗಳಿದ್ದರೆ ಅವಕ್ಕೇ ಪಕ್ಕದಲ್ಲಿ ಡಕ್ಕ ಕಟ್ಟಿ ಸಂಕ ಮಾಡಿಕೊಳ್ಳಬೇಕಾಗುತ್ತದೆ. ಉದಾಹರಣೆಗಾಗಿ ನೇತ್ರಾವತಿ ಮತ್ತು ಪಯಸ್ವಿನಿ ನದಿಗಳ ಮೇಲಿನ ರೈಲ್ವೇ ಸೇತುವೆಗಳಿಗೆ ಪಕ್ಕದಲ್ಲಿ ಡಕ್ಕ ಕಟ್ಟಿಸುವ ಏರ್ಪಾಡುಗಳು.

ಹೀಗೆ ಇದ್ದುದನ್ನು ತಿದ್ದಿ ಅನುಕೂಲಪ್ರವಾಗಿ ಬಿಟ್ಟ ಹೊಸದಾಗಿ ಆಧುನಿಕ ರೀತಿಯಲ್ಲಿ ಕಟ್ಟಿಸುವ ಅಥವಾ ಸಧಾರಿಸಿಕೊಳ್ಳುವ ಯೋಜನೆಗಳಲ್ಲದೆ ಹೊಸದಾಗಿ 52 ಸಂಕಗಳನ್ನು ಹಾಕಿಸಿ ನಮ್ಮ ಜಿಲ್ಲೆಯ ಉದ್ದಗಲಗಳಲ್ಲಿ ಜನವಾಹನಗಳ ಸಂಚಾರವು ಮಳೆಗಾಲ ಬೇಸಿಗೆಗಾಲವೆನ್ನದೆ ಹೊಳೆಗಳ ಅಡಚಣೆಯಿಲ್ಲದೆ ಸರಾಗವಾಗಿ ಸಾಗುವಂತೆ ವಿಶೇಷ ವಿಚಾರ ಮಾಡಿ ಸಿದ್ಧಗೊಳಿಸಲ್ಪಟ್ಟ ಅಂದಾಜು ಪಟ್ಟಿಯು ಯೋಜನೆಯಲ್ಲಿ ಸೇರ್ಪಡೆಯಾಗಿದೆಯೆಂಬುದು ಮುಂದೆ ಬರುವ ವಿವರಗಳಿಂದ ಸ್ಪಷ್ಟವಾಗುತ್ತದೆ. ಈ ಐವತ್ತೆರಡು ಹಿರಿಯ ಸಂಕಗಳು (Major Bridges) ಯಾವವು ಎಲ್ಲಿ ಎಂಬುದೂ ಅವುಗಳ ಅಂದಾಜು ವೆಚ್ಚ ಎಷ್ಟೆಂಬುದೂ ಕೆಳಗೆ ಹೇಳಲಾಗಿದೆ.

೧ ಕೊಲ್ಲದ್ಕ–ಕಾಂಞಾನ್‌ಗಾಡ್ ರಸ್ತೆಯ ತಕ್ಕೈಲ್ ಸಂಕ (ರೂ. 4,50,000), ೨ ವಲಚಾರು ಗಡಿ–ಕಾಂಞಾನಗಾಡ್ ರಸ್ತೆಯ ಕರಿಯಂಗಟೆ ಸಂಕ (ರೂ. 4,50,000), ೩. ನೀಲೇಶ್ವರ (ರೂ. 1,50,000) ೪. ಬಂಟ್ವಾಳ-ಮೂಡುಬಿದಿರೆ ರಸ್ತೆಯಲ್ಲಿ ಪೂಚಮೊಗರು ಸಂಕ, (ರೂ 2,70,000) ೫. ಮೂಡಬಿದಿರೆ ಹೆಬ್ರಿ ರಸ್ತೆಯಲ್ಲಿ ಜರ್ಪಟ್ಟ ಸಂಕ (ರೂ. 67,500) ೬. ಮೂಡಬಿದ್ರೆ-ಹೆಬ್ರಿ-ಅಲ್ಪಾಡಿ ಮಾರ್ಗದಲ್ಲಿ ಸೀತಾನದಿ ಸಂಕ (ರೂ. 1,35,000) ೭. ಹಳೆಯಂಗಡಿ- ಮಂಡ್ಕೆ ಹಾಲಾಡಿ ಸಂಕ (ರೂ. 2,25,000) ೮ ಹಳೆಯಂಗಡಿ-ಮಂಡ್ಕೆ-ಮಾಲೂರು ಸಂಕ (ರೂ. 57,000) ೯. ಹಳೆಯಂಗಡಿ-ಮಂಡ್ಕೆ- ಚಕ್ರನದಿ ಸಂಕ (ರೂ. 1,12,500) ೧೦. ಮಂಡ್ಕೆ ಹಳ್ನಾಲ್, ಜಡ್ಕಲ್ಲು ಸಂಕ (ರೂ. 75,000) ೧೧ ಬೈಂದೂರು-ಉತ್ತರಕನ್ನಡ ಗಡಿ ಶಿರೂರು ಸಂಕ (52,000) ೧೨. ಪುತ್ತೂರು-ಸಂಪಾಜೆ ರಸ್ತೆಯ 59/1 ಮೈಲಲ್ಲಿ (ರೂ. 75000) ೧೩ ಬಂಟ್ವಾಳ-ಚಾರ್ಮಾಡಿ ರಸ್ತೆಯಲ್ಲಿ ಬೆಳ್ತಂಗಡಿ ಸಂಕ (ರೂ. 1,50,000), ೧೪. ಅರಿಯಡ್ಕ-ನೇತ್ರಾವತಿ- ಕಟ್ಟ ಗುಂಡಪ್ಪ ಸಂಕ (ರೂ. 45000) ೧೫ ಅರಿಯಡ್ಕ ಸುಬ್ರಹ್ಮಣ್ಯ ಕುಲ್ಕುಂದ ಮಾರ್ಗದಲ್ಲಿ ಪಂಜ ಸಂಕ (54000), ೧೬. ಅದೇ ಹಾದಿಯಲ್ಲಿ ಯೆನೆಕಲ್ ಸಂಕ (ರೂ. 54,000) ೧೭. ಬಸಳೆ ಪಟ್ಟರಸ್ತೆ ಹೊಸ್ಮಟ್ಟು ಸಂಕ (ರೂ 2,70,000) ೧೮ ಅದೇ ರಸ್ತೆಯಲ್ಲಿ 27/3 ಮೈಲಲ್ಲಿ ಸಂಕ (ರೂ. 1,97,000) ೧೯. ಪುತ್ತೂರು-ಉಪ್ಪಿನಂಗಡಿ, ನೇತ್ರಾವತಿ ಮೇಲೆ ಸಂಕ (ರೂ. 2,97,000) ೨೦. ಮಂಗಳೂರು ಕಾಸರಗೋಡು ಕರಾವಳಿ ಮಾರ್ಗದಲ್ಲಿ 7/8 ಮೈಲಲ್ಲಿ (ರೂ. 1,20,000) ೨೧. 13/5 ಮೈಲಲ್ಲಿ (ರೂ. 1,50 000) ೨೨. 19/8 ಮೈಲಲ್ಲಿ (ರೂ. 5,25000) ೨೩. 21/4 ಮೈಲಲ್ಲಿ (ರೂ 1,50,000) ೨೪ 24/3 ಮೈಲಲ್ಲಿ (ರೂ 3,00 000) ೨೫. ಮೂಡಬಿದಿರೆ-ಗುರುವಾಯನಕೆರೆ, ಹೊಸಂಗಡಿ ಸಂಕ (ರೂ. 1,21,500) ೨೬. ಅದೇ ರಸ್ತೆಯಲ್ಲಿ ವೇಣೂರು ಸಂಕ (ರೂ. 80,600) ೨೭. ಮಂಗಳೂರು ಬೈಂದೂರು ಕರಾವಳಿ ರಸ್ತೆಯಲ್ಲಿ, ಕೊಳೂರು (ರೂ.3,37,500) ೨೮. ಪಾವಂಜೆ (ರೂ 6,37,500) ೨೯. ಮೂಲ್ಕಿ (ರೂ 6,000) ೩೦. ಉದ್ಯಾವರ (ರೂ 9,00,000) ೩೧. ಕಲ್ಯಾಣಪುರ (ರೂ 9,00,000) ೩೨. ಮಾಬುಕಳ (ರೂ 6,00,000), ೩೩ ಗಂಗೊಳ್ಳಿ (ರೂ 30,00,000) ೩೪ ಹಂಗಾರ ಹೊಳೆ (ರೂ 4,50,000) ೩೫ ಚಿನ್ನಗೋಳಿ ಬೆಳ್ಳಾಲ್ ರಸ್ತೆಯಲ್ಲಿ ಯೋಳಂಜೆ (ರೂ 1,67,500) ೩೬ ಮಾಲ್ಪೆ-ಹಿರಿಯಡ್ಕ ರಸ್ತೆಯಲ್ಲಿ, ಕಲ್ಮಾಡಿ (ರೂ 90,000) ೩೭ ಹಿರಿಯಡ್ಕ-ಹೆಬ್ರಿ-ಶಿವಮೊಗ್ಗ ರಸ್ತೆಯಲ್ಲಿ ಪುತ್ತಿಗೆ (ರೂ 1,80 000), ೩೮ ಮೂಡಬಿದ್ರೆ-ಹೊಸ್ಮಾರು ಮಾರ್ಗದ 5/5 ಮೈಲಲ್ಲಿ (ರೂ 45,000) ೩೯ ಪೈಚಾರ್-ಸನಗಿರಿ ಸುಬ್ರಹ್ಮಣ್ಯ ಮಾರ್ಗದಲ್ಲಿ ಕಲ್ಲಜ ಸಂಕ (ರೂ 90,000) ೪೦ ಕಾಸರಗೋಡು-ಹೊಸದುರ್ಗ ಮಾರ್ಗದಲ್ಲಿ ಬೇಕಲ (ರೂ 1,50,000) ೪೧. ಅದೇ ರಸ್ತೆಯಲ್ಲಿ ಚಿತ್ತಾರಿ (ರೂ 1,87,000), ೪೨ ಪಾಣೆಮಂಗಳೂರು-ಪುತ್ತೂರು ರಸ್ತೆ 0/2 ಮೈಲಲ್ಲಿ (ರೂ 72,000), ೪೩ ಅದೇ ರಸ್ತೆ 8/7 ಮೈಲಲ್ಲಿ (ರೂ 54,000), ೪೪ ಕೋಟ ಗೋಳಿಯಂಗಡಿ ರಸ್ತೆ ಉಪ್ಪಲಾಡಿ ಸಂಕ (ರೂ 90,000) ೪೫ ಕಲ್ಯಾಣಪುರ-ಕುಕ್ಕೆಹಳ್ಳಿ ರಸ್ತೆ ಪುತ್ತಿಗೆ ಹೊಳೆ (ರೂ 1,80,000) ೪೬. ಅದೇ ಗುರುವಾಯನಕೆರೆ-ಹೊಸನಗರ್ ರಸ್ತೆಯಲ್ಲಿ 4/4 ಮೈಲಲ್ಲಿ (ರೂ 90,000) ೪೭. ಅದೇ ರಸ್ತೆ 12/4 ಮೈಲಲ್ಲಿ (ರೂ 90,000) ೪೮ ಅಜೆಕಾರ್ ವಿನಯಾರ್ ರಸ್ತೆ 7/5 ಮೈಲಲ್ಲಿ (ರೂ 67,000) ೪೯ ಅದೇ ರಸ್ತೆ 10/3 ಮೈಲಲ್ಲಿ (ರೂ 67,000) ೫೦ ಅದೇ ರಸ್ತೆ 12/8 ಮೈಲಲ್ಲಿ (ರೂ 60,000), ೫೧ ಉಜಿರೆ ಧರ್ಮಸ್ಥಳ ರಸ್ತೆಯಲ್ಲಿ ನೇತ್ರಾವತಿ ಮೇಲೆ (ರೂ 90,000) ೫೨ ವಿಟ್ಲ ಸಾಲೆತ್ತೂರು (ರೂ. 72,000). ಹೀಗೆ ೫೨ ಸಂಕ ಸೇತುವೆಗಳಿಗಾಗಿ ಜಮಲಾ ಅಂದಾಜು ವೆಚ್ಚ ರೂ 139 37,600. ಮೇಲ್ಕಂಡ ರೂ 373.3 ಲಕ್ಷದಲ್ಲಿ ಈ ವೆಚ್ಚ ರೂ 139·4 ಕಳೆದು ಉಳಿಯುವ ಮೊಬಲಗು ಮುಖ್ಯ ರಾಜಮಾರ್ಗಗಳ ಮತ್ತು ಗ್ರಾಮ ರಸ್ತೆಗಳ ನಿರ್ಮಾಣಕ್ಕಾಗಿ ಇದೆ.

'ಜಿಲ್ಲಾ ಹಿತೈಷಿ'

ಉಡುಪಿ ಮಧ್ವಮತ

ಶಿವಳ್ಳಿ ಬ್ರಾಹ್ಮಣರ

ಧರ್ಮ ಛತ್ರ

ಇದೇ ತಾ॥ 8-10-44ರಿಂದ

ರಾಮೇಶ್ವರ ದೇವಸ್ಥಾನದ ಬಡಗು ಬೀದಿಯಲ್ಲಿ ತೆರೆಯಲ್ಪಟ್ಟಿದೆ

ಎಲ್. ನರಸಿಂಗರಾವ್. ಪ್ರೊಪ್ರೈಟರ್.

ಉಡುಪಿ ಬೋರ್ಡಿಂಗ್ ಎಂಡ್ ಲಾಜಿಂಗ್, ಮಥುರ.

Sri Narayan Guru Bank, Ltd.,

(Incorporated in British India Liability of Members is Limited)

Regd. Head Office HAMPANKATTA,

MANGALORE.

Branches: UDIPI, & Coondapur.

Authorised Capital	....	**Rs 2,00000**
Issued Capital	... .	**,, 1,00000**
Paid up Capital	... .	**,, 56,150**

The Company has commenced Business by obtaining from the Government the Certificate of Commencement of Business on the 19th August, 1944 under the Indian Companies Act, 1913.

Strong Board of Directors

Consent of the Central Government has been obtained under the Defence of India Rules 94 A "It must be distinctly understood that in giving this consent the Govt. of India does not take any responsibility for the financial soundness of any scheme or for the correctness of any of the statements made or opinion expressed with regard to them". The Government of India has been pleased to extend the period till the 13th January 1945 for the sale of shares.

A few shares at par available,

Rs 50/- per share. Re. 1/- Entrance Fee per share

Hundreds have already taken up shares!

WHY NOT YOU?

Current and Savings Bank Accounts are opened. Fixed Deposits are accepted. Enquire for Rules of Business and rates of Interest.

MANGALORE JARAPPA,

President & Managing Director.

ನೋಟೀಸು

ಉಡುಪಿ ಡಿ॥ ಮು॥ ಕೋರ್ಟಿನಲ್ಲಿ

O. P No. 84/1944

1 ಗಂಗಮ್ಮ-ಪಿ. ವೆಂಕಟದಾಸಾಚಾರ್ಯರ ವಿಧವೆ; 2 ಲಕ್ಷ್ಮೀನಾರಾಯಣ, 3 ಪಯುವದನ, 4 ರಾಮಚಂದ್ರ- ಪಿ ವೆಂಕಟದಾಸಾಚಾರ್ಯರ ಮಕ್ಕಳು ಮ್ಯಾನರ್ಸ್-ರಕ್ಷಕಳು ತಾಯಿ 1ನೇ ಅರ್ಜಿದಾರಳು, ಉಡುಪಿ ತಾಲ್ಲೂಕು ಶಿವಳ್ಳಿ ಗ್ರಾಮದ ಪಾಡಿಗಾರದಲ್ಲಿರುವವರು

—ಅರ್ಜಿದಾರರು

ಈ ಮೂಲಕ ಸಮಸ್ತರಿಗೂ ತಿಳಿಯಪಡಿಸುವುದೇನಂದ್ರ—

ಮೇಲ್ಕಂಡ 1ನೇ ಅರ್ಜಿದಾರಳ ಗಂಡ 2ರಿಂದ 4ರ ವರೇಗಿನ ಅರ್ಜಿದಾರರ ತಂದೆ ತಾ. 6 5-1943ರಲ್ಲು ಮೃತಪಟ್ಟ ಪಿ॥ ವೆಂಕಟದಾಸಾಚಾರ್ಯರಿಗೆ "The Canara Mutual Assurance Company Ltd, Udipi" ಇದರ ನಂಬ್ರ 795ನೇ ಪೋಲಿಸಿ ಬಾಬ್ತು ಸಿಕ್ಕತಕ್ಕ ಐವಜು ರೂಪ್ಯಾ 496 5 0ನ್ನು ವಸೂಲು ಪಡಿಯುವರೆ ಸದ್ರಿ ಮೃತನ ವಾರೀಸುದಾರರಾದ ಅರ್ಜಿದಾರರೇ ಹಕ್ಕುದಾರರೆಂತಲೂ, ಆ ಬಗ್ಗೆ 1ನೇ ಅರ್ಜಿದಾರಳ ಹೆಸರಲ್ಲಿ ಸಕ್ಸೆಶ್ಯನ್ ಸರ್ಟಿಫಿಕೇಟು ಕೊಡಿಸಬೇಕಾಗಿಯೂ ವಗೈರೆ ಸಂಗ್ತಿ ಕಾಣಿಸಿ ಅರ್ಜಿದಾರರು ದಾಖಲುಮಾಡಿರುವ ಮೇಲ್ಕಂಡ ಅರ್ಜಿಯು ತಾ. 4 12 1944ಕ್ಕೆ ಇಟ್ಟಿರುತ್ತದೆ. ಆಕ್ಷೇಪ ಹೇಳಲುಳ್ಳವರು ಸದ್ರಿ ದಿವಸ ಈ ಕೋರ್ಟಿನ ಮುಂದೆ ಬೆಳಗ್ಗೆ 10 ಘಂಟೆಗೆ ಹಾಜರಾಗಿ, ಜ್ಯಾಹೀರುಮಾಡಿಕೊಳ್ಳತಕ್ಕದ್ದು

ಉಡುಪಿ, ತಾ. 15-11-1944. | **D. V Acharya.** Vakil for Petitioner

ನೋಟೀಸು

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

R. I. A 1703/44 O S. 466/44

ವಾದಿ- ವಡೇರಹೋಬಳಿ ಅಣ್ಣಪ್ಪ ಸೆಟ್ಟಿ

—ಅರ್ಜಿದಾರ

ಪ್ರತಿವಾದಿ M. ವೆಂಕಟ್ರಮಣ ಕಲ್ಕೂರ

—ಎದ್ರಿ

ಕುಂದಾಪುರ ಕಸಬೆಯಲ್ಲಿರುವ ಮುಟ್ಟಾಡಿ ಶಿವರಾಮ ಕಲ್ಕೂರರ ಮಗ ಸದ್ರಿ ಪ್ರತಿವಾದಿ M. ವೆಂಕಟ್ರಮಣ ಕಲ್ಕೂರರೀಗೆ ಈ ಮೂಲಕ ತಿಳಿಯಪಡಿಸುವುದೇನಂದರೆ—

ನಿಮ್ಮಿಂದ ಕರ್ನಾಟಕ ಬೇಂಕಿನ ಕುಂದಾಪುರ ಬ್ರೇಂಚಿಗೆ ತಾ 30-11-43ರ ಹುಂಡಿ ಪ್ರಕಾರ ಸಲತಕ್ಕ ಹಣ ಬಡ್ಡಿ ಕೂಡಾ ರೂ 424-6 0ನ್ನು ವಾದಿಯು ಕಟ್ಟಿ, ಆ ಬಾಬ್ತು ನಿಮ್ಮಿಂದ ವಾದಿಗೆ ಬರ ರೂ. 425-0-0 ವಗೈರೆ ಬರಮಾಡಿಕೊಳ್ಳುವ ಕುರಿತು ದಾಖಲು ಮಾಡಿದ ನೋಲಿನ ದಾವೆ ಮತ್ತು ನಿಮ್ಮ ಬಾಬ್ತು ಸ್ಥಿರಆಸ್ತಿ ಕೈಪೇತು ಜಪ್ತು ಮಾಡ್ಬೇಕೆಂತ ವಗೈರೆ ಕಾಣ್ಸಿ ದಾಖಲುಮಾಡಿದ ಮೇಲಿನ R. I. A. (ಆರ್॥ ಐ॥ ಎ॥)1703/44ನೇ ಜಪ್ತಿ ಅರ್ಜಿ ಸಹಾ ತಾ. 8-12-44ನೇ ದಿನ ಬೆಳಿಗ್ಗೆ 11ಗಂಟೆಗೆ ಮೇಲ್ಕಾಣುವ ಕೋರ್ಟಿನಲ್ಲಿ ತನ್ಕಿಗೆ ಇಟ್ಟಿದೆ ಎಂಬ ಸಂಗ್ತಿ ಈ ಮೂಲಕ ತಿಳಿಸೋಣಾಗಿದೆ

Coondapoor, 18 11-44 | **S S. Shetty.** Advocate for Pltf,

○ ಮಾಲಿನೀ ○

(೩ನೇ ಪುಟದಿಂದ ಮುಂದುವರಿದುದು.)

●

ಹೊಸಬನು ಆಕೆಯನ್ನೇ ದಿಟ್ಟಿಸಿ ನೋಡಿದನು ನಿಜ. ಅದೇ ಮೊಗ, ಅದೇ ತುಂಬಿದ, ಚೆಲುವಿನ ಮೊಗ, ಸಿರಿ ಮೊಗ. ಅವನೆಂದ: 'ಹಾಗಾದರೆ ನನ್ನ ಗುರುತು ಇದೆಯೇನು? ಪಾಪ. ಎಷ್ಟು ಸಣ್ಣವಳಿದ್ದಿಯೋ ನೀನು!'

ಹೊಸಬನ ಗುರುತು ಇದೆಯೇನು?

ಆಕೆಯೂ ನೋಡಿದಳು. ಕಣ್ಣುಗಳ ನೋಟ ಕೂಡಿಕೊಂಡುವು. ಎರಡೂ ನೋಟಗಳು ಒಂದೇ ಗುರಿಯನ್ನು ನೇರಿಟ್ಟ ಎರಡು ತುಟ್ಟತುದಿಗೆ (Poles) ಎನಿದುವು. ಅವು ಒಂದು ಕಡೆ ಎಲ್ಲಿಯೋ ಕೂಡಿದುವು.

ಮಾಲಿನಿಯ ಮನದಲ್ಲಿ ಮಾಸಿದ್ದ ನೆನಹು ಎಚ್ಚೆತ್ತು ಹೇಳಿತು. ನಿನಗೆ ಗುರುತಿದೆಯೇನು? ಆಕೆಯ ನೈಮನಗಳೆಲ್ಲ ನಡುಗಿದುವು.

ಇನ್ನೂ ಒಂಬತ್ತು ವರುಷದ ಹುಡುಗಿಯಿದ್ದಾಗ ಮಾಲಿನಿಗೆ ಮದುವೆಯಾಗಿತ್ತು. ನರೇಂದ್ರ-ಅದು ಆಕೆಯ ಗಂಡನ ಹೆಸರು-ಅವನು ಊರು ಸುತ್ತುವುದಕ್ಕಾಗಿ ಹೋಗಿದ್ದನು. ಚುಕ್ಕಾಣಿ ಕಡಿದ ಹಡಗಿನಂತೆ ಎತ್ತಲೋ ತೇಲಿಕೊಂಡು ಹೋದನು. ಎಂಟು ವರುಷದ ಬಳಿಕ ಊರಿಗೆ ಹೊಸಬನಾಗಿ ಬಂದು, ಈಗ ತನ್ನ ಹುಡುಗಿ ಹೆಣ್ಣಿನ ಮುಂದೆ ಕೇಳುತ್ತಾನೆ: 'ಮಾಲಿನೀ ... ಅವಳು ಎಲ್ಲಿಗೆ ಹೋದಳು?.......'

ಎಂತಹ ಆಭಾಸವಿದು!

ಆಕೆ ಇಂದಿನ ಕನ್ನೆ. ಬಳೆದು ಹರಯಕ್ಕೆ ಬಂದ ಹೆಣ್ಣು.

\+ \+ ×

ಮಾಲಿನಿ ಹಾಸಿಗೆಯನ್ನು ಹಿಡಿದಳು

ಆಕೆಗೆ ಹುಚ್ಚು ಹಿಡಿದಿರಲಾರದು, ಜಾಡು ಅಂಟಿರಲಾರದು. ಆದರೆ ಒಂದು ಮಾತು ನಿಜ. ಆಕೆ ಕೆಟ್ಟವಳೆಂಬ ಅರಿವು, ಕೆಟ್ಟಿರುವಳೆಂಬ ಅರಿವು ಆಕೆಯ ಮನವನ್ನು ಕೊರೆದು ಕೊರಗಿಸಿತು ಆಕೆ ಸೊರಗಿ ಹೋದಳು ಹಸೆ ಹಿಡಿದಳು.

ನರೇಂದ್ರ ಯೋಚಿಸಿದ ಆಕೆಯ ನಡವಳಿಯನ್ನು ಗುರುತಿಸಿದ. ಕೊನೆಗೆ ಒಂದು ತೀರ್ಪಿಗೆ ಬಂದನು. ಕನ್ನೆ ತನ್ನಿಂದ ಹಾಳಾದಳು ಏಳು ಎಂಟು ವರುಷದ ದೀರ್ಘ ಕಾಲದ ವರೆಗೆ ಆಕೆಯನ್ನು ಕಣ್ಣುತಪ್ಪಿಸಿ ಕಣ್ಣೀರಿಡಿಸಿದ ತಪ್ಪುಗಾರನಾನು. ಈ ನಡುವೆ ಆಕೆಯ ಹೆಣ್ಣೆನೆದೆ ಎಲ್ಲಿಯೋ ಒಂದು ಹೊಸ ಆಸರೆಯನ್ನು ಕಂಡುಕೊಂಡಿರಬೇಕು ....ಕೈಯನ್ನು ನೋಡುವುದಕ್ಕೆ ಕನ್ನಡಿ ಬೇಕೆ?

ಮಾಲಿದಿ ಮಲಗಿದ್ದಳು. ನರೇಂದ್ರ ಆಕೆಯ ಹಾಸಿಗೆಯಲ್ಲಿ ಕುಳಿತನು. ಆಗ ತಾನೇ ನಿದ್ದೆಯಲ್ಲಿದ್ದ ಆಕೆ ತಟ್ಟನೆ ಎದ್ದು 'ಶಶಿ! ಶಶಿ!' ಎಂದು ಒರಲುತ್ತ ನರೇಂದ್ರನ ಕುತ್ತಿಗೆಗೆ ಜೋಲು ಬಿದ್ದಳು. ನರೇಂದ್ರನಿಗೆ ಇವರ ಮೊಸ ಮೊದಲೇ ಹೊಳೆದಿತ್ತು. ಈಗ ನಿಜವೆನಿಸಿತು

ಡಾಕ್ಟರರು ಯಾರು ಯಾರು ಬಂದರೂ ಅದರಿಂದ ಏನೂ ಗುಣವಾಗಲಿಲ್ಲ. ಕೊನೆಗೆ ತಾನೇ ವೈದ್ಯನಾಗಿ ನಿಂತನು.

ಶಶಿ ಎಂದಿನಂತೆ ಬಂದಾಗ ನರೇಂದ್ರ ಅವನನ್ನು ಆದರದಿಂದ ಬರಮಾಡಿಕೊಂಡನು. ಮಾಲಿನಿ ಮಲಗಿದ್ದಲ್ಲಿಗೆ ಒಯ್ದು ಕುಳ್ಳಿರಿಸಿದನು. ನರೇಂದ್ರ ತನ್ನ ಮಡದಿ ಮಾಲಿನಿಯ ಕೈಯನ್ನು ಎತ್ತಿಕೊಂಡನು. ಯಂತ್ರದಂತೆ, ನಾಟಕದಲ್ಲಿ ಪಾತ್ರವಹಿಸಿದಂತೆ, ನರೇಂದ್ರ ಹೇಳಿದ: 'ಸಮಾಜವು ಈ ಕೋಮಲ ಹಸ್ತ ಕಮಲವನ್ನು ನನ್ನ ಕೈಗೆ ಕೊಟ್ಟು ಹರಸಿತ್ತು. ದೈವ ಅದನ್ನು ನಿನ್ನ ಕೈಯಲ್ಲಿಡಲು ಮಾಡಿದೆ. ಇಗೋ, ಈ ಪುಷ್ಪಾಂಜಲಿಯನ್ನು ಸ್ವೀಕರಿಸಬೇಕು ....' ಎಂದು ಶಶಿಯ ಕೈಗಳನ್ನು ಎಳೆದು ಮಾಲಿನಿಯ ಕೈಯನ್ನಿತ್ತನು. ಅವನು ಏನು ಹೇಳಿದ, ಏನು ಮಾಡಿದನೆಂದು ಆತನಿಗೇ ಗೊತ್ತಿದ್ದಂತೆ ತೋರುತ್ತದಿಲ್ಲ. ಅವನು ಶೀರ ಮರಣೆಯಲ್ಲಿ ತಲೆಮರಸಿ ಹೀಗೆ ಮಾಡಿದಂತೆ ಇತ್ತು. ಶಶಿ ಕಣ್ಣರಳಿಸಿ ನೋಡುತ್ತಿದ್ದನು. ಮಾಲಿನಿಗೆ ಒಂದಿಷ್ಟು ಎಚ್ಚರು ತಿಳಿದಿತ್ತು ಆಗ

ನರೇಂದ್ರ ನಿಟ್ಟುಸಿರು ಬಿಟ್ಟನು. ಅವರಿಬ್ಬರ ಕೈಗಳನ್ನೂ ಬಿಟ್ಟನು. ಅಲ್ಲಿಂದ ಒಡನೆ ಹೊರಗೆ ಇಳಿದು ನೆಟ್ಟಗೆ ಕಂಡದಾರಿ ಹಿಡಿದು ನಡೆದು ಹೋದನು.

ಕಂಡಿಯಿಂದ ಅವನು ಹೋಗುವುದನ್ನು ಶಶಿ ನಿಂತು ನೋಡಿದ ಅವನು ದೂರ ದೂರ ಹೋಗುವುದು ಕಾಣಿಸಿತು ಮಾಲಿನಿಯ ಕೈಯನ್ನು ಕೆಳಗಿರಿಸಿ ತಾನೂ ಹೊರಗೆ ಇಳಿದು ಹೋದನು. ಅವನು ಏನಿಕೆ ಹಾಕುತ್ತಲಿದ್ದ. 'ಎಂತಹ ಮನಸ್ಸು ಇದು!' ಅದರ ಬಗೆಗಾಣುತ್ತಿರಲಿಲ್ಲ; ಕಾಣುವಂತಿಲ್ಲ. ಅವನೂ ಎಲ್ಲಿಗೋ ನರೇಂದ್ರನ ಬೆನ್ನು ಹತ್ತಿ ಹೋದನು. ಹೋದವನು ಹಿಂದಿರುಗಲಿಲ್ಲ.

ಮಾಲಿನಿ ಆರಿದ ಗಂಟಲಿನೊಳಗಿಂದ ಕೂಗಿಡುತಿದ್ದಳು. 'ಶಶಿ! ಶಶಿ! ಶಶಿ! ....'ಮಂದ ಮಂದವಾಗಿ ಉರಿಯುತ್ತಿದ್ದ ದೀಪವನ್ನು ಆರಿಸುವ ಮಂದ ಮಾರುತನು ಬಂದು ತನ್ನ ಕೆಲಸವನ್ನು ಪೂರೈಸಿ ಹೋದನು.

—(ಮಲಯಾಳಿ ಕತೆಯಿಂದ)

ಇಂತಹ ಅನರ್ಥಕ್ಕೆ ಅವಕಾಶ ಕೊಡಲು

ನೀವು ಎಂದಿಗೂ ಇಷ್ಟಪಡಲಾರಿರಿ.

ಆದರೆ, ಅನವಶ್ಯಕವಾದ ಪದಾರ್ಥಗಳನ್ನು ನೀವು ಕೊಂಡುಕೊಂಡಾಗೆಲ್ಲ, ಸಂಭವಿಸತಕ್ಕದ್ದು ಇದೊಂದೇ. ಪದಾರ್ಥಗಳ ಬೆಲೆ ಮಿತಿ ಮೀರಿ ಏರುವುದರಿಂದ, ನಿಮಗೆ ನಿಜವಾಗಿಯೂ ಅವಶ್ಯವಿಲ್ಲದ ಪದಾರ್ಥಗಳನ್ನು ನೀವು ಕೊಂಡುಕೊಳ್ಳುವ ಪ್ರತಿಯೊಂದಾವರ್ತಿಯೂ, ಶ್ರಮಾರ್ಜಿತವಾದ ನಿಮ್ಮ ಧನವು ಹಾಳಾಗುವುದು. ಆದುದರಿಂದ ವಿವೇಕಿಗಳಾಗಿರಿ. ಅನಿವಾರ್ಯವಾಗಿ ಬೇಕಾದಂತಹ ಪದಾರ್ಥಗಳನ್ನು ಮಾತ್ರ ಕೊಂಡುಕೊಳ್ಳಿ. ಯುದ್ಧಕಾಲದಲ್ಲಿ, ಪದಾರ್ಥಗಳ ಬೆಲೆ, ನಮ್ಮ ಹಣಕ್ಕೆ ಅನುರೂಪವಾಗಿರುವುದಿಲ್ಲ. ಯುದ್ಧಕಾಲದಲ್ಲಿ ಹೆಚ್ಚು ಬೆಲೆಯನ್ನು ಕೊಟ್ಟು, ಅನವಶ್ಯಕವಾದ ಪದಾರ್ಥಗಳನ್ನು ಕೊಂಡುಕೊಳ್ಳುವುದರಲ್ಲಿ ಹಣವನ್ನು ವೆಚ್ಚ ಮಾಡುವುದು, ಹಾಳುಬಾವಿಯಲ್ಲಿ ಹಾಕಿದಂತೆಯೇ.

ಆಭರಣಗಳು, ಜಮೀನುಗಳು, ಕಟ್ಟಡಗಳು, ಷೇರುಗಳು, ಕ್ರಯಕ್ಕೆ ಸಿಗುವ ಸಾಮಾನುಗಳ ವಸ್ತುಗಳಿಗಾಗಿ ನೀವು ವೆಚ್ಚ ಮಾಡುವುದರಿಂದ, ಬಂದು ಬಳಕ್ಕೆ ಬರುವಂತಹ ವಸ್ತುಗಳ ಬೆಲೆಗಳು ಸ್ಥಿರವಲ್ಲ. ಆದುದರಿಂದ ಎಚ್ಚರಿಕೆ ತಪ್ಪಿ, ತಪ್ಪು ನಿರ್ಣಯವನ್ನು ಮಾಡಿ ಈಗ ಬೆಲೆಗಳು ಏರುವುದಕ್ಕೆ ಬದಲಾಗಿ ಇಳಿಮುಖವಾಗಿರುವಂತೆ ಕಾಣುತ್ತವೆ.

ಹಾಗಾದರೆ, ಭದ್ರತೆ ಮತ್ತು ಲಾಭಕರ, ಈ ಎರಡು ಗುಣಗಳನ್ನೂ ಹೊಂದಿರುವ, ಧನವಿನಿಯೋಗ ಮಾರ್ಗಗಳು ಯಾವುವೆಂದರೆ:—

- ★ ಇನ್‌ಷೂರನ್ಸ್ ಪಾಲಿಸಿಗಳು,
- ★ ಕೋಆಪರೇಟಿವ್ ಸಂಘಗಳು
- ★ ಬೇಂಕುಗಳಲ್ಲಿ ಕಲ್ಪಿಸಿರುವ ಉಳಿತಾಯದ ಸಾಧನಗಳು,
- ★ ಪೋಸ್ಟಾಫೀಸ್ ಸೇವಿಂಗ್ಸ್ ಬೇಂಕುಗಳು,
- ★ ಗವರ್ನಮೆಂಟ್ ಲೋನ್‌ಗಳು,
- ★ ಮತ್ತು ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳು.

ಸುರಕ್ಷಿತವಾದ ಧನವಿನಿಯೋಗದಿಂದ ದೊರೆಯುವ ಬಡ್ಡಿಯು ಕಡಿಮೆಯಾಗಬಹುದು, ಆದರೆ, ಅಸಲು ಭದ್ರವಾಗಿರುವುದು —ಯುದ್ಧಕಾಲದಲ್ಲಿ ಧನವಿನಿಯೋಗವಹಿಸುವ ಉದ್ದೇಶವುಳ್ಳವರು ಗಮನಿಸಬೇಕಾದ ವಿಷಯವು ಇದೇ ಅಲ್ಲವೆ?

ಹಣವನ್ನು ಕೈಲಾದ ಮಟ್ಟಿಗೂ ಉಳಿಸಿರಿ

ಉಳಿಸಿದ್ದನ್ನು ವಿವೇಕಮಾರ್ಗಗಳಲ್ಲಿ ವಿನಿಯೋಗಿಸಿರಿ.

ಇದು ರಾಷ್ಟ್ರೀಯ ಯುದ್ಧಮುಖವು ಭಾರತೀಯರ ಸಮಕ್ಷಮದಲ್ಲಿ ಮಾಡುವ ಅರಿಕೆ

AAA 1112 KN

The Pangal Nayak Bank Limited.

(Incorporated in 1920)

Registered Office Court Road, UDIPI.

Branches at Udipi, Mangalore, Katapadi, Kanhangad, Kinnigoli and Nileshwar, South Canara District

Discounting of demand and short term negotiable instruments for approved parties, granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms acceptance of Fixed, Current, Savings Bank and Cumulative deposits and every other type of up to date Banking service is at the disposal of all the sections of the discreet public.

For business proper please enquire at any one of our Offices.

15th April 1944.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗಾರಂಟೀ

ಮೂತ್ರದಿಂದ ಕೀವು ಬರುತ್ತಿದ್ದರೆ, ಘೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದ ಬಾವು ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಶೋಭೆಯುಳ್ಳವರಾಗಿದ್ದರೆ, .. ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಪಾಂಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕಟ್ಟಿ ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದು ವರೆಗು ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ೬ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:— ಗದಗ:- ಗದಗ ಫಾರ್ಮಸಿ, ಹುಬ್ಬಳ್ಳಿ:- ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟ — ಬಾಗಲಕೋಟೆ ಫಾರ್ಮಸಿ, ಧಾರವಾಡ:— ಧಾರವಾಡ ಫಾರ್ಮಸಿ, ದಾವಣಗೇರಿ: ದಾವಣಗೇರಿ ಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ದಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ.

Ayurveda Oushadalaya GADAG

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್ — ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:— ಡಾ. ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮೆಸಿ ಶ್ರೀ. ಆರ್. ಎಸ್. ಶೆಣ್ಯ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮೆಸಿ, ಡಾ. ಕೆ. ಶೇಷಗಿರಿ ಪೈ, L. I. M.; ಡಾ. ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ಸಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೩ ಬಾಟ್ಲಿಗಳು ಹೆಚ್ಚು ಕಡಿಮೆ ೪೦ ದಿವಸಗಳಿಗೆ ಬರುವವು, ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೫ **ಕೊಡಿಯಾಲಬೈಲು, ದ. ಕ**

— ಮಕ್ಕಳನ್ನು ಹಡೆಯುವದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:— ಹೆರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೧೦ಆಣೆ.

ಮಾಲಕರು:— ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:— ಹುಬ್ಬಳಿ ಫಾರ್ಮಸಿ,— ಹುಬ್ಬಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ— ಕುಂಬರವಾಡಿ ಸ್ಟೋರ್ಸ. ದಾವಣಗೇರಿ:— ದಾವಣಗೇರಿ ಪ್ರೆಸ್. ಆರ್. ಎಲ್. ಕಮಲದಾಸಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ,

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ ಕ್ವಾಲಿಟಿಂಗ್ಲಿ ಬರದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನಿಸಬಹುದು. ಉಡುಪಿ ಏಜಂಟರು:— ನವಭಾರತ ಬುಕ್ ಡಿಪೊ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ ಬೆಲೆ ೦—೧೦—೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು.

ಪ್ರೇಮಪ್ರವಾಹವು ಹೇಗೆ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮಪ್ರವಾಹ

ಸ್ವಾರಸ್ಯವಾದ ೫ ಕತೆಗಳ ಸಂಗ್ರಹ ಬೆಲೆ ೦-೬—೦

ಬಹಿರಂಗವಾಗಿ ಅಲ್ಲವಾದರೂ ಅಂತರಂಗವಾಗಿ ನೋಡತಕ್ಕ

ಆರ್ಟ್ ಚಿತ್ರಗಳು

ಹಲವಾರು ಸುಂದರಿಯರ ನೈಜಚಿತ್ರಗಳ ಕಟ್ಟು. ಬೆಲೆ ೦—೬—೦

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಕುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ. ೧—೮—೦

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. ಬೆಲೆ: ೦—೧೨—೦

ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd. No. M. 3618.

ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6.

Estd. 1921 ಸ್ಥಾಪನೆ.

ನವಯುಗ

NAVAYUGA

ವರ್ಷ ೨೪ ವಾರ ೧೩ | ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. | Vol. 24 No. 13

Founder SRI A. B. SHETTY.

ಉಡುಪಿ • 30—11—1944 • ಮಂಗಳೂರು.

ದಿ ಜುಪಿಟರ್

ಜನರಲ್ ಇನ್ಶ್ಯೂರೆನ್ಸ್ ಕಂಪೆನಿ, ಲಿ, ಬೊಂಬಾಯಿ.

ವಿಮೆಯಿಳಿಸ ಬೇಕೆ?

ಏಜಂಟರಾಗುವಿರಾ!

-ಹಾಗಾದರೆ ಕೂಡಲೇ-

ಪಿ. ಡಿ. ನಾನಯ್ಯ, ಉಡುಪಿ,

ದಕ್ಷಿಣ ಕನ್ನಡದ ಚೀಫ್ ಏಜೆಂಟ್.

-ಇವರಿಗೆ ಬರೆಯಿರಿ-

1 ಕೋಟಿಗೆ ಮಿಕ್ಕಿ ವ್ಯವಹಾರ!

ಈ ವರುಷವೇ ರಜತೋತ್ಸವ!

The Jupiter General Insurance Company Ltd.

ಅಂತರಂಗ

ಉಡುಪಿ.

ಅಖಿಲ ಕರ್ನಾಟಕದ ಹೊಸ ಮಾದರಿಯ ಸಚಿತ್ರ ವಿನೋದ ವಾರಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0

ಬಿಡಿ ಪ್ರತಿಗೆ ರೂ. 0—1—6

Transact with

The Vijaya Bank Ltd.

H. O. MANGALORE.

Branches all over the District and in Bombay city,

For all kinds of Banking business.

ದಿ ವಿಜಯ ಬೇಂಕ್ ಲಿಮಿಟೆಡ್,

ಹೆಡ್ ಆಫೀಸು: ಮಂಗಳೂರು.

ಜಿಲ್ಲೆಯ ಎಲ್ಲಾ ಕಡೆಗಳಲ್ಲಿ ಮತ್ತು ಮುಂಬಾಯಿ ನಗರದಲ್ಲಿ ನಮ್ಮ ಶಾಖೆಗಳು ಎಲ್ಲಾ ತರದ ಬೇಂಕಿಂಗ್ ವ್ಯವಹಾರಗಳು ನಡೆಸಲ್ಪಡುವುದು.

"We are glad to announce that the Canara Bank Ltd., are our Clearing agents at Bombay".

ದಿ ಕೆನರಾ ಬ್ಯಾಂಕ್ ಲಿಮಿಟೆಡ್‌ಯವರು ನಮ್ಮ ವಿಜಯಾ ಬ್ಯಾಂಕಿನ ಕ್ಲಿಯರಿಂಗ್ ಏಜಂಟರಾಗಿರುತ್ತಾರೆಂದು ತಿಳಿಸಲು ಸಂತೋಷಪಡುತ್ತೇವೆ.

M. M. Bhandary,

Agent Bombay Branch.

BAG ON HIS HEAD

If you saw any passenger sitting in a train with his bag on his head, you will laugh your sides out because good arrangements are made in the train to keep the luggage.

One worrying about one's future and that of one's family is like the passenger with his bag on the head because fine arrangements to ensure them through insurance are easily available.

THE CANARA MUTUAL ASSURANCE CO., LTD.,

UDIPI (S. India)

REG.

ಅಮೃತಾಂಜನ ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವದು, ಬೇಳು ವಿಷ ಮುಂತಾದ ಚೇಳಿನ ಕಚ್ಚುವಿಕೆ, ನೆಗಡಿ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಪ್ರತ್ಯುಷಧಿ ಮತ್ತು ಸರ್ವ ಸಮ್ಮತಿಸಿ ಶಿಕ್ಷಿತ್ಸೆ ಕ್ಷದ

ಅಮೃತಾಂಜನ ಲಿಮಿಟೆಡ್.

ಮದರಾಸು.

ಬೊಂಬಾಯಿ ಮತ್ತು ಕಲ್ಕತ್ತ.

ದಿ ಮೂಲ್ಕಿ ಬೇಂಕ್, ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪ್ರೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ, ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,

Moolky, S. K.

ಕ್ರೌನ್

ರಬ್ಬರ್ ಸ್ಟಾಂಪ್ ಕಂಪೆನಿ

18 ಬಲ್ಮಠ ರಸ್ತೆ, ಮಂಗಳೂರು.

ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co.

18 Balmat Road, MANGALORE

Approved firm by the Govt. of Mysore. Certified by the Agent of the Govt. of India in Ceylon. ESTD 1906

Sri Narayan Guru Bank, Ltd.,

(Incorporated in British India, Liability of Members is Limited)

Regd. Head Office: HAMPANKATTA, MANGALORE.

Branches: UDIPI, & Coondapur.

Authorised Capital	... .	**Rs 2,00000**
Issued Capital	....	**„ 1,00000**
Paid up Capital	....	**„ 56,150**

The Company has commenced Business by obtaining from the Government the Certificate of Commencement of Business on the 19th August, 1944 under the Indian Companies Act, 1913.

Strong Board of Directors

Consent of the Central Government has been obtained under the Defence of India Rules 94 A "It must be distinctly understood that in giving this consent the Govt. of India does not take any responsibility for the financial soundness of any scheme or for the correctness of any of the statements made or opinion expressed with regard to them". The Government of India has been pleased to extend the period till the 13th January 1945 for the sale of shares.

A few shares at par available.

Rs. 50/- per share. Re. 1/- Entrance Fee per share.

Hundreds have already taken up shares!

WHY NOT YOU?

Current and Savings Bank Accounts are opened. Fixed Deposits are accepted. Enquire for Rules of Business and rates of Interest.

MANGALORE JARAPPA,

President & Managing Director.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಮೂರನೇ ಸಂಪುಟಾರಂಭವಾಗಿದೆ

ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲಾರುಗಳೂ ಪ್ರಕಟವಾಗುತ್ತವೆ.

ವಾರ್ಷಿಕ ಚಂದಾ

ರೂ. 1—8—0 ಮಾತ್ರ

ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

☞ ಮುಟ್ಟಾಗುವಿಕೆ ☜

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ—'ಕುಮಾರಿ' (Govt Regd) ನಿಶ್ಚಿತ ನಿರುಪದ್ರವಿ—ಒಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯುಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ 3/- ಕ್ರೈಮೊರಿಡ ಕೇಸುಗಳಿಗೆ ರೂ.5,(ವಿ.ಪಿ.12 ಆಣೆ ಅಲಾಯಿದ) Mrs P: DEVEE, F. D. S. (N) Tollygunge, Calcutta,

ಸ್ಟಾಕಿಸ್ಟ್: ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

Decorate your home with

Life-like Oil Painting

of those dear and near to you

M. S. Shirale,

MODERN STUDIO,

UDIPI.

CHAMPAE'S

Snow & Castrex

Sole Distributers for (India.)

Sukhananda Stores

Santhekatte, UDIPI, S. K.



ಯಾವತ್ತೂ ವಿಧ [illegible] ಹಿತ್ತಾಳಿ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಪುರ ವ್ಯಾಸಾಚಾರ್ಯ,

ರಥಬೀದಿ, ಉಡುಪಿ.

ವಾರದ ಕಥೆ

ಇಬ್ಬರು ಪ್ರವಾಸಿಕರು!

ಕಥೆಗಾರರು: ಶ್ರೀ. ಎನ್. ಗಣೇಶ ಚಿಪಳೂಣಕರ, ಹೆಬ್ರಿ.

ವಿಶ್ವನಾಥ ರಾಯರ ನಾಲ್ಕು ಮಂದಿ ಮಕ್ಕಳಲ್ಲಿರಿಯು, ಹಿರಿಯ ಸ್ವಲ್ಪ ಕಾಹಿಲೆಯ ಮನುಷ್ಯ. ಅವರು ಕೆಲ ಕಾಲದ ಮೊದಲು ಅಪಘಾತದಿಂದ ಮರಣ ಹೊಂದಿದ್ದರು. ಅವನ ಒತ್ತಿನವರಾದ ದೇವರಾಯರು ಹಟವಾದಿ ಮತ್ತು ಉಗ್ರ ಮನೋವೃತ್ತಿಯವರಾದ ಕಾರಣ ಒಂದು ವೇಶ್ಯೆಯ ಮನೆಯಲ್ಲಿ ನಡೆದ ಕೊಲೆಯಿಂದಾಗಿ ಅವರಿಗೆ ಆಜನ್ಮ ಕರಿನೀರಿನ ಶಿಕ್ಷೆ ವಿಧಿಸಲ್ಪಟ್ಟಿತು. ಬಾಕಿ ಉಳಿದ ಇಬ್ಬರಲ್ಲಿ ಹಿರಿಯವರಾದ ಕಾಶೀನಾಥ ರಾಯರ ಒಬ್ಬನೇ ಒಬ್ಬ ಮಗ ನಾನು. ಕಡೆಯವರಾದ ಪಾಂಡುರಂಗ ರಾಯರು ಇನ್ನೂ ಚಿಕ್ಕವರು. ಆಸ್ತಿ ಮತ್ತು ಹಣದ ಮಹದಭಿಲಾಷೆಯಿಂದ ಅವರನ್ನು ನನ್ನ ತಂದೆಯವರು ಯಾವ ರೀತಿಯಿಂದಲೋ ಕೊಲ್ಲಿಸಿ, ಕೊಲೆಯು ಪತ್ತೆಯಾಗದಂತೆ ಮಾಡಿಸಿದರು!......

ಸಮಾಜದ ಆತ್ಮಘಾತಕಪ್ರವರ್ತಿಯೇ ಎಲ್ಲದಕ್ಕೂ ಮೂಲ! ಹಣ ಮತ್ತು ಸ್ವಾಭಿಮಾನವು ಏನನ್ನೂ ಮಾಡಲು ಹೇಸುವುದಿಲ್ಲ. ನನ್ನ ಇಬ್ಬರು ಚಿಕ್ಕತಂದೆಯರಿಗೂ ಗಂಡು ಮಕ್ಕಳೇ ಇರಲಿಲ್ಲ. ಎರಡೆರಡು ಹೆಣ್ಣು ಮಕ್ಕಳು ಮಾತ್ರ ಇದ್ದರು. ಅವರನ್ನು ಯಥಾಕಾಲದಲ್ಲಿ ನನ್ನ ತಂದೆಯು ಯಾರೊಡನೆಯೋ ಲಗ್ನ ಮಾಡಿ ಬಿಟ್ಟಿದ್ದರು'

ಪಾಂಡುರಂಗ ರಾಯರ ಕೊಲೆಯ ಐದು ವರ್ಷಗಳ ನಂತರ ನನ್ನ ಅಜ್ಜನಾದ ವಿಶ್ವನಾಥ ರಾಯರು ಸ್ವರ್ಗಸ್ಥರಾದರು. ಮತ್ತು 1 ಲಕ್ಷ ರೂಪಾಯಿಯ ಇಸ್ಟೇಟಿನ ಅಧಿಕಾರವೆಲ್ಲ ನನ್ನ ತಂದೆಯವರ ಕೈಗೆ ಸಿಕ್ಕಿತು! ಆ ವೇಳೆ ಅವರು ತಾರುಣ್ಯದ ಹಂತದಲ್ಲಿ ನಿಂತಿದ್ದರು ಅವರು ಸುಖಸಾಧನೆಯ ಸ್ವೇಚ್ಛಾಚಾರವರ್ತಿಗಳಾದರು.

ನನ್ನನ್ನು ಅವರು ಬೊಂಬಾಯಿಯಲ್ಲಿ ವಿದ್ಯಾಭ್ಯಾಸಕ್ಕಾಗಿ ಬಿಟ್ಟಿದ್ದರು. ಅವರು ತನ್ನ ಹಣವನ್ನು ಜೀವನದ ಸುಖ ಸಾಧನಗಳಲ್ಲಿ ವೆಚ್ಚ ಮಾಡಲು ಪ್ರಾರಂಭಿಸಿದರು. ಈಗಿನ ನಾಗರಿಕತೆಗೆ ಬೇಕಾಗುವ ರೀತಿನೀತಿಯಲ್ಲಿ ನಡೆಯದೆ ಮತ್ತರಾಗಿ ನಡೆಯತೊಡಗಿದರು. ಆದರೆ ಆ ಹಣವು, ಆಯುಷ್ಯದ ಪ್ರತಿ ನಿಮಿಷ ನಿಮಿಷಗಳು ಹೇಗೆ ಕಳೆಯುತ್ತ ಹೋಗುವವೋ ಹಾಗೆಯೇ ಮುಗಿಯುತ್ತ ಬಂದಿತು. ತಕ್ಕ ಹುಟ್ಟು ಇಲ್ಲದೆ ಖರ್ಚಾಗುವಾಗ ಮತ್ತೇನಾದೀತು? ನಂತರ ಉಳಿದ ಕೆಲವು ರೂಪಾಯಿಗಳನ್ನು ನನ್ನೊಡನೆ ಕೇಳದೆ ಧರ್ಮ ಫಂಡಿಗೆ ಕೊಟ್ಟುಬಿಟ್ಟರು. ನನ್ನ ತಾಯಿಯು ಮನಸ್ತಾಪದಿಂದ ಮತ್ತು ರೋಗದಿಂದ ದೈವಾಧೀನಳಾದಳು. ತಂದೆಯವರು ನನಗೆ ಬರೇ ಏಳು ರೂಪಾಯಿ ಮನಿ ಆರ್ಡರು ಮಾಡಿ, ಸತ್ಯ—ನೀತಿಯ ಶೋಧನೆಗಾಗಿ ಹಿಮಾಲಯಕ್ಕೆ ತೆರಳಿದರು. ಅವರು ಆ ಮನಿ ಆರ್ಡರ್ ಕೂಪನಿನಲ್ಲಿ ಈ ಕೆಳಗಿನಂತೆ ಬರೆದಿದ್ದರು:—

"ಈ ಅಜ್ಞಾನದ ದುಃಖಮಯ ಸಂಸಾರದಲ್ಲಿ ನರಳಿ ನರಳಿ ಶಾಂತಿ ಶೋಧನೆಗಾಗಿ ಹಿಮಾಲಯಕ್ಕೆ ಹೊರಟಿರುತ್ತೇನೆ. ಇನ್ನು ನಾನು ತಿರುಗಿ ಬರುವುದಿಲ್ಲ. ಚಿಂತೆಯಿಂದ ಎಲ್ಲ ಹಣವನ್ನೂ ಧರ್ಮ ಸಂಸ್ಥೆಗೆ ಕೊಟ್ಟು ಉಳಿದ ಏಳು ರೂಪಾಯಿಗಳನ್ನು ನಿನಗೆ ಕಳುಹಿಸಿದ್ದೇನೆ. ನಾನು ಮತ್ತು ನನ್ನ ತಂದೆಯು ಗಳಿಸಿದ ಪಾಪ ದ್ರವ್ಯವು ನಿನಗೆ ಸಿಕ್ಕದಂತೆ ಮಾಡಲು ನಾನೇ ಕಾರಣಭೂತನಾದೆ! ನಾವು ಮಹಾ ಪಾತಕಿಗಳು. ಇನ್ನು ಮುಂದೆ ನೀನಾದರೂ ಸನ್ಮಾರ್ಗದಲ್ಲಿ ನಡೆಯಬೇಕೆಂದು ನನ್ನ ಆಶೀರ್ವಾದಗಳು. ದೇವರು ನಿನಗೆ ಸಹಾಯ ಮಾಡಲಿ! ಕ್ಷಮಿಸು!"

ಆಗ ನನಗೆ ಆಕಾಶದಿಂದ ಸಿಡಿಲೇ ತಲೆಯ ಮೇಲೆ ಬಿದ್ದಂತಾಯಿತು. ಲಕ್ಷಾಧೀಶನ ಮಗನಾದ ನಾನು ಕೂಡಲೇ ಭಿಕ್ಷಾಧೀಶನಾದೇನೆಂಬ ಕಲ್ಪನೆ ನನಗಿರಲಿಲ್ಲ. ಅದರಲ್ಲಿಯೂ ಸಾಧ್ವಿಮಣಿಯಾದ ನನ್ನ ಮಾತೆಯ ಮರಣದ ದುಃಖ ಬೇರೆ

ಆ ವೇಳೆಯಲ್ಲಿ ನಾನು ಎಫ್. ಎ. ವರ್ಗದಲ್ಲಿ ಕಲಿಯುತ್ತಲಿದ್ದೆ. ಭಾಗ್ಯವಂತ ತರುಣನಲ್ಲಿ ಜನಿಸುವ ಗಾಳಿಗೋಪುರಗಳು ಆಗ ನನ್ನಲ್ಲೂ ಉದಯಿಸಿದ್ದವು. ನನ್ನ ಬುದ್ಧಿಯು ಬಹಳ ತೀಕ್ಷ್ಣವಿದ್ದಿತು. ಶ್ರೀಮಂತ ಮನೆತನದ ಒಂದು ಹುಡುಗಿಯ ಮೇಲೆ ನಾನು ಪ್ರೇಮವಿಟ್ಟಿದ್ದೆ. ಹಣದ ಶಕ್ತಿಯಿಂದ ಆ ಸುಂದರಿಯನ್ನು ನಾನು ಲಗ್ನವಾಗಬಹುದಿತ್ತು. ಆದರೆ-- ಆದರೆ ಭೂಕಂಪದಂತೆ, ವಿಚಿತ್ರ ದೈವಗತಿಯಿಂದಾಗಿ ಕಲ್ಪನಾತರಂಗದ ಮಹದಾಕಾಂಕ್ಷೆಯೆಂಬ ಬಂಗಲೆಗಳು ಕ್ಷಣ ಮಾತ್ರದಿಂದ ಹಾರಿ ಹೋದವು.

ಜೀವವು ಜಗತ್ತಿನಲ್ಲಿ ಬಾಳಬೇಕೆಂದು ಹೇಳುತ್ತದೆ. ಜಗತ್ತನ್ನು ಬಿಟ್ಟು ಹೋಗುವುದೆಂದರೆ ನನಗೆ ಭಯಂಕರ ಭೀತಿಯಾಗುತ್ತಿತ್ತು. ನಾನು ಬದುಕಬೇಕೆಂದೇ ನಿರ್ಧರಿಸಿದೆ ಧ್ಯೇಯ, ಆಶೆ, ಆಕಾಂಕ್ಷೆ, ಪ್ರೇಮ, ಉಚ್ಚಕುಲ, ಉಚ್ಚ ಶಿಕ್ಷಣ, ಅಭಿಮಾನ, ಮುಂತಾದುವುಗಳನ್ನು ಗಂಟುಕಟ್ಟಿ ದೇವರ ದಕ್ಷಿಣೆಯಲ್ಲಿ ಬಿಸುಟು ಉದರ ನಿಮಿತ್ತಕ್ಕೆ ಸಿದ್ಧನಾದೆ! ಅದರ ವಿನಹ ಗತ್ಯಂತರವೇ ಇರಲಿಲ್ಲ. ನಗೆ ನಾಚಿಕೆಗಳನ್ನು ತೊರೆದುಬಿಟ್ಟೆ.

ನನಗೆ ದೊಡ್ಡ ಅಥವಾ ಮಧ್ಯಮ ರೀತಿಯ ಸಂಬಳ ಸಹ ಸಿಗುತ್ತಿರಲಿಲ್ಲ. ಉತ್ತಮ ವರ್ಗದವರಿಗಿಂತ ಹೀನ ವರ್ಗದಲ್ಲಿ ನನ್ನ ನೀತಿಯು 'ಓ' ಗೊಟ್ಟಿತು. ದಲಿತ ವರ್ಗದವರಲ್ಲಿ ಅಭಿಮಾನವೂ ಉತ್ತಮ ವರ್ಗದವರಲ್ಲಿ ತಿರಸ್ಕಾರವೂ ನನಗೆ ಒಮ್ಮೆಲೇ ಮೂಡಿದವು. ಹೀಗೆ ನೋಡುತ್ತಿದ್ದಂತೆ ೩ ವರುಷ ಕಳೆದು ಹೋದವು. ಆದರೆ ನನ್ನಲ್ಲಿ ಒಂದು ಬಿಡಿ ಕಾಸು ಕೂಡಾ ಸಂಗ್ರಹವಾಗಿರಲಿಲ್ಲ. ದಲಿತ ವರ್ಗದವರೊಡನೆ ಸೇರಿ ಕೂಲಿ ಮಾಡುತ್ತ, ಗಾಯವಾಡಿ, ಕಾಂಜೀವಾಡಿ, ಭುಲೇಶ್ವರ, ಬಾಂಬೆಖಾನ, ಬಾಯಕಲ್, ಕಾವಸಾರಿಪುರ, ಪರೇಲ ಮುಂತಾದ ಊರುಗಳನ್ನೂ ಸುತ್ತಾಡಿದೆ! ......

.......ಪರಂತು ಈ ಜೀವನದಲ್ಲಿ ನನಗೆ ಬೇಸರ ಬರತೊಡಗಿತು. ಪ್ರೇಮ, ಆಶೆ, ಮತ್ತು ಧ್ಯೇಯ ವಗೈರೆ ಮನಸ್ಸಿನ ಎಲ್ಲಾ ಆಶಾ ರೋಗಗಳಿಂದ ನಾನು ಈಗ ದೂರವಾಡ್ದೆ ಸಮಾಜವು ನನಗೆ ನನ್ನ ಮೊದಲಿನ ಮರ್ಯಾದೆಯನ್ನು ಕೊಡಲು ಸಿದ್ಧವಾಗಿರಲಿಲ್ಲ ನನಗೂ ಆ ವಿಷಯದಲ್ಲಿ ಆಸಕ್ತಿ ಇರಲಿಲ್ಲ.

ಎಷ್ಟೋ ಕಡೆಗಳಲ್ಲಿ ನಾನು ಒಳ್ಳೆಯ ಕೆಲಸಕ್ಕಾಗಿ ವಿಚಾರಿಸಿದೆ. ನನಗೆ ಎಲ್ಲಿಯೂ ಇಂಬು ದೊರೆಯಲಿಲ್ಲ ನಾನು ವೈರಾಗ್ಯ ಭಾವನೆಯನ್ನು ತಾಳಿ ಕೂಲಿ ಕೆಲಸದಲ್ಲಿಯೇ ದಿವಸ ಕಳೆಯತೊಡಗಿದೆ. ನನಗೀಗ ಇಪ್ಪತ್ತೈದು ವರ್ಷಗಳ ಗಡಿ ದಾಟಿದೆ. ಹೇಗೆಂದರೂ ತಾರುಣ್ಯಕಾಲ' ಆದರೂ ನಾಳೆಗೆ ಬೇಕು ಎಂಬ ಆಕಾಂಕ್ಷೆಯನ್ನು ಇಡದೆ ಬಂದ ಹಣವನ್ನು ಇಂದೇ ಮುಗಿಸಿಬಿಡುತ್ತಿದ್ದೆ. ಎಷ್ಟೆಂದರೂ ತಾರುಣ್ಯದಲ್ಲಿ ಹುಟ್ಟುವ ಕಾಮ ವಾಸನೆಯನ್ನು ಬಿಗಿಹಿಡಿಯುವುದು ಅಸಾಧ್ಯವಾದ ಮಾತು. ಕಾರಣ ನಾನು ಶಾಂತಿ ಎಂಬ ಒಬ್ಬ ಇಪ್ಪತ್ತು ವರ್ಷ ವಯಸ್ಸಿನವಳಾದ ವೇಶ್ಯೆಯ ಕಡೆಗೆ ಹೋಗತೊಡಗಿದೆ. ಈ ಅಭ್ಯಾಸ ತಾಗಿದ ಮೇಲೆ ಅವಳನ್ನು ಬಿಟ್ಟಿರಲಾಗುತಿದ್ದಿಲ್ಲ. ಕಾರಣ.......?

.......ಕಾರಣ ನನ್ನಂತೆಯೇ ಅವಳು ಸಹ ಬೇಸೂರ ವೃತ್ತಿಯವಳಾಗಿದ್ದಳು. ವೇಶ್ಯಾ ಜೀವನದಲ್ಲಿ ಅವಳಿಗೆ ಬಹಳ ವೇದನೆಯಾಗುತಿತ್ತು. ಆದರೆ ಬೇರೆ ಯಾವ ಉದ್ಯೋಗವೂ ಇಲ್ಲದಿದ್ದುದರಿಂದ ತನ್ನ ದೇಹವನ್ನು ಮಾರಿಯೇ ಜೀವಿಸಬೇಕಾಗಿತ್ತು. ನನ್ನೊಡನೆ ಯಾವಾಗಲೂ ಬಹಳ ಪ್ರೀತಿಯನ್ನು ತೋರುತ್ತಿದ್ದಳು. ಆದುದರಿಂದ ನನ್ನ ಮನಸ್ಸು ಅವಳಿದ್ದಲ್ಲಿಗೇ ಎಳೆಯತೊಡಗಿತು.

ಹೀಗೆ ಒಂದು ದಿವಸ ಜೇಬಿನಲ್ಲಿ ಎರಡು ರೂಪಾಯಿಗಳನ್ನು ಹಾಕಿ ಅವಳಿದ್ದೆಡೆಗೆ ಹೋದೆ ಒಬ್ಬರೊಬ್ಬರ ಮೈಗೆ ಮೈ ಆನಿಸಿಕೊಂಡು ಕುಳಿತ ನಂತರ ಅವಳು ಕೇಳಿದಳು:—"ನಿತ್ಯವೂ ನೀವು ಯಾಕೆ ನನ್ನೆಡೆಗೆ ಬರುವುದಿಲ್ಲ?"

ಶಾಂತಿಗೆ ನನ್ನ ಎಲ್ಲಾ ಸುಖ ದುಃಖಗಳು ಗೊತ್ತಿದ್ದವು. ನಾನು ಹೇಳಿದೆ:— "ಶಾಂತಿ, ನಿನ್ನ ಜೀವನಕ್ಕೆ ಸಂಪಾದನೆ ಸಾಕಾಗುತ್ತದೋ ಇಲ್ಲವೋ?"

ಅವಳು ನನ್ನ ತೊಡೆಯ ಮೇಲೆ ಮಲಗಿಕೊಂಡೇ ಹೇಳಿದಳು:—"ಮತ್ತೆ ನೀವು ನಿತ್ಯವೂ ಎಲ್ಲಿ ಮಲಗುತ್ತೀರಿ?"

"ಕಾಲು ರಸ್ತೆಯ ಬದಿಯಲ್ಲಿ" ನಾನು ನಿರ್ವಿಕಾರವಾಗಿ ಹೇಳಿದೆ.

"ಮಳೆಯಲ್ಲೇ ಮಲಗುತ್ತೀರೇನು?" ಅವಳು ನನ್ನ ಕಡೆಗೆ ದೃಷ್ಟಿಬೀರಿ ಹೇಳಿದಳು.

"ಟೌನ್ ಮುನಿಸಿಪಾಲಿಯ ಕಟ್ಟೋಣದ ಕಿರು ಮಾಡಿನ ಬದಿಯಲ್ಲಿ" ನಾನು ಹೇಳಿದೆ.

ಅವಳು ನನ್ನ ಗಲ್ಲವನ್ನು ಹಿಡಿದು ತಿಕ್ಕುತ್ತ ಹೇಳಿದಳು. "ನಾಳೆಯಿಂದ ಇಲ್ಲಿಗೇ ಬನ್ನಿರಿ."

"ಯಾಕೆ?" ನಾನು ವಿಚಾರಿಸಿದೆ.

"ಊಟ ಮಾಡಲಿಕ್ಕೆ, ವಾಸಕ್ಕೆ, ಮತ್ತು ನಿದ್ರೆ ಮಾಡಲು. ಕೆಲಸಕ್ಕೆ ಮಾತು ಹೊರಗೆ ಹೋದರೆ ಸಾಕು."

ನಾನು ಮುಚ್ಚಿದ ಕಣ್ಣುಗಳಿಂದಲೇ ಕೇಳಿದೆ. "ನೀನು ಯಾರು? ನಾನು ಯಾರು? ನನ್ನ ಬಗ್ಗೆ ನಿನಗೆ ಅಷ್ಟು ಯೋಚನೆಯೇನು?"

"ನಾನು ಒಬ್ಬ ಹೆಂಗಸು. ನೀವೊಬ್ಬ ಪುರುಷ.. ಆದರೆ ನಾನು ನಿಮ್ಮ ಹಿತೈಷಿಯಾಗಕೂಡದೇಕೆ?"

"ನನಗೂ ಮೊದಲು ಹೀಗೆಯೇ ತೋರುತ್ತಿತ್ತು" ನಾನೆಂದ.

"ಈಗ ಏಕೆ ತೋರುವದಿಲ್ಲ?" ಅವಳು ನಡುಗುತ್ತ ಕೇಳಿದಳು.

"ಈಗ ನನಗೆ ಜೀವನದಲ್ಲಿ ಬೇಸರ ಹತ್ತಿದೆ"

"ಅದಕ್ಕೇ ನನ್ನೆಡೆ ಬನ್ನಿರೆಂದು ಹೇಳುವುದು!" ಅವಳು ಸ್ವಲ್ಪ ಉನ್ಮತ್ತಳಾದವಳಂತೆ ನಟಿಸಿ ಹೇಳಿದಳು.

(೧೧ನೇ ಪುಟ ನೋಡಿರಿ.)

ಯುದ್ಧವು ತೀವ್ರ ಕೊನೆಗೊಂಡು ಧಾರಣೆಗಳ ರಚನೆಯು ರೂಪಾಂತರ ಹೊಂದಬಹುದು. ಈ ಪರಿಸ್ಥಿತಿಯನ್ನು ನೀವು ಹೇಗೆ ಎದುರಿಸುವಿರಿ? ನಾವೀ ಸಲಹೆಗಳನ್ನು ನಿಮ್ಮ ಮುಂದಿಡುವೆವು:—

1 ನಿಮ್ಮ ಕೂಡೆ ಮಾಲುಗಳ ಅತ್ಯಧಿಕ ಸಂಚಯವಿದ್ದಲ್ಲಿ. ಈಗಲೇ ಅವನ್ನು ವಿಕ್ರಯಿಸಿ ನಿಮ್ಮ ನಗದಿ ಸ್ಥಿತಿಯನ್ನು ಸ್ಥಿರಗೊಳಿಸಿರಿ ನಿಮ್ಮ ಆ ನಗದಿ ಹಣವನ್ನೆಲ್ಲಾ ಬ್ಯಾಂಕಿನ ಖಾತೆಯಲ್ಲಿರಿಸಿ ಧಾರಣೆಗಳ ಇಳಿತವನ್ನು ನಿರೀಕ್ಷಿಸಿರಿ

2 ನಿಮ್ಮ ಸಾಲಗಳನ್ನೀಗಲೇ ತೀರಿಸಿರಿ. ಇಲ್ಲವಾದರೆ ಯುದ್ಧಾನಂತರದ ದಿನಗಳಲ್ಲಿ ಧಾರಣೆಗಳ ಇಳಿತದಿಂದಾಗಿ ಸಾಲಗಳನ್ನು ತೀರಿಸಲು ಬಹು ತ್ರಾಸವಾಗಬಹುದು.

3 ನಿಮಗೆ ಪರರಿಂದ ಸಲ್ಲಬೇಕಾದ. ಸಾಲಗಳನ್ನೀಗಲೇ ವಸೂಲು ಮಾಡಿರಿ, ಏಕೆಂದರೆ ಧಾರಣೆಗಳ ಇಳಿತದಿಂದಾಗಿ ನಿಮ್ಮ ಸಾಲಗಾರರ ನಗದಿ ಸ್ಥಿತಿಯು ಬಹಳ ಮಾರ್ಪಾಡು ಹೊಂದಿ, ಅವರಿಂದ ಸಾಲಗಳನ್ನು ತೀರಿಸಲಸಾಧ್ಯವಾಗಬಹುದು.

4 ನಿಮ್ಮ ಕೂಡೆ ಇರುವಂಥ ನಗದಿಯನ್ನೆಲ್ಲಾ ಇನ್ನು ಮುಂದೆ ಬರುವ ಧಾರಣೆ. ಇಳಿತವಾಗುವ ದಿನಗಳಿಗಾಗಿ ಕೂಡಿಡಿ. ಧಾರಣೆಗಳ ಗತಿಯನ್ನು ಮತ್ತು ವಾಣಿಜ್ಯದ ಸಾಮಾನ್ಯ ಸ್ಥಿತಿಯನ್ನು ಪರ್ಯಾಲೋಚಿಸಿ ನಿಮ್ಮ ಭಾವೀ ಯೋಜನೆಗಳನ್ನು ಕಲ್ಪಿಸಬಹುದು.

ನಿಮ್ಮಲ್ಲಿರುವ ನಗದಿಯನ್ನೆಲ್ಲಾ ನಮ್ಮೊಡನೆ ಖಾತೆಯಲ್ಲಿರಿಸಿರಿ. ಇಲ್ಲವಾದರೆ ಪ್ರೇರಣೆಗಳಿಗೆ ಅಥವಾ ಸಮಾಜದ ಒತ್ತಂಗಳಿಗೆ ಒಳಗಾಗುವ ಪ್ರಸಂಗ ಒದಗಬಹುದು

ಸ್ಥಾಪನೆ: 1906 ಕೆನರಾ ಬೇಂಕ್ ಲಿಮಿಟೆಡ್

ESTD 1906 **Canara Bank, Limited**

(Incorporated in British old wealth limited-Liability of members limited.)

ಮನುಷ್ಯ—ಮರ್ಜಿ

ಸ್ವಭಾವ ಚಿತ್ರಗಳು.

೨. ನಗುಮೊಗದ ನರ್ಸಮ

(ಚಿತ್ರಿಸುವವರು —'ಮಟ್ಸ್ಪರ್')

❖

ನಮ್ಮೂರ ನರ್ಸಮನ ನಗುವನ್ನು ಚಿತ್ರಿಸುವದು ಬಹಳ ಪ್ರಯಾಸದ ಕೆಲಸ. ಒಂದು ಮುಖವನ್ನೇ ಒಂದು ಪುಟದಷ್ಟು ಅರಳಿಸಿ ಇಲ್ಲಿ ತೋರಿಸಬೇಕಾಗಿದೆ. ಆ ಮುಖವೇನೋ ಒಂದೇ ಪುಟದಷ್ಟಲ್ಲ, ಹಲವು ಪುಟಗಳಾಗುವಷ್ಟು ಅರಳಿದೆ. ಅರಳದಿರುವದು ಚಿತ್ರಿಸುವವನ ಕಲೆ ಮಾತ್ರ ಆದ್ದರಿಂದ ಬಹುಶಃ ಈ ವರ್ಣನೆ 'ಬೆಳದಿಂಗಳನ್ನು ನೋಡು' ಎಂಬ ಅಂಗ್ಸೈಯ್ಯಲ್ಲಿ ತೋರಿಸಿದಂತಾಗಿದೆ ನರ್ಸಮನ ತಿಳಿಯಾದ ಮಧುರ ನಗುವು ನನ್ನ ಅನುಭವದಲ್ಲಿದೆ-ಪ್ರಶಾಂತ ಕೊಳದ ಜಲದಲ್ಲಿ ಮೂಡಿರುವ ಪೂರ್ಣಿಮಾ ಚಂದ್ರನ ಪ್ರತಿಬಿಂಬದಂತೆ. ಆದರದನ್ನು ಆಡಿ ತೋರಿಸುವಾಗ ಕೊಳದ ನೀರು ಅಲುಗಾಡುತ್ತಿದೆ; ಅದರಲ್ಲಿರುವ ಆ ಬಿಂಬವೂ ಅಲುಗಾಡಿ ಬಿಳಿಯ ಗೆರೆಯ ಅಥವಾ ಮಿಂಚುಬಳ್ಳಿಯ ರೂಪಾಗಿ ತೋರಿಂಬೇಕು. ಇಂತಹ ಚಿತ್ರಗಾರಿಕೆ ಬಹಳ ಪ್ರಯಾಸದ ಕೆಲಸವಾದ್ದರಿಂದಲೇ ನರ್ಸಮನ ನಗುವಿನಂತಹ ಒಂದು ಭಾಗ ನಮ್ಮ ಕವಿತೆ, ಕಥೆ, ಕಾದಂಬರಿ ಅಥವಾ ಚಲಚ್ಚಿತ್ರಗಳಲ್ಲಿ ಕಂಡುಬರುವದಿಲ್ಲ. ಅದನ್ನು ಚಿತ್ರಿಸಬಲ್ಲ ಕವಿಗಳಿರುತಿದ್ದರೆ ಎಂತೆಂತಹ ಹೃದಯಸ್ಪರ್ಶೀ ಕಥೆಗಳು ಹುಟ್ಟುತಿದ್ದವು!

× × ×

ಆಕೆ ಪ್ರತಿದಿನ ಪೇಟೆಗೆ ಬರುತ್ತಾಳೆ. ಏನು, ಇಪ್ಪತ್ತೈದರ ಗಡಿಯೊಳಗಿನ ಹೆಂಗಸು. ಈಗ ಎರಡು ಮಕ್ಕಳ ತಾಯಿ. ಒಬ್ಬ ಜತೆಗಿಲ್ಲದೆ ಪ್ರಾಯಶಃ ಆಕೆ ಮನೆಬಿಟ್ಟವಳಲ್ಲ. ಪೇಟೆಗೆ ಬರುವಾಗ ಯಾವಾಗಲೂ ಜತೆಗಿರುವವನೊಬ್ಬನಿಗೆ ಆವಳಷ್ಟೇ ಪ್ರಾಯವಾಗಿರಬೇಕು. ನೋಡಿದವರು ಅವರನ್ನು ಅಕ್ಕ-ತಮ್ಮ ಎನ್ನಬಹುದು. ಎರಡು ಹೆತ್ತವಳು ಹೇಗಿದ್ದಾಳೋ ನರ್ಸಮ್ಮ ಹಾಗಿದ್ದಾಳೆ. ಯಾವ ಹೊಣೆಯೂ ಇಲ್ಲದ -ಅತಿ ದುಡಿಮೆಯಿಂತಹ ದೈಹಿಕ ದಂಡನೆಯೂ ಬೀಳದ—ಉಂಡಾಡಿ ಯುವಕನಿರಬೇಕಾದಂತೆ ಇದ್ದಾನೆ ಆಕೆಯ ಜತೆಗಾರ. ಆದ್ದರಿಂದ ನೋಡುವವರಿಗೆ ಆಕೆ ಅಕ್ಕನಂತೆ, ಅವ ತಮ್ಮನಂತೆ ತೋರುತ್ತಾರೆ ಆದರೆ ಅಷ್ಟನ್ನೇ ಅಥವಾ ಅಷ್ಟನ್ನೂ ಯಾರು ನೋಡುತ್ತಾರೆ? ನೋಡುವದಾದರೆ--ಅವರನ್ನು ನೋಡಿದಂತೆಯೇ ಅವರೊಳಗಿನ ಸಂಬಂಧವೇನೆಂಬುದನ್ನೂ ಊಹಿಸಿ ನೋಡಬೇಕು. ಹಾಗೆ ನೋಡುವಾಗ ಅವರೊಳಗಿನ ಸಲುಗೆಗೆ ಕಾರಣವಾಗಿ ಹೊಳೆಯುವ ಒಂದು ಸಂಬಂಧವಿದೆ. ಅದಲ್ಲವಾದರೆ ಅವರೊಳಗಿನ ಸಾಮ್ಯತೆಯನ್ನು ಮಾತ್ರ ಹೊರತು ತಾರತಮ್ಯವನ್ನು ನೋಡುವಂತಿಲ್ಲ. ಅಕ್ಕ--ತಮ್ಮನಂತೆ ಕಂಡರೂ ಆಕೆ ಯುವತಿ--ಅವ ಯುವಕ. ಹೀಗೆ ಜನರ ಲೆಕ್ಕಾಚಾರದಲ್ಲಿ ಕೂಡಿಸಿದರೂ ಕಳೆದರೂ ಆಕೆ--ಆತನ ಸಂಬಂಧವು ಒಂದೇ ಮೊತ್ತಕ್ಕೆ ಬಂದಿದೆ; ಪ್ರಣಯ ಸಂಬಂಧವನ್ನಿಸಿದೆ! ಇದು ಮನುಷ್ಯನ ಸ್ವಭಾವ. ಗುಟ್ಟೆಂದರೆ ಅವಳ ಜತೆಗಾರ ಗಂಡನ ಸಂಬಂಧಿಕನೇ. ಗಂಡ ಅವನನ್ನು ಮನೆಯಲ್ಲಿ ನಿಲ್ಲಿಸಿಕೊಂಡುದೂ ಇಷ್ಟಕ್ಕೇನೇ---ಮನೆ ಕೆಲಸದಲ್ಲಿ, ತಿರುಗಾಟದಲ್ಲಿ ಪತ್ನಿಗೊಬ್ಬ ಜತೆಗಾರಬೇಕೆಂಬುದಕ್ಕಾಗಿ. ಗಂಡ ಮುಂಜಾನೆ ಕೆಲಸಕ್ಕೆ ಹೊರಟು ಸಂಜೆ ಬರುವವ. ನೆಗೆಯ ನರ್ಸಮನನ್ನು ಅವಳ ಎರಡು ಸಣ್ಣ ಮಕ್ಕಳೊಂದಿಗೆ ಏಕಾಕಿನಿಯಾಗಿ ಬಿಡುವದರಲ್ಲಿ ಅವನಿಗೆ ಅವಳ ಮೇಲಿನ ಸಂದೇಹಕ್ಕಿಂತಲೂ ಹೆಚ್ಚಾಗಿ ಊರ ಕುರಿತು ಸಂಕೋಚವಿದ್ದಿರಬೇಕು. ದುಡಿದುಣ್ಣುವವನಿಗೆ, ಬೇರೊಬ್ಬ ಧಾಂಡಿಗನನ್ನು ಸಾಕುವದು ದೊಡ್ಡ ಹೊರೆಯೇನೋ ನಿಜ ಆದರೆ ಅವನ ಬಾಡಿಗೆಚೀಟಿನಲ್ಲಿ ಮನೆ ಮತ್ತು ಒಂದು ತೋಟವಿದೆ. ತೋಟದ ಕೆಲಸ ಮತ್ತು ಮನೇಕೆಲಸ ಒಬ್ಬನಿಗೆ ಸಾಕಾಗುವಷ್ಟಾಗುತ್ತದೆ. ಈ ಜತೆಗಾರ ಆ ಕೆಲಸ ಮತ್ತು ಕಾವಲು, ಎರಡಕ್ಕೂ ಆಗುತ್ತಾನೆ. ಆದ್ದರಿಂದ ನೇಮಕವು ನಷ್ಟದ ಬಾಬೇನೂ ಅಲ್ಲ; ಅಪಮಾನ, ಇಲ್ಲವೇ ಅಪಾಯದ ಬಾಬು—ಅಂದರೆ ಊರವರ ಊಹೆಯಲ್ಲಿ!

ಊರವರು ಊಹಿಸಿರುವದು ಅಸಂಬದ್ಧವನ್ನೇ ಎಂದ ಹಾಗಾಯಿತು. ಅಂದರೆ, ಊರೇ ಅನ್ಯಾಯಗಾರ ಅಥವಾ ಅಜ್ಞಾನಿ ಎಂಬ ಆರೋಪವೇ? ಯಾವುದೂ ಅಲ್ಲ ನಮ್ಮದೂ ಎಲ್ಲಾ ಕಡೆಗಳಂತೆ ಸಾಮಾನ್ಯರೇ ಇರುವ ಊರು. ಇಲ್ಲಿ ಇರುವದೂ ಸರ್ವ ಸಾಮಾನ್ಯವಾದ ಅನ್ಯಾಯ ಅಥವಾ ಅಜ್ಞಾನ. ನರ್ಸಮನ ನಗುವನ್ನು ಕಂಡ ಪರ ಊರವರೂ ನಮ್ಮೂರವರಾಗುತ್ತಾರೆ; ಆದುದಿದೆ. ಬಂದ ಕೆಲಸ ಮುಗಿದಾದ ಮೇಲೆ ನರ್ಸಮನಿಗಾಗಿಯೇ ಈ ಊರಲ್ಲಿ ಒಂದೆರಡು ದಿನ ನಿಂತು ಹೋದವರಿದ್ದಾರೆ. ಕಾರಣ ಎಲ್ಲರೂ ಸಾಮಾನ್ಯರೇ; ನರ್ಸಮನ ನಗು ಮಾತ್ರ ಅಸಾಮಾನ್ಯ.

ಅವಳು ತನ್ನ ಜತೆಗಾರನೊಡನೆ ರಸ್ತೆಯಲ್ಲಿ ಮಾಡುತ್ತಾ ಬರುವ 'ಚೇಷ್ಟೆ'ಯನ್ನು ಅಂಗಡಿಯಲ್ಲಿ ಕುಳಿತು ನೋಡಿದರೂ ಸಾಕು. ಆ ನಡೆಯೇ ಒಂದು ನರ್ತನ; ನರ್ಸಮನಿರುವ ರಸ್ತೆ ರಂಗಭೂಮಿಯಾಗಿ ಬಿಡುತ್ತದೆ. ಯಾವಾಗ ನೋಡಿದರೂ ಅವರಿಬ್ಬರನ್ನು ಒಂದೇ ಮನಸಿನಲ್ಲಿ ಒಟ್ಟಿಗಿಟ್ಟು ಹೊರಟವರೆನ್ನಲಾಗುವದಿಲ್ಲ; ಆಗ ತಾನೇ ಒಟ್ಟಾದ ಪ್ರೇಮಿಗಳೆನ್ನಬೇಕು. ಅವಳು ಪದೇ ಪದೇ ಸೆರಗನ್ನೆಳೆದುಕೊಳ್ಳುವದು--ನೈಯನ್ನೊಲೆದಾಡಿಸುತ್ತಾ ಆಗಾಗ ಅವನ ಮೈಗೆ ತಾಗಿಕೊಂಡೇ ನಡೆಯುವದು—ಎಲ್ಲಕ್ಕಿಂತ ಹೆಚ್ಚೆಂದರೆ ತುಟಿಗೆ ಪಿರಾಮುವನ್ನೇ ಕೊಡದೆ ನಗು ನಗುತ್ತಾ ಮಾತಾಡುತ್ತಲೇ ಇರುವದು,--ಈ ಸದಾ ನಗುವೇ ಒಮ್ಮೊಮ್ಮೆ ಸರಸದ ಸಂತೋಷದ ನಗುವಾಗಿ ಮಧುರ ಲಹರಿಯೇಳುವದು--ಇವಕ್ಕೆಲ್ಲಾ ಏನರ್ಥ? ಅವನೋ— ಹೆಚ್ಚಾಗಿ ಹೂಂಗುಟ್ಟುತ್ತಾ ಹೋಗುತ್ತಾನೆ; ಅವಳ ಮಾತುಗಳ ಮಾಧುರ್ಯಕ್ಕನುಸಾರವಾಗಿ ಒಮ್ಮೆ ಅವನ ಮುಖದಲ್ಲಿ ಮುಗುಳು ನಗು, ಒಮ್ಮೊಮ್ಮೆ ಗಹಗಹ ನಗುವೇಳುತ್ತದೆ. ಇವರಿಬ್ಬರ ನಗೆಯು ಮಹೋತ್ಸವದ ಗದ್ದಲವೆನ್ನಾಗಿ ಹೋಗುತ್ತದೆಂದರೆ, ಇದಿರಿನಿಂದ ಬರುವವರು, ದಾಟಿ ಹೋದವರು, ಎಡಬಲದ ಅಂಗಡಿಗಳಲ್ಲಿ ಕುಳಿತು ನೋಡುವವರು—ಎಲ್ಲರೂ ನಗುವವರೇ ಆದರೆ ನರ್ಸಮನ ನಗೆಯ ವರ್ಗವೇ ಬೇರೆ. ಆ ನಗುವಿನ ಸುತ್ತ ವಿಕಟವ ಕಾಮುಕ ನಗು, ಕುಹಕ ನಗು, ಪರಿಹಾಸದ ನಗು-ಇವೆಲ್ಲಾ ಆರೋಹಣದ ಶ್ರೇಣಿಯನ್ನು ಸುತ್ತುಗಟ್ಟಿದ್ದ ರಾಕ್ಷಸಿಯಂತೆ ಎಂತಹ ನೆಗೆಯಿದ್ದರೂ ನರ್ಸಮನ ನಗೆ ನಿಲ್ಲದು; ಅದು ಬೇರೆಯವರಿಂದಲೇ ಅಲ್ಲ, ನರ್ಸಮನಿಂದಲೂ ನಿಲ್ಲಿಸಲಾಗದ ನಗು. ನಗು—ನರ್ಸಮನ ಹೆರಕೆಯನ್ನು ವರ್ಣಿಸುವ ಬಗೆಯೇ ತಿಳಿಯದು. ರತ್ನದಲ್ಲಿ ಹೊಳಪು ಸೇರಿಕೊಂಡಂತೆ, ಚಂದ್ರನಲ್ಲಿ ಬೆಳುದಿಂಗಳಿರುವಂತೆ, ನರ್ಸಮನಲ್ಲಿ ನಗೆಯಿದೆ. ಆದ್ದರಿಂದ ಬೇರ್ಪಡಿಸಲಾಗುವದಿಲ್ಲ. ನಾಗಮ್ಮ, ನಳಿನಮ್ಮಗಳ ನಗೆಯು,—'ಲಾಟೂಸಿ'ನಲ್ಲಿ ದೀಪ ಹೊತ್ತಿಸಿದಂತೆ ಮೂಡಿಬರಬೇಕು ಅಂತಹದನ್ನು ಬೇಕಾದಾಗ ಉರಿಸಬಹುದು; ಬೇಡವಾದಾಗ ನಂದಿಸಬಹುದು. ನರ್ಸಮನ ನಗುವಿಗೂ ಮಿಕ್ಕವರ ನಗುವಿಗೂ ಇರುವ ವ್ಯತ್ಯಾಸವಷ್ಟೆ. 'ನರ್ಸಮ' ಎಂದಾಗಲೇ ಅವಳ ನಗುವೂ ಅದರಲ್ಲಿ ಬಂತು. ಆದರೆ ಬೇರೊಬ್ಬಳ ಕುರಿತಾಡುವಾಗ ಅವಳು 'ನಗುತಿದ್ದಳು' ಅಥವಾ 'ನಗುತಿರಲಿಲ್ಲ' ಎಂದು ಹೇಳದೆ ಆಗುವದಿಲ್ಲ. ಒಬ್ಬಳಲ್ಲಿ ಸಂತೋಷ, ದುಃಖ, ಮತ್ಸರ, ಕ್ರೋಧ, ಚಿಂತೆ, ಯೋಚನೆ-ಇವು ಮೂಡಿದುದನ್ನು ಅನುಕ್ರಮವಾಗಿ ನಗು, ಕಣ್ಣೀರು, ದುರ್ಬಂಗಿ, ಉರಿಮುಖ, ಕಂದುಮುಖ, ಗಂಭೀರ ಮುಖಮುದ್ರೆಗಳಿಂದರಿಯಬೇಕು. ನರ್ಸಮನಲ್ಲಿ ಆ ಭಾವಗಳುಂಟಾದುದನ್ನು ತಿಳಿಯಲಿಕ್ಕೂ ನಗೆಯ ಸ್ವಾತಂತ್ರ್ಯವೊಂದೇ ಆಧಾರ. ಸಂತೋಷವುಂಟಾದಾಗ ಅವಳ ನಗುವಿನಲ್ಲಿ ಮಾಧುರ್ಯ ಹೆಚ್ಚುತ್ತದೆ. ದುಃಖದ ವೇಳೆ ಅದರ ಹೊಳಪೆಲ್ಲಾ ಹೋಗಿಬಿಟ್ಟು ಕರಿ ಗ್ಲಾಸಿನೊಳಗಿಂದ ಬಿದ್ದ ಬೆಳಕಿನಂತಿರುತ್ತದೆ. ಅವಳು ಮತ್ಸರಕ್ಕೀಡಾಗುವ ಅಪರೂಪ ಸಂದರ್ಭಗಳಲ್ಲಿ ಪ್ರಾಯಶಃ ಆ ಕನ್ನಡಿ ಬೆಳಕಿನಂತಹದೇ ಇದಿರಲ್ಲಿದ್ದವರ ಎಡ ಯಾ ಬಲಗಡೆಗೆ ಬೀಳಬೇಕು ಕ್ರೋಧಗೊಂಡಾಗ ಅಗ್ಗಿಷ್ಟಿಕೆಯ ಪ್ರಕಾಶದಂತೆ-ಚಿಂತೆಗೀಡಾದಾಗ ಮಾಡಿನ ಕನ್ನಡಿಯಿಂದ ಬಿದ್ದ ಬೆಳಕಿನಂತೆ-ಯೋಚನೆಯ ವೇಳೆ (ಕೋಣೆ ಬೆಳಗಲಿಕ್ಕಲ್ಲ-ಲಾಟೀನನ್ನು ಯಾರೂ ಎಡವದಂತೆ ತೋರಬೇಕೆಂದು ಮಾತ್ರ ಹೊತ್ತಿಸಿಟ್ಟ ಲಾಟೀನಿನಂತೆ) ಸ್ವಲ್ಪ ಕಿರಿದಾದಂತಾಗಿ ಕಾಣುತ್ತದೆ. ಅರ್ಥಾತ್ ಯಾವ ಸಂದರ್ಭದಲ್ಲಾದರೂ ಅವಳ ನಗೆಯಿದ್ದದ್ದೇ. ಮುಂಭಾಗದಿಂದ ಮುಂಗಡೆಗೋಡುವ ಕಾರಾದರೂ ಹಿಂಗಡೆಯಲ್ಲಿ ನರ್ಸಮ ಓಡುತಿದ್ದಾಳೆಂಬುದನ್ನು 'ರಿವರ್ಸ್ ಫ್ಲೇಟ್' ಮಾಡುತ್ತದೆ. ಇಂತಹ ಕುತೂಹಲಕರ ಅರ್ಥವೂ ಅವಳ [illegible] ಅವರ [illegible] ನಗೆಯೇ. ಅವರಲ್ಲಿ [illegible] ಧಿಕ್ಕಾರದ ಅರ್ಥ ಆ ದೈವದತ್ತ [illegible] ಪಕ್ಕೆ ನರ್ಸಮ. ಒಲಿಸಿದ ನಗೆ ಬೀರಿಂದದೇ ಅವ ಭಾವಿಸುತ್ತಾನೆ. ಅಂಗಡಿಯ ಒಳಗೆ ಸಂಕೋಚದ ವಯ್ಯಾರ ಬೀರುತ್ತಾ ಬಂದು 'ಎರಡು ಸೇರು ಹೆಸರು ಕೊಡಿ' ಎನ್ನುವಾಗ ಸೆರಗಿನ ತುದಿಯನ್ನು ಬಾಯಿಯವರೆಗೂ ತಂದು ನಗೆ. ಆಗ ಸಾಹುಕಾರನಲ್ಲಿ ಒಂದು ಪ್ರೇರಣೆ ಹುಟ್ಟಿದಂತಾಗಿ 'ಹ್ಞಾಂ! ಎರಡು ಸೇರೂ?' ಎಂದು ಅವನೂ ನಗುತ್ತಾನೆ. ಅಂಗಡಿಗೆ ಬಂದು ಸಮಯಕಾಯುತ್ತಾ ಕುಳಿತಿದ್ದ ಗಿರಾಕಿಗಳೂ [illegible] ಆಕೆಯ ದೃಷ್ಟಿ ಬಿದ್ದಿಲ್ಲವಾದರೂ [illegible] ಒಯ್ಯಾರದ ನಗೆಬೀರುತ್ತಾ

(೧೦ನೇ ಪುಟ ನೋಡಿರಿ.)

ಪ್ರಕಟಣೆ.

ನನ್ನ ಜಾಬ್ತಾ ಇದೇ ಕಳದ ಅಕ್ಟೋಬರ ೫೦ ಅಂದರೆ ತಾ. 29 10 1943ರಿಂದ ತಾರೀಕು 17 10-1944ರ ವರೆಗಿನ ಅಂಗಡಿಯ ಜಾಬ್ತಾ ಲೆಕ್ಕದ ಊರಗದ ಪುಸ್ತಕವನ್ನು ನಾನು ತಾ. 22 11 1944 ಉಡುಪಿ ಫರ್ಸ್ಟ್ ಕ್ಲಾಸ್ ಬೆಂಚ್ ಮೆಜಿಸ್ಟ್ರೇಟ್ ಕೋರ್ಟಿನಲ್ಲಿ ನನ್ನ ನಂಬ್ರದ ಬಗ್ಗೆ ಕೊಂಡು ಹೋಗಿ ಮೊದಗೆ ಇಟ್ಟು ನಾನು ವಿಚಾರಣೆ ಬಗ್ಗೆ ಕೋರ್ಟಿನ ಒಳಗೆ ಹೋದ ಸಮಯದಲ್ಲಿ ಸದ್ರಿ ಪುಸ್ತಕವನ್ನು ವಾಪಾಸು ಬರುವಾಗ ಹಿಡಕೊಂಡು ಬರಲಿಕ್ಕೆ ಮರೆತುಹೋಗಿ ಮನೆಗೆ ಹೋದ ನಂತ್ರ ಸ್ವಲ್ಪ ಸಮಯದಲ್ಲಿ ಪುಸ್ತಕವನ್ನು ಕೋರ್ಟಿನಲ್ಲಿ ಬಿಟ್ಟುಬಂದಿದೇನೆಂತ ನೆನಪಾಗಿ ಕೂಡ್ಲೆ ವಾಪಾಸು ಬಂದು ನೋಡಿದಲ್ಲಿ ಸದ್ರಿ ಪುಸ್ತಕವು ನಾನು ಇಟ್ಟ ಸ್ಥಳದಲ್ಲಿ ಆಗಲೀ ಎಲ್ಲಿಯೂ ನೋಡಿದ್ದು ಇದರಲ್ಲಿ ಆ ಬಗ್ಗೆ ಕೋರ್ಟಿನವರ ಕೂಡೆ ಕೇಳುವರೆ ಕೋರ್ಟಿನ ಸಮಯ ಕೈದಾಗಿ ಎತ್ತದೆ ಆ ಮೇಲೆ ಯಾರ ವರೆಗೆ ಆದರ ಬಗ್ಗೆ ತಲಾಶಿ ನೋಡಿದ್ದಾಗ್ಯೂ ನನಗೆ ಸಿಕ್ಕದಿಲ್ಲವಾದ್ದರಿಂದ ಯಾರು ಪುಸ್ತಕವನ್ನು ನನಗೆ ತಂದು ಕೊಟ್ಟವರಿಗೆ ರೂಪಾಯಿ ಐದರಷ್ಟು ಬಹುಮಾನ ಕೊಡಲಿಕ್ಕೆ ನಾನು ಸಮ್ಮತಿಸಿದ್ದೇನೆ.

ಉದಿಯಾವರ ವಾಮನ ಶಾನುಭಾಗ

25-11-1944.

CO-OPERATION - - - -

Life Assurance is the business based on the idea of mutual co-operation. By diverting a small portion of one's earning for paying premiums, we co-operate for the good of the family and safeguard the education of children.

Let us assist you in taking out a Policy under the plan best suited to you. Write now to:—

KOCHIKAR BROTHERS LTD.

Chief Agents for South India

THE BOMBAY LIFE ASSCE. CO., LTD.

[Estd 1908]

The "Bombay Life" Bldg., UDIPI S. K.

Offices and Agencies throughout South India.

ಬಿಡಿನುಡಿ

ದ. ಕ. ರೈತರು ಪ್ರಥಮ ಕಂತಾಗಿ ಭತ್ತವಾದರೆ ನವಂಬರ್ 15ರೊಳಗೆ, ಅಕ್ಕಿಯಾದರೆ ನವಂಬರ್ 30ರೊಳಗೆ ಸ್ಟೋರುಗಳಿಗೊಪ್ಪಿಸಬೇಕೆಂದು ಪ್ರಥಮತಃ ಜಿಲ್ಲಾಧಿಕಾರಿಗಳು ಆಜ್ಞಾಪಿಸಿದ್ದರು

ನಡುವೆ ಮಳೆ ಬಂದು ಬೆಳೆ ಮತ್ತು ಅಕ್ಕಿ ಭತ್ತ ಕೊಳೆಯಿತು.

ಮಳೆಬಂದಿದೆಯೆಂಬುದು ಮನವಿಗಳ ಮೂಲಕ ಅಧಿಕಾರಿಗಳಿಗೆ ತಿಳಿಯಿತು.

ಈ ಅವಧಿಯನ್ನು ಮುಂದುವರಿಸುವ ಅಗತ್ಯವೆಂದು ಅವರಿಗೆ ಹೊಳೆಯಿತು.

ಹಾಗಾಗಿ ಭತ್ತ ಅಕ್ಕಿ ಒಪ್ಪಿಸುವ ವಾಯಿದೆ ಹದಿನೈದು ಹದಿನೈದು ದಿನಗಳಿಗೆ ಬೆಳೆಯಿತು

ಆದರೆ ಮಳೆ ಈಗಲೂ ಬರುತ್ತಿರುವದನ್ನು ಕಾಣುವಾಗ ರೈತರಲ್ಲಲ್ಲವಾದರೆ ಮಳೆಯ ಮೇಲಾದರೂ ವಿಶ್ವಾಸವಿಡೋಣವೆಂದರೆ ಆ ಕಾಲವೂ ಕಳೆಯಿತ.!

× × ×

ಜಾತೀಯ ಜಗಳ ಮತ್ತು ಅಲ್ಪ ಸಂಖ್ಯಾಕರ ಪ್ರಶ್ನೆಗಳ ಕುರಿತು ನ್ಯಾಯವಾದ ವಿಚಾರಣೆ ನಡಿಸಿ ತೀರ್ಮಾನವೀಯಲು ಸರ್. ಸಪ್ರುಗಳ ನೇತೃತ್ವದಲ್ಲಿ ಪಕ್ಷರಹಿತ ಪ್ರಮುಖರೊಂದು ಸಮಿತಿ ನೇಮಿಸಲಿದ್ದಾರೆ

'ಈ ಸಮಿತಿಯ ತೀರ್ಮಾನಕ್ಕೆ ದೇಶದ ಬೆಂಬಲ ದೊರೆತರೆ ಆ ಮೇಲೆ ಬ್ರಿಟಿಷ್ ಸರಕಾರದೊಡನೆ ರಾಜಕೀಯ ಸಂಬಂಧವಾಗಿ ವ್ಯವಹರಿಸಲಾಗುವದು'.

ಆ ವ್ಯವಹಾರ ಜಯಶೀಲವಾದರೆ ಹಿಂದುಸ್ಥಾನಕ್ಕೆ ಸ್ವಾತಂತ್ರ್ಯ ದೊರೆಯುವದು

ಆ ಸ್ವಾತಂತ್ರ್ಯ ದೊರೆತರೆ ದೇಶದ ಇಂದಿನ ದುರ್ಭಿಕ್ಷ, ದುರ್ವ್ಯಯ, ದುಶ್ಚೇಷ್ಟೆಗಳೆಲ್ಲ ಬಿಟ್ಟು ಹೋಗುವವು!

ಹೀಗೆಂದು ದೇಶದಲ್ಲಿ ಆಶೋದಯವಾಗಿದೆ.

"ನಾನು ಮದುವೆಯಾಗುವದಾದರೆ" ಎಂಬ ಲೇಖನವೊಂದನ್ನು ನಟಿ ಶಾಂತಾ ಆಪ್ಟೆ ಬೊಂಬಾಯಿಯ ವಾರ ಪತ್ರಿಕೆಯೊಂದರಲ್ಲಿ ಪ್ರಕಟಿಸಿದ್ದಳು.

ಅಂದಿನಿಂದ ಟಪ್ಪಾಲುದ್ವಾರಾ ನೂರಾರು ಭಾವೀ ಮದುವಣಿಗರ ಪತ್ರಗಳಾಕೆಗೆ ಬರುತ್ತಿವೆಯಂತೆ.

ಆದರೆ ಆಪ್ಟೆಯೀಗ ಪತ್ನಿಯಾಗುವ ಆತುರದಲ್ಲಿಂದೆ ಚಲಚ್ಚಿತ್ರ ನಿರ್ಮಾಪಕಳಾಗುವ ಛಲದಲ್ಲಿದ್ದಾಳೆ ಎಂಬ ವಾರ್ತೆ ಬಂದಿದೆ

ಆಕೆಯ ಮದುವೆ ಅರ್ಜಿದಾರರ ಆತುರವು ಇನ್ನಷ್ಟು ಹೆಚ್ಚಬಹುದು.

ನಟಿಯನ್ನು ವಿವಾಹವಾಗುವ ಬದಲು ನಿರ್ಮಾಪಕಿಯ ಕೈಹಿಡಿಯುವದರಲ್ಲಿ ಎಷ್ಟೋ ಆನಂದ!

ಸಪ್ರುಗಳ ಸೂಚನೆಯಲ್ಲಿಯೂ ಶಾಂತಾ ಲೇಖನದಲ್ಲಿಯೂ ಒಂದೊಂದು '....ರೆ' ಸೇರಿಕೊಂಡಿದ್ದುದು ಪ್ರಾಯಶಃ ಯಾರಿಗೂ ನೆನಪಿಲ್ಲ

ಅಳಿಯುಳಿಸಿಕೊಳ್ಳಲು ಅಕ್ಷರ ಲೋಪ ಮಾಡುವದೊಂದು ಪಾಪವಲ್ಲ ತಾನೆ!

× × ×

ರೇಶನ್ ಪರಿಮಾಣದಲ್ಲಿ ಮುಕ್ಕಾಲಂಶ ಅಕ್ಕಿಯನ್ನೂ ಉಳಿದ ಕಾಲಂಶದಲ್ಲಿ ಅರೆವಾಸಿ ಗೋದಿ, ಅರೆವಾಸಿ ರಾಗಿ ಪಡೆದುಕೊಳ್ಳಲೇಬೇಕೆಂದು ದ. ಕ. ಜಿಲ್ಲಾ ರೇಶನ್ ಆಫೀಸರರ ಪ್ರಕಟಣೆ.

ಆದರಲ್ಲೂ ರಾಗಿಯ ಬದಲು ಗೋದಿ ಪಡೆಯಬಹುದು ಆದರೆ ಗೋದಿಯ ಬದಲು ರಾಗಿ ದೊರೆಯದು.

ರಾಗಿ ಗೋದಿಗಳ ಬದಲಿಗೆ ಅಕ್ಕಿಯೆಂತೂ ದೊರೆಯದು.

ಜನ ಮತ್ತು ಧಾನ್ಯಗಳ ತರಗತಿ ನಿರ್ಣಯದ ಪಾಸು-ನಾಪಾಸು ಪರೀಕ್ಷೆಯಾಗುವದು ಯುದ್ಧಕಾಲದಲ್ಲೇ.

ಅಕ್ಕಿ ಮೇಲ್ದರ್ಜೆಗೆ ಹೋಯಿತು. ರಾಗಿಗೆ ಮಧ್ಯಮ ವರ್ಗ, ಗೋದಿಗೆ ಕನಿಷ್ಠ ತರಗತಿ.

ನಮ್ಮಲ್ಲಿಯೂ ಮಾತೃಭೂಮಿಯ ಮಮತೆಯಿದೆ ಎಂಬುದಕ್ಕೆ ಇದೊಂದು ದೃಷ್ಟಾಂತ

ಅಕ್ಕಿ ನಮ್ಮ ನೆಲದ್ದು: ರಾಗಿಯೂ ಹಾಗೇನೇ. ಗೋದಿ ಕೆನಡಾದಿಂದ ಬಂದದ್ದು.

ದಕ್ಷಿಣಾಫ್ರಿಕಕ್ಕೆ ಬಂದವರೆಂದು ಹಿಂದೀಯರನ್ನು ಅಪಮಾನಿಸುತ್ತಿರುವ ಬಿಳಿಯರು ಇದರಿಂದ ಕಣ್ತೆರೆಯಬೇಕು.

ಬಿಳಿ ಜನರ ವರ್ಣದ್ವೇಷಕ್ಕೆ ತಾವು ಮಾಡಿರುವ ಪ್ರತೀಕಾರಗಳ ವಿವರ ಕೊಡುವಾಗ ಎಸೆಂಬ್ಲಿಯಲ್ಲಿ ಡಾ| ಖರೆಯವರು ಇದನ್ನೂ ಸೇರಿಸಿಹೇಳಬೇಕು.

—ಬೀದಿವಾಲ.

NOTICE

ಕುಂದಾಪುರ ಡಿ. ಮು. ಕೋರ್ಟಿನಲ್ಲಿ

S C. 418/44

ವಾದಿ ಕೃಷ್ಣ ಉಪಾಧ್ಯ ಮಂಜುನಾಥ ಉಪಾಧ್ಯರ ಮಗ, ಕುಂದಾಪುರ ತಾಲ್ಲೂಕು ಉಪ್ಪುಂದ ಗ್ರಾಮ.

ಪ್ರತಿವಾದಿ ನಾರಾಯಣ ಗಣಪತಿ ಭಟ್ಟ. ಕೇಳಾಮನೆ ಗಣಪಯ್ಯ ಭಟ್ಟರ ಮಗ. ಉಪ್ಪುಂದ ಗ್ರಾಮ.

ಸದ್ರಿ ಪ್ರತಿವಾದಿಗೆ ತಿಳಿಯಪಡಿಸುವುದೇನೆಂದ್ರೆ

ವಾದಿಯ ತಂದೆಗೆ ಪ್ರತಿವಾದಿಯು ತಂದೆಯು ತಾ. 14 2 41ರಲ್ಲು ಬರಕೊಟ್ಟ ಕಂತು ಕರಾರಿನ ಬಾಬ್ತು ರೂಪ್ಯಾ 25 10 9 ನ್ನು ವಸೂಲು ಮಾಡುವರೇ ವಾದಿಯು ದಾವಾ ದಾಖಲ್ಲು ಮಾಡಿರುತ್ತಾನೆ. ಸದ್ರಿ ದಾವೆಯನ್ನು ತಾ. 4-12-44ನೇ ದಿವಸ ಪೂರ್ವಾಹ್ನ ಗಂಟೆ 11ಕ್ಕೆ ಮೇಲ್ಕಾಣಿಸಿದ ಕೋರ್ಟಿನಲ್ಲಿ ತನ್ಕಿಗೆ ಇಟ್ಟಿದೆ. ಆ ಬಾಬಿನಲ್ಲಿ ಆಕ್ಷೇಪ ಇದ್ದರೆ ಸದ್ರಿ ದಿವಸ ಕೋರ್ಟಿನಲ್ಲಿ ಹಾಜರಾಗಿ ತಿಳಿಸತಕ್ಕದ್ದು

(ಕೋರ್ಟು ಹುಕುಂ ಪ್ರಕಾರ)

Y Manjaya Shetty
Advocate for Plaintiff

ಮೊಕ್ಕಾಂ: ಕುಂದಾಪುರ
ತಾ, 21-11-44.

ಪ್ರಯಾಣದ ಕಥೆ 5



ಒಳ್ಳೆಯದು, ಸಾಮಾನನ್ನೂ ನಾನೇ ಹೊರಬೇಕಾಗಿದೆ.

ಎಷ್ಟೋಮಂದಿ ಪ್ರಯಾಣಮಾಡುತ್ತಿದ್ದಾರೆ. ಅವರ ಸಾಮಾನುಗಳೂ ಅಪಾರವಾಗಿವೆ. ಇದರಿಂದ ಕೂಲಿಯವರು ತಾನೇ ಎಲ್ಲಿ ಸಿಕ್ಕುವರು.

ರೈಲು ನಿಲ್ದಾಣವನ್ನು ಸೇರಿದೆ. ಅಲ್ಲಿನ ದೃಶ್ಯವು ಯುದ್ಧರಂಗವನ್ನು ಹೋಲುತ್ತದೆ. ಪ್ರತಿಯೊಬ್ಬರೂ ಏಕಕಾಲದಲ್ಲಿ ರೈಲಿನಕಡೆಗೆ ನಾನುಮುಂದು, ತಾನು ಮುಂದು ಎಂದು ನುಗ್ಗುತ್ತಿದ್ದಾರೆ.

ಇಂದು ಅತ್ಯವಸರ ಸಾಮಾನುಗಳನ್ನು ಮೊಟ್ಟಮೊದಲು ರವಾನಿಸಬೇಕು. ಆದರಿಂದಲೇ ಪ್ರಯಾಣದಲ್ಲಿ ಜನಗಳಿಗೆ ಸೌಕರ್ಯವಿಲ್ಲ.

ಅನಾವಶ್ಯಕವಾದ ಪ್ರಯಾಣವನ್ನು ನಿಲ್ಲಿಸಿರಿ.

ಈ ಕುಟುಂಬದ ಗತಿಯೇನಾಗುವುದೋ ಮುಂದಿನ ವಾರದ ಕಥೆಯಲ್ಲಿ ನೋಡಿ.

AAA. 850

ಸಿಂಹದೆದೆಯ ಜವಾಹಿರಲಾಲ್

ದೈಹಿಕ ಮತ್ತು ನೈತಿಕ ಬಲವೆರಡರಲ್ಲಿಯೂ ಪಂಡಿತ ನೆಹರುಗಳನ್ನು ಸರಿಗಟ್ಟುವವರು ಅಪರೂಪವೆನ್ನಬೇಕು. ನೈತಿಕ ಬಲದ ಮಟ್ಟಿಗೆ ಪಂಡಿತರು ಮಹಾತ್ಮರಿಗೆರಡನೆಯವರು. ಕೆಲವು ರಾಷ್ಟ್ರ ಪ್ರಮುಖರು ಖಾಸಗೀ ಜೀವನದಲ್ಲಿ ಮನುಷ್ಯ ಸಹಜ ದೌರ್ಬಲ್ಯಕ್ಕೊಳಗಾದ ಹಲವು ಕಥೆಗಳು ಒಳಗಿಂದೊಳಗೆ ಪ್ರಚಾರದಲ್ಲಿವೆ. ಆದರೆ ನೆಹರುಗಳಿಗಂತಹ ದೋಷ ಇದುವರೆಗೆ ಸೋಂಕಲ್ಲ. ಇನ್ನವರ ದೈಹಿಕ ಧೈರ್ಯದ ಕುರಿತು 'ಹಿಂದುಸ್ಥಾನ್ ಟೈಮ್ಸ್'ನಲ್ಲಿ ಶ್ರೀ. ಕೆ. ರಾಮರಾಯರು ಪ್ರಕಟಿಸಿರುವ ಒಂದು ಘಟನೆಯು ಮನನಾರ್ಹವಿದೆ. ಕಾಂಗ್ರೆಸು ಮಹಾ ವಿಜಯ ಸಂಪಾದಿಸಿದ 1937ರ ಚುನಾವಣೆ ನಡೆಯುತ್ತಿದ್ದ ಕಾಲವದು. ಆಗ ಮದ್ರಾಸಿನ ಪ್ರಧಾನಿಗಳಾಗಿದ್ದ ಜಸ್ಟೀಸ್‌ಪಕ್ಷದ ನಾಯಕ ಬೊಬ್ಬಿಲಿಯ ರಾಜರಿಗೆ ಪ್ರತಿಸ್ಪರ್ಧಿಯಾಗಿ ಶ್ರೀ ವಿ. ವಿ ಗಿರಿಯವರು ಕಾಂಗ್ರೆಸ್ ಉಮೇದ್ವಾರಿಯಾಗಿದ್ದರು. ಆ ಕ್ಷೇತ್ರದಲ್ಲಿದ್ದಷ್ಟು ಚುನಾವಣೆಯ ತೀವ್ರ ತಿಕ್ಕಾಟ ಬೇರೆಲ್ಲಿಯೂ ಇರಲಿಲ್ಲವೆನ್ನಬಹುದು. ನೆಹರುಗಳು ಈ ಸಂಬಂಧವಾಗಿ ಅಲ್ಲಿ ಹೋಗಿದ್ದಾಗ ಕಾಂಗ್ರೆಸಿಗರ ದಳದಲ್ಲಿ ಕೋಣಗಳನ್ನೇರಿ ಬರುತಿದ್ದವರ ಮೇಲೆ ಬೊಬ್ಬಿಲಿ ಕಡೆಯವರು ಆನೆಗಳನ್ನು ಹತ್ತಿಕೊಂಡು ಮೇಲ್ವಾಯ್ದು ಬಂದರು. ಇದರಿಂದ ಹೊಡೆದಾಟವಾಗುವ ಸಂಭವ ಕಂಡೊಡನೆ ಜವಾಹಿರಲಾಲರು ದಬಕ್ಕನೆ ಕೆಳಗೆ ಹಾರಿ ಮುಂಭಾಗದಲ್ಲಿರುವ ಆನೆಯು ಮೇಲೇನೇ ಬೀಳುವಷ್ಟು ಸಮೀಪಕ್ಕೆ ಧಾವಿಸಿದರು. ಕೈಯಲ್ಲೊಂದು ಕೋಲು ಕೂಡಾ ಇಲ್ಲದೆ ಆನೆಗೆ ಹೊಡೆಯಲು ಬಂದ ಈ ಸಿಂಹ ಸದೃಶ ಪುರುಷನನ್ನು ಕಂಡೊಡನೆ ಬೊಬ್ಬಿಲಿ ರಾಜರ ಕಡೆಯ ಕಠೋರ ಮನುಷ್ಯರೂ ದಂಗುಬಡೆದು ಹೋದರು. ಆವರೆಗೂ ಬೊಬ್ಬಿಲಿ ರಾಜರ ಭಯದಿಂದ ಎಲ್ಲವನ್ನೂ ಸಹಿಸಿಕೊಂಡಿದ್ದ ಪೋಲೀಸರಿಗೆ ಇದನ್ನು ಮಾತ್ರ ಸಹಿಸಲಸಾಧ್ಯವಾಯಿತು. ಅವರು ಕೂಡಲೇ ನಡುವೆ ಬಂದು ರೋಷಮೊಂಚಗೊಂಡು ನುಡಿದರು—ನಾವು ಬೊಬ್ಬಿಲಿ ಕದೆಯವರಪೇಕ್ಷಿಸುವ ಯಾವ ಅತಿರೇಕವನ್ನಾದರೂ ಆಚರಿಸಲು ಬಿಡಬಲ್ಲೆವು; ಆದರೆ ಜವಾಹಿರಲಾಲ ನೆಹರುಗಳ ಮೇಲೆ ಒಂದೇ ಒಂದು ಹೊಡೆತ ಬಿದ್ದರೆ ರಾಜರ ಕಡೆಯವರ ಮೇಲೆ ರೈಫಲ್‌ಗಳು ಹಾರುವದು ಖಂಡಿತ". ಆನೆಗಳ ಮೇಲೆ ಕೋಣಗಳು ವಿಜಯ ಸಾರಿದುದು ಚರಿತ್ರೆಯಲ್ಲಿ ಇದೇ ಮೊದಲು.

ಗಡಿನಾಡಿನಲ್ಲಿ ಖಾನ್ ಸಹೋದರರಿಗಿರುವ ಪ್ರತಿಷ್ಠೆ ಬೇರಾರಿಗೂ ಇಲ್ಲ. ಆ ಪೈಕಿ ಹಿರಿಯಣ್ಣ ಡಾ। ಖಾನ್ ಸಾಹೇಬರು ಕಾಂಗ್ರೆಸ್ ಪ್ರಧಾನಿಯಾಗಿದ್ದು ಪ್ರಾಂತ್ಯದಲ್ಲಿ ಅಧಿಕಾರವನ್ನೂ ಚಾಲು ಮಾಡಿದವರು. 'ಟ್ರಿಬ್ಯೂನ್' ಪತ್ರಿಕೆಯಲ್ಲಿ ಇತ್ತೀಚೆಗೆ ನಡೆದ ಒಂದು ಸ್ವಾರಸ್ಯಮಯ ಸಾಮಾನ್ಯ ಘಟನೆಯೊಂದು ಪ್ರಕಟವಾಗಿದೆ. ಅ. ಭಾ. ಪತ್ರಿಕಾ ಸಂಪಾದಕ ಪರಿಷತ್ತಿನ ಈ ವರುಷದ ಅಧ್ಯಕ್ಷ ಶ್ರೀ. ಎಸ್.

ಖಾನ್ ಸಾಹೇಬರಿಗೆ ಕಾಣಸಿಗುತ್ತಿದ್ದರೆ—

ಎ. ಬ್ರೆಲ್ವಿಯವರು ಇತ್ತೀಚೆಗೆ ಗಡಿನಾಡ ಸಂಚಾರಕ್ಕೆ ಹೋಗಿದ್ದರು. ಅವರು ಪೇಶಾವರದಲ್ಲಿ ಇಳಿದೊಡನೆ ಓರ್ವ ಸಿ ಐ ಡಿ ಕಾನ್‌ಸ್ಟೇಬಲ್ ಬಂದು ಹೆಸರು ವಿಳಾಸ ಕೊಡಬೇಕೆಂದು ಅವರನ್ನು ಪೀಡಿಸಹತ್ತಿದ. ಬ್ರೆಲ್ವಿಯವರು ಅವನ ವರ್ತನೆಯನ್ನು ನಿಷೇಧಿಸುತ್ತಾ ಪರಿಚಯ ಕೊಡಲು ತಿರಸ್ಕರಿಸಿದರು. ಆದರೆ ಅವ ಕೇಳಲಾರ. ಹೀಗೆ ತಿಕ್ಕಾಟ ನಡೆಯುತ್ತಿದ್ದಾಗ ಅತ್ತ ಖಾನ್ ಸಾಹೇಬರ ಸವಾರಿ ಬಂತು. ಇವರನ್ನು ಕಂಡೊಡನೆ ಆ ಸಿ ಐ ಡಿ ಅಲ್ಲಿಂದ ಕಾಲ್ತೆಗೆಯಹತ್ತಿದ---ಅದೃಶ್ಯನಾಗಿಬಿಟ್ಟ. ಖಾನ್ ಸಾಹೇಬರು ಬ್ರೆಲ್ವಿಯವರಿಂದ ಸಂಗತಿಯನ್ನೆಲ್ಲಾ ತಿಳಿದುಕೊಂಡರು. ಆ ಮನುಷ್ಯನಿಗೆ ಒಂದು ಪಾಠ ಕಲಿಸಿ ಬಿಡಬೇಕೆಂದು ನೆನಸಿ ಆ ಕಡೆ, ಈ ಕಡೆಗೆಲ್ಲಾ ನೋಡಿದರು ಪ್ಲೇಟ್‌ಫೋರ್ಮಿನಲ್ಲೆಲ್ಲಾ ಸುತ್ತಾಡಿ ಹುಡುಕಿದರು. ಆದರೆ ಕಾನ್‌ಸ್ಟೇಬಲನ ಸುದೈವದಿಂದ ಅವನು ಅವರ ಕಣ್ಣಿಗೆ ಬೀಳಲೇ ಇಲ್ಲ

ಜರ್ಮನ್ ತಯಾರಿಯ ಅಪೂರ್ವ ಲೋಹ

ಅತ್ಯಂತ ಗಟ್ಟಿಯಾದ ಹಾಗೂ ಅತೀ ಹಗುರವಾದ ಒಂದು ಮಿಶ್ರಲೋಹವನ್ನು ಜರ್ಮನರು ತಯಾರಿಸಿದ್ದಾರೆಂಬುದೀಗ ಬೆಳಕಿಗೆ ಬಿದ್ದಿದೆ. ಅದರ ಅಪೂರ್ವತೆ ಮತ್ತು ನಾಜಿಗಳು ಈಗ ಅದನ್ನು ಉಪಯೋಗಿಸಿರುವ ರೀತಿಯು ಬ್ರಿಟಿಷ್ ಇಂಜಿನೀಯರರನ್ನು ಸಮುನ್ಯಗೊಂಡುಮಾಡಿದೆ ಎಂದು ಲಂಡನಿನ 'ಎಂಪಾಯರ್ ನ್ಯೂಸ್' ಪತ್ರಿಕೆ ಪ್ರಕಟಿಸಿದೆ. ಆಶ್ಚರ್ಯವೆಂದರೆ ಜರ್ಮನರೀ ವರೆಗೆ ಆ ಲೋಹದಿಂದ ನಾಣ್ಯಗಳನ್ನು ಹೊಡೆಯಿಸಿ ಕೆಲವು ಆಶ್ರಿತ ರಾಜ್ಯಗಳಲ್ಲಿ ವಿತರಣೆಮಾಡಿದ್ದಾರೆ. ಇಷ್ಟೊಂದು ಹಗುರ ಹಾಗೂ ಗಟ್ಟಿಯ ಈ ಅದ್ಭುತ ಲೋಹವನ್ನು ಟೆಕ್ಕ ಬೋಂಬ ಅಥವಾ ವಿಮಾನ ತಯಾರಿಗೆ ಉಪಯೋಗಿಸಿಕೊಂಡಿಲ್ಲವೇಕೆ ಎಂಬುದೇ ಮಿತ್ರ ತಜ್ಞರ ತಲೆ ಕೆರಡುಮಾಡಿರುವ ಪ್ರಶ್ನೆ. ಆ ಲೋಹದಿಂದ ತಯಾರಾದ ಒಂದು ನಾಣ್ಯವನ್ನು ಬ್ರಿಟಿಷ್ ತಜ್ಞರೊಬ್ಬರು ಪರೀಕ್ಷೆ ನಡಿಸಿ ಯಾವುದರಿಂದಲೂ [illegible] ಗುವಂತಿಲ್ಲವೆಂಬುದನ್ನು ತಿಳಿದು ಕೊನೆಗೆ ಒಂದು ವಜ್ರದಿಂದ ತುಂಡುಮಾಡಲು [illegible] ಅದರಲ್ಲೊಂದು ಗೆರೆ ಮಾತ್ರ ಬಿತ್ತಂತೆ. ಜರ್ಮನರು ಒಂದು ಗುಪ್ತಲೋಹ ತಯಾರು ಮಾಡಿದ್ದಾರೆ ಎಂಬ ಊಹೆಯೇನೋ ಇದ್ದಿತು. ತಜ್ಞರ ಅಭಿಪ್ರಾಯದಂತೆ 'ಯುದ್ಧಾನಂತರದ ಜಾಗತಿಕ ಭದ್ರತೆಯಲ್ಲಿ ಈ ಲೋಹಕ್ಕೆ ಪ್ರಾಮುಖ್ಯಸ್ಥಾನವಿದೆ. ಮುಖ್ಯವಾಗಿ ಯೋಚಿಸಬೇಕಾದ ವಿಷಯವೆಂದರೆ ಜರ್ಮನರ ಮೂರನೇ ಯುದ್ಧ ಹೂಡುವ ಹಂಚಿಕೆಯಿಂದಿರಬೇಕು. ಈ ಲೋಹದ ಗುಟ್ಟನ್ನವರು ಬಹಿರಂಗ ಪಡಿಸದೆ ತಮ್ಮಲ್ಲೇ ಇಟ್ಟುಕೊಂಡಲ್ಲಿ ಮುಂದಿನ ಕಾಲವು ಅತಿ ಕಠಿಣವಾಗಬಹುದು. ಆದ್ದರಿಂದ ಭವಿಷತ್ಕಾಲದಲ್ಲಿ ಇದಕ್ಕಿಂತಲೂ ಭೀಕರವಾದ ಯುದ್ಧವಾಗದಂತೆ, ಮಿತ್ರರಾಷ್ಟ್ರದವರು ಈ ಲೋಹದ ಎಲ್ಲಾ ಹಕ್ಕನ್ನೂ ಜರ್ಮನರಿಂದ ಕಸಿದುಕೊಳ್ಳದಿದ್ದರೆ ಗಂಡಾಂತರವಿದೆ". ಫ್ರಾನ್ಸನ್ನು ಜರ್ಮನರು ಕಬಳಿಸಿಕೊಂಡಮೇಲೆ ಅಲ್ಲಿಯ ಹಲವು ಫ್ರೆಂಚ್ ನಾಣ್ಯಗಳನ್ನು ಹಿಂದೆಗೆದು ಜರ್ಮನರು ಈ ಲೋಹದ ನಾಣ್ಯಗಳನ್ನಲ್ಲಿ 'ಆಕ್ರಮಿತ ನಾಣ್ಯ'ವಾಗಿ ವಿತರಣೆಮಾಡಿದ್ದರು. ಮಿತ್ರರಾಷ್ಟ್ರೀಯ ತಜ್ಞರು ಈ ಕುರಿತು ಶೋಧದಲ್ಲಿದ್ದಾರೆ.

ಸಟ್ಟಾವಾಲರಿಗೊಂದು ಸಂತೋಷ ವಾರ್ತೆ?

ಬೊಂಬಾಯಿ ಸಾಹುಕಾರ ವ್ರಜಲಾಲ್ ಎಂಬವರು ಎಲ್ಲೂರಿನಲ್ಲಿ ವಾಸಿಸುತಿದ್ದರು. ಇವರು ತನ್ನ ಮನೆಯನ್ನೇ ಜುಗಾರಿ ಸ್ಥಳವಾಗಿ ಉಪಯೋಗಿಸುತಿದ್ದಾರೆಂದೂ, ಅಲ್ಲಿ ನ್ಯೂಯೋರ್ಕ್ ಹತ್ತಿ ದ್ಯೂತ (ಸಟ್ಟಾ ಆಟ) ನಡೆಯುತ್ತಿದೆಯೆಂದೂ ವ್ರಜಲಾಲರ ಮೇಲೆ ಸರಕಾರೀ ಮೊಕದ್ದಮೆ ಹೂಡಲ್ಪಟ್ಟಿತು. ಚಿಂತಾಲಪೂಡಿಯ ಡಿಪ್ಯುಟಿ ತಹಶೀಲ್ದಾರ್ ಮೆಜಿಸ್ಟ್ರೇಟರು ಸಾಹುಕಾರರಿಗೆ 2 ತಿಂಗಳ ಕಠಿಣ ಸಜೆ ಮತ್ತು 100 ರೂ. ಜುಲ್ಮಾನೆ ವಿಧಿಸಿ, ಜುಲ್ಮಾನೆ ತೆರಲು ತಪ್ಪಿದರೆ ಪುನಃ ಎರಡು ವಾರಗಳ ಶಿಕ್ಷೆಯೆಂದು ತೀರ್ಪಿತ್ತರು. ಆಪೀಲಾಯಿತು. ಎಲ್ಲೂರಿನ ಸಬ್ ಡಿವಿಜನಲ್ ಮೆಜಿಸ್ಟ್ರೇಟರು ಆ ತೀರ್ಪನ್ನು ರದ್ದುಪಡಿಸಿ ಆರೋಪಿಯನ್ನು ಬಿಡುಗಡೆಮಾಡಿದರು. ಈ ಬಿಡುಗಡೆ ತೀರ್ಮಾನದ ವಿರುದ್ಧವಾಗಿ ಮದ್ರಾಸ್ ಹೈಕೋರ್ಟಿಗೆ ಸರಕಾರೀ ಅಪೀಲು ನಡೆದಾಗ ನವಂಬರ್ ತಾ 6 ರಲ್ಲಿ ಜಸ್ಟೀಸ್ ಬೆಯಾರರು ಅಪೀಲನ್ನು ಡಿಸ್‌ಮಿಸ್‌ಮಾಡಿದರು. ಈ ವಿಜಯದಿಂದ ಸಟ್ಟಾ ಕೇಂದ್ರಗಳು ಹುರುಪುಗೊಳ್ಳುವವರದಲು ಯೋಚಿಸಬೇಕಾದ ಒಂದು ವಿಷಯವಿದೆ. ಹೈಕೋರ್ಟಿನ ತೀರ್ಮಾನವೇನು? ಆರೋಪಿ ಸಾಹುಕಾರರು ತಾನು ಸಟ್ಟಾ ಆಡಿದ್ದರೂ ಅಪರಾಧ ಮಾಡಿದಂತಾಗಿಲ್ಲವೆಂದು ಸಾಧಿಸಿ ಗೆದ್ದರೋ? ಅಥವಾ ಸಟ್ಟಾ ಆಟ ನಡೆಸಿದ್ದೇ ಇಲ್ಲವೆಂದು ಸಾಧಿಸಿದ್ದರೋ?—ಎಂಬ ವಿವರ ತಿಳಿದುಬಂದಿಲ್ಲ. ಒಟ್ಟಿನಲ್ಲಿ ಎರಡನೆಯ ಹಾದಿಯನ್ನೇ ಹಿಡಿದಿರಬೇಕು. ಹಾಗಾಗಿದ್ದರೆ ಇದು ಆ ಸಾಹುಕಾರರ ವಿಜಯ ಹೊರತು ಸಟ್ಟಾ ವಿಜಯವಲ್ಲ!

ENGLISH MADE EASY

ಇಂಗ್ಲಿಷ್ ಏನೂ ತಿಳಿಯದವರು 'ಸುಲಭದಲ್ಲಿ ಇಂಗ್ಲಿಷ್' ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೇ ಕಲಿತುಕೊಳ್ಳಬಹುದು.

ಇಂಗ್ಲಿಷ್ ಅಲ್ಪಸ್ವಲ್ಪ ಬಲ್ಲವರು ಚೆನ್ನಾಗಿ ಕಲಿತುಕೊಳ್ಳಬಹುದು

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.
ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ

ಬೆಲೆ ಬರೇ ರೂ 1—4—0 ರೂ 1-4-0ನ್ನು ಮನಿಯಾರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತೆ.

ನ ವ ಭಾ ರ ತ ಪು ಸ್ತ ಕ ಭಂ ಡಾ ರ,
ರಿಜಿಸ್ಟರ್ಡ್ ಪಬ್ಲಿಷರ್ಸ್ ಎಂಡ್ ಬುಕ್ ಸೆಲ್ಲರ್ಸ್,
ಉಡುಪಿ, ದ ಕ,

Navabharat Book Depot Udipi South India — Navabharat Book Depot Udipi South India

ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು

	ರೂ. ಆ.				
		ಮೂರು ಪ್ರಹಸನಗಳು	0 14	ವಿರಾಧ[illegible]	0 2
ಸುಲಭದಲ್ಲಿ ಇಂಗ್ಲಿಷ್	1-4	ಸ್ವತಂತ್ರ ಜೀವನೋಪಾಯ	0 3	ಪಶ್ಚಿಮ[illegible]	0 8
ಯುವಕರಿಗೆ ಮತ್ತು ವಯಸ್ಕರಿಗೆ		ಪ್ರೌಢ ಪಥ	0 4	● ಕವಿತೆಗಳು	
ಸುಲಭವಾಗಿ ಇಂಗ್ಲಿಷನ್ನು ಅನ್ಯ		ಹೆಂಡ್ತಿ ಗಂಡನಾದರೆ	0 4	ಕಾವ್ಯಸಾಮ್ರಾಜ್ಯ	0 12
ಸಹಾಯವಿಲ್ಲದೆ ಕಲಿಯುವ ಇಂಗ್ಲಿ		● ಕತೆಗಳು		ವಂಗಳು	0
ಷ್ ಸ್ವಯಂಬೋಧಿನಿ		ನಗೆನೋಟಗಳು	0-14	ಶ್ರೀಮುಖ	1-0
● ನಾಟಕಗಳು		ಅನ್ನದೇವರು		ಪುರಂದರದಾಸರ ಕೀರ್ತನೆ	1-0
ಪ್ರೇಮವಿಜಯ	0-12	ಮತ್ತು ಇತರ ಕಥೆಗಳು	1-0	ಭಗವದ್ಗೀತಾ (ಮೂಲ	
ದೇಶಭಕ್ತ	1-4	ಭಾರತೀಯ ಕತೆಗಳು	0-14	ಸಿಲ್ಕ್ ಬೈಂಡು)	1-4
ವ್ಯಭಿಚಾರಿಣಿ ಯಾರು	0-12	ಸಂವಾದೀಪ	0 10	● ಇತರ ಪುಸ್ತಕಗಳು	
ಕುಶಲವ	0-5	ನಾಟಕತೆಗಳು	0-3	ಮುಂದಿನ ದೇವರು	0 3
ಸಂಶಯ ಪಿಶಾಚಿ	0-8	ಕಂದಕಾರ[illegible] ನೋಟಗಳು	08	ರಾಷ್ಟ್ರಸಭೆಯ ಇತಿಹಾಸ	2-8
ರಂಗಭೂಮಿ	0-5	ನಾರೀಹೃದಯ	0 14	ಬಾಲವಾಙ್ಮಯ	0-3
ಪ್ರತಾಪ	1-12	[illegible] ಕತೆಗಳು	0-10	ಮಿತಸಂತತಿ	0-5
ಧರ್ಮಸಂಕಟ	0 4	ಪ್ರೇಮಪ್ರವಾಹ	0 6	ಸೃಷ್ಟಿಯ ಜ್ಞಾನ	0-8
ಆರೋಗ್ಯ ಪ್ರತಾಪ	0 12	ಆಧುನಿಕ ಇಂಗ್ಲಿಷ್ ಕತೆಗಳು	0 12	ನವಪೂರಿತ ಪಟ್ಟಣಗಳು	1-8
ಪಂಚಾರತಿ	0-6	ಲೀಲಾಮುದ್ರೆ	0-6	ಚರಕ	0 6
ಪ್ರತೀಕಾರ	0 6	● ಕಾದಂಬರಿಗಳು			
ಸೇವಾಪಥ	0-8	ಸನ್ಯಾಸಿಯ ಸೋಗಿನಲ್ಲಿ	0 8	ಗೀತೆಯ ಕೈಗನ್ನಡಿ	0-12

ನವಭಾರತ ಪುಸ್ತಕ ಭಂಡಾರ, ರಿಜಿಸ್ಟರ್ಡ್ ಪಬ್ಲಿಷರ್ಸ್, ಉಡುಪಿ ದ ಕ.

The Canara Banking Corporation Limited.

(Incorporated in British India.)

Estd: 1906

Head Office: **UDIPI**, (S. K.)

ANNOUNCEMENT

Branches of the Bank Will Shortly Be opened at **HUBLI & DHARWAR.**

ನವಯುಗ

ಉಡುಪಿ, ಗುರುವಾರ ೩೦-೧೧-೧೯೪೪

ಎರಡು ಸದ್ದಾರಿಗಳು

ಪ್ರಪಂಚದ ಯಾವುದೇ ಸಣ್ಣ ದೊಡ್ಡ ಕಲಹಗಳಲ್ಲಾದರೂ ನ್ಯಾಯವು ಎಲ್ಲಿಯಾದರೊಂದೆಡೆಯಲ್ಲಿ ಹುದುಗಿಕೊಂಡಿರಲೇಬೇಕು. ಆದ್ದರಿಂದ ಇಂದಿನ ಲೋಕಯುದ್ಧದಿಂದ ಹಿಡಿದು ಮನೆಕಲಹದ ವರೆಗಿನ ಎಲ್ಲಾ ತಿಕ್ಕಾಟಗಳಿಗೂ ತೀರ್ಮಾನವಿದೆ; ಇದೆ ರಕ್ತಪಾತ, ದ್ವೇಷಾಸೂಯೆ, ಅನ್ಯಾಯಕೃತ್ಯಗಳೇಳುವದು ಈ ಅಂತರ್ಗತ ನ್ಯಾಯವನ್ನು ಎತ್ತಿ ಹಿಡಿಯುವ ಮೂರನೆಯವರಿಲ್ಲದೆ ಹೋದಾಗಲೇ. ಭಾರತದ ಇಂದಿನ ಬಿಕ್ಕಟ್ಟು ಮತ್ತು ಜಾತೀಯ ಕಲಹಗಳೂ ಇದಕ್ಕಪವಾದವಾಗಿಲ್ಲ ಅವುಗಳಿಗೊಂದೊಂದು ತೀರ್ಮಾನವಿದೆ; ಆದರೆ ತೀರ್ಮಾನಿಸುವವರಿಲ್ಲ; ಅಂತಹ ತೀರ್ಮಾನಕ್ಕೆ ಒಪ್ಪಲೇಬೇಕಾದವರು ಒಪ್ಪುವದೂ ಇಲ್ಲ. ಆದ್ದರಿಂದಲೇ ಇಂದಿನ ಮಹಾ ದುರಂತ. ಇದನ್ನು ಮನಗಂಡು ಸರ್. ಸಪ್ರುಗಳು ಜಾತೀಯ ಜಗಳ ತೀರ್ಮಾನಕ್ಕಾಗಿ ಒಂದು ಹೊಸ ವಿಧಾನದಿಂದ ಕಾರ್ಯಾರಂಭಿಸಿದ್ದಾರೆ. ರಾಜಾಜಿಯವರು ರಾಜಕೀಯ ಜಗಳ ತೀರ್ಮಾನಕ್ಕಾಗಿಯೂ ಇಂತಹ ಒಂದು ಉಪಾಯ ಸೂಚಿಸಿದ್ದಾರೆ ಇವೆರಡೂ ದೇಶದ ಇಂದಿನ ಬಿಕ್ಕಟ್ಟೆಂಬ ಗೊಂಡಾರಣ್ಯದಲ್ಲಿ ತೋರಿ ಬರುವ ಸದ್ದಾರಿಗಳಂತಿದ್ದು ಗುರಿ ಸೇರಿಸಬಲ್ಲವೆಂಬುದಕ್ಕನುಮಾನವಿಲ್ಲ

ಸರ್ ತೇಜಬಹದೂರು ಸಪ್ರುಗಳ ಪ್ರೇರಣೆಯಂತೆ ಪಕ್ಷರಹಿತ ಪ್ರಮುಖರ ಸಮ್ಮೇಲನದ ಸ್ಥಾಯೀ ಸಮಿತಿಯು, ಜಾತೀಯ ಮತ್ತು ಅಲ್ಪ ಸಂಖ್ಯಾಕರ ಪ್ರಶ್ನೆಗಳನ್ನು ಪರ್ಯಾಲೋಚಿಸಲು ಒಂದು ಸಮಿತಿಯನ್ನು ರಚಿಸುವ ನಿರ್ಧಾರಮಾಡಿದೆ. ಈ ಯೋಜನೆಗೆ ಗಾಂಧಿಜೀಯ ಪೂರ್ಣ ಬೆಂಬಲದ ಆಶ್ವಾಸನೆಯನ್ನು ಸರ್. ಸಪ್ರುಗಳು ಪಡೆದಿದ್ದಾರೆ. ಗಾಂಧಿಜಿಯ ಬಯಕೆಯಂತೆಯೇ ಆ ವಿಚಾರಣಾ ಮಂಡಲಿಯಲ್ಲಿ ಯಾವುದೊಂದು ಪಕ್ಷ ಅಥವಾ ಅಭಿಮಾನವನ್ನು ಕಟ್ಟಿಕೊಂಡವರಿರುವಂತಿಲ್ಲ. ಕಾಂಗ್ರೆಸ್, ಮುಸ್ಲಿಂಲೀಗ್, ಹಿಂದೂ ಮಹಾಸಭೆಗಳಂತಹ ಸಂಸ್ಥೆಗಳ ಭಕ್ತರಿಗೆ—ಹುಟ್ಟು ಪಕ್ಷಪಾತಿಗಳಿಗೆ-ಅಲ್ಲಿ ಸ್ಥಾನವಿಲ್ಲ. ಯಾವ ಕಡೆಗೂ ವಾಲದೆ, ಎಲ್ಲಾ ಪಕ್ಷಗಳ ವಾದವನ್ನೂ ನಿರ್ವಿಕಾರ ಬುದ್ಧಿಯಿಂದ ಆಲಿಸಬಲ್ಲವರಿಂದ—ಏಕಾಗ್ರಚಿತ್ತದಿಂದ ನ್ಯಾಯಶೋಧನೆ ಮಾಡತಕ್ಕವರಿಂದ-ಆ ಸಮಿತಿ ರೂಪುಗೊಳ್ಳುತ್ತದೆ. ಕೊನೆಯ ಪಕ್ಷ ವಿರಾಮ ಹೊಂದಿದ ಇಬ್ಬರು ಜಡ್ಜರಾದರೂ ಆ ಸಮಿತಿಯಲ್ಲಿರುತ್ತಾರೆ. ಸಮಿತಿಯ ತೀರ್ಮಾನವು ಎಲ್ಲಾ ಜಾತಿಮತಗಳವರಿಗೊಪ್ಪಿಗೆಯಾದರೆ ಸಂತೋಷ. ಕೊನೆಗೆ ರಾಷ್ಟ್ರದ ಬೆಂಬಲವಾದರೂ ಅದಕ್ಕೆ ದೊರೆತರೆ. ಸರ್ವಪಕ್ಷೀಯ ಸಮ್ಮೇಲನವನ್ನು ಕರೆದು ರಾಜಕೀಯ ಹಕ್ಕು ಬಾಧ್ಯತೆಗಳಿಗಾಗಿ ಬ್ರಿಟಿಷ್ ಸರಕಾರದೊಡನೆ ವ್ಯವಹರಿಸಲನುಕೂಲವಾಗುತ್ತದೆ—ಇದು ಸರ್. ಸಪ್ರುಯೋಜನೆಯ ಆಕಾರ ಮತ್ತು ಗುರಿ. ಈ ನ್ಯಾಯವಾದವನ್ನು ಬೇರಾರೂ ಆಕ್ಷೇಪಿಸಲಾರರು, ಆದರೆ ಮಿ ಜಿನ್ನರು ಇದನ್ನಾಕ್ಷೇಪಿಸುವ ಅಥವಾ ಅಸಡ್ಡೆ ಮಾಡುವ ಸಂಭವವಿದೆ. ಹಾಗೆ ಮಾಡುವಾಗ ಮಿ ಜಿನ್ನರ ಮೇಲೆ ನ್ಯಾಯವನ್ನು ವಿರೋಧಿಸಿದ ಆರೋಪ ಬರಬಹುದು; ಗಾಂಧೀ ಸಂಭಾಷಣೆಯಲ್ಲಿ ಅಪಜಯಗೊಂಡುದಕ್ಕಿಂತಲೂ ಹೆಚ್ಚಿನ ಅಪಕೀರ್ತಿಯವರಿಗೆ ತಟ್ಟಬಹುದು. ಮಿ. ಜಿನ್ನರು ಅದಕ್ಕೆ ಸಿದ್ಧರೇ. ಮುಸ್ಲಿಂ ಲೀಗಿನ ಇದು ವರೆಗಿನ ಧೋರಣೆಯ ಮೇಲಿಂದ, ಇಂತಹ ಮುಷ್ಕರ ಹೂಡದಂತೆ ಮಿ. ಜಿನ್ನರನ್ನು ಹಿಡಿದು ಹಿಂಡೆಳೆಯುವವರಿರುವದೂ ಅಸಂಭವವೆನ್ನಬೇಕು. ಇಂತಹ ಪರಿಸ್ಥಿತಿಯಲ್ಲಿ ವಿಚಾರಣಾ ಮಂಡಲಿಯ ತೀರ್ಮಾನಕ್ಕೆ ಇಡೀ ರಾಷ್ಟ್ರದ ಬೆಂಬಲ ದೊರೆತರೂ 'ಅವರೊಳಗೇನೇ ಒಮ್ಮತವಿಲ್ಲ' ಎಂಬ ಬ್ರಿಟಿಷ್ ಸರಕಾರದ ಪಲ್ಲವಿ ನಿಲ್ಲುವಂತಿಲ್ಲ. ಆಗ ದೇಶವಾಗಲೀ, ಮಿ. ಜಿನ್ನರಾಗಲೀ ಒಂದೇ ಒಂದಡಿ ಮುಂದಿಡದಂತಾಗುವದು. ಮಿ. ಜಿನ್ನರು ಅಂತಹ ಧೋರಣೆ ವಹಿಸಲಾರರೆಂದು ಆಶಿಸಿದರೆ, ಈ ನವಯೋಜನೆಯು ದೇಶದ ಭವಿಷ್ಯತ್ತನ್ನು ಬೆಳಗಿಸಬಲ್ಲುದು.

ನಾಗಪುರ ವಿಶ್ವವಿದ್ಯಾನಿಲಯದ ಪದವೀದಾನ ಸಮಾರಂಭದಲ್ಲಿ ಭಾಷಣಮಾಡುತ್ತಾ ಶ್ರೀ. ಸಿ. ರಾಜಗೋಪಾಲಾಚಾರ್ಯರು ರಾಜಕೀಯ ಬಿಕ್ಕಟ್ಟು ನಿವಾರಣೆಗೂ ಇಂತಹ ಸದ್ದಾರಿಯನ್ನೇ ಸೂಚಿಸಿದ್ದಾರೆ. ಅಮೆರಿಕಾ, ಕೆನಡಾ ಮೊದಲಾದ ವಿದೇಶಗಳಲ್ಲಿ ಲೋರ್ಡ್ ಹೆಲಿಫೇಕ್ಸ್, ಮಿ. ಮೆಕ್ಡೊನಾಲ್ಡರಂತಹ ಜವಾಬ್ದಾರಿಯರಿತ ಬ್ರಿಟಿಷ್ ಪ್ರಮುಖರು ಕೂಡಾ ಅಪಪ್ರಚಾರ ನಡಿಸುತ್ತಿದ್ದಾರೆ. 'ಮಿತ್ರ ರಾಷ್ಟ್ರಗಳಿಗೆ, ಅಥವಾ ಕೆನಡಾ ಅಮೇರಿಕಗಳಿಗೆ ಸರಿತೋರುವ ಒಂದು ಪಂಚಾಯತ ಕೋರ್ಟು ಏರ್ಪಡಲಿ. ಯಥಾರ್ಥ ಹಾಗೂ ನ್ಯಾಯವಾದ ಯಾವ 'ಎವಾರ್ಡ'ನ್ನಾದರೂ ನಾವು ಶಿರಸಾವಹಿಸುವೆವು' ಎಂದು ರಾಜಾಜಿಯ ಆಹ್ವಾನ. ಆದರೆ ಬ್ರಿಟಿಷ್ ಸರಕಾರವು ಇದಕ್ಕೊಪ್ಪುವಂತಿವಂತಿಲ್ಲ. ಈ ಮಟ್ಟಿಗೆ ಮಿ. ಜಿನ್ನರನ್ನು ಬ್ರಿಟಿಷರೋ, ಬ್ರಿಟಿಷರನ್ನು ಮಿ. ಜಿನ್ನರೋ ಮೋಲ್ಬಂಗ್ಗಿಯಾಗಿಟ್ಟುಕೊಂಡು ವರ್ತಿಸುತ್ತಿರುವಂತಿದೆ! ಯಾರಲ್ಲಿ ಯಾವ ಅಯೋಗ್ಯತೆಯಿದ್ದರೂ ಇವೆರಡು ಸೂಚನೆಗಳೂ ಕಾಲಯೋಗ್ಯವಿವೆ; ನಿರಾಕ್ಷೇಪಕರ ಹಾಗೂ ನಿರ್ದೋಷವಾಗಿವೆ. 'ಸದ್ಯಸ್ಥಿತಿಗೊಂದು ತೀರ್ಮಾನವೇ ಬೇಡ' ಎನ್ನುವವರು ಮಾತ್ರ ಇವುಗಳನ್ನಾಕ್ಷೇಪಿಸಬೇಕು. ದೇಶಕ್ಕೆ ಇಂದಿನ ಬಿಕ್ಕಟ್ಟು ಬೇಡವಾಗಿರುವದರಿಂದ ಈ ಸೂಚನೆಗಳಿಗೆ ಅದರ ಪೂರ್ಣ ಸ್ವಾಗತ ಹಾಗೂ ಬೆಂಬಲ ಇದೆ.

ಪಂಜಾಬ್ ಮೈಲ್ ಅಪಘಾತ

ಇದೇ ತಾ. 23ನೇ ರಾತ್ರಿ 12-40ಕ್ಕೆ ಬಿಹಾರಿನ ಅಂಬ್ರಾಹ್ ಸಮೀಪದ ಒಂದು ಸಣ್ಣ ಸಂಕವನ್ನು ದಾಟುತ್ತಿದ್ದ ಪಂಜಾಬು ಮೈಲಿನ ಎಂಜಿನು ಮತ್ತು ಅದಕ್ಕೆ ತಾಗಿದ್ದ ಪ್ರಥಮದ ಆರು ಗಾಡಿಗಳು ಕಂಬಿ ತಪ್ಪಿ ಕೆಳಗೆ ಬಿದ್ದು ದೊಡ್ಡ ಅಪಘಾತ ವುಂಟಾಗಿದೆ. ಮಡಿದವರ ಮತ್ತು ಜಖಂಗೊಂಡವರ ಸರಿಯಾದ ಸಂಖ್ಯೆಯಿಷ್ಟೆಂದು ತಿಳಿದಿಲ್ಲ. ಪ್ರಥಮತಃ ತಿಳಿದುಬಂದಂತೆ 6 ಮಂದಿ ಮಡಿದು 13 ಮಂದಿಗೆ ಪ್ರಾಣಾವಧಿ ಜಖಂ ಮತ್ತು 41 ಮಂದಿ ಸಣ್ಣಪುಟ್ಟ ಘಾಯಗೊಂಡಿದ್ದಾರೆಂದು ತಿಳಿದುಬರುತ್ತದೆ ಮಡಿದವರಲ್ಲಿ ಕರಾಚಿ ಕೋರ್ಪರೇಶನಿನ ಸ್ಥಾಯೀ ಸಮಿತಿಯ ಅಧ್ಯಕ್ಷರೊಬ್ಬರು. ಸಿಂಧ್ ಎಸೆಂಬ್ಲಿಯ ಕಾಂಗ್ರೆಸ್ ಪಕ್ಷದ ನಾಯಕ ಶ್ರೀ ಸಿದ್ವ ಮತ್ತು ಕರಾಚಿಯ ಮಾಜೀ ಮೆಂಬರರೂ ಜಖಂಗೊಂಡಿರುತ್ತಾರೆ. ಇವರೆಲ್ಲಾ, ಕಲ್ಕತ್ತದ ಮೇಯರರು ಹಿಂದುಸ್ಥಾನ ಮತ್ತು ಸಿಲೋನಿನ ಮೇಯರರುಗಳಿಗಾಗಿ ಏರ್ಪಡಿಸಿದ್ದ ಸತ್ಕಾರ ಕೂಟಕ್ಕಾಗಿ ಕಲ್ಕತ್ತೆಗೆ ಹೊರಟವರು. ಈ ದುಃಖ ಸೂಚನಾರ್ಥವಾಗಿ ಆ ಸತ್ಕಾರ ಕೂಟವು ನಿಲ್ಲಿಸಲ್ಪಟ್ಟಿದೆ.

'ಕ್ವಿಟ್ ಅಬಿಸೀನಿಯಾ' ವಾದ

ಅಬಿಸೀನಿಯದಲ್ಲಿರುವ ಬ್ರಿಟಿಷರು ಹೊರಡಲು ಕೇಳುವದಿಲ್ಲವೆಂದು ಅಲ್ಲಿಯ ಚಕ್ರವರ್ತಿ ಹೈಲೆಸಿಲಾಸಿಯುವರು ಅಮೇರಿಕಕ್ಕೆ ದೂರುಕೊಟ್ಟಿದ್ದಾರೆಂದು ಪ್ರಕಟವಾಗಿದೆ. ಬ್ರಿಟಿಷರು ಅಲ್ಲಿಯ ಒಗಾಡೆನ್ ಮತ್ತು ಹರಾರ್ ಎಂಬ ಪ್ರಾಮುಖ್ಯ ಸ್ಥಳಗಳನ್ನು ಆಕ್ರಮಿಸಿಕೊಂಡು ಬಿಟ್ಟುಕೊಡಲೊಪ್ಪುವದಿಲ್ಲ. 1942ರಲ್ಲಿ ನಡೆದ ಬ್ರಿಟಿಷ್-ಅಬಿಸೀನಿಯಾ ಒಪ್ಪಂದದಂತೆ ಬ್ರಿಟಿಷ್ ಸೋಮಾಲಿ ಲೇಂಡಿಗೆ ತಾಗಿರುವ ಕೆಲವು ಅಬಿಸೀನಿಯಾ ಪ್ರದೇಶಗಳಲ್ಲಿ ತಮಗೆ ಅಧಿಕಾರವಿದೆಯೆಂದು ಬ್ರಿಟಿಷರ ಅಂಬೋಣವಿರುವಂತೆ ಕಾಣುತ್ತದೆ

ಕೆನಡಾದಲ್ಲಿ ಒಳಗೊಂದಲ

ಕೆನಡಾದಲ್ಲಿ ಖಡ್ಡಾಯವಾಗಿ ಸೇನಾಶಿಕ್ಷಣ ಕೊಡುವ ಸರಕಾರಿ ಸೂಚನೆಗೆ ವಿರುದ್ಧವಾಗಿ ದೇಶದಲ್ಲಿ ನಿಷೇಧ ಪ್ರದರ್ಶನಗಳು ನಡೆದಿವೆ. ಈ ಪ್ರದರ್ಶನಗಳಲ್ಲಿ ಹೆಚ್ಚಾಗಿ ಯುವಕರು ಭಾಗವಹಿಸುತಿದ್ದಾರೆ ಮುಖ್ಯ ಮಂತ್ರಿ ಮೆಕೆಂಜೀ ಕಿಂಗರು ತನ್ನ ಅಧಿಕಾರವುಳಿಸಿಕೊಳ್ಳುವ ಪ್ರಯತ್ನದಲ್ಲಿದ್ದಾರೆ. ಈ ಗಲಭೆಯಿಂದಾಗಿ ಆಕಾಶ ಮಂತ್ರಿ ಮಿ. ಪವರರು ರಾಜಿನಾಮೆಯಿತ್ತಿದ್ದಾರೆ. ಗೃಹರಕ್ಷಣೆಗಾಗಿ ತಯಾರಿಸಿದ್ದ ಸುಮಾರು 16 ಸಾವಿರ ಕೆನಡಾ ಸೇನೆಯನ್ನು ಯುರೋಪು ರಂಗಕ್ಕೆ ಕಳುಹಬೇಕಾಗಿ ಬಂದುದೇ ಕಾರಣ ಪಶ್ಚಿಮ ಯುರೋಪು ಮತ್ತು ಇಟಲಿ ರಣರಂಗಗಳಲ್ಲಿ ನಿರೀಕ್ಷೆಗೂ ಮಿಕ್ಕಿ ಜನಹಾನಿಯಾಯಿತೆಂದೂ ಇದೇ ಪರಿಮಾಣದಲ್ಲಿ ಮುಂದುವರಿದರೆ ಜನವರಿ ಅಥವಾ ಫೆಬ್ರವರಿಯಲ್ಲಿ ಕಾಲ್ಬಲದ ಕೊರತೆ ಬೀಳಬಹುದೆಂದೂ ಕೆನಡಾದ ರಕ್ಷಣಾ ಮಂತ್ರಿ ಒಪ್ಪಿಕೊಂಡಿದ್ದಾರೆ.

ಸೈನ್ಯಶಸ್ತ್ರಗಳು ಕಡಿಮೆಯಾಗುತ್ತಿವೆ

ಮಿತ್ರ ರಾಷ್ಟ್ರಗಳಿಗೆ ಇನ್ನೂ ಹೆಚ್ಚಿನ ಸೈನ್ಯ ಸಂಗ್ರಹ ಬೇಕಾಗಿದೆಯೆಂಬುದು ಕೆನಡಾದ ಬಿಕ್ಕಟ್ಟಿನಿಂದ ತಿಳಿದುಬಂದಂತೆಯೇ ಜಾಪಾನರಿಗೂ ಅಂತಹ ಆವಶ್ಯಕತೆಯೊದಗಿದೆ ಎಂಬ ವಾರ್ತೆಯಿದೆ. ಜಾಪಾನರು ಬೋಂಬಿಸೆಯುವುದೇ ಮೊದಲಾದ ಯುದ್ಧ ಕಾರ್ಯಗಳಿಗಾಗಿ ಅಧಿಕ ಸಂಖ್ಯೆಯಲ್ಲಿ ಕೋತಿಗಳಿಗೆ ತರಬೇತಿ ಕೊಟ್ಟು ವಾನರಸೇನೆ ತಯಾರಿಸುತ್ತಿದ್ದಾರೆಂಬ ವಿಲಕ್ಷಣ ಹಾಗೂ ಕೌತುಕದಾಯೀ ವಾರ್ತೆ ಪ್ರಕಟವಾಗಿದೆ. ಅಧ್ಯಕ್ಷ ರುಸವೆಲ್ಟರು ತನ್ನೊಂದು ಹೇಳಿಕೆಯಲ್ಲಿ ಅಮೇರಿಕಕ್ಕೆ ಗುಂಡು ಮತ್ತು ಹಡಗುಗಳ ಕೊರತೆಯಿದೆ ಎಂದಿದ್ದಾರೆ. ಅಗತ್ಯವುಳ್ಳ ಶಸ್ತ್ರಗಳನ್ನು ಮುಖ್ಯವಾಗಿ ಅತಿಭಾರದ ಗುಂಡುಗಳು ಮತ್ತು ಸೈನಿಕ ಗಾಡಿಗಳನ್ನು ತಯಾರಿಸಲು ಹೆಚ್ಚಿನ ಕೆಲಸಗಾರರ ಆವಶ್ಯಕತೆಬಿದ್ದಿದೆ. ಅಮೇರಿಕನ್ ಫೆಡರೇಶನಿನ ಅಧ್ಯಕ್ಷರು ಈ ಉದ್ದೇಶದಿಂದಲೇ ಅಲ್ಲಿಯ ಐದು ದೊಡ್ಡ ಕೂಲಿಗಾರ ಸಂಘಗಳ ಪ್ರತಿನಿಧಿಗಳನ್ನಾಹ್ವಾನಿಸಿ ಸಮ್ಮೇಲನ ನೆರೆಯಿಸಿದ್ದಾರೆ. ಸೇಕಡಾ 40ರಷ್ಟು ಶಸ್ತ್ರಾಸ್ತ್ರಗಳ ಕೊರತೆ ಕಂಡುಬರುತ್ತಿದೆಯೆಂದೂ, ಕಡಿಮೆಯೆಂದರೆ 77000 ಕೆಲಸಗಾರರು ಕೂಡಲೇ ಬೇಕಾಗಿದ್ದಾರೆಂದೂ ತಿಳಿದುಬರುತ್ತದೆ. ಪಶ್ಚಿಮ ರಣರಂಗದ ಸರ್ವ ಸೇನಾನಿ ಜನರಲ್ ಐಸೆನೋವರರೂ ತನ್ನೊಂದು ಹೇಳಿಕೆಯಲ್ಲಿ ಈ ಕುರಿತು ಆವಸರದ ವಿನಂತಿಮಾಡಿಕೊಂಡಿದ್ದರು.

ನೋಟೀಸು

ಉಡ್ಪಿ ಡಿ. ಮು. ಕೋರ್ಟಿನಲ್ಲಿ

R E A. 271/44 in R E P 560/43 in os 410/42

ಕೃಷ್ಣದೇವರು ಹಂದೆ-ಅರ್ಜಿದಾರ (4ನೆ ಎದ್ರಿ)

ಮತ್ತು

1. ಸಾವಿತ್ರಿ ಅಂಮ- 2. ಬಾಗೀರತಿ ಅಂಮ- 3- ಯಾಕೋಬ್ ಸಾಹೇಬ 4- ಕೃಷ್ಣದೇವರು ಹಂದೆ 5- ಕರೀಮು ಸಾಹೇಬ—ಯೆದ್ರಿರು

ಯಿವರೊಳಗೆ

ಸದ್ರಿ ವೆವಹರಣೆಯಲ್ಲಿ 1ನೆ ವಾದಿಳು ಸಾವಿತ್ರಿ ಅಂಮಗೆ ಮೇಲ್ಕಂಡ ಸದ್ರಿ ಅರ್ಜಿ ವೆವಹರಣೆಗೆ ಕಾರಣವಾದ ಅಮಲ್ದಾರಿಯಲ್ಲಿ 1ನೆ ಎದ್ರಿಳ ಪಕ್ಕಿನ ಆಸ್ತಿ ಏಲಮಿನಲ್ಲಿ ಹುಟ್ಟಿ ಬಂದ ಆೃವಜಿನಲ್ಲಿ ಪೌಂಡೇಜು- ಪ- ಡಿಕ್ರಿ ಆೃವಜು ಕಳದು-ಡಿಪೋಜಿಟಿನಲ್ಲಿರುವ ಬಾಕಿಯಿರುವ ರೂಪಾಯಿ 156-8-5 ಸದಿ, 1ನೆ ವಾದಿಳು ಅರ್ಜಿದಾರಗೆ ತಾರೀಕು 9-7-40ರಲ್ಲಿ ರಜಿಸ್ಟ್ರಿ ಸಿಶಿಂ ಬರ್ಸಿಕೊಟ್ಟ ವೆವಸ್ಥಾ ಪತ್ರ ಮೇರೇಗೆ ಅರ್ಜಿದಾರನು ಪಡಿಯಲಿಕ್ಕೆ ಹಕ್ಕುದಾರನಾಗಿ ಆ ಮೇರೆಗೆ ಸದ್ರಿ ಆೃವಜು ತನಗೆ ಕೊಡಿಸಬೇಕಾಗಿ ಕೊಟ್ಟ ಸದ್ರಿ ಅರ್ಜಿ ತನ್ನಿಯು 1ನೆ ವಾದಿಳ ನೋಟೀಸಿನ ಬಗ್ಗೆ ತಾ 12-12-1934ಕ್ಕೆ ಯಿಟ್ಟಿರುವದ್ರಿಂದ ಆ ದಿವಸ 1ನೆ ವಾದಿಳು ಸ್ವತಹಾ ವ. ವಕೀಲರ ಮುಕಾಂತ್ರ ಆ ದಿವಸ 10 ಗಂಟೆಗೆ ಕೋರ್ಟಿಗೆ ಹಾಜ್ರಾಗಿ ಜಾಹೀಲು ಮಾಡಿಕೊಳ್ಳತಕ್ಕದ್ದು ಯಿಲ್ಲವಾದ್ರೆ ಸದ್ರಿ ಅರ್ಜಿಯು ಅವಳ ಗೈರಾಜ್ರಿಯಲ್ಲಿ ತೀರ್ಮಾನಿಸಲ್ಪಡುವದು.

P Padmanabha Rao B.A.B.L.

Vakil for Petitioner

ಉಡ್ಪಿ
ತಾ 28-11-44

ಜರ್ಮನ್ ಗಡಿಯ ಪ್ರಕೃತಿದತ್ತ ಹಾಗೂ ಸ್ವನಿರ್ಮಿತ ರಕ್ಷಣೆ!

ನಾಜಿಗಳು ಸಮಯ ದೂಡಿ ಸನ್ನಾಹ ಮಾಡುತಿದ್ದಾರೆ!

"ಯುದ್ಧದಲ್ಲಿ ಹಿಂದೆಂದಿಗೂ ನಮ್ಮನ್ನು ಪರೀಕ್ಷಿಸಿರದಷ್ಟು ಕಠಿಣವಾಗಿ ಕಳೆದ ಬೇಸಿಗೆ ಮತ್ತು ಮಳೆಗಾಲವು ನಮ್ಮನ್ನು ಪರೀಕ್ಷಿಸಿದೆ. ನಾವೀಗಲಾದರೂ ಪೂರ್ಣ ಪಾರಾಗಿದ್ದೇವೆಂದು ಇದರ ಅರ್ಥವಲ್ಲ. ತನ್ನ ಹೋರಾಟ ಯಂತ್ರವನ್ನು ಪುನಃ ರಭಸದಿಂದ ಚಾಲೂಮಾಡಲಾಗುವಂತೆ ಸರಿಪಡಿಸಿಕೊಳ್ಳಲು ಕಳೆದ ಮೂರು ತಿಂಗಳುಗಳು ಜರ್ಮನಿಗನುಕೂಲವಾಗಿ ದೊರೆತವು. ಹೀಗೆ ತಡವಾಗುತ್ತಾ ಹೋಗುವಪ್ರತಿಯೊಂದು ದಿನವೂ, ನಾವು ಹೊಸತಾಗಿ ಸಂಗ್ರಹಿಸಿರುವ ಸೇನೆಗಳನ್ನು ರಂಗಕ್ಕೆ ತರುವ ಅನುಕೂಲತೆಯನ್ನು ಹೆಚ್ಚಿಸುವದು ಮಿತ್ರರ ಆಕಾಶ ಧಾಳಿಯೊಂದು ಈ ದಿನ ನಮ್ಮ ಮುಂದಿರುವ ಕಠಿಣ ಸಮಸ್ಯೆಯೆಂಬುದು ನಿರ್ವಿವಾದ. ಈಗ ಜರ್ಮನ್ ಜನತೆಯ ಪಾಲಿಗೆ ಅತ್ಯುಗ್ರ ಹೋರಾಟ ಕೊಡುವದೊಂದೇ ಉಳಿದಿದೆ ಹೊರತು ಮತ್ತೊಂದು ಪಥವಿಲ್ಲ"—ಜರ್ಮನ್ ಪ್ರಚಾರ ಮಂತ್ರಿ ಕುಹಕಿ ಶಿರೋಮಣಿ ಡಾ! ಗೋಬೆಲ್ಸನಾಡಿರುವ ಈ ಮಾತುಗಳನ್ನೂ ಬಡಾಯಿಯೆಂದರಾಗದು. ಯುದ್ಧಸ್ಥಿತಿಯು ಇದಕ್ಕಿಂತ ಬಹಳ ಭಿನ್ನವಾಗಿಲ್ಲ.

ಪಶ್ಚಿಮ ರಂಗದಲ್ಲಿ

ಕಾಲವಿಳಂಬದಿಂದ ಮಿತ್ರರಿಗೆ ಹಾನಿ, ಜರ್ಮನರಿಗೆ ಹಿತವೆಂಬುದನ್ನು, ಮಿತ್ರಪಾಳಯದಲ್ಲಿದ್ದಿರುವ ಜನ, ಶಸ್ತ್ರಗಳ ಅಭಾವದ ಬೊಬ್ಬೆಯೂ ತಿಳಿಸುತ್ತದೆ. ಅಂತೆಯೇ ಎಲ್ಲಾ ಯುದ್ಧರಂಗಗಳಲ್ಲೂ ಜರ್ಮನರು ಅಪೂರ್ವ ಪ್ರತಿಭಟನೆಯೊಡ್ಡಿ ಸಮಯ ಸಂಪಾದನೆ ಮಾಡುತ್ತಿರುವದೂ ಕಾಣುತ್ತಿದೆ. ಮುಖ್ಯವಾಗಿ ಪಶ್ಚಿಮರಂಗದ ಜರ್ಮನ್ ಗಡಿಯಲ್ಲಿ ಪ್ರತಿಯೊಂದಿಂಚು ನೆಲವನ್ನೂ ರಕ್ತದಿಂದ ತೋಯಿಸಿಯೇ ಮಿತ್ರರು ಮುಂದೊತ್ತಬೇಕಾಗಿದೆ. ಡಚ್ ವಲಯದಿಂದಾರಂಭಿಸಿ ಸ್ವಿಸರ್ಲೇಂಡ್ ಗಡಿ ವರೆಗಿನ 500 ಮೈಲುದ್ದದ ರಣರಂಗದಲ್ಲಿ ಮಿತ್ರರ ಆರು ಸೇನೆಗಳು ಚರಿತ್ರಾಪೂರ್ವ ಅತಿ ಭೀಕರ ಹೋರಾಟದಲ್ಲಿ ನಿರತವಾಗಿವೆ. ಕಳೆದ ವಾರದಲ್ಲಿ ಅಲ್ಲಿಯ ಪ್ರಾಮುಖ್ಯ ನಗರಗಳಾದ ಬೆಲ್ಫೋರ್ಟ್, ಮುಲ್ಹೌಸ್, ಸ್ಟ್ರಾಸ್‌ಬೋರ್ಗ್, ಮೆಟ್ಸ್ ಮತ್ತು ಸರ್ರಿಬೋರೋಗಳು ಮಿತ್ರರ ವಶವಾಗಿರುವದು ನಿಜ. ಇಡೀ ರಂಗದ ಆ ತುದಿಯಿಂದ ಈ ತುದಿಯ ವರೆಗೂ ಜರ್ಮನರು ಸಾವಧಾನವಾಗಿ ಹಿಂದೊತ್ತಲ್ಪಡುತ್ತಿರುವದೂ ನಿಜ.

ಮಿತ್ರರ ಅನಾನುಕೂಲತೆ

ಜರ್ಮನರಿಗೆ ರಕ್ಷಣಾವಕಾಶ ದೊರೆಯದಂತೆ ಮಾಡಿ ಮುಂದೊತ್ತಬೇಕೆಂಬ ಹಂಚಿಕೆಯೊಡನೆ ಈ ಧಾಳೀ ಯೋಜನೆ ತಯಾರಾಗಿತ್ತು ಎಂದು ಜನರಲ್ ಈಸೆನೋವರರೆಸ್ಸುತ್ತಾರೆ. ಆದೇ ಸಮಯದಲ್ಲಿ ತಮ್ಮ ಅನಾನುಕೂಲತೆಗಳನ್ನೂ ಕಡೆಗಣಿಸಿದ್ದರೋ ಎಂಬ ಸಂದೇಹವಿದೆ. ಆಕ್ರಮಣಗಾರರಿಗೆ ಹವಾಮಾನವು ಅನುಕೂಲವಾಗಿರಬೇಕು. ಮಳೆಬಿಟ್ಟು ಛಳಿಯಾರಂಭವಾಗುತ್ತಿರುವ ಇಂದಿನ ಮಧ್ಯಾವಧಿಯು ಅಂತಹ ಅನುಕೂಲ ಕಾಲವಲ್ಲ. ಇಂತಹ ಅತಿದೊಡ್ಡ ಧಾಳಿಯಾರಂಭಿಸುವಾಗ ಅತಿಹೆಚ್ಚಿನ ಶಸ್ತ್ರೋಪಕರಣಗಳ ಸಂಗ್ರಹವಾಗಿ ಕೊಳ್ಳಬೇಕೆಂಬ ಮುಂಜಾಗ್ರತೆಯನ್ನೂ ಅವರು ವಹಿಸಿರಲಿಲ್ಲ. ಆದರೆ ಜರ್ಮನರ ಪ್ರತಿಭಟನೆಯ ತೀವ್ರತೆಯಿಂದಾಗಿ ಅಲ್ಲಿ ಸೇನೋಪಕರಣ ವ್ಯಯದಲ್ಲಿ ಮಿತಾಚರಣೆ ನಡೆಯಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಮಿತ್ರರ ಪ್ರಗತಿ ಸಾವಧಾನವಾಗುವದು ಸಹಜವೇ.

ಜರ್ಮನರ ಅನುಕೂಲತೆ.

ಇಲ್ಲಿ ಜರ್ಮನರಿಗಿರುವ ಪ್ರಕೃತಿದತ್ತ ಸೌಕರ್ಯಗಳಂತೂ ಅಜೇಯ. ಪಶ್ಚಿಮ ಗಡಿಯಲ್ಲಿ ಜರ್ಮನರು ಮುಖ್ಯ ಪ್ರತಿಭಟನೆ ಕೊಡುವದು ಅಲ್ಲಿಯ ವಿಶಾಲ ಹೊಳೆ ರ್ಹೈನ್ ದಡದಲ್ಲೆಂಬುದು ತಜ್ಞರಿತಿರುವ ಗುಟ್ಟು. ರ್ಹೈನನ್ನು ದಾಟಿ ಮುಂದೊತ್ತುವ ವರೆಗೂ ಮಿತ್ರರು ಜರ್ಮನಿ ನುಗ್ಗಿದರೆನ್ನಲಾಗುವದಿಲ್ಲ ಆ ಹೊಳೆಯೇ ಸ್ವಿಸ್ ಗಡಿಯಿಂದ ಹೊಲ್ಲೆಂಡು ಸರಹದ್ದಿನ ವರೆಗೂ ಜರ್ಮನ್ ಪ್ರವೇಶಕ್ಕೊಂದು ಪ್ರಬಲ ಪ್ರತಿಬಂಧ. ಅಂತೆಯೇ ಆ ಹೊಳೆಯ ವರೆಗೆ ಹೋಗಬೇಕಾದರೂ ಪ್ರಬಲಾತಂಕಗಳಾಗಿ ಬೇರೆರಡು ಹೊಳೆ ಮತ್ತು ದುರ್ಗಮ್ಯ ಪರ್ವತ ವಲಯಗಳಿವೆ. ಸಾಲದುದಕ್ಕೆ ಸಿಗ್‌ಫ್ರಿಡ್ ಕೋಟೆಯಿದೆ. ಮಿತ್ರರ ಆರು ಸೇನೆಗಳ ಪೈಕಿ ಐದು ಸೇನೆಗಳೀಗ ಈ ವಲಯದೊಳಗಡೆ ಕಾಲಿಟ್ಟು ಕಠಿಣ ಹೋರಾಟದಲ್ಲಿವೆ. ಇವಿಷ್ಟನ್ನೂ ದಾಟಿಕೊಂಡು ಮಿತ್ರ ಸೇನೆ ಮುಂದೆ ಬಂದರೂ ರ್ಹೈನ್ ಹೊಳೆಯನ್ನು ದಾಟಲು ಎಷ್ಟಕ್ಕೂ ಬಿಡಬಾರದೆಂದು ಜರ್ಮನರ ನಿರ್ಧಾರವಿದೆ. ಆದರೆ ಆಧುನಿಕ ಯುದ್ಧ ಯಂತ್ರಕ್ಕೆ ಈ ತಡೆಗಳು ಇದಿರಲ್ಲವೆಂದೂ ಮಿತ್ರಸೇನೆಯ ಒತ್ತದದಿದಿರು ರ್ಹೈನ್ ಹೊಳೆಯ 25 ಸಂಕಗಳನ್ನು ರಕ್ಷಿಸಿಕೊಳ್ಳುವದು ಜರ್ಮನರಿಗಸಾಧ್ಯವಾಗಬಹುದೆಂದೂ ಆಶಿಸಲಾಗಿದೆ

ರಶ್ಯದ ದಿಕ್ಕಿನಲ್ಲಿ.

ಕೆಂಪು ಸೇನೆಯು ಈಗ ಸುಮಾರು 52 ಡಿವಿಜನ್ ಸೇನೆಗಳನ್ನು ತನ್ನ ಉತ್ತರಗಡೆಯ ರಂಗಗಳಲ್ಲಿ ಯುದ್ಧಕ್ಕೆ ಹೋರಾಡುತ್ತಿದೆ ಸ್ಟಾಲಿನರು ಛಳಿಗಾಲದ ಮಹಾಧಾಳಿಯನ್ನು ಹೂಡುವ ಸನ್ನಾಹಮಾಡಿದ್ದು ಅದು ಯಾವ ಕ್ಷಣದಲ್ಲಾದರೂ ಆರಂಭವಾಗಬಹುದೆಂದು ನಿರೀಕ್ಷೆ ಸದ್ಯ ಪೂರ್ವ ರಂಗಗಳಲ್ಲಿ ವಿಶೇಷ ಚಟುವಟಿಕೆ ಕಂಡುಬರುತ್ತಿದೆ ರಶ್ಯನರು ಪ್ರಥಮತಃ ಬಾಲ್ಟಿಕ್ ರಾಷ್ಟ್ರಗಳ ಮೇಲೆ ಬೀಳಬಹುದೆಂದು ನಂಬಲಾಗಿದೆ. ಅಲ್ಲಿ ಜರ್ಮನರ ಸುಮಾರು 30 ಡಿವಿಜನ್ ಸೇನೆಗಳು [illegible] ಸುತ್ತುಗಟ್ಟಲ್ಪಟ್ಟಂತಾಗಿ ಇನ್ನೂ ಉಳಿದಿವೆ ಪ್ರಕೃತ ಹಂಗೇರಿಯಲ್ಲಿ ಪ್ರಧಾನ ಪಟ್ಟಣ ಬುಡಾಪೆಸ್ಟಿನ ಸುತ್ತುವಲಯದ ನಗರಗಳಲ್ಲಿ ಒಂದೊಂದನ್ನೇ ಆಕ್ರಮಿಸಿಕೊಳ್ಳುವುದರಲ್ಲಿ ಕೆಂಪು ಸೇನೆ ನಿರತವಾಗಿದೆ ಇಟಲಿ ಯುದ್ಧದಲ್ಲಿ ಗಣನೀಯ ವಾರ್ತೆಯೇನೂ ಇಲ್ಲ

ಜಾಪಾನಿನ ಮೇಲೆ

ಕಳೆದವಾರ ನಡೆದ ವಿಮಾನ ಧಾಳಿಯು ಗಣ್ಯವಾದುದು ಸೈಪಾನ್ ನಿಲ್ದಾಣದಿಂದ ಹೊರಟ 70 ಕೊತ್ತಳ ವಿಮಾನಗಳು ಜಪಾನರ ಪ್ರಧಾನ ಪಟ್ಟಣ ಟೋಕಿಯೋದ ಮೇಲೆ ಧಾಳಿಯಿಟ್ಟು ಪ್ರಾಮುಖ್ಯ ಉಪಕರಣ ತಯಾರಿ ಕೇಂದ್ರಗಳ ಮೇಲೆ ಅಗ್ನಿವರ್ಷ ಸುರಿಸಿ ಬಂದಿವೆ. ಕಳೆದ ವಾರಾದಿಯಲ್ಲಿ ಜಾಪಾನಿನ ವಿಮಾನ ತಯಾರಿ ಕೇಂದ್ರ ಕ್ಯೂಶುವಿನ ಮೇಲೂ ಆಕಾಶ ಧಾಳಿ ನಡೆಸಲಾಗಿತ್ತು. ಇಂತಹ ಧಾಳಿಗಳು ಇನ್ನು ಮೇಲಿಂದ ಮೇಲೆ ನಡೆಯುವ ಸಂಭವವಿದೆ. ಫಿಲಿಪ್ಪಾಯಿನ್ಸಿನ ಲೈಟಿ ದ್ವೀಪದಲ್ಲಿ ಬಲವಾಗಿ ಹೊಡೆತ ತಿನ್ನುತ್ತಿರುವ ತಮ್ಮ ಸೇನೆಗಳಿಗೆ ಸರಬರಾಯಿ ಕೊಂಡೊಯ್ಯುತ್ತಿದ್ದ ಜಾಪಾನೀ ಹಡಗದಳವನ್ನು ಅಮೇರಿಕನ್ ವಿಮಾನ ಹಾಗೂ ಸಬ್‌ಮೇರಿನ್‌ಗಳು ಧಾಳಿಯಿಟ್ಟು ಅನಾಹುತಕ್ಕೀಡುಮಾಡಿವೆ.

ಬರ್ಮಾ—ಚೀನಾ

ಬರ್ಮದಲ್ಲಿ ಉತ್ತರಗಡೆಯಿಂದ ಚೀನೀ ಸೇನೆಗಳು, ಬರ್ಮಾ ರಸ್ತೆ ತೆರೆಯುವ ಹೆಬ್ಬಾಗಿಲಂತಿರುವ ಭಾಮೋ ನಗರವನ್ನು ಪ್ರವೇಶಿಸಿರುವದೊಂದು ಅತಿ ದೊಡ್ಡ ಲಾಭ. ದಕ್ಷಿಣ ಕಡೆಯಲ್ಲಿ 14ನೇ ಸೇನೆಯೂ ನಿಧಾನವಾಗಿ ಮುಂದೊತ್ತುತ್ತಿದೆ. ಚೀನದ ದುರವಸ್ಥೆಯು ಸುಧಾರಿಸಿಲ್ಲ. ದಕ್ಷಿಣ ಚೈನವೀಗ ಸಂಪೂರ್ಣವಾಗಿ ಜಪಾನರ ಹತೋಟಿಗೆ ಒಳದಾಂತಿದೆ. ಚೈನವೀಗ ಎರಡು ತುಂಡಾಗಿದೆ. ಅಮೂಲ್ಯವಾದ ಕರಾವಳಿ ಹಾಗೂ ಅಲ್ಲಿನ ಉಪಯುಕ್ತ ನಿಲ್ದಾಣಗಳೆಲ್ಲಾ ಜಾಪಾನರಿಗೆ ದೊರೆತಿವೆ ಮಂಚೂರಿಯದಿಂದ ಹಾಂಗ್‌ಕಾಂಗಿನ ವರೆಗೆ ಈಗ ನೆಲ ಸಂಬಂಧವಾಯಿತು ಜಪಾನರಿಗತ್ಯನುಕೂಲ. ಜಪಾನರೀಗ ದಕ್ಷಿಣ ಚೀನದಲ್ಲಿ ವಿಶೇಷ ಸರಬರಾಯಿ ಪಡಿಸಿಕೊಂಡು ಚೀನವನ್ನು ಪೂರ್ಣ ಸ್ವಾಧೀನ ಮಾಡುವ ಕೊನೆಯ ಮಹಾ ಧಾಳಿಗನುವಾಗುತಿದ್ದಾರೆ.

ಬ್ರಿಟನಿನ ಶ್ವೇತಪತ್ರ

ಇದೇ ತಾ 28ರಲ್ಲಿ ಬ್ರಿಟಿಷ್ ಪ್ರಧಾನಿಗಳು ಒಂದು ಶ್ವೇತ ಪತ್ರವನ್ನು ಕಾಮನ್ಸ್ ಸಭೆಯ ಮುಂದೆ ಪ್ರಕಟಿಸಿದ್ದಾರೆ ಕಳೆದ ಐದು ವರುಷಗಳಲ್ಲಿ ವಿವಿಧ ವಿಭಾಗಗಳಲ್ಲಿ ಯುದ್ಧ ಕಾರ್ಯಕ್ಕೆ ಸೇರಿ ನೆರವಾದವರ ಸಂಖ್ಯೆ, ಸಂಚಾರ ಸರಬರಾಯಿ ವ್ಯವಸ್ಥೆ, ವಿಮಾನ, ಹಡಗ ಮದ್ದುಗುಂಡು ಶಸ್ತ್ರೋ[illegible]ಗಳ ತಪಶೀಲುಗಳೆಲ್ಲಾ ಆ ಶ್ವೇತ ಪತ್ರದಲ್ಲಿವೆ

ಕೆಸ್ಸರ್‌ಲಿಂಗನ ಮರಣ?

ಇಟಲಿಯಲ್ಲಿ ಜರ್ಮನರ ಸರ್ವಸೇನಾನಿಯಾಗಿದ್ದ ಕೆಸ್ಸರ್‌ಲಿಂಗನು ಬೋಂಬು ಬಿದ್ದು ಜಖಂಗೊಂಡು ಕೊನೆಗೆ ಮಡಿದನೆಂದು ವಾರ್ತೆಯಿದೆ. ಇದು ನಿಜವಾದರೆ ಹಿಟ್ಲರನು ತನ್ನ ಸೇನೆಯ ಎರಡು ಆಧಾರ ಸ್ತಂಭಗಳನ್ನು ಕಳೆದುಕೊಂಡಂತಾಯಿತು. ಮೊದಲನೆಯದು ರೋಮೆಲ್; ಎರಡನೇ ಕೆಸ್ಸರ್‌ಲಿಂಗ್. ಇಟಲಿಯಲ್ಲಿ ಮಿತ್ರಸ್ಥಾಪಿತ ಸರಕಾರದ ಪಕ್ಷಗಳೊಳಗೆ ತೀವ್ರ ಭಿನ್ನಾಭಿಪ್ರಾಯವೆದ್ದು, ಬಲಪಕ್ಷ ಎಡಪಕ್ಷಗಳೊಳಗೆ ತಿಕ್ಕಾಟ ನಡೆದಿದೆ. ಮುಸಲಿನಿಯಂತೂ ತನ್ನ ಸ್ವಂತ ಸೇನೆಯಲ್ಲೇ ತನಗಾಗದವರು ಸೇರಿಕೊಂಡಿದ್ದರೆಂದು ಅದನ್ನು ಬರ್ಖಾಸ್ತು ಪಡಿಸಿಕೊಂಡಿದ್ದಾನೆ.

ಒಳಗೊಂದಲಗಳು

ಲಂಡನಲ್ಲಿನಿರುವ ಪೋಲೆಂಡ್ ಸರಕಾರದ ಪ್ರಧಾನಮಂತ್ರಿ, ಮತ್ತು ಇತರ ಪಕ್ಷಗಳೊಳಗೆ ರಶ್ಯಾ—ಪೋಲೆಂಡ್ ಸಂಬಂಧದಲ್ಲಿ ವೈಷಮ್ಯ ಹುಟ್ಟಿ ಪ್ರಧಾನಮಂತ್ರಿ ರಾಜೀನಾಮೆಯಿತ್ತಿದ್ದಾನೆ

ಬಾಡಿಗೆಗೆ ದೊರಕುತ್ತವೆ.

ಹೊಸ ಉಡುಪುಗಳು ಹೊಸ ಪರದೆಗಳು

ಹೊಸ ಇತರ ಉಪಕರಣಗಳು

ಶಾಲಾಮಕ್ಕಳ ಮತ್ತು ಎಮೆಚೂರ್ಸ್ ನಾಟಕ ಕಥಾಭಾಗದಲ್ಲಿ ಬರಬಹುದಾದ ವಿವಿಧ ಭೂಮಿಕೆಗಳಿಗನುಕೂಲವಾದ ಎಲ್ಲಾ ತರದ ಪರದೆ ಉಡುಪು ಸಹಿತ ಉಪಕರಣಗಳು ಬಹಳೇ ಕಡಿಮೆ ಬಾಡಿಗೆಗೆ ದೊರಕುತ್ತವೆ. ಅಗತ್ಯವಿದ್ದಲ್ಲಿ ಪಾಡರ್ ಕೆಲಸವನ್ನು ಸಹ ಮಾಡಿ ಕೊಡಲಾಗುವುದು. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ಎಂಟು ದಿವಸಗಳ ಮುಂಚಿತವಾಗಿ ಬರೆದುಕೊಳ್ಳುವುದು.

B Budan Basha Saheb,
P. V I., B H. E. Boys School, Barkur,
P. O. Barkur.

ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್, ಉಡ್ಪಿ.

ತಾ. **29—11—44** ರಿಂದ

ಮೋಹನ ಚಿತ್ರಪಟ—

ನಯಾ ಜಮಾನಾ

ಅನಂತರ

ಪೃಥ್ವಿರಾಜ್ ಬಿ. ಎ. ಮತ್ತು ರೂಪರಾಣಿ ನಾಸೀಮ್

ಅಭಿನೀತ

ಉಜಾಲಾ

ನೆನಪಿರಲಿ

28—12—44 ರಿಂದ

ಬೊಂಬ್ಯಾಟಾಕೀಸ್ ಚಿತ್ರ ಕಿಸ್ಮತ್

ಈಗ ತಾನ ಹೊರಬಿದ್ದಿದೆ! ದೊಡ್ಡ ಆಕಾರದ ಹೊಸ ನಿಘಂಟು!!

ಇದುವರೆಗೆ ಕರ್ನಾಟಕದಲ್ಲಿ ಪ್ರಕಟವಾಗಿರುವ ಎಲ್ಲ ಇಂಗ್ಲೀಷ್ ಇಂಗ್ಲೀಷ್ ಕನ್ನಡ ನಿಘಂಟುಗಳಿಗಿಂತ ಮಿಗಿಲಾದ್ದೆನಿಸಿ,
ಸುಪ್ರಸಿದ್ಧ 'ಅಕ್ಸ್‌ಫರ್ಡ್' 'ಚೆಂಬರ್ಸ್' ಡಿಕ್ಶನರಿ ಕ್ರಮದಲ್ಲಿ ರಚಿತವಾದ

ಶ್ರೀ. ಡಿ. ಕೆ. ಭಾರದ್ವಾಜರ ಇಂಗ್ಲಿಷ್-ಇಂಗ್ಲಿಷ್-ಕನ್ನಡ ಸ್ಟಾಂಡರ್ಡ್ ಡಿಕ್ಶನರಿ

ದಕ್ಷಿಣ ಕನ್ನಡ ಮತ್ತು ಕೊಡಗು ಸೀಮೆಗಳ ಸೋಲ್ ಏಜಂಟರು - ಎಲ್ಲಾ ಪುಸ್ತಕ ವ್ಯಾಪಾರಿಗಳಲ್ಲಿ ಸಿಕ್ಕುವುದು

SCHOOL BOOK Co., MANGALORE. ಸ್ಕೂಲ್ ಬುಕ್ ಕಂಪೆನಿ, ಮಂಗಳೂರು.

ಮಂಗಳೂರು

ಜಟ್ಕಾ ಬಾಡಿಗೆ ನಿರ್ಣಯ— ಮಂಗಳೂರಲ್ಲಿ ಕಳೆದೆರಡು ವರ್ಷಗಳಿಂದ ಜಟ್ಕಾ ಬಾಡಿಗೆ ವಿಪರೀತವಾಗಿದ್ದು, ಬೇರೆ ನಗರಗಳಲ್ಲಿನ ಇಂತಹ ಬಂಡಿಗಳ ಬಾಡಿಗೆಗಿಂತ ಎಷ್ಟೋ ಪಾಲು ಹೆಚ್ಚಿತ್ತು. ಮಂಗಳೂರು ಮುನಿಸಿಪಾಲಿಟಿಯೊಳಗಿನ ಜಟ್ಕಾ ಬಂಡಿಗಳ ಬಾಡಿಗೆಯನ್ನು ಈಗ ಇದೇ ತಿಂಗಳಿಂದ ನಿಯಂತ್ರಿಸಿದವರು 1934ರಲ್ಲಿ ನಿರ್ಣಯವಾಗಿದ್ದ ಜಟ್ಕಾ ಬಾಡಿಗೆಯೆಷ್ಟೋ ಅದಕ್ಕೆ ಈಗ ಸೇಕಡಾ 50ರಷ್ಟು ಬಾಡಿಗೆ ಕೂಡಿಸಿ ಪಡೆಯಬೇಕು (1934ರಲ್ಲಿ ಒಂದು ನಿರ್ದಿಷ್ಟ ಸ್ಥಳದಿಂದ ಇನ್ನೊಂದಕ್ಕೆ 0-4 0 ಎಂದು ಇದ್ದ ಈಗ 0 2 0 ಕೂಡಿಸಿ, ಆರಾಣೆ ಪಡೆಯಬಹುದು) ಬಾಡಿಗೆ ಕಾಣಿಸುವ ಪಟ್ಟಿಗಳನ್ನು ಜಟ್ಕಾಗಳಲ್ಲಿ ಅಂಟಿಸಲಾಗಿದೆ ಈ ಬಾಡಿಗೆಗಿಂತ ಹೆಚ್ಚು ಪಡೆದವರು ದಂಡನಾರ್ಹರು

ಜಿಲ್ಲಾ ಬೋರ್ಡು ಸಭೆಯು ತಾ. 28ರಲ್ಲು ಶ್ರೀ ಎ ಲಕ್ಷ್ಮೀನಾರಾಯಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು 1944-45 ನೆ ವರುಷದ ತಿದ್ದಿದ ಬಜೆಟ್ ಮತ್ತು 1945 46ನೆ ವರುಷದ ಅಂದಾಜು ಆದಾಯ ವೆಚ್ಚಗಳ ಪಟ್ಟಿಯು ಕೆಲವು ತಿದ್ದುಪಡಿಗಳೊಂದಿಗೆ ಮಂಜೂರಾಯಿತು

ಉಡುಪಿ

ಪರ್ಯಾಯದ ಪೂರ್ವಸಿದ್ಧತೆ— ಉಡುಪಿಯ ಶ್ರೀ ಶೀರೂರು ಮಠದ ಶ್ರೀ ಲಕ್ಷ್ಮೀಂದ್ರ ತೀರ್ಥ ಶ್ರೀಪಾದಂಗಳವರು ಮುಂಬರುವ ತಮ್ಮ ಪರ್ಯಾಯದ ಪೂರ್ವಸಿದ್ಧತೆಯಾಗಿ ಮೊನ್ನೆ 'ಬಾಳೆ ಮುಹೂರ್ತ'ವನ್ನು ವಿಶೇಷ ವೈಭವದಿಂದ ನಡೆಸಿದರು. ಈ ಸಮಾರಂಭಕ್ಕೆ ವಾಡಿಕೆಯಂತೆ ಪರ್ಯಾಯ ಪೀಠದ ಕಡೆಯಿಂದ ಬಿರುದಾವಳಿಗಳು ಬಾರದ್ದರಿಂದ ಶ್ರೀ ಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರು ತಮ್ಮ ಶ್ರೀ ಪರ್ಯಾಯ ಬಿರುದಾವಳಿಗಳನ್ನಿತ್ತು ಉತ್ಸವವನ್ನು ನೆರವೇರಿಸುವುದರಲ್ಲಿ ಸಹಕರಿಸಿದರೆಂದು ಬಲ್ಲೆವು.

ನಿಧನ:—ಉಡುಪಿಯ ಕ್ರಿಶ್ಚನ್ ಹೈಸ್ಕೂಲಿನಲ್ಲಿ ಹಲವು ವರ್ಷಗಳ ವರೆಗೆ ಗಣಿತಾಧ್ಯಾಪಕರಾಗಿದ್ದು, ೧೯೩೩ರಲ್ಲಿ ನಿವೃತ್ತರಾದ ಶ್ರೀ ಉರ್ವ ಶ್ರೀನಿವಾಸರಾವ್, ಬಿ. ಎ. ಎಲ್. ಟಿ ಅವರು ಇದೇ ನವಂಬರ ತಾ ೨೩ ಗುರುವಾರ ಅಪರಾಹ್ನ ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರು ಸುಮಾರು ೬೦ ವರ್ಷದ ಮುದುಕರಾಗಿದ್ದು ವೃದ್ಧಾಪ್ಯದ ಜ್ವರದಿಂದ ಹಾಸಿಗೆ ಹಿಡಿದ ಮೂರು ದಿನಗಳಲ್ಲೇ ಗತಿಸಿ ಹೋದರು. ಅವರು ಗಣಿತ ಶಿಕ್ಷಣದಲ್ಲಿ ನಿಪುಣರೆಂದು ಪ್ರಸಿದ್ಧಿ ಹೊಂದಿದ್ದು, ತಮ್ಮ ಸರಳ ಜೀವನ, ನಡೆ, ನುಡಿಗಳಿಂದ ವಿದ್ಯಾರ್ಥಿಗಳೆಲ್ಲರ ಹಾಗೂ ಪುರಜನರ ಪ್ರೀತಿಗೆ ಪಾತ್ರರಾಗಿದ್ದರು. ಮೃತರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನೀಯಲಿ

ಕುಂದಾಪುರ ಡಿವಿಜನಲ್ ವಾರ್ ಕಮಿಟಿಯ ಸಭೆಯು—ಇದೇ ತಾ 22ರಲ್ಲು ಉಡುಪಿ ಮೊಕ್ಕಾಮಿನಲ್ಲಿ ಸಬ್ ಕಲೆಕ್ಟರ್ ಡಿ ಜಿ ಸಾಠೆಯವರ ಅಧ್ಯಕ್ಷತೆಯಲಿ ಜರಗಿತು ಕುಂದಾಪುರ, ಉಡುಪಿ ಕಾರ್ಕಳ ಕಮಿಟಿಗಳು ಯುದ್ಧ ಪ್ರಯತ್ನದಲ್ಲಿ ಮಾಡಿದ ವರದಿ ವಿಮರ್ಶಿಸಲಾಯಿತ ಡಿಸೆಂಬರ ತಾ 16ರಲ್ಲು ಯುದ್ಧ ನಿಧಿ ಮತ್ತು ರೆಡ್‌ಕ್ರಾಸ್ ಸಹಾಯಾರ್ಥವಾಗಿ ಉಡುಪಿ ಕಮಿಟಿಯ ನೇತೃತ್ವದಲ್ಲಿ ಜರಗತಕ್ಕ ನಾಟಕ ಮತ್ತು ಇತರ ವಿನೋದಾವಳಿಗಳ ಯೋಜನೆಯನ್ನು ಪುಷ್ಟೀಕರಿಸಲಾಯಿತು ಮತ್ತು ಟಿಕೇಟು ಮಾರಾಟದ ಕಾರ್ಯದಲ್ಲಿ ಜಂಬಲವನ್ನೀಯಬೇಕೆಂದು ನಿರ್ಧಾರವಾಯಿತು. ಡಿಸಂಬರ ತಾ 15ರಲ್ಲು ಶಿರ್ವ ಸಂಟರಿನಲ್ಲಿ Soldiers Depot ತೆರೆಯಬೇಕಾಗಿಯೂ ಅದೇ ದಿನ ಸಂಜೆ ಕಲ್ಯಾಣಪುರ ಕೇಂದ್ರದಲ್ಲಿ Soldiers Day ಆಚರಿಸಬೇಕಾಗಿಯೂ ನಿರ್ಣಯವಾಯಿತು, ಇವೆರಡ ಸಮಾರಂಭಗಳ ಅಧ್ಯಕ್ಷತೆಯನ್ನು ವಹಿಸಲು ಜಿಲ್ಲಾ ಕಲೆಕ್ಟರನು ವಿನಂತಿಸಬೇಕೆಂದಾಯಿತು

ತಾಲೂಕು ವಾರ್ ಕಮಿಟಿಯ ಸಭೆಯು—ತಾ 23ರಲ್ಲು ಸಂಜೆ ಮಿ| ಡಿ. ನೊರೊನ್ಹಾ, ಡಿಸ್ಟ್ರಿಕ್ಟ್ ಮುನ್ಸಿಫ್ ಅವರ ಅಧ್ಯಕ್ಷತೆಯಲ್ಲಿ ಜರಗಿತು ಕಲ್ಯಾಣಪುರದಲ್ಲಿ ಆಚರಿಸಲಿರುವ Soldiers Day ಸಮಾರಂಭದ ಊಟ ಉಪಚಾರಾದಿಗಳ ವಿಷಯದಲ್ಲಿ ಶ್ರೀ ಶೀರೂರು ಮಠದ ಶ್ರೀ ಲಕ್ಷ್ಮೀಂದ್ರತೀರ್ಥ ಸ್ವಾಮಿಗಳವರು ವಹಿಸುವಂತೆ ಅವರನ್ನು ಪ್ರಾರ್ಥಿಸಲಾಯಿತು,

ಸ್ಥಳೀಯ ಡಾಕ್ಟರರ ಸಭೆಯು—ತಾ, 27ರಲ್ಲು ಸರಕಾರೀ ಆಸ್ಪತ್ರೆಯಲ್ಲಿ ಡಾ| ಪಿ ಜಿ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು ಕೆಪ್ಟನ್ ಪಂಡಿತ್, ಡಾ| ವೆಂಕಪ್ಪ ಮತ್ತು ಡಾ| ಸುಂದರಂ ಅವರು ಮಿಲಿಟರಿ ಸೇವೆಗೆ ಡಾಕ್ಟರರು ಸೇರಿ ಯುದ್ಧ ಪ್ರಯತ್ನಕ್ಕೆ ನೆರವಾಗಬೇಕಾಗಿ ಭಾಷಣಗಳನ್ನಿತ್ತರು. ಸರಕಾರೀ ಆಸ್ಪತ್ರೆಯ ಡಾಕ್ಟರ ನಾರಾಯಣನ್‌ರವರು ಟೀ ಪಾರ್ಟಿಯನ್ನಿತ್ತು ವಂದನೆ ವಾದಗಳನ್ನರ್ಪಿಸಿದರು

ಮಿಲಾಗ್ರಿಸ್ ಹೈಸ್ಕೂಲ್ ಡೇ ಸಮಾರಂಭವು—ಕಳೆದ ಶುಕ್ರವಾರ ಸಂಜೆ ಮಿ| ಡಿ| ನೊರೊನ್ಹಾ, ಡಿ ಮುನ್ಸಿಫ್ ಉಡುಪಿ ಅವರ ಅಧ್ಯಕ್ಷತೆಯಲ್ಲಿ ಜರಗಿತು.

ಜಾಸ್ತಿ ಪೋಸ್ಟಾಫೀಸುಗಳ ಆವಶ್ಯಕತೆ—ಜಿಲ್ಲೆಯಲ್ಲಿ ಎರಡನೆಯದಾದ ಉಡುಪಿ ಮುನಿಸಿಪಲ್ ವ್ಯವಹಾರ ಕ್ಷೇತ್ರದಲ್ಲಿ ಒಂದೇ ಒಂದು ಪೋಸ್ಟಾಫೀಸು ಇರುವುದರಿಂದ ನಾಗರಿಕರಿಗೆ ತುಂಬಾ ತೊಂದರೆಯಾಗಿದ್ದರೂ ಆ ವಿಷಯದಲ್ಲಿ ಜನರು ಈ ತನಕ ಚಳವಳ ಹೂಡದಿದ್ದುದೂ ಇಲಾಖೆಯವರು ಸಹ ಜನಹಿತ ಹಾಗೂ ವಹಿವಾಟಿನ ದೃಷ್ಟಿಯಿಂದಲಾದರೂ ಜಾಸ್ತಿ ಪೋಸ್ಟಾಫೀಸುಗಳ ವ್ಯವಸ್ಥೆ ಮಾಡದಿದ್ದುದೂ ಆಶ್ಚರ್ಯ ಮಂಗಳೂರಲ್ಲಿ ನಾಲ್ಕು, ಕುಂದಾಪುರ ಕಾರ್ಕಳಗಳಲ್ಲಿ ಎರಡೆರಡು ಪೋಸ್ಟಾಫೀಸುಗಳಿರುವಂತೆ ಉಡುಪಿಗೂ ಜಾಸ್ತಿ ಪೋಸ್ಟಾಫೀಸುಗಳು ಅತ್ಯಾವಶ್ಯಕವೆಂಬುದಕ್ಕೆ ಮಹಾಜನರೂ ಇಲಾಖೆಯವರೂ ತೀವ್ರ ನಿಗಾ ಕೊಡಬೇಕಾಗಿದೆ

ಕಾರ್ಕಳ—ಸ್ಥಳೀಯ ಬೋರ್ಡ ಹೈಸ್ಕೂಲಿನ ಕ್ರಿಕೆಟ್ ಟೀಮಿನವರು ಉಡುಪಿಯ ಕ್ರಿಕೆಟ್ ಟೀಮಿನವರೊಡನೆ ಆಟವಾಡಿ ಈ ಬಾರಿ ಗೆದ್ದು, ಕಪ್ ಪಡೆದಿರುವರು ಈ ಸಂಸ್ಥೆಯ ಹಳೇ ವಿದ್ಯಾರ್ಥಿ ಶ್ರೀ ಸಾಂತಯ್ಯ ದೇವಪ್ಪ ಶೆಟ್ಟಿಯವರ ಪುತ್ರಿ ಶ್ರೀಮತಿ ... ಬಾಯಿಯನ್ನು ವಿವಾಹವಾದ ... ಹೊರವಣಿಗೆ ಕೂಡಾ ಇತ್ತು ಶ್ರೀ ರಂಜಾಳ ವಾಸುದೇವ ಶೆಣೈಯವರು, ಶ್ರೀ ಕೆ ಬಿ. ಗೋಪಾಲಕೃಷ್ಣ ಶೆಣೈಯವರಲ್ಲಿ ಪುರ ಪ್ರಮುಖರಿಗೆ 'ಟೀಪಾರ್ಟಿ' ಸತ್ಕಾರ ಕೊಟ್ಟಿದ್ದು, ಶ್ರೀ ಕೆ ರಾಘವೇಂದ್ರ ರಾಯರವರು ವಧೂವರರನ್ನು ಆಶೀರ್ವದಿಸಿ ಭಾಷಣ ಕೊಟ್ಟಿರುವರು,

ಮೂಲ್ಕಿ—ಮಂಗಳೂರು ತಾಲೂಕು ಅತಿಕಾರಿಬೆಟ್ಟು ಗ್ರಾಮದ "ಮೈಲೊಟ್ಟು" ಎಂಬಲ್ಲಿ ಇದೇ ಬರುವ ತಾ 4-12-44ನೇ ಸೋಮವಾರ ಅಪರಾಹ್ನ ಘಂಟೆ 4ಕ್ಕೆ ಹೊಸ ಸಂತೆಯು ತೆರೆಯಲ್ಪಡುವುದು. ಈ ಸಮಾರಂಭಕ್ಕೆ ಸರ್ವರೂ ಬರಬೇಕಾಗಿಯೂ ಮುಂದೆ ಪ್ರತಿ ಸೋಮವಾರ ನಡೆಯುವ ಸಂತೆಗೆ ಸರ್ವರೂ ಪ್ರೋತ್ಸಾಹಿಸಬೇಕಾಗಿಯೂ ಶ್ರೀ ಯಂ ಏ ಶೆಟ್ಟಿಯವರು ವಿನಂತಿಸುತ್ತಾರೆ

ಕುಂದಾಪುರ—ಶ್ರೀ ಗುರುನಾರಾಯಣ ಬ್ಯಾಂಕಿನ ಶಾಖೆಯು ತಾ 18ರಲ್ಲಿ ತೆರೆಯಲ್ಪಟ್ಟ ಸುದ್ದಿ ಕಳೆದ ಸಂಚಿಕೆಯಲ್ಲಿ ಪ್ರಕಟವಾಗಿದೆ ಪ್ರಾರಂಭೋತ್ಸವದ ವೇಳೆ ಬ್ಯಾಂಕಿನ ಮೆನೇಜಿಂಗ್ ಡೈರೆಕ್ಟರ್ ಶ್ರೀ ಮಂಗಳೂರು ಜಾರಪ್ಪನವರಿಂದ ವರದಿ ವಾಚನವಾದೊಡನೆ, ಇಲ್ಲಿಯ ರೆವರೆಂಡ್ ಫಾದರ್ ಕುಲಾಸರವರೂ, ಮುನ್ಸಿಫ್ ಜನಾಬ್ ಅಬ್ದುಲ್ ರಹಿಮಾನರೂ, ವಕೀಲ್ ಶ್ರೀ ಕೆ ರಘುನಾಥ ಶೆಣೈಯವರೂ, ತಹಶಿಲ್ದಾರ್ ಬಿ. ಗಣೇಶನವರೂ, ಡಿಸ್ಟ್ರಿಕ್ಟ್ ಬೋರ್ಡ್ ಮೆಂಬರ್ ಶ್ರೀ. ಯು.ಬಿ ಸರ್ವೋತ್ತಮ ಪೈಯವರೂ ಭಾಷಣಗಳನ್ನಿತ್ತಿದ್ದರು ಬ್ಯಾಂಕಿನ ಎಸ್ಟೇಟ್ ಸುಪರಿಂಟೆಂಡ್ ಶ್ರೀ. ಬಿ ನರ್ಸಪ್ಪನವರು ಧನ್ಯವಾದಗಳನ್ನರ್ಪಿಸಿದರು

ಧರ್ಮಸ್ಥಳ—ಇದೇ ತಾ 14 ಮತ್ತು 15ರಲ್ಲು ಶ್ರೀ ಧರ್ಮಸ್ಥಳ ಕ್ಷೇತ್ರದಲ್ಲಿ ಹನ್ನೆರಡನೇ ಧರ್ಮಸಮ್ಮೇಳನವು ಮೊದಲನೇ ದಿವಸ ಮೈಸೂರಿನ ಆಸ್ಥಾನ ಮಹಾ ವಿದ್ವಾನ್ ಶ್ರೀ ಎ ಶಾಂತಿರಾಜ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲೂ ಎರಡನೇ ದಿವಸ ಮೈಸೂರಿನ ರಾಜಸೇವಾಪ್ರಸಕ್ತ ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರ ಅಧ್ಯಕ್ಷತೆಯಲ್ಲೂ ಬಹು ವಿಜೃಂಭಣೆಯಾಗಿ ನಡೆಯಿತು. ಮೊದಲನೇ ದಿವಸ "ನೂತನ ಹಾಗೂ ಪುರಾತನ ವಿದ್ಯಾಭ್ಯಾಸದ ಗುಣದೋಷ ವಿಚಾರ" ಎಂಬ ವಿಷಯವೂ ಎರಡನೇ ದಿವಸ "ಕನ್ನಡವು ಧರ್ಮದ ಬೆಳವಣಿಗೆಗೆ ಮಾಡಿದ ಉತ್ತೇಜನ" ಎಂಬ ವಿಷಯವೂ ಚರ್ಚೆಗೆ ಗೊತ್ತು ಮಾಡಲ್ಪಟ್ಟಿತ್ತು ಮೊದಲ ದಿನ ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಡಿ ಮಂಜಯ್ಯ ಹೆಗ್ಗಡೆಯವರು ಸ್ವಾಗತ ಭಾಷಣ ಮಾಡಿದರು. ಅನಂತರ ಮೈಸೂರಿನ ಶಾರದಾ ವಿಲಾಸ ಪಾಠಶಾಲಾ ಪಂಡಿತರಾದ ಶ್ರೀ ಕೆ ಕೃಷ್ಣ ಭಟ್ಟರೂ, ಮೈಸೂರಿನ ಪ್ರಿನ್ಸಿಪಾಲ್ ಶ್ರೀ ಜಿ ಸ್ವಾಮಿ ...ರೂ, ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರರೂ, ಮೈಸೂರಿನ ಓರಿಯಂಟಲ್ ಲೈಬ್ರೇರಿಯ ಶ್ರೀ ಎಂ ಡಿ ಬಸವಪ್ಪ ಶಾಸ್ತ್ರಿಗಳೂ, ಡಿಸ್ಟ್ರಿಕ್ಟ್ ಬೋರ್ಡ್ ಎಜ್ಯುಕೇಶನ್ ಆಫೀಸರರಾದ ಶ್ರೀ ... ರಾಮರಾಯರೂ ಭಾಷಣಗಳನ್ನು ಮಾಡಿದರು ಅನಂತರ ಅಧ್ಯಕ್ಷರವರು ಉಪಸಂಹಾರ ಭಾಷಣವನ್ನೂ ಶ್ರೀ ಮೂಲ್ ಹೆಗ್ಗಡೆಯವರು ಅಭಿವಂದನೆಗಳನ್ನೂ ಸಮರ್ಪಿಸಿ ಸಂತರ ಈ ದಿನದ ಸಭೆಯು ಮುಕ್ತಾಯವಾಯಿತು

ಎರಡನೇ ದಿವಸ ಹಿಂದಿನ ದಿನದ ಭಾಷಣಕಾರರಲ್ಲದೆ ಪುತ್ತೂರಿನ ಶ್ರೀ ... ಮಂಗೇಶರಾಯರೂ ಭಾಷಣ ಮಾಡಿದರು ಅಧ್ಯಕ್ಷರು ಉಪಸಂಹಾರ ಭಾಷಣ ಮಾಡಿದ ಮೇಲೆ ಶ್ರೀ- ಮಂಜಯ್ಯ ಹೆಗ್ಗಡೆಯವರು ಅಧ್ಯಕ್ಷರು ಮೊದಲಾದವರಿಗೆ ಅಭಿವಂದನೆಗಳನ್ನು ಅರ್ಪಿಸಿದರು ಸಭೆಯು ಯಶಸ್ವಿಯಾಗಿ ಮುಕ್ತಾಯವಾದ ತರುವಾಯ ದೀಪೋತ್ಸವ ಹಾಗೂ ದೇವರ ಉತ್ಸವಗಳೂ ಬಹಳ ವಿಜೃಂಭಣೆಯಿಂದ ಜರಗಿದುವು

ವ್ಯವಸಾಯ, ಆರೋಗ್ಯ ಮತ್ತು ಕೈಗಾರಿಕೆ ಪ್ರದರ್ಶನ

ಸುಳ್ಯ ಸಹಕಾರ ಮಂದಿರದ ಕಟ್ಟೋಣದಲ್ಲಿ ಸುಳ್ಯ ಗ್ರಾಮಾಭಿವೃದ್ಧಿ ಕಮಿಟಿಯ ಆಶ್ರಯದಲ್ಲಿ 1945ನೆ ಜನವರಿ 9, 10, 11ರಲ್ಲು ಸುಳ್ಯ ಜಾತ್ರೆ ಸಮಯ ಜರಗುವುದು. 1 ಪ್ರದರ್ಶನವು ಕೃಷಿಯ ಯೋಗ್ಯತೆ ಮತ್ತು ಗುಣಗಳನ್ನು ಪ್ರಕಟಿಸಲ್ಪಡುವವು 2 ಪ್ರೇಕ್ಷಕರಿಗೆ ಅನುಕೂಲ್ಯವಾದ ವಸ್ತುಗಳು ದೊರಕುವವು 3 ನಮ್ಮ ದೇಶದಲ್ಲಿ ಇಂತಹ ಪ್ರದರ್ಶನದಿಂದ ಉತ್ತಮ ತರದ ಕೃಷಿಯ ಮೇಲಾಟದ ಸ್ಪರ್ಧೆ ಉಂಟಾಗುವದು. 4 ಈ ಸ್ಪರ್ಧೆಯಿಂದ ಕೃಷಿಕರು ಅಭಿವೃದ್ಧಿ ಹೊಂದುವರು

ಪ್ರದರ್ಶನ-ಸ್ಪರ್ಧೆಗಳಲ್ಲಿ ಇಚ್ಛಿಸುವವರು ತಮ್ಮ ವಸ್ತುಗಳನ್ನು ಸುಳ್ಯ ಸಂಘದ ಆಫೀಸಿಗೆ ತಾ. 7-1-45ರೊಳಗೆ ತಲಪುವಂತೆ ಕಳುಹಿಸಬೇಕು. ಪ್ರದರ್ಶನಕ್ಕೆ ಕಳುಹಿಸುವ ಮತ್ತು ವಾಪಾಸು ತರಿಸಿಕೊಳ್ಳುವ ಖರ್ಚನ್ನು ಉಮೇದ್ವಾರರೇ ಸಹಿಸಿಕೊಳ್ಳಬೇಕು

ಪ್ರದರ್ಶನಕ್ಕೆ ಕಳುಹಿಸಿಕೊಡುವ ವಸ್ತುಗಳು 1 ಧಾನ್ಯಗಳು, 2. ಫಲವಸ್ತುಗಳು, 3. ಬೀಜಗಳು, 4. ಕೃಷಿ ಉಪಕರಣಗಳು, 5. ವೇಲಿನ ಪೈರುಗಳು, 6 ಜಾನುವಾರುಗಳು, 7 ಉತ್ತಮ ಜಾತಿಯ ಕೋಳಿಗಳು 8 ಉತ್ತಮಜಾತಿಯ ನಾಯಿಗಳು, 9 ತರಕಾರಿಗಳು, 10 ಗೆಡ್ಡೆಗೆಣಸು, 11 ಕಸಿಗಿಡಗಳು, 12 ಇತರ ಕೈಗಾರಿಕೆ ಸಾಮಾನುಗಳು

ಪ್ರತಿ ದಿವಸ ಸಾಯಂಕಾಲ ಘಂಟೆ 3ರಿಂದ ಕೃಷಿ, ಕೈಗಾರಿಕೆ, ಗೋಸಂರಕ್ಷಣೆ, ಸಹಕಾರ, ಆರೋಗ್ಯ ಇವುಗಳ ಕುರಿತು ಬಲ್ಲವರಿಂದ ಭಾಷಣಗಳು ನಡಿಯುವವು.

Sullia 25 10-44 M AITHAPPA RAI-
ಅಧ್ಯಕ್ಷ

ರವಾ ಮತ್ತು ಚಿಲ್ಲರೆ ಸಕ್ಕರೆಯ ಖಂಡಿತ ಬೆಲೆ ಜಿಲ್ಲಾ ಕಲೆಕ್ಟರರ ಪ್ರಕಟಣೆ—ದ ಕ. ಜಿಲ್ಲೆಯ ಈ ಕೆಳಗೆ ಸೂಚಿಸೋಣವ ಕೇಂದ್ರಗಳಲ್ಲಿ ಸಕ್ಕರೆ ಮಾರಾಟದ ದರವನ್ನು ಈ ರೀತಿಯಾಗಿ ಜಿಲ್ಲಾ ಕಲೆಕ್ಟರರು ನಿರ್ಧರಿಸಿರುವರು ಅಧಿಕೃತ ವ್ಯಾಪಾರಿಗಳು ತಮ್ಮಲ್ಲಿರುವ ಸ್ಟಾಕನ್ನು ಬೋರ್ಡಿನಲ್ಲಿ ಬರೆದು ತೂಗಿಹಾಕಬೇಕಾಗಿಯೂ ಸಕ್ಕರೆ ಕೊಂಡುಕೊಳ್ಳುವವರಿಗೆ ಛಾಪಾ ರಶೀದಿಯನ್ನು ಕೊಡಬೇಕೆಂದೂ ಸೂಚಿಸಿದ್ದಾರೆ ಈ ನಿಯಮವನ್ನು ಪಾಲಿಸದವರು ಜುಲ್ಮಾನೆ ಮತ್ತು ಮೂರು ವರುಷ ಶಿಕ್ಷೆ ಅನುಭವಿಸಬೇಕಾಗುವುದು.

ಮಂಗಳೂರು ಟೌನ್-ಗೋಣಿ ಒಂದರ ರೂಪಾಯಿ 53-7 8, ರತ್ತಲಿಗೆ 0 4 1, ಬಂಟ್ವಾಳ ರೂಪಾಯಿ 56-1-4 ಮತ್ತು 0 4 3 ಕಾಸರಗೋಡು ಟೌನ್ 56 10 1 ಮತ್ತು 0-4-3 ಹೊಸದುರ್ಗ 57 3 0 ಮತ್ತು 0 4-4, ಪುತ್ತೂರು ಟೌನ್ 56 12 3 ಮತ್ತು 0 4-3, ಬೆಳ್ತಂಗಡಿ ಟೌನ್ 56-15 6, ಮತ್ತು 0-4 4, ಉಡುಪಿ ಟೌನ್ 57-13-0 ಮತ್ತು 0 4 4, ಕುಂದಾಪುರ ಟೌನ್ 58-13 10 ಮತ್ತು 0-4 5, ಕಾರ್ಕಳ ಟೌನ್ 56 12-10 ಮತ್ತು 0 4 3

ರವಾ ದರದಲ್ಲಿ ಸೇಲ್ಸ್ ಟೇಕ್ಸ್ ಸೇರಿರುತ್ತದೆ. ಎರಡು ರತ್ತಲಿಗೆ ಒಂದು ಪೈ ಅಥವಾ ರೂಪಾಯಿಗೆ ಎರಡು ಪೈಯಂತೆ ಚಿಲ್ಲರೆ ಮಾರಾಟದ ದರಕ್ಕೆ ಸೇಲ್ಸ್ ಟೇಕ್ಸ್ ರೂಪದಲ್ಲಿ ಸೇರಿಸಬೇಕಾಗಿದೆ.

Read & Advertise in
NAVAYUGA

ದಕ್ಷಿಣ ಕನ್ನಡ-

ಮಂಗಳೂರು

ಪ್ರಶ್ನೋತ್ತರಗಳು.

ಶ್ರೀ| ಎಂ. ಡಿ. ಅಧಿಕಾರಿಗಳು ಮಹಾತ್ಮರನ್ನು ಕಾಣುವ ಉದ್ದೇಶದಿಂದ ಕಳೆದ ತಾ.೨೪ಕ್ಕೆ ವಾರ್ಧಾಕ್ಕೆ ಹೋಗಿ ಅವರ ಮುಂದೆ ಇಟ್ಟ ಪ್ರಶ್ನೆಗಳಲ್ಲಿ ಪ್ರಮುಖ ಮೂರನ್ನು ಕೆಳಗೆ ಕೊಡಲಾಗಿದೆ,

ಪ್ರಶ್ನೆ–ಸದ್ಯ ಕಾಂಗ್ರೆಸಿನ ಕಾರ್ಯವನ್ನು ಹೇಗೆ ಮುಂದುವರಿಸಲಿ?

ಉತ್ತರ–ಮುಂಬಯಿಯಲ್ಲಿ ಜರಗಿದ ಕಾಂಗ್ರೆಸಿಗರ ಪರಿಷತ್ತಿಗೆ ನಾನು ಕಳುಹಿಸಿದ 'Hints to constructive work' ಎಂಬ ಸಂದೇಶದಲ್ಲಿ ಎಲ್ಲವನ್ನೂ ನನ ಊದಿಸಿರುವೆನು. ಅದರಲ್ಲಿ ವಿದ್ಯಾರ್ಥಿಗಳ, ಮಜೂರರು ಮತ್ತು ಕಿಸಾನರ ಸಂಘಟನೆಗೆ ಪ್ರಾಧಾನ್ಯ ಕೊಟ್ಟಿರುವೆನು. ಅದನ್ನು ಸರಿಯಾಗಿ ಅಭ್ಯಾಸ ಮಾಡಿರಿ,

ಪ್ರಶ್ನೆ– ಅಖಿಲ ಭಾರತ ಕಾಂಗ್ರೆಸ್ಸಿಗರ ಸಭೆಯನ್ನು ಕರೆಯುವುದು ಉತ್ತಮವಾಗಬಹುದು. ತಾವು ಏನನ್ನುತ್ತೀರಿ?

ಉತ್ತರ–ಅದು ಸದ್ಯ ಸಾಧ್ಯವಿಲ್ಲ. ಆ ಮಾತನ್ನು ಬಿಟ್ಟು ಬಿಡಿರಿ. ಪ್ರಾಂತಗಳಲ್ಲಿ ಕಾರ್ಯವನ್ನು ಮೊದಲು ಮಾಡಿರಿ,

ಪ್ರಶ್ನೆ–ಕಾಂಗ್ರೆಸಿನ ಪ್ರಾಥಮಿಕ ಸದಸ್ಯರನ್ನು ಮಾಡುವುದು ಅಗತ್ಯವೆ?

ಉತ್ತರ– ಘಟನಾರೀತಿಯಿಂದಲೂ ಇತರ ಕಾರಣಗಳಿಂದಲೂ ಪ್ರಾಥಮಿಕ (ನಾಲ್ಕಾಣೆ ಸದಸ್ಯರು) ಸದಸ್ಯರನ್ನು ಮಾಡಬಾರದುದಿಲ್ಲ. ಅದನ್ನು ಮಾಡುವ ಆವಶ್ಯಕತೆಯೂ ಇಲ್ಲ. ಬೇರೆ ವಿಧದಿಂದ ನೀವು ಕಾಂಗ್ರೆಸಿನ ಕಾರ್ಯ ಮಾಡಬಲ್ಲಿರಿ.

ಕಡೆಗೆ "ಕರ್ನಾಟಕಕ್ಕೆ ತಮ್ಮ ಸಂದೇಶವೇನು? ಎಂದು ಕೇಳಿದ ದಕ್ಕೆ "ಕಾರ್ಯ ಪ್ರವೃತ್ತರಾಗಿರಿ ಎಂದಿಷ್ಟೇ ಹೇಳುವೆ" ಎಂದು ಮಹಾತ್ಮರು ಉತ್ತರವಿತ್ತಿರುವರು"

ಜಿಲ್ಲಾ ಫುಡ್ ಕೌನ್ಸಿಲಿನ ಸಭೆ–ಕಲೆಕ್ಟರ ರಾ| ಸಾ| ಪಿ| ರ ಮಾದುಸರ ಅಧ್ಯಕ್ಷತೆಯಲ್ಲಿ ಜಿಲ್ಲಾ ಫುಡ್ ಕೌನ್ಸಿಲಿನ ಸಭೆಯು ತಾ - ೨೦ರಂದು ಜರಗಿತು. ಸದಸ್ಯರ ಆಗ್ರಹದಂತೆ, ತಾವಾಗಿಯೇ ಬತ್ತವನ್ನು ತಂದೊಪ್ಪಿಸುವ ದಿನವನ್ನು ನವಂಬರ ತಾ- ೧೫ರಿಂದ ಇಂಕೂ ಅಕ್ಕಿ ತಂದೊಪ್ಪಿಸುವ ಮೂರು ಅವಧಿಗಳನ್ನು ಮತ್ತೂ ೧೫ದಿನ ಮುಂದಕ್ಕೆ ಮುಂದುವರಿಸಲು ಕಲೆಕ್ಟರರು ಒಪ್ಪಿದರು. ಹಿಂದಿನ ಸಲ ಸಭೆಯು ನೇಮಿಸಿದ್ದ ಉಪಸಮಿತಿಯು ಪರವಾಗಿ ಕಾಸರಗೋಡು ತಾಲೂಕಿನಲ್ಲಿ ಸಂಚರಿಸಿ ಗೇಣಿಸಿನ ಮೇಲಿನ ನಿರ್ಬಂಧಕಾಜ್ಞೆಯನ್ನು ಈ ಸಲದ ಬೆಳೆಯ ಮಟ್ಟಿಗೆ ಹಿಂತೆಗೆಯಬಹುದೆಂದು ಶ್ರೀಯುತರು ಎ. ಬಿ. ಶೆಟ್ಟಿ ಮತ್ತು ನಯಂಪಳ್ಳಿ ರಾಮರಾವ್ ಇವರು ಸೂಚಿಸಿದರ - ಹೊರಕ್ಕೆಯ್ಯಲು ಆರಿಸುವವರಿಗೆ ತಾವು ಸಮ್ಮತಿಪತ್ರ ಕೊಡುವುದಾಗಿ ಕಲೆಕ್ಟರರು ತಿಳಿಸಿದರು.

ಅವಲಕ್ಕಿಯ ನಿರ್ಮಾಣ ಮತ್ತು ವ್ಯಾಪಾರವನ್ನು ನಿಯಂತ್ರಿಸಲು ಕೌನ್ಸಿಲು ನಿರ್ಧರಿಸಿತು. ಅವಲಕ್ಕಿ ಕುಟ್ಟುವವರಿಗೆ ಬತ್ತ ಕೊಡಲ್ಪಡುವುದು. ಆದರೆ ಅವರಲ್ಲಿ ಯಾರಾದರೂ ಬತ್ತ ದಾಸ್ತಾನು ಮಾಡಿದ್ದರೆ, ಅದನ್ನು ಸೆಳೆದು ಶಿಕ್ಷಿಸಲಾಗುತ್ತದೆ. ಸಕ್ಕರೆಯು ಈಗ ಈ ಜಿಲ್ಲೆಗೆ ಸ್ವಲ್ಪ ಹೆಚ್ಚು ಬರುತ್ತಿರುವುದರಿಂದ ಎಲ್ಲಾ ತಾಲೂಕುಗಳಲ್ಲಿ ಅದರ ಪ್ರಮಾಣವನ್ನು ಹೆಚ್ಚಿಸುವುದು ಸಾಧ್ಯವಿದೆಯೆಂದು ಕಲೆಕ್ಟರರು ತಿಳಿಸಿದರು. ಈಗ ಬಂಜರಿರುವ, ಆದರೆ ಕೃಷಿಮಾಡಬಹುದಾದ ಸರಕಾರಿ ಸ್ಥಳಗಳನ್ನು ಹೆಚ್ಚು ಬೆಳೆ ಬೆಳೆಸುವುದಕ್ಕಾಗಿ ಯಾರಾದರೂ ಕೇಳಿದರೆ ಕೊಡಲಾಗುವುದೆಂದು ಕಲೆಕ್ಟರರು ಸ್ಪಷ್ಟಪಡಿಸಿದರು.

ಹಿಂದೆ ಬತ್ತದ ರೂಪದಲ್ಲೇ ಕೊಡಲಾಗುತ್ತಿದ್ದ ಸಾಲ್ಯ ಫಿರ್ಕಾ ಮತ್ತು ಕಾಸರಗೋಡು ತಾಲೂಕಿನ ಕೆಲ ಭಾಗಗಳನ್ನು ಬಿಟ್ಟು ಉಳಿದ ಸ್ಥಳಗಳಲ್ಲಿ ಉಂಬಳಿ ಕಾಯಮಾಡುದನ್ನು ಅಕ್ಕಿಯ ರೂಪದಲ್ಲಿ ಕೊಡಬೇಕೆಂದು ವಿವರಿಸಿರುವುದಲ್ಲದೆ, ಸ್ವಂತ ಕೃಷಿಮಾಡುವವರೂ ಬೇರೆ ಬೇರೆ ಕಡೆಗಳಲ್ಲಿ ತಮ್ಮ ಆಸ್ತಿಗಳನ್ನು ಗೇಣಿಗೆ ಕೊಟ್ಟವರೂ (ತಮ್ಮ ಸ್ಥಳದ ವಿಸ್ತೀರ್ಣ, ಗ್ರಾಮ, ತಾಲೂಕು, ಪಟ್ಟಾನಂಬ್ರ, ಒಕ್ಕಲಿನ ಹೆಸರು, ಅಕ್ಕಿಯ ರೂಪದಲ್ಲಿ ಗೇಣಿ, ತಮ್ಮ ವೆಚ್ಚಕ್ಕಾಗಿ ಯಾವ ಆಸ್ತಿಯಿಂದ ಅಕ್ಕಿ ಬೇಕು ಎಂಬುದನ್ನೆಲ್ಲಾ ವಿವರಿಸಿ) 'ಡಿಕ್ಲರೇಶನ್ ಪತ್ರ'ಗಳನ್ನು [ಇನ್ನೂ ಒಪ್ಪಿಸದೆ ಇದ್ದರೆ] ಕೂಡಲೇ ಕೊಡಬೇಕೆಂದರು.

ಹಸುಗೆ ಅಧಿಕಾರಿಗಳ ಪ್ರಕಟಣೆ–ಪೂರ್ಣ ಹಸುಗೆ ಹಾಡಿದ ಮಂಗಳೂರು, ಉಡುಪಿ ಮತ್ತು ಕಾಸರಗೋಡಿನ ಕ್ಷೇತ್ರಗಳಲ್ಲಿ ಇದೇ ತಾ- ೧೯ರಿಂದ ಹಸುಗೆ ಪಡಿಯ ½ ಅಂಶವು ಗೋಧಿ-ಯಾ-ರಾಗಿಯ ರೂಪದಲ್ಲಿ ಕಡ್ಡಾಯವಾಗಿ ಕೊಡಲ್ಪಡುವುದಿಷ್ಟೆ. ಈ ಕ್ಷೇತ್ರದಲ್ಲಿ ಪರ್ಯಟನ ಮೂಲಕ ದಶಂಬರದ ವರೆಗೆ ಅಕ್ಕಿ ಸಂಗ್ರಹಿಸಿಟ್ಟುಕೊಂಡಿರುವವರು ಕೂಡಲೆ ತಮ್ಮ ಸಂಗ್ರಹದ ½ ಅಂಶ ಅಕ್ಕಿಯನ್ನು ಸರ್ಕಾರಕ್ಕೆ ಸಾಗಿಸಿ ಗೋಧಿ ಯಾ ರಾಗಿಯನ್ನು ಪಡಕೊಳ್ಳಬೇಕು.

ನೆರೆಹಾವಳಿಗೆ ಗುರಿಯಾಗಿದ್ದ ಮುಂಡಪ್ಪಿರ, ಕಡಂದಲೆ, ಕಟೀಲ ಪ್ರದೇಶಗಳ ಕೆಲವು ಜನರಿಗೆ ಹಾರೆ-ಸೀರೆಗಳನ್ನು ಶ್ರೀ| ಕೆ. ಕೆ. ಶೆಟ್ಟರೂ ಕಾಸರಗೋಡು ತಾಲೂಕಿನ ಕೆಲವು ಪ್ರದೇಶಗಳ ಜನರಿಗೆ ಹಾರೆಗಳನ್ನು ಶ್ರೀ| ಬಿ. ದೇವಪ್ಪ ಆಳ್ವರೂ ಕಳೆದ ವಾರ ಜನತಾ ಆಹಾರ ಸಮಿತಿಯ ಪರವಾಗಿ ಹಂಚಿದರು.

ಜಿಲ್ಲಾ ಹಿಂದೂಸ್ಥಾನ್ ಸ್ಕೌಟ್ಸ್ ಎಸೋಸಿಯೇಶನಿನ ಕೇಂದ್ರ ಸಭೆಯು ಡಾ| ಕೇಶವ ಪೈ ಅವರ ಅಧ್ಯಕ್ಷತೆಯಲ್ಲಿ ಜರಗಿ ದಶಂಬರ ತಾ. ೧೬ರಿಂದ ೩೦ರ ವರೆಗೆ ಬೆಸೆಂಟ್ ಹುಡುಗಿಯರ ಶಾಲೆಯಲ್ಲಿ ಸ್ಕೌಟ ಕ್ಯಾಪ್ಟನ್ ತರಬೇತಿ ಕೇಂದ್ರವನ್ನು ನಡೆಸುವುದಕ್ಕೂ ತಾ- ೨೩ ಮತ್ತು ೨೪ ರಂದು ಪಡುಬಿದ್ರೆ ಇಲ್ಲವೆ ಸುರತ್ಕಲ್‌ಗಳಲ್ಲಿ ಜಿಲ್ಲಾ ಸ್ಕೌಟ್ ಪರಿಷತ್ತನ್ನು ಜರಗಿಸುವುದಕ್ಕೂ ಅಲ್ಲೇ ತಾ ೨೫ ರಿಂದ ೩೧ರವರೆಗೆ ಸ್ಕೌಟ್ ಮಾಸ್ತರರ ತರಬೇತಿ ಕೇಂದ್ರವನ್ನು ಜರಗಿಸುವುದಕ್ಕೂ ನಿಶ್ಚೈಸಲಾಯಿತು.

ಹಳಬರು ಸಂಪ್ರದಾಯ ವಾದಿಗಳು; ಪ್ರಗತಿಗೆ ವಿರೋಧಿಗಳು-ಎಂಬ ವಿಷಯದ ಕುರಿತು ಸ್ವಾರಸ್ಯ ಪೂರ್ಣವಾದ ವಿವಾದವೊಂದು ಅರೋಶಿಯಸ್ ಕಾಲೇಜಿನಲ್ಲಿ ಮಂಗಳೂರು ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಜರಗಿತು. ಡಾ. ಕೇಶವ ಪೈ ಮಿತ್ರರು ನಿರ್ಣಯವನ್ನು ವಿರೋಧಿಸಿಯೂ ಶ್ರೀ ಭಾಸ್ಕರ ಪೈ, ಮತ್ತು ವಿದ್ಯಾರ್ಥಿಗಳು ಸಮರ್ಥಿಸಿಯೂ ಮಾತಾಡಿದರು. ಕಾಲೇಜಿನ ಪ್ರಿನ್ಸಿಪಾಲ ಫಾ- ಕೆಸ್ಲೊ ಅವರು ಅಧ್ಯಕ್ಷತೆ ವಹಿಸಿದ್ದರು. ಮತ ಕೊಡಾಗ ಹಳಬರನ್ನು ಖಂಡಿಸುವ ನಿರ್ಣಯವು ಸ್ವೀಕೃತವಾಯಿತು.

ನಗರದಲ್ಲಿ ಶ್ರೀ| ಜೋಕಿಂ ಆಳ್ವರು–ಮುಂಬಯಿಯ 'ಫೋರಂ' ಸಾಪ್ತಾಹಿಕದ ಸಂಪಾದಕ ಶ್ರೀ| ಜೋಕಿಂ ಆಳ್ವರು ತಾ- ೨೧ರಂದು ಮಂಗಳೂರಿಗೆ ಬಂದರು. ಅದಿನದ ಸಂಜೆ 'ಭಾರತದ ವಿಚಾರವೇನು?' ಎಂಬ ವಿಷಯದ ಕುರಿತು ಮಂಗಳೂರು ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಜರಗಿದ ಸಭೆಯಲ್ಲಿ ಭಾಷಣವಿತ್ತರು. 'ನಮ್ಮ ಮುಂದೆ ದಾರಿಯು ಸ್ಪಷ್ಟವಾಗಿಲ್ಲ. ಹಿಂದಿನ ಸ್ವಾತಂತ್ರ್ಯ ಸಮರಗಳು ಯಶಸ್ವಿಯಾಗಲಿಲ್ಲ. ೧೯೪೨ ಆಗಸ್ಟ್ ಮತ್ತು ಬಂಗಾಳದ ಕ್ಷಾಮ. ಈ ಎರಡು ಸಂದರ್ಭಗಳಲ್ಲಿ ನಾವು ಕಳೆದುಕೊಂಡೆವು. ದೇಶದ ಸ್ವಾತಂತ್ರ್ಯಕ್ಕಾಗಿಯೇ ನಮ್ಮ ಪ್ರಾಣಗಳು ಮೀಸಲಾಗಿರಬೇಕು, ಗಾಂಧಿಯವರ ನಾಯಕತ್ವದಲ್ಲಿ ನಾವು ಮುಂದೆ ಸಾಗಬೇಕು' ಎಂದು ಅವರು ಹೇಳಿ, ಇಂಡಿಯದ ಕಮ್ಯೂನಿಸ್ಟರನ್ನು ಕಟುವಾಗಿ ಟೀಕಿಸಿ, 'ಕಮ್ಯೂನಿಸ್ಟ್ ಪಾರ್ಟಿಯವರ ಮಾತಿಗೆ ಯಾರೂ ಕಿವಿಗೊಡಬಾರದು; ದ್ರೋಹಿಗಳಾಗಬಾರದು.' ಎಂದರು - ಯೂನಿಯನಿನ ಅಧ್ಯಕ್ಷ ಪ್ರೊ| ವಿ- ಜೆ. ಜೋಸೆಫರು ಅಧ್ಯಕ್ಷತೆ ವಹಿಸಿದ್ದರು, ಕಾರ್ಯದರ್ಶಿ ಶ್ರೀ| ಲೋಕನಾಥರು ವಂದನೆಗಳನ್ನರ್ಪಿಸಿದರು.

ತಾ. ೨೩ರಂದು ಸಂಜೆ ಜಿಲ್ಲಾ ಪತ್ರಿಕೋದ್ಯೋಗಿ ಸಂಘದವರು ಶ್ರೀ| ಆಳ್ವರನ್ನು ಆಹ್ವಾನಿಸಿ ಸತ್ಕರಿಸಿದರು. ಆ ಸಂದರ್ಭದಲ್ಲಿ ಪತ್ರಿಕೋದ್ಯಮದ ಈಗಿನ ಪರಿಸ್ಥಿತಿ, ಪತ್ರಿಕೋದ್ಯೋಗಿಗಳ ಸಂಕಷ್ಟಗಳು ಈ ಮೊದಲಾದ ವಿಷಯಗಳ ಕುರಿತು ನೆರೆದಿದ್ದವರೂ ಶ್ರೀ| ಆಳ್ವರೂ ವಿಚಾರ ವಿನಿಮಯ ಮಾಡಿದರು. 'ಈ ಜಿಲ್ಲೆಯ ಎಲ್ಲ ಪತ್ರಿಕೆಗಳೂ ಒಂದಾಗಿ ಒಂದೇ ಪತ್ರಿಕೆಯನ್ನು ನಡೆಸಬೇಕು' ಎಂಬುದು ಅವರ ಸೂಚನೆಯಾಗಿತ್ತು.

ಗುರುವಾರ ಬೆಳಗ್ಗೆ ಶ್ರೀ| ಆಳ್ವರು ಎಲೋಶಿಯಸ್ ಕಾಲೇಜ್ ಹಾಸ್ಟೆಲನ್ನೂ ಸಂಜೆ ರಾಮಕೃಷ್ಣ ವಿದ್ಯಾರ್ಥಿ ಭವನವನ್ನೂ ಸಂದರ್ಶಿಸಿ ಭಾಷಣಗಳನಿತ್ತರು. ಶುಕ್ರವಾರ ಬೆಳಗ್ಗೆ ಅವರು ಉಡುಪಿಗೆ ಬಂದರು.

ಶ್ರೀ. ಜಿ. ಕೃಷ್ಣರಾಯರ ನಿಧನ–ಮಂಗಳೂರಿನ ಸುಪ್ರಸಿದ್ಧ ವಕೀಲರಾಗಿದ್ದ ಶ್ರೀ| ಗೊಲ್ಲರಕೇರಿ ಕೃಷ್ಣರಾಯರು ತಮ್ಮ ೮೫ನೆಯ ವಯಸ್ಸಿನಲ್ಲಿ ಕದ್ರಿಯ ಸ್ವಗೃಹದಲ್ಲಿ ನಿಧನಹೊಂದಿದರೆಂದು ತಿಳಿಸಲು ವಿಷಾದಿಸುತ್ತೇವೆ. ಶ್ರೀ, ಜಿ. ಸೋಮಶೇಖರ ರಾವ್ ವಕೀಲರು ದಿವಂಗತರ ಪುತ್ರರು. ಮೃತರ ಆತ್ಮಕ್ಕೆ ಶಾಂತಿ ಇರಲಿ.

"ಯುದ್ಧಾನಂತರದ ಜಗತ್ತು": ಈ ವಿಷಯವಾಗಿ, ಶ್ರೀ| ಎ. ಬಿ. ಶೆಟ್ಟಿಯವರು 'ಸೋವಿಯಟ್ ಮಿತ್ರರ' ಸಂಘದ ಆಶ್ರಯದಲ್ಲಿ, ಇದೇ ತಾ. 2೬ರಲ್ಲಿ, ಮೆಡಿಕಲ್ ಸೋಶಿಯಲ್ ಲೈಬ್ರರಿಯಲ್ಲಿ ಭಾಷಣ ಮಾಡಿದರು.

ಡಾ| ಬಿ ಆರ್ ಹೆಗ್ಡೆ–ಇವರು ಇತ್ತೀಚೆಗೆ ವಾರ್ ಟೆಕ್ನಿಶಿಯನ್ಸರ ಬಗ್ಗೆ ಡಾಕ್ಟರರಾಗಿ ನೇಮಿಸಲ್ಪಟ್ಟಿದ್ದು, ಇದೇ ತಾ. ೨೦ರಿಂದ ಕೇಂದ್ರ ಸರಕಾರದವರಿಂದ ನೇಮಿಸಲ್ಪಟ್ಟಿರುವರು.

ಡಾ, ಯು ಪಿ. ಮಲ್ಯರ ಆರೋಗ್ಯ–ಬೆಟನ್ನೂ ಆಗಿ ಬಂಧನದಲ್ಲಿರುವ ಡಾ| ಯು- ಪಿ. ಮಲ್ಯರವರನ್ನು, ಕೆಲದಿನಗಳ ಹಿಂದೆ ಚಿಕಿತ್ಸೆ ಬಗ್ಗೆ ಮದರಾಸಿನ ಜನರಲ್ ಆಸ್ಪತ್ರೆಗೆ ಒಯ್ದರಷ್ಟೆ? ಅವರ ಧರ್ಮಪತ್ನಿಯವರೂ, ಮತ್ತೆ ಕೆಲವು ಬಂಧುಗಳೂ ಮದರಾಸಿಗೆ ತೆರಳಿ ಅವರನ್ನು ಕಂಡು ಮಾತಾಡಿ ಬಂದಿರುವರು. ಡಾ| ಮಲ್ಯರವರು ಸೌಖ್ಯವಾಗಿರುವರೆಂದು ತಿಳಿಯಲಾಗಿದೆ.

ಸಿಡುಬು ಹೆಚ್ಚುತ್ತಿದೆ–ಸಿಡುಬು ಹೆಚ್ಚುತ್ತಿದೆ ಈ ನಗರಕ್ಕೆ, ಸುಮಾರು 50 ಮಂದಿಗೆ ತಗಲಿದಂತೆ, ಅದರ ಕಾಟದಿಂದ ಮೂರು ಮರಣ ಪಟ್ಟಂತೆ, ತಿಳಿದುಬಂದಿದೆ. ಪ್ಲೇಗ್ ಇಲಿಗಳೂ ಬೀಳುತ್ತಲೇ ಇವೆ, ಆದರೆ ಮನುಷ್ಯರಿಗೆ ಪ್ಲೇಗು ಸೋಂಕಿದ ವಾರ್ತೆಯಿಲ್ಲ.

ಮುಂಬಯಿಯ ಬಿಲ್ಲವರ ಯಸೋಸಿಯೇಶನ್" ಸಹಾಯಾರ್ಥವಾಗಿ ತಾ. 22-12-'44ರಲ್ಲಿ ಭಾಂಗವಾಡಿ ಥಿಯೇಟರಿನಲ್ಲಿ ಅಭಿನಯಿಸಲಿಕ್ಕಿರುವ 'ಕಾಲಚಕ್ರ' ಸಾಮಾಜಿಕ ನಾಟಕದ ಸಂಗೀತ ನಿರ್ದೇಶಕತ್ವವನ್ನು ಮಂಗಳೂರಿಂದ ಬಂದ ಶ್ರೀ ಯಮ್. ಎ. ದೇವಡಿಗರಿಗೆ ವಹಿಸಿಕೊಡಲಾಗಿದೆ ಎಂದು ತಿಳಿದು ಬಂದಿದೆ.

ಕಟಪಾಡಿ–ಉದ್ಯಾವರ, ಕುರ್ಕಾಲು, ಮಣಿಪುರ ಮಟ್ಟು, ಏಣಗುಡ್ಡೆ, ಕೋಟೆ, ಮಟ್ಟು, ಪಾಂಗಾಳ, ಉಳಿಯಾರಗೋಳಿ, ಈ ಎಂಟು ಗ್ರಾಮಗಳ ಬಿಲ್ಲವರಲ್ಲಿ ಊರ ಗುರಿಕಾರರ ಸಭೆಯು ತಾ. 3-12 44ನೇ ರವಿವಾರ ಪೂರ್ವಾಹ್ಣ ಗಂಟೆ 11 ಕ್ಕೆ ಬ್ರಹ್ಮ ಶ್ರೀ ನಾರಾಯಣಗುರು ಸ್ವಾಮಿ ಸೇವಾ ಸಮಿತಿಯ ಭವನದಲ್ಲಿ ಜರಗಲಿಕ್ಕಿರುವದೆಂದು ವಾರ್ತೆ.

ಮೂಲ್ಕಿ:—ಮೂಲ್ಕಿ ಬಿಲ್ಲವ ಸಮಾಜ ಸೇವಾ ಸಂಘದ ಭಜನಾ ಉದ್ಘಾಟನಾ ಸಮಾರಂಭವು ತಾ- 25ರಲ್ಲಿ ಪಡುಬಿದ್ರಿ ಶ್ರೀ| ಮ್ಯನ್. ನಾಗಪ್ಪನವರ ಅಧ್ಯಕ್ಷತೆಯಲ್ಲಿ ಜರಗಿತು. ಭಜನಾ ಆವಶ್ಯಕತೆಯ ಕುರಿತು ಶ್ರೀಗಳಾದ ಯಂ ಬಾಬು(ವಿದ್ವಾನ್ ದತ್ತ, ವೆಂಕಪ್ಪ, ಯಂ. ಕೆ. ಎಲ್ಲಪ್ಪನವರೇ ಮೊದಲಾದವರು ಮಾತನಾಡಿದ ಮೇಲೆ ಕಾರ್ಯಕಾರಿ ಮಂಡಳಿಯ ಸಬ್ ಕಮಿಟಿಗೆ ಸಹಾಯಕರಾಗಿ ಸದಸ್ಯರನ್ನು ಆರಿಸಲಾಯಿತು. ಅಧ್ಯಕ್ಷರು ಬೆಲೆ ಭತ್ರದ ಭಾಷಣ ಮಾಡಿ ಈ ಭಜನಾ ಮಂಡಳಿಗೆ ರೂ. 101 ಕೊಡ ಬೇಕೆಂದು ವಾಗ್ದಾನ ಮಾಡಿದರು. ಧನ್ಯವಾದಾರ್ಪಣವಾಗಿ ಸಭೆಯು ಕೊನೆಗೊಂಡಿತು.

ನೋಟಿಸು.

ಕುಂದಾಪುರ ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ.

ಕ್ರಮ ನಂ. 451/1944

R. I A. 1582/1944

ವಾದಿ– ರಾಮಚಂದ್ರ ಪ್ರಭು.

ಪ್ರತಿವಾದೀರು– 1 ನಾಗಂಮ 2. ಲಕ್ಷ್ಮೀ ಹೆಂಗ್ಸು, 3. ಮ್ಯಾನರ ಕೊರಗ, 4 ಮ್ಯಾನರ ಹೂವಯ್ಯ.

ಮ್ಯಾನರ 3. 4ನೇ ಪ್ರತಿವಾದೀರ ಗಾರ್ಡಿಯನ ತಾಯಿ 2ನೇ ಪ್ರತಿವಾದಿಳು, ಲಕ್ಷ್ಮೀ ಹೆಂಗಸಿಗೆ–

ಮೇಲ್ಕಂಡ ದಾವೆಯಲ್ಲಿ ವಾದಿಯು ನಿಂಮನ್ನು ಮ್ಯಾನರ 3–4ನೇ ಪ್ರತಿವಾದೀರ ಬಗ್ಗೆ ಗಾರ್ಡಿಯನರಾಗಿ ನೇಮಕ್ಕ್ರರು ಮಾಡಬೇಕೆಂದು ವಾಕ್ಲು ಮಾಡಿದ ಸದ್ರಿ ಅರ್ಜಿಯು ತಾರೀಕು 13–12–1944ಕ್ಕೆ ಮುಜ್ಕುರು ಕೋರ್ಟಿನಲ್ಲಿ ವಾದೆಯು ತಸ್ಕಿ ಕೂಡಾ ಬಗ್ಗೆ ಇಟ್ಟಿರುವದ್ರಿಂದ ಆ ಕುರಿತು ನಿಮ್ಮ ಆಕ್ಷೇಪಗಳೇನಾದ್ರು ಯಿರುವ ಪಕ್ಷದಲ್ಲಿ ಅದನ್ನು ಆ ದಿವ್ಸ ಕೋರ್ಟಿನವರು ಕರದಾಗ್ಯೆ ಹಾಜರಾಗಿ ಜ್ಯಾಹೀರ್ಮಾಡಿಕೊಳ್ಳತಕ್ಕದಿರಬೇಕೆಂದು ಈ ಮೂಲಕ ತಿಳಿಸೋಣಾಗುತ್ತದೆ.

ಕೋರ್ಟು ಹುಕ್ಕುಂ ಪ್ರಕಾರ,

K. Narayana Kamath.

ವಾದಿಯ ಕಡೆ ಎಡ್ವೊಕೇಟ

ತಾ.21–11–1944.

ಉಡುಪಿ ಮಧ್ವಮತ

ಶಿವಳ್ಳಿ ಬ್ರಾಹ್ಮಣರ

ಧರ್ಮ ಛತ್ರ

ಇದೇ ತಾ· 8–10–44ರಿಂದ

ರಾಮೇಶ್ವರ ದೇವಸ್ಥಾನದ ಬಡಗು ಬೀದಿಯಲ್ಲಿ ತೆರೆಯಲ್ಪಟ್ಟಿದೆ

ಎಲ್. ನರಸಿಂಗರಾವ್, ಪ್ರೊಪ್ರೈಟರ್.

ಉಡುಪಿ ಬೋರ್ಡಿಂಗ್ ಎಂಡ್ ಲಾಜಿಂಗ್, ಮಧುರ.

ಉಡುಪಿ ಮುನಿಸಿಪಲ್ ಉಪಚುನಾವಣೆ.

ಇದೇ ಬರುವ 4–12–1944ರಲ್ಲಿ ನಡೆಯಲಿರುವ ಉಡುಪಿ ಮುನಿಸಿಪಾಲಿಟಿಯ ಮೂಡನಿಡಂಬೂರು ವಾರ್ಡಿನ ಉಪಚುನಾವಣೆಯಲ್ಲಿ ನಾನು ಒಬ್ಬ ಉಮೇದ್ವಾರನಾಗಿರುವೆ. ಮತದಾರರೆಲ್ಲರೂ ದಯಮಾಡಿ ತಮ್ಮ ಮತಗಳನ್ನು ನನಗೆ ಕೊಟ್ಟು ಪ್ರೋತ್ಸಾಹಿಸಿ, ಮಹಾ ಜನರ ಸೇವೆಯನ್ನು ಮಾಡುವ ಸುಯೋಗವನ್ನು ಒದಗಿಸಿಕೊಡ ಬೇಕಾಗಿ ಅಪೇಕ್ಷಿಸುತ್ತೇನೆ.

ಆರ್.ಆರ್. ಕುಂಜೂರು.

ಜತೆಕಾರ್ಯದರ್ಶಿ, ತಾಲೂಕು ಆಹಾರ ಸಮಿತಿ, ಉಡುಪಿ.

೨. ನಗುಮೊಗದ ನರ್ಸನು

(೯ನೇ ಪುಟದಿಂದ ಮುಂದುವರಿದುದ.)

ರೆ. ಎಲ್ಲರು ನೆನೆಸುವನೂ—'ನರ್ಸನು ನನ್ನನ್ನು ನೋಡಿ ನಕ್ಕಳು' ಎಂದು; ತನ್ನಾ ಜತೆಗಾರನೊಡನೆ ನಕ್ಕಂತೆಯೇ ತನ್ನೊಡನೆಯೂ ನಕ್ಕಳೆಂದು. ನಿಜ ತನ್ನಷ್ಟೇ ಆ ಜತೆಗಾರನು ಕೂಡಾ ಆಕೆಗೆ ಎಂದು ಯಾರೂ ತಿಳಿಯುವದಿಲ್ಲ; ಆ ಜತೆಗಾರನಿದ್ದಂತೆಯೇ ತಾವೂ ಇದ್ದೇವೆ, ಜತೆಗಾರ ತಾವು ಊಹಿಸಿದಂತೆ, ಇದ್ದಾನೆ ಎಂದು ಎಲ್ಲರ ಭಾವನೆ ಹುಚ್ಚು ನಗೆಯಿಂದಾಗಿ ತಾನು ಊರವರಿಗಿಂತಹ ಮೆಚ್ಚಾಗಿದ್ದೇನೆ ಎಂಬ ದಿನವಹೀ ಅನುಭವವು ನರ್ಸನನ್ನಲ್ಲಿ ಹುಲ್ಲಿಯಂತಹ ಬೆದರು ಬುದ್ಧಿಯನ್ನು ಹುಟ್ಟಿಸಿದೆ. ನಾಲ್ಕು ದಿಕ್ಕನ್ನು ಅವಳು ಸಂದೇಹದೃಷ್ಟಿಯಿಂದ ನೋಡುತ್ತಾ ಹೋಗುವಂತಾಗಿದೆ. ಆವರೇನು ಮಾಡಿಯಾಳು ಪಾಪ, ನಗದಿರಲಾಗುವದಿಲ್ಲ. ಆ ಜತೆಗಾರನಿಲ್ಲದೆ ಮನೆ ಬಿಡುವದೇ ಇಲ್ಲ.

ಅವಳ ಗಂಡನ ಕುರಿತು ಎಂದು ಮಾತುಗಳನ್ನಿಲ್ಲಿ ಹೇಳಲೇಬೇಕಾಯಿತು. ಆವ ಮೂರನೇ ವರ್ಗದ ಜನ. ಸಭೆ ಸಮಾರಂಭಗಳಲ್ಲಿ ಎಲ್ಲರೊಡನೆ ನಗುತ್ತಾ ಮಾತಾಡಬಲ್ಲ ಪತ್ನಿಯಿರಬೇಕೆಂದು ಬಯಸುವ ನವ ನಾಗರಿಕನೇನೂ ಅಲ್ಲ ಹೀಗಾಗಿ ನರ್ಸನ ನಗು ಮೊದಮೊದಲು ಅವನಿಗೊಂದು ಯಾತನೆಯಾಗಿರಬೇಕು. ಈಗ ಎರಡು ಮಕ್ಕಳ ತಾಯಿಯ ಪೂರ್ಣಾನುಭವವಾದ ಮೇಲೆ--ಪೂರ್ಣಾಧಿಕಾರ ಬಂದ ಮೇಲೆ--ಅವನಲ್ಲಿ ಈ ಕುರಿತಿದ್ದ ಚಿಂತೆ ಬಿಟ್ಟು ಹೋಗಿದೆ. ದಾಂಪತ್ಯದ ಆದಿಭಾಗದಲ್ಲಿ ಆಕೆಯ ನಗುವನ್ನು ನಿಲ್ಲಿಸುವ ಕೆಲವು ಬಂದೋಬಸ್ತನ್ನು ಮಾಡಿ ಆತ ನೋಡಿದ್ದನಂತೆ. ಈಗ ಪ್ರಾಯಶಃ ಊರವರ ವರೌಢ್ಯಕ್ಕಾಗಿ ಮನಸ್ಸಿನೊಳಗೆ ಅವನೇ ನಗುತ್ತಿರಬೇಕು. ಊರವರೋ ಅವರೂ ನಗುತಿದ್ದಾರೆ—ನರ್ಸನ ಕುರಿತು ಒಂದು ರೀತಿಯಿಂದಾದರೆ, ನರ್ಸನ ಗಂಡನಿಗಾಗಿ ಮತ್ತೊಂದು ವಿಧದಿಂದ! ಅಂತೂ ನರ್ಸನೊಂದಿಗೆ ನಮ್ಮೂರಿಗೆ ಊರೇ ನಗುತ್ತಿದೆ.

ಆಕೆ ಮುದಿಯಾಗಿಕೊಳ್ಳಲಿ. ಆಗ ನರ್ಸನ ನಗೆಯನ್ನು ಬೆನ್ನಟ್ಟಿಬರುತ್ತಿರುವ ನಗೆಯೆಲ್ಲವೂ ನಿಲ್ಲಲಿವೆ. ಆದರೆ ಅವಳು ಮಾತ್ರ ಆಗಲೂ ಹೀಗೆಯೇ ನಗೆಬೀರುವಳು. ಯಾತಕೆಂದರೆ ಅದು ಬೇರೇನೂ ಅಲ್ಲ:- ಸ್ತ್ರೀತ್ವ ಸಹಜ ಲಜ್ಜೆ, ನಯ, ವೈಯ್ಯಾರ ಬೆಡಗುಗಳು ಮಿತಿಗೂ ಮಿಕ್ಕಿ ವೃದ್ಧಮಾಗಿ ಹುಟ್ಟಿಬಂದಿರುವ ಒಂದು ಅಪರೂಪ ಸೃಷ್ಟಿ ಮಾತ್ರ!

ಬರುವವಾರ

ಮುಂಗೋಪಿ ಮುದ್ದಣ್ಣ.

ಸ್ವೀಕಾರ-ವಿಮರ್ಶೆ.

ಸ್ಟಾಂಡರ್ಡ್-ಡಿಕ್ಶನರಿ — ಶ್ರೀ. ಡಿ. ಕೆ. ಭಾರದ್ವಾಜರ ಇಂಗ್ಲಿಷ್-ಇಂಗ್ಲಿಷ್ ಕನ್ನಡ ಶಬ್ದಕೋಶ ಸಾಮಾನ್ಯ ಡಿಕ್ಶ್ನರಿ ಆಕಾರದ 648 ಪುಟಗಳಿರುವ ಈ ಪುಸ್ತಕದಲ್ಲಿ ಸುಮಾರು 24000 ಇಂಗ್ಲಿಷ್ ಪದಗಳ, ಹಾಗೂ ಆ ಪದಗಳು ಬೇರೆ ಬೇರೆ ಪದಗಳೊಂದಿಗೆ ಸೇರಿ ಆಗುವ ಪದ ವೃಂದಗಳ ವಿವಿಧಾರ್ಥಗಳು ಇಂಗ್ಲಿಷ್ ಮತ್ತು ಕನ್ನಡದಲ್ಲಿ ಬಂದಿವೆ. ವಿದ್ಯಾರ್ಥಿಗಳಿಗೆ ವಿಶೇಷ ಉಪಯೋಗಕ್ಕೆ ಬೀಳುವ ಶಬ್ದಕೋಶವಿದು. ಕನ್ನಡಿಗರಿಗೆ ಪರಿಚಿತರಾಗಿರುವ ಶ್ರೀ. ಭಾರದ್ವಾಜರು ಈ ಮೊದಲು ನಾಲ್ಕು ಶಬ್ದಕೋಶಗಳನ್ನು ರಚಿಸಿ ಪಡೆದ ಅನುಭವವನ್ನು ಈ 'ಸ್ಟಾಂಡರ್ಡ್‌ಡಿಕ್ಶನರಿ' ರಚನೆಯಲ್ಲಿ ಉಪಯೋಗಿಸಿಕೊಂಡಿರುವರು ಮುಂದಣ ಮುದ್ರಣಗಳಲ್ಲಿ ಅದನ್ನು ತಿದ್ದಿ ಬೆಳೆಸುವ ಅಧಿಕಾರವೂ ಅವರದಾಗಿದೆ. ಇಂದಿನ ಕಷ್ಟಕಾಲದಲ್ಲಿ ಇಂತಹದೊಂದು ಶಬ್ದ ಭಂಡಾರವನ್ನು ನಿರ್ಮಿಸಿದುದು ಶ್ಲಾಘನೀಯ ಸಾಹಸವೇ ಸರಿ. ಕನ್ನಡಿಗರು ಇದರ ಪ್ರಯೋಜನವನ್ನು ಪಡೆಯಬೇಕು. ಬೆಲೆ. ರೂ. 5. ಪ್ರಕಾಶಕರು ಗದಗ ಶ್ರೀ ಸರಸ್ವತೀ ಪುಸ್ತಕ ಭಂಡಾರದ ಶ್ರೀ. ಬಿ. ಜಿ. ಸಂಕೇಶ್ವರರು.

ಇಡ್ಯ ವಿದ್ಯಾದಾಯಿನೀ ಸ್ಕೂಲ್, ಸುರತ್ಕಲ್—ಈ ಶಾಲೆಯ 27 ನೇ ವರ್ಷಂತ್ಯುತ್ಸವದ ವರದಿ ನಮ್ಮ ಹಸ್ತಗತವಾಗಿದೆ. ಜಿಲ್ಲೆಯ ಪ್ರಗತಿಪರ ಶಾಲೆಗಳಲ್ಲೊಂದಾದ ವಿದ್ಯಾದಾಯಿನೀ ಶಾಲೆಯಲ್ಲಿ ವರದಿಯ ವರುಷದಲ್ಲಿ 417 ವಿದ್ಯಾರ್ಥಿ ವಿದ್ಯಾರ್ಥಿನಿಯರು ಮತ್ತು 15 ಮಂದಿ ಅಧ್ಯಾಪಕರಿದ್ದರು. ಕಳೆದ ಮೇ ತಿಂಗಳಲ್ಲಿ ಶ್ರೀ ಕೃಷ್ಣಾಪುರ ಮಠಾಧೀಶ ಶ್ರೀ ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರಿಂದ ವಿದ್ಯಾದಾಯಿನೀ ಹೈಸ್ಕೂಲಿನ, ಪ್ರಾರಂಭೋತ್ಸವವೂ ನಡೆದಿದೆ. ವರದಿಯ ವರುಷದಲ್ಲಿ ಶಾಲೆಯ ಆಡಳಿತಕ್ಕಾಗಿ ರೂ. 662ನ್ನು ಆಡಳಿತ ಸಂಘದವರು ಸ್ವತಃ ಕೈಬಿಡಬೇಕಾಯಿತು. ವಿದ್ಯಾಭಿಮಾನಿಗಳೆಲ್ಲರ ಪ್ರೋತ್ಸಾಹ ದೊರೆತು ಈ ಶಾಲೆ ಸುದೃಢವಾಗಿ ಅಭಿವೃದ್ಧಿ ಹೊಂದಲೆಂದು ಹಾರೈಸುತ್ತೇವೆ.



ಈಗ ಉಳಿಸಿದ ಪ್ರತಿಯೊಂದು ರೂಪಾಯಿಯೂ..

ಯುದ್ಧ ಮುಗಿದಮೇಲೆ, ಈಗಿನಕ್ಕಿಂತಲೂ ಬಹುಮಟ್ಟಿಗೆ ಹೆಚ್ಚಾದ ಕೊಳ್ಳುವ (ಪದಾರ್ಥಗಳನ್ನು) ಶಕ್ತಿಯನ್ನು ಪಡೆಯುವುದು. ಪದಾರ್ಥಗಳು ಮಿತಿಮೀರಿ ತುಟ್ಟಿಯಾಗಿರುವ ಈ ಸಮಯದಲ್ಲಿ, ನಾವು ಅವುಗಳನ್ನು ಕೊಂಡುಕೊಂಡರೆ, ನಮ್ಮ ದುಡ್ಡಿಗೆ ತಕ್ಕ ಪ್ರಯೋಜನವು ದೊರಕುವುದಿಲ್ಲ ವೆಂಬಂಶವು, ಸಾಮಾನ್ಯ ಬುದ್ಧಿಯುಳ್ಳವರಿಗೂ ಕೂಡ ಸ್ಪಷ್ಟವಾಗಿ ತಿಳಿದಿರುತ್ತದೆ. ಇಲ್ಲದೆ, ಬಟ್ಟೆಗಳು, ಆಹಾರ ಸಾಮುಗ್ರಿಗಳು, ಮತ್ತು ಔಷಧಿಗಳು, ಇವುಗಳಿಗೆ ಈಗ್ಗೆ ಒಂದು ವರ್ಷದ ಹಿಂದೆ ಇದ್ದ ಬೆಲೆಗೂ, ಈಗಿನ ಬೆಲೆಗೂ ಹೋಲಿಸಿದ್ರೇ ಆದರೆ ಈಗಿನ ಹಣವು ಎಷು ಮಟ್ಟಿಗೆ ಕಡಿಮೆಯಾಗಿದೆಯೆಂಬುವುದೂ, ಮತ್ತು ಇವುಗಳ ಧಾರಣೆಯು ಇನ್ನೂ ಇಳಿಯುವದರಲ್ಲಿಯೇ ಇದೆಯೆಂಬುದು ವ್ಯಕ್ತವಾಗುವುದು. ಈ ವಿಚಾರವನ್ನು ಚೆನ್ನಾಗಿ ಸ್ಮೃತಿಯಲ್ಲಿಡಿ. ಕಳೆದವರ್ಷ, ನೂತನ ಯವಾಡಿದ ವಿವೇಕಿಯು, ಈ ವರ್ಷ, ಅಂದಿಗಿಂತಲೂ ಸುಲಭಕ್ರಯಕ್ಕೆ ತನಗೆ ಬೇಕಾದವಸ್ತುಗಳನ್ನು ಕೊಳ್ಳುವುದು. ಆದುದರಿಂದ ನಿಮ್ಮ ಕೈಲಾದಮಟ್ಟಿಗೂ ಈಗ ಹಣವನ್ನು ಉಳಿಸಿ, ಯುದ್ಧನಿಂತು, ಶಾಂತಿಯು ನೆಲೆಸಿದಾಗ ಈಗಿನಕ್ಕಿಂತಲೂ ಕನಿಷ್ಟಪಕ್ಷ ಇಮ್ಮಡಿ ಪ್ರಯೋಜನವನ್ನು ಹೊಂದುವುದು ಅತ್ಯಂತ ವಿವೇಕಯುಕ್ತವಾದ ಮಾರ್ಗ.

ಮತ್ತೊಂದಂಶವೇನೆಂದರೆ, ನೀವು ಉಳಿಸಿದ ಹಣವನ್ನು ವಿನಿಯೋಗಿಸುವಾಗ ಹೆಚ್ಚುಬಡ್ಡಿಗೆ ಆಸೆಪಡದೆ, ಬಂಡವಾಳಕ್ಕೆ ಚ್ಯುತಿಯಿಲ್ಲದ ಮಾರ್ಗವೆಂಬುವ ವಿಚಾರವನ್ನು ದೃಢಮಾಡಿಕೊಳ್ಳಿರಿ. ಆಭರಣಗಳು, ಜಮೀನುಗಳು, ಕಟ್ಟಡಗಳು, ಕೈಗಾರಿಕೆ ಸಾಮಾನುಗಳು, ಸರಕುಗಳು, ಇವುಗಳೆಲ್ಲವೂ, ಈ ಯುದ್ಧದ ದಿವಸಗಳಲ್ಲಿ, ಧನ ವಿನಿಯೋಗಕ್ಕೆ ಯೋಗ್ಯವಾಗಿಲ್ಲ. ಅವುಗಳ ಬೆಲೆ ಪ್ರಕೃತದಲ್ಲಿ ಮಿತಿಮೀರಿ ಏರಿರುವದೇನೋ ನಿಜ. ಆದರೆ, ಅವುಗಳು ಬಹುಮಟ್ಟಿಗೆ ಇಳಿಯುವದನ್ನೂ ಸಹ ನೀವು ಒಂದು ದಿನವಲ್ಲೊಂದು ದಿನ ನೋಡಿಯೇ ನೋಡುವಿರಿ.

ಭದ್ರತೆ ಮತ್ತು ಮಿತವಾದ ಬಡ್ಡಿ. ಇವುಗಳ ಮೇಲೆ ನಿಮ್ಮ ಧ್ಯಾನವಿದ್ದರೇ ಆದರೆ, ನಿಮ್ಮ ಹಣವನ್ನು ಗವರ್ನಮೆಂಟ್ ಲೋನುಗಳೂ, ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳೂ, ಇನ್ಷೂರೆನ್ಸ್, ಕೋಆಪರೇಟಿವ್ ಸಂಘಗಳೂ, ಪೋಸ್ಟಾಫೀಸ್ ಮತ್ತು ಬ್ಯಾಂಕುಗಳಲ್ಲಿ ಏರ್ಪಡಿಸಿರುವ ಉಳಿತಾಯ ಸೌಕರ್ಯಗಳೂ, ಇವುಗಳಲ್ಲಿ ನಿಮ್ಮ ಹಣವನ್ನು ಇಡಿರಿ.

ಹಣವನ್ನು ಕೈಲಾದ ಮಟ್ಟಿಗೂ ಉಳಿಸಿರಿ ಉಳಿಸಿದ್ದನ್ನು ವಿವೇಕಮಾರ್ಗಗಳಲ್ಲಿ ವಿನಿಯೋಗಿಸಿರಿ.

ಇದು ರಾಷ್ಟ್ರೀಯ ಯುದ್ಧಯುಜ್ಞವು ಭಾರತೀಯರ ಸಮಕ್ಷಮದಲ್ಲಿ ಮಾಡುವ ಅರಿಕೆ.

AAA 1113 KN.

ತಾಯಿಯ ಮಮತೆಯ ಅಥವಾ ಭಗಿನಿಯ ಪ್ರೇಮದ ವಾಕ್ಯಗಳನ್ನು ಕೇಳಿದಂತಾಗಿ ನನಗೆ ಬಹಳ ಸಂತೋಷವಾಯಿತು.

"ಶಾಂತೀ, ನೀನು ಯಾರು? ಎಲ್ಲಿಯವಳು? ನಾನು ಯಾರು? ಎಲ್ಲಿಯವನು? ನಿನ್ನ ಮತ್ತು ನನ್ನ ಸಂಬಂಧ ಏನು? ಜೀವನ ಪಥದಲ್ಲಿ ನಾವು ಇಬ್ಬರು ಪ್ರವಾಸಿಕರು! ನನ್ನಂತಹ ಒಬ್ಬ ಬೇಕೂಫ್, ಅಲ್ಪ ತರಗತಿಯ ಮನುಷ್ಯನ ಮೇಲೆ ನೀನು ಏನೆಂದು ಪ್ರೀತಿಸುವುದು? ನಿನಗೆ ನಾನು ಮಾಡಿರುವ ಉಪಕಾರವಾದರೂ ಏನು? ನನ್ನ ಪೂರ್ವವೃತ್ತ, ನನ್ನ ಸ್ಥಿತಿಗತಿಗಳ ಬಗ್ಗೆ ಸಹ ನಿನಗೆ ಏನೂ ತಿಳಿದಿರಲಾರದು. ನನ್ನ ದುಃಖಮಯ ಜೀವನದ ಅಂಶದಲ್ಲಿ ನೀನು ಸಹಭಾಗಿಯಾಗಬೇಕಾದೀತು!......"

ಆವಳು ಬಹಳ ಗಾಬರಿಗೊಂಡವಳಂತಾದಳು. ಆದರೂ ಧೈರ್ಯದಿಂದ ಮಾತನಾಡತೊಡಗಿದಳು. "ನನ್ನಲ್ಲಿ ಒಳ್ಳೇ ಮನಸಿನ ಗೃಹಸ್ಥರು ಬರುತ್ತಾರೆ. ಆದರೆ ಒಂದು ಜೀವ ಒಂದು ಜನ್ಮದಲ್ಲಿ ಒಬ್ಬನ ಮೇಲೆ ಮಾತ್ರ ಹೆಚ್ಚಿನ ಪ್ರೀತಿಯಿಡಲು ಸಾಧ್ಯ. ಜೀವನದಲ್ಲಿ ಒಂದು ವಿಷಯ ಲಭಿಸುವುದು ಅಥವಾ ರುಚಿಸುವುದು ಒಮ್ಮೆಯೇ! ಅದರಂತೆ ನಿಮ್ಮಲ್ಲಿ ನನಗೆ ಪ್ರೇಮ ಉದಯಿಸಿದಲ್ಲಿ ತಪ್ಪೇನು? ಈಗ ಬಹಳ ರಾತ್ರಿಯಾದುದರಿಂದ ಮಲಗುವ. ಇಲ್ಲದಿದ್ದಲ್ಲಿ ನಾಳೆ ಕೆಲಸಕ್ಕೆ ಹೋಗಲು ನಿಮಗೆ ಅಡ್ಡಿಯಾದೀತು".

"ಶಾಂತೀ ನಿನ್ನ ಹೃದಯದ ಅಂತರಾಳವನ್ನು ಸಂಪೂರ್ಣ ತಿಳಿದೆ. ನೀನು ನನ್ನ ತಾಯಿ, ನನ್ನ ತಂಗಿ, ನನ್ನ ಸ್ನೇಹಿತೆ, ಮತ್ತು ಎಲ್ಲವೂ ನೀನೆ! ನಿನ್ನೊರತು ನನಗೆ ಬೇರೆ-ಯಾರೂ ದಿಕ್ಕಿಲ್ಲ! ನಾಳೆಯಿಂದ ನಿನ್ನಲ್ಲಿಗೇ ನಾನು ಬರುತ್ತೇನೆ! ನೀನೆ ನನ್ನ ರಕ್ಷಕಿ!"

ಆವಳು ಆಗ ಬಹಳ ಸಂತೋಷಗೊಂಡಳು!

ವಾಸ್ತವಿಕವಾಗಿ ನಾನು ಶಾಂತಿಯಲ್ಲಿಯೇ ವಾಸಿಸತೊಡಗಿದೆ. ನನ್ನ ಕೂಲಿ ಕೆಲಸವೂ ಸರಾಗವಾಗಿ ನಡೆಯುತ್ತಿತ್ತು. ನನಗೆ ಈ ನಾಟಕೀಯ ಸ್ಥಿತಿಯನ್ನು ನೋಡಿ ಬಹಳ ಅಚ್ಚರಿಯಾಯಿತು! ಯಾರೋ ನನ್ನ ಮನಸ್ಸಿನಲ್ಲಿ-"ನಿನಗೆ ಶಾಂತಿಯ ವಿನಹ ಬೇರೆ ಗತಿ ಇಲ್ಲ. ಅವಳಿಗೂ ಹಾಗೆಯೇ. ನೀವಿಬ್ಬರೂ ದೈವದತ್ತವಾಗಿ ಸೇರಿದವರು. ನೀವು ಒಬ್ಬರೊಬ್ಬರನ್ನು ಪ್ರೇಮದಿಂದ ಕಂಡು ಸುಖದಿಂದ ಜೀವಿಸಿರಿ" ಎಂದು ಹೇಳಿದಂತಾಯಿತು!

ಹೀಗೆಯೇ ಇರುವಾಗ ಒಂದು ದಿವಸ ನಮ್ಮ ಭಾಗ್ಯವು ಉದಯಿಸುವ ಶುಭಸಮಯವು ತಾನೇ ಓಡುತ್ತ ಬಂದಿತ್ತು!

ಒಬ್ಬ ಸರದಾರ ಪುತ್ರನು ಅವಳಿದ್ದಲ್ಲಿಗೆ ದಿನ ಅಕಸ್ಮಾತ್ ಬಂದಿದ್ದನು. ಅವನ ಕಾರು ಮಾರ್ಗದಲ್ಲಿ ನಿಂತಿತ್ತು. ಡ್ರೈವರನು ಕಾರನ್ನು ಕಾಯುತ್ತಲಿದ್ದನು.

ಶಾಂತಿಯ ಲಕ್ಷ್ಯವು ಅವನ ಕಿಸೆಯ ಕಡೆಗೆ ಹೋಯಿತು ಅವನ ಕಿಸೆಯಲ್ಲಿ ಹತ್ತರ ಇನ್ನೂರು ನೋಟುಗಳು,ಐದರ ನೂರು ನೋಟುಗಳು ಮತ್ತು ಒಂದರ ಆರುನೂರು ನೋಟುಗಳಿದ್ದವು. ಅವುಗಳನ್ನು ಅವಳು ಅವನ ಕಿಸೆಗೆ ಕೈಹಾಕಿ ಆಗಲೇ ತೆಗೆದಿಟ್ಟದ್ದಳು.

ತನ್ನ ವಿಷಯಲಾಲಸೆಯು ತೀರಿದೊಡನೆ ಆ ಸರದಾರಪುತ್ರನು ಹೊರಟುಹೋದನು. ಅವನಿಗೆ ಈ ಕಳವು ತಿಳಿದಿದ್ದರೂ ಅವನು ಕೇಳುವಂಥವನಾಗಿರಲಿಲ್ಲ. ನಾವು ಕಳವು ಮಾಡಿದರೂ ಪಾಪಕರವಾಗಲಿಕ್ಕಿಲ್ಲ. ಯಾಕೆಂದರೆ ಅದರಲ್ಲಿ ಒಂದು ಆತ್ಮತೃಪ್ತಿಯಿತ್ತು. ಸಮಾಧಾನವಿದ್ದಿತು.

ಇಬ್ಬರು ಪ್ರವಾಸಿಕರು!

(೩ನೇ ಪುಟದಿಂದ ಮುಂದುವರಿದುದು)

ನಾವು ಆ ಕೂಡಲೇ ರಾತ್ರಿಯ ಲೋಕಲ್ ಟ್ರೈನಿನಲ್ಲಿ ಪೂನೆಗೆ ಹೊರಟೆವು. ಮತ್ತು ಮರುದಿವಸ ನಾವು ಪೂನೆಯ ಒಂದು ಪ್ರಸಿದ್ಧ ಹೋಟೆಲಿನಲ್ಲಿ ಇಳಿದೆವು. ಆದರೆ ನಾವು ಪೂನೆಯಂತಹ ದೊಡ್ಡ ಪಟ್ಟಣದಲ್ಲಿ ಹೆಚ್ಚು ಕಾಲ ಕಳೆಯುವುದು ಸರಿಯಲ್ಲವೆಂದು ತಿಳಿದು ಎಂಟು ದಿವಸ ಮಾತ್ರ ಇರುವುದೆಂದು ಗೊತ್ತುಮಾಡಿದೆವು.

ಒಂದು ದಿವಸ ನಾವು ಸಿನೆಮಾ ನೋಡಿ ಬಂದು ರಾತ್ರಿ ನಮ್ಮ ಕೋಣೆಯಲ್ಲಿ ಮಲಗಿಕೊಂಡಿರುವಾಗ ಶಾಂತಿಯೇ ಮಾತಿಗೆ ಮೊದಲುಮಾಡಿದಳು.

"ಇಂದು ನಾನು ನನ್ನ ಪೂರ್ವ ವೃತ್ತಾಂತವನ್ನು ಹೇಳಬೇಕೆಂದು ಇದ್ದೇನೆ".

"ಯಾವುದಕ್ಕಾಗಿ? ಅದರಿಂದ ಏನು ಹಿತವಿದೆ?" ನಾನು ಕೇಳಿದೆ.

"ನನ್ನ ಮನಸ್ಸಿನ ಹಿತಕ್ಕಾಗಿ".

"ಒಳ್ಳೇದು, ಹಾಗಾದರೆ ಹೇಳು" ನಾನೆಂದೆ. ಅವಳು ಹೇಳತೊಡಗಿದಳು:-

"ನನ್ನ ಅಜ್ಜನ ಹೆಸರು ಸಂಜೀವರಾಯರೆಂದು. ಬೆಳಗಾವಿಯೊಳಗಿನ ಒಂದು ಗ್ರಾಮದಲ್ಲಿ ಅವರು ವಾಸವಾಗಿದ್ದರು. ಅವರು ಹೆಂಡತಿಯೊಡನೆ ತನ್ನ ಜೀವನವನ್ನು ಸುಖವಾಗಿ ಸಾಗಿಸುತ್ತಿದ್ದರು. ಅವರಿಗೆ ತೆಂಗಿನಕಾಯಿಯ ತೋಟವಿದ್ದಿತು. ಒಮ್ಮೆ ಅವರ ಹೆಂಡತಿಗೆ ಏನೋ ಕಾಹಿಲೆ ಬಂದುದರಿಂದ ಔಷಧಿಗಾಗಿ ಸಾಲವಾಯಿತು. ನಂತರ ಸಾಲದ ಹಣಕ್ಕಾಗಿ ಅವರ ತೋಟವನ್ನು ಶ್ರೀನಿವಾಸರಾಯರೆಂಬವರು ಜಪ್ತಿಮಾಡಿದರು ಮತ್ತು ನನ್ನ ಅಜ್ಜನ ಮನೆಯೂ ಜಪ್ತಿಯಾಯಿತು. ಅಜ್ಜ ಮತ್ತು ಅವರ ಹೆಂಡತಿ ಅತಿಶಯವಾದ ದುಃಖದಿಂದ ಗೇಣುದ್ದ ಹೊಟ್ಟೆಯ ನಿಮಿತ್ತವಾಗಿ ಹೇಗೂ ಬೊಂಬಾಯಿಯನ್ನು ಸೇರಿದರು.

ಅಲ್ಲಿ ಅವರು ಒಂದು ಗಿರಣಿಯಲ್ಲಿ ಕೆಲಸಕ್ಕೆ ತೊಡಗಿದರು. ಒಂದು ಸಿಮೆಂಟಿನ ಕೊಠಡಿಯಲ್ಲಿ ಅವರ ಬಿಡಾರ. ಮೂರು ವರ್ಷಗಳ ಮೇಲೆ ಅಲ್ಲಿ ನನ್ನ ತಂದೆಯ ಜನ್ಮವಾಯಿತು. ಆ ಮೇಲೆ ನನ್ನ ಅಜ್ಜಿಗೆ ಮಕ್ಕಳೇ ಹುಟ್ಟಲಿಲ್ಲ. ಒಬ್ಬನೇ ಒಬ್ಬ ಮಗನ ಮೇಲೆ ನನ್ನ ಅಜ್ಜನಿಗೆ ಬಹಳ ಮಮತೆ. ಹದಿನಾಲ್ಕನೆ ವಯಸ್ಸಿನಿಂದ ನನ್ನ ತಂದೆ ಗಿರಣಿಯಲ್ಲಿ ಕೆಲಸಕ್ಕೆ ಹೋಗುತ್ತಿದ್ದಳು. ಹದಿನೇಳನೆಯ ವಯಸ್ಸಿನಲ್ಲಿ ನನ್ನ ತಂದೆಗೆ ಲಗ್ನವಾಯಿತು. ನನ್ನ ತಾಯಿಯೂ ಗಿರಣಿಯಲ್ಲಿ ಕೆಲಸಕ್ಕೆ ಹೋಗತೊಡಗಿದಳು. ಅವಳು ಗರೀಬಳಾಗಿದ್ದಂತೆ ಪಾಪದವಳೂ ಆಗಿದ್ದಳು ಎರಡು ವರ್ಷಗಳ ಹುಲ್ಲಿ ಅವಳಲ್ಲಿ ಒಂದು ಗಂಡು ಕೂಸು ಹುಟ್ಟಿತು. ಅದು ನಾಲ್ಕು ತಿಂಗಳಲ್ಲೇ ಕಾಹಿಲೆಯಿಂದ ಸತ್ತುಹೋಯಿತು ಆ ಮೇಲೆ ಅಂದರೆ ಇಪ್ಪತ್ತು ವರ್ಷಗಳ ಪೂರ್ವದಲ್ಲಿ ನನ್ನ ಜನನವಾಯಿತು. ನನ್ನ ಮೇಲೆ ನನ್ನ ತಾಯಿತಂದೆ ಮತ್ತು ಅಜ್ಜನಿಗೆ ಬಹಳ ಪ್ರೀತಿ. ನಂತರ ಎರಡುಮೂರು ವರ್ಷಗಳ ಮೇಲೆ ನನ್ನ ತಾಯಿಯು ಹೆತ್ತು ತೀರಿಹೋದಳು. ನನ್ನ ತಂದೆಯು ಅಜ್ಜನ ಒತ್ತಾಯದಿಂದ ಬೇರೊಂದು ಮದುವೆ ಮಾಡಿಕೊಂಡನು ಕೆಲವು ಕಾಲದ ಮೇಲೆ ನನ್ನ ಅಜ್ಜ ತೀರಿಕೊಂಡರು.

ತಂದೆ ಎರಡನೇ ಮದುವೆಯಾದುದೇ ಅವರು ನನ್ನ ಮೇಲೆ ಮಾಡಿದ ದೊಡ್ಡ ದ್ರೋಹ. ನನ್ನ ಮಲತಾಯಿ ಬಹಳ ಕ್ರೂರಸ್ವಭಾವದವಳಾಗಿದ್ದಳು. ದೇವರು ಮನುಷ್ಯನಿಗೆ ಎಂತಹ ಕಷ್ಟಗಳನ್ನು ಒಮ್ಮೊಮ್ಮೆ ಕೊಡುತ್ತಾನೆ ಎಂಬುದಕ್ಕೆ ನಾನೇ ನಿದರ್ಶನ.! ನನ್ನ ತಂದೆಯು ಪ್ಲೇಗಿನಿಂದ ನರಳಿ ಕೆಲಕಾಲದಲ್ಲಿ ಮರಣಹೊಂದಿದರು. ನಾನು ನಿರಾಶ್ರಿತಳಾದೆ; ಹತಾಶಳಾದೆ! ನನ್ನ ದುರ್ದೈವವು ನನ್ನನ್ನು ಕಾಡತೊಡಗಿತು. ತಾರುಣ್ಯದ ಸೌಂದರ್ಯವೆಂಬ ಭೂತವು ನನ್ನ ನೀತಿಯ ಕೊಲೆಮಾಡಿತು!

ನಾನು ಇಂಗ್ಲೀಷ್ ಸಾಲ್ಕರಲ್ಲಿ ಓದುತ್ತಿದ್ದೆ. ಮನೆಗೆ ಬಂದು ಎಲ್ಲಾ ಕೆಲಸಗಳನ್ನು ನಾನೇ ಮಾಡಬೇಕಾಗುತ್ತಿತ್ತು.

ಒಂದು ದಿನ ಮಲತಾಯಿ ನನ್ನನ್ನು ತನ್ನ ಸ್ವಾರ್ಥಕ್ಕಾಗಿ ಬಲಿಕೊಟ್ಟಳು! ಹಾಯ್!

ದಿನನಿತ್ಯದಂತೆ ಮಧ್ಯಾಹ್ನದಲ್ಲಿ ನಾನು ಅವಳಿಗೆ ರೊಟ್ಟಿಗಳನ್ನು ಗಿರಣಿಗೆ ಕೊಂಡು ಹೋಗಿದ್ದೆ. ನನ್ನನ್ನು ನೋಡಿ ಅಲ್ಲಿಯ ವಿವ್ಹಿಂಗ ಮಾಸ್ತರನು ಮುಗ್ಧನಾಗಿದ್ದ. ನನ್ನ ಮಲತಾಯಿಯು ನನ್ನನ್ನು ಅಂದು ವಾಪಾಸು ಕಳುಹಿಸದೆ ತನ್ನ ಹಿಂದೆಯೇ ಬರಹೇಳಿ ಒಂದು ಕತ್ತಲೆ ಮುಸುಕಿದ ಕೊಠಡಿಗೆ ಕೊಂಡೊಯ್ದಳು. ಅಲ್ಲಿ ಒಬ್ಬ ನಲ್ವತ್ತರ ಗಡಿದಾಟಿದ ಕ್ರೂರ - ಚರ್ಯೆಯ ಮನುಷ್ಯನು ಸಿಗರೇಟು ಸೇದುತ್ತಾ ಕುರ್ಚಿಯ ಮೇಲೆ ಕುಳಿತಿದ್ದ. ಅವನ ಎದುರು ನನ್ನನ್ನು ನಿಲ್ಲಿಸಿ, ತಾಯಿ ಹೇಳಿದಳು:—"ಮೆನೇಜರ್ ಸಾಹೇಬ್. ನೀವು ಹೇಳಿದಂತೆ ನಾನು ಕೇಳಿಕೊಂಡಿದ್ದೇನೋ ಇಲ್ಲವೋ!?" ಹೀಗೆನ್ನುವಾಗ ಆಕೆ ವೈಯ್ಯಾರದಿಂದ ನಗುತಿದ್ದಳು.

ನನಗೇನೂ ಅರ್ಥವಾಗದೆ ಸುಮ್ಮಗೆ ನಿಂತಿದ್ದೆ. ಅವನು, ನನ್ನ ತಾಯಿಯನ್ನು ನನ್ನಿದಿರಲ್ಲೇ ಅಪ್ಪಿಕೊಂಡು ಚುಂಬಿಸುತ್ತ:- "ನೀನು ಇನ್ನು ಈ ಗಿರಣಿಯ ಅಧಿಕಾರಿಣಿಯಾಗುವಿ!" ಎಂದ ಆ ಚಂಡಾಲಿನಿ ನನ್ನನ್ನು ಅಲ್ಲಿಯೇ ಬಿಟ್ಟುಹೊರಟು ಹೋದಳು

ಅವನು ಎದ್ದ; ಮೆಲ್ಲಮೆಲ್ಲನೆ ಹೋಗಿ ಬಾಗಿಲಿನ ಅಗಳಿಯನ್ನು ಹಾಕಿದ. ಮತ್ತು ನನ್ನ ಎರಡೂ ಕೈಗಳನ್ನು ಹಿಡಿದುಕೊಂಡು ಬಲವಾಗಿ ತಳ್ಳಿ ಅಲ್ಲಿಯ ಮಂಚದ ಮೇಲೆ ಮಲಗಿಸಿದ. ನಾನು ಭೀತಿಯಿಂದ ನಡುಗತೊಡಗಿದೆ. ಅವನು ನನ್ನನ್ನು ಒತ್ತಿ ಹಿಡಿದು......

....ನಾನು ಎಚ್ಚರವಾದಾಗ ಒಂದು ಮೃದುವಾದ ಗಾದಿಯ ಮೇಲೆ ಮಲಗಿಕೊಂಡಿದ್ದೆ. ನನ್ನ ಅಂಗಾಂಗಗಳಲ್ಲಿ ಬಹಳ ನೋವು ಎದ್ದಿತ್ತು. ಅಲುಗಾಡಲು ಚೇತನವಿರಲಿಲ್ಲ. ಹೇಗೆ ಹೇಗೋ ಸಂಕಟವಾಗಿ ಪುನಃ ಬಿದ್ದುಕೊಂಡೆ.......

.......ಅಂದಿನಿಂದ ಎಂಟು ತಿಂಗಳವರೆಗೆ ನಾನು ಅದರ ಬಂಧನದಲ್ಲಿ ಇರಬೇಕಾಯಿತು. ಪ್ರತಿ ದಿವಸ ರಾತ್ರಿ ಆ ನರಾಧಮ ಬೇರೆ ಒಬ್ಬಿಬ್ಬರು ನರಪಶುಗಳೊಂದಿಗೆ ಕೋಣೆಗೆ ಬಂದು, ಸುರಾಪಾನ ಮಾಡಿ, ನನ್ನ ಮೇಲೇರಿ ಬರುತ್ತಿದ್ದ. ಒಮ್ಮೊಮ್ಮೆ ಇತರ ಎಳೆಪ್ರಾಯದ ತರುಣಿಯರನ್ನೂ ಆ ಕಾಮಾಂಧರು ಕರೆದುಕೊಂಡು ಬಂದು ನನ್ನಿದಿರಲ್ಲಿಯೇ ಕಡಿಸುತಿದ್ದರು.

ನಾನು ಕಿರಿಚುತ್ತಿದ್ದೆ, ಒದರುತ್ತಿದ್ದೆ. ನನಗೆ ಅವರು ನಡೆಸುತ್ತಿರುವ ಅತ್ಯಾಚಾರಗಳನ್ನು ತಾಳಿಕೊಳ್ಳುವುದು ಮೊದ ಮೊದಲು ಕಷ್ಟವೆನಿಸುತ್ತಿತ್ತು! ಕೊನೆಗೆ ನನ್ನ ದೇಹದ ಮೇಲೆ ಭಯಂಕರ ಗುಹ್ಯರೋಗಗಳು ಕಾಣಿಸಿಕೊಂಡವು. ಕೆಲವು ಕಾಲದ ನಂತರ ನಡೆಯಲು ಸಹ ಆಗದಂತಾಯಿತು. ಇಲ್ಲದ ವಿಚಾರಗಳನ್ನು ಎಣಿಸುತ್ತ ನಾನು ದಿವಸ ಕಳೆಯುತ್ತಿದ್ದೆ...

—ಒಂದು ದಿನ ಅವರು ನನ್ನಂತಹ ಒಬ್ಬ ಎಳೆ ಪ್ರಾಯದ ಕಿಶೋರಿಯನ್ನು ಕೊಠಡಿಗೆ ತಂದರು ನನ್ನನ್ನು ದಸ್ಕೆಗೆಳೆದುಕೊಂಡು ಹೋಗಿ ಬಿಟ್ಟು ಬಾಗಿಲು ಮುಚ್ಚಿದರು. ನಾನು ದುಃಖಿಸುತ್ತ ಒಬ್ಬ ಮುದುಕಿಯಲ್ಲಿಗೆ ಹೋದೆ. ಅವಳು ನನ್ನನ್ನು ಸ್ವಾಗತಿಸಿದಳು. ಅವಳೊಂದಿಗಿದ್ದ ಬೇರೆ ಐವರು ಸೂಳೆಗಳೊಂದಿಗೆ ನಾನು ಆರನೆಯವಳಾದೆ. ಎರಡು ವರ್ಷಗಳಲ್ಲೇ ನಾನು ಸ್ವತಂತ್ರಳಾದೆ. ಇಂದಿನಿಂದ ನಾನು ಆ ವೇಶ್ಯಾವೃತ್ತಿಗೆ ತಿಲಾಂಜಲಿಯನ್ನಿತ್ತೆನೆಂದು ತಿಳಿಯಬೇಕು. ಈಗ ನಾವು ನನ್ನ ಅಜ್ಜನಿದ್ದ ಬೆಳಗಾವಿಯ ಹಳ್ಳಿಗೆ ಹೋಗಿ, ಅವರ ಆಸ್ತಿಯನ್ನು ತೆಗೆದುಕೊಂಡು ಅಲ್ಲೇ ಜೀವನ ಪಥವನ್ನು ಸಾಗಿಸುವ!"— ಎಂದಳು!

[illegible]ಳ ಚರಿತ್ರೆಯನ್ನು ಕೇಳಿ ತುಂಬಾ ಖೇದವಾಯಿತು. ನಾನು ನನ್ನ ಚರಿತ್ರೆಯನ್ನು ಹೇಳಿದೆ. ಇಬ್ಬರೂ ಒಮ್ಮೆಗೇ ಒಂದು ದೀರ್ಘವಾದ ಸುಯ್ಯನ್ನು ಬಿಟ್ಟೆವು. ನಾವು ಶ್ವಾಸತಃ ಒಂದಾದೆವು.

ನಾನು ಬ್ರಾಹ್ಮಣ ಜಾತಿಯವ, ನನಗೆ ಈಗ ತಿರುಗಿ ಬ್ರಾಹ್ಮಣನಾಗಲು ಮನಸ್ಸಿಲ್ಲ. ಶಾಂತಿಯಂತಹ ಒಬ್ಬ ದೇವತೆ—ಹೌದು, ನನಗೆ ಜೊತೆ ಸಿಕ್ಕಿದ ದೇವ ಕನ್ಯೆ—ಯನ್ನು ಕೂಡಿಕೊಂಡು ಬಾಳುವುದೇ ನನಗೆ ಒಂದು ಮಹಾ ಭಾಗ್ಯವೆನಿಸುತ್ತಿದೆ!

ಕಾರ್ಕಳ:—ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯು ಕಳೆದ ಆಗೋಸ್ತು ತಿಂಗಳ ಹಿಂದೀ ಪರೀಕ್ಷೆಗಳನ್ನು ಕೊಟ್ಟ ಕಾರ್ಕಳ ಕೇಂದ್ರದ ಭಾಷಾಭ್ಯಾಸಿಗಳಲ್ಲಿ ಸೇಕಡಾ 80ರಷ್ಟು ಮಂದಿ ಅಂತವ್ಯ ಪರೀಕ್ಷೆಗಳಲ್ಲಿ ಉತ್ತೀರ್ಣರಾಗಿರುವದು ಮಾತ್ರವಲ್ಲವೆ, ರಾಷ್ಟ್ರಭಾಷೆಯ ಕುಮಾರಿ ಯಂ. ಶಾರಾವತಿಯವರು ದಕ್ಷಿಣ ಭಾರತದಲ್ಲಿ ಸರ್ವ ದ್ವಿತೀಯರಾಗಿ ತೇರ್ಗಡೆ ಹೊಂದಿರುವರು.

ಪಡುಬಿದ್ರೆ:—ಮಾಮೂಲು ಪ್ರಕಾರ ಆಗುವ ಕಂಬಳವು ತಾ. 10-12-'44ನೇ ಆದಿತ್ಯವಾರ ಜರಗುವುದು.

The Pangal Nayak Bank Limited.

(Incorporated in 1920.)

Registered Office Court Road, UDIPI.

Branches at— Udipi, Mangalore, Katapadi, Kanhangad, Kinnigoli and Nileshwar, South Canara District.

Discounting of demand and short term negotiable instruments for approved parties, granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms, acceptance of Fixed, Current, Savings Bank and Cumulative deposits and every other type of up-to-date Banking service is at the disposal of all the sections of the discreet public.

For business proper please enquire at any one of our Offices.

15th April 1944.

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಟ್ಟೆ ಕುಟ್ಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹುಳಿಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya. GADAG.

The best preventive in epidemics of CHOLERA

"BHUVANENDRA"

CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ'

ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ. ಸಾಯನ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ ಶ್ರೀ। ಆರ್। ಎಸ್। ಶೆಟ್ಟಿ, ರಥಬೀದಿ; ಡಾ। ಟಿ। ಜಿ। ಆಚಾರ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಣೈಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ೩ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ

—ಮಕ್ಕಳನ್ನು ಪಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಟ್ಟೆಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹುಳಿಖಾರವನ್ನು ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜ ೧೨ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ. ವಿಜಾಪೂರ—ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕಮಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ, ಕ್ಯಾಲಿ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನ್ಸಬಹುದು. ಉಡುಪಿ ಏಜಂಟರು: — ನವಭಾರತ ಬುಕ್ ಡಿಪೊ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ ಬೆಲೆ ೦—೧೦—೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು.

ಪ್ರೇಮಪ್ರವಾಹವು ಹೇಗೆ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮಪ್ರವಾಹ

ಸ್ವಾರಸ್ಯವಾದ ೫ ಕತೆಗಳ ಸಂಗ್ರಹ ಬೆಲೆ ೦-೬-೦

ಬಹಿರಂಗವಾಗಿ ಅಲ್ಲವಾದರೂ ಅಂತರಂಗವಾಗಿ ನೋಡತಕ್ಕ

ಆರ್ಟ್ ಚಿತ್ರಗಳು

ಹಲವಾರು ಸುಂದರಿಯರ ನೈಜಚಿತ್ರಗಳ ಕಟ್ಟು. ಬೆಲೆ ೦—೬—೦

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಳುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ. ೧—೮—೦

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. ಬೆಲೆ: ೦—೧೨—೦

ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

· ನವಭಾರತ ಪುಸ್ತಕ ಭಂಡಾರ, ಉಡುಪಿ.

EDITED PRINTED & PUBLISHED BY K. H. SHETTY AT THE NAVAYUGA PRESS. UDIPI S. India

Regd. No. M. 3618.

ವಾರ್ಷಿಕ ಚಂದಾ ರೂ. 4—0—0 ಬಿಡಿ ಸಂಚಿಕೆ 0—1—6

Estd. 1921 ಸ್ಥಾಪನೆ

NAVAYUGA
ನವಯುಗ

ವರ್ಷ ೨೪ ವಾರ ೧೩ | ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ | Vol. 24 No. 13

Founder SRI A. B. SHETTY.

ಉಡುಪಿ ● 7-12-1944 ● ಮಂಗಳೂರು.

ದಿ ಜುಪಿಟರ್
ಜನರಲ್ ಇನ್ಶ್ಯೂರೆನ್ಸ್
ಕಂಪೆನಿ, ಲಿ, ಬೊಂಬಾಯಿ.
ವಿಮೆಯಿಳಿಸ ಬೇಕೆ?
ಏಜಂಟರಾಗುವಿರಾ!
-ಹೀಗಾದರೆ ಕೂಡಲೇ-
ಪಿ. ಡಿ. ನಾಯಕ, ಉಡುಪಿ.
ದಕ್ಷಿಣ ಕನ್ನಡದ ಚೀಫ್ ಏಜೆಂಟ್.
-ಇವರಿಗೆ ಬರೆಯಿರಿ-
1 ಕೋಟಿಗೆ ಮಿಕ್ಕಿ ವ್ಯವಹಾರ!
ಈ ವರುಷವೇ ರಜತೋತ್ಸವ!
The Jupiter General Insurance Company Ltd.

ಅಂತರಂಗ
ಉಡುಪಿ
ಅಖಿಲ ಕರ್ನಾಟಕದ ಹೊಸ
ಮಾದರಿಯ ಸಚಿತ್ರ
ವಿನೋದ ವಾರ ಪತ್ರಿಕೆ.
ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ. 0—1—6

Transact with

The Vijaya Bank Ltd.
H. O. MANGALORE.
Branches all over the District and in Bombay city,
For all kinds of Banking business

ದಿ ವಿಜಯ ಬೇಂಕ್
ಲಿಮಿಟೆಡ್,
ಹೆಡ್ ಆಫೀಸು: ಮಂಗಳೂರು.
ಜಿಲ್ಲೆಯ ಎಲ್ಲಾ ಕಡೆಗಳಲ್ಲಿ ಮತ್ತು ಮುಂಬಾಯಿ ನಗರದಲ್ಲಿ ನಮ್ಮ ಶಾಖೆಗಳು ಎಲ್ಲಾ ತರದ ಬೇಂಕಿಂಗ್ ವ್ಯವಹಾರಗಳು ನಡೆಸಲ್ಪಡುವುದು.

"We are glad to announce that the Canara Bank Ltd, are our Clearing agents at Bombay'.

ದಿ ಕೆನರಾ ಬ್ಯಾಂಕ್ ಲಿಮಿಟೆಡ್‌ಯವರು ನಮ್ಮ ವಿಜಯಾ ಬ್ಯಾಂಕಿನ ಕ್ಲಿಯರಿಂಗ್ ಏಜಂಟರಾಗಿರುತ್ತಾರೆಂದು ತಿಳಿಸಲು ಸಂತೋಷಪಡುತ್ತೇವೆ.

M. M. Bhandary,
Agent Bombay Branch,

BAG ON HIS HEAD

If you saw any passenger sitting in a train with his bag on his head, you will laugh your sides out because good arrangements are made in the train to keep the luggage

One worrying about one's future and that of one's family is like the passenger with his bag on the head because fine arrangements to ensure them through insurance are easily available.

THE CANARA MUTUAL ASSURANCE CO., LTD.,
UDIPI (S India.)

ಅಮೃತಾಂಜನ
ತಲೆನೋವು, ಶಿರೋವೇದನೆ, ಉಳುಕು, ಶೀತ, ಗಂಟಲು, ಧುಮ, ಹಲ್ಲು ನೋವುಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ವಿಷ ಮುಂತಾದ ಜೀವಜಂತುಗಳ ಕಡಿತ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಪರಿಹಾರಕ ಮತ್ತು ಸಹ ಸಮ್ಮತಿ ಚಿಕಿತ್ಸೆ
REGD
ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.
ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪ್ರೊಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಜನರ ಪ್ರಯೋಜನವನ್ನು ಸಾಧಿಸುತ್ತಿರುವದು.
The Moolky Bank Ltd.,
Moolky, S. K

Sri Narayan Guru Bank, Ltd.,

(Incorporated in British India. Liability of Members is Limited.)
Regd. Head Office: HAMPANKATTA,
MANGALORE.
Branches: UDIPI, & Coondapur.

Authorised Capital	... ..	**Rs 2,00000**
Issued Capital	. ....	**„ 1,00000**
Paid up Capital	. ....	**„ 72,950**

The Company has commenced Business by obtaining from the Government the Certificate of Commencement of Business on the 19th August, 1944 under the Indian Companies Act, 1913

Strong Board of Directors

Consent of the Central Government has been obtained under the Defence of India Rules 94 A "It must be distinctly understood that in giving this consent the Govt. of India does not take any responsibility for the financial soundness of any scheme or for the correctness of any of the statements made or opinion expressed with regard to them". The Government of India has been pleased to extend the period till the 13th January 1945 for the sale of shares.

A few shares at par available.

Rs. 50/- per share, Re 1 - Entrance Fee per share.

Hundreds have already taken up shares'

WHY NOT YOU?

Current and Savings Bank Accounts are opened. Fixed Deposits are accepted. Enquire for Rules of Business and rates of Interest.

MANGALORE JARAPPA,
President & Managing Director.

ಕ್ರೌನ್
ರಬ್ಬರ್ ಸ್ಟ್ಯಾಂಪ್ ಕಂಪೆನಿ
18 ಬಲ್ಮಠ ರಸ್ತೆ, ಮಂಗಳೂರು.
ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.
Crown Rubber Stamp Co.
18 Balmat Road, MANGALORE
Approved firm by the Govt. of Mysore. Certified by the Agent of the Govt of India in Ceylon. ESTD 1906

ಮುಟ್ಟಾಗುವಿಕೆ
ಪಲತಿಂಗಳಿಂದ ಕಟ್ಟಾಗಿದ್ದರೂ, ತಪ್ಪಿದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ—'ಕುಮಾರಿ' (Govt Regd) ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ 3/- ಕೈಮೀರಿದ ಕೇಸುಗಳಿಗೆ ರೂ.5,(ವಿ.ಪಿ.12 ಆಣೆ ಅಲಾಯಿದ) Mrs P. DEVEE, F. D. S. (N) Tollygunge, Calcutta.
ಸ್ಟಾಕಿಸ್ಟ್: ಪ್ರೊಪ್ಯುಲರ್ ಸ್ಟೋರ್ಸ್, ಮಂಗಳೂರು.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ
ಬಾಲಚಂದ್ರ
ಇದೀಗ ಮೂರನೇ ಸಂಪುಟಾರಂಭವಾಗಿದೆ
ವಿದ್ಯಾ ಇಲಾಖೆಗೆ ಸಂಬಂಧಿಸಿದ ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ
ವಾರ್ಷಿಕ ಚಂದಾ
ರೂ 1—8—0 ಮಾತ್ರ
ಹೆಚ್ಚಿನ ವಿಚಾರಕ್ಕೆ ಬರೆಯಿರಿ
ಬಾಲಚಂದ್ರ, ಉಡುಪಿ.

Decorate your home with
Life-like Oil Painting
of those dear and near to you
M. S Shirale,
MODERN STUDIO.
UDIPI



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ
ಕಲ್ಯಾಣಿ ವ್ಯಾಪಾರಾಲಯ,
ರಥಬೀದಿ ಉಡುಪಿ

CHAMPAE'S
Snow & Castrex
Sole Distributers for (India.)
Sukhananda Stores
Santhekatte, UDIPI, S. K.

ಉರ್ವ ಗ್ರಾಮದ ಪಟೇಲಿಕೆಯು ನಮ್ಮ ಆನಂದ ರಾಯನ 'ವಾರೀಸು' ಹಕ್ಕಿನದೆಂದು ಒಂದೇ ತಂಗತಿಯವರಾದ ನಮಗೆಲ್ಲರಿಗೂ ಗೊತ್ತು. ಉರ್ವದ ಸೆಲೀನ ಬಾಯಿಯೂ ಆನಂದ ರಾಯನೂ ನಮ್ಮ ತರಗತಿಯಲ್ಲಿ ಪ್ರಸಿದ್ಧ ವಿದ್ಯಾರ್ಥಿಗಳು. ಒಂದೇ ಗ್ರಾಮದವರಾದುದರಿಂದ ರಜೆ ಸಿಕ್ಕಿದೊಡನೆ ಊರಿಗೆ ಹೋಗುವುದೂ ರಜೆ ಮುಗಿದೊಡನೆ ಮರಳುವುದೂ ಜತೆಯಲ್ಲಿಯೇ. ಆದುದರಿಂದ ಅವರಿಬ್ಬರೊಳಗೆ ಬಹಳ ಸಲುಗೆ ನನಗೆ ಬಾಲ್ಯದಲ್ಲಿಯೇ ಮದುವೆಯಾಗಿತ್ತು. ನನ್ನಾಕೆಯ ತವರು ಉರ್ವ ಗ್ರಾಮದಲ್ಲಿಯೆ. ಒಂದು ಬಾರಿ ರಜೆ ದೊರೆತೊಡನೆ ನಾನೂ ಅವನೊಂದಿಗೆ ಹೋರಟಿದ್ದೆ ಉರ್ವಕ್ಕೆ. ದಾರಿಯಲ್ಲಿ ನಮ್ಮ ಅಧ್ಯಾಪಕರ ವಿಮರ್ಶೆಯು ನಡೆದ ಬಳಿಕ ಆನಂದರಾಯನು "ದಾಂತಿ, ನನ್ನ ಒಂದು ಪ್ರಶ್ನೆಗೆ ಉತ್ತರ ಕೊಡಬಲ್ಲೆಯಾ" ಎಂದು ಕೇಳಿದ 'ಸಾಧ್ಯವಾದರೆ ಕೊಡಬಹುದು ಇಲ್ಲದಿದ್ದರೆ ಅಂತರಂಗಕ್ಕೆ ಬರಿಯುವ" ಎಂದೆ ನಾನು 'ಮತಾಂತರವಾಗುವುದಾದರೆ ಕ್ರೈಸ್ತ ಮತ ಒಳ್ಳೇದೇ ಬ್ರಹ್ಮಸಮಾಜ ಒಳ್ಳೆದೇ'" ಇದು ಆನಂದನ ಪ್ರಶ್ನೆ. "ರಾಮಮೋಹನ ರಾಯಿ ಮತ್ತು ಏಸುವನ್ನು ಒಟ್ಟು ಕೂಡಿಸಿ ಅದರಲ್ಲಿ ಕೇಳು" ಒಂದು ಚಿಮುಟಿ ನಶ್ಯ ಸೇದುತ್ತಾ ನಾನು ಕೊಟ್ಟ ಉತ್ತರ ಇದು. ಮೂರು ವರುಷಗಳ ಹಿಂದಿನ ಮಾತು

× × ×

ನಾನು ನನ್ನ ಹೈಸ್ಕೂಲು ಶಿಕ್ಷಣವನ್ನು ಮುಗಿಸಿ ಬೊಂಬಾಯಿಗ ಹೋದವನು ಮೊನ್ನೆ ೩ನೇ ಬಂದಿದ್ದ ಊರಿಗೆ. ಒಂದೆಡೆ ನನ್ನ ನೆಂಟರ ಮನೆಗೆ ಹೋಗಬೇಕೆಂಬ ಆತುರ, ಇನ್ನೊಂದೆಡೆ ನನ್ನ ಹಳೆಯ ಸಹಪಾಠಿಗಳನ್ನು ಕಾಣಬೇಕೆಂಬ ಆಕಾಂಕ್ಷೆ, ಇವುಗಳು ಮರುದಿನವೇ ನನ್ನನ್ನು ಉರ್ವಕ್ಕೆ ಕರೆದೊಯ್ದುವು. ಬಸ್ಸು ಸಾಯಂಕಾಲ ಗಂಟೆ ೬ಕ್ಕೆ ಉರ್ವಕ್ಕೆ ಮುಟ್ಟಿತು. ಮಾರ್ಗದಿಂದ ಸ್ವಲ್ಪ ದೂರ ನನ್ನಾಕೆಯ ಮನೆ ನೇರಾಗಿ ನಡದು ಮನೆಯ ಜಗಲಿ ಹತ್ತಿದೆ ಅಧಿಕಾರದಿಂದ--ಈಗಣ ರೇಶನಿಂಗ್ ಆಫೀಸರರು ಒಳ ನುಗ್ಗುವಂತೆ ನನ್ನಾಕೆ ನನ್ನ ನೋಡಿ ಓಡಿದಳು ಒಳಕ್ಕೆ ಕಳುಹಿಸಿದಳು ತಾಯಿಯನ್ನು ಹೊರಕ್ಕೆ ಮತ್ತೆ ಹೇಳಬೇಕೆ ಉಪಚಾರ?

ನಾನು ಬಂದ ವಾರ್ತೆ ನನ್ನ ನೆಂಟರ ಮನೆಯ ಒಕ್ಕಲು ರೀತು ಬಾಯಿಗೆ ಯಾರು ಹೇಳಿದರೋ ನಾನರಿಯೆ. ಓಡಿ ಓಡಿ ಬಂದಳಾಕೆ, ನನ್ನನ್ನು ಕಾಣುವ ಆತುರದಿಂದ. ಕ್ಷೇಮ ಸಮಾಚಾರದ ನಂತರ ನಾನು ಕೇಳಿದೆ "ಇಲ್ಲಿ ಈಗ ಪಟೇಲರಾರು?" ಅದಕ್ಕವರೆಲ್ಲಾ ಗೊಳ್ಳೆಂದು ನಗಬೇಕೆ! 'ಇದೇಕೆ ಪರಿಹಾಸ್ಯ ರೀತಮ್ಮಾ?' ಎಂದು ಕೇಳಿದೆ ನಾನು. "ಪರಿಹಾಸ್ಯವಲ್ಲ, ರಹಸ್ಯ, ರಹಸ್ಯ 'ಬಯಲಾ'ಗಿದ ಬೀಜ ಮೊಳೆತು ಸಸಿಯಾಗಿ ಫಲ ಬಿಟ್ಟಿದೆ. ಇನ್ನು ಕೊಯ್ದು ಕಟ್ಟಿ ಹೊರುವುದಾರೋ ನೋಡಬೇಕು" ಎಂದವಳ ಉತ್ತರ "ಕಡಂಗೋಡ್ಲು ಕವಿಗಳನ್ನೂ ನಾಚಿಸಿಬಿಡುತ್ತದ ನಿನ್ನ ಭಾವ ಕವಿತೆ" ಎಂದಳು ನನ್ನಾಕೆ. ನನ್ನ ಕುತೂಹಲ ಇಮ್ಮಡಿಯಾಯಿತು "ಏನು ವಿಚಾರ, ಸರಳವಾಗಿ ಹೇಳಬಾರದೆ" ಎಂದೆ ನಾನು. "ಸರಳವೋ ವಿರಳವೋ ನಾನರಿಯೆ. ಅಂತೂ ಈಗಿನ ತರುಣ

ಈ ವಾರದ ಕತೆ

ಇಗೋ, ಹಾಕಿಕೋ ಚೂರಿ!

ಕತೆಗಾರ —ಶ್ರೀ 'ದಾಂತಿ'

-ತರುಣಿಯರ ಬಿಡಗು ಬಿನ್ನಾಣಗಳೇ ಬೇರೆಯಪ್ಪಾ'ಎಂದಳು ಮುದುಕಿ ನನ್ನತ್ತೆಯನ್ನು ನೋಡಿ ಮುಗುಳು ನಗುತ್ತಾ 'ಹಾಂ ನಿಮ್ಮಲ್ಯಾಕೆ ಗುಟ್ಟು ನೋಡಿ ನಿಮ್ಮೊಡನೆ ಕಲಿಯುತಿದ್ದ ಆನಂದ ರಾಯರೇ ಈಗಿನ ಪಟೇಲರು ಅಲ್ಲ- ಅವರಿಗೆ ಕೆಲವು ತಿಂಗಳುಗಳ ಹಿಂದೆ 'ಸರ್ವಾಧಿಕಾರಿ'ಯೆಂದು ಕರೆಯುವುದಿತ್ತು ಊರವರು ಪ ನೆಬೇಕು ಬೇಗಬೇಕಾದರೆ ಪಟೇಲರ ದಯೆಯನ್ನು ಮೊದಲು ಸಂಪಾದಿಸಬೇಕು ಚಿಮಿಣಿ ಎಣ್ಣೆ ಸಕ್ಕರೆ--ಅವರು 'ಪಟ್ಟಿ' ಕೊಟ್ಟರೆ ಉಂಟು ಎಳೆ ಪ್ರಾಯದಲ್ಲಿ ಅಧಿಕಾರ ಸಿಕ್ಕಬಾರದು ಬಾಳೆ ಮರಕ್ಕೆ ಬಳ್ಳಿ ನಡಬಾರದು —ಎಂಬುದು ಇದಕ್ಕೇನಾ. ದಮ್ಮಯ್ಯ ಹಾಕಿದೆ "ಸ್ವಾಮೀ ಒಂದು ಕಾಲು ಬಾಟ್ಲಿ ಎಣ್ಣೆಗೆ ಪಟ್ಟಿ ಕೊಡಿರೆಂ"ದು 'ಈಗ ಬಾ, ಮತ್ತೆ ಬಾ, ಪುರ್ಸೊತ್ತಿಲ್ಲ ಹೋಗಿ ಬಾ" ಎಂದು ಕಳಿಸಿದರು ನನ್ನನ್ನು ಇಲ್ಲದಿದ್ದರೆ ನಾನೂ ಅಷ್ಟು ದಮ್ಮಯ್ಯ ಹಾಕುತ್ತಿರಲಿಲ್ಲ ನನ್ನ ಕಿರಿ ಮಗಳೊಬ್ಬಳು ಪ್ರಸವಕ್ಕೆ ಬಂದಿದ್ದಳು ಎಲ್ಲಿಯಾದರೂ ಬೇಕಲ್ಲಾ ಆಪತ್ಕಾಲಕ್ಕೆ ಕಣ್ಣಿಗೆ ಹಾಕಲಿಕ್ಕಾದರೂ ಅದಕ್ಕಾಗಿ ಬೇಡಿದ ಒಂದು ಸರ್ತಿ ಅಂದರು- "ಘಂಟೆಗೆ ಮುತ್ತು ಕೊಡಬೇಕು ಎಣ್ಣೆ ಬೇಕಾದರೆ' ಎಂದು. ಅದನ್ನೂ ಕೊಟ್ಟೆ ಸ್ವಾಮೀ,ಗೇರು ಬೀಜದ ಎಣ್ಣೆಯನ್ನು ನೂರಿ ನಾಲ್ಕಾಣ ದುಡ್ಡು ಆದರೆ ಎಣ್ಣೆ ಮಾತ್ರ ಕಾಣೆ"

"ಇಷ್ಟೇನಾ ನಿನ್ನ ಜಾನ ಕವಿತೆಯ ಭಾವಾರ್ಥ ?' ಎಂದೆ ನಾನು

'ಇಲ್ಲಪ್ಪ, ಇದು ಪೀಠಿಕೆ. ಇನ್ನು ಸುರುವಾಗುತ್ತದೆ ಹೊಸ ವಿಷಯ" ಎಂದಳು ನನ್ನತ್ತೆ

ರೀತುಬಾಯಿ ನಕ್ಕಳು ಒಂದು ಕಿರುನಗೆ ಅದು 'ನಂಜು-ನಗೆ'ಯೆಂದು ನನಗನಿಸಿತು

ಪುನಹ ಪ್ರಾರಂಭಿಸಿದಳು ರೀತುಬಾಯಿ ನೀವು ಸಲೀನ ವಿನ್ಸೆಸನ್ನು ಬಲ್ಲಿರಷ್ಟೆ ನಿಮ್ಮೊಡನೆ ಕಲಿತವಳು ಅಮ್ಮ! ಅವಳ ಜೋಕೇನು! ಶೋಕೇನು! ಬಟ್ಟೆಗೆ ಕಂಟ್ರೋಲು ಆಗುವ ಮೊದಲೇ ಅವಳ ಗಾ

ನುಗಳಿಗೆ ಕಂಟ್ರೋಲಾಗಿ ಅವು ಮೊಣಗಂಟಿನಿಂದ ಬರ್ತಿ ಒಂದೂವರೆ ಗೇಣು ಮೇಲಿನವರೆಕ್ಕೆ ಕಷ್ಟದಿಂದ ಇಳಿಯುತಿದ್ದುವು ರೇಶನ್‌ಕಾರ್ಡಿನ ಅಕ್ಕಿ ಸಾಕಾಗದೆ ಕೊಟ್ಟ ಧಾನ್ಯ ತಿನ್ನಲಿಕ್ಕಾಗದೆ ಹೊಟ್ಟೆಗೆ ಒದ್ದೆ ಒಟ್ಟೆ ಕಟ್ಟಿಕೊಳ್ಳುವುದು ಬಡವರಾದ ನಾವಾದರೆ ಅವಳು ಅದಕ್ಕಿಂತ ಮೊದಲೇ ಹೊಟ್ಟೆಗೆ ಹೊರಗಿಂದ ಪಟ್ಟಿ ಕಟ್ಟಿಕೊಳ್ಳುತಿದ್ದಳು ಎರಡು ಕರಿ ಹಾವುಗಳು ಎದೆಯ ಮೇಲೆ ಮಲಗಿ ಹಾಲು ಕುಡಿಯುತ್ತಿವೆಯೋ ಎಂದು ಕಾಣುತಿದ್ದುವು ಅವಳ ಡಬ್ಬಲ್ ಜಡೆಗಳು ಹಾಂ! ಮರೆತೆ; ಅವಳು ಇಗರ್ಜಿ ಶಾಲೆಯಲ್ಲಿ ಮಿಸ್ಟ್ರೆಸು. ಒಂದು ದಿನ ನಾನು ಬೇಡಿದೆ--"ರೇಶನಿಂಗ್ ಕಾರ್ಡಿಗೆ ಒಂದು ಅರ್ಜಿ ಬರದು ಕೊಡಮ್ಮಾ" ಅವಳು ಬಿಡುವೇ ಇಲ್ಲ ಎನಬೇಕೆ? ಹೌದು ಸ್ವಾಮೀ, ಅವಳಿಗೇನು ಗೊತ್ತು ಬಡ ಜನರ ಗೋಳು. ಅವಳಿಗೆ ಬೇಕಾದಷ್ಟು ಸಿಗುತ್ತದಲ್ಲಾ ಪಟೇಲರ ಪಟ್ಟಿಯಿಂದ" ..

"ಸಾಕೇ ನಿನ್ನ ಪುರಾಣ ಇದೆಲ್ಲಾ ಏಕೆ ಅಸಂಬದ್ಧ ಪ್ರಲಾಪ? ಹೇಳಬೇಕೆಂದಿದ್ದರೆ ಚುಟುಕಾಗಿ ಹೇಳಬಾರದೆ?" ಎಚ್ಚರಿಸಿದಳು ರೀತು ಬಾಯಿಯನ್ನು ನನ್ನತ್ತೆ

ಮುಂದರಿಸಿದಳು ರೀತುಬಾಯಿ "ಪುರ್ಸೊತ್ತಿಲ್ಲದ ಪಟೇಲರೂ ಬಿಡುವಿಲ್ಲದ ಸೆಲೀನಳೂ ಒಟ್ಟು ಸೇರಿದರು ಈ ರೇಶನಿನ ದೆಸೆಯಿಂದ ಅವರ ಸೇರುವಿಕೆಗ ಆಸ್ಪದ ದೊರಕಿತು ಹಗೆಯ ಹಗೆ ಮಿತ್ರನಲ್ಲವೆ? ಪುರ್ಸೊತ್ತಿಲ್ಲ--ಬಿಡುವಿಲ್ಲಗಳು ಒಟ್ಟು ಸೇರಿದರೆ ಸಮಯ ಸಿಗಲೇ ಬೇಕಾದ್ದು ಒಂದು ಸಿದ್ಧಾಂತವಷ್ಟೆ ಇನ್ನೇನು, ಬ್ರಹ್ಮನ ಕೆಲಸ ಬೇರೊಬ್ಬ ಮಾಡಲು ಹೊರಟಾಗ ಆತನು ಬೇಡವೆನ್ನುತ್ತಾನೆಯೆ? ಅದೂ ಪುರ್ಸೊತ್ತಿಲ್ಲದ ಈ ಕಾಲದಲ್ಲಿ, ತಿಳಿದು ಏರಿಗ ನಿಲುಕಲೇ ಬೇಕಷ್ಟೆ, ಗಂಧ ಹೂದ ಬೇಕಪ್ಪ, ಹೊಟೆತುಂಬಿ ಹಬ್ಬಿತು ಊರಲ್ಲೆಲ್ಲಾ ಆದರೆ ಅದು ಸುಗಂಧವಲ್ಲ, ದುರ್ಗಂಧ."

"ಪತ್ರಗಳೂ ನಡೆಯುತ್ತಿದ್ದುವಂತೆ. ನಿಮ್ಮ ರಾಯರ ಪತ್ರವೊಂದು ರಾಣಿಗೆ ನೇ

ರುವ ಬದಲು ಅವಳ ತಾಯಿಯ ಕೈವಶವಾಯಿತು ಸೆಲೀನಳು ಇಗರ್ಜಿಗೆ ಹೋಗಿದ್ದಳೆಂದು ಪಟೇಲರಿಗೇನು ಗೊತ್ತು? ಪಟೇಲರ ಕಾಗದವೆಂದೊಡನೆ ಹೆದರಿ ಓಡಿತು ಮುದುಕಿ ಗುರುಗಳ ಬಳಿಗೆ, ಪತ್ರ ಓದಿ ಗುರುಗಳೆಂದರು, "ಸುಮ್ಮನಿರು. ಏಸುವು ಹೇಳಿದ್ದಾನೆ--'ಎಲ್ಲರೂ ನನ್ನ ಮಕ್ಕಳೆಂದು". ಗುರುವಿಗೆ ತಿಳಿದದ್ದು ಅವರ ಸೆಕ್ರೆಟರಿ(ಮಿಸ್ಟ್ರೆಸ್)ಯವರಿಗೆ ತಿಳಿಯಿತು ಮಿಸ್ಟ್ರೆಸ್‌ಗೆ ತಿಳಿದದ್ದು ಗುತ್ತಿಗೆಯಲ್ಲಿ ಒಯ್ಯಲಾಗಿ ಗುತ್ತಿನವರಿಗೂ ಗುಟ್ಟಿನಿಂದಲೇ ತಿಳಿಯಿತು ಪತ್ರದಲ್ಲಿ ಬರೆದಿದ್ದರಂತೆ ರಾಯರು--"ನೀನು ನನ್ನನ್ನು ಮದುವೆಯಾಗದಿದ್ದರೆ ನಾನು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆ" ಎಂದು ನಾನು ರಾಯರ ಮನಸಿಗೆ ಕೆಯ್ ಕೊಯ್ಯಲು ಹೋಗಿದ್ದೆ. ಮೆಲ್ಲನೆ ರಾಯರ ತಾಯಿ ಚಂದ್ರಮ್ಮನೊಡನೆ ಹೇಳಿದ ನನ್ನ ಮುಯ್ಯನ್ನು ತೀರಿಸಲಿಕ್ಕೆ ಚಂದ್ರಮ್ಮ ಅಪಕ್ಕಾದರೂ ಕೇಳಿ. ಹೋಗಿದರು ಇನ್ನೇನು ಗತಿಯೆಂದು ತನ್ನ ಹಿತಚಿಂತಕನಾದ ಪುರೋಹಿತ ರಾಮಚಂದ್ರನೊಡನೆ ಹೇಳಿಬೊಬ್ಬಿಟ್ಟರು. ಭಟ್ಟರು ಜನಿವಾರ ಸಾಕ್ಷಿಯಾಗಿ ಅಭಯ ಇತ್ತರು--"ನಿನ್ನ ಮಗನನ್ನು ಕ್ರೈಸ್ತನಾಗಲು ಬಿಡೆನು" ಎಂದು ಮಾತ್ರವಲ್ಲ, ಬೆಂಗಳೂರಲ್ಲಿ ಹೋಟೇಲಿಟ್ಟುಕೊಂಡಿದ್ದ ಚಂದ್ರಮ್ಮನ ಅಣ್ಣ ಶ್ರೀಪತಿರಾಯರಿಗ ಕಾಗದವೊಂದನ್ನು 'ಪೋಸ್ಟ್' ಮಾಡಿದರು."

"ಇದಕ್ಕೆಲ್ಲಾ ದಲಾಲಿ ಯಾರು ಸಿಕ್ಕಿದರವರಿಗ"? ನಾನು ಕೇಳಿದೆ

"ಅವರೊಬ್ಬರು ಇಗರ್ಜಿ ಶಾಲಾ ಮಾಸ್ತರರು. ಸುಬ್ರಹ್ಮಣ್ಯ ಶಾಸ್ತ್ರಿಗಳು, ಏಳು ಹಾಗ್ಗಳನ್ನು ನುಂಗಿದ 'ಕುತ್ರೋಡಿ' ಆದರಲಿ ಇತ್ತ ರಾಯರು ಸೆಲೀನಳಿಗಾಗಿ ತನ್ನ ಜೀವನವನ್ನು 'ಧಾರೆ'ಯ ಮೂಲಕ ಧಾರೆಯೆರೆಯಲು ನಿಶ್ಚಯಿಸಿದರು. ಚಂದ್ರಮ್ಮ ಬೊಬ್ಬಿಟ್ಟಳು. ಮಗನ ಕಾಲು ಹಿಡಿದು ಬೇಡಿಕೊಂಡಳು ಇಲ್ಲ. ಆ ಗಂಟೆಗೊಂದೇ ಸ್ವರ, ಮದುವೆ ಇಲ್ಲವೆ ಮರಣ. ಚಂದ್ರಮ್ಮ ಊಹಿಸಿದಳು. ಮಗನಿಗೆ ಮದ್ದಿನ ಪ್ರಯೋಗವೆಂದು. ಮನವನ್ನು ಮಿಗಿಸುವ ಮದ್ದಾವುದು ಸ್ವಾಮೀ. ಮಗನು ಸಾಯುವುದಕ್ಕಿಂತಲೂ ಜಾತಿ ಬಿಟ್ಟರೂ ಚಿಂತಿಲ್ಲ, ಸುಖವಾಗಿರಲಿ ಎಂದವಳ ನಿರ್ಧಾರ. ಹೆತ್ತೊಡಲಲ್ಲವೇ ಅದು? ಬರುವ ಮಂಗಳವಾರ ಇಗರ್ಜಿಯಲ್ಲಿ ಗುಪ್ತವಾಗಿ ಮದುವೆ ನಡೆಯುವುದೆಂಬ ಗುಪ್ತ ವಾರ್ತೆಯನ್ನು ಯಾರೋ ಗಟ್ಟಿಯಾಗಿ ಹೇಳಿದರು ಪುರೋಹಿತರಿಗೆ. ಅವರು ಸುಮ್ಮನೆ ಬಿಡುವರೆ? ಜನಿವಾರದ ಸಾಕ್ಷಿಯಿಲ್ಲವೆ? ಓಡಿದರು ಕಚ್ಚೆ ಕಟಿಕೊಂಡು ಘಟ್ಟ

(೧ನೇ ಪುಟ ನೋಡಿರಿ.)

CO-OPERATION - - - -

Life Assurance is the business based on the idea of mutual co-operation By diverting a small portion of one's earning for paying premiums, we co-operate for the good of the family and safeguard the education of children.

Let us assist you in taking out a Policy under the plan best suited to you Write now to:—

KOCHIKAR BROTHERS LTD.

Chief Agents for South India

THE BOMBAY LIFE ASSCE. CO., LTD.

[Estd 1908]

The "Bombay Life" Bldg., UDIPI S K.

Offices and Agencies throughout South India.

ಮನುಷ್ಯ—ಮರ್ಜಿ

ಸ್ವಭಾವ ಚಿತ್ರಗಳು.

೩. ಮುಂಗೋಪಿ ಮುದ್ದಣ್ಣ.

(ಚಿತ್ರಿಸುವವರು:—'ಮಟ್ಟಾರ್')

ಕೋಪವಿಲ್ಲದವರಿದ್ದಾರೆಯೆ? ಮುಂಗೋಪ ಅಲ್ಲವಾದರೆ ಹಿಂಗೋಪ, ಒಳಕೋಪ, ಹುಸಿಟ್ಟು ಕೋಪ, ಮಿಶ್ರಕೋಪ— ಯಾವುದಾದರೊಂದು ವರ್ಗದ ಕೋಪ ಯಾರಲ್ಲಾದರೂ ಇದ್ದೇ ತೀರಬೇಕು. ನಮ್ಮ ಮುದ್ದಣ್ಣ ಮುಂಗೋಪಿ ಈ ವರ್ಗದಲ್ಲಾದರೂ ಮುದ್ದಣ್ಣನೊಬ್ಬನೇ ಇರುವವನಲ್ಲ. ಸಿದ್ದೆಗಣ್ಣ ನಿರಂಜನ ರಾಯನಿದ್ದಾನೆ, ಯಾವ ಶಕ್ಷಿಗಾರನ ರಿಕಾರ್ಡಾದರೂ ಹರಿದಿದ್ದರೆ ಅವ ನಿರಂಜನ ರಾಯನ ಕಕ್ಷೀಗಾರನೆನ್ನಬೇಕು; ಅನುಭವಕೊಡುವಾಗ ಬೇಡವಾದ ಒಂದೇ ಒಂದು ಶಬ್ದ ಬಂದರಾಯಿತು—ಅವ ರಿಕಾರ್ಡನ್ನು ತೆಗೆದು ಒಪಕ್ಕನೆ ಎಸೆದೇ ಬಿಟ್ಟ! ಇನ್ನು ಸಿದ್ದಣ್ಣ ಮುಂಗೋಪಿಯಲ್ಲವೇ? ಅವನ ವೀಕ್ಯದ ತಟ್ಟೆಗೆ ಮಗುವೊಂದು ಕೈಹಾಕಿ ನೋಡಲಿ—ಆನೆಯ ಮೇವಿನತ್ತ ಸುಳಿದ ಅಡಿನಂತಾಗಿ ಹೋಗುವದೇ ಸರಿ 'ಅದು–ಇದು' ವ್ಯತ್ಯಾಸವರಿಯದ ಪೆದ್ದಣ್ಣನೂ ಮುಂಗೋಪಿಯೇ—ತಾಯಿಯೊಮ್ಮೆ 'ನಿನ್ನನ್ನು ಹೆರುವ ಬದಲು ನಾನೊಂದು ಕೊರಡನ್ನು ಹೆತ್ತರಾಗುತಿತ್ತು' ಎಂದುದಕ್ಕಾಗಿ ಅವ ಮೂರು ದಿನ ಉಪವಾಸಮಾಡಿ ಕೊರಡೇ ಆಗಿದ್ದ. ಮುದ್ದಣ್ಣನಂತಹ ಮುಂಗೋಪಿಗಳು ಬಹುಮಂದಿ; ಆದರೆ ಮುಂಗೋಪದಿಂದ 'ಮುದ್ದಣ್ಣ' ಆದವರು ಬೇರಿಲ್ಲ.

ಮುದ್ದಣ್ಣನ ಮುಂಗೋಪದ ರುಚಿ ನಿಮಗೊಮ್ಮೆ ತಾಗಿದರಾಯಿತು. ಆ ಮೇಲೆ ಅದಕ್ಕಾಗಿಯೇ ನೀವು ಅವನ ಸಂಬಂಧ ಬೆಳೆಯಿಸುವಿರೇನೋ! ಸಿಟ್ಟನ್ನು ಬೆಂಕಿಗೆ ಹೋಲಿಸಬೇಕು. ಆದರೆ ಮುದ್ದಣ್ಣನ ಸಿಟ್ಟು ದುರ್ಸುಬಾಣದ ಬೆಂಕಿ—ಮೈಗೆ ಮನೆಗೆ ಹತ್ತಿಕೊಳ್ಳುವ ಕಿಡಿಯಲ್ಲ. ಆದ್ದರಿಂದಲೇ ಉತ್ಸವಕ್ಕೆ ಹೋಗುವವರಂತೆ ನೀವವನ ಸಂಬಂಧ ಬೆಳೆಯಿಸುವಿರೆಂದೆ. ಸಿಟ್ಟಿಗೇಳುವ ಸಂಕಟ ಯಾರಿಗೂ ಬೇಡ. ಮನಸ್ಸು ಉರಿಯಬೇಕು—ತಲೆಯು ಬಿಸಿ ಹವೆ ಬೀಸುವ ಪಂಕದಂತೆ ಗರ್ರನೆ ತಿರುಗಬೇಕು—ಕಣ್ಣು ಮೂಗಿನ ರಂಧ್ರಗಳಿಂದ ಖಾರ ಸೂಸಬೇಕು—ಸರ್ವಾಂಗ ಕಂಪಿಸಬೇಕು ಹೀಗೆ ತಾನು ಬೆಂಕಿಯ ಕುಂಡವಾಗಿ ಅನ್ಯರನ್ನು ಬೇಯಿಸಬೇಕು. ಮುದ್ದಣ್ಣ ನಿಜಕ್ಕೂ ಸಿಟ್ಟಗುತ್ತಾನೆ; ಮಿಕ್ಕವರಿಗಿಂತ ಹೆಚ್ಚಾಗಿಯೇ ಕುದಿಯುತ್ತಾನೆ-ಹಿಡಿದ ಬೆಂಕಿಗಿಂತ ಹೆಚ್ಚಾಗಿ ಸಿಡಿವ ದುರ್ಸು ಬಾಣದಂತೆ ಆದರೆ ಯಾವುದನ್ನೂ ಬೇಯಿಸುವದಿಲ್ಲ! ಅವನದು ರಮ್ಯ ಕೋಪ; ಕೋಪದಲ್ಲೂ ಸಾಧು ಜಾತಿಯೊಂದಿದೆ ಎಂಬುದಕ್ಕೊಂದು ದೃಷ್ಟಾಂತ.

ಕೋಪದಲ್ಲೂ ಒಳ್ಳೆಯ ವರ್ಗವಿದೆಯಾದರೆ ನಮಗೂ ಅದೇ ಇರಲಿ, ನಾವೂ ಮುದ್ದಣ್ಣನಂತೆಯೇ ಕೋಪಿಸಿಕೊಳ್ಳಬಾರದೇಕೆ, ಎಂಬ ಆಸೆ ನಿಮ್ಮಲ್ಲಿ ಮೂಡಬಹುದು. ಸಾಧ್ಯವಿದ್ದರೆ ಪ್ರಯತ್ನಿಸಿ. ಪ್ರಥಮತಃ ನಿಮ್ಮ ಕೋಪಕ್ಕೂ ಮುದ್ದಣ್ಣನ ಮುಂಗೋಪಕ್ಕೂ ಇರುವ ವ್ಯತ್ಯಾಸವರಿತುಕೊಳ್ಳಬೇಕಷ್ಟೆ. ನೀವು ಸಿಟ್ಟಾದ ಕೆಲವು ಸಂದರ್ಭಗಳನ್ನು ನೆನಸಿಕೊಳ್ಳಿ. ಬೇಡವಾದ ಯಾವುದಾದರೊಂದರ ದರ್ಶನ ಅಥವಾ ಶ್ರವಣವು ನಿಮ್ಮ ಮನಸ್ಸಿಗೆ ಬೈಯ್ಯುವಂತೆ ಹೊಡೆಯುವಂತೆ, ಎದುರು ಹೋಗುವಂತೆ, ನಿಂತಲ್ಲೇ ಕುಣಿಯುವಂತೆ ಪ್ರೇರಣೆಕೊಡುತ್ತದೆ. ಅದೇ 'ಸಿಟ್ಟು', ಕೊಲೆಮಾಡಿಸುವ ಮನೆ ತೆಗೆಯಿಸುವ ಸಿಟ್ಟು ಇರಲಿ, ನಿಮ್ಮ ಮೇಲಧಿಕಾರಿ ಹೆಚ್ಚಾಗಿ ನಿಮಗೆ ಬೇಡವಾದ ಮಾತನ್ನೇ ಆಡಿರಬೇಕು—ನಿಮಗೊಗ್ಗದ ಆಜ್ಞೆಮಾಡಿರಬೇಕು. ನೀವು ಸಿಟ್ಟುಗೊಂಡು ಅವನನ್ನು ಬೈದುದು, ಹೊಡೆದುದು, ಅಥವಾ ಆಫೀಸಿನಲ್ಲಿ ಹಾರಾಡಿದುದಿದೆಯೆ? ಆದರೆ ಆ ಅಧಿಕಾರಿ ದಿನಕ್ಕೆ ಹತ್ತು ಬಾರಿಯಂತೆ ಮಾಡುವದನ್ನು ಆಡುವದನ್ನು ಆಳೊಬ್ಬ ಮಹಾಶಯನ್ಮೆ ಯಾವರೂ ಆತಿದರೆ, ಮಾಡಿದರೆ? ಬೈಯ್ಯುವ, ಹೊಡೆಯುವ, ಹಾರಾಡುವ, ದೂಡುವ- ಎಲ್ಲವನ್ನೂ ಒನ್ಮೆಯೇ ಮಾಡುವಿರೇನೋ! ನಿಮ್ಮೊಡನೆ ಮಾತಾಡುವವನೊಬ್ಬನ ಬಾಯಿಯಿಂದ ಸರಾಗವಾಗಿ ಬರುತ್ತಿವೆ—'ಫಟಿಂಗ' 'ಲುಚ್ಚ' 'ದದಾಖೋರ' ಶಬ್ದಗಳು. ಆಗ ನಿಮ್ಮ ಸಿಟ್ಟು ಹಿಂಗಡೆಯಲ್ಲೇ ಆಲಿಸುತ್ತಾ ನಿಲ್ಲುತ್ತದೆ-ಆವ ಫಟಿಂಗನೆನ್ನುವುದು ನಿಮ್ಮನ್ನೋ ನೆರೆಯವನನ್ನೋ ಎಂಬುದು ನಿರ್ಧಾರವಾಗುವ ವರೆಗೂ. ನಿಮ್ಮನ್ನೇ ಆದರೆ ಮತ್ತದು ಮುಂದೆ ಬರಲು ಹೊತ್ತಿಲ್ಲ ಅರ್ಥಾತ್ ನಿಮ್ಮ ಸಿಟ್ಟು ಯಾರ ಮತ್ತು ಎಲ್ಲಿ,ಏಕೆ, ಎಂಬುದನ್ನು ನೋಡಿಕೊಳ್ಳುತ್ತದೆ. ಮುದ್ದಣ್ಣನ ಸಿಟ್ಟು ಹಾಗಲ್ಲ ಅದು ಕಾಲ, ಸ್ಥಿತಿ, ಜನ ತಾರತಮ್ಯವಾವುದನ್ನೂ ನೋಡುವದಿಲ್ಲ ಆಗದ ಮಾತು ಆಳಿನಿಂದ ಹೇಗೆ ಬರಕೂಡದೋ ಹಾಗೆಯೇ ಅಧಿಕಾರಿಯಿಂದಲೂ ಬರಕೂಡದು. 'ಫಟಿಂಗ' ಎಂದು ಆವನನ್ನೂ ಹೇಳಕೂಡದು; ಆವನ ಬುತ್ತಿನವನನ್ನೂ ಹೇಳಕೂಡದು. ಇಂತಹ ಯಾವ ಸಂದರ್ಭಗಳಲ್ಲಾದರೂ ಆವನ ಸಿಟ್ಟೇ ಸಿಟ್ಟು; ಅದೂ ಅತಿರೇಕ ಮತ್ತು ಬಹುಬೇಗ. ಇಂತಹ ಸಿಟ್ಟು ಸಮತಾವಾದಿಯಾಗುವದು ನಿಮಗೆ ನಮಗೆ ಸಾಧ್ಯವೆ? ಹೀಗೆ ಎಲ್ಲೆಲ್ಲೂ ಮುಂಗೋಪಿಯಾಗಿಯೂ ಆವ ಜನಪ್ರಿಯನಾಗುವದು ಹೇಗೆ, ಎಂದು ಪ್ರಶ್ನಿಸುವಿರಾ? ಮುದ್ದಣ್ಣನಾದರೆ ನಿಮ್ಮೀ ಅಜ್ಞಾನಕ್ಕಾಗಿ ಸಿಟ್ಟುಗೊಂಡಾನು. ಯಾತಕೆಂದರೆ ಉತ್ತರ ಆ ಸಿಟ್ಟಿನಲ್ಲೇ ಇದೆ. ಅವ ಸಿಟ್ಟುಗೊಳ್ಳುವದಕ್ಕೆ 'ಕಾಲ ವ್ಯತ್ಯಾಸ ನೋಡಲಾರ, ಜನ ತಾರತಮ್ಯ ಮಾಡಲಾರ, ಎಂದಮೇಲೆ ಆವ ನೋಡುವದು ಮಾಡುವದು ಮತ್ತೇನನ್ನು? ಅನ್ಯಾಯ ಮತ್ತು ಅತಿರೇಕಗಳನ್ನು ಮಾತ್ರ. ಅವನ ಸಿಟ್ಟು ಅವುಗಳ ಮೇಲೇನೇ ತದನುಸಾರ ಅವುಗಳನ್ನಾಧರಿಸಿ ಯಾವನು ನಿಂತಿದ್ದಾನೋ ಅವನ ಮೇಲೆಯೂ ಹೀಗಾಗಿ ಮುದ್ದಣ್ಣನ ಮುಖದಿದಿರು ಬಿದ್ದ ತಪ್ಪುಗಾರರ ಮೇಲೆ 'ನಪ ಮುಂಗೋಪದ ಪರಿಣಾಮವೆಷ್ಟೆಂದರೆ, ವಸ್ತ್ರಕ್ಕೆ ಇಸ್ತ್ರಿ ಹಾಕುವಾಗ ಅದರ ಅಡಿಹಲಗೆಗೆಷ್ಟು ಬಿಸಿ ತಾಗುತ್ತದೋ ಅಷ್ಟೆ! ತುಸು ಬೆಚ್ಚಗಾದಂತಾಗಿ 'ಹಾಯ್' ಅನ್ನಿಸುತ್ತದೆ; ಮೈ ಸುಟ್ಟಂತಾಗುವದಿಲ್ಲ ಆದ್ದರಿಂದ ಅವನ ಕೋಪಕ್ಕೀಡಾದವರು ನೊಂದುಕೊಳ್ಳುವದು ಕಡಿಮೆ—ದ್ವೇಷಿಸುವದೆಂತೂ ಅಸಾಧ್ಯ. ಮುದ್ದಣ್ಣನ ಸ್ವಭಾವವಂತಹದು; ಅದರಲ್ಲಿ ಅಜ್ಞಾನವೇ ಇರಬಹುದು; ಆದರೆ ಎಲ್ಲಾ ಸಂದರ್ಭಗಳಲ್ಲೂ 'ನನ್ನದು ನ್ಯಾಯ.' ಎಂಬ ಹೆಮ್ಮೆಯೊಂದಿದೆ ಆದ್ದರಿಂದ ಅವನಿಗೆ ಸಿಟ್ಟುಗೊಳ್ಳುವ ಅಧಿಕಾರವಿದೆ. ಈ ಅಧಿಕಾರವಿದ್ದವನನ್ನು ದ್ವೇಷಿಸಲಾಗುತ್ತದೆಯೆ? ಗೊತ್ತಿಲ್ಲದೆ ಮಾಡುತ್ತಿದ್ದಾನಲ್ಲಾ ಎಂದು ಕೆಲವು ವೇಳೆ ಅವನ ಕುರಿತು ಕನಿಕರ ಪಡಬೇಕು ಅಥವಾ ಹೆದರಬೇಕು ಕಾಲ, ಸ್ಥಿತಿ, ಜನ ತಾರತಮ್ಯ ನೋಡಿಯೇ ಸಿಟ್ಟನ್ನೋ ಒಲವನ್ನೋ ಪ್ರದರ್ಶಿಸಬಲ್ಲ ನಮಗಿರುವ ಹಾದಿಯಿದೇ. ಮುದ್ದಣ್ಣನ ಕೋಪ ಪೋಲೀಸು ದಂಡನೆಗೆ ಸಮ. ಕಳ್ಳನೊಬ್ಬನನ್ನು ಹಿಡಿದು ಹೊಡೆದನೆಂದು ಪೋಲೀಸನನ್ನು ಎಂತೂ ದ್ವೇಷಿಸುವಂತಿಲ್ಲ. ಸತ್ಯಕ್ಕೂ ಕಳ್ಳತನ ಮಾಡದವನಾದರೂ ಕಳ್ಳತನಕ್ಕಾಗಿ ತನ್ನನ್ನು ಶಿಕ್ಷಿಸಿದ ಪೋಲೀಸನನ್ನು ಮಿಕ್ಕವರನ್ನು ದ್ವೇಷಿಸಿದಂತೆಯೇ ದ್ವೇಷಿಸಲಾಗುತ್ತದೆಯೆ? 'ನಾನು ಕಳ್ಳನಲ್ಲ ಅಯ್ಯೋ!' ಎಂದು ಬಾಯಿಯಲ್ಲೂ ಮನಸ್ಸಿನಲ್ಲೂ ದಮ್ಮಯ್ಯ ಹಾಕಿಯಾನು ಆದರೆ ಕಳ್ಳನೇ ಆದರೂ ಬಾಯಿಯಲ್ಲಿ ಹೇಳುವುದು ಹಾಗೆಯೇ!

ಮುದ್ದಣ್ಣನ ಮುಂಗೋಪದ ಸ್ವಾರಸ್ಯಮಯ ಕಥೆಗಳನ್ನೆಷ್ಟೋ ಹೇಳಲಿಕ್ಕಿತ್ತು. ಒಂದು ಅಸಾಮಾನ್ಯ ಸ್ವಭಾವ ಎಂತಹ ನೂತನ ಘಟನೆಗಳನ್ನು ನಿರ್ಮಿಸಿರಲಿಕ್ಕಿಲ್ಲ! ಆದರೆ ಇಲ್ಲಿ ಸ್ಥಳ ಸಂಕೋಚದಿಂದ ಚಿತ್ರ ಚುಟುಕಾಗಬೇಕಾಗಿದೆ. ಇನ್ನೆರಡೇ ಮಾತು. ನಾವು 'ಸರಿ'ಯೆನ್ನುವದು ನಮಗೆಟಕುವವನನ್ನು; ಪ್ರಪಂಚದ ವ್ಯವಹಾರಕ್ಕೊಸ್ಕರ ತ್ಯಾಗಿ ತಾಗಿಕೊಂಡವನನ್ನು. ಪ್ರಪಂಚ ತಾರತಮ್ಯವನ್ನು ಬಿಟ್ಟಿಲ್ಲ ಮುದ್ದಣ್ಣನ ಮುಂಗೋಪಕ್ಕೆ ಅದಿಲ್ಲವೇ ಇಲ್ಲ. ಅರ್ಥಾತ್ ಅವನಲ್ಲಿ ಪ್ರಪಂಚಾನುಭವವಿಲ್ಲ, ಅಥವಾ ಪ್ರಪಂಚದಲ್ಲಿ ಅವನಿಲ್ಲ. ಲೋಕವೇ ತನ್ನದಾಗಬೇಕೆಂದು ವಿಶೇಷವಾಗಿ ಅವನೂ, ಅವ ನನ್ನವನಾಗಲೆಂದು ಸಹಜವಾಗಿ ಲೋಕವೂ ಸ್ಪರ್ಧಿಸುತ್ತಿದೆ ಹೀಗೆ ಬರೆ ... ಈ ಸ್ಪರ್ಧೆಯಲ್ಲಿ ಮುದ್ದಣ್ಣನ ಪಕ್ಷವನ್ನೇ ವಹಿಸೋಣವೆನಿಸುತ್ತದೆ; ಆದರೆ ಬದುಕಬೇಕೆಂಬುದಕ್ಕಾಗಿ ಮಾತ್ರ ಲೋಕವನ್ನು ಬಿಡಲಾಗುವದಿಲ್ಲ.

ಬರುವ ವಾರ— ಸಮಸ್ಯೆ ಸರಸು.

ನೋಟೀಸು.

ಕುಂದಾಪುರ ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟನಲ್ಲಿ.

O. S. 476/1944

ಅಣ್ಣಾಜಿ ರಾವ- ವಾದಿ

ಮತ್ತು

ಗುಂಡು ರಾವ ಯಾನೆ ಗಣಪತಿ ರಾವ ಕೂಡಾ- ಪ್ರತಿವಾದಿರು.

1. ಗುಂಡು ರಾವ ಯಾನೆ ಗಣಪತಿ ರಾವ, ನಾಗಯ್ಯನವರ ಮಗ. ಕುಂದಾಪುರ ತಾಲೂಕು ನಾಡ ಗ್ರಾಮ. 3. ಮೋಹನ ರಾವ ದತ್ತಾತ್ರೇಯ ರಾಯನ ಮಗ. ಮಂಗಳೂರು ಶಹಾರಿನ ವ್ಯಾತಿ ಭವಂತಿ ಕೇರಿ. 4. ಮೋಳಹಳ್ಳಿ ಅಣ್ಣಾಜಿ ರಾವ-ಭವಾನಿ ರಾಯನ ಮಗ. ಉಡ್ಪಿ ಟೌನ್ ಬನ್ನಂಜೆ ರೋಡ್. 5. ರಾಮಕೃಷ್ಣ ಹೆಬ್ಬಾರ-ಮಂಜುನಾಥ ಹೆಬ್ಬಾರನ ಮಗ-ಕುಂದಾಪುರ ತಾಲೂಕು ಬಡಾಕೆರೆ ಗ್ರಾಮ.

ವಾದಿಯು ಸ್ಥಿರ ಆಸ್ತಿಯ ಜವಾಬ್ದಾರಿಯಿಂದ ಬರಬೇಕಾದ ಹಣಗಳ ಕುರಿತು ದಾಖಲ ಮಾಡಿದ ಮೇಲೆ ಕಾಣಿಸಿದ ದಾವೆಯು ತಾ 13-12-44ಕ್ಕೆ ತನ್ನಿಗೆ ಯಿಟ್ಟಿರುತ್ತದೆಂತಲೂ, ವ ಆ ದಿವ್ಸ ಮೇಲೆ ಕಾಣಿಸಿದ ಪ್ರತಿವಾದಿರು ಹಾಜರು ಆಗಲಿಕ್ಕೆ ತಪ್ಪಿದ್ರೆ ಅವರ ಪರೋಕ್ಷದಲ್ಲಿ ಮುಂದಿನ ತಸ್ಥಿಯು ನಡೆಯುವುದೆಂತಲೂ ಈಮೂಲಕ ತಿಳಿಸೋಣಾಗುತ್ತದೆ.

ಕುಂದಾಪುರ 29-11-44. } **G. Sanjiva Rau,** Pleader for Pltf.

ವರ್ಷದ ಕೊನೆದೂರವಿಲ್ಲ ನಾವು ಈಗ ನಡೆದಿರುವುದನ್ನೆಲ್ಲಾ ಸಂಗ್ರಹಿಸಿ ನೋಡಿ ಭವಿಷ್ಯವನ್ನು ಯೋಚಿಸೋಣ.

ನಿಮ್ಮ ಹಿಂದಿನ ಗೆಲುವುಗಳು ನಿಮ್ಮ ಭವಿಷ್ಯವನ್ನು ಮಂಕುಗೊಳಿಸದಿರಲಿ; ಅಂತೆಯೇ ನಿಮ್ಮ ಹಿಂದಿನ ಸೋಲುಗಳೂ ನಿಮ್ಮ ಚೇತನವನ್ನು ಕುಗ್ಗಿಸದಿರಲಿ.

ನಾವಾವರೋ ನೀವು ನಿಮಗೂ, ನಿಮ್ಮ ಕುಟುಂಬಕ್ಕೂ ಹೊತ್ತಿರುವ ಮುಖ್ಯ ಕರ್ತವ್ಯವೊಂದರ ಕಡೆಗೆ ನಿಮ್ಮ ಗಮನ ಸೆಳೆಯಲಿಚ್ಛಿಸುತ್ತೇವೆ.

ಬಾಳಿನ ತರಾತುರಿಗಳಿಗೂ, ಅನಿಶ್ಚಿತತೆಗಳಿಗೂ ಸಿದ್ಧತೆಗೊಳಿಸಿಕೊಳ್ಳುವುದು ಪ್ರತಿ ಬುದ್ಧಿವಂತನ ಪ್ರಥಮ ಕರ್ತವ್ಯ. ಇದಕ್ಕಾಗಿ ಪ್ರತಿಯೊಬ್ಬರೂ ಒಳ್ಳೆಯ ಬ್ಯಾಂಕ್ ಲೆಕ್ಕವನ್ನು ತೆರೆಯಬೇಕು. ಇಂದೇ ನಮ್ಮಲ್ಲಿ ಲೆಕ್ಕತೆರೆದು ಭವಿಷ್ಯವನ್ನು ಭದ್ರಗೊಳಿಸಿಕೊಳ್ಳಿ.

ಸ್ಥಾಪನೆ 1906 ಕೆನರಾ ಬೇಂಕ್ ಲಿಮಿಟೆಡ್

ESTD 1906 **Canara Bank, Limited.**

(Incorporated in British India with limited Liability of members limited).

WANTED

A permanent second clerk for the Sri Ananthapadmanabha Temple, Perdur, Udipi Tq. S Kanara Dt., on a Salary of Rs 20 p. m plus Rs. 5 D. A. Candidates must have read up to School Final and must write an excellent hand in English and Kanarese. Retired clerks of the Revenue Department or persons having knowledge of Commercial subjects will be preferred Apply immediately to the Executive officer of the Temple.

Perdur S K. } 2-12-44

ಬಿಡಿನುಡಿ

ದೂರುವವರು ಕಿವಿಯಾರೆ ಕೇಳಿ ದೂರಬಹುದೇ--ಕಣ್ಣಾರೆ ಕಂಡೇ ದೂರಬೇಕೇ? ಈಗ ಮುಂದೆ ಬಂದಿರುವ ಒಂದು ಪ್ರಶ್ನೆ.

ಸರ್ ಮಿರ್ಜಾ ಇಸ್ಮಾಯೀಲರು ಮೈಸೂರಿನ ದಿವಾನರಾಗಿ ಕೀರ್ತಿ ಪಡೆದವರು. ಈಗ ಜಯಪುರ ಸಂಸ್ಥಾನದ ದಿವಾನರಾಗಿದ್ದಾರೆ

ಹಿಂದೂ ಸಂಸ್ಥಾನವಾದ ಜಯಪುರದಲ್ಲಿ ಇವರೀಗ ಹಿಂದುಗಳ ಹಿತಕ್ಕೆ ಹಾನಿ ತರುತಿದ್ದಾರೆ ಎಂಬ ದೂರಿದ್ದಿದೆ.

'ದೂರುವವರು ಇಲ್ಲಿ ಬಂದು ಕಣ್ಣಾರೆ ನೋಡಿಕೊಳ್ಳಿ'—ಎಂದು ಮಿರ್ಜಾರ ಆಹ್ವಾನ.

ಕಣ್ಣಾರೆ ಕಂಡಾಗ ತೋರುವ ಅನ್ಯಾಯವು ಜಯಪುರದ ಹಿಂದುಗಳ ಮೇಲಾಗಿಲ್ಲ; ಚಾರ್ಜಿನ ಘಾಯ ಒಬ್ಬನೇ ಒಬ್ಬ ಹಿಂದುವಿನ ಮೇಲಿಲ್ಲ.

'ಪ್ರತಿಯೊಬ್ಬ ಹಿಂದೀಯನೂ ಉರ್ದು ಕಲಿಯಬೇಕು' ಎಂದು ಸರ್. ಮಿರ್ಜರ ಬಹಿರಂಗ ಬೋಧನೆ ಅದು ನೋಡಲಾಗುವಂತಹದೇ?

ಕೆಲವು ಕಡೆಗಳಲ್ಲಿದ್ದ ಹಿಂದೂ ವಿಗ್ರಹಗಳನ್ನವರು ತೆಗೆಸಿದ್ದರು. ಇವುಗಳನ್ನು ನೋಡಲು ಸಿಗುತ್ತವೆಯೆ?

ಹೀಗೆಯೇ ನೋಡಲು ಸಿಗದ ದೂರೊಂದು ದಕ್ಷಿಣ ಕನ್ನಡದಲ್ಲಿಯೂ ಕೇಳಬರುತ್ತಿದೆ

ಸ್ಟೋರುಗಳಿಗೆ ಅಕ್ಕಿ ಭತ್ತ ಒಪ್ಪಿಸಿದ ರೈತರಿಗೆ ಅವುಗಳ ಮೌಲ್ಯದ ಹಣಕ್ಕಾಗಿ ಈ ಮೊದಲು ಸ್ಟೋರುಗಳಲ್ಲಿ 'ಚೆಕ್'ದೊರೆಯುತಿತ್ತು.

ಈ ವರುಷ ಹಳ್ಳೀ ಸ್ಟೋರುಗಳಿಗೆಲ್ಲಾ ಹಣವೇ ಹೋಗಿದೆಯಂತೆ.

ಹಣ ಬಂದಿತೆಂದು ಅಲ್ಲಿದ್ದ ಚೆಕ್ ಪುಸ್ತಕಗಳಾವುವೂ ವಾಪಾಸು ಹೋಗಲಿಲ್ಲವೆಂದು ಕಾಣುತ್ತದೆ.

ಒಮ್ಮೆ ಚೆಕ್, ಆ ಮೇಲೆ ಹಣ ಪಡೆದು ಅಭ್ಯಾಸವಾಗಿದ್ದ ರೈತರು ಈ ಬಾರಿ ಚೆಕ್ ಕೊಡದಿದ್ದರೆ 'ಛೆಕ್' ಎಂದು ಸಿಟ್ಟಾದರೆ?

ಆದ್ದರಿಂದ ಅಕ್ಕಿ ಬಂದ ಕೂಡಲೇ ಹಣವಿದ್ದ ಹಳ್ಳೀ ಸ್ಟೋರುಗಳು ಪ್ರಥಮತಃ ಚೆಕ್ ಕೊಡುತ್ತವೆ.

ಆ ಮೇಲೆ ಆ ಚೆಕ್ಕನ್ನು ತಾವೇ ಪಡೆದು ಹಣ ಕೊಡುತ್ತವೆ.

ಇಂತಹ ಅಪೂರ್ವ ವಹಿವಾಟಿಗೆ ರೈತರಿಗೆ ತಾಗುವ ವೆಚ್ಚ ಚೆಕ್ ವಟಾಯಿಸಿದ ಫೀ 0—4—0 ಮಾತ್ರ.

'ಹೀಗೆ ದೂರುವವರು ಕಣ್ಣಾರೆ ನೋಡಿಕೊಳ್ಳಿ' ಎಂದು ಸರ್. ಮಿರ್ಜರಂತೆ ಸ್ಟೋರುಗಳವರೂ ಆಹ್ವಾನಿಸಬಹುದು.

ಹೋಗಿ ನೋಡಿದರೆ ಏನೂ ತೋರುವಂತಿಲ್ಲ.

ರೈತರು ಪಡೆದ ಚೆಕ್ಕನ್ನು ಕೊಟ್ಟು ಹಣ ಪಡೆದಿದ್ದಾರೆ; ಚೆಕ್ ತೋರುವಂತಿಲ್ಲ.

ಆ ಹಣವನ್ನು ಕೊಟ್ಟು ಉಪ್ಪು ಮೆಣಸು, ಸಾಂಬಾರ, ವಸ್ತ್ರ ಪಡೆದುಕೊಂಡಿರಬಹುದು. ಹಣವೂ ತೋರುವಂತಿಲ್ಲ.

ಆದರೆ ಲೆಕ್ಕ ಹೇಳಿಯಾರು. ಅದನ್ನು ಕೇಳಿ ದೂರಿದರೆ ಪುನಃ ಕರೆ ಬಂದೀತು—'ದೂರುವ ಮೊದಲು ಕಣ್ಣಾರೆ ನೋಡಿಕೊಳ್ಳಿ!'

ಅಬ್ಬಾ ಕಾಲಸ್ಥಿತಿಯೇ! ದುಡಿದು ಉಣ್ಣುವೆನೆಂದರೆ ಹೇಗೂ ಇಲ್ಲ - ದೂರಲಿಕ್ಕಾದರೂ ಇದೆಯೆ?

× × ×

ಆಹಾರ ಧಾನ್ಯ ಮತ್ತು ಇತರ ಜೀವನೋಪಯೋಗಿ ಸಾಮಾನುಗಳು ಸಾರ್ವಜನಿಕರಿಗೆ ಯೋಗ್ಯ ದರದಲ್ಲಿ ಸರಿಯಾಗಿ ದೊರೆಯುವ ವ್ಯವಸ್ಥೆಗಾಗಿ ಈ ವರುಷ ಮದ್ರಾಸು ಸರಕಾರವು 116 ಲಕ್ಷ ರೂ. ವ್ಯಯಿಸಬೇಕೆಂದು ನಿರ್ಧರಿಸಿದೆ

ಈ ಕೆಲಸಕ್ಕಾಗಿಯೇ 60 ಲೋರಿಗಳನ್ನು ತೆಗೆದುಕೊಳ್ಳಲು 5 ಲಕ್ಷ ಮತ್ತು ಗೋಡೌನುಗಳ ರಚನೆಗಾಗಿ 10 ಲಕ್ಷ ರೂ ಗಳನ್ನದು ಪ್ರತ್ಯೇಕ ಮಂಜೂರು ಮಾಡಿದೆ.

ಆಹಾರ ವ್ಯವಸ್ಥೆಗಾಗಿ ಹೀಗೆಲ್ಲಾ ಲಕ್ಷಗಳನ್ನು ವ್ಯಯಿಸುವಾಗ ಅಕ್ಕೀ ತಯಾರಿಯ ಒನಕೆ, ಒರಳುಗಳಿಗಾಗಿ ಲಕ್ಷ್ಯವನ್ನಾದರೂ ಕೊಡಬೇಕೆಂದು ಉಣ್ಣುವವರ ಅಂಬೋಣ.

ಈಗ ಸ್ಟೋರುಗಳಲ್ಲಿ ದೊರೆಯುವ ಅಕ್ಕಿಗೆ, ಮೂಲಬಣ್ಣ ಮಿಶ್ರಬಣ್ಣಗಳ ಸೈಕಿಯಾವುದೂ ಇಲ್ಲವಂತೆ

ಅವುಗಳನ್ನು ಮಡಿ ಮಾಡುವ ಒನಕೆ ಒರಳುಗಳ ನಿರ್ಮಾಣವಾಗಬೇಕು.

ಕುಟ್ಟುವ ಜನರೂ ಬೇಕಾಗಬಹುದು-ಯಾಕೆಂದರೆ ಮುಳಪ್ಪಲು ಪಾವಕ್ಕಿಯುಂಡವರು ಹಿಂದಿನಂತೆ ಮೂರು ಕಳಸಿಗೆ ಅಕ್ಕಿ ಕುಟ್ಟಲಾರರು.

ಆದರೆ ನಮ್ಮವರು ಹಿಡಿದಿರುವ ಯುದ್ಧ ಕೈದಿಗಳ ಸಂಖ್ಯೆ ಲಕ್ಷಗಟ್ಟಲೆಯಲ್ಲಿದೆ.

ಅವರಿಗೆಲ್ಲಾ ರೊಟ್ಟಿ ಮಾಂಸ ದೊರೆಯುತ್ತಿದೆ.

ನಮಗಿದಿರಾಗಿ ಗನ್ನು ಹಿಡಿದ ಅಪರಾಧವನ್ನು ಒನಕೆ ಹಿಡಿಯಿಸಿ ಪರಿಹಾರ ಮಾಡಿದಂತೆಯೂ ಆಗುವದು.

ಅವರ ಆಹಾರ ಜೀರ್ಣವಾಗಿ ಆರೋಗ್ಯ ಪಾಲನೆಯೂ ಆಗುವದು.

—'ಬೀದಿವಾಲ'

ಪ್ರಯಾಣದ ಕಥೆ

6



ಹೇಗೋ ಒಳಹೊಕ್ಕರು. ಆದರೆ ಕೂಡುವುದೆಲ್ಲಿ?

ಸ್ವಲ್ಪಹೊತ್ತಿನಲ್ಲ ಮಕ್ಕಳು ದಣಿದು ಹೋದರು. ತಲೆಯ ಗತಿಯೂ ಅಷ್ಟೇ-ಆದರೆ, ಅವರು ಏನುತಾನೇ ಮಾಡಬಲ್ಲರು!

ಈ ಕುಟುಂಬದ ಗತಿ ಯೇನಾಗುವುದೋ ಮುಂದಿನವಾರದ ಕಥೆಯಲ್ಲಿ ನೋಡಿ.

ಇಂದು ಅತ್ಯವಸರ ಸಾಮಾನುಗಳನ್ನು ಮೊಟ್ಟಮೊದಲು ರವಾನಿಸಬೇಕು. ಆದುದರಿಂದಲೇ ಪ್ರಯಾಣದಲ್ಲಿ ಜನಗಳಿಗೆ ಸೌಕರ್ಯವಿಲ್ಲ.

ಅನಾವಶ್ಯಕವಾದ ಪ್ರಯಾಣವನ್ನು ನಿಲ್ಲಿಸಿರಿ.

ವಿಶೇಷ ಘಟನೆಗಳು

ಮಹಾತ್ಮರ ವಿಶ್ರಾಂತಿ.

ಇದೇ ದಶಂಬರ ತಾ 4ರಿಂದ 31ರ ವರೆಗೆ ಮಹಾತ್ಮಾಜಿ ಪೂರ್ಣ ವಿಶ್ರಾಂತಿ ಪಡೆಯುವ ನಿರ್ಧಾರ ಮಾಡಿದ್ದಾರೆ. ಈ ಅವಧಿಯಲ್ಲಿ ಯಾವ ಸಾರ್ವಜನಿಕ ಕಾರ್ಯವನ್ನಾಗಲೀ ಯಾವುದೇ ವಿಧದ ಪತ್ರ ವ್ಯವಹಾರ ಅಥವಾ ಸಂಭಾಷಣೆಯನ್ನವರು ಮಾಡುವಂತಿಲ್ಲ. ಪತ್ರಿಕೆಗಳನ್ನು ಕೂಡಾ ಓದಲಾರರು. ಹುಳದ ಉಪದ್ರವೊಂದನ್ನು ಬಿಟ್ಟರೆ ಅವರ ಆರೋಗ್ಯವೀಗ ಪೂರ್ಣ ಸುಧಾರಿಸಿದೆ. ಆದರೆ ಓದಿದೊಡನೆ, ಬರೆದೊಡನೆ ಮೆದುಳು ದೌರ್ಬಲ್ಯವುಂಟಾಗುತ್ತದೆಯಾದ್ದರಿಂದಲೇ ಈ ವಿಶ್ರಾಂತಿ. 'ನಾನು ಕೇವಲ ತಾತ್ವಿಕ ದೃಷ್ಟಿಯಿಂದ ಉಪವಾಸವೊಂದನ್ನು ಮಾಡುವ ನಿರೀಕ್ಷೆಯಲ್ಲಿದ್ದೆ. ಆದರೆ ದೈವೇಚ್ಛೆ ಬೇರೆಯಿತ್ತು. ಸದ್ಯಕ್ಕೆ ಕೆಲಸೋಪವಾಸ ಮಾಡಿ ವಿಶ್ರಾಂತಿ ಪಡೆಯಬೇಕಾಗಿದೆ' ಎಂದು ಗಾಂಧಿಜಿಯ ಹೇಳಿಕೆ. ಮಿಲಿಯಾವಧಿ ಮಂದಿಯ ಉಪವಾಸ, ಕಾಳ ಸಂತೆ, ಇತ್ಯಾದಿ ದುರಂತಗಳು ತನ್ನನ್ನೀಗಲೂ ನೋಯಿಸುತ್ತಿವೆಯೆಂದೂ ಕೆಲಸಗಾರರೆಲ್ಲಾ ಅವುಗಳ ನಿವಾರಣೆಗೆ ಪ್ರಯತ್ನಿಸಬೇಕೆಂದೂ ಗಾಂಧಿಯವರು ಈ ಸಂದರ್ಭದಲ್ಲಿ ಮತ್ತೊಮ್ಮೆ ವಿಜ್ಞಾಪಿಸಿಕೊಂಡಿದ್ದಾರೆ.

ಜಾಪಾನೀ ರಾಮಾಯಣ

ಬರ್ಮಾದಲ್ಲಿ ಜಾಪಾನರು ವಾನರ ಸೇನೆಯೊಂದನ್ನು ತಯಾರಿಸಿದ್ದಾರೆಂಬ ವಾರ್ತೆ ಈ ಮೊದಲೇ ಪ್ರಕಟವಾಗಿದೆ. ಅದಕ್ಕಾಗಿ ಅವರು ಮಧ್ಯ ಬರ್ಮಾದಲ್ಲಿ ಒಂದು ಮಿಲಿಟರಿ ಶಾಲೆಯನ್ನೇ ತೆರೆದು ಮಂಗಗಳನ್ನು ಹಿಡಿದು ತರಬೇತಿ ಕೊಡುತಿದ್ದಾರೆ. ಸರಬರಾಯಿ ಪಥಗಳ ಅನಾನುಕೂಲತೆಯಿರುವ ಅರಣ್ಯ ಯುದ್ಧಗಳಿಗನುಕೂಲವಾಗಿ ಪೆಟ್ರೋಲು, ಗನ್ನುಗಳು, ಮತ್ತು ಅತಿ ಭಾರದ ಯುದ್ಧೋಪಕರಣಗಳನ್ನೊಯ್ಯಲು ಅವರು ಆನೆಗಳನ್ನು ಉಪಯೋಗಿಸುತಿದ್ದುದು ಈ ಮೊದಲೇ ಪ್ರಕಟವಾಗಿದ್ದಿತು. ಬಂಡಿಗಳ ಕೆಲಸವನ್ನು ಆನೆಗಳಿಂದ ಮಾಡಿಸಿದಂತೆ ಮನುಷ್ಯರ ಕೆಲಸವನ್ನು ಮಂಗಗಳಿಂದ ಮಾಡಿಸುವ ಹಂಚಿಕೆಯದು ಈ ಮಂಗಗಳು ಕೈ ಬಿರಂಗಿಗಳನ್ನು ಹಿಡಿದುಕೊಂಡು ಮರಹತ್ತಿ ಕುಳಿತುಕೊಳ್ಳುವವು. ಇದಿರಿಗೆ ಬರುವ ವೈರಿಗಳ ಮೇಲೆ ಗುಂಡು ಹಾರಿಸುವವು ಮಾತ್ರವಲ್ಲ, ಕತ್ತೆಗಳ ಮೇಲೆ ಸವಾರಿ ಮಾಡಿ, ಕುದುರೆ ಸವಾರ ಮನುಷ್ಯ ದಳದ ಕೆಲಸವನ್ನೂ ಮಾಡಬಲ್ಲವು. ಕುಳ್ಳ ಜಾಪಾನರು ಮಂಗಗಳಿಗೆ ಮನುಷ್ಯರ ಉಡುಗೆ ತೊಡಿಸಿರುವುದರಿಂದ ಸಂಸ್ಕೃತಿಯ ಮಟ್ಟಿಗೂ ವಾನರ ಸಮಾನರು ಜಾಪಾನರೆಂದು, ವಾನರರೆಂದು ಎಂಬ ವ್ಯತ್ಯಾಸವರಿಯದೆ ಮಿತ್ರ ಸೇನೆಗಳು ಗಲಿಬಿಲಿಗೊಳ್ಳುವ ಸಂಭವ ಸಹ ಇಲ್ಲ ಮನೆ ಮನೆ ತಿರುಗಿ ಮಂಗನನ್ನಾಡಿಸುವವರಿಗೆ ಪ್ರಾಯಶಃ ಬರ್ಮಾಕ್ಕೆ ಹೋಗುವ ಸುಯೋಗವೊದಗಿತು!

ಅತಿ ಚತುರ ಕಳ್ಳ.

ನಾಗಪುರದ ಶ್ರೀಮಂತ ಸಾಹುಕಾರ ಸೇಟ್ ಮೋಹನ್‌ಲಾಲ್ ಗೋಚ್ರರವರ ಒಳಕಿಸೆಯಿಂದ ಒಂದೊಂದು ಸಾವಿರ ರೂ ಗಳ 19 ನೋಟುಗಳನ್ನು ಜಾರಿಸಿಬಿಟ್ಟ ಒಬ್ಬ ಅಸಾಧಾರಣ ಕಳ್ಳನ ಪತ್ತೆಯಿನ್ನೂ ಆಗಿಲ್ಲ ಈ ಕಳವು ನಡೆದುದು ಜಯಪುರ ರೈಲ್ವೇ ಸ್ಟೇಶನಿನಲ್ಲಿ ಸಾಹುಕಾರರು ಪಾಕೇಟನ್ನು ತನ್ನ 'ಅಂಡರ್ ವೀಯರ್'ನ ಕಿಸೆಯೊಳಗಿಟ್ಟುಕೊಂಡಿದ್ದರು. ಅದನ್ನು ತೆಗೆಯಬೇಕಾದರೆ ಒಂದು ಉಲ್ಲನ್ ಕೋಟು, ಒಂದು ವೆಸ್ಟ್ ಕೋಟು, ಮತ್ತೊಂದು ಶರ್ಟನ್ನು ಕತ್ತರಿಸಬೇಕಾಗಿದ್ದಿತು. ಇಷ್ಟನ್ನೂ ಆ ಕಳ್ಳ ಒಂದು ಕ್ಷೌರ ಕತ್ತಿಯಿಂದ ಸಾಧಿಸಿದ್ದ. ಆಶ್ಚರ್ಯವೆಂದರೆ ಈ ಸಮಯದಲ್ಲಿ ಬೇರಾವ ಯೋಚನೆ ಕೂಡಾ ಇಲ್ಲದೆ ಸಾಹುಕಾರರು ಎಚ್ಚರದಲ್ಲೇ ಇದ್ದರು ಆದರೂ ತಮ್ಮ ಅಂಗಿ ಕತ್ತರಿಸುವುದು ಅವರಿಗೆ ತಿಳಿಯಲಿಲ್ಲ ಇನ್ನೂ ಆಶ್ಚರ್ಯವೆಂದರೆ, ಆ ವಿಚಿತ್ರ ಕಳ್ಳನ ಪತ್ತೆ ತಿಳಿಸಿದವರಿಗೆ ಕಳವಾಗಿ ಹೋದ ಮೌಲ್ಯದ 19 ಸಾವಿರ ರೂಪಾಯಿಗಳನ್ನೂ ಬಹುಮಾನವಾಗಿ ಕೊಡುವೆನೆಂದು ಆ ಸಾಹುಕಾರರು ಘೋಷಿಸಿದ್ದಾರೆ ಅವರು ಸಾಹುಕಾರರ! ತನಗಾದ ಧನ ನಷ್ಟಕ್ಕಿಂತಲೂ ತನ್ನ ಜಾಗರೂಕತೆಗೆ ಬಂದ ಅಪವಾದವೇ ಅವರಿಗೆ ಹೆಚ್ಚಿನದಾಗಿ ತೋರಿ ಆ ಕಳ್ಳನ ಮೇಲೆ ಹರ ಬಿದ್ದಿರಬೇಕು!

ಹಿಟ್ಲರ್ ಹೇಗಿದ್ದಾನೆ?

ಗಂಟಲು ನೋವಿಗೆ ಶಸ್ತ್ರಕ್ರಿಯೆ ಮಾಡಿಸಿಕೊಂಡು ಮಾತಾಡಲಶಕ್ತನಾಗಿದ್ದಾನೆ; ಟೋಕಿಯೋಗೆ ಓಡಿಹೋಗಿದ್ದಾನೆ, ಅಧಿಕಾರವೆಲ್ಲಾ ಹಿಮ್ಲರನಿಂದ ಅಪಹರಿಸಲ್ಪಟ್ಟು ಅನಾಥನಾಗಿದ್ದಾನೆ—ಎಂದು ಹಿಟ್ಲರನ ವಿಷಯದಲ್ಲಿ ದಿನಕ್ಕೊಂದರಂತೆ ವಾರ್ತೆ ಬರುತ್ತಿದೆ ಎಲ್ಲಕ್ಕಿಂತ ವಿಶೇಷವಾದ ವಾರ್ತೆಯೆಂದರೆ ಹಿಟ್ಲರನೀಗ ಬದುಕಿ ಉಳಿದಿಲ್ಲ; ಹಿಂದೊಮ್ಮೆ ಬಿಸಿದಿದ್ದ ಒಳಸಂಚಿನವರ ಬೋಂಬು ಅವನನ್ನು ನಿಜಕ್ಕೂ ನಿರ್ನಾಮ ಮಾಡಿದೆ. ಈಗ ಹಿಟ್ಲರನ ಹೆಸರಿನಿಂದ ನಡೆಯುತ್ತಿರುವದೆಲ್ಲಾ ಹಿಮ್ಲರನ ಕಣ್ಣುಮುಚ್ಚಾಲೆಯಾಟವೆಂಬ ವಾರ್ತೆ. 'ಡೈಲಿ ಸ್ಕೆಚ್' ಪತ್ರಿಕೆಯ ಒಂದು ವರದಿಯಂತೆ ಹಿಟ್ಲರನು ತನ್ನ 'ವಿಲ್' ಒಂದನ್ನು ಬರೆದಿಟ್ಟಿದ್ದಾನೆ. ಆ ವಿಲ್‌ನಾಮೆಯಲ್ಲಿ ತನ್ನ ಮರಣಾನಂತರ ತನ್ನ ಉಳಿತಾಯದ ಉತ್ಪತ್ತಿಯೆಲ್ಲವೂ ನಾಜೀ ಪಕ್ಷಕ್ಕೆ ಸಲಬೇಕೆಂದು ವಿಧಿಸಿದ್ದಾನಂತೆ. ಅವನ ಒಬ್ಬ ತಂಗಿ, ಒಬ್ಬ ತಮ್ಮ ಮತ್ತು ಕೆಲ ಮಂದಿ ಸೊಸೆಯರಲ್ಲಿ ಯಾರೊಬ್ಬರಿಗೂ ಒಂದೇ ಒಂದು ಚಿಕ್ಕಾಸನ್ನೂ ಬಿಟ್ಟಿಲ್ಲವಂತೆ.

ಸಿಂಹದ ಮನುಷ್ಯ ಬೇಟೆ

ಪೋರ್ಚುಗೀಸ್ ಪೂರ್ವಾಫ್ರಿಕದ ಮೋಝಾಂಬಿಕ ಒಂದೆಡೆ ಹಿಂಗಡೆಯಲ್ಲಿ ಮನುಷ್ಯನನ್ನು ಕಂಡೊಡನೆ ಬೇಟೆಯಾಡಿ ತಿನ್ನುವ ಸಿಂಹಗಳು ಈಗಲೂ ಇವೆಯಂತೆ ಹಗಲೆತ್ತರಕ್ಕೆ ದಟ್ಟವಾಗಿ ಬೆಳೆದಿರುವ ಪೊದರುಗಳ ಆಶ್ರಯ ಪಡೆದು ಅವು ಮನುಷ್ಯ ವಾಸನೆ ಬಂದೊಡನೆ ಬೆನ್ನಟ್ಟಿ ಕೊಲ್ಲುತ್ತಿವೆ ಕಳೆದ ಮಹಾಯುದ್ಧದ ಕಾಲದಲ್ಲಿ ಅಲ್ಲಿಗೊಂದು ರೈಲು ರಸ್ತೆ ನಿರ್ಮಾಣವಾಗಿತ್ತು. ಆಗಿನಿಂದ ಅಲ್ಲಿ ಸಿಂಹದ ಬೇಟೆ ನಿಷೇಧಿಸಲ್ಪಟ್ಟು ಸಿಂಹಗಳೇ ಮನುಷ್ಯ ಬೇಟೆ ಆರಂಭಿಸಿವೆ ಈ ಯುದ್ಧಕಾಲದಲ್ಲಂತೂ ಸಿಂಹದ ಉಪಾಯ ಬಹಳವಾಗಿ ಹೋಗಿದೆ ಬೇಟೆಗಾರರಿಗೆ ಸಾಕಷ್ಟು ಮದ್ದು ಗುಂಡುಗಳು ದೊರೆಯುತ್ತಿಲ್ಲ ಹೀಗಾಗಿ ಈ ತನಕ 15 ಕರಿಜನರನ್ನೂ ಒಬ್ಬ ಬಿಳಿಯವನನ್ನೂ ಸಿಂಹಗಳು ನುಂಗಿವೆ ಒಮ್ಮೆ ಒಂದು ಭಯಂಕರ ಘಟನೆ ನಡೆದಿದ್ದಿತು ಒಂದು ಸಿಂಹವು ಓಡಿಬಂದು ರೈಲ ಗಾಡಿಯೊಳಗೇ ನುಗ್ಗಿತು ಆ ಕಂಪಾರ್ಟ್‌ಮೆಂಟಿನಲ್ಲಿ ಐದಾರು ಮಂದಿ ಕರಿಜನರ ಮಧ್ಯದಲ್ಲಿ ಕುಳಿತಿದ್ದ ಬಿಳಿಯ ದಾಂಡಿಗನೊಬ್ಬನನ್ನು ಹೆಕ್ಕಿ ತೆಗೆದು, ಎಳೆದುಕೊಂಡು ಹೋಗಿಬಿಟ್ಟಿತು!

ಪುನಃ ಹರ್ ಗೊಂದಲ?

ಸಿಂಧ ಪ್ರಾಂತ್ಯದಲ್ಲಿ ವಹಾ ಬಲಶಾಲಿ ಧರ್ಮಾಯಿತ ಪಕ್ಷವಾದ ಹರ್ ಚಳವಳಗಾರರು ಕೆಲ ಕಾಲದ ಮೊದಲು ಬಹಳ ಆಘಾತಗಳನ್ನು ಮಾಡಿ ಪ್ರಸಿದ್ಧಿ ಪಡೆದಿದ್ದರು. ಮಧ್ಯ ಕಾಲದಲ್ಲಿ ಅವರ ಸುದ್ದಿಯಿರಲಿಲ್ಲ ಈಗ ಬರುತ್ತಿರುವ ವಾರ್ತೆಯಂತೆ ಪುನಃ ಅಲ್ಲಿ ಅವರ ಉಪಟಳವಾರಂಭವಾಗಿದೆ ಕೆಲವೆಡೆಯ ಆಸ್ತಿ ಭೂಮಿಗಳನ್ನೂ ಸಂಕ ಕಾಲುವೆಗಳನ್ನೂ ಅವರು ಹಾಳು ಮಾಡುತ್ತಿರುವ ವಾರ್ತೆಯಿದೆ ಪೋಲೀಸರ ಬೆಂಬಲಕ್ಕಾಗಿ ಈಗ ಸೇನೆ ಹೋಗಿದೆ. ಬಂಡಾಯಗಾರರಿಂದ ಸುಮಾರು 7 ಲಕ್ಷ ರೂ. ಮೌಲ್ಯದ ಬೆಳೆ ಹಾಳಾಗಿದೆಯೆಂದೂ ತಿಳಿದು ಬರುತ್ತದೆ. ಹರ್‌ಗಳೆಲ್ಲಾ ಈಗ ಒಂದು ಕಾಡಿನೊಳಗೆ ಅಡಗಿಕೊಂಡಿರುವರು ಪೋಲೀಸರು ಆ ಕಾಡನ್ನು ಸುತ್ತುಗಟ್ಟಿದ್ದಾರೆ.

ಜಾಪಾನೀ ಗುಪ್ತಚಾರರು

ಕಳೆದ ವರುಷ 4 ಮಂದಿ ಜಾಪಾನೀ ಗುಪ್ತಚಾರರು ಹಿಂದುಸ್ಥಾನದ ಪಶ್ಚಿಮ ಕರಾವಳಿಯಲ್ಲಿಳಿದವರನ್ನು ಪಾಲಿಗೆ ಕೊಡಲಾಗಿತ್ತು ಆ ಮೇಲೆ ಗಾಳಿ ಕೊಡೆಯಿಂದ ಇಳಿದಿದ್ದ ಇಬ್ಬರನ್ನೂ, ಇತ್ತೀಚೆಗ ಪುನಃ ತೀರದಿಂದಿಳಿದ ಐವರನ್ನೂ ಬಂಧಿಸಿ, ಇಬ್ಬರಿಗೆ ಟಂಪು, ಮಿಕ್ಕವರಿಗೆಲ್ಲಾ ಶಾತಿಯಾಗಿವೆ ಇವರೆಲ್ಲಾ ಹಿಂದೀಯರು.

ನೋಟೀಸು

ದ. ಕ. ಮಂಗಳೂರು ಡಿ ಮುನ್ಸಿಫ ಕೋರ್ಟಿನಲ್ಲಿ

S C. No 366/1944

ಕೂಸಪ್ಪಯ್ಯ —ವಾದಿ

ಮತ್ತು

ರಮಾಬಾ — ಪ್ರತಿವಾದಿ

ಮಂಗಳೂರು ಶಹಾರ ಜೋಡುಮಾರ್ಗದ ಬಳಿಯಿರುವ ತಾರಾನಾಥ ಭಟ್ರ ವಿಧವೆ ರಮಾಬ್ಬಾಯಿಗೆ-

ಮೇಲೆ ಹೆಸ್ರು ಕಾಣ್ಸಿದ ವಾದಿ ನಿಂಸು ಮೇಲೆ ತಾ. 1—7—42ರಲ್ಲಿ ರೂ. 42ಕ್ಕೆ M ಲಕ್ಷ್ಮೀನಾರಾಯಣರಾಯರಿಗೆ ಬರಕೊಟ್ಟ ನೋಟಿನ ಹಕ್ಕು ಪರಾಭಾರೆ ಪಡೆದು ದಾಕ್ಲು ಮಾಡಿದ ಮೇಲಿನ ದಾವೆ ಆಖೈರಿ ತನಿ ಬಗ್ಗೆ ತಾ. 18-12-1944ಕ್ಕೆ ಇಟ್ಟಿರುತ್ತದೆ ಈ ಕುರಿತು ನಿಮಗೇನಾದ್ರು ಆಕ್ಷೇಪವಿದ್ರೆ ಸದ್ರಿ ತಾರೀಕಿನ ಬೆಳಿಗ್ಗೆ ಮೇಲಿನ ಕೋರ್ಟಿನ ಮುಂದೆ ಗಂಟೆ 11ಕ್ಕೆ ಹಾಜರಾಗಿ ಜಾಹೀರು ಪಡಿಸಿಕೊಳ್ಳಬಹುದು ತಪ್ಪಿದ್ರೆ ಪ್ರತಿವಾದಿಯಾದ ನಿಂಮ ಗೈರ ಹಾಜ್ರಿಯಲ್ಲಿ ಸದ್ರಿ ಸಂಬ್ರವು ತೀರ್ಮಾನಿಸಲಾದೀತು ತಿಳಿದಿರಲಿ

ಮಂಗಳೂರು ತಾ 27 11-44 } **B Rama Achar,** Advocate for Pltf

ENGLISH MADE EASY

ಇಂಗ್ಲಿಷ್ ಏನೂ ತಿಳಿಯದವರು 'ಸುಲಭದಲ್ಲಿ ಇಂಗ್ಲಿಷ್' ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೇ ಕಲಿತುಕೊಳ್ಳಬಹುದು

ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು

ಸುಲಭದಲ್ಲಿ ಇಂಗ್ಲಿಷ್

ಕೊರದ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ

ಬೆಲೆ ಬರೇ ರೂ 1—4—0 ರೂ 1-8-0ನ್ನು ಮನಿ ಯಾರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತ.

ನ ವ ಭಾ ರ ತ ಪು ಸ್ತ ಕ ಭಂ ಡಾ ರ,

ರಿಜಿಸ್ಟರ್ಡ್ ಪಬ್ಲಿಷರ್ಸ್ ಎಂಡ್ ಬುಕ್ ಸೆಲ್ಲರ್ಸ್,

ಉಡುಪಿ, ದ ಕ,

ಉಡುಪಿ ಮಧ್ವಮತ

ಶಿವಳ್ಳಿ ಬ್ರಾಹ್ಮಣರ

ಧರ್ಮ ಛತ್ರ

ಇದೇ ತಾ 8 10—44ರಿಂದ

ರಾಮೇಶ್ವರ ದೇವಸ್ಥಾನದ ಬಡಗ ಬೀದಿಯಲ್ಲಿ ತೆರೆಯಲ್ಪಟ್ಟಿದೆ

ಎಲ್ ನರಸಿಂಗ ರಾವ್. ಪ್ರೊಪ್ರೈಟರ್

ಉಡುಪಿ ಬೋರ್ಡಿಂಗ್ ಎಂಡ್ ಲಾಡ್ಜಿಂಗ್, ಮಧುರ

The Canara Banking Corporation Limited.

(Incorporated in British India)

Estd· 1906·

Head Office: **UDIPI,** (S. K.)

ANNOUNCEMENT

Branches of the Bank Will Shortly Be opened at **HUBLI & DHARWAR.**

ಉಡುಪಿ, ಗುರುವಾರ ೭-೧೨-೧೯೪೪

ಲೋಕದಣಿದಿದೆ!

ಯುದ್ಧಸ್ಥಿತಿಯೀಗ ಇಡೀ ಪ್ರಪಂಚವನ್ನೇ ಆಯಾಸಕ್ಕೀಡುಮಾಡಿದೆ ಎಂಬ ಸ್ಪಷ್ಟಚಿಹ್ನೆಗಳು ಕಾಣಿಸಹತ್ತಿವೆ. ಪ್ರತಿಯೊಂದು ಕ್ಷಣದಲ್ಲೂ ಪ್ರತಿಯೊಂದು ರಾಷ್ಟ್ರದ ಶಕ್ತಿಯನ್ನು ವ್ಯಯಿಸಿಯೇ ಈ ಚರಿತ್ರಾಪೂರ್ವ ಯುದ್ಧವು ಐದು ವರುಷ ಸಾಗಿದೆ. ಪ್ರಾಣಾವಧಿ ಪ್ರಯತ್ನವೊಂದನ್ನು ಇಷ್ಟು ದೀರ್ಘಾವಧಿಯ ವರೆಗೂ ನಡೆಯಿಸುವದು ಮನುಷ್ಯ ಸ್ವಭಾವಕ್ಕೆ ವಿರುದ್ಧ. ವೈಭವೋತ್ಸವಗಳನ್ನಾದರೂ ಕಾಲಮಿತಿಯಿಲ್ಲದೆ ನಡೆಯಿಸುತ್ತಾ ಹೋದಲ್ಲಿ ಕೊನೆಗವುಗಳ ಮೇಲೆ ವೈರಾಗ್ಯ ಹುಟ್ಟುವದು ಸ್ವಾಭಾವಿಕ. ಇದಂತೂ ಯಾರಿಗೂ ಬೇಡವಾದ ಕಾಳಗ; ಭವಿಷ್ಯದ ಕ್ಷೇಮಕ್ಕಾಗಿ ಲೋಕ ಮಾಡುತ್ತಿರುವ ಮಹಾಯಜ್ಞ. ಈ ಯಜ್ಞಕ್ಕೆ ಇಡೀ ಪ್ರಪಂಚದ ಜೀವನ ಸೌಕರ್ಯಗಳು, ಸರ್ವಾನುಕೂಲತೆಗಳು ಆಹುತಿಯಾಗಿವೆ, ಆದ್ದರಿಂದ ಸಹಜವಾಗಿ ಪ್ರಪಂಚವಿಂದು ಆಯಾಸಗೊಂಡಿದೆ ಈ ರೀತಿ ಸರ್ವತ್ಯಾಗಮಾಡಿದರೂ !ಯುದ್ಧಾಂತ್ಯದ ಗಡಿಗೆ ಬಂದೆವೆನ್ನೋಣವೆ? 'ಯುದ್ಧವು ಬೇಗನೇ ಕೊನೆಗೊಳ್ಳಬಹುದೆಂಬ ಬಯಲಾಸೆ ಬೇಡ' ಎಂದು ಕಾಮನ್ಸ್ ಸಭೆಯಲ್ಲಿ ಮೊನ್ನೆ ತಾನೇ ಮಿ. ಚರ್ಚಿಲ್ಲರ ಎಚ್ಚರಿಕೆ ಬಂದಿದೆ. ಹೀಗಾಗಿ ಆಯಾಸದ ಜತೆಯಲ್ಲಿ ಅಸಹನೆಯೂ ಬೆಳೆಯುವಂತಾಗಿದೆ.

ಆದರೂ ಪಕ್ಷಭೇದವಿಲ್ಲದೆ ಲೋಕದಲ್ಲೆಲ್ಲಾ ಹುಟ್ಟಿರುವ ಈ ಜಿಗುಪ್ಸೆಯು ಸ್ಪಷ್ಟ ಪ್ರದರ್ಶನಕ್ಕವಕಾಶವಿಲ್ಲ. ಮೈಮೇಲೆ ಬಂದಿರುವ ಆಪತ್ತು ನಿವಾರಣೆಯಾಗುವ ಮೊದಲೇ ವೈರಾಗ್ಯ ತಾಳುವಷ್ಟು ನಪುಂಸಕರು ಯಾವ ಕಡೆಯಲ್ಲೂ ಇಲ್ಲ. ಹಾಗಾಗಿ ಯುದ್ಧವಿನ್ನೂ ಬೆಳೆಯುತ್ತಿದೆ ಹಾಗೆಂದು ಈಗ ಹುಟ್ಟಿರುವ ಬೇಸರವಾದರೂ ಯಾವ ವಿಧದಿಂದಲೂ ಪ್ರಕಾಶಕ್ಕೆ ಬಾರದೆ ನಿಲ್ಲುವಷ್ಟು ಅಲ್ಪವಾಗಿಲ್ಲ. ಅದೂ ಒಂದಲ್ಲೊಂದು ವಿಧದಿಂದ ಗೋಚರಿಸುತ್ತಲೇ ಇದೆ. ಮಿತ್ರಪಾಳೆಯದೊಳಗಿನ ಸಣ್ಣ ರಾಷ್ಟ್ರಗಳಲ್ಲೆಲ್ಲಾ ಎದ್ದಿರುವ ಮಂತ್ರಿಮಂಡಲಗಳ ಬಿಕ್ಕಟ್ಟು ಮತ್ತು ಪರಸ್ಪರ ಅವಿಶ್ವಾಸಗಳಿಗೆ ಈ ಬೇಸರವೇ ಹೇತು. ಶತ್ರು ಪಾಳಯವಾದರೂ ನಾವು ಅಸೂಯೆ ಪಡಬೇಕಾದ ಸ್ಥಿತಿಯಲ್ಲಿಲ್ಲ. 'ಯುದ್ಧಸ್ಥಿತಿಯ ಕುರಿತು ಚರ್ಚಿಸುವುದನ್ನು ನಿಷೇಧಿಸಲಾಗಿದೆ. ಈ ಯುದ್ಧದ ಕೊನೆಯ ಪರಿಣಾಮದ ಕುರಿತು ಸಂದೇಹ ಪ್ರದರ್ಶನವು ಶಿಕ್ಷಾರ್ಹವಾದುದು' ಎಂದು ಇತ್ತೀಚೆಗೆ ಜರ್ಮನರಿಗೆ ಡಾ. ಗೋಬೆಲ್ಸನ ಕಟ್ಟಾಜ್ಞೆಯಾಗಿದೆ. ಜರ್ಮನರು ಗಲಿಬಿಲಿಗೊಂಡಿದ್ದಾರೆ ಎಂಬುದರ ನಿದರ್ಶನವಿದು. ಜರ್ಮನಿಯ ಗಡಿಯೊಳಗೆ ಮಿತ್ರಸೇನೆಗಳು ನುಗ್ಗುತ್ತಿರುವ ಈ ಕಾಲದಲ್ಲೇ ಒಳಗಿನ ಸ್ಥಿತಿಯೂ ಸಾಕಷ್ಟು ಭದ್ರವಾಗಿಲ್ಲ ಎಂದೂಹಿಸಬಹುದು. ಹಾಗೆ ನುಗ್ಗುವ ಮಿತ್ರಸೇನೆಗಳ ಸ್ಥಿತಿಗತಿಯೇ? ಗುಂಡುಗಳ ಕೊರತೆಯುಂಟು; ಕಾಲ್ಬಲವಿನ್ನೂ ಬೇಕಾದೀತು- ಎಂಬ ಕೂಗು ಅಲ್ಲಿಂದಲೂ ಕೇಳಿ ಬರುತ್ತಿದೆ. ಅಂತೂ ಇದುವರೆಗೆ ಒಬ್ಬರನ್ನೊಬ್ಬರು ಸೋಲಿಸಿದುದಕ್ಕಿಂತ ಹೆಚ್ಚಾಗಿ ಯುದ್ಧವು ಇಬ್ಬರನ್ನೂ ಸೋಲಿಸಿದೆ!

ಆದರೂ ಇಕ್ಕಡೆಯುವಂತಲ್ಲಿರುವ ಒಂದು ಮುಖ್ಯ ತಾರತಮ್ಯವನ್ನು ಮರೆಯಬಾರದು. ವೈರಿರಾಷ್ಟ್ರಗಳೀಗ ಸೋತಿರುವದು ಸೇನಾ ವಿಭಾಗದಲ್ಲಿ; ರಣರಂಗದಲ್ಲಿ. ಮಿತ್ರರಾಷ್ಟ್ರಗಳ ಆಯಾಸವೋ ಆಲಸ್ಯವೋ ಪ್ರದರ್ಶನವಾಗುತ್ತಿರುವದು ರಾಜಕೀಯ ಸಂಬಂಧದಲ್ಲಿ; ವ್ಯವಹಾರರಂಗದಲ್ಲಿ ನಮ್ಮ ಆಶೆಗಾಧಾರವಾಗಿರುವ ವೈರಿಗಳ ಆ ದೌರ್ಬಲ್ಯವು ಇನ್ನು ನಿವಾರಣೆಗೊಳ್ಳುವಂತಿಲ್ಲವೆಂದೇ ಬಯಸೋಣ. ಮಿತ್ರ ರಾಷ್ಟ್ರಗಳ ಈ ಕೊರತೆಯೂ ಹೀಗೆಯೇ ಉಳಿಯುವದು ಹಿತಕರವೆ? ರಶ್ಯ ಮತ್ತು ಇಂಗ್ಲಾಂದು ಅಮೇರಿಕಗಳ ವ್ಯವಹಾರ ಸಂಬಂಧವಿನ್ನೂ ಸುಧಾರಿಸಿಲ್ಲ. ಬಾಲ್ಟಿಕ್ ಸಮಸ್ಯೆ, ಪೋಲಂಡಿನ ಪ್ರಶ್ನೆ, ಫ್ರಾನ್ಸಿನ ಸ್ಥಾನ, ಇರಾನಿನ ಎಣ್ಣೆ–ಇವೆಲ್ಲವುಗಳಿಂದಾಗಿ ಎದ್ದಿರುವ ಮತಭೇದವು ದಿನಕ್ಕೊಂದಂತೆ ಪ್ರಜ್ವಲಿಸುತ್ತಿದೆ. ಚೀನದ ಚಿಯಾಂಗ್ ಸರಕಾರದ ಮೇಲೆ ರಶ್ಯಾನರಿಗೆ ತೀವ್ರ ಅತೃಪ್ತಿಯಿರುವಂತಿದೆ. ಸಿಕ್ಕುಗಟ್ಟಿಹೋಗಿರುವ ಇಂಗ್ಲೆಂಡು–ಹಿಂದುಸ್ಥಾನಗಳ ಸಂಬಂಧವನ್ನಂತೂ ಬಿಡಿಸುವವರಿಲ್ಲ. ಅಬಿಸೀನಿಯದಿಂದ ಕಾಲ್ತೆಗೆಯುವದಕ್ಕೂ ಬ್ರಿಟನರೊಪ್ಪುವದಿಲ್ಲ. ಗ್ರೀಸಿನಲ್ಲೀಗ ಸ್ಥಾಪಿತವಾಗಿರುವ ಮಿತ್ರಪಕ್ಷಪಾತಿ ಸರಕಾರದ ವಿರುದ್ಧವಾಗಿ ಜನರು ಸಶಕ್ತ ಬಂಡಾಯವೆಬ್ಬಿಸಿದ್ದಾರೆ. ಇಟೆಲಿಯಲ್ಲಿ ಬ್ರಿಟನಿನಿಂದ ಸ್ಥಾಪಿತವಾಗಿರುವ ಬೊನೊಮಿ ಮಂತ್ರಿಮಂಡಲದಲ್ಲಿ ತನ್ನ ಹಳೆಯ ಮಿತ್ರ ಕೌಂಟ್ ಸ್ಫೋರ್ಜರನ್ನು ಸೇರಿಸಿಕೊಳ್ಳಲು ಬೊನೊಮಿಯವರ ಒಪ್ಪಿಗೆಯಿದ್ದರೂ ಬ್ರಿಟನರೊಪ್ಪುವದಿಲ್ಲ ಇವೆಲ್ಲ ಘಟನೆಗಳಿಂದ ಒಡೆದು ಕಾಣುತ್ತಿರುವ ಮಿತ್ರರಾಷ್ಟ್ರಗಳ–ಮುಖ್ಯವಾಗಿ ಇಂಗ್ಲಾಂಡಿನ–ಸಾಮ್ರಾಜ್ಯದಾಹ ತೊಲಗದೆ ಯುದ್ಧ ಗೆದ್ದರೂ ಶಾಂತಿಸ್ಥಾಪನೆ ಸಾಧ್ಯವೆ? ಯುದ್ಧಜನ್ಯ ಆಯಾಸವನ್ನು ಈ ಘೋರಣೆಯು ಮತ್ತಷ್ಟು ಹೆಚ್ಚಿಸಿದೆ ಎಂಬುದನ್ನು ಮರೆಯಬಾರದು.

ಬಸ್ ಸರ್ವಿಸನ್ನು ಸರಕಾರ, ವ, ಸ್ಥಳೀಯ — ಸಂಸ್ಥೆ ನಡೆಸಬೇಕು —

ಯುದ್ಧಾನಂತರದ ಪುನರ್ರಚನಾ ಸಮಿತಿಯ ಅಭಿಪ್ರಾಯ

'ಬಸ್ ಸರ್ವೀಸುಗಳನ್ನು ನಮ್ಮ ಜಿಲ್ಲಾ ಬೋರ್ಡು ನಡೆಸಬಾರದೇಕೆ?' ಎಂಬ ಅಭಿಪ್ರಾಯವು ದ. ಕನ್ನಡದಲ್ಲೀಗ ಪ್ರಕಟಗೊಂಡು ಪ್ರಬಲಿಸುತ್ತಿದೆ. ಈ ಬೇಡಿಕೆಯು ನಮ್ಮ ಜಿಲ್ಲೆಯದಷ್ಟೇ ಅಲ್ಲ; ಅದು ಇಡೀ ಮದ್ರಾಸ್ ಪ್ರಾಂತ್ಯದ ಕರೆ; ನಮ್ಮ ಜಿಲ್ಲಾ ಬೋರ್ಡು ಅದನ್ನು ಈಗಲೇ ಮಾನ್ಯಮಾಡಿದರೆ ಯುದ್ಧಾನಂತರದ ಪುನರ್ರಚನೆಯ ಹೊಣೆಗೆ ಮುಂದಾಗಿ ಹೆಗಲೊಡ್ಡಿದ ಕೀರ್ತಿ ಸಂಪಾದಿಸಬಹುದು;-ಎಂಬುದಕ್ಕೆ ಕಳೆದ ನವಂಬರ್ ತಾ. 30ರಲ್ಲಿ ಮಾನ್ಯ ಗವರ್ನರರ ಅಧ್ಯಕ್ಷತೆಯಲ್ಲಿ ಮದ್ರಾಸಿನಲ್ಲಿ ಜರಗಿದ ಯುದ್ಧಾನಂತರದ ಪುನರ್ರಚನಾ ಸಮಿತಿಯ ಮಹಾಸಭೆಯಲ್ಲಾದ ನಿರ್ಣಯವೊಂದು ನಿದರ್ಶನ. ಅದರ ಸಾರಾಂಶವನ್ನಿಲ್ಲಿ ಕೊಡಲಾಗಿದೆ. ಯುದ್ಧಾನಂತರ ಸಂಬಂಧದ ಈ ಮುಖ್ಯ ಕಮಿಟಿಯು, ಬೇರೆ ಬೇರೆ ವಿಭಾಗಗಳಿಗಾಗಿ ಪ್ರತ್ಯೇಕ ಸಬ್ ಕಮಿಟಿಗಳನ್ನು ನೇಮಿಸಿ ವರದಿಯನ್ನಪೇಕ್ಷಿಸಿದ್ದಿತು. ಅಂತೆಯೇ ಟ್ರಾನ್ಸ್‌ಪೋರ್ಟ್ ಸಬ್ ಕಮಿಟಿ (ಒಯ್ಯೋಣ ಸಂಬಂಧದ)ಯ ವರದಿಯು ಪರ್ಯಾಲೋಚನೆಗಾಗಿ ಮುಖ್ಯ ಸಮಿತಿಯ ಮುಂದೆ ಬಂತು.

ಸಬ್ ಕಮಿಟಿ ವರದಿಯ ಸಾರಾಂಶ–

ಸರ್ವೀಸುಗಳನ್ನಿಡುವ ಕುರಿತು ಖಾಸಗೀ ಏಕಾಧಿಕಾರಕೊಡುವಂತಿಲ್ಲ; ಸರಕಾರವೇ ಅವುಗಳನ್ನು ನಡೆಸುವಂತೆಯೂ ಇಲ್ಲ. 20ಕ್ಕೆ ಕಡಿಮೆ ಬಸ್ಸುಗಳಿರದ ದೊಡ್ಡ ಸಂಸ್ಥೆಗಳು ಸರಕಾರದ ಹತೋಟಿಗೊಳಪಟ್ಟು ಅವುಗಳನ್ನು ನಡಿಸಬೇಕು. ಈಗಿನಂತೆ ಜಿಲ್ಲೆಗೊಂದು ಟ್ರಾಫಿಕ್ ಬೋರ್ಡುಗಳಿರುವದರಿಂದ ಬಸ್‌ಮಾಲಿಕರು ಪರ್ಮಿಟ್ ಪಡೆಯುವದಕ್ಕಾಗಿ ಹಲವು ಬೋರ್ಡುಗಳನ್ನು ಹಾರೈಸಬೇಕಾಗಿರುವ ಸಂಕಷ್ಟ ನಿವಾರಣೆಗಾಗಿ ಅವುಗಳ ಬದಲಿಗೆ ಮೂರು ಯಾ ನಾಲ್ಕು ಜಿಲ್ಲೆಗಳಿಗೊಬ್ಬನಂತೆ ಅಧಿಕಾರಿಯನ್ನೇ ನೇಮಿಸಬೇಕು. ಅಂತೆಯೇ ಎತ್ತಿನ ಗಾಡಿಗಳಿಗೆ ಕಬ್ಬಿಣದ ಚಕ್ರದ ಬದಲು ರಬ್ಬರ್ ಗಾಲಿಗಳ ಅನುಕೂಲತೆಯೊದಗಿಸಬೇಕು. ಇತ್ಯಾದಿ ಕೆಲವು ಸೂಚನೆಗಳು ಸಬ್ ಕಮಿಟಿಯ ವರದಿಯಲ್ಲಿದ್ದುವು. ಈ ಸೂಚನೆಗಳನ್ವಯ ಈಗಿರುವ ಮಾದರಿಯ ಬಸ್ ಕಂಪೆನಿಗಳು ಇನ್ನಷ್ಟು ಅನುಕೂಲತೆಯೊಂದಿಗೆ ಯುದ್ಧಾನಂತರವೂ ಅಸ್ತಿತ್ವದಲ್ಲಿರುವ ಅವಕಾಶವಿದೆ.

ಮಹಾಸಮಿತಿಯ ನಿರ್ಣಯ

ಈ ವರದಿಯ ಮೇಲೆ ಚರ್ಚೆ ನಡೆದಾಗ ನಮ್ಮ ಜಿಲ್ಲೆಯವರಾದ ಶ್ರೀ ಆರೂರು ಲಕ್ಷ್ಮೀ ನಾರಾಯಣರಾಯರು, ಮೋಟರು ಮತ್ತು ದುರಸ್ತಿಯ ಅನುಕೂಲತೆಯಿರುವ ಸಣ್ಣ ಕಂಪೆನಿಗಳನ್ನೂ ಬಸ್ ಸರ್ವಿಸ್ ನಡೆಯಿಸಲು ಬಿಡಬೇಕೆಂದು ಬಯಸಿದರು ಅಂತಹ ಕಂಪೆನಿಗಳು ದೊಡ್ಡ ಕಂಪೆನಿಗಳೊಡನೆ ಮಿಶ್ರಗೊಳ್ಳುವಂತೆ ಪ್ರೋತ್ಸಾಹಿಸಲಾಗುವದೆಂಬ ಉತ್ತರ ಬಂತು. ಬಸ್ಸೊಂದಕ್ಕೆ 3000 ರೂ ಗಳಂತೆ ಮೌಲ್ಯಕೊಡಲು ತಯಾರು ಆದರೆ ಪ್ರಕೃತ 20 ಸಾವಿರದ ವರೆಗೂ ಮೌಲ್ಯ ಕೇಳುತ್ತಿರುವದರಿಂದ ಕಂಪೆನಿಗಳನ್ನು ಸಂಯುಕ್ತಗೊಳಿಸುವದು ಕಷ್ಟವಾಗಿದೆಯೆಂದು ಉತ್ತರ ಬಂತು. ಶ್ರೀ ಪಿ. ರಾಮಮೂರ್ತಿಯವರೆದ್ದು ಈ ವರದಿಯೇ ಅವ್ಯವಹಾರ್ಯವೆಂದೂ ಕೆಲಸಗಾರರ ಪರಿಸ್ಥಿತಿಯ ಕುರಿತು ಒಂದೇ ಒಂದು ಶಬ್ದ ಅದರಲ್ಲಿಲ್ಲವೆಂದೂ ಆಕ್ಷೇಪಿಸಿ, ಸರಕಾರವೇ ಸಾರ್ವಜನಿಕ ಸರ್ವಿಸುಗಳನ್ನು ನಡಿಸಬೇಕೆಂದು ಸೂಚಿಸಿ, ನೆರೆಯ ಸಂಸ್ಥಾನವಾದ ತಿರುವಾಂಕೂರಿನಲ್ಲಿ ಆ ಪದ್ಧತಿಯು ಜಯಶೀಲವಾಗಿರುವ ದೃಷ್ಟಾಂತ ಕೊಟ್ಟರು. ಶ್ರೀ ಎಸ್. ಗುರುಸ್ವಾಮಿಯವರೂ ಆ ವಾದವನ್ನು ಸಮರ್ಥಿಸಿ ಕೆಲಸಗಾರರ ಸಂಕಷ್ಟಗಳನ್ನು ನಿವೇದಿಸಿಕೊಂಡ ಮೇಲೆ ಸರ್. ಆರ್.ಕೆ. ಷಣ್ಮುಖಂ ಚೆಟ್ಟಿಯವರು ಖಾಸಗೀ ಆಡಳಿತೆಯಿಂದ ಸಾರ್ವಜನಿಕ ಹಿತ ಸಂಬಂಧಗಳಿಗೆ ತಗಲುವ ಧಕ್ಕೆಯನ್ನು ನಿದರ್ಶನಪೂರ್ವಕವಾಗಿ ವಿವರಿಸಿ, ಸರಕಾರ, ಮುನಿಸಿಪಾಲಿಟಿ ಅಥವಾ ಸ್ಥಳೀಯ ಸಂಸ್ಥೆಗಳೇ ಸಂಚಾರಕ ಸರ್ವಿಸುಗಳನ್ನು ನಡೆಸಬೇಕೆಂದರು. ಬೇಗಮ್ ಮಿರ್. ಅಮಿರುದ್ದೀನ್ ಮತ್ತು ಮಿ. ಅಬ್ದುಲ್ ಹಮೀದ್‌ಖಾನರೂ ಈ ಅಭಿಪ್ರಾಯವನ್ನು ಸಮರ್ಥಿಸಿದರು. ಸಮಯಾನುಸಾರವಾಗಿ ಸರಕಾರವೇ ಬಸ್ ಸರ್ವಿಸುಗಳನ್ನು ನಡೆಸುವದಕ್ಕೂ ವರದಿಯಲ್ಲಿ ಸೂಚಿಸಿರುವ ದೊಡ್ಡ ಕಂಪೆನಿಗಳ ಕೈಯಿಂದ ಸುಲಭವಾಗಿ ತೆಗೆದುಕೊಳ್ಳಲು ಅನುಕೂಲವೇ ಆಗುತ್ತದೆ ಎಂದು ಸಬ್ ಕಮಿಟಿಯ ಪರವಾಗಿ ಉತ್ತರಬಂತು. ಆದರೂ ಸಬ್ ಕಮಿಟಿಯ ವರದಿಯ ಮೇಲೆ ಮತ ತೆಗೆದಾಗ 12 ಅನುಕೂಲ 23 ಪ್ರತಿಕೂಲ ಮತಗಳು ದೊರೆತು ಅದು ಬಿದ್ದು ಹೋಯಿತು. ಆ ಮೇಲೆ ಸರಕಾರ ಅಥವಾ ಸ್ಥಳೀಯ ಸಂಸ್ಥೆಯೇ ಬಸ್ ಸರ್ವೀಸುಗಳ ಅಧಿಕಾರ ಮತ್ತು ಆಡಳಿತೆ ನಡೆಸಬೇಕೆಂಬ ಪರ್ಯಾಲೋಚನೆಯೊಡನೆ ಮತ್ತೊಂದು ವರದಿಯೊಪ್ಪಿಸುವದಕ್ಕಾಗಿ ಈ ವರದಿಯನ್ನು ಸಬ್ ಕಮಿಟಿಗೇನೇ ಹಿಂದೆಕೊಡಬೇಕು–ಎಂಬ ಸರ್. ಷಣ್ಮುಖಂ ಚೆಟ್ಟಿಯವರ ಸೂಚನೆಯು ವೋಟಿಗೆ ಬಿದ್ದು 28 ಅನುಕೂಲ 5 ಪ್ರತಿಕೂಲ ಮತಗಳಿಂದ ಪಾಸಾಯಿತು. ನಿಷ್ಪಕ್ಷಪಾತ ತೀರ್ಮಾನ ಹೊಂದುವದಕ್ಕಾಗಿ ಅಧ್ಯಕ್ಷ ಗವರ್ನರರು ಆದಿಯಲ್ಲೇ ಸೂಚಿಸಿದ್ದಂತೆ ಅಧಿಕಾರೀ ಸದಸ್ಯರು ಮತದಾನಮಾಡದೆ ತಟಸ್ಥರಾಗಿದ್ದರು.

ಹರಿಜನ ಸೇವಾಸಂಘ— ಹರಿಜನ ಸೇವಾ ಸಂಘದ ಮಹಾಸಭೆಯು ಕಳೆದ ತಾ. ೩೦ರಲ್ಲಿ ಇಲ್ಲಿಯ ಥಿಯೊಸಾಫಿಕಲ್ ಲಾಜಿನಲ್ಲಿ ಅದರ ಅಧ್ಯಕ್ಷರಾದ ಶ್ರೀ ಎ ಬಿ ಸೆಟ್ಟಿ, ಅವರ ಅಧ್ಯಕ್ಷತೆಯಲ್ಲಿ ಜರುಗಿತು, ಸಂಘದ ಕಾರ್ಯದರ್ಶಿ ಶ್ರೀ, ಬಿ. ಅನಂತ ರಾಯರು ವರದಿಯನ್ನೊಪ್ಪಿಸಿದರು. ೪೪-೪೫ರ ಬಜೆಟ್ ಮಂಜೂರಾಗಿ ಆ ವರ್ಷದ ಕಾರ್ಯಕಾರಿ ಸಮಿತಿಯೂ ಆರಿಸಲ್ಪಟ್ಟಿತು. ಶ್ರೀಗಳಾದ ಎ. ಬಿ. ಸೆಟ್ಟರು ಅಧ್ಯಕ್ಷರು. ಎಂ. ಅಣ್ಣಪ್ಪ, ವೈಸ್‌ಪ್ರೆಸಿಡೆಂಟ್; ಬಿ ಅನಂತರಾವ್, ಕಾರ್ಯದರ್ಶಿ; ಇವರಲ್ಲದೆ ಇನ್ನೆಂಟು ಮಂದಿ ಸದಸ್ಯರೂ ಇದ್ದಾರೆ. ಅವರಲ್ಲಿ ಶ್ರೀ. ಎ. ಶ್ರೀನಿವಾಸ ಸೆಟ್ಟಿ ಅವರೂ ಒಬ್ಬರು.

ಎಲ್ಲೆಡೆಗಳಲ್ಲೂ ರಾಜಕೀಯ ಅಂತಃಕಲಹ!

ಜರ್ಮನಿ—ಹಂಗೇರಿ—ಚೀನಾ ರಂಗಗಳ ಯುದ್ಧ ಸ್ಥಿತಿ

ಪಶ್ಚಿಮ ರಂಗದಲ್ಲಿ.

ಜರ್ಮನಿಯ ಗಡಿಯೊಳಗೆ ನುಗ್ಗಿರುವ ಮಿತ್ರ ಸೇನೆಗಳು ಈ ವಾರದಲ್ಲಾದರೂ ಆಕರ್ಷಣೀಯ ವಿಜಯವಾವುದನ್ನೂ ಸಂಪಾದಿಸಿಲ್ಲ. ಭೀಕರ ಕಾಳಗ ಕೊಡುತ್ತಾ, ಸಾವಧಾನವಾಗಿ ಆದರೆ ದೃಢವಾಗಿ ಮುಂದೊತ್ತುತ್ತಿವೆ ಎಂದಿಷ್ಟೇ ಹೇಳಬೇಕು. ಅಲ್ಲಿಯ ಒಂದೆಡೆಯಲ್ಲಿ ಅಮೇರಿಕನ್ ಮೂರನೇ ಸೇನೆ ಸಾರ್ ಹೊಳೆಯನ್ನು ದಾಟಿದೆಯೆಂದು ತಿಳಿದು ಬರುತ್ತದೆ. ಪೆಲ್ಜೀವಲಯದ ಬ್ರಿಟಿಷ್ ಎರಡನೇ ಸೇನೆಯೂ ಅದನ್ನು ಸುತ್ತುಗಟ್ಟಿದೆ ಎಂಬ ವಾರ್ತೆ ಬಂದಿದೆ. ಅಂತೂ ಜರ್ಮನ್ ಗಡಿಯ ಪ್ರಾಮುಖ್ಯ ಯುದ್ಧದಲ್ಲಿ ಜರ್ಮನರು ತಮಗೆ ಅನಾನುಕೂಲವಾದಲ್ಲಿಂದ ತುಸು ಹಿಂದೆಗೆದು ಅನುಕೂಲ ಸ್ಥಳದಲ್ಲಿ ನಿಂತು ಪುನಃ ಅಷ್ಟೇ ಭೀಕರವಾಗಿ ಹೋರಾಡುತ್ತಿದ್ದಾರೆ. ಅಲ್ಲಿಯ ಯುದ್ಧ ನಿರ್ಣಯಕ ಸಮ ಮುಟ್ಟಿದಲ್ಲಿದೆ. ಇಟಲಿಯಲ್ಲಿ ಮಿತ್ರಸೇನೆ ಮುಂದೊತ್ತಿದೆ.

ರಶ್ಯನರು

ಡೆನ್ಯೂಬ್ ಹೊಳೆ ದಾಟಿ ಹಂಗೇರಿಯ ಆಕ್ರಮಣದ ತಮ್ಮ ಕೆಲಸವನ್ನು ಬಹು ಮಟ್ಟಿಗೆ ನೆರವೇರಿಸಿಕೊಂಡಿದ್ದಾರೆ. ಪ್ರಧಾನ ನಗರ ಬುಡಾಪೆಸ್ಟಿನ ಪತನವು ಇನ್ನು ನಿಶ್ಚಯವೆನ್ನಬಹುದು. ಅದರ ಸರಹದ್ದಿನ ಆಯಕಟ್ಟಿನ ನಗರಗಳೆಲ್ಲಾ ಕೆಂಪು ಸೇನೆಯ ವಶವಾಗಿವೆ. ಜರ್ಮನ್ ಸೇನೆಗಳು ತುಸು ಗೊಂದಲಕ್ಕೀಡಾದಂತಿದೆ. ರಶ್ಯನರ ದ್ವಿಮುಖ ಧಾಳಿಗಳನ್ನು ತಡೆಯುವದಕ್ಕಾಗಿ ನಾಜಿಗಳು ಒಂದೆಡೆಯಿಂದ ಇನ್ನೊಂದೆಡೆಗೆ ಸೇನೆಯನ್ನೊಯ್ಯುತ್ತಾ ಕಠಿಣವಾಗಿ ಪ್ರತಿಭಟಿಸುತ್ತಿದ್ದಾರೆ. ಆದರೆ ಅವುಗಳನ್ನು ಹುಸಿಗೊಳಿಸಿ ಕೆಂಪು ಸೇನೆಯೀಗ ಆಸ್ಟ್ರಿಯಾ ಗಡಿಯ ಕಡೆಗೆ ಧಾಳಿಯಿಟ್ಟಿದೆ. ಹಂಗೇರಿಯಲ್ಲಿ ಜರ್ಮನರ ರಕ್ಷಣಾ ಕೇಂದ್ರವಾಗಿದ್ದ ಸಾಟೋಲ್ಜಾ—ಕೆಂಪು ಸೇನೆಯ ವಶವಾಗಿದೆ.

ಜಾಪಾನ್ ಯುದ್ಧ

ಜಾಪಾನರ ಪ್ರಧಾನ ನಗರವಾದ ಟೋಕಿಯೋದ ಮೇಲೆ ಕಳೆದ ವಾರದಲ್ಲಿ ಪುನಃ ಮೂರು ಬಾರಿ ಆಕಾಶಧಾಳಿ ನಡೆಯಿತು. ಜಾಪಾನರು ತಮಗಾಗುವ ಹಾನಿಯನ್ನು ಒಪ್ಪಿಕೊಂಡಿದ್ದಾರೆ. ಶಾಂತ ಸಮುದ್ರದಲ್ಲಿ ಫಿಲಿಪ್ಪಾಯಿನ್ಸ್ ದ್ವೀಪಗಳ ಮೇಲೆ ಅಮೇರಿಕಾನರಾರಂಭಿಸಿದ್ದ ಆಕ್ರಮಣವೇಕೋ ಬಹಳ ಮಂದಗತಿಯಲ್ಲಿದೆ. ಹವಾಮಾನದ ಅನಾನುಕೂಲತೆಯೇ ಇದಕ್ಕೆ ಕಾರಣವಂತೆ. ಬರ್ಮಾ ಯುದ್ಧದಲ್ಲಿ ಮಿತ್ರಸೇನೆ ಪ್ರಗತಿಯಲ್ಲಿದೆ. ಚಿಂಡ್ವಿನ್‌ನಲ್ಲಿಯದ ಕಾಲೆವಾ ನಗರವು ಮಿತ್ರ ಸೇನೆಗಳ ವಶವಾಗಿದೆ. ಉತ್ತರ ಬರ್ಮದ ಸಿಟ್ವಾಂಗ್ ಹೊಳೆಗೆ ಸಂಕ ರಚಿಸಿ ದಾಟಲನುಕೂಲವಾಗುವಂತೆ ಕಳೆದೆರಡು ತಿಂಗಳಿಂದ ಅಲ್ಲಿ ಕಾವಲು ನಡೆಸಿದ ಕೀರ್ತಿಯು ಮದ್ರಾಸಿನ ಸೇನೆಗೆ ಸಲ್ಲುತ್ತದೆ.

ಚೀನದ ಕಠಿಣಾವಸ್ಥೆ

ಹೊರಗಡೆಯ ಎಲ್ಲಾ ಸರಬರಾಯಿ ಪಥಗಳನ್ನೂ ಕಡಿದುಕೊಂಡು ಪೂರ್ಣ ನಿಸ್ಸಹಾಯಕ ಸ್ಥಿತಿಗಿಳಿಯುವ ವಿಷಮಾವಸ್ಥೆಯೀಗ ಚೀನಕ್ಕೊದಗಿದೆ. ಚುಂಕಿಂಗ್ ಮತ್ತು ಕುನ್ಮಿಂಗಿನ ಯೆದ್ವಾರಿಗಳೂ, ಆಕಾಶ ಪಥಗಳ ಸಂಬಂಧವೂ ಇರುವ ಕ್ವೀಯಾಂಗಿನ ಕಡೆಗೆ ಜಾಪಾನರ ಪ್ರಬಲ ಸೇನೆಯೀಗ ಧಾವಿಸಿ ಬರುತ್ತಿದೆ. ಯುನಾನ್ ಪ್ರಾಂತ್ಯವನ್ನು ಉಳಿಸಿಕೊಳ್ಳುವದು ಚೈನೀಯರಿಗತಿ ಪ್ರಯಾಸವಾಗಬಹುದು. ಮುಂದೊತ್ತಿ ಬರುತ್ತಿರುವ ಜಾಪಾನೀ ಸೇನೆಗಳ ಮೇಲೆ ಅಮೇರಿಕಾನರ ಆಕಾಶಧಾಳಿಯ ಹೊರತು ಬೇರೆ ಪ್ರತಿಭಟನೆ ಕಾಣುವದಿಲ್ಲ. ಆಕಾಶ ಹೊಡೆತವನ್ನಾದರೂ ರಾತ್ರಿ ನಡೆಸಲಾಗುವದಿಲ್ಲ. ಹಗಲು ಜಾಪಾನೀ ಸೇನೆ ಮರೆಯಲ್ಲಿ ನಿಂತು, ರಾತ್ರಿ ಮುಂದೊತ್ತುವ ಅನುಕೂಲತೆಯಿದೆ.

ಚೀನದ ಅಂತಃಕಲಹ.

ಚಿಯಾಂಗ್ ಕೈಶೇಕರು ತನ್ನ ಮಂತ್ರಿ ಮಂಡಲವನ್ನು ಪುನರ್ಘಟಿಸಿಕೊಂಡಿದ್ದಾರಾದರೂ ಅಲ್ಲಿಯ ಕಮ್ಯೂನಿಸ್ಟರಾಗಲೀ ರಶ್ಯವಾಗಲೀ ಸಮಾಧಾನಗೊಂಡಿಲ್ಲ. ಚೀನಾ ಸೇನೆಯಲ್ಲಿ ಅರೆವಾಸಿಗೂ ಮಿಕ್ಕಿರುವ ಕಮ್ಯೂನಿಸ್ಟರ ಮಾತಿಗೆ ಬೆಲೆ ದೊರೆಯಲೇಬೇಕೆಂದೂ ಈಗ ಚೀನದ ಸೇನೆ ಮನಃಪೂರ್ವಕ ಕಾರ್ಯಾಚರಣೆಯಲ್ಲಿಲ್ಲವೆಂದೂ ರಶ್ಯದ ಅಧಿಕಾರೀ ಪತ್ರಿಕೆಯೊಂದು ಆರೋಪಿಸಿದೆ. ಈಗಿನ ಸ್ಥಿತಿಯಲ್ಲಿ ಅಮೇರಿಕಾನರ ಅಲ್ಪ ಸಹಾಯ, ಬ್ರಿಟನ್ನರ ಅಸಡ್ಡೆ, ರಶ್ಯದ ಕ್ರೋಧಕ್ಕೆ ಚಿಯಾಂಗ್ ಕೈಶೇಕರು ಈಡಾದಂತಿದೆ.

ಗ್ರೀಸಿನಲ್ಲಿ ಬಂಡಾಯ

ಗ್ರೀಸಿನ ಪ್ರಧಾನ ನಗರ ಎಥೆನ್ಸಿನಲ್ಲಿ ಕಳೆದ ತಾ. ೩ರಲ್ಲಿ ಅರಮನೆಯತ್ತ ನುಗ್ಗಿ ಬರುತ್ತಿದ್ದ ಪ್ರದರ್ಶಕರ ದೊಡ್ಡ ಗುಂಪಿನ ಮೇಲೆ ಪೋಲಿಸರು ಮೆಶಿನುಗನ್ನುಗಳಿಂದ ಗುಂಡು ಹಾರಿಸಿ ಹಲವರು ಮಡಿದರು. ನೂರಾರು ಮಂದಿ ಜಖಂಗೊಳ್ಳುವಂತಾಗಿದೆ. ವಿರೋಧ ಪ್ರದರ್ಶಕರಲ್ಲಿ ಹೆಂಗಸರೂ ಮಕ್ಕಳೂ ಇದ್ದರು. ಪ್ರಧಾನ ನಗರವನ್ನೀಗ ಬ್ರಿಟಿಷ್ ಸೇನೆಗಳು ಪಹರೆ ಮಾಡುತ್ತಿವೆ. ನಗರದಲ್ಲಿ ಕರ್ಫ್ಯೂ ಆಜ್ಞೆ ಜಾರಿಯಾಗಿದೆ. ಗ್ರೀಸಿನ ರಾಷ್ಟ್ರ... [illegible] ಗವಾಗಿದೆಯೆಂದೂ, ಎಡ ಪಕ್ಷೀಯರ ಅತಿರೇಕವಾದ ಬೇಡಿಕೆಗಳನ್ನು ಮನ್ನಿಸದಿದ್ದುದೇ ಇದಕ್ಕೆ ಕಾರಣವೆಂದೂ, ಎಲ್ಲರೂ ಗ್ರೀಸಿನ ರಾಷ್ಟ್ರೀಯ ಕರೆಯನ್ನು ಕೇಳಿ ಕರ್ತವ್ಯ ನಿರತರಾಗಬೇಕೆಂದೂ ಗ್ರೀಕ್ ಪ್ರಧಾನಿಗಳು ವಿನಂತಿ ಮಾಡಿಕೊಂಡಿದ್ದಾರೆ.

ಎಲ್ಲೆಲ್ಲೂ ಒಳಜಗಳ-

ಇಟಲಿಯ ಮಿತ್ರ ಸ್ಥಾಪಿತ ಸರಕಾರದ ಪ್ರಧಾನಿ ಬೊನೊಮಿಯವರು ರಾಜೀನಾಮೆಯೀಯುವ ಪರಿಸ್ಥಿತಿಯೊದಗಿದೆ. ರೋಮ್ ನಗರದಲ್ಲಿ ರಾಜಭಕ್ತರು ಮತ್ತು ಕಮ್ಯೂನಿಸ್ಟರೊಳಗೆ ದಂಗೆ ನಡೆದಿದೆ. ಕೌಂಟ್ ಸ್ಫೋರ್ಝರನ್ನು ಮಂತ್ರಿ ಮಂಡಲದಲ್ಲಿ ಸೇರಿಸಲೊಪ್ಪದ ಬ್ರಿಟಿಷ್ ಧೋರಣೆಯು ಇಟಲಿಯನರಲ್ಲಿ ಅತೃಪ್ತಿ ಹುಟ್ಟಿಸಿದೆ. ಲಂಡನಿನಲ್ಲಿರುವ ಪೋಲೆಂಡ್ ಸರಕಾರದ ಹಿಂದಿನ ಮಂತ್ರಿಮಂ... [illegible] ಲಿಗೆ ಬಹಿಷ್ಕರಿಸಿರುವ ಸೋಶಿಯಲಿಸ್ಟ್ ಮಂಡಲವು ಬರಿಯ ಕಣ್ಣುಕಟ್ಟೆಂದು ರಶ್ಯವು ಟೀಕಿಸಿದೆ. ಬೆಲ್ಜಿಯಮಿನಲ್ಲಿ ಸರಕಾರಕ್ಕೂ ಕಮ್ಯೂನಿಸ್ಟರಿಗೂ ಮತಭೇದ ಮತ್ತು ಚಿಕ್ಕಾಟಗಳಿವೆ. ಆಕ್ರಮಣ ಮುಕ್ತಾಯಗೊಂಡ ರಾಷ್ಟ್ರಗಳ ಗೊರಿಲ್ಲಾ ಮತ್ತು ಗುಪ್ತಸೇನೆಗಳಿಗೂ ಹೊಸ ಅಪ್ರಾಗತಿಕ ಸರಕಾರಗಳಿಗೂ ತೀವ್ರ ಭಿನ್ನಾಭಿಪ್ರಾಯಗಳಿರುವದೇ ಈ ಒಳಗೊಂದಲಗಳಿಗೆ ಹೇತುವೆನ್ನಬೇಕು.

ಭಿನ್ನಾಭಿಪ್ರಾಯಗಳು

ಸ್ವತಂತ್ರ ಫ್ರೆಂಚರ ನಾಯಕ ಜನರಲ್ ಡಿಗೋಲೆಯವರು ಮೋಸ್ಕೋವಿಗೆ ಹೋಗಿ ಸ್ಟಾಲಿನರೊಡನೆ ಸಂಭಾಷಿಸಿದ್ದಾರೆ. ಫ್ರಾನ್ಸಿನ ಭವಿಷ್ಯದ ಕುರಿತೇ ಈ ಮಾತುಕತೆ ನಡೆದಿರಬೇಕೆಂಬುದರಿಂದ ಈ ಸುದ್ದಿಗೆ ವಿಶೇಷ ಪ್ರಾಮುಖ್ಯತೆಯಿದೆ. ಡಿ, ಗೋಲೆಯವರ ಒಲವು ಇಂಗ್ಲಾಂಡು ಅಮೇರಿಕಗಳಿಗಿಂತ ಹೆಚ್ಚಾಗಿ ರಶ್ಯದ ಮೇಲಿರಬಹುದೇ ಎಂಬ ಸಂದೇಹವೆದ್ದಿದೆ. ಯುದ್ಧಾನಂತರ ಸ್ವತಂತ್ರ ಆಕಾಶ ಸರ್ವಿಸುಗಳನ್ನಿಡುವ ಅಮೇರಿಕದ ಯೋಜನೆಯನ್ನು ಬ್ರಿಟನು ನಿರಾಕರಿಸಿದೆ. ಅಮೇರಿಕವೀಗ ಈ ಸಂಬಂಧವಾಗಿ ಸ್ಪೈನಿನೊಡನೆಂದು ಒಪ್ಪಂದ ಮಾಡಿಕೊಂಡಿದೆ. ರುಮೇನಿಯಾ ಮಂತ್ರಿ ಮಂಡಲವೂ ರಾಜೀನಾಮೆಯಿತ್ತಿದೆ.

ಪಕ್ಷರಹಿತ ಪ್ರಮುಖರ ಬೇಡಿಕೆ

ಪಕ್ಷರಹಿತ ಸಮ್ಮೇಲನದ ಸ್ಥಾಯೀ ಸಮಿತಿಯ ಸಭೆಯು ತಾ. ೨ರಲ್ಲಿ ಅಲ್ಲಹಾಬದಿನಲ್ಲಿ ಸರ್ ಸಪ್ರುಗಳ ಅಧ್ಯಕ್ಷತೆಯಲ್ಲಿ ನೆರೆಯಿತು. ಮದ್ರಾಸ್, ಬೊಂಬಾಯಿ, ಸಂಯುಕ್ತ, ಮಧ್ಯಪ್ರಾಂತ್ಯ ಮತ್ತು ಬಿಹಾರುಗಳಲ್ಲಿರುವ ೯೩ನೇ ಸೆಕ್ಷನನ್ವಯದ ಗವರ್ನರ್ ಆಡಳಿತೆಯನ್ನು ತೀವ್ರವಾಗಿ ಖಂಡಿಸಿ, ಯುದ್ಧಾನಂತರದ ಪುನರ್ರಚನೆಗಾಗಿ ದೊಡ್ಡ ದೊಡ್ಡ ಯೋಜನೆಗಳನ್ನು ತಯಾರಿಸುತ್ತಿರುವ ಈ ಕಾಲದಲ್ಲಿ ಪ್ರತಿಯೊಂದು ಪ್ರಾಂತ್ಯದಲ್ಲೂ ಪ್ರಜಾ ಜವಾಬ್ದಾರಿ ಸರಕಾರವಿರಲೇಬೇಕೆಂದು ಸಮಿತಿಯ ನಿರ್ಧಾರ. ಆದಕ್ಕಾಗಿ ರಾಜಿನಾಮೆಯಿತ್ತ ಪ್ರಜಾಪ್ರತಿನಿಧಿಗಳು ಪುನಃ ಅಧಿಕಾರ ವಹಿಸಬೇಕೆಂದೂ ಇಲ್ಲವಾದರೆ ಅಲ್ಪಪಕ್ಷೀಯರನ್ನು ಆಡಳಿತೆ ವಹಿಸಲು ಬಿಡಬೇಕೆಂದೂ ಈ ಪ್ರಮುಖರು ಕೇಳಿಕೊಂಡಿದ್ದಾರೆ.

ಸರ್ವಿಸುಗಳಲ್ಲಿ ಯುರೋಪಿಯನರು

ಹಿಂದುಸ್ಥಾನದ ಸಿವಿಲ್, ಪೋಲಿಸ್ ಮತ್ತು ಮಿಲಿಟರಿ ಸರ್ವಿಸುಗಳಿಗೆ ಈಗಲೂ ಯುರೋಪಿಯನರನ್ನು ಸೇರಿಸಿಕೊಳ್ಳುತ್ತಿರುವದನ್ನು ನಿಲ್ಲಿಸಿ ಯೋಗ್ಯ ಹಿಂದೀಯರಿಗೇನೇ ಕೊಡಬೇಕೆಂದು ಈ ಪಕ್ಷರಹಿತ ಪ್ರಮುಖರ ಸಮಿತಿ ಕೇಳಿಕೊಂಡಿದೆ. ಕಾಂಗ್ರೆಸ್ ವರ್ಕಿಂಗ್ ಕಮಿಟಿ ಮೆಂಬರರನ್ನು ಕೂಡಲೇ ಬಿಡತಕ್ಕದ್ದೆಂದೂ ಇದರಿಂದ ಪ್ರಾಂತ್ಯಗಳಲ್ಲಿ ಜನ ಪ್ರತಿನಿಧಿ ಸರಕಾರಗಳನ್ನು ಸ್ಥಾಪಿಸುವದಕ್ಕೆ ಅವಕಾಶವೊದೆಯುವದೆಂದೂ ಈ ಸಮಿತಿಯು ಸರಕಾರವನ್ನು ಅಗ್ರಹಪೂರ್ವಕ ಕೇಳಿಕೊಂಡಿದೆ

ರಿಸೆಪ್ಶನ್ ಡಿಪ್ಪೊಗಳಿಗೆ—ಟಿಕ್ಕೆಟಿನ ಪ್ರಕಾರ 6 ಗಂಟೆಗೆ ಸಾಕಷ್ಟು ಮೊದಲೇ ತರಬೇಕೆಂದೂ ಇಲ್ಲವಾದರೆ ಕಾನೂನು ಬಾಹಿರವಾದದರಿಂದ ಆದನ್ನು ಸ್ಟೇಶನಿನ ಜಾಗದಲ್ಲಿ ಎಲ್ಲಿಯೂ ಆವಶ್ಯವಾಗಿ ಇಡುವುದೂ ಅಸಾಧ್ಯವೆಂದೂ ತಿಳಿಸುತ್ತಾರೆ.

NOTICE.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O. S. 217/1944.

R. I. A. 1416-1734-1736/1944.

ವಾದಿಳು-ಸೋಮಕ್ಕ ಹೆಗ್ಗಡ್ತಿ.

ಪ್ರತಿವಾದಿರು —1 ಹಮ್ಮಬ್ಬ ಬ್ಯಾರಿ, 2 ಹುಸೆನಬ್ಬ ಬ್ಯಾರಿ, 3 ಮೈನರ ಪಾತುಮ್ಮ, 4 ಮೈನರ ಕುಂಞಿ ಬ್ಯಾರಿ, 5 ಖಾಜಮ್ಮ, 6 ಪಾತುಮ್ಮ, 7 ಪಾಪಮ್ಮ, 8 ಬೀಬಿಮ್ಮ 9 ಆೈಸಮ್ಮ ಪೋತಿ, 10 ನಾಗಪ್ಪ ಬಳಿಯ, 11 ರಾಮಚಂದ್ರ ಹೆಬ್ಬಾರ, 12 ಅಣ್ಣಯ್ಯ ನ್ಯಾಕ, 13 ಉಮ್ಮಾತುಮ್ಮಾ. 14 ರಾಘವೇಂದ್ರ ಬುಧ್ಯ, 15 ಕೃಷ್ಣರಾಯ ಪೈ, 16 ಹಮ್ಮಬ್ಬ ಬ್ಯಾರಿ, 17 ಕುಂಞಿಹಮ್ಮದ್ ಬ್ಯಾರಿ, 18 ಪಕೀರ ಬ್ಯಾರಿ, 19 ಬೀಪಾತುಮ್ಮ, 20 ಖತೀಜಮ್ಮ, 21 ಮೈನರ ಆಲಿಮುಮ್ಮಾ, 22 ಮೈನರ ಸಾರಮ್ಮ, 23 ಮೈನರ ಅವ್ವಮ್ಮ.

ಕುಂದಾಪುರ ತಾಲ್ಲೂಕ ಕೋಟೇಶ್ವರ ಗ್ರಾಮದಲ್ಲಿರುವ ಕುನ್ನಿಹಮ್ಮದ್ ಬ್ಯಾರಿ ವಿಧವೆ 6ನೇ ಪ್ರತಿವಾದಿ ಪಾತುಮ್ಮ 1 ತನ್ನೀರು ಬಾವಿ ಹಸನಬ್ಬ ಬ್ಯಾರಿ ಹೆಂಡ್ತಿ 8ನೇ ಪ್ರತಿವಾದಿ ಬೀಬಿಮ್ಮ 1 ಮಣೂರು ಗ್ರಾಮದಲ್ಲಿರುವ ಬಿನ್ನಾರಿ ಪಕೀರ ಬ್ಯಾರಿ ವಿಧವೆ 7ನೇ ಪ್ರತಿವಾದಿ ಪಾಪಮ್ಮ 1 ಹಂಗ್ಲೂರು ಗ್ರಾಮದಲ್ಲಿರುವ ವೆಂಕಟ್ರಮಣ ಹೆಬ್ಬಾರರ ಮಗ 11ನೇ ಪ್ರತಿವಾದಿ ರಾಮಚಂದ್ರ ಹೆಬ್ಬಾರ 1 ಬೀಜಾಡಿ ಗ್ರಾಮದಲ್ಲಿರುವ ಕುನ್ನಿಹಮ್ಮದ್ ಬ್ಯಾರಿ ಮಗಳು 13ನೇ ಪ್ರತಿವಾದಿ ಉಮ್ಮಾತುಮ್ಮಾ 1 ಆೈಸಮ್ಮನ ಮಕ್ಕಳು 16ನೇ ಪ್ರತಿವಾದಿ ಹಮ್ಮಬ್ಬ ಬ್ಯಾರಿ 1, 17ನೇ ಪ್ರತಿವಾದಿ ಕುಂಞಿಹಮ್ಮದ್ ಬ್ಯಾರಿ 1, 18ನೇ ಪ್ರತಿವಾದಿ ಪಕೀರ ಬ್ಯಾರಿ 1, 20ನೇ ಪ್ರತಿವಾದಿ ಖತೀಜಮ್ಮ 1, 21ನೇ ಪ್ರತಿವಾದಿ ಮೈನರ ಆಲಿಮುಮ್ಮಾ 1, 22ನೇ ಪ್ರತಿವಾದಿ ಮೈನರ ಸಾರಮ್ಮ 1, 23ನೇ ಪ್ರತಿವಾದಿ ಮೈನರ ಅವ್ವಮ್ಮ 1 ಕೂಡಾ 12 ಜನರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ

ಸೋಮಕ್ಕ ಹೆಗ್ಗಡ್ತಿಯು ವಾದಿಯಾಗಿ 1 ರಿಂದ 5ನೇ ವರೆಗಿನ ಪ್ರತಿವಾದಿರಿಂದ ಇಂಪ್ಲಿಮೆಂಟ ಬೋಂಡಿನ ಪ್ರಕಾರ ಬರತಕ್ಕ ಹಣ ಬಡ್ಡಿ ಕೂಡಾ ರೂ. 1437-13-6ನ್ನು ಬರ ಮಾಡಿಕೊಳ್ಳುವರೆ ದಾವ್ಯು ಮಾಡಿದ ಮೇಲಿನ ದಾವೆ ಮತ್ತು ನಿಮ್ಮನ್ನು ಸದ್ರಿಮಂಟು ಪ್ರತಿವಾದಿ ಸ್ಥಾನದಲ್ಲಿ ಸೇರಿಸಬೇಕೆಂತ ದಾಖಲು ಮಾಡಿದ ಮೇಲಿನ R. I. A. 1416 1734 1944ನೇ ಅರ್ಜಿ ಮತ್ತು ಮೈನರ 21 22-23ನೇ ಪ್ರತಿವಾದಿರ ಗಾರ್ಡಿಯನ್ ಆಗುವರೆ ದಾಖಲು ಮಾಡಿದ ಮೇಲಿನ R. I. A. 1736/1944ನೇ ಅರ್ಜಿಯು ತಾ. 14-12-44ಕ್ಕೆ ಮೇಲಿನ ಕೋರ್ಟಿನಲ್ಲಿ ತನ್ನಿಗೆ ಇಟ್ಟಿರುತ್ತದೆ. ಆ ಕುರಿತು ಯೇನಾದರೂ ಆಕ್ಷೇಪಣೆಗಳಿದ್ದರೆ ಆ ತಾರೀಕಿಗೆ ಮೇಲಿನ ಕೋರ್ಟಿನಲ್ಲಿ ಹಾಜರಾಗಿ ಜ್ಯಾಪೇರು ಮಾಡಿಕೊಳ್ಳತಕ್ಕದ್ದು, ಎಂಬ ಸಂಗ್ತಿಯನ್ನು ಈ ಮೂಲಕ ತಿಳಿಯಪಡಿಸಿರುತ್ತದೆ.

N. S. Parameshwariah.
Advocate for Plaintiff

Date 1-12-44
Kundapur

ದಕ್ಷಿಣ ಕನ್ನಡ.

ಮಂಗಳೂರು

ಪ್ರತಿನಿಧಿಗಳು—ಇದೇ ದಶಂಬರ ತಿಂಗಳ 28, 29, ಮತ್ತು 30ನೇ ತಾರೀಖುಗಳಂದು ಕಲ್ಕತ್ತೆಯಲ್ಲಿ ಜರಗಲಿರುವ ಅಖಿಲ ಭಾರತ ರೇಡಿಕಲ್ ಡೆಮೋಕ್ರೇಟಿಕ್ ಪಾರ್ಟಿಯ ವಾರ್ಷಿಕಾಧಿವೇಶನಕ್ಕೆ ದ| ಕ| ಜಿಲ್ಲೆಯ ಪಾರ್ಟಿಯ ಪ್ರತಿನಿಧಿಗಳಾಗಿ ಶ್ರೀಯುತರು ಎನ್| ಶಂಕರ ಭಟ್', ಎಡ್ವೊಕೇಟ್, ಜೆ| ಕೆ| ನೆಟ್ಟೂರ್, ಕೆ| ವೆಂಕಪ್ಪಯ್ಯ, ಬಿ| ಎಸ್| ಕೋಟ್ಯ, ಬಿ| ಜೆ| ಶೆಟ್ಟಿ, ರಮಾನ ಶ್, ಜೆ| ಆರ್| ನಾರಂಗ್, ಬಿ| ಎನ್| ರೈ, ಮತ್ತು ಬಿ| ಆರ್ ವಲ್ಯ ಇವರು ಆರಿಸಲ್ಪಟ್ಟಿರುತ್ತಾರೆ. ಶ್ರೀ| ಎಮ್| ಎ| ಹುಸೇನ್, ಇವರು ಪ್ರತಿನಿಧಿಗಳನ್ನು ತಾ| 20ರಂದು ಇಂದು ಟೀಪಾರ್ಟಿಯನ್ನಿತ್ತು ಸತ್ಕರಿಸಲಿರುವರು.

ವರ್ಧಂತಿ—"ಗವರ್ನಮೆಂಟ್ ಹಾಯರ್ ಎಲಿಮೆಂಟರಿ ಟ್ರೈನಿಂಗ್ ಶಾಲೆಯ ವರ್ಧಂತ್ಯುತ್ಸವವು ತಾರೀಖು 16ನೇ ಶನಿವಾರ ಅಪರಾಹ್ನ ಘಂಟೆ 5 30ಕ್ಕೆ ಸ್ಥಳೀಯ ಸೈಂಟ್ ಎಲೋಶಿಯಸ್ ಕಾಲೇಜಿನ ಪ್ರಿನ್ಸಿಪಾಲ್ ಮತ್ತು ರೆಕ್ಟರರಾದ ರೆವರೆಂಡ್ ಫಾದರ್ ಜೋಸೆಫ್ ಎ ಬಿ. ಕೊಲ್ಲೊ ಬಿ. ಎ. ಎಸ್ ಜೆ. ಇವರ ಅಧ್ಯಕ್ಷತೆಯಲ್ಲಿ ಜರಗಲಿರುವುದರಿಂದ ಶಾಲಾ ಹಳೆ ವಿದ್ಯಾರ್ಥಿಗಳೂ ವಿದ್ಯಾಭಿಮಾನಿಗಳೂ ಪ್ರೋತ್ಸಾಹಿಸಬೇಕಾಗಿ ಶಾಲಾ ಮುಖ್ಯೋಪಾಧ್ಯಾಯರು ವಿನಂತಿಸುತ್ತಾರೆ

ಕಲೆಕ್ಟರರ ಪ್ರಕಟಣೆ

ಅಕ್ಕಿ ಬತ್ತ ಲೆಕ್ಕದ ಎಚ್ಚರಿಕೆ—"ಇಷ್ಟರೊಳಗೆ ಇಡೀ ಜಿಲ್ಲೆಯ ಬೆಳೆ ಕಟಾವಿನ ಕೆಲಸವು ಮುಗಿದಿರುವುದರಿಂದ ಆಯಾ ತಹಶೀಲ್ದಾರರು ಕೃಷಿ ವ್ಯವಸಾಯಗಾರರಿಂದ ಅವರಲ್ಲಿರುವ ಉತ್ಪತ್ತಿ, ದಾಸ್ತಾನಿರುವ ಲೆಕ್ಕದ ವಿವರವನ್ನು ಪಡಕೊಳ್ಳಲಾಗಿದೆ ಎಂದು ತಿಳಿದುಕೊಳ್ಳಲಾಗುತ್ತದೆ. ಏಕೆಂದರೆ ಬೆಳೆ ಕಟಾವಾದ ಕೂಡಲೆ ಆ ಕುರಿತು ಕಲೆಕ್ಟರರ ಚಟ್ಟಿಯು ಪ್ರಕಟಿಸಲ್ಪಟ್ಟ ೧೪ ದಿನದೊಳಗಾಗಿ ಈ ವಿವರಗಳನ್ನು ತಲುಪಿಸಬೇಕಾಗಿ ಹುಕುಂ ಹೊರಡಿಸಲಾಗಿತ್ತು. ಇದು ಅತ್ಯಾವಶ್ಯವಾದ ವಿಷಯ

ತಪ್ಪಿತಸ್ಥರಿಗೆ ಶಿಕ್ಷೆ—ಇಷ್ಟರೊಳಗೆ ಜಮೀನ್ದಾರರೂ, ಒಕ್ಕಲುಗಳೂ ತಮ್ಮ ಬೆಳೆ ವಿವರದ ಪಟ್ಟಿಗಳನ್ನು ಕಳುಹಿಸದಿದ್ದಲ್ಲಿ ಎಲ್ಲಾ ಹಳ್ಳಿಗರಿಗೂ ಎಚ್ಚರಿಕೆ ಕೊಟ್ಟ ಮೇಲೆ ಅವರನ್ನು ಶಿಕ್ಷೆ ವಿಚಾರಣೆಗೆ ಒಳಪಡಿಸುವ ಕೆಲಸವನ್ನು ಕೈಕೊಳ್ಳಲಾಗುವುದು. ಆಯಾ ಪ್ರದೇಶದ ತಹಶೀಲ್ದಾರರೂ ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಯಾವದೊಂದು ತರದ ಅಸಡ್ಡೆ ಆಲಕ್ಷ್ಯ ತೋರಿಸಿದ್ದು ವ್ಯಕ್ತವಾದಲ್ಲಿ ಅದರಿಂದ ಮುಖ್ಯ ಆಹಾರ ರೇಶನಿಂಗಿನ ಕೆಲಸಕ್ಕೆ ತುಂಬಾ ಧಕ್ಕೆ ಉಂಟಾಗುವುದರಿಂದ-ಅವರನ್ನೂ ಕಠಿಣ ವ್ಯವಹಾರಕ್ಕೆ ಗುರಿಮಾಡಲಾಗುವುದು.

ಅಕ್ಕಿ ಅವಧಿ—ಬತ್ತ ಮತ್ತು ಅಕ್ಕಿಯ ಮೇಲಿನ ಲೆವಿಯನ್ನು ತಲುಪಿಸುವ ಅವಧಿಯನ್ನು ಆಗಲೇ ೩೦.೧೧.೧೯೪೪ರಿಂದ ೧೫-೧೨-೪೪ಕ್ಕೆ ಮುಂದುವರಿಸಲಾಗಿದೆ" ರೈತರಿಗೆ ಈ ಅವಧಿಯ ಅನುಕೂಲತೆ ಸಂಪೂರ್ಣ ಪಡೆಯಬಹುದು, ಆದರೆ ಬತ್ತವನ್ನು ತಾ ೧-೧೨-೧೯೪೪ರ ನಂತರ ಯಾವ ಅಕ್ಕಿ ಬತ್ತ ಸ್ವೀಕರಿಸುವ ಕೇಂದ್ರದಲ್ಲಿ ಸ್ವೀಕರಿಸಬಾರದು. ಈ ತಾರೀಕಿನ ನಂತರದ ತಲುಪಿಸುವಿಕೆಗಳು ಬರೀ ಅಕ್ಕಿ ರೂಪದಲ್ಲಿ ಮಾತ್ರವಿರಬೇಕು. ಇದು ಗಮನಿಸಬೇಕಾದ ಮುಖ್ಯ ವಿಷಯ.

ವಿಶೇಷ ಸಂದರ್ಭಗಳಲ್ಲಿ—ಸುಳ್ಯ, ಕಾಸರಗೋಡು, ಹೊಸ ದುರ್ಗಗಳಿಗೆ ಸಂಬಂಧಿಸಿದ ಕೆಲವು ಹಳ್ಳಿ ಪ್ರದೇಶಗಳಲ್ಲಿ ಗೇಣಿಯನ್ನು ಬತ್ತ ರೂಪದಲ್ಲೇ ಪಡೆಯುವ ಪದ್ಧತಿಯಿರುವಲ್ಲಿ ಮಾತ್ರ ಬತ್ತವನ್ನೇ ತಗೆದುಕೊಳ್ಳಲಾಗುವುದು—ಅಕ್ಕಿಯನ್ನೇ ಕೊಡಬೇಕೆಂಬ ಒತ್ತಾಯವಿಲ್ಲ. ಇಂತಹ ವಿಶೇಷ ಪದ್ಧತಿ ಕ್ರಮವಿರುವ ಜಿಲ್ಲೆಯ ಇತರ ಭಾಗಗಳಲ್ಲೂ ಇದೇ ಅಕ್ಕಿ ಒತ್ತಾಯವಿಲ್ಲದೆ ಬತ್ತ ಪಡೆಯುವ ಧೋರಣೆಯು ಒಂದು ಸ್ಪೆಶಲ್ ಸಂದರ್ಭವೆಂಬುದಾಗಿ ತಿಳಿದು ಅನ್ವಯಿಸಲಾಗುವುದು.

ಅವಧಿ ತಪ್ಪಿದ ಅಕ್ಕಿ ಬೆಲೆ—"ಪುನಃ ತಿಳಿಯಪಡಿಸುವುದೇನೆಂದರೆ—ಅವಧಿ ಹೆಚ್ಚಿಸಿದ ಸಮಯದಲ್ಲಿ ಕೊಡಲ್ಪಟ್ಟ ಅಕ್ಕಿ ಬತ್ತಗಳಿಗೆ ಹಿಂದೆ ನಿರ್ಧರಿಸಿದ ಬೆಲೆಯೇ ಕೊಡಲಾಗುವುದು. (ಈ ಅವಧಿಯಲ್ಲಿ ಬತ್ತಕ್ಕೆ ಆಣೆ, ಅಕ್ಕಿಗೆ ರೂ ೧ ಕಡಿಮೆ ಮಾಡಿ ಕೊಡಲಾಗುವುದಿಲ್ಲ)

"ಆದರೆ ಮುಂದುವರಿಸಿದ ಅವಧಿ ನಂತರ ತಲುಪಿಸಲಾಗುವ ಬತ್ತ, ಅಕ್ಕಿಗಳಿಗೆ ಮುಡಿಯಲ್ಲಿ ಕ್ರಮವಾಗಿ ಆಣೆ ಮತ್ತು ರೂ. ೧ ಕಡಿಮೆ ಬೆಲೆ ಕೊಡಲಾಗುವುದು.

ಎಲ್ಲಾ ಕಡೆಯಲ್ಲೂ ಒಂದೇ ಬೆಲೆ

"ಪ್ರಾಂತ್ಯ ಸರಕಾರ ಆಹಾರ ಖಾತೆಯ ಹುಕುಂ ಮತ್ತು ಜಿಲ್ಲಾ ಫುಡ್ ಕೌನ್ಸಿಲ್ ನಿರ್ಣಯ ಪ್ರಕಾರ ಎಲ್ಲಾ ಅಕ್ಕಿ ಬತ್ತ ಸ್ವೀಕಾರ ಡಿಪೋಗಳಲ್ಲಿ ಕೊಡಲ್ಪಡುವ ಅಕ್ಕಿ ಬತ್ತಗಳಿಗೆ ತಾಲೂಕು ಕೇಂದ್ರದಲ್ಲಿ ಕೊಡಲಾಗುವ ಬೆಲೆಯನ್ನೇ ಕೊಡಲಾಗುವುದು. ಅಂದರೆ ತಾಲೂಕು ಮುಖ್ಯ ಪಟ್ಟಣದಲ್ಲಿ ಬೇರೆ ಬೇರೆ ತರದ ಅಕ್ಕಿಗಳಿಗೆ ಯಾವ ಬೆಲೆ ಕೊಡಲಾಗವುದೊ ಅದೇ ಬೆಲೆ ಎಲ್ಲಾ ಹಳ್ಳಿಯಲ್ಲಿನ (ಎಸ್. ಕೆ. ಸಿ ಸಿ) ಅಕ್ಕಿ ಬತ್ತ ಸ್ವೀಕಾರ ಡಿಪೋಗಳಲ್ಲೂ ಕೊಡಲಾಗುವುದು. ಈ ಹುಕುಂ ತಾ. ೧ ೧೨ ೪೪ ರಿಂದ ಜ್ಯಾರಿಗೆ ಬರುತ್ತದೆ.

ಇದರ ಮುಂಚೆ ಹಳ್ಳಿ ಡಿಪೋಗಳಲ್ಲಿ ಮುಡಿಗೆ ಸ್ವಲ್ಪ ಕಮ್ಮಿ—ಅಂದರೆ ತಾಲೂಕು ಪಟ್ಟಣಗಳಲ್ಲಿ ಕೊಡುತ್ತಿರುವುದಕ್ಕಿಂತ ಕಡಿಮೆ-ಬೆಲೆ ಕೊಡಲಾಗುತ್ತಿತ್ತು. ಸದ್ರಿ ಎಸ್. ಕೆ. ಸಿ, ಸಿ, ಹೋಲ್‌ಸೇಲ್ ಸಪ್ಲೈರ್ಸಿನ ಅಧಿಕಾರಿಗಳು ತಮ್ಮ ಕೈಕೆಳಗಿನ ಸಂಸ್ಥೆಗಳಿಗೆಲ್ಲಾ ಬರೂದು ಈ ವಿಷಯ ತಿಳಿಸಬೇಕು.

ಸರಿಯಾಗಿ ಪ್ರಚಾರವಾಗಲಿಲ್ಲ ಫುಡ್ ಕೌನ್ಸಿಲಿನ ನಿರ್ಣಯಗಳು—ದಕ್ಷಿಣ ಕನ್ನಡ ಜಿಲ್ಲಾ ಫುಡ್ ಕೌನ್ಸಿಲ್ ಕಲೆಕ್ಟರರ ಆಫೀಸಿನಲ್ಲಿ ತಾ. ೨೦—೧೧—೧೯೪೪ರಲ್ಲಿ ಸೇರಿತ್ತು. ಅದರಲ್ಲಿ ನಿರ್ಣಯಿಸಿದ, ಸೂಚಿಸಿದ ವಿಷಯಗಳ ಕುರಿತು ಕಲೆಕ್ಟರರ ಒಂದು ಪ್ರಕಟನೆಯಲ್ಲಿ ಈ ಕೆಳಗಿನ ವಿಚಾರಗಳಿವೆ

ಆಹಾರ ರೇಶನಿಂಗಿನ ಕೆಲಸವು ಭರದಿಂದ ಸಾಗುತ್ತಿದೆ ಹೊರಗಿನಿಂದ ಇನ್ನೂ ಆಹಾರ ಪದಾರ್ಥಗಳು ಬರಲಿವೆ. ಜಮೀನ್ದಾರರು ಎಲ್ಲಾ ಸಮಯದಲ್ಲಿನ ತಮ್ಮ ಗೇಣಿಯಲ್ಲಿನ ಮಿಗಿತಾಯದ ಅಂಶವನ್ನು ತಲುಪಿಸಬೇಕಾದುದರ ಆವಶ್ಯಕತೆಯು ಸರಕಾರದ ಹುಕುಮನ್ನು ಕಲೆಕ್ಟರರು ತಿಳಿಸಿದರು.

ಪುನಃ ಪ್ರಕಟನೆ:—ಒಂದಕ್ಕಿಂತ ಹೆಚ್ಚು ಹಳ್ಳಿಗಳಿಂದ ಗೇಣಿ ಪಡೆಯುವವರು, ಕೃಷಿ ಪ್ರದೇಶದ ಮಾಲಿಕರು ತಾಲೂಕು ಕಛೇರಿಗೆ ಬೇರೆ ಬೇರೆ ಹಳ್ಳಿಗಳಲ್ಲಿರುವ ತಮ್ಮ ಆಸ್ತಿ, ಅದರ ವಿಶಾಲತೆ, ಉತ್ಪತ್ತಿ, ಒಕ್ಕಲುಗಳ ಹೆಸರು, ಮುಂತಾದ ವಿವರಗಳನ್ನು ಕೊಡಬೇಕೆಂದು ತಿಳಿಸುವ ಕಲೆಕ್ಟರರ ಪ್ರಕಟನೆಯು ಹೆಚ್ಚಿನ ಜನರಿಗೆ ಇನ್ನೂ ಸರಿಯಾಗಿ ತಿಳಿಯುವಂತಾಗಿಲ್ಲ ಎಂಬ ವಿಷಯವನ್ನು ಕೌನ್ಸಿಲಿನವರು ಕಲೆಕ್ಟರರಿಗೆ ತಿಳಿಸಿದರು. ಕಲೆಕ್ಟರರು ಆ ಪ್ರಕಟನೆಯನ್ನು ಪುನಃ ವಿಸ್ತಾರವಾಗಿ ಪ್ರಕಟಿಸುವಂತೆ ರೆವಿನ್ಯೂ ಆಫೀಸರರುಗಳಿಗೆ ಅದನ್ನು ಪುನಃ ಮುಖ್ಯವಾಗಿ ಹಳ್ಳಿ ಪ್ರದೇಶಗಳಲ್ಲಿ—ಪ್ರಕಟಿಸುವಂತೆ ತಿಳಿಸುವುದಾಗಿ ಒಪ್ಪಿಕೊಂಡರು

ಮೇಲೆ ಕಾಣಿಸಿದ ಬತ್ತ ಅಕ್ಕಿ ಅವಧಿಯ ವಿಚಾರವನ್ನು ಕಲೆಕ್ಟರರು ವಿವರಿಸಿದಾಗ, ಕೌನ್ಸಿಲು ಸಮ್ಮತಿಪಟ್ಟಿತು.

ತರಾವರಿ ಅಕ್ಕಿ, ರಾಗಿ ಬೆಲೆ: ಸರಕಾರದ ರೆವಿನ್ಯೂ ಬೋರ್ಡಿನವರು ಒಂದನೇ ಎರಡನೇ ತರಗತಿಯ ಅಕ್ಕಿ ರಾಗಿಗಳ ಬೆಲೆಯನ್ನು ನಿರ್ಧರಿಸಿದ ಬಳಿಯ ಕುರಿತು ಕಲೆಕ್ಟರರು ಕೌನ್ಸಿಲಿನ ಅಭಿಪ್ರಾಯ ಕೇಳಿದರು. ಅಂದರೆ ಅಕ್ಕಿ ರಾಗಿಗಳಿಗೆ ಅವುಗಳ ಉತ್ಪತ್ತಿ ಸ್ಥಳದಲ್ಲೇ ಎಷ್ಟು ಬೆಲೆ ಕೊಡಬೇಕೆಂಬ ವಿಷಯದ ಕುರಿತು ಈ ಅಭಿಪ್ರಾಯ ಕೇಳಲಾಯಿತು. ಅದಕ್ಕೆ ಒಂದು ಪ್ರತ್ಯೇಕ ಸಮಿತಿಯು ರಚಿಸಲ್ಪಟ್ಟಿತು.

ಗೇಣಿಯನ್ನು ಅಕ್ಕಿ ರೂಪದಲ್ಲೇ ಹೆಚ್ಚಾಗಿ ಕೊಡುವ ಪದ್ಧತಿಯುಳ್ಳ ಈ ಜಿಲ್ಲೆಯಲ್ಲಿ ಬೇರೆ ಬೇರೆ ಹಳ್ಳಿಗಳಿಗೆ ಪ್ರತ್ಯೇಕ ಕೇಂದ್ರ ಸ್ಥಳಗಳಿಲ್ಲದಿರುವುದರಿಂದ ಮತ್ತು ರೆವಿನ್ಯೂ ಬೋರ್ಡಿನವರು ನಿರ್ಧರಿಸಿದ ಈ ಸ್ಥಳೀಕ ಬೆಲೆಯೂ ಇಲ್ಲಿ ಜ್ಯಾರಿಯಲ್ಲಿದ್ದ ಬೆಲೆಯೂ ಹೆಚ್ಚು ಕಡಿಮೆ ಒಂದೇ ಇರುವುದರಿಂದ ಎಲ್ಲಾ ಕಡೆಗಳಲ್ಲೂ ಅದೇ ಬೆಲೆ ನಿರ್ಧರಿಸುವುದು ಸರಿ ಎಂದಾಯಿತು. (ಈ ಆಧಾರದ ಮೇಲೆ ಮೇಲಿನ ಪ್ರಕಟನೆ ಹೊರಡಿಸಿದೆ.)

ಗೋಧಿ-ಜಿಲ್ಲಾ ರೇಶನ್ ವಿವರ. ತಾ. ೧೯ರಿಂದ ಗೋಧಿ ರಾಗಿ ಅಂಶವಾಗಿ ವಿತರಣೆ ಮಾಡುವ ಮತ್ತು ಇಡೀ ಜಿಲ್ಲೆಯಲ್ಲಿ ಅನಾಸ್ಥೀಯ ರೇಶನನ್ನು ಜ್ಯಾರಿ ಮಾಡುವ ಸರಕಾರದ ಸೂಚನೆಯನ್ನು ಕೌನ್ಸಿಲಿಗೆ ತಿಳಿಸಲಾಯಿತು

ಗೇಣಿ ನಿರ್ಬಂಧ "ಗೇಣಿ ಜಿಲ್ಲೆಯಿಂದ ಹೊರಹೋಗಬಿಡಬಾರದು ಆದರೆ ಹೆಚ್ಚಿನ ಅಂಶ ಇದ್ದಲ್ಲಿ ಮಾತ್ರ ವಿಶೇಷ ಅನುಮತಿ ಪಡೆವುದರ ಮೂಲಕ ಕಳುಹಿಸುವುದಕ್ಕೆ ಏರ್ಪಾಟು ಕೊಡಬಹುದು" ಎಂಬ ಸರಕಾರದ ಆಜ್ಞೆಯನ್ನು ಕಲೆಕ್ಟರರು ತಿಳಿಸಿದರು.

ಹೆಚ್ಚು ಆಹಾರ ಬೆಳೆ— ಜಿಲ್ಲೆಯಲ್ಲಿ ಆಹಾರ ವಸ್ತುಗಳನ್ನು ಹೆಚ್ಚಾಗಿ ಬೆಳೆಸಲು ಪ್ರಯತ್ನಗಳು ಮಾಡಲಾಗಿವೆ ನಿಷ್ಪ್ರಯೋಜಕವಾಗಿ ಹಾಳು ಬಿದ್ದಿರುವ ಬಯಲು ಪ್ರದೇಶಗಳನ್ನು ಸ್ವಾಧೀನ ಮಾಡಿಕೊಳ್ಳುವಂತೆ ರೆವಿನ್ಯೂ ಡಿವಿಜನಲ್ ಆಫೀಸರರಿಗೆ ನಿರ್ದೇಶಿಸಲಾಗಿದೆ. ಇವುಗಳನ್ನು ಹೇಗೆ ಕೃಷಿ, ಸಾಗುವಳಿ ಮಾಡಬಹುದೆಂದು ಫುಡ್ ಕೌನ್ಸಿಲಿನಲ್ಲಿ ಚರ್ಚೆಯಾಯಿತು. ಸದ್ಯದಲ್ಲೇ ಸರಕಾರದಿಂದ ಸ್ಥಾಪಿಸಲ್ಪಡುವ ನೀರಾವರಿ ಸಂಬಂಧಿಯ ಕಾರ್ಯಕ್ರಮವನ್ನು ನಿರೀಕ್ಷಿಸಲಾಗಿದೆ.

ಬೈಂದೂರು—ತಾ 28-11-44ನೇ ದಿನ ಬೆಳಗ್ಗೆ ಮೈಸೂರಿನ ಮಹಾರಾಜರು ಬೈಂದೂರಿನ ಮುಕಾಂಬಿಕಾ ಕೊಲ್ಲೂರಿಗೆ ಬಂದು ಮೂಕಾಂಬಿಕಾ ದೇವಾಲಯವನ್ನು ಸಂದರ್ಶಿಸಿದರು. ಬೈಂದೂರು ಶಯನೇಶ್ವರ ದೇವಾಲಯವನ್ನು ಸಂದರ್ಶಿಸುವರೆಂದು ಮಹಾರಾಜರು ಮೊದಲೇ ತಿಳಿಸಿದ್ದರಿಂದ ಶ್ರೀಯುತರೆ ಕೃಷ್ಣಪ್ಪ ಸೆಟ್ಟಿ ಸಹೋದರರು ಬೈಂದೂರು ದೇವಸ್ಥಾನದ ಬಳಿ ಮತ್ತು ಪೇಟೆಯಲ್ಲಿ ತಳಿರು ತೋರಣಗಳನ್ನು ಹಾಕಿಸಿದ್ದರು. ಮಹಾರಾಜರ ಪ್ರೋಗ್ರಾಮ್ ಹೆಚ್ಚು ಕಡಿಮೆಯಾದ್ದರಿಂದ ಬೈಂದೂರು ದೇವಸ್ಥಾನದ ಇದಿರು ಕೃಷ್ಣಪ್ಪ ಸೆಟ್ಟಿ ಸಹೋದರರಿಂದ ಸ್ವಾಗತ ಪಡೆದು ದೇವಸ್ಥಾನ ನೋಡದೇ ಹೋದರು. ರಾಜರನ್ನು ನೋಡಲು ದೇವಸ್ಥಾನದ ವಠಾರದಲ್ಲಿ ನೆರೆದ 10ಸಾವಿರ ಜನರು ನಿರಾಶರಾದರು. ಬೈಂದೂರಿನ ಮಿಡ್ಲ ಸ್ಕೂಲಿನ ಇದಿರುಗಡೆ ಮಹಾರಾಜರ ಕಾರನ್ನು ಕುಂದಾಪುರ ತಾಲೂಕು ಕಾಂಗ್ರೆಸ್ ಕಮಿಟಿಯ ಅಧ್ಯಕ್ಷ ಶ್ರೀ. ಬಿ ಸುಬ್ಬಣ್ಣ ಸೆಟ್ಟಿ ನಿಲ್ಲಿಸಿ ಮಹಾರಾಜರಿಗೆ ಪುಷ್ಪಹಾರ ಒಪ್ಪಿಸಿ ಮೈಸೂರು ಸ್ಟೇಟಿನ ಕಾಂಗ್ರೆಸ್ ಕೈದಿಗಳನ್ನು ಸೆರೆಮನೆಯಿಂದ ಬಿಡುಗಡೆ ಮಾಡಬೇಕೆಂದೂ, ಮೈಸೂರಿನ ಸ್ಟೇಟ್‌ಕಾಂಗ್ರೆಸ್ ಅಧ್ಯಕ್ಷರ ಮೇಲಿನ ಪ್ರತಿಬಂಧಕಾಜ್ಞೆಗಳನ್ನು ತೆಗೆಯಬೇಕೆಂದೂ, ಆಹಾರದ ಅಭಾವದಿಂದ ಕಂಗೆಟ್ಟಿರುವ ದಕ್ಷಿಣ ಕನ್ನಡ ಜಿಲ್ಲೆಯ ಜನತೆಯು ಆಹಾರ ಸಂಕಷ್ಟ ನಿವಾರಣೆಗಾಗಿ ಈ ಜಿಲ್ಲೆಯ ಸೊಸೈಟಿಗಳಿಗೆ ಮೈಸೂರು ಸ್ಟೇಟಿನಿಂದ ಈ ಜಿಲ್ಲೆಗೆ ಬತ್ತ ಸಾಗಿಸುವರೆ ಏರ್ಪಾಟು ಕೊಡಬೇಕೆಂದೂ, ಯುದ್ಧ ಪೂರ್ವದಲ್ಲಿ ಈ ಜಿಲ್ಲೆಯ ಆಹಾರ ಪೂರೈಕೆಗೆ ಬೇಕಾಗುವ 1/5ಅಂಶ ಬತ್ತವು ಮೈಸೂರು ಸ್ಟೇಟಿನಿಂದ ಸಿಗುತ್ತಿತ್ತೆಂದೂ ಮನವಿ ಮಾಡಿಕೊಂಡರು.

ನೋಟೀಸು.

ಕುಂದಾಪುರ ಡಿ ಮು. ಕೋರ್ಟಿನಲ್ಲಿ

R. I A. 1353/1944
O. S. 102/1942

ವಾದಿ—ಮಂಜುನಾಥಯ್ಯ

ಪ್ರತಿವಾದಿರು—ಕೃಷ್ಣಪ್ಪಯ್ಯ ಕೂಡಾ 5 ಜನರು

1ನೇ ಪ್ರತಿವಾದಿ-ಕೃಷ್ಣಪ್ಪಯ್ಯ-ವಾಸುದೇವಯ್ಯನವರ ಮಗ-ಹಾನಗಲ್ಲು-ಧಾರವಾಡ ಜಿಲ್ಲಾ.

ಸದ್ರಿ ಮಂದನೆ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ.—

ಸದ್ರಿ ವಾದಿಯು ಸದ್ರಿ ಪ್ರಿಲಿಮಿನರಿ ಡಿಕ್ರಿಯ ಮೇಲೆ ಫ್ಯಾನಲ್ ಡಿಕ್ರಿ ಬಗ್ಗೆ ಮೋಲ್ಕಂಡ ಅರ್ಜಿಯನ್ನು ಕೋರ್ಟಿಗೆ ದಾಖಲು ಮಾಡಿರುವುದರಿಂದ ಆ ಕುರಿತು ನಿಮ್ಮದೇನಾದರೂ ಆಕ್ಷೇಪವಿದ್ರೆ ತಾ. 21 12 44ನೇ ದಿವಸ ಮೋಲ್ಕಂಡ ಕೋರ್ಟಿನಲ್ಲಿ ಹಾಜ್ರಾಗಿ ಜ್ಯಾಹೀರು ಮಾಡಿಕೊಳ್ಳುವಲ್ಲಿ ತಪ್ಪಿದರೆ ನಿಮ್ಮ ಗೈರ್ ಹಾಜರಾತಿಯಲ್ಲಿ ಕೋರ್ಟಿನವರಿಗೆ ಯುಕ್ತ ಕಂಡ ರೀತಿಯಲ್ಲಿ ತೀರ್ಮಾನಿಸಲ್ಪಡುವುದೆಂಬ ಸಂಗ್ತಿಯನ್ನು ಕೋರ್ಟು ಹುಕುಂ ಪ್ರಕಾರ ತಿಳಿಸೋಣಾಗುತ್ತದೆ.

K Raghunath Shenai.
ವಾದಿಯ ಕಡೆ ಪ್ಲೀಡರರು.
ಕುಂದಾಪುರ 2—12—1944

Navabharat Book Depot Udipi South India Navabharat Book Depot Udipi South India

ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು

	ರೂ. ಆ.				
ಸುಲಭದಲ್ಲಿ ಇಂಗ್ಲಿಷ್	1-4	ಮೂರು ಪ್ರಹಸನಗಳು	0 14	ವಿರಾಟಭೂಮಿ	0-2
ಯುವಕರಿಗೆ ಮತ್ತು ವಯಸ್ಕರಿಗೆ		ಸ್ವತಂತ್ರ ಜೀವನೋಪಾಯ	0-3	ವತ್ಸಲಾ	0 8
ಸುಲಭವಾಗಿ ಇಂಗ್ಲಿಷನ್ನು ಅನ್ಯ		ಪುರುಷವಧು	0-4	● ಕವಿತೆಗಳು	
ಸಹಾಯವಿಲ್ಲದೆ ಕಲಿಸುವ ಇಂಗ್ಲಿಷ್ ಸ್ವಯಂಬೋಧಿನಿ		ಹೆಂಡ್ತಿ ಗಂಡನಾದರೆ	0 4	ಕಾವ್ಯಸಾಮ್ರಾಜ್ಯ	0 12
		● ಕತೆಗಳು		ಮುಗುಳು	0-3
● ನಾಟಕಗಳು		ನಗೆನೋಟಗಳು	0 14	ಶ್ರೀಮುಖ	1-0
ಪ್ರೇಮವಿಜಯ	0-12	ಅನ್ನದೇವರು ಮತ್ತು ಇತರ ಕಥೆಗಳು	1-0	ಪುರಂದರದಾಸರ ಕೀರ್ತನೆ	1-0
ದೇಶಭಕ್ತ	1-4	ಭಾರತೀಯ ಕತೆಗಳು	0-14	ಭಗವದ್ಗೀತಾ (ಮೂಲ-ಸಿಲ್ಕ್ ಬೈಂಡು)	1-4
ವ್ಯಭಿಚಾರಿಣಿ ಯಾರು	0-12	ನಂದಾದೀಪ	0 10	● ಇತರ ಪುಸ್ತಕಗಳು	
ಕೃಪಲತ	0-5	ನಾಡಕತೆಗಳು	0-3	ಮಿಂಚಿನ ದೇವರು	0 3
ಸಂಶಯ ಪಿಶಾಚಿ	0-8	ಕಂಡೂಕಾಣದ ನೋಟಗಳು	0 8	ರಾಷ್ಟ್ರರಚನೆಯ ಇತಿಹಾಸ	2 8
ರಂಗಭೂಮಿ	0-8	ನಾರೀಹೃದಯ	0 14	ಬಾಲವಾಙ್ಮಯ	0-3
ಪ್ರಕಾಶ	1-12	ಅಂತರಂಗದ ಕತೆಗಳು	0-10	ಮಿತಸಂತತಿ	0-8
ಧರ್ಮಸಂಕಟ	0 4	ಪ್ರೇಮಪ್ರವಾಹ	0 6	ಸ್ತ್ರೀಯಜ್ಞಾನ	0-8
ಆರೋಗ್ಯ ಪ್ರತಾಪ	0 12	ಅತಿಥಿ ಇತ್ಯಾದಿ ಕತೆಗಳು	0 12	ಪಾಪಪೂರಿತ ಪಟ್ಟಣಗಳು	1 8
ಪಂಚ ರತಿ	0 6	ಲೋಪಾಮುದ್ರೆ	0-6	ಚಿಗರು	0 6
ಪ್ರತೀಕಾರ	0 6	● ಕಾದಂಬರಿಗಳು			
ಸೇವಾಪಥ	0-8	ಸನ್ಯಾಸಿಯ ಸೋಗಿನಲ್ಲಿ	0-8	ಗೀತೆಯ ಕೈಗನ್ನಡಿ	0 12

ನವಭಾರತ ಪುಸ್ತಕ ಭಂಡಾರ, ರಿಟೈರ್ಡ್ ಪಬ್ಲಿಷರ್ಸ್, ಉಡುಪಿ ದ ಕ.

ನೋಟೀಸು

ದ. ಕ ಮಂಗಳೂರು ಡಿಸ್ಟ್ರಿಕ್ಟ ಮುನ್ಸಿಫ ಕೋರ್ಟಿನಲ್ಲಿ

ಕ್ರಮನಂಬ್ರ 345/1944
R I. A. No 919/44

ಕೆ. ರಂಗಪ್ಪಯ್ಯ ಬ್ರತಾಳ —ವಾದಿ
ಮತ್ತು
ವಿಟ್ಟಪ್ಪ ನಾಯ್ಕ —ಪ್ರತಿವಾದಿ

ಮಂಗಳೂರು ತಾಲ್ಲೂಕ ಈರಾ ಗ್ರಾಮದ ಸೇಕಜೆಯಲ್ಲಿರುವ ಕೊಡಂಗೆ ರಾಮಪ್ಪ ನಾಯ್ಕರ ಮಗ ವಿಟ್ಟಪ್ಪ ನಾಯ್ಕರೀಗೆ—

ಮೇಲೆ ಹೆಸ್ರು ಕಾಣ್ಸದ ವಾದಿ ನಿಂಮ ಮೇಲೆ ಗೇಣಿ ಬಾಕಿ ವ ಆಸ್ತಿ ಸ್ವಾಧೀನತೆ ವಗೈರೆಗೆ ದಾಕ್ಲು ಮಾಡಿದ ಮೇಲಿನ ವ್ಯಾಜ್ಯವು ಅಖೈರಿ ತನ್ಕಿ ಬಗ್ಗೆ ತಾ 19—12—44ಕ್ಕೆ ಇಟ್ಟಿರುತ್ತದೆ. ಆ ಕುರಿತು ನಿಮಗೇನಾದ್ರು ಆಕ್ಷೇಪವಿದ್ರೆ ಮತ್ತು R. I. A No 919/44ರಲ್ಲಿ ಡಿಕ್ರಿಗೆ ಮುಂಚಿತವಾಗಿ ನಿಂಮ ಬಾಬ್ತು ಸ್ಥಿರಾಸ್ತಿ ಜಪ್ತಿ ವಿಷಯದಲ್ಲಿ ಕೂಡಾ ಆಕ್ಷೇಪವಿದ್ರೆ ಸದ್ರಿ ತಾ 19—12—44ನೇ ದಿನ ಬೆಳಗ್ಗೆ ಮೇಲಿನ ಕೋರ್ಟು ಮುಂದೆ ಹಾಜರಾಗಿ ಜಾಹೀರು ಪಡಿಸಿಕೊಳ್ಳಬಹುದು. ತಪ್ಪಿದರೆ ನಿಂಮ ಗೈರಿ ಹಾಜ್ರಿಯಲ್ಲಿ ಸದ್ರಿ ನಂಬ್ರವು ತೀರ್ಮಾನಿಸಲಾದೀತು.

B R. Vyasraya Achar,
ವಾದಿ ಕಡೆ ಎಡ್ವಕೇಟ
ಮಂಗಳೂರು ತಾ 27—11—1944

ಉಡುಪಿ

ಕ್ರಿಕೆಟ್ ಪಂದ್ಯ—ಸ್ಥಳೀಯ ಉಡುಪಿ ಟೀಮ್ ಮತ್ತು ಕುಂದಾಪುರ, ಕಾರ್ಕಳ, ಹಾಗೂ ಉಡುಪಿಯ ವೈ. ಎಮ್. ಎಸ್. ಸ್ಸಿಯವರ ಸಂಯುಕ್ತ ಟೀಮುಗಳೊಳಗೆ ತಾ-3-12-44ರಲ್ಲಿ ಕ್ರಿಕೆಟ್ ಪಂದ್ಯಾಟ ನಡೆಯಿತು. ಉಡುಪಿ ಟೀಮಿನವರು 162 ರನ್ನುಗಳನ್ನೂ, ಸಂಯುಕ್ತ ಟೀಮಿನವರು 97 ರನ್ನುಗಳನ್ನೂ ತೆಗೆದು ಮೊದಲಿನವರೇ ವಿಜಯಿಗಳಾದರು. ಉಡುಪಿ ಟೀಮಿನ ಶ್ರೀ ಭಾಸ್ಕರ ಶೇಟ್ (50), ಶ್ರೀ ವಾದಿರಾಜ ಹೆಗ್ಡೆ (25) ಮತ್ತು ಬಿ. ರಜಾಕ್ (22) ಸಂಯುಕ್ತ ಟೀಮಿನ ಶ್ರೀ ಪುಂಡಲೀಕ (43) ಇವರ ಬೇಟಿಂಗ್ ಚಲೋದಿತ್ತು. ಶ್ರೀಗಳಾದ ವಿಷ್ಣು ಕಾಮತ್, (ಸಂ ಟೀಮ್) ಶಂಕರನಾರಾಯಣ ಹೆಗ್ಡೆ, ಬಿ ರಘುರಾಮ ಹೆಗ್ಡೆ (ಉಡುಪಿ ಟೀಮ್) ಯವರ ಬೌಲಿಂಗ್ ಉತ್ತಮವಿತ್ತು. ಕೊನೆಯಲ್ಲಿ ಮಿಸೆಸ್ ಸಾಥೆಯವರಿಂದ ಬೇಟಿಂಗಿಗಾಗಿ ಶ್ರೀಗಳಾದ ಭಾಸ್ಕರ ಸೇಟ್ ಮಂದಿರ ಜಹಗೆ ಮತ್ತು ಪುರುಷರಿಗೂ, ಬೌಲಿಂಗಿಗಾಗಿ ಶ್ರೀಗಳಾದ ಶಂಕರ ನಾರಾಯಣ ಹೆಗ್ಡೆ ಮತ್ತು ವಿಷ್ಣು ಕಾಮತರಿಗೂ ರಜತ ಪದಕಗಳು ಕೊಡಲ್ಪಟ್ಟವು. ಕಪ್ಪನ್ನಾಗಿ ಉಡುಪಿ ಟೀಮಿಗೆ ಸ್ಥಳೀಯ ಡಿ. ಮುನ್ಸಿಫ್ ವಿ. ನೋರೊನ್ಹಾ ಇವರೂ, ಸಂಯುಕ್ತ ಟೀಮಿಗೆ ಕುಂದಾಪುರ ಡಿ. ಸಬ್ ಕಲೆಕ್ಟರ್ ಶ್ರೀ ಸಾಥೆಯವರೂ ಆದಿದ್ದರು. ಜಿಲ್ಲೆಯ ಬೇರೆ ಬೇರೆ ಟೀಮುಗಳೊಡನೆ ಈ ವರುಷ ನಡೆಸಿದ ಎಲ್ಲಾ ಪಂದ್ಯಗಳಲ್ಲಿಯೂ ಉಡುಪಿ ಟೀಮಿನವರೇ ವಿಜಯಿಗಳಾಗಿರುವುದು ಅಭಿನಂದನೀಯ.

ಅಕ್ಕಿ ಒಪ್ಪಿಸುವ ಡಿಪೋಗಳಲ್ಲಿಯ ಆಫೀಸು ಸಮಯ— ಪೂರ್ವಾಹ್ನ ಗಂಟೆ 9ರಿಂದ ಮಧ್ಯಾಹ್ನ 1 ಗಂಟೆ, ಸಂಜೆ ಗಂಟೆ 3ರಿಂದ6ರ ತನಕವೆಂದೂ ಸರಕಾರಿ ರಜಾ ದಿನಗಳಲ್ಲಿ ಡಿಪೋಗಳಿಗೆ ರಜಾ ಯಿರುವುದೆಂದೂ ಮಹಾ ಜನರ ತಿಳುವಳಿಕೆ ಬಗ್ಗೆ ಹೋಲ್ ಸೇಲ್ ಸ್ಟೋರ್ಸಿನ ಅಧ್ಯಕ್ಷರು ತಿಳಿಸುತ್ತಾರೆ.

ಗೀತಾ ಜಯಂತಿ—ಕಳೆದ ತಾ 29ರಲ್ಲಿ ಕಲಾ ವೃಂದದಲ್ಲಿ ಭಂಡಾರಕೇರಿ ಮಠದ ಶ್ರೀ ವಿದ್ಯಾ ಮಾನ್ಯ ತೀರ್ಥರ ಅಧ್ಯಕ್ಷತೆಯಲ್ಲಿ ಗೀತಾ ಜಯಂತಿಯು ಜರಗಿತು. ಪಂಡಿತ ವೆಂಕಟರಮಣಾಚಾರ್ಯರು "ಗೀತೆಯ ಬಹಿರಂಗ ವಿಮರ್ಶೆ" ಕುರಿತೂ ಕರ್ಣಕೇಸರಿ ಶ್ರೀ ಬನ್ನಂಜೆ ನಾರಾಯಣಾಚಾರ್ಯರ "ಗೀತೆ"ಯ ಕುರಿತೂ ಪೇಜಾವರ ಮಠದ "ವಿಶ್ವೇಶ ತೀರ್ಥ" ಶ್ರೀ ಪಾದಂಗಳವರು "ಗೀತೆಯ ವೈಶಿಷ್ಟ್ಯ"ದ ಕುರಿತೂ ಭಾಷಣ ಮಾಡಿದರು. ಅಧ್ಯಕ್ಷರು ಗೀತೆಯ ಬಹಿರಂಗ ಮತ್ತು ಅಂತರಂಗ ವಿಮರ್ಶೆ ಮಾಡುತ್ತಾ ವಿಚಾರಪರ ಭಾಷಣ ಮಾಡಿದರು. ಕೊನೆಗೆ ಕಾರ್ಯದರ್ಶಿಗಳ ಧನ್ಯವಾದದೊಡನೆ ಕಾರ್ಯ ಕ್ರಮವು ಕೊನೆಗೊಂಡಿತು.

ಮುನಿಸಿಪಲ್ ಮೀಟಿಂಗು— ಕಳೆದ ತಾ 30ರಲ್ಲಿ ಸಂಜೆ ಶ್ರೀಮತಿ ಲೀಲಾ ಬಾಯಿ ಕಾಮತರ ಅಧ್ಯಕ್ಷತೆಯಲ್ಲಿ ಜರಗಿತು. ಬಸ್ ಸ್ಟೇಂಡಿನಲ್ಲಿ ಮೋಟಾರ್ ಲಾರಿಗಳು ಬಂದು ನಿಲ್ಲದ ಹಾಗೆ ನಿರ್ಬಂಧ ಹಾಕಬೇಕಾಗಿ ನಿರ್ಧಾರವಾಯಿತು. ಬೇರೆಗೆ ವರ್ಗವಾಗಿ ಹೋಗಲಿರುವ ಇಲ್ಲಿಯ ಕಮಿಶನರ್ ಶ್ರೀ ರಾಮುಣ್ಣಿ ನಾಯರರು ನಗರ ಸಭೆಗೆ ಸಲ್ಲಿಸಿದ ಸೇವೆಯನ್ನು ಹೊಗಳಿ ರಿಕಾರ್ಡು ಮಾಡಲಾಯಿತು. ಶ್ರೀಗಳಾದ ನರಸಿಂಹ ವಿಠಲ ಕಾಮತ್ ಮತ್ತು ಪಂಡಿತ ಕಣ್ಣನ್ ನಂಬಿಯಾರರು ಕಮಿಶನರರಿಗೆ ಟೀಪಾರ್ಟಿಯನ್ನಿತ್ತು ಗೌರವಿಸಿದರು. ಶ್ರೀ ಹರಿಶ್ಚಂದ್ರ ರಾಯರು ಇಲ್ಲಿಯ ಕಮಿಶನರರಾಗಿ ನೇಮಕ ಹೊಂದಿರುವರು

ಧೂಳಿನ ಹಾವಳಿ— ಆರಂಭವಾಗಿಯದೆ ಲಾರಿಗಳ ಓಡಾಟದಿಂದಂತೂ ವಿಪರೀತ ಧೂಳು ಹಾರುತ್ತದೆ. ರಸ್ತೆಗಳಿಗೆ ನೀರು ಹಾಕಿಸುವ ಕುರಿತು ನಗರ ಸಭೆಯು ಆರೋಗ್ಯ ದೃಷ್ಟಿಯಿಂದಲಾದರೂ ಕೂಡಲೇ ವಿಚಾರಮಾಡಿ ವ್ಯವಸ್ಥೆ ಮಾಡದಿದ್ದರೆ ಪರಿಣಾಮ ನೆಟ್ಟಗಾಗಲಾರದು

ಪ್ರೈಸ್ ಕಂಟ್ರೋಲ್— ಯಾವ ಮಾಲೂ ಕಂಟ್ರೋಲ್ ದರದಲ್ಲಿ ದೊರೆಯ ಪುದಿಲ್ಲ. ಕಂಟ್ರೋಲ್ ಕಮಿಟಿ ಮೆಂಬರರಿಗೆ ಸಕ ಕಂಟ್ರೋಲ್ ದರದಲ್ಲಿ ಸಾಮಾನುಗಳು ದೊರೆಯುತ್ತವೆಯೋ ಎಂಬುದೇ ಅನುಮಾನಕರ.

ಬೆಳ್ಳಿಗೆ ಅಕ್ಕಿ ಸರಬರಾಯಿ— ಇನ್ನೂ ತೃಪ್ತಿಕರವಾದ ಮಟ್ಟವನ್ನು ಮುಟ್ಟಲಿಲ್ಲ. ವಿವಿಧ ಜಾತಿಯ ಬೆರಕೆ ಅಕ್ಕಿಯೇ ಹೊರಬೀಳುತ್ತದೆ. ಕುಚ್ಚಿಗೆ ರಂಡಿ ಅಕ್ಕಿ ಸಹಾ ಇದೇ ಮಾದರಿಯಾಗಿದೆ ಬೇಯಿಸಿದರೆ ಅನ್ನದ ಬದಲಾಗಿ ಅರಿ ಗಂಜಿಯೋ ಮಡ್ಡಿಯೋ ಆಗುತ್ತದೆ ಇಂತಹ ಆಹಾರದಿಂದ ಜನರ ಆರೋಗ್ಯ ಕೆಡುವ ಸಂಭವವಿದೆ. ಜಿಲ್ಲಾಧಿಕಾರಿಗಳು ಈ ಕಡೆ ತೀವ್ರ ನಿಗಾ ಕೊಡಬೇಕಾಗಿದೆ.

ಗೋಧಿ ಬೆಲೆ ಇಳಿಯಿತು— ಅಕ್ಕಿಯ ಅಭಾವವನ್ನು ಹೋಗಲಾಡಿಸುವರೆ ಯಾ ಜನರಲ್ಲಿ ಗೋಧಿಯನ್ನು ಹೆಚ್ಚು ಹೆಚ್ಚಾಗಿ ಉಪಯೋಗಿಸಲು ಅನುಕೂಲವಾಗುವಂತೆಯೂ ಇದೇ ತಾ 3ರಿಂದ ಎಲ್ಲಾ ಡಿಪೋಗಳಲ್ಲಿ ಕಡಿಮೆ ದರದಲ್ಲಿ ಗೋಧಿ ಮಾರಾಟದ ವ್ಯವಸ್ಥೆ ಮಾಡಲಾಗಿಯದೆ ಮಂಗಳೂರು ರೇಶನ್ ಕ್ಷೇತ್ರದಲ್ಲಿ ಸೇರು ಒಂದರ 0-3 ಪೈ. ಇತರ ಸ್ಥಳಗಳಲ್ಲಿ ಮುಂಚೆಯದ್ದಕ್ಕಿಂತ ಹನ್ನೊಂದು ಪೈ ಕಡಿಮೆ.

ಮೂಡನಿಡಂಬೂರು ವಾರ್ಡಿನ— ಮುನಿಸಿಪಲ್ ಉಪಚುನಾವಣೆಯಲ್ಲಿ ಶ್ರೀ ಶಂಭು ಸೆಟ್ಟರು ವಿಜಯಿಗಳಾಗಿರುವರು.

ಲೋರಿ ಅಡಿಗೆ ಬಿದ್ದು ಮರಣ— ಕಳೆದ ಆದಿತ್ಯವಾರ ಬೆಳಗ್ಗೆ ಮೋಟಾರ್ ಲೋರಿಯೊಂದು ಫಲಿಮಾರು ಮಠದ ಬದಿಯ ಪಡು ಪೇಟೆ ರಸ್ತೆಯಲ್ಲಿ ಹೋಗುತ್ತಿದ್ದಾಗ ಸಾಮಾನು ಹೊತ್ತುಕೊಂಡು ಹೋಗುತ್ತಿದ್ದ ಒಬ್ಬ ಕೂಲಿಯವನು ಅಡಿಗೆ ಬಿದ್ದು ಕೂಡಲೆ ಆಸ್ಪತ್ರೆಗೆ ಒಯ್ಯಲ್ಪಟ್ಟನು. ಸಂಜೆ ಮರಣಹೊಂದಿದನೆಂದ ತಿಳಿದುಬರುತ್ತದೆ.

ಕರ್ನಾಟಕ ಸಂಘ—ಈ ಸಂಘದ ಕಾರ್ಯನಿರ್ವಾಹಕ ಸಮಿತಿಯ ಸಭೆಯು ತಾ 3-12-44ರಲ್ಲಿ ಶ್ರೀ ಎನ್. ರಾಜಗೋಪಾಲಕೃಷ್ಣ ರಾಯರ ಅಧ್ಯಕ್ಷತೆಯಲ್ಲಿ ಜರಗಿತು ಇಂದು ಜರಗಬೇಕಾಗಿ ನಿರ್ಣಯವಾಗಿದ್ದ ಸಂಘದ ಮಹಾಧಿವೇಶನವು ಅನಿವಾರ್ಯವಾದ ಕಾರಣಗಳಿಂದಾಗಿ ತಾ 7 1-45ಕ್ಕೆ ಜರಗತಕ್ಕದ್ದೆಂದಾಯಿತು. ಕಾರ್ಯನಿರ್ವಾಹಕ ಸಮಿತಿಯ ತಾ 26—10—44ನೇ ಅಧಿವೇಶನದ 6ನೇ ನಿರ್ಣಯದ ಕುರಿತು ಕೆಲವು ಪತ್ರಿಕೆಗಳಲ್ಲಿ ಬಂದ ಸುದ್ದಿ ಇಲ್ಲಿದ ವಿಷಯವು ಪರ್ಯಾಲೋಚನೆಗೆ ಬಂದು ಆ ವಿಷಯವಾಗಿಯೂ ಕೆಳಗಿನಂತೆ ನಿರ್ಣಯವಾಗಿದೆ—'ಸಮಿತಿಯ ತಾ 26-10 44ನೇ ಅಧಿವೇಶನದ 6ನೇ ನಿರ್ಣಯದ ಕುರಿತು 'ಕಂಠೀರವ'ದ ತಾ 14-11 44ನೇ ಸಂಚಿಕೆಯಲ್ಲಿಯೂ 'ಸಂಯುಕ್ತ ಕರ್ನಾಟಕ'ದ ತಾ 19-11-44ರ ಸಂಚಿಕೆಯಲ್ಲಿಯೂ 'ಕರ್ಮವೀರ'ದ ತಾ 13-11 44ನೇ ಸಂಚಿಕೆಯಲ್ಲಿಯೂ ಬಂದ ಸುದ್ದಿಗಳನ್ನು ಸಮಿತಿಯ 6ನೇ ನಿರ್ಣಯಾನುಸಾರವೇ ಓದಿಕೊಳ್ಳತಕ್ಕದ್ದಾದ್ದರಿಂದ ಸಂಘದ 6ನೇ ಪೂರ್ಣ ನಿರ್ಣಯದ ನಕಲನ್ನು ಪ್ರಕಟೀಕೃತವಾದ ಆ ಸುದ್ದಿಗಳ ಬದಲು ಓದಿಕೊಳ್ಳುವುದಾಗಿ ಆ ಪತ್ರಿಕೆಗಳಿಗೆ ಪ್ರಕಟಣೆಯ ಬಗ್ಗೆ ಪ್ರಧಾನ ಕಾರ್ಯದರ್ಶಿಗಳು ಕಳುಹಿಸತಕ್ಕದೆಂದು ನಿರ್ಣಯವಾಯಿತು" (ಶ್ರೀ. ತಿ. ತಾ. ಶರ್ಮ ? ಕುಪ್ಪಣ್ಣಾಚಾರ್ಯರು ಈ ನಿರ್ಣಯವನ್ನು ಒಪ್ಪಲಿಲ್ಲ)

ಪ್ರಕಟೀಕೃತವಾದ ಸುದ್ದಿಗಳ ಬದಲು ಓದಿಕೊಳ್ಳಬೇಕಾದ ನಿರ್ಣಯ. 'ಸಾಹಿತ್ಯೋತ್ಸವದ ಸಂಬಂಧವಾಗಿ ಸ್ಥಳೀಯ ಪತ್ರಿಕೆಗಳಲ್ಲಿ ಬಂದ ವ್ಯಕ್ತಿಪರವಾದ ಟೀಕೆಗಳಲ್ಲಿ ತೋರಿ ಬರುವ ಅಭಿಪ್ರಾಯಗಳು ಈ ಸಂಘದ ಅಭಿಪ್ರಾಯಗಳಾಗಿ ಯಾರಿಂದಲೂ ಪರಿಗ್ರಹಿಸಲ್ಪಡಕೂಡದಾಗಿ ಸಂಘವು ಈ ಮೂಲಕ ಸ್ಪಷ್ಟಪಡಿಸುತ್ತದೆ ಮತ್ತು ಈ ನಿರ್ಣಯವನ್ನು ಸಂಬಂಧಪಟ್ಟ ಪತ್ರಿಕೆಗಳಲ್ಲಿ ಪ್ರಕಟೀಕರಿಸಬೇಕಾಗಿ ಆಯಾಪತ್ರ ಸಂಪಾದಕರಿಗೆ ವಿನಂತಿ ಮಾಡುತ್ತದೆ' ಎಂದು ಪ್ರಧಾನ ಕಾರ್ಯದರ್ಶಿ ಶ್ರೀ. ಕೊಡ್ಯಾಲ್ ಶ್ರೀನಿವಾಸರಾಯರು ಬರೆಯುತ್ತಾರೆ.

ಪಾಂಗಾಳ— ಇಲ್ಲಿಯ ಜನಾರ್ದನ ದೇವಸ್ಥಾನದ ಸಣ್ಣ ರಥ ಮತ್ತು ಕೊಟ್ಟಗೆಯ ಜೀರ್ಣೋದ್ಧಾರದ ಕೆಲಸವು ತಾ 20-11-44ರಿಂದ ಪ್ರಾರಂಭವಾಗಿ ರಭಸದಿಂದ ಸಾಗುತ್ತಲಿದೆ ಬೊಂಬಾಯಿಯಲ್ಲಿ ಉದಾರ ಬುದ್ಧಿಯಿಂದ ಪರಮಾತ್ಮನ ಸೇವೆಗೆ ದ್ರವ್ಯ ಸಹಾಯ ಮಾಡುವ ಬಗ್ಗೆ ವಾಗ್ದಾನ ಮಾಡಿದ ಮಹನೀಯರು ಆದಷ್ಟು ಬೇಗನೇ ಹಣ ಕಳುಹಿಸಬೇಕಾಗಿ ಕಾರ್ಯದರ್ಶಿ ಶ್ರೀ. —ವಿ ಸುಬ್ರಾಯರು ವಿನಂತಿಸುತ್ತಾರೆ.

ಕಟಪಾಡಿ—ಬ್ರಹ್ಮ ಶ್ರೀ. ನಾರಾಯಣ ಗುರು ಸೇವಾ ಸಮಿತಿಯ ದೇವತಾ ಮಂದಿರದಲ್ಲಿ, ತಾ. 26-11-44ರಲ್ಲಿ ಶ್ರೀ ಕೊಡವೂರು ಬಾಬ ಮೇಸ್ತ್ರಿಗಳವರ ಸಭಾಧ್ಯಕ್ಷತೆಯಲ್ಲಿ ಬಿಲ್ಲವ ಜನಾಂಗದ ಕಸಬುದಾರರ ಪೈಕಿ, ಮೇಸ್ತ್ರಿಗಳವರ, ಗಾಡಿಗಾರರ ಮತ್ತು ಬಂಡೆಕಲ್ಲಿನ ಕೆಲಸಗಾರರ ಸಭೆಯು ಜರಗಲ್ಪಟ್ಟಿತು. ಶ್ರೀಗಳಾದ ಪಿ. ಕೆ. ಸುವರ್ಣರು, ಯು. ದಾದುಮಾಸ್ತರ್, ಕೆ. ದೇಜು ಮಾಸ್ಟರ್ ಇವರು ಮಾತನಾಡಿದ ಮೇಲೆ ಸಭಾಧ್ಯಕ್ಷರ ಭಾಷಣವಾಯಿತು ಎಲ್ಲರೂ ಮಂದಿರಕ್ಕೆ ಸಹಾಯ ಮಾಡುವುದಾಗಿ ವಾಗ್ದಾನ ಮಾಡಿದರು

ಈಗಿನ ಕಾಗದ ನಿಯಂತ್ರಣ ಕಾನೂನಿನ ದೆಸೆಯಿಂದಾಗಿ

1945ನೇ ವರ್ಷದ

ನವಭಾರತ ಡೈರಿಗಳು

ಪ್ರಕಟಿಸಲ್ಪಡುವುದಿಲ್ಲ

ಆದುದರಿಂದ ನಮ್ಮ ಗ್ರಾಹಕರಾರೂ ಡೈರಿಗಳ ಬಗ್ಗೆ ಪತ್ರ ವ್ಯವಹಾರ ಮಾಡಬಾರದಾಗಿ ಈ ಮೂಲಕ ಅಪೇಕ್ಷಿಸಲಾಗುತ್ತದೆ

ನವಭಾರತ ಪುಸ್ತಕ ಭಂಡಾರ, ಉಡುಪಿ

ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್, ಉಡುಪಿ.

ತಾ 11—12—44 ರಿಂದ

ಆಚಾರ್ಯ ಆರ್ಟ ಚಿತ್ರ

ಉಲ್ಝನ್

ಸರ್ದಾರ್ ಅಖ್ತರ್, ಮಜಹರ್ ಖಾನ್

17—12—44

ಪ್ರೇಮ ಸಂಗೀತ—ಶಾಲಿಮಾರ್ ಚಿತ್ರ

21—12—44

ಮಾಸ್ತರಜೀ—ಜನಕ ಚಿತ್ರ

27—12—44

ಕಿಸ್ಮತ್

ಪುತ್ತೂರು ಹ್ಯಾಸ್ಕೂಲಿನ ಹೊಸ ಕಟ್ಟೋಣದ ಬುನಾದಿ ಕಲ್ಲು ಸ್ಥಾಪನೆ—ತಾ 1 12 1944ರಲ್ಲು ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಡೆಯವರ ಅನಿವಾರ್ಯ ಗೈರುಹಾಜರಿಯಲ್ಲಿ ಅವರ ಬಗ್ಗೆ ಶ್ರೀ ಕೆಳ್ತಂಗಡಿ ಮಂಗೇಶ ರಾಯರಿಂದ ನೆರವೇರಿಸಲ್ಪಟ್ಟಿತು. ಹ್ಯಾಸ್ಕೂಲ್ ಬಿಲ್ಡಿಂಗ್ ಕಮಿಟಿಯು ಈ ವರೆಗೆ ಸುಮಾರು ರೂ 5200/-ನ್ನು ಕಟ್ಟೋಣದ ಬಗ್ಗೆ ಸಂಗ್ರಹಿಸಿ ಇನ್ನು ಸುಮಾರು ರೂ 25,000 ಬೇಕಾಗಬಹುದೆಂದು ಕಾರ್ಯದರ್ಶಿಗಳು ತಿಳಿಸಿದರು ಶ್ರೀ ಮೊಳಹಳ್ಳಿ ಶಿವರಾಯರು ಕಮಿಟಿಯ ಪರವಾಗಿ ಧನ ಸಹಾಯವನ್ನು ಸಭಿಕರಲ್ಲಿ ಯಾಚಿಸಿದ್ದರ ಫಲವಾಗಿ ರೂ 5700ಕ್ಕೆ ಮಿಕ್ಕಿ ವಾಗ್ದಾನಗಳು ಸಿಕ್ಕವು. ಉಳಿದ ಹಣವನ್ನು ಶೀಘ್ರದಲ್ಲಿ ಒದಗಿಸಲು ಧರ್ಮಿಕ ಬುದ್ಧಿಯುಳ್ಳವರೂ, ಹಳೆ ವಿದ್ಯಾರ್ಥಿಗಳೂ ಸಹಾಯವನ್ನು ಮಾಡಬೇಕೆಂದು ಶ್ರೀ. ಮಂಗೇಶ ರಾಯರು ಕೇಳಿಕೊಂಡರು ಶ್ರೀ ಬೆಳ್ಳಿ ರಾಮಚಂದ್ರ ರಾಯರು ಧನ್ಯವಾದಗಳನ್ನು ಅರ್ಪಿಸಿದ ನಂತರ ತಿಂಡಿಗಳನ್ನು ಹಂಚಿ ಸಮಾರಂಭವು ಕೊನೆಗೊಂಡಿತು ಈ ವರೆಗೆ ರೂ 100ಕ್ಕೆ ಕಡಿಮೆಯಾಗದೆ ವಾಗ್ದಾನ ಮಾಡಿದ ಮಹನೀಯರುಗಳ ಹೆಸರುಗಳನ್ನು ಕೆಳಗೆ ಕೊಡಲಾಗಿದೆ 1 ಶ್ರೀ. ಬೈಂದೂರು ಪ್ರಭಾಕರರಾವ್ ರೂ 2004, 2 ಓರ್ವ ಹಳೆ ವಿದ್ಯಾರ್ಥಿ 1001, 3 ಶ್ರೀ ಧರ್ಮಸ್ಥಳ ಮಂಜಯ್ಯ ಹೆಗ್ಡೆಯವರು 1000, 4 ಹ್ಯಾಸ್ಕೂಲ್ ಸ್ಟುಡೆಂಟ್ಸ್ ಸ್ಟೇಶನರಿ ಸೊಸೈಟಿ 750, 5 ರಾವ್‌ಸಾಹೇಬ್ ಯ ಮ್ ಅನಂತರಾಮ 555, 6 ಶ್ರೀ ಮ್ಯಾ ಮಹಾಲಿಂಗ ಶೆಣೈ ಮತ್ತು ಬಿ ಯನ್ ಮಲ್ಯ ಯಂಡ್ ಸನ್ಸ್ 555, 7 ಶ್ರೀ ಅಪ್ಪಣ್ಣ ಪ್ರಭು ಯಂಡ್ ಸನ್ಸ್ 505, 8 ಶ್ರೀ ಮ್ಯಾ ರಾಮಚಂದ್ರ ದಾಸಪ್ಪ ಶಾನುಭಾಗ ಯಂಡ್ ಸನ್ಸ್ 505, 9 ರಾವ್ ಸಾಹೇಬ್ ವಿಟ್ಠಲ್ ಲಕ್ಷ್ಮೀನಾಥ ಸ್ವಾಮಿ ಜಯರವರು 501, 10 ಶ್ರೀ ಬೆಳ್ತಂಗಡಿ ಮಂಗೇಶರಾಯರು 501, 11 ಶ್ರೀ ಪಿದ್ಯಾಪು ನಾರಾಯಣ ಭಟ್ಟರು 251, 12 ಶ್ರೀ ಯನ್ ಯಸ್ ಕೃಷ್ಣರಾವ್ (ಒವರಿಂ ವೆ ಜಸ್ಟೀಟ್) 250, 13 ಶ್ರೀ ಎ. ಸಿ ಅಪ್ಪಾಜಿ ರಾವ್ (ಬೊಂಬಾಯಿ) 202, 14 ಡಾಕ್ಟರ್ ಬಡಾಕಿಲ ಶಂಭು ಶರ್ಮ 125, 15 ಶ್ರೀ ಸಿ. ಯಸ್ ಶಾಸ್ತ್ರಿ 116, 16 ಶ್ರೀ ಕಾರ್ಕಳ ವೆಂಕಪ್ಪ ಎಂಡ್ ಬ್ರದರ್ಸ್ 101, 17 ಶ್ರೀ ಪಾಂಗಾಳ ಸಂಜೀವ ರಾವ್ 101, 18 ಶ್ರೀ ಅರ್ಬ್ಯಪು ಕೆ. ನಾರಾಯಣ ನಾಯಕ್ 101, 19 ಶ್ರೀ ಎಸ್ ಕೆ. ವೆಂಕಟರಮಣ ಭಟ ಯಂಡ್ ಬ್ರದರ್ಸ್ 101 20 ಶ್ರೀ ಕೆಂಚಿಲ ಎಂ ಬಾಬುರಾವ್ 101, 21 ಶ್ರೀ ಯುವಕ್ ಸಾಂಡ್ರ ರಂಗರಾವ್ 101, 22 ಶ್ರೀ ಕನುಲಾಲ್ ಕೊಠ್ಯ (ಬೊಂಬಾಯಿ) 100, 23 ಶ್ರೀ ಕೆ. ವೆಂಕಪ್ಪಯ್ಯ ಉರಿಮಜಲು 100

ನೋಟೀಸು

ಪುತ್ತೂರು ಡಿ ಮು. ಕೋರ್ಟಿನಲ್ಲಿ

S C No 165/1944

ಮಹಾಬಲ ಆಳ್ವ —ವಾದಿ

ಪಾತುಮ್ಮ, ಹಾಜಿ ಉಮ್ಮರ ಬ್ಯಾರಿಗಳ ವಿಧವೆ, ಮಂಗಳೂರು ತಾಲ್ಲೂ ನೇಪೂರು ಗ್ರಾಮದ ಕೋಡಿಬೈಲು —ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲ್ಕ ತಿಳಿಯಪಡಿಸುವದೇನೆಂದ್ರೆ —

ಮೇಲಿನ ವ್ಯಾಜ್ಯದಲ್ಲಿ ಪ್ರತಿವಾದಿಯಾದ ನೀವು ಮೂಲಗೇಣಿ ಹಕ್ಕಿನಿಂದ ಅನುಭವಿಸುವ ಕಡೆಶ್ವಾಲ್ಯ ಗ್ರಾಮದ ಆಸ್ತಿ ಬಾಬ್ತು ನಿಂದ ವಾದಿಗೆ ಬರತಕ್ಕ 1942, 43 ಮತ್ತು 44 ನೇ ಇಸವಿಯ ಮೂಲಗೇಣಿ ಬಾಕಿ ವ ಬಡ್ಡಿ ರೂ 23—10—0ಕ್ಕೆ ವಾದಿಯು ನಿಮ್ಮ ಮೇಲೆ ಮಾಡಿದ ಮೋಕ್ಕಂ ದ ಮಾ ವ್ಯಾಜ್ಯ ತಾ 21—12—1944ಕ್ಕೆ ತನಿಕೆಗೆ ಇಟ್ಟಿರುವದ್ರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪ ಇದ್ರೆ ಸದ್ರಿ ಪ್ಯಾದೆ ದಿನ ಪೂರ್ವಾಹ್ನ 11 ಗಂಟೆಗೆ ಕೋರ್ಟು ಮುಂದೆ ಹೇಳಿಕೊಳ್ಳದಿದ್ರೆ ನಿಮ್ಮನ್ನು ಬಿಟ್ಟು ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು ಎಂತ ಕೋರ್ಟು ಹುಕುಂ ಪ್ರಕಾರ ಈ ಮೂಲ್ಕ ನಿಮಗೆ ತಿಳಿಸಿಯದೆ

C M Sadashiva Rau,
Pleader for Pltf.

Puttur 2—12—1944

ಹಳ್ಳಿಯ ಕೃಷಿಕನ ದುರವಸ್ಥೆ.

''ಆಹಾರ ಸಾಮಾಗ್ರಿಗಳನ್ನು ಬೆಳೆಸತಕ್ಕ ಕೃಷಿಕನು ರಾಷ್ಟ್ರದ ಬೆನ್ನು ಮೂಳೆಯಾಗಿರುತ್ತಾನೆ. ಆತನ ಪರಿಸ್ಥಿತಿಯು ಕೆಟ್ಟಲ್ಲಿ ಸಾಮಾಜಿಕ ಪರಿಸ್ಥಿತಿಯೇ ಕೆಡುವುದು'' ಎಂಬುದಾಗಿ ನಮ್ಮ ಮುಖಂಡರುಗಳು ಆಗಾಗ್ಗೆ ತಮ್ಮ ಸಾರ್ವಜನಿಕ ಭಾಷಣಗಳಲ್ಲಿ ಆಡುತ್ತಿರುವರಾದರೂ, ನಮ್ಮ ಜಿಲ್ಲೆಯಲ್ಲಿ ಅಧಿಕಾರಿಗಳು ಕೈಕೊಂಡ ಆಹಾರ ವಿತರಣೆಯ ಧೋರಣೆಯನ್ನು ಪರಿಶೀಲಿಸಿದರೆ ವರ್ಷದ ಹೆಚ್ಚಿನ ದಿವಸಗಳಲ್ಲಿ ಆಹಾರ ಉತ್ಪತ್ತಿಯನ್ನೇ ತನ್ನ ಏಕಮಾತ್ರ ವೃತ್ತಿಯಾಗಿಟ್ಟುಕೊಂಡು ದುಡಿಯುತ್ತಿರುವ ಹಳ್ಳಿಗನ ಕಡೆಗೆ ಅಧಿಕಾರಿಗಳ ಲಕ್ಷ್ಯವು ಹರಿದಂತೆ ಕಾಣುವದಿಲ್ಲ.

ಕಳದ ವರ್ಷ ಬಡ ಕೃಷಿಕನು ತನ್ನ ಉತ್ಪತ್ತಿಯಿಂದ ಧನಿ ಗೇಣಿಯನ್ನು ಅಳೆದು ತನ್ನ ಕಣಜವನ್ನು ಬರಿದುಮಾಡಿ, ಆ ಮೇಲೆ ತನ್ನ ಮತ್ತು ತನ್ನ ಕುಟುಂಬಿಕರ ಪೋಷಣೆಗೆ ಆಹಾರವನ್ನು ಇಷ್ಟು ವರ್ಷದಂತೆ ಕಡಧಾರಣೆಗೆ ಕೂಡ ಪಡೆಯಲಾರದೆ, ಅನಂತರ ಹಲವು ಸಾರಿ ಗ್ರಾಮ ಉದ್ಯೋಗಸ್ಥರಲ್ಲಿಗೂ, ಹಲವು ಸಾರಿ ತಹಶೀಲ್ದಾರರ ಕಛೇರಿಗೂ ನಡೆದು ಕೆಲವು ದಿವಸ ಉಪವಾಸ ಬಿದ್ದ ನಂತರ ಹ್ಯಾಗೂ ಕಷ್ಟದಿಂದ ತಲಾ 1ರ ಒಂದು ಪಾವು ಅಕ್ಕಿಯಂತೆ ಹಸುಗೆ ಕಾರ್ಡನ್ನು ಪಡಕೊಂಡ ಕಾರ್ಡಿನ ನಿಯಮಿತ ಅಕ್ಕಿಯನ್ನು ಕೂಡಾ ಅಖೈರಿಗೆ ಪಡೆಯಲಾರದೆ ವಾರಕ್ಕೆ 2 ಯಾ 3 ದಿವಸದ ಅಕ್ಕಿಯನ್ನು ಪಡೆದು ಮಿಕ್ಕ ದಿವಸ ಗೆಣಸು, ಅವರೆ ಇತ್ಯಾದಿಗಳಿಂದ ತನ್ನ ಹಶಿವನ್ನು ತಣಿಸಿ, ಹ್ಯಾಗೂ ಪಾರಾದನೆನ್ನಬೇಕು

ಮದರಾಸು ಗವರ್ನಮೆಂಟಿನವರು 1354ನೇ ಫಸ್ಲಿಗೆ ಹೊರಡಿಸಿರುವ ಈ ಜಿಲ್ಲೆಗೆ ಅನ್ವಯಿಸುವ ಆಜ್ಞೆಯಲ್ಲಿ ಕೃಷಿಕನಾಗಲಿ, ರೈತನಾಗಲಿ, ತನ್ನಲ್ಲಿರುವ ಎಲ್ಲಾ ಮಿಗ್ತೆ ಬತ್ತ ವ ಅಕ್ಕಿಯನ್ನು ಜಿಲ್ಲಾ ಕಲೆಕ್ಟರರಿಗಾಗಲಿ, ಅವರ ಏಜಂಟರಿಗಾಗಲಿ ಮಾತ್ರ ವಿಕ್ರಯ ಮಾಡಬಹುದಾಗಿ ತಿಳಿಸಿರುತ್ತಾರೆ. ಆ ಹುಕುಮಿನಲ್ಲಿ ಒಬ್ಬನ ಮಿಗ್ತೆ ಅಕ್ಕಿಯನ್ನು ನಿಶ್ಚೈಸುವಾಗ (a) ಆತನಿಗೆ ಮತ್ತು ಆತನ ಮನೆವಾರ್ತೆಗೆ ಬೇಕಾಗುವ ಅಕ್ಕಿ. (b) ಗೇಣಿಯು ಅಕ್ಕಿ ವ ಬತ್ತ ರೂಪದಲ್ಲಿ ಕೊಡಬೇಕಾದಲ್ಲಿ ಅದಕ್ಕೆ ಬೇಕಾದ ಅಕ್ಕಿ ವ ಬತ್ತ ಮತ್ತು ಅಕ್ಕಿ ವ ಬತ್ತಗ ಸಾಲವಿರುವಲ್ಲಿ ಆ ಸಾಲದ ಮರುಪಾವತಿಗೆ ಬೇಕಾದ ಅಕ್ಕಿ ವ ಬತ್ತ. (c) ಕೃಷಿಗೆ ಅವಶ್ಯವುಳ್ಳ ಪಕ್ಲಿಗೆ ಬೇಕಾದ ಮುಂಗಡಕೊಡಬೇಕಾದಲ್ಲಿ ಹಾಗೆ ಕೊಡಬೇಕಾದ ಅಕ್ಕಿ ಯಾ ಬತ್ತ. (d) ಬೀಜಕ್ಕೆ ಮತ್ತು ವ್ಯವಸಾಯದ ಕೂಲಿಗಳಿಗೆ ಕೊಡಬೇಕಾದ ಮಜೂರಿಗೆ ಬೇಕಾಗುವ ಬತ್ತ. (e) ಹಳ್ಳಿಗಳಲ್ಲಿರತಕ್ಕ ವ್ಯವಸಾಯಕ್ಕೆ ಸಂಮಂಧಿಸಿದ ಕೆಲಸಗಾರರ ಮಜೂರಿಗಳಿಗೆ ಆತನಿಗೆ ಬೇಕಾಗುವ ಅಕ್ಕಿ ವ ಬತ್ತ- ಇವ್ರುಗಳನ್ನು ತೆಗೆದಿಡಲಾಗುವದಾಗಿ ಜಾಹೀರಾತು ಇರುತ್ತದೆ ನಮ್ಮ ಜಿಲ್ಲಾ ಕಲ್ಲೆಕ್ಟರರವರು ಮೇಲಿನ ಆಜ್ಞೆಗನುಸರಿಸಿ ನಮ್ಮ ಜಿಲ್ಲೆಯ ಪ್ರತಿಯೊಬ್ಬ ಕೃಷಿಕನಿಂದ ತನ್ನಲ್ಲಿರತಕ್ಕ ಅಕ್ಕಿ ವ ಬತ್ತದ ಲೆಕ್ಕವನ್ನು ಕೊಡಬೇಕಾಗಿ ಆಜ್ಞೆ ಹೊರಡಿಸಿರುತ್ತಾರೆ.

ಮೇಲಿನ ಆಜ್ಞೆಗಳು ದೇಶದ ಆಹಾರ ಸಾಮಾಗ್ರಿಗಳು ಕಳ್ಳ ಸಂತೆಗೆ ಹೋಗದಂತೆ ತಡೆಗಟ್ಟುವದಕ್ಕೆ ಅವಶ್ಯವಿದ್ದು ಸಾರ್ವಜನಿಕ ಉಪಯುಕ್ತದ್ದೆಂತ ನಿರಾಕ್ಷೇಪವಾಗಿ ಹೇಳಬಹುದು. ಆದರೆ ಕಲೆಕ್ಟರರ ಏಜಂಟರು ಕೃಷಿಕರಿಂದ ಅಕ್ಕಿ ವ ಬತ್ತ ಜಮೆ ಮಾಡುವಾಗ ಮದರಾಸು ಗವರ್ನಮೆಂಟಿನವರ ಆಜ್ಞೆಯಲ್ಲಿರತಕ್ಕ ಮೇಲೆ ಕಾಣಿಸಿರುವ (a) ಟು (e) ವಿನಾಯತಿಯ ವಿಷಯಗಳಿಗೆ ಗಮನ ಕೊಡುವರೆ? ಜಿಲ್ಲಾಧಿಕಾರಿಗಳು ಈ ವಿಷಯ ಯಾವದಾದರೊಂದು ನಿಶ್ಚಿತ ಧೋರಣೆಯನ್ನು ಕೈಕೊಂಡಿರುವರೇ? ಕುಂದಾಪುರ ಡಿವಿಜನಿನ, ಕಲ್ಲೆಕ್ಟರರ ಪ್ರತಿನಿಧಿಯರು ಉಡ್ಪಿ ಮತ್ತು ಕಾರ್ಕಳ ತಾಲೂಕುಗಳ ರೈತರ ಪ್ರತಿನಿಧಿಗಳೊಡನೆ, ಪ್ರತಿಯೊಬ್ಬ ಚಾಲಗೇಣಿ ಪಕ್ಲು ತನ್ನ ಗೇಣಿಯನ್ನು, ಅಕ್ಕಿ ವ ಬತ್ತ ರೂಪವಾಗಿಯೇ ಕೊಟ್ಟೇ ತೀರಬೇಕೆಂದೂ, ಹಾಗೆ ಕೊಡದಿರುವ ಕೃಷಿಕನ ಮೇಲೆ ವ್ಯವಹರಣೆ ಖಂಡಿತವಾಗಿಯೂ ನಡಿಸಲಾದೀತಾಗಿ ಕೂಡಾ ತಿಳಿಸಿರುತ್ತಾರಾಗಿ ನವಯುಗದ ಹಿಂದಿನ ಸಂಚಿಕೆಗಳಿಂದ ತಿಳಿಯುತ್ತದೆ.

ಕರಾವಳಿಯ ಭೂಮಿಗಳ ಚಾಲಗೇಣಿ ಪಕ್ಲುಗಳು ಕಾರ್ತಿ ಬೆಳೆಯಲ್ಲಿ ಧನಿಗೆ ಕೊಡಬೇಕಾದ ಗೇಣಿಯನ್ನು ಕೂಡಾ ಉತ್ಪತ್ತಿ ಮಾಡುವದು ಕಷ್ಟ ಸಾಧ್ಯ--ಈ ವರ್ಷವಂತೂ ಮಳೆಯು ಒಕ್ಕಲಿಗನಿಗೆ ಅನುಕೂಲ ಸಮಯಕ್ಕೊದಗದೆ ಇದ್ದ ದೆಸೆಯಿಂದಲೂ ಬೇರೆ ಬೇರೆ ಕಾರಣಗಳಿಂದಲೂ, ಬೆಳೆಯು ನಿಕೃಷ್ಟತರದ್ದಾಗಿ ಸರಾಸರಿ ಶೇಕಡಾ 25ರಷ್ಟಾದರೂ ಕಡಿಮೆಯಿರುತ್ತದೆ. ಹೀಗಿರುವಾಗ ಕಲ್ಲೆಕ್ಟರರ ಏಜಂಟರು ಬಂದು ಒಕ್ಕಲಿಗನು ಬೆಳೆಸಿರುವ ಎಲ್ಲಾ ಬತ್ತವನ್ನು ಹಿಡಿದಲ್ಲಿ ಆತನು ತನ್ನ ಮತ್ತು ತನ್ನನ್ನು ಆಶ್ರಯಿಸಿಕೊಂಡಿರುವವರ ಪೋಷಣೆಯನ್ನು ಯಾವ ರೀತಿಯಿಂದ ನಡೆಯಿಸಬೇಕು? ಆತನಿಗೆ ಹಸುಗೆ ಚೀಟು ದೊರೆಯುವದೆಂದು ಅಧಿಕಾರಿಗಳ ವಾದ. ಇದು ಎಷ್ಟು ಸಮಂಜಸವಾಗಿರುವದು? ಅವನು ತಾನು ಬೆಳಸಿದ ಬತ್ತವನ್ನು ಮುಡಿ 1ಕ್ಕೆ ನಾಲ್ಕು ರುಪ್ಯಾ ಚಿಲ್ಲರೆಯಲ್ಲಿ ಸರಕಾರಿ ಡಿಪೋಗಳಿಗೆ ಸಾಗಿಸಿಕೊಡಬೇಕು ಮತ್ತು ಅವನಿಗೆ ಬೇಕಾದ ಅಕ್ಕಿಯನ್ನು ದಿನಂಪ್ರತಿಯೋ, ವ ವಾರಕ್ಕೊಂದಾವರ್ತಿಯೋ, ಮುಡಿ 1ಕ್ಕೆ ಸುಮಾರು ಹನ್ನೊಂದು ರುಪಾಯಿ ದರದಲ್ಲಿ ಹಸುಗೆ ಚೀಟನಿಂದ ಪಡೆಯಬೇಕು ನಮ್ಮ ಕೃಷಿಕರಿಗೆ, ಕೃಷಿ ವಿನಹಾ ಬೇರೆ ಜೀವನದ ಉಪವೃತ್ತಿಗಳಿರುವುದಿಲ್ಲ. ಕೃಷಿಯನ್ನು ಏಕಮಾತ್ರ ವೃತ್ತಿಯಾಗಿ ಶತಮಾನಗಳಿಂದ ಅವಲಂಬಿಸಿಕೊಂಡು ಬಂದಿರುವ ಆತನಿಗೆ ಹಸುಗೆ ಕಾರ್ಡಿನ ಅಕ್ಕಿ ಪಡೆಯುವರೆ ಪ್ರತಿದಿನ ವ ವಾರಕ್ಕೆ ಬೇಕಾಗುವ ಹಣವಾದರೂ ಎಲ್ಲಿಂದ ದೊರೆಯಬೇಕು? ಮುಂದಿನ ಬೆಳೆಗೆ ಬೇಕಾದ ಗೊಬ್ಬರ ವಗೈರೆ ಅನುಕೂಲತೆಗಳನ್ನು ಅವನು ಯಾವ ರೀತಿಯಿಂದ ಮಾಡಬೇಕು? ಅವನಿಂದ ಹಿಡಿದ ಅಕ್ಕಿ ಯಾ ಬತ್ತದ ಕ್ರಯವನ್ನು ಅವನ ಧನಿಗೆ ಕೊಡಲಾಗುವದು. ಈ ವಿಷಯಗಳ ಕಡೆಗೆ ಅಧಿಕಾರಿಗಳಾಗಲಿ, ಪಕ್ಲುಗಳ ನಿಕಟ ಸಂಮ್ಮಂಧವುಳ್ಳ ಧನಿಗಳಾಗಲಿ, ಗಮನಕೊಟ್ಟಿರುತ್ತಾರೋ? ಧನಿಗಳಿಗೆ, ಪಕ್ಲುಗಳಿಂದ ಬರತಕ್ಕ ಗೇಣಿಯನ್ನು ಗವರ್ನಮೆಂಟಿನವರೇ ವಸೂಲು ಮಾಡಿ ವ್ಯವಹರಣೆಗಳಿಲ್ಲದೆ ತಮಗೆ ಹಣ ಕೊಡುತ್ತಾರೆಂಬುದರಿಂದ ಸಂತುಷ್ಟಿಬರಬಹುದು. ನಮ್ಮ ಜಿಲ್ಲೆಯ ಕೃಷಿಕರು ಹೆಚ್ಚಿನವರು ನಿರಕ್ಷರಕುಕ್ಷಿಗಳು. ದಾರಿದ್ರ್ಯದಿಂದ ನರಳಾಡುತ್ತಿರುವವರು. ತಮ್ಮ ಸಂಕಷ್ಟಗಳನ್ನು ಸಂಮ್ಮಂಧಪಟ್ಟ ಅಧಿಕಾರಿಗಳ ಮುಂದೆ ಇಟ್ಟು ಅವುಗಳ ನಿವೃತ್ತಿಯನ್ನು ಮಾಡಿಕೊಳ್ಳಲು ಅವರು ಅಸಮರ್ಥರು.

ವರ್ಗದಾರರಿಗೆ ಅಧಿಕಾರಿಗಳ ಧೋರಣೆಯಿಂದ ಕೆಡಕುಂಟಾಗುವ ಸಂದರ್ಭಗಳಲ್ಲಿ ಅವರಲ್ಲಿ ಸಂಘಶಕ್ತಿಯೂ, ಧನಬಲವೂ ಇರುವುದರಿಂದ ಅವರು ಗುಲ್ಲೆಬ್ಬಿಸಿದೊಡನೆ, ಅಧಿಕಾರಿಗಳು ತಮ್ಮ ಧೋರಣೆಯನ್ನು ಚಲಾಯಿಸುವುದಕ್ಕೆ ಅಂತಹ ವರ್ಗದಾರರನ್ನೆ ತಮ್ಮ ಸಹಾಯಕ್ಕೆ ಕರೆಯುವರು. ತಮ್ಮ ವಾಕ್ಚಾತುರ್ಯದಿಂದಲೋ ತಾವು ಪ್ರತಿನಿಧಿಗಳಾಗಿರುವ ಸಂಘಗಳ ಬಲದಿಂದಲೊ, ಇವರು ಅಧಿಕಾರಿಗಳ ವಿಶ್ವಾಸಾರ್ಹರಾದರೆ, ಅವರಲ್ಲಿ ಹೆಚ್ಚಿನವರು ತಾವು ಗಳಿಸಿರುವ ಅಧಿಕಾರಿಗಳ ವಿಶ್ವಾಸವನ್ನು ಇನ್ನೂ ಹೆಚ್ಚಿಸಿಕೊಳ್ಳುವ ಒಂದೇ ಗುರಿಯನ್ನಿಟ್ಟುಕೊಂಡು ತಾವು ಅಧಿಕಾರಿಗಳಿಗಿಂತಲೂ ಹೆಚ್ಚಾಗಿ ಅಧಿಕಾರಿಗಳ ಧೋರಣೆಯನ್ನು ಚಲಾಯಿಸುವ ಸಹಾನುಭೂತಿಯನ್ನು ತೋರಿಸುತ್ತಿರುವರು. ಇಂತಹ ಅನಧಿಕಾರಿ ವರ್ಗದವರಿಂದ ಕೂಡಾ ಬಡ ಕೃಷಿಕನಿಗೆ ಏನೂ ಪ್ರಯೋಜನವಾಗಲಾರದು.

ನಮ್ಮ ಈಗಿನ ಜಿಲ್ಲಾ ಕಲೆಕ್ಟರವರು ಜಿಲ್ಲೆಯ ಚಾರ್ಜನ್ನು ವಹಿಸಿಕೊಂಡಂದಿನಿಂದ ಜಿಲ್ಲೆಯ ಸಾರ್ವಜನಿಕ ಹಿತದೃಷ್ಟಿಯಿಂದ ಜಿಲ್ಲೆಯ ಆಹಾರ ವಿತರಣೆಯಲ್ಲಿ ಮತ್ತು ಜನಸಾಮಾನ್ಯತೆಗೆ ಆವಶ್ಯಕವಿರುವ ಮಾಲುಗಳನ್ನು ಆದಷ್ಟು ಕಡಿಮೆ ಬೆಲೆಗೆ ಒದಗಿಸಿಕೊಡುವಲ್ಲಿ ಹೆಚ್ಚಿನ ಪ್ರಯತ್ನ ಮಾಡುತ್ತಿದ್ದಾರೆಂಬ ಸಂಗತಿಯು ಸರ್ವರಿಗೂ ವಿದಿತವಾಗಿದೆ. ರೈತನಿಂದ ಅಕ್ಕಿಯನ್ನು ಬಲಾತ್ಕಾರದಿಂದ ಸ್ವಾಧೀನಪಡಿಸಿ ಆ ಅಕ್ಕಿಗೆ ಮುಡಿ1ಕ್ಕೆ ರೂಪ್ಯಾ8/-ರಂತೆ ದರಕೊಟ್ಟು ಅಂಗಡಿಗಳಲ್ಲಿ ಸಾಹುಕಾರರು ಮುಡಿ 1ರ ರೂಪ್ಯಾ 13/-ರಂತೆ ಮಾರಾಟಮಾಡುತ್ತಿದ್ದ ಹವ್ಯಾಸವು ಈಗ ಇರುವದಿಲ್ಲವೆಂಬುದು ನಿಜ ಆದರೆ ಬಡಕೃಷಿಕನ ಗೋಳು ಅವರಿಗೆ ಪೂರ್ಣ ತಿಳಿದಿದೆಯೇ ಎಂಬುದು ಸಂಶಯಾಸ್ಪದ.

ಕಳದ ವರ್ಷ ಆಹಾರ ಉತ್ಪತ್ತಿಮಾಡಿದ್ದ ಕೃಷಿಕರಿಂದ ಎಲ್ಲಾ ಅಕ್ಕಿ ವ ಬತ್ತವನ್ನು ಗವರ್ನಮೆಂಟಿನವರು ಸ್ವಾಧೀನಪಡಿಸಿಕೊಂಡು ರೇಶನಿಂಗ್ ಜಾರಿಯಲ್ಲಿರುವ ಪೇಟೆಗಳಲ್ಲಿ ಪ್ರತಿಯೊಬ್ಬ ಪಟ್ಟಣಿಗನಿಗೂ ದಿನ 1ಕ್ಕೆ ಸುಮಾರು ಎರಡು ಪಾವು ಅಕ್ಕಿಯಂತೆ ಕೊಟ್ಟು ಆಹಾರಸಾಮಾಗ್ರಿಗಳ ಉತ್ಪತ್ತಿಕಾರನಾಗಿದ್ದ ಶ್ರಮಜೀವಿಯಾಗಿರುವ ಹಳ್ಳಿಗನಿಗೆ ದಿನ 1ಕ್ಕೆ ಒಂದು ಪಾವಿನಂತೆ ಕೂಡಾ ಕೊಡಲಾರದೆ ವಾರಕ್ಕೆ 2 ಯಾ 3 ದಿವಸ ಮಾತ್ರ ಅಕ್ಕಿಕೊಟ್ಟು ಉಳಿದ ದಿವಸಗಳಲ್ಲಿ ಗೆಣಸು, ಹಲಸಿನ ಬೀಜ, ಅವರೆ ವಗೈರೆ ಕೊಟ್ಟಿರುವುದು ಹಳ್ಳಿಗನು ಎಂದೂ ಮರೆಯಲಾರದ ವಿಷಯ. ಈ ವರ್ಷ ಕೂಡಾ ಸರಕಾರೀ ಏಜಂಟರ ವರ್ತನದಿಂದ ಹಳ್ಳಿಗಳಲ್ಲಿ ಹೊಟ್ಟೆಯ ಕೂಗು ಬಹಳ ಬೇಗನೆ ಕೇಳಬರುವುದರಲ್ಲಿ ಸಂಶಯವಿಲ್ಲ. ಗೇಣಿಯು ಧನಿಯ ಅಂಶ. ಅದನ್ನು ಪಕ್ಲಿಂದ ಪಡಕೊಂಡಲ್ಲಿ ಆತನಿಗೆ ಅನ್ಯಾಯವಾಗಲಾರದು ಎಂದು ಕೆಲವರ ವಾದ. ಗೇಣಿ ಕೂಡಾ ಒಂದು ಬೆಳೆಯಲ್ಲಿ ಉತ್ಪತ್ತಿಯಾಗದ ಭೂಮಿಗಳಲ್ಲಿ ಬೆಳೆದದ್ದು ಪೂರಾ ಧನಿಯ ಅಂಶವಾದಲ್ಲಿ ವರ್ಷದ ಹೆಚ್ಚಿನ ದಿವಸಗಳಲ್ಲಿ ರಾತ್ರಿ ಹಗಲೆನ್ನದೆ, ಚಳಿಮಳೆಗಳನ್ನು ನೋಡದೆ ತಾನು ಮತ್ತು ತನ್ನವರು ಕೂಡಾ ಬೆವರು ಸುರಿಸಿ ದುಡಿದ ಒಕ್ಕಲಿಗನ ಅಂಶವನ್ನು ಎಲ್ಲಿ ಹುಡುಕಬೇಕು?

ಆದುದರಿಂದ ಪ್ರತಿಯೊಬ್ಬ ಕೃಷಿಕನಿಗೆ ಅವನು ಉತ್ಪತ್ತಿಮಾಡಿರುವ ಬತ್ತ ಯಾ ಅಕ್ಕಿಯಲ್ಲಿ ಆತಗೆ ಮತ್ತು ಆತನ ಕುಟುಂಬಕ್ಕೆ ಪೋಷಣೆಗೆ ಬೇಕಾಗುವ ಅಕ್ಕಿ ಯಾ ಬತ್ತ, ಅವನಿಗೆ ಬೇಕಾಗುವ ಬೀಜದ ಬತ್ತ ಮತ್ತು ಕೃಷಿ ಕೆಲಸಗಳಿಗೆ ಅವಶ್ಯಬೇಕಾಗುವ ಧಾನ್ಯ ಎಷ್ಟನ್ನಾದರೂ, ಧಾನ್ಯ ರೂಪದಲ್ಲಿಯೇ ಬಿಟ್ಟು, ಮಿಕ್ಕುಳಿದ ಅಧಿಕಾಂಶ ಧಾನ್ಯವನ್ನು ಮಾತ್ರ ಸ್ವಾಧೀನಪಡಿಸಿಕೊಳ್ಳುವದು ಕೃಷಿಕನ ಹಿತದೃಷ್ಟಿಯಿಂದ ಅತ್ಯಾವಶ್ಯಕವಾಗಿರುತ್ತದೆ. ಹಾಗೆ ಮಾಡುವುದು ಮದರಾಸು ಗವರ್ನಮೆಂಟಿನವರು ಹೊರಡಿಸಿರುವ ಆಜ್ಞೆಗೆ ಅನುಸಾರವಾಗಿಯೂ ಇರುವದು. ಹ್ಯಾಗೂ ಧನಿಯ ಗೇಣಿಯ ಅಂಶದಲ್ಲಿ ಆತನ ಪೋಷಣೆ ಮತ್ತು ಕೃಷಿಗೆ ಬೇಕಾಗುವಷ್ಟು ಧಾನ್ಯದ ಮೌಲ್ಯವನ್ನು ಒಕ್ಕಲು, ಧನಿಗೆ ಕೊಡಲು ಸಮರ್ಥನಾಗಿರುವಲ್ಲಿ ಅಂತಹ ಒಕ್ಕಲುಗಳ ಪೂರಾ ಬತ್ತ ವ ಅಕ್ಕಿಯನ್ನು ಸ್ವಾಧೀನಪಡಿಸಿಕೊಂಡು ಅವನಿಗೆ ಹಸುಗೆ ಚೀಟು ಕೊಡುವದು ಎಷ್ಟಕ್ಕೂ ನ್ಯಾಯವಾಗಿರದು. ಈ ವಿಷಯವನ್ನು ಅಧಿಕಾರಿಗಳಿಗೆ ತಿಳಿಸಿ ಆ ಬಗ್ಗೆ ಚಳವಳ ಮಾಡಲು ಒಕ್ಕಲಿಗನಿಗೆ ಅನುಕೂಲತೆಗಳೂ, ಸಂಘಶಕ್ತಿಯೂ ಇರುವುದಿಲ್ಲ. ವರ್ಗದಾರರ ಸಂಘದವರು ಒಕ್ಕಲಿಗನ ಈ ಮೊರೆಯನ್ನು ಅಧಿಕಾರಿಗಳ ಮುಂದೆ ಇಡದೆಹೋದರೆ, ಅಧಿಕಾರಿಗಳು ತಮ್ಮ ಮನಸ್ವಿಯಾಗಿ ಹಳ್ಳಿಗಳ ಧಾನ್ಯಗಳನ್ನು ಸ್ವಾಧೀನಪಡಿಸಿಕೊಂಡಲ್ಲಿ ಹಳ್ಳಿಗನು ತುಂಬಾ ಸಂಕಷ್ಟಕ್ಕೆ ಒಳಗಾಗುವನು. ಬಡವರ ಪಕ್ಷಪಾತಿಯಾದ ಜಿಲ್ಲಾ ಕಲೆಕ್ಟರರವರು ಈ ವಿಷಯ ಪರ್ಯಾಲೋಚಿಸಿ, ತಮ್ಮ ನೌಕರರಿಗೆ ಯೋಗ್ಯ ಸಲಹೆಗಳನ್ನು ಕೊಟ್ಟು ಬಡ ಕೃಷಿಕರ ಕೃತಾರ್ಥತೆಗೆ ಪಾತ್ರರಾಗಬೇಕಾಗಿ ಹಾರೈಸೋಣಾಗುತ್ತದೆ.

'ಒಕ್ಕಲಿಗನ ಬಂಧು'

ಬಾಡಿಗೆಗೆ ದೊರಕುತ್ತವೆ.

ಹೊಸ ಉಡುಪುಗಳು ಹೊಸ ಪರದೆಗಳು

ಹೊಸ ಇತರ ಉಪಕರಣಗಳು

ಶಾಲಾಮಕ್ಕಳ ಮತ್ತು ಎಮೆಚೂರ್ಸ್ ನಾಟಕ ಕಥಾಭಾಗದಲ್ಲಿ ಬರಬಹುದಾದ ವಿವಿಧ ಭೂಮಿಕೆಗಳಿಗನುಕೂಲವಾದ ಎಲ್ಲಾ ತರದ ಪರದೆ ಉಡುಪು ಸಹಿತ ಉಪಕರಣಗಳು ಬಹಳೇ ಕಡಿಮೆ ಬಾಡಿಗಗೆ ದೊರಕುತ್ತವೆ. ಅಗತ್ಯವಿದ್ದಲ್ಲಿ ಪೌಡರ್ ಕೆಲಸವನ್ನು ಸಹ ಮಾಡಿಸೋಣಾಗುವುದು. ಹೆಚ್ಚಿನ ವಿವರಕ್ಕೆ, ಈ ಕೆಳಗಿನ ವಿಳಾಸಕ್ಕೆ ಎಂಟು ದಿವಸಗಳ ಮುಂಚಿತವಾಗಿ ಬರೆದುಕೊಳ್ಳುವುದು.

B Budan Basha Saheb,
P. V. I., B. H. E. Boys School, Barkur,
P. O. Barkur.

ಇಗೋ, ಹಾಕಿಕೋ ಚೂರಿ

(ಹಿಂದಿನ ಪುಟದಿಂದ ಮುಂದುವರಿದುದು).

ರ್ಮಪುರಕ್ಕೆ. ಬಿಟ್ಟರು ತಂತಿಯೊಂದನ್ನು ಶ್ರೀಪತಿರಾಯರಿಗೆ.

"ಗುಪ್ತವಾಗಿ ಮದುವೆಯನ್ನು ನಡೆಸಬೇಕೆಂದು ಕೂಡಿದ್ದರು ಇಗರ್ಜಿಯಲ್ಲಿ ಕೆಲವರು. ಶಾಸ್ತ್ರಿಗಳು ನಮ್ಮ ಮದುವಣಿಗ ರಾಯರ ಪ್ರೈವೇಟ್ ಸೆಕ್ರೆಟರಿ. ಗುರುಗಳು ಬಂದರು. ಮಣಕೂರಿದರು—ವಧು-ವರರು, ಸಲೀನ-ಆನಂದರಾಯರು. ಪಾದ್ರಿಯು ಗಂಟೆಯನ್ನು ಬಾರಿಸಲು ಸಿದ್ಧನಾಗಿ ನಿಂತಿದ್ದ. ಹಿಗ್ಗಿದರು ನಮ್ಮ ರಾಯರು; ಸ್ವರ್ಗಕ್ಕೆ ಮೂರೇ ಗೇಣು ಉಳಿಯಿತವರಿಗೆ. ಅಷ್ಟರಲ್ಲಿ ಕಾರೊಂದು ಬಂದು ನಿಂತಿತು. ಗಂಟೆ ಬಾರಿಸಲು ಹಗ್ಗ ಹಿಡಿದು ನಿಂತಿದ್ದ ಪಾದ್ರಿಯ ಬಳಿ. ಪುರೋಹಿತರು ಶ್ರೀಪತಿರಾಯರು ಇನ್ನು ಕೆಲವರು ಧುಮ್ಮಿಕ್ಕಿದರು ಕೆಳಗೆ. ಪುರೋಹಿತರು ಪಾದ್ರಿಯ ಹತ್ತಿರ ನಿಂತುಕೊಂಡರು. 'ಸತ್ತರೂ ಬಿಡಲಾರೆ ಗಂಟೆ ಬಾರಿಸಲು'-ಇದು ಅವರ ಗುಟ್ಟಿನ ನಿರ್ಧಾರ. ಶ್ರೀಪತಿ ರಾಯರು ಇಗರ್ಜಿಯ ಒಳ ಹೊಕ್ಕು ಕರೆದರು—'ಆನಂದ'.

ನಿಮ್ಮ ಆನಂದರಾಯ ಹದರಿಬಿಟ್ಟ ಸ್ವಾಮಿ. "ತಡೆಯಿರಿ, ಗುರುಗಳೇ!-ಈ ಲಗ್ನಕ್ಕೊಂದು ವಿಘ್ನವಿದೆ-" ಎಂದರು ಶ್ರೀಪತಿ ರಾಯರು. ಗುರುಗಳು ತಡೆಯಲೇ ಬೇಕಾಯಿತು. "ಆನಂದ ಇಲ್ಲಿ ಬಾ"- ಶ್ರೀಪತಿರಾಯರ ಮರು ಕೂಗು. ಬರಲೇ ಬೇಕಾಯಿತು ನಿಮ್ಮ ಸಹಪಾಠಿ. "ಏನು ನಿನ್ನ ನಿರ್ಧಾರ?" ಶ್ರೀಪತಿರಾಯರ ಪ್ರಶ್ನೆ ಅಳಿಯನಿಗೆ. "ಒಂದೇ ಸಲೀನಳೊಡನೆ ಮದುವೆ, ಇಲ್ಲವೆ ಮರಣ." ಅಳಿಯನ ಉತ್ತರ. "ಮರಣ! ಅದು ಹೇಗೆ?" ಮರುಪ್ರಶ್ನೆ. "ಒಂದೋ ಚೂರಿ ಹಾಕಿಕೊಂಡು ಇಲ್ಲವೆ ನೇಣು ಹಾಕಿಕೊಂಡು"—ಮರುತ್ತರ. ಸಲೀನಳ ಎದೆ ಉಬ್ಬಿತು—ಆನಂದರಾಯನ ನಿರ್ಧಾರವನ್ನು ನೋಡಿ. "ನಿಶ್ಚಯವೇ?" ಕೇಳಿದರು ಶ್ರೀಪತಿರಾಯರು. "ಮೂರು ಮಾತಿಗೂ ನಿಶ್ಚಯ. ಸಲೀನಳನ್ನು ಬಿಟ್ಟು ನಾನು ಬದುಕಲಾರೆ." ನಿಮ್ಮ ರಾಯರ ಉತ್ತರ. "ಸರಿ. ಒಂದೇ ಮದುವೆ ಇಲ್ಲವೇ ಮರಣ; ಇದು ನಿನ್ನ ನಿರ್ಧಾರವಷ್ಟೆ! ಮದುವೆ ಯಾಗಬೇಕಾದರೆ ನೀನು ಜಾತಿ ಬಿಡಬೇಕು, ಸಾಯುವುದಾದರೆ ದೇಹ ಬಿಡಬೇಕು. ಇವುಗಳಲ್ಲಿ ನೀನು ಯಾವುದನ್ನು ಮಾಡಿದರೂ ನಿನ್ನ ಅಂತಿಮ ಕಾರ್ಯ ('ಬೊಜ್ಜ')ವನ್ನು ನಾವು ಮಾಡಬೇಕು. ಜೀವವಿದ್ದು ನಿನ್ನ 'ಬೊಜ್ಜ' ಮಾಡುವುದಕ್ಕಿಂತಲೂ ಸತ್ತಮೇಲೆ ಮಾಡಿದರೆ ಕುಲಕ್ಕೆ ಅವಮಾನವಿಲ್ಲ. ನಿನ್ನನ್ನು ಮದುವೆಯಾಗಲು ನಾನು ಸರ್ವಥಾ ಬಿಡಲಾರೆ. ಹಾಗಾದರೆ ನೀನು ಸಾಯಲೇ ಬೇಕಷ್ಟೆ. ಚೂರಿ ಹಾಕಿಕೊಂಡರೂ ಸಾಯುತ್ತೀಯೆಂದಲ್ಲವೆ ನಿನ್ನ ನಿರ್ಧಾರ. ಇಗೋ, ಹಾಕಿಕೋ ಚೂರಿ ನಮ್ಮೆದುರಿನಲ್ಲಿಯೇ!" ಚೂರಿಯನ್ನು ರಾಯರು ಕಿಸೆಯೊಳಗಿಂದ ತೆಗೆದರು ಕೊನೆಗೆ. ಅದನ್ನು ಹಾಕಿ ಕೊಳ್ಳುವುದಿರಲಿ; ಹಿಡಿದು ಕೊಳ್ಳುವ ಧೈರ್ಯವೂ ಬರಲಿಲ್ಲ ನಿಮ್ಮ ಆನಂದನಿಗೆ. ಹಾಗೆ ಹಾಕಿ ಕೊಳ್ಳಲಿಕ್ಕೆ ಜೀವವೇನು ಮೇಣದಿಂದ ಮಾಡಿದ್ದ ಸ್ವಾಮಿ? ಅಷ್ಟರಲ್ಲಿ ರಾಯರನ್ನು ಮಾವನ ಅಪ್ಪಣೆಯಂತೆ ಅವರೊಡನೆ ಬಂದವರು ಎತ್ತಿ ಕಾರಿನೊಳಗೆ ಹಾಕಿದರು. ಕಾರು ಓಡಿತು. ಈಗ ನಿಮ್ಮ ಪರೀಲರು ಬೆಂಗಳೂರಲ್ಲಿರುವರಂತೆ. ಸುಬ್ರಹ್ಮಣ್ಯ ಶಾಸ್ತ್ರಿಗಳು ಪಂಚರಿಯಂತೆ. ಸಲೀನಳು ನಿನ್ನೆ ಗಂಡು ಮಗುವೊಂದನ್ನು ಹೆತ್ತಿರುವಳಂತೆ. ಮಗು ಮುಖದಲ್ಲಿ ಶಾಸ್ತ್ರಿಗಳನ್ನೇ ಹೋಲುತ್ತದಂತೆ. "ಎಲ್ಲಿಯೋ ಹುಡಿಗ ಸ್ನಾನ ಮಾಡಿ ಬರುವಾಗ ಇದಾಗಿರಬೇಕು ಶಾಸ್ತ್ರಿಗಳೇ" ಎಂದು ಬಂದವರೊಡನೆ ಸಲೀನಳ ತಾಯಿಯು ಉದ್ಗಾರವಂತೆ. ಹೇಗೆ ನಿಮ್ಮ ಸಹಪಾಠಿಗಳ ಕಾರುಬಾರು!" ಎಂದಳು ಲೀತು ನಗಾಡುತ್ತಾ.

ನಾನು ಉತ್ತರಕ್ಕಾಗಿ ಹುಡುಕುತ್ತಿರುವಾಗ "ಊಟಕ್ಕೆ ಏಳಿ" ಎಂದರು ನನ್ನತ್ತೆ. ನೀರ ತಂಬಿಗೆಯನ್ನು ಕೈಯಿಂದ ಕೊಟ್ಟು ನನ್ನಾಕೆ ಕಣ್ಣಿನಿಂದ ಕರೆದೇ ಬಿಟ್ಟಳು. ಊಟದ ಸಂಭ್ರಮದಲ್ಲಿ ಉತ್ತರ ಮರೆತು ಹೋಯಿತು. ಆದರೆ ನನ್ನ ಸಹಪಾಠಿಯ ಕತೆಯನ್ನು ಮಾತ್ರ ನಾನು ಮರೆಯಲಾರೆ. ನೀವೂ ಮರೆಯಬೇಡ.

ಬಾಲಚಂದ್ರ

ಉಪಾಧ್ಯಾಯರಿಗಾಗಿ ಪ್ರಕಟವಾಗುವ ವಿದ್ಯಾವಿಷಯಕ ಮಾಸಪತ್ರಿಕೆ.

ವಾರ್ಷಿಕ ಚಂದಾ ರೂ.1-8-0

ಮಾದರಿ ಪ್ರತಿಗೆ ಎರಡಾಣೆ ಸ್ಟಾಂಪಿನೊಂದಿಗೆ ಬರೆಯುವುದು.

ಸಂಚಾಲಕ

ಬಾಲಚಂದ್ರ, ಉಡುಪಿ.

ಪ್ರತ್ಯಕ್ಷಪ್ರಮಾಣವೇ ನಂಬಿಕೆಗೆ ಕಾರಣ

ಬೆಲೆಗಳು ಇಳಿಯುತ್ತಿರುವದರಿಂದ, ಭವಿಷ್ಯತ್ಕಾಲಕ್ಕಾಗಿ ಈಗ ಹಣವನ್ನು ಉಳಿಸುವುದರ ಬುದ್ಧಿವಂತಿಕೆಯು ಸ್ಥಾಪಿತವಾಗುತ್ತದೆ.

ಕಳೆದವರ್ಷ ಮತ್ತು ಈ ವರ್ಷದ ಪ್ರಾರಂಭದಲ್ಲಿ ಯಾರೂ ಹಣವನ್ನು ಉಳಿಸದೇ, ಗೌರ್ನಮೆಂಟಿನವರು ಪದಾರ್ಥಗಳ ಬೆಲೆಗಳನ್ನು ಇಳಿಸುವುದಕ್ಕಾಗಿ ಒಂದೋಬಸ್ತು ಮಾಡದೆಯೂ, ಮತ್ತು ಆವಶ್ಯವಸ್ತುಗಳ ಉತ್ಪನ್ನವನ್ನು ಹೆಚ್ಚಿಸುವ ಏರ್ಪಾಟುಗಳನ್ನು ಮಾಡದೆಯೂ ಹೋಗಿದ್ದ ಪಕ್ಷದಲ್ಲಿ, ಕಳೆದವರ್ಷದಂತೆಯೇ, ಈಗಲೂ ಕೂಡ ಪದಾರ್ಥಗಳ ಬೆಲೆಗಳು ನಂಬಲು ಅಸಾಧ್ಯವಾಗುವ ಮಟ್ಟಿಗೆ ಏರುತ್ತಿದ್ದವು.

ಆದರೆ, ಅನೇಕ ಜನಗಳ ಮಿತವ್ಯಯದಿಂದ ಮಾಡಲ್ಪಟ್ಟ ಉಳಿತಾಯದಿಂದಲೂ, ಗೌರ್ನಮೆಂಟಿನವರ ಸಮಯೋಚಿತವಾದ ಮಾರ್ಗಪ್ರದರ್ಶನದಿಂದಲೂ, ಬೆಲೆಗಳು ಒಂದು ಮಟ್ಟಿಗೆ ಇಳಿದಿರುತ್ತವೆ. ಆಭರಣಗಳು, ಕಟ್ಟಡ ಮುಂತಾದ ಸ್ಥಿರಸ್ವತ್ತುಗಳು, ವ್ಯಾಪಾರದ ಸರಕುಗಳು, ಇವುಗಳಿಗಾಗಿ ಅವಿವೇಕವಾಗಿ ಯಾರಾರು ಹಣವನ್ನು ವೆಚ್ಚಮಾಡಿದರೋ, ಅವರುಗಳೇ ಆ ಪದಾರ್ಥಗಳ ಬೆಲೆ ಕಡಿಮೆಯಾಗುವದರ ಮೂಲಕ ತಮ್ಮ ಬಂಡವಾಳವು ಸಂಕುಚಿತವಾಗುತ್ತಿರುವದನ್ನು ತಮ್ಮ ಕಣ್ಣಿಂದಲೇ ಕಂಡಿರುತ್ತಾರೆ.

ಇಷ್ಟೇ ಅಲ್ಲ, ಪದಾರ್ಥಗಳ ಬೆಲೆಗಳು ಇನ್ನೂ ಇಳಿಯುತ್ತಲೇ ಹೋಗುವವು. ಆದುದರಿಂದ ವಿವೇಕಿಗಳಾಗಿ ಇರಿ. ಬೆಲೆಗಳ ಇಳಿತದ ಏಟಿಗೆ ಸಿಕ್ಕಬೇಡಿ.

ಎಂದಿನಂತೆ ಈಗಲೂ ಸುರಕ್ಷಿತವಾಗಿರತಕ್ಕ ಧನ ವಿನಿಯೋಗ ಮಾರ್ಗಗಳು ಈ ಕೆಳಗೆ ನಮೂದಿಸಲ್ಪಟ್ಟಿರುತ್ತವೆ. ಪದಾರ್ಥಗಳ ಬೆಲೆ ಎಷ್ಟೆಷ್ಟು ಮಟ್ಟಿಗೆ ಇಳಿಯುತ್ತಾ ಹೋಗುತ್ತದೋ ಅಷ್ಟು ಮಟ್ಟಿಗೆ ಇವುಗಳ ಬೆಲೆಯು ಹೆಚ್ಚುತ್ತಾ ಹೋಗುತ್ತದೆ. ಪದಾರ್ಥಗಳ ಬೆಲೆಯಲ್ಲಿ ಒಂದು ಆಣೆಮಾತ್ರ ಕಡಿಮೆಯಾದರೂ ಕೂಡ, ಇವುಗಳ ಬೆಲೆಯು ಏರದೇ ಇರುವುದಿಲ್ಲ. ಅವುಗಳು ಯಾವವೆಂದರೆ:—

★ ಕೋ ಆಪರೇಟಿವ್ ಸಂಘಗಳು
★ ಇನ್ಶೂರೆನ್ಸ್ ಪಾಲಿಸಿ
★ ಸೇವಿಂಗ್ಸ್ ಬ್ಯಾಂಕು ಖಾತೆ
★ ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕು
★ ಗೌರ್ನಮೆಂಟ್ ಲೋನುಗಳು
★ ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳು.

ಭೋಗ್ಯವಸ್ತುಗಳನ್ನು ತ್ಯಜಿಸಿರಿ. ಹೊಸ ಉಡುಪುಗಳು, ಹೊಸ ಕುರ್ಚಿ ಮೇಜು ಮುಂತಾದ ಸಾಮಾನುಗಳು, ಹೊಸ ಮನೆಗಳು, ಸೈಕಲ್‌ಗಳು ಮತ್ತು ಮೋಟಾರುಗಳು ಇವುಗಳನ್ನು ಕೊಳ್ಳುವುದಕ್ಕೆ ಯುದ್ಧ ನಿಂತ ನಂತರ ಬೇಕಾದಷ್ಟು ಅವಕಾಶವುಂಟಾಗುವುದು. ಈಗ ಹಣವನ್ನು ಉಳಿಸಿರಿ; ಆಗ ವೆಚ್ಚ ಮಾಡಿರಿ.

ಹಣವನ್ನು ಕೈಲಾದ ಮಟ್ಟಿಗೂ ಉಳಿಸಿರಿ

ಉಳಿಸಿದ್ದನ್ನು ವಿವೇಕಮಾರ್ಗಗಳಲ್ಲಿ ವಿನಿಯೋಗಿಸಿರಿ

ಇದು ರಾಷ್ಟ್ರೀಯ ಯುದ್ಧಮುಖವು ಭಾರತೀಯರ ಸಮಕ್ಷಮದಲ್ಲಿ ಮಾಡುವ ಅರಿಕೆ

AAA 1114 KN.

The Pangal Nayak Bank Limited.

(Incorporated in 1920)

Registered Office Court Road, UDIPI.

Branches at— **Udipi, Mangalore, Katapadi, Kanhangad, Kinnigoli and Nileshwar, South Canara District**

Discounting of demand and short term negotiable instruments for approved parties, granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms acceptance of Fixed, Current, Savings Bank and Cumulative deposits and every other type of up-to date Banking service is at the disposal of all the sections of the discreet public

For business proper please enquire at any one of our Offices.

15th April 1944

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,.... ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧ ತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya. GADAG

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea, Stomachache, Vomiting and nausea.

BHUVANENDRA PRODUCTS LTD., Katapadi.

'ಭುವನೇಂದ್ರ'
ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ತೊಟ್ಟು, ಸಣ್ಣ ಮಕ್ಕಳಿಗೆ 1ರಿಂದ2ತೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು. ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು—ಡಾ. ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ ಶ್ರೀ। ಆರ್। ಎಸ್। ಶೆಣೈ, ರಥಬೀದಿ; ಡಾ। ಟಿ। ಜಿ। ಆಚಾರ್ಸ್ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೊ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತರ ದೇಹಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ **ಅಮೋಘವಾದ ಮಧುರದ್ರವ ರಸಾಯನ.** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ.)



೮ ಔನ್ಸಿನ ೩ಬಾಟ್ಲಿಗಳು. ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.೨ ಕೊಡಿಯಾಲಬೈಲು, ದ.ಕ

— ಮಕ್ಕಳನ್ನು ಹಡೆಯುವದು ಸಾಕೇ—

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಹಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ. ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜ ೧೨ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರ:—ಹುಬ್ಬಳಿ ಫಾರ್ಮಸಿ,—ಹುಬ್ಬಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಕುಂಬರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕವಲದಾಸಿ, ಕೆಮಿಸ್ಟ, ಹಾವೇರಿ, ಬ್ಯಾಡಿಗಿ.

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಆದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1—12—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ಯಾಲೆ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನ್ನಿಬಹುದು — ಉಡಪಿ ಏಜಂಟರು: — ನವಭಾರತ ಬುಕ್ ಡಿಪೊ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ ಬೆಲೆ ೦—೧೦—೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು.

ಪ್ರೇಮಪ್ರವಾಹವು ಹೇಗೆ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮಪ್ರವಾಹ

ಸ್ವಾರಸ್ಯವಾದ ೫ ಕತೆಗಳ ಸಂಗ್ರಹ ಬೆಲೆ ೦ - ೬—೦

ಬಹಿರಂಗವಾಗಿ ಅಲ್ಲವಾದರೂ ಅಂತರಂಗವಾಗಿ ನೋಡತಕ್ಕ

ಆರ್ಟ್ ಚಿತ್ರಗಳು

ಹಲವಾರು ಸುಂದರಿಯರ ಸ್ವೈಜಚಿತ್ರಗಳ ಕಟ್ಟು. ಬೆಲೆ ೦—೬—೦

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಕುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ. ೧—೮—೦

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. ಬೆಲೆ: ೦—೧೨—೦

ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಿಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI

Regd No. M 3618.

ವಾರ್ಷಿಕ ಚಂದಾ ರೂ 4—8—0 ಬಿಡಿ ಸಂಚಿಕೆ 0—1—6

Estd. 1921 ಸ್ಥಾಪನೆ.

NAVAYUGA

ನವಯುಗ

ವರ್ಷ ೨೪ ವಾರ ೧೪ | ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ. Founder SRI A. L. SHETTY. | Vol. 24 No. 14

ಉಡುಪಿ ● 14—12—1944 ● ಮಂಗಳೂರು.

ದಿ ಜುಪಿಟರ್
ಜನರಲ್ ಇನ್ಶ್ಯೂರೆನ್ಸ್
ಕಂಪೆನಿ, ಲಿ, ಬೊಂಬಾಯಿ.

ವಿಮೆಯಿಳಿಸ ಬೇಕೆ?
ಏಜಂಟರಾಗುವಿರಾ!

-ಹಾಗಾದರೆ ಕೂಡಲೇ-

ಪಿ. ಡಿ ನಾನಯ್ಯ, ಉಡುಪಿ.
ದಕ್ಷಿಣ ಕನ್ನಡದ ಚೀಫ್ ಏಜೆಂಟ್.

-ಇವರಿಗೆ ಬರೆಯಿರಿ-

1 ಕೋಟಿಗೆ ಮಿಕ್ಕಿ ವ್ಯವಹಾರ!
ಈ ವರುಷವೇ ರಜತೋತ್ಸವ!

The Jupiter General Insurance Company Ltd

ಅಂತರಂಗ

ಉಡುಪಿ
ಅಖಿಲ ಕರ್ನಾಟಕದ ಹೊಸ
ಮಾದರಿಯ ಸಚಿತ್ರ
ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ 0—1—6

Transact with

The Vijaya Bank Ltd.

H. O. MANGALORE.

Branches all over the District and in Bombay city,

For all kinds of Banking business

ದಿ ವಿಜಯ ಬೇಂಕ್
ಲಿಮಿಟೆಡ್,
ಹೆಡ್ ಆಫೀಸು ಮಂಗಳೂರು.

ಜಿಲ್ಲೆಯ ಎಲ್ಲಾ ಕಡೆಗಳಲ್ಲಿ ಮತ್ತು ಮುಂಬಾಯಿ ನಗರದಲ್ಲಿ ನಮ್ಮ ಶಾಖೆಗಳು

ಎಲ್ಲಾ ತರದ ಬೇಂಕಿಂಗ್ ವ್ಯವಹಾರಗಳು ನಡೆಸಲ್ಪಡುವುದು.

"We are glad to announce that the Canara Bank Ltd., are our Clearing agents at Bombay".

ದಿ ಕೆನರಾ ಬ್ಯಾಂಕ್ ಲಿಮಿಟೆಡ್‌ಯವರು ನಮ್ಮ ವಿಜಯಾ ಬ್ಯಾಂಕಿನ ಕ್ಲಿಯರಿಂಗ್ ಏಜಂಟರಾಗಿರುತ್ತಾರೆಂದು ತಿಳಿಸಲು ಸಂತೋಷಪಡುತ್ತೇವೆ.

M. M Bhandary,
Agent Bombay Branch.

Develop the God given "Talents".

"Children are the 'Talents' given to man by the Lord, and unless parents provide for their full development they will not be fit to enter the Kingdom of Heaven" said General Garfield, one of the illustrious Presidents of the United States.

A Children's Endowment Policy will forestall the financial want which often hampers the full development of your children.

THE CANARA MUTUAL ASSURANCE CO., LTD.,

UDIPI (S India)

REGD

ಅಮೃತಾಂಜನ ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬರುಕೊಳ್ಳುವುದು, ಚೇಳು ವಿಷ ಮುಂತಾದ ಬೇನೆ ಕಳ್ಳುವಿಕ್ಕೆ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧೌಷಧ, ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್.
ಮದರಾಸು
ಬೊಂಬಾಯಿ ಮತ್ತು ಕಲ್ಕತ್ತಾ.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪ್ಪಾಜಿಟುಗಳಿಗೆ ಉತ್ತಮ ದರದ ಒಡ್ಡಿಯನ್ನೂ, ಸಾಲಗಳನ್ನು ಕಡಮೆ ದರದ ಒಡ್ಡಿಯಿಂದಲೂ ಕೊಡುತ್ತಾ, ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S K

CO-OPERATION - - - -

Life Assurance is the business based on the idea of mutual co-operation. By diverting a small portion of one's earning for paying premiums, we co-operate for the good of the family and safeguard the education of children.

Let us assist you in taking out a Policy under the plan best suited to you. Write now.

KOCHIKAR BROTHERS LTD.
Chief Agents for South India
THE BOMBAY LIFE ASSCE. CO., LTD.
(Estd 1908)
The "Bombay Life" Bldg., UDIPI S K.

Offices and Agencies throughout South India.

ಕ್ರೌನ್
ರಬ್ಬರ್ ಸ್ಟ್ಯಾಂಪ್ ಕಂಪೆನಿ
18 ಬಲ್ಮಠ ರಸ್ತೆ, ಮಂಗಳೂರು
ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವುವು

Crown Rubber Stamp Co.
18 Balmat Road, MANGALORE

Approved firm by the Govt. of Mysore. Certified by the Agent of the Govt. of India in Ceylon Estd 1906

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಮೂರನೇ ಸಂಪುಟ ಆರಂಭವಾಗಿದೆ
ವಿದ್ಯಾರ್ಥಿಗಳಿಗೆ ಸಂಬಂಧಿಸಿದ
ಸರ್ಕ್ಯುಲರುಗಳೂ ಪ್ರಕಟ
ವಾಗುತ್ತವೆ
ವಾರ್ಷಿಕ ಚಂದಾ
ರೂ 1—8—0 ಮಾತ್ರ
ಹೆಚ್ಚಿನ ವಿಚಾರಕ್ಕೆ ಬರೆಯಿರಿ
ಬಾಲಚಂದ್ರ, ಉಡುಪಿ.

☞ ಮುಟ್ಟಾಗುವಿಕೆ ☜

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ—'ಕುಮಾರಿ' (Govt Regd) ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಹರಿಯಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ 3|- ಕ್ಯಮೀರಿದ ಕೇಸುಗಳಿಗೆ ರೂ.5,(ವಿ.ಪಿ 12 ಆಣೆ ಅಲಾಯಿದ) Mrs P: DEVEE, F. D. 5 (N) Tollygunge, Calcutta

ಸ್ಟಾಕಿಸ್ಟ್, ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ಏಸಿಯಾಟಿಕ್ ಗವರ್ನಮೆಂಟ್ ಸೆಕ್ಯೂರಿಟಿ ಲ್ಯಾಫ್ ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್

ಪ್ರಕಟಣೆ

ಈ ಕಂಪೆನಿಯ ಬೆಂಗಳೂರು ಶಾಖೆಯ ಏಜನ್ಸಿ ಮೆನೇಜರರಾದ ಮಿ ಪಿ ಬಿ ನೊರೊನ್ಹಾರವರು ಇದೇ ತಾ 12ರಿಂದ 20ರ ತನಕ ಮಂಗಳೂರು, ಉಡುಪಿ, ಕುಂದಾಪುರ, ಕಾಸರಗೋಡು ಪುತ್ತೂರು ಕೇಂದ್ರಗಳಲ್ಲಿ ಮೊಕ್ಕಾಂ ಮಾಡಲಿರುವರು. ಕಂಪನಿಯ ಪ್ರಾತಿನಿಧ್ಯವನ್ನು ಪಡೆಯಲಪೇಕ್ಷಿಸುವ ಉತ್ಸಾಹೀ ಕಾರ್ಯಕರ್ತರು ಮುಖತಃ ಭೇಟಿಯಾಗಬಹುದು. ಯಾ ಪತ್ರವ್ಯವಹಾರ ಮಾಡಬಹುದು.

ಬಿ. ಕರುಣಾಕರ ಹೆಗ್ಡೆ
ಇನ್ಸ್‌ಪೆಕ್ಟರ್ ಒಫ್ ಏಜನ್ಸೀಸ್
ಏಸಿಯಾಟಿಕ್ ಲ್ಯಾಫ್ ಆಫೀಸು, ಮನಿಪಾಳ ಪೋಸ್ಟು (ದ ಕ)

Asiatic Govt. Security Life Assurance Co., Ltd.

Decorate your home with

Life-like Oil Painting

of those dear and near to you

M. S Shirale,
MODERN STUDIO
UDIPI

CHAMPAE'S

Snow & Castrex

Sole Distributers for (India.)

Sukhananda Stores
Santhekatte UDIPI S K

ನಾನಾ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ

ಕಲ್ಯಾಂಜೆ ವ್ಯಾಸಾಚಾರ್ಯ,

ವ್ಯಂಗ್ಯ ಊಹೆ

ಉಪಾಯದಿದಿರು ಉಪವಾಸ

ಊಹಿಸಿದುದು—'ಹೆಗ್ಡೆ'

ಇದು ಭವಿಷದ್ವಾರ್ತೆಯ ವರದಿ; ಅಂದ ಮೇಲೆ ಎಲ್ಲವೂ ಕಲ್ಪನೆಯೇ. ಹತ್ತರಲ್ಲಿ ಏಳಂಶ ಗಾಂಧಿಜೀ ಉಪವಾಸ ಮಾಡುವ ಸಂಭವ ಕಾಣುವದಿಲ್ಲ. ಆದರೆ ಅವರ ಸೂಚನೆ ಈ ತನಕ ರದ್ದಾಗಿಲ್ಲ. ಈ ಉಪವಾಸದ ಏಕಮಾತ್ರ ಪ್ರೇರಣೆಯಾಗಿರುವ ಗಾಂಧಿಜೀಯ ಅಂತರ್ವಾಣಿಗೂ ದೇಶದ ಆಗು ಹೋಗುಗಳಿಗೂ ಇರುವ ಸಂಬಂಧವೆಷ್ಟು ಕೃತಕವಾದುದು-ಗಾಂಧಿಜೀಯ ಆತ್ಮಶುದ್ಧೀ ಯತ್ನವು ಎಂತೆಂತಹ ಕಪಟಾಚರಣೆಗಾಸ್ಪದ ಕೊಡಬಲ್ಲುದು-ಎಂಬುದನ್ನಿಲ್ಲಿ ವ್ಯಂಗವಾಗಿ ಊಹಿಸಿಯದೆ. ಇದು ದ್ವಿದಳ ಬರೆಹ. ಉಪವಾಸಪೂರ್ವದ ಚಿತ್ರ ಈ ಬಾರಿ ಉಪವಾಸಾನಂತರದ ಊಹೆ ಬರುವ ವಾರ

ಇಂಗ್ಲಿಷ್ ಯುಗಾದಿ—ತಾ 1-1-1945ನೇ ರಾತ್ರಿ 8 ಘಂಟೆಗೆ ಸೇವಾಗ್ರಾಮದ ಗುಡಿಸಲಿನ ಹುಲ್ಲಿನ ಚಾಪೆಯಲ್ಲಿ ಮಲಗಿದ್ದ ಗಾಂಧಿಜೀಯೊಂದು ಬಾರಿ ಬೆನ್ನು ನಿಗುರಿಸಿ ದಿಂಬಿಗೊರಗಿ ಕುಳಿತರು. ಕನ್ನಡಕಗಳೊಳಗಿಂದ ಅವರ ಕಣ್ಣುಗಳು ಉಜ್ವಲ ಪ್ರಕಾಶ ಬೀರುತ್ತಿದ್ದವು ಕೋಣೆ ತುಂಬಾ ಹರಡಿದ್ದ ಕಾಗದಗಳನ್ನು ಒಂದೊಂದನ್ನೇ ಹೆಕ್ಕುತ್ತಾ, ಕಾರ್ಯದರ್ಶಿ ಪ್ಯಾರೇಲಾಲರು ದಪ್ತರು ಕಟ್ಟುತ್ತಿದ್ದರು ಲೇಖನ ವಾಚನಗಳ ಸಮೇತ ಎಲ್ಲಾ ಸಾರ್ವಜನಿಕ ಚಟುವಟಿಕೆಗಳನ್ನೂ ಬದಿಗಿಟ್ಟು ಗಾಂಧಿಜೀಯನುಭವಿಸಿದ್ದ ತಿಂಗಳ ವಿಶ್ರಾಂತಿ ಆ ದಿನ ತಾನೇ ಕೊನೆಗೊಂಡಿದ್ದಿತು. ತಮಗಿಂತ ಮುಂದಾಗಿ ಗೆಲ್ಡರರಂತಹ ವಿದೇಶೀ ಬಾತ್ಮೀದಾರರೆಲ್ಲಿ ನುಗ್ಗಿ ಬಿಡುವರೋ ಎಂಬ ಭಯದಿಂದ ಭಾರತದ ಮೂಲೆ ಮೂಲೆಗಳಿಂದಲೂ ಪತ್ರಿಕಾಪ್ರತಿನಿಧಿಗಳು ಮೊದಲ ರಾತ್ರಿಯಲ್ಲೇ ಸೇವಾಗ್ರಾಮಕ್ಕೆ ಬಂದು ಸೇರಿದ್ದರು ಈ ದಿನ 780ಕ್ಕೂ ಮಿಕ್ಕಿ ಪತ್ರಗಳು,689ಕ್ಕೆ ಮಿಕ್ಕಿ ತಂತಿಗಳು ಬಂದಿದ್ದವು ಗಾಂಧಿಜೀ ಅವುಗಳಲ್ಲೊಂದನ್ನೂ ಒಡೆಯದೆ-ಪತ್ರಿಕಾ ಪ್ರತಿನಿಧಿಗಳಿಗೂ ಭೇಟಿ ಕೊಡದೆ-ಇಂದು ಮುಂಜಾನೆಯ ಪ್ರಾರ್ಥನೆ ಮುಗಿಸಿ 8ಘಂಟೆಗೆ ಪ್ಯಾರೇಲಾಲರೊಡನೆ ದಪ್ತರುಗಳ ನಡುವೆ ಕುಳಿತು,ಅವುಗಳ ಪರಿಶೀಲನೆಗೆ ತೊಡಗಿದವರು ರಾತ್ರಿ ಆಗ ತಾನೇ 8 ಘಂಟೆಗೆ ಬೆನ್ನು ನೆಟ್ಟಗೆ ಮಾಡಿದ್ದರು ಅವರು ವಿಮರ್ಶಿಸಿದುದು ಬೇರೆ ಬೇರೆ ಪ್ರಾಂತ್ಯ, ಜಿಲ್ಲೆ, ಸ್ಥಳ, ವ್ಯಕ್ತಿಗಳಿಂದ ಬಂದಿದ್ದ ವಿಧಾಯಕ ಕಾರ್ಯಾಚರಣೆಯ ವರದಿಗಳನ್ನು. ದೇಶದಲ್ಲೆಷ್ಟು ಕೆಲಸ ನಡೆಯಿತು-ತಾನು ಉಪವಾಸ ಮಾಡುವ ಆಗತ್ಯವಿದೆಯೇ ಇಲ್ಲವೇ ಎಂಬುದನ್ನು ತಿಳಿಯದೆ ಅವರಿಗೆ ನಿರ್ವಾಹವಿರಲಿಲ್ಲ. ಅವರ ತಿಂಗಳ ವಿಶ್ರಾಂತಿಯ ಉದ್ದೇಶವಿದ್ದುದೂ ಅವೇ ಎಲ್ಲವನ್ನೂ ಪರಿಶೀಲಿಸಿ ಮುಗಿಸಿದ ಗಾಂಧಿಜೀ ಗಾಢಾಲೋಚನೆಗೀಡಾದುದನ್ನೂ, ಅವರ ಮುಖದಲ್ಲೊಂದು ಕಾಂತಿ ಹೊಳೆಯ ಹತ್ತಿದುದನ್ನೂ ಬಗ್ಗಿ ಕಾಗದಗಳನ್ನೊಟ್ಟು ಮಾಡುತ್ತಿದ್ದ ಪ್ಯಾರೇಲಾಲರು ನೋಡದಿರಲಿಲ್ಲ. ಗಾಂಧಿಜೀಯ ಅಂತಹ ಚಿಂತನೆಯು ಲೋಕ ಪ್ರಾಮುಖ್ಯ ನಿರ್ಧಾರವೊಂದನ್ನು ಹೆರದೆ ಎಂದೂ ಬಂಜೆಯಾದುದಿಲ್ಲವೆಂಬುದನ್ನರಿತಿದ್ದ ಪ್ಯಾರೇಲಾಲರ ಮನಸ್ಸಿಗೆ, ಇದೊಂದು ಅತಿ ಮುಖ್ಯ ಮುಹೂರ್ತವೆಂಬುದು ಹೊಳೆಯಿತು. ಈ ಮೊದಲೇ ಆ ವರದಿಗಳನ್ನೆಲ್ಲಾ ಓದಿದ್ದ ಅವರಿಗೆ ಗಾಂಧಿಜೀಯ ಹೃದಯ ಸ್ಫೋಟದ ಕಾರಣವೂ ಗೊತ್ತಿತ್ತು.

'ಪ್ಯಾರೇಲಾಲ್'-ಎಂದರು ಗಾಂಧಿಜೀ ಪ್ಯಾರೇಲಾಲರ ಹೃದಯವು ಆ ಮೊದಲೇ 'ಬಾಪೂಜೀ, ಬಾಪೂಜೀ' ಎಂದು ನೂರು ಬಾರಿ ಜಪಿಸುತ್ತಲೇ ಇದ್ದಿತು ಮಹಾತ್ಮರ ಬಾಯಿಂದ ಹೊರಟ 'ಪ್ಯಾರೇಲಾಲ್', ದೇಶದ ಪಾಲಿಗೆ ನಾನೊಂದು ಚಂಡಿ ಹಿಡಿಯುವ ಮಗ; ಸತ್ಯಾಗ್ರಹೀ ನಾಯಕನಲ್ಲ!"--ಬಾಪೂಜೀ ಇಂತಹ ವೈರಾಗ್ಯದ ಮಾತುಗಳನ್ನಾಡುವ ಸಂದರ್ಭವೇ ಸೇವಾಗ್ರಾಮದ ಪಾಲಿಗೆ ಭೂಕಂಪ ಪ್ಯಾರೇಲಾಲರು ತುಸು ನಡುಗಿದರು ವರದಿಗಳ ಕಟ್ಟಿನ ಕಡೆಗೆ ಬೆರಳು ತೋರಿಸುತ್ತಾ ಮಹಾತ್ಮರು ಹೇಳಿದರು: "ಅವುಗಳಲ್ಲಿ ಮುಕ್ಕಾಲಂಶ ಅರ್ಧ ಸತ್ಯ ಮತ್ತು ಅನೃತ ವಾರ್ತೆಗಳೇ ಇವೆ ಎಂಬುದನ್ನು ನಾನು ಬಲ್ಲೆ ಆದರೂ ಹತ್ತನ್ನು ಹೇಳುವವರು ಒಂದನ್ನಾದರೂ ಮಾಡಿರಬೇಕೆಂದು ಸಮಾಧಾನಪಡಬಹುದಂದರೆ ನಾನು ವಿಶ್ರಾಂತಿಪಡಕೊಂಡ ಮೇಲೆ ಅಂತಹ ಕಾರ್ಯ ಕೂಡಾ ಹಿಂದಿನಂತೆ ನಡೆದಿಲ್ಲ ನನ್ನ ಉಪವಾಸವನ್ನು ನಿಲ್ಲಿಸಬೇಕೆಂಬುದೊಂದೇ ದೇಶದ ಇಚ್ಛೆ, ಮಿಲಿಯಾವಧಿ ಜನರು ಉಪವಾಸ ಬಿದ್ದು ಸಾಯುತ್ತಿರುವದನ್ನು ನಿಲ್ಲಿಸಬೇಕೆಂದೇನೂ ಇಲ್ಲ ಆದ್ದರಿಂದ ಉಪವಾಸದ ಸೂಚನೆ ಕೊಟ್ಟಂದಿನಿಂದ ವಿಶ್ರಾಂತಿ ಪಡಕೊಳ್ಳುವ ವರೆಗೆ ದೇಶದ ಕಾರ್ಯಕರ್ತರೆಲ್ಲಾ ಸ್ವಲ್ಪ ಚಡಪಡಿಸಿದರು ಉಪವಾಸದ ಬದಲಿಗೆ ವಿಶ್ರಾಂತಿ ಪಡೆದನೆಂಬ ಅರ್ಥಕಟ್ಟಿ ಆ ಮೇಲೆ ಅವರಲ್ಲೂ ಆಲಸ್ಯಗೊಂಡರು ಭಾರತಮಾತೆ ದುರ್ದೈವಿ!" ಇಷ್ಟು ಹೇಳಿ ಗಾಂಧಿಜೀ ಕಣ್ಣು ಮುಚ್ಚಿದರು. ಕಠಿಣ ಪರೀಕ್ಷಾ ಕಾಲವೊದಗಿದಾಗಲೆಲ್ಲಾ ಅವರ ಪದ್ಧತಿಯಾಗಿರುವ ಆಂತರಿಕ ಪ್ರಾರ್ಥನೆಯಲ್ಲಿ ಗಾಢವಾಗಿ ತಲ್ಲೀನರಾಗಿ ಹೋದ ಬಾಪೂಜೀಯನ್ನು ಕಂಡ ಪ್ಯಾರೇಲಾಲರೂ ಯೋಚನಾಮಗ್ನರಾದರು.

ಮರುದಿನ ಮುಂಜಾನೆ ಶಿಬಿರದ ಚಾವಡಿಯಲ್ಲಿ ಆತುರದಿಂದ ಕಾಯುತ್ತಿದ್ದ ಪತ್ರಿಕಾಪ್ರತಿನಿಧಿಗಳ ಕೈಗೆ, ಪ್ಯಾರೇಲಾಲರು ಗಾಂಧಿಜಿಯ ದಸ್ಕತ ನಿತಿ ಹೇಳಿಕೆಯೊಂದನ್ನೊಪ್ಪಿಸುತ್ತಾ, ಇದರಲ್ಲೊಂದು ಕೊಮವನ್ನೂ ಹಿಂದುಮುಂದು ಮಾಡದೆ, ಯಾವ ಟಿಪ್ಪಣಿಯನ್ನೂ ಸೇರಿಸದೆ ಪ್ರಕಟಿಸಬೇಕೆಂದು ಬಾಪೂಜಿ ಅಪೇಕ್ಷಿಸಿದ್ದಾರೆ. ಎಂದು ಕೈಜೋಡಿಸಿ ಹೊರಟುಹೋದರು. ಮರುದಿನ ಎಲ್ಲಾ ದೈನಿಕಗಳಲ್ಲೂ ಮೂರಿಂಚು ದಪ್ಪಾಕ್ಷರಗಳ ತಲೆಬರಹದಡಿಯಲ್ಲಿ ಅರ್ಧ ಇಂಚಿನ ಅಕ್ಷರಗಳಲ್ಲಿ ಪ್ರಕಟವಾದ ಹೇಳಿಕೆ-"ಕೇವಲ ಅಂತರ್ಶುದ್ಧಿಗಾಗಿ ನಾನು ಕೈಕೊಳ್ಳಬೇಕೆಂದು ಬಯಸಿದ್ದ ಅನಶನ ವ್ರತದ ಸೂಚನೆಯಿಂದ ಪ್ರೇರಣೆಗೊಂಡ ದೇಶವು ಕೈಗೊಂಡಿರುವ ವಿಧಾಯಕ ಕಾರ್ಯಕ್ರಮಗಳನ್ನು ನೋಡಿ ಆನಂದವಾಗಿದೆ.ಆದರೆನನ್ನ ಉಪವಾಸೋದ್ದೇಶವನ್ನು ನೆರವೇರಿಸಿಕೊಡುವಷ್ಟು ಗಣ್ಯಕಾರ್ಯ ನಡೆದಿದೆಯೆಂದು ನನಗನ್ನಿಸುವದಿಲ್ಲ ದೇವರ ಇಚ್ಛೆ, ನನ್ನ ಅಂತರಂಗ ತ್ವಮೇನನ್ನೋ ಕರೆಯುವಂತಿದೆ. ಆ ವಾಣಿಯೀಗಲೂ ಅಸ್ಪಷ್ಟವಾಗಿಯೇ ಇದೆ. ಆದ್ದರಿಂದ ದೇಶಕ್ಕೆ ಇನ್ನೊಂದು ಮೂರು ತಿಂಗಳ ಅವಧಿಯನ್ನೀಯಬೇಕಾಗಿದೆ. ಬರುವ ಎಪ್ರಿಲ್ ಒಂದನೇ ತಾರೀಕಿನ ವರೆಗೆ, ದೇಶದ ಕಾರ್ಯಕರ್ತರು ತಮ್ಮ ಉದ್ಯೋಗ ಪ್ರವೃತ್ತರಾಗಿದ್ದಾರೋ, ಅಥವಾ ನಾನು ಉಪವಾಸನಿರತನಾಗಬೇಕೋ ಎಂಬುದನ್ನು ಆ ನಂತರ ಪರಿಶೀಲಿಸಿ, ನಿರ್ಧರಿಸಲಿದ್ದೇನೆ. ಕಾರ್ಯಕರ್ತರ ಶಕ್ತಿಯು ಬಹುಮುಖವಾಗಿ ಹಂಚಿ ಹೋಗುವಂತಾಗಬಾರದೆಂಬುದಕ್ಕಾಗಿ ವಿಧಾಯಕ ಕಾರ್ಯಕ್ರಮಗಳ ಪೈಕಿ ಮುಖ್ಯ ಮೂರು ಸೂತ್ರಗಳನ್ನು ಮಾತ್ರ ಅವರ ಮುಂದಿಟ್ಟಿದ್ದೇನೆ. ೧ ಲಾಭಖೋರತನ ಮತ್ತು ಕಾಳಸಂತೆ ವಹಿವಾಟಿನ ಪೂರ್ತಿ ನಿರ್ನಾಮ ೨ ಆಹಾರಾಭಾವದಿಂದ ನರಳುವವರೊಬ್ಬರೂ ಇಲ್ಲದಂತಾಗುವದು. ೩ ಪ್ರತಿಯೊಂದು ಕಡೆಯಲ್ಲೂ ಹಿಂದೂ ಮುಸ್ಲಿಮ್ ಸಾಮಾನ್ಯ ಜನರು ಒಂದಾಗಿ ಜೀವಿಸಬೇಕು ಈ ಮೂರು ಕಾರ್ಯಕ್ರಮಗಳು ತೃಪ್ತಿಕರವಾಗಿ ನಡೆದಿಲ್ಲವೆಂಬುದು ಖಚಿತವಾದರೆ, ನಮ್ಮ ರಾಷ್ಟ್ರೀಯ ವಾರದ ಆರಂಭ ದಿನವಾ ಎಪ್ರಿಲ್ 6ನೇ ತಾರೀಕಿನಿಂದ ನಾನು ಅನಶನವ್ರತ ಕೈಕೊಳ್ಳತಕ್ಕದೆಂದು ದೈವೇಚ್ಛೆಯಿರುವಂತೆ ಭಾಸವಾಗುತ್ತಿದೆ-ಮೋ. ಕ ಗಾಂಧಿ".

* * *

ಇಡಿಯ ರಾಷ್ಟ್ರವನ್ನೇ ಚಾಬೂಕಿನಿಂದ ಹೊಡೆದೆಬ್ಬಿಸಿದಂತಾಯಿತು ಹಳ್ಳಿ ಮೂಲೆಯೂ ಚೇತನಗೊಂಡಿತು. ಎಲ್ಲೆಲ್ಲೂ ಉದ್ವೇಗ, ಆತುರ. 'ದರಿದ್ರರನ್ನು ಉಣ್ಣಿಸುವದಕ್ಕಾಗಿ ದರಿದ್ರನಾರಾಯಣನ ಉಪವಾಸ ದೀಕ್ಷೆ!" "ಲಾಭಖೋರರನ್ನು ಉರುಳಿಸಿರಿ—ಗಾಂಧಿಜೀಯನ್ನು ಉಳಿಸಿರಿ!" 'ಬಾಪೂಜೀ ಬದುಕಬೇಕೋ—ಹಿಂದೂ ಮುಸ್ಲಿಮರೊಂದಾಗಬೇಕು!" ಎಂದು ಪತ್ರಿಕೆಗಳು ಅರ್ಭಟಿಸಿ ಕರೆದವು ಹಿಮಾಲಯದಿಂದ ಕನ್ಯಾಕುಮಾರಿಯ ವರೆಗಿನ-ಕಾರ್ಪೊರೇಶನುಗಳಿಂದಾರಂಭಿಸಿ ಕೊಳೆತ ಹಳ್ಳೀ ವರೆಗಿನ-ಎಲ್ಲೆಡೆಗಳಲ್ಲೂ ಸಭೆ, ಮೆರವಣಿಗೆ, ಭಾಷಣ, ಓಡಾಟಗಳ ಗೊಂದಲ ಮನೆಮನೆಯ ಗೋಡೆಗಳೂ ಗಾಂಧೀ ಸಂದೇಶವನ್ನಾಡಹತ್ತಿದವು ಹೊಟ್ಟೆ ಬೆನ್ನಿಗೊತ್ತಿದಗಾಂಧಿಯು ನೋಡುವವರ ಕಡೆಗೆ ಕೈತೋರಿಸುತ್ತಾ 'ನೀವು ಉದ್ಯೋಗ ಮಾಡುವಿರೋ ನಾನು ಉಪವಾಸ ಮಾಡಬೇಕೋ?'-ಎಂದು ಖಾಸಗಿಯಾಗಿ ಪ್ರಶ್ನಿಸುವಂತಿರುವ ವ್ಯಂಗ್ಯ ಚಿತ್ರವೊಂದು 'ನೋಟೀಸ ಹಚ್ಚಬಾರದು' ಎಂದು ಬರೆದಿದ್ದ ಸ್ಥಳಗಳನ್ನೂ ಬಿಡದೆ ಅಂಟಿಸಲ್ಪಟ್ಟಿತ್ತು. ನವದಿಲ್ಲಿಯಲ್ಲಿ ಇದರ ಪರ್ಯಾಲೋಚನೆಗಾಗಿ ಕರೆಯಲ್ಪಟ್ಟಿದ್ದ ಪಕ್ಷರಹಿತ ಪ್ರಮುಖರು ಅನ್ನ ನೀರು ಬಿಟ್ಟು ಚರ್ಚೆಗಾರಂಭಿಸಿದರು ಕಾಶಿಯಲ್ಲಿ ಮಂಚ ಹಿಡಿದಿದ್ದ ಮಾಲವೀಯರು ಕಂಪಿತ ಹಸ್ತದಿಂದ ಸಹಿಹಾಕಿ ಗಾಂಧಿಜೀಗೊಂದು, ರಾಷ್ಟ್ರಕ್ಕೊಂದು ವಿಜ್ಞಾಪನೆ ಹೊರಡಿಸಿದರು. ಅಹಮ್ಮದ್ ನಗರದ ಕೋಟೆಯಲ್ಲಿರುವ ವರ್ಕಿಂಗ್ ಕಮಿಟಿ ಸದಸ್ಯರು ಪ್ರಕಟಿತ ಸ್ವಾಭಿಮಾನವನ್ನು ರದ್ದುಪಡಿಸಿಕೊಂಡು, ತಮ್ಮ ಸಂಬಂಧಿಕರನ್ನು ಭೇಟಿಗಾಮಂತ್ರಿಸಿಕೊಂಡರು. ಮಹಾರಾಷ್ಟ್ರದ ಕೆಲವು ಭಾಗಗಳನ್ನೂ ಕರ್ನಾಟಕಕ್ಕೆ ಸೇರಿಸಿ, ಗಂಗಾಧರರಾವ್ ದೇಶಪಾಂಡೆಯವರು ಅಖಿಲ ಕರ್ನಾಟಕದಹಳ್ಳಿ ಹಳ್ಳಿಯ ಸಂಚಾರ ಕಾರ್ಯಕ್ರಮ ಹಾಕಿಕೊಂಡರು. ಸರಿ, ಸೇವಾಗ್ರಾಮದ ಮೇಲೆ ದೇಶದ ನಾಲ್ಕೂ ದಿಕ್ಕುಗಳಿಂದ ವರದಿಯ ಸೋನೆ ಮಳೆಯೇ ಸುರಿಯಲಾರಂಭ. ಮಿ ಫಜಲುಲ್ ಹಕ್ಕರ ಅಧ್ಯಕ್ಷತೆಯಲ್ಲಿ ಕಲ್ಕತ್ತದಲ್ಲಿ ಸೇರಿದ ಪ್ರಚಂಡ ಸಭೆಯಲ್ಲಿ ಪ್ರತಿಯೊಬ್ಬ ಬಂ

(೧೯ನೇ ಪುಟ ನೋಡಿರಿ)

ವರ್ಷದ ಕೊನೆದೂರವಿಲ್ಲ ನಾವು ಈಗ ನಡೆದಿರುವುದನ್ನೆಲ್ಲಾ
ಸಂಗ್ರಹಿಸಿ ನೋಡಿ ಭವಿಷ್ಯವನ್ನು ಯೋಚಿಸೋಣ.

ನಿಮ್ಮ ಹಿಂದಿನ ಗೆಲುವುಗಳು ನಿಮ್ಮ ಭವಿಷ್ಯವನ್ನು ಮಂಕುಗೊಳಿಸದಿರಲಿ, ಅಂತೆಯೇ ನಿಮ್ಮ ಹಿಂದಿನ ಸೋಲುಗಳೂ ನಿಮ್ಮ ಚೇತನವನ್ನು ಕುಗ್ಗಿಸದಿರಲಿ

ನಾವಾದರೋ ನೀವು ನಿಮಗೂ, ನಿಮ್ಮ ಕುಟುಂಬಕ್ಕೂ ಹೊತ್ತಿರುವ ಮುಖ್ಯ ಕರ್ತವ್ಯವೊಂದರ ಕಡೆಗೆ ನಿಮ್ಮ ಗಮನ ಸೆಳೆಯಲಿಚ್ಛಿಸುತ್ತೇವೆ

ಬಾಳಿನ ತರಾತುರಿಗಳಿಗೂ, ಅನಿಶ್ಚಿತತೆಗಳಿಗೂ ಸಿದ್ಧತೆಗೊಳಿಸಿಕೊಳ್ಳುವುದು ಪ್ರತಿ ಬುದ್ಧಿವಂತನ ಪ್ರಥಮ ಕರ್ತವ್ಯ ಇದಕ್ಕಾಗಿ ಪ್ರತಿಯೊಬ್ಬರೂ ಒಳ್ಳೆಯ ಬ್ಯಾಂಕ್ ಲೆಕ್ಕವನ್ನು ತೆರೆಯಬೇಕು ಇಂದೇ ನಮ್ಮಲ್ಲಿ ಲೆಕ್ಕತೆರೆದು ಭವಿಷ್ಯವನ್ನು ಭದ್ರಗೊಳಿಸಿಕೊಳ್ಳಿ.

ಸ್ಥಾಪನೆ 1906 ಕೆನರಾ ಬೇಂಕ್ ಲಿಮಿಟೆಡ್

ESTD 1906 **Canara Bank, Limited.**

(Incorporated in British India with limited Liability of members limited).

ಸೋಜಿಗದ ಸುದ್ದಿಗಳು

ಹೈಕೋರ್ಟ ಜಡ್ಜರ ಬಯಕೆ

"ನಾನು ಕಾಲೇಜಿನಲ್ಲಿದ್ದಾಗ ಸರಕಾರೀ ಉದ್ಯೋಗ ಸಂಪಾದನೆಯೇ ನನ್ನ ಗುರಿಯಾಗಿದ್ದಿತು. ನಾನು ಮತ್ತೊಮ್ಮೆ ಯುವಕನಾಗಿ ಹೋದಲ್ಲಿ ವ್ಯಾಪಾರವನ್ನೇ ನನ್ನ ಗುರಿಯಾಗಿ ಮಾಡಿಕೊಂಡೇನು ಭಾರತದ ಭವಿಷ್ಯವೂ ವಾಣಿಜ್ಯವನ್ನೇ ಅದರಿಸಿದೆ"— ಲಾಹೋರಿನ 'ಹೈಲಿ ಕಾಲೇಜ್ ಓಫ್ ಕಾಮರ್ಸಿ'ನ ಬಹುಮಾನ ವಿತರಣಾ ಸಭೆಯ ಅಧ್ಯಕ್ಷ ಸ್ಥಾನದಿಂದ ಲಾಹೋರ್ ಹೈಕೋರ್ಟಿನ ಚೀಫ್ ಜಸ್ಟಿಸ್ ಸರ್. ಟ್ರೆವೊರ್ ಹೆರ್ರಿಸರಾಡಿದ ಮಾತುಗಳಿವು

ಬೇಗ ಮದುವೆಯಾಗಿರಿ.

ಬ್ರಿಟಿಷ್ ಆರೋಗ್ಯ ಪಾಲನಾ ಸಂಘವು ಯುವತಿಯರೆಲ್ಲಾ ಬೇಗ ಮದುವೆಯಾಗಬೇಕೆಂದು ವಿನಂತಿಸಿಕೊಂಡಿದೆ ಬ್ರಿಟನಿನಲ್ಲೀಗ ಜನನ ಸಂಖ್ಯೆ ಕಡಿಮೆಯಾಗಲು ವಿಳಂಬ ವಿವಾಹಗಳೇ ಕಾರಣವಂತೆ. ಓರ್ವ ಮಹಿಳೆಯು ಮಕ್ಕಳನ್ನು ಹೆರುವ ಪಕ್ವಕಾಲವೆಂದರೆ 18 ರಿಂದ 25ರ ವರೆಗಿನ ವಯಸ್ಸಿನಲ್ಲಿ ಆದರೆ ಬ್ರಿಟಿಷ್ ಮಹಿಳೆಯರು ಸರ್ವಸಾಧಾರಣವಾಗಿ ಮದುವೆಯಾಗುವದು ತಮ್ಮ 26ನೇ ವಯಸ್ಸಿನ ನಂತರವೇ ಮದುವೆಯಾದ ಮೇಲಾದರೂ 2 ಯಾ 3 ಮಕ್ಕಳನ್ನು ಹೆರುವ ಅವಧಿಯಲ್ಲಿ 1ಕ್ಕೆ ಮಾತ್ರ ಅವರು ಜನ್ಮ ಕೊಡುತ್ತಾರೆ ಬೇಗ ಮದುವೆಯಾಗುವದರಿಂದ ಆರೋಗ್ಯ ಮತ್ತು ದಾಂಪತ್ಯಸುಖವೂ ಹೆಚ್ಚಂತೆ

ಸರ್. ಸುಲ್ತಾನರ ಸದ್ಬುದ್ಧಿ

ಹಿಂದೀ ಸರಕಾರದ ಸುದ್ದಿಖಾತೆ ಮತ್ತು ಆಕಾಶವಾಣಿ ವಿಭಾಗದ ಮೆಂಬರರಾದ ಸರ್ ಸುಲ್ತಾನ್ ಅಹಮ್ಮದರು ಒಂದು ಪುಸ್ತಕ ಬರೆದಿದ್ದಾರೆ ಅದರ ಹೆಸರು 'ಸಾಧ್ಯವಿರುವ ಸಮಸ್ಯಾ ಪರಿಹಾರ' (Possible solution) ಈ ಪುಸ್ತಕದಲ್ಲವರು ಮಿ ಜಿನ್ನರ ಬೇಡಿಕೆಯಾದ ದೇಶದ ವಿಭಾಗವನ್ನು ಸ್ಪಷ್ಟವಾಣಿಯಲ್ಲಿ ಖಂಡಿಸಿದ್ದಾರೆ ಸರ್ ಸಪ್ರುಗಳಿಂದ ರಚಿಸಲ್ಪಡುವ, ಜಾತಿ ಜಗಳ ತೀರ್ಮಾನ ಸಮಿತಿಯ ಮುಂದೆ ಈ ಪುಸ್ತಕವನ್ನಿಡುವರೆಂದು ತಿಳಿದು ಬರುತ್ತದೆ

ಆಧುನಿಕ ನಾರದ ನಟ್ಸನ್

ಅಮೇರಿಕದ ಕಾಂಗ್ರೆಸ್ ಸದಸ್ಯ ಹೆರೋಲ್ಡ್ ನಟ್ಸನ್ ಎಂಬವರಿಗೆ ವಿಚಿತ್ರ ವಾರ್ತೆ ಹೇಳುವದರಲ್ಲಿ ಅತ್ಯಭಿರುಚಿ. ಅವರು ಇತ್ತೀಚೆಗೆ ಕಾಂಗ್ರೆಸಿನಲ್ಲಿ ಹೇಳಿದ ವಾರ್ತೆ— "ಅಧ್ಯಕ್ಷ ರೂಸವೆಲ್ಟರು ಸಂಚಾರ ಮುಗಿಸಿಕೊಂಡು ಬರುವಾಗ ತನ್ನ ಪ್ರೀತಿಯ ನಾಯಿ 'ಫಾಲಾ' ವನ್ನು ಪ್ರಮಾದವಶಾತ್ ಎಲ್ಯೂತಿಯನ್ಸಿನಲ್ಲೇ ಬಿಟ್ಟು ಬಂದಿದ್ದರು. ಸೀಟ್ಲಿಗೆ ಬಂದ ಮೇಲೆ ನಾಯಿ ತಪ್ಪಿಹೋದುದು ಗೊತ್ತಾಯಿತು. ಇಲ್ಲಿಂದ ಡಿಸ್ಟ್ರೋಯರ್ ವಿಮಾನವೊಂದನ್ನು ಕಳುಹಿಸಿ ನಾಯಿಯನ್ನು ತರಲಾಯಿತು."

ಮತ್ತೊಂದು ಪಟಾಕಿ

ಮೇಲಿನ ವಾರ್ತೆಯು ಪೂರ್ಣ ಸುಳ್ಳೆಂದು ಅಧ್ಯಕ್ಷ ಭವನದಿಂದ ಸಮಾಧಾನ ಬಂದಾಗ ನಟ್ಸನರು ಮತ್ತೊಂದು ಪಟಾಕಿ ಹಾರಿಸಿದರು 'ಅಮೇರಿಕದ ಅತಿ ಮೇಲ್ದರ್ಜೆಯ ಅಧಿಕಾರಿಣಿಯೊಬ್ಬಳು ಆಸ್ಟ್ರೇಲಿಯಕ್ಕೆ ಹೊರಟಾಗ ಮಳೆಸ್ನಾನಕ್ಕನುಕೂಲವಾಗುವಂತೆ ಅವರ ವಿಮಾನವನ್ನು ಹೊಸ ರೀತಿಯಿಂದ ಜೋಡಿಸಲಾಗಿದ್ದಿತು" ಇದೂ ನಿರಾಕರಿಸಲ್ಪಟ್ಟಾಗ ನಟ್ಸನರು ಮತ್ತೊಂದು ಸುದ್ದಿಗೆ ಹಾರಿ, ಕೇಳಿದರು. "ಅಧ್ಯಕ್ಷ ರೂಸವೆಲ್ಟರ ಪ್ರಯಾಣದಿಂದ ಅಮೇರಿಕನ್ ತೆರಿಗೆದಾರರಿಗೆ 20,000,000 ಪೌಂಡು ಖರ್ಚು ತಾಗುತ್ತದೆ ಎಂದು ಒಂದು ವಾರದ ಹೊದಲು ಪಿಯರ್ಸನರಾಡಿರುವದಾದರೂ ನಿಜವೇ"?

ಪತಿಯಂತೆ ಪತ್ನಿ

ವೈಸರಾಯಿ ವೇವೆಲರು ಗವರ್ನರರ ಸಮ್ಮೇಲನವೊಂದನ್ನು ಇತ್ತೀಚೆಗೆ ಕರೆದಿದ್ದಂತೆ ಲೇಡಿ ವೇವೆಲರು ಎಲ್ಲಾ ಗವರ್ನರರ ಪತ್ನಿಯರ ಸಮ್ಮೇಲನವೊಂದನ್ನು ನವಡಿಲ್ಲಿಯಲ್ಲಿ ಕರೆದಿದ್ದಾರೆ ಅಧಿಕಾರಬದ್ಧವಾಗಿ ಮಹಿಳೆಯರ ಚಟುವಟಿಕೆಗಳನ್ನು ಇದೀ ರಾಷ್ಟ್ರದಲ್ಲಿ ಹೆಚ್ಚಿಸಬೇಕೆಂಬುದೇ ಈ ಪರಿಷತ್ತಿನ ಉದ್ದೇಶವಂತೆ ಆದರೂ ಭಾರತದಲ್ಲಿರುವ ಬ್ರಿಟಿಷ್ ಮಹಿಳೆಯರೆಂದರೆ ಅತಿ ವಿಚಿತ್ರ ವಸ್ತುಗಳೆಂದೂ, ಅಧಿಕಾರಿಗಳೊಡನೆ ನರ್ತನಕ್ಕೆ ಹೋಗುವದೇ ತಾವು ಮಾಡುತ್ತಿರುವ ಮಹಾತ್ಯಾಗವೆಂದು ಹೆಚ್ಚಿನವರು ಭಾವಿಸುತ್ತಿದ್ದಾರೆಂದೂ ಬ್ರಿಟಿಷ್ ಸೇನಾಧಿಕಾರಿಯೊಬ್ಬರು ಬರೆದಿದ್ದಾರೆ

ರಾತ್ರಿಹಗಲು ವಿದ್ಯುದ್ದೀಪ

ನಂದಿಸಲು ಮತ್ತು ಉರಿಸಲು ಕೆಲಸಗಾರರೇ ಇಲ್ಲದ ದೆಸೆಯಿಂದಾಗಿ ಬ್ರಿಸ್ಟೋಲ್ ನಗರದ ರಸ್ತೆಗಳ ವಿದ್ಯುದ್ದೀಪಗಳು ರಾತ್ರಿಹಗಲೂ ಉರಿಯುತ್ತಿವೆ ಎಂಬುದು ನಂಬಲಸಾಧ್ಯವಾದ ಸತ್ಯವಾರ್ತೆಯೆಂದು ಲಂಡನ್ ಪತ್ರಿಕೆಯೊಂದು ಪ್ರಕಟಿಸಿದೆ ಈಗ ಯುದ್ಧ ಕಾರ್ಯಕ್ಕೆ ಹೋಗಿರುವ 100ಮಂದಿ ಅಧಿಕೃತ ಕೆಲಸಗಾರರು ಬರುವ ವರೆಗೆ ಈ ದೀಪಗಳು ಈ ಪ್ರಕಾರ ಉರಿಯಲೇಬೇಕಾಗಿದೆಯಂತೆ ಪ್ರಕೃತ ಒಂದು ದೊಡ್ಡ 'ಸ್ವಿಚ್' ಹಾಕುವದೂ ಅನದ್ಯವಂತ ವಿದ್ಯುಚ್ಛಕ್ತಿ ಕಿನಾವ್ರಯುಕ್ಕೆ ಹದಲ ಒಮ್ಮೆ ದೀಪ ನಂದಿಸಿಬಿಟ್ಟರೆ ಮತ್ತೆ ಅಲ್ಲಿ ರಾತ್ರಿ ಬೆಳಕೇ ಇಲ್ಲದಂತಾಗುವದು!

ನಾಜಿಗಳ ಗುಪ್ತಾಸ್ತ್ರ ಬಯಲು!

ಡಾ। ಗೋಬೆಲ್ಸನ ಪ್ರಚಾರಕರೀಗ ಜರ್ಮನಿಯ ಊರೂರುಗಳಲ್ಲಿ ಸಂಚರಿಸಿ, ತಮ್ಮ ಗುಪ್ತಾಸ್ತ್ರಗಳು ವೈರಿಗಳನ್ನು ಸದೆಬಡಿದು ವಿಜಯ ದೊರಕಿಸಿಕೊಡುವ ಪ್ರಚಾರಮಾಡುತ್ತಾ ಜರ್ಮನರನ್ನು ಹುರಿದುಂಬಿಸುತಿದ್ದಾರೆ ಹಾರುವ ಬೋಂಬಿನ 10ಪಾಲಷ್ಟು ದೊಡ್ಡದಾದ ಬೋಂಬು ಹೊರಯನ್ನು ಹೊತ್ತುಕೊಂಡು ಜರ್ಮನಿ ಕಕ್ಷೆ ಹಾರಬಲ್ಲ ನವಬೋಂಬರ್‌ಗಳೇ ಜರ್ಮನಿಯ ವಿ 3 ಇನ್ನು ಉರಿಯುವ ಬೋಂಬುಗಳನ್ನು ಹೊಡವ ವಿಮಾನ ಮೊದಲಾದ ವಿವಿಧ ತರಗತಿಯ ನೂತನಾಯುಧಗಳಿವೆ ಎಂಬ ವಾರ್ತೆಯೂ ಬರುತ್ತಿದೆ.

ಈಗಲೂ ಪಾಂಡವ ಪರಿಣಯ

ಸಹೋದರರಿಗೆಲ್ಲಾ ಓರ್ವಳೇ ಸಹಧರ್ಮಿಣಿ

ಅ ಭಾ ಹರಿಜನ ಸೇವಾ ಸಂಘದ ಮತ್ತು ಕಸ್ತೂರಿ ಬಾ ಸಮಿತಿಯ ಮುಖ್ಯ ಕಾರ್ಯದರ್ಶಿಯಾಗಿ, ತ್ಯಾಗ ಮತ್ತು ಸಂಘಟನಾ ಶಕ್ತಿಯಿಂದ ರಾಷ್ಟ್ರದ ಜನತೆಯ ಹೃದಯದಲ್ಲೊಂದು ಸ್ಥಾನ ಪಡೆದಿರುವ ಥಕ್ಕರ್ ಬಾಪಾ, ಡೆಹರಾ ಡನ್ ಜಿಲ್ಲೆಯ ಪರ್ವತಪ್ರದೇಶಗಳಲ್ಲಿ ಈಗಲೂ ಇರುವ ಪಾಂಡವ ಪದ್ಧತಿಯೊಂದನ್ನು ಪ್ರಕಾಶಪಡಿಸಿದ್ದಾರೆ

ಇನ್ನೂ ದ್ವಾಪರಯುಗ

ಈ ಪರ್ವತ ವಲಯದಲ್ಲಿರುವವರೆಲ್ಲಾ ಹಿಂದುಗಳು ಆದರೆ ಹಿಂದೂಧರ್ಮದಲ್ಲಾಗಿರುವ ಬದಲಾವಣೆ ಅಥವಾ ಭಾರತದಲ್ಲಿ ಹರಡಿರುವ ನಾಗರೀಕತೆಯು ಗಂಧಗಾಳಿ ಕೂಡಾ ಇಲ್ಲಿ ಬೀಸಿಲ್ಲ ಇಲ್ಲಿರುವ ಜಾತಿಗಳ ಪೈಕಿ ಬ್ರಾಹ್ಮಣರು ಮತ್ತು ರಜಪೂತರೊಳಗೆ ಮಿಶ್ರ ಭೋಜನ, ಮಿಶ್ರ ವಿವಾಹಗಳೂ ನಡೆಯುತ್ತವೆ ಅಸ್ಪರ್ಶರ ಪೈಕಿ ತೀರಾ ಕೆಳಜಾತಿಯಾದ ಕೋಲ್ಟರನ್ನು ಬಿಟ್ಟು ಮಿಕ್ಕ ಹರಿಜನರ ಕೈಯಿಂದ ಅವರು ನೀರು ಕುಡಿಯಬಲ್ಲರು ದೇಶದ ಮಿಕ್ಕ ಕಡೆಗಳಲ್ಲಿರುವಂಥ ಜಾತಿಭೇದ ಇಲ್ಲಿಲ್ಲ ಬ್ರಾಹ್ಮಣರು ಜನಿವಾರ ಹಾಕಲೇಬೇಕೆಂಬ ನಿಯಮವಿಲ್ಲ ಬಹಳ ಮಿತವ್ಯಯದ ಜೀವನವಾದ್ದರಿಂದ ಸಾಲ ಕಡಂಟ್ಟುಗಳ ಬಾಧೆಯೂ ಇಲ್ಲ

ಪಾಂಡವ ರಾಜ್ಯ

ಅಲ್ಲಿರುವ ಬ್ರಾಹ್ಮಣರು ತಾವು ಪಾಂಡವರ ವಂಶಜರೆಂದೂ ರಜಪುತಾನರು ತಾವು ಕೌರವ ವಂಶಸ್ಥರೆಂದೂ ಹೇಳುತಿದ್ದಾರೆ. ಗುಡ್ಡ ಪರ್ವತಗಳಲ್ಲೆಲ್ಲಾ ಅಗಣಿತ ಪಾಂಡವ ದೇವಾಲಯಗಳಿವೆಯಂತೆ ಮಹಾಭಾರತದಲ್ಲಿ ಹೇಳಲ್ಪಟ್ಟಿರುವ ಎಷ್ಟೋ ಚಿಹ್ನೆಗಳು ಈಗಲೂ ಅಲ್ಲಿ ಕಾಣಲು ಸಿಗುತ್ತವೆ ಆ ಪರ್ವತ ವಲಯದ ಮಟ್ಟಿಗೆ ಅಲ್ಲಿ ಧರ್ಮರಾಜ್ಯಭಾರದಂತಹ ಶಾಂತಿಯೇ ನೆಲಸಿದೆ. ಆದರೆ ನಿಕೃಷ್ಟದರ್ಜೆಯ ಹರಿಜನರಾದ ಕೋಲ್ಟಗಳು ಬ್ರಾಹ್ಮಣರ ಋಣದಲ್ಲಿ ಸಿಕ್ಕಿದ್ದಾರೆ ಅವರ ಜೀವಮಾನವೆಲ್ಲಾ ಪರಿಶ್ರಮದಿಂದ ಸಾಗಬೇಕಾಗಿದೆ ಈ ದಲಿತರ ಉದ್ಧಾರಕ್ಕಾಗಿ ಕಷ್ಟಸಹಿಷ್ಣುಗಳಾದ ಕೆಲಸಗಾರರು ಬೇಕಾಗಿದ್ದಾರೆ ಎಂದು ಥಕ್ಕರ್ ಬಾಪರ ಅಂಬೋಣ.

ಈಗಲೂ ದ್ರೌಪದೀ ಪರಿಣಯ

ಪಾಂಡವರನ್ನು ಬಿಟ್ಟರೆ ಆ ಕಾಲದಲ್ಲಾಗಲೀ ಈ ಕಾಲದಲ್ಲಾಗಲೀ ಬೇರೆಲ್ಲಿಯೂ ಕಾಣಲು ಸಿಗದ ಬಹುಪತಿತ್ವ ಪದ್ಧತಿಯು ಈಗಲೂ ಅಲ್ಲಿದೆ ಸರ್ವಸಾಧಾರಣವಾಗಿ, ಓರ್ವ ಕನ್ಯೆ ಒಂದು ತಾಯಿಯ ಗಂಡು ಮಕ್ಕಳಿಗೆಲ್ಲಾ ಪತ್ನಿಯಾಗುತ್ತಾಳೆ. ಕೆಲವೇ ಮಂದಿ ವಿದ್ಯಾವಂತರಲ್ಲಿ ಮಾತ್ರ 'ಒಬ್ಬನಿಗೊಬ್ಬಳೇ' ಎಂಬ ಕ್ರಮವಿದೆ. ಆದರೆ ಸುಶಿಕ್ಷಿತರು ಕೂಡಾ ತಮ್ಮ ಮಗಳನ್ನು ಸಹೋದರರೆಲ್ಲರಿಗೆ ಮದುವೆಮಾಡಿಕೊಡಲು ಹಿಂಜರಿಯುವದಿಲ್ಲ ಅಲ್ಲಿಯ ಮಕ್ಕಳು ನಮ್ಮಲ್ಲಿಯ ಮಕ್ಕಳಂತೆ 'ಚಿಕ್ಕಪ್ಪ ದೊಡ್ಡಪ್ಪ'ರೇ ಇಲ್ಲ, ಬದಲಿಗೆ ನಾಲ್ಕಾರು ಮಂದಿ 'ಅಪ್ಪಗಳೇ' ಕೆಲವು ವೇಳೆ ಅತಿ ವಿಲಕ್ಷಣ ಸಂಬಂಧಗಳು ನಿರ್ಮಾಣಗೊಂಡಿವೆ ದೃಷ್ಟಾಂತಕ್ಕಾಗಿ ಒಂದು ತಾಯಿಗೆ ಆರು ಮಂದಿ ಗಂಡು ಮಕ್ಕಳಿದ್ದರೆ ಅತಿ ದೊಡ್ಡವನ ಪ್ರಾಯ 25 ಆಗಿದ್ದರೆ ಅತಿ ಸಣ್ಣವನ ಪ್ರಾಯ 5 ಆಗಿರಬಹುದು 20ವರುಷದ ವಧು ಪ್ರೌಢಳು ಬಂದರೆ ಆಕೆ ಆ 25ರಿಂದಾರಂಭಿಸಿ ಆ 5ರ ವರೆಗಿನ ಎಲ್ಲರಿಗೂ ಪತ್ನಿಯಾಗುತ್ತಾಳೆ. ಅದೇ ರೀತಿ ತನ್ನ ಅತ್ತೆ ಹೆರುವ ಗಂಡು ಮಕ್ಕಳಿಗೂ ಆಕೆ ಪತ್ನಿ, ಇಂತಹ ಸಂದರ್ಭಗಳಲ್ಲಿ ಅತ್ತೆಯ ಕಿರಿಯ ಮಕ್ಕಳಿಗಿಂತಲೂ ಸೊಸೆಯ ಮಕ್ಕಳು ಪ್ರಾಯದಲ್ಲಿ ದೊಡ್ಡವರಾಗುವದಿದೆ. ಆದರೆ ಅತ್ತೆಯ ಮಕ್ಕಳೆಲ್ಲಾ ಆಕೆಗೆ ಹೇಗೆ ಗಂಡಂದಿರೋ, ಆಕೆಯ ಮಕ್ಕಳಿಗೆ ಹಾಗೇನ 'ತಂದೆ'ಯರು ಈ ಹಿರಿಯವ ಆ ಕಿರಿಯವನನ್ನು 'ಅಪ್ಪ' ಎಂದೇ ಕರೆಯುತ್ತಾನೆ! ನವನಾಗರೀಕರ ಕೋಂಕಡೆಗಳು ಇನ್ನಾದರೂ ಎಷ್ಟೋ! ಎಂತೆಂತಹ ವಿಲಕ್ಷಣ ಪದ್ಧತಿಗಳು ಈಗಲೂ ಇವೆ!

ENGLISH MADE EASY

ಇಂಗ್ಲಿಷ್ ಏನೂ ತಿಳಿಯದವರು 'ಸುಲಭದಲ್ಲಿ ಇಂಗ್ಲಿಷ್' ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೇ ಕಲಿತುಕೊಳ್ಳಬಹುದು

ಇಂಗ್ಲಿಷ್ ಅಲ್ಪಸ್ವಲ್ಪ ಬಲ್ಲವರು ಚೆನ್ನಾಗಿ ಕಲಿತುಕೊಳ್ಳಬಹುದು

ಸುಲಭದಲ್ಲಿ ಇಂಗ್ಲಿಷ್

ಕೋರದ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.

ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ.

ಬೆಲೆ ಬರೇ ರೂ 1—4—0 ರೂ 1-8-0ನ್ನು ಮನಿಯಾರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತೆ.

ನವಭಾರತ ಪುಸ್ತಕ ಭಂಡಾರ,

ರಜಿಸ್ಟರ್ಡ್ ಪಬ್ಲಿಶರ್ಸ್ ಎಂಡ್ ಬುಕ್ ಸೆಲ್ಲರ್ಸ್,

ಉಡುಪಿ, ದ ಕ,

ಬಿಡಿನುಡಿ

ಸ್ಥಾನಮಾನಗಳ ಮಟ್ಟಿಗೆ ಕಾಳು ಮತ್ತು ಧೂಳು ಸಮಾನವೆಂದು ಕಾಣುತ್ತದೆ.

ಮೊದಲು ಕಾಳಿನ ವ್ಯಾಪಾರ ಖಾಸಗೀ ಜನರ ಕೈಯಲ್ಲಿತ್ತು. ಈಗ ಕೋಪರೇಟಿವ್ ಸ್ಟೋರುಗಳ ಕೈಗೆ ಹೋಗಿದೆ.

ಮೊದಲು ಧೂಳಿನ ಉದ್ಧಾರ ಖಾಸಗೀ ಕಾರುಗಳಿಂದ ಅಧಿಕವಾಗಿ ನಡೆಯುತ್ತಿತ್ತು, ಈಗ ಧೂಳೆಬ್ಬಿಸುವ ಕೆಲಸ ಲೋರಿಗಳದು.

ಆದರೆ ಒಂದು ವ್ಯತ್ಯಾಸ — ಈ ವ್ಯವಸ್ಥೆಯಿಂದಾಗಿ ಕಾಳು ಮಾರಾಟ ಕಡಿಮೆ ಪರಿಮಾಣದಲ್ಲಿ, ಧೂಳು ಹಾರಾಟ ಅಧಿಕ ಪರಿಮಾಣದಲ್ಲಿ.

ಧಾನ್ಯದ ಅಭಾವ ಅನಿವಾರ್ಯವೆನ್ನೋಣ, ಧೂಳನ್ನು ಮಲಗಿಸುವ ನೀರಿನ ಅಭಾವವೂ ಅನಿವಾರ್ಯವೆ?

ಮೊನ್ನೆ ವರೆಗೂ ಮಳೆ ಬರುತ್ತಿತ್ತು. ಆದರೆ ಅದು ಕಾಳನ್ನು ಒದ್ದೆಮಾಡುವಷ್ಟೇ ಧೂಳನ್ನೂ ಅಲ್ಲ

ಬಹುಸಂಖ್ಯಾಕ ಬಡವರು ಕಣ್ಣೀರು ಸುರಿಸುತ್ತಿದ್ದಾರೆ; ಅದೂ ಕೂಡ ರಸ್ತೆಯೊದ್ದೆಯಾಗುವಷ್ಟಿಲ್ಲ.

ಅಂಥ ಮೇಲೆ ಉಡುಪಿ ನಗರ ಸಭೆಯವರು ರಸ್ತೆಗಳಿಗೆ ನೀರನ್ನೇಕೆ ಹಾಕಿಸುತ್ತಿಲ್ಲ?

ನೀರಿಲ್ಲವೆನ್ನಲಾಗುವದಿಲ್ಲ. ನೀರಿನ ಲೋರಿಗೆ ಪೆಟ್ರೋಲಿಲ್ಲವೆನ್ನಬೇಕೆ?

ಅಕ್ಕಿಯ, ಲೋರಿಗಾಗುವ ಪೆಟ್ರೋಲು ನೀರಿನ ಲೋರಿಗೂ ಆಗುತ್ತದಷ್ಟೆ?

ಹೊಟ್ಟೆ ತಣಿಸುವ ಧಾನ್ಯಕ್ಕೂ ರಸ್ತೆ ತಣಿಸುವ ನೀರಿಗೂ ವ್ಯತ್ಯಾಸವಿರಬಹುದು.

ಆದರೆ ಪಟ್ಟಣಿಗರ ಮಟ್ಟಿಗೆ ಊಟಕ್ಕಿಂತ ಹೆಚ್ಚಿನದು ಉಡುಗ

ಆದ್ದರಿಂದ ಉಡುಪಿಯಲ್ಲಿ ಧೂಳಿನ ದೂರು ಕೇಳಬರುತ್ತಿದೆ.

ನಮ್ಮೂರಲ್ಲಿ ಬೆಂಕಿ ನಂದಿಸುವ ಸ್ಟೇಶನ್ ಇದೆಯಾದರೂ, ನಮ್ಮವರ ಮನಸ್ಸಿಗಲ್ಲದೆ ಮನೆಗೆ ಬೆಂಕಿ ಹತ್ತಿದ ನಿದರ್ಶನಗಳಿಲ್ಲ

ಹೀಗಾಗಿ ಈ ಬೆಂಕಿಯೋಧರಿಗೂ ರಸ್ತೆಗಲ್ಲಿಗಳಲ್ಲಿ ಧೂಳೆಬ್ಬಿಸುವ ಉದ್ಯೋಗ ಹೊರತು ನೀರು ಹನಿಸುವ ಕೆಲಸವಿಲ್ಲ.

ಬೆಂಕಿಗಾಗುವ ನೀರು ಧೂಳಿಗೂ ಆಗುವಾಗ, ಇವರಾದರೂ ರಸ್ತೆಯನ್ನೇಕೆ ತಣಿಸಬಾರದು?

* * * *

ದ. ಕ ಜಿಲ್ಲೆಯ ಅಕ್ಕಿ ಸ್ವೀಕರಿಸುವ ಸ್ಟೋರುಗಳ ವಿನಂತಿ—'ಅಕ್ಕಿ ತರುವವರು ಸಾಯಂ. ಆರು ಘಂಟೆಗೆ ಸ್ವಲ್ಪ ಹೊತ್ತಿರುವಾಗಲೇ ತರಬೇಕು'

'ಆ ಮೇಲೆ ಬರುವ ಅಕ್ಕಿಯನ್ನು ಅಲ್ಲಿಯೇ ಅಮಾನತಿಡುವದು ಕೂಡಾ ನಿಯಮ ಬಾಹ್ಯವಾದ್ದರಿಂದ ತೊಂದರೆಯಾದೀತು'

ಈ ತೊಂದರೆಯನ್ನು ತಪ್ಪಿಸುವದಕ್ಕಾಗಿ ದೂರದ ಹಳ್ಳಿಗರು ಮೊದಲ ರಾತ್ರಿಯಲ್ಲಿಯೇ ಅಕ್ಕಿ ಹೊತ್ತುಕೊಂಡು ಮನೆಯಿಂದ ಹೊರಡಬೇಕಾದೀತು

ಹೀಗೆ ಕಾಳ ರಾತ್ರಿಯಲ್ಲಿ ಹೊರುವ ಕೆಲಸ ಮಾಡಿ ರೈತರಿಗಭ್ಯಾಸವಿದೆ.

ಆದರೆ ಇದು ಕಾಳ ಸಂತೆ (ಬ್ಲೇಕ್ ಮಾರ್ಕೆಟ್) ವ್ಯಾಪಾರವಾಗಲಾರದಷ್ಟೆ-

'ಸರಕಾರದ ತಪ್ಪೇನೂ ಇಲ್ಲ, ಬಳೆಸುವನೇ ಬ್ಲೇಕ್ ಮಾರ್ಕೆಟ್ ವಹಿವಾಟು ನಡಿಸಹತ್ತಿದುವರಿಂದ ಆಹಾರಾಭಾವವುಂಟಾಯಿತು,'ಎಂದು ಮಿ ಅಮೆರಿ ಹೇಳಲಾರರಷ್ಟೆ?

* * * *

ಮದ್ರಾಸ್ ಪ್ರಾಂತ್ಯದ ನೀರಾವರಿ ಕೆಲಸಗಳ ಪ್ರಧಾನ ಇಂಜಿನೀಯರರು ಈ ವಾರದಲ್ಲಿ ದಕ್ಷಿಣ ಕನ್ನಡಕ್ಕೆ ಬಂದು ಜಿಲ್ಲೆಯಲ್ಲಿ ಸಂಚರಿಸಲಿದ್ದಾರೆ.

ಜಿಲ್ಲೆಯಲ್ಲಿ ನೀರಾವರಿ ಸೌಕರ್ಯಗಳನ್ನೇರ್ಪಡಿಸುವದಕ್ಕಾಗಿ ಪರಿಶೀಲನೆ ನಡೆಸುವದೇ ಈ ಭೇಟಿಯ ಉದ್ದೇಶ

ಕೆರೆ, ಮದಗ, ತೋಡು, ಹೊಳೆಗಳ ಭೇಟಿಯನ್ನವರು ಪಡೆಯಲಿದ್ದಾರೆ.

ಎಲ್ಲೆಲ್ಲಿ ನೀರು ನಿಂತಿದೆ, ಎಲ್ಲೆಲ್ಲಿ ಮಣ್ಣುಬಿದ್ದಿದೆ, ಎಂಬುದನ್ನೆಲ್ಲಾ ಅವರು ನೋಡಲಿದ್ದಾರೆ.

ದುಡಿಯುವ ಕೂಲಿಗಳ ಎಲುಬು ಮಾಂಸಗಳು ಕಲ್ಲು ಮಣ್ಣಿಗೆ ಸಮ; ರಕ್ತ ನೀರಿಗೆ ಸಮ

ಆದ್ದರಿಂದ ಅವುಗಳ ಅಭಾವವೂ ಈ ಪ್ರಧಾನ ಇಂಜಿನೀಯರರ ಪರ್ಯಾಲೋಚನೆಗೆ ಒಳಪಡುವದೆಂದು ನಂಬಲಾಗಿದೆ.

—ಬೀದಿವಾಲ

WANTED.

Estate Writers and Labour Suppliers with from 30 to 100 labourers

Apply, G. V. R. FREND
Karadykhan Estate,
Sangameswarpet P. O.
Kadur District

ಅಮೇರಿಕ—ಇಂಗ್ಲಾಂಡುಗಳೊಳಗೆ ವಾಗ್ಯುದ್ಧ!

ಜರ್ಮನರಿಂದ ಸ್ವತಂತ್ರಗೊಳಿಸಲ್ಪಟ್ಟ ಗ್ರೀಸಿನಲ್ಲೀಗ, ಅಪ್ರಗತಿಕ ಶ್ರೀಮಂತ ವರ್ಗದವರ ಸರಕಾರವು ಬ್ರಿಟಿಷ್ ಬೆಂಬಲದಿಂದ ಪಾಪಾಂಡ್ರ್ಯೋವರ ಪ್ರಧಾನಿತ್ವದಲ್ಲಿದೆ. ಫೇಸಿಸ್ಟರನ್ನು ಪ್ರತಿಭಟಿಸುವದರಲ್ಲಿ ಅಸಾಧಾರಣ ಧೈರ್ಯದಿಂದ ರಕ್ತ ಸುರಿಸಿರುವ ಅಲ್ಲಿಯ ಉಗ್ರಗಾಮಿ ತರುಣರೆಲ್ಲರ ಬೆಂಬಲವಿರುವ, ಕಮ್ಯೂನಿಸ್ಟ್, ಸೋಶಿಯಾಲಿಸ್ಟ್, ರೈತರು ಮತ್ತು ಕೆಲಸಗಾರರ ಪಕ್ಷವಾದ 'ಇ. ಎ. ಎಮ್' ಈಗ ಸರಕಾರದ ವಿರುದ್ಧ ದಂಗೆಯೆದ್ದಿದೆ. ಈ ಎಡ ಪಕ್ಷೀಯರಿಗೆ ನ್ಯಾಯವಾದ ಸ್ಥಾನಮಾನಗಳನ್ನೀಯದೆ, ಬ್ರಿಟಿಷ್ ಬೆಂಬಲದಿಂದ ಬಲಪಕ್ಷೀಯ ಸರಕಾರವು ಶ್ರೀಮಂತರಾಡಳಿತೆಯ ಹಳೇಪದ್ಧತಿಯನ್ನನುಸರಿಸಿದುದೇ ಗಲಭೆಗೆ ಕಾರಣ. ಗ್ರೀಸಿನ ಮುಖ್ಯ ಪಟ್ಟಣವಾದ ಎಥೆನ್ಸಿನ ಮೇಲೆ ಎಡಪಕ್ಷೀಯರ ಸಶಸ್ತ್ರಧಾಳಿಯಾರಂಭವಾಗಿದೆ. ಕೆಲಸಗಾರರು ಪ್ರಥಮತಃ ಹೂಡಿದ್ದ 24 ಘಂಟೆಗಳ ಮುಷ್ಕರವೀಗ ಅಂತರ್ಯುದ್ಧವಾಗಿ ಇಡೀ ರಾಷ್ಟ್ರದಲ್ಲಿ ಹರಡಿದೆ. ಬ್ರಿಟಿಷ್ ಸೇನೆಗಳು, ಟೇಂಕುಗಳು, ವೈಮಾನಿಕರು ಗಾಳಿಕೊಡೆಯವರು ಅಪ್ರಗತಿಕ ಸರಕಾರದ ಪಕ್ಷವಹಿಸಿ ಧಾಳಿಯಿಡುತ್ತಿವೆ. ಚಳವಳಿಗಾರರ ಮೇಲೆ ಸಹಜವಾಗಿ ಲೋಕದ ಸಹಾನುಭೂತಿಯಿರುವಂತಿದೆ. ಆದರೆ ಅವರು ನಾಜಿಗಳ ಸಹಾಯಪಡೆಯುತ್ತಿದ್ದಾರೆ ಎಂದು ಬ್ರಿಟಿಷರ ಆರೋಪ. ಗ್ರೀಸ್ ಸರಕಾರಕ್ಕೆ ಬ್ರಿಟಿಷ್ ಸಹಾಯವೊಂದಲ್ಲವಾಗಿದ್ದರೆ ಇಡೀ ರಾಷ್ಟ್ರದ ಬೆಂಬಲ ಮತ್ತು ಪ್ರಾತಿನಿಧ್ಯವಿರುವ ಚಳವಳಿಗಾರರು ಇಷ್ಟರಲ್ಲೇ ವಿಜಯಿಗಳಾಗುತ್ತಿದ್ದರೆಂಬುದು ಖಂಡಿತ. ಗ್ರೀಸಿನಂತೆಯೇ ಇಟೆಲಿಯ ಆಡಳಿತೆಯಲ್ಲಿಯೂ ಬ್ರಿಟಿಷರು ತಮ್ಮ ಸ್ವಾರ್ಥ ಸಾಧಿಸುತ್ತಿದ್ದಾರೆ. ಫೇಸಿಸ್ಟ್ ಸರಕಾರದ ಬದ್ಧ ವಿರೋಧಿಯಾಗಿ 1926ರಲ್ಲೇ ಇಟೆಲಿಯನ್ನು ಬಿಟ್ಟಿದ್ದ ಮುಸಲಿನಿಯ ಪತನಾನಂತರ ಮರಳಿ ಬಂದು, ಬಡೊಗ್ಲಿಯೋ ಸರಕಾರದ ಸ್ಥಾನಚ್ಯುತಿಯನ್ನು ಸಾಧಿಸಿದ್ದ ಪ್ರಜಾಪ್ರಭುತ್ವವಾದಿ ಕೌಂಟ್ ಸ್ಫೋರ್ಝರವರನ್ನು ವಿದೇಶ ಮಂತ್ರಿಯಾಗಿ ನೇಮಿಸಿಕೊಳ್ಳಬಾರದೆಂದು ಚರ್ಚಿಲ್ ಮತ್ತು ಈಡೆನರ ಕಟ್ಟಾಜ್ಞೆ. ಇಟೆಲಿಯ ಪ್ರಧಾನ ಬೊನೊಮಿಯವರಿಗೆ ಸ್ಫೋರ್ಝರ ಮೇಲೆ ವಿಶ್ವಾಸವಿದ್ದರೂ ಬ್ರಿಟಿಷರ ವಿರೋಧ ಅಚಲವಿದೆ. ಬೆಲ್ಜಿಯಮ್ ಸರಕಾರವನ್ನೂ ಬ್ರಿಟಿಷರು ತಮ್ಮ ಸೂತ್ರಕ್ಕೆ ತಕ್ಕಂತೆ ಕುಣಿಸುತ್ತಿದ್ದಾರೆ. ಇದರಿಂದ ಅಮೇರಿಕವು ರೇಗಿಬಿದ್ದಿದೆ. ಅದರ ನೂತನ ಸ್ಟೇಟ್ ಸೆಕ್ರೆಟರಿ ಮಿ. ಸ್ಟೆಟ್ಟಿನಸರು ಅಧಿಕಾರ ಪೂರ್ವಕವಾಗಿ 'ಸ್ವತಂತ್ರ ರಾಷ್ಟ್ರಗಳ ಒಳಾಡಳಿತೆಯಿಂದ ಕೈತೆಗೆಯಬೇಕು' ಎಂದು ಇಂಗ್ಲೆಂಡಿಗೆ ಸ್ಪಷ್ಟ ಎಚ್ಚರಿಕೆ ಕೊಟ್ಟಿದ್ದಾರೆ. ಬ್ರಿಟಿಷರು ತಮ್ಮ ಸಾಮ್ರಾಜ್ಯ ಸ್ವಾರ್ಥದಿಂದಲೇ ಗ್ರೀಸ್, ಇಟೆಲಿ, ಬೆಲ್ಜಿಯಮ್ ಮೊದಲಾದ ರಾಷ್ಟ್ರಗಳ ಆಡಳಿತೆಯಲ್ಲಿ ಕೈಹಾಕುತ್ತಿದ್ದಾರೆ ಎಂದು ಅಮೇರಿಕನ್ ಪತ್ರಿಕೆಗಳು ಬಹಿರಂಗವಾಗಿ ಟೀಕಿಸುತ್ತಿವೆ. ಬ್ರಿಟನಿನ 'ಮೆಂಚೆಸ್ಟರ್ ಗಾರ್ಡಿಯನ್' ಮೊದಲಾದ ಪತ್ರಿಕೆಗಳು, ಅಮೇರಿಕವು ಈ ಮೊದಲು ಮಾಡಿರುವ ಅಚಾತುರ್ಯಗಳನ್ನು ವರ್ಣಿಸುತ್ತ ಬ್ರಿಟನಿಗೆ ಬೋಧನೆ ಕೊಡಲು ಹೊರಟ ಅಮೇರಿಕನರ ಅಧಿಕಪ್ರಸಂಗವನ್ನು ಖಂಡಿಸಹತ್ತಿವೆ. ಗ್ರೀಸಿನ ತಮ್ಮ ಧೋರಣೆಯನ್ನು ಎಷ್ಟಕ್ಕೂ ಬದಲಾಯಿಸುವಂತಿಲ್ಲವೆಂದು ಮಿ. ಚರ್ಚಿಲ್ಲರೂ ಮಿ. ಈಡೆನರೂ ಪುನಃ ಒತ್ತಿಹೇಳಿದ್ದಾರೆ. ಅಮೇರಿಕವೂ ಈ ಕುರಿತು ಛಲತೊಟ್ಟು ಕಾರ್ಯಕ್ಕಿಳಿಯುವಂತೆ ಕಾಣುತ್ತಿಲ್ಲ. ರಷ್ಯವೀತನಕ ಮೌನವಾಗಿದೆಯಾದರೂ ಅದು ತನ್ನ ಧೋರಣೆಯನ್ನಿನ್ನು ಪೋಲೆಂಡು ಮತ್ತು ಬಾಲ್ಕನುಗಳ ವಿಷಯದಲ್ಲಿ ಬಿಗಿಗೊಳಿಸುವದೆಂಬ ಭಯವಿದ್ದಿದೆ. ಲಂಡನಿನಲ್ಲಿರುವ ಹಿಂದೀ 'ಸ್ವರಾಜ್ಯ ಭವನ'ವು ಗ್ರೀಸಿನ ಪ್ರಜೆಗಳಿಗೆದುರಾಗಿ ಹಿಂದೀ ಸೈನಿಕರನ್ನು ಉಪಯೋಗಿಸಿದುದನ್ನು ಖಂಡಿಸಿದೆ. ಲೋಕವು ಫೇಸಿಸ್ಟರಿಂದ ವಿಮೋಚನೆಗೊಂಡರೂ ಸಾಮ್ರಾಜ್ಯ ಸ್ವಾರ್ಥಿಗಳಿಂದ ಬಿಡುಗಡೆಗೊಂಡುವಂತಿಲ್ಲವೆಂಬುದೀಗ ಅಂಗೈ ನೋಟದಷ್ಟು ಸ್ಪಷ್ಟ. [illegible] ಗಳೊಳಗೆ ಇಂತಹ ಬಹಿರಂಗ ವಾಗ್ಯುದ್ಧವು ಈವರೆಗೆ ನಡೆದುದಿಲ್ಲ.

ವೈಸರಾಯಿ—ಆಶ್ರಿತ ರಾಜರೊಳಗೆ ಮತಭೇದ.

ಆಶ್ರಿತ ರಾಜರೊಂದು ಆಶ್ಚರ್ಯವನ್ನೇ ನಿರ್ಮಿಸಿದ್ದಾರೆ. ಕಳೆದ ತಾ. 4ರಲ್ಲಿ ಆಶ್ರಿತ ರಾಜ್ಯಕೂಟ(ಚೇಂಬರ್ ಓಫ್ ಪ್ರಿನ್ಸಸ್)ದ ಇಡಿಯ ಸ್ಥಾಯೀ ಸಮಿತಿಯೂ ಅದರ ಚಾನ್ಸೆಲರಾದ ಭೋಪಾಲದ ನವಾಬರ ಸಮೇತ ರಾಜೀನಾಮೆಯಿತ್ತಿದೆ. ರಾಜರ ಕೂಟದ ಮಹಾಸಭೆಯು ಮರುದಿನ ಸೇರಬೇಕಾಗಿದ್ದಿತು. ಅದೀಗ ಅನಿಶ್ಚಿತಾವಧಿಯವರೆಗೆ ಮುಂದುವರಿಸಲ್ಪಟ್ಟಿದೆ. ಬ್ರಿಟಿಷ್ ಸರಕಾರ ಮತ್ತು ಆಶ್ರಿತ ರಾಜರುಗಳೊಳಗಿರುವ ಒಪ್ಪಂದ ಕರಾರುಗಳ ವಿಷಯವಾಗಿ ಚಕ್ರವರ್ತಿಗಳ ಪ್ರತಿನಿಧಿ ವೈಸರಾಯರಿಗೂ ಆಶ್ರಿತ ರಾಜರಿಗೂ ಭಿನ್ನಾಭಿಪ್ರಾಯ ಒಂದುದೇ ಈ ಅಸಾಮಾನ್ಯ ಘಟನೆಗೆ ಕಾರಣವಂತೆ. ಬ್ರಿಟಿಷ್ ಮತ್ತು ಹಿಂದೀ ಸಂಸ್ಥಾನಿಕರೊಳಗೆ ತೀವ್ರ ಮತಭೇದಗಳಿದ್ದ ನಿದರ್ಶನಗಳೇನೋ ಇವೆ. ಆದರೆ ಸಾಮೂಹಿಕವಾಗಿ, ಮತ್ತು ಬಹಿರಂಗವಾಗಿ ಇಂತಹ ನಿಷೇಧ ಪ್ರದರ್ಶನ ನಡೆದುದು ಚರಿತ್ರೆಯಲ್ಲಿ ಇದೇ ಮೊದಲಿನ್ನಬೇಕು.

ಸಂಸ್ಥಾನಿಕರ ಸಂಘದ ಮುಂದೆ ಒಯ್ಯಬೇಕಾದ ಠರಾವುಗಳಿಗೆ ರಾಜ ಪ್ರತಿನಿಧಿ ವೈಸರಾಯರ ಸಮ್ಮತಿಬೇಕೆಂಬುದೊಂದು ನಿಯಮ. ಈ ಬಾರಿ ರಾಜಮಂಡಲದ ಸ್ಥಾಯೀ ಸಮಿತಿಯು ಮುಂದಿಡಬೇಕೆಂದು ಬಯಸಿದ ಕೆಲವು ಪ್ರಾಮುಖ್ಯ ನಿರ್ಣಯಗಳಿಗೆ ರಾಜಪ್ರತಿನಿಧಿಗಳು ಒಪ್ಪಲಿಲ್ಲ. ಈ ಭಿನ್ನಾಭಿಪ್ರಾಯದ ಮುಖ್ಯ ಕಾರಣವೆಂದರೆ, ಸುಗಮವಾಗಿ ಸ್ವತಂತ್ರ್ಯಾಡಳಿತೆ ನಡೆಸುವದು ಕಷ್ಟವಾಗಿರುವ ಸಣ್ಣ ಸಂಸ್ಥಾನಗಳಿಗೆ ಸಂಯುಕ್ತಾಡಳಿತೆಯೇರ್ಪಡಿಸಬೇಕೆಂಬ ಬ್ರಿಟಿಷ್ ಸರಕಾರದ ಧೋರಣೆ. ಇಂತಹ ಅಲ್ಪ ಸಂಸ್ಥಾನಗಳನ್ನು ಒಂದೊಂದು ತಂಡವಾಗಿ ಜೋಡಿಸಿ ಅವುಗಳಲ್ಲಿ ಏಕರೀತಿಯ ರಾಜ್ಯಭಾರ ಸ್ಥಾಪಿಸುವ ಈ ವ್ಯವಸ್ಥೆಯಿಂದ ಬ್ರಿಟಿಷ್ ಸರಕಾರವು ತಮ್ಮ ಆಡಳಿತೆಯೊಳಗೆ ಕೈಹಾಕುವಂತಾಗುವದೆಂದು ಆಶ್ರಿತ ರಾಜರ ಭೀತಿ. ತಮ್ಮೊಳಗಿನ ಕರಾರು ಮತ್ತು ತಮ್ಮ ಕಾದಿಟ್ಟ ಹಕ್ಕುಬಾಧ್ಯತೆಗಳಿಗನುಸಾರವಾಗಿ ತಮ್ಮ ಸಮ್ಮತಿ ವಿನಹ ಚಕ್ರವರ್ತಿ ಸರಕಾರವು ಯಾವ ಸುಧಾರಣೆಯನ್ನಾದರೂ ಮಾಡಬಾರದೆಂದು ಆಶ್ರಿತರ ವಾದ. ಅರ್ಥಾತ್ ಹಿಂದೀ ರಾಜರ ಅಭಿಪ್ರಾಯದಂತೆ ಚಕ್ರವರ್ತಿ ಸರಕಾರ ಮತ್ತು ತಮ್ಮೊಳಗಿನ ಕರಾರುಗಳು ಸಮಾನ ರಾಜ್ಯಗಳೊಳಗಾಗಿರುವ ಒಪ್ಪಂದದಂತೆ. ಆದರೆ ಆ ಕರಾರುಗಳಿಗೆ ಕಾಲಸ್ಥಿತಿಗನುಸಾರವಾದ ಅರ್ಥ ಕಟ್ಟುವ ಅಧಿಕಾರ ತನಗಿದೆಯೆಂದು ಸಾಮ್ರಾಟ ಪ್ರತಿನಿಧಿ ವೈಸರಾಯರ ಉತ್ತರ. ಭಾರತದ ಸ್ವಾತಂತ್ರ್ಯ ಪ್ರಶ್ನೆ ಬಂದಾಗಲೆಲ್ಲಾ, ಆಶ್ರಿತ ರಾಜರುಗಳ ಹಕ್ಕುಬಾಧ್ಯತೆಗಳ ವಾದವನ್ನು ಬ್ರಿಟಿಷ್ ಮುತ್ಸದ್ದಿಗಳೇ ಮುಂದೊಡ್ಡುತ್ತಿದ್ದಾರೆಂಬುದನ್ನು ಈ ಸಂದರ್ಭದಲ್ಲಿ ಮರೆಯಬಾರದು. ಈ ರೀತಿ ಸ್ವಾಭಿಮಾನದ ಪ್ರಶ್ನೆಯನ್ನು ಮುಂದೊಡ್ಡಿರುವ ಆಶ್ರಿತ ರಾಜರ ಒಂದು ಅಲ್ಪ ಬೇಡಿಕೆಯೂ, ಅದಕ್ಕೆ ವೈಸರಾಯರಿತ್ತಿದ್ದ ಸಮಂಜಸ ಉತ್ತರವೂ ಗಮನಾರ್ಹವಿವೆ. ಬ್ರಿಟಿಷ್ ಭಾರತದ ಪತ್ರಿಕೆಗಳು ಸಂಸ್ಥಾನಗಳ ಕುರಿತು ಮಾಡುತ್ತಿರುವ ಟೀಕೆಗಳನ್ನು ನಿಲ್ಲಿಸುವಂತೆ ಅವರು ವೈಸರಾಯರನ್ನು ಕೇಳಿಕೊಂಡಿದ್ದರು. ವೈಸರಾಯರು ಅದಕ್ಕಾಗಿ ಸಹಾನುಭೂತಿ ಸೂಚಿಸಿ 'ಪತ್ರಿಕಾ ವಿಮರ್ಶೆಗಳನ್ನು ನಿಲ್ಲಿಸುವ ಉತ್ತಮೋಪಾಯವೆಂದರೆ ಆಡಳಿತೆಯಲ್ಲಿ ಸುಧಾರಣೆ ಮಾಡಿಕೊಳ್ಳುವದು' ಎಂದು ತನಗಲ್ಲದ ಪರೋಪದೇಶ ಪಾಂಡಿತ್ಯವನ್ನು ಪ್ರದರ್ಶಿಸಿದ್ದರು. ಆದರೆ ಈ ಆಶ್ರಿತ ರಾಜರ ಮಂಡಲದಲ್ಲಿ ಹಿಂದುಸ್ಥಾನದ ಎಲ್ಲಾ ಪ್ರಗತಿಪರ ಹಾಗೂ ಪ್ರಮುಖ ಸಂಸ್ಥಾನಗಳು ಸೇರಿಲ್ಲ. ಮಂಡಲದ ಸ್ಥಾಯೀ ಸಮಿತಿಯ ಈ ನಿರ್ಧಾರವನ್ನು ಕೂಡಾ ಎಲ್ಲಾ ನರೇಂದ್ರರು ಅನುಮೋದಿಸಿಲ್ಲವೆಂದು ಪ್ರಕಟವಾಗಿದೆ. ಹೇಗಿದ್ದರೂ ಈ ಅಪೂರ್ವ ಬಿಕ್ಕಟ್ಟಿನಿಂದಾಗಿ ಬ್ರಿಟಿಷ್ ಸರಕಾರಕ್ಕೆ ಮನಸಿದ್ದರೆ ಆಶ್ರಿತ ರಾಜರನ್ನೂ ಸ್ವತಂತ್ರ ಭಾರತದಲ್ಲಿ ಸೇರುವಂತೆ ಪ್ರೇರಿಸಲು ಸಾಧ್ಯವಿದೆಯೆಂಬುದು ಹೊಳೆಯುತ್ತು. ಅದೇ ಸಮಯದಲ್ಲಿ ತೀರಾ ಅಪ್ರಗತಿಕವಾಗಿರುವ ಆಶ್ರಿತ ರಾಜರಲ್ಲಿಯೂ ಸ್ವಾಭಿಮಾನವಿದೆಯೆಂಬುದೂ ಪ್ರಕಾಶಗೊಂಡಿದೆ. ಈ ಸ್ವಾಭಿಮಾನದ ಹಕ್ಕನ್ನು ಪ್ರಜೆಗಳಿಗೂ ಕೊಟ್ಟು, ತಮ್ಮಲ್ಲಿ ಪ್ರಜಾಜವಾಬ್ದಾರಿ ಸರಕಾರಗಳನ್ನು ಅವರೇಕೆ ಸ್ಥಾಪಿಸಬಾರದು?

ಸುರತಕಲ್—ಇಲ್ಲಿಯ ವಿದ್ಯಾದಾಯಿನೀ ಹೈಯರ್ ಎಲಿಮೆಂಟರೀ ಶಾಲೆಯ ನೂತನ ಕಟ್ಟಡದ ಶಂಕುಸ್ಥಾಪನೆಯು ತಾ 26-11-'44ರಲ್ಲಿ ಶ್ರೀ ಚಿತ್ರಾಪುರ ಮಠದ ವಿದ್ಯಾಪೂರ್ಣ ತೀರ್ಥ ಶ್ರೀ ಪಾದಂಗಳವರಿಂದ ಜರಗಿಸಲ್ಪಟ್ಟಿತು. ಅಧ್ಯಕ್ಷರು ವಿದ್ಯೆ, ಮತ್ತು ಕರ್ತವ್ಯ ಮತ್ತು ಇತರ ವಿಚಾರದ ಬಗ್ಗೆ ಮನವಿತ್ತರು. ಬಳಿಕ ಕೆಲವು ವಿನೋದಗಳಾದ ಮೇಲೆ ಸಭೆಯು ಮುಕ್ತಾಯವಾಯಿತು.

ನೋಟೀಸು

ಪುತ್ತೂರು ಡಿ. ಮು. ಕೋರ್ಟಿನಲ್ಲಿ

S C No 165/1944

ಮಹಾಬಲ ಭಟ್ಟ — ವಾದಿ

ಪಾತುಮ್ಮ, ಹಾಜಿ ಉಮ್ಮರ ಬ್ಯಾರಿಗಳ ವಿಧವೆ, ಮಂಗಳೂರು ತಾಲ್ಕು ನೇವೂರು ಗ್ರಾಮದ ಕೋಡಿಬ್ಯಲು —ಪ್ರತಿವಾದಿ

ಸದ್ರಿ ಪ್ರತಿವಾದಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ

ಮೇಲಿನ ವ್ಯಾಜ್ಯದಲ್ಲಿ ಪ್ರತಿವಾದಿರಾದ ನೀವು ಮೂಲಗೇಣಿ ಹಕ್ಕಿನಿಂದ ಅನುಭವಿಸುವ ಕಡೆಶ್ವಾಲ್ಕ ಗ್ರಾಮದ ಆಸ್ತಿ ಬಾಬ್ತು ನಿಂಮಿಂದ ವಾದಿಗೆ ಬರತಕ್ಕ 1942, 43 ಮತ್ತು 44 ನೇ ಇಸವಿಯ ಮೂಲಗೇಣಿ ಬಾಕಿ ವ ಬಡ್ಡಿ ರೂ 23—10—0ಕ್ಕೆ ವಾದಿಯು ನಿಮ್ಮ ಮೇಲೆ ಮಾಡಿದ ಮೇಲ್ಕಂಡ ವ್ಯಾಜ್ಯ ತಾ 21—12—1944ಕ್ಕೆ ತನ್ಕಿಗೆ ಇಟ್ಟಿರುವದ್ರಿಂದ ಆ ಕುರಿತು ನಿಮಗೇನಾದರೂ ಆಕ್ಷೇಪ ಇದ್ರೆ ಸದ್ರಿ ತ್ವಾರೀಖಿನ ಪೂರ್ವಾಹ್ನ 11 ಗಂಟೆಗೆ ಕೋರ್ಟು ಮುಂದೆ ಹೇಳಿಕೊಳ್ಳದಿದ್ರೆ ವ್ಯಾಜ್ಯವನ್ನು ಶಿಸ್ತಾ ಮಾಡಿ ಯುಕ್ತ ಕಂಡಂತೆ ತೀರ್ಮಾನಿಸಲಾದೀತು ಎಂತ ಕೋರ್ಟಿನ ಹುಕುಂ ಪ್ರಕಾರ ಈ ಮೂಲಕ ನಿಮಗೆ ತಿಳಿಸಿಯದೆ.

M Sadashiva Rau,
Pleader for Plff.

Puttur 2—12—1944

Navabharat Book Depot Udupi South India — Navabharat Book Depot Udupi South India

ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು

		ಡಾ. ಆ. ಮೂರು ಪ್ರಹಸನಗಳು	0 14	ವೀರಭೂಮಿ	0 2
ಸುಲಭದಲ್ಲಿ ಇಂಗ್ಲಿಷ್	1-1	ಸ್ವತಂತ್ರ ಜೀವನಯು	0 3	ವತ್ಸಲಾ	0 8
ಯುವಕರಿಗೆ ಮತ್ತು ವಯಸ್ಕರಿಗೆ		ಪುರುಷವಧ	0 4	● ಕವಿತೆಗಳು	
ಸುಲಭವಾಗಿ ಇಂಗ್ಲಿಷನ್ನು ಅನ್ಯ		ಹೆಂಡ್ತಿ ಗಂಡನಾದರೆ	0 4	ಕಾವ್ಯಸಾಮ್ರಾಜ್ಯ	0 12
ಸಹಾಯವಿಲ್ಲದೆ ಕಲಿಸುವ ಇಂಗ್ಲಿಷ್ ಸ್ವಯಂಬೋಧಿನಿ		● ಕತೆಗಳು		ವ ಗಳು	0 3
		ನಗೆಸೊಟಗಳು	0 14	ಶ್ರೀಮುಖ	1-0
● ನಾಟಕಗಳು		ಅಶ್ವದೇವರು		ಪುರಂದರದಾಸರ ಕೀರ್ತನೆ	1 0
ಪ್ರೇಮವಿಜಯ	0 12	ಮತ್ತು ಇತರ ಕಥೆಗಳು	1 0	ಭಗವದ್ಗೀತಾ ಮೂಲ	
ದೇಶಭಕ್ತ	1-4	ಭಾರತೀಯ ಕತೆಗಳು	0-14	(ಸಿಲ್ಕ್ ಬೈಂಡು)	1-4
ವ್ಯಭಿಚಾರಿಣಿ ಯಾರು	0-12	ನಂದಾದೀಪ	0 10	● ಇತರ ಪುಸ್ತಕಗಳು	
ಕುಸಲವ	0-5	ನಾಟಕಕತೆಗಳು	0-3	ವಿಜಯಂದಿನ ಜೀವನ	0 3
ಸಂಶಯ ಪಿಶಾಚಿ	0-8	ಕಂದನ ಹಾದಿ ನೋಟಗಳು	0 8	ರಾಷ್ಟ್ರಕಥೆಯ ಇತಿಹಾಸ	2 8
ರಂಗಭೂಮಿ	0-6	ಸಾಹಿತ್ಯದವರು	0 14	ಬಾಲವಾಙ್ಮಯ	0-3
ಪ್ರಕಾರ	1 12	ಅಂತರಂಗದ ಕತೆಗಳು	0-10	ಮತಾಂತರ	0 [illegible]
ಧರ್ಮಸಂಕಟ	0 4	ಪ್ರೇಮಪ್ರವಾಹ	0 6	ಪಕ್ಷಿ ಮಹಾಜನ	0-8
ಆರೋಗ್ಯ ಪ್ರಭಾವ	0 12	ಅಹಹಾ ಇತ್ಯಾದಿ ಕತೆಗಳು	0 12	ಸಾಮಾಜಿಕ ಪುಸ್ತಕಗಳು	1 8
ಪಂಚಾರತಿ	0 6	ಜೀವನಮುಕ್ತ	0-6	ಚಿಗರು	0 6
ಪ್ರತೀಕಾರ	0 6	● ಕಾದಂಬರಿಗಳು			
ಸೇವಾಪಥ	0-8	ಸನ್ಯಾಸಿಯ ಹೆಂಡತಿ	0 8	ಗೀತೆಯ ಕೈಗನ್ನಡಿ	0 12

ನವಭಾರತ ಪುಸ್ತಕ ಭಂಡಾರ, ಎಜೆನ್ಸ್ & ಪಬ್ಲಿಷರ್ಸ್, ಉಡುಪಿ ದ. ಕ.

The Canara Banking Corporation Limited.

(Incorporated in British India. Liability of Members is limited)
Estd 1906.
Head Office: **UDIPI**, (S. K.)

Authorised Capital	Rs. 25,00,000/-
Issued & Subscribed Capital	Rs. 16,00,000/-
Paid up Capital	Rs 14,55,165/-
Reserves	Rs. 4,15,000/-

Total working Capital: exceed one crore & 24 lakhs.

ANNOUNCEMENT

Branches of the Bank have been opened at HUBLI & DHARWAR on 4—12—1944.

ಉಡುಪಿ, ಗುರುವಾರ ೧೪-೧೨-೧೯೪೪

ಪರದೆಯೆದ್ದಿತು!

ಚರ್ಚಿಲ್ ರುಸವೆಲ್ಟರು ಒಂದಾಗಿ ಹೊರಡಿಸಿದ್ದ ಅಟ್ಲಾಂಟಿಕ್ ಘೋಷಣೆಯು ಆ ಕಾಲದಲ್ಲಿ ಇಡೀ ಲೋಕವನ್ನೇ ಮೋಹಿಸಿದ್ದಿತು. ಯುದ್ಧಾನಂತರ ಸರ್ವ ರಾಷ್ಟ್ರಗಳಿಗೂ ಸ್ವಾತಂತ್ರ್ಯ ದೊರಕುವದೆಂಬ ಆಶ್ವಾಸನೆಯೇ ಅದರಲ್ಲಿರುವ ತಿರುಳು. ಹಿಂದುಸ್ಥಾನವು ಈ ಘೋಷಣೆಯ ಗಡಿಯಿಂದ ಹೊರಗೆ, ಎಂದು ಮಿ. ಚರ್ಚಿಲ್ಲರು ಆಗಲೇ ಹೇಳಿಬಿಟ್ಟಿದ್ದರು. ಆದರೆ ಯುರೋಪಿನ ನಾಜೀ ಆಕ್ರಮಿತ ರಾಷ್ಟ್ರಗಳು ಅದರ ಗಡಿಯೊಳಗಿವೆ ಎಂಬ ಕುರಿತು ಮತಭೇದವಿರಲಿಲ್ಲ. ಬ್ರಿಟಿಷರ ಒಂದೊಂದು ಮಾತಿಗೆ ಎರಡೆರಡು ಅರ್ಥಗಳಿವೆ ಎಂಬ ಅನುಭವ ಲೋಕಕ್ಕಿದ್ದದ್ದೇ, ಆದರೂ ಯುದ್ಧಾನಂತರದ ಲೋಕವ್ಯವಸ್ಥೆಯಲ್ಲಿ ಅವರೇ ಸರ್ವಾಧಿಕಾರಿಗಳಲ್ಲ; ಆ ನಿರ್ಮಾಣದಲ್ಲಿ ಅಮೇರಿಕ, ರಶ್ಯಗಳಿಗೂ ಇಂಗ್ಲಾಂಡಿನಷ್ಟೇ ತೂಕವಿದೆ; ಅವುಗಳ ಅಭಿಪ್ರಾಯಕ್ಕೆ ವಿರುದ್ಧವಾಗಿ ತನ್ನ ಸಾಮ್ರಾಜ್ಯ ಸ್ವಾರ್ಥ ಸಾಧಿಸುವ ಎದೆಗಾರಿಕೆ ಬ್ರಿಟನಿಗೆ ಬರುವಂತಿಲ್ಲ-ಎಂಬ ಆಸೆಯೊಂದಿದ್ದಿತು. ಆದರೆ ಸಂಬಂಧಕ್ಕಿಂತ ಸ್ವಾರ್ಥ ಹೆಚ್ಚಿನದು ಯಾವುದನ್ನೇ ತ್ಯಾಗ ಮಾಡಬೇಕಾಗಿ ಬಂದರೂ ಸಾಮ್ರಾಜ್ಯ ಸ್ವಾರ್ಥವನ್ನು ಬಿಡುವಂತಿಲ್ಲ, ಎಂಬುದೇ ಚರ್ಚಿಲ್ ಸರಕಾರದ ಭೀಷ್ಮನಿರ್ಧಾರವೆಂಬುದೀಗ ಅಂಗೈನೋಟದಷ್ಟು ಸ್ಪಷ್ಟವಾಗಿದೆ. ಇಡೀ ಲೋಕದ ಅಸಮ್ಮತಿ ಮತ್ತು ಅಮೇರಿಕದ ಬಹಿರಂಗ ನಿಷೇಧಗಳನ್ನು ಕಡೆಗಣಿಸಿ, ಗ್ರೀಸ್, ಇಟಲಿ, ಬೆಲ್ಜಿಯಮುಗಳ ಎದೆಯುರಿಯಲ್ಲಿ ಅದು ತನ್ನ ಬೇಳೆಬೇಯಿಸಿಕೊಳ್ಳುತ್ತಿದೆ. ಗ್ರೀಸಿನ ಜನಪ್ರಿಯ ಬಂಡಾಯದಲ್ಲಿ ನಿಜವಾದ ಪ್ರತಿನಾಯಕನೆಂದರೆ ಬ್ರಿಟನು. ಬ್ರಿಟಿಷ್ ಟೇಂಕು, ವಿಮಾನಗಳ ಬೆಂಬಲವಲ್ಲವಾದರೆ ಅಲ್ಲಿಯ ಅಲ್ಪ ಸಂಖ್ಯಾಕರ ಅಪ್ರಾಗತಿಕ ಸರಕಾರವು ಇಷ್ಟರಲ್ಲೇ ಅಡಿಮೇಲಾಗುತ್ತಿದ್ದಿತು; ಗ್ರೀಸಿನ ಫೇಸಿಸ್ಟ್ ಆಕ್ರಮಣದ ಕಳಂಕವನ್ನು ಯಾರ ಬೆವರು ಮತ್ತು ರಕ್ತ ತೊಳೆದಿದ್ದಿತೋ ಆ ತೀವ್ರಗಾಮಿ ತರುಣರ ಎಡಪಕ್ಷದ ಸರಕಾರವು ಸ್ಥಾಪನೆಯಾಗುತ್ತಿದ್ದಿತು. ಆದರೆ ಗ್ರೀಸಿನ ಇಂದಿನ ಸರಕಾರವನ್ನು 'ಕ್ರಮಬದ್ಧವಾಗಿ ಸ್ಥಾಪನೆಗೊಂಡಿರುವ ಸರಕಾರ'-ತಾವೀಗ ನೆರವಾಗುತ್ತಿರುವುದು 'ಶಾಂತಿ ಮತ್ತು ವ್ಯವಸ್ಥಾಪಾಲನೆಗಾಗಿ' ಎಂದು ಹೇಳುತ್ತಾ ಮಿ. ಚರ್ಚಿಲ್ಲರು ತನ್ನ ಸೇನಾಶಕ್ತಿಯಿಂದ ಅಲ್ಲಿಯ ಬಹುಮತವನ್ನು ದಮನಿಸುತ್ತಿದ್ದಾರೆ. ಬ್ರಿಟಿಷರ ಶಬ್ದಕೋಶದಲ್ಲಿರುವ 'ಕ್ರಮಬದ್ಧ ಸರಕಾರ' 'ಶಾಂತಿ ಮತ್ತು ವ್ಯವಸ್ಥೆ' ಶಬ್ದಗಳ ಅರ್ಥವೇನೆಂಬುದು ಹಿಂದೀಯರಿಗೆ ಗೊತ್ತಿದೆ. ಫೇಸಿಸ್ಟ್ ಆಕ್ರಮಣದಿಂದ ಬಿಡುಗಡೆ ಹೊಂದಿದ ಮೇಲೂ ಲೋಕದ ಪಾಲಿಗೆ ಈ ಮಾದರಿಯ 'ಕ್ರಮಬದ್ಧವಾದ' 'ಶಾಂತಿ ವ್ಯವಸ್ಥೆಯ' ಆಡಳಿತೆಯೇ ಗತಿಯೆಂದಾದರೆ ನಿಜವಾದ ಶಾಂತಿಸುಭಿಕ್ಷೆಯೆಂಬುದು ಬಯಲಾಸೆಯೇ ಸರಿ. ಫೇಸಿಸ್ಟರಿರಲಿ, ಸಾಮ್ರಾಜ್ಯವಾದಿಗಳೇ ಇರಲಿ—ಯಾರು ಗೆಲ್ಲುತ್ತಾರೋ ಅವರು ಆಳುತ್ತಾರೆ! ಈ ತತ್ವಪಾಲನೆಗಾಗಿಯಲ್ಲದೆ ಗ್ರೀಸಿನ ಅಂತಃಕಲಹದಲ್ಲಿ ಕೈಹಾಕುವ ಅಗತ್ಯವೇ ಬ್ರಿಟಿಷರಿಗಿರಲಿಲ್ಲ. ಬೆಲ್ಜಿಯಮಿನಂತೆ, ಗ್ರೀಸು ಈಗ ರಣಕ್ಷೇತ್ರದ ಗಡಿಯಲ್ಲಿಲ್ಲ. ಅದರ ಪಾಲಿಗೀಗ ಯುದ್ಧ ಮುಕ್ತಾಯಗೊಂಡಿದೆ. ಅನ್ಯ ರಾಷ್ಟ್ರಗಳಿಗೆ ತನ್ನಿಚ್ಛೆಯ ಸ್ವತಂತ್ರ ಸರಕಾರ ಸ್ಥಾಪಿಸಲು ಬಿಡುವದೇ ಬ್ರಿಟಿಷರ ಗುರಿಯಾಗಿದ್ದರೆ ಗ್ರೀಸಿನ ತೀರ್ಮಾನವನ್ನು ಗ್ರೀಕರ ಪಾಲಿಗೇನೇ ಬಿಟ್ಟುಕೊಡುವ ಕಾಲವಿದು. ಆದರೆ ಸಾಮ್ರಾಜ್ಯವಾದೀ ಚರ್ಚಿಲ್ಲರ ವಾದವಿಲ್ಲಿದೆ—'ಗ್ರೀಸಿನಲ್ಲಿ ತನ್ನ 30,000 ಸೈನಿಕರನ್ನು ಆಹುತಿಕೊಟ್ಟಿರುವ ಬ್ರಿಟನಿಗೆ ಅದರ ಮೇಲೆ ವರ್ಚಸ್ಸು ಬೀರುವ ಅಧಿಕಾರವಿದೆ.' ಎರಡುಶತಮಾನಗಳು ಸಮೀಪಿಸುವ ವರೆಗೆ ಹಿಂದುಸ್ಥಾನದಲ್ಲಿ ತ್ಯಾಗಮಾಡಿರುವದರಿಂದಾಗಿಯೇ ಅದನ್ನು ಆಳುವ ಅಧಿಕಾರವಿದ್ದಂತೆ ಗ್ರೀಸಿನಲ್ಲಿ ತ್ಯಾಗಮಾಡಿದವರಿಗೆ ಗ್ರೀಸನ್ನಾಳುವ ಅಧಿಕಾರವೂ ಇದೆ ಎಂಬುದು ಇದರಿಂದ ಸ್ಪಷ್ಟ. ಈ ದೃಷ್ಟಿಯಿಂದ ನೋಡಿದರೆ ಯುದ್ಧಾನಂತರ ಎಲ್ಲಾ ದುರ್ಬಲ ರಾಷ್ಟ್ರಗಳಿಗೂ ಪಾರತಂತ್ರ್ಯವೇ ಗತಿ. ಈ ತನಕ ತೆರೆಯ ಮರೆಯಲ್ಲಿ ನಡೆಯುತ್ತಿದ್ದ ಸ್ವಾರ್ಥ ಸಾಧನೆಯು ಗ್ರೀಸ್ ದುರಂತದ ಮೂಲಕ ರಂಗಕ್ಕೆ ಬಂದಿದೆ. ಭವಿಷ್ಯದ ಕುರಿತು ಬಯಲಾಸೆ ಕಟ್ಟಿಕೊಂಡಿರುವ ಹಿಂದೀಯರೀಗ ಕಣ್ಣು ತೆರೆಯಬೇಕು.

ಪಣಿಯಾಡಿ ವಾರ್ಡಿನ ಉಪಚುನಾವಣೆ—ಸದ್ಯವೇ ಜರಗಲಿರುವುದರಿಂದ ಆ ವಾರ್ಡಿನ ಪ್ರತಿನಿಧಿಯಾಗಿ ಕೌನ್ಸಿಲು ಮೆಂಬರಿಕೆಗೆ ಶ್ರೀ ಯು. ಎಸ್. ಭಟ್ಟರು ಉಮೇದ್ವಾರರಾಗಿ ನಿಲ್ಲಲಿರುವರೆಂದು ತಿಳಿಸುತ್ತಾರೆ.

ಉಪಕಾರ ಸ್ಮರಣೆ.

ಬೊಂಬಾಯಿಯ ಕನ್ನಡಿಗರು 'ನವಯುಗ ಎಂಟರ್‌ಪ್ರೈಸ್ ಲಿಮಿಟೆಡ್'ನ ಪಾಲುದಾರರಾಗಿಯೂ, ನವಯುಗ, ಅಂತರಂಗ ಪತ್ರಿಕೆಗಳ ಚಂದಾದಾರರಾಗಿಯೂ ಅಧಿಕ ಸಂಖ್ಯೆಯಲ್ಲಿ ಸೇರುವಂತೆ ನೆರವಾದ ಶ್ರೀಗಳಾದ ಟಿ. ತಬುರ ಸೆಟ್ಟಿ, ರಾಮಣ್ಣ ಎಲ್. ಸೆಟ್ಟಿ, ಕೆ. ದೇಜು ಸೆಟ್ಟಿ, ಎ. ಗೋಪಾಲ ಸೆಟ್ಟಿ, ಎ. ಕೃಷ್ಣಯ ಸೆಟ್ಟಿ, ಪಿ. ಕೃಷ್ಣಯ ಸೆಟ್ಟಿ, ಬಿ. ಮೆಣ್ಣು ಸೆಟ್ಟಿ, ಎಸ್. ಎನ್. ಸೆಟ್ಟಿ, ಎಚ್. ನಾರಾಯಣ ರಾವ್, ಕೆ. ವಿಟ್ಠಲ ಸೆಟ್ಟಿ, ನಾಗಯ್ಯ ಸೆಟ್ಟಿ ಮೊದಲಾದ ಮಿತ್ರರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳಿವೆ. ಅಂತೆಯೇ ಪಾಲುದಾರರಾಗಿ ಮತ್ತು ಚಂದಾದಾರರಾಗಿ ಸೇರಿದ ಹಾಗೂ ಇತರ ವಿಧದಿಂದ ಪ್ರೋತ್ಸಾಹಿಸಿದ ಎಲ್ಲ ಮಹನೀಯರ ಉಪಕಾರವನ್ನೂ ಈ ಸಂದರ್ಭದಲ್ಲಿ ಸ್ಮರಿಸುತ್ತೇನೆ. ಇದೇ ರೀತಿ ಪೂನೆಯಲ್ಲಿ ನೆರವಾದ ಮಿತ್ರರಿಗೂ ಕೃತಜ್ಞತೆಗಳಿವೆ.

ಕೆ. ಜಗನ್ನಾಥ ಶೆಟ್ಟಿ.

ಬಂಟರ ಯೂನಿ ನಾಡವರ ಸಂಘದ ಶ್ರೀ ರಾಮಕೃಷ್ಣ ವಿದ್ಯಾರ್ಥಿನಿ ಭವನದ ಕುರಿತು ತಾ. 31—5—44 ರ ವರೇಗಿನ ವಾಗ್ದಾನ ಮತ್ತು ವಸೂಲಿಯನ್ನು ಈ ಮೊದಲು ಪ್ರಕಟಿಸಿರುವೆವು. ಆನಂತರದ ವಾಗ್ದಾನ ವಸೂಲಿ ಹೀಗಿರುವುದು:—

ತಾ. 31—4—44ರ ವರೆಗೆ ವಾಗ್ದಾನ ರೂ 15597, ವಸೂಲಿ 7015. ಅನಂತರ 1. ವಿದ್ಯಾರ್ಥಿ ಭವನದ ಕಮಿಟಿ ಬೊಂಬಾಯಿ ಮುಂಚಿನ ರೂ, 1000 ಕಾನವಿ ವಸೂಲಿ 500. 2. ಡಾಕ್ಟರ್ ಎಸ್. ಟಿ. ಕಂಬ್ಳಿ W. D. Burlin ಹೈದರಾಬಾದ್ ವಾ.500 ವ.200 3. ಶ್ರೀ ಜಾರ್ಕಳ ನಾಗಣ್ಣ ಹೆಗ್ಗಡೇರು ವಾಗ್ದಾನ 500 4. ಶ್ರೀ ಕುತ್ಯಾರು ಗಣಪಯ ಸೆಟ್ರು, ಕಾಫಿ ಪ್ಲಾಂಟರ್ Sakleshpur ವಾ. 500 ವ 100 5. ಶ್ರೀಮತಿ ಸೇಸಮ್ಮ ಎಮ್. ಆರ್. ಪೂಂಜ ಹೆಸರಲ್ಲಿ ಮಕ್ಕಳಿಂದ ರೂ 500-ರ ಭರ್ತಿಗೆ ವ 250. 6. ಶ್ರೀ ಪಿ ಆರ್. ಟಿ ಪೂಂಜ, ಕಾಫಿಪ್ಲೆಂಟರ್ ಮತ್ತು ರಾವ್ ಸಾ ಪಿ. ಆರ್. ಆರ್. ಪೂಂಜ B.A.B.L ಅವರ ತಾಯಿಯ ಸ್ಮರಣಾರ್ಥ ವಾ 500 ವ 500. 7 ಡಾಕ್ಟರ್ ಮಂಜುನಾಥ ರೈಗಳು M.B.B.L. F.R.C.S (Edin) D. M. R (Eng) Profeser of Radiology Madras ಅವರ ತಂದೆತಾಯಿಗಳ ಹೆಸರಲ್ಲಿ ವಾ 1001 ವ 1001. 8. ಕೆಳಗಿನ ತಮ್ಮ ಕಮಿಟಿಯನ್ನು ಏರ್ಪಡಿಸುವ ಮುಂಚಿತವಾಗಿ ಕಟ್ಟಡ ಫಂಡಿಗೆ ರೂ 250/-ರಂತೆ ಎರವಾಗಿ ಕೊಟ್ಟ 8ಮಂದಿ ಪೈಕಿ (a) ಶ್ರೀ ಗಣೇಶನಾರಾಯಣ ರೈ B.A.B.L ಕಾಸರಗೋಡು ಸದ್ರಿ ರೂ 250-ನ್ನು ಧರ್ಮಾರ್ಥವಾಗಿ ಕೊಟ್ಟು ವಾಗ್ದಾನವನ್ನು ರೂ 500ಕ್ಕೆ ಏರಿಸಿರುವರು ವಾ 500 ವ 250 (b) ಶ್ರೀಮತಿ ಅತ್ತಾಮವರ ಕಲ್ಯಾಣಿ ಶೆಡ್ತಿಯರು ಸದ್ರಿ ರೂ 250 ಧರ್ಮಾರ್ಥವಾಗಿ ಕೊಟ್ಟಂತೆ ವಾ250 ವ 250 (c) ಶ್ರೀಮತಿ ಲಲಿತಾ ಡಾಕ್ಟರ್ ಎಮ್ ರೈ ರೂ. 250 ಧರ್ಮಾರ್ಥ ಕೊಟ್ಟಂತೆ ವಾ 250 ವ250 9. ಶ್ರೀಮತಿ ತಿಂಥಮಿ ಆರ್. ಪೂಂಜ B. A ಸೆಕ್ರೆಟರಿ ವಿದ್ಯಾರ್ಥಿನಿ ಭವನ ಇವರ ಹೆಸರಲ್ಲಿ ಶ್ರೀ. ಎ. ಬಿ. ಸೆಟ್ರು ವಾ 250 ವ 250. 10. ಬೊಂಬಾಯಿ ವಾಗ್ದಾನಗಳ ಪೈಕಿ ವಸೂಲಿ 25 ಜುಮ್ಲಾ ವಾಗ್ದಾನ ರೂ 19848 ವಸೂಲಿ 10591

ನಮ್ಮ ವಿನಂತಿಗಳು— ನಮ್ಮ ಸಂಘದ ವಾರ್ಷಿಕ ಸಭೆಯು ತಾ 31-12-44ಕ್ಕೆ ಜರಗಲಿರುವುದು. ಕಳೆದ ಸಭೆಯಲ್ಲಿ ಕಮಿಟಿಯು ಸ್ಥಾಪಿತವಾದಾಗ ರೂ 25000- ಆಗಬೇಕೆಂದಿತ್ತು. ನಮ್ಮ ಸಮಾಜವು ಈ ವರ್ಷಾಂತ್ಯದೊಳಗೆ ರೂ 25000-ಕ್ಕೆ ಕಡಮೆಯಾಗದಂತೆ ಮುಂದೆ ಬರುವುದಾಗಿ ನಂಬುವೆವು. ಈಗಿನ ಕಾಲದಲ್ಲಿ ನ್ಯಾಯವಾದ ಭವನ ಕಟ್ಟುವರೆ ಇದು ಕೂಡಾ ತೀರ ಕಡಿಮೆ. ಈ ದೃಷ್ಟಿಯಿಂದ ಎಲ್ಲವರೂ ಮುಂದೆಬಂದು ಉದಾರ ಸಹಾಯದಿಂದ ಹೆಚ್ಚಿನ ದ್ರವ್ಯ ಸಂಗ್ರಹಕ್ಕೆ ಎಡೆ ಕೊಡುವಂತೆ ಕೇಳುವೆವು. ವಾಗ್ದಾನವಿತ್ತವರು ಬೇಗನೆ ಪೂರ್ಣವಾಗಿ ಕಳುಹಿಸಿಕೊಡುವರೆಂದು ನಂಬಿರುವೆವು.

ಇತಿ

S/d **ಜಾರ್ಕಳ ನಾಗಣ್ಣ ಹೆಗ್ಗಡೆ**
ಸಾಕೂರು ಅಂತಣ್ಣ ಸೆಟ್ಟಿ
ಮೂಲ್ಕಿ ರಾಮಕೃಷ್ಣ ಪೂಂಜ

ತಾ 7—12—44 Advt

ನೇಶನಲ್ ಸೇವಿಂಗ್ಸ್ ಸರ್ಟಿಫಿಕೇಟು ಚಳವಳದ—ಕುರಿತು ತಾ 12 ರಲ್ಲಿ ಮುನಿಸಿಪಲ್ ಮ್ಯಾನ್ ಶಾಲೆಯಲ್ಲಿ ಶ್ರೀ ರಾಮನ ನಂಬಿಯಾರರ ಅಧ್ಯಕ್ಷತೆಯಲ್ಲಿ ಮಹಾ ಜನ ಸಭೆಯೊಂದು ಜರಗಿ ಶ್ರೀಗಳಾದ ಕೆ. ನರಸಿಂಗರಾವ್, ಪಿ. ಆರ್. ನಾಯಕ್ ಮತ್ತು ಬಿ. ಶ್ಯಾಮರಾಯ ಸೆಟ್ಟರು ಭಾಷಣಗಳನ್ನಿತ್ತರು. ಇದೇ ಉದ್ದೇಶದ ಸಲುವಾಗಿ 11ರಲ್ಲೂ ಕಟ್ಪಾಡಿಯಲ್ಲೂ ಸಭೆ ಜರಗಿತ್ತು.

ಪಡುಬಿದ್ರಿ—"ದಿ ಪಡುಬಿದ್ರಿ ಬಿಲ್ಲವರ ಯೂನಿಯನ್, ಮುಂಬಯಿ." ಇದರ ಕಾರ್ಯದರ್ಶಿಯವರು ಸಮಿತಿಯಿಂದ ಸೂಚನೆ ಹೊಂದಿ, ಯೂನಿಯನಿನ ಒಂದು ಶಾಖೆಯನ್ನು ಪಡುಬಿದ್ರಿಯಲ್ಲಿ ಸ್ಥಾಪಿಸಲೋಸುಗ, ಇಲ್ಲಿಗೆ ಬಂದಿದ್ದು, ತಾ 18-11-44ರಲ್ಲಿ, ಪಡುಬಿದ್ರಿ ಬೋರ್ಡ್ ಹಾಯರ್ ಎಲಿಮೆಂಟರಿ ಶಾಲಾ ವಠಾರದಲ್ಲಿ, ಶ್ರೀ ಎಮ್. ಕೆ. ರಾಮಪ್ಪನವರ ಅಧ್ಯಕ್ಷತೆಯಲ್ಲಿ, ಬಿಲ್ಲವರ ಸಭೆಯೊಂದು ಜರಗಿತು. ಶ್ರೀ ಡಿ.ಎಂ. ಎ. ಗಜರಾಜ್‌ರವರು ಮುಂಬಾಯಿಯಲ್ಲಿ ಸ್ಥಾಪಿಸಲ್ಪಟ್ಟ ಈ ಯೂನಿಯನಿನ ಚರಿತ್ರೆಯನ್ನೂ, ಅದರ ಕ್ರಮ, ನಿಬಂಧನೆಗಳನ್ನೂ, ವಿವರಿಸಿ ವಿಸ್ತರಿಸಿದ ನಂತರ, ಸ್ವಗ್ರಾಮಗಳಲ್ಲಿಯ ಸಮಸ್ತ ಬಂಧುಗಳ ಸಹಕಾರವನ್ನು ವಿನಯ ಪೂರ್ವಕ ಕೋರಿಕೊಂಡರು.— ಅಧ್ಯಕ್ಷರು ಈ ಯೂನಿಯನಿನ ಉತ್ತರೋತ್ತರವನ್ನು ಬಯಸಿ ಭಾಷಣವಿತ್ತರು. ತರುವಾಯ ಊರಿನ ತಿಂಗಳುಗಳ ತನಕ, ಹದಿನೈದು ಮಂದಿಯ ಸ್ಥಳೀಯರೊಂದ, ಒಂದು ತಾತ್ಕಾಲಿಕ ಕಾರ್ಯಕಾರೀ ಸಮಿತಿಯನ್ನು ಚುನಾಯಿಸಿ, ಯೂನಿಯನಿಗೆ ಬೇಕಾದ ಎಲ್ಲಾ ವ್ಯವಸ್ಥೆಯನ್ನು ಮಾಡುವ ಹಕ್ಕು ಸ್ವಾತಂತ್ರ್ಯತೆಯನ್ನು ಈ ಸಮಿತಿಗೆ ಕೊಡಲಾಯಿತು. ಬಳಿಕ ಲಘು ಫಲಾಹಾರ, ಧನ್ಯವಾದಗಳೊಂದಿಗೆ ಸಭಾ ವಿಸರ್ಜನೆಯಾಯಿತು.

MATRIMONIAL.

Wanted a fair Looking house-hold trained Kanarese Brahmin bride bellow 20 years (Widow-entirely no objection) to marry a middle class high caste Madhwa Brahmin youth Apply to:-

X

C/o **"Navayuga" Udipi.**

ಬರ್ಮಾ ರಸ್ತೆಯ ಬಾಗಿಲಿಗೆ ಜಪಾನರ ಅಡ್ಡಗಾಲು

ಸಿಗ್‌ಫ್ರೆಡ್ ಸರಹದ್ದಿನಲ್ಲಿ ಭೀಕರ ಕಾಳಗ

ಪಶ್ಚಿಮ ರಂಗದಲ್ಲಿ

ಅತ್ಯುಗ್ರ ಹಾಗೂ ಚರಿತ್ರಾರ್ಹ ಹೋರಾಟವು ಎಂದಿನಂತೆ ದೃಢವಾಗಿ ಸಾಗುತ್ತಿದೆ. ಸಿಗ್‌ಫ್ರೆಡ್ ಕೋಟೆಗಳ ವಳಯಗಳಲ್ಲಿ ಅತಿ ಭೀಕರ ಕಾಳಗವೀಗ ಆರಂಭವಾದಂತಿದೆ. ಸಾರ್ ಕ್ಷೇತ್ರದಲ್ಲಿ ಪ್ರಬಲ ಟ್ಯಾಂಕು ದಳಗಳನ್ನು ಮುಂದೊಡ್ಡಿ ಜರ್ಮನರು ಹೂಡಿದ ಪ್ರತಿಧಾಳಿಗಳ ನಿರರ್ಥಕವಾಗಿವೆ ಒಂದೆಡೆಯಿಂದ ರೋವರ್ ಹೊಳೆಗಭಿಮುಖವಾಗಿ ಅಮೇರಿಕದ ಪ್ರಥಮ ಸೇನೆ ಹೊಸ ಧಾಳಿಯಾರಂಭಿಸಿ ಮುಂದೊತ್ತುತ್ತಿರುವ ವಾರ್ತೆ ಬಂದಿದೆ. ಡಚ್ ವಲಯದ ರಣಕ್ಷೇತ್ರಗಳಲ್ಲಿ ಹೊಳೆಯ ಕಟ್ಟುಗಳನ್ನು ಕಡಿದುಬಿಟ್ಟು ಜರ್ಮನರು ಕೆಲವು ಮೈಲುಗಳವರೆಗೂ ಜಲಪ್ರಳಯವನ್ನುಂಟುಮಾಡಿದ್ದಾರೆಂದೂ ನೆರೆಯು ಪಶ್ಚಿಮಾಭಿಮುಖವಾಗಿ ಹರಿದುಬರುತ್ತಿರುವದರಿಂದ ಮಿತ್ರಸೇನೆಗಳು ಹಿಂದೆಗೆದು ನಿಲ್ಲುವಂತಾಗಿದೆಯೆಂದೂ ತಿಳಿದುಬರುತ್ತದೆ. ಅಂತೂ ಜರ್ಮನ್ ಗಡಿಯಲ್ಲಿ ಏಕಪ್ರಕಾರ ಕಠಿಣಹೋರಾಟ ನಡೆದಿದೆ

ಗೋಬೆಲ್ಸನ ಹೆದರಿಕೆ

'ಡಾಸ್‌ರೀಖ್' ಪತ್ರಿಕೆಯಲ್ಲೊಂದು ಲೇಖನ ಬರೆಯುತ್ತಾ ಜರ್ಮನ್ ಪ್ರಚಾರ ಮಂತ್ರಿ ಡಾ| ಗೋಬೆಲ್ಸನು ರಾಷ್ಟ್ರವಿದಿರಿಸಿರುವ ಅಪಾಯವನ್ನು ವರ್ಣಿಸಿದ್ದಾನೆ 'ನಾವೀಗ ಗೋಡೆಗೆ ಬೆನ್ನು ಕೊಟ್ಟು ಹೋರಾಡುತಿದ್ದೇವೆ. ಇದರಿಂದ ನಮಗನುಕೂಲವಿರಬಹುದು; ಆದರೆ ಅಪಾಯವೂ ಅಧಿಕವಿದೆ. ಕಳೆದ ಆಗೋಸ್ತು, ಸೆಪ್ಟಂಬರಿನಲ್ಲಿ ಇದ್ದ ದುಃಸ್ಥಿತಿಯೀಗ ಉಳಿದಿಲ್ಲವೆಂಬುದು ನಿಜ ಆದರೆ ಇನ್ನೂ ದೊಡ್ಡ ಅಪಾಯಗಳು ನಮ್ಮನ್ನು ಕಾದಿವೆ' ಎಂದು ಎಚ್ಚರಿಸಿ ಮಿತ್ರರ ಆಕಾಶ ಧಾಳಿಯು ಮಾಡಿರುವ ಅನಾಹುತವನ್ನೊಪ್ಪಿಕೊಂಡಿದ್ದಾನೆ ಇದಕ್ಕೊಂದು ಶಮನವನ್ನು ಕಂಡು ಹಿಡಿಯಲು ಈ ತನಕವಾಗಲಿಲ್ಲವೆಂದೂ, ಆದರೆ ವಿಚಿತ್ರ ಆಕಾಶಧಾಳಿಯನ್ನು ಅತಿ ನಷ್ಟದಾಯಿಯಾಗುವಂತೆ ಮಾಡುವ ಪ್ರಯತ್ನ ನಡೆದಿದೆಯೆಂದೂ ಗೋಬೆಲ್ಸನ ಅಂಬೋಣ.

ರಶ್ಯದ ಯುದ್ಧ

ಹಂಗೇರಿಯಲ್ಲಿ ಪ್ರಧಾನ ನಗರ ಬುಡಾಪೆಸ್ಟನ್ನು ವಶಪಡಿಸಿಕೊಳ್ಳುವದರಲ್ಲಿ ಕೆಂಪು ಸೇನೆಯೀಗ ನಿರತವಾಗಿದೆ. ಅದರ ರಕ್ಷಣಾ ವ್ಯವಸ್ಥೆಯು ಇಷ್ಟರಲ್ಲೇ ನುಚ್ಚುನುರಿಯಾದ ವಾರ್ತೆ ಬಂದಿದೆ. ಪೂರ್ವ ಮತ್ತು ದಕ್ಷಿಣದಿಂದ ಕೆಂಪುಸೇನೆಯು ಬುಡಾಪೆಸ್ಟಿನ ಮೇಲೇನೇ ತಾಡನ ಕೊಡುತ್ತಿದೆ. ಹಂಗೇರಿ ಸರಕಾರವು ರಾಜಧಾನಿಯಿಂದ ಬೇರೆ ಕಡೆಗೆ ಪಲಾಯನ ಮಾಡಿದೆ ಯುಗೊಸ್ಲೋವಿಯದಿಂದ ಆಸ್ಟ್ರಿಯಾಕ್ಕೆ ಹಿಂದೆಗೆಯುತ್ತಿರುವ ಜರ್ಮನರ ಪಥಗಳ ಮೇಲೇನೇ ಮಾರ್ಶಲ್ ಟಿಟೋರ ಸೇನೆ ಪ್ರಬಲ ಧಾಳಿಯಾರಂಭಿಸಿದೆ ರಶ್ಯನ್ ವಲಯದ ಇತರ ರಣರಂಗಗಳಿಂದ ಗಣನೀಯ ವಾರ್ತೆಯೇನೂ ಬರುತ್ತಿಲ್ಲ ಮಾರ್ಶಲ್ ಸ್ಟಾಲಿನರಾರಂಭಿಸಬಹುದೆಂದಿದ್ದ ನೂತನ ಮಹಾಧಾಳಿಯೂ ಈ ತನಕ ಆರಂಭವಾಗಿಲ್ಲ.

ರಶ್ಯಾ-ಫ್ರಾನ್ಸ್ ಒಪ್ಪಂದ

ಸ್ವತಂತ್ರ ಫ್ರಾನ್ಸಿನ ತಾತ್ಕಾಲಿಕ ಸರಕಾರದ ಪ್ರಮುಖರಾಗಿರುವ ಜನರಲ್ ಡಿ. ಗೋಲೆಯವರು ಮೋಸ್ಕೋವಿಗೆ ಹೋಗಿ ಸ್ಟಾಲಿನರೊಡನೆ ಸಂಭಾಷಿಸಿ 'ಪ್ರಾಯಶಃ ಎಲ್ಲಕ್ಕಿಂತ ಭದ್ರವಾದ ಮತ್ತು ಹೃತ್ಪೂರ್ವಕ ಸಂಬಂಧ ನಮ್ಮದು' ಎಂಬ ಮಾರ್ಮಿಕ ಮಾತಿನಿಂದ ಫ್ರಾನ್ಸ್ ರಶ್ಯಾ ಮೈತ್ರಿಯನ್ನು ಚಿತ್ರಿಸಿದ್ದರು. ಈಗ ಪರಸ್ಪರ ಮೈತ್ರಿ ಮತ್ತು ಸಹಾಯದ ಒಂದು ಒಪ್ಪಂದವು ರಶ್ಯಾ-ಫ್ರಾನ್ಸಿನೊಳಗೆ ಆಗಿದೆ. ಡಿ ಗೋಲೆಯವರು ಫ್ರಾನ್ಸಿಗೆ ಮರಳಿದ್ದಾರೆ ಇಬ್ಬರೊಳಗೆ ಅತ್ಯಂತ ಸೌಹಾರ್ದಪರ ಭಾವನೆಯಿದೆಯೆಂದೂ, ಎಲ್ಲಾ ವಿಷಯಗಳ ಪೂರ್ಣ ಸಮ್ಮತದ ಕರಾರು ಪತ್ರವೊಂದಕ್ಕೆ ದಶಂಬರ್ 10ರಲ್ಲಿ ಇಕ್ಕಡೆಯವರ ಸಹಿ ಬಿತ್ತೆಂದೂ ಪ್ರಕಟವಾಗಿದೆ.

ಚೀನದ ದುರವಸ್ಥೆ

ಮಿಕ್ಕೆಲ್ಲಾ ಯುದ್ಧರಂಗಗಳಿಗಿಂತಲೂ ಆತ್ಯಾತುರದಿಂದ ನೋಡಬೇಕಾದ ಕ್ಷೇತ್ರವೆಂದರೆ ಚೀನ. ಶಾಂತ ಸಮುದ್ರದಲ್ಲಿ ಜಪಾನರನುಭವಿಸುತ್ತಿರುವ ಸೋಲಿನ ಹೃದಯಂಗಮ ವಾರ್ತೆಗಳು ಬರುತ್ತಿರುವಾಗಲೆ ಚೀನದಲ್ಲವರು ಆಡುತ್ತಿರುವ ಪ್ರಲಯ ನಾಟಕವು ಪ್ರಜಾಸತ್ತಾತ್ಮಾದಿಗಳ ಎದೆಬಿರಿಯುವಂತಹದಿದೆ ಚೀನದ ಪೂರ್ವ ದಕ್ಷಿಣ ಪ್ರಾಂತ್ಯಗಳಲ್ಲಿದ್ದ ಎಲ್ಲಾ ಅಮೇರಿಕನ್ ವಿಮಾನನಿಲ್ದಾಣಗಳನ್ನೂ ಜಪಾನರು ವಶಪಡಿಸಿಕೊಂಡಿದ್ದಾರೆ. ಹಾಗೆಯೇ ರಾಜಧಾನಿ ಚುಂಕಿಂಗಿನ ಹೆಬ್ಬಾಗಿಲಾದ ಕ್ವೀಚೊ ಪ್ರಾಂತ್ಯದೊಳಗೆ ನುಗ್ಗಿದ್ದಾರೆ ಈಗ ಕ್ವಿಯಾಂಗನ್ನು ವಶಪಡಿಸಿಕೊಳ್ಳುವ ಸಾಹಸದಲ್ಲಿದ್ದಾರೆ ಕ್ವಿಯಾಂಗನ್ನು ಸ್ವಾಧೀನಪಡಿಸಿಕೊಳ್ಳಲು ಅವರು ಶಕ್ತರಾದರೆ ಆ ಮೇಲೆ ಚೀನದ ಅವತಾರ ಬಹುಮಟ್ಟಿಗೆ ಸಮಾಪ್ತಿಯಾದಂತೆ

ಪೂರ್ತಿ ದಿಗ್ಬಂಧನ

ಕ್ವಿಯಾಂಗನ್ನು ಹಿಡಿದ ಮೇಲೆ ಯುನ್ನಾನ್ ಪ್ರಾಂತ್ಯದ ಕುನ್ಮಿಂಗಿನ ಮೇಲೆ ಧಾಳಿಯಿಡುವದು ಸುಲಭ. ಈ ಕುನ್ಮಿಂಗೇ ಈಗ ಚೀನದ ಅನ್ನಕೋಶದಂತಿದೆ. ಬರ್ಮಾ ರಸ್ತೆಯು ತಿರುಗುವದು ಇಲ್ಲಿಯೇ. ಮಾತ್ರವಲ್ಲ, ಹಿಂದುಸ್ಥಾನದಿಂದ ಆಕಾಶಮಾರ್ಗವಾಗಿ ಸರಬರಾಯಿಯಾಗುತ್ತಿರುವ ಸಾಮಾನುಗಳ ವಿತರಣೆಯಾಗುತ್ತಿರುವದೂ ಇಲ್ಲಿಯೇ. ಅದನ್ನೇ ಹಿಡಿದುಕೊಂಡು ಯುನ್ನಾನ್ ಪ್ರಾಂತ್ಯವನ್ನು ಜಪಾನರು ವಶಪಡಿಸಿಕೊಂಡು ನಿಂತರೆ ಮತ್ತೆ ಬರ್ಮಾರಸ್ತೆ ತೆರೆದರೂ ಜಪಾನರಿಗೇನೇ ಸರಬರಾಯಿ ಹೋಗಬೇಕಾದೀತು! ಹಿಂದುಸ್ಥಾನದಿಂದ ಚೀನದ ವರೆಗೆ ಅತಿ ಶ್ರಮ ಮತ್ತು ವ್ಯಯದಿಂದ ಇತ್ತೀಚೆಗೆ ರಚಿಸಲ್ಪಟ್ಟಿರುವ 'ಪೈಪ್ ಲೈನು' ಕೂಡಾ ನಿರರ್ಥಕವಾಗುವುದು.

ಮುಂದೇನು?

ಮಿತ್ರ ರಾಷ್ಟ್ರಗಳು ಮತ್ತು ಚೀನದೊಳಗಿನ ನೆಲ ಸಂಬಂಧವನ್ನು ಪೂರ್ತಿ ಕಡಿದುಬಿಡಬೇಕೆಂಬುದೇ ಜಪಾನರ ಇಂದಿನ ಆತುರವೆಂಬುದು ಸ್ಪಷ್ಟ. ಆದುದರಿಂದಲೇ ಅವರು ಇತ್ತೀಚೆಗೆ ಇಂಡೋ ಚೀನದಿಂದಲೂ ಚೀನದ ಮೇಲೆ ಹೊಸ ಧಾಳಿ ಹೂಡಿದುದು. 1938ರಲ್ಲಿ ಹೇಂಕೋ ಮತ್ತು ಕೇಂಟನ್‌ಗಳನ್ನು ಕಳಕೊಂಡಂದಿನಿಂದಲೂ ಚೀನವು ಆರ್ಥಿಕ ದುರವಸ್ಥೆಯಲ್ಲಿದೆ. ಕಮ್ಯೂನಿಸ್ಟ್ ಮತ್ತು ಚಿಯಾಂಗರೊಳಗಿನ ಜಗಳದಿಂದಾಗಿ ಚಿಯಾಂಗರ ಅರ್ಧ ಮಿಲಿಯ ಸೇನೆಯು ರಶ್ಯಾ-ಚೀನಾ ಗಡಿಯಲ್ಲಿ ಕಾವಲಿಗೇನೇ ನಿಲ್ಲಬೇಕಾಗಿ ಬಂದಿದೆ. ಈಗ ಅವುಗಳಲ್ಲಿ ಬಹು ಭಾಗವನ್ನು ಚಿಯಾಂಗರು ಜಪಾನೀ ಯುದ್ಧಕ್ಕೆಳಿಸಿದ್ದಾರೆ ಎಂಬುದು ಸಂಕ್ಷೇಪ ವಾರ್ತೆ. ಕಮ್ಯೂನಿಸ್ಟರೊಡನೆ ರಾಜಿಯಾದರೆ ಇನ್ನಾದರೂ ಚೀನವುಳಿಯಬಹುದೆಂಬ ಆಶೆಯಿದೆ, ಜ. ವೆಡೆಮೆಯರಂತಹ ಮಿತ್ರ ಸೇನಾನಿಗಳೇ ಚೀನದ ಕುರಿತು ಚಳವಳ ಪ್ರದರ್ಶಿಸಿದ್ದಾರೆ

ಒರಿಸ್ಸಾದ ಮೇಲೆ ಆಕಾಶ ಧಾಳಿ

ದಶಂಬರ್ ತಾ 7ರಲ್ಲಿ ಕೆಲವು ಜಪಾನೀ ವಿಮಾನಗಳು ಒರಿಸ್ಸಾ ಕರಾವಳಿಯ ಮೇಲೆ ಧಾಳಿ ನಡೆಸಿದವು ಎಂದು ಪ್ರಕಟವಾಗಿದೆ. ಆದ ಜನ ಹಾನಿ ಮತ್ತು ಸೊತ್ತು ನಷ್ಟವು ಅಲ್ಪವಂತೆ.

ಟೋಕಿಯೋದ ಮೇಲೆ ಧಾಳಿ

ಅಮೇರಿಕದ ಕೋಟೆಗಳ ವಿಮಾನಗಳು ತಾ 10ರಲ್ಲಿ ಜಪಾನ್ ರಾಜಧಾನಿ ಟೋಕಿಯೋದ ಮೇಲೆ ಎರಡು [illegible] ನಡೆಸಿದವು. ಸುಮಾರು 650 ರಕ್ಷಣಾ ವಿಮಾನಗಳ ಜತೆಯಲ್ಲಿ 500 ಧಾಳಿಗ ವಿಮಾನಗಳು ತಾ 9ನೇ ರಾತ್ರಿ ಬರ್ಲಿನಿನ ಮೇಲೂ ಧಾಳಿಯಿಟ್ಟವು.

ಚಿಮೂರು ಪ್ರಕರಣ

ಭನ್ಸಾಲಿ ಉಪವಾಸ ಪ್ರಸಿದ್ಧಿಯ, 1942ರ ಆಗೋಸ್ತು ಗಲಭೆಯ ಸಂಬಂಧದ ಚಿಮೂರು ದೊಂಬಿಯಲ್ಲಿ ಮರಣಶಿಕ್ಷೆಗೊಳಗಾಗಿದ್ದ 9 ಮಂದಿಯ ಪರವಾಗಿ ಪ್ರಿವಿ ಕೌನ್ಸಿಲಿಗೆ ಅಪೀಲಾಗಿತ್ತು. ಆ ಪೀಲ್ ಡಿಸ್‌ಮಿಸ್ ಮಾಡಲ್ಪಟ್ಟಿದೆ

ಅಲ್ಲಾಭಕ್ಸ್ ಕೊಲೆಯ ಪ್ರತಿಧ್ವನಿ

ಸಿಂಧಿನ ಮಿ. ಅಲ್ಲಾಭಕ್ಷರ ಕೊಲೆಯ ಸಂಬಂಧವಾಗಿ ದಸ್ತಗಿರಿಮಾಡಲ್ಪಟ್ಟಿದ್ದ ಮಾಜಿ ಮಂತ್ರಿ ಮಿ. ಕುಹ್ರೋರವರ ವಿಚಾರಣೆಯೀಗ ನಡೆಯುತ್ತಿದೆ. ಸರಕಾರದ ಪರವಾಗಿ 30 ಮಂದಿ ಸಾಕ್ಷಿಗಾರರಿದ್ದಾರೆ.

ಸಪ್ರು ಸಮಿತಿ

ಜಾತೀಜಗಳ ತೀರ್ಮಾನಕ್ಕಾಗಿ ಸರ್. ಸಪ್ರುಗಳ ಅಧ್ಯಕ್ಷತೆಯಲ್ಲಿ ಸೇರಲಿರುವ ಸಮಿತಿಯ ಸದಸ್ಯರಾಗಲು 23ಕ್ಕೆ ಮಿಕ್ಕಿದ ಪ್ರಮುಖ ನ್ಯಾಯವಾದಿಗಳು ಒಪ್ಪಿದ್ದಾರೆ, ಇನ್ನೂ ಕೆಲವರನ್ನು ಸೇರಿಸಿಕೊಳ್ಳಲಾಗುವದು. ಈಗ ಬೇರೆಬೇರೆ ಪಕ್ಷ ಮತ್ತು ವ್ಯಕ್ತಿಗಳಿಗೆ ಕಳುಹಿಸಿಕೊಡುವದಕ್ಕಾಗಿ ಪ್ರಶ್ನಾವಾಲಿಕೆ ತಯಾರಾಗುತ್ತಿದ.

ದಕ್ಷಿಣಾಫ್ರಿಕದಲ್ಲಿ

ಹಿಂದೀ ಸರಕಾರದ ಪ್ರತೀಕಾರದಿಂದ ಬುದ್ಧಿ ಕಲಿತ ದಕ್ಷಿಣಾಫ್ರಿಕ ಸರಕಾರವು ಹಿಂದೀಯರ ವಿರುದ್ಧವಿದ್ದ ತನ್ನ ನವಶಾಸನದ ಬದಲಿಗೆ ಮುಂದಿನ ತೀರ್ಮಾನವಾಗುವ ವರೆಗೆ ಪೆಗ್ಗಿಂಗ್ ಮಸೂದೆಯನ್ನೇ ಜಾರಿಯಲ್ಲಿಡಲು ಒಪ್ಪಿದೆ. ಆದರೆ ಹಿಂದೂಸ್ಥಾನ ಮತ್ತು ದ. ಆಫ್ರಿಕದ ಧುರೀಣರು ಒಂದು ದುಂಡು ಮೇಜಿನ ಸಮ್ಮೇಲನದಲ್ಲಿ ಒಟ್ಟಾಗದೆ ತಮಗೆ ನ್ಯಾಯದಾನವಾಗಲಾರದೆಂದು ಆಫ್ರಿಕ ಹಿಂದೀಯರು ಅಭಿಪ್ರಾಯ ವ್ಯಕ್ತಮಾಡಿದ್ದಾರೆ.

ಆಸ್ಯಕ್ಕೆ ಸ್ವಾತಂತ್ರ್ಯ?

ಆಸ್ಯದ ಜನರಲ್ಲಿ ಮೂಡಿರುವ ರಾಷ್ಟ್ರೀಯ ಸ್ವತಂತ್ರತಾಭಾವವನ್ನು ಸೇನಾಶಕ್ತಿಯಿಂದ ಕೂಡಾ ದಮನಿಸಲು ಸಾಧ್ಯವಿಲ್ಲ. ಜಪಾನರಿಂದ ಗೆದ್ದುಕೊಂಡ ರಾಷ್ಟ್ರಗಳ ಆಡಳಿತೆಯನ್ನು ಆ ಮೊದಲಿನವರಿಗೇನೇ ಹಿಂತಿರುಗಿ ಕೊಡುವ ಬದಲಿಗೆ ತಾತ್ಕಾಲಿಕವಾಗಿ ಜಾಗತಿಕ ಮೇಲ್ವಿಚಾರಣೆಯಿಡಬೇಕು ಆ ಮೇಲೆ ನಿಶ್ಚಿತಾವಧಿಯಲ್ಲಿ ಸ್ವತಂತ್ರಾಡಳಿತೆ ಸ್ಥಾಪಿಸಬೇಕು ಎಂದು ಅಮೇರಿಕದ ವಿದೇಶಿ ಸಂಬಂಧ ಧೋರಣೆಯ ಸಂಸ್ಥೆ ಪ್ರಕಟಿಸಿದೆ.

ಶಾಂತಸಮುದ್ರಕ್ಕೆ ಬ್ರಿಟಿಷ್ ನಾವೆ.

[illegible] ಜಪಾನ ಎದುರಿಕ್ಕೆ ಸಾಧ್ಯವಿದ್ದಷ್ಟು ಸಹಾಯ ಕಳುಹಿಸುವೆವೆಂಬ ಮಿ. ಚರ್ಚಿಲ್ಲರ ಆಶ್ವಾಸನೆಗನುಸಾರವಾಗಿ ಎಡ್ಮಿರಲ್ ಫ್ರೇಸರರ ನಾಯಕತ್ವದಲ್ಲಿ ಬ್ರಿಟಿಷರ ಪ್ರಬಲ ಹಡಗಪಡೆಯೊಂದು ಶಾಂತಸಮುದ್ರಕ್ಕೆ ಬಂದಿದೆ.

ಜಪಾನಿನಲ್ಲಿ ಭೂಕಂಪ

ಜಪಾನಿನಲ್ಲಿ ತಾ 7ರಲ್ಲಿ ಭೂಕಂಪವಾಗಿದೆ. ನಾಗೋಯಾ ಮತ್ತು ಒಸಾಕಗಳೂ ಹಾನಿಗೊಳಗಾಗಿರುವದರಿಂದ ಹೆಚ್ಚಿನ ನಷ್ಟವಾಗಿರಬೇಕೆಂದು ನಂಬಲಾಗಿದೆ.

ನಾಜೀ ಸಬ್ ಮೆರೀನ್ ಸುಧಾರಣೆ

ಯು. ಬೋಟು ಹಾವಳಿಯೀಗ ಬಹಳ ಮಟ್ಟಿಗೆ ತಗ್ಗಿದೆಯಾದರೂ ಜರ್ಮನರು ಸುಮ್ಮಗಿಲ್ಲವೆಂದೂ, ಅವುಗಳಲ್ಲಿ ಹೊಸ ಮಾದರಿ ಮತ್ತು ಹೊಸ ಸುಧಾರಣೆಮಾಡಿಕೊಂಡು ನಾಜಿಗಳು ಪುನಃ ಯು. ಬೋಟು ದಾಳಿಯನ್ನು ಹೆಚ್ಚಿಸುವ ಸಂಭವವಿದೆಯೆಂದೂ ತಾ. 9ರಲ್ಲಿ ಚರ್ಚಿಲ್ ರುಜುವೆಲ್ಟರು ಜತೆಯಾಗಿ ಹೊರಡಿಸಿದ ವರದಿಯಲ್ಲಿಂದಿದ್ದಾರೆ. ಯು. ಬೋಟು ತಯಾರಿಯನ್ನೇ ಈಗ ನಿಲ್ಲಿಸಲಾಗಿದೆ ಎಂಬ ವಾರ್ತೆಯು ಪ್ರಾಯಶಃ ಜರ್ಮನರೇ ಆಡಿರುವ ಕಪಟನಾಟಕವಾಗಿರಬೇಕೆಂದು ಅವರ ಅಂಬೋಣ.

ಈಗಿನ ಕಾಗದ ನಿಯಂತ್ರಣ ಕಾನೂನಿನ ದೆಸೆಯಿಂದಾಗಿ

1945ನೇ ವರ್ಷದ

ನವಭಾರತ ಡೈರಿಗಳು

ಪ್ರಕಟಿಸಲ್ಪಡುವುದಿಲ್ಲ.

ಆದುದರಿಂದ ನಮ್ಮ ಗ್ರಾಹಕರಾರೂ ಡೈರಿಗಳ ಬಗ್ಗೆ ಪತ್ರ ವ್ಯವಹಾರ ಮಾಡಬಾರದಾಗಿ ಈ ಮೂಲಕ ಅಪೇಕ್ಷಿಸಲಾಗುತ್ತದೆ

ನವಭಾರತ ಪುಸ್ತಕ ಭಂಡಾರ, ಉಡುಪಿ.

ಉಡುಪಿ

ಅವಲಕ್ಕಿ ಸ್ಟಾಕಿನ ಕುರಿತು ಜಿಲ್ಲಾ ಕಲೆಕ್ಟರರ ಪ್ರಕಟಣೆ— ಮಂಗಳೂರು, ಕಾಸರಗೋಡು, ಉಡುಪಿ ರೇಶನ್ ಪದ್ಧತಿ ಜ್ಯಾರಿಯಿರುವ ಪ್ರದೇಶದೊಳಗೆ ಒಂದು ಮುಡಿ (42 ಸೇರು)ಗಿಂತ ಜಾಸ್ತಿ ಅವಲಕ್ಕಿ ಸ್ಟಾಕು ಮಾಡಿದವರು ತಾ 25ರೊಳಗಾಗಿ ಆಯಾಯಾ ಪ್ರದೇಶದ ರೇಶನ್ ಆಫೀಸರರಿಗೆ ಈ ಕೆಳಗೆ ಸೂಚಿಸಿದ ಮಾಹಿತಿಯೊಂದಿಗೆ ಸ್ಟೇಟ್‌ಮೆಂಟನ್ನು ಹಾಜರು ಮಾಡಬೇಕು. ಇಲ್ಲವಾದರೆ ತಕ್ಕ ಶಿಕ್ಷೆಗೊಳಗಾಗಬೇಕಾಗುವುದು.

1. ಪೂರ್ಣ ಹೆಸರು (ದಪ್ಪಕ್ಷರದಲ್ಲಿ ಸ್ಪಷ್ಟವಾಗಿ ಬರೆಬೇಕು) 2 ವಿಳಾಸ 3- ಸ್ಟಾಕಿನಲ್ಲಿರುವ ಅವಲಕ್ಕಿ (a) ಸ್ವಂತ ಲೆಖ್ಖದ್ದು (b) ತನ್ನ ಮತ್ತು ಇನ್ನೊಬ್ಬರ ಜೋಯಿಂಟ್ ಲೆಖ್ಖದ್ದು (c) ತಾನು ಮತ್ತು ಇತರರು ಒಟ್ಟಾಗಿದ್ದ ಕಂಪೆನಿಯ ಲೆಖ್ಖದ್ದು 4 ಮೇಲೆ ನಮೂದಿಸಿದ ಅವಲಕ್ಕಿ ಸ್ಟಾಕು ಎಲ್ಲೆಲ್ಲಿ ಎಷ್ಟೆಷ್ಟು ಯಾರ ಯಾರ ಹೆಸರಲ್ಲಿರಿಸಲಾಗಿಯದೆ ಎಂಬುವದು ಸ್ಪಷ್ಟವಾಗಿರತಕ್ಕದ್ದು. 5. ಒಬ್ಬನ ಯಾ ಹೆಚ್ಚು ಮಂದಿ ಪಾಲುಗಾರರಿದ್ದಲ್ಲಿ ಅವರವರ ಪೂರ್ಣ ಹೆಸರು ಮತ್ತು ವಿಳಾಸ ನಮೂದಿಸಬೇಕು.

ಕ್ರಿಶ್ಚಿಯನ್ ಹ್ಯಾಸ್ಕೂಲ್ ವರ್ಧಂತಿ ಸಮಾರಂಭವು—ತಾ 8ರಲ್ಲು ಸಂಜೆ ಖಾನ್ ಸಾಹೇಬ್ ಎಚ್. ಎಸ್ ಹುಸ್ಸೇನ್ ಸಾಹೇಬ್ ಬಹದೂರ್, ಎಮ್. ಎಲ್. ಎ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಶ್ರೀ ಪಿ. ಎಸ್. ಕುದ್ವರು ಶಾಲೆಯ ಸ್ಪಸ್ತಿವಾಚನ ಮಾಡಿದರು. ತದನಂತರ ಹೆಡ್ಮಾಸ್ತರ್ ಮಿ| ಎ. ಎಸ್. ಕಾರಟರು ಶಾಲಾವರದಿಯನ್ನೋದಿದರು. ಇನಾಮು ಹಂಚೋಣವಾದ ಬಳಿಕ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶಾಲೆಯ ಅಭಿವೃದ್ಧಿಯನ್ನು ಕೊಂಡಾಡಿ, ಶಾಲೆಯು ಕಾಲೇಜಾಗಿ ಪರಿಣಮಿಸಲೆಂದು ಕೋರಿದರು. ನಾಟಕಾಭಿನಯದೊಂದಿಗೆ ಅಂದಿನ ಕಾರ್ಯಕ್ರಮ ಕೊನೆಗೊಂಡಿತು. ಮರುದಿನ ಸಂಜೆಯೂ ವಿವಿಧ ವಿನೋದಾವಳಿಗಳ ಪ್ರದರ್ಶನ ನಡೆಯಿತು.

ಕ್ರಿಕೆಟ್ ಪಂದ್ಯಾಟಕ್ಕೆ ಪ್ರೋತ್ಸಾಹ—ಕಳೆದವಾರ ಅಜ್ಜರಕಾಡು ಗಾಂಧಿ ಮೈದಾನದಲ್ಲಿ ಉಡುಪಿ ಟೀಮಿನವರಿಗೂ ಕಾರ್ಕಳ ಕುಂದಾಪುರ ಸಂಯುಕ್ತ ಟೀಮಿನವರಿಗೂ ಕ್ರಿಕೆಟ್ ಪಂದ್ಯಾಟ ಜರಗಿ ಉಡುಪಿ ಟೀಮಿನವರು ಜಯಶೀಲರಾಗಿರುವಷ್ಟೆ. ಈ ಪಂದ್ಯಾಟದಲ್ಲಿ ಭಾಗ ವಹಿಸಿದವರಿಗೆ ಹೋಗಿ ಬರುವ ಖರ್ಚು, ಊಟ ಉಪಚಾರಾದಿಗಳ ವೆಚ್ಚ ಮತ್ತು ಪಾರಿತೋಷಕ ಮೆಡಲುಗಳ ಬೆಲೆ ಕೂಡ ರೂಪಾಯಿ 157-15-9ನ್ನು ಶ್ರೀಕೃಷ್ಣಾಪುರ ಮಠದ ಶ್ರೀ ವಿದ್ಯಾರತ್ನತೀರ್ಥ ಶ್ರೀಪಾದಂಗಳವರು ಕೊಟ್ಟಿರುವರೆಂದು ತಿಳಿದುಬರುತ್ತದೆ.

ಟೀಪಾರ್ಟಿ-ಜನಪ್ರಿಯ ಡಾ| ಸಂದರ್ಶಾಮ ಪೈಗಳವರು ತಮ್ಮ ಪುತ್ರಿಯ ವಿವಾಹಸಮಾರಂಭದ ಸಲುವಾಗಿ ತಾ. 11ರಲ್ಲು ಆಪ್ತ ಗೃಹಸ್ಥ ಗೃಹಿಣಿಯರಿಗೆಲ್ಲಾ ಟೀಪಾರ್ಟಿಯನ್ನಿತ್ತರು.

ಬೆಳ್ತಿಗೆ ಅಕ್ಕಿ ಅಭಾವ-ಹೋಗಲಾಡಿಸಲು ಈಗ ತಾಲೂಕು ಸಪ್ಲೈ ಡಿಪೋಗಳಲ್ಲಿ ಜಮೆಯಾದ ಭತ್ತದ ಹೆಚ್ಚಿನಂಶವನ್ನು ಬೆಳ್ತಿಗೆ ಅಕ್ಕಿಯಾಗಿ ಮಾರ್ಪಡಿಸಲು ಸುಸಂಧಿ. ಸಂಬಂಧಪಟ್ಟವರು ಈ ಕಡೆ ನಿಗಾ ಕೊಡುವರೆಂದು ನಿರೀಕ್ಷೆ.

ದಕ್ಷಿಣ ಕನ್ನಡ ಜಿಲ್ಲೆಗೆ ವಿದ್ಯುತ್ ಶಕ್ತಿಯ ಪೂರೈಕೆ—ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿದ್ಯುತ್ ಶಕ್ತಿಯ ಪೂರೈಕೆಯ ಅತ್ಯಾವಶ್ಯಕತೆಯ ವಿಚಾರವಾಗಿ ಕಳೆದ ತಾ. ೧೦ರಂದು 'ಮುಕುಂದನಿವಾಸ'ದ ಪಟಾರದಲ್ಲಿ ಉಡುಪಿಯ ಹಾಗೂ ಸುತ್ತುಮುತ್ತಲಿನ ಗ್ರಾಮಸ್ಥರ ಮಹಾಸಭೆಯೊಂದು ಶ್ರೀ ಬಿ| ವೈಕುಂಠ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿತು. ನಮ್ಮ ಜಿಲ್ಲೆಯಲ್ಲೆಲ್ಲ ಅಗ್ಗವಾಗಿ ವಿದ್ಯುತ್ ಶಕ್ತಿಯ ಪೂರೈಕೆಯಾದರೆ ಅದು ಹೇಗೆ ಸಕಲ ತರದ ಚಿಕ್ಕದೊಡ್ಡ ಕೈಗಾರಿಕೆ ಮುಂತಾದ ಉದ್ಯಮಗಳ ಆರಂಭ ಅಭಿವೃದ್ಧಿಗಳಿಗೆ ಪ್ರಧಾನ ಬೆಂಬಲವಾಗಿ ಜಿಲ್ಲೆಯ ಏಳಿಗೆಯನ್ನು ಸಾಧಿಸೀತೆಂಬುದನ್ನೂ ಮುಂದೆ ಯುದ್ಧಾನಂತರದಲ್ಲಿ ಭೀಕರವಾಗಿ ಮರುಕೊಳಿಸಬಹುದಾದ ನಿರುದ್ಯೋಗ ಸಮಸ್ಯೆಯನ್ನು ಸುಲಭವಾಗಿ ನಿವಾರಿಸೀತೆಂಬುದನ್ನೂ ಬಗೆಗಾಣುವಂತೆ ವಿಶದವಾಗಿ ವಿವರಿಸಿದರು. ಡಾ| ಟಿ| ಮಾಧವ ಪೈಗಳು ಅಧ್ಯಕ್ಷರ ಅಭಿಪ್ರಾಯವನ್ನು ಸಮರ್ಥಿಸಿ ಅಂತಹ ವಿದ್ಯುತ್ ಶಕ್ತಿಯ ವ್ಯಾಪ್ತಿಯು ನಮ್ಮ ಜಿಲ್ಲೆಯ ಕರಾವಳಿಯನ್ನಲ್ಲದೆ ಒಳನಾಡುಗಳನ್ನೂ ಒಳಗೊಂಡರೆ ಈಗ ನಿರ್ಜನವಾಗಿ ಬಂಜರು ಬಿದ್ದಿರುವ ವಿಸ್ತಾರವಾದ ಮಲೆನಾಡು ನಾಡೂ ಜನವಸತಿಗೂ ಆರೋಗ್ಯಕ್ಕೂ ಕೃಷಿ ವಾಣಿಜ್ಯ ಉದ್ಯಮಗಳ ಉತ್ಕರ್ಷಕ್ಕೂ ಸಹಾಯಕವಾಗುವುದೆಂಬ ದೃಷ್ಟಿಯಿಂದ ನೋಡಿದರೆ ನಮ್ಮ ಜಿಲ್ಲೆಗೆ ಪೈಕರಾ ವಿದ್ಯುತ್‌ಶಕ್ತಿ ಸಂಗ್ರಹ ಕೇಂದ್ರಕ್ಕಿಂತ ಜೋಗದ ಕೇಂದ್ರವು ಸಮೀಪವೂ ಅನುಕೂಲವೂ ಇರುವ ಕಾರಣ ಅಲ್ಲಿಂದ ನಮ್ಮ ಜಿಲ್ಲೆಗೆ ವಿದ್ಯುತ್ ಶಕ್ತಿಯ ಪೂರೈಕೆಯಾಗುವಂತೆ ಜಿಲ್ಲೆಯವರೆಲ್ಲ ಯತ್ನಿಸಬೇಕೆಂದು ಸೂಚನೆಯಿತ್ತರು. ಅನಂತರ ವಿಚಾರವಿನಿಮಯಗಳು ನಡೆದು ಕೊನೆಗೆ ಜೋಗದ ಕೇಂದ್ರದಿಂದ ನಮ್ಮ ಜಿಲ್ಲೆಗೆ ವಿದ್ಯುತ್ ಶಕ್ತಿಯ ಪೂರೈಕೆಯನ್ನು ನೆರವೇರಿಸಿಕೊಡುವಂತೆ ಸರಕಾರವನ್ನು ಕೇಳಿಕೊಳ್ಳಬೇಕೆಂದು ಸರ್ವಾನುಮತದಿಂದ ನಿರ್ಣಯವಾಯಿತು. ಈ ನಿರ್ಣಯವನ್ನು ಮದ್ರಾಸು ಸರಕಾರಕ್ಕೂ ಯುದ್ಧೋತ್ತರ ಪುನರ್ರಚನಾ ಸಮಿತಿಗೂ ಸಂಬಂಧಪಟ್ಟ ಇತರ ಇಲಾಖೆಗಳಿಗೂ ಡಾ| ಮಾಧವಪೈಗಳು ಕಳುಹಿಸಿಕೊಡಬೇಕೆಂದೂ ತೀರ್ಮಾನವಾಯಿತು.

ಸರಕಾರದ ಆಹಾರ ಸಂಚಯದ ಧೋರಣೆ—ಜನತೆಯ ಪ್ರಮುಖ ಆಹಾರ ಸಾಮಗ್ರಿಗಳಾದ ಅಕ್ಕಿ ರಾಗಿ ಗೋಧಿ ಮೊದಲಾದ ಧಾನ್ಯಗಳ ವಹಿವಾಟನ್ನು ಖಾಸ ಹೊರತು ಬೇರೆ ಯಾರೂ ನಡಿಸಕೂಡದಾಗಿಯೂ ಅವುಗಳು ಗವರ್ನಮೆಂಟಿನವರ ಅಂಕೆಯಲ್ಲಿಯೇ ಇರತಕ್ಕದ್ದೆಂದೂ ಗವರ್ನಮೆಂಟಿನವರು ವಿಧಿಸಿರುತ್ತಾರೆ. ಹೀಗಿರುತ್ತಾ ರಾಷ್ಟ್ರದ ಪ್ರತಿಯೊಬ್ಬನ ಆಹಾರ ಪೂರೈಕೆಯ ಹೊಣೆಯು ಗವರ್ನಮೆಂಟಿನವರದ್ದೇ ಆಗಿರುತ್ತದೆ. ಈ ಜವಾಬ್ದಾರಿಯನ್ನು ಯೋಗ್ಯರೀತಿ ನಿರ್ವಹಿಸಲಾಗುವಂತೆ ಸರಕಾರೀ ಏಜಂಟರುಗಳು ದೇಶದ ಎಲ್ಲಾ ಉತ್ಪತ್ತಿಕಾರರಿಂದ ಆಹಾರ ವಸ್ತುಗಳನ್ನು ಸಂಗ್ರಹಿಸುತ್ತಲಿದ್ದಾರೆ.

ಕೃಷಿಕನಿಂದ ಸರಕಾರದ ಏಜಂಟರುಗಳು ಆಹಾರವಸ್ತುಗಳನ್ನು ಸ್ವಾಧೀನಪಡಿಸಿಕೊಳ್ಳುವಾಗ "ಆಹಾರದ ಉತ್ಪತ್ತಿಕಾರನು ತನ್ನ ಆವಶ್ಯಕತೆಗೆ ಬೇಕಾಗುವ ಧಾನ್ಯವನ್ನು ಧಾನ್ಯರೂಪದಲ್ಲಿಯೇ ಇಟ್ಟುಕೊಳ್ಳಲಾಗುವಂತೆ ಹೆಚ್ಚಿನ ಜಾಗರೂಕತೆ ತೆಗೆದುಕೊಳ್ಳತಕ್ಕದ್ದು. ಪ್ರತಿಯೊಬ್ಬ ರೈತನಿಗೂ, ಆತನಿಗೆ ಮತ್ತು ಆತನನ್ನು ಆಶ್ರಯಿಸಿಕೊಂಡಿರುವವರಿಗೆ ಮತ್ತು ಆತನ ಗ್ರಾಮಕ್ಕೆ ಬೇಕಾದ ಧಾನ್ಯಗಳಿಗೆ ಕೊರತೆಯಾಗಲಾರದೆಂಬ ಭರವಸೆಯು ಹುಟ್ಟತಕ್ಕದ್ದು" ಎಂಬದಾಗಿ ಇಂಡಿಯಾ ಗವರ್ನಮೆಂಟಿನ ಆಹಾರಖಾತೆಯ ಸ್ಪೆಶಲ್ ಅಫೀಸರರಾದ ಸಮುರ್ ಸೆಟ್ ಬಟ್ಲರರು, ಗವರ್ನಮೆಂಟಿನವರ ಅನುಸರಿಸಬೇಕಾಗಿ ಕೊಟ್ಟಿರುವ ಸೂಚನೆಗಳಲ್ಲಿ ತನ್ನ ಪ್ರಥಮ ಸೂಚನೆಯಾಗಿ ಅವರ ರಿಪೋರ್ಟಿನಲ್ಲಿ ಕಾಣಿಸಿರುತ್ತಾರೆ. ಮದರಾಸು ಗವರ್ನಮೆಂಟಿನವರು ಆ ಧೋರಣೆಗನುಸಾರವಾಗಿ ಅಕ್ಕಿ ವ ಬತ್ತವನ್ನು ಜಮೆ ಮಾಡುವಾಗ ತಮ್ಮ ನೌಕರರು ಅನುಸರಿಸಬೇಕಾಗಿ ಕೊಟ್ಟಿರುವ ಕ್ರಮಗಳನ್ನು ನವಯುಗದ ಕಳೆದ ಸಂಚಿಕೆಯಲ್ಲಿ ಸೂಚಿಸಿರುತ್ತದೆ. ಮದರಾಸು ಸರಕಾರದ ಸಿವಿಲ್ ಸಪ್ಲೈಸ್ ಕಮಿಷನರರಾದ ಡಬ್ಲ್ಯು. ಸ್ಕ್ಯಾಚ್ ಬ್ರಾನ್ ಇವರು ಪ್ರಾಂತಿಕ ಆಹಾರ ಸಮಿತಿಯ ಮೀಟಿಂಗಿನಲ್ಲಿ ಗವರ್ನಮೆಂಟಿನವರು ಕೃಷಿಕನಿಂದ ಅಕ್ಕಿ ವ ಬತ್ತವನ್ನು ಕೊಂಡುಕೊಳ್ಳುವಾಗ ಅವನಿಗೆ ತನ್ನ ಆವಶ್ಯಕತೆಗೆ ಬೇಕಾಗುವ ಧಾನ್ಯ ಮತ್ತು ಅವನ ಕೂಲಿಯವರಿಗೆ ಧಾನ್ಯರೂಪದಲ್ಲಿ ಮಜೂರಿ ಕೊಡಬೇಕಾದಲ್ಲಿ ಆ ಮಜೂರಿಗೆ ಬೇಕಾಗುವ ಧಾನ್ಯಗಳನ್ನು ಆತನಲ್ಲಿರಿಸಿ, ಮಿಕ್ಕ ಧಾನ್ಯವನ್ನು ಮಾತ್ರ ಕೊಂಡುಕೊಳ್ಳಲಾಗುವುದೆಂದು ಸೂಚಿಸಿರುತ್ತಾರೆ. ಉತ್ಪತ್ತಿಕಾರನಿಗೆ ಆತನ ಪೋಷಣೆ ಮತ್ತು ವ್ಯವಸಾಯ ವೃತ್ತಿಗೆ ಬೇಕಾಗುವ ಧಾನ್ಯಗಳನ್ನು ಆತನ ವಶಬಿಟ್ಟು ಮಿಕ್ಕುಳಿದ ಧಾನ್ಯವನ್ನು ಮಾತ್ರ ಕೃಷಿಕನಿಂದ ಸ್ವಾಧೀನಪಡಿಸಿಕೊಳ್ಳುವದು ಕೇಂದ್ರ ಮತ್ತು ಪ್ರಾಂತಿಕ ಸರಕಾರಗಳ ಧೋರಣೆಯಾಗಿರುತ್ತದೆಂತ ಇವುಗಳಿಂದ ಸ್ಪಷ್ಟವಾಗುತ್ತದೆ.

ನಮ್ಮ ಜಿಲ್ಲೆಯಲ್ಲಿ ಈಗ ಅಕ್ಕಿ ವ ಬತ್ತವನ್ನು ಕೃಷಿಕರಿಂದ ಸರಕಾರೀ ಏಜಂಟರುಗಳು ಒಟ್ಟುಕೂಡಿಸುತ್ತಿದ್ದಾರೆ. ಕಲೆಕ್ಟರರ ನೌಕರರು ಹಳ್ಳಿಯ ಒಕ್ಕಲಿನಿಂದ ಅಕ್ಕಿ ವ ಬತ್ತವನ್ನು ಜಮೆ ಮಾಡುವಾಗ ಮೇಲಿನ ಸರಕಾರೀ ಧೋರಣೆಯನ್ನು ಜ್ಞಾಪಕದಲ್ಲಿಟ್ಟುಕೊಳ್ಳುವರೋ? ಒಕ್ಕಲು ಧನಿಗೆ ಕೊಡತಕ್ಕ ಪೂರಾ ಗೇಣಿಯನ್ನು ಅವನ ಮಿಗತೆ ಎಂತ ಭಾವಿಸಿ ಅದನ್ನು ಪೂರಾ ಸ್ವಾಧೀನಪಡಿಸಿಕೊಂಡಲ್ಲಿ ಕರಾವಳಿ ಭೂಮಿಗಳ ಹೆಚ್ಚಿನ ಒಕ್ಕಲುಗಳೊಡನೆ ಅವರ ಪೋಷಣೆ ಮತ್ತು ಮುಂದಿನ ಸಾಗುವಳಿಗೆ ಬೇಕಾದ ಬೀಜದ ಧಾನ್ಯ ಸಹಾ ಉಳಿಯುವದು ದುರ್ಲಭ. ನಿಜವಾದ ಉತ್ಪತ್ತಿಕಾರನಾದ ಒಕ್ಕಲು, ಈ ವರ್ಷ ಉತ್ಪತ್ತಿ ಮಾಡಿರುವ ಬತ್ತವೆಷ್ಟು, ಆತನಿಗೆ ಮತ್ತು ಆತನ ಮನೆವಾರ್ತೆಗೆ ಸರಕಾರೀ ಲೆಕ್ಕದ ಪ್ರಕಾರ ಪೋಷಣೆಗೆ ಬೇಕಾಗುವ ಅಕ್ಕಿ ವ ಬತ್ತ ಎಷ್ಟು, ಮತ್ತು ಆತನು ಸಾಗುವಳಿ ಮಾಡುವ ಭೂಮಿಗಳ ವ್ಯವಸಾಯದ ಖರ್ಚಿಗೆ ಆತನಿಗೆ ಬೇಕಾಗುವ ಅಕ್ಕಿ ವ ಬತ್ತ ಎಷ್ಟು-ಎಂಬುದನ್ನು ನಿಶ್ಚೈಸಿ ಅವನು ಮಾಡಿರುವ ಉತ್ಪತ್ತಿಯಿಂದ ಅವುಗಳನ್ನು ಪ್ರಥಮತಃ ತೆಗೆದಿಟ್ಟು ಅವನಲ್ಲಿರತಕ್ಕ ಮಿಕ್ಕ ಅಕ್ಕಿ ವ ಬತ್ತವನ್ನು ಮಾತ್ರ ಸ್ವಾಧೀನಮಾಡಿಕೊಳ್ಳುವದು ನ್ಯಾಯವಾಗಿರುವುದು. ಹೀಗೆ ಮಾಡಿದಲ್ಲಿ, ತಾನು ಉತ್ಪತ್ತಿ ಮಾಡಿದ್ದನ್ನು ತಾನುಣ್ಣಬಹುದೆಂಬ ಭರವಸೆಯೂ, ಮುಂದಿನ ಬೆಳೆಯನ್ನು ಕಷ್ಟಪಟ್ಟು ತಾನು ಮಾಡಬೇಕೆಂಬ ಉತ್ಸಾಹವೂ ಅವನಲ್ಲಿ ಉಂಟಾಗುವದು. ಇಲ್ಲವಾದರೆ ಆಹಾರ ಉತ್ಪತ್ತಿಯಂತಹ ಸಾರ್ವಜನಿಕ ಸೇವೆಯಲ್ಲಿ ನಿರತನಾಗಿರುವ ಕೃಷಿಕನಲ್ಲಿ ನಿರುತ್ಸಾಹವೂ ಅಸಂತುಷ್ಟಿಯೂ ಹುಟ್ಟಿ ಅವುಗಳಿಂದ ಮುಂದಿನ ಆಹಾರ ಉತ್ಪತ್ತಿಗೆ ಹೆಚ್ಚಿನ ದಕ್ಕೆ ತಗಲುವದರಲ್ಲಿ ಸಂಶಯವಿಲ್ಲ.

ಸಮಗ್ರ ಹಿಂದೂದೇಶದ ಆಹಾರ ಸಂಚಯ ಧೋರಣೆ ಮತ್ತು ನಮ್ಮ ಪ್ರಾಂತಿಕ ಸರಕಾರದ ಧೋರಣೆ ಇವುಗಳನ್ನು ನಮ್ಮ ಜಿಲ್ಲೆಯಲ್ಲಿ ಕೂಡಾ ಅಕ್ಷರಶಃ ಪಾಲಿಸಲಾಗುವದೆಂಬು ಮಾನ್ಯ ಜಿಲ್ಲಾ ಕಲೆಕ್ಟರರವರು ಸಾರ್ವಜನಿಕ ತಿಳುವಳಿಕೆ ಬಗ್ಗೆ ಪ್ರಕಟಿಸಿ, ಮುಗ್ಧ ಕೃಷಿಕರ ದಿಗಿಲನ್ನು ಶಮನಗೊಳಿಸಲಾರರೇ?

—ಒಕ್ಕಲಿಗನ ಬಂಧು

ಕೊಡವೂರು—ಇಲ್ಲಿ ವರ್ಷಾವಧಿ ಜರಗುವ ಶಂಕರಪಟ್ಟು ದೈವಳ ಕಂಬಳವು ಇದೇ ತಾ 14ರಲ್ಲು ನಡೆಯುವದಾಗಿ ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಮೊಕ್ತೇಸರ ಶ್ರೀ ಸೀನ ಸೆಟ್ಟರು ತಿಳಿಸುತ್ತಾರೆ.

ತಾ. 17—12—44ರಿಂದ

ನಿತಿನ್ ಬೋಸ್ ದಿಗ್ದರ್ಶಿಸಿದ

ಶ್ರೀ ಪಿಕ್ಚರ್ಸಿನವರ

ಪರಾಯಾಧನ್

ಲೀಲಾದೇಸಾಯಿ ಮತ್ತು ಬಲವಂತಸಿಂಗ್.

ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್, ಉಡುಪಿ.

ಬಂಟರ ಯಾನೆ ನಾಡವರ ಸಂಘ, ಮುಂಬಯಿ.

ಈ ಸಂಘದ ವರ್ಷಾವಧಿ ಸಾರ್ವಜನಿಕ ಸಭೆಯು ತಾ 12—11—44ರಲ್ಲಿ ನೇಶನಲ್ ಮೆಡಿಕಲ್ ಹೋಲಿನಲ್ಲಿ ಶ್ರೀ ಪಾಂಗಾಳ ಮಹಾಬಲ ಸೆಟ್ರ ಅಧ್ಯಕ್ಷತೆಯಲ್ಲಿ ಜರಗಿತು. ಬಂಟರ ಯುವಕ ಸಂಘವು ಈ ಸಂಘಕ್ಕೆ ಸಮ್ಮಿಳಿತವಾಗಿರುವುದರಿಂದ ಅದರ ಮೆಂಬರರೂ ಬಂದಿದ್ದರು. ಅಧ್ಯಕ್ಷರು ಬಂಟರ ಯುವಕ ಸಂಘದ ಮೆಂಬರರನ್ನು ಸ್ವಾಗತೀಕರಿಸಿದ ಮೇಲೆ ಬಂಟ ಯುವಕ ಸಂಘದ ಅಧ್ಯಕ್ಷರಾಗಿದ್ದ ಶ್ರೀ ಮೂಲೂರು ಶ್ರೀಧರ ಸೆಟ್ರ ಯುವಕ ಸಂಘದ ಕಾರ್ಯಕಲಾಪಗಳನ್ನೂ, ಮುಂದಿನ ಐಕ್ಯತೆಯು ಅಲ್ಲಿ ಮಾಡಲಿರುವ ಸಂಘದ ಸದುದ್ದೇಶಗಳನ್ನೂ ಕುರಿತು ಭಾಷಣವಿತ್ತರು. ಅನಂತರ ಸಂಘದ ವರದಿಯನ್ನು ಮತ್ತು ಲೆಕ್ಕಪತ್ರಗಳನ್ನು ಮಂಜೂರು ಮಾಡಿ ಸ್ವೀಕರಿಸಿದಲ್ಲದೆ, ಕೆಳಗಿನ 31 ಮೆಂಬರರ ಆಡಳಿತೆಯ ಮಂಡಳಿಯನ್ನು ಚುನಾಯಿಸಲಾಯಿತು. ಶ್ರೀ ಗಳಾದ ಮದನ್ ಶೆಟ್ರ ಅಧ್ಯಕ್ಷರು ಬಗ್ಗರಗುತ್ತು ನರ್ಸ ಶೆಟ್ರ ಉಪಾಧ್ಯಕ್ಷರು. ಮಂಜಯ್ಯ ಭಂಡಾರಿ, ಗೌರವ ಕೋಶಾಧಿಕಾರಿ ಐ ನಾರಾಯಣ ಶೆಟ್ರ ಉಪ ಗೌರವ ಕೋಶಾಧಿಕಾರಿ ಯಸ್ ಶ್ರೀಧರ ಶೆಟ್ರ, ಕರಿಯಣ್ಣ ಶೆಟ್ರ ಜೊತೆ ಗೌರವ ಕಾರ್ಯದರ್ಶಿಗಳು. ಪಾಂಗಾಳ ಮಹಾಬಲ ಶೆಟ್ರ ಟಿ ಯಸ್ ಹೆಗ್ಡೆ B A L L B ಮತ್ತು ಯ ಕೃಷ್ಣ ಶೆಟ್ರ ಕೆ ವಿಠಲ ಶೆಟ್ರ, ಯೆರ್ಮಾಳು ಮಹಾಲಿಂಗಶೆಟ್ರ ಆರ್-ಆರ್ ಶೆಟ್ರ ಕೆ ಜಗನ್ನಾಥ ಶೆಟ್ರ ಯಸ್ ಸಂಜೀವ ಶೆಟ್ರ. ಬಿ-ಸಂಜೀವ ಶೆಟ್ರ B A ವೈ ರಾಜು ಶೆಟ್ರ ಕೆ-ದೇಜು ಶೆಟ್ರ, ಎ ಬಾಲಕೃಷ್ಣ ಶೆಟ್ರ. ಮೂಲ್ಕಿ ವಾಸು ಶೆಟ್ರ ಬಿ. ದೇವದಾಸ್ ಶೆಟ್ರ. ಯಸ್ ಯಸ್. ಶೆಟ್ರ ಯಮ ರಾಜು ಶೆಟ್ರ ವೈ. ವೆಂಕಪ್ಪ ಶೆಟ್ರ. ಯಮ್. ಶಿವಪ್ಪ ಶೆಟ್ರ ವೈ. ಆರ್ ಶೆಟ್ರ. ಎ. ಭೋಜ ಶೆಟ್ರ ನಾರಾಯಣ ಯಸ್ ಶೆಟ್ರ ವೈ ಮುದ್ದಣ್ಣ ಶೆಟ್ರ ಗುಂಡು ಆರ್ ಶೆಟ್ರ. ಯಮ ಗಂಗಯ್ಯ ಶೆಟ್ರ, ಕೃಷ್ಣ ಯಸ್. ಶೆಟ್ರ—

ಸಂಘದ ಅಭಿವೃದ್ಧಿಯನ್ನು ಬಯಸಿ, ಶ್ರೀಗಳಾದ ಮದನ್ ಶೆಟ್ರ, ಬಿ ಸಂಜೀವ ಶೆಟ್ರ B A ಟಿ ಯಸ್ ಹೆಗ್ಡೆ B A L-L-B-ಸೂಡ ಸಂಜೀವಶೆಟ್ರ, ಮಂಜಯ ಭಂಡಾರಿ, ಐ ನಾರಾಯಣ ಶೆಟ್ರ, ಕರಿಯಣ್ಣ ಶೆಟ್ರ, ಕಾಸು ಕಾಂತಪ್ಪ ಶೆಟ್ರ, ಬಾಲಕೃಷ್ಣ ಶೆಟ್ರ, ಆರೂರ್ ಶ್ರೀನಿವಾಸ್ ರಾವ್ MALLB ಯವರು ಸುರಸವಾದ ಭಾಷಣವಿತ್ತರು. ಅಧ್ಯಕ್ಷರ ಭಾಷಣ, ಧನ್ಯವಾದ ಸಮರ್ಪಣೆ, ಉಪಾಹಾರದೊಂದಿಗೆ ಸಭಾಂತ್ಯವಾಯಿತು.

ಈ ಸಂಘದ ಆಡಳಿತ ಮಂಡಳಿಯು 3-12-44ರಲ್ಲಿ ವಿಜಯ ಬೇಂಕಿನ ಪಟಾರದಲ್ಲಿ ಸೇರಿ, ಸಂಘದ ಮಾಜಿ ಕಾರ್ಯದರ್ಶಿಯವರಿಂದಲೂ, ಕೋಶಾಧಿಕಾರಿಯವರಿಂದಲೂ ಚಾರ್ಜನ್ನು ತೆಗೆದುಕೊಂಡು, ಸಂಘದ ಪುನರ್ಜೀವನದವ್ಯವಸ್ಥೆಯನ್ನು ಮಾಡುವರೆ ಮುಂಬಾಯಿ ನಗರದಲ್ಲಿ 7 ವಾರ್ಡುಗಳನ್ನಾಗಿ ವಿಭಾಗಿಸಿ 7 ಉಪ ಸಮಿತಿಗಳನ್ನು ಮಾಡಲಾಯಿತು. ಬಂಟರ ಯುವಕ ಸಂಘದಿಂದ ನಡಿಸಲ್ಪಟ್ಟು ಈ ವರೆಗೆ ಬಂದಿರುವ, "ಕರ್ನಾಟಕ ಕ್ರಿಸೆಂಟ್ ಹೈಸ್ಕೂಲ್"ಗೆ ಅವರಿಂದಲೇ ರಚಿತವಾದ ಉಪಸಮಿತಿಯು ಬರುವ ಜೂನ್ ತಿಂಗಳ ವರೆಗೆ ಇರಬೇಕೆಂದು ನಿರ್ಣಯವಾಯಿತು.—ಊರಿನ ಒಬ್ಬ ಮಹನೀಯರು ತನ್ನ ಮನೆಮಾರು ಅಗ್ನಿ ವಶವಾಗಿ ನಾಶವಾಯಿತೆಂದು ಸಭೆಯಲ್ಲಿ ತಿಳಿಸಿದಾಗ ಅಂದು ಕೂಡಿದ್ದ ಮೆಂಬರರು ರೂಪಾಯಿ 52/- ಆಗಲೇ ಒಟ್ಟು ಮಾಡಿ ಅವರಿಗೆ ಕೊಟ್ಟರು. ಸಂಘದ ಮುಖಾಂತರ ಬಂಟರ ಯಾನೆ ನಾಡವರ ಕಾನೇಶ್‌ಮಾರಿಯನ್ನು ಸದ್ಯಕ್ಕೆ ತೆಗೆಯಲಿರುವುದರಿಂದ ಎಲ್ಲರೂ ಸಹಕರಿಸಬೇಕಾಗಿ ಕಾರ್ಯದರ್ಶಿಗಳು ಅಪೇಕ್ಷಿಸುತ್ತಾರೆ.

ದಕ್ಷಿಣ ಕನ್ನಡ-
ಮಂಗಳೂರು

ಜಿಲ್ಲೆಯಲ್ಲಿ ನೀರಾವರಿ ಕೆಲಸಗಳು—ಪ್ರಾಂತದ ನೀರಾವರಿ ಕೆಲಸಗಳ ಪ್ರಧಾನ ಇಂಜನಿಯರರು ಈ ತಿಂಗಳಲ್ಲಿ ಮಂಗಳೂರಿಗೆ ಬಂದು ಜಿಲ್ಲೆಯಲ್ಲಿ ಸಂಚರಿಸಲಿರುವರೆಂದು ಶ್ರೀ ಎ. ಬಿ. ಶೆಟ್ಟರು ಮದ್ರಾಸಿನಿಂದ ಹೇಳಿ ಕಳುಹಿರುವರು. ಯಾವ ಯಾವ ಸ್ಥಳಗಳಲ್ಲಿ ನೀರಾವರಿ ಸೌಕರ್ಯಗಳನ್ನು ಏರ್ಪಡಿಸುವುದು ಸಾಧ್ಯವಿದೆಯೆಂದು ನೋಡುವುದೇ ಅವರ ಉದ್ದೇಶವಾಗಿದೆ. ಜನರು ಇಂಜನಿಯರನ್ನು ಕಂಡು ತಮ್ಮ ಸೂಚನೆಗಳನ್ನು ಮುಂದಿಡಬೇಕೆಂದೂ ಆ ವಿಚಾರವಾಗಿ ಮಂಗಳೂರಿನ ತಮ್ಮ ವಿಳಾಸಕ್ಕೆ ಬರೆಯಬೇಕೆಂದು ಶ್ರೀ ಎ. ಬಿ. ಶೆಟ್ಟರು ತಿಳಿಸಿರುವರು. ಇಂಜನಿಯರರ ಕಾರ್ಯಕ್ರಮಗಳನ್ನು ಕೆಳಗೆ ಕೊಟ್ಟಿದ್ದೇವೆ.

ಹೆಚ್ಚಿನ ನೀರಿನ ಸೌಕರ್ಯಕ್ಕಾಗಿ ನಮ್ಮ ಜಿಲ್ಲೆಯಲ್ಲಿ ಚಿಕ್ಕಪುಟ್ಟ ನೀರಾವರಿಗಳನ್ನೇರ್ಪಡಿಸುವ ಆವಶ್ಯಕತೆಯನ್ನು ಜಿಲ್ಲಾ ಬೋರ್ಡ ಕೌನ್ಸಿಲಿನ ಮುಂದಿಡಲಾಗಿತ್ತು, ಪ್ರಾಂತಿಕ ಆಹಾರ ಕೌನ್ಸಿಲಿನಲ್ಲಿ ಆ ವಿಚಾರವಾಗಿ ಯತ್ನ ನಡೆದಿದೆ. ಆ ಸಂಬಂಧವಾಗಿ ಜಿಲ್ಲೆಯ ಪ್ರತಿನಿಧಿಗಳು ಸೂಚಿಸಿದ ಕಾರ್ಯ ವಿಧಾನಗಳಲ್ಲಿ ಕೆಳಗಿನವು-ಕೆಲವು ಗುಡ್ಡಗಳ ನಡುವೆ ತೋಡುಗಳನ್ನು 'ಕಟ್ಟ' ಮಳೆ ನೀರನ್ನು ಹವಿ ಮಾಡಿ ನಿಲ್ಲಿಸುವುದು, ಸಾಧ್ಯವಿದ್ದಲ್ಲೆಲ್ಲ ಹೊಳೆಗಳಿಗೆ 'ಕಟ್ಟ' ಹಾಕುವುದು ಬ್ರಹ್ಮಾವರದ ಚೌಟರ ಮದಗದಂತಹ ದೊಡ್ಡ ಕೆರೆಗಳ ತಳದಿಂದ ಜಮೆಯಾದ ಮಣ್ಣನ್ನು ತೆಗೆದು, ದುರಸ್ತಿ ಮಾಡುವುದು, ಚಿಕ್ಕಪುಟ್ಟ ನೀರಾವರಿ ಯೋಜನೆಯನ್ನು ಕಾರ್ಯರೂಪದಲ್ಲಿಳಿಸಲು ಉದ್ಯೋಗಸ್ಥರ ನೇಮಕವೇನೋ ಹಿಂದೆಯೇ ಆಗಿತ್ತು ಆದರೆ ಕಾರ್ಯ ಈ ತನಕ ಆರಂಭವಾಗಿರಲಿಲ್ಲ. ಬಲು ಒತ್ತಾಯದ ಬಳಿಕ ಈ ಜಿಲ್ಲೆಯಲ್ಲಿ ಪ್ರವಾಸ ಕೈಕೊಳ್ಳಲು ಚೀಫ್ ಇಂಜನಿಯರರು ಒಪ್ಪಿರುವರು.

ಕಾರ್ಯಕ್ರಮ ಡಿಸೆಂಬರ ತಾ. ೧೧ ಕೆಂಬಳಿಗೆ ಬಂದು ಸಂಜೆ ಕೃಷಿಗಾಗಿ ಹಸನು ಮಾಡಲ್ಪಡುತ್ತಿರುವ ಸ್ಥಳದ ಸಂದರ್ಶನ ತಾ. ೧೬-ಕಾಸರಗೋಡು, ಶಿರಿಯಾಳ ಯೋಜನೆ ತಾ. ೧೭ ಪನತ್ತಡಿ ಪನತ್ತಿಯೋಜನೆ. ತಾ. ೧೮ ಮಂಗಳೂರು, ಗುರುಪುರ ಯೋಜನೆಯ ಪರೀಕ್ಷೆ ತಾ. ೧೯ ಕಾರ್ಕಳಕ್ಕಾಗಿ ಮಂಗಳೂರಿಂದ ಉಡುಪಿಗೆ. ತಾ. ೨೦ ಉಡುಪಿಯಿಂದ ಮಂಗಳೂರಿಗೆ ಚೌಟರ ಮದಗದ ಸಂದರ್ಶನ, ತಾ. ೨೧ ಮಂಗಳೂರಿಂದ ಮದ್ರಾಸಿಗೆ ಹಿಂತಿರುಗುವುದು

ಶ್ರೀಮತಿ—ಎಲಿಸ್ ಸಿಪ್ರಿಯನ್ ಆಲ್ವಾರೀಸರು ನಗರಕ್ಕೆ ಬಂದಿರುವರು ಪಟ್ಟಣವನ್ನು ಬಿಟ್ಟು ಹೊರಹೋಗಬಾರದಾಗಿ ಅವರ ಮೇಲೆ ನಿ‌ರ್ಬಂಧವಿದೆ. ಮಂಗಳೂರಿನ ಈ ವರೆಗಿನ ಚಳವಳಿಯಲ್ಲಿದ್ದು, ಆಗಸ್ಟಿನ ಆನಂತರದ ಗಲಭೆಯಲ್ಲಿ ಭಾಗವಹಿಸಿ ಅಜ್ಞಾತವಾಸಕ್ಕೆ ಹೋಗಿದ್ದ ಅವರು ಅನುಭವಿಸಿ ಈಗ ಬಿಡುಗಡೆ ಹೊಂದಿ ಮರಳಿ ಬಂದು

ಸೆಶ್ಯನ್ಸ್ ಕೋರ್ಟಿನಲ್ಲಿ—ಶ್ರೀ ಬಾವಗಲಿ ನಾರಾಯಣ ರೈ ಅವರನ್ನು ಮಾರ್ಚ ೧೭ರಂದು ಪುತ್ತೂರು ತಾಲೂಕಿನ ಕೆಡಿಮಾರಿಯಲ್ಲಿ ಕೊಂದರೆಂಬ ಆರೋಪದ ಮೇಲೆ ಬಂಧಿಸಲಾಗಿದ್ದ ಶ್ರೀಯುತರ ಕೃಷ್ಣಪ್ಪ ಶೆಟ್ಟಿ, ಸಂಕಪ್ಪ ಶೆಟ್ಟಿ, ಬಿಲಿಯಾರು ಶೀನಪ್ಪ ಶೆಟ್ಟಿ ನೆಕ್ರಾಜೆ ವೆಂಕಪ್ಪ ಶೆಟ್ಟಿ, ಗೋಳಿಕಟ್ಟೆ ಐತಪ್ಪ ಪೂಜಾರಿ ಮತ್ತು ಪಟೇಲು ತನಿಯ ಪೂಜಾರಿ ಈ ಆರು ಜನರ ವಿಚಾರಣೆ ನಡೆದು ಇ. ಪಿ. ಕೋಡಿನ ೩೦೨ನೆ ಸೆಕ್ಶನಿನನ್ವಯ ಪ್ರತಿಯೊಬ್ಬರಿಗೂ ೩ ವರ್ಷಗಳ ಕಠಿನ ಸಜೆಯನ್ನು ಜಿಲ್ಲಾ ಮತ್ತು ಸೆಶ್ಯನ್ ನ್ಯಾಯಾಧೀಶ ಮಿ| ಕೋಮನ್ ಅವರು ವಿಧಿಸಿದರು, ಶ್ರೀಯುತರು ಬಿ. ನರಸಿಂಗರಾವ್ ಮತ್ತು ಜಿ ಸೋಮಶೇಖರರಾವ್ ಇವರು ಆರೋಪಿಗಳ ಕಡೆಯಿಂದ ವಾದಿಸಿದರು. ಇದೇ ಮೊಕದ್ದಮೆಯ ಸಂಬಂಧವಾಗಿ ಆಸ್ಪತ್ರೆಯಲ್ಲಿ ಮಡಿದ ಶ್ರೀ| ವಿಠ್ಠಲ ರೈ ಅವರ ಬಂಧನವಾಗಿತ್ತು

ಜನತಾ ರಂಗಭೂಮಿ— ಸಮಿತಿಯವರ ಕಾರ್ಯಕಾರಿ ಮಂಡಲದ ಸಭೆಯು ತಾ ೬ರಂದು ಶ್ರೀ ಪಿ ಕೆ ನಾರಾಯಣ ಅವರ ಅಧ್ಯಕ್ಷತೆಯಲ್ಲಿ ಜರಗಿ, ಡಿಸೆಂಬರ ಕೊನೆಯಲ್ಲಿ ಮುಂಬಯಿಯಲ್ಲಿ ಜರಗಲಿರುವ ಜನತಾ ರಂಗಭೂಮಿ ಸಮ್ಮೇಳನಕ್ಕೆ ಶ್ರೀ| ಶಾಂತಾರಾಮ ಪೈ ಅವರನ್ನು ಸೌಹಾರ್ದ ಪ್ರತಿನಿಧಿಯಾಗಿ ಕಳುಹುವ ನಿರ್ಣಯವಾಯಿತ.

ನಮಗೆ ಯಾವ ರೀತಿಯ ಸಾಹಿತ್ಯ ಬೇಕು?-ಎಂಬ ವಿಷಯದ ಕುರಿತು ಶ್ರೀ| ಕಡಂಗೋಡ್ಲು ಶಂಕರ ಭಟ್ಟರು ಪ್ರಗತಿಶೀಲ ಲೇಖಕರ ಸಂಘದ ಆಶ್ರಯದಲ್ಲಿ ಶುಕ್ರವಾರ ಸಂಜೆ ಭಾಷಣವಿತ್ತು, ತ 'ಪ್ರಗತಿಶೀಲ-ಅಪ್ರಗತಿಕ ಎಂಬ ಪದದ ಬೇಧ ಗಾಹಿತ್ಯವು ಜೀವನದ ಪ್ರತಿಬಿಂಬ, ಪ್ರಚೋದಕವೂ ಆಗಿರಬೇಕು ಈಗಿನ ವೈಷಮ್ಯ ಪ್ರಗತಿ ಶೀಲರ ಮಾತ್ರ' ಎಂದರು. ಸಭೆಗೆ ಬಂದಿದ್ದ ಶ್ರೀ| ಶಿವರಾಮ ಕಾರಂತರ ಮಾತನಾಡಿ, 'ಈವರ್ಷ ಪುಸ್ತಕ ಕಟ್ಟು ಮಾರಾಟವಾಗಲೆಂದು ಕೆಲವರು ಹುಡಿದ ಬೆಡಗಿನ ಮಾತ'ವೆಂದರು ಕಾರ್ಯದರ್ಶಿ ಶ್ರೀ| ಕೆ ಕೆ. ಶೆಟ್ಟರು ಧನ್ಯವಾದಗಳನ್ನರ್ಪಿಸುತ್ತಾ 'ಶ್ರೀ ಕಾರಂತರ ಟೀಕೆ ಗಾಢ ಧೋರಣೆಯದು'ಎಂದರು.

ಅಖಿಲ ಕರ್ನಾಟಕ ಪ್ರಗತಿಶೀಲ ಲೇಖಕ ಸಮ್ಮೇಲನ—ಮಂಗಳೂರು ಪ್ರಗತಿಶೀಲ ಲೇಖಕರ ಸಂಘದ ಸಭೆಯು ೬ರಂದು ಶ್ರೀ| ಬಿ. ಶಂಕರ ಭಟ್ಟರ ಅಧ್ಯಕ್ಷತೆಯಲ್ಲಿ ಜರಗಿ ಡಿಸೆಂಬರ ಕೊನೆಯಲ್ಲಿ ಧಾರವಾಡದಲ್ಲಿ ಅಖಿಲ ಕರ್ನಾಟಕ ಪ್ರಗತಿಶೀಲ ಲೇಖಕರ ಸಮ್ಮೇಳನ ಕರೆಯುವ ಸೂಚನೆಗೆ ಬೆಂಬಲ ಕೊಡುವ ಮತ್ತು ಸಮ್ಮೇಳನವನ್ನು ಕರೆಯಲು ಶ್ರೀ ಆರ್ ವಿ. ಜಾಗಿರದಾರರಿಗೆ ಅಧಿಕಾರ ಕೊಡುವ ನಿರ್ಣಯವನ್ನು ಮಾಡಿತು 'ನಮಗೆ ಯಾವ ರೀತಿಯ ಸಾಹಿತ್ಯ ಬೇಕು?' ಎಂಬ ವಿಷಯದ ಕುರಿತು ಒಂದು ಉಪನ್ಯಾಸ ಮಾಲೆಯನ್ನಾರಂಭಿಸುವುದಕ್ಕೆ ಸಭೆಯು ನಿರ್ಧರಿಸಿತು ಧಾರವಾಡದ ಸಮ್ಮೇಳನಕ್ಕೆ ಕಳುಹುವ ನಿರ್ಣಯಗಳನ್ನು ಸಭೆಯು ರಚಿಸಿತು

ಅಡಿಕೆ ಬೇಸಾಯಗಾರರ ಪರಿಷತ್ತು—ಈ ತಿಂಗಳ ಅಂತ್ಯಕ್ಕೆ ಅಥವಾ ಬರುವ ತಿಂಗಳ ಆದಿಗೆ ಶಿವಮೊಗ್ಗದಲ್ಲಿ ಜರಗಲಿರುವುದು ಮುಂಬಯಿಯ ಸುಪ್ರಸಿದ್ಧ ಧುರೀಣರೂ ವಕೀಲರೂ ಆದ ಶ್ರೀ| ಕೆ. ಎಂ ಮುನ್ಶಿಯವರು ಅಧ್ಯಕ್ಷತೆಯನ್ನು ವಹಿಸಲಿದ್ದಾರೆ ಇವರ ಒಪ್ಪಿಗೆಯನ್ನು ಪಡೆದುಕೊಂಡು ತಾರೀಕನ್ನು ನಿರ್ಣಯಿಸಬೇಕಾಗಿದೆ, ಬರುವ ವಾರ ಅದು ತಿಳಿಯಬಹುದು.

ಆ ಬೇಸಾಯಗಾರರ ಕರ್ತವ್ಯ ನಮ್ಮ ಜಿಲ್ಲೆಯ ಅಡಿಕೆ ಬೆಳೆಗಾರರೆಲ್ಲ ಕೂಡಲೆ ಸಂಘದ ಸದಸ್ಯರಾಗಿ ಸೇರಿ, ಅಲ್ಲಲ್ಲಿ ತಾಲೂಕು ಸಮಿತಿಗಳನ್ನೂ ಸ್ಥಳೀಯ ಸಮಿತಿಗಳನ್ನೂ ರಚಿಸಬೇಕು ಉತ್ತರ ಕನ್ನಡ ಮತ್ತು ಇತರ ಸ್ಥಳಗಳಲ್ಲಿಯು ಜನರು ಅತ್ಯುತ್ಸಾಹದಿಂದ ಕೆಲಸಮಾಡುತ್ತಿದ್ದಾರೆ. ಎಲ್ಲ ಅಡಿಕೆ ತೋಟಿಗರು ಸುಸಂಘಟಿತರಾಗಿ ಕೆಲಸ ಮಾಡಿದರೆ ತಾನೆ ಕಷ್ಟಗಳನ್ನು ಪರಿಹರಿಸಲು ಸಾಧ್ಯ. ದಿಸೆಂಬರ ಅಂತ್ಯದೊಳಗೆ ಎಲ್ಲರೂ ಸದಸ್ಯರಾಗಿ ಸೇರಿ ನಮ್ಮ ಜಿಲ್ಲೆ ಹಿಂದೆ ಬೀಳದಂತೆ ನೋಡಬೇಕೆಂದು ಅ. ಬೇ. ಸಂಘದ ಕಾರ್ಯದರ್ಶಿಗಳು ಬರೆಯುತ್ತಾರೆ.

ಜಿಲ್ಲಾ ಕೃಷಿಕರ ಸಹಕಾರಿ—ಹೋಲ್ ಸೇಲ್ ಸೊಸೈಟಿಯ ವಿಶೇಷ ಮಹಾ ಸಭೆಯು ಪುತ್ತೂರಲ್ಲಿ ಶ್ರೀ| ಬೈಂದೂರು ಪ್ರಭಾಕರರಾಯರ ಅಧ್ಯಕ್ಷತೆಯಲ್ಲಿ ಜರಗಿ, ಮುಂಬಯಿ ಸ್ಫೋಟನದ ಫಲವಾಗಿ ಸಂಘಕ್ಕುಂಟಾದ ನಷ್ಟದ ಕುರಿತು ಏನು ಮಾಡಬೇಕೆಂದು ಯೋಚಿಸಲಾಯಿತು, ಘಟನಾವಳಿಯಲ್ಲಿ ಸ್ವಲ್ಪ ಬದಲಾವಣೆ ಮಾಡಿ ಮುಂಬಯಿಯ ಶಾಖೆಯನ್ನು ಪುನಸ್ಸ್ಥಾಪಿಸಬೇಕೆಂದು ನಿರ್ಣಯಿಸಲಾಯಿತು

ಇನ್ನಂಜೆ—ತಾ 10-12-44ರಲ್ಲಿ ಇಲ್ಲಿಯ ಎಸ್ ವಿ. ಎಚ್. ಹೈಸ್ಕೂಲಿನ ಮಾಳಿಗೆಯ ಮೇಲ್ ಮಿ| ಯು, ಶೇಷ ರಾಯರ ಚಿತ್ರಾಶ್ರಮದ ಉದ್ಘಾಟನಾ ಸಮಾರಂಭವು ಸಂಭ್ರಮದಿಂದ ಜರಗಿತು ಮೊತ್ತಮೊದಲು ಶ್ರೀಕೃಷ್ಣಾ ಬಾಯಿಯವರ ಆರಂಭ ಭಾಷಣವಾದ ಮೇಲೆ ಶ್ರೀಗಳಾದ ವ್ಯಾಸರಾವ್ B-A-L-T-ಕೆ ರಾಮಕೃಷ್ಣ ಉಡುಪ ಎ. ನರಸಿಂಹಯ್ಯ ಮುಂತಾದವರು, ಶ್ರೀ ಶೇಷ ರಾಯರ ಜನಪ್ರಿಯತೆ ಹಾಗೂ, ಸರ್ವತೋಮುಖಿ ವಿಷಯವನ್ನು ಹೊಗಳಿದರು. ಬಳಿಕ ಡಾಕ್ಟರರ ಧನ್ಯವಾದ ಸಮರ್ಪಣೆಯಾದ ಮೇಲೆ ಉಪಹಾರ ತಾಂಬೂಲಾದಿಗಳಿಂದ ಸಭಾಂತ್ಯವಾಯಿತು.

ಸಾಲಿಗ್ರಾಮ—ಇಲ್ಲಿಯ ಕಾರಂತ ಹಳೇ ವಿದ್ಯಾರ್ಥಿ ಸಂಘದವರು ಏರ್ಪಡಿಸಿದ ಕಿರಿಯ ಕಥಾ ಸ್ಪರ್ಧೆಯಲ್ಲಿ 43 ಕಿರಿಯ ಕರ್ನಾಟಕದ ಬೇರೆ ಬೇರೆ ಭಾಗಗಳಿಂದ ಕಥೆಯನ್ನು ಕಳುಹಿಸಿ ಭಾಗವಹಿಸಿದ್ದಾರೆ. ಸಂಘದ ಇವರೆಲ್ಲರೂ ಬಹುಮಾನಿತರಾಗಿದೆ ಶ್ರೀ ಎಚ್ ಸುಬ್ಬರಾವ್ ಮಂಗಳೂರು ಎಂಬವರ "ಗೆಳೆಯರು" ಎಂಬ ಕಥೆ ಮತ್ತು ಶ್ರೀ ಫಿಲಿಪ್ಸ್ ಜಾಕೋಬ್ ಸ್ಯಾಂಟ್ ಥಾಮಸ್ ಹೈಸ್ಕೂಲ್ ಹೊನ್ನಾವರ ಎಂಬವರ "ಸೀತೆ" ಎಂಬ ಕಥೆಯೂ ಕ್ರಮವಾಗಿ ಮೊದಲನೆ ಮತ್ತು ಎರಡನೆ ಬಹುಮಾನ ಪಡೆದಿವೆ.

ಶ್ರೀ| ವಾ| ಮ ಶಿವರಾಮಯ್ಯ, ವಿದ್ವಾನ್ ಇವರ ಸ್ಮಾರಕಾರ್ಥವಾಗಿ ಕಾರಂತ ಹಳೇ ವಿದ್ಯಾರ್ಥಿ ಸಂಘದವರು ತೆರೆಯಲಿರುವ ದವಾಖಾನೆ ಸಾರ್ವಜನಿಕ ವಾಚನಾಲಯದ ಉದ್ಘಾಟನಾ ಸಮಾರಂಭವು ಇದೇ ತಾ 17-12-44ನೇ ಆದಿತ್ಯವಾರ ಬೆಳಗ್ಗೆ ಘಂಟೆ 10ಕ್ಕೆ ಸಾಲಿಗ್ರಾಮದ 'ಸೀತಾರಾಮ ಮಂದಿರ'ದಲ್ಲಿ ನಡೆಯುವುದು.

ನೋಟೀಸು.

ಮಂಗಳೂರು ದಿವಾನಿ ಕೋರ್ಟಿನಲ್ಲಿ

O. S. No 371/1944
I A. 981/44

ಸೋಮಕ್ಕ ಕೂಡಾ —ವಾದಿರು

ಮತ್ತು

ಪೂವಕ್ಕ —ಪ್ರತಿವಾದಿ.

ಪ್ರ ಪೂವಕ್ಕ—ಬಾಳಮ್ಮ ಹೆಂಗ್ಸಿನ ಮಗಳು, ಮಂಗಳೂರು ತಾಲ್ಕು ಪುದು ಗ್ರಾಮದಲ್ಲಿ

ಸದ್ರಿ ವಾದಿರು ಪ್ರತಿವಾದಿಯಾದ ನಿಮ್ಮಿಂದ ತಾ 21—1—43ರಿಂದ ತಾ 9—10—44ರ ವರೇಗಿನ ಅಶನಾರ್ಥದ ಬಾಕಿ ಬಗ್ಗೆ ನಿಮ್ಮಿಂದ ದಾವಾ ದಾಖಲ್ಲು ಮಾಡಿರುತ್ತಾರೆ. ಮತ್ತು ಈ ಕೋರ್ಟು R. E-P-No 623/43 in O S. 35/43ನೇ ಅಮ್ಲುಜಾರಿ ಲೆಕ್ಕಕ್ಕೆ ಇರುವ ಆ್ಯವೇಜಿನ ಸೈಕಿ ರೂಪಾಯಿ 260/-ನ್ನು ಡಿಕ್ರಿಗಿಂತ ಮುಂಚಿತವಾಗಿ ಜಪ್ತು ಮಾಡಬೇಕಾಗಿ ಕೂಡಾ ಅರ್ಜಿ ದಾಖಲ್ಲು ಮಾಡಿರುತ್ತಾರೆ ಸದ್ರಿ ದಾವೆ ಮತ್ತು ಮೇಲಿನ ಅರ್ಜಿಯು ಸಹಾ ಇದೇ ತಾ 28—12—1944ಕ್ಕೆ ಇಟ್ಟಿರುತ್ತದೆ ಸದ್ರಿ ದಿವಸ ನೀವು ತಪ್ಪದೆ ಹಾಜರಾಗಿ ನಿಮ್ಮ ಉದಾಹರಣೆಯನ್ನು ದಾಖಲ್ಲು ಮಾಡತಕ್ಕದ್ದು ತಪ್ಪಿದರೆ ನಿಮ್ಮನ್ನು ಶಿಸ್ವಾ ಮಾಡಿ ಶಿಸ್ವಾ ಡಿಕ್ರಿ ಮಾಡಲಾದೀತು ತಿಳಿದಿರಲಿ.

ಮಂಗಳೂರು
ತಾ. 7-12-1944

B M Hegde,
Advocate for Plff

Sri Narayan Guru Bank, Ltd.,

(Incorporated in British India Liability of Members is Limited)

Regd. Head Office HAMPANKATTA,
MANGALORE.
Branches. UDIPI, & Coondapur.

Authorised Capital	. .	**Rs 2,00000**
Issued Capital	..	**,, 1,00000**
Paid up Capital	.. ....	**,, 72,950**

The Company has commenced Business by obtaining from the Government the Certificate of Commencement of Business on the 19th August, 1944 under the Indian Companies Act, 1913

Strong Board of Directors

Consent of the Central Government has been obtained under the Defence of India Rules 94 A "It must be distinctly understood that in giving this consent the Govt of India does not take any responsibility for the financial soundness of any scheme or for the correctness of any of the statements made or opinion expressed with regard to them' The Government of India has been pleased to extend the period till the 13th January 1945 for the sale of shares.

A few shares at par available.

Rs 50/- per share. Re 1 - Entrance Fee per share.

Hundreds have already taken up shares!

WHY NOT YOU?

Current and Savings Bank Accounts are opened. Fixed Deposits are accepted Enquire for Rules of Business and rates of Interest

MANGALORE JARAPPA,
President & Managing Director.

ಸ್ವೀಕಾರ-ವಿಮರ್ಶೆ

ಜೇನಿನ ವ್ಯವಸಾಯ—ಗ್ರಂಥಕರ್ತ-ಶ್ರೀ ಪೈಲೂರು ಲಕ್ಷ್ಮೀನರಾಯಣರಾವ್, ಬಿ ಎ ಬೆಲೆ ಕ್ಯಾಡಿ ರ. ಕ. ಕ್ರಯ ೧ ರೂಪಾಯಿ

ನಮ್ಮಲ್ಲಿಯ ಉಪಯುಕ್ತ ವ್ಯವಸಾಯಗಳಲ್ಲೊಂದಾದ ಜೇನು ಕಯ್ಗಾರಿಕೆ ಮಾಹಿತಿಯು ಈ ಪುಸ್ತಕದಲ್ಲಿ ವಿಸ್ತಾರವಾಗಿ, ಸವಿವರವಾಗಿ, ಚಿತ್ರವಾಗಿ ಬಂದಿದೆ ಲೇಖಕರು ಈ ವ್ಯವಸಾಯದಲ್ಲಿ ನಿಪುಣ ಕಾಲ ದುಡಿದು ಸಂಪಾದಿಸಿದ ಅನುಭವದ ಆಧಾರದ ಮತ್ತು ದೀರ್ಘ ಗ್ರಂಥಾವಲೋಕನೆಯ ನೆಲೆಯ ಜೇನು ನೊಣಗಳ ಮತ್ತು ಸ್ವಭಾವಗಳ ಸೂಕ್ಷ್ಮ ಪರಿಚಯ ಕೊಟ್ಟಿದ್ದಾರೆ. ಆದ್ದರಿಂದ ಈ ಪುಸ್ತಕದಲ್ಲಿ ಈ ಗ್ರಾಮ ಕೈಗಾರಿಕೆಗೆ ಸಂಬಂಧಪಟ್ಟ ಎಲ್ಲಾ ವಿಷಯಗಳೂ ಮನದಟ್ಟಾಗುವಂತೆ ಸವಿವರವಾಗಿ ಬಂದಿವೆ, ಇವನ್ನೆಲ್ಲಾ ಪ್ರತ್ಯಕ್ಷ ಕಂಡಂತೆ ಸೂಚಿಸುವ ಚಿತ್ರಗಳೂ ಇವೆ ಗ್ರಾಮ ಕೈಗಾರಿಕೆಗಳಲ್ಲಿ ಅಭಿರುಚಿಯುಳ್ಳವರು, ಜೇನಾಯ ಗಾರರು, ಮತ್ತು ವಲ್ಲ, ಸ್ವತಂತ್ರ ಉಪವೃತ್ತಿಯೊಂದನ್ನು ಕೈಕೊಳ್ಳಬಯಸುವ ಇತರರೂ ಈ ಪುಸ್ತಕವನ್ನೋದಿ ಪ್ರಯೋಜನ ಹೊಂದಬಹುದು

ಪೇಟೆ ವೈಯಾರದ ಹೆಣ್ಣು; ಹಳ್ಳಿಗ ಡುಸುಳ್ಳ ಗಂಡು. ನಮ್ಮ ಊರು ನಪುಂಸಕ ವರ್ಗದ್ದು. ಪೂರಾ ಪೇಟೆಯೂ ಅಲ್ಲ, ತೀರಾ ಹಳ್ಳಿಯೂ ಅಲ್ಲ ನಮ್ಮ ಅಂತಪ್ಪನ ಅಂಗಡಿಯಲ್ಲಿ ನಡೆಯುವಷ್ಟು ಪಂಚಾಯತಿಕೆ ಗ್ರಾಮಚಾವಡಿಯಲ್ಲೂ ಇಲ್ಲ. ಅವನ ಅಂಗಡಿಯ ಸಾಮಾನಿನಂತೆಯೇ ಅಂಗಣದ ಜನ ಖಾಲಿಯಾಗುವದೆಂದಿಲ್ಲ. ಮುಂಗಡೆಯಲ್ಲೊಂದು ನಾಜೂಕಿನ ಚಪ್ಪರ ಹಾಕಿದ್ದಾನೆ; ಅದರ ಎರಡು ಜಗಲಿಗಳಂತೂ ಸವೆದು ನುಣುಪಾಗಿವೆ ಎಂಟು ಹತ್ತರಷ್ಟು ಚಾಪೆಗಳು ದಾಸ್ತಾನಿವೆ. ಮುಂದಾಗಿ ಬಂದವರಿಂದ ಜಗಲಿಗಳು ತುಂಬಿದರೂ ಕೊನೆಗೆ ಬಂದವರು ನಿಂತು ಹೋಗುವಂತಿಲ್ಲ. ಅಂಗಳಕ್ಕೆ ಚಾಪೆಯೆಳೆದುಕೊಂಡರಾಯಿತು. ಅವಲಕ್ಕಿ, ಮುಂಡಕ್ಕಿಗಳ ಕಾಲವಿತ್ತು. ತಿನ್ನುವ ಮೊದಲೂ, ತಿಂದ ನಂತರವೂ ಬಾಯಿಯಲ್ಲಿ ನೀರು ಬರಿಸುವ 'ಉಪ್ಪುಕರಿ' ಅಂತಪ್ಪನದು. ಈಗ ಒಂದು 'ಸ್ಪೆಶಲ್ ಉಪ್ಪಿಟ್ಟು' ತಯಾರು ಮಾಡುತ್ತಾನೆ. ಅದಕ್ಕಾಗಿ ಎರಡು ಮೈಲು ದೂರದಿಂದ ಪಟೇಲರ ಮನೇ ಹುಡುಗ ತಟ್ಟೆ ಹಿಡಿದುಕೊಂಡು ಪ್ರತಿದಿನವೂ ಬರುವದು ನಮಗೆ ಗೊತ್ತು. ಅರ್ಧಾಣೆಗೊಂದು ಲೋಟ ಪಾನಕ ಕೊಡುತ್ತಾನೆ ಬೀಡಿ, ಬೀಡ, ಸಿಗರೇಟ್—ಮತ್ತು ಎರಡು ಹಳೆಯ ಇಸ್ಪೇಟ್ ಪೆಟ್ಟಿಗೆಗಳು ಅವನಲ್ಲಿ ದಾಸ್ತಾನು—ನಾವೂ ಅವುಗಳಂತೆಯೇ

ಅಂತಪ್ಪನ ಕಟ್ಟಡಕ್ಕೆ ನಕಾಶೆ ಬರಕೊಟ್ಟವನ ಸ್ಮರಣೆ ಬರುತ್ತಿದೆ. ಒಡ್ಡೋಲಗದ ಚಾವಡಿಯಿಂದ ಒಳಮನೆಗೆ ಹೋಗಲು ಒಂದು ಹಾದಿ. ಅದು ಅಂಗಡಿಯ ಪಕ್ಕದಿಂದ ಹೋಗಿದೆ. ಚಾವಡಿಯಲ್ಲಿದ್ದುಕೊಂಡೇ ಮನೆಯೊಳಗಿನ ಚಲನವಲನಗಳನ್ನು ನೋಡಲಾಗುತ್ತದೆ. ಅಂಗಡಿಗೆ ಹತ್ತಿದರೆ ತುಸು ಹತ್ತಿರದಿಂದಲೇ ನೋಡಬಹುದು. ಆದ್ದರಿಂದ ದಿನಕ್ಕೆರಡು ಕಟ್ಟು ಬೀಡಿಯೆಳೆಯುವ ನಾವೆಲ್ಲಾ ತೆಗೆದುಕೊಳ್ಳುವದು ಸರ್ತಿಗೊಂದು ಪಾವಾಣೆಯದನ್ನೇ.

ಪ್ರಾಯಸ್ಥರ ಸರತಿ ಮಧ್ಯಾಹ್ನನಂತರ. ನಾವೆಲ್ಲಾ ಅಲ್ಲಿ ಮುಂಜಾನೆ 9 ಘಂಟೆಯೊಳಗೇ ತಯಾರು. ಯಾಕಂದರೆ ಸರಸುವಿನ ಆಗಮನ ಕರೆಕ್ಟ್ 9 ಘಂಟೆಗೆ! ನಮ್ಮ ಕಣ್ಣು ಸಿದ್ದೆ ಬಡಬೇಕು ಆಗಲೇ.

ಸರಸು ಅಂತಪ್ಪನ ಮನೇಗೆಲಸದ ಹುಡುಗಿ. ಮುಂಜಾನೆ 9 ಘಂಟೆಗೆ ಬಂದು, ಪಾತ್ರೆ ತೊಳೆಯುವದು, ಎಮ್ಮೆಗಕ್ಕಚ್ಚು ಇಟ್ಟು ಹಾಲು ಕರೆದು ಕೊಡುವದು, ಅಡುಗೇ ಕೆಲಸ, ಇತ್ಯಾದಿಗಳನ್ನು ಮುಗಿಸಿ ಸಂಜೆ 5ಕ್ಕೆ ಹೋಗುತ್ತಾಳೆ ಅವಳು ಪಾತ್ರೆ ತಿಕ್ಕಿದುದು ಹೌದು, ತರಕಾರಿ ಹೆಚ್ಚಿದುದು ನಿಜ ಎಂಬುದಕ್ಕೆ ನಾವೆಲ್ಲಾ ಸಾಕ್ಷಿ.

× × ×

"ಒಳ್ಳೇ ಅಂದಾಜು ನಿಮ್ಮದು. ಆಕೆ ಎಮ್ಮೆಯ ಹಾಗೆ ಬೆಳೆದಿದ್ದಾಳೆ ಎಂಬುದರಿಂದ ಹೇಳುವಿರೋ ಹೇಗೆ? ಬರುವ ಕೊಡಿ ತಿಂಗಳಿಗೆ ಅವಳಿಗೆ ಹದಿನೈದು ಹಿಡಿಯಬೇಕು"--ಎಂದು ಸರಸುವಿನ ತಾಯಿಯೊಮ್ಮೆ ಅಂತಪ್ಪನೊಡನೆ ಮಾತಾಡುವಾಗ ಹೇಳಿದ್ದಳು. ಈ ಸೌಭಾಗ್ಯವತಿಯೂ ಈಗೀಗ ಬಹಳ ಬಾರಿ ಅಂಗಡಿಗೆ ಬರುತ್ತಿದ್ದಾಳೆ. ಬಂದಾಗಳು—ಅವಳು ತಿಂದ ಉಪ್ಪಿಟ್ಟನ್ನ ಸೆರಗಿಗೆ ಸೇರಿಸಿದ ಉಪ್ಪು ಮೆಣಸಿನ ಕ್ರಯ ಒಡ್ಡೋಲಗದವರ ಲೆಕ್ಕಕ್ಕೆ ಬೀಳುತ್ತಿರು

ಮನುಷ್ಯ—ಮರ್ಜಿ

ಸ್ವಭಾವ ಚಿತ್ರಗಳು.

ಶ್ರೀ ಸಮಸ್ಯೆ ಸರಸು

(ಚಿತ್ರಿಸುವವರು:—'ಮಟ್ಟಾರ್')

ವಾಗ ಬರುವದೊಂದು ಪ್ರಯಾಸವೆ? ಆಕೆಯ ಲೆಕ್ಕದಲ್ಲಿ ಮಗಳ ಪ್ರಾಯ 14--ಆದ್ದರಿಂದ ತಾನೂ ಈಗ ಮುದುಕಿಯಲ್ಲ. ಮಮತೆ ಮಾಡುವಾಗಲಂತೂ ಆಕೆಯ ದೃಷ್ಟಿಯಲ್ಲಿ ಮಗಳು ನಾಲ್ಕು ವರ್ಷದ ಮಗುವೇ ಆಗುತ್ತಾಳೆ. ಆದರೆ ನಮ್ಮ ಕಣ್ಣಿಗೆ ಸರಸು 18ರ ಯುವತಿ 14ಲೋಕ ಹೊರತು ಸರಸುವಿನ ಪ್ರಾಯವಲ್ಲ! ಸರಸುವಿನ ಪ್ರಾಯ ಹದಿನಾಲ್ಕೇ ಆದರೆ, ರಾಮಣ್ಣನ ಪ್ರಾಯ 21; ಕೇಶವಣ್ಣನಿಗೀಗ ಹಿಡಿದು 19; ಬರುವ ಮಕರ ಸಂಕ್ರಾಂತಿಗೆ ವೆಂಕಣ್ಣನಿಗೆ ಹಿಡಿಯಲಿರುವದು 18. ನನಗೀಗ 16.

× × ×

ಉದ್ದ, ತೋರ ಪ್ರಮಾಣದಲ್ಲಿ ಮುದ್ದೆ ಕಡೆದು ಮಾಡಿದ ಗೊಂಬೆಯಂತಿದ್ದಾಳೆ ಆಕೆ ಪುಷ್ಟದೇಹ ಚಂಚಲಾಕ್ಷಿ, ಚಪಲೆಯೆಂದು ಸರಸುವನ್ನು ಹೇಳುವಂತಿಲ್ಲ. ಬೆಡಗು, ಬಿನ್ನಾಣ, ವೈಯ್ಯಾರ, ಯಾವುದನ್ನೂ ಕೇಳಬೇಡಿ. ಮುಖವು ಪ್ರಫುಲ್ಲವಾಗಿದೆ ಎನ್ನುವ ಬದಲಿಗೆ ಪ್ರಬಲವಾಗಿದೆ ಎನ್ನುವಂತೆ ಒಂದು ವಿಧದ ಮೂಕಬಿಂಕ. ಬಳುಕುವ ಬಾಡುವ ದೌರ್ಬಲ್ಯವವಳಲ್ಲಿಲ್ಲ. ಮುಂಜಾನೆ ಕೆಲಸಕ್ಕೆ ಬರುವಾಗ ಇದ್ದಂತಹ ಸ್ಥಾಯೀಭಾವವೇ ಇಡೀ ದಿನದ ಕೆಲಸ ಮುಗಿಸಿ ಸಂಜೆ ಮರಳುವಾಗಲೂ. ಬಿಂಕದ ಹುಡುಗಿ ಪಾತ್ರೆ ತಿಕ್ಕಿ, ಹಾಲು ಕರೆದು ದಣಿಯುವಂತಿದೆಯೇ ಉದ್ದ ಜಡೆ, ಉಟ್ಟ ಸೀರೆಯ ಎಲ್ಲಾ ಅಂಚುಗಳೂ ಅಲ್ಲಲ್ಲೇ ಅಂಟಿಕೊಂಡಂತೆ—ಸೈಕಲ್ ಸವಾರನ ಡ್ರೆಸ್ಸಿನಂತೆ. ಸೆಗಣಿ ಸಾರಿಸುವಾಗ ಕೂಡಾ ಹಾಗೆಯೇ. ಸೆರಗು ಹಾರುವ ಓರೆಯಾಗುವ ಕ್ರಮವೇ ಇಲ್ಲ. ಸೀರೆಯ ಕಾಲಂಚಿನ ರಪರಪ ಶಬ್ದವೇ ಅವಳು ಬರುತಿದ್ದಾಳೆ ಎಂಬ ಡಂಗುರ. ನೀಟಬೆನ್ನು, ಮಂದಹೆಜ್ಜೆ. ಎಲ್ಲವೂ ನಿರ್ಣಯಿಸಿಟ್ಟ ಠರಾವಿನಂತೆ; ಕೂಡಿಸಿಟ್ಟ ಲೆಕ್ಕದಂತೆ ಚರ್ಚೆ ಚಾಪಲ್ಯವಿಲ್ಲ; ಅಳುಕುಬಳುಕಿಲ್ಲ; ಓರೆ ನೋಟ, ಒಲೆದಾಟಗಳಿಲ್ಲ ನಮ್ಮ ಓಲಗವನ್ನು ಪ್ರವೇಶಿಸುವಾಗಲೊಮ್ಮೆ ಸುತ್ತಲೂ ನೋಡಿಕೊಳ್ಳುತ್ತಾಳೆ. ಆ ನೋಟವು ಪ್ರತಿಯೊಬ್ಬನ ದೃಷ್ಟಿಯನ್ನೂ ಫಕ್ಕನೊಮ್ಮೆ ಹೀರಿಕೊಂಡಂತಾಗುತ್ತದೆ. ಆಮೇಲೆ ನಮ್ಮನ್ನು ಹಾದು ಹೋಗುವಾಗ ಅವಳಂತೆಯೇ ಅವಳ ದೃಷ್ಟಿ ಕೂಡಾ. ಒಳಮನೆಯ ಅವಳ ಚಲನವಲನಗಳಲ್ಲಿ ಹೆಚ್ಚಿನವು ಹೊರಗೂ ತೋರುತ್ತವೆ. ಹಾಲು ಕರೆಯಲು ಹಟ್ಟಿಗೆ ಹೋಗುವ ಹೊತ್ತು, ಪಾತ್ರೆ ತೊಳೆಯಲು ಬಾವೀಕಟ್ಟೆಗೆ ಹೋಗುವ ಘಂಟೆ, ತರಕಾರಿ ಹೆಚ್ಚಲು ಮೆಟ್ಟುಗತ್ತಿಯೇರುವ ಸಮಯ—ಇವುಗಳ ಕಾಲ ನಿಯಾಮಕ ಪಟ್ಟಿ ನಮ್ಮ ಬದುಡೆಯೊಳಗೇ ಉಂಟು. ಬಗ್ಗದಲ್ಲಿಂದಲೇ ಆಗಾಗ ಆಕೆ ಹೊರಗಡೆಗೆ ದೃಷ್ಟಿಹಾಕುತ್ತಾಳೆ ಅವಳ ನೋಟದ ಶಾಖ ಬೀಳಲಿಲ್ಲವೋ—ಅದರ ಅಭಾವದಿಂದ ಶೀತವೇರುವಷ್ಟು ಥಂಡಿತಾಗುವಷ್ಟು, ಸೂಕ್ಷ್ಮ ಪ್ರಕೃತಿಯವರು ನಮ್ಮಲ್ಲಿ ಕೆಲವರು. ಕೆಮ್ಮುವದಕ್ಕೂ ಶೀನುವದಕ್ಕೂ ಪ್ರಾರಂಭ! ಆಗ ಅವಳು ಹೊರಚೆಲ್ಲುವ ನೋಟದಲ್ಲೊಂದು ಕಸಿಕರವಿರುತ್ತದೆ. ಅದೇ ಆಕರ್ಷಣೆ; ನಾವು ಕೃತಾರ್ಥರಾಗುವದು ಅಷ್ಟರಿಂದಲೇ. ಅವಳು ನಗುವನ್ನೂ ನಾವು ಕಂಡಿದ್ದೇವೆ. ಅದು ಅಂತಪ್ಪನೊಡನಾಗಲೀ, ಆ ಮನೆಯ ಬೇರೆಯವರೊಡನಾಗಲಿ ಮಾತಾಡುವಾಗ. ಆದರೆ ಆ ನಗೆಯ ನೈಜಗುರಿ ನಾವೇ ಎಂಬು ನಮಗೆ ಗೊತ್ತು. ನಾವದಕ್ಕೆ ಪ್ರತಿನಗೆ ಸಲ್ಲಿಸುತ್ತೇವೆ-ನಮ್ಮೊಳಗೇನೇ ಮಾತಾಡಿಕೊಂಡು ಅನುಮಾನವೇನು? ಆಕೆ ಒಲವು ಇರುವ, ಒಪ್ಪಿಗೆಗೆ ಬರುವ ಹುಡುಗಿ. ಕರೆಯುವಾಗ ಎಮ್ಮೆ ಕಾಲಾಡಿಸಿದರೆ ಆಕೆ ಗದರಿಸಿದುದನ್ನು ನಾವು ಕೇಳಿಲ್ಲ; ಅಂತಪ್ಪನನ್ನ ಎಂದಾದರೂ ಕೂಗಿ ಕರೆದುದಿಲ್ಲ ಅವಳ ಸ್ವರವೋ? ಅದು ಗಿಳಿ ಅಥವಾ ಕೋಗಿಲೆಯದಲ್ಲ, ತಾಮ್ರದ ಪಾತ್ರೆಯದು! ಪಾತ್ರೆಯ ಮೇಲೊಂದು ಕಡ್ಡಿಯೆಳೆದರೆ ಹೇಗೋ ಹಾಗೆ; ಅದೊಂದು ಟೇ.......ಂ' ನಾದ. ಒಟ್ಟಿನ ಮೇಲೆ ಅತಿ ಸಂಕೋಚ ಪ್ರಕೃತಿಯ ಹುಡುಗಿ; ಮಾನಧನವಿರುವ ಮಾತಾಡದ ಜಾತಿ; ಅಷ್ಟೇ! ಅವಳ ಪ್ರಾಯ ಮತ್ತು ಪ್ರಕೃತಿಗೆ ಸಹಜವಾದ ಮದ, ಬಿಂಕ, ಹುಮ್ಮಸ್ಸು ಇವೆಲ್ಲಾ ನೀಟಾದ ನಡೆ ನೇರಾದ ನೋಟ, ಮತ್ತು ಕೀಳ್ದನಿಯಲ್ಲಿ ಸ್ಥಾಯಿಯಾಗಿವೆ ಅವು ತುಳುಕಿ ಚೆಲ್ಲದಂತೆ ಅವಳೇ ಬಿಗಿಹಿಡಿದುಕೊಂಡಿದ್ದಾಳೆ. ಅವಳ ಸತೀತ್ವ ಅಸಾಮಾನ್ಯವೇ ಸರಿ ಇಂಥವಳ ಪ್ರೇಮವನುಭವಿಸಬಲ್ಲವನೇ ದೇವೇಂದ್ರ! ಈ ಹುದ್ದೆ ಯಾರಿಗೆ ಮೀಸಲೋ? ನಮ್ಮ ಪೈಕಿ ಪ್ರತಿಯೊಬ್ಬನ ಮನಸ್ಸೂ 'ತನಗೇನೇ' ಎನ್ನುತ್ತಿದೆ. ಸಾಧಿಸದೆ ಕೆಲಸವಾಗುವದಿಲ್ಲ ತಾನೆ? ಈ ಸಾಧನೆಯಿಂದಾಗಿ ಅಂತಪ್ಪ ಈಗ ಬೆಂಕಿ ಪೆಟ್ಟಿಗೆಯ ವ್ಯಾಪಾರ ಬಿಟ್ಟಿದ್ದಾನೆ ಯಾಕಂದರೆ ಮಾರಬೇಕು ಕಂಟ್ರೋಲ್ ದರದಲ್ಲಿ; ಆದರಲ್ಲೂ ಬೆಂಕಿಪೆಟ್ಟಿಗೆಯಿಲ್ಲದಿದ್ದರೆ ಅವನ ಅಂಗಡಿಯಲ್ಲಿ ಬೀಡಿಯ ಖರ್ಚು ಹೆಚ್ಚಿಗೆ. ಒಳಗೆ ಹೋಗಿ ಬೆಂಕಿ ಹೊತ್ತಿಸುವ ಸುಖಕ್ಕಾಗಿಯೇ ಪ್ರತಿಯೊಬ್ಬನೂ ಐದು ಮಿನಿಟಗೊಂದು ಬೀಡಿ ಮುಗಿಸುತ್ತಾನೆ ಈ ವಿಧಾನದಿಂದ ದಿನಕ್ಕೊಂದು ಇಪ್ಪತ್ತು ಬಾರಿಯಾದರೂ ಸರಸುವನ್ನು ಸಮೀಪದಲ್ಲೇ ನೋಡಿಯಾಯಿತು. ಆದರೆ ಆಗ ಕೂಡ ಅವಳ ನೋಟ ಚಲಿಸಿದುದಿಲ್ಲ; ಕೆನ್ನೆಯಲ್ಲೊಂದು ಲಜ್ಜೆಯ ಸುಳಿಬಿದ್ದುದೂ ಇಲ್ಲ. ಬೆದರಿ ಬೇರೆ ನಿಲ್ಲುತ್ತಾಳೆ ಮಾತ್ರ. ಇಂತಹ ಗೂಢ ಪ್ರೇಮವನ್ನು ಸಮೀಪಿಸಿದರೆ ಸಾಲದು; ಸ್ಪರ್ಶಿಸಿ ನೋಡಬೇಕು. ಸರಿ, ನಮ್ಮಲ್ಲಿ ಒಂದೊಂದೇ ಮನೆಯ ಕೆಲಸದಾಕೆ ಗೈರುಹಾಜರಿಯಾಗಲು ಪ್ರಾರಂಭ 'ನಮ್ಮ ವೈರಿಯೀದಿನ ಕೆಲಸಕ್ಕೇನೇ ಬರಲಿಲ್ಲಪ್ಪಾ!'-ಎಂದು ಶ್ಯಾಮರಾಯ ತನ್ನ ವಸ್ತ್ರದ ಗಂಟು ಹಿಡಿದುಕೊಂಡು ಬಂದ ಒಗೆದುಕೊಡುವಂತೆ ಸರಸುವಿನ ಕೈಗೆ ಕೊಡುವದಕ್ಕೆ. ಮರುದಿನವೇ ಭೀಮಣ್ಣನ ಮನೆಯ ದುಗ್ಗಿಯೂ ಅಬ್ಸೆಂಟ್; ನೇ[illegible]ಣ್ಣನ ಮನೆಯ ಕೂಸು, ರಾಘು ಮನೆಯ ನರ್ಸಿ—ಯಾರೂ ಕೆಲಸಕ್ಕೆ ಬಂದಿಲ್ಲ! [illegible]ಲ್ಲರ ಅಂಗಿ ವಸ್ತ್ರಗಳೂ ಸರಸುವಿನ ಕೈ[illegible] ಹೋದವು. ಕೈಗೆ ಕೈತಾಗಿರಬೇಕು; ಆದ[illegible] ಮನಸ್ಸಿಗೆ ಮನಸ್ಸು ಹತ್ತಿದ ಅನುಭ[illegible] ಯಾರಿಗೂ ಆಗಲಿಲ್ಲ!

× × ×

ಹೀಗೆ ಸರಸುವನ್ನೊಲಿಸಿಕೊಳ್ಳುವದಲ್ಲಿ ಎಲ್ಲರೂ ವಿಫಲರಾಗಿದ್ದೆವು. ಆದ[illegible] ಯಾರಾದರೂ ಗೆದ್ದಿರಲೇಬೇಕೆಂಬುದರಿಂ[illegible] ನಮ್ಮ ಪೈಕಿ ಪ್ರತಿಯೊಬ್ಬನ ಮೇಲೆ ಪ್ರ[illegible]ಯೊಬ್ಬನಿಗೂ ಅನುಮಾನ ಹೀಗಾಗಿ ಕೆ[illegible]ನಕೊನೆಗೆ ಈ ಸ್ಪರ್ಧೆಯಲ್ಲಿ ಸಾಮೂಹಿ[illegible] ಸಾಧನೆಯ ಬದಲಿಗೆ ವ್ಯಕ್ತಿ ಸ್ವಾರ್ಥಮ[illegible]ಡಹತ್ತಿತು ಈ ಹೊತ್ತಿನಲ್ಲೇ ನಮ್ಮ [illegible]ಡಕ್ಕೆ ಕಿತಾಪತಿ ಕಿಟ್ಟು ಬಂದು ಸೇರಿಕೊ[illegible]ಡ. ಆಗ ನಮಗೆಲ್ಲಾ ನಿರಾಶೆ. ಕಿಟ್ಟು [illegible]ಕೃಷ್ಣ; ಆವನ ಬೆರಳು ಮುರಲಿಗೆ ಸವ[illegible] ಆ ಕೈಸನ್ನೆಯಿದಿರು ಕಣ್ಸನ್ನೆ ಮಾಡ[illegible] ಯುವತಿಯರೇ ಇಲ್ಲವೆಂಬ ಪ್ರತೀತಿ. ಇ[illegible]ಗಂತೂ ಒಂದನನೇ ಸೀದಾ ಬಾವಿಕಟ್ಟೆ[illegible] ಹೋಗಿ ಸರಸುವಿನಿಂದ ಒಂದು ಕೊ[illegible] ನೀರು ತೆಗೆಯಿಸಿ ಕೈಕಾಲು ತೊಳೆದುಕೊಂ[illegible]ಡು ಬಂದಿದ್ದ. ಆ ಮೇಲೆ 2 ದಿನಗ[illegible] 20ಸಲವಾದರೂ ಅವ ಸರಸು ಸುಳಿದ[illegible] ಸುಳಿದಿದ್ದಾನೆ. ಆದರೆ ಹಾಂ!- ಎರ[illegible] ದಿನ. ಆ ಮೇಲೆ ಕಾಣೆಯಾದವ ಅತ್ತ [illegible]ಳಿದುದೇ ಇಲ್ಲ

ಪರಾಜಿತ ಕಿಟ್ಟು ಮೊನ್ನೆ ರಸ್ತೆಯ ಇದಿರಾದ. "ಸವಾರಿ ಅಂತಪ್ಪನ ಅಂ[illegible]ಗೇಕೆ ಅಪರೂಪವಾಗಿದೆ?"-ಎಂದು ತಮಾಷೆಗಾಗಿ ಕೇಳಿದೆ.

"ನೀವೆಲ್ಲಾ ಕೋತಿಗಳು! ಸೀರೆಯ[illegible]ದನ್ನು ಸುತ್ತಿಬಿಟ್ಟರೆ ಗೋಮಟನನ್ನ ಸುತ್ತುಗಟ್ಟುತ್ತೀರಿ! ಆ ಸರಸು ಯಾರೇ[illegible] ಹೇಳು, ಅವ..........?" ಕೈಭಾಷೆಯಿ[illegible] ಪ್ರಶ್ನಿಸಿದ

"ಹೌದು, ಎಟಕದ ದ್ರಾಕ್ಷೇ ಹ[illegible]ಹುಳಿ!" ಎಂದು ಅವನನ್ನು ಅಣಕಿಸಿ [illegible]ಹಿದ್ದೆ. ಆದರೆ......ಅಂತಪ್ಪನ ಅಂಗ[illegible] ಇನ್ನು ಹೋಗಬೇಕೇ?

ಬರುವವಾರ—ಗಡಿಬಿಡಿ ರಾಮಣ್ಣ

ಬಾಡಿಗೆಗೆ ದೊರಕುತ್ತವೆ.

ಹೊಸ ಉಡುಪುಗಳು ಹೊಸ ಪರದೆಗಳು

ಹೊಸ ಇತರ ಉಪಕರಣಗಳು

ಶಾಲಾಮಕ್ಕಳ ಮತ್ತು ಎಮೆಚೂರ್ ನಾಟಕ ಕಥಾಭಾಗದಲ್ಲಿ ಬರಬಹುದಾದ ವಿವಿಧ ಭೂಮಿಕೆಗಳಿಗನುಕೂಲವಾದ ಎಲ್ಲಾ ತರದ ಪರದೆ ಉಡುಪು ಸಹಿತ ಉಪಕರಣಗಳು ಬಹಳೇ ಕಡಿಮೆ ಬಾಡಿಗೆಗೆ ದೊರಕುತ್ತವೆ. ಅಗತ್ಯವಿದ್ದಲ್ಲಿ ಪೌಡರ್ ಕೆಲಸವನ್ನು ಸಹ ಮಾಡಿಕೊಡಲಾಗುವುದು. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ಎಂಟು ದಿವಸಗಳ ಮುಂಚಿತವಾಗಿ ಬರೆದುಕೊಳ್ಳುವುದು.

B Budan Basha Saheb,
P. V. I., B. H. E Boys School, Barkur,
P. O. Barkur.

ಉಪಾಯದಿದಿರು ಉಪವಾಸ

(೩ನೇ ಪುಟದಿಂದ ಮುಂದ ವರಿದುದು.)

ಗಾಳಿಯೂ ಮುಂಜಾನೆಯ ಫಲಾಹಾರದ ಮೊದಲು ಮೂರು ಬಾರಿ 'ಹಿಂದೂ ಮುಸ್ಲಿಮ್ ಕೀ ಜೈ' ಘೋಷವೆಬ್ಬಿಸತಕ್ಕದ್ದೆಂಬ ನಿರ್ಧಾರವಾದ ವರದಿ ಬಂತು. ಅಲ್ಲಾ ಮಾಮುಶ್ರೂಕಿಯವರು ಭಗವದ್ಗೀತೆಯನ್ನೂ ಶ್ಯಾಮ ಪ್ರಸಾದಮುಖರ್ಜಿಯವರು ಕೊರಾನನ್ನೂ ಹಿಡಿದು ಭಾಷಣಕ್ಕೆ ನಿಂತ ಭಾವ ಚಿತ್ರಗಳು ಬಂದವು. ಮುಸ್ಲಿಂ ಮೆರವಣಿಗೆಯೊಂದರಲ್ಲಿ ಹಿಂದೂ ಪಾಲಗದವರಿದ್ದುದೂ, ಹಿಂದೂ ದೇವೋತ್ಸವಗಳಲ್ಲಿ ಮುಸಲ್ಮಾನರು ದುರ್ಸು ಬಾಣ ಸುಡುತ್ತಿದ್ದುದೂ ಸೇವಾ ಗ್ರಾಮಕ್ಕೆ ವರದಿಯಾಯಿತು. ಎಪ್ರಿಲ್ ತಿಂಗಳೊಗೆ ಪಸೂಲಾಗದುಳಿಯುವ ಗೇಣಿಯನ್ನೆಲ್ಲಾ, ಒಕ್ಕಲುಗಳಿಗೆ ಬಾಕಿ ಬಿಟ್ಟು ಆಹಾರಾಭಾವ ನಿವಾರಣೆಗೆ ನೆರವಾಗಬೇಕೆಂದು ಸಂಯುಕ್ತ ಪ್ರಾಂತ್ಯದ ಜಮೀನ್ದಾರ್ ಸಂಘ ಮಾಡಿದ ನಿರ್ಧಾರವನ್ನು ದ. ಕನ್ನಡದ ವರ್ಗದಾರ ಸಂಘವೂ ಅನುಕರಿಸಿದ ವಾರ್ತೆ ಹೋಯಿತು. ಉಡುಪಿಯ ಮಕರ ಸಂಕ್ರಾಂತಿ ಮಹೋತ್ಸವವು ವರದಿಯಾಗುವಾಗ, ಗಾಂಧಿಜೀ ಉಪವಾಸದ ಬಗ್ಗೆ ಏರ್ಪಟ್ಟಿದ್ದ 'ಮನಶ್ಶಾಂತಿ ಮಹೋತ್ಸವ'ವಾಗಿ ಮಾರ್ಪಟ್ಟಿದ್ದಿತು. ಬಂಗಾಳದಿಂದ ವಾರ್ತೆ—'ಮಹಾತ್ಮರು ಉಪವಾಸ ನಿರೀಕ್ಷೆಯನ್ನು ಬಿಟ್ಟರೆಂಬ ವಾರ್ತೆ ಬಾರದೆ ತಾವು ಉಣ್ಣುವಂತಿಲ್ಲವೆಂದು ಇಲ್ಲಿ ಸಾಮೂಹಿಕ ಉಪವಾಸಾರಂಭವಾಗಿದೆ. ಕೆಲವರು ಆಹಾರ ಮುಟ್ಟದೇ ಸಾಯುತ್ತಿದ್ದಾರೆ' ಮಲಬಾರಿನಲ್ಲಿಯೂ ಇಂತಹ ಸಹಾನಭೂತಿ ಸೂಚಕ ಸಾಮೂಹಿಕೋಪವಾಸಾರಂಭವಾದವರದಿಬರಹತ್ತಿತು! ಅಕ್ಕಿ ದಾಸ್ತಾನಿಟ್ಟವರು, ಸಾಮಾನು ಅಡಗಿಸಿಟ್ಟವರೆಲ್ಲಾ ತಮ್ಮ ದಾಸ್ತಾನಿನ ಮೌಲ್ಯದ ಇಮ್ಮಡಿಯಷ್ಟು ಹಣವನ್ನು ಸರಕಾರಕ್ಕೊಪ್ಪಿಸಿಬಿಟ್ಟರು (ಜುಲ್ಮಾನೆಯಾಗಿ ಎಂಬ ಪ್ರಸ್ತಾಪವಿಲ್ಲ) ಎಂಬ ಹೃದಯ ಪರಿವರ್ತನೆಯ ವರದಿಗಳು ದೇಶದ ಸಂದುಗೊಂದುಗಳಿಂದಲೂ ಬರಹತ್ತಿದವು. ಜನವರಿಯಾಂತ್ಯದಲ್ಲಿ ಮೊದಲಿದ್ದ ಐವರು ಕಾರ್ಯದರ್ಶಿಗಳಿಗೆ ಸಹಾಯಕರಾಗಿ ಬೇರೈದು ಮಂದಿಯನ್ನು ಗಾಂಧಿಜೀ ನೇಮಿಸಿಕೊಳ್ಳಬೇಕಾಗಿಬಂತು. ಫೆಬ್ರುವರಿ ಮಧ್ಯಭಾಗದಲ್ಲಿ ದೇಶದಲ್ಲಿ ಕಾಗದದ ಭಾರೀ ಅಭಾವ ಕಂಡು ಬಂತು; ದೊಡ್ಡ ಲಕೋಟೆಯೊಂದಕ್ಕೆ ಎರಡಾಣೆಯಷ್ಟು ಬೆಲೆಯೇರಿತು. ಟಪ್ಪಾಲು ಇಲಾಖೆಯನೌಕರರರಜೆ ಅರ್ಜಿಗಳು, ಸಂಬಳಹೆಚ್ಚಳದವಿನಂತಿಗಳು ಸರಕಾರಕ್ಕೆಬರಹತ್ತಿದವು. ಫೆಬ್ರುವರಿಅಂತ್ಯಕ್ಕೆ ನವಡಿಲ್ಲಿಯಿಂದ ಹೊರಟಪತ್ರಿಕಾಶಾಸನಂ...." ಈವರುಷದ ಆದಿಯಿಂದದೇಶದಲ್ಲೆಲ್ಲಾ ಕಾಗದದ ದುರ್ವ್ಯಯ ಮಿತಿಮೀರಿ ನಡೆಯಹತ್ತಿದೆಯೆಂದೂ, ಇದನ್ನು ನಿಲ್ಲಿಸದಿದ್ದಲ್ಲಿ ಉಪಯುಕ್ತ ಬರೆವಣಿಗೆಗಳಿಗೆ ಕಾಗದವೇ ದೊರೆಯುವಂತಾಗುವದೆಂದೂ ಸರಕಾರಕ್ಕೆ ಮನವರಿಕೆಯಾಗಿರುವುದರಿಂದ ಮನೇ ವಾರ್ತೆಯ ಕಾಗದ ಪ್ರಣಯ ಪತ್ರ, ಇತ್ಯಾದಿಗಳನ್ನು ಬಿಟ್ಟು ಮಿಕ್ಕುಳಿದ ಎಲ್ಲಾ ಪತ್ರ ವ್ಯವಹಾರಗಳನ್ನೂ ಈ ಮೂಲಕ ನಿಷೇಧಿಸಲಾಗಿದೆ. ಇದನ್ನು ಉಲ್ಲಂಘಿಸುವವರು 6 ತಿಂಗಳ ಸಜೆ, ಇಲ್ಲವೇರೂ. 1000ಜುಲ್ಮಾನೆಅಥವಾ ಎರಡಕ್ಕೂ ಅರ್ಹರಾಗುವರು". ಈ ಆಜ್ಞೆಯ ಕುರಿತು ಪಾರ್ಲಿಮೆಂಟಿನಲ್ಲಿ ಮಿ. ಸೋರೆನ್ಸನ್ ಮಿ. ಅಮೆರಿಯವರನ್ನು ಕೆಣಕಿಕೆಣಕಿ 'ಇದು ಸೇವಾಗ್ರಾಮಕ್ಕೆ ವರದಿಯೇ ಹೋಗದಂತೆ ಮಾಡಿ ಗಾಂಧಿಯವರು ಉಪವಾಸ ಕೈಗೊಳ್ಳುವಂತೆ ಮಾಡುವ ಹಂಚಿಕೆಯಲ್ಲವೆ?' ಎಂದು ಪ್ರಶ್ನಿಸುತ್ತಿದ್ದ ದಿನವೇ, ಮತ್ತೊಂದು ವಾರ್ತೆ ಪ್ರಕಟವಾಯಿತು...."ಇನ್ನು ಮೂರು ತಿಂಗಳ ತನಕ ವಾರ್ಧಕ್ಕೆ ಟಿಕೇಟು ಕೊಡುವುದನ್ನು ನಿಲ್ಲಿಸಲಾಗಿದೆ' ಎಂದು. ರೈಲ್ವೇ ಬೋರ್ಡಿನ ಪ್ರಕಟಣೆ ಹೊರಟಿತು. ಟಪ್ಪಾಲು ದ್ವಾರಾ ವರದಿ ಕಳುಹಿಸಲಾಗದುದರಿಂದ ದೇಶದ ಸಂದು ಮೂಲೆಗಳವರೂ ಸಜೀವ ವರದಿಗಳಾಗಿ ಸೇವಾಗ್ರಾಮಕ್ಕೆ ಹೊರಟು ಆ ಭಾರದಿಂದ ರೈಲ್ವೇ ಲೈನು ಕುಸಿಯಹತ್ತಿದುದೇ ಇದಕ್ಕೆ ಕಾರಣವಂತೆ!

* * *

ಈ ಘಟನೆಗಳ ನಂತರವಂತೂ ಇಡೀ ದೇಶವು ಎಡೆಬಿಡದೆ ಪ್ರಾರ್ಥಿಸಹತ್ತಿದೆ. ಮಹಾತ್ಮರು ಉಲ್ಲಸಿತರಾಗಿದ್ದಾರೆ; ಪ್ರಾಯಶಃ ಉಪವಾಸವಿಲ್ಲ ಎಂಬ ಆಸೆ ಹುಟ್ಟುತ್ತಿದೆ. ಭಾರತ ಮತ್ತು ಗಾಂಧಿ ಪರಸ್ಪರ ದೃಷ್ಟಿಯುದ್ಧಕ್ಕೆ ನಿಂತಿದ್ದಾರೆ.

ನೋಟ, ಮಾಟ ನಡೆದೇ ಇತ್ತು—ಏಪ್ರಿಲ್ 5, 1945. ಬಂತೇ ಬಂತು!

ಮುಂದೇನು? ಬರುವ ವಾರದ ಸಂಚಿಕೆ ನೋಡಿರಿ.



ಇದನ್ನು ತಿಳಿಯುವುದಕ್ಕೆ
ಯಾವ ಜೋತಿಷ್ಯವೂ ಬೇಕಿಲ್ಲ

ಇನ್ನು ಮುಂದಕ್ಕೆ ಪದಾರ್ಥಗಳ ಬೆಲೆಗಳು ಹೆಚ್ಚುವವೋ, ಇಳಿಯುವವೋ ಎಂಬುದನ್ನು ಹೇಳುವದಕ್ಕೆ ಯಾವ ಅಪರೋಕ್ಷಜ್ಞಾನಿಯೂ ಬೇಕಾಗಿಲ್ಲ. ಪದಾರ್ಥಗಳ ಬೆಲೆಗಳು ಇಳಿಮುಖವಾಗಿರುವ ಅಂದಾಜು, 1943ನೇ ಇಸವಿಯಲ್ಲಿ ಜನಗಳಿಗೆ ಉಂಟಾದ ಅನುಭವದಿಂದಲೇ ಸಾಮಾನ್ಯಕ್ಕೆ ನಂಬಿಕೆಯನ್ನುಂಟುಮಾಡಿರುತ್ತವೆ. ಬೆಲೆಗಳು ಇಳಿಯುತ್ತಿವೆಯೆಂದು ಸ್ಪಷ್ಟಪಡಿಸುವ ನಿದರ್ಶನಗಳು ನಮ್ಮ ಸುತ್ತುಮುತ್ತಲೂ ಇವೆ. ಬೆಲೆಗಳನ್ನು ಹತೋಟಿಗೆ ತರುವ ಉದ್ದೇಶದಿಂದ ಗೌರ್ನಮೆಂಟಿನವರು ಜಾರಿಗೆ ತಂದಿರುವ ಶಾಸನಗಳು ಮತ್ತು ಅನ್ಯಾಯದಿಂದ ಲಾಭಸಂಪಾದನೆಯನ್ನು ಮಾಡಲು ಪ್ರಯತ್ನಿಸಿದ ವ್ಯಾಪಾರಿಗಳನೇಕರನ್ನು ದಂಡನೆಗೆ ಗುರಿಮಾಡಿದ್ದೂ, ಈ ಎರಡು ವಿಚಾರಗಳೂ, ಬೆಲೆಗಳು ಏರುತ್ತಿರುವುದನ್ನು ನಿಲ್ಲಿಸಿದ್ದಲ್ಲದೆ, ಅವುಗಳು ಇನ್ನೂ ತಗ್ಗುತ್ತಲೇ ಹೋಗುವಂತೆ ನಿಸ್ಸಂದೇಹವಾಗಿ ಮಾಡಿರುತ್ತವೆ. ಬೆಲೆಗಳ ಇಳಿತದ ಬಗೆಗೆ ನೀವು ಸಿಕ್ಕಬೇಡಿ

ಕೈಗಾರಿಕೆ ಸಾಮಾನುಗಳು, ವ್ಯಾಪಾರದ ಸರಕುಗಳು, ಜಮೀನುಗಳು, ಕಟ್ಟಡಗಳು, ಆಭರಣಗಳು, ಇವುಗಳಮೇಲೆ ಬಂಡವಾಳವನ್ನು ಹಾಕುವುದಕ್ಕೆ ಇದು ಸಮಯವಲ್ಲ. [illegible] ಇವುಗಳ ಬೆಲೆಯು ಇಳಿಯುವುದು ಖಂಡಿತ [illegible] ರೂ 100 ಬಂಡವಾಳವು, ಒಂದು ವರ್ಷ ಅಥವ ಇನ್ನೂ ಮುಂಚೆಯೇ ರೂ 10 ಅಥವ ಇನ್ನೂ ಕಡಿಮೆ ಬೆಲೆಗೆ ಇಳಿಯುವುದು.

ಈಗ ಬಂಡವಾಳವನ್ನು ವಿನಿಯೋಗಿಸಲು ಅತ್ಯುತ್ತಮ ಮಾರ್ಗಗಳು ಇವು — ಪೋಸ್ಟ್ ಆಫೀಸಿನ ಸರ್ಟಿಫಿಕೇಟುಗಳು, ಡಿಫೆನ್ಸ್ ಸೇವಿಂಗ್ಸ್ ಬ್ಯಾಂಕು ಖಾತೆಗಳು, ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕುಗಳು, ಗವರ್ನಮೆಂಟ್ ಲೋನುಗಳು ಮತ್ತು ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳು.

ಬಟ್ಟೆಬರೆಗಳು, ಜಮೀನ ಸಾಮಾನುಗಳು, ಔಷಧಿಗಳು, ಔಷಧಿಗಳ ತಯಾರಿಕೆಗೆ ಬೇಕಾಗುವ ಸಾಮಗ್ರಿಗಳು, ಆಹಾರಕ್ಕೆ ಉಪಯುಕ್ತವಾದ ಧಾನ್ಯಗಳು, ಇವೇ ಮೊದಲಾದವುಗಳ ಧಾರಣೆಯು ಇಳಿಯುತ್ತಿದೆ. ಇದೂ ಅಲ್ಲದೆ, ಬೆಲೆಗಳನ್ನು ಅಧೀನಕ್ಕೆ ತೆಗೆದುಕೊಳ್ಳುವ ಕಾನೂನುಗಳ ಕಾಠಿಣ್ಯವು ಹೆಚ್ಚುತ್ತಿರುವದಲ್ಲದೆ, ಅವುಗಳನ್ನು ಉಲ್ಲಂಘಿಸಿದವರನ್ನು ಶಿಕ್ಷೆಗೆ ಗುರಿಮಾಡುವ ವಿಚಾರಣೆಗಳೂ ಬಲವಾಗಲ್ಪಡುತ್ತಿವೆ. ಈ ಕಾರಣಗಳಿಂದ ಬೆಲೆಗಳು ಇನ್ನೂ ಇಳಿಯುತ್ತವೆಂದು ನೀವು ಖಂಡಿತವಾಗಿಯೂ ನಂಬಿರಿ.

ಹಣವನ್ನು
ಕೈಲಾದ ಮಟ್ಟಿಗೂ
ಉಳಿಸಿರಿ
ಉಳಿಸಿದ್ದನ್ನು
ವಿವೇಕಮಾರ್ಗ
ಗಳಲ್ಲಿ ವಿನಿಯೋ
ಗಿಸಿರಿ

ಇದು ರಾಷ್ಟ್ರೀಯ ಯುದ್ಧಮುಖವು ಭಾರತೀಯರ ಸಮಕ್ಷಮದಲ್ಲಿ ಮಾಡುವ ಅರಿಕೆ

AAA 1115 KN.

The Pangal Nayak Bank Limited.

(Incorporated in 1920)

Registered Office Court Road, UDIPI.

Branches at— **Udipi, Mangalore, Katapadi, Kanhangad, Kinnigoli and Nileshwar, South Canara District**

Discounting of demand and short term negotiable instruments for approved parties, granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms acceptance of Fixed, Current, Savings Bank and Cumulative deposits and every other type of up-to date Banking service is at the disposal of all the sections of the discreet public

For business proper please enquire at any one of our Offices.

15th April 1944

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತ ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೇರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೪ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya. GADAG.

The best preventive in epidemics of CHOLERA

"BHUVANENDRA"

CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ. ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ ಶ್ರೀ। ಆರ್। ಎಸ್। ಶೆಣೈ, ರಥಬೀದಿ; ಡಾ। ಟಿ। ಜಿ। ಆಚಾರ್ಯ್ಸ ಫಾರ್ಮಸಿ; ಡಾ। ಕೆ। ಶೇಷಗಿರಿ ಪೈ, L. I. M.; ಡಾ। ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೋ.

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ **ಅಮೋಘವಾದ ಮಧುರದ್ರವ ರಸಾಯನ.** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)



೮ ಔನ್ಸಿನ ೩ಬಾಟ್ಲಿಗಳು ಹೆಚ್ಚು ಕಡಿಮೆ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಬ್ಬ ಬಾಣಂತಿಯರಿಗೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರಿಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ

— ಮಕ್ಕಳನ್ನು ಹಡೆಯುವದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜ ೧೪ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ— ದಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್. ಆರ್. ಎಲ್. ಕಮಾಲದಾಸ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣ ಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವದಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ. 1-12—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ವಾಲಿ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ಕಳಿಸಬಹುದು. ಉಡುಪಿ ಏಜಂಟರು:—ನವಭಾರತ ಬುಕ್ ಡಿಪೋ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ ಬೆಲೆ ೦—೧೦—೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾ .

ಪ್ರೇಮಪ್ರವಾಹವು ಹೇಗ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮಪ್ರವಾಹ

ಸ್ವಾರಸ್ಯವಾದ ೫ ಕತೆಗಳ ಸಂಗ್ರಹ ಬೆಲೆ ೦-೬—೦

ಬಹಿರಂಗವಾಗಿ ಅಲ್ಲವಾದರೂ ಅಂತರಂಗವಾಗಿ ನೋಡತಕ್ಕ

ಆರ್ಟ ಚಿತ್ರಗಳು

ಹಲವಾರು ಸುಂದರಿಯರ ನೈಜಚಿತ್ರಗಳ ಕಟ್ಟು. ಬೆಲೆ ೦—೬—೦

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಕುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ ೧—೪—೦

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. ಬೆಲೆ: ೦—೧೨—೦

ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಿಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

Regd. No. M 3078.　　ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6　　Estd. 1921 ಸ್ಥಾಪನೆ.

NAVAYUGA
ನವಯುಗ

ವರ್ಷ ೨೪] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ [Vol 24
ವಾರ ೧೫] Founder SRI A. T. SHETTY. [No. 15

ಉಡುಪಿ ● 21–12–1944 ● ಮಂಗಳೂರು.

ದಿ ಜುಪಿಟರ್
ಜನರಲ್ ಇನ್ಶ್ಯೂರೆನ್ಸ್
ಕಂಪೆನಿ, ಲಿ, ಬೊಂಬಾಯಿ.
ವಿಮೆಯುಳಿಸ ಬೇಕೆ?
ಏಜಂಟರಾಗುವಿರಾ?
-ಹಾಗಾದರೆ ಕೂಡಲೇ-
ಪಿ. ಡಿ. ನಾಯಕ, ಉಡುಪಿ.
ದಕ್ಷಿಣ ಕನ್ನಡದ ಚೀಫ್ ಏಜೆಂಟ್.
-ಇವರಿಗೆ ಬರೆಯಿರಿ-
! ಕೋಟಿಗೆ ಮಿಕ್ಕಿ ವ್ಯವಹಾರ
ಈ ವರುಷವೇ ರಜತೋತ್ಸವ!
The Jupiter General
Insurance Company Ltd.

Transact with
The Vijaya Bank Ltd.
H. O. MANGALORE.
Br nches all over the District
and in Bombay city,
For all kinds of Banking business
ದಿ. ವಿಜಯ ಬೇಂಕ್
ಲಿಮಿಟೆಡ್,
ಹೆಡ್ ಆಫೀಸು: ಮಂಗಳೂರು.
ಜಿಲ್ಲೆಯ ಎಲ್ಲಾ ಕಡೆಗಳಲ್ಲಿ ಮತ್ತು ಮುಂಬಾಯಿ ನಗರದಲ್ಲಿ ನಮ್ಮ ಶಾಖೆಗಳು
ಎಲ್ಲಾ ತರದ ಬೇಂಕಿಂಗ್ ವ್ಯವಹಾರ ಗಳು ನಡೆಸಲ್ಪಡುವುದು.
"We are glad to announce that the Canara Bank Ltd., are our Clearing agents at Bombay".
ದಿ ಕೆನರಾ ಬ್ಯಾಂಕ್ ಲಿಮಿಟೆಡ್‌ಯವರು ನಮ್ಮ ವಿಜಯಾ ಬ್ಯಾಂಕಿನ ಕ್ಲಿಯರಿಂಗ್ ಏಜಂಟರಾಗಿರುತ್ತಾರೆಂದು ತಿಳಿಸಲು ಸಂತೋಷಪಡುತ್ತೇವೆ.
M. M. Bhandary,
Agent Bombay Branch,

ಕ್ರೌನ್
ರಬ್ಬರ್ ಸ್ಟ್ಯಾಂಪ್ ಕಂಪೆನಿ
18 ಬಲ್ಮಠ ರಸ್ತೆ, ಮಂಗಳೂರು.
ರಬ್ಬರ್ ಮೊಹರು ಸೈನ್ ಬೋರ್ಡ್
ತೃಪ್ತಿಕರವಾಗಿ ಮಾಡಿಕೊಡಲ್ಪಡುವವು
Crown Rubber Stamp Co.
18 Balmat Road, MANGALORE
Approved firm by the Govt. of Mysore.
Certified by the Agent of the Govt. of India in Ceylon. ESTD 1906

ಮುಟ್ಟಾಗುವಿಕೆ
ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣೆ ಅಥವಾ ಇನ್ನಾವ ಕಾರಣವಿದ್ದರೂ—'ಕುಮಾರಿ' (Govt Regd) ನಿಶ್ಚಿತ ನಿರುಪದ್ರವಿ—ಹಿಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಸರಿಯುಗೊಡುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ 3/- ಕೈಮೀರಿದ ಕೇಸುಗಳಿಗೆ ರೂ.5,(ವಿ.ಪಿ.12 ಆಣೆ ಅಲಾಯಿದ) Mrs P. DEVEE,
F. D. S. (N) Tollygunge, Calcutta.
ಸ್ಟಾಕಿಸ್ಟ್: ಪೊಪ್ಯುಲರ್ ಸ್ಟೋರ್ಸ್,
ಮಂಗಳೂರು.

CHAMPAE'S
Snow & Castrex
Sole Distributers for (India.)
Sukhananda Stores
Santhekatte, UDIPI, S. K.

Develop the God given "Talents".
"Children are the 'Talents' given to man by the Lord, and unless parents provide for their full development they will not be fit to enter the Kingdom of Heaven," said General Garfield, one of the illustrious Presidents of the United States.
A Children's Endowment Policy will forestall the financial want which often hampers the full development of your children.
THE CANARA MUTUAL
ASSURANCE CO., LTD.,
UDIPI (S India)

CO-OPERATION - - - -
Life Assurance is the business based on the idea of mutual co-operation. By diverting a small portion of one's earning for paying premiums, we co-operate for the good of the family and safeguard the education of children.
Let us assist you in taking out a Policy under the plan best suited to you. Write now to:—
KOCHIKAR BROTHERS LTD.
Chief Agents for South India
THE BOMBAY LIFE ASSCE. CO., LTD.
(Estd 1908)
The "Bombay Life" Bldg., UDIPI S. K.
Offices and Agencies throughout South India.

ENGLISH MADE EASY
ಇಂಗ್ಲಿಷ್ ಏನೂ ತಿಳಿಯದವರು 'ಸುಲಭದಲ್ಲಿ ಇಂಗ್ಲಿಷ್' ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೇ ಕಲಿತುಕೊಳ್ಳಬಹುದು.
ಇಂಗ್ಲಿಷ್ ಅಲ್ಪಸ್ವಲ್ಪ ಬಲ್ಲವರು ಚೆನ್ನಾಗಿ ಕಲಿತುಕೊಳ್ಳಬಹುದು.
ಸುಲಭದಲ್ಲಿ ಇಂಗ್ಲಿಷ್
ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.
ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ.
ಬೆಲೆ ಬರೇ ರೂ 1—4—0 ರೂ 1-5-0ನ್ನು ಮನಿ ಯಾರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತೆ.
ನವಭಾರತ ಪುಸ್ತಕ ಭಂಡಾರ,
ರಿಜಿಸ್ಟರ್ಡ್ ಪಬ್ಲಿಷರ್ಸ್ ಎಂಡ್ ಬುಕ್ ಸೆಲ್ಲರ್ಸ್,
ಉಡುಪಿ, ದ. ಕ.

ಅಂತರಂಗ
ಉಡುಪಿ
ಅಖಿಲ ಕರ್ನಾಟಕದ ಹೊಸ
ಮಾದರಿಯ ಸಚಿತ್ರ
ವಿನೋದ ವಾರ ಪತ್ರಿಕೆ.
ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ. 0—1—6

REGD
ಅಮೃತಾಂಜನ
ತಲೆವೇದನೆ, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಹಲ್ಲು ವೇದನೆಗಳಿಗೂ ಎದೆನೋವು, ಗಾಯಗಳು ಬಾತುಕೊಳ್ಳುವುದು, ಚೇಳು ವಿಷ ವಂತಾದ ಬೇನೆ ಪಕ್ಷವಾತ, ಮೊಣಿವು ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಸಫಲ ಮದ್ದು ಸಕಲ ಸ್ಥಳಗಳಲ್ಲಿ ಸಿಕ್ಕುತ್ತದೆ
ಅಮೃತಾಂಜನ ಲಿಮಿಟೆಡ್,
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತ.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.
ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.
The Moolky Bank Ltd.,
Moolky, S. K.

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ
ಬಾಲಚಂದ್ರ
ಇದೀಗ ಮೂರನೇ ಸಂಪುಟಾರಂಭವಾಗಿದೆ
ವಿದ್ಯಾ ಇಲಾಖೆಗೆ ಸಂಬಂಧಿಸಿದ
ಸರ್ಕ್ಯುಲರುಗಳೂ ಪ್ರಕಟ
ವಾಗುತ್ತವೆ
ವಾರ್ಷಿಕ ಚಂದಾ
ರೂ 1-8-0 ಮಾತ್ರ
ಹೆಚ್ಚಿನ ವಿಚಾರಕ್ಕೆ ಬರೆಯಿರಿ
ಬಾಲಚಂದ್ರ, ಉಡುಪಿ.

Decorate your home with
Life-like Oil Painting
of those dear and near to you
M. S. Shirale,
MODERN STUDIO,
UDIPI.


ಯಾವತ್ತೂ ವಿಧದ ಬೆಳ್ಳಿ, ತಾಮ್ರ ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.
ಕಲ್ಯಂಜೆ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

ಎಪ್ರಿಲ್ ತಾ ೫, ೧೯೪೫.

ಬಡಹಳ್ಳಿ, ಸೇವಾಗ್ರಾಮವು ಇಡೀ ಪ್ರಪಂಚದ ದೃಷ್ಟಿ ಕೇಂದ್ರವಾಗಿದೆ. ಅಮೇರಿಕವು ರುಸವೆಲ್ಟರನ್ನ ಚುನಾಯಿಸಿತೋ ದಿನೆಯುರನ್ನೋ ಎಂದು ಲೋಕ ವಾಷಿಂಗ್ಟನಿನ ಕಡೆಗೆ ನೋಡಿದ ದೃಷ್ಟಿಯಲ್ಲಿ ಕೂಡ ಇಂತಹ ಆತುರವಿರಲಿಲ್ಲ. ತವರ್ಸ್ಟೋರಿನಲ್ಲಿ ಈ ಬಾರಿ ಇರುವದು ಗೋಧಿಯೋ ಅಕ್ಕಿಯೋ ಎಂಬುದನ್ನಾದರೂ ದಕ್ಷಿಣ ಕನ್ನಡದ ಯಾವ ಹಳ್ಳಿಯವರೂ ಇಷ್ಟು ಬಾಯಾರಿಕೆಯಿಂದ ಕಂಡಿರಲಿಲ್ಲ. ಹೆಚ್ಚೇನು, ತನ್ನಾಕೆ ಹೆರುವದು ಗಂಡೋ ಹೆಣ್ಣೋ ಎಂದು ಪ್ರಸವವೇದನೆ ಕೇಳಬರುತ್ತಿರುವ ಕೋಣೆಯ ಕಡೆಗೆ ಕೂಡ ಇಂತಹ ಉದ್ವೇಗದಿಂದ ನೋಡುವವನಿರಲಾರ. ಆದರೆ ಗಾಂಧಿಜೀ ಈ ಬಾರಿ ಉಣ್ಣುವರೋ ಉಪವಾಸ ಕುಳಿತುಕೊಳ್ಳುವರೋ ಎಂದು ಸೇವಾಗ್ರಾಮದ ಕಡೆಗೆ ಇಡೀ ಲೋಕ ನೋಡುತ್ತಿದ್ದ ದೃಷ್ಟಿಯಲ್ಲಿ ಕಳವಳ, ಆತುರ, ಆಸೆ, ನಿರಾಶೆ–ಇವೆಲ್ಲಾ ಮಿಶ್ರವಾಗಿವೆ. ಸೇವಾಗ್ರಾಮ ಭಾವಗ್ರಾಮವಾಗಿದೆ

ಆಶ್ರಮದ ಸರಾರವೆಲ್ಲಾ ಕಾರು, ಜಟಕಾ, ಎತ್ತಿನ ಗಾಡಿ, ಸೈಕಲ್, ಕುದುರೆ ಕೋಣಗಳಿಂದ ತುಂಬಿಹೋಗಿ 'ವಿವಿಧ ವಾಹನ ಪ್ರದರ್ಶನ'ವಾಗಿದೆ ಅವುಗಳನ್ನು ಓರೆಗೆ ಸರಿಸಿಕೊಂಡು ಓಡೋಡಿ ಬರುತ್ತಿರುವ 'ಪ್ರೆಸ್ಸುಮೇನ್'ಗಳು-ಸೆರಗು ಎತ್ತಿನ ಕೊಂಬಿಗೊ, ಸೈಕಲ್ ಹೇಂಡ್ಲಿಗೋ ಸಿಕ್ಕಿ ಹರಿದು ಹೋದುದನ್ನು ಗಣಿಸದೆ ಏಕಪ್ರಕಾರ ನುಗ್ಗುತ್ತಿರುವ ಕೇಸರೀ ಬಣ್ಣದ ಸೀರೆಯುಟ್ಟ ಸ್ವಯಂಸೇವಿಕೆಯರು–ಮೋಟಾರ್ ಸೈಕಲು, ಸಾದಾ ಸೈಕಲುಗಳಲ್ಲಿ ಬಂದಿಳಿದು ಬೆವರನ್ನು ಕೂಡಾ ಒರಸಿಕೊಳ್ಳದೆ 'ಏಕ್-ದೋ' ಮಾರ್ಚ್ ಮಾಡುತ್ತಾ ಬರುವ ಸ್ವಯಂಸೇವಕರು-ಕಾರಿನಿಂದಿಳಿದು ಗಂಭೀರ ಮುಖಮುದ್ರೆಯಿಂದ ದ್ವಾರಪಾಲಕರ ಸೆಲ್ಯೂಟಿಗೆ ಪ್ರತಿ ಸೆಲ್ಯೂಟ್ ಕೊಡುವದನ್ನೂ ಗಾಬರಿಯ ಬಲದಿಂದ ಮರೆತು ಆಶ್ರಮದೊಳಗೆ ನುಗ್ಗುತ್ತಿರುವ ಧುರೀಣರು--ಇವರೆಲ್ಲರ ಎದೆಯುರಿಯ ಶಮನಕ್ಕಾಗಿ ಗಾಳಿ ಬೀಸುತ್ತಿದೆಯೋ ಎಂಬಂತೆ ಆಶ್ರಮದ ಮುಂಭಾಗದಲ್ಲಿ ಪಟಪಟಿಸಿ ಹಾರುತ್ತಿರುವ ದೊಡ್ಡ ರಾಷ್ಟ್ರಧ್ವಜ-ಸೇವಾಗ್ರಾಮವು ಸೇವೆಯ ಗ್ರಾಮ ನಿಜವನ್ನಿಸಿದೆ!

*   *   *   *

ಆಶ್ರಮದಲ್ಲಿ 'ಅರೆಬತ್ತಲೆ ಫಕೀರ'ನ ಗುಡಿಸಲು. ಇಲ್ಲಿ ಈ ಬಾರಿ ಒಂದೇ ರೀತಿ ಐದು ದಿನಗಳವರೆಗೂ ಗಾಂಧಿಜೀ ಕುಳಿತಿದ್ದಾರೆ; 'ಪತ್ರತಪ'ವನ್ನಾಚರಿಸಿದ್ದಾರೆ; ದೇಶದ ಮೂಲೆಗಳ ವರದಿಗಳನ್ನು ಪರ್ಯಾಲೋಚಿಸಿದ್ದಾರೆ. ಈ ವರದಿಗಳಲ್ಲಿ ಒಂದೊಂದನ್ನೇ ಆರಿಸಿ, ತೆಗೆದುಕೊಡುವದು-ಮರಳಿ ಪಡೆದು ಕೂಡಿಸಿಡುವದು, ಪ್ಯಾರೇಲಾಲರ ಸಮೇತ ಹತ್ತು ಮಂದಿ ಕಾರ್ಯದರ್ಶಿಗಳ ಕೆಲಸ. ಈ ಐದು ದಿನಗಳಲ್ಲಿ ಇವರೆಲ್ಲರ ಮೈಯಿಂದ ಬೆವರಿಳಿದಷ್ಟು ಬಾಯಿಯಿಂದ ಮಾತು ಹೊರಟಿಲ್ಲ. ಬಾಪುಜೀಯ ಮುಂದಿಡಲು ಒಂದು ಕಾಗದವನ್ನೆತ್ತುವಾಗ ಒಂದು ಖಂಡಿಯನ್ನೆತ್ತಿದ ಅನುಭವ ಅವರಿಗಾಗುತಿತ್ತು. ಈ ಐದು ದಿನಗಳಲ್ಲಿ ಆಶ್ರಮವು ಮೌನವೇ ಆಗಿದೆ; ದೇಶವು ಬಹಳ ಮಾತಾಡಿದೆ

ವ್ಯಂಗ್ಯ ಊಹೆ

ಉಪವಾಸದಿದಿರು ಉಪಾಯ

(ಈ ಲೇಖನದ ಪೂರ್ವಾರ್ಧ 'ಉಪಾಯದಿದಿರು ಉಪವಾಸ' ಕಳೆದ ವಾರ ಬಂದಿದೆ).

ಊಹಿಸಿದುದು—'ಹೆಗ್ಡೆ'.

ತಾ ೫-೪-೪೫ನೇ ಅಪರಾಹ್ನ ಆರು ಘಂಟೆಗೆ ಪರೀಕ್ಷೆ ಮುಗಿಯಿತು. ಇಡಿಯ ರಾಷ್ಟ್ರದಲ್ಲಿ ಈ ಪಂಚ ದಿನಗಳನ್ನು ಪ್ರಫುಲ್ಲವದನದಿಂದ ಕಳೆದ ಏಕ ಮಾತ್ರವ್ಯಕ್ತಿಗಾಂಧಿಜೀ ಒಮ್ಮೆ ಸುತ್ತ ನೋಡಿದರು. ಮುಂಭಾಗದಲ್ಲಿ ಪ್ಯಾರೇಲಾಲರು ಚೌಕಹಾಕಿ ಕುಳಿತಿದ್ದಾರೆ. ಉಳಿದ ಒಂಭತ್ತು ಮಂದಿ ಕಾರ್ಯದರ್ಶಿಯರು ನವಗ್ರಹಗಳಂತೆ ವಿವಿಧ ಭಂಗಿಗಳಲ್ಲಿ ನಿಂತಿದ್ದಾರೆ. ಅಲ್ಲಿಯೇ ಕಾಲು ಮಡಚಿ ಕುಳಿತಿದ್ದ ರಾಜಾಜಿಯ ಹಸುರು ಕನ್ನಡಕದ ಛಾಯೆಬಿದ್ದು ರಿಕಾರ್ಡು ಕಟ್ಟುಗಳು ಮಸಕಾಗಿ ಕಾಣುತ್ತಿವೆ. ಸರೋಜಿನಿ ದೇವಿ ತನ್ನ ಬೊಜ್ಜು ಹೊಟ್ಟೆಗಾಧಾರವಾಗಿ ಎರಡೂ ಕೈಗಳನ್ನು ಸೊಂಟಕ್ಕಿಟ್ಟುಕೊಂಡು ನಿಂತಿದ್ದಾರೆ ಎಲ್ಲರ ಮೇಲೂ ಒಮ್ಮೆ ದೃಷ್ಟಿಯೋಡಿಸಿದ ಗಾಂಧಿಜೀಯೊಂದು ಬಾರಿ ಗಹಗಹಿಸಿ ನಕ್ಕರು "ನೀವು ಕುಸ್ತಿಗೆ ನಿಂತಂತಿದೆ"– ಎಂದು ಸರೋಜಿನಿಯೊಡನೆ ತಮಾಷೆ "ನೀವು ಊಟ ಬಿಡುವದು ನಿಜವಾದರೆ ನಿಮ್ಮೊಡನೆ ಕುಸ್ತಿ ಹಿಡಿಯುವದೇ ಸರಿ!"--ಎಂದರು ಸರೋಜಿನಿ ಒಮ್ಮೆ ಎಲ್ಲರ ಮುಖದಲ್ಲೂ ನಗೆ ಮಿಂಚಿತು. ಗಾಂಧಿಜೀ ಮಾತ್ರ ಗಹಗಹಿಸಿ ನಕ್ಕರು.

"ದೇಶದಲ್ಲಿ ನಿಷ್ಕ್ರಿಯೆಯಿದೆ ಎಂದು ಈಗ ಹೇಳುವಂತಿಲ್ಲ"--ಒಂದು ವರದಿಯನ್ನೋದಿ ಕೆಳಗಿಡುತ್ತಾ ರಾಜಾಜಿ ನುಡಿದಾಗ "ಹೌದು. ಈ ದೊಡ್ಡ ರಾಶಿ ದೇಶದ ಕ್ರಿಯೆಯೇ ಅಲ್ಲವೇನು?"-ಎಂದರು ಮಹಾತ್ಮ ಮಾರ್ಮಿಕವಾಗಿ ಬರೆದು ಮತ್ತು ಟಾಯ್ಪರೆಯಾಗಿ ಬಂದ ಎಲ್ಲಾ ವರದಿಗಳನ್ನೊಳಗೊಂಡಿದ್ದ ಆ ರಾಶಿಯಲ್ಲಿ ನಿಜಕ್ಕೂ ಬ್ರಹ್ಮಾಂಡ ಬರವಣಿಗೆಗಳಿದ್ದುವು.

*   *   *   *

ಮಹಾತ್ಮರ ನಿರ್ಧಾರವು ಮರುದಿನ ತಿಳಿಯಬೇಕು. ಆ ರಾತ್ರಿ ಯಾರನ್ನೂ ಗಾಂಧಿಜೀ ತನ್ನ ಕೋಣೆಯಲ್ಲಿ ಮಲಗಲು ಬಿಡಲಿಲ್ಲ. ಮಹಾತ್ಮರ ಮನಸ್ಸಿನ ಪ್ರತಿಬಿಂಬವಾಗಿ ದೀಪವೊಂದು ಒಮ್ಮೆ ಉಜ್ವಲವಾಗಿ ಮತ್ತೊಮ್ಮೆ ಕಿರಿದಾಗಿ ಉರಿಯುತ್ತಿರುವದು ಕಿಟಕಿಯಿಂದ ಕಾಣುತಿತ್ತು. ನಡುರಾತ್ರೆಯಲ್ಲಿ ರಾಜಾಜಿ ಕಳ್ಳಹೆಜ್ಜೆಯಿಂದ ಹೋಗಿ ಕಿಟಕಿಯಿಂದ ಇಣಿಕಿದರು. ದೀಪದ ಪ್ರಕಾಶವು ಅವರ ಹಸುರು ಕನ್ನಡಕ್ಕೆ ಬಿದ್ದು, ಅಲ್ಲಿಂದ ಗಾಂಧಿಜೀಯ ಮೇಲೆ ತಂಪು ಕಿರಣವಾಗಿ ಹರಡಿತು. ಆ ಬೆಳಕಿನಲ್ಲಿ ನೋಡುವಾಗ ಇಹದ ಪರಿವೆಯೇ ಇಲ್ಲದೆ ಗಾಢ ಅಂತರ್ಯೋಚನೆಯಲ್ಲಿ ಮಗ್ನರಾಗಿ ಕುಳಿತಿದ್ದ ಬಾಪುಜೀ ಪದ್ಮಾಸನಾರೂಢ ಬುದ್ಧನಂತೆ ತೋರಿದರು!...?...?......???

*   *   *   *

ತಾ 6-4-45. ಮುಂಜಾನೆ ನಾಲ್ಕು ಘಂಟೆಯೊಳಗೆ ಮಹಾತ್ಮರು ಮಿಂದು ಬಂದಿದರು; ವಿಶೇಷ ಪ್ರಾರ್ಥನೆ ಮಾಡಿಮುಗಿಸಿದ್ದರು. ರಾತ್ರಿಯಿಡೀ ನಿದ್ದೆ ಬಿಟ್ಟು ಮಾರ್ಜಾಲಾಕ್ಷಿಗಳಾಗಿದ್ದ ಆಶ್ರಮ ವಾಸಿಗಳು, ಅತಿಥಿಗಳು, ಸ್ವಯಂ ಸೇವಕ ಸೇವಿಕೆಯರು ಸುತ್ತಲೂ ನೆರೆದಾಗ "ವೈಷ್ಣವ ಜನತೋ......." ಹಾಡ ಹೇಳಿದರು. ಗೀತೆ, ಬೈಬಲ್ ಮತ್ತು ಕೊರಾನುಗಳ ಕೆಲವು ಭಾಗಗಳನ್ನೋದಿಯಾಯಿತು. ಭಜನೆಗಾರಂಭ. ಗಾಂಧೀಜೀ ಕಣ್ಣು ಮುಚ್ಚಿಕುಳಿತಿದ್ದಾರೆ; ಸುತ್ತಲಿನ 'ಸೀತಾರಾಮ್, ಸೀತಾರಾಮ್" ಘೋಷಗಳ ಅಲೆಗಳು ಅವರನ್ನು ತೂಗಿ ತೂಗಿ ನಿದ್ರೆಮಾಡಿಸುತ್ತಿವೆ ಎಂಬಂತೆ ಅವರ ಭಾವ ಸಮಾಧಿ ಗಂಭೀರವಾಗುತ್ತಾ ಬರುತ್ತಿದೆ. ಮಹಾತ್ಮರು ಕಣ್ಣು ತೆರೆದ ಹೊತ್ತೇ ಅವರ ಫಲಾಹಾರದ ಹೊತ್ತು. ಪದ್ಧತಿಯ ಆಡಿನ ಹಾಲು ಮತ್ತು ಬೇಳೆ ಬಂತು–ಗಾಂಧಿಜೀ ಕೈಸನ್ನೆಮಾಡಿದರು 'ಹಿಂದೆಹೋಗಲಿ!'

ಹಾ! ಒಮ್ಮೆಗೇ ಎಲ್ಲರ ಕಣ್ಣಲ್ಲೂ ಮಿಂಚು ಸುಳಿಯಿತು. ಮಹಾತ್ಮರು ಉಪವಾಸದ ನಿರ್ಧಾರವನ್ನೇ ಮಾಡಿದ್ದಾರೆ! ಏನನ್ನೂ ಹೇಳದೇ ಈ ಬಾರಿ ಅನಶನ! ಇದೇಕೆ ಹೀಗೆ? ಉಪವಾಸ ಶರ್ತಗಳಾವುವು? ರಾಜಾಜೀ ಕೊರಳು ಕೊಂಕಿಸಿ ಕೇಳುತ್ತಿದ್ದಾರೆ. ಸರೋಜಿನ ಭುಜ ಕುಲುಕಿ ಕುಲುಕಿ ಪ್ರಶ್ನಿಸುತ್ತಿದ್ದಾರೆ; ಮಹಾತ್ಮರು ಅದನ್ನು ಉತ್ತರಿಸುವ ಬದಲಿಗೆ ಆಶ್ರಮವಾಸಿಯೊಬ್ಬನನ್ನು ಕರೆದರು–"ಆ ಆಡಿನ ಹಗ್ಗ ಬಿಚ್ಚಿ ಬಿಟ್ಟು ಬಿಡು!" ಹಾಗೋ! ಈ ಬಾರಿಯದು ಅಂತಿಮ ಉಪವಾಸ. ಕಾರ್ಯ ಕೆಟ್ಟಿತು! ಕತ್ತಲು ಕವಿಯಿತು!

*   *   *   *

ಇಡಿಯ ಭಾರತದ ಆಗು ಹೋಗುಗಳೆಲ್ಲಾ ಅಡಿಮೇಲಾದುವು. 40 ಕೋಟಿ ಹುಚ್ಚರನ್ನು ಕೂಡಿಸಿಟ್ಟ ಆಸ್ಪತ್ರೆಯಲ್ಲಾಗಬೇಕಾದ ಗಡಿಬಿಡಿಗಳೇಳಹತ್ತಿದವು. "ಬಾಪುಜೀ ಸತ್ತು ನೀವು ಬದುಕಬೇಕೆ?" "ಇಡೀ ರಾಷ್ಟ್ರದ ಆತ್ಮ ಕ್ಷಯಿಸುತ್ತಿದೆ—ಆಹಾರ ಸೇವನೆ ಯಾವುದರ ಪಾಲನೆಗಾಗಿ?"—ಎಂದು ಪತ್ರಿಕೆಗಳು ಕೆರಳಿ ಪ್ರಶ್ನಿಸಹತ್ತಿದುವು.

ಉಪವಾಸಾರಂಭದ ದಿನ—ಸೇವಾಗ್ರಾಮದಿಂದ ಬೊಂಬಾಯಿಯ ವರೆಗಿನವರಿಗೆ ಪೂರ್ವಾಹ್ನದಿಂದಲೂ ಉಪವಾಸ. ಅಪರಾಹ್ನಾನಂತರ ಇಡೀ ರಾಷ್ಟ್ರವೇ ಉಪವಾಸ ಬಿದ್ದಿತು ಪ್ರತಿಯೊಂದು ಅಂಗಡಿಯ ಬಾಗಿಲು ಮುಚ್ಚಿತು. ಗಾಂಧಿಜೀ ನೂಲುತ್ತಾ ಗೀತಾ ಪಠನೆ ಮಾಡುತ್ತಾ ಆನಂದದಿಂದಿದ್ದರು. ಡಾ। ಬಿ. ಸಿ ರೋಯಿಗಳು ಕಲ್ಕತ್ತದಿಂದ, ಡ। ಗಿಲ್ಡರ್, ಗಜ್ಜರರು ಬೊಂಬಾಯಿಯಿಂದ ಸೇವಾ ಗ್ರಾಮಕ್ಕೆ ಹೊರಟಿದ್ದಾರೆ.

ಎರಡನೇ ದಿನ. ಇಡೀ ರಾಷ್ಟ್ರದ ಪ್ರತಿಯೊಂದು ಹೊಟೆಲಿನಿಂದ ಒಕ್ಕಲಿ ಅಂಬೋಡೆಗಳು ಕೊಳೆತ ವಾಸನೆ ಬರುತ್ತಿದೆ. ಕಟ್ಟಿಗೆಯ ಬೆಲೆ ಅರ್ಧಕ್ಕಿಳಿದಿದೆ. ಗಾಂಧಿಜೀ ಹಸನ್ಮುಖಿಯಾಗಿದ್ದಾರೆ ಆದರೆ ನಿತ್ರಾಣ, ಕಾಣಿಸುತ್ತಿದೆ. ಡಾ. ಗಿಲ್ಡರ್, ನಾಯರ್, ಗಜ್ಜರ್, ರೋಯಿಗಳ ಸಹಿಯೊಡನೆ ಪ್ರಥಮ ಬುಲ್ಲೆಟಿನ್ ಹೊರಟಿತು.

ಮೂರನೇ ದಿನ. ಬಿರ್ಲಾರವರ ತಲೆ ತಿರುಗಿದೆ—ಅಜಾದರು ವಾಂತಿ ಮಾಡಿದೆ—ರಾಜೇಂದ್ರ ಪ್ರಸಾದರಿಗೆ ಹೊಸ ರೀತಿಯ ಉಬ್ಬಸ ಪ್ರಾರಂಭವಾದ-ಸರೋಜಿನಿಗೆ ಹೊಟ್ಟೆ ನೋವೆದ್ದ—ವಾರ್ತೆಗಳು ಬಂದವು. ರಸ್ತೆಗಳಲ್ಲೆಲ್ಲೂ ಡಾಕ್ಟರರ ಓಡಾಟಗಳು. ಮನೆಯಡುಗೆಯವರಿಗೆ ಒಲೆಗೆ ಕಟ್ಟಿದ ಜೇಡನ ಬಲೆ ಗುಡಿಸುವ ಕೆಲಸ. ನೋಡುವ ದೃಷ್ಟಿಗಳಲ್ಲೂ, ನೋಡತಕ್ಕ ಮುಖಗಳಲ್ಲೂ ಕತ್ತಲೆಯೇ ಇರುವದರಿಂದ ಹಗಲು ರಾತ್ರಿಯಾಗಿದೆ. ಹೊಟೆಲುಗಳಲ್ಲಿ ಬಾಗಿಲು ಹಿಂಗಡೆಯಲ್ಲಾಗಿದೆ. ಮಹಾತ್ಮರ ನಿತ್ರಾಣ ಹೆಚ್ಚಿದೆ. ಆದರೆ ದೈನಿಕಾಚರಣೆಗಳನ್ನು ಬಿಟ್ಟಿಲ್ಲವೆಂದು ಅಪರಾಹ್ನದ 'ಬುಲ್ಲೆಟಿನ್'ನಲ್ಲಿದೆ.

ನಾಲ್ಕನೇ ದಿನ. ದೇಶದಲ್ಲಿ ಕಾಳ ರಾತ್ರಿ ಹರಡಿತು-ಗಾಂಧಿಜೀ ಈ ದಿನ ಸ್ಮೃತಿ ತಪ್ಪಿ ಬಿದ್ದರು. ಬೇರೆ ಬೇರೆ ಕಡೆಯ ನಗರ ಸಭೆಗಳು ಅವಸರದ ಸಭೆ ಸೇರಿ ನಗರದ ಆಸ್ಪತ್ರೆಗಳಲ್ಲಿ ಮಂಚಗಳನ್ನು ಹೆಚ್ಚಿಸುವ ನಿರ್ಧಾರ ಮಾಡಿದವು. ಪಿತ್ಥಹಾರಿ, ಅಗ್ನಿಶಾಮಕ, ತೈಲ ಗುಳಿಗೆಗಳ ಮಾರಾಟ ಹೆಚ್ಚಿತು. ಕಟ್ಟಿಗೆಯ ಬೆಲೆ ತೀರಾ ಇಳಿದುದರಿಂದ ಮಂಚಕ್ಕಾಗುವ ಮರಗಳ ಕಡಿತ ಹೆಚ್ಚಿತು. ಮಾಡಿನಲ್ಲಿ ಹೊಗೆ ಕಾಣುವ ಮನೆಯನ್ನು ಕಾಂಗ್ರೆಸ್ ಸ್ವಯಂಸೇವಕರು ಮುತ್ತಿ ಒಲೆಯನ್ನು ನಂದಿಸಹತ್ತಿದರು. ಅಕ್ಕೀಸ್ಟೋರುಗಳ ಕೆಲಸಗಾರರಿಗೆ ಜೊಂಪು ಹತ್ತಿದೆ. ರೇಶನ್ ಕಾರ್ಡುಗಳ ಕಲಮು ಕಲಮುಗಳೇ ಖಾಲಿಯುಳಿದಿವೆ. ಅಗ್ನಿ ದೇವನೂ ಭಗವಂತನಿಗೆ ಸಮ—ಅಂತರ್ಗತನಾಗಿದ್ದಾನೆ; ಪ್ರತ್ಯಕ್ಷನಾಗಲಾರ!

ಆ ಮೇಲಿನ ದಿನಗಳು—ರಾಷ್ಟ್ರದ ಪಾಲಿನ ಮಹಾ ದುರ್ದಿನಗಳು.

ಮಹಾತ್ಮರ ನಾಲಗೆ ತೊದಲುತ್ತಿದೆ. ಸದಾ ಕಾಲ ಅರೆ ಸ್ಮೃತಿ; ಐದು ಮಿನಿಟಿಗೊಮ್ಮೆ ಪೂರ್ತಿ ಮೂರ್ಛೆ. ಆಶ್ರಮದ

(೧೫ನೇ ಪುಟ ನೋಡಿ).

ಬಾಡಿಗೆಗೆ ದೊರಕುತ್ತವೆ.

ಹೊಸ ಉಡುಪುಗಳು   ಹೊಸ ಪರದೆಗಳು

ಹೊಸ ಇತರ ಉಪಕರಣಗಳು

ಶಾಲಾಮಕ್ಕಳ ಮತ್ತು ಎಮೆಚೂರ್ಸ್ ನಾಟಕ ಕಥಾಭಾಗದಲ್ಲಿ ಬರಬಹುದಾದ ವಿವಿಧ ಭೂಮಿಕೆಗಳಿಗನುಕೂಲವಾದ ಎಲ್ಲಾ ತರದ ಪರದೆ ಉಡುಪು ಸಹಿತ ಉಪಕರಣಗಳು ಬಹಳೀ ಕಡಿಮೆ ಬಾಡಿಗೆಗೆ ದೊರಕುತ್ತವೆ. ಅಗತ್ಯವಿದ್ದಲ್ಲಿ ಪೌಡರ್ ಕೆಲಸವನ್ನು ಸಹ ಮಾಡಿಸೋಣಾಗುವುದು. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ಎಂಟು ದಿವಸಗಳ ಮುಂಚಿತವಾಗಿ ಬರೆದುಕೊಳ್ಳುವುದು.

B Budan Basha Saheb,
P. V. I., B H. E. Boys School, Barkur,
P. O. Barkur.

ರೋಯಿ-ಮೆಹತಾ ವಾಗ್ವಾದ

ಹಿಂದೀ ಸರಕಾರವು ಎಮ್. ಎನ್. ರೋಯಿಗಳಿಗೆ ತಿಂಗಳೊಂದಕ್ಕೆ 13 ಸಾವಿರ ರೂ.ಗಳಂತೆ ಕೊಡುತ್ತಿರುವುದರ ಕುರಿತು, ಲೇಬರ್ ಫೆಡರೇಶನಿನ ಮಾಜೀ ಅಧ್ಯಕ್ಷ ಶ್ರೀ ಜಮುನಾದಾಸ್ ಮೆಹತರಿಗೂ, ಕಾರ್ಯದರ್ಶಿ ರೋಯಿಗಳಿಗೂ ವಾಗ್ಯುದ್ಧ ಪ್ರಾರಂಭವಾಗಿದೆ. ತನ್ನ ಮೇಲೆ ಅವಿಶ್ವಾಸ ಸೂಚನೆ ಒದಬಹುದೆಂಬ ಭಯದಿಂದ ಮೆಹತರು ಅಧ್ಯಕ್ಷಪದಕ್ಕೆ ರಾಜಿ ಕೊಟ್ಟರೆಂದು ರೋಯಿಗಳ ವಾದ. ಒಮ್ಮೆ ಸರಕಾರಕ್ಕೆ ಹಿಂದೀ ಸರಕಾರದ ಏಜಂಟನಾಗಿ ತಾನು ನೇಮಕಗೊಂಡುದರಿಂದಲೇ ರಾಜಿಕೊಟ್ಟೆನೆಂದೂ, ಮುಂದಿನ ಫೆಡರೇಶನ್ ಅಧಿವೇಶನದಲ್ಲಾದರೂ ತನ್ನ ಮೇಲೆ ಅವಿಶ್ವಾಸ ಸೂಚನೆಯನ್ನು ಅಗತ್ಯವಾಗಿ ತರಬೇಕೆಂದೂ ಮೆಹತಾರ ಆಹ್ವಾನ. ಫೆಡರೇಶನಿನ ಕಾರ್ಯಕಾರೀ ಸಮಿತಿಗಾಗಲೀ ಅಧ್ಯಕ್ಷರಿಗಾಗಲೀ ಏನೊಂದನ್ನೂ ತಿಳಿಸದೆ, ರೋಯಿಗಳು ಖಾಸಗಿಯಾಗಿ 13,000ರೂ ಮಾಸಿಕವನ್ನು ನುಂಗುತಿದ್ದಾರೆ ಅದರ ಮೊತ್ತವು ಇಷ್ಟರಲ್ಲೇ 4 ಲಕ್ಷಕ್ಕೆ ಏರಿದೆ. ಮತ್ತು ದಿನಂಪ್ರತಿ 500ರಂತೆ ಹೆಚ್ಚುತ್ತಿದೆ. ಬರುವ ಮಾರ್ಚಿಯಲ್ಲಿ ಕೇಂದ್ರ ಎಸೆಂಬ್ಲಿಯ ಬಜೆಟ್ ಅಧಿವೇಶನದ ಮುಂದೆ ನಾನೀ ವಾದವನ್ನು ತರಲಿದ್ದೇನೆ. ಆ ತನಕ ರೋಯಿಗಳೂ ಅವರ ಅನುಯಾಯಿಗಳೂ ಮನಸೇಚ್ಛೆ ವರ್ತಿಸಲು ಸ್ವತಂತ್ರರಿದ್ದಾರೆ, ಎಂದು ಇದೇ ತಾ. 15ರಲ್ಲಿ ಶ್ರೀ ಮೆಹತರು ಮತ್ತೊಂದು ಹೇಳಿಕೆಯಿತ್ತಿದ್ದಾರೆ.

ವೈಸರಾಯರ ಒಣವಾದ

ಕಲ್ಕತ್ತದ ವಣಿಕ್ ಸಂಘ (ಚೇಂಬರ್ ಓಫ್ ಕಾಮರ್ಸ್)ದ ಮುಂದೆ ಕಳೆದ ತಾ 16ರಲ್ಲಿ ವೈಸರಾಯಿ ಲೋರ್ಡ್ ವೇವೆಲರು ಭಾಷಣವೀಯುತ್ತಾ, ದೇಶದ ಆರ್ಥಿಕ, ರಾಜಕೀಯ, ಚಲಾವಣೆ ಮತ್ತು ಆಹಾರ ಸ್ಥಿತಿಗಳ ಕುರಿತು ಪ್ರಸ್ತಾಪಿಸಿದರು. ಯುದ್ಧವು ಹಿಂದುಸ್ಥಾನವನ್ನು ದುರ್ಬಲಗೊಳಿಸದೆ ಪ್ರಬಲಗೊಳಿಸಿದೆ. ಅದಕ್ಕೆ ಸುಸಂದರ್ಭಗಳನ್ನೊದಗಿಸಿದೆ. ಇನ್ನು ಅದಕ್ಕೆ ರಾಜಕೀಯ ಜ್ವರವಿದೆಯಾದರೆ, ಅದರ ಧುರೀಣರು ವ ಕಿಸ್ಸಾನದಂತಹ ಶಸ್ತ್ರಕ್ರಿಯೆ ಮಾಡಬೇಕೆಂಬ ಬಯಕೆಯುಳ್ಳವರಾದರೆ ಅದು ಭಾವೀ ಸುಯೋಗವನ್ನು ಕಳೆದುಕೊಳ್ಳಬೇಕಾಗುವದು. 'ಕ್ವಿಟ್ ಇಂಡಿಯಾ' ಮಿಕ್ಸ್ಚರ್ ಮತ್ತು ಸತ್ಯಾಗ್ರಹ ಮಾತ್ರೆಗಳಿಂದ ಗುಣದೊರೆವಂತಿಲ್ಲ. ಎಕ್ಸಿಕ್ಯೂಟಿವ್ ಕೌನ್ಸಿಲು ಒಂದು ರಾಷ್ಟ್ರೀಯ ಸಂಕಾರವೇ ಆಗಿದೆ. ಸದ್ಯದ ರಾಜ್ಯಘಟನೆಗಳಿಗಿಂತ ವಿಸ್ತೃತವಾದ ಯಾವುದೊಂದು ರಾಷ್ಟ್ರೀಯ ಸಂಕಾರವನ್ನೂ ಯುದ್ಧಾವಧಿಯಲ್ಲಿ ಸ್ಥಾಪಿಸಲು ಸಾಧ್ಯವಿಲ್ಲ. ದೇಶದ ಬಿಕ್ಕಟ್ಟು ನಿವಾರಣೆಗಾಗಿ ಹೊಸ ಕಾರ್ಯವಾವುದನ್ನೂ ಕೈಕೊಳ್ಳುವಂತಿಲ್ಲ. ಸ್ಟರ್ಲಿಂಗ್ ಸಾಲಗಳನ್ನು ಮರುಪಾವತಿ ಮಾಡಲಾಗುವದು, ಎಂಬುದೇ ಲೋರ್ಡ್ ವೇವೆಲ್ ಭಾಷಣದ ಸಾರಾಂಶ.

ಸಪ್ರು ಸಮಿತಿಗೆ ಮಿ ಜಿನ್ನರ ನಕಾರ

ಜಾತಿ ಜಗಳ ತೀರ್ಮಾನ ಶೋಧನೆಗಾಗಿ ತನ್ನಿಂದ ನೇಮಕಗೊಂಡಿರುವ ಕಮಿಟಿಯ ಪರವಾಗಿ ಮಿ. ಜಿನ್ನರ ಅಭಿಪ್ರಾಯ ಸಂಗ್ರಹಿಸಲಾಗುವಂತೆ ಭೇಟಿಯ ವೇಳೆಕ್ಷಿಸಿ ಸರ್ ತೇಜ ಬಹದೂರ್ ಸಪ್ರುಗಳು ಡಿಸೆಂಬರ್ ತಾ. 10ರಲ್ಲಿ ಬರೆದಿದ್ದ ಪತ್ರಕ್ಕೆ ಮಿ ಜಿನ್ನರು ತಾ 13ರಲ್ಲಿ ಸ್ಪಷ್ಟ ನಿರಾಕರಣೆ ಕಳುಹಿಸಿದ್ದಾರೆ "ನಾನು ಪಕ್ಷರಹಿತ ಸಮ್ಮೇಲನವನ್ನಾಗಲೀ ಅದರ ಸ್ಥಾಯೀ ಸಮಿತಿಯನ್ನಾಗಲೀ ಒಪ್ಪಿಕೊಳ್ಳುವವನಲ್ಲ, ಅಂತೆಯೇ ಸ್ಥಾಯೀ ಸಮಿತಿಯಿಂದ ಇತ್ತೀಚಿಗೆ ನೇಮಕಗೊಂಡ ಈ ಕಮಿಟಿಯನ್ನೂ ಒಪ್ಪಲಾರೆನೆಂದು ಪ್ರತಿಪಾದಿಸುತ್ತೇನೆ. ಸದ್ಯದ ರಾಜಕೀಯ ಸ್ಥಿತಿ ಸುಧಾರಣೆಯ ಸಂಬಂಧದ ನಿಮ್ಮ ಉದ್ದೇಶ ಮತ್ತು ಕಾರ್ಯರೀತಿ ಕೂಡಾ ನನಗೆ ಸಮ್ಮತವಿಲ್ಲ. ನನ್ನೀ ಅಭಿಪ್ರಾಯಗಳು ನಿಮಗೂ ಸಾರ್ವಜನಿಕರಿಗೂ ಸುವೇದ್ಯವಿವೆ. ಇಂತಹ ಪರಿಸ್ಥಿತಿಯಿಂದಾಗಿ ನಿಮ್ಮ ಪತ್ರದಲ್ಲಿರುವ ವಿಜ್ಞಾಪನೆಯನ್ನು ಮನ್ನಿಸುವದು ನನಗಸಂಭವನೀಯವಾಗಿದೆ. ನಿಮ್ಮ ಮೇಲೆ ವ್ಯಕ್ತಿಶಃ ನನಗೇನೂ ಬೇಸರವಿಲ್ಲವೆಂಬುದನ್ನೂ, ಪಕ್ಷರಹಿತ ಸಮ್ಮೇಲನದ ಪರವಾಗಿಯಲ್ಲದೆ ಬೇರೆ ನಿಮಿತ್ತದಿಂದ ನೀವು ನನ್ನ ಭೇಟಿ ಯಾಚಿಸುತ್ತಿದ್ದರೆ ನಾನು ಸಂತೋಷದಿಂದ ಒಪ್ಪುತ್ತಿದ್ದೆನೆಂಬುದನ್ನು ನೀವು ನಂಬುವಿರೆಂದು ನನ್ನ ಆಶೆ" ಎಂದು ಮಿ. ಜಿನ್ನರ ಪತ್ರ. 'ಹಿಂದಿನದೆಲ್ಲವನ್ನು ಮರೆತು ಸ್ವಚ್ಛ ಹಲಗೆಯಲ್ಲಿ ಹೊಸತಾಗಿ ಪ್ರಾರಂಭಿಸಲಿರುವ ಸಪ್ರುಸಮಿತಿಗೆ ರಾಷ್ಟ್ರದ ಸಹಕಾರ ದೊರೆಯದವರಲ್ಲಿ ಅಹಂಕಾರವಿರ್ಯ ಅಥವಾ ಅಸಕ್ತಿಯಿರಬೇಕು" ಎಂದು ಮಿ. ರಹಿಮತುಲ್ಲರ ವಾದ.

ಬ್ರಿಟಿಷ್ ಕೂಲಿಗಾರ ಪಕ್ಷದ ನಿರ್ಣಯ

ಲಂಡನಿನಲ್ಲಿ ಈ ವಾರಾಂದಿಯಲ್ಲಿ ಜರಗಿದ ಬ್ರಿಟಿಷ್ ಲೇಬರ್ ಪಕ್ಷದ ಸಮ್ಮೇಲನವು ಪಕ್ಷದ ಕಾರ್ಯಕಾರೀ ಸಮಿತಿಯ ಅಧಿಕಾರಿಗಳಿಗೆ ವಿರುದ್ಧವಾಗಿ ಎರಡು ಪ್ರಮುಖ ನಿರ್ಧಾರಗಳನ್ನು ಮಾಡಿ ಅವರನ್ನು ಚಕಿತಗೊಳಿಸಿದೆ. ಗ್ರೀಸಿನ ಪಾಪೆಂಡ್ರಾವು ಸಂಕಾರಕ್ಕೆ ಬ್ರಿಟಿಷರು ಕೊಡುತ್ತಿರುವ ಬೆಂಬಲವನ್ನು ಹಲವು ಸದಸ್ಯರು ಕಠಿಣವಾಗಿ ಟೀಕಿಸಿದ್ದಾರೆ. ಎಡಪಕ್ಷೀಯರೊಡನೆ ಒಪ್ಪಂದಮಾಡಿಕೊಳ್ಳತಕ್ಕದೆಂದು ಸಮ್ಮೇಲನವು ನಿರ್ಣಯಿಸಿದೆ. ಬ್ರಿಟಿಷ್ ಯುದ್ಧಮಂಡಲದಲ್ಲಿ ಮಂತ್ರಿಪದದಲ್ಲಿರುವ ಈ ಪಕ್ಷದ ಸದಸ್ಯ ಮಿ. ಬೆವಿನರು ಮುಂದೆ ಏನು ಮಾಡಬಹುದೋ ನೋಡಬೇಕಿದೆ ಮತ್ತೊಂದು ಮುಖ್ಯ ನಿರ್ಧಾರದಂತೆ ಹಿಂದುಸ್ಥಾನದಲ್ಲಿ ರಾಷ್ಟ್ರೀಯ ಸರಕಾರ ಸ್ಥಾಪಿಸಿ, ಬಿಕ್ಕಟ್ಟು ನಿವಾರಿಸುವದು ಅತ್ಯಗತ್ಯ—ಅದಕ್ಕಾಗಿ ರಾಜಕೀಯ ಪ್ರಮುಖರ ಬಿಡುಗಡೆಯಾಗಬೇಕೆಂಬುದು. ಈ ನಿರ್ಧಾರಕ್ಕೆ ಲೇಬರ್ ಪಕ್ಷದ ಕಾರ್ಯಕಾರೀ ಸಮಿತಿಯ ವಿರೋಧವಿದ್ದಿತು. ಅವರು ರೋಯಿ ಪಕ್ಷದ ಮಾದವನ್ನು ಮುಂದೊತ್ತಿದ್ದರು. ಆದರೆ ನಿರ್ಣಯಕ್ಕೆ ಬಹುಮತ ದೊರೆತು ಪ್ರಬಲೋತ್ಸಾಹ ದೊಡನೆ ಅದು ಮಂಜೂರಾಗಿದೆ. ಇವೆರಡು ನಿರ್ಣಯಗಳ ಚರ್ಚೆಯ ಸಂದರ್ಭಗಳಲ್ಲಿ ಸದಸ್ಯರು ಉದ್ವೇಗಗೊಂಡು ಕಟುವಚನಗಳಲ್ಲಿ ಸಂಬೋಧನೆ ಖಂಡನಾವೇಶಗಳ ಪ್ರದರ್ಶನಗಳು. ನಡೆದಿದ್ದುವು. ಬಹುಸಂಖ್ಯಾಕ ಬ್ರಿಟಿಷ್ ಕೂಲಿಗಾರರೀಗ ನ್ಯಾಯದ ದಾರಿಗಾಗಹತ್ತಿರುವದರ ನಿದರ್ಶನವಿದು.

ವಾದ—ಪ್ರತಿವಾದ

ಚರ್ಚಿಲ್ಲರು ಹೊರಡುವ ಹೊತ್ತಾಗಿದೆ!

ಅಮೇರಿಕದ ಪ್ರಸಿದ್ಧ ಬ್ರಿಟಿಷ್ ಲೇಖಕ ಎಚ್ ಜಿ ವೆಲ್ಸ್ 'ಸೋಶಿಯಾಲಿಸ್ಟ್ ಟ್ರಿಬ್ಯೂನ್' ಪತ್ರಿಕೆಯಲ್ಲಿ ಒರೆದ ಒಂದು ಲೇಖನದಲ್ಲಿ ಚರ್ಚಿಲ್ಲರು ಬ್ರಿಟಿಷ್ ಯುದ್ಧದಲ್ಲಿ, ಅವರು ನಮ್ಮನ್ನು ತಮ್ಮ ಕೊನೆಯ ಹಂತದಲ್ಲಿ ಇಷ್ಟರಲ್ಲೇ ಸಾಗಿ ಹೋಗಿರುವದರಿಂದ ಕೂಡಲೇ ಅಧಿಕಾರ ತ್ಯಾಗಮಾಡತಕ್ಕದೆಂದೂ ಖಂಡತುಂಡವಾಗಿ ಹೇಳಿದ್ದಾರೆ. ದಕ್ಷಿಣಾಫ್ರಿಕಾ ಯುದ್ಧಗಳೇ ಶ್ರೀಮಂತ ಕನ್ಸರ್ವೇಟಿವ್ ಬ್ರಿಟಿಷರ ಮಾತ್ರ ನೆಲೆ ಅವರು, ಹಿಂದೀಯರ ಜೀವನವನ್ನೆಲ್ಲ ಇಳಿಸಿದ್ದು ಗೆ ರೀತಿಯ ವಿ ಚರ್ಚಿಲ್ ಧೋರಣೆಯ ಸರ್ವವಿದಿತ ವಿಷಯ. ಇದಕ್ಕಿಂತ ಹೇಯವಾದ ಕೃತ್ಯಗತ್ತಿನ ಬೇರಾವ ಭಾಗದಲ್ಲೂ ನಡೆದಿಲ್ಲ. ಓರ್ವ ವಿದ್ಯಾರ್ಥಿ ನ್ಯಾಯಾಂಗದ ಚರ್ಚಿಲ್ ಈಗ ಬಹುವಾಗ ಸ್ಪಷ್ಟ ಸ್ಥಿತಿಯಿದ್ದಾರೆ. ಆದರೆ ತನ್ನಲ್ಲೂ ವಿಶಾಲ ಧೋರಣೆಯಿದೆ, ವಿಜ್ಞಾನಕ್ಕೂ ...

ANNOUNCEMENT.

We have pleasure to announce that we will shortly be opening branches at—

COIMBATORE,
ERODE,
MADURA &
SALEM

A vital link for those in business and trade with the above centres or others desiring to establish new connections with them will be provided with the opening of these branches

We extend a hearty invitation to all to avail of the new services and opportunities offered by us

ESTD 1906 **Canara Bank, Limited.**

(Incorporated in British India Liability of members limited)

ಕಿತ್ತಿದೆ ವ್ಯಾಪಕಾನುಬಂಧವಿದೆ, ಎಂಬುದನ್ನು ತನಗೇನೂ ಪ್ರದರ್ಶಿಸಿದುದಿಲ್ಲ. ಸಮಕಾಲೀನ ಸಾಮಾಜಿಕ ಹಾಗೂ ವೈಜ್ಞಾನಿಕ ಶಾಸ್ತ್ರದ ಕುರಿತು ಅವರಿಗೆ ಗೊತ್ತಿರುವದು ಶೂನ್ಯವೆಂಬುದು ಮಹತ್ವದ ವಿಷಯ. ಅವರು ತಮ್ಮ ಕಲಸವನ್ನು ಮಾಡಿದ ಹಾಯಿತು, ಇನ್ನು ಹೊರಡಬೇಕು. ನಾವು ಅವರಿಗೆ ಋಣಿಗಳಾಗಿರುವದನ್ನು ಮರೆಯುವ ಮೊದಲೇ ಅವರು ಅಧಿಕಾರ ತ್ಯಾಗಮಾಡುವದು ವಿಹಿತ. ಹೀಗೆ ಹೊರಟರೆನೇ ಅವರು ಜಗತ್ತಿನ ಸ್ತುತಿಗೆ ಪಾತ್ರರಾಗುತ್ತಾರೆ" ಎಂದು ಸ್ಪಷ್ಟರ ಸ್ಪಷ್ಟಮಾತು.

'ಸರ್ ಇಲ್ಲದ 'ಗುಡ್ ಮೋರ್ನಿಂಗ್'!

ಇದೇ ತಾ 16ರಲ್ಲಿ ಒಂದು ವಿಚಿತ್ರ ತೀರ್ಮಾನ ಹೊರಬಿದ್ದಿದೆ. ಮಧ್ಯಪ್ರಾಂತ್ಯದ ಭಾಗಲ್ಪುರ ಜಿಲ್ಲಾ ಮೆಜಿಸ್ಟ್ರೇಟರಾದ ಶ್ರೀ ಎಸ್ ಕೆ. ಬೆನರ್ಜಿ, ಏ ಸಿ ಎಸ್ ಇವರು ತಮ್ಮಲ್ಲಿಯ ಬ್ಯಾರಿಸ್ಟರೊಂದರ ಶ್ರೀ ವಿ ಪಿ ವರ್ಮಾರಿಗೆ ರೂ 50 ದಂಡ ಅಥವಾ ತಪ್ಪಿದರೆ ೫ ದಿನಗಳ ಸಾದಾ ಸಜೆಯೆಂದು ವಿಧಿಸಿದ್ದಾರೆ. ಬ್ಯಾರಿಸ್ಟರರು ಮಾಡಿದ ಅಪರಾಧವೆಂದರೆ ಈ ಮೆಜಿಸ್ಟ್ರೇಟರನ್ನು ಕಂಡಾಗ ಗುಡ್‌ಮೋರ್ನಿಂಗ್' ಎಂದು ಮಾತ್ರ ಹೇಳಿ 'ಸರ್' ಎಂದು ಹೇಳದಿದ್ದುದು. ಶ್ರೀ ವರ್ಮಾರ ಮೇಲಿನ ಆರೋಪ ಹೀಗಿದೆ ಡಿಸೆಂಬರ ತಾ 1ರಲ್ಲಿ ಜಿಲ್ಲಾ ಮೆಜಿಸ್ಟ್ರೇಟರು ಕೋರ್ಟನ್ನು ಪ್ರವೇಶಿಸಿದಾಗ ಶ್ರೀ ವರ್ಮಾರಿದ್ದು 'ಗುಡ್ ಮೋರ್ನಿಂಗ್' ಎಂದರು. ಅವರು 'ಸರ್' ಎಂಬುದನ್ನು ಕೂಡಿಸಿ ಹೇಳದೆ ಕೋರ್ಟನ್ನು ಅಗೌರವಿಸಿದಂತಾಗಿತು ಎಂದು ಮೆಜಿಸ್ಟ್ರೇಟರಿಂದಾಗ, ಯಾವ ಕೋರ್ಟಿನ್ನೇ ಆದರೂ 'ಸರ್' ಎಂದು ಸಂಬೋಧಿಸುವ ಪದ್ಧತಿಯೇ ತನ್ನಲ್ಲಿಲ್ಲವೆಂದು ಶ್ರೀ ವರ್ಮಾರೆಂದರಂತೆ. ಈ ಕುರಿತು ತಾನು ಕಾರ್ಯಕ್ಕೆಕೊಳ್ಳಬೇಕಾಗುವದೆಂದು ಮೆಜಿಸ್ಟ್ರೇಟರೆಂದಾಗ 'ದಯವಿಟ್ಟು ಹಾಗೆ ಮಾಡಿಬಿಡಿ' ಎಂದು ಬ್ಯಾರಿಸ್ಟರ್ ವರ್ಮಾರು ಉತ್ತರವಿತ್ತರಂತೆ. ಆದರೆ ತರುವಾಯ ಮೆಜಿಸ್ಟ್ರೇಟರು ವಿಚಾರಣೆ ನಡೆಸಿ ಕೋರ್ಟ ಅವಮಾನದ ಬಗ್ಗೆ ಮೇಲಿನ ಶಿಕ್ಷೆ ವಿಧಿಸಿದ್ದಾರೆ. ಬಾಗಲಪುರದ ವಕೀಲ್ ಸಂಘವು ಮೆಜಿಸ್ಟ್ರೇಟರ ವರ್ತನೆಯನ್ನು ಖಂಡಿಸಿ 'ಅನ್ಯಾಯ'ವೆಂದು ಠರಾವು ಮಾಡಿದೆ. ನ್ಯಾಯಾಧೀಶರು ಆಸನಾರೂಢರಾಗುವಾಗ ಪ್ರಾಚೀನ ವಕೀಲರಿಲ್ಲ. ಎದ್ದು ನಿಲ್ಲುವ ಪದ್ಧತಿಯೇ ಕೋರ್ಟಿಗೆ ಸಾಕಾಗುವ ಗೌರವವೆಂದೂ 'ಗುಡ್ ಮೋರ್ನಿಂಗ್' ಎಂದಾಗಲೀ 'ಗುಡ್ ಮೋರ್ನಿಂಗ್ ಸರ್' ಎಂದಾಗಲೀ ಹೇಳುವ ಅಗತ್ಯವೇ ಇಲ್ಲವೆಂದೂ ಈ ಸಂಘ ನಿರ್ಣಯಿಸಿದೆ.

NOTICE

An annual General Body Meeting of the S R S. Homeold Boarders Association, Mangalore will be held at S R S. Home Mangalore, at 5 P M on Sunday the 31st December, 1944 All the members are cordially invited to be present.

U Krishna Shetty B A B L
K Nagappa Shetty, B A L L
Advocate,
Joint Secretaries

Mangalore, Date 15 12 44

ಬಿಡಿನುಡಿ

ಇದೇ ತಾ. ೧೭ರಲ್ಲಿ ಮಂಗಳೂರಿನ ಕದ್ರಿ ಕಂಬಳ

ಮರುದಿನ ಅಲ್ಲಿ ನಾಡಿಕೆಯ 'ಕೋಳಿ ಅಂಕ' ನಡೆಯುತಿತ್ತು.

ಸಬ್ ಇನ್ಸ್ಪೆಕ್ಟರ್ ಮಿ ಕೋಯಿಕುಟ್ಟಿಯವರು ರಿಜರ್ವ್ ಪೋಲೀಸು ಪಡೆಯೊಂದಿಗೆ ಅಂಕಕ್ಕಿಳಿದರು. ಕೆಲವು ಜನರನ್ನೂ ಹಲವು ಕೋಳಿಗಳನ್ನೂ ಗೆದ್ದರು ದಸ್ತಗಿರಿಮಾಡಿ ಕೊಂಡೊಯ್ದರು.

ದುರ್ದೈವವಶಾತ್ ಕೋಳಿಗೆ ಕಟ್ಟುವ 'ಬಾಳು'ಗಳನ್ನು ಮುಟ್ಟಲಿಲ್ಲ.

ರಾತ್ರಿ ಕೋಳಿಗಳೆಲ್ಲಾ ಲೋಕಪ್ಪಿನಲ್ಲಿ. ಇನ್ನದನ್ನು 'ಕೋಳಿ ಗೂಡು' ಎಂದು ಕಾಂಗ್ರೆಸ್ ಕೈದಿಗಳು ಕರೆಯದಂತೆ ನೋಡಬೇಕು.

ಆ ದಿನ ಸ್ಟೇಶನಿನವರೆಲ್ಲಾ ಕೋಳಿ ಕೂಗುವ ಹೊತ್ತಿನಲ್ಲೇ 'ಡ್ಯೂಟಿ'ಗೆ ಹಾಜರಾಗಿರಬೇಕು.

'ವಿಚಾರಣೆಯ ದಿನ ಹಾಜರಾಗಬೇಕು' ಎಂಬ ಶರ್ತದ ಮೇಲೆ ಜನರನ್ನೂ ಕೋಳಿಗಳನ್ನೂ ಜಾಮೀನಿನಲ್ಲಿ ಮರುದಿನ ಬಿಡಲಾಗಿದೆ.

ಕೋರ್ಟಿನಲ್ಲಿ ಕೋಳಿಗಳು ಕೊಡುವ ವಾಗ್ಮೂಲಗಳು ಅಸುಪಾಸಿನವರನ್ನೆಲ್ಲಾ ಎಚ್ಚರಿಸುವವೆಂದು ನಂಬಲಾಗಿದೆ.

ಕೊಂಗ್ರ, ಕಬ್ರ್ಲ, ಮಯ್ಪು, ಕಡ್ಲ, ಉರ್ಯ-ಎಲ್ಲರೂ 'ಕೊಕ್ಕೊಕ್ಕೋಕೋ' (ಕೊಂದು ಹಾಕುವಿಯಾದರೆ ಹಾಕೋ) ಎಂದೇ ಹೇಳಬಹುದು.

ಈ ವಾಗ್ಮೂಲಕ್ಕನುಸಾರವಾಗಿ ಅವುಗಳಿಗೆ ಮರಣದಂಡನೆಯಾದರೆ ಬಂಧಿಸಿದವರ ಶ್ರಮಸಾರ್ಥಕ!!

× × ×

ಎಳ್ಳಮಾವಾಸ್ಯೆಯ ದಿನ ಮಲ್ಪೆಯ ವಡಭಾಂಡೇಶ್ವರ ಸಮುದ್ರ ಸ್ನಾನಕ್ಕೆ ಬಂದಿದ್ದ ದೂರದ ಹಳ್ಳಿಗರಲ್ಲಿ ಹಲವರು ಊಟದ ಅಕ್ಕಿಯನ್ನು ಕಟ್ಟಿಕೊಂಡೇ ಬಂದಿದ್ದರು.

ಅವರ ಅಕ್ಕಿಯನ್ನು ಉಡುಪಿಯ ವಲಯದಲ್ಲಿ ಕಸಗೊಳ್ಳಲಾಯಿತಂತೆ.

ಇದು ಧಾನ್ಯನಿಯಂತ್ರಣಕ್ಕನುಸಾರವಾಗಿಯೋ ಧರ್ಮನೀತಿ ಪಾಲನೆಗಾಗಿಯೋ ಎಂಬುದು ಸ್ಪಷ್ಟವಾಗಿ ತಿಳಿದಿಲ್ಲ.

ರೇಶನ್ ಪರಿಮಾಣಕ್ಕನುಸಾರವಾದ ಒಂದೂಟದ ಅಕ್ಕಿಯನ್ನು ಕೊಂಡುಹೋಗುವದು ಅಪರಾಧವೆಂದಾದರೆ ಇದು ಧಾನ್ಯನಿಯಮ ಪಾಲನೆ ಹಾಗಲ್ಲವಾದರೆ ಅಮಾವಾಸ್ಯೆಯ ದಿನ ಉಣ್ಣಬಾರದೆಂಬ ಧರ್ಮನಿಯಮ ಪಾಲನೆ.

ಅಥವಾ ಈ ಯಾತ್ರಿಕರು ಅಕ್ಕಿಯನ್ನು ಸಮುದ್ರಕ್ಕೊಗೆಯಲು ಹೊರಟಿಂಬೇಕೆಂದು ಕಾವಲುಗಾರರಿಗೆ ಸಂದೇಹ ಬಂದಿರಬಹುದೆ?

ಅದೂ ಸ್ವಾಭಾವಿಕ-ಯಾಕೆಂದರೆ ಈ ವರುಷ ಅಕ್ಕಿ ಬಹಳ ಪಾಪ ಮಾಡಿದೆ.

ಅದನ್ನು ಅಮಾವಾಸ್ಯೆ ಮೀಯಿಸಿ ಪಾಪ ಪರಿಹಾರ ಮಾಡಿಸುವದು ಆಗತ್ಯವೇ ಇದ್ದಿತು.

ಇನ್ನು ಮುಂದಿನ ಅಮಾವಾಸ್ಯೆಯ ವರೆಗೆ ಅಕ್ಕಿಪಾಪ ಎಷ್ಟೆಲ್ಲಾ ಜಮೆಯಾಗಲಿದೆಯೋ!

× × ×

ದಕ್ಷಿಣ ಕನ್ನಡದ ಕಾಂಗ್ರೆಸ್ ಕೈದಿಗಳಲ್ಲಿ ಹೆಚ್ಚಿನವರು ಬಿಡುಗಡೆಯಾಗಿದ್ದಾರೆ. ಇನ್ನೂ ಜಿಲ್ಲೆಯಲ್ಲಿರುವ ಕಾಂಗ್ರೆಸ್ ಪ್ರಮುಖರೆಂದರೆ ನಾಲ್ವರು ಮಾತ್ರ.

ಆ ಪೈಕಿ ಮೂವರು ಸೆರೆಯಲ್ಲಿದ್ದಾರೆ; ಒಬ್ಬರು ಮರೆಯಾಗಿದ್ದಾರೆ.

ಜಿಲ್ಲೆಯ ಆಹಾರಾಭಾವ ನಿವಾರಣೆಗೆ ನೆರವಾಗುವದು ಪ್ರತಿಯೊಬ್ಬ ದಕ್ಷಿಣ ಕನ್ನಡಿಗನ ಕರ್ತವ್ಯ.

ಮೇಲಿನ ನಾಲ್ವರಿಂದ ಮಾತ್ರ ಇನ್ನೂ ಆ ಕರ್ತವ್ಯಪಾಲನೆಯಾಗುತ್ತಿದೆ.

ಜಿಲ್ಲೆಯೊಳಗಿರುವವರು ಕೂಡ ಧರ್ಮಬುದ್ಧಿಯಿಂದಾದರೂ ಕರ್ತವ್ಯಪಾಲಿಸುವಂತಾಗಬೇಕು.

ಅದಕ್ಕಾಗಿ ನಮ್ಮ ಜಿಲ್ಲಾ ಆಹಾರ ಸಮಿತಿಯು 'ಏಕಾದಶೀ ಮಹಾತ್ಮೆ' ಗ್ರಂಥದ ಪ್ರಕಟಣಾಧಿಕಾರ ಪಡೆಯಬೇಕು.

—ಬೀದಿವಾಲ.

NOTICE

In the Court of the District munsif of Mangalore

Original Suit No 290 of 1936
R. E. P. No. 189/1944
G. M. B. D'Souza-Plaintiff
against
Deog D'Souza-Defendant.
To Deog D'Souza, Defendant-

Whereas the abovenamed Plaintiff has made application to this Court for execution of the decree passed in the above Suit you are hereby warned to appear in this Court in person or by a pleader duly instructed on the 3rd day of January 1945 at 11 o'clock in the forenoon to show cause against the application, failing wherein, the said application will be heard and determined ex-parte.

Given under my hand and the seal of the Court, this 5th day of December 1944

P. D' Souza, B. A., B. L.
Vakil for Plaintiff.



ಮನೆಯ ಯಜಮಾನ– ನಿಮ್ಮ ಈ ತೊಂದರೆಗಳಿಗೆಲ್ಲಾ ಕಾರಣನಾದ ನನ್ನನ್ನು ಮನ್ನಿಸಿ ನನಗೆ ತಿಳಿಸದೇನೇ ಶ್ರೀಮತಿಯು ಕಾಗದವನ್ನು ಬರೆದುಬಿಟ್ಟಳು. ನಿಜವಾಗಿಯೂ ಈಗಿನ ರೈಲು ಪ್ರಯಾಣದಲ್ಲಿ ಸುಖವಿಲ್ಲ.'

ಅಷ್ಟು ಕಷ್ಟಗಳನ್ನನುಭವಿಸಿ ಅವರು ಇಷ್ಟು ದೂರ ಬಂದುದಕ್ಕಾಗಿ ಈಗಿನ ಪ್ರಯಾಣದ ಕಷ್ಟಗಳನ್ನರಿತ ನಾರಾಯಣರಾಯನಿಗೆ ಮನಸಿಗೆ ತುಂಬಾ ವ್ಯಸನವಾಯಿತು.



ಇಂದು ಅತ್ಯವಶ್ಯ ಸಾಮಾನುಗಳನ್ನು ಮೊಟ್ಟಮೊದಲು ರವಾನಿಸಬೇಕು, ಆದುದರಿಂದಲೇ ಪ್ರಯಾಣದಲ್ಲಿ ಜನಗಳಿಗೆ ಸೌಕರ್ಯವಿಲ್ಲ.

RAA 853 KN

ಅನಾವಶ್ಯಕವಾದ ಪ್ರಯಾಣವನ್ನು ನಿಲ್ಲಿಸಿರಿ.

ಈ ಬಾರಿ ಬೆಳಕಿಗೆ ಬಂದವರು

ಎಡ್ವರ್ಡ್ ಸ್ಟೆಟ್ಟಿನಸ್

ಅಮೇರಿಕದ ಹೊಸ ಸ್ಟೇಟ್ ಸೆಕ್ರೆಟರಿ. ರೂಸವೆಲ್ಟರು ಈ ಬಾರಿ ಪುನಃ ಅಧ್ಯಕ್ಷರಾಗಿ ಆರಿಸಲ್ಪಟ್ಟ ಮೇಲೆ ಇವರ ನೇಮಕವಾಯಿತು. ಮಿ. ಸ್ಟೆಟ್ಟಿನಸ್ ಖಂಡಿತ ವಾಣಿಯ ಮನುಷ್ಯ. ಕಾರ್ಯದರ್ಶಿಯಾಗಿ ನೇಮಕಗೊಂಡೊಡನೆ ಪ್ರಥಮತಃ ಅವರ ಬಾಯಿಯಿಂದ ಹೊರಬಿದ್ದುದು ಇಂಗ್ಲೆಂಡಿಗೆ ಸ್ಪಷ್ಟ ಎಚ್ಚರಿಕೆ. ಗ್ರೀಸ್, ಇಟೆಲಿ, ಮೊದಲಾದ ವಿದೇಶಗಳ ಒಳಾಡಳಿತೆಯಲ್ಲಿ ಕೈಹಾಕುವ ಮೂಲಕ ಬ್ರಿಟನು ಅಧಿಕ ಪ್ರಸಂಗಕ್ಕೆಳಿದಿದೆ ಅಮೇರಿಕವಿದನ್ನು ಸಹಿಸಲಾರದು. 'ಬ್ರಿಟಿಷರೇ! ಗ್ರೀಸ್ ಇಟೆಲಿಗಳಿಂದ ಕೈತೆಗೆಯಿರಿ' ಎಂದು ಖಂಡತುಂಡವಾಗಿ ಹೇಳಿ ಇವರು ಲೋಕಪ್ರಿಯರಾಗಿದ್ದಾರೆ. ವಿದೇಶ ಸಂಬಂಧದ ಧೋರಣೆಯನ್ನು ರೂಪಿಸುವ ಜವಾಬ್ದಾರಿಯು ಮುಖ್ಯವಾಗಿ ಅಧ್ಯಕ್ಷರದು ಮತ್ತು ಒಟ್ಟಿನ ಮೇಲೆ ಇಡಿಯ ಅಧಿಕಾರಿ ಮಂಡಲದ್ದಾದರೂ ಮಿ. ಸ್ಟೆಟ್ಟಿನಸರಿಗಿದರಲ್ಲಿ ಪ್ರಾಮುಖ್ಯವಾಗಿದೆ.

ಕೌಂಟ್ ಸ್ಫೋರ್ಝ

ಇವರು ಇಟೆಲಿಯ ಉಚ್ಚ ರಾಷ್ಟ್ರಾಭಿಮಾನಿ; ಪ್ರಜಾಸತ್ತೆಯ ಪರಮಭಕ್ತ. ಕೆಲವು ಬ್ರಿಟಿಷ್ ಪ್ರಮುಖರಂತೆ ಫೇಸಿಸ್ಟ್ ವಿರೋಧವನ್ನು ಇವರು ಕಲಿತುದು ಈ ಯುದ್ಧಾನಂತರವೇನೂ ಅಲ್ಲ. ಮುಸಲಿನಿಯ ಆಳ್ವಿಕೆಯನ್ನು ಸಹಿಸಲಾರದೆ ಇಟೆಲಿಯನ್ನು ಬಿಟ್ಟು 20ವರುಷಗಳ ಪರಿಯಂತರ ವಿದೇಶಗಳಲ್ಲಿ ಅಲೆದಾಡುತ್ತಿದ್ದರು. ಫೇಸಿಸ್ಟ್ ಮೂಲಪುರುಷನ ಪತನವಾದರೂ ಆವನ ಉಗ್ರಛಾಯೆಯಂತಿದ್ದ ಬೊಡೊಗ್ಲಿಯೋ ಅಧಿಕಾರಕ್ಕೆ ಬಂದುದು ಇವರಿಗೊಪ್ಪಿಗೆಯಾಗಲಿಲ್ಲ. ಆದರೆ ದೂರ ನಿಲ್ಲುವ ಕಾಲವಿದಲ್ಲವೆಂದು ಬಗೆದು ಇಟೆಲಿಗೆ ಬಂದರು. ಬೊಡೊಗ್ಲಿಯೋನ ವಿರುದ್ಧ ಸಾಧನೆಮಾಡಿದರು. ಅವನೂ ಅಧಿಕಾರತ್ಯಾಗ ಮಾಡಿ ಬೊನೊಮಿ ಸರಕಾರದ ಸ್ಥಾಪನೆಯಾಯಿತು. ಪ್ರಧಾನಿ ಬೊನೊಮಿಯವರು ಸ್ಫೋರ್ಝರ ಆಪ್ತ ಮಿತ್ರ ಇವರಿಗೆ ವಿದೇಶ ಮಂತ್ರಿ ಸ್ಥಾನಕೊಡಬೇಕೆಂಬ ಬೊನೊಮಿಯವರ ಬಯಕೆಗೆ ಬ್ರಿಟಿಷ್ ಸರಕಾರವೀಗ ಅಡ್ಡ ಬಂದಿದೆ. ಬ್ರಿಟಿಷರ ಸ್ವಾರ್ಥವನ್ನು ಲೋಕದಿದಿರು ಪ್ರಕಾಶಪಡಿಸಿದ ಸ್ವಚ್ಛಕನ್ನಡಿಯಾಗಿ ಸ್ಫೋರ್ಝರ ಕೀರ್ತಿ ಹೆಚ್ಚಿದೆ!

ಪಾಪೇಂಡ್ರೇವು

ಈಗಿನ ದುರ್ದೈವೀ ಗ್ರೀಸ್ ಸರಕಾರದ ಮುಖ್ಯ ಮಂತ್ರಿಯೀತ. ಫೇಸಿಸ್ಟರನ್ನು ಸದೆಬಡಿಯಲು ತಮ್ಮ ಸರ್ವತ್ಯಾಗವಮಾಡಿದ್ದ ದೇಶಾಭಿಮಾನಿ ಗ್ರೀಕರ ರಕ್ತಪ್ರವಾಹ ಹರಿಯಿಸಿ ಕೀರ್ತಿ ಸಂಪಾದಿಸಿದ್ದಾನೆ. ಬಹಳ ಹಠಮಾರಿ ಮನುಷ್ಯ- 'ಛೋಟಾ ಚರ್ಚಿಲ್' ಎನ್ನಬಹುದು. ಗ್ರೀಸಿನ ಬಹುಭಾಗವು ವಿರುದ್ಧ ಪಕ್ಷದ ಸೇನೆಯಾದ ಇ ಎಲ್. ಎ ಎಸ್-ಇವರ ಸ್ವಾಧೀನತೆಯಲ್ಲಿದೆ ಲೋಕದ ನ್ಯಾಯವಾದಿಗಳೆಲ್ಲರ ಸಹಾನುಭೂತಿಯೂ ಅದಕ್ಕಿದೆ. ಆದರೆ ಪಾಪೇಂಡ್ರೇವು ಬ್ರಿಟಿಷ್ ವಿಮಾನ, ಟೇಂಕು, ಸೇನೆಗಳ ಬಲದಿಂದ ಇಡೀ ಲೋಕವನ್ನು ಕಡೆಗಣಿಸಿ ಕಪಿಮುಷ್ಟಿಯಿಂದಿದ್ದಾನೆ. ಇವನೊಬ್ಬ ಅಧಿಕಾರ ತ್ಯಾಗಮಾಡಿ, ಸರ್ವಪಕ್ಷೀಯ ಸರಕಾರವು ಸ್ಥಾಪನೆಗೊಂಡಲ್ಲಿ ತಾವೀಗಲೂ ಶಸ್ತ್ರ ಕೆಳಗಿಡಲು ತಯಾರಿದ್ದೇವೆಂದು ಎಡಪಕ್ಷೀಯರನ್ನುತ್ತಾರೆ ಆದರೆ ಇವನೂ ಮಿ. ಚರ್ಚಿಲ್ಲರೂ ತಮ್ಮ ಹಠಬಿಡಲೊಪ್ಪದುದರಿಂದಾಗಿಯೇ ಗ್ರೀಸಿನಲ್ಲಿನ್ನೂ ರಕ್ತದ ಕೋಡಿ ಹರಿಯುತ್ತಿದೆ

ಜನರಲ್ ಫ್ರಾಂಕೊ

ಸ್ಪೈನಿನ ಫೇಸಿಸ್ಟ್ ಪಕ್ಷಪಾತೀ ಸರಕಾರದ ಸರ್ವಾಧಿಕಾರಿ ಹಾಗೂ ಹಿಟ್ಲರ್ ಮುಸಲಿನಿಗಳ ನಿರ್ಮಾಣವಾಗಿರುವ ಜನರಲ್ ಫ್ರಾಂಕೋ ಈ ಮೊದಲೇ ಲೋಕಪ್ರಸಿದ್ಧ. ಆದರೆ ಈ ಯುದ್ಧದಲ್ಲಿ ಸ್ಪೈನು ತಾಟಸ್ಥ್ಯವಹಿಸಿದುದರಿಂದ ಆಗಾಗ ಫ್ರೇಂಕೋನ ಭಾಷಣ ಹೊರತು ಕೀರ್ತಿಯೇನೂ ಕೇಳಿ ಬರುತ್ತಿರಲಿಲ್ಲ. ಈಗ ಮತ್ತೊಮ್ಮೆ ಆವ ಸುದ್ದಿಯ ರಂಗದಲ್ಲಿ ಕಾಣಿಸಹತ್ತಿದ್ದಾನೆ. ಆತ ತನ್ನ ಅಧಿಕಾರಕ್ಕೆ ರಾಜಿನಾಮೆಯಿತ್ತಿದ್ದಾನೆ ಎಂದು ದಟ್ಟವಾದ ವದಂತಿ. ಆದರೆ ಸ್ಪೈನ್ ಸರಕಾರವು ಸುದೃಢವಾಗಿದೆ ಮತ್ತು ಸುಕ್ಷೇಮದಲ್ಲಿದೆ' ಎಂದು ಸರಕಾರವನ್ನುತ್ತಿದೆ. "ಸರಕಾರವೇನೇ ಹೇಳುತ್ತಿದ್ದರೂ ಫ್ರಾಂಕೋ ರಾಜೀನಾಮೆಯಿತ್ತಿರುವದು ನಿಜ. ಇಂದಲ್ಲವಾದರೆ ನಾಳೆ ರಾಜಿ ಕೊಡಬೇಕಾಗುವದೆಂಬುದು ಅವನಿಗೆ ಗೊತ್ತೇ ಇದೆ" ಎಂದು ಅಲ್ಲಿಯ ರಿಪಬ್ಲಿಕನ್ ಧುರೀಣರೊಬ್ಬರಂದಿದ್ದಾರೆ. ಸ್ಪೈನಿನಲ್ಲಿದ್ದ ಬ್ರಿಟಿಷ್ ರಾಯಭಾರಿಯೀಗ ವಿರಾಮ ಪಡೆದಿದ್ದಾರೆ. ಬದಲಿಗಿನ್ನೊಬ್ಬರ ನೇಮಕ ಈತನಕ ಆಗಿಲ್ಲ

ಜನರಲ್ ಪೇಚ್

ಜರ್ಮನಿಯ ಗಡಿಯಲ್ಲಿ ಭೀಕರ ಸಂಗ್ರಾಮದಲ್ಲಿ ನಿರತವಾಗಿರುವ ಮಿತ್ರ ಸೇನೆಗಳ ಪೈಕಿ ಅಮೇರಿಕನ್ 7ನೇ ಸೇನೆಯ ನಾಯಕರಿವರು ಅಲ್ಲಿ ಅಮೇರಿಕ ಇಂಗ್ಲಂಡುಗಳ ಹಲವು ಸೇನೆಗಳೂ ಸೇನಾನಾಯಕರೂ ಚರಿತ್ರಾರ್ಹ ಕಠಿಣ ಹೋರಾಟ ಮತ್ತು ಹಂಚಿಕೆಯಲ್ಲಿದ್ದಾರೆ. ಎಲ್ಲರಿಗಿಂತ ಸ್ವಲ್ಪ ಹೆಚ್ಚಾಗಿ ಜನರಲ್ ಪೇಚರ ಚಟುವಟಿಕೆಯ ವಾರ್ತೆ ಬರುತ್ತಿದೆ ಅಜೇಯವೆಂದು ಪ್ರಸಿದ್ಧಿಗೊಂಡಿರುವ ಸಿಗ್‌ಫ್ರೆಡ್ ಕೋಟೆಯ ಹರಿತ ದಂತಗಳನ್ನು ಪ್ರಥಮತಃ ಇದಿರಿಸಿದುದು ಜನರಲ್ ಪೇಚರ ಸೇನೆ. ಅಂತೆಯೇ ಮೂರು ಮುಖವಾಗಿ ಜರ್ಮನಿಯೊಳಗಡೆಯ ಪೆಲಾಟಿನೇಟ್ ವಲಯದೊಳಗೆ ಎಲ್ಲರಿಗಿಂತ ಮುಂದಾಗಿ ನುಗ್ಗಿರುವದೂ ಜ. ಪೇಚರ ಏಳನೇ ಸೈನ್ಯವೇ. ಈ ತನಕವೂ ನಿದ್ರಿಸುತ್ತಿದ್ದಂತಿದ್ದ ಸಿಗ್‌ಫ್ರೆಡ್ ಕೇಸರಿಯನ್ನು ಮುಂದಾಗಿ ಕೆಣಕಿದ ಕೀರ್ತಿ ಜ. ಪೇಚರದು. ಆವರು ನುಗ್ಗಿದ ನೆಲೆಯು ಸಿಗ್‌ಫ್ರೆಡ್ ಕೋಟೆಯ ದುರ್ಬಲ ಭಾಗವಾಗಿರಬೇಕು. ಆದ್ದರಿಂದ ಇದು ಅದೃಷ್ಟ ಬಲದಿಂದ ದೊರೆತ ಕೀರ್ತಿಯಾಗಿರಬಹುದು ಈಗ ಜರ್ಮನಿ ಶತ್ರುರೀ ದಳಗಳು ಪೇಚರ ಮೇಲೆ ಕವಿದು ಬೀಳುತ್ತಿರುವ ವಾರ್ತೆ ಬರುತ್ತಿದೆ.

ಜನರಲ್ ಲೀ ಹಂಗ್

ಉತ್ತರ ಬರ್ಮದಲ್ಲಿ ಇದೇ ತಾ. 15 ರಲ್ಲಿ ಭಾಮೋ ನಗರವನ್ನು ವಶಪಡಿಸಿಕೊಂಡ 38ನೇ ಚೀನೀ ಸೇನೆಯ ನಾಯಕರಿವರು. ಹೆಸರಾಂತ ಸೇನಾನಿ. ಉತ್ತರ ಬರ್ಮದ ಪ್ರಾಮುಖ್ಯ ನಗರವೆಂದರೆ ಭಾಮೋ. ಚೀನದ ಗಡಿಯು ಈ ನಗರದ 25ಮೈಲು ಪೂರ್ವಕ್ಕಿದೆ. ಆ ಗಡಿಯ 18 ಮೈಲು ಪಶ್ಚಿಮದಲ್ಲಿ ಇಲ್ಲಿಯ ರಸ್ತೆ ಹೋಗಿ ಹಳೆಯ ಬರ್ಮಾರಸ್ತೆಗೆ ಕೂಡುತ್ತದೆ. ಇಂತಹ ಪ್ರಾಮುಖ್ಯ ಸರಬರಾಯಿ ಕೇಂದ್ರ ಭಾಮೋವನ್ನು ವಶಪಡಿಸಿಕೊಂಡ ಲೀ ಹಂಗರು ಕೃತಕೃತ್ಯರಾಗಿ ಶ್ಲಾಘಿಸಲ್ಪಡುತ್ತಿದ್ದಾರೆ.

ಶ್ರೀ ತಾರಾನಾಥ ರಾತ್ರಿ ಶಾಲೆ, ಕೊಲ್ಹಾಪುರ:—ಪ್ರೇಮ ದಾಮಾಜಿ ನೆಮ್ಮ ಡಾ। ಹೆಗ್ಡೇರಿಂದ ನಡೆಸಲ್ಪಡುತ್ತಿರುವ ಈ ಧರ್ಮಾರ್ಥ ರಾತ್ರಿ ಕನ್ನಡ ಶಾಲೆಯ ಬಗ್ಗೆ ಲಿಂಗಾಯತ ಸಮಾಜದ ಇಲ್ಲಿಯ ಪೂಜ್ಯ ಸ್ವಾಮಿ ರಾಯರುಗಳು ತಮ್ಮ ಚಿತ್ರದಗರ ಮಠದ ಮಾಹಡಿ ಹೋಲನ್ನು ಉಪಯೋಗಿಸಲು, ಫರ್ನಿಚರ್ಸ್, ಲೈಟ್ ಸಹಿತ ಉಚಿತವಾಗಿ ಬಿಟ್ಟುಕೊಡಲು ಒಪ್ಪಿದ್ದು, ಪ್ರೊಫೆಸರ್‌ಹಾಗೂ ಪ್ರಸಿದ್ಧ ಕನ್ನಡಸಾಹಿತಿ ಶ್ರೀ-ಶ್ರೀ-ಜ ಕುಂದಣಗಾರರು ಇಲ್ಲಿ ಕನ್ನಡ ಪ್ರಚಾರದ ಬಗ್ಗೆ ತುಂಬಾ ಮೆಹನತ್ ತೆಗೆದುಕೊಂಡುದೂ ಸ್ತುತ್ಯ! ಇಲ್ಲಿಯ ಜೈನ-ಲಿಂಗಾಯತ ಸಮಾಜಗಳು ಕನ್ನಡ ಭಾಷೆ ಬಗ್ಗೆ ತೋರಿಸುವ ಪ್ರೋತ್ಸಾಹದಿಂದ, ಕೊಲ್ಹಾಪುರದಲ್ಲಿ ಕನ್ನಡ ಭಾಷಾ ಶಿಕ್ಷಣವು ಪ್ರಗತಿ ಹೊಂದುವದರಲ್ಲಿ ಸಂಶಯವಿಲ್ಲ.

ನೋಟೀಸು

ಪುತ್ತೂರು ಡಿ ಮು. ಕೋರ್ಟಿನಲ್ಲಿ.

os no. 64/1944

ಸುಬ್ರಾಯ, ಕುಂಬೇ ಪಕೀರನ ಮಗ, ಪುತ್ತೂರು ತಾಲ್ಲೂಕು ಸುಳ್ಯ ಕಸಬಾ ಗ್ರಾಮ-ವಾದಿ.

1. ಮಾಪಗಾಡಗಾ ಮಲ್ಲಿಂಗಯ್ಯ —ಮೃತ್ತ ವಾರಿಸ್ದಾರರು-2, 3, 4ನೇಯವರು

2 ದೇವಪ್ಪಯ್ಯ. 3 ಸೀತಾರಾಮ. 4 ಕೃಷ್ಣಯ್ಯ. 1ನೇ ಪ್ರತಿವಾದಿಮಕ್ಕಳು,ಪುತ್ತೂರು ತಾಲ್ಲೂಕು,ಸುಳ್ಯ ಕಸಬಾಗ್ರಾಮಸ್ತರು ಪ್ರತಿವಾದಿರು-

ಸದ್ರಿ 2, 3, 4ನೇ ಪ್ರತಿವಾದಿರೀಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ—

1ನೇ ಪ್ರತಿವಾದಿ, ವಾದಿಗೆ ಕ್ರಯ ಪಡ್ಸಿಕೊಟ್ಟ ಸುಳ್ಯಕಸಬಾ ಗ್ರಾಮದ್ದ ರಿ. ಸ. ನಂ. 183/2ನೇ ಆಸ್ತಿ, ಕಟ್ಟಡಗಳು ವಗೈರೆ ಸ್ವಾಧೀನತೆಗೂ, ಮಿಗ್ತೆ ವಗೈರೆ ನಿವೃತ್ತಿಗಳ ಕುರಿತೂ ವಾದಿಯು ನಿಮ್ಮೆಲ್ಲರ ಮೇಲೆ ಮಾಡಿದ ಮೇಲ್ಕಂಡ ನ್ಯಾಯ್ಯ ತಾ 28-12-44ಕ್ಕೆ ತನ್ನಿಗೆ ಇಟ್ಟಿರುವದ್ರಿಂದ, ಆ ಕುರಿತು ಆಕ್ಷೇಪವುಳ್ಳವರು ಸದ್ರಿ ವ್ಯಾದೆದಿನ ಪೂರ್ವಾಹ್ನ ಗಂಟೆ 11ಕ್ಕೆ ಮೇಲ್ಕಂಡ ಕೋರ್ಟು ಮುಂದೆ ಸ್ವತಹ ಯಾ ವಕೀಲದ್ವಾರಾ ಹಾಜರಾಗಿ ಉದಪಂಸದಿದ್ರೆ, ನಿಮ್ಮ ಶಿವಾಯಿ ಸದ್ರಿ ದಾವೆ ಯುಕ್ತ ಕಂಡಂತೆ ತೀರ್ಮಾನಿಸಲ್ಪಡುತ್ತದೆ—ಎಂತ ಈ ಮೂಲಕ ತಿಳ್ಸಿಯದೆ.

Puttur } M. Sadashiva Rao.
10-12-44 } Pleader for Plaintiff

ನೋಟೀಸು.

ಕುಂದಾಪುರ ಡಿ. ಮು. ಕೋರ್ಟಿನಲ್ಲಿ.

O S 55/44

ವಾದಿರು ರಾಮಪ್ಪ ಸೆಟ್ಟಿ ಕೂಡಾ.

ಪ್ರತಿವಾದಿರು ವೆಂಕಟ್ರಮಣ ಸೆಟ್ಟಿ ಕೂಡಾ

ಮೇಲ್ಕಂಡ ದಾವೆಯ 4ನೇ ಪ್ರತಿವಾದಿ ಪಾಂಡುರಂಗ ಸೆಟ್ಟಿ ವೆಂಕಟ್ರಮಣ ಸೆಟ್ಟಿ ಮಗ, ಕುಂದಾಪುರ ತಾಲ್ಲೂಕು ಗಂಗೊಳ್ಳಿ ಗ್ರಾಮದಲ್ಲಿರುವವರು. ಯಿವರಿಗೆ ಈ ಮೂಲಕ ತಿಳಿಯಪಡಿಸುವದೇನೆಂದ್ರೆ ವಾದಿರು ನೀವು ಕೂಡಾ ಪ್ರತಿವಾದಿರ ಮೇಲೆ ನಿಮ್ಮ ಮತ್ತು ವಾದಿರ ಒಟ್ಟು ಪಕ್ಕಿನ ಆಸ್ತಿಯಲ್ಲಿ ಸಮಾಂಶ ಅಂದಪಿಕೆ ಕೊಡಿಸಬೇಕಾಗಿ ದಾಕ್ಲು ಮಾಡಿದ ದಾವೆಯು ತಾ 28-12-44ಕ್ಕೆ ಮೇಲ್ಕಂಡ ಕೋರ್ಟಿನಲ್ಲಿ ತನ್ನಿಗೆ ಇಟ್ಟಿರುತ್ತದೆ. ಆ ಕುರಿತು ನಿಮ್ಮನೇನಾದ್ರೂ ಆಕ್ಷೇಪವಿದ್ದರೆ ಸದ್ರಿ ದಿವ್ಸ ಬೆಳಿಗ್ಗೆ 11 ಗಂಟೆಗೆ ಕೋರ್ಟಿನಲ್ಲಿ ಹಾಜರಾಗಿ ಜ್ಯಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದ್ರೆ ನಿಮ್ಮ ಗೈರು ಹಾಜರಿಯಿಂದ ತೀರ್ಮಾನಿಸಲಾದೀತು.

K Soorappa Shetty
Advocate for Plaintiff.

ತಾರೀಕು 11 12 44.
ಮೊಕ್ಕಾಂ. ಕುಂದಾಪುರ.

ನೋಟೀಸು.

ಕುಂದಾಪುರ ತಾಲ್ಲೂಕು ಕಮಲಶಿಲೆ ಗ್ರಾಮದಲ್ಲಿರುವ ಕಮಲಶಿಲೆ ಬ್ರಾಹ್ಮಿ ದುರ್ಗಾಪರಮೇಶ್ವರಿ ಅಮ್ಮನವರ ದೇವಸ್ಥಾನದ ಸಕ್ಕಲು ಜನರ ಭಕ್ತರಲ್ಲಿ ತಿಳಿಯಪಡಿಸುವದೇನೆಂದ್ರೆ

ಸದ್ರಿ ಬ್ರಾಹ್ಮಿ ದುರ್ಗಾಪರಮೇಶ್ವರಿ ಅಮ್ಮನವರ ದೇವಸ್ಥಾನದಲ್ಲಿ ಟ್ರಸ್ಟಿನ ಆಡಳ್ತೆದಾರರಾಗಿದ್ದ ಕಮಲಶಿಲೆ ಗೋಪಾಲಯ್ಯನವರನ್ನು ಟ್ರಸ್ಟಿ ನ ಆಡಳ್ತೆಯನ್ನು ರದ್ದು ಪಡ್ಸಿ B O No 4032/19-10-44ರಲ್ಲಿ ನನ್ನನ್ನು ಮಧ್ಯಂತರೀಯ ಟ್ರಸ್ಟಿಯಾಗಿ ಆಡಳ್ತೆ ನಡ್ಸಿ ಬರುವಂತೆ ಮದ್ರಾಸು ಹಿಂದು ರಿಲೀಜಿಯಸ್ ಎಂಡೋಮೆಂಟು ಬೋರ್ಡಿನವರು ನೇಮಿಸಿರುವದ್ರಿಂದ ಸದ್ರಿ ದೇವಸ್ಥಾನಕ್ಕೆ ನಿಮ್ಮಿಂದ ಸಲ್ಲಬೇಕಾದ ಗೇಣಿ, ಒಲ್ಮಿ, ಕಾಣಿಕೆ, ಎಲ್ಲಾ ತರದ ಸಲುವಳಿಗಳನ್ನು ಯಿನ್ನು ಮುಂದೆ ಸದ್ರಿ ಗೋಪಾಲಯ್ಯನವರ ಸ್ವಾಧೀನ ಕೊಡದೆ ನನ್ನ ಸ್ವಾಧೀನ ಕೊಟ್ಟು ರಶೀದಿ ಪಡಿಯುವೇಕಾಗಿ ಈ ಮೂಲಕ ತಿಳಿಯಪಡಿಸುತ್ತೇನೆ-

A. Krishnarau, Kodgi.
Interim trustee
Brahmi Durga Parameshwari
Temple, Kamalasile

ನೋಟೀಸು

ಮಂಗ್ಳೂರು ಡಿ ಮು. ಕೋರ್ಟಿನಲ್ಲಿ

[illegible] 44

ಯಮ್. ಚಂದ್ರಸೇಕರ್ - ವಾದಿ

ಮತ್ತು

1 ಮಾಧವ ಪೈ, 2 ವೇದವ್ಯಾಸ ಪೈ, 3 ಕ್ರಿಷ್ಣ ಪೈ (ಮೈನರ ಗಾರ್ಡಿಯನ್ ಮೊದಲಿನವರು 1ನೇ ಪ್ರತಿವಾದಿ),4 ಕೇಶವ ಪೈ 5 ನಾರಾಯಣ ಪೈ-ಪ್ರತಿವಾದಿರು

1ನೇ ಪ್ರತಿವಾದಿ ಮಾಧವ ಪೈ, 2ನೇ ಪ್ರತಿವಾದಿ ವೇದವ್ಯಾಸ ಪೈ ರಗುನಾಥ ಪೈ ಮಗಂದಿರು—ಮಂಗ್ಳೂರು ಕೈಸಾರ ಶ್ರೀ ವಿಠೋಬಾ ಟೆಂಪಲ್ ರೋಡಿನಲ್ಲಿರುವವರಿಗೆ—

ಮೇಲ್ಕಂಡ ನ್ಯಾಜ್ಯದಲ್ಲಿ 1ನೇ ವ 2ನೇ ಪ್ರತಿವಾದಿರಿಗೆ ಸಬ್ಸ್ಟಿಟ್ಯೂಟೆಡ್ ಸರ್ವಿಸದ್ವಾರಾ ನೋಟೀಸು ಹುಕುಂ ಆಗಿರುತ್ತದೆ ಮತ್ತು ನ್ಯಾಜ್ಯವು ತಾರೀಕು 28ನೇ ದಶಂಬ್ರ 1944ನೇ ಯಿಸವಿಯಲ್ಲಿ ತನ್ನಿ ಬಗ್ಗೆ ಯಿಟ್ಟಿರುತ್ತದೆ ಸದ್ರಿ 1ನೇ ವ 2ನೇ ಪ್ರತಿವಾದಿರಿಗೆ ಯೇನಾದ್ರೂ ಉಜಾಹರೆ ಕೊಡುವದಿದ್ದ್ರೆ ಆ ದಿವ್ಸ ಸದ್ರಿಯವರು ಖುದ್ದಾಗಲಿ ಯಾ ವಕೀಲ ದ್ವಾರವಾಗಲಿ ಹಗಲು 11 ಗಂಟೆಗೆ ಹಾಜರಾಗಿ ಹೇಳಿಕೊಳ್ಳದಿದ್ರೆ ನ್ಯಾಜ್ಯವು ಯೇಕಪಕ್ಷವಾಗಿ ತೀರ್ಮಾನಿಸಲ್ಪಡುವದು ತಿಳಿದಿರುವದು.

ಮಂಗ್ಳೂರು, }
7-12-44 } G. Narayana Rau.

The Canara Banking Corporation Limited.

(Incorporated in British India. Liability of Members is limited.)

Estd 1906

Head Office: UDIPI, (S K.)

Authorised Capital	Rs 25,00,000/-
Issued & Subscribed Capital	Rs 16,00,000/-
Paid up Capital	Rs 14,55,165/-
Reserves	Rs 4,15,000/-

Total working Capital: exceed one crore & 24 lakhs.

ANNOUNCEMENT

Branches of the Bank have been opened at HUBLI & DHARWAR on 4—12—1944.

ಉಡುಪಿ, ಗುರುವಾರ ೨೧-೧೨-೧೯೪೪

ಅಪಹಾಸ್ಯಕರ ವಾದ

ಕಲ್ಕತ್ತೆಯ ವರ್ಣಿಕ್ ಸಂಘದ ಮುಂದೆ ವೈಸರಾಯಿ ಲೋರ್ಡ್ ವೇವೆಲರು ಕಳೆದ ವಾರದಲ್ಲಿತ್ತ ಭಾಷಣವು 'ಬ್ರಿಟಿಷ್ ಬುದ್ಧಿ'ಯ ಒಂದು ಮಾದರಿಯಾಗಿತ್ತಲ್ಲದೆ ವಸ್ತುಸ್ಥಿತಿಗೊಗ್ಗುವ ವಾಣಿಯಾಗಿರಲಿಲ್ಲ ಈ ಸೇನಾನಿ ವೈಸರಾಯರು ಒಮ್ಮೆ 'ಮಹಾಮಹೋಪಾಧ್ಯಾಯ'ನಾಗಿ, ಹಿಂದುಸ್ಥಾನದ ಜ್ವರ, ಪಾಕಿಸ್ತಾನ್ ಶಸ್ತ್ರಕ್ರಿಯೆ, ಕ್ವಿಟ್ ಇಂಡಿಯಾ ಕಷಾಯ, ಸತ್ಯಾಗ್ರಹ ಮಾತ್ರೆ-ಇತ್ಯಾದಿ ವೈದ್ಯಾಂಗ ನಿಪುಣ್ಯತೆ ಪ್ರದರ್ಶಿಸಿದ್ದಾರೆ; ಮತ್ತೊಮ್ಮೆ ಜ್ಯೋತಿಷ್ಯ ಶಿಖಾಮಣಿಯಾಗಿ, ಹಿಂದುಸ್ಥಾನವು ಇನ್ನು ಹೊಂದಲಿರುವ ಅಭಿವೃದ್ಧಿ, ಸ್ಟರ್ಲಿಂಗ್ ಸಾಲಗಳ ಮರುಪಾವತಿ, ಇತ್ಯಾದಿಗಳ ಕಣಿ ಹೇಳಿ, ಜೋತಿಶ್ಶಾಸ್ತ್ರ ಪಾಂಡಿತ್ಯವನ್ನೂ ತೋರಿಸಿದ್ದಾರೆ ಲೋರ್ಡ್ ವೇವೆಲರಿಗೆ ವೈದ್ಯಕೀಯ, ಭವಿಷ್ಯದಂತಹ ಆರೋಗ್ಯಾಯುಷ್ಯ ಸಂಬಂಧದ ಕಲೆಗಳು ಮಾತ್ರ ಗೊತ್ತಿರುವದಲ್ಲ--ಅಣಕಿಸಲಿಕ್ಕೂ ತಿಳಿದಿದೆ ಎಂಬುದಕ್ಕೆ ನಿದರ್ಶನವಾಗಿ ಕ್ವಿಟ್ ಇಂಡಿಯಾ, ಸತ್ಯಾಗ್ರಹಗಳ ವ್ಯಂಗ್ಯ ಸಂಬೋಧನೆಯೂ, "ಹಿಂದುಸ್ಥಾನವು ಪುನಃ ಚರಕ ತಿರುಗಿಸುವ ಸ್ಥಿತಿಗಿಳಿಯುವಂತಿಲ್ಲ" ಎಂಬ ಮಾತುಗಳೂ ಬಂದಿವೆ ಆದರೆ ಹಿಂದುಸ್ಥಾನದಂತಹ ವಿಶಾಲ ರಾಷ್ಟ್ರವೊಂದರ ಹೊಣೆ ಹೊತ್ತವನಲ್ಲಿ ಇಂತಹ ಪಾಂಡಿತ್ಯ ಮಾತ್ರವಿದ್ದರೆ ಸಾಲದು. ಭಿನ್ನ ಸಂಸ್ಕೃತಿಯುಳ್ಳ, ಕಠಿಣ ಸಮಸ್ಯೆಗೊಳಗಾಗಿರುವ ರಾಷ್ಟ್ರದ ಮನೋವೃತ್ತಿಯನ್ನರಿಯುವ ತಾಳ್ಮೆ ಮತ್ತು ಸಹಾನುಭೂತಿಯಿರಬೇಕಾದುದು ಮುಖ್ಯ. ಲೋರ್ಡ್ ವೇವೆಲರಲ್ಲಿ ಈ ಗುಣಗಳ ಅಭಾವವಿದೆ ಎಂಬುದೀಗ ಸ್ಪಷ್ಟವಾಗಿದೆ. ಮಾತ್ರವಲ್ಲ, ಲಂಡನಿನಿಂದ ಹೊಂಡುವಾಗ ಗಂಭೀರ ವ್ಯಕ್ತಿಯಾಗಿ ಕಾಣುತ್ತಿದ್ದ ಅವರೀಗ ಲಘುಮಾತುಗಳನ್ನಾಡ ಹತ್ತಿದ್ದಾರೆ. ಸೇನೆಯನ್ನಾಡಿಸಿದ ಅನುಭವ ಪಾತ್ರವಿರುವವನ ಕೈಗೆ ದೊಡ್ಡ ರಾಷ್ಟ್ರವೊಂದರ ರಾಜಕೀಯ ಸೂತ್ರವನ್ನು ಕೊಟ್ಟ ಅಚಾತುರ್ಯವೀಗ ಫಲ ಬಿಡಹತ್ತಿದೆ. 'ಅತಿರೇಕ ಆತ್ಮವಿಶ್ವಾಸವೇ ಓರ್ವ ಸೇನಾನಿಯಲ್ಲಿರಬೇಕಾದ ಅತಿಮುಖ್ಯ ಆಯುಧ' ಎಂದು ಲೋರ್ಡ್ ವೇವೆಲರೊಮ್ಮೆ ಹೇಳಿದ್ದರು. ಇದು ಸೇನಾನಾಯಕನಲ್ಲಿರಬೇಕಾದ ಗುಣ. ರಾಜಕೀಯ ನಾಯಕನಲ್ಲಿ ಇಂತಹ ಸ್ವಭಾವವು ದುರಭಿಮಾನವನ್ನಿಸುತ್ತದೆ. ಅವನು ಆತ್ಮವಿಶ್ವಾಸವಿಟ್ಟುಕೊಂಡಂತೆ ಅನ್ಯರ ಮೇಲೂ ವಿಶ್ವಾಸವಿಡಲು ಕಲಿಯಬೇಕು. ಸೇನಾನಿ ವೇವೆಲರು ವೈಸರಾಯಿ ವೇವೆಲರಾದ ಮೇಲೂ ಕಲಿಯಬೇಕಾದುದನ್ನು ಕಲಿತಿಲ್ಲ. ಭಾರತದ ರಾಷ್ಟ್ರೀಯತೆಯನ್ನು ಅವರು ವೈರಿಸೇನೆಯೆಂದು ಭಾವಿಸಿರುವದರಿಂದ ಈಗಲೂ ಅತಿರೇಕ ಆತ್ಮವಿಶ್ವಾಸದ ಸೇನಾನಿಯೇ ಆಗಿದ್ದಾರೆ. ಈ ವಿಶ್ವಾಸಕ್ಕನುಸಾರವಾಗಿ "ನಮಗೆ ಈಗ ಒಂದು ರಾಷ್ಟ್ರೀಯ ಸರಕಾರವೇ ಇದೆ. ಅದು ವಿಮರ್ಶೆ ಮತ್ತು ನಿಂದೆಗಳನ್ನು ಸಹಿಸಿಕೊಂಡು ಹಿಂದುಸ್ಥಾನದ ಆವಶ್ಯಕತೆಗಳನ್ನೆಲ್ಲಾ ಪೂರೈಸಿಕೊಡುತ್ತಿದೆ" ಎಂದು ಎಕ್ಸಿಕ್ಯೂಟಿವ್ ಕಮಿಟಿಯನ್ನು ಹೊಗಳಿ ತನ್ನ ಬೆನ್ನನ್ನು ತಾನೇ ಚಪ್ಪರಿಸಿಕೊಂಡಿದ್ದಾರೆ. ಯಾವುದೊಂದು ಪಕ್ಷದ ಪ್ರಾತಿನಿಧ್ಯವೂ ಇಲ್ಲದೆ, ವೈಸರಾಯರು ಕರೆದು ನಿಶ್ಚಿಸಿಕೊಂಡುದರಿಂದಾಗಿಯೇ ಅಲ್ಲಿ ನಿಂತಿರುವ ಕೆಲವು ಅಧಿಕಾರಾಭಿಲಾಷೀ ಹಿಂದೀ ಜೋಹುಕುಂಮಾಲರಿಗೂ 'ರಾಷ್ಟ್ರೀಯ ಸರಕಾರ'ಎಂಬ ಹೆಸರು ಒಪ್ಪುತ್ತದಾದರೆ ರಾಷ್ಟ್ರದ ಬೇಡಿಕೆಗೆ ಈ ತನಕವಿದ್ದ ಆ ಹೆಸರನ್ನಿನ್ನು ಒದಲಾಯಿಸಬೇಕಾಯಿತು! ಇದೇ ಎಕ್ಸಿಕ್ಯೂಟಿವ್ ಕಮಿಟಿಯ-ಹಿಂದೀ ಸರಕಾರದ ಪ್ಲೇನಿಂಗ್ ಮತ್ತು ಡೆವಲಪ್‌ಮೆಂಟ್ ಖಾತೆಯ-ಸದಸ್ಯರಾದ ಸರ್. ಅರ್ದೇಶಿರ್ ದಲಾಲರು ತಾ. 16ರಲ್ಲಿ ಕಲ್ಕತ್ತದ ಪತ್ರಿಕಾ ಪ್ರತಿನಿಧಿಗಳ ಮುಂದೆ ಆಡಿದ ಮಾತು ಇಲ್ಲಿದೆ: "ಜನತೆಯನ್ನು ಕೂಡಿಕೊಂಡು ನಡೆಯಬಲ್ಲ, ಹಾಗೂ ಅವರನ್ನು ಹೆಚ್ಚಿನ ತ್ಯಾಗಕ್ಕೆ ಪ್ರೇರಿಸಬಲ್ಲ ರಾಷ್ಟ್ರೀಯ ಸರಕಾರವೊಂದು ಇಲ್ಲದುದರಿಂದಾಗಿ ನಮ್ಮ ಕೆಲಸಕ್ಕೆ ಧಕ್ಕೆಯೊದಗಿದೆ". ವೈಸರಾಯರು ಯಾರನ್ನು 'ರಾಷ್ಟ್ರೀಯ ಸರಕಾರ' ಎಂದು ಕರೆದಿದ್ದಾರೋ ಅವರೇ 'ರಾಷ್ಟ್ರೀಯ ಸರಕಾರವಿಲ್ಲದುದರಿಂದಾಗಿ....'ಎನ್ನುತಿದ್ದಾರೆ! ಈ ಕುರಿತು ಟೀಕೆಯನಗತ್ಯ. ತಮ್ಮ ಆಡಳಿತೆಯೀಗ 'ಉಂಟು-ಇಲ್ಲ' ಎನ್ನುವ ಐಂದ್ರಜಾಲಿಕರ ಕೈಯಲ್ಲಿದೆ ಎಂದಿಷ್ಟೇ ಹಿಂದೀಯರು ಅರಿತಿರಬೇಕಾದ ಅಂಶ!

MATRIMONIAL.

Wanted a fair Looking house-hold trained Kanarese Brahmin bride bellow 20 years (Widow-entirely no objection) to marry a middle class high caste Madhwa Brahmin youth. Apply to:-

X

C/O "Navayuga" Udipi

ದಕ್ಷಿಣ ಕನ್ನಡ.

ಕಾರ್ಕಳ—ಇಂಗ್ಲಾಂಡಿನಿಂದ ಕಾರ್ಕಳಕ್ಕೆ ಮರಳಿಬಂದಿರುವ ಡಾ. ಕೆ. ಸೋಮನಾಥ ಭಟ್ಟ, ಎಮ್. ಆರ್. ಸಿ. ಎಸ್; ಎಲ್. ಆರ್. ಸಿ. ಪಿ. ಯವರು ಮಕ್ಕಳ ಆಸ್ಪತ್ರೆ ಬಗ್ಗೆ ತಾ. 20ರಲ್ಲು ಶ್ರೀ. ಜಾರ್ಕಳ ನಾಗಣ್ಣ ಹೆಗ್ಡೆಯವರ ಅಧ್ಯಕ್ಷತೆಯಲ್ಲಿ ಜರಗಿದ ಸಭೆಯಲ್ಲಿ ಸುಮಾರು 8000 ರೂಪಾಯಿ ಬೆಲೆಬಾಳುವ ಶಸ್ತ್ರೋಪಕರಣಗಳನ್ನೂ ತನ್ನ ಸ್ವಂತದ ಒಂಗ್ಲೆಯನ್ನೂ ಮಕ್ಕಳ ಆಸ್ಪತ್ರೆಯ ಬಗ್ಗೆ ದಾನಮಾಡಿದ್ದು ಸ್ತುತ್ಯಾರ್ಹವಿದೆ. ಈ ಬಗ್ಗೆ ಶ್ರೀ. ಯು. ಕೃಷ್ಣರಾವ್‌ರವರು ಕನ್ವೀನರರಾಗಿದ್ದು ಸಮಿತಿಯೊಂದು ರಚಿಸಲ್ಪಟ್ಟಿದೆ.

ಜನಪ್ರೀತ ಎಫ್. ಎ. ಶುಕೂರ್ ಸಾಹೇಬರವರು ತನ್ನ ಮದುವೆಸಮಾರಂಭದ ಸಮ್ಬಂಧ ಪುರಪ್ರಮುಖರಿಗೆ 'ಟೀಪಾರ್ಟಿ' ಕೊಟ್ಟು ಸತ್ಕರಿಸಿದರು. ಶ್ರೀ. ಬಿ. ಕೊರಗಪ್ಪ, ಡಿಸ್ಟ್ರಿಕ್ಟ ಮುನ್ಸಿಫ್, ಶ್ರೀ ಕೆ. ಜಿ ಶೆಣೈ, ಶ್ರೀ. ಎಸ್. ರಾಮಕೃಷ್ಣ ಆಚಾರ್, ಶ್ರೀ. ಶ್ರೀನಿವಾಸ ಕಿಣಿ, ಶ್ರೀ ಜಿ. ಕೆ ಕಾಮತ್, ವಕೀಲ ಮೊದಲಾದವರ ಪ್ರಸಂಗೋಚಿತ ಭಾಷಣಗಳಿದ್ದವು.

ಕಾರ್ಕಳ ತಾಲೂಕು ಅಡಿಕೆ ಬೇಸಾಯಗಾರರ ಅಸಾಧಾರಣ ಸಭೆಯೊಂದು ದುರ್ಗಾಗ್ರಾಮದ ದೇವಸ್ಥಾನದಲ್ಲಿ ತಾ. 7-12-44ರಲ್ಲು ಶ್ರೀ. ಕೆ. ರವಿವರ್ಮ ಪಡಿವಾಳರ ಅಧ್ಯಕ್ಷತೆಯಲ್ಲಿ ಸೇರಿ ಅಡಿಕೆ ಬೇಸಾಯಗಾರರ ಸಂಕಷ್ಟಗಳ ಕುರಿತು ಸರಕಾರಕ್ಕೆ ಮನವಿ ಮತ್ತು ಡೆಪ್ಯುಟೇಶನ್ ಬಗ್ಗೆ ಸಮಿತಿಯೊಂದನ್ನು ರಚಿಸಲಾಯಿತು

ಮೂಡಬಿದ್ರೆ-ಇಲ್ಲಿಯ ಕೋಪರೇಟಿವ್ ಸ್ಟೋರಿನ ಮಹಾಸಭೆಯು ತಾ. 17ನೇ ಅಪರಾಹ್ನ 3 ಘಂಟೆಗೆ ಜರಗುವದೆಂದು ನೋಟೀಸು ಕೊಟ್ಟು ನಿಯಮಿತ ಘಂಟೆಗೆ ಪಾಲುದಾರರು ಹಾಜರಾಗಲಿಲ್ಲವೆಂದು ಅಧ್ಯಕ್ಷರು ತನ್ನೊಡನೆ ಬಂದಿದ್ದ 9ಮಂದಿ ಸದಸ್ಯರಿಗೆ ತಿಳಿಸಿ ಹೊರಟು ಹೋದರೆಂದೂ ಅನಂತರ ಬಂದ ಪಾಲುಗಾರರು ಡೈರೆಕ್ಟರರಲ್ಲೊಬ್ಬರಾದ ಶ್ರೀ. ಕರಂಜೆ ಶ್ಯಾಮರಾಯರ ಅಧ್ಯಕ್ಷತೆಯಲ್ಲಿ 4 ಘಂಟೆಗೆ ಸಭೆ ಸೇರಿ ಅಧ್ಯಕ್ಷರ ವರ್ತನೆಯನ್ನು ಖಂಡಿಸಿ ರಠಾವುಮಾಡಿದರೆಂದೂ ಒಂದು ಬಾತ್ಮಿ ಬಂದಿದೆ

ಬೈಲೂರು--ಮಹಿಷಾಸುರ ಮರ್ದಿನಿ ಎಲಿಮೆಂಟರಿ ಶಾಲೆಯ ಹೆತ್ತವರ ಸಂಘದ ಸಭೆಯು ತಾ. 17-12-44ರಲ್ಲಿ ಉಡ್ಪಿ ರೇಂಜಿನ ಶಾಲಾ ಜೂನಿಯರ್ ಡಿಪ್ಟಿ ಇನ್ಸ್‌ಪೆಕ್ಟರ್ ಶ್ರೀ. ಯನ್. ಸುಂದರರಾಯರ ಅಧ್ಯಕ್ಷತೆಯಲ್ಲಿ ಜರಗಿತು ಮಕ್ಕಳ ವಿನೋದಾವಳಿಗಳಿದ್ದುವಲ್ಲದೆ 'ಪುನರ್ವಿವಾಹ' ಎಂಬ ನಾಟಕವೂ ಅಭಿನಯಿಸಲ್ಪಟ್ಟಿತು. ಸಭಿಕರ ಮತ್ತು ಅಧ್ಯಕ್ಷರ ಭಾಷಣ, ಇನಾಮು ಹಂಚೋಣ ನಡೆದು ಸಭಾಂತ್ಯವಾಯಿತು.

ಶೋಚನೀಯ ನಿಧನ-ತಾ. 15ನೇ ಎಳ್ಳಮಾವಾಸ್ಯೆಯ ದಿನ ಕಟಪಾಡಿಯ ಪಡು ಕರಾವಳಿಯಾದ ಕೈಪುಂಜಾಲಿನಲ್ಲಿ ಮನೇ ಹೆಂಗಸನ್ನು ಸಮುದ್ರಸ್ನಾನ ಮಾಡಿಸಲು ಹೋಗಿದ್ದ ನಾಡವ ಯುವಕನೊಬ್ಬನು ತೆರೆಯಿಂದೆಳೆಯಲ್ಪಟ್ಟು ಮರಣ ಹೊಂದಿದನೆಂದೂ ಹೆಣವನ್ನು ಬಲೆ ಬೀಸಿ ತೆಗೆಯಬೇಕಾಯಿತೆಂದೂ ತಿಳಿದುಬರುತ್ತದೆ.

ಮದ್ರಾಸಿನಲ್ಲಿ ಕನ್ನಡ ನಾಟಕ-ಮದ್ರಾಸಿನ ಗವರ್ನ್‌ಮೆಂಟ್ ಇಂಡಿಯನ್ ಮೆಡಿಕಲ್ ಸ್ಕೂಲಿನ ಕರ್ನಾಟಕ ವಿದ್ಯಾರ್ಥಿ ಸಂಘದವರು ತಾ. 8-12-44 ರಲ್ಲಿ ಶ್ರೀ ಕೆ. ಕೆ ಶೆಟ್ಟರ "ವ್ಯಭಿಚಾರಿಣಿ ಯಾರು?" ಎಂಬ ಸಾಮಾಜಿಕ ನಾಟಕವನ್ನು (ಮದ್ರಾಸಿನ) ಮ್ಯೂಜಿಯಮ್ ಥಿಯೇಟರ್‌ನಲ್ಲಿ ಶ್ರೀ. ಯಂ. ರಾಧಾಕೃಷ್ಣ ಪಿಳ್ಳೆ, ಮದ್ರಾಸ್ ಮೇಯರ್, ಇವರ ಅಧ್ಯಕ್ಷತೆಯಲ್ಲಿ ತುಂಬಾ ಯಶಸ್ವಿಯಾಗಿ ಅಭಿನಯಿಸಿದರು. ನಾಟಕದಿಂದ ಸಂಗ್ರಹಿಸಲ್ಪಟ್ಟ ಧನವು ಈ ಶಾಲೆಯ ಬಡ ವಿದ್ಯಾರ್ಥಿಗಳ ಸಹಾಯಕ್ಕಾಗಿ ವಿನಿಯೋಗಿಸಲ್ಪಡುತ್ತದ

ನಿಖಿಲ ಕರ್ನಾಟಕ ಚತುರ್ದಶ ಆಯುರ್ವೇದ ಸಮ್ಮೇಲನ-ಜರಗುವ ಸ್ಥಳ:-ಶ್ರೀರಾಬೀವಿ, ಮಂಜೇಶ್ವರ. ಸ್ವಾಗತಾಧ್ಯಕ್ಷರು:-ಶ್ರೀಮಾನ್ ವೈಕುಂಠ ಭಕ್ತ, ಮಂಜೇಶ್ವರ. ಪ್ರದರ್ಶನದ ಉದ್ಘಾಟಕರು:-ಶ್ರೀಮಾನ್ ಲಕ್ಷ್ಮೀನಾರಾಯಣ ನಾಯಕರು, ಪಾಂಗಾಳ. ಸಮ್ಮೇಲನಾಧ್ಯಕ್ಷರು:-ಶ್ರೀಮಾನ್ ವೈದ್ಯ ಪಾರ್ಥನಾರಾಯಣ ಪಂಡಿತರು, ಮೈಸೂರು.

ಈ ಸಮ್ಮೇಲನವು ಇದೇ ಬರುವ ಜನವರಿ ತಾ. 4, 5, ಮತ್ತು 6ನೇ ದಿನಗಳಲ್ಲಿ ನಡೆಯುವುದು. ತಾ. 4ರಲ್ಲು ಬೆಳಿಗ್ಗೆ ಗಂಟೆ 9ಕ್ಕೆ ಸಮ್ಮೇಲನಾಧ್ಯಕ್ಷರ ಮೆರವಣಿಗೆಯು ನಡೆಯುವುದಲ್ಲದೆ ಅದೇ ದಿನ ಸಾಯಂಕಾಲ ಗಂಟೆ 6--30ಕ್ಕೆ ಸಕಲ ಆಯುರ್ವೇದ ಔಷಧಗಳ ಹಾಗೂ ಗ್ರಂಥಗಳ ಪ್ರದರ್ಶನದ ಉದ್ಘಾಟನಾ ಸಮಾರಂಭವು ಶ್ರೀಮಾನ್ ಪಾಂಗಾಳ ಲಕ್ಷ್ಮೀನಾರಾಯಣ ನಾಯಕರ ಹಸ್ತದಿಂದ ನೆರವೇರಲ್ಪಡುವುದು ತಾ. 5ರಲ್ಲು ಬೆಳಿಗ್ಗೆ ಗಂಟೆ 9ಕ್ಕೆ ಮತ್ತು ಮಧ್ಯಾಹ್ನ ಗಂಟೆ 2ಕ್ಕೆ ಅಧಿವೇಶನವು ನಡೆಯುವುದು. ಅಧಿವೇಶನದ ಉಳಿದ ಕಾರ್ಯಕಲಾಪಗಳು ತಾ. 6ರಲ್ಲು ನಡೆಯುವವು. ಅಲ್ಲದೆ, ಅತ್ಯಪೂರ್ವವಾದ 'ಧನ್ವಂತರಿ'ಯ ಭಾವಚಿತ್ರ ಅನಾವರಣೋತ್ಸವವೂ ಜರುಗಲಿದೆ.

ಜಿಲ್ಲಾ ಕಮರ್ಶಿಯಲ್ ಟೇಕ್ಸ್ ಆಫೀಸರರ ಪ್ರಕಟಣೆ

ಈ ಮೊದಲೇ ವ್ಯಾಪಾರಿಗಳಿಗೆ ಪದೇ ಪದೇ ತಿಳಿಸಿದಾಗ್ಯೂ ಇನ್ನೂ ಕೆಲವರು ಕಳ್ಳಸಂತೆಯಲ್ಲಿ ಸಾಮಾನುಗಳನ್ನು ಮಾರಾಟ ಮಾಡುತ್ತಲಿರುವುದೂ ದಾಸ್ತಾನು ಇದ್ದಾಗ್ಯೂ ಇಲ್ಲವೆಂದು ಗಿರಾಕಿಗಳಿಗೆ ಹೇಳಿ ವಾಪಾಸು ಕಳುಹಿಸುವುದೂ ಸಾಮಾನುಗಳನ್ನು ಕೊಟ್ಟಲ್ಲಿ ರಶೀದಿಗಳನ್ನು ಕೊಡದಿರುವುದೂ ಆಫೀಸರರ ಗೋಚರಕ್ಕೆ ಬಂದಿದೆ. ಇನ್ನೂ ಈ ಮಾದರಿಯನ್ನನುಸರಿಸಿದವರಿಗೆ ಉಗ್ರ ಶಿಕ್ಷೆಯನ್ನೀಯಲಾದೀತು ಎಂದು ಈ ಮೂಲಕ ಎಲ್ಲಾ ವ್ಯಾಪಾರಿಗಳಿಗೂ ಮುಂಜಾಗ್ರತೆಯ ಎಚ್ಚರಿಕೆಯನ್ನೀಯಲಾಗಿದೆ ಎಂಬುವುದೇ ಪ್ರಕಟಣೆಯ ಸಾರಾಂಶ

ಪ್ರಕಟಣೆ

ದಿ ನ್ಯೂ ಗಾರ್ಡಿಯನ್ ಒಫ್ ಇಂಡಿಯಾ ಲೈಫ್ ಇನ್ಸೂರೆನ್ಸ್ ಕಂಪೆನಿ, ಲಿಮಿಟೆಡ್ ಮದ್ರಾಸು.

ಇದರ ದಕ್ಷಿಣ ಕನ್ನಡ ಜಿಲ್ಲೆಯ ಚೀಫ್ ಓರ್ಗನೈಜರರಾದ ಶ್ರೀ. ಕುಕ್ಕಾರು ಗಣಪಯ್ಯ ಶೆಟ್ರು ಕಂಪೆನಿಯ ಕಾರ್ಯಾರ್ಥದ ಸಲುವಾಗಿ ತಾ. 17-12-44ರಲ್ಲು ಬೊಂಬಾಯಿಗೆ ಹೊರಟಿರುತ್ತಾರೆ. ಬೊಂಬಾಯಿಯ ಬಂಧುಗಳು ಹಿಂದಿನಂತೆ ಈ ಸಲವೂ ಶ್ರೀಯುತ ಶೆಟ್ರ ಕಾರ್ಯದಲ್ಲಿ ಸಹಕರಿಸಿ ಪ್ರೋತ್ಸಾಹಿಸುವರೆಂದು ನಿರೀಕ್ಷಿಸಲಾಗಿದೆ.

ಜರ್ಮನ್ ಗಡಿಯಲ್ಲಿ ನಾಜೀ ಸೇನೆಯ ಪ್ರಬಲ ಪ್ರತಿಧಾಳಿ!

ಇಂಗ್ಲಾಂಡು-ಅಮೇರಿಕಗಳೊಳಗೆ ಮನಕಷಾಯ

ಪಶ್ಚಿಮರಂಗದ ಅತ್ಯುಗ್ರಕದನ.

ಜರ್ಮನಿಯ ಗಡಿ ಹೋರಾಟವೀಗ ಅತಿ ಬಿರುಸಾಗುತ್ತಿದೆ. ಪ್ರಾಯಶಃ ಮಿತ್ರ ಪಾಳಯದ ಯಾವ ನಿರಾಶಾವಾದಿಯೂ ನಿರೀಕ್ಷಿಸಿರದಷ್ಟು ಪ್ರಬಲ ಪ್ರತಿಭಟನೆಯನ್ನು ನಾಜಿಗಳು ಕೊಡುತಿದ್ದಾರೆ. ಇತ್ತೀಚಿಗಿನ ವಾರ್ತೆಯಂತೆ, ಈ ವರೆಗೂ ಪ್ರತಿಭಟನೆ ಮತ್ತು ಸಣ್ಣಪುಟ್ಟ ಪ್ರತಿ ಧಾಳಿಗಳನ್ನು ಹೂಡುತ್ತಿದ್ದ ನಾಜೀ ಸೇನೆಯೀಗ ದೊಡ್ಡ ಪರಿಮಾಣದಲ್ಲಿ 60 ಮೈಲುದ್ದದ ಪ್ರತಿಧಾಳಿಯನ್ನಾರಂಭಿಸಿ ಬೆಲ್ಜಿಯಮಿನ ವರೆಗೂ ಮುನ್ನುಗ್ಗಿದೆ. ಮಿತ್ರ ಸೇನೆಗಳ ಕಠಿಣ ಪರೀಕ್ಷಾ ಕಾಲವೀಗ ಬಂದಿದೆ.

ಅಲ್ಲಿರುವ ಮಿತ್ರ ಸೇನೆಗಳು.

ಜರ್ಮನ್ ಗಡಿಯಲ್ಲಿ ತೀರಾ ಉತ್ತರಕ್ಕೆ ಅಮೇರಿಕದ 9ನೇ ಮತ್ತು 1ನೇ ಸೇನೆ; ಮಧ್ಯವಲಯದಲ್ಲಿ 3ನೇ ಅಮೇರಿಕನ್ ಸೇನೆ. ದಕ್ಷಿಣಗಡೆಯಲ್ಲಿ ಅಮೇರಿಕನ್ ಏಳನೇ ಸೇನೆ ಮತ್ತು ಫ್ರೆಂಚ್ ಮೊದಲನೇ ಸೇನೆ—ಹೋರಾಟಕ್ಕೊಡ್ಡಲ್ಪಟ್ಟಿವೆ. ಎಲ್ಲವೂ ಜರ್ಮನ್ ಸರಹದ್ದಿನಲ್ಲಿ, ಸಿಗ್‌ಫ್ರೆಡ್ ವಲಯದಲ್ಲಿ ಹೋರಾಡುತ್ತಿವೆ. ಆ ಪೈಕಿ ದಕ್ಷಿಣ ಭಾಗದ ಏಳನೇ ಸೇನೆಯು ಜರ್ಮನಿಯೊಳಗಡೆಗೆ ಒಂದೆರಡು ಮೈಲುಗಳ ತನಕ ನುಗ್ಗಿದೆ. ಎಲ್ಲಾ ರಂಗಗಳಲ್ಲೂ ಸಮಬಲ ಹೋರಾಟಗಳು ಅತಿ ಭೀಕರವಾಗಿ ನಡೆಯುತ್ತಿವೆ.

ಜರ್ಮನರ ಪ್ರಬಲ ಧಾಳಿ

ಈಗ ಉತ್ತರಗಡೆಯಲ್ಲಿ ಬೆಲ್ಜಿಯಮ್ ಮತ್ತು ಲಕ್ಸೆಂಬರ್ಗ್ ಗಡಿಯ 60 ಮೈಲುದ್ದಕ್ಕೆ ಜರ್ಮನರು ಪ್ರಬಲ ಧಾಳಿಹೂಡಿ ಮುಂದೊತ್ತಲಾರಂಭಿಸಿದ್ದಾರೆ. ಕೆಲವೆಡೆಗಳಲ್ಲಿ ಅವರನ್ನು ತಡೆದು ನಿಲ್ಲಿಸಲಾಗಿದೆಯಾದರೂ ಇನ್ನು ಕೆಲವು ಮುಖಗಳಲ್ಲಿ ಮುಂದೊತ್ತುತ್ತಲೇ ಇದ್ದಾರೆಂಬೂ, ಅಮೇರಿಕನ್ ಸೇನೆಗಳ ಹಿಂಗಡೆಯಲ್ಲಿ ಗಾಳಿಕೊಡೆಯವರನ್ನೂ ಇಳಿಸಿದ್ದಾರೆಂದೂ ತಿಳಿದುಬರುತ್ತದೆ. ಇಲ್ಲಿ ಇದು ವರೆಗೆ ಕಾಣಿಸದಿದ್ದಷ್ಟು ಅಧಿಕ ಸಂಖ್ಯೆಯಲ್ಲಿ ನಾಜೀ ಟೇಂಕುದಳಗಳೂ, ಚಕಿತಗೊಳಿಸುವಷ್ಟು ಜರ್ಮನ್ ವಿಮಾನ ಬಲಗಳೂ ಈಗ ಮುಂದೆ ಬಂದಿವೆ.

ಉತ್ತರದ ಸೇನೆಗೆ ಗಂಡಾಂತರ

ಹೀಗ ಮುಂದೊತ್ತಿದ ನಾಜೀ ಸೇನೆ ಬೆಲ್ಜಿಯಮ್ ಮತ್ತು ಲಕ್ಸೆಂಬರ್ಗಿನೊಳಗೆ ದೂರದ ವರೆಗೂ ಹೋಗಿದೆಯೆಂದೂ ಉತ್ತರಗಡೆಯ ಮಿತ್ರ ಸೇನೆಗಳ ಆಟವನ್ನು ಪೂರ್ತಿ ನಿಲ್ಲಿಸಿಬಿಡುವದೇ ಈ ಧಾಳಿಯ ಉದ್ದೇಶವಿರಬೇಕೆಂದೂ ತಿಳಿದುಬರುತ್ತದೆ ಈ ಹೊಡೆತವೂ ಜರ್ಮನ್ ಟೇಂಕು ವಿಮಾನಗಳ ಹೊಸ ಭೇಟಿಯೂ ಮಿತ್ರ ಸೇನಾನಿಗಳ ಪಾಲಿಗೊದಗಿದ ಆಕಸ್ಮಿಕವೆನ್ನಬೇಕು. ಹೀಗೆಉತ್ತರಗಡೆಯಲ್ಲಿ ನಾಜೀ ಸೇನೆಯ ಪ್ರಾಬಲ್ಯ ಕಂಡುಬರುತ್ತಿರುವಾಗ ದಕ್ಷಿಣ ಕಡೆಯ ಮಿತ್ರಸೇನೆಗಳು ಮುಂದೊತ್ತಿ ಕೆಲವು ಗ್ರಾಮಗಳನ್ನು ಹಿಡಿದುಕೊಂಡಿವೆ. ಇಲ್ಲಿಯೂ ಜರ್ಮನರ ಪ್ರತಿಭಟನ ಹೆಚ್ಚಿದೆ

ರಶ್ಯನರ ಪ್ರಗತಿ.

ಹಂಗೇರಿಯ ಪ್ರಧಾನ ನಗರ ಬುಡಾಪೆಸ್ಟನ್ನು ಸಂಪೂರ್ಣ ಮುತ್ತಿಗೆ ಹಾಕಿ ಕೆಂಪು ಸೇನೆಯೀಗ ಆಸ್ಟ್ರಿಯಾದ ಗಡಿಯತ್ತ ಧಾವಿಸುತ್ತಿದೆ. 'ವಿಯೆನ್ನಾದ ವರೆಗೆ ಓಟ' ಎಂಬುದೇ ಈಗ ಕೆಂಪು ಸೋಲ್ಜರರ ರಣನಾದ. ಹಂಗೇರಿಯ ಈಶಾನ್ಯ ದಿಕ್ಕಿನಿಂದ ಮುಂದೊತ್ತಿದ ರಶ್ಯನ್ ಸೇನೆ ಝೆಕೊಸ್ಲೋವೇಕಿಯದೊಳಗೆ ಪರ್ವತ ಕಣಿವೆಗಳ ನಡುವೆ ಮುನ್ನುಗ್ಗುತ್ತಿದೆ. ಆಸ್ಟ್ರಿಯಾದ ಪ್ರಧಾನ ನಗರ ಲೋಕ ಪ್ರಸಿದ್ಧ ವಿಯೆನ್ನಾವನ್ನು ಉಳಿಸಿಕೊಳ್ಳುವ ಹಂಚಿಕೆಯಲ್ಲೀಗ ಜರ್ಮನ್ ಸೇನಾನಿಗಳಿರುವಂತಿದೆ ಆಸ್ಟ್ರಿಯಾ, ಝೆಕೊಸ್ಲೋವೇಕಿಯಗಳ ಗತಿ ನಿರ್ಣಯ ಕಾಲಬಂದಿದೆ.

ಶಾಂತ ಸಮುದ್ರದಲ್ಲಿ

ಫಿಲಿಪ್ಪಾಯಿನಿನ ದೊಡ್ಡ ದ್ವೀಪಗಳಲ್ಲೊಂದಾದ ಮಿಂಡೋರೋದಲ್ಲಿ ಕಳದ ವಾರ ಅಮೇರಿಕನ್ ಸೇನೆಗಳಿಳಿದುದು ಮಹತ್ವದ ವಾರ್ತೆ. ಈ ದ್ವೀಪವು ಮನಿಲಾಕ್ಕೆ 75 ಮೈಲು ದಕ್ಷಿಣದಲ್ಲಿದೆ. ಜಪಾನ್ ವಶದಲ್ಲಿರುವ ಫಿಲಿಪ್ಪಾಯಿನ್ ದ್ವೀಪಗಳನ್ನೀಗ ಸರೀ ಇಬ್ಭಾಗ ಮಾಡಿದಂತಾಗಿದೆ. ಮಿಂಡೋರೋ ಮತ್ತು ಲೈಟೆ ದ್ವೀಪಗಳಲ್ಲಿ ಅಮೇರಿಕನ್ ಸೇನೆ ಪ್ರಗತಿ ಪಡೆಯುತ್ತಾ ಇದೆ. ಫಿಲಿಪ್ಪಾಯಿನ್ ಸಮುದ್ರದಲ್ಲಿ ಲುಝೋನಿಗೆ ಹೋಗುತ್ತಿದ್ದ ಮಿತ್ರ ಹಡಗಗಳ ಮೇಲೆ ಜಪಾನರು ಬಿದ್ದು ನೌಕಾ ಕಾಳಗ ನಡೆಯಿತು. ಟೋಕಿಯೋದ ಮೇಲೆ ಆಗಾಗ ಆಕಾಶ ಧಾಳಿಯಾಗುತ್ತಿದೆ.

ಬರ್ಮಾ ಹೋರಾಟ

ಉತ್ತರ ಬರ್ಮದ ಪ್ರಾಮುಖ್ಯ ನಗರವಾದ ಭಾಮೋವನ್ನು ದೀರ್ಘಾವಧಿಯ ಹೋರಾಟದ ನಂತರ ಚೀನೀ ಸೇನೆ ವಶಪಡಿಸಿಕೊಂಡುದು ಗಣನೀಯ ವಿಜಯ ಅರಕಾನ್ ವಲಯದಲ್ಲಿಯೂ ಮಿತ್ರ ಸೇನೆಗಳು ಮುಂದೊತ್ತಿವೆ. ಉತ್ತರ ಬರ್ಮದ 500 ಚದರ ಮೈಲಷ್ಟು ಸ್ಥಳಗಳನ್ನು ಜಪಾನರಿಂದ ಕಸಕೊಳ್ಳಲಾಗಿದೆ. ಕಳದಬಾರಿ ಇಂಫಾಲಿನ ಮೇಲೆ ಜಪಾನರು ಮುಂದೊತ್ತಿ ಬಂದಾಗ, ಅರಕಾನಿನಿಂದ ತಮ್ಮ 5ನೇ ಸೇನೆ ಬರುವ ವರೆಗೆ 6ದಿನ ಪರಿಯಂತರ ಹಿಂದೀ ಗಾಳಿಕೊಡೆಯೋಧರು, ಆತಿ ಸಮೀಪದಲ್ಲಿ ದಿನಕ್ಕೊಂದು ಬಾಟ್ಲಿ ನೀರನ್ನು ಮಾತ್ರ ಕುಡಿದು ಜಪಾನರನ್ನು ತಡೆಗಟ್ಟಿದ್ದ ಚರಿತ್ರಾರ್ಹ ಸಾಹಸವೀಗ ಪ್ರಕಟವಾಗಿದೆ.

ಜರ್ಮನಿಯನ್ನು ಕತ್ತರಿಸಿ ಪೋಲೆಂಡಿಗೆ

ಪೋಲೆಂಡು ಸಮಸ್ಯಾಚರ್ಚೆಗಾಗಿ ಸೇರಿದ್ದ ಕಾಮನ್ಸ್ ಸಭೆಯಲ್ಲಿ ಮಿ. ಚರ್ಚಿಲ್ಲರು ರಶ್ಯದ ವಾದವನ್ನು ಸಮರ್ಥಿಸಿ ಕರ್ಝನ್ ಲೈನೇ ಪೋಲೆಂಡ್-ರಶ್ಯಾಗಡಿಯಾಗಬೇಕೆಂದರು. ಆ ಮೂಲಕ ಪೋಲೆಂಡಿಗಾಗುವ ನಷ್ಟವನ್ನು ತುಂಬಲು ಜರ್ಮನಿಯಪೂರ್ವಪ್ರಶ್ಯ, ಕೋಯಿನಿಗ್ಸ್‌ಬರ್ಗ್ ಕೋಟೆಗಳು ಮತ್ತು ಡಾನ್ಜಿಗನ್ನು ಕೂಡಿಸಿಕೊಡಲಾಗುವದೆಂದೂ, ಹಾಗೆ ಮಾಡುವರೆ ಪೂರ್ವಗಡೆಯ ಮಿಲಿಯಾವಧಿ ಪೋಲರನ್ನು ಉತ್ತರ ಮತ್ತು ಪಶ್ಚಿಮದಿಕ್ಕಿಗೆ ವರ್ಗಾಯಿಸುವ ಕಷ್ಟ ಮಾತ್ರ ನೋಡುವನಷ್ಟವಿಲ್ಲವೆಂದೂ ಮಿ ಚರ್ಚಿಲ್ಲರ ವಾದ. ಇಂತಹ ಭೇದ ನೀತಿಯು ಅಟ್ಲಾಂಟಿಕ್ ಘೋಷಣೆಗೆ ವಿರೋಧವೆಂದು ಬ್ರಿಟಿಷ್ ಪತ್ರಿಕೆಗಳೂ ಕಟುವಾಗಿ ಟೀಕಿಸುತ್ತಿವೆ.

ಗ್ರೀಸಿನ ಬಂಡಾಯ

ಪ್ರಬಲವಾಗಿ ನಡೆಯುತ್ತಲೇ ಇದೆ. ಗ್ರೀಸಿನ ಬಹು ಭಾಗವು ರಾಷ್ಟ್ರೀಯವಾದಿ ಬಂಡಾಯಗಾರರ ವಶದಲ್ಲಿದೆ ಜನ ಬೆಂಬಲವೂ ಸಂಪೂರ್ಣವಾಗಿ ಈ ಎಡ ಪಕ್ಷೀಯರಿಗೇನೇ ಇದೆ. ಗ್ರೀಸಿನ ಬ್ರಿಟಿಷ್ ಸೇನಾನಿ ಜನರಲ್ ಸ್ಕೋಬಿಯವರು ಬಂಡಾಯಕಾರರ ಸೇನಾನಿ ಸಾರಾಫಿಸ್‌ರವರಿಗೆ ಸಂಧಿ ಸೂಚನೆಗಳನ್ನು ಕಳುಹಿದ್ದರಾದರೂ ಚಳವಳಗಾರರ ಶರ್ತಗಳಿಗೊಪ್ಪದುದರಿಂದ ಅದು ಮುರಿದಿದೆ. ಗ್ರೀಸನ್ನು ವಶಪಡಿಸಿಕೊಳ್ಳಬೇಕೆಂದೇ ಬ್ರಿಟಿಷರ ಪ್ರಯತ್ನವೆಂದ ಎಡ ಪಕ್ಷೀಯರು ಹೇಳುತಿದ್ದಾರೆ. ಪಶ್ಚಿಮ ಗ್ರೀಸಿನಲ್ಲಿದ್ದ ಹಿಂದೀ ಸೇನೆಯು ಚಳವಳಗಾರರಿಂದ ಹೊಡೆತ ತಿಂದು ಸಮುದ್ರ ಮೂಲಕ ಹಿಂದಿರುಗಿ ಹೋಗಿದೆ.

ಅಮೇರಿಕದ ಅಸಮ್ಮತಿ

ಗ್ರೀಸ್, ಇಟೆಲಿಗಳಲ್ಲಿ ಬ್ರಿಟಿಷರು ವಹಿಸಿದ ಧೋರಣೆಗೆ ಅಸಮ್ಮತಿ ಪ್ರದರ್ಶಿಸಿದ್ದ ಅಮೇರಿಕವು ಪೋಲೆಂಡಿನ ಗಡಿ ವ್ಯವಸ್ಥೆಯ ಕುರಿತು ಚರ್ಚಿಲ್ಲರಿತ್ತ ಭಾಷಣದಿಂದ ಮತ್ತಷ್ಟು ಮನನೊಂದಿದೆ ಆದರೆ ಆಕ್ರಮಣ ಮುಕ್ತಾಯಗೊಂಡ ರಾಷ್ಟ್ರಗಳ ಸಂಬಂಧವಾಗಿ ಯಾವ ಧೋರಣೆ ವಹಿಸಬೇಕೆಂಬ ಸ್ಪಷ್ಟ ನಿರ್ಧಾರವನ್ನು ಅದು ಈ ತನಕ ಮಾಡಿದಂತಿಲ್ಲ. ಮಿತ್ರ ಪಾಳಯದೊಳಗಿನ ಅಂತರಾಷ್ಟ್ರೀಯ ಸಂಬಂಧಗಳೀಗ ತೀರಾ ಕೆಟ್ಟು ಹೋಗಿರುವದರಿಂದ ಚರ್ಚಿಲ್-ರೂಸವೆಲ್ಟ್-ಸ್ಟಾಲಿನ್ ಸಮ್ಮೇಳನ ಕೂಡಲು ತಡೆಯುಂಟಾಗಿದೆ. ಮಿ. ಚರ್ಚಿಲ್ಲರು ಕ್ರಿಸ್‌ಮಸಿನ ಮೊದಲು ಮತ್ತೊಂದು ಹೇಳಿಕೆಯೀಯಲಿದ್ದಾರೆ.

ಮಹಾತ್ಮಾ ಗಾಂಧಿಯವರು.

ವಿಶ್ರಾಂತಿ ಪಡಕೊಂಡಂದಿನಿಂದ ಗಾಂಧಿಯವರ ಆರೋಗ್ಯ ಒಹುಮಟ್ಟಿಗೆ ಸುಧಾರಿಸಿದೆ. ಅವರು ಪುನಃ ವಾರ್ಧಾದಲ್ಲಿಯೇ ನಿಲ್ಲುವ ಸಂಭವವಿದೆ. ಫೆಬ್ರವರಿಯಲ್ಲಿ ನವದಿಲ್ಲಿಗೂ ಭೇಟಿ ಕೊಡಬಹುದು. ವಾರ್ಧದಲ್ಲಿ ನಾಲ್ಕು ದಿನವಿದ್ದು ಸೇವಾಗ್ರಾಮಕ್ಕೆ ಮರಳಿದ್ದಾರೆ. ವಾರ್ಧದ ವಿದ್ಯಾರ್ಥಿನಿಯರು ಒಂದು ಹೊಸರೀತಿಯ ನಾಟಕವನ್ನು ಗಾಂಧಿಜೀಯ ಮುಂದೆ ಪ್ರದರ್ಶಿಸಿದ್ದರು ಆ ನಾಟಕದಲ್ಲಿ ದೇ[illegible]ನ ಒಡ[illegible]ಲಗ, ಅಲ್ಲಿ ಚರ್ಚಿಲ್, ರೂಸವೆಲ್ಟ್, ಹಿಟ್ಲರ್, ಸ್ಟಾಲಿನ್—ಮುಂತಾದವರ ನಾಗ್ಮೂಲಗಳಾಗುತ್ತವೆ ಕೊನೆಗೆ ನಾರದನ ಸಲಹೆಯಂತೆ ಗಾಂಧಿಜಿಯವರನ್ನಲ್ಲಿಗೆ ಕರೆದಾಗ ಅವರು ತನ್ನ ಅಹಿಂಸಾ ಸಂದೇಶ ಕೊಡುತ್ತಾರೆ. ಇಂದ್ರಸಭೆ ತೃಪ್ತಿಗೊಂಡು ಇಂದ್ರಾಣೆ ಗಾಂಧಿಗೆ ಕಂಕಣ ಕಟ್ಟುತ್ತಾಳೆ.

ಜಪಾನಿಗೆ ಜಪಾನರಿಚ್ಛೆಯ ಸರಕಾರ?

ಚೀನದಲ್ಲಿ ಪ್ರಜಾಪ್ರಭುತ್ವವಿಲ್ಲವೆಂದು ಪರದೇಶೀಯರು ಮಾಡುತ್ತಿರುವ ಟೀಕೆಗೆ ಜನರಲಿಸಮೋ ಚಿಯಾಂಗ್ ಕೈಶೇಕರು ಉತ್ತರವೀಯುತ್ತಾ 'ಕೆಲವು ವಿಷಯಗಳಲ್ಲಿ ಚೀನದ ಪ್ರಜಾಪ್ರಭುತ್ವವು ಇಂಗ್ಲಾಂಡಿಗಿಂತ ಭಿನ್ನವಿರಬಹುದು; ಆದರೆ ಎರಡರ ಗುರಿಯೂ ಒಂದೇ' ಎಂದಿದ್ದಾರೆ. ಯುದ್ಧಾನಂತರ ಜಪಾನಿನ ನಿಶ್ಶಸ್ತ್ರೀಕರಣವಾಗಬೇಕೆಂದೂ, ಅದು ಪುನಃ ಬಲಿಷ್ಠ ರಾಷ್ಟ್ರವಾಗುವದನ್ನು ಸರ್ವ ಶಕ್ತಿಯಿಂದ ನಿಗ್ರಹಿಸತಕ್ಕದ್ದೆಂದೂ ಅವರ ಅಭಿಮತ. ಆದರೆ ಯುದ್ಧಾನಂತರ ಜಪಾನಿನಲ್ಲಿ ಯಾವುದೇ ವಿಧದ ಸರಕಾರ ಸ್ಥಾಪನೆಗಾಗಿ ಪ್ರಯತ್ನಿಸದೆ ಮಿತ್ರರಾಷ್ಟ್ರಗಳು ಆ ಕಾರ್ಯವನ್ನು ಜಪಾನು ಜನತೆಗೇನೇ ಬಿಟ್ಟುಬಿಡುವದು ವಾಸಿಯೆಂದು ಚಿಯಾಂಗರನ್ನುತ್ತಾರೆ.

Notice

ಪುತ್ತೂರು ಡಿ. ಮು. ಕೋರ್ಟಿನಲ್ಲಿ

O. S 32/39 in R I A.

1302-1303/1944

ಶ್ರೀ ವಿಷ್ಣುತೀರ್ಥ ಸ್ವಾಮಿಯವರು, ಮ್ಯಾನೇಜರು, ಬಗ್ಗೆ ರಕ್ಷಕ ಮುಚ್ಚಿಂತಾಯ ಕೃಷ್ಣಾಚಾರ್ಯ - ಅರ್ಜದಾರ

ಅಪ್ಪು ಯಾನೆ ನರಸಿಂಹ ಶ್ಯಾನುಭಾಗ —ಎದ್ರಿ

ಸದ್ರಿ ಎದ್ರಿಗೆ ತಿಳಿಯಪಡಿಸುವುದೇನೆಂದ್ರೆ-ಮೇಲ್ಕಂಡ ವ್ಯವಹರಣೆಯಲ್ಲಿ ಸದ್ರಿ ಅರ್ಜದಾರರನ್ನು ಸಪ್ಲಿಮೆಂಟಲ್ ವಾದಿರಾಗಿ ಸೇರಿಸುವರೆಯೂ ಮತ್ತು ಡಿಕ್ರಿ ಬಾಕಿ ಆ್ಯವಜುವ್ನಲಿ ಕುರಿತು ಪರ್ಸನಲ್ ಡಿಕ್ರಿ ಕೊಡಿಸಬೇಕಾಗಿಯೂ ಕೂಡಾ ಅರ್ಜದಾರು ದಾಖಲ್ಲು ಮಾಡಿದ ಮೇಲಿನ ಅರ್ಜಿಗಳು ತನಿಖೆ ಬಗ್ಗೆ ತಾ 15-1-45ಕ್ಕೆ ಯಿಟ್ಟಿದೆ. ಆದ್ರಿಂದ ಅವ್ರಲ್ಲಿ ವುದಹರಿಸುವುದಿದ್ದರೆ ಆ ದಿವ್ಸ 10ಗಂಟೆಗೆ ಸರಿಯಾಗಿ ಸದ್ರಿ ಕೋರ್ಟಿನ ಮುಂದೆ ಸ್ವತಹಾ ಅಗ್ಲೀ ವಕೀಲರ ಮುಖಾಂತ್ರವಾಗಲೀ ಹಾಜ್ರು ಆಗಿ ವುದಹರಿಸಿಕೊಳ್ಳತಕ್ಕದ್ದು. ತಪ್ಪಿದ್ರೆ ಏಕಪ್ಪಾರ್ಟಿ ವಿಚಾರಣೆಯಿಂದ ತೀರ್ಮಾನ ಮಾಡಲಾಗುವುದು. ತಿಳಿದಿರಲಿ.

ಪುತ್ತೂರು } C. S. Shastry.
ತಾ 12-12-44 } Vakil for Petitioner

ಸನ್‌ರ್ಯಾಸ್ ಚಿತ್ರಪಟ

ಸರ್ದಾರ್ ಅಕ್ತಾರ್, ಮಜಹರ್‌ಖಾನ್, ನಾಜೀರ್

ಮತ್ತು ಖಜ್ಜನ್

ಅಭಿನಯಿಸಿದ

ಘರ್ ಸಂಸಾರ್

ತಾ. 21—12—44ರಿಂದ

ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್, ಉಡ್ಪಿ.

ದಕ್ಷಿಣ ಕನ್ನಡ,

ಮಂಗಳೂರು

ಜಿಲ್ಲೆಯ ಆಹಾರ ಸಮ್ಮೇಳನ—ವನ್ನು ಜನವರಿ ತಾ. ೨೦, ೨೧ ಈ ದಿನಗಳಲ್ಲಿ ಮಂಗಳೂರಲ್ಲಿ ಜರಗಿಸಬೇಕೆಂದೂ ಅಧ್ಯಕ್ಷತೆ ವಹಿಸಲು ಶ್ರೀ। ಕೆ. ಬಿ. ಜಿನರಾಜ ಹೆಗ್ಡೆ ಎಂ. ಎಲ್. ಎ. (ಕೇಂದ್ರ) ಅವರನ್ನು ಮತ್ತು ಉದ್ಘಾಟನೆ ನಡೆಸಲು ಶ್ರೀ। ಎ. ಬಿ. ಶೆಟ್ಟರನ್ನು ಕೇಳಿಕೊಳ್ಳಬೇಕೆಂದೂ ತಾ. ೧೦ರಂದು ರವಿವಾರ ಸಂಜೆ ಶ್ರೀ। ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ಸೇರಿದ ಜಿಲ್ಲಾ ಜನತಾ ಆಹಾರ ಸಮಿತಿಯ ಸಭೆಯು ನಿರ್ಧರಿಸಿತು. ಈಗ ಸಿಗುತ್ತಿರುವ ಅಕ್ಕಿಯ ಹಸುಗೆಯ ಭಾಗ ಕಡಿಮೆ ಇರುವುದರಿಂದ, ಎಷ್ಟೋ ಬಡ ಜನರಿಗೆ ಗೆಣಸು ಮುಖ್ಯ ಆಹಾರವಾಗಿರುವುದರಿಂದ ಗೆಣಸು ಜಿಲ್ಲೆಯಿಂದ ಹೊರಹೋಗದಂತೆ ನೋಡಬೇಕೆಂದು ಸಮಿತಿಯು ಕಲೆಕ್ಟರರಿಗೆ ಸೂಚಿಸಿತು.

ಕಳ್ಳತನ— ೩೫ ಗೋಣಿ ಅಕ್ಕಿಯನ್ನು ಮಂಗಳೂರಿಂದ ಹಡಗು ತುಂಬಿಸಿ ಹೊರಟಿದ್ದ ಮಚ್ವೆಯನ್ನು ಕೆಳಗೆ ಕೊಂಡು ಹೋಗಿ ತಲ್ಪಾಡಿಯಿಂದ ಹೇರಿದರೆಂದೂ ಬೇರೆ ಕಡೆಗೆ ಒಯ್ದು ಕಳ್ಳ ಸಂತೆಯಲ್ಲಿ ಮಾರುವುದು ಅವರ ಉದ್ದೇಶವಿತ್ತೆಂದೂ ಹೇಳಲಾಗಿದೆ. ಕೆಲ ಜನರ ಮೇಲೆ ಪೋಲೀಸರು ವಾರಂಟು ಹೊರಡಿಸಲು ಆ ಜನರೆಲ್ಲ ಈಗ ಅಡಗಿಕೊಂಡಿರುವರು. ಈ ಕಳ್ಳತನದ ಯತ್ನ ಕಳೆದ ತಿಂಗಳಲ್ಲಿ ನಡೆಯಿತು. ಮಂಗಳೂರು ಸರ್ಕಲ್ ಇನ್ಸ್‌ಪೆಕ್ಟರ್ ಸೀತು ಮಾಧವ ಮೇಹನರು ತನಿಖೆ ನಡೆಸುತ್ತಾರೆ.

ಕಳ್ಳತನದಿಂದ ಅಕ್ಕಿ—ಹೊರಹೋಗದಂತೆ, ತಾಲೂಕಿಂದ ತಾಲೂಕಿಗೂ ನಿಯಮವನ್ನು ಮುಂದು ಹೋಗದಂತೆ, ೧೯೪೫ ಮಾರ್ಚ್ ತಾ. ೩೧ರ ವರೆಗೆ, ಮೂರು ಲೋವರ್ ಡಿವಿಜನಲ್ ಕ್ಲಾರ್ಕರನ್ನೂ, ೧೨ ಪೇದೆಗಳನ್ನೂ, ಚೌಕಿದಾರರನ್ನೂ ಮತ್ತು ೮೧ ಗ್ರಾಮ ಸಿಬ್ಬಂದಿಗಳನ್ನೂ ನೇಮಿಸಲಾಗಿದೆ.

ಚಿಲ್ಲರೆ—ಅಧಿಕವಾಗಿತ್ತೆಂಬ ಕಾರಣದಿಂದ ಕದ್ರಿ ಸೋಡಾ ವ್ಯಾಪಾರಿಗಳೊಬ್ಬರಿಗೆ ಮತ್ತು ಪ್ರೆಡ್ಡಿನ ಅಂಗಡಿಯವರೊಬ್ಬರಿಗೆ ಸ್ಪೆ. ಮ್ಯಾಜಿಸ್ಟ್ರೇಟರಿಂದ ಶಿಕ್ಷೆಯೂ ಜುರುಮಾನೆಯೂ ವಿಧಿಸಲ್ಪಟ್ಟಿತ್ತು. ಜಿಲ್ಲಾ ಜಡ್ಜರಲ್ಲಿ ಇವರು ಅಪೀಲು ಮಾಡಲಾಗಿ, ಈಗ ಎರಡೂ ಮಾಫಿಯಾಗಿವೆ.

ಟಾಪು ಶಿಕ್ಷೆ—ಶ್ರೀ। ಸಣ್ಣಂಗೋಲಿ ಅಚ್ಯುತ ಭಟ್ಟರನ್ನು ಗುಂಡು ಹೊಡೆದು ಕೊಂದ ಆರೋಪದ ಮೇಲೆ ಬಂಧಿಸಲ್ಪಟ್ಟಿದ್ದ ಭಟ್ಟರ ಮಗ ಶ್ರೀ। ಗಣಪತಿ ಭಟ್, ಅವರ ಗೆಳೆಯ ರಾಮನಾಯಕ್ ಮತ್ತು ಮೂವರ ವಿಚಾರಣೆಯು ಮುಕ್ತಾಯವಾಗಿ ಜಿಲ್ಲಾ ಮತ್ತು ಸೆಶನ್ಸ್ ನ್ಯಾಯಾಧೀಶ ಮಿ ಕೋಮನ್ ಅವರು ಮೊದಲಿನ ಇಬ್ಬರು ಆರೋಪಿಗಳನ್ನು ಟಾಪು ಶಿಕ್ಷೆಗೆ ಗುರಿಪಡಿಸಿದರು. ಉಳಿದವರನ್ನು ಬಿಡುಗಡೆ ಮಾಡಿದರು.

ಹೆಂಗಸರ—ಸಹಾಯ ಸೇನೆಗೆ (W A. C.) ಹೆಂಗಸರನ್ನು ಸೇರಿಸಲು ರಿಕ್ರೂಟಿಂಗ್ ಆಫೀಸರ್ ಮತ್ತು ಜೂನಿಯರ್ ಕಮಾಂಡರ್ ಮಿಸೆಸ್ ಇ. ಮೊಸ್ಸಿ ಅವರು ತಾ. ೧೩ರಂದು ಮಂಗಳೂರಿಗೆ ಬಂದು ತಾ. ೧೬ರ ವರೆಗೆ ಸೇನೆ ಸೇರಬಿಚ್ಛಿಸಿದ ಹುಡುಗಿಯರಿಗೆ ಭೇಟಿಕೊಟ್ಟರು.

ಸ್ಥಾನ ಬದ್ಧತೆಯಿಂದ ಬಿಡುಗಡೆ—ಜಿಲ್ಲಾ ಹಿಂದೆ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿದ್ದ ಡಾ। ಯು। ಪಿ। ಮಲ್ಯ ಮತ್ತು ಶ್ರೀ। ಬಿ। ದಾಮೋದರ. ಬಾಳಿಗ ಇವರೂ ಸ್ವಯಂಸೇವಕ ದಳದ ನಾಯಕರಾಗಿದ್ದ ಶ್ರೀ। ರಾಮರಾಯ ಕಿಣಿ ಇವರೂ ತಂಜಾವೂರು ಜೈಲಿನಿಂದ ಮಂಗಳೂರಿಗೆ ಮರಳಿರುವರು. ಇನ್ನೂ ಜಿಲ್ಲೆಯಿಂದ ಹೋಗಿರುವ ಕಾಂಗ್ರೆಸ್ ಮುಖಂಡರು ನಾಲ್ವರು ಮಾತ್ರ. ೧೯೪೨ರ ಅನಂತರ ಸ್ಥಾನಬದ್ಧತೆಯಲ್ಲಿರುವ ಶ್ರೀ. ಎಸ್. ಎನ್. ಹೊಳ್ಳ; ೧೯೪೨ ಅಗಸ್ಟಿನಲ್ಲಿ ಬಂಧಿಸಲ್ಪಟ್ಟ ಶ್ರೀ. ಕೆ. ಆರ್. ಕಾರಂತರು; ಆನಂತರ ಕೈದು ಮಾಡಲ್ಪಟ್ಟ ಶ್ರೀ. ಕೆ. ತಿಮ್ಮಪ್ಪ ಶೆಟ್ಟರು ಮತ್ತು ೧೯೪೨ರ ಆಗಸ್ಟಿನ ಆನಂತರ ಮರೆಯಾದ ಶ್ರೀ। ಯು. ಶ್ರೀನಿವಾಸ ಮಲ್ಯರು.

ಹಿಂದೂ ರಿಲೀಜಿಯಸ್ ಎಂಡೋಮೆಂಟ್ ಬೋರ್ಡಿನ ಪ್ರಾಂತಿಕ ಅಧ್ಯಕ್ಷ ರಾ. ಬ. ಚಿನ್ನಯ್ಯ ಪಿಳ್ಳೆಯವರು ಮದ್ರಾಸಿನಿಂದ ಇಲ್ಲಿಗೆ ಬಂದಿರುವರು. ಜಿಲ್ಲಾ ಗೌ. ಸಾ. ಬ್ರಾಹ್ಮಣ ದೇವಸ್ಥಾನಗಳ ಟ್ರಸ್ಟಿಗಳ ಸಂಘದವರನ್ನು ಕಂಡು ಅವರ ಸಂಕಷ್ಟಗಳನ್ನು ಕೇಳಿದರು.

ಪ್ರೆಸ್ ಕೆಲಸಗಾರರಸಂಘದ ಆಶ್ರಯದಲ್ಲಿ ಸಾರ್ವಜನಿಕ ಸಭೆಯೊಂದು ತಾ। ೧೦ನೇ ರವಿವಾರ ಸಂಜೆ ಕೇಂದ್ರ ಮೈದಾನಿನಲ್ಲಿ ಶ್ರೀ। ಕೆ. ಕಾಂತಪ್ಪಶೆಟ್ಟರ ಅಧ್ಯಕ್ಷತೆಯಲ್ಲಿ ಜರಗಿತು. ಸಂಬಳದಲ್ಲಿ ಶೇಕಡ ೫೦ ಹೆಚ್ಚಿಸಬೇಕು; ಶೇಕಡಾ ೧೦೦ ತುಟ್ಟಿಭತ್ತೆ ಕೊಡಬೇಕು ಮತ್ತು ಮೂರು ತಿಂಗಳ ಬೋನಸ್ ಸಿಗಬೇಕು ಎಂಬ ಮತ್ತು ಇತರ ಪ್ರೆಸ್ ಸೌಕರ್ಯಗಳನ್ನು ಕುರಿತಾದ ನಿರ್ಣಯಗಳನ್ನು ಸಭೆಯು ಸ್ವೀಕರಿಸಿತು. ಶ್ರೀ। ಎಸ್. ಎನ್. ಹೊಳ್ಳರ ಬಿಡುಗಡೆಯಾಗಬೇಕೆಂದೂ ಸಭೆಯು ಕೇಳಿತು ಶ್ರೀಯುತರು ಕೆ। ಕೃಷ್ಣರಾವ್, ಬಿ। ವಿ। ಕಕ್ಕಿಲ್ಲಾಯ, ಡಾ। ಒಡೆಯರ್, ಸಿಂಪ್ಸನ್ ಸೋನ್ಸ್, ಚೆರಿಯಪ್ಪ ಮತ್ತು ಎ। ಚಂದ್ರಶೇಖರ ಇವರು ಮಾತನಾಡಿದರು.

ಹುಲಿಬೇಟೆ— ಪುತ್ತೂರು ತಾಲೂಕು ಆಲೆಟ್ಟಿ ಗ್ರಾಮದ ಬಡ್ಡಡ್ಕ ಅಪ್ಪಯ್ಯ ಗೌಡರು ಇದೇ ತಾ. ೧೦ರಂದು ದೊಡ್ಡ ಜಾತಿಯ ಹುಲಿಯನ್ನು ತನ್ನ ಲೈಸನ್ಸು ಕೋವಿಯಿಂದ ಗುಂಡು ಹೊಡೆದು ಕೊಂದಿರುತ್ತಾರೆ

ಶ್ರೀ ನಾರಾಯಣ ಗುರು ಬೇಂಕಿನ ಶಾಖೆಯೊಂದು ತಾ. 1–1–1945 ನೆ ಸೋಮವಾರ ದಿನ ಕೊಯಮುತ್ತೂರಲ್ಲಿ ವೆಂಕಟರಾಮ ಬೀದಿಯಲ್ಲಿರುವ ಆರ್. ಎಸ್. ಪುರಂನಲ್ಲಿ (ಪೋಸ್ಟು ಬಾಕ್ಸ್ ನಂಬ್ರ 167) ತೆರೆಯಲ್ಪಡುವುದು.

ದ. ಕ ಜಿಲ್ಲಾ ಬಂಟರ ಯಾನೆ ನಾಡವರ ಸಂಘದವಾರ್ಷಿಕ ಮಹಾಸಭೆಯು ಇದೇ ತಿಂಗಳ ತಾ. 31ನೆ ಆದಿತ್ಯವಾರ ಬೆಳಗ್ಗೆ ಘಂಟೆ 10ಕ್ಕೆ ಮಂಗಳೂರು ಶ್ರೀ ರಾಮಕೃಷ್ಣ ವಿದ್ಯಾರ್ಥಿ ಭವನದ ವೆಂಕಪ್ಪ ಪೂಂಜ ಸಭಾಸದನದಲ್ಲಿ ಜರಗಲಿರುವುದು. ಅದೇ ದಿನ ಬೆಳಗ್ಗೆ 9ಘಂಟೆಗೆ ಕಾರ್ಯನಿರ್ವಾಹಕ ಕಮಿಟಿಯ ಸಭೆಯೂ ಮಧ್ಯಾಹ್ನ 12 ಘಂಟೆಗೆ ಮಹಾಸಭೆಯಲ್ಲಿ ಆರಿಸಲ್ಪಟ್ಟ ಹೊಸ ಕಾರ್ಯನಿರ್ವಾಹಕ ಕಮಿಟಿಯ ಮೀಟಿಂಗು ಸಹಾ ಜರಗಲಿರುವುದು.

ದೇವರಿಗೆ ಕಡ್ಡಾಯವಾಗಿ ಗೋಧಿ ಕೊಡಬೇಕಾಗಿಲ್ಲ!

ದ. ಕ. ಜಿಲ್ಲೆಯ ಗೌ। ಸಾ। ಬ್ರಾಹ್ಮಣ ದೇವಸ್ಥಾನಗಳ ಮುಕ್ತೇಸರರ ಸಂಘದವರು ವಿನಂತಿ ಮಾಡಿಕೊಂಡದಕ್ಕೆ ಉತ್ತರವಾಗಿ ಕಾಲಂಶವನ್ನು ಗೋಧಿಯ ರೂಪದಲ್ಲಿ ನೀವು ಪಡೆಯಬೇಕಾಗಿ ಒತ್ತಾಯವಿಲ್ಲ. ಎಲ್ಲ ಅಂಶವನ್ನು ಅಕ್ಕಿಯಲ್ಲೇ ತೆಗೆದುಕೊಳ್ಳಬಹುದು ಎಂದು ಪ್ರಾಂತಿಕ ಪೂರೈಕೆ ಕಮಿಷನರರು ತಿಳಿಸಿರುವರು.

ಕೋಳಿ ಕಟ್ಟವನ್ನು ಚೆದರಿಸಿದರು!

ಕೋಳಿಗಳ ಮತ್ತು ಜನರ ಕೈಸೆರೆ

ಕಳೆದ ತಾ13ರಲ್ಲಿ ಕದ್ರಿಯ ಕಂಬಳಗದ್ದೆಯಲ್ಲಿ ವರ್ಷಂಪ್ರತಿ ಕಂಬಳದ ಮರುದಿನ ಕೋಳಿಕಟ್ಟ ನಡೆಯುವಂತೆ ಈ ಸಲವೂ ಕೋಳಿಕಟ್ಟವಾಗುತ್ತಿದ್ದಾಗ ಪೋಲೀಸ್ ಸಬ್ ಇನ್ಸ್‌ಪೆಕ್ಟರ್ ಮಿ। ಕೋಯ ಕುಟ್ಟಿಯವರು ರಿಸರ್ವ್ ಪೋಲೀಸರೊಡನೆ ಬಂದು ಕೋಳಿ ಕಟ್ಟವನ್ನು ಚೆದರಿಸಿದರು. ೩೫ರಷ್ಟು ದಿಯಷ್ಟು ಜನರ ಬಂಧನವಾಯಿತು, ಹಲವು ಕೋಳಿಗಳನ್ನೂ ಪೋಲೀಸರು ಹಿಡಿದರು. ಕೆಲಜನರು ಕೋಳಿಗಳನ್ನು ಬಿಟ್ಟು ಓಡಿ ಹೋದರು. ಜನರು ಕೂಡಿದ್ದು ಗೊಂದಲವಾಗುವಂತಹ ಪರಿಸ್ಥಿತಿಯುಂಟಾಗುತ್ತಿತ್ತು ಎಂಬುದು ಪೋಲೀಸರ ವಿವರಣೆ.

ಮರುದಿನ ನ್ಯಾಯಾಧೀಶರ ಮುಂದ ಬಂಧಿತರು ತರಲ್ಪಟ್ಟಾಗ ಜಾಮೀನಿನ ಮೇಲೆ ಅವರ ಮತ್ತು ಅವರ ಕೋಳಿಗಳ ಬಿಡುಗಡೆಯಾಯಿತು. ವಿಚಾರಣೆ ದಿವಸ ತಮ್ಮ ಕೋಳಿಗಳೊಡನೆ ಕೋರ್ಟಿಗೆ ಬರಬೇಕೆಂದು ಅವರಿಗೆ ಆಜ್ಞೆಯಾಗಿದೆ, ಕೆಲ ಕೋಳಿಗಳ ಯಜಮಾನರು ಯಾರೂ ಮುಂದೆ ಬರಲಿಲ್ಲ. ಅಂತಹ ಕೋಳಿಗಳನ್ನು ಏಲಂ ಮಾಡುವರೆಂದು ಗೊತ್ತಾಗಿದೆ. "ಕೋಳಿಜೂಜು ಕಾನೂನಿಗೆ ವಿರೋಧವಾದುದು" ಎಂದು ಪತ್ರಿಕಾ ಪ್ರತಿನಿಧಿಯೊಡನೆ ಮಂಗಳೂರು ಸರ್ಕಲ್ ಇನ್ಸ್‌ಪೆಕ್ಟರರು ಹೇಳಿದ್ದಾರೆ.

ಕಾಲ್ತಾರಿಯಲ್ಲಿ ನಡೆಯುದುದಕ್ಕೆ ಶಿಕ್ಷೆ

ಹಂಪನಕಟ್ಟ ಬಳಿ ಕಾಲ್ತಾರಿಯಲ್ಲಿ ನಡೆಯುದುದಕ್ಕೆ ೧೯೪ ಮಂದಿಯ ಮೇಲೆ ಮೊಕದ್ದಮೆ ಹೂಡಲಾಗಿದ್ದು, ೧೭೩ ಮಂದಿಗೆ ಜುಲ್ಮಾನೆಯಾಗಿದೆ. ಅವರಲ್ಲಿ ಶೇಕಡ ೮೦ ಮಂದಿ ಹಳ್ಳಿಯವರು.

ಉಡುಪಿ

ಸೋಲ್ಜರ್ಸ್ ಡೇ ಸಮಾರಂಭ—

ಉಡುಪಿ ತಾಲೂಕು ವಾರ್ ಕಮಿಟಿಯ ನೇತೃತ್ವದಲ್ಲಿ ಸೋಲ್ಜರ್ಸ್ ಡೇ ಅರ್ಥಾತ್ ಸಿಪಾಯಿ ದಿನಾಚರಣೆಯು ಕಲ್ಯಾಣಪುರದ ಗೋಪಾಲಪುರ ಮಠದಲ್ಲಿ ಶ್ರೀ ಶೀರೂರು ಮಠದ ಶ್ರೀ ಲಕ್ಷ್ಮೀಂದ್ರತೀರ್ಥ ಶ್ರೀಪಾದಂಗಳವರ ಉದಾರಾಶ್ರಯದಲ್ಲಿ ಇದೇ ತಾ. 15ನೆ ಶುಕ್ರವಾರ ಸಂಜೆ ಅತ್ಯಂತ ವೈಭವದಿಂದ ಜರಗಿತು. ಜಿಲ್ಲಾ ಸುಪರಿಂಟೆಂಡೆಂಟ್ ಒಫ್ ಪೋಲೀಸ್ ಮಿ। ಜಿ। ಜೆ। ಚಾಡ್ವಿಕ್ ಅವರೂ ಸಬ್ ಕಲೆಕ್ಟರ್ ಮಿ। ಡಿ। ಡಿ। ಸಾಥೆಯವರೂ ಸಮಕ್ಷಮಕರಾಗಿ ಈ ಸಮಾರಂಭಕ್ಕೆ ಚಿತ್ತೈಸಿದ್ದರು. ಮಾನ್ಯ ಅತಿಥಿಗಳು ಮಠದ ಕಡೆಯಿಂದ ವಾದ್ಯಘೋಷಗಳಿಂದ ಸ್ವಾಗತೀಕರಿಸಲ್ಪಟ್ಟರು ಸಭಾರಂಭದಲ್ಲಿ ಮಿ। ಆರ್। ಫೆರ್ನಾಂಡೀಸ್, ಹೆಡ್ಮಾಸ್ಟರ್, ಬೋರ್ಡ್ ಹೈಸ್ಕೂಲ್ ಅವರು ಪೂರ್ವಪೀಠಿಕಾ ಭಾಷಣವನ್ನಿತ್ತರು. ತದನಂತರ ರೆ। ಫಾದರ್ ಮಿಲಾಸ್ಸೊ, ರೆ। ಫಾದರ್ ರಬೇಲೊ, ಮಿಸೆಸ್ ಮನೋರಮಾ ಬಾಯಿ ಮತ್ತು ಶ್ರೀ ಬಿ ಶ್ಯಾಮರಾಯ ಸೆಟ್ಟರ ಸಂದರ್ಭೋಚಿತ ಭಾಷಣಗಳಾದುವು. ಆ ಬಳಿಕ ಅಧ್ಯಕ್ಷಸ್ಥಾನವನ್ನು ವಹಿಸಿದ ಶ್ರೀ ಡಿ. ಡಿ. ಸಾಥೆಯವರು ಭಾಷಣವೀಯುತ್ತ ಹೀಗೆಂದರು—"ಈಗಿನ ಘೋರ ಸಂಗ್ರಾಮವು ಇಡೀ ಜಗತ್ತಿಗೇನೇ ಸಂಬಂಧಪಟ್ಟುದಾಗಿದೆ. ಆದುದರಿಂದ ಹಿಂದುಸ್ಥಾನವೂ ಇಲ್ಲಿಯ ಹಿಂದೀಯರೂ ಈ ಯುದ್ಧದಲ್ಲಿ ಸೇರಿಕೆರುವರು. ಆದ ಕಾರಣ ಯುದ್ಧದ ಯಶಸ್ಸಿನ ಬಗ್ಗೆ ನಾವು ಕೈಲಾದಷ್ಟು ಮಂದಿ ಯೋಗ್ಯ ವೀರರನ್ನು ರಣರಂಗಕ್ಕೆ ಕಳುಹಬೇಕಾಗಿದೆ. ನಮ್ಮ ಹಳ್ಳಿ ಹಳ್ಳಿಗಳಿಂದ ಹೋದ ತರುಣರು ಇಂದು ಉತ್ತಮ ತರಗತಿಯ ಸಿಪಾಯಿಗಳಾಗಿ ಕಾದಾಡುತ್ತಿದ್ದಾರೆ. ಆದುದರಿಂದಲೇ ನೀವಾದರೂ ನಿಮ್ಮ ಮಕ್ಕಳನ್ನು ಧೈರ್ಯದಿಂದ ಯುದ್ಧರಂಗಕ್ಕೆ ಕಳುಹಿಸಿರಿ. ಅಲ್ಲಿ ಅವರು ನಮ್ಮ ನಾಡನ್ನು ಕಾಪಾಡಲಿ. ನಿಮ್ಮ ಕುಟುಂಬದ ರಕ್ಷಣೆಯ ಜವಾಬ್ದಾರಿಯನ್ನು ನಾನು ಹೊತ್ತು ವಹಿಸುವೆನು. ಕಂಟ್ರೋಲ್ ವಸ್ತುಗಳಲ್ಲಾ ನಿರಾಯಾಸವಾಗಿ ನಿಮಗೆ ಸಿಕ್ಕುವಂತೆ ನಿಮಗೆ ನೀಲಿಬಣ್ಣದ ಕಾರ್ಡುಗಳನ್ನು ಕೊಡಲಾಗುವುದು. ಮಕ್ಕಳಿಗೆಧರ್ಮಾರ್ಥ ಶಿಕ್ಷಣ, ಉಚಿತ ಸರಕಾರೀ ವೈದ್ಯಕೀಯ ಚಿಕಿತ್ಸೆಯ ಏರ್ಪಾಡು ಮಾಡಲಾಗುವುದು. ನಿಮಗೆ ಕೊಡುವ ನೀಲಿಬಣ್ಣದ ಕಾರ್ಡಿನ ದುರುಪಯೋಗವನ್ನು ಮಾತ್ರ ಮಾಡಕೂಡದು. ಯುದ್ಧಮುಖಕ್ಕೆ ಸೇರಿದ ನಿಮ್ಮ ಮಕ್ಕಳು ಕಳುಹಿಸುವ ಹಣವನ್ನು ದುಂದುಗಾರಿಕೆಯಲ್ಲಿ ಖರ್ಚುಮಾಡದೆ ಸ್ವಲ್ಪ ಅಂಶವನ್ನಾದರೂ ಉಳಿಸಲು ಪ್ರಯತ್ನಿಸಿರಿ. ಆಗಾಗ್ಗೆ ಚಿಂತಾಜನಕ ಕಾಗದ ಪತ್ರಗಳನ್ನು ಬರೆದು ನಿಮ್ಮ ಮಕ್ಕಳು ಮನಸ್ಸು ಊರಿಗೆ ಬರುವಂತೆ ಮಾಡುವ ದುರಭ್ಯಾಸವನ್ನು ಬಿಟ್ಟುಬಿಡಿರಿ. ಯುದ್ಧಾನಂತರ ಪುನರ್ರಚನಾ ಕಾರ್ಯಕ್ರಮದಲ್ಲಿ ಇಂದಿನ ಸಿಪಾಯಿಗಳಿಗೇನೇ ಪ್ರಾಧಾನ್ಯವಿದೆ. ಆದುದರಿಂದ ಹೆಚ್ಚುಹೆಚ್ಚು ಮಂದಿಯನ್ನು ಯುದ್ಧಮುಖಕ್ಕೆ ಕಳುಹಿಸಿರಿ. ತನ್ಮೂಲಕ ಸೈನಿಕ ಶಿಕ್ಷಣ ಪಡೆಯುವಂತಾಗಲಿ. ನಮಗೆ ಡೆಮೊಕ್ರಸಿ ಬೇಕಾದರೂ ನಾವು ಯುದ್ಧಮಾಡಲು ತಯಾರಿರಬೇಕಾಗಿದೆ. ಧರ್ಮಾಧಿಕಾರಿಗಳಾದ ಶ್ರೀ ಶೀರೂರು ಮಠದ ಸ್ವಾಮಿಗಳವರು ಯುದ್ಧ ಪ್ರಯತ್ನದಲ್ಲಿ ನೆರವಾಗಿ ಈ ದಿನ ಯುದ್ಧಮುಖದಲ್ಲಿ ಸೇವಾಬದ್ಧರಾಗಿರುವ ಸಿಪಾಯಿಗಳ ಕುಟುಂಬದವರಿಗೆಲ್ಲಾ (ಸಾಧಾರಣ ೫೦೦ಮಂದಿ) ಇದೇ ಸ್ಥಳದಲ್ಲಿ ಉತ್ಕೃಷ್ಟ ರೀತಿಯ ಊಟದ ವ್ಯವಸ್ಥೆಯನ್ನು ಮಾಡಿದುದಕ್ಕಾಗಿ ಅವರನ್ನು ಅಭಿನಂದಿಸ ಬೇಕು. ಮಾತ್ರವಲ್ಲ,ಇದು ಇತರ ಧರ್ಮಾಧಿಕಾರಿಗಳಿಗೊಂದು ಮಾದರಿಯಾಗಿದೆ". ಶ್ರೀ ಕೊರಡ್ಕಲ್ ಶ್ರೀನಿವಾಸರಾಯರು ಧನ್ಯವಾದಗಳನ್ನರ್ಪಿಸಿದರು.

ಮಕ್ಕಳೊಳಗೆ ಕುಶಲ ಸ್ಪರ್ಧೆಗಳು ನಡೆದು ಗೆದ್ದವರಿಗೆ ಮಿಸೆಸ್। ಜಿ. ಜೆ. ಚಾಡ್ವಿಕರ ಹಸ್ತದಿಂದ ಇನಾಮುಗಳು ಹಂಚಲ್ಪಟ್ಟವು. ತದನಂತರ ನೆರೆದವರಿಗೆಲ್ಲಾ ಘನತರ ಟೀಪಾರ್ಟಿ ಸತ್ಕಾರವಾಯಿತು.

ನೇಶನಲ್ ಸೇವಿಂಗ್ಸ್ ಸಾಕ್ಷ್ಯಕ ಓಟದಲ್ಲಿ—ಉಡುಪಿ ತಾಲೂಕಿನಿಂದ 11 ಮಂತ್ರಿ ದಿಕ್ಕೂಟುಗಳೂ ಒಂದು ಲಕ್ಷ ರೂಪಾಯಿಯೂ ಜಮೆಯಾಗಿರುತ್ತದೆ.

ಯುದ್ಧ ನಿಧಿಯ ಸಹಾಯಾರ್ಥವಾಗಿ ತಾ. 16ನೆ ಶನಿವಾರ ರಾತ್ರೆ ಶ್ರೀ ರಾಮಕೃಷ್ಣ ಥಿಯೇಟರಿನಲ್ಲಿ ಬೆನಿಫಿಟ್ ನಾಟಕ ಪ್ರದರ್ಶನವಾಯಿತು. ಸಾಧಾರಣ ನಾಲ್ಕುಸಾವಿರ ರೂಪಾಯಿ ಜಮೆಯಾಗಿದೆ.

ರೇಶನ್ ಕ್ಷೇತ್ರದಲ್ಲಿ ಪೂರ್ಣ ಪಡಿಯ ಆವಶ್ಯಕತೆ—ಹಳ್ಳಿ ಹಳ್ಳಿಗಳಲ್ಲಿಯು ಗುರುತು ಚೀಟಿನವರಿಗೆ ಆದರಲ್ಲಿ ಸೂಚಿಸಿದ ಮಿತಿಯಷ್ಟು (ಎರಡು ಪಾವು) ಅಕ್ಕಿ ವ ಧಾನ್ಯ ದೊರೆಯುತ್ತಿದೆ. ಸ್ಥಳೀಯ ರೇಶನ್ ಕ್ಷೇತ್ರದಲ್ಲಿ ಮಾತ್ರ ಇನ್ನೂ ೬ ಔಂಶ ಕಡಿತ ಹೋಗಿಲ್ಲ. ಪೂರ್ಣ ರೇಶನ್ ದೊರೆಯದಿದ್ದರೆ ಬಡವರು ಮಧ್ಯಮ ತರಗತಿಯವರು ಒಂದು ಹೊತ್ತು ಬಿಡ್ಡಾಯ ಉಪವಾಸ ಮಾಡಬೇಕಾಗುವ ಸಂಭವವಿದೆ. ಸಂಬಂಧಪಟ್ಟ ಅಧಿಕಾರಿಗಳು ಈಕಡೆ ತೀವ್ರ ಗಮನ ಕೊಡಬೇಕಾಗಿಯದೆ ಎಂದು ಶ್ರೀ। ಯು. ಎಸ್. ಭಟ್ಟರು ತಿಳಿಸುತ್ತಾರೆ.

ಬಸ್ರೂರು—ಇಲ್ಲಿಯ, ತರುಣ ಸಂಗೀತ ನಾಟಕ ಮಂಡಳಿಯವರು ತಾ. 3-12-44 ಮತ್ತು 4-12-44ರಲ್ಲಿ "ಪ್ರೇಮಪಾಶ" ಎಂಬ ಹಾಸ್ಯಮಯ ಸಂಗೀತ ನಾಟಕವನ್ನು ಬಹಳ ಯಶಸ್ವಿಯಾಗಿ ಅಭಿನಯಿಸಿದರು.

ಶ್ರೀ ತಲಕಾವೇರಿ ಯೋಜನೆ ಯನ್ನು ಪುಷ್ಟೀಕರಿಸಿ ಸರ್. ಪಿ. ಎಸ್. ಶಿವಸ್ವಾಮಿ ಐಯ್ಯರರೂ ಸರ್. ಸಿ. ಪಿ. ರಾಮಸ್ವಾಮಿ ಐಯ್ಯರರೂ ತಂತಮ್ಮ ಸದಭಿಪ್ರಾಯವನ್ನಿತ್ತು ಇಂತಹ ಪವಿತ್ರ ಕಾರ್ಯದಲ್ಲಿ ಆಸ್ತಿಕ ಜನರು ಶಕ್ತ್ಯಾನುಸಾರ ನೆರವಾಗಬೇಕಾಗಿ ವಿನಂತಿಸಿರುವರು. ಧನಸಹಾಯ ಮಾಡತಕ್ಕವರು 'ಪ್ರೆಸಿಡೆಂಟ್, ಕೊಡಗು ಸೆಂಟ್ರಲ್ ಕೊಪರೇಟಿವ್ ಬೇಂಕ್ ಲಿಮಿಟೆಡ್, ತಲಕಾವೇರಿಫಂಡ್, ಮಡಿಕೇರಿ, ಕೊಡಗು' ಈ ವಿಳಾಸಕ್ಕೆ ಕಳುಹಿಸಬಹುದು.

ದಿ ಕೆನರಾ ಎಸೋಸಿಯೇಶನ್, ಕೊಲ್ಹಾಪುರ—ಕೊಲ್ಹಾಪುರದ ಲೋ-ಕೋಲೇಜಿನಲ್ಲಿ ತಾ. 3–12–44ರಲ್ಲಿ ಕೆನರಾ ಎಸೋಸಿಯೇಶನಿನ ದ್ವಿತೀಯ ವಾರ್ಷಿಕ ಮಹಾಸಭೆಯು ಕಾಮರ್ಸ್ ಅಧ್ಯಕ್ಷರಾದ ಬಿ. ಟಿ. ಕೋಲೇಜಿನ ಪ್ರೊಫೆಸರ್ ಮಿ। ಮೇಥ್ಯೂರವರ ಅಧ್ಯಕ್ಷತೆಯಲ್ಲಿ ನೆರೆಯಿತು, ಸಭಿಕರ ಭಾಷಣ, ಅಧ್ಯಕ್ಷರ ಹಿತವಾದಗಳಾದ ಮೇಲೆ ಟೀಪಾರ್ಟಿಯಾದ ನಂತರ ಮುಂದಿನ ವರ್ಷದ ವರ್ಕಿಂಗ್ ಕಮಿಟಿಯ ಆಯ್ಕೆಯಾಯಿತು. ಪ್ರೊಫೆಸರ್ ಮಿ। ಮೇಥ್ಯೂ ಅಧ್ಯಕ್ಷರಾಗಿಯೂ ಮ। ರಾ। ದಿವೇಕರ್ ಮತ್ತು ಡಾ। ಆರ್. ಎನ್. ಭಟ್ ಉಪಾಧ್ಯಕ್ಷರುಗಳಾಗಿಯೂ, ಡಾ। ಎಂ. ಎಸ್. ಹೆಗ್ಡೆ ಮತ್ತು ಶ್ರೀ। ರಾ। ಯಸ್. ಗೋಕರ್ಣ (B .S C.) ರನ್ನು ಕಾರ್ಯದರ್ಶಿಗಳಾಗಿಯೂ, ಶ್ರೀ। ರಾ। ಕೋಡ್ಲೆಕೆರೆ(B. S. C); ಶ್ರೀ। ವಿ. ಜಿ. ಭಟ್ (B S. C.); ಪ್ರೊ॥ ರಘುನಾಥರಾವ್ (ಲೋ ಕೋಲೇಜ್), ಶ್ರೀ। ಕೆ. ಜಿ ಹೆಗ್ಡೆ(ಎಕ್ಸ್‌ಚೇಂಜ್ ಬೇಂಕ್ ಮೆನೇಜರ್); ಪ್ರೊ॥ ಕೆ. ಜಿ. ಕುಂದಣಗಾರ (ರಾಜಾರಾಂ ಕೋಲೇಜ್) ಇವರನ್ನು ಮ। ಕ। ಮೆಂಬರರಾಗಿಯೂ, ಎಡ್ವೈಸರರನ್ನಾಗಿಯೂ ಆರಿಸಲಾಯಿತು.

Read & Advertise in
NAVAYUGA

ದಕ್ಷಿಣ ಕನ್ನಡ.

ಜಿಲ್ಲಾ ಆಹಾರ ಸಮಿತಿಗೆ ಶ್ರೀ ಎ. ಬಿ. ಸೆಟ್ಟರ ಸೂಚನೆಗಳು.

ಇದೇ ತಾ. 28-12-44ರಲ್ಲಿ ನೆರೆಯಲಿರುವ ಜಿಲ್ಲಾ ಆಹಾರ ಸಮಿತಿಯ ಮುಂದೆ ಈ ಮುಂದಿನ ಸೂಚನೆಗಳನ್ನು ಪರ್ಯಾಲೋಚನೆಗಿಡುವಂತೆ ಶ್ರೀ ಎ. ಬಿ. ಸೆಟ್ಟರು ಜಿಲ್ಲಾ ಕಲೆಕ್ಟರರೊಡನೆ ವಿಜ್ಞಾಪಿಸಿಕೊಂಡಿದ್ದಾರೆ

(1) ಕಾಡುಮೃಗಗಳಿಂದ ಜಾನುವಾರುಗಳು ಹಾಗೂ ಬೆಳೆಗಳು ನಾಶವಾಗುತ್ತಿರುವ ವಿಚಾರ (ಇತ್ತೀಚೆಗೆ ಕಾಡುಮೃಗಗಳ ಹಾವಳಿ ಹೆಚ್ಚಿದ ಮತ್ತು ರಿಸರ್ವ್ ಕಾಡುಗಳ ಒಳಿಯ ಹಳ್ಳಿಗಳಿಂದ ಕರುಪಶು ಗ್ರಾಮಗಳ ಮೇಲೂ ಈ ಹಾವಳಿಯು ಮೊದಲಿಗಿಂತ ಅಧಿಕಾಧಿಕವಾಗಿ ಹಬ್ಬಿದೆ, ಇತ್ತೀಚೆಗೆ ಕೆಲವು ಹಳ್ಳಿಗಳಲ್ಲಿ ಹುಲಿಗಳು ಮನುಷ್ಯರ ಮೇಲೂ ಬಿದ್ದಿವೆ, ಹಾಗೂ ಎತ್ತಿಕೊಂಡು ಹೋಗಿವೆ. ಜಾನುವಾರು ಮತ್ತು ಬೆಳೆಯ ರಕ್ಷಣೋದ್ದೇಶದಿಂದ ಇಂತಹ ಹಾವಳಿಯನ್ನು ತಪ್ಪಿಸುವದಕ್ಕಾಗಿ ಕೋವಿ ಲೈಸನ್ಸುಗಳನ್ನು ಹೆಚ್ಚಿಸಬೇಕಲ್ಲದೆ, ಉತ್ತಮ ವರ್ಗದ ತೋಟ, ಗನ್ ಪೌಡರ್ ಇತ್ಯಾದಿಗಳನ್ನು ಸಾಕಷ್ಟು ಪರಿಮಾಣದಲ್ಲಿ ಒದಗಿಸಿಕೊಡುವದು ಅಗತ್ಯವಿದೆ

(2) ಇತರ ಜಿಲ್ಲೆಗಳಂತೆಯೇ ಈ ಜಿಲ್ಲೆಯಲ್ಲಿಯೂ ಪ್ರಾಯಸ್ಥರ ರೇಶನಿಂಗ್ ಪರಿಮಾಣವನ್ನು 1 1 ರಾತಲಿಗೇರಿಸುವ ಆವಶ್ಯಕತೆ (ರೇಶನಿಂಗ್ ಪರಿಮಾಣವು ಒಂದು ರಾತ್ಲಿಗಿಂತಲೂ ಕಡಿಮೆಯಿರುವದು ಮಲಬಾರು ಮತ್ತು ದ. ಕನ್ನಡಗಳಲ್ಲಿ ಮಾತ್ರ ಮುಖ್ಯವಾಗಿ ಹಳ್ಳೀ ಮೇಲಿಯ ಗಳ ಮಟ್ಟಿಗೆ ಸಂಪೂರ್ಣ ರೇಶನಿಂಗ್ ಪರಿಮಾಣ ದೊರೆಯುವಂತಾಗಬೇಕು)

(3) ಎಣೆಲ್ ಬೆಳೆಯ ಸಾಗುವಳಿ ಖರ್ಚಿಗಾಗಿ ಮುಂಗಡ ಕೊಡುವ ವಿಚಾರ (ಈ ಉದ್ದೇಶಕ್ಕಾಗಿ ಒಕ್ಕಲುಗಳಿಗೆ ಹೆಚ್ಚಿನ ವರ್ತಕರು ಮೇ ಅಥವಾ ಜೂನ್ ತಿಂಗಳಲ್ಲಿ ಅಕ್ಕೀ ಸಾಲ ಕೊಡುವ ಕ್ರಮವಿದೆ ಆದ್ದರಿಂದ ಮೇಲಿನ ವಿಷಯವನ್ನು ಲಕ್ಷ್ಯದಲ್ಲಿಡಬೇಕೆಂಬುದನ್ನು ಉಚಿತ ಯಿದ ಅಕ್ಕಿಯನ್ನು ನಿರ್ಣಯಿಸುವ ರೆವಿನ್ಯೂ ಅಧಿಕಾರಿಗಳ ಗಮನಕ್ಕೆ ತರತಕ್ಕದ್ದು)

ಅಕ್ಕಿಯನ್ನು ಸ್ಟೋರುಗಳಿಗೊಪ್ಪಿಸಬೇಕಾದ ಮುಂದಿನ ಕಂತಿನ ಅವಧಿಯನ್ನು ಬೆಳೆಸಬೇಕೆಂದು ಕಲೆಕ್ಟರರನ್ನು ಕೇಳಿಕೊಳ್ಳಲಾಗಿದೆ. ಅಕ್ಕಿ ಬಿಡಲೊಳ್ಳುವ ಹೆಚ್ಚಿನ ಡಿಪೋಗಳ ಗೋಡೌನುಗಳಲ್ಲಿ ಸಾಕಷ್ಟು ಸ್ಥಳಾನುಕೂಲತೆಯಿಲ್ಲ. ಮತ್ತು ಕೇಂದ್ರದ ಡಿಪೋಗಳಿಗೆ ಸರಬರಾಯಿ ಮಾಡುವರೆ ಸಾಕಷ್ಟು ಸಂಖ್ಯೆಯಲ್ಲಿ ಲಾರೀಗಳೂ ಅವುಗಳಿಗೆ ದೊರೆಯುವದು ಸಾಧ್ಯವಾಗಿದೆ ಈಗ ಸದ್ಯಕ್ಕೆ ಸಿಗುವಷ್ಟು ಅಕ್ಕಿ ದಾಸ್ತಾನಾಗಿದೆ. ಆದ್ದರಿಂದಲೇ ಮುಂದಿನ ಅವಧಿಯನ್ನು ಹೆಚ್ಚಿಸಬೇಕೆಂದು ಈ ವಿಜ್ಞಾಪನೆ

ದ. ಕ. ಜಿಲ್ಲೆಯಲ್ಲಿ ನೀರಾವರಿಯ ಮುಖ್ಯ ಇಂಜಿನೀಯರರ ಪ್ರವಾಸ

ನದಿಗಳಿಗೆ ಅಣೆಕಟ್ಟು

ಮದ್ರಾಸ್ ಪ್ರಾಂತ್ಯದ ನೀರಾವರಿ ಯೋಜನೆಯ ಮುಖ್ಯ ಇಂಜಿನೀಯರರು ಈ ವಾರ ದಕ್ಷಿಣ ಕನ್ನಡಕ್ಕೆ ಬಂದು ಕುಂಬಳೆಯ ಬಳಿಯ ಶಿರಿಯಾ ಹೊಳೆ ಮಲಯ, ಮಂಗಳೂರಿಗೊಂಭತ್ತು ಮೈಲು ದೂರದಲ್ಲಿ ಗುರುಪುರ ಹೊಳೇ ಕ್ಷೇತ್ರ ಮತ್ತು ಬ್ರಹ್ಮಾವರದ ಬಳಿಯ ಬಾರಕೂರ್ ಭಾಗಗಳನ್ನು ಪರೀಕ್ಷಿಸಿದ್ದಾರೆ. ಶಿರಿಯ. ಹೊಳೆಗೊಂದು ಕಟ್ಟ ಕಟ್ಟುವ ಕಾರ್ಯವನ್ನು ಬರುವ ಜನವರಿಯಿಂದಲೇ ಆರಂಭಿಸುವ ಸಂಭವವಿದೆ. ಬಾಂತರ್ ಮ ಭಾಗದ ದುರಸ್ತಿಯ ಬಗ್ಗೆಯೂ ಇಂಜಿನೀಯರರು ಅನುಕೂಲವಾದ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ ತಾ 16ರಲ್ಲಿ ಶ್ರೀ ಎ. ಬಿ. ಸೆಟ್ಟರು ಅವರನ್ನು ಭೇಟಿಮಾಡಿ ಇನ್ನೂ ಹಲವು ಹೊಳೆಗಳಿಗೆ ಇಂತಹ ಕಟ್ಟ ಕಟ್ಟಲು ಸಾಧ್ಯವಿದೆಯೆಂದೂ, ಆ ಮೂಲಕ 'ಸುಗ್ಗಿ' ಮತ್ತು 'ಕೊಳಕೆ' ಬೆಳೆಗಳಿಗೆ ನೀರೊದಗಿಸಬಹುದೆಂದೂ ಇಂಜಿನೀಯರರಿಗೆ ಮನದಟ್ಟು ಮಾಡಿಸಿದರು. ಬೈಂದೂರಿನ ಶ್ರೀ. ಬಿ. ಸುಬ್ಬಣ್ಣ ಸೆಟ್ಟರ, ಕಾರ್ಕಳದ ಶ್ರೀ ಕೆ. ಎಮ್. ಹೆಗ್ಡೆಯವರ, ಬೈಲೇಶ್ವರದ ಶ್ರೀ ರಾಘವನ್ ನಂಬಿಯಾರರ ಸೂಚನೆಗಳನ್ನೂ ನೀರಾವರಿ ಇಂಜಿನೀಯರರಿಗೊಪ್ಪಿಸಲಾಯಿತು. ಇವುಗಳ ಕುರಿತು ಪರ್ಯಾಲೋಚನೆ ನಡೆಸಲಾಗುವದೆಂದು ಇಂಜಿನೀಯರರು ಆಶ್ವಾಸನೆಯಿತ್ತಿದ್ದಾರೆ ಅದಕ್ಕೆ ಸಮಯ ಹಿಡಿಯಬಹುದು ಈ ಮಧ್ಯೆ ಜನರು ಸಾಧ್ಯವಿದ್ದಲ್ಲೆಲ್ಲಾ ಹೊಳೆಗಳಿಗೆ ತಾತ್ಕಾಲಿಕ ಮಣ್ಣು ಕಟ್ಟಗಳನ್ನು ಪದ್ಧತಿಯಂತೆ ಕಟ್ಟಿಕೊಂಡ ಎರಡನೇ ಮತ್ತು ಮೂರನೇ ಬೆಳೆಗೆ ಆ ನೀರನ್ನು ಉಪಯೋಗಿಸಿಕೊಳ್ಳಬಹುದು ಈ ವಿಧ ಸದಿಂದ ಧಾನ್ಯೋತ್ಪತ್ತಿ ಹೆಚ್ಚಿಸಿಕೊಳ್ಳುವ ರೈತರು ಸ್ವತಃ ಪ್ರಯೋಜನಹೊಂದುವದಷ್ಟೇ ಅಲ್ಲದೆ ಸರಕಾರವೂ ಅಂಥವರಿಗೆ ರಿಯಾಯತಿಗಳನ್ನೀಯಲಿದೆ ಎಂದು ಶ್ರೀ ಎ. ಬಿ. ಸೆಟ್ಟರು ತಿಳಿಸಿರುತ್ತಾರೆ.

ದ. ಕ. ಜಿಲ್ಲೆಯ ಉತ್ತರ ಭಾಗಕ್ಕೆ ನೀರಾವರಿ ಸೌಕರ್ಯ

ಶ್ರೀ. ಬಿ ಸುಬ್ಬಣ್ಣ ಸೆಟ್ಟರ ಯೋಜನೆ.

ಕುಂದಾಪುರ ತಾಲೂಕಿನಲ್ಲಿ ಅಗತ್ಯವಾಗಿ ಕೈಕೊಳ್ಳಬೇಕಾದ ನೀರಾವರಿ ಸೌಕರ್ಯಗಳ ಸವಿವರ ಯೋಜನೆಯೊಂದನ್ನು ಶ್ರೀ ಬಿ. ಸುಬ್ಬಣ್ಣ ಸೆಟ್ಟರು ಮದ್ರಾಸ್ ಸರಕಾರಕ್ಕೆ ಕಳುಹಿಕೊಟ್ಟಿದ್ದಾರೆ ಬಿಜೂರ ಹೊಳೆ, ಹಡಸಾಡು, ಹಡವಿನಗದ್ದೆ ಎತ್ತಾಬೇರು, ಕಲ್ಲಹೊಳೆ ಇವುಗಳಿಗೆ ಕಟ್ಟ ಹಾಕುವದು, ದೊಡ್ಡಕೆರೆ, ಕೊಲ್ಲೂರ ಮಾರ್ಗ, ಹುಂತನ ಕೆರೆ, ಹೇರಳೆ ಇವುಗಳನ್ನು ದುರಸ್ತಿಪಡಿಸುವದು, ಮಾವಿನ ಕಳಿಯ ಎರಡು ಪಕ್ಕದ ಗುಡ್ಡಗಳ ನಡುವೆ ಕಟ್ಟ ಹಾಕಿ ನೀರು ಸಂಗ್ರಹ ಕೋಡಿ ಹೊಳೆಯಿಂದ ವೈದಿಕ ಪುರದ ವರೆಗೆ ಮುಖ್ಯ ಉದ್ದದ ಕಾಲುವೆ ತೋಡುವದು ಇವಿಷ್ಟು ಈ ಯೋಜನೆಯ ಅಂಗಗಳು, ಅಂದಾಜು ವೆಚ್ಚ ಸುಮಾರು ರೂ 3 ಲಕ್ಷ ರೂ ಗಳನ್ನು ವ್ಯಯಿಸಿ ಸರಕಾರವು ಮೇಲಿನ ಯೋಜನೆಯನ್ನು ಕಾರ್ಯಗತಗೊಳಿಸಿದಲ್ಲಿ ಸುಮಾರು 3000 ಎಕ್ರೆ ಗದ್ದೆಗಳಲ್ಲಿ ಎರಡನೇ ಬೆಳೆಯನ್ನೂ ಸುಮಾರ 1000 ಎಕ್ರೆ ಗದ್ದೆಗಳಲ್ಲಿ ಮೂರನೇ ಬೆಳೆಯನ್ನೂ ಮಾಡಲು ನೀರಿನ ಅನುಕೂಲತೆಯುಂಟಾಗುವದು. ಆ ಮೂಲಕ 20000 ಗೋಣಿ ಹೆಚ್ಚಿನ ಅಕ್ಕಿಯು ಜಿಲ್ಲೆಗೆ ದೊರೆಯುವಂತಾಗುವದು 1938ನೇ ಇಸವಿಯಲ್ಲಿ ಕಾಂಗ್ರೆಸ್ ಮಂತ್ರಿಯಾಗಿದ್ದ ಮಿ. ಯಾಕೂಬ್ ಹಸ್ಸೇನರು ಸ್ವತಃ ಹೇರಿಕೆರೆಯನ್ನು ಸಂದರ್ಶಿಸಿ ಅದರ ದುರಸ್ತಿ ಮತ್ತು ವಿಜೂರ ಕಟ್ಟದ ರಚನೆಗೆ ಸಮ್ಮತಿ ವ್ಯಕ್ತಪಡಿಸಿದ್ದರು ಈ ಕಾರ್ಯಗಳಿಗಾಗಿ ಮದ್ರಾಸ್ ಸರಕಾರದ ಅಗಿನ ಸಾರ್ವಜನಿಕ ಖಾತೆಯವರು ರೂ. 1 ಲಕ್ಷದ ಯೋಜನೆ ತಯಾರಿಸಿದ್ದರೆಂದೂ ಅದು ಈಗಲೂ ಸರಕಾರದ ಪರಿಶೀಲನೆಯಲ್ಲಿದೆಯೆಂದೂ ತಿಳಿದು ಬರುತ್ತದೆ, ಚೀಫ್ ಇಂಜಿನೀಯರರು ಮೊನ್ನೆ ಕೊಟ್ಟ ಆಶ್ವಾಸನೆಯ ಪ್ರಕಾರ, ಆಹಾರಾಭಾವದ ಈ ಕಾಲದಲ್ಲಿ ಆದಷ್ಟು ಬೇಗನೇ ಸರಕಾರವು ಇಂತಹ ಉಪಯುಕ್ತ ಕಾರ್ಯ ಕೈಕೊಳ್ಳುವದೆಂದು ಆಶಿಸಲಾಗಿದೆ

ಸರ್ಪವಿಷಹಾರಿ "ತಿರಿಯಕ್" (Tiriyaq)

ಮೊನ್ನೆ ೧ನೆಯ ತಾರೀಖು ಮಂಗಳವಾರ ರಾತ್ರಿ ಸುಮಾರು ೮|| ಗಂಟೆಯ ಹೊತ್ತಿಗೆ ಮಂಜೇಶ್ವರದ ರೈಲ್ವೇ ಸ್ಟೇಶನಿನ ಕೂಲಿಯಾಳು ಶ್ರೀ. ಎನ್ಸ ಎಂಬವನು ಮನೆಗೆ ಮರಳುವಾಗ ಅರ್ಧ ಹಾದಿಯಲ್ಲಿ ಇಗರ್ಜಿಯನ್ನು ದಾಟುತ್ತಲೆ ಪಕ್ಕಸ್ಸು ಒಲವಾದೊಂದು ಕನ್ನಡಿ ಹಾವು (ಉರಿಮಂಡಲ ಹಾವು Russell's Viper) ಅವನ ಎಡಗಾಲಿನ ಒಂದು ಬೆರಳಿನಲ್ಲಿ ಕಚ್ಚಿತು. ಅಲ್ಲಿಂದ ಮುಂದೆ ೧೦ ಮಾರು ನಡೆಯಲಾರದೆ ಅವನು ನಮ್ಮ ಮನೆಯ ಎದುರಿನ ಶ್ರೀ ಸಂಕಮ್ಮ ಎಂಬ ಹೆಂಗಸಿನ ಮನೆಯ ಮುಂದೆ ಒಂದು ಬಿದ್ದು ಅದರ ನೋವನ್ನೂ ಜ್ವಾಲೆಯನ್ನೂ ತಡೆಯಲಾರದೆ ನರಳುತ್ತಲೂ ಹೊರಳುತ್ತಲೂ ಇದ್ದನು ಕೂಡಲೆ ಅವರೂ ಅವರ ಮನೆಯವರೂ ಅವನ ಕಾಲಿನ ವಿಷಾನಕಂಡಕ್ಕೆ ಬಿಗಿಯಾಗಿ ಕಟ್ಟು ಹಾಕಿ ಅವನಿಗೆ ನೀರಕದ ಉತ್ತರಾ ಬೇರನ್ನು ಜಗಿಯಲಿಕ್ಕೆ ಕೊಟ್ಟರು. ಅಷ್ಟರಲ್ಲಿ ಇಲ್ಲಿಯ ಡಾಕ್ಟರ ಶ್ರೀ. ಪಿ. ನಾರಾಯಣರಾಯರು ಅಲ್ಲಿಗೆ ಬಂದು ಆ ಕಚ್ಚಿದ ಭಾಗದಲ್ಲಿ ಅಡ್ಡಕಚ್ಚ ನೀಟಕಚ್ಚ ಗಾಯ ಹಾಕಿ ಅದರ ನಾಲ್ಕೂ ಕಡೆಗೆ ತಿರಿಯಕ್ (Tiriyaq, ಎಂಬ ಔಷಧಿಯ ಇಂಜಕ್ಷನ್ ಕೊಟ್ಟು ಅದರ ಕೆಲವು ಟಬಲೆಟ್ಟುಗಳನ್ನು ಒಂದೊಂದು ಸಾರಿ ನೀರಿನಲ್ಲಿ ಎರಡು ಗೋಡವಾದಲ ೨ ಇಮಿಷಕ್ಕೊಮ್ಮೆ ಅವನಿಗೆ ನಾಲ್ಕು ಸಾರಿ ಕೊಟ್ಟರು ... ಅನಂತರ ನಾಲ್ಕು ಸಾರಿ ... ರವನ್ನು ... ರಾತ್ರಿ ೧೧ ಗಂಟೆಯ ವರೆಗೆ ... ಉಪಾಯ ... ಸೆಯೂ ಕ್ರಮೇಣ ಹತ್ತಿಕೆ ... ಆ ಬಳಿಕ ಕೊಟ್ಟ ಆ ಮದ್ದನ್ನು ಅವನು ... ಮಿಷದ ಮೇಲೆ ಅವನಿಗೆ ಹಾಲು ಕೊಟ್ಟು ಅವನನ್ನು ಮನೆಗೆ ಕೊಂಡು ಹೋಗುವಾಗ ಆ ಕಾಲಿಗೆ ಭಾರವಿತ್ತಲ್ಲದೆ ಬೇರೆ ಇರಲಿಲ್ಲ. ಈಗ ಅವನು ಕ್ಷೇಮ ಹೊಂದಿ ... ಡಾಕ್ಟರರ ಈ ಸ್ತುತ್ಯವಾದ ಉಪಕಾರವನ್ನು ಮರೆಯುವಂತಿಲ್ಲ. ಆ ಮದ್ದಿನ, ಅದರ ಬಣ್ಣ ಹಸುರು, ಅದಕ್ಕೆ ಕಪ್ಪುರದ ತೀಕ್ಷ್ಣವಾದ ವಾಸನೆ ... ಕಡಿದಾಗ ಹಿಡಿಯುತ್ತ ಹೋಗುವಂತೆ ಅವನ ... ಟ್ಟು ಹಚ್ಚು ಕಡಿಯೂ ಆಗುತ್ತಿದ್ದಂತೆ, ಕೊನೆಗೆ ತಾಳಲಾರದೆ ಅದನ್ನವನು ಕಾರುತ್ತಿದ್ದನಂತೆ, ಈ ಮದ್ದು ವಿಷ ಜಂತುಗಳ ಕಡಿತಕ್ಕೆ ದಿವ್ಯ ಔಷಧಿ ಎಂದೇ. ಈ ಕಣ್ಣಾರೆ ಕಂಡ ಅನುಭವದಿಂದ ನನಗೆ ಖಂಡಿತವಾಯಿತು ಇದನ್ನು ಮೊದಲು ನೋಡಿ ... ವರ್ಷದ ಹಿಂದೆ ಅದರೊಂದಿಗೆ ಮದ್ರಾಸಿನ ಪತ್ರಿಕೆಯಿಂದ ಓದಿಯುತ್ತಿದ್ದರೂ ಅದರ ಹೆಸರನ್ನು ನಾನು ಕೇಳಿದುದೂ ಅದರಿಂದ ವಿಷಹರ ... ಕಂಡುದೂ ಇದೇ ಮೊದಲ ... ಜಿಲ್ಲೆಯಲ್ಲಿ ಅದರ ಹೆಸರು ಗೊತ್ತಿದೆಯೊ ಇಲ್ಲವೋ ನಾನರಿಯೆ. ಅದು ... ಹೆಸರು Revd Dr H.J Lorbeer s Tiriyaq or Anti Snake bite. ... ಕಷ್ಟಯ ... ಕೊಳ್ಳುವ ವಿಳಾಸ Revd Dr. H J Lorbeer's Laboratory, P. O. Box No. 63, Lahore (Panjab)

ಗೋವಿಂದ ಪೈ.

ಮಂಜೇಶ್ವರ, ೮ ಡಿಶಂಬರ ೪೪

NOTICE

In the Court of the District Munsiff of Mangalore.

S. C No, 485 of 1944

Between:—

Kateel Sitarama Pai & Co. —Plaintiff

and

G. Povappa Rai - Defendant

To

Defendant G. Povappa Rai, Polal, Near Gurpur, Mangalore

Take notice that the above-named plaintiff has filed the above suit against you for recovery of Rs 138-13-5 being the amount claimed in the plaint with further interest and all costs of the suit and the same is posted to 29-12 1944. You are hereby called upon to appear either in person or by a pleader on the said date in the above court and on your failure the same will be decided in your absence.

Mangalore, | U A Mallya,
... Dec 1944 | Vakil for Plaintiff.

Sri Narayan Guru Bank, Ltd.,

(Incorporated in British India Liability of Members is Limited)

Regd. Head Office HAMPANKATTA,

ಮಂಗಳೂರು.

Branches. UDIPI, & Coondapur

Authorised Capital	**Rs 2,00000**
Issued Capital	**,, 1,00000**
Paid up Capital	**,, 76,600**

The Company has commenced Business by obtaining from the Government the Certificate of Commencement of Business on the 19th August 1944 under the Indian Companies Act 1913

Strong Board of Directors

Consent of the Central Government has been obtained under the Defence of India Rules 94 A "It must be distinctly understood that in giving this consent the Govt. of India does not take any responsibility for the financial soundness of any scheme or for the correctness of any of the statements made or opinion expressed with regard to them" The Government of India has been pleased to extend the period till the 13th January 1945 for the sale of shares

A few shares at par available.

Rs 50/- per share. Re 1 Entrance Fee per share

Hundreds have already taken up shares!

WHY NOT YOU?

Current and Savings Bank Accounts are opened. Fixed Deposits are accepted Enquire for Rules of Business and rates of Interest

MANGALORE JARAPPA,

President & Managing Director.

WANTED.

Estate Writers and Labour Suppliers with from 30 to 100 labourers.

Apply, G V R FREND

Karadykhan Estate,

Sangameswarpet P. O

Kadur District

ಪ್ರಕೃತಿಯ ಪಾಕದಲ್ಲಿ ಇನ್ನೂ ತಪ್ಪುಗಳಾಗುತ್ತಿವೆ. ಹೊಸ ಅಡುಗೆಯವಳ ಕೈ ಮಾಡದಂತೆ ಒಂದರಲ್ಲಿ ಉಪ್ಪು, ಮತ್ತೊಂದರಲ್ಲಿ ಮೆಣಸು, ಮಗದೊಂದರಲ್ಲಿ ಸಿಹಿ- ಹೀಗೆ ಒಂದೊಂದರಲ್ಲಿ ಒಂದೊಂದು ರುಚಿ ಅಧಿಕವೋ ಅಲ್ಪವೋ ಆಗಿಹೋಗುತ್ತಿದೆ. ಒಬ್ಬನಲ್ಲಿ ಸಿಟ್ಟು ಜಾಸ್ತಿ, ಇನ್ನೊಬ್ಬನಿಗೆ ಗುಟ್ಟು ಕಡಿಮೆ, ಮತ್ತೊಬ್ಬನ ಸ್ವಭಾವ ತೀರಾ ಮೃದು, ಬೇರೊಬ್ಬನಲ್ಲಿ ಕಪಟವಧಿಕ; ಓರ್ವ ಅತಿ ಜಾಗರೂಕತೆಯವನಾದರೆ ಮತ್ತೋರ್ವ ತೀರಾ ಗಡಿಬಿಡಿ-ಇಂತಹ ಏರುತಗ್ಗು ಸ್ವಭಾವ ನಿರ್ಮಾಣವೇ ಪ್ರಕೃತಿಯ ಕೈವಾಡ. ಹೀಗೆ 'ಅತಿ'ಯಾದುದ ಸೇರಿಕೊಂಡವರಲ್ಲಿ ನಮ್ಮ ರಾಮಣ್ಣನೊಬ್ಬ. ಅವ 'ಗಡಿಬಿಡಿ' ಮನುಷ್ಯ.

ರಾಮಣ್ಣನ ಗಡಿಬಿಡಿಯು ನನ್ನಂಥವರ ನಡುವೆಯೇ ಇದ್ದುದರಿಂದಾಗಿ ಅದಿಷ್ಟು ಅಜ್ಞಾತವಾಗಿದೆ. ದಿಗ್ದರ್ಶಕ ಶಾಂತಾರಾಮರ ಕಣ್ಣಿಗೆ ಬೀಳಬೇಕಾಗಿತ್ತು— ಎಲ್ಲರೂ ನೋಡಲಾಗುವಂತೆ ಅದು ಚಿತ್ರಪಟ್ಟಲ್ಪಡುತ್ತಿತ್ತೆಂದು ಖಂಡಿತವಾಗಿ ಹೇಳಬಲ್ಲೆ. ಅಷ್ಟೂ ಸೈಡ ಸ್ವಾರಸ್ಯವದರಲ್ಲಿದೆ. ಬೆಳಕು ಬೀಳಲವಕಾಶವಿಲ್ಲದ ದೆಸೆಯಿಂದ ಮೂಲೆಗುಂಪಾಗಿರುವ ಹುಟ್ಟುಕಲೆಗಳಲ್ಲಿ [illegible] ಒಂದು. 'ಕೆಂ [illegible] ರುತ್ತೀಯಾ' 'ನಿನಗೇನು ಜೀವವೇಳೆಯುತ್ತಿದೆಯೇ?' 'ಪಂಚರಂಗೀ ತಾಗಿದವನಂತೆ ಮಾಡುತ್ತಾನಲ್ಲ!'-ಇಂತಹ ಸಂಬೋಧನೆಗಳನ್ನು ರಾಮಣ್ಣ ದಿನಕ್ಕಿಪ್ಪತ್ತು ಬಾರಿ ಪಡೆಯುತ್ತಾನೆ. ರಾಮಣ್ಣನಂತಹ 'ಚುರುಕುತನ' ಎಲ್ಲರಲ್ಲೂ ಇರುತ್ತಿದ್ದರೆ ಲೋಕವೇ ಸರ್ಕಸ್ ರಂಗವಾಗಿ ಹೋಗುತ್ತಿತ್ತು. ಅವ ಎಷ್ಟೋ ಬಾರಿ ಬೈಗಳನ್ನು ಕೇಳಿರಬೇಕು; ಪೆಟ್ಟನ್ನೂ ತಿಂದಿರಬೇಕು. ಯಾತಕೆಂದರೆ ರಾಮಣ್ಣನಲ್ಲಿ ಗಡಿಬಿಡಿಯು ಧಿಕವಿರುವಂತೆ ಸಿಟ್ಟು ಜಾಸ್ತಿಯಿರುವವರು ಬಹಳ ಮಂದಿ

× × ×

ಅವ ನಿಮ್ಮ ಆಫೀಸಿಗೆ ಬರುತಿದ್ದಾನೆ. ನಿಮಗವನ ಪರಿಚಯವಿಲ್ಲವಾದರೆ, ನಿಮ್ಮ ಮಗ್ಗುಲ ಮಾಡಿಗೆ ಬೆಂಕಿ ಹತ್ತಿದುದನ್ನು ತಿಳಿಸಲಿಕ್ಕಾಗಿಯೇ ಬರುತಿದ್ದಾನೆ, ಎಂದು ಭಾವಿಸಬೇಕು! ತೊಡೆ ತೋರುವ ವರೆಗೂ ಕಚ್ಚೆಯ ತುದಿಯನ್ನೆತ್ತಿ ಹಿಡಿದು, ಎಡಬಲ ನೋಡುತ್ತಾ, ಒಳನುಗ್ಗುವಾಗ ಏನೋ ಒಂದು ಉದ್ವೇಗ. ಮುಂಗಡೆಯ ಕುರ್ಚಿಯ[illegible]ಕೊಳ್ಳುವಾಗ ಆಚೀಚೆ ನೋಡಿ, ಅತ್ತಿತ್ತ ಕೈ ತಿರುಗಿಸಿ, ಮೇಜಿನ ಮೇಲಿನ ಶಾಯಿ ದವತಿಯನ್ನು ಉರುಳಿಸದಿದ್ದರೆ ನಿಮ್ಮ ಪುಣ್ಯ. ಅವ ಕುಳಿತುಕೊಳ್ಳುವ ಮೊದಲೇ—ನೀವು ಮನುಷ್ಯರು ಹೌದಾದರೆ ಎದ್ದು ನಿಂತು—ಸಂಗತಿಯೇನೆಂದು ವಿಚಾರಿಸುವಿರಿ. ಸಂಗತಿ ತೀರಾ [illegible], ಆದರೆ ಈ ಸಂ[illegible] ಅಸಮಾನ್ಯವಾದ್ದರಿಂದ ಆ ವಿಪತ್ತಿನಿಂದ ಪಾರಾಗುವಾಗ ನಿಮಗೆ ಸಾಕೋ ಸಾಕನ್ನಿಸಿಬಿಡುತ್ತದೆ. ಅವನ ಕೈಕಾಲುಗಳಿಗೆಲ್ಲಾ ಹಲಗೆ ಕಟ್ಟಿಬಿಡಬೇಕು—ಥಕ್ಕ ಪಕ್ಕನೇ ತಿರುಗಿಸಲಾಗದಂತಹ ನಿರ್ಬಂಧವೇನಾದರೂ ಬೇಕೇಬೇಕು- ಎಂದು ಎಷ್ಟೋ ವೇಳೆ ನನಗನ್ನಿಸಿದೆ.

ಮನುಷ್ಯ—ಮರ್ಜಿ

ಸ್ವಭಾವ ಚಿತ್ರಗಳು.

— ೫. ಗಡಿಬಿಡಿ ರಾಮಣ್ಣ —

(ಚಿತ್ರಿಸುವವರು:—'ಮಟ್ಟಾರ್')

ನಮ್ಮೂರ ಶಾಲಾ ವರ್ಧಂತಿ. ರಾತ್ರಿ 9 ಘಂಟೆಗೆ ಕಾರ್ಯಕ್ರಮವಾರಂಭವಾಗಬೇಕಾಗಿದ್ದಿತು. ಅಧ್ಯಕ್ಷರು ಅಂದು ಆರು ಘಂಟೆಯ ಬಸ್ಸಿಗೇನೇ ಬಂದಿದ್ದರಾದರೂ ಒಂದು ಮೈಲು ದೂರದಲ್ಲಿ ಬಿಡಾರಬಿಟ್ಟಿದ್ದರು. ಅಧ್ಯಕ್ಷ ಮರ್ಜಿನುಸಾರವಾಗಿ 10 ಘಂಟೆಗೆ ನಾವೆಲ್ಲಾ ಒಟ್ಟಾಗಿ ಹೊರಟಿದ್ದೆವು. ಗ್ಯಾಸ್‌ಲೈಟ್ ಹಿಡಿದುಕೊಂಡು ಮುಂಭಾಗದಲ್ಲಿ ಹೆಡ್ಮಾಸ್ತರರು; ಅವರ ಹಿಂದೆ ರಾಮಣ್ಣ; ಬೆನ್ನಲ್ಲಿ ಅಧ್ಯಕ್ಷ ಮಹಾಶಯರು; ಹಿಂಗಡೆ ನಾನು. ಒಂದು ನಸ್ರೂರ ಓಣಿಯಲ್ಲಿ ಮಾತಾಡಿಕೊಂಡು ಹೋಗುತ್ತಿದ್ದೆವು. ಇದ್ದಕ್ಕಿದ್ದಂತೆ ರಾಮಣ್ಣ ಹಿಂಗಡೆಗೆ 'ಹ್ಯಾಂ ಜಂಪ್' ಮಾಡಿಬಿಟ್ಟ; ಅವನ ಕಾಲೊಂದು ಅಧ್ಯಕ್ಷ ಮಹಾಶಯರ ಹೆಗಲ ವರೆಗೆ ಬರುತ್ತಿರುವ ವರೆಗೆ ನಾನು ಕಂಡಿದ್ದೆ. ಅಷ್ಟರಲ್ಲೇ ಹಿಂದೋಡಲು ಹಿಂಭಾಗ ನೋಡಬೇಕಾದ ಅಗತ್ಯ ನನಗೂ [illegible]..., ನಾನು ಆ ಮೇಲೆ ನೋಡಿದುದು ಅಧ್ಯಕ್ಷರು ಮತ್ತು ರಾಮಣ್ಣ ಜತೆ ಹಾವುಗಳಂತೆ ಹೆಣೆದುಕೊಂಡಲ್ಲಿಂದಲೇ ನೆಲದಿಂದ ಏಳುತ್ತಿರುವದನ್ನು. ಅಲ್ಲಿಂದಲೂ ರಾಮಣ್ಣ 'ಹಾವು, ಹಾವು!' ಎಂದು ಕೂಗುತ್ತಲೇ ಇದ್ದ. ನಾವೆಲ್ಲಾ ತಕ್ಕಮಟ್ಟಿಗೆ ಸುಧಾರಿಸಿಕೊಂಡು ಲೈಟಿನ ಬೆಳಕಿನಲ್ಲಿ ರಾಮಣ್ಣನ ಹಾವನ್ನು ಕಂಡೆವು- ಅದು ಬೇಲಿಬಿಟ್ಟು ತುಸು ಮುಂಗಡೆಗೆ ಹರಿದಿದ್ದ ಒಂದು ಬಳ್ಳಿ. ಆ ಮೇಲಿನ ನಾಟಕದಲ್ಲಿ ನಾವೆಲ್ಲಾ ಪಾತ್ರವಹಿಸಿ ಬೇಲಿಯ ಬುಡದಲ್ಲಿ ಸಿಕ್ಕಿಕೊಂಡಿದ್ದ ಅಧ್ಯಕ್ಷರ ಮುಂಡಾಸನ್ನು ಹೆಕ್ಕಿಕೊಟ್ಟೆವು. ವರ್ಧಂತ್ಯುತ್ಸವದ ಮಿಕ್ಕ ವಿವಿಧ ವಿನೋದಾವಳಿಗಳಲ್ಲಾವುದೂ ನನಗಿಷ್ಟು ರುಚಿಸಲಿಲ್ಲ.

ಒಮ್ಮೆ ನಾವು ನಾಲ್ಕಾರು ಮಂದಿ ಕುಳಿತುಕೊಂಡು ಚರ್ಚೆಗಾರಂಭಿಸಿದ್ದೆವು. ನಮ್ಮೊಳಗೆ, ಊರ ಪಂಚಾಯತಿಕೆ ಹಾರಿಸುವಷ್ಟೇ ಮಿತ್ರತ್ವವಿದ್ದಿತು ಹೊರತು ಮನೇವಾರ್ತೆಗಿಳಿಯುವಷ್ಟು ಮನೋ ಸಂಬಂಧವಿರಲಿಲ್ಲ. ಆ ಮಾತು, ಈ ಮಾತು ಮುಗಿದು, ರಾಮಣ್ಣ ಪ್ರವೇಶಿಸುವ ಹೊತ್ತಿಗೆ ಸರೋಜಿನೀ ದೇವಿಗೆ ಸರಕಾರದಿಂದ ಬಿದ್ದ ಬಾಯ್ಬೀಗ ಬಿಚ್ಚುವಲ್ಲಿಗೆ ಬಂದಿದ್ದೆವು. 'ಇವನೇಕೆ ಇಲ್ಲಿ ಸತ್ತ?' ಎಂದು ನಮ್ಮಲ್ಲಿ ಪ್ರತಿಯೊಬ್ಬನ ಮನಸ್ಸೂ ಪ್ರಶ್ನಿಸುತ್ತಿದ್ದುದರಿಂದ ಅವ ಬಂದಾಗ 'ಏನು ರಾಮಣ್ಣ' ಎಂದವರಿಲ್ಲ. ಅವನಿಗದು ಬೇಕಾಗಿರಲೂ ಇಲ್ಲ. ಈ ಅನಪೇಕ್ಷಿತ ಪ್ರಾಣಿ ಆ ಪಕ್ಕ, ಈ ಪಕ್ಕದವರ ಭುಜಗಳಿಗೊಮ್ಮೊಮ್ಮೆ ಢಿಕ್ಕಿ ಹೊಡೆದು ನಮ್ಮ ನಡುವೆ ತೂರಿಕೊಂಡು ಕುಳಿತ. ನಾವೆಲ್ಲಾ ಧ್ರುವತಪಸ್ವಿನಂತಹ ಧೃತಿಯನ್ನು ಮನಸ್ಸಿನ ಮೇಲೆ ಆವಾಹನೆ ಮಾಡಿಕೊಂಡು, ಅವನ ಇರಸ್ತಿಕೆಯನ್ನೇ ಮರೆತು, ಮಾತು ಮುಂದುವರಿಸಹತ್ತಿದೆವು—"ಅವರು ಸರೋಜಿನಿಯ ಬಾಯಿಗೆ ಬೀಗ ಹಾಕದಿದ್ದರೆ..........."ಆ ಮೇಲಿನ ಸ್ವರ ರಾಮಣ್ಣನದು—"ಬೀಗ ಹಾಕದೆ ಬಿಡುತ್ತಿದ್ದರೆಯೋ-ಅವಳು ಆ ಕಮಲೆ, ಕರುಣನೊಡನೆ ಮೇಳ ಕಟ್ಟುವದನ್ನು ಮನೆ ಮನೆ ಹೇಳಿಬಿಡುತ್ತಿದ್ದಳು!" ನಾವೆಲ್ಲಾ ಒಮ್ಮೆಗೇ ದಂಗುಬಡೆದು ಹೋದೆವು! ನಾವು ಮಾತಾಡುತ್ತಿದ್ದುದು ಸರೋಜಿನಿದೇವಿಗೆ ಸರಕಾರ ಹಾಕಿದ್ದ ಭಾಷಣ ಪ್ರತಿಬಂಧದ ವಿಷಯವನ್ನು. ರಾಮಣ್ಣ ಎತ್ತಿಕೊಂಡಾಡಿದುದು, ಆಚೆಮನೆಯ ಸರೋಜಿನಿಗೆ ಅವಳ ಗಂಡ ದಾಮೋದರ ಹಾಕಿದ ಬೆದರಿಕೆಯನ್ನು. 'ಕರುಣನೊಡನೆ ಮೇಳಕಟ್ಟುವ ಕಮಲೆ' ಎಂದರೆ ದಾಮೋದರನ ತಂಗಿ. ಅಲ್ಲಿದ್ದವರಲ್ಲಿ ದಾಮೋದರನೂ ಒಬ್ಬ. ಏನು ಮಾಡಲಿ- ಮಾತು ಹೊರಬಿದ್ದಾಗಿದೆ. ನಮ್ಮೆಲ್ಲರ ದೃಷ್ಟಿಗಳೂ ಒಮ್ಮೆ ದಾಮೋದರನ ಮುಖದ ಮೇಲೆ ಬಿದ್ದುವು; ಅಲ್ಲಿಯೊಂದು ಕಪ್ಪು ಕತ್ತಲೆ ಕಂಡಂತಾಯಿತು. ದಾಮು ಪಿಟ್ಟೆನ್ನಲಿಲ್ಲ. ರಾಮಣ್ಣನಿಗೂ ದಾಮುವಿನ ಪರಿಚಯವಿದ್ದಿತು. ಮುಖದಿದಿರು ಇಂತಹ ಮಾತೆತ್ತಿದವನ ಹಲ್ಲುದುರಿಸಿ ಬಿಡುವ ಮನುಷ್ಯ ಅವ ಎಂದು ನಮ್ಮಂತೆ ಅವನಿಗೂ ಗೊತ್ತಿದ್ದದ್ದೇ. ಆದರೆ ಗಡಿಬಿಡಿಯಿಂದ ಎಲ್ಲವನ್ನೂ ಮರೆತು ಮಾತಾಡಿ ಆಗಿದೆ. ದಾಮುವಿಗೂ ಗೊತ್ತು, ತಾನು ಕೆನ್ನೆಗೆರಡು ಏರಿಸಿದರೆ ರಾಮಣ್ಣ ಇನ್ನಷ್ಟು ಗಡಿಬಿಡಿಗೊಳುತ್ತಾನೆ. ನೆಗೆದುಹಾರಿ ರಂಪಾಟವೆಬ್ಬಿಸಿ, ಊರನ್ನೇ ಒಟ್ಟು ಮಾಡಿ ಸಂಗತಿಯನ್ನೆಲ್ಲಾ ಕಾರುತ್ತಾನೆ. ಆದ್ದರಿಂದ ಅವ ಅಪಮಾನವನ್ನೂ ಸಿಟ್ಟನ್ನೂ ಒಟ್ಟೊಟ್ಟಿಗೆ ನುಂಗಿಕೊಂಡ. ನಾವು ಒಬ್ಬೊಬ್ಬರೊಂದೊಂದು ನೆಪ ತೆಗೆದು ಅಲ್ಲಿಂದ ಕಾಲು ಕಿತ್ತೆವು.

Navabharat Book Depot Udipi. South India. Navabharat Book Depot. Udipi. South India

ನೋಡಿದರೆ ಬಿಡದಿರುವ ಕೆಲವು ಪುಸ್ತಕಗಳು

	ರೂ. ಆ.	ಮೂರು ಪ್ರಹಸನಗಳು	0-14	ವೀರಭೂಮಿ	0 2
ಸುಲಭದಲ್ಲಿ ಇಂಗ್ಲಿಷ್	1-4	ಸ್ವತಂತ್ರ ಜೀವನೋಪಾಯ	0-3	ವತ್ಸಲಾ	0 8
ಯುವಕರಿಗೆ ಮತ್ತು ವಯಸ್ಕರಿಗೆ		ಪುರುಷವಧು	0-4	● ಕವಿತೆಗಳು.	
ಸುಲಭವಾಗಿ ಇಂಗ್ಲಿಷನ್ನು ಅನ್ಯ		ಹೆಂಡ್ತಿ ಗಂಡನಾದರೆ	0-4	ಕಾವ್ಯಸಾಮ್ರಾಜ್ಯ	0-12
ಸಹಾಯವಿಲ್ಲದೆ ಕಲಿಸುವ ಇಂಗ್ಲಿ		● ಕತೆಗಳು		ಮುಗುಳು	0-3
ಷ್ ಸ್ವಯಂಬೋಧಿನಿ.		ನಗೆನೋಟಗಳು	0-14	ಶ್ರೀಮುಖ	1-0
● ನಾಟಕಗಳು		ಅನ್ನದೇವರು		ಪುರಂದರದಾಸರ ಕೀರ್ತನೆ	1-0
ಪ್ರೇಮವಿಜಯ	0-12	ಮತ್ತು ಇತರ ಕಥೆಗಳು	1-0	ಭಗವದ್ಗೀತಾ (ಮೂಲ-	
ದೇಶಭಕ್ತ	1-4	ಭಾರತೀಯ ಕತೆಗಳು	0-14	ಸಿಲ್ಕ್ ಬೈಂಡು)	1-4
ವ್ಯಭಿಚಾರಿಣಿ ಯಾರು	0-12	ನಂದಾದೀಪ	0-10	● ಇತರ ಪುಸ್ತಕಗಳು	
ಕುಶಲವ	0-5	ನಾಡಕತೆಗಳು	0-3	ಮುಂದಿನ ದೇವರು	0-3
ಸಂಶಯ ಪಿಶಾಚಿ	0-8	ಕಂಡೂಕಾಣದ ನೋಟಗಳು	0-8	ರಾಷ್ಟ್ರಸಭೆಯ ಇತಿಹಾಸ	2-8
ರಂಗಭೂಮಿ	0-8	ನಾರೀಹೃದಯ	0-14	ಬಾಲವಾಙ್ಮಯ	0-3
ಪ್ರತಾಪ	1-12	ಅಂತರಂಗದ ಕತೆಗಳು	0-10	ಮಿತಸಂತತಿ	0-8
ಧರ್ಮಸಂಕಟ	0-4	ಪ್ರೇಮಪ್ರವಾಹ	0-6	ನಕ್ಷಯಜ್ಞಾನ	0-8
ಆರೋಗ್ಯ ಪ್ರತಾಪ	0-12	ಆಹುತಿ ಇತ್ಯಾದಿ ಕತೆಗಳು	0-12	ಪಾಪಪೂರಿತ ಪಲ್ಯಂಗಗಳು	1-8
ಪಂಚಾರತಿ	0-6	ಲೋಪಾಮುದ್ರೆ	0-6	ಚಿಗುರು	0 6
ಪ್ರತೀಕಾರ	0-6	● ಕಾದಂಬರಿಗಳು			
ಸೇವಾಪಥ	0-8	ಸನ್ಯಾಸಿಯ ಸೋಗಿನಲ್ಲಿ	0-8	ಗೀತೆಯ ಕೈಗನ್ನಡಿ	0-12

ನವಭಾರತ ಪುಸ್ತಕ ಭಂಡಾರ, ರಿಜಿಸ್ಟರ್ಡ್ ಪಬ್ಲಿಷರ್ಸ್, ಉಡುಪಿ. ದ. ಕ.

ಮತ್ತೊಂದು ಬಾರಿ; ರಾಮಣ್ಣ ರಮಣಿಯೊಂದಿಗೆ ರಾತ್ರಿ 'ಶೋ' ನೋಡಲು ಹೊರಟಿದ್ದ. ಸಿನೆಮಾ ನೋಡುವವರು ಸಿಗರೇಟ್ ಎಳೆಯದಾಗುವದಿಲ್ಲ. ನಮ್ಮ ನಗರಸಭೆಯ ಕಟ್ಟಳೆಗಳು ಆ ಭಾಗದಲ್ಲೇಕೊ ಕಟ್ಟುನಿಟ್ಟಾಗಿ ಜಾರಿಗೆ ಬಂದಿದ್ದುದರಿಂದ ಅಂಗಡೀ ಸಾಲುಗಳು ರಸ್ತೆ ಬಿಟ್ಟು ಎರಡು ಮಾರು ದೂರದಲ್ಲಿದ್ದುವು. ರಾಮಣ್ಣ ಸಿಗರೇಟ್ ತೆಗೆದುಕೊಳ್ಳಲು ಹೋದ; ಅವ ಬರುವ ವರೆಗೆಂದು ರಮಣಿ ರಸ್ತೆಯಲ್ಲೇ ನಿಂತಳು. ಅವ ಹೋದ ಅಂಗಡಿಯಲ್ಲಿ ಸಿಗರೇಟ್ ಇರಲಿಲ್ಲ. ಮತ್ತೊಂದು ಅಂಗಡಿಯಲ್ಲಿ ಕೇಳಿದ; ಕೇಳುತ್ತಾ ಕೇಳುತ್ತಾ ಸಿಗರೇಟ್ ದೊರೆಯಬೇಕಾದರೆ ಅವ ಇನ್ನೊಂದು ತುದಿಯ ಅಂಗಡಿಗೆ ಬರಬೇಕಾಯಿತು. ಗಂಡ ಎಲ್ಲಿ ಹೋದರೂ ತಾನಿದ್ದಲ್ಲಿಗೇ ಹಿಂದೆಬರುತ್ತಾನೆ ಎಂಬ ವಾಡಿಕೆ ಬಲದಿಂದಲೋ, ಗೆಳತಿಯರು ಸಿಕ್ಕಿ ಮಾತಾಡಿ ನಿಂತುದರಿಂದಲೂ ರಮಣಿ ನಿಂತಲ್ಲೇ ಇದ್ದಳು. ಆದರೆ ರಾಮಣ್ಣನಿಗೆ ಗಡಿಬಿಡಿಯಲ್ಲಿ ಇದು ಮರವೆಯಾಗಿತ್ತು. ಅವ ಹತ್ತಿಪ್ಪತ್ತು ಮಾರು ದೂರದ ಆ ಅಂಗಡಿ ಪಕ್ಕದಲ್ಲೇ ರಸ್ತೆ ಹಿಡಿದ. ಆಗ ದಪ್ಪ ಕೆಂಪಂಚಿನ ಹಳದೀ ಸೀರೆಯ 'ಫೇಶನ್'ಕಾಲ. ರಾಮಣ್ಣನ ಧರ್ಮಾಂಗಿಯಿಂದಾರಂಭಿಸಿ ದಾಮಣ್ಣನ ರಂಗಿಣಿಯ ವರೆಗಿನ ಎಲ್ಲಾ ಯುವತಿಯರೂ ಅದನ್ನೇ ಉಡುತ್ತಿದ್ದರು. ರಸ್ತೆ ಹಿಡಿದ ರಾಮಣ್ಣ ಅಲ್ಲಿಯೇ ರಮಣಿಯನ್ನು ಕೂಡಿಕೊಂಡ- ಸರಸವಾಡುತ್ತಾ ಮೈಗೆ ಮೈ ತಾಗುವ ವರೆಗೂ ಸಮೀಪಿಸುತ್ತಾ ನಡೆದ; ಅವಳು ದೂರ ಸರಿದು ಬೇಗಬೇಗ ಹೆಜ್ಜೆಯಿಡುತ್ತಿರುವದನ್ನು ಕಂಡು "ಅವಸರವೇನೇ? ಫಸ್ಟ್ ಶೋ ಇನ್ನೂ ಬಿಟ್ಟಿಲ್ಲ. ಇಗೋ ಬೀಡ" ಎಂದು ಕೈಮುಂದೆ ಮಾಡಿದವನೇ ಹಿಂದೆ ಹಾರಿದ. ಅಷ್ಟರಲ್ಲಿ ಬೇಗ ಬೇಗ ಹೆಜ್ಜೆಯಿಟ್ಟು ರಾಮಣ್ಣನ ರಮಣಿಯೂ ಅಲ್ಲಿ ಬಂದು ಸೇರಿದ್ದರಿಂದ ಬಚಾವಾದ. ರಾಮಣ್ಣನ ಗಡಿಬಿಡಿ ಮತ್ತು ಆ ಹೊಸಬಳ ಕೆಂಪಂಚಿನ ಸೀರೆ ಮಾಡಿ ಹಾಕಿದ ಅಜ್ಞಾತ ಸ್ನೇಹವಿದು!

ರಾಮಣ್ಣನ ದಿನಚರಿಯಲ್ಲಿ ಇಂತಹ ಒಂದೋ ಎರಡೋ 'ಗಮ್ಮತ್'ತಪ್ಪಿದ್ದಲ್ಲ. ಇಷ್ಟೊಂದು ಅಪಭ್ರಂಶ, ಅಡ್ಡಾದಿಡ್ಡಿ, ಬಿಡಿಮೇಲು ಜಂತುವೊಂದನ್ನು ನಾನು ಬೇರೆ ನೋಡಿಲ್ಲ. ವಿರಾಮವು ಬೇಸರವಾದಾಗಲೆಲ್ಲಾ ಕೆಲವರು. ಈ ತಟಪಟ ಹನಿಯಪ್ಪನನ್ನು ಕರೆಯುವದಿದೆ.

ಬರುವ ವಾರ—**ಹಾಡಿಯ ಗಂಗಮ್ಮ**

ಉಪವಾಸದಿದಿರು ಉಪಾಯ

(೨ನೇ ಪುಟದಿಂದ ಮುಂದುವರಿದುದು).

ಕೋಣೆಯೊಂದರಲ್ಲಿ ಡಾಕ್ಟರರೊಟ್ಟಾದರು. ಗುಪ್ತ ಯೋಚನೆ ನಡೆಸಿದರು.

ಒಂಭತ್ತನೇ ದಿನದಿಂದ ಪ್ರಜ್ಞೆಯಿಲ್ಲದ ಗಾಂಧಿಜೀಗೊಂದು ಸ್ಪೆಶ್ಯಲ್ ಇಂಜೆಕ್ಶನ್ ಕೊಡಲಾಗುತ್ತಿದೆ ಕಿತ್ತಳೇ ಹಣ್ಣಿನ ರಸವಲ್ಲ,-ಕೇವಲ ಇಂಜೆಕ್ಶನ್. ಆಹಾರವಲ್ಲ, ಔಷಧ.

ಡಾಕ್ಟರರಿಗೆಷ್ಟು ಗೊತ್ತಿದೆ? ಆರೋಗ್ಯ ಪರೀಕ್ಷಿಸಿಯಾರು—ಆತ್ಮಪರೀಕ್ಷೆ ತಿಳಿದೀತೆ? ಎಂಟನೇ ದಿನದ ರಾತ್ರಿಯಲ್ಲಿ ಪೂರ್ತಿ ನಿರಾಶೆಪಟ್ಟಿದ್ದ ಡಾಕ್ಟರರೆಲ್ಲಾ ದಂಗು ಬಡಿಯುವಂತೆ ಒಂಭತ್ತನೇ ದಿನದಿಂದ ಮಹಾತ್ಮರ ಪ್ರಕೃತಿ ತುಸು ಸುಧಾರಿಸದಂತಿದೆ. ಮೊದಲು ಬಾಪುಜೀ ಫಲಾಹಾರ ಮಾಡುತ್ತಿದ್ದ ಹೊತ್ತಿನಲ್ಲಿ ಈಗ ಇಂಜೆಕ್ಶನ್ ಪಡೆಯುತ್ತಿರುವದನ್ನು ಕಂಡೂ ಕಂಪಿಸದಿರುವ ದೇಶ ಭಾರತ! ದುರ್ದೈವಿ. ಮಹಾತ್ಮರೋ—ಅವರು ಆತ್ಮಬಲದಿಂದ ಇನ್ನೂ ಬದುಕಿದ್ದಾರೆ ದೇಶ ಸ್ವಾತಂತ್ರ್ಯವನ್ನು ಕಂಡೇ ಕಣ್ಮುಚ್ಚುವವರೆಗೂ ಬದುಕಲಿದ್ದಾರೆ.

ಬಾಪುಜೀ ಪ್ರಾಣ, ಭಾರತದಲ್ಲಿ ಧಾನ್ಯ—ಇವೆರಡೂ ಉಳಿಯುತ್ತಾ ಹೋಗಿವೆ!

* * * *

ಪಾರ್ಲಿಮೆಂಟಿನಲ್ಲಿ ಮಿ. ಸೋರೆನ್ಸನರು "ಗಾಂಧಿಯವರ ಆಸೆಯನ್ನು ಸರಕಾರವು ಪೂರ್ತಿ ಬಿಟ್ಟಿದೆಯೆ?"-ಎಂದು ಪ್ರಶ್ನಿಸಿದಾಗ ಇಡೀ ಸಭೆಯೊಮ್ಮೆ ಗಂಭೀರವಾಯಿತು.! ಅಮೆರಿಯವರೂ ಗಭೀರತೆಯಲ್ಲೇ ಇದ್ದರು ಹೊರತು ಉತ್ತರಿಸಲಿಲ್ಲ.

"ಅವರು ಆತ್ಮ ತನ್ನ ಬಲದಿಂದಲೇ ಈ ತನಕ ಉಳಿದಿದ್ದಾರೆ, ಎಂಬುದು ಮಿ. ಅಮೆರಿಯವರಿಗೆ ತಿಳಿದಿದೆಯೆ?" ಮತ್ತೊಮ್ಮೆ.

ಅಮೆರಿಯ ತುಟಿಯಲುಗಾಡಿದುದು ಕಂಡುಬಂತು. "ಅವರು ಇಂಜಕ್ಶನಿನ ಬಲದಿಂದ ಉಳಿದಿದ್ದಾರೆ ಎಂಬುದು ತಿಳಿದಿದೆ"

"ಅಂದರೆ ಮಿ. ಅಮೆರಿಯವರ ಅಭಿಪ್ರಾಯವೇನು?"

"ಅದು ಆಹಾರಸತ್ವ ಸೇರಿರುವ ಇಂಜಕ್ಶನಾಗಿಂಬೇಕು"

"ಮಿಲಿಯಾವಧಿ ಭಾರತೀಯರು ಗಾಂಧಿಯವರ ಮೇಲಿನ ಭಕ್ತಿಯಿಂದ ಉಪವಾಸಮಾಡುತ್ತಿರುವಾಗ ಇಂತಹ ಮಹಾ ಆರೋಪವಮಾಡುವ ಮಿ. ಅಮೆರಿಯವರು ತನ್ನ ಜವಾಬ್ದಾರಿಯರಿತಿರುವರೆ?" ರೋಷದ ಪ್ರಶ್ನೆ.

ಉತ್ತರವಿಲ್ಲ.

ಕನ್ಸರ್ವೇಟಿವ್ ಸದಸ್ಯ ಮಿ. ಪ್ರೊ. ಎಂಪಾಯರರು ಪ್ರಶ್ನಿಸಿದರು—"ಗಾಂಧಿಯವರ ಉಪವಾಸದಿಂದಾಗಿ ಮಿಲಿಯಾವ ಮಂದಿ ಆಹಾರಬಿಟ್ಟು ಹಿಂದೂದೇಶದ ಆಹಾರಾಭಾವ ಬಹುಮಟ್ಟಿಗೆ ನಿವಾರಣೆಯಾಗಿ ಹಿತಸಾಧನೆಯಾಗಿರುವದು ನಿಜವೆ?"

ಮಿ. ಅಮೆರಿ "ನಿಜ. ಈಗ ಹಿಂದುಸ್ಥಾನದಲ್ಲಿ ಧಾನ್ಯಗಳ ಉಳಿತಾಯ ಕಂಡುಬರುತ್ತಿದೆ."

ಪ್ರೊ. ಎಂಪಾಯರ್—"ಹಾಗೆ ಉಳಿದ ಧಾನ್ಯಗಳನ್ನು ಆಕ್ರಮಣ ಮುಕ್ತಾಯಗೊಂಡ ಯುರೋಪಿನ ರಾಷ್ಟ್ರಗಳಿಗೆ ಸರಬರಾಯಿ ಪಡಿಸಿ ಅಲ್ಲಿಯ ಆಹಾರಾಭಾವ ನಿವಾರಿಸಲಾಗುವದೆ?"

ಮಿ. ಅಮೆರಿ—"ಈ ವಿಷಯವು ಸರಕಾರದ ಪರ್ಯಾಲೋಚನೆಯಲ್ಲಿದೆ."

ಲಿಬರಲ್ ಸದಸ್ಯ ಮಿ. ಸ್ಲೇವರಿಯವರೆದ್ದು ಕೇಳಿದರು.—"ಯುದ್ಧಪೀಡಿತ ಯುರೋಪಿನ ಜನಾಂಗಗಳಿಗೆ ಮಿಲಿಯಾವಧಿ ಟನ್ನು ಆಹಾರವನ್ನುಳಿಸಿಕೊಟ್ಟ ಗಾಂಧಿಯವನ್ನೂ ಕೊನೆಯ ವರೆಗೆ ಉಳಿಸುವದು ಸರಕಾರದ ಕರ್ತವ್ಯವಾದುದರಿಂದ ಅವರ ಇಂಜಕ್ಶನಿನ ಆಹಾರ ಸತ್ವದ ಅಭಾವವುಂಟಾಗದಂತೆ ನೋಡಲಾಗುವದೆ?"

ಮಿ. ಅಮೆರಿ—"ಅದು ಇಂಡಿಯಾ ಸರಕಾರದ ಜವಾಬ್ದಾರಿ".

ಮಿ. ಸ್ಲೇವರಿ—"ಜರ್ಮನಿಯು ಸಮೇತ ಇಡೀ ಯುರೋಪಿಗೆ ಆಹಾರ ಸರಬರಾಯಿ ಮಾಡುವ ಹೊಣೆಯು ಸದ್ಯದಲ್ಲೇ ಬ್ರಿಟಿಷ್ ಸರಕಾರದ ಮೇಲೆ ಬೀಳಲಿರುವದರಿಂದ, ಈಗಿನದಕ್ಕಿಂತ ಇಮ್ಮಡಿ ಆಹಾರವನ್ನು ಹಿಂದುಸ್ಥಾನವು ಉಳಿಸಿ ಕೊಡುವ ಅಗತ್ಯವಿಲ್ಲವೆ? ಇದು ಸರಕಾರದ ನಿರೀಕ್ಷೆಯಲ್ಲಿದೆಯೆ?"

ಮಿ. ಅಮೆರಿ—"ಹಾಗಾಗುವದೆಂಬ ನಿರೀಕ್ಷೆಯಿದೆ. ಎಷ್ಟೇ ಭಿನ್ನಾಭಿಪ್ರಾಯವಿದ್ದರೂ ಈ ತನಕ ಗಾಂಧಿಯವರನ್ನು ಅನುಕರಿಸಿದ ಪಂಡಿತ ನೆಹರುಗಳೂ ಈ ಬಾರಿ ತನ್ನ ನಾಯಕನ ಮೇಲ್ಪಂಗ್ತಿಯನ್ನು ಅನುಕರಿಸಿ ಹಿಂದುಸ್ಥಾನದಲ್ಲಿ ಆಹಾರ ಉಳಿತಾಯವೇರುವಂತೆ ಮಾಡುವರೆಂದು ನಂಬಲಾಗಿದೆ"!

ನೀವು..

ನಿಮ್ಮ ಧನ..

ಮತ್ತು ನಿಮ್ಮ ಭವಿಷ್ಯತ್ತು

"ನನ್ನ ಧನ, ನನ್ನದು. ಅದನ್ನು ನನ್ನ ಮನಸ್ಸು ಬಂದಂತೆ ಏಕೆ ವೆಚ್ಚಮಾಡ ಕೂಡದು?" ಎಂಬದಾಗಿ ನೀವು ಕೇಳಬಹುದು. ನಿಮ್ಮ ಹಣವನ್ನು ನಿಮ್ಮ ಮನಬಂದಂತೆ ನೀವು ಧಾರಾಳವಾಗಿ ಖರ್ಚುಮಾಡಲು ಯಾರೂ ಅಡ್ಡಿಮಾಡುವಹಾಗಿಲ್ಲ—ಆದರೆ, ನೀವು ಶ್ರಮಪಟ್ಟು, ಎದೆಯರಕ್ತವನ್ನು ಬಸಿದು, ಆ ಹಣವನ್ನು ಸಂಪಾದಿಸಿದ್ದೇ ಆದರೆ, ಅದನ್ನು ನಿರರ್ಥಕವಾಗಿ ಚೆಲ್ಲಿಬಿಡಲು, ನೀವು ಎಂದಿಗೂ ಸಮ್ಮತಿಸಲಾರಿರಿ. ಆದರೆ, ಪ್ರತಿಯೊಂದುಸಲ ಅನವಶ್ಯಕವಾದ ಪದಾರ್ಥಗಳಿಗೆ ಮಿತಿಮೀರಿದ ಬೆಲೆಯನ್ನು ಕೊಟ್ಟು, ಕೊಂಡುಕೊಳ್ಳುವಾಗೆಲ್ಲಾ, ನೀವು ಹೀಗೆಯೇ ಮಾಡುತ್ತಿರುತ್ತೀರಿ. ಧಾರಣಪಾಸಿಯು ಮಾಮೂಲ್ ಮಟ್ಟಕ್ಕೆ ಇಳಿಯುವವರೆಗೂ, ನೀವು ಕೊಳ್ಳುವುದನ್ನು ನಿಲ್ಲಿಸುವುದು ಉತ್ತಮ.

ಅದೂ ಅಲ್ಲದೆ ಭವಿಷ್ಯತ್ತನ್ನು ಮರೆಯಬೇಡಿ. ಸಂಯುಕ್ತ ರಾಷ್ಟ್ರಪಕ್ಷದವರಿಗೆ ಜಯವುಂಟಾಗಿ, ಭರತದೇಶದ ಶಕ್ತಿ ಮತ್ತು ಸ್ವಾಭಾವಿಕ ಸಂಪತ್ತು, ಶಾಂತಕಾಲದಲ್ಲಿ ನಡಿಸಬಹುದಾದ ಉದ್ಯೋಗಗಳಲ್ಲಿ ಉಪಯೋಗಿಸಲು ಅವಕಾಶವಾಗುತ್ತದೆ. ಆಗ ಭರತಖಂಡದ ಪುರೋಭಿವೃದ್ಧಿಗಾಗಿ ಮಾಡುವ ಏರ್ಪಾಟುಗಳಿಗೆ, ಎಷ್ಟು ಬಂಡವಾಳ ದೊರೆತರೂ ಇನ್ನೂ ಬೇಕಾಗುವುದು. ಆದುದರಿಂದ ಈಗ ಎಷ್ಟೆಷ್ಟು ಮಟ್ಟಿಗೆ ನೀವು ಹಣವನ್ನು ಉಳಿಸುವಿರೋ, ಅಷ್ಟಷ್ಟು ಮಟ್ಟಿಗೆ, ನಿಮ್ಮ ಭವಿಷ್ಯತ್ಸಂಪತ್ತೆಂಬ ಕಟ್ಟಡದ ತಳಹದಿಯು ಬಲಪಡುವುದು.

ಹಣವನ್ನು ಕೈಲಾದ ಮಟ್ಟಿಗೂ

ಉಳಿಸಿರಿ

ಉಳಿಸಿದ್ದನ್ನು ವಿವೇಕಮಾರ್ಗಗಳಲ್ಲಿ ವಿನಿಯೋಗಿಸಿರಿ.

★ ಇನಷೂರೆನ್ಸ್, ಗವರ್ನಮೆಂಟ್ ಲೋನುಗಳು ನ್ಯಾಷನಲ್ ಸರ್ಟಿಫಿಕೇಟುಗಳು, ಪೋಸ್ಟಾಫೀಸ್ ಸೇವಿಂಗ್ಸ್ ಬೇಂಕುಗಳು, ಸೇವಿಂಗ್ಸ್ ಬೇಂಕು ಖಾತೆಗಳು, ಕೋ ಆಪರೇಟಿವ್ ಸೊಸೈಟಿಗಳು, ಇವುಗಳು ಧನ ವಿನಿಯೋಗಕ್ಕೆ ಉತ್ತಮಮಾರ್ಗಗಳು. ಇವುಗಳಲ್ಲಿ ಹಾಕಿದ ಬಂಡವಾಳವು ಭದ್ರವಾಗಿರುವುದಲ್ಲದೆ, ನಿಮಗೆ ನ್ಯಾಯವಾದ ಬಡ್ಡಿಯೂ ದೊರೆಯುವುದು.

ಇದು ರಾಷ್ಟ್ರೀಯ ಯುದ್ಧಮುಖವು ಭಾರತೀಯರ ಸಮಕ್ಷಮದಲ್ಲಿ ಮಾಡುವ ಅರಿಕೆ.

AAA 1116 KN.

The Pangal Nayak Bank Limited.

(Incorporated in 1920.)

Registered Office Court Road, UDIPI.

Branches at— Udipi, Mangalore, Katapadi, Kanhangad, Kinnigoli and Nileshwar, South Canara District

Discounting of demand and short term negotiable instruments for approved parties, granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms acceptance of Fixed, Current, Savings Bank and Cumulative deposits and every other type of up-to-date Banking service is at the disposal of all the sections of the discreet public

For business proper please enquire at any one of our Offices.

15th April 1944

ಗನೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ,....ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಜೇರು ಇಳಿದಿದ್ದರೆ, ಉರುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ,ಕುಂಬಳಕಾಯಿ,ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೆಸ್. ಪತ್ರವ್ಯವಹಾರ ಮಾಡತಕ್ಕ ವಾಲಕರ ವಿಳಾಸ.

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ, ಗದಗ.

Ayurveda Oushadalaya GADAG.

The best preventive in epidemics of CHOLERA

"BHUVANENDRA" CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' ಚಂದ್ರಮಸ್

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೊಡನಿರತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ ೪ರಿಂದ ೮ಬೊಟ್ಟು, ಸಣ್ಣ ಮಕ್ಕಳಿಗೆ ೧ರಿಂದ೨ಬೊಟ್ಟು ಅವರ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ. ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ (ಶ್ರೀ) ಅರ್. ಎಸ್. ಶೆಟ್ಟಿ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮಸಿ; ಡಾ. ಕೆ. ಶೇಷಗಿರಿ ಪೈ, L. I. M.; ಡಾ. ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೋ.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)



ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತಿಯ ದೇಹಸ್ಥಿತಿಯನ್ನು ನಿರ್ಧರಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

೮ ಔನ್ಸಿನ ಬಾಟ್ಲಿಗಳು ಹೆಚ್ಚು ಕೆಡದೆ ಅಲ್ಪದಿವಸಗಳಿಗೆ ಬರುವವು. ಅಂದರೆ ಕೇವಲ ೮ ರೂಪಾಯಿಗಳೇ. ಒಂದು ಬಾಣಂತಿತನಕ್ಕೆ ಸಾಕಾಗುವವು. ವಿಶೇಷ ವರ್ತಮಾನಕ್ಕೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ನಂ.3 ಕೊಡಿಯಾಲಬೈಲು, ದ.ಕ

—ಮಕ್ಕಳನ್ನು ಹಡೆಯುವದು ಸಾಕು—

ಅಶಕ್ತ ಸ್ತ್ರೀಯರಿಗೆ

ಬರ್ಥ ಕಂಟ್ರೋಲ

ರೋಗಗ್ರಸ್ತ ಹೆಣ್ಣುಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹಸಿವೀಸಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಸ್ಟ ಚಾರ್ಜು ೧೦ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರು:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ— ದಾನಪ್ಪ ಸಿದ್ದಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಹುಂಬರವಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್ಸ, ಆರ್. ಎಲ್. ಶವಲದಾರ, ಕೆಮಿಸ್ಟ, ಹಾವೇರಿ, ಬ್ಯಾಡಗಿ.

Ayurveda Oushadalaya, GADAG CITY.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ.ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ ೧ರ ದರ ರೂ. 3—8—0.

ಕಸ್ತೂರಿಮಿಶ್ರಿತ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಹೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ ೧ರ ರೂ. 1—12—0.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್, —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಖ್ಯಾತಿ ಸಂಗ್ತಿ ಬರದಲ್ಲಿ ರೋಗಕ್ಕೆ ತಕ್ಕವಾದ ಔಷಧಿ ರವಾನ್ಸಬಹದು. ಉಡುಪಿ ಏಜಂಟರು:— ನವಭಾರತ ಬುಕ್ ಡಿಪೊ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ ಬೆಲೆ ೦—೧೦—೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು.

ಪ್ರೇಮಪ್ರವಾಹವು ಹೇಗೆ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮಪ್ರವಾಹ

ಸ್ವಾರಸ್ಯವಾದ ೫ ಕತೆಗಳ ಸಂಗ್ರಹ ಬೆಲೆ ೦-೬-೦

ಬಹಿರಂಗವಾಗಿ ಅಲ್ಲವಾದರೂ ಅಂತರಂಗವಾಗಿ ನೋಡತಕ್ಕ

ಆರ್ಟ್ ಚಿತ್ರಗಳು

ಹಲವಾರು ಸುಂದರಿಯರ ನೈಜಚಿತ್ರಗಳ ಕಟ್ಟು. ಬೆಲೆ ೦—೬—೦

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಕುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ. ೧—೮—೦

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. ಬೆಲೆ: ೦—೧೨—೦

ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ.

EDITED PRINTED & PUBLISHED BY K. H. SHETTY AT THE NAVAYUGA PRESS, UDIPI, S. INDIA

ವಾರ್ಷಿಕ ಚಂದಾ ರೂ. 4—8—0 ಬಿಡಿ ಸಂಚಿಕೆ 0—1—6.

Estd. 1921 ಸ್ಥಾಪನೆ.

NAVAYUGA

ನವಯುಗ

ವರ್ಷ ೨೪] ಪ್ರತಿ ಗುರುವಾರ ಹೊರಡುವ ರಾಷ್ಟ್ರೀಯ ವಾರಪತ್ರಿಕೆ [Vol. 24
ವಾರ ೧೬] Founder SRI A. B. SHETTY. [No. 16

ಉಡುಪಿ • 28-12-1944 • ಮಂಗಳೂರು.

ದಿ ಜುಪಿಟರ್
ಜನರಲ್ ಇನ್ಶ್ಯೂರೆನ್ಸ್
ಕಂಪೆನಿ, ಲಿ., ಬೊಂಬಾಯಿ.

ವಿಮೆಯಿಳಿಸ ಬೇಕೆ?
ಏಜಂಟರಾಗುವಿರಾ!

–ಹಾಗಾದರೆ ಕೂಡಲೇ–

ಪಿ. ಡಿ. ನಾಯಕ್, ಉಡುಪಿ.
ದಕ್ಷಿಣ ಕನ್ನಡದ ಚೀಫ್ ಏಜೆಂಟ್.

–ಇವರಿಗೆ ಬರೆಯಿರಿ–

1 ಕೋಟಿಗೆ ಮಿಕ್ಕಿ ವ್ಯವಹಾರ!
ಈ ವರುಷವೇ ರಜತೋತ್ಸವ!

The Jupiter General Insurance Company Ltd

ಅಂತರಂಗ

ಉಡುಪಿ.
ಅಖಿಲ ಕರ್ನಾಟಕದ ಹೊಸ
ಮಾದರಿಯ ಸಚಿತ್ರ
ವಿನೋದ ವಾರ ಪತ್ರಿಕೆ.

ವಾರ್ಷಿಕ ಚಂದಾ ರೂ. 4—8—0
ಬಿಡಿ ಪ್ರತಿಗೆ ರೂ. 0—1—6

Transact with

The Vijaya Bank Ltd.

H. O. MANGALORE.

Branches all over the District and in Bombay city,

For all kinds of Banking business

ದಿ ವಿಜಯ ಬೇಂಕ್
ಲಿಮಿಟೆಡ್,
ಹೆಡ್ ಆಫೀಸು: ಮಂಗಳೂರು

ಜಿಲ್ಲೆಯ ಎಲ್ಲಾ ಕಡೆಗಳಲ್ಲಿ ಮತ್ತು ಮುಂಬಾಯಿ ನಗರದಲ್ಲಿ ನಮ್ಮ ಶಾಖೆಗಳು

ಎಲ್ಲಾ ತರದ ಬೇಂಕಿಂಗ್ ವ್ಯವಹಾರಗಳು ನಡೆಸಲ್ಪಡುವುದು

"We are glad to announce that the Canara Bank Ltd., are our Clearing agents at Bombay'

ದಿ ಕೆನರಾ ಬ್ಯಾಂಕ್ ಲಿಮಿಟೆಡ್‌ಯವರು ನಮ್ಮ ವಿಜಯಾ ಬ್ಯಾಂಕಿನ ಕ್ಲಿಯರಿಂಗ್ ಏಜಂಟರಾಗಿರುತ್ತಾರೆಂದು ತಿಳಿಸಲು ಸಂತೋಷಪಡುತ್ತೇವೆ

M. M Bhandary,
Agent Bombay Branch,

Develop the God given "Talents".

"Children are the 'Talents' given to man by the Lord, and unless parents provide for their full development they will not be fit to enter the Kingdom of Heaven," said General Garfield, one of the illustrious Presidents of the United States.

A Children's Endowment Policy will forestall the financial want which often hampers the full development of your children.

THE CANARA MUTUAL ASSURANCE CO., LTD.,
UDIPI (S. India)

REGD

ಅಮೃತಾಂಜನ ತಲೆನೋವು, ಶಿರೋವೇದನೆ, ಉಳುಕು, ಕುತ್ತಿಗೆ, ಭುಜ, ಬೆನ್ನು ವೇದನೆಗಳಿಗೂ ಎದೆನೋವು, ಗಾಯಗಳು ಬಾತು ಕೊಳ್ಳುವುದು, ಚೇಳು ವಿಷದಂತಹ ಬೇನೆ ಪಕ್ಷವಾತ ಮೊದಲಾದ ಎಲ್ಲಾ ರೋಗಗಳಿಗೂ ಸಿದ್ಧ ಔಷಧ, ಹುಳುಕಡ್ಡಿ ಮದ್ದು ಸಹ ನಮ್ಮಲ್ಲಿ ಸಿಕ್ಕುತ್ತದೆ

ಅಮೃತಾಂಜನ ಲಿಮಿಟೆಡ್.
ಮದರಾಸು.
ಬೊಂಬಾಯಿ ಮತ್ತು ಕಲ್ಕತ್ತಾ.

ದಿ ಮೂಲ್ಕಿ ಬೇಂಕ್,
ಲಿಮಿಟೆಡ್.

ಗ್ರಾಮಸ್ಥರ ನಡುವೆ ಸ್ಥಾಪಿತವಾಗಿ 15 ವರ್ಷಗಳಿಂದ ಡಿಪೋಜಿಟುಗಳಿಗೆ ಉತ್ತಮ ದರದ ಬಡ್ಡಿಯನ್ನೂ ಸಾಲಗಳನ್ನು ಕಡಮೆ ದರದ ಬಡ್ಡಿಯಿಂದಲೂ ಕೊಡುತ್ತಾ, ಬೇಂಕಿನ ಎಲ್ಲಾ ತರದ ವಹಿವಾಟುಗಳಿಂದ ಅವರ ಪ್ರಯೋಜನವನ್ನು ಸಾಧಿಸುತ್ತಿರುವುದು.

The Moolky Bank Ltd.,
Moolky, S K.

CO-OPERATION - - - -

Life Assurance is the business based on the idea of mutual co-operation. By diverting a small portion of one's earning for paying premiums, we co-operate for the good of the family and safeguard the education of children.

Let us assist you in taking out a Policy under the plan best suited to you. Write now to:—

KOCHIKAR BROTHERS LTD.
Chief Agents for South India
THE BOMBAY LIFE ASSCE. CO., LTD.
(Estd 1908)
The "Bombay Life" Bldg., UDIPI S. K.

Offices and Agencies throughout South India.

ಕ್ರೌನ್
ರಬ್ಬರ್ ಸ್ಟ್ಯಾಂಪ್ ಕಂಪೆನಿ
18 ಬಲ್ಮಠ ರಸ್ತೆ, ಮಂಗಳೂರು.
ರಬ್ಬರ್ ಮೊಹರು ಸೈನ್ ಬೋರ್ಡ್ ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co.
81 Balmat Road, MANGALORE
Approved firm by the Govt of Mysore. Certified by the Agent of the Govt. of India in Ceylon. ESTD 1906

ವಿದ್ಯಾವಿಷಯಕ ಪ್ರಮುಖ ಮಾಸಪತ್ರಿಕೆ

ಬಾಲಚಂದ್ರ

ಇದೀಗ ಮೂರನೇ ಸಂಪುಟಾರಂಭವಾಗಿದೆ
ವಿದ್ಯಾ ಇಲಾಖೆಗೆ ಸಂಬಂಧಿಸಿದ
ಸರ್ಕ್ಯುಲರುಗಳೂ ಪ್ರಕಟವಾಗುತ್ತವೆ
ವಾರ್ಷಿಕ ಚಂದಾ
ರೂ 1-8-0 ಮಾತ್ರ
ಹೆಚ್ಚಿನ ವಿಚಾರಕ್ಕೆ ಬರೆಯಿರಿ

ಬಾಲಚಂದ್ರ, ಉಡುಪಿ.

☞ ಮುಟ್ಟಾಗುವಿಕೆ ☜

ಹಲತಿಂಗಳಿಂದ ಕಟ್ಟಾಗಿದ್ದರೂ, ಕಷ್ಟದ ಗರ್ಭಧಾರಣ ಅಥವಾ ಇನ್ನಾವ ಕಾರಣವಿದ್ದರೂ—'ಕುಮಾರಿ' (Govt Regd) ನಿಶ್ಚಿತ ನಿರುಪದ್ರವಿ ಒಂದಿನಂತೆಯೇ, ಆಶ್ಚರ್ಯಕರವಾಗಿ, ಕೆಲವೇ ಗಂಟೆಗಳಲ್ಲಿ ಸರಿಯಾಗುವುದು; ಬೇಕಾದಾಗ ಗರ್ಭಧಾರಣೆಯನ್ನು ನಿಲ್ಲಿಸುವುದು; ಸಾವಿರಾರು ಮಂದಿ ತೃಪ್ತರಾಗಿದ್ದಾರೆ! ಬೆಲೆ ರೂ 3/- ಕೈಮೀರಿದ ಕೇಸುಗಳಿಗೆ ರೂ.5, (ವಿ ಪಿ.12 ಆಣೆ ಅಲಾಯಿದ) Mrs P: DEVEE, F. D. S (N) Tollygunge, Calcutta.

ಸ್ಟಾಕಿಸ್ಟ್: ಪೊಪ್ಯುಲರ್ ಸ್ಟೋರ್ಸ್, ಮಂಗಳೂರು.

ENGLISH MADE EASY

ಇಂಗ್ಲಿಷ್ ವಿನಾ ತಿಳಿಯದವರು 'ಸುಲಭದಲ್ಲಿ ಇಂಗ್ಲಿಷ್' ಪುಸ್ತಕದಿಂದ ಸುಲಭವಾಗಿ ತಮ್ಮಷ್ಟಕ್ಕೆ ತಾವೇ ಕಲಿತುಕೊಳ್ಳಬಹುದು.

ಇಂಗ್ಲಿಷ್ ಅಲ್ಪಸ್ವಲ್ಪ ಬರುವವರು ಚೆನ್ನಾಗಿ ಕಲಿತುಕೊಳ್ಳಬಹುದು

ಸುಲಭದಲ್ಲಿ ಇಂಗ್ಲಿಷ್

ಕೊರಡ್ಕಲ್ಲರ ಇಂಗ್ಲಿಷ್ ಸ್ವಯಂಬೋಧಿನಿ.
ವಯಸ್ಕರಿಗೂ ವಿದ್ಯಾರ್ಥಿಗಳಿಗೂ ಅತ್ಯಂತ ಪ್ರಯೋಜನಕಾರಿ

ಬೆಲೆ ಬರೇ ರೂ. 1-4-0 ರೂ 1-8-0ನ್ನು ಮನಿಯಾರ್ಡರು ಮಾಡಿದರೆ 1 ಪ್ರತಿ ಕಳಿಸಲ್ಪಡುತ್ತೆ.

ನವಭಾರತ ಪುಸ್ತಕ ಭಂಡಾರ,
ರಿಜಿಸ್ಟರ್ಡ್ ಪಬ್ಲಿಷರ್ಸ್ ಎಂಡ್ ಬುಕ್ ಸೆಲ್ಲರ್ಸ್,
ಉಡುಪಿ, ದ. ಕ

Decorate your home with
Life-like Oil Painting
of those dear and near to you
M. S Shirale,
MODERN STUDIO,
UDIPI.



ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕಂಚು ಮೊದಲಾದವುಗಳ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ರಖಂ ಆಗಿಯೂ ಚಿಲ್ಲರೆಯಾಗಿಯೂ ದೊರೆಯುತ್ತವೆ.

ಕಲ್ಯಾಣಜಿ ವ್ಯಾಸಾಚಾರ್ಯ,
ರಥಬೀದಿ, ಉಡುಪಿ.

CHAMPAE'S
Snow & Castrex
Sole Distributers for (India.)
Sukhananda Stores
Santhekatte, UDIPI, S. K.

ವಿಚಾರ—ವಿನೋದ

ದೂರದೃಷ್ಟಿಯಿಂದ ನೋಡಿದರೆ

ನಾವೂ ಈ ಯುರೋಪು ಯುದ್ಧದ ಯೋಧರು. ನಮ್ಮ ದೇಶ ನಮ್ಮದಲ್ಲ; ನಮ್ಮ ನಿತ್ಯಾವಶ್ಯಕಗಳು ನಮ್ಮವಲ್ಲ; ನಮ್ಮ ಈಗಿನ ನಿತ್ಯದ ನಿಯಮಗಳಂತೂ ನಮ್ಮವಲ್ಲವೇ ಅಲ್ಲ ನಮ್ಮ ಸ್ವಭಾವ? ಅದರ ಏರಿಳಿತ?—ಇವುಗಳಾದರೂ ನಮ್ಮವುಗಳ ಕ್ಷೀಣವೆ? ಅವುಗಳಲ್ಲಿ ಯುರೋಪು ಯುದ್ಧದಿಂದ ಹುಟ್ಟಿದವುಗಳಿವೆ, ಯುರೋಪು ಯುದ್ಧಕ್ಕೆ ಹುಟ್ಟಿದವುಗಳಿಗೆ ಹುಟ್ಟಿದವುಗಳೂ ಇವೆ!

ಕಾರು, ಬಸ್ಸು, ಲೋರಿಗಳಡಿಯಲ್ಲಾಗುವ ದುರ್ಮರಣಗಳ ವಾರ್ತೆ ಬಾರದ ದಿನವಿಲ್ಲ; ಕಾರಣ—ಡ್ರೈವರರಿಗೀಗ ಟ್ಯಾಂಕು ಸರದಿಯ ಮರ್ಜಿ ಬಂದಿರುವದೊಂದು, ಅಧಿಕಾರಿಗೆ ಸೋಲ್ಜರರ ಹೆಜ್ಜೆಯಾಗಿರುವದಿನ್ನೊಂದು. ವಿಲಕ್ಷಣ ಖೂನಿ ಕೊಲೆಗಳ ಸುದ್ದಿ ಬರುತ್ತಿದೆ—ಇದರ ಹೇತುವೂ ಅದೇ. ಪಶ್ಚಿಮ ರಣರಂಗದ ಸೈನಿಕರ ಪರಾಕ್ರಮವನ್ನು ತಮ್ಮಲ್ಲಿ ಆವಾಹನೆ ಮಾಡಿಕೊಳ್ಳುವವರು ನಮ್ಮವರಡವೆ ಹೆಚ್ಚಿದ್ದಾರೆ. ಉಂಡು ಮೂಸೆ ಹೆಚ್ಚಿದೆ—ಅದು ಹಿಟ್ಲರ್ ಕಡಿತ. ಸಿಗರ್ ಕೊಳವೆಗಳು ಹೆಚ್ಚಿ ಹೋಗಿವೆ—ಅದು ಚರ್ಚಿಲ್ ಹೊಗೆ. ಈಗ 'ಬೋಳು ಕ್ರಾಪ್' ಹೆಚ್ಚಾಗಿದೆ—ಅದು ಸ್ಟಾಲಿನ್ ತಲೆ! ಹೀಗೆ ನಾವೀಗ ಅನುಭವಿಸುತ್ತಿರುವವುಗಳೆಲ್ಲಾ ಅಲ್ಲಿಂದ ಆಮದು ಪಡೆಸಿಕೊಂಡವುಗಳೇ. ಯಾರನ್ನೇ ಆದರೂ ಪರೀಕ್ಷಿಸಿ ನೋಡಿ—ಅವನಲ್ಲಿ ಸ್ಟಾಲಿನನ ಗುಟ್ಟು, ಚರ್ಚಿಲ್ಲರ ದಾರ್ಢ್ಯ, ಚಿಯಾಂಗರ ಶಪಥ, ಮೇಡಮ್ ಕ್ಯೈಶೇಕರ ಗಂಡುಗಲಿತನ, ಮುಸ್ಸೋಲಿನಿಯವರ ಚಾತುರ್ಯ—ಇವುಗಳಲ್ಲಿ ಒಂದಲ್ಲವಾದರಿನ್ನೊಂದು ಗೋಚರಿಸಲೇ ಬೇಕು ಹಾಗಲ್ಲವಾದರೆ ಜಾಪಾನೀ ಸೋಲ್ಜರನ ಚುರುಕು, ಅಮೇರಿಕನ್ ಯೋಧನ ನಗೆತ, ನಾಜೀ ಸೋಲ್ಜರನ ಸಿಟ್ಟು, ಪೋಲಿಶ್ ಸೈನಿಕನ ಮತ್ಸರ—ಇವುಗಳಾದರೂ ಕಾಣಿಸಬೇಕು. ಅದೂ ಇಲ್ಲವೆನ್ನುವಿರಾ? ಚೀನಾ ನಾಗರೀಕನ ಒದ್ದಾಟ, ಬರ್ಲಿನ್ ಪ್ರಜೆಯ ಹೊಟ್ಟೆಯುರಿ, ಪರ್ಲ್‌ಹಾರ್ಬರಿನವರ ಆಲಸ್ಯ, ಗೋಬೆಲ್ಸನ ಚಾಡಿ, ಬ್ರಿಟಿಷ್ ಸುದ್ದಿ ಖಾತೆಯ ಮಿರುಗು,—ಇವುಗಳಾದರೂ ಇದ್ದೇ ಇವೆ. ಈ ಪೈಕಿ ಯಾವುದೂ ಇಲ್ಲವಾದರೆ ಅಂಥವನಲ್ಲಿ ಈ ಕಾಲದ ಹವೆ ಸೇದುವ ಶ್ವಾಸ ನಾಳವೂ ಇಲ್ಲ!

× × ×

ನೀವು ಕೆಲಸಕ್ಕಿಟ್ಟುಕೊಂಡವ ಹೊಣೆಯರಿತ ಮನುಷ್ಯ. ತಪ್ಪು ಮಾಡಲಾರ. ಅವನಿಂದಾಗಿ ನಿಮ್ಮ ಮನೆವಾರ್ತೆ ಸುಗಮವಾಗಿದೆ. ಆದ್ದರಿಂದ ನೀವು ಅವನನ್ನು ರಕ್ಷಕನೆಂಬಂತೆ ಗೌರವಿಸುತ್ತೀರಿ. ಅಂತಹ ಮನುಷ್ಯ ಈಗ ಪರಮಾರಿಯಾಗಿದ್ದಾನೆ. ಯಾವ ಕೆಲಸವನ್ನೂ ಬಾಕಿಯಿಡಲಾರ. ಆದರೆ ನೀವು 'ಗೂ' ಎಂದೊಡನೆ ಅವ 'ಫುರಂಕ್' ಎನ್ನುತ್ತಾನೆ. ಸಿಟ್ಟುಗೊಂಡು 'ಹಾಗೆ ಮಾಡಲು ನಿಮ್ಮನ್ನು ಹೇಳಿದವರಾರು?' ಎಂದು ಯಜಮಾನನ ರೀತಿಯಿಂದ ನೀವೆಲ್ಲಿಯಾದರೂ ಕೇಳಿಬಿಟ್ಟರೆ "ಬೇಕವಾದರೆ ಬಿಟ್ಟುಬಿಡಿ, ನಾನೀಗಲೇ ಹೊರಟೆ" ಎಂದು ಗಂಟುಮೂಟೆ ಕಟ್ಟಿ ನಿಲ್ಲುತ್ತಾನೆ. ನೀವು ಅಲ್ಲೇ ಥಂಡಾಗಿ ಹೋಗುವಿರಿ. "ಸಲುಗೆ ಕೊಟ್ಟುಬಿಟ್ಟೆ, ಸವಾರಿ ಮಾಡಹತ್ತಿದ್ದಾನೆ"—ಎಂದು ನಿಮ್ಮನ್ನು ನೀವೇ ಶಪಿಸಿಕೊಳ್ಳುವಿರಿ. ಆದರೆ, ಹಾಗಲ್ಲ, ನೀವೀಗ ಸ್ಮರಿಸಬೇಕಾದುದು ಚರ್ಚಿಲ್ಲರನ್ನು. ಇದು ಚರ್ಚಿಲ್ ಯುಗ—ಇದು ಚರ್ಚಿಲ್ ಮರ್ಜಿ. ಬ್ರಿಟಿಷ್ ಜನತೆಗೊಗ್ಗದ ಧೋರಣೆ ವಹಿಸಿಯೂ "ಬೇಡವಾದರೆ ನನ್ನನ್ನು ಬಿಟ್ಟುಬಿಡಿ" ಎಂದು ಚರ್ಚಿಲ್ಲರೀತನಕ ಎರಡುಮೂರು ಎದ್ದು ನಿಂತುದಿದೆ. ಮೊನ್ನೆ ತಾನೇ ನಡೆದ ಗ್ರೀಕ್ ಪ್ರಕರಣದ ನೆನಪಿದೆಯಷ್ಟೆ? ಬ್ರಿಟನಿಗಾಗಿ ಇಷ್ಟು ಕೆಲಸ ಮಾಡಿದವನಿಗೆ, ಇಂತಹ ಮುಷ್ಕರ ಹಿಡಿಯುವ ಅಧಿಕಾರವಿದೆ. ನಿಮ್ಮ ಮನೆಯಾಳು ಛೋಟಾ ಚರ್ಚಿಲ್! ಇದು ಯುದ್ಧದಿಂದಾಗಿಯೇ ಹುಟ್ಟಿದ ಸ್ವಭಾವ!

× × ×

ಆವ ಭಿಕ್ಷುಕನಾದರೂ ಈ ಮೊದಲು 'ಪಿರಿಪಿರಿ' ಮನುಷ್ಯನಾಗಿರಲಿಲ್ಲ. "ಅಮ್ಮಾ ಪಡಿ" ಎಂದೊಡನೆ "ಹೋಗೋ ಆಚೆ" ಎಂದುಬಿಟ್ಟರೆ ಹೋಗಿಯೇ ಬಿಡುತ್ತಿದ್ದ. ಈಗೀಗ ಹಾಗಲ್ಲ. ಪಾಪ ಜಿಯೋ ಸೈಯೋ ಗಂಟೆಗೆ ಬೀಳದೆ ಆವ ಕದಲಲಾರ. ಎರಡು ಮಿನಿಟು ತಡವಾದರೆ ಅಲ್ಲಿಯೇ ಕುಳಿತುಕೊಳ್ಳುತ್ತಾನೆ. ಭಿಕ್ಷೆ ಹೊರತು ಬಿಡಿಗಾಸು ಒಡಿಗೆ ಬಂದರೂ ಏಳುವಂತಿಲ್ಲ. ಈ ತರ ಮಾರಿ ಸ್ವಭಾವವೆಲ್ಲಿಂದ ಬಂತು? ಬಂಗಾಳದಿಂದ. ಅಲ್ಲಿ ರಾತ್ರಿಹಗಲು ರಸ್ತೆಯಲ್ಲಿ ಬಿದ್ದು ಮಡಿದವರ ಆತ್ಮಗಳು ಇಲ್ಲಿಯವರಿಗೂ ಪಾಠ ಕಲಿಸಿವೆ. ಇದು ಯುದ್ಧದಿಂದ ಹುಟ್ಟಿದವುಗಳಿಗೆ ಹುಟ್ಟಿದ ಸ್ವಭಾವ

× × ×

ನಿಮ್ಮಿಂದ ತನಗೆ ಬರತಕ್ಕದ್ದಿದೆ ಎಂದು ಅವ ಹೇಳುತ್ತಾ ಇದ್ದ. ಆದರೆ ನಿಮ್ಮ ಲೆಕ್ಕಾಚಾರದಂತೆ ಸಲುವಂತಹದೇನೂ ಇಲ್ಲ. ಹೆಚ್ಚೆಂದರೆ ಏನಾದರೂ ಪಂಚಾಯತಿಕೆಗ ಬಂದಾನು, ಎಂದು ನಿಮ್ಮ ನಿರೀಕ್ಷೆ. ಆವ ದುಡುಕುವ ಮನುಷ್ಯನಲ್ಲ. ಆದರೆ ಇದೇನು! ನಿಮ್ಮ ಮೇಲೆ ರಿಜಿಸ್ಟ್ರಿ ನೋಟೀಸೇ ಬಂದಿದೆ. 'ಈ ನೋಟೀಸು ತಲುಪಿದ ಮೂರು ದಿನದೊಳಗೆ ಅಸ್ಲು ಬಡ್ಡಿ ಸಮೇತ ಪಾವತಿ ಮಾಡದಿದ್ದಲ್ಲಿ ನಿಮ್ಮ ಮೇಲೆ ದಾವಾ ದಾಖಲು ಮಾಡಬೇಕಾಗುವದು' ಎಂಬದು ಹೇಳುತ್ತದೆ. ನಿಮಗಾಶ್ಚರ್ಯವಾಗುವದು ಅವನಿಗಾರೋ ಕಿವಿಯೂದಿರಬೇಕೆಂದು ಸಂದೇಹ ಬರುವದು. ಕಿವಿಯೂದಿದವ ಹಿಟ್ಲರ್! ಇದು 'ಹಿಟ್ಲರ್ ಅಲ್ಟಿಮೇಟಮ್'! ಕಾಲಸ್ಥಿತಿಗೆ ತಕ್ಕಂತೆ ಈ ಮರ್ಜಿಯಲ್ಲಿರುವ ಸ್ಫೂರ್ತಿ ಮತ್ತು ಗಂಡುಗಲಿತನವೂ ಇವನನ್ನೂ ಸೇರಿಕೊಂಡಿತು. ಇದು ಯುದ್ಧಕ್ಕೇನೇ ಹುಟ್ಟಿದ ಸ್ವಭಾವ

× × ×

ನಿಮ್ಮ ದುರದೃಷ್ಟ ಕುಟುಂಬಿಕರ ಮತ್ತು ನಿಮ್ಮ ಹೊಟ್ಟೆ ತುಂಬಿಸಿಕೊಳ್ಳಬೇಕೆಂದು ನೀವು ಬೊಂಬಾಯಿಗೆ ಬಂದವರು ಸಂಸ್ಥೆ, ದೇವಾಲಯ, ಗುಡಿ, ಗೋಪುರಗಳಿಗೆಂದು ವಂತಿಗೆಯೆತ್ತಲು ಬರುವವರೆಂತೂ ಇದ್ದಾರೆ. ಈ ಬಾರಿ ಮತ್ತೊಂದು ಆಶ್ಚರ್ಯ. ಪರಿಂದ ಸಹಾಯ ಯಾಚಿಸುವ ಸ್ವಭಾವವೇ ಇಲ್ಲದ ಊರ ಗೌಡರು "ಊರ ಗರಡಿಯ ಉಂಬಳಿ ಪಡೆಯುವರ ವ್ಯಾಜ್ಯ ನಡಸುವದಕ್ಕಾಗಿ" ವಂತಿಗ ಕೇಳಿಕೊಂಡು ಬಂದಿದ್ದಾರೆ. "ಗೌಡರಿಗೀ ಬುದ್ಧಿ ಕೊಟ್ಟವರು ಗರಡಿಯ ಬೈದರ್ಕಳ" ಎಂದು ಅವರೊಡನೆ ಸರಿವಾಣ ಹಿಡಿದು ಬಂದ 'ಮಹಾಶಿಷ್ಯ'ಯನ್ನುತ್ತಾನೆ. ಆದರೆ ಹಾಗಲ್ಲ. ಈ ಬುದ್ಧಿ ಕೊಟ್ಟವರ ಊರ ತಹಶಿಲ್ದಾರರಾಗಿ ಬೇಕು. ಯುದ್ಧನಿಧಿ ಕೂಡಿಸಲು ತಹಶೀಲ್ದಾರರೇಳುವಾಗ, ಉಂಬಳೀ ವ್ಯಾಜ್ಯದ ಪಂಡು ಮಾಡಲು ಗೌಡರೂ ಎದ್ದರು. ಇದು ಯುದ್ಧಕ್ಕೆ ಹುಟ್ಟಿದುದಕ್ಕೆ ಹುಟ್ಟಿದ ಸ್ವಭಾವ

× × ×

ಮದುವೆ ಮೇಲ್ವಿಚಾರಕ್ಕೆಂದು ನೀವ ವನನ್ನು ಕರದಿದ್ದಿರಿ. ದಿಬ್ಬಣವನ್ನಿದುರ್ಗೊಳ್ಳುವವರಿಂದಾರಂಭಿಸಿ, ಮಾಡಬೇಕಾದಉಪಚಾರಗಳನ್ನೆಲ್ಲಾ ಮಾಡಿಬೀಳ್ಕೊಡುವ ವರೆಗೂ ಬಹಳ ಮೆಹನತ್ತಿನ ಮೇಲ್ವಿಚಾರ ಅವನದು. ಅವನ ಉಪಕಾರವನ್ನು ಸ್ಮರಿಸಬೇಕು. ಅವನಿಗೆ ಯೋಗ್ಯ ಉಡುಗೊರೆಕೊಟ್ಟು ಫರ್ಲಾಂಗು ದೂರದ ವರೆಗೂ ಹೋಗಿ ಬೀಳ್ಕೊಡಬೇಕೆಂದು ನೀವು ನಿಂತಿದ್ದೀರಿ. ಇದರೆ ಇದೇನು? ಅವ ಹೊರಡಲಾರ—ಮದುವೇ ಕಾರ್ಯ ಮುಗಿದರೂ ಮನೇ ಕಾರ್ಯದ ಮೇಲ್ವಿಚಾರಕ್ಕೆ ತೊಡಗಿದ್ದಾನೆ. ನೀವು ಜಿಗುಪ್ಸೆಗೊಳ್ಳುವಿರಿ. ಇದು ದೊಡ್ಡವರ ಮರ್ಜಿಯಲ್ಲ, ಅಲ್ಪ ಸ್ವಭಾವವೆಂದು ಗೊಣಗುವಿರಿ. ಆದರೆ ತನ್ನ ಮರ್ಜಿ ಹೀನವಾದುದೆಂದು ಅವನಿಗನ್ನಿಸುವದಿಲ್ಲ. ಕೆಲ ಯೋಗ್ಯ ಘನತೆಯೆಂಬಂತೆ ಹೆಗ್ಗಳಿಕೆಯಲ್ಲೇ ಇದ್ದಾನೆ. ಇದು ಬ್ರಿಟಿಷರ ಗ್ರೀಸ್ ಧೋರಣೆಯ ಅನುಕರಣೆಯಾಗಿರಬೇಕು——ಯುದ್ಧಕ್ಕೇನೇ ಹುಟ್ಟಿದ ಸ್ವಭಾವ.

ಅಂತೆಯೇ

ನಮ್ಮಲ್ಲಿ ಒತ್ತಿಲು ನುಗ್ಗುವವರ ಕಾಟ ಹೆಚ್ಚಿದುದು ಸಿಗ್‌ಫ್ರೈಡ್ ಕೋಟೆಯ ಕಾಳಗಾನಂತರವೇ.

ಪಂಚಾಯತದಾರರಿಂದ ಆಸ್ತಿ ಪಾಲುಪಟ್ಟಿಯಲ್ಲಾಗುವ ಅನ್ಯಾಯ ಹೆಚ್ಚಲಾರಂಭಿಸಿರುವದು ಪೋಲೆಂಡಿನ ಗಡಿ ಸಮಸ್ಯೆಯನ್ನು ಕಂಡುದರಿಂದಲೇ.

ಕರಾರು ವಿರುದ್ಧ ವ್ಯಾಜ್ಯಗಳು ಹೆಚ್ಚಿರುವದಕ್ಕೆ ರಶ್ಯಾ-ಜರ್ಮನಿ ಒಪ್ಪಂದದ ಪರಿಣಾಮವೇ ಪ್ರೇರಣೆಯಾಗಿರಬಹುದು

ಅರ್ಧ ಹಾದಿ ವರಗೆ ಹೋಗಿ ಬಂದು 'ತಿಳಿಸಿ ಬಂದೆ'ನೆನ್ನುವ ಅರೆಸತ್ಯವಾದಿಗಳ ಸಂಖ್ಯೆ ಹೆಚ್ಚಿದುದು ಬ್ರಿಟಿಷ್ ಪ್ರಕಟಣೆಗಳನ್ನು ಓದಿದ ಮೇಲೇನೋ!

× × ×

ನಮ್ಮಲ್ಲೀಗ ದಾನ್ಯ ಮತ್ತು ಜೀವನೋಪಯೋಗೀ ಸಾಮಾನುಗಳ ಅಭಾವಕ್ಕೆ ಯುದ್ಧವೇ ಕಾರಣವಾಗಿರುವಂತೆ ಅಸತ್ಯ, ಅವಸರ, ಅನ್ಯಾಯಗಳ ಆಧಿಕ್ಯಕ್ಕೂ ಅದೇ ಕಾರಣ. ಇದು ಸಹಜ ಪರಿವರ್ತನೆ. ಇಂಗ್ಲಿಷರು ತಮ್ಮ 'ಫೇಶನ್' ಅನುಕರಿಸುವಂತೆ ಹಿಂದೀಯರ ಮೇಲೆ ಶಾಸನವನ್ನೇನೂ ಹೊರಡಿಸಲಿಲ್ಲ; ನಾವೇ ವ್ಯಾಮೋಹಗೊಂಡು ಅದನ್ನು ಅನುಕರಿಸಿದೆವು. ಈ ಆಕರ್ಷಣೆಗೆ ನಮ್ಮ ಮತ್ತು ಅವರೊಳಗಿರುವ ಅಂತಸ್ತು ವ್ಯತ್ಯಾಸ, ಅಥವಾ ಶಕ್ತಿ ವ್ಯತ್ಯಾಸವೇ ಕಾರಣ. ಹಾರಿಬಂದುದು ತಲೆಯ ಮೇಲೆ ನಿಲ್ಲುತ್ತದೆ, ಅಥವಾ ಅದರ ಛಾಯೆಯಾದರೂ ನಿಲ್ಲುತ್ತದೆ. ಅಂತೆಯೇ ಯುದ್ಧಜನ್ಯ ಸ್ಥಿತಿಮತಿಗಳೆಲ್ಲಾ ಮೇಲ್ಮಟ್ಟದವುಗಳು, ನಿತ್ಯ ಜಗತ್ತಿನ ದೈನಿಕಾಚರಣೆಗೆ ಮಿಕ್ಕಿದವುಗಳು. ಹಾಗೆ ಮೇಲ್ಭಾಗದಲ್ಲಿದ್ದುಕೊಂಡು ಅವು ಒಂದಲ್ಲೊಂದು ರೀತಿಯಿಂದ, ನೆಲ ಹಿಡಿದಿರುವ ನಮ್ಮ ಸ್ವಭಾವ ಪರಿವರ್ತನೆ ಮಾಡಿವೆ. ಇದು ಸ್ಥಿತಿಮತಿ ಸಂಬಂಧ. ದುರ್ಬೀನಿನಿಂದ ನೋಡಿದರೆ ಕಟ್ಟೆ ಹುಣಿ ಕಡಿದಾಟ—ನೆರೆಮನೆಯವರೊಳಗಿನ ವಾಗ್ವಾದ-ಪತ್ನಿಯ ಇದಿರು ಮಾತು-ಎಲ್ಲವುಗಳಲ್ಲಿಯೂ ಯುದ್ಧ ಹುಗಿದಿರುವದು ಕಾಣಿಸೀತು; ಮಾವನ ಬದಲಿಗೆ ಚರ್ಚಿಲ್ಲರನ್ನು—ದಾಯಾದಿಗಳ ಬದಲಿಗೆ ರುಸವೆಲ್ಟರನ್ನು-ಆಚೇ ಮನೆಯ ಖಿಲಾಡಿಗಳ ಬದಲಿಗೆ ಟೋಜೋ, ಮಿಕೇಡೋರನ್ನು ಬೈಯ್ಯುವ ಮನಸಾದೀತು! ಅಂದ ಮೇಲೆ ದುರ್ಗತಿ ತೊಲಗದಿದ್ದರೂ ಈ ದುರಭ್ಯಾಸಗಳು ನಿವಾರಣೆಯಾಗಬಹುದಾದ್ದರಿಂದ 'ಯುದ್ಧಾನಂತರ ಶಾಂತಿಸ್ಥಾಪನೆ' ನಿಜ!

V. H.

MATRIMONIAL.

Wanted a fair Looking house-hold trained Kanarese Brahmin bride bellow 20 years (Widow-entirely no objection) to marry a middle class high caste Madhwa Brahmin youth Apply to:-

X

C/O "Navayuga" Udipi

ANNOUNCEMENT.

We have pleasure to announce that we will shortly be opening branches at:—

COIMBATORE,
ERODE,
MADURA &
SALEM.

A vital link for those in business and trade with the above centres, or others desiring to establish new connections with them, will be provided with the opening of these branches

We extend a hearty invitation to all to avail of the new services and opportunities offered by us

ESTD 1906 **Canara Bank, Limited.**

(Incorporated in British India Liability of members limited).

ಬಿಡಿನುಡಿ

❖

ನಾಳೆ (ತಾ. 29-12-44ನೇ ಶುಕ್ರವಾರ) ಹುಣ್ಣಿಮೆಯಲ್ಲಿ ಚಂದ್ರಗ್ರಹಣವಿಲ್ಲವಾದ್ದರಿಂದ ಧರ್ಮ ಕರ್ಮಗಳಿಗೆ ಲೋಪವಾಡುವ ಆಗತ್ಯವಿಲ್ಲ- ಎಂದೊಬ್ಬ ಪಂಚಾಂಗಕರ್ತರನ್ನುತ್ತಾರೆ.

ಆದಿನ ರಾತ್ರಿ 8¾ ಘಂಟೆಗೆ ಚಂದ್ರನ ¾ರಷ್ಟು ಭಾಗಕ್ಕೆ ಗ್ರಹಣ ಸೋಂಕಲಿದೆ ಎಂದು ಮತ್ತೊಬ್ಬ ಪಂಚಾಂಗಕರ್ತರವಾದ.

ಆ ದಿನ ರಾತ್ರಿ 8¾ಯ ನಂತರ ಚಂದ್ರಗ್ರಹಣವಿರುವದು ಖಂಡಿತವೆಂದು ನಾನೀಗ ಹೇಳಬಲ್ಲೆ.

ನಮ್ಮ ಕವಿಗಳು ಅಸಾಮಾನ್ಯರ ಸೋರೆಕಾಯಿ ಮುಖವನ್ನಾದರೂ 'ಮುಖಚಂದ್ರಮ' ಎಂದು ಕರೆದಿದ್ದಾರೆ:

ಚಂದ್ರಗ್ರಹಣದ ಸ್ಪರ್ಧೆಗಿಳಿದಿರುವ ಈ ಪಂಚಾಂಗಕರ್ತರು ಅಸಾಮಾನ್ಯರೆಂಬುದಂತೂ ನಿರ್ವಿವಾದ.

ಶುಕ್ರವಾರ ರಾತ್ರಿಗೆ ಒಂದೋ ಮೊದಲನೆಯವರ, ಅಥವಾ ಎರಡನೆಯವರ 'ಮುಖ ಚಂದ್ರಮ'ನಿಗೆ ಗ್ರಹಣತಾಗುವದೆಂತೂ ಖಂಡಿತ.

ಆದ್ದರಿಂದ ಆ ರಾತ್ರಿ ಒಂದೋ ಆಕಾಶದ ಕಡೆಗೆ ಇಲ್ಲವೇ ಈ ಪಂಚಾಂಗಕರ್ತರ ಕಡೆಗೆ ಎಲ್ಲರೂ ಕತ್ತು ನೀಡಬೇಕು.

× × ×

"ಸಾಹುಕಾರರಿಗೆಷ್ಟೇ ಎಚ್ಚರಿಕೆ ಕೊಟ್ಟರೂ, ಕೆಲವರು ಕಳ್ಳ ವ್ಯಾಪಾರ ಮತ್ತು ಸುಳ್ಳು ವ್ಯಾಪಾರವನ್ನು ಇನ್ನೂ ಬಿಟ್ಟಿಲ್ಲ. ಇನ್ನು ಮುಂದೆ ಅಂಥವರನ್ನು ಕಠಿಣವಾಗಿ ಶಿಕ್ಷಿಸಲಾಗುವದು'-ಜಿಲ್ಲಾ ಕಮರ್ಶಿಯಲ್ ಟೇಕ್ಸ್ ಆಫೀಸರರ ಎಚ್ಚರಿಕೆ.

ವ್ಯಾಪಾರದಲ್ಲಿ ಲಾಭ-ನಷ್ಟದ ತುಲನೆಯೇ ಮುಖ್ಯ.

ಈ ವ್ಯಾಪಾರದಲ್ಲಿ ಲಾಭ ಯಾವುದರಲ್ಲಿ-ಕಳ್ಳ ವ್ಯಾಪಾರ ನಿಲ್ಲಿಸುವದರಲ್ಲೋ, ಕಠಿಣ ಶಿಕ್ಷೆಯನುಭವಿಸುವದರಲ್ಲೋ?

ಸಾಹುಕಾರರ ಪಾಲಿಗೆ ಕಾಂಚನ ಶಿಕ್ಷೆಯೇ ಕಠಿಣ ಶಿಕ್ಷೆ

ಇದನ್ನು ಅಧಿಕಾರಿಗಳು ಅರಿತಂತಿದೆ; ಸಾಹುಕಾರರಿಗೂ ಗೊತ್ತಿರಬಹುದು.

ಕಳ್ಳ ವ್ಯಾಪಾರ ನಡೆಸಿ ಕಾಂಚನ ಶಿಕ್ಷೆ ಹೊಂದಿದರೆ 'ಉಣ್ಣೆಯ ಲಾಭ ಊರಗಾಸಿಗೆ' ಎಂಬಂತಾಗಬಹುದು.

ನಷ್ಟ ಹೊಂದಬೇಕೆಂದು ವ್ಯಾಪಾರ ಮಾಡುವವರಿಲ್ಲ.

ಆದ್ದರಿಂದ ಇನ್ನಾದರೂ ಕಳ್ಳವ್ಯಾಪಾರದ ಬದಲಿಗೆ ಸಭ್ಯ ವ್ಯಾಪಾರ-ಸುಳ್ಳು ವ್ಯಾಪಾರದ ಸ್ಥಾನದಲ್ಲಿ ಸತ್ಯ ವ್ಯಾಪಾರ ಆರಂಭವಾಗುವದೆಂದು ನಂಬಿಕೆ.

× × ×

ಇದೇ ತಾ. 22ರಲ್ಲಿ ಜರಗಿದ ಉಡುಪಿ ನಗರ ಸಭೆಯ ಅಧಿವೇಶನದಲ್ಲಿ 'ಡಿ. ಓ. ರೂಲ್ಸಿನನುಸಾರವಾಗಿ ಜಟಕಾ ಬಾಡಿಗೆ ದರವನ್ನು ಜಿಲ್ಲಾ ಕಲೆಕ್ಟರರು ನಿಯಂತ್ರಿಸಬೇಕು' ಎಂದು ಕೇಳಿಕೊಳ್ಳಲಾಯಿತು.

'ಇಷ್ಟು ಭಾರವಾದ ನಿರ್ಣಯವನ್ನು ನಮ್ಮ ಕುದುರೆಗಳೆಳೆಯಲಾರವು' ಎಂದು ಜಟಕಾವಾಲಾರು ಮುಷ್ಕರ ಹಿಡಿದರೆ?

ಅಥವಾ 'ಅಗ್ಗದ ಸವಾರಿ' ಎಂದು ಎಲ್ಲರೂ ಜಟಕಾ ಹತ್ತಲಾರಂಭಿಸಿದರೆ?

ದೇಶರಕ್ಷಣಾ ಶಾಸನದಂತೆ ಈ ಸಂಬಂಧದ ನಿಯಂತ್ರಣಗಳೂ ಬರಬೇಕು.

ಪ್ರಥಮತಃ ನಗರ ಸಭೆಯ ಸದಸ್ಯರೆಲ್ಲಾ ಜಟಕಾ ಸವಾರಿಗೆ ಯೋಗ್ಯರು-ಅವರು ಹತ್ತಿದೊಡನೆ ಗಾಡಿ ಹೊಡೆಯಲು ಜಟಕಾವಾಲರು ಬದ್ಧರು ಎಂದಾಗಬೇಕು.

ಜಟಕದ 'ಸೀಟು' ನಗರ ಸಭೆಯ 'ಸೀಟ'ಗೆ ಸಮವೆಂದಾಗಬೇಕು.

ಅರ್ಥಾತ್ ಸದಸ್ಯರಿಲ್ಲದೆ ಸ್ಥಾನಖಾಲಿ ಬಿದ್ದಾಗ ತೆರಿಗೆದಾರರಲ್ಲಿ ಯಾರಾದರೂ ಅದನ್ನೇರಬಹುದು.

ಆಗ ಅದನ್ನು ನಿಯಮಾನುಸಾರ ನಡೆಸುವ ಅಧ್ಯಕ್ಷ ಸ್ಥಾನ ಜಟಕಾವಾಲನದಾಗುತ್ತದೆ.

ಇಂತಹ ಸುವ್ಯವಸ್ಥೆಯಾದರೇನೇ ಸುಗಮ ಪ್ರಯಾಣ.

× × ×

ಅಧಿಕಾರಿಗಳಿಗೆ 'ಸರ್' ಇದ್ದಂತೆ ನಾಗರಿಕರಿಗೆ 'ಶ್ರೀ' ಇದೆ.

ತಮಗೆ 'ಸರ್' ಇಲ್ಲದ ಗುಡ್ ಮೋರ್ನಿಂಗ್ ಕೊಟ್ಟುದಕ್ಕಾಗಿ ಜಿಲ್ಲಾಧಿಕಾರಿಯೊಬ್ಬರು ಓರ್ವ ಬ್ಯಾರಿಸ್ಟರರನ್ನು ಶಿಕ್ಷಿಸಿದುದನ್ನು ಕೇಳಿದ್ದೆವು

ಎಜೆಂಡ ಪತ್ರದಲ್ಲಿ ತಮ್ಮ ಹೆಸರಿನ ಮುಂದೆ 'ಶ್ರೀ' ಸೇರಿಸದಿದ್ದುದಕ್ಕಾಗಿ ಉಡುಪಿ ನಗರ ಸಭೆಯ ಸದಸ್ಯರೊಬ್ಬರು ಆಕ್ಷೇಪವೆತ್ತಿದರೆಂದು ಕೇಳುತ್ತೇನೆ.

'ಶ್ರೀ' ಎಲ್ಲಿ ಹೋಯಿತು ಎಂಬ ಪ್ರಶ್ನೆ ಬಂದಾಗ 'ನೌಕರರ ಪ್ರಮಾದದಿಂದ ತಪ್ಪಿಹೋಯಿತು' ಎಂಬ ಉತ್ತರ ಬಂತು.

ಹೀಗೆ ತಪ್ಪಿಸಿಕೊಂಡ ಎಷ್ಟೋ ಕಾಂಗ್ರೆಸ್ ಪ್ರಮುಖರೀಗ ಸಿಕ್ಕಿದ್ದಾರೆ.

ಕಾಣೆಯಾದ ಅಕ್ಷರಗಳೂ ಪುನಃ ಕಾಣಿಸಿಕೊಳ್ಳಬಲ್ಲುವೆ?

ಹಾಗೆ ಮತ್ತೊಮ್ಮೆ ಸೇರಿಸಿಕೊಂಡಲ್ಲಿ ಹೆಸರ ಮುಂದೆ 'ಶ್ರೀ ಶ್ರೀ' ಆಗುತ್ತಿದೆ

ಒಂದು 'ಶ್ರೀ' ಇಲ್ಲದಿದ್ದರದು ಅಭಾವ, ಎರಡು 'ಶ್ರೀ' ಸೇರಿದರದು ಅತಿ ಸಂಗ್ರಹ.

ಆಹಾರದ ರೋಗ ಅಕ್ಷರಕ್ಕೂ ಬಂದುದಾಗುವದು.

ಆದ್ದರಿಂದ ಅಕ್ಷರಗಳ ಅಭಾವ ಮತ್ತು ಅತಿಸಂಗ್ರಹ ನಿವಾರಣೆಗಾಗಿ 'ಅಕ್ಷರ ನಿಯಂತ್ರಣಾಜ್ಞೆ'ಯೊಂದು ಬರುವದು ಬೇಡವೆ?

—ಬೀದಿವಾಲ

೯ನೇ ಕರ್ನಾಟಕ ಏಕೀಕರಣ ಪರಿಷತ್ತು.

ತಾ. ೨೫-೧೨-೪೪ರಲ್ಲಿ ಧಾರವಾಡದಲ್ಲಿ ಸೇರಿದ ಕ. ಏ. ಪರಿಷತ್ತಿನ ಅಧ್ಯಕ್ಷರಾದ ಶ್ರೀ. ಕೆ. ಬಿ. ಜಿನರಾಜ ಹೆಗ್ಡೆ, ಎಂ ಎಲ್ ಎ. (ಕೇಂದ್ರ), ಇವರು ಕೊಟ್ಟ ಭಾಷಣದ ಭಾಗ.

ಈ ಯುದ್ಧ ಕಾಲದಲ್ಲಿ ನಮಗೆ ರಾಜಕೀಯ ಅಥವಾ ಸೈತಿಕ ಅಭಿವೃದ್ಧಿಗೆ ಎಡೆಯಿಲ್ಲ. ರಾಷ್ಟ್ರೋದ್ಧಾರದ ಯಾವ ರೂಪದ ಕಾರ್ಯಕ್ಕೂ ಅವಕಾಶವಿಲ್ಲ. ನಮ್ಮ ದೇಶದ ಗ್ರಾಮೋದ್ಧಾರಕ್ಕೆ ವರ್ಷವೊಂದರ ಒಂದು ಕೋಟಿ ರೂಪಾಯನ್ನಾದರೂ ವೆಚ್ಚಮಾಡಲಿಕ್ಕೆ ಸಾಧ್ಯವಾಗದ ಇಂಡಿಯಾ ಸರಕಾರವು, ಈಗ ಯುದ್ಧಕ್ಕೋಸ್ಕರ ಈ ದೇಶದ ಉತ್ಪತ್ತಿಯಿಂದಲೇ ದಿನಕ್ಕೆ ಒಂದು ಕೋಟಿ ರೂಪಾಯಿ ವೆಚ್ಚ ಮಾಡುತ್ತಿದೆ. ಉತ್ಪತ್ತಿಯ ಮೇಲಣ ತೆರಿಗೆ ಏಳರಿಂದ ಎಂಟು ಪಾಲಷ್ಟು ಹೆಚ್ಚುತ್ತಿದೆ. ಇದು ನಿಜವಾದ ಸಂಪತ್ತೋ ಎಂದು ಕೇಳಬೇಕಾಗುತ್ತದೆ. ಹಾಗಲ್ಲವೆಂದೇ ನನ್ನ ಭಾವನೆ.

ಕರ್ನಾಟಕ ಏಕೀಕರಣದ ಧ್ಯೇಯ.

ಕರ್ನಾಟಕ ಏಕೀಕರಣದ ಧ್ಯೇಯವು ಕನ್ನಡ ಭಾಷೆಯನ್ನಾಡುವ ಎಲ್ಲಾ ಜನರನ್ನು ಅವರ ಈಗಿನ ಮತ್ತು ಮುಂದಿನ ಅಥವಾ ಆಗಿಂದಾಗ ಹೊರಿಸಬಹುದಾದ ಪ್ರಭುತ್ವದ ಅಡ್ಡಿಯಿಲ್ಲದ ಒಂದೇ ಪ್ರಜಾಪ್ರಭುತ್ವದೊಳಗೆ ತರುವುದಾಗಬೇಕು. ನಮ್ಮ ಭಾರತ ರಾಷ್ಟ್ರದ ಉದ್ದೇಶವು ಇಡೀ ರಾಷ್ಟ್ರವನ್ನು ಏಕ ಪ್ರಜಾಧಿಪತ್ಯದಲ್ಲಿ ತರುವುದೇ ಆದುದರಿಂದ ಅದನ್ನು ಹಿಂಬಾಲಿಸುವುದು ಅನುಕರಣೆಯವೂ, ಧಾರ್ಮಿಕವೂ ಆಗಿದೆ ಅದನ್ನು ಸಾಧಿಸಬಲ್ಲೆವೆಂದು ನಮಗೆ ಧೈರ್ಯವಿದೆ; ಆ ಕಾರ್ಯಸಾಧನೆಗೋಸ್ಕರ ನಾವು ತಾಳ್ಮೆಯಿಂದ ಕೆಲಸಮಾಡಬೇಕು. ಈಗ ಆತ್ಮ ನಿರ್ಧಾರವು ಎಷ್ಟು ವೃದ್ಧಿಗೊಂಡಿದೆಯೆಂಬುವನ್ನು ನೀವೇ ತಿಳಿದಿದ್ದೀರಿ. ಈ ದೇಶದ ರಾಜಕೀಯ ರಂಗದಲ್ಲಿ ಈ ತತ್ವವನ್ನು ಹೆಚ್ಚಾಗಿ ಒಪ್ಪಿರುವದರಿಂದಲೇ ಹಿಂದಿನ ಅನ್ಯಾಯಗಳಿಂದಲೂ ಈಗ ಚಾರಿತ್ರಿಕವೆಂದು ತೋರುವ ನಿಮಿತ್ತಗಳಿಂದಲೂ ನಿವೃತ್ತಿ ಹೊಂದಲಿಕ್ಕೆ ಕರ್ನಾಟಕ, ಆಂಧ್ರಪ್ರಾಂತಗಳಂತಹ ನರಳುತ್ತಿರುವ ಕ್ಷೇತ್ರಗಳು ಪರರಲ್ಲಿ 'ಭಿಕ್ಷಾಂದೇಹಿ' ಎನ್ನುವ ಸಮಯ ಹೋಗಿದೆ. ನಾವು ನಮ್ಮ ಜನರಿಗೆ ಅವರ ಹಕ್ಕು ಬಾಧ್ಯತೆಗಳನ್ನು ಎಚ್ಚರಿಸಿ ನಮ್ಮನ್ನು ಬಲಪಡಿಸಿಕೊಳ್ಳಬೇಕು. ನಮ್ಮ ಶಕ್ತಿಯಲ್ಲಿ ನಮಗೆ ವಿಶ್ವಸವಿದ್ದರೆ ನಾವು ನಿರಾಶರಾಗುವ ಕಾರಣವಿಲ್ಲ. ನಮ್ಮ ಧ್ಯೇಯವು ನ್ಯಾಯವಾದದ್ದು ನಮಗೆ ಜಯವಾಸ್ತಿ ಖಂಡಿತ.

ದಕ್ಷಿಣ ಕನ್ನಡದಲ್ಲಿ ಮಾತಾಡುವ ಕನ್ನಡಭಾಷೆಯ ವಿಷಯವಾಗಿ ಶ್ರೀ ಎಮ್. ಸಿ. ಕೃಷ್ಣ ನಾಯರರು ತನ್ನ ಪುಸ್ತಕದಲ್ಲಿ ಹೀಗೆ ಹೇಳುತ್ತಾರೆ:—"ಬ್ರಿಟಿಷ್ ನೌಕರರಡಿಯಲ್ಲಿ ಕನ್ನಡಿಗರು ನೌಕರರಾಗಿ ಸೇರಿ ದಕ್ಷಿಣ ಕನ್ನಡದಲ್ಲಿಯೂ ಕೊಡಗಿನಲ್ಲಿಯೂ-ಎಂದರೆ, ಮಲೆಯಾಳಿಗಳೂ, ತುಳುವರೂ, ಕೊಡಗರೂ ಇರುವ ರಾಜ್ಯದಲ್ಲಿ ಕನ್ನಡವನ್ನು ಅಸ್ವಾಭಾವಿಕವಾಗಿ ವ್ಯಾವಹಾರಿಕ ಭಾಷೆಯನ್ನಾಗಿ ಮಾಡಿಕೊಂಡರು."—ದಕ್ಷಿಣ ಕನ್ನಡದ ಚರಿತ್ರೆಯ ವಿಷಯವಾಗಿ ಶ್ರೀ ನಾಯರರಿಗೆ ಏನೂ ಪರಿಜ್ಞಾನವಿಲ್ಲವೆಂಬುದು ಇದರಿಂದ ಸ್ಪಷ್ಟವಾಗುತ್ತದೆ. ದಕ್ಷಿಣ ಕನ್ನಡದಲ್ಲಿ ಒಂದೇ ಒಂದಾದರೂ ಮಲೆಯಾಳ ಭಾಷೆಯಲ್ಲಿರುವ ಶಿಲಾಶಾಸನವನ್ನಾಗಲಿ, ಮಲೆಯಾಳಿ ಕವಿಯನ್ನಾಗಲಿ ತೋರಿಸಲಿಕ್ಕೆ ಶ್ರೀ ನಾಯರರಿಂದ ಅಸಾಧ್ಯ. ವಸ್ತುತಃ ಯಾವ ಸಮಯದಲ್ಲಿಯೂ ದಕ್ಷಿಣ ಕನ್ನಡವು ಕೇರಳಕ್ಕೆ ಸೇರಿರಲೇ ಇಲ್ಲ. ಆದುದರಿಂದ ಶ್ರೀ ನಾಯರರ ಸಾಧನೆಯು ತೀರ ಹೇಯವಾದುದು.

ಕನ್ನಡಿಗರೂ ಆಂಧ್ರರೂ ಒಂದೇ ತರದ ಕಷ್ಟಕ್ಕೊಳಗಾದವರು. ಆದರೆ ನಮ್ಮ ಕಷ್ಟ ಅವರಿಗಿಂತಲೂ ಹೆಚ್ಚು. ಅವುಗಳೇನೆಂದು ಮೊದಲಿಂದಲೂ ತಿಳಿದ ವಿಷಯವಾದುದರಿಂದ ಅವನ್ನು ಈಗ ತಿರುಗಿ ಹೇಳುವುದಿಲ್ಲ ನಮಗೂ ಆಂಧ್ರರಿಗೂ ಬಳ್ಳಾರಿ ಜಿಲ್ಲೆಯಲ್ಲಿ ಗಡಿಯ ವಿಷಯವಾಗಿ ಕೆಲವು ಮತಭೇದಗಳಿವೆ. ಆಂಧ್ರರೊಡನಾಗಲಿ, ಮರಾಟರೊಡನಾಗಲಿ ಮಲೆಯಾಳಿಗಳೊಡನಾಗಲಿ ಅಥವಾ ತಮಿಳರೊಡನಾಗಲಿ ಇದ್ದ ಗಡಿವ್ಯಾಜ್ಯಗಳನ್ನು ನ್ಯಾಯ ತಿಳಿದ ಯಾವುದಾದರೂ ಪಂಚಾಯಿತಿ ಕಮಿಟಿಯಿಂದ ತೀರ್ಮಾನವಾಗಲಿಕ್ಕೆ ನಮ್ಮ ಅಡ್ಡಿಯಿಲ್ಲ. ಈ ವಿಷಯವಾಗಿ ನಾನು ನನ್ನ ಅನೇಕ ಆಂಧ್ರ ಸ್ನೇಹಿತರೊಡನೆ ಚರ್ಚಿಸಿದ್ದೇನೆ. ಅವರು ಅವರ ದೇಶದಲ್ಲಿ ಪ್ರಮುಖರು ಮಾತ್ರವಲ್ಲ; ಅವರ ಅಭಿಪ್ರಾಯಗಳಿಗೆ ಅಲ್ಲಿ ಮನ್ನಣೆಯೂ ಇದೆ. ಅವರೊಳಗೆ ಒಬ್ಬರಾದರೂ ನ್ಯಾಯಬಾಹಿರರಲ್ಲವೆಂದು ನಾನು ಮನಗಂಡಿರುತ್ತೇನೆ. ಆದರೆ ಗಡಿಯಲ್ಲಾಗಲಿ ಕೇಂದ್ರದಲ್ಲಾಗಲಿ ಇರುವ ನಮ್ಮ ಸ್ನೇಹಿತರು ಪ್ರಥಮತಃ ಸ್ವದೇಶೀಯರಾಗಬೇಕೆಂಬುದನ್ನೂ ಅದರೊಡನೆ ಕನ್ನಡ ಭಕ್ತರಾಗಬೇಕೆಂಬುದನ್ನೂ ಮರೆಯಬೇಡಿರಿ.

ಆದುದರಿಂದ ನನ್ನ ರಚನಾತ್ಮಕ ಸೂಚನೆಯೇನೆಂದರೆ:—ಪ್ರತಿ ಜಿಲ್ಲೆಯಲ್ಲಿಯೂ ನಾವು ಏಕೀಕರಣ ಕಮಿಟಿಗಳನ್ನು ಸ್ಥಾಪಿಸಬೇಕು. ಆ ಕಮಿಟಿಗಳು ಸ್ಥಾನಿಕ ಅವಶ್ಯಕತೆಗಳನ್ನು ಚೆನ್ನಾಗಿ ಪರ್ಯಾಲೋಚಿಸಿ ಅವುಗಳ ನಿವೃತ್ತಿಗೆ ಬೇಕಾದ ನಿವಾರಣೋಪಾಯಗಳನ್ನು ಕಂಡುಹಿಡಿಯಬೇಕು. ಪ್ರಕೃತ ಸಂದರ್ಭದಲ್ಲಿ ಪ್ರತಿ ಕಮಿಟಿಯೂ ಆಯಾ ಜಿಲ್ಲೆಗಳ ಆಹಾರ ಸ್ಥಿತಿಯನ್ನು ವಿವೇಚಿಸಿಕೊಳ್ಳಬೇಕು ಅದೂ ಅಲ್ಲದೆ ಬೇರೆ ದಿನವಹಿ ಅಗತ್ಯ ವಸ್ತುಗಳು ಅಲ್ಲಲ್ಲಿ ಸಿಗುತ್ತವೋ, ಇಲ್ಲವಿದ್ದರೆ ಅವುಗಳನ್ನು " ' ಒದಗಿಸಿಕೊಳ್ಳಬೇಕು, ಎಂಬ ವಿಚಾರವನ್ನೂ ಈ ಕಮಿಟಿಗಳು ಮಾಡಬೇಕಲ್ಲದೆ ತಮ್ಮ ಆಹಾರವನ್ನೂ ಇನ್ನಿತರ ಅವಶ್ಯಕತೆಗಳನ್ನೂ ಕಾಲ ಸಂದರ್ಭಗಳಿಗೆ ತಕ್ಕಂತೆ ಬದಲಿಸಿಕೊಳ್ಳುವ ಹಾಗೆ ನಮ್ಮವರಿಗೆ ತಿಳಿಸಬೇಕು. ದಿನವಹಿ ಹೆಚ್ಚಾಗುವ ಈಗಿನ ಕಂಟ್ರೋಲ್, (Control) ಮತ್ತು ಇನ್ನಿತರ ನಿಯಮನಿಬಂಧನೆಗಳಿಗನುಸಾರವಾಗಿ ವರ್ತಿಸಲಿಕ್ಕೆ ನಮ್ಮ ಜನಾಂಗದ ಮೂಲಾಧಾರವಾದ ರೈತರಿಗೆ ಬೇಕಾದ ಹಿತೋಪದೇಶವನ್ನು ಮಾಡಬೇಕು. ಪ್ರತಿಯೊಬ್ಬ ಕನ್ನಡಿಗನೂ ಕಳ್ಳಸಂತೆಯನ್ನು ಸಮೂಲವಾಡುವೆನೆಂದು ಪ್ರತಿಜ್ಞೆ ಮಾಡಿ ನಮ್ಮಲ್ಲಿ ಅತಿ ಬಡವರಿಗಾದರೂ ದಿನೇ ದಿನೇ ಬೇಕಾದ ಸಕಲ ಸಾಮಾನುಗಳೂ ಆದಷ್ಟು ಕಡಿಮೆ ಶ್ರಮದಿಂದ ಸಿಕ್ಕುವಂತೆ ಮಾಡಲಿ. ಅಂದಿನ ಕನ್ನಡನಾಡು ಹೊನ್ನಿನ ನಾಡಾಗಿತ್ತು, ಈಗಿನ ನಾವೂ ಅದನ್ನು ಮರೆಯಲೊಲ್ಲೆವು ಎಂದು ಪ್ರತಿಜ್ಞೆಗೈಯತಕ್ಕದು. ದೇಶಸೇವೆಯೇ ಈಶಸೇವೆ.

Read & Advertise in
NAVAYUGA

ಮನುಷ್ಯ—ಮರ್ಜಿ

ಸ್ವಭಾವ ಚಿತ್ರಗಳು

— ೬. ಚಾಡಿಯ ಗಂಗಮ್ಮ —

(ಚಿತ್ರಿಸುವವರು:—ಮಟ್ಟಾರ್).

ನ್ಯಾಯ ಸಾಧನೆಗೆ ಒಂದು ಕಾರಣಬೇಕಾಗುವದಿಲ್ಲ; ನ್ಯಾಯುವೇ ಒಂದು ಕಾರಣ. ಆದರೆ ಅನ್ಯಾಯವಾಗಬೇಕಾದರೆ ಒಂದು ಬಲವಾದ ಕಾರಣವಿರಬೇಕು. ಅನ್ಯಾಯಕ್ಕಾಗಿಯೇ ಯಾರೂ ಅನ್ಯಾಯ ಮಾಡುವದಿಲ್ಲ. ಅನ್ಯಾಯಿಯು ತನ್ನ ಗೌರವ, ಆಸ್ತಿತ್ವಗಳನ್ನೇ ತ್ಯಾಗಮಾಡಬೇಕಾಗುತ್ತದೆ. ಇಂತಹ ಮಹಾತ್ಯಾಗದ ಪ್ರೇರಣೆ ಒಬ್ಬನಿಗೆ ಬರಬೇಕಾದರೆ ಅದರ ಕಾರಣವೂ ಅಸ್ತಿರಬೇಕು; ಈ ಕಹಿಯನ್ನು ನೆನಸುವದಕ್ಕೆ ಮನಸ್ಸೇ ಬಾರದಷ್ಟು ಸಿಹಿ ಅವನಿಗೆ ತಾಗಿಕೊಳ್ಳಬೇಕು. ಉದಾ:-ಹೆಚ್ಚಿನ ರೋಗ ರುಜೆಗಳಿಗೆ ಹೇತು ರುಚಿಯಿದ್ದ ತಿಂಡಿಗಳು; ಹೆಚ್ಚಿನ ದ್ವೇಷಾಸೂಯೆಗಳಿಗೆ ಕಾರಣ ಚೆಲುವೆಯರಾದ ಹೆಣ್ಣುಗಳು; ಹೆಚ್ಚಿನ ಜಗಳಗಳಿಗೆ ಮೂಲ ಮಧುರ ಚಾಡಿಗಳು!

ಗಂಗಮ್ಮ ನಡು ಪ್ರಾಯ ದಾಟಿದ ಹೆಂಗಸು. ಎಲ್ಲಿ ಹೋಗಬಹುದು-ಎಲ್ಲಿ ಹೋಗಬಾರದು, ಹೇಗೆ ಮಾತಾಡಬಹುದು-ಹೇಗೆ ಮಾತಾಡಬಾರದು, ಎಂಬ ಜಾಗ್ರತೆಯಲ್ಲಿ ಹದಿನೆಂಟರ ಯುವತಿಯರು ಕೂಡಾ ಇವಳಿಗೆ ಸಾಟಿಯಲ್ಲ. ಮಾತು ವರ್ತನೆಗಳಲ್ಲೆಲ್ಲಾ ಸಂಕೋಚಪಟ್ಟುಕೊಳ್ಳುತ್ತಾಳೆ. ತಾನು ತಪ್ಪಿ ಬೀಳುವೆನೋ ಎಂದು ನಮ್ಮೊಡನೆ ಮಾತಾಡುವಾಗಲೆಲ್ಲಾ ಹೆದರಿಕೊಳ್ಳುತ್ತಾಳೆ. ನಮ್ಮನ್ನವಳ ವಿನಯ ಸೆರೆ ಹಿಡಿಯುವದು. ಪ್ರಾಯ ಸಂದವಳು ಬೇರಾವುದಕ್ಕಾಗಿ ಇಂತಹ ಅಳುಕು ಪ್ರದರ್ಶಿಸಬೇಕ.- ಕೇವಲ ವಿನಯಕ್ಕಾಗಿ. ಆಗ ಅವಳಂತೆಯೇ ನಾವೂ ನಮ್ರರಾಗುವೆವು; ಸಂಕೋಚಗೊಳ್ಳುವೆವು. ಒಳ್ಳೆಯ ಹೆಂಗಸು; ಆವಳ ಮನನೋಯಬಾರದು ಎಂಬ ಜಾಗ್ರತೆ ನಮ್ಮಲ್ಲೂ ಮೂಡುವದು. ಅವಳು ಒಳ್ಳೆಯವಳು-ಅವಳ ಮಾತುಗಳೂ ಒಳ್ಳೆಯವೇ. ಹೀಗೆ ವ್ಯವಸ್ಥೆಯಿಂದ ಕ್ರಮವಾಗಿ ರೂಪುಗೊಂಡ 'ಒಳ್ಳೆತನ' ಬಹಳ ಭದ್ರಬಾದುದು. ಅದರಲ್ಲಿರುವ ಕೆಡುಕು ಅದಕ್ಕಿಂತಲೂ ಹೆಚ್ಚಿನದೆಂಬುದು ಮನವರಿಕೆಯಾಗುವ ವರೆಗೂ ಈ ಒಳ್ಳೆಯ ದನ್ನು ನಿವಾರಿಸಿಕೊಳ್ಳಲಾಗುವದೇ ಇಲ್ಲ

* * * *

ಗಂಗಮ್ಮ ಗಂಡುಛೇರಿಯಲ್ಲವಾದ್ದರಿಂದ ನಿಮ್ಮ ಮನೆಗೆ ಬಂದರೆ ಚಾವಡಿಯಲ್ಲಾರಿದ್ದಾರೆ ಎಂದು ನೋಡಿಕೊಂಡೇ ಮೆಟ್ಟಲು ಹತ್ತಿಯಾಳು. ಪಕ್ಕದ ಕೋಣೆಯಲ್ಲಿ ಹೆಂಗಸರೊಡನಾದರೆ ತಾಸುಗಟ್ಟಲೆ ಮಾತಾಡುತ್ತಾ ಕುಳಿತಾಳು. ನೀವು ನವನಾಗರಿಕರಾದರೆ 'ಬೇಡವಾದ ಸಂಕೋಚ' ವೆನ್ನುವಿರಿ;ಅಲ್ಲವಾದರೆ 'ಇದು ಹಿಂದೂ ಸ್ತ್ರೀತ್ವ'ವೆಂದು ಅಭಿಮಾನಪಡುವಿರಿ. ಹೆಂಗುಸದ ಪಂಚಾಯತಿಕೆಯಿಂದಾಗಿ ಊಟಕ್ಕೊಂದುಅರ್ಧಗಂಟೆತಡವಾದರೂ ನಿಮಗೆ ಗಂಗಮ್ಮನ ಮೇಲೆ ಸಿಟ್ಟು ಬರುವಂತಿಲ್ಲ. ಗಂಗಮ್ಮನೊಡನೆ ಬಡಾಯಿ ಹಾರಿಸುತ್ತಾ ಸಮಯ ತೆಗೆಯುವದಕ್ಕಾಗಿ ನಿಮ್ಮಾಕೆಯನ್ನಾದರೂ ನೀವು ದೂರುವಂತಿಲ್ಲ. ಹೆಂಗಸರಿಗೆ ಇಂತಹ ಕಾಲಕ್ಷೇಪವೂ ಬೇಡವೆ? ಗಂಗಮ್ಮನೊಡನೆ ಮಾತಾಡಿ ನಿಂತುದಕ್ಕಾಗಿ ಬೈಗಳೆಂದಾದರೆ, ಅಂತಹ ಮನುಷ್ಯನಿಗೆ ಮತ್ತೇನು ಬೇಕಾದೀತು? ಗಂಗಮ್ಮನಿಗೆ ಎಲ್ಲೆಲ್ಲಿಯೂ ಸುಸ್ವಾಗತ. ಬಾವೀ ಕಟ್ಟೆಗೆ ಗಂಗಮ್ಮ ಬಂದು ನಿಂತರೆ, ಸೇದುವವಳಿಗೆ ನೀರು ನೇಲ್ಗಡೆಯಲ್ಲೇ ಇದೆ ಎಂಬಷ್ಟು ಹುರುಪು; ಅಡುಗೇ ಮನೆಯಲ್ಲಿ ಆಕೆ ಬಂದು ಕುಳಿತರೆ ಒಲೆಯೂದುವವಳಿಗೆ ಕಟ್ಟಿಗೇ ಹೊಗೆಯೇ ಕರ್ಪೂರದ ಹೊಗೆಯಷ್ಟು ಪರಿಮಳ ಗಂಗಮ್ಮ ನಮ್ಮೂರ ಗಂಗಾ; ಪವಿತ್ರ ಗಂಗೆ!

* * * *

ನಾರಾಯಣನ ಸಂಸಾರದಲ್ಲೀಗ ಒಡಕು ಮೂಡಿದೆ. "ಆಫೀಸು ಬಿಟ್ಟೊಡನೆ ಸೀದಾ ಮನೆಗೆ ಬಂದು ಬಿಡಬೇಕು" ಎಂದು ಲಕ್ಷ್ಮಿಯ ಪೇಡಿಕೆ ಯಾಸೆ ಆಜ್ಞೆ. "ಆ ದಾಗುವದಿಲ್ಲ; ಇಲ್ಲಿ ಬಂದು ನೊಣ ಹೊಡೆಯುವದಕ್ಕಿಂತ ನಾನು ಕ್ಲಬ್ಬಿನಲ್ಲಿದ್ದು ಬಂದರೆ ನಿನಗೇನು ಬಾಧಕ?"—ಎಂದು ನಾರಾಯಣನ ಪ್ರಶ್ನೆ. "ಓಹೋ! ಅದು ಕ್ಲಬ್ಬೇನು? ಸೀಲಿಯ ಮನೆಗೆ ಕ್ಲಬ್ ಎನ್ನುತ್ತಾರೆಯೆ?"

"ಯಾವ ಸೀಲಿ? ಏನೇ ನಿನಗೆ ತಲೆ ಸರಿಯಿದೆಯೋ ಇಲ್ಲವೋ? ಅವಳ ಗಂಡ ಕೇಳಿದರೆ......"

"ಹಾಂ? ನಿಮಗೆ ಹೆದರಿಕೆ ಅವಳ ಗಂಡನದು; ನಿಮ್ಮ ಹೆಂಡತಿಯದಲ್ಲ! ಗಂಡ ಹೇಳುವವ ಹಾಗೆಲ್ಲಾ ಸಡಿಲು ಬಿಡುತ್ತಾನೆಯೇ? ನೀವಿನ್ನು ಅಲ್ಲಿ ಹೆಜ್ಜೆಯಿಡಕೂಡದು."

"ಮುಚ್ಚುಬಾಯಿ! ತಲೆತುಂಬಾ ಹಂಟಿ ಬೇಡ!"

"ಈ ನಟನೆಯೆಲ್ಲಾ ಯಾತಕ್ಕಾಗಿ? ನನಗೆಲ್ಲಾ ಗೊತ್ತಾಗಿದೆ?"

"ಗೊತ್ತಾದುದೇನು? ಹೇಳಿದವರಾರು? ಅವರ ನಾಲಿಗೆ ಸೀಳುತ್ತೇನೆ! ಬೇಗಹೇಳು"

ಉತ್ತರವಿಲ್ಲ.

ನಾರಾಯಣ ಮೂರು ಬಾರಿ ನೆಲ ತುಳಿದು ದಡಬಡ ಇಳಿದು ನಡೆದೇ ಬಿಟ್ಟ- ಕ್ಲಬ್ಬಿಗೇ! ಅಂದಿನಿಂದ ಇದೇ ಅವಸ್ಥೆ!

* * * *

ಅತ್ತೇ ಸೊಸೆಯರ ಕಾಳಗ ಅಲ್ಲಿ ನಿತ್ಯದ ಮಾತು ಅವಳ ಮಗ, ಇವಳ ಗಂಡ- ಮೆದುಳಿಲ್ಲದ ಮನುಷ್ಯನಾದ್ದರಿಂದ ತಾಯಿ ಮತ್ತು ಪತ್ನಿಯನ್ನು ತಕ್ಕಡೀ ತಟ್ಟೆಗಳಂತೆ ನೇತಾಡಿಸಿ ಹಿಡಿದುಕೊಂಡಿದ್ದ. ಆದರೆ ಅತ್ತೆಯ ಕೈಗೊಂದು ಹೊಸ ಆಯುಧವೀಗ ಬಂದಿದೆ. ಮಾತು ಮಾತಿಗೆ, ಸೊಸೆಯ ಚಿಕ್ಕತಾಯಿಯಮಗಳೊಬ್ಬಳು ಮನೇ ಗುಮಾಸ್ತನನ್ನು ಕಟ್ಟಿಕೊಂಡು ಬೊಂಬಾಯಿ ಗೋಡಿಹೋದ ವಾರ್ತೆ ಬಿಡುತ್ತಾಳೆ. ಸೊಸೆಯ ರಂಪಾಟವೇ ರಂಪಾಟ; ಮನೇ ಗಂಡುಸಿಗೆ ತನ್ನ ಮಾನಕ್ಕೂ ಧಕ್ಕೆ ಬಂದ ಅನುಭವವಾಗಿದೆ. "ಸಂಗತಿ ಹಾಗಲ್ಲವೇ ಅಲ್ಲ; ಬೊಂಬಾಯಿಯಿಂದ ಅವಳ ಗಂಡನ ಕಾಗದ ಬಂದಿತ್ತು-ಮನೇ ಗುಮಾಸ್ತ, ನೊಡನೆ ಹೆಂಡತಿಯನ್ನು ಕಳುಹಿಸಿಕೊಡಬೇಕೆಂದು. ಅದನ್ನೂ ಈ ರೀತಿ ಬೊಗಳುವ ಇವಳ ನಾಲಿಗೆಗೆ ಹುಳ ಬೀಳಲಾರದೆ?" ಎಂದು ಕಣ್ಣಿನಿಂದ ನೀರು ಕೆಡಿಗಳನ್ನು ಒಟ್ಟೊಟ್ಟಿಗೆ ಸುರಿಸಿ ಸೊಸೆ ಗಂಡನನ್ನು ಸಮಾಧಾನಪಡಿಸಿದ್ದಾಳೆ. ಅವ ತಾಯಿಯನ್ನು ಗದರಿಸಿ ಕೇಳಿದ "ಇದನ್ನು ನಿನಗೆ ಹೇಳಿದವರಾರು? ಅವರನ್ನು ಕರೆದು ತಾ ಅದನ್ನು ರುಜುಪಡಿಸಿ ಕೊಟ್ಟಲ್ಲಿ ಇವಳನ್ನೀಗಲೇ ಮನೆಯಿಂದ ಹೊರಡಿಸುತ್ತೇನೆ; ಇಲ್ಲವಾದರೆ ಹೇಳಿದವಂಗೆ........!" ಎಂದಾತ ಎಡಗಾಲ ಮೆಟ್ಟನ್ನು ಝಾಡಿಸಿ ಹೂಂಕರಿಸಿದ. ಅತ್ತೆ ಆ ಮುಹೂರ್ತದಲ್ಲಿ ಮೌನಳಾದಳು;ಆದರೆ ಸೊಸೆಯ ಯೋಗ್ಯತೆಯಳೆಯುವ ಈ ಅಳತೇ ಕೋಲನ್ನು ಕೆಳಗಿಡಲಿಲ್ಲ. ಮಗನೀಗ ಬೇರೆ ಮನೆ ಹುಡುಕುತಿದ್ದಾನೆ.

* * * *

ಈಚೇ ಮನೆಯವರ ಕೆಸುವಿನ ಗದ್ದೆ ಮಣ್ಣಿನಡಿಯಲ್ಲಿದ್ದಂತೆಯೇ ರಾತ್ರೋರಾತ್ರಿ ಕಳವಾಗಿದ್ದಿತು. ಹಾಲ್ಮರ ಪುರಾಣಿಕರ ರಾಶೀ ಪೂಜೆಗೆ ಹೊರ ಕಟ್ಟುವವರ ಕಾರ್ಬಾರಾಗಿರಬೇಕು. ಕಳವಾಗಿ ಹೋಯಿತಲ್ಲಾ ಎಂಬ ಪಶ್ಚಾತ್ತಾಪದೊಂದಿಗೆ ಸತ್ಪಾತ್ರಕ್ಕೆ ಸಂದಿತಲ್ಲಾ ಎಂಬ ಸಮಾಧಾನವೂ ಇದ್ದುದರಿಂದ ಅವರು ಗಲಾಟೆಗೆ ಹೋಗಲಿಲ್ಲ. ಆದರೆ ಆದೇ ದಿನ ಮೇಲ್ಮನೆಯವರು ಕೆಸುವಿನ ಪಲ್ಯ ಮಾಡಿದ್ದ ವಾರ್ತೆ ನಾಲ್ಕನೇ ದಿನ ತಲಪಿತು ಪರೇಲರಲ್ಲಿ ದೂರು ಹೋಯಿತು. ವಿಚಾರಣೆಯಲ್ಲಿ ಆ ದಿನ ಮೇಲ್ಮನೆಯಲ್ಲಾಗಿದ್ದುದು ಸೊರಣಗೆಡ್ಡೆಯ ಪಲ್ಯವೆಂಬುದಕ್ಕೆರುಜುವಾತು ದೊರೆಯಿತು. ಮೊಕದ್ದಮೆ ಡಿಸ್‌ಮಿಸ್ ಆದಮೇಲೆ "ಕೆಸುವಿನ ಪಲ್ಯ ತಾನು ಮಾಡಿದ್ದೆನೆಂಬ ವಾರ್ತೆ ತಿಳಿಸಿದವರ ಹೆಸರು ಮುಂದೆ ಬರಬೇಕು." ಎಂದು ಪ್ರತಿವಾದಿ ಛಲತೊಟ್ಟ. ಪರೇಲರೂ ಅದನ್ನು ಸಮರ್ಥಿಸಿದರು. ಆದರೆ ಅದು ಹತ್ತು ಹಲವು ಬಾಯಿಗಳಿಗೆ ವರ್ಗಾಯಿಸಲ್ಪಡುತ್ತಾ ಬಂದು ಸೇರಿಕೊಂಡ ವಾರ್ತೆಯಾಗಿದ್ದಂತೆ ತೋರಿ ಬಂತು. ಇದಕ್ಕೆ ಹೊಣೆಯೆಂದು ಯಾರನ್ನು ತಾನೇ ಶಿಕ್ಷಿಸಲು ಸಾಧ್ಯ?

* * *

ಒಂದು ಮನೆಗೆ ಹತ್ತಲ ಬಾಗಿಂದಲಿ ಯಾರಾದರೂ ನುಗ್ಗಿದುದಿದ್ದರೆ ಅಥವಾ ನುಗಿದುದ್ದಿಲ್ಲವಾದರೂ ಆ ವಾರ್ತೆಯು ನಮ್ಮೂರ ಪ್ರತಿಯೊಂದು ಮನೆಗೂ ಹತ್ತಿಲ ದ್ವಾರಾ ನುಗ್ಗುತ್ತದೆ.

ನಮ್ಮೂರ ಪಿಲಾಡಿರಂಗನ ಕೈಕೋಲಿಗೊಂದು ಸಂದು ಇರುವದನ್ನು ಇದುವರೆಗಾರೂ ಕಂಡಿಲ್ಲವಾದರೂ ಅದರೊಳಗೊಂದು ಈಟಿಯಿವೆ ಎಂಬುದು ಪ್ರತಿಯೊಬ್ಬನಿಗೂ ತಿಳಿದಿದೆ.

ನರ್ಸಮ್ಮನ ಗೆಜ್ಜೆಟೀಕನ್ನು ನಾಗಣ್ಣ ಕೊಂಡು ಹೋಗಿ ನಾಂದಣೆ ಬೇಂಕಿನಲ್ಲಿ ಅಡವಿಟ್ಟುದನ್ನು ನರ್ಸಮ್ಮನೇ ಗುಟ್ಟುಮಾಡಬೇಕು ಹೊರತು ಊರವರೆಲ್ಲರೂ ಮಾತಾಡುತ್ತಿದ್ದಾರೆ.

ಹೆಚ್ಚೇನು, ಒಂದು ಮನೆಯ ಅಡುಗೇ ಕೋಣೆಗೆ ನಾಯಿ ಹೊಕ್ಕುದು-ಒಬ್ಬಾಕೆ ನಡು ಮಧ್ಯಾಹ್ನ ಹೊತ್ತಿನಲ್ಲೇ ಗಂಡನೊಡನೆ ನಗುತ್ತಾ ಮಾತಾಡಿದುದು-ಊರ ಗೌಡನ ಮಗಳು ಗಂಡನ ಮನೆಗೆ ಹೊರಡುವಾಗ ಕಣ್ಣು ಒದ್ದೆಯಾಗಿದ್ದುದು-ಇಂಥವೆಲ್ಲಾ ಊರ ವಾರ್ತೆಗಳಾಗಿ ಬಿಡುತ್ತವೆ

'ಛೆ! ನಮ್ಮೂರಲ್ಲಿದ್ದಷ್ಟು ಚಾಡಿ, ತಂಟೆ ಇನ್ನೆಲ್ಲಿಯೂ ಇರಲಾರದು' ಎಂದು ನಮ್ಮೊಳಗ ನಾವೇ ಮಾತಾಡಿಕೊಳ್ಳುವದಿದೆ. 'ಗಂಗಮ್ಮನಂಥವರು ಬೇರೆಲ್ಲಿಯೂ ಇರಲಾರರು' ಎಂದದಕ್ಕೆ ಕೂಡಿಸಿ ಹೇಳಿದವರಿಲ್ಲ. ಕಾರಣವೆಂದರೆ ಅವಳು ಮನೆ ಮನೆ ಹೋಗುತ್ತಾಳೆ; ಮಾತು ಬಿಡಲು ಹೋಗುವವಳಂತಲ್ಲ. ಇಂತಹ ವಾರ್ತೆಗಳನ್ನು ಬಿಡುವಾಗ ಕೇಳುವವರಿಗುಪಕಾರಮಾಡುತ್ತಿದ್ದೇನೆನ್ನಬೇಕು ಹೊರತು ಯಾರಿಗಾದರೂ ಉಪದ್ರವಿದೆ ಎಂದೆನ್ನಿಸುವದೇ ಇಲ್ಲ. ಹೀಗಾಗಿ, ಮೇಲೆ ನಮೂದಿಸಿರುವ ಘಟನೆಗಳಲ್ಲಿ ಸ್ಪಷ್ಟವಾಗಿರುವಂತೆ, ಬಾಯಿ ಬಿಡುವ ಸಂದರ್ಭ ಬಂದಾಗಲಾದರೂ ಗಂಗಮ್ಮನ ಹೆಸರು ಮುಂದೆಬರುವಂತಿಲ್ಲ. ಯಾಕೆಂದರೆ ಅವಳೇನು ಚಾಡಿ ಹೇಳಿದ್ದಾಳೆಯೆ? ಊರವರ ದೃಷ್ಟಿಯಲ್ಲಿ ಗಂಗಮ್ಮ ಅನುಭವವಿದ್ದಾಕೆ- ಅನ್ಯಾಯಗಾತಿಯಲ್ಲ ಆದರೆ ಅವಳೆಲ್ಲಿಯಾದರೂ ಸತ್ತು ಹೋದಲ್ಲಿ ಊರ ಮರ್ಜಿ ಬದಲಾಗುವಾಗ ಗಂಗಮ್ಮನ ನಿಜ ಸ್ಮರಣೆ ಊರಿಗಾಗಬಹುದೇನೋ.

ಬರುವ ವಾರ— ಹಿಕ್‌ಮತ್ ಹಿರಿಯ.

ತಾ. 28--12--44 ರಿಂದ

ವಾಡಿಯಾರವರ ಸಾಮಾಜಿಕ ಚಿತ್ರ

★ ಶೋಭಾ ★

ಶಾಹು ಮೋದಕ್

ಮತ್ತು

ಶೋಭನಾ ಸಮರ್ಥ

ಶ್ರೀ ರಾಮಕೃಷ್ಣ ಥಿಯೇಟರ್, ಲಿಮಿಟೆಡ್, ಉಡ್ಪಿ.

ಬಾಲಚಂದ್ರ

ಉಪಾಧ್ಯಾಯರಿಗಾಗಿ ಪ್ರಕಟವಾಗುವ ವಿದ್ಯಾವಿಷಯಕ ಮಾಸಪತ್ರಿಕೆ.

ವಾರ್ಷಿಕ ಚಂದಾ ರೂ.1-8-0

ಮಾದರಿ ಪ್ರತಿಗೆ ಎರಡಾಣೆ ಸ್ಟ್ಯಾಂಪಿನೊಂದಿಗೆ ಬರೆಯುವುದು.

ಸಂಚಾಲಕ

ಬಾಲಚಂದ್ರ, ಉಡುಪಿ.

ಸಿಡಿಲುಮರಿ-ವೋನ್ ರುಂಡ್ ಸ್ಟೆಡ್

ಮಿತ್ರರು ವಿಜಯಶ್ರೀಯ ಕಡೆಗೆ ತೋರಿಸುತ್ತಿದ್ದ ಬೆರಳನ್ನು ಫಕ್ಕನೆ ಬಾಯಿಗಿಟ್ಟುಕೊಳ್ಳುವಂತೆ ಮಾಡಿದ-ಇಡಿಯ ಪ್ರಪಂಚವೊಮ್ಮೆಯೇ ರೋಮಾಂಚಗೊಳ್ಳುವಂತಹ ಅದ್ಭುತ ಸಾಧಿಸಿದ--ಕೀರ್ತಿ ಜರ್ಮನಿಯ ಅನುಪಮ ಸೇನಾನಿ ವೋನ್ ರುಂಡಸ್ಟೆಡನಿಗೆ ಸಲ್ಲಬೇಕು. ಈ ಯುದ್ಧದ ಅತಿ ಪ್ರಮುಖ್ಯ ಧಾಳಿಯೊಂದನ್ನು ಆಕಸ್ಮಿಕವಾಗಿ, ಅತಿದೊಡ್ಡ ಪರಿಮಾಣದಲ್ಲಿ ಆರಂಭಿಸಿ ಆತ ಶತ್ರುಮಿತ್ರರೆಲ್ಲರನ್ನೂ ದಂಗುಬಡಿಸಿದ್ದಾನೆ. ಈ ಹೊಡೆತದಾರಂಭ ಇದೇ ಡಿಶಂಬರ್ ತಾ. 11ರಲ್ಲಿ; ಜರ್ಮನ್ ಗಡಿಯ, ದಕ್ಷಿಣ ಬೆಲ್ಜಿಯಮ್ ಮತ್ತು ಉತ್ತರ ಲಕ್ಸೆಂಬರ್ಗ್ ಪ್ರದೇಶದಲ್ಲಿ ಅವನ್ನವ 60ಮೈಲು ವಿಸ್ತೀರ್ಣದಲ್ಲಿ ಆರಂಭಿಸಿ ಬೆಳೆಯಿಸುತ್ತಾ ಬಂದಿದ್ದಾನೆ ಸರಾಸರಿ ದಿನಕ್ಕಿಪ್ಪತ್ತು ಮೈಲುಗಳಂತೆ ಮುಂದೊತ್ತಿದ್ದಾನೆ ರುಂಡ್‌ಸ್ಟೆಡ್ ಹೊಡೆತವೀಗ ಸಿಡಿಲ ಬಡಿತದಂತಾಗಿದೆ.

ನಿಜಕ್ಕೂ ಅದ್ಭುತ!

ಈ ಧಾಳಿಯ ಜಯಾಪಜಯದ ನಿರೀಕ್ಷೆ ಹೇಗೂ ಇರಲಿ ರುಂಡಸ್ಟೆಡನು ಇದನ್ನಾರಂಭಿಸಲು ಶಕ್ತನಾದುದೇ ಒಂದು ಆಶ್ಚರ್ಯ ರಶ್ಯಾ, ಇಟಲಿ ಫ್ರಾನ್ಸ್, ರಣರಂಗದಲ್ಲಿ ಜರ್ಮನರೀತನಳ ಹೊಂದಿರುವ ಹಾನಿಯನ್ನು ನೋಡಿದರೆ, ಇಷ್ಟು ದೊಡ್ಡ ಪರಿಮಾಣದ ಧಾಳಿಯನ್ನು ರೂಪಿಸಲು ಅವರಿಂದ ಸಾಧ್ಯವಾದುದು ಹೇಗೆಂಬುದೇ ಒಂದು ಸಮಸ್ಯೆ ಮಿತ್ರಸೇನೆಗಳು ಹಲವು ವಾರಗಳಿಂದ ಸಮುಮಟ್ಟದ ಜಲದಂತೆ ಅಲುಗಾಡದೆ ನಿಂತಿದ್ದ ಕ್ಷೇತ್ರದಲ್ಲಿ ನಾಜೀ ಸೇನೆಯೀರೀತಿ ಮಹಾ ಪ್ರವಾಹವಾಗಿ ನುಗ್ಗಿ ಹರಿಯಬೇಕಾದರೆ ಅದರ ಶಕ್ತಿಯೆಷ್ಟಿರಬೇಡ? ಬಹುಕಾಲದಿಂದ ಕಾಣೆಯಾಗಿದ್ದ 'ಲುಫ್ಟ್‌ವಾಫ್' ಈಗ ಎಲ್ಲಿಂದ ಬಂತು? ಮಿತ್ರ ಸೇನೆಗಳೇಕಾಗಿ ಅಲ್ಲಿ ಹಿಂಜರಿಯುತ್ತಿವೆ? ಗವಿಯ ವರೆಗೂ ಅಟ್ಟಲ್ಪಟ್ಟ ಘಾಯಗೊಂಡ ಹುಲಿ ' ಈ ರೀತಿ ಅರ್ಭಟಿಸುತ್ತಾ ಹೊರನುಗ್ಗಿ ಬರುವಾಗ ಬೇಟೆಗಾರರು ಆ ನಿರೀಕ್ಷೆಯಲ್ಲಿಲ್ಲದಿದ್ದುದೇಕೆ? ಮುಂತಾದ ಪ್ರಶ್ನೆಗಳೀ ಸಂದರ್ಭದಲ್ಲೇಳುತ್ತವೆ. ಇದರ ಪರಿಣಾಮವನ್ನಂತೂ ಲೋಕವು ಆತ್ಯಾತುರದಿಂದ ನಿರೀಕ್ಷಿಸುತ್ತಿದೆ

ಇದೊಂದು ಜೂಜು!

ರಣಭೈರವ ರುಂಡ್‌ಸ್ಟೆಡನು ಮಹಾಲಾಭ ಅಥವಾ ಸರ್ವನಾಶದ ಒಂದು ದ್ಯೂತಕ್ಕಿಳಿದಿದ್ದಾನೆ ಎಂಬುದು ನಿರ್ವಿವಾದ. ಸಂದರ್ಭಕ್ಕನುಸಾರವಾಗಿ ಸೌಮ್ಯ-ರೌದ್ರಾವತಾರಗಳನ್ನು ಧರಿಸುವ ಜಾಣ್ಮೆಯಲ್ಲಿ ನಾಜೀ ಸೇನಾನಿಗಳನ್ನು ಮಿಕ್ಕಿದವರಿಲ್ಲ. ಮಿಂಚು ಧಾಳಿಗಳಲ್ಲಂತೂ ಅವರನ್ನು ಬಿಟ್ಟರೆ ಇನ್ನಿಲ್ಲ. ರುಂಡ್‌ಸ್ಟೆಡ್ ನಾಜಿಗಳ ಅಗ್ರಗಣ್ಯ ಸೇನಾನಿ ತನ್ನ ಪ್ರತಿನಾಯಕ ಜನರಲ್ ಈಸೆನೋವರರ ಬಯಕೆಯೇನೆಂಬುದನ್ನಾತ ಅರಿತಿದ್ದ. ರೈನ್ ಹೊಳೆಯ ಪಶ್ಚಿಮಗಡೆಯಲ್ಲೇ ನಿರ್ಣಯಾತ್ಮಕ ಜರ್ಮನ್ ಯುದ್ಧ ನಡೆಯತಕ್ಕದ್ದೆಂದು ಈಸೋವರರೆಂದಿದ್ದರು. ಅದಕ್ಕನುಗುಣವಾಗಿ ಕೆಲವು ವಾರಗಳಿಂದ ಮಿತ್ರಸೇನೆ ಜರ್ಮನ್ ಹೆಬ್ಬಾಗಿಲನ್ನು ತಟ್ಟುತ್ತಾ ನಿಂತಿದ್ದಿತು. ಉತ್ತರದಲ್ಲಿ ರೊ ಯರ್ ಹೊಳೆಯ ವರೆಗದು ಬಂದಿತ್ತು, ಅದನ್ನು ದಾಟಿ ನುಗ್ಗಿದಲ್ಲಿ ಕೊಲೋನಿನ ಕಾರ್ಖಾನೆ ವಲಯಗಳಿಗಪಾಯ ದಕ್ಷಿಣದಲ್ಲಿ ಮಿತ್ರ ಸೇನೆ ಸಾರ್ ಕ್ಷೇತ್ರದೊಳಗೆ ದೃಢವಾಗಿ ಮುಂದೊತ್ತುತ್ತಿದ್ದಿತು ಇದನ್ನೆಲ್ಲಾ ಹಣಿಗಣ್ಣೋಟದಿಂದೀಕ್ಷಿಸುತ್ತಾ ಇದ್ದ ರುಂಡ್‌ಸ್ಟೆಡ್ ಜರ್ಮನಿಗಿರುವ ಅಪಾಯವನ್ನು ಊಹಿಸಿಕೊಂಡ. ಮಿತ್ರ ಸೇನಾಪಾಲಿನ ಉತ್ತರ ಮತ್ತು ದಕ್ಷಿಣದ ಮಧ್ಯವನ್ನು ಭೇದಿಸಿಕೊಂಡು ಬಾಣದಂತೆ ಮುನ್ನುಗ್ಗಿದ. ಇಂತಹ ಗಂಡಾಂತರದ ನಿರೀಕ್ಷೆಯಿಲ್ಲದೆ ನಿಂತಿದ್ದ ಮಿತ್ರಸೇನೆ ಈ ನುಗ್ಗಾಟದಿಂದ ನಜ್ಜುಗುಜ್ಜಾಗಬೇಕಾಯಿತು ಅಮೇರಿಕನ್ ಯೋಧರು ಪ್ರತ್ಯಕ್ಷ ನರಕ ಯಾತನೆಯನ್ನೇ ಅನುಭವಿಸಬೇಕಾಯಿತು. ಉತ್ತರಗಡೆಯ ಮಿತ್ರಸೇನೆ ಸುತ್ತುಗಟ್ಟಲ್ಪಡುವ ಅಥವಾ ಸಮುದ್ರಕ್ಕಟ್ಟಲ್ಪಡುವ ಅಪಾಯವೊದಗಿದೆ ಈ ಬಾರಿ ರುಂಡ್‌ಸ್ಟೆಡ್ ಗೆದ್ದರೆ ಮಿತ್ರರ ಯುದ್ಧ ಯೋಜನೆ ಅಡಿಮೇಲಾಗುವದು, ಸೋತರೆ ಜರ್ಮನಿಯ ಪತನ ಸಮೀಪಿಸುವದು. 'ಹಾಗಾದರೆ ಹಾಗೆ-ಹೀಗಾದರೆ ಹೀಗೆ'.. ಎಂದು ರುಂಡ್‌ಸ್ಟೆಡ್ ಹೊಡೆದ ಹೊಡತವಂತೂ ಮಿತ್ರರಿಗೀ ಮುಹೂರ್ತದಲ್ಲೊಮ್ಮೆ ಕಣ್ಣುತ್ತಲೆ ಒರಿಸಿದೆ!

ಹಿಟ್ಲರ್ ಪಂಚಿಕ!

ಈ ಧಾಳಿ ಯೋಜನೆಯನ್ನು ತಯಾರಿಸಿದವನು ವ್ಯಕ್ತಿಶಃ ಹಿಟ್ಲರನಂತೆ ಅವನು ಬಹುಕಾಲದಿಂದ ಅಜ್ಞಾತವಾಸಿಯಾಗಿದ್ದುದು ಇಂತಹ ಅದ್ಭುತಸಾಧನೆಗಾಗಿಯಂತೆ 'ಕ್ರಿಸ್‌ಮಸ್ ಉಡುಗೊರೆಯಾಗಿ ಏಚೆನ್' ಹೊಸ ವರ್ಷದ ಬಳುವಳಿಯಾಗಿ ಪ್ಯಾರಿಸ್, ನಿಮಗೆ' ಎಂದು ಜರ್ಮನ್ ಸೇನೆಗೆ ಹಿಟ್ಲರನ ವಾಗ್ದಾನ. ಆದರೆ ಮಿತ್ರ ಪಾಳಯದವರ ಭರವಸೆಗೆ ಭಂಗಬಂದಿಲ್ಲ. ನಾವು ಹೊರಗೆಳೆಯಬೇಕಾಗಿದ್ದವ ತಾನಾಗಿ ಬಯಲಿಗೆ ಬಂದು ಮೈಯೊಡ್ಡಿದ್ದಾನೆ- ಎಂದು ಸಂತೋಷಿಸುವವರೂ ಇದ್ದಾರೆ. ಈ ಧಾಳಿಯನ್ನೊಮ್ಮೆ ಸೋಲಿಸಿಬಿಟ್ಟಲ್ಲಿ ಇನ್ನು ಮುಂದಿನ ಹೋರಾಟಗಳೆಲ್ಲಾ ಆಟವಾಗಿ ಹೋಗುವವೆಂದು ಮಿತ್ರರನ್ನುತ್ತಾರೆ. 1918ರಲ್ಲಿ ಜರ್ಮನ್ ದೊಗ್ಗಾಲೂರುವ ಮೊದಲೊಮ್ಮೆ ಕೊನೆಯ ಪ್ರ... ಕ್ಷಿಪವಾಗಿ ಇಂತಹ ನಾಳಿಯನ್ನೇ ಹೂಡಿದ್ದಿತು, ಅದರಂತೆಯೇ ಇದು ಕೂಡ ಅವಸಾನಕಾಲದ ಒದ್ದಾಟವೆಂದು ಖಂಡಿತನಾಗಿ ಹೇಳುವ ಧೈರ್ಯವಿಲ್ಲವಾದರೂ ಪರಿಣಾಮವು ಅದಕ್ಕಿಂತ ಭಿನ್ನವಾಗಲಾರದೆಂದು ಆಶಿಸಲಾಗಿದೆ ತಥಾಸ್ತು! ಆದರೆ, ರುಂಡ್‌ಸ್ಟೆಡ್—ಇವನೆಂತಹ ಕಾಲರುದ್ರನಪ್ಪಾ ಎಂದು ಈಗೊಮ್ಮೆ ಮೂಗಿಗೆ ಬೆರಳಿಡಲೇ ಬೇಕು! ಜರ್ಮನರ ಸಂಗ್ರಹ ಮತ್ತು ಶಕ್ತಿ ಬರಿದಾಗಿಲ್ಲವೆಂಬ ಜ್ಞಾನೋದಯವೂ ಆಗಬೇಕು ರುಂಡ್‌ಸ್ಟೆಡ್ ಮತ್ತೊಂದು ಯುದ್ಧಾದ್ಭುತವನ್ನು ಲೋಕಕ್ಕೆ ಕಾಣಿಸಿದ್ದಾನೆ!

ಅಧಿಕಾಧಿಕ ಗೋಧಿ ತಿನ್ನಿರಿ

1. ಅಕ್ಕಿಯ ಅಭಾವ ನಿವಾರಣೆಗೆ ಆಸ್ಟ್ರೇಲಿಯದ ಗೋಧಿ.

ಸರಕಾರದ ಅಂದಾಜಿನಂತೆ ಅನ್ನವುಣ್ಣುವ ಅಭ್ಯಾಸವಿದ್ದವರಿಗೆಲ್ಲಾ ಸಾಕಾಗುವಷ್ಟು ಅಕ್ಕಿಯ ಉತ್ಪತ್ತಿಯು ನಮ್ಮ ಪ್ರಾಂತ್ಯದಲ್ಲಾಗಲಿ ನಮ್ಮಲ್ಲಿಗಾಮದು ಪಡಿಸಿಕೊಳ್ಳೋಣವೆಂದರೆ ಇತರ ಪ್ರಾಂತ್ಯ ಅಥವಾ ದೇಶಗಳಲ್ಲಿ ಕೂಡಾ ಅದು ದೊರಿಯುವದಿಲ್ಲ. ಆದ್ದರಿಂದ ಅಕ್ಕಿಯ ಅಭಾವವನ್ನು ತುಂಬಿಸಿಕೊಳ್ಳುವದಕ್ಕಾಗಿ ಈಗ ಆಸ್ಟ್ರೇಲಿಯದ ಗೋಧಿಯನ್ನು ತರಿಸಿಕೊಳ್ಳಲಾಗುತ್ತಿದೆ. ಜನರಿಗೆಲ್ಲಾ ಅವರವರ ರೇಶನಿನ ½ ಭಾಗದಷ್ಟು ರಾಗಿ ಮತ್ತು ಗೋಧಿ ಅಥವಾ ಗೋಧಿಯೊಂದೇ ದೊರಿಯುತ್ತಿದ.

2. ಗೋಧಿಯು ಅಕ್ಕಿಗಿಂತ ಪುಷ್ಟಿದಾಯಿ ಆಹಾರ

ಬಡವರು, ಅದರಲ್ಲೂ ಮುಖ್ಯವಾಗಿ ಹಳ್ಳೀ ವಲಯಗಳವರು ಅಕ್ಕಿಯೊಡನೆ ಮಿಶ್ರವಾಗಿ ಗೋಧಿಯನ್ನು ಉಪಯೋಗಿಸಲು ಬಹಳ ಹಿಂಜರಿಯುತಿದ್ದಾರೆ. ಗೋಧಿಯ ಆಹಾರಕ್ಕೆ ತುಪ್ಪ ಬೇಕೇಬೇಕು ಎಂಬ ಭಾವನೆಯೊಂದು ಜನರಲ್ಲಿ ಬೇರೂರಿದೆ ಇದು ತಪ್ಪು ಅಭಿಪ್ರಾಯ ಉತ್ತರ ಹಿಂದುಸ್ಥಾನದ ಬಡ ತರಗತಿಯವರು, ತುಪ್ಪ ಅಥವಾ ಎಣ್ಣೆಯೇನೂ ಇಲ್ಲದ ಗೋಧಿ ಹಿಟ್ಟನ್ನು ನೀರಲ್ಲಿ ಕಲಸಿ, ಬೆಂಕಿಯಲ್ಲಿ ಕಾಯಿಸಿ ಚಪಾತಿ ಮಾಡುತ್ತಾರೆ. ಅದರ ಹೆಸರು 'ಫುಲ್ಕ' ಎಂದು ಪಂಜಾಬ ಮತ್ತು ಇತರ ಕಡೆಗಳ ಗೋಧಿಯುಣ್ಣುವ ಜನರೇ ದೈಹಿಕವಾಗಿ ದೇಶದ ಇತರ ಕಡೆಗಳವರಿಗಿಂತ ಹೆಚ್ಚಿನ ಬಲಶಾಲಿಗಳು. ದವಸಧಾನ್ಯಗಳ ಪೈಕಿ ಅತ್ಯಂತ ಪೌಷ್ಟಿಕವಾದುದೆಂದರೆ ಗೋಧಿ. ಲೋಕದ ಹಲವು ಕಡೆಗಳಲ್ಲಿ ಅದೇ ಮುಖ್ಯಾಹಾರವಾಗಿದೆ. ಉತ್ತಮ ಆಹಾರಧಾನ್ಯಗಳ ಪಟ್ಟಿಗೆ ಗೋಧಿಯ ನಂತರ ರಾಗಿಗೆ ಸ್ಥಾನ ಸಲ್ಲುತ್ತದೆ. ರಾಗಿಯು ಬಡವರ ಆಹಾರವೆಂದೂ, ಜೈಲು ಆಹಾರವೆಂದೂ ಇದುವರೆಗಿದ್ದ ತಾತ್ಸಾರವು ತಪ್ಪು ಭಾವನೆಗಿದೆ.

3 ಗೋಧೀ ಉಪಯೋಗದ ವಿವಿಧ ವಿಧಾನ

ಮಿಲ್ ತಯಾರಿಯ ನಾಜೂಕಾದ ಅಕ್ಕಿಗಿಂತ ಕೈತಯಾರಿಯ ಮಸಕು ಅಕ್ಕಿ ಹೇಗೆ ಪೌಷ್ಟಿಕವೋ, ಹಾಗೆಯೇ ಇಡಿಯ ಗೋಧೀ ಹಿಟ್ಟು 'ಅಟ್ಟ'ವು'-ಗೋಧಿಯ ಬಿಳೀ ಹಿಟ್ಟು 'ಮೈಡಾ'ಗಿಂತ ಪುಷ್ಟಿದಾಯಕವಾಗಿದೆ ಗೋಧಿ ಅಥವಾ ಅಕ್ಕೀ ಕಾಳಿನ ಮೇಲ್ಹೊಗಲನ್ನು ಸುಲಿಯುವಾಗ ಅದರೊಂದಿಗೆ ಧಾತುಲವಣ ಮತ್ತು ವಿಟಮಿನ್‌ನಂತಹ ಉಪಯುಕ್ತ ಆಹಾರ ಭಾಗಗಳೂ ಕಳೆದುಹೋಗುತ್ತವೆ. ಆದರೆ ದುರ್ದೈವವಶಾತ್ ಇಡೀ ಗೋಧಿಹಿಟ್ಟಿಗಿಂತ ನಿಸ್ಸತ್ವವಾದ ಬಿಳಿ ಹಿಟ್ಟ(ಮೈಡಾ)ನ್ನು ಉಪಯೋಗಿಸುವದು ಈ ಕಾಲದ ಒಂದು 'ಫೇಶನ್' ಆಗಿಹೋಗಿದೆ. ಈಗ ನಮಗೆ ಕೊಡಲ್ಪಡುತ್ತಿರುವ ಆಸ್ಟ್ರೇಲಿಯದ ಗೋಧಿಯು ಇಂಡಿಯನ್ ಗೋಧಿಗಿಂತ ಮೃದುವುಳ್ಳದ್ದು. ಅದನ್ನು ಮನೆಯಲ್ಲೇ ಬೀಸುವ ಕಲ್ಲುಗಳಿಂದ ಅತೀ ಸುಲಭದಲ್ಲಿ ಕಡಿ ಮಾಡಲು ಅಥವಾ ಹಿಟ್ಟುಮಾಡಲು ಸಾಧ್ಯವಿದೆ ಗೋಧಿಯ ಕಡಿ ತುಂಡುಗಳನ್ನು ಅಕ್ಕಿಯಂತೆಯೇ ಅಡುಗೆ ಮಾಡಲಾಗುತ್ತದೆ. ಕೇವಲ ಗೋಧಿ ಹಿಟ್ಟಿನಿಂದಲೇ ಅಥವಾ [illegible] ಜೋಳ ಇತ್ಯಾದಿ ಧಾನ್ಯವನ್ನೇ ಅದಕ್ಕೆ ಸೇರಿಸಿಕೊಂಡು ಪೂರಿ ಅಥವಾ ಚಪಾತಿ ಮಾಡಬಹುದು ಅಂತೆಯೇ ಉಪ್ಪುಮಾವು, ಪರಂತಾ, ದೋಸೆ, ಪಾಮೋಸಾ ಇತ್ಯಾದಿಗಳೂ ಗೋಧಿ ಹಿಟ್ಟಿನಿಂದಾಗುತ್ತವೆ.

ಗೋಧಿ. ರಾಗಿ ಉಪಯೋಗವನ್ನು ಜನಪ್ರಿಯಗೊಳಿಸಿರಿ

ಆದ್ದರಿಂದ ಗೋಧಿ ಮತ್ತು ರಾಗಿಗಳನ್ನು ನಮ್ಮ ನಿತ್ಯಾಹಾರದ ಒಂದು ಅಂಗವಾಗಿ ಉಪಯೋಗಿಸುವಂತಹ ಕ್ರಮವು ಸರ್ವತ್ರ ಪ್ರಚಾರವಾಗಬೇಕು ಇವು ಅಕ್ಕಿಗಿಂತ ಅಗ್ಗ ಮತ್ತು ಪುಷ್ಟಿಕರವಿವೆ. ಪ್ರತಿಯೊಂದು ಕನ್ನಡ ಪತ್ರಿಕೆಯೂ ಈ ಕುರಿತು ಪ್ರಚಾರಕ್ಕೆ ತೊಡಗಲಿ. ನಮ್ಮ ಕೃಷಿ ಇಲಾಖಾಧಿಕಾರಿಗಳು, ಶಾಲಾಧ್ಯಾಪಕರು, ಹೆಲ್ತ್ ಇನ್ಸ್‌ಪೆಕ್ಟರರುಗಳು ಮತ್ತು ಕಾಂಗ್ರೆಸ್ ಕೆಲಸಗಾರರು [illegible] ಪ್ರಚಾರ ಕೈಕೊಂಡು, ಜನರ ಸ್ವಭಾವವನ್ನು ಕ್ರಮಕ ಪದ್ಧತಿಗಳಿಂದ ತಪ್ಪಿಸಿ ಅದು ಯೋಗ್ಯ ಹಾದಿ ಹಿಡಿಯುವಂತೆ ನೆರವಾಗಿ ಸ್ಥಿತಿ ಸುಧಾರಿಸಬಹುದು.

ಎ ಬಿ ಶೆಟ್ಟಿ

ಬಾಡಿಗೆಗೆ ದೊರಕುತ್ತವೆ.

ಹೊಸ ಉಡುವುಗಳು ಹೊಸ ಪರದೆಗಳು

ಹೊಸ ಇತರ ಉಪಕರಣಗಳು

ಶಾಲಾಮಕ್ಕಳ ಮತ್ತು ಎಮೆಚೂರ್ಸ್ ನಾಟಕ ಕಥಾಭಾಗದಲ್ಲಿ ಬರಬಹುದಾದ ವಿವಿಧ ಭೂಮಿಕೆಗಳಿಗನುಕೂಲವಾದ ಎಲ್ಲಾ ತರದ ಪರದೆ ಉಡುಪು ಸಹಿತ ಉಪಕರಣಗಳು ಬಹಳೇ ಕಡಿಮೆ ಬಾಡಿಗೆಗೆ ದೊರಕುತ್ತವೆ. ಅಗತ್ಯವಿದ್ದಲ್ಲಿ ಪೌಡರ್ ಕೆಲಸವನ್ನು ಸಹ ಮಾಡಿ ಕೊಡಲಾಗುವುದು. ಹೆಚ್ಚಿನ ವಿವರಕ್ಕೆ ಈ ಕೆಳಗಿನ ವಿಳಾಸಕ್ಕೆ ಎಂಟು ದಿವಸಗಳ ಮುಂಚಿತವಾಗಿ ಬರೆದುಕೊಳ್ಳುವುದು

B Budan Basha Saheb,
P. V. I., B. H E Boys School, Barkur,
P. O. Barkur.

The Canara Banking Corporation Limited.

(Incorporated in British India. Liability of Members is limited.)

Estd: 1906

Head Office: **UDIPI**, (S. K.)

Authorised Capital	Rs. 25,00,000/-
Issued & Subscribed Capital	Rs 16,00,000/-
Paid up Capital	Rs 14,55,165/-
Reserves	Rs 4,15,000/-

Total working Capital: exceed one crore & 24 lakhs.

ANNOUNCEMENT

Branches of the Bank have been opened at HUBLI & DHARWAR on 1—12—1944.



ಉಡುಪಿ, ಗುರುವಾರ ೨೮ ೧೨-೧೯೪೪

೧೯೪೪-೧೯೪೫

ಲೋಕದ ರಕ್ತಪ್ರವಾಹಕ್ಕೆ ನೆರೆಯೇರಿಸಿ, ಮಿಲಿಯಾವಧಿ ಬಡವರ ಉದರವಹ್ನಿಯನ್ನು ಇನ್ನಷ್ಟು ಪ್ರಜ್ವಲಗೊಳಿಸಿ, ಒಟ್ಟಿನ ಮೇಲೆ ಲೋಕಪ್ರಳಯವನ್ನು ಪರಮಾವಧಿಗೆ ಮುಟ್ಟಿಸಿ 1944ನೇ ಇಸವಿ ಕಳೆಯುತ್ತಿದೆ; 1945 ಕಾಲಿಡುತ್ತಿದೆ. ಪ್ರಪಂಚವು ೪೪ನ್ನು ದಾಟಿದುದೆಂದರೆ ತುಫಾನೆದ್ದ ಸಮುದ್ರದಲ್ಲಿ ಪ್ರಯಾಣಮಾಡಿದಂತೆ; ಮರುಭೂಮಿಯಲ್ಲಿ ಹಾದಿ ಹುಡುಕ್ಕಿನಡದಂತೆ! ಇಷ್ಟೊಂದು ಪ್ರಯಾಸದ ಅವಧಿಯು ಪ್ರಪಂಚದ ಪಾಲಿಗೆ ಈ ಮೊದಲಿದ್ದಂತೆ ಕಾಣುವದಿಲ್ಲ; ಆದರೆ ಇನ್ನು ಮುಂದೆ? 45ನೇ ಇಸವಿ ಇದಕ್ಕಿಂತ ಸುಗಮವಾಗುವದೆಂದು ಹೇಳುವದಾದರೂ ಹೇಗೆ? ತನ್ನ ಪೂರ್ವಿಕನು ಅಸ್ತಿವಾರ ಹಾಕಿಟ್ಟಿರುವ--ಅರ್ಧಮರ್ಧ ಮಾಡಿಟ್ಟಿರುವ--ಆಪತ್ತು, ಅನಾಹುತಗಳ ಗುಡಿಕಟ್ಟಿ ಕಳಶವಿಡುವದಕ್ಕಾಗಿಯೇ ಬರುತ್ತಿರುವ ಇಸವಿಯಿದು! ಅಂದಮೇಲೆ ಲೋಕವು ಕಳೆದ ವರುಷಕ್ಕಿಂತ ಹೆಚ್ಚಿನ ಸಂಕಷ್ಟಗಳನ್ನು ಬರುವ ವರುಷ ಅನುಭವಿಸಲು ಉಳಿದಿದೆ. ಪ್ರಪಂಚಕ್ಕೆಂತಹ ರಾಹು ಸಂಧಿಯಿದು!

41ರೊಂದಿಗೆ ನರಕಯಾತನೆಯೂ ಕಳೆಯಬಹುದೆಂಬ ಆಶೆಗೆ ಆದಿಭಾಗದಲ್ಲಿ ಅವಕಾಶವಿತ್ತು. ಈ ವರುಷದೊಳಗೆ ಹಿಟ್ಲರನ ಅವಸಾನವೆಂದು ನಿರೀಕ್ಷಿಸಿದವರು ಬಹಳ ಮಂದಿ. ಅಂಥವರಲ್ಲಿ ಮಿ. ಚರ್ಚಿಲ್ಲರೂ ಒಬ್ಬರು. ಹಾಗಾಗುತ್ತಿದ್ದರೆ 1944ಕ್ಕೆ ಅತೀಸಂಭ್ರಮದ ವಿದಾಯ ದೊರಕುತಿತ್ತು. ಯುರೋಪು ಯುದ್ಧವೊಂದು ಮುಗಿಯುತ್ತಿದ್ದರೆ, ಆ ನೆಲೆಯ ಜಪಾನು ಯುದ್ಧಕ್ಕೆ ಲೋಕವನ್ನು ಹೀಗೆ ದಣಿಸುವ ಶಕ್ತಿ ಉಳಿಯುತ್ತಿದ್ದಿಲ್ಲ. ಆದರೆ 44ನೇ ಇಸವಿ ಅಂತಹ ಭಾಗ್ಯವನ್ನು ಪಡೆದುಬಂದಿದ್ದಿಲ್ಲ. ಅದರ ಆದಿಭಾಗದಲ್ಲಿ ಹಿಟ್ಲರನಿಗೆ ಶನಿ ಹಿಡಿದಂತೆ ಕಾಣುತಿತ್ತು; ಅಂತ್ಯಭಾಗದಲ್ಲಿ ಶಕ್ತಿ ಹೆಚ್ಚಿದಂತೆ ಕಾಣುತ್ತಿದೆ. ಸಾವಿನ ಲಕ್ಷಣ ತೋರಿಸುತ್ತಿದ್ದ ನಾಜೀ ಭೇತಾಳ ಶಕ್ತಿಯು ಈಗ ತೋರಿಸಹತ್ತಿರುವದು ಸಾಹಸವನ್ನೇ. ಈ ಲೋಕಯುದ್ಧಕ್ಕೀಗ ಐದನೇ ವರುಷ; ಈ ಅವಧಿಯಲ್ಲಿ ಇದನ್ನು ಆರಂಭಿಸಿದವರ ಸೋಲು ಹಣ್ಣಾಗಿರಬೇಕು--ಆದರೆ ಯುದ್ಧಕ್ಕಿಂತಹ ಮಾರ್ಧಿಕ್ಯ ಬಂದಂತೆ ಕಾಣುವದಿಲ್ಲ!

ಹಿಂದುಸ್ಥಾನಕ್ಕೆ 1944ರ ಕಾಣಿಕೆಯೇನು? ಅನ್ನಾಭಾವ; ಜನ್ಮಸಿದ್ಧ ಹಕ್ಕಾದ ಸ್ವಾತಂತ್ರ್ಯದ ಮಟ್ಟಿಗೆ ಪೂರ್ಣ ನಿರಾಶೆ; ವ್ಯಕ್ತಿಗತ ಸ್ವಾತಂತ್ರ್ಯಗಳಿಗೂ ತಡೆ! ಗಾಂಧೀಜೀಯೊಬ್ಬರನ್ನು ಅದು ಜೈಲಿನಿಂದ ಹೊರಬಿಸಿತ; ಆದರೆ ಅದಕ್ಕಾಗಿ ಅಭಿನಂದನೆ ಸಲ್ಲಬೇಕಾದದು ಜ್ವರಾಣುಗಳಿಗೊ, ಕೊಕ್ಕೇಹುಳಗಳಿಗೊ ಹೊರತು ಬೇರೆಯವರಿಗಲ್ಲ. ದೇಶದಲ್ಲಿ ಒಂದೆಡೆ ಮಿಲಿಯಾವಧಿ ಮಂದಿಯ ಉಪವಾಸವಾದರೆ ಮತ್ತೊಂದೆಡೆ ಕೆಲಮಂದಿ ಸಮಾಜಕಂಟಕರ ಲಾಭಖೋರತನ; ರಾಜಕೀಯದಿಂದಾರಂಭಿಸಿ, ನಿತ್ಯಜೀವನದ ವರೆಗಿನ ಪ್ರತಿಯೊಂದು ವಿಷಯವೂ ಅಸ್ತವ್ಯಸ್ತವಾಗಿದ್ದರೂ, ಸರ್ವವೂ ಸುಗಮವಾಗಿವೆಯೆಂಬ ಅಧಿಕಾರಿಗಳ ಅಭಿಪ್ರಾಯ; ಜನವಿಶ್ವಾಸಕ್ಕೆ ಪಾತ್ರರಾದ ರಾಷ್ಟ್ರಮುಖಂಡರನ್ನು ಬಂದೀಖಾನೆಗಳೊಳಗೆ ಕೊಳೆಯಬಿಟ್ಟು, ಜೋಹುಕುಂಮಾಲರನ್ನೇ ರಾಷ್ಟ್ರಪ್ರತಿನಿಧಿಗಳೆನ್ನುವ ಘೋಷಣೆ--ಇಂತಹ ತಿರುಗುಮುರುಗು ಪ್ರಭಾವಕ್ಕೊಳಗಾದ ವರುಷವಿದು. ಗಾಂಧಿ ಜಿನ್ನಾ ಮಾತುಕತೆ ನಡೆದು ಮುರಿದುಹೋಯಿತು; ಸ್ವದೇಶ ವಿದೇಶಗಳಲ್ಲಿದ್ದ ಬಿಕ್ಕಟ್ಟು ನಿವಾರಣೆಯ ಕೂಗು ಅರಣ್ಯರೋದನವಾಯಿತು; ಎಲ್ಲವನ್ನೂ ಕೆಡಿಸಿ 1944 ಕಳೆದುಹೋಯಿತು!

1945 ಬರುತ್ತಿದೆ; ಏನನ್ನೆಲ್ಲಾ ತರುತ್ತಿದೆಯೋ ಯಾರು ಬಲ್ಲರು? ಜರ್ಮನಿ ಯುದ್ಧದ ಕೊನೆಯಂಕವನ್ನಂತೂ ಈ ವರುಷದಲ್ಲೇ ಕಾಣಬೇಕು. ಅದು ಅತಿ ಭೀಕರವಾಗಿ ಸಾಗುವದೆಂಬುದು ನಿರ್ವಿವಾದ. ಜಪಾನಿನ ಸರದಿ ಈ ಇಸವಿಯಲ್ಲೇ ಬರುವಂತಿಲ್ಲ. ಆದರೆ ಆಸರ ಯುದ್ಧದ ತೀಕ್ಷ್ಣತೆಯೂ ಹೆಚ್ಚುವ ಸಂಭವವಿದೆ. ಐದು ವರುಷಗಳ ಯುದ್ಧದಿಂದ ಲೋಕವು ದಣಿದು ಹಣ್ಣಾಗಿದೆ ಎಂಬುದಿಷ್ಟರಲ್ಲೇ ಸ್ಪಷ್ಟವಾಗಿದೆ; ಆರನೇ ವರುಷದಲ್ಲಿ ಆಯಾಸವು ಅಸಹನೀಯವಾಗುವ ಸಂಭವವಿದೆ. ಹಿಂದುಸ್ಥಾನದ ರಾಜಕೀಯ ಬಿಕ್ಕಟ್ಟು ಇಷ್ಟರಲ್ಲೇ ಕೊಳೆತು ನಾರಹತ್ತಿರುವದರಿಂದ ಇನ್ನುಮುಂದೆ ಅದೊಂದು ಅಭ್ಯಾಸವಾಗಿ ಹೋಗಬಹುದು. ಕಳೆದ ವರುಷ ಭಾರತಕ್ಕೆ ಸೋಂಕಿದ್ದ ಜಪಾನೀ ರಾಹುಗ್ರಹಣ ಈ ಬಾರಿ ದೊಡ್ಡ ಪರಿಮಾಣದಲ್ಲಿ ತಾಗಲಾರದೆಂಬ ನಂಬಿಕೆಯಿಲ್ಲ.

ಅಂತೂ 1944 ಕಳೆಯಿತಲ್ಲಾ ಎಂದು ಸಂತೋಷಿಸುವಾಗಲೇ 1945 ಬಂತಲ್ಲಾ ಎಂದು ದುಃಖಿಸಬೇಕಾಗಿದೆ. ಆದರೆ ಒಂದು ಮಹತ್ತು ಮರೆಯುವಂತಹದಲ್ಲ. ಹಿಂದಿನ ಯುಗಯುಗಾಂತರಗಳ ಪೂರ್ವಿಕರಿಗೆ ದೊರೆಯದಿದ್ದಂತಹ, ಮುಂದಿನ ತಲತಲಾಂತರಗಳ ಸಂತಾನಪರಂಪರೆಗೆ ಪ್ರಾಯಶಃ ದೊರೆಯಲಾರದಂತಹ, ಒಂದು ಅಪೂರ್ವ ಯೋಗ- ಅದ್ಭುತಗಳ ಯುಗ--ನಮ್ಮ ಪಾಲಿಗೆ ಬಂದಿದೆ. ಅಸಾಧಾರಣ ಧೈರ್ಯಸ್ಥೈರ್ಯ, ಅಸಾಮಾನ್ಯ ಸಹನಶಕ್ತಿಗಳ ಪ್ರದರ್ಶನದಿಂದ ಅನುಭವಿಸಬಹುದಾದ ಸುಸಂದರ್ಭವಿದು. ಹಾಗಾಗಲಿ--ಇಂದಿನ ಕಗ್ಗತ್ತಲಲ್ಲಿ ಪ್ರತಿಯೊಬ್ಬನ ಕಲಿತನದ ದೀವಿಗೆ ಬೆಳಗಲಿ, ಎಂದೇ ನಮ್ಮ ಹೊಸ ವರುಷದ ಹಾರೈಕೆ.

——ಅ. ಭಾ. ಹಿಂದೂ ಮಹಾ ಸಭಾ——

೨೬ನೇ ವಾರ್ಷಿಕಾಧಿವೇಶನ

ಬಿಲಾಸಪುರದಲ್ಲಿ ಇದೇ ತಾ 24ರಿಂದ ಡಾ| ಶ್ಯಾಮ ಪ್ರಸಾದ ಮುಖರ್ಜಿಯವರ ಅಧ್ಯಕ್ಷತೆಯಲ್ಲಿ ಅತ್ಯಂತ ವಿಜೃಂಭಣೆಯಿಂದ ನಡೆದಿದೆ. 5000ಕ್ಕೆ ಮಿಕ್ಕಿ ಸಭಿಕರು ಹಾಜರಿದ್ದರಲ್ಲದೆ ದೇಶದ ಹಿಂದೂ ಪ್ರಮುಖರೆಲ್ಲಾ ಆಗಮಿಸಿದ್ದರು. ಬಿಲಾಸಪುರದ ಚರಿತ್ರೆಯಲ್ಲೇ ಇಲ್ಲದಷ್ಟು ಜನ ಸಂದಣಿ ನೆರೆದಿತ್ತು. ಶ್ರೀ ಸಾವರ್ಕರ್ ಮತ್ತು ಅಧ್ಯಕ್ಷ ಡಾ| ಮುಖರ್ಜಿಯವರಾಗಮಿಸಿ ಜೈಕಾರಗಳ ಸ್ವಾಗತ ಪಡೆದೊಡನೆ 'ವಂದೇ ಮಾತರಂ' ಹಾಡಲಾಯಿತು.

ಶ್ರೀ. ಸಾವರ್ಕರರ ಸಂದೇಶ

ಅಧಿವೇಶನದ ಉದ್ಘಾಟನೆಮಾಡುತ್ತಾ ಶ್ರೀ. ಸಾವರ್ಕರರು—"ಮುಸಲ್ಮಾನರ ಮನವೊಲಿಸುವದಕ್ಕಾಗಿ ಹಿಂದುಗಳೀಗ ತಮ್ಮ ವಿಶಿಷ್ಟ ಕುರುಹುಗಳನ್ನು ಬಿಡುತ್ತಿಲ್ಲವೆಂಬುದು ಸಂತೋಷ. ಠಾಗೋರರಿಂದ ರಚಿಸಲ್ಪಟ್ಟಿದ್ದ ರಾಷ್ಟ್ರಗೀತೆಯನ್ನು ತ್ಯಜಿಸಿ 'ಇಕ್ಬಾಲರ' ಗೀತೆಯನ್ನು ಹಿಂದುಗಳು ಅಂಗೀಕರಿಸಿಕೊಂಡುದಿದೆ. ಆದರೆ ಮುಸಲ್ಮಾನರನ್ನು ಮೆಚ್ಚಿಸುವ ಪ್ರಯತ್ನವೆಷ್ಟು ಹೆಚ್ಚಾಯಿತೋ, ಅಷ್ಟೇ ಅವರ ಬೇಡಿಕೆಗಳೂ ಹೆಚ್ಚುತ್ತಾ ಬಂದವು. ಈಗ ತಾನೆ ತಮ್ಮ ಪುನರುತ್ಥಾನದ ಸ್ಫೂರ್ತಿ ಹಿಂದುಗಳಲ್ಲಿ ಬೆಳೆಯಹತ್ತಿರುವದು ಆನಂದದ ವಿಷಯ. ಕಡಿಮೆಪಕ್ಷ ತಾವು ಹಿಂದುಗಳೆಂದು ಹೇಳಿಕೊಳ್ಳುವದರಲ್ಲಿ ಹೆಮ್ಮೆಪಡುವ ಒಂದು ಕೋಟಿ ಹಿಂದುಗಳಾದರೂ ಇದ್ದಾರೆ" ಎಂದರು.

ಸ್ವಾಗತಾಧ್ಯಕ್ಷ ಶ್ರೀ. ಪಿ. ಸಿ. ಬೋಸ್.

ಇವರು ಜಬ್ಬಲ್‌ಪುರ ನಗರ ಸಭಾಧ್ಯಕ್ಷರು. ತಮ್ಮ ಸ್ವಾಗತ ಭಾಷಣದಲ್ಲಿ "ಅಲ್ಪ ಸಂಖ್ಯಾಕ ಸಮಾಜವೊಂದು ತನ್ನ ಸಂಖ್ಯೆಗೂ ಮಿಕ್ಕಿದ ಅಧಿಕಾರಗಳನ್ನು ಕೇಳುವದು ಹೇಗೆ ಎಂಬುದೇ ನನಗರ್ಥವಾಗದು" ಎಂದಿದ್ದಾರೆ "ಧಾರ್ಮಿಕ ಹಕ್ಕಿನ ಆಧಾರದಿಂದ ಪಿತೃಭೂಮಿಯೊಳಗಡೆಯಲ್ಲೊಂದು ಪ್ರತ್ಯೇಕ ರಾಷ್ಟ್ರ ಸ್ಥಾಪನೆಯಾದುದು ಲೋಕದ ಚರಿತ್ರೆಯಲ್ಲೇ ಇಲ್ಲ" ಎಂದು ಹೇಳಿ ಸಿಂಧ್ ಸರಕಾರವು ಸತ್ಯಾರ್ಥ ಪ್ರಕಾಶದ 14ನೇ ಅಧ್ಯಾಯಕ್ಕೆ ಹಾಕಿರುವ ಬಹಿಷ್ಕಾರವನ್ನು ಖಂಡಿಸಿದರು. ಹಿಂದೂ ಕಾನೂನಿನ ಸುಧಾರಣೆಯು ಕುಂತು ಇನ್ನಷ್ಟು ಅನುಕೂಲಕಾಲವನ್ನೇ ಚುನಾಯಿಸಿಕೊಳ್ಳಬೇಕೆಂದು ಶ್ರೀ ಬೋಸರ ಅಭಿಪ್ರಾಯ. ಮಧ್ಯ ಪ್ರಾಂತ್ಯವನ್ನು ಭಯಕ್ಕೀಡುಮಾಡಿರುವ ಒಂದು ಸಮಸ್ಯೆಯೆಂದರೆ ಬಿರಾರನ್ನು ಹೈದರಾಬಾದಿನ ನೈಜಾಮ್ ಆಡಳಿತೆಗೇನೇ ಸೇರಿಸಬೇಕೆಂದು ಮುಸಲ್ಮಾನರು ಹೂಡಿರುವ ಚಳವಳಿ. ಪ್ರಾಂತ್ಯದ ಅತಿ ಮುಖ್ಯ ಭಾಗವಾದ ಹಿಂದೂಬಹು ಸಂಖ್ಯಾಕರಿರುವ ಹೈದರಾಬಾದು ನಿಜಾಮರ ಕೈಯಲ್ಲಿದೆ. ಇನ್ನು ಬಿರಾರನ್ನೂ ಅವರಿಗೊಪ್ಪಿಸಿದಲ್ಲಿ ಮಧ್ಯ ಪ್ರಾಂತದಲ್ಲಿ ಸಿಂಧಿಗಿಂತಲೂ ಕಳಕಳಿಯದೊಂದನ್ನು ನಿರ್ಮಿಸಿದಂತೆಯೇ ಸರಿ" ಎಂದು ಶ್ರೀ ಬೋಸರೆಂದಿದ್ದಾರೆ.

ಡಾ| ಮುಖರ್ಜಿಯವರ—

ಅಧ್ಯಕ್ಷ ಭಾಷಣವು ಮನೋಜ್ಞವೂ ವಿಚಾರಣೀಯವೂ ಇದ್ದಿತು ಅದು ಸರ್ವರಿಂದ ಶ್ಲಾಘಿಸಲ್ಪಟ್ಟಿದೆ. ಸಾವರ್ಕರರಂತೆ ಕೇವಲ ರಕ್ತ ಬಿಸಿಯೇರಿಸುವ ಭಾಷಣ ಮುಖರ್ಜಿಯವರದಲ್ಲ; ಮೆದುಳಿಗೂ ಕೆಲಸ ಕೊಡುತ್ತದೆ. ಭಾರತದ ಭವಿಷ್ಯದ ಹಿತ ಸಾಧನೆಗಾಗಿ ಡಾ| ಮುಖರ್ಜಿಯವರು ಎಲ್ಲಾ ಪಕ್ಷೀಯರ ಒಗ್ಗಟ್ಟಿಗಾಗಿ ಹೃತ್ಪೂರ್ವಕ ಮಾಡಿಸಿರುವದಕ್ಕಂತೂ ಸುಸ್ವಾಗತ ಸಲ್ಲಬೇಕು. ಹಿಂದೂ ಮಹಾಸಭೆಯ ದೃಷ್ಟಿಯಿಂದ ಡಾ| ಮುಖರ್ಜಿಯವರು ಕೆಲವು ಅಲ್ಪ ವಿಷಯಗಳಿಗೂ ಪ್ರಾಮುಖ್ಯತೆ ಕೊಟ್ಟಿರಬಹುದು; ಸ್ವಾಭಾವಿಕವಾಗಿ ಅವರ ಭಾಷಣದಲ್ಲಿ ಹಿಂದುತ್ವವೇ ತಿರುಳಾಗಿ ಸೇರಿರಬಹುದು. ಆದರೆ ಅದು ರಾಷ್ಟ್ರೀಯ ಭಾವನೆಗಿಂತ ಬಹಳ ಭಿನ್ನವಾಗಿಲ್ಲ.

— ಭಾರತದ ಯುದ್ಧಾರ್ಥಿಕ ಸ್ಥಿತಿ —

ರಿಜರ್ವ್ ಬೇಂಕಿನ ಇತ್ತೀಚೆಗಿನ ನಿರ್ಮಾಣಾಂಕೆಗಳ ಆಧಾರದಿಂದ, ಕಳೆದ ವಾರ 1 ಕೋಟಿ ರೂಪಾಯಿಯಷ್ಟು ಹೆಚ್ಚಿಗೆ ನೋಟುಗಳು ಹೊರಬಿದ್ದಿವೆಯೆಂದು ತಿಳಿದು ಬರುತ್ತದೆ. ಯುದ್ಧಕಾಲದ ಹಣಕಾಸು ವಹಿವಾಟುಗಳ ಭೀಕರತೆಗೆ ಇದೊಂದು ನಿದರ್ಶನ. ಇಂತಹ ಅತಿ ಪ್ರಸರಣವನ್ನು ಪರಿಹಾರಕಾರಯಾಗಿ ತಡೆಗಟ್ಟದಿದ್ದಲ್ಲಿ ಹಿಂದುಸ್ಥಾನದ ಮೂಲ ಧಂಡವಾಳಕ್ಕೆ ಧಕ್ಕೆಯೊದಗುವ ಅಪಾಯವಿದೆ. ಹೊಣೆಗೆ ಹೆಗಲೊಡ್ಡುವ ದೇಶದ ಆರ್ಥಿಕ ತಳಗಟ್ಟು ಭದ್ರವಾಗಿರಬೇಕೆಂಬುದು ನಿರ್ವಿವಾದ. ರಿಜರ್ವ್ ಬೇಂಕಿನ ಹೇಳಿಕೆಯಿಂದ ನೋಟುಗಳ ವಿಕರಣೆ ಹೆಚ್ಚಲು ಯುದ್ಧವೊಂದೇ ಕಾರಣವೆಂಬುದು ಸ್ಪಷ್ಟವಾಗಿದೆ. ಯುದ್ಧ ಪ್ರಾರಂಭವಾಗುವಾಗ ನಮ್ಮಲ್ಲಿ ಹೊರಡುತ್ತಿದ್ದ ನೋಟು ರೂ. 182·13 ಕೋಟಿಗಳಿದ್ದು, ಕಳೆದ ದಶಂಬರ್ ತಾ.15ರಲ್ಲಿ ಅದು ರೂ 994.69 ಕೋಟಿಗಳಷ್ಟಾಗಿದೆ. ಹಿಂದಿಗಿಂತ ಸುಮಾರು ಐದು ಪಾಲಷ್ಟು ಅಧಿಕ. ಇದಕ್ಕೆ ಹೊಂದಿಕೆಯಾಗಿ ಸ್ಟರ್ಲಿಂಗ್ ಸಾಲಗಳ ಸಮಸ್ಯೆಯಿದೆ. ಇಂತಹ ಅತಿಪ್ರಸರಣವನ್ನು ತಡೆಗಟ್ಟಲು ಬೆಲೆ ನಿಯಂತ್ರಣ ಮತ್ತು ಉಳಿತಾಯಗಳೇ ಉಪಾಯಗಳೆಂದು ಸರಕಾರವನ್ನುತ್ತಿದೆ ಆದರೆ ಇವು ಈ ತನಕ ಜಯಶೀಲವಾಗಿಲ್ಲ. ಇದಕ್ಕಿರುವ ನಿಜವಾದ ಪರಿಹಾರವೆಂದರೆ, ಅವರ ಆರ್ಥಿಕ ಶಕ್ತಿಗೆ ಸಹನೆಯಾಗುವಷ್ಟನ್ನೇ ಭಾರತದಿಂದ ಪಡೆಯಬೇಕು. ಉಳಿದ ಅಂಶವನ್ನು ಅವರು ಪಡಿಸಿಕೊಂಡಾಗಲೀ, ಭಾರತದ ಉತ್ಪಾದನಾ ಶಕ್ತಿಯನ್ನು ಹೆಚ್ಚಿಸಿಯಾಗಲೀ ಪಡೆಯಬೇಕು. ಆದರೆ ವಿದೇಶೀ ಸರಕಾರವು ಅದಕ್ಕೆ ತಯಾರಿಲ್ಲ.

ಜರ್ಮನರ ಪ್ರತಿಧಾಳಿಗೆ ತಡೆ ಬೀಳುವದೆ?

ರಶ್ಯಾನರ ರಭಸ ಹೆಚ್ಚಿದೆ

ಜರ್ಮನರ ಮಹೋಗ್ರಧಾಳಿ

ದಶಂಬರ ತಾ 16ರಲ್ಲಿ ನಾಜಿಗಳ ಅಪ್ರತಿಮ ಸರ್ವಸೇನಾನಿ ರುಂಡ್‌ಸ್ಟೆಡನು ಜರ್ಮನ್ ಗಡಿಯಲ್ಲಿ ಆರಂಭಿಸಿರುವ ಮಹೋಗ್ರ ಪ್ರತಿಧಾಳಿಯು ಇದುವರೆಗೂ ಅಭಿವೃದ್ಧಿ ಹೊಂದುತ್ತಲೇ ಇದೆ. ವಿಮಾನ ಟೇಂಕುಗಳನ್ನು ಅಧಿಕಸಂಖ್ಯೆಯಲ್ಲಿ ಮುಂದೊಡ್ಡಿ ಅಕಸ್ಮಾತ್ ಪ್ರಳಯ ಪ್ರವಾಹದಂತೆ ಹರಿದು ಬಂದ ರುಂಡ್‌ಸ್ಟೆಡ್ ಧಾಳಿಯಿಂದ ಪ್ರಥಮತಃ ಅಮೇರಿಕನ್ ಸೇನೆ ಅನುಭವಿಸಿದ ಹಾವಳಿಯು ಕಣ್ಣೀರು ಬರಿಸುವಂತಹದಿದೆ. ಎಲ್ಲವನ್ನೂ ನುಜ್ಜುಗುಜ್ಜು ಮಾಡಿಕೊಂಡು ನಾಜೀಸೇನೆಯ ಹೊಡೆತ ಮುದ್ದಾನೆಯ ತುಳಿತವಾಗಿ ಮಿತ್ರಸೇನೆಯನ್ನು ನಿಪಾತಮಾಡಿದ್ದಿತು. ಮಿತ್ರಸೇನಾನಿಗಳು ತಳಮಳಕ್ಕೀಡಾಗಿದ್ದರು.

ತಾತ್ಕಾಲಿಕ ಸುಧಾರಣೆ

ಪ್ರಕೃತ ಜನರಲ್ ಆಯಿಸೆನ್ಹೋವರರು ಸುಧಾರಿಸಿಕೊಂಡು ಜರ್ಮನ್ ಧಾಳಿಯನ್ನು ತಡೆಗಟ್ಟಲು ಸಜ್ಜಾದಂತಿದೆ ಗಡಿಯ ಉತ್ತರ ಮತ್ತು ದಕ್ಷಿಣದ ಮಿತ್ರಸೇನೆಗಳನ್ನು ಭೇದಿಸಿ ನಡೆಬಡಿದು ಮಿತ್ರರ ಯುದ್ಧ ಹಂಚಿಕೆಯನ್ನೇ ಅಡಿಮೇಲು ಮಾಡುವ ಗುರಿಯಿಂದ ಜರ್ಮನ್ ಧಾಳಿಯಾರಂಭವಾಗಿದ್ದಿತು; ಆ ಜರ್ಮನ್ ಸೇನೆಯ ಆಕ್ಕಪಕ್ಕಗಳ ಮೇಲೆ ಉತ್ತರದಿಂದಲೂ, ದಕ್ಷಿಣದಿಂದಲೂ ಕವಿದು ಬಿದ್ದು ತುಂಡರಿಸಬೇಕೆಂದು ಈಗ ಮಿತ್ರರು ಅಣಿಯಾಗಿದ್ದಾರೆ ಅಲ್ಲಲ್ಲಿ ತಡೆಯೊಡ್ಡಿದ್ದಾರೆಂದೂ ತಿಳಿದುಬರುತ್ತದೆ. ಈಗೀಗ ಆಕಾಶವೂ ಶುಭ್ರವಾಗ ಹತ್ತಿರುವದರಿಂದ ಮಿತ್ರರಿಗೆ ವಿಮಾನ ಧಾಳಿಯ ಅನುಕೂಲತೆಯೂ ದೊರೆತಿದೆ

ಯುದ್ಧ ಬಿರುಸಾಗಿದೆ

ಆದರೆ ನಾಜಿಗಳ ಈ ಧಾಳಿಯು ತಾತ್ಕಾಲಿಕ ಸಾಹಸವಲ್ಲ, ವ್ಯವಸ್ಥೆಯಿಂದ ದೂರದ ಗುರಿಯಿಟ್ಟುಕೊಂಡು ಆರಂಭಿಸಿದ ಹೊಡೆತ ಅದಕ್ಕೀವರೆಗೂ ಸಮಬಲ ಪ್ರತಿಭಟನೆ ಬಿದ್ದಿಲ್ಲ. ಮಾತ್ರವಲ್ಲ, ಮೊದಲಿನ ಆವೇಶವನ್ನು ತಣಿಸಿದ್ದೇವೆಂದು ಮಿತ್ರರನ್ನುತ್ತಿದ್ದಾರಾದರೂ ಸಾರ್, ಮ್ಯೂಸ್ ಹೊಳೆಗಳನ್ನು ದಾಟಿ ನಾಜಿಗಳು ಮುಂದೆಮುಂದೆ ಬರುತ್ತಿದ್ದಾರೆ. ಅಧಿಕಾಧಿಕ ಸಂಖ್ಯೆಯಲ್ಲಿ ಮಿತ್ರಸೇನೆಗಳ ಹಿಂಭಾಗಕ್ಕೆ ಗಾಳಿಕೊಡೆಯವರನ್ನಿಳಿಸುತ್ತಿದ್ದಾರೆ. ಡಿನ್ಹ್ಯಾನ್‌ನಂತಹ ಪ್ರಾಮುಖ್ಯ ನಗರದವರೆಗೂ ಮುಂದೊತ್ತಿದ್ದಾರೆ. ಇದುವರೆಗಿನ ಮಿತ್ರರ ವಿರೋಧವು ಪ್ರತಿಬಂಧವೆನ್ನುವಷ್ಟೇ ಹೊರತು ಪೂರ್ಣ ತಡೆಯೆನ್ನಲಾಗುವಷ್ಟು ಪ್ರಬಲವಿಲ್ಲ.

ಆಕಾಶ ಹೊಡೆತಗಳು

ಜರ್ಮನರ ಹೊಡತಕ್ಕೆ ಪ್ರತೀಕಾರವೆಂಬಂತೆ ಅಮೇರಿಕನ್ ವಿಮಾನಗಳು ಇದುವರೆಗಿನ ದಾಖಲೆಗಳನ್ನೆಲ್ಲಾ ಮುರಿಯುವಷ್ಟು ಅಧಿಕಸಂಖ್ಯೆಯಿಂದ ಕಳದವಾರ ಜರ್ಮನಿ ಮೇಲೆ ಬೋಂಬುಧಾಳಿ ನಡಿಸಿವೆ. ಈ ಧಾಳಿಯಲ್ಲಿ 3000 ವಿಮಾನಗಳು ಭಾಗವಹಿಸಿದ್ದುವು. ಅಂತೆಯೇ ಇಂಗ್ಲಾಂಡಿನ ಉತ್ತರ ಮತ್ತು ದಕ್ಷಿಣ ಭಾಗಗಳ ಮೇಲೆ ಜರ್ಮನರ ವಿ 2 ರ ಹೊಡೆತ ಪ್ರಬಲವಾಗಿ ಸಾಗಿದೆ ಇದುವರೆಗೆ ರೆಕ್ಕೆ ಬೋಂಬು ಮತ್ತು ರೋಕೆಟ್ ಧಾಳಿಗಳಿಗೆ ದಕ್ಷಿಣ ಇಂಗ್ಲಾಂಡೊಂದೇ ಗುರಿಯಾಗಿದ್ದಿತು. ಈ ಬಾರಿ ಉತ್ತರ ಇಂಗ್ಲಾಂಡಿಗೂ ಆ ರೋಗ ತಗಲಿದುದೊಂದು ವಿಶೇಷ

ಗೋಬೆಲ್ಸನಲ್ಲಿ ಆಶೋದಯ.

ಇದೇ ತಾ 24ರಲ್ಲಿ ಜರ್ಮನ್ ಪ್ರಚಾರ ಮಂತ್ರಿ ಡಾ ಗೋಬೆಲ್ಸನು ವಿಜಯ ಭರವಸೆ ವ್ಯಕ್ತಿ ಪಡಿಸಿದ್ದಾನೆ. "ಜರ್ಮನ್ ಚರಿತ್ರೆಯಲ್ಲೇ ಅಪೂರ್ವವಾದ ಒಂದು ವರುಷವನ್ನು ನಾವು ದಾಟಿ ಬಂದೆವು ಕೆಲವೊಮ್ಮೆ ಈ ಭಾರವು ನಮ್ಮ ಶಕ್ತಿಗೆ ಮೀರಿದವೆಂಬ ಚಿಂತ ನಮ್ಮಲ್ಲಿ ಕೆಲವರಿಗೆ ಹುಟ್ಟಿದೆ. ಆದರೆ ಈ ದಿನ ಸಂಜೆ, ಜರ್ಮನ್ ಜನತೆಗೆ ಉಜ್ವಲ ಭವಿಷ್ಯವಿದೆಯೆಂದು ಸುದೃಢ ವಿಶ್ವಾಸದಿಂದ ನಾನು ಹೇಳಬಲ್ಲೆ. ಕಳದ ಕೆಲವು ತಿಂಗಳುಗಳಲ್ಲಿ ನಾವು ಸೋಲಿಗೆ ತೀರಾ ಸಮೀಪವಾಗಿದ್ದೆವು ಆದರೆ ನಾವು ಗಲಿಬಿಲಿಗೊಳ್ಳಲಿಲ್ಲ. ಇತರ ರಾಷ್ಟ್ರಗಳಂತೆ ಸೋಲನ್ನೊಪ್ಪಿಕೊಳ್ಳುತಿದ್ದರೆ ನಾವಿನ್ನು ರಲ್ಲೇ ನಾಶವಾಗ [illegible] ಪ್ರತಿಭಟನೆ ಮತ್ತು ತಾಡನದ. ನಮ್ಮ ರಾಷ್ಟ್ರ ಶಕ್ತಿ ಪುನಃ ದೊಡ್ಡ ಪರಿಮಾಣದಲ್ಲಿ ಮುಂದೆ ಬಂದಿದೆ" ಎಂದಿವನು ಗೋಬೆಲ್ಸ್.

ಹಿಟ್ಲರ್ ಹೇಗಿದ್ದಾನೆ?

'ಹಿಟ್ಲರನೀಗ ರಾತ್ರಿ ಹಗಲು ಹಂಚಿಕೆ ತಯಾರಿಯಲ್ಲೇ ಇದ್ದಾನೆ ಹೀಗ ಭವಿಷ್ಯಕ್ಕಾಗುವ ಯೋಜನೆಯಲ್ಲೇ ಪೂರ್ಣ ತಲ್ಲೀನನಾಗಿ ಆತನಿದ್ದುದನ್ನು ನಾನು ಇದುವರೆಗೆ ಕಂಡುದಿಲ್ಲ' ಎಂದು ಗೋಬೆಲ್ಸನನ್ನುತ್ತಾನೆ ಹಿಟ್ಲರನೀಗ ಕೆಲಕಾಲದಿಂದ ಬವೇರಿಯಾದ ಬೆಕ್ಟೆಸ್‌ಗೇಡನ್ ಎಂಬಲ್ಲಿ ಇದ್ದಾನೆಂದು ಊಹೆ ಇತ್ತೀಚೆಗೆ ಅಲ್ಲಿ ಹಿಟ್ಲರ ಪ್ರಾಣಾಪಹಾರದ ಮತ್ತೊಂದು ಪ್ರಯತ್ನ ನಡೆಯಿತೆಂದು 'ನ್ಯೂಸ್ ಕ್ರಾನಿಕಲ್' ಪತ್ರಿಕೆಗೊಬ್ಬ ಬಾತ್ಮೀದಾರ ಬರೆದಿದ್ದಾನೆ. ಇಡೀ ಬೆಕ್ಟೆಸ್‌ಗೇಡನ್ ಜಿಲ್ಲೆಯು ಎಸ್. ಎಸ್. ಸೈನಿಕರ ಸ್ವಾಧೀನದಲ್ಲಿದೆಯೆಂದೂ ಹೊರಗಿನ ವ್ಯವಹಾರಗಳನ್ನೆಲ್ಲಾ ಕಡಿಯಲಾಗಿದೆಯೆಂದೂ ವಾರ್ತೆಯಿದೆ

ರಶ್ಯಾನರ ನವಧಾಳಿ

ರಶ್ಯನರು ಸುಮಾರು 700 ಮೈಲು ಉದ್ದಕ್ಕೆ ಭಳಿಗಾಲದ ನವಧಾಳಿಯಾರಂಭಿಸಿದ್ದಾರೆಂದು ಜರ್ಮನರು ಕೆಲದಿನಗಳಿಗೆ ಮೊದಲೇ ಹೇಳಿದ್ದರು. ಆದರೆ ಮಿತ್ರಪಾಳಯದಿಂದ ಇದುವರೆಗೆ ಆ ಕುರಿತು ಯಾವ ವಾರ್ತೆಯೂ ಬಂದಿಲ್ಲ. ದೊಡ್ಡ ಪರಿಮಾಣದ ಹೊಸ ಧಾಳಿಗಳನ್ನಾರಂಭಿಸಿದ ಮೇಲೂ ವಾರ್ತೆಯನ್ನು ಮಾತ್ರ ರಶ್ಯನರು ಹಲವು ದಿನಗಳ ವರೆಗೆ ಪ್ರಕಟಿಸದಿದ್ದ ದೃಷ್ಟಾಂತಗಳು ಈ ಮೊದಲಿದ್ದುವು. ಆದರ ಈ ಬಾರಿ ಜರ್ಮನರೇ ಉದ್ವೇಗಪೂರ್ವಕ ಹುಸಿಪ್ರಚಾರಮಾಡಿರಬೇಕೆಂದು ನಂಬಲಾಗಿದೆ. ಕಳೆದ ಒಂದೆರಡು ವಾರಗಳಲ್ಲಿ ಹಂಗೇರಿ ಮೊದಲಾದ ರಣರಂಗಗಳಲ್ಲಿ ರಶ್ಯನರ ಸಾಹಸ ಹೆಚ್ಚಾಗಿರುವದಂತೂ ನಿರ್ವಿವಾದ.

ಬುಡಾಪೆಸ್ಟ್ ಮುತ್ತಿಗೆ

ಹಂಗೇರಿಯ ರಾಜಧಾನಿ ಬುಡಾಪೆಸ್ಟನ್ನು ರಶ್ಯಾನರೀಗ ಸಂಪೂರ್ಣ ಸುತ್ತುಗಟ್ಟಿದ್ದಾರೆ ಅಂತೆಯೇ ಆ ನಗರದ ಉತ್ತರ ಗಡಿಯಲ್ಲಿ ಡೆನ್ಯೂಬನ್ನು ಸೇರಿದ್ದಾರೆ ಜರ್ಮನ್ ನಾಗರೀಕರು ವಿಯೆನ್ನಾಕ್ಕೆ ಹೋಗಿ ಆಶ್ರಯ ಪಡೆಯಹತ್ತಿದ್ದಾರೆ. ರಶ್ಯನರ ಮುಂದಿನ ಹೊಡೆತವು ಆಸ್ಟ್ರಿಯಕ್ಕೆಂಬುದು ಖಂಡಿತ. ಅಂತೂ ಪೂರ್ವ ರಣರಂಗದ ಉತ್ತರಗಡೆ ಮತ್ತು ಕೇಂದ್ರದಲ್ಲಿ ಯುದ್ಧ ರಭಸ ಹೆಚ್ಚಿದೆ ಲೇಟ್ವಿಯದಲ್ಲಿರುವ ಜರ್ಮನ್ ಸೇನೆಗಳನ್ನು ಸುತ್ತುಗಟ್ಟುವದಕ್ಕಾಗಿ ರಶ್ಯನರು 27 ಡಿವಿಜನ್ ಸೇನೆಗಳನ್ನು ಮುಂದೊಡ್ಡಿ ಹೋರಾಟವಾರಂಭಿಸಿದ್ದಾರೆ ಈಗ ಸ್ತಬ್ಧವಾಗಿರುವ ಪೋಲೆಂಡು ರಂಗದಲ್ಲೂ ಪುನಃ ಧಾಳಿಯಾರಂಭವಾಗುವ ನಿರೀಕ್ಷೆಯಿದ

ಇಲ್ಲಿಯೂ ಸುಲಭವಿಲ್ಲ.

ಆದರೆ ಪಶ್ಚಿಮ ರಣರಂಗದಂತೆಯೇ ರಶ್ಯದ ದಿಕ್ಕಿನಲ್ಲಿ ಕೂಡಾ ಜರ್ಮನರನ್ನು ತಾತ್ಸಾರಮಾಡಲು ಸಾಧ್ಯವಿಲ್ಲ ಹಂಗೇರಿಯಲ್ಲಿ 71 ಡಿವಿಜನ್ ನಾಜೀ ಸೇನೆಗಳಿವೆಯೆಂದೂ, ಅಗತ್ಯ ಬಿದ್ದಲ್ಲಿ ಇಟೆಲಿಯಿಂದ ರಿಜರ್ವ್ ಸೇನೆಗಳನ್ನಲ್ಲಿಗಾಮದು ಪಡಿಸಿಕೊಳ್ಳಬಲ್ಲರೆಂದೂ ಜನರಲ್ ಕ್ಲಾರ್ಕರೇ ಎಚ್ಚರಿಸಿದ್ದಾರೆ ಇಟೆಲಿಯಲ್ಲಿ ಕೂಡಾ ಕೆಸ್ಸಲರಿಂಗನು ಆಗಾಗ ಪ್ರಬಲ ಪ್ರತಿಭಟನೆ ಹೂಡಿ ಸಾಕಷ್ಟು ಸಮಯ ಸಂಪಾದಿಸಿಕೊಡುತಿದ್ದಾನೆ. ಅಂತೂ ಇಂಗ್ಲಾಂಡು ಅಮೇರಿಕಗಳಂತೆಯೇ ರಶ್ಯಕ್ಕೆ ಕೂಡಾ ಜರ್ಮನ್ ಕ್ಷೇತ್ರಗಳನ್ನು ಸುಲಭವಾಗಿ ಮುರಿಯಲಾಗುವಂತಿಲ್ಲ. ಪ್ರಯಾಸದಿಂದ ಸಾಧಿಸಬೇಕಾದ ವಿಜಯವದು

ಜಾಪಾನ್ ಯುದ್ಧ

ಬರ್ಮಾದ ಅರಕಾನ್ ಕರಾವಳಿಯಲ್ಲಿ ಮಿತ್ರಸೇನೆಗಳು ಮುಂದೊತ್ತುತ್ತಿವೆ; ಅಲ್ಲಿಯ ಡೋನ್ ಬಿಯಾಕ್ ಮೊದಲಾದ ಪ್ರಾಮುಖ್ಯ ನಗರಗಳು ಅವುಗಳ ಹಸ್ತಗತವಾಗಿವೆ, ಸೇನಾನಿ ಎಡ್ಮಿರಲ್ ಮೌಂಟ್ ಬೇಟನರು ಅರಕಾನಿಗೆ ಭೇಟಿಕೊಟ್ಟು ಬ್ರಿಟಿಷ್ ಮತ್ತು ಹಿಂದೀ ಸೇನೆಗೆ ಗೌರವ ಸಲ್ಲಿಸಿದ್ದಾರೆ-ಎಂಬ ವರ್ಣನೆಗಳಲ್ಲದೆ ಶಾಂತಸಮುದ್ರದ ಯುದ್ಧವಾರ್ತೆಗಳೇನೂ ಈ ವಾರದಲ್ಲಿಲ್ಲ ಗಣನೀಯ ವಾರ್ತೆ ಚೀನದಿಂದಲೂ ಬಂದಿಲ್ಲ. ಜಪಾನರ ಕಾರ್ಮೋಸ ಕ್ಷೇತ್ರಗಳ ಮೇಲೆ ಆಕಾಶಧಾಳಿ ನಡೆಸಿದ ವಾರ್ತೆಯಿದೆ ಎಲ್ಲಿಯೂ ಎತ್ತಿ ಹೇಳಬಹುದಾದ ಹೋರಾಟ ನಡೆದಿಲ್ಲ.

ವ್ಯವಹಾರ ರಂಗದಲ್ಲಿ

ಹಂಗೇರಿಗೆ ತಾತ್ಕಾಲಿಕ ರಾಷ್ಟ್ರೀಯ ಸರಕಾರವನ್ನು ರಶ್ಯಾನರು ಸ್ಥಾಪಿಸಿದ್ದರೆ ಈ ಸರಕಾರವೀಗ ಆಕ್ಸಿಸ್ ರಾಷ್ಟ್ರಗಳ ಸಂಬಂಧ ಕಡಿದುಕೊಂಡಿದೆ. ಗ್ರೀಸಿನ 'ಎಲಾಸ್' ಪ್ರಮುಖರು ಜನರಲ್ ಸ್ಕೋಬಿಯವರ ಸಂಧಿಸೂಚನೆಗೆ ಕೊಟ್ಟ ಉತ್ತರದಲ್ಲಿ ತಾವು ಕೇವಲ ಗ್ರೀಕ್ ಸರಕಾರಕ್ಕೆ ಮಾತ್ರ ಶರಣುಹೋಗಬಲ್ಲೆವೆಂದೂ, ಬಲಪಕ್ಷೀಯರ ಕೆಲವು ಸೇನೆಗಳನ್ನೂ ಹಿಂದೆಗೆದುಕೊಳ್ಳತಕ್ಕದ್ದೆಂದೂ ಶರ್ತಗಳಿವೆ. ಪೋಪ್ ಗುರುಗಳಿಗತ್ತ ಕ್ರಿಸ್‌ಮಸ್ ಸಂದೇಶದಲ್ಲಿ ನಾಗರೀಕ ಸ್ವಾತಂತ್ರ್ಯವೇ ಪ್ರಜಾಪ್ರಭುತ್ವದ ತಿರುಳೆಂದು ಹೇಳಿ ಶಾಂತಿ ಸ್ಥಾಪನೆಗಾಗಿ ಒಂದು ಬಲಶಾಲಿ ಸಂಸ್ಥೆ ವಿರಬೇಕೆಂದಿದ್ದಾರೆ.

ಮಹಾತ್ಮಾ ಗಾಂಧಿಯವರಿಗೆ

ಸೌಮ್ಯ ರೀತಿಯ ಶೀತ ಜರ್ವವು ಕಳದ ವಾರಾರಂಭವಾಗಿದ್ದಿತು ತಾ 31ರಲ್ಲಿ ಉಪದ್ರಕಾರಿ ಕಫವಿಕ್ಕೆಂದೂ ಜ್ವರವೂ ತುಸು ಏರಿದ್ದಿತೆಂದೂ ಡಾ। ಸುಶೀಲಾ ನಾಯರಂ [illegible]ಯಲ್ಲಿನ ದಿನದಿಂದ ಅವರು ಹಣ್ಣು ರಸವನ್ನು [illegible] ತಿದ್ದಾರೆ; ಆದ್ದರಿಂದ ಸಂಚಾರ ಕ್ರಮವನ್ನೂ ಬಹಳ ಮಟ್ಟಿಗೆ ಕಡಿಮೆ ಮಾಡಿದ್ದಾರೆ ಮರುದಿನ ಜ್ವರವಿರಲಿಲ್ಲ. ಕಸ್ತೂರಿಬಾ ನಿಧಿಗೆ ಧಿಲ್ಲೀ ವಲಯದಲ್ಲಿ ಇದುವರೆಗೆ ಜಮೆಯಾದ ಹಣ ರೂ 555621-14-0 ಇದರ ಮುಖ್ಯಾಂಶವು ಆ ಪ್ರಾಂತ್ಯದಲ್ಲೇ ವಿನಿಯೋಗವಾಗಬೇಕಾದ್ದರಿಂದ ಅಲ್ಲಿ ಹಳ್ಳಿಮಧ್ಯದಲ್ಲೊಂದು ಹೆಂಗಸರ ಆಸ್ಪತ್ರೆ ಸ್ಥಾಪಿಸುವ ಸನ್ನಾಹ ನಡೆದಿದ.

ಸಪ್ರುಗಳ ವಿಚಾರಣಾ ಸಮಿತಿ

ಜಾತಿ ಜಗಳ ತೀರ್ಮಾನಕ್ಕಾಗಿ ಸರ್. ಸಪ್ರುಗಳಿಂದ ನೇಮಿಸಲ್ಪಟ್ಟಿರುವ ಸಮಿತಿಯೊಡನೆ ಸಹಕರಿಸಲು ಶ್ರೀ ಸಾವರ್ಕರರೂ ಹಿಂದು ಮಹಾಸಭೆಯೊಂದಿಲ್ಲ ಅದಕ್ಕೆ ಬೆಂಬಲವೀಯುವ ನಿರ್ಧಾರವಾಯಿತಲ್ಲದೆ ಸಿಖ್ ಪ್ರಮುಖರು ಪಾಕಿಸ್ಥಾನವನ್ನು ಕಠೋರವಾಗಿ ಖಂಡಿಸಿದರು. "ತಪ್ಪು ಮಾಡಲಾರಂಭಿಸಿದ ಮೇಲ ಮಿ. ಜಿನ್ನರಿಗೀಗ ಹೆಚ್ಚು ಹಿಂದಿರುವದು ಅಸಾಧ್ಯವಾಗಿದೆ. ಇದರಿಂದ ಸಮಿತಿಗೇನೂ ತೊಂದರೆಯಿಲ್ಲ ತಾನೊಬ್ಬ ವಿರೋಧಿ ನಾಯಕನೆಂಬ ಹೆಗ್ಗಳಿಕೆ ಸಂಪಾದಿಸಿದುದಲ್ಲದೆ ಮಿ ಜಿನ್ನರು ಗತಕಾಲದಲ್ಲಾದರೂ ಗಣನೀಯ ರಾಜಕೀಯ ಸೇವನ್ನೂ ಮಾಡಿದವರಲ್ಲ" ಎಂದು ಡಾ। ಲತೀಫರ ಟೀಕೆ

The Popular Insurance Co. Ltd.,

Head Office Mangalore, S K.

NOTICE is hereby given that the share certificate for Nos 1040 to 1041 of Mr. K. Laxminarayana Kamath, Merchant, Udipi, having been lost, a duplicate will be issued failing receipt of objection from any interested parties, within one month from the date hereof.

Mangalore, 22-12-1941

B. Vittal Rau,
Managing Director

ದಕ್ಷಿಣ ಕನ್ನಡ,

ಮಂಗಳೂರು

ಜುಲ್ಮಾನೆ—ಕಡ್ಡಿಯ ಕಟ್ಟಿಗೆ ವ್ಯಾಪಾರಿಗಳೊಬ್ಬರಿಗೆ ನಿಯಂತ್ರಣಾಜ್ಞೆಯನ್ನು ಉಲ್ಲಂಘಿಸಿದುದಕ್ಕಾಗಿ ರೂ. ೬೦೦ ಜುಲ್ಮಾನೆ ಮತ್ತು ೩ ತಿಂಗಳ ಸಜೆ ವಿಧಿಸಲಾಗಿದೆ.

ವಿಚಿತ್ರ ಶಿಶು-ಕೊಂಬುಗಳನ್ನು ಧರಿಸಿದ್ದ ವಿಚಿತ್ರ ಶಿಶುವೊಂದು ಜನಿಸಿದ ವಾರ್ತೆ ನಗರದ ಗೋರಿಗುಡ್ಡೆ (ಬೆಪ್ಪ) ಯಿಂದ ಬಂದಿದೆ. ಮಗುವು ಹುಟ್ಟಿದಾಗಲೇ ಮೃತಪಟ್ಟಿತ್ತು.

ಜಿಲ್ಲೆಯ ವಿವಿಧ ಮಜೂರ—ಸಂಘಗಳ ಪ್ರತಿನಿಧಿಗಳ ಸಮ್ಮೇಳನವು ತಾ. ೧೭ರಂದು ಬೆಳಗ್ಗೆ ಶ್ರೀ ಎ. ಬಿ. ಶೆಟ್ಟಿರ ಅಧ್ಯಕ್ಷತೆಯಲ್ಲಿ ರಘುನಾಥಯ್ಯ ಸ್ಮಾರಕ ಮಂದಿರದಲ್ಲಿ ಜರಗಿತು. ಜಿಲ್ಲೆಗೊಂದು ಟ್ರೇಡ್ ಯೂನಿಯನನ್ನು ಸ್ಥಾಪಿಸುವ ನಿರ್ಧಾರವಾಗಿ ಕಾರ್ಯಕಾರಿ ಸಮಿತಿಗೆ ಶ್ರೀ. ಕೆ. ಕೆ. ಶೆಟ್ಟಿಯವರು ಅಧ್ಯಕ್ಷರಾಗಿಯೂ ಶ್ರೀ. ಶಿವಶಂಕರರಾಯರು ಉಪಾಧ್ಯಕ್ಷರಾಗಿಯೂ ಶ್ರೀ. ಬಿ. ವಿ. ಕಕ್ಕಿಲ್ಲಾಯರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು.

ಕಮ್ಯೂನಿಸ್ಟ್ ಪಾರ್ಟಿ—ಯ ಆಶ್ರಯದಲ್ಲಿ ಸಾರ್ವಜನಿಕ ಸಭೆಯೊಂದು ತಾ. ೧೬ರಂದು ನೆಹರೂ ಮೈದಾನಿನಲ್ಲಿ ಜರಗಿತು. ಸಭೆಗೆ ಬಂದಿದ್ದ ಕೇರಳದ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಶ್ರೀ| ಕೃಷ್ಣಪಿಳ್ಳೆ ಅವರು, ಕಮ್ಯೂನಿಸ್ಟ್ ಪಕ್ಷದ ... ಕಾರ್ಯಕಲಾಪಗಳನ್ನು ವಿವರಿಸಿದರು. ಶ್ರೀ| ಬಿ. ಬಿ. ವಿ. ಕಕ್ಕಿಲ್ಲಾಯರು ಅಧ್ಯಕ್ಷತೆ ವಹಿಸಿದ್ದರು. ಆ ಸಭೆಗೆ ಮೊದಲು ಕಮ್ಯೂನಿಸ್ಟ್ ಪಾರ್ಟಿಯ ಸ್ವಯಂಸೇವಕರ ಸೈಕಲ್ ಮೆರವಣಿಗೆ ಇತ್ತು.

ಕೆನರಾ ವಾಣಿಜ್ಯ ಸಂಘ—ದ ವರ್ಧಂತ್ಯುತ್ಸವವು ಕೆನರಾ ಹೈಸ್ಕೂಲಿನಲ್ಲಿ ತಾ. ೩೧ರಂದು ಜಿಲ್ಲಾ ಕಲೆಕ್ಟರ ರಾ. ಸಾ. ಪಿ. ರಾಮದಾಸರ ಅಧ್ಯಕ್ಷತೆಯಲ್ಲಿ ಜರಗುವುದು.

ಗ. ಹಾ. ಎ. ಟ್ರೈನಿಂಗ್ ಶಾಲೆಯ ವರ್ಧಂತ್ಯುತ್ಸವವು ರೆವರೆಂಡ್ ಸೈಂಟ್ ಆಲೋಶಿಯಸ್ ಕಾಲೇಜಿನ ಪ್ರಿನ್ಸಿಪಾಲ್ ರೆ. ಫಾ. ಕೈಪಲೋ ಅವರ ಅಧ್ಯಕ್ಷತೆಯಲ್ಲಿ ಜರಗಿತು. ಮುಖ್ಯೋಪಾಧ್ಯಾಯ ಮಿ| ರಾಬರ್ಟ್ಸನ್‌ರು ಶಾಲೆಯ ವರದಿಯನ್ನೊಪ್ಪಿಸಿದರು. ಬಹುಮಾನ ವಿತರಣ ಮತ್ತಿತರ ಕಾರ್ಯಕ್ರಮಗಳ ಬಳಿಕ ವಿವಿಧ ವಿನೋದಗಳಿದ್ದುವು.

ಕೇಂದ್ರ ಅಸೆಂಬ್ಲಿಯು-ಕಳೆದ ಅಧಿವೇಶನದ ಕುರಿತು ತಮ್ಮ ಅಭಿಪ್ರಾಯಗಳನ್ನು ಸಂಸ್ಕೃತಿಕ ಸಂಘದ ಆಶ್ರಯದಲ್ಲಿ ಶ್ರೀ| ಜನರಾಜ ಹೆಗ್ಡೆಯವರು ತಾ. ೨೦ರಂದು ಸಂಜೆ ಕೊಟ್ಟರು. ಹಿಂದಿನಂತೆಯೇ ಕಾಂಗ್ರೆಸ್ ಲೀಗ್ ಪಕ್ಷಗಳೊಳಗಿನ ಐಕ್ಯ ಬಲವಾಗಿದೆಯೆಂದೂ ಅಸೆಂಬ್ಲಿಯೊಳಗಿರುವವರ ಎಲ್ಲಾ ಪಕ್ಷಗಳಲ್ಲಿ ಈ ಎರಡು ಪಾರ್ಟಿಗಳು ಬಲಿಷ್ಠವಿವೆಯೆಂದೂ ಅಸೆಂಬ್ಲಿಯಲ್ಲಿ ಪ್ರತಿ ವಿಷಯದಲ್ಲೂ ಸದಸ್ಯರು ಆಸಕ್ತಿ ವಹಿಸುತ್ತಾರೆಂದೂ ಅವರು ಹೇಳಿದರು. ಆಹಾರದ ಪ್ರಶ್ನೆ ಬಂದಾಗ ಎಲ್ಲಾ ಪಂಗಡಗಳವರೂ ಒಮ್ಮತದಿಂದ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಾರೆಂದೂ ಸರಕಾರದ ಧೋರಣೆಯನ್ನು ಕಟುವಾಗಿ ಟೀಕಿಸುತ್ತಾರೆಂದೂ ಅವರು ತಿಳಿಸಿದರು.

ಶ್ರೀ| ನಿಡ್ಲೋಡಿ ಅನಂತ ಉಪಾಧ್ಯಾಯರು—ಬಿಜಾಪುರದಲ್ಲಿ ತಾ ೨೬, ೨೭ರಂದು ಜರಗಲಿರುವ ದಕ್ಷಿಣ ಭಾರತದ ತೃತೀಯ ಸಂಸ್ಕೃತ ಸಮ್ಮೇಳನದ ಅಧ್ಯಕ್ಷತೆ ವಹಿಸಲು ಹೊರಟಿದ್ದಾರೆ.

WANTED.

Estate Writers and Labour Suppliers with from 30 to 100 labourers.

Apply, G. V. R. FREND

Karadykhan Estate,

Sangameswarpet P. O

Kadur District

ಹೊಸ್ಟೆಲ್ ಡೇ—ಶ್ರೀ ರಾಮಕೃಷ್ಣ ಸ್ಟುಡೆಂಟ್ಸ್ ಹೋಮ್ ಮತ್ತು ಶ್ರೀ ರಾಮಕೃಷ್ಣ ವಿದ್ಯಾರ್ಥಿನಿ ಭವನದ ಹೊಸ್ಟೆಲ್ ಡೇ ಸಮಾರಂಭವು ಜನವರಿ ತಾ 21 ರಲ್ಲು ಶ್ರೀ. ಕೆ. ಐ. ವರ್ಗೀಸ್, ಎಮ್. ಎ, ಗವರ್ನಮೆಂಟ್ ಕಾಲೇಜು ಪ್ರಿನ್ಸಿಪಾಲ್, ಅವರ ಸನ್ಮಾನ್ಯ ಅಧ್ಯಕ್ಷತೆಯಲ್ಲಿ ಜರಗಲಿರುವುದು.

ಕೆನರಾ ಹುಡುಗಿಯರ ಶಾಲೆಯ ಸ್ವರ್ಣೋತ್ಸವ—ಈ ಹುಡುಗಿಯರ ಶಾಲೆಯು ಸ್ಥಾಪಿತವಾಗಿ ೫೦ ವರ್ಷ ದಾಟಿದ್ದರಿಂದ ಇದೇ ದಶಂಬರ ತಾ. ೨೫ರಿಂದ ೬ ದಿನ ಸದರಿ ಶಾಲೆಯ ಸ್ವರ್ಣಮಹೋತ್ಸವ ನಡೆಯುವುದು.

ಈ ಕೆಳಗಿನ ಉತ್ಸವಗಳು ಸದರಿ ಅವಧಿಯಲ್ಲಿ ಸಮಾವೇಶಗೊಂಡಿವೆ.

೧. ಕೆನರಾ ಹೈಸ್ಕೂಲ್ ದಿನಾಚರಣೆ—ತಾ. ೨೫; ೨. ಕೆನರಾ ಗರ್ಲ್ಸ್ ಶಾಲೆಯ ಹಳೆ ವಿದ್ಯಾರ್ಥಿನಿಗಳ ಸಂಘದ ದಿನಾಚರಣೆ—ತಾ ೨೬; ಮಹಾತ್ಮಾ ಗಾಂಧಿ ವಸ್ತು ಪ್ರದರ್ಶನಾಲಯದ ಬೆಳ್ಳಿ ಹಬ್ಬ—ತಾ. ೨೬; ೪. ಕೆನರಾ ಹೈಸ್ಕೂಲ್ ಹಳೆ ವಿದ್ಯಾರ್ಥಿಗಳ ಸಂಘದ ವರ್ಷಾವಧಿ ಉತ್ಸವ—ತಾ. ೨೭; ೫. ಕೆನರಾ ಹುಡುಗಿಯರ ಶಾಲೆಯ ವರ್ಧಂತಿ—ತಾ. ೨೮. ಭಾಷಣಗಳು, ಆಟ ಚಟುವಟಿಕೆ ಸ್ಪರ್ಧೆ, ನಾಟಕಾಭಿನಯ, ವಿನೋದಾವಳಿ, ಇನಾಮು ಹಂಚೋಣ, ಫಲಾಹಾರ ಇತ್ಯಾದಿ ಕಲಂಗಳು ಸದರಿ ಉತ್ಸವಗಳ ಕಾರ್ಯಕ್ರಮದಲ್ಲಿ ಅಡಕವಾಗಿವೆ.

ಉಡುಪಿ

ಮುನಿಸಿಪಲ್ ಕೌನ್ಸಿಲಿನ ಮೀಟಿಂಗು ಇದೇ ತಾ. 22ರಲ್ಲು ಚೆಯರ್‌ಮೆನ್ ಶ್ರೀ. ಎ. ಲಕ್ಷ್ಮೀನಾರಾಯಣರಾಯರ ಅಧ್ಯಕ್ಷತೆಯಲ್ಲಿ ಜರಗಿತು. ಕುದುರೆಗಾಡಿಗಳಿಗೆ ಸಂಬಂಧಪಟ್ಟ (Hackney Carriage Act) ಕಾನೂನಿನ ಶರ್ತಗಳನ್ನು ಮುನಿಸಿಪಾಲಿಟಿಯೊಳಗೆ ಜ್ಯಾರಿಗೆ ತರಬೇಕಾಗಿ ಸೂಚಿಸಿದ ಶ್ರೀ ನ. ಶಿಂಡ ವಿದ್ವಾಂಸರ ... ನಿರ್ಣಯದ ಕುರಿತು ಆಲೋಚಿಸಲಾಯಿತು. ಈ ಕಾನೂನನ್ನು ಜ್ಯಾರಿಗೆ ತಂದಲ್ಲಿ ಈಗಿರುವ ಕುದುರೆಗಾಡಿಗಳೆಲ್ಲ ಪ್ರಯಾಣಕ್ಕೆ ಅಯೋಗ್ಯವೆಂದಾಗಿ ಜಟ್ಕಾವಾಲರಲ್ಲಿ ನಿರುದ್ಯೋಗ ಉಂಟಾಗಬಹುದೆಂಬ ಅಭಿಪ್ರಾಯವಾಗಿ ಜಟ್ಕಾವಾಲರು ಪಟ್ಟಣಾ ಬಾಡಿಗೆಯನ್ನು ನ್ಯಾಯರೀತಿಯಲ್ಲಿ ಕೇಳುವ ಹಾಗೆ ಡಿಫೆನ್ಸ್ ಒಫ್ ಇಂಡಿಯಾ ರೂಲ್ಸುಗಳನುಸಾರವಾಗಿ ಜಿಲ್ಲಾ ಕಲೆಕ್ಟರರು ಬಾಡಿಗೆ ದರವನ್ನು ನಿಶ್ಚಯಿಸುವಂತೆ ಅವರನ್ನು ಕೇಳಿಕೊಳ್ಳಬೇಕೆಂದಾಯಿತು. 1944-45ರ ರಿವೈಸ್ಡ್ ಮತ್ತು 1945-46ರ ಬಜೇಟು ಎಸ್ಟಿಮೇಟುಗಳ ಮಂಜೂರಾತಿಯ ವಿಷಯ ಬಂದಾಗ ವಿದ್ಯಾಭ್ಯಾಸಕ್ಕೂ ಟೌನ್ ಪ್ಲಾನಿಂಗ್ ಶಾಖೆಗೂ ಸಂಬಂಧಪಟ್ಟ ಅಂಕೆಸಂಖ್ಯೆಗಳ ಮಾಹಿತಿಯು ಸಿದ್ಧವಿಲ್ಲವಾದುದರಿಂದ ಹೆಚ್ಚಿನ ಸದಸ್ಯರು ಬಜೇಟನ್ನು ಮಂಜೂರು ಮಾಡಲು ಒಪ್ಪಲಿಲ್ಲ. ಕೌನ್ಸಿಲು ಮಂಜೂರಾತಿ ಪಡೆಯದೆ ಸರಕಾರಕ್ಕೆ ಕಳುಹಲು ಸಾಧ್ಯವಿಲ್ಲವಾದುದರಿಂದ ಸರಕಾರಕ್ಕೆ ಒಪ್ಪಿಸುವ ಸಮಯದ ಅವಧಿಯನ್ನು 15 ದಿವಸಗಳಿಗೆ ಹೆಚ್ಚಿಸುವಂತೆ ಸರಕಾರವನ್ನು ಪ್ರಾರ್ಥಿಸುವ ಠರಾವಾಯಿತು.

ಚಂದ್ರಗ್ರಹಣವೇ? ಇದೇ ತಾ, 29ನೆ ಕೃಷ್ಣಾಂ ಹುಣ್ಣಿಮೆ ದಿವಸ ರಾತ್ರಿ 8-40 ತಾಸಿಗೆ ಚಂದ್ರನಿಗೆ ಗ್ರಹಣ ಉಂಟಾಗುವುದೆಂದು ಉಡುಪಿ ಪಂಚಾಂಗ ಸಂಪಾದಕ ಶ್ರೀ ಅತ್ತೂರು ವಾಸುದೇವ ಉಡುಪರು ತಿಳಿಸಿದ್ದಾರೆ. ಶ್ರೀಪತಿ ಪಂಚಾಂಗಕರ್ತರಾದ ಶ್ರೀ ಶ್ರೀಪತಿ ನರಸಿಂಹ ಅಡಿಗರು ಇದು ಬರೇ ಕಾಲ್ಪನಿಕ ಚಂದ್ರಗ್ರಹಣವೆಂದೂ ಆ ದಿನ ನಡೆಯತಕ್ಕ ಧರ್ಮಕರ್ಮಾದಿಗಳನ್ನು ನಿಸ್ಸಂಶಯವಾಗಿಯೂ ಆಚರಿಸಬಹುದೆಂದೂ ಅಭಿಪ್ರಾಯಪಟ್ಟಿರುತ್ತಾರೆ. ಯಾವ ಪಂಚಾಂಗದಲ್ಲಿ ಕೂಡ ಚಂದ್ರಗ್ರಹಣವಿದೆಯೆಂಬ ಪ್ರಸ್ತಾಪವೇ ಇರುವಂತೆ ತೋರುವುದಿಲ್ಲ.

ದಿ ಕರ್ನಾಟಕ ಫ್ರೆಂಡ್ಸ್ ಯೂನಿಯನ್ ಬೊಂಬಾಯಿಈ ಸಂಸ್ಥೆಯು ಕಳೆದ ಹದಿನಾರು ವರುಷಗಳಿಂದ ಕನ್ನಡಿಗರ, ಕನ್ನಡ ನಾಡಿನ ಹಾಗೂ ಕನ್ನಡ ಭಾಷಾಭಿವೃದ್ಧಿಗಾಗಿ ಹೆಣಗಾಡುತ್ತಿದ್ದು ಸಾರ್ವಜನಿಕ ಸೇವೆಗಾಗಿ ಆಗಾಗ್ಗೆ ಬೆನಿಫಿಟ್ ನಾಟಕಗಳನ್ನು ಪ್ರದರ್ಶಿಸಿ ಅದರಿಂದ ಉಂಟಾದ ಉತ್ಪತ್ತಿಯನ್ನು ಅರ್ಪಿಸುತ್ತಲಿರುವುದು ಅಭಿನಂದನೀಯವಿದೆ. ಸಂಸ್ಥೆಯು ಇದೇ ರೀತಿಯಲ್ಲಿ ಜನತಾ ಜನಾರ್ಧನನ ಸೇವೆಯನ್ನು ಮಾಡಲಿ.

ರಾಮಕುಂಜ—ಈ ಗ್ರಾಮದಲ್ಲಿ ಹುಲಿಯ ಗಲಾಟೆ ಬಹಳ ಜೋರಾಗಿರುತ್ತದೆ. ಈ ದಿನಕ್ಕೆ ಮುಂಚೆ ಸಾಧಾರಣ 4 ದಿವಸದಿಂದ ನಾಲ್ಕೈದು ದನ ಎತ್ತುಗಳನ್ನು ಕೊಂದು ತಿಂದಿರುತ್ತದೆ. ತಾ| 7ರಲ್ಲಿಯು, ತಿಮ್ಮಪ್ಪ ಗೌಡನ ಸುಮಾರು 125-0-0 ಕ್ರಯ ಬಾಳುವ ದನವನ್ನು ಸಾಧಾರಣ ಮಧ್ಯಾಹ್ನ 12 ಗಂಟೆ ಸಮಯಕ್ಕೆ ಅವರ ಮನೆಯ ಹತ್ತಿರವೇ ಹಿಡಿದು ಕೊಂದು ಹಾಕಿರುತ್ತದೆ.

ಶಿರ್ವ—ತಾ 18-12-44ರಲ್ಲಿ ಶ್ರೀ ಶಾರದಾ ಶಾಲೆಯಲ್ಲಿ ಕೀರ್ತಿಶೇಷ ಮೆನೇಜರ್ ಶಿರ್ವ ಸಂಕಪ್ಪರಾಯರ ದ್ವಿತೀಯ ವರ್ಷ ವರ್ಧಂತಿ ಉತ್ಸವವು ಡಾಕ್ಟರ್ ಯು. ಕೆ. ಆಚಾರ್ಯ L. A. M. S ಇವರ ಅಧ್ಯಕ್ಷತೆಯಲ್ಲಿ ಜರಗಿತು. ಹಲವರ ಭಾಷಣಗಳಾದುವು ಶಾಲಾ ಪಾಲಕರ ಸಂಘದ ಸಭೆ ಜರಗಿ ಚಾಲ್ತಿ ವರ್ಷಕ್ಕೆ ಡಾಕ್ಟರ್ ಆಚಾರ್ಯರು ಅಧ್ಯಕ್ಷರಾಗಿ 16 ಮಂದಿ ಮೆಂಬರರ ಚುನಾವಣೆಯಾಗಿ ಶಾಲೆಗೆ ಒಂದು ಯೋಗ್ಯ ಕಟ್ಟೋಣವನ್ನು ಕಟ್ಟಿಸಬೇಕೆಂದಾಯಿತು.

ದಿ ಕೆನರ ಎಸೋಸಿಯೇಶನ್, ಕೊಲ್ಹಾಪುರ—ಇದರ ಆಶ್ರಯದಲ್ಲಿ ಅಧ್ಯಕ್ಷ ಶ್ರೀ| ಮಾಧ್ಯಮರ ನೇತೃತ್ವದಲ್ಲಿ, ಲೋಕೋಲೇಜಿನ ಹೋಲಿನಲ್ಲಿ, ಪ್ರೊಫೆಸರ್ ಗಜೇಂದ್ರ ಗಡರವರು ಕಾರವಾರ ಜಿಲ್ಲೆಯ ಪ್ರಸಿದ್ಧ ಸೀನ್‌ಸಿನೆರಿಗಳನ್ನು "ಮ್ಯಾಜಿಕ್‌ಲ್ಯಾಂಟರ್ನ್ ಶೋ" ಮೂಲಕ ತೋರಿಸಿದರು. ಕೆನರ ಜಿಲ್ಲೆಯ ಕೈಗಾರಿಕೆ, ಪ್ರಸಿದ್ಧ ಸ್ಥಳ, ವೃತ್ತಿ ಪತ್ರಿಕೆಗಳ ಕುರಿತು ಹಲವರು ವ್ಯಾಖ್ಯಾನ ಮಾಡಿದರು. ಲಘು ಫಲಾಹಾರದೊಂದಿಗೆ ಸಭಾಂತ್ಯವಾಯಿತು.

ಸುರತ್ಕಲ್-ವಿದ್ಯಾದಾಯಿನೀ ಹೈಸ್ಕೂಲಿನ ಸಹಾಯಾರ್ಥವಾಗಿ ತಾ 23-12-44ರಲ್ಲಿ ಈ ಶಾಲು ಮಂದಿರದಲ್ಲಿ ಶಾಲಾ ಭಿಮಾನಿಗಳು ಉಡುಪಿಯ ಶ್ರೀ ಕೃಷ್ಣಾಪುರ ಮಠಾಧೀಶರಾದ ಶ್ರೀ ವಿದ್ಯಾರತ್ನ ತೀರ್ಥ ಶ್ರೀಪಾದಂಗಳವರ ದಿವ್ಯ ನೇತೃತ್ವದಲ್ಲಿ ರಾಜಾಹಂಸ ಎಂಬ ಸಂಗೀತ ನಾಟಕವನ್ನು ಯಶಸ್ವಿಯಾಗಿ ಅಭಿನಯಿಸಿದರು.

ಮಂಜೇಶ್ವರ—ದ. ಕ. ಜಿಲ್ಲಾ ಗಾಣಿಗರ ಯಾನೆ ಸಪಲ್ಯರ ಸಮಾಜ ಸುಧಾರಕ ಸಂಘದ ಆರನೇ ವಾರ್ಷಿಕೋತ್ಸವವು ಇದೇ ಬರುವ ತಾ. 1-1-45ನೇ ಸೋಮವಾರ ರೈಲ್ವೇ ಸ್ಟೇಶನ ಬಳಿ ಉದ್ಯಾನವನ ಬೋರ್ಡು ಶಾಲಾ ಕಟ್ಟಡದಲ್ಲಿ ಶ್ರೀ ಬಿ. ಸೀತಾರಾಮ ರಾವ್, ಇವರ ಅಧ್ಯಕ್ಷತೆಯಲ್ಲಿ ಜರಗಲಿಕ್ಕಿರುವುದು.

ಉಡುಪಿ ಮಧ್ವಮತ

ಶಿವಳ್ಳಿ ಬ್ರಾಹ್ಮಣರ

ಧರ್ಮ ಛತ್ರ

ಇದೇ ತಾ 8-10-44ರಿಂದ

ರಾಮೇಶ್ವರ ದೇವಸ್ಥಾನದ ಬಡಗು ಬೀದಿಯಲ್ಲಿ ತೆರೆಯಲ್ಪಟ್ಟಿದೆ.

ಎಲ್. ನರಸಿಂಗ ರಾವ್, ಪ್ರೊಪ್ರೈಟರ್.

ಉಡುಪಿ ಬೋರ್ಡಿಂಗ್ ಎಂಡ್ ಲಾಜಿಂಗ್, ಮಧುರ.

"ಗ್ರಾಮ ಉದ್ಯೋಗಸ್ಥರ ಮೇಲೆ ಅಪವಾದ"

ತಾರೀಕು 10—12—44ನೇ ರಾಷ್ಟ್ರಬಂಧು ಸಂಚಿಕೆಯಲ್ಲಿ ಓರ್ವ ಮಹಾಶಯರು "ಹಳ್ಳಿಯಲ್ಲಿ ಸರಕಾರಿ ಉದ್ಯೋಗಸ್ಥರು" ಎಂಬ ಶಿರೋನಾಮದಿಂದ ಒಂದು ಲೇಖನ ಬರೆದು ಗ್ರಾಮ ಉದ್ಯೋಗಸ್ಥರ ಮೇಲೆ ಹಲವಾರು ಅಪವಾದಗಳನ್ನು ಕಲ್ಪಿಸಿರುವರು. ಅದರಲ್ಲಿ ಕೆಲವರಿಗೆ ಕುಶಿಬಂದಷ್ಟು ಭತ್ತಕ್ಕಾಗಿ ರಿಕ್ವಿಜೀಶನ್ ನೋಟೀಸು ಕೊಡುವುದಂತೆ. ತಾಲ್ಲೂಕಿನಲ್ಲಿ ದಸ್ತು ಮಾಡಿದ ಖಾಲಿ ಫೋರ್ಮುಗಳು ಇವೆಯಂತೆ. ಅದನ್ನೆಲ್ಲಾ ಮನಬಂದಂತೆ ಹಂಚುವುದಂತೆ. ಮತ್ತು ಮೇಲಧಿಕಾರಸ್ಥರನ್ನೆಲ್ಲಾ ಉಪಾಯಾಂತರದಿಂದ ತಮ್ಮ ಜೇಬಿಗೆ ಸೇರಿಸಿಕೊಳ್ಳುವರಂತೆ. 'ಇದೆಲ್ಲಾ ಸತ್ಯವೇ ಎಂದು ವಿಚಾರಿಸುವುದು ನಮ್ಮ ಕರ್ತವ್ಯ. ಮಾನ್ಯ ಜಿಲ್ಲಾ ಕಲೆಕ್ಟರ್ ದೊರೆಗಳವರು ಈ ಮುಂಚೆಯೇ ತಮ್ಮ ಸ್ಪಷ್ಟೋಕ್ತಿಯನ್ನ ಜನರ ಮುಂದಿಟ್ಟಿರುವರು. ಅಂದ ಮೇಲೆ ಅಂಥ ಅಪರಾಧ ಮಾಡಿದವರಿಗೆ ತಕ್ಕ ಪ್ರಾಯಶ್ಚಿತ್ತ ಇದ್ದೇ ಇರುವುದು. ಇವರ ಲೇಖನದಲ್ಲಿ ಕಾಣುವುದೇನೆಂದರೆ ಗ್ರಾಮ ಉದ್ಯೋಗಸ್ಥರು, ವಾರೀಸು ಹಕ್ಕಿನಿಂದ ಬಾಳುವವರು; ಕಾರಣ ಕೇವಲ ಅಶಿಕ್ಷಿತರು, ಅಸಂಸ್ಕೃತರು ಕಾನೂನುಗಳ ಉದ್ದೇಶವನ್ನೇ ತಿಳಿಕೊಳ್ಳುವ ಸಾಮರ್ಥ್ಯವಿಲ್ಲದವರು ಎಂದು—ಆಗಲಿ, ಗ್ರಾಮ ಉದ್ಯೋಗಸ್ಥರಿಗೆ ಕೆಲಸಕ್ಕೆ ಬರಬೇಕಾದರೆ ಒಂದು ಪರೀಕ್ಷೆ ಇದ್ದೇ ಇದೆ. ಅದರಲ್ಲಿ ಪಾಸಾಗಬೇಕು. ಹಾಗೆ ಪಾಸಾಗದಿದ್ದ ವ್ಯಕ್ತಿಗೆ ಕೆಲಸ ಸಿಕ್ಕುವುದೆ? ಇಲ್ಲ. ಹಾಗಿದ್ದ ಮೇಲೆ ಅವರ ಕೆಲಸಕ್ಕೆ ಸಾಕಾಗುವಷ್ಟು ವಿದ್ಯೆ ಅವರು ಕಲಿಯಲೇಬೇಕೆಂದಾಯಿತು. ಇದರಿಂದ ಅಶಿಕ್ಷಿತರು ಎನ್ನುವುದಾದರೂ ಹೇಗೆ?

ಗ್ರಾಮ ಉದ್ಯೋಗಸ್ಥರು S. S. L. C. ಯೋ B. A. ಯೋ ಕಲಿತವರಾಗಬೇಕೆಂದು ನಿರ್ಬಂಧವಿರುತ್ತಿದ್ದರೆ ಹಾಗೆಯೇ ಆಗುತಿತ್ತು. ಈ ಮಹಾಶಯರು ಇವರ ಬಗ್ಗೆ "ಸ್ಪೆಶಲ್ ಎಕ್ಸಾಮಿನೇಶನ್" ಒಂದು ಬೇಕು. ಎಂದು ಸರಕಾರಕ್ಕೆ ತಿಳಿಸಿದ್ದರೆ ಎಷ್ಟೋ ಉಪಕಾರವಿತ್ತು. ಕಾರಣ ಎಷ್ಟೋ ಅಶಿಕ್ಷಿತ ಗ್ರಾಮ ಉದ್ಯೋಗಸ್ಥರನ್ನು ಶಿಕ್ಷಿತರನ್ನಾಗಿ ಮಾಡಿದಂತಾಗುತ್ತಿತ್ತು. ಮತ್ತು ಕಾನೂನು ತಿಳಿಯುವ ಸಾಮರ್ಥ್ಯವಿದ್ದವರೆಲ್ಲ ನಮ್ಮರ ಹೃದಯರಂತೆ. ಗ್ರಾಮ ಉದ್ಯೋಗಸ್ಥರ ಹೃದಯ ಪರೀಕ್ಷಕರೆಂದರೆ ಇವರೊಬ್ಬರೇ ಇವರ ಸಾಮರ್ಥ್ಯ-ಕಲ್ಪನಾಶಕ್ತಿ- ಇನ್ನೆಷ್ಟೋ? ಗ್ರಾಮ ಉದ್ಯೋಗಸ್ಥರಿಗೆ ಊರವರ ಮೇಲೆ ಪ್ರೀತಿಯಿಲ್ಲವೆಂದೂ ಬರೆಯುತ್ತಾರೆ. ಲೇಖಕ ಮಹಾಶಯರಿಗೆ ತುಂಬಾ ಊರವರ ಮೇಲೆ ಪ್ರೀತಿಇರಬಹುದು! ಬಾಯಿಯಿಂದ ಬಡಾಯಿ ಕೊಚ್ಚಿಕೊಳ್ಳುವ ಎಷ್ಟೋ ಮಂದಿ ಸುಧಾರಕರು ಊರಿನಲ್ಲಿರಬಹುದು. ಅವರ ಸುಧಾರಕತನವನ್ನು ಕಾರ್ಯರೂಪದಲ್ಲಿ ನೋಡಬೇಕು. ಗ್ರಾಮ ಉದ್ಯೋಗಸ್ಥರಿಗೆ ಊರಿನ ಸ್ಥಿತಿಗಳು ಅರಿವಿಲ್ಲವಂತೆ. ಇದನ್ನು ಓದಿದರೆ ಬಹಳ ಚೆನ್ನಾಗಿರುವುದು. ಗ್ರಾಮ ಉದ್ಯೋಗಸ್ಥರು ಆ ಊರಿನವರೆ? ಯಾ ಹೊರಗಿನವ (ಯಾರೋ ಪರವೂರಿಂದ) ಬಂದವರೆ? ಆಯಾ ಗ್ರಾಮದ ನಿವಾಸಿಗಳನ್ನೇ ಅದರಲ್ಲೂ ಮರ್ಯಾದಸ್ಥರನ್ನು ನೋಡಿ ಗ್ರಾಮ ಉದ್ಯೋಗಕ್ಕಾಗಿ ನೇಮಿಸಲ್ಪಟ್ಟಿದೆ; ಅಂದ ಮೇಲೆ ಆ ಊರಿನ ಸ್ಥಿತಿಗತಿಗಳು ತಿಳಿಲ್ಲವೆಂದರೆ ಆಶ್ಚರ್ಯವೆ. ಸರಿ! ಗ್ರಾಮ ಉದ್ಯೋಗವನ್ನು ಬಡ ನೌಕರಿ ಎಂದು ಅಲ್ಲಗಳೆದು ಅಪವಾದಗಳನ್ನು ಹೊರಿಸಬಹುದು. ಆದರೆ ಅದನ್ನು ಕೇಳುವಷ್ಟು ಸಹನಾಶಕ್ತಿಯುಳ್ಳ ಗ್ರಾಮ ನೌಕರರು ಯಾರೂ ಇಲ್ಲವೆಂಬುದು ತಿಳಿದಿರಲಿ.

ಎಸ್. ಎಸ್. ಬೇಲೂರ,

ಪ್ರೆಸಿಡೆಂಟ್, ಸ್ಕೂಲ್‌ಕಮಿಟಿ,

ಬೇಲೂರು.

Read & Advertise in

NAVAYUGA

ದಕ್ಷಿಣ ಕನ್ನಡ.

ಉಡುಪಿ

ಎಕೆಡೆಮಿ ಆಫ್ ಜನರಲ್ ಎಜ್ಯುಕೇಶನ್– (Academy of General Education) ಮಣಿಪಾಲ ಇದರ ವಿದ್ಯಾರ್ಥಿವ ಹಾಸಭೆಯು ನಿಯಮದಂತೆ ತಾ. 7—1—1945ನೇ ಆದಿತ್ಯವಾರ ಅಪರಾಹ್ನ 4ಗಂಟೆಗೆ ಕೆನರಾ ವ್ಯೊಕೆಶನಲ್ ಬಿಲ್ಡಿಂಗ್ಸ್, ಉಡುಪಿ ಇದರಲ್ಲಿ ಜರಗುವುದು.

ಸದರಿ ಸಭೋತ್ಸವಕ್ಕಾಗಿ ವಿದ್ಯಾಸಂಸ್ಥೆಯ ಪದವೀದಾನ ಸಮಾರಂಭ (Convocation) ವು ತಾ. 13—1—1945 ಶನಿವಾರ ಸಾಯಾಹ್ನ ಉಡಪಿ ಬೋರ್ಡ್ ಹ್ಯಾಸ್ಕೂಲಿನ "ಪೀಪಲ್ಸ್ ಹೋಲ್" (People's Hall)ನಲ್ಲಿ ಜರಗುವುದಾಗಿಯೂ ನಿರ್ಧರಿಸಲಾಗಿದೆ. ಅಗ್ಗೆ ಅಭಿಭಾಷಣ (Address) ವನ್ನೀಯಲು ಚಿದಂಬರಂ ಅಣ್ಣಾಮಲೆ ವಿಶ್ವವಿದ್ಯಾಲಯದ ವ್ಹಾಯ್ಸ್ ಚಾನ್ಸಲರರಾದ ಶ್ರೀ ಎಸ್. ರತ್ನಸ್ವಾಮಿ, ಎಮ್. ಎ., ಬಾರ್ ಎಟ್-ಲಾ, ಸಿ. ಐ. ಇ ರವರು ದಯಮಾಡಿ ಒಪ್ಪಿಕೊಂಡಿರುತ್ತಾರೆ.

ಶ್ರೀ. ಬಿ. ಜಗಜ್ಜೀವನದಾಸ ಸೆಟ್ಟಿ ಮತ್ತು ಸಹೋದರರ ಉದಾರ ಕಾರ್ಯ—ಬಿ. ಎಂ ಸೆಟ್ಟಿ ಟೈಲ ವರ್ಕ್ಸಿನ ವ್ಯವಸ್ಥಾಪಕರಾದ ಶ್ರೀ. ಬಿ. ಜಗಜ್ಜೀವನದಾಸ ಸೆಟ್ಟರು ಮತ್ತು ಸಹೋದರರು ಇತ್ತ ವೂರು ವರುಷಗಳಿಂದ ತಮ್ಮ ಕಾರ್ಖಾನೆಯ ಹಂಚುಗಳನ್ನು ಸಮುದ್ರ ಮಾರ್ಗವಾಗಿ ಬೊಂಬಾಯಿಗೆ ಸಾಗಿಸುವ ರೆ ಮಚ್ವೆಗಳ ಜನಾಕಾರ್ಯವನ್ನು ಕೈಗೊಂಡು ಈಗ ತಾನೆ 5 ಮಚ್ವೆಗಳು ಸಮುದ್ರ ಪ್ರಯಾಣದಲ್ಲಿದ್ದು 6ನೆ ಮಚ್ವೆಯ ಉದ್ಘಾಟನಾ ಸಮಾರಂಭವನ್ನು ಇದೇ ತಾರೀಕು 4 12-44ರಲ್ಲು ಕುಂದಾಪುರ ಸಬ್ ಕಲೆಕ್ಟರರ ಧರ್ಮಪತ್ನಿ ಶ್ರೀಮತಿ ಉಷಾ ಡಿ ಡಿ ಸಾಹೆಬ ಎಂ ಕನ್ನಾನ್ನ ಅಧ್ಯಕ್ಷತೆಯಲ್ಲಿ ನೆರವೇರಿಸಿರು. ಮಚ್ವೆಯನ್ನು ರಚಿಸಿದ ಶ್ರೀ ಕೃಷ್ಣಮೆಸ್ತನೆಂಬವರಿಗೆ ಕಟ್ಟಿಡಿ ಆಣೆಗಳನ್ನು ತಗಾರಿಸಿದ ಶ್ರೀ ಕೃಷ್ಣಪ್ಪಆಚಾರಿಗೆ ಮತ್ತು ಬೇಕಾದ ನವಾಸಿನೆಯ ನಾರಗಳನ್ನು ಸಂಗ್ರಹಿಸಿದ ಶ್ರೀ ಗ ದೆಬೆಟ್ಟ ಸೀನ ಸೆಟ್ಟರಿಗೆ ಬಂಗಾರದ ಮೆಡಲು ಮತ್ತು ಉಂಗುರವನ್ನು ಇನ್ನುಳಿದ 100ಮಂದಿ ಇತರ ಕೆಲ್ಸದ ಎರಿಗೆ ವಸ್ತ್ರ ಉಡಿಗೆಗಳನ್ನು ಹಂಚಿದರು ಸ್ತುತ್ಯವಿದೆ

ಸೂಲ್ಕುದ್ರು ಕಡವಿನಲ್ಲಿ ಪ್ರಯಾಣಿಕರ ಗೋಳು—ಉಡುಪಿ ತಾಲೂಕಿನಲ್ಲಿರುವ ಫೇರಿಗಳಲ್ಲಿ ಒಂದಾದ ಸೂಲ್ಕುದ್ರು ಕಡವು ಬ್ರಹ್ಮಾವರ ಸ್ಟಾನ್ಸುನು ಮಾರ್ಗವಾಗಿ ಕಿರಿಮಂಜೇಶ್ವರಕ್ಕೆ ಹೋಗುವ ಕಾಲ್ದಾರಿಯ ಮಾರ್ಗವಾಗಿದ್ದು ಪಾಗೂ ಹಳ್ಳಿ ಪ್ರದೇಶವಾಗಿದ್ದು ದ. ಕ. ಜಿಲ್ಲಾ ಬೋರ್ಡಿನ ಆದಾಯಕ್ಕೆ ವರ್ಷಕ್ಕೆ 500 ರಿಂದ 800 ರೂಪಾಯಿ ವರೆಗೆ ಏಲಂ ಹಣ ಸಿಗುತ್ತಿದೆ. ಇಂಥಾ ಕಡವಿನಲ್ಲಿ ಜಿಲ್ಲಾ ಬೋರ್ಡಿನ, ವ. ಇತರ ಇಲಾಖಾ ಅಧಿಕಾರಿಗಳ ಸಂಚಾರವು ಆ ಮಾರ್ಗದಲ್ಲಿ ಇಲ್ಲದಿರುವುದರಿಂದ ಸದ್ರಿ ಕಡವಿನಲ್ಲಿ ಒಂದು ಒಡಕು ದೋಣಿ ವಿನಃ ಬೇರೆ ದೋಣಿಗಳಿಲ್ಲ. ಅವನ್ನು ದಾಟಿಸುವದಕ್ಕೂ ಜನವಿಲ್ಲ. ಪ್ರಯಾಣಿಕರೆ ದೋಣಿ ನಡೆಸುವುದಲ್ಲದೆ, ಕಂಟ್ರಾಕ್ಟರರೋ ಅವರ ಪ್ರತಿನಿಧಿಗಳೋ ಜನರಿಂದ ಹಣವನ್ನು ವಾತ್ರ ಇಸ್ಸಕೊಂಡಂತೆ ವಸೂಲು ಮಾಡುತ್ತಿದ್ದಾರೆ ಪ ಪದ ಹೆಂಗಸರು ಮಕ್ಕಳ ಕಷ್ಟವನ್ನು ಹೇಳತೀರದು. ಮಧ್ಯೆ ಮಧ್ಯ ಕುದ್ರುಗಳಲ್ಲಿ ದೋಣಿ ನಿಲ್ಲಿಸಿ ಜಿಪ್ಪವುದು, ಮಧ್ಯ ಹೊಳೆಯಲ್ಲಿ ಸಿಕ್ಕಿದ ಹೊಗೆಯುಲ್ಲೇ ಬಿಡುವುದು, ಇತ್ಯಾದಿ ಕಷ್ಟಗಳು ಪ್ರಯಾಣಿಕರಿಗೆ ದೊರಕುತ್ತಿವೆ. ಇಂಥಾ ವಿಚಾರಗಳಿಗೆ ಮಾನ್ಯ ಜಿಲ್ಲಾ ಬೋರ್ಡಿನವರು ಇನ್ನಾದರೂ ಲಕ್ಷ್ಯಕೊಟ್ಟು ಸುವ್ಯವಸ್ಥೆ ನಡೆಸಬೇಕೆಂದು ಕೋರುವ

—ಬಡ ಪ್ರಯಾಣಿಕ

ಹರಿಜನ ಪೋಲೀಸ್ ಕೋನ್ಸ್ಟೆಬಲನ ಅಕಾಲ ನಿಧನ:— ಹಂಜನರಲ್ಲಿ ಮೊದಲನೆದಾಗಿ ಸರಕಾರಿ ಉದ್ಯೋಗಕ್ಕೆ ಸೇರಿದ್ದ ಮಣಿಪಾಲ ಗ್ರಾಮದ ಶ್ರೀ. ಎಂ. ಪಂಡಂಬವರು ತಾ. 11-12-44ರಲ್ಲಿ ಪದಂಕ ರ್ಯ C D I-T ಆಸ್ಪತ್ರೆಯಲ್ಲಿ ತನ್ನ 26ನೇ ವಯಸ್ಸಿನಲ್ಲಿ ನಿಧನ ಹೊಂದಿರುವುದು ವಿಷಾದಕರವೆಂದು ವ್ಯಾಪನ ಆತ್ಮಕ್ಕೆ ಶಾಂತಿದೊರಕಲೆಂದು ಶ್ರೀ ಸುಬ್ಬನವರು ಬರೆಯುತ್ತಾರೆ.

ಮಂಜೇಶ್ವರ:—ಮಂಜೇಶ್ವರಕ್ಕೆ ಸಮೀಪ ಕರ್ನಾಟಕದ ೧೯ನೇ ಆಯುರ್ವೇದ ಸಮ್ಮೇಲನಕ್ಕೆ ಬರಲಿರುವ ವೈದ್ಯರು, ಬೆಲಿಗೇಟುರು, ಮತ್ತು ಪ್ರೇಕ್ಷಕರು ಇವರುಗಳಿಗೆ ವೇಳೆಯಾದ ಬಸ್ಸುಗಳ ಮೂಲಕ ಪ್ರಯಾಣದಲ್ಲಿ ಬಸ್ಸುಗಳಲ್ಲಿ ಸ್ಥಳಾಭಾವದ ಅಡಚಣೆಯ ಉಂಟಾಗದಂತೆ, ಅನುಕೂಲಪಡಿಸಬೇಕಾಗಿ ಬಸ್ ಕಂಪೆನಿಯವರನ್ನು ಅಪೇಕ್ಷಿಸಲಾಗಿತ್ತು, ಕೆನರಾ ಪಬ್ಲಿಕ್ ಕನ್ವೆಯನ್ಸ್ ಕಂಪೆನಿಯವರು ನಮ್ಮ ಅಪೇಕ್ಷೆಯನ್ನು ಮನ್ನಿಸಿ (1) ಚಕ್ರವರ್ತಿ (2) ಕುಮುಟಾ, (3) ಸೆಕ್ಲೇಹಪುರ, (4) ಮೈಸ ರ , (5) ಸೆಂಟ್ರಲ್ ಕರ್ನಾಟಕ ಮೋಟಾರ್ ಸರ್ವಿಸ್ ಸಹ. ಸ್ಥಳಗಳಲ್ಲಿರುವ ತಮ್ಮ ಪ್ರತಿನಿಧಿಯವರಿಗೆ ಬೇಕಾದ ಅನುಕೂಲತೆಗಳನ್ನು ಒದಗಿಸುವರೆ ಒಪ್ಪಿದ್ದಾರೆ. ಬೇರೆ ಕಂಪೆನಿಯವರು ಸಹಾ ಹಾಗೆಯೇ ಅನುಕೂಲಿಸುವರಾಗಿ ನಂಬಿಕೆಯಿದೆ ಆದ್ದರಿಂದ ಬಸ್ಸು ಮೂಲಕ ಪ್ರಯಾಣ ಮಾಡುವ ವೈದ್ಯರು-ಬೆಲಿಗೇಟರು-ಪ್ರೇಕ್ಷಕರು 2 ದಿವಸದ ಆ ಮುಂಚಿತವಾಗಿ ತಮತಮಗೆ ಬೇಕಾಗುವ ಆಸನ (ಸೀಟು) ಗಳ ವಿವರ, ಆಯಾ ಸ್ಥಳಗಳ ಬುಕ್ಕಿಂಗ್ ಆಫೀಸ ಅಧಿಕಾರಸ್ಥರೀಗೆತಿಳಿಸುವಂತೆ ಅಪೇಕ್ಷಿಸಲಾಗಿದೆ ಗುತ್ತದೆಂದ ಸ್ವಾಗತ ಸಮಿತಿ ಅಧ್ಯಕ್ಷರು ಅಪೇಕ್ಷಿಸುತ್ತಾರೆ.

1943ನೇ ಮದರಾಸು ಮೆಸ್ಸ್ಯೂರ್ ಡೀಲರ್ಸ್ ಲ್ಯಾಸೆನ್ಸಿಂಗ್ ಕಾನೂನು—ಕಟಾವಿನಲ್ಲಿ ಮಾರು ಗೊಬ್ಬರ ಕಯಾರಿಸಿ ಮಾರುವವರು ಲೈಸನ್ಸು ಪಡೆಕೊಳ್ಳಬೇಕೆಂಬ ಕಾನೂನು, ಕಾಸ ವರ್ಷ ಜಾರಿಗೆ ಬಂದು, ಆ ಕಾನೂನ ಪ್ರಕಾರ ಅದರ ಅ ಕೆಲಸ ಮಾಡುವುದು ಅಸಾಧ್ಯವಾಗಿ ವಿನಃ ಗುಂಡಲ್ಲೆಲ್ಲ ಕಳವಳ ಉಂಟಾಗಿ, ದ. ಕ ಪೋಷಕ ೨ ದ ಜನ ಸಭೆವ್ಯ ಸರಕಾರಕ್ಕೆ ಕಳದ ಆಕ್ಷೇಪದ ಒ ಗಳಲ್ಲಿ ಒಂದು ಮೆಮೋರಿಯಲ್ ಕಳುಹಿಸಿ, ಶ್ರೀಗಳಾದ ಬಿ. ಯಂ. ತಿಂಗಳಾಯರು, ಯಂ. ಕೆ. ಬಸಪ್ಪನವರು, ಜಿ. ಎ. ಪಕ್ಕಿನರು ಮತ್ತು ಯ ಫ. ಬಿ. ಕೋಡೆಂಕರರು (ಎಸ್. ಕಾಯಿರ್ದರ್) ಕೂಡಾ ನಾಲ್ಕು ಜನರ ಒಂದು ಪ್ರತಿನಿಧಿ ಮಂಡಲವನ್ನು ಮದ್ರಾಸಿಗೆ ಕಳುಹಿಸಿತ್ತು, ಇವರು ಸಂಬಂಧಪಟ್ಟ ಮುಖ್ಯಾಧಿಕಾರಿಗಳನ್ನೆಲ್ಲ ಕಂಡು, ವಿಷಯ ಗಂಭೀರತೆಯಿಂದ ವಿಷಯದೊರಕನ್ನೆಲ್ಲ ಸದರೀ ಕಾನೂನಿಂದ ವಿನಾಯಿತಿಪಡಿಸಬೇಕೆಂದು ಕೇಳಿಕೊಂಡಿದ್ದರು

1943ನೇ ಮದರಾಸು ಮೆನ್ಯೂರ್ ಡೀಲರ್ಸ್ ಲೈಸೆನ್ಸಿಂಗ್ ಕಾನೂನಿನಲ್ಲಿ ಈಗ ಸರಕಾರದವರು ತಮ್ಮ Ms. No. 5120 (ಡೆವಲಪ್‌ಮೆಂಟ್ ಇಲಾಖೆ) ತಾ. 2-12-1944ನೇ S- O-ಪ್ರಕಾರ ಸದರೀ ಕಾನೂನಿನಲ್ಲಿ 1ನೇ ಕಲಮಿನ, ಉಪ ಕಲಮು 3ರ ನಂತ್ರ ಈ ಕೆಳಗಿನಂತೆ ಕಂಡಿಕೆಯೊಂದು ಸೇರಿಸುತ್ತಾರೆ -' (4) ಪೀನಟ್ ಶೆಲ್, ಫಿಶ್ ಗುವಾನೊ ಮತ್ತು ಇತರ ವಿಷನು ಗೊಬ್ಬರವನ್ನು, ತಾವೇ ತಯಾರಿಸಿ ಮಾರುವ ವಿಸಾಗಾರರಿಗೆ ಈ ಕಾನೂನು ಅನ್ವಯವಾಗಕೂಡದು. ''

ಕಾಸರಗೋಡು

ಉಪಾಧ್ಯಾಯರ ಸಮ್ಮೇಲನ—ಕಾಸರಗೋಡು ತಾಲೂಕು ಬೋರ್ಡು ಶಾಲೆಗಳ ಉಪಾಧ್ಯಾಯ ಸಂಘದ ವಾರ್ಷಿಕ ವಾರ್ಷಿಕ ಸಮ್ಮೇಳನವು ತಾ. ೧೭ರಿಂದ ಬೇಗ್ಗೆ ಕುಂಬಳೆಯಲ್ಲಿ ಶ್ರೀ ಜನಾರ್ದನ ಹೆಗ್ಡೆ ಎಂ. ಎಲ್. ಎ (ಕೇಂದ್ರ) ಅವರ ಅಧ್ಯಕ್ಷತೆಯಲ್ಲಿ ಜರಗಿತು ಜಿಲ್ಲಾ ಬೋರ್ಡ್ ವಿದ್ಯಾಧಿಕಾರಿ ಶ್ರೀ ಹೊಸಬೆಟ್ಟು ರಾಮರಾಯರು ಸಮ್ಮೇಳನದ ಉದ್ಘಾಟನೆಯನ್ನು ಮಾಡಿದರು ಬೋರ್ಡು ಸಹಾಯಕ ಮೊದಲಾದ ಎಲ್ಲಾ ಶಾಲೆಗಳಲ್ಲಿ ಕೆಲಸ ಮಾಡುತ್ತಿರುವ ಅಧ್ಯಾಪಕರಿಗೆ ಸರಕಾರಿ ಶಾಲೆಗಳಂತೆ ಇರುವ ಸೌಲಭ್ಯಗಳನ್ನು ಸಿಗಬೇಕೆನ್ನುವ ಉಪಾಧ್ಯಾಯರನ್ನು ಸ್ಥಳಾಂತರ ಮಾಡುವ ಕ್ರಮ ವನ್ನು ಬದಲಿಸುವ, ಸೂಪರಿಂಟೆಂಟ್ ಪದ್ದತಿಯಲ್ಲಿ ಹೇಳಿರುವ ಸಂಬಳ, ವೈಷ್ಯಕೀಯ ಸಹಾಯ, ಮಕ್ಕಳಿಗೆ ಧರ್ಮಾರ್ಥವಾಗಿ ಮಧ್ಯಾಹ್ನ ಊಟದ ಇವನ್ನು ಕೂಡಲೇ ಜಾರಿಗೆ ತರಬೇಕೆನ್ನುವ, ಪ್ರತಿ ಗ್ರಾಮದಲ್ಲೂ ಆಹಾರ ಸಮಿತಿಯನ್ನು ಸ್ಥಾಪಿಸಿ, ಸ್ಕೂಲುಗಳನ್ನು ತೆರೆದು ಊರಿನವರ ಕಷ್ಟಗಳನ್ನು ನಿವಾರಿಸಲು ಎಲ್ಲ ಅಧ್ಯಾಪಕರೂ ನೆರವಾಗಬೇಕೆಂದು ಕೇಳಿಕೊಳ್ಳುವ, ನಿರ್ಣಯಗಳು ಸ್ವೀಕರಿಸಲ್ಪಟ್ಟುವು.

ಡಾ! ಕೆ. ಪಿ ಆರ್. ರಾಯರ ಸ್ಮಾರಕನಿಧಿ–ಇಲ್ಲಿಯ ಸುಪ್ರಸಿದ್ಧ ಡಾಕ್ಟರರಾದ ಕೆ. ಪಿ ರಾಘವೇಂದ್ರರಾಯರ ಹೆಸರನ್ನ ಸ್ಮಾರಕ ಸಂಸ್ಥೆಯೊಂದನ್ನು ಸ್ಥಾಪಿಸುವುದರ ಸಲುವಾಗಿ ಇಲ್ಲಿನ ಹಿಂದೂ ಮ ಸ್ಲಿಮ್, ಕ್ರಿಶ್ಚಿಯನ್ ಎಂಬ ಭೇದವಿಲ್ಲದೆ ಎಲ್ಲರೂ ಒಂದಾಗಿ ಸೇರಿ ಸ್ಮಾರಕನಿಧಿ ಸಂಗ್ರಹದ ಕುರಿತು ಕಮಿಟಿಯೊಂದನ್ನು ಸ್ಥಾಪಿಸಿ ಕಾರ್ಯಾರಂಭಕ್ಕೆ ಪ್ರಾರಂಭವಾಗಿ ಕೆಲಸಮಾಡುವುದು ಕಲಿಯಿತು. ಕೆಲಮಹನೀಯರು ನಿಧಿಗೆ ದ್ರವ್ಯ ಸಹಾಯದ ವಾಗ್ದಾನ ಮಾಡಿಯಲ್ಲ ಕೆಲವರು ಹಣವನ್ನು ನಿಧಿಗೆ ಸಮರ್ಪಿಸಿಯೂ ಇರುತ್ತಾರಲ್ಲದೆ ಬೇರೆ ವಿಧಾನದಿಂದಲೂ ನಿಧಿಗೆ ಹಣಸಂಗ್ರಹ ಮಾಡಿರುತ್ತಾರೆ. ರಾಘವೇಂದ್ರರಾಯರ ಸ್ಮಾರಕ ನಿಧಿಗೆ ಹಣವನ್ನು ಸಂಗ್ರಹವಾಗಿದೆ, ವಾಗ್ದಾನ ಮಾಡಿದ ಐವೇಜಿನ ಸಂಖ್ಯೆ, ವಸೂಲು ಆದ ಐವೇಜಿನ ವಿವರ, ಈ ರೀತಿ ಸಂಗ್ರಹವಾದ ಐವಜು ಯಾರಲ್ಲಿ ಇರಿಸಲ್ಪಟ್ಟಿದೆ ಎಂಬೀ ವಿಷಯಗಳು ಮಹಾಜನರಿಗೆ ತಿಳಿಯಬೇಕಾದಂತೆ ಸದ್ರಿ ಕಮಿಟಿಯ ಕಾರ್ಯದರ್ಶಿಗಳು ಸರಿಯಾದ ವಿವರವನ್ನು ಪತ್ರಿಕೆಯ ಮುಖಾಂತರ ಬೇಕಾಗಿ ಸ್ಮಾರಕ ಸಂಸ್ಥೆಯ ಪ್ರೇಮಿಗಳಲೊಬ್ಬರಾದ ಶ್ರೀಯುತ ಪಿ. ವಿ ಕಡಂಬಳಿತ್ತಾಯರು ಅಪೇಕ್ಷಿಸುತ್ತಾರೆ.

ಪುತ್ತೂರು

ಅಡಿಕೆಯ ವಿಚಾರ—ಸಟ ಪಿಕೆಟು ರದ್ದುಪಡಿಸಿ ಮಾವಾಸು ಸ ಆರ್ ವಸೂಲಿ ಕೇಳದ ಸಮಯದಲ್ಲಿ ಆ. ಬೀ. ಗ ರವ ಪರವಾಗಿ ಶ್ರೀ ಜಿ.ಕೆ. ಗೋವಿಂದ ಭಟ್ಟರು, ಇಂಡಿಯಾ ಸರಕಾರಕ್ಕೆ ಒಂದು ನೋಟೀಸು ಕೊಟ್ಟಿದ್ದರು ಇದರ ವಿಚಾರಕ್ಕಾಗಿ ಮದ್ರಾಸ್ ಸಂಸ್ಥಾನದ ಅಗ್ರಿಕಲ್ಚರಿ ಎಡಿಷನಲ್ ಕಲೆಕ್ಟರರು ಅವರನ್ನು ಮದ್ರಾಸಿಗೆ ತಾ. ೨೨-೩ಕ್ಕೆ ಕರೆದಿರುತ್ತಾರೆ. ಈ ಸಂದರ್ಭದಲ್ಲಿ ಮಾರ್ಕೆಟ್ ಮಾಡಲು ಕೊಯಿದ ಅಡಿಕೆಯ ಇತ್ಯರ್ಥ ಮತ್ತು ವಸೂಲಾದ ಸುಂಕವನ್ನು, ವಾಪಾಸು ಕೊಡುವ ಮತ್ತು ಹಳೆ ಅಡಿಕೆಗೆ ವಿನಾಯಿತಿ ಮಾಡುವ ಎಲ್ಲಾ ವಿಷಯ ಗಳನ್ನು ಕಾರ್ಯದರ್ಶಿಗಳು. ಚರ್ಚಿಸಲಿರುವ [illegible] ಬೇಕಾದ ಅಕ್ಕಿ-ಭತ್ತದ ಸಂಬಂಧಯೂ ಕೆಲಿಕು ಪ್ರಯತ್ನಿಸುವರು

ತಾ ೧೭. ೧೨-೪೪ರಲ್ಲಿ ಅ. ಬೀ. ಗಾರರ ಕಾರ್ಯಕಾರಿ ಮಂಡಲಿ ಸಭೆಯು ತಾ 14-1-1945 (ಆದಿತ್ಯವಾರ) ಪುತ್ತೂರಲ್ಲಿ ಶ್ರೀಕರ ಸಂಘದ ಕಟ್ಟಡದಲ್ಲಿ ದ.ಕ ಮತ್ತು ಕೊಡಗಿನ ಅ ಬೀ. ಸಂಘದ ಸಭೆ ೩ ಗಂಟೆಗೆ ಸೇರಲು ನಿರ್ಧರಿಸಿದರು.

೨೯ನೆ ಕನ್ನಡ ಸಾಹಿತ್ಯ ಸಮ್ಮೇಳನ—ಇದೇ ತಾ 28ರಿಂದ 30ರ ವರೆಗೆ 3 ದಿನಗಳಲ್ಲಿ ರಬಕವಿಯಲ್ಲಿ ನಡೆಯುತ್ತದೆ, ೨೮-೧೨-೪೪ ನೆಯ ದಿನ ಬೆಳಗ್ಗೆ ೯-೩೦ ಗಂಟೆಗೆ ಸಾಂಗ್ಲಿ ಸಂಸ್ಥಾನದ ರಾಜಾಸಾಹೇಬರವರಾದ ಹಿಸ್ ಹೈನೆಸ್ ಕ್ಯಾಪ್ಟನ್ ಸರ್ ಚಿಂತಾಮಣರಾವ್ ಧುಂಡಿರಾಜ, ಕೆ ಸಿ ಐ ಇ ಅವರು ಪ್ರಾರಂಭೋತ್ಸವ ನಡೆಸಲು ದಯಮಾಡಿ ಒಪ್ಪಿರುತ್ತಾರೆ. ಕನ್ನಡ ನಾಡಿನ ಸುಪ್ರಸಿದ್ಧ ಸಾಹಿತಿಗಳಾದ ಶ್ರೀಮಾನ್ ಶ್ರೀ. ಶಿ. ಬಸವನಾಳ್ ಎಂ.ಎ ಅವರುಅಧ್ಯಕ್ಷತೆ ವಹಿಸುತ್ತಾರೆ.

ಭಾರತಸ್ವಾತಂತ್ರ್ಯ ಚಾಯಾಹಾರಿಕೆ
''ಭಾರತೀಯ ಸ್ವಾತಂತ್ರ್ಯ ಸಮಸ್ಯೆಯು ಯಾವುದೇ ರಾಜಕೀಯ ಪಕ್ಷದವರಿಂದ ಉದ್ಭವಿಸಿಲ್ಲ. ಅ ಥವಾ ಅದು ತೋರಿಕೆಯ ಪ್ರಚಾರವೂ ಅಲ್ಲ. ಅ ದು ಜಾಗತಿಕ ಪರಿಸ್ಥಿತಿ ಮೂಲಕ ಸ್ವಾಭಾವಿಕವಾಗಿ ಹುಟ್ಟಿದ್ದಾಗಿದೆ '' ಎಂದು ಅಮೇರಿಕದ ನ್ಯಾಯೋಚಿಸನಲ್ಲಿ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರಿಂದ ಹ್ವಾರೆ.

Sri Narayan Guru Bank, Ltd.,

(Incorporated in British India Liability of Members is Limited)

Regd. Head Office HAMPANKATTA,

MANGALORE.

Branches. UDIPI, & Coondapur.

Authorised Capital	. .	**Rs 2,00000**
Issued Capital	...	**,, 1,00000**
Paid up Capital	. ....	**,, 76,600**

The Company has commenced Business by obtaining from the Government the Certificate of Commencement of Business on the 19th August. 1944 under the Indian Companies Act 1913

Strong Board of Directors

Consent of the Central Government has been obtained under the Defence of India Rules 94 A "It must be distinctly understood that in giving this consent the Govt. of India does not take any responsibility for the financial soundness of any scheme or for the correctness of any of the statements made or opinion expressed with regard to them'. The Government of India has been pleased to extend the period till the 13th January 1945 for the sale of shares.

A few shares at par available.

Rs 50/- per share. Re 1/- Entrance Fee per share.

Hundreds have already taken up shares!

WHY NOT YOU?

Current and Savings Bank Accounts are opened. Fixed Deposits are accepted Enquire for Rules of Business and rates of Interest.

MANGALORE JARAPPA,
President & Managing Director.

ವಾರದ ವಾರ್ತೆ

ಬ್ರಿಟಿಷ್-ಅಬಿಸೀನಿಯಾ ಕರಾರು

ಅಬಿಸೀನಿಯದ ಕೆಲವು ಪ್ರಾಮುಖ್ಯ ಸ್ಥಳಗಳನ್ನು ಬಿಡಲೊಪ್ಪದ ಬ್ರಿಟಿಷರ ಕುರಿತು ಅಲ್ಲಿಯ ಚಕ್ರವರ್ತಿಗಳು ಅಮೇರಿಕಾ ಸರಕಾರಕ್ಕೆ ದೂರುಕೊಟ್ಟಿದ್ದರೆಂಬ ದಟ್ಟ ವದಂತಿಯಿದ್ದಿತು. ಕಳೆದ ವಾರ ಆಂಗ್ಲೋ–ಅಬಿಸೀನಿಯಾ ಒಪ್ಪಂದವಾಗಿದೆ. ಈ ಕರಾರು ಪ್ರಕಾರ ಅಡ್ಡಿಸ್ ಅಬಾಬಾ-ಜಿಬೂತಿ ರೈಲ್ವೆಯಿಂದ ಬ್ರಿಟಿಷ್ ಸೇನೆ ಹಿಂದೆಗೆಯಬೇಕು. ಅದರ ಒತ್ತಿನ ಸ್ಥಳವನ್ನೂ ಅಬಿಸೀನಿಯಕ್ಕೇನೇ ಬಿಟ್ಟುಕೊಡಬೇಕು. ಆದರೆ ಇಟಲಿ ಸೋಮಾಲಿಲೇಂಡಿಗೆ ಒತ್ತಾಗಿ ಇರುವ ಸ್ಥಳದಲ್ಲಿ ಯುದ್ಧಾನಂತರದ ಒಪ್ಪಂದದ ವರೆಗೆ ಬ್ರಿಟಿಷ್ ಸೇನಾಧಿಕಾರವಿರಬಹುದು. ಈ ಕರಾರು ಪ್ರಕಾರ 1942ರಲ್ಲಾದ ಒಪ್ಪಂದಕ್ಕಿಂತ ಹೆಚ್ಚಿನ ಸ್ಥಳಗಳು ಅಬಿಸೀನಿಯಕ್ಕೆ ದೊರೆತಿವೆ.

ಗ್ರೀಸ್ ದುರಂತ

ಇನ್ನೂ ಭೀಕರವಾಗಿ ಸಾಗುತ್ತಿರುವ ಗ್ರೀಸ್ ಅಂತಃಕಲಹದ ಕುರಿತು ಕಳೆದ ವಾರ ಬ್ರಿಟಿಷ್ ಕಾಮನ್ಸ್ ಸಭೆಯಲ್ಲಿ ಮಿ. ಈಡೆನರು ಮತ್ತೊಂದು ಹೇಳಿಕೆಯಿತ್ತಿದ್ದಾರೆ. ಬ್ರಿಟಿಷರು ಎಲ್ಲಾ ಪಕ್ಷಗಳ ಸಮ್ಮತಿಯಿಂದಲೇ ಗ್ರೀಸ್ ಪ್ರವೇಶಮಾಡಿದ್ದು, ಅದೂ ಆಹಾರ ಸರಬರಾಯಿಪಡಿಸಲಿಕ್ಕಾಗಿಮಾತ್ರ. ಅಂತಹ ಸಹಾಯವಿಲ್ಲದಿರುತ್ತಿದ್ದರೆ ಗ್ರೀಕರ ಆಹಾರಾಭಾವ ಅಸಹ್ಯವಾಗುತಿತ್ತು. ಈಗಿನ ಗಲಭೆಯಿಂದ ಆಹಾರ ವಿತರಣೆಗೆ ತಡೆಬಿದ್ದಿದೆ. ಗ್ರೀಸಿನಲ್ಲಿ ಸರ್ವಪಕ್ಷೀಯ ಸರಕಾರ ಸ್ಥಾಪಿಸುವದೇ ನಮ್ಮ ಗುರಿ. ಬ್ರಿಟನಿಗೆ ಗ್ರೀಸಿನಲ್ಲಿ ಸ್ವಾರ್ಥವಿದೆಯೆಂಬ ಆರೋಪವು ಶುದ್ಧ ತಪ್ಪಭಿಪ್ರಾಯ ಎಂದು ಮಿ. ಈಡೆನರ ಅಂಬೋಣ.

ಗ್ರೀಕ್ ರಾಷ್ಟ್ರೀಯವಾದಿಗಳ ಸಮ್ಮತಿ

ಗ್ರೀಸಿನ ವಿರುದ್ಧ ಪಕ್ಷ 'ಎಲಾಸ್' ಪ್ರಮುಖರು ಬ್ರಿಟಿಷ್ ಸೇನಾನಿ ಸ್ಕೋಬಿಯವರ ಕೆಲವು ಶರ್ತಗಳಿಗೊಪ್ಪಿಗೆಯಿತ್ತಿದ್ದಾರೆ. ಆ ಶರ್ತಗಳಂತೆ ಪ್ರಧಾನ ನಗರ ಎಥೆನ್ಸ್ ಮತ್ತು ಬೇರೊಂದು ಕಡೆಯ ಎಲಾಸ್ ಸೈನಿಕರನ್ನು ನಿಶ್ಶಸ್ತ್ರರನ್ನಾಗಿ ಮಾಡುವದಕ್ಕೂ ಅವರ ಒಪ್ಪಿಗೆಯಿದೆ. ಗ್ರೀಸ್ ಆಡಳಿತೆಯನ್ನು ಪ್ರಕೃತ ಒಬ್ಬ ರೀಜೆಂಟನ ಕೈಗೊಪ್ಪಿಸುವ ಸೂಚನೆಯನ್ನು ಅನುಮತಿಗಾಗಿ ಗ್ರೀಸ್ ಸರಕಾರವು ಲಂಡನಿನಲ್ಲಿರುವ ಅವರ ರಾಜರಿಗೆ ಕಳುಹಿಸಿದ್ದು, ರಾಜರೀಗ ಅದನ್ನೊಪ್ಪಿಸಿದ್ದಾರೆ. ಕ್ರಿಸ್‌ಮಸ್ ಸಂಬಂಧದಲ್ಲಾದರೂ ಗ್ರೀಸಿನಲ್ಲಿ ಜಗಳ ನಿಲ್ಲಿಸಬೇಕೆಂದು ಕಾಮನ್ಸ್ ಸಭೆಯಲ್ಲಿ ಬಂದ ಸೂಚನೆಯನ್ನು ಮಿ. ಈಡೆನ್ ನಿರಾಕರಿಸಿದರು.

ಬ್ರಿಟನಿನಲ್ಲಿ ಹೊಸ ಸೇನಾ ತಯಾರಿ

ಬರುವ ತಿಂಗಳುಗಳಲ್ಲಿ ಕಾಲು ಮಿಲಿಯ ಹೊಸ ಸೈನಿಕರನ್ನು ಬ್ರಿಟನಿನಲ್ಲಿ ಜಮಾಯಿಸತಕ್ಕದ್ದೆಂದು ಡೌನಿಂಗ್ ಸ್ಟ್ರೀಟಿನಿಂದ ಪ್ರಕಟವಾಗಿದೆ. ನಮ್ಮ ಸೇನೆಯನ್ನು ಇನ್ನಷ್ಟು ಬಲಗೊಳಿಸುವದಕ್ಕಾಗಿ ಈ ಸನ್ನಾಹವೆಂದು ಆ ಪ್ರಕಟಣೆಯಲ್ಲಿದೆ. ಜರ್ಮನಿ ಯುದ್ಧದ ದುರ್ವಾರ್ತೆ ಬರುತ್ತಿರುವುದರಿಂದ ಇಂತಹ ಆವಶ್ಯಕತೆ ಬಿದ್ದಿರಬೇಕೆಂದು ಯಾರೂ ಊಹಿಸಬಾರದೆಂದೂ ಯುದ್ಧವನ್ನು ಗುರಿತನಕ ಸಾಗಿಸುವ ತಮ್ಮ ಧ್ಯೇಯಪಾಲನೆಗಾಗಿಯೇ ಈ ಹೊಸ ಕಾರ್ಯವೆಂದೂ ಸಮಾಧಾನ ಕೊಡಲಾಗಿದೆ. ಇದಕ್ಕಾಗಿ 18 ವರುಷಕ್ಕೆ ಮೇಲ್ಪಟ್ಟವರನ್ನೂ ಕಾರ್ಖಾನೆಗಳಲ್ಲಿ ಕೆಲಸಕ್ಕಿರುವವರನ್ನೂ ಸೇನೆಗೆ ಕರೆಯಲಾಗುವದು.

ಹಿಂದೀ ಸ್ವಾತಂತ್ರ್ಯಕ್ಕೆ ರಶ್ಯದ ಬೆಂಬಲ

"ಸೋವಿಯೆಟ್ ರಶ್ಯವು ಹಿಂದುಸ್ಥಾನ ಮತ್ತು ಚೀನದ ಸ್ವಾತಂತ್ರ್ಯಕ್ಕಾಗಿ ಸದಾ ಬೆಂಬಲವೀಯುವಂತಹದೆಂಬ ಕುರಿತು ಅನುಮಾನವೇ ಇಲ್ಲ" ಎಂದು ರಶ್ಯದ ಪೂರ್ಣ ಪರಿಚಯವುಳ್ಳ ಬ್ರಿಟಿಷ್ ಲೇಖಕ ಸರ್ ಬೆರ್ನಾರ್ಡ್ ಪೇರೆಸರು ಬರೆದಿದ್ದಾರೆ. "ಇಂದಿನ ಇಂಗ್ಲಾಂಡು–ಭಾರತ ಜಗಳದಲ್ಲಿ ರಶ್ಯದ ಅಭಿಪ್ರಾಯ ಸ್ಪಷ್ಟವಿದ್ದರೂ ಅದು ಪೂರ್ಣ ತಟಸ್ಥವಾಗಿದೆ. ರಶ್ಯವು ಹಿಂದುಸ್ಥಾನ ಪ್ರವೇಶಿಸುವಂತಿಲ್ಲ; ಆದರೆ ಅವರ ಪ್ರವೇಶಕ್ಕೆ ನಮಗಿಂತ ಹೆಚ್ಚಿನ ಸ್ವಾಗತವಲ್ಲಿ ದೊರೆಯಲಿದೆ ಎಂದು ನಾನು ಹೇಳಲೆ? ಭಾರತಕ್ಕೆ ಪೂರ್ಣ ಸಮಾಧಾನವನ್ನು ಉಂಟುಮಾಡಿದ್ದಲ್ಲಿ ಇಂಗ್ಲಾಂಡು-ರಶ್ಯಾ ಸಂಬಂಧವು ಬಹಳವಾಗಿ ಸುಧಾರಿಸುವದು ಖಂಡಿತ" ಎನ್ನುತ್ತಾರೆ ಪೇರೆಸ್.

ಕಮ್ಯೂನಿಸ್ಟರ ಬೇಡಿಕೆಗೆ ಚಿಯಾಂಗರ ನಕಾರ

ಚೀನದಲ್ಲೊಂದು ಸಮ್ಮಿಶ್ರ ಸರಕಾರ ಸ್ಥಾಪನೆಯಾಗಬೇಕು, ಮತ್ತು ಸಂಯುಕ್ತ ಸೇನಾಧಿಕಾರಿಗಳ ನೇಮಕವಾಗಬೇಕು ಎಂಬ ಅಲ್ಲಿಯ ಕಮ್ಯೂನಿಸ್ಟರ ಸಂಧಿ ಸೂಚನೆಗಳನ್ನು ಚಿಯಾಂಗ್ ಕೈಶೇಕರು ನಿರಾಕರಿಸಿದ್ದಾರೆ. ಈ ಸೂಚನೆಯನ್ನೊಯ್ದ ಕಮ್ಯೂನಿಸ್ಟ ನಾಯಕರನ್ನು ಒಂದು ವಾರದ ವರೆಗೂ ಕಾಯುವಂತೆ ಮಾಡಿ ಕೊನೆಗರ್ಧಘಂಟೆ ಮಾತ್ರ ಭೇಟಿ ಕೊಟ್ಟು ಚಿಯಾಂಗರು ಅಧಿಕಾರ ದರ್ಪ ಪ್ರದರ್ಶಿಸಿದರು ಎಂದು ಕಮ್ಯೂನಿಸ್ಟರ ಆರೋಪ. ಇದರಿಂದಾಗಿ ಚಿಯಾಂಗ ಕೈಶೇಕ್ ಮತ್ತು ಕಮ್ಯೂನಿಸ್ಟರೊಳಗೆ ರಾಜಿಯಾಗಿ ಜಪಾನರಿಗೆ ಪ್ರಬಲ ವಿರೋಧ ವೇಳಬಹುದೆಂಬ ಆಸೆ ಹುಸಿಯಾಗಿದೆ.

ಹಿಂದೂ ಮಹಾಸಭಾ ಅಧಿವೇಶನ

ಅ. ಭಾ. ಹಿಂದೂ ಮಹಾಸಭೆಯ ವಾರ್ಷಿಕಾಧಿವೇಶನವು ಬಿಲಾಸಪುರದಲ್ಲಿ ಡಾ| ಶ್ಯಾಮಪ್ರಸಾದ ಮುಖರ್ಜಿಯವರ ಅಧ್ಯಕ್ಷತೆಯಲ್ಲಿ ಇದೇ ತಾ. 24ರಲ್ಲಿ ಆರಂಭವಾಗಿದೆ. ಡಾ| ಮುಖರ್ಜಿಯವರು ತನ್ನ ಅಧ್ಯಕ್ಷಭಾಷಣದಲ್ಲಿ "ಶಾಂತಿ ಸಮ್ಮೇಲನದಲ್ಲಿ ಹಿಂದುಸ್ಥಾನದ ಸ್ವರ ಕೇಳುವಂತಾಗಬೇಕು. ಅದು ನಮ್ಮ ಪರಂಪರಾಗತ ಹಕ್ಕುದಾರರಾದ ಬ್ರಿಟಿಷರ ಪಾಲಿಗೆ ಹೋಗಬಾರದು. ಅದಕ್ಕಾಗಿಯೇ ನಾನು ಎಲ್ಲಾ ಪಕ್ಷಗಳು ಒಗ್ಗಟ್ಟಾಗಬೇಕೆನ್ನುತ್ತೇನೆ" ಎಂದು ಹೇಳಿ ವೈಸರಾಯರಲ್ಲಿ ಯಥಾರ್ಥತೆಯಿದ್ದರೆ ರಾಜಕೀಯ ಪ್ರಮುಖರ ಬಿಡುಗಡೆ ಮಾಡಿ ಹಿಂದೀ ಪ್ರಶ್ನೆಯ ತೀರ್ಮಾನವನ್ನು ರಶ್ಯಾ, ಅಮೇರಿಕ, ಚೀನಾ ಪ್ರತಿನಿಧಿಗಳಿಗೆ ಕೊಡಲಿ ಎಂದು ಆಹ್ವಾನಿಸಿದ್ದಾರೆ.

ಪಾಕಿಸ್ತಾನ್ ಪ್ರಲಾಪ

"ಮುಸ್ಲಿಂ ಲೀಗು ತನ್ನ ಸ್ವಶಕ್ತಿಯಿಂದ ಪಾಕಿಸ್ತಾನವನ್ನು ಗೆದ್ದುಕೊಳ್ಳುವದೆಂಬ ಹಂಬಲ ಸಲ್ಲದು; ಅಥವಾ ಹಾಗಾಗಬಹುದೆಂದು ಅದರ ನಾಯಕನು ನಿರೀಕ್ಷಿಸುವದೂ ಬೇಡ. ಭಾರತದ ಇಬ್ಭಾಗಕ್ಕೆ ಬ್ರಿಟಿಷ್ ಬೆಂಬಲ ದೊರೆಯುವದೆಂದು ಅವರು ನಂಬಿದ್ದಾರೆ. ರಕ್ಷಣೆಯು ಬ್ರಿಟಿಷ್ ಖಡ್ಗದಿಂದಲೇ ಆಗಬೇಕಾದರೆ ಅದು ಶಾಶ್ವತ ಗುಲಾಮಗಿರಿ ಹೊರತು ಬೇರೇನೂ ಅಲ್ಲ. ಜುಲುಮೆಯ ವಿಭಾಗದ ನಂತರ ಬ್ರಿಟಿಷ್ ಅಧಿಕಾರವು ಹಿಂದೆಗೆಯಲ್ಪಟ್ಟ ಮೇಲೆ ಇಡೀ ರಾಷ್ಟ್ರದಲ್ಲಿ ಪುನಃ ತನ್ನ ಅಧಿಕಾರ ಸ್ಥಾಪಿಸದಂತೆ ಸ್ವತಂತ್ರ ಹಿಂದುಸ್ಥಾನವನ್ನು ತಡೆಯುವವರಾರಿದ್ದಾರೆ?"– ಎಂದು ಡಾ| ಶ್ಯಾಮಪ್ರಸಾದರ ವೀರವಾಣಿ. ಎಲ್ಲಾ ಅಲ್ಪಸಂಖ್ಯಾಕರಿಗೂ ನ್ಯಾಯವಾದ ವಿಶೇಷ ರಕ್ಷಣೆಗಳನ್ನೀಯುವ ವಿಧಾನವನ್ನು ಡಾ| ಮುಖರ್ಜಿ ವಿವರಿಸಿದ್ದಾರೆ.

ಫ್ರಾನ್ಸಿನ ಬೇಡಿಕೆಗಳು

ಡಿ ಗೋಲೆ–ಸ್ಟಾಲಿನ್ ಒಪ್ಪಂದದಿಂದ ಮಿಕ್ಕ ಪ್ರಬಲ ರಾಷ್ಟ್ರಗಳು ಒಳಗಿಂದೊಳಗೆ ಕಳವಳಕ್ಕೀಡಾಗಿವೆ. ಆ ಮೊದಲು ಅಂತರ್ರಾಷ್ಟ್ರೀಯ ಮಂಡಲಿಯ ಅಧಿಕಾರದಲ್ಲಿದ್ದು 1940ರಲ್ಲಿ ಸ್ಪೈನ್ ಸರಕಾರವು ಜುಲುಮೆಯಿಂದ ವಶಪಡಿಸಿಕೊಂಡ ಟಾಂಜೀರಿನ ಇಂದಿನ ಆಳ್ವಿಕೆಗೆ ತಾವೆಂದೂ ಒಪ್ಪಿಕೊಡುವಂತಿಲ್ಲವೆಂದು ಸ್ವತಂತ್ರ ಫ್ರೆಂಚರ ವಿದೇಶ ಮಂತ್ರಿಯಂದಿದ್ದಾರೆ. ಅಂತೆಯೇ ಜರ್ಮನಿಯು ಇನ್ನೊಮ್ಮೆ ಧಾಳಿಕಾರಕವಾಗದಂತೆ ಅದರ ರ್ಹೈನ್ ಕ್ಷೇತ್ರವನ್ನು ಕತ್ತರಿಸಿ ವಿಂಗಡಿಸಬೇಕೆಂದೂ ಅವರು ಜಾಹೀರುಮಾಡಿದ್ದಾರೆ. ಜರ್ಮನಿಯ ಕೆಲವು ಉಪಯುಕ್ತ ಭಾಗಗಳನ್ನು ಕಡಿದು ಪೋಲೆಂಡಿಗೆ ಕೊಡುವ ಸೂಚನೆಗೆ ತಮ್ಮ ಸಮ್ಮತಿಯೂ ಇಷ್ಟಕ್ಕಾಗಿಯೇ ಎಂದು ಅವರ ಅಂಬೋಣ.

೧೬ ಮಂದಿಗೆ ಮರಣಶಿಕ್ಷೆ

ಭೋಗ್ನಿಪೋರ್ ಎಂಬಲ್ಲಿ ಕಳೆದ ಮಾರ್ಚಿ ತಾ. 12ರಲ್ಲಿ ಸಬ್ ಇನ್ಸ್ಪೆಕ್ಟರರೊಬ್ಬರನ್ನು ಕೊಲೆಮಾಡಿದ ಆರೋಪಕ್ಕಾಗಿ ಕಾನ್ಪುರದ ಸೆಶ್ಶನ್ಸ್ ಜಡ್ಜರು 16ಮಂದಿಗೆ ಮರಣ ಶಿಕ್ಷೆ, ನಾಲ್ಕು ಮಂದಿಗೆ ಜೀವಾವಧಿ ಸಜೆಯಿತ್ತಿದ್ದಾರೆ. 38 ಮಂದಿ ಆರೋಪಿತರಲ್ಲಿ ಉಳಿದವರ ಬಿಡುಗಡೆಯಾಗಿದೆ. ಆಗೋಸ್ತು ಗಲಭೆಯ ವೇಳೆಯಲ್ಲಿ ಚಿಮೂರಿನಲ್ಲಾದ ದುರಂತಕ್ಕಾಗಿ 13 ಮಂದಿಗೆ ಫಾಶಿ ಶಿಕ್ಷೆ ವಿಧಿಸಲ್ಪಟ್ಟದ್ದು ಆ ಕುರಿತು ಪ್ರಿವಿ ಕೌನ್ಸಿಲಿನ ವರೆಗೆ ಅಪೀಲು ನಡೆದರೂ ನಿಷ್ಫಲವಾಗಿ ಈಗ ದೇಶಮುಖಂಡರ ಪ್ರೇರಣೆಯಂತೆ ಗವರ್ನರ್ ಮತ್ತು ವೈಸರಾಯರ ಸನ್ನಿಧಿಗೆ ಪ್ರಾಣದಾನಕ್ಕಾಗಿ ಲಕ್ಷಾವಧಿ ಮಂದಿಯ ಬಿನ್ನವತ್ತಳೆಗಳು ಹೋಗಿವೆ.

ಆಕಾಶ ರೋಗ

ಪ್ರಥಮತಃ ವಿಮಾನ ಪ್ರಯಾಣ ಮಾಡುವ ಸೇಕಡಾ 17 ರಷ್ಟು ಮಂದಿ ಆಕಾಶ ಪೀಡೆಗೊಳಗಾಗುತ್ತಾರಂತೆ. ಎರಡನೇ ಪ್ರಯಾಣದಲ್ಲಿ ಸೇಕಡಾ 4. ಆ ಮೇಲೆ ಕೇವಲ 0.5ರಷ್ಟು ಮಂದಿ ಮಾತ್ರ ತಲೆ ತಿರುಗಾಟ ಇತ್ಯಾದಿ ಬಾಧೆಗೊಳಗಾಗುತ್ತಾರೆಂದು ತಿಳಿದು ಬಂದಿದೆ.

ಕರ್ನಾಟಕದ ಪ್ರತಿಭಾಗದಲ್ಲಿಯೂ, ಮದ್ರಾಸು, ಬೊಂಬಾಯಿ ಮೊದಲಾದ
ನಗರಗಳಲ್ಲಿಯೂ ಅಭಿನಯಿಸಲ್ಪಟ್ಟು ಜನಮೆಚ್ಚಿಗೆ ಪಡೆದ

[illegible]

ಶ್ರೀ. ಕೆ. ಕೆ. ಶೆಟ್ಟರಿಂದ ಬರೆಯಲ್ಪಟ್ಟ ಅತ್ಯಾಧುನಿಕ ಸಾಮಾಜಿಕ ನಾಟಕ
ಕೆಲವೇ ಪ್ರತಿಗಳು ಉಳಿದಿವೆ ... ... ಬೆಲೆ 0—12—0
0-14-0 ಸ್ಟಾಂಪು ಕಳಿಸಿದರೆ ಒಂದು ಪ್ರತಿಯನ್ನು ಬುಕ್‌ಪೋಸ್ಟ್ ಮಾಡಲಾದೀತು

ಪ್ರತಿಗಳು ಸಿಗುವ ಸ್ಥಳ:—
ನ ವ ಭಾ ರ ತ ಪು ಸ್ತ ಕ ಭಂ ಡಾ ರ, ಉ ಡು ಪಿ.

ವಿಲಕ್ಷಣ ವಾರ್ತೆ

ಅಧ್ಯಕ್ಷ—ಸೇನಾನಿಗಳೊಳಗೆ ಶ್ವಾನ ಸಂಬಂಧ!

ಅಮೇರಿಕಾಧ್ಯಕ್ಷ ರುಸವೆಲ್ಟರ ಅತಿ ಪ್ರೀತಿಯ ನಾಯಿ 'ಫಾಲಾ' ಇತ್ತೀಚೆಗೆ ಪ್ರಯಾಣ ಮಾಡಿದ್ದಾಗ, ಪ್ರಮಾದವಶಾತ್ ಅದನ್ನು ದೂರದಲ್ಲಿ ಬಿಟ್ಟುಬಂದ ರುಸವೆಲ್ಟರು ಕೊನೆಗೊಂದು ವಿಮಾನ ಕಳುಹಿಸಿ ಅದನ್ನು ತರಿಸಿದ್ದರೆಂಬ ವಾರ್ತೆ ಅಮೇರಿಕನ್ ಕಾಂಗ್ರೆಸಿನಲ್ಲಿಯೇ ಬಂದಿದ್ದಿತು. ಈಗ ಫಾಲಾನಿಗೆ, ಜನರಲ್ ಐಸೆನೋವರರ ಅತಿ ಪ್ರೀತಿಯ ಸ್ಕಾಟ್ ನಾಯಿ ಟೆಲೆಕ್ ಪುತ್ರಿ ರುಬಿಯೊಡನೆ ಅಧಿಕೃತವಾಗಿ ವಿವಾಹ ನಿಶ್ಚಯವಾಗಿದೆ. ರುಬಿಯು 'ಟೆಲೆಕ್' ಮಗಳು. ಟೆಲೆಕನ್ನು ಮಿ. ಚರ್ಚಿಲ್ಲರು ಐಸೆನೋವರರಿಗೆ ಉಡುಗೊರೆಯಾಗಿ ಕೊಟ್ಟಿದ್ದರು. ಟೆಲೆಕ್ ಅಲ್ಜೀರ್ಸ್‌ನಲ್ಲಿ ಐಸೆನೋವರರ ಮಂಚದಡಿಯಲ್ಲೇ ರುಬಿಯನ್ನು ಹೆತ್ತಿದ್ದಳು. ರುಬಿಯನ್ನು ವಾಷಿಂಗ್ಟನಿನಲ್ಲಿ ಬಿಟ್ಟು ಐಸೆನೋವರರು ಟೆಲೆಕನ್ನು ತನ್ನೊಂದಿಗೊಯ್ದಿದ್ದರು. ಈಗ ಸೇನಾನಿ ಐಸೆನೋವರ ಮತ್ತು ಅಧ್ಯಕ್ಷ ರುಸವೆಲ್ಟರೊಳಗೆ ನೆಂಟಸ್ತಿಕೆ ನಿರ್ಣಯವಾಗಿದೆ!

ನಾಯೀ ವಿರಹದಿಂದ ಆತ್ಮಹತ್ಯೆ!

ಫ್ರಾನ್ಸಿಸ್ ಹೊರೇಸ್ ಸೋಮ್ಸ್ ಎಂಬ 38 ವರುಷ ವಯಸ್ಸಿನವನು ಮಿಲಿಟರಿ ಪೋಲಿಸ್ ಶಿಬಿರದಲ್ಲಿ ನಾಯಿಗಳಿಗೆ ತರಬೇತಿಯೀಯುವ ಉದ್ಯೋಗದಲ್ಲಿದ್ದ. ಆ ಪೈಕಿ ಒಂದು ನಾಯಿಯ ಮೇಲೆ ಅವನಿಗೆ ಪ್ರಾಣಾವಧಿ ಮಮತೆಯಿದ್ದಿತು. ಇತ್ತೀಚೆಗೆ ಅವನು ಆ ಉದ್ಯೋಗದಿಂದ ನಿವೃತ್ತನಾಗಬೇಕಾಗಿ ಬಂತು. ಇದರಿಂದ ಅವನು ತೀರಾ ಕಂಗಾಲಾಗಿ ಹೋದ. ತನ್ನ ಪ್ರೀತಿಯ ನಾಯಿಯನ್ನು ಅಗಲಿದ ಬಾಳುವೆಯೇ ಅವನಿಗೆ ಅಸಹ್ಯವಾಯಿತು. 9 ದಿನಗಳ ರಜೆಯಲ್ಲಿ ಮನೆಯಲ್ಲಿದ್ದಂತೆ ಒಂದು ದಿನ ನೇಣಿನಡಿಯಲ್ಲಿ ನೇತಾಡುತ್ತಿದ್ದ ಅವನ ಶವ ಕಂಡುಬಂತು. ಪತ್ನಿಯ ಹೇಳಿಕೆಯ ಮೇಲಿಂದ ನಾಯಿಯ ವಿರಹವೇ ಅವನ ಮೃತ್ಯುವಿಗೆ ಕಾರಣವಾಯಿತೆಂದು ತಿಳಿದುಬಂತು.

ಹಂದಿಗಳು ವಿಮಾನ ತಿಂದವು!

ಸ್ಟೇಂಟನ್ ಎಂಬಲ್ಲಿಯ ಫ್ರೇಂಕ್ ಬೇಕರ್ ಮತ್ತು ಸ್ಟಾನ್ಲೆ ಪಿಯರ್ಸ್ ಎಂಬವರೊಂದು ವಿಮಾನ ಹತ್ತಿ ನೆರೆಯೂರಿನ ತಮ್ಮ ಮಿತ್ರನ ಭೇಟಿಗಾಗಿ ಹೋಗಿದ್ದರು. ವಿಮಾನವನ್ನೊಂದು ಬಯಲಲ್ಲಿ ನಿಲ್ಲಿಸಿ ಅವರು ಗೈರುಹಾಜರಿಯಾಗಿದ್ದ ಸಮಯ ನೋಡಿ 140 ಹಂದಿಗಳು ವಿಮಾನವನ್ನು ಮುತ್ತಿ ಅದರ ರೆಕ್ಕೆ ಹೊದಿಕೆ ಇತ್ಯಾದಿಗಳನ್ನೆಲ್ಲಾ ಜಗಿದು ಬಿಟ್ಟವು. ಬೇಕರ್ ಮತ್ತು ಪಿಯರ್ಸರು ಬಸ್ಸು ಹತ್ತಿ ತಮ್ಮ ಊರಿಗೆ ಹೋಗಬೇಕಾಯಿತು.

ಎತ್ತಿನ ಚಾತುರ್ಯ!

ಅಲ್ವಾರಿನಲ್ಲಿ ಶಂಭುನಾಥ್ ಎಂಬ ಹೆಸರಿನ ಎತ್ತೊಂದು ಮನುಷ್ಯರಷ್ಟೇ ಬುದ್ಧಿಶಕ್ತಿಯುಳ್ಳದ್ದೆಂದು ಪ್ರದರ್ಶನವಾಗಿದೆ. ಅಲ್ವಾರಿನ ಮಹಾರಾಜರಿದಿರು, ಅದರ ನಾಯಕನು ಹೇಳಿದೊಡನೆ, ಗುಂಪಿನಲ್ಲಿದ್ದವರ ಪೈಕಿ ಆ ಮುದುಕನನ್ನು, ಮಹಾಪಂಡಿತನನ್ನು ಮತ್ತು ವಾಚ್ ಇದ್ದವನೊಬ್ಬನನ್ನು ಅದು ಮೂಸುಡಿನಿಂದ ತಾಗಿಸಿ ತೋರಿಸಿ ಕೊಟ್ಟಿತು. ಒಬ್ಬ ಮನುಷ್ಯನು ಹೇಗೆ ಪರಿಚಯ ಹೇಳಬಲ್ಲನೋ ಅದೇ ರೀತಿ ಶಂಭುನಾಥನೂ ಹೇಳಿದವರ ಗುರುತು ಹಚ್ಚಬಲ್ಲನೆಂದು ಪೂರ್ಣ ಪರೀಕ್ಷೆಯ ನಂತರ ಖಚಿತವಾಗಿದೆ. ಅದರ ಯಜಮಾನನಿಗೆ ಅಲ್ವಾರ್ ಮಹಾರಾಜರಿಂದ ಬಹುಮಾನ ದೊರೆಯಿತು.

ಅವಳ ಮದ ಹೆಚ್ಚಾಯಿತು!

ಅಮೆರಿಕದಲ್ಲಿರುವ ಫ್ರೆಂಚ್-ಕೆನಡಾ ನಟಿ ಫಿಫಿ ದೋರ್ಸೇ ಎಂಬವಳು ಇಂಗ್ಲಾಂಡು ಮತ್ತು ಫ್ರಾನ್ಸಿನಲ್ಲಿರುವ ಸೋಲ್ಜರರಿಗೆ ಮನರಂಜನೆ ಮಾಡುವದಕ್ಕಾಗಿ ತನ್ನನ್ನು ಹೋಗಲು ಬಿಡಬೇಕೆಂದು ಅಮೇರಿಕಾ ಸರಕಾರದೊಡನೆ ಅನುಮತಿ ಯಾಚಿಸಿದ್ದಳು. ಅವಳ 'ಅತಿರೇಕ ಲೈಂಗಿಕ ವರ್ತನೆ'ಗಾಗಿ ಸಮ್ಮತಿ ನಿರಾಕರಿಸಲ್ಪಟ್ಟಿದೆ. "ನೀನು ಗೊಂದಲದಾಯಿಯಾದ್ದರಿಂದ ಸಮ್ಮತಿ ನಿರಾಕರಿಸಿದ್ದೇವೆನ್ನಲು ವ್ಯಸನವಾಗುತ್ತದೆ" ಎಂದೀಗ ಉತ್ತರ ಬಂದಿದೆ. ಈ ಸಂಬಂಧದ ಅಮೇರಿಕನ್ ಅಧಿಕಾರೀ ಸಂಸ್ಥೆಯು ಫಿಫಿಗೆ ಮೊದಲೊಮ್ಮೆ 200 ಮಂದಿ ಇಟಲಿ ಕೈದಿಗಳ ಮುಂದೆ ಇಂತಹ ಸಂದರ್ಭವೊದಗಿಸಿಕೊಟ್ಟು ಪರೀಕ್ಷಿಸಿದ್ದಿತು. ಈ ಕುರಿತು ಫಿಫಿಯ ಹೇಳಿಕೆ: "ಬಹುಶಃ ನಾನು ಮಾಡಬಾರದಾಗಿದ್ದ ಕೆಲವು ಸಂಗತಿಗಳನ್ನಲ್ಲಿ ಮಾಡಿದ್ದೆ. ಆದರೆ ನನ್ನ ವರ್ತನೆಗಳನ್ನು ವರದಿ ಮಾಡುವ ಗುಪ್ತಚಾರರಲ್ಲಿದ್ದರೆಂದು ನನಗೇನು ಗೊತ್ತು? ಒಂದು ಬಾರಿ ನಾನು ಅಂಗಿಯನ್ನು ಮೊಣಕಾಲಿಗಿಂತಲೂ ಮೇಲಕ್ಕೆತ್ತಿ "ಹುಡುಗರೇ, ಇಲ್ಲಿ ಸರಿಯಾಗಿ ನೋಡಿಬಿಡಿ. ನಿಮ್ಮಿಂದಾಗುತ್ತದಾದರೆ ಇಲ್ಲಿ ಸಾಕಷ್ಟು ತಿರುಳಿದೆ" ಎಂದು ಹೇಳಿದ್ದೆ. ಅವರೆಲ್ಲಾ ಸಿಳ್ಳುಹಾಕಿದ್ದರು ಮತ್ತು ನಗೆಯಾಡಿದ್ದರು. ಈ ಬಾರಿ ನನಗೆ ಸಮ್ಮತಿ ನಿರಾಕರಿಸಲ್ಪಟ್ಟಿದೆ. ಆದರೆ ಕರೋಲ್ ಲೇಂಡಿಸ್, ಅನ್‌ಶೆರಿಡೆನ್, [illegible] ಮೊದಲಾದವರನ್ನೆಲ್ಲಾ ಅಲ್ಲಿಗೆ ಹೋಗಲು ಬಿಟ್ಟಿದ್ದಾರೆ. ನಾನೇನು ಅವರಿಗಿಂತಲೂ ಹೆಚ್ಚಿನ ಲೈಂಗಿಕ ಮದದವಳೇ? ಈ ನಿರಾಕರಣೆಯಿಂದಾಗಿ ನನಗೆ ಹುಚ್ಚು ಹಿಡಿದಂತಾಗಿ ಅತ್ತುಬಿಡೋಣವೆನ್ನಿಸುತ್ತದೆ".

ರೈಲಿನ 'ಲೋಂಗ್ ಜಂಪ್'!

ಇಂಗ್ಲಾಂಡಿನ ಕೆಂಟ್ ಬಳಿಯ ಸೇತುವೆಯೊಂದನ್ನು ಹಾದುಕೊಂಡು ರೈಲು ಹೋಗಬೇಕಾಗಿತ್ತು. ಅಷ್ಟರಲ್ಲಿ ಸೇತುವೆಯ ಮೇಲೇನೇ ರೆಕ್ಕೆ ಬಾಂಬೊಂದು ಬೀಳುತ್ತಿರುವದು ಡ್ರೈವರನಿಗೆ ಕಾಣಿಸಿತು. ಅವ ಕೂಡಲೇ 'ಬ್ರೇಕ್' ಹಾಕಿಬಿಟ್ಟ. ಇವನ ಬ್ರೇಕ್ ಬೀಳುವದೂ ಮುಂಭಾಗದ ಸಂಕ ಬಾಂಬಿನಿಂದ ಮುರಿದು ಬೀಳುವದೂ ಸರಿಹೋಯಿತು. ಆದರೆ ಅದ್ಭುತವೆಂದರೆ ರಭಸದಿಂದ ಬ್ರೇಕ್ ಬಿದ್ದುದರಿಂದಾಗಿ ರೈಲುಬಂಡಿ [illegible] ನೆಗೆದುಬಿತ್ತು. ಹಿಂದಿನ ಎರಡು ಗಾಡಿಗಳೆಲ್ಲದರ ಯಾವುದಕ್ಕೂ ಹಾನಿ ಸಂಭವಿಸಲಿಲ್ಲ.

ಹಿಂದಕ್ಕೆ ನೋಡಿದರೆ
ಮುಂದಿನ ವಿಚಾರಗಳು ಕಾಣುವವು

ಜೀವನಕ್ಕೆ ಅವಶ್ಯಕವಾದ ಪದಾರ್ಥಗಳಲ್ಲಿಯಾಗಲಿ, ಕೇವಲ ಭೋಗ್ಯವಸ್ತುಗಳಲ್ಲಾಗಲೀ, ಈಗ ನಾಲ್ಕು ವರ್ಷಗಳಿಂದ, ಅನೇಕಮಡಿಯಾಗಿ ಬೆಲೆ ಹೆಚ್ಚದೇ ಇರುವ ವಸ್ತುವು ಬಹು ಅಪೂರ್ವ. ಗಾರ್ನಮೆಂಟಿನವರ ಅಂಕೆಯಿಂದ ಬೆಲೆಗಳ ಏರುವಿಕೆಯು ತಡೆಯಲ್ಪಟ್ಟಿರುವದಲ್ಲದೆ, ವಸ್ತುತಃ ಇಳಿಮುಖವಾಗಿ ಕೂಡ ಮಾಡಲ್ಪಟ್ಟಿದೆ. ಬೆಲೆಗಳು ಇನ್ನೂ ಇಳಿಯುವುದು ಅತ್ಯವಶ್ಯಕ. ಹಾಗೆ ಆಗಬೇಕಾದರೆ ಗಾರ್ನಮೆಂಟಿನವರ ಏರ್ಪಾಟುಗಳೇ ಸಾಲವು. ಬೆಲೆಗಳನ್ನು ಇಳಿಸುವುದಕ್ಕೆ ಹಣವನ್ನು **ಉಳಿಸುವದು** ಒಂದೇ ರಾಜಮಾರ್ಗ

ಉಳಿಸಿದ ಹಣವನ್ನು ರಕ್ಷಿಸಿರಿ. ಜಮೀನುಗಳು, ಕಟ್ಟಡಗಳು, ಭೋಗ್ಯವಸ್ತುಗಳು, ಆಭರಣಗಳು, ಕೈಗಾರಿಕೆ ಸಾಮಾನುಗಳು, ಇವುಗಳು ಅವುಗಳ ಬೆಲೆಗೆ ತಕ್ಕ ಪ್ರಯೋಜನಕಾರಿಗಳಲ್ಲ. ಅವುಗಳ ಪ್ರಕೃತದ ಬೆಲೆಗಳು ಮಿತಿಮೀರಿ ಏರಿವೆ. ಆದುದರಿಂದ, ನಿಮ್ಮ ಹಣವನ್ನು ಸುರಕ್ಷಿತವಾಗಿಯೂ ಮತ್ತು ಶಾಶ್ವತ ಪ್ರಯೋಜನಕಾರಿಯಾಗಿಯೂ ಇರುವ ಮಾರ್ಗದಲ್ಲಿ ವಿನಿಯೋಗಿಸಿ. ಅಂತಹ ಮಾರ್ಗಗಳನೇಕವಿವೆ. ಅವು ಯಾವುವೆಂದರೆ. — ಇನ್ಶೂರನ್ಸ್ (ವಿಮೆ), ಕೋಆಪರೇಟಿವ್ ಸಂಘಗಳು, ಬೇಂಕುಗಳಲ್ಲಿ ಸೇವಿಂಗ್ಸ್ ಖಾತೆ ಇಡುವದು, ಪೋಸ್ಟಾಫೀಸ್ ಸೇವಿಂಗ್ಸ್ ಬೇಂಕುಗಳು. ಆದರೆ, ಗಾರ್ನಮೆಂಟ್ ಲೋನುಗಳು ಮತ್ತು ನ್ಯಾಷನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳು ಸರ್ವೋತ್ತಮವಾದ ಮಾರ್ಗಗಳು.

ಹಣವನ್ನು
ಕೈಲಾದ ಮಟ್ಟಿಗೂ
ಉಳಿಸಿರಿ
ಉಳಿಸಿದ್ದನ್ನು
ವಿವೇಕಮಾರ್ಗಗಳಲ್ಲಿ ವಿನಿಯೋಗಿಸಿರಿ.

ಈಗ ನೀವು ಹಣವನ್ನು ಉಳಿಸಿದರೆ, ಅದು ನಿಮ್ಮ ವೃದ್ಧಾಪ್ಯದಲ್ಲಿ ಆಧಾರವಾಗುವುದು, ಇಲ್ಲವೆ ಯುದ್ಧನಂತರ ಬಳಿಕ ನಿಮಗೆ ಬಹಳ ಲಾಭಕರವಾದ ಸನ್ನಿವೇಶಗಳನ್ನು ಒದಗಿಸುವುದು. ಹಣವನ್ನು ಉಳಿಸುವುದಕ್ಕೆ ಇದು ಸುವರ್ಣಪ್ರಾಯವಾದ ಸಮಯ. ಇಂತಹ ಸಮಯವನ್ನು ಬಿಟ್ಟುಬಿಡುವುದು ವಿವೇಕವಲ್ಲ.

ಇದೇನೆ, ನ್ಯಾಶನಲ್ ವಾರ್‌ಫ್ರಂಟ್, ಅಂದರೆ, ರಾಷ್ಟ್ರೀಯ ಯುದ್ಧಮುಖವು ಭಾರತೀಯರ ಸಮಕ್ಷಮದಲಿ ಮಾಡುವ ವಿನಂತಿ.

AAA 1117 KN

NOTICE

An annual General Body Meeting of the S. R. S. Home old Boarder's Association, Mangalore will be held at S. R. S. Home Mangalore, at 5 P. M. on Sunday the 31st December, 1944. All the members are cordially invited to be present.

U. Krishna Shetty, B. A. B. L.
K. Uggappa Shetty, B. A. B. L.
Advocates
Joint Secretaries
Mangalore, Date 15-12-44.

Read & Advertise in
NAVAYUGA

The Pangal Nayak Bank Limited.

(Incorporated in 1920)

Registered Office Court Road, UDIPI.

Branches at— **Udipi, Mangalore, Katapadi, Kanhangad, Kinnigoli and Nileshwar. South Canara District**

Discounting of demand and short term negotiable instruments for approved parties, granting of loans and overdraft accommodation on goldware, marketable produce, other merchandise and on other securities, collection of pay, pension or other bills, transmission of monies to upcountry places on moderate terms acceptance of Fixed, Current, Savings Bank and Cumulative deposits and every other type of up to date Banking service is at the disposal of all the sections of the discreet public

For business proper please enquire at any one of our Offices

15th April 1944.

— ಮಕ್ಕಳನ್ನು ಹಡೆಯುವದು ಸಾಕು —

ಅಶಕ್ತ ಸ್ತ್ರೀಯರಿಗೆ **ಬರ್ಥ ಕಂಟ್ರೋಲ** ರೋಗಗ್ರಸ್ತ ಹೆಣ್ಣು ಮಕ್ಕಳಿಗೆ

ಏಳು ದಿವಸ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳು ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಸೆರಗು, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ಗುಳಿಗೆ ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಪಥ್ಯ:—ಹರವೀಪಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. 5—0—0 ಪೋಷ್ಟ ಚಾರ್ಜ ೧೦ಆಣೆ.

ಮಾಲಕರು:—ಹಾಲಪ್ಪಾ ಫಕೀರಪ್ಪಾ ದಾವಣಗೇರಿ

ಆಯುರ್ವೇದ ಔಷಧಾಲಯ, ಗದಗ-ಸಿಟಿ

ಏಜಂಟರ:—ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಧಾರವಾಡ, ವಿಜಾಪೂರ—ಮಾನಪ್ಪ ಸಿದ್ಧಲಿಂಗಪ್ಪ ಧಾರವಾಡಕರ, ವಿಜಾಪೂರ. ಚಿಕ್ಕೋಡಿಯಲ್ಲಿ:—ಹುಂಬರಮಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್ಸ. ಆರ್. ಎಲ್. ಕಮಲದಾನಿ, ಕೆಮಿಸ್ಟ, ಹಾವೇರಿ, ಬ್ಯಾಡಗಿ,

Ayurveda Oushadalaya, GADAG CITY.

ಸೋರಿಯಾ ಪರಮಾರೋಗ ಉಷ್ಣ ರೋಗಕ್ಕೆ ಔಷಧ

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಧೋತರಕ್ಕೆ ಹಳದೀ ಡಾಗು ಹತ್ತುತ್ತಿದ್ದರೆ, ಶರೀರದಿಂದ ಬಾವು. ಶರೀರದ ತೊಗಲು ಹಿಂದಕ್ಕೆ ಸರಿಯುದಿದ್ದರೆ, ಶರೀರದ ನುತ್ತು ಘಾಯವಾಗಿದ್ದರೆ,....ಚಟ್ಟಿ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಬು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂಡುಮಾಲಿ, ಕೈಕಾಲು ಶೂಲಿ, ಅರ್ಧಾಂಗವಾಯು ನಡುನೋಯುವದು ಸ್ತ್ರೀಯರ ಬಿಳಿಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇದುವುದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲೆ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆ ದರ ದಿವಸ ಬೆಳಿಗ್ಗೆ ಒಂದೇ ಸಾರೆ ೭ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನುತುಪ್ಪದಲ್ಲಿ ತಕ್ಕೊಳ್ಳಬೇಕು. ಪಥ್ಯ: ಹಸೀಖಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೮ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ದಾವಣಗೇರಿ:ದಾವಣಗೇರಿಪ್ರೇಸ್. ಪತ್ರವ್ಯವಹಾರ ಮಾಡತಕ್ಕ ಮಾಲಕರ ವಿಳಾಸ

ರೇವಣಸಿದ್ಧಪ್ಪ ಹಾಲಪ್ಪ ದಾವಣಗೇರಿ,

ಆಯುರ್ವೇದ ಔಷಧಾಲಯ. ಗದಗ.

Ayurveda Oushadalaya GADAG.

ಧಾತುಪುಷ್ಟಿ ಲೇಹ

ಇದು ಬಲಹೀನರಿಗೆ ಶಕ್ತಿವರ್ಧಕ ರಸಾಯನ. ಸ್ವಪ್ನಾವಸ್ಥೆ ಶರೀರದ ಉಷ್ಣತೆ ಧಾತು ಮೂತ್ರದೊಡನೆ ಹೊರಗೆ ಹೋಗುವಿಕೆ, ಸೊಂಟನೋವು, ಕೈಕಾಲು ಬಚ್ಚುವುದು, ಮಲಬದ್ಧತೆ, ಒಳಜ್ವರ, ಇವುಗಳನ್ನೆಲ್ಲ ಹೋಗಲಾಡಿಸಿ ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು. ಅದಲ್ಲದೆ ನರಗಳ ದೌರ್ಬಲ್ಯವನ್ನು ಹೋಗಲಾಡಿಸಿ ವೀರ್ಯವೃದ್ಧಿಯನ್ನೂ ಉಂಟುಮಾಡುವದು. ಬಾಟ್ಲಿ 1ರ ದರ ರೂ. 3—8—0.

ಕಸ್ತೂರಿಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರು ಉಪಯೋಗಿಸತಕ್ಕ ಅಮೋಘವಾದ ಶಕ್ತಿವರ್ಧಕ. ಪ್ರಸವಾಯಾಸವನ್ನು ಹೋಗಲಾಡಿಸಿ, ಉದರದೊಳಗಿನ ಅಂಗಗಳನ್ನು ಬಲಪಡಿಸಿ, ಗತಶಕ್ತಿಯನ್ನು ಪುನಃ ತುಂಬಿಸುವುದು ರಕ್ತಧಾತುವು ಅಭಿವೃದ್ಧಿಯಾಗಿ, ಬಾಣಂತಿಯರು ಪುಷ್ಟಿಯೊಂದುವರಲ್ಲದೆ, ಶಿಶುವಿಗೂ ಬೇಕಾದಷ್ಟು ಹಾಲು ಸಿಗುವಂತೆ ಮಾಡುವುದು. ಬಾಟ್ಲಿ 1ರ ರೂ 1—12—0

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ.

— ಎಂ. ಗಣಪಯ್ಯ ಎಂಡ್ ಸನ್ಸ್. —

ಆಯುರ್ವೇದಿಕ ಫಿಜಿಸಿಯನ್ಸ್, ರಥಬೀದಿ ನಂಬ್ರ, 10 ಮಂಗಳೂರು.

ಎಲ್ಲಾ ನಮೂನೆಯ ಔಷಧಿಗಳು ದೊರೆಯುತ್ತವೆ. ಕ್ಯಾಟಲಾಗ್ ಬರದಲ್ಲಿ ರೋಗಕ್ಕೆ ತಕ್ಕದಾದ ಔಷಧಿ ರವಾನಿಸಲಾಗುವುದು. ಉಡುಪಿ ಏಜಂಟರು:—ನವಭಾರತ ಬುಕ್ ಡಿಪೋ

The best preventive in epidemics of CHOLERA

"BHUVANENDRA"
CHANDRAMAS

Also a sovereign remedy for diarrhoea, Stomachache, Vomiting and Nausea.

BHUVANENDRA PRODUCTS LTD., Katapadi.

'ಭುವನೇಂದ್ರ' **ಚಂದ್ರಮಸ್**

ವಾಂತಿಭೇದಿಯಂತಹ ಭಯಂಕರ ಪೀಡೆಗಳಲ್ಲಿ ಪ್ರತಿಯೊಬ್ಬನೂ ಉಪಯೋಗಿಸತಕ್ಕ ಅತ್ಯುತ್ತಮ ಔಷಧಿ

ದೊಡ್ಡವರಿಗೆ 4ರಿಂದ 8ಬೊಟ್ಟು, ಸಣ್ಣ ಮಕ್ಕಳಿಗೆ 1ರಿಂದ2ಬೊಟ್ಟು ಲವಂಗ ಯಾ ಓಮದ ಕಷಾಯದಲ್ಲಿ ದಿನಕ್ಕೆ 2 ಯಾ 3 ಸರ್ತಿ ಯುಕ್ತ ಕಂಡಂತೆ ಕೊಡುವುದು.

ಅತಿಸಾರ, ಹೊಟ್ಟೆನೋವು, ಹಲ್ಲುನೋವು, ಅಜೀರ್ಣ ಇತ್ಯಾದಿಗಳಲ್ಲಿ ಕೂಡ ಉಪಯೋಗ.

ಭುವನೇಂದ್ರ ಪ್ರೊಡಕ್ಟ್ಸ ಲಿಮಿಟೆಡ್, ಕಟಪಾಡಿ, ದ. ಕ.

ಉಡುಪಿ ಸ್ಟಾಕಿಸ್ಟರು:—ಡಾ. ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ ಶ್ರೀ. ಆರ್. ಎಸ್. ಶೆಟ್ಟಿ, ರಥಬೀದಿ; ಡಾ. ಪಿ. ಜಿ. ಆಚಾರ್ಸ್ ಫಾರ್ಮಸಿ, ಡಾ. ಕೆ. ಶೇಷಗಿರಿ ಪೈ, L. I. M.; ಡಾ. ವೆಂಕಟರಾವ್, ಕೊರಡ್ಕಲ್; ನವಭಾರತ ಬುಕ್ ಡಿಪೋ

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೇಹಸ್ಥಿತಿಯನ್ನು ಸಿದ್ಧಗೊಳಿಸಿ ತಯಾರಿಸಲ್ಪಟ್ಟ ಅಮೋಘವಾದ ಮಧುರದ್ರವ ರಸಾಯನ. ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.

ನವಜೀವಾತು ಎಂಬ ಸೂತಿಕಾ ರಸಾಯನ

(ಇದು ರಿಜಿಸ್ಟರು ಮಾಡಲ್ಪಟ್ಟಿದೆ)



೮ ಔನ್ಸಿನ ೨ಬಾಟ್ಲಿಗಳು. ಹುಟ್ಟು ಕಟ್ಟಿನ ೪೦ದಿವಸಗಳಿಗೆ ಬರುವವು. ಅಂದರೆ ಕೇವಲ ೪ ರೂಪಾಯಿಗಳೇ ಒಂದು ಬಾಣಂತಿತನಕ್ಕೆ ಸಾಕಾಗುವವು ವಿಶೇಷ ಮಾಹಿತಿ ಬಗ್ಗೆ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ.ವಿ.ಶಾಸ್ತ್ರಿ, ಆಯುರ್ವೇದ ಭೂಷಣ, ನಂ.5 ಕೊಡಿಯಾಲಬೈಲು, ದ.ಕ

ಅಂತರಂಗದ ಕತೆಗಳು

೧೨ ಕತೆಗಳ ಸಂಗ್ರಹ ಬೆಲೆ ೦—೧೦—೦

ಅಂತರಂಗವನ್ನು ಬೆಳಗಿ, ಬಹಿರಂಗವನ್ನು ಹೊಳೆಸಿ ಹರಿಯುವ ಮಾತು.

ಪ್ರೇಮಪ್ರವಾಹವು ಹೇಗೆ ಹರಿಯುತ್ತದೆ? ಪ್ರಣಯದಲ್ಲಿ ಪ್ರಲಯವಿದೆಯೆ?

ಪ್ರೇಮಪ್ರವಾಹ

ಸ್ವಾರಸ್ಯವಾದ ೫ ಕತೆಗಳ ಸಂಗ್ರಹ ಬೆಲೆ ೦-೬-೦

ಬಹಿರಂಗವಾಗಿ ಅಲ್ಲವಾದರೂ ಅಂತರಂಗವಾಗಿ ನೋಡತಕ್ಕ

ಆರ್ಟ್ ಚಿತ್ರಗಳು

ಹಲವಾರು ಸುಂದರಿಯರ ನೈಜಚಿತ್ರಗಳ ಕಟ್ಟು. ಬೆಲೆ ೦—೬—೦

ಪಾಪಪೂರಿತ ಪಟ್ಟಣಗಳು

ಪ್ರಪಂಚದ ಬೇರೆ ಬೇರೆ ದೇಶಗಳಲ್ಲಿ ವ್ಯಭಿಚಾರ ಸೂಳೆಗಾರಿಕೆಗಳು ಸಮಾಜವನ್ನು ಹೊಕ್ಕು ಅದನ್ನು ಹೇಗೆ ಕೊರೆದು ತಿಂದು ಹಾಕುತ್ತಿದೆ ಎಂಬುದನ್ನು ವಿವರಿಸುವ ಗ್ರಂಥ. ಬೆಲೆ. ೧—೮—೦

ವ್ಯಭಿಚಾರಿಣಿ ಯಾರು?

ಸಾಮಾಜಿಕ ನಾಟಕ. ಬೆಲೆ: ೦—೧೨—೦

ಮಾನವಂತತನದ ಸೋಗಿನಿಂದ ನಡೆಸಲ್ಪಡುವ ಅನಾಚಾರವನ್ನೂ ಪವಿತ್ರ ಪ್ರೇಮವು ಕಠಿಣ ಪರೀಕ್ಷೆಗೊಳಗಾದರೂ ಕಟ್ಟಕಡೆಗೆ ಅದರ ವಿಜಯ ನಿಶ್ಚಯವೆಂಬುದನ್ನೂ ಮನಗಾಣಿಸುವ ವಿಚಾರ ಕ್ರಾಂತಿಕಾರಕ ನಾಟಕ.

ನವಭಾರತ ಪುಸ್ತಕ ಭಂಡಾರ, ಉಡುಪಿ.

EDITED PRINTED & PUBLISHED BY K H. SHETTY AT THE NAVAYUGA PRESS, UDIPI, S. INDIA